ಶ್ರೀ ಬಾಲಲೀಲಾಮಹಾಂತಶಿವಯೋಗೀಶ್ವರ ಗ್ರಂಥಮಾಲೆ : ೭೦

ಭೀಮಕವಿ ವಿರಚಿತ

ಬಸವಪುರಾಣ

ಪ್ರಕಾಶಕರು:

ಶ್ರೀ ನಿ. ಪ್ರ. ಸ್ವ. ಮಹಾಂತಸ್ವಾಮಿಗಳು
ಶ್ರೀ ಗುರು ಮೃತ್ಯುಂಜಯ ಮಹಾಸ್ವಾಮಿಗಳು
ಶ್ರೀ ಮುರುಘಾಮಠ, ಧಾರವಾಡ

ಸಂಪಾದಕರು:

ಡಾ. ಆರ್. ಸಿ. ಹಿರೇಮಠ, ಎಂ.ಎ., ಪಿಎಚ್.ಡಿ.
ಕನ್ನಡ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

CC-0. Jangamwadi Math Collection. Digitized by eGangotri

Q234:221 331
33M8
Bhimkavi.
Basavpuranam.



CC-0. Jangamwadi Math Collection. Digitized by eGangotri

Q234:221
33M8

331

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

*****

Please return this volume on or before the date last stamped.
Overdue volume will be charged ten paise per day.

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಬಸವಣ್ಣನವರು

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಶ್ರೀ ಬಾಲಲೀಲಾಮಹಾಂತಶಿವಯೋಗೀಶ್ವರ ಗ್ರಂಥಮಾಲೆ : ೭೦

ಭೀಮಕವಿ ವಿರಚಿತ

ಬಸವಪುರಾಣ

ಪ್ರಕಾಶಕರು:

ಶ್ರೀ ನಿ. ಪ್ರ. ಸ್ವ. ಮಹಾಂತಸ್ವಾಮಿಗಳು
ಶ್ರೀ ಗುರು ಮೃತ್ಯುಂಜಯ ಮಹಾಸ್ವಾಮಿಗಳು
ಶ್ರೀ ಮುರುಘಾಮಠ, ಧಾರವಾಡ

8101

ಸಂಪಾದಕರು:

ಡಾ. ಆರ್. ಸಿ. ಹಿರೇಮಠ, ಎಂ.ಎ., ಪಿಎಚ್.ಡಿ.
ಕನ್ನಡ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

CC-0. Jangamwadi Math Collection. Digitized by eGangotri

ಪ್ರಕಾಶಕರು:

ಶ್ರೀ ನಿ. ಪ್ರ. ಸ್ವ. ಮಹಾಂತಸ್ವಾಮಿಗಳು
ಶ್ರೀಗುರು ಮೃತ್ಯುಂಜಯ ಮಹಾಸ್ವಾಮಿಗಳು
ಶ್ರೀ ಮುರುಘಾಮಠ, ಮೃತ್ಯುಂಜಯ ನಗರ,
——— .

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನದ
ಜ್ಞಾನ ಮಂದಿರಕ್ಕೆ ದಾವಣಗೆರೆ ವೇ|| ಬಿ. ಎಂ. ಚನ್ನಬಸಯ್ಯನವರಿಂ
ಸಮರ್ಪಿಸಿದ್ದು.

ತಾ. 20-1-1988 ನೇ ಬುಧವಾರ

ಎಲ್ಲ ಹಕ್ಕು ಪ್ರಕಾಶಕರಿಗೆ ಸೇರಿವೆ.

Q234:221
33M8

ಬೆಲೆ: ರೂ. 30-00

ಮುದ್ರಕರು:

ಮಣಿಪಾಲ ಪವರ್ ಪ್ರೆಸ್, ಮಣಿಪಾಲ.

SRI JAGADGURU VISHWARADHYA
JNANA SIMHASA - JNANAMANDIR
LIBRARY.
Jangamwadi Math, VARANASI,
Acc. No. 331

CC-0. Jangamwadi Math Collection. Digitized by eGangotri

SRI JAGADGURU VISHWARADHYA
JNANA SIMHASAN, JNANAMANDIR
LIBRARY
Jangamwadi Math, Varanasi
Acc. No. 331

CC-0. Jangamwadi Math Collection. Digitized by eGangotri



ಶ್ರೀ ನಿ. ಪ್ರ. ಸ್ವ. ಮುರುಘೇಂದ್ರ ಮಹಾಶಿವಯೋಗಿಗಳು
ಗಚ್ಚಿನಮಠ, ಅಥಣಿ

CC-0. Jangamwadi Math Collection. Digitized by eGangotri

ಅರ್ಪಣೆ

ಶಿವಶರಣರ ಸಾಮರಸ್ಯದ ಮಾರ್ಗದಲ್ಲಿ ನಡೆದು
ಶಿವಯೋಗವನ್ನಾಚರಿಸಿ
ಪರಮವೈರಾಗ್ಯಮೂರ್ತಿಗಳೂ
ಮಹಾಶಿವಯೋಗಿಗಳೂ
ಎನಿಸಿದ
ಅಥಣಿ ಗಚ್ಚಿನ ಮಠದ
ಲಿಂಗೈಕ್ಯ
ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ
ಶ್ರೀ ಮುರುಘೇಂದ್ರ ಶಿವಯೋಗಿಗಳ
ದಿವ್ಯ ಪಾದಪದ್ಮಂಗಳಲ್ಲಿ
ಈ ಕೃತಿಪುಷ್ಪವನ್ನು ಭಕ್ತಿಪುರಸ್ಸರವಾಗಿ
ಸಮರ್ಪಿಸಲಾಗಿದೆ.

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು
ಶ್ರೀ ಮುರುಘಾಮಠ, ಧಾರವಾಡ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಪರಿವಿಡಿ

ಪ್ರಕಾಶಕರ ಮಾತು

ಪ್ರಸ್ತಾವನೆ

ಸಂಧಿ	ವಿಷಯ	ಪುಟ
೧ನೇ ಸಂಧಿ : ಪೀಠಿಕೆ		೫
೨ನೇ ಸಂಧಿ : ಬಸವೇಶ್ವರನು ಜನಿಸಿದ ಕಥೆ		೨೩
೩ನೇ ಸಂಧಿ : ಬಸವಣ್ಣನವರು ಬಾಗವಾಡಿಯೊಳುದಯವಾದುದು		೩೮
೪ನೇ ಸಂಧಿ : ಬಸವೇಶ್ವರನ ವಿವಾಹ ವಿಸ್ತಾರದ ಕಥೆ		೬೦
೫ನೇ ಸಂಧಿ : ಬಸವಣ್ಣನವರು ಕಲ್ಯಾಣಕ್ಕೆ ಬಂದುದು		೮೩
೬ನೇ ಸಂಧಿ : ಬಸವೇಶ್ವರನ ಭಕ್ತಿಪ್ರತಿಜ್ಞೆ		೧೦೨
೭ನೇ ಸಂಧಿ : ಅಲ್ಲಮಪ್ರಭುದೇವರು ಕಲ್ಯಾಣಕ್ಕೆ ಬಂದುದು		೧೧೬
೮ನೇ ಸಂಧಿ : ಬಂದಿಕಾಜಿರನ್ನು ಭಕ್ತರನ್ನಾಗಿ ಮಾಡಿದ ಕಥೆ		೧೩೨
೯ನೇ ಸಂಧಿ : ಗೊಲ್ಲಿತಿಯ ಪವಾಡ		೧೪೬
೧೦ನೇ ಸಂಧಿ : ಪೆಟ್ಟಿಗೆಯ ಪವಾಡ		೧೬೩
೧೧ನೇ ಸಂಧಿ : ಮುಗ್ಧಸಂಗಯ್ಯನ ಕಥೆ		೧೭೭
೧೨ನೇ ಸಂಧಿ : ರುದ್ರಪಶುಪತಿ ನಕ್ಕನಾಯ್ನಾರುಗಳ ಕಥೆ		೧೯೩
೧೩ನೇ ಸಂಧಿ : ಕೋಳೂರು ಕೊಡಗೂಸಿನ ಕಥೆ		೨೦೧
೧೪ನೇ ಸಂಧಿ : ಅಮ್ಮವ್ವೆಯ ಕಥೆ		೨೧೦
೧೫ನೇ ಸಂಧಿ : ದೀಪದ ಕಲಿಯೆರ ಕಥೆ		೨೨೦
೧೬ನೇ ಸಂಧಿ : ನಾಟ್ಯನಮಿತ್ತಡಿಯರ ಕಥೆ		೨೨೯
೧೭ನೇ ಸಂಧಿ : ಕಣ್ಣಪ್ಪನ ಕಥೆ		೨೩೬
೧೮ನೇ ಸಂಧಿ : ಸಕಲೇಶ ಮಾದರಸರ ಕಥೆ		೨೬೪
೧೯ನೇ ಸಂಧಿ : ಸಕಲೇಶ ಮಾದರಸರ ಕಥೆ		೨೮೬
೨೦ನೇ ಸಂಧಿ : ಮಡಿವಳ ಮಾಚಿದೇವರ ಕಥೆ		೨೯೯
೨೧ನೇ ಸಂಧಿ : ಇಜೆ ಭಕ್ತ ಹಾಗೂ ಬಾಹೂರಬೊಮ್ಮಯ್ಯಗಳ ಕಥೆ		೩೧೨
೨೨ನೇ ಸಂಧಿ : ಶಂಕರದಾಸಿಮಯ್ಯಗಳ ಕಥೆ		೩೩೦
೨೩ನೇ ಸಂಧಿ : ಸಿರಿಯಾಳನ ಕಥೆ		೩೪೧
೨೪ನೇ ಸಂಧಿ : ಹಲಾಯುಧನ ಕಥೆ		೩೬೪
೨೫ನೇ ಸಂಧಿ : ಮೆಜಿಮಿಂಡದೇವರ ಕಥೆ		೩೭೮
೨೬ ನೇ ಸಂಧಿ : ನಂಬಿಯಣ್ಣನು ಗಣಂಗಳ ಹೊಗಳಿದ ಕಥೆ		೩೯೬
೨೭ನೇ ಸಂಧಿ : ಕಿನ್ನರಯ್ಯಗಳ ಕಥೆ		೪೧೯
೨೮ನೇ ಸಂಧಿ : ಕಲಕೇತಯ್ಯಗಳ ಕಥೆ		೪೩೭
೨೯ನೇ ಸಂಧಿ : ಮೋಳಿಗೆ ಮಾರಯ್ಯಗಳ ಕಥೆ		೪೪೫

CC-0. Jangamwadi Math Collection. Digitized by eGangotri

೩೦ನೇ ಸಂಧಿ : ಕನ್ನದ ಬೊಮ್ಮಯ್ಯಗಳ ಕಥೆ ೪೫೬
೩೧ನೇ ಸಂಧಿ : ಮುಸುಟೆ ಚವುಡಯ್ಯಗಳ ಕಥೆ ೪೬೫
೩೨ನೇ ಸಂಧಿ : ಸುರಗಿ ಚವುಡಯ್ಯಗಳ ಕಥೆ ೪೮೨
೩೩ನೇ ಸಂಧಿ : ತೆಲುಗು ಬೊಮ್ಮಯ್ಯಗಳ ಕಥೆ ೪೮೮
೩೪ನೇ ಸಂಧಿ : ಶಿವಯೋಗನಿದ್ರಾಮುದ್ರೆಯ ಕಥೆ ೪೯೮
೩೫ನೇ ಸಂಧಿ : ಕಿನ್ನರಯ್ಯಗಳ ಪ್ರಾಣವ ಪಡೆದ ಕಥೆ ೫೧೩
೩೬ನೇ ಸಂಧಿ : ಮೇದಾರ ಕೇತಿದೇವಯ್ಯಗಳ ಕಥೆ ೫೨೯
೩೭ನೇ ಸಂಧಿ : ದಸರಯ್ಯಗಳ ಕಥೆ ೫೪೯
೩೮ನೇ ಸಂಧಿ : ಗುರುಭಕ್ತಯ್ಯಗಳ ಕಥೆ ೫೬೯
೩೯ನೇ ಸಂಧಿ : ಗುರುಭಕ್ತಾಂಡಾರಿಯ ಕಥೆ ೫೮೭
೪೦ನೇ ಸಂಧಿ : ಶ್ವೇತನ ಕಥೆ ೬೧೦
೪೧ನೇ ಸಂಧಿ : ಮಲುಹಣನ ಕಥೆ ೬೧೮
೪೨ನೇ ಸಂಧಿ : ಓಹಿಲಯ್ಯಗಳ ಕಥೆ ೬೨೯
೪೩ನೇ ಸಂಧಿ : ಉದ್ಭಟದೇವನ ಕಥೆ ೬೫೧
೪೪ನೇ ಸಂಧಿ : ಗುರುಭಕ್ತಾಂಡಾರಿಯ ಕಥೆ ೬೭೦
೪೫ನೇ ಸಂಧಿ : ವೇಮನಾರಾಧ್ಯರ ಕಥೆ ೬೮೪
೪೬ನೇ ಸಂಧಿ : ಚಿಕ್ಕಮಾದಣ್ಣನ ಕಥೆ ೭೦೫
೪೭ನೇ ಸಂಧಿ : ಕದಿರರೇಮಯ್ಯಗಳ ಕಥೆ ೭೨೫
೪೮ನೇ ಸಂಧಿ : ವಿಕಾಂತರಾಮಯ್ಯಗಳ ಕಥೆ ೭೩೫
೪೯ನೇ ಸಂಧಿ : ಕೂನಪಾಂಡ್ಯರ ಕಥೆ ೭೪೭
೫೦ನೇ ಸಂಧಿ : ದೇವರದಾಸಿಮಯ್ಯಗಳ ಕಥೆ ೭೬೮
೫೧ನೇ ಸಂಧಿ : ವಿಕಾಂತರಾಮಿತಂದೆಗಳು ಶಿರವರಿದ ಪವಾಡದ ಕಥೆ . . ೭೮೯
೫೨ನೇ ಸಂಧಿ : ಸೊಡ್ಡಳ ಬಾಚರಸರ ಕಥೆ ೮೦೨
೫೩ನೇ ಸಂಧಿ : ಸೊಡ್ಡಳ ಬಾಚರಸರು ಬಿಜ್ಜಳನ ಕೂಡ ವಾದವ ಗೆಲಿದ ಕಥೆ . ೮೨೧
೫೪ನೇ ಸಂಧಿ : ಶಿವನಾಗಮಯ್ಯಗಳ ಕಥೆ ೮೪೫
೫೫ನೇ ಸಂಧಿ : ಬಿಬ್ಬಬಾಚಯ್ಯಗಳ ಕಥೆ ೮೬೦
೫೬ನೇ ಸಂಧಿ : ಸಾಮವೇದಿಗಳ ಕಥೆ ೮೭೫
೫೭ನೇ ಸಂಧಿ : ಶೈವದೀಕ್ಷಾಚಾರ್ಯರು ೯೦೧
೫೮ನೇ ಸಂಧಿ : ವಿಷದ ಪವಾಡ ೯೧೯
೫೯ನೇ ಸಂಧಿ : ಜಗದೇವಯ್ಯಗಳ ಕಥೆ ೯೩೪
೬೦ನೇ ಸಂಧಿ : ಬಸವೇಶ್ವರನು ಸಂಗಮೇಶ್ವರದಲ್ಲಿ ಐಕ್ಯವಾದ ಕಥೆ . . . ೯೫೧
ಕಠಿನ ಶಬ್ದಕೋಶ, ವಿಶಿಷ್ಟಪದಗಳ ಸೂಚಿ ಇತ್ಯಾದಿ ೯೭೭

CC-0. Jangamwadi Math Collection. Digitized by eGangotri

ಪ್ರಕಾಶಕರ ಮಾತು

ಬಸವಪುರಾಣ. ಚೆನ್ನಬಸವಪುರಾಣ, ವೀರಶೈವಾಮೃತಮಹಾಪುರಾಣ ಇವು ವೀರಶೈವಕ್ಕೆ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳಿದ್ದಂತೆ. ಈ ಗ್ರಂಥಗಳನ್ನು ಪಂಡಿತರಿಂದ ಪರಿಷ್ಕರಿಸಿ ಸುಂದರವಾಗಿ ಮುದ್ರಿಸಿ ಸದ್ಭಕ್ತರ ಮನೆಮನೆಗೆ ಮುಟ್ಟುವಂತೆ ಮಾಡಬೇಕೆಂಬುದು ಲಿಂ. ಶ್ರೀ. ನಿ. ಪ್ರ. ಮೃತ್ಯುಂಜಯ ಮಹಾ ಸ್ವಾಮಿಗಳ ಧ್ಯೇಯವಾಗಿದ್ದಿತು. ಶರಣಸಾಹಿತ್ಯದ ಪ್ರಕಟಣೆಗೆಂದೇ ಅಪ್ಪಗಳು ಶ್ರೀ ಬಾಲಲೀಲಾಮಹಾಂತಶಿವಯೋಗೀಶ್ವರ ಗ್ರಂಥಮಾಲೆಯನ್ನು ಶ್ರೀಮಠ ದಲ್ಲಿ ಸ್ಥಾಪಿಸಿ ಮಹತ್ವದ ಅನೇಕ ಗ್ರಂಥಗಳನ್ನು ಪ್ರಕಟಿಸಿ ಸದ್ಭಕ್ತರಿಗೆ ಆಶೀರ್ವದಿ ಸಿರುವರು. ಆ ಮಹಾಗ್ರಂಥಮಾಲೆಯ ಎಪ್ಪತ್ತನೆಯ ಪುಷ್ಪವಾಗಿ ಭೀಮಕವಿಯ ಬಸವಪುರಾಣವು ಪ್ರಕಟವಾಗುತ್ತಿರುವುದು ಅಪ್ಪಗಳ ಆಶೀರ್ವಾದವಲ್ಲದೆ ಬೇರೆ ಏನೂ ಅಲ್ಲ.

ಬಸವಣ್ಣನವರು ವೀರಶೈವ ನಿರ್ಣಯ ಪರಮಾವತಾರರು. ಭಕ್ತಿಭಂಡಾರಿ ಗಳು. ತಮ್ಮ ಭಕ್ತಿಯ ಅಪಾರವಾದ ಶಕ್ತಿಯಿಂದ ಮರ್ತ್ಯಕ್ಕೆ ಮಹವನ್ನು ತಂದವರು. ನುಡಿದಂತೆ ನಡೆದು ಲಿಂಗಾಂಗಸಾಮರಸ್ಯವನ್ನು ಪಡೆದು ಪ್ರಮಥರಲ್ಲಿ ಅಗ್ರಗಣ್ಯರೆನಿಸಿದರು. ಇಹಪರಗಳನ್ನು ಒಂದುಗೂಡಿಸುವ ಪರಮಸಾಧನವನ್ನು ಕಂಡುಹಿಡಿದವರು. ಕಾಯದಲ್ಲಿ ಗುರು, ಲಿಂಗ, ಜಂಗಮದ ಆಯತವನ್ನು ಅರಿಯುವ ಇಷ್ಟಲಿಂಗೋಪಾಸನ ಮಾರ್ಗವನ್ನು ತೋರಿಸಿ ಸಮಸ್ತ ಭಕ್ತರನ್ನು ಉದ್ಧರಿಸಿದ ಪುಣ್ಯಪುರುಷರು ಶ್ರೀ ಬಸವಣ್ಣನವರು. ಅವರ ಚರಿತ್ರೆಯನ್ನು ಹಂಪೆಯ ಹರಿಹರದೇವರು ಬಸವರಾಜದೇವರ ರಗಳೆಯೆಂದು ಕನ್ನಡದಲ್ಲಿಯೂ ಪಾಲ್ಕುರಿಕೆ ಸೋಮಾರಾಧ್ಯರು ಬಸವಪುರಾಣಮು ಎಂದು ತೆಲುಗಿನಲ್ಲಿಯೂ ರಚಿಸಿ ಸಾಹಿತ್ಯಪ್ರಪಂಚವನ್ನು ಉದ್ಧರಿಸಿದರು. ಪಾಲ್ಕುರಿಕೆ ಸೋಮನಾಥ ಕವಿಯ ತೆಲುಗು ಬಸವಪುರಾಣವನ್ನು ಭೀಮಕವಿ ಕನ್ನಡದಲ್ಲಿ ರಚಿಸಿ ಕನ್ನಡಿಗರಿಗೆ ಮಹದುಪಕಾರ ಮಾಡಿರುವರು. ಅದು ಬಸವಪುರಾಣವೆಂದು ಕನ್ನಡದಲ್ಲಿ ಪ್ರಸಿದ್ಧವಾಗಿದೆ.

CC-0. Jangamwadi Math Collection. Digitized by eGangotri

ಶ್ರೀಮಠದ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯಲ್ಲಿ ಬಸವಪುರಾಣವನ್ನು ಪ್ರಕಟಿಸಬೇಕೆಂಬ ಅಭಿಲಾಷೆ ಬಹುದಿನಗಳಿಂದಲೂ ಇದ್ದಿತು. ಡಾ. ಆರ್. ಸಿ. ಹಿರೇಮಠ ಅವರು ಭಕ್ತಿಯಿಂದ ಈ ಕಾರ್ಯವನ್ನು ಪೂರೈಸಿ ಕೊಟ್ಟಿರುವರು. ಅವರಿಗೆ ಶ್ರೀ ಶಿವಯೋಗಿಗಳು ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲಿ. ಸದ್ಭಕ್ತರು ಶ್ರೀ ಬಸವಪುರಾಣವನ್ನು ಓದಿ ಕೃತಾರ್ಥರಾಗಲೆಂದು ಹಾರೈಸುತ್ತೇವೆ.

ಶ್ರೀ ಮುರುಘಾಮಠ,
ಧಾರವಾಡ.

ಪ್ರಕಾಶಕರು

CC-0. Jangamwadi Math Collection. Digitized by eGangotri

ಪ್ರಸ್ತಾವನೆ

'ಬಸವಪುರಾಣ'ವೆಂದು ಹೆಸರಾದ ಕನ್ನಡ ಕಾವ್ಯದ ಕರ್ತೃ ಭೀಮಕವಿ ಎಂಬುದು ಆ ಗ್ರಂಥದಿಂದಲೇ ತಿಳಿಯುತ್ತದೆ (ಸಂ. ೧, ಪ. ೧೭). ಅಲ್ಲಲ್ಲಿ ಕವಿ ಈ ಕೃತಿಯಯನ್ನು 'ಬಸವಚರಿತೆ' (ಸಂ. ೧, ಪ. ೧೨, ೨೩), 'ಬಸವ ಕಥೆ' (ಸಂ. ೧, ಪ. ೧೫) ಎಂದೂ ಉಲ್ಲೇಖಿಸಿರುವನು. ಆದರೂ ಕಾವ್ಯದ ಆದ್ಯಂತ ಗಳಲ್ಲಿ 'ಬಸವಪುರಾಣ' ಎಂಬ ಅಭಿಧಾನವೆ ಕಂಡುಬರುತ್ತಿದೆ. ಇದಕ್ಕೆ ಮೂಲ ವಾದ ಪಾಲ್ಕುರಿಕೆ ಸೋಮನಾಥನ ತೆಲುಗು ಕೃತಿಗೆ 'ಬಸವಪುರಾಣಮು' ಎಂಬ ಹೆಸರಿರುವುದರಿಂದಲೂ ಭೀಮಕವಿಯ ಈ ಕೃತಿಗೆ 'ಬಸವಪುರಾಣ' ಎಂಬುದೇ ನಿಜನಾಮವೆಂಬುದು ವಿಚಿತ. ಉಳಿದವನ್ನು ಪರ್ಯಾಯನಾಮಗಳಾಗಿ ಬಳಸಿ ದ್ದಾನೆಂದು ಹೇಳಬಹುದು.

ಭೀಮಕವಿ 'ಶಿವಕವಿದೇವನ ಆತ್ಮಜನು'. ಈ ಶಿವಕವಿದೇವನು ಸದ್ಗುರು ಸೇವೆ, ಜಂಗಮಭಜನೆ, ಲಿಂಗನಿಷ್ಠೆಗಳಲ್ಲಿ ಬಲ್ಲಿದನಾಗಿ ಶಿವಭಕ್ತಿಸಮಯ ಸಾಗರಕ್ಕೆ ಚಂದ್ರನಂತಿದ್ದನು.[೧] ಇಂತಹ ಗುರುಲಿಂಗಜಂಗಮನಿಷ್ಠೆಯ ಪರಿಸರದಲ್ಲಿ ಬೆಳೆದ ಭೀಮನು ಪರಮ ಶಿವಭಕ್ತಿಪರಾಯಣನಾಗಿದ್ದನೆಂದು ಹೇಳುವ ಆವಶ್ಯಕತೆಯೆ ಇಲ್ಲ. ಆ ಭಕ್ತಿಯೆ ಆತನಲ್ಲಿ 'ಬಸವಪುರಾಣ' ಕಾವ್ಯವನ್ನು ರಚಿಸಬೇಕೆಂಬ ಆಕಾಂಕ್ಷೆಯ ಅಂಕುರವನ್ನು ಮೂಡಿಸಿದೆ. ಆದರೆ 'ಬಡಮತಿಯಿಂದ ಬಸವರಾಜನ ಕೃತಿಯನ್ನು ರಚಿಸುವುದೆಂತು?' ಎಂಬ ಆಲೋಚನೆಯಲ್ಲಿ ನಿದ್ರಿಹೋಗಲು ಕನಸಿನಲ್ಲಿ ಪಾಲ್ಕುರಿಕೆಯ ಸೋಮೇಶ ಮತ್ತು ತಂದೆ ಶಿವದೇವಾರ್ಯರು ಪ್ರಸನ್ನರಾಗುವರು. ಅವರ ಪ್ರಸಾದವೇ ಈ 'ಬಸವಪುರಾಣ'ದ ರಚನೆಯ ಆಶಾಂಕುರವು ಬೆಳೆದು ಪಲ್ಲವಿಸಿ ಮಹಾವೃಕ್ಷವಾಗಲು ಅಮೃತಧಾರೆಯಾಯಿತು. 'ನಿನ್ನಾತ್ಮದೊಳಗಿದ್ದು ನಾವು ರಚಿಸುವೆವು, ಬಸವಪುರಾಣವನ್ನು ಬರೆದುಕೋ' ಎಂಬ ಅಭಯವಾಣಿಯನ್ನು ಭೀಮಕವಿ ಎರದಲ್ಲಿ ಧರಿಸಿ ಕಾವ್ಯರಚನೆಗೆ ಕೈಹಾಕಿ ರುವನು. ಪಾಲ್ಕುರಿಕೆ ಸೋಮೇಶನು ತೆಲುಗಿನಲ್ಲಿ 'ಮುನ್ನ ಉಸುರ್ದುದನೆ' ಈತನು ಕನ್ನಡಿಸಿ ಹೇಳಿದನು.

ಭೀಮಕವಿ ತನ್ನ ಸುಸಂಸ್ಕೃತಿಯ ದ್ಯೋತಕವಾಗಿ ತನ್ನನ್ನು 'ಬಡಮತಿ' ಎಂದು ಕರೆದುಕೊಂಡಿದ್ದರೂ ಆತನು ವಿದ್ಯಾಪಾರಂಗತನಾಗಿದ್ದನೆಂದು ತಿಳಿದು ಬರುತ್ತದೆ. ಸಿದ್ಧನಂಜೇಶನ 'ರಾಘವಾಂಕಚಾರಿತ್ರ'ದಲ್ಲಿ ಭೀಮಕವಿ ರಾಘವಾಂಕನಲ್ಲಿ ವಿದ್ಯೆ ಕಲಿತನೆಂಬ ಪ್ರಸ್ತಾಪ ಬರುತ್ತದೆ:

---

೧ ಬ.ಪ್ರ. ೧–೧೭.

CC-0. Jangamwadi Math Collection. Digitized by eGangotri

ಶ್ರೀಶೈಲದ ದಕ್ಷಿಣದ್ವಾರವೆನಿಸುವ ಸಿದ್ಧವಟಪುರದಲ್ಲಿ ಆಂಧ್ರಭಾಷಾ ಸತ್ಕವಿತ್ವಕೋವಿದನಪ್ಪ ಶಿವಕವಿ ಶಿವದೇವನೆಂಬವನಿರುವನು. ಆತನು ಗುರು ಲಿಂಗಜಂಗಮಸೇವಾರ್ಥವಾಗಿ ಪಂಪಾಪುರಕ್ಕೆ ಬಂದು ಪರೀಶ್ವರನಿಗೆ ನಮಸ್ಕರಿಸುವನು.[೨] ತನಗೆ ಸತ್ಪುತ್ರನು ಹುಟ್ಟಿದರೆ ಪರೀಶ್ವರನ ಸೇವೆ ಮಾಡುತ್ತ ಆತನಲ್ಲಿ ಅಭ್ಯಾಸಮಾಡುತ್ತಿರುವ ರಾಘವಾಂಕನ ಸೇವೆಮಾಡಿಸುವನು: ಆತನಲ್ಲಿ ಓದಿಸುವೆನು; ಎಂದು ಆಶೀರ್ವಾದ ಪಡೆದು ಶಿವದೇವನು ಸಿದ್ಧವಟಪುರಕ್ಕೆ ಹೋದನು.[೩] ಕೆಲದಿನಗಳಲ್ಲಿಯೇ ಶಿವದೇವನಿಗೆ ಪುತ್ರೋತ್ಸವವಾಗುವುದು. ಮಗುವಿನ ಮುಖದ ಶಿವತೇಜವನ್ನೂ ಕಂಗಳ ಕಾಂತಿಯನ್ನೂ ಕಂಡ ಶಿವದೇವನು ಈತನು ಭೂತಳದ ಕವಿನಿವಹವನ್ನು ಅಚ್ಚರಿಗೊಳಿಸುವ ಕವಿಯಾಗುವನೆಂದು ಬಗೆದು ಆತನಿಗೆ 'ಭೀಮ' ಎಂದು ಹೆಸರಿಡುವನು. ಮಗು ಎಂಟು ವರುಷದವನಾದಾಗ ಆತನನ್ನು ಹಂಪೆಗೆ ಕರೆತಂದು ಹರಿಹರದೇವನಿಗೆ ಒಪ್ಪಿಸುವನು.[೪] ಶಿವದೇವನ ಭಕ್ತಿಭಾವವನ್ನು ಕಂಡು ಹರಿಹರದೇವನಿಗೆ ಆಶ್ಚರ್ಯವಾಗುವುದು. ತನ್ನ ಶಿಷ್ಯ ರಾಘವಾಂಕನನ್ನು ಕರೆದು, ಈತನಿಗೆ ಎಲ್ಲ ವಿದ್ಯೆಗಳನ್ನೂ ಕಲಿಸೆಂದು ಅಪ್ಪಣೆಕೊಡುವನು. ಗುರುವಿನ ಅಪ್ಪಣೆವಿಡಿದು ರಾಘವಾಂಕನು ಭೀಮನಿಗೆ ಸಕಲವಿದ್ಯೆಗಳನ್ನು ಕಲಿಸಿ ಪರಮಾನಂದದಲ್ಲಿ ಮೂಡಿ ಮುಳುಗುವನು.[೫] ಕವಿತಾವಿದ್ಯೆಯಲ್ಲಿ ಪಾರಂಗತನಾದ ಭೀಮನನ್ನು ರಾಘವಾಂಕನು ಹರಿಹರದೇವನಲ್ಲಿಗೆ ಕರೆದೊಯ್ಯುವನು. ಆತನ ಕಾವ್ಯಶಕ್ತಿಯನ್ನೂ ವಿದ್ಯಾನೈಪುಣ್ಯವನ್ನೂ ಕಂಡು ಹರಿಹರನು ಸಂತೋಷಪಡುವನು. ತನ್ನ ಕಾವ್ಯರಚನಾಸಾಮರ್ಥ್ಯವನ್ನು ತೋರಿಸಲು ಭೀಮನು ಹರಿಹರನ ಸಮ್ಮುಖದಲ್ಲಿಯೇ 'ಭೃಂಗಿದಂಡಕ'ವನ್ನು ರಚಿಸುವನು. ಹರಿಹರನು ಮೆಚ್ಚಿ 'ಅದು ಶಿವಭಕ್ತ ಕರ್ಣಾಮೃತವೆ'ಂದುಸುರಿ ಭೀಮಕವಿಯನ್ನು ಆಶೀರ್ವದಿಸಿ ಸಿದ್ಧವಟಪುರಕ್ಕೆ ಕಳುಹಿದನು.[೬] ಮನೆಗೆ ಬಂದ ಭೀಮಕವಿ ತಂದೆಗೆ ನಮಸ್ಕರಿಸಿದನು. ಶಿವದೇವನು ಆತನನ್ನು ಬಿಗಿಯಪ್ಪಿ, ಆತನು ಕಲಿತ ವಿದ್ಯೆಯನ್ನು ಪರೀಕ್ಷಿಸಿ 'ಶಿವಕವಿಗಳ ಪ್ರೇಮದ ಕುವರನೇ, ಭಕ್ತವೃಂದದಾಜ್ಞೆಯನ್ನು ಶಿರಸಾವಹಿಸಿ ಜೀವಿಸು' ಎಂದು ಹರಕೆಯನ್ನಿತ್ತನು.[೭] ಭೀಮಕವಿ ಗುರುಲಿಂಗಜಂಗಮವ

---

೨ ಶ್ರೀಶೈಲ..... ರಾ.ಚಾ. ಸಂ. ೧೫, ಪ. ೩.
೩ ಎನಗೆ ಸತ್ಪುತ್ರ..... ರಾ.ಚಾ. ಸಂ. ೧೫, ಪ. ೪.
೪ ಶಿವದೇವನಾನಂದ..... ರಾ.ಚಾ. ಸಂ. ೧೫, ಪ. ೫.
೫ ವರತನಯನಂ..... ರಾ.ಚಾ. ಸಂ. ೧೫, ಪ. ೬.
೬ ಕವಿತಾದಿ..... ರಾ.ಚಾ. ಸಂ. ೧೫, ಪ. ೭.
೭ ತಂದೆಯಂ..... ರಾ.ಚಾ. ಸಂ. ೧೫, ಪ. ೮.

CC-0. Jangamwadi Math Collection. Digitized by eGangotri



ಗಡೇಕಲ್ಲು ಗ್ರಾಮದಲ್ಲಿರುವ ಭೀಮಕವಿಯ ಸಮಾಧಿ ಮಂದಿರದ ಹೊರನೋಟ
(ಗಡೇಕಲ್ಲು ಗ್ರಾಮವು ಬಳ್ಳಾರಿ ಗುಂತಕಲ್ಲು ಬಸ್‌ಮಾರ್ಗದಲ್ಲಿ ಗುಂತಕಲ್ಲಿಗೆ ಸಮೀಪದಲ್ಲಿದೆ)

CC-0. Jangamwadi Math Collection. Digitized by eGangotri



ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗುತ್ತಿ ತಾಲೂಕಿನ ಗಡೆಕಲ್ಲು ಗ್ರಾಮದಲ್ಲಿರುವ
ಭೀಮಕವಿಯ ಸಮಾಧಿ

CC-0. Jangamwadi Math Collection. Digitized by eGangotri

ನಾರಾಧಿಸುತ್ತ ಶಿವಶರಣರ ಚರಿತ್ರಗಳನ್ನು ಹೇಳುತ್ತಿರಲು ಪಾಲ್ಕುರಿಕೆ ಸೋಮೇಶ್ವರ ಮತ್ತು ಶಿವದೇವ ಸ್ವಪ್ನದಲ್ಲಿ ಬಂದು 'ಬಸವಪುರಾಣ'ವನ್ನು ರಚಿಸುವಂತೆ ಆಶೀರ್ವದಿಸಲು ಎಚ್ಚೆತ್ತು ಹರಗಣದ ನೇಮವನ್ನು ಪಡೆದು, ಭಕ್ತರು ಆದರಿಸುವಂತೆ ಆದನ್ನು ರಚಿಸಿ ಸುಖದಿಂದಿದ್ದನು.[೮]

ಭೀಮಕವಿ ರಾಘವಾಂಕನಲ್ಲಿ ವಿದ್ಯೆ ಕಲಿತನೆಂಬುದು ಉಭಯ ಕವಿಗಳ ಕಾಲದೃಷ್ಟಿಯಿಂದ ಸರಿಹೊಂದುವಂತೆ ತೋರುವುದಿಲ್ಲ. ಭೀಮಕವಿಯ ಕಾಲ ಕ್ರಿ. ಶ. ೧೩೬೯ ಎಂಬುದು ಬಸವಪುರಾಣದ ಸಮಾಪ್ತಿಯನ್ನು ತಿಳಿಸುವ

ಕೋವಿದರು ಕೇಳ್ದೊಳ್ಳಿತೆನಲುಡು
ದೇವ ನಿಧಿ ನಯನೇಂದು ಸಂಖ್ಯೆಗ
ಳೋವಿ ಶಕವರುಷಂಗಳಾಗಲು ಸೌಮ್ಯವತ್ಸರದ
ಶ್ರಾವಣ ಬಹುಳ ಪಕ್ಷ ದಶಮಿ
ಜೀವವಾರದೊಳಾದಿವೃಷಭೇಂ
ದ್ರಾವತಾರದ ಬಸವಚರಿತೆ ಸಮಾಪ್ತವಾಯಿತ್ತು.[೯]

ಎಂಬ ಪದ್ಯದಿಂದ ವಿದಿತವಾಗುತ್ತದೆ. ರಾಘವಾಂಕನ ಕಾಲ ಕ್ರಿ. ಶ. ಸು. ೧೨೨೦ ಎಂದು ತಿಳಿದುಬರುತ್ತದೆ.[೧೦] ಆದುದರಿಂದ ಮೇಲಿನ ಕತೆಗೆ ಐತಿಹಾಸಿಕ ಸತ್ಯತೆ ಯಿಲ್ಲವೆಂಬಲ್ಲಿ ಸಂದೇಹವಿಲ್ಲ.

ಭೀಮಕವಿಯ ತಂದೆ ಶಿವಕವಿಯಾದ ಶಿವದೇವ ಎಂದು ರಾಘವಾಂಕ ಚಾರಿತ್ರ ಹೇಳುತ್ತದೆ. ಶಿವಕವಿದೇವ ಎಂದು ಕವಿ ತನ್ನ ತಂದೆಯ ಹೆಸರನ್ನು ಉಲ್ಲೇಖಿಸಿರುವನು. ಇದರಿಂದ 'ದೇವ' ಎಂಬುದೇ ಕವಿಯ ತಂದೆಯ ಹೆಸರೆಂದು ಕವಿಚರಿತೆಕಾರರ ಮತ.[೧೧] ಅನಘದೇವಾರ್ಯ ಎಂಬಲ್ಲಿ ಅನಘಪದವನ್ನು ಶಿವ ಸೂಚಕವಾಗಿ ಬಳಸಿರುವ ಸಂಭವವಿದೆ. 'ಶಿವಕವಿದೇವ' ಎಂಬುದು 'ಶಿವದೇವ ಕವಿ' ಎಂಬುದರ ಛಂದೋನಿಯಂತ್ರಿತ ರೂಪವೆಂದು ತೋರುತ್ತದೆ. ಕಾರಣ ಭೀಮಕವಿಯ ತಂದೆಯ ಹೆಸರು 'ಶಿವದೇವ' ಎಂಬುದೇ ಸೂಕ್ತ. ಆತನ ಸ್ಥಳ ಸಿದ್ಧವಟಪುರ. ರಾಘವಾಂಕ ಚಾರಿತ್ರದಲ್ಲಿ ಈ ಉಲ್ಲೇಖ ಸ್ಪಷ್ಟವಾಗಿಬರುತ್ತದೆ.[೧೨]

---

೮ ಗುರುಲಿಂಗಜಂಗಮ..... ರಾ.ಚಾ. ಸಂ. ೧೫, ಪ. ೯.

೯ ಬ.ಪು. ಸಂ. ೬೦, ಪ. ೯೨.

೧೦ ಮಹಾಕವಿ ರಾಘವಾಂಕ: ಕಾಲನಿರ್ಣಯ.

೧೧ ಕರ್ನಾಟಕ ಕವಿಚರಿತೆ: ಹೊಸ ಆವೃತ್ತಿ.

೧೨ ರಾ.ಚಾ. ಸಂ. ೧೫, ಪ. ೩: ಸಿದ್ಧವಟಪುರದೊಳಿಹನಾಂಧ್ರಭಾಷಾಸಕೃವಿತ್ವಕೋವಿದ ನಪ್ಪ.....ಶಿವದೇವನು.

CC-0. Jangamwadi Math Collection. Digitized by eGangotri

ಬಸವಪುರಾಣದಲ್ಲಿ ಪ್ರಾರಂಭದ ಪದ್ಯದೊಳಗೆ ಬಸವಮಹಾಗುರುವನ್ನು ಸ್ತುತಿಸಿ ಮುಂದಿನ ನಾಲ್ಕು ಪದ್ಯಗಳಲ್ಲಿ ಸಿದ್ಧವಟನಾಥನನ್ನು ಸ್ಮರಿಸುತ್ತಾನೆ. ಈತನು ಹಲವರು ಊಹಿಸಿದಂತೆ[೧೩] ಕವಿಯ ಗುರುವಲ್ಲ. ಏಕೆಂದರೆ ಆ ಪದ್ಯಗಳಲ್ಲಿ ಬರುವ ಅಗಜಾವಾಮಭಾಗೋದ್ದಾಮವಪುರಭಿರಾಮ, ಕಾಮತಾತಪಿತಾಮಹ ಪ್ರಮುಖಾಮರೇಂದ್ರಕ್ಷೇಮ ಮುಂತಾದ ವಿಶೇಷಣಗಳೆಲ್ಲ ಶಿವನಿಗೆ ಸಲ್ಲುತ್ತವೆ. ಆದುದರಿಂದ ಸಿದ್ಧವಟನಾಥನು ಕವಿಯ ಊರಾದ ಸಿದ್ಧವಟಪುರದ ಅಧಿದೇವತೆ. ಆ ಸಿದ್ಧವಟಪುರವು ಶ್ರೀಶೈಲದ ದಕ್ಷಿಣದ್ವಾರವೆನಿಸಿದ್ದಿತಂತೆ.[೧೪]

ಕೊಂಡಗುಳಿ ಕೇಶಿರಾಜ ಹಾಗೂ ಶ್ರೀಪತಿಪಂಡಿತ, ಶಿವಲೆಂಕಮಂಚಣ ಪಂಡಿತ, ಮಲ್ಲಿಕಾರ್ಜುನಪಂಡಿತ ಇವರುಗಳ ಕೃಪೆ ಪಡೆದು ಕವಿ ಬಸವಣದಂಡ ನಾಥನ ಕಾವ್ಯವನ್ನೊರೆಯುವನು.[೧೫] ಹಂಪೆಯ ಹರಿಹರದೇವ ರಾಘವಾಂಕ ಈ ಕವಿಗಳಿಗೆ ವಂದಿಸುವನು. ಪುರಾತನ ಹಾಗೂ ನೂತನ ಶಿವಕವಿಗಳನ್ನು, ಶಿವಧರ್ಮ ಶಾಸ್ತ್ರಕಳಾವಿಶಾರದರನ್ನು, ಶಿವತತ್ವಕೋವಿದರನ್ನು, ಸಕಲಾಗಮಜ್ಞರನ್ನು ಭಾವಿಸಿ ಭೀಮಕವಿ ಬಸವಪುರಾಣವನ್ನು ರಚಿಸುವನು. ಬಸವಪುರಾಣವಲ್ಲದೆ ಭೃಂಗಿಡ್ಗಡಕ ಮತ್ತು ಭೀಮಕವೀಶ್ವರರಗಳೆ ಎಂಬೆರಡು ಕೃತಿಗಳನ್ನೂ ಈ ಕವಿ ರಚಿಸಿರುವಂತೆ ತಿಳಿದುಬರುತ್ತದೆ. ಆದರೆ ಈ ಎರಡು ಕೃತಿಗಳು ಇನ್ನೂ ಉಪಲಬ್ಧವಾಗಿರುವುದಿಲ್ಲ.

ಕಾವ್ಯವಿವೇಚನೆ

ವೀರಶೈವ ಪುರಾಣಗಳು

ಪುರಾಣಗಳು ಭಾರತೀಯ ಜನಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದು ಕೊಂಡಿವೆ; ಮತ್ತು ಅತಿ ಪ್ರಮುಖ ಪಾತ್ರವಹಿಸಿವೆ. ವೇದ ಆಗಮಗಳಂತೆ ಪುರಾಣಗಳೂ ಭಾರತೀಯರ ದೃಷ್ಟಿಯಲ್ಲಿ ಪೂಜ್ಯವಾಗಿವೆ. ವೇದಗಳಿಗೆ ಬರೆದ ಭಾಷ್ಯವೇ ಪುರಾಣಗಳು ಎಂಬ ಕಲ್ಪನೆ ಬೆಳೆದುಬಂದಿದೆ.

"ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬ್ರಹ್ಮಯೇತ್"

ಎಂಬ ಉಕ್ತಿಯಲ್ಲಿ ಇತಿಹಾಸ ಮತ್ತು ಪುರಾಣಗಳು, ವೇದಗಳ ಸ್ಪಷ್ಟೀಕೃತ

---

೧೩. ಬ.ಪು. ಜನಪ್ರಿಯ ಆವೃತ್ತಿ, ಉಪೋದ್ಘಾತ ಪು. LVI
೧೪ ರಾ.ಚಾ. ಸಂ. ೧೫, ಪ. ೩.
೧೫ ಬ.ಪು. ಸಂ. ೧, ಪ. ೧೦–೧೨.

CC-0. Jangamwadi Math Collection. Digitized by eGangotri

ಆವೃತ್ತಿ ಎಂಬ ಹೇಳಿಕೆ ಇದೆ. ಋಷಿಗಳು ಕಂಡು ಉಂಡ ಬ್ರಹ್ಮಜ್ಞಾನದ ಬ್ರಹ್ಮಾನಂದದ ರಹಸ್ಯ ವೇದಗಳಲ್ಲಿ ಅಡಕವಾಗಿದೆ. ವೇದ ಸೂಕ್ತಗಳಲ್ಲಿ ಉಕ್ತವಾದ ತತ್ವ ಜ್ಞಾನ ಜನಸಾಮಾನ್ಯರ ಗ್ರಹಣಶಕ್ತಿಗೆ ನಿಲುಕದಾಗಿತ್ತು. ಮೊದಲನೆಯದಾಗಿ ಸಾಮಾನ್ಯನ ಬೌದ್ಧಿಕ ಅಳತೆಗೋಲು ತತ್ವಜ್ಞಾನದ ಆಳಕ್ಕೆ ಇಳಿಯಲಸಾಧ್ಯವಾಯಿತು. ಎರಡನೆಯದಾಗಿ ವೈದಿಕ ಭಾಷೆ, ಆಡುಭಾಷೆಯಿಂದ ಭಿನ್ನವಾಗಿದ್ದು ಸಾಮಾನ್ಯನಿಂದ ಬಹುದೂರದಲ್ಲಿತ್ತು. ಇವುಗಳ ಫಲವಾಗಿ ಕೇವಲ ಬುದ್ಧಿ ಮತ್ತೆಯ ಸಹಾಯದಿಂದ ವೇದಗಳ ಅಧ್ಯಯನ ಸಾಗದಾಯಿತು. ಹೀಗಾಗಿ ವೇದಗಳ ಅಧ್ಯಯನಕ್ಕೆ ವ್ಯಾಖ್ಯಾನದ ಆವಶ್ಯಕತೆ ಹೆಚ್ಚಾಯಿತು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೆಂಬ ಚತುರ್ವೇದಗಳು ನಾಲ್ಕು ಭಿನ್ನ ಮೂಲಭೂತತತ್ವಗಳ ವಿವರಣೆಯನ್ನು ಕೊಡುತ್ತವೆ. ಭಾರತೀಯ ಮಹಾಕಾವ್ಯಗಳೆನಿಸಿದ ರಾಮಾಯಣ ಮಹಾಭಾರತಗಳ ರಚನೆಯ ಉದ್ದೇಶ, ವೇದ ಉಪನಿಷತ್ತುಗಳ ಧ್ಯೇಯ ಮತ್ತು ಆದರ್ಶಗಳ ಪ್ರಚಾರ. ಪ್ರಾಚೀನ ಕಾಲದಲ್ಲಿ ಪ್ರಸಿದ್ಧರಾಗಿದ್ದ ಮಹಾವ್ಯಕ್ತಿಗಳ ಕಥೆಯನ್ನು ಮನೋಜ್ಞವಾಗಿ ಹೇಳುವ ಪುರಾಣಗಳು, ಅವರ ಉದಾರ ಚರಿತೆಯ, ಧ್ಯೇಯ ಸಾಧನೆಯ ಆದರ್ಶಗಳ ಕಡೆಗೆ ಸಾಮಾನ್ಯನ ಮನವನ್ನು ಆಕರ್ಷಿಸುತ್ತವೆ. ಧರ್ಮ ಮತ್ತು ಕರ್ಮಗಳ ಬೋಧನೆ ಮತ್ತು ಪ್ರಚಾರ ಕಾರ್ಯವನ್ನು ಪುರಾಣಗಳು ಮಾಡಿದುವೆನ್ನಬಹುದು.

ಪುರಾಣ ಮತ್ತು ಮಹಾಕಾವ್ಯಗಳ ಒಳ ಆತ್ಮ ಸ್ಥೂಲವಾಗಿ ಒಂದೇ ಆಗಿ ಕಂಡುಬಂದರೂ ಪುರಾಣಗಳ ವಸ್ತು ಮತ್ತು ರೀತಿಯಲ್ಲಿ ಸೂಕ್ಷ್ಮ ವ್ಯತ್ಯಾಸ ಕಂಡುಬರುತ್ತದೆ. ಇತಿಹಾಸ ಅಥವಾ ಮಹಾಕಾವ್ಯಗಳಲ್ಲಿ ಕಥನವಸ್ತು ಪ್ರಮುಖವಾದರೆ, ಪುರಾಣಗಳಲ್ಲಿ ತಾತ್ವಿಕ ಮತ್ತು ಧಾರ್ಮಿಕ ಅಂಶಗಳು ಪ್ರಾಮುಖ್ಯತೆಯನ್ನು ಪಡೆದಿವೆ. ವಿಶ್ವೋತ್ಪತ್ತಿ ಶಾಸ್ತ್ರ, ಪರಮಾರ್ಥ ವಿದ್ಯೆ ಮತ್ತು ತತ್ವ ಜ್ಞಾನಗಳ ವಿವೇಚನೆಯೇ ಹೆಚ್ಚಾಗಿ, ಕಥನ ಅಂಶ ಕಡಿಮೆಯಾಗಿದೆ. ಮಹಾಕಾವ್ಯಗಳಲ್ಲಿರುವ ಕಥೆಯ ಬೇರು ಐತಿಹಾಸಿಕವಿದ್ದಿರಬಹುದು; ಆದರೆ ಪುರಾಣಗಳಲ್ಲಿ ಸಂಪೂರ್ಣ ಕಾಲ್ಪನಿಕ. ಪುರಾಣ ಮತ್ತು ಮಹಾಕಾವ್ಯಗಳು ವೇದಗಳ ಸರಿಸಮಾನವಾಗಿ ನಿಂತಿವೆ.

ವಾಜಸ್ನೇಯ ಬ್ರಾಹ್ಮಣೋಪನಿಷತ್ತು ಹೀಗೆ ಹೇಳುತ್ತದೆ:

"ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇ ತದ್ಯದ್ಋಗ್ವೇದೋ
ಯಜುರ್ವೇದಃ ಸಾಮವೇದೋಽಥರ್ವಾಂಗಿರಸ ಇತಿಹಾಸಃ ಪುರಾಣಂ ॥"

ನಾಲ್ಕು ವೇದಗಳು, ಇತಿಹಾಸ ಮತ್ತು ಪುರಾಣಗಳು ಜ್ಞಾನರೂಪದಲ್ಲಿರುವ ದೇವದೇವನ ಉಸಿರು. ಉಚ್ಛ್ವಾಸ ನಿಶ್ವಾಸಗಳು ಹೇಗೆ ಪ್ರಕೃತಿಸಹಜವೋ

CC-0. Jangamwadi Math Collection. Digitized by eGangotri

ಅಂತೆಯೇ ವೇದ ಪುರಾಣಗಳ ನಿರ್ಮಿತಿಯೂ ಅಸಹಾಯ ಮತ್ತು ಸಹಜ ವಾದುದು.

ವಾಯುಪುರಾಣ ಮತ್ತೂ ಮುಂದುವರಿದು ಹೀಗೆ ಹೇಳುತ್ತದೆ:

"ಪುರಾಣಂ ಸ್ವರಶಾಸ್ತ್ರಾಣಾಂ ಪ್ರಥಮಂ ಬ್ರಹ್ಮಣಾ ಸ್ಮೃತಂ
ಅನಂತರಂ ವಕ್ತ್ರೇಭ್ಯೋ ವೇದಾಸ್ತಸ್ಯ ವಿನಿರ್ಗತಾಃ ॥"

ಪರಬ್ರಹ್ಮನು ಮೊದಲಿಗೆ ಪುರಾಣಗಳನ್ನು ಸೃಷ್ಟಿಸಿ ತರುವಾಯ ವೇದಗಳನ್ನು ರಚಿಸಿದ್ದಾನೆ ಎಂದು ಮೇಲಿನ ಶ್ಲೋಕ ಹೇಳುತ್ತದೆ. ಇದರ ಸತ್ಯಾಸತ್ಯತೆಯ ಬಗೆಗೆ ಅನುಮಾನವಾದರೂ, ಒಂದಾನೊಂದು ಕಾಲದಲ್ಲಿ ಪುರಾಣಗಳಿಗೆ ಭಾರತೀಯರು ಕೊಟ್ಟ ಸ್ಥಾನದ ಅರಿವು ನಮಗಾಗುತ್ತದೆ.

ಪುರಾಣಗಳು ವೇದವ್ಯಾಸಕೃತ ಎಂಬ ಪ್ರತೀತಿ ಇದೆ. ಆದರೆ ಇವುಗಳ ವಸ್ತು ಮತ್ತು ರಚನೆಗಳನ್ನು ದೃಷ್ಟಿಯಲ್ಲಿರಿಸಿ ಪರಿಶೀಲಿಸಿದರೆ ಏಕಕರ್ತೃತ್ವದ ಬಗೆಗೆ ಅನುಮಾನವಾಗುತ್ತದೆ. ವೇದವ್ಯಾಸಕೃತವೆಂದು ಹೇಳಲಾದ ವೇದಗಳ ವಿಸ್ತೃತ ರೂಪವೇ ಪುರಾಣಗಳು ಎಂಬುದೇನೋ ನಿಜ. ವೇದಗಳ ತಾತ್ವಿಕ ವಿವೇಚನೆ ಉಪನಿಷತ್ತು ಮತ್ತು ಭಗವದ್ಗೀತೆಗಳಲ್ಲಿಯೇ ವಿವರವಾಗಿ ಕಾಣ ದೊರೆಯುತ್ತದೆ; ವೇದಗಳಲ್ಲಿರುವ ಸಾಂಕೇತಿಕ ಕಥೆಗಳಾದ ಸತ್ಯಕಾಮ, ಜಾಬಾಲ, ನಚಿಕೇತ ಮೊದಲಾದುವು ಉಪನಿಷತ್ತುಗಳಲ್ಲಿ ವರ್ಣಿತವಾಗಿ ಪ್ರಸಿದ್ಧವಾಗಿವೆ. ಭಗವದ್ಗೀತೆ ಮಹಾಭಾರತದ ಒಂದು ಅಂಗವಾಗಿ ಬಂದಿದೆ. ವೇದಗಳ ತಾತ್ತ್ವಿಕ ವಿವೇಚನೆಯೇ ಉಪನಿಷತ್ತು ಮತ್ತು ಭಗವದ್ಗೀತೆಗಳಲ್ಲಿಯೂ ಕಂಡುಬಂದರೂ. ಸುಲಲಿತವಾದ ಶೈಲಿ, ಸಂಕ್ಷಿಪ್ತತೆಗಳು ಓದುಗರ ಮೇಲೆ ಪರಿಣಾಮ ಬೀರುತ್ತವೆ. ಕಾಲಕ್ರಮೇಣ ಉಪನಿಷತ್ತು ಮತ್ತು ಭಗವದ್ಗೀತೆಗಳ ಮೇಲೆಯೂ ವ್ಯಾಖ್ಯಾನ ಬರೆಯುವ ಆವಶ್ಯಕತೆ ಉಂಟಾಯಿತು. ಮಹತ್ವಪೂರ್ಣವಾದ ಮತ್ತು ಆಳವಾದ ತತ್ವವಿವೇಚನೆಯನ್ನು ಜನಪ್ರಿಯವಾಗುವಂತೆ ನಿರೂಪಿಸುವ ಕಾರ್ಯ ಪುರಾಣಗಳಲ್ಲಿ ಸಿದ್ಧಿಸಿತು. ಕೆಲವು ಉದಾಹರಣೆಗಳನ್ನು ನೋಡಬಹುದು:

ಈ ಜಗತ್ತು ಪ್ರಕೃತಿ ಮತ್ತು ಪುರುಷರ ಲೀಲೆಯಿಂದ ಉದ್ಭವವಾಯಿತು.

ದೇವೀಭಾಗವತಪುರಾಣ ಜಗತ್ತಿನ ವ್ಯುತ್ಪತ್ತಿಯನ್ನು ಮನಸೆಳೆಯುವ ಮನವೊಲಿಸುವ ಕಥನರೂಪದಲ್ಲಿ ಹೆಣೆಯುತ್ತದೆ. ಪುರುಷ, ಪ್ರೇಮಪ್ರತೀಕವೆಂದೂ, ಪ್ರಕೃತಿ ಸೌಂದರ್ಯಪ್ರತೀಕವೆಂದೂ ವರ್ಣಿತರಾಗಿದ್ದಾರೆ. ಈ ಎರಡು ಶಕ್ತಿಗಳ ಮಿಲನದಿಂದ ಜನಿಸಿದುದೇ ಈ ಬ್ರಹ್ಮಾಂಡ.

ಬ್ರಹ್ಮದೇವ ಮತ್ತು ವಿಷ್ಣುದೇವರಲ್ಲಿ ಯಾರು ಹೆಚ್ಚು ಎಂಬ ಬಗೆಗೆ ಒಮ್ಮೆ ಕಲಹ ಹುಟ್ಟಿತು. ನಿರ್ಣಯಕ್ಕಾಗಿ ಶಿವನೆಡೆಗೆ ಬಂದಾಗ, ತಾನು ಲಿಂಗಾ

CC-0. Jangamwadi Math Collection. Digitized by eGangotri

ಕಾರವನ್ನು ಹೊಂದುವುದಾಗಿಯೂ ಬ್ರಹ್ಮನು ಮುಡಿಯನ್ನು ಮುಟ್ಟಿ ಬರ ಬೇಕೆಂದೂ, ವಿಷ್ಣು ಪಾದಗಳನ್ನು ಮುಟ್ಟಿ ಬರಬೇಕೆಂದೂ ಸೂಚಿಸಿದ. ಯಾರು ಶೀಘ್ರವಾಗಿ ಹಿಂದಿರುಗುವರೋ ಅವರೇ ಹಿರಿಯರು ಎಂದ ಶಿವನ ಮಾತಿಗೆ ಒಪ್ಪಿ ತಮ್ಮ ತಮ್ಮ ಗುರಿಯತ್ತ ಸಾಗಿದರು. ಲಿಂಗಾಕಾರ ತಾಳಿದ ಶಿವನು ಬೆಳೆ ದನು. ಪಯಣದಿಂದ ಆಯಾಸಗೊಂಡ ಬ್ರಹ್ಮನು ನಿಂತು ಸುತ್ತಲೂ ದೃಷ್ಟಿ ಹರಿಸಿದನು. ಆಕಸ್ಮಿಕವಾಗಿ ಕಾಮಧೇನು ಗೋಚರಿಸಿತು. ಬ್ರಹ್ಮನಿಗೆ ಒಂದು ಉಪಾಯ ಹೊಳೆಯಿತು. ತಾನು ಲಿಂಗದ ಮುಡಿಯನ್ನು ಮುಟ್ಟಿದುದಾಗಿ ಸುಳು ಸಾಕ್ಷ್ಯ ನುಡಿಯಲು ಕೇಳಿಕೊಂಡ. ಸೃಷ್ಟಿಕರ್ತನಾದ ಬ್ರಹ್ಮನೇ ಕೇಳುತ್ತಿರುವಾಗ ತಾನು ಒಲ್ಲೆ ಎನ್ನಲಾಗದೆ, ಸುಳ್ಳು ಹೇಳುವ ಮನಸ್ಸೂ ಇಲ್ಲದೆ ಕಾಮಧೇನು ಸಂದಿಗ್ಧದಲ್ಲಿ ಸಿಲುಕಿತು. ಒಂದು ಕ್ಷಣ ವಿಚಾರಮಾಡಿ ಒಪ್ಪಿಗೆ ಕೊಟ್ಟಿತು. ಬ್ರಹ್ಮ ಕಾಮಧೇನುವಿನೊಡನೆ ಶಿವನಲ್ಲಿಗೆ ಬರುವ ವೇಳೆಗೆ ವಿಷ್ಣುವೂ ಆಗಮಿಸಿದ. ಇಬ್ಬರ ಕಾರ್ಯಸಾಧನೆಯ ಬಗೆಗೆ ಶಿವ ಪ್ರಶ್ನಿಸಲು ವಿಷ್ಣು ಮೌನ ತಾಳಿದ; ಬ್ರಹ್ಮ ತಾನು ಹೂಡಿದ್ದ ಸಂಚಿನ ಪ್ರಕಾರ ತಾನು ಶಿವಲಿಂಗದ ಮುಡಿಯನ್ನು ಮುಟ್ಟಿ ಬಂದುದಾಗಿಯೂ ಆದಕ್ಕೆ ಕಾಮಧೇನುವೇ ಸಾಕ್ಷಿಯೆಂದೂ ಹೇಳಿದ. ಬ್ರಹ್ಮದೇವನ ಸಂಚಿನ ಸುಳ್ಳು ಶಿವನಿಗೆ ತಿಳಿಯದೆ ಇದ್ದೀತೆ? ಹುಸಿನಗೆಯೊಡನೆ ಶಿವ ಕಾಮಧೇನುವಿನೆಡೆಗೆ ಪ್ರಶ್ನಾರ್ಥಕದೃಷ್ಟಿ ಹರಿಸಿದಾಗ, ಕಾಮಧೇನು ತಲೆಯ ನ್ನಲುಗಿಸಿ ಬ್ರಹ್ಮನ ಪರ ಸಾಕ್ಷ್ಯ ನುಡಿಯಿತು; ಬಾಲವನ್ನು ಮೇಲೆತ್ತಿ ಅಲ್ಲಾಡಿಸಿ ಬ್ರಹ್ಮನು ಹೇಳುತ್ತಿರುವುದು ನಿಜವಲ್ಲ ಎಂಬ ಸಂಕೇತವನ್ನು ಮಾಡಿತು. ಸುಳ್ಳು ಮತ್ತು ಮೋಸಗಳಿಗಾಗಿ ಬ್ರಹ್ಮನು ಶಿಕ್ಷೆಯನ್ನನುಭವಿಸಬೇಕಾಯಿತು. ಲಿಂಗ ಅನಾದಿ ಮತ್ತು ಅನಂತ ಎಂಬುದು ನಿರ್ವಿವಾದ ಎಂದು ಶಿವ ಸ್ಪಷ್ಟಪಡಿಸಿದ. ಈ ತಾತ್ವಿಕ ಸತ್ಯವನ್ನು ಸ್ಥಿರಪಡಿಸುವ ಸಲುವಾಗಿಯೇ ಲಿಂಗಪುರಾಣದಲ್ಲಿ ಈ ಕಥೆಯನ್ನು ಹೆಣೆಯಲಾಗಿದೆ.

ಮತ್ಸ್ಯಪುರಾಣದಲ್ಲಿ ಬ್ರಹ್ಮ, ತನ್ನ ಮಗಳಾದ ಸರಸ್ವತಿಯನ್ನು ವಿವಾಹ ವಾದ ಒಂದು ಕಥೆ ಉಕ್ತವಾಗಿದೆ. ಬ್ರಹ್ಮ ಕರ್ಮದೇವತೆ; ಸರಸ್ವತಿ ಜ್ಞಾನದೇವತೆ ಯಾವುದೇ ಕ್ರಿಯೆ ನಿರ್ದೋಷವೆಂದು ಸಿದ್ಧವಾಗಬೇಕಾದರೆ ಅದಕ್ಕೆ ಜ್ಞಾನದ ಬೆಂಬಲ ಅತ್ಯಾವಶ್ಯಕ. ಜ್ಞಾನಯುಕ್ತ ಕ್ರಿಯೆ ಮಾತ್ರ ಮಾನವನನ್ನು ಮೋಕ್ಷ ದೆಡೆಗೆ ಒಯ್ಯಲು ಸಾಧಕವಾಗುತ್ತದೆ. ಜ್ಞಾನರಹಿತ ಕ್ರಿಯೆಯೇ ಆಗಲಿ, ಕ್ರಿಯಾ ರಹಿತ ಜ್ಞಾನವೇ ಆಗಲಿ ದುಃಖ ಮತ್ತು ಮರ್ತ್ಯತ್ವದ ಕಡೆಗೆ ಒಯ್ಯುತ್ತವೆ. ಜ್ಞಾನ ಮತ್ತು ಕ್ರಿಯೆಗಳ ಸಮ್ಮಿಳನದ ದ್ಯೋತಕವಾಗಿಯೇ ಬ್ರಹ್ಮ, ಸರಸ್ವತಿ ಯನ್ನು ತನ್ನ ಹೃದಯದಲ್ಲಿಯೇ ಇರಿಸಿಕೊಂಡ.

ಹೀಗೆ ಪುರಾಣಗಳು ಸಾಂಕೇತಿಕ ಕಥೆಗಳ ಆಧಾರದ ಮೇಲೆ ರಚಿತವಾಗಿವೆ.

CC-0. Jangamwadi Math Collection. Digitized by eGangotri

"ಪುರಾಣಗಳು ತಮ್ಮ ಹೆಸರಿಗೆ ತಕ್ಕಂತೆ ಪುರಾತನ ಕಾಲದಿಂದಲೂ ಸಾಗಿಬಂದಿರುವ ಸೃಷ್ಟಿವರ್ಣನೆ, ಸಾಂಕೇತಿಕ ಕಟ್ಟುಕತೆ, ರೂಪಕ, ಸಂಪ್ರದಾಯ, ಮತ, ಸಮಾಜ ನಿಯಮ ಮುಂತಾದವುಗಳ ಜನಪ್ರಿಯ ನಿರೂಪಣೆಗಳು. ಇದೇ ಪುರಾಣಗಳ ಮೂಲೋದ್ದೇಶ. ಉಚ್ಚತಮವಾದ ಆಧ್ಯಾತ್ಮಿಕ ಹಾಗೂ ದಾರ್ಶನಿಕ ಸತ್ಯಗಳನ್ನು ಕಥೆ, ಆಖ್ಯಾನ, ಸಂಕೇತ, ಅದ್ಭುತಕಥೆ, ಪವಾಡ, ದೃಷ್ಟಾಂತಗಳ ಮೂಲಕ ಜನಸಾಮಾನ್ಯರಿಗೆ ತಿಳಿಯಪಡಿಸುವುದೇ ಪುರಾಣಗಳ ಗುರಿ"[೧೫] ಎಂದು ಶ್ರೀ ಅರವಿಂದರು ಹೇಳಿರುವುದು ಗಮನಾರ್ಹ. ಒಂದು ಪ್ರಮುಖವಾದ ಕಥೆ ಪ್ರಚಲಿತವಾಗಿದ್ದರೆ ಅದರ ಸುತ್ತ ನೂರಾರು ಉಪಕಥೆಗಳು ಹೆಣೆದುಕೊಂಡಿರುತ್ತವೆ. ಪ್ರತಿಯೊಂದು ಉಪಕಥೆಯೂ ಒಂದೊಂದು ತಾತ್ವಿಕ ಸತ್ಯ ಅಥವಾ ನೈತಿಕ ಸೂತ್ರವನ್ನು ಸ್ಪಷ್ಟೀಕರಿಸುತ್ತದೆ. ಪುರಾಣಗಳಲ್ಲಿ ಕಂಡುಬರುವ ಸಾಂಕೇತಿಕತೆಯ ಸಂಪೂರ್ಣ ಜ್ಞಾನ ಲಭಿಸಿದಾಗ ಮಾತ್ರ ಪುರಾಣಗಳ ಅಧ್ಯಯನದಲ್ಲಿ ಆಸಕ್ತಿ, ಅಭಿರುಚಿಗಳು ಬೆಳೆಯುತ್ತವೆ.

ಹದಿನೆಂಟು ಪುರಾಣಗಳು ಮತ್ತು ಅವುಗಳ ಕರ್ತೃತ್ವ

ಚತುರ್ವೇದಗಳು, ಷಡಂಗಗಳಾದ ಶಾಸ್ತ್ರಗಳು ಮತ್ತು ೧೮ ಪುರಾಣಗಳ ಉಲ್ಲೇಖ ಭಾರತೀಯ ಸಾಹಿತ್ಯದಲ್ಲಿ ಮೇಲೆ ಮೇಲೆ ಕಂಡುಬರುತ್ತದೆ. ಈ ೧೮ ಪುರಾಣಗಳು ಕೆಳಗಿನಂತಿವೆ:

೧. ಬ್ರಹ್ಮಪುರಾಣ	೧೦. ಬ್ರಹ್ಮವೈವರ್ತಪುರಾಣ
೨. ಪದ್ಮಪುರಾಣ	೧೧. ಲಿಂಗಪುರಾಣ
೩. ವಿಷ್ಣುಪುರಾಣ	೧೨. ವರಾಹಪುರಾಣ
೪. ಶಿವಪುರಾಣ	೧೩. ಸ್ಕಂದಪುರಾಣ
೫. ಭಾಗವತಪುರಾಣ	೧೪. ವಾಮನಪುರಾಣ
೬. ನಾರದೀಯ ಪುರಾಣ	೧೫. ಕೂರ್ಮಪುರಾಣ
೭. ಮಾರ್ಕಂಡೇಯಪುರಾಣ	೧೬. ಮತ್ಸ್ಯಪುರಾಣ
೮. ಅಗ್ನಿಪುರಾಣ	೧೭. ಗರುಡಪುರಾಣ
೯. ಭವಿಷ್ಯಪುರಾಣ	೧೮. ಬ್ರಹ್ಮಾಂಡಪುರಾಣ

---

೧೫ Shri Aurobindo: Foundations of Indian Culture p. 352

CC-0. Jangamwadi Math Collection. Digitized by eGangotri

ಮೇಲಿನ ೧೮ ಪುರಾಣಗಳೂ ವ್ಯಾಸರಚಿತವೆಂಬ ನಂಬಿಕೆ ಬೆಳೆದುಬಂದಿರುವುದರಿಂದ ಇವುಗಳನ್ನು "ವ್ಯಾಸೋಕ್ತ ಪುರಾಣಗಳು" ಎಂದೇ ಕರೆಯುವ ರೂಢಿ ಇದೆ. ಮಹಾಭಾರತವೂ ವ್ಯಾಸಭಾರತ ಎಂಬ ಹೆಸರನ್ನೇ ಪಡೆದಿದೆ. ಎಲ್ಲವೂ "ವ್ಯಾಸ ಕೃತ" ಎಂಬ ಸಾಮಾನ್ಯ ನಂಬಿಕೆ ಇದ್ದರೂ, ಇದು ನಂಬಲಸಾಧ್ಯ. ಮಹಾಭಾರತ, ಆದಿಯಲ್ಲಿ "ಜಯ" ಎಂಬ ೫೦೦೦ ಸೂತ್ರಗಳಿಂದ ಕೂಡಿದ್ದ ಚಿಕ್ಕ ಗ್ರಂಥವಾಗಿತ್ತು. ಕಾಲಕ್ರಮೇಣ ಹಲವಾರು ಕವಿಗಳು ಚಮತ್ಕಾರದಿಂದ ಕೈಯಾಡಿಸಿದುದರಿಂದ ಗಾತ್ರ ಹಿಗ್ಗಿ ಇಂದಿನ ಮಹಾಭಾರತವಾಯಿತು. ಪುರಾಣಗಳಲ್ಲೂ ಹೀಗೆಯೇ ಏನಾದರೂ ಆಗಿರಬಹುದು. ಹಿಗ್ಗುವಿಕೆ ಮತ್ತು ಪ್ರಕ್ಷಿಪ್ತತೆಗಳಲ್ಲಿ ಕಲಾನೈಪುಣ್ಯ ವಿಲ್ಲದ ಅಪಕ್ವತೆ ಪುರಾಣಗಳಲ್ಲಿ ಕಂಡುಬರುತ್ತದೆ. ೧೫ನೆಯ ಶತಮಾನದ ಸುರಂಗ ಕವಿ ತನ್ನ ತ್ರಿಷಷ್ಟಿ ಪುರಾತನ ಚಾರಿತ್ರೆದಲ್ಲಿ ತನ್ನ ಕೃತಿಯ ಆಕರ ಲೈಂಗ್ಯಪುರಾಣ ವೆಂದು ಹೇಳುತ್ತಾನೆ. ಈ ಕಥೆಗಳು ಲಿಂಗಪುರಾಣದಲ್ಲಿ ಇಂದು ಕಂಡುಬರುವುದಿಲ್ಲ ವಾದುದರಿಂದ ಪ್ರಕ್ಷಿಪ್ತತೆ ಮತ್ತು ವಿಕ್ಷಿಪ್ತತೆಗಳು ಇನ್ನೂ ನಡೆಯುತ್ತಿರಬಹುದೆಂದು ಊಹಿಸಬಹುದು. ೧೮ ಪುರಾಣಗಳೂ ವಿಕಕರ್ತೃಕಗಳಾಗಿರದೆ ಭಿನ್ನ ಕರ್ತೃಕಗಳಾಗಿದ್ದು ಕಾಲಕ್ರಮೇಣ ವಿಸ್ತೃತವಾಗಿರುವ ಸಂಭವವೇ ಹೆಚ್ಚು. ಪುರಾಣಗಳ ವಸ್ತುವಿನ ಆಧಾರದ ಮೇಲೆ ಅವುಗಳನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸಬಹುದು:

೧. ಬ್ರಹ್ಮಸಂಬಂಧಿಯಾದ ಪುರಾಣಗಳು:
ಬ್ರಹ್ಮಪುರಾಣ, ಬಹ್ಮವೈವರ್ತಪುರಾಣ.

೨. ವಿಷ್ಣುಸಂಬಂಧಿಯಾದ ಪುರಾಣಗಳು:
ವಿಷ್ಣುಪುರಾಣ, ಭಾಗವತಪುರಾಣ, ಕೂರ್ಮಪುರಾಣ, ಗರುಡ ಪುರಾಣ, ವರಾಹಪುರಾಣ, ವಾಮನಪುರಾಣ, ಮತ್ಸ್ಯಪುರಾಣ.

೩. ಶಿವಸಂಬಂಧಿಯಾದ ಪುರಾಣಗಳು:
ಶಿವಪುರಾಣ, ಮಾರ್ಕಂಡೇಯಪುರಾಣ, ಲಿಂಗಪುರಾಣ, ಸ್ಕಂದ ಪುರಾಣ.

೪. ಇತರ ಪುರಾಣಗಳು:
ಭವಿಷ್ಯಪುರಾಣ, ಪದ್ಮಪುರಾಣ, ನಾರದೀಯಪುರಾಣ, ಅಗ್ನಿ ಪುರಾಣ, ಬ್ರಹ್ಮಾಂಡಪುರಾಣ.

ಮೋನೀರ್ ವಿಲ್ಲಿಯಮ್ಸ್, ಸಂಸ್ಕೃತ ಶಬ್ದಕೋಶದ ಪ್ರಕಾರ, ೧೮ ಪುರಾಣಗಳ ವಿಭಾಗಕ್ರಮ ಕೆಳಗಿನಂತಿವೆ:

CC-0. Jangamwadi Math Collection. Digitized by eGangotri

೧. ರಾಜಸಿಕ ಉತ್ಕರ್ಷವನ್ನು ಪ್ರತಿಪಾದಿಸುವ ಬ್ರಹ್ಮಸಂಬಂಧೀ ಪುರಾಣಗಳು:
ಬ್ರಹ್ಮಾಂಡಪುರಾಣ, ಬ್ರಹ್ಮಪುರಾಣ, ಬ್ರಹ್ಮವೈವರ್ತಪುರಾಣ.
ಮಾರ್ಕಂಡೇಯಪುರಾಣ, ಭವಿಷ್ಯಪುರಾಣ, ವಾಮನಪುರಾಣ.

೨. ಸಾತ್ವಿಕ ಉತ್ಕರ್ಷವನ್ನು ಪ್ರತಿಪಾದಿಸುವ ವಿಷ್ಣುಸಂಬಂಧೀಪುರಾಣಗಳು:
ವಿಷ್ಣುಪುರಾಣ, ಭಾಗವತಪುರಾಣ, ನಾರದೀಯಪುರಾಣ, ಗರುಡ ಪುರಾಣ, ಪದ್ಮಪುರಾಣ, ವರಾಹಪುರಾಣ.

೩. ತಾಮಸಿಕ ಉತ್ಕರ್ಷವನ್ನು ಪ್ರತಿಪಾದಿಸುವ ಶಿವಸಂಬಂಧೀಪುರಾಣಗಳು:
ಶಿವಪುರಾಣ, ಲಿಂಗಪುರಾಣ, ಸ್ಕಂದಪುರಾಣ, ಅಗ್ನಿಪುರಾಣ, ವಾಯುಪುರಾಣ, ಮತ್ಸ್ಯಪುರಾಣ, ಕೂರ್ಮಪುರಾಣ.

ಕೆಲ ವಿದ್ವಾಂಸರು ಮತ್ತೊಂದು ರೀತಿಯಲ್ಲಿ ನಾಲ್ಕು ಗುಂಪುಗಳಾಗಿ ವಿಭಜಿಸಿದರೆ ಮತ್ತೆ ಕೆಲವರು ಆರು ಗುಂಪುಗಳಾಗಿ ವಿಭಜನೆ ಮಾಡುತ್ತಾರೆ.

೧೮ ಪುರಾಣಗಳೂ ಏಕಕರ್ತೃಕವಾಗಿದ್ದರೆ, ಮೇಲಿನ ವಿವಾದಕ್ಕೆ ಆಸ್ಪದವೇ ಇರುತ್ತಿರಲಿಲ್ಲ. ವಿಷ್ಣುಸಂಬಂಧಿಯಾದ ಪುರಾಣಗಳು ವಿಷ್ಣುಪಾರಮ್ಯವನ್ನು ಎತ್ತಿ ಹಿಡಿಯುವ ಕಥೆಗಳನ್ನು ಹೆಣೆದರೆ, ಶೈವಪುರಾಣಗಳು ಶಿವಪಾರಮ್ಯವನ್ನು ಎತ್ತಿಹಿಡಿಯುತ್ತವೆ. ಹಿಂದೂಧರ್ಮದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಶಿವ – ಇವರುಗಳ ಆರಾಧನೆ ನಡೆದಿತ್ತು. ವೈದಿಕಧರ್ಮ ಪ್ರಚಲಿತವಾಗಿದ್ದ ಕಾಲದಲ್ಲಿ ಶಿವ ಮತ್ತು ಹರಿ ಆರಾಧ್ಯದೈವತಗಳಾದರು. ಬ್ರಹ್ಮದೇವನ ಸ್ಥಾನ ಕೆಳಗಿಳಿಯಿತು. ೧೮ ಪುರಾಣಗಳ ಪಟ್ಟಿಕೆಯನ್ನು ಪರಿಶೀಲಿಸಿದಾಗ ಈ ಮಾತಿನ ಸತ್ಯ ಅರಿವಾಗುತ್ತದೆ. ಬ್ರಹ್ಮಸಂಬಂಧಿಯಾದ ಪುರಾಣಗಳ ಸಂಖ್ಯೆ ವಿಷ್ಣು ಮತ್ತು ಶಿವಸಂಬಂಧೀಪುರಾಣಗಳಿಗಿಂತ ಕಡಿಮೆಯಿರುವುದು ಕಂಡುಬರುತ್ತದೆ. ಜನರಲ್ಲಿ ಶಿವ ಮತ್ತು ವಿಷ್ಣು ದೇವತೆಗಳ ಮೇಲಿನ ನಂಬಿಕೆ ಹೆಚ್ಚಾದಂತೆ, ಆ ಆ ಧರ್ಮದ ಅನುಯಾಯಿಗಳು ತಂತಮ್ಮ ಮತಪ್ರಸಾರಕ್ಕಾಗಿ ಪುರಾಣಗಳನ್ನು ರಚಿಸಿದರು. ಕೆಲವು ಪುರಾಣಗಳು ವಿಶಿಷ್ಟ ಮತದ ಕಟ್ಟಿಗೆ ಒಳಪಡದೆ ಸಾಮಾನ್ಯ ತತ್ವಗಳನ್ನು ಪ್ರತಿಪಾದಿಸುತ್ತವೆಯೆಂಬುದು ಗಮನಾರ್ಹವಾದ ಅಂಶವಾದರೂ ಸದ್ಯದಲ್ಲಿ ಅವುಗಳ ವಿವೇಚನೆ ಅನವಶ್ಯ. ವಿವಿಧ ಮತಭೇದಗಳಿಂದ ಕೂಡಿರುವ ಎಲ್ಲಾ ಪುರಾಣಗಳ ಕರ್ತೃತ್ವವನ್ನೂ ಒಬ್ಬ ವ್ಯಕ್ತಿಯ ಮೇಲೆಯೇ ಆರೋಪಿಸುವುದು ಕಷ್ಟ. ಪುರಾಣಗಳ ಮೂಲಭೂತ ತತ್ವಗಳಲ್ಲಿ, ಧಾರ್ಮಿಕ ನಂಬಿಕೆಗಳಲ್ಲಿ, ಶೈಲಿಯಲ್ಲಿ ಕಂಡುಬರುವ ವ್ಯತ್ಯಾಸ ಇದಕ್ಕೆ ಸಾಕ್ಷಿ ನುಡಿಯುತ್ತದೆ. ವೇದಗಳನ್ನು ವಿಸ್ತರಿಸಿ ಅವುಗಳ ಮೂಲಭೂತ ತತ್ವವನ್ನು ವ್ಯಾಖ್ಯಾನಿಸಲೆಂದೇ ರಚಿತವಾದ

CC-0. Jangamwadi Math Collection. Digitized by eGangotri

ಪುರಾಣಗಳ ಕರ್ತೃತ್ವವನ್ನು, ವೇದಕರ್ತೃ ವ್ಯಾಸನಿಗೇ ಆರೋಪಿಸುವ ರೂಢಿ ಬೆಳೆದು ಬಂದಿತ್ತು.

ಪುರಾಣಗಳ ಕಾಲ

ವೇದಗಳ ಮತ್ತು ಉಪನಿಷತ್ತುಗಳ ಕಾಲದ ತರುವಾಯ ಪುರಾಣಗಳ ಕಾಲ ಪ್ರಾರಂಭವಾಗುತ್ತದೆ. ಪುರಾಣಗಳಲ್ಲಿ ಪ್ರತಿಪಾದಿತವಾದ ಮೂಲಭೂತ ತತ್ವಗಳು ವೇದೋಪನಿಷತ್ತುಗಳಲ್ಲಿ ಬೀಜರೂಪದಲ್ಲಿರುವುದನ್ನು ನೋಡ ಬಹುದು. ಪುರಾಣಗಳು ವೇದಪೂರ್ವವೆಂದು ವಾಯುಪುರಾಣ ಹೇಳಿದೆಯಾದರೂ ಆ ಉಕ್ತಿಯ ಪ್ರತಿಪದಾರ್ಥವನ್ನು ಗ್ರಹಿಸುವುದು ಸಾಧುವಾಗಲಾರದು. ವಾಯು ಪುರಾಣಕರ್ತೃ, ಪುರಾಣಗಳ ಬಗೆಗೆ ತಳೆದಿದ್ದ ಗೌರವಭಾವನೆಯನ್ನು ಆ ಹೇಳಿಕೆ ಪ್ರತಿಬಿಂಬಿಸುತ್ತದೆ. ಬೌದ್ಧ ಚಾರ್ವಾಕ ಮೊದಲಾದ ನಾಸ್ತಿಕ ಧರ್ಮಗಳು ಜನ ಪ್ರಿಯವಾಗುತ್ತಿದ್ದು, ಸುಮಾರು ಕ್ರಿ. ಪೂ. ೫ನೆಯ ಶತಮಾನದ ವೇಳೆಗೆ ವೈದಿಕಧರ್ಮ ಖಿಲವಾಗುತ್ತಿತ್ತು. ಜನಮನದಲ್ಲಿ ಮತ್ತೆ ವೈದಿಕಧರ್ಮ ನೆಲೆ ನಿಲ್ಲುವಂತೆ ಮಾಡುವ ಪ್ರಯತ್ನ ಪುರಾಣಗಳಿಂದ ಪ್ರಾರಂಭವಾಗಿರಬಹುದು.

ಪುರಾಣಗಳ ಕಾಲದ ಬಗೆಗೆ ದೇಶೀಯ ಮತ್ತು ಪಾಶ್ಚಾತ್ಯ ವಿದ್ವಾಂಸ ರನೇಕರು ಚರ್ಚಿಸಿದ್ದಾರೆ. ಪಾಶ್ಚಾತ್ಯ ವಿದ್ವಾಂಸರಲ್ಲಿ ಕೆಲವರ ಅಭಿಪ್ರಾಯದಂತೆ ಪುರಾಣಗಳ ಕಾಲ ಕ್ರಿ. ಶ. ಸುಮಾರು ೧೦ನೆಯ ಶತಮಾನ. ಆದರೆ ಅಮರ ಕೋಶದಲ್ಲಿ ಹೇಳಲಾದ ಪುರಾಣವ್ಯಾಖ್ಯೆಯನ್ನು ನೋಡಿದರೆ ಮೇಲಿನ ಊಹೆ ಸಮಂಜಸವೆನಿಸದು. ಅಮರುಕನು ಇಂತಹ ನಿಖರವಾದ ನಿಶ್ಚಿತವಾದ ವ್ಯಾಖ್ಯೆ ಯನ್ನು ಕೊಡಬೇಕಾದರೆ ಅವನ ಕಾಲಕ್ಕಾಗಲೇ ಪ್ರಮುಖ ಪುರಾಣಗಳೆಲ್ಲಾ ರಚಿತವಾಗಿದ್ದುವು ಎಂಬುದನ್ನು ಒಪ್ಪಲೇಬೇಕಾಗುತ್ತದೆ. ಎಲ್ಲ ವೈದಿಕಪುರಾಣ ಗಳಿಗೂ ಈ ವ್ಯಾಖ್ಯೆ ಸರಿಹೊಂದುತ್ತದೆ. ಯಾವಾಗಲೂ ಸಾಹಿತ್ಯಕೃಷಿ ಮೊದಲು, ತರುವಾಯ ಅದರ ವಿಶ್ಲೇಷಣೆ, ವ್ಯಾಖ್ಯಾನ. ಇದು ಸಾಮಾನ್ಯ ನಿಯಮ. ಸಾಹಿತ್ಯಿಕ ರೂಪದ ವಿವರಣೆ ಮೊದಲು ಹುಟ್ಟಿ, ಅನಂತರದಲ್ಲಿ ಆ ವ್ಯಾಖ್ಯೆಗೆ ತಕ್ಕಂತೆ ವಿವರಣೆಗೆ ಸರಿಹೊಂದುವಂತೆ ಆ ವಿಶಿಷ್ಟ ಸಾಹಿತ್ಯ ನಿರ್ಮಿತಿಯಾಗು ವುದು ಊಹೆಗೆ ನಿಲುಕದ ಮಾತು. ಯಾವುದೇ ಒಂದು ವಿಶಿಷ್ಟ ಸಾಹಿತ್ಯ ರೂಪು ಗೊಂಡು ಅದು ಸಮೃದ್ಧವಾಗಿ ಬೆಳೆದಮೇಲೆ ಅದರ ಗುಣದೋಷಗಳನ್ನು ವಿಶ್ಲೇಷಿಸಿ, ಅದರ ವ್ಯಾಖ್ಯೆಯನ್ನು ಮುಂದಿಡುವುದು ಪರಂಪರೆಯ ಸಂಪ್ರದಾಯ ದಿಂದ ಬೆಳೆದುಬಂದಿದೆ. ಈ ದೃಷ್ಟಿಯಿಂದ ವಿಚಾರಮಾಡಿದಾಗ, ಪುರಾಣಗಳ ಕಾಲಮಿತಿ ಅಮರಕೋಶಕ್ಕೆ ಪ್ರಾಚೀನವಾಗಿರಬೇಕು. ಅಮರಕೋಶದಲ್ಲಿ ಪ್ರಕ್ಷಿಪ್ತ

CC-0. Jangamwadi Math Collection. Digitized by eGangotri

ವಾದ ಹಲವಾರು ಭಾಗಗಳಿವೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಪುರಾಣಗಳ ವ್ಯಾಖ್ಯೆಯನ್ನು ಹೇಳುವ ಭಾಗವೂ ಪ್ರಕ್ಷಿಪ್ತವಾಗಿರಬಾರದೇಕೆ ಎಂಬ ಅನುಮಾನ ಸಹಜವಾಗಿಯೇ ಉದ್ಭವಿಸುತ್ತದೆ. ಆದರೆ ಅಮರಕೋಶದ ಪ್ರತಿಗಳಲ್ಲೆಲ್ಲಾ ಒಂದೇ ಬಗೆಯ ಪಾಠ ದೊರೆಯುವುದಲ್ಲದೆ, ಈ ಶ್ಲೋಕದ ಶೈಲಿ ಮತ್ತು ಭಾಷೆ ಉಳಿದ ಶ್ಲೋಕಗಳಂತೆಯೇ ಇರುವುದರಿಂದಲೂ ಈ ಅನುಮಾನಕ್ಕೆ ಆಸ್ಪದವೂ ಇಲ್ಲ, ಆಧಾರವೂ ಇಲ್ಲ.

ಅಮರಕೋಶದ ಕಾಲ ಸು. ಕ್ರಿ. ಪೂ. ೧ನೆಯ ಶತಮಾನ. ಆದುದರಿಂದ ಪುರಾಣಗಳ ಕಾಲ ಕ್ರಿ. ಪೂ. ೧ನೆಯ ಶತಮಾನಕ್ಕೂ ಹಿಂದೆ ಹೋಗುತ್ತದೆ. ಬೌದ್ಧ ಮತ್ತು ಜೈನ ಮತಗಳು ಉತ್ಕರ್ಷ ಸ್ಥಿತಿಯಲ್ಲಿದ್ದಾಗ ವಿಕದೇವೋಪಾಸನೆ, ದೈವಭಕ್ತಿ, ನಂಬಿಕೆಗಳು ಮಸುಳಿಸುತ್ತಿದ್ದುವು. ವೈದಿಕ, ಜೈನ ಹಾಗೂ ಬೌದ್ಧ ಮತಗಳ ನಡುವೆ ಘರ್ಷಣೆ ನಡೆದು ಜನತೆ ದಿಕ್ಕೆಟ್ಟಿದ್ದಿತು. ವೈದಿಕಧರ್ಮದ ಕಡೆಗೆ ಜನರ ಮನ ಒಲಿಸಲು, ಆಸಕ್ತಿ ಹುಟ್ಟಿಸಲು, ಶ್ರದ್ಧೆ ಬೆಳಿಸಲು, ನಂಬಿಕೆ ಬಲಗೊಳಿಸಲು ಪುರಾಣಗಳ ನಿರ್ಮಿತಿ ಸಹಾಯಕವಾಗಿರಬಹುದು.

ಪುರಾಣಗಳ ವಿಶೇಷ ಲಕ್ಷಣಗಳು

"ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ
ವಂಶಾನುಚರಿತಾನುಚ್ಚೈವ ಪುರಾಣಂ ಪಂಚಲಕ್ಷಣಂ॥"

ಎಂದು ಅಮರಕೋಶ ಪುರಾಣದ ವ್ಯಾಖ್ಯೆಯನ್ನು ಹೇಳುತ್ತದೆ. ವೈದಿಕ ಪುರಾಣಗಳು ಸಾಗರದಂತೆ ವಿಶಾಲವಾದುವು, ಅಪಾರವಾದುವು ಮತ್ತು ಆಳವಾದುವು. ಪ್ರಾಚೀನ ಭಾರತೀಯ ಜ್ಞಾನವನ್ನೆಲ್ಲಾ ತನ್ನೊಳಗೆ ಅಳವಡಿಸಿಕೊಂಡಿದೆ. ವಿಶ್ವೋತ್ಪತ್ತಿ ಶಾಸ್ತ್ರ, ಭೂಗರ್ಭಶಾಸ್ತ್ರ, ಭೂಗೋಳಶಾಸ್ತ್ರ, ಇತಿಹಾಸ, ನೀತಿಶಾಸ್ತ್ರ, ತತ್ವಶಾಸ್ತ್ರ ಮೊದಲಾದ ಎಲ್ಲವನ್ನೂ ಪುರಾಣಗಳು ಒಳಗೊಂಡಿವೆ. ಸುವ್ಯವಸ್ಥಿತವಾದ ಜೋಡಣೆ ಇಲ್ಲದಿದ್ದರೂ ಪುರಾಣಗಳನ್ನು ವಿಶ್ವಕೋಶ ಎನ್ನಲು ಅಭ್ಯಂತರವಿಲ್ಲ. ಕಲಾಕೌಶಲ್ಯದ ಅಂಶವನ್ನು ಗಣನೆಗೆ ತೆಗೆದುಕೊಂಡರೆ ಪುರಾಣಗಳು ಅಷ್ಟೇನೂ ಉತ್ಕೃಷ್ಟವೆನಿಸಲಾರವಾದರೂ, ಸಾಂಸ್ಕೃತಿಕವಾಗಿ ಇವುಗಳ ಮಟ್ಟ ಅತ್ಯುನ್ನತವೆನ್ನಬಹುದು. ಪ್ರಾಚೀನ ಭಾರತದಲ್ಲಿ ಚಾರಿತ್ರಿಕ ದಾಖಲೆಗಳು ದೊರಕಲಾರವಾದರೂ, ಪುರಾಣಗಳು ಇತಿಹಾಸಕ್ಕೆ ಸಂಬಂಧಪಟ್ಟ ಕೆಲವು ಅಂಶಗಳನ್ನು ಒದಗಿಸುತ್ತವೆ. ಆದರೆ ಈ ಎಲ್ಲ ಅಂಶಗಳೂ ವಿಶ್ವಸನೀಯ ಎನಿಸಿಕೊಳ್ಳಲಾರವು. ಬೇರೆ ಆಧಾರಗಳ ಬೆಂಬಲದಿಂದ ದೃಢಪಡಿಸಬೇಕು. ಪೌರಾಣಿಕ ಕಥೆಗಳ ತಾತ್ವಿಕ ಮಹತ್ವ, ಸಾಂಕೇತಿಕತೆ ಮತ್ತು ನೈತಿಕ ಅಂಶಗಳು

CC-0. Jangamwadi Math Collection. Digitized by eGangotri

ಜನರ ಮನದ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ. ಪುರಾಣಗಳು ಧಾರ್ಮಿಕ, ತಾತ್ವಿಕ, ಸಾಮಾಜಿಕ, ಸಾಂಸ್ಕೃತಿಕ, ನೈತಿಕ ಹಾಗೂ ಸಾಹಿತ್ಯಿಕ ಮೌಲ್ಯಗಳನ್ನು ಒಳಗೊಂಡಿವೆ. ಈ ಎಲ್ಲ ದೃಷ್ಟಿಯಿಂದ ಪುರಾಣಗಳ ಅಭ್ಯಾಸ ಪ್ರಯೋಜನಕರ. ಈಗಾಗಲೆ ಈ ದಿಸೆಯಲ್ಲಿ ಪಂಡಿತರು ಅಭ್ಯಾಸ ಮಾಡುತ್ತಿದ್ದಾರೆ.

ಪುರಾಣಗಳ ಕಲ್ಪನೆ ಭಾರತಕ್ಕಷ್ಟೇ ಮೀಸಲಾಗಿಲ್ಲ. ಪ್ರತಿಯೊಂದು ಧರ್ಮವೂ ತನ್ನದೇ ಆದ ದೇವತಾಖ್ಯಾನಗಳಿಂದ ಕೂಡಿದ ಸಾಹಿತ್ಯವನ್ನು ಹೊಂದಿರುತ್ತದೆ. ಉದಾಹರಣೆಗೆ: ಗ್ರೀಕರ ದೇವತಾಖ್ಯಾನ, ಕ್ರಿಶ್ಚಿಯನ್ ದೇವತಾಖ್ಯಾನ, ಇಸ್ಲಾಂ ದೇವತಾಖ್ಯಾನ ಮೊದಲಾದುವು. ಭಾರತದಲ್ಲಿಯೇ ಹಲವಾರು ಧರ್ಮಗಳು ತಲೆಯೆತ್ತಿವೆ. ಧರ್ಮಗಳೊಡನೆಯೆ ಅವುಗಳಿಗೆ ಸಂಬಂಧಪಟ್ಟ ದೇವತಾಖ್ಯಾನಗಳೂ ಸಹ ಹುಟ್ಟಿಕೊಂಡಿವೆ. ಇಂತಹ ಧರ್ಮಗಳಲ್ಲಿ ಜೈನಧರ್ಮವೂ ಒಂದು. ಎಲ್ಲ ಧರ್ಮಗಳಂತೆ ಈ ಧರ್ಮವೂ ಸಹ ತನ್ನದೇ ಆದ ವಿಶಿಷ್ಟ ಪೌರಾಣಿಕ ಸಾಹಿತ್ಯವನ್ನು ಒಳಗೊಂಡಿದೆ. ಜೈನಧರ್ಮದ ಉಗಮವಾದಂದಿನಿಂದ ಮತಪ್ರಸಾರಕ್ಕಾಗಿ ಶ್ರಮಿಸಿದ ೨೪ ತೀರ್ಥಂಕರರ ಚರಿತೆಯನ್ನು ಒಳಗೊಂಡಿರುವ ಜೈನಪುರಾಣಗಳೆ ಆ ಧರ್ಮದ ಪೌರಾಣಿಕ ಸಾಹಿತ್ಯ. ಜೈನ ಪುರಾಣಗಳು, ವೈದಿಕ ಪುರಾಣಗಳಿಂದ ಭಿನ್ನವಾದ ಕೆಲವು ವಿಶಿಷ್ಟ ಗುಣಲಕ್ಷಣಗಳಿಂದ ಕೂಡಿವೆ. ಜೈನಪುರಾಣದ ಎಂಟು ಪ್ರಮುಖ ಅಂಗಗಳು ಇಂತಿವೆ:

೧. ತೀರ್ಥಂಕರರ ಭವಾವಳಿ	೫. ಕರ್ಮತತ್ತ್ವ
೨. ಪಂಚಕಲ್ಯಾಣಗಳು	೬. ಅಣುವ್ರತಗಳು
೩. ವಿಶ್ವೋತ್ಪತ್ತಿ	೭. ಗುಣವ್ರತಗಳು
೪. ಜೈನ ಪರಮಾರ್ಥವಿದ್ಯೆ	೮. ಹನ್ನೆರಡು ಬಗೆಯ ತಪಸ್ಸು

ಇವುಗಳೆಲ್ಲಾ ಜೈನಪುರಾಣಗಳಲ್ಲಿ ಚಿತ್ರಿತವಾಗಿರುತ್ತವೆ.

ಜೈನಪುರಾಣಗಳು ತಮ್ಮದೇ ಆದ ಏಕಮತ್ಯವನ್ನು ಸಾಧಿಸಿಕೊಂಡಿವೆ. ಅಸಂಖ್ಯಾತವಾಗಿ ಕಂಡುಬರುವ ಉಪಕಥೆಗಳು ತಮ್ಮ ನೆರಳಿನಿಂದ ಮೂಲಕಥೆಯನ್ನು ಮುಚ್ಚಿಬಿಟ್ಟಿವೆಯಲ್ಲದೆ ಸಾಮಾನ್ಯ ಓದುಗ ಭವಾವಳಿಗಳ ಅರಣ್ಯದಲ್ಲಿ ದಿಕ್ಕೆಟ್ಟು ಅಲೆಯುವಂತೆ ಆಗುತ್ತದೆ.

ಸಾಂಪ್ರದಾಯಿಕತೆಯ ಹಾದಿಯಲ್ಲಿಯೇ ನಡೆದುಬಂದ ಪುರಾಣಗಳಲ್ಲಿ ಪರಂಪರೆಯಿಂದ ಬಂದ ಪಂಚಕಲ್ಯಾಣಗಳ ವರ್ಣನೆ, ಪರಾವಿದ್ಯೆ, ಕರ್ಮತತ್ವ, ನರಕ ವರ್ಣನೆ ಮೊದಲಾದುವುಗಳಿಂದ ಕೂಡಿ ಜೈನಪುರಾಣಗಳು ಒಂದೇ ಅಚ್ಚಿನಲ್ಲಿನ ಎರಕ ಹೊಯ್ದಂತೆ ಪಡಿಯಚ್ಚುಗಳಾಗಿವೆ. ವೈವಿಧ್ಯತೆ ಮತ್ತು ಕಲಾಪರಿಪೂರ್ಣತೆಯ ಕುಂದು ಗೋಚರಿಸುತ್ತದೆ.

CC-0. Jangamwadi Math Collection. Digitized by eGangotri

ವೀರಶೈವಧರ್ಮ ಹಿಂದೂಧರ್ಮದ ಮತ್ತೊಂದು ವಿಶಿಷ್ಟ ಉಪಭಾಗವಾದರೂ, ಅದು ೧೮ ವೈದಿಕ ಪುರಾಣಗಳನ್ನು ಮಾನ್ಯ ಮಾಡುವುದಿಲ್ಲ. ವೈದಿಕ ಮತ್ತು ವೀರಶೈವ ಧರ್ಮಗಳ ನಡುವೆ ಕೆಲವು ಮೂಲಭೂತ ತತ್ವಗಳಲ್ಲಿ ಸಾಮ್ಯ ಕಂಡುಬಂದರೂ ವೀರಶೈವ ವೈದಿಕದಿಂದ ಸಿಡಿದು ದೂರ ನಿಲ್ಲುತ್ತದೆ. ಪೌರಾಣಿಕ ಸಾಹಿತ್ಯವನ್ನು ತನ್ನದೇ ಆದ ರೀತಿಯಲ್ಲಿ ಬೆಳಸಿಕೊಂಡಿದೆ. ರೂಪ, ಆತ್ಮ ಮತ್ತು ವಸ್ತುಗಳಲ್ಲಿ ತನ್ನ ವೈಶಿಷ್ಟ್ಯವನ್ನು ರೂಪಿಸಿಕೊಂಡಿದೆ, ರೂಢಿಸಿಕೊಂಡಿದೆ.

ವೀರಶೈವ ಸಾಹಿತ್ಯವೆಲ್ಲ ವೀರಶೈವ ಪುರಾಣಗಳಲ್ಲ. ಅಲ್ಲಿ ವಚನಸಾಹಿತ್ಯ, ಅದರ ಟೀಕೆ, ಟಿಪ್ಪಣಿ, ವ್ಯಾಖ್ಯಾನ, ಸಿದ್ಧಾಂತಗಳ ಸಾಹಿತ್ಯವಿದೆಯೆಂಬುದು ಸಾಹಿತ್ಯಜ್ಞರ ಅರಿತಕ್ಕೆ ಬಂದಿದೆ; ಶತಕಸಾಹಿತ್ಯಕ್ಕೇನೂ ಕೊರತೆಯಿಲ್ಲ. ಕಾವ್ಯರೂಪದಲ್ಲಿ ಬಂದ ವೀರಶೈವ ಸಾಹಿತ್ಯವೆಲ್ಲವೂ ಪುರಾಣಸಾಹಿತ್ಯವಲ್ಲ. ವೀರಶೈವ ಕಾವ್ಯ ಸಾಹಿತ್ಯವನ್ನು ಶುದ್ಧಸಾಹಿತ್ಯ, ಪುರಾಣಸಾಹಿತ್ಯ, ಮಿಕ್ಕ ಸಾಹಿತ್ಯವೆಂದು ವಿಭಜಿಸಬಹುದು.

ಹರಿಹರ, ರಾಘವಾಂಕ, ಚಾಮರಸ, ಸುರಂಗ, ಷಡಕ್ಷರದೇಪರೆ ಮೊದಲಾದವರ ಕೃತಿಗಳು ಯಾವ ವಸ್ತುವನ್ನೇ ಕುರಿತು ಬರೆದಿರಲಿ, ಯಾವ ರೂಪದಲ್ಲಿಯೇ ಇರಲಿ, ಶುದ್ಧಸಾಹಿತ್ಯದಲ್ಲಿ ಪರಿಗಣಿತವಾಗುತ್ತವೆ; ರಸನಿಷ್ಠವಾಗಿರುವುದೇ ಅದಕ್ಕೆ ಕಾರಣ. ಸೊಗಸಿನ ಸುಗ್ಗಿ, ರಸದ ಮಡು, ಪುಣ್ಯದಾಗರವನಿಪ ಕಥೆಗೆ ಅಷ್ಟಾದಶ ವರ್ಣನೆಗಳ ಹಂಗೇಕೆ ಎಂದು ಅಂಥ ವರ್ಣನೆಗಳನ್ನು ಬಿಟ್ಟು ಕೇವಲ ಕಥಾನಾಯಕರ ಜೀವನವನ್ನೇ ಕೇಂದ್ರೀಕರಿಸಿ ಬರೆದ ಹರಿಹರ, ರಾಘವಾಂಕ, ಚಾಮರಸಾದಿ ಕವಿಕೃತಿಗಳಾಗಲಿ, ಅಷ್ಟಾದಶ ವರ್ಣನೆಗಳ ಚೌಕಟ್ಟಿನಲ್ಲಿ ಬರೆದ ಗಿರಿಜಾಕಲ್ಯಾಣ, ತ್ರಿಷಷ್ಟಿ ಪುರಾತನಚಾರಿತ್ರ, ರಾಜಶೇಖರವಿಳಾಸ, ಶಬರಶಂಕರವಿಳಾಸ, ವೃಷಭೇಂದ್ರವಿಜಯದಂತಹ ಪ್ರೌಢ ಕಾವ್ಯಗಳಾಗಲಿ ಅಲ್ಲಿ ರಸವೇ ಪ್ರಧಾನ. ಆ ಕಾವ್ಯನಿರ್ಮಿತಿಯಲ್ಲಿ ಕಲೆ ಪ್ರಧಾನವಾಗಿದೆಯಲ್ಲದೆ ಪ್ರಚಾರವಲ್ಲ. ಶರಣರ ಮಹಿಮೆ, ಶಿವಲೀಲೆಗಳ ವರ್ಣನೆ, ಇಂತಹ ಯಾವ ವಸ್ತುವಿದ್ದರೂ ಭಾವಪೂರ್ಣನಾದ ಕವಿ ಅಲ್ಲಿ ಒಡೆದು ಕಾಣುತ್ತಾನೆ. ಚರ್ಚೆ, ಸಂಗ್ರಹ, ವಿವರಣೆ, ಪ್ರಚಾರಗಳಿಗಿಂತ, ಸೃಜನಶಕ್ತಿ, ಸಮಷ್ಟಿದೃಷ್ಟಿ, ಕಲೆ, ರಸ ಇವು ಅಲ್ಲಿ ಮುಖ್ಯವಾಗಿರುತ್ತವೆ.

ವೀರಶೈವ ಪುರಾಣಗಳೆಂಬುವು ಈ ವಿಭಾಗದ ಪ್ರಾರಂಭದಲ್ಲಿ ವಿವರಿಸಿದ ಪುರಾಣಗಳ ಸಾಮಾನ್ಯ ಉದ್ದೇಶಕ್ಕಾಗಿ ರಚಿತವಾಗಿವೆ. ಬಸವಪುರಾಣ, ಪದ್ಮರಾಜಪುರಾಣ, ಪ್ರಭುದೇವರ ಪುರಾಣ, ಮಹದೇವಿಯಕ್ಕನ ಪುರಾಣ, ದೇವರದಾಸಿಮಯ್ಯನ ಪುರಾಣ, ದೇವಾಂಗದಾಸಿಮಯ್ಯ ಪುರಾಣ, ಶಿವತತ್ವ ಚಿಂತಾಮಣಿ, ಚನ್ನಬಸವಪುರಾಣ, ವೀರಶೈವಾಮೃತ ಮಹಾಪುರಾಣ, ಶಂಕರದಾಸಿ

CC-0. Jangamwadi Math Collection. Digitized by eGangotri

ಮಯ್ಯನ ಪುರಾಣ, ಚತುರಾಚಾರ್ಯಪುರಾಣ, ರೇವಣಸಿದ್ಧೇಶ್ವರಪುರಾಣ, ಏಕೋರಾಮೇಶ್ವರಪುರಾಣ, ತೋಂಟದ ಸಿದ್ಧೇಶ್ವರಪುರಾಣ, ಸಿದ್ಧೇಶ್ವರಪುರಾಣ, ಪಾಲ್ಕುರಿಕೆ ಸೋಮೇಶ್ವರಪುರಾಣ – ಇಂತಿವೆಲ್ಲ ಪುರಾಣವೆಂದು ರಚಿತವಾದುವು. ಸಿದ್ಧನಂಜೇಶನ ರಾಘವಾಂಕಚಾರಿತ್ರ, ಗುರುರಾಜಚಾರಿತ್ರ, ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ ಮುಂತಾದ ಕೃತಿಗಳು ಚಾರಿತ್ರಪ್ರಧಾನವಾಗುವುದನ್ನು ಬಿಟ್ಟು ಪುರಾಣದ ಹಾದಿಯನ್ನು ಹಿಡಿದಿವೆ. ಷಟ್ಪದಿ, ಸಾಂಗತ್ಯ ಮುಂತಾದ ನಡುಗನ್ನಡದ ಸುಲಭ ಶೈಲಿಯಲ್ಲಿ ಬರೆದ ವೀರಶೈವ ಕೃತಿ ಮೇಗಣ ಯಾವುದೇ ಗುಂಪಿಗೆ ಸೇರಿದ್ದರೂ ಜನತೆ ಅದನ್ನು ಪುರಾಣಪ್ರವಚನಕ್ಕಾಗಿ ಉಪಯೋಗಿಸ ಬಹುದು; ಭಕ್ತಿಯಿಂದ ಲಾಲಿಸಬಹುದು. ಹಾಗೆಂದ ಮಾತ್ರಕ್ಕೆ ಅವನ್ನು ಪುರಾಣ ಗಳೆಂದು ಪರಿಗ್ರಹಿಸಲಾಗದು.

"ಶಿವನಂ ತದೀಯ ಶರಣವ್ರಜ"ವನ್ನು ಕುರಿತು ಕೃತಿರಚನೆ ಮಾಡುವುದು ಗಿರೀಶಂಗೆ ನಾಲಗೆಯನ್ನು ಮಾರಿದ ವೀರಶೈವ ಕವಿಗಳ ಉದ್ದೇಶ. ಶುದ್ಧಸಾಹಿತ್ಯ ವಿರಲಿ, ಪುರಾಣಸಾಹಿತ್ಯವಿರಲಿ ಅದು ಈ ನಿಯಮಕ್ಕೆ ಬದ್ಧವಾಗಿದೆ. ಶಿವನನ್ನು ಎಂದರೆ ಪರಶಿವನನ್ನು ಕುರಿತು ಎಂಬುದು ಸುಸ್ಪಷ್ಟ. ಲೋಕೋದ್ಧಾರ ನಿಮಿತ್ತ ಶಿವನು ಭೂಲೋಕದಲ್ಲಿ ಅವತರಿಸುವುದಿಲ್ಲ. ಅವನ ಲೀಲೆಯೆ ಈ ಚರಾಚರ ಸೃಷ್ಟಿ. ಲೀಲೆಯಾದಡೆ ಉಮಾಮಹೇಶ್ವರ; ಲೀಲೆ ನಿಂದಡೆ ಸ್ವಯಂಭು. ಆ ಲೀಲೆಯಲ್ಲಿಯೇ ಶಿವನು ವಿವಿಧ ರೂಪದಲ್ಲಿ ಗೋಚರಿಸಿ ಭಕ್ತರನ್ನು ಉದ್ಧರಿಸು ವನು. ಆತನ ಅನಂತ ಲೀಲೆಗಳಲ್ಲಿ ಪಂಚವಿಂಶತಿ ಲೀಲೆಗಳು ಪ್ರಸಿದ್ಧವಾಗಿವೆ. ಶೈವಸಾಹಿತ್ಯದಲ್ಲಿ ಅವುಗಳ ಉಲ್ಲೇಖ ವಿಪುಲವಾಗಿದೆ. ಆ ಪಂಚವಿಂಶತಿ ಲೀಲೆ ಗಳೆಂದರೆ:

೧. ಸೋಮಧರಲೀಲೆ	೧೧. ಆಚಾರಿಲೀಲೆ
೨. ಉಮಾಮಹೇಶ್ವರಲೀಲೆ	೧೨. ವೀರಭದ್ರಲೀಲೆ
೩. ವೃಷಭಾರೂಢಲೀಲೆ	೧೩. ಶರಭಲೀಲೆ
೪. ತಾಂಡವಲೀಲೆ	೧೪ ಅರ್ಧನಾರೀಶ್ವರಲೀಲೆ
೫. ಗಿರಿಜಾಕಲ್ಯಾಣಲೀಲೆ	೧೫ ಕಿರಾತಲೀಲೆ
೬. ಭಿಕ್ಷಾಟನಲೀಲೆ	೧೬. ಕಂಕಾಳಲೀಲೆ
೭. ಮಾರಹರಲೀಲೆ	೧೭. ಚಂಡೇಶಾನುಗ್ರಹಲೀಲೆ
೮. ಕಾಲಹರಲೀಲೆ	೧೮. ವಿಷಧರಲೀಲೆ
೯. ತ್ರಿಪುರದಹನಲೀಲೆ	೧೯. ಚಕ್ರದಾನಲೀಲೆ
೧೦. ಜಲಂಧರಲೀಲೆ	೨೦. ವಿಷ್ಣುಪ್ರಸಾದಲೀಲೆ

CC-0. Jangamwadi Math Collection. Digitized by eGangotri

೨೦. ಉಮಾಸ್ಕಂದಲೀಲೆ
೨೧. ಏಕಪಾದಲೀಲೆ
೨೨. ಸುಖಾಪಹಲೀಲೆ
೨೪. ದಕ್ಷಿಣಾಮೂರ್ತಿಲೀಲೆ
೨೫. ಲಿಂಗೋದ್ಭವಲೀಲೆ

ಈ ಲೀಲೆಗಳನ್ನು ಆಧರಿಸಿ ಬರೆದ ವೀರಶೈವ ಸಾಹಿತ್ಯದ ಪ್ರಮುಖ ಕೃತಿಗಳು ಇಂತಿವೆ:

ಶಿವಲೀಲಾಪರ ಕೃತಿಗಳು

ಶುದ್ಧ ಸಾಹಿತ್ಯ ಕಾವ್ಯಗಳು

೧. ಗಿರಿಜಾಕಲ್ಯಾಣ – ಹರಿಹರದೇವ
೨. ವೀರೇಶಚರಿತೆ – ರಾಘವಾಂಕ
೩. ಶರಭಚಾರಿತ್ರ – ರಾಘವಾಂಕ
೪. ಭಿಕ್ಷಾಟನಚರಿತ್ರೆ (ವಾರ್ಧಕ) – ಗುರುಲಿಂಗವಿಭು (೧೫೫೦)
೫. ವೀರಭದ್ರವಿಜಯ (ಚಂಪೂ) – ವೀರಭದ್ರರಾಜ (೧೫೫೯)
೬. ವೀರಭದ್ರವಿಜಯ (ಭಾಮಿನಿ) – ನಿಶ್ಚಲಿತಾತ್ಮ (೧೬೦೦)
೭. ವೀರಭದ್ರ ಸಾಂಗತ್ಯ
೮. ವೀರಭದ್ರಲೀಲಾರತ್ನ(ಸಾಂಗತ್ಯ) – ಶಾಂತವೀರ (೧೬೦೮)
೯. ಶಬರಶಂಕರವಿಲಾಸ – ಷಡಕ್ಷರದೇವ

ತದೀಯ ಶರಣವ್ರಜವೆಂದರೆ ಶಿವತತ್ವವನ್ನು ಜೀವಿಸಿ, ಸಾಕ್ಷಾತ್ ಶಿವ ಸ್ವರೂಪರಾದ ಮಹಾನುಭಾವರು, ಶಿವಭಕ್ತಿಪರಾಯಣರು, ಶಿವಸಮಯ ಪ್ರತಿಷ್ಠಾಪಕರು, ಶಿವತತ್ವಸಾಧಕರು, ಬೋಧಕರು. ತದೀಯ ಶರಣಪ್ರಜದಲ್ಲಿಯೇ ಬರುತ್ತಾರೆ. ನಿಚ್ಚಳ ವೀರಶೈವ ಪರಿಭಾಷೆಯಲ್ಲಿ ಹೇಳುವುದಾದರೆ ಷಟ್ಸ್ಥಲ, ಅಷ್ಟಾವರಣ, ಪಂಚಾಚಾರಗಳನ್ನು ಪರಿಪಾಲಿಸಿದವರು ಶಿವಶರಣರು. ಅವರನ್ನು ಪುರಾತನರು, ಬಸವಾದಿ ಪ್ರಮಥರು, ರೇಣುಕಾದ್ಯಾಚಾರ್ಯರು, ಪಂಡಿತ ತ್ರಯರು, ವಿರಕ್ತರು – ನೂರೊಂದು ವಿರಕ್ತರು, ಏಳನೂರೊಂದು ವಿರಕ್ತರು – ಎಂದು ಮುಂತಾಗಿ ವಿಭಜಿಸಬಹುದು.

CC-0. Jangamwadi Math Collection. Digitized by eGangotri

ಪುರಾತನರೆಂದರೆ ತಮಿಳುನಾಡಿನ ಶಿವಭಕ್ತರು. ಅರುವತ್ತುಮೂವರು ಪುರಾತನರು ತಮಿಳುನಾಡಿನಲ್ಲಿ ಪ್ರಸಿದ್ಧರಾಗಿ ಹೋಗಿರುವರು. ಜೈನ, ಬೌದ್ಧ ಸಮಯಗಳ ಮೂಲಕ ಈ ನಾಡಿನಲ್ಲಿ ನಶಿಸಿಹೋಗುತ್ತಿದ್ದ ಸಮಯದಲ್ಲಿ ಈ ಅರುವತ್ತಮೂವರು ಪುರಾತನರು ಅವತರಿಸಿ ಶಿವಧರ್ಮವನ್ನು ಪ್ರತಿಷ್ಠಾಪಿಸಿದರು. ತಿರುನೀಲಕಂಠರನ್ನು ಮೊದಲ್ಗೊಂಡು ಸೌಂದರನಂಬಿಯ ವರೆಗೆ ಅರುವತ್ತು ಮೂವರ ಚರಿತೆಯನ್ನು ತಮಿಳು ಭಾಷೆಯಲ್ಲಿ ಶಕ್ಕೀಳಾರ್ ಕವಿ 'ಪೆರಿಯ ಪುರಾಣಂ' ಎಂಬ ಗ್ರಂಥದಲ್ಲಿ ವಿವರಿಸಿರುವನು. ಕ್ರಿ. ಶ. ೫ನೆಯ ಶತಮಾನದಿಂದ ೯ನೇ ಶತಮಾನದ ವರೆಗಿನ ಅವಧಿ ಈ ತ್ರಿಷಷ್ಟಿ ಪುರಾತನರ ಕಾಲವೆಂದು ತಿಳಿಯಬಹುದು. ಇವರು ಐತಿಹಾಸಿಕ ವ್ಯಕ್ತಿಗಳೆಂಬುದು ಗಮನಾರ್ಹ. ಇವರನ್ನು ಕುರಿತು ಕನ್ನಡದಲ್ಲಿ ನಿರ್ಮಿತವಾದ ಸಾಹಿತ್ಯ ಇಂತಿದೆ:



CC-0. Jangamwadi Math Collection. Digitized by eGangotri

ಬಸವಾದಿ ಪ್ರಮಥರ ಸಾಹಿತ್ಯ

ಶುದ್ಧ

- ಬಸವರಾಜದೇವ ರಗಳೆ—ಹರಿಹರ
- ವೃಷಭೇಂದ್ರವಿಜಯ – ಷಡಕ್ಷರದೇವ
- ಬಸವಶಿಖಾಮಣಿ
- ಬಸವೇಶ್ವರ ಕಾವ್ಯ(ಸಾಂಗತ್ಯ) – ಬಸವಲಿಂಗ
- ಪ್ರಭುದೇವರ ರಗಳೆ – ಹರಿಹರ
- ಪ್ರಭುಲಿಂಗಲೀಲೆ – ಚಾಮರಸ
- ಮಹಾದೇವಿಯಕ್ಕನ ರಗಳೆ – ಹರಿಹರ
- ಪ್ರಭುವಿನ ಸಾಂಗತ್ಯ – ಪರ್ವತೇಶ (೧೬೦೮)
- ಉದ್ಭಟಕಾವ್ಯ – ಉದ್ಭಟದೇವ
- ಉದ್ಭಟಕಾವ್ಯ – ಬಸವಾಂಕ
- ಸಿದ್ಧರಾಮಚಾರಿತ್ರ – ರಾಘವಾಂಕ
- ಸೋಮನಾಥಚಾರಿತ್ರ – ರಾಘವಾಂಕ
- ಮಡಿವಾಳಯ್ಯನ ಸಾಂಗತ್ಯ
- ನನ್ನಯ್ಯಗಳ ಚರಿತೆ (ಚಂಪೂ) – ಕವಿ ಮಾದಣ್ಣ (೧೬೫೦)
- ನನ್ನಯ್ಯಗಳ ಚರಿತ್ರೆ (ಸಾಂಗತ್ಯ) – ಪರ್ವತದೇವ
- ಸುಜ್ಞಾನಿದೇವ ಕಾವ್ಯ (ನನ್ನಯ್ಯ ಚರಿತ್ರೆ) – (೧೬೦೦)
- ಅಮುಗಿದೇವಯ್ಯನ ಸಾಂಗತ್ಯ – ಶಿವಲಿಂಗಾರ್ಯ (೧೬೦೦)
- ಉರಿಲಿಂಗ ಪೆದ್ದಯ್ಯನ ಕಥೆ (ಷಟ್ಪದಿ) – ಬಸವರಾಜ

ಪುರಾಣ

- ಬಸವಪುರಾಣ – ಭೀಮಕವಿ
- ಸಿಂಗಿರಾಜಪುರಾಣ
- ಚೋರಬಸವಪುರಾಣ – ಶಂಕರಕವಿ
- ಭಕ್ತಿರಸಸೋನೆ (೧೬೫೦)
- ನಂದಿಯಾಗಮಲೀಲೆ (ಭಾಮಿನಿ)
- ವೀರಸಂಗಯ್ಯ (೧೬೫೯)
- ಪ್ರಭುದೇವರ ಪುರಾಣ – ಎಳಂದೂರ ಹರಿಪರ
- ಮಹಾದೇವಿಯಕ್ಕನ ಪುರಾಣ – ಹರೀಶ್ವರ
- ದೇವರದಾಸಿಮಯ್ಯ ಪುರಾಣ (ಭಾಮಿನಿ) ವಿರೂಪಾಕ್ಷ ದೇಶಿಕ
- ದೇವಾಂಗ ದಾಸಿಮಯ್ಯ ಪುರಾಣ (ಸಾಂಗತ್ಯ)
- ಚೆನ್ನಬಸವ ಪುರಾಣ – ವಿರೂಪಾಕ್ಷ ಪಂಡಿತ
- ಶಂಕರದಾಸಿಮಯ್ಯನ ಪುರಾಣ (ಭಾಮಿನಿ) – ಮಲ್ಲಿಕಾರ್ಜುನ (೧೬೮೭)
- ಆಬ್ಬಲೂರ ಚರಿತೆ
- ಗೊಲ್ಲಾಳೇಶ್ವರ ಪುರಾಣ
- ಸಕಲೇಶ ಮಾದಿರಾಜ ಪುರಾಣ

CC-0. Jangamwadi Math Collection. Digitized by eGangotri

ರೇಣುಕಾಚಾರ್ಯರು, ಏಕೋರಾಮಾರಾಧ್ಯರು, ಪಂಡಿತಾರಾಧ್ಯರು, ಮರುಳಾರಾಧ್ಯರು, ವಿಶ್ವಾರಾಧ್ಯರು ಎಂಬ ಪಂಚ ಆಚಾರ್ಯರು ವೀರಶೈವರಿಗೆ ಪೂಜ್ಯರಾಗಿರುವರು. ಅವರನ್ನು ಕುರಿತು ಸಾಹಿತ್ಯ ಹುಟ್ಟಿಬಂದ ವಿವರ ಹೀಗೆ:

ಆಚಾರ್ಯಪರ ಸಾಹಿತ್ಯ



ರೇಪಣಸಿದ್ಧೇಶ್ವರ ರಗಳೆ
– ಹರಿಹರದೇವ
ರೇಪಣಸಿದ್ಧೇಶ್ವರ ಕಾವ್ಯ
ರೇಪಣ ಸಾಂಗತ್ಯ
ರೇಣುಕ ವಿಜಯ
ರೇಪಣಸಿದ್ಧ ಚಾರಿತ್ರ
ಮರುಳಸಿದ್ಧ ಸಾಂಗತ್ಯ

ಚತುರಾಚಾರ್ಯ ಪುರಾಣ
– ಸಂಪಾದನೀಯ ಪರ್ವತೇಶ (೧೬೯೮)
ರೇಪಣಸಿದ್ಧೇಶ್ವರ ಪುರಾಣ
– ಚತುರ್ಮುಖಿ ಬೊಮ್ಮರಸ (೧೫೦೦)
ಏಕೋರಾಮೇಶ್ವರದೇವರ ಪುರಾಣ
– ನಂಜಣಾರ್ಯ
ಮರುಳಸಿದ್ಧಪುರಾಣ – ದೇಪ

ವಿರಕ್ತರು – ನೂರೊಂದರು



ನೂರೊಂದು ವಿರಕ್ತರ ಕಾವ್ಯ
ಕರಸ್ಥಳನಾಗಯ್ಯನ ಚರಿತೆ

CC-0. Jangamwadi Math Collection. Digitized by eGangotri



CC-0. Jangamwadi Math Collection. Digitized by eGangotri

ಆಧುನಿಕ ಪುರಾಣಗಳು

ದ್ಯಾಂಪುರ ಚನ್ನಕವಿಗಳ ಪುರಾಣಗಳು:

೧. ಹೇಮರಡ್ಡಿ ಮಲ್ಲಮ್ಮನ ಪುರಾಣ
೨. ಹಾಲಕೆರೆ ಅನ್ನದಾನಸ್ವಾಮಿಗಳ ಪುರಾಣ
೩. ನಾಲ್ವತವಾಡದ ವೀರೇಶ್ವರ ಪುರಾಣ
೪. ಹುಚ್ಚೇಶ್ವರ ಪುರಾಣ
೫. ಇಳಕಲ್ಲ ಮಹಾಂತ ಸ್ವಾಮಿಗಳ ಪುರಾಣ
೬. ಬಾಲಲೀಲಾ ಮಹಾಂತಶಿವಯೋಗೀಶ್ವರ ಪುರಾಣ
೭. ಹಾನಗಲ್ಲ ಕುಮಾರಸ್ವಾಮಿಗಳ ಪುರಾಣ
೮. ಶಿರಪಟ್ಟಿ ಫಕೀರಸ್ವಾಮಿಗಳ ಪುರಾಣ
೯. ಕಂಬಳಿಹಾಳ ದೊಡ್ಡಬಸವೇಶ್ವರ ಪುರಾಣ

ಸರ್ವದರ್ಶನತೀರ್ಥ, ಪಂಡಿತ ವೈ. ನಾಗೇಶಶಾಸ್ತ್ರಿಗಳ ಪುರಾಣಗಳು:

೧. ಮರಿಯೋಗೀಶ್ವರ ಪುರಾಣ
೨. ಫಲಹಾರೇಶ್ವರ ಪುರಾಣ
೩. ಅರ್ಧನಾರೀಶ್ವರ ಪುರಾಣ
೪. ಸಿದ್ಧಲಿಂಗೇಶ್ವರ ಪುರಾಣ
೫. ಗವಿಸಿದ್ಧೇಶ್ವರ ಪುರಾಣಂ
೬. ಜಯದೇವ ಲೀಲೆ
೭. ಶ್ರೀ ಮೃತ್ಯುಂಜಯ ಲೀಲಾವಿಲಾಸಂ

ಪಂಡಿತ ಹುಕ್ಕೇರಿ ಸದಾಶಿವಶಾಸ್ತ್ರಿಗಳ ಪುರಾಣಗಳು:

೧. ಅಥಣಿ ಶಿವಯೋಗಿಗಳ ಪುರಾಣ
೨. ಬಿದರಿ ಕುಮಾರೇಶ್ವರ ಪುರಾಣ

ಶ್ರೀಮತಿ ಜಯದೇವಿತಾಯಿ ಲಿಗಾಡೆ ಅವರ ಪುರಾಣಗಳು:

೧. ಶ್ರೀ ಸಿದ್ಧರಾಮೇಶ್ವರ ಪುರಾಣ

CC-0. Jangamwadi Math Collection. Digitized by eGangotri

ವೀರಶೈವ ಸಂಸ್ಕೃತ ಕಾವ್ಯಗಳು

೧. ರೇಣುಕ ಚಂಪೂ
೨. ರೇಣುಕ ವಿಜಯಂ
೩. ಬಸವೇಶ ವಿಜಯಂ
೪. ವೀರಭದ್ರಪುರಾಣಂ
೫. ಸಾನಂದ ಚರಿತೆ
೬. ಪಂಡಿತಾರಾಧ್ಯ ಚಾರಿತ್ರ್ಯ

ವೀರಶೈವ ತೆಲುಗು ಕೃತಿಗಳು



ತಮಿಳು ಕೃತಿಗಳು



CC-0. Jangamwadi Math Collection. Digitized by eGangotri



ಇಂಗ್ಲಿಷ್ ಕೃತಿಗಳು

(೧) ಬಸವ ಪುರಾಣ—(The Journal of the Bombay, Branch Royal Asiatic Society 865–66 Vol. VIII)

(೨) ಚಿನ್ನ ಬಸವ ಪುರಾಣ— — do — by Rev. G. Wurth.

ಶಿವಲೀಲೆ, ಶಿವಶರಣರ ಲೀಲೆ, ತತ್ವ ನಿರೂಪಣೆ ಇವು ಮೇಲೆ ನಿರ್ದೇಶಿಸಿದ ಕೃತಿಗಳ ವಸ್ತುಸಾಮಗ್ರಿ. ಮೊದಲಿನವೆರಡನ್ನು ಪ್ರತ್ಯೇಕವಾಗಿಟ್ಟುಕೊಂಡು ಶುದ್ಧಕಾವ್ಯ ನಿರ್ಮಿತಿಯಾಗಿದ್ದರೆ ಎರಡು ಅಥವಾ ಮೂರರ ಸಮ್ಮಿಶ್ರಣದಿಂದ ಪುರಾಣ ಸಾಹಿತ್ಯ ಸೃಷ್ಟಿಯಾಗಿದೆ.

ಮೇಲೆ ನಿರ್ದೇಶಿಸಿದ ವೀರಶೈವ ಪುರಾಣಗಳನ್ನು ಪೃಥಕ್ಕರಿಸಿದರೆ ಆ ಪುರಾಣಗಳಲ್ಲಿ ಬರುವ ವಿಷಯರಾಶಿಯನ್ನು ಹೀಗೆ ವಿವರಿಸಬಹುದು:

ವೀರಶೈವ ಪುರಾಣಗಳ ವಿಷಯ

i) **ಶಿವನ ಪಂಚವಿಂಶತಿ ಲೀಲೆಗಳ ಸುದೀರ್ಘ ವಿವರಣೆ.**

ii) **ಶಿವಭಕ್ತರ ಚರಿತ್ರೆ.**

೧) ಪ್ರಮಥಗಣ – ೪೭ ೩) ಯೋಗಾಚಾರ್ಯರು – ೨೮

೨) ರುದ್ರಗಣ – ೧೭೧ ೪) ತ್ರಿಷಷ್ಟಿ ಪುರಾತನರು – ೬೩

CC-0. Jangamwadi Math Collection. Digitized by eGangotri

೫) ಷೋಡಶರು – ೧೬ ೭) ದಶಗಣರು – ೧೦
೬) ತೇರಸರು – ೧೩ ೮) ಅಮರ ಗಣರು – ೨೩೪
=೧೦೦೦

ಮಲ್ಲಿಕಾರ್ಜುನ ಪಂಡಿತಾರಾಧ್ಯ, ಪಾಲ್ಕುರಿಕೆಯ ಸೋಮ, ಹರಿಹರಾದಿಗಳು ತಮಗೆ ಪ್ರಾಚೀನರಾದ ವೀರಶೈವರನ್ನು ಮೇಲಣ ಎಂಟು ವಿಧದಲ್ಲಿ ವರ್ಗೀಕರಿಸಿದರು. (ಇಲ್ಲಿ ಪ್ರಮಥಗಣ, ರುದ್ರಗಣ, ಶಿವಲೋಕ ಸಂಬಂಧಿಗಳು, ಯೋಗಾಚಾರ್ಯರಲ್ಲಿ ಲಕುಲೀಶ್ವರ ಮುಂತಾದ ಲೌಕಿಕ ಹೆಸರುಗಳು ಕಂಡುಬರುವುದರಿಂದ ವೀರಶೈವದ ಇತಿಹಾಸವನ್ನು ಯೋಗಾಚಾರ್ಯರಿಂದ ಪ್ರಾರಂಭ ಮಾಡಬಹುದು. ೮ನೆಯ ವರ್ಗದವರಾದ ಅಮರಗಣಂಗಳ ಸಂಖ್ಯೆ ೭೭೦ಕ್ಕೆ ಏರಿದೆ.) ಕಲ್ಯಾಣದ ಪತನ ವಿಜಯನಗರದ ಜನನದ ಮಧ್ಯದ ಸುಮಾರು ೬೦೦ ಜನ ವೀರಶೈವ ಶರಣರನ್ನು ಗುರುತಿಸಿ "ನೂತನರು" ಎಂಬ ಹೆಸರಿನಿಂದ ೯ನೆಯ ವರ್ಗ ಸ್ಥಾಪಿಸಿದವನು ಲಕ್ಕಣದಂಡೇಶ. ಮುಂದೆ ೧೦ನೆಯದಾಗಿ ನೂರೊಂದು ವಿರಕ್ತರು. ೧೧ನೆಯದಾಗಿ ೭೦೧ ವಿರಕ್ತರು ವರ್ಗೀಕರಿಸಲ್ಪಟ್ಟವರಾಗಿದ್ದಾರೆ. ಈ ೭೦೧ ವಿರಕ್ತರ ತರುವಾಯದ ಶರಣರ ಚರಿತೆ ಗುರುರಾಜಚಾರಿತ್ರ ಮೊದಲಾದ ಕಾವ್ಯಗಳಲ್ಲಿ ಬರುತ್ತಿದ್ದರೂ ೧೨ನೆಯದಾಗಿ ಯಾರೂ ವರ್ಗೀಕರಿಸಿಲ್ಲ. ವೀರಶೈವ ಪುರಾಣಗಳಲ್ಲಿ ಈ ೧೧ ವರ್ಗಗಳಿಗೆ ಸಂಬಂಧಿಸಿದ ವ್ಯಕ್ತಿಗಳ ವಿಷಯ ಕಂಡು ಬರುತ್ತದೆ.

iii ವೀರಶೈವ ಮತತತ್ವನಿರೂಪಣೆ:

ಚನ್ನಬಸವಪುರಾಣ, ವೀರಶೈವಾಮೃತ ಮಹಾಪುರಾಣ, ಶಿವತತ್ವಚಿಂತಾಮಣಿ ಮೊದಲಾದವುಗಳಲ್ಲಿ ನಿರೂಪಿತವಾದ ಷಟ್‌ಸ್ಥಲ, ನೂರೊಂದು ಸ್ಥಲ, ಅಷ್ಟಾವರಣ, ಕರಣಹಸಿಗೆ, ಮಿಶ್ರಾರ್ಪಣ ಮೊದಲಾದ ವಿಷಯಗಳನ್ನು ಅವಲೋಕಿಸಬಹುದು.

iv ವಾದ ಪ್ರಕರಣ:

ಕೆಲವು ಪುರಾಣಗಳಂತೂ ಅನ್ಯ ಮತವಾದಿಯ ಗರ್ವಭಂಗಕ್ಕಾಗಿಯೇ ಹುಟ್ಟಿಕೊಂಡಿವೆ.

CC-0. Jangamwadi Math Collection. Digitized by eGangotri

ವೀರಶೈವ	ವಾದಿ	ಆಸ್ಥಾನ	ಕೃತಿಗಳು
ರೇವಣಸಿದ್ಧ	ವೈಷ್ಣವಚೋಳ	—	ರೇವಣಸಿದ್ಧೇಶ್ವರ ಪುರಾಣ
ಏಕೋರಾಮಿತಂದೆ	ವ್ಯಾಸ	ಮುದ್ರಾಪುರದ ವೀರಭಾಸ್ಕರನೃಪತಿ	ಕೆಲವು ವೀರಶೈವ ಪುರಾಣಗಳು
ಬಸವ	ಮೀಮಾಂಸಕಾಚಾರ್ಯ	ಕಲಚೂರಿ	ಶಿವತತ್ವಚಿಂತಾಮಣಿ, ಮತ್ತು ಸಿಂಗಿರಾಜ ಪುರಾಣ
ಪಂಡಿತಾರಾಧ್ಯ	ಬುದ್ಧಗುರು	ವೆಲನಾಡಚೋಳ	ಪಂಡಿತಾರಾಧ್ಯ ಚರಿತೆ
ಪಾಲ್ಕುರಿಕೆ ಸೋಮ	1) ಚಕ್ರಪಾಣಿ ರಂಗನಾಥ 2) ಮೊಸರುಕುರಿಕೆಶಾಸ್ತ್ರಿ 3) ಆಜ್ಯಕುರಿಕೆಶಾಸ್ತ್ರಿ	ಕಾಕತೀಯರು	ಗುರುರಾಜ ಚಾರಿತ್ರ
ಕೆರೆಯ ಪದ್ಮರಸ	ತ್ರಿಭುವನ ತಾತ	ಹೊಯ್ಸಳ	ಪದ್ಮರಾಜ ಪುರಾಣ
ರಾಘವಾಂಕ	ಕುಮಾರವ್ಯಾಸ?	—	ಹರಿಹರ ಮಹತ್ವ?
ಜಕ್ಕಣಾಚಾರ್ಯ	ಮುಕುಂದ ಪೆದ್ದಿ	ಪ್ರೌಢದೇವರಾಯ	ತರುವಾಯದ ವೀರಶೈವ ಪುರಾಣಗಳು

೫. ರಾಜಕೀಯ ಅಂಶಗಳು:

ಚೋಳ, ಕಲ್ಯಾಣ ಚಾಲುಕ್ಯ, ಕಲಚೂರ್ಯ, ಕಾಕತೀಯ, ಹೊಯ್ಸಳ, ಕಪಿಲ, ವಿಜಯನಗರ, ಮೈಸೂರು, ಮಹಮದೀಯ, ಕೆಳದಿ ಅರಸುಮನೆತನಗಳಲ್ಲದೆ ಪಾಳೆಯಗಾರರು ಉಲ್ಲಿಖಿತರಾಗಿದ್ದಾರೆ.

ಚೋಳ:

೭ಸಿರ ಸಂಬಂಧದಲ್ಲಿ ಕರಿಕಾಲ ಚೋಳ, ಮುಕ್ಕಣ್ಣ ಚೋಳ, ಸತ್ಯೇಂದ್ರ ಚೋಳ, ಧರ್ಮಚೋಳ, ಭೀಮಚೋಳ, ಉತ್ತುಂಗ ಚೋಳ, ಕುಲೋತ್ತುಂಗ ಚೋಳ, ಅಯ್ವಡಿ ಚೋಳ, ರಾಜೇಂದ್ರ ಚೋಳ, ಮೊನೆಧರ ಚೋಳ, ಕೈವಲ್ಯ ಚೋಳ, ಮನುಜೇಂದ್ರ ಚೋಳ, ಮನು ಚೋಳ, ವೀರ ಚೋಳ, ಪಗಲ್ಚೋಳ ಎಂಬ ಚೋಳರಾಜರ ಚರಿತ್ರೆ ಬರುತ್ತದೆ. ಭಾವಚಿಂತಾರತ್ನ, ರಾಜಶೇಖರ ವಿಳಾಸ, ಚೋಳರಾಜ ಸಾಂಗತ್ಯ ಮೊದಲಾದ ಪುರಾಣಗಳು ಈ ಅರಸರನ್ನೇ ಕುರಿತು ಹುಟ್ಟಿವೆ. ಹರಿಹರನ ರಗಳೆ, ರೇವಣಸಿದ್ಧೇಶ್ವರ ಪುರಾಣ, ಸೌಂದರ ಪುರಾಣ, ಸೌಂದರವಿಳಾಸ, ದೀಪದ ಕಲಿಯರ ಕಾವ್ಯ, ಚೇರಮ ಕಾವ್ಯ, ತ್ರಿಭುವನ ತಿಲಕ, ತ್ರಿಷಷ್ಟಿ ಪುರಾತನರ ಚರಿತ್ರೆಗಳಲ್ಲಿ ಸಾಂದರ್ಭಿಕವಾಗಿ ಚೋಳ

CC-0. Jangamwadi Math Collection. Digitized by eGangotri

ರಾಜರ ಚರಿತ್ರೆ ಸೇರಿಕೊಂಡಿವೆ. ಇದಲ್ಲದೆ ಚೇರ, ಪಾಂಡ್ಯ – ಮೊದಲಾದ ಅರಸರ ಉಲ್ಲೇಖ ಆಗಾಗ ಬರುತ್ತದೆ.

ಚಾಲುಕ್ಯರು:

೧. ರೇವಣಸಿದ್ಧೇಶ್ವರ ಕಲ್ಯಾಣಕ್ಷಿತಿಪ ಚಾಳುಕ್ಯನಿಗೆ ಸುರಗಿಯನ್ನು ತೋರಿದ ನಂತೆ.

೨. ಕೊಂಡಗುಳಿ ಕೇಶಿರಾಜ ಚಾಲುಕ್ಯ ವಿಕ್ರಮಾದಿತ್ಯನಲ್ಲಿ ಮಂತ್ರಿಯಾಗಿದ್ದನು.

೩. ಕಲ್ಯಾಣ ಚಾಲುಕ್ಯರಾಜ ತ್ರಿಭುವನಮಲ್ಲ ಸೋಮೇಶ್ವರ (೧೧೮೨–೧೧೯೯) ಏಕಾಂತರಾಮನನ್ನು ಬರಮಾಡಿಕೊಂಡು ಸತ್ಕರಿಸಿ ಅಬ್ಬಲೂರನ್ನು ದತ್ತಿಯಾಗಿ ಕೊಟ್ಟನು.

೪. ದೇವರದಾಸಿಮಯ್ಯನು ಪೊಟ್ಟಲಕೆರೆಯ ಚಾಳುಕ್ಯ ಜಯಸಿಂಹನ ಆಸ್ಥಾನದಲ್ಲಿ ಪರವಾದಿಗಳನ್ನು ಗೆದ್ದು ರಾಣಿಯಾದ ಸುಗ್ಗಲೆಗೆ ಲಿಂಗದೀಕ್ಷೆ ಕೊಟ್ಟನು.

ಕಲಚೂರ್ಯರು:

ವೀರಶೈವ ಆಂದೋಲನ ನಡೆದುದು ಕಲಚೂರ್ಯರ ಕಾಲದಲ್ಲಿ ಬಿಜ್ಜಳನ ಉಲ್ಲೇಖ ಸರ್ವಸಾಮಾನ್ಯವಾಗಿದೆ. ಬಸವ, ಚನ್ನಬಸವ ಮೊದಲಾದ ಅನೇಕ ವಚನಕಾರರು ಆಗಿಹೋಗಿದ್ದಾರೆ. 'ಸಿದ್ಧರಾಮ ಚರಿತ್ರೆ'ಯಲ್ಲಿಯ ಕರ್ಣದೇವ ಪ್ರಸಂಗ ಐತಿಹಾಸಿಕ ದೃಷ್ಟಿಯಿಂದ ಗಮನಾರ್ಹವಾದುದು. ಸೊಡ್ಡಳ ಬಾಚರಸ, ಗುಪ್ತಮಂಚಣ್ಣ, ತಂಗಟೂರು ಮಾರಯ್ಯ, ರಾಯಸದ ಮಂಚಣ್ಣ ಇವರೆಲ್ಲ ಬಿಜ್ಜಳನಲ್ಲಿ ಅಧಿಕಾರಿಗಳಾಗಿದ್ದರೆಂದು ತಿಳಿದುಬರುತ್ತದೆ.

ಕಾಕತೀಯರು:

ಗಣಪತಿ ನೃಪಾಲನ ಉಲ್ಲೇಖ ವೀರಗುಂಡ ಬ್ರಹ್ಮಯ್ಯರೊಂದಿಗೆ ಬರುತ್ತದೆ. ಕಾಕತೀಯ ಪ್ರತಾಪರುದ್ರನ ಆಸ್ಥಾನದಲ್ಲಿ ರಾಘವಾಂಕನು ಪರವಾದಿಗಳನ್ನು ಗೆದ್ದುದು. ಈ ರಾಜಮನೆತನದ ವಿಷಯ ತೆಲುಗು ವೀರಶೈವ ಪುರಾಣಗಳಲ್ಲಿ ಬಂದಿರಲೂ ಬಹುದು.

ಕದಂಬರು:

ಕದಂಬ ಕಾಮರಸನು (೧೧೮೦–೧೨೦೩) ಏಕಾಂತರಾಮನನ್ನು ಹಾನಗಲ್ಲಿಗೆ ಕರೆದುಕೊಂಡು ಹೋಗಿ ಸತ್ಕರಿಸಿ ಮಲ್ಲವಳ್ಳಿ ಗ್ರಾಮವನ್ನು ದತ್ತಿಯಾಗಿ ಬಿಟ್ಟನು.

CC-0. Jangamwadi Math Collection. Digitized by eGangotri

ಹೊಯ್ಸಳ:

ಹರಿಹರ ಕರಣಿಕ, ಕೆರೆಯ ಪದ್ಮರಸ ಮಂತ್ರಿ, ರಾಘವಾಂಕ ಹೊಯ್ಸಳರ ಓಲಗದಲ್ಲಿ ನಡೆದ ತ್ರಿಭುವನತಾತನ ವಾದಪ್ರಸಂಗದಲ್ಲಿ ಪಾಲುಗೊಂಡಿದ್ದರು. ಇವನ ಸಮಾಧಿ ಬೇಲೂರಿನಲ್ಲಿ ಆಯಿತು. ಪದ್ಮರಾಜಪುರಾಣ ಮೊದಲಾದವು ಗಳಲ್ಲಿ ಈ ಮನೆತನದ ಉಲ್ಲೇಖ ಬರುತ್ತದೆ.

ಕಂಪಿಲ:

ರಾಘವಾಂಕನಿಗೆ ಪಾದಪೆಂಡೆ ನೀಡಿದವನು ಕಂಪಿಲದೇವರಾಯನೇ ಆಗಿರ ಬೇಕು. ಚನ್ನಬಸವಪುರಾಣದಲ್ಲಿ ಈ ಮನೆತನದ ಉಲ್ಲೇಖ ಬರುತ್ತದೆ. ಕುಮಾರ ರಾಮನನ್ನು ಕುರಿತು ಹುಟ್ಟಿಕೊಂಡ ಎಲ್ಲ ಕಾವ್ಯಗಳಲ್ಲಿಯೂ ಉಲ್ಲೇಖ ಬರುತ್ತದೆ.

ವಿಜಯನಗರ:

(ಸಂಗಮ, ಸಾಳ್ವ, ತುಳು, ಆರವೀಡು)

ಪ್ರೌಢರಾಯನ ಕಾಲದ ನೂರೊಂದು ವಿರಕ್ತರು, ವಿರೂಪಾಕ್ಷನ ಕಾಲದ ಏಳುನೂರೊಂದು ವಿರಕ್ತರು.

ಪಾಳೆಯಗಾರರು:

೧. ಗುಮ್ಮಳಾಪುರವರಾಧೀಶ ಚಿಕ್ಕವೀರಣಾರ್ಯನ ವಂಶವಿವರಣೆ ಬೊಮ್ಮರ ಸನ ಸೌಂದರ ಪುರಾಣದಲ್ಲಿ ಬರುತ್ತದೆ.

೨. ಉಮ್ಮತ್ತೂರಿನ ವೀರನಂಜೇಂದ್ರನ ಉಲ್ಲೇಖ ನೀಲಕಂಠಾಚಾರ್ಯನ 'ಆರಾಧ್ಯಚರಿತ್ರೆ'ಯಲ್ಲಿ ಬರುತ್ತದೆ.

೩. ಚೋಳರ ಭೀಮ ಏಳು ಬೀಡಿನ ಗೋವನಾದ ವಿರೂಪರಾಜನು ತನ್ನ ತ್ರಿಭುವನತಿಲಕ ಚೇರಮ ಕಾವ್ಯದಲ್ಲಿ ತನ್ನ ವಂಶವನ್ನು ಹೇಳಿಕೊಂಡಿದ್ದಾನೆ.

೪. ಈ ವಿರೂಪರಾಜನ ಮಗ ವೀರಭದ್ರರಾಜನು ತನ್ನ ವೀರಭದ್ರ ವಿಜಯ ದಲ್ಲಿ ತನ್ನ ಮನೆತನವನ್ನು ಉಲ್ಲೇಖಿಸಿದ್ದಾನೆ.

೫. ಮೈಸೂರಿನ ಇಮ್ಮಡಿ ಕೃಷ್ಣರಾಜನ ಸೇನಾಪತಿ ಕಳಲೆಯ ನಂಜರಾಜನ ಆಸ್ಥಾನದಲ್ಲಿ ನೂರೊಂದನು ಸೌಂದರ ಕಾವ್ಯದಲ್ಲಿ ಕಳಲೆ ನಂಜರಾಜನ ವಿಷಯವನ್ನು ಹೇಳಿದ್ದಾನೆ.

ಉದ್ಭಟ, ಮಳೆಯರಾಜ, ಓಹಿಲ ಮೊದಲಾದ ರಾಜರ ಚರಿತ್ರೆ ವೀರಶೈವ ದಲ್ಲಿ ಸುಪ್ರಸಿದ್ಧ.

CC-0. Jangamwadi Math Collection. Digitized by eGangotri

ಕೆಲವು ವೀರಶೈವ ಪುರಾಣಗಳ ವಿಷಯ ವಿಭಜನೆ

೧. ಬಸವಪುರಾಣ

ಕಥಾನಾಯಕನ ಚರಿತ್ರೆ, ಕಾಂಡ ೧, ೨ :

ಪೀಠಿಕೆ, ಶಿವನ ಒಡ್ಡೋಲಗ, ನಾರದದರ್ಶನ, ನಂದೀಶ್ವರನು ಶಿಲಾದ ಮುನಿಗುದಯಿಸುವುದು, ಬಸವೇಶ್ವರನು ಮರ್ತ್ಯಕ್ಕೆ ತರುವುದು, ಬಾಗವಾಡಿಯಲ್ಲಿ ಬಸವೇಶ್ವರನ ಜನನ, ಸಂಗಮೇಶ್ವರ ದರ್ಶನ, ಬಾಲ್ಯ, ಉಪನಯನನಿರಾಕರಣೆ, ಕಲ್ಯಾಣಗಮನ – ವಿವಾಹ, ಭಕ್ತಿಪ್ರತಿಜ್ಞೆ, ಚೆನ್ನಬಸವಣ್ಣನವರು – ಪ್ರಭುದೇವರು ಕಲ್ಯಾಣಕ್ಕೆ ಆಗಮಿಸುವುದು, ಬಂದಿಕಾರ-ಭಕ್ತ.

ಶಿವಭಕ್ತರ ಕಥೆಗಳು, ಕಾಂಡ ೩ :

ಮುಗ್ಧ ಭಕ್ತರ ಕಥೆಗಳು – ಸಕಳೇಶ ಮಾದರಸರು.

ಕಾಂಡ ೪–೮:

ಮಡಿವಾಳ ಮಾಚಿದೇವನ ಕಥೆ, ವೀರಭಕ್ತರ ಕಥೆಗಳು, ಆದಿಶರಣರ ಕಥೆಗಳು, ಅರವತ್ತು ಮೂವರ ಕಥೆಗಳು, ಬಸವಪೂರ್ವದ ಶರಣರ ಕಥೆಗಳು.

ಕಥಾನಾಯಕನ ಚರಿತ್ರೆ

ಕಾಂಡ ೮, ಸಂಧಿ ೫೮ – ಬಸವೇಶ್ವರನ ವಿಷದ ಪವಾಡ.
ಕಾಂಡ ೮, ಸಂಧಿ ೫೯ – ಜಗದೇವಯ್ಯಗಳ ಕಥೆ.
ಕಾಂಡ ೮, ಸಂಧಿ ೬೦ – ಬಸವಣ್ಣನವರ ಐಕ್ಯ.

೨. ಶಿವತತ್ವ ಚಿಂತಾಮಣಿ

ಸಂಧಿ ೧–೨೫, ಶಿವನ ಪಂಚವಿಂಶತಿ ಲೀಲೆಗಳು

ಚಾರಿತ್ರಿಕ ಅಂಶ:

ಸಂ. ೨೬ ಭುವನ ಕೋಶ
ಸಂ. ೨೭ ಶಿವಲೋಕ ವಿಸ್ತಾರ
ಸಂ. ೨೮ ನಾರದ ದರ್ಶನ
ಸಂ. ೨೯ ಶಿವನಂದಿಕೇಶ್ವರ ಸಂವಾದ

CC-0. Jangamwadi Math Collection. Digitized by eGangotri

ಸಂ. ೩೦ ಬಸವ ಜನನ
ಸಂ. ೩೧ ಬಸವನ ಮದುವೆ; ಪ್ರಧಾನ ಪಟ್ಟ
ಸಂ. ೩೨ ಬಸವೇಶ್ವರನ ಪವಾಡ
ಸಂ. ೩೩ ಮೂಮಾಂಸಕನ ಪವಾಡ
ಸಂ. ೩೪ ಪ್ರಮಥ ಗಣ, ರುದ್ರ ಗಣ, ಯೋಗಾಚಾರ್ಯ, ತೇರಸ, ದಶಗಣ ಚರಿತ್ರೆ.
ಸಂ. ೩೫ ಆರುವತ್ತುಮೂರು ಪುರಾತನ ಚರಿತ್ರೆ
ಸಂ. ೩೬ ಷೋಡಶರ ಕಥೆ.
ಸಂ. ೩೭ ನೂತನರ(ಕಲ್ಯಾಣಪತನ-ವಿಜಯನಗರ ರಾಜ್ಯೋದಯದ ಮಧ್ಯದ ಶರಣರ) ಕಥೆ.
ಸಂ. ೩೮ ಅಸಂಖ್ಯಾತರ ಕಥೆ

ತತ್ವವಿವರಣೆ:

ಸಂ. ೩೯ ಧರ್ಮಾಧರ್ಮ, ಪಿಂಡೋತ್ಪತ್ತಿ, ಸಂಸಾರ ಹೇಯ
ಸಂ. ೪೦ ಪಂಚಾಕ್ಷರಿ ಮಹಿಮೆ
ಸಂ. ೪೧ ರುದ್ರಾಕ್ಷಿಯ ಮಹತ್ವ
ಸಂ. ೪೧ ವಿಭೂತಿಯ ಮಹಿಮೆ
ಸಂ. ೪೨ ಗುರು ಶುಶ್ರೂಷಾ ಕ್ರಮ
ಸಂ. ೪೩ ದೀಕ್ಷಾವಿಧಾನ
ಸಂ. ೪೪ ಪಾದೋದಕ ಮಹತ್ವ
ಸಂ. ೪೫ ಷಟ್‌ಸ್ಥಲ ಬ್ರಹ್ಮನಿರ್ಣಯ
ಸಂ. ೪೬ ಲಿಂಗಸ್ಥಲ
ಸಂ. ೪೭ ಆಂಗಸ್ಥಲ
ಸಂ. ೪೮ ಲಿಂಗಾಂಗ ಸಂಯೋಗ ಸ್ಥಲ
ಸಂ. ೪೯ ಲಿಂಗಾಂಗ ಸಂಯೋಗ
ಸಂ. ೫೦ ಸರ್ವಾಂಗಲಿಂಗ ಸ್ಥಲ
ಸಂ. ೫೧ ಕ್ರಿಯಾ ವಿಶ್ರಾಂತಿ

೩. ವೀರಶೈವಾಮೃತ ಮಹಾಪುರಾಣ

ತತ್ವವಿವರಣೆ : ಕಾಂಡ ೧

ಸಂಧಿ೧. ಪೀಠಿಕೆ, ೨. ವಸ್ತು ನಿರ್ದೇಶ, ೩. ಪಂಚಾವರಣಾಂಗ ಸದ್ಭಕ್ತ ಲಕ್ಷಣ. ೪. ಅನಾದಿ ಜಂಗಮದ ಮಕುಟದಲ್ಲಿ ಶೂನ್ಯ ಲಿಂಗೋತ್ಪತ್ತಿ ಕ್ರಮ. ೫. ಚಿದಂಬರೋದ್ಧರಣೆ, ತ್ರ್ಯಕ್ಷರ, ಪಂಚಾಕ್ಷರ, ಷಡಕ್ಷರ ವಿವರಣ, ೬. ಭಾವಮೂರ್ತಿ ಲಕ್ಷಣ. ೭. ಮಾಹೇಶ್ವರ ಭೇದ ಸೃಷ್ಟಿ ವಿಷಯ ಕಥನ. ೮. ಲಿಂಗಾಂಗ ಸ್ವರೂಪ ವಿವರಣಗಳು. ೯. ನಿಷ್ಕಳ – ಸಕಲ, ನಿಷ್ಕಳ – ಸಕಳ ಶಕ್ತಿಸಾದಾಖ್ಯ ಲಕ್ಷಣ.

CC-0. Jangamwadi Math Collection. Digitized by eGangotri

ಶಿವಲೀಲೆ: ಕಾಂಡ ೨, ೩, ೪, ೫, ೬
ಶಿವನ ಪಂಚವಿಂಶತಿ ಲೀಲೆಗಳು

ತತ್ವವಿವರಣೆ: ಕಾಂಡ ೭

ಸಂಧಿ ೧. ವಿರಾಟರೂಪ ಲಕ್ಷಣ. ೨. ಸಪ್ತಶೈವ, ತ್ರಿಶೈವಗಳ ವಿವರಣೆ. ೩. ವೀರಶೈವ ಮತ್ತು ಕರಣಹಸಿಗೆ. ೪. ಗುರು ಶಿಷ್ಯ ಲಕ್ಷಣ, ದೀಕ್ಷಾಸುದಿನ ೫. ದೀಕ್ಷಾಮಂಟಪ ಕ್ರಮ. ೬. ಪಂಚಕಲಶ ಪ್ರತಿಷ್ಠಾಪನಾ. ೭ ರುದ್ರಾಕ್ಷಿ ಜಪ ಲಕ್ಷಣ. ೮. ಯೋಗಾಸನ–ಪಂಚಕಲಶ ವಿಧಾನ. ೯. ಚಕ್ರಬೀಜ, ರುದ್ರಾಭಿಷೇಕ. ೧೦. ಅಷ್ಟವಿಧ ಪೂಜೆ. ೧೧. ಷೋಡಶೋಪಚಾರ. ೧೨. ಶ್ರೀಗುರು ಶಿಷ್ಯನನ್ನು ಮಂತ್ರಮೂರ್ತಿ ಮಾಡುವಿಕೆ. ೧೩. ದೀಕ್ಷಾ ವಿಧಾನ. ೧೪. ಗುರುಸೇವಾವಿಧಾನ. ೧೫. ವೀರಶೈವಧರ್ಮ ಸದಾಚಾರ ಮತ್ತು ಶೀಲಕ್ರಮ. ೧೬. ಆರುವತ್ತುನಾಲ್ಕು ಶೀಲವಿವರಣೆ. ೧೭. ಕ್ರಿಯಾ ಸಮಾಧಿ ವಿಷಯ.

ಶರಣಚರಿತ್ರೆ: ಕಾಂಡ ೮

ಸಂಧಿ ೧. ಬಸವಾವತರಣ, ೨. ಪೆಟ್ಟಿಗೆ ಪವಾಡ; ಬಸವಸಮಕಾಲೀನ ಶರಣರ ಕಥೆ, ೩. ಪಾಲ್ಕುರಿಕೆ ಸೋಮನ ಬಸವಪುರಾಣ ಕಥಾಸಂಗ್ರಹ. ೪. ಬಸವೇಶ್ವರನ ಇತರ ಪವಾಡಗಳು. ೫, ೬, ೭ ಪಂಡಿತಾರಾಧ್ಯಚರಿತ್ರೆ ಸಂಗ್ರಹ. ೮. ನೂತನರ ಚರಿತ್ರೆ (ಶಿವತತ್ವ ಚಿಂತಾಮಣಿ ಕಥಾಸಂಗ್ರಹ ಮತ್ತು ತನಗೆ ತಿಳಿದ ಮಿಕ್ಕ ಶರಣರ ಕಥಾಸಂಗ್ರಹ).

ತತ್ವವಿವರಣೆ: ಕಾಂಡ ೮

ಸಂಧಿ ೯ ಷಟ್‌ಸ್ಥಲ, ೧೦ ಅಂಗಸ್ಥಲ.
ಒಟ್ಟಾಗಿ ಈ ಕೃತಿಯು ತತ್ವ-ಚರಿತ್ರೆ-ಲೀಲೆಗಳ ತ್ರಿವೇಣಿಯಾಗಿರುವುದು.

೪. ಚನ್ನಬಸವಪುರಾಣ:

ಕಥಾನಾಯಕನ ಚರಿತ್ರೆ: ಕಾಂಡ ೧

ಪೀಠಿಕೆ, ಶಿವನ ಒಡ್ಡೋಲಗ, ನಾರದದರ್ಶನ, ಚನ್ನಬಸವ ಉತ್ಪತ್ತಿ, ಪುಷ್ಪಕೋತ್ಸವ, ಇಷ್ಟಲಿಂಗಧಾರಣೆ, ಮಂಚಣ್ಣನ ಚಹಡಿ, ರಾಜನೀತಿ, ಚಂದ್ರೋದಯ, ರಾತ್ರಿ ವಿಹಾರ, ಕಲ್ಯಾಣ ದೇಶವರ್ಣನೆ.

CC-0. Jangamwadi Math Collection. Digitized by eGangotri

ಶಿವಲೀಲೆಗಳು: ಕಾಂಡ ೨, ೩, ೪
ಶಿವನ ಪಂಚವಿಂಶತಿ ಲೀಲೆಗಳು.

ವೀರಶೈವರ ಚರಿತ್ರೆ: ಕಾಂಡ ೫
ಸೋಮಸೂರ್ಯಾನ್ವಯ ವರ್ಣನೆ, ಶೈವರ (೬೩ ಪುರಾತನರು, ಷೋಡಶರು ಮತ್ತು ತೇರಸರು, ದಶಗಣರು) ಕಥೆ, ಸಾನಂದ ಗಣೇಶ್ವರನ ಕಥೆ, ವೀರಶೈವ ಶರಣರ (೭೭೦ ಅಮರಗಣಂಗಳ) ಕಥೆ.

ತತ್ವನಿರೂಪಣೆ:
ಪಿಂಡೋತ್ಪತ್ತಿ, ಕರಣಹಸಿಗೆ, ದೀಕ್ಷಾವಿಧಾನ, ಲಿಂಗಾರ್ಚನಾವಿಧಾನ, ಷಟ್‌ಸ್ಥಲ ನಿರ್ಣಯ ಸಂಧಿ.

ವೀರಶೈವರ ಚರಿತ್ರೆ:
ಕಾಲಜ್ಞಾನ ಸಂಧಿ – ಕಲ್ಯಾಣ ಕ್ರಾಂತಿ, ಹೊಯ್ಸಳ ರಾಜ್ಯ, ಕಂಪಿಲ ರಾಜ್ಯ, ಸಂಗಮ, ಸಾಳ್ವ, ತುಳುವಂಶಗಳೊಂದಿಗೆ ಶರಣರ ಚರಿತ್ರೆ.

೫. ರಾಘವಾಂಕ ಚಾರಿತ್ರ:

ಸಂಧಿ ೧. ಪೀಠಿಕೆ, ೨. ರಾಘವಾಂಕನ ಜನನ, ಹರಿಹರನಿಂದ ವಿದ್ಯಾಭ್ಯಾಸ. ೩. ದೇವರಾಜನ ಆಸ್ಥಾನದಲ್ಲಿ ಹರಿಶ್ಚಂದ್ರಕಾವ್ಯವಾಚನ. ೪. ಮುರಿದ ಹಲ್ಲು ಮರಳಿ ಪಡೆದದ್ದು. ೫. ಶಿವಭಕ್ತರ ಸತ್‌ಕಥೆಗಳು ಮತ್ತು ಗುರು ಮಹಿಮೆ. ೬. ಲಿಂಗಮಹಾತ್ಮೆ, ೭. ಕಮಳಾಯಿಯ ಕಥೆ, ೮, ೯, ೧೦, ೧೧, ೧೨ ಜಂಗಮ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿ, ಪಾದತೀರ್ಥ, ಪ್ರಸಾದ ಮಹಾತ್ಮೆ, ೧೩. ಸೋಮನಾಥ ಚರಿತ್ರ ಸಂಗ್ರಹ, ೧೪. ಶರಭಾದಿ ಕಾವ್ಯಗಳ ಚರಿತ್ರ, ೧೫. ಭೀಮಕವಿ ವಿದ್ಯಾದಾನ, ಸಿದ್ಧರಾಮಚರಿತ್ರ ಸಂಗ್ರಹ, ೧೬. ರಾಘವಾಂಕ ಪದ್ಮರಸರ ಸಂದರ್ಶನ, ೧೭. ಓರಂಗಲ್ಲು ಪ್ರಯಾಣ, ೧೮. ಪ್ರತಾಪರುದ್ರನ ಆಸ್ಥಾನಪಂಡಿತರನ್ನು ಗೆದ್ದದ್ದು. ೧೯. ರಾಘವಾಂಕನ ಸಮಾಧಿ.

೬. ಗುರುರಾಜ ಚಾರಿತ್ರ:

"ಒರೆವೆನಾಚಾರ್ಯರುದ್ಭವನಾ, ಪರಮ ಸದ್
ಗುರುವಂಶವಂ, ಶಿವನ ಪಂಚವಿಂಶತಿ ಲೀಲೆ,
ಹರಪೂಜೆಯಂ, ಪಂಡಿತಾರಾಧ್ಯರೊರೆದ ಗಣಸಾಹಸ್ರ ನಾಮಂಗಳಂ

CC-0. Jangamwadi Math Collection. Digitized by eGangotri

ಧರೆಯಲ್ಲಿ ಶಿವಕೃಪೆವಡೆದ ನೂತನದ
ಹರ ಪುರಾತನರ ಕಥೆಗಳಂ,....."

ಎಂಬ ಪದ್ಯ ಈ ಪುರಾಣಕ್ಕೆ ಪರಿವಿಡಿಯಾಗಿದೆ. ಪಾಲ್ಕುರಿಕೆ ಸೋಮನ ಬಸವ ಪುರಾಣ ಮತ್ತು ಪಂಡಿತಾರಾಧ್ಯಚರಿತ್ರೆ, ಲಕ್ಕಣನ ಶಿವತತ್ವಚಿಂತಾಮಣಿ, ಮಲ್ಲಣನ ವೀರಶೈವಾಮೃತ ಮಹಾಪುರಾಣಗಳ ಶರಣರ ಚರಿತ್ರ ಇಲ್ಲಿ ಒಟ್ಟುಗೂಡಿ ನಿಂತಿದೆ. ಹೀಗಾಗಿ ಇದೊಂದು ಶರಣಚರಿತ್ರಸಾಗರ.

೭. ಪ್ರೌಢದೇವರಾಯನ ಕಾವ್ಯ:

".....ಎಲೆ ಜಕ್ಕಣಾರ್ಯ! ತಿಳಿಪು ನೀನೆನಗೆ ಚಾಮರಸ ಬಪ್ಪನ್ನೆಗಂ ಮಲಹರನ ಶರಣರಾ ಕಥೆಯಂ....." ಎಂಬ ಪ್ರೌಢದೇವರಾಯನ ವಿನಂತಿಯ ಮೇರೆಗೆ ೧೧ ದಿನಗಳ ವರೆಗೆ ಹೇಳಿದ ಶರಣರ ಕಥೆಗಳು. ಪ್ರೌಢರಾಯನ ಚರಿತ್ರೆಯಾಗಲಿ, ಆವನ ಸಮಕಾಲೀನ ಶರಣರ ಕಥೆಯಾಗಲಿ, ಕಲ್ಯಾಣಪತನದ ತರುವಾಯದ ಶರಣರ ಕಥೆಯಾಗಲಿ ಬರದೆ ಬಸವ ಸಮಕಾಲೀನ ಮತ್ತು ಬಸವಪೂರ್ವದ ಶರಣರ ಕಥೆಗಳಿವೆ.

೮. ಸಿಂಗಿರಾಜ ಪುರಾಣ:

ಇದು ಸ್ವತಂತ್ರ ಪದ್ಧತಿಯ ಪುರಾಣ. ".....ಆದ್ಯರ ವಚನಸಿದ್ಧಿ ಸಾರೋದ್ಧಾರ ಶಾಸನವಿದು....." ಗುರುದೇಮಿದೇವಯ್ಯನಿಗೆ ಗೊತ್ತಿದ್ದ ೬೪ ಪವಾಡಗಳು ಮಾತ್ರ ಇಲ್ಲಿ ೪೦ ಸಂಧಿಗಳಲ್ಲಿ ವಿಸ್ತಾರಗೊಂಡಿವೆ. ಮೊದಲಿನ ೭ ಸಂಧಿಗಳು ಬಸವಣ್ಣನ ಜನನ, ವಿವಾಹ, ಮಂತ್ರಿಪದವಿಗಳನ್ನು ವಿವರಿಸುತ್ತವೆ. ಶರಣರ ವಚನ (೮೨), ಹಾಡು (೨)ಗಳಿಂದ ಘಟನೆಗಳನ್ನು ಸಮರ್ಥಿಸುತ್ತಾನೆ. ಆದರ ವಿವರ ಕೆಳಗಿನಂತಿದೆ:

ಸಂಧಿ	ವಚನ	ಹಾಡು	ಸಂಧಿ	ವಚನ	ಹಾಡು
೨	೧೧	೧	೧೧	೨	—
೪	೩	—	೧೭	೧	—
೫	೧೮	—	೧೯	೨	—
೯	೪	—	೨೨	೨	—
೧೦	೨	—	೨೫	೧	—

CC-0. Jangamwadi Math Collection. Digitized by eGangotri

೨೭	೩	—	೩೮	೨	—
೨೮	೨	—	೩೯	೨	—
೩೧	೧೧	—	೪೨	೨	—
೩೩	೧	—	೪೫	೧	—
೩೪	೧	೧	೪೮	೧	—
೩೫	೧	—			
			ಒಟ್ಟು	೮೨	೨

೧. ಉಪ್ಪಲದಿನ್ನೆಯ ಸಂಗಮೇಶ್ವರನು ವಿಳಾಪುರದ ಆದಿಲ್‌ಶಾಹ ಒಣಗಿಸಿದ್ದ ಮರವನ್ನು ಚಿಗುರಿಸಿ ಅರಸನಿಂದ ವಂದನೆ ಪಡೆದನು. (ಗುರುರಾಜ ಚಾರಿತ್ರ)

೨. ಕೊಟ್ಟೂರ ಬಸವೇಶನು ಕುತುಬಶಾಹ ನಿಜಾಮಲಕ ಕುಬಾರ ಇವರ ಮನೆಯಲ್ಲಿ ಶಿವಗೆಂದು ಸಿಂಗರಿಸಿದ ಮಂಚವೇರಿ ಬಯಲಾದನು. (ಗುರು ರಾಜಚಾರಿತ್ರ)

೩. ಮಹಲಿಂಗ ಮುನಿಗಳು ಘೋರ್ಪಡೆ ವಂಶದ ಮಾಲೋಜಿ ಮಹಾರಾಜ ನಿಂದ ನರಗಟ್ಟಿ ಗ್ರಾಮವನ್ನು ಪಡೆದನು. ಮಲರೋಗದಿಂದ ಸತ್ತ ಮಾಲೋ ಜಿಯ ಮಗ ಗೋವಿಂದರಾಜನ ಪ್ರಾಣ ಉಳಿಸಿಕೊಟ್ಟನು. ಮಾಲೋಜಿಯ ಇನ್ನೊಬ್ಬ ಮಗ ಕೇದಾರ ಭಾವನು ವಿಷಪ್ರಾಶನದಿಂದ ಪ್ರಾಣ ನೀಗಿದನು. ಗೋವಿಂದರಾಯನ ಮಗ ನಾರಾಯಣನು ಬಾಲಗ್ರಹದಿಂದ ಮರಣ ಹೊಂದಿದಾಗ ಮುನಿನಾಥನು ಬದುಕಿಸಿದನು. (ಮಹಲಿಂಗಲೀಲೆ)

೪. ...ತೋಂಟದ ಸಿದ್ಧಲಿಂಗೇಶ್ವರನು ತುರುಷ್ಕರಾಜನಿಗೆ ಜೀವದಾನ ಮಾಡಿದ ವಿಷಯ ಎರಡೂ ಪುರಾಣಗಳಲ್ಲಿ ಬಂದಿದೆ.

ವೀರಶೈವಪುರಾಣಲಕ್ಷಣಗಳು

ವೀರಶೈವ ಪುರಾಣಪರಂಪರೆಗೆ ಆದಿಯೆಂದರೆ "ಬಸವಪುರಾಣ"ವೆಂದೇ ಹೇಳಬೇಕು. ಭೀಮಕವಿಯು ಬಸವಪುರಾಣ ರಚನೆಯ ಸಂಬಂಧವಾಗಿ ಹೇಳಿದ ಪದ್ಯದಲ್ಲಿ ಆ ಪುರಾಣದ ಲಕ್ಷಣ ಧ್ವನಿತವಾಗುವಂತಿದೆ.

ಆದಿಲಿಂಗ ರಹಸ್ಯ ಸಿದ್ಧಾಂ
ತಾದಿ ವೇದ ಪುರಾಣ ಸಮ್ಮತ
ವಾದ ಬಸವ ಪುರಾತನರ ಹೀತಾರ್ಥ ಮಾತೃಕದಿ

CC-0. Jangamwadi Math Collection. Digitized by eGangotri

ಕೋದ ಮಣಿಗಣ ಸೂತ್ರದಂತಿರೆ
ಆದಿಗಣಚರಿತಂಗಳೊಳು ಸಂ
ವೇದಿಸಲು ಬಸವನ ಚರಿತೆಯಂ ಬಣ್ಣಿಸುವೆನೊಸೆದು.

ಇಲ್ಲಿ ಕವಿ ಬಸವಚರಿತೆಯನ್ನು ಆದಿಗಣಚರಿತಗಳಲ್ಲಿ ಸಂವೇದಿಸಿ ಬರೆದಿರುವನು. ಬಸವಚರಿತೆ, ಆದಿಗಣಚರಿತೆಗಳೇ ಬಸವಪುರಾಣ ಲಕ್ಷಣಗಳು. ಈ ಚರಿತೆಗಳನ್ನು ಕೋದ ಮಣಿಗಣಸೂತ್ರದಂತೆ ಹೇಳಬೇಕು. ಬಸವಚರಿತೆಗೆ ಬಸವ ಪುರಾತನರ ಗೀತೆಗಳೇ ಮಾತೃಕೆ. ಏಕೆಂದರೆ ಅವು ವೇದ ಪುರಾಣಸಮ್ಮತವಾದುವು. ಚರಿತೆಯೆಂಬಲ್ಲಿ ಐತಿಹಾಸಿಕ ಅಂಶ ಹಾಗೂ ಪವಾಡಗಳೆರಡರ ಅರ್ಥವೂ ಅಡಕವಾಗಿದೆ. ಪವಾಡಗಳೇ ಆ ವ್ಯಕ್ತಿಯ ಮಹಿಮಾತಿಶಯವನ್ನು ಬಿತ್ತರಿಸುವುದರಿಂದಲೂ ಜನಸಾಮಾನ್ಯರ ಚಿತ್ರವನ್ನು ಸುಲಭವಾಗಿಯೇ ಸೆಳೆದು ಅಲ್ಲಿನ ಭಕ್ತಿಯ ಬೀಜವನ್ನು ಬಿತ್ತಬಲ್ಲವಾದುದರಿಂದಲೂ ನೈಜ ಚರಿತ್ರೆಗಿಂತಲೂ ಪವಾಡಗಳಿಗೇ ಪ್ರಧಾನ ಸ್ಥಾನವನ್ನು ಇತ್ತಿರುವನು. ಚರಿತ್ರೆಯ ಮೌಲ್ಯ ಇಂದಿನವರಿಗೆ ಅಧಿಕವಾಗಿರಬಹುದು. ಅಂದಿನವರಿಗೆ ಪವಾಡಗಳೇ ಅಧಿಕ ಮೌಲ್ಯವುಳ್ಳವಾಗಿದ್ದುವು. ಬಸವಾದಿ ಪ್ರಮಥರ ವಚನಗಳ ಆಧಾರದಿಂದ ಬಸವಚರಿತೆಯನ್ನು ವಿವರಿಸಿರುವನು.

ಬಸವಪುರಾಣದ ದೃಷ್ಟಿಯಲ್ಲಿ ವೀರಶೈವ ಪುರಾಣದ ಲಕ್ಷಣಗಳು ಎರಡೇ ಎರಡು:

೧. ಬಸವ ಚರಿತೆ; ೨. ಆದಿಗಣಚರಿತೆ

ಇವೆರಡನ್ನೂ ಜೋಡಿಸಿರುವ ಬಗೆಯೆಂತು? ಬಸವಣ್ಣನವರ ಜೀವನ ಚರಿತೆಯಲ್ಲಿ ಚನ್ನಬಸವಣ್ಣ, ಮಡಿವಾಳ ಮಾಚಯ್ಯ, ಪ್ರಭುದೇವ, ಕಿನ್ನರಿ ಬ್ರಹ್ಮಯ್ಯನವರೇ ಮೊದಲಾದ ಸಮಕಾಲೀನ ಶರಣರ ಜೀವನ ಹಾಸುಹೊಕ್ಕಾಗಿ ಬೆರೆತಿರುವುದರಿಂದ ಅವರೆಲ್ಲರ ಚರಿತೆಗಳೂ ಬಸವಚರಿತೆಯೊಡವೆರೆದುಬರುತ್ತವೆ; ಬರುವುದು ಸಹಜ; ಅವು ಹಾಗೆ ಬಂದಿವೆ. ಬಸವಣ್ಣನವರ ಭಕ್ತಿ ದೃಢವಾಗುವಂತೆ, ಅವರ ಮತ್ರ್ಯದ ಮಣಿಹ ಪೂರೈಸುವಂತೆ ಅವರ ಸುತ್ತಣ ಈ ಶರಣರು ಪರೀಕ್ಷೆಯೊಡ್ಡಿರುವರು, ಸಹಾಯ ನೀಡಿರುವರು.

ಪ್ರಸ್ತುತ ಪ್ರಶ್ನೆಯೆಂದರೆ ಆದಿಗಣಚರಿತೆ, ಬಸವಚರಿತೆಯಲ್ಲಿ ಬೆರೆದ ಪರಿಯೆಂತು? ಬಸವಣ್ಣನವರ ಜೀವನದ ಇಲ್ಲವೆ ಪರಿಸರದ ಕೆಲವು ಘಟನೆಗಳು ಪವಾಡಗಳು ಆದಿ ಶರಣರ ಸ್ಮರಣೆಯನ್ನು ತಂದು ಆ ಚರಿತೆಗಳ ನಿರೂಪಣೆಗೆ ಸನ್ನಿವೇಶ ನಿರ್ಮಿತಿಯಾಗಿ ಅವುಗಳನ್ನು ದೃಷ್ಟಾಂತರೂಪದಿಂದಲೋ ಬೋಧೆಯ ರೂಪದಿಂದಲೋ ವಿವರಿಸುವರು.

CC-0. Jangamwadi Math Collection. Digitized by eGangotri

ಮುಗ್ಧಸಂಗಯ್ಯನನ್ನು ಕಂಡು ಆಶ್ಚರ್ಯಚಕಿತನಾದ ಚನ್ನಬಸವಣ್ಣನಿಗೆ ಬಸವಣ್ಣನವರು ಮುಗ್ಧ ಭಕ್ತರ ಕಥೆಗಳನ್ನು ಹೇಳುವರು. ಮಾಚಿದೇವರ ಸಂದರ್ಭದಲ್ಲಿ ಬಸವಣ್ಣನವರು ಬಿಜ್ಜಳನಿಗೆ ವೀರಭಕ್ತರ ಕಥೆಗಳನ್ನುಸುರುವರು. ಬಸವಣ್ಣನವರ ಭಕ್ತಿಯ ಹಮ್ಮನ್ನು ಕಳೆಯಲು ಮಾಚಿದೇವರು ಆದಿ ಶರಣರ ಕಥೆಗಳನ್ನು ವಿವರಿಸುವರು. ನಂಬಿಯಣ್ಣ ೬೨ ಜನ ಪುರಾತನರನ್ನು ಕುರಿತು ಹೇಗೆ ಹಾಡಿದನೆಂಬುದನ್ನು ಮಾಚಿದೇವ ಬಸವಣ್ಣನವರಿಗೆ ಅವರ ಕಥೆಗಳನ್ನು ಸಂಕ್ಷೇಪ ವಾಗಿ ಹೇಳುವನು. ಹೀಗೆ ಬಸವಪುರಾಣದಲ್ಲಿ ಆದಿಗಣಚರಿತೆ ಬಂದಿದೆ. ಅವೆಲ್ಲ ಮಣಿಹಾರದಂತೆ ಸುಂದರವಾಗಿ ಸಹಜವಾಗಿ ಒಂದುಗೂಡಿವೆಯೇ ಎಂಬುದು ವಿಮರ್ಶೆಯ ಮಾತು. ಅಷ್ಟೊಂದು ಕಲೆ ಅಲ್ಲಿ ಇದೆಯೆಂಬುದೇ ಒಪ್ಪಿಕೊಳ್ಳು ವುದು ಕಷ್ಟವಾದರೂ ಇವೆಲ್ಲ ಶರಣರ ಚರಿತೆಗಳನ್ನು ಬಸವಚರಿತೆಯೆಂಬ ಸೂತ್ರಕ್ಕೆ ಪವಣಿಸಿವೆಯೆಂಬುದು ನಿರ್ವಿವಾದ.

ಈ ಪುರಾಣದ ಕಥಾವಸ್ತುವನ್ನು ಹಮ್ಮುವಲ್ಲಿ ಪಾಲ್ಕುರಿಕೆ ಸೋಮನಾಥ ಕವಿ ಒಂದು ಕಾರ್ಯವನ್ನು ಮಾಡಿರುವನು. ಬಸವಣ್ಣನವರ ಜೀವನದ ಘಟನೆ ಪವಾಡಗಳಿಗೆ ಸಮಾನವಾದುದನ್ನು ಹಿಂದಿನ ಶರಣರ ಜೀವನದಲ್ಲಿ ಕಾಣುವುದರ ಜೊತೆಗೆ, ಹಿಂದಿನ ಶರಣರ ಜೀವನದ ಕೆಲವು ಮಹತ್ವದ ಘಟನೆ, ಪವಾಡಗಳು ಬಸವಣ್ಣನವರ ಜೀವನದಲ್ಲಿ ನಡೆದುವೆಂದು ತೋರಿಸಲು ಅವನ್ನು ಕವಿ ತಾನೇ ಸೃಜಿಸಿದಂತೆ ತೋರುತ್ತದೆ. ಅಂತೆಯೇ ತಮಿಳುನಾಡಿನ ಕೆಲವು ಪುರಾತನರ ಹಾಗೂ ಬಸವಣ್ಣನವರ ಜೀವನದಲ್ಲಿ ಬರುವ ಕೆಲವೊಂದು ಕಥೆ, ಪವಾಡಗಳಲ್ಲಿ ಅಷ್ಟೊಂದು ಸಾಮ್ಯ ಕಂಡುಬರುತ್ತದೆ. ಜಂಗಮವು ಮನೆಗೆ ಬಂದಾಗ ಚಿರು ತೊಂಡನಾಯನಾರರು ಮಗನನ್ನೇ ಆತನಿಗೆ ಊಣಬಡಿಸಿದರೆ ಬಸವಣ್ಣನವರು ಜಂಗಮಕ್ಕೆ ತಮ್ಮ ಪ್ರೀತಿಯನ್ನೇ ಅರ್ಪಿಸುತ್ತಾರೆ. ಇಂತಹ ಕಥೆಗಳು ಸಾದೃಶ್ಯ ಜನ್ಯವಾದುವುಗಳೆ.

ಬಸವಪುರಾಣದಿಂದ ಪದ್ಮರಾಜಪುರಾಣಕ್ಕೆ ಬಂದರೆ ವೀರಶೈವ ಪುರಾಣ ಲಕ್ಷಣದಲ್ಲಿ ಹೆಚ್ಚಳವಾದುದನ್ನು ಕಾಣುತ್ತೇವೆ. ಕಥಾನಾಯಕನ ಚರಿತೆ, ಪೂರ್ವದ ಶರಣರ ಚರಿತೆ ಬಸವಪುರಾಣದಂತೆ ಇಲ್ಲಿಯೂ ಮೇಳೈಸಿಬರುತ್ತವೆ. ಪದ್ಮರಾಜರ ಜೀವನವನ್ನು ಹೇಳುತ್ತ ಸಮಕಾಲೀನ ಕವೀಶ್ವರ ಹರೀಶ್ವರನ ಕಥೆ, ಸಕಳೇಶ ಮಾದರಸರ ಕಥೆ, ಶಿವದೇವರ ಕಥೆ, ರಾಘವಾಂಕ, ಪುಲಿಗೆರೆಯ ಮಾಯಿದೇವ, ದೋರಾಂಬುಧಿಯ ರಾಮಣ್ಣ ಮುಂತಾದವರ ಉಲ್ಲೇಖಗಳು ಸಮುಚಿತ ಸ್ಥಾನ ದಲ್ಲಿ ಬರುವುದಲ್ಲದೆ ಪದ್ಮರಾಜರ ಮಹಿಮಾತಿಶಯವನ್ನು ಬಣ್ಣಿಸಲು ಅನೇಕ ಪವಾಡಗಳು ಕಲ್ಪಿತವಾಗಿವೆ. ಬಸವಪುರಾಣ ರಚನೆಯ ಸಮಯದಲ್ಲಿ ಬಸವಣ್ಣ ನವರ ಪೂರ್ವದ ಶರಣರ, ಪುರಾತನರ ಕಥೆಗಳು ಸಾದೃಶ್ಯ ಮೂಲಕ ಆ ಪುರಾಣ

CC-0. Jangamwadi Math Collection. Digitized by eGangotri

ದಲ್ಲಿ ಬಂದರೆ ಪದ್ಮರಾಜಪುರಾಣದಲ್ಲಿ ಬಸವಾದಿ ಶರಣರ ಕಥೆಗಳು ಉಪಾಖ್ಯಾನಗಳಾಗಿ ಬರುತ್ತವೆ. ಪದ್ಮರಾಜರು ಹೊಯ್ಸಳ ಆಸ್ಥಾನದಲ್ಲಿ ಮಂತ್ರಿಗಳಾಗಿದ್ದುದರಿಂದ ಬಸವಣ್ಣನವರ ಜೀವನದ ಕೆಲವು ಘಟನೆಗಳು ಸಾದೃಶ್ಯ ರೂಪವಾಗಿ ಪದ್ಮರಾಜರ ಮಹಿಮೆಯನ್ನು ನಿರೂಪಿಸುವಲ್ಲಿ ಬರುತ್ತವೆ. ಬಸವಣ್ಣನವರ ಮೇಲೆ ಬಿಜ್ಜಳನ ಭಾಂಡಾರದ ಅಪವ್ಯಯದ ಆರೋಪ ಬಂದಂತೆ ಕೆರೆ ಕಟ್ಟಿಸಲು ಪದ್ಮರಸರು ಭಾಂಡಾರದ ಹಣವನ್ನು ಉಪಯೋಗಿಸಿದರೆಂಬ ಆರೋಪ ಬರುತ್ತದೆ. ಪದ್ಮರಸರನ್ನು ಬಸವಣ್ಣನವರ ಎತ್ತರಕ್ಕೆ ಏರಿಸಬೇಕೆಂಬ ಕವಿಯ ಆಶಯ ಇಂತಹ ಘಟನೆಗಳನ್ನು ಕಲ್ಪಿಸಿರುವುದು ಸಹಜ.

ಪದ್ಮರಾಜಪುರಾಣದಲ್ಲಿ ವೀರಶೈವಪುರಾಣದ ಇನ್ನೊಂದು ಲಕ್ಷಣ ಕಂಡುಬರುತ್ತದೆ. ಮುಂದಿನ ವೀರಶೈವ ಪುರಾಣಗಳಲ್ಲಿ ಬರುವ ವಾದಕಾಂಡ ಮೊಟ್ಟಮೊದಲ ಸಲ ಪದ್ಮರಾಜಪುರಾಣದಲ್ಲಿ ಬರುತ್ತದೆ. ವಿಷ್ಣುಸರ್ವೋತ್ತಮನೆಂದು ತ್ರಿಭುವನತಾತನು ಬೇಲೂರಲ್ಲಿ ಸಾರಿ ಪ್ರತಿವಾದಿಗಳನ್ನು ಆಹ್ವಾನಿಸಿರಲು, ಕೆರೆಯ ಪದ್ಮರಸರು ಅನೇಕ ಶಿವಭಕ್ತರೊಡನೆ ಅಲ್ಲಿಗೈತಂದು ವಾದದಲ್ಲಿ ತ್ರಿಭುವನತಾತನನ್ನು ಸೋಲಿಸುವರು. ಆ ವಾದದಲ್ಲಿ ಶಿವಸರ್ವೋತ್ತಮತ್ವವನ್ನು ಎತ್ತಿ ಹಿಡಿಯುವ ಅನೇಕ ಉಕ್ತಿಗಳನ್ನು ವೇದಾಗಮ ಪುರಾಣೇತಿಹಾಸಗಳಿಂದ ಉದ್ಧರಿಸಿದರೆ ತ್ರಿಭುವನತಾತನೂ ತನ್ನ ವಾದವನ್ನು ಸಮರ್ಥಿಸಲು ಆಧಾರಗಳನ್ನೀಯುವನು. ಪದ್ಮರಾಜಪುರಾಣದ ಈ ಭಾಗವು ಪಾಂಡಿತ್ಯ, ತರ್ಕ, ವಿಚಾರಗಳ ತಾಂಡವವಾಗಿವೆ. ಕೊನೆಗೆ ಪದ್ಮರಸರು ವಾದದಲ್ಲಿ ವಿಜಯಶೀಲರಾಗಲು ಅವರನ್ನು ಶಿವಾದ್ವೈತ ಸಾಕಾರಸಿದ್ಧಾಂತ ಪ್ರತಿಷ್ಠಾಪನಾಚಾರ್ಯರೆಂದು ಕರೆಯಲಾಗುವುದು. ಹೀಗೆ ಪದ್ಮರಾಜಪುರಾಣದನ್ವಯ ವೀರಶೈವಪುರಾಣದ ಲಕ್ಷಣಗಳು ಮೂರು:

೧. ಕಥೆ (ಕಥಾನಾಯಕನ ಜೀವನಚರಿತ್ರೆ)
೨. ಉಪಕಥೆ (ಹಿಂದಿನ ಶರಣರ ಕಥೆಗಳು)
೩. ವಾದಕಾಂಡ (ಶಿವಪಾರಮ್ಯ ಪ್ರತಿಷ್ಠಾಪನೆಯ ವಾದ)

ವೀರಶೈವ ಪುರಾಣಲಕ್ಷಣಗಳ ಅಭಿವೃದ್ಧಿಯ ದೃಷ್ಟಿಯಿಂದ ಮುಂದಿನ ಮಹತ್ವದ ಪುರಾಣವೆಂದರೆ ಲಕ್ಕಣ್ಣ ದಂಡೇಶನ ಶಿವತತ್ವಚಿಂತಾಮಣಿ. ಶಿವತತ್ವಚಿಂತಾಮಣಿಯಲ್ಲಿ ಬರುವ ವಿಷಯಗಳನ್ನು ಲಕ್ಕಣ್ಣ ದಂಡೇಶನು ಹೀಗೆ ವಿವರಿಸಿರುವನು:

ಪರಮ ಶಿವತತ್ವಚಿಂತಾಮಣಿಯ ಕೃತಿಯೊಳಂ
ಮೆರೆವ ನಿತ್ಯಾನಿತ್ಯ ವಸ್ತುವಿನ ವಿವರಣಂ

CC-0. Jangamwadi Math Collection. Digitized by eGangotri

ವರ ಸಕಲ ನಿಷ್ಕಲದ ಪರಿಯ ನಿಷ್ಕಲ ತತ್ವ ಸಕಲ ವಾದಾಭೇದವು
ಇರೆ ಭುವನಕೋಶ ಶಿವಲೋಕದಭಿವರ್ಣನಂ
ಹರನ ದಿವ್ಯಾಸ್ಥಾನ ನಾರದನ ದರುಶನಂ
ಪುರಹರನ ನಂದೀಶ ಸಂವಾದವಂ ಜಗವ ಪಾಲಿಸುವಡುದಯವಾದ
ಬಸವನವತಾರ ಬಸವನ ನಾಮನಿರ್ವಚನ
ವೆಸೆವ ಬಾಲ್ಯದ ಲೀಲೆ ಮೇಲಣ ಪವಾಡಗಳ್
ವಸುಧೆಯೊಳು ಶಿವಧರ್ಮಮಾರ್ಗಮಂ ನೆಱಿ ತೋಱಿ ಮೆಱೆದಾ
ಗಣಪ್ರಶಂಸೆ
ಎಸೆವ ಧರ್ಮಾಧರ್ಮ ಪಿಂಡದುತ್ಪತ್ತಿಯಂ
ವಿಷಮ ಸಂಸೃತಿಹೇಯ ಪಂಚಾಕ್ಷರಿಯ ಮಹಿಮೆ
ಭಸಿತ ರುದ್ರಾಕ್ಷಿಗಳ ಮಾಹಾತ್ಮ್ಯಮಂ ಕರುಣದಿಂದ ಶ್ರೀಗಳು ಮಾಡುವ
ವರಲಿಂಗಧಾರಣಂ ಶಿವನ ಪೂಜಾನಿಯಮ
ಪರಿವಿಡಿಯ ಪಾದೋದಕ ಪ್ರಸಾದಕ್ರಮಂ
ಉರು ಶಿವಾಧಿಕ್ಯ ಮಾಹೇಶ್ವರಾಚರಣೆಯಂ ಮೇಲೆ ಷಟ್‌ಸ್ಥಲವೆಂಬಿವ
ಧರೆಯ ಶಿವಭಕ್ತರೆಲ್ಲಂ ಕೇಳ್ದು ಸುಜ್ಞಾನ
ಭರಿತರಾಗುತ ಶಿವಾನಂದ ರಸಮಯರಾಗಿ
ಪರಮ ಸರ್ವಜ್ಞತ್ವಕೊಡೆಯರಪ್ಪರ ವಿಮಲ ಚರಣಾಂಬುಜಕ್ಕೆ ಶರಣು.
ಕೃತಿಗೆ ಪದಿನೆಂಟಂಗವೆನೆ.....

ಲಕ್ಕಣ್ಣ ದಂಡೇಶನು ಪರಂಪರೆಯಿಂದ ಬಂದ ಅಷ್ಟಾದಶ ವರ್ಣನೆಗಳಿಗೆ ಪ್ರತಿಯಾಗಿ ತನ್ನ ಕೃತಿಗೆ ಕೆಳಗಿನ ಪದಿನೆಂಟಂಗಗಳನ್ನು ಹೇಳಿರುವನು. ಅವೇ ವೀರಶೈವ ಪುರಾಣದ ಲಕ್ಷಣಗಳು. ಅವು ಹೀಗಿವೆ:

೧. ನಿತ್ಯಾನಿತ್ಯ ವಸ್ತುವಿನ ವಿವರಣೆ
೨. ಸಕಲ ನಿಷ್ಕಲ ತತ್ವವಿಚಾರ
೩. ಪಂಚವಿಂಶತಿಲೀಲೆ
೪. ಭುವನಕೋಶ
೫. ಶಿವಲೋಕದಭಿವರ್ಣನ
೬. ಹರನ ದಿವ್ಯಾಸ್ಥಾನ – ನಾರದ ದರ್ಶನ
೭. ಶಿವನಂದೀಶ ಸಂವಾದ
೮. ಬಸವೇಶ್ವರಾವತಾರ – ಬಾಲಲೀಲೆ, ಪವಾಡ

CC-0. Jangamwadi Math Collection. Digitized by eGangotri

೯. ಶಿವಧರ್ಮ ಮಾರ್ಗವನ್ನು ತೋರಿದ ವಿಷಯ ಹಾಗೂ ಪ್ರಶಂಸೆ
೧೦. ಧರ್ಮಾಧರ್ಮ, ಪಿಂಡೋತ್ಪತ್ತಿ
೧೧. ಸಂಸಾರ ಹೇಯ
೧೨. ಪಂಚಾಕ್ಷರೀ ಮಹಿಮೆ
೧೩. ಭಸಿತ ರುದ್ರಾಕ್ಷಿ ಮಾಹಾತ್ಮ್ಯ
೧೪. ಲಿಂಗಧಾರಣ
೧೫. ಪಾದೋದಕ ಪ್ರಸಾದಕ್ರಮ
೧೬. ಶಿವಾಧಿಕ್ಯ
೧೭. ಮಾಹೇಶ್ವರಾಚರಣೆ
೧೮. ಷಟ್‌ಸ್ಥಲ

ವೀರಶೈವಾಮೃತಮಹಾಪುರಾಣ ತತ್ವಪ್ರಧಾನ ಪುರಾಣವಾಗಿರುವುದರಿಂದ ಅದರಲ್ಲಿ,

೧. ಪ್ರವೃತ್ತಿತತ್ವವಿವರಣೆ
೨. ಪಂಚವಿಂಶತಿ ಲೀಲೆಗಳು
೩. ನಿವೃತ್ತಿತತ್ವನಿರೂಪಣೆ
೪. ಬಸವಾದಿ ಪ್ರಮಥರ ಹಾಗೂ ಶರಣರ ಚರಿತ್ರ ನಿರೂಪಣೆ
೫. ಷಟ್‌ಸ್ಥಲ ವಿವರಣೆ

ಈ ಪಂಚಾಂಗಗಳು ಬಹು ಸೂಕ್ಷ್ಮ ವಿವರಣೆಯೊಂದಿಗೆ ವೀರಶೈವಾಮೃತ ಮಹಾಪುರಾಣದಲ್ಲಿ ನಿರೂಪಿತವಾಗಿವೆ.

ವೀರಶೈವ ಪುರಾಣಪರಂಪರೆಯಲ್ಲಿ ಕೊನೆಯ ಮಹತ್ವದ ಕೃತಿ – ಚನ್ನ ಬಸವ ಪುರಾಣ. ವಿರೂಪಾಕ್ಷ ಪಂಡಿತನು ತನ್ನ ಪುರಾಣಲಕ್ಷಣಗಳನ್ನು ಹೀಗೆ ವಿವರಿಸಿರುವನು:

ಪರಿವಿಡಿಯೊಳೀ ಪುರಾಣದ ಕಥಾಕುಳಕಮಂ
ವಿರಚಿಪೆಂ ಕೈಲಾಸವರ್ಣನಂ ನಾರದನ
ದರುಶನಂ ಚನ್ನಬಸವೋತ್ಪತ್ತಿ ಪುಷ್ಪಕೋತ್ಸಾಹಮಾತನ ಸುಲೀಲೆ
ಅರಸಿನಾಸ್ಥಾನಮಾ ಪುರದೇಶವರ್ಣನಂ
ಗುರುಚನ್ನಬಸವನಾ ಸಿದ್ಧರಾಮೇಶ್ವರಂ
ಗೊರೆದ ಶಿವತತ್ವಮಾ ಶಿವನ (.....) ಲೀಲೆ ಸೋಮಸೂರ್ಯಾನ್ವಯಂ
ಹರಶರಣ ಚರಿತೆ ದೀಕ್ಷಾ ವಿಧಾನಂ ಷಟ್ಸ್ಥಲಂ ಸುಕಾಲಜ್ಞಾನವು

CC-0. Jangamwadi Math Collection. Digitized by eGangotri

ಇಂತಿವೆಲ್ಲಂ ಚೆನ್ನಬಸವಪೌರಾಣದಾ
ದ್ಯಂತ ಸತ್ಯಕ್ಥೆಯ ಸೂಚನೆ

ಚನ್ನಬಸವ ಪುರಾಣದನ್ವಯ ಪುರಾಣಲಕ್ಷಣಗಳು ಇಂತಿವೆ:

೧. ಕೈಲಾಸ ವರ್ಣನೆ
೨. ನಾರದನ ದರ್ಶನ
೩. ಚನ್ನಬಸವೋತ್ಪತ್ತಿ
೪. ಪುಷ್ಪಕೋತ್ಸಾಹ
೫. ಚನ್ನಬಸವಣ್ಣನವರ ಬಾಲಲೀಲೆ
೬. ಪುರದೇಶ ವರ್ಣನ
೭. ಆರಸಿನಾಸ್ಥಾನ
೮. ಗುರುಚನ್ನಬಸವನು ಸಿದ್ಧರಾಮೇಶನಿಗೆ ಹೇಳಿದ ಶಿವತತ್ವ
೯. ಪಿಂಡೋತ್ಪತ್ತಿ, ಕರಣ ಹಸಿಗೆ
೧೦. ಪಂಚವಿಂಶತಿ ಲೀಲೆ
೧೧. ಸೋಮಸೂರ್ಯಾನ್ವಯ
೧೨. ಶಿವಶರಣಚರಿತೆ (ಶೈವ ಶರಣರು – ವೀರಶೈವ ಶರಣರು)
೧೩. ದೀಕ್ಷಾವಿಧಾನ – ಲಿಂಗಪೂಜಾ ವಿಧಾನ.
೧೪. ಷಟ್‌ಸ್ಥಲ ನಿರ್ಣಯ
೧೫. ಕಾಲಜ್ಞಾನ

ವೀರಶೈವ ಪುರಾಣ ಲಕ್ಷಣಗಳು ಹೆಚ್ಚುತ್ತ ಹೊರಟಿರುವುದು ಇದರಿಂದ ವೇದ್ಯವಾಗುತ್ತದೆ. ಕಥಾನಾಯಕರ ಚಾರಿತ್ರಿಕ ಅಂಶಗಳು ಕರಗುತ್ತ ಲೀಲೆಗಳ, ಶಿವಶರಣರ ಕಥೆಗಳ, ತತ್ವಗಳ ವಿವರಣೆ ಹಿಗ್ಗುತ್ತ ಹೋದುದನ್ನು ಗಮನಿಸಬೇಕು. ಮೊದಮೊದಲು ಕಥಾನಾಯಕನ ಜೀವನಕ್ಕೆ ಸಂಬಂಧಪಟ್ಟ ಇಲ್ಲವೆ ಆ ದಿವ್ಯ ಜೀವನದ ಘಟನೆಗಳ ಸಾದೃಶ್ಯವುಳ್ಳ ಶರಣರ, ಪುರಾತನರ ಕಥೆಗಳು ಕೋದ ಮಣಿಹಾರದಂತೆ ಬರುತ್ತಿದ್ದರೆ ಈ ಹಿಂದಿನ ಶರಣರ, ಪುರಾತನರ, ನೂತನರ, ಸಮಕಾಲೀನ ಶರಣರ ಕಥೆಗಳನ್ನು ಹೇಳುವುದು ಸಂಪ್ರದಾಯವಾಗಿಬಿಟ್ಟಿದೆ. ಅವನ್ನು ಪ್ರತ್ಯೇಕವಾಗಿಯೇ ವಿವರಿಸಲಾಗುತ್ತದೆ. ಶಿವತತ್ವ ಚಿಂತಾಮಣಿಯಲ್ಲಿ ಬರುವ ಹಿಂದಿನ ಎಲ್ಲ ಶರಣರ ಚರಿತ್ರೆಗಳಿಗೆ ಮತ್ತೆ ಮಧ್ಯಕಾಲೀನ ಶರಣ ಚರಿತ್ರೆಗಳನ್ನು ಸೇರಿಸಿ ತನ್ನ ಕಾಲದ ವರೆಗೆ ಶರಣರ ಪಟ್ಟಿಯನ್ನು ಸಿದ್ಧಪಡಿಸಿದೆ. ಮುಂದೆ ಈ ಕಾರ್ಯವನ್ನು ವೀರಶೈವಾಮೃತ ಮಹಾಪುರಾಣ

CC-0. Jangamwadi Math Collection. Digitized by eGangotri

ಮುಂದುವರಿಸಿದೆ; ಚೆನ್ನಬಸವಪುರಾಣ ಆದನ್ನು ಇನ್ನೂ ಮುಂದಕ್ಕೆ ತಂದಿತು. ಗುರುರಾಜ ಚಾರಿತ್ರದಲ್ಲಿ ಇನ್ನುಳಿದ ಶರಣರ ಕಥೆಗಳು ಬಂದುವು. ವೀರಶೈವ ಪುರಾಣಗಳ ಸಮಕಾಲೀನ ಘಟನೆಗಳ ಬಗೆಗೆ ಲಕ್ಷ್ಯ ಪೂರೈಸುತ್ತಿದ್ದುದೇ ಈ ಬೆಳವಿಗೆ ಕಾರಣ.

ವೀರಶೈವ ಸಿದ್ಧಾಂತದಲ್ಲಿ ವಿಶೇಷ ಬೆಳವಣಿಗೆಯಾದಂತೆ ಆ ಕಾಲದ ಪುರಾಣಗಳ ತತ್ವ ಸಿದ್ಧಾಂತಗಳನ್ನು ವಿಶಿಷ್ಟವಾಗಿಯೂ, ವಿವರವಾಗಿಯೂ ಹೇಳತೊಡಗಿದರು. ಧರ್ಮ, ಆಚಾರ, ವಿಚಾರಗಳ ವಿವರಣೆಯೂ ಇದೇ ರೀತಿಯಾಗಿ ಬೆಳೆಯುತ್ತ ನಡೆದಿದೆ. ಹೀಗೆ ಬೆಳೆದು ನಿಂತ ವೀರಶೈವ ಪುರಾಣ ಪ್ರಪಂಚಕ್ಕೆ ಬಸವಪುರಾಣವೇ ಆದಿ; ಆದರ್ಶ.

ವಿಮರ್ಶೆ

ವಸ್ತುವಿನ್ಯಾಸ

'ಬಸವಪುರಾಣ'ವು ಬಸವಣ್ಣನವರ ಮಹಿಮಾತಿಶಯವನ್ನು ಬಿತ್ತರಿಸುವ ಮಹತ್ಕೃತಿ. ಅಲ್ಲಿ ಬಸವಣ್ಣನವರ ಚರಿತ್ರೆ, ಅವರ ಭಕ್ತಿಯ ವೈಭವ, ಅವರು ಒಡವೆರೆದ ಶರಣರ ಜೀವನ, ಮುನ್ನಿನ ಪುರಾತನರ ಕಥೆ ಮುಂತಾದವುಗಳ ಬಣ್ಣನೆಯಿದೆ.

ಬಸವಣ್ಣನವರ ಚರಿತ್ರೆಯನ್ನು ಬರೆಯಲು ಭೀಮಕವಿಗೆ ಪಾಲ್ಕುರಿಕೆ ಸೋಮನಾಥನ ವರಪ್ರಸಾದವೇ ಕಾರಣವೆಂದು ಕವಿಯೇ ಕಂಠೋಕ್ತವಾಗಿ ಹೇಳಿದ್ದಾನೆ.

ಇನಿತು ಬಡಮತಿಯಿಂ ಬಸವರಾ
ಜನ ಕೃತಿಯನಾನೆಂತು ರಚಿಸುವೆ
ನೆನುತೆಣಿಸಿ ಶಿವಯೋಗನಿದ್ರಾಮುದ್ರಿತದೊಳಿರಲು
ಅನುನಯದಿ ಪಾಲ್ಕುಱಿಕೆ ಸೋಮೇ
ಶನುಮನಘದೇವಾರ್ಯನುಂ ಕನ
ಸಿನೊಳೆಸೆದು ಬಂದು ಪ್ರಸಾದವನಿತ್ತು ನುಡಿಸಿದನು.

ಆವುದಕ್ಕನುಮಾನಿಸದಿರೊಲಿ
ದಾವ ಶಬ್ದಾರ್ಥಮುಮನಾದಡೆ
ಭಾವಿಸಲು ನಿನಗಱಿಪಿ ನಿನ್ನಾತ್ಮದೊಳಗಲದಿರ್ದು

CC-0. Jangamwadi Math Collection. Digitized by eGangotri

ನಾವು ರಚಿಸುವೆವೆಸೆವ ಬಸವ ಕ
ಥಾವಿಸರಮಂ ಬರೆದುಕೋಯೆಂ-
ದೋವಿದವರಾಜ್ಞೆಯನೆ ಶಿರದೊಳು ಧರಿಸಿ ಮುದವೆತ್ತು:

ಅಸಮ ಲಿಂಗೈಕಾನುಭಾವ
ಪ್ರಸರಮತಿ ಕವಿ ಸೋಮನಾಥನು
ರಸಮೊಸರೆ ಮುನ್ನುಸುರ್ದುದನೆ ಕನ್ನಡಿಸಿ ಪೇಳೆಂದು
ಎಸೆವ ಬಸವಪುರಾಣಮಂ ಪಸ
ರಿಸುವ ನಿರ್ಮಳಬೋಧೆಯಂ ಕರು
ಣಿಸಿದ ಕಾರಣವೆನಗೆ ಪಿರಿದಾಯಾಸವಿನಿತಿಲ್ಲ.೧೬

ಬಸವಪುರಾಣವನ್ನು ರಚಿಸುವುದು ಹೇಗೆ ಎಂದು ವಿಚಾರಿಸುತ್ತ ಭೀಮ ಕವಿಯು ನಿದ್ರೆಹೋಗಲು ಕನಸಿನಲ್ಲಿ ಪಾಲ್ಕುರಿಕೆ ಸೋಮೇಶ ಹಾಗೂ ಅನಘ ದೇವಾರ್ಯರು ಬಂದು ಪ್ರಸಾದವನ್ನಿತ್ತು, ನಿನ್ನ ಹೃದಯಕಮಲದಲ್ಲಿ ನಿಂತು ಎಲ್ಲ ಶಬ್ದಾರ್ಥವನ್ನು ತಿಳಿಸಿ ನಾವೇ ರಚಿಸುವೆವು ಬಸವಪುರಾಣವನು, ನೀನು ಬರೆದುಕೋ ಎಂದು ಆಜ್ಞಾಪಿಸಿದರು. ಈ ವಿಷಯವನ್ನು ಕನ್ನಡ ತೆಲುಗು ಬಸವಪುರಾಣಗಳನ್ನು ತೂಗಿ ನೋಡಿ ಅರಿಯುವುದು ಅವಶ್ಯವಾಗಿದೆ.

ಬಸವಣ್ಣನವರ ಚರಿತ್ರೆಯ ದೃಷ್ಟಿಯಿಂದ ಕನ್ನಡ, ತೆಲುಗು, ಸಂಸ್ಕೃತ ಸಾಹಿತ್ಯಗಳನ್ನು ಸಮೀಕ್ಷಿಸಿದರೆ ಅಲ್ಲಿ ಮುಖ್ಯವಾಗಿ ಎರಡು ಸಂಪ್ರದಾಯಗಳು ಗೋಚರವಾಗುತ್ತವೆ:

೧. (ಅ) ಪಾಲ್ಕುರಿಕೆಯ ಸೋಮನಾಥ – ಭೀಮಕವಿ — ಕಂಚಿಶಂಕ
ರಾರ್ಯವ್ಯಾಸೋಕ್ತ ಸಂಸ್ಕೃತ ಬಸವಪುರಾಣ.

(ಆ) ಸಿಂಗಿರಾಜಪುರಾಣ, ಪ್ರಭುಲಿಂಗಲೀಲೆ, ಶಿವತತ್ವಚಿಂತಾಮಣಿ, ಚನ್ನಬಸವಪುರಾಣ, ಶರಣಲೀಲಾಮೃತ.

೨. ಹರಿಹರದೇವ:

ಭೀಮಕವಿಯ ಬಸವಪುರಾಣವು ಪಾಲ್ಕುರಿಕೆ ಸೋಮನಾಥನ ಸಂಪ್ರದಾಯಕ್ಕೆ ಸೇರಿದುದಷ್ಟೇ ಅಲ್ಲ. ಅದರ ಕನ್ನಡ ಅನುವಾದವೆಂಬುದು ಕೆಳಗಿನ ವಿಶ್ಲೇಷಣೆಯಿಂದ ವಿದಿತವಾಗುತ್ತದೆ. ಬಸವಣ್ಣನವರ ಜೀವನಚರಿತ್ರೆಯನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಪರಿಶೀಲಿಸಬಹುದು.

---

೧೬. ಭೀಮಕವಿ. ಬ.ಪು. ಪೀಠಿಕಾಸಂಧಿ ಪ. ೧೪, ೧೫, ೧೬.

CC-0. Jangamwadi Math Collection. Digitized by eGangotri

ಬಸವಣ್ಣನವರ ಜೀವನಚರಿತೆ

ಜನ್ಮಕಾರಣ

ಕೈಲಾಸದಲ್ಲಿ ಶಿವನ ಸಭೆ ನೆರೆದಿದೆ. ನಾರದನು ಅಲ್ಲಿಗೈತಂದು, ಭೂಲೋಕದಲ್ಲಿ ಶಿವಭಕ್ತಿಯು ಕಾಣದಾಗಿದೆ. ಲಿಂಗ ಜಂಗಮ ಪ್ರಸಾದಸ್ಥಲಗಳ ರಹಸ್ಯವನ್ನು ವಿವರಿಸಿ ಮಾನವರನ್ನು ಉದ್ಧರಿಸುವ ಮಹತ್ಕಾರ್ಯಕ್ಕಾಗಿ ತಾವೇ ಭೂಲೋಕಕ್ಕೆ ಬಿಜಯಂಗೈಸಬೇಕೆಂದು ಶಿವನನ್ನು ಪ್ರಾರ್ಥಿಸುವನು.[೧೬] ಅದಕ್ಕೆ ಶಿವನು ನಂದಿನಾಥನಿಗೂ ನನಗೂ ಭೇದವೆಂಬುದಿಲ್ಲ, ಆತನನ್ನೇ ಭೂಲೋಕಕ್ಕೆ ಕಳುಹುವುದಾಗಿ ಅಪ್ಪಣೆ ಕೊಡುವನು.[೧೯] ಶಿವನಾಜ್ಞೆಯನ್ನು ನಂದಿನಾಥನು ಶಿರದಲ್ಲಿ ವಹಿಸಿ,

---

೧೬ ಈಶಮೀಭಕ್ತಿ – ತುದಮೊದಲಿದಿಯನ ದೋಪದೆವ್ವರಿಕಿಸಂದು ದೃಷ್ಟಪ್ರತ್ಯಯಂಬುಲವಲನ ನಂದಿಯಂಬುಲು ದಕ್ಕಿ ಸದ್ಭಕ್ತಿಯುಕ್ತಿ ಸುಸ್ಥಿರಲೀಲ ಲಿಂಗಸ್ಥಲ ಜಂಗಮಸ್ಥಲ ತತ್ ಪ್ರಸಾದಸ್ಥಲಂಬುಲನು ಸಂಪನ್ನುಲೈ ಜಗಜ್ಜನುಲೆಲ್ಲ ಭಕ್ತಿಸೊಪ್ಪನ ಜುಬ್ಬನಂಜೂಜುಲದೇಲ ನೀವು ಪ್ರಸನ್ನುಡ (ವೈಪಚ್ಚಿ) ಲೋಕಪಾವನಂಬುಗ ಭಕ್ತಿಜಾಲಿಂಪವಲಿಯು.

ಪಾಲ್ಕುರಿಕೆ ಸೋಮನಾಥ, ಬಸವಪುರಾಣಮು ಪ್ರ. ೬

ನಿಮ್ಮ ಭಕ್ತಿಯ ತುದಿಮೊದಲಿದೆಂ
ದೊಮ್ಮೆಯುಂ ಸಲೆ ತೋಱದಾರಿಗೆ
ಸಮ್ಮದಿಸಲರಿದಲ್ಲದೃಷ್ಟ ಪ್ರತ್ಯಯಂಗಳಲಿ
.....ಮನುಷ್ಯಲೋಕದಲಿ ॥
ಮುಂದೆ ಇದು ಲಿಂಗಸ್ಥಳಂ ತಾ
ನೆಂದಿದುವೆ ವರಜಂಗಮಸ್ಥಳ
ವೆಂದು ತದ್ವಿಮಳಪ್ರಸಾದಸ್ಥಳಮಿದೆಂದಱಿಪಿ ॥
ನೀವೆ ಬಿಜಯಂಗೈದು ಕರುಣಾ
ಭಾವಗುಣದಿಂ ನೋಡಿ ಮರ್ತ್ಯವ
ನೋವಿ ಮನುಜರನೆಲ್ಲರಂ ನಿಜಭಕ್ತಿಯುಕ್ತಿಯಲಿ ।
ಪಾವನತ್ವವನಿತ್ತು ಪಾಲಿಸಿ
ಕಾವುದೆನ್ನಯ ಬಿನ್ನಪವನೆನೆ
ದೇವದೇವಂ ಸಂತಸದೊಳಿಂತೆಂದನಾ ಮುನಿಗೆ ॥

ಭೀಮ. ಬ.ಪು. ಸಂ. ೧; ಪ. ೫೮, ೫೯, ೬೦.

೧೯ ನಂದಿಕೇಶ್ವರುನಕುನಾಕುನೊಕ್ಕಿಂತ–ಸಂದುಲೇಕುನಿಕಿ
ನಿಸ್ಸಂದೇಹಮಗುಟ
ನೀತನೀಬುತ್ತೆಂತುನಿತನೀಚೇಬರಮಪೂತ
ಮೈಲೋಕಂಬು ಬೋಧಂಬು ವಡೆಯು

ಪಾ.ಸೋ. ಬ.ಪು. ಆ. ೧; ಪ. ೭

CC-0. Jangamwadi Math Collection. Digitized by eGangotri

ಇಲ್ಲಿದ್ದರೂ ಅಷ್ಟೆ, ಅಲ್ಲಿದ್ದರೂ ಅಷ್ಟೆ, ನಾನು ಎಂದಿಂದಿಗೂ ಎಲ್ಲೆಲ್ಲಿಯೂ ನಿನ್ನ ಲ್ಲಿಯೇ ಇರತಕ್ಕವನು ಎಂದು ಬಿನ್ನೈಸಿ ಭೂಲೋಕದಲ್ಲಿ ಉದಯಿಸಲುದ್ಯುಕ್ತ ನಾಗುವನು.

ಜನನ, ಬಾಲ್ಯ

ಶ್ರೀಗಿರಿಯ ಪಶ್ಚಿಮಭಾಗದಲ್ಲಿ ಕರ್ನಾಟಕ ದೇಶವು ಕರಮೆಸೆದಿರುವುದು. ಅಲ್ಲಿ ಹಿಂಗುಳೇಶ್ವರ ಭಾಗವಾಟಿಯೆಂಬ ವಿಖ್ಯಾತ ಅಗ್ರಹಾರವುಂಟು. ಆ ಅಗ್ರ ಹಾರದೊಳಗೆ ಮಂಡಗೆ ಮಾದಿರಾಜ ಮಾದಾಂಬೆ ಎಂಬ ದಂಪತಿಗಳಿದ್ದರು.[೧೯] ಮಕ್ಕಳಿಲ್ಲವೆಂದು ಮಾದಲಾಂಬೆ ನಂದೀವ್ರತವನ್ನು ಕೈಕೊಳ್ಳುವಳು. "ತಂದೆ ನಿನ್ನವೋಲೀಶಭಕ್ತಿಯ ಕಂದನೆನಿಸಿರ್ದ" ಮಗನನ್ನು ಕೊಟ್ಟರೆ ನಿಮ್ಮ ಹೆಸರಿಡುವೆ

ನಂದಿನಾಥಾಗ್ರೇಸರಂಗೆನ
ಗೊಂದಿನಿತು ಸಂದಿಲ್ಲದಿಹುದಕೆ
ಸಂದೆಗಮೆ ನಾವೀತನಂ ಮರ್ತ್ಯಕ್ಕೆ ಕಳುಹುವೆವು.
ಭೀಮ. ಬ.ಪ್ರ. ಸಂ. ೧; ಪ. ೬೧.

೧೯ ಶ್ರೀಗಿರಿಪಶ್ಚಿಮಮುನನರಸುತಂ ಬಗುಚು । ಗರ್ಣಾಟದೇಸಮನು...
ಪ್ರಖ್ಯಾತ ಸದ್ಭಕ್ತಿನಡಿಸನ್ನ ಹಿಂಗುಳೇಶ್ವರ ಭಾಗವಾಟಿಯನುನಗ್ರ
ಹಾರಂಬುನಂದು ವಿಖ್ಯಾತಮನುಚುಡು ಮಂಡೆಗಮಾದಿರಾಜನಗ
ನತನಿ ಪರಮ ಸಾಧ್ವಿಯತಿವ ಮಾದಾಂಬ ಸತತ ಶಿವಾಚಾರಸಂಪನ್ನಧನ್ಯ
ಪಾ.ಸೋ. ಬ.ಪ್ರ. ಆ. ೧, ಪುಟ ೧೧.

.....ಸಿರಿ
ಗಿರಿಯ ಪಡುವಣ ಕಡೆಯ ಧರೆಯಲಿ
ನರನುತಾಸ್ಪದವೆನಿಸಿದಾ ಕರ್ನಾಟದೇಶದಲಿ
ಕರಮೆಸೆದುದಲ್ಲಿ ಪ್ರಸಿದ್ಧ ದಿ
ಪಿರಿದೆನಿಪ ಶಿವಭಕ್ತಿಬೀಜ
ಕ್ಕಿರವೆನಿಸಿದೊಂದಿಂಗುಳೇಶ್ವರ ಬಾಗವಾಡಿಯದು

ಆ ಮಹಾಬಹುಳಗ್ರಹಾರದ
ಗ್ರಾಮಣೇಮಣಿ ವಿತರಣದ ಕಣಿ
ಭೂಮಿದೇವಾಗ್ರಣಿ ಪರಮಶೈವಾಂಬುರುಹತರಣಿ
ನೇಮಿಸುವ ಷಟ್‌ಕರ್ಮಮಾರ್ಗ
ಪ್ರೇಮಿ ಸಂತತ ವರತನೂಭವ
ಕಾಮಿ ಮಂಡಗೆ ಮಾದಿರಾಜನೆನಲ್ಕೆ ಸನ್ನಾಮಿ.
ಭೀಮ. ಬ.ಪ್ರ. ಸಂ. ೨; ಪ. ೪೫–೪೬

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 3354
CC-0. Jangamwadi Math Collection. Digitized by eGangotri

ನೆಂದು ಮಾದಾಂಬೆ ನುಡಿಯಲು ನಂದಿನಾಥನು ಪ್ರಸಾದವನ್ನು ಕರುಣಿಸಿದನು.[೨೦] ಆ ಪ್ರಸಾದದ ಫಲವಾಗಿ ಮಾದಲಾಂಬೆಯ ಗರ್ಭದಿಂದ ಅರ್ಧೋದಯ ಮುಹೂರ್ತದೊಳಗೆ[೨೧] ಸತ್ಪುತ್ರನ ಜನನವಾಗುವುದು. ತತ್‌ಕ್ಷಣವೆ ಶಿವನು ಗುರುಸ್ವರೂಪನಾಗಿ ಅಲ್ಲಿಗೆ ಆಗಮಿಸಿ ಮಗುವಿನ ಅಂಗದ ಮೇಲೆ ಲಿಂಗಸಂಬಂಧವನ್ನುಂಟುಮಾಡುವನು. ಶಿವಸ್ವರೂಪಿಯಾದ ತಪಸ್ವಿ ಬಂದ ಬಟ್ಟೆಯನಾರೂ ಅರಿಯರು. ಆತನ ಜಡೆಯ ಸುತ್ತು ಲಿಂಗದ ಸೆಜ್ಜೆಯಿದೆ; ಆತನು ರತ್ನಗಂಬಳಿಯನ್ನು ಹೊದೆದಿರುವನು, ರುದ್ರಾಕ್ಷಿಗಳನ್ನು ಧರಿಸಿರುವನು. ಬಿಳಿಯ ಛತ್ರ, ಕೈಯಲ್ಲಿ ದಂಡ ಹಿಡಿದಿರುವನು; ಮೈಗೆ ಭಸ್ಮಲೇಪನ ಮಾಡಿಕೊಂಡಿರುವನು; ಹಣೆಯಲ್ಲಿ ಮೂರು ಬೆರಳು ವಿಭೂತಿ ಶೋಭಿಸುತ್ತಿದೆ.[೨೨] ಮಹಾತಪಸ್ವಿ ತಾನು ಅನುದಿನ ಕಪ್ಪಡಿ ಸಂಗಮನಾಥನಲ್ಲಿ ಇರುವುದಾಗಿಯೂ ಕೂಡಲಸಂಗಮೇಶನೆಂಬ ಹೆಸರು ತಮಗಿದೆಯೆಂದೂ ತಾಯಿಗೆ ತಿಳಿಸಿ, ಸತ್ಪುತ್ರನು ತನ್ನ ಮಗನೆಂದು ತಿಳಿಸಿದನು. ಶಿವಾರ್ಪಿತವಲ್ಲದೆ ಏನನ್ನೂ ಮಗುವಿಗೆ ಅರ್ಪಿಸ

---

೨೦ ಪಾ.ಸೋ. ಬ.ಪು. ೧೨; ಭೀಮ, ಬ.ಪು. ಸಂ. ೨; ಪ. ೫೦–೫೫.

೨೧ ಆತಲ್ಲಿ ಗರ್ಭಂಬುನಂದುದಯಿಂಚಿ;
ನರ್ಧೋದಯಮುನಂದಯತನಿಲೋನುನ್ನಯರ್ಧಂದು
ಮೌಳಿಗುಪ್ತಾಕೃತೀ ದಾಲ್ಚಿ । ಯಂಗಂಬು ಪೈಗಡು
ಸಾಂಗಂಬುಗಾಗ – ಲಿಂಗಸಾಹಿತ್ಯಂಬುಲೀಲನೊನರ್ಚಿ
ಪಾ.ಸೋ. ಬ.ಪು. ಆ. ೧, ಪು. ೧೪.

ಪ್ರೀತಿಯಲಿ ಪುತ್ರನು ಕರಾಂಭೋ
ಜಾತಮುಕುಳಿತನಾಗಿ ಮೆಲ್ಲನೆ
ಮಾತೆಯುದರದೊಳುದಯಿಸಲು ಅರ್ಧೋದಯದೊಳಾಗ
ಆ ತನಯನೊಳಗಿಹ ಶಿವಂ ವಿ
ಖ್ಯಾತಗುರುವಾಕಾರಮಂ ತಾ
ಳ್ದಾತನಂಗದ ಮೇಲೆ ಲಿಂಗಾಸಂಗವಂ ಮಾಡಿ
ಭೀಮ. ಬ.ಪು. ಸಂ. ೨; ಪ. ೨೪

೨೨ ಮುಡುಚಿನ ಮಡು ಪುಗೆಂಜಡ ಮುಡಿನಮ ಮೈಡುನಿ ಚಂದಂಬುಲುವೆಡವೆಡ ದೋಪಗಟ್ಟಿನವೆಲಿ ಪೊತ್ತಿ ಕಚ್ಚಡಂ ಬೆಂದು – ಬುಟ್ಟಿನಿರುದ್ರಾಕ್ಷಭೂಷಣಂಬುಲುನು; ರಾಗಿಕುಂಡಲಮುಲು ರತ್ನಕಂಬಳಿಯು, ಯೋಗದಂಡುಬುನುನೊಕಚೇತಗೊಡುಗು । ಪಾ.ಸೋ. ಬ.ಪು. ೧೪–೧೫.

ಜಡೆಮುಡಿಯನಳವಡಿಸಿ ತೋರುವ
ಮೃಡನ ಸೆಜ್ಜೆ ಸಿತಾಂಬರದ ಚೆಲು

CC-0. Jangamwadi Math Collection. Digitized by eGangotri

ಲಾಗದೆಂದೂ ಅಪ್ಪಣೆ ಕೊಡಿಸಿ ಅದೃಶ್ಯನಾಗುವನು.[೨೩] ಇತ್ತ ಮಾದರಸ-ಮಾದಲಾಂಬೆಯರು ಸಂಭ್ರಮದಿಂದ ಮಗುವಿಗೆ ನಾಮಕರಣೋತ್ಸವವನ್ನು ನೆರವೇರಿಸುವರು; ಭಕ್ತರನ್ನು ಬರಮಾಡಿಕೊಳ್ಳುವರು; ವಿಭೂತಿ ವೀಳಯವನ್ನು ಕೊಡುವರು; ಹರಶರಣರ ಪಾದೋದಕದಿಂದ ಮಗುವಿಗೆ ಸ್ನಾನ ಮಾಡಿಸುವರು; ಮೈಗೆ ವಿಭೂತಿಯನ್ನು ಧರಿಸುವರು. ಅಗಣ್ಯ ಪುಣ್ಯೋದಯದ ಕುಮಾರನಿಗೆ ಬಸವನೆಂಬ ನಾಮವನ್ನಿಡುವರು.[೨೪] ಮಗು ಬಾಲಲೀಲೆಯನ್ನಾಡುವನು; ಶೈಶವವಿನೋದದಲ್ಲಿ ಕಾಲ ಕಳೆಯುವನು; ಲಿಂಗಾರ್ಚನೆಯನ್ನಾಚರಿಸುವನು; ಮಾಹೇಶ್ವರರನ್ನು ಪರಶಿವನೆಂದು ಕಾಣುವನು.[೨೫] ಬರೆಹ, ವಾಚನ, ಗಣಿತ, ಶಬ್ದಾರ್ಥ, ವ್ಯಾಕರಣ, ಛಂದಸ್ಸು, ಸಂಗೀತ, ಸಾಹಿತ್ಯ, ವೇದಾಗಮ ಪುರಾಣ ಶಾಸ್ತ್ರಗಳು ಮಗುವಿನ ಅಧ್ಯಯನದಲ್ಲಿ ಮುಖೋದ್ಗತವಾಗುವುವು.[೨೬] ಎಂಟನೆಯ ವರ್ಷದಲ್ಲಿ ಉಪನಯನ ಮಾಡಬೇಕೆಂದು ತಂದೆಯು ಸಕಲ ಸಿದ್ಧತೆಯನ್ನು ಮಾಡುವನು.[೨೭]

ಉಡಿಗೆ ಹೊದೆದಿಹ ರತ್ನಗಂಬಳಿ ತಾಂಬ್ರಕುಂಡಲವ
ತೊಡಿಗೆ ರುದ್ರಾಕ್ಷಗಳ ಬೆಳುಗೊಡೆ
ಒಡಿದ ದಂಡಂ ಭಸಿತಲೇಪನ
ಮೊಡಲು ನಸುನೊಸಲೊಳು ತ್ರಿಪುಂಡ್ರದ ರೇಖೆಗಳು ಮೆಱೆಯೆ
ಭೀಮ. ಬ.ಪ್ರ. ಸಂ. ೩; ಪ. ೨೬

೨೩. ಕಪ್ಪಡಿಸಂಗಮೇಶ್ವರಂ ಬಂದು – ನೆಲ್ಲಪ್ಪು(ಡುನುನುನ್ನಿ)ಯೆಟ್ಟುಲಂಟೇನಿಯೇನು
ಗೂಡಲಿ ಸಂಗಮೇಶ್ವರು ಪೇರ – ಕಾನಯಾಗುಡಿಲೋನಗದಲಕುಂಡುದುನು ।
ಪಾ.ಸೋ. ಬ.ಪ್ರ. ಆ. ೧; ಪ್ರ. ೧೫.

ಹಿಂಗದನುದಿನವಿಹೆನು ಕಪ್ಪಡಿ
ಸಂಗಮೇಶ್ವರದಲ್ಲಿ ಕೂಡಲ
ಸಂಗಮೇಶನ ಪೆಸರು ನಾವೆಮಗಲ್ಲಿ ತಾನಿರವು
ಭೀಮ. ಬ.ಪ್ರ. ಸಂ. ೩; ಪದ್ಯ ೨೮.

೨೪ ಬಸವನಾಮಂ ಬಿಡಿ – ಪಾ.ಸೋ. ಬ.ಪ್ರ. ಆ. ೧; ಪ್ರಟ ೧೫.
ಬಸವನಾಮವನಿಟ್ಟು – ಭೀಮ. ಬ.ಪ್ರ. ಸಂ. ೩; ಪದ್ಯ ೩೩.

೨೫ ಪಾ.ಸೋ. ಬ.ಪ್ರ. ಆಶ್ವಾಸ ೧; ಪ್ರ. ೧೬.
ಭೀಮ. ಬ.ಪ್ರ. ಸಂಧಿ ೩; ಪದ್ಯ ೪೧.

೨೬ ಪಾ.ಸೋ. ಬ.ಪ್ರ. ಆ. ೧; ಪ್ರ. ೧೬.
ಭೀಮ. ಬ.ಪ್ರ. ಸಂ. ೩; ಪದ್ಯ ೪೨.

೨೭ ಗತಭಕ್ತಿಯುಕ್ತುಡೈಗರ್ಭಾಷ್ಟಮಮುನ । ಸುತುನುಪನಯನಂಬು ಶುಭ
ಮುಹೂರ್ತಮುನ । ಪಾ.ಸೋ. ಬ.ಪ್ರ. ಆ. ೧; ಪ್ರ. ೧೬.

CC-0. Jangamwadi Math Collection. Digitized by eGangotri

ಉಪನಯನ

ಗರ್ಭಾಷ್ಟಕದಲ್ಲಿ ಮಗನಿಗೆ ಉಪನಯನವನ್ನು ಪೂರೈಸಲು ತಂದೆ ಸಿದ್ಧತೆಯನ್ನು ನಡೆಸಲು, ಬಸವಣ್ಣನು 'ಶಿವದೀಕ್ಷೆಯಾದ ನನಗೆ ಮುಂಜಿಗಟ್ಟುವ' ಯೋಚನೆ ಏಕೆ ಮಾಡುವಿರಿ? ನಾನು ಜನಿಸಿದೊಡನೆ ಸಂಗಮೇಶ್ವರನು ಸದ್ಗುರುವಾಗಿ ಬಂದು ಉಪದೇಶವಿತ್ತು ಶೈವಾಚಾರಮಾರ್ಗದಲ್ಲಿ ನಿಲಿಸಿ ಸಲಹಿರುವನು. ನೀರ ನೇಣಿನ ಬಾಧೆಯಿಲ್ಲದ ವೀರಶೈವಾಚಾರ ದೀಕ್ಷಾಧಾರಕನನ್ನು ಘೋರಕರ್ಮದಲ್ಲಿ ನಿಲಿಸುವುದೇಕೆ?[೨೫] ಷಡ್ದರ್ಶನಕ್ಕೆ ಅತೀತವಾದ ಶಿವಭಕ್ತಿಮಾರ್ಗದಲ್ಲಿ ನಿಂತಿರುವ ನನಗೆ ನನ್ನ ಸದ್ಗುರು ಶಿವನನ್ನು ಚಿತ್ತಾಭ್ಯಂತರದಲ್ಲಿ ಒಂದಿಸಿ ಕರಸ್ಥಲದಲ್ಲಿಡಬಲ್ಲನು, ಇಷ್ಟಲಿಂಗಪೂಜೆಗೆ ಸಮಾನವಾದುದು ಬೇರೊಂದಿಲ್ಲ ಎಂದು ಮುಂತಾಗಿ ತಂದೆಯೊಡನೆ ವಾದಿಸಿ. ವಾದ ವಿರಸಕ್ಕೇಳಲು ಬಸವಣ್ಣನು ಅವನ್ನೆಲ್ಲವನ್ನು ತೊರೆದು ನಿಜಸಹೋದರಿ ನಾಗಾಂಬಿಕೆಯೊಡನೆ ಮನೆಬಿಟ್ಟು ಮಹಮನೆಯ ಕಡೆಗೆ ನಡೆದನು.[೨೬]

ಕೂಡಲಸಂಗಮದಲ್ಲಿ

ಬಸವಣ್ಣನು ಉಪನಯನವನ್ನು ಧಿಕ್ಕರಿಸಿ ಮನೆಬಿಟ್ಟು ನೆರೆಯಲ್ಲಿರುವ ಮಹಮನೆಗೆ ಬರುವನು. ಅಲ್ಲಿ ಉಪನಯನಕ್ಕೆ ಬಂದಿದ್ದ ಮಾದಲಾಂಬೆಯ ಸಹೋದರನೂ, ಶಿವಭಕ್ತನೂ, ಅರಸು ಬಿಜ್ಜಳನ ಭಂಡಾರಿಯೂ ಆದ ಬಲದೇವನು ತನ್ನ ಮಗಳಾದ ಗಂಗಾಂಬೆಯನ್ನು ಬಸವಣ್ಣನಿಗೆ ಕೊಡಬೇಕೆಂದು ನಿಶ್ಚಯಿಸಿ ವಿವಾಹಸಮಾರಂಭವನ್ನೇರ್ಪಡಿಸುವನು. ಸಮಾರಂಭ ಮುಗಿದ ಮೇಲೆ ಮುಂಗಡಿಯಲ್ಲಿಯೇ ಸಂಗಮವಿದೆ, ಅಲ್ಲಿ ಮದ್ಗುರುಲಿಂಗವಿರುವನು, ಅವರಡಿಗಳಂ ಕಂಡು ಅರ್ಚಿಸಿ, ನಿಮ್ಮ ಕರುಣಾದೃಷ್ಟಿಯಿಂದ ಭಕ್ತ್ಯಂಗನೆಯನಾಲಿಂಗಿಸುವೆನೆಂದು, ಸತಿ ಗಂಗಾದೇವಿ, ಅನುಜೆ ನಾಗಲಾದೇವಿ ಇವರೊಡನೆ ಮಾವ ಬಲದೇವನ ಅಪ್ಪಣೆ ತೆಗೆದುಕೊಂಡು ಬಸವಣ್ಣನು ಕೂಡಲಸಂಗಮದತ್ತ ನಡೆಯುವನು.[೨೯] ಕಪ್ಪಡಿ ಸಂಗಮವನ್ನು ತಲುಪಿ ಸಂಗಮೇಶ್ವರದೇವಾಲಯಕ್ಕೆ ಹೋಗು

.....ಗರ್ಭಾಷ್ಟಕದೊಳಾ ಜನಕ
ಮಗನಿಗುಪನಯನವನೊಡರ್ಚಲು
ನೆಗಳ್ದು ಶುಭಲಗ್ನಕ್ಕೆ ತೊಡಗಲು ಭೀಮ. ಬ.ಪು. ಸಂ. ೩; ಪದ್ಯ ೪

೨೮ ಪಾ.ಸೋ. ಬ.ಪು. ಪು. ೧೬–೧೮. ಭೀಮ. ಬ.ಪು. ಸಂ. ೩; ಪ. ೪೩–೮೬.

೨೯ ಆಂತಭಕ್ತಾಳಿಕಿನಭಮತಾರ್ಥಮುಲು ಸಂತುಷ್ಟಿಗಾಬರಿಚರ್ಯಲೊನರ್ಚಿ ಸಾಷ್ಟಾಂಗುಡ್ಯೆ ಭುವಿಜಾಂಗಿಲಿಮ್ರೊಕ್ಕಿ ಶಿಷ್ಪಭಕ್ತಾಳಿಕಿಜೇತುಲುಮುಗಿಚಿಯಲ್ಲಿ ಕಪ್ಪಡಿ

CC-0. Jangamwadi Math Collection. Digitized by eGangotri

ವರು. ಭಕ್ತರು ಬಸವಣ್ಣನನ್ನು ಇದಿರ್ಗೊಂಡರು. ಸಂಗಮೇಶ್ವರನು ತಪಸ್ವಿಯ ವೇಷದಲ್ಲಿ ಬಂದು ಬಸವೇಶ್ವರನಿಗೆ ಉಪದೇಶ ಮಾಡುವನು.[೩೦] ಬಸವಣ್ಣನ ಭಕ್ತಿಯ ಮಹಿಮೆಯನ್ನರಿತು ಸಮಸ್ತ ಜನರು ಆತನನ್ನು ಕೊಂಡಾಡುವರು. ಬಸವಣ್ಣನು ಭಕ್ತರನ್ನು ಕೂಡಿಕೊಂಡು ಸಂಗಮೇಶದೇವಾಲಯದ ಮಂಟಪದಲ್ಲಿ ಒಡ್ಡೋಲಗವನ್ನೀಯುವನು. ಸಂಗಮೇಶ್ವರನನ್ನು ಪೂಜಿಸುತ್ತ ಬಸವಣ್ಣನು ಕಪ್ಪಡಿ ಸಂಗಮದಲ್ಲಿ ಸುಖಿವಾಗಿರ್ದನು.[೩೧]

ಸಂಗಮೇಶ್ವರಂ ಬಂದುಂದೆಲ್ಲಂಬುಮಾ ಗುರುದೇವುಡನ್ನಾಡು. ಚನಿಯೆದವಾರಿ ಶ್ರೀಚರಣಮುಲ್‌ಗೊಲುವಂಗನಿಯೆದಮಿಕ್ಕಿಲಿ ಕರುಣಮೀಚೇತ.

ಪಾ.ಸೋ. ಬ.ಪ್ರ. ಪ್ರ. ೨೦–೨೧.

ಮುಂಗಡೆಯೊಳಿದೆ ಒಪ್ಪಿ ಕಪ್ಪಡಿ
ಸಂಗಮೇಶ್ವರದಲ್ಲಿ ಮದ್ಗುರು
ಲಿಂಗವಿದ್ವಹನೆಯ್ದೆನಾವವರಡಿಗಳಂ ಕಂಡು ।
ಹಿಂಗದರ್ಚಿಸಿ ನಿಮ್ಮ ಕರುಣಾ
ಪಾಂಗದಿಂ ಭಕ್ತ್ಯಂಗನೆಯನಾ
ಲಿಂಗಿಸುವೆನೆನುತಾ ಮಹಾಭಕ್ತರ ನಿರೂಪದಲಿ ॥

ಧೀವರಂ ನಿಜವನಿತೆ ಗಂಗಾ
ದೇವಿಯುಂ ತನ್ನನುಜೆ ನಾಗಲ
ದೇವಿಯುಂ ತಾನೆಯ್ದಿದನು ಬಲದೇವನಟ್ಟಿದಡೆ ।
ಮಾವನಂ ಬೀಳ್ಕೊಂಡು ಸದ್ಗುರು
ದೇವನಂಘ್ರಿಧ್ಯಾನಯೋಗದೊ
ಳೋವಿ ತತ್ಪುರದತ್ಯಲಭಮುಖಿನಾಗಿ ನಡೆವುತ್ತ ॥

ಭೀಮ. ಬ.ಪ್ರ. ಸಂ. ೪; ಪ. ೪೮–೪೯.

೩೦ ಪಾ.ಸೋ. ಬ.ಪ್ರ. ೨೧. ಭೀಮ. ಬ.ಪ್ರ. ಸಂ. ೪; ಪ. ೪೮.

೩೧ ಕೂಡಲಸಂಗಯ್ಯ ಗುಡಿಮಂಟಪಮುನಗೂಡಿ
ಭಕ್ತಾವಲಿಗೊಲುವಿಚ್ಛೆಯುಡು
ಸಾರಾಂಚಿತೋಕ್ತುಲ ಸಂಸ್ತುತಿಂಪುಚುನು–ಬೂರಿ
ತಂಬುಗನಾದಪೂಜ ಸೇಯುಚುನು
ಮೂಡುಸಂಧ್ಯಲ ಗುರುಮೂರ್ತಿ ಗೊಲ್ಚುಚುನು
ಬೋಡಿಗಾರ್ದೊದ್ದುಲುಪ್ಪಚ್ಚುಚುನುಂಡೆ. ಪಾ.ಸೋ. ಬ.ಪ್ರ. ಪ್ರ. ೨೩.
ವಿವಿಧ ಭಕ್ತರುವೆರಸಿ ಪರಮೋ
ತ್ಸವದಿ ಕೂಡಲಸಂಗಮೇಶನ
ಭವನಮಂಟಪದೊಳು ಮಹಾ ಒಡ್ಡೋಲಗವನಿತ್ತು

CC-0. Jangamwadi Math Collection. Digitized by eGangotri

ವಿವಾಹ

ಬಲದೇವ ದಂಡನಾಥನ ಮಗಳಾದ ಗಂಗಾಂಬೆಯೊಡನೆ ಬಸವಣ್ಣನವರ ವಿವಾಹ ಇಂಗಳೇಶ್ವರಬಾಗವಾಡಿಯಲ್ಲಿ ನೆರವೇರುವುದು.[೩೨] ಬಸವಣ್ಣನವರಿಗೆ ಮಾಯಿದೇವಿಯೆಂಬ ಇನ್ನೊಬ್ಬ ಪತ್ನಿಯಿರುವುದಾಗಿಯೂ ತಿಳಿದುಬರುತ್ತದೆ.[೩೩]

ವಿವಾಹ ಮುಗಿದ ನಂತರ ಬಸವಣ್ಣನು ಕೂಡಲಸಂಗಮದಲ್ಲಿರುವನು. ಆತ್ತ ಕಲ್ಯಾಣದಲ್ಲಿ ಭಂಡಾರಿ ಬಲದೇವಸಚಿವರನು ಬಸವಂಗೆ ತನಯಳನಿತ್ತು, ಪ್ರಮಥರು ಕರೆಸಲು ಪೋಗುವಂತೆ ಶಿವಲೋಕಕ್ಕೈದಿದನು.[೩೪]

ಆಗ ಬಿಜ್ಜಳನು ಬಲದೇವಮಂತ್ರಿಯ ಬಂಧುಬಳಗವನ್ನೆಲ್ಲ ಕರೆಸಿ ಬಲದೇವನ ಮಂತ್ರಿಪದದ ಗುರುತರವಾದ ಹೊಣೆಯನ್ನು ಹೊತ್ತುಕೊಳ್ಳಲು ಸಮರ್ಥರಾದವರು ಅವರಲ್ಲಿ ಇರುವರೇ ಎಂದು ವಿಚಾರಿಸುವನು. ಆಗ ಅವರು ಬಲದೇವನ ತನಯಳ ಪ್ರಾಣನಾಥನಾದ ಬಸವಣ್ಣನು ಆ ಮಂತ್ರಿಪದಕೆ ಅರ್ಹನಿರುವನು, ಎಂದು ನುಡಿಪರು. ಬಿಜ್ಜಳನು ಬಸವಣ್ಣನಲ್ಲಿಗೆ ನಿರೂಪವನ್ನು ಕಳಿಸುವನು. ಬಸವಣ್ಣನು ಭಕ್ತಹಿತಾರ್ಥವನ್ನು ನೆನೆದು ಅದಕ್ಕೊಡಂಬಟ್ಟು ಕಲ್ಯಾಣಕ್ಕೆ ಬರುವನು.[೩೫] ಹೀಗೆ ಪಾಲ್ಕುರಿಕೆ ಸೋಮನಾಥನ ಅಭಿಪ್ರಾಯದಲ್ಲಿ ಬಸವಣ್ಣನು ಬಲದೇವಮಂತ್ರಿಯ ಮರಣಾನಂತರ ಆತನ ಮಂತ್ರಿಪದವನ್ನು ಸ್ವೀಕರಿಸಲು ಬಿಜ್ಜಳನ ನಿರೂಪದ ಮೇರೆಗೆ ಕಲ್ಯಾಣಕ್ಕೆ ನಡೆದಿರುವನು.

ನವರಸಾಂಚಿತನಾದದಿಂ ಮೂ
ಱವಸರದೊಳರ್ಚಿಸುತ ಸಗುರು
ಸ್ತವನ ಪೂಜೆಯೊಳಿಂತು ಬಸವಂ ಸುಖದೊಳಿರುತಿರ್ದಂ
ಭೀಮ. ಬ.ಪು. ಸಂ. ೪: ಪ. ೭೪.

೩೨ ಪಾ.ಸೋ. ಬ.ಪು. ಆ. ೧; ಪು. ೨೦. ಭೀಮ. ಬ.ಪು. ಸಂಧಿ ೪: ಪ. ೧೪.

೩೩ ಮತ್ತೆ ಒಬ್ಬಯ್ಯಂ ಬಸವಸಚಿ
ವೋತ್ತಮನ ಪೊರೆಗೆಯ್ದಿ ಆತನ
ಮತ್ತಗಜಗಮನೆಯ ಕಿವಿಯ ಪೊನ್ನೋಲೆಯಂ ಕಂಡು
ಒತ್ತಿ ಬೇಡಲು ಮಾಯಿದೇವಿಯ
ಮುತ್ತಿನೋಲೆಯನೀಸಿಕೊಂಡೊಲಿ
ದಿತ್ತು ನಮಿಸಲು..... ಭೀಮ. ಬ.ಪು. ಸಂ. ೧೦: ಪ. ೪೩.

೩೪ ಅಕ್ಕಡನಂತಗಳ್ಯಾಣಂಬುನಂದು – ನಿಕ್ಕುಡುಶಿವಭಕ್ತಿಕೆಲ್ಲಯೆ, ಪರಗು ಬಂಡಾರಿ ಬಲದೇವ ದಂಡನಾಯಕುಡುದಂಡಿ ಬಸವನಿಕಿದನಯನಿಚ್ಚುಟಯು ಬ್ರಮಥುಲೆಂತಯು ಮೆಚ್ಚಿ ರಾಬಂಪಬೋವು ಕ್ರಮಮುನ ಬ್ರಮಥಲೋಕಮನಕೇಗುಡುನು..... ಪಾ.ಸೋ. ಬ.ಪು. ಆ ೨.

೩೫ ಯತನಿತಯ ಪ್ರಾಣೇಶುಡು ವಿನಯೋಕ್ತಿ ಪರುಡು ವಿನುಮಖಿಳ ಕಳಾಪ್ರವೀಣುಡಿಟ್ಲನನ್ನು.....' ಪಾ.ಸೋ. ಬ.ಪು. ಆ. ೨: ಪು. ೨೪.

CC-0. Jangamwadi Math Collection. Digitized by eGangotri

ಮಂತ್ರಿಪದ

ಸಚಿವಶ್ರೇಷ್ಠನಾವ ಭಂಡಾರಿ ಬಲದೇವನು ಬಸವಣ್ಣನಿಗೆ ತನ್ನ ಮಗಳನ್ನು ಮದುವೆಮಾಡಿಕೊಟ್ಟಮೇಲೆ, ಮರಣಹೊಂದುವನು.[೩೬] ಬಿಜ್ಜಳನು ಬಲದೇವ ಮಂತ್ರಿಯ ಬಂಧುಬಳಗವನ್ನು ಕರೆಯಿಸಿ ಬಲದೇವನ ಹೊಣೆ ಹೊರಲು ಸಮರ್ಥರಾದವರು ಅವರಲ್ಲಿ ಉಂಟೇ ಎಂದು ವಿಚಾರಿಸುವನು.[೩೭] ಬಲದೇವನ ಮಗಳ ಪತಿಯಾದ ಬಸವಣ್ಣನು ನಿನ್ನ ಮಂತ್ರಿಪದಕ್ಕೆ ಯೋಗ್ಯನೆಂದು ಅವರು ಬಿನ್ನವಿಸುವರು. ಆತನನ್ನು ಬರಮಾಡಿಕೊಳ್ಳಬೇಕೆಂದು ಅಮಾತ್ಯರನ್ನು ಆತನಲ್ಲಿಗೆ ಅರಸನು ಕಳುಹಿಸುವನು.

ಸಂಗಮಕ್ಕೆ ಅವರು ಹೋಗಿ ಬಿಜ್ಜಳನ ಪ್ರಧಾನಪಟ್ಟಕ್ಕೆ ಅಧಿಪತಿಯಾಗಲು ಬರಬೇಕೆಂದು ಅರಸನ ಬಿನ್ನಪವನ್ನು ನಿವೇದಿಸುವರು. ಭಕ್ತಹಿತಾ

ಎನೆ ಮಹಾರಾಜೇಂದ್ರ ಉಂಟಾ
ತನ ತನುಜೆಯ ಪ್ರಾಣನಾಥನು
ವಿನಯವಾಕ್ಯಂ ನಿಮ್ಮ ರಾಜ್ಯವನುದ್ಧರಿಸಲಾರ್ಪ.....
ಭೀಮ. ಬ.ಪು. ಸಂ. ೫; ಪದ್ಯ ೫.

೩೬ ಭಂಡಾರಿಬಲದೇವದಂಡನಾಯಕುಡು
ದಂಡಿ ಬಸವನಿಕಿ ದನಯನಿಚ್ಚುಟಯು
ಬ್ರುಮಥ ಲೆಂತಯು ಮೆಚ್ಚರಾ ಬಂಪ ಬೋವು
ಕ್ರಮಮುನ ಬ್ರುಮಥಲೋಕಕೇಗುಡನು. ಪಾ.ಸೋ. ಬ. ಪು. ಆ. ೨, ಪು೨೪
ಭಂಡಾರಿಬಲದೇವಂ ಸಚಿವವರನು
ಇತ್ತಲೀ ಬಸವಂಗೆ ತನಯಳ
ನಿತ್ತೊಡೊಲಿದು ಪ್ರಮಥರತಿಮುದ
ವೆತ್ತು ಕರೆಸಲು ಪೋಪಪೊಲು ಶಿವಲೋಕಕೆಯ್ದಿದನು ।
ಭೀಮ. ಬ.ಪು. ಸಂ. ೫, ಪ. ೩.

೩೭ ಬಲದೇವಮಂತ್ರಿಯಾಪ್ತುಲ ಬಂಧುಜನುಲ
ಬಿಲುವಂಗ ಬಂಚಿಯಾ ಬಿಜ್ಜುಲುಂಡನಿಯೆ ಪಾಸೋ. ಬ.ಪು. ಆ ೨, ಪು.೨೪
ಬಳಿಕವಾ ಬಲದೇವಮಂತ್ರಿಯ
ಬಳಗಮಂ ಬಂಧುಗಳನಾಪ್ತರು
ಗಳನಿಳಾಧೀಶನು ಕರೆಸಿ ತಾನವರಿಗಿಂತೆಂದ
ನಲಿವ ಹಿತವರು ಸೋದರರು ಮ
ಕ್ಕಳುಗಳಾರಾಯ್ತಾದೊಡೀತನ
ಬಲುನಿಯೋಗವನೆಲ್ಲವಂ ಪ್ರತಿಪಾಲಿಸುವರೊಳರೇ ॥
ಭೀಮ. ಬ.ಪು. ಸಂ. ೫; ಪ. ೪.

CC-0. Jangamwadi Math Collection. Digitized by eGangotri

ವಾಗಿ ಬಸವಣ್ಣನು ಅದಕ್ಕೆ ಒಪ್ಪುವನು.[೩೪] ಬಿಜ್ಜಳನು ಬಸವಣ್ಣನನ್ನು ಹನ್ನೆರಡು ಜನ ಭಂಡಾರಿಗಳೊಳಗೆ ಹಿರಿಯ ಭಂಡಾರಿಯನ್ನಾಗಿ ನಿಯಮಿಸುವನು.[೩೫] ಸಕಲ ರಾಜವೈಭವದೊಡನೆ ಮೆರವಣಿಗೆ ಕಲ್ಯಾಣಪಟ್ಟಣದ ಬೀದಿಯಲ್ಲಿ ಹಾಯ್ದು ಬಂದು ಓಲಗಂಗೊಟ್ಟಿರಲು ಹರಲಿಖಿತವೋಲೆಯೊಂದು ಆಕಸ್ಮಿಕವಾಗಿ ಆಕಾಶದಿಂದ ಬಿಜ್ಜಳಭೂಭುಜನ ಸಮ್ಮುಖದಲ್ಲಿ ಬೀಳುವುದು. ಆ ಲಿಪಿಯನ್ನೋದುವುದು ಯಾರಿಗೂ ಸಾಧ್ಯವಾಗದಿರಲು ಬಸವಣ್ಣನು ಅದನ್ನೋದಿ ಸಿಂಹಾಸನದ ಕೆಳಗಿದ್ದ ಅಪಾರ ಧನವನ್ನು ತೋರಿಸಿಕೊಡುವನು. ಅದರಿಂದ ಸಂಪ್ರೀತನಾದ

---

೩೮ ಮಂತ್ರಿಪಟ್ಟಮನಕು ಮಂಡಲಂಬುನಕು
ದಂತ್ರಂಬುನಕು ನಿಜಾಪ್ತಮುನಕು ಮೂಲ
ಭಂಡಾರಮುನಕು ಭೂಪತಿರಾಜ್ಯಮುನಕು
ನೊಂಡೇಮಿ ನೀವೇಕಾಕೊಡೆಯಲುನ್ನರೆ?
ಯತಡು ಪಟ್ಟಿಡುಕೂಟಿ ಕರುಡಕಾನಿ-
ಕ್ಷಿತಿಕೆಲ್ಲ ನೀವಭೂಪತಿವಿನಿಕ್ಕಂಬು
ವಿಚ್ಚೀಯುಮನಿಯಿಟ್ಲು ವಿನ್ನವಿಂಚುಡುನು
ಸೆಜ್ಜೊಟ ಭಕ್ತಹಿತಾರ್ಥಂಬುದಲಚಿ ಪಾ.ಸೋ. ಬ.ಪ್ರ. ಆ. ೨, ಪ್ರ. ೨೪

ಧಾರುಣಿಗೆ ಸಚಿವಾಗ್ರಪಟ್ಟಕ
ಪಾರ ಭಂಡಾರಕ್ಕೆ ಬಹುಪರಿ
ವಾರಕಾಪ್ತಜನಕ್ಕೆ ವಿಶ್ವಾಸಕ್ಕೆ ಬಿಜ್ಜಳನ
ಭೂರಿಸಾಮ್ರಾಜ್ಯಕ್ಕೆ ಸಕಳದ
ಭಾರಮಂ ತಾಳಲ್ಕೆ ಮತ್ತೆ ವಿ
ಚಾರಿಸಲು ನೀವಲ್ಲದಾತಂಗಾವನಿರ್ದಹನು.
ಅರಸನೊಕ್ಕೈಯೋಗರಕೆ ತಾ
ನರುಹನುಳಿದಂತೀ ಧರಿತ್ರಿಗೆ
ನಿರುತವಧಿಪತಿ ನೀವೆಯಲ್ಲಾ ಬಸವಮಂತ್ರೀಶಾ
ಪುರಕೆ ಬಿಜಯಂಗೆಯ್ದು ಸಲೆಯು
ದ್ಧರಿಸಿಯೆಂಬರ ಬಿನ್ನಪವನವ
ಧರಿಸಿ ಭಕ್ತಹಿತಾರ್ಥಮಂ ನೆನೆದಲ್ಲಿಗೊಡಬಟ್ಟ.
ಭೀಮ. ಬ.ಪ್ರ. ಸಂ. ೫; ಪ. ೯–೧೦.

೩೯ ಭಂಡಾರುಲು ಪನ್ನಿದ್ದಜಂದುಮೇಟಿ ತನುಂಬುನನಿರ್ಮಿಲಿಚ್ಚಿತನದು.
ಪಾ.ಸೋ. ಬ.ಪ್ರ. ಆ. ೨, ಪ್ರ. ೨೫

.....ಭಂಡಾರಿಗಳು ಪನ್ನಿಬ್ಬರವರೊಳಗೆ ಹಿರಿಯ ಭಂಡಾರಾಧಿಪತ್ಯದೊ
ಳರಲನುಮತಿಸಿ ಭೀಮ. ಬ.ಪ್ರ. ಸಂ. ೫, ಪ. ೧೯.

CC-0. Jangamwadi Math Collection. Digitized by eGangotri

ಬಿಜ್ಜಳನು ತನ್ನ ಹನ್ನೆರಡು ಜನ ಮಹಾಮಾತ್ಯರಲ್ಲಿ ಅಗ್ರೇಸರನನ್ನಾಗಿ ಮಾಡುವನು.[೪೦]

ಶರಣಸಮಾಗಮ

ಬಸವೇಶ್ವರನು ಪ್ರಧಾನಮಂತ್ರಿಯಾಗಿ ಸಾಮ್ರಾಜ್ಯದ ಭಾರವನ್ನು ಹೊತ್ತಂತೆಯೇ ಭಕ್ತಿಪ್ರತಿಷ್ಠೆಯನ್ನು ಮಾಡುವನು. ಮೂವತ್ತಾರು ಭಾಷೆಗಳನ್ನು ತೊಟ್ಟು ತನ್ನ ಭಕ್ತಿಯನ್ನು ಆ ದಿಸೆಯಲ್ಲಿ ಹರಿಸುವುದಾಗಿ ಪಣತೊಡುವನು. ಆತನ ದರ್ಶನಕ್ಕೆ ಅನೇಕ ಶಿವಭಕ್ತರು ಕಲ್ಯಾಣಕ್ಕೆ ಬರುವರು. ಆ ಸಮಯದಲ್ಲಿಯೆ ಚನ್ನಬಸವಣ್ಣನವರ ಉದಯವಾಗುವುದು.[೪೧] ಚನ್ನಬಸವಣ್ಣನು ಜ್ಞಾನನಿಧಿಯಾಗಿ ತನ್ನ ಶ್ರೀಗುರುವಾದ ಬಸವೇಶ್ವರನನ್ನು ಅನಂತಮುಖವಾಗಿ ಸ್ತುತಿಸುವನು.[೪೨]

ಇಷ್ಟರಲ್ಲಿ ಬಸವಣ್ಣನ ಭಕ್ತಿಯನ್ನು ಎಣ್ಣೆಸೆಗೆ ಪಸರಿಸಬೇಕೆಂದು ಅಲ್ಲಮ ಪ್ರಭು ಭಂಡಾರಿಯ ಅರಮನೆಗೆ ಬರುವನು. ಆತನ ಕರಸ್ಥಲದಲ್ಲಿ ಲಿಂಗವಿದೆ. ಆನಂದರಸದಲ್ಲಿ ಲೋಲುಪ್ತನಾಗಿ ತನ್ನನ್ನು ತಾನು ಮರೆತಿರುವನು. ನಡೆಗೆ ಹೆಜ್ಜೆಯಿಲ್ಲ. ಆತನಿಗೆ ನೆಳಲಿಲ್ಲ.[೪೩] ಬಸವಣ್ಣನು ಪ್ರಭುದೇವರ ಶ್ರೀಪಾದಪದ್ಮಕ್ಕರ್ಚನೆ ಮಾಡಿ ಆರೋಗಣೆಯನ್ನು ಮಾಡಿಸುವನು. ಒಂದು ಲಕ್ಷದ ಮೇಲೆ

---

೪೦ ಪನ್ನಿಬ್ಬರುಮಹಾಮಾತ್ಯರೊಳಗಗ್ರೇಸರನೆನಲು
ಭೀಮ. ಬ.ಪು. ೫; ಪ. ೬೫.

೪೧ ಪಾ.ಸೋ. ಬ.ಪು. ಆಶ್ವಾಸ ೨, ಪುಟ ೩೦. ಭೀಮ. ಬ.ಪು. ಸಂಧಿ ೬, ಪ. ೩೪-೪೪

೪೨ ಪಾ.ಸೋ. ಬ.ಪು. ಆ. ೨, ಪು. ೩೧–೩೨. ಭೀಮ. ಬ. ಪು. ಸಂ ೬, ಪ. ೪೫–೫೧.

೪೩ ಲೀಲಿಂಗರಸ್ಥಲ ಲಿಂಗವಿನ್ಯಸ್ತ ಲೋಲೇಕ್ಷಣಾನಂದ ಕೇಳೀ ವಜಿಚಿ । ಯಿದಿಯೇಱು ವಲ್ಲಂಬುನಿದಿಸೆಟ್ಟುಗಟ್ಟು–ನಿದಿದೇರು–ಬಿಡವಿ ಎನ್ನದಿದಲಂ ಪುಡಿಗಿಯರುದೇರ ನನ್ನಿಯುನಂತತದೊಲಗಿ–ತೆರುವಿಟ್ಟು ಟಕುನಕುನಕುಲರು ಗನಿಪೊಗಡ.
ಪಾ.ಸೋ. ಬ.ಪು. ಆ. ೨, ಪು. ೩೨.

ವರ ಕರಸ್ಥಳ ಲಿಂಗದತ್ತ
ಸ್ಫುರಿತ ಲೋಲಾಲೋಕನಾನಂ
ದರಸಕೇಳೀಸುಖದೊಳಾಳುತ ತನ್ನುವಂ ಮಱೆದು
ತರು ಬಿದರು ಗಿಡು ಬೆಟ್ಟ ಘಟ್ಟವಿ
ದಿರದಡವಿ ತೊಱೆ ಹಳ್ಳವೆಂಬ ವಿ
ಸರವುಡುಗಿ ನಡೆವುತ್ತಿರಲು ಹೆಜ್ಜೆಯು ನೆಳಲುಮಿಲ್ಲ.
ಭೀಮ. ಬ.ಪು. ಸಂಧಿ ೭, ಪದ್ಯ ೭.

CC-0. Jangamwadi Math Collection. Digitized by eGangotri

ತೊಂಬತ್ತೊಂದು ಸಾವಿರ ಜಂಗಮಕ್ಕೆಂದು ಮಾಡಿದ ಪದ-ಪದಾರ್ಥಾವಳಿಯನ್ನೆಲ್ಲ ಪ್ರಭುದೇವರು ಒಂದು ಗಳಿಗೆಯಲ್ಲಿ ಆರೋಗಿಸಿಬಿಡುವರು. ಬಸವಣ ತನ್ನನ್ನೇ ಓಗರವೆಂದು ಪ್ರಭುದೇವರಿಗೆ ಅರ್ಪಿಸುವನು.[೪೪] ತನ್ನ ತನುವನ್ನೇ ಅರ್ಪಣೆ ಮಾಡಿದ ಮಹಾತ್ಮ ಬಸವನಿಗೆ ಪ್ರಭು ಮೆಚ್ಚಿ ಆತನನ್ನು ಅನಂತಮುಖವಾಗಿ ಕೊಂಡಾಡುವನು. ಪ್ರಸಾದವನ್ನಿತ್ತು ಮುಂಡಾಡುವನು. ಬಸವಣ್ಣನನ್ನು ಭಕ್ತಿರಸಾಮೃತಸಾಗರದಲ್ಲಿ ಲೋಲಾಡಿಸುವನು. ಅಲ್ಲಮಪ್ರಭುವಿನ ದಿವ್ಯಾನುಭಾವದಲ್ಲಿ ಲಿಂಗದ ನಿಜಸ್ಥಿತಿಯನ್ನು ಬಸವಣ್ಣನು ತಿಳಿದುಕೊಳ್ಳುವನು. ಅಲ್ಲಮನು ಅಲ್ಲಿ ನಿಲ್ಲದೆ ಮುಂದೆ ಚರಿಸುವನು.

ಸಕಲೇಶ ಮಾದರಸರು ಕಲ್ಯಾಣಕ್ಕೆ ಬಂದು ಬಸವಣ್ಣನವರನ್ನು ಕೂಡುವರು.[೪೫] ಬಸವರಾಜನ ಕೀರ್ತಿ ದೆಸೆದೆಸೆಗೆ ಪಸರಿಸಲು ಅದನ್ನು ಕೇಳ್ದು ಹಿಪ್ಪರಿಗೆಯ ಮಡಿವಾಳ ಮಾಚಿದೇವನು ಕಲ್ಯಾಣಕ್ಕೆ ಬಂದು ಸದ್ಭಕ್ತರ ಬಟ್ಟೆಗಳನ್ನು ತೊಳೆಯುವ ಕಾಯಕವನ್ನು ಕೈಕೊಳ್ಳುವನು.[೪೬] ಹೀಗೆಯೇ ಪೂರ್ವದೊಳಗಿನ ಸುವಿಖ್ಯಾತ ಸದ್ಭಕ್ತ ಕಿನ್ನರಿಬೊಮ್ಮಯ್ಯನು ಬಸವಣ್ಣನನ್ನು ನಿರೀಕ್ಷಿಸುವ ಇಚ್ಛೆಯಿಂದ ಕಲ್ಯಾಣಕ್ಕೆ ಬರುವನು. ಅಲ್ಲಿ ದಾಸೋಹವನ್ನು ಕೈಕೊಂಡು ಬಸವಣ್ಣನಿಗೆ ನೆರವಾಗಿ ಉಳಿಯುವನು. ಕಿನ್ನರಯ್ಯನಿಗೆ ಪರಶಿವನು ಪಡಿಹೊನ್ನು ಕೊಡುವ ನೆಂಬುದನ್ನು ಕೇಳಿ ಭಕ್ತನೊಬ್ಬನು ಆತನನ್ನು ಕಾಣುವ ತವಕದಿಂದ ಬಂದು ಕಲಿಕೇತ ಬೊಮ್ಮಯ್ಯನಿದ್ದ ಠಾವಿನಲ್ಲಿ ದಣಿದು ನಿಲ್ಲುವನು. ಭಕ್ತನೆದುರು ಕಿನ್ನರಯ್ಯನು ಶಿವನಿಂದ ಪಡಿಹೊನ್ನು ತೆಗೆದುಕೊಳ್ಳುವುದು ಅನ್ಯಾಯವೆಂದು

---

೪೪ ಪಾ.ಸೋ. ಬ.ಪು. ಆ. ೨, ಪುಟ ೩೨. ಭೀಮ. ಬ.ಪು. ಸಂಧಿ ೭. ಪದ್ಯ ೧೬.

೪೫ ಶ್ರೀಮಹಿತ ಕಲ್ಯಾಣದೊಳಗಭಿ
ರಾಮ ಬಸವನ ಮುಂದೆ ನಿಂದಿರ
ಲಾ ಮಹಾತ್ಮರ ಮಾದಿರಾಜರ ರೂಪವಾಕ್ಷಣದೆ
ಸಂಗಮೇಶ್ವರನಲ್ಲಿ ಕಂಡ
ಷ್ಟಾಂಗವೆಱಗಿ ನಮಿಸುವ ಮಾತ್ರದಿ
ಮುಂಗಡಿಯೊಳಿರೆ ಬಸವನಚ್ಚರಿವಡುತ ಪೊಡಮಡಲು
.....ಮಾದಿರಾಜಯ್ಯ
ಚಾರುಗೌರವ ಲೈಂಗ್ಯಭಕ್ತ್ಯಾ
ಚಾರಿಯಹ ಬಸವಣ್ಣನಿಂದವ
ನಾರತಮುಮರ್ಚಿಸಿಕೊಳುತ್ತುಂ ಸುಖದೊಳಿರುತಿರ್ದು
ಭೀಮ. ಬ.ಪು. ಸಂ. ೧೯, ಪ. ೩೪–೩೫.

೪೬ ಭೀಮ. ಬ.ಪು. ಸಂ. ೨೦, ಪ. ೬–೮.

CC-0. Jangamwadi Math Collection. Digitized by eGangotri

ಖಂಡಿಸಿ ಕಲ್ಲು ಮುಟ್ಟಿ ಸುವರ್ಣವನ್ನಾಗಿ ಮಾರ್ಪಡಿಸಿದನು. ಭಕ್ತನು ತನಗೆ ಬೇಕಾದನಿತು ಹೊನ್ನು ಹೊತ್ತುಕೊಂಡು ಹೋಗಿ ಮುಂದೆ ಹೊರಲಾರದ ಒಬ್ಬ ಅನುಚರನನ್ನು ಕೊಡಬೇಕೆಂದು ಬಸವಣ್ಣನನ್ನು ಕೇಳುವನು. ಆತನ ಮುಖಾಂತರ ಕಲಿಕೇತ ಬೊಮ್ಮಯ್ಯನ ಮಹತ್ವವನ್ನು ಕೇಳಿ ಬಸವಣ್ಣ ಕಿನ್ನರಯ್ಯ ಮೊದಲಾದವರು ಕಲಿಕೇತ ಬೊಮ್ಮಯ್ಯನವರಲ್ಲಿಗೆ ಹೋಗುವರು. ಹೀಗೆ ಶರಣ ಸಮಾಗಮ ಹೆಚ್ಚುತ್ತ ಹೋಗುವುದು.[೪೭]

ಸಪಾದಲಕ್ಷಭೂಮಿಯ ಮಾರಯ್ಯನವರು ರಾಜ್ಯವನ್ನು ಬಿಟ್ಟು ಕಲ್ಯಾಣದಲ್ಲಿ ಬಂದು ಕಟ್ಟಿಗೆಯ ಕಾಯಕದಲ್ಲಿ ನಿರತವಾದುದು ಪ್ರಸಿದ್ಧವಾಗಿದೆ.[೪೯] ಕನ್ನದ ಬೊಮ್ಮಯ್ಯ ಕಲ್ಯಾಣದಲ್ಲಿಯೇ ಇದ್ದು ಜಂಗಮದಾಸೋಹದಲ್ಲಿ ನಿರತನಾಗಿದ್ದನು.[೫೭] ಮುಸುಟಿಯೆಂಬ ಊರಿಂದ ವೀರಭಕ್ತ ಚೌಡಯ್ಯನು ಬಂದು ಕಲ್ಯಾಣದಲ್ಲಿ ನೆಲಸಿ ಸತ್ತ ಪ್ರಾಣಿಗಳಿಗೆ ಜೀವದಾನ ಮಾಡುತ್ತಿದ್ದನು. ಸುರಗಿಯ ಚೌಡಯ್ಯನು ಕಲ್ಯಾಣದಲ್ಲಿ ಶಿವನಿಗೆ ತುತ್ತುಮಾಡಿ ಉಣ್ಣಿಸುತ್ತಿದ್ದನು. ತೆಲುಗು ಬೊಮ್ಮಯ್ಯನು ಕಲ್ಯಾಣಕ್ಕೆ ಬಂದು ಗುರುಪದಧ್ಯಾನವೇ ಸುರಗಿಯಾಗಿ ಪೂರ್ವ ಕರ್ಮದ ಬೇಟೆಯಾಡುತ್ತಿದ್ದನು.

ಗುರು ಲಿಂಗ ಜಂಗಮದ ದಾಸೋಹವನ್ನು ಕೈಕೊಂಡ ಬಸವಣ್ಣನು ಶಿವ ಯೋಗನಿದ್ರಾಮುದ್ರೆಯಲ್ಲಿದ್ದುದನ್ನು ದ್ವಾರದಲ್ಲಿ ಬಂದ ಜಂಗಮರಿಗೆ ತಿಳಿಸಲು ಅವರು ಹಿಂತಿರುಗುವರು. ಅವರೊಡನೆ ಬಸವಣ್ಣನ ಪ್ರಾಣ ಹೋಗುವುದು. ಬಸವಣ್ಣನ ಪ್ರಾಣ ಹೋದೊಡನೆ ಕಿನ್ನರಯ್ಯನ ಪ್ರಾಣವೂ ಹಾರಿಹೋಗುವುದು. ಮಾಚಿದೇವನು ಅವರಿಬ್ಬರ ಪ್ರಾಣಗಳನ್ನು ಮರಳಿ ಪಡೆವನು. ನುಲಿಯ ಚಂದಯ್ಯನೆಂಬ ಶರಣನು ಆಗ ಪ್ರಸಿದ್ಧಿವಡೆದನು.[೫೦] ಮೇದಾರಕೇತಯ್ಯನು ಕಲ್ಯಾಣದಲ್ಲಿರಲು ಒಂದು ದಿನ ಆತನ ಅಸು ಶಿವನಲ್ಲಿ ಬೆರೆಯಿತು. ಬಸವಣ್ಣನ ಪ್ರಾರ್ಥನೆಯ ಮೇರೆಗೆ ಮಡಿವಾಳಯ್ಯನು ಆತನ ಪ್ರಾಣವನ್ನು ಮರಳಿ ಪಡೆದನು. ಆಗ ಪಡಿಹಾರಿ ಬಾಚಯ್ಯನೂ ಅಲ್ಲಿದ್ದನು. ಬಸವರಾಜನ ಭಕ್ತಿಜಲನಿಧಿಯೊಳೋಲಾಡಬೇಕೆಂದು ಆಬಲೂರ ಏಕಾಂತರಾಮಯ್ಯನು ಕಲ್ಯಾಣದಲ್ಲಿ ಬಂದು ನಿಲ್ಲುವನು. ಸೊಡ್ಡಳ ಬಾಚರಸನು ಸೌರಾಷ್ಟ್ರ ಸೋಮನಾಥನನ್ನು ಕಲ್ಯಾಣಕ್ಕೆ ಬರಮಾಡಿಕೊಳ್ಳುವನು. ಬಸವಣ್ಣನು ಇದನ್ನು ಕಂಡು ಆನಂದಪಡುವನು.[೫೧] ಶಿವನಾಗಮಯ್ಯ, ಹರಳಯ್ಯ, ಮಧುವಯ್ಯ, ಜಗದೇವ, ಮಲ್ಲಿ, ಬೊಮ್ಮ ಮೊದಲಾದ ಶಿವಶರಣರೂ ಕಲ್ಯಾಣದಲ್ಲಿದ್ದಂತೆ ವ್ಯಕ್ತವಾಗುತ್ತದೆ. ಆ ಕಾಲದಲ್ಲಿ

---

೪೭ ಭೀಮ. ಬ.ಪು. ಸಂ. ೨೮. ೪೯ ಭೀಮ ಬ.ಪು. ಸಂ. ೨೯. ೫೭ ಭೀಮ. ಬ.ಪು. ಸಂ. ೩೦. ೫೦ ಭೀಮ. ಬ.ಪು. ಸಂ. ೩೫, ಪ. ೫೮. ೫೧ ಭೀಮ. ಬ.ಪು. ಸಂ. ೩೬.

CC-0. Jangamwadi Math Collection. Digitized by eGangotri

ಕಲ್ಯಾಣದಲ್ಲಿದ್ದ ನೂರಾರು ಶಿವಶರಣರನ್ನು ಬಸವಪುರಾಣದಲ್ಲಿ ಹೆಸರಿಸಲಾಗಿದೆ.[೫೨]

ವಿರಸ

ಮಡಿವಳ ಮಾಚಿದೇವಯ್ಯನ ಪ್ರಸಂಗದಲ್ಲಿ ವಿರಸದ ಅಗ್ನಿ ಪುಟನೆಗೆಯುವುದು.[೫೩] ಶರಣರ ಮಡಿಯ ಬಟ್ಟೆಗಳನ್ನು ಮುಟ್ಟಿದವನನ್ನು ಅವನು ಇರಿದನೆಂಬ ಅಪವಾದವನ್ನು ಕೇಳಿ ದೊರೆ ಬಿಜ್ಜಳನು ಕಿಡಿಕಿಡಿಯೋಗುವನು. ಮಾಚಿದೇವನ ಮೇಲೆ ಮದ್ದಾನೆಯನ್ನು ಬಿಡಿಸುವನು. ಇದರಿಂದ ಶರಣರ ವಿಷಯವಾಗಿ ಬಿಜ್ಜಳನ ಮನಸ್ಸು ಎಷ್ಟು ಕಲುಷಿತವಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಆದರೆ ಕೊನೆಗೆ ಶರಣರ ಮಹಿಮೆಯನ್ನು ಕಂಡು ಪಶ್ಚಾತ್ತಾಪಪಡುವನು.[೫೪]

ಕಿನ್ನರಿ ಬೊಮ್ಮಯ್ಯನ ಪ್ರಸಂಗದಲ್ಲಿ ವಿರಸ ಧಗಧಗಿಸಿ ಉರಿಯತೊಡಗುತ್ತದೆ. ವಿಟನೊಬ್ಬನು ತನ್ನ ಸೂಳೆ ಬಯಸಿದ ಕುರಿಯನ್ನು ಬೆನ್ನಟ್ಟಿ ಬರುವನು. ಆ ಕುರಿ ಓಡಿ ಬಂದು ಪ್ರಾಣರಕ್ಷಣೆಗಾಗಿ ತ್ರಿಪುರಾಂತಕೇಶ್ವರ ದೇವಾಲಯವನ್ನು ಪ್ರವೇಶಿಸುವುದು. ಅಲ್ಲಿದ್ದ ಕಿನ್ನರಯ್ಯ ಕರುಣೆಯಿಂದ ಆ ಕುರಿಯನ್ನು ಕೊಲ್ಲದಂತೆ ಪ್ರಾರ್ಥಿಸಿ ಆತನು ಕೇಳಿದ ಹಣವನ್ನು ಕೊಟ್ಟು ಕಳುಹಿಸುವನು. ಆಕೆ ಅದೇ ಕುರಿ ಬೇಕೆಂದು ಹಟಹಿಡಿಯಲು ವಿಟನು ಅದನ್ನು ಒಯ್ಯಲು ಬಂದು ಉದ್ಧಟತನದಿಂದ ವರ್ತಿಸಿ ತನ್ನ ಪ್ರಾಣವನ್ನು ಕಳೆದುಕೊಂಡನು. ಮತ್ತೆ ದೂರು ಬಿಜ್ಜಳನಲ್ಲಿಗೆ ಹೋಗುವುದು. ಇದರ ಪರೀಕ್ಷೆಯಲ್ಲಿಯೂ ಬಿಜ್ಜಳನ ಕೋಪ ಇತಿಮಿತಿಯಿಲ್ಲದಾಗುವುದು.[೫೫]

ಕನ್ನದ ಬೊಮ್ಮಯ್ಯನು ದಾಸೋಹಕ್ಕಾಗಿ ಅರಮನೆಗೆ ಕನ್ನವಿಕ್ಕಿದನೆಂಬ

---

೫೨ ಭೀಮ. ಬ.ಪು. ಸಂ. ೫೭, ಪ. ೧–೧೨.

೫೩. ಬ.ಪು. ಸಂ. ೨೦.

೫೪ ಕಜ್ಜವಿದು ತಾನೆಂದು ಬಸವಂ
ಬುಜ್ಜಯಿಸಿ ಪೇಳಲ್ಕೆ ರಾಯಂ
ಲಜ್ಜೆಯಂ ನಾಚಿಕೆಯನುಳಿದಾಗಲಿಯೆನುತ ಬಂದು
ತಜ್ಜನರು ಶಪ್ಪರುಗಳಂ ವಿ
ದ್ವಜ್ಜನರು ಮಂತ್ರಿಗಳು ಸಹಿತಂ
ಬಿಜ್ಜಳಂ ಸಾಷ್ಟಾಂಗವೆಱಗಿರಲ್ಕೈಸು ದೂರದಲಿ.
ಭೀಮ. ಬ.ಪು. ಸಂ. ೨೧, ಪ. ೩೮.

೫೫ ಬ.ಪು. ಸಂ. ೨೭.

CC-0. Jangamwadi Math Collection. Digitized by eGangotri

ಆರೋಪವನ್ನು ಕೇಳಿ ಬಿಜ್ಜಳನು ಬಸವಣ್ಣನನ್ನು ಪರೀಕ್ಷೆಗೆ ಗುರಿಮಾಡುವನು. ಬಿಜ್ಜಳನ ಭಂಡಾರ ಇಮ್ಮಡಿಯಾಗಿರುವುದು.[೫೬]

ಶಿವನಾಗಮಯ್ಯಗಳ ಪ್ರಸಂಗ ಬಸವರಾಜದೇವರ ರಗಳೆಯಂತೆ ಬಸವ ಪುರಾಣದಲ್ಲಿಯೂ ಬರುತ್ತದೆ.[೫೭]

ಬಸವಣ್ಣನು ರಾಜಸಭೆಯಲ್ಲಿ ಕುಳಿತಿದ್ದಂತೆಯೇ ಕೈಗಳನ್ನು ಮೇಲಕ್ಕೆತ್ತುವನು. ದೊರೆ ಬಿಜ್ಜಳನು ಅದರ ಕಾರಣವನ್ನು ಕೇಳಲು ಗೊಲ್ಲತಿಯೊರ್ವಳು ಕಾಲು ಜಾರಿ ಬೀಳುತ್ತಿರಲು ಆವಳು ಹೊತ್ತಿದ್ದ ಹರವಿಯನ್ನು ಬೀಳದಂತೆ ಎತ್ತಿ ಹಿಡಿದೆನೆಂದು ಬಸವಣ್ಣನು ಉತ್ತರ ಕೊಡುವನು. ಬಿಜ್ಜಳನು ಇದನ್ನು ಪರೀಕ್ಷಿಸಿಯೇ ಮನಗಾಣುವನು. ತನ್ನ ತಪ್ಪನ್ನು ಒಪ್ಪಿಕೊಳ್ಳುವನು. ಬಿಜ್ಜಳ ಬಸವಣ್ಣನವರ ನಡುವೆ ವಿರಸ ಇಲ್ಲಿಂದಲೇ ಆರಂಭವಾದುದು ಕಂಡುಬರುತ್ತದೆ.[೫೯]

ಗೊಲ್ಲತಿಯ ಪವಾಡದಿಂದ ಪೆಟ್ಟಿಗೆಯ ಪವಾಡಕ್ಕೆ ಬರುವ ಹೊತ್ತಿಗೆ ವಿರಸ ಇನ್ನೂ ಹೆಚ್ಚಿದಂತೆ ಗೋಚರವಾಗುತ್ತದೆ. ಬಸವಣ್ಣನು ಪೆಟ್ಟಿಗೆಯ ಹೊನ್ನೆಲ್ಲವನು ಜಂಗಮರಿಗೆ ಕೊಟ್ಟನೆಂದು ಕಾಳಿಮರಸ, ಕರಿಯ ಕೇಶವ, ಚೋಳಿಯಣ್ಣ, ಕಸವಮಂತ್ರಿ ಮೊದಲಾದವರು ಬಿಜ್ಜಳನಿಗೆ ದೂರುವರು.[೬೯] ಭಂಡಾರದ ಪರೀಕ್ಷೆಯಲ್ಲಿ ಧನವಿದ್ದಂತಿರುವುದು.[೬೦]

ಬಸವಣ್ಣನು ಕುಲಗೋತ್ರವೆನ್ನದೆ ಭಕ್ತರೆನ್ನುವವರಲ್ಲಿ ಪ್ರಸಾದವನ್ನು ಸೇವಿಸುತ್ತಿರುವನೆಂದು ಶೈವದೀಕ್ಷಾಮುಖ್ಯರು ದೂರಿಡುವರು. ಬಿಜ್ಜಳನು ಅದಕ್ಕೆ

---

೫೬ ಬ.ಪ್ರ. ಸಂ. ೩೦. ೫೭ ಬ.ಪ್ರ. ಸಂ. ೫೪–೫೬.

೫೮ ನಸುನಗುತ ಬಸವಯ್ಯ ಅಕ್ಕಟ
ಮುಸುಕಿತೇ ಶಿವಮರುಳು ನಿನ್ನುವ
ನಸಮಭಕ್ತಿರಸಂ ನಿನಗೆ ತಲೆಗೇಱಿತೇ ಭ್ರಮಿಸಿ
ಸಸಿನೆ ಇದ್ದಂತಿರ್ದು ತುಂಬಿ
ರ್ದಸಮ ಸಭೆಯೊಳು ಅಂಜದಿರುಯೆನು
ತೊಸೆದು ತೋಳ್ಗಳನೆತ್ತಿ ನೀಡುತ ಹಿಡಿದುದೇನೆನಲು.
ಬ.ಪು. ಸಂ. ೯, ಪ. ೩.

೫೯ ಬ.ಪ್ರ. ಸಂ. ೧೦, ಪ. ೪, ೫.

೬೦ ತಪ್ಪಿದೇವುದು ನಮ್ಮ ಧನವಂ
ತಪ್ಪದೊಪ್ಪಿಸಿ ಹೋಗು ಸಾಕಿ
ನ್ನೊಪ್ಪದಿಂ ಭಂಡಾರದೊಡೆತನಮಂ ಪ್ರಧಾನಿಕೆಯಂ
ದಂಡಿಸುವರಾರೆನ್ನನೆಂಬು
ದ್ದಂಡಿಕೆಯೊಳೆಮ್ಮರ್ಥಮಂ ನೀಂ
ಕೊಂಡೆಯಲ್ಲದೆ..... ಬ.ಪು. ಸಂ. ೧೦, ಪ. ೮.

CC-0. Jangamwadi Math Collection. Digitized by eGangotri

ಮತ್ತೆ ಕಿವಿಗೊಡುವನು.[೬೧] ವಿಷದ ಪವಾಡ ವಿರಸವನ್ನು ಇನ್ನೂ ಮುಂದ ಕ್ಕೊಯ್ಯುತ್ತದೆ.[೬೨]

ಬಿಜ್ಜಳನು ಅಜ್ಞಾನದ ಮದದಿಂದ ಬಸವಣ್ಣನ ಮಹಿಮೆಯನ್ನು ಅರಿತೂ ಅರಿಯದವನಂತೆ ಏನೂ ತಪ್ಪಿಲ್ಲದೆ ಹರಳಯ್ಯ ಮಧುವಯ್ಯಗಳ ಕಣ್ಣು ಕೀಳಿಸಿದನು. ಇಲ್ಲಿಗೆ ಬಿಜ್ಜಳ ಬಸವಣ್ಣನವರ ಸಂಬಂಧ ಕತ್ತರಿಸಿಹೋಯಿತು.

ಕೊನೆಯ ಘಟನೆ

ಭೀಮಕವಿಯು ಈ ಕೊನೆಯ ಚಿತ್ರವನ್ನು ಹೀಗೆ ರೂಪಿಸಿದ್ದಾನೆ: ಬಿಜ್ಜಳ ಬಸವಣ್ಣನವರ ನಡುವೆ ನಡೆದ ವಿರಸಪ್ರಸಂಗಗಳು ಅಧಿಕವಾಗುತ್ತ, ನಡೆಯಲು ಮುಂದೆ ದುರ್ಘಟನೆಗಳು ನಡೆಯುವ ಸೂಚನೆಗಳು ಬಸವಣ್ಣನಿಗೆ ಗೋಚರವಾಗುತ್ತವೆ. ಅಂಥ ಪ್ರಸಂಗ ಬಂದಲ್ಲಿ ಶಿವದ್ರೋಹಕ್ಕೆ ಪ್ರತಿಕಾರ ಮಾಡುವ ಆಶ್ವಾಸನವನ್ನು ಅವರು ಜಗದೇವನಿಂದ ತೆಗೆದುಕೊಳ್ಳುವರು. ಬಿಜ್ಜಳನು ನಿರಪರಾಧಿಗಳಾದ ಆಳ್ಕಯ್ಯ ಮಧುವಯ್ಯಗಳ ಕಣ್ಣು ಕೀಳಿಸುವನು. ಶಿವದ್ರೋಹವಾದುದಕ್ಕೆ ಮನನೊಂದು ಇನ್ನು ಕಲ್ಯಾಣದಲ್ಲಿರಲಾಗದೆಂದು ಬಸವಣ್ಣನವರು ಜಗದೇವನನ್ನು ಕರೆಸಿ 'ತದ್ರೋಹಿಯನಪಹರಿಸಿ ನನ್ನಿಯಂ ಮೆರೆಯಬೇಕು' ಎಂದು ಬೆಸನಿತ್ತು ಸಂಗಮಕ್ಕೆ ಹೋದರು. ಜಗದೇವನು ಸಹಾಯಕರಾದ ಮಲ್ಲಿ ಹಾಗೂ ಬೊಮ್ಮಿಗಳೊಡನೆ ಬಿಜ್ಜಳನ ವಧೆಗೈದನು. ಬಸವಣ್ಣನವರು ಇನ್ನೂ ಕಪ್ಪಡಿಯ ಮಾರ್ಗದಲ್ಲಿರುವಾಗಲೇ ಈ ವಾರ್ತೆ ಅವರಿಗೆ ಮುಟ್ಟುವುದು. ಕ್ಷಿಪ್ರದಲ್ಲಿಯೇ ಅವರು ಸಂಗಮನಾಥನಲ್ಲಿ ಐಕ್ಯವಾಗುವರು.

ಬಸವಚರಿತ ನಿಷ್ಕರ್ಷ

ಬಸವಣ್ಣನವರ ಚರಿತೆಯನ್ನು ಹಂಪೆಯ ಹರಿಹರನು (ಸುಮಾರು ಕ್ರಿ. ಶ. ೧೨೦೦) ಒಂದು ತೆರನಾಗಿ ಹೇಳಿದರೆ, ತದನಂತರದ ಪಾಲ್ಕುರಿಕೆಯ ಸೋಮಾರಾಧ್ಯ (ಕ್ರಿ. ಶ. ೧೨೦೦), ಆತನ ತೆಲುಗು ಬಸವಪುರಾಣವನ್ನೇ ಕನ್ನಡಿಸಿದ ಭೀಮಕವಿ, ಚಂಪೂರೂಪದಲ್ಲಿ ಬಸವರಾಜವಿಜಯವನ್ನು ಬರೆದ ಷಡಕ್ಷರಿ, ಸಂಸ್ಕೃತದಲ್ಲಿ ಬಸವಪುರಾಣವನ್ನು ರಚಿಸಿದ ಕಂಚಿಯ ಶಂಕರಾರಾಧ್ಯ ಇವರೆಲ್ಲರೂ

---

೬೧ ಭೀಮ. ಬ.ಪು. ಸಂ. ೫೭, ಪ. ೨೦–೨೫.

೬೨ ಭೀಮ. ಬ.ಪು. ಸಂ. ೬೦, ಪ. ೫೦–೬೦.

CC-0. Jangamwadi Math Collection. Digitized by eGangotri

ಇನ್ನೊಂದು ರೀತಿಯಿಂದ ಹೇಳುತ್ತಾರೆ. ಇವರೆಲ್ಲರ ನಡುವೆ ಸಿಂಗಿರಾಜನು – ಅಂತೆಯೇ ಶಿವತತ್ವಚಿಂತಾಮಣಿಯನ್ನು ಬರೆದ ಲಕ್ಕಣ್ಣದಂಡೇಶ – ಬಸವಣ್ಣನವರ ಚರಿತೆಯನ್ನು ಮೂರನೆಯದಾದ ಒಂದು ವಿಶಿಷ್ಟ ಮಾರ್ಗವನ್ನನುಸರಿಸಿ ಹೇಳುತ್ತಾನೆ. ಹರಿಹರನ ಬಸವರಾಜದೇವರ ರಗಳೆಯಲ್ಲಿ ಬಸವಣ್ಣನವರ ಭಕ್ತಿ ವಲ್ಲರಿ ವಿಕಸನಗೊಂಡು ಕಾವ್ಯದುದ್ದಕ್ಕೂ ಚೆಲ್ಲವರಿದಿದೆ. ಭಕ್ತಿಯ ಆವೇಶದಲ್ಲಿ, ಕಾವ್ಯದ ತಾದಾತ್ಮ್ಯಸ್ಥಿತಿಯಲ್ಲಿ ಹರಿಹರನು ಬಸವಣ್ಣನವರ ವ್ಯಕ್ತಿತ್ವವನ್ನು ಕಂಡರಿಸುತ್ತಿದ್ದರೂ ಆತನ ದೃಷ್ಟಿಯಲ್ಲಿ ಬಸವಚರಿತೆಗೆ ವಿಶೇಷ ಮಹತ್ವವಿದೆ ಯೆಂದು ತೋರುತ್ತದೆ. ಅಂತೆಯೇ ಆತನ ರಗಳೆಯಲ್ಲಿ ಬಸವಣ್ಣನವರ ಜೀವನ ಚರಿತೆಗೆ ಸಂಬಂಧಪಟ್ಟ ಅನೇಕ ಅಂಶಗಳು ವಾಸ್ತವವೇನೋ ಎನ್ನುವಂತೆ ನಿರೂಪಿತವಾಗಿವೆ. ಮೇಲೆ ನಿರ್ದೇಶಿಸಿದ ಎರಡನೆಯ ಗುಂಪಿನ ಕವಿಗಳಲ್ಲಿ ಬಸವಣ್ಣನವರ ಅತಿಮಾನುಷ ವ್ಯಕ್ತಿತ್ವಕ್ಕೆ ವಿಶೇಷ ಪ್ರಾಶಸ್ತ್ಯವಿದೆ. ಬಸವಣ್ಣನೊಬ್ಬ ಅವತಾರ ಪುರುಷನೆಂಬ ಭಾವನೆಯನ್ನು ಪ್ರಕಟಿಸುವುದೇ ಆ ಕವಿಗಳ ಮುಖ್ಯ ಉದ್ದೇಶ. ಬಸವಚರಿತೆ ಪುರಾಣವಾಗಬೇಕೆಂಬ ಉತ್ಕಟೇಚ್ಛೆ ಆ ಕವಿಗಳಲ್ಲಿದೆ. ಪುರಾಣಕ್ಕೆ ಅತ್ಯಾವಶ್ಯಕವಾದ ಪವಾಡಗಳನ್ನೂ ಮತ್ತಿನ ಕಥೆಗಳನ್ನೂ ಜೋಡಿಸಲೇಬೇಕಲ್ಲವೇ? ಇಂತಹ ಉದ್ದೇಶವನ್ನು ಇಟ್ಟುಕೊಂಡುದರಿಂದ ಎರಡನೆಯ ಗುಂಪಿನವರ ಕಾವ್ಯಗಳಲ್ಲಿ ಬಸವಣ್ಣನವರ ಪವಾಡಗಳಿಗೂ ಅವರ ಸಮಕಾಲೀನ ಶಿವಶರಣರ ಕಥೆಗಳಿಗೂ ವಿಶೇಷ ಪ್ರಾಶಸ್ತ್ಯ ದೊರೆಯಿತು. ಕಥಾನಾಯಕನ ಜೀವನಚರಿತೆ, ವ್ಯಕ್ತಿತ್ವವಿಕಸನಗಳ ಮೇಲೆಯೇ ಅವರ ದೃಷ್ಟಿ ಕೇಂದ್ರೀಕೃತವಾಗಲಿಲ್ಲ. ಬಸವಣ್ಣನವರ ಚರಿತೆ ಬರುವುದು ಮುಖ್ಯವಾಗಿ ಈ ಕಾವ್ಯಗಳ ಆದ್ಯಂತಗಳಲ್ಲಿ ಮಾತ್ರ. ಮಿಕ್ಕಿನ ಬಹುಭಾಗದಲ್ಲಿ ಬಸವಣ್ಣನವರ ಚರಿತೆಗೆ ಗೌಣಸ್ಥಾನ. ಬಂದನಿತು ಭಾಗ ಇತಿಹಾಸದೃಷ್ಟಿಯಿಂದ ಹರಿಹರನಿಗಿಂತಲೂ ಹೆಚ್ಚು ವಿಶ್ವಸನೀಯವಾಗಿರುವ ಸಂಭವವಿದೆ. ಏಕೆಂದರೆ ಕಲ್ಯಾಣದ ಕ್ರಾಂತಿಯ ನಂತರ ಅನೇಕ ಶರಣರು ಶ್ರೀಶೈಲಕ್ಕೆ ಹೋಗಿರುವರು. ಪಾಲ್ಕುರಿಕೆ ಶ್ರೀಶೈಲಕ್ಕೆ ಸಮೀಪದಲ್ಲಿರುವುದರಿಂದ ಶರಣರ ವಿಷಯ ಸೋಮನಾಥನಿಗೆ ನೇರವಾಗಿ ತಿಳಿದುಬರಲು ಸಾಧ್ಯವಿದೆ. ಹರಿಹರನಿದ್ದ ಹಂಪೆಯು ಕಲ್ಯಾಣ ಶ್ರೀಶೈಲಗಳಿಂದ ದೂರದಲ್ಲಿದೆ. ಭಿನ್ನರಾಜ್ಯದಲ್ಲಿದ್ದುದರಿಂದ ಅಲ್ಲಿಗೆ ಶರಣರ ಚರಿತೆ ನೇರವಾಗಿ ಹರಿದುಬಂದಿರುವ ಸಂಭವ ಕಡಿಮೆಯೆಂದು ತೋರುತ್ತದೆ.

ಸಿಂಗಿರಾಜಪುರಾಣವು ಈ ದೃಷ್ಟಿಯಲ್ಲಿ ಮಧ್ಯಮಮಾರ್ಗಾವಲಂಬಿಯಾಗಿದೆ. ಪರಸಮಯದಾಚಾರ್ಯರಹುದೆನ್ನುವಂತೆ ಓಳ ಪವಾಡಗಳನ್ನು ಮೆರೆದು ಮೇದಿನಿಯನ್ನು ಬೆರಗುಗೊಳಿಸಿದ ಪವಾಡಪುರುಷ ಬಸವಣ್ಣನ ಅಮಲಚಾರಿತ್ರ್ಯವನ್ನು ನಿರೂಪಿಸುವುದು ಸಿಂಗಿರಾಜನ ಕಾವ್ಯೋದ್ದೇಶವಾಗಿದೆ. ಆಂತೆಯೇ ಆತನು ತನ್ನ

CC-0. Jangamwadi Math Collection. Digitized by eGangotri

ಕಾವ್ಯವನ್ನು "ಅಮಲಬಸವಚಾರಿತ್ರ"ವೆಂದು ಕರೆದಿದ್ದಾನೆ.[೬೩] ಈ ಕಾವ್ಯದಲ್ಲಿ ಬಸವಣ್ಣನವರ ಪವಾಡಗಳಿಗೂ ಚರಿತ್ರೆಗೂ ಆಷ್ಟೇ ಮಹತ್ವದ ಸ್ಥಾನವಿರುವುದರಿಂದ ಬಸವಚರಿತ್ರನಿರೂಪಣಸಾಹಿತ್ಯದಲ್ಲಿ ಇದಕ್ಕೊಂದು ವಿಶಿಷ್ಟ ಸ್ಥಾನವಿದೆ. ಬಸವಣ್ಣನವರ ಅತಿಮಾನುಷವ್ಯಕ್ತಿತ್ವಕ್ಕೂ ಈ ಕಾವ್ಯದಲ್ಲಿ ಎಡೆಯುಂಟೆಂಬುದನ್ನು ನಾವು ಮರೆಯಲಾಗದು. ಸಿಂಗಿರಾಜಪುರಾಣದನ್ವಯ ಬಸವಕಥಾರ್ಣವವನ್ನು ಮಥಿಸಲುದ್ಯೋಗಿಸಿದವನು ನಂದಿರುದ್ರನು. ಬಸವಣ್ಣನವರು ಮರ್ತ್ಯದ ಮಣಿಹವನ್ನು ಪೂರೈಸಿ ಸುಜ್ಞಾನರಥದಲ್ಲಿ ಕೈಲಾಸಕ್ಕೆ ಬರಲು, ಸುಜ್ಞಾನದ ಉಜ್ವಲಪ್ರಭೆ ಶಿವನ ಆಸ್ಥಾನವನ್ನೆಲ್ಲ ಪಸರಿಸುವುದು. ದೇವಾನುದೇವತೆಗಳೆಲ್ಲ ಇಂತಪ್ಪ ಶುದ್ಧಿ ಬಸವಂಗೆಂತೆಂದು ಆಶ್ಚರ್ಯಚಕಿತರಾಗಲು ನಂದಿ ಮಹಾಕಾಳನಿಗೆ ಬಸವಣ್ಣನು ತನ್ನ ಹೃದಯವನ್ನೇ ತೆರೆದು ಅಲ್ಲಿ ಮನೆಮಾಡಿಕೊಂಡಿದ್ದ ಬ್ರಹ್ಮಾಂಡವನ್ನೂ ವೇದಾಗಮಶಾಸ್ತ್ರಗಳನ್ನೂ ಶರಣರ ಚರಿತ್ರೆಗಳನ್ನೂ ತೋರಿಸುವನು. ಆ ದಿವ್ಯದರ್ಶನದಲ್ಲಿಯೇ ನಂದಿರುದ್ರನಿಗೆ ಬಸವಚರಿತೆಯ ದರುಶನವಾಗುವುದು. ನಂದಿಯ ಬಸವಪುರಾಣಪದ್ಧತಿಗೆ ಇಂತು ಆದಿಯಾಗುವುದು. ಈ ಬೆಳಕಿನಲ್ಲಿ ಬಂದ ಸಿಂಗಿರಾಜಪುರಾಣದ ಕಥೆ ಬೇರೊಂದು ತೆರನಾಗಿರುವುದು ಸಹಜವೆ.

ಬಸವಣ್ಣನವರ ಚರಿತ್ರೆಯನ್ನು ನಿರೂಪಿಸುವ ಎಲ್ಲ ಸಾಹಿತ್ಯಗ್ರಂಥಗಳಲ್ಲಿ ವಚನವಾಙ್ಮಯವು ಹೆಚ್ಚು ಪ್ರಮಾಣಬದ್ಧವಾದುದು. ಏಕೆಂದರೆ ಅದು ಬಸವಣ್ಣನವರ ಸಮಕಾಲೀನವಾದುದು; ಸಮಕಾಲೀನ ಘಟನೆಗಳನ್ನು ಸತ್ಯದೃಷ್ಟಿಯಿಂದ ನಿರೂಪಿಸತಕ್ಕುದು. ಹರಿಹರಾದಿ ಕವಿಗಳಿಗೆ ವಚನವಾಙ್ಮಯದ ಪ್ರತ್ಯಕ್ಷ ಪರಿಚಯವಿದ್ದುದು ನಿಜ. ಅನೇಕ ವಚನಗಳು ಅವರ ಕೈಯಲ್ಲಿ ಕಾವ್ಯರೂಪ ತಾಳುವುದನ್ನು ನೋಡುತ್ತೇವೆ. ಆದರೆ, ಸಿಂಗಿರಾಜಪುರಾಣದಲ್ಲಿ ವಚನಗಳನ್ನು ಇದ್ದಕ್ಕಿದ್ದಂತೆಯೇ ಬೇರೆ ಬೇರೆ ಸನ್ನಿವೇಶಗಳಲ್ಲಿ ಉದ್ಧರಿಸುವ ವಿಶಿಷ್ಟ ರೀತಿಯೊಂದು ಕಂಡುಬರುತ್ತದೆ. ಇದರಿಂದ ಸಿಂಗಿರಾಜಪುರಾಣಕ್ಕೆ ಐತಿಹಾಸಿಕ ಬೆಲೆ ಅಧಿಕತರವಾಗಿದೆಯೆಂದು ಊಹಿಸಲವಕಾಶವಿದೆ.

ಬಸವಣ್ಣನವರ ಜನನವೃತ್ತಾಂತವು ಬಸವಪುರಾಣ, ಬಸವರಾಜದೇವರ ರಗಳೆ, ಸಿಂಗಿರಾಜಪುರಾಣಗಳಲ್ಲಿ ತೀರ ಭಿನ್ನವಾಗಿದೆ. ಹರಿಹರನ ಬಸವರಾಜ

---

೬೩. ಕರ್ನಾಟಕ ಕವಿಚರಿತ್ರೆಯಲ್ಲಿ ಈ ಕಾವ್ಯದ ಹೆಸರು 'ಮಲಬಸವಚಾರಿತ್ರ'ವೆಂದು ಬಿದ್ದಿದೆ.

—ಕರ್ನಾಟಕ ಕವಿಚರಿತೆ ಭಾಗ ೨, ಪುಟ ೧೪೮.

CC-0. Jangamwadi Math Collection. Digitized by eGangotri

ಶಾಪವಿಮೋಚನೆಗಾಗಿ ಭೂಲೋಕಕ್ಕೆ ಬಂದವನು.[೬೪] ಆತನು ಶಿವಭಕ್ತಿಯಂ ಉದ್ಧಾರಕ್ಕಾಗಿ ಭೂಲೋಕಕ್ಕವತರಿಸಿದನೆಂದು ಬಸವಪುರಾಣದ ಅಭಿಮತ. ಸಿಂಗಿರಾಜನ ಬಸವಣ್ಣನು ತಾನು ಲಿಂಗಧಾರಿಯಾಗಿ ಆತ್ಮಕಲ್ಯಾಣವನ್ನು ಸಾಧಿಸಿಕೊಂಡು ಲಿಂಗತತ್ವವನ್ನು ಲೋಕಕ್ಕೆ ಬೋಧಿಸಿ ಲೋಕಕಲ್ಯಾಣವನ್ನೆಸಗಲು ಬಂದಾತನು.[೬೫] ಆತನಲ್ಲಿ ಮಾನವತೆ, ಕಾರಣಿಕತೆ ಎರಡೂ ಉಂಟು. ಬಸವಣ್ಣನವರ ಜನ್ಮ ವೃತ್ತಾಂತ ಸಿಂಗಿರಾಜಪುರಾಣದಲ್ಲಿ ಹೀಗೆ ಉಕ್ತವಾಗಿದೆ:

ಕರ್ನಾಟಕದಲ್ಲಿ "ಎರಡೈನೂಱು ವರ್ಷದ ಮಹಾಗ್ರಾರ[೬೬]ವುಂಟು. ಅದರ ಹೆಸರು ಇಂಗಳೇಶ್ವರ ಬಾಗೆವಾಡಿ.[೬೭] ಆ ಮಹಾಗ್ರಾರದ ಅಗ್ರಭೂಸುರಶ್ರೇಷ್ಠ ಮಂಡಿಗೆಯ ಮಾದಿಮರಸನು.[೬೮] ಆತನು ಸಾಂಖ್ಯಾಯನ ಗೋತ್ರದವನು, ಸತ್ಕುಲಪ್ರಸೂತನು. ಆತನ ರಾಣಿ ಮಾದಲಾಂಬಿಕೆ.[೬೯] ಮಾದಾಂಬಿಕೆಯು ವೃಷಭ ನೋಂಪಿಯನ್ನು ಕೈಕೊಂಡು ಬಾಗೆವಾಡಿಯ ಮೂಲಸ್ಥ ಲಿಂಗಭವನಕ್ಕೆ ಬರುವಳು. ವೃಷಭನನ್ನು ಪೂಜಿಸಿ ಅಲ್ಲಿ ಸ್ಕಾಂದೋಕ್ತ ಕಥೆಯೊಂದನ್ನು ಕೇಳಿ ಪುತ್ರಾಕಾಂಕ್ಷೆಯುಳ್ಳವಳಾಗುವಳು. ಅವ್ಯಕ್ತನಾಗಿ ಅಲ್ಲಿಯೇ ಚರಿಸುತ್ತಿರ್ದ ವೃಷಭನು ಮಾದ

---

೬೪ ಆರವರಿಸದೀ ಸಭೆಯೊಳೆನ್ನಯ ಸಮಕ್ಷದೊಳು
ಹುಸಿನುಡಿವರೇ ಕುಡದೆ ಎನ್ನಯ ಕುಮಾರಂಗೆ
ಎಸೆವ ನಿಜಭಕ್ತಿಭೂಷಣನೆನಿಪ ವೀರಂಗೆ
ಎಮಗೆ ಕುಡದಿರ್ದಡಂ ಸೈರಿಸುವೆವಾವಯ್ಯ
ಎಮಳ ಶಿಶುವಿಂಗೆ ಹುಸಿ ನುಡಿಯೆ ಸೈರಿಸೆವಯ್ಯ
ಇದಱಿಂದಮೊಂದು ಜನನಂ ನಿನಗೆ ದೊರಕಿತ್ತು
ಮುದದಿಂದ ಹೋಗಯ್ಯ ಜನನವಂ ನೀ ಹೊತ್ತು
ಧರಣಿಯೊಳು ವೃಷಭಮುಖಿ ಹುಟ್ಟೆಂದು ಬೆಸಸುತಿರೆ
– ಬಸವರಾಜದೇವರ ರಗಳೆ ಸ್ಥಲ ೧, ಪ್ರ. ೩–೪, ಸಾಲು ೫೭–೬೩.

೬೫ ಸಿಂಗಿರಾಜಪುರಾಣ, ಸಂಧಿ ೫, ಪದ್ಯ ೫

೬೬ ಸಿಂಗಿರಾಜಪುರಾಣ, ಸಂಧಿ ೫, ಪದ್ಯ ೯.

೬೭ ಸಿಂಗಿರಾಜಪುರಾಣ ಸಂಧಿ ೫, ಪದ್ಯ ೯.
ಇಂಗುಳೇಶ್ವರ ಬಾಗವಾಡಿ (ಭೀಮಕವಿ ಬಸವಪುರಾಣ ಸಂ. ೨, ಪ. ೪೫).

೬೮ ಕಮ್ಮಕುಲದ ಅಗ್ಗೇಶ್ವರ ಮಾದಿರಾಜ (ಹರಿಹರನ ಬ.ರಾ.ದೇ.ರ. ಸ್ಥಲ. ೧; ಪ್ರ. ೫, ಸಾಲು ೯೮–೯೯.)
ಮಂಡಗೆಯ ಮಾದಿರಾಜ (ಭೀಮಕವಿ ಬಸವಪುರಾಣ ಸಂ. ೨, ಪ. ೪೬).

೬೯ ಮಾದಾಂಬೆ ಮಂಡಿಗೆ ಮಾದಿರಾಜ (ಹರಿಹರನ ಬಸವರಾಜ ದೇವರ ರಗಳೆ ಸ್ಥಲ ೧, ಪ್ರ. ೫.) ಮಾದಾಂಬಿಕೆ (ಭೀಮಕವಿ ಬಸವಪುರಾಣ ಸಂ. ೨, ಪ. ೪೬.)

CC-0. Jangamwadi Math Collection. Digitized by eGangotri

ಲಾಂಬಿಕೆಯ ಗರ್ಭವನ್ನು ಪ್ರವೇಶಮಾಡುವನು. ಶುಭಮಾಸದ(ಆಶ್ವೀಜಮಾಸ?) ಶುದ್ಧ ಚತುರ್ದಶಿಯ ಹಿಮಕರವಾರ ಹಿಮಕರಾರ್ದಸ್ಥ ಶಿವಯೋಗದ ಶುಭ ಮುಹೂರ್ತದಲ್ಲಿ ಬಸವಣ್ಣನವರ ಜನನವಾಗುವುದು.[೨೦] ಹುಟ್ಟಿದ ಶಿಶು ಕಣ್ ಬಾಯ್ದೆಗೆಯದೆ, ಅಳದೆ ಮೌನದಿಂದಿರುವುದು.[೨೧] ಕೃಷ್ಣವೇಣೀಸಂಗಮದಿಂದ ಆ ಪುರಕ್ಕೆ ಜಾತವೇದಿ[೨೨]ಗಳೆಂಬ ತಾಪಸಾಚಾರ್ಯರು ಆಗಮಿಸಿದ್ದರು. ಆ ತಪಸ್ವಿಗಳು ಮಗುವಿಗೆ ಭಸ್ಮಧಾರಣ ಮಾಡಲು ಆ ಮಹಾತ್ಮಕನು ಕಣ್ಣೆರೆದು ತನ್ನ ಕರ್ಮನಿರ್ಮೂಲನ ಮಾಡಿಕೊಂಡನು. ನಿಜಗುರುವ ಕಂಡನು. ಸಿಂಗಿರಾಜನ ಅಭಿಮತದಂತೆ ಜಾತವೇದಿಗಳೊಬ್ಬ ಮಹಾಯೋಗಿಗಳು. ಮಗುವನ್ನು ತೋರ ಲವರೋನ್ನಮಶ್ಶಿವಾಯೆನುತ ಶ್ರೀಮದಣಿಮಾದಿಗಳ ಸಿದ್ಧಿ ತ್ರಿಪುಂಡ್ರವನ್ನಿಡು ವರು. ಜಡೆ, ರುದ್ರಾಕ್ಷಿ, ಭಸಿತ, ಯೋಗವಟ್ಟೆ, ಅಕ್ಷಮಾಲೆಗಳನ್ನು ಹೇಳಿದ ಕವಿ ಆತನಿಗೆ ಇಷ್ಟಲಿಂಗವಿದ್ದುದನ್ನು ಸೂಚಿಸಿದಂತಿಲ್ಲ. ಆದರೆ, ಭೀಮಕವಿಯು ಬಸವ ಪುರಾಣದಲ್ಲಿ ಇದರ ಉಲ್ಲಿಖಿತವಾದಂತಿದೆ.[೨೩] ಆವರು ಮಗುವಿಗೆ ಇಷ್ಟಲಿಂಗ ಧಾರಣಮಾಡುವರು.

"ಇಷ್ಟಾಕೃತಾರ್ಥ ಬಂದೊಲಿದಿತ್ತೆವಾಗಿ ತ
ನ್ನಿಷ್ಟಲಿಂಗಮದಕ್ಕು ಈ ಲಿಂಗಮಂ ಸಿಂಹ
ವಿಷ್ಟರದೊಳಿಟ್ಟರ್ಚಿಸಫ್ಯರ್ಘಪಾದ್ಯಾಚಮನ ಜಲಕ್ರಮವಲ್ಲದುದನು

---

೨೦ ಹರಿಹರಭೀಮಕವಿಗಳು ಬಸವಣ್ಣನವರ ಜನನಮುಹೂರ್ತದ ವಿಷಯವಾಗಿ ಮೌನ ತಳೆದಿರುವರು. ವೈಶಾಖಶುದ್ಧ ಅಕ್ಷಯ್ಯತೃತೀಯ ರೋಹಿಣೀ ನಕ್ಷತ್ರದಲ್ಲಿ ಬಸವಣ್ಣನವರು ಜನಿಸಿರುವರೆಂದು ಈಗ ರೂಢಿಯ ನಂಬಿಕೆ.

೨೧ ಸಿಂಗಿರಾಜಪುರಾಣ, ಸಂ. ೫; ಪದ್ಯ ೫೩.

೨೨ ಕಪ್ಪಡಿಸಂಗಮದಿಂದ ಸಂಗಮೇಶನ ಪೆಸರ ಗುರುಗಳು ಬಸವಣ್ಣನವರ ಜನನ ಕಾಲದಲ್ಲಿ ಐತಂದು ಆತನಿಗೆ ಉಪದೇಶ ಮಾಡಿದರೆಂದು ಬಸವಪುರಾಣದಲ್ಲಿ ಹೇಳಿದೆ. ಕಣ್ಬೆರೆ ಯದ ವಿಷಯದ ಪ್ರಸ್ತಾಪ ಆಲ್ಲಿಲ್ಲ. ಲಿಂಗವನ್ನು ತೋರಿದೊಡನೆ ಕಣ್ಬೆರೆದು ಸುಖಿಯಾದನೆಂದು ಹರಿಹರನ ಹೇಳಿಕೆ.

೨೩. ಜಡೆಮುಡಿಯನಳವಡಿಸಿ ತೋಱುವ
ಮೃಡನ ಸೆಜ್ಜೆ ಸಿತಾಂಬರದ ಚೆಲು
ವುಡಿಗೆ ಹೊದೆದಿಹ ರತ್ನಗಂಬಳಿ ತಾಮ್ರಕುಂಡಲವು
ತೊಡಿಗೆ ರುದ್ರಾಕ್ಷಿಗಳ ಬೆಳುಗೊಡೆ
ಹಿಡಿದ ದಂಡಂ ಭಸಿತ ಲೇಪನ
ದೊಡಲ ನಡು ನೊಸಲೊಳು ತ್ರಿಪುಂಡ್ರದ ರೇಖೆಗಳು ಮೆಱೆಯೆ
– ಬ.ಪು. ಸಂ. ೨, ಪ. ೨೬

CC-0. Jangamwadi Math Collection. Digitized by eGangotri

ಮುಟ್ಟಿಸದಿರೇನುವನನರ್ಪಿತವನೇನೊಂದು
ಕೊಟ್ಟು ಕೆಡಿಸದಿರೆನುತ್ತಾಜ್ಞಾಪಿಸುಪದೇಶಗೊಟ್ಟು.[೭೪]"

ಹೋದರು. ಬಸವಪುರಾಣದಲ್ಲಿಯೂ ಸಂಗಮೇಶನು ಶಿವಾರ್ಪಿತವನಲ್ಲದೆ ಇನಿತನರ್ಪಿತವ ಮಾಡದಿರದುವೆ ಆಣೆ ಕಣಾ ನಿಮಗೆಂದು ತಂದೆ ತಾಯ್ಗಳಿಗೆ ಹೇಳಿ ಅದೃಶ್ಯನಾಗುವನು. ಬಸವಣ್ಣನವರ ನಾಮಕರಣ ಮಹೋತ್ಸವವು ಒಳ್ಳೇ ಸಂಭ್ರಮದಿಂದ ನೆರವೇರುವುದು. ರುದ್ರಸಂಖ್ಯೆಯ ಮಾಸದೊಳಗೆ ಅಂದರೆ, ಹನ್ನೊಂದನೆಯ ತಿಂಗಳು ಮಗುವಿಗೆ ಚೌಲಕರ್ಮವನ್ನೆಸಗುವರು.[೭೫] ಹರಿಹರ ಭೀಮಕವಿಗಳು ಈ ವಿಷಯವನ್ನು ಪ್ರಸ್ತಾಪಿಸುವುದಿಲ್ಲ. ಮಗುವಿನ ಬಾಲಲೀಲೆಗಳನ್ನು ಕಂಡು ತಂದೆತಾಯ್ಗಳು ಸಂತೋಷಬಟ್ಟುದನ್ನು ಭೀಮಕವಿ, ಸಿಂಗಿರಾಜರು ವಿಶದವಾಗಿ ವರ್ಣಿಸಿದರೆ ಬಾಲಬಸವನು ತಂದೆ ತಾಯ್ಗಳನ್ನು ಎಳವೆಯಲ್ಲಿಯೇ ಕಳೆದುಕೊಂಡು ಮುತ್ತಬ್ಬೆ[೭೬]ಯ ಪಕ್ಕದಲ್ಲಿ ಬೆಳೆದು ನಾಲ್ಕೈರಡು ವರ್ಷಗಳನ್ನು ಸಂತಸದಿಂದ ಕಳೆದನೆಂದು ಹರಿಹರನು ಹೇಳುತ್ತಾನೆ.

ಮಗುವಿಗೆ ಗರ್ಭಾಷ್ಟಕಕ್ಕೆ ಮಾತಾಪಿತೃಗಳು ಉಪನಯನ ಮಾಡಲುದ್ಯುಕ್ತರಾಗುವರು. ಬಾಲದೊಡಿಗೆಯ ತೊಡಿಸುವಂತೆ ಇದು ಒಂದು ಉತ್ಸಾಹಲೀಲೆಯೆಂದಿದ್ದೆನು, ಬೇರೊಂದಾಗಮದ ಕಡೆಯ ಮೂಲೆವೊಗಿಸುವೊಡೆ ಎಮಗನ ನ್ವಿತಂ, ಪೂರ್ವಾಚಾರ್ಯರೆಮಗಾಚಾರ್ಯರು, ಮುಂಜಿಗಿಂಜಿಗಳ ಗೀಳೇಕೆನುತ ಅವನು ಹಱಿಯಲನುಗ್ಗೈವನು. ತಂದೆತಾಯ್ಗಳೂ ದ್ವಿಜರೂ ಹೋ ಹೋ ದ್ವಿಜಕರ್ಮಕ್ಕೆದು ಆದಿ, ಇದನತಿಗಳೆವುದೆಂತು? ಧರ್ಮಕರ್ಮಕ್ಕುಭಯ ಕುಲ ಪ್ರಸೂತತ್ವಕ್ಕೆ ಬ್ರಹ್ಮಯೋಗದ ಬಳಕೆಗೆ ನೀನು ಅರ್ಹನಾಗಬೇಕಿದ್ದರೆ ಇದನ್ನು ಪಡೆಯಲೇಬೇಕು ಎಂದು ವಾದಿಸುವರು. ಶಿವಪದಾರ್ಚಕರಿಗೆ ಕರ್ಮದುಪದೇಶವೇ? ಎಂದು ಪ್ರತ್ಯುತ್ತರವನೀವನು. ಅವರ ಯಾವ ವಾದವೂ ಈತನ ಮುಂದೆ ನಿಲ್ಲದಾಯಿತು. ಆಗ ತಂದೆತಾಯಿಗಳು ಬಸವಣ್ಣನವರ ವಾದಕ್ಕೆ ಒಪ್ಪುವರು. ಆದರೂ ಯಜ್ಞೋಪವೀತವನ್ನು ಹರಿಯಬೇಡ, ತಾನಾಗಿಯೇ ಹರಿದು ಬಿದ್ದರದು ಬೀಳಲಿ ಎಂದು ಹೇಳುವರು. ಆದಕ್ಕೆ ಬಸವಣ್ಣನು ಒಪ್ಪುವನು.

ಹರಿಹರದೇವನ ಅಭಿಮತದಂತೆ ಬಸವಣ್ಣನವರಿಗೆ ಹದಿನಾರು ವರ್ಷಗಳು ಕಳೆದು ಯೌವನ ಪ್ರಾಪ್ತವಾಗುತ್ತದೆ. ಜವ್ವನಂ ಶಿವಪೂಜೆಯಲ್ಲಿ ಸವೆಯಲೀಯುಂ ಶಿವಭಕ್ತಿಯುಂ ಕರ್ಮಮುಂ ಎಂದುಮೊಂದಾಗಿರದು ಎಂದೊಲ್ಲದೆ

---

೭೪ ಸಿಂ.ಪ್ರ. ಸಂ. ೫, ಪ. ೬೧. ೭೫ ಸಿಂ.ಪ್ರ. ಸಂ. ೫, ಪ. ೭೭.

೭೬ ಬಸವರಾಜದೇವರ ರಗಳೆ ಸ್ಥಲ ೨.

CC-0. Jangamwadi Math Collection. Digitized by eGangotri

ಕರ್ಮಲತೆಯಂತಿರ್ದ ಜನ್ನಿವಾರಮಂ ಕಳೆದು ಬಿಸುಟು ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪಱಿದು ಬಿಸುಟು ಮನೆ ನೆಳಲಂ ಲೆಕ್ಕಿಸದೆ. ಅರ್ಥಮಂ ಲೆಕ್ಕಿಸದೆ ವೃತ್ತಿಯಂ ವಿಚಾರಿಸದೆ ಬಂಧುಗಳಂ ಬಗೆಯದೆ ಪುರಜನಮಂ ಪರಿಕಿಸದೆ ಬಾಗೆವಾಡಿಯಂ ಪೊಱಮಟ್ಟಂ.[೨೨]

ಆದರೆ ಭೀಮಕವಿಯ ಬಸವಪುರಾಣದನ್ವಯ ಬಸವಣ್ಣನವರು ಮೌಂಜಿಯ ವಿಧಾನವನ್ನೇ ಧಿಕ್ಕರಿಸುವರು. ಅಂದಮೇಲೆ ಯಜ್ಞೋಪವೀತವನ್ನು ಧರಿಸುವ ಇಲ್ಲವೆ ಹರಿವ ಪ್ರಸಂಗವೇ ಅಲ್ಲಿ ಬರುವುದಿಲ್ಲ.

ಮೌಂಜಿಯ ಪ್ರಸಂಗ ಮುಗಿದಮೇಲೆ ಬಸವಣ್ಣನವರ ಜೀವನದಲ್ಲಿ ನಡೆದ ಮುಖ್ಯ ಘಟನೆಯೆಂದರೆ ಗೃಹತ್ಯಾಗ. ಜನಿವಾರವನ್ನು ಹರಿದು ಬಿಸುಟು ಪುರಜನ ಪರಿಜನರನ್ನು ಲೆಕ್ಕಿಸದೆ ಬಸವಣ್ಣನವರು ತಮ್ಮ ಅಭಿಮತಕ್ಕೆ ಒಪ್ಪದ ತಂದೆತಾಯಿಗಳನ್ನು ಬಿಟ್ಟು ಈಶಭಕ್ತರೆ ಎನ್ನ ತಂದೆತಾಯಿಗಳು, ವೀರಮಾಹೇಶ್ವರರೆ ಎನಗೆ ಗತಿ, ಇಷ್ಟಲಿಂಗವೇ ಇನ್ನು ಶರಣು ಎಂದು ಮನೆಯಿಂದ ಹೊರವಂಟು ಪೂರ್ವಾಭಿಮುಖವಾಗಿ ಕೂಡಲಸಂಗಮದತ್ತ ಬಂದರೆಂದು ಪರಿಹರನ ನಿರೂಪಣೆ.

ಭೀಮಕವಿಯ ಬಸವಪುರಾಣದನ್ವಯ ಬಸವಣ್ಣನವರು ಮೌಂಜಿಬಂಧನ ಕ್ಕೊಪ್ಪದೆ ಮನೆಬಿಟ್ಟು ಹೋಗುವುದು ಕಪ್ಪಡಿಸಂಗಮಕ್ಕಲ್ಲ, ಬಾಗವಾಡಿಯಲ್ಲಿಯೆ ಇರುವ ಮಹಮನೆಯ ಮನೆಗೆ.[೨೪] ಆತನು ಅಲ್ಲಿಯೇ ಮಹಮನೆಯ ಭಕ್ತರ ಮಧ್ಯದಲ್ಲಿ ಕೆಲದಿನ ವಿದ್ದು ವಿವಾಹದ ನಂತರ ನಿಜವನಿತೆ ಗಂಗಾದೇವಿ, ಅಗ್ರಜೆ ನಾಗಲದೇವಿಯರೊಡನೆ ಕಪ್ಪಡಿಸಂಗಮಕ್ಕೆ ತೆರಳುವನು.

ಸಿಂಗಿರಾಜನ ಕಥಾಸರಣಿಯೇ ಬೇರೆ ತೆರನಾಗಿದೆ. "ಜನಿವಾರವು ತಾನೆ ಬೀತು ಹರಿದಂದು ಹರಿಯಲೆಂಬ ತಂದೆತಾಯ್ಗಳ ಮಾತಿಗೊಪ್ಪಿ ಬಾಲಕ ಬಸವನು ಮನೆಯಲ್ಲಿಯೇ ಇರುವನು. ಓದುವವರೊಡನೆ ಅನವರತ ವ್ಯಾಜಿಸುಸುತ್ತಿರುವನು.[೨೫] ಒಡನಾಡಿಗಳಲ್ಲಿ ವರ್ಮ ಬಲಿಯುವುದು. ಕೆಲದಿನದ ಮೇಲೆ ಬಸವಣ್ಣ ಹಾಗೂ ಆತನ ಒಡನಾಡಿಗಳೆಲ್ಲ ಭಾಗೀರಥಿಯೆಂಬ ದೇವತಾಕೂಪದಲ್ಲಿ ಜಲಕ್ರೀಡೆಯಾಡುತ್ತಿದ್ದರು; ಒಬ್ಬರೊಬ್ಬರ ಮೇಲೆ ಜಿಗಿಯುತ್ತಿದ್ದರು. ಆಗ ಒಬ್ಬ ಹಿರಿಯ ಪಾರ್ವನ ಸುತನು ಮಡಿವನು. ಓರಗೆಯವರೆಲ್ಲ ಬಸವಣ್ಣನೇ ಕೊಂದನೆಂದು ದೂರಿದರು. ಊರ ವಿಪ್ರರೆಲ್ಲಾ ಹಿಡಿ, ಬಡಿಯೆಂದು ಹೂಲಿಯೆಬ್ಬಿಸಿ

---

೨೨ ಬ.ದೇ. ರ. ಸ್ಥಲ ೨, ಪುಟ ೧೧. ೨೪ ಬ.ಪ್ರೆ. ಸಂ. ಪಿ. ಪ. ೮೪.

೨೫ ಸಿಂ. ಪು. ಸಂ. ಶಿ. ಪ. ೯೧.

CC-0. Jangamwadi Math Collection. Digitized by eGangotri

ವರು. ಬಸವಣ್ಣನು ಮನೆಗೆಯ್ತಂದು, ತನ್ನಯ ಲಿಂಗಮಂ ಕೊಂಡು, ತಂದೆ ತಾಯ್ಗಳಿಗೆ ಬೆಬ್ಬಳಿಗೊಳುತುಸುರ್ದು, ಬೇರೊಂದು ಬಾಗಿಲಗಳಿದು, ಕಪ್ಪಡಿಯ ಸಂಗಮದ ದೆಸೆಗೆ ಸೈವರಿದನು."[೪೦] ಪುರಜನರು ಬೆನ್ನಟ್ಟುವರು. ಕೃಷ್ಣವೇಣಿ ಮೈದೆರೆದು ಎಡೆಗುಡುವಳು. ಬಸವಣ್ಣನು ಕಪ್ಪಡಿಯ ಸಂಗಮಕ್ಕೈತಂದು ತನ್ನಾರಾಧ್ಯರಾದ ಜಾತವೇದಮುನಿಗಳನ್ನು ಮರೆಹೊಗುವನು. ಬೆನ್ನಟ್ಟಿ ಬಂದ ಪುರಜನರೂ ಅಲ್ಲಿಗೈತರುವರು. ಬಸವಣ್ಣನ ಮೇಲೆ ಆರೋಪ ಹೊರಿಸುವರು. ಲಿಂಗವೇ ಮಾತನಾಡಿ ಬಸವಣ್ಣನು ನಿರಪರಾಧಿಯೆಂದು ಸಾರುವುದು.

ಬಸವಣ್ಣನು ಲಿಂಗಪ್ರಸಾದಾನುಭವಸುಖದೊಳಿರುತ್ತಿರಲು ಆತನ ಮಹಿಮೆಗೇಳಿ ತಂದೆತಾಯ್ಗಳು ಅಲ್ಲಿಗೈತರುವರು. ಪಾತಕರ ಗೆಲಿದೆ; ಪ್ರಪಂಚಿ ನೀನಲ್ಲ; ಎಮ್ಮಾತನೆಂದಡೆ ಪಾಪ, ನೀ ದೈವ. ನಿನ್ನಿಂದ ಎಮ್ಮ ಕುಲಕೋಟಿಗಳು ಉದ್ಧಾರವಾದುವು. ಮನೆಗೆ ಬಿಜಯಂಗೈಯ್ಯಬೇಕೆಂದು ಸಾಷ್ಟಾಂಗಪ್ರಣತರಾದರು.

"ಒಡೆಯರು ಬಂದಡೆ ಗುಡಿ ತೋರಣವ ಕಟ್ಟಿ; ನಂಟರು ಬಂದಡೆ ಸಮಯವಿಲ್ಲವೆನ್ನಿ. ಆಂದೇಕೆ ಬಾರರು? ನೀರಿಗೆ ನೇಣಿಗೆ ಹೊಱಿಗಾದಂದು! ಸಮಯಾಚಾರಕ್ಕೊಳಗಾದಂದು!! ಪರುಷಮುಟ್ಟಿದ ಕಬ್ಬಿಣ ಹೊನ್ನಾಯಿತ್ತು. ಬಳಿಕ ಬಂಧುಗಳುಂಟೆ?"

"ಆ ಮಾತೇತಕೆ? ಇನ್ನು ನೋಡಿ ಸುಖಿಮಿಹುದು; ಪರಮಾರ್ಥ ಕಾಮ್ಯಾರ್ಥಕಾಗದು. ದುರ್ನೀತಿಯ ಗ್ರಹಣಕೆ ನಾನು ಬಾರೆನು; ಬಂದಡೆ ನಿಮಗೆ ಸುಖವಿಲ್ಲ." ಎಂದು ಉತ್ತರಿಸುವನು. ಆಗ ತಂದೆತಾಯಿಗಳು ಸಂಸಾರ ಭ್ರಾಂತಿಯಳಿಯದೆ ಮಗಳು ನಾಗಾಯಿ, ಅಳಿಯ ಶಿವದೇವ[೪೧] ಇವರನ್ನು ಬಸವಣ್ಣನ ಸೇವೆಗೆಂದಿಟ್ಟು ತಕ್ಕುದಂ ಕೊಟ್ಟು ಬರುವರು.

ಬಸವಣ್ಣನು ಕಪ್ಪಡಿಸಂಗಮಕ್ಕೆ ಐತಂದ ಸನ್ನಿವೇಶನಿರೂಪಣೆಯಲ್ಲಿ ಮೂರೂ ಗುಂಪಿನ ಕವಿಗಳಲ್ಲಿ ತೋರುವ ವ್ಯತ್ಯಾಸವನ್ನು ಗಮನಿಸಿದುದಾಯಿತು. ಆದರೆ, ಸಂಗಮೇಶನ ಸನ್ನಿಧಾನದಲ್ಲಿ ಬಸವಣ್ಣನವರ ಭಕ್ತಿಕುಸುಮವರಳಿ ಅವರ ವ್ಯಕ್ತಿತ್ವದ ಮಹಾಮಂದಿರಕ್ಕೆ ಸುವರ್ಣಕಲಶವನ್ನಿಟ್ಟಿತೆಂದು ಹೇಳುವಲ್ಲಿ ಎಲ್ಲರೂ ಒಂದೇ ಅಭಿಪ್ರಾಯದವರಾಗಿದ್ದಾರೆ.

---

೪೦ ಸಿಂ.ಪ್ರ. ಸಂ. ೫ ಪ. ೯೪.

೪೧ ಅಕ್ಕನಾಗಾಯಿಯ ಪತಿ ಶಿವದೇವನೆಂಬ ಸಿಂಗಿರಾಜನ ಅಭಿಪ್ರಾಯ ಗಮನಾರ್ಹ.

CC-0. Jangamwadi Math Collection. Digitized by eGangotri

ಮುಂದಿನ ಮಹತ್ವದ ಘಟನೆಯೆಂದರೆ ಕಲ್ಯಾಣಗಮನ. ಇದರ ನಿರೂಪಣೆ ಹರಿಹರನ ರಗಳೆಯಲ್ಲಿ ಇಂತಿದೆ:

ಬಸವಣ್ಣನನ್ನು ಮಹೀತಳದಲ್ಲಿ ಮೆರೆಯಲೆಂದು ಕಪ್ಪಡಿ ಸಂಗಮನಾಥನು ಆತನ ಕನಸಿನಲ್ಲಿ ಬಂದು "ಎಲೆ ಮಗನೆ ಬಸವ, ಬಸವಣ್ಣ, ಬಸವಿದೇವ, ನಿನ್ನಂ ಮಹೀತಳದೊಳು ಮೆರೆದಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು"[೮೨] ಎಂದು ಆಪ್ಪಣೆಕೊಡಿಸುವನು. ಆತನ ಸನ್ನಿಧಾನವನ್ನು ಬಿಟ್ಟು ಅಗಲಲಾರದ ಬಸವಣ್ಣನು "ದೇವದೇವಾ, ಸಂಗಾ, ಕಾಳ್ಕಿಚ್ಚಿನಿಂ ಬೇವಂಗೆ ತಂಪಿನ ಸೋನೆಯ ಮಳೆಯಾಗುತ್ತೆ ಮಾಣ್ಬರೇ? ನಡುಗಡಲೊಳಾಳ್ವಂಗೆ ತೆಪ್ಪವಾಗುತ್ತೆ ಪಿಂಗುವರೆ? ಬೆಳ್ದಿಂಗಳೇಕೆ, ಬಿಸಿಲೇಕೆ? ಅಮೃತವೇಕೆ, ವಿಷವೇಕೆ? ಬೆಳಗೇಕೆ, ತಮವೇಕೆ? ನೀನೇಕೆ, ಈ ನುಡಿಯೇಕೆ? ಹೊದ್ದಿದರಂ ಹೋಗೆಂಬರೆ? ಸಾರ್ದರಂ ಸೈರಿಸೆಂಬರೆ? ನಂಬಿದವರ ಗೋಣಂ ಕೊಯ್ವರೆ? ಶಿಶುವನಿಜಿವರೆ? ಪಶುವಂ ಕೊಲುವರೆ? ಎನ್ನಂ ಬಿಡುವರೆ? ಕರುಣೆ! ಕರುಣೆ!! ಕರುಣಂ ಲೇಸಾಯ್ತು!!! ಇನ್ನೇನು, ಇನ್ನೇನು?"[೮೩] ಎಂದು ಪಲುಂಬಿ ಗೋಳಿಡುವನು. ಸಂಗಮನಾಥನು "ನಡೆಯಯ್ಯ, ನಡೆ ಮಗನೆ, ನಡೆ ಕಂದ ಬಸವಣ್ಣ, ಪೊಡವಿಗಧಿಪತಿಯಾಗಿ ಬಾಳೆನ್ನ ಬಸವಣ್ಣ, ನಿಂದಲ್ಲಿ ನಿಂದಪೆಂ, ನಡೆದಲ್ಲಿ ನಡೆದಪೆಂ, ಕರೆದಡೋಯೆಂದಪೆಂ" ಎಂದು ಅಭಯವನ್ನಿತ್ತು ಕಳಿಸುವನು. ತತ್ಪೂರ್ವದಲ್ಲಿ ಧ್ಯಾನಾರೂಢನಾಗಿದ್ದ ಬಸವಣ್ಣನ ಕರಕಮಲಕ್ಕೆ ನಂದೀಶ್ವರನ ಹೃತ್ಕಮಲದಲ್ಲಿ ಬೆಳೆದ ಲಿಂಗ ಸನ್ನಿಹಿತವಾಗುವುದು. ಮಿಕ್ಕವರು ಹೇಳದ ಇದೊಂದು ವಿಶೇಷ ಸಂಗತಿಯನ್ನು ಹರಿಹರನು ನಿರೂಪಿಸುತ್ತಾನೆ. ಇಂತು ಸಂಗಮನಾಥನ ಪರಮಪ್ರಸಾದವನ್ನು ಪಡೆದು ಬಸವಣ್ಣನು ಮಂಗಳವಾಡಕ್ಕೆ ಪ್ರತರುವನು.

ಭೀಮಕವಿಯು ಬಸವಣ್ಣನವರ ಕಲ್ಯಾಣಗಮನದ ಕಾರಣವನ್ನು ಹೀಗೆ ಹೇಳುವನು: ಉಪನಯನಕ್ಕೆಂದು ಬಾಗವಾಡಿಗೆ ಬಂದ ಬಸವಣ್ಣನ ಸೋದರ ಮಾವ ಬಲದೇವನು ಆತನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ ಕಲ್ಯಾಣಕ್ಕೆ ಪ್ರತರುವನು. ಇತ್ತ, "ಬಸವಂಗೆ ತನಯಳನಿತ್ತೊಡೆವೊಲಿದು ಪ್ರಮಥರು ಅತಿ ಮುದವೆತ್ತು ಕರೆಸಲು ಪೋಪವೊಲು ಬಲದೇವನು ಶಿವಲೋಕಕೆಯ್ದಿದನು."[೮೪]

---

೮೨ ಮಂಗಳವಾಡ ಕಲ್ಯಾಣ ಎರಡೂ ಬೇರೆ ಬೇರೆಯಾದುವೇ, ಒಂದೆಯೇ ಎಂಬುದೂ ಒಂದು ಸಮಸ್ಯೆಯೆ.

೮೩ ಬ. ದೇ. ರ. ಸ್ಥಲ ೨, ಪ್ರ. ೨೧.

೮೪ ಬ. ಪ್ರ. ಸಂ. ೫, ಪ. ೩೦ಇಂದ ೧

CC-0. Jangamwadi Math Collection. Digitized by eGangotri

ಬಳಿಕಲಾ ಬಲದೇವಮಂತ್ರಿಯ
ಬಳಗಮಂ ಬಂಧುಗಳನಾಪ್ತರು
ಗಳನಿಳಾಧೀಶನು ಕರಸಿ ತಾನವರಿಗಿಂತೆಂದ
ನಲಿವ ಹಿತವರು ಸೋದರರು ಮ
ಕ್ಕಳುಗಳಾರಾಯ್ತಾದೊಡೀತನ
ಬಲು ನಿಯೋಗವನೆಲ್ಲಪಂ ಪ್ರತಿಪಾಲಿಸುವರೊಳರೇ

ಎನೆ ಮಹಾರಾಜೇಂದ್ರ ಉಂಟಾ
ತನ ತನುಜೆಯ ಪ್ರಾಣನಾಥನು
ವಿನಯವಾಕ್ಯಂ ನಿಮ್ಮ ರಾಜ್ಯವನುದ್ಧರಿಸಲಾರ್ಪ
ಅನಘನತಿಬಳ ಪಾವನ
ವನಧಿಯಾತನದೆಂತೆನಲು ಭೂ
ವಿನುತ ಸಂಗಮದೇವನಿಂ ಪಡೆದನು ಪ್ರಸನ್ನತೆಯಾ[೪೫]

ಬಲದೇವನ ಸ್ಥಾನಕ್ಕೆ ಆತನ ಬಂಧುಬಳಗದವರಲ್ಲಿ ಆರಾದರೂ ಉಂಟೇ? ಎಂದು ಬಿಜ್ಜಳನು ವಿಚಾರಿಸುವಲ್ಲಿ ಮಂತ್ರಿಪದವೂ ಆಗ ವಂಶಪಾರಂಪರ್ಯವಾಗಿ ನಡೆದುಬರುತ್ತಿದ್ದಿತೆಂಬುದು ವಿದಿತವಾಗುತ್ತದೆ. ಜನರೆಲ್ಲಾ 'ಬಸವಣ್ಣನೇ ನಿಮ್ಮ ರಾಜ್ಯವನ್ನು ಉದ್ಧರಿಸಲಾರ್ಪ, ಆತನೇ ನಿನಗೆ ಮಂತ್ರಿತನಕ್ಕೆ ತಕ್ಕವ' ಎಂದು ಹೇಳುವುದನ್ನು ಬಿಜ್ಜಳನು ಲಾಲಿಸುವಲ್ಲಿ ಮಂತ್ರಿಗಳನ್ನು ಆಯ್ದುಕೊಳ್ಳುವ ಸಂದರ್ಭ ಬಂದಾಗ ವಂಶಪಾರಂಪರ್ಯಕ್ಕೆ ಮಹತ್ವವನ್ನು ಕೊಟ್ಟಂತೆ ಜನಾಭಿಪ್ರಾಯದ ಕಡೆಗೂ ಗಮನವನ್ನೀಯಲಾಗುತ್ತಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಜನರ ಮಾತನ್ನು ಕೇಳಿ ಬಿಜ್ಜಳನು,

ಘನದ ಭದ್ರೇಭವನಮಾತ್ಯರ
ನನಿಬರಂ ಬೆಸನಿತ್ತು ಬಸವನ
ನನುನಯದೊಳೊಡಗೊಂಡು[೪೬]

ಬರಲೆಂದು ಅಟ್ಟುವನು. ಅಮಾತ್ಯರು ಬಂದು ಬಸವಣ್ಣನವರಲ್ಲಿ ಅರಸನ ಬಿನ್ನಹವನ್ನು ಮುಂದಿಟ್ಟು ಹೀಗೆ ಪ್ರಾರ್ಥಿಸುವರು :

---

೪೫ ಬಸವಪುರಾಣ ಸಂಧಿ ೫, ಪ. ೪–೫.
೪೬ ಬಸವಪುರಾಣ ಸಂಧಿ ೫, ಪ. ೬.

CC-0. Jangamwadi Math Collection. Digitized by eGangotri

ಧಾರುಣಿಗೆ ಸಚಿವಾಗ್ರಪಟ್ಟಕೆ
ಪಾರ ಭಂಡಾರಕ್ಕೆ ಬಹು ಪರಿ
ವಾರಕಾಪ್ತಜನಕ್ಕೆ ವಿಶ್ವಾಸಕ್ಕೆ ಬಿಜ್ಜಳನ
ಭೂರಿಸಾಮ್ರಾಜ್ಯಕ್ಕೆ ಸಕಳದ
ಭಾರಮಂ ತಾಳಲ್ಕೆ ಮತ್ತೆ ವಿ
ಚಾರಿಸಲು ನೀವಲ್ಲದಾತಂಗಾವನಿರ್ದಪನು.[೮೭]

ಬಸವಣ್ಣನವರೇ ಸಚಿವಾಗ್ರಪಟ್ಟಕ್ಕೆ ಅರ್ಹರೆಂದು ಮಂತ್ರಿಗಳ ಅಭಿಮತ. ಇಂತಹ ಮಂತ್ರಿವರೇಣ್ಯರಿರುವಲ್ಲಿ ಅರಸನ ಸ್ಥಾನಮಾನಗಳೇನು?

ಅರಸನೊಕ್ಕೈಯೋಗರಕೆ ತಾ
ನರುಹನುಳಿದಂತೀ ಧರಿತ್ರಿಗೆ
ನಿರುತವಧಿಪತಿ ನೀವೆಯಲ್ಲಾ ಬಸವಮಂತ್ರೀಶಾ
ಪುರಕೆ ಬಿಜಯಂಗೈದು ಸಲೆ ಉ
ದ್ಧರಿಸಿಯೆಂಬರ ಬಿನ್ನಪವನವ
ಧರಿಸಿ ಭಕ್ತಹಿತಾರ್ಥಮಂ ನೆನೆದಲ್ಲಿಗೊಡಬಟ್ಟಾ[೮೮]

"ಅರಸನು ಒಂದು ಹಿಡಿ ಅನ್ನಕ್ಕೆ ಮಾತ್ರ ಯೋಗ್ಯನು. ಮಿಕ್ಕುದಕ್ಕೆಲ್ಲ ಸರ್ವಾಧಿಕಾರಿ ಬಸವಣ್ಣನೇ" ಎಂದು ಮಂತ್ರಿಗಳು ನುಡಿಪರು. ಬಸವಣ್ಣನು ಕಲ್ಯಾಣಕ್ಕೆ ಹೋಗಲು ಒಪ್ಪಿದುದು ಈ ಅಧಿಕಾರಲಾಲಸೆಯಿಂದಲ್ಲ, ಅಧಿಕಾರಕ್ಕಿಂತಲೂ ಆತನು ಭಕ್ತಹಿತಾರ್ಥವನ್ನೇ ನೆನೆದು ಕಲ್ಯಾಣಕ್ಕೆ ಕೃತಂದನು.

ಇನ್ನು ಸಿಂಗಿರಾಜನ ಕಡೆಗೆ ಹೊರಟರೆ ಆತನ ನಿರೂಪಣೆಯೇ ಬೇರೆ ತೆರನಾಗಿದೆ.[೮೭] ಭಾದ್ರಪದ ಬಹುಳ ಷಷ್ಠಿ ಮಂಗಳವಾರ. ಅಂದು ಶಿವದರ್ಶನಾಗ ಮಾರ್ಚನಕಾರಣಾರ್ಥಕ್ಕೆ ವಿವಿಧ ಜನಜಾತ್ರೆ ಸಂಗಮೇಶ್ವರದಲ್ಲಿ ನೆರೆಯಿತು. ವಿಪ್ರಸಂದೋಹ ನೀಲೋತ್ಪಲಗಳನ್ನು ತಂದು, ಪುನೀತ ಘೃತದೊಳಗೆ ಅದ್ದಿ, ತಿಲದೊಳ್ ಪೊರಳ್ಚಿ, ಭೂತನಾಥಂಗೆ ಇಂಡೆಗಟ್ಟಿ ಸಂಗಮೇಶ್ವರನಿಗೆ ಮಹಾ ಪೂಜೆಯನ್ನು ನೆರವೇರಿಸಿದ್ದರು. ಬಸವಣ್ಣನು ಎಂದಿನಂತೆ ಬಂದು ಆ ಮಹಾ ಪೂಜೆಯನ್ನು ಪರಿಹರಿಸಿ ತಾನು ತಂದ ವನಕುಸುಮಗಳಿಂದ ಸಂಗಮೇಶ್ವರನನ್ನು

---

೮೭ ಬಸವಪುರಾಣ ಸಂಧಿ ೫ ಪ. ೯.

೮೮ ಬ.ಪು. ಸಂ. ೫, ಪ. ೧೦.

೮೯ ಸಿಂ. ಪು. ಸಂ. ೬, ಪ. ೧೧ರಿಂದ.

CC-0. Jangamwadi Math Collection. Digitized by eGangotri

ಆರ್ಚಿಸುತ್ತಿದ್ದನು. ವಿಪ್ರರು ಕೋಪಾವಿಷ್ಟರಾಗಿ 'ಹಿಡಿ, ಹೊಡೆ, ಕೊಲ್ಲು' ಎಂದು ಆರ್ಭಟಿಸಿ ಬಸವಣ್ಣನವರನ್ನು ಜಡಿದು ಝಂಕಿಸಿದರು. ಆಗ ಸಂಗಮೇಶ್ವರಲಿಂಗ ದಿಂದ ಬ್ರಹ್ಮನಾದವುಂಟಾಗಿ "ಎಲವೋ, ಬಸವನ ಪೂಜೆ ನಿರುತ, ನೀವು ಮಾಡಿದ ಪೂಜೆ ಹುಸಿ" ಎಂದು ಆಕಾಶವಾಣಿಯಾಗುವುದು. ಆಗ ವಿಪ್ರಸಂದೋಹವೆಲ್ಲ ಬೆಕ್ಕಸಬೆರಗಾಗಿ ಭಯಭಕ್ತಿಯಿಂದ ಬಸವಣ್ಣನವರಿಗೆ ಸಾಷ್ಟಾಂಗ ವಂದಿಸಿದರು. 'ಸಂಗನೇ ಬಸವ, ಬಸವನೇ ಸಂಗ'ನೆಂದು ಜಾತ್ರೆಗೆ ಬಂದ ಜನ ನೆರೆನಂಬಿತು. ಜಾತ್ರೆಯ ಪರುಷೆ ಹೋದ ಹೋದಲ್ಲೆಲ್ಲ ಈ ವಾರ್ತೆ ಪಸರಿಸಿತು.

ಬಿಜ್ಜಳನರೇಂದ್ರನಾಳ್ವ ಕಲ್ಯಾಣ; ಅಲ್ಲಿ ಪರುಷೆಪಟ್ಟಣ[೯೦]; ಆ ಪಟ್ಟಣದಲ್ಲಿ ಬಲದೇವ ದಂಡಾಧಿಪನ ಮನೆ. ಈ ಉಲ್ಲೇಖಗಳು ಬಸವಚರಿತ್ರೆಯ ಸಂಬಂಧ ದಲ್ಲಿ ಬಹು ಮಹತ್ವವಾದುವು. ಪರುಷೆಪಟ್ಟಣದಲ್ಲಿದ್ದ ಬಲದೇವನಿಗೆ ಸುದ್ದಿ ಮುಟ್ಟುವುದು.

ಬಲದೇವದಣ್ಣಾಯಕನು ಆತಂಗೆ ಅಲ್ಲಿಂದಲೇ ಕೈಮುಗಿವನು. 'ಅವರ ತಾಯಿ ನಮಗೆ ಮಾತಾಮಹರ ದೆಸೆಯ ವಳಿಯಿಂದ ತಂಗಿಯಹಳು. ಆ ಮಹಾತ್ಮ ಕನ ಶಿಶ್ರೂ ಕೆಲಸಕ್ಕೆ ಎನ್ನಾತ್ಮಜೆಯ ಕೊಡುವೆನು' ಎಂದು ಸಂಕಲ್ಪಿಸಿ, ಅದನ್ನು ಜಾತವೇದಯ್ಯಗಳಿಗೆರುಹಲು ಬಲದೇವನು ಓಲೆಮಾನಿಸರನ್ನು ಸಂಗಮಕ್ಕೆ ಕಳು ಹಿಸುವನು. ತಪಸ್ವಿಗಳು ಆ ಓಲೆಯನ್ನು ಓದಿನೋಡಿ ಪರಿಣಮಿಸಿ ಅದನ್ನು ಬಸವಣ್ಣಂಗೆ ಕೊಟ್ಟರು. ಬಸವಣ್ಣನು ಅದನ್ನೋದಿ "ಇದು ಎಂತಹುದು? ನಿಮ್ಮಯ ಪದವ ಬಿಡಿಸುವೊಡೆ ವಿಘ್ನವು ಇದು" ಎಂದು ಪ್ರಾರ್ಥಿಸುವನು. ಅದಕ್ಕೆ ಜಾತವೇದಮುನಿಗಳು "ಅಲ್ಲಲ್ಲ; ಕಾಮ್ಯಾರ್ಥಕಾರಣದ ಚಿಂತೆಯಿಂದ ಇದು ನಡೆದುದಲ್ಲ: ಸಂಗಮೇಶ್ವರನೇ ಅವರಂತರಂಗದೊಳಗಿರ್ದು ಇದನ್ನು ನಿರೂಪಿಸಿರುವನು. ಈ ನಿರೂಪಣೆಯನ್ನು ಉಲ್ಲಂಘಿಸಲಾಗದು. ಭ್ರಾಂತಿ ಬೇಡ, ಎಮ್ಮಾಣೆ. ಲಿಂಗ ಜಂಗಮದೊಳು ಆವು ಎಂತಿಹುದ ನೀ ಬಲ್ಲೆ. ದಾಸೋಹಕೆ ಇದು ಮುಂದಣ ಅಂತಸ್ಥಸೂಚಿತ"[೯೧] ಎಂದು ಆಜ್ಞಾಪಿಸುವರು. ಬಸವಣ್ಣನು ಹಸಾದವೆಂದು ನುಡಿದು "ಯದ್ಭಾವ ತದ್ಭವತಿ. ಉರಿ ಬರಲಿ ಸಿರಿ ಬರಲಿ, ಬೇಕು ಬೇಡೆನ್ನೆ. ನರರ ಬೇಡೆನು, ನಿಮ್ಮ ಪದದಾಣೆ" ಎಂದು ಪ್ರತಿಜ್ಞೆಮಾಡಿ[೯೨]

---

೯೦ ಕಲ್ಯಾಣದಲ್ಲಿ ಪರುಷೆಗಟ್ಟಿಯ ಸಂಬಂಧ ವೀರಶೈವರಿಗೂ, ಮಹಮ್ಮದೀಯರಿಗೂ ವ್ಯಾಜ್ಯ ನಡೆದುದು ಸರ್ವಶ್ರುತ. ಬಸವಣ್ಣನವರ ಮಹಾಮನೆಗೆ ಎಡೆಗೊಟ್ಟ ಪರುಷಗಟ್ಟಿಯ ಉಲ್ಲೇಖ ಇಲ್ಲಿ ಬಂದಿರುವುದನ್ನು ಗಮನಿಸಬೇಕು.

೯೧ ಸಿಂ.ಪ್ರ. ಸಂ. ೬, ಪ. ೨೭.

೯೨ ಸಿಂ.ಪ್ರ. ಸಂ. ೬, ಪ. ೨೮.

CC-0. Jangamwadi Math Collection. Digitized by eGangotri

ಕೂಡಲ ಸಂಗನ ಹಸಾದವನ್ನು ಪಡೆದು ಸದ್ಭಾವ ಸ್ವಸ್ಥಾನಕ್ಕೆಯ್ದುವಂತೆ ಕಲ್ಯಾಣಕ್ಕೆ ಹೊರಟನು.

ಕಲ್ಯಾಣದಲ್ಲಿ ಬಸವಣ್ಣನವರಿಗೂ ಬಿಜ್ಜಳನಿಗೂ ಸಂಬಂಧವೆಂತುಟಾಯಿತು, ಬಸವಣ್ಣನವರಿಗೆ ಮಂತ್ರಿಪದವಿ ಹೇಗೆ ಪ್ರಾಪ್ತವಾಯಿತು ಎಂಬಿವೇ ಪ್ರಸ್ತುತ ಸಮಸ್ಯೆಗಳು.

ಭೀಮಕವಿಯ ನಿರೂಪಣೆಯಂತೆ ಬಲದೇವಮಂತ್ರಿಯ ಮರಣದ ನಂತರ ಬಿಜ್ಜಳನು ಬಸವಣ್ಣನವರನ್ನು ಬಲದೇವನ ಸ್ಥಾನಕ್ಕಾಗಿ ಬರಮಾಡಿಕೊಂಡ ನೆಂಬುದನ್ನು ಹಿಂದೆ ವಿವರಿಸಲಾಗಿದೆ. ಬಸವಣ್ಣನವರು ಕಲ್ಯಾಣಕ್ಕೆ ಬಂದೊಡನೆ ಬಿಜ್ಜಳನು ಅವರನ್ನು ಅತ್ಯಂತ ಸಂಭ್ರಮದಿಂದ ಬರಮಾಡಿಕೊಳ್ಳುವನು. ಮೆರವಣಿಗೆ ಪರಿಯದ ಮುನ್ನವೇ ಶಿವಲಿಖಿತ ಓಲೆಯೊಂದು, ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಹೋಗುತ್ತಿರುವ ಬಿಜ್ಜಳನ ಎದುರಿಗೆ ಬರುವುದು. ಅರಸನು ಅದನ್ನು ಕೈಗೆತ್ತಿಕೊಂಡನು.

ತೆಲುಗಲಿಪಿ ನಾಗರದ ಲಿಪಿ ಗ್ರಂ
ಥಲಿಪಿ ಹಳೆಗನ್ನಡದ ಲಿಪಿ ದ್ರಾ
ವಿಳಲಿಪಿಯು ಪಾರಿಸಲಿಪಿಯು ಲಾಳಲಿಪಿ ಮೊದಲಾದ
ಹಲವು ಲಿಪಿಗಳನೋದಬಲ್ಲ
ಗ್ಗಳದ ಕರಣಿಕರಂ ಕರೆಸಿ ಬಿ
ಜ್ಜಳಮಹೀಪತಿಯಾಗ ತಾ ಹಿಡಿದಿರ್ದ ಲೇಖೆಯನು

ಅವರ ಕೈಯೊಳು ಕೊಟ್ಟು ಲೇಖಾ
ರ್ಥವನಟ್ಟಿದು ನೀವನಿಬರುಂ ಹೇ
ಳುವುದೆನಲು ಕೈಕೊಂಡು ತಾವಾವೋಲೆಯಂ ನೋಡಿ
ಶಿವಲಿಖಿತವದನೋದಲಱಿಯದೆ
ತವತವಗೆ ಬೆಬಿಗಾಗಿ ಪತ್ರವ
ನವನಿಪನ ಮುಂದಿರಿಸಿ ಬಿನ್ನೈಸಿದರು ಕರಣಿಕರು[೯೩]

ಹೀಗೆ ನಾನಾ ಲಿಪಿಗಳನ್ನೋದಬಲ್ಲವರು ತಮ್ಮ ತಮ್ಮ ಅಸಮರ್ಥತೆಯನ್ನು ವ್ಯಕ್ತಪಡಿಸಿ "ಗುಹಗಣಪರಜವನಮಾಲಿ ಮುಖ್ಯರು ಮಾತ್ರ ಓದಬಲ್ಲ ಓಲೆಯಿದು ಮಾನವರಿಗಸಾಧ್ಯ"[೯೪] ಎಂದು ಬಿನ್ನೈಸಲು

---

೯೩. ಬ.ಪ್ರ. ಸಂ. ೫, ಪ. ೫೩.
೯೪ ಬ.ಪ್ರ. ಸಂ. ೫. ಪ. ೫೪.

CC-0. Jangamwadi Math Collection. Digitized by eGangotri

ಕೇಳಿ ನೃಪನಾರಾದೊಡಿಂತೀ
ವೋಲೆಯಂ ತಿಳಿದರ್ಗೆ ಕೊಡುವೆಂ
ಶ್ರೀಲಸದಮಾತ್ಯಾದಿ ಸಕಲ ನಿಯೋಗದೊಡೆತನವ[೫೫]

ಎಂದು ಸಾರುವನು. 'ಓಲೆಯನ್ನು ಓದಿ ಅರ್ಥೈಸಿದವರಿಗೆ ಅಮಾತ್ಯಪದವಿ, ನಿಯೋಗದೊಡೆತನ' ಎಂದು ಅರಸನ ಘೋಷಣೆಯಾಗುವುದು.

ಎನಲೊಡನೆ ಬಸವಣ್ಣನಾ ಭೂ
ಪನ ಕರದೊಳಿರ್ದೋಲೆಯಂ ಕರ
ಮನುನಯದಿ ತಾನೀಸಿಕೊಂಡು ಅಭಿವಂದಿಸುತ

ಅದನ್ನೋದತೊಡಗಿದನು: "ಚಾಳೋಕ್ಯಾನ್ವಯದವರು ಮುನ್ನ ನಿಕ್ಷೇಪಿಸಿದ ಎಂಬತ್ತೆಂಟುಕೋಟಿ ಧನ, ಅರಸನೇ, ನಿನ್ನ ಸಿಂಹಾಸನದ ಕೆಳಗಿದೆ, ಅದನ್ನು ನಿನಗೆ ತೋರಿಸುವೆನು" ಎಂದು ನುಡಿದನು.[೫೬] ಅರಸನ ಅಭಿಮತದಂತೆ ಸಿಂಹಾಸನದ ಕೆಳಗೆ ಅಗಿದು ತೆಗೆಯಲು ದೇವಲಿಪಿಯಲ್ಲಿ ಬಂದ ಉಲ್ಲೇಖದ ನೂರ್ಮಡಿ ಧನ ಕಾಣಿಸಿಕೊಂಡಿತು. ಬಿಜ್ಜಳನು ಅದನ್ನು ಕಂಡು ಬೆಕ್ಕಸಂಬಟ್ಟು ಅಳ್ಳರಿಂದಿದಿರೆದ್ದು ಬಂದು ಬಸವವಿಭುವನ್ನು ತಕ್ಕೈಸಿ, ಮುಂಡಾಡಿ ಕೊಂಡಾಡಿ ಕೈಮುಗಿದನು:

ಈ ಪುರುಷನಲ್ಲಾ ಯುಗಾದಿ ಮ
ಹಾಪುರುಷರಿಗೆ ಮೊದಲ ಪುರುಷನು
ಈ ಪುರುಷನಲ್ಲಾ ತ್ರಿಪುರುಷ ಗುಣತ್ರಯದ ಪುರುಷ
ಈ ಪುರುಷನಲ್ಲಾ ತ್ರಿಭುವನ
ಸ್ಥಾಪನಾಚಾರ್ಯಕ್ಕೆ ಪುರುಷನು
ಈ ಪುರುಷನೈತಂದನಿಂದೆಮ್ಮಂ ಸಲಹಲೆಂದು[೫೭]

ಎನ್ನುತ್ತ–

ಧರಣಿಪತಿಯು ಸಕಳನಿಯೋಗಂ
ಪುರಜನಂಗಳು ಕೀರ್ತಿಸುತ್ತಂ
ಕರಮತಿಯಮೆನುತ್ತ ರಾಯಂ ಬಸವಮಂತ್ರಿಯನು

---

೫೫ ಬ.ಪ್ರ. ಸಂ. ೫, ಪ. ೫೫.
೫೬ ಬ.ಪ್ರ. ಸಂ. ೫, ಪ. ೫೭.
೫೭ ಬ.ಪ್ರ. ಸಂ. ೫, ಪ. ೬೨.

CC-0. Jangamwadi Math Collection. Digitized by eGangotri

ಕರೆದು ಮನ್ನಣೆವೆತ್ತ ಪನ್ನಿ
ಬ್ಬರು ಮಹಾಮಾತ್ಯರೊಳಗಗ್ರೇ
ಶ್ವರನೆನಲು ಮಿಗೆ ಪಿರಿಯ ಗದ್ದುಗೆಯಲ್ಲಿ"
ಕುಳ್ಳಿರಿಸಿದರು.[೯೪]

ಭೀಮಕವಿಯ ಅಭಿಮತವಿಷ್ಟು:

೧. ಬಲದೇವಮಂತ್ರಿಯು ಶಿವಲೋಕಕ್ಕೆ ತೆರಳಿದೊಡನೆಯೇ ಬಿಜ್ಜಳನ ಅಭಿಮತದಂತೆ ಬಸವಣ್ಣನು ಮಂತ್ರಿಪದವಿಗೇರಿದನು.

೨. ದೇವಲಿಪಿಯನ್ನೋದಿ ಬಿಜ್ಜಳನ ಘೋಷಣೆಯಂತೆ ಪನ್ನೆರಡು ಜನ ಮಹಾಮಂತ್ರಿಗಳೊಳಗೆ ಅಗ್ರೇಸರ (ದಣ್ಣಾಯಕ?)ನಾದನು.

ಸಿಂಗಿರಾಜನು ಭೀಮಕವಿಯ ಅಭಿಮತದ ಮೊದಲನೆಯ ಭಾಗವನ್ನು ಅಲ್ಲಗಳೆಯುತ್ತ –

ಬಲದೇವ ಮದುವೆಯಂ ಮಾಡಿ ಕೆಲವಾನ್ದಿನಂ
ಕಳಿದೊಡಾ ಪದವ ಬಸವಂಗಿತ್ತರೆಂಬ ಕೃತಿ
ವಳಕೆಯುಂಟಂತಲ್ಲವಿದು ಚೆನ್ನಬಸವೇಶನಮಲವಚನೋಚಿತೋಕ್ತಿ[೯೯]

ಎಂದು ಹೇಳಿರುವನು. ಹಾಗೂ ಆ ವಚನದ ಸಾರವನ್ನು –

"ಕಾರಣಿಕ ತಾ ಮುನ್ನ ಕರಣಂಗಳಾಶ್ರಯವ ಸಾರಿದನು."[೧೦೦] ಎಂದು ಉದ್ಧರಿಸುವನು. ಇಲ್ಲಿ ಕರಣಂಗಳೆಂದರೆ ಕರಣಿಕರೆಂದು ಅರ್ಥಮಾಡಿರುವರು. ಬಸವಣ್ಣನು ಕರಣಂಗಳಾಶ್ರಯ ಪಡೆದ ಕಥೆಯನ್ನು ಸಿಂಗಿರಾಜನು ಹೀಗೆ ವಿವರಿಸುವನು :

ಬಲದೇವಮಂತ್ರಿಯ ಬಿನ್ನಹದ ಮೇರೆಗೆ ಆತನ ಮಗಳನ್ನು ವಿವಾಹವಾಗ ಬೇಕೆಂಬ ಜಾತವೇದಮುನಿಗಳ ಅಪ್ಪಣೆಯನ್ನು ಶಿರಸಾವಹಿಸಿ ಬಸವಣ್ಣನು ಕಲ್ಯಾಣಕ್ಕೈತಂದನು. ಒಂದೆರಡು ಕಾಲ ತಮ್ಮಲ್ಲಿಯೇ ಬೀಡುಬಿಟ್ಟಿರಬೇಕೆಂಬ ಮಾವನ ವಾತ್ಸಲ್ಯದ ನುಡಿಗೆ ಒಪ್ಪಿ ಬಸವಣ್ಣನು ಅಂತೆಗೆಯ್ವನು.

---

೯೪ ಬ.ಪು. ಸಂ. ೬, ಪ. ೬೫.

೯೯ ಸಿಂ.ಪ್ರ. ಸಂ. ೬, ಪ. ೪೮.

೧೦೦ ಸಿಂ.ಪ್ರ. ಸಂ. ೬, ಪ. ೪೯.

CC-0. Jangamwadi Math Collection. Digitized by eGangotri

ಬಸವಣ್ಣನು ಪರಾರ್ಜಿತ (ಸ್ತ್ರೀ) ಧನದಿಂದ ಗುರು ಲಿಂಗ ಜಂಗಮ ಸೇವೆಯನ್ನೆಸಗುತ್ತಿರುವುದು ಸೊಡ್ಡಳ ಬಾಚರಸರಿಗೆ ಸರಿಬೀಳಲಿಲ್ಲ. ಕಾಯಕವೇ ಕೈಲಾಸವೆಂಬ ತತ್ವವನ್ನು ಅರುಹಿ ಬಸವಣ್ಣನವರನ್ನು ಬಿಜ್ಜಳನ ಕರಣಶಾಲೆಗೆ ಸೇರಿಸುವರು. ಹೀಗೆ ಸೇರಿಸುವಲ್ಲಿ ಬಾಚರಸರ ಅನುಭವದೃಷ್ಟಿಗೆ –

೧. ಬಸವಣ್ಣನವರಲ್ಲಿ ವಿವೇಕ ಬಲಿವುದು.

೨. ಅದರ ದೆಸೆಯಿಂದ ಅರಸನ ಮನ್ನಣೆ ದೊರೆವುದು.

೩. ಅಧಿಕ ಧನವನ್ನಾರ್ಜಿಸಿ ತನಗೆ ಬೇಕಾದ ಪರಿಯಲ್ಲಿ ದಾಸೋಹ ಮಾಡಲು ಅನುವಾಗುವುದು.

ಎಂಬೀ ಮೂರು ಮಹತ್ವದ ದರ್ಶನಗಳು ವೇದ್ಯವಾಗುವುವು. ಬಾಚರಸರ ಅಭಿಮತದಂತೆ ಬಸವಣ್ಣನು ಕರಣಿಕವೃತ್ತಿಯನ್ನು ಸ್ವೀಕರಿಸಿ ದಿನದಿನಕ್ಕೆ ಅಭಿವೃದ್ಧಿ ಹೊಂದತೊಡಗಿದನು. ಒಂದುದಿನ ಬಿಜ್ಜಳಮಹೀಪಾಲನು ಒಡ್ಡೋಲಗಗೊಟ್ಟಿರುವನು. ಆ ಒಡ್ಡೋಲಗದ ನಡುವೆ ಆಕಸ್ಮಿಕದ ಲಿಖಿತ ಅಂಬರದಿಂದ ಕೆಳಗಿಳಿದು ನೃಪನ ಸಿಂಹಾಸನದ ಮೇಲೆ ಬೀಳುವುದು.

ಅನೇಕ ಲಿಪಿಗಳನ್ನು ಬಲ್ಲವರು ಬಂದರೂ ಅವರಿಗೆ ಈ ದೇವಲಿಖಿತ ವನ್ನೋದಲಸಾಧ್ಯವಾಯಿತು. ಆಶರೀರವಾಣಿಯ ಆಜ್ಞೆಯ ಮೇರೆಗೆ ಬಸವಣ್ಣನು ಆ ಲಿಪಿಯನ್ನು ಓದುವನು. 'ವಸ್ತುವರುವತ್ತಾಱುಕೋಟಿ ನಿನ್ನ ಸಿಂಹಾಸನದಡಿಯಲ್ಲಿದೆ'ಯೆಂದು[೧೧೧] ಬಸವಣ್ಣನು ಅರ್ಥೈಸಿ ಹೇಳುವನು. ಬಿಜ್ಜಳನು ಆನಂದ ಪುಲಕಿತನಾಗಿ ಬಾಯೆಂದಪ್ಪಿ ಸಿಂಹಾಸನದ ಬಲಭಾಗದಲ್ಲಿ ಇಂಬುಗೊಟ್ಟು ಬಸವಣ್ಣನನ್ನು ಕುಳ್ಳಿರಿಸಿಕೊಂಡನು. 'ಲೇಸೈ ಬಸವರಾಜಾ, ನಿನ್ನನೀಸುದಿನ ನಾವು ಅರಿಯದಿದ್ದೆವು' ಎಂದು ನುಡಿದನು. ಬಸವಣ್ಣನು ಚಾಳೋಕ್ಯಚಕ್ರೇಶನಿಗೆ ಹೂಳಿರ್ದ ನಿಧಿಯನ್ನು ತೋರಿಸಿಕೊಟ್ಟನು. ಆಗ ಚಕ್ರವರ್ತಿಯು ಬಸವರಸನಿಗೆ ಸರ್ವ ವಸ್ತ್ರಾಭರಣಭೂಷಣಂಗೈಸಿ, ಭದ್ರಕಾಯನೆನಿಪ ಪಟ್ಟದಾನೆಯನೇಱಿಸಿ ತೂರ್ಯತ್ರಯಂಗಳೊಡನೆ ಮೆರವಣಿಗೆ ಮಾಡಿಸಿದನು.

ಕಲ್ಯಾಣಪುರದಲ್ಲೆಲ್ಲಾ ಬಸವಣ್ಣನನ್ನು ಮೆರೆಸುತ್ತ ಭೂಪ ಬಿಜ್ಜಳನು ತನ್ನ ಅರಮನೆಗೆ ಬಿಜಯಂಗೆಯ್ಸಿಕೊಂಡು ಆತನಿಗೆ ಪ್ರಧಾನಪಟ್ಟಗಟ್ಟಿದನು.

---

೧೧೧ ಸಿಂ.ಪು. ಸಂ. ೭, ಪ. ೪೭.

CC-0. Jangamwadi Math Collection. Digitized by eGangotri

ಶಿವಲಿಖಿತವನ್ನೋದಿ ಬಸವಣ್ಣನವರು ಬಿಜ್ಜಳನ ಪ್ರಧಾನಮಂತ್ರಿಯಾದ ರೆಂಬುದು ಭೀಮಕವಿ ಹಾಗೂ ಸಿಂಗಿರಾಜರ ಆಶಯ. ಇದಕ್ಕೆ ಚೆನ್ನಬಸವಣ್ಣನವರ ವಚನದ ಸ್ಪಷ್ಟವಾದ ಆಧಾರವೂ ಉಂಟು. ಅದು ಹೀಗೆ:

"ಹರನಟ್ಟಿದಾಗ್ರದ ಬೆಸನ ಗುರುನಿರೂಪವೆಂದು ಕೈಕೊಂಡು, ಕರುಣಿ ಬಸವಣ್ಣ ಕೈಲಾಸದಿಂದ ಗುರು ಲಿಂಗ ಜಂಗಮಕ್ಕೆ ಭಕ್ತಿಯ ಮಾಡ ಬೇಕೆಂದು, ಏಳುನೂಱಿಪ್ಪತ್ತು ಅಮರಗಣಂಗಳು ಸಹಿತ ಮರ್ತ್ಯಲೋಕ ಕ್ಕೈತಂದನಯ್ಯಾ. ಲೋಕಾದಿಲೋಕಂಗಳಿಗೆ ಪರಮ ಗುರುವಾದನಯ್ಯಾ ಬಸವಣ್ಣನು! ಜಡರುಗಳ ಮನದ ಕತ್ತಲೆಯ ಕಳೆಯಬೇಕೆಂದು ಕಟ್ಟಿತ್ತು ಕಲ್ಯಾಣದಲ್ಲಿ ಮಹಾಮಠವು![೧೦೨] ಪರಮನಟ್ಟಿದ ಓಲೆ ಬಂದಿಳಿಯಿತ್ತು ಬಿಜ್ಜಳನ ಸಿಂಹಾಸನದಲ್ಲಿ. ಅದ ತಂದು ಓದಿಸಿದರೆ ಸೃಷ್ಟಿಯ ಸೇನಬೋವ ರಿಗೆ ತಿಳಿಯದು. ಛಪ್ಪನ್ನ ದೇಶದ ಭಾಷೆಯ ಲಿಪಿ ಮುನ್ನವೆ ಅಲ್ಲ. ಇದ ನೋದಿದವರಿಗೆ ಆನೆ, ಸೇನೆ, ಕುದುರೆ, ಭಂಡಾರ, ಅಱುವತ್ತಾಱು ಕರಣಿ ಕರಿಗೆ ಮುಖ್ಯನ ಮಾಡುವೆನೆಂದು ಬಿಜ್ಜಳ ಭಾಷೆಯ ಕೊಡುತ್ತಿರಲು ಹರನಿರೂಪವ ಶಿರದ ಮೇಲಿಟ್ಟು ಶಿವ ಶರಣೆಂದು, ಬಸವಣ್ಣ ಮೆಟ್ಟಿ ನೋಡಿ ತೆಗೆಸಿದನಯ್ಯಾ ಅಱುವತ್ತಾಱುಕೋಟಿ ವಸ್ತುವ! ಆರಮನೆಗೆ ರಾಜ್ಯಕ್ಕೆ ಒಡೆಯನಾಗಿ, ಹರಗಣಂಗಳಿಗೆ ಗತಿ ಮತಿ ಚೈತನ್ಯನಾಗಿ, ಕೂಡಲ ಚೆನ್ನಸಂಗಯ್ಯನಲ್ಲಿ ಅಂಡಜದೊಳಗಿದ್ದು ಶಿವನ ಭಂಡಾರಿಯಾದನಯ್ಯಾ ಎನ್ನ ತಂದೆ ಪೂರ್ವಾಚಾರಿ ಸಂಗನಬಸವಣ್ಣನು!"[೧೦೩]

ಶಿವಲಿಖಿತದ ಪವಾಡವನ್ನು ಮೆರೆದು ಬಸವಣ್ಣನು ಬಿಜ್ಜಳನ ಅಮಾತ್ಯಾ ಗ್ರೇಶ್ವರನಾದುದು ಐತಿಹಾಸಿಕ ಸತ್ಯವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ, ಹರಿಹರನೊಬ್ಬನು ಮಾತ್ರ ಈ ಪ್ರಸ್ತಾಪವನ್ನೇ ಎತ್ತುವುದಿಲ್ಲ. ಕಲ್ಯಾಣಕ್ಕೈ ತಂದ ಬಸವಣ್ಣನು ಕರಣಿಕರ ಶಾಲೆಯ ಸನಿಹದಲ್ಲಿ ಕುಳಿತು ಗಣಕರ ಲೆಕ್ಕಾಚಾರ ವನ್ನು ನಿರೀಕ್ಷಿಸುತ್ತಿದ್ದನು. ಆಗ ಬಿಜ್ಜಳನ ಭಂಡಾರಿ ಕಮ್ಮೆಕುಲಪತಿಯೆನಿಪ, ಸಿದ್ಧದಂಡಾಧಿಪನು ಅಲ್ಲಿಗೆ ಬಂದು ಗಣಕರ ಲೆಕ್ಕವನ್ನು ಕೇಳುತ್ತಿದ್ದನು. ಗಣಕರು ಆಯದಲ್ಲಿ ಬೀಯವನ್ನು ಕಳೆದು ನಿಲವು (ಉಳಿತಾಯ) ಐದುಕೋಟಿ ಐವತ್ತು ಲಕ್ಷವೆಂದು ತಪ್ಪಿ ಹೇಳಿದರು. ತಪ್ಪಿದುದು ಸಿದ್ಧರಸರ ಲಕ್ಷ್ಯಕ್ಕೂ ಬರಲಿಲ್ಲ. ಆದರೆ,

---

೧೦೨ ಮಹಾಮನೆಯನ್ನು ಮಹಾಮನೆಯ ಮನೆ, ಮಹಾಮಠ ಎಂದು ಕರೆದಿರುವು ದನ್ನು ಗಮನಿಸಬೇಕು.

೧೦೩. ಶೂನ್ಯ (ಚೆನ್ನಬಸವೇಶ್ವರ) ಸಂಪಾದನೆ ಪುಟ ೧೬೮.

CC-0. Jangamwadi Math Collection. Digitized by eGangotri

ಬಸವರಾಜನು ಆರೆನಿಮಿಷದಲ್ಲಿಯೇ ಆ ತಪ್ಪನ್ನು ಅರಿತುಕೊಂಡನು. ಭಕ್ತನ ಒಡವೆ ಕೆಡಲಾಗದೆಂದು ಸಿದ್ಧದಂಡಾಧಿಪನಿಗೆ ಲೆಕ್ಕ ತಪ್ಪಿದೆಯೆಂದು ಹೇಳಿದನು. ಪರೀಕ್ಷಿಸಿ ನೋಡಲಾಗಿ ಐವತ್ತು ಲಕ್ಷ ಅಂತರ ಕಂಡು ಬಂದಿತು. ಸಿದ್ಧರಸನು ಬಸವಣ್ಣನ ಕುಶಾಗ್ರಮತಿಗೆ ಮೆಚ್ಚಿ ಆತನನ್ನು ಬಿಜ್ಜಳನಲ್ಲಿಗೆ ಕರೆದೊಯ್ದು, ಬಸವಣ್ಣನ ಬುದ್ಧಿಮತ್ತೆಯನ್ನು ಹೊಗಳಿ ಈತನು ಕೇವಲ ನಿರೀಕ್ಷಣ ಮಾತ್ರ ದಿಂದಲೇ ತಪ್ಪಿದ ಲೆಕ್ಕವನ್ನು ಕಂಡುಹಿಡಿದು ನಮಗೆ ತಿಳಿಸಿ ಭಂಡಾರಕ್ಕೆ ಐವತ್ತು ಲಕ್ಷದ ಉಳಿತಾಯವನ್ನು ಹೆಚ್ಚಿಸಿಕೊಟ್ಟನು. ಆದುದರಿಂದ ಇಂತಹ ಗಣಕವಿಖ್ಯಾತ ನನ್ನು ಭಂಡಾರದಲ್ಲಿರಿಸಿಕೊಳ್ಳುವುದು ವಿಹಿತವೆಂದುಸುರಿದನು. ಅದಕ್ಕೆ ಬಿಜ್ಜಳನೂ ಒಪ್ಪಿದನು. "ಉಡಕೊಡಿಸಿ ಜೀವಿತವನಾಗಳೆ ಮಾಡಿ ವರುಷವೊಂದಕ್ಕೆ ನೂರೊಂದು ಹೊನ್ನು" ಬಸವಣ್ಣಂಗೆ ಕೊಡಬೇಕೆಂದು ನಿರ್ಧರಿಸಿ ಭಂಡಾರದಲ್ಲಿ ಕರಣಿಕನೆಂದು ನಿಯಮಿಸಿಕೊಳ್ಳುವನು. ಭಂಡಾರಿ ಸಿದ್ಧರಸನು ಬಸವಣ್ಣನನ್ನು ತನ್ನ ಮನೆ ಯಲ್ಲಿಯೇ ಇರಿಸಿಕೊಳ್ಳುವನು. "ಕುಲವೊಂದೆ ಕುಲವಾಗೆ, ಗೋತ್ರವಂತನುವಾಗೆ, ನೆಲೆ ವಿಚಾರಿಸೆ ತನ್ನ ಸಂಬಂಧವೊಂದಾಗೆ" ಸಿದ್ಧದಂಡಾಧಿನಾಥನು ಹಿರಿಹಿರಿ ಹಿಗ್ಗಿದನು. ಬಸವಣ್ಣನೇ ತನಗೆ ಗತಿ ಮತಿಯೆಂದು ನೆರೆನಂಬಿದನು. ದಿನದಿನಕ್ಕೆ ಬಸವಣ್ಣ ಅಂತರಂಗದಲ್ಲಿಯೂ ವೃತ್ತಿಯಲ್ಲಿಯೂ ಅಭಿವೃದ್ಧಿಹೊಂದುತ್ತ ನಡೆ ದನು. ಕೆಲಕಾಲದನಂತರ ಸಿದ್ಧದಂಡಾಧಿನಾಥನು ಮರಣಹೊಂದಲು ಬಿಜ್ಜಳನು ಬಸವಣ್ಣನನ್ನೇ ಆತನ ಉತ್ತರಾಧಿಕಾರಿಯನ್ನಾಗಿ ತೆಗೆದುಕೊಂಡು ದಂಡನಾಥ ನನ್ನಾಗಿ ಮಾಡಿದನು.

ಹರಿಹರನ ನಿರೂಪಣೆ ವಾಸ್ತವವಾಗಿ ತೋರಿದರೆ, ಭೀಮಕವಿ ಸಿಂಗಿ ರಾಜರ ಹೇಳಿಕೆ ಐತಿಹಾಸಿಕ ಸತ್ಯವೆಂದು ಕಾಣುತ್ತದೆ.

ಬಸವಣ್ಣನವರ ವಿವಾಹದ ವಿಷಯವಾಗಿಯೂ ಈ ಮೂವರೂ ಕವಿ ಗಳಲ್ಲಿ ಐಕಮತ್ಯವಿಲ್ಲ. ಹರಿಹರನ ಅಭಿಮತದಂತೆ ಬಸವಣ್ಣನು ಹದಿನಾರರ ಹರೆಯದಲ್ಲಿ ಬಾಗೆವಾಡಿಯನ್ನು ಬಿಟ್ಟು ಕಪ್ಪಡಿಸಂಗಮಕ್ಕೆ ಬರುವನು. ಅಲ್ಲಿ ತನ್ನ ವ್ಯಕ್ತಿತ್ವ ವಿಕಸನವಾಗುವವರೆಗೆ ಕೆಲಕಾಲ ಉಳಿಯುವನು. ಆಮೇಲೆ ಕಲ್ಯಾಣಕ್ಕೆ ಬರುವನು. ಅಲ್ಲಿ ಕರಣಿಕವೃತ್ತಿಯನ್ನು ಆರಂಭಿಸಿ ಸ್ವಶಕ್ತಿಯ ಬಲದಿಂದ ದಂಡ ನಾಥ ಪದವಿಯ ವರೆಗೆ ಏರುವನು. ದಂಡನಾಥನಾದಮೇಲೆ ಆತನು ಕೆಲದಿನ ಕಳೆದನಂತರ ಸತ್ಕುಲ ಸಾದೃಶ್ಯ ಸುಶೀಲೆಯರಪ್ಪ ಗಂಗಾದೇವಿ, ಮಾಯಿದೇವಿ ಯರನ್ನು ಮದುವೆಯಾಗುವನು. ಇದರಿಂದ ಬಸವಣ್ಣನು ವಯಸ್ಸಿನಿಂದ ಪ್ರೌಢ ನಾಗಿ ವೃತ್ತಿಯಿಂದ ದಂಡನಾಥನಾಗಿ ಅಂತರಂಗದಿಂದ ತೇಜೋಮೂರ್ತಿಯಾಗಿ ಮೆರೆವ ಸಮಯದಲ್ಲಿ ಗಂಗಾದೇವಿ ಮಾಯಿದೇವಿಯರೆಂಬಿಬ್ಬರನ್ನು ಮದುವೆ

CC-0. Jangamwadi Math Collection. Digitized by eGangotri

ಯಾದನೆಂದು ವಿದಿತವಾಗುತ್ತದೆ. ಆದರೆ, ಆ ಗಂಗಾದೇವಿ ಮಾಯಿದೇವಿಯ ರಾರು? ಸಿದ್ಧರಸನಿಗೂ ಇವರಿಗೂ ಏನಾದರೂ ಸಂಬಂಧವಿದ್ದಿತೇ ಎಂಬ ಅಂಶ ಗಳೇನೂ ಸ್ಪಷ್ಟವಾಗುವುದಿಲ್ಲ. ಸಿದ್ಧರಸನು ಅಪುತ್ರಕ[೧೦೪]ನಾಗಿ ಮಡಿದನೆಂದಿಷ್ಟೇ ಹರಿಹರನ ಹೇಳಿಕೆ.

ಭೀಮಕವಿಯ ಅಭಿಮತದಂತಾದರೋ ಗರ್ಭಾಷ್ಟಕದಲ್ಲಿ ನಡೆಯಲಿದ್ದ ಬಸವಣ್ಣನವರ ಉಪನಯನಕ್ಕೆ ಆತನ ತಾಯಿ ಮಾದಲಾಂಬಿಕೆಯ ಅಗ್ರಜ ಬಲದೇವಮಂತ್ರಿಯು ಬಾಗೆವಾಡಿಗೆ ಬಂದಿರುತ್ತಾನೆ. ಉಪನಯನವು ಕುಂಠಿತ ವಾಗಿ ಬಸವಣ್ಣನು ಮನೆಬಿಟ್ಟು ಮಹಮನೆಯ ಮನೆಗೆ ಬಂದೊಡನೆ ಬಲದೇವ ಮಂತ್ರಿಯು ಅಲ್ಲಿಯೇ ಶಿವಭಕ್ತರ ಸಮ್ಮುಖದಲ್ಲಿ ತನ್ನ ಮಗಳಾದ ಗಂಗಾಂಬಿಕೆಯನ್ನು ಬಸವಣ್ಣನಿಗೆ ಕೊಟ್ಟು ಮದುವೆಮಾಡಿ ಕಲ್ಯಾಣಕ್ಕೆ ಬರುತ್ತಾನೆ. ಇದಲ್ಲದೆ ಬಸವಣ್ಣನಿಗೆ ಮಾಯಿದೇವಿಯೆಂಬ ಇನ್ನೊಬ್ಬ ಪತ್ನಿಯಿದ್ದ ಉಲ್ಲೇಖವು ಭೀಮ ಕವಿಯ ಬಸವಪುರಾಣದಲ್ಲಿ ಹೀಗೆ ಬರುತ್ತದೆ:

"ಮತ್ತೆ ಒಬ್ಬಯ್ಯಂ ಬಸವಸಚಿ
ವೋತ್ತಮನ ಪೊರೆಗೆಯ್ದಿಯಾತನ
ಮತ್ತಗಜಗಮನೆಯ ಕಿವಿಯ ಪೊನ್ನೋಲೆಯಂ ಕಂಡು
ಒತ್ತಿ ಬೇಡಲು ಮಾಯಿದೇವಿಯ
ಮುತ್ತಿನೋಲೆಯನೀಸಿಕೊಂಡೊಲಿ
ದಿತ್ತು ನಮಿಸಲು ಮಿಂಡಜಂಗಮವಿತ್ತಲೈತಂದ"[೧೦೫]

ಈ ಮಾಯಿದೇವಿ ಯಾರ ಮಗಳು, ಬಸವಣ್ಣನೊಡನೆ ಈಕೆಯ ವಿವಾಹ ಎಂದು ಎಲ್ಲಿ ನೆರವೇರಿತು ಎಂಬ ವಿಷಯಗಳನ್ನು ಮಾತ್ರ ಭೀಮಕವಿಯು ವಿವರಿಸಿರುವುದಿಲ್ಲ.

ಬಸವಣ್ಣನವರ ವಿವಾಹದ ವಿಷಯವನ್ನು ಸಿಂಗಿರಾಜನು ಬೇರೊಂದು ರೀತಿಯಿಂದ ವಿವರಿಸುತ್ತಾನೆ. ಬಸವಣ್ಣನವರು ಬಲದೇವಮಂತ್ರಿಯ ಮಗಳಾದ ಗಂಗಾಂಬೆಯನ್ನು ಕಲ್ಯಾಣದಲ್ಲಿ ಮದುವೆಯಾದ ವಿಷಯವನ್ನು ಹಿಂದೆ ವಿವರಿಸ ಲಾಗಿದೆ. ಅವರ ಇನ್ನೊಂದು ವಿವಾಹ ದಂಡನಾಥಪದವಿಗೇರಿದಮೇಲೆ ನಡೆಯುತ್ತದೆ.

---

೧೦೪ ಬ.ದೇ. ರ. ಸ್ಥಲ ೫, ಸಾಲು ೧೫೫.

೧೦೫ ಬ.ಪು. ಸಂ. ೧೦, ಪ. ೪೩.

CC-0. Jangamwadi Math Collection. Digitized by eGangotri

ಬಸವಣ್ಣನವರು ದಂಡನಾಥರಾದಮೇಲೆ ಬಿಜ್ಜಳನು ಅರಸು ಹಾಗೂ ದಂಡನಾಯಕರ ಮನಸ್ಸು ಬೆರಸಿ ಬೇರಿಲ್ಲದೆ ಎರಡೊಂದಾಗಿರುವುದು ರಾಜ್ಯಕ್ಕೆ ವಿಹಿತವೆಂದು ಆಲೋಚಿಸುವನು. ವೈವಾಹಿಕ ಸಂಬಂಧವು ಈ ದಿಸೆಯಲ್ಲಿ ಬಹು ಮಹತ್ವದ ಕಾರ್ಯವನ್ನು ಎಸಗಬಲ್ಲುದೆಂದು ಆತನ ಆಲೋಚನೆ. ರಾಜ್ಯರಾಜ್ಯ ಗಳೊಳಗಿನ ಸ್ನೇಹಸಂಬಂಧ ಭದ್ರವಾಗಿ ಉಳಿಯುವುದಕ್ಕೋಸ್ಕರ ಹಿಂದೆ ಗುಪ್ತರೂ ಕದಂಬರೂ ಚಾಲುಕ್ಯರೂ ರಾಷ್ಟ್ರಕೂಟರೂ ಹೀಗೆ ಬೇರೆ ಬೇರೆ ರಾಜಮನೆತನಗಳು ಪರಸ್ಪರ ಶರೀರಸಂಬಂಧ ಬೆಳೆಸಿದುದನ್ನು ಆತನು ಗಣನೆಗೆ ತೆಗೆದುಕೊಂಡಿರಬೇಕು. ತನ್ನ ತಂದೆ ಮಡಿದ ನಂತರ ತಾಯಿ ಸಹಗಮನಹೋಗುವ ಪ್ರಸಂಗ ಬರುತ್ತದೆ. ಆಗ ಆಕೆಯ ಮಗು ಅಂದರೆ ಬಿಜ್ಜಳನ ತಮ್ಮ ಕರ್ಣದೇವ ಇನ್ನೂ ಮೊಲೆಕುಡಿಯುವ ಕೂಸು. ಈ ಕೂಸನ್ನು ಆಕೆ ಸಿದ್ಧರಸಮಂತ್ರಿಯ ಸತಿ ಪದ್ಮಗಂಧಿಯ ಉಡಿಯಲ್ಲಿ ಹಾಕಿ ಸತಿಹೋಗುವಳು. ಪದ್ಮಗಂಧಿ ಮೊಲೆಯೂಡಿ ಕರ್ಣದೇವನನ್ನು ಸಲಹುವಳು. ಆ ಬಳಿಕ ಆಕೆಗೆ ನೀಲಲೋಚನೆಯೆಂಬ ಮಗಳು ಹುಟ್ಟುವಳು. ಒಬ್ಬಳೇ ತಾಯಮೊಲೆ ಕುಡಿದು ಬೆಳೆದ ಕರ್ಣದೇವ, ನೀಲ ಲೋಚನೆಯರು ಅಣ್ಣತಂಗಿಯರಲ್ಲವೇ? ದಣ್ಣಾಯಕ ಬಸವಣ್ಣನಿಗೆ ತಮ್ಮ, ತಂಗಿಯಂತಿದ್ದ ನೀಲಲೋಚನೆಯನ್ನು ಕೊಟ್ಟು ಮದುವೆಮಾಡುವನು. ಅರಸನ ತಂಗಿ ನೀಲಲೋಚನೆ ಪಟ್ಟಮಹಿಷಿಯೇ ಆದಳೆಂದು ಸಿಂಗಿರಾಜನ ಹೇಳಿಕೆ.

ಬಸವಣ್ಣನವರ ವಿವಾಹದ ವಿಷಯವಾಗಿ ಬೇರೆ ಬೇರೆ ಕವಿಗಳ ಅಭಿಪ್ರಾಯ ಗಳನ್ನು ಹೀಗೆ ಸಂಗ್ರಹಿಸಬಹುದು:

೧ **ಹರಿಹರನ ಅಭಿಪ್ರಾಯ:** ಗಂಗಾದೇವಿ, ಮಾಯಿದೇವಿಯರು ಬಸವಣ್ಣನವರ ಹೆಂಡರು. ಇವರು ಯಾರ ಮಕ್ಕಳು; ಬಸವಣ್ಣನೊಡನೆ ಇವರ ವಿವಾಹವು ಎಂದು ಎಲ್ಲಿ ಆಯಿತು ಎಂಬ ಉಲ್ಲೇಖವಿಲ್ಲ.

೨. **ಭೀಮಕವಿಯ ಅಭಿಪ್ರಾಯ:** ಗಂಗಾದೇವಿ, ಮಾಯಿದೇವಿಯರು ಬಸವಣ್ಣನವರ ಪತ್ನಿಯರು. ಗಂಗಾದೇವಿ ಬಸವಣ್ಣನವರ ಸೋದರ ಮಾವ ಬಲದೇವಮಂತ್ರಿಯ ಮಗಳು. ಬಲದೇವಮಂತ್ರಿಯು ಬಸವಣ್ಣನವರ ಉಪನಯನಕ್ಕೆಂದು ಬಾಗವಾಡಿಗೆ ಬಂದಾಗ ಆಲ್ಲಿಯೇ ಮಹಮನೆಯಲ್ಲಿ ಬಸವಣ್ಣನವರ ಎಂಟನೆಯ ವಯಸ್ಸಿನಲ್ಲಿಯೇ ಮದುವೆಯಾಗುವುದು. ಮಾಯಿದೇವಿ ಯಾರ ಮಗಳು, ಬಸವಣ್ಣನೊಡನೆ ಆಕೆಯ ವಿವಾಹ ಎಂದು ಎಲ್ಲಿ ಆಯಿತು ಎಂಬುದರ ಉಲ್ಲೇಖವನ್ನು ಮಾತ್ರ ಮಾಡಿರುವುದಿಲ್ಲ.

CC-0. Jangamwadi Math Collection. Digitized by eGangotri

೩. **ಸಿಂಗಿರಾಜನ ಅಭಿಪ್ರಾಯ:** ಗಂಗಾದೇವಿ, ನೀಲಲೋಚನೆಯರು ಬಸವಣ್ಣನವರ ಧರ್ಮಪತ್ನಿಯರು. ಗಂಗಾದೇವಿ ಬಲದೇವ ಮಂತ್ರಿಯ ಮಗಳು; ನೀಲಲೋಚನೆಯು ಸಿದ್ಧರಸಮಂತ್ರಿಯ ಸುತೆ.

ಬಸವಣ್ಣನವರ ತುಂಬುಜೀವನ ಮುಂದುವರಿಯಿತು. ಅವರ ಭಕ್ತಿಭಾವಕ್ಕೆ ಒಲಿದು ಅಸಂಖ್ಯಾತ ಶಿವಶರಣರು ಕಲ್ಯಾಣದಲ್ಲಿ ನೆರೆದರು. ದಿನಗಳೆದಂತೆ ಭಕ್ತಿ ಪಂಥವು ಬಲವಾಗತೊಡಗಿತು. ಜಾತಿ-ಮತ-ಕುಲ-ಗೋತ್ರಗಳ ಭಿನ್ನಭಾವನೆಯ ಉಚ್ಚಾಟನೆ ಮಾಡಿ ಶಿವಭಕ್ತರೆಲ್ಲರೂ ಒಂದೇ ಎಂಬ ಭಾವವನ್ನು ಬಸವಾದಿ ಪ್ರಮಥರು ಪ್ರಚುರಗೊಳಿಸಿದರು; ನುಡಿದಂತೆ ನಡೆದರು. ಸಮಾಜದಲ್ಲಿ ಅದ್ಭುತವಾದ ಕ್ರಾಂತಿಯೇ ತಲೆದೋರಿತು. ಸಂಪ್ರದಾಯವು ಕ್ರಾಂತಿಯನ್ನು ಸಹಿಸಬಲ್ಲುದೆ? ಆದುದರಿಂದ ಸಂಪ್ರದಾಯವಾದಿಗಳು ಬಸವಣ್ಣನವರ ವಿಷಯವಾಗಿ ಅಸೂಯೆಪಡತೊಡಗಿದರು; ಬಿಜ್ಜಳನ ಮನದಲ್ಲಿ ಕಾಲುಷ್ಯದ ಬೀಜವನ್ನು ಬಿತ್ತಿದರು. ಆದುದರಿಂದ ಬಹುಬೇಗನೆ ಬಿಜ್ಜಳ ಬಸವಣ್ಣ ಇವರಲ್ಲಿ ವಿರಸಭಾವ ಉಂಟಾಗುತ್ತದೆ; ಅದು ದಿನದಿನ ಪ್ರಬಲವೂ ಆಗುತ್ತದೆ. ಬಿಜ್ಜಳ, ಬಸವಣ್ಣ ಇವರಲ್ಲಿ ನಡೆದ ವಿರಸಪ್ರಸಂಗಗಳನ್ನು ಬೇರೆ ಬೇರೆ ಕವಿಗಳು ವಿವರಿಸುವ ರೀತಿ ಹೀಗೆ:

ಹರಿಹರನ ವಿವರಣೆ: ೧. ಬಸವಣ್ಣನವರು ಒಂದು ದಿನ ಮಾಲೆಗಾರನು ತಂದುಕೊಟ್ಟ ಕೇತಕೀದಳವನ್ನು ಶಿವಲಿಂಗಕ್ಕರ್ಪಿಸುವರು. ಇದು ಆಗಮವಿರೋಧವೆಂದು ನಾರಣಭಟ್ಟನು ವಿರೋಧ ವ್ಯಕ್ತಪಡಿಸುವನು. ಇದು ಬಸವಣ್ಣನವರ ಬಗೆಗಿರುವ ಅಸೂಯೆಯ ಹಿನ್ನೆಲೆಗೆ ನೆವ. 'ಬಸವಣ್ಣನು ಭಕ್ತರು ಕೊಟ್ಟದ್ದನ್ನು ದೇವನು ಸ್ವೀಕರಿಸುವನು' ಎಂದು ವಾದಿಸುವನು ಹಾಗೂ ಅದನ್ನು ಪವಾಡ ಮೆರೆದು ಸಿದ್ಧಮಾಡಿ ತೋರಿಸುವನು. ಪರವಾದಿಗಳು ಬಸವಣ್ಣನವರ ವಿಷಯವಾಗಿ ಅರಸನಿಗೆ ದೂರಿಡುವ ಪ್ರಸಂಗಗಳಲ್ಲಿ ಇದು ಮೊದಲನೆಯದು.[೧೦೬]

೨. ಬಿಜ್ಜಳನ ಗುರು ನಾರಣಕ್ರಮಿತ, ಸೌರಿಭಟ್ಟ, ವಿಷ್ಣುಪೆದ್ದಿ ಮೊದಲಾದವರು ಭಕ್ತರ ವಿಷಯವಾಗಿ ಅಸೂಯೆಪಟ್ಟು ಅವರ ವಿಷಯದಲ್ಲಿ ಕೆಳಗಿನಂತೆ ಆರೋಪಗಳನ್ನು ಹೊರಿಸಿ ಬಸವಣ್ಣನವರ ವಿರುದ್ಧ ಅರಸನಿಗೆ ದೂರಿಡುವರು:

ಅ) ರಾಜ್ಯದ ಬೊಕ್ಕಸವನ್ನು ಭಕ್ತರಿಗಾಗಿ ಸೂರೆ ಮಾಡುವನು.

---

೧೦೬ ಬ.ದೇ. ರ. ಸ್ಥಳ ೬, ಪು. ೩೭

CC-0. Jangamwadi Math Collection. Digitized by eGangotri

ಆ) ಎಲ್ಲೆಡೆಯಲ್ಲಿ ಭಕ್ತರು ವಿಷ್ಣುವನ್ನು ನಿಂದಿಸುವರು; ಜಿನನನ್ನು ಕೊಂಡಾಡಿ ಬಿಸುಟುವರು.

ಇ) ಷಡ್ದರ್ಶನಗಳನ್ನು ಕೀಳುಮಾಡಿ ಮೃಡದರ್ಶನವನ್ನೇ ಮೇಲುಮಾಡುವರು.

ಹೀಗೆ ಆರೋಪಿಸುತ್ತ ದೂರುತ್ತ, ಅರಸನು ರಾಜ್ಯವನ್ನು ಉದಾಸೀನ ಮಾಡಲಾಗದೆಂದೂ ಇದನ್ನು ವಿಚಾರಿಸದೆ ಕ್ಷತ್ರಿಯ ಧರ್ಮವನ್ನು ಕೆಡಿಸಲಾಗದೆಂದೂ ಪರವಾದಿಗಳು ಒತ್ತಾಯಪಡಿಸುವರು. ಬಿಜ್ಜಳನು ಬೊಕ್ಕಸದ ಲೆಕ್ಕವನ್ನು ಪರೀಕ್ಷಿಸುವನು. ಪದಿನೆಂಟು ಕೋಟಿ ದ್ರವ್ಯ ಸ್ಥಿತವೆಂದು ಭಂಡಾರಿಗಳ ಮೇಲೆ ಆರೋಪ ಹೊರಿಸುವನು. ಬಸವಣ್ಣನು ಭಂಡಾರವನ್ನು ತೆರೆದು ತೋರಿಸಿ ಪದಿನೆಂಟು ಕೋಟಿಗೆ ನೂರ್ಮಡಿ, ಸಾಸಿರಮಡಿ ಹೊನ್ನು ತೋರಿಸುವನು. ಬಿಜ್ಜಳನು ಪಶ್ಚಾತ್ತಾಪಪಟ್ಟು ಕ್ಷಮೆ ಕೋರುವನು.[೧೦೭]

೩. ಬಸವಣ್ಣನು ಒಮ್ಮೆ ಕಂಬಳಿಯು ನಾಗಿದೇವರ ಮನೆಯಲ್ಲಿ ಪ್ರಸಾದಸ್ವೀಕರಿಸುವನು. ವೈಷ್ಣವರ ಬೇಹಿನವನು ಇದನ್ನು ವಿಪ್ರರಿಗೆ ತಿಳಿಸುವನು. ಅವರೆಲ್ಲರೂ ಸೇರಿ ಬಸವಣ್ಣನು ಹೊಲೆಯರ ಮನೆಯಲ್ಲಿ ಉಣ್ಣುತ್ತ ಊರನ್ನು ಹೊಲೆಗೆಡಿಸುತ್ತಿರುವನೆಂದು ಬಿಜ್ಜಳನಲ್ಲಿ ದೂರಿಡುವರು. ಬಿಜ್ಜಳನು ವಿಚಾರಣೆಗಾಗಿ ಬಸವಣ್ಣನನ್ನು ಕರೆಸುವನು. ರಾಜಾಂಗಣದ ಹೊರವಳಯದಲ್ಲಿಯೇ ಬಿಜ್ಜಳನ ಓಲಗ ನೆರವೇರುವುದು. ಬಿಜ್ಜಳನಿಗೂ ಬಸವಣ್ಣನಿಗೂ ವಾದವಿವಾದ ನಡೆದು ಬಸವಣ್ಣನು ನಾಗಿದೇವನ ಕೈಯನ್ನು ಕೊಯ್ದು ಗಾಯದಿಂದ ರಕ್ತಕ್ಕೆ ಪ್ರತಿಯಾಗಿ ಹಾಲು ಸುರಿಯುವುದನ್ನು ತೋರಿಸಿ ಭಕ್ತರ ಶ್ರೇಷ್ಠತೆಯನ್ನು ಪ್ರಕಟಪಡಿಸುವನು.[೧೦೮]

ಭೀಮಕವಿಯ ನಿರೂಪಣೆ:

೧. ಮಡಿವಳ ಮಾಚಿದೇವರ ಪ್ರಸಂಗ: ಮಡಿವಳ ಮಾಚಿದೇವನು ತಾನು ಭಕ್ತರ ಮಡಿವಸ್ತ್ರಗಳನ್ನು ತರುವಾಗ ಎದುರು ಭವಿಗಳಾರೂ ಬರಲಾಗದೆಂಬ ವ್ರತವನ್ನು ಕೈಕೊಂಡಿದ್ದನು. ಬಂದರೆ ಅವರ ಶಿರಶ್ಛೇದನ! ಒಂದು ದಿನ ಒಬ್ಬ ಭವಿಯು ಆತನ ಎದುರು ಬಂದೇಬಿಡುವನು. ಮಾಚಿದೇವನು ಅವನ ಶಿರಶ್ಛೇದ ಮಾಡಲು ದೊರೆಯಲ್ಲಿ ಪರವಾದಿಗಳು ದೂರಿಡುವರು. ಮಾಚಯ್ಯನು ಇರಿ

---

೧೦೭ ಬ.ದೇ. ರ. ಸ್ಥಲ ೮, ಪು. ೫೨-೫೫
೧೦೮ ಬ.ದೇ. ರ. ಸ್ಥಲ ೧೦, ಪು. ೬೯

CC-0. Jangamwadi Math Collection. Digitized by eGangotri

ದವನಿಗೆ ಪ್ರಾಣದಾನ ಮಾಡುವನು. ಕುಹಕವೃತ್ತಿಯ ದೊರೆ ಮತ್ತೊಂದು ದಿನ ಮಾಚಿಯ್ಯನೆದುರು ಮದ್ದಾನೆಯನ್ನು ಕಳಿಸುವನು. ಮಾಚಿಯ್ಯನು ಆದರ ಶಿರ ಶ್ಛೇದನವನ್ನು ಮಾಡುವನು. ಬಿಜ್ಜಳನು ಗೆಯ್ದ ಇಂತಹ ಶಿವದ್ರೋಹಗಳಿಂದ ಬಸವಣ್ಣ ಬಿಜ್ಜಳರಲ್ಲಿ ವಿರಸವು ಆರಂಭವಾಗುವುದು.[೧೦೯]

೨. ಕನ್ನದ ಬೊಮ್ಮಿದೇವರ ಪ್ರಸಂಗ: ಕನ್ನದ ಬೊಮ್ಮಿದೇವನೆಂಬ ಭಕ್ತನು ರಾಜ್ಯದ ಭಂಡಾರಕ್ಕೆ ಕನ್ನ ಹಾಕಿದನೆಂಬ ಆರೋಪವನ್ನು ಕೇಳಿ ಬಿಜ್ಜಳನು ಕುಪಿತನಾಗುವನು. ಬಸವಣ್ಣನು ಆತನನ್ನು ಕರೆಸುವನು. ಎಲ್ಲರೂ ಸೇರಿ ಭಂಡಾರವನ್ನು ಪರೀಕ್ಷಿಸುವರು. ಆಗ ಭಂಡಾರದಲ್ಲಿ ಕನ್ನದ ಕುರುಹೇ ಇಲ್ಲ; ಭಂಡಾರದ ಹೊನ್ನಿನಲ್ಲಿಯೂ ವ್ಯತ್ಯಯವಿರಲಿಲ್ಲ. ಪೊಟ್ಟಿ ಆರೋಪವೆಂದು ಸಿದ್ಧವಾಗಲು ಎಲ್ಲರೂ ಆಶ್ಚರ್ಯಪಡುವರು. ಬಿಜ್ಜಳನಿಗೆ ಪಶ್ಚಾತ್ತಾಪ[೧೧೦] ವಾಗುವುದು.

೩. ಬಾಚರಸರ ಪ್ರಸಂಗ: ಸೊಡ್ಡಳ ಬಾಚರಸನೆಂಬ ಭಕ್ತನು ಸೌರಾಷ್ಟ್ರ ಪತಿಯನ್ನು ಕಲ್ಯಾಣದಲ್ಲಿ ಪ್ರತಿಷ್ಠಾಪಿಸಿದನು. ಅದಕ್ಕೆ ಪ್ರತಿಯಾಗಿ ಪರವಾದಿಗಳು ಬಿಜ್ಜಳನ ಅಭಿಮತದಂತೆ ಗೋವಿಂದಪ್ರತಿಮೆಯನ್ನು ಪ್ರತಿಷ್ಠಾಪಿಸುವರು. ದೊರೆಯ ಅಪ್ಪಣೆಯಂತೆ ಆ ಉತ್ಸವಕ್ಕೆ ಸೊಡ್ಡಳ ಬಾಚರಸರ ಹೊರತು ಬಹುತರ ಎಲ್ಲರೂ ಬರುವರು. ಬಾಚರಸನೇಕೆ ಬಾರನೆಂದು ದೊರೆ ಗರ್ವದಿಂದ ಕೇಳುವನು, ಬರಲೇಬೇಕೆಂದು ಆಗ್ರಹವನ್ನೂ ತೊಡುವನು. ಆದರೆ, ಅನ್ಯದೈವತವನ್ನು ನೋಡಲಾಗದೆಂಬುದು ಬಾಚರಸನ ವ್ರತ. ದೊರೆಯು ಆಗ್ರಹಪಡಿಸಲು ಬಸವಣ್ಣನವರು ಬಾಚರಸನನ್ನು ಬರಹೇಳುವರು. ಆತನು ಬಂದು ನೋಡಿ ದೊಡನೆಯೇ ಗೋವಿಂದಪ್ರತಿಮೆ ಕರಗಿಹೋಗುವುದು. ಇಂಥ ಪ್ರಸಂಗದಿಂದ ಅರಸನ ವಿರಸ ಅಧಿಕವಾಗುವುದು ಸ್ವಾಭಾವಿಕ.

೪. ಶಿವನಾಗಮಯ್ಯನ ಪ್ರಸಂಗ: ಹರಿಹರನು ನಿರೂಪಿಸಿದ ಕಂಬಳಿನಾಗಿದೇವನ ಪ್ರಸಂಗವನ್ನೇ ಯಥಾರೀತಿಯಾಗಿ ಭೀಮಕವಿಯೂ ನಿರೂಪಿಸಿರುವನು. ಹೆಸರು ಮಾತ್ರ 'ಕಂಬಳಿನಾಗಿದೇವ' ಎನ್ನುವ ಬದಲು ಶಿವನಾಗಮಯ್ಯ ಎಂದು ಇದೆ.

ಸಿಂಗಿರಾಜನ ಅಭಿಪ್ರಾಯ:

೧. ರಾಜಧಾನಿಯಲ್ಲಿ, ಜನರಲ್ಲಿ ಬಸವೇಶ್ವರನ ಪ್ರಭಾವವು ಬೆಳೆಯುವು

---

೧೦೯ ಬ. ಪು. ಸಂಧಿ ೨೧

೧೧೦ ಬ. ಪು. ಸಂ. ೩೧

CC-0. Jangamwadi Math Collection. Digitized by eGangotri

ವನ್ನು ಕಂಡು ಜೈನರು ಅಸೂಯಾಪರರಾಗುವರು. ಬಸವಣ್ಣನು ಮಿಂಡಜಂಗಮರಿಗೆ ಭಂಡಾರದ ವಸ್ತ್ರಗಳನ್ನು ಕೊಟ್ಟನೆಂದು ಅವರೆಲ್ಲ ಅರಸನಿಗೆ ದೂರಿಟ್ಟರು. ಬಿಜ್ಜಳನು ಭಂಡಾರದ ಪೆಟ್ಟಿಗೆಗಳನ್ನು ಪರೀಕ್ಷಿಸಿ ನೋಡಲು ವಸ್ತ್ರಗಳು ಕವಲಿರಲಿಲ್ಲ. ಬಸವಣ್ಣ ಬಿಜ್ಜಳರಲ್ಲಿ ವಿರಸಕ್ಕೆ ಆರಂಭವಾಗುತ್ತದೆ.

೨. ಕೊಂಡೆಯ ಮಂಚಿಣ್ಣನ ಪ್ರಸಂಗ : ಕೊಂಡೆಯ ಮಂಚಿಣ್ಣನು ಬಿಜ್ಜಳನಿಗೆ ಸಭೆಗೆ ಬಂದ ಬಸವಣ್ಣನು ಸಿಂಹಾಸನಕ್ಕೆರಗದೆ ನಂದಿಮುದ್ರೆಯುಳ್ಳ ಉಂಗುರಕ್ಕೆ ಮಾತ್ರ ನಮಸ್ಕರಿಸುತ್ತಿರುವನೆಂದು ಚಾಡಿ ಹೇಳುವನು. ಅದನ್ನು ಕೇಳಿ ಬಿಜ್ಜಳನು ಕೋಪಾವಿಷ್ಟನಾಗಿ ಸಿಂಹಾಸನಕ್ಕೆ ನಮಸ್ಕರಿಸಬೇಕೆಂದು ಬಸವಣ್ಣನಿಗೆ ಆಗ್ರಹಪಡಿಸುವನು. ಬಸವಣ್ಣನವರು ಹಾಗೆ ಮಾಡಿದಾಗ ಗದ್ದುಗೆಗೆ ಉರಿ ಹತ್ತುವುದು. ಬಿಜ್ಜಳನ ಪ್ರಾರ್ಥನೆಯ ಮೇರೆಗೆ ಬಸವಣ್ಣನು ಅದನ್ನು ಉಪಶಮನ ಮಾಡುವನು.[೧೧೧]

೩. ಭಂಡಾರದ ಅಪವ್ಯಯದ ಆರೋಪಗಳು:

i ಭಂಡಾರದ ಲೆಕ್ಕದಲ್ಲಿ ಅಪವ್ಯಯವಾಗಿದೆಯೆಂದು ಪರವಾದಿಗಳು ಸೊಡ್ಡಳಬಾಚರಸರ ಮೇಲೆ ಆರೋಪ ಹೊರಿಸುವರು. ಬಿಜ್ಜಳನು ಬಾಚರಸರ ಶಿರಶ್ಛೇದನ ಮಾಡಲು ಆಜ್ಞಾಪಿಸುವನು. ಕೊಲೆಗಡಕರು ಬಾಚರಸರ ಕೊಲೆ ಮಾಡುವಷ್ಟರಲ್ಲಿಯೇ ಮಸಣದಲ್ಲಿದ್ದ ಮುಂಡಗಳೆಲ್ಲಾ ಎದ್ದು ರಾಜಭಟರನ್ನು ಕೊಲ್ಲತೊಡಗುವವು. ಬಸವಣ್ಣನು ಬಂದು ಅವರನ್ನೆಲ್ಲ ಉಳಿಸುವನು.[೧೧೨]

ii ಭಂಡಾರದ ಧನವನ್ನು ಬಸವಣ್ಣನು ಗೊರವರಿಗೆ ದಾನಮಾಡಿಬಿಡುವನೆಂದು ಜನರು ದೂರಿಡಲು ಅರಸನು ಬಸವಣ್ಣನ ಮೇಲೆ ಕಿಡಿಕಿಡಿಯಾಗುವನು. ಜಂಗಮರು ಇಲ್ಲವೆ ಮಂತ್ರಿಪದ ಇವುಗಳಲ್ಲಿ ಒಂದನ್ನು ಮಾತ್ರ ಸ್ವೀಕರಿಸಬೇಕೆಂದು ಗದರಿಸುವನು. ಬಸವಣ್ಣನು ಅರಸನಿಗೆ ಮುದ್ರೆಯನ್ನು ಒಪ್ಪಿಸಿಕೊಟ್ಟು ಮಂತ್ರಿಪದವನ್ನು ತ್ಯಜಿಸಿ ಹೊರವಂಟನು. ಗಂಗಾದೇವಿ, ನೀಲಾಂಬಿಕೆ, ಅಕ್ಕನಾಗಾಯಿ, ಶಿವಸ್ವಾಮಿ, ಚೆನ್ನಬಸವೇಶ, ಬಾಲಸಂಗಯ್ಯ[೧೧೩] ಇವರೊಡನೆ ಬಸವಣ್ಣನು

---

೧೧೧ ಬ. ಪ್ರ. ಸಂ. ೧೪

೧೧೨ .. .. .. ೨೩

೧೧೩ ಸಿಂಗಿರಾಜನ ಅಭಿಪ್ರಾಯದಂತೆ ಶಿವಸ್ವಾಮಿ ಅಕ್ಕನಾಗಾಯಿಯ ಪತಿ. ಬಾಲಸಂಗಯ್ಯ ಬಸವಣ್ಣನವರ ಮಗ. ಹರಿಹರನು ಬಸವಣ್ಣನವರ ಮಗನ ಹೆಸರು ಸಿದ್ಧರಸನೆಂದು ಹೇಳಿರುವನು. (ಬ. ದೇ. ರ ಸ್ಥಲ ೧೦, ಪು. ೭೧)

CC-0. Jangamwadi Math Collection. Digitized by eGangotri

ಹೊರವಂಟು ಅರಣ್ಯಕ್ಕೆ ಹೋಗಿ ಅಲ್ಲಿಯೇ ಕೆಲದಿನ ವಾಸಿಸಿ ಜಂಗಮಾರಾಧನೆ ನಡೆಸುವನು. ಬಿಜ್ಜಳನಿಗೆ ಪಶ್ಚಾತ್ತಾಪವಾಗುವುದು. ಬಸವಣ್ಣನಿಗೆ ಪ್ರಾರ್ಥನೆ ಮಾಡಿಕೊಂಡು ಆತನು ಪುನಃ ದಂಡನಾಥ ಪದವಿಯನ್ನು ಸ್ವೀಕರಿಸುವಂತೆ ಮಾಡುವನು.[೧೧೪]

iii ಭಂಡಾರದಲ್ಲಿ ಭಕ್ತಗಣಕರು ಲೆಕ್ಕಪತ್ರಗಳಲ್ಲಿ ಕೇವಲ ನಮಃಶಿವಾಯ ಎಂಬ ಮಂತ್ರವನ್ನೇ ಬರೆಯುತ್ತಿರುವರೆಂದು ಕೊಂಡೆಯರು ಆರೋಪಿಸುವರು. ಬಿಜ್ಜಳನು ಸಿದ್ಧರಸ, ಮಧುವರಸ, ಬಲದೇವ, ಜಗದೇವ, ಶಾಂತರಸ ಇವರನ್ನು ಕರೆಸಿ ಸೂರ್ಯಾಸ್ತದೊಳಗಾಗಿ ಲೆಕ್ಕವನ್ನು ಸರಿಯಾಗಿ ಬರೆದು ತೋರಿಸಬೇಕೆಂದು ಆಜ್ಞಾಪಿಸುವನು. ಭಕ್ತರು ಏಳು ದಿನಗಳವಧಿಯಷ್ಟು ಕಾಲ ಸೂರ್ಯನನ್ನು ತಡೆದು ನಿಲ್ಲಿಸಿ ಲೆಕ್ಕವನ್ನು ಸರಿಮಾಡಿಕೊಟ್ಟರು. ಇಂತಹದೇ ಪ್ರಸಂಗದಲ್ಲಿ ಮತ್ತೊಮ್ಮೆ ಚಂದ್ರನನ್ನು ನಿಲ್ಲಿಸುವರು. ಜನರು ಗಾಬರಿಗೊಳ್ಳುವರು. ಅರಸನು ತನ್ನ ತಪ್ಪಿಗೆ ಕ್ಷಮೆಕೋರುವನು.[೧೧೫]

iv ಒಬ್ಬ ತಪಸ್ವಿಗೆ ಬಸವಣ್ಣನವರು ಅರಸನ ಅಶ್ವಭಂಡಾರದ ಮುಖ್ಯ ಕುದುರೆಯೊಂದನ್ನು ದಾನವಾಗಿ ಕೊಟ್ಟನೆಂದು ಕೊಂಡೆಯರು ಆರೋಪಿಸುವರು. ದೊರೆ ಬಸವಣ್ಣನವರನ್ನು ಕೇಳಿ ಪರೀಕ್ಷಿಸಿದಾಗ ಕುದುರೆ ಇದ್ದಲ್ಲಿಯೇ ಇರುವುದು.

೪. ಮಾಚಿದೇವರ ಪ್ರಸಂಗ : ಮಡಿವಳ ಮಾಚಿದೇವನು ಭಕ್ತರ ಮಡಿಗಳನ್ನು ತರುವಾಗ ಎದುರು ಬಂದ ಭವಿಯ ಶಿರವನ್ನು ಇರಿದು ಅವನಿಗೆ ಜೀವದಾನ ಮಾಡಿದ್ದು, ಅರಸನು ತನ್ನಮೇಲೆ ಕಳಿಸಿದ ಪಟ್ಟದಾನೆಯನ್ನು ಕೊಂದು ಅದನ್ನು ಪುನಃ ಬದುಕಿಸಿ ಮೆರೆದ ಪವಾಡದ ವಿವರಣೆ ಹರಿಹರ, ಭೀಮಕವಿಗಳ ಕಾವ್ಯಗಳಲ್ಲಿ ಬರುವಂತೆ ಇಲ್ಲಿಯೂ ಬರುತ್ತಿದೆ.

೫. ಶಿವಭಕ್ತೆಯನ್ನು ಪರೀಕ್ಷಿಸಿದ ಪ್ರಸಂಗ: ಮೊಗವಾಡದ ಕೇಶಿರಾಜ ನೆಂಬ ಭಕ್ತನು ಅಗ್ಗವಣಿಯ ಶೀಲವನ್ನು ಹಿಡಿದಿರುವನು. ಅವನಿಗಾಗಿ ಒಬ್ಬ ಶಿವಭಕ್ತೆ ಸೇವಕಿ ಮಡಿಯಿಂದ ಅಗ್ಗವಣಿಯನ್ನು ತರುತ್ತಿದ್ದಳು. ಒಮ್ಮೆ ಆಕೆಗೆ ಸಂಬಂಧಿಸಿದ ಬಿಜ್ಜಳನ ಅಂತಃಪುರದ ಹೆಗ್ಗಡಿತಿ ಎದುರುಬಂದು ಅದರಲ್ಲೇನಿದೆ ಎಂದು ಪಾತ್ರೆಯನ್ನು ಮುಟ್ಟಿ ನೋಡಹೋಗುವಳು. ಶಿವಭಕ್ತೆ ಆಗದಾಗದೆಂದು ಹೇಳಿದಾಗ ರಾಜಪರಿವಾರದ ಆ ಹೆಗ್ಗಡಿತಿ ತನ್ನ ದರ್ಪವನ್ನು ತೋರಿಸಿ ಅರಸನಿಗೆ ದೂರು ಹೇಳುವಳು. ಅರಸು ಆ ಶಿವಭಕ್ತೆಯನ್ನು ಕರೆಸಿ ವಿಚಾರಿಸುತ್ತಿರುವಾಗ

---

೧೧೪ ಬ. ಪು. ಸಂ. ೩೧.

೧೧೫ ಬ. ಪು. ಸಂ. ೨೨.

CC-0. Jangamwadi Math Collection. Digitized by eGangotri

ಆತನ ಸೇವಕನೊಬ್ಬನು ಕೈಯ ಕೋಲಿನಿಂದ ಆಕೆಯ ತಲೆಯ ಮೇಲಿನ ಪಾತ್ರೆಗೆ ಹೊಡೆದನು. ಗಡಿಗೆ ಒಡೆದರೂ ಒಳಗಿದ್ದ ಅಗ್ಗಣಿ ಮಾತ್ರ ಪಾತ್ರೆಯಾಕಾರದಲ್ಲಿ ಹಾಗೆಯೇ ತಲೆಯಮೇಲೆಯೇ ನಿಂತಿತು. ಬಿಜ್ಜಳನಿಗೆ ಮತ್ತೆ ಪಶ್ಚಾತ್ತಾಪ; ಸಂತಾಪ.[೧೧೬]

೬. ಪ್ರಸಾದಪ್ರಸಂಗ: ರಾಜಬೋವನೆಂಬ ತಂಡಾಯಿಲನ ಚಾರರು ಶಿವಭಕ್ತರ ಹತ್ತಿರ ಬಂದು ಪ್ರಸಾದವನ್ನು ಕೇಳುವರು. ಭವಿಗಳಿಗೆ ಪ್ರಸಾದ ಸಲ್ಲದೆಂದು ಶರಣರು ನಿರಾಕರಿಸುವರು. ಚಾರರು ಬಂದು ದೊರೆಗೆ ದೂರಿಡುವರು. ಬಿಜ್ಜಳನು ಚೆನ್ನಬಸವಣ್ಣನವರನ್ನು ಕರೆಸಿ ಗದ್ದರಿಸಿ ಅವರಿಗೆ ಪ್ರಸಾದವನ್ನು ಕೊಡಲೇಬೇಕೆಂದು ಆಗ್ರಹಪಡುವನು. ಶಿವಶರಣರು ಹಾಲಾಹಲವನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸಿ ಪವಾಡಮೆರೆದರು.

೭. ಅಕ್ಕನಾಗಾಯಿಯ ಪ್ರಸಂಗ: ಬಿಜ್ಜಳನ ಕುಹಕವೃತ್ತಿ ಇನ್ನೂ ಮುಂದುವರಿಯುವುದು. ಒಂದು ದಿನ ನಾಗಾಂಬೆಯನ್ನು ಅರಮನೆಗೆ ಕರೆಸುವನು. 'ಬಸವಣ್ಣನಿಗೆ ನಮ್ಮ ತಂಗಿಯನ್ನು ಕೊಟ್ಟಿರುವುದರಿಂದ ನೀವು ನಮಗೆ ಬಂಧುಗಳು' ಎಂದು ನಟನೆಯ ಬೆಳುನುಡಿಗಳನ್ನಾಡುವನು. ವಸ್ತ್ರಾಭರಣಗಳನ್ನು ಕೊಟ್ಟು ಅಲಂಕಾರ ಮಾಡಿಸುವನು. ನಮ್ಮ ಅರಮನೆಯಲ್ಲಿ ಕೆಲಕಾಲ ಉಳಿದು ಬಂಧುಬಳಗದ ಕಣ್ಣಾತೃಪ್ತಿಯನ್ನು ಹಿಂಗಿಸಬೇಕೆಂದು ವಿಜ್ಞಾಪಿಸುವನು. ವಂಚನೆಯರಿಯದ ನಾಗಾಯಿ ಅರಮನೆಯ ಅಂತಃಪುರವನ್ನು ಪ್ರವೇಶಮಾಡಿ ವಿಶ್ರಮಿಸುತ್ತಿರಲು ಸ್ವಲ್ಪ ನಿದ್ರೆ ಹತ್ತುವುದು. ಆ ಸಮಯದಲ್ಲಿ ಕುಹಕಿ ದೊರೆ ಮಿಕ್ಕ ಮಂತ್ರಿಗಳ ಸಹಾಯದಿಂದ ಬಸವಣ್ಣನನ್ನು ಕರೆಸಿ ಆತನು ಅಂತಃಪುರವನ್ನು ಪ್ರವೇಶಿಸುವ ತಂತ್ರಮಾಡುವನು. ಭಕ್ತಿಯ ಬಲದಿಂದ, ಪಾತಿವ್ರತ್ಯದ ಮಹಿಮೆಯಿಂದ ಬಸವಣ್ಣನು ಹಸುಗೂಸಾಗಿ ತಾಯಿಯ ಮೊಲೆಯುಣ್ಣುವಂತೆ ನಾಗಾಯಿಯ ಮೊಲೆ ಕುಡಿಯತೊಡಗುವನು. ಅಪಹಾಸ್ಯ ಮಾಡಲೆಂದು ಮಿಕ್ಕವರನ್ನು ಕರೆದುಕೊಂಡು ನೋಡಲು ಬಂದ ಬಿಜ್ಜಳನು ಈ ದೃಶ್ಯವನ್ನು ಕಂಡು ಮಂತ್ರಮುಗ್ಧನಾಗುವನು.[೧೧೭]

೮. ಹರಿಹರ, ಭೀಮಕವಿಗಳು ಹೇಳುವಂತೆ ಶಿವನಾಗಮಯ್ಯನ ಪ್ರಸಂಗ ಇಲ್ಲಿಯೂ ಯಥಾವತ್ತಾಗಿ ಬರುತ್ತದೆ.

ಹೀಗೆ ವಿರಸತೆಯ ಸನ್ನಿವೇಶದಲ್ಲಿ ಬಿಜ್ಜಳನ ಪರೀಕ್ಷೆ ಪಶ್ಚಾತ್ತಾಪಗಳು

---

೧೧೬ ಸಿಂ.ಪು. ಸಂ. ೨೬.

೧೧೭ ಸಿಂ.ಪು. ಸಂ. ೩೪.

CC-0. Jangamwadi Math Collection. Digitized by eGangotri

ಒಂದೇಸವನೆ ನಡೆಯುತ್ತವೆ. ಈ ವಿರಸಪ್ರಸಂಗಗಳು ಮಿಕ್ಕ ಕಾವ್ಯಗಳಿಗಿಂತ ಸಿಂಗಿರಾಜಪುರಾಣದಲ್ಲಿ ಹೆಚ್ಚಾಗಿಯೇ ಬರುತ್ತವೆ. ಸಿಂಗಿರಾಜ ಪುರಾಣವು ಕ್ರೀ ಭಾವಗಳ ಮಥನಕ್ರಿಯೆ. ಆದರೆ, ಮಿಕ್ಕ ಕಾವ್ಯಗಳಲ್ಲಿಯ ವಿರಸಪ್ರಸಂಗಗಳು ದುರಂತದತ್ತ ಮುನ್ನಡೆದರೆ ಈ ಕಾವ್ಯದಲ್ಲಿ ಆ ಪ್ರಸಂಗಗಳು ಬಿಜ್ಜಳನ ಮನಸ್ಸಿನ ಪಶ್ಚಾತ್ತಾಪವನ್ನು ಹೆಚ್ಚಿಸುತ್ತ ಆತನಲ್ಲಿ ಅರುಹು ಎಚ್ಚರಗೊಳ್ಳುವಂತೆ ಮಾಡುವವು.

ಕೊನೆಯ ಘಟನೆ: ಹರಿಹರನ ಬಸವರಾಜದೇವರ ರಗಳೆಯ ಇಪ್ಪತ್ತೈದು ಸ್ಥಲಗಳಲ್ಲಿ ಕೇವಲ ಹದಿಮೂರು ಸ್ಥಲಗಳು ಮಾತ್ರ ದೊರೆತಿದ್ದು ಹದಿಮೂರನೆಯ ಸ್ಥಲ ಮುಕ್ತಾಯವಾಗುವುದರ ಮುನ್ನವೇ ಕಾವ್ಯ ತ್ರುಟಿತವಾಗಿದೆ. ಸೋಜಿಗದ ಸಂಗತಿಯೆಂದರೆ – ಕಥೆ ಮುಗಿಯುವ ಮೊದಲೇ ಬಿಜ್ಜಳನ ಕೊನೆಯನ್ನು ಸೂಚಿಸುವ ಕೆಲವು ಚರಣಗಳು ಬರುತ್ತವೆ. ಈ ಸ್ಥಿತಿಯಲ್ಲಿ ಬಂದ ಚರಣಗಳನ್ನು ಮೂಲಕಾವ್ಯದ ಭಾಗವೆಂದು ನಂಬುವುದೂ ಕಠಕಷ್ಟವಾಗುತ್ತದೆ. ಆ ಚರಣಗಳಿಂದ ಶಿವದ್ರೋಹಂಗೈದ ಬಿಜ್ಜಳನ ಕೊಲೆಮಾಡಿಸಿ ಬಸವಣ್ಣನು ಕಪ್ಪಡಿ ಸಂಗಮೇಶನಲ್ಲಿಗೆ ಬಂದು ಐಕ್ಯನಾದನೆಂದು ತಿಳಿದುಬರುತ್ತದೆ.

ಭೀಮಕವಿಯು ಈ ಕೊನೆಯ ಚಿತ್ರವನ್ನು ಹೀಗೆ ರೂಪಿಸಿದ್ದಾನೆ: ಬಿಜ್ಜಳ ಬಸವಣ್ಣನವರ ನಡುವೆ ನಡೆದ ವಿರಸಪ್ರಸಂಗಗಳು ಅಧಿಕವಾಗುತ್ತ ನಡೆಯಲು ಮುಂದೆ ದುರ್ಘಟನೆಗಳು ನಡೆಯುವ ಸೂಚನೆಗಳು ಬಸವಣ್ಣನಿಗೆ ಗೋಚರವಾಗುತ್ತವೆ. ಅಂಥ ಪ್ರಸಂಗ ಬಂದಲ್ಲಿ ಶಿವದ್ರೋಹಕ್ಕೆ ಪ್ರತೀಕಾರ ಮಾಡಿವ ಆಶ್ವಾಸನವನ್ನು ಅವರು ಜಗದೇವನಿಂದ ತೆಗೆದುಕೊಳ್ಳುವರು. ಬಿಜ್ಜಳನು ನಿರಪರಾಧಿಗಳಾದ ಅಳ್ಳಯ್ಯ ಮಧುವಯ್ಯಗಳ ಕಣ್ಣು ಕೀಳಿಸುವನು. ಶಿವದ್ರೋಹವಾದುದಕ್ಕೆ ಮನನೊಂದು ಇನ್ನು ಕಲ್ಯಾಣದಲ್ಲಿರಲಾಗದೆಂದು ಬಸವಣ್ಣನವರು ಜಗದೇವನನ್ನು ಕರೆಸಿ 'ತದ್ರೋಹಿಯನಪಹರಿಸಿ ನನ್ನಿಯಂ ಮೆರೆಯಬೇಕು' ಎಂದು ಬೆಸನಿತ್ತು ಸಂಗಮಕ್ಕೆ ಹೋದರು. ಜಗದೇವನು ಸಹಾಯಕರಾದ ಮಲ್ಲಿಹಾಗೂ ಬೊಮ್ಮಿಗಳೊಡನೆ ಬಿಜ್ಜಳನ ವಧೆಗೈದನು. ಬಸವಣ್ಣನವರು ಇನ್ನೂ ಕಪ್ಪಡಿಯ ಮಾರ್ಗದಲ್ಲಿರುವಾಗಲೇ ಈ ವಾರ್ತೆ ಅವರಿಗೆ ಮುಟ್ಟುವುದು.

ಸಿಂಗಿರಾಜನ ಕಾವ್ಯ ಮುಕ್ತಾಯವಾಗುವುದು ಸುಖಾಂತದಲ್ಲಿ. ಬಿಜ್ಜಳನ ಕೊಲೆಯ ಪ್ರಸಂಗವೇ ಅಲ್ಲಿ ಬರುವುದಿಲ್ಲ. ಬಸವಣ್ಣನವರು ಶೂನ್ಯಸಿಂಹಾಸನವನ್ನು ನಿರ್ಮಿಸಿರುವುದನ್ನು ಕಂಡು ಬಿಜ್ಜಳನಿಗೆ ಜಾತಿಸ್ಮರತ್ವವುಂಟಾಗುವುದು. ಇಂತಹ ಕಾರಣಿಕ ಪುರುಷನು ಮಂತ್ರಿಯಾಗಿರುವುದು ಅನುಚಿತವೆಂದು ಬಗೆವನು. ತಾನು ಮಾಡಿದ ಪಾಪಕೃತ್ಯಗಳಿಗಾಗಿ ಮನನೊಂದು ಬಸವಣ್ಣನವರ ಪಾದಕ್ಕೆ ಬೀಳುವನು. ಚೆನ್ನಬಸವಣ್ಣನವರಿಗೆ ದಂಡನಾಥ ಪದವಿಯನ್ನು ಕೊಡಿಸಿ ಬಸವಣ್ಣ

CC-0. Jangamwadi Math Collection. Digitized by eGangotri

ನವರು ಗುರು ಲಿಂಗ ಜಂಗಮ ಸೇವೆಯಲ್ಲಿ ಕಾಲಕಳೆಯುವಂತೆ ಆಸ್ಪದ ಮಾಡಿ ಕೊಡುವನು.

ಬಸವಚರಿತಾವತಾರದ ಬೃಹದ್ರೂಪವನ್ನು ನೋಡಿದುದಾಯಿತು. ಒಬ್ಬೊಬ್ಬರ ನಿರೂಪಣೆ ಒಂದೊಂದು ರೀತಿಯಾಗಿದೆ. ಎಲ್ಲರೂ ಕೇಳಿಕೆಯ ಆಧಾರದಿಂದಲೇ ಬರೆದವರು. ಕಾಲದೃಷ್ಟಿಯಿಂದ ಹರಿಹರ, ಪಾಲ್ಕುರಿಕೆ ಸೋಮನಾಥ ಇವರು ಬಸವಣ್ಣನವರಿಗೆ ತೀರ ಹತ್ತಿರದವರೇನೋ ನಿಜ. ಆದರೆ, ಅವರಿಗೂ ಎಲ್ಲ ಐತಿಹಾಸಿಕ ಸಂಗತಿಗಳು ಖಚಿತವಾಗಿ ದೊರೆತಿವೆಯೆಂದು ಹೇಳಲು ಬರುವಂತಿಲ್ಲ. ಬಸವಚರಿತೆ ನಿಷ್ಕೃಷ್ಟವಾಗಿ ಉಳಿದುಬಂದಿದ್ದರೆ, ಇಳಿದು ಬಂದಿದ್ದರೆ ಎಲ್ಲರೂ ಎಲ್ಲ ಘಟನೆಗಳನ್ನೂ ಒಂದೇ ರೀತಿಯಾಗಿ ನಿರೂಪಿಸಬಹುದಾಗಿದ್ದಿತು. ಹಾಗಿಲ್ಲದುದರಿಂದ ಯಾವುದು ಸತ್ಯ, ಯಾವುದು ಅಸತ್ಯ ಎಂಬುದನ್ನು ನಿಷ್ಕರ್ಷಿಸಬೇಕಾಗುತ್ತದೆ. ಇಂತಹ ನಿಷ್ಕರ್ಷಣೆಯ ಕಾರ್ಯವನ್ನು ಸಿಂಗಿರಾಜನು ಮಾಡಿದಂತೆ ತೋರುತ್ತದೆ. ಶಿವಶರಣರ ಚರಿತ್ರೆಗಳನ್ನು ನಿರ್ಮಿಸುವಲ್ಲಿ ಅವರ ವಚನಗಳಷ್ಟು ಪ್ರಬಲವಾದ ಆಧಾರಗಳು ಬೇರೆ ಯಾವವೂ ಇಲ್ಲ. ಸಿಂಗಿರಾಜಪುರಾಣದ ಅಗ್ಗಳಿಕೆಯೆಂದರೆ – ಆತನು ಬಸವೇಶ್ವರಾದಿಗಳ ವಚನಗಳನ್ನು ಬಹುಸೂಕ್ಷ್ಮವಾಗಿ ಪರಿಶೀಲನೆಮಾಡಿ ಅಲ್ಲಿರುವ ಐತಿಹಾಸಿಕ ಅಂಶಗಳ ಕಡೆಗೆ ವಿಶೇಷವಾಗಿ ಗಮನಕೊಟ್ಟಿರುವನು. ಅಲ್ಲದೆ, ತನ್ನ ಪೂರ್ವದಲ್ಲಿ ಆಗಿಹೋದ ಹರಿಹರ ಭೀಮಕವಿ ಈ ಉಭಯ ಸಂಪ್ರದಾಯಗಳ ಕಥಾಸರಣಿಯನ್ನು ಒರೆಗೆ ಹಚ್ಚಿ, ಅಲ್ಲಿ ನಿರೂಪಿತವಾದ ಘಟನೆಗಳ ಸಾಧು ಅಸಾಧುತ್ವವನ್ನು ನಿಷ್ಕರ್ಷಿಸಿಕೊಂಡು ತನ್ನ ಕಥೆಯನ್ನು ಹಮ್ಮಿರುವನು. ಆತನು ಬಸವಣ್ಣನವರ ಮದುವೆಯ ಪ್ರಸ್ತಾಪವನ್ನು ವಿವರಿಸಿರುವುದು, ಬಿಜ್ಜಳನ ಕೊಲೆಯ ಪ್ರಸ್ತಾಪವನ್ನೇ ಎತ್ತದೆ ಆ ದುರ್ಘಟನೆಯಿಂದ ಬಸವಣ್ಣನವರನ್ನು ಬಹು ದೂರದಲ್ಲಿರಿಸಿರುವುದು ಆತನ ಐತಿಹಾಸಿಕ ದೃಷ್ಟಿಯ ದ್ಯೋತಕವಾಗಿದೆ. ದಯೆಯೇ ಧರ್ಮದ ಮೂಲವೆಂದು ನುಡಿದಾತ, ನಡೆದಾತ, ಮರಣವೇ ಮಹಾನವಮಿ ಎಂಬ ತತ್ವವನ್ನು ಮೆರೆದಾತ ಬಿಜ್ಜಳನ ಕೊಲೆಗೆ ಕಾರಣನಾಗುವುದು, ಅಲ್ಲಿಂದ ಪಾರಾಗಲು ಕಪ್ಪಡಿ ಸಂಗಮಕ್ಕೆ ಹೋಗುವುದು ಅಸಾಧ್ಯ, ಅಸಂಭವ. ವಚನವಾಙ್ಮಯದ ನಿರೀಕ್ಷಣೆಯಿಂದ ಸಿಂಗಿರಾಜನಿಗೆ ಈ ಸತ್ಯಾಂಶ ವೇದ್ಯವಾದಂತೆ ಕಂಡುಬರುತ್ತದೆ. ಅಂತೆಯೇ ಬಸವಚರಿತೆಯನ್ನು ನಿರೂಪಿಸುವ ಸಿಂಗಿರಾಜನು ಬಿಜ್ಜಳನ ಕೊಲೆಯ ಪ್ರಸಂಗವನ್ನು ಎತ್ತುವುದೇ ಇಲ್ಲ. ಏಕೆಂದರೆ, ಅದಕ್ಕೂ ಬಸವಣ್ಣನಿಗೂ ಸಂಬಂಧವೇ ಇಲ್ಲ. ಬಿಜ್ಜಳನ ಕೊಲೆಯ ಪ್ರಸ್ತಾಪ ಸಿಂಗಿರಾಜಪುರಾಣದಲ್ಲಿ ಬಾರದಿರುವುದರಿಂದ ಅದರ ಅರಿವು ಸಿಂಗಿರಾಜನಿಗೆ ಇದ್ದಿಲ್ಲವೆಂತಲ್ಲ; ಬಿಜ್ಜಳನ ಕೊಲೆಯಾದುದು ಸೂರ್ಯಪ್ರಕಾ

CC-0. Jangamwadi Math Collection. Digitized by eGangotri

ದಷ್ಟು ಸ್ಪಷ್ಟ; ಸತ್ಯ. ಇಂತಹ ಐತಿಹಾಸಿಕ ಸತ್ಯದ ಅರಿವು ಸಿಂಗಿರಾಜನಿಗೆ ಇಲ್ಲದಿರುವುದೆಂತು? ಕಾವ್ಯಾರಂಭದಲ್ಲಿ ಪರಶಿವನು ಸಿಂಹಕೇಶ ದ್ರಾವಿಡರನ್ನು ಬಿಜ್ಜಳ ಕರ್ಣದೇವರಾಗಿ ಮರ್ತ್ಯಕ್ಕೆ ಅವತರಿಸುವಂತೆ ಆಜ್ಞಾಪಿಸುವಲ್ಲಿ 'ಭಕ್ತರಿಂದಲೇ ನಿಮ್ಮ ಅಳಿವಪ್ಪುದು' ಎಂದು ಹೇಳುವನು. ಈ ಮಾತಿನಲ್ಲಿಯೇ ಶಿವಭಕ್ತರಿಗೂ ಬಿಜ್ಜಳನಿಗೂ ನಡೆದ ತಿಕ್ಕಾಟ, ಪರವಾದಿಗಳ ಪಕ್ಷವನ್ನು ವಹಿಸಿ ಬಿಜ್ಜಳನು ಗೈದ ಶಿವದ್ರೋಹ, ಮಾಡಿದ ಕೊಲೆ, ಶಿವಭಕ್ತರು ತತ್ಪ್ರತೀಕಾರಾರ್ಥವಾಗಿ ಮಾಡಿದ ಬಿಜ್ಜಳನ ಕೊಲೆ ಇವೆಲ್ಲವೂ ಧ್ವನಿತವಾಗುವಂತಿವೆ.

ಆದರೆ, ಸಿಂಗಿರಾಜಪುರಾಣವು ಕೇವಲ ಐತಿಹಾಸಿಕ ದೃಷ್ಟಿಯಿಂದಲೇ ಬರೆದುದು ಎಂದು ಇದರರ್ಥವಲ್ಲ. ಬಸವಣ್ಣನು ಮೆರೆದ ಪವಾಡಗಳನ್ನು ಬಣ್ಣಿಸುವುದು ಸಿಂಗಿರಾಜನ ಉದ್ದೇಶವಾದರೂ ಐತಿಹಾಸಿಕ ಸತ್ಯಗಳ ಆಧಾರದ ಮೇಲೆ ಪವಾಡಗಳ ಮಂದಿರವನ್ನು ಕಟ್ಟಿರುವನು. ಬಸವಣ್ಣನವರು ಪವಾಡಗಳನ್ನು ಮೆರೆದುದು ಅವರ ಹಾಗೂ ಮಿಕ್ಕ ಶರಣರ ವಚನಗಳಿಂದಲೇ ತಿಳಿದುಬರುತ್ತದೆ. ಅಂದಮೇಲೆ ಸಿಂಗಿರಾಜನು ವಿವರಿಸುವ ಪವಾಡಗಳು ಕಾಲ್ಪನಿಕವಾದುವೆಂದು ಹೇಳುವುದು ಹೇಗೆ? ಅತ್ಯುಕ್ತಿಯ ಬಣ್ಣನೆಯು ಇರಬಹುದು ಅಲ್ಲಿ; ಆದರೆ, ಸತ್ಯಾಂಶಕ್ಕೆ ಚ್ಯುತಿಯಿಲ್ಲವೆಂಬುದನ್ನು ಗಮನಿಸಬೇಕು. ಮಿಕ್ಕ ಶಿವಶರಣರ ಕಥೆಗಳನ್ನು ವಿವರಿಸುವಲ್ಲಿಯೇ ಹೆಚ್ಚಿನ ಕಾವ್ಯಭಾಗವನ್ನು ಮೀಸಲಾಗಿಟ್ಟ ಪಾಲ್ಕುರಿಕೆ ಸೋಮನಾಥ, ಭೀಮಕವಿಗಳಿಗಿಂತಲೂ ಕೇವಲ ಬಸವಣ್ಣನವರ ಚರಿತೆ, ಪವಾಡ, ವ್ಯಕ್ತಿತ್ವಗಳ ಕಡೆಗೆ ಸಿಂಗಿರಾಜನು ತನ್ನ ಕಾವ್ಯದೃಷ್ಟಿಯನ್ನು ಕೇಂದ್ರೀಕರಿಸಿರುವುದು ಅತಿ ಮಹತ್ವವಾದುದು.[೧೧೧] ಇಷ್ಟಾದರೂ ಇವೆಲ್ಲ ಕಾವ್ಯಗಳನ್ನೂ ಮಿಕ್ಕ ಆಧಾರಗಳನ್ನೂ ಸಂಶೋಧನೆಮಾಡಿ, ಪರಿಶೀಲನೆಮಾಡಿ ಬಸವಚರಿತೆಯನ್ನು ನಿರ್ಮಿಸುವುದು ಅತ್ಯವಶ್ಯವಾಗಿದೆ.

ಬಸವಪುರಾಣದ ಕಥಾವಸ್ತು

ಬಸವಪುರಾಣದ ಕಥಾವಸ್ತು ಬಸವಣ್ಣನವರ ಜೀವನಕ್ಕೆ ನೇರವಾಗಿ ಸಂಬಂಧಪಟ್ಟುದು. ಇದು 'ಪುರಾಣ'ವಾಗಬೇಕೆಂಬ ಉದ್ದೇಶದಿಂದ ಜನತೆಯಲ್ಲಿ ಭಕ್ತಿಭಾವನೆಯನ್ನು ಹುಟ್ಟಿಸುವ ಶಿವಭಕ್ತರ ಅನೇಕ ಕಥೆಗಳನ್ನು ಇಲ್ಲಿ ಅಳವಡಿಸಲಾಗಿದೆ. ಅವುಗಳ ವಿವರ ಹೀಗೆ:

---

೧೧೧ ಸಿಂಗಿರಾಜನು ಹೇಳುವ ೬೪ ಪವಾಡಗಳನ್ನೇ ವಿರೂಪಾಕ್ಷಪಂಡಿತನು ಯಥಾವತ್ತಾಗಿ ವಿವರಿಸುವನು

CC-0. Jangamwadi Math Collection. Digitized by eGangotri

೧. ಮುಗ್ಧ ಸಂಗಯ್ಯನು ವೇಶ್ಯಾಸ್ತ್ರೀಯ ಲಾಂಛನಗಳನ್ನೆಲ್ಲ ಶಿವಲಾಂಛನಗಳೆಂದು ಬಗೆದು ಬಣ್ಣಿಸುವುದನ್ನು ಕಂಡು ಆಶ್ಚರಿಗೊಂಡ ಚನ್ನಬಸವಣ್ಣನಿಗೆ ಬಸವಣ್ಣನವರು ಕೆಳಗಣ ಮುಗ್ಧಭಕ್ತರ ಕಥೆಗಳನ್ನು ಸುರುವರು.[೧೧೯]

(i) ರುದ್ರಪಶುಪತಿ (ii) ನಕ್ಕನೈನಾರು (iii) ಕೋಳೂರು ಕೊಡಗೂಸು (iv) ಅಮ್ಮವ್ವೆ (v) ದೀಪದ ಕಲಿಯನಾರು (vi) ನಾಟ್ಯನಮಿತ್ತಂಡಿ (vii) ಕಣ್ಣಪ್ಪ (viii) ಕಲಿಯಂಬ.

೨. ಬಿಜ್ಜಳನು ಕೊಂಡೆಯರ ಮಾತನ್ನು ಕೇಳಿ ಮಡಿವಾಳ ಮಾಚಿದೇವನ ಮೇಲೆ ಮದ್ದಾನೆಯನ್ನು ಏರಿಬಿಡಲು, ಮಾಚಿದೇವನು ಅದನ್ನು ಇರಿದು ಕೊಂದು ಮರಳಿ ಪ್ರಾಣದಾನಮಾಡಿದನು. 'ಶಿವಭಕ್ತರು ಮಲೆತಡೆ ಕೊಲುವವರು; ಶರಣನೆ ಕಾಯುವವರು' ಎಂದು ಅವರ ಮಹಿಮೆಯನ್ನು ವಿವರಿಸಲು ಬಸವಣ್ಣನು ಬಿಜ್ಜಳನಿಗೆ ಕೆಳಗಣ ವೀರಭಕ್ತರ ಕಥೆಗಳನ್ನು ಹೇಳುವನು.

(i) ಇರಿಭಕ್ತ. (ii) ಬಾಹೂರ ಬೊಮ್ಮಯ್ಯ.

೩. ಬಸವಣ್ಣನು 'ಬೇಡುವವರಿಲ್ಲದೆ ಬಡವಾದೆನೆ'ಂಬ ವಚನವನ್ನು ಹಾಡಲು ಅದರ ಹಿಂದಿರುವ ಭಕ್ತಿಯ ಮದಾಂಕುರವನ್ನು ಕತ್ತರಿಸಲು ಮಡಿವಾಳ ಮಾಚಯ್ಯನು ಕೆಳಗಣ ಆದಿಶರಣರ ಕಥೆಗಳನ್ನು ಹೇಳುವನು.

(i) ಶಂಕರದಾಸಿಮಯ್ಯ (ii) ಸಿರಿಯಾಳ (iii) ನಿಂಬಿಯಕ್ಕ (iv) ಹಲಾಯುಧ (v) ಮೆರೆಮಿಂಡದೇವ (vi) ನಂಬಿಯಣ್ಣ.

೪. ನಂಬಿಯಣ್ಣನು ಅರುವತ್ತೆರಡು ಜನ ಪುರಾತನರ ಚರಿತೆಯನ್ನು ಹಾಡಿದುದನ್ನು ಮಾಚಿದೇವನು ಬಸವರಸರಿಗೆ ಉಸುರುವನು.

೫. ಏಕಾಂತರಾಮಯ್ಯನು ಜಿನಸಮಯವನ್ನು ಎದುರಿಸಿ ಶಿವಸಮಯವನ್ನು ಪ್ರತಿಷ್ಠಾಪಿಸಿದ ಕೆಳಗಣ ಕಥೆಗಳನ್ನು ಬಿಜ್ಜಳನಿಗೆ ಹೇಳುವನು:

(i) ತಿರುವಾಕರೀಶ (ವಾಗೀಶ) (ii) ಇರಿವತಾಂಡಾರಿ (iii) ಪಿಳ್ಳೈನೈನಾರ (iv) ನಿಡುಮಾರ (v) ನಮಿನಂದಿ.

---

೧೧೯ ಕರಮೆಸೆವ ನೂತನ ಪುರಾತನ
ವರಗಣಂಗಳೊಳೆಣಿಸಿ ತೋಱಲು
ಧರೆಯೊಳಿಂತಹ ಮುಗ್ಧರೊಳರೇಯೆಂದು ಬಿನ್ನೈಸೆ
ಪರಮ ಹರುಷದಿ ಮುಗ್ಧಭಕ್ತರ
ಚರಿತೆಗಳನೊರೆದಪೆವೆನುತ್ತಂ
ವಿರಚಿಸಲು ತೊಡಗಿದನು ಬಸವಂ ಚನ್ನಬಸವಂಗೆ – ಬ.ಪು. ಸಂ. ೧೧, ಪು.೫೯

CC-0. Jangamwadi Math Collection. Digitized by eGangotri

೬. ಬಸವಣ್ಣನು ಬಿಜ್ಜಳನಿಗೆ ಶಿವಭಕ್ತರ ಮಹಿಮೆಯನ್ನು ವಿವರಿಸಲು ಹೇಳಿದ ಕಥೆಗಳು:

(i) ಹಾವಿನಹಾಳ ಕಲ್ಲಯ್ಯ. (ii) ಬಿಬ್ಬ ಬಾಚಯ್ಯ.
(iii) ಮಾದರ ದೂಡಯ್ಯ. (iv) ಭೀಮಯ್ಯ.
(v) ಶ್ವಪಚಯ್ಯ. (vi) ಉದ್ಭಟ.
(vii) ಕಕ್ಕಯ್ಯ. (viii) ಕಿಂಭಾವಿ ಭೋಗಣ್ಣ.
(ix) ವರದಾನಿ ಗುಡ್ಡವ್ವೆ.

ಭೀಮಕವಿಯ ಬಸವಪುರಾಣ ಪಾಲ್ಕುರಿಕೆ ಸೋಮನಾಥನ ಬಸವಪುರಾಣವನ್ನು[೧೨೦] ಅನುಕರಿಸುತ್ತಿದ್ದರೂ ತೆಲುಗು ಬಸವಪುರಾಣದಲ್ಲಿಲ್ಲದ ಹತ್ತೊಂಬತ್ತು ಕಥೆಗಳು ಕನ್ನಡ ಬಸವಪುರಾಣದಲ್ಲೂ ಹಾಗೂ ಬಸವರಾಜವಿಜಯದಲ್ಲೂ ಕಂಡುಬರುತ್ತವೆ. ಹಾಗೆಯೇ ಸಂಸ್ಕೃತ ಬಸವಪುರಾಣದಲ್ಲಿಲ್ಲದ ಕೆಲವು ಕಥೆಗಳನ್ನು ಬಸವರಾಜವಿಜಯದಲ್ಲಿ ಕಾಣುತ್ತೇವೆ. ಈ ನಾಲ್ಕೂ ಕಾವ್ಯಗಳಲ್ಲಿ ಬಂದ ಮಹತ್ವದ ಸಂಗತಿ ಹಾಗೂ ಕಥೆಗಳನ್ನು ಒರೆಗೆ ಹಚ್ಚಿ ನೋಡಿದರೆ ಈ ಮಾತಿನ ಅರ್ಥವಾಗುವುದು.

ಕಥಾರಂಭದಲ್ಲಿ ಕೈಲಾಸದಲ್ಲಿ ಶಿವನ ಆಸ್ಥಾನಕ್ಕೆ ನಾರದನ ಆಗಮನ ನಾಲ್ಕು ಕಾವ್ಯಗಳಲ್ಲಿಯೂ ಸಾಮಾನ್ಯವಾಗಿದೆ. ಶಿವನು ಪಾರ್ವತಿಗೆ ಹೇಳಿದಂತೆ ನಂದಿಕೇಶ್ವರ ಶಿಲಾದನ ವೃತ್ತಾಂತವನ್ನು ತೆಲುಗು-ಕನ್ನಡ-ಸಂಸ್ಕೃತ ಬಸವಪುರಾಣಗಳು ಹೇಳುತ್ತವೆ. ಬಸವರಾಜವಿಜಯದಲ್ಲಿ ನಾರದನು ಶಿವನಿಗೆ ಭೂಲೋಕದ ವರ್ತಮಾನವನ್ನು ಅರುಹಿದುದು ಬರುತ್ತದೆ. ಶಿಲಾದನಿಗೆ ಶಿವನು ವರವಿತ್ತ ವಿಷಯದ ಉಲ್ಲೇಖ ನಾಲ್ಕು ಕಾವ್ಯಗಳಲ್ಲಿಯೂ ಬಂದಿದೆ. ಬಸವಣ್ಣನವರ ಚರಿತ್ರೆಯಲ್ಲಿ ಅಳವಡಿಸಲಾದ ಸಂಗತಿ ಹಾಗೂ ಕಥೆಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು ಇಲ್ಲಿ ಎತ್ತಿ ತೋರಿಸುತ್ತಿದ್ದೇವೆ:

---

೧೨೦ ಈ ಗ್ರಂಥವು ಅಚ್ಚಾಗಿಲ್ಲ. ಈ ಗ್ರಂಥವನ್ನು ಸಂಸ್ಕರಣ ಮಾಡುತ್ತಿರುವ ಪೂಜ್ಯ ಡಾ. ಎಸ್. ಸಿ. ನಂದೀಮಠರವರು ಈ ವಿಷಯವನ್ನು ದಯವಿಟ್ಟು ಒದಗಿಸಿಕೊಟ್ಟಿದ್ದಾರೆ.

CC-0. Jangamwadi Math Collection. Digitized by eGangotri

ಸಂಗತಿ ಅಥವಾ ಕಥೆ	ತೆಲುಗು ಬಸವಪುರಾಣ	ಕನ್ನಡ ಬಸವಪುರಾಣ	ಸಂಸ್ಕೃತ ಬಸವ ಪುರಾಣ
ಬಸವಣ್ಣನವರ ಜನನ	ಇದೆ	ಇದೆ	ಇದೆ
ಉಪನಯನ ನಿರಾಕರಣ	,,	,,	,,
ವಿವಾಹ, ಕಲ್ಯಾಣಗಮನ	,,	,,	,,
ಭಕ್ತಿಪ್ರತಿಜ್ಞೆ	,,	,,	,,
ಪ್ರಭುವಿನ ಕಲ್ಯಾಣಗಮನ	,,	,,	,,
ಬದನೆಕಾಯಿಯ ಪವಾಡ	ಪ್ರ. ೩೩	ಪ್ರ. ೧೨೫, ಪ. ೨	,,
ಬಳ್ಳೇಶಮಲ್ಲಯ್ಯನ ಕಥೆ	,,	ಸಂ. ೮, ಪ. ೭–೧೧	,,
ಕಾಟಕೋಟನ ಕಥೆ	ಪ್ರ. ೩೮	೮.೧೨	,,
ಮುತ್ತಿನ ಪವಾಡ	,,	೮.೨೧	,,
ಮೊರಟದ ಬಂಕಯ್ಯ	ಪ್ರ. ೩೯	೮.೨೩	,,
ಗೋಪಮಹಿಳೆಯ ಕಥೆ	ಪ್ರ. ೪೧	೮.೨೮	,,
ಪೊನ್ನಾಂಬಲನಾಥನ ಕಥೆ	ತಿರುಚಿಟ್ಟಿಂಬುಲ ಕಥೆ ಪ್ರ. ೪೨	ತಿರುಚಿಟ್ಟಿಂಬುಲ ಕಥೆ ೯.೯	ಇಲ್ಲ
ಸಿದ್ಧರಾಮಯ್ಯ ಕೈಲಾಸಕ್ಕೆ ಹೋಗಿ ಬಂದುದು	ಇದೆ	೯.೩೪	ಇದೆ
ಪೇಳಿಗೆಯ ಪವಾಡ	ಪ್ರ. ೪೭	೧೦.೧–೧೪	,,
ಚೊಕ್ಕನಾಥನ ಕಥೆ	ನಕ್ಕಿಲುಗುಚ್ಚಿ ಮುಲೈನ ಕಥೆ	ಚೊಕ್ಕನೈನಾರು ಕಥೆ ೧೦.೧೬	,,
ಬಸವಣ್ಣನ ಪಟ್ಟಿದರಸಿಯ ಚೀಲದ ಪವಾಡ	ಪ್ರ. ೪೮	೧೦.೨೧	,,
ಇಡುಗುಡಿನಾಥನ ಕಥೆ	ಪ್ರ. ೪೯	೧೦.೩೬	ಇಲ್ಲ
ಮಾಯಾದೇವಿಯ ಮಣಿತಾಟಂಕ	ಇಲ್ಲ	ಇದೆ	ಇದೆ
ಮುಗ್ಧಸಂಗಯ್ಯನ ಕಥೆ	ಪ್ರ. ೫೦	ಸಂ. ೧೧	,,
ಮುಗ್ಧಭಕ್ತರ ಕಥೆಗಳು	ಇದೆ	ಇದೆ	,,
ರುದ್ರಪಶುಪತಿಗಳ ಕಥೆ	ಪ್ರ. ೫೫	೧೨.೨	,,
ತಿರುನೀಲನಕ್ಕರ ಕಥೆ	ನಕ್ಕನೈನಾರನ ಕಥೆ ಪ್ರ. ೫೭	ನಕ್ಕನೈನಾರನ ಕಥೆ ೧೨.೧೯	,,
ಕೋಳೂರ ಕೊಡಗೂಸಿನ ಕಥೆ	ಪ್ರ. ೬೧	ಸಂ. ೧೩	,,
ಬಿಜ್ಜಮಹಾದೇವಿಯ ಕಥೆ	ಪ್ರ. ೫೮	ಸಂ. ೧೬	,,
ದೀಪದ ಕಲಿಯಾರರ ಕಥೆ	ಪ್ರ. ೬೩	ಸಂ. ೧೫	,,

CC-0. Jangamwadi Math Collection. Digitized by eGangotri

ನಾಟ್ಯನಮಿತ್ತಂಡಿಯ ಕಥೆ	ಪು. ೬೮	ಸಂ. ೧೬	ಇದೆ
ಕಣ್ಣಪ್ಪನ ಕಥೆ	ಪು. ೭೦	ಸಂ. ೧೭	,,
ಕಲಿಯಂಬಿನ ಕಥೆ	ಪು. ೭೭	೧೭.೧೧೦	,,
ಸಕಲೇಶ ಮಾದರಸನ ಕಥೆ	,,	೧೮.೧೯	,,
ಮಡಿವಾಳಯ್ಯನ ಕಥೆ	ಪು. ೮೭	ಸಂ. ೨೦	,,
ಇಜಿವತ್ತನ ಕಥೆ	ಇರುವದಾಂಡಾರಿ ಪ್ರ. ೯೧	ಇಜಿಭಕ್ತ ೨೧.೧	,,
ಬಾಹೂರ ಬೊಮ್ಮಯ್ಯನ ಕಥೆ	ಪು. ೯೨	೨೧.೨೫	,,
ಶಂಕರದಾಸಿಮಯ್ಯನ ಕಥೆ	ಪು. ೯೬	೨೨.೧	,,
ಜಗದೇಕಮಲ್ಲನ ಕಥೆ	ಪು. ೯೮	೨೨.೨೧	ಇಲ್ಲ
ಸಿರಿಯಾಳ್ಕನ ಕಥೆ	ಪು. ೧೦೦	೨೩.೧	ಇದೆ
ನಿಂಬಿಯ ಕಥೆ	ನಿಮ್ಮವ್ವಕಥೆ ಪು. ೧೦೩	೨೩.೫೦	,,
ನರಸಿಂಹನರಾಧಿಪನ ಕಥೆ	ಪು. ೧೦೫	೨೫.೭೭	,,
ಹಲಾಯುಧಯ್ಯನ ಕಥೆ	ಪು. ೧೦೬	ಸಂ. ೨೪	,,
ಮೆಱಿಮಿಂಡದೇವನ ಕಥೆ	ಮಿಂಡನೈನಾರು ಪು. ೧೧೧	೨೫.೧	,,
ವಾಲ್ಮೀಕದೇವನ ಕಥೆ	ಪು. ೧೧೧	೨೫.೧೬	ಇಲ್ಲ
ಬಾಣನ ಕಥೆ	ಪು. ೧೧೫	೨೫.೫೦	,,
ಪಿಟ್ಟವ್ವೆಯ ಕಥೆ	,,	೨೫.೫೪	ಇದೆ
ಕಲಿಕಾಮನ ಕಥೆ	,,	೨೫.೫೬	,,
ನಂಬಿ (ತಿರುಪಾಡು)	ಪು. ೧೧೬	ಸಂ. ೨೬	ಇಲ್ಲ
ಆಣುಮೂರ್ತಿಯ ಕಥೆ	ಏಣುಮೂರ್ತಿಯ ನೈನಾರು ಪು. ೧೧೬	೨೬.೧–೬	,,
ಕಡವಲನಂಬಿಯ ಕಥೆ	ಪು. ೧೧೭	೨೬.೭–೮	ಇಲ್ಲ
ಅತಿಭಕ್ತನ ಕಥೆ	ಪು. ೧೧೮	೨೬.೨೦–೨೭	—
ಅರಿಪಾಲನ ಕಥೆ	ಅರಿವಾಳು ನಯನಾರಿ ಪು. ೧೧೭	ಅರಿವಾಳತಾಂಡಿ ೨೬.೧೫೫–೧೯	—
ಕಲಿನಾಥನ ಕಥೆ	ಪು. ೧೧೭	ಇದೆ	—
ಏಣಾದಿನಾಥನ ಕಥೆ	ಪು. ೧೧೮	೨೬.೨೮–೩೨	—
ಸೇದಿರಾಜನ ಕಥೆ	ಚೇದಿವಲ್ಲಭ ಪು. ೧೧೯	೨೬.೩೫–೩೬	—
ಪಗಲ್ಶೋಳನ ಕಥೆ	ಕರಿಯೂರಿಚೋಡ ಪು. ೧೧೯	ಕರವೂರ ಚೋಳ ೨೬.೩೬–೩೯	ಇದೆ
ಕಲಿಕಂಬನ ಕಥೆ	ಕಲಿಯಂಬನೈನಾರು ಪು. ೧೧೯	ಕಲಿಯಂಬನೈನಾರು ೨೬.೩೯–೪೧	—

CC-0. Jangamwadi Math Collection. Digitized by eGangotri

ಅಮರನೀತಿಯ ಕಥೆ	ಇರುವದಾಂಡಾರಿ ಪು. ೧೨೦	ಇದಾಂಡಾರಿ ೨೬.೪೨–೪೬	ಇದೆ
ಇಳೆಯಾಂಡಗುಡಿಮಾರಯ್ಯನ ಕಥೆ	ಪು. ೧೨೦	೨೬.೪೭–೪೯	—
ಗಣನಾಥನ ಕಥೆ	,,	೨೬.೫೦–೫೬	—
ತಿರುನೀಲಕಂಠನ ಕಥೆ	ಪು. ೧೨೧	೨೬.೫೭–೬೬	ಇದೆ
ಪ್ರೂಸಲನ ಕಥೆ	,,	೨೬.೬೭–೬೮	—
ಕರಿಪಾಲನ ಕಥೆ	ಪು. ೧೨೨	೨೬.೬೮	—
ತಿರುಕುಜುಂಪೆತೊಂಡನ ಕಥೆ	,,	೨೬.೬೯	—
ತಿರುಮೂಲರ ಕಥೆ	,,	೨೬.೬೯	—
ಚಿಜುಪ್ರಲಿಯನಾಥನ ಕಥೆ	,,	೨೬.೭೦	—
ಚಿಜುತ್ತೊಣೆಯರ ಕಥೆ	,,	೨೬.೭೦	—
ಕಿನ್ನರೇಶ್ವರನ ಕಥೆ	ಪು. ೧೨೪	ಸಂ. ೨೭	ಇದೆ
ಕಲಿಕೇತ ಬ್ರಹ್ಮಯ್ಯನ ಕಥೆ	ಪು. ೧೨೯	ಸಂ. ೨೮	,,
ಮೋಳಿಗೆಯ ಮಾರಯ್ಯನ ಕಥೆ	ಪು. ೧೩೨	ಸಂ. ೨೯	,,
ಕನ್ನದ ಬ್ರಹ್ಮಯ್ಯನ ಕಥೆ	ಪು. ೧೩೪	ಸಂ. ೩೦	,,
ಮುಸುಟಿ ಚೌಡಯ್ಯನ ಕಥೆ	ಪು. ೧೩೩	ಸಂ. ೩೧	,,
ಸುರಗಿ ಚೌಡಯ್ಯನ ಕಥೆ	ಪು. ೧೪೨	ಸಂ. ೩೨	,,
ತೆಲುಗು ಜೊಮ್ಮಯ್ಯನ ಕಥೆ	ಪು. ೧೪೪	ಸಂ. ೩೩	,,
ಶಿವಯೋಗನಿದ್ರಾಮುದ್ರೆ	—	ಸಂ. ೩೪	,,
ಕಿನ್ನರಬಸವ ಪ್ರಾಣದಾನ	—	ಸಂ. ೩೫	,,
ತಂಗಟೂರ ಮಾರಿದೇವ	—	ಇದೆ	—
ಮುರಿಯ ಚಂದಯ್ಯ	—	,,	—
ಕೊಂಡಗುಳಿ ಕೇಶಿರಾಜ	—	,,	—
ಮೇದರ ಕೇತಯ್ಯನ ಕಥೆ	—	ಸಂ. ೩೬	—
ದಸರಯ್ಯನ ಕಥೆ	—	ಸಂ. ೩೭	ಇದೆ
ಗುರುಭಕ್ತಯ್ಯನ ಕಥೆ	—	ಸಂ. ೩೮	,,
ಗುರುಭಕ್ತಾಂಡಾರಿಯ ಕಥೆ	—	ಸಂ. ೩೯	,,
ಶ್ವೇತನ ಕಥೆ	—	ಸಂ. ೪೦	,,
ಮಲ್ಲಣನ ಕಥೆ	—	ಇದೆ	,,
ಓಹಿಲಯ್ಯನ ಕಥೆ	—	,,	,,
ಉದ್ಭಟದೇವನ ಕಥೆ	—	,,	,,
ಗುರುಭಕ್ತಾಂಡಾರಿಯ ಕಥೆ	—	,,	,,
ವೇಮನಾರಾಧ್ಯರ ಕಥೆ	—	,,	,,
ಚಿಕ್ಕಮಾದಣ್ಣನ ಕಥೆ	—	,,	,,
ಕದಿರ ರೇಮಯ್ಯನ ಕಥೆ	—	,,	,,
ಏಕಾಂತರಾಮಯ್ಯನ ಕಥೆ	ಪು. ೧೪೪	ಸಂ. ೪೮	,,

CC-0. Jangamwadi Math Collection. Digitized by eGangotri

ವಾಗೀಶ್ವರನ ಕಥೆ	ಪು. ೧೫೦	೪೮.೨೬	ಇದೆ
ಇರುತ್ತಾಂಡಿಯ ಕಥೆ	ಪು. ೧೫೧	೪೮.೪೩	—
ಪಿಳ್ಳೈನೈನಾರರ ಕಥೆ	ಪು. ೧೫೧	೪೯.೧	ಇದೆ.
ನಿಡುಮಾರನ ಕಥೆ	ಪು. ೧೫೪	೪೯.೪೬	,,
ನಮಿನಂದಿಯ ಕಥೆ	ಪು. ೧೫೫	೪೯.೫೩	ಇದೆ
ಸಾಂಬ್ಯತೊಂಡನ ಕಥೆ	ಪು. ೧೫೬	೪೯.೬೨	,,
ಕೋವೂರ ಬೊಮ್ಮಯ್ಯನ ಕಥೆ	ಪು. ೧೫೭	೪೯.೭೬	,,
ದಾಸಿಮಯ್ಯನ ಕಥೆ	ಪು. ೧೫೭	ಸಂ. ೫೦	,,
ಮಾರುಡಿಗಿ ನಾಚಯ್ಯನ ಕಥೆ	ಪು. ೧೬೨	೫೦.೭೪	,,
ಪುಲಿಗೆಜೆಯ ಸೋಮನ ಕಥೆ	ಪು. ೧೬೩	೫೦.೭೬	,,
ವೈಜಾಂಬೆಯ ಕಥೆ	ಪು. ೧೬೩	ಸಂ. ೫೧	,,
ಏಕಾಂತರಾಮಯ್ಯನ ಕಥೆ	ಪು. ೧೬೭	೫೧.೩೦	,,
ಸೊಡ್ಡಳಬಾಚರಸನ ಕಥೆ	ಪು. ೧೬೭	ಸಂ. ೫೨	,,
ಅರಿಯಮನ ಕಥೆ	ಪು. ೧೭೦	೫೨.೩೪	—
ವೀರಶಂಕರನ ಕಥೆ	ಪು. ೧೭೧	೫೨.೫೦	ಇದೆ
ಶಿವಲೆಂಕಮಂಚಣ್ಣನ ಕಥೆ	ಪು. ೧೭೧	೫೨.೫೫	,,
ಶಂಕರದಾಸಿಮಯ್ಯನ ಕಥೆ	ಪು. ೧೭೩	೫೨.೬೯	,,
ಶಿವನಾಗಮಯ್ಯನ ಕಥೆ	ಇದೆ	ಸಂ. ೫೪	,,
ಹಾವಿನಹಾಳ ಕಲ್ಲಯ್ಯನ ಕಥೆ	ಪು. ೧೮೨	೫೪.೨೬	,,
ಬಿಬ್ಬಿ ಬಾಚಯ್ಯನ ಕಥೆ	ಪು. ೧೮೪	ಸಂ. ೫೫	—
ಮಾದರ ದೂಡಯ್ಯನ ಕಥೆ	ಪು. ೧೮೮	೫೫.೫೨	ಇದೆ
ಭೀಮಯ್ಯನ ಕಥೆ	ಪು. ೧೮೮	೫೫.೫೭	,,
ಶ್ವಪಚಯ್ಯನ ಕಥೆ	ಪು. ೧೮೮	೫೬.೧	,,
ಉದ್ಧಟಿಯ್ಯನ ಕಥೆ	ಪು. ೧೮೯	೫೬.೬	,,
ಕಕ್ಕಯ್ಯನ ಕಥೆ	ಪು. ೧೯೦	೫೬.೨೭	,,
ಕೆಂಭಾವಿಭೋಗಣ್ಣನ ಕಥೆ	ಪು. ೧೯೧	೫೬.೩೧	,,
ಗುಡ್ಡವ್ವೆಯ ಕಥೆ	ಪು. ೧೯೩	೫೬.೫೬	,,
ಕಜ್ಜಾಯದ ಪವಾಡ	ಇಲ್ಲ	೫೬.೯೦	—
ಕಲ್ಯಾಣದ ನೂತನ ಭಕ್ತರು	ಪು. ೧೯೫	೫೭.೧–೫೪	—
ವಿಷದ ಪವಾಡ	ಪು. ೧೯೯	ಸಂ. ೫೭.೫೮	ಇದೆ
ಜಗದೇವಯ್ಯನ ಕಥೆ	ಪು. ೨೦೩	೫೯.೧	,,
ಏಲೇಶ್ವರ ಕೇತಯ್ಯನ ಕಥೆ	ಪು. ೨೦೪	೫೯.೧೨	—
ಸೌಂದರನಾಚಯ್ಯನ ಕಥೆ	ಪು. ೨೦೬	೫೯.೩೭	—
ಹರಳಯ್ಯ ಮಧುವಯ್ಯಗಳ ಕಥೆ	ಪು. ೨೦೮	೬೦.೧	ಇದೆ

ಸಂಗಮನಾಥನಲ್ಲಿ ಬಸವಣ್ಣನವರ ಐಕ್ಯ ನಾಲ್ಕರಲ್ಲಿಯೂ ಸಾಮಾನ್ಯವಾಗಿದೆ.

CC-0. Jangamwadi Math Collection. Digitized by eGangotri

ಬಸವಪುರಾಣದ ಸಂದೇಶ

ಬಸವಪುರಾಣವು ಕನ್ನಡದ ಬೃಹತ್‌ಕಾವ್ಯಗಳಲ್ಲಿ ಒಂದು. ಕನ್ನಡದ ರಾಜಷಟ್ಪದಿಯೆನಿಸಿದ ಭಾಮಿನಿಗೆ ಬಸವಪುರಾಣವೇ ಆದಿ. ಕ್ರಿ. ಶ. ೧೨೭೫ರಲ್ಲಿ ಕಾವ್ಯರಚಿಸಿದ ಕುಮುದೇಂದು ತನ್ನ ರಾಮಾಯಣದಲ್ಲಿ ಮಿಕ್ಕ ಷಟ್ಪದಿಗಳೊಡನೆ ಭಾಮಿನೀಷಟ್ಪದಿಯನ್ನೂ ಅಲ್ಲಲ್ಲಿ ಬಳಸಿರುವುದೇನೋ ನಿಜ. ಆದರೆ ಸಮಗ್ರ ಕಾವ್ಯವನ್ನೇ ಭಾಮಿನೀಷಟ್ಪದಿಯಲ್ಲಿ ಬರೆದ ಮೊದಲನೆಯ ಕವಿಯೆಂದರೆ ಭೀಮ ಕವಿ. ದೇಸಿಯ ಪ್ರಯೋಗ, ಭಾಮಿನಿಯ ಬಳಕೆ ಈ ದೃಷ್ಟಿಯಿಂದ ಬಸವಪುರಾಣವು ಮುಂದಿನ ಮಹಾಕವಿಗಳಿಗೆ ಮಾರ್ಗದರ್ಶಿಯಾಗಿದೆ.

ಕಾವ್ಯದ ಹೆಸರು ಸೂಚಿಸುವಂತೆ ಬಸವಪುರಾಣದ ಕಥಾವಸ್ತು ಬಸವಣ್ಣನವರ ಚಾರುಚರಿತೆ. ಆದರೆ, ಬಸವಣ್ಣನವರೊಬ್ಬ ಸಾಮಾನ್ಯ ವ್ಯಕ್ತಿಯಾಗಿರದೆ, ಅಸಾಮಾನ್ಯ ಶಕ್ತಿಯಾಗಿ ಹನ್ನೆರಡನೆಯ ಶತಮಾನದ ಕನ್ನಡನಾಡಿನ ಧಾರ್ಮಿಕ ಸಾಮಾಜಿಕ ಸಾಹಿತ್ಯಿಕ ಕ್ಷೇತ್ರದ ಅದ್ಭುತ ಕ್ರಾಂತಿಗೆ ಕಾರಣರಾಗಿರುವರು; ಮಾನವಜೀವನದ ಹೊಸ ಮೌಲ್ಯಗಳನ್ನು ಕಂಡುಹಿಡಿದಿರುವರು; ಮರ್ತ್ಯಕ್ಕೆ ಮಹತ್ವವನ್ನು ತಂದಿರುವರು. ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಲ್ಲಿ ವಿಷಮತೆಯ ಬಿರುಗಾಳಿ ಬೀಸುತ್ತಿದ್ದ ಕಾಲದಲ್ಲಿ ಬಸವಣ್ಣನವರ ಸತ್ಯ, ಸಮತೆ, ಪ್ರೇಮ, ದಯೆ, ದಮೆ, ಶಾಂತಿ, ಭಕ್ತಿ, ಕಾಯಕಗಳ ಸಂದೇಶ ಮಾನವಕುಲಕೋಟಿಗೆ ಅಮೃತ ಸಂಜೀವಿನಿಯಾಗಿ ಪರಿಣಮಿಸಿತು. ಬಸವಣ್ಣನವರ ಭಕ್ತಿಯ ಸೌರಭ ನಾಡಿನ ಸುತ್ತೆಲ್ಲ ಪಸರಿಸಿತು. ಅಸಂಖ್ಯಾತ ಶಿವಶರಣರು ಕಲ್ಯಾಣಕ್ಕೆ ಆಗಮಿಸಿದರು. ಕಲ್ಯಾಣ ಮನುಕುಲದ ಕಲ್ಯಾಣವಾಯಿತು. ಬಸವಣ್ಣನವರ ಮಹಾಮನ ಮಹಾಮನೆಗಳು ವಿಶ್ವದಷ್ಟು ವಿಶಾಲವಾದುವು. ಅನುಭವಮಂಟಪ ಲೋಕದ ಕಲ್ಯಾಣ ಮಂಟಪವಾಯಿತು. ಬಸವಣ್ಣನವರ ಭಕ್ತಿಯ ಬಳ್ಳಿ ಸುತ್ತೆಲ್ಲ ಪಸರಿಸಿ ಹೂತು ಕಾತು ಲಿಂಗದ ಗೊಂಚಲುಗಳಿಗೆ ಎಡೆಯಾಯಿತು. ಬಸವಪುರಾಣದ ಬೃಹತ್ ಕಾವ್ಯದಲ್ಲಿ ಬಸವಣ್ಣನವರ ಈ ಅದ್ಭುತವಾದ, ಅಗಾಧವಾದ, ವಿಶಾಲವಾದ ವ್ಯಕ್ತಿತ್ವದ ಮಂದಿರವನ್ನು ಕಂಡರಿಸಲಾಗಿದೆ. ಕಾವ್ಯಕ್ಷೇತ್ರದಲ್ಲಿ ಅದೊಂದು ವೇರೂಳು ಕೈಲಾಸದೇವಾಲಯ. ಕಲೆಯ ಸೊಗಸು, ಕಾವ್ಯದ ಕಾವು, ಭಕ್ತಿಯ ನಿರ್ಭರತೆ, ಜೀವನ್ಮುಕ್ತಸ್ಥಿತಿ ಇವುಗಳ ಅನುಭೂತಿ, ಅರಿವು, ಸಾಕ್ಷಾತ್ಕಾರವಾಗ ಬೇಕಾದರೆ ಪಾಲ್ಕುರಿಕೆ ಸೋಮನಾಥಮಹಾಕವಿಯ ಬಸವಪುರಾಣವನ್ನು ಓದ ಬೇಕು.

ಬಸವಪುರಾಣವು 'ಸರ್ಗಶ್ಚ ಪ್ರತಿಸರ್ಗಶ್ಚ ವಂಶೋಮನ್ವಂತರಾಣಿ ಚ । ವಂಶಾನುಚರಿತಂ ಚ' ಎಂಬ ಲಾಕ್ಷಣಿಕರ ತತ್ವಕ್ಕನುಸಾರವಾಗಿ ಬರೆದ ಸಾಂಪ್ರ

CC-0. Jangamwadi Math Collection. Digitized by eGangotri

ದಾಯಿಕ ಪುರಾಣವಲ್ಲ. ಔಚಿತ್ಯವಿಲ್ಲದೆ ಜಗತ್ತಿನ ಎಲ್ಲ ವಸ್ತುಗಳನ್ನೂ ತನ್ನಲ್ಲಿ ಅಳವಡಿಸಿಕೊಳ್ಳಬೇಕೆಂಬ ಹವ್ಯಾಸ, 'ಇಲ್ಲಿಲ್ಲದುದೆಲ್ಲಿ ಇಲ್ಲ' ಎಂದು ಹೇಳಿಕೊಳ್ಳುವ ಹೆಮ್ಮೆ ಬಸವಪುರಾಣಕ್ಕಿಲ್ಲ. ಕಥಾನಾಯಕನ ವ್ಯಕ್ತಿತ್ವವನ್ನು ಮರೆಯದೆ ಅದಕ್ಕೆ ನೇರವಾಗಿ ಸಂಬಂಧಪಟ್ಟು ಪೋಷಕವಾಗುವ ಕಥೆಗಳನ್ನೇ ಜೋಡಿಸಿ ಆದರ್ಶ ಪುರಾಣದ ಕಥಾವಸ್ತುವನ್ನು ನಿರ್ಮಿಸಲಾಗಿದೆ ಬಸವಪುರಾಣದಲ್ಲಿ. ಭಾರತೀಯ ಪುರಾಣ ಪರಂಪರೆಯಲ್ಲಿ ಅದಕ್ಕೊಂದು ವೈಶಿಷ್ಟ್ಯವಿದೆ; ನೂತನತೆ ಇದೆ. ಕನ್ನಡ ದಲ್ಲಿದ್ದ ಭಿನ್ನ ಭಿನ್ನ ಸಂಪ್ರದಾಯಗಳ ಪುರಾಣಕಾವ್ಯಗಳ ಹಿನ್ನೆಲೆಯಲ್ಲಿ ನೋಡಿ ದಾಗ ಬಸವಪುರಾಣದ ಕಥಾವಸ್ತುವೊಂದು ನೂತನ ನಿರ್ಮಿತಿಯೆಂದು ಯಾರಿ ಗಾದರೂ ಹೊಳೆಯದಿರದು.

ಐತಿಹಾಸಿಕ ದೃಷ್ಟಿಯಿಂದಲೂ ಬಸವಪುರಾಣವು ಬಹು ಮಹತ್ವವಾದುದು. ಸಾಮಾನ್ಯವಾಗಿ ಇದುವರೆಗೆ ಪಂಡಿತರು ಬಸವಾದಿ ಪ್ರಮಥರ ಚಾರಿತ್ರಿಕ ವಿಷಯದ ಬಗೆಗೆ ಬಸವಪುರಾಣಕ್ಕಿಂತಲೂ ಹರಿಹರಾದಿ ಕವಿಗಳ ಕಾವ್ಯಗಳಿಗೆ ಹೆಚ್ಚು ಮಹತ್ವ ಕೊಟ್ಟಿರುವುದು ಕಂಡುಬರುತ್ತದೆ. ಬಸವಪುರಾಣವನ್ನು ಕೇವಲ ಪುರಾಣವೆಂದು ಪರಿಭಾವಿಸಿದುದೇ ಇದಕ್ಕೆ ಕಾರಣವೆಂದು ತೋರುತ್ತದೆ. ಆದರೆ ವಸ್ತುಸ್ಥಿತಿ ತೀರ ಭಿನ್ನವಾಗಿದೆ. ಕಲ್ಯಾಣದ ಕ್ರಾಂತಿಯು ವಿಪ್ಲವದಲ್ಲಿ ಕೊನೆ ಗೊಳ್ಳಲು ಆಲ್ಲಿದ್ದ ಶಿವಶರಣರು ಸುತ್ತೆಲ್ಲ ಚದುರಿರುವರು. ಅವರಲ್ಲಿ ಮುಖ್ಯ ವಾದುವು ಎರಡು ಗುಂಪುಗಳು. ಒಂದು ಉಳವೆಯತ್ತ ಹೋದುದು; ಇನ್ನೊಂದು ಶ್ರೀಶೈಲದತ್ತ ತೆರಳಿದುದು. ಶ್ರೀಶೈಲದ ಕಡೆಗೆ ಹೊರಟ ಶಿವಶರಣರು ಓರುಂಗಲ್ಲಿ ನಲ್ಲಿ ನಿಂತಂತೆ ತೋರುತ್ತದೆ. ಓರುಂಗಲ್ಲಿನ ಕಾಕತೀಯ ದೊರೆಗಳು ಕಲ್ಯಾಣದ ಕ್ರಾಂತಿಯ ಅನಂತರ ವೀರಶೈವ ಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹವನ್ನಿತ್ತಿರು ವರು. ಆಲ್ಲಿಗೈತಂದ ಶಿವಶರಣರ ಬಾಯಿಂದ ನೆರೆಹೊರೆಯ ಜನ ಬಸವಾದಿ ಪ್ರಮಥರ ಚರಿತ್ರೆಯನ್ನು ಕೇಳಿರಬೇಕು. ಓರುಂಗಲ್ಲಿಗೆ ಸಮೀಪದಲ್ಲಿದ್ದ ಪಾಲ್ಕುರಿಕೆ ಸೋಮನಾಥನು ಇಂಥ ಪ್ರತ್ಯೇಕ ನಿದರ್ಶನಗಳ ಆಧಾರದ ಮೇಲೆ ತನ್ನ ಬಸವ ಪುರಾಣವನ್ನು ರಚಿಸಿರುವನು. ಅಂತೆಯೇ ಬಸವಪುರಾಣವು ಬಸವಣ್ಣನವರ ಚರಿತ್ರೆಯ ದೃಷ್ಟಿಯಿಂದಲೂ ಬಹಳ ಮಹತ್ವಪೂರ್ಣವಾಗಿದೆ. ಕಲ್ಯಾಣದ ಶಿವ ಶರಣರು ಓರುಂಗಲ್ಲಿನಲ್ಲಿ ಅವತರಿಸುವರೆಂದು ಹೇಳುವ ಕಾಲಜ್ಞಾನ ಈ ಮಾತಿಗೆ ಪುಷ್ಟಿಯನ್ನು ಕೊಡುತ್ತದೆ.

ಬಸವಣ್ಣನವರು ಭಕ್ತಿಭಾಂಡಾರಿಗಳೆಂದು ಖ್ಯಾತಿವೆತ್ತಿರುವರು. 'ಬಸವನ ಭಕ್ತಿ ಭಕ್ತಿ' ಎಂದು ಕವಿಗಳು ಕೊಂಡಾಡಿರುವರು. 'ಬಸವ ಶರಣೆನೆ ಪಾಪವಳಿ ವುದು' 'ಬಸವ ಶರಣೆನೆ ತಾಪವಾಯಿಗು' 'ಬಸವ ಶರಣೆನೆ ಭವವುಡುಗುವುದು'

CC-0. Jangamwadi Math Collection. Digitized by eGangotri

Q234 : 221 33M8

'ಬಸವ ಶರಣಕಿನೆ ಶೀಲವೊಪ್ಪುಗು' ಎಂದು ಬಸವಪುರಾಣದ ಆದಿಯಲ್ಲಿ ಕವಿ ಭಕ್ತಿಯ ನಿರ್ಭರಭಾವದಿಂದ ಹಾಡಿರುವನು. ಅಸಮನೇತ್ರನೆ ಬಸವನಾಮದಿಂದ ಇಳೆಗವತರಿಸಿರುವನು. ಸಾಯುಜ್ಯಸಾರೂಪ್ಯ ಪದವಿಗಳನ್ನು ಪಡೆಯಬಹುದು. ಆದರೆ 'ಸಲಿಪನೆಂದೆನಿಪ ಬಸವ'ನಾಗುವುದು ಲೋಕದಲ್ಲಿ ಕರಕಷ್ಟ. ಬಸವಾಕ್ಷರ ತ್ರಯ ಲೋಕದ ತಾರಕಮಂತ್ರ. ಆತನ ದೆಸೆಯೊಳು ಎಲ್ಲರು ಧನ್ಯರಾದಪರೆಂದು ಕವಿ ಬಸವಣ್ಣನವರನ್ನು ಸ್ತುತಿಸುವನು.

ಬಸವಣ್ಣನವರ ಅನುಪಮವಾದ ವ್ಯಕ್ತಿತ್ವ ಈ ಕಾವ್ಯದಲ್ಲಿ ಒಡಮೂಡಿದೆ. 'ನಿಚ್ಚಲುಂ ಶಿವರಾತ್ರಿಯಂ ಮಾಳ್ಪಚ್ಚರಿಯೆನಿಪ ಭಾಷೆ, ಭಕ್ತರನಚ್ಚಶಿವನೆಂದಿಪ್ಪ ಭಾಷೆ, ಶರಣರ ಹೆಚ್ಚು ಕುಂದುಗಳಂ ನುಡಿಯದಿಹ ಸಚ್ಚರಿತ್ರದ ಭಾಷೆ, ಮೃಡನ ನಾದೊಡೆಯು ಒಂದು ಬಾರಿಗೆ ಕಡಗಿ ಬೇಡದ ಭಾಷೆ, ಏನಾದೊಡೆ ಬಯಸಿ ದೊಡವೆಗಳನಡಿಯಿಡದೀವ ಭಾಷೆ, ನುಡಿದು ಹುಸಿಯದ ಭಾಷೆ, ನುಡಿಗಳಹಗೆ ತಾಂ ನಡೆಸುವುದು ಭಾಷೆ, ಭಕ್ತರ ಸಲಿಗೆಯ ಸಲಿಸುವ ಭಾಷೆ, ದಾಸೋಹವ ನವಿರತಂ ಮಾಡುವ ಭಾಷೆ, ಕನಸಿನೊಳಂ ಪಿನಾಕಿಗೆ ಗೆಲವನೀಯದ ಭಾಷೆ – ಬಸವಣ್ಣನವರ ಇಂಥ ಭಾಷೆಗಳಿಗೆ ಬಸವಪುರಾಣವು ಒಂದು ಸುಂದರವಾದ ಭಾಷ್ಯವಾಗಿದೆ. ಬಸವಣ್ಣನವರ ನುಡಿ-ನಡೆಗಳ ಸಾಮರಸ್ಯ, ಲಿಂಗಾಂಗ ಸಾಮರಸ್ಯ, ಬಸವಪುರಾಣದಲ್ಲಿ ಕಲಾತ್ಮಕವಾಗಿ ನಿರೂಪಿತವಾಗಿದೆ. ಬಸವಣ್ಣನವರ ಭಕ್ತಿಯ ತೆರೆತೆರೆಗಳು ಈ ಕಾವ್ಯದಲ್ಲಿ ಮೇರೆದಪ್ಪಿ ಹರಿವುತ್ತಿರುವುದನ್ನು ಕಾಣಬಹುದು.

ಬಸವಣ್ಣನವರ ಅಂತರಂಗ ಪರೀಕ್ಷೆ, ಸೂಕ್ಷ್ಮವಾದ ಮನೋವಿಶ್ಲೇಷಣೆ – ಇವು ಎಂತಹವರನ್ನೂ ಮುಗ್ಧಗೊಳಿಸುವಂತಿವೆ. 'ಬೇಡು ಬೇಡೆಲೆ ಹಂದೆ ಬೇಡಿದುದನೀವೆ' ಎಂದು ಹಾಡಿದ ಬಸವಣ್ಣನವರ ಭಕ್ತಿಯ ಹಮ್ಮು ಬಿಮ್ಮುಗಳನ್ನು ಪ್ರಭುದೇವ, ಮಡಿವಳ ಮಾಚಯ್ಯ, ಮೋಳಿಗೆಯ ಮಾರಯ್ಯ ಮೊದಲಾದ ಶಿವಶರಣರು ಕಳೆದು, ಅವರ ಭಕ್ತಿ ದಿಟಪುಟವಾಗುವಂತೆ, ಸತ್ಯಶುದ್ಧವಾಗುವಂತೆ ಮಾಡಿರುವರು. ಸತ್ಯಶುದ್ಧ ಭಕ್ತಿಯ ಸ್ವರೂಪವನ್ನೂ, ಮಹಿಮೆಯನ್ನೂ ಸಹೃದಯರ ಮನಂಬುಗುವಂತೆ ವರ್ಣಿಸಿ, ಅವರ ಹೃದಯದಲ್ಲಿ ಭಕ್ತಿ ಪ್ರಜ್ವಲಿಸುವಂತೆ ಮಾಡುವುದೇ ಬಸವಪುರಾಣದ ಉದ್ದೇಶ, ಸಂದೇಶ.

ಕಾಯಕವೇ ಕೈಲಾಸವೆಂಬುದು ಬಸವಪುರಾಣದ ದಿವ್ಯ ಸಂದೇಶ. ಬಸವ ಪುರಾಣದ ಅನೇಕ ಸನ್ನಿವೇಶಗಳಲ್ಲಿ ಇದಕ್ಕೆ ನಿದರ್ಶನಗಳು ದೊರೆಯಬಲ್ಲುವು. ಮಾಚಯ್ಯನನ್ನು ಬಿಜ್ಜಳನು ಕೀಳುಕುಲದ ಅಸಗನೆಂದು ಕೀಳ್ನುಡಿದಾಗ ಬಸವಣ್ಣನವರ ಕಾಯಕದ ರಹಸ್ಯವನ್ನು ಬಿಚ್ಚಿ ಹೇಳುವ ಮಾತುಗಳು ಗಮನಾರ್ಹವಾಗಿವೆ. ನಾವ ಬಿಂದುಗಳು ಅಡ್ಡಪಲಿಗೆಗಳಾಗಿ, ಆದಿಶಕ್ತಿಯೆ ತಿಗುರಿಯಾಗಿ ಬ್ರಹ್ಮಾಂಡ

SRI JAGADGURU VISHWARADHYA
JNANA SIMHASAN JNANAMANDIR
LIBRARY,
Jangamwadi Math, VARANASI.
Acc No. ...
CC-0. Jangamwadi Math Collection. Digitized by eGangotri

ಭಾಂಡಂಗಳನು ವಿರಚಿಸುವವನು ಕುಂಬಾರ, ಗಮಿಸುವಸುವಿನ ಮೋಹವನ್ನು ಹದಗೊಳಿಸುವವನು ಕಮ್ಮಾರ. ಹೀಗೆ ಒಂದೊಂದು ಕಾಯಕದ ತತ್ತ್ವವನ್ನು ದಿವ್ಯಕ್ಕೇರಿಸುವ ಬಸವಣ್ಣನವರ ನುಡಿಗಳಲ್ಲಿ ವಿಶ್ವಕ್ಕೆ ಶಾಶ್ವತವಾದ ಸಂದೇಶ ವಡಗಿದೆ.

ದಯವೇ ಧರ್ಮದ ಮೂಲವೆಂಬ ವಿಶ್ವಸಂದೇಶ ಬಸವಪುರಾಣದಲ್ಲಿ ಬಹಳ ಮಾರ್ಮಿಕವಾಗಿದೆ. ಕಿನ್ನರಯ್ಯಗಳು ಒಂದು ದಿವಸ ವಿನೋದಾರ್ಥವಾಗಿ ತ್ರಿಪುರಾಂತಕೇಶ್ವರ ದೇವಾಲಯದಲ್ಲಿ ಕುಳಿತಿರುವರು. ಒಬ್ಬನು ತನ್ನ ವೇಶ್ಯೆಗಾಗಿ ಪಥೆ ಮಾಡಲೆಂದು ಕುರಿಯನ್ನು ಕೊಂಡು ಒಯ್ಯುತ್ತಿರುವನು. ನೇಣು ಹರಿದು ಕುರಿ ತ್ರಿಪುರಾಂತಕೇಶ್ವರ ದೇವಾಲಯವನ್ನು ಪ್ರವೇಶಿಸುತ್ತದೆ. ಕಿನ್ನರಯ್ಯಗಳು ಆ ವಿಟನಿಗೆ ಹೇಳುವ ಮಾತುಗಳು ಎಷ್ಟು ಮಾರ್ಮಿಕವಾಗಿವೆ! 'ಕೊಲುವುದು ದೋಷ, ಬಿಲತಿ ಬೆಲೆಯನು ಹೇಳು, ಇಮ್ಮಡಿಯಾದೊಡಂ ಕೊಳ್ಳು, ನೋವು ಸಾವು ಜೀವಿಗಳಿಗೆಲ್ಲಾ ಸರಿಯಲಾ' ಎಂದು ಹೇಳಿ ಸಾವಿರ ಹೊನ್ನು ಕೊಟ್ಟು ಕುರಿಯ ಪ್ರಾಣವನ್ನುಳಿಸುವ ದೃಶ್ಯ ಅತ್ಯಂತ ಹೃದಯ ಸಂವೇದಿಯಾಗಿದೆ. ಸಕಲ ಜೀವಾತ್ಮರಿಗೆ ಲೇಸನೇ ಬಯಸಬೇಕೆಂಬುದೇ ಬಸವ ಪುರಾಣದ ದಿವ್ಯ ನವ್ಯ ಸಂದೇಶ.

ಗ್ರಂಥಸಂಸ್ಕರಣ

ಮಾತೃಕೆಗಳು

೧) **ಅ.** ಬೆಳಗಾವಿ ಜಿಲ್ಲೆಯ ಯಕ್ಕುಂಡಿ ವಿರಕ್ತ ಮಠದ ಸ್ವಾಮಿಗಳಾದ ಶ್ರೀ ಪು. ನಿ. ಪ್ರ. ಶ್ರೀ ವಿರೂಪಾಕ್ಷ ಸ್ವಾಮಿಗಳು ಗುರು ಶ್ರೀ ಸಿದ್ಧರಾಮ ಸ್ವಾಮಿಗಳು ಅವರ ಕೃಪೆಯಿಂದ ದೊರೆತುದು. ಭಿಕ್ಷದ ಶ್ರೀ ರಾಚೋಟಿ ಸ್ವಾಮಿಗಳವರಿಂದ ಸೌಮ್ಯ ಸಂವತ್ಸರದಲ್ಲಿ ಪ್ರತಿ ಮಾಡಲ್ಪಟ್ಟಿದ್ದು. ೨೪೧ ಗರಿಗಳಿವೆ. ತಾಳೆವೋಲೆ ಪ್ರತಿ. ಚೆನ್ನಾಗಿದೆ.

೨) **ಬ.** ನಾಗನೂರ ಮಹಾಸ್ವಾಮಿಗಳಾದ ಶ್ರೀ ನಿ. ಪ್ರ. ನಿರಂಜನಸ್ವಾಮಿ ಗಳವರ ಕೃಪೆಯಿಂದ ದೊರೆತುದು. ಬಿಳಿ ಕಾಗದದ ಕಲ್ಲಚ್ಚಿನ ಪ್ರತಿ.

೩) **ಕ.** ಕೋರಿ ಕಾಗದದ ಪ್ರತಿ. ತುಂಬ ಅಶುದ್ಧವಾಗಿದೆ. ಜೀರ್ಣವಾಗಿದೆ.

೪) **ಡ.** ಶ್ರೀಮಲ್ಲಾಬಾದಿ ಮಹಾಲಿಂಗಪ್ಪನವರು ದಾವಣಗೆರೆ ಅವರಿಂದ

CC-0. Jangamwadi Math Collection. Digitized by eGangotri

ದೊರೆತುದು. ತಾಡೋಲೆ ಪ್ರತಿ. ಪ್ರತಿ ಶುದ್ಧವಾಗಿದೆ ಹಾಗೂ ಉತ್ತಮವಾಗಿದೆ.

೫) ಚ. ಕಾಗದದ ಪ್ರತಿ. ಇದನ್ನು ಪಾರಿಶ್ವಾಡದ ಸಿದ್ಧರಾಮಪ್ಪನ ಮಗನಾದ ರುದ್ರಪ್ಪನು ಶಕೆ ೧೩೫೨ ವಿಕೃತಿನಾಮ ಸಂವತ್ಸರ ಶ್ರಾವಣ ಬಹುಳ ತ್ರಯೋದಶಿಯಂದು ಸಂಪೂರ್ಣಗೊಳಿಸಿದನು.

೬) ಮ. ಶ್ರೀ ಮ. ನಿ. ಪ್ರ. ಗುರುಲಿಂಗಸ್ವಾಮಿಗಳು, ಮಹಾಲಿಂಗೇಶ್ವರ ಮಠ, ಮಹಾಲಿಂಗಪೂರ ಅವರ ಕೃಪೆಯಿಂದ ದೊರಕಿದುದು. ತಾಡೋಲೆ ಪ್ರತಿ. ಉತ್ತಮವಾಗಿದೆ.

೭) ಧ. ಶ್ರೀ ನಿ. ಪ್ರ. ಸಂಗಮೇಶ್ವರ ಸ್ವಾಮಿಗಳು ಗುರುಮಠಕಲ್ ಅವರಿಂದ ದೊರೆತುದು. ತಾಳೆಗರಿಯ ಪ್ರತಿ. ಪ್ರತಿಯ ಕೊನೆಯಲ್ಲಿ ಹೀಗಿದೆ: ಯಿದು ಸಕಲ ಮಾಹೇಶ್ವರಾಮಳಪದಪಯೋಜಪರಾಗಮದಷಟ್ಪದಿ ಯೆನಿಪ ಪಾಲ್ಕುಱಿಕೆ ಸೋಮೇಶ್ವರನ ಕಾರುಣ್ಯವೊದಗಿದ ಖಿಳಕಳಾ ಪ್ರಪೂರೀತಹೃದಯ ಭೀಮಕವಿಪ್ರಣೀತಾಭ್ಯುದಯ ಬಸವಪುರಾಣ ಕಥೆಯೊಳಗಷ್ಟ ಮಾಶ್ವಾಸಂ ॥೯೬॥ ಅಂತು ಖಾಂಡ ೞಕ್ಕೂ ಪದನು ೩೬೧೯ಕ್ಕಂ ಶ್ರೀ ಶ್ರೀ ಶ್ರೀ ಶ್ರೀ. ಬಸವೇಶ್ವರಪುರಾಣ ಸಮಾಪ್ತ ಮಂಗಳಮಹಾಶ್ರೀ ಶ್ರೀ ಶ್ರೀ. ಗರಿ ಚೆನ್ನಾಗಿವೆ. ಅಕ್ಷರ ದೊಡ್ಡವು, ಪ್ರತಿ ಉತ್ತಮ.

೮) ನ. ಶ್ರೀ ನಿ. ಪ್ರ. ಸ್ವ. ಮರಿಶಾಂತವೀರಸ್ವಾಮಿಗಳು, ಗವಿಮಠ, ಕೊಪ್ಪಳ ಅವರಿಂದ ದೊರೆತುದು ಕೊನೆಯಲ್ಲಿ ಹೀಗಿದೆ:

ಯಿದು ಸಕಲ ಮಹೇಶ್ವರಾಮಳಪದಪಯೋಜಪರಾಗಮದಷಟ್ಪದ ವೆನಿಪ ಪಾಲ್ಕುರಿಕೆ ಸೋಮೇಶ್ವರನ ಕಾರುಣ್ಯಂ ವೊದಗಿದಖಿಳ ಕಳಾಪ್ರಪೂರಿತ ಭೀಮಕವಿಪ್ರಣೀತಾಭ್ಯುದಯ ಬಸವಪುರಾಣಕಥೆ ಯೊಳಗಷ್ಟಮಾಶ್ವಾಸಂ ॥ ೯೭ ॥ ಅಂತು ಕಾಂಡವು ೞಕ್ಕಂ ಸಂಧಿ ೫೦ಕ್ಕಂ ಪದನು ೩೦೫೦ಕ್ಕಂ ಯಿದಕ್ಕೆ ಸ್ತೋತ್ರಪದ ಆಶೀರ್ವಾದ ಪದಂಗಳಿಂದ ೨೧ ಪದನ ಕಳೆದು ಕಥಾಲಾಪಣಿಗೆಗೆ ೩೦೩೧ಪದನು ಭೀಮಕವಿ ಪ್ರೋಕ್ತಂಗಳು. ಗುರುಭಕ್ತನ ಕಥೆ ಮೊದಲಾದ ವುತ್ಪ್ರೇಕ್ಷಿಪ್ತಂಗಳು ಆ ಕಥೆಗೆ ಸೇರಲಾದ ಪದನು ಸಂಧಿ ೧೦ಕ್ಕಂ ಪದನು ೫೭೬ಕ್ಕಂ ಅಂತು ವುಭಯಂ ಕೂಡಿ ಸಂಧಿ ೬೦ಕ್ಕಂ ಪದನು ೩೬೦೬ಕ್ಕಂ ಮಂಗಳಮಹಾಶ್ರೀ ಶ್ರೀ ಶ್ರೀ. ಬುಕ್ಕರಾಯಸಮುದ್ರದ ಗವಿಮಠದ

CC-0. Jangamwadi Math Collection. Digitized by eGangotri

ಗುರುಶಾಂತಮೂರ್ತಿ ಕೃಪಾಪ್ರಸನ್ನರಾದ ಚೆನವೀರ ಸ್ವಾಮಿಗಳು ತಂಮ್ಮ ಸಮಯಾಚಾರದ ಮೂರ್ತ್ತಿಗಳಾದ ಚೆನಮಲ್ಲಪ್ಪನವರಿಗೆ ತಮ್ಮ ಪ್ರಿಯ ಸೇವಕನಾದ ಕಂಬ್ಬಾಳ ಕೊಟ್ಟೂರಯ್ಯನ ಕಯ್ಯಲ್ಲಿ ಬರಸಿದಂತ್ತಾ ಬಸವೇಶ್ವರನ ಪುರಾಣವೂ. ಶ್ರೀ ಗುರುಶಾಂತ್ತ ಮೂರ್ತ್ತಿ ನಿಂಮ್ಮ ಪಾದವೇ ಗತಿ॥ ಶ್ರೀ ಸದಾಶಿವಾ ನಿಂಮ್ಮ ಪಾದವೇ ಗತಿ॥ ಶ್ರೀಗುರುಬಸವ ಲಿಂಗಾಯ ನಮಃ ॥ ಶ್ರೀಶ್ರೀ ಶ್ರೀಶ್ರೀಶ್ರೀಶ್ರೀಶ್ರೀಶ್ರೀ ಅಕ್ಷರ ಸಣ್ಣವು. ಗರಿ ಅಲ್ಲಲ್ಲಿ ಹರಿದಿವೆ.

೯) ಪ. ತಾಳೆಗರಿಯ ಪ್ರತಿ. ಕ. ವಿ. ಕನ್ನಡ ವಿಭಾಗದ ಹಸ್ತಪ್ರತಿ ಗ್ರಂಥಾಲಯದಿಂದ ಪಡೆದುದು. ಕೊನೆಯಲ್ಲಿ ಹೀಗಿದೆ:

ಯಿದು ಸಕಳ ಮಾಹೇಶ್ವರಾಮಳ ಪದಪಯೋಜ ಪರಾಗಮದಷಟ್ಪದಿ ಯೆನಿಪ ಪಾಲ್ಕುಱಿಕೆ ಸೋಮೇಶ್ವ = = = = = = ಭೀಮಕವಿ ಪ್ರಣೀತಾದ್ಭದಯ ಬಸವಪುರಾಣ ಕಥೆಯೊಳು ಷಷ್ಠಮಸ್ವಾಸಾ ॥೯೫॥ ಅಂತು ಸಂದಿ॥೨೬॥ಕಂ ಪದನು ೩೬೨೫ಕ್ಕಂ ಮಂಗಳಮಹಾ ಶ್ರೀ = = = = = ರತ್ನ ಅಭಯ ದಾನ ಸಪ್ಪಾಪದ್ಮರಾದ ಪರಮ ಶಿವಾಚಾರ ಭಾವಾನುರೂಪರಾದ ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರ । ದ್ಯಾನ = = = = = ಪ್ರಸಂನ ಪ್ರಭು ಸ್ವಾಮಿಗಳ ಸಾಂಪ್ರದಾಯದ ನಿರಾಳ ನಿಶೂನ್ಯ ಬ್ರಂಹ್ಮವೇತ್ತ್ರ ಗಳಾದ ನಿರಂಜನ ಷಟ್ಸ್ಥ[ಲ] ಬ್ರಂಹ್ಮಿಗಳಾದ ಶಿವಪೂಜದು[ರ]ಂಧ = = = = = ನಯ್ಯ ಬರಸಿದ ಪುರಾಣವು ವಿರೋಧಿವಿಕ್ರತು ಸಂವತ್ಸರದ ಮಾಗಸುದ್ಧ ತದ್ದಿಗೆ ಸೋಮವಾರ ಉತ್ತರಭಾದ್ರಪದೆ ನಕ್ಷತ್ರದಲು ಅಮ್ಮುತಸಿದ್ಧಿಯೆಂದು ಬಸವೇಶ್ವ = = = = ಶ್ರೀ ಶ್ರೀಶ್ರೀಶ್ರೀಶ್ರೀಶ್ರೀ ಪ್ರತಿ ತುಂಬ ಏಲವಾಗಿದೆ. ಅಕ್ಷರ ಚೆನ್ನಾಗಿವೆ.

೧೦) ಥ. ಶ್ರೀ ಶಾಂತಲಿಂಗಸ್ವಾಮಿಗಳು ಚೌಕೀಮಠ. ಕೊನೆಯಲ್ಲಿ ಇಂತಿದೆ:

ಯಿದು ಸಕಳಮಾಹೇಶ್ವರಾಮಳ ಪದಪಯೋಜಪರಾಗಮದ ಷಷ್ಪದ ವೆನಿಪ ಪಾಲ್ಕುಱಿಕೆ ಸೋಮೇಶ್ವರನ ಕಾರುಣ್ಯ ॥ ವೊದವಿದಖಿಳ ಕಳಾಪ್ರಪೂರಿತ ಹೃದಯಭೀಮಕವಿಪ್ರಣೀತಾದ್ಭದಯ ಬಸವಪುರಾಣ ಕಥೆಯೊಳಗಷ್ಟಮಾ ಸ್ವಾಶಾ ॥ ಅಂತ್ತೂ ಸಂಧಿ ೬೦ಕ್ಕಂ ಪದನು ಆಶ್ವಾಸನಕ್ಕಂ ಪದನು ೩೬೧೪ಕ್ಕಂ ಮಂಗಳಮಹಾಶ್ರೀಶ್ರೀಶ್ರೀ ಸ್ವಸ್ತಿಶ್ರೀ ಜಯಾದ್ಭುದಯ ಶಾಲಿವಾಹನ ಶಕ ವರುಷ ೧ [೪] ೪೧

CC-0. Jangamwadi Math Collection. Digitized by eGangotri

ಕೆಂಪಿನ ಪರಾಂಬಿಕೆ ವಾತಾಣ ಗುರುಪಾದ ಸ್ವಾಮಿಗಳ ಬಸವಲಿಂಗ ಸ್ವಾಮಿಗಳ ಪುಸ್ತಕವು. ಶ್ರೀಶ್ರೀಶ್ರೀಶ್ರೀ ಅಕ್ಷರಗಳು ಚೆನ್ನಾಗಿಲ್ಲ. ಗರಿಗಳು ಅಲ್ಲಲ್ಲಿ ಬಿಲವಾಗಿವೆ.

ಸಮಸ್ಯೆ

ಬಸವಪುರಾಣವು ಬಹುಜನಪ್ರಿಯ ಕೃತಿಯಾಗಿ ಕನ್ನಡ ನಾಡಿನ ಮೂಲೆ ಮೂಲೆಗಳಲ್ಲಿ, ಮಠಮಂದಿರಗಳಲ್ಲಿ ಕಂಡುಬರುತ್ತದೆ. ಈ ಕಾವ್ಯದಲ್ಲಿ ಬರುವ ಬಸವಾದಿ ಪ್ರಮಥರ ಕಥೆಗಳು, ಅದರ ಭಾಮಿನಿಯ ಲಯಲಾಲಿತ್ಯ ಜನಮನವನ್ನು ಸೂರೆಗೆಯ್ದಿವೆ; ಆರು ಶತಮಾನಗಳ ವರೆಗೆ ಅದು ಭಕ್ತಿಯ ಪ್ರವಾಹವಾಗಿ ಹರಿದುಬಂದಿವೆ. ಜನಪ್ರಿಯವಾದ ಇಂತಹ ಕೃತಿಗಳು ಸಾಮಾನ್ಯವಾಗಿ ಓದುಗರ, ಲಿಪಿಕಾರರ ಇಲ್ಲವೆ ಪಂಡಿತರ ಕೈವಾಡಕ್ಕೆ ಪಕ್ಕಾಗುವುದು ತೀರ ಸ್ವಾಭಾವಿಕ. ಸಂಸ್ಕೃತ ಭಾಷೆ ಹಾಗೂ ಚಂಪೂರೂಪಗಳಲ್ಲಿ ರಚಿತವಾದ ಗ್ರಂಥಗಳಲ್ಲಿ ಪ್ರಕ್ಷಿಪ್ತಾಂಶಗಳು ಕಡಿಮೆ. ನಡುಗನ್ನಡ ಸಾಹಿತ್ಯಕೃತಿಗಳು ಜನಸಾಮಾನ್ಯರ ಮನೆ-ಮನ ಮುಟ್ಟಿದುದರಿಂದ ಅವುಗಳಲ್ಲಿ ಅನೇಕ ಜನರ ಕೈವಾಡಗಳನ್ನು ಕಾಣಬಹುದಾಗಿದೆ. ನಾಡಿನ ಒಂದು ಭಾಗದಲ್ಲಿ ಅತ್ಯಂತ ಲೋಕಪ್ರಿಯವಾದ ಕಥೆಯೊಂದಿದ್ದು ಅದು ಪ್ರಸ್ತುತ ಕೃತಿಯಲ್ಲಿ ಬಂದರೆ ಲೇಸೆಂದು ಭಾವಿಸಿದ ಭಾವುಕರೋ ಲಿಪಿಕಾರರೋ ಪಂಡಿತರೋ ಸೂಕ್ಷ್ಮಮಾರ್ಪುಗಳನ್ನು ಮಾಡಿ ಸಹಜವಾಗಿಯೆ ಮೂಲದಲ್ಲಿ ಸೇರಿಸಬಹುದಾಗಿದೆ. ಜನರ ನಾಲಗೆಯ ಮೇಲೆ ನಲಿವ ಈ ಕೃತಿಗಳಲ್ಲಿ ಪದಪದ್ಯಗಳ ವ್ಯತ್ಯಾಸಗಳೂ ಭಾಷಿಕ ಬದಲಾವಣೆಗಳೂ ಪ್ರಾದೇಶಿಕ ಭಿನ್ನತೆಗನುಸಾರವಾಗಿ ಗೋಚರಿಸುತ್ತವೆ. ಶಿವಶರಣರ ವಚನಗಳು, ಕುಮಾರವ್ಯಾಸ ಭಾರತಗಳಂತಹ ಶ್ರೇಷ್ಠ ಕೃತಿಗಳು ಪ್ರಕ್ಷೇಪಗಳ ಹಾವಳಿಗೆ ತುತ್ತಾಗಿವೆ. ಈ ದಿಶೆಯಲ್ಲಿ ಬಸವಪುರಾಣವು ಇವುಗಳ ಸಾಲಿನಲ್ಲಿಯೇ ಬರುತ್ತದೆ.

ಬಸವಪುರಾಣದಲ್ಲಿ ಏಂಟು ಕಾಂಡಗಳಿರುತ್ತವೆ. ಆದರೆ ನಾಡಿನ ನಾನಾ ಭಾಗಗಳಲ್ಲಿ ದೊರೆಯುವ ಎಲ್ಲ ಪ್ರತಿಗಳಲ್ಲಿಯೂ ಕಾಂಡಗಳ ವಿಭಜನೆ ಒಂದೇ ರೀತಿಯಾಗಿಲ್ಲ; ಒಳಗಣ ಸಂಧಿವಿಭಜನೆಯಲ್ಲಿಯೂ ವ್ಯತ್ಯಾಸ ತೋರಿಬರುತ್ತದೆ. ಬಸವಪುರಾಣದ ಕೊನೆಯ ಸಂಧಿಯಲ್ಲಿ ಈ ಕೆಳಗಣ ಪದ್ಯ ದೊರೆಯುತ್ತದೆ:

ತ್ರಿದಶಶತಷಟ್‌ಶತತ್ರಿವಿಂಶತಿ
ವಿದಿತ ಸಂಖ್ಯಾಯುಕ್ತದಿಂ ಷಟ್
ಪದಿಗಳೆಂಟಾಶ್ವಾಸದಿಂದಱುವತ್ತು ಸಂಧಿಗಳಿಂ

CC-0. Jangamwadi Math Collection. Digitized by eGangotri

ಒದಗಿ ನವರಸ ಲಕ್ಷಣಾರ್ಥ ಸ
ಮುದಯ ಭಾವೋಪಮೆಗಳಿಂದೊ
ಪ್ಪಿದುದು ಬಸವಪುರಾಣವೀಶ್ವರಗಣಕಥನವಾಗಿ[೧೨೧]

ಇದರಿಂದ ಬಸವಪುರಾಣದಲ್ಲಿ ೮ ಆಶ್ವಾಸ (ಕಾಂಡ), ೬೦ ಸಂಧಿ, ೩೬೨೩ ಪದ್ಯ ಗಳು ಉಂಟೆಂದು ಸ್ಪಷ್ಟವಾಗುತ್ತದೆ. ಪ್ರಸ್ತುತ ಆವೃತ್ತಿಗಾಗಿ ಬಳಸಿದ ಗ ಪ್ರತಿಯಲ್ಲಿ,

ತ್ರಿದಶಶತಮುಂ ಪಂಚಶತ ಪಂ
ಚದಶ ಪಂಚಕ ಯುಕ್ತದಿಂ ಷಟ್
ಪದಿಗಳಿಂತಾಶ್ವಾಸದಿಂದಱುವತ್ತು ಸಂಧಿಗಳಿಂ[೧೨೨]

ಎಂಬ ಭಿನ್ನಪಾಠವು ದೊರೆಯುತ್ತದೆ. ಈ ಮೇರೆಗೆ ಬಸವಪುರಾಣವು ೩೫೫೫ ಪದ್ಯಗಳನ್ನೊಳಗೊಂಡಿದೆ ಎಂದು ಅರ್ಥವಾಗುತ್ತದೆ. ಕರ್ನಾಟಕ ಕವಿಚರಿತೆ ಕಾರರು ನೋಡಿದ ಬಸವಪುರಾಣದ ಪ್ರತಿಯಲ್ಲಿ ೬೧ ಸಂಧಿಗಳುಂಟೆಂದು ತಿಳಿಯುತ್ತದೆ.[೧೨೩] ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿಯವರು ಪ್ರಕಟಿಸಿದ ಬಸವಪುರಾಣದ ಜನಪ್ರಿಯ ಆವೃತ್ತಿಯಲ್ಲಿ ೬೩ ಸಂಧಿಗಳಿರುವುದು ಗೋಚರವಾಗುತ್ತದೆ. ಮೇಲೆ ಅವತರಿಸಿಕೊಂಡ ಪದ್ಯದಲ್ಲಿಯ "ದಱುವತ್ತು" ಎಂಬ ಪದದ ಬದಲು ಜನಪ್ರಿಯ ಆವೃತ್ತಿಯಲ್ಲಿ "ತ್ರಿಷಷ್ಟಿ" ಎಂಬ ಪದವು ಕಂಡುಬರುತ್ತದೆ.[೧೨೪] ಇಲ್ಲಿ 'ತ್ರಿಷಷ್ಟಿ' ಎಂಬುದರಿಂದ ಛಂದೋದೋಷ ವಾಗಿ ಷಟ್ಪದಿಯ ಲಯಕ್ಕೆ ಭಂಗವುಂಟಾಗಿದೆ. ಆದುದರಿಂದ ಬಸವಪುರಾಣದಲ್ಲಿ ೬೩ ಸಂಧಿಗಳು ನಿಜವಾಗಿಯೂ ಇದ್ದುವೆ, ಇವೆಯೆ ಎಂಬುದನ್ನು ಸೂಕ್ಷ್ಮ ವಾಗಿ ಪರಿಶೀಲಿಸಬೇಕಾಗುತ್ತದೆ.

ಬಸವಪುರಾಣದ ಸಂಧಿ ಪದ್ಯಸಂಖ್ಯೆಗಳ ವಿಷಯದ ಸಮಸ್ಯೆ ಇಂದಿನ ದೇನಲ್ಲ. ಬಹಳ ಹಿಂದಿನ ಕಾಲದಲ್ಲಿಯೂ ಈ ಬಗ್ಗೆ ಚರ್ಚೆ ಮಾಡಿದ ಉಲ್ಲೇಖ ಒಂದು ತಾಳೆಗರಿಯ ಪ್ರತಿಯಲ್ಲಿ ದೊರೆಯುತ್ತದೆ. ಗುರು ರಾಜಚಾರಿತ್ರ(ಕ್ರಿ. ಶ. ಸು. ೧೬೫೦)ದ ಆ ಪ್ರತಿಯಲ್ಲಿ ಗ್ರಂಥಾರಂಭಕ್ಕಿಂತ ಮೊದಲ ಗರಿಗಳಲ್ಲಿ ಈ ಮಾತಿದೆ:

"ಬಸವಪುರಾಣದ ಪ್ರತಿಗಳಲ್ಲಿ ಷಟ್ಪದಂಗಳು ಸೂತ್ರತಪ್ಪಿ ಹಿಂಚುಮುಂಚಾ ಗಿಯೂ, ಪೂರ್ವಾರ್ಧ ಪರಾರ್ಧಗಳು ಹಿಂಚುಮುಂಚಾಗಿಯೂ ಕಥೆಯೂ

---

೧೨೧ ಬ. ಪು. ಸಂ. ೬೦, ಪ. ೯೧. ೧೨೨ ಬ. ಪ್ರ. ಪುಟ ೯೭೨ (ಅಡಿಟಿಪ್ಪಣಿ).
೧೨೩ ಕ. ಕ. ಚ. I, ಪ್ರ. ೪೮೨. ೧೨೪ ಬ. ಪು. ಜ. ಪ್ರ. ಸಂ. ೬೩, ಪ. ೫೦.

CC-0. Jangamwadi Math Collection. Digitized by eGangotri

ಕಾಂಡಗಳೂ ಹಿಂಚುಮುಂಚಾಗಿಯೂ ಇವೆ. ಕಾಂಡಗಳಲ್ಲಿ ಬಂದ ನಾಂದಿಯೆ ಪುನರಪಿ ಬಂದಿದೆ. ಕೆಲವು ಪದ್ಯಗಳು ಹೆಚ್ಚಿಗೆ. ಅಂತೂ ಕಾಂಡ ೮ಕ್ಕೆ ಸಂಧಿ ೬೦ಕ್ಕೆ ಪದ ೩೬೧ಕ್ಕಂ ಹೆಚ್ಚಾಗಿದ್ದರೆ ಹೆಚ್ಚಿಗೆ ಎಂದು ತಿಳಿವುದು, ಕಡಿಮೆಯಾಗಿದ್ದರೆ ಲೇಖನದೋಷವೆಂದರಿವುದು. ಕೆಲವು ಪದ್ಯಗಳನ್ನು ಸರ್ವಲಕ್ಷಣಪೂರ್ಣವಾಗಿ ತಿದ್ದಿ ಸೇರ್ಪಡಿಸಿದರು ನೀಲಕಂಠಾಚಾರ್ಯರು".[೧೨೫]

ಇದನ್ನು ಸಮೀಕ್ಷಣೆ ಮಾಡಿದ ನೀಲಕಂಠಾಚಾರ್ಯರ ಅಭಿಮತದಂತೆ ಸಹ ಬಸವಪುರಾಣದಲ್ಲಿ ೬೦ ಸಂಧಿಗಳೇ ಇರಬೇಕೆಂದು ತೋರುತ್ತದೆ. ಅಲ್ಲದ ಕಾಂಡ ಸಂಧಿ ಪದ್ಯಸಂಖ್ಯೆಗಳಲ್ಲಿ ಅಸ್ತವ್ಯಸ್ತವಾಗಿದ್ದರೆ ಲಿಪಿಕಾರರ ದೋಷವೆಂದೇ ತಿಳಿಯಬೇಕೆಂದು ಅವರ ಅಭಿಪ್ರಾಯ. ಹೀಗಾಗಿ ಮೂಲ ಆಕರವನ್ನೇ ಪೃಥಕ್ಕರಿಸಿ ನೋಡುವುದು ಪ್ರಸ್ತುತವೆನಿಸಿದೆ. ೬೩ ಸಂಧಿಗಳನ್ನುಳ್ಳ ಜನಪ್ರಿಯ ಆವೃತ್ತಿಯಲ್ಲಿ ಒನೆಯ ಸಂಧಿಯ ಸೂಚನಾಪದ್ಯವಿದು:

ತರುಣಿ ನಾಗಾಂಬೆಯ ಸುಗರ್ಭದಿ
ನಿರುಪಮಜ್ಞಾನಸ್ವರೂಪಂ
ಪರಮಕಾರಣ ಚೆನ್ನಬಸವಂ ಉದ್ಭವಂ ಗೈದ

ಮೇಲುಗಡೆಯಲ್ಲಿ ಚೆನ್ನಬಸವಣ್ಣನವರ ಉದಯ ಎಂಬ ಶೀರ್ಷಿಕೆಯನ್ನೂ ಕೊಡಲಾಗಿದೆ. ಆದರೆ ಈ ಸಂಧಿಯಲ್ಲಿ ಬರುವ ಒಟ್ಟು ೧೮ ಮಾತ್ರ ಪದ್ಯಗಳಲ್ಲಿ ಒಂದರಲ್ಲಿಯೂ ಚೆನ್ನಬಸವಣ್ಣನವರ ಜನನದ ಉಲ್ಲೇಖವಿರುವುದಿಲ್ಲ; ಚೆನ್ನಬಸವಣ್ಣನವರ ವರ್ಣನೆ ಮತ್ತು ಅವರು ಮಾಡಿದ ಗುರುಸ್ತೋತ್ರ ಮಾತ್ರ ಈ ಸಂಧಿಯಲ್ಲಿದೆ. ಚೆನ್ನಬಸವಣ್ಣನವರ ಉದಯದ ಸಂಧಿಯಲ್ಲಿ, ಅಕ್ಕನಾಗಾಯಿಯವರ ಉಲ್ಲೇಖ, ಅವರು ಮಾಡಿದ ಪ್ರಸಾದಸೇವೆ, ಅವರಲ್ಲಿ ಬೆಳೆಯುತ್ತಿದ್ದ ಚಿತ್ಪಿಂಡದ ಉದಯ, ಚೆನ್ನಬಸವಣ್ಣನವರ ಜನನ, ನಾಮಕರಣ ಇತ್ಯಾದಿಗಳ ವಿವರಣೆಯನ್ನು ಅಪೇಕ್ಷಿಸಿದರೆ ತಪ್ಪಾಗಲಿಕ್ಕಿಲ್ಲ. ಆದರೆ ಜ.ಪ್ರಿ.ಆ.ಯ ಒನೆಯ ಸಂಧಿಯ ಸೂಚನಾಪದ್ಯಕ್ಕೂ ಒಳಗಣ ಪದ್ಯಗಳಿಗೂ ವಿಷಯ ಸಂಬಂಧವೇ ಇಲ್ಲ. ಚೆನ್ನಬಸವಣ್ಣನವರ ಜನನ ತತ್ಪೂರ್ವದಲ್ಲಿಯೇ ಆಗಿಹೋಗಿದೆಯೆಂಬುದನ್ನು ಅಲ್ಲಿಯ ವಿಷಯ ತಿಳಿಸುತ್ತದೆ. ಅಲ್ಲದೆ ಬಸವಪುರಾಣದ ಒಂದೊಂದು ಸಂಧಿಯಲ್ಲಿಯೂ ಒಂದು ವಿಶಿಷ್ಟ ಕಥೆಯೋ ಕಥಾಗುಚ್ಛವೋ ಮಹತ್ವದ ಘಟನೆಯೋ ನಿರೂಪಿತವಾಗಿರುತ್ತದೆ. ಹಾಗೆ ಇಲ್ಲಿ ಯಾವುದೂ ಇಲ್ಲ. ಇದೇ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಿಂದ ಪ್ರಕಟವಾಗಿದ್ದ ಬಸವಪುರಾಣದ ಗ್ರಂಥಾಲಯ

---

೧೨೫ ಕ. ಕ. ಚ. I, ಪು. ೪೮೨.

CC-0. Jangamwadi Math Collection. Digitized by eGangotri

ಆವೃತ್ತಿಯಲ್ಲಿ[೨೨೧] ೬೦ ಸಂಧಿಗಳು ಮಾತ್ರವಿದ್ದುದನ್ನು ಕಾಣಬಹುದು. ಸಾಹಿತ್ಯ ಸಮಿತಿಯ ಈ ಪುರಾಣದ ಎರಡು ಸಂಪುಟಗಳಿಗೆ ಆಕರಗಳಾದ ಅ, ಬ, ಕ. ಡ, ಚ, ಮ ಈ ಪ್ರತಿಗಳಲ್ಲಿ ಒಂದರೊಳಗೆ ಮಾತ್ರವೇ ೭ನೆಯ ಸಂಧಿಯ ಸೂಚನಾ ಪದ್ಯವು ದೊರೆಯುತ್ತದೆ; ಆಷ್ಟೇ ಹೊರತು ಪ್ರತಿ ಸಂಧಿಯ ಕೊನೆಯಲ್ಲಿ ಇರುವಂತೆ ಸಂಧಿ ಹಾಗೂ ಪದ್ಯಸಂಖ್ಯೆಗಳನ್ನು ಹೇಳಿ ಮಂಗಳಮಹಾಶ್ರೀಯಿಂದು ಉಲ್ಲೇಖಿಸಿಲ್ಲ. ಹೆಚ್ಚಿಗೆ ಬಳಸಿದ ಮೂರು ಪ್ರತಿಗಳಲ್ಲಿ ಈ ಏಳನೆಯ ಸಂಧಿ ಪ್ರತ್ಯೇಕಿಸಲ್ಪಟ್ಟಿದೆ ಎಂಬುದನ್ನೂ ಸಂಪಾದಕರು ತಿಳಿಸಿರುವುದಿಲ್ಲ. ಆದುದರಿಂದ ಈ ಸಂಧಿ ೬ನೆಯ ಸಂಧಿಯಲ್ಲಿ ಅಂತರ್ಗತವಾಗುವುದೆ ಸೂಕ್ತವೆಂದು ತೋರುತ್ತದೆ. ಹೀಗೆಯೆ ಜನಪ್ರಿಯ ಆವೃತ್ತಿಯಲ್ಲಿ ಪ್ರತ್ಯೇಕವಾಗಿ ಕಂಡು ಬರುವ ೫೮ ಮತ್ತು ೬೩ನೆಯ ಸಂಧಿಗಳಿಗೆ ಸೂಚನಾಪದ್ಯಗಳೇ ಇಲ್ಲ. ಹೀಗಾಗಿ ಈ ಪುರಾಣದ ಒಟ್ಟು ಸಂಧಿ ಸಂಖ್ಯೆಯನ್ನು ಹೇಳುವ ಪ್ರಥಮ ಸಂಧಿಯ ಪದ್ಯದಲ್ಲಿಯ 'ತ್ರಿಷಷ್ಟಿ' ಎಂಬಲ್ಲಿ ಉಂಟಾದ ಛಂದೋಭಂಗ, ಆ ಸಂಧಿಸಂಖ್ಯೆಗೆ ಸರಿಪಟ್ಟಿಂತಿರುವ ೭, ೫೮, ೬೩ನೆಯ ಸಂಧಿಗಳ ವಿಭಜನೆಯಲ್ಲಿ ಕಾಣುವ ಅಸಂಬದ್ಧತೆ, ನೀಲಕಂಠಾಚಾರ್ಯರ ಸ್ಪಷ್ಟ ಅಭಿಪ್ರಾಯ ಇವುಗಳಿಂದಾಗಿ ಬಸವ ಪುರಾಣದ ಒಟ್ಟು ಸಂಧಿಗಳು ಅರುವತ್ತೇ ಎಂದು ಸುಸ್ಪಷ್ಟವಾಗುತ್ತದೆ.

ಇನ್ನು ಬಸವಪುರಾಣದ ಒಟ್ಟು ಪದ್ಯಸಂಖ್ಯೆಯ ವಿಚಾರ. ಈಗ ಪ್ರಕಟವಾಗಿರುವ ಎಲ್ಲ ಆವೃತ್ತಿಗಳಲ್ಲಿಯೂ ೩೬೨೮ ಪದ್ಯಗಳಿವೆ. ಆದರೆ ಇದು ನಿಜವಾದ ಸಂಖ್ಯೆಯೆ? ಅನ್ಯರ ಕೈವಾಡದಿಂದ ಹೆಚ್ಚಿದ ಸಂಖ್ಯೆಯೆ? ಮೂಲತಃ ಇದ್ದ ಸಂಖ್ಯೆಯಾವುದು? ಕೃತಕ ಪದ್ಯಗಳಾವುವು? ಎಂಬುದನ್ನು ತಿಳಿಯುವುದು ಸುಲಭವಲ್ಲ. ಸದ್ಯದಲ್ಲಿ ನಮಗೆ ಉಪಲಬ್ಧವಿದ್ದ ಮಾತೃಕೆಗಳ ಪರಿಶೀಲನೆಯಿಂದ ಭೀಮಕವಿಯವೇ ಆದ ಪದ್ಯಗಳ ಸಂಖ್ಯೆಯನ್ನು ಕಂಡುಹಿಡಿಯಲು ಇಲ್ಲಿ ಪ್ರಯತ್ನಿಸಲಾಗಿದೆ.

ಎಲ್ಲ ಮುದ್ರಿತ ಆವೃತ್ತಿಯಲ್ಲಿ ಕಂಡಂತೆ ಒಟ್ಟು ಪದ್ಯಗಳು		೩೬೨೮
ಸಂ. ೬೦, ಪ. ೯೧ರಲ್ಲಿಯ ವಿವರದಂತೆ	,,	೩೬೨೩
ಈ ಪದ್ಯದ ಒಂದು ಪಾಠಭೇದದಂತೆ	,,	೩೬೨೪
ಸ. ೬೦ರ, ಪ್ರಕ್ಷಿಪ್ತವಾದ ಪ. ೯೬ರಂತೆ	,,	೩೦೩೧
ಈ ಪದ್ಯದ ಒಂದು ಪಾಠಭೇದಂತೆ	,,	೩೬೨೪
ನೀಲಕಂಠಾಚಾರ್ಯನ ಅಭಿಪ್ರಾಯದಂತೆ	,,	೩೬೨೧
ನ ಪ್ರತಿಯಲ್ಲಿ ಕೊನೆಗೆ ಹೇಳಿದಂತೆ	,,	೩೬೧೬

೨೨೬ ಸಂಪಾದಕರು: ಡಾ. ಆರ್. ಸಿ. ಹಿರೇಮಠ, ೧೯೫೮.

CC-0. Jangamwadi Math Collection. Digitized by eGangotri

ಗ್ರಂಥಸಂಪಾದನೆಯ ಸಂದರ್ಭದಲ್ಲಿ ಕೆಲವೊಂದು ಪದ್ಯಗಳು ಕೆಲವೊಂದು ಪ್ರತಿಗಳಲ್ಲಿ ಇಲ್ಲದಿದ್ದುದು ಕಂಡುಬಂದಿದೆ. ಅವುಗಳ ವಿವರ ಕೆಳಗಿನಂತಿದೆ:

ಪ್ರತಿ	ಇಲ್ಲದ ಪದ್ಯಗಳು	ಒಟ್ಟು ಇಲ್ಲದ ಪದ್ಯಗಳು	ಉಳಿವ ಪದ್ಯಗಳು
ಕ	ಸಂ. ೬ ಪ. ೫೧, ಸಂ. ೫೯, ಪ. ೩೨	೨	೩೬೨
ತ	ಸಂ. ೧೭, ಪ. ೫೩	೧	೩೬೨
ನ	ಸಂ. ೧೦, ಪ. ೫೧, ಸಂ. ೩೬, ಪ. ೬೫, ಸಂ. ೩೭, ಪ. ೧, ಸಂ. ೩೯, ಪ. ೫೧, ಸಂ. ೫೭, ಪ. ೫೦, ಸಂ. ೫೭, ಪ. ೫೪.	೬	೩೬೨೨
ಪ	ಸಂ. ೫೭, ಪ. ೫೦, ಸಂ. ೫೭, ಪ. ೫೪	೨	೩೬೨೬
ಮ	ಸಂ. ೭, ಪ. ೧೧	೧	೩೬೨೭

ಇಲ್ಲಿ ಉಳಿದಿರುವ ಪದ್ಯಗಳಲ್ಲಿ ಪ್ರಕ್ಷಿಪ್ತವೆಂದು ನಿಚ್ಚಳವಾಗಿರುವ ಸಂ. ೬೦, ಪದ್ಯ ೯೬ನ್ನು ಬಿಟ್ಟುಬಿಟ್ಟರೆ ಆಯಾ ಪತ್ರಿಯ ಪದ್ಯಸಂಖ್ಯೆ ಒಂದರಿಂದ ಕಡಿಮೆಯಾಗುತ್ತದೆ. ಆಗ ನ ಪ್ರತಿಯಲ್ಲಿ ಉಳಿಯುವುದು ೩೬೨೧ ಪದ್ಯಗಳು. ಈ ಸಂಖ್ಯೆ ನೀಲಕಂಠಾಚಾರ್ಯನು ಹೇಳುವ ಸಂಖ್ಯೆಯೆ ಆಗಿರುವುದು ಗಮನಾರ್ಹ ವಿಷಯ. ನೀಲಕಂಠಾಚಾರ್ಯನ ನಿರ್ಣಯಕ್ಕೆ ನ ಪ್ರತಿಯ ಪುಷ್ಪಿ ದೊರೆಯುವುದರಿಂದ ಇದೇ ೩೬೨೧ ಬಸವಪುರಾಣದ ಒಟ್ಟು ಪದ್ಯಸಂಖ್ಯೆ ಇರಬಹುದೆಂದು ಸಕೃದ್ದರ್ಶನಕ್ಕೆ ತೋರುತ್ತದೆ. ಆದರೆ, ಸಂ. ೬೦, ಪ. ೯೧ರ 'ತ್ರಿವಿಂಶತಿ' ಎಂಬುದನ್ನು ತಿದ್ದುವುದಕ್ಕೆ ಆಧಾರ ದೊರೆತಿಲ್ಲ.

ಈ ನ ಪ್ರತಿ ಇನ್ನೂ ಹಲವು ಪ್ರಕ್ಷೇಪಗಳನ್ನು ಹೇಳುತ್ತದೆ. ನೋಡಿ, ಗ್ರಂಥದ ಕೊನೆಯ ಗದ್ಯವಿದು:

"ಆಂತು ಕಾಂಡವು ಲಕ್ಕಂ ಸಂಧಿ ೫೦ಕ್ಕಂ ಪದನು ೩೦೫೨ಕ್ಕಂ ಯಿದಕ್ಕೆ ಸ್ತೋತ್ರಪದ ಆಶೀರ್ವಾದಪದಂಗಳಿಂದ ೨೧ ಪದನ ಕಳೆದು ಕಥಾಲಾಪಣೆಗೆ ೩೦೩೧ ಪದನು ಭೀಮಕವಿ ಪ್ರೋಕ್ತಂಗಳು. ಗುರುಭಕ್ತನ ಕಥೆ ಮೊದಲಾದವುತ್ಪೈಕ್ಷಿಪ್ತಂಗಳು. ಆ ಕಥೆಗೆ ಸೇ(ರಿಸ)ಲಾದ ಪದನು ಸಂಧಿ ೧೦ಕ್ಕಂ ಪದನು ೫೭೬ಕ್ಕಂ ಆಂತು ಉಭಯಂ ಕೂಡಿ ಸಂಧಿ ೬೦ಕ್ಕಂ ಪದನು ೩೬೧೬ಕ್ಕಂ ಮಂಗಳಂ ಮಹಾಶ್ರೀ..." ಹೀಗೆ ನ ಪ್ರತಿ ಭೀಮಕವಿ ಪ್ರೋಕ್ತಂಗಳು ೩೦೩೧ ಮಾತ್ರ ಪದ್ಯಗಳೆಂದು ಉಸುರುತ್ತದೆ. ಇದು ಬಸವಪುರಾಣದ ಸಂ. ೬೦, ಪ. ೯೬ರ ಅಭಿಪ್ರಾಯವನ್ನು ಪಡಿನುಡಿಯುತ್ತದೆ. ಆ ಪದ್ಯವಿದು:

CC-0. Jangamwadi Math Collection. Digitized by eGangotri

ಬಸವೇಶ್ವರ ಎಂಬ ಐದಕ್ಷರದ ಪದ

ಪದವಿನಾಶನ ಭೀತಿಯಿಂದಂ
ಪದದ ಬಾಹುಲ್ಯದುರುಭಯದಿಂ
ತ್ರಿದಶಶತಮುಂಮೆಂಬ ಪದನುಂ ಮುನ್ನ ಭೀಮಕವಿ
ಪದದೆ ಪೇಳ್ದನದೇ ಪ್ರಮಾಣಂ
ಪದದ ಸಂಖ್ಯೆಗೆ ನಿರಿಸಿಕೂಡಲ್
ಮುದದೆ ಮುಚ್ಚಾಸಿರದ ಮೂವತ್ತೊಂದು ಪದನಾಯ್ತು.

ಈ ಪದ್ಯಕ್ಕಿರುವ ಶೀರ್ಷಿಕೆಗೂ ಪದ್ಯದ ವಿಷಯಕ್ಕೂ ಸಂಬಂಧವೇನೆಂಬುದು ತಿಳಿಯದು. ಇಲ್ಲಿ "ಭೀಮಕವಿ ಮುನ್ನೆ ಪೇಳಿದುದು ೩೦೦೦ ಪದನು, ಅದೇ ಪ್ರಮಾಣವು, ಪದದ ಸಂಖ್ಯೆಗೆ 'ನಿರಿಸಿ ಕೂಡಲ್' ೩೦೩೧ ಪದನಾಯಿತು" ಎಂದು ವಿವರಿಸಲಾಗಿದೆ. ಇದೊಂದು ಪ್ರಕ್ಷಿಪ್ತ ಪದ್ಯವೆಂಬುದು ನಿಚ್ಚಳವಾಗಿಯೆ ಕಂಡುಬರುತ್ತಿದ್ದರೂ ಯಾವನೊಬ್ಬ ಅಭ್ಯಾಸಿ ವಿವೇಚಿಸಿ ತನ್ನ ಅಭಿಪ್ರಾಯವನ್ನು ಹೇಳಿರುವುದರಿಂದಲೂ ನ ಪ್ರತಿ ಇದನ್ನು ಬೆಂಬಲಿಸಿರುವುದರಿಂದಲೂ ವಿಮರ್ಶಕನು ಉಪೇಕ್ಷಿಸುವಂತಿಲ್ಲ. ಈತನು 'ನಿರಿಸಿ ಕೂಡಿದ' ೩೧ ಪದ್ಯಗಳೂ ಭೀಮಕವಿಯವೇ ಎಂದು ಎಣಿಸಬೇಕು; ಮತ್ತು ಒಟ್ಟು ಪದ್ಯಗಳು ೩೦೩೧ ಎಂದು ತಿಳಿಯಬೇಕು. ಈ ಸಂಖ್ಯೆಗೆ ಸೇರಿರುವ ಪ್ರಕ್ಷಿಪ್ತ ಪದ್ಯಗಳಾವುವೆಂಬುದನ್ನು ನ ಪ್ರತಿ ಎತ್ತಿ ತೋರಿಸುತ್ತದೆ:

ಸ್ತೋತ್ರಾಶೀರ್ವಾದ ಪದ್ಯಗಳು	೨೧
೧೦ ಸಂಧಿಗಳ ಗುರುಭಕ್ತಾದಿ ಕಥೆಗಳ ಪದ್ಯಗಳು	೫೭೭
ಒಟ್ಟು	೫೯೭

ಈಗಿನ ಗ್ರಂಥದ ೩೬೨೮ ಪದ್ಯಗಳಲ್ಲಿ ಈ ೫೯೭ ಪ್ರಕ್ಷಿಪ್ತ ಪದ್ಯಗಳನ್ನು ಬಿಟ್ಟರೆ ಉಳಿಯುವುದು ೩೦೩೧ ಪದ್ಯಗಳು. ಹೀಗೆ ನ ಪ್ರತಿ ಬಿಟ್ಟಿರುವ ಪದ್ಯಗಳನ್ನು ಕಳೆದರೆ ನೀಲಕಂಠಾಚಾರ್ಯನ ಸಂಖ್ಯೆಯನ್ನೂ (೩೬೨೧), ತನ್ನ ಅಭಿಪ್ರಾಯದಂತೆ ಗುರು ಭಕ್ತಾದಿ ಕಥೆಗಳ ೫೯೭ ಪದ್ಯಗಳನ್ನು ಕಳೆದರೆ ಅಜ್ಞಾತ ವಿಮರ್ಶಕನ ಸಂಖ್ಯೆಯನ್ನೂ (೩೦೩೧) ತೋರಿಸುವುದು ಸಂಶೋಧಕರಿಗೆ ಕುತೂಹಲಕಾರಿಯೂ ರೋಚಕವೂ ಆಗಿದೆ.

ನ ಪ್ರತಿ ೫೦ ಸಂಧಿ, ೩೦೫೨ ಪದ್ಯಗಳು ಭೀಮಕವಿ ಪ್ರೋಕ್ತಂಗಳೆಂದು ಹೇಳಿದ್ದರೂ ತನ್ನ ಅಭಿಪ್ರಾಯದಲ್ಲಿ ಉತ್ಪ್ರೇಕ್ಷಿಪ್ತಂಗಳೆನಿಸಿದ ೧೦ ಸಂಧಿಗಳನ್ನು–

CC-0. Jangamwadi Math Collection. Digitized by eGangotri

೫೭೬ ಪದ್ಯಗಳನ್ನು ಕೂಡಿಸಿಕೊಂಡೇ ಕೊಟ್ಟಿದೆ. ಗುರುಭಕ್ತಾದಿ ಕಥೆಗಳ ೧೦ ಸಂಧಿಗಳಾವುವೆಂದು ನೋಡುವಾಗ, ಗುರುಭಕ್ತಯ್ಯ(ಸಂ. ೩೮)ನಿಂದ ಚಿಕ್ಕ ಮಾದಣ್ಣ(ಸಂ. ೪೬)ನ ಕಥೆಗಳ ವರೆಗೂ ಬರುತ್ತದೆ. ಅವುಗಳ ಪದ್ಯಸಂಖ್ಯಾ ವಿವರ ಹೀಗೆ:

	ಕಥೆಯ ಹೆಸರು	ಸಂಧಿ	ಒಟ್ಟು ಪದ್ಯ
೧.	ಗುರುಭಕ್ತಿಯಾಂಡಾರಿ	೩೮	೭೧
೨.	ಗುರುಭಕ್ತಯ್ಯ	೩೯	೮೯
೩.	ಶ್ವೇತ	೪೦	೩೦
೪.	ಮಲುಹಣ	೪೧	೪೦
೫.	ಗುರ್ಜರ (ಓಹಿಲಯ್ಯ)	೪೨	೮೬
೬.	,, (ಉದ್ಭಟ)	೪೩	೭೩
೭.	ಗುರುಭಕ್ತಿಯಾಂಡಾರಿ	೪೪	೫೫
೮.	ವೇಮನಾರ್ಯ	೪೫	೮೧
೯.	ಚಿಕ್ಕ ಮಾದಣ್ಣ	೪೬*	೭೦
			೫೯೫

'ಗುರುಭಕ್ತನ ಕಥೆ ಮೊದಲಾದವು' ಎಂದಿರುವುದರಿಂದ ಆ ಹತ್ತು ಸಂಧಿಗಳು ಅವಿಚ್ಛಿನ್ನ ಕ್ರಮದಲ್ಲಿಯೇ ಇರಬೇಕೆಂದು ಲೆಕ್ಕಿಸಲಾಗಿದೆ. ಆದರೆ ಇವು ೯ ಸಂಧಿಗಳಾಗುತ್ತವೆ; ೫೯೫ ಪದ್ಯಗಳಾಗುತ್ತವೆ. ೫೭೬ಕ್ಕಿಂತ ಹೆಚ್ಚಿರುವ ಈ ಪದ್ಯ ಸಂಖ್ಯೆಯಲ್ಲಿ ನ ಪ್ರತಿಯಲ್ಲಿಲ್ಲದ ೨ ಪದ್ಯಗಳನ್ನು ಕಳೆದರೆ ೧೭ ಪದ್ಯಗಳು ಹೆಚ್ಚಾಗುತ್ತವೆ. ಈ ನ ಪ್ರತಿಯ ಅಭಿಪ್ರಾಯವನ್ನು ಕೂಲಂಕಷ ಅಭ್ಯಾಸದಿಂದ ಒರೆಗೆ ಹಚ್ಚಿ ನೋಡುವುದು ಪ್ರತ್ಯೇಕವಾದ ಕೆಲಸ. ೫೭೬ ಪದ್ಯಗಳ ದೊಡ್ಡ ಮೊತ್ತವನ್ನು ಪ್ರಕ್ಷಿಪ್ತವೆಂದು ತೆಗೆದು ಹಾಕುವ ಸಾಹಸ ಈಗ ಬೇಡ; ನೀಲ ಕಂಠಾಚಾರ್ಯನ ೩೬೧ಕ್ಕೆ ನಿಂತಿರೋಣ.

---

* ಈ ಸಂಧಿ ನ ಪ್ರತಿಯಲ್ಲಿಲ್ಲ. ಲಕ್ಷ್ಯ ತಪ್ಪಿ ಉಳಿದುಕೊಂಡಿರಬೇಕು. ಏಕೆಂದರೆ ಒಟ್ಟು ಪದ್ಯ ಸಂಖ್ಯೆಗಳ ಲೆಕ್ಕದಲ್ಲಿಯೂ, ಪ್ರಕ್ಷಿಪ್ತ ಪದ್ಯಗಳ ಲೆಕ್ಕದಲ್ಲಿಯೂ ಇದನ್ನು ಹಿಡಿದುದು ಕಂಡು ಬರುತ್ತದೆ.

CC-0. Jangamwadi Math Collection. Digitized by eGangotri

ಕೃತಜ್ಞತೆಗಳು

ಭೀಮಕವಿಯ ಬಸವಪುರಾಣ ಕನ್ನಡ ನಾಡಿನಲ್ಲಿ ಪಂಡಿತಪಾಮರರಿಗೆ ಪ್ರಿಯವಾದ ಕೃತಿ. ಹಳ್ಳಿಗಳಲ್ಲಿ ಮೂರು ನಾಲ್ಕು ತಿಂಗಳ ಕಾಲ ಬಸವ ಪುರಾಣವನ್ನು ಹಚ್ಚಿ ಸಹಸ್ರಾರು ಜನರು ಭಕ್ತಿಯಿಂದ ಕೇಳಿ ಪಾವನರಾಗಿರುವರು, ಆಗುತ್ತಿರುವರು. ಕನ್ನಡ ಸಾಹಿತ್ಯದಲ್ಲಿ ಬಸವಪುರಾಣದ ಸ್ಥಾನ ಬಲು ಹಿರಿದು. ಭಾಮಿನೀ ಷಟ್ಪದಿಯನ್ನು ಹದಗೊಳಿಸಿ ಪುರಿಗೊಳಿಸಿ ಒಂದು ಮಹಾಪುರಾಣವನ್ನು ಆದರಲ್ಲಿ ರಚಿಸಿ ಮುಂದಿನ ಕವಿಗಳಿಗೆ ಅದರ ಸೊಬಗನ್ನೂ ಶಕ್ತಿಯನ್ನೂ ತೋರಿಸಿದ ಕೀರ್ತಿ ಭೀಮಕವಿಗೆ ಸಲ್ಲುತ್ತದೆ. ಅಂತೆ ಅದು ಪಂಡಿತ ಪಾಮರರಿಗೆ ಪ್ರಿಯವಾಗಿದೆ.

ಬಸವಪುರಾಣವನ್ನು ಪರಿಷ್ಕರಿಸಿ ಪ್ರಕಟಿಸಬೇಕೆಂಬ ಸಂಕಲ್ಪವನ್ನು ಲಿಂಗೈಕ್ಯ ಪ್ರೊ. ಶಿ. ಶಿ. ಬಸವನಾಳರವರು ತಮ್ಮ ಮುಂದಿಟ್ಟುಕೊಂಡಿದ್ದರು. ಅವರ ಅಕಾಲ ಮರಣನಿಮಿತ್ತ ಆ ಕಾರ್ಯವನ್ನು ನಾವು ಕೈಕೊಳ್ಳಬೇಕಾಯಿತು. ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿಯ ಪರವಾಗಿ ಬಸವಪುರಾಣದ ಪ್ರಥಮ ಪರಿಷ್ಕರಣವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಲಾಯಿತು. ಈ ಗ್ರಂಥವನ್ನು ಪುನಃ ಪರಿಷ್ಕರಿಸುವ ಆವಶ್ಯಕತೆ ತಲೆದೋರಿತು. ನಾಡಿನ ನಾನಾ ಭಾಗದಿಂದ ನೂರಾರು ಹಸ್ತಪ್ರತಿಗಳನ್ನು ಸಂಗ್ರಹಿಸಿ ಪ್ರಾತಿನಿಧಿಕವೆನಿಸಿದ ಮಹತ್ವದ ತಾಳವೋಲೆಯ ಹತ್ತು ಪ್ರತಿಗಳನ್ನಿಟ್ಟುಕೊಂಡು ಹೊಸ ಸಂಸ್ಕರಣವನ್ನು ಸಿದ್ಧಮಾಡಲಾಗಿದೆ; ಪ್ರಸ್ತಾವನೆ ಇತ್ಯಾದಿಗಳನ್ನೆಲ್ಲ ಪೂರೈಸಲಾಗಿದೆ.

ಧಾರವಾಡದ ಶ್ರೀ ಮುರುಘಾಮಠ ಅಭಿನವಕಲ್ಯಾಣ. ಬಸವಣ್ಣನವರ ಕಾಲದಲ್ಲಿ ಸಾಹಿತ್ಯ ಬೆಳಕಾಗಿ ಹರಿದಂತೆ ಲಿಂ. ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಯುಗದಲ್ಲಿ ಶರಣಸಾಹಿತ್ಯ ಅಪಾರವಾಗಿ ಬೆಳಕು ಕಂಡಿತು. ಆ ಪರಂಪರೆ ಶ್ರೀ ನಿ. ಪ್ರ. ಸ್ವ. ಮಹಾಂತಸ್ವಾಮಿಗಳವರ ಕೃಪೆಯಿಂದ ಅವಿಚ್ಛಿನ್ನವಾಗಿ ನಡೆದು ಬಂದಿದೆ. ಈ ಬಸವಪುರಾಣದ ಪ್ರಕಟನೆಗೆ ೩೦,೦೦೦ ರೂ.ಗಳನ್ನು ಆಶೀರ್ವದಿಸಿದುದು ಒಂದು ಸಂಸ್ಮರಣೀಯ ವಿಷಯ. ಅಪ್ಪಗಳಿಗೆ ನಮ್ಮ ಭಕ್ತಿಯನ್ನು ಅರ್ಪಿಸಲು ಶಬ್ದಗಳೇ ಸಾಲದಾಗಿವೆ.

ಶ್ರೀ ವೀ. ರು. ಕೊಪ್ಪಳ ಅವರು ಈ ಕಾರ್ಯದಲ್ಲಿ ನನಗೆ ಊರುಗೋಲಾಗಿ ನಿಂತಿರುವರು. ಶ್ರೀ ಮೇವುಂಡಿ ಮಲ್ಲಾರಿ ಅವರು ಹೆಜ್ಜೆ ಹೆಜ್ಜೆಗೂ ಸಹಾಯ ನೀಡಿರುವರು. ಶ್ರೀ ಪಂಚಾಕ್ಷರಿ ಹಿರೇಮಠ ಹಾಗೂ ಶ್ರೀ ಎಸ್. ಜಿ. ಕುಲಕರ್ಣಿ

CC-0. Jangamwadi Math Collection. Digitized by eGangotri

ಅವರು ನೆರವನ್ನು ನೀಡಿರುವರು. ಕನ್ನಡ ವಿಭಾಗದ ನನ್ನ ಸಹೋದ್ಯೋಗಿಗಳಾದ ಡಾ. ಎಂ. ಎಸ್. ಸುಂಕಾಪುರ, ಡಾ. ಎಂ. ಎಂ. ಕಲಬುರ್ಗಿ, ಪ್ರೊ. ಜೆ. ಎಸ್. ಕುಳ್ಳಿ ಮುಂತಾದವರು ಸಹಾಯ ನೀಡಿರುವರು. ಎಲ್ಲರಿಗೂ ಕೃತಜ್ಞತೆಗಳು. ಮಣಿಪಾಲ ಪವರ್ ಪ್ರೆಸ್ಸಿನ ಒಡೆಯರ ಹಾಗೂ ಕೆಲಸಗಾರರ ಹೃತ್ಪೂರ್ವಕ ಸಹಕಾರವನ್ನಂತೂ ನೆನೆದಷ್ಟೂ ಕಡಿಮೆ.

೨೫-೧-೧೯೭೧

ಆರ್. ಸಿ. ಹಿರೇಮಠ
ಸಂಪಾದಕರು

CC-0. Jangamwadi Math Collection. Digitized by eGangotri

ಬಸವಪುರಾಣದ ಕಥಾಸಾರ

ಸಂಧಿ ೧ರಿಂದ ೪

ಪೀಠಿಕೆ

ಶಿವಕವಿದೇವನ ಮಗನಾದ ಭೀಮಕವಿ ತನ್ನೀ ಕಾವ್ಯರಚನೆಯನ್ನು ಕುರಿತು ಆರಂಭದಲ್ಲಿ ಹೀಗೆ ಹೇಳುತ್ತಾನೆ:

ಬಸವಮಹಾಗುರುವೆ ನನಗೆ ಶರಣಾಗು; ಕೃತಿಯನ್ನು ಪಾರವೆಯ್ದಿಸು. ಸಿದ್ಧವಟಧಾಮನೆ ನಮ್ಮನ್ನು ಉದ್ಧರಿಸು, ಈ ಕೃತಿಗೆ ಅತಿಚಿಮತ್ಕೃತಿಯನ್ನು ಕೊಡು. ಸಾವಿರಾರು ನಾಲಗೆಯವರಿಗೆ ಬಸವಚರಿತ್ರೆ ಹೇಳಲಸಾಧ್ಯ; ಒಂದು ನಾಲಗೆಯವನು ಹೇಗೆ ಹೇಳಿಯೇನು? ಯಾವ ಯೋಚನೆಯೂ ಇಲ್ಲದೆ ಭಕ್ತಿ ಪರವಶದಿಂದ ತುತಿಸಿ ಬದುಕುವೆನು. ಕೊಂಡಗುಳಿ ಕೇಶಿ, ಸಿರಿಪತಿಪಂಡಿತ, ಶಿವಲೆಂಕಪಂಡಿತ, ಮಲ್ಲಿಕಾರ್ಜುನ ಪಂಡಿತ ಇವರ ಕೃಪೆಯಿಂದ ನನಗೆ ಇದನ್ನು ರಚಿಸುವ ಉತ್ಸಾಹ. ಹರನನ್ನೂ ಹರಗಣಗಳನ್ನೂ ಕೀರ್ತಿಸಿದ ಹರಿಹರದೇವ ಮತ್ತು ರಾಘವರ ಕೃಪೆಯಿಂದ ರಚಿಸುವೆನು. ಪುರಾತನ ನೂತನ ಶಿವಕವಿಗಳನ್ನು ಭಾವಿಸುವೆನು.

ಇಷ್ಟೊಂದು ಬಡಮತಿಯವನು ಬಸವರಾಜನ ಕೃತಿಯನ್ನು ನಾನು ಹೇಗೆ ರಚಿಸಬಲ್ಲೆನು ಎಂದು ಎಣಿಸಿ ಶಿವಯೋಗನಿದ್ರಾಮುದ್ರೆಯಲ್ಲಿರುವಾಗ ಪಾಲ್ಕುರಿಕೆ ಸೋಮನಾಥನು ಕನಸಿನಲ್ಲಿ ಬಂದು ಪ್ರಸಾದವನ್ನು ಕರುಣಿಸಿದನು: 'ನಾನು ನಿರಂತರವಾಗಿ ನಿನ್ನ ಆತ್ಮದಲ್ಲಿದ್ದು ರಚಿಸುವೆನು, ಬರೆದುಕೋ; ನಾನು ಹೇಳಿದುದನ್ನೆ ಕನ್ನಡಿಸಿ ಹೇಳು' ಎಂದು ಬೋಧಿಸಿದನು. ಇದರಿಂದ ನನ್ನ ಕೆಲಸ ಆಯಾಸವಿಲ್ಲದೆ ನಡೆಯುವುದು.

ರಸ-ಭಾವ-ಅರ್ಥ-ಅಲಂಕಾರಗಳಲ್ಲಿ ದೋಷವಿಲ್ಲದಂತೆ ಕೃತಿಯನ್ನು ಎಸಗುವೆನು. ವಸ್ತುಕದ ಮುಂದೆ ಇದರ ವಿಳಾಸವೇನು? ಸಾಮಾನ್ಯ ವರ್ಣಕವಿತೆಯೆಂದು, ಬರಿಯ ಕನ್ನಡ ಭಾಷೆಯೆಂದು ಬಗೆಯಲಾಗದು. ಗುರುಬಸವನನ್ನು ನೆನೆಯುವ ಬಲ್ಪಿಂದ ಸರಸಮೃದುಮಧುರೋಕ್ತಿಗಳು ಒದಗಿಬಂದಿವೆ. ಲಿಂಗರಹಸ್ಯಸಿದ್ಧಾಂತ, ವೇದಪುರಾಣ, ಬಸವಪುರಾತರ ಗೀತಾರ್ಥ ಇವುಗಳನ್ನು ಕೋದ ಮಣಿಗಣಸೂತ್ರದಂತೆ ಬಸವನ ಚರಿತೆಯನ್ನು ಆದಿಗಣಗಳ ಚರಿತೆ

CC-0. Jangamwadi Math Collection. Digitized by eGangotri

ಗಳೊಡನೆ ಬಣ್ಣಿಸುವೆನು; ಪರಂಜ್ಯೋತಿಃಸ್ವರೂಪಿಗೆ ಒಂದು ದೀಪವನ್ನು ಹೊತ್ತಿಸುವಂತೆ ಬಣ್ಣಿಸುವೆನು.

ಕಥಾರಂಭ

ಶುಭ್ರತೆಯೆಲ್ಲಾ ಒಟ್ಟುಗೂಡಿ ಆಕಾರವಾಗಿದ್ದ ಕೈಲಾಸದಲ್ಲಿ ಶಿವನ ಓಲಗ. ಹರಿ, ಬ್ರಹ್ಮ, ದೇವೇಂದ್ರಾದಿಗಳು ದೇವರನ್ನು ಓಲಗಿಸುತ್ತಿದ್ದರು. ಶಿವನು ದೇವತೆಗಳನ್ನು ಕಟಾಕ್ಷದಿಂದ ನೋಡಿ, ಹರಿಬ್ರಹ್ಮರನ್ನು ಮಾತನಾಡಿಸಿ, ಗಣೇಶ–ಷಣ್ಮುಖರನ್ನು ಮುದ್ದಾಡಿ ಬೀಳ್ಕೊಟ್ಟನು. ಓಲಗವು ಹರಿದು, ಮಹಾದೇವನು ಪಾರ್ವತಿಯೊಡನೆ, ತನ್ನ ಮಿತಪರಿವಾರದೊಡನೆ ಸುಖಸಂಕಥಾವಿನೋದದಿಂದಿರುವಾಗ ನಾರದನು ಆಗಮಿಸಿ ನಮಸ್ಕರಿಸಿ ನಿಂತನು. 'ಮುನಿಪನೇ, ನೀನು ಅರಿತುಕೊಂಡು ಬಂದ ವೃತ್ತಾಂತವನ್ನು ವಿವರಿಸು' ಎಂದು ದೇವಿ ಕೇಳಿದಳು. ಅವನು, "ಮರ್ತ್ಯಲೋಕದಲ್ಲಿ ಭಕ್ತಿಚರಿತ್ರವು ಎಷ್ಟೂ ವ್ಯಕ್ತವಾಗಿರುವುದಿಲ್ಲ. ಶೈವಾಚಾರತತ್ಪರರಾದ ಶರಣರು ಮರೆಮಾಜಿಕೊಂಡಿರುವರು. ಅನೇಕರಲ್ಲಿ ಹಮ್ಮು ಹೆಚ್ಚಾಗಿದೆ. ನಿಮ್ಮ ಭಕ್ತಿಯ ತುದಿಮೊದಲು ಇದೆಂದು ಯಾರಿಗೂ ಕಾಣದಿದೆ. ನೀವು ಬಂದು ಕರುಣೆಗೆಯ್ದು ಭಕ್ತಿಯನ್ನು ಪಸರಿಸಿ ಮರ್ತ್ಯವನ್ನು ಪಾವನಗೊಳಿಸಬೇಕು" ಎಂದು ಶಿವನನ್ನು ಬಿನ್ನವಿಸಿದನು.

ವೃಷಭೇಂದ್ರನ ಪ್ರಥಮಾವತಾರ

ಅದಕ್ಕೆ ದೇವದೇವನು 'ನಂದೀಶ್ವರನಿಗೂ ನನಗೂ ಎಳ್ಳನಿತೂ ಭೇದವಿಲ್ಲ. ಇವನು ಎರಡನೆಯ ಶಂಕರನೇ. ಈತನನ್ನು ಕಳಿಸಿ ಲೋಕವನ್ನು ಬೋಧಿಸಿ ಉದ್ಧರಿಸಿಸುವೆನು' ಎಂದು ಹೇಳಿ ಆ ಬಗೆಯನ್ನು ವಿವರಿಸಿದನು. ಆದಿಯಲ್ಲಿ ಶಿಲಾದನೆಂಬವನು ಸಾಸವೆಕಾಳಷ್ಟು ಕಲ್ಲು ಕಣಗಳನ್ನು ತಿಂದು ತಪಸ್ಸು ಮಾಡಿ ನನ್ನನ್ನು ಒಲಿಸಿದನು. 'ನಿನ್ನ ಪ್ರತಿಮಾನನಪ್ಪ ಭಕ್ತಿಪರನಾದ ಮಗನನ್ನು ಕೊಡು, ಆ ಮಗನಲ್ಲಿ ಭಕ್ತಿರತಿ ಲವಮಾತ್ರ ಕಡಿಮೆಯಾದರೂ ಆತನನ್ನು ಕೊಂದು ಹಾಕುವೆನು – ಅಂಥ ಮಗನನ್ನು ಕೊಡು' ಎಂದು ಬೇಡಿದನು. ಆ ಪ್ರಕಾರ ನನ್ನ ಅಪ್ಪಣೆಯಂತೆ ವೃಷಭೋತ್ತಮನು ಶಿಲಾದನಿಗೆ ನಂದೀಶ್ವರನೆಂಬ ಹೆಸರಿನಿಂದ ಮಗನಾದನು. ಆತನು ಭಕ್ತಿಜೀವಿಯಾಗಿ ಘೋರ ತಪವನ್ನಾಚರಿಸಿದನು. ಆತನ ತಪೋವಹ್ನಿಗೆ ದೇವಾಧಿದೇವತೆಗಳೂ ಮನುಜರೂ ಬೆಂದು ತಳಮಳಿಸಿ ನನಗೆ ಮರೆಹೊಕ್ಕರು. 'ಈತನು ನಂದಿ, ಎರಡನೆಯ ನಾನು. ಈತನಿಂದ ನಿಮಗಾರಿಗೂ

CC-0. Jangamwadi Math Collection. Digitized by eGangotri

ಕೇಡಿಲ್ಲ' ಎಂದು ನಾನು ಅಭಯವನ್ನಿತ್ತೆನು. ಮುಂದೆ ನಾನವನಿಗೆ ಪ್ರತ್ಯಕ್ಷ ನಾಗಲು, 'ನಿನ್ನ ಅವಿರತ ಭಕ್ತಿಯನ್ನು ಮಾತ್ರ ಕೊಡು, ಏನೂ ಒಲ್ಲೆ' ಎಂದು ಆತನೆಂದನು. ನಾನು ಆತನನ್ನು ನನ್ನ ವಾಹನವನ್ನಾಗಿ ಮಾಡಿಕೊಂಡು ಆತನ ಆಂಗಸ್ಪರ್ಶಸುಖದಲ್ಲಿರುವೆನು. ನಂದೀಶ್ವರನ ತಪೋಭೂಮಿಯಾದ ಶ್ರೀಶೈಲದ ನೈಋತ್ಯಭಾಗವು 'ನಂದಿಮಂಡಲ' ಎಂದು ಹೆಸರಾಯಿತು.

ನಂದೀಶನಿಗೆ ಶಿವನಿರೂಪ

ಶಿವನು ನಂದಿಯನ್ನು ತಕ್ಕೈಸಿ ಇಂತೆಂದನು: 'ನೀನು ಬಸವನಾಮದಿಂದ ಭೂಲೋಕದಲ್ಲಿ ಅವತರಿಸಿ ಮರ್ತ್ಯವನ್ನು ಪಾವನಗೊಳಿಸು. ನಾನು ನಿನ್ನೊಡನೆಯೆ ಗುರುಲಿಂಗಜಂಗಮರೂಪದಿಂದಿದ್ದು ಬೋಧಿಸುತ್ತಿರುವೆನು. ನನಗೂ ನಿನಗೂ ಇಷ್ಟೂ ಸಂದಿಲ್ಲ.' ಅದಕ್ಕೆ ನಂದೀಶ್ವರನು ದೇವದೇವನಿಗೆ ಮೈಯೆಲ್ಲ ಕೈಯಾಗಿ ದೀರ್ಘದಂಡಪ್ರಣಾಮ ಗೈದು, ಆತನ ಅನುಜ್ಞೆಯನ್ನು ತಲೆಯಲ್ಲಾಂತು ಸಂತಸದಿಂದ ಭೂಲೋಕದತ್ತ ಗಮನಿಸಿದನು.

ಬಸವಜನನ

ಶ್ರೀಶೈಲದ ಪಶ್ಚಿಮಕ್ಕೆ ಕರ್ನಾಟಕದಲ್ಲಿ ಇಂಗುಳೇಶ್ವರ–ಬಾಗವಾಡಿಯೆಂಬ ಊರುಂಟು. ಆ ಅಗ್ರಹಾರದ ಗ್ರಾಮಣೀಮಣಿ ಮಂಡಗೆ ಮಾದಿರಾಜನೆಂಬ ಶೈವಬ್ರಾಹ್ಮಣ. ಮಾದಾಂಬಿಕೆ ಆತನ ಸತಿ. ಅವರಿಗೆ ಮಕ್ಕಳಿರಲಿಲ್ಲ. ಪುತ್ರಕಾಮಿಗಳಾದ ಅವರು ನಂದೀಶ್ವರನ ನೋಂಪಿಯನ್ನು ಮಾಡಿದರು. ವ್ರತದ ಕೊನೆಯ ದಿನ ನಂದಿಯನ್ನು ಪೂಜಿಸಿ ಪ್ರಾರ್ಥಿಸುವಾಗ ಆ ದೇವನು ಹೂದಂಡೆಯನ್ನು ಕರುಣಿಸಿದನು. ಆ ಪ್ರಸಾದವನ್ನು ಮಾದಾಂಬಿಕೆ ಮುಡಿಯಲ್ಲಿ ಧರಿಸಿದಳು. ದೇವರ ವರಪ್ರಸಾದದಿಂದ ಮಾನಿನಿ ಗರ್ಭವತಿಯಾದಳು. ಶಿವನ ಬೆಸನದಿಂದ ಬಂದ ವೃಷಭೇಂದ್ರನು ಆ ಗರ್ಭವನ್ನು ಪ್ರವೇಶಿಸಿದನು. ಅಲ್ಲಿ ಈಶಧ್ಯಾನ ತತ್ಪರನಾಗಿ ಯೋಗನಿದ್ರಾಮುದ್ರೆಯಲ್ಲಿದ್ದನು.

ಬಳಿಕೊಂದು ದಿನ ಮಾದಾಂಬಿಕೆಗೆ ಕೀಲು ಕೀಲುಗಳಲ್ಲಿ ಬೇನೆಗಳುಂಟಾದವು. ಶಿವಾಂಶಿಕನಿದ್ದ ಗರ್ಭದ ಭಾರವನ್ನು ತಾಳಲಾರದೆ ಅವಳು ತಳಮಳಿಸುತ್ತ ನಂದೀಶ್ವರನಲ್ಲಿ ಮೊರೆಯಿಟ್ಟಳು. ರಾತ್ರಿ ಕೊಂಚ ಕಣ್ಣು ಮುಚ್ಚಿದಾಗ ವೃಷಭೇಂದ್ರನು ಜಂಗಮರೂಪದಿಂದ ಬಂದು, 'ನಿನ್ನ ಬಸುರಲ್ಲಿ ಬೆಳೆಯುವವನು ಸಾಮಾನ್ಯನಲ್ಲ. ಭಕ್ತಿವರ್ಧನಕ್ಕಾಗಿ ಶಿವಾಜ್ಞೆಯಿಂದ ಆದಿಗಾದಿಯನಾದಿ ನಂದಿಯೆ ಜನಿಸಲಿದ್ದಾನೆ. ಹುಟ್ಟಿದಾಗಳೇ ಬಸವನೆಂದು ಹೆಸರಿಡು' ಎಂದು ಅರುಹಿದನು.

CC-0. Jangamwadi Math Collection. Digitized by eGangotri

ಮಾದಿರಾಜ-ಮಾದಲಾಂಬಿಕೆಯರಿಗೆ ಅತ್ಯಂತ ಸಂಭ್ರಮವಾಯಿತು. ಮುಂದೆ ಆಕೆ ಗಂಡುಮಗುವನ್ನು ಹೆತ್ತಾಗ ಕೂಸಿನಲ್ಲಿಯ ಶಿವನೆ ಗುರುವಾಗಿ ಬಂದು ಲಿಂಗ ಧಾರಣೆ ಮಾಡಿದನು. ಆ ತಾಪಸಾಕಾರದ ಗುರು ತಾಯಿಗೆ, 'ನಾವು ಕಪ್ಪಡಿ ಸಂಗಮದಲ್ಲಿರುತ್ತೇವೆ; ಸಂಗಮೇಶನೆಂದು ಹೆಸರು; ಈತನು ಒಂದು ಬಗೆಯಲ್ಲಿ ನನ್ನ ಮಗನು; ಲೋಕಹಿತಕ್ಕಾಗಿ ನಿನ್ನಲ್ಲಿ ಜನಿಸಿದ್ದಾನೆಂದು ನೋಡಲಿಕ್ಕೆ ಬಂದೆವು; ಶಿವಾರ್ಪಿತವಲ್ಲದ್ದನ್ನು ಈತನಿಗೆ ಸ್ವಲ್ಪವೂ ಕೊಡಲಾಗದು' ಎಂದು ತಿಳಿಸಿ ಅದೃಶ್ಯನಾದನು. ತಾಯಿ-ತಂದೆ-ಬಳಗದವರ ಆನಂದಕ್ಕೆ ಮೇರೆಯಿಲ್ಲ. ಭಕ್ತಗಣವನ್ನು ಕರೆಸಿ ಪೂಜಿಸಿ ಶರಣಚರಣಕೋದಕದಿಂದ ಬಾಲಕನನ್ನು ತೊಳೆದು ವಿಭೂತಿಧಾರಣ ಮಾಡಿ ದಾನಧರ್ಮಗಳನ್ನು ಮಾಡಿ ಸುಖದಿಂದಿದ್ದರು.

ಬಸವಣ್ಣನ ಬಾಲ್ಯ

ಬಸವಕುಮಾರನು ಕಿರಿವಯಸ್ಸಿನಲ್ಲಿಯೆ ಮಾಹೇಶ್ವರರನ್ನು ಹರನೆಂದೆ ಭಾವಿಸುವನು. ಓದು-ಬರಹ, ಸಂಗೀತ-ಸಾಹಿತ್ಯ, ಶಿವರಹಸ್ಯ-ವೇದಾಗಮಗಳು ನೆನೆದ ಮಾತ್ರದಲ್ಲಿಯೆ ಅವನಿಗೆ ಬಾಯಿಪಾಠ. ಅವನ ಗರ್ಭಾಷ್ಟಕದಲ್ಲಿ ಮಗನಿಗೆ ಉಪನಯನ ಮಾಡಲು ತಂದೆ ಯೋಚಿಸಿದನು. ಆಗ ಬಸವಣ್ಣನು 'ಹುಟ್ಟಿದಾಗಲೇ ಸಂಗಮೇಶ್ವರನು ಲಿಂಗದೀಕ್ಷೆ ಮಾಡಿರಲು ನನಗೆ ಮುಂಜಿಗಟ್ಟುವುದು ತರವಲ್ಲವೆ'ಂದು ವಾದಿಸಿ ನಿರಾಕರಿಸುವನು. ತಂದೆ ಪರಿಪರಿಯಿಂದ ತಿಳಿಸಿ ಹೇಳಿದರೂ ಅವನು ಒಪ್ಪಲಿಲ್ಲ. ಉಪನಯನವನ್ನು ಧಿಕ್ಕರಿಸಿ ತನಗೆ ವೀರಮಾಹೇಶ್ವರರೆ ಗತಿ ಎನ್ನುತ್ತ ಬಸವಣ್ಣನು ತನ್ನ ಸಹೋದರಿ ನಾಗಾಂಬಿಕೆಯೊಡನೆ ಸಂಗಮಕ್ಕೆ ಬಂದನು.

ಗಂಗಾ-ಬಸವಕಲ್ಯಾಣ

ಮಾದಲಾಂಬೆಯ ಸೋದರನಾದ ಬಲದೇವಮಂತ್ರಿ ತನ್ನ ಮಗಳನ್ನು ಇಂಥ ಆದಿ ಶಿವಭಕ್ತನಿಗಲ್ಲದೆ ಮತ್ತಾರಿಗೆ ಕೊಡುವುದೆಂದು ಯೋಚಿಸಿ, ಆತನಲ್ಲಿಗೆ ಹೋಗಿ ತನ್ನ ಪುತ್ರಿಯನ್ನು ಸ್ವೀಕರಿಸಿ ಉದ್ಧರಿಸಬೇಕೆಂದು ಬಿನ್ನವಿಸಿದನು. ಅವನು ಒಪ್ಪಿದನು. ಕಲ್ಯಾಣನಗರಿಯನ್ನು ಸಿಂಗರಿಸಿ, ಬಸವಣ್ಣನೊಡನೆ ಮಗಳು ಗಂಗಾದೇವಿಯ ಕಲ್ಯಾಣವನ್ನು ಅತ್ಯಂತ ವೈಭವದಿಂದ ನೆರವೇರಿಸಿದನು. ಬಳಿಕ ಬಸವೇಶ್ವರನು ಹೆಂಡತಿ ಮತ್ತು ಅಕ್ಕನೊಡನೆ ಸಂಗಮಕ್ಕೆ ಬಿಜಯಮಾಡಿದನು. ಗುರು ಸಂಗಮೇಶನು ಪ್ರತ್ಯಕ್ಷನಾಗಿ ಇದಿರುಗೊಂಡು ಭಕ್ತಿಪಥವನ್ನು ಬೋಧಿಸಿದನು. ನಾನಾ ಭಕ್ತಮಂಡಲಿಸಮೇತನಾಗಿ ಕೂಡಲಸಂಗಮೇಶನ ಗುಡಿಯಲ್ಲಿ ತ್ರಿಕಾಲಪೂಜೆಯನ್ನಾಚರಿಸುತ್ತ ಭಕ್ತಿಸುಖಲೋಲನಾಗಿ ಇರುತ್ತಿದ್ದನು.

CC-0. Jangamwadi Math Collection. Digitized by eGangotri

ಸಂಧಿ: ೫, ೬

ಬಸವ ಭಂಡಾರಿಯಾದ

ಇತ್ತ ಕಲ್ಯಾಣದಲ್ಲಿ ಕೆಲದಿನಕ್ಕೆ ಬಲದೇವನು ಶಿವಲೋಕವನ್ನು ಸೇರಿದನು. ಅವನ ರಾಜಕಾರ್ಯವನ್ನು ನಿರ್ವಹಿಸಲು ಸಮರ್ಥರು ಯಾರಿದ್ದಾರೆಂದು ಬಿಜ್ಜಳನೊರೆ ವಿಚಾರಿಸಿದನು. ಆತನ ಅಳಿಯ ಬಸವೇಶ್ವರನುಂಟು ಎಂದು ತಿಳಿದುಬಂದಿತು. ಕೂಡಲೆ ಅರಸು ಆತನನ್ನು ಕರೆತರಲು ಅಮಾತ್ಯರನ್ನು ಸಂಗಮಕ್ಕೆ ಕಳಿಸಿದನು. ಭಕ್ತಿಹಿತಾರ್ಥವನ್ನು ನೆನೆದು ಬಸವಣ್ಣನು ಆ ನಿಯೋಗಕ್ಕೆ ಒಡಂಬಟ್ಟನು. ಬಿಜ್ಜಳನು ಹಿರಿದು ಹಿಗ್ಗಿನಿಂದ ಆತನನ್ನು ಬರಮಾಡಿಕೊಂಡು ತನ್ನ ಹನ್ನಿಬ್ಬರು ಭಂಡಾರಿಗಳಿಗೆ ಪ್ರಮುಖನನ್ನಾಗಿ ನಿಯಮಿಸಿಕೊಂಡು ಉಡುಗೊರೆಗಳನ್ನಿತ್ತು ಸತ್ಕರಿಸಿದನು. ಮೆರವಣಿಗೆಯಲ್ಲಿ ಹೊರಟ ಆ ಭವ್ಯ ಮೂರ್ತಿಯನ್ನು ನಗರದ ನರನಾರಿಯರು ನೆರೆದು ನೋಡಿ ಕಣ್ಣುಹಬ್ಬ ಮಾಡಿಕೊಂಡರು.

ದೊರೆಗೆ ಅಪಾರ ಭಂಡಾರ ಲಾಭ

ಬಿಜ್ಜಳನು ಒಡ್ಡೋಲಗಂಗೊಟ್ಟು ಕುಳಿತಿದ್ದನು. ಆಗ ಆಗಸದಿಂದ ಹರಲಿಖಿತವಾದ ಓಲೆಯೊಂದು ಬಂದು ಬಿದ್ದಿತು. ನಾನಾ ಲಿಪಿತಜ್ಞರಾದ ಕರಣಿಕರಿಂದ ಅದನ್ನು ಓದುವುದಾಗಲಿಲ್ಲ. ಆಗ ಬಸವಣ್ಣನು ಅರಸನ ಕೈಲಿದ್ದ ಓಲೆಯನ್ನು ಈಸಿಕೊಂಡು ಶಿವಲಿಖಿತವನ್ನು ಗಳಗಳನೆ ನೋಡಿ ಆತನಿಗೆ ಹೇಳಿದನು: 'ದೊರೆಯೆ, ನಿಜವಾಗಿ ಹೇಳುತ್ತೇನೆ, ನಿನ್ನ ಸಿಂಹಾಸನದ ಕೆಳಗೆ ಚಾಲುಕ್ಯರು ಹೂತಿಟ್ಟ ಎಂಬತ್ತೆಂಟು ಕೋಟಿ ಧನವಿದೆ. ಸಂಶಯವಿಲ್ಲದೆ ಅಗಿಸು, ಕಣ್ಮುಚ್ಚಿ ತೋರಿಸುವೆ'. ಹಾಗೆ ಅಗಿಸಿ ನೋಡಲು ಅಪಾರ ನಿಧಿ ಕಣ್ಣು ಕೋರೈಸುವಂತೆ ಥಳಥಳಿಸಿತು. ಹೊರತೆಗೆಯುವಾಗ ಬಸವನ ಕರಸ್ಪರ್ಶದಿಂದ ಧನರಾಶಿ ನೂರ್ಮಡಿಯಾಯಿತು. ಬಿಜ್ಜಳನೂ ಮಂತ್ರಿ ಅಮಾತ್ಯರೂ ಜನರೂ ಬಸವನನ್ನು ಅಚ್ಚರಿಯಿಂದ ಕೊಂಡಾಡಿದರು.

ಬಸವಮಹಿಮೆ

ಭಕ್ತರನ್ನು ಆಚ್ಚ ಶಿವನೆಂದೇ ಭಾವಿಸುವುದು, ಶಿವೈಕ್ಯರ ಕುಂದುಗಳನ್ನು ಎಣಿಸದಿರುವುದು, ಶಿವನನ್ನು ಕೂಡ ಒಮ್ಮೆಯೂ ಬೇಡದಿರುವುದು, ನುಡಿದಂತೆ ನಡೆಯುವುದು, ಅವಿರತ ದಾಸೋಹ ಮಾಡುವುದು, ಪರಸಮಯಿಗಳ ದರ್ಪವನ್ನು ಕೆಡಿಸುವುದು, ಅನರ್ಪಿತವ ಮುಟ್ಟದಿರುವುದು, ಹರನಿಂದಕರನ್ನು ಒರಸು

CC-0. Jangamwadi Math Collection. Digitized by eGangotri

ವುದು. ಜಂಗಮಪ್ರಾಣವಾಗಿರುವುದು – ಇತ್ಯಾದಿ ಬಸವಣ್ಣನ ಗಟ್ಟಿ ಭಾಷೆ ಗಳಾಗಿದ್ದವು. ಆತನ ಕೀರ್ತಿ ದಶದಿಕ್ಕುಗಳಲ್ಲಿ ಹಬ್ಬಲು ಆತನನ್ನು ಕಾಣುವುದಕ್ಕೆ ದೇಶದೇಶಗಳಿಂದ ಜನ ಬರತೊಡಗಿತು. ನಿತ್ಯವೂ ತಂಡತಂಡದ ಭಕ್ತರುಗಳನ್ನು ಮನವಾರೆ ಆದರಿಸುವನು. ಅವರವರ ಇಷ್ಟಗಳನ್ನು ಮನದಣಿಯೆ ಸಲಿಸುವನು.

ಹೀಗೆ ಸಮಸ್ತ ಮಾಹೇಶ್ವರರನ್ನು ಬಸವಣ್ಣನು ಆರಾಧಿಸುತ್ತಿರಲು, ಆತನ ಕರುಣಾಹಸ್ತದಿಂದ ಅಕ್ಕ ನಾಗಲಾಂಬೆಯ ಗರ್ಭದಲ್ಲಿ ಸರ್ವಾಂಗಲಿಂಗಿ ಚೆನ್ನಬಸವನು ಜನಿಸಿದನು. ಅವನು ಬಸವನನ್ನು ಗುರುರೂಪದಲ್ಲಿ ಸೇವಿಸು ತ್ತಿದ್ದನು.

ಸಂಧಿ: ೭

ಪ್ರಭುದೇವರ ಆರೋಗಣೆ

ಮಾಯಾವಿರಹಿತ ಚರಲಿಂಗಮೂರ್ತಿ ಅಲ್ಲಮಪ್ರಭು ಬಸವನೆಡೆಗೆ ಬರು ವರು. ಬಿದಿರುಹೋದರು. ಬೆಟ್ಟಗಟ್ಟ. ಹಳ್ಳಕೊಳ್ಳ ಯಾವುದರ ಪರಿವೆಯೂ ಇಲ್ಲದೆ ಮೈಮರೆದು ನಡೆಯುತ್ತಿದ್ದ ಆ ಯೋಗಿ. ದೇಹಕ್ಕೆ ನೆಳಲಿಲ್ಲ, ನಡೆದರೆ ಹೆಜ್ಜೆಯಿಲ್ಲ. ಆತನ ಬರವು ಸಂಗಮೇಶನ ತನುವಿನಲ್ಲಿ ಹೊಳೆಯಲು ಬಸವನು ವಂದಿಸಿದನು. 'ಒಡಲಲ್ಲಿ ಅಸುವುಂಟಾಗಿ ಇಲ್ಲದ ಬೆಡಗಿನ ಅಪ್ರತಿಮಾನರೂಪನು' ಬಂದು ಸಿಂಹಾಸನವನ್ನೇರಿದನು. ಬಸವನು ಆತನ ಪಾದಪದ್ಮಗಳನ್ನು ಅರ್ಚಿಸಿ ಪಾದಾಂಬುವನ್ನು ಧರಿಸಿದನು. ಹೊನ್ನ ಹರಿವಾಣವನ್ನಿಟ್ಟು ಪಂಚಪಕ್ವಾನ್ನ ಗಳನ್ನು ಬಡಿಸಿದನು. ಹಿಂದಕ್ಕೆ ಸುರಗಿ ಚೌಡಯ್ಯನು ಶಿವನಿಗೆ ದೊಡ್ಡ ದೊಡ್ಡ ತುತ್ತುಮಾಡಿ ನೀಡಿದಂತೆ ಬಸವಣ್ಣನು ನೀಡುತ್ತಿರಲು ಪ್ರಭು ಆರೋಗಿಸು ತ್ತಿದ್ದನು. ಒಂದು ಲಕ್ಷ ತೊಂಬತ್ತಾರು ಸಾವಿರ ಜಂಗಮಕ್ಕೆ ಮಾಡಿದ ಪದ ಪದಾರ್ಥಗಳು ಒಂದು ವಿಘಳಿಗೆಯಲ್ಲಿ ಸವೆದವು; ಪ್ರಭುವಿನ ಹಸಿವು ಹಿಂಗದು ಆಗ ಬಸವನು ಕೈಮುಗಿದು ನಿಂತು 'ಇನ್ನು ನಿಮಗೆ ನಾನೇ ಓಗರ' ಎಂದು ನುಡಿ ದನು. ತನುವನ್ನರ್ಪಿಸಿದ ಬಸವನಿಗೆ ಅಲ್ಲಮಪ್ರಭು ಮೆಚ್ಚಿದನು. ಆತನನ್ನು ಪರಿಪರಿಯಾಗಿ ಹೊಗಳಿ ಮುಂಡಾಡಿದನು.

ಗಿರಿರಾಜನಂದನೆಯ ಗಣಾರಾಧನೆ

'ತಮ್ಮನ್ನು ತೃಪ್ತಿಬಡಿಸಲು ನಾನೆಷ್ಟರವನು?' ಎಂದು ಬಸವನು ಉಮೆಯ ಗಣಾರಾಧನೆಯ ಉದಾಹರಣೆ ಕೊಡುವನು:

CC-0. Jangamwadi Math Collection. Digitized by eGangotri

ಶಿವೆ ಒಮ್ಮೆ ಶಿವನನ್ನು ಪೂಜಿಸುವೆನೆಂದು ಬಗೆದಾಗ, ಶಿವರೂಪದ ಪ್ರಮಥಗಣ ಸಮೂಹವೇ ಎದುರು ನಿಂತಿತು. ಶಿವನಾರೋ ಪ್ರಮಥರಾರೋ ಎಂದು ಗಿರಿಜೆ ಭ್ರಾಂತಳಾದಳು. ಆಗ ಶಿವನನ್ನುಳಿದು ಇತರರೆಲ್ಲ ತಮ್ಮ ನಿಜ ರೂಪಗಳನ್ನು ತಳೆದರು. ಆ ಪ್ರಮಥಕೋಟಿಯನ್ನು ನೋಡಿ ಅವಳು ಬೆರ ಗಾದಳು. ಈ ಮಹಾಗಣಕೋಟಿಗೆ ಆರೋಗಣೆ ಮಾಡಿಸುವೆನು ಎಂದು ಅವರಿಗೆ ವಿಭೂತಿಯನ್ನು ಕೊಡಿಸಿ ಬಂದಳು. ಹಲವು ತೆರದ ಪಕ್ವಾನ್ನ ದಿವ್ಯಾನ್ನಗಳು ಸಿದ್ಧವಾದವು. ಅತ್ತ ಕಾಯ್ದು ಕುಳಿತ ಗಣಂಗಳು ಇನ್ನೂ ಹೊತ್ತೋ ನೋಡಿ ಬರಲು ಒಬ್ಬ ಗಣಪಟುವನ್ನು ಕಳಿಸಿದರು. 'ಎಲ್ಲ ಸಿದ್ಧವಾಗಿದೆ, ಕೂಡಲೇ ಕರೆದು ಕೊಂಡು ಬಾ' ಎಂದು ಶರ್ವಾಣಿ ಹೇಳಿದಳು.

ಆಗ ಗಣಪಟು, 'ಅಮ್ಮಾ, ದೂರದಿಂದ ಬಂದಿದ್ದೇನೆ, ಹಸಿವಾಗಿದೆ. ನನಗೆ ಬಡಿಸವ್ವಾ ಮೊದಲು, ಬಳಿಕ ಎಲ್ಲರನ್ನೂ ಕರೆತರುವೆ' ಎಂದನು. ಆಗಜೆ ಬಡಿಸಿ ದಳು. ಆಶ್ಚರ್ಯ! ಪಟು ಮೇರುವಿನಷ್ಟು ತುತ್ತುಗಳನ್ನು ಮಾಡಿ ಉಣ್ಣತೊಡಗಿ ದನು. ಗಣಕೋಟಿಗೆ ಮಾಡಿದ್ದ ಅಡುಗೆಯೆಲ್ಲವೂ ತೀರಿತು. ಒಬ್ಬ ಹುಡುಗನಿಗೆ. ಪಾರ್ವತಿ ಪತಿಯಲ್ಲಿಗೆ ಹೋಗಿ ಬಿನ್ನವಿಸಿದಳು. ಶಿವನು ನಸುನಕ್ಕು 'ಈ ಬಾಲ ಗಣವೇ ಹೀಗೆ, ಇನ್ನು ಮಹಾಪ್ರಮಥರೆಂತೋ!' ಎಂದು ಗಣಗಳ ಮಹಿಮೆ ಯನ್ನು ಕೊಂಡಾಡಿದನು.

ಹೀಗೆ ಪಾರ್ವತಿಯೇ ಒಬ್ಬ ಬಾಲಕನಿಗೆ ಊಣಲಿಕ್ಕಲಾರದೆ ಹೋದಾಗ, ಸಾಕ್ಷಾತ್ ಸಂಗಮೇಶ್ವರಾ, ನಿಮಗೆ ಆರೋಗಣೆ ಮಾಡಿಸುವುದು ನನ್ನ ಹಪಣೆ? ಎಂದು ನುಡಿದ ಬಸವನನ್ನು ಅಲ್ಲಮನು ಕರುಣೆದೋರಿ ಮುಂಡಾಡಿ, ತತ್ತ್ವಾರ್ಥಾನುಭವವನ್ನು ವಿವರಿಸಿದನು.

ಸಂಧಿ : ೮

ಭಕ್ತರಾದರು ಬಂಡಿಕಾರರು

ಒಂದು ದಿನ ಕಳ್ಳರು ಭಕ್ತರಲ್ಲದವರಿಗೆ ಬಸವನ ಮನೆಯಲ್ಲಿ ಪ್ರವೇಶ ವಿಲ್ಲವೆಂದು ತಿಳಿದು, ಬದನೆಕಾಯಿಗಳನ್ನು ಸಜ್ಜೆಯಲ್ಲಿ ಕಟ್ಟಿ ಧರಿಸಿಕೊಂಡು ಭಕ್ತ ರಂತೆ ಬಂದರು. ಬಸವನು ಅವರನ್ನು ಆದರೋಕ್ತಿಗಳಿಂದ ಲಿಂಗಾರ್ಚನೆಗೆ ಬಿನ್ನ ವಿಸಿದನು. ಕಳ್ಳರು ಕಕ್ಕಾವಿಕ್ಕಿಯಾದರು. ಓಡಿಹೋಗಲು ಉಪಾಯವಿಲ್ಲದೆ ಒಬ್ಬ ರೊಬ್ಬರ ಮುಖವನ್ನು ನೋಡುತ್ತ ಪೂಜೆಗೆ ಕುಳಿತರು. ಬಸವರಾಜನ ಸಂಗ ಪ್ರಭಾವದಿಂದ ಅವರ ಬದನೆಕಾಯಿಗಳೆಲ್ಲ ಬಾಣಲಿಂಗಗಳಾಗಿದ್ದವು. ಅವರು ಭಕ್ತರಾಗಿ ಬಸವಮಹಿಮೆಯನ್ನು ಹೊಗಳಿದರು.

CC-0. Jangamwadi Math Collection. Digitized by eGangotri

ಪರಮ ಭಕ್ತರಿಗೆ ಇದು ಯಾವ ಗಹನವೆಂದು ಕವಿ ಇನ್ನು ಕೆಲವು ದೃಷ್ಟಗಳಿಂದ ಬಿಂಬಿಸುತ್ತಾನೆ:

ಬಳ್ಳವು ಲಿಂಗವಾಯಿತು

ಮಲ್ಲಸೆಟ್ಟಿಯೆಂಬ ಭಕ್ತನು ವ್ಯಾಪಾರಕ್ಕೆ ಹೋದಾಗ ಕಣ್ಣುಬೇನೆಯಾಯಿತು. ಸಹೋದ್ಯೋಗಿಗಳು ಮಹಾಪ್ರತಸ್ಥನಾದ ಇವನು ಶಿವಪೂಜೆಯಿಲ್ಲದೆ ಜೀವ ಬಿಡುತ್ತಾನೆಂದು ಕುಟಿಲಯೋಚನೆಯಿಂದ ಹುಲ್ಲದೇಗುಲವನ್ನು ರಚಿಸಿ, ಆಳೆಯುವ ಬಳ್ಳವನ್ನು ಇಟ್ಟು ಸೆಟ್ಟಿಗೆ ಇದು ಶಿವಾಲಯವೆಂದು ತೋರಿಸಿದರು. ಅವನು ಅದನ್ನೇ ಶಿವಲಿಂಗಭಾವನೆಯಿಂದ ಭಕ್ತಿಪೂರ್ವಕವಾಗಿ ಪೂಜಿಸಿದನು. ಸಂಗಡಿಗರು 'ಎಲವ್ವೋ, ಮಲ್ಲಭಾವನು ಬಳ್ಳವನ್ನು ಶಿವಲಿಂಗವೆಂದು ಪೂಜಿಸಿದನೆ'ಂದು ನಗೆಯಾಡಿದರು. ಆ ಬಳಿಕ ಕಾಳನ್ನಳೆಯುವುದಕ್ಕಾಗಿ ಬಳ್ಳವನ್ನು ತರ ಹೋದಾಗ ನೋಡುತ್ತಾರೆ: ಬಳ್ಳವು ಶಿವಲಿಂಗವಾಗಿದೆ! ಆದೇ ಬಳ್ಳೇಶ್ವರವೆಂದು ಪ್ರಸಿದ್ಧವಾಯಿತು.

ಕಾಟಕೋಟ ಗೊಲ್ಲನ ಕಥೆ

ಕಾಟಕೋಟನೆಂಬ ಗೊಲ್ಲನು ಆಡಿನ ಹಿಕ್ಕೆಯನ್ನು ಈಶ್ವರನೆಂದು ಅದಕ್ಕೆ ಹಾಲೆರೆದು ಪೂಜಿಸಿ ಭಕ್ತಿಪರವಶದಿಂದ ಕುಣಿಯುತ್ತಿದ್ದನು. ಒಮ್ಮೆ ಅವನ ತಂದೆ ಇದನ್ನು ನೋಡಿ ಹಾಲನ್ನೆಲ್ಲ ಹೀಗೆ ಹಾಳುಮಾಡುವನಲ್ಲಾ ಎಂದು ಬಯ್ಯುತ್ತ ಒದೆಯತೊಡಗಿದನು. ಆಗ ಕಾಟಕೋಟನು 'ಹರಹರಾ! ಶಿವದ್ರೋಹೀ, ಸಾಯಿ!' ಎನ್ನುತ್ತ ತಂದೆಯನ್ನು ಕೊಡಲಿಯಿಂದ ಹೊಡೆದು ಕೆಡವಿದನು. ಹಿಕ್ಕೆಯೆ ಗೊಲ್ಲಳರಾಯನಿಂದ ಶಿವಲಿಂಗವಾಗಿ ಮೆರೆಯಿತು.

ಹೀಗೆಯೆ ಬಾಹೂರ ಬೊಮ್ಮಯ್ಯನ ಭಾವದಂತೆ ಜೋಳವು ಶಿವಲಿಂಗವಾಯಿತು. ಇನ್ನು ಬಸವನ ಭಕ್ತಿಪ್ರಭಾವದಿಂದ ಕಳ್ಳರು ಶಿವಲಾಂಛನಧಾರಿಗಳಾದುದು ಏನು ಘನ!

ಜೋಳದ ರಾಶಿ ಮುತ್ತಿನ ರಾಶಿಯಾಯಿತು

ಒಮ್ಮೆ ಬಸವಣ್ಣನು ಸ್ನಾನಮಾಡುತ್ತಿದ್ದಾಗ ಜಂಗಮನೊಬ್ಬನು ಬಂದು, 'ದಿನಾ ಒಕ್ಕುಳ ಮುತ್ತಿನ ಚೂರ್ಣದ ರಂಗವಾಲೆಯಿಕ್ಕುವುದು ನನ್ನ ನೇಮ. ಬಸವಾ, ಹತ್ತು ಖಂಡುಗ ಮುತ್ತುಗಳನ್ನು ಕೊಡು' ಎಂದು ಬೇಡಿದನು. ಬಸವನು ಅಲ್ಲಿದ್ದ ಜೋಳದ ರಾಶಿಯನ್ನು ನೋಡಿ, 'ಅದೋ, ಹತ್ತು ಖಂಡುಗವೇ

CC-0. Jangamwadi Math Collection. Digitized by eGangotri

ಏಕೆ, ನಿಮಗೆ ಬೇಕಾದಷ್ಟು ಒಯ್ಯಿರಿ' ಎಂದನು. ಆತನ ದೃಷ್ಟಿಕ್ಷೇಪದಿಂದ ಜೋಳದ ರಾಶಿಯೆಲ್ಲವೂ ಮುತ್ತಿನ ರಾಶಿಯಾಗಿರಲು ಜಂಗಮನು ಬೇಕಾದಷ್ಟು ಹೊತ್ತು ಕೊಂಡು ಹೋದನು.

ಕೊರಡು ಕೊನರಿತು

ಒಮ್ಮೆ, ಒಬ್ಬ ಜಂಗಮನು ನಟ್ಟಿರುಳು ಬಂದು ಮೊರಟದ ಬಂಕಿದೇವ ನನ್ನು ತನ್ನ ಲಿಂಗಾವಸರಕ್ಕೆ ಬರಡಾವಿನ ಹಾಲು, ಹೊಸ ಬಿಲ್ವ ಬೇಕು, ಕೊಡು ಎಂದು ಕೇಳಿದನು. ಬಂಕನು ಕೂಡಲೆ ಒಂದು ಗೊಡ್ಡನ್ನು ಕರೆದು ಗಡಿಗೆ ಹಾಲನ್ನೂ ಅಲ್ಲಿಯೇ ಇದ್ದ ಕೊರಡನ್ನು ಚಿಗುರಿಸಿ ಹೊಸ ಬಿಲ್ವಪತ್ರಗಳನ್ನೂ ಕೊಟ್ಟು ಆತನ ಇಷ್ಟವನ್ನು ಸಲ್ಲಿಸಿದನು.

ಇಂತಹ ಮಹಿಮೆಯನ್ನು ಪುರಾತನರಲ್ಲಿ ಕೇಳುತ್ತಿದ್ದೆವು. ಇದೀಗ ಬಸವ ನಿಂದ ಜೋಳವು ಮುತ್ತಾದುದನ್ನು ಕಣ್ಣಾರೆ ಕಂಡೆವೆಂದು ಜನರು ಕೊಂಡಾಡಿ ದರು.

ಶಿವನು ಹಣೆಗಣ್ಣು ಬೇಡಿದನು

ಹೀಗಿರಲು, ಒಮ್ಮೆ, ಶಿವನು ಜಂಗಮವೇಷದಿಂದ ಬಸವನಲ್ಲಿಗೆ ಬಂದು ತನಗೆ ಹಣೆಗಣ್ಣನ್ನು ಕೇಳಿದನು. ಆಗ ಬಸವನು 'ನಿನಗೆ ಇದು ಹೊಸದೆ? ನಿನ್ನ ಮಾಯೆಯ ಪಸರವನ್ನು ನಾನು ಬಲ್ಲೆ' ಎಂದು ನುಡಿದು ಅವನ ಮುಖಕ್ಕೆ ಕನ್ನಡಿ ಯನ್ನು ಹಿಡಿದು 'ನೋಡಿಕೊ, ಮೂರು ಕಣ್ಣಿವೆ' ಎಂದನು. ಶಿವನು ಭಂಗಿತ ನಾಗಿ ಓಡತೊಡಗಿದನು. 'ಓಡದಿರು ಸಂಗಯ್ಯಾ, ನಿಲ್ಲು, ನಿನ್ನಿಂದ ನಾನು ಒಂದನ್ನೂ ಬೇಡುವವನಲ್ಲ. ಪುರಾತನರಲ್ಲಿ ಅನೇಕರು ಅನೇಕವನ್ನು ಬೇಡಿದಂತೆ ನಾನು ಬೇಡೆನು, ನೀನೇ ಬೇಕಾದುದನ್ನು ಬೇಡು ನಾನು ಕೊಡುವೆ' ಎಂದು ಬಸವನು ಹೇಳಿದನು.

ಸಂಧಿ: ೯

ಗೊಲ್ಲಿತಿಯ ಕಥೆ

ಒಂದು ದಿನ ಬಸವಣ್ಣನು ದೊರೆಯ ಓಲಗದಲ್ಲಿ ಕುಳಿತಿದ್ದಂತೆ, ಎರಡೂ ಕೈಗಳನ್ನೆತ್ತಿ 'ಅಂಜದಿರು, ಬೆಲ್ಲುವುದಿಲ್ಲ' ಎಂದು ನುಡಿದನು. ಬಿಜ್ಜಳನೂ, ಸಭಿಕರೂ 'ಬಸವನಿಗೆ ಶಿವಮರುಳು' ಎಂದು ನಕ್ಕರು. ಆಗ ಬಸವನು ಹೇಳಿದನು:

CC-0. Jangamwadi Math Collection. Digitized by eGangotri

"ತ್ರಿಪುರಾಂತಕ ದೇವಾಲಯದ ಪೂರ್ವಕ್ಕೆ ಅರ್ಧ ಗಾವುದದೊಳಗೆ ಕಪಿಲೇಶ್ವರವುಂಟು. ಆದಕ್ಕೆ ಪೂಜಾರಿ ಸಾವಿರದಾರುನೂರು ಖಂಡುಗ ಕ್ಷೀರಾಭಿಷೇಕ ಮಾಡಿದನು. ಆದರಿಂದ ಬೀದಿಯಲ್ಲಿ ಕೆಸರಾಗಿದೆ. ಅಲ್ಲೊಬ್ಬ ಗೊಲ್ಲಿತಿ ಮಜ್ಜಿಗೆ ಹೊತ್ತುಕೊಂಡು ಬರುವಾಗ ಜಾರಿಬೀಳುತ್ತ 'ಬಸವಾ' ಎಂದಳು. ಆದಕ್ಕಾಗಿ ಹರವಿಯನ್ನು ಎತ್ತಿ ಹಿಡಿದೆನು."

ಬಿಜ್ಜಳನು ಆ ಗೊಲ್ಲಿತಿಯನ್ನು ಕರೆಸಿ ಕೇಳಲು, ಆಕೆ ಬಸವಣ್ಣನು ಹೇಳಿದುದು ಸತ್ಯವೆಂದು ತಿಳಿಸಿದಳು. "ಈತನ ಮಹಿಮೆ,–ಭಕ್ತವರರ ಮಹಿಮೆಯೇ–ಹಿರಿದು. ಆರುವತ್ತುಮೂವರೊಳಗೆ ತಿರುಚಿಟ್ಟಂಬಲನು ಧೋಧೋ ಸುರಿವ ಮಳೆಯಲ್ಲಿಯೇ ಶಿವಪೂಜೆಗೆ ಹೂಗಳನ್ನು ತಿರಿದು ತರುತ್ತಿದ್ದನು. ಆಗ ಕಾಲು ಜಾರಿ ಜೋಲಿಹೋಗುತ್ತಿರಲು ಹೂ ಬಿದ್ದಾವೆಂದು ದೇವರನ್ನು ಕರೆದನು. ದೇವನು ಬೀಳದಂತೆ ಎತ್ತಿ ಹಿಡಿದನು. ಹಾಗೆ ಬಸವಣ್ಣನು ನನ್ನನ್ನು ಉದ್ಧರಿಸಿದನು." ಎಂದು ನುಡಿದು ಗೊಲ್ಲಿತಿ ಮತ್ತೆ ಹೇಳಿದಳು:

ಸರ್ವಾಂತರ್ಯಾಮಿ ಬಸವ

"ನಾನು ಹಿಂದಕ್ಕೆ ಸೊನ್ನಲಾಪುರಕ್ಕೆ ಹೋಗಿದ್ದೆ. ಸಿದ್ಧರಾಮದೇವನು ಭಕ್ತರ ಸಭೆಯಲ್ಲಿದ್ದನು. 'ತಾವು ಯೋಗಾವಸ್ಥೆಯಲ್ಲಿ ಕೈಲಾಸಕ್ಕೆ ಹೋಗಿ ಬಂದು ಮಾಡುತ್ತಿರುವಿರಿ; ಅಲ್ಲಿ ಬಸವಣ್ಣನವರನ್ನು ಕಂಡಿರಾ?' ಎಂದು ಭಕ್ತರು ಬೆಸಗೊಂಡರು. 'ಇಂದು ಹೋಗಿ ವಿಚಾರಿಸಿಕೊಂಡು ಬರುವೆ' ಎಂದು ಸಿದ್ಧರಾಮನು ಎಂದಿನಂತೆ ಕೈಲಾಸಕ್ಕೆ ಹೋದನು. ಶಿವನು ಪಾರ್ವತಿಯೊಡನೆ ಒಡ್ಡೋಲಗದಲ್ಲಿ ವಿರಾಜಮಾನನಾಗಿದ್ದನು. ಸಿದ್ಧರಾಮನು ಭಕ್ತಿಯಿಂದ ನಮಿಸಿ 'ಈ ಪ್ರಮಥ ಲೋಕದಲ್ಲಿ ಬಸವನಿದ್ದಾನೆಯೆ?' ಎಂದು ಕೇಳಿದನು. 'ಆ ಲೋಕ ಈ ಲೋಕ ಎಂದೇನು, ಯಾವ ಲೋಕದಲ್ಲೇನು ಬಸವನಿಲ್ಲಾ?' ಎಂದು ಶಿವನು ತನ್ನ ಹೃದಯವನ್ನು ಬಿಚ್ಚಿ ತೋರಿಸಿದನು. ಕೈಯಲ್ಲಿ ಲಿಂಗ, ಅಲ್ಲಿಯೆ ನಟ್ಟ ದೃಷ್ಟಿ, ಕಂಗಳಲ್ಲಿ ಸುಖಾಶ್ರು,–ಪದ್ಮಾಸನಸ್ಥವಾದ ಈ ಬಸವಮೂರ್ತಿ ಸಿದ್ಧರಾಮನಿಗೆ ಕಂಗೊಳಿಸಿತು. ಆತನು ಮರಳಿ ಭೂಮಿಗೆ ಬಂದು ಭಕ್ತವೃಂದಕ್ಕೆ ವಿವರಿಸಿ, ತನ್ನ ಎದೆಯನ್ನು ತೆರೆದು ತಾನು ಕಂಡಂತೆ ತೋರಿಸಿದನು. ಎಲ್ಲರೂ ಶರಣು ಶರಣೆಂದು ಹೊಗಳಿದರು. ಇದು ನಾನು ಕಿವಿಯಾರೆ ಕೇಳಿದ ಮಾತು. ಈ ಬಸವಣ್ಣನ ಮಹಿಮೆ ಅಗಾಧವಾದುದು" ಎಂದು ವಿವರಿಸಿದ ಗೊಲ್ಲಿತಿಯನ್ನು ಉಡುಗೊರೆಗಳಿಂದ ಬಿಜ್ಜಳನು ಮನ್ನಿಸಿ ಕಳುಹಿದನು.

CC-0. Jangamwadi Math Collection. Digitized by eGangotri

ಸಂಧಿ : ೧೦

ಭಂಡಾರ ಪೆಟ್ಟಿಗೆಯ ಪವಾಡ

ಒಂದು ದಿನ ಬಸವಣ್ಣನು ರಾಯನ ಸೈನ್ಯಕ್ಕೂ ಇತರ ಸೇವಕವರ್ಗಕ್ಕೂ ಜೀವಿತವನ್ನು ಕೊಡುತ್ತಿದ್ದನು. ವಿಟಜಂಗಮರು ಬಂದು ಪೆಟ್ಟಿಗೆಯ ಹೊನ್ನ ನ್ನೆಲ್ಲಾ ತಮಗೆ ಕೊಡೆಂದರು. ಬಸವನು ಸಂತಸದಿಂದ ಎಲ್ಲವನ್ನೂ ಅವರಿಗೆ ಕೊಟ್ಟುಬಿಟ್ಟನು. ಇತರ ಮಂತ್ರಿಗಳು ಅರಸನಲ್ಲಿ ದೂರಿದರು. ಆತನು ಬಸವ ನನ್ನು ಬರಿಸಿ, "ಏನಯ್ಯಾ, ನೀನು ಗಳಿಸಿ ತಂದು ತುಂಬುವುದು ಹೋಯಿತು. ಹೀಗೆ ನಮ್ಮ ಭಂಡಾರವನ್ನು ಮಿಂಡರಿಗೆ ಹಾಳುಮಾಡುವುದೆ? ಸಾಕು, ನಿನ್ನ ಭಂಡಾರದೊಡೆತನ, ಪ್ರಧಾನಿಕೆ" ಎಂದು ಕೋಪದಿಂದ ನುಡಿದನು.

ಅದಕ್ಕೆ ಬಸವನು, "ಶಿವಭಕ್ತಿಯೆಂಬ ಚಿಂತಾಮಣಿ ಕಲ್ಪವೃಕ್ಷ ಕಾಮಧೇನು ಗಳಿರುತ್ತಿರಲಿಕ್ಕೆ ಭಕ್ತನು ಅನ್ಯಧನವನ್ನು ಆಶಿಸುವನೆ? ಬಿಡು, ಆ ಸಂದೇಹವನ್ನು ಬಿಡು. ಒಡೆಯರೊಡವೆಯನ್ನು ಒಡೆಯರಿಗೆ ಕೊಟ್ಟಿನಲ್ಲದೆ, ನಿನ್ನ ಧನದಲ್ಲಿ ಅರೆ ಕಾಣೆಯಾದರೂ ಸವೆದರೆ ನಾನು ಭಕ್ತನಲ್ಲ" ಎಂದು ನುಡಿದು ಪೆಟ್ಟಿಗೆಗಳನ್ನು ತರಿಸಿ ಮುಂದಿಟ್ಟು ತೋರಿಸಿದನು. ತೆರೆದು ನೋಡಲು ಮೊದಲಿಗಿಮ್ಮಡಿಯಾಗಿ ಹೊನ್ನುಗಳು ಸೂಸಿದವು. ಬಿಜ್ಜಳನು ಹೊಗಳಿದನು. ಭಕ್ತಜನರು "ಹಿಂದಕ್ಕೆ ಮಧುರಪಾಂಡ್ಯನು ಉತ್ತಮ ಕುದುರೆಗಳನ್ನು ತರುವುದಕ್ಕಾಗಿ ವಿಪುಲ ಧನವನ್ನು ಕೊಟ್ಟು ಜೊಕ್ಕನಾಯ್ಕನನ್ನು ಕಳುಹಿದ್ದನು. ಅವನು ಆ ಧನವನ್ನು ಶಿವಭಕ್ತರ ಆರಾಧನೆಗೆ ವ್ಯಯಿಸಿ, ನರಿಗಳನ್ನು ನಾಯಕ ಅಶ್ವಗಳನ್ನಾಗಿ ಮಾಡಿ ದೊರೆಗೆ ಒಪ್ಪಿಸಿದನು. ಹರಭಕ್ತರ ಮಹಿಮೆ ಅದ್ಭುತ"ವೆಂದು ತುತಿಸಿದರು.

ದುಕೂಲದ ಪವಾಡ

ಒಂದು ದಿನ ಸೂಳೆಮನೆಯಲ್ಲಿದ್ದ ಅಯ್ಯನೊಬ್ಬನು ತನ್ನ ಪಡಿಯನ್ನು ತರುವುದಕ್ಕಾಗಿ ತೊತ್ತನ್ನು ಬಸವನಲ್ಲಿಗೆ ಕಳುಹಿದನು. ಅವಳು ಬಂದು ಆತನ ಪಟ್ಟದರಸಿ ಉಟ್ಟಿದ್ದ ದುಕೂಲವನ್ನು ಕಂಡು ಬೆರಗಾಗಿ ಹಾಗೆಯೇ ತಿರುಗಿ ಬಂದು ತನ್ನ ಒಡತಿಗೆ ಅದನ್ನು ಬಣ್ಣಿಸಿ 'ನಿನಗೆ ಅದನ್ನು ಭಾವನಿಂದ ತರಿಸಿಕೋ' ಎಂದು ಹೇಳಿದಳು. ಸೂಳೆಯ ಮನೀಷೆಯಂತೆ ವಿಟನು ಬಸವಣ್ಣನಲ್ಲಿಗೆ ಹೋಗಿ ಗಂಗಾಂಬಿಕೆಯ ದುಕೂಲವನ್ನು ಬೇಡಿದನು. ಆತನು ತಟ್ಟನೆ 'ಹಸಾದ'ವೆಂದು 'ಅಯ್ಯನಿಗೆ ನಿನ್ನ ಹುಟ್ಟಿಗೆಯನ್ನು ಕೊಡು' ಎನ್ನುತ್ತ ಅದನ್ನು ಸೆಳೆಯತೊಡಗಿದನು. ಸೆಳೆಸೆಳೆದಂತೆ ಅದು ಅಕ್ಷಯವಾಯಿತು. ದುಕೂಲಗಳ ಬೆಟ್ಟವೇ ಎದುರಿಗೊಟ್ಟಿತು. ಆ ಮಿಂಡ

CC-0. Jangamwadi Math Collection. Digitized by eGangotri

ಜಂಗಮ 'ಭಕ್ತರ ದಾನವೆಂದರೆ ಇಂತಹದು. ಇಡುಗುಡಿಯ ನಾಯ್ಕರು ಹೆಂಡತಿಯ ಸೀರೆಯನ್ನು ಸೆಳೆದು ಕೊಟ್ಟ; ಹನ್ನೆರಡು ವರುಷ ಜಾಣ್ಮೆಯಿಂದ ನೆಯ್ದ ಉತ್ತಮ ವಸ್ತ್ರವನ್ನು ಜೇಡರ ದಾಸ ಕೊಟ್ಟ' ಎನ್ನುತ್ತ ಕೆಲವು ವಸ್ತ್ರಗಳನ್ನು ಕೊಂಡೊಯ್ದನು. ನೆರೆದವರು ಬಸವ-ಗಂಗಾಂಬಿಕೆಯರನ್ನು ಕೊಂಡಾಡಿದರು.

ಇನ್ನೊಮ್ಮೆ ಇನ್ನೊಬ್ಬ ಅಯ್ಯನು ಬಸವನನ್ನು ಆತನ ಮಡದಿ ಮಾಯಿದೇವಿಯ ಮುತ್ತಿನೋಲೆಯನ್ನು ಬೇಡಲು ತೆಗೆದುಕೊಟ್ಟುಬಿಟ್ಟನು.

ಸಂಧಿ : ೧೧

ಮುಗ್ಧ ಸಂಗಯ್ಯನ ಕಥೆ

ಮಿಂಡ ಜಂಗಮರೆಲ್ಲಾ ಬಸವಣ್ಣನಿಂದ ಪಡಿಯನ್ನು ಪಡೆದು ಸೂಳೆಗೆಯ್ಯಲು ಹೋಗುವುದನ್ನು ಕಂಡ ಮುಗ್ಧಸಂಗಯ್ಯನು ಇದೂ ಒಂದು ಲಿಂಗಾವಸರವೆಂದು ಬಗೆದನು; ನಾನೂ ಸೂಳೆಗೆಯ್ಯುವೆನೆಂದು ಆತನಿಗೆ ಹೇಳಿದನು. ಆತನು ನಸುನಕ್ಕು ಸರಸಾಲಾಪದಿಂದ ನಿರೂಪ ಕೊಟ್ಟು, ಚೆನ್ನಾಗಿ ಸಿಂಗರಿಸಿ ಭಕ್ತೆಯಾದ ಸೂಳೆಯ ಮನೆಗೆ ಕಳುಹಿದನು. ಸೂಳೆ ಮುಗ್ಧಸಂಗಯ್ಯನನ್ನು ಕೈಗೊಟ್ಟು ಒಳಕ್ಕೆ ಕರೆದೊಯ್ದಳು. ಅಲ್ಲಿಯ ಶೃಂಗಾರಮಂಚವನ್ನು ಕಂಡು ಸಂಗಯ್ಯನು ಇದು ಇವಳ ಶಿವಾರ್ಚನೆಯ ಮನೆ ಎಂದು ಬಗೆದನು. ಅಲ್ಲಿಯೆ ಕೆಳಗೆ ಕಂಬಳಿಗದ್ದುಗೆಯಲ್ಲಿ ಅರ್ಚನೆಗೆ ಕುಳಿತನು. ಭಕ್ತರಂತಿಲ್ಲದ ಅವಳ ವೇಷಭೂಷಣಗಳನ್ನು ಕಂಡು 'ನಿನ್ನ ವಿಶೇಷ ವೇಷಕ್ಕೆ ಸದ್ಗುರು ಯಾರು? ನಿನ್ನ ಆಚಾರ ಯಾವುದು?' ಎಂದು ಮುಗ್ಧನು ವಿಚಾರಿಸಿದನು. ಆಕೆ ಹೇಳಿದಳು:

"ವಾಮದೇವಯೋಗಿಯಿಂದ ದೀಕ್ಷೆ ಪಡೆದು, ತಪಗೈದು ಶಿವನಿಂದ ಪಾರ್ವತಿ ಪಡೆದ ವೇಷಲಾಂಛನವಿದು. ಆಕೆಯ ಸಂತತಿಯವರು ನಾವು. ಹಾಲನ್ನು ಅಷ್ಟಾಂಶಕ್ಕೆ ಆಟ್ಟಿಸಿ ಸಕ್ಕರೆ ಬೆರಸಿ ಶಿವನಿಗರ್ಪಿಸಿ ಆ ಪ್ರಸಾದವನ್ನು ಸೇವಿಸುತ್ತೇವೆ; ಭಕ್ತರು ಒಲಿದು ಕೊಟ್ಟ ಕಂದಮೂಲಫಲಾದಿ ಪ್ರಸಾದವನು ಕೊಳ್ಳುವೆವು: ಇದು ನಮ್ಮ ತಪಶ್ಚರ್ಯೆ. ತನುಮನಧನಗಳನ್ನು ವಂಚನೆಯಿಲ್ಲದೆ ಇತ್ತ ಜಂಗಮದ ಅನುಭವಣೆಯಲ್ಲಿರುತ್ತೇವೆ. ಲಿಂಗಾರ್ಚನೆಯ ಹೊರತು ಬೇರೆ ಕೆಲಸವೊಂದುಂಟೆ? ಇದು ನಮ್ಮ ಸದ್ಗುರುಮತದ ಮಾರ್ಗವು" ಎಂದು ನುಡಿದು ಆತನ ಅಪೇಕ್ಷೆಯಂತೆ ಲಿಂಗಪೂಜೆಗೆ ಅಣಿಮಾಡಿದಳು. ಅವನ ಶಿವಪೂಜೆ ಮುಗಿಯುವಲ್ಲಿ ಬೆಳಗಾಯಿತು. ಮುಗ್ಧಸಂಗಯ್ಯನು ಬಂದು ಬಸವನಿಗೆ ಹೇಳಿದನು:

"ಏನು ಹೇಳಲಿ ಸೂಳೆ ಗೈದುದನ್ನು! ಸೂಳೆಗೈವುತ್ತ ನಿನ್ನನ್ನೇ ನೆನೆದೆನಪ್ಪಾ ಬಸವರಾಜಾ, ನೀನೂ ಬರಬೇಕಿತ್ತು ಬಿಡು!"

CC-0. Jangamwadi Math Collection. Digitized by eGangotri

ಎಲ್ಲರೂ ಈ ಮುಗ್ಧಭಕ್ತಿಯನ್ನು ಕೊಂಡಾಡಿದರು. ಚೆನ್ನಬಸವಣ್ಣನು ನೂತನ ಪುರಾತನರಲ್ಲಿ ಇಂತಹ ಮುಗ್ಧಭಕ್ತರು ಉಂಟೇ ಎಂದು ಬಸವಣ್ಣನನ್ನು ಕೇಳಿದನು. ಆಗ ಬಸವಣ್ಣನು ಹೇಳುತ್ತಾನೆ:

ಸಂಧಿ : ೧೨

ರುದ್ರಪಶುಪತಿಯ ಕಥೆ

ಎಲವೂರಲ್ಲಿ ರುದ್ರಪಶುಪತಿಯೆಂಬ ಗಣನಾಥನಿದ್ದನು. ಶಿವಾಲಯವೊಂದರಲ್ಲಿ ಸಮುದ್ರಮಥನಕಥೆಯ ಪುರಾಣ ನಡೆದಿತ್ತು. ಆ ಮಥನದಲ್ಲಿ ಭಯಂಕರವಾದ ವಿಷವು ಹುಟ್ಟಿಲು ಶಿವನು ನುಂಗಿದನು ಎಂಬುದನ್ನು ಕೇಳಿದ ರುದ್ರಪಶುಪತಿ ಅವಾಕ್ಕಾದನು. 'ನಿಜವೇ' ಎಂದು ಕೇಳಲು ಪುರಾಣಿಕನು 'ನಿಜ ನಿಜ' ಎಂದನು. 'ಅಯ್ಯೋ ಘಾತವಾಯಿತು' ಎಂದು ಹಮ್ಮೈಸಿದನು ರುದ್ರಪಶುಪತಿ.

"ವಿಷವನ್ನುಂಡವರು ಸಾಯದಿರುವರೆ? ಇನ್ನೇನು ಮಾಡಲಿ? ವಿಷ ಹೇಗೆ ನಿರ್ವಿಷವಾದೀತು ಮಹಾದೇವ! ನಿನ್ನ ಹೊರತು ನನಗೆ ಗತಿಯಿಲ್ಲ: ಉಗುಳುಗುಳು. ದೇವೀ, ನೀನಾಗ ಎಲ್ಲಿದ್ದೆ? ತಾಯಿಯಿಲ್ಲ, ಇದ್ದರೆ ವಿಷವನ್ನು ಕುಡಿಯಗೊಡುತ್ತಿದ್ದಳೆ? ವೀರಭದ್ರಯ್ಯಾ, ನೀಲಕಂಠನ ಸಾವನ್ನು ತಪ್ಪಿಸಯ್ಯಾ" ಎಂದು ಪ್ರಲಾಪಿಸುತ್ತ ತಾನಿನ್ನು ಬದುಕಲಾರೆನೆಂದು ರುದ್ರಪಶುಪತಿ ಬಾವಿಯಲ್ಲಿ ಬಿದ್ದನು. ಆಗ ಶಿವನು ಪ್ರತ್ಯಕ್ಷನಾಗಿ "ನಿನ್ನ ಅಪೇಕ್ಷೆಯನ್ನು ಕೇಳಿಕೋ" ಎನ್ನಲು ಆತನೆಂದನು:

"ಏನೇನೂ ಬೇಕಿಲ್ಲ. ಈ ವಿಷಸೇವನೆಯಿಂದ ಏನೇನಾಗುವುದೋ – ಅದನ್ನು ಕೇಳಲಾರೆ. ಇದನ್ನು ಉಗುಳು. ಉಗುಳಿದರೆ ಸಾವಿರ ವರಗಳನ್ನು ಕೊಟ್ಟ ಹಾಗಾಯಿತು."

"ನನ್ನ ಕೊರಳಲ್ಲಿ ಇದು ತುಂತುರಂತೆ ಅಣುಮಾತ್ರ ಸಿಕ್ಕಿಕೊಂಡಿದೆ. ಉಗುಳುವುದು ಹೇಗೆ? ಏನೂ ಚಿಂತೆಪಡಬೇಡ, ಏನಾಗುವುದಿಲ್ಲ" ಎಂದು ಶಿವನು ಸಂತಯಿಸಿದನು.

"ವ್ಯರ್ಥ ಮಾತುಗಳನ್ನಾಡಬೇಡ ಶಿವನೆ. ನಾನು ನಿಮ್ಮನ್ನು ಸಾಯಗೊಡುವನಲ್ಲ. ವಿಷವನ್ನು ಉಗುಳು, ಇಲ್ಲದಿದ್ದರೆ ನನ್ನನ್ನು ಸಾಯಗೊಡು" ಎಂದು ರುದ್ರಪಶುಪತಿ ಕತ್ತಿಯನ್ನೆತ್ತಿದನು.

ಶಿವನು ಆತನನ್ನು ಹಿಡಿದೆತ್ತಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, "ಈ ವಿಷದಿಂದ ನಾನೇನು ಸಾಯುವುದಿಲ್ಲ; ನಂಬದಿದ್ದರೆ ಇಲ್ಲಿ ಕುಳಿತು ನೋಡುತ್ತಿರು" ಎಂದನು.

CC-0. Jangamwadi Math Collection. Digitized by eGangotri

ರುದ್ರಪಶುಪತಿ ಪಶುಪತಿಯ ಬಲದೊಡೆಯ ಮೇಲೆ ಆಗಲದೆ ಕುಳಿತಿದ್ದು ವಿಷವಿಳಿದೀತೆಂದು ಎವೆಯಿಕ್ಕದೆ ನೋಡುತ್ತ, ಇಳಿದರೆ ಇರಿದುಕೊಳ್ಳುವೆನೆಂದು ಕತ್ತಿಯನ್ನು ಎದೆಗಾನಿಸಿಕೊಂಡು ಕುಳಿತಿದ್ದಾನೆ.

ನಕ್ಕನಾಯ್ನಾರ ಕಥೆ

ಶಾಂತಮಂಡಲದಲ್ಲಿ ನಕ್ಕನಾಯ್ನಾರೆಂಬ ಗಣನಾಥ. ಅವನು ಪೂಜೆಮಾಡುವಾಗ ಜೇಡಹುಳು ಶಿವಲಿಂಗದ ಮೇಲೆ ಹರಿದಾಡಿತು. ಅದನ್ನು ಕಂಡ ಆತನ ಹೆಂಡತಿ 'ಅಯ್ಯೋ, ಶಿವನ ಮೈಮೇಲೆ ಗುಳ್ಳಿ ಏಳುವವಲಾ' ಎಂದು ತೂತೂ ಎಂದು ತೂಪಿರಿದಳು. 'ಎಲಗೇ, ದೇವನಿಗೆ ಉಗುಳು ಸಿಡಿಸಿದೆಯಾ ಪಾಪಿ' ಎಂದು ಬಯ್ದು ಅವಳನ್ನು ತಳ್ಳಿದನು. ಸಂಜೆಯ ವೇಳೆಯಲ್ಲಿ ಮಡದಿ ತೂಪಿರಿಯದಿದ್ದ ಭಾಗದಲ್ಲಿ ಹುಗುಳುಗಳು ಕಂಡವು. ಕೂಡಲೇ ಆತನು ಹೆಂಡತಿಯಲ್ಲಿಗೆ ಧಾವಿಸಿ, "ಮುಂಜಾನೆ ನಾನು ತಪ್ಪು ಮಾಡಿದೆ. ತೂಪಿರಿಯದ ಶಿವನ ಲಿಂಗಭಾಗದಲ್ಲಿ ಗುಳ್ಳೆಗಳೆದ್ದಿವೆ. ತೂಪಿರಿದು ಅವನ್ನು ಕಳೆ ಬಾ" ಎಂದು ದೈನ್ಯದಿಂದ ಕರೆದನು. ಅವಳು ಗಂಡ ಸಿಟ್ಟಾದರಾಗಲಿ ಎಂದು ಪೂರಾ ತೂಪಿರಿಯದೆ ಬಂದುದಕ್ಕೆ ಹಳಹಳಿಸುತ್ತ ಬಂದು ನೋಡಿ ಕಳವಳಿಸಿ ಈ ಪಾಪಿಣಿಗೆ ಸಾವೇ ಲೇಸೆಂದು ಕೊರಳನ್ನಿರಿದುಕೊಳ್ಳುವಾಗ ಶಿವನು ಪ್ರತ್ಯಕ್ಷನಾಗಿ 'ಏನು ಬೇಕು ಬೇಡಿಕೊಳ್ಳಿರಿ' ಎನ್ನಲು ಅವರು 'ನಿನ್ನ ಪಾದಸ್ಮರಣಸಂಪನ್ನತೆಯನ್ನು ಸತತವಾಗಿ ಕೊಡು' ಎಂದು ಪ್ರಾರ್ಥಿಸಿದರು.

ಸಂಧಿ : ೧೩

ಕೊಡಗೂಸಿನ ಕಥೆ

ಕೋಳೂರಲ್ಲಿ ಶಿವದೇವನೆಂಬೊಬ್ಬ ಶಿವಾರ್ಚಕ. ಒಬ್ಬಳ್ಳ ಕಪಿಲೆಯ ಹಾಲನ್ನು ಶಿವನಿಗರ್ಪಿಸುವುದು ಆತನ ನಿಯಮ. ಒಮ್ಮೆ ದೇವಕಾರ್ಯಕ್ಕಾಗಿ ದೂರದೂರಿಗೆ ಹೋಗುವುದು ಬಂದಿತು. ಕಿರಿಯ ಮಗಳಿಗೆ ಮನೆಯನ್ನೊಪ್ಪಿಸಿ, ಶಿವನಿಗೆ ಹಾಲ ನೇಮವನ್ನು ತಪ್ಪಿಸಬೇಡವೆಂದು ಹೇಳಿ ತಂದೆ ಹೋದನು. ಮಗು ಕೊಡಗೂಸು ಮಿಂದು ಮಡಿಯುಟ್ಟು ಭಸಿತವನ್ನಿಟ್ಟು ಬಟ್ಟಲಲ್ಲಿ ಹಾಲನ್ನು ತೆಗೆದುಕೊಂಡು ಹೋದಳು. ಶಿವನಿಗೆ ನಮಸ್ಕರಿಸಿ ಬಟ್ಟಲನ್ನು ಮುಂದಿಟ್ಟು 'ಎನ್ನೊಡೆಯ ಕಲ್ಲಿನಾಥಾ, ಆರೋಗಿಸು' ಎಂದು ಬಿನ್ನವಿಸಿ ಮರೆಯಲ್ಲಿ ನಿಂತಳು. ದೇವರು ಕುಡಿಯದಿರಲು 'ಏಕೆ ಕುಡಿಯಲೊಲ್ಲೆ ತಂದೆ? ತಂದೆಯ ಕೈಯಲ್ಲಿ ದಿನವೂ ಸೇವಿಸುತ್ತಿದ್ದೆಯಲ್ಲಾ! ಮಗುವೆಂದು ಉಪೇಕ್ಷೆಯೆ? ಹಾಲು ಚೆನ್ನಾಗಿ

CC-0. Jangamwadi Math Collection. Digitized by eGangotri

ಕಾದಿಲ್ಲವೆ? ಹೊತ್ತಿದೆಯೊ? ಸೀಯಿಲ್ಲವೊ? ಏನಾಗಿದೆ? ಬೇರೇನಾದರೂ ತರಲೆ?' ಎಂದು ಪರಿಪರಿಯಲ್ಲಿ ಕೊಡಗೂಸು ಹಲುಬಿದಳು, ಅತ್ತಳು. 'ಏನು ಮಾಡಲಿ? ನೀನು ಕುಡಿಯದಿದ್ದರೆ ನಮ್ಮವರು ಹೊಡೆದು ಕೊಂದೇ ಹಾಕುವರು. ನಾನು ಹಾಗೆಯೇ ಹೋಗುವವಳಲ್ಲ. ಇಲ್ಲಿಯೇ ಸಾಯುವೆನು' ಎಂದು ಲಿಂಗಕ್ಕೆ ತಲೆ ಜಜ್ಜಿಕೊಳ್ಳತೊಡಗಿದಳು. ಶಿವನು ಬಟ್ಟಲನ್ನೀಸಿಕೊಂಡು ಹಾಲನ್ನು ಕುಡಿದನು.

ದಿನಾಲು ಈ ಕ್ರಮ ನಡೆಯಿತು. ಊರಿಗೆ ಹೋದವರು ಬಂದರು. ಮಗಳು ಗುಡಿಯಿಂದ ಬರಿಯ ಬಟ್ಟಲನ್ನು ತಂದುದನ್ನು ತಂದೆ ನೋಡಿ 'ಎಲೆ ಮೂಳಿ, ಹಾಲೇನಾಯಿತು? ಚೆಲ್ಲಿದೆಯೋ, ನೀನೇ ಕುಡಿದೆಯೋ, ಏನು ಮಾಡಿದೆ?' ಎಂದು ಕೋಪದಿಂದ ಕೇಳಿದನು. 'ಕಲ್ಲಿದೇವನು ಈಸಿಕೊಂಡು ಕುಡಿಯುತ್ತಾನೆ' ಎಂದು ಮಗು ಹೇಳಿದಳು. ಮರುದಿನ ಅವಳನ್ನು ಪರೀಕ್ಷಿಸಲೆಂದು ಶಿವದೇವನು ಮರೆಯಲ್ಲಿ ಅವಳ ಹಿಂದೆ ಹೋಗಿ ಅಡಗಿ ನಿಂತನು. ಅಂದು ಶಿವನು ಮುಂದಿಟ್ಟ ಹಾಲನ್ನು ಕೈಕೊಳ್ಳಲಿಲ್ಲ. 'ಎಲೆ ಮೂಳಿ ಸುಳ್ಳು ಬೊಗಳಿದೆಯಾ? ನಿನ್ನನ್ನು ಕಡಿದು ನುಚ್ಚುನುರಿ ಮಾಡುವೆ' ಎಂದು ಅವಳಿಡೆಗೆ ಧಾವಿಸಿದನು. ಮಗು ಶಿವನೆಡೆಗೆ ಸಾಗಿ 'ಹಾ ಶಿವನೇ, ನೀನೇ ಗತಿ' ಎಂದು ಮೊರೆಯಿಟ್ಟಿತು. ಆಗ ದೇವನು ಬಟ್ಟಲನ್ನಿಸಿದುಕೊಂಡು ಹಾಲನ್ನು ಕುಡಿದು 'ಮಗೂ ಅಂಜಬೇಡ' ಎಂದು ಮೈದಡವಿ ಅಪ್ಪಿ ಕೊಡಗೂಸನ್ನು ತನ್ನಲ್ಲಿ ಹೊಗಿಸಿಕೊಂಡನು. ತಂದೆ ಓಡಿಹೋಗಿ ಅವಳ ಜಡೆಯನ್ನೆಳೆದನು. ದೇಹವೆಲ್ಲ ಲಿಂಗೈಕ್ಯವಾಗಿ ಜಡೆ ಹೊರಗುಳಿಯಿತು. ಇದು ಪ್ರಸಿದ್ಧ; ಮುಂಗೈಯ ಕಡಗಕ್ಕೆ ಕನ್ನಡಿಯೇಕೆ? ಬೆಳೆಯುತ್ತಿರುವ ಕೂದಲನ್ನು ಆರು ತಿಂಗಳಿಗೊಮ್ಮೆ ಈಗಲೂ ಕತ್ತರಿಸುವುದುಂಟು.

ಸಂಧಿ: ೧೪

ಬಿಜ್ಜ ಮಹಾದೇವಿಯ ಕಥೆ

ಬಿಜ್ಜಮಹಾದೇವಿಯೆಂಬ ಭಕ್ತೆ ಶಿವನಿಗೆ ಎಲ್ಲಾ ನಿಯೋಗದವರಿದ್ದು ತಾಯಿಯಿಲ್ಲವೆಂದು ಮರುಗಿದಳು. ತಾಯಿಯಿದ್ದಿದ್ದರೆ, ಆತನ ತಲೆ ಜಡೆಗಟ್ಟುತ್ತಿತ್ತೆ? ವಿಷವನ್ನು ಕುಡಿಯಗೊಡುತ್ತಿದ್ದಳೆ? ತೊಗಲನ್ನುಟ್ಟು ಹಾವುಗಳನ್ನು ತೊಡಗೊಡುತ್ತಿದ್ದಳೆ? ತಿರುಪೆಗೆ ಹಚ್ಚುತ್ತಿದ್ದಳೆ? ತಾಯಿಯಿಲ್ಲದುದಕ್ಕೆ ಅವನಿಗೆ ಈ ವಿಧಿಯಾಯಿತು ಎಂದು ಪರಿತಾಪಿಸಿ ಆತನಿಗೆ ತಾನೇ ಬಡತಾಯಿಯಾಗುವೆನೆಂದು ಬಗೆದಳು. ಹೂಸಿ ಎರೆದು ಕವಿಯೂದಿ ಕಣ್ಣೂದಿ ಪಟ್ಟಿರಿಸಿ ಮಗುವಿನಂತೆ

CC-0. Jangamwadi Math Collection. Digitized by eGangotri

ಶಿವನನ್ನು ಸಲಹತೊಡಗಿದಳು. ಹಾಲೆರೆವಳು, ಬೆಣ್ಣೆಯಿಕ್ಕುವಳು. ಶಿವನು ಅವಳ ಮುಗ್ಧಭಕ್ತಿಗೆ ನಲಿದು ನರ್ತಿಸುತ್ತಿದ್ದನು.

ಹೀಗೆ ಕೆಲದಿನವಿರಲು, ಶಿವನು ಬಿಜ್ಜಮಹಾದೇವಿಯನ್ನು ಧರೆಯಲ್ಲಿ ಮೆರೆಸಲೆಂದು ಬಗೆದನು. ಮಗು ಕಣ್ಣು ತೆರೆಯದೆ, ಮೊಲೆಯುಣ್ಣದೆ, ಬೆಣ್ಣೆಗೆ ಬಾಯ್ದೆರೆಯದೆ, ಆಳದೆ ಸುಂದಾಯಿತು. ತಾಯಿ ಇದ್ದಕಿದ್ದಂತೆ ಈ ಬೇನೆ ನಿನಗೇ ಕಾಯಿತಣ್ಣಾ, ಮುಕ್ಕಣ್ಣಾ ಎಂದು ಹಲುಬಿದಳು. ಬೇಡಿಕೊಂಡು ತಿನ್ನುವ ನಿನಗೆ ನನ್ನ ಊಟ ರುಚಿಸದೇ ಭವಗೇಡಿ ಮಗನೆ? ಎಂದು ಆಕ್ಕರೆಯಿಂದ ದೂರಿದಳು. ನಿನ್ನೀ ಬೇನೆಯನ್ನು ಎಂತು ನೋಡಲಿ? ಸತ್ತುಹೋಗುವೆನೆಂದು ತಲೆಯನ್ನು ಕೊಯ್ದುಕೊಳ್ಳಲು ಅಣಿಯಾದಳು. ಶಿವನು ಪ್ರತ್ಯಕ್ಷನಾಗಿ ಇಷ್ಟವನ್ನು ಬೇಡಿಕೋ ಎನ್ನಲು, "ನೀನು ನಿರೋಗಿಯಾಗಿ ಹಾಯಾಗಿದ್ದರೆ ಸಾಕು; ನಿನ್ನ ಸ್ಮರಣೆ ಯೊಂದನ್ನು ದಯಪಾಲಿಸು" ಎಂದು ಆಕೆ ಬೇಡಿದಳು. ಶಿವನು ಅವಳ ತಾಯಿ ತನವನ್ನು ಹೊಗಳಿ ಆ ಅಮ್ಮವ್ವೆಗೆ ನಿತ್ಯತ್ವವನ್ನು ಕೊಟ್ಟನು.

ಸಂಧಿ: ೧೫

ದೀಪದ ಕಲಿಯನಾರ ಕಥೆ

ಚೋಳದೇಶದ ಕಾಂಚೀಪುರದಲ್ಲಿ ದೀಪದ ಕಲಿ ಎಂಬ ಶಿವೈಕ್ಯನಿರುತ್ತಿದ್ದನು. ಒಮ್ಮೆ ನೆರೆಯೂರಿಗೆ ಹೋಗುತ್ತ ಅಡವಿಯಲ್ಲಿ ಹಾಳುದೇಗುಲದಲ್ಲಿ ಶಿವ ನೊಬ್ಬನೇ ಇರುವುದನ್ನು ಕಂಡು ಅವನಿಗೆ ಹೆದರಿಕೆಯಾಯಿತು. ಈ ಮಹಾ ಮಹಿಮನು ಈ ಸ್ಥಳದಲ್ಲಿ ಬಿದ್ದ ಗುಡಿಯಲ್ಲಿ ಪೂಜಾದಿಗಳನ್ನು ಕಾಣದೆ ಹೀಗಿರ ಬಹುದೇ ಎಂದು ನೆನೆದು, ತನ್ನಲ್ಲಿದ್ದ ಧನಕನಕಾದಿಗಳನ್ನೆಲ್ಲ ವ್ಯಯಿಸಿ ಅಲ್ಲಿ ಶಿವನಿಗೆ ಆಲಯವನ್ನು ನಿರ್ಮಿಸಿದನು; ಕೋಟೆ ಕಟ್ಟಿಸಿ ಕಂದಕವನ್ನು ಅಗಿಸಿದನು. ನೆಲ್ಲು ಜೋಳ ಮೊದಲಾದವನ್ನು ವಿಪುಲವಾಗಿ ಸಂಗ್ರಹಿಸಿದನು; ಸಕಲಸೇವಾನಿಯೋಗ ದವರನ್ನು ನಿಯಮಿಸಿದನು. ಕಾವಲುಗಾರರನ್ನಿಟ್ಟನು.

ಕೆಲದಿವಸ ವೈಭವದಿಂದ ಸೇವೆ ನಡೆಯಲು ದೀಪದ ಕಲಿಯಾರ ಧನವೆಲ್ಲ ಸವೆಯಿತು. ಸೇವೆಯ ಜನಗಳೆಲ್ಲಾ ಬಿಟ್ಟುಹೋದರು. ತಾನೊಬ್ಬನೇ ಎಲ್ಲ ಸೇವೆಗಳನ್ನೂ ನೆರವೇರಿಸುತ್ತ ರಾತ್ರಿಯೆಲ್ಲ ಪಂಜುಹಿಡಿದು ಸುತ್ತಾಡಿ ಕೋಟೆ ಯನ್ನು ಕಾಯ್ದನು. ಉರುವಲು ಸಿಗದಾಗಲು ಉಡುತೊಡುವ ಬಟ್ಟೆಗಳನ್ನು ಉರಿಸಿದನು. ಅವೂ ಮುಗಿದವು. ತನ್ನ ಜಡೆಯನ್ನೇ ಹೊತ್ತಿಸಿ ಬೆಳಕುಮಾಡಿ ತಿರುಗಾಡಿದನು. ಕೂದಲು ಉರಿದು ನೆತ್ತಿ ಬೇಯತೊಡಗಿತು. ಆಗ ಶಿವನು ಮೈದೋರಿ 'ನಿನ್ನ ಅಭೀಪ್ಸೆಯೇನೆ'ಂದು ಕೇಳಿದನು. ಅದಕ್ಕೆ ದೀಪದ ಕಲಿಯ

CC-0. Jangamwadi Math Collection. Digitized by eGangotri

ನಾರು "ಕೈಲಾಸವೆಂಬ ಹಿರಿಯ ದುರ್ಗವು ನಮಗಿರುತ್ತಿರಲಿಕ್ಕೆ ಈ ಅಡವಿಯಲ್ಲಿ ಇರುವುದೇಕೆ? ನಡೆ, ಅಲ್ಲಿಗೆ ಹೋಗೋಣ" ಎಂದು ದೇವಾಲಯ ಸಹಿತ ಶಿವನನ್ನು ವಿಮಾನದಲ್ಲಿ ಕೊಂಡೊಯ್ದನು.

ಸಂಧಿ: ೧೭

ನಾಟ್ಯನಮಿತ್ತಡಿಯರ ಕಥೆ

ಕಾಂಚಿಯ ನಾಟ್ಯನಮಿತ್ತಡಿಯನಾರು ಏಕಾಂಬ್ರನಾಥನ ಗುಡಿಗೆ ಹೋಗಿದ್ದಾಗ ತಾಂಡವಮೂರ್ತಿಯನ್ನು ಕಂಡು ನಿಬ್ಬೆರಗಾದನು. "ನಡು ಒತ್ತಟ್ಟಿಗೆ ಒಲೆದಿದೆ; ಕೈಗಳು ಎತ್ತೆತ್ತಲೋ ಡೊಂಕಿಕೊಂಡಿವೆ; ಒಂದು ಕಾಲು ಊರಿದೆ. ಇನ್ನೊಂದು ಮೇಲೆದ್ದು ಸೊಟ್ಟಾಗಿದೆ; ಕಂಠವು ಬಿಗಿದುಕೊಂಡಿದೆ; ಜಡೆಮುಡಿ ಉಚ್ಚಿ ಜೋಲುತ್ತಿದೆ. ಶಿವನಿಗೆ ಏನಾಗಿದೆ?" ಎಂದು ಪೂಜಾರಿಯನ್ನು ಕೇಳಿದನು. "ದೇವನಿಗೆ ವಾಯುದೋಷವಾಗಿದೆ. ಇದನ್ನು ಬೇಗನೆ ಕಳೆಯದಿದ್ದರೆ ಅಪಾಯ. ಕೆಲವು ಔಷಧಗಳು ನನಗೆ ಗೊತ್ತಿವೆ; ನೀನು ಮಾಡಿಸಿದರೆ ಮಾಡುವೆ" ಎಂದು ಪೂಜಾರಿ ಹೇಳಿದನು. ಮುಗ್ಧಭಕ್ತನು ತನ್ನಲ್ಲುಳ್ಳ ಅರ್ಥವನ್ನೆಲ್ಲ ಪೂಜಾರಿಗೆ ಕೊಟ್ಟನು. ಅವನು ಮದುಗುಣಿಕೆ, ಎಕ್ಕೆ, ಔಡಲ ಎಲೆಗಳು ಮತ್ತೇನೇನನ್ನೊ ಕೂಡಿಸಿ ತೈಲವನ್ನು ಮಾಡಿ ನಟರಾಜನಿಗೆ ಹೂಸಿ ತಿಕ್ಕಿದನು; ಪೊಟ್ಟಣ ಮಾಡಿ ಕಾಸಿದನು. ಹಲವು ದಿನ ಹೀಗೆ ಉಪಚಾರ ಮಾಡಿದರೂ ಶಿವನ ಬೇನೆ ಹೋಗಲಿಲ್ಲ. "ತೊಪ್ಪಲುಗಿಪ್ಪಲಿನಿಂದ ವಾಸಿಯಾಗದು; ಈ ರೋಗಕ್ಕೆ ನಾನೇ ವೈದ್ಯ" ಎಂದು ನಾಟ್ಯನಮಿತ್ತಡಿಯನಾರು ಕೊರಳಿಗೆ ಅಲಗನ್ನೆತ್ತಿದನು. ಆಗ ಶಿವನು ಪ್ರತ್ಯಕ್ಷವಾಗಲು ಏನೊಂದು ವರವನ್ನೂ ಕೇಳಿಕೊಳ್ಳದೆ, 'ನಿನ್ನ ರೂಪು ಹೀಗೇಕೆ ವಿದ್ರೂಪವಾಗಿದೆ? ಸಹಜವೋ ರೋಗವೊ? ಎಂದು ಕೇಳಿದನು. 'ಇದು ನನ್ನ ತಾಂಡವರೂಪ' ಎಂದು ಹೇಳಿ ಶಿವನು ಕುಣಿದು ತೋರಿಸಿದನು. ನಾಟ್ಯನಮಿತ್ತಡಿಯರನ್ನು ಪುಷ್ಪಕದಲ್ಲಿ ಕೈಲಾಸಕ್ಕೊಯ್ದನು.

ಸಂಧಿ: ೧೭

ಕಣ್ಣಪ್ಪನ ಕಥೆ

ಕಾಳಹಸ್ತಿಯ ಗಿರಿಪ್ರದೇಶದಲ್ಲಿ ಉಡುವೂರ ಕಣ್ಣಪ್ಪನೆಂಬ ಬೇಡನಿರುತ್ತಿದ್ದನು. ಅವನೊಮ್ಮೆ ಬೇಟೆಯಾಡಿ ದಣಿದೊರಗಿರಲು ಶಿವನು ತಪಸ್ವಿವೇಷ

CC-0. Jangamwadi Math Collection. Digitized by eGangotri

ದಿಂದ ಕನಸಿನಲ್ಲಿ ಬಂದು ಭಸಿತವನ್ನು ಧರಿಸಿ, ಪಂಚಾಕ್ಷರಿಯನ್ನು ಉರುಹಿ, "ಮುಂದೆ ಕಿರಿದಂತರದಲ್ಲಿ ಶಿವಲಿಂಗವುಂಟು; ಅದು ನಿನ್ನ ಪ್ರಾಣಲಿಂಗ" ಎಂದು ತಿಳುಹಿದನು. ಕಣ್ಣಂದನು ಆ ನಿರ್ದೇಶದಂತೆ ಹೋಗಿ ಶಿವಲಿಂಗವನ್ನು ಕಂಡು ನಮಸ್ಕರಿಸಿದನು. ತನ್ನ ಪ್ರಾಣಲಿಂಗವನ್ನು ಈ ಕಗ್ಗಾಡಿನಲ್ಲಿ ಬಿಡುವುದು ತರವಲ್ಲ, ಹಳ್ಳಿಗೊಯ್ದು ಗುಡಿಸಲು ಕಟ್ಟಿ ಇರಿಸಬೇಕೆಂದು ಅವನು ಬಗೆದು, "ನೀವಿಲ್ಲಿಗೆ ಎಲ್ಲಿಂದ ಬಂದಿರಿ? ಎಷ್ಟು ದಿನವಾಯಿತು? ನಮ್ಮ ಹಳ್ಳಿಗೆ ಬಂದು ಹಾಯಾಗಿರ ಬಾರದೆ? ಅಲ್ಲಿ ನಿಮಗೆ ಬೇಕಾದುದನ್ನು ಕೊಡುವೆ" ಎಂದು ಶಿವನನ್ನು ಕರೆದನು. ಅವನು ಮಾತಾಡದಿರಲು ಕಣ್ಣಪ್ಪನು ಲಿಂಗಕ್ಕೆ ಹಸಿವಾಗಿದೆಯೇನೋ ಎಂದು ನೆನೆದು ಆಹಾರವನ್ನು ತರಲು ಹೋದನು.

ಅಸುರರು ಶಿವನ ಆಪ್ಪಣೆಯಂತೆ ಮೃಗಗಳಾಗಿ ಆ ಆಡವಿಯಲ್ಲಿ ಹುಟ್ಟಿ, ಕಣ್ಣಪ್ಪನ ಬಾಣದಿಂದ ಮುಕ್ತಿಯನ್ನು ಹಾರೈಸಿಕೊಂಡಿದ್ದರು. ಮೃಗದ ಹಿಂಡನ್ನೇ ಕಂಡು ಅವುಗಳನ್ನು ಹೊಡೆದು ಕೆಡಹಿ, ಮಾಂಸದಿಂದ ಅಡುಗೆಮಾಡಿ ದೊನ್ನೆಯಲ್ಲಿಟ್ಟುಕೊಂಡು, ಬಿಲ್ವಪತ್ರಗಳನ್ನು ತಲೆಯಲ್ಲಿ ತುರುಕಿಕೊಂಡು, ತಿಳಿನೀರನ್ನು ಬಾಯಲ್ಲಿ ತುಂಬಿಕೊಂಡು ಗುಡಿಗೆ ಮರಳಿ ಬಂದನು. ಮೊದಲಿನ ಪೂಜೆಯನ್ನು ಕೆರವುಗಾಲಿಂದ ನೂಕಿ, ಬಾಯ ನೀರಿಂದ ಅಭಿಷೇಕಿಸಿ, ತಲೆಯ ಹೂ ಪತ್ರಿಗಳನ್ನು ಉದುರಿಸಿ, ಮಾಂಸವನ್ನು ಅರ್ಪಿಸಿ ಪೂಜಿಸತೊಡಗಿದನು. ಮರುದಿನ ಗುಡಿಯ ಪೂಜಾರಿ ಬಂದು ಗುಡಿ ಹೊಲಸಾದುದನ್ನು ನೋಡಿ ಖಿತಿಗೊಂಡು, ಬಯ್ಯುತ್ತ ಶುದ್ಧಗೊಳಿಸಿ ಹೊಸ ಪೂಜೆ ಮಾಡಿದನು. ಕೆಲದಿನ ಈ ಕ್ರಮ ನಡೆಯಲು 'ಈ ದುರುಳನಾವನೋ ಕೊಂದುಹಾಕುವೆನೆ'ಂದು ಒಂದು ದಿನ ಪೂಜಾರಿ ಅಲ್ಲಿಯೆ ಅಡಗಿ ಕುಳಿತನು. 'ಅವನು ಬಲಿಷ್ಠನಾಗಿದ್ದರೇನು, ನೋಡಿಬಿಡುವೆ. ಹಿಂದಕ್ಕೆ ಇಲ್ಲಿ ಆನೆಯನ್ನು ಕೆಣಕಿ ಜೇಡಹುಳು ಕಾದಲಿಲ್ಲವೆ?' ಎಂದು ಬಗೆದನು.

ಆನೆ-ಜೇಡಗಳ ಪೂಜಾಕಥೆ

ಒಂದು ಜೇಡ ಶಿವನಿಗೆ ಬಿಸಿಲು ತಾಗಬಾರದೆಂದು ಬಲೆಯ ತೆರೆಯನ್ನು ರಚಿಸಿ, ಎಲೆಹೂಗಳಿಂದ ದಟ್ಟಗೊಳಿಸಿ ಹೋಗುತ್ತಿತ್ತು. ಆನೆ ಬಂದು ಕ್ಷುದ್ರ ಹುಳು ಶಿವನನ್ನು ಬಲೆಯಲ್ಲಿ ಬಿಗಿಯುತ್ತಿದೆಯೆಂದು ಕೋಪದಿಂದ ಅದನ್ನೆಲ್ಲಾ ಕಿತ್ತೆಸೆದು, ಸೊಂಡಿಲ ನೀರನ್ನೆರೆದು ಕಮಲಗಳಿಂದ ಪೂಜಿಸುವುದು. ಜೇಡ ಬಂದು ಮತ್ತೆ ಚಪ್ಪರ ಮಾಡುವುದು. ಹೀಗೆ ಕೆಲದಿನ ನಡೆಯಲು, ಒಂದುದಿನ ಜೇಡ ಆನೆಗೆ ಶಾಸನ ಮಾಡುವೆನೆಂದು ಅದರ ಸೊಂಡಿಲನ್ನು ಹೊಕ್ಕು ಕಚ್ಚುತ್ತ ನೆತ್ತಿಯ ಪರೆಗೇರಿತು. ಆನೆಯನ್ನು ಕೊಂದು ತಾನೂ ಸತ್ತಿತು.

CC-0. Jangamwadi Math Collection. Digitized by eGangotri

ಕಣ್ಣಪ್ಪನ ಕಣ್ಣರ್ಪಣ

ಅಡಗಿದ್ದ ಪೂಜಾರಿಗೆ ಕಣ್ಣಪ್ಪನ ಮುಗ್ಧಭಕ್ತಿಯನ್ನು ತೋರುವೆನೆಂದು ಶಿವನು ಒಂದು ಮುಖವನ್ನು ಧರಿಸಿ ಬಲಗಣ್ಣಿಂದ ನೀರು ಸುರಿಸತೊಡಗಿದನು. ಕಣ್ಣಪ್ಪನು ಬಂದು ಅದನ್ನು ನೋಡಿ ಭಯಭ್ರಾಂತನಾದನು. ಎಂದಿನಂತೆ ಪೂಜೆಮಾಡಿ "ಅಪ್ಪದೇವನೇ, ಏನಾಯಿತು ನಿನಗೆ? ಏಕೆ ಈ ಕಣ್ಣೀರು?" ಎಂದು ದುಃಖಿಸಿದನು. ಕಸ ಬಿದ್ದಿತೇ ಎಂದು ಬೆರಳಿಂದ ಒರಸಿದನು, ಊದಿದನು. ದೋತ್ರದಿಂದ ಉಸಿರಿನ ಕಾವು ಕೊಟ್ಟನು. ಯಾವುದಕ್ಕೂ ಜಲಧಾರೆ ನಿಲ್ಲಲಿಲ್ಲ. "ಆಗಲಿ, ನನ್ನ ನೀರೋಗಿಯಾದ ಕಣ್ಣುಗಳನ್ನೇ ನಿನಗೆ ಅಳವಡಿಸುವೆನು" ಎಂದು ಕಣ್ಣಪ್ಪನು ತನ್ನ ಒಂದು ಕಣ್ಣನ್ನು ಕಿತ್ತು ಶಿವನಿಗೆ ಹಚ್ಚಿದನು. ನೀರು ಇನ್ನೊಂದು ಕಣ್ಣಿನಿಂದ ಉಕ್ಕಿತು. ಆತನು ತನ್ನ ಇನ್ನೊಂದು ಕಣ್ಣನ್ನು ಕೀಳಲುಜ್ಜುಗಿಸಿದಾಗ ಶಿವನು ಪ್ರತ್ಯಕ್ಷವಾಗಿ ಕಣ್ಣಪ್ಪನನ್ನು ಮುಂಡಾಡಿದನು; ಪೂಜಾರಿ ಕೋಪವಡಗಿ ನಮಸ್ಕರಿಸಿ ಕೊಂಡಾಡಿದನು.

ಶಿವನು "ಮೆಚ್ಚಿದೆ ವರವನ್ನು ಬೇಡೆ"ನಲು, ಕಣ್ಣಪ್ಪನು "ಮೋಕ್ಷ-ಗೀಕ್ಷ, ಅಭಿಮತಗಿಭಿಮತ ಒಂದನ್ನೂ ನಾನರಿಯೆ. ನನ್ನ ಕಣ್ಣಲ್ಲಿ ನಿನ್ನ ಕಣ್ಣು, ನಿನ್ನ ಕಣ್ಣಲ್ಲಿ ನನ್ನ ಕಣ್ಣು ಸದಾ ಇರಿಸಿ ರಕ್ಷಿಸು" ಎಂದನು. ಅದರಂತೆ ಶಿವನು ಕಣ್ಣಪ್ಪನಿಗೆ ಎದುರಾಗಿ, ನಿಲ್ಲಲು, ಪರಸ್ಪರ ಅನ್ಯೋನ್ಯ ದೃಷ್ಟಿಗಳಿಂದ ಇಬ್ಬರೂ ಒಪ್ಪುತ್ತಿದ್ದಾರೆ. ಇಂದಿಗೂ ಶಿವನಿಗೆ ಕಣ್ಣಪ್ಪನ ಮುಕ್ಕುಳೋದಕ, ಕಣ್ಣಪ್ಪನ ನಿರ್ಮಾಲ್ಯಗಳ ಪೂಜೆ ನಡೆಯುತ್ತಿದೆ; ಕಣ್ಣಪ್ಪನಿಗೆ ಅರ್ಪಿಸಿದಲ್ಲದೆ ಶಿವನ ಆರೋಗಣೆಯಿಲ್ಲ.

ಸಂಧಿ: ೧೮, ೧೯

ಸಕಳೇಶಮಾದರಸನ ಕಥೆ

ಸಕಳೇಶಮಾದರಸನೆಂಬ ಸದ್ಭಕ್ತನು ಅಭಿರಾಮಪುರದಲ್ಲಿ ಆಳುತ್ತಿದ್ದನು. ಬತ್ತೀಸಾದಿ ರಾಗಗಳಿಗೆಲ್ಲ ದಂಡಿಗೆಗಳನ್ನು ರಚಿಸಿ ವೀಣೆ ಬಾರಿಸುತ್ತಿದ್ದನು. ಜಂಗಮಾರಾಧನೆ ಗೈಯುತ್ತ ಭಕ್ತಿಸಾಮ್ರಾಜ್ಯಲೋಲನಾಗಿದ್ದ ಆತನಿಗೆ ಭೂಸಾಮ್ರಾಜ್ಯ ಭೋಗವು ಬೇಸರವಾಯಿತು. ಮಲ್ಲರಸನೆಂಬ ಒಬ್ಬರಸು ರಾಜ್ಯವನ್ನು ತ್ಯಜಿಸಿ ಶ್ರೀಶೈಲದ ಬಿಲ್ವವನದಲ್ಲಿ ಸಮಾಧಿಯಲ್ಲಿದ್ದಾನೆಂದು ಗಣಂಗಳಿಂದ ಕೇಳಿದ ಮಾದಿರಾಜನು ಆತನನ್ನು ಕಾಣಲು ಹೊರಟನು. ಗಿರಿಯ ಮಾಹಾತ್ಮ್ಯವನ್ನು ಹೊಗಳುತ್ತ ಅದನ್ನೇರಿ ನಾನಾ ತೀರ್ಥಗಳನ್ನೂ ನಾನಾ ವನಗಳನ್ನೂ ನೋಡುತ್ತ ಅವನು ಬಿಲ್ವವನಕ್ಕೆ ಹೋದನು. ಮಾದಿರಾಜನು ತನ್ನ ದರ್ಶನಕ್ಕೆ ಬರುವ ಸುಳಿವನ್ನರಿತು ಮಲ್ಲಿಕಾರ್ಜುನ ದೇಶಿಕೋತ್ತಮನು ಆತನ ಮನದ ಬಲುಹನ್ನು

CC-0. Jangamwadi Math Collection. Digitized by eGangotri

ನೋಡಲೆಂದು ಮಹಾದ್ಭುತಶರೀರನಾಗಿ ದಾರಿಯಲ್ಲಿ ಅಡ್ಡಲಾಗಿ ಮಲಗಿದನು. ದಾಟಲಸಾಧ್ಯವಾದ ಇದರ ರಹಸ್ಯವನ್ನು ತಿಳಿಯುವೆನೆಂದು ಮಾದಿರಾಜನು ಮಸ್ತಕದ ದೆಸೆಗೆ ನಡೆದನು; ಮೂರು ವರುಷ ನಡೆದರೂ ಅಂತ ಹತ್ತಲಿಲ್ಲ. ಮೊದಲು ಚರಣಗಳಿಗೆ ವಂದಿಸಬೇಕೆಂದೆಣಿಸಿ ಅತ್ತಕಡೆ ಸಾಗಿದನು. ಎಂಟು ವರುಷಗಳಾದರೂ ಅಡಿಗಳ ದರ್ಶನವಿಲ್ಲ. ಮಾದಿರಾಜನು ಭಯಭ್ರಮೆಗೊಂಡನು. "ನಿಮ್ಮ ರೂಪವನ್ನು ತೋರದೆ ಏಕೆ ಕಾಡುವಿರಿ? ನಾನೇಸರವನು? ನಿಮ್ಮ ಅಡಿದಾವರೆಗಳನ್ನು ತೋರಿ ದಯೆಗೆಯ್ಯಿರಿ" ಎಂದು ಪ್ರಾರ್ಥಿಸುತ್ತ ಒಂದು ತಿಂಗಳು ಬಿದ್ದುಕೊಂಡಿದ್ದನು.

ಮಲ್ಲಿಕಾರ್ಜುನಯೋಗಿ ಕರುಣೆಸಿ ನಿಜರೂಪವನ್ನು ತೋರಿ, ಶಿವತತ್ವಾನುಭಾವವನ್ನು ಬೋಧಿಸಿ, ಇನ್ನು ಕೆಲವುಕಾಲ ನೀನು ಪ್ರಪಂಚದಲ್ಲಿ ಇದ್ದು ಬರಬೇಕೆಂದು ತಿಳಿಸಿದನು. ಮಾದಿರಾಜನು ಒಪ್ಪಲಿಲ್ಲ. ಇವನನ್ನು ಪ್ರತ್ಯಯದಿಂದ ಒಡಂಬಡಿಸಬೇಕೆಂದು ಒಂದು ಮರದಡಿಯಲ್ಲಿ ಕುಳ್ಳಿರಿಸಿ ಎಲ್ಲಿಗೋ ಹೊರಟುಹೋದನು. ಕೊಂಚ ಹೊತ್ತಿನಲ್ಲಿ ಕುರಿಗಾಹಿಯ ವೇಷದಿಂದ ಬಂದು, ಮೇವಿಗಾಗಿ ಆ ಮರದ ತೊಪ್ಪಲನ್ನು ಸವರತೊಡಗಿದನು. "ನಾನು ನೆರಳೆಂದು ಕುಳಿತಿರುವುದು ಕಾಣುವುದಿಲ್ಲವೇನು? ಈ ಮರವನ್ನೇ ಕಡಿಯುತ್ತೀಯಲ್ಲ ಎಲೆ ಪಾಪಿ ಕುರುಬಾ! ಬೇರೆ ಮರಗಳಿಲ್ಲವೆ?" ಎಂದು ಮಾದಿರಾಜನು ಕೋಪದಿಂದ ಗದರಿಸಿದನು. ಕುರುಬನು ಅದಕ್ಕೆ ಜಗ್ಗದೆ, "ಭಲೆ, ಕೋಪಿಸುವ ನೀನು ಪಾಪಿಯೋ ನಾನೊ! ಆಹಾ, ಹಸಿತಪಸ್ವಿ!" ಎಂದು ಮೂದಲಿಸಿ ನಕ್ಕು ಕಪಟ ವೇಷವನ್ನು ತೊರೆದು ನಿಜರೂಪದಲ್ಲಿ ನಿಂತನು. ಮಾದಿರಾಜನು ಸಿಟ್ಟೆಲ್ಲ ಇಳಿದು ಲಜ್ಜಿತನಾದನು. ಆತನ ಕಣ್ಣಲ್ಲಿ ನೀರುಕ್ಕಿತು. ಮಲ್ಲರಸನು ಪ್ರೀತಿಯಿಂದ ಅವನನ್ನು ತೆಗೆದಪ್ಪಿ, "ನೀನು ತಿರುಗಿ ಹೋಗಲು ಒಲ್ಲೆನೆಂದುದಕ್ಕೆ ಈ ಆಟ ಹೂಡಿದೆನು. ನಿನಗಿನ್ನೂ ಶಿವಾಚಾರವೃದ್ಧಿಯನ್ನು ಮಾಡುವ ಮಣಿಹ ಭೂಮಿಯ ಮೇಲಿದೆ. ಬಳಿಕ ನಾನೇ ಬರಿಸಿಕೊಳ್ಳುವೆನು. ನಿನಗೀಗ ಏನು ಬೇಕು ಬೇಡಿಕೋ ಕೊಡುವೆನು" ಎನಲು, ಮಾದರಸನು "ದಯಾನಿಧೇ, ಸಕಲೇಶಾ, ದುಡ್ಡು ದುಗ್ಗಾಣಿ, ಪದವಿಗಿದವಿ ಯಾವುದೂ ಬೇಕಿಲ್ಲ"ವೆಂದು ಅಡಿಗೆರಗಿ ಏಳುವಷ್ಟರಲ್ಲಿ ಕಲ್ಯಾಣದಲ್ಲಿ ಬಸವರಸನ ಎದುರು ನಿಂತಿದ್ದನು.

ಸಂಧಿ: ೨೦, ೨೧

ಮಡಿವಾಳ ಮಾಚಯ್ಯನ ಕಥೆ

ಬಸವನ ಮಹಿಮೆಯಿಂದ ಆಕರ್ಷಿತನಾದ ಮಾಚಯ್ಯನೆಂಬ ಭಕ್ತನು

CC-0. Jangamwadi Math Collection. Digitized by eGangotri

ಕಲ್ಯಾಣಕ್ಕೆ ಬಂದು ಜಂಗಮರ ಬಟ್ಟೆಗಳನ್ನು ಒಗೆಯುವ ಕಾಯಕದಲ್ಲಿದ್ದನು. ದಿನಾಲು ಬೆಟ್ಟದಷ್ಟು ಬಟ್ಟೆಗಳ ಮೊಟ್ಟೆಗಳನ್ನು ಹೊತ್ತುಕೊಂಡು ಬರುತ್ತಾ ಅನ್ಯರು ಭಕ್ತರ ಮಡಿಬಟ್ಟೆಗಳನ್ನು ಮುಟ್ಟಿದರೆ ಕುಟ್ಟಿ ಕೆಡಹುವೆನೆಂಬುದು ಅವನ ಭಾಷೆ. ಒಂದು ದಿನ ಅವನು ಬಟ್ಟೆ ಹೊತ್ತು ಬರುತ್ತಿದ್ದ ದಾರಿಯಲ್ಲಿ ಒಬ್ಬ ಭವಿ ತಾಗಿದನು. ಕೂಡಲೆ ಮಾಚಯ್ಯನು ಅವನ ತಲೆಯನ್ನು ಕಡಿದು ಗಗನಕ್ಕೆ ಹಾರಿಸಿದನು. ಜನರು ಅರಸನಲ್ಲಿ ದೂರಿದರು. ಅರಸನು ಬಸವಣ್ಣನನ್ನು ಕುರಿತು ಕೋಪದಿಂದ "ನೋಡಿದೆಯಾ, ಅಗಸಭಕ್ತನ ಉರವಣಿಗೆ! ಅಂದದ್ದಿಲ್ಲ ಆಡಿದ್ದಿಲ್ಲ; ಕೈ ಸೋಂಕಿತೋ ಇಲ್ಲವೋ ಅವರನ್ನು ಕೊಂದೊಗೆಯುವುದೆ?" ಎಂದು ನುಡಿದನು. ಬಸವಣ್ಣನು "ಸುಚರಿತ್ರನಾದ ಆ ಸದ್ಭಕ್ತನು ಸಾಮಾನ್ಯನಲ್ಲ. ಸಾಕ್ಷಾತ್ ಶಿವಸ್ವರೂಪನು. ಅಲ್ಲಸಲ್ಲದವರ ಮಾತನ್ನು ಕೇಳಿ ಅವನ ಮೇಲೆ ಹೋಗಬೇಡ" ಎಂದು ತಿಳಿಹೇಳಿದನು. ಅರಸನು ಇದನ್ನು ಕೇಳದೆ ಮಾಚಯ್ಯನ ಮೇಲೆ ಮದ್ದಾನೆಯನ್ನು ಬಿಟ್ಟು ತುಳಿಸುವಂತೆ ಆಜ್ಞೆ ಮಾಡಿದನು. ತನ್ನ ಮೇಲೆ ಅಬ್ಬರಿಸಿ ಬರುವ ಮದ್ದಾನೆಯನ್ನು ಕಂಡು ಮಾಚಯ್ಯನು ಹೊತ್ತಿದ್ದ ಬಟ್ಟೆಯ ಮೊಟ್ಟೆಯನ್ನು ಆಕಾಶದಲ್ಲಿ ನಿಲ್ಲಿಸಿ, ಶೌರ್ಯದಿಂದ ಮುನ್ನುಗ್ಗಿ ಮಾವುತರನ್ನು ಬೀಳಹೊಯ್ದು, ಆನೆಯ ಸೊಂಡಿಲನ್ನು ಹಿಡಿದೊತ್ತಿ ಗುದ್ದಿ ಗುದ್ದಿ ಕೊಂದನು. ಇದನ್ನು ಕೇಳಿ ಅರಸನು ಭಂಗಿತನಾದನು. ಬಸವಣ್ಣನು ಇನ್ನೂ ಕೆಲವು ಶಿವಭಕ್ತರ ಮಹತಿಯ ಕಥೆಗಳನ್ನು ಬಣ್ಣಿಸಿದನು:

ಇರಿವತ್ತನ ಕಥೆ

ಇರಿವತ್ತನೆಂಬವನು ಅರುವತ್ತುಮೂವರೊಳಗೊಬ್ಬನು. ದ್ರಮಿಡದೇಶದ ಕರವೂರ ಚೋಳನ ರಾಜ್ಯದಲ್ಲಿದ್ದನು. ಶಿವಭಕ್ತರಿಗೆ ಅಪಕಾರ ಮಾಡುವವರನ್ನು ಇರಿದು ಕೊಲ್ಲುವುದು ಅವನ ನೇಮ. ಒಮ್ಮೆ ಚೋಳರಾಯನ ಹಿರಿಯಾನೆ ಸಂಕಲೆ ಹರಿದುಕೊಂಡು ಬೀದಿಗಳಲ್ಲಿ ಗದ್ದಲಹಾಕತೊಡಗಿತು. ಆಗ ಒಬ್ಬ ಭಕ್ತನು ಹೂ ಕೊಯ್ದುಕೊಂಡು ಬರುತ್ತಿದ್ದನು. ಆನೆ ಅವನನ್ನು ಹಿಡಿದು ಕೊಂದು ಹಾಕಿತು. ಆತನ ಆರ್ತಸ್ವರವನ್ನು ಕೇಳಿದ ಇರಿವದಾಂಡಾರಿ ಧಾವಿಸಿ ಬಂದು. ಮದೋನ್ಮತ್ತ ಆನೆಯ ಮೇಲೆ ಏರಿಹೋಗಿ ಕುಂಭಸ್ಥಳವನ್ನು ಸೀಳಿ ಕೊಂದನು, ಈ ದುರ್ಘಟನೆಯನ್ನು ಕೇಳಿ ಚೋಳನು ಅಲ್ಲಿಗೆ ಬಂದು ಆಳಿನ ಪಾಪಕ್ಕೆ ಆಳ್ದನು ಹೊಣೆಯೆಂದು ಬಗೆದು ಸಾಯಲು ನಿಶ್ಚಯಿಸಿ ಇರಿದುಕೊಳ್ಳಲು ಅಣಿಯಾದನು. ಆಗ ಶಿವನು ಪ್ರತ್ಯಕ್ಷನಾಗಿ ಮಡಿದ ಭಕ್ತನನ್ನೂ ಆನೆಯನ್ನೂ ಎತ್ತಿ ಸಲಹಿದನು. ಹೀಗೆ ಚೋಳನು ತನ್ನ ಮತ್ತಗಜದ ಕೃತ್ಯಕ್ಕಾಗಿ ಸಾಯಲಣಿಯಾಗಿರಲು, ನಾನು

CC-0. Jangamwadi Math Collection. Digitized by eGangotri

ಬೇಡವೆಂದು ಸಾರಿ ಸಾರಿ ಹೇಳಿದರೂ ಭಕ್ತನ ಮೇಲೆ ಆನೆಯನ್ನು ಬಿಡಿಸಿದೆಯಲ್ಲಾ, ಎಂಥ ಶಿವದ್ರೋಹ! ಎಂದು ಬಿಜ್ಜಳನಿಗೆ ಹೇಳಿದನು.

ಬಾಹೂರ ಬೊಮ್ಮನ ಕಥೆ

ಬಾಹೂರಬೊಮ್ಮಯ್ಯನೆಂಬ ಭಕ್ತಶೀಲನು ಕಲ್ಲನಂದಿಗೆ ಹುಲ್ಲಮೇಯಿಸಿದ, ಜೋಳವನ್ನು ಶಿವಲಿಂಗವನ್ನಾಗಿ ಮಾಡಿದ ಮಹಿಮನು. ತೋಟವನ್ನು ಮಾಡಿ ಭಕ್ತರ ಮನೆಗೆ ಹೂ ಒದಗಿಸುವ ಕಾಯಕದವನು. ಒಮ್ಮೆ ಒಬ್ಬ ದೊರೆಯ ದಂಡು ಊರಹೊರಗೆ ಬೀಡುಬಿಟ್ಟಿತ್ತು. ಅವನ ಮತ್ತಗಜವೊಂದು ಸಂಕಲೆ ಹರಿದುಕೊಂಡು ಬಂದು ಜನರನ್ನು ತೊತ್ತಳದುಳಿಯುತ್ತ ಕೋಲಾಹಲವೆಬ್ಬಿಸಿತು. ಬಾಹೂರ ಬೊಮ್ಮಯ್ಯನು ಸೊಂಡಿಲು ತಿರುವಿ ಒತ್ತುತ್ತ ನದಿಯ ದಂಡೆಯ ವರೆಗೆ ತಳ್ಳಿದನು. ಆದು ಸತ್ತುಬಿದ್ದಿತು. ಮಾವುತಿಗರು ಅರಸನಿಗೆ ತಿಳಿಸಿದರು. ಅರಸನು ಬಂದು ತನ್ನ ಆನೆ ಬೊಮ್ಮಯ್ಯನನ್ನು ನೋಯಿಸಿದುದಕ್ಕಾಗಿ ಆತನ ಕ್ಷಮೆ ಬೇಡಿದನು. ಆತನು ಕರುಣಿಸಿ ಆನೆಯನ್ನು ಬದುಕಿಸಿದನು. ಭಕ್ತೋತ್ತಮನ ಮರೆಹೊಕ್ಕ ರಾಜನು ಪ್ರಣ್ಯತನುವಾದನು.

"ಇಂತಹ ಭಕ್ತಚರಿತಗಳು ಹಲವಾರುಂಟು. ಅವರು ಮಾರ್ಮಲೆತವರನ್ನು ಕೊಲ್ಲುವರು, ಶರಣು ಹೊಕ್ಕವರನ್ನು ಕಾಯುವರು. ಈ ಮಾಚಯ್ಯನು ಸಾಮಾನ್ಯ ನರನಲ್ಲ, ಕಲಿಯುಗರುದ್ರನೆ. ದೊರೆಯೆ, ನೀನುಳಿಯಬೇಕಾದರೆ ಅವನಿಗೆ ಶರಣುಹೋಗಬೇಕು. ಅವನು ರಕ್ಷಿಸುತ್ತಾನೆ." ಎಂದು ನುಡಿಯಲು ಆತನು ಪರಿವಾರಸಹಿತವಾಗಿ ಹೋಗಿ ಮಾಚಯ್ಯನಡಿಗಳಿಗೆರಗಿದನು. ಆ ಭಕ್ತವರನು ಕರುಣಿಸಿ ಮದ್ದಾನೆಗೆ ಜೀವದಾನ ಮಾಡಿದನು; ಮುನ್ನದಿನ ತನ್ನಿಂದ ಮಡಿದವನನ್ನೂ ಬದುಕಿಸಿದನು.

ಬಸವಣ್ಣನ ಹೆಮ್ಮೆಗೆ ಮಡಿವಳನ ಮದ್ದು

ಒಮ್ಮೆ ಬಸವಣ್ಣನು 'ಬೇಳ್ಪವರಿಲ್ಲದೆ ಬಡವಾದೆ' ಎಂದೊಂದು ಗೀತವನ್ನು ಹಾಡುವನು. ಅದನ್ನು ಕೇಳಿದ ಮಾಚಯ್ಯನು ಬಸವನಿಗೆ ಇಷ್ಟೊಂದು ಮದವೇರಿತೆ ಎಂದು ಕುಪಿತನಾಗುವನು. ಅದರಿಂದ ಬಸವನು ಭಯವಿಹ್ವಲನಾಗಿ ಓಡಿಬಂದು ಮಾಚಯ್ಯನಿಗೆ ರಕ್ಷಿಸೆಂದು ಅಡ್ಡಬೀಳುವನು. 'ನೀನೊಬ್ಬನೇ ಧನಿಕ ದಾನಿಯೇ, ಜಂಗಮರು ಅಷ್ಟು ಅಷ್ಟದರಿದ್ರರೆ, ಎಂಥದು ನಿನ್ನ ಹೆಮ್ಮೆ!' ಎಂದು ಗದ್ದರಿಸಿ, 'ನಿನಗೆ ಮಹಾನುಭಾವರ ಬಡತನದ ಇರವನ್ನು ತೋರುವೆನು ನೋಡು' ಎಂದು ಕೈಯಿಂದ ನೀರನ್ನು ಉಗ್ಗುವನು. ನೀರ ಹನಿಗಳೆಲ್ಲಾ ನವರತ್ನ ಗಳಾಗಿ ಸೂರೆಯಾಗುವವು. ಅರಸನೂ ಪುರಜನಗಳೂ ಆಶ್ಚರ್ಯಾತುರದಿಂದ

CC-0. Jangamwadi Math Collection. Digitized by eGangotri

ಬಂದು ಈ ಆದ್ಭುತವನ್ನು ನೋಡಿದರು. ಬಸವನು ಮತ್ತೆ ಮತ್ತೆ ವಂದಿಸಿ ಕರುಣಿಸೆಂದು ಬೇಡಿಕೊಳ್ಳುವನು. ಅಗಸನು ಆತನ ಮನದ ಮಲಿನವನ್ನು ಕಳೆದನು.

ಸಂಧಿ: ೨೨

ಶಂಕರದಾಸಿಮಯ್ಯನ ಕಥೆ

ಶಂಕರದಾಸಿಮಯ್ಯನೆಂಬ ಭಕ್ತನು ಕೌದಿಹೊಲಿಯುವ ಕಾಯಕ ಮಾಡಿ ಕೊಂಡಿದ್ದನು. ಅದರಿಂದ ಪಡೆದ ಧನದಲ್ಲಿ ದಿನಾಲು ಐದು ಮಾನ ಧಾನ್ಯದಿಂದ ಜಂಗಮಾರಾಧನೆ ಗೈಯುತ್ತಿದ್ದನು. ಒಮ್ಮೆ ಜಡೆಯ ಶಂಕರದಾಸಿ ಎಂಬ ಭಕ್ತನು ಬಂದು ಕೆಲಹೊತ್ತು ಅನುಭಾವಸರಸಗೋಷ್ಠಿಯಲ್ಲಿದ್ದು ಹೋದನು. ಮನೆಗೆ ಹೋಗಿ, ಈ ಶಂಕರದಾಸಿ ಇಷ್ಟು ಲಿಂಗಸದರ್ಥನಾಗಿಯೂ ಎಂತಹ ಬಡತನದಲ್ಲಿ ಬಳಲುತ್ತಾನೆಂದು ಮರುಗಿ, ಹೆಡಗೆ ಭತ್ತವನ್ನು ಕಳಿಸಿದನು. 'ಇಂದು ನಮ್ಮೈಡರು ಗಳಿಗೆ ಬತ್ತವನ್ನು ಕಳಿಸಿದನು, ಅಮಮಾ ಲೇಸಾಯಿತು!' ಎಂದುಕೊಂಡು ಕೈಯಿಂದ ತೆಗೆಯಲು ಹೆಡಿಗೆ ಬತ್ತ ಅವನ ಒಂದು ಹಿಡಿಯಲ್ಲಿ ಆಡಗಿತು. ಜಡೆಯ ಶಂಕರನಲ್ಲಿದ್ದ ತವನಿಧಿಯೂ ಅಡಗಿಹೋಯಿತು. ಅವನ ಕಣಜಗಳೆಲ್ಲಾ ಬರಿದಾದವು. ಅವನ ಪತ್ನಿ ದುಗ್ಗಳೆ "ಉಳ್ಳವರೆಂಬ ಜಂಬದಿಂದ ಶಂಕರದಾಸಿಗೆ ಬತ್ತವನ್ನು ಕಳಿಸಿದುದಕ್ಕೆ ಹೀಗಾಯಿತು. ಶಿವಸಮಾನ ಮಹಂತರ ಆಂತರವನ್ನರಸುವುದು ನಿಮ್ಮಂತಹರಿಗೆ ಸಾಧ್ಯವೆ? ಹಿಂದಕ್ಕೆ ಶಿವನು ಒಲಿದು ಏನು ಬೇಕೆಂದು ಕೇಳಿದರೆ ನೀವೆ ಒಡೆಯರಾಗಿ ನಡೆಸುತ್ತಿರಲು ಬೇರೊಂದು ಬೇಡವೆಂದು ಹಗಲೂ ರಾತ್ರಿ ಸೂಜಿಯನ್ನು ಪೋಣಿಸುವಂತೆ ಕಣ್ಣುಗಳನ್ನು ಕೊಡು ಎಂದು ಬೇಡಿದನು. ಶಿವನು ಕೊಟ್ಟ ಹಣೆಗಣ್ಣಿನಿಂದ ಪರದೈವಗಳು ಛಿಟಿಛಿಟಿಲೆಂದು ಒಡೆಯತೊಡಗಿದುವು. ದೇವರುಗಳೆಲ್ಲಾ ಬೆದರಿ ಈತನ ಆಳುಗಳಾಗಿ ದುಡಿಯುವವು. ಹದಿನೆಂಟು ಯೋಗಪೀಠಗಳು ಈತನಿಗೆ ಪ್ರತಿಪರುಷ ಕಪ್ಪವನ್ನು ಸಲ್ಲಿಸುವವು. 'ಬಣಗು ದೈವಗಳನ್ನು ಒಡೆದರೇನಂತೆ! ನಮ್ಮ ಸಮರ್ಥ ದಾಮೋದರನ ಪಂಚಲೋಹದ ಮೂರ್ತಿಯನ್ನು ಹಣೆಗಣ್ಣಿಂದ ನೋಡಿ ಒಡೆದರೆ ಸೈಯೆನ್ನುವೆ' ಎಂದು ಜಗದೇಕಮಲ್ಲನು ಆಢ್ಯತೆಯಿಂದ ನುಡಿಯಲು ಶಂಕರದಾಸಿಮಯ್ಯನು ಹೋಗಿ ನೋಡಿದನು. ಕೂಡಲೆ ಆ ಮೂರ್ತಿ ಸಿಡಿದು ಪೆಡಿಪುಡಿಯಾಯಿತು. ಇಂತಹ ಮಹಿಮನಿಗೆ ಶರಣುಹೋಗುವುದೇ ಲೇಸು. ನಡೆ" ಎಂದು ಪತಿಗೆ ಹೇಳಿದಳು. ಇಬ್ಬರೂ ಹೋಗಿ ಆತನಿಗೆ ಭಯಭಕ್ತಿಯಿಂದ ನಮಸ್ಕರಿಸಿ "ನಮ್ಮ ತಪ್ಪನ್ನು ಮನ್ನಿಸಿ ಉದ್ಧರಿಸಬೇಕೆ"ಂದು ಬೇಡಿಕೊಂಡರು. ಆಗ ಶಂಕರದಾಸಿಮಯ್ಯನು "ನಾವು ಬಡವರು, ತಾವು ಧನಿಕ ದಾನಿಗಳು, ನಮಗೆ

CC-0. Jangamwadi Math Collection. Digitized by eGangotri

ನಮಿಸುವುದೆ?" ಎಂದು ಹಂಗಿಸಿ ನುಡಿದನು ಮತ್ತೆ ಕರುಣಿಸಿ ಅವರಿಗೆ ತವನಿಧಿಯನ್ನು ದಯಪಾಲಿಸಿದನು.

ಸಂಧಿ : ೨೩

ಸಿರಿಯಾಳನ ಕಥೆ

ಕಂಚಿಯಲ್ಲಿ ಸಿರಿಯಾಳನೆಂಬ ಭಕ್ತನು ನಿತ್ಯವೂ ಸಾವಿರ ಜಂಗಮಕ್ಕೆ ಅವಂಚಕತ್ವದಿಂದ ಮಾಡುತ್ತಲಿದ್ದನು. ಆತನ ಭಕ್ತಿಯಾಳವನ್ನು ಪರಿಕಿಸಲು ಶಿವನು ತಪಸ್ವಿವೇಷದಿಂದ ಹೋದನು. ಸಿರಿಯಾಳನು ತಮ್ಮಲ್ಲಿ ಸೇವೆ ಸ್ವೀಕರಿಸಬೇಕೆಂದು ಕೇಳಿಕೊಂಡನು. ಆ ಶಿವತಪಸ್ವಿ "ಆಗಬಹುದು. ಆದರೆ ನನ್ನದೊಂದು ನೇಮವುಂಟು. ಅದನ್ನು ಸಲಿಸುವುದಾದರೆ ಆಗಲಿ" ಎಂದು ಹೀಗೆ ವಿವರಿಸಿದನು: "ನನಗೆ ಮಾಂಸವಾಗಬೇಕು; ಅದೂ ಮದ್ವಂಶಜನ ಮಾಂಸವಾಗಬೇಕು; ದುರ್ಮಾಂಸವಲ್ಲದ ಸುತನನ್ನು ಕೊಂದು ನೀಡುವುದಾದರೆ ನಮಗೆ ಹಿತವು. ಗಂಡನಿಲ್ಲದ ನಾರಿ, ಹೆಂಡತಿಯಿಲ್ಲದ ಪುರುಷ, ಮಗನಿಲ್ಲದ ಮನೆಯಾದರೆ ನಮಗೆ ನಿಷಿದ್ಧ. ಇಂತಹ ಅಸಂಭವ ನೇಮವನ್ನು ಸಲಿಸುವುದಾದರೆ ನಿನ್ನ ಜನ್ಮ ಸಫಲವಾಗುವುದು" ಎಂದು ನುಡಿದ ತಪಸ್ವಿಯ ಮಾತಿಗೆ ಒಪ್ಪಿ ಹೆಂಡತಿಗೆ ಆರುಹಿದನು. ಆಕೆ ಕೇಳಿ ಸಂತಸದಿಂದ ಒಪ್ಪಿದಳು.

ತಾಯಿ ಕರೆಯುವ ಮುನ್ನವೆ ತಪಸ್ವಿ ಸಾಲೆಗೆ ಹೋಗಿ ಚಿಲ್ಲಾಳನಿಗೆ "ಅಕ್ಕಟಾ. ನಿನ್ನ ತಂದೆ ಒಬ್ಬ ರಕ್ಕಸ ತಪಸಿಗೆ ನಿನ್ನ ಮಾಂಸವನ್ನು ಅಟ್ಟಿಕ್ಕುವನು; ಎಲ್ಲಿಯಾದರೂ ಹೋಗಿ ಅಡಗಿಕೋ" ಎಂದು ಮರುಕದಿಂದ ತಿಳಿಸಿದನು. ಅದಕ್ಕೆ ಬಾಲಕನು "ನಾನಿದಕ್ಕೆ ಅಂಜುವನೆ? ತಾಯಿತಂದೆಗಳ ಮಾತನ್ನು ಮನ್ನಿಸದಿದ್ದರೆ ನನಗೆ ಇಹ ಪರ ಎರಡೂ ಇಲ್ಲ. ಉತ್ತಮ ತಪಸಿಗೆ ನನ್ನ ಒಡಲನ್ನು ಆಹಾರವಾಗಿಸಿ ಕೃತಾರ್ಥನಾಗುವೆನು. ಇಂಥ ಕೆಟ್ಟ ಉಪದೇಶ ಮಾಡಬೇಡಿರಿ" ಎಂದು ತಪಸಿಯನ್ನು ದಂಗುಗೊಳಿಸಿದನು. ತಾಯಿ ಅವನನ್ನು ಮನೆಗೆ ಕರೆತಂದು ಸ್ನಾನಮಾಡಿಸಿ ಅಲಂಕರಿಸಿದಳು. ತಂದೆತಾಯಿ ಇಬ್ಬರೂ ಮಗನಿಂದ ತಾವು ಧನ್ಯರಾದೆವೆಂದು ಅವನನ್ನು ವಧಿಸಿದರು. ಮಾಂಸದ ಅಡುಗೆಯಾಯಿತು. ತಾಪಸನನ್ನು ಕರೆತಂದು ಆರಾಧಿಸಿ ಕುಳ್ಳಿರಿಸಿ ಬಡಿಸಿದರು. ಆತನು ತನ್ನ ಪಙ್ತಿಗೆ ಸಿರಿಯಾಳ ಸೆಟ್ಟಿಯನ್ನೂ ಕರೆದನು. ತುತ್ತು ತೆಗೆದುಕೊಳ್ಳುವ ಹೊತ್ತಿಗೆ "ಮಗನನ್ನೂ ಕರೆ" ಎಂದು ತಪಸ್ವಿ ಹೇಳಿದನು. ತಾಯಿ ಚಂಗಳೆ ಬಾಗಿಲಿಗೆ ಹೋಗಿ "ಚಿಲ್ಲಾಳಾ, ಯತಿದೇವರು ಕರೆಯುತ್ತಾರೆ ಬಾ" ಎಂದು ಕೂಗಿ ಕರೆದಳು. ಚಿಲ್ಲಾಳನು ಓಡಿ ಬಂದು ಇದಿರಿಗೆ ನಿಂತನು. ಈಶ್ವರನು ಪ್ರತ್ಯಕ್ಷನಾದನು. ಸಿರಿಯಾಳ ಚಂಗಳೆ

CC-0. Jangamwadi Math Collection. Digitized by eGangotri

ಚೀಲಾಳರು ಅಡಿಗೆರಗಿದರು. ಶಿವನು ಆ ಮೂವರನ್ನೂ ಏಳು ಕೇರಿ ಸಹಿತವಾಗಿ ಕೈಲಾಸಕ್ಕೊಯ್ದನು.

ನಿಂಬಿಯ ಕಥೆ

ಈ ಘಟನೆಯಿಂದ ಸಿರಿಯಾಳನಿಗೆ ತನ್ನ ಭಕ್ತಿಗಾಗಿ ಅಹಂಕಾರವುಂಟಾಯಿತು. ಆತನಿಗೆ ಬುದ್ಧಿಗಲಿಸಬೇಕೆಂದು ಬಗೆದು ಶಿವನು ಆತನನ್ನು ಕೈಹಿಡಿದು ನಡೆ ಎಂದು ಮರ್ತ್ಯಕ್ಕೆ ಕರೆತಂದನು. ಆ ಕ್ಷಣವೆ ಶಿವ ಮತ್ತು ಸೆಟ್ಟಿ ಇಬ್ಬರೂ ತಪಸ್ವಿರೂಪದಲ್ಲಿ ನಿಂಬಿ ಎಂಬ ಭಕ್ತೆಯ ಮುಂದೆ ನಿಂತಿದ್ದರು.

ನಿಂಬಿಯಕ್ಕ ಶಿವಭಕ್ತರ ಮನೆಗಳಿಗೆ ಅಗ್ಗಿವಣಿಯನ್ನು ಪೂರಯಿಸುವ ಕಾಯಕದವಳು. ಬಂದ ತಪಸ್ವಿಗಳ ಕಾಲ್ತೊಳೆದು ಪಾದೋದಕವನ್ನು ಕೊಂಡು ಅವರಿಗಾಗಿ ಅಡಿಗೆ ಮಾಡಿದಳು. ದಾರಿಯ ದಣಿವಾದವರಂತೆ ತಪಸಿಗಳು ಒರಗಿದರು. ನಿಂಬಿ ಅಡಿಗೆ ಮಾಡಿಟ್ಟು ನೀರಿಗೆ ಹೋದಳು. ಅಷ್ಟರಲ್ಲಿ ದನಗಾಯ ಹೋಗಿದ್ದ ಆಕೆಯ ಮಗನು ಹಸಿವೆಯಿಂದ ಅವ್ವಾ ಎಂದು ಬಂದನು. ಅಟ್ಟಿಟ್ಟಿದ್ದ ಅಡಿಗೆಯಲ್ಲಿ ಒಂದು ಹೂರಿಗೆಯನ್ನು ತೆಗೆದುಕೊಂಡು ಮೆದ್ದನು. ತಾಯಿ ಬಂದು ನೋಡಿ, "ಮೂಳಾ, ಮಾಹೇಶ್ವರರ ಓಗರದ ಮಿಸಲು ಮುರಿದೆಯಾ ಶಿವದ್ರೋಹಿ ಮೂಳಾ!" ಎಂದು ಬಯ್ಯುತ್ತ ಕೋಪದಿಂದ ಹೊಡೆದು ಕೊಂದು, ಯಾರಿಗೂ ಕಾಣದಿರಲೆಂದು ಹೆಣವನ್ನು ಗೋದಲಿಗೆ ಎಳೆದು ಹಾಕಿ ಹುಲ್ಲು ಮುಚ್ಚಿದಳು. ಬೇರೆ ಅಡಿಗೆಯನ್ನು ಮಾಡತೊಡಗಿದಳು. ಆಗ ಶಿವತಪಸ್ವಿ, "ನೋಡಿದೆಯಾ, ಮಿಸಲು ಮುರಿದುದಕ್ಕೆ ನಿಂಬಿ ಮಗುವನ್ನು ಕೊಂದೆಳೆದಳು" ಎಂದು ಹೆಣವನ್ನು ಸೆಟ್ಟಿಗೆ ತೋರಿಸಿದನು.

ನಿಂಬಿ ಅಡಿಗೆಯನ್ನು ಮುಗಿಸಿ, ಮಾಹೇಶ್ವರರನ್ನು ಆರಾಧಿಸಿ, ಶಿವಪೂಜೆ ಗೈಸಿ ಊಟಕ್ಕೆ ಬಡಿಸಿದಳು. ಶಿವತಪಸ್ವಿ ಏನೂ ಅರಿಯದವನಂತೆ, "ಇದೀಗ ನಿನ್ನ ಮಗನು ಹಸಿದು ಬಂದು ಗಡಬಡಿಸಿದನು. ಅವನನ್ನು ಕರೆ" ಎಂದು ನಿಂಬಿಗೆ ಹೇಳಿದನು. ಅವಳು ನಸುನಗುತ್ತ "ನನ್ನನ್ನು ಹೆಂಗುಸು ಅರಿಯದವಳೆಂದು ಬಗೆಯದಿರು ಲಿಂಗವೆ. ನಿನ್ನ ಮಹಿಮೆಯನ್ನು ನಾನು ಬಲ್ಲೆ. ನಿನ್ನ ಹಂಗಿನ ಸಿರಿಯಾಳ ಸೆಟ್ಟಿಯಂತೆ ನಾನೇನು ಮತಿಹೀನಳೇ? ನೀವು ಸುಮ್ಮನೆ ಆರೋಗಿಸದಿದ್ದರೆ ಬಿಡುವವಳಲ್ಲ. ಮಗುವನ್ನು ಹುಡುಕಿ ತರುವ ಗಸಣೆ ಏಕೆ? ದ್ರೋಹ ಮಾಡಿದ ಅವನು ಸತ್ತುಹೋದನು!" ಎಂದು ನುಡಿದಳು. ಸಿರಿಯಾಳನು ಬೆದರಿದನು; ನಾಚಿದನು. ಶಿವನು ನಿಜರೂಪ ತೋರಿದನು. "ದೇವಾ, ಇಂತಹ ಕಪಟನಾಟಕವನ್ನೆಲ್ಲಾ ಬಿಡು, ನಿನಗಿತ್ತ ಬೋನವನ್ನು ಉಣ್ಣದೆ ಹೋದರೆ ನನ್ನಾಣೆ" ಎಂದಳು ನಿಂಬಿಯಕ್ಕ. ಆಕೆಯ ಭಕ್ತಿಗೆ ಮೆಚ್ಚಿದ ಶಿವನು ಆರೋಗಿಸಿದನು. ಜಗತ್ತಿನಲ್ಲಿ

CC-0. Jangamwadi Math Collection. Digitized by eGangotri

ಮೆರೆದ ಭಕ್ತರು ಅನೇಕರಿರುತ್ತಿರಲು ನೀನೇ ಭಕ್ತನೆಂದು ಅಹಂಕರಿಸಿದೆಯಲ್ಲಾ ಎಂದು ಸಿರಿಯಾಳನನ್ನು ತಿರಸ್ಕರಿಸಿದನು. ನಿಂಬಿಯ ಪುತ್ರನನ್ನು ಎಬ್ಬಿಸಿ ಕೈಲಾಸಕ್ಕೆ ಕಳುಹಿದನು.

ಸಂಧಿ: ೨೪

ಹಲಾಯುಧನ ಕಥೆ

ಬಳಿಕ ಶಿವನು ಸೆಟ್ಟಿಯನ್ನು ಹಲಾಯುಧನಲ್ಲಿಗೆ ಕರೆದೊಯ್ದನು. ಅವನಿಗೆ ತಮ್ಮ ಪರಿಚಯವನ್ನು ಹೇಳುತ್ತ, ನಾವು ನಿರಾಳಪುರದವರು, ತಂದೆತಾಯಿಗಳ ಹೊಲಬನ್ನರಿಯೆವು, ಹೀಗೆಯೇ ಭಕ್ತರ ಮನೆಗಳಲ್ಲಿ ಪೂಜೆಗೊಳ್ಳುತ್ತ ಚರಿಸುತ್ತಿರುವೆವು. ಎಲ್ಲಿ ಹೋದಲ್ಲಿ ಸಿರಿಯಾಳನ ಸ್ತುತಿಪರ ಸಾಹಿತ್ಯವೇ ಕೇಳಿಬರುವುದು ಎಂದು ಶಿವನು ಹೇಳಲು ಹಲಾಯುಧನಿಗೆ ಸಿಟ್ಟೇರಿತು. "ಸರಿ ಸರಿ. ಶಿವನು ಮಾಂಸವನ್ನು ಬೇಡಿದನೆ? ಸೆಟ್ಟಿ ಭಕ್ತನಾದ ಮಗನನ್ನು ಕೊಂದು ನೀಡಿದನೆ? ಇವನೆಂಥ ಶಿವಭಕ್ತನೊ! ತಾಯಿ ರಕ್ಕಸಿಯಾದರೆ ಮಗನೆಂತು ಬದುಕುವನೊ? ಶಿವನೆಂತು ಬೇಡಿದನೊ? ಅವನು ಜಾಣನಾಗಿದ್ದರೆ ತಂದೆ ಮಗನ ತಲೆ ಕತ್ತರಿಸುವಾಗಲೇ ಮೆಚ್ಚಿಕೊಡಬಾರದೆ? ಭಕ್ತನ ಮಗನನ್ನು ಕೊಲಿಸಿದನೆಂಬ ಅಪವಾದಕ್ಕೆ ಅಂಜಿ ಮತ್ತೆ ಬದುಕಿಸಿದನೇ ಶಿವನು? ಇವನು ದೇವನಲ್ಲ, ಇವನು ಭಕ್ತನಲ್ಲ" ಎಂದು ಹಲಾಯುಧನು ಅಬ್ಬರಿಸಿ ಚಪ್ಪಳಿಕ್ಕಿದನು. ತಪಸ್ವಿಗಳಿಬ್ಬರೂ ಚಿಂತಾಕ್ರಾಂತರಾಗಿ ಒಬ್ಬರ ಮೊಗವನ್ನೊಬ್ಬರು ನೋಡಿದರು. ಶಿವನು ಪಾರ್ವತಿಯನ್ನು ನೆನೆದು ಬರಿಸಿದನು; ಆಕೆಯೊಡನೆ ಚಂಗಳೆಯೂ ಬಂದಳು. ಪಾರ್ವತಿಯೆಂದಳು: "ಹಲಾಯುಧನು ಮಾಹೇಶ್ವರರಿಗೆ ಬೇಡಿದುದನ್ನಿತ್ತು ತಣಿಸುವನೆಂಬ ನೆಗಳ್ತೆಯನ್ನು ಕೇಳಿ ನಾವಿಲ್ಲಿಗೆ ಬಂದೆವು. ಹಲಾಯುಧ, ನೀನೇನು ಸಾಮಾನ್ಯನೇ?" ಆಗ ಹಲಾಯುಧನು "ಏನು ಬೇಕು ಬೇಡಿರಿ" ಎಂದನು. "ಈಕೆ ಚಂಗಳೆ, ನಾನು ಪಾರ್ವತಿ. ನಮ್ಮ ಪತಿಗಳಿಗೆ ನಿಶ್ಚಲ ಭಕ್ತಿಯನ್ನೂ ಅಭಯವನ್ನೂ ನಮಗೆ ಸೌಭಾಗ್ಯವನ್ನೂ ಕೊಡು" ಎಂದು ಉಮೆ ಬೇಡಿಕೊಂಡಳು. ಶಿವನಿಗೂ ಸಿರಿಯಾಳನಿಗೂ ಹಲಾಯುಧನು ಅಭಯವನ್ನಿತ್ತನು. ಶಿವನು ಪ್ರತ್ಯಕ್ಷನಾಗಿ, ಆತನನ್ನು ಆತನಾಳುವ ನವಪುರ ಸಹಿತವಾಗಿ ಕೈಲಾಸಕ್ಕೆ ಕರೆದೊಯ್ದನು.

ಸಂಧಿ: ೨೫, ೨೬

ಮೆರೆಮಿಂಡದೇವನ ಕಥೆ

ಚೆಂಗೊಂಡೆ ಎಂಬ ಊರೊಳಗೆ ಮೆರೆಮಿಂಡದೇವನೆಂಬ ಭಕ್ತನಿರುತ್ತಿದ್ದನು. ಅವನು ಪ್ರತಿತಿಂಗಳೂ ಶಿವರಾತ್ರೆ ವ್ರತವನ್ನು ಹನ್ನೆರಡು ವರುಷ ನಡೆಸಿ

CC-0. Jangamwadi Math Collection. Digitized by eGangotri

ಗಿಸಿನೆಯ ವರುಷದ ಕೊನೆಯಲ್ಲಿ ತಿರುವಾರೂರ ವಾಲ್ಮೀಕೇಶ್ವರನ ಮಂದಿರದಲ್ಲಿ ಜಾಗರವನ್ನಾಚರಿಸಿ ತತ್ವಗೋಷ್ಠಿಯಲ್ಲಿರುತ್ತಿದ್ದನು. ಆಗ ನಂಬಿ ಪರವೆನಾಚಿಯ ಮನೆಯಿಂದ ಆಡಂಬರದಿಂದ ಗುಡಿಗೆ ಬಂದವನು, ಅಲ್ಲಿದ್ದ ಮಾಹೇಶ್ವರರನ್ನು ಲೆಕ್ಕಿಸದೆ ಶರಣೆನ್ನದೆ ಒಳಗೆ ಹೋದನು. ಅವನ ಅಹಂಕಾರಕ್ಕೆ ಮೆರೆಮಿಂಡನು ಸಿಡಿಮಿಡಿಗೊಂಡು ಘುಡುಘುಡಿಸಿದನು. "ಮಾಹೇಶ್ವರರೆಂದರೆ ಎಷ್ಟು ದುರ್ಲಕ್ಷ್ಯ! ಯಾವನೀ ದ್ರೋಹಿ? ದೇಗುಲದಿಂದ ಓಡಿಸಿರಿ ಈತನನ್ನು!" ಎಂದು ಉಗ್ಗಡಿಸಿದನು ಮೆರೆಮಿಂಡ. ಪೂಜಾರಿ ಹೇಳಿದನು: "ಈತ ನಂಬಿ. ಈತನ ಹಾಡಿಗೋ, ಭಕ್ತಿಗೋ ಮೆಚ್ಚಿ ವಾಲ್ಮೀಕೇಶ್ವರ ನಿತ್ಯ ಸಾವಿರ ಹೊನ್ನು ಕೊಡುತ್ತಾನೆ; ಈತನನ್ನು ತನ್ನ ಮಗನೆಂದೇ ಬಗೆದಿರುವನು. ಇಷ್ಟೇ ಅಲ್ಲ, ಈತನಿಗೆ ಕುಂಟಣಿಯಾಗಿರುವನು," ಎಂದು ತಿಳಿಸಿದನು. "ಓಹೋ, ಈತನೇ ನಂಬಿಯೋ! ಈತನ ಭಕ್ತಿಯನ್ನೂ ಈತನ ಮೇಲಣ ಶಿವನ ಕೂರ್ಮೆಯನ್ನೂ ನಾವು ನೋಡಿಕೊಳ್ಳುವೆವು, ಅವರಿಬ್ಬರೂ ಭಕ್ತಸಮೂಹಕ್ಕೆ ಹೊರಗು" ಎಂದು ಡಂಗುರ ಹೊಯ್ಸಿದನು.

ಕೇಳಿ ವಾಲ್ಮೀಕೇಶನು ಬೆದರಿದನು. ಇಲ್ಲಿರುವುದು ತರವಲ್ಲವೆಂದು ನಂಬಿಯನ್ನು ಕೈಹಿಡಿದೆಳೆದುಕೊಂಡು, ಮಾಹೇಶ್ವರರ ಮುಂದೆ ಹಾಯಲಂಜಿ ಜಲಹರಿಯ ಮಾರ್ಗವಾಗಿ ಮೌನವಾಗಿ ಹೊರಬಿದ್ದು ನಡೆದನು. ಇಬ್ಬರೂ ತಗ್ಗಿ ತಗ್ಗಿ ಅದರಿದರ ಮರೆಮರೆಯಲ್ಲಿ ಸಾಗಿದರು. ಭಕ್ತರು ಬೆನ್ನಟ್ಟುವರೋ ಎಂದು ತಿರುತಿರುಗಿ ನೋಡುತ್ತ ಕೋಟಿಗೋಡೆಯ ಕಲ್ಲೊಂದನ್ನು ತೆಗೆದು ಕಿಂಡಿಯಲ್ಲಿ ನುಸುಳಿದರು. ಕೊನೆಗೆ ಅಡವಿಯನ್ನು ಸೇರಿ ದಣಿವಾರಿಸಿಕೊಳ್ಳುವಾಗ ನಂಬಿ "ನಮ್ಮಿ, ಭಯಕ್ಕೆ ಕಾರಣವೇನು? ಇಷ್ಟಾತುರವೇಕೆ?" ಎಂದು ಗಾಬರಿಯಿಂದ ಕೇಳಿದನು. ಶಿವನು ಉತ್ತರವಿತ್ತನು: "ನಮಗೂ ಭಕ್ತರಿಗೂ ಭೇದವಿಲ್ಲ. ಜಂಗಮವನ್ನು ಭಕ್ತಿಯಿಂದ ಮನ್ನಿಸದಿದ್ದರೆ ಶಿವಪೂಜೆ ನಿಷ್ಫಲ." ಎಂದು ಶಿವನು ಹಿರಿಯ ಭಕ್ತರ ಕೆಲವು ಕಥೆಗಳನ್ನು ವಿವರಿಸಿದನು.

ಬಾಣನ ಕಥೆ

ಬಾಣನೆಂಬ ಅಸುರನು ಶಿವನಿಗೆ ದಿನಾಲು ಸಾವಿರ ವೇಳೆ ಪೂಜೆ ಸಲಿಸುವ ನೇಮವನ್ನು ಕೈಕೊಂಡಿದ್ದನು. ದೇಹಧರ್ಮಾದಿ ಕಾರ್ಯಕ್ಕೂ ಅವನಿಗೆ ವೇಳೆ ಸಿಕ್ಕುತ್ತಿರಲಿಲ್ಲ. ಅದಕ್ಕಾಗಿ ನಾನು ಸಾವಿರ ಕೈಗಳನ್ನು ಕೊಟ್ಟೆನು. ಆ ಚೋದ್ಯವನ್ನು ನೋಡಲು ಜನರು ತಂಡತಂಡವಾಗಿ ಬಂದು ಆತನೊಡನೆ ಶಿವಕಥಾಗೋಷ್ಠಿ ಮಾಡತೊಡಗಿದರು. ಮತ್ತೆ ಶಿವಪೂಜೆಗೆ ಆತಂಕವಾಗಲು ಜನರನ್ನು ತಡೆಯುವುದಕ್ಕಾಗಿ ಬಾಣನ ಬಾಗಿಲನ್ನು ನಾನು ಕಾಯ್ದೆನು.

CC-0. Jangamwadi Math Collection. Digitized by eGangotri

ಪಿಟ್ಟವ್ವೆಯ ಕಥೆ

ಮುದುಗೊಂಡೆ ಎಂಬಲ್ಲಿ ಪಿಟ್ಟವ್ವೆಯೆಂಬ ಸಜ್ಜನ ಭಕ್ತೆ ಇರುತ್ತಿದ್ದಳು. ಕಾವೇರಿಗೆ ಕಟ್ಟೆ ಕಟ್ಟಿಸುವುದಕ್ಕಾಗಿ ಕರಿಕಾಲ ಚೋಳನು ಊರೂರಿನ ಎಲ್ಲಾ ಜನಕ್ಕೆ ಬಿಟ್ಟಿಯನ್ನು ಹೇಳಿಸಿದನು. ಪಿಟ್ಟವ್ವೆಯ ಭಕ್ತಿಗೊಲಿದ ನಾನು ಆಕೆಯ ಬದಲು ಬಿಟ್ಟಿಗೆ ಹೋದೆನು.

ಕಲಿಕಾಮದೇವನ ಕಥೆ

ಶ್ರೀಕುಡಿಯೆಂಬಲ್ಲಿ ಕಲಿಕಾಮದೇವನು ಶಿವನನ್ನು ನಂಬಿ ಕೀಳು ಕೆಲಸಕ್ಕೆ ಹಚ್ಚಿದ್ದಾನೆಂದು ಕೇಳಿ ಕೋಪಗೊಂಡು ತಾನು ಸುಮ್ಮನಿರುವುದು ಖೂಳತನವೆಂದು, ವೀರಭಕ್ತಿಗೆ ಕುಂದೆಂದು ಬಗೆದು, ನಂಬಿಯ ಊರ ಹೆಸರೆತ್ತಿದರೆ, ಅವನ ಸುದ್ದಿ ತೆಗೆದರೆ ಅವರನ್ನು ಕೊಲ್ಲಿಸುವೆನೆಂದು ಸಾರಿದನು. ಆಗ ನಾನು ಕಲಿಕಾಮನನ್ನು ಕರೆತಂದು ವಿವಿಧೋಪಾಯಗಳಿಂದ ಒಡಂಬಡಿಸಿ ಇಬ್ಬರನ್ನೂ ಒಂದು ಮಾಡಿದೆನು.

ಬಳಿಕ ಶಿವನೆಂದನು: "ನಾನು ನಿನಗೆ ಪಡಿ ಕೊಡುವುದು, ಬಿದ್ದ ಕೆಲಸ ಮಾಡುವುದು ಭಕ್ತಿನಿಮಿತ್ತವಲ್ಲದೆ, ನನ್ನ ಭಕ್ತರೊಡನೆ ಗರ್ವಿಸಿ ನಡೆಯಲು ನೀನು ಸಮರ್ಥನೆ? ನಿನ್ನ ದೆಸೆಯಿಂದ ನನಗೆ ದೋಷ ಹೊದ್ದಿತು; ನಾನು ಭಕ್ತರಿಗೆ ಹೊರಗಾದೆ." ಬಳಿಕ ಜಂಗಮಲಿಂಗ ಭಕ್ತಿಸ್ಥಳವನ್ನು ನಂಬಿಗೆ ಅರುಹಿದನು. ನಂಬಿಗೆ ಜ್ಞಾನೋದಯವಾಗಿ ಭಕ್ತರಿಗೆ ಅಡಿಗಡಿಗೆ ನಮಿಸುತ್ತ, ಒಬ್ಬೊಬ್ಬ ಮಹಾಭಕ್ತರ ತಿರುಪಾಡುಗಳನ್ನು ರಚಿಸಿ ಹಾಡಿದನು.

ಈ ಕಥೆಯನ್ನು ಹೇಳಿ ಮಡಿವಳ ಮಾಚಿದೇವಯ್ಯನು ಬಸವನಿಗೆ ನಿರೂಪಿಸಿ, ಆ ಹಾಡುಗಳ ತಿರುಳನ್ನು ತಿಳಿಸಿದನು.

ಆಣುಮೂರ್ತಿ: ಈ ಭಕ್ತನಿಗೆ ದಿನಾಲು ಮೂರು ಹೊತ್ತೂ ಶಿವನನ್ನು ಚಂದನದಿಂದ ಅರ್ಚಿಸುವುದು ನೇಮ. ಅದಕ್ಕಾಗಿ ತನ್ನ ಧನವೆಲ್ಲಾ ಸವೆಯಲು ತನುವನ್ನೇ ತೇದು ತೇದು ಅರ್ಪಿಸಿ ಕೈಲಾಸವನ್ನು ಹೊಂದಿದನು.

ಕಡವಳ ನಂಬಿ: ದಿನಾಲು ಶಿವನಿಗೆ ಸಾವಿರ ದೀಪಗಳನ್ನು ಬೆಳಗುವ ನೇಮದವನು ಈತ. ಧನವೆಲ್ಲ ತೀರಲು ಕೊನೆಗೆ ತನ್ನ ಜಡೆಯನ್ನೇ ಉರಿಸಿ ಶಿವನನ್ನು ಮೆಚ್ಚಿಸಿದನು.

ಗುಗ್ಗುಳ ಕಲಿಯನಾರು: ಶಿವನಿಗೆ ಮಹಿಷಾಕ್ಷಿಧೂಪವನ್ನು ಅರ್ಪಿಸುವ ಭಾಷೆ ಈತನದು. ಆ ವ್ರತಕ್ಕಾಗಿ ಹೆಂಡತಿಯ ಮಂಗಲಸೂತ್ರ ಸಹಿತ ಮಾರಿ

CC-0. Jangamwadi Math Collection. Digitized by eGangotri

ಹೋಯಿತು. ತಿರುಪರಂಧಾಮನೆಂಬ ದೊರೆ ತನ್ನ ಇಷ್ಟದೈವತವಾದ ನಾಗ ನಾಥನು ಒಂದು ಕಡೆ ಕೊಂಕಿರಲು ಚಿಂತೆಗೊಳಗಾಗಿದ್ದನು. ಈ ಭಕ್ತನು ಅವನಲ್ಲಿಗೆ ಹೋಗಿ "ನನಗೆ ಸಾಕಷ್ಟು ಗುಗ್ಗುಳವನ್ನು ಕೊಟ್ಟರೆ ಲಿಂಗವನ್ನು ನೆಟ್ಟಗೆ ಮಾಡುವೆ"ನೆಂದು ಹೇಳಿದನು. ಅರಸನು ಅವನಿಷ್ಟವನ್ನು ಪೂರಯಿಸಲು, ಭಕ್ತನು ಲಿಂಗಕ್ಕೆ ಸೆಲ್ಲೆಯನ್ನು ಸುತ್ತಿ ಈಚೆಯ ಸೆರಗುಗಳಿಗೆ ಅಲಗನ್ನು ಕಟ್ಟಿ ಕತ್ತಿಗೆ ಏರಿಸಿ ಹಿಂದಕ್ಕೆ ನಿಮಿರಿ ಜಗ್ಗತೊಡಗಿದನು. ಶಿವನು ಪ್ರತ್ಯಕ್ಷವಾಗಿ ಅವನಿಗೆ ಅಪವರ್ಗ ಪದವಿಯನ್ನಿತ್ತನು.

ಆರಿವಾಳತಾಂಡಾರಿ: ಈತನು ರಾಜಾನ್ನದಕ್ಕಿಯ ನೇಮಕ್ಕಾಗಿ ಧನವ ನ್ನೆಲ್ಲಾ ಸವೆಸಿದನು. ಅದಕ್ಕಾಗಿ ಕೂಲಿಯನ್ನು ಮಾಡಿದನು. ಮುಂದೆ ಕೂಲಿಯೂ ದೊರೆಯದಾಯಿತು. ಅಂತಿಂತು ದೊರಕಿಸಿದ ಒಂದು ಮಾನಕ್ಕಿಯನ್ನು ತರು ತ್ತಿದ್ದಾಗ ಅವನು ಮುಗ್ಗರಿಸಲು ಬೀಟೆಯಲ್ಲಿ ಬಿದ್ದು ಹಾಳಾಯಿತು. ಆಗ ಭಕ್ತನು ಸಾಯಲು ಬಗೆದು ಕೊರಳನ್ನು ಕೊಯ್ದುಕೊಳ್ಳಲು ಶಿವನು ಅವನಿಗೆ ಪುನರ್ಜನ್ಮ ರಹಿತವಾದ ಪದವಿಯನ್ನಿತ್ತನು.

ಅತಿಭಕ್ತ: ಮೀನುಗಳನ್ನು ಮಾರಿ ಜಂಗಮಕ್ಕೆ ಮಾಡುವವನು. ಬಲೆಯಲ್ಲಿ ಸಿಕ್ಕಿದ ಮೊದಲ ಮೀನನ್ನು ದೇವಾಸವೆಂದು ಬಿಟ್ಟು ಮಿಕ್ಕಿನ ಮೀನುಗಳನ್ನು ಪೇಟೆಗೆ ಒಯ್ಯುತ್ತಿದ್ದನು. ಒಮ್ಮೆ ಮೂರು ದಿನ ಮೀನೇ ಸಿಕ್ಕಲಿಲ್ಲ. ಆಮೇಲೆ ಬಲೆ ಬೀಸಿದರೆ ರತ್ನಾಕ್ಷಿಯ ಹೊನ್ನ ಮೀನುಗಳೇ ಸಿಕ್ಕಿದವು; ಅವನ್ನು ಶಿವ ಮೀನುಗಳೆಂದು ಬಿಟ್ಟುಬಿಟ್ಟನು. ಯಾವ ಹೊಳೆ ಯಾವ ಮಡುವಿಗೆ ಹೋದರೂ ಹೀಗೆಯೇ ಆಯಿತು. ಕೊನೆಗೆ, ಇದೇ ಕೊನೆಯ ಪ್ರಯತ್ನ, ಇನ್ನು ಬಲೆಯ ನ್ನೆತ್ತುವುದಿಲ್ಲವೆಂಬ ಪ್ರತಿಜ್ಞೆಯಿಂದ ಬಲೆ ಬೀಸಿ ಎತ್ತಿದಾಗ ಅದರಲ್ಲಿ ಪ್ರತ್ಯಕ್ಷ ಈಶ್ವರನೇ ಸಿಕ್ಕಿ ಬಂದು ಅವನಿಗೆ ಪ್ರಮಥನಾಥ ಪದವಿಯನ್ನು ಕರುಣಿಸಿದನು.

ಏಣಾದಿನಾಥ: ಈತನೊಬ್ಬ ರಾಜ; ಶಿವಭಕ್ತ. ನೀತಿಯಿಂದ ರಾಜ್ಯವಾಳು ತ್ತಿದ್ದ. ಆಗ ಶತ್ರುಗಳು ಒಬ್ಬನಿಗೆ ಭಕ್ತವೇಷವನ್ನು ಆಳವಡಿಸಿ ದಂಡಿನೊಡನೆ ಅವನ ಮೇಲೆ ಕಳಿಸಿದರು. ಶೂರನಾದ ಏಣಾದಿನಾಥ ಸೈನ್ಯವನ್ನು ಕೊಲ್ಲುತ್ತ ಬಂದು ಎದುರಿನಲ್ಲಿ ಕಪಟ ಶಿವಭಕ್ತನನ್ನು ಕಂಡು ಕರದ ಕರವಾಳವನ್ನು ಬಿಸುಟು ನಮಸ್ಕರಿಸಿದನು. ದಳಪತಿ ಅವನ ಕೊರಳನ್ನು ಇರಿದನು. ಇವನು ಉಮ್ಮಳಿಸದೆ ಮತ್ತೆಯೂ 'ಶಿವನೇ ಶರಣು' ಎಂದನು. ಶಿವನು ಪ್ರತ್ಯಕ್ಷನಾಗಿ ಮೋಕ್ಷವನ್ನಿತ್ತನು.

ಸೇದಿರಾಜ: ರುದ್ರಾಕ್ಷಿಭಸಿತಧಾರಿಗಳನ್ನು ಶಿವನೆಂದೇ ಕಾಣುವ ಮಹಾ ಭಕ್ತ. ಅರಿರಾಜರು ಅವನೊಡನೆ ಕಾದಲಾರದೆ, ಪಂಚಮುದ್ರಾಧಾರಿಗಳಾದ ಹದಿಮೂವರನ್ನು ವಿರಚಿಸಿ ಅವನೆಡೆಗೆ ಕಳಿಸಿದರು. ರಾಜನು ಅವರಿಗೆ ಭಕ್ತಿಯಿಂದ

CC-0. Jangamwadi Math Collection. Digitized by eGangotri

ನಮಸ್ಕರಿಸಿದನು. ಆ ಕಪಟಿಗಳು ಅವನನ್ನು ಇರಿದರು. ಶಿವನು ಪ್ರತ್ಯಕ್ಷವಾಗಿ ಅವನಿಗೆ ನಿತ್ಯಸುಖವನ್ನಿತ್ತನು.

ಕರವೂರ ಜೋಳ: ಇವನೊಮ್ಮೆ ಪರರಾಜರ ಮೇಲೆ ಚತುರಂಗ ಬಲವನ್ನು ಕಳಿಸಿದನು. ಅವರು ವೈರಿಗಳ ರುಂಡವನ್ನು ತರಿದು ತಂದರು. ಅವುಗಳಲ್ಲಿ ಒಂದು ರುಂಡದ ಕೂದಲು ರಕ್ತದಲ್ಲಿ ತೋದು ಒಣಗಿ ಜಡೆಗಟ್ಟಿತ್ತು. ಅದನ್ನು ನೋಡಿ ಜೋಳನು ಇದು ತಪಸಿಯ ಶಿರವೆಂದು ಬಗೆದು ನೊಂದು ತನ್ನ ಶಿರವನ್ನು ಅರಿದುಕೊಂಡು ಶಿವನಿಂದ ಮೋಕ್ಷವನ್ನು ಪಡೆದನು.

ಕಲಿಯಂಬ: ಈ ಭಕ್ತನ ದಾಸಿಯ ಮಗನು ಮನೆಗೆಲಸ ಮಾಡಲಾರದೆ ಬಿಟ್ಟುಹೋಗಿದ್ದವನು ಜಂಗಮವಾಗಿ ಇವನ ಮನೆಗೇ ಬಂದನು. ಭಕ್ತನು ಅವನ ಪಾದಗಳನ್ನು ತೊಳೆಯುವಾಗ ಆಳನ್ನು ಗುರುತಿಸಿದ ಕಲಿಯಂಬನ ಹೆಂಡತಿ "ಈತನು ನಮ್ಮ ತೊತ್ತಿನ ಮಗನಲ್ಲಾ!" ಎಂದು ನೀರೆಯದಾದಳು. ಜಂಗಮದಲ್ಲಿ ಪೂರ್ವಕುಲವನ್ನು ಆರಸಿದ ತಪ್ಪಿಗಾಗಿ ಕಲಿಯಂಬನು ಅವಳ ಕೈಗಳನ್ನು ಕತ್ತರಿಸಿದನು. ಶಿವನು ಮೆಚ್ಚಿ ಅವನಿಗೆ ಗಣಪದವಿಯನ್ನಿತ್ತನು.

ಅವನಿದಾಂಡಾರಿ: ಈತನ ನಿಷ್ಠೆಯನ್ನು ನೋಡುವುದಕ್ಕಾಗಿ ಶಿವನು ಜಂಗಮವಾಗಿ ಬಂದು, ತನ್ನ ಜೋಳಿಗೆ ಲಂಗೋಟಿಗಳನ್ನು ಅವನಲ್ಲಿ ರಕ್ಷಿಸಲು ಇಟ್ಟು ಹೋಗಿ, ಅವನ್ನು ಇಟ್ಟಲ್ಲಿಯೆ ಅದೃಶ್ಯಗೊಳಿಸಿ ತಿರುಗಿ ಬಂದು ಬೇಡಿದನು. ಎಷ್ಟು ಮನೆಮಾಡು ಹುಡುಕಿದರೂ ಆ ವಸ್ತುಗಳನ್ನು ಕಾಣದೆ ಭಕ್ತನು ಅವುಗಳ ತೂಕದ ಹೊಸ ಬಟ್ಟೆ ಕೊಡುವೆನೆಂದನು. ತಕ್ಕಡಿಯಲ್ಲಿ ಒಂದು ಕಡೆ ಜಂಗಮನ ಜೋಳಿಗೆ-ಕೌಪೀನಗಳನ್ನಿಟ್ಟು ಇನ್ನೊಂದು ಕಡೆ ತನ್ನಲ್ಲಿದ್ದ ಬಟ್ಟೆಬರೆಗಳನ್ನಲ್ಲದೆ ಸಕಲ ಸಂಪತ್ತನ್ನಿಟ್ಟು ತೂಗಿದರೂ ಸರಿಬಾರದಿರಲು ಅವನಿದಾಂಡಾರಿ ತಾನೇ ಏರಿದನು. ಆಗ ಶಿವನು ಮೆಚ್ಚಿ ಅವನಿಗೆ ಪ್ರಮಥತ್ವವನ್ನು ಕೊಟ್ಟನು.

ದಂಗುಳಿಯ ಮಾರಯ್ಯ: ಈ ಭಕ್ತನಿಗೆ ಜಂಗಮಕ್ಕೆ ಮಾಡಿ ವಿತ್ತವೆಲ್ಲವೂ ಸವೆದು ದುರ್ದೆಸೆಯುಂಟಾಗಿತ್ತು. ಆಗ ಶಿವನು ಇವನ ಪರೀಕ್ಷೆಗೆಂದು ಜಂಗಮವಾಗಿ ಬಂದನು. ನಟ್ಟಿರುಳು, ಧೋ ಧೋ ಮಳೆ; ನಡುಗುತ್ತಿರುವ ಜಂಗಮನನ್ನು ಕುಳ್ಳಿರಿಸಿ ಗುಡಿಸಲನ್ನೇ ಹಿರಿಹಿರಿದು ಉರಿಹೊತ್ತಿಸಿದನು ಭಕ್ತ. ಜಂಗಮನು ಕಾಸಿಕೊಂಡು ಚಳಿ ಹಿಂಗಿ, ಹಸಿವೆಯೆಂದನು. ಅವನು ನಿನ್ನೆ ಬಿತ್ತಿದ್ದ ಬೀಜಗಳನ್ನೇ ಆಯ್ದು ತಂದು ಬೋನವನ್ನು ಮಾಡಿ ನೀಡಿ ಶಿವನನ್ನೊಲಿಸಿ ಮುಕ್ತಿಗೆ ಸಂದನು.

ಸುರಂಗಗಣನಾಥ: ತನ್ನ ರಾಜ್ಯದಲ್ಲಿ ಭವಿಯೊಬ್ಬನೂ ಉಳಿಯದಂತೆ ಭಕ್ತರನ್ನಾಗಿ ಮಾಡುವ ಭಾಷೆಯವನು. ಉಪದೇಶ ದೃಷ್ಟಗಳಿಗೆ, ಧನಕನಕಾದಿ

CC-0. Jangamwadi Math Collection. Digitized by eGangotri

ಗಳಿಗೆ ಒಲಿಯದಿದ್ದರೆ ಕೊಂದುಬಿಡುವನು. ಅವನ ಭಾಷೆಯನ್ನು ಪರೀಕ್ಷಿಸಲು ಶಿವನು ಒಕ್ಕಲಿಗನಾಗಿ ಬಂದು. "ಬಿಟ್ಟಿ ಬೀಡಾರ ಹೊರೆಗೆ ತೆರೆ ಎಂದು ನಿನ್ನವರು ಕಾಡುತ್ತಾರೆ, ಇದು ಧರ್ಮವೆ?" ಎಂದು ದೂರಿದನು. "ಭಕ್ತನಾಗಿ ಸುಖವಾಗಿ ಇರು" ಎಂದು ಗಣನಾಥನು ಪರಿಪರಿಯಾಗಿ ಹೇಳಿದರೂ ಒಕ್ಕಲಿಗನು ಒಪ್ಪದಿರಲು ಅವನನ್ನು ಕೊಲ್ಲಲುಜ್ಜುಗಿಸಿದನು. ಶಿವನು ಪ್ರತ್ಯಕ್ಷನಾಗಿ "ಏನು ಬೇಕು ಬೇಡಿಕೊ" ಎನ್ನಲು "ನಿನ್ನ ವರ ಬೇಕಾಗಿಲ್ಲ; ಲಿಂಗಧಾರಣೆ ಮಾಡಿಕೋ" ಎಂದು ಶಿವನನ್ನು ಲಿಂಗಧಾರಿಯನ್ನಾಗಿ ಮಾಡಿದನು.

ತಿರುನೀಲಕಂಠ: ಪೊಂಬಟ್ಟಪುಲಿಯೂರಲ್ಲಿ ಎಂದಿನಂತೆ ತಿರುನೀಲಕಂಠ ದೇವರನ್ನು ಪೂಜಿಸಿ ಮರಳಿ ಬರುತ್ತಿದ್ದಾಗ ಒಬ್ಬ ವೇಶ್ಯೆ ನೋಡದೆ ಚೆಲ್ಲಿದ ಎಂಜಲುನೀರು ಈತನ ಮೆಲೇ ಬಿದ್ದಿತು. "ಶಿವ ಶಿವಾ ತಿರುನೀಲಕಂಠಾ!" ಎಂಬ ಅವನ ಧ್ವನಿಯನ್ನು ಕೇಳಿ ಆ ನಾರಿ ಗಾಬರಿಯಿಂದ ಧಾವಿಸಿ ಬಂದು ಅಡಿಗೆರಗಿದಳು. ಒಳಗೆ ಕರೆದೊಯ್ದು ಸ್ನಾನಮಾಡಿಸಿ, ಸುಗಂಧದ್ರವ್ಯಗಳನ್ನು ಲೇಪಿಸಿ ತಪ್ಪನ್ನು ಕ್ಷಮಿಸಿರೆಂದು ಬೇಡಿಕೊಂಡಳು. ಮನೆಗೆ ಬಂದ ಪತಿಯ ಈ ಹೊಸ ಪರಿಯನ್ನು ನೋಡಿ "ಯಾವಳಲ್ಲಿಗೆ ಹೋಗಿದ್ದೆ; ನನ್ನನ್ನು ಮುಟ್ಟಬೇಡ. ಶಿವನಾಣೆ" ಎಂದಳು. ಇಬ್ಬರೂ ಒಬ್ಬರನ್ನೊಬ್ಬರು ಮುಟ್ಟದೆ ಎಂಬತ್ತು ವರುಷಗಳನ್ನು ಕಳೆದರು.

ಒಮ್ಮೆ ಶಿವನು ತಪಸ್ವಿ ವೇಷದಿಂದ ಬಂದು ಇವರ ಭಾಷಾನಿಷ್ಠೆಯನ್ನು ಪರೀಕ್ಷಿಸಿದನು. ಇವರಲ್ಲಿ ಒಂದು ಪಾತ್ರೆಯನ್ನು ಮಡಗಿ ಕೆಲಹೊತ್ತಿಗೆ ತಿರುಗಿ ಒಯ್ಯುವೆನೆಂದು ಹೇಳಿದನು. ತಿರುಗಿ ಬಂದು ಕೇಳಿದಾಗ ಆ ಪಾತ್ರೆ ಮಾಯವಾಗಿತ್ತು. ತಪಸ್ವಿ ರಂಪವೆಬ್ಬಿಸಿದನು. (ಇವರ ಭಾಷೆಯನ್ನರಿತಿದ್ದ ಶಿವನು ಪರಸ್ಪರ ಕೈಹಿಡಿದು ಹೊಂಡದಲ್ಲಿ ಸ್ನಾನ ಮಾಡಿದರೆ ಬಿಡುವೆನೆಂದನು. ಅವರು ಒಪ್ಪದಿರಲು) ತನ್ನ ದಂಡವನ್ನು ಆಚೆ ಈಚೆ ಹಿಡಿಸಿ ಹೊಂಡದಲ್ಲಿ ಮುಳುಗಿಸಿದನು. ಮೇಲಕ್ಕೆದ್ದಾಗ ಅವರು ಮಿಂಡಹರೆಯದವರಾಗಿದ್ದರು. ಶಿವನು ಪ್ರತ್ಯಕ್ಷವಾಗಿ ಮತ್ತೆ ಎಂಬತ್ತು ವರುಷ ಅವರನ್ನು ದಾಂಪತ್ಯಸುಖದಲ್ಲಿರ ಹೇಳಿ ಆ ಬಳಿಕ ಗಣಪದವಿಯಲ್ಲಿರಿಸಿದನು.

ಇತ್ಯಾದಿ ಮಹಾಮಹಿಮ ಭಕ್ತವರರ ಲೆಂಕ ಕಿಂಕರ ಶಿಶು ನಾನೆಂದು ನಂಬಿ ತಿರುಪಾಡು ಹಾಡಿದನು. ವಿಕ್ರಮ ಚೋಳನು ಹೊನ್ನ ಶಿವಾಲಯವನ್ನು ಮಾಡಿದಂತೆ ಮಣಿಮಯ ಶಿವಾಲಯವನ್ನು ಮಾಡಿಸಿದ ಕಲಿಪಾಲ, ತಿರುವಾಕ್ರೀಶನ ಕರುಣದಿಂದ ಪ್ರಾಣನಾಥನ ಇರವನ್ನರಿದು ಅರ್ಚಿಸಿದ ತಿರುಕುರುಪಿ, ರೋಹಿಣಿಯೂ ತಾನೂ ಹರಕೃಪೆಯಿಂದ ಮುಕ್ತಿಗೆ ಸಂದ ತಿರುವೂರ ತಿರು

CC-0. Jangamwadi Math Collection. Digitized by eGangotri

ಮೂಲ, ಸಾವಿರ ಭಕ್ತರಿಗೆ ವಂಚಿಸದೆ ಮಾಡಿ ಮುಕ್ತನಾದ ಚಿರುಪುಲಿಯಾರು, ನಿತ್ಯವೂ ಶಿವನಿಂದ ಪಡಿಯೊಂದು ಹೊನ್ನನ್ನು ಪಡೆದ ಚಿರುತ್ತೊಣೆಯ, – ಇವರೆಲ್ಲರನ್ನು ನಂಬಿ ಹೊಗಳಿದನು. ಆಡಿಗಡಿಗೆ ನಮಿಸುತ್ತ ಒಡೆಯರಿರಾ ನೀವೇ ಗತಿ, ನನ್ನನ್ನು ಕರುಣಿಸಿ ಸಲಹಿರಿ ಎಂದು ಬೇಡಿಕೊಂಡನು. ಮೆರೆಮಿಂಡ ದೇವನು ಅವನನ್ನು ಮನ್ನಿಸಿ, ಅವನ ಮುಂದಿದ್ದ ಶಿವನನ್ನು ವಂದಿಸಿದನು. ಶಿವನು ಭಕ್ತಗಣಸಹಿತವಾಗಿ ಮೆರೆಮಿಂಡದೇವನನ್ನು ತನ್ನ ಪುರಕ್ಕೆ ಕಳುಹಿದನು. ನಂಬಿ ಅಹಂಕಾರವುಳಿದು ಜಂಗಮಶರಣನಾದನು.

ಸಂಧಿ: ೨೭, ೨೮

ಕಿನ್ನರಯ್ಯನ ಕಥೆ

ಪ್ರೂಡೂರಲ್ಲಿ ಕಿನ್ನರ ಬೊಮ್ಮಿದೇವನು ನಾನಾ ಬಗೆಯ ಕಾಯಕಗಳಿಂದ ಗಳಿಸಿ ಜಂಗಮಾರಾಧನೆ ಮಾಡುತ್ತಿದ್ದನು. ಎಲ್ಲ ಧನವೂ ಸವೆಯಲು ದೇವನ ಮುಂದೆ ಕಿನ್ನರ ವೀಣೆಯನ್ನು ಚಮತ್ಕೃತಿಯಿಂದ ಬಾರಿಸಿದನು. ಶಿವನು ಮೆಚ್ಚಿ ಒಂದು ಹೊನ್ನು ಒಂದು ಪಣ ಒಂದು ಹಾಗವನ್ನು ನಿತ್ಯಪಡಿಯಾಗಿ ಕೊಡತೊಡಗಿದನು. ಬಸವನ ಭಕ್ತಿಮಹಿಮೆಯನ್ನು ಕೇಳಿದ ಬೊಮ್ಮಯ್ಯನು ಆತನ ದರುಶನಕ್ಕೆ ಬಂದನು. ಬಸವನು ಆತನನ್ನು ಸತ್ಕರಿಸಿ ಪಾದೋದಕವನ್ನು ಕೊಂಡನು. ಒಂದು ದಿನ ಬೊಮ್ಮಯ್ಯನು ತ್ರಿಪುರಾಂತಕ ದೇವಾಲಯದಲ್ಲಿ ಕುಳಿತಾಗ, ಪರ್ವಕ್ಕಾಗಿ ವೇಶ್ಯೆಯ ಮನೆಗೆ ಕುರಿಯನ್ನು ವಿಟನು ಒಯ್ಯುತ್ತಿದ್ದನು. ಅದು ಹಗ್ಗ ಹರಿದುಕೊಂಡೋಡಿ ಗುಡಿಯನ್ನು ಹೊಕ್ಕಿತು. ವಿಟನು ಹಿಡಿಯ ಹೋಗಲು ಬೊಮ್ಮಯ್ಯನು "ಮೊರೆಹೊಕ್ಕುದನ್ನು ಕೊಡುವುದಿಲ್ಲ" ಎಂದನು. ಇಬ್ಬರಲ್ಲಿಯೂ ವಾಗ್ವಾದವಾಗಿ ಕೊನೆಗೆ ಬೊಮ್ಮಯ್ಯನು ಸಾವಿರ ಹೊನ್ನು ಬೆಲೆ ತೆತ್ತು ಅದನ್ನು ಬಿಡಿಸಿಕೊಂಡನು. ವಿಟನು ಬೇರೊಂದು ಕುರಿಯನ್ನು ಕೊಂಡು ಕೊಂಡು ಹೋದನು. ನಡೆದ ಸಂಗತಿಯನ್ನರಿತ ಅವಳು ಆತನನ್ನು ಧಿಕ್ಕರಿಸಿ ಮೊದಲು ಗೊತ್ತಾದ ಆ ಕುರಿಯೇ ಬೇಕೆಂದು ಹಿಂದಕ್ಕಟ್ಟಿದಳು. ವಿಟನು ಆ ಕುರಿಯನ್ನು ಹಿಡಿಯ ಬಂದನು. ಬೊಮ್ಮಯ್ಯನು ವಿರೋಧಿಸಿದನು. ಜಗಳದಲ್ಲಿ ಅವನು ಕೋಪದಿಂದ ವಿಟನನ್ನು ಹೊಡೆದು ಕೊಂದನು.

ವಿಟನ ಸಂಬಂಧಿಗಳು ಅರಸನಲ್ಲಿ ದೂರಿದರು. ಅರಸನು ಬಸವಣ್ಣನ ಮೊಗವನ್ನು ನೋಡುತ್ತ "ನಿನ್ನ ಭಕ್ತರ ಉಪಟಳ, ಅನ್ಯಾಯ ಹೆಚ್ಚಿಹೋಯಿತು. ಸಾಕು, ನೀನೇ ರಾಜ್ಯವಾಳಿಕೋ" ಎಂದು ಕೋಪದಿಂದ ನುಡಿದನು. ಬಸವನು ನಸುನಗುತ್ತ, "ತುದಿಮೊದಲನ್ನರಿಯದೆ ಹೀಗಾಡದಿರು; ಶಿವಸಮಾನ ಕಿನ್ನ

CC-0. Jangamwadi Math Collection. Digitized by eGangotri

ರಯ್ಯನು ಸುಮ್ಮಸುಮ್ಮನೆ ಹೀಗೆ ವರ್ತಿಸಿರಲಾರನು. ನಿನ್ನ ಜನವನ್ನು ಕಳುಹಿ ತಿಳಿದುಕೋ" ಎಂದೆನ್ನಲು ಅರಸನು ಅಮಾತ್ಯರನ್ನು ಕಳಿಸಿದನು. "ವಿಟನು ಬೆಲೆ ತೆಗೆದುಕೊಂಡು ಮಾರಿಹೋಗಿಯೂ ಮತ್ತೆ ಅದನ್ನು ಒಯ್ಯಲು ಬಲಾತ್ಕರಿಸಿ ದುದರಿಂದ ಅವನನ್ನು ಶಿಕ್ಷಿಸಿದೆನು. ಇದಕ್ಕೆ ತ್ರಿಪುರಾಂತಕನಿಂದಲೇ ಸಾಕ್ಷಿ ನುಡಿಸು ವೆನು. ಅರಸನನ್ನು ಕರೆತನ್ನಿ" ಎಂದು ಬೊಮ್ಮಯ್ಯನೆಂದನು. ಅರಸನು ಬಂದನು. ಎಲ್ಲರೆದುರು ಅವನು 'ತ್ರಿಪುರಾಂತಕಾ' ಎಂದು ಕೂಗಲು ದೇವನು 'ಓ' ಎಂದು ಪಡಿದನಿಗೊಟ್ಟನು. ಕೂಡಲೆ ಪ್ರಳಯ ಉತ್ಪಾತಗಳು ತೋರಿದವು; ಜನರು ಭಯಭೀತರಾದರು. ಲೋಕಹಿತಾರ್ಥವಾಗಿ ಬಸವಣ್ಣನು ಕಿನ್ನರಯ್ಯನ ಅಡಿ ಗೆರಗಿ 'ಕರುಣಿಸು' ಎಂದು ಪ್ರಾರ್ಥಿಸಿದನು. ತ್ರಿಪುರಾಂತಕನ ಮೊಗವನ್ನು ನೋಡಿ 'ಸಾಕು ಮಾಣಿಸು' ಎಂದು ಕಿನ್ನರಯ್ಯನು ಎಂದೊಡನೆ ಎಲ್ಲವೂ ಶಾಂತವಾಯಿತು. ಅರಸನೂ ನೆರೆದವರೂ ಆತನ ಮಹಿಮೆಯನ್ನು ಕೊಂಡಾಡಿದರು.

ಕಲಕೇತ ಬೊಮ್ಮಯ್ಯನ ಕಥೆ

ಕಲಕೇತ ಬೊಮ್ಮಯ್ಯನು ಹಾಸ್ಯಗಾರ ವೇಷವನ್ನು ಕಟ್ಟಿ ಭಕ್ತರ ಮನೆ ಮನೆಗೆ ಹೋಗಿ ನಗಿಸಿ ತಣಿಸುವ ಕಾಯಕದವನು. ಅದರಿಂದ ದಿನಾಲು ಹೆಚ್ಚು ಕಡಿಮೆಯಿಲ್ಲದೆ ಇಬ್ಬಳವನ್ನು ಗಳಿಸಿ ಜಂಗಮಾರಾಧನೆ ನಡೆಸುತ್ತಿದ್ದನು. ಒಮ್ಮೆ ಒಬ್ಬ ಭಕ್ತನು ಕಿನ್ನರಯ್ಯನ ದರ್ಶನಕ್ಕೆ ಹೊರಟವನು ದಣಿದು ಬಳಲಿ ಕಲಕೇತ ಬೊಮ್ಮಯ್ಯನ ಮನೆಯ ಮುಂದೆ ದೊಪ್ಪೆಂದು ಕುಳಿತನು. "ಅಯ್ಯಾ, ಕಿನ್ನರಯ್ಯನ ಮನೆ ಇನ್ನೂ ಎಷ್ಟು ದೂರ? ಆತನಿಂದ ನಮ್ಮ ಬಡತನವನ್ನು ಕಳೆದುಕೊಳ್ಳ ಲೆಂದು ಹೊರಟಿದ್ದೇನೆ" ಎಂದು ಕಲಕೇತನನ್ನು ಕೇಳಿದನು. ಅದಕ್ಕೆ ಅವನು ನಸುನಕ್ಕು "ಆ ಕೈಕೂಲಿಕಾರನ ವಿಷಯ ನನ್ನ ಮುಂದೆ ಹೇಳಬೇಡ. ಬೆಲೆಗೆ ಕೆಲಸ ವನ್ನು ಮಾಡುವವನನ್ನು, ಫಲಕ್ಕಾಗಿ ಪೂಜಿಸುವವನನ್ನು ಏನು ಹಚ್ಚೀಯೆ! ಅವನು ನಿಧಿಯನ್ನು ಕೊಡುತ್ತಾನೆಯೆ? ಅಷ್ಟು ದೂರ ಏನು ಹೋಗುವೆ? ಇಲ್ಲಿಯೇ ನಾನು ಬೇಕಾದಷ್ಟು ಕೊಡುತ್ತೇನೆ" ಎಂದು ಕಲ್ಲುಗಳನ್ನು ಬಡಿಗೆಯಿಂದ ಬಡಿ ಯಲು ಹೊನ್ನುಗಳ ರಾಸಿಯಾಗಿ ಕಂಗೊಳಿಸಿತು. ಭಕ್ತನು ಸಾನಂದಾಶ್ಚರ್ಯ ದಿಂದ ಬೇಕಾದಷ್ಟನ್ನು ಬಟ್ಟೆಯಲ್ಲಿ ಮೊಟ್ಟೆಕಟ್ಟಿ ಹೊತ್ತುಕೊಂಡು ನಡೆದನು.

ದಾರಿಯಲ್ಲಿ ಬಸವಣ್ಣನ ಮನೆಯ ಮುಂದೆ ಭಾರವನ್ನು ಇಳಿಸಿ ಕಲ ಕೇತಯ್ಯನ ವಿಷಯವನ್ನೆಲ್ಲ ವಿವರಿಸಿ "ಆತನು ಕೊಟ್ಟಿರುವುದನ್ನು ತನಗೊಬ್ಬನಿಗೇ ಹೊರಲಾಗುವುದಿಲ್ಲ. ಒಂದು ಆಳನ್ನು ಕೊಡು" ಎಂದು ಕೇಳಿದನು. ಆ ಭಕ್ತನಿಗೆ ನೆರವನ್ನು ಕೊಟ್ಟು ಬಸವನು ಕಲಕೇತಯ್ಯನಲ್ಲಿಗೆ ಬಂದು ಪೊಡಮಟ್ಟು

CC-0. Jangamwadi Math Collection. Digitized by eGangotri

ಸ್ತುತಿಸಿದನು. ಏವನಿಂದ ಪಡಿಯನ್ನು ಪಡೆಯುತ್ತಾನಂತೆ, ಜನರಿಗೆ ರಾಶಿ ರಾಶಿ ಕೊಡುತ್ತಾನಂತೆ; ಅವನ ಭಕ್ತಿಯೆ ಭಕ್ತಿಯಲ್ಲದೆ ನಮ್ಮದೇತರ ಭಕ್ತಿ? ನಾವು ಇಷ್ಟು ಪೂಜಿಸಿಯೂ ಒಂದು ವೀಸವನ್ನೂ ಪಡೆಯಲಿಲ್ಲವೆಂದು ಕಿನ್ನರಯ್ಯನನ್ನು ಹಾಸ್ಯಮಾಡಿ "ಆತನಿಗೆ ಹೇಳು: ಇಲ್ಲಿ ಬೇಕಾದಷ್ಟು ಧನವಿದೆ, ಒಯ್ಯಲಿ" ಎಂದು ಕಲಕೇತನೆಂದನು. ಅವನು ಮುಟ್ಟಿದ ಮಣ್ಣಿನ ಗುಡ್ಡೆ ಹೊನ್ನಿನ ರಾಶಿಯಾಯಿತು. ಇದನ್ನು ತಿಳಿದು ಕಿನ್ನರಯ್ಯನು ಭಯದಿಂದ ನಡುಗಿ ಓಡಿ ಬಂದು ಕಲಕೇತನ ಕಾಲಮೇಲೆ ಬಿದ್ದನು; ಅಹಂಕಾರವುಡುಗಿ ಕ್ಷಮಿಸಿ ಸಲಹಬೇಕೆಂದು ಬೇಡಿದನು. ಕಲಕೇತನು ಆತನನ್ನು ಮನ್ನಿಸಿದನು.

ಸಂಧಿ : ೨೯

ಮೋಳಿಗೆ ಮಾರಯ್ಯನ ಕಥೆ

ಮೋಳಿಗೆ ಮಾರಯ್ಯನು ಕಟ್ಟಿಗೆ ಮಾರುವ ಕಾಯಕದಿಂದ ಗಳಿಸಿ ಜಂಗಮಾರಾಧನೆ ಮಾಡುವವನು. ಬಸವನರಮನೆಯಲ್ಲಿ ರಸರಸಾಯನಗಳನ್ನು ಭುಂಜಿಸಿ ತಣಿಯದ ಜಂಗಮರು ಇಲ್ಲಿಯೂ ಒಪ್ಪೊತ್ತು ಆರೋಗಿಸುವರು. ಅವರು ಬಸವಣ್ಣನಲ್ಲಿ ಆತನನ್ನು ಹೊಗಳಿ "ಅಲ್ಲಿಯ ತಿಳುವಾದ ಅಂಬಲಿ ನಿನ್ನ ರಸರಸಾನ್ನಕ್ಕೆ ಸರಿ" ಎಂದು ನುಡಿದರು. ಬಸವಣ್ಣನು ಭದ್ಮವೇಷದಿಂದ ಅವರ ಮನೆಗೆ ಹೋದನು. ಆತನಿರಲಿಲ್ಲ. ಆತನ ಹೆಂಡತಿ ಬಸವಣ್ಣನ ಲಿಂಗಪೂಜೆಗೆ ಅಣಿಮಾಡಿದಳು; ಇದ್ದುದನ್ನು ಬಡಿಸಿದಳು. ಅವನು ಬರುವಾಗ ಎರಡು ಸಾವಿರ ಹೊನ್ನುಗಳ ಹಮ್ಮಿಣಿಯನ್ನು ಗೊತ್ತಾಗದಂತೆ ಇರಿಸಿ ಬಂದನು. ಕೆಲಹೊತ್ತಿನಲ್ಲಿ ಮಾರಯ್ಯನು ಬಂದು ಬಚ್ಚಲುಮನೆಗೆ ಹೋಗುವಾಗ ಹೊನ್ನ ಜಾಳಿಗೆಗಳನ್ನು ಕಂಡು "ಯಾರು ಬಂದಿದ್ದರು?" ಎಂದು ಮಡದಿಯನ್ನು ಕೇಳಿದನು. ಅವಳು ನಡೆದುದನ್ನು ಅರುಹಲು ಬಂದವನು ಬಸವನೇ ಎಂದು ಮಾರಯ್ಯನು ಗ್ರಹಿಸಿದನು. ದಯಾಮಯನಾದ ಆತನು ಇಲ್ಲಿಯವರೆಗೆ ಬಂದು ಅನುಗ್ರಹಿಸಿದನಲ್ಲಾ, ತಾನು ಧನ್ಯನು ಎಂದು ಬಗೆದನು. ಆದರೆ ತನ್ನ ಕಾಯಕಲಬ್ಧಿಯಲ್ಲಿಯೆ ಇರುವೆನಲ್ಲದೆ ಇಂತಹ ಹೆಮ್ಮೆಯನ್ನರಿಯೆನೆಂದುಕೊಂಡು, ಇಬ್ಬರು ಜಂಗಮರಿಗೆ ಹೊನ್ನ ಜಾಳಿಗೆಗಳನ್ನು ಕೊಟ್ಟು ಅರ್ಚಿಸಿ ಪಾದೋದಕವನ್ನು ಕಟ್ಟಿಗೆಯ ಹೊರೆಯ ಮೇಲೆ ಚಿಮುಕಿಸಿದನು. ಅವೆಲ್ಲ ಚಿನ್ನದ ಕಟ್ಟಿಗೆಗಳಾದವು. ಅವನ್ನು ಕಡಿಕಡಿದು ಜಂಗಮರಿಗೆ ಹಂಚಿಬಿಟ್ಟನು. ಇದನ್ನು ಕೇಳಿದ ಬಸವರಸನು ಗಾಬರಿಯಿಂದ ಓಡಿ ಬಂದು ಮಾರಯ್ಯನಿಗೆ ವಂದಿಸಿ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡನು.

CC-0. Jangamwadi Math Collection. Digitized by eGangotri

ಸಂಧಿ : ೩೦

ಕನ್ನದ ಬೊಮ್ಮಯ್ಯನ ಕಥೆ

ಕನ್ನದ ಬೊಮ್ಮಿದೇವನು ಕನ್ನವಿಕ್ಕಿ ಮನೆಮನೆ ಹೊಕ್ಕು, ಭಕ್ತರ ಮನೆಯಾಗಿದ್ದರೆ ಅವರನ್ನು ಎಚ್ಚರಿಸಿ ತನ್ನ ಹೆಸರು ಹೇಳಿ ಹೋಗುವುದು; ಭವಿಗಳ ಮನೆಯಾಗಿದ್ದರೆ ಧನವನ್ನು ಕದ್ದೊಯ್ದು ಜಂಗಮಕ್ಕೆ ಮಾಡುವನು. ಹೀಗಿರಲು ಒಮ್ಮೆ ಬಹಳ ಜನ ಜಂಗಮರು ಬರಲು ದೊರೆಯ ಮನೆಗೇ ಕನ್ನವಿಕ್ಕಬೇಕೆಂದು ತೆರಳಿದನು. ಬಸವಣ್ಣನು ದಾರಿಯಲ್ಲಿ ಎದುರಾದನು. "ನಡೆ, ಬಿಜ್ಜಳನ ಭಂಡಾರವನ್ನು ತೋರಿಸು" ಎಂದು ಬೊಮ್ಮಿದೇವನು ಅವನನ್ನು ಕರೆದೊಯ್ದನು. ಭಕ್ತ ಪ್ರೇಮಿ ಬಸವನು ಭಂಡಾರವನ್ನು ತೋರಿಸಲು ಅವನು ಅಗಳಿಗನ್ನವನ್ನಿಕ್ಕಿ ಪೆಟ್ಟಿಗೆಗಳ ಧನವನ್ನು ಒಯ್ದನು. ಕನ್ನದಿಂದ ಸುರಿದ ಮಣ್ಣಿಲ್ಲವೂ ಹೊನ್ನಾಗಿದ್ದಿತು. ಬಿಜ್ಜಳನು "ಬಸವಣ್ಣನು ಇಷ್ಟು ಸೊಕ್ಕಿದನೆ? ವಿಶ್ವಾಸಿಯೆಂದು ಅಧಿಕಾರ ಕೊಟ್ಟುದಕ್ಕೆ ಭಂಡಾರಕ್ಕೆ ಹಗಲುಗನ್ನವನ್ನಿಕ್ಕಿಸಿದನೇ?" ಎಂದು ಕಿಡಿಕಿಡಿಯಾಗಿ ಬಂದನು. ಬಾಗಿಲಲ್ಲಿಯೆ ರಾಶಿಯಾಗಿ ಬಿದ್ದಿದ್ದ ಬಂಗಾರವನ್ನು ನೋಡಿ ಬೆರಗುವಡೆದು ನಿಂತನು; ಅವನ ಕೋಪವು ಜರ್ರನೆ ಇಳಿಯಿತು. "ಇದೇನು ಅದ್ಭುತ! ಕಳ್ಳನು ಯಾರು?" ಎಂದು ಬಸವಣ್ಣನನ್ನು ಕೇಳಿದನು. ಆಗ ಆತನು ನಡೆದುದನ್ನು ವಿವರಿಸಿ ಕನ್ನದ ಬೊಮ್ಮಿದೇವನ ಮಹತಿಯನ್ನು ಹೊಗಳಿದನು. ಬೊಕ್ಕಸದ ಧನವನ್ನೂ ಹೊತ್ತಗೆಯ ಲೆಕ್ಕವನ್ನೂ ತೋರಿಸಿದನು. ಲೆಕ್ಕಕ್ಕಿ ಇಮ್ಮಡಿಯಾಗಿಯೆ ಧನವಿದ್ದುದನ್ನು ಕಂಡು ಬಿಜ್ಜಳನು ಬೆಕ್ಕಸಬೆರಗಾದನು.

ಸಂಧಿ : ೩೧

ಮುಸುಟೆ ಚವುಡಯ್ಯನ ಕಥೆ

ಸತ್ತ ಗೂಳಿ ತಪಸ್ವಿ ಭಕ್ತರುಗಳಿಗೆ ಜೀವನವನ್ನಿತ್ತ ಬಿರುದಿನ ಚೌಡಯ್ಯ ಮುಸುಟೆ ಗ್ರಾಮದಿಂದ ಬಸವಣ್ಣನ ದರ್ಶನಕ್ಕೆ ಬಂದನು. ಒಂದು ದಿನ ಆತನು ಮದುವೆಗೆಂದು ಪರವೂರಿಗೆ ಹೊರಟಿದ್ದನು. ಒಬ್ಬ ತಪಸ್ವಿಯ ಶವವು ಇದಿರಿಗೆ ಬಂದಿತು. ಆ ತಪಸ್ವಿಯ ಹರಕೆಯನ್ನು ಪಡೆಯದೆ ಹೋಗುವುದು ಉಚಿತವಲ್ಲೆಂದು "ಶರಣು ಶರಣಾರ್ಥಿ" ಎಂದು ವಂದಿಸಿದನು. ಕೂಡಲೆ ತಪಸ್ವಿ ಜೀವಂತನಾಗಿ ವಿಮಾನದಿಂದ ಧುಮ್ಮಿಕ್ಕಿ ನಿಬ್ಬಣದೊಡನೆ ಮದುವೆಗೆ ಹೊರಟನು.

ಮುಂದೆ ಒಂದು ಆಲದ ಮರವಿತ್ತು. ಅದನ್ನು 'ಬಸವನ ಆಲ' ಎಂದು ಕರೆಯುತ್ತಿದ್ದರು. ಅಲ್ಲಿ ಆಡುತ್ತಿದ್ದ ಹುಡುಗರನ್ನು "ಇದಕ್ಕೆ ಈ ಹೆಸರೇಕೆ

CC-0. Jangamwadi Math Collection. Digitized by eGangotri

ಬಂದಿತು?" ಎಂದು ಚೌಡಯ್ಯನು ಕೇಳಲು ಅವರು ಹೇಳಿದರು: "ನಮ್ಮ ಹಿರಿಯರು ಹೇಳುತ್ತಾರೆ: ಎರಡು ಗೊಳಿಗಳು ಕಾದಾಡಿ ಒಂದು ಇಲ್ಲಿ ಸತ್ತಿತು. ಅದನ್ನು ಹೂಳಿದಲ್ಲಿ ಈ ಮರ ಹುಟ್ಟಿ ಬಸವನಾಳ ಎನಿಸಿತು." ಆಗ ಚವುಡಯ್ಯನು "ಏಳು ಬಸವಾ, ಎದ್ದು ಬಾ" ಎಂದು ಕೂಗಿದನು. ಕೂಡಲೇ ಯಾವ ಕಾಲದಲ್ಲಿಯೋ ಮಡಿದಿದ್ದ ಬಸವನು ಮರವನ್ನು ಸೀಳಿಕೊಂಡು ಬಂದು ಡುರಿಕೆ ಹಾಕುತ್ತ ನಿಬ್ಬಣದೊಡನೆ ಹೊರಟಿತು.

ಮುಂದೆ ಇದ್ದೊರೆ ಎಂಬ ಹೆದ್ದೊರೆ ಸೂಸಿ ಹರಿಯುತ್ತಿದ್ದಿತು. ಚವುಡಯ್ಯನು "ದಾರಿ ಬಿಡು" ಎಂದು ಖಡ್ಗವನ್ನೆತ್ತಿ ಜಡಿದನು. ನದಿ ಇಬ್ಬಗಿಯಾಗಿ ದಾರಿಯನ್ನು ಕೊಡಲು ನಿಬ್ಬಣವು ಮುಂದೆ ಸಾಗಿತು.

ಮದುವೆಯನ್ನು ಮುಗಿಸಿಕೊಂಡು ಕಲ್ಯಾಣಕ್ಕೆ ಬಂದಾಗ ಜನರು ಚವುಡಯ್ಯನನ್ನು ಸಂಭ್ರಮದಿಂದ ಇದಿರ್ಗೊಂಡರು. ತನಗೆ ನಮಿಸಿದ ಒಬ್ಬ ನಾರಿಯನ್ನು 'ದೀರ್ಘಾಯುಷಿಯಾಗು' ಎಂದು ಅವನು ಹರಸಿದನು. ಮರುದಿನವೇ ಆಕೆ ಸಾಯಲು ತಾಯಿತಂದೆಗಳು ಹೆಣದೊಂದಿಗೆ ಬಂದು "ನಿನ್ನೆ ನೀವು ಹರಸಿದ ಮಗಳು ಸತ್ತುಹೋದಳು. ಕರುಣಿಸಿ ಕಾಯಿರಿ" ಎಂದು ಮೊರೆಯಿಟ್ಟರು. ಅವನು ಕರುಣಿಸಿ 'ಏಳೇಳೆ'ಂದು ಸಿದಿಗೆಯನ್ನು ಮುಟ್ಟಲು ಆದರ ಕಟ್ಟುಗಳೆಲ್ಲಾ ಹರಿದು ಆ ಸತಿ ನಿದ್ದೆಯಿಂದೆದ್ದಳೆಂಬಂತೆ ಎದ್ದು ಚವುಡಯ್ಯನಿಗೆ ನಮಿಸಿದಳು.

ಹೀಗೆ ಹೆಚ್ಚುತ್ತಿರುವ ಆತನ ಮಹಿಮೆ ಪರಸಮಯಿಗಳಿಗೆ ಸಹಿಸದಾಯಿತು. ಅವರು ಗೋಣಿಯ ಮೂರ್ತಿಯನ್ನು ರಚಿಸಿ ವಿಭೂತಿರುದ್ರಾಕ್ಷಿಗಳನ್ನು ಧರಿಸಿ ವಿಮಾನದಲ್ಲಿರಿಸಿ ಮಸಣಕ್ಕೆ ಒಯ್ಯುವ ಕಪಟವನ್ನು ಹಮ್ಮಿದರು. ಹೆಣವು ಚವುಡಯ್ಯನ ಬೀದಿಯಲ್ಲಿ ಹಾಯುತ್ತಿರಲು ಆತನು ಕಂಡು ಕೃತಕ ಶವವೆಂದು ಅರಿತೂ ಸಿದಿಗೆಯ ಹತ್ತಿರಕ್ಕೆ ಧಾವಿಸಿ, ಏಳೇಳೆಂದು ಕೈಹಿಡಿದೆಳೆದನು. ಗೋಣಿಯ ಮೂರ್ತಿ ಸುಂದರ ತನುವಾಗಿ ಜೀವ ತುಂಬಿ ಧುಮ್ಮಿಕ್ಕಿ ಬಂದು ಚವುಡಯ್ಯನ ಪಾದಗಳಿಗೆ ಎರಗಿತು. ಆತನನ್ನು ಭಕ್ತನನ್ನಾಗಿ ಮಾಡಿ, ಭಯ-ಪಶ್ಚಾತ್ತಾಪದಿಂದ ಶರಣೆಂದ ಕಪಟಿಗಳಿಗೆ ಅಭಯವನ್ನಿತ್ತು ಮನ್ನಿಸಿದನು.

ಸಂಧಿ : ೩೨

ಸುರಗಿ ಚೌಡಯ್ಯನ ಕಥೆ

ಸುರಗಿ ಚವುಡಯ್ಯನೆಂಬ ಭಕ್ತನು ಕಲ್ಯಾಣ ಕಟಕದಲ್ಲಿ ಜಂಗಮಾರಾಧಕನಾಗಿದ್ದನು. ಶಿವನು ಕರಿಕಾಲ ಚೋಳನಲ್ಲಿ ಕೈಯಾರೆ ಉಂಡಂತೆ, ಚಿನ್ನಯ್ಯನಲ್ಲಿ ಅಂಬಲಿಯನ್ನು ಸುರಿದಂತೆ, ಚೋಳಾದೇವಿಯ ಅಡಿಗೆಯನ್ನು ಆರೋಗಿಸಿದಂತೆ

CC-0. Jangamwadi Math Collection. Digitized by eGangotri

ಸುರಗಿ ಚವುಡಯ್ಯನಲ್ಲಿ ಆತನು ತುತ್ತು ಮಾಡಿ ಉಣಿಸುವುದನ್ನು ಅತ್ಯಂತ ಸವಿಮಾಡಿಕೊಂಡು ಉಣ್ಣುತ್ತಿದ್ದನು.

ಸಂಧಿ: ೩೩

ತೆಲುಗು ಬೊಮ್ಮಯ್ಯನ ಕಥೆ

ಶ್ರೀಶೈಲದ ವನಪ್ರದೇಶದಲ್ಲಿ ಒಬ್ಬಯ್ಯನು ತಪಸ್ಸು ಮಾಡುತ್ತಿದ್ದನು. ವಿಹಾರಾರ್ಥವಾಗಿ ಅಲ್ಲಿಗೆ ಬಂದಿದ್ದ ಗಂಧರ್ವಸ್ತ್ರೀ-ಪುರುಷರು ಆತನನ್ನು ನೋಡಿ 'ಅದೇನು, ದೊಡ್ಡ ಬಂಡೆಯೋ ಕರಡಿಯೋ ನೋಡಿ' ಎಂದು ನಗೆಯಾಡಿದರು. ತಪಸ್ವಿಯ ಶಿಷ್ಯನು ಅದನ್ನು ಕೇಳಿ "ಭೂಲೋಕದಲ್ಲಿ ಮೃಗಗಳಾಗಿ ಜನಿಸಿರಿ" ಎಂದು ಗಂಧರ್ವರಿಗೆ ಶಾಪವಿತ್ತನು. ಅವರು ಪಶ್ಚಾತ್ತಾಪದಿಂದ ವಂದಿಸಿ ತಮ್ಮ ಉಶ್ಶಾಪವೆಂದಿಗೆಂದು ಬೆಸಗೊಂಡರು. ತೆಲುಗ ಬೊಮ್ಮಯ್ಯನ ಕೈಯಿಂದ ಮರಣವಾಗಲು ಶಾಪವಿಮೋಚನೆಯೆಂದು ಶಿಷ್ಯನು ಉಸುರಿದನು. ಗಂಧರ್ವರು ಕಲ್ಯಾಣದ ಬಳಿಯ ಅಡವಿಯಲ್ಲಿ ಮೃಗಗಳಾಗಿ ಜನಿಸಿದರು.

ಕಲ್ಯಾಣದಲ್ಲಿರುತ್ತಿದ್ದ ತೆಲುಗ ಬೊಮ್ಮಯ್ಯನೆಂಬ ಭಕ್ತನು ಪತ್ರಿಗಾಗಿ ಅಡವಿಗೆ ಹೋಗಿರಲು ಮೃಗಗಳೆಲ್ಲಾ ಅವನನ್ನು ಮುತ್ತಿದವು. "ನಾವು ಗಂಧರ್ವರು; ಮುನಿಶಾಪದಿಂದ ಮೃಗಗಳಾಗಿದ್ದೇವೆ; ನಿನ್ನ ಕೈಯಲ್ಲಿ ಮರಣವಾದರೆ ನಮಗೆ ವಿಮೋಚನೆ" ಎಂದು ಒಂದು ಮೃಗವು ಹೇಳಿತು. ಬೊಮ್ಮಯ್ಯನು ಮರುದಿನ ಅವುಗಳ ಬೇಟೆಯಾಡಿದನು. ಮೃಗಗಳು ನಾಯಿಗಳಿಗೆ ಸಿಕ್ಕದೆ, ಮಿಕ್ಕ ಬೇಡರ ಬಾಣಗಳನ್ನು ತಪ್ಪಿಸಿಕೊಳ್ಳುತ್ತ ಬೊಮ್ಮಯ್ಯನ ಬಾಣಗಳಿಗೆ ಸಾಯುತ್ತ ಪೂರ್ವರೂಪಗಳನ್ನು ಹೊಂದಿ ಅವನನ್ನು ನುತಿಸುತ್ತ ಗಂಧರ್ವಲೋಕವನ್ನು ಸೇರಿದವು.

ಸಂಧಿ: ೩೪

ಜಂಗಮಪ್ರಾಣಿ ಬಸವಣ್ಣ

ಬಸವಣ್ಣನು ಒಮ್ಮೆ ಯೋಗನಿದ್ರಾಮುದ್ರೆಯಲ್ಲಿ ಪರವಶನಾಗಿದ್ದಾಗ ಹೊಸ ಜಂಗಮನೊಬ್ಬನು ದರುಶನಕ್ಕೆ ಬಂದನು. ದ್ವಾರಪಾಲಕರಿಂದ ಬಸವಣ್ಣನು ಯೋಗಮುದ್ರೆಯಲ್ಲಿರುವುದನ್ನು ತಿಳಿದು ಅವನು ಹಾಗೆಯೆ ತಿರುಗಿ ಹೋದನು. ಕೂಡಲೆ ಬಸವಣ್ಣನ ಪ್ರಾಣವು ಅವನೊಡನೆಯೇ ಹೊರಟು ಹೋಯಿತು. ಶಿವಭಕ್ತರು ನೆರೆದು ಹೀಗಾಗಲು ಕಾರಣವೇನೆಂದು ಯೋಚಿಸಿ,

CC-0. Jangamwadi Math Collection. Digitized by eGangotri

ಜಂಗಮನೊಬ್ಬನು ಬಂದು ಮರಳಿ ಹೋದನೆಂಬುದನ್ನು ತಿಳಿದರು. ಹಾಗಾದರೆ ಬಸವಣ್ಣನ ಜಂಗಮಪ್ರಾಣತ್ವವೇ ಕಾರಣವೆಂದು ನಿಶ್ಚಯಿಸಿ ಊರೆಲ್ಲ ಹುಡುಕಿ ಆ ಜಂಗಮನನ್ನು ಕರೆತಂದರು. ಆಗ ಆತನೊಂದಿಗೆ ಬಸವಣ್ಣನ ಪ್ರಾಣವೂ ಮರಳಿತು.

ಸಂಧಿ: ೩೫

ಮಾಚಯ್ಯನು ಕಿನ್ನರಯ್ಯನ ಹರಣವನ್ನು ಪಡೆದ ಕಥೆ

ಬಸವಣ್ಣನ ಜಂಗಮಪ್ರಾಣತ್ವದ ಭಾಷೆಯನ್ನು ಪರಿಕಿಸಲೆಂದು ಶಿವನು ಕಿನ್ನರಯ್ಯನ ಪ್ರಾಣವನ್ನೊಯ್ದನು. ಆತನ ಅಂತ್ಯವಿಧಿಗಾಗಿ ಬಸವಣ್ಣನೂ ಭಕ್ತ ಸಮೂಹವೂ ಕೂಡಿತು. ಮಡಿವಾಳ ಮಾಚಯ್ಯ ಬಂದಿರಲಿಲ್ಲ. ಆತನನ್ನು ಕರೆತರಲು ಪಡಿಹಾರಿ ಬಾಚಯ್ಯನನ್ನು ಕಳುಹಿಸಿದರು. ಅವನಿಂದ ಪ್ರಸ್ತುತವನ್ನರಿದು, ಬಸವಣ್ಣನೂ ಸಾಮಾನ್ಯರಂತೆ ಅಳುವುದನ್ನು ಕೇಳಿ ಮಾಚಯ್ಯನು ಕುಪಿತನಾದನು. "ಇವನೇ ಜಂಗಮಪ್ರಾಣಿ ಬಸವಣ್ಣನೊ! ಅವನಿದ್ದಲ್ಲಿ ನಾನು ಬಾರೆನು" ಎಂದು ಹೇಳಿಕಳಿಸಿದನು. ಇದನ್ನು ಕೇಳಿ ಎಚ್ಚರುಗೊಂಡ ಬಸವಣ್ಣನ ಪ್ರಾಣಪಕ್ಷಿ ಹಾರಿಹೋಯಿತು. ಆಗ ಮಾಚಯ್ಯನು ಬಂದು ಶಿವನಿಂದ ಇಬ್ಬರ ಪ್ರಾಣಗಳನ್ನೂ ಪಡೆದನು.

ಸಂಧಿ: ೩೬

ಮಾಚಯ್ಯನು ಮೇದರ ಕೇತಯ್ಯನ ಹರಣವನ್ನು ಪಡೆದ ಕಥೆ

ಬಸವರಾಜನ ಜಂಗಮಪ್ರಾಣಿಯೆಂಬ ಭಾಷೆಯನ್ನು ಒರೆಗೆ ಹಚ್ಚಲು ಮತ್ತೊಮ್ಮೆ ಶಿವನು ಮೇದರ ಕೇತಿದೇವನ ಪ್ರಾಣವನ್ನು ಕೊಂಡೊಯ್ದನು. ಹಿರಿಯ ಭಕ್ತವೃಂದವು ನರೆಯಿತು. ಬಾಚಪಡಿಹಾರಿ ಮಡಿವಾಳ ಶರಣನನ್ನು ಕರೆಯಹೋದನು. ಬಸವಣ್ಣ ಮೊದಲಾಗಿ ಎಲ್ಲ ಜನವೂ ಕೂಡಿದೆಯೆಂಬುದನ್ನು ಅರಿತುಕೊಂಡು, "ಜಂಗಮಪ್ರಾಣಿಯೂ ನಾಚಿಕೆಯಿಲ್ಲದೆ ಬಂದು ಕುಳಿತಿದ್ದಾನೋ ನೋಡುತ್ತ! ಭಾಷೆಗೆಟ್ಟಿದ್ದವನ ಸಭೆಗೆ ನಾನು ಬರುವುದಿಲ್ಲ, ನಡೆ" ಎಂದು ಹೇಳಿದನು. ಇದನ್ನು ತಿಳಿದೊಡನೆ ಬಸವರಾಜನ ಪ್ರಾಣವು ಹಾರಿಹೋಯಿತು. ಆ ಬಳಿಕ ಮಾಚಯ್ಯನು ಹೋಗಿ, ಗೋಳಾಡುತ್ತಿದ್ದ ಭಕ್ತಸ್ತೋಮವನ್ನು ಸೈತಿಟ್ಟು "ಶಿವನೇ, ಕೇತಿದೇವನನ್ನು ತಡವಿಲ್ಲದೆ ಕೊಡು, ಅವನೊಡನೆ ಬಸವರಾಜನೂ ಬರುವನು" ಎಂದು ಬೇಡಿದನು. "ತಳುವಿದರೆ ನಿನ್ನ ಮೇಲೆ ಡಂಗುರ ಹೊಯಿಸುವೆ" ಎಂದು ಗುಡುಗಿದನು. ಕೈಲಾಸಪುರವು ಅಲ್ಲೋಲಕಲ್ಲೋಲವಾಯಿತು. ಶಿವನ ಪರಿವಾರವು ಬೆದರಿತು. ಪ್ರಮಥಗಣವು ಇಬ್ಬರನ್ನೂ

CC-0. Jangamwadi Math Collection. Digitized by eGangotri

ಮತ್ಯ್ಕಕ್ಕೆ ಕಳುಹಿಬಿಡಿ ಎಂದು ಪ್ರಾರ್ಥಿಸಿತು. ಬಸವಣ್ಣನು ಶಿವನಿಗೂ ಗಣ ವೃಂದಕ್ಕೂ ಕೈಮುಗಿದು, "ನಮಗೆ ಆ ಇಹದ ಭೋಗವು ಸಾಕು. ತಮ್ಮ ಸನ್ನಿಧಿಯಲ್ಲಿ ಓಲೈಸಿಕೊಂಡಿರುವೆವು" ಎಂದನು. ಆಗ ಶಿವನು, "ಕೈಕೊಂಡ ಮಣಿಪವನ್ನು ಪೂರಯಿಸದೆ ಇಲ್ಲಿ ಬರಬಹುದೆ? ಹೋಗಿರಿ; ಎಲ್ಲೆಡೆಗೂ ಭಕ್ತಿಯನ್ನು ಪಲ್ಲವಿಸಿ ಬನ್ನಿರಿ" ಎಂದು ಒಡಂಬಡಿಸಿ ಕಳುಹಿದನು. ಇಬ್ಬರಲ್ಲಿಯೂ ಪ್ರಾಣವು ಸಂಚರಿಸಿ ಎದ್ದು ಮಡಿವಾಳ ಮಾಚಯ್ಯನಿಗೆ ವಂದಿಸಿದರು.

ಸಂಧಿ: ೩೭

ದಸರಯ್ಯನ ಕಥೆ

ದಸರಯ್ಯನೆಂಬ ಭಕ್ತನು ಕೋಪರಹಿತನು, ಅತ್ಯಂತ ಶಾಂತನು; ಸ್ವಹಿತವನ್ನು ನೋಡದೆ ಪರಹಿತವನ್ನೇ ನೋಡುವವನು. ಜೀವಹಿಂಸೆಯಾದೀತಲ್ಲಾ ಎಂದು ನೋಡಿ ನೋಡಿ ಮೆಲ್ಲನಡಿಯಿಡುವನಲ್ಲದೆ, ಹೂ ಕೊಯ್ದರೆ ಗಿಡಕ್ಕೆ ನೋವಾದೀತೆಂದು ಉದುರಿದ ಹೂಗಳನ್ನೇ ಒಯ್ಯುವನು. ಭಕ್ತನ ಮೇಲ್ಮೆಯನ್ನು ಸೈರಿಸದ ದುರ್ಜನರು ಒಬ್ಬ ಮೋಟುಗೈಯವನಿಗೆ ಭಸ್ಮ-ರುದ್ರಾಕ್ಷಿಗಳನ್ನು ಧರಿಸಿ, ತಲೆಯನ್ನು ನುಣ್ಣಗೆ ಬೋಳಿಸಿ, ಬಿಳಿಯ ಬಟ್ಟೆ ತೊಡಿಸಿ, ಕೊರಳಲ್ಲಿ ಬರಿಯ ಸಜ್ಜೆಯನ್ನು ಕಟ್ಟಿ ದಸರಯ್ಯನ ತಲೆಯನ್ನು ಮೋಟುಗೈಯಿಂದ ಹೊಡೆಯಲು ಹೇಳಿಕಳಿಸಿದರು. ಆ ಕೃತಕ ಜಂಗಮನು ಅವನ ಹಿಂದೆ ಹಿಂದೆ ಹೋಗಿ "ಏನು ದಸರಯ್ಯನವರೇ, ನಿಮ್ಮ ಮಹಿಮೆಯನ್ನು ಕೇಳಿ ನೋಡಲು ಬರುತ್ತಿದ್ದೇನೆ, ಕಾಣುವುದಿಲ್ಲವೆ? ಶರಣೆಂದರೆ ನಿಮ್ಮ ಅಭಿಮಾನ ಕುಂದುವುದೆ?" ಎಂದು ದಬ್ಬಿಸಿ ನುಡಿದನು. ಆಗ ದಸರಯ್ಯನು ಹೊರಳಿ ನೋಡಿ ಆ ಜಂಗಮಲಿಂಗಕ್ಕೆ ಭಕ್ತಿಯಿಂದ ನಮಿಸಿ, "ಅಹಾ ಮಹೇಶ್ವರಾ, ನನ್ನದು ಅನಂತ ಅಪರಾಧವಾಯಿತು, ಕ್ಷಮಿಸಿ ಪೊರೆ" ಎಂದು ಪ್ರಾರ್ಥಿಸಿದನು. ಆ ಕಪಟಿ ಏನೊಂದೂ ನುಡಿಯದೆ ಮೋಟುಗೈಯಿಂದ ದಸರಯ್ಯನ ತಲೆಯನ್ನು ಕುಟ್ಟ ತೊಡಗಿದನು. ದಸರಯ್ಯನು ತನ್ನ ತಪ್ಪಿಗೆ ಶಿವನು ಕೊಡುವ ಶಿಕ್ಷೆಯೆಂದು ಬಗೆದನು. ಮತ್ತೆ ಮತ್ತೆ ತಲೆಯನ್ನೊಡ್ಡಿದನು. ಬುಗುಟಿಗಳೆದ್ದು ನೆತ್ತರು ಸುರಿದರೂ ತನ್ನ ತಲೆಯ ಕಾಠಿನ್ಯಕ್ಕೆ ಶಿವನ ಕೈಗಳು ನೊಂದವೆಂದನಲ್ಲದೆ ತನಗೆ ನೋವಾಯಿತೆಂದು ವಿರೋಧಿಸಲಿಲ್ಲ. ಅವನ ಕೈಗಳನ್ನು 'ಅಕಟಾ ನೊಂದವಲ್ಲಾ' ಎಂದು ಒತ್ತಿದನು, ತಿಕ್ಕಿದನು. ಕೂಡಲೇ ಕಪಟಿಯ ಕೈಗಳು ಮೊಳೆತವು; ಕೈಗಳಿಗೆ ಬೆರಳುಗಳು ಚಿಗಿತವು. ಕಪಟಿ ತನ್ನ ನೀಳತೋಳುಗಳನ್ನು ನೀವಿ ನೀವಿ ನೋಡಿಕೊಂಡನು; ಸಜ್ಜೆಯನ್ನು ಮುಟ್ಟಿ ನೋಡಿಕೊಂಡನು;

CC-0. Jangamwadi Math Collection. Digitized by eGangotri

ನಾಚಿಕೆಯಿಂದ ತಲೆವಾಗಿ ನಿಂತನು. ಈ ಆದ್ಭುತಕ್ಕೆ ಬೆರಗುಗೊಂಡು ಜನರು ದಸರಯ್ಯನನ್ನು ಕೊನೆದು ಕೊಂಡಾಡಿದರು. "ನಿನ್ನ ತಲೆಯ ಸ್ಪರ್ಶದಿಂದ ಮೋಟನಿಗೆ ಕೈಗಳು ಬಂದವು; ಆದು ಶಿವನ ತಲೆಯೇ ಸೈ!" ಎಂದು ಹೊಗಳಿದರು. ಕಪಟಿಗಳು ರಕ್ಷಿಸೆಂದು ಶರಣುಬಂದರು.

ಸಂಧಿ: ೩೮

ಗುರುಭಕ್ತಯ್ಯನ ಕಥೆ

ಗುರುಭಕ್ತಯ್ಯನೆಂಬವನು ಅಸದೃಶ ಗುರುಭಕ್ತನು. ಗುರುವಿನ ಪಾದ ಕಮಲಗಳನ್ನು ನಿತ್ಯವೂ ಅರ್ಚಿಸಿ ಅವರ ಕೃಪೆಯನ್ನು ಪಡೆವನು. ಗುರುದಕ್ಷಿಣೆ ಕೊಡುವುದಕ್ಕೆ ತನ್ನಲ್ಲಿ ಏನೂ ಇಲ್ಲದಿರಲು ತ್ರಿಕರಣಗಳನ್ನೆ ಅವರಿಗರ್ಪಿಸಿದ್ದನು.

ಒಂದು ದಿವಸ ಆತನು ಹೂವಿಗೆ ಹೊರಟಾಗ ಗುರುಪಾದುಕೆಗೆ ಕಾಲು ಕೊಂಚೆ ತಾಗಿತು. 'ಆಯ್ಯೋ! ನಾನು ಮಹಾದ್ರೋಹಿಯಾದೆನು, ಮಹಾಪಾಪಿಯಾದೆನು!' ಎಂದುಕೊಂಡು ಪಾದಗಳನ್ನು ಕಡಿದುಕೊಂಡುಬಿಟ್ಟನು. ಆ ಹೊತ್ತಿಗೆ ಗುರು ಅಮರಗುಂಡಪಂಡಿತರು ಬರಲು, ಗುರುಭಕ್ತನು ಅವರಿಗೆ ನಮಿಸಿದನು. ಗುರುಕರುಣೆಯಿಂದ ಅವನ ಪಾದಗಳು ಮೊದಲಿನಂತೆ ಚಿಗಿತವು. ಅವನ ಹಿರಿಮೆಗಾಗಿ ಸಹಶಿಷ್ಯರು ಒಳಗೊಳಗೆ ಮತ್ಸರಿಸತೊಡಗಿದರು. ಇದನ್ನರಿತ ಗುರು ಆತನ ಗುರುಭಕ್ತಿಯ ಹಿರಿಮೆಯನ್ನು ಉಳಿದವರಿಗೆ ತೋರಿಸಲು ಬಗೆದನು. ಒಂದು ದಿವಸ ಎಲ್ಲ ಶಿಷ್ಯರನ್ನೂ ಕರೆದು, ತನ್ನ ಮಂಚದ ಮೇಲೆ ಕುಳಿತುಕೊಳ್ಳಿರಿ ಎಂದು ಪ್ರತಿಯೊಬ್ಬನಿಗೂ ಗುರು ಹೇಳಿದನು. ಇಂತಹ ಅಲ್ಲದ ಕೆಲಸ ಮಾಡಲು ಅವರೆಲ್ಲರೂ ಅಂಜಿದರು. ಗುರುಭಕ್ತಯ್ಯನು "ಗುರೋರಾಜ್ಞಾ ಅಲಂಘ್ಯಾ" ಎಂದುಕೊಂಡು ತತ್‌ಕ್ಷಣವೇ ಗುರುಮಂಚವನ್ನೇರಿ ಕುಳಿತನು. ಉಳಿದ ಶಿಷ್ಯರು ದ್ರೋಹ ದ್ರೋಹ ಎಂದು ಕೂಗಿದರು. ಗುರು ಗುರುಭಕ್ತನನ್ನು ಕೆಳಗಿಳಿಯ ಹೇಳಿ ಒಂದು ಶೂಲವನ್ನು ರಚಿಸಿ, "ಮಂಚವಿರಲಿ, ಇದನ್ನೇರಿರಿ" ಎಂದು ಶಿಷ್ಯರಿಗೆ ಹೇಳಿದನು. ಯಾರೂ ಮುಂದೆ ಬರಲಿಲ್ಲ. ಗುರುಭಕ್ತನಿಗೆ "ನೀನು ಏರು" ಎಂದೊಡನೆಯೆ ಗುರುಸ್ಮರಣೆ ಮಾಡುತ್ತ ಶೂಲವನ್ನೇರಿದನು. ಗುರು ಎಲ್ಲರಿಗೂ ನುಡಿದನು: "ನೋಡಿದಿರಾ, ಈತನ ನಿಷ್ಠೆಯನ್ನು! ಮಂಚವೇನು, ಶೂಲವೇನು ಏರೆಂದರೆ ಏರಿಬಿಟ್ಟನು!" ಎಲ್ಲರ ಮತ್ಸರವೂ ಝಾಡ್ರನೆ ಇಳಿಯಿತು. ಗುರು ಗುರುಭಕ್ತಯ್ಯನನ್ನು ಇಳಿದು ಬಾ ಎನ್ನಲು ಶೂಲದಿಂದಿಳಿದು ಬಂದು ಗುರುವಿಗೆ ನಮಿಸಿದನು. ಎಲ್ಲ ಶಿಷ್ಯರೂ ಅವನನ್ನು ಹೊಗಳಿದರು.

CC-0. Jangamwadi Math Collection. Digitized by eGangotri

ಸಂಧಿ: ೩೯ರಿಂದ ೪೪

ಗುರುಭಕ್ತಾಂಡಾರಿಯ ಕಥೆ

ಗುರುಭಕ್ತಾಂಡಾರಿ ಒಂದು ದಿನ ಬೆಜವಾಡದಲ್ಲಿ ಸೂಳೆಗೇರಿಯಲ್ಲಿ ಹಾಯ್ದು ಬರುವಾಗ, ಪ್ರೌಢವತಿಯೆಂಬ ವೇಶ್ಯೆಗೆ ಮನಸೋತನು. ತನ್ನ ಸಖನ ಕೈಯಿಂದ ಆಕೆಗೆ ಒತ್ತೆಯನ್ನು ಕಳುಹಿದನು. ಅವಳು ಒಲ್ಲೆನೆಂದು ಅವನನ್ನು ತಿರುಗಿ ಕಳಿಸಿದಳು. ಗುರುಭಕ್ತಾಂಡಾರಿ ತಾನೇ ಹೋಗಿ "ಏಕೆ ಒಲ್ಲೆ? ರೂಪು, ಯೌವನ, ಸಂಪತ್ತು ಯಾವುದಕ್ಕೂ ಕೊರತೆಯಿಲ್ಲ. ಕಾಮಕಲೆಗಳನ್ನೆಲ್ಲಾ ನಾನು ಬಲ್ಲೆ. ಬೇಕಾದರೆ ಮುದುವೆಯಾಗಲೂ ಸಿದ್ಧನಿದ್ದೇನೆ. ನಿನ್ನನ್ನು ಬಿಟ್ಟು ಮಾತ್ರ ಜೀವಿಸಲಾರೆ" ಎಂದು ಆತನು ಪರಿಪರಿಯಿಂದ ರಮಿಸಿ ಹೇಳಿದನು, ಅಂಗಲಾಚಿದನು. ಪ್ರೌಢವತಿ ಒಪ್ಪಲಿಲ್ಲ. "ವೇಶ್ಯಾಗಮನವು ಸತ್ಪಥವಲ್ಲ. ವೇಶ್ಯೆಯರು ಅತಿ ಕುಟಿಲೆಯರು. ತತ್ವಜ್ಞನಾದ ನೀನು ಅವರ ಹೇಸಿ ಶರೀರಸುಖಕ್ಕೆ ಏಕೆ ಮರುಳಾದೆ?" ಎಂದು ಪರಿಪರಿಯಿಂದ ಆವನ ಮನವನ್ನು ತಿರುಗಿಸಲು ಅವಳು ಪ್ರಯತ್ನಿಸಿದಳು. ಗುರುಭಕ್ತಾಂಡಾರಿಗೆ ಅದಾವುದೂ ನಾಟಲಿಲ್ಲ. ಇನ್ನು ಕತೆಗಳನ್ನು ಹೇಳಿತಿದ್ದುವೆನೆಂದು ಆಕೆ ಹಿಂದಣವರ ಕತೆಗಳನ್ನು ಹೇಳಿದಳು:

ಶ್ವೇತನ ಕಥೆ

ಕಾಮಾತುರನಾದ ಶ್ವೇತನು ಹೀಗೆಯೆ ರಂಭೆಗೆ ಮರುಳಾಗಿದ್ದನು. ಆಗ ಅವಳು, "ನೀನು ಸದಾ ದುಶ್ಚರಿತನಾಗಿರುವೆ; ವೇಶ್ಯಾಗಾಮಿಯಾದ ನಿನಗೆ ದೇವರಿಲ್ಲ, ದಿಂಡರಿಲ್ಲ, ಗುರುವಿಲ್ಲ, ಹಿರಿಯರಿಲ್ಲ. ಒಮ್ಮೆ ಸೂಳೆಯ ಸಲುವಾಗಿ ಮಾಲೆಯನ್ನು ಒಯ್ಯುತ್ತಿದ್ದಾಗ ಒಂದು ಹೂ ಹರಿದು ಹೇಸಿಕೆಯಲ್ಲಿ ಬೀಳಲು, ಎತ್ತಿಕೊಳ್ಳಲಾರದೆ 'ಶಿವಾರ್ಪಣ' ಎಂದುದಕ್ಕೆ ಹಿಂದಣ ಪುಣ್ಯಫಲದಿಂದ ಈ ಇಂದ್ರಪಟ್ಟ ನಿನಗಾಯಿತು. ಇನ್ನು ಬೆಳಗಾಗುತ್ತಲೇ ಈ ಪಟ್ಟ ಮುಗಿದು ನರಕಕ್ಕೆ ಹೋಗುವೆ," ಎಂದು ನುಡಿದಳು. "ಇಂದಿನ ಸುಖವನ್ನು ಸೂರೆಗೊಳ್ಳುವೆನಲ್ಲದೆ. ನಾಳಿನ ನರಕಗಿರಕಗಳನ್ನು ಲೆಕ್ಕಿಸುವೆನೇ" ಎಂದು ವಾದಿಸಿ ಅನುಕೂಲೆಯಾಗೆಂದು ಪ್ರಾರ್ಥಿಸಿದನು ಶ್ವೇತ. ಕೊನೆಗೆ ರಂಭೆ "ನಿನಗೆ ಯಾವ ಕಾಲವೂ ಶಾಶ್ವತ ಸುಖವನ್ನು ಕೊಡುವೆನು, ನಂಬು" ಎಂದು ಹೇಳಿ ಶ್ವೇತನಿಗೆ ಶಿವಭಕ್ತೆ ವೇಷವನ್ನು ತೊಡಿಸಿ ಶಿವಾಲಯಕ್ಕೆ ಕಳುಹಿದಳು. ಅವನು ಗುಡಿಯ ಕಸಗುಡಿಸಿ, ತಳಿ ಹೊಡೆದು, ರಂಗವಾಲಿಯನ್ನಿಕ್ಕಿ ಶಿವನನ್ನು ಷೋಡಶೋಪಚಾರದಿಂದ ಪೂಜಿಸಿದನು. ಹೀಗಿರುತ್ತಿರುವಾಗಲೇ ಬೆಳಗಾಯಿತು. ಯಮದೂತರು ರಂಭೆಯ ಮನೆಗೆ ಬಂದು "ನಿನ್ನೆ ರಾತ್ರಿ ನಿನ್ನೊಂದಿಗೆ ಇದ್ದ ಅವನೆಲ್ಲಿ?" ಎಂದು ಕೇಳಿದರು.

CC-0. Jangamwadi Math Collection. Digitized by eGangotri

ದಾಸಿ ದೇವಾಲಯಕ್ಕೆ ಅವರನ್ನು ಕಳುಹಿದಳು. ಪೂಜಾಮಗ್ನನಾಗಿರುವ ಶ್ವೇತನನ್ನು ಕಂಡು ಒಳಹೊಗಲಂಜಿ ಹಿಂದಿರುಗಿ ಹೋಗಿ ಯಮನಿಗೆ ತಿಳಿಸಿದರು. ಯಮನು ಆತನನ್ನು ದಂಡಿಸದೆ ಬಿಡೆನೆಂದು ಉರವಣಿಸಿ ಬಂದನು. ಶಿವನು ಅವನ ಎದೆಯನ್ನು ಶೂಲದಿಂದಿರಿದು ಶ್ವೇತನನ್ನು ರಕ್ಷಿಸಿ ಗಣಪದವಿಯನ್ನಿತ್ತನು. ಬಳಿಕ ಯಮನನ್ನು ಕಾಯ್ದು "ನಮ್ಮ ಭಕ್ತರ ಉಸಾಬರಿಗೆ ಬರಲಾಗದೆಂ"ದು ವಿಧಿಸಿದನು.

ಮಲುಹಣನ ಕಥೆ

ಮಲುಹಣನೆಂಬ ಕವಿಶ್ರೇಷ್ಠನು ಮಲುಹಣಿಯೆಂಬ ವೇಶ್ಯೆಯಲ್ಲಿ ಅನುರಕ್ತನಾಗಿದ್ದನು; ಅವಳೂ ಅವನಲ್ಲಿ ಪ್ರೀತಿಯುಳ್ಳವಳಾಗಿದ್ದಳು. ಧನಾಶೆಯುಳ್ಳ ಆಕೆಯ ತಾಯಿ ಈತನನ್ನು ಹೊರಡಿಸಿ, ಮಗಳನ್ನು ಧನಿಕನೊಡನೆ ಕೂಡಬೇಕೆಂದು ಎಣಿಕೆ ಹಾಕಿದಳು. ಒಮ್ಮೆ ಆತನನ್ನು ಸಂಧಿಸಿ, "ನನ್ನ ಮಗಳು ಹುಚ್ಚಿ, ಅವಳಿಗೆ ನೀನು ಏನೂ ಕೊಡಲೊಲ್ಲೆ. ಇಲ್ಲದ ಭುಲ್ಲವಣೆಯಿಂದ ಅವಳೊಡನೆ ಲೋಲಾಡುತ್ತಿರುವೆ. ಹಬ್ಬಹುಣ್ಣಿವೆಗಳ ವೆಚ್ಚಕ್ಕಿಲ್ಲದೆ ಸಾಲಮಾಡಿ ಸಾಕಾಯಿತು; ಇನ್ನು ಇಲ್ಲಿ ಬರಬೇಡ" ಎಂದು ಪರಿಪರಿಯಿಂದ ಹೀಯಾಳಿಸಿ ಮಲುಹಣನನ್ನು ಹೊರಗೆ ಹಾಕಿದಳು. ಮಲುಹಣಿಯನ್ನು ಒಬ್ಬ ಮಂಡಳೇಶ್ವರನೊಡನೆ ಕೂಡಿದಳು. ಮಲುಹಣನು ಅವಳ ವಿರಹವನ್ನು ತಾಳಲಾರದೆ, ತನ್ನ ಚಿತ್ತದಲ್ಲಿ ಮಲುಹಣಿಯ ರೂಪವನ್ನು, ಅವಳ ಹಾವಭಾವಗಳನ್ನು ಚಿತ್ರಿಸಿಕೊಂಡು ಅವಳ ಸವಿನುಡಿಗಳನ್ನು, ಅವಳ ಸಂಗದ ರಸನಿಮಿಷಗಳನ್ನು ನೆನೆಯುತ್ತ ಅವಳ ಮನೆಯ ಜಗುಲಿಯ ಮೇಲೆಯೆ ಕುಳಿತಿದ್ದನು. ಅಷ್ಟರಲ್ಲಿ ಹೊಸ ಮಿಂಡನೊಡನಿದ್ದ ಮಲುಹಣಿ ಕದವನ್ನು ತೆರೆದು ಉಗುಳಿದಳು. ಅದು ಅವನ ಮೇಲೆ ಬಿದ್ದಿತು. ದಿಟ್ಟಿಸಿ ನೋಡಿ, "ಯಾರು ಮಲುಹಣನೆ? ಹೋದವನು ಮತ್ತೇಕೆ ಬಂದೆ? ಸತ್ತರೂ ಬರಬಾರದು. ಕತ್ತಲೆಯಲ್ಲಿ ಕಾಣದೆ ನಿನ್ನ ಮೇಲೆ ಉಗುಳಿದೆನು ಅಯ್ಯೊ!" ಎನ್ನುತ್ತ ಅವಳು ಮಲುಹಣನನ್ನು ಹಿತ್ತಿಲಮನೆಗೆ ಕರೆದೊಯ್ದು ನೆರೆಯಲು ಅನುವಾದಳು. "ಒಬ್ಬ ಪುರುಷನಿರುವಾಗ ಕಾಮಾತುರತೆಯಿಂದ ರಮಿಸುವುದು ನೀತಿಯಲ್ಲ" ಎಂದು ಅವನು ನಿರಾಕರಿಸಿದನು. "ನೀನು ಹಿಂದೆಸೆಯಲ್ಲಿ ನನ್ನ ಬೆನ್ನಿಗೆ ಮೊಲೆಗಳನ್ನೊತ್ತಿ ಅಪ್ಪಿಕೊಂಡಿರು; ನಾನು ಶಿವನನ್ನು ಸ್ತುತಿಸುವೆನು" ಎಂದನು. ಆಕೆ ಹಾಗೆ ಮಾಡಲು ಮಲುಹಣನು ಮೂವತ್ತಾರು ಪದ್ಯಗಳನ್ನು ರಚಿಸಿ ಹಾಡಿದನು. ಶಿವನು ಮೆಚ್ಚಿ ಮಲುಹಣ, ಮಲುಹಣಿ, ಆಕೆಯ ತಾಯಿ ಮತ್ತು ಗಿಳಿಗಳನ್ನು ಕೈಲಾಸಕ್ಕೊಯ್ದನು.

CC-0. Jangamwadi Math Collection. Digitized by eGangotri

ಕುಮಾರಪಾಲಕ ಗುರ್ಜರನ ಕಥೆ

ಗುರ್ಜರರಾಜನೂ ಅವನ ಹೆಂಡತಿಯೂ ಅತ್ಯಂತ ಶಿವಭಕ್ತಿಪರಾಯಣರು. ಅವರು ಒಂದು ದಿನ ಶಿವಸಂಕಥಾವಿನೋದದಿಂದ ಪಗಡೆಯಾಡುತ್ತಲಿದ್ದರು. ಆಟದಲ್ಲಿ ನಡುವೆಯೆ ರಾಜನು ನೆವವಿಲ್ಲದೆ ನಕ್ಕನು. "ಏಕೆ ನಕ್ಕೆ? ನನ್ನ ಪೆದ್ದತನವನ್ನೇನಾದರೂ ಕಂಡೆಯೋ, ಏನಾಯಿತು?" ಎಂದು ರಾಣಿ ಕೇಳಿದಳು. ಅದಕ್ಕೆ ರಾಜನು "ನಕ್ಕುದಕ್ಕೆ ಕಾರಣ ಬೇರುಂಟು – ಕೇಳು" ಎಂದು ಓಹಿಲಯ್ಯನ ಚರಿತ್ರೆಯನ್ನು ಬಿತ್ತರಿಸಿದನು:

ಓಹಿಲಯ್ಯನ ಕಥೆ

ಸೌರಾಷ್ಟ್ರ ಸೋಮನಾಥನ ನಿಶ್ಚಲ ಭಕ್ತನು ಓಹಿಲನು. ನಿತ್ಯವೂ ತನ್ನ ತೂಕದ ಮಹಿಷಾಕ್ಷಿ ಗುಗ್ಗುಳವನ್ನು ಅರ್ಪಿಸುವುದು ಅವನ ನೇಮ. ಹತ್ತಿರದ ಹಣವೆಲ್ಲ ಸವೆಯಲು ದೂರದ ಕಾಡುಗಳಿಗೆ ಹೋಗಿ ಗುಗ್ಗುಳವನ್ನು ತರತೊಡಗಿದನು. ಅವನ ಪೂಜೆಗೆ ಕಾಲ ಅಕಾಲ ಎಂಬುದಿಲ್ಲ. ಮುನ್ನ ಗೌಳಪೂಜಾರಿಗಳು ಮಾಡಿದ್ದ ಪೂಜೆಯನ್ನು ಸರಿಸಿ, ಅರ್ತಿಯಿಂದ ಪೂಜೆ ಗೈದು ಮಹಿಷಾಕ್ಷಿ ಗುಗ್ಗುಳದ ಧೂಪವಿಕ್ಕುತ್ತಿದ್ದನು.

ಹೀಗೆ ಕೆಲದಿನ ಸಾಗುತ್ತಿರಲು ಗೌಳತಪಸಿಗಳು ರೇಗಿದರು. ಎಲ್ಲಿದ್ದನೋ ಈ ಭಕ್ತ! ಅವೇಳೆಯಲ್ಲಿ ಬಂದು, ನಿರ್ಬಂಧವನ್ನು ಲೆಕ್ಕಿಸದೆ ಗುಡಿಯನ್ನು ಹೊಕ್ಕು ಪೂಜಿಸುತ್ತಿದ್ದಾನೆ. ತಿರಿದು ತಿನ್ನುವ ಈತನಿಗೆ ವ್ರತದ ಬಿಂಕ! ಎಂದು ಯೋಚಿಸಿದರು. ದೇವಾಲಯದ ಪರಿಚಾರಕರಲ್ಲದೆ ಉಳಿದವರು ಗುಡಿಯ ಒಳಗೆ ಹೋಗಬಾರದೆಂದು ಆಜ್ಞೆ ಹೊರಡಿಸಿದರು. ಹಗಲು ಕಾಪಲಿಟ್ಟು ರಾತ್ರಿ ಬೇಗ ಮುದ್ರೆ ಮಾಡಿದರು. ಓಹಿಲನು ಗುಗ್ಗುಳವನ್ನು ಹೊತ್ತುಕೊಂಡು ನಡುರಾತ್ರಿ ಗುಡಿಗೆ ಬಂದನು. ಕೂಡಲೆ ಸೋಮೇಶ್ವರನು ಕದವನ್ನು ತೆರೆದನು. ಅವನು ನಿತ್ಯದಂತೆ ಅರ್ಚಿಸಿದನು. ಗೌಳತಪಸ್ವಿಗಳು ಬೆರಗಾದರು. ಆದರೂ ದುರ್ಬುದ್ಧಿ ಹೋಗಲಿಲ್ಲ. ಓಹಿಲನನ್ನು ಊರಲ್ಲಿಯೇ ಇರಗೊಡಬಾರದೆಂದು ಅವನಿಗೆ ಊರಲ್ಲಿ ಭಿಕ್ಷೆ ಹುಟ್ಟದಂತೆ ಮಾಡಿದರು. ಭಕ್ತನು ಇದಕ್ಕಂಜಲಿಲ್ಲ. ಮನೆಮನೆ ತಿರುಗುವ ವೇಳೆಯೇ ಶಿವಾರ್ಚನೆಗೆ ಧ್ಯಾನಕ್ಕೆ ಉಳಿಯಿತೆಂದುಕೊಂಡನು. ನಿರ್ಮಾಲ್ಯದ ಪತ್ರೆಗಳನ್ನೇ ಪ್ರಸಾದವೆಂದು ಸೇವಿಸತೊಡಗಿದನು. ಅದನ್ನು ಕಂಡ ಆ ದುರಾತ್ಮರು ನಿರ್ಮಾಲ್ಯವನ್ನು ಸುಟ್ಟುಹಾಕತೊಡಗಿದರು. ಓಹಿಲನು ಆ ಬೂದಿಯನ್ನೇ ತಿಂದು ಜೀವಿಸತೊಡಗಿದನು.

ಒಂದು ದಿನ ಓಹಿಲನು ಅಡವಿಯಿಂದ ಚಂದನದ ಚಿಕ್ಕೆ ಗುಗ್ಗುಳಗಳನ್ನು ತರುತ್ತಿದ್ದನು. ಅವನ ಅಂಗಾಲಲ್ಲಿ ಕೋಲಿ ನಟ್ಟಿತು. ಅದನ್ನು ಲೆಕ್ಕಿಸದೆ ಅವನು

CC-0. Jangamwadi Math Collection. Digitized by eGangotri

ಕುಂಟುತ್ತ ಕಾಲೆಳೆಯುತ್ತ ಸಾಗಿದ್ದನು. ಆಗ ಶಿವನು ಕಿರಾತವೇಷದಿಂದ ಬಂದು, "ಅಯ್ಯೋ ದಸಿ ನಟ್ಟು ರಕ್ತ ಹರಿಯುತ್ತಿದೆಯಲ್ಲಾ! ನಿಲ್ಲು ನಿಲ್ಲು ಭಕ್ತಾ. ಕಂಬಿಯನ್ನಿಳಿಸಿ ಕೋಲಿಯನ್ನು ಕಿತ್ತುಕೋ; ನಿನಗಾಗದಿದ್ದರೆ ನಾನಾದರೂ ಕಿತ್ತುವೆ" ಎಂದನು. "ನನ್ನ ಕಾಲನ್ನು ನೀನು ಮುಟ್ಟಲಾಗದು, ಬೇಡ" ಎಂದನು ಓಹಿಲ. "ನಿನ್ನಂತೆಯೆ ಆಗಲಿ, ಕಾಲನ್ನು ಮುಟ್ಟದೆ ತಂಡಸದಿಂದ ಕೀಳುವೆ" ಎಂದು ಕಿತ್ತೊಡನೆ ಅಂಗಾಲಿಂದ ಭಸಿತವೇ ಚಿಮ್ಮಿ ಬಂದಿತು. ಎಲೆಹಾಕಿ ಕಟ್ಟಿ "ಇನ್ನು ಹೋಗು ಓಹಿಲಾ, ಸೋಮೇಶ್ವರನು ನಿನಗೆ ಕರುಣಿಸುವನು" ಎಂದು ಹೇಳಿ ಬೇಡನು ಮಾಯವಾದನು.

ಓಹಿಲನು ಗುಡಿಗೆ ಬಂದು ಸೋಮೇಶ್ವರನಿಂದ ಕದಗಳನ್ನು ತೆಗೆಸಿ ಅರ್ಚಿಸಿ, ಧೂಪಪಾತ್ರೆಯಲ್ಲಿ ಉರಿಯನ್ನು ಹೊತ್ತಿಸಿ ಗಂಟೆಯನ್ನು ತರುವಷ್ಟರಲ್ಲಿ ಗೌಳತಪಸಿಗಳು ಗುಗ್ಗುಳವನ್ನು ಅಪಹರಿಸಿದ್ದರು. ಓಹಿಲನು ಶಿವನ ಇಚ್ಛೆ ಎಂದು ಕೊಂಡು, "ಸೋಮೇಶ್ವರಾ, ಇನ್ನು ನನ್ನ ಶರೀರವೇ ನಿನಗೆ ಗುಗ್ಗುಳ" ಎಂದು ನುಡಿದು ಅಸಂಖ್ಯಾತ ಗಣಂಗಳನ್ನು ನೆನೆಯುತ್ತ ಧಗಧಗಿಸುವ ಧೂಪಪಾತ್ರೆಯಲ್ಲಿ ಕುಳಿತನು. ಶಿವನು ಪ್ರತ್ಯಕ್ಷನಾಗಿ ಆತನನ್ನು ಕೈಲಾಸಕ್ಕೆ ಕೊಂಡೊಯ್ದನು. ಓಹಿಲನು ಆಟ್ಟಹಾಸದಿಂದ ಗಂಟೆಯನ್ನು ಬಾರಿಸುತ್ತ ಹೋದನು. ಗೌಳತಪಸಿಗಳ ಕುಹಕತನವು ಉಡುಗಿತು. ಅವನನ್ನು ಸ್ತುತಿಸುತ್ತ ವಂದಿಸಿದರು.

ಈ ಕಥೆಯನ್ನು ಮಡದಿಗೆ ಹೇಳಿ ಗುರ್ಜರರಾಜನು "ಇಷ್ಟೆಲ್ಲಾ ತಪಸ್ಸು ಮಾಡಿ ತಾನೊಬ್ಬನೇ ಕೈಲಾಸಕ್ಕೆ ಹೋಗುವುದನ್ನು ಕಂಡು ನನಗೆ ನಗೆ ಬಂದಿತು" ಎಂದನು. "ಊರಿದ್ದಿಲ್ಲವೆ, ಜನವಿದ್ದಿಲ್ಲವೆ ತನ್ನೊಡನೆ ಬರುವುದಕ್ಕೆ? ಒಬ್ಬನೇ ಹೋಗುತ್ತಿದ್ದಾನಲ್ಲಾ, ಎಂತಹ ಕಾರ್ಪಣ್ಯ!" ಎಂದು ಮತ್ತೆ ನಕ್ಕನು. ಹೊರಟಿರುವ ಓಹಿಲನನ್ನು ಸತಿಗೆ ತೋರಿದನು. ಆಕೆ ನೋಡಿ ಭಕ್ತಿಯಿಂದ ಕೈ ಮುಗಿದಳು. "ಇಂತಹ ಮಹಿಮನನ್ನು ಹಂಗಿಸಿ ನುಡಿಯುವರೇ? ಆಡುವುದು ಸುಲಭ, ಮಾಡುವುದು ಅಸಾಧ್ಯ" ಎಂದಳು. "ಆದೇನು ಆಶ್ಚರ್ಯ ಬಿಡು; ಚೇರಮರಾಯನು ಎಂಬತ್ತು ಸಾವಿರ ಕುದುರೆಗಳೊಡನೆ ಶಿವಪುರಕ್ಕೆ ನೆಗೆದು ದಾಳಿಯಿಡಲಿಲ್ಲವೆ?" ಎಂದು ರಾಜನು ಇಂತಹ ಅನೇಕರ ಉದಾಹರಣೆಗಳನ್ನು ಹೇಳಿದನು. ಆಗ ರಾಣಿ "ಇದ್ದಾವು ಅನೇಕ. ಆದರೆ ನೀನೋ ಕಾಮಿ, ಈತನೋ ನಿಷ್ಕಾಮಿ, ನೀನೋ ದ್ಯೂತವ್ಯಸನಿ, ಈತನೋ ನಿರ್ವ್ಯಸನಿ" ಇತ್ಯಾದಿ ಗುಣಗಳನ್ನೆತ್ತಿ "ಇಂಥವನನ್ನು ಹೀಗಳೆಯುವುದು ಉಚಿತವಲ್ಲ" ಎಂದು ನುಡಿದಳು. ರಾಜನು ಲೆತ್ತದಾಟವು ಉಚಿತವಲ್ಲವೆಂಬೆಯಾ ಕೇಳು:

CC-0. Jangamwadi Math Collection. Digitized by eGangotri

ಮೂರ್ಖನಾಯ್ನಾರ ಕಥೆ

ಮೂರ್ಖನಾಯ್ನಾರೆಂಬ ಭಕ್ತನು ಮತ್ತೊಂದು ಕೆಲಸವನ್ನರಿಯದೆ ಕಲಿತ ಲೆತ್ತವನ್ನೇ ಆಡಿ ಜನರನ್ನು ಸೋಲಿಸಿ, ಪಡೆದ ಧನದಿಂದ ಜಂಗಮಾರಾಧನೆ ನಡಸುತ್ತಿದ್ದನು. ಒಮ್ಮೆ ಶಿವನು ಜೂಜುಗಾರನ ವೇಷದಿಂದ ಬಂದು ಮೂರ್ಖ ನಾಯ್ನಾರೊಡನೆ ಲೆತ್ತವಾಡಿ ಅಪರಿಮಿತ ವಿತ್ತವನ್ನು ಸೋತನು. ಕೊಡುವುದ ಕ್ಕಿಲ್ಲದೆ ಓಡಿಹೋಗಲು ನೋಡಿದನು. ಭಕ್ತನು ಅವನನ್ನು ಹಿಡಿದು ಕಟ್ಟಿಹಾಕಿದನು. ಆಗ ಶಿವನು ತನ್ನ ಉಡಿಯ ಶಿವಸೂತ್ರವನ್ನು ತೋರಿದನು. 'ಅಕಟಾ ಶಿವಲಾಂಛನ ಧಾರಿಯನ್ನು ಕಟ್ಟಿದೆನಲ್ಲಾ!' ಎಂದು ಪರಿತಪಿಸಿ ಭಕ್ತನು ಶಿರಶ್ಛೇದ ಮಾಡಿ ಕೊಳ್ಳಲುಜ್ಜುಗಿಸಿದನು. ಶಿವನು ಪ್ರತ್ಯಕ್ಷನಾಗಿ, "ವರವನ್ನು ಬೇಡಿಕೋ" ಎಂದನು. "ಒಡೆಯರೊಡೆಯಾ, ಈಗ ನನಗೆ ಸೋತಿರುವ ಧನವನ್ನು ಕೊಡು ಸಾಕು. ಜಂಗಮದೊಡವೆಯದು, ವಂಚಿಸಬಾರದು" ಎಂದು ಹೇಳಿ 'ಪ್ಯಾಡನ ಕೈಯಿಂದ ವಸೂಲು ಮಾಡಿಕೊಂಡು ಮಾಹೇಶ್ವರರಿಗೆ ಅರ್ಪಿಸಿ ಆತನಲ್ಲಿ ಬೆರೆದನು.

ಈ ಕಥೆಯನ್ನೂ ಗಂಡನು ಹೇಳಿದ ಭಕ್ತಿಯ ಉಪದೇಶವನ್ನೂ ಕೇಳಿ ರಾಣಿಯೆಂದಳು: "ಅದೆಲ್ಲಾ ಆಯಿತು. ಓಹಿಲಯ್ಯನನ್ನು ನಗುವ ನೀನು ಯಾವಾಗ ಹೇಗೆ ಎಷ್ಟು ಜನರನ್ನು ಕರೆದುಕೊಂಡು ಕೈಲಾಸಕ್ಕೆ ಹೋಗುವೆ, ಹೇಳು" ಎಂದಳು. ಅದಕ್ಕರಸನು "ಇಂದೇ ಈಗಲೇ ಹೀಗೆಯೇ ಈ ಮಂದಿ ಯನ್ನು ಕರೆದುಕೊಂಡು ಹೋಗುವೆ" ಎಂದು ನುಡಿದು, ಜನಗಳನ್ನು ನೆರವಿ ಹೆಂಡರು ಮಕ್ಕಳು ಬಂಧುಬಳಗ ಸಹಿತವಾಗಿ ಬಾಂದಳಕ್ಕೆ ನೆಗೆದು ವಾದ್ಯವೈಭವ ದೊಡನೆ ಕೈಲಾಸಕ್ಕೆ ತೆರಳಿದನು.

ಪ್ರೌಢವತಿ ಇಷ್ಟೆಲ್ಲ ಕಥೆ ಉಪಕಥೆಗಳನ್ನು ಹೇಳಿದರೂ ಗುರುಭಕ್ತಾಂಡಾ ರಿಯ ಕಾಮಮದವಿಳಿಯಲಿಲ್ಲ. ಆಗ ಉಪಾಯಗಾಣದೆ ನಿಜವನ್ನು ಹೇಳಬೇಕಾ ಯಿತು, ಹೇಳಿದಳು: "ಗುರುಭಕ್ತಿಯೇ ನಮಗಿಬ್ಬರಿಗೂ ಜೀವವಾಗಿರುವಾಗ ಒತ್ತೆಗೆ ಆಸೆಮಾಡಿ ನಿನ್ನನ್ನು ಕೂಡುವುದು ಲೇಸಲ್ಲ. ಒಂದು ರಾತ್ರಿ ನಿನ್ನ ಸದ್ಗುರು ನನ್ನಲ್ಲಿ ಬಂದಿದ್ದನು. ಅದಕ್ಕಾಗಿ ನಿನ್ನನ್ನು ಬೇಡವೆಂದೆನು." ಇದನ್ನು ಕೇಳಿದೊಡನೆ ಕೆಂಡವನ್ನು ತುಳಿದಂತೆ ಗುರುಭಕ್ತಾಂಡಾರಿ ಮೆಟ್ಟಿಬಿದ್ದನು. ಗುರುವಿನ ಸ್ತ್ರೀಗೆ ಮನಸ್ಸು ಮಾಡಿದ ದ್ರೋಹಿ ತಾನೆಂದು ಹಳಿದುಕೊಂಡನು. ಪ್ರೌಢವತಿಗೆರಗಿ "ತಾಯೆ, ನಿನ್ನನ್ನು ಆಸಿಸಿದ ಪಾಪ ಇನ್ನೆಂದಿಗೆ ಅಳಿಯುವುದೋ?" ಎಂದು ಗೋಳಿಟ್ಟನು. ಅಡವಿಗೆ ಹೋಗಲೇ ಸತ್ತುಹೋಗಲೇ? ನನ್ನ ಪಾಪಕ್ಕೆ ಪರಿಹಾರ ವೇನೆಂದು ಕಲ್ಲುಮರಗಳನ್ನೂ ಕೇಳಿದನು. ಕೊನೆಗೆ ದುಃಖಾತಿರೇಕದಿಂದ ತನ್ನ ಎರಡೂ ಕಣ್ಣುಗಳನ್ನು ಕಿತ್ತುಕೊಂಡನು. ಒಡಲನ್ನು ಸೀಳಿಕೊಳ್ಳಲು ಅನು

CC-0. Jangamwadi Math Collection. Digitized by eGangotri

ವಾದನು. ಇದನ್ನು ಕೇಳಿದ ಗುರುಹಸ್ತಾಗ್ರಜನು ಅಲ್ಲಿಗೆ ಬಂದು ತಮ್ಮನನ್ನು ಹಿಡಿದೆತ್ತಿ ಅಪ್ಪಿಕೊಂಡನು. ಆತನು ಅಣ್ಣನ ಪಾದಪದ್ಮಗಳಿಗೆರಗಿದನು. "ಹೆದರ ದಿರು, ಕುಂದದಿರು, ನಿನ್ನಲ್ಲಿ ಕೊರತೆಯಿಲ್ಲ. ಆಳಲಬೇಡ" ಎಂದು ಅಣ್ಣನು ಸಂತೈಸಿ ಗುರುಸ್ಮರಣೆ ಮಾಡುತ್ತ ತಮ್ಮನ ಕಣ್ಣ ನೆತ್ತರನ್ನು ತೊಡೆದನು. ಗುರು ಭಕ್ತಾಂಡಾರಿಯ ಹೋದ ಕಣ್ಣುಗಳು ಬಂದವು.

ಸಂಧಿ: ೪೫

ವೇಮನಾರಾಧ್ಯನ ಕಥೆ

ಧರ್ಮಪರನೂ ಸುಶೀಲನೂ ವಿದ್ವಾಂಸನೂ ಆದ ವೇಮಯ್ಯನು ಒಂದು ದಿನ ತೋಟದ ಹತ್ತಿರ ಹೂಗೊಯ್ಯುತ್ತಿದ್ದನು. ಆಗ ನವವಿವಾಹಿತನಾದ ರಾಜ ಕುಮಾರನೊಬ್ಬನು ಸತಿಯೊಡನೆ ಊರಿಗೆ ಬರುತ್ತಾ ಆತನನ್ನು ಕಂಡು 'ಆಯ್ಯಾ ಜೋಹಾರು' ಎಂದನು. ರಾಜಕುಮಾರನು ಅಲ್ಪಾಯುವೆಂದು ಅರಿತ ವೇಮ ನಾರಾಧ್ಯನು ಸುಮ್ಮನಿದ್ದುಬಿಟ್ಟನು. ಎರಡನೆಯ ಸಲ ನಮಿಸಿದರೂ ಸುಮ್ಮ ನಿದ್ದನು. ಆಗ ರಾಜಕುಮಾರನು ನಸುಗೋಪ, ನಸುಲಜ್ಜೆ, ನಸುಭಕ್ತಿವೆರಸಿ, "ತಾವು ಮಹಾಮಹಿಮರು, ಹರರೂಪರು, ನಮಿಸಿದವರನ್ನು ಹರಸದಿರುವುದು ಧರ್ಮವೇ? ಇದೇನು ದೊಡ್ಡವರ ನಡತೆಯೆ?" ಎಂದು ಹಲತೆರದ ಮಾತು ಗಳನ್ನಾಡಿದನು. ಆಗ ವೇಮನಯ್ಯನು "ನಾಳೆ ಮಧ್ಯಾಹ್ನ ನಿನಗೆ ಮರಣವುಂಟು; ಆದಕ್ಕೇ ಹರಸಲು ನಾಲಗೆಯೇಳಲಿಲ್ಲ. ನಾಳೆ ನಿನಗೆ ಸಾವು ತಪ್ಪದು, ಹೋಗು" ಎಂದನು. ರಾಜಕುಮಾರನಿಗೆ ರೇಗಿತು. "ಹರಲಾಂಛನದಿಂದ ಸುಳಿಯುತ್ತಿರುವೆ ಯೆಂದು ಜನ ನಮಿಸಿದಮಾತ್ರಕ್ಕೆ ನೀನು ಹರನಾಗಬಲ್ಲೆಯಾ? ನಾಳೆ ನಾನು ಸತ್ತುದೇ ಆದರೆ ಲೋಕಕ್ಕೆ ನೀನೆ ನನ್ನಿಯುಳ್ಳ ಆಯ್ಯನು!" ಎಂದು ನುಡಿದು ಹೊರಟುಹೋದನು.

ಅಂದು ರಾತ್ರಿ ರಾಜಕುಮಾರನು ನಿದ್ರಿಸಿರಲು ಮಂಚದ ಸರಪಣಿಗುಂಟ ಇಳಿದುಬಂದ ಘಟಸರ್ಪವು ಅವನ ಕೈಯನ್ನು ಕಚ್ಚಿತು. ಹೆಂಡತಿಗೆ ಎಚ್ಚರವಾಗಿ ಆಯ್ಯೋ ಎಂದು ಗೋಳಿಟ್ಟಳು. ಅವನಿಗೂ ಎಚ್ಚರವಾಯಿತು. ಗಾರುಡ-ವೈದ್ಯ ಎಲ್ಲ ಉಪಚಾರಗಳೂ ನಡೆದವು. ತಜ್ಞರೆಲ್ಲರೂ ನೋಡಿ 'ನಾಲ್ಕು ಹಲ್ಲುಗಳು ನಟ್ಟಿವೆ, ಬದುಕಲಾರನು' ಎಂದು ಹೇಳಿ ತೆರಳಿದರು. "ವೇಮಯ್ಯನ ಮಾತು ದಿಟವಾಯಿತು; ಅವನು ಮಹಾತ್ಮನು. ಆತನಿಗೆ ಮೊರೆಯಿಡುವಾ" ಎಂದು ಆ ಯುವತಿ ಹೇಳಿದಳು. ಎಲ್ಲರೂ ಹೆಣವನ್ನೊಯ್ದು ಆತನ ಮುಂದೆ ಹಾಕಿ ಮೊರೆಯಿಟ್ಟರು. ವೇಮನಾರ್ಯನು ಮಾಹೇಶ್ವರರನ್ನು ಅರ್ಚಿಸಿ, ಅವರ ಪಾದೋ

CC-0. Jangamwadi Math Collection. Digitized by eGangotri

ದಕದಿಂದ ಶವವನ್ನು ತೊಳೆಸಿ ಭಸಿತವನ್ನು ಹೂಸಿ ಪಂಚಾಕ್ಷರಿಯನ್ನು ಉಚ್ಚರಿಸಿ ಏಳೇಳೆಂದು ಕೈಹಿಡಿದು ಎತ್ತಿದನು. ಅರಸುಮಗನು ದಿಕ್ಕನೆ ಎದ್ದು ವೇಮ ನಾರ್ಯನಿಗೆ ವಂದಿಸಿ ತನ್ನ ಅಪರಾಧಗಳನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದನು.

ಸಂಧಿ : ೪೭

ಚಿಕ್ಕಮಾದಣ್ಣನ ಕಥೆ

ಚಿಕ್ಕ ಮಾದಣ್ಣನೆಂಬ ಭಕ್ತನು ಸಕಳೇಶಮಾದರಸನ ಚರಣಾರಾಧಕನಾಗಿದ್ದನು. ಬಡ ಕಾಯಕದಿಂದ ಜೀವನವನ್ನು ಸಾಗಿಸುತ್ತ ಸಿಕ್ಕಷ್ಟರಲ್ಲಿಯೆ ತೃಪ್ತಿಯಿಂದ ಇರುತ್ತಿದ್ದನು. ಒಂದು ದಿವಸ ರಾತ್ರಿ ಇದ್ದಕ್ಕಿದ್ದಂತೆ ಅವನು ತೀರಿಕೊಂಡನು. ಅವನ ಹೆಂಡತಿ ನೆರೆಯವರಿಗೆ ಗೊತ್ತಾಗಗೊಡದೆ ಪಾದೋದಕದಿಂದ ಶವವನ್ನು ತೊಳೆದು ಭಸಿತವನ್ನು ಪೂಸಿ ಕಂಬಕ್ಕೆ ಒರಗಿಸಿ ಕುಳ್ಳಿರಿಸಿದಳು. ಸಮಾಧಿಗಾಗಿ ದೇವರ ಕೋಣೆಯಲ್ಲಿ ಕುಳಿ ತೋಡತೊಡಗಿದಳು. ಆ ಸಪ್ಪಳಕ್ಕೆ ಅವರ ಚಿಕ್ಕ ಬಾಲಕನಿಗೆ ಎಚ್ಚರವಾಯಿತು. ಎದ್ದು ಬಂದು "ಅವ್ವಾ, ಅಪ್ಪ ಹೀಗೇಕೆ ಸೆಟೆಗೊಂಡು ಕೂತಿದ್ದಾನೆ? ಮಾತಾಡುವುದಿಲ್ಲವೇಕೆ? ನಿನ್ನ ಮೇಲೆ ಸಿಟ್ಟೇ? ಇಲ್ಲಿ ನೀನೇನು ನಡೆಸಿದ್ದೀ? ಪೂಜೆಯ ಜಗುಲಿಯನ್ನು ಏಕೆ ಅಗೆಯುತ್ತೀ? ಅಪ್ಪನ ಸಿಟ್ಟನ್ನು ಇಳಿಸೋಣ ಬಾ." ಎಂದು ಹಲವಾರು ಪ್ರಶ್ನೆಗಳನ್ನು ಕೇಳುತ್ತ ಹಂಬಲಿಸಿದನು. "ಅವರ ಸಿಟ್ಟು ತಿದ್ದುವಂತಹದಲ್ಲ. ನೀನು ಸುಮ್ಮನೆ ಹೋಗಿ ಮಲಗಿಕೋ" ಎಂದಳು ತಾಯಿ. ಬಾಲಕನು ಮಲಗದೆ ಸಕಳೇಶಮಾದರಸರಲ್ಲಿಗೆ ಧಾವಿಸಿದನು. "ಅಪ್ಪ ಸೆಟಗೊಂಡು ಕೂತಿದ್ದಾನೆ. ಮಾತಾಡಲೊಲ್ಲ. ಅವ್ವ ಜಗಲಿ ಅಗೆಯುತ್ತಿದ್ದಾಳೆ. ಅಪ್ಪನ ಸಿಟ್ಟನ್ನು ತಿದ್ದಿರಿ. ಬನ್ನಿ ಅಯ್ಯಾ" ಎಂದು ಮೊರೆಯಿಟ್ಟನು. ಮಾದರಸನು ಬಂದು ಎಲ್ಲವನ್ನೂನೆ ಕೂಡಿ ಅರಿತು, "ಇದೇನು ಹೀಗೆ ಕುಳಿತೆ ಚಿಕ್ಕಮಾದಣ್ಣಾ, ಏಳೇಳು, ಲಿಂಗಪೂಜೆಯ ಹೊತ್ತಾಯಿತು" ಎಂದು ಕರೆದನು. ಕೂಡಲೆ ಚಿಕ್ಕಮಾದಣ್ಣನು ದಾರಿದಣುವಿನಿಂದ ಒರಗಿದ್ದವನು ಎದ್ದಂತೆ ಎದ್ದು ಮಾದರಸನಿಗೆ ನಮಸ್ಕರಿಸಿದನು. ಬಾಲ ಲಿಂಗಣ್ಣನ ಮುಗ್ಧಭಕ್ತಿಯಿಂದಾಗಿ ತಂದೆಗೆ ಪ್ರಾಣದಾನ ಮಾಡಿದ ಮಹಾಮಹಿಮನೆಂದು ಸಕಲರೂ ಮಾದಿರಾಜನನ್ನು ಕೊಂಡಾಡಿದರು.

ಸಂಧಿ : ೪೭

ಕದಿರ ರೇಮಯ್ಯನ ಕಥೆ

ಕದಿರ ರೇಮಯ್ಯನೆಂಬ ಗುರುಮೂರ್ತಿ ಒಮ್ಮೆ ತನ್ನ ಗುರುವಿನ ದರ್ಶನಕ್ಕಾಗಿ ಹೊರಟಿದ್ದನು. ಮಧ್ಯೆ ಪೂಜಾಸಮಯವಾದುದರಿಂದ ಒಂದೂರಲ್ಲಿ ಒಬ್ಬ

CC-0. Jangamwadi Math Collection. Digitized by eGangotri

ಭಕ್ತನ ಮನೆಗೆ ಹೋದನು. ಸೋಮನಾಥನೆಂದು ಆತನ ಹೆಸರು; ಹೆಂಡತಿ ಅಣ್ಣಲದೇವಿ, ಮಗ ಮಲಿನಾಥ. ಮೂವರೂ ಭಕ್ತಿಯಿಂದ ರೇಮಯ್ಯನನ್ನು ಆರಾಧಿಸಿ ಪ್ರಸಾದವನ್ನು ಕೈಕೊಂಡರು. ರೇಮಯ್ಯನು ಗುರುಸನ್ನಿಧಿಗೆ ಬಿಜಯ ಮಾಡಿದನು.

ಇತ್ತ ತಾಯಿ ಕಾಕುಳ್ಳು ಆಯ್ದು ತರಲು ಅಡವಿಗೆ ಹೋಗಿದ್ದಳು. ಮಗ ಮಲಿನಾಥನೂ ಸಂಗಡ ಹೋಗಿದ್ದನು. ಬರುವಾಗ ಒಂದು ವಿಷಸರ್ಪ ಕಚ್ಚಿ ಹುಡುಗನು ಮಡಿದನು. ತಾಯಿ ಅದಕ್ಕೆ ಅಳಲಲಿಲ್ಲ ಬಳಲಲಿಲ್ಲ, ವಿಧಿಯನ್ನು ಬಯ್ಯಲಿಲ್ಲ, ಶಿವನನ್ನು ದೂರಲಿಲ್ಲ. ಗಂಡಹೆಂಡತಿ ಕೂಡಿ ಮನೆಯೊಳಗೆ ವೇದಿಕೆಯನ್ನಗಿದು ಸಮಾಧಿಗೊಳಿಸಿ ಇದ್ದುಬಿಟ್ಟರು. ಕದಿರರೇಮಯ್ಯನು ಗುರುವಿನ ದರ್ಶನಾಶೀರ್ವಾದ ಪಡೆದು ಏಳು ದಿನಗಳ ತರುವಾಯ ಮರಳಿ ಬರುತ್ತ ಲಿಂಗಾವಸರಕ್ಕೆ ಆ ಮನೆಯಲ್ಲಿಯೇ ತಂಗಿದನು. ಪೂಜೆ ಮುಗಿದು ಪ್ರಸಾದಭೋಗಕ್ಕೆ ಕುಳಿತಾಗ, "ಏಕೆ, ಮಗು ಕಾಣುವುದಿಲ್ಲ, ಕರೆಯಿರಿ" ಎಂದನು. ತಾಯಿ ಕರೆಯಲೊಲ್ಲದೆ, ಸುಮ್ಮನಿರಲಾರದೆ "ಒಡೆಯಾ, ನೀವರಿಯದ್ದಾವುದು? ಮಗು ನಿಮ್ಮ ಆಡಿಗಳಡಿಯಲ್ಲಿಯೇ ಇರುತ್ತಿರಲು ಬೇರೆಲ್ಲಿಂದ ಕರೆಯುವುದು?" ಎಂದಳು. ರೇಮಯ್ಯನು ಸಮಾಧಿಯನ್ನು ಆಗೆಯಿಸಿ 'ಮಲಿನಾಥಾ' ಎಂದು ಕರೆದನು. ಅವನು ಮೆಲ್ಲನೆ ಕಣ್ದೆರೆದು ರೇಮಯ್ಯನಿಗೆ ಶರಣೆಂದನು. ತಾಯಿ ಮಗು ವನ್ನೆತ್ತಿಕೊಂಡು ನಮಿಸಿದಳು.

ಸಂಧಿ : ೪೮ ರಿಂದ ೫೧

ಏಕಾಂತರಾಮಯ್ಯನ ಕಥೆ

ಏಕಾಂತರಾಮಯ್ಯನೆಂಬ ಭಕ್ತನು ಅಬ್ಬಲೂರಲ್ಲಿ ಇರುತ್ತಿದ್ದನು. ದಿನಾಲು ಲಿಂಗಾರ್ಚನೆಯ ಅನಂತರ ಪ್ರಮಥಲೋಕಕ್ಕೆ ಹೋಗಿ ಪ್ರಮಥರೊಡನೆ ಅನುಭಾವಗೋಷ್ಠಿಯಲ್ಲಿ ಕೆಲಕಾಲವಿದ್ದು ಮತ್ತೆ ಮರ್ತ್ಯಕ್ಕೆ ಬರುತ್ತಿದ್ದನು. ದಿಗ್ದೆಸೆಯಲ್ಲಿ ಪಸರಿಸಿದ ಬಸವರಾಜನ ಕೀರ್ತಿಯನ್ನು ಕೇಳಿ ಕಲ್ಯಾಣಕ್ಕೆ ಬಂದು ಆತನನ್ನು ಪ್ರಚ್ಛನ್ನರೂಪದಿಂದ ನೋಡಿ ಅಲ್ಲಿಯೆ ಇರುತ್ತಿದ್ದನು.

ಒಮ್ಮೆ ಒಬ್ಬ ಜೈನನು ಕೆರಹುಗಾಲಿಂದ ಶಿವಾಲಯವನ್ನು ಹೊಕ್ಕುದನ್ನು ಕಂಡು ರಾಮಯ್ಯನು "ಎಲವೋ ಜೈನಾ, ಕೆರಹುಗಾಲಿಂದ ಗುಡಿಯೊಳಗೆ ಬರುವರೆ? ಅವುಗಳನ್ನು ಹೊರಗೆ ಕಳೆದು ತಪ್ಪಾಯಿತೆಂದು ಶಿವನಿಗೆ ವಂದಿಸು. ಇಲ್ಲದಿದ್ದರೆ ನಿನ್ನನ್ನು ಕೊಂದುಹಾಕುವೆ" ಎಂದು ಗರ್ಜಿಸಿದನು. ಅದಕ್ಕೆ ಜೈನನು "ಅಹಹಾ, ಶಿವಾಲಯಗಳಿಗೆ ನೀನೊಬ್ಬ ದಿಕ್ಕುಂಟಾದೆಯಲ್ಲಾ! ನಿನ್ನ ತಲೆಯನ್ನು

CC-0. Jangamwadi Math Collection. Digitized by eGangotri

ಕಡಿದುಕೊಂಡು ಶಿವನಿಂದ ಮರಳಿ ಪಡೆ; ಎಂದರೆ ನೀನೇ ಭಕ್ತ ಶಿವನೇ ವೈಪ ಎಂದೇನು" ಎಂದು ಪಂಥವನ್ನೇ ಒಡ್ಡಿದನು. ನಮ್ಮ ವೀರಮಾಹೇಶ್ವರರಿಗೆ ಶಿರವನ್ನರ್ಪಿಸಿ ಪಡೆಯುವುದೇನೂ ಜೋದ್ಯವಲ್ಲ. ಅವರ ಮಹಿಮೆಗಳನ್ನು ಕೇಳು:

ಮಹಾಕಾಳನೆಂಬ ಭಕ್ತನು ಜಂಬೂರೊಳಗೆ ಶಿವನಿಗೆ ಶಿರವನ್ನರ್ಪಿಸಿ ಮತ್ತೆ ಅಟ್ಟಿಗೆ ಅಂಟಿಸಿ ಪ್ರಾಣವನ್ನು ಪಡೆದನು. ಇದನ್ನು ಕೇಳಿದ ಗೋವಿಂದಭಟ್ಟಾರಕ ನೆಂಬವನು, 'ಶಿವಾರ್ಪಿತ ಮಸ್ತಕವನ್ನು ತಿರುಗಿ ಅಟ್ಟಿಗೆ ಹತ್ತಿಸಿಕೊಳ್ಳುವರೇ? ಇದು ತಪ್ಪು' ಎಂದು ತನ್ನ ಶಿರವನ್ನು ಕಡಿದು ಶಿವನಿಗರ್ಪಿಸಿ ಮೂರು ದಿನಗಳ ಮೇಲೆ ಹೊಸ ತಲೆಯನ್ನು ಪಡೆದನು. ಇದನ್ನು ಕೇಳಿದ ಮೊರಟಿಪ ಬಂಕಿದೇವನು 'ಮೂರು ದಿನ ತನಕ ಶಿವನೇನು ಸತ್ತಿದ್ದನೆ? ಇದ್ದರೆ ಹೀಗೇಕಾಯಿತು' ಎಂದು ತನ್ನ ತಲೆಯನ್ನು ತರಿದು ಶಿವನಿಗೆ ಅರ್ಪಿಸಿದನು. ಕೂಡಲೆ ಹೊಸ ತಲೆ ಚಿಗುರಿತು. ಅದನ್ನು ತರಿದರ್ಪಿಸಿದನು. ಮತ್ತೆ ಚಿಗುರಿತು. ಹೀಗೆ ತರಿದಂತೆ ಹೊಸ ತಲೆ ಮೊಳೆಯುತ್ತಿತ್ತು; ಮೊಳಿಮೊಳಿತಂತೆ ತರಿಯುತ್ತಿದ್ದನು. ಆಗ ಶಿವನು "ಎಲವೊ ಬಂಕಾ, ಸಾಕು; ನಾನು ಸೋತೆನು, ನೀನು ಗೆದ್ದೆ" ಎಂದನು.

ಇಂತಹರು ಅನೇಕರು ಲೋಕದಲ್ಲಿದ್ದಾರೆ. ಇನ್ನು ನಿಮ್ಮ ಆರುಹತರನ್ನು ಅಪಹರಿಸಿದ ನಮ್ಮ ಆದ್ಯರ ಮಹಿಮೆಗಳನ್ನು ಕೇಳು:

ತಿರುವಾಕರೀಶನ ಕಥೆ

ತಿರುವಾಕರೀಶನೆಂಬ ಜೈನಮುನಿ ತಿರುನಾವಲೂರಲ್ಲಿರುತ್ತಿದ್ದನು. ಹೊಟ್ಟೆ ಶೂಲೆಯಿಂದ ಬಹುವಾಗಿ ನರಳುತ್ತ ಹೊರಳಾಡುವ ಆತನಿಗೆ ಅಕ್ಕ "ಇದು ಸಾಮಾನ್ಯ ಶೂಲೆಯಲ್ಲ. ಮಂತ್ರತಂತ್ರಗಳಿಂದ ಹೋಗದು. ಶೂಲಿಮಂತ್ರದಿಂದ ಶೂಲೆ ಹೋಗುವುದು" ಎಂದೆನ್ನಲು ಆತನೊಪ್ಪಿದನು. ಪಂಚಾಕ್ಷರೀ ಮಂತ್ರದಿಂದ ಮಂತ್ರಿಸಿದ ಭಸ್ಮವನ್ನು ಅಕ್ಕನು ಆತನಿಗೆ ಸವರಿದಳು. ಶೂಲೆ ಬಿಟ್ಟಿತು. ತಿರುವಾಕರೀಶನು ಪೊಗಳೂರ ಹೊಲೆಗೇರಿಯಲ್ಲಿದ್ದ ಗುರುಮೂರ್ತಿಯನ್ನು ಕಂಡು ವಂದಿಸಿ ಆತನಿಂದ ಶಿವದೀಕ್ಷೆಯನ್ನು ಪಡೆದನು. ಆಗ ಜೈನರೆಲ್ಲಾ ಕೂಡಿ ಆತನನ್ನು ಪತಿತನೆಂದು ಆನೆಯ ಕಾಲಿಗೆ ತಳ್ಳಿದರು; ಅದು ಅವನನ್ನು ಮುಟ್ಟದೆ ಹೋಯಿತು. ಅವನು ವಿಷಕ್ಕೆ ಸಾಯಲಿಲ್ಲ, ಕಿಚ್ಚಿಗೆ ಸುಡಲಿಲ್ಲ. ಕೊನೆಗೆ ಭೀತಿಯಿಂದ ತನಗೆ ಶರಣುಬಂದ ಜೈನರನ್ನು ಮನ್ನಿಸಿ ತಿರುವಾಕರೀಶನು ಶಿವಭಕ್ತರನ್ನಾಗಿ ಮಾಡಿದನು. ಬಸದಿಗಳನ್ನು ಕೆಡವಿ ಜಿನಪ್ರತಿಮೆಗಳನ್ನು ಒಡೆದು ಹಾಕಿದನು.

ಇರಿತ್ತಾಂಡಿಯ ಕಥೆ

ಆರೂರೊಳಗೆ ಇರಿತ್ತಾಂಡಾರಿಯೆಂಬ ಭಕ್ತನಿದ್ದನು. ಹುಟ್ಟುಗುರುಡ. ಶಿವ ಮಜ್ಜನಕ್ಕಾಗಿ ಕೆರೆ ತೋಡಬೇಕೆಂದು ಬಗೆದನು. ಗುಡಿಗೂ ಕೆರೆಯಗುಳುವ

CC-0. Jangamwadi Math Collection. Digitized by eGangotri

ಸ್ಥಳಕ್ಕೂ ನಡುವೆ ಕುರುಹಿಗಾಗಿ ಹಗ್ಗವನ್ನು ಕಟ್ಟಿದನು. ಆಗೆದಗೆದು ಮಣ್ಣನ್ನು ತುಂಬಿಕೊಂಡು ಹಗ್ಗದ ಗುಂಟ ಬಂದು ಚೆಲ್ಲುತ್ತಿದ್ದನು. ವಿಘ್ನಕಾರಿಗಳಾದ ಪರ ಸಮಯಿಗಳು ಹಲವು ತೊಂದರೆಗಳನ್ನೊಡ್ಡಿದರು. ಕೊನೆಗೆ ಕಟ್ಟಿದ ಹಗ್ಗವನ್ನು ಹರಿದುಹಾಕಿದರು. ಆಗ ಇರಿತ್ತಾಂಡಿ ಶಿವನಿಂದ ಕಣ್ಣುಗಳನ್ನು ಪಡೆದು ಜೈನರನ್ನು ಕುರುಡರನ್ನಾಗಿ ಮಾಡಿ ಜಿನಮೂರ್ತಿಗಳನ್ನು ಭಗ್ನಗೊಳಿಸಿದನು.

ಕೂನಪಾಂಡ್ಯನ ಕಥೆ

ಶ್ರೀಕಾಳಿಯೆಂಬ ನಗರಿಯಲ್ಲಿ ಗುಹನಂಶದಿಂದ ಪಿಳ್ಳೈಯನಾಯನಾರು ಜನಿಸಿದನು. ಒಮ್ಮೆ ತಂದೆ ಮಗುವನ್ನು ಎತ್ತಿಕೊಂಡು ಕೊಳಕ್ಕೆ ಸ್ನಾನಕ್ಕೆ ಹೋದನು: ಅವನು ಶಿಶುವನ್ನು ದಂಡೆಯಲ್ಲಿರಿಸಿ ಸ್ನಾನ ಮಾಡುತ್ತಿದ್ದನು. ಆಕಾಶದಲ್ಲಿ ಹೋಗುತ್ತಿದ್ದ ಶಿವಪಾರ್ವತಿಯರು ಮಗುವನ್ನು ನೋಡಿದರು. ಕುಮಾರನನ್ನು ಕಂಡ ಪಾರ್ವತಿಯ ಮೊಲೆಗಳು ತೊರೆದವು. ಆಕೆ ಭೂಲೋಕಕ್ಕೆ ಇಳಿದು ಬಂದು ಮಗುವನ್ನೆತ್ತಿ ಮುಂಡಾಡಿ ಹೊಟ್ಟೆತುಂಬ ಮೊಲೆಯುಣಿಸಿದಳು, ಒಂದು ಬಟ್ಟಲಲ್ಲಿ ಹಾಲನ್ನು ಕರೆದು ಅದರ ಕೈಯಲ್ಲಿ ಕೊಟ್ಟು ಹೊರಟು ಹೋದಳು. ತಂದೆ ಬಂದು ಯಾರು ಬಂದಿದ್ದರು? ಯಾರು ಹಾಲು ಕೊಟ್ಟರು? ಎಂದು ಕೇಳಲು ಮಗು ಆ ಎಂದು ಮೇಲೆ ತೋರಿಸಿತು. ಮಗು ಆ ಮೊಲೆವಾಲಿನ ಪ್ರಭಾವದಿಂದ ಸರ್ವಜ್ಞತ್ವವನ್ನೂ ವಾಕ್ಸಿದ್ಧಿಯನ್ನೂ ಪಡೆಯಿತು.

ಪಿಳ್ಳೈಯ ನಾಯನಾರು ಕಾಳಿನಾಥನನ್ನು ಭಕ್ತಿಯಿಂದ ಸ್ತುತಿಸಲು ಪಾರ್ವತಿ ಆತನಿಗೆ ಸುವರ್ಣತಾಳಗಳನ್ನು ಕೊಟ್ಟಳು; ಶಿವನು ಧವಲಚ್ಛತ್ರ, ಚಾಮರ, ಶಂಖ, ಕಹಳೆ, ಪ್ರಪ್ಪಕ, ಪಲ್ಲಕ್ಕಿ, ಸುವರ್ಣಾಂಸನಗಳನ್ನು ನೀಡಿದನು. ಈ ವೈಭವದೊಡನೆ ಮೆರೆಯುತ್ತ, 'ಪರಸಮಯಕಾನನದಹನ' ಎಂಬ ಬಿರುದನ್ನು ಹೊಗಳಿಸಿಕೊಳ್ಳುತ್ತ ಸಂಚರಿಸಿ ಇನಕುಲೋತ್ತುಂಗ ಚೋಳನನ್ನು ಶಿವಸನ್ನಿಹಿತನನ್ನಾಗಿ ಮಾಡಿದನು. ಎರಡು ಸಾವಿರ ಬೌದ್ಧರ ಓಲಗಸಹಿತವಾಗಿ ವಾದಿಸುವ ಅವರ ಪ್ರಮುಖನನ್ನು ಸೋಲಿಸಿ, ಶರಣು ಬಂದ ಆ ಬೌದ್ಧರನ್ನು ಶಿವಭಕ್ತಿಪರರನ್ನಾಗಿ ಮಾಡಿದನು. ತಿರುಮರಕ್ಕಡ ಎಂಬ ಊರಲ್ಲಿ ಬ್ರಹ್ಮೇಶ್ವರನ ಭದ್ರದ್ವಾರಗಳನ್ನು ಹಾರದೆಗೆಸಿದನು. ತಿರುವಾಲವಾಯಿ ಎಂಬಲ್ಲಿ ಆರುಹತರನ್ನೆಲ್ಲ ಜಯಿಸಿದನು.

ಇಂತು ಮೆರೆಯುತ್ತ ಮಧುರೆಯ ರಾಣಿಯ ಅಪೇಕ್ಷೆಯಂತೆ ಅಲ್ಲಿಗೆ ಬಂದನು. ಜ್ಞಾನಸಂಬಂಧಿಯೆನಿಸಿದ ಶೈವಬಾಲಕನೊಬ್ಬನು ತಾನು ಜಿನಸಮಯ ಧೂಮಧ್ವಜನೆಂಬ ಗರ್ವದಿಂದ ಈ ಊರಿಗೆ ಬಂದಿದ್ದಾನೆ; ಅವನನ್ನು ಕೂಡಲೆ ಹೊರಗೆ ಹಾಕಬೇಕೆಂದು ಜೈನರು ರಾಜನಿಗೆ ಹೇಳಿದರು. "ಆತನು ಚೋಳ

CC-0. Jangamwadi Math Collection. Digitized by eGangotri

ರಾಯನ ಗುರುವು; ಆತನನ್ನು ಸುಮ್ಮನೆ ಹೊರಹೊರಡಿಸಲಾಗದು. ನೀವು ಅವನನ್ನು ವಾದದಲ್ಲಿ ಗೆಲ್ಲುವುದೇ ಲೇಸು" ಎಂದು ಅರಸನು ಹೇಳಿದನು. ಅವರು ವಾದಿಸಿ ಸೋತರು. ಜ್ಞಾನಸಂಬಂಧಿ ಇಳಿದಿದ್ದ ಮನೆಗೆ ರಾತ್ರಿಯಲ್ಲಿ ಕಿಚ್ಚನ್ನಿಟ್ಟರು. ಅಗ್ನಿ ಸುಡಲಂಜಿ ಆತನ ಮುಂದೆ ನಿಲ್ಲಲು, "ಹೋಗು, ಅರಸನ ದೇಹದಲ್ಲಿ ಜ್ವರವಾಗಿ ನೆಲಸು" ಎಂದು ಆತನು ಆಜ್ಞಾಪಿಸಿದ್ದನು. ಅರಸನಿಗೆ ಜ್ವರವೇರಿತು. ಕೆಂಡದಂತಹ ಜ್ವರ. ಮಡದಿ ಮಂಗಾಯಕ್ಕರಸಿಯ ಮತದಿಂದ ಆತನು ಜ್ಞಾನಸಂಬಂಧಿಯ ಮರೆಹೊಕ್ಕನು. ಆತನು ರಾಜನ ದೇಹಕ್ಕೆ ಭಸಿತವನ್ನು ಹೂಸಿದ ಮಾತ್ರಕ್ಕೆ ಜ್ವರವಿಳಿಯಿತು, ಮಾತ್ರವಲ್ಲ ಆತನ ಬೆನ್ನಿನ ಕೂನೂ ಹೊರಟುಹೋಗಿ ಸುಂದರ ಶರೀರಿಯಾದನು. ಕೂನಪಾಂಡ್ಯನೆಂಬ ಹೆಸರು ಹೋಗಿ ಸೌಂದರಪಾಂಡ್ಯನೆಂದೆನಿಸಿದನು.

ಬಳಿಕ ಜೈನಪಂಡಿತರು ದೃಷ್ಟಗಳಿಂದ ಈ ಹುಡುಗನನ್ನು ಗೆಲ್ಲಬೇಕೆಂದು "ಶಿವಮಂತ್ರದ ಮತ್ತು ಜಿನಮಂತ್ರದ ಓಲೆಗಳನ್ನು ಬೆಂಕಿಗೆ ಹಾಕೋಣ. ಯಾವ ಓಲೆ ಸುಡುವುದಿಲ್ಲವೋ ಅದು ಗೆದ್ದಂತೆ" ಎಂದು ಜ್ಞಾನಸಂಬಂಧಿಗೆ ನುಡಿದರು. ಆತನು ಅದಕ್ಕೊಪ್ಪಿದನು. ಅರಸನು ಎರಡು ಓಲೆಗಳನ್ನೂ ಕಿಚ್ಚಿಗೆ ಹಾಕಲು ಜೈನ ಓಲೆ ಸುಟ್ಟು ಶಿವಭಕ್ತನ ಓಲೆ ಥಳಥಳಿಸಿತು. ಜೈನರು "ಇನ್ನೊಮ್ಮೆ ಓಲೆಗಳನ್ನು ಕಾವೇರಿಗೆ ಹಾಕಿ ನೋಡೋಣ; ಪ್ರವಾಹದಲ್ಲಿ ಕೊಚ್ಚಿ ಹೋದ ಓಲೆಯವರು ಸೋತಂತೆ. ಪ್ರವಾಹಕ್ಕೆ ಇದಿರಾಗಿ ಎದ್ದು ಬಂದ ಓಲೆಯವರು ಗೆದ್ದಂತೆ" ಎಂದರು. ಜ್ಞಾನಸಂಬಂಧಿ ಇದಕ್ಕೂ ಒಪ್ಪಿ "ಸೋತವರನ್ನು ಶೂಲಕ್ಕೇರಿಸಬೇಕೆ"ಂದು ಹೇಳಿದನು. ಆ ಮೇರೆಗೆ ಪರೀಕ್ಷಿಸಲು ಈಗಲೂ ಜೈನರು ಸೋತರು. ಹದಿನೆಂಟು ಸಾವಿರ ಜೈನರನ್ನು ಹಿಡಿತರಿಸಿ ಶೂಲಕ್ಕೇರಿಸಲಾಯಿತು.

ನಿಡುಮಾರನ ಕಥೆ

ನಿಡುಮಾರನೆಂಬ ದೊರೆ ಶೈವಮಾರ್ಗಿ. ದೇಶದಲ್ಲಿ ಜೈನರ ಪ್ರಾಬಲ್ಯ. ಅದಕ್ಕೇನು ಮಾಡಬೇಕೆಂದು ಚಿಂತಿಸುತ್ತಿದ್ದ. ಭಕ್ತಿವರ್ಧನನಿಗಾಗಿ ಅವತರಿಸಿದ್ದ ಜ್ಞಾನ ಸಂಬಂಧಿ ಪಾಂಡ್ಯದೇಶದಲ್ಲಿ ಜೈನರನ್ನು ಸೋಲಿಸಿ ಶೂಲಕ್ಕೇರಿಸಿದನೆಂಬುದನ್ನು ಕೇಳಿದನು. ಆಗ ತನ್ನ ದೇಶದ ಎಲ್ಲ ಜೈನರನ್ನೂ ಕರೆತರಿಸಿ, "ಇಷ್ಟು ದಿನ ನಮ್ಮ ಪ್ರಜೆಗಳನ್ನು ಅಜ್ಞಾನಬೋಧನೆಯಿಂದ ಕೆಡಿಸಿದಿರಿ. ಇನ್ನು ಹಾಗೆ ನಡೆಯದು. ಪಾಂಡ್ಯದೇಶದಲ್ಲಿ ಜ್ಞಾನಸಂಬಂಧಿ ಶಿವನೇ ಕರ್ತನೆಂದು ಪ್ರತಿಷ್ಠಿಸಿ ಜೈನರನ್ನು ನಿರ್ಮೂಲ ಮಾಡಿದ್ದಾನೆ. ನೀವು ಶಿವಮತವನ್ನು ಸ್ವೀಕರಿಸಿರಿ; ಇಲ್ಲದಿದ್ದರೆ ನಿಮಗೆ ಶೂಲವೇ ಗತಿ" ಎಂದು ನುಡಿದು, ಶಿವಭಕ್ತರಾದವರನ್ನು ಉಳಿಸಿ ಒಲ್ಲದವರನ್ನು ಶೂಲಕ್ಕೇರಿಸಿದನು.

CC-0. Jangamwadi Math Collection. Digitized by eGangotri

ನಮಿನಂದಿಯ ಕಥೆ

ಎಲೊ ಜೈನಾ, ಇನ್ನೂ ಕೇಳು:

ನಮಿನಂದಿಯೆಂಬ ಗಣೋತ್ತಮನು ಚಿಲ್ಲತ್ತಿರುಪದೂರಲ್ಲಿ ತುಪ್ಪವನ್ನು ಬೇಡಿ ತಂದು ಶಿವನಿಗೆ ಸಾವಿರ ದೀಪಗಳ ನೇಮವನ್ನು ನಡೆಸುತ್ತಿದ್ದನು. ಅದನ್ನು ಸೈರಿಸದೆ ಜೈನರು ಊರಲ್ಲಿ ಆತನಿಗೆ ತುಪ್ಪ ಹುಟ್ಟದಂತೆ ಮಾಡಿದರು. ಆಗ ನಮಿನಂದಿ ಶಿವನ ಮುಂದೆ "ದೇವಾ, ನನ್ನ ನೇಮ ಕೆಡುವ ಹೊತ್ತು ಬಂದಿತು; ಸಾಯುವೆನೆ"ಂದು ಕೊರಳಿಗೆ ಖಡ್ಗವನ್ನೆತ್ತಿದನು. ಶಿವನು ಪ್ರತ್ಯಕ್ಷವಾಗಿ "ವರದ ಸೋಮವ್ವೆಯಂತೆ, ನಮ್ಮ ಮಜ್ಜನ ಬಾವಿಯ ನೀರಿಂದ ದೀಪ ಹೊತ್ತಿಸು. ಜೈನರ ಹಸುಗಳು ಇಂದೇ ಸಾಯುವವು" ಎಂದು ಬೆಸಸಿದನು. ನಮಿನಂದಿ ಬಾವಿಯ ನೀರಿನಿಂದ ಕೋಟಿದೀಪಗಳನ್ನು ಹಚ್ಚಿದನು. ಜೈನರ ಹಸುಗಳೆಲ್ಲ ಇದ್ದಕ್ಕಿದ್ದಂತೆ ಸತ್ತುಬಿದ್ದುವು. ಅವರು ಹೌಹಾರಿದರು. ಆ ಶಿವಭಕ್ತನದೇ ಪ್ರತಾಪ ವೆಂದು ತಿಳಿದು ಆತನಿಗೆ ಮರೆಹೊಕ್ಕು ಕ್ಷಮೆ ಬೇಡಿದರು. ನಮಿನಂದಿ ಅವರಿಗೆ ಶಿವದೀಕ್ಷೆಯಿತ್ತು, ಅವರ ಹಸುಗಳನ್ನು ಬದುಕಿಸಿದನು.

ಸಾಂಖ್ಯತೊಂಡನ ಕಥೆ

ಚೋಳರಾಜ್ಯದ ಶಾಂತಮಂಡಲದಲ್ಲಿ ಬೌದ್ಧನಾಗಿ ಜನಿಸಿದ ಸಾಂಖ್ಯ ತೊಂಡನಿಗೆ ದೊಡ್ಡವನಾದ ಬಳಿಕ ಆ ಧರ್ಮದಲ್ಲಿ ಅಸಡ್ಡೆಯೂ ಶಿವಭಕ್ತಿಯಲ್ಲಿ ವಾಂಛೆಯೂ ಉಂಟಾಯಿತು. ಹೊಳೆಯಾಚೆಯಲ್ಲಿದ್ದ ಒಂದು ಶಿವಾಲಯಕ್ಕೆ ಹೋಗಿ "ಶಿವ ಶಿವಾ, ನನ್ನನ್ನು ಈ ಹೀನಸಮಯದವರಲ್ಲಿ ಹುಟ್ಟಿಸಬಹುದೆ? ನಿನ್ನನ್ನು ಪೂಜಿಸುವ ಉಪಾಯವೊಂದೂ ಕಾಣದಲ್ಲಾ" ಎಂದು ಹಲುಬಿ "ಜಿನ ಬೌದ್ಧ ಚಾರ್ವಾಕ ಈ ಮೂರು ದುಸ್ಸಮಯಗಳು ನಿರ್ಮೂಲವಾಗಲೆಂದು ನಿನಗೆ ದಿನಾಲು ಮೂರು ವೇಳೆ ಮೂರು ಕಲ್ಲುಗಳಿಂದ ಹೊಡೆಯುವೆನು" ಎಂದು ನಿಶ್ಚಯಿಸಿದನು. ಹೀಗೆ ಕೆಲದಿನ ನಡೆಯುತ್ತಿರಲು ಒಮ್ಮೆ ಹೊಳೆ ಕಟ್ಟಿ ಮೂರು ದಿನ ಗುಡಿಗೆ ಹೋಗಲಾಗಲಿಲ್ಲ. ನಾಲ್ಕನೆಯ ದಿನ ಹೋಗಿ ಕಳೆದ ಮೂರು ದಿನಗಳ ಬಗ್ಗೆ ಒಂಬತ್ತು ಕಲ್ಲುಗಳಿಂದ ಹೊಡೆಯುವುದೇನು, ಒಂದು ದೊಡ್ಡ ಕಲ್ಲನ್ನು ಎತ್ತಿಹಾಕುವೆನೆಂದು ಸಾಂಖ್ಯತೊಂಡನು ಅನುವಾದನು. ಆಗ ಶಿವನು ಪ್ರಸನ್ನನಾಗಿ, ತನ್ನ ಮೇಲೆ ಬೀಳುವ ಕಲ್ಲನ್ನು ಆಚೆಗೆ ತೊಲಗಿಸಿ, "ಭಕ್ತಾ, ಅಭೀಷ್ಟವೇನು?" ಎಂದು ಕೇಳಿದನು. ಅದಕ್ಕವನು "ನೀನೊಲಿದು ಕೈಕೊಂಡೆ ಸಾಕು. ಯಾವಾಗಲೂ ನಿನ್ನುತ್ತಮಾಂಗದ ಭಾಗಕ್ಕೆ ಈ ಕಲ್ಲುಗಳನ್ನು ಹೂಗಲ್ಲಾಗಿ ಎಲ್ಲ ದೇಗುಲಗಳಲ್ಲಿ ಇರಿಸು" ಎಂದು ಬೇಡಿಕೊಂಡನು. ಆಗಮ ವಿರೋಧಿಗಳನ್ನೆಲ್ಲ ಪರಿಹರಿಸಿದನು.

CC-0. Jangamwadi Math Collection. Digitized by eGangotri

ಕೋಪ್ಪೂರರು ಬೊಮ್ಮಯ್ಯನ ಕಥೆ

ಬೊಮ್ಮಯ್ಯನೆಂಬ ಪುರಾರಿಭಕ್ತನು ವಾದದಲ್ಲಿ ಆರುಹತರನ್ನೆಲ್ಲ ಸೋಲಿಸಿದನು. ಆಗವರು ಒಂದು ಆಲದ ಮರವನ್ನು ತೋರಿಸಿ "ಇದನ್ನು ನೀನು ಸುಡು. ಇಲ್ಲವೆ ನಾವು ಸುಡುವೆವು, ನೀನು ಬದುಕಿಸು" ಎಂದರು. "ಜನಾಶ್ರಯವಾದ ಮರವನ್ನು ಸುಡಬಹುದೆ? ಬದುಕಿಸುವೆನು" ಎಂದು ಬೊಮ್ಮನೆಂದನು. ಮಂತ್ರ ತಂತ್ರಗಳಿಂದ ಅವರು ಸುಟ್ಟರು; ಬೊಮ್ಮಯ್ಯನು ಆ ಬೂದಿಯ ಮೇಲೆ ಭಸಿತವನ್ನು ತಳಿದೊಡನೆ ಮರವು ಮುನ್ನಿನಂತೆ ಎದ್ದು ತಳತಳಿಸಿತು. ಕೋಪ್ಪೂರ ಬಸದಿಗಳೆಲ್ಲವನ್ನು ಕೆಡಹಿ ಬೊಮ್ಮಯ್ಯನು ಜೈನರನ್ನೆಲ್ಲ ಭಕ್ತರನ್ನಾಗಿ ಮಾಡಿ ಸಲಹಿದನು.

ದೇವರದಾಸಿಮಯ್ಯನ ಕಥೆ

ಇನ್ನೂ ಕೇಳು ಜೈನಾ: ಹೊಟಲಕೆರೆ ಎಂಬಲ್ಲಿ ಏಳುನೂರು ಬಸದಿಗಳಿದ್ದವು; ಇಪ್ಪತ್ತು ಸಾವಿರ ಜಿನಮುನಿಗಳಿದ್ದರು; ಅವರ ಗುರು ರಾಜನಿಗೆ ಆಚಾರ್ಯನಾಗಿದ್ದನು. ಅರಸು ದೇಸಿಂಗರಾಯನ ಮಡದಿ ಸುಗ್ಗಲದೇವಿ ಶಿವಭಕ್ತೆ. ದೇವರದಾಸಿಮಯ್ಯನ ಶಿಷ್ಯೆ. ಆಕೆ ಈ ಸ್ಥಿತಿಯನ್ನು ಗುರುವಿಗೆ ತಿಳಿಸಿದಳು. ಆತನು ಭಕ್ತರೊಡನೆ ಅಲ್ಲಿಗೆ ಹೋದನು. ಅರಸಿ ಗುರುವನ್ನು ಆದರದಿಂದ ಬರಮಾಡಿಕೊಂಡಳು. ಆಗ ದೇಸಿಂಗರಾಯನು "ಇದೇನು ತಿಳಿಗೇಡಿಯಂತೆ ಮಾಡುವೆ? ಗಂಡನಿಗೂ ಹೆಂಡತಿಗೂ ಬೇರೆ ಬೇರೆ ಗತಿಗಳಿವೆಯೆ? ಸತಿಗೆ ಪತಿಯೇ ಗುರು. ಇವರನ್ನು ಕಳುಹಿಬಿಡು" ಎಂದು ಹೇಳಿದನು. ಆಗ ಸುಗ್ಗಲೆ "ಅಧಮ ಆರುಹತರ ಸೊಕ್ಕನ್ನು ಮುರಿಯಲು ಶಿವನೇ ಬಂದಿದ್ದಾನೆ. ಈ ಗುರುವನ್ನು ಹಿಂದಕ್ಕೆ ಕಳುಹುವವಳಲ್ಲ ನಾನು. ಬೇಕಾದರೆ ನೀನು ನನ್ನನ್ನು ಬಿಟ್ಟು ಬೇರೆಯವಳನ್ನು ಮದುವೆಯಾಗು" ಎಂದು ನಿಷ್ಠುರವಾಗಿ ನುಡಿದಳು.

ಬಳಿಕ ದೊರೆ ಆರುಹತರನ್ನು ಸಭೆಗೆ ಕರೆದನು. ಸುಗ್ಗಲೆ ದಾಸಿಮಯ್ಯನನ್ನು ಬರಮಾಡಿಕೊಂಡಳು. ದಾಸಿಮಯ್ಯನು ಶ್ರುತ್ಯಾಗಮ ಪ್ರಮಾಣಗಳಿಂದ ರಾಮನಾಥನೇ ಲೋಕದೇವನೆಂದು ವಾದಿಸಿದನು. ಅದಕ್ಕೆ ಜೈನರಿತ್ತಿದ ಪ್ರಶ್ನೆಗಳಿಗೆಲ್ಲ ಉತ್ತರವಿತ್ತನು. ವೀರಶೈವ ತತ್ತ್ವಜ್ಞಾನವನ್ನು ವಿವರವಾಗಿ ಬೋಧಿಸಿದನು. ನಿರುತ್ತರರಾದ ಜೈನರು ಕೊನೆಗೊಂದು ಕುತಂತ್ರವನ್ನು ಹೂಡಿದರು. ಕಾಳಸರ್ಪವೊಂದನ್ನು ಹರವಿಯೊಳಗಿಟ್ಟು ಮುಚ್ಚಿ "ಇದರಲ್ಲಿ ಶಿವನುಂಟಿ?" ಎಂದು ಕೇಳಿದರು. "ಉಂಟುಂಟು, ಇಲ್ಲದುಂಟೆ?" ಎಂದು ದಾಸಿಮಯ್ಯನು ಹರವಿಯಲ್ಲಿ ಕೈತೂರಿ ಹಾವನ್ನು ಹೊರಕ್ಕೆ ತೆಗೆದನು. ಅದು ಆತನ ಕರಸ್ಥಲದಲ್ಲಿ ಅಡಗಿತು. ಊರ ಜನವೆಲ್ಲ ಈ ಮಹಿಮೆಯನ್ನು ಹೊಗಳಿತು. ರಾಜನು ಜೈನಮತವನ್ನು ತ್ಯಜಿಸಿ ಭಕ್ತನಾದನು. ಜೈನರು ದೀಕ್ಷೆಯನ್ನು ಹೊಂದಿ ಸುಖಿಗಳಾದರು.

CC-0. Jangamwadi Math Collection. Digitized by eGangotri

ಮಾರುಡಿಗೆಯ ನಾಚಯ್ಯನ ಕಥೆ

ಮತ್ತೂ ಕೇಳು ಜೈನಾ: ಮಾರುಡಿಗೆಯಲ್ಲಿ ಸಾವಿರದ ಏಳ್ನೂರು ಬಸದಿ ಗಳಿದ್ದು ಒಂದು ಶಿವಾಲಯವಿದ್ದಿತು. ಜೈನರು ಅದನ್ನು ಕೆಡವಿ ಪೂಜಾರಿಯನ್ನು ಬಡಿದರು. ಆಗ ನಾಚಯ್ಯನೆಂಬ ಭಕ್ತನು ಶಿವದ್ರೋಹಿಗಳನ್ನು ಬಗ್ಗುಬಡಿಯದೆ ಶಿವನಿಗೆ ನೈವೇದ್ಯವಿಕ್ಕೆನೆಂದು ಶಪಥದಿಂದ ಹೊರಟನು. ಹತ್ತು ದಿನಗಳಲ್ಲಿ ಹನ್ನೆರಡು ಸಾವಿರ ಶಿವಭಕ್ತರನ್ನು ಸಾವಿರದೇಳ್ನೂರು ಲಿಂಗಗಳೊಡನೆ ಕರೆ ತಂದನು. ಊರಿಗೆ ಮುತ್ತಿಗೆಯಿಕ್ಕಿ, ಜೈನರೊಡನೆ ಕಾದಿದನು. ಜೈನರೆಲ್ಲ ಮಡಿ ದರು ಇಲ್ಲವೆ ಮದವುಡುಗಿ ಭಕ್ತರಾದರು. ಜಿನಮೂರ್ತಿಗಳೆಲ್ಲ ನಷ್ಟವಾಗಿ ಆ ಸ್ಥಳದಲ್ಲಿ ಶಿವಲಿಂಗಗಳು ಪ್ರತಿಷ್ಠಿತವಾದವು. ಇದನ್ನು ನೀನರಿಯೆಯಾ?

ಸೋಮಣ್ಣನ ಕಥೆ

ಇನ್ನೂ ಕೇಳು ಜೈನಾ: ಪುಲಿಗೆರೆಯಲ್ಲಿ ಸೋಮಣ್ಣನೆಂಬವನು ದಿನಾಲು ಮೂರು ಹೊತ್ತು ಲಿಂಗಸ್ಪರ್ಶನದ ನೇಮದವನಾಗಿದ್ದನು. ಒಂದು ದಿನ ಅವನಿಗೆ ಕಣ್ಪೇನೆಯಾಯಿತು. ಶಿವಾಲಯಕ್ಕೆ ಹೋಗಲಾರದೆ ಅಂದು ಊಟವಿಲ್ಲದೆ ಉಳಿದನು. ಅವನ ಮಕ್ಕಳೆಲ್ಲ ಜೈನರಾಗಿದ್ದರು. ಅವರು ಕುಹಕದಿಂದ "ಭಕ್ತಾ, ಗುಡಿಗೆ ಕರೆದೊಯ್ಯುವೆವು. ನಡೆ" ಎಂದು ಒಂದು ಬಸದಿಗೆ ಕರೆದುಕೊಂಡು ಹೋದರು. "ಇದೋ ಶಿವಲಿಂಗ"ವೆನ್ನುತ್ತ ಜಿನನ ತಲೆಯಮೇಲೆ ಆತನ ಕೈಯ ನ್ನಿರಿಸಿದರು. ಸೋಮಣ್ಣನು ಕೈಯಾಡಿಸಿ ಕೈಮುಗಿದು ನಮಸ್ಕರಿಸಿದನು. ನೆರೆ ದವರು ಸೋಮಣ್ಣ ಜಿನನಿಗೆ ವಂದಿಸಿದನೆಂದು ಗಹಗಹಿಸಿ ನಕ್ಕರು. ಅವನು ಕುಪಿತನಾಗಿ "ನಾನು ಜಿನನಿಗೆ ವಂದಿಸುವವನೇ? ಶಿವನನ್ನು ತೋರಿಸುವೆ" ಎಂದು ಕಣ್ಣ ಕಟ್ಟನ್ನು ಬಿಚ್ಚಿ ಮೂರ್ತಿಯನ್ನು ನೋಡಿದನು. ಆ ಕ್ಷಣವೆ ಜಿನ ಮೂರ್ತಿ ಛಟಛಟನೆ ಸೀಳಿ ಇಕ್ಕಡೆಗಳಲ್ಲಿ ಬಿದ್ದು, ಅಲ್ಲಿ ಸೋಮೇಶ್ವರನು ಲಿಂಗ ರೂಪದಲ್ಲಿ ಉದ್ಭವಿಸಿದನು.

ವೈಜಕವ್ವೆಯ ಕಥೆ

ಪರಿವಳಿಕೆಯಲ್ಲಿ ವೈಜಕವ್ವೆ ಒಬ್ಬ ಶಿವಭಕ್ತೆ; ಆಕೆಯ ಗಂಡ ಜೈನ. ಒಂದು ದಿನ ಗಂಡನು ಜಿನಮುನಿಗಳನ್ನು ಚರಿಗೆಗೆ ಕರೆದು ಹೆಂಡತಿಯಿಂದ ತೆರತೆರದ ಪಕ್ವಾನ್ನಗಳನ್ನು ಮಾಡಿಸಿದನು. ಆತನು ಅವರನ್ನು ಕರೆತರುವಷ್ಟರಲ್ಲಿ, ಆಕೆ ಇಂತಹ ಅಡುಗೆ ಲೋಗರಿಗೆ ಸಲ್ಲುವುದಲ್ಲಾ ಎಂದು ಹಳಹಳಿಸುತ್ತಿರಲು, ಶಿವನು ತಪೋಧನವೇಷದಲ್ಲಿ ಬಂದನು. ವೈಜವ್ವೆ ಆತನನ್ನು ಒಳಕ್ಕೆ ಕರೆದೊಯ್ದು ಕುಳ್ಳಿರಿಸಿ ಆರಾಧಿಸಿದಳು. ಆತನ ಆರೋಗಣೆ ನಡೆದಾಗ ಜಿನಮುನಿಗಳು ಬಂದು ದೂರದಿಂದ ಕಂಡು ಕುಪಿತರಾಗಿ ತಿರುಗಿ ಹೋಗಿಬಿಟ್ಟರು. ಗಂಡನು "ಜಿನಮುನಿ

CC-0. Jangamwadi Math Collection. Digitized by eGangotri

ಗಳಿಗೆ ಮಾಡಿದುದನ್ನು ಗೊರವನಿಗೆ ಇಕ್ಕಿದೆಯಾ? ಮನೆಯನ್ನು ಹಾಳುಮಾಡಿದೆ" ಎಂದು ಸಿಟ್ಟು ಬೆಂಕಿಯಾಗಿ ಬಯ್ದನು. ಚಿಮ್ಮಟಿಗೆಯಿಂದ ಹೊಯ್ಯತೊಡಗಿದನು. ಆದರೆ ಆ ಹೊಡೆತಗಳು ವೈಜವ್ವೆಗೆ ತಾಗದೆ, ಇದ್ದಿದ್ದಲ್ಲಿಯೆ ಜಿನಮುನಿಗಳಿಗೆ ತಾಗುತ್ತಿದ್ದವು. ಅವರು ಗೋಳಿಡುತ್ತ ದಿಕ್ಕುಗೆಟ್ಟು ಓಡತೊಡಗಿದರು. ಇದನ್ನರಿತ ವೈಜವ್ವೆ ಹೊಡೆಯದಿರೆಂದು ಗಂಡನನ್ನು ತಡೆದಳು. ಆಕೆ ಕರುಣಾಮಯಿ. ಜೈನರಿಗೆ ತಾಗುವ ಏಟುಗಳು ನಿಂತವು. ಗಂಡನು ಅವಳನ್ನು ಮನೆಯಿಂದ ಹೊರ ಹಾಕಿದನು. ಊರಲ್ಲಿ ಗುಡಿ-ಬಸದಿ ಯಾವುದನ್ನೂ ಕಂಡರಿಯದ ಅವಳು ಶಿವಾಲಯವೆಂದು ಬಗೆದು ಜಿನಾಲಯವನ್ನು ಹೊಕ್ಕಳು. ಕೂಡಲೇ ಅಲ್ಲಿಯ ಜಿನ ಪ್ರತಿಮೆ ಒಡೆದುಬಿದ್ದು ಶಿವಲಿಂಗವೊಂದು ಮೂಡಿತು.

ಇವೆಲ್ಲ ಕತೆಗಳನ್ನು ಹೇಳಿ, "ಎಲೋ ಜೈನಾ ಕೇಳು: ಅಬ್ಬಲೂರಲ್ಲಿ ಜೈನರು ವಾದಿಸಿ ಸೋತು ದೃಷ್ಟಪ್ರತ್ಯಯಗಳನ್ನು ತೋರೆ"ಂದು ನುಡಿಯಲು, "ಇಲ್ಲಿಯ ಹಿರಿಯ ಬಸದಿ ಬೆಳಗಾಗುವುದರೊಳಗೆ ನೆಲಸಮವಾಗಿ ಜಿನಮೂರ್ತಿ ನುಚ್ಚುನೂರಿಯಾದರೇ ನಾನು ಭಕ್ತನೆ"ಂದು ಭಾಷೆ ತೊಟ್ಟಿನು. ಮರುದಿನ ಬೆಳಗಿನಲ್ಲಿ ಜೈನರು ನೋಡುತ್ತಾರೆ, ಹಾಗೆಯೆ ಆಗಿತ್ತು. ಈ ಕಟಕದಲ್ಲಿದ್ದ ಬಸದಿಗಳ ಅವಸ್ಥೆಯೂ ಹೀಗೆಯೇ ಆಗುವುದೆಂದು ತಿಳಿ" ಎಂದನು. ರಾಮಯ್ಯ ಮತ್ತೆ "ಶಿರವನ್ನು ಕೊಟ್ಟು ಪಡೆಯುವುದು ಯಾವ ಘನ! ಕೊಟ್ಟು ಏಳು ದಿನಕ್ಕೆ ಪಡೆಯುವೆ; ಆ ಬಳಿಕ ಎಲ್ಲ ಬಸದಿಗಳನ್ನು ಕೆಡವಿ ಜಿನನ ರೂಪುಗಳನ್ನು ಒಡೆಯುವೆ" ಎಂದನು.

ಏಕಾಂತರಾಮಯ್ಯನ ಉದ್ಭವವನ್ನು ನೋಡಲು ಅರಸನು ಸಕಲ ಪರಿವಾರದೊಡನೆ ಬಂದನು; ಬಸವಾದಿ ಭಕ್ತರು ಬಂದರು, ಜನ ನೆರೆಯಿತು. ರಾಮಯ್ಯನು ಕತ್ತಿಯಿಂದ ಶಿರಸ್ಸನ್ನು ಕೊಯ್ದು, ಹಾಗೆಯೆ ರುಂಡ-ಕತ್ತಿಗಳನ್ನು ಹಿಡಿದುಕೊಂಡು ಏಳು ದಿನಗಳ ವರೆಗೆ ಕಲ್ಯಾಣಕಟಕದಲ್ಲಿ ಮೆರೆದನು. ಆಮೇಲೆ ಮೊದಲಿನ ಗುಡಿಗೆ ಬಂದು "ಎಲೆ ಜೈನರಿರಾ, ನನ್ನ ಭಾಷೆ ಸಂದಿತಲ್ಲವೆ?" ಎನ್ನುತ್ತ ಶಿರವನ್ನು ಶರೀರಕ್ಕೆ ಅಳವಡಿಸಿದನು. ಪಾತಕರನ್ನು ನೋಡಬಾರದಲಾ ಎಂದು ಅಡ್ಡ ಮೊಗವಿಟ್ಟಂತೆ ಶಿರವು ಸ್ವಲ್ಪ ಓರೆಯಾಗಿ ಹತ್ತಿಕೊಂಡಿತು. ಶರಣಾಗತರಾಗಿ ನಮಿಸಿದ ಜೈನರಿಗೆ ಹಣೆಯಲ್ಲಿ ನಂದಿಮುದ್ರೆಯೊತ್ತಿ ಭಕ್ತರನ್ನಾಗಿ ಮಾಡಿ ಬಸದಿಗಳನ್ನೆಲ್ಲ ಕೆಡವಿದನು.

ಸಂಧಿ: ೫೨, ೫೩

ಸೊಡ್ಡಳ ಬಾಚರಸನ ಕಥೆ

ಸೊಡ್ಡಳ ಬಾಚರಸನೆಂಬಾತನು ಬಿಜ್ಜಳನಲ್ಲಿ ಕೊಠ್ಯಾರದ ಅಧಿಕಾರಿಯಾಗಿದ್ದನು. ಪರವಾದಿಭಯಂಕರನಾದ ಆತನು ವರುಷವರುಷವೂ ಸೌರಾಷ್ಟ್ರಕ್ಕೆ

CC-0. Jangamwadi Math Collection. Digitized by eGangotri

ಹೋಗಿ ಶಿವರಾತ್ರಿಯನ್ನಾಚರಿಸುವ ನೇಮವನ್ನು ಹಿಡಿದಿದ್ದನು. ಒಮ್ಮೆ ಅರಸನು ಆತನಿಗೆ ಬಿಡುವು ಕೊಡಲಿಲ್ಲ. "ನಿಮಗೇನು ಮಹಂತರಿಗೆ! ಸೋಮೇಶ್ವರನನ್ನೇ ಇದ್ದಲ್ಲಿಗೆ ಬರಿಸಿಕೊಳ್ಳಿರಿ" ಎಂದು ಕಟಕಿಯಾಡಿದನು. ಸೋಮೇಶ್ವರನು ತನ್ನ ನೇಮವನ್ನು ಅದೆಂತು ತಪ್ಪಿಸುತ್ತಾನೆ: ಅರಸನೆಂದಂತೆಯೆ ಆದೀತು ಎಂದು ಕೊಂಡು ಬಾಚರಸನು ನಿಶ್ಚಿಂತನಾಗಿದ್ದನು.

ಶಿವರಾತ್ರಿಯ ಮುನ್ನದಿನ ಶಿವನು ಪಡಿಹಾರಿಯ ವೇಷದಿಂದ ಬಂದು ಒಂದು ಓಲೆಯನ್ನು ಬಾಚರಸನಿಗೆ ಕೊಟ್ಟು, "ಹಿಂದೆ ಸೋಮೇಶನು ಬರುತ್ತಿದ್ದಾನೆ: ಮುಂದೆ ನನ್ನನ್ನು ಕಳುಹಿದನು. ನೋಡಿಕೋ" ಎಂದು ಹೇಳಿದನು. "ಕೊಠ್ಯಾರವನ್ನು ತೆರವು ಮಾಡಿಕೊಂಡಿರು. ಶಿವನು ಇಲ್ಲಿಯೇ, ಮೈದೋರುತ್ತಾನೆ" ಎಂದೂ ತಿಳಿಸಿ ಅದೃಶ್ಯನಾದನು. ಮರುದಿವಸ ಬಸವರಸರೂ ಭಕ್ತರೂ ನೆರೆದಿದ್ದರು. ಬಾಚರಸನು ಆನಂದಾಶ್ರು ಸೂಸುವ ಕಣ್ಣುಗಳಿಂದ ಸೋಮೇಶ್ವರನನ್ನು ಇದಿರುನೋಡುತ್ತಿದ್ದನು. ವಾದ್ಯಗಳು ಮೊಳಗುತ್ತಿದ್ದವು. ಆಗ ಪುರಜನವೆಲ್ಲಾ ನೋಡುತ್ತಿದ್ದಂತೆ ಸೌರಾಷ್ಟ್ರನಾಥನು ಹಿರಿಯ ಕಣಜವನ್ನೊಡೆದುಕೊಂಡು ಆವಿರ್ಭವಿಸಿದನು. ಜನರೆಲ್ಲ ಕೊಂಡಾಡುತ್ತಿರಲು ಬಿಜ್ಜಳನು ಬಂದು ಬಾಚರಸನ ಅದ್ಭುತ ಮಹಿಮೆಗೆ ಬೆರಗಾಗಿ ಆತನಿಗೆ ನಮಸ್ಕರಿಸಿದನು. ಅಲ್ಲಿಯೇ ದೇವಾಲಯವು ನಿರ್ಮಾಣವಾಯಿತು. ಭಕ್ತನು ಶಿವರಾತ್ರಿನೇಮವನ್ನು ಸಲಿಸಿದನು. ಅಲ್ಲಿ ಶಿವನು ಕೊಠ್ಯಾರ ಸೋಮೇಶ್ವರನೆಂದು ಪ್ರಸಿದ್ಧನಾದನು.

ಬಾಚರಸನು ಭಕ್ತಿನಿರತನಾಗಿ ಇರುತ್ತಿರಲು, ಪ್ರತಾಪನಾರಾಯಣಪುರದಲ್ಲಿ ಬಿಜ್ಜಳನೂ ಪರವಾದಿಗಳೂ ಸೇರಿ ಗೋವಿಂದದೇವಾಲಯವನ್ನು ಕಟ್ಟಿಸಿದರು. ಉತ್ಸವದ ಒಡ್ಡೋಲಗವು ಸೇರಿತ್ತು. ಬಾಚರಸನು ಬಂದಿರಲಿಲ್ಲ. ಇದರ ಕಾರಣವೇನೆಂದು ಬಿಜ್ಜಳನು ಬಸವಣ್ಣನನ್ನು ಕೇಳಿದನು. "ಸೇವೆಯಲ್ಲಿ ತಪ್ಪಿದರೆ, ಯುದ್ಧದಲ್ಲಿ ಓಡಿದರೆ ತಪ್ಪಲ್ಲದೆ ಅನ್ಯ ದೈವದಲ್ಲಿಗೆ ಬಾರದಿದ್ದರೆ ತಪ್ಪೆ?" ಎಂದು ಬಸವಣ್ಣನೆಂದನು. ಭಕ್ತರು ಪರದೈವವನ್ನು ಸಹಿಸರೆಂಬುದಕ್ಕೆ ಅರಿಯಮನ ಕಥೆಯನ್ನು ಹೇಳಿದನು.

ಅರಿಯಮನ ಕಥೆ

ಮಹೇಂದ್ರಮಂಡಲವೆಂಬ ಪುರದಲ್ಲಿ ಅರಿಯಮನೆಂಬ ಭಕ್ತನಿದ್ದನು. ಅನ್ಯ ದೈವದ ಹೆಸರುಗೊಂಡವನನ್ನು ಕೊಲ್ಲುವೆನೆಂಬುದು ಅವನ ಭಾಷೆ. ಭಿಕ್ಷಕ್ಕೆ ಬಂದ ಬ್ರಾಹ್ಮಣನಿಗೆ ಅವನು ನೀಡುವಾಗ ಒಂದಗುಳು ನೆಲಕ್ಕೆ ಬೀಳಲು ಬ್ರಾಹ್ಮಣನು ಅನ್ಯ ಶಬ್ದವನ್ನು ಆಡಿದನು. ಅರಿಯಮನು ಕೈಯಲ್ಲಿಯ ಸಟ್ಟುಗದಿಂದ ಹೊಡೆದು ಕೊಂದುಬಿಟ್ಟನು. ಅರಸನಲ್ಲಿಗೆ ದೂರು ಹೋಯಿತು. ಅರಸನು

CC-0. Jangamwadi Math Collection. Digitized by eGangotri

ಅರಿಯಮನನ್ನು ಕರೆಸಿ ವಿಚಾರಿಸಿದನು. ಬ್ರಾಹ್ಮಣನು ನುಡಿದ ಅನ್ಯಶಬ್ದವನ್ನು ಉಚ್ಚರಿಸಲೊಲ್ಲದೆ "ಕೊಂದದ್ದು ನಿಜ, ಕಾರಣ ಶಿವನೇ ಬಲ್ಲ" ಎಂದನು. ಅರಿಯಮನನ್ನು ವಧಿಸುವಂತೆ ರಾಜಾಜ್ಞೆಯಾಯಿತು. ಅವನು ಶಿವಾಲಯವನ್ನು ಹೊಕ್ಕು ಶಿವನಿಗೆ ಮೊರೆಯಿಟ್ಟನು. ಶಿವನು ಪ್ರತ್ಯಕ್ಷವಾಗಿ ತನ್ನ ಎದೆಯನ್ನು ಸೀಳಿ ಆತನನ್ನು ಒಳಗಿಟ್ಟುಕೊಂಡನು. ಅಷ್ಟರಲ್ಲಿ ಬೆನ್ನಟ್ಟಿದ ತಳವಾರರು ಬರಲು ಶಿವನೆದೆ ಮುಚ್ಚಿಕೊಂಡು ಅರಿಯಮನ ವಸ್ತ್ರದ ಚುಂಗು ಮಾತ್ರ ಹೊರಗುಳಿಯಿತು. ಭಕ್ತರಾದವರು ಪರದೈವದ ಹೆಸರನ್ನು ಸಹಿಸರೆಂಬುದಕ್ಕೆ ಆ ವಸ್ತ್ರವೇ ಸಾಕ್ಷಿ.

ಶಂಕರದಾಸನ ಕಥೆ

ಅರಸಾ, ಇನ್ನೂ ಕೇಳು: ವೀರ ಶಂಕರದಾಸನೊಬ್ಬನು ಪರಸಮಯ. ಪರದೈವಗಳನ್ನು ಮುಟ್ಟಿನೆಂಬ ಭಾಷೆಯವನು. ಒಮ್ಮೆ ಕನಸಿನಲ್ಲಿ ಬೌದ್ಧನೊಬ್ಬನು ಆತನನ್ನು ಸೋಂಕಿದನು. ಈ ಪಾಪಕ್ಕೆ ಸುಟ್ಟುಕೊಳ್ಳುವುದೇ ಶಿಕ್ಷೆಯೆಂದು ಬಗೆದು ಅವನು ಶ್ರೀಶೈಲಕ್ಕೆ ಹೋಗಿ ಹಾಟಕೇಶ್ವರನ ಸನ್ನಿಧಿಯಲ್ಲಿ ಕಿಚ್ಚು ಹೊತ್ತಿಸಿ, ಮೇಲೆ ಕಾವಲಿಯನ್ನಿಟ್ಟನು: ಅದು ಕೆಂಪಗೆ ಕಾಯಲು ಅದರಲ್ಲಿ ಕುಳಿತು ಶಿವನನ್ನು ಮೆಚ್ಚಿಸಿ ಸಾಯುಜ್ಯ ಪದವಿಯನ್ನು ಪಡೆದನು.

ಶಿವಲೆಂಕ ಮಂಚಯ್ಯನ ಕಥೆ

ಅರಸಾ, ಇನ್ನೂ ಕೇಳು: ಕಾಶಿಯಲ್ಲಿ ಶಿವಲೆಂಕ ಮಂಚಣ್ಣನು ವಿಶ್ವೇಶ್ವರನಿಗೆ ಹತ್ತು ಬೆರಳುಗಳನ್ನು ಕಡಿದರ್ಪಿಸಿ ಮೆಚ್ಚಿಸಿದನು. 'ಪರಸಮಯದ ಮೂಗಿನ ಕತ್ತಿ' ಎಂಬ ಬಿರುದಿನಿಂದ ಮೆರೆಯುತ್ತಿದ್ದನು. ಗದಾಧರ ದೇವಾಲಯದ ಹತ್ತಿರ ಎಲ್ಲಾ ಸಮಯಿಗಳು ಸಭೆಗೂಡಿ ಮಂಚಣ್ಣನನ್ನು ವಾದಕ್ಕೆ ಕರೆದರು. ಆತನು ಶಾಸ್ತ್ರಾಗಮಪುರಾಣಪ್ರಮಾಣಗಳಿಂದ ಎಲ್ಲರನ್ನೂ ಗೆದ್ದನು. ಬಾಯಿಕಟ್ಟಿದ ಪರಸಮಯಿಗಳು ಶಿವನೇ ದೈವವೆಂಬುದಕ್ಕೆ ದೃಷ್ಟವನ್ನು ತೋರೆಂದರು. ಆಗ ಮಂಚಯ್ಯನು "ಎಲೈ ಚಕ್ರಧರಾ, ನಿನ್ನೊಡೆಯನಾದ ಶಿವನಿಗೆ ನಮಿಸು ನಡೆ" ಎನ್ನಲು ಗದಾಧರಮೂರ್ತಿ ಗುಡಿಯಿಂದ ಹೊರಬಿದ್ದು ಹೊರಟಿತು; ಮಂಚಯ್ಯನ ಆದೇಶದಂತೆ ಶಿವನಿಗೆ ಪೊಡಮಟ್ಟಿತು. ಅಲ್ಲಿ ನೆಲದ ಮೇಲೆ ನೀಳವಾಗಿ ಬಿದ್ದಿರುವ ಹರಿರೂಪವೇ ಹರಿಯು ಶಿವಭಕ್ತಾಧೀನನೆಂಬುದಕ್ಕೆ ಸಾಕ್ಷಿ.

ಶರಣ ಶಂಕರದಾಸಿಯ ಕಥೆ

ಈತನು ಎರಡನೆಯ ಭಾಳಾಂಬಕನೆಂದು ಹೆಸರಾಗಿದ್ದನು. ಸಿಟ್ಟಿನಿಂದ ನೋಡಿದರೆ ಪರದೈವಗಳು ಸಿಡಿದುಬೀಳುತ್ತಿದ್ದವು. ಇದನ್ನು ಕೇಳಿ ಪರಸಮಯಿ

CC-0. Jangamwadi Math Collection. Digitized by eGangotri

ಯಾದ ಜಗದೇಕಮಲ್ಲನು ತನ್ನಪರೆಲ್ಲರನ್ನು ನೆರಹಿ ಶಂಕರದಾಸಿಯನ್ನು ದೃಷ್ಟವನ್ನು ತೋರಿಸಲು ಆಹ್ವಾನಿಸಿದನು. ಅವನು ಬಂದು ಉಗ್ರನೇತ್ರದಿಂದ ವನ ಮಾಲಿಯ ಮೂರ್ತಿಯನ್ನು ನೋಡಲು ಅದು ಒಡೆದು ಬಿದ್ದಿತು. ಈ ಮಾತಿಗೆ ಈಗಿರುವ ಬರಿ ಗುಡಿಯೇ ಸಾಕ್ಷಿ.

ಹೀಗೆ ಶರಣರ ಮಹಿಮೆಗಳನ್ನು ಬಿಜ್ಜಳನಿಗೆ ವಿವರಿಸಿ, ಶಿವರಾತ್ರಿಯ ಪವಾಡದಿಂದ ಬಾಚರಸನ ಮಹಿಮೆಯನ್ನರಿತ ನೀನು ಇನ್ನೂ ಪರೀಕ್ಷಿಸಬಹುದೆಂದು ಹೇಳಿ ಬಸವಣ್ಣನು ಆತನನ್ನು ಕರೆಸಿದನು. ಆತನು ಬಂದು, "ಬಣಗು ದೈವಗಳನ್ನು ಕರ್ತರೆಂದು ಎಣಿಸುವರೇ ? ಕರ್ತರ ಕರ್ತ ನಮ್ಮ ಸೊಡ್ಡಳನೊಬ್ಬನೆ" ಎಂದು ವಾದಿಸಿ, ಇತರ ದೈವಗಳ ಹಿರಿಮೆಯನ್ನು ಖಂಡಿಸುವನು. ಹರಿಯ ದಶಾವತಾರಗಳನ್ನೂ ಅವನು ಭಂಗಪಟ್ಟುದನ್ನೂ ವಿಡಂಬಿಸುವನು. ಶಿವನಿರಲಿ, ಆತನ ಒಬ್ಬ ಗಣನಿಂದಲೇ ಲೋಕಗಳು ಹುಟ್ಟಿ ಬಾಳಿ ಅಳಿಯುವವು. ಹರಿ ಬ್ರಹ್ಮಾದ್ಯರು ಶಿವನನ್ನು ಆರಾಧಿಸಿಕೊಂಡಿರುವರು, ಎಂದು ಮುಂತಾಗಿ ಶಿವನ ಹಿರಿಮೆಯನ್ನು ಬಿತ್ತರಿಸಿ ಗೋವಿಂದಪ್ರತಿಮೆಯನ್ನು ದುರುದುರನೆ ನೋಡಿದನು. ಒಡನೆಯೆ ಅದು ಪ್ರಡಿಪ್ರಡಿಯಾಯಿತು. ಪರಸಮಯಿಗಳ ಹೆಮ್ಮೆ ಮಣ್ಣುಗೂಡಿತು. ಬಿಜ್ಜಳನು ಬೆರಗಾಗಿ ಬಾಚರಸನನ್ನು ಹೊಗಳಿದನು.

ಸಂಧಿ: ೫೪, ೫೫

ಶಿವನಾಗಮಯ್ಯನ ಕಥೆ

ಶಿವನಾಗಮಯ್ಯನೆಂಬ ಭಕ್ತೋತ್ತಮನು ಬಸವಣ್ಣನಿಂದ ಸೇವೆಗೊಳ್ಳುತ್ತ ಇರುತ್ತಿದ್ದನು. ಚಾಡಿಗಾರರಾದ ಭವಿಗಳು ಅರಸನಲ್ಲಿ ದೂರಿದರು. "ವರ್ಣಾಶ್ರಮವೆಲ್ಲಾ ಬಸವನಿಂದ ಕೆಟ್ಟುಹೋಗುತ್ತಿದೆ. ಆತನು ಶಿವನಾಗಮಯ್ಯನ ಕಾಲಮೇಲೆ ಬೀಳುವನು. ಅವನು ಉಂಡು ಮಿಕ್ಕುದನ್ನು ಸೇವಿಸುವನು. ನಿಮ್ಮ ಮನೆಯೊಳಗೆ ಲ್ಲೆಲ್ಲಿಯೂ ಹೋಗುವನು. ಆತನಿಂದ ಕಲ್ಯಾಣವೆಲ್ಲವೂ ಹೊಲೆಗಲಸಿ ಹೋಯಿತು. ರಾಷ್ಟ್ರದ ಪಾಪ ರಾಜನಿಗೆ ಬಡಿಯುವುದು. ನಿನ್ನ ಪಾಪ ಪುರೋಹಿತರಿಗೆ. ಆದ್ದರಿಂದ ಹೇಳಿದೆವು. ಹೇಗಾದರೂ ಈ ಜನವನ್ನು ಪರಿಹರಿಸಬೇಕು" ಎಂದರು. ಅರಸನು ಬಸವಣ್ಣನನ್ನು ಕರೆಸಲು ಶಿವನಾಗಮಯ್ಯನನ್ನೊಡಗೊಂಡೇ ಬಂದನು. "ನೋಡಿದಿರಾ, ನಿಮಗೆಷ್ಟೂ ಅಳುಕದೆ ಅವನೊಂದಿಗೇ ಬರುತ್ತಿದ್ದಾನೆ, ಇಲ್ಲಿ ಹೊಲೆಗಲಸಲಿಕ್ಕೆ" ಎಂದರು ಬ್ರಾಹ್ಮಣರು. ಬಿಜ್ಜಳನು ಅವರ ಗೃಹಪ್ರವೇಶವನ್ನು ತಪ್ಪಿಸಲು ಹೊರಗಡೆಯೆ ಸಭೆಸೇರಿಸಿದನು. ಬಸವಣ್ಣನು ತನ್ನ ಹೊದಿಕೆಯನ್ನು

CC-0. Jangamwadi Math Collection. Digitized by eGangotri

ಹಾಸಿ ಶಿವನಾಗಮಯ್ಯನನ್ನು ಕುಳ್ಳಿರಿಸಿ "ಕರೆಸಿದ ಮಾಣಹವೇನು?" ಎಂದು ಅರಸನನ್ನು ಬೆಸಗೊಂಡನು.

"ಮತ್ತೇನು? ಭಕ್ತ, ಭಕ್ತ ಎಂದು ಹೊಲೆಗಲಸಿ ಕಲ್ಯಾಣಕಟಕವನ್ನು ಕೆಡಿಸುತ್ತಿರುವೆ. ಇನ್ನು ಮಳೆ ಬಿದ್ದೀತೆ, ಬೆಳೆ ಬಂದೀತೆ?" ಎಂದು ಅರಸನು ಕಟುವಾಗಿ ನುಡಿದನು. ಅದಕ್ಕೆ ಬಸವಣ್ಣನು "ದೊರೆಯೇ, ಬ್ರಾಹ್ಮಣರು ಬಡಗಿ ಮಾಚಲದೇವಿಯನ್ನು ಕುಲೀನೆಯನ್ನಾಗಿ ಮಾಡುವೆವೆಂದು, ಬಂಗಾರದ ಆಕಳಿನಲ್ಲಿ ಆಕೆಯನ್ನು ಹೊಗಿಸಿ, ಹೊನ್ನನ್ನು ತುಂಬಿ ಹೊಡೆದು 'ಪೂರ್ವಾಶ್ರಯವು ಹೋಯಿತೆಂದು ಆಕೆಗೆ ನಮಸ್ಕರಿಸಿದರು ಮಾತ್ರವಲ್ಲ, ಅವಳಂಗದ ಎಂಜಲು ಹಾಲನ್ನು ಸೇವಿಸಿದರು. ಅಲ್ಲದ ಹೊನ್ನಧೇನುವನ್ನು ಅಂಗಅಂಗವಾಗಿ ಕಡಿದು ತಮ್ಮೊಳಗೆ ಹಂಚಿಕೊಂಡರು. ಇವರಿಗಿಂತ ಹೊಲೆಯರುಂಟೆ? ಭಕ್ತಲೋಕವೆ ದಿಟವಾದ ಕುಲವು. ಇದಕ್ಕೆ ದೃಷ್ಟಗಳನ್ನು ಕೇಳು:

ಹಾವಿನಹಾಳ ಕಲ್ಲಯ್ಯನ ಕಥೆ

ಕಲ್ಲಯ್ಯನು ಹರರೂಪೇ ಹೊರತು ನರರೂಪಲ್ಲ. ಆ ಊರಲ್ಲಿ ಒಂದು ಹಾವು ಬಂದವರನ್ನೆಲ್ಲ ಕಚ್ಚಿ ಕೊಲ್ಲುತ್ತಿತ್ತು. ಒಂದು ದಿನ ಆದು ಕಲ್ಲಯ್ಯನನ್ನು ಕಡಿದು ತಾನೇ ಸತ್ತಿತು. ದಯಾಪರನಾದ ಆವನು ಆದನ್ನು ಬದುಕಿಸಿ ಬಂದಿಸಿದನು. ಆತನ ತೊತ್ತು ಒಮ್ಮೆ ಅಗ್ಗವಣಿಗೆ ಹೋದಾಗ ಸದ್ಬ್ರಾಹ್ಮಣನ ಕೈ ಸೋಂಕಿದುದಕ್ಕೆ ಕೊಡವನ್ನು ಬಿಸಾಡಿ ಒಡೆದು ಹೊಸ ಕೊಡದಲ್ಲಿ ನೀರೊಯ್ದಳು. 'ಅನ್ಯರು ಮುಟ್ಟಿದರೆ ಬ್ರಾಹ್ಮಣರಿಗೆ ಮೈಲಿಗೆಯಲ್ಲದೆ ಬ್ರಾಹ್ಮಣರು ಮುಟ್ಟಿದರೆ ಅನ್ಯರಿಗೆ ಮೈಲಿಗೆಯೆ? ಎಂಥ ದಿಮಾಕು ತೊತ್ತಿಗೆ!' ಎಂದು ಬ್ರಾಹ್ಮಣರು ಕುಪಿತರಾಗಿ ಕಲ್ಲಯ್ಯನಲ್ಲಿ ದೂರಿದರು. ಆಗ ಕಲ್ಲಯ್ಯನು ಆವರಿಗೆ "ಶಿವಭಕ್ತರ ಮನೆಯ ನಾಯಿಯೂ ನಿಮ್ಮನ್ನು ಮುಟ್ಟಕೂಡದು; ದಾಸಿ ಹೇಗೆ ಮುಟ್ಟಿಯಾಳು? ನೀವೆಂಥ ಬ್ರಾಹ್ಮಣರು!" ಎಂದು ಮುಂತಾಗಿ ಖಂಡತುಂಡಾಗಿ ಹೇಳಿದನು. ಆವರು ಇನ್ನಷ್ಟು ರೇಗಿ, "ತಾವು ಸಜ್ಜನರೆಂದು ಹೇಳಬಂದರೆ ನಮ್ಮನ್ನು ನಾಯಿಗೂ ಕಡೆಪಾಡಿ ಮಾತನಾಡುವಿರಲ್ಲಾ! ನಿಮ್ಮ ನಾಯಿಯಿಂದ ಒಂದೆರಡು ವೇದಮಂತ್ರಗಳನ್ನು ನುಡಿಸಬಲ್ಲಿರಾ?" ಎಂದು ಗುಡುಗಿದರು. ಕಲ್ಲಯ್ಯನು ವೇದಪಿತಾಮಹನೆಂಬ ನಾಯಿಯನ್ನು ಕರೆದು, "ಯಾವ ವೇದದಲ್ಲಾದರೂ ಒಂದರ ಶಾವನ್ನೆತ್ತಿ ಅನುಷ್ಠಿಸು" ಎಂದು ನುಡಿದನು. ಕೂಡಲೇ ನಾಯಿ ಓಂಕಾರವನ್ನು ಉಚ್ಚರಿಸಿ ಪದವರ್ಗಕ್ರಮಾವಿ ಸಹಿತವಾಗಿ ನಾಲ್ಕು ವೇದಗಳಲ್ಲಿಯೂ ಒಂದೊಂದು ಶಾವನ್ನೆತ್ತಿ ಅನುಷ್ಠಿಸಿತು.

ಹೀಗೆಯೇ ಮಹಾಕಾಳಿದೇವ, ಶಿವಚಿತ್ತರ ಉದಾಹರಣೆಗಳಿಂದ ಭಕ್ತರ

CC-0. Jangamwadi Math Collection. Digitized by eGangotri

ಮಹಿಮೆಯನ್ನು ಬಸವಣ್ಣನು ಬಿಜ್ಜಳನಿಗೆ ಬಿತ್ತರಿಸಿ. ಬಿಬ್ಬಬಾಚಯ್ಯನಿಂದ ಬ್ರಾಹ್ಮಣರು ಕೆಟ್ಟ ಕೇಡನ್ನು ಹೇಳಿದನು:

ಬಿಬ್ಬ ಬಾಚಯ್ಯನ ಕಥೆ

ಗೊಬ್ಬೂರಲ್ಲಿ ಬಿಬ್ಬಬಾಚಯ್ಯನೆಂಬ ಮಹಿಮನು ಸಿದ್ಧಪ್ರಸಾದದ ನೇಮವನ್ನು ಕೈಕೊಂಡಿದ್ದನು. ಸುತ್ತ ನಾಲ್ಕಾರು ಯೋಜನಗಳಲ್ಲಿ ಭಕ್ತರಲ್ಲಿ ಪರ್ವಗಳಾದರೆ ಅಲ್ಲಿಗೆ ಹೋಗಿ ಶರಣಸಮೂಹಕ್ಕೆ ಪೊಡಮಟ್ಟು ಅವರು ಉಂಡೊಕ್ಕ ಪ್ರಸಾದವನ್ನು ಬಂಡಿಯಲ್ಲಿ ಹೇರಿಕೊಂಡು ಬಂದು ಅನುಭವಿಸುತ್ತಿದ್ದನು. ಅದಕ್ಕಾಗಿ ಬ್ರಾಹ್ಮಣರು ಖಿತಿಗೊಂಡು ಗುಜುಗುಜುಗುಟ್ಟುತ್ತಿದ್ದರು.

ಒಮ್ಮೆ ಒಬ್ಬ ಭಕ್ತನ ಮನೆಯಿಂದ ಬಂಡಿಯಲ್ಲಿ ಪ್ರಸಾದವನ್ನು ಹೇರಿಕೊಂಡು ವಾದ್ಯವೈಭವದೊಡನೆ ಊರನ್ನು ಹೋಗುತ್ತಿದ್ದನು ಬಾಚಯ್ಯ. "ಇದು ಜನವಿರುದ್ಧ ವರ್ತನೆ. ಇತ್ತ ಬರಬೇಡ. ತೊಲಗತ್ತ" ಎಂದು ಬ್ರಾಹ್ಮಣರು ತಡೆದರು. "ಕುಲಹೀನರೆಂಜಲನ್ನು ಗುಡಿಸಿ ತಂದು ಇದೇನು ಸಂಭ್ರಮ, ಇದೇನು ಆವೇಶ – ಆರ್ಭಟಿ!" ಎಂದರು. ಬಾಚಯ್ಯನು "ಭಕ್ತರಿಗೆ ನೀವು ಹವಣೇ? ಬಾಯಿಗೆ ತಕ್ಕ ತುತ್ತು ತಕ್ಕೊಳ್ಳಿರಿ. ಆಭಿಮಾನಕ್ಕೆ ಬಿದ್ದು ಕೆಡಬೇಡಿರಿ. ಪ್ರಸಾದ ದೂಷಕರಿಗೆ ಹಿತವಿಲ್ಲ" ಎಂದು ಹೇಳಿದುದಕ್ಕೆ ಅವರು "ಹಲವು ಗೊರವರ ಎಂಜಲೇನು ಹಾವೋ ಹುಲಿಯೋ ಕಾಳ್ಕಿಚ್ಚೋ ಕಾಳಕೂಟವೋ – ಭಯಂಕರವಾಗಿ ಹೇಳುವಿರಲ್ಲ!" ಎಂದು ನುಡಿಯುತ್ತ ಬಂಡಿಯಮೇಲೆ ದಾಳಿಯಿಟ್ಟರು. ಆಗ ಬಿಬ್ಬಬಾಚಯ್ಯನು "ಓಡಿರೋ, ಕಲ್ಪಾಂತ ವಿಲಯಾಗ್ನಿ ಎದ್ದು ಬರುತ್ತದೆ" ಎಂದು ಸಿದ್ಧಪ್ರಸಾದದ ಹೊದಿಕೆಯನ್ನು ತೆರೆದನು. ಪ್ರಸಾದವನ್ನು ಎತ್ತಿ ಚೆಲ್ಲಿದೊಡನೆ ಛಿಟಿಛಿಟಿಲೆಂಬ ಉರಿ ಎತ್ತೆತ್ತಲೂ ಸೂರೆಯಾಯಿತು. ಕುಟಿಲ ಬ್ರಾಹ್ಮಣರ ಮನೆಗಳು ಹೊತ್ತಿ ಉರಿಯತೊಡಗಿದವು. ಅವರೆಲ್ಲಾ ದಿಕ್ಕುಗೆಟ್ಟೋಡಿ ಬದುಕುವ ಆಶೆಯಿಂದ ಹೊಳೆ ಬಾವಿ ಹೊಕ್ಕರು. ಶಿವಾಲಯ-ಭಕ್ತಮಂದಿರಗಳನ್ನು ಹೊಕ್ಕರು, ಭಸಿತ ರುದ್ರಾಕ್ಷಿಗಳನ್ನು ಧರಿಸಿದರು. ಕೊನೆಗೆ ಬಾಚಯ್ಯನ ಬೆನ್ನಿಗೆ ಬಿದ್ದು "ತಪ್ಪನ್ನು ಮನ್ನಿಸಿ ಸಲಹ"ಂದು ಮೊರೆಯಿಟ್ಟರು. ಆತನು ಕರುಣಿಸಿ ಉತ್ಪಾತವನ್ನು ಮಾಣಿಸಿದನು.

ಈ ಕತೆಯನ್ನು ಹೇಳಿ ಬಸವರಾಜನು "ಶಿವಭಕ್ತನೇ ಕುಲಜನು, ಅಲ್ಲದವನು ಹೊಲೆಯರ ಹೊಲೆಯನೆ"ಂದು ತಿಳಿಸಿ ಮತ್ತೆಂದನು:

ಮಾದರ ದೂಳಯ್ಯನ ಕಥೆ

ಹರಿಗಳ ಅಪ್ಪಣ್ಣನೆಂಬ ಬ್ರಾಹ್ಮಣನು ಕುಷ್ಠರೋಗಿಯಾಗಿದ್ದನು. ಒಂದು

CC-0. Jangamwadi Math Collection. Digitized by eGangotri

ರಾತ್ರಿ ಅವನು ಕಾಣದೆ ಮಾದರ ದೂಳಯ್ಯನ ಬಚ್ಚಲುಮೋರಿಯ ಕೆಸರಲ್ಲಿ ಕಾಲಿಟ್ಟನು. ಆಮೇಲೆ ಹೊರಕ್ಕೆ ಬಂದು ತೊಳೆದುಕೊಂಡು ಬೆಳಗಿನಲ್ಲಿ ನೋಡುತ್ತಾನೆ: ಕಾಲಿನ ಕುಷ್ಠವಳಿದು ಸುಂದರವಾಗಿತ್ತು. ಬ್ರಾಹ್ಮಣನು ಆನಂದಾಶ್ಚರ್ಯಗಳಿಂದ ದೂಳಯ್ಯನ ಬಚ್ಚಲುಕುಂಡದಲ್ಲಿ ಮುಳುಗೆದ್ದು ಸ್ನಾನಮಾಡಿ ಸರ್ವಾಂಗದ ಕುಷ್ಠವನ್ನೂ ಕಳೆದುಕೊಂಡು ಆ ಭಕ್ತನಿಗೆ ನಮಿಸಿದನು. ಹೀಗೆ ಅವನ ಬಚ್ಚಲು ಕುಂಡದಿಂದ ಏಳುನೂರು ಬ್ರಾಹ್ಮಣರು ಕುಷ್ಠರೋಗದಿಂದ ಮುಕ್ತರಾದರು.

ಸಾಮವೇದಿಯ ಕಥೆ

ಅರಸ, ಇನ್ನೂ ಕೇಳು: ಸಾಮವೇದಿಯೆಂಬ ಬ್ರಾಹ್ಮಣಶ್ರೇಷ್ಠನು ಆಕಾಶ ಮಾರ್ಗವಾಗಿ ಹೋಗುತ್ತಿದ್ದನು. ಕೆಳಗೆ ಶ್ವಪಚಯ್ಯನೆಂಬ ಅಂತ್ಯಜನು ಆಡಿಗೆ ಮಾಡುತ್ತಿದ್ದನು. ಸಾಮವೇದಿಯ ದೃಷ್ಟಿ ಬಿದ್ದೀತೆಂದು ಕೆರವಿನಿಂದ ಪಾತ್ರೆಯನ್ನು ಮುಚ್ಚಿದನು. "ತಾನು ಬೇಯಿಸುವುದು ಮಾಂಸ, ನನ್ನನ್ನು ಕಂಡು ಮುಚ್ಚಿದನಲ್ಲಾ!" ಎಂದು ಸಾಮವೇದಿ ಮನದಲ್ಲಿ ಅಹಂಕರಿಸಿದನು: ಅವನ ಮಂತ್ರಶಕ್ತಿಕುಗ್ಗಿ ಹಾರುತ್ತಿದ್ದ ದೋತ್ರ ಕೆಳಗಿಳಿಯಿತು. ಸಾಮವೇದಿ ಶ್ವಪಚಯ್ಯನ ಆಡಿಗೆರಗಿ ಅವನಿಂದ ದೀಕ್ಷೆ ಪಡೆದನು.

ಉದುಭಟನ ಕಥೆ

ಅರಸಾ, ಇನ್ನೂ ಕೇಳು: ಉದುಭಟನೆಂಬ ಮಹಂತನು ಭೋಜರಾಜನಿಗೆ ಗುರುವಾಗಿದ್ದನು. ಭೋಜನಲ್ಲಿ ಹಾಡುತ್ತಿದ್ದ ಜೊಮ್ಮವ್ವೆಯೆಂಬ ಶಿವಭಕ್ತೆಗೆ ಭಕ್ತಿರತಿಯನ್ನು ಆತನು ಬೋಧಿಸುತ್ತಿದ್ದನು. ಉತ್ತಮ ಭೂಸುರನು ಕುಲ ಹೀನೆಯನ್ನು ಕೂಡಿಕೊಂಡಿರುವನೆಂದು ಬ್ರಾಹ್ಮಣರು ರಾಜನಲ್ಲಿ ದೂರಿದರು. ಆತನ ಹುಹಿಮೆಯನ್ನು ಮೆರೆಯಬೇಕೆಂದು ಶಿವನು ಮನದಂದನು. ಒಂದು ದಿನ ಆಲದ ಮರದಲ್ಲಿ ಭೂತವೊಂದು ಅಳುತ್ತಿದ್ದ ಮಹಾರವವನ್ನು ರಾಜನು ಕೇಳಿದನು. ಊರ ಜನರೊಡನೆ ಹೋಗಿ "ಯಾರು ನೀನು, ಯಾಕೆ ಅಳುವೆ" ಎಂದು ವಿಚಾರಿಸಿದನು. ಅದಕ್ಕೆ ಭೂತವೆಂದಿತು:

"ಹನ್ನೆರಡು ವರುಷಗಳಿಂದಲೂ ಉದುಭಟನ ಸಾವನ್ನು ಕಾಯ್ದು ಏಳು ಸಾವಿರ ಭೂತಗಳು ಇಲ್ಲಿದ್ದೆವು. ನಿನ್ನೆ ನಾನು ಹೊಟ್ಟೆಯ ದೆಸೆಯಿಂದ ಹೊರಗೆ ಹೋಗಿ ಬರುವಷ್ಟರಲ್ಲಿ ಎಲ್ಲ ಭೂತಗಳೂ ಹೊರಟುಹೋಗಿವೆ. ಅವು ಉದುಭಟನ ಸುಡುವ ಹೊಗೆಯಿಂದ ಕೈಲಾಸವನ್ನು ಕಂಡವು. ಉಳಿದ ನಾನು ಗತಿಗೆಟ್ಟು ಅಳುತ್ತಿರುವೆ. ಈಗಲಾದರೂ ಉರುವಲಿಟ್ಟು ಬೆಂಕಿ ಹೊತ್ತಿಸಿದರೆ ನಾನೂ ಕೈಲಾಸ ಸೇರೇನು."

CC-0. Jangamwadi Math Collection. Digitized by eGangotri

ಅರಸನು ಅದರಂತೆ ಉರಿಹೊತ್ತಿಸಲು ಅದರ ಹೊಗೆ ತಾಗಿ ಭೂತವು ಮರವನ್ನು ಕಿತ್ತುಕೊಂಡು ಆಕಾಶಕ್ಕೆ ನೆಗೆಯಿತು.

ಡೋಹರ ಕಕ್ಕಯ್ಯನ ಕಥೆ

ಅರಸಾ. ಇನ್ನೂ ಕೇಳು: ಕಕ್ಕಯ್ಯನೆಂಬವನು ತ್ರಿವಿಧ ಭಕ್ತಿಪರಾಯಣನು. ಒಬ್ಬ ಬ್ರಾಹ್ಮಣನು ಹೇಳುತ್ತಿದ್ದ ಪುರಾಣವನ್ನು ಕೇಳಿದನು. ಆತನು ಹರಿಯ ಪ್ರತಾಪವನ್ನು ಹೇಳುತ್ತಿದ್ದನಲ್ಲವೆ ಹರಿಯನ್ನು ಮರ್ದಿಸಿದ ಶಿವಮಹತ್ವವನ್ನು ಹೇಳುತ್ತಿರಲಿಲ್ಲ: ತ್ರಿವಿಕ್ರಮನು ಬಲಿಯನ್ನು ಮೆಟ್ಟಿದನೆನ್ನುತ್ತಿದ್ದ. ಆ ಕಾಲನ್ನು ಶಿವ ಕಡಿದನೆನ್ನುತ್ತಿರಲಿಲ್ಲ; ನರಸಿಂಹ ಹಿರಣ್ಯಕನನ್ನು ಕೊಂದನೆನ್ನುತ್ತಿದ್ದ, ಶಿವ ಶರಭನಾಗಿ ಆತನನ್ನು ಸಂಹರಿಸಿದುದನ್ನು ಹೇಳುತ್ತಿರಲಿಲ್ಲ: 'ಸರ್ವಂ ವಿಷ್ಣು ಮಯಂ' ಎಂದು ಹೇಳುತ್ತಿದ್ದ. ಆ ವಿಷ್ಣುವಿಗೆ ಶಿವ ಒಡೆಯನೆಂಬುದನ್ನು ಹೇಳುತ್ತಿರಲಿಲ್ಲ. ಹರಿ ಹರ ಒಬ್ಬನೇ ಎನ್ನುತ್ತಿದ್ದ, ಹರಿಯನ್ನು ಹರಿಸಿದ್ದಕ್ಕಾಗಿ ಹರನು ಹರಿಪರನೆನಿಸಿದನೆಂದು ಹೇಳುತ್ತಿರಲಿಲ್ಲ. ಇಂತಹ ದ್ರೋಹಿ ಪುರಾಣಕನನ್ನು ಇರಿಸಲಾಗದೆಂದು ಕಕ್ಕಯ್ಯನು ಪುರಾಣಿಕನನ್ನು ಇರಿದು ಕೊಂದನು. ಅವನ ಶರೀರವು ಬಿಬ್ಬನೆ ಬಿರಿದು ಬಾಲಹುಳುಗಳ ರಾಶಿಯಾಯಿತು.

ಕೆಂಭಾವಿ ಭೋಗಯ್ಯನ ಕಥೆ

ಮತ್ತೂ ಕೇಳು ಅರಸಾ: ಕೆಂಭಾವಿಯೆಂಬ ಮಹಾಗ್ರಹಾರದಲ್ಲಿ ಭೋಗಣ್ಣನೆಂಬಾತನು ಲಿಂಗಜಂಗಮಾರ್ಚಕನಾಗಿರುತ್ತಿದ್ದನು. ಶಿವನು ಆತನನ್ನು ಮೆರೆಯಲಿಂದು ಶಿವಲಾಂಛನಧಾರಿಯಾಗಿ ಕೀಳುಕುಲದವನಂತೆ ಸತ್ತ ಕರುವನ್ನು ಹೊತ್ತುಕೊಂಡು ಬಂದನು. ಭೋಗಯ್ಯನು ಆತನಡಿಗೆ ನಮಿಸಿ ಕರುವನ್ನು ಈಸಿಕೊಂಡು ಮನೆಯೊಳಕ್ಕೆ ಕರೆದೊಯ್ದನು. ಈ ಸತ್ತ ಕರುವಿನ ಮಾಂಸದಿಂದ ಅಡಿಗೆಮಾಡಿ ನೀಡಬೇಕೆಂದು ಆ ಪ್ರಸಾದಮೂರ್ತಿ ಎಂದನು. ಆತನು ಅದರಂತೆ ಮಾಡಿ ನೀಡಿದನು. ಊರ ಬ್ರಾಹ್ಮಣರೆಲ್ಲ ಕುಪಿತರಾಗಿ ಬಂದು ಕದ ಮುರಿದು ಒಳಹೊಕ್ಕು "ಅಂತ್ಯಜರನ್ನು ಒಳಹಾಕಿಕೊಂಡು ಅಗ್ರಹಾರವನ್ನು ಹೊಲೆಗಲಸುತ್ತಿರುವೆಯಲ್ಲಾ!" ಎಂದು ಗದರಿದರು. ಅದಕ್ಕೆ "ನಮ್ಮ ಮನೆಯಲ್ಲಿ ಅಂತ್ಯಜರೆ? ಇಲ್ಲಿಲ್ಲ. ಶಿವನ ಪ್ರತಿರೂಪರಾದ ಶರಣರನ್ನು ಧಿಕ್ಕರಿಸುವ ನಿಮ್ಮ ಊರು ಬೇಡ, ನಿಮ್ಮ ವೃತ್ತಿ ಬೇಡ" ಎಂದು ಭೋಗಯ್ಯನು ಹೊರಟುಹೋದನು. ಆಗ ಎಲ್ಲ ಶೈವರ ಮನೆಗಳಲ್ಲಿಯ ಲಿಂಗಗಳೂ ಗುಡಿಗಳಲ್ಲಿಯ ಲಿಂಗಗಳೂ ಆತನ ಬೆನ್ನುಹತ್ತಿ ನಡೆದವು. ಹಲವು ಉತ್ಪಾತಗಳಾದವು; ಊರ ಭಾಗ್ಯ ಹಾಳಾಯಿತು; ಕೆರೆ ಬಾವಿ ಬತ್ತಿದವು; ಬೆಳೆಗಳು ಒಣಗಿದವು. ಭೋಗಯ್ಯನೂ ಅವನೊಡನೆ ಲಿಂಗಗಳೂ

CC-0. Jangamwadi Math Collection. Digitized by eGangotri

ಹೋದುದರಿಂದ ಹೀಗಾಯಿತೆಂದು ಜನರೂ ಬ್ರಾಹ್ಮಣರೂ ಅರಿತು, ಅವನನ್ನರಸಿಕೊಂಡು ಹೋಗಿ ಪಶ್ಚಾತ್ತಾಪದಿಂದ ನಮಸ್ಕರಿಸಿ ಕ್ಷಮಿಸೆಂದು ಬೇಡಿಕೊಂಡರು. ಅವನು ಕರುಣಿಸಿ ಮರಳಿ ಬಂದನು; ಅವನೊಡನೆ ಲಿಂಗಗಳೂ ಬಂದವು; ಗಡಿಬಿಡಿಯಲ್ಲಿ ಸಣ್ಣ ಪೀಠದ ಮೇಲೆ ದೊಡ್ಡ ಲಿಂಗ, ದೊಡ್ಡ ಪೀಠದ ಮೇಲೆ ಸಣ್ಣ ಲಿಂಗ ಕುಳಿತವು.

ಗುಡ್ಡವ್ವೆಯ ಕಥೆ

ಮತ್ತೂ ಕೇಳು ಅರಸಾ: ನಾವದಿಗೆಯೆಂಬಲ್ಲಿ ಗುಡ್ಡವ್ವೆ ಸದ್ಭಕ್ತೆಯೆಂದು ಹೆಸರಾಗಿದ್ದಳು. ತೊನ್ನಿನಿಂದ ಆಕೆಯ ರೂಪ ಕೆಟ್ಟಿತ್ತು. ಆ ಅಗ್ರಹಾರದ ಬ್ರಾಹ್ಮಣರು ಅವಳನ್ನು ಹೊರಗೆ ಹಾಕಿದರು. ಸೋಮೇಶ್ವರನಿಂದ ಸುರೂಪವನ್ನು ಪಡೆದಲ್ಲದೆ ಈ ಊರಲ್ಲಿ ಕಾಲಿಡಬಾರದೆಂದು ನಿರ್ಧರಿಸಿ ಸೌರಾಷ್ಟ್ರಕ್ಕೆ ತೆರಳಿದಳು. ಲಿಂಗಾಲುಗಳೊಡೆದವು; ಆಂಬೆಗಾಲಿಕ್ಕಿ ಹೊರಟಳು; ಮಂಡೆ ಕೈಗಳೊಡೆದವು; ಸೋಮೇಶ್ವರನನ್ನು ನೆನೆಯುತ್ತ ಉರುಳುತ್ತುರುಳುತ್ತ ಸಾಗಿದಳು. ಮೈ ಒಡೆದು ರಪೂರಕ್ತವಾಯಿತು. ಆದರೂ ಸಂಕಲ್ಪವನ್ನು ಬಿಡದಿದ್ದ ಗುಡ್ಡವ್ವೆಯ ನಿಷ್ಠೆಗೆ ಮೆಚ್ಚಿ ಶಿವನು ಪ್ರಸನ್ನನಾಗಿ ಅವಳಿಗೆ ದಿವ್ಯ ಶರೀರವನ್ನು ಕೊಟ್ಟು ಆಕೆಯ ಅಪೇಕ್ಷೆಯಂತೆ ನಾವದಿಗೆಯ ಪುರಭಾಗದಲ್ಲಿ ನೆಲಸಿದನು. ಗುಡ್ಡವ್ವೆಯನ್ನು ಬಯ್ದ ಬ್ರಾಹ್ಮಣರು ಕುಷ್ಠರೋಗದಿಂದ ಬಳಲಿದರು.

ಹೀಗೆ ಹಲವಾರು ಉದಾಹರಣೆಗಳಿಂದ ಬಸವಣ್ಣನು ಭಕ್ತರ ಸತ್ಕುಲತ್ವವನ್ನು ಪ್ರತಿಪಾದಿಸಿದನು. ಬಿಜ್ಜಳನು ಇನ್ನೂ ಕೋಪಾವೇಶದಿಂದ "ಇಷ್ಟೆಲ್ಲಾ ಹಲವು ಕಥೆಗಳೇತಕ್ಕೆ? ಭಕ್ತರನ್ನು ಜೀವುಟಿದರೆ ಹಾಲು ಇತರರನ್ನು ಜೀವುಟಿದರೆ ರಕ್ತ ಹೊರಡುವುದೆ? ಏನು ಹೇಳುವೆ" ಎಂದನು. "ನೀವೆಂದಂತೆಯೇ ಆಗಲಿ. ಶಿವನಾಗಮಯ್ಯನ ಮೈಯಲ್ಲಿ ಹಾಲನ್ನು ಹೊರಡಿಸುವೆ. ಸೋಮಯಾಜಿಯಲ್ಲಿ ನೀರನ್ನಾದರೂ ತೋರಿಸಿರಿ" ಎಂದು ಬಸವಣ್ಣನು ಶಿವನಾಗಮಯ್ಯನ ಕರಸ್ಥಲವನ್ನು ಹಿಡಿದು ಹಿಸುಕಿದನು. ಶಿವಭಕ್ತಿಯೆಂಬ ಕಾಮಧೇನುವನ್ನು ಕರೆದನೋ ಎಂಬಂತೆ ಹಾಲು ಸೂಸಿತು. ಬಿಜ್ಜಳನೂ ಜನರೂ ಬೆರಗಾಗಿ ಶಿವನಾಗಮಯ್ಯನ ಮಹಿಮೆಯನ್ನು ಹೊಗಳುತ್ತ ನಮಸ್ಕರಿಸಿದರು.

ಸಂಧಿ: ೫೬, ೫೮

ವಿಷದ ಪವಾಡ

ಅನೇಕಾನೇಕ ಶೈವ ದೀಕ್ಷಾಚಾರ್ಯರೂ ಅವರ ಮಹಿಮೆಗೆ ಓತು ಬಂದು ದೀಕ್ಷೆ ಹೊಂದಿದ ಅಖಿಲ ಜನರೂ ಕಲ್ಯಾಣದಲ್ಲಿ ಪ್ರಸಾದಭೋಗಿಗಳಾಗುತ್ತಿರಲು

CC-0. Jangamwadi Math Collection. Digitized by eGangotri

ಕಬ್ಬಿಲರು ಅರಸನಲ್ಲಿಗೆ ಬಂದು "ಪ್ರಸಾದವನ್ನು ಭಕ್ತರೇ ಸೇವಿಸುತ್ತಿರುವರು. ನಮಗೆ ಒಂದಿಷ್ಟೂ ಕೊಡಲೊಲ್ಲರು. ಆದಿ ಚಂಡೇಶನು ಮಳಲಲಿಂಗಕ್ಕೆ ಹಾಲೆರೆದು, ವಿರೋಧಿಸಿದ ತಂದೆಯನ್ನು ಕೊಂದು ಪಡೆದ ಪ್ರಸಾದವನ್ನು ನಮಗಿತ್ತನು; ಅದನ್ನು ವಂಶಪರಂಪರೆಯಾಗಿ ಅನುಭವಿಸಿಕೊಂಡು ಬಂದ ನಮಗೀಗ ಈ ಅವಸ್ಥೆಯಾಗಿದೆ. ನಮಗೆ ನ್ಯಾಯವಾದಾನ ಮಾಡು. ಇಲ್ಲದಿದ್ದರೆ ನಾವೆಲ್ಲರೂ ಅರಮನೆಯ ಮುಂದೆ ಸುಟ್ಟುಕೊಂಡು ಸಾಯುವೆವು" ಎಂದು ದೂರಿಕೊಂಡರು. ಅರಸನು ಬಸವಣ್ಣನನ್ನು ಕರೆಸಿ, "ಕಬ್ಬಿಲರ ನೆತ್ತರುಗೊಡುಗೆಯನ್ನು ಕೊಡು; ಅವರ ಪ್ರಸಾದವನ್ನು ಕಸಿದುಕೊಂಡುಂಬುದು ಯಾವ ನ್ಯಾಯ?" ಎಂದು ಹೇಳಿದನು. "ಶಿವಲಿಂಗಪ್ರಸಾದವು ಭಕ್ತನಿಗಲ್ಲದೆ ಇವರಿಗೆ ಸಲ್ಲುವುದಿಲ್ಲವೆ"ಂದನು ಬಸವಣ್ಣ. ಮತ್ತೆ ಕಬ್ಬಿಲರನ್ನು ಕುರಿತು, "ನಮ್ಮೊಡನೆ ವೀರೋಧವೇಕೆ? ನಿಮ್ಮ ಸಾಮ್ಯವನ್ನೇನು ನಾವು ಕಳೆದುಕೊಂಡಿಲ್ಲ. ಸುಮ್ಮನೆ ಜಗಳಾಡಬೇಡಿರಿ" ಎಂದನು. ಅವರು "ಮೊದಲಿನಿಂದ ಭೋಗಿಸುತ್ತ ಬಂದ ಪ್ರಸಾದವನ್ನು ಕೊಡದಿದ್ದರೆ ಇಲ್ಲಿಯೆ ಸಾಯುವೆವೆಂ"ದರು. ಬಸವನು ಅದಕ್ಕೊಪ್ಪದೆ. "ನೀವೀ ಪ್ರಸಾದಕ್ಕೆ ಅರ್ಹರಲ್ಲ. ಅರ್ಹತೆಯಿದ್ದರೆ, ಸಂಗಮೇಶನಿಗೆ ವಿಷವನ್ನು ನಿವೇದಿಸಿ, ಪ್ರಸಾದವನ್ನು ಕೊಡುವೆನು. ಈಸಿಕೊಳ್ಳಬಲ್ಲಿರಾ?" ಎಂದು ನುಡಿದನು. "ನೋಡಿದಿರಾ, ಬಸವನು ನಮ್ಮನ್ನು ವಿಷವಿಕ್ಕಿ ಕೊಲ್ಲಬೇಕೆನ್ನುತ್ತಾನೆ" ಎಂದು ಅವರು ಗುಡುಗಿದರು. "ಜೀವದಿಂದಿದ್ದರೆ ಸೊಪ್ಪು ಸದೆ ತಿಂದು ಬದುಕೇವು. ಈ ಬಸವನಿಗೆ ನಾವಂಜುವೆವು. ನಮಗೆ ವಿಷಪ್ರಸಾದ, ಭಕ್ತರಿಗೆ ಅಮೃತಪ್ರಸಾದವೆ? ವಿಷಪ್ರಸಾದವನ್ನು ತಾವುಂಡು ಬದುಕಲಿ. ನಾವು ಯಾವ ಪ್ರಸಾದದ ಗೊಡವೆಗೂ ಬರುವುದಿಲ್ಲ" ಎಂದರು.

ಬಸವಣ್ಣನು ಶಿವಾಲಯಕ್ಕೆ ಭಕ್ತರೊಡನೆ ಬಂದು ಕಟ್ಟುಗ್ರವಾದ ನಾನಾ ವಿಷಗಳನ್ನು ಅರೆಯಿಸಿ ಕೊಪ್ಪರಿಗೆಯಲ್ಲಿ ತುಂಬಿಸಿದನು. ಕಬ್ಬಿಲರು ಬೆದರಿದರು. ಬಸವಣ್ಣನು ಆ ವಿಷವನ್ನು ಭಕ್ತಿಯಿಂದ ಶಿವನಿಗರ್ಪಿಸಿದನು. ಜಂಗಮಾವಳಿ ಪ್ರಸಾದಕ್ಕೆ ಕುಳಿತಿತು. ಬಡಿಸುವ ಸಡಗರ, ಆರೋಗಿಸುವ ಸಂಭ್ರಮ ಹೇಳತೀರದು. 'ನನಗೆ ತಾ ಅವಗೆ ತಾ, ಅವಗೆ ನೀಡು ಇವಗೆ ನೀಡು, ಸರಸರ ಮುಗಿಸು, ಇನ್ನಿಷ್ಟು ಹಿಡಿ' ಎಂಬ ಕೋಲಾಹಲದಲ್ಲಿ ಊಟ ಸಾಗಿತು. ಶರಣಶರಣೆಯರೆಲ್ಲ ಉಂಡು ತಣಿದರು. ಬಳಿಕ ಬಸವಣ್ಣನು ಬಿಜ್ಜಳನನ್ನೂ, ಅವನ ಪರಿವಾರವನ್ನೂ ಸೈನಿಕರನ್ನೂ ಸೇವಕರನ್ನೂ ಕರೆಸಿ ಉಣಿಸಿದನು; ಆನೆ ಕುದುರೆಗಳನ್ನೆಲ್ಲ ಹಿಡಿತರಿಸಿ ಉಣಿಸಿದನು.

ಬಸವನ ಈ ಮಹಾಮಹಿಮೆಗೆ ಕಟ್ಟಚ್ಚರಿಬಟ್ಟು ರಾಜನೂ ನೆರೆದ ಜನವೂ

CC-0. Jangamwadi Math Collection. Digitized by eGangotri

"ಅಂದು ಅಮೃತವುಂಡ ದೇವತೆಗಳು ಪ್ರಳಯಕ್ಕೊಳಗಾದರು; ಇಂದು ಬಸವಣ್ಣನು ವಿಷವನ್ನುಂಡು ದಿವ್ಯಾಂಗನಾದನು. ಈತನು ಲೋಕಹಿತಾರ್ಥವಾಗಿ ಶಿವಾಜ್ಞೆಯಿಂದ ಅವತರಿಸಿದ ಸಾಕ್ಷಾತ್ ನಂದೀಶ್ವರನೇ ಅಹುದಹುದು" ಎಂದು ಕೊಂಡಾಡಿದರು. ಕಬ್ಬಲರ ತಂಡವು ಬಸವಣ್ಣನ ಕಾಲಿಗೆ ಬಿದ್ದು ಕಾಪಾಡೆಂದು ಬೇಡಿಕೊಳ್ಳಲು ದಯೆಯೆ ಧರ್ಮವಾಗಿದ್ದ ಆತನು ಅವರನ್ನು ಸಲಹಿದನು.

ಸಂಧಿ : ೫೯

ಜಗದೇವಯ್ಯನ ಕಥೆ

ಜಗದೇವಮಂತ್ರಿ ಒಂದು ದಿನ ಬಸವಣ್ಣನನ್ನು ತನ್ನ ಮನೆಗೆ ಆರೋಗಣೆಗೆ ಕರೆದನು. ಜಂಗಮದ ಬರವಿಗೆ ಸೈರಿಸುವೆಯಾದರೆ ಆಗಲಿ ಎಂದು ಬಸವಣ್ಣನು ಒಪ್ಪಿದನು. ಜಗದೇವನು ಬಗೆಬಗೆಯ ಪಕ್ವಾನ್ನಗಳ ಅಡಿಗೆ ಮಾಡಿಸಿದನು. ಬಸವಣ್ಣನು ಬರುವುದರೊಳಗೆ ಮನೆತನದ ಪೂರ್ವಾಚಾರದಂತೆ ಬ್ರಾಹ್ಮಣ ಭೋಜನ ಮಾಡಿಸಿದನು. ಈ ಸುದ್ದಿ ಬಸವಣ್ಣನಿಗೆ ಹತ್ತಿತು. ಕರೆಯ ಬಂದ ಜಗದೇವನನ್ನು ಅಧೋಗತಿಗಿಳಿದ ಅಧಮನೆಂದು ಬಯ್ದು "ನೀನಿಲ್ಲಿ ಬರಬೇಡ. ನಾನು ಬರುವುದಿಲ್ಲ, ನಡೆ" ಎಂದನು. ಭವಿಸಂಗದ್ರೋಹ ಎಂತಹದೆಂಬುದಕ್ಕೆ ಏಲೇಶ್ವರ ಕೇತಯ್ಯನ ಕಥೆಯನ್ನು ಹೇಳಿದನು.

ಏಲೇಶ್ವರ ಕೇತಯ್ಯನ ಕಥೆ

ಏಲೇಶ್ವರ ಕೇತಯ್ಯನೆಂಬ ಭಕ್ತನು ತನ್ನ ಮನೆಯ ಜನಗಳನ್ನಲ್ಲದೆ, ಹಸು ನಾಯಿ ಬೆಕ್ಕು ಮೊದಲಾದ ಪ್ರಾಣಿಗಳನ್ನೂ ಶಿವ ಸಹಿತರನ್ನಾಗಿ ಮಾಡಿದ್ದನು. ಪಂಚೇಂದ್ರಿಯಗಳಿಂದಲೂ ಭವಿಗಳನ್ನು ವರ್ಜಿಸಿದ್ದನು. ಕುಹಕ ಭವಿಗಳು ಸೈರಿಸದೆ ಬಿತ್ತುವ ತಪ್ಪಿ ನಾಳೆ ಎನ್ನುವಾಗ ಅವನ ಬೀಜದ ಕೊಟಡಿಗೆ ಕೊಳ್ಳಿಯಿಕ್ಕಿ ಸುಟ್ಟರು. ಅದಕ್ಕವನು ಕುಗ್ಗದೆ ಸುಟ್ಟ ಬೀಜಗಳನ್ನೇ ಬಿತ್ತಿದನು. ಪ್ರತಿ ವರುಷಕ್ಕಿಂತಲೂ ಆ ವರುಷ ಇಮ್ಮಡಿ ಮುಮ್ಮಡಿಯಾಗಿ ಬೆಳೆ ಬಂದಿತು. ಇದರಿಂದ ಆ ವಿರೋಧಿಗಳು ಬುದ್ಧಿಗಲಿಯದೆ, ಕೇತಯ್ಯನ ದನಗಳನ್ನೆಲ್ಲ ಕಳವು ಮಾಡಿಸಿದರು. ಮನೆ ಬಿಟ್ಟಂದಿನಿಂದ ಆ ದನಗಳು ಮೇವು-ನೀರು ಮುಟ್ಟಲಿಲ್ಲ. ಏಳು ದಿನ ನಿರಾಹಾರದಲ್ಲಿಯೇ ಕಳೆದವು. ಕಳ್ಳರು ಗೋಹತ್ಯೆಯ ಪಾಪ ಬರುವುದೆಂದು ಅವುಗಳನ್ನು ಬಿಟ್ಟುಬಿಟ್ಟರು. ಭವಿಗಳಲ್ಲಿ ಉಂಡವೆಂದು ಕೇತಯ್ಯನು ಕೊಟ್ಟಿಗೆಯೊಳಗೆ ದನಗಳನ್ನು ತೆಗೆದುಕೊಳ್ಳಲಿಲ್ಲ; ಒಳಗಿದ್ದ ಕರುಗಳು ಕೂಡ ತಮ್ಮ ತಾಯಿಗಳತ್ತ ನೋಡಲಿಲ್ಲ. ಆಕಳುಗಳು ಹೊರಗಿನಿಂದ ಇಣಿಇಣಿಕಿ ತಾವು ಪೂಜಿಸುತ್ತಿದ್ದ ಲಿಂಗ

CC-0. Jangamwadi Math Collection. Digitized by eGangotri

ದತ್ತ ನೋಡಿ ಆರಚುತ್ತಿದ್ದವು. ಬೇರೆಯವರು ದಯೆಯಿಂದ ಕೊಟ್ಟ ಮೇವನ್ನು ಅವು ಮುಟ್ಟಲಿಲ್ಲ. ಆಗ ಕೇತಯ್ಯನು ಇವು ವ್ರತಭ್ರಷ್ಟವಾಗಿಲ್ಲವೆಂದು ತಿಳಿದು ಒಳಕ್ಕೆ ಕರೆದುಕೊಂಡನು. ಅವು ಲಿಂಗಸ್ಪರ್ಶನ ಮಾಡಿ ಮೇದು ನೀರು ಕುಡಿದವು.

ಜಗದೇವಾ, ನೀನು ಇಂತಹ ಆಚಾರಮಹಿಮೆಯನ್ನರಿತೂ ದುಷ್ಕರ್ಮಿಗಳನ್ನು ಆರಾಧಿಸಿದೆಯಲ್ಲ, ನಿನಗೇನೆನ್ನಲಿ? ಎಂದು ಮುಂತಾಗಿ ನಾನಾ ಛಂದದಿಂದ ಬಸವಣ್ಣನು ಬೋಧಿಸಿದನು. ಜಗದೇವನು ಬಸವಣ್ಣನಿಗೂ ಭಕ್ತವೃಂದಕ್ಕೂ ಪಶ್ಚಾತ್ತಾಪದಿಂದ ನಮಸ್ಕರಿಸಿ ಕ್ಷಮಿಸಬೇಕೆಂದು ಬೇಡಿಕೊಂಡನು. ಬಸವಣ್ಣನು ಕರುಣಿಸಿ ಶಿವಗಣದ ಅನುಮತಿಯಿಂದ ಇಂತೆಂದನು: "ಇನ್ನು ಕೆಲವು ದಿನಕ್ಕೆ ಮಹಾಶಿವದ್ರೋಹವು ಒದಗುವುದು. ಆ ದ್ರೋಹಿಯನ್ನು ನೀನು ಹಿಂಜರಿಯದೆ ತೀರಿಸಿಬಿಡು. ಶಿವನ ಒಲುಮೆ, ಭಕ್ತರ ಮೆಚ್ಚು ನಿನಗುಂಟಾಗುವುದು." ಜಗದೇವನು ಆ ಮಣಿಹಕ್ಕೆ ವೀರದಂಬುಲವನ್ನು ಕೈಕೊಂಡನು. ಭಕ್ತರು ಸಹಿತವಾಗಿ ಬಸವಣ್ಣನು ಆತನ ಮನೆಯಲ್ಲಿ ಆರೋಗಿಸಿದನು.

ಸಂಧಿ: ೬೦

ಬಸವೇಶ್ವರನ ಐಕ್ಯ

ಮುಂದೆ ಕೆಲದಿನಗಳಲ್ಲಿ ಬಿಜ್ಜಳನು ಹರಳಯ್ಯ ಮಧುವಯ್ಯಗಳೆಂಬ ಶೀಲಸಂಪನ್ನರಾದ ಭಕ್ತರ ಕಣ್ಣುಗಳನ್ನು ಕೀಳಿಸಿದನು. ಶಿವಭಕ್ತರು ಕೆರಳಿದರು. ಬಸವಣ್ಣನು ಜಗದೇವನನ್ನು ಕರೆಯಿಸಿ "ಆ ದ್ರೋಹಿಯನ್ನು ಅಪಹರಿಸಿ ನನ್ನಿಯನ್ನು ಮೆರೆ" ಎಂದು ಆದೇಶವಿತ್ತ. ಹರಳಯ್ಯ-ಮಧುವಯ್ಯಗಳ ಕಣ್ಣನ್ನು ಪಡೆದು ಕಲ್ಯಾಣವನ್ನು ತೊರೆದು ಸಂಗಮೇಶ್ವರಕ್ಕೆ ನಡೆದನು. ಬಿಜ್ಜಳನ ಸಂಪತ್ತು ಇಂಗಿತು, ಕಟಕದ ಭಾಗ್ಯವಳಿಯಿತು. ದುರ್ನಿಮಿತ್ತಗಳಾದವು. ಜನ ಬೆದರಿತು.

ಮನೆಗೆ ಬಂದ ಜಗದೇವನನ್ನು ಕಂಡು ತಾಯಿ ಎಂದಳು: "ಶಿವದ್ರೋಹದ ಸುದ್ದಿ ಕಿವಿಗೆ ಬಿದ್ದೊಡನೆ ಹಗೆಯನ್ನು ಕೊಲ್ಲದೆ, ನೀನೂ ಸಾಯದೆ ಉಳಿದಿರುವೆಯಲ್ಲಾ! ಎಲ್ಲಿದೆ ನಿನ್ನ ಪ್ರತಿಜ್ಞೆ?" ಎಂದು ಬಯ್ದು ನಾಯಿಗಿಕ್ಕುವಂತೆ ಹಿತ್ತಿಲಲ್ಲಿ ಆತನಿಗೆ ಊಟಕ್ಕಿಕ್ಕಿ ಕಳುಹಿದಳು. ಮಲ್ಲ ಮತ್ತು ಬೊಮ್ಮಯ್ಯ ಎಂಬ ಇಬ್ಬರು ವೀರಭಕ್ತರೂ ಜಗದೇವನನ್ನು ಕೂಡಿಕೊಂಡರು. ಮೂವರೂ ಅರಮನೆಯತ್ತ ಸಾಗಿದರು. ಬಲಿಷ್ಠವಾದ ವೃಷಭವೊಂದು ಅವರಿಗೆ ದಾರಿಮಾಡಿಕೊಡುತ್ತ ಹೊರಟಿತು. ವೀರಭದ್ರರಂತೆ ಬರುತ್ತಿದ್ದ ಅವರನ್ನು ತಡೆಯಲಾರದೆ ಕಾವಲಿ

CC-0. Jangamwadi Math Collection. Digitized by eGangotri

ನವರು ಸರಿದುಹೋದರು. ಮೂವರೂ ಅರಮನೆಯನ್ನು ಹೊಕ್ಕು ಓಲಗದಲ್ಲಿದ್ದ ಬಿಜ್ಜಳನನ್ನು ಇರಿದು ಕೆಡವಿದರು. ಜಗದೇವನು ತಿರುಗಿ ಬಂದು ತಾಯಿಗೆ ನಮಸ್ಕರಿಸಿ ತನ್ನ ಭಾಷೆ ಪೂರೈಸಿತೆಂದು ಹೇಳಿ ಆಕೆಯ ಕೃಪೆಯನ್ನು ಪಡೆದನು. ಆ ಶಿವದ್ರೋಹಿಯನ್ನು ಮೊದಲು ಕೊಲ್ಲದೆ ಬಿಟ್ಟ ತಪ್ಪಿಗಾಗಿ ಅವನು ತನ್ನ ಶಿರವನ್ನು ಕಡಿದುಕೊಂಡನು. ಶಿವನು ಮೆಚ್ಚಿ ಅವನನ್ನೂ ಅವನ ಪುತ್ರಪೌತ್ರಕಳತ್ರಗೋತ್ರರೆಲ್ಲರನ್ನೂ ವಿಮಾನದಲ್ಲಿ ಕೈಲಾಸಕ್ಕೆ ಕರೆದೊಯ್ದನು.

ಬಸವೇಶ್ವರನು ಸಂಗಮಕ್ಕೆ ಬಂದು ಗುರುವನ್ನೂ ಶಿವನನ್ನೂ ಮನದುಂಬಿ ಸ್ತುತಿಸಿದನು. "ನಿಮ್ಮಾಜ್ಞೆಯಂತೆ ಬಂದು ಮಣಿಹವನ್ನು ಪೂರಯಿಸಿದೆನು. ಇನ್ನು ನಿಮ್ಮಲ್ಲಿಗೆ ಕರೆದುಕೋ" ಎಂದು ಪ್ರಾರ್ಥಿಸಿದನು. ಗುರು ಪ್ರಸನ್ನನಾಗಿ. ನಮಿಸಿದ ಬಸವನನ್ನು ಬೋಳಯಿಸಿ ಪ್ರಸಾದವನ್ನಿತ್ತು ತನ್ನಲ್ಲಿ ಒಂದುಗೂಡಿಸಿಕೊಂಡು ಗುಡಿಯೊಳಗೆ ಪ್ರವೇಶಿಸಿದನು. ಭಕ್ತರು ಕೀರ್ತಿಸಿದರು. ಹೂಮಳೆ ಕರೆಯಿತು.

ಕವಿಯ ಫಲಶ್ರುತಿ

ನುತಿವೆತ್ತ ಬಸವಪುರಾಣವನ್ನು ಭಕ್ತೋತ್ತಮರ ಕೈಲಿ ಕೇಳಿದಂತೆ ನನ್ನ ಶಕ್ತ್ಯನುಸಾರವಾಗಿ ಹೇಳಿದೆನು: ಅನಂತ ಮಾಹೇಶ್ವರರ ಕಥೆಗಳನ್ನು ವಿವರಿಸಿದೆನು. ಭಕ್ತರು ಇದನ್ನು ಪೆರೆಯುವುದು. ಇದನ್ನು ಓದಿದವರ ಕೇಳಿದವರ ಪಾಪಗಳೋಡಿ. ಭವದ ಬೇರು ಕಿತ್ತು. ಊರ್ಜಿತ ಭಕ್ತಿ ರಂಜಿಸುವುದು. ಅವರಿಗೆ ಸೂರ್ಯನ ತೇಜ. ಚಂದ್ರನ ಕಾಂತಿ. ಅಗ್ನಿಯ ಪ್ರತಾಪ. ಕುಬೇರನ ಸಂಪತ್ತು. ಮನ್ಮಥನ ರೂಪು. ದೇವೇಂದ್ರನ ಉನ್ನತ ಭೋಗ ಉಂಟಾಗುವವು.

CC-0. Jangamwadi Math Collection. Digitized by eGangotri

ಬಸವಪುರಾಣ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಕಾಂಡ : ೧

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಂಧಿ : ೧

*

ಸೂಚನೆ : ಆದಿ ಶಿವಲಿಂಗಕ್ಕೆ ವಾಹನ
ವಾದ ನಂದೀಶ್ವರನಿಗೆ ಮತ್ತೆ ಶಿ
ವಾದಮುನಿಗುದಯಿಸಿದ ಪರಿಯಂ ಪೇಳ್ವೆನೆಂತೆನಲು

ಶ್ರೀಗುರುವೆ ದೀಕ್ಷಾಗುರುವೆ ಶಿ
ಕ್ಷಾಗುರುವೆ ರಕ್ಷಾಗುರುವೆ ಸ
ರ್ವಾಗಮೋಕ್ತಕಳಾಗುರುವೆ ಶಿವಯೋಗಧರ್ಮಾರ್ಥ
ಭೋಗಗುರುವೇ ತ್ಯಾಗಗುರುವೆ ಸು
ಧೀಗುರುವೆ ವಾಚಾಗುರುವೆ ಭವ
ರೋಗಹರ ಶರಣಾಗು ಬಸವಮಹಾಗುರುವೆ ನಿಮಗೆ ೧

---

* ರಾಗ: ನಾಟಿ (ಅ, ಕ); ಮಾಲಾಹರಿ (ಚ); ಶಾಂತಮಲಹರಿ (ತ, ಥ); ಭೈರವಿ (ಸ).
೧ನು (ಧ). ೨ಯೆ (ಚ, ದ, ಬ).

CC-0. Jangamwadi Math Collection. Digitized by eGangotri

ಶ್ರೀಮದಗಜಾವಾಮಭಾಗೋ
ದ್ದಾಮವಪುರಭಿರಾಮನಭಿ[೧]ನುತ
ಸಾಮಗಾನಸ್ತೋಮ ಸರಸಪ್ರೇಮ[೨]ನರಿಭೀಮ[೩]
ಕಾಮತಾತಪಿತಾಮಹಪ್ರಮು
ಖಾಮರೇಂದ್ರಕ್ಷೇಮನಪ್ರತಿ
ನಾಮನೊಸೆದುದ್ಧರಿಸುಗೆಮ್ಮನು ಸಿದ್ಧವಟಧಾಮ ೨

ಶ್ರೀಗುರುಪರಂಜ್ಯೋತಿಲಿ[೪]ಂಗಂ
ನಾಗಮುಖಿಮುಖಿನಳಿನಭೃಂಗಂ
ಭೋಗಿಶಯನಸು[೫]ಹೃದಯ ಸರಸಿಜ ಸಮುದಯಪತಂಗಂ
ರಾಗ ತುಂಗಜಟಾಮಕುಟತಟ
ಯೋಗ ಗಂಗಾಭಂಗನೊಲ್ದಮ
ಗೀಗೆ ಬಸವನ ಕೃತಿಯನೊರೆ[೬]ವ ಸುಮತಿಯ[೭] ಸಮತೆಯನು[೮] ೩

ದೇವದೇವನುಮೇಶನೀಶನು
ಭಾವಭಾವಿತಜನಜನನ[೯]ಭಯ[೧೦]
ದಾವದಾವನವ[೧೧]ಮರಮರ[೧೨] ಸಂಸಿದ್ಧಸಿದ್ಧೇಶ
ಜೀವಜೀವಂ ಶರಣಶರಣಂ[೧೩]
ಸೇವಕಂ ಸೇವಕಪರ್ಗೆಮ
ಗೀವನೀ ವರ ಬಸವಚರಿತಾಪರಿಮಿತೋಕ್ತಿಗಳ ೪

ಶ್ಯಾಮಳಾಂಗೀಸಂಗತಾಂಗಂ
ಶ್ಯಾಮಳಾಂಗದೃಗಂಕಪಾದಂ
ಶ್ಯಾಮಳಾಂಗಮದಾಪಹಾರಂ ಸಿದ್ಧವಟನಾಥ
ಶ್ಯಾಮಕಂಧರಗಮನಜನಕಂ
ಶ್ಯಾಮಕಂಧರರಾಜಕಟಕಂ
ಶ್ಯಾಮಕಂಧರನೀವನೀಕೃತಿಗತಿಚಮತ್ಕೃತಿಯ ೫

೧ತಿ (ಸ). ೨–೩ ವರಿಭೀಮ (ಸ). ೪ರಂ (ಸ). ೫ಸ (ಥ). ೬–೮ ವೆನು ಸುಮತಿ ಸಮ್ಮತಿಯ (ಬ). ೬ಗೆ (ಸ). ೮ × (ಸ ಹೊರತು ಎಲ್ಲಪ್ರತಿ) (ಸ). ೯–೧೦ ವನ (ಬ). ೧೧–೧೨ ಮರನಮರ (ಕ, ಚ); ಮದನಮದ (ಬ). ೧೩ ಣಾ (ಅ, ಕ, ಚ, ತ, ಥ, ದ, ನ, ಮ).

CC-0. Jangamwadi Math Collection. Digitized by eGangotri

ಗೋಪಯೋಗೋಪಾದಪಾಮೃತ
ಗೋಪವಾಹನ ಗೋಪವಾಹನ
ಗೋಪವಾಹನ ಗೋಪವನಭುಗಿನಾಮಳಸ್ಮೇರ
ಗೋಪಶಿವಸುಗೋಪವಿ್ರನು
ಗೋಪತಿವಿಷಮ ಗೋಪರಂ ವಿಧು
ಗೋಪದಂ ವಟಗೋಪನೀವನು ಗೋಪಟುತ್ವವನು ೬

ಸಾರಗಾನದೊಳಿಂಪು ಜಾತಿಪ
ಟೀರದೊಳು ತಂಪು ತ್ರಿದಶಧರ
ಣೀರುಹದೊಳೊಳುಗಂಪುಮಿರ್ಪವೊಲಖಿಳ ಭಕ್ತರೊಳು
ಪೂರಮಾಗಿಹ ನಿಮ್ಮ ಕೃತಿಯಂ
ಪಾರವೆಯ್ದಿಸಿ ಪೊರೆವುದೆಮ್ಮನು
ದಾರಿ ಮಹಿಮಾಗಾ್ರ ಬಸವಕುಮಾರ ಭವದೂರ ೭

ನಿನ್ನ ಕೃತಿಯಂ ಸೊಗಸುಮಿಗೆ ಪೇ
ಳ್ವನ್ನೆವರ ನಿರ್ವಿಘ್ನದಿಂದು
ತ್ಪನ್ನನವರಸಭಾವಭರಿತೋನ್ನತಮತಿಯನಿತ್ತು
ಎನ್ನುವಂ ಪದುಳದೊಳಿರಿಸಿ ಪೊರೆ
ಸನ್ನುತಾಮಳಭಕ್ತಿಗುಣಸಂ
ಪನ್ನ ಕಲಿಯುಗದೆರಡನೆಯ ಮುಕ್ಕಣ್ಣ ಬಸವಣ್ಣ ೮

ಎರಡೆರಡು ಮೂಱಿರಡುವೈದೆರ
ಡೆರಡು ಸಾಸಿರ ರಸನೆಗಳ್ಗೆವ
ರ್ಗರಿದು ಪೊಗಳಲು ನಿಮ್ಮ ಚರಿತೆಯನೊಂದು ನಾಲಗೆಯ
ನರನ ಪವಣೇ ಕೀರ್ತಿಪಡೆ ಬಸ
ವರಸ ನಿಮ್ಮಂ ಭಕ್ತಿಲಲನಾ
ಪರವಶದೊಳೇನೆಂದುವಱಿಯೆನು ತುತಿಸಿ ಬದುಕುವೆನು ೯

೧ಮಿ (ಚ). ೨–೩ಕರುಣಾಕ. (ತ) ತಿಕಾ (ಮ). ೪–೫ಯುಳ್ಳರಾ (ಕ, ಬ). ೬ನು (ಅ, ತ, ನ, ಬ).

CC-0. Jangamwadi Math Collection. Digitized by eGangotri

ಕೊಂಡಗುಳಿ ಕೇಶಿಗಳ ಸಿರಿಪತಿ
ಪಂಡಿತರ ಶಿವಲೆಂಕಮಂಚಣ
ಪಂಡಿತರ ಗುರುಮಲ್ಲಿಕಾರ್ಜುನಪಂಡಿತರ ಕೃಪೆಯಿಂ
ಮಂಡಿತೋಕ್ತಿಯೊಳವರ್ಗಳಿತ್ತು
ದ್ದಂಡ ಮತಿಯಿಂದಿಳೆಗೆ ಬಸವಣ
ದಂಡನಾಥನ ಕೃತಿಯನೊರೆವೆನಖಿಂಡಿತೋತ್ಸವದಿಂ ೧೦

ಸರಸಮೃದುಮಧುರೋಪಮೆಗಳಂ
ಕುರಿಸೆ ವಸ್ತುಕವರ್ಣಕಂಗಳ
ನೆರಪಿ ಹರನಂ ಹರಗಣಂಗಳನೆಯ್ದಿ ಕೀರ್ತಿಸಿದ
ಧರೆಗುಭಯಕವಿಶರಭಭೇರುಂ
ಡರಸುಕವಿ ಹರಿಬುಧವರನ ತ
ದ್ವರಸುತನ ರಾಘವನ ಕೃಪೆಯಿಂ ರಚಿಸುವೆಂ ಕೃತಿಯ ೧೧

ಶಿವಕವಿಗಳೆನಿಸಿದ ಪುರಾತನ
ಕವಿಗಳಂ ಶಿವಭಕ್ತಿನೂತನ
ಕವಿಗಳಂ ಶಿವಧರ್ಮಶಾಸ್ತ್ರಕಳಾವಿಶಾರದರ
ಶಿವರಹಸ್ಯಮಹತ್ವಶಿವತ
ತ್ವವಿದರಂ ಸಕಲಾಗಮಜ್ಞ
ಪ್ರವರರಂ ಭಾವಿಸಿ ರಚಿಸುವೆಂ ಬಸವಚರಿತೆಯನು ೧೨

ಇಷ್ಟಮಾಗಿರಲನ್ಯಕವಿ ನಿ
ರ್ದಿಷ್ಟಿತಾರ್ಥಮನೊರೆವುದೊಂದು
ತ್ಕೃಷ್ಟಮತಿಯ ನವೋಪಮೆಗಳಂ ತನ್ನೊಳಾಪನಿತ
ಸೃಷ್ಟಿಸುತ್ತಿರವೇಳ್ಕು ಬಾಣೋ
ಚ್ಛಿಷ್ಟವೆಂಬ ಜಗತ್ಪ್ರಯದೊಳೀ
ಕಷ್ಟಮೇ ಸಾಲದೆ ವಿಚಾರಿಸೆ ಸತ್ಕವೀಂದ್ರರಿಗೆ ೧೩

CC-0. Jangamwadi Math Collection. Digitized by eGangotri

ಇನಿತು ಬಡಮತಿಯಿಂ ಬಸವರಾ
ಜನ ಕೃತಿಯನಾನೆಂತು ರಚಿಸುವೆ
ನೆನುತೆಣಿಸಿ ಶಿವಯೋಗನಿದ್ರಾಮುದ್ರಿತದೊಳಿರಲು
ಆನುನಯದಿ ಪಾಲ್ಕುರಿಕೆ ಸೋಮೇ
ಶನುಮನಘದೇವಾರ್ಯನುಂ ಕನ
ಸಿನೊಳೊಸೆದು ಬಂದು[೨] ಪ್ರಸಾದವನಿತ್ತು ನುಡಿಸಿದನು ೧೪

ಆವುದಕ್ಕನುಮಾನಿಸದಿರೊಲಿ
ದಾವ ಶಬ್ದಾರ್ಥಮುಮನಾದಡೆ
ಭಾವಿಸಲು ನಿನಗಱಿಪಿ ನಿನ್ನಾತ್ಮದೊಳಗಲದಿರ್ದು
ನಾವು ರಚಿಸುವೆವೆಸೆವ ಬಸವ ಕ
ಥಾವಿಸರಮಂ ಬರೆದುಕೋಯೆಂ-
ದೋವಿದವರಾಜ್ಞೆಯನೆ ಶಿರದೊಳು ಧರಿಸಿ ಸಮುದಿತ್ತು ೧೫

ಅಸಮಲಿಂಗೈಕಾನುಭಾವ
ಪ್ರಸರಮತಿಕವಿಸೋಮನಾಥನು
ರಸಮೊಸರೆ ಮುನ್ನುಸುರ್ದುದನೆ ಕನ್ನಡಿಸಿ ಪೇಳೆಂದು
ಎಸೆವ ಬಸವಪುರಾಣಮಂ ಪಸ
ರಿಸುವ ನಿರ್ಮಳಬೋಧೆಯಂ ಕರು
ಣಿಸಿದ ಕಾರಣವೆನಗೆ ಪಿರಿದಾಯಾಸವಿನಿತಿಲ್ಲ ೧೬

ವಿಮಳ ಸದ್ಗುರುಸೇವೆಯಲಿ ಜಂ
ಗಮಭಜನೆಯಲಿ ಲಿಂಗನಿಷ್ಠಾ
ಸಮತೆಯಲಿ ತನುಮನಧನಂಗಳನಿತ್ತಭವಭಕ್ತಿ
ಸಮಯವಾರ್ಧಿವಿವರ್ಧನೋಜ್ವಲ
ಹಿಮಗು ಶಿವಕವಿದೇವನಾತ್ಮಜ
ಸುಮತಿ ಭೀಮನುಭಯಕವಿತ್ವಸಮರ್ಥನುಸುರುವಡೆ ೧೭

೧–೨ ಳು ಬಂದು ನಿಜ (ಸ). ೩–೪ ಮತಿ (ಸ). ೫ ಕ್ಯಾ (ಸ). ೬–೭ ನ್ನಿಲ್ಲ (ತ, ಥ, ದ, ನ) ೪ ಯು (ಕ).

CC-0. Jangamwadi Math Collection. Digitized by eGangotri

ವೈರಿಪದವಪಳಬ್ಬವಚಮ
ತ್ಕಾರವಧಮೋಪಮೆ ವಿ೧ಯತಿ ಪದ
ಪೂರಕಂ ದುಸ್ಸಂಧಿಯನಿಬದ್ಧಂ ವಿರುದ್ಧಾರ್ಥ
ನೀರಸಂ ಶೈಥಿಲ್ಯವರ್ಣಂ
ಕಾರಕವಿರಹಿತಂ ಕ್ರಿಯಾಳಂ
ಕಾರಹೀನವೆನಿಪ್ಪ ಪೊಳ್ಕಂ ತೂಱಿ ಕಳೆದಿಂತು ೧೫

ಸ್ಫರಸಮೃದುತರಯಮಕಗಮಕವಿ
ಸರ ಸಮಾಸಪ್ರಾಸದೇಶೀ
ಸರಣಿ ಶಬ್ದಾರ್ಥೋಪಮಾಚಾತುರ್ಯಮಾಧುರ್ಯ
ಸರಸ೨ಪದಶಯ್ಯಾದೃಢವ್ಯಾ
ಕರಣಯುತಲಾಲಿತ್ಯನಿಯಮಾ
ಕ್ಷರಸಲಕ್ಷಣ ಭಾವಮಾಗಿರೆ ರಚಿಸುವೆಂ ಕೃತಿಯ ೧೬

ಹಾಲೊಳಪ್ಪಿನ ವಿಪರವಱಿವ ಮ
ರಾಳವಂ ಕಂಡುಬ್ಬಿ ಲೋಕಂ
ಲಾಲಿಸುವವೊಲು ಶು೩ನಕ ಮೊಗೆ೪ವಾಲಂ ಕುಡಿದು ಪ್ರೋಗೆ
ಆಳಿಗೊಳುತಂ ಬಡಿವರಲ್ಲದೆ
ಲಾಲಿಸುವರೇ ಸುಕವಿಯೆಂದಡೆ
ಮೇಲಹುದು ಕೃತಿ ಕುಕವಿಯೆಂದಡದೇನಹುದು ೫ಕಡಿಗೆ೬ ೨೦

ಪ್ರಾಸ ಯತಿ ಗಣ ಗದ್ಯ ಪದ್ಯ ಸ
ಮಾಸಯುತ ವಸ್ತುಕದ ಮುಂದೆ ವಿ
ಳಾಸ೩ಮೇ ಸಾಮಾನ್ಯಮೀ೪ ವರ್ಣಕ ಕವಿತೆಯೆಂದು
ಓಸರಿಸದಿರಿ ಬಱಿಯ ಕನ್ನಡ
ಭಾಷೆಯೆಂದೆನಲಾಗದಿಳೆಗಿದು
ಲೇಸೆನಿಪ ವೇದಪ್ರಮಾಣವನಿಪ್ಪುದೆಂತೆನಲು ೨೧

೧ನಿ (ಸ). ೨ಳ (ಕ, ಚ, ತ, ಥ, ದ, ಧ, ನ, ಬ). ೩–೪ನಕಿ ಮೊಲೆ (ಸ). ೫–೬ ತಸಗೆ (ದ, ಬ); ಎಮಗೆ (ಅ). ೭–೮ವಹುದೇ ಮೇಣಮೀ (ಅ, ಡಾ); ಮೇ ಬಿಡು ಕಳವೆಯಿದು(ಕ).

CC-0. Jangamwadi Math Collection. Digitized by eGangotri

ಧರೆಯೊಳೂರಡಿಯಾದ ಕೊಳಗದ
ಸರಿಯ ಸೊಲ್ಲಿಗೆ ಸಲ್ಲದಿಪ್ಪುದೆ
ಪರಿಮಿತಾಕ್ಷರತತಿಯೊಳಪರಿಮಿತಾರ್ಥರಚನೆಯಲಿ
ವಿರಚಿಸುವುದದು ಕವಿಯ ಚತುರತೆ
ಗುರುಬಸವನಂ ನೆನೆವ ಬಲ್ಪಿಂ
ಸರಸ ಮೃದುಮಧುರೋಕ್ತಿಗಳು ಮಿಗೆ ರಚಿಸುವೆನು ಕೃತಿಯ ೨೨

ಆದಿಲಿಂಗರಹಸ್ಯಸಿದ್ಧಾಂ
ತಾದಿ ವೇದಪುರಾಣಸಮ್ಮತ
ವಾದ ಬಸವಪುರಾತನರ ಗೀತಾರ್ಥಮಾತೃಕದಿ
ಕೋದ ಮಣಿಗಣಿಸೂತ್ರದಂತಿರೆ
ಆದಿಗಣಚರಿತಂಗಳೊಳು ಸಂ
ವೇದಿಸಲು ಬಸವನ ಚರಿತೆಯಂ ಬಣ್ಣಿಸುವೆನೊಸೆದು ೨೩

ಅಸಮಲಿಂಗಾಂಗೈಕ್ಯಸಂಗದಿ
ಬಸವನಂ ಬೇಱಿಂದು ಭಾವದೊ
ಳೊಸೆದು ಕೀರ್ತಿಸಲಹುದೆಯಿದು ತಪ್ಪೆಂದು ನುಡಿಯದಿರಿ
ಪಸುಮತಿಗೆ ಶಿವಭಕ್ತಿಯಂ ಪಸ
ರಿಸುವಪಂ ತಾನಾಗಿಯಾತನ
ದೆಸೆಯೊಳೆಲ್ಲರು ಧನ್ಯರಾದಪರೆಂದು ತುಳಿತಿಸುವೆನು ೨೪

ಬಸವ ಶರಣನೆ ಪಾಪವಳಿವುಗು
ಬಸವ ಶರಣನೆ ತಾಪವಾಱುಗು
ಬಸವ ಶರಣನೆ ಪರಮಪಾವನ ಭಾತಿ ಸಂಧಿಸುಗು
ಬಸವ ಶರಣನೆ ಭಕ್ತಿ ದೊರಕುಗು
ಬಸವ ಶರಣನೆ ಸಾರ್ವ ಸುಸ್ಥಿತಿ
ಬಸವ ಶರಣನೆ ವಚನರಚನಾಸಿದ್ಧಿ ವರ್ಧಿಸುಗು ೨೫

---

೧೪ (ಥ, ನ). ೨೩ (ಥ, ನ). ೨–೩ ಭಾವದ (ಬ). ೪ನು (ತ, ದ, ನ, ಬ); ಸ್ಮು (ಚ, ಥ). ೫ಶು (ತ, ಥ, ಧ, ನ.)

CC-0. Jangamwadi Math Collection. Digitized by eGangotri

ಬಸವ ಶರಣನೆನೆ ಭವ[೧]ವುಡು[೨]ಗುವುದು
ಬಸವ ಶರಣನೆನೆ ಕೀರ್ತಿಯೆಸೆವುದು
ಬಸವ ಶರಣನೆನೆ ದುಸ್ಥಿತಿಗಳತ್ತತ್ತಲೋಡುವುವು
ಬಸವ ಶರಣನೆನೆ ಸೌಖ್ಯಮೊಂದುಗು
ಬಸವ ಶರಣನೆನೆ ಭಾಗ್ಯವಪ್ಪುಗು
ಬಸವ ಶರಣನೆನೆ ಕಾಮಿತೋನ್ನತ ಸಿದ್ಧಿ ಸಿದ್ಧಿಸುಗು ೭೭

ಬಸವ ಶರಣನೆನೆ ಶೀಲ[೩]ವೊಪ್ಪು[೪]ಗು
ಬಸವ ಶರಣನೆನೆ ವಿಮಲಮತಿ ರಂ
ಜಿಸುವುದುಸುರುವುದೇಂ ಬಸವನೆಂಬಕ್ಷರತ್ರಯವ
ಒಸೆದು ಚಿತ್ತದೊಳೊಮ್ಮೆ[೫]ಯುಂ ಪಠಿ
ಯಿಸು[೬]ವನಾವನವನ ವದನಸಾ
ರಸವೆ ನೆಲೆಯಾಗಿಪ್ಪನೀಶ್ವರನೆಂದಡಂತಾಗಿ ೭೮

ಬಸವರಾಜನನಾ[೭]ಗಳುಂ[೮] ಕೀ
ರ್ತಿಸುವವಂ ಭವಬಂಧಮಂ ಛೇ
ದಿಸುವುದರಿದೇ ಬಸವನೇಂ ಜಾವಳನೆ ಭಕ್ತರೊಳು
ಅಸಮನೇತ್ರನೆ ಬಸವ[೯]ನಾಮ[೧೦]ದಿ
ನೆಸೆದನಲ್ಲದೆ ಬಸವನಿಳೆಗುದ
ಯಿಸಿದ ಮಾತ್ರದೊಳಾತನಂ ನರಜಾತನೆನಲ[೧೧]ಹುದೆ ೭೯

ಪುರಹರಂ ನಿರವಯದೊಳಿರೆ ಬಸ
ವರಸನವಯವದಿಂದೆ [೧೨]ಚಲಿ[೧೩]ಸುವ
ಪುರಹರಂ ಸಾಕಾರದಿಂದಿರೆ ಬಸವರಸನಿಂತು
ಶರಣನಾಗೆರವಿಲ್ಲದಿಪ್ಪನು
ಶರಣನಾಗಿ ಪುರಾರಿ ಚರಿಸಲು
ಪರಮಭಕ್ತಿಯೊಳಾವಗಂ ಬಸವಣ್ಣನರ್ಚಿಸುವ ೮೦

೧–೨ ವಡ (ಬ). ೩–೪ ವರ್ಧಿಸು (ನ). ೫–೬ ಯಿಮ್ಮೆ, ಪಠಿಸು (ತ, ಥ, ದ, ನ). ೭–೮ ವಗಂ (ತ, ದ, ನ). ೯–೧೦ ರೂಪ (ತ, ಥ, ದ, ನ). ೧೧ ಬ (ಸ). ೧೨–೧೩ ಚರಿ (ಸ); ರಚಿ (ದ).

CC-0. Jangamwadi Math Collection. Digitized by eGangotri

ಪರಮ ಭಕ್ತಾಕೃತಿಯೊಳೀಶ್ವರ
ನಿರೆ ಬಸವನಾಳಾಗಿ [೧]ಭಜಿಸಿಸುವ
ಸರರೆ ಶಿವಲಿಂಗದ ನೆಲೆಯನೀ ಬಸವನೇ ಬಲ್ಲ
ಪರಮನಱಿವನು ಬಸವನನುವನು
ಪುರಹರನ ಸಾಲೋಕ್ಯದೊಳಗಮ
ರ್ದಿರಲಿಹುದು ಸಾಮೀಪ್ಯದಿಂ ಸಂದಿಲ್ಲದಿರಲಿಹುದು ೩೦

ಅಸಮ ಸಾರೂಪ್ಯದ ಪದದಿ ವ
ರ್ತಿಸಬಹುದು ಸಾಯುಜ್ಯದಿಂದೆ ಬೆ
ರಸಿ ಸುಖದೊಳಿರಲಪ್ಪುದಲ್ಲದೆ ಸಶಿವನೆಂದೆನಿಪ
ಬಸವನಾಗಲುಬಹುದೆ ಲೋಕ
ಪ್ರಸರದೊಳು ಸಾಮಾನ್ಯರಿಗೆ ಭಾ
ವಿಸುವಡತಿ ನಿರ್ವಂಚಕನು ಸಕಲಪ್ರಮಥರೊಳಗೆ ೩೧

ಲಿಂಗಮೂರ್ತಿಗೆ ಕೂರ್ಪ ಬಸವಂ
ಜಂಗಮಾರ್ಚಕನಾದಿಬಸವನ
ನಂಗವೈರಿಯ ಶರಣರೊಳು ಸಲೆ ಸಂದ ದಾಸೋಹಿ
ತಿಂಗಳಂ ಸೂಡಿದವನಸಮೋ
ತ್ತುಂಗವಾಹನಮೀಶ್ವರನ ಗಣ
ಪುಂಗವರ್ಗೆಱುವ ಮಹಾಸಿಂಹಾಸನಂ ಬಸವ ೩೨

ಲೀಲವಂತರ ಕೈಯ ಕನ್ನಡಿ
ಕಾಲಕಂಠನ ಕೂರಲಗು ಕರು
ಣಾಳು ಬಸವಂ ಲಿಂಗಜಂಗಮದೊಳು ಸೊಬಗನೆನಿಸಿ
ಲೀಲೆಯಿಂ ನವ ಕುಸುಮ ಗಂಧ ಸ
ಮೇಳನದೊಳಿಪ್ಪಸಮ ಭಕ್ತಿ[೪]ವಿ
ಶಾಲನಂ[೫] ಬಣ್ಣಿಸಲಳವೆ ಸುರದನುಜಮನುಜರಿಗೆ ೩೩

೧–೨ ಚರಿ (ದ, ನ). ೩ ಬ (ಸ). ೪–೫ ವಿಳಾಸನಂ (ದ).

CC-0. Jangamwadi Math Collection. Digitized by eGangotri

ಸೊಕ್ಕಿ ಮಿಗೆ ನುಡಿವಳ್ತಿಕಾಱನು
ಲೆಕ್ಕಿಸುವನೇ ದೋಷವೆಂಬವೊ
ಲಕ್ಕುದಲ್ಲದೆ ಬಸವನಂ ಕೀರ್ತಿಸುವಡೆನ್ನಳವೆ
ಲೆಕ್ಕವಿಲ್ಲದೆ ಬಾಳ್ವ ಧನಿಕನ
ನಕ್ಕಱಿಂದೀರೈದು ಸಾಸಿರ
ದೊಕ್ಕಲಾಗಿ ಬರ್ದುಂಕು ನೀನೆಂದುಱಿ[1] ಪರಸಿದಂತೆ ೩೪

ಶ್ರೀಪರಂಜ್ಯೋತಿಸ್ವರೂಪಿಗೆ
ದೀಪವೊಂದಂ ಪೊತ್ತಿ[2]ಸುವ[3]ವೊಲು –
ಮಾಪನಿರ್ಮಿತವಪ್ಪ ಪತ್ರಪ್ರಸವವಿಸರವನು
ಆ ಪರ[4]ಮ ಶಿವ[5]ಗರ್ಪಿಸುವೆನೆಂ
ಬೀ ಪರಿಯದಲ್ಲದೆ ನುತಿಸಲಾ
ನಾಪೆನೇ [6]ಸಪು[7]ಭಕ್ತಿಭಂಡಾರಿಯ ಚರಿತ್ರವನು ೩೫

ಕುತ್ತದಿಂ ಮಂಡಿವವರನಿಂದ್ರನೆ
ನುತ್ತಧಮರಂ ಪೊಗಳ್ದಿ[8] ದೈನ್ಯದೊ
ಳತ್ತಲಿತ್ತಂ ಸುತ್ತಿ ಸುತ್ತಿ ದುರಾಸೆಯಂ ಪೊತ್ತು
ಉತ್ತಮದ ಕವಿತೆಯನಮಾನ್ಯರಿ
ಗಿತ್ತು ಪೆಂಪಂ ಗುಂಪನುಱಿ[9] ನೀ
ಗುತ್ತಭವನಂ ಪೊಗಳದಳಿವರನೇನ[10]ನೆಂಬೆನು[11] ೩೬

ಅನುಪಮಾ[10]ನಂದಮ[11]ಯನಗಜೇ
ಶನ ಮಹಿಮೆಯಂ ಕಾಣ್ಬುದದು ಪುಸಿ
ಯೆನಿಸಿ ಮಿಗೆ ನಿಗಮಾಳಿ 'ಕವಯಃ ಕಿಂ ನ ಪಶ್ಯಂತಿ'
ಎನೆ ಬಗೆಗಳೊಳು ಕುಕವಿಗಳನನು
ದಿನವೆಣಿಸದತಿ ವಿಮಳ ಮತಿ[12]ಯಲಿ[13]
ವಿನುತಿಸುವೆ ನಾನೀ ಕಥಾವೃತ್ತಾಂತವೆಂತೆನಲು ೩೭

೧–೨ಸಿದ (ತ, ದ, ನ). ೩–೪ ಲಿವಂ (ತ, ದ, ನ). ೫–೬ ಸಪ್ (ತ, ದ, ನ). ೭ಳ್ತು (ದ, ನ). ೮–೯ ಬಣ್ಣಿಸುವ (ಚ). ೧೦–೧೧ ನನಮೇ (ದ, ನ). ೧೨–೧೩ ಯೊಳ್ (ತ, ದ, ನ).

CC-0. Jangamwadi Math Collection. Digitized by eGangotri

ಇಂದುರುಚಿ ಬಲಿದುದೊ ಹರಸ್ಮೇ
ರಂ ದಿವಿಯೊಳಾಕಾರಮಾಯ್ತೊ ಹಿ
ಮಂದಳಿದುದೋ ಕಠಿಣಮಂ ಸುಧೆ ಬೆಳೆದಚಲಮಾಯ್ತೊ
ಕುಂದಚಂದನಮಲ್ಲಿಕಾಹರಿ
ಚಂದನಾಮರಸಿಂಧುಜಲಸಿತ
ವ್ಯಂದಮೇ[೧] ರೂಪಾಯ್ತೊ ಎನೆ ರಜತಾದ್ರಿ ರಂಜಿ[೨]ಪ್ಪುದು[೩] ೩೮

ಕಣಿಯೊ ಪರುಷದ ನಿಧಿಯೊ ಚಿಂತಾ
ಮಣಿಯ ನಂದನಮೋ ದಿವಿಜ ಧಾ
ರುಣಿರುಹಂಗಳ ನೆಲೆಯೊ ಕಡವರದಿರವೊ ಶೋಭನದ
ದೊಣೆಯೊ ಸಿದ್ಧರಸದ ಸದನಮೋ
ಪ್ರಣವಮಂತ್ರಾಗಮದ ಕಳೆಗಳೊ
ಪ್ರಣುತಿಸಲ್ಕಿ[೪]ಂತೊಪ್ಪುವಾ ಕಲಧೌತಶೈಲದಲಿ ೩೯

ಇಂದ್ರನೀಲಮರಕತಮೌಕ್ತಿಕ
ರುಂದ್ರಮಾಣಿಕ್ಯಪ್ರವಾಳ ದಿ
ನೇಂದ್ರಕಾಂತಾನಂತಮಣಿಗಣಖಚಿತಲಾಲಿತ್ಯ
ಸಾಂದ್ರ [೫]ರಮ್ಯ[೬]ಸ್ಥಾನಮಂಟಪ
ಚಂದ್ರಕಾಂತದ ಕುಟ್ಟಿಮದೊಳಗ
ಜೇಂದ್ರನಿರ್ದನು ರತ್ನಮಯಸಿಂಹಾಸನದ ಮೇಲೆ ೪೦

ಆಯವಸರದೊಳಂಬುಜಾಂಬಕ
ತೋಯಜಪ್ರಭವರು ಸುಧಾಶನ
ನಾಯಕಾದಿ ದಿಶಾಧಿಪರು ವರುಣಾದಿ ವಸುವುಗಳು
ಧೀಯುತರು ನವನಾಥಸಿದ್ಧರ
ಜೇಯಸಾಧ್ಯಪ್ರವರಮುಖ್ಯಮ
ಹಾ ಯತೀಂದ್ರರು ಬಂದರೀಶನನೋಲಯಿ[೭]ಸಲೆಂದು ೪೧

---

೧ ಮೀ (ಸ). ೨–೩ ಸಿತು (ತ, ಥ). ೪ ಲ್ಕೆಂ (ಸ). ೫–೬ ರುಚ್ಯಾ (ಅ, ಡಾ, ಚ, ತ, ಥ, ದ, ಧ, ನ, ಬ). ೭ ಗಿ (ತ, ದ, ಸ).

CC-0. Jangamwadi Math Collection. Digitized by eGangotri

ದ್ವಾದಶಾದಿತ್ಯರು ನವಬ್ರ
ಹ್ಮಾದಿ ಬುಧಸಪ್ತಋಷಿಗಳುಮೇ
ಕಾದಶೀ[೧] ರುದ್ರರು [೨]ಸನಂದ ಶುಕಾದಿ[೩] ಮುನಿವರರು
ಆದಿತೇಯಾದಿ ಗ್ರಹಾವಳಿ
ಯಾದಿ ನಕ್ಷತ್ರಂಗಳುಂ ವೇ
ದಾದಿವೇದ್ಯರು ಬಂದರೀಶನನೋಲಯಿ[೪]ಸಲೆಂದು ೪೨

ಸುರನಿಕರ ದನುಜಪ್ರಕರ ಕಿ
ನ್ನರವಿಸರ ಗಂಧರ್ವಚಯ ಕಿಂ
ಪುರುಷಗಣ ರಾಕ್ಷಸಸಮೂಹ ಮಯೂರಸಂದೋಹ
ಉರಗಕುಲ ಗರುಡೌಘ ಯಕ್ಷೋ
ತ್ಕರ ವಿಯಚ್ಚರವೃಂದ ಮಾನವ
ವರವಿತತಿಗಳು ಬಂ[೫]ದರೀ[೬]ಶನನೋಲಯಿಸಲೆಂದು ೪೩

ಗಜಬಜಿಸದಿರಿ ದಿವಿಜರಿರ ಗುಜು
ಗುಜುಯೆನುತ್ತಿರದಿರಿ ಮುನಿಗಳಿರ
ಭುಜಗರಿರ ಸಂದಣಿಸದಿರಿ ಗರುಡರಿರ ಉಲಿಯದಿರಿ
ಗಜಗಮನ ಸಂಭ್ರಮಿಸದಿರು ನೀ
ನಜ ಕಳಕಳವಿದೇಕೆನುತ್ತಂ
ಭುಜಬಲರು ದೌವಾರಿಕರು ಹೋ ಎನುತ ವಾರಿಸಲು ೪೪

ಆ ಸಮಯದೊಳುಮಾಸಹಾಯಂ
ಮಾಸಹೋದರಶೇಖರನು ಮಹಿ
ಮಾಸದರ್ಥನು ದಾನಗುಣಗರಿಮಾಸಮಂ ಶಿವನು
ಭಾಸುರೋನ್ನತ ಭಾಸಯುತ ಶೋ
ಭಾಸನಾತನ ನೂತನಾಂಗನಿ[೭]
ಭಾಸುರಾಜಿನವಾಸನಾ ಕೈಲಾಸವಾಸದಲಿ ೪೫

೧ಶ (ದ). ೨–೩ ಸನಂದಾದಿಗಳು (ತ, ದ); ಸನಂದಾದಿಗಳು (ತ, ದ): ಸಾನಂದಾದಿ (ನ). ೪ಗಿ (ತ, ದ, ನ). ೫–೬ ದುದೀ (ತ, ಥ, ನ). ೭ವಿ (ತ, ದ).

CC-0. Jangamwadi Math Collection. Digitized by eGangotri

ಸಿರಿಯ ವರಿಸಿಂ ಮೊಲಗಿ ವಾಣೀ
ಶ್ವರನ ಮೇಲೆ ಫಣೀಂದ್ರಕಂಕಣ
ಕರಕಮಲಮಂ ನೀಡೆ ಸುರಪಂ ಶ್ರೀಪದವನೊತ್ತೆ
ತರಣಿಶಶಿಗಳು ಚಾಮರವನಿಡು
ತಿರೆ ಕುಬೇರಂ ಹಡಪವಂ ಸಂ
ವರಿಸಿ ಪಿಡಿದಿರಲಿನಿಮಿಷರು ಜಯಜಯ ಎನುತ್ತಿರಲು ೪೬

ಸರಸಚಾತುರ್ವೇದನಾದಂ
ಮೊರೆಯಲೋಂಕಾರಾದಿ ಮಂತ್ರೋ
ಚ್ಚರಣರವದಿಂದತ್ರಿಮುಖ್ಯರದೊಂದೆಸೆಯೊಳಿರಲು
ಪರಮತರ್ಕಪುರಾಣಶಾಸ್ತ್ರೋ
ತ್ಕರವಿವರಣಕಳಾಪ್ರವೀಣ
ಸ್ಫುರಣದಿಂ ಗೌತಮ ಪುರೋಗಮರೊಂದೆಸೆಯೊಳಿರಲು ೪೭

ತತವಿತತಘನಶುಷಿರವಾದ್ಯ
ಪ್ರತಿಮಿಳಿತ ಷಡ್ಜಾದಿ ಸಪ್ತ
ಶ್ರುತಿಗಳಿಂಪುಗೆ ಮಂದ್ರಮಧ್ಯಮತಾರವಿಶ್ರಮದ
ಅತಿಮಧುರಮೃದುಗೀತಜಾತೋ
ನ್ನತ ರಸದೊಳೊಡಗೂಡಿ ಪಾಡುತ
ಚತುರತುಂಬುರನಾರದಾದ್ಯರು ಮುಂದೆಸೆಯೊಳಿರಲು ೪೮

ಅಂಗವಂ ನಡುಗಿಸುತ ಬಸುಱಿಂ
ಪೊಂಗಿಸುತವಕ್ಕಳಿಸುತಂ ವಾ
ದ್ಯಂಗಳಿಗೆ ಬೆಚ್ಚುತ ಬೆದಱಿತಂ ಬಾಯ್ದೆಱೆದುಱುಗಿಸಿ
ಕಂಗಳಂ ಮೆಳ್ಳಿಸುತ ಪಲುಗಿರಿ
ದುಂಗುಟಂಗಳನೂಱಿ ನಡೆವುತ
ಭೃಂಗಿ ನಗಿಸುತ್ತೇಡಿಸುತ ಶಿವನಿದಿರೊಳಾಡುತ್ತ ೪೯

೧–೨ ಸೊಳ್ (ಸ). ೩–೪ ರಿಯ (ತ, ಥ, ದ, ಧ, ನ). ೫–೬ ಸುತ (ತ, ಥ, ದ). ೭–೮ ಲ್ಲಿ (ತ, ದ).

CC-0. Jangamwadi Math Collection. Digitized by eGangotri

ಜಾಱಿ ಮಂಡೆಯನಿಕ್ಕಿ ಮುಂ[೧]ದಕೆ[೨]
ಹಾಱಿ ಕೈಕಾ[೩]ಲ್ ಕೊಂ[೪]ಕಿಸುತ ಕಾ[೫]
ಲೂಱಿ ನಿಂದುಸುರಾಂತು ಬಯಲಂ ಹೊಯ್ಯಲಪ್ಪಳಿಸಿ
ಬೀಱಿ ನವರಸಮಂ ಸಭೆಗೆ ನಲ
ವೇಱಿ ತನ್ನಭಿನವ ನಟನೆಯಂ
ತೋಱಿಯಾಡುವ ಭೃಂಗಿಗೊಲಿದು ಪಿನಾಕಿ ಸಾಕೆನುತ ೫೦

ಕೂಡೆ ನಿಮಿಷರಂ ಕಟಾ[೬]ಕ್ಷಿಸಿ[೭]
ನೋಡಿ ಹರಿಪದ್ಮಜರೊಡನೆ ಮಾ
ತಾಡಿ ಲಂಬೋದರಗುಹರ್ಗಂ ಮುದ್ದುಗಳನೂಡಿ
ಬೇಡಿದರ್ಗಭಿಮತವಿತತಿಯಂ
ನೀಡಿ ಹರುಷಂ ಮೂ[೮]ಡಿ ಚಂದ್ರಾ
ಜೂಡನೆಲ್ಲರುಮಂ ಕಳುಹಿ ಪೇರೋಲಗಂ ಪರೆದು[೯] ೫೧

ಆ ರಜತಗಿರಿಶಿಖಿರದೊಳ್ ಮದ
ನಾರಿಯುಂ ಗೌರಿಯುಮುಚಿತ ಲೀ
ಲಾರಚಿತ ಸುಖಿಸಂಕಥಾ[೧೦]ಪ್ರಥ[೧೧] ಕೌತುಕದೊಳಿರಲು
ವೀರ ವೀರಕ ನಂದಿ ರೇಣುಕ
ದಾರುಕರುವುಪಮನ್ಯುಭೃಂಗಿಯು
ವೀರಭದ್ರಾದಿ ಪ್ರಮಥರೋಲೈ[೧೨]ಪ ಸಮಯ[೧೩]ದೊಳು[೧೪] ೫೨

ಮಿಸುಪ ರನ್ನದ ಕುಂಡಲಂ ಸಿತ
ಭಸಿತ ಲಲಿತಾಂಗಂ ತ್ರಿಪುಂಡ್ರದ
ನೊಸಲರುಣಪಟವೇಕಜಡೆ ತೊಳತೊಳಗುವುಪವೀತ
ಎಸೆವ ನಸುನಗೆ ದಶನರುಚಿ ದೆಸೆ
ದೆಸೆಗೆ ಪಸರಿಸೆ ವೀಣೆಯಂ ಬಾ
ಜಿಸುತ ಮೆಲ್ಲನೆ ಪಾಡುತಾಡುತ ಮಂದಗತಿಗಳಲಿ ೫೩

೧–೨ದೆಗೆ (ತ, ಥ, ದ, ಧ, ನ). ೩–೪ಲೊಂ (ಬ). ೫ಕೋ (ತ, ಧ). ೬–೭ಕ್ಷವೆ (ತ, ದ, ನ). ೮ಮಾ (ತ, ದ, ನ). ೯ಪಿ (ತ, ದ, ನ). ೧೦–೧೧ಪ್ರಮ (ನ). ೧೨ಲಗಿ (ತ, ದ). ೧೩–೧೪ದಲಿ (ತ, ದ, ನ).

CC-0. Jangamwadi Math Collection. Digitized by eGangotri

ಪರಿಮಿತದ ಸಮಯೋಚಿತವನಱಿ
ದುರವಣಿಯನುಳಿದೊಯ್ಯನೊಯ್ಯನೆ
ಹರನ ಹೊರೆಗೈತಂದು ನಾರದನೆಂಬ ಮುನಿರಾಯ
ಧರಣಿಯೊಳು ಸಾಷ್ಟಾಂಗವೆಱಗಿ ಪು
ನರಪಿ ವಂದಿಸಿ ನಿಂದು ಮುಕುಳಿತ
ಕರಯುಗಳದಿಂದಖಿಳ ಲೋಕಾಲೋಕಚರಿತಗಳ ೫೪

ಬಿನ್ನವಿಸಲೆಂದಿರ್ದ ಹದನಂ
ಮುನ್ನಱಿದು ಪರಮೇಶ್ವರಂ ಹಿಮ
ಗು[1]ನ್ನಯನದಿಂ ನೋಡುವವಸರದೊಳ್ ಮಹಾದೇವಿ
ತನ್ನ ವಲ್ಲಭನನುಮತದಿ ಕೈ
ಸನ್ನೆಯಲಿ ಕರೆದೆಲೆ ಮುನಿಪ ನೀ
ನನ್ನಿಯನೆ ಪೇಳ್ ತಿಳಿದು ಬಂದ ಸಮಸ್ತ ಕಾರ್ಯವನು ೫೫

ಎಂದಡಾ ಮುನಿವಲ್ಲಭಂ ತರು
ಣೇಂದುಜೂಟನ ಸಮ್ಮುಖದೊಳೊಲ
ವಿಂದೆ ಕೈಮುಗಿದಖಿಳ ಲೋಕಾಲೋಕಚರಿತಗಳು
ಎಂದಿನಂತೆ ವಿಶೇಷಭಕ್ತಿಯೊ
ಳೊಂದಿ ನಡೆವುವು ಮರ್ತ್ಯಲೋಕದೊ
ಳಿಂದು ಭಕ್ತಿಚರಿತ್ರವಿನಿತುಂ ವ್ಯಕ್ತಮಾಗಿರದು ೫೬

ಪರಮ ಶೈವಾಚಾರತತ್ಪರ
ಪರಿಹರು ಪರರೊಡನೆ ನುಡಿಯದೆ
ಶರಣರಿಪ್ಪರು ಕೆಲಕೆಲಬರುಂ ಲೋಕಲೌಕಿಕದಿ
[2]ಬೆರಸಿಯುಂ ನರಲೋಕಬಾಧೆಗೆ[3]
ಬೆರಸದಿಪ್ಪರು ಕೆಲಬರತಿಸುಖಿ
ಪರವಶದಿ ಮಱಿದಿಪ್ಪರೀ ಲೋಕಕ್ಕೆ ಮಱಿಗೊಂಡು ೫೭

೧ರು (ಕ. ತ. ಥ. ದ. ನ. ಮ). ೨–೩ ಬೆರಸಿಯುಂ ತಲ್ಲೋಕ ಬೋಧೆಗೆ (ಕ. ಥ, ನ) ಬೆರಸಿಯುನ್ನತಲೋಕ ಬೋಧೆಗೆ (ಆ. ತ. ದ. ಮ).

CC-0. Jangamwadi Math Collection. Digitized by eGangotri

[೧]ಸಮ್ಮು[೨]ದಿತ ಸದುಭಕ್ತಿಯುಕ್ತರು
ಹಮ್ಮಿನಿಂದಿರುತಿಹರು ಕೆಲಬರು
ತಮ್ಮತಮ್ಮೊಡಲುಗಳನಂತುಮಡಂಗಿ[೩]ಕೊಂಡಿಹರು[೪]
ನಿಮ್ಮ ಭಕ್ತಿಯ ತುದಿಮೊದಲಿದೆಂ
ದೊಮ್ಮೆಯುಂ ಸಲೆ ತೋಱಿದಾರಿಗೆ
ಸ[೫]ಮ್ಮದಿ[೬]ಸಲರಿದಲ್ಲಿ ದೃಷ್ಟಪ್ರತ್ಯಯಂಗಳಲಿ ೫೫

ಸಂದೆಗಂಗಳನುಳಿದು ಸತತಾ
ನಂದಿತಾವಳ ಭಕ್ತಿಯುಕ್ತಾ
ನಂದ[೭]ರಸದೊಳಗಾ[೮]ಡುವಂತೆ ಮನುಷ್ಯಲೋಕದಲಿ
ಮುಂದೆಯಿದು ಲಿಂಗಸ್ಥಳಂ ತಾ
ನೆಂದಿದುವೆ ವರ ಜಂಗಮಸ್ಥಳ
ವೆಂದು ತದ್ವಿವಳ ಪ್ರಸಾದಸ್ಥಳಮಿದೆಂದಱುಪಿ ೫೬

ನೀವು ಬಿಜಯಂಗೆಯ್ದು ಕರುಣಾ
ಭಾವಗುಣದಿಂ ನೋಡಿ ಮರ್ತ್ಯವ
ನೋವಿ ಮನುಜರನೆಲ್ಲರಂ ನಿಜಭಕ್ತಿಯುಕ್ತಿಯಲಿ
ಪಾವನತ್ವವನಿತ್ತು ಪಾಲಿಸಿ
ಕಾವುದೆನ್ನಯ ಬಿನ್ನಪವನೆನೆ
ದೇವದೇವಂ ಸಂತಸದೊಳಿಂತೆಂದನಾ ಮುನಿಗೆ ೫೭

ನಂದಿನಾಥಾಗ್ರೇಶ್ವರಂಗೆನ
ಗೊಂದಿನಿತು ಸಂದಿಲ್ಲದಿ[೯]ಹುದಕೆ[೧೦]
ಸಂದೆಗಮೆ ನಾವೀತನಂ ಮರ್ತ್ಯಕ್ಕೆ ಕಳುಹುವೆವು
ಮುಂದೆಯೀಯೆರಡನೆಯ ಶಂಕರ
ನಿಂದೆ ಪರಮ ಪವಿತ್ರದುನ್ನತಿ
ಯೊಂದಿ ನೆಗಳ್ದಾಲೋಕವೆಲ್ಲಂ ಬೋಧಿಸಲ್‌ಪಡುಗು ೫೮

೧–೨ ಪ್ರಮು (ದ). ೩–೪ ಯಂತಾಗಿ (ಅ, ಕ, ಥ, ಧ, ಮ). ೫–೬ ಮ್ಮುದಿ (ಧ); ಮ್ಮತಿ (ನ). ೭–೮ ಸರಸದೊಳಾ (ಸ). ೯–೧೦ ರ್ಪುದು (ತ, ದ, ನ).

CC-0. Jangamwadi Math Collection. Digitized by eGangotri

ಎಂದಡುಮೆ ನಿಜವರನನೀಕ್ಷಿಸಿ
ನಂದಿಗೆಮಗಂ ಸಂದಿನಿತುವಿ
ಲ್ಲೆಂದಡದು ಭಕ್ತೈಕತನುವಾನೆಂದೊರೆದ ಪರಿಯೊ
ಹೊಂದಿಯಾತನು ನೀವೆಯಾಗಿ
ರ್ದಂದಮೋ ಬೆಸಸೆನೆ ಹಿಮಾಚಲ
ನಂದನೆಗೆ ಶಿವನಾ ಮುನೀಂದ್ರನು ಕೇಳಲಿಂತೆಂದ ೬೨

ಊಹಿಪಡೆ ನಾಂ ಭಕ್ತದೇಹಿಕ
ದೇಹನಹೆನಹೆನಹೆನದೇಂ ಸಂ
ದೇಹಮೇ ಕೇಳ್ ಪೇಳ್ವೆನಿನ್ನೊಂದತಿ ವಿಶೇಷವನು
ದೇಹ ದೇಹಿಗಳಿಹಗೆಹಗೆ ದಾ
ಸೋಹಸೋಹಂಗಳೊಳಮರ್ದುಱಿ
ಮೋಹಿಕೊಂಡಿಹೆನಾ ಕಥಾವೃತ್ತಾಂತವೆಂತೆನಲು ೬೩

ಆದಿ ವಿವಿಧ ಯುಗಂಗಳಲ್ಲಿ ಶಿ
ಲಾದನುಗ್ರತಪವನೊಡರ್ಚಿದ
ನಾದಿಯೆನಿಪ ಶ್ರೀಗಿರಿಯ ನೈರುತ್ಯಭಾಗದಲಿ
ಆದರಣೆಯಿಂ ಕಂದಮೂಲಫ
ಲಾದಿಗಳನಿನಶಶಿಕಿರಣಪವ
ನೋದಕಾಹಾರಂಗಳಿಂ ವರುಷತ್ರಿಕೋಟಿಗಳ ೬೪

ಸಲಿಸಿ ತಾಂ ಶತಕೋಟಿ ವರುಷಂ
ಗಳೊಳೆ ಮೇಣ್ ಸಾಸವೆಯ ತೋರಿದ
ಶಿಲೆಗಳನೆ ಮೆಲಿದುಗ್ರತಪಮಂ ಮಾಡಿದಾತಂಗೆ
ಒಲಿದು ಸನ್ನಿಧಿಯಾಗಿ ನಾವತಿ
ಸುಲಭರಾದೆವು ಬೇಡು ಬೇಡಿದ
ಫಲವನೀವವು ನಿನಗೆನಲ್ಕೆ ಶಿಲಾದಮುನಿವರನು ೬೫

೧–೨ ರಿಹ (ಧ); ರಿದ (ಸ).

CC-0. Jangamwadi Math Collection. Digitized by eGangotri

ಧಾರುಣೀತಳವೊಂದೆ ವಂದಿಸಿ
ಸೇ[೧]ರಿ ಕೈಮುಗಿದಭವ ಭವಸಂ
ಹಾರ [೨]ಹರ[೩] ಸರ್ವಜ್ಞ ಸರ್ವಗ ಸರ್ವ ಸರ್ವೇಶ
ಸೂರಿಜನಮಂದಾರ ಶಿವ ಆಪ
ಧಾರು ವೇದಾಂತಾವಗಮ್ಯ ಮ
ನೋರಥಪ್ರದ ನೀಲಗಳ ಬಿನ್ನಪವನವಧರಿಸು ೬೬

ಅಂತು ಸಂಧಿ ೧ಕ್ಕಂ ಪದಗಳು ೬೬ಕ್ಕಂ

ಮಂಗಳಮಹಾಶ್ರೀ ಶ್ರೀ ಶ್ರೀ

೧ಸಿ (ತ, ದ, ಧ, ನ). ೨–೩ಭವ (ತ, ದ).

CC-0. Jangamwadi Math Collection. Digitized by eGangotri

ಸಂಧಿ : ೨

ಸೂಚನೆ : ೧ಇಂದುಧರನನುಮತದೊಳಾದಿಯ
ನಂದಿನಾಥನು ಬಸವನಾಮದಿ
ಬಂದಪಂ ಶಿವಭಕ್ತಿಯಂ ವಸುಮತಿಗೆ ಪಸರಿಸಲು

ಏನುವುಂ ಕೊಱತಿಲ್ಲ ೧ಮದ್ವರ೨
ದಾನಿ ನೀವಿರಲಾದಡಂ ಬಳಿ
ಕಾನಭೀಷ್ಟವನೊಂದನರ್ಥಿಪೆನೆನಗೆ ಕರುಣಿಪಡೆ
ಮಾನಿತೋತ್ತಮ ಭಕ್ತಿನಿಷ್ಠಾ
ನೂನಮಾನಸನಂ ಭವತ್ಪ್ರಿ
ಮಾನವಪ್ಪ ಸುಪುತ್ರನಂ ಕೊಟ್ಟೆನ್ನನುದ್ಧರಿಸು ೧

ಎಂದಡಾತಂಗಭಿಮತಾರ್ಥಮ
ನೊಂದಿಸುವನೆಂದಿರ್ದಡೆಯೊಳರ
ವಿಂದಮುಖಿ ಕೇಳನಿತಱೊಳ್ ಪೋಗದೆ ಲಲಾದಮುನಿ
ವಂದಿಸುತ ಕೈಮುಗಿದು ಮತ್ತಿಂ
ತೆಂದನಿಂತೆನಗಿಪ್ಪಮಪ್ಪ ಸು
ನಂದನನನೊಲಿದಿತ್ತು ಸಲಹುವಡೊಂದನವಧರಿಸು ೨

೧–೨ ಮುಗ್ಧರ (ಮ).

CC-0. Jangamwadi Math Collection. Digitized by eGangotri

ಪ್ರವಿಮಳೋತ್ತಮ [೧]ಭಕ್ತಿರತಿಯಲಿ[೨]
ಲವವಿನಿತು ಕುಂದಿದಡೆ ತತ್ತನು
ಭವನ ತಲೆಯಂ ಪಳ್ಳಿಯಿದು ಬಿಸುಡುವೆನಾ ತನೂಜಂಗೆ
ಅವಘಡಿಸಿ ನೀವಡ್ಡ[೩]ಬಿದ್ದಿಡೆ
ಶಿವನೆ ಕೇಳಂತಾದಡಾತ್ಮೋ
ದ್ಭವನನೊಲಿವೆನದಲ್ಲದಡೆ ನಾನೊಲ್ಲೆನೀ ವರವ ೩

ನಾದಮೂರ್ತಿಯೆ ಚಿತ್ತವಿಸು ಕರು
ಣೋದಯಾತ್ಮದೊಳೆನುತಮಿಪ್ಪ ಶಿ
ಲಾದನಂಚಿತ ಭಕ್ತಿನಿಷ್ಠೆಗೆ ನಾವೊಸೆದು ಮೆಚ್ಚಿ
ಆದಿಗಾದಿಯನಾದಿಯಾದ[೪] ಸ
ದಾದಿ ಮದ್ವಿಮಳಾವತಾರಂ
ವೇದಿಸುವ ಧರ್ಮಸ್ವರೂಪಿ [೫]ಲಸದ್ಭುತಾಲಾಪಿ[೧೦] ೪

ನಡೆವುದಾದಿಯುಗಂಗಳೊಳು ನಾ
ಲ್ಕಡಿಯೊಳುನ್ನತ ಧರ್ಮವಾ ಮೂ
ಱ[೧೧]ಡಿಯೆ ನಡೆವುದು ಧರ್ಮವಾ ತ್ರೇತಾಯುಗಂಗಳಲಿ
ನಡೆವುದೀರಡಿಯಿಂದೆ ಧರ್ಮಂ
ಬಿಡದೆ ತದ್ವಾಪರ ನಿಕಟದೊಳ್
ನಡೆವುದೊಂದಡಿಯಿಂದೆ ಧರ್ಮಂ ಕಲಿಯುಗಂಗಳೊಳು ೫

ಈ ಪರಿಯೊಳತ್ಯಂತ ಧರ್ಮಕ
ಳಾಪರೂಪವಿಳಾಸದಿಂ ಲೋ
ಕೋಪಕಾರಾರ್ಥಪ್ರಯುಕ್ತ ನಿರೂಢಿಯಲಿ ಮೆಱಿದು
ಈ ಪಶುಪನೆರಡನೆಯ ಶಂಭು
ದ್ವೀ[೧೨]ಪನಾಮಂ ವಿಶ್ವಭುವನ
ವ್ಯಾಪಿತೋನ್ನತ ನಿತ್ಯ ಮಹಿಮಾಪದವಿಗಳನೆಸೆದು ೬

೧–೨ ಶಿವಭಕುತಿಯಲಿ (ಕ). ೩ ದ (ದ, ನ). ೪ ತ (ತ). ೫–೬ ಬೀಳ್ಪೊ (ದ); ಬಿಂದ (ನ). ೭–೮ ಯುಗ (ಬ, ದ). ೯–೧೦ ಲಸದ್ಭಿಪತಾಲಾಪಿ (ತ); ಲಸನ್ವ್ರತಾಲಾಪಿ (ಥ, ಧ); ಲಸನ್ನೃಪಾಲಾಪಿ (ಸ). ೧೧ ವ (ಥ, ದ). ೧೨ ದ್ವೀ (ಸ).

CC-0. Jangamwadi Math Collection. Digitized by eGangotri

ಎಮಗೆ ವಾಹನವಾಗಿ ನಾನಾ
ಪ್ರಮಥನಾಯಕನಾಗಿ ಗೋಕುಲ
ರಮಣ[೧]ರಮಣನು[೨]ಮಾಗಿ ಕರಮೆಸೆವಾ[೩]ದಿನಂದಿಯನು
ಪ್ರ[೪]ಮುದ[೫]ಚಿತ್ತದಿ ನೋಡಿ ವೃಷಭೋ
ತ್ತಮ ಜನಿಸು ನೀನಾ ಶಿಲಾದಂ
ಗಮಿತ ನಂದೀಶ್ವರನೆನಿಪ್ಪ ಸುನಾಮಧೇಯದಲಿ ೭

ನೀವೆ ಜನಿಸಲ್ವೇಳ್ಕದಲ್ಲದ
ಡಾವುದೈಸಲ್ವೇಳ್ಕು ಕೇಳ್ ಪರಿ
ಭಾವಿಸಲು ನಿತ್ಯಸ್ವರೂಪ ಮಹತ್ವದಿಂದೆಮ್ಮ
ಜೀವವೆನಿಪ ಪ್ರಮಥಗಣನಾ
ಥಾವಳಿಯೊಳೆಲ್ಲಮ್ಮದತಿ ನಿ
ಷ್ಠಾವಿಶೇಷಾತುಲಿತ ಭಕ್ತಿಯನಿತ್ತೆನಾತಂಗೆ ೮

ಇದು ನಿಮಿತ್ತಂ ವಿಹಿತಭಕ್ತಿಯೊ
ಳೊದಗಿದುತ್ತಮ ನಂದನನ
ಲ್ಲದೆ [೬]ಶಿಲಾದನುವೊಲ್ಲೆನೆಂದಹನಿತ್ತು ನಾವಿನ್ನು[೭]
ವಿದಿತ ವರವಂ ತೆಗೆಯಲಱಿವೆವೆ
ಪದುಳದಿಂದೆಮ್ಮಾಜ್ಞೆಯೊಳು ನೀ
ನುದಯಿಸೈ ಜಗದೊಳಗೆ[೮] ದ್ವಿತಿಯದ ಶಂಭುವೇ ಕೇಳು ೯

ಎಂದಡಾಗಲಿಯೆಂದು ಮ[೯]ನ್ಮಥ
ದಿಂದಯೋನಿಜನಾಗಿಯೊಗೆದನು
ನಂದಿಕೇಶ್ವರನೆಂಬ ಪೆಸರಿಂದಾ ಶಿಲಾದಂಗೆ
ಮುಂದೆ ಜನಿಸಲೊಡನೆ ಮದೀಯಾ
ನಂದಭಕ್ತಿ ಸಮುದ್ಭವಿಸಿತೊಲ
ವಿಂದ ಜನಿಸಿದ ಮುನ್ನವೇ ಜನಿಸಿತ್ತು ಮಚ್ಚಿಂತೆ ೧೦

೧–೨ ಸುರುತರ (ತ, ದ, ನ). ೩ ದಾ (ಕ, ಥ, ನ). ೪–೫ ಮಥ (ದ). ೬–೭ ಶಿಲಾಸನನೊಲ್ಲನೆಂದಹನಿತ್ತು ನಾವಿಂದು (ಮ); ಶಿಲಾಸನನೊಲ್ಲನೆಂದಹನಿತ್ತು ನಾನಿನ್ನ (ಕ); ಶಿಲಾಸನನೊಲ್ಲನೆಂದಹನಿತ್ತು ನಿಂತು ನಾವಿನ್ನು (ಆ, ತ, ನ); ಶಿಲಾಸನನೊಲ್ಲನೆಂದಹನಿತ್ತು ಋಷಿತ್ತು ನಾವಿನ್ನು (ಬ). ೮ × (ತ, ದ, ನ). ೯ ನ (ನ).

CC-0. Jangamwadi Math Collection. Digitized by eGangotri

ಪರಮ ತತ್ವಾವ್ಯತವೆ ಮೊಲೆವಾಲ್
ಗುರುಪಾದಾಂಬುಜಧ್ಯಾನ ಸುಸ್ಥಿರ
ದಿರವೆ ಬೆಣ್ಣೆ ರಹಸ್ಯ ಮೃದುಸೂಕ್ತಿಗಳೆ ತೊದಲುನುಡಿ
ಪರಶಿವಾಚಾರಮೆ ತನಗೆಯಾ
ಚರಣೆಯಾಗಿ ಮದೀಯ ಪದಪಂ
ಕರುಹಮಂ ತನ್ನಾತ್ಮದೊಳ್ ನೆಲೆಗೊಳಿಸಿ ಭಕ್ತಿಯಲಿ ೧೧

ಹರಿವ ತೊಱೆಗಳ ನಡುವೆ ಧೃತಿಯೋ
ಸರಿಸದುಱಿ ಚಳಿಗಾಲವೆಲ್ಲಂ
ನಿರುತದಿಂ ಕೊರಳುದ್ದ ನೀರೊಳು ನಿಂದು ಕಾಲೊಂದ
ಧರೆಯೊಳೂಱಿ ನಭಕ್ಕೆ ಮುಖಪಂ
ಕರುಹವೊಗ್ಗಿ ನಿಗುಳ್ದ ಭೋರನೆ
ಸುರಿವ ಪೆರ್ಮಳೆಯೊಳಗೆ ತಾಂ ಕಂಪಿಸದೆ ನಿಂದಿರ್ದು ೧೨

ಧರಣಿಯೊಳು ತಲೆಯೂಱಿ ಮೇಲಕೆ
ಚರಣಯುಗಮಂ ನೆಗಪಿ ಕೀಲಾ
ವರಣ ಪಂಚಾಗ್ನಿಯ ನಡುವೆ ತಾ ನೆನೆದಡೆದೆಗುದಿಯೆ
ಕರಮುಸುರ್ವ ಬಾಯ್ಬೇಯೆ ನೋಳ್ಪೆವೆ
ಯೆರಡು ಕರಿಮುರಿಯಾಗೆ ದೆಸೆಗಾ
ವರಿಸುತಿರಲುರಿವಿಸಿಲೊಳಂತೆಡೆವಿಡದೆ ನಿಂದಿರ್ದು ೧೩

ಪೊಡವಿ ನಡುಗಲು ನದಿಗಳಿಂಗಲು
ಉಡುಪ ಭಾನುಗಳಸ್ತಮಿಸೆ ಬೆ
ನ್ನುಡುಗೆ ಕೂರ್ಮಂ ದೆಸೆಗಳೊಡೆಯರು ಬೆದಱಿ ದಿಕ್ಕುಗಳು
ಪೊಡೆಗೆಡೆಯೆ ದಿಕ್ಕರಿಗಳುಂ ಮದ
ವುಡುಗೆ ಗೋತ್ರಾಳಿಗಳ ಬೈಸಿಗೆ
ಬಿಡೆ ಫಣೀಂದ್ರನು ಬಾಗೆ ತಾರಾವೀಥಿ ಬಯಲಾಗೆ ೧೪

೧–೨ ದಾಬ್ಜ (ತ, ಥ, ದ, ನ). ೩ ತ (ತ, ದ, ನ). ೪–೫ ಭೋರೆನೆ (ಕ, ತ, ದ, ನ). ೬–೭ ಕರಕರಿ (ಕ, ಚ. ತ, ಥ, ದ, ನ, ಬ). ೮ ದಿ (ತ, ಥ, ದ, ಧ).

CC-0. Jangamwadi Math Collection. Digitized by eGangotri

ಧರೆಗುದುರೆ ತಾರಕೆಗಳಜನೆದೆ
ಬಿರಿಯೆ ಮುರರಿಪು ಜರಿಯೆ ದಿವಿಜರ್
ಸರಿಯೆ ಸುರಗಿರಿ ಕಂಪಿಸಲ್ ಬ್ರಹ್ಮಾಂಡವ್ಲುಗಾ್ಡೆ
ನಿರುತದಿಂದತಿ್ ವೀರಘೋರಾ
ಪರಿಮಿತೋತ್ಕಟ ಪಟುತಪವನಾ
ಚರಿಸಿದನು ನಂದೀಶನತಿಶಯವತಿಶಯವಿದೆನಲು ೧೫

ಆ ಸಮಯದೊಳಜಾಚ್ಯುತೇಂದ್ರಸು
ರಾಸುರರ್ ಸಂತಾಪಿಸುತ್ತ ವಿ
ಕಾಸವುಳಿದತಿ ಭಯದಿ ನಾವಿದ್ದೆಡೆಗೆ ಪರಿತಂದು
ದಾಸಭಾವದಿ ನಮಿಸಿ ಕರುಣಾ
ವಾಸ ದೇವರದೇವ ದೇವವಿ
ಲಾಸ ದೇವವರೇಣ್ಯ ದೇವಾರಾಧ್ಯ ಚಿತ್ರೈಸು ೧೬

ಪರಮ ಭಟ್ಟಾರಕ ್ಳಪರಾಪರ್
ಪರಮ ಪರ ಪರಮಸ್ವತಂತ್ರನ –
ಪರಿಮಿತ ಸದಾನಂದಪರ ಪರಮಾತ್ಮ ಪರಮೇಶ
ವರದಶಂಕರ ಭಕ್ತಶಂಕರ
ದುರಿತಹರ ನಿಖಿಲೈಕರಕ್ಷಣ
ವ್ಲರ ಕೃಪಾಕರ ದಕ್ಷಶಿಕ್ಷಣದಕ್ಷ ಮಮ ರಕ್ಷ ೧೭

ಎನುತಲೆಮ್ಮುವನಾಗ ಕೀರ್ತಿಸು
ವನಿಮಿಷೇಂದ್ರರನತಿ ದಯಾಲೋ
ಕನದಿನೀಕ್ಷಿಸಿ ನಾವ್ಲಿವರ್ಗಳಿಗಭಯಮಂ ಕೊಟ್ಟು
ಇನಿತು ಸಂತಾಪಿಸಲದೇತ
ಕ್ಕನಘ ವೃಷಭಾ್ಧಿಪತಿ ಮಾಡುವ್
ಘನತಪಕೆ ಸಂಭ್ರಮಿಸದಿರಿ ನೀವೆಲೆ ಮರುಳ್ಗಳಿರ ೧೮

೧–೨ ಳ್ಕಾ (ತ, ದ, ನ). ೩ ಲಿ (ಸ). ೪–೫ ಪರಾತ್ಪರ (ತ, ದ, ನ); ಪರಾತರ (ಸ). ೬ ಕ (ಸ). ೭ ನ (ಸ). ೮–೯ ಧೀಶ ಮಾಳ್ಪ (ತ, ದ, ನ).

CC-0. Jangamwadi Math Collection. Digitized by eGangotri

ಬಲ್ಪಿನೆರಡನೆಯೀಶ್ವರಂ ಫಣಿ
ತಲ್ಪ ನಿನ್ನಯ ಪದವಿಯಂ ಸಂ
ಕಲ್ಪಿಸುವನೇ ಒಮ್ಮೆ ಬಗೆವನೆ ಪದ್ಮಭವ ನಿನ್ನ
ಸ್ವಲ್ಪ ಪದವಿಯನಮರವರ ನಿ
ನ್ನಲ್ಪಪದವಿಯನರ್ಥಿಪನೆ ಸಂ
ಕಲ್ಪವೆಂದು ವಿಕಲ್ಪವೆಂದಿದನೆಣಿಕೆಗೊಂಬುವನೆ ೧೯

ಎನ್ನನಲ್ಲದೆ [೧]ಸತತಮುಂ[೨] ಬಳಿ
ಕೆನ್ನ ಪದವಿಯನಾದಡಾತನು
ತನ್ನ ಮನದೊಳು ನೆನೆವುದಿಲ್ಲೆನ್ನ ಪ್ರಮಥರಾಣೆ
ನನ್ನ[೩]ಯಿನುತವರುಗಳ[೪] ತದ್ಭಯ
ವನ್ನಿವಾರಿಸಲೆಂದು ಬಗೆದು ಮ
ರುನ್ನಿಕರವೋಲ್ಕೈ[೫]ಸಿ ಬರುತಿರಲಲ್ಲಿಗಾನೆಯ್ದಿ ೨೦

ನಂದಿನಾಥನ ಹತ್ತೆ ಸಾರ್ದಿರೆ
ಮುಂದೆಯಾತಂ ತನ್ನ ಮನದೊಳ
ಗೊಂದಿದೆಮ್ಮಂ ಕಂಡು ಸಂಭ್ರಮವೆತ್ತಿಯೊಡನೊಡನೆ
ನಂದಿತಾಮಳಭಕ್ತಿ[೬]ರಸ[೭]ಸಾ
ನಂದಪುಳಕಂಗಳು ತನುವಿನೊಳ್
ಸಂದಣಿಸೆ ದಂಡಪ್ರಣಾಮವನಿಕ್ಕಿ ವಂದಿಸುತ ೨೧

ಎನ್ನ ನಂದೀಶಂ ಮದಂಘ್ರಿಗೆ
ತನ್ನ ನಿಶ್ಚಲಭಾವಸನ್ಮ[೮]ತಿ
ಯಿನ್ನಮಿಸಿ ರೋಮಾಂಚಕಂಚುಕಿತಾಂಗಸಂಗದಲಿ
ಉನ್ನತಾನಂದಾಶ್ರುಸಲಿಲೋ
ತ್ಪನ್ನ ವದನಾಂಬುಜದಿನಪರಿ
ಚ್ಛಿನ್ನ ಗದ್ಗದಕಂತದಿಂ ಕೈಮುಗಿದು ಕೀರ್ತಿಸಲು ೨೨

೧–೨ ಸಂತತಂ (ದ). ೩–೪ ಯೆಂದೆನುತವರ (ತ, ದ, ಸ). ೫ ಲಗಿ (ದ, ಸ). ೬–೭ ಸರ (ಸ). ೮ ದ್ಯು (ತ, ದ); ದ್ಯ್ರ (ಸ).

CC-0. Jangamwadi Math Collection. Digitized by eGangotri

ಮೆಚ್ಚಿದೆಂ ಕೊಡುವೆಂ ವರಂಗಳ
ನಿಚ್ಚೈಯಾವುದು ಬೇಡು ನೀನೆನೆ
ಆಚ್ಚುಕದ ದರಹಾಸಲಕ್ಷ್ಮಿ ಮುಖಾಬ್ಜದೊಳು ಮೊಳೆಯೆ
ಪೆಚ್ಚಿ ಬಿನ್ನೈಸಿದನೆಮಗೆ ತಾ
ನಚ್ಚರಿಯ ನಿಧಿಯಿರಲು ಜಲಗಂ
ಕಚ್ಚುವರೆ ಮೇಣ್ ನಿಮ್ಮನೊಂದಂ ಬೇಳ್ಪ ಮರುಳುಂಟೆ ೨೩

ಪದವಿಗಳು ಗಿದವಿಗಳವೇತಕೆ
ಮದನಹರ ನಿಮ್ಮ[1]ಚರಣಭಕ್ತಿಸು
ಪದವಿಯಂ ಕೃಪೆಯಿಂ ಪ್ರಸಾದಿಸಿ ಸಲಹು ನೀವೆನಗೆ
ವಿದಿತವೆನಲಾ ನಂದಿಯಂ ಸ
ಮ್ಮೃದಿತಗಾಢಾಲಿಂಗನೋತ್ಸುಕ
ವೊದಗೆ[2]ಯಾತನ ತನುವನೆನ್ನಯ ತನುವಿನೊಡನೆಳ್ಪಿ ೨೪

ನಿನ್ನ ಗಾತ್ರಸ್ಪರ್ಶನಸಮು
ತ್ಪನ್ನಸುಖರಸ ಭಾವಮಾಗಿರ
ಲೆನ್ನ ವಾಹನವಾಗು ನೀನೆಂದೆಮ್ಮ ವಾಹನವು
ಸನ್ನುತಾಗಮ ನಿಗಮವೆನುತ ಸ
ಮುನ್ನತ ಪ್ರಮಥೇಂದ್ರ ಪದವಿಗೆ
ಚೆನ್ನಪಟ್ಟಂಗಟ್ಟಿ ಸರ್ವಜ್ಞತ್ವಮಂ ಕೂಡಲು ೨೫

ಒಂದೆಸೆಯೊಳಿರ್ದಿಂದಿರಾವರ
ನೊಂದೆಸೆಯೊಳರವಿಂದಸಂಭವ
ನೊಂದೆಸೆಯೊಳಿಂದ್ರನು ಸುರಾವಳಿಯೊಂದೆಸೆಯೊಳಿರಲು
ವಂದಿಸುತ ಮುಕುಳಿತ ಕರಂಗಳ
ಸಂದಿಸಲು ಭಾಳಸ್ಥಳಗಳಿಂ
ನಂದಿಕೇಶನನಂಕಿಸುತ ಕೀರ್ತಿಸಿದರರ್ತಿ[3]ಯಲಿ ೨೬

೧ಮ (ತ). ೨ವಿ (ತ). ೩–೪ಳಗ (ಸ). ೫ರ್ಥ (ಸ).

CC-0. Jangamwadi Math Collection. Digitized by eGangotri

ಸು[೧]ತಿಸುವಮರರನತಿ ದಯಾಮೃತ
ಯುತ ನಯನದಿಂ ನೋಡಿ ಮಂದ
ಸ್ಮಿತ ಮುಖಾಂಬುಜನಾಗಿ ಭೀತಿಗೊಳುತ್ತಮಿಪ್ಪವರ
ವಿತತಭಯಮಂ ಪರಿಹರಿಸಿ ಸೂ
ನೃತವಚನದಿಂ ಸಲಹಿದಂ ತತ್
ಕ್ರತುಭುಜರನೆಂದಿನ ಪರಿಯೊಳಿರೆ ನಂದಿಕೇಶ್ವರನು ೨೭

ಶ್ರೀಗಿರಿಯ ನೈಋತ್ಯದಿಗು[೨]ಭೂ
ಭಾಗದೊಳೆಸೆವ ಗಣ್ಯಪುಣ್ಯವಿ
ಭಾಗವಾ ಕ್ಷೇತ್ರಂ ಪರಮಪಾವನ ಶುಭೋದಯವು
ಈ ಗಣಾಗ್ರಣಿ ನಂದಿ ಮದ್ಧಿತ
ಯೋಗತಪಮಂ ಕೂರ್ತು ಮಾಡಿದ
ನಾಗಿ ಲೋಕಕೆ ನಂದಿಮಂಡಲವೆಂಬ ಪೆಸರಾಯ್ತು ೨೮

ಆಲ್ಲಿ ವರ್ತಿಸುತಿರ್ಪ ಜೀವಿಗ
ಳೆಲ್ಲರಿಗೆ ಕೊಟ್ಪೆನು ಸುಗತಿಯಂ
ವಲ್ಲಭೆಯೆ ಕೇಳ್ ನಂದಿನಾಥನ ಶುಭಚರಿತ್ರವನು
ಸೊಲ್ಲಿದರ್ಗಂ ಕೇಳಿದರ್ಗಂ
ಸಲ್ಲಲಿತಮತಿ ಭಕ್ತಿಗುಣರತಿ
ಯೆಲ್ಲಿಯುಂ ದೊರೆಕೊಳ್ಗು ದೃಷ್ಟಾದೃಷ್ಟಸಿದ್ಧಿಗಳು ೨೯

ಮೇದಿನಿಯೊಳಿಂತಪ್ಪ ಕಾರಣ
ಮಾದಿಗಣ[೩]ವೆಂತಿರ್ದಡೇನೋ
ವೇ[೪]ದಿಸುವಡಾನೀತನಾಗಿಹೆನೆನಗೆಯೀತಂಗೆ
ಭೇದವಿಲ್ಲೆಂದೆಂಬ ಶಂಭುಗೆ
ಮೋದದಿಂದಡಿಗಡಿಗೆ ನಂದಿಯ
ನಾದರದಿ ತೋಱುತ್ತ ಮತ್ತಿಂತೆಂದಳಗಜಾತೆ ೩೦

---

೧ ಸ್ತು (ತ, ದ, ನ). ೨ ಗ್ (ತ, ದ, ನ). ೩–೪ ನೆಂಬನಿತ ಕೇಳಾ (ತ, ನ). ೪ ವಾ (ತ).

CC-0. Jangamwadi Math Collection. Digitized by eGangotri

ಈ ಸದಾಚಾರತ್ವವೀ ಮಹಿ
ಮಾಸಮಗ್ರತೆಯೀಯುದಾರತೆ
ಯೀ ಸರಸಪಾಂಡಿತ್ಯವೀ ನಿರಹಂಕರಣಭಕ್ತಿ
ಈ ಸುಗುಣಗಣವೀ ನಿರಂತರ
ದಾಸಭಾವನೆಯೀ ವಿಶದಯಶ
ವೀ ಸಮುಚಿತತ್ವಂಗಳೀ ಸಚ್ಚರಿತವೀ ಘನತೆ ೩೧

ಆರಿಗುಂಟಿಂತಪ್ಪ ಶಕ್ತಿ ಪು
ರಾರಿ ನಿಮ್ಮಂ ಪೊತ್ತಿರಲ್ಕೆ ವಿ
ಚಾರಿಸಲ್ ಮೂಜಗಕೆ ನೀವಲ್ಲದೆ ಪೆಱರ್ಗಳವೆ
ಸೇರಿಯೀ ಪರಿಯಿಂದೆ ನಿಮ್ಮವ
ತಾರವಾಗದವಂ ನಿಮಗೆ ಸುಕು
ಮಾರನೆಂತಹನೆಂಬ ನಲ್ಲಳ ಸರಸವಚನವನು ೩೨

ಆಲಿಸುತ ಮುದವೆತ್ತು ಗಂಗಾ
ವಲೌಲಿ ನಾರದಮುನಿಯನೀಕ್ಷಿಸಿ
ಕೇಳಿದೈ ನಂದೀಶ್ವರನ ಘನಮಹಿಮೆಗಳನೆನುತ
ಬೋಳವಿಸುತಂ ನಂದಿಯಂ ಕರು
ಣಾಲಸದಮೃತರಸದೊಳದ್ದಿ ವಿ
ಲೋಲತಾಲೋಕನದಿನೀಕ್ಷಿಸುವಾಗಳೇವೊಗಳ್ದಿ ೩೩

ಇನಿತಿನಿತು ಭಯವಿನಿತು ಲಜ್ಜೆಯ
ದಿನಿತಿನಿತು ಮುದವಿನಿತು ನಯಮುಂ
ತನಗೆ ಭೂಷಣಮಾಗಿ ತೋಱಲು ನಯನಯುಗಳದೊಳು
ಘನಸುಖಾಶ್ರುಕಣಂಗಳುಗುತಿರೆ
ತನುವಿನೊಳು ಪುಳಕಾಂಕುರಂಗಳು
ಕೊನರೆ ನೆನಹಿನ ಹೃದಯವಿ[ದು] ತಟತಟನದಿರುತಿರಲು ೩೪

---

೧೯ (ಸ).

CC-0. Jangamwadi Math Collection. Digitized by eGangotri

ಪ್ರಸ್ತುತಾಲಾಪದೊಳೆ ಮಸ್ತ
ನ್ಯಸ್ತಹಸ್ತದ್ವಂದ್ವನಾಗಿ ಮೃ
ದುಸ್ತವನಮಂ ಮಾಳ್ಪನಘನಂದೀಶನಂ ನೋಡಿ
ಹಸ್ತಯುಗದಿಂ ತೆಗೆದು ವಿಪ್ರಳೋ
ರಸ್ಥಲದಿ ಬಿಗಿದಪ್ಪಿ ಸಶಿವಂ
ಸ್ವಸ್ತಿಸ್ತದಿಂ ತನ್ನ ಪ್ರಸಾದವನಿಕ್ಕಿಯಿಂತೆಂದಂ ೩೫

ಇದುವೆಯಾಗಮಮೂಲಪದ್ಧತಿ
ಯಿದುವೆ ಧರ್ಮಾಚಾರವರ್ತನ
ವಿದುವೆ ಸುವ್ರತವಿದುವೆ ಭಕ್ತಿಮಹತ್ಪಸಾರಾಯ
ಇದುವೆ ಪರತತ್ವಾನುಭವಸುಖ
ವಿದುವೆ ಚರಿತಾರ್ಥತ್ವಮಂದಿರ
ವಿದುವೆ ತುದಿಪದವೆಂದು ನಿನ್ನಿಂದವೆ ವಿದಿತವಹುದು ೩೬

ನಂದಿಕೇಶ್ವರ ಮದ್ಧರಣ ನಿ
ನ್ನಿಂದೆ ಸಜ್ಜನಭಕ್ತಿ ಪಸರಿಸಿ
ಸಂದುದೆಲ್ಲಾ ಭುವನಭವನೋದ್ದೀಪರೂಪದಲಿ
ಶಿಕಂದಿ ಕೇಳ್ ಪ್ರಮಥರ್ಗೆ ಹಿಮಗಿರಿ
ನಂದನೆಗೆ ಮದ್ವಿಮಳತತ್ವಾ
ನಂದಬೋಧೆಯನಱಿಹಿದದಱಿಂದಱಿಹಿದೆನು ನಿನಗೆ ೩೭

ಶ್ರೀಕರದ ಸರ್ವಜ್ಞನಾಮಂ
ಪ್ರಾಕಟಿಪೆನಲು ಸಲುವುದೆಲ್ಲಾ
ಲೋಕದೊಳಗಂತಾಗಿ ತನ್ನರಲೋಕದೊಳ್ ಪೋಗಿ
ಏಕತವೆ ನೀನೆರಡನೆಯು ಶಿವ
ನಾಕೃತಿಯಳೊಪ್ಪಿಸೆದು ನಾನಾ
ಲೋಕಹಿತಮುಂ ಭಕ್ತಿ ಲೋಕಹಿತಾರ್ಥಮಾಗಲ್ಕೆ ೩೮

೧ಶ (ತ, ಧ, ದ, ಥ); ಪ (ನ). ೨–೩ ತಂದೆ (ದ).

CC-0. Jangamwadi Math Collection. Digitized by eGangotri

ಏಮ್ಮ್ಯ ಕೌತುಕವಾಗಿ ಮರ್ತ್ಯವ
ನಿಮ್ಮ್ಯಡಿಸಿ ಪಾವನವನೆಯ್ದಿಸು
ಒಮ್ಮ್ಯೆಯುಂ ನೀಂ ಬಸವನೆಂಬಭಿಧಾನದಿಂದೆನಲು
ಸಮ್ಮ್ಯದಂ ಮಿಗೆ ನಂದಿ ತನ್ನ ಕ
ರಮ್ಮ್ಯಗಿದು ತಾಂ ಬಿನ್ನವಿಸಿದನು
ನಿಮ್ಮ್ಯಯಾಜ್ಞೆಯನೆನ್ನ ಮಂಡೆಯೊಳಾಂತು ಮಾಡುವೆನು ೩೯

ಸೊಲ್ಲಬೇಕಿನಿತೊಂದನೆನ್ನಂ
ಭುಲ್ಲವಿಸಿ ಮರ್ತ್ಯಕೆ ಜಗತ್ಪ್ರಯ
ವಲ್ಲಭನೆ ನೀವಲ್ಲದೊರ್ಬನು ಕರ್ತನಿದ್ದಹನೆ
ಇಲ್ಲಿ ವರ್ತಿಸುತಿರ್ದಡೇನೆನ
ಗಲ್ಲಿ ವರ್ತಿಸುತಿರ್ದಡೇಂ ನಾ
ನೆಲ್ಲಿ ವರ್ತಿಸುತಿರ್ದಡೇಂ ನಿಮ್ಮಲ್ಲಿಯೆನ್ನಿರವು ೪೦

ಎಂದು ಬಿನ್ನೈಸುತ್ತಮಿಪ್ಪಾ
ನಂದಿವರನ ನಯೋಕ್ತಿಗಳಿಗಿಂ
ತೆಂದನಭವಂ ನಿನ್ನುವಂ ಗುರು–ಲಿಂಗರೂಪಾಗಿ
ಬಂದು ನಿಜ ತತ್ವಾರ್ಥಸೌಖ್ಯವ
ನೊಂದಿಸುವೆ ನಾಂ ಪ್ರಾಣಲಿಂಗಾ
ನಂದದಿಂ ತತ್ ಪ್ರಾಣತನು ಗಳೊಳಗಲದೊಲಿದಿಹೆನು ೪೧

ಕೂಡಿ ಜಂಗಮವಾಗಿ ನಿನ್ನೊಡ
ನಾಡುವೆಂ ತನು ಮನ ಧನಂಗಳು
ನಾಡೆ ಬೀಸರವಾಗದಂತವನೊಪ್ಪಗೊಳುತಿಹೆನು
ನೋಡಲೆನ್ನಸುಗಸುವೆನಿಸಿ ಸಲೆ
ಊಢಿವೆತ್ತ ಪ್ರಮಥರನು ಮಿಗೆ
ಮಾಡಿ ನಿತ್ಯಪ್ರಾಣವಾಗಿರುತಿಪ್ಪೆನಂತಾಗಿ ೪೨

೧–೨ ಪ್ರಾಣಲಿಂಗ (ತ, ದ, ನ, ಬ, ಮ).

CC-0. Jangamwadi Math Collection. Digitized by eGangotri

ವಿನುತಯೆಸೆವಮ್ಮಿಬ್ಬರೊಳಗೊಂ
ದಿನಿತುವುಂ ಸಂದಿಲ್ಲದುದಕಿದು
ನಿನಗೆ ದೃಷ್ಟವಲಾ ಜಗತ್ಪಾವನನೆ ಕೇಳೆಂದು
ಘನದಯಾಮತಿಯಿಂದೆ ಹೇಳಿದ
ಮನಸಿಜಾರಿಯ ಮೆಲ್ಲಡಿಗಳಿಗೆ
ತನುವದೆಲ್ಲಂ ಕೈಗಳಾಗಿರೆ ವಂದಿಸುತ ನಿಂದು ೪೩

ಇನಿತು [೧]ಬಿನ್ನಪವುಸಿರಲೇಕೆಂ
ದೆನುತವನಿತಳವೊಂದೆ ವಂದಿಸಿ
ಅನಘಮತಿನಂದೀಶ್ವರನು ಗಣಸನ್ನಿಹಿತನಾಗಿ
ಮನದೊಳಭವನನರಿಸಿ ಹರುಷಂ
ಜನಿಸೆ ತಾಂ ನರಲೋಕವದೆಯಿದೆ
ಯೆನಲಿಳಿದು ನಡೆತಂದನೈಸಉಶೊಳಿತ್ತಲವನಿಯಲಿ ೪೪

ಗುರುತರೋನ್ನತವಾಗೆಸೆವ ಸಿರಿ
ಗಿರಿಯ ಪಡುವಣ ಕಡೆಯ ಧರೆಯಲಿ
ನರನುತಾಸ್ಪದವೆನಿಸಿದಾ ಕರ್ನಾಟದೇಶದಲಿ
ಕರಮೆಸೆದುದಲ್ಲಿ ಪ್ರಸಿದ್ಧದಿ
ಪಿರಿದೆನಿಪ ಶಿವಭಕ್ತಿಬೀಜ
ಕ್ಕಿರವೆನಿಸಿದೊಂದಿಂಗುಳೇಶ್ವರ ಬಾಗವಾಡಿಯದು [೨] ೪೫

ಆ ಮಹಾ ಬಹುಳಗ್ರಹಾರದ
ಗ್ರಾಮಣೀಮಣಿ ವಿತರಣದ ಕಣಿ
ಭೂಮಿದೇವಾಗ್ರಣಿ ಪರಮ ಶೈವಾಂಬುರುಹತರಣಿ
ನೇಮಿಸುವ ಶಿಷಟ್ಳಕರ್ಮಮಾರ್ಗ
ಪ್ರೇಮಿ ಸಂತತ ವರತನೂಭವ
ಕಾಮಿ ಮಂಡಗೆಮಾದಿರಾಜನೆನಲ್ಕೆ ಸನ್ನಾಮಿ ೪೬

೧–೨ ಬೆಸನಮನು (ಬ, ಮ, ಚ). ೨ ಲಿ (ಕ, ಚ, ಬ). ೩–೪ ಸತ್ (ಚ).

CC-0. Jangamwadi Math Collection. Digitized by eGangotri

ಆತನುತ್ತಮ ಸತಿ ವಿಶೇಷಪು
ನೀತೆ ಮಾದಾಂಬಿಕೆ ಸವಿನಯಾ
ನ್ವೀತೆ ಸತ್ಕುಲಜಾತೆ ಸಜ್ಜನಭಕ್ತಿನಿರ್ಣೀತೆ
ಪಾತಕಕ್ಕತಿಭೀತೆ ಧರ್ಮ
ಸ್ಫೂರ್ತೆ ಪುಣ್ಯಸಮೇತೆ ಸತ್ಯವಿ
ನೀತೆ ಸುಗುಣವ್ರಾತೆ ವಿಮಳಾಚಾರವಿಖ್ಯಾತೆ ೪೭

ಕಾಂತೆ ತಾಂ ಸುತರಿಲ್ಲದಿರ್ದಡ
ನಂತ ಚಿಂತಾಕ್ರಾಂತೆಯಾಗುತೆ
ತೂಂತು ನೋಂಪಿಗಳಂ ಪಲವನುಜಿ[1] ನೋಂತು ಬೇಸತ್ತು
ಸಂತತಿಯದೆಂದಪ್ಪುದೆಮಗಿ
ನ್ನೆಂತೆನುತ [2]ಸತಿಪತಿಗಳುಂ[3] ಮತಿ
ವಂತರಿಂದಂ ಪೊತ್ತಗೆಗಳಂ ತೆಗಿಸಿ ನೋಡಿಸುತ ೪೮

ಸಂದ ನೋಂಪಿಗಳೊಳು ವಿಚಾರಿಸಿ
ನಂದಿನಾಥನ ನೋಂಪಿಯದು ಪಲ
ವಂದದಿಂ ಕಾಮ್ಯಾ[1]ರ್ಥಸಿದ್ಧಿಗೆ ನಿತ್ಯ ಕಾರಣವು
ಎಂದು ಸುವ್ರತನಿಯತವಂ ಬುಧ
ರಿಂದುಮುಖಿಗಱುಪಿದಡೆ ಪರಮಾ
ನಂದದಿಂ ಮಾದಾಯಿ ಶಿವಮಂದಿರಕೆ ನಡೆತಂದು ೪೯

ಅಪ್ರತಿಮನಂ ಕಾಣುತವ ದಂ
ಡಪ್ರಣಾಮವನಿಕ್ಕಿ ಸರ್ವ
ಜ್ಞ ಪ್ರಮಥವರ ನಂದಿನಾಥ ನತಾನಿಮಿಷಯೂಥ
ಸುಪ್ರಸನ್ನಯೆನುತ್ತ ಭಯಭ
ಕ್ತಿಪ್ರಿಯೋಕ್ತಿಗಳಿಂದೆ ಕೀರ್ತಿಸು
ತೀ ಪ್ರಕಾರದಿನಂಚಿತವ್ರತಚ[4]ರ್ಯೆಯಲಿ[5]ಮಾಡಿ ೫೦

೧–೨ ಸತಿಯುಂ ಪತಿಯು (ಸ). ೩ ಯಾ (ಥ, ದ). ೪–೫ ರ್ಯದಲಿ (ಚ); ರ್ಯೆಯಂ (ತ, ಥ, ದ, ನ).

CC-0. Jangamwadi Math Collection. Digitized by eGangotri

ಮೋದವಲರಲ್ ಸೋಮವಾರ ಮು
ದಾದಿಯಾದೊಂಬತ್ತು ದಿವಸಂ
ವೇದಿತೋತ್ಸವವೃತ್ತಿಯಿಂ ಸಲೆ ನೋಂತು ಮಱುದಿನವು
ಆದಿನಂದಿಗೆ ಮಜ್ಜನವನಮು
ಳೋದಕದಿನಭಿಷೇಕಿಸುತ್ತಾ
ಮೋದ ಮೃದುಚಂದನ ಕುಸುಮ ನವಮಾಲೆಗಳನಿತ್ತು ೫೧

ಸುತ್ತಿ ದಿವ್ಯಾಂಬರವಿತಾನಮು
ನುತ್ತಮಾಭರಣಂಗಳಂ ತೊಡಿ
ಸುತ್ತ ಗಂಟೆಗಳಂದುಗೆಗಳುರಗೆಜ್ಜೆಗಳನಿಕ್ಕಿ
ಮತ್ತೆ ನೊಸಲಲಿ ಬಾಸಿಗವನ
ಚ್ಛೊತ್ತಿದಂತೆ ಸುವರ್ಣಪಟ್ಟವ
ನೆೊತ್ತಿ ನೆತ್ತಿಯೊಳೀ ಪರಿಯೊಳಿಲ್ಲವನಲಂಕರಿಸಿ ೫೨

ಗೋಪನಂ ಗಂಧಾಕ್ಷತಾರ್ಚನೆ
ಧೂಪದೀಪಾರತಿಗಳಿಸೆಯೆ ನಿ
ರೂಪಿಸುತ ನವಪಂಚಭಕ್ಷ್ಯಾವಳಿಯನರ್ಪಿಸುತ
ಆಪನಿತು ಹೊಸ ಹುಗ್ಗಿ ಗುಡವಾ
ಜ್ಯಾಪರಿಮಿತಂ ಕಲಸಿಯೂಡು
ತ್ತಾ ಪರಮ ಮಾಹೇಶ್ವರರನಾರಾಧನೆಯೊಳೊಲಿಸಿ ೫೩

ನಂದಿಕೇಶ್ವರ ಹರಭರಣ ನವ
ನಂದಿನಾಥ ಅನಾಥಬಂಧುವೆ
ತಂದೆ ನಿನ್ನವೊಲೀಶಭಕ್ತಿಯ ಕಂದನೆನಿಸಿರ್ದ
ಕಂದನಂ ನೀವಿತ್ತಡಾನೊಲ
ವಿಂದೆ ನಿಮ್ಮಯ ಪೆಸರನಿಕ್ಕುವೆ
ನೆಂದೆನಲು ಮಾದಾಂಬಿಕೆಗೆ ಜನರಾಗೆ೨ ನೋಡಲ್ಕೆ ೫೪

೧ನೊ (ತ, ದ, ನ). ೨ಜಿ (ತ, ದ, ನ).

CC-0. Jangamwadi Math Collection. Digitized by eGangotri

ಇಂಡೆಯಂ ಕರುಣಿಸಲದಂ ಕೈ
ಕೊಂಡುರದೊಳಾನನದೊಳೊತ್ತುತೆ
ಮಂಡೆಯಲಿ ಸೂಡಿದಳು ಮಾನಿನಿ ತತ್‌ಪ್ರಸಾದವನು
ಗಂಡಹೆಂಡಿರು ನಂದಿಯಂ ಬಲ
ಗೊಂಡು ವಂದಿಸಿ ಪಿರಿದು ಶುಭವಿದಿ
ರ್ಗೊಂಡಪ್ಪೊಲು ನಿಜಮಂದಿರಕೆ ನಡೆತಂದು ಮುದವೆತ್ತು ೫೫

ಎಂದಿನಂತೆ ವಿಶೇಷ [೧]ತೋಷಣ
ಪೊಂದಿ ಸತಿಯುಂ ಪತಿಯುಮತ್ಯಾ
ನಂದಸುಖದೊಳು ವರ್ತಿಸುತ್ತಿರೆ ಮುನ್ನ ಮರ್ತ್ಯಕ್ಕೆ
ಇಂದುವೌಳಿಯ ಬೆಸನದಿಂದವೆ
ಬಂದ ನಂದೀಶನು ಹೃದಯದೊಳ
ಮಂದರಾಗಂಬೆತ್ತು ತಾನೆಯ್ತಪ್ಪ ಬರವಿಂಗೆ ೫೬

ಅನುಗುಣಕೆ ಪಡಿಯೆನಿಸಿ ತನ್ನಂ
ತನಯನಾಗಲು ನೋಂತಳಬುಜಾ
ನನೆಯ ಸುಕೃತವನೇನನೆಂಬೆನು ನೆನೆದ ಕಾರ್ಯವದು
ತನಗೆ ನೆಱಿ ಸಿದ್ಧಿಸಿತೆನಲು ಮಾ
ನಿನಿಯ ಬಸುಱಿಲಿ ತಾಂ ಪ್ರವೇಶಿಸ
ಲನಿತಱಿಕೊಳು ತದ್‌ಗರ್ಭಚಿಪ್ಪಗಳಂಕುರಿತವಾಯ್ತು ೫೭

ಆಂತು ಸಂಧಿ ೨ ಕ್ಕಂ ಪದಗಳು ೧೨೩ ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಸಂತಸ (ತ, ದ, ನ).

CC-0. Jangamwadi Math Collection. Digitized by eGangotri

ಸಂಧಿ : ೩

ಸೂಚನೆ : ನಾಗಕಂಕಣನಾಜ್ಞೆಯಲಿ ಭೂ
ಭಾಗದಲಿ ಬಂದಾದಿವೃಷಭನು
ಬಾಗವಾಡಿಯೊಳುದಯವಾದನು ಬಸವನಾಮದಲಿ

ಅಮೃತತನುವಿನ ತನಯನುದರದೊ
ಳಮರ್ದಿರಲು ಹಸಿವಿಲ್ಲದಾದುದು
ರಮಣಿಗುತ್ತಮ ಭಕ್ತಿರುಚಿಕಿನು ಬಸುಱಿಂಳಿಹನಾಗಿ
ಕಮಳವದನೆಗೆ ರುಚಿಯರುಚಿಯಾ
ಯ್ತಮಳಕಾಯದ ಮೂರ್ತಿ ಸುದತಿಯ
ನಿಮಿರ್ದ ಜಠರದೊಳಿರೆ ತನೂಲತೆ ಬೆಳುಪು ಬಲಿದಪ್ಪುದು ೧

ಸರಸಿಜಾಕ್ಷಿಯ ಭಕ್ತಿಶೀಲೋ
ದರವಿತರ ಪಾಕವನೊಲಿಯದೋ
ಕರಿಕೆಯಾದುದು ಸುತನ ಬರವಿಗೆ ಬಾಯ್ದೆಱಿದ ತೆಱದಿ
ಪರಮ ಸತಿಗಾಗುಳಿಕೆ ಬಂದುದು
ಪರಶಿವನ ತನು ಲಲನೆಯೊಳಗವ
ತರಿಸಲಾದುದು ಯೋಗನಿದ್ರೆಯೆಸಿನಲುಸಿ ವಧುಗೆ ನಿದ್ರೆ ೨

೧–೨ ಯಿತು (ಕ, ಥ). ೩ ತ (ತ). ೪–೫ ಳಿರಲಾಗಿ (ಬ, ತ, ದ, ನ). ೬–೭ನಲ್ (ತ, ದ, ನ, ಬ).

CC-0. Jangamwadi Math Collection. Digitized by eGangotri

ಕಾಲಕಂಠನ ರೂಪುದರದೊಳ್
ಕೀಲಿಸಲ್ ಕುಚಚೂಚುಕಂಗಳು
ನೀಲವಾದವು ಘನಶಿವಾಕೃತಿ ಜಠರದೊಳಗಿರಲು
ಸ್ಥೂಲವಾದುದು ಸತಿಯ ಬಡನಡು
ಲೀಲೆಯಿಂ ಯೋಗೀಂದ್ರಹಂಸನು
ಲೋಲನಯನೆಯ ಬಸುಱಿಕೊಳಿರೆ ನಡೆವೇಗವುಡುಗಿದುದು ೩

ಎನೆ ಲತಾಂಗಿಯ ಜಠರವದು ದಿನ
ದಿನಕೆ ನುಣ್ಪುಂ ಪೆಂಪ್ಪುಮಿಂಪುಂ
ಕೊನರ್ದು ಬಲಿದೊಂಬತ್ತು ತಿಂಗಳು ತುಂಬಿ ನಂದೀಶ
ವನಿತೆಯುದರದೊಳತಿ ಶುಭೋದಯ
ವೆನಿಸಿ ಬೆಳೆದನು ತಾಯ ಗರ್ಭಸ
ದನವೆ ತನ್ನಯ ಸುಖಿಸಮಾಧಿಗೆ ತಾಣಮಾಗಿರಲು ೪

[೧]ಸಿದ್ಧ[೨]ಪದ್ಮಾಸನದೊಳಿರ್ದು ವಿ
ಶುದ್ಧತನು ತಾನಾಗಿ ಭೂತಸ
ಮೃದ್ಧಿಶುದ್ಧಿಗೆ ಪೊಕ್ಕು ಘಟಮಂ ಕೆಡಪುತೊಳಗಿರ್ದ
ಬದ್ಧಜಲಮಂ ಚಲ್ಲಿ ಚಲ್ಲಿ ತ
ದುದ್ಧರಾಗ್ನಿಯನಂತು ಕೆಡಿಸಿ ಸ
ಮುದ್ಧರಿಸಿ ಕಿಡಿಯಿಲ್ಲ ಪೊಗೆಯದು ಬೂದಿಯದು ತಾನು ೫

ಒತ್ತಿಯೂದುವದಿಲ್ಲ ಸೊಡರಂ
ಪೊತ್ತಿಸಿದನೊಂದಂ ತದೀಯೋ-
ದಾತ್ತದೀಪಸುದೀಪ್ತಿಯಿಂ ತಾನಿದ್ದ ಮನೆಯಲ್ಲಿ
ಒತ್ತಿ ಕರಿಯದು ಬೇಯದಿಪ್ಪಂ
ತತ್ತಲೊಳಗೊಳಗುರುಹಿದನು ಪ್ರೌ
ಢತ್ತಮೋಹರ ಚಿತ್‌ಪ್ರಭಾಂಗನು ಕಲಿಮಲಾಪಹನು ೬

೧–೨ ಶುದ್ಧ (ಕ).

CC-0. Jangamwadi Math Collection. Digitized by eGangotri

ಧಾತ್ರಿಯೊಳು ಕಾಲೂಱಿ ನಿಂತಿಹ
ಪುತ್ರನುಂಟೇ ಲೋಕದೊಳಗೆ ವಿ
ಚಿತ್ರವೆನುತವೆ ಶತ್ರುಮಿತ್ರರು ತಾವು ತಮತಮ್ಮ
ಕ್ಷೇತ್ರದೊಳಗಿರವುಳಿದು ಮುಂದೆ ಪ
ರತ್ರವಿಲ್ಲದೆ ಪಾಱುತಿರೆ ಲೋ
ಕತ್ರಯೇಶ್ವರಮೂರ್ತಿ ನಂದಿ ಲತಾಂಗಿಯುದರದಲಿ ೭

ನಲಿದು ಚೌದಳಪಂಕರುಹಮಂ
ಕಳೆದು ನಡೆತಂದಾ ತ್ರಿಕೂಟದ
ನೆಲೆಗೆ ನಿಂದು ಸುಷುಪ್ತಿಸರ್ಪನನೆಬ್ಬಿಸುತ್ತಾಱಿ
ದಳದ ನಳಿನಮನೂಱಿ ತದ್ದಶ
ದಳಸರೋಜಮನೊಂದಿಯೀರಾಱಿ
ದಳಜಲಜಮಂ ಸೋಂಕಿ ಷೋಡಶಪತ್ರಕಮಳದಲಿ ೮

ಮೇಲೆ ಸುರುಚಿರ ಸೌಖ್ಯಕೇಳೀ
ಲೋಲದಿಂದೋಲಾಡುತದನತಿ
ಲೀಲೆಯಿಂ ದಾಂಟುತ್ತೆರಡುದಳದಬ್ಜದಲಿ ತನ್ನ
ಕೀಲಿಸಿದ ಸುಜ್ಞಾನಹರುಷದೆ
[೧]ಜೋಲಿ[೨] ಮುಂದೆಯಧೋವದನದು
ತ್ತಾಳ ಷಟ್‌ಕಮಲಂಗಳೂರ್ಧ್ವಮುಖಿಂಗಳಾಗೆಸೆಯೆ ೯

ಲಲಿತ ನಿಶ್ಚಲಚಾಪಗತಿಯಲಿ
ಹೊಳೆವ ಪಶ್ಚಿಮನಾಳದಿಂದೊಗೆ
ದಲರ್ವ ನಾದಕೆ ಸೊಕ್ಕಿಯಚಲಂಗಳವೊಲಡಿಯಿಟ್ಟು
ಬಲಿದ ಮೌನಕೆ ಸಿಲುಕಿ ಮುಂದೆಗೆ
ನಿಲುಕಿ ಮೇಲಣ ಮುಖದ ಸಾವಿರ
ದಳದ ತಾವರೆ ತಾನಧೋಮುಖವಾಗಿ ಮಿಂಚುತಿರೆ ೧೦

೧-೨ ಸೋಲಿ (ಥ, ನ).

CC-0. Jangamwadi Math Collection. Digitized by eGangotri

ಶ್ರೀ ಬಸವೇಶ್ವರ ದೇವಾಲಯ, ಬಾಗೇವಾಡಿ.

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ದಿವ್ಯನಾಗಿಯೆ ಷೋಡ[೧]ಶಾತ್ಮ[೨]ದ
ನವ್ಯಮೃತಕರ ನವ ಸುಧಾರಸ
ಭವ್ಯಪಾನಾಪಾರಸುಖದಿ[೩]ತಿ ಪಾರವಶ್ಯದಲಿ
ಸೇವ್ಯ ಪರಮಜ್ಯೋತಿರಾಕಾ
ರವ್ಯಯದ ತನ್ನೊಂದು ತೇಜೋ
ದ್ರವ್ಯಮೇ ಪ್ರಭೆಯಾಗಿ ಥಳಥಳಿಸಿದಪುದೇವೊಗಳ್ವೆ ೧೧

ಸತತಮುಂ ಹಿಮಕಿರಣಕಾಂತ
ಪ್ರತಿಮೆಯುದರದೊಳುಜ್ವಲಿಸುವ
ಪ್ರತಿಮ ದೀಪದವೊಲು ಸಿತಾಂಗದ ಸತಿಯ ಜಠರದಲಿ
ಅತುಳಿತಪ್ರಭೆವೆತ್ತು ಸುತನೀ
ಗತಿಯೊಳೀಶಧ್ಯಾನತತ್ಪರ
ಮತಿಯೊಳಿರ್ದನು ತಾಯ ಬಸುಱಿಲಿ ವತ್ಸರತ್ರಯವು ೧೨

ಕಾಲಬೆರಳ ಕರಾಂಗುಲಂಗಳ
ಕೀಲಸಂದಿಗಳೆಡೆಗೆಡೆಗೆ ಕಡು
ಶೂಲೆ ಕೆರಳುತ ಸೂಜಿಗಳಿನಿಱಿವಂತಿರಲು ಸುಯ್ದು
ಶೂಲಿಯಂತಿಕನಿರ್ಪ ತನ್ನ ವಿ
ಶಾಲಗರ್ಭದ ಭಾರಪಂ ತಾಂ
ತಾಳಲಾಱದೆ ಮಾದಲಾಂಬಿಕೆ ಶಿವಶಿವಾಯೆನುತ ೧೩

ಒಳಗೊಳಗೆ ಬಸುಱಿಱಿವ ಬೇನೆಗೆ
ಬಳಲುತೊಂದಿನ ನಂದಿನಾಥನ
ನಿಳಯಮಂ ಮತ್ತೆಯ್ದಿ ಸತಿ ವಿನ್ನೈಸಿದಳು ನಮಿಸಿ
ಹಲವು ನೋಂಪಿಗಳೆಯ್ದಿ ನೀರೊಳು
ಕಲಸಿ ಕಳೆದಿಳೆಯಱಿಯೆ ನಿಮ್ಮಡಿ
ಗಳ ಶರಣುವೊಕ್ಕೆನು ಶರಣ್ಯೈಕ್ಯಕಂತೆ ಪತಿಕರಿಸಿ ೧೪

೧–೨ ಶಾಸ್ಯ (ತ. ದ. ನ). ೩ ರ (ಥ).

CC-0. Jangamwadi Math Collection. Digitized by eGangotri

ವರ ಸುತನ ಕೊಡಲೆನಗೆ ಲೇಸಾ
ಯ್ತರೆ ಪುಣ್ಯಂಗೆಯ್ದ ಸತಿಯರು
ತರಳರಂ ಬೆಸಲಹರು ನವಮಾಸಂಗಳಂ ಪೊತ್ತು
ನಿರುತವಿಂದಿಗೆ ಮೆಲ್ಲನಿದೆ ಮೂ
ರ್ವರುಷವಾಯಿತ್ತಯ್ಯ ನಂದೀ
ಶ್ವರನೆಯಿದಱಿಂದೇನವಸ್ಥೆಗೆ ಬ೧ಹೆನೊ೨ ನಾನಱಿಯೆ ೧೫

ಇಂದು ದುರ್ಭರವೆನಿಸಿದರ್ಭಕ
ನಿಂದೆ ಧರಿಸಲ್ಪಟ್ಟ ಗರ್ಭವ
ಮುಂದ ಕಕ್ಕಟಿಗರ್ಭವಾಯಿತು ನೀ ಕೊಡುಪ ವರವು
ಬಂದುದೆನಗಿನ್ನುದರದುರಿಯುಂ
ನಂದಿಸಯ್ಯ ಕೃಪಾಂಬುಪೂರದಿ
ತಂದೆಯೀ ವೇದನೆಗೆ ಜೀವಿಸಲಾಱಿನೇಗುವೆನು ೧೬

ಎಲ್ಲಿಯುಂ ಕೇಳ್ದಱಿಯೆವಿಂತಹ
ದುರ್ಲಭದ ಬಸುಱಿಯರನೆನುತಿರು
ತಲ್ಲಿಗಲ್ಲಿಗೆ ನಿಂದು ಬಳಲುತೆ ತನ್ನ ಮನೆಗೆಯ್ದಿ
ಪಲ್ಲವಾಧರೆ ಚಿಂತಿಸುತ್ತೆದೆ
ದಲ್ಲಣಿಸಿ ಉಃಪ್ಪೆಂದು ಸುಯಿವುತ
ಗಲ್ಲದಲಿ ಕೈಯೂಱಿ ಕಡೆದಳು ಹಾಸಿಗೆಯ ಮೇಲೆ ೧೭

ಒಳಗಣುಪತಾಪೋಪಶಮನಕೆ
ಮಲಯರುಹಕರ್ಪುರದ ಶೀತಳ
ಸಲಿಲದಿಂ ನನೆದಿದಱಿ ನೆವವಿರುಳಿನಿತು ಕಣ್ಮುಚ್ಚೆ
ಒಲಿದ ವೃಷಭಾಧಿಪತಿ ದರುಶನ
ದೊಳಗೆ ಜಂಗಮಲಿಂಗರೂಪಂ
ದಳೆದು ಸತಿಗಾಯವಸರದೊಳಿಂತೆಂದು ಬೆಸಸಿದನು ೧೮

೧–೨ ರ್ಪೆ (ತ, ನ).

CC-0. Jangamwadi Math Collection. Digitized by eGangotri

ನಿನ್ನುದರದುಪತಾಪದುರಿಯಂ
ನಿನ್ನ ಚಿಂತಾಕ್ರಾಂತವೆಲ್ಲವ
ನಿನ್ನು ಪರಿಹರಿಸಲ್ಕೆ ಬಂದೆನು ಕಮಳದಳನಯನೆ
ನಿನ್ನ ಬಸುಱಿಲಿ ಬೆಳೆವ ಸುಕುಮಾ
ರಂ ನಿಖಿಳಪಾವನನೆನಿಪ್ಪ ಜ
ಗನ್ನುತೋನ್ನತಮೂರ್ತಿಯಲ್ಲದೆ ಜಾವಳನೆ ಕೇಳು ೧೯

ಆದಿಗಾದಿಯನಾದಿ ನಂದಿ ಶಿ
ಲಾದನಣುಗನು ಶಿವನ ಬೆಸನದಿ
ವೇದಿತಾಮಳ ಭಕ್ತಿವರ್ಧನಕಾರಣದಿ ಬಂದು
ಮೇದಿನಿಯೊಳೊಗೆದಂ ನಿನಗೆ ಸ
ಮ್ಮೋದದಿಂ ಪೇಳ್ದಪೆವು ಸೂನೃತ
ವಾದ ನುಡಿಯಂ ನಂಬಿ ಪದುಳಿರು ಚಿಂತಿಸದಿರಿನ್ನು ೨೦

ಹುಟ್ಟಿದಪನುತ್ತಮ ಕುಮಾರನು
ಹುಟ್ಟಿದಾಗಳೆ ಬಸವನಾಮವ
ನಿಟ್ಟು ಕರೆ ನೀನೆನಲನಿತಱಿಕೊಳು ನಿದ್ರೆ ತಿಳಿದೆದ್ದು
ದಿಟ್ಟಿಸಾರುವನಲ್ಲಿ ಕಾಣದೆ
ನೆಟ್ಟನೀತನೆ ವೃಷಭಪತಿ ಕೃಪೆ
ಪ್ರಟ್ಟಿಯೆಮ್ಮಂ ಸಲಹಲಿಲ್ಲಿಗೆ ಬಂದನಿದು ದಿಟವು ೨೧

ವಿನನುಸುರ್ದಪೆನೆನ್ನ ಜನ್ಮಫ
ಲಾನುಭೋಕ್ತವ್ಯಕ್ಕೆ ಮಿಗೆ ಸಂ
ಧಾನವಾಯಿತು ಬದುಕಿದೆನು ನಾನೆನುತ ಹರುಷದಲಿ
ಮಾನಿನಿಯರುಂ ಗೋತ್ರಬಂಧುವಿ
ತಾನವಚ್ಚರಿಪಟ್ಟು ಕೇಳಲು
ತಾನಿರುಳು ಕಂಡಿರ್ದ ಕನಸನವರ್ಗೆ ಹೇಳುತ್ತೆ ೨೨

CC-0. Jangamwadi Math Collection. Digitized by eGangotri

ಇದ್ದ ಮಾದಾಂಬಿಕೆಯ ಜಠರದೊ
ಳಿದ್ದ ಸುಜ್ಞಾನಿಯ ಮನೋಬ್ಜದೊ
ಳಿದ್ದು ಬೆಳಗುತ್ತಿದ್ದ ಪರಮಜ್ಯೋತಿರಾಕಾರ
ಹೊದ್ದಿದವನಂ ಬೋಧಿಸುತೆ ಬಂ
ದಿದ್ದ ಮಣಿಹವನಱಿದಿರೆನಲೊಡ
ನೆದ್ದು ಮಱಿಯದೆ ತಾನೆಱಿಗೆ ತಚ್ಛಿವನ ಮೆಲ್ಲಡಿಗೆ ೫೩

ಪ್ರೀತಿಯಲಿ ಪುತ್ರನು ಕರಾಂಭೋ
ಜಾತಮುಕುಳಿತನಾಗಿ ಮೆಲ್ಲನೆ
ಮಾತೆಯುದರದೊಳುದಯಿಸಲು ಅರ್ಧೋದಯದೊಳಾಗ
ಆ ತನಯನೊಳಗಿಹ [೧]ಶಿವಂ [೨]ವಿ
ಖ್ಯಾತಗುರ್ವಾಕಾರಮಂ ತಾ
ಳ್ದಾತನಂಗದ ಮೇಲೆ ಲಿಂಗಾಸಂಗವಂ ಮಾಡಿ ೫೪

ಬಂದ ಬಟ್ಟೆಯನಾರುವಱಿಯದ
ಛಂದದಿಂದಾಪೆಡೆಯೊಳಿರ್ದೆಯಿ
ತಂದನೋ ಈ ತಾಪಸೋತ್ತಮನಿದು ವಿಚಿತ್ರವಲ
ಎಂದು ಮನೆಯವರೊಳಗೊಳಗೆ ತಾ
ವೊಂದನೊಂದಂ ನುಡಿವುತಂ ಬೆಱಿ
ಗೊಂದಿರುತ್ತಿರಲಾ ಸಮಯದಲಿ ಚಂದ್ರಶೇಖರನು ೫೫

ಜಡೆಮುಡಿಯನಳವಡಿಸಿ ತೋಱುವ
ಮೃಡನ ಸೆಜ್ಜೆ ಸಿತಾಂಬರದ ಚೆಲು
ವುಡಿಗೆ ಹೊದೆದಿಹ ರತ್ನ [೩]ಗಂಬಳಿ ತಾಮ್ರಕುಂಡಲವು
ತೊಡಿಗೆ ರುದ್ರಾಕ್ಷಿಗಳ ಬೆಳುಗೊಡೆ
ಹಿಡಿದ ದಂಡಂ ಭಸಿತಲೇಪನ
ದೊಡಲು ನಡುನೊಸಲೊಳು ತ್ರಿಪುಂಡ್ರದ ರೇಖೆಗಳು ಮಱಿಯೆ ೫೬

೧–೨ ಶಿವನೆ (ತ, ದ, ನ). ೩ ನ್ನ (ತ, ದ, ನ).

CC-0. Jangamwadi Math Collection. Digitized by eGangotri

ಫಾಳವಿಪ ಸುಲಿಪಲ್ ಮುಗುಳ್ನಗೆ
ಮೇಳವಿಸುವ ಮುಖಪ್ರಸನ್ನತೆ
ನೀಳಬವರಿಯ ಗಡ್ಡವೊಪ್ಪುತ್ತಿರೆ ಜಗತ್ಕ್ರಯವ
ಪಾಲಿಸುವ ಮುನಿವಲ್ಲಭಂ ಕರು
ಣಾಳು ತಾಪಸನಾಗಿ ಮುದವನು
ಕೂಲವಾಗಲು ಮಾದಲಾಂಬಿಕೆಗಾಗಳಿಂತೆಂದಂ ೨೭

ಹಿಂಗದನುದಿನವಿಹೆನು ಕಪ್ಪಡಿ
ಸಂಗಮೇಶ್ವರದಲ್ಲಿ ಕೂಡಲ
ಸಂಗಮೇಶನ ಪೆಸರು ನಾವೆಮಗಲ್ಲಿ ತಾನಿರವು
ತಂಗಿ ಕೇಳಿವನೆನ್ನ ಮಗನೊಂ
ದಂಗ[೧]ದಲಿ ಕೇಳ್ ವೇ[೨]ದಭವಮೀ
ತಂಗೆ ನಿನ್ನೊಳು ಜನಿಸಲಾಯಿತು ಲೋಕಹಿತಕಾಗಿ ೨೮

ಇದುನಿಮಿತ್ತಂ ನೋಡಬಂದೆವು
ಮುದದೊಳಾನುಪದೇಶಗುರುವೀ
ವಿದಿತ ಜನ್ಮದೊಳುತ್ತಮೋತ್ತಮ ನಂದನಂಗಿನ್ನು
ಇದಱ ಮೇಲೆ ಶಿವಾರ್ಪಿತವನ
ಲ್ಲದೆಯಿನಿತನರ್ಪಿತವ ಮಾ[೩]ಡದಿ
ರಿದುವೆಯಾಣೆ ಕಣಾ ನಿನ[೪]ಗೆನುತದೃಶ್ಯವಾಗಿಂತು ೨೯

ಭಾಳಲೋಚನನೋಯೆನಲು ಮುನಿ
ಪಾಲನೆಯ್ದಿದನತ್ತಲಿತ್ತಲು
ಬಾಲರವಿಕೋಟಿಪ್ರಭೆಯನೊಳಕೊಂಡು ಮುಂಕೊಂಡು
ಬಾಲಕನ ಘನತೇಜಮುರ್ವಿಯ
ಮೇಲೆ ಪರ್ಬಲು ಸೂಚಿಮುಖಿಮಂ
ಕೀಲಿಸುವೊಡಱಿದೆನಿಸಿ ದಟ್ಟೈಸುವ ತಮಂಧದಲಿ ೩೦

೧–೨ದಿಂ ಮಾನುಷ (ತ, ದ, ನ). ೩ನೂ (ಧ). ೪ಮ (ಸ).

CC-0. Jangamwadi Math Collection. Digitized by eGangotri

ಮಾನವರೊಳಜ್ಞಾನತಿಮಿರವ
ದೇನುವಿಲ್ಲದೆ ಹರಿಯಲಮಳ
ಜ್ಞಾನಿಯಿಂ ಬೆಳಗಾಗದುಱಿ ಬೆಳಗಾದುದಂ ಕಂಡು
ಭಾನುವಿನ ಹಂಗಿಲ್ಲದಖಿಳವ
ನೂನರಾಗಂಬೆತ್ತುದಿಂತು ಸು
ಮಾನದಿಂ ತಾಯ್ತಂದೆಯರು ತತ್ಪುತ್ರನಂ ನೋಡಿ ೩೧

ಪರಮ ಸನ್ಮುದಪೂರಿತಾಂತಃ
ಕರಣರಾಗುತ ಭಕ್ತಿಗಣಮಂ
ಕರೆಸಿ ನಮಿಸಿ ವಿಭೂತಿಯಂ ವೀಳೆಯವನೊಲಿದಿತ್ತು
ಪರಶರಣಚರಣೋದಕದೊಳಾ
ತರುಣನಂ ಮೈದೊಳೆದು ನೊಸಲಲಿ
ವರ ಭಸಿತಮಂ ಪೂಸಿ ತಳಿದು ಕುಮಾರಕನ ಮೇಲೆ ೩೨

ದೆಸೆದೆಸೆಗಳಲಿ ಬಹಳ ವಾದ್ಯ
ಪ್ರಸರವದು ಭೋರೆಂದುಲಿವುತಿರೆ
ಅಸಮ ಮಹಿಮಾಗಣ್ಯಪುಣ್ಯೋದಯನನಾ ಸುತನ
ಬಸವನಾಮವನಿಟ್ಟು ಪೊಸ ಸಂ
ತಸದಿ ಸತಿಯುಂ ಪತಿಯು ಬೇಳ್ಪರಿ
ಗೊಸಗೆಗಳನೊಸೆದಿತ್ತು ಸುಖದಿಂದಿರೆ ಕುಮಾರಕನು ೩೩

ಪಿಂತೆ ತಮವದೆ ತನ್ನ ತೇಜವ
ದಿಂತುಟಿಂದಪಹಾಸ್ಯವಂ ಮಾ
ಳ್ಪಂತೆಸೆದು ದೀವಿಗೆಯ ಬೆಳಗನು ನೋಡಿ ನಸುನಗುತ
ಸಂತತಂ ಲಿಂಗಪ್ರಸಾದವ
ಸಂತಸದ ಮಱಿಹಿಂದಲಿಪ್ಪವೊ
ಲಂತು ಜನನಿಯ ಮೊಲೆಯನುಣ್ಣದೆ ಸುಮ್ಮನಿರುತಿಹನು ೩೪

೧–೨ ರುಗಳಂ (ಸ). ೩ ಲಿ (ಸ).

CC-0. Jangamwadi Math Collection. Digitized by eGangotri

ಅತುಳ ಶಿವಸುಖಿಸುಧೆಯನಾತ್ಮ
ಸ್ಥಿತಿಗೆ ಕೈ ಕೈಯಿಂದೆ ಹಿಡಿಕೈ
ಸುತವೆ ಸವಿಯಂ ನೋಳ್ಪವೊಲು ಹಸ್ತಂಗಳಂ ಪೀರ್ವ
ವಿತತ ಲಿಂಗಧ್ಯಾನಿ ನಿಶ್ಚೇ
ಷ್ಟಿತಮವಸ್ಥೆಯನೊಂದಿದಂತ
ಪ್ರತಿಮ ನಂದೀಶಾವತಾರನು ಬೆಱಿಗು ನೆಱಿದಿಹನು ೩೫

ಒತ್ತರಿಪ ಸಂಸಾರವಂ ಬೆಂ
ಬತ್ತಿ ಪಾಱಿ[೧] ತಗುಳ್ದು ನಲಿದಾ
ಡುತ್ತಲಿಪ್ಪವೊಲೆರಡು ಕಯ್ಯಂ ಬಿಚ್ಚಿಯಾಡುವನು
ಮುತ್ತಿ ಬಹ ಮಾಯಾಪ್ರಪಂಚುವ
ನೊತ್ತಲೀಯದೆ ಬೀಳಲೊದೆವಂ
ತುತ್ತಮೋತ್ತಮನೊಡನೊಡನೆ ಪದಯುಗವನಾಡಿಸುವ ೩೬

ಇಳೆಗೆ ತಾನಂದಾಂತು ಬಂದಿಹ
ಕೆಲಸವದು ತಳುವಾಯಿತೆಂದು
ಮ್ಮಳಿಸಿ ಹೆದಱುವ ಮಾಳ್ಕೆಯಿಂದೊಮ್ಮೊಮ್ಮೆ ಹೆದಱುವನು
ಒಲಿದು ಶಿವನಂ ಪಾಡುತಿರಲಾ
ಗಳು ಸುಖಾಶ್ರುಗಳುಗುವ ತೆಱಿದಿಂ
ದಳುವನಂಬಕಯುಗಳದೊಳು ಕಂಬನಿಗಳುಗುತಿರಲು ೩೭

ಕಡುಭವದ ಬಾಧೆಗೆ ತೊಡಕಿ[೨] ಮೊಱಿ[೨]
ಯಿಡುವ ಭವಿಗಳನಾಲಿಸುವವೊಲು
ಉಡುಗದಾಲಿಪನೊಡೆಯರಡಿಗಳ ಮೇಲೆ ಬೀಳಲ್ಕೆ
ತೊಡಗುವಂದದಿ ಕವಿದು ಬೀೞ್ವನು
ಪೊಡವಿಯೊಳು ಮಱಿಗೊಂಡ ಭಕ್ತಿಯ
ನೊಡನೆ ತಲೆವಿಡಿದೆತ್ತುವಂದದಿ ತಲೆಯನೆತ್ತುವನು ೩೮

೧ಱ (ಸ). ೨ರ (ತ, ದ, ನ).

CC-0. Jangamwadi Math Collection. Digitized by eGangotri

ಹದುಳದಿಂ ಪದ್ಮಾಸನಾಸೀ
ನದಿರವಂ ಕಲಿವಂತೆ ಕುಳ್ಳಿಹ
ನಿದುವೆರಡನೆಯ ಶಂಭು ವೃಷಭನು ತಾನೆಯೆಂಬವೊಲು
ಮುದವಲರ್ದಂಬಳಿಕಿಯಾಡುವ
ನುದಿತ ಶೈವಾಚಾರಭಕ್ತಿಯೊ
ಳೊದಗಿ ತಾನೊಂದಾಗಿ ನಿಂದವೊಲೊಪ್ಪಿ ನಿಂದಿಹನು ೫೯

ಆದಿಮಾರ್ಗಂ ತಪ್ಪದಡಿಯಿಡು
ವಾದಿಯಲಿ ದಟ್ಟಡಿಯಿಡುವನಖಿ
ಳಾದಿದೇವನ ಹೆಸರುಗೊಳಲೊಡನಾಗ ಗದ್ಗದಿಕೆ
ಆದವೊಲು ತೊದಲಿಸಿ ನುಡಿವನೆ
ಮ್ಮಾದಿಭಕ್ತರೆ ಘನವೆನುತ ಸ
ಮ್ಮೋದದಿಂ ಪರಿದಾಡುವಂತಾಡುವನು ಪರಿಪರಿದು ೬೦

ಧರಣಿಯೊಳು ಶೈಶವವಿನೋದದ
ಹರಯದಲಿ ಲಿಂಗಾರ್ಚನೆಯನಾ
ಚರಿಸುವನು ಬುದ್ಧಿಯನಱಿವ ಕಿಱುಗಾಲವಾಗಿಂತು
ಪರಮ ಮಾಹೇಶ್ವರರನೊಲವಿಂ
ಪರಮನೆಂದೇ ಕಾಣ್ಬನಾಗಳು
ಶರಣಮಾನಸನಿಳೆಯನೆನಿಸಿದ ಬಸವಸುಕುಮಾರ ೬೧

ಬರೆಹ ವಾಚನ ಗಣಿತ ಶಬ್ದಾ
ರ್ಥ ರಸ ಭಾವೋಕ್ತಿ ಪ್ರವೀಣತೆ
ಭರತ ಛಂದೋ ವ್ಯಾಕರಣ ಸಂಗೀತ ಸಾಹಿತ್ಯ
ಹರರಹಸ್ಯಾಗಮ ಪುರಾಣೋ
ತ್ಕರ ಸಕಳ ವೇದಾದಿ ಕಲೆಗಳು
ಸ್ಮರಿಸಲೊಡನೆ ಮುಟ್ಟೋದ್ಗತಂ ಬಸವಂಗದೇವೊಗಳ್ವೆ ೬೨

CC-0. Jangamwadi Math Collection. Digitized by eGangotri

ಜಗದೊಳಗೆ ಸರ್ವಜ್ಞಪ್ರಭುವಿನ
ಬಗೆಯೊಳಿಗೆದವನಾಗಿ ಸರ್ವಕ
ಲೆಗಳು ಸಹಜವೆನಲ್ಕೆ ಗರ್ಭಾಷ್ಟಕದೊಳಾ ಜನಕ
ಮಗನಿಗುಪನಯನವನೊಡರ್ಚಲು
ನೆಗಳ್ದು ಶುಭಲಗ್ನಕ್ಕೆ ತೊಡಗಲು
ನಗುತ ಬಸವನು ಭಕ್ತಿಯಿಂದಿಯದ ತಂದೆಗಿಂತೆಂದ ೪೩

ಜನಕ ಕೇಳ್ ಶಿವದೀಕ್ಷೆಯಿಲ್ಲದ
ವನವೊಲಿನ್ನಂ ಮುಂಜಿಗಟ್ಟುವ
ಮನವಿದೆಂತಾಯ್ತೀಗ ನಿನಗವಿವೇಕಿಯೆಂದದಲಿ
ಜನಿಸಿದಾಗಳೆ ಸಂಗಮೇಶ್ವರ
ನೆನಗೆ ಸದ್ಗುರುವಾಗಿ ಬೋಧಿಸಿ
ವಿನುತ ಶೈವಾಚಾರಮಾರ್ಗದೊಳಿರಿಸಿ ಸಲಹಿದನು ೪೪

ಸಾರಸಂಸಾರದ್ವಿಜತ್ವವ
ಪಾರ ಪತಿತವಲಾ ಸದಮಳಾ
ಚಾರಸದ್ಗುರುವಿನ ಕರಾಬ್ಜದಿ ಜನ್ಮನಾದಂಗೆ
ಧಾರುಣೀಸುರಿಜನ್ಮಕರ್ಮಿವು
ಕ್ರೂರಕರ್ಮವಲಾ ಸುಗುರುಭಜ
ನಾರತಂಗಗ್ನಿಗೆ ಹವಿಯನಿಕ್ಕಿದಡೆ ದೋಷವಲಾ ೪೫

ವಿರಸವೆನಗಿದು ಮುಂಜಿಯೆಂಬುದ
ನೊರೆಯದಿರು ಪರಿಹರಿಸಿ ಕಳೆ ಕಿಶಂ
ಕರಿನನರ್ಚಿಸುತಕಟ ನೀ ಮರುಳಾಗಿ ಹೋದೆಯಲಾ
ಪರಮ ಗುರುಪದಮಂ ಪಿಡಿದು ದುರ್
ನರರ ಕಾಲ್ಗಳಿಗೆಱಗುವಂಗತಿ
ನರಕವಲ್ಲಾ ಪೂರ್ವಭವಸಂಸ್ಕಾರರಹಿತಂಗೆ ೪೬

೧–೨ ಕರ್ಮಜನ್ಮ (ಥ, ಧ). ೩–೪ ಈಶ್ವರ (ತ, ದ, ನ).

CC-0. Jangamwadi Math Collection. Digitized by eGangotri

ಮಲಹರಾತ್ಮಕ ಮಂತ್ರಮಂ ನೆಱಿ
ಕಲಿತು ಬಹುಮಂತ್ರಂಗಳಂ ತಾಂ
ಕಲಿವುದುತ್ಕಟಪಾಪವಲ್ಲಾ ಸಹಜ ಭಕ್ತರ್ಗೆ
ಒಲವಿನೆತ್ತುವ ಕೈಗಳಂ ದುರ್
ಮಲಿನ ಕರ್ಮಚರದ್ವಿಜಾತ
ರ್ಗಲಸದೆತ್ತುವದಧಮಜಾತರ್ಗಧಮಜಾತವಲಾ ೪೭

ಕರ್ಮಪಾಶವನುಱಿ ಪಱಿದು ದುಃ
ಕರ್ಮರಜ್ಜುಗಳಂ ತೊಡುವುದತಿ
ಕರ್ಮವಲ್ಲಾ ಭಸಿತ ರುದ್ರಾಕ್ಷಾದಿ ಮುದ್ರೆಗಳ
ನಿರ್ಮಲತೆಯಿಂ ಧರಿಸಿ ಚರಿಸುತ
ಚರ್ಮ ದುರ್ಮುದ್ರೆಗಳನೇ ಶಿವ
ಧರ್ಮವರ್ಮಜ್ಞರ್ಗೆ ಧರಿಸುವುದುಚಿತವೇ ಹೇಳು ೪೮

ನೀರ ನೇಣಿನ ಬಾಧೆಯಿಲ್ಲದ
ವೀರಶೈವಾಚಾರದೀಕ್ಷಾ
ಧಾರಕನನತಿ ನಿರ್ಮಿತೋಭಯಕರ್ಮನಿರ್ಮಲನ
ಘೋರಕರ್ಮಾಶ್ರಯದ ಪಾರಾ
ವಾರದೊಳು ಮುಳುಗಿಸುವೆನೆಂಬ ವಿ
ಚಾರವಿಂತಿದು ನಿನಗೆ ಧರ್ಮವೆ ಬೊಪ್ಪ ನೀ ಕೇಳು ೪೯

ಜಾತಿಯೊಳು ಬ್ರಹ್ಮನ ಶಿರವನರಿ
ದಾತ ತತ್ಪ್ರಮಥೇಂದ್ರವಂಶನ
ನೇತಕೆನ್ನಂ ಬ್ರಹ್ಮವಂಶಜನೆಂದು ಭಾವಿಸುವೆ
ಜಾತಿಗೋತ್ರಾತೀತ ಸದ್ಗುರು
ಜಾತನಂ ಬಹು ಜಾತಿಗೋತ್ರ ಸ
ಮೂಹ ದುಃಕ್ರಿಯದಾಶ್ರಯನ ನೀನೆಂತು ಮಾಡಿದಪ್ಪೆ ೫೦

CC-0. Jangamwadi Math Collection. Digitized by eGangotri

ಆಕುಲದಭವನ ಭಕ್ತತತಿಗಾ
ವ ಕುಲವೆಂದಿದನೆಣಿಸಿ ನೀ ಪಾ
ರ್ಪಿಕೆಗೆ ಸಲಿಸುವೆಯಿಂತಿನಿತು ಮಾರ್ಗಂಗಳೆಂದೆಮ್ಮಿಗೆ
ಪ್ರಕಟಿಸದಿರಾ ಮುಂಜಿಯೆಂಬುದ
ನಕಟ ಪಾತಕವೆಂಬ ಮಾತಿಗೆ
ವಿಕಳನಾಗುತ ತಂದೆಯಿಂತೆಂದನು ತನೂಜಂಗೆ ೫೧

ವಾದಿಸದೆ ಬಸವಣ್ಣ ಕೇಳಾ
ವೇದಿನೀಸುರಮಾರ್ಗದಿರವಂ
ವೇದಮತದಿಂ ಗರ್ಭಸಂಸ್ಕಾರಂ ಮೊದಲೆನಿಪ್ಪ
ಆದಿಕರ್ಮಂಗಳವು ಹದಿನಾ
ಱಾದವವಱೊಳಗೊಂದುವುಂ ಕುಂ
ದಾದಡಾತನು ಬ್ರಾಹ್ಮಣೋತ್ತಮನಾಗಲಱಿಯನಲಾ ೫೨

ಇದಱೊಳಾವ ವಿರುದ್ಧವುಂಟೈ
ಇದಕೆ ರುವ್ರನೆ ಗಣಪಲಾ ಬಳಿ
ಕಿದಕೆ ನಂದಿಯೆ ಮುಖ್ಯನುಪನಯನಾರ್ಚನಂಗಳಿಗೆ
ಇದಕೆ ಬೀಜಂ ಪ್ರಣವವದು ತಾ
ನಿದಕೆ ದೈವಂ ಭರ್ಗನೆಂಬುದು
ವಿದಿತ ಮಂತ್ರವಿರಲ್ಕೆ ದೋಷಮೆ ಅಂತುಮಲ್ಲದೆಯು ೫೩

ಪಿಡಿವ ಪಾತ್ರೆ ಪಿತಾಮಹನ ತಲೆ
ತೊಡುವ ಸೂತ್ರವೆ ಹಾವು ಕೈಗಳ
ವಡುವ ತತ್ಪಾಲಾಶದಂಡವೆ ವಿಷ್ಣುಕಂಕಾಳ
ಇಡುವ ಮೇಧಾವಿಯೆ ಭಸಿತವೆಡೆ
ಬಿಡದೆಸೆವ ಚಂಡಿಕೆಗಳ್ಕೈದುಂ
ಜಡೆ ಕೊರಳ ಕೃಷ್ಣಾಜಿನವೆ ಕರಿಯಜಿನವಾಗಿರಲು ೫೪

೧ತೆ (ತ, ದ). ೨ನ (ಕ, ಚ).

CC-0. Jangamwadi Math Collection. Digitized by eGangotri

ಪುರಹರಂ ಭಿಕ್ಷಾಟನವನಾ
ಚರಿಸಲ್ಕೈದುವ ವೇಷವನಿತಂ
ಧರಿಸಿದಲ್ಲದೆ ಭೂಸುರೋತ್ತಮನಾಗನೆಂದಡಿದು
ಹರನ ಭಕ್ತರ್ಗೇಂ ವಿರುದ್ಧಮೆ
ವಿರಸವೆಂತಾಯ್ತಯ್ಯ ತನುಭವ
ಪರಮ ಭಕ್ತಿಯು ಹೀನವಹುದೇ ಮುಂಜಿಗಟ್ಟಿದಡೆ ೫೫

ಮಾತುಕಾಱಿತನದಲುಲಿವ ಪಲ
ಮಾತವೇತಕೆ ನಾವು ಹೇಳಿದ
ಮಾತನಾಲಿಸಿ ಮಾಡಬೇಹುದು ಮಕ್ಕಳಾದವರು
ಜಾತಿಗುತ್ತಮ ಕುಲದೊಳೊಗೆದು ಪು
ನೀತನಾಗಿ ಸಮಸ್ತವರ್ಣ
ವ್ರಾತದೊಳಗಗ್ರಜಕುಲಾಗ್ರಣಿಯೆನಿಸಿ ಬಾಳ್ದಿರದೆ ೫೬

ನಾವಱಿಯೆವಿಂತಪ್ಪ ಜೋದ್ಯವ
ನಾವ ನಾಡೊಳು ನಿನ್ನ ತಲೆಯಲಿ
ಆವಗಂ ಶಿವಭಕ್ತಿ ಮೂಡಿದುದೇ ಜಗತ್ತ್ರಯಕೆ
ನೀವುದಯಿಸಲು ಬದುಕಿದೆವು ಪೆಱ
ತಾವುದಿಲ್ಲ ಕೃತಾರ್ಥರಾದೆವು
ಕಾವುದೆಮ್ಮವನುದ್ಧರಿಸು ಕುಲಕೋಟಿಯೆಲ್ಲವನು ೫೭

ಇಳೆಗೆ ಕುಲದೀಪಕನುದಯಿಸಲು
ಕುಲಮೊಡನೆ ವರ್ಧಿಸುವುದಾಗಳು
ಬಳಿಕ ಕುಲನಾಶಕನು ಹುಟ್ಟಲು ಕುಲವಳಿದು ಪೋಕು
ಕುಲದ ಬೇರಿಗೆ ನೀನೆ ಗುದ್ದಲಿ
ಗೊಳಲದೇಕೆ ಸುಪುತ್ರನಾಗಿದ
ನಲಘುವಿಪ್ರರು ಕೇಳಿದಡೆ ಹೊಱಗಿಕ್ಕರೇ ನಿನ್ನ ೫೮

CC-0. Jangamwadi Math Collection. Digitized by eGangotri

ಎಂದುವುಂ ಲೋಕಕ್ಕೆ ಬಾರದ
ನಂದನಂ ನೀನೆಮ್ಮ ಬಸುಱಿಲಿ
ಬಂದು ಹರುಷವನೆಯ್ದಿಸದೆ ಪಿರಿದುಮ್ಮಳವನೆಮಗೆ
ತಂದಕಟ ಕುಲಗೆಡಿಕನಹರೇ
ಕಂದ ನಿನ್ನಂ ಪಿಡಿದು ಸುಗತಿಯ
ನೊಂದಿ ಬದುಕುವೆವೆಂದಲಾ ನೆಱಿ ನಂಬಿಕೊಂಡಿಹೆವು ೫೯

ಚಾರುಕುಲವಾ ಕುಲಕೆ ತಕ್ಕಾ
ಚಾರವಾಚಾರಕ್ಕೆ ತಕ್ಕ ಪು
ರಾರಿಭಕ್ತಿಯದೊಳ್ಪಿತಲ್ಲಾಯಿಹಪರಂಗಳಿಗೆ
ಕಾರಣವು ಸಂಸಾರದುಃಖಿನಿ
ವಾರಣವು ತಾನುಭಯಧರ್ಮಾ
ಚಾರಮಾರ್ಗದಿ ದೇವಪಿತೃಗಳು ತುಷ್ಟರಹರೆಂದು ೬೦

ಯುಕ್ತಿಯಂ ಹೇಳಿದೆವು ನಿನಗೀ
ಯುಕ್ತಿಯಂ ಕಡೆಗೊಳ್ಳದಿರ್ದಡೆ
ಭಕ್ತಿಯುಂ ನೀನಿಂತು ಬಲ್ಲಂತಾಗುತಿರು ನಿನ್ನ
ಭಕ್ತತನಕಂಜುವೆವೆನುತ ಕಠಿ
ಣೋಕ್ತಿಗಳನುಱಿ ನುಡಿಯೆ ಕೇಳ್ದು ವಿ
ರಕ್ತಕರ್ಮಂ ಬಸವನಿಂತೆಂದನು ಮುಳಿಸಿನಿಂದ ೬೧

ತೋಱಿಪಟ್ಟ ಬ್ರಾಹ್ಮ್ಯವೆಂಬುದು
ಬೇಱಿ ದರ್ಶನವೀಶಭಕ್ತಿಯು
ಬೇಱಿಯಿಂತಿವನೆರಡುಮಂ ನೀ ಕೂಡಿ ನುಡಿಯದಿರು
ಬೇಱಿ ದೈವವು ಬೇಱಿ ಮಂತ್ರವು
ಬೇಱಿ ಗುರುವುಂ ಬೇಱಿ ವೇಷವು
ಬೇಱಿ ಬೇಱಿ ಧ್ಯಾನಬಾಹ್ಯಕ್ರಿಯೆಗಳಾಚಾರ ೬೨

---

೧ ಸ್ಕಾ (ಕ. ಚ). ೨ ಟ್ಯಾ (ಬ). ೩–೪ ವಸಮ (ತ, ದ, ನ).

CC-0. Jangamwadi Math Collection. Digitized by eGangotri

ಆದಡಾನನವಗ್ನಿ ಶಿರವಜ
ನಾದಿರುದ್ರನೆ ಶಿಖಿ ಹೃದಯವ
ಬ್ಹೋದರಂ ಪ್ರಾಣಾದಿವಾಯುಗಳೆಯ್ದಿ ತತ್‌ಪ್ರಾಣ
ಮೇದಿನೀಸತಿಯೋನಿ ಧವಳಿತ
ವಾದ ವರ್ಣಂ ಶಂಕರನ ಪರಿ
ಯಾದುದೇ ಗಾಯತ್ರಿ ಸಾಂಖ್ಯಾಯನ ಸಗೋತ್ರವಲಾ ೬೩

ಪರಿಕಿಸುವಡಿಪ್ಪತ್ತುನಾಲ್ಕ
ಕ್ಷರವದಕೆ ಮೂಱಿಡಿಯುದರವಾಱ್
ಶಿರಸುಗಳುವೈದೆಂಬುದೆಲ್ಲಾ ನಿಮ್ಮ ಯಾಜ್ಞಿಕವು
ನಿರುತದಲಿ ಕೇಳ್ ದೈವವದು ವಿ
ಸ್ತರಿಸಿ ಬೇಱಿಹುದಲ್ಲವೋ ಆದ
ಱಿರವು ಸಾಂಖ್ಯಾಯನ ಮತವಲಾ ದೈವವೆನಲಿಲ್ಲ ೬೪

ಹಲವು ರೂಪದು ತಾನದಕೆ ಗುರು
ಬಲಿದ ಕರ್ಮಜಡಾತ್ಮನದಕೆ
ನ್ನೊಲಿವ ಮಂತ್ರವು ತಾನಿದಕೆ[೧] ಗಾಯತ್ರಿಯನುದಿನವು
ಇಳೆಯೊಳಾ ಕ್ರಿಯೆ ಕರ್ಮಬಂಧದ
ನೆಲೆಯದಱಿ ವೇಷಂ ವಿಚಾರಿಸಿ
ನಿಲುವಡಿತರೇತರವಲಾ ಆದು ಮೋಕ್ಷಕಾರಣವೆ ೬೫

ಇತ್ತ ಕೇಳ್ ಷಡುದರ್ಶನಾತೀ
ತೋತ್ತಮದ ಶಿವಭಕ್ತಿಮಾರ್ಗಾ
ಯತ್ತವಂ ಶ್ರುತಿ ವಿಶ್ವತಃ ಚಕ್ಷುರುತವೆಂದೆನುತ
ಒತ್ತಿ ಪೊಗಳುವ ನಿಗಮತತಿಗ
ತ್ತತ್ತ ಮೀಱಿಹುವ[೨] ಸೂಕ್ಷ್ಮರೂಪಮ
ಹತ್ತರಂ ತಾನಾದಿಗಾದಿಯೆನಿಪ ಪರಂಜ್ಯೋತಿ ೬೬

೧ರ (ಅ, ಕ, ಚ, ತ, ಥ, ಮ). ೨–೩ ಱಿದ (ಅ, ಕ, ತ, ಧ, ಮ).

CC-0. Jangamwadi Math Collection. Digitized by eGangotri

ಇಂತೆಸೆವ ಶಿವನೆಮಗೆ ದೈವವ
ನಂತಮಹಿಮನನೆಮ್ಮ ಚಿತ್ತಾ
ಭ್ಯಂತರದೊಳೊಂದಿಸಿ ಕರಸ್ಥಲದಿಂ ಪಿಡಿಸಲಾಪ
ಸಂತತಾಮಳಕೀರ್ತಿ ಕರುಣಾ
ವಂತಮೂರ್ತಿ ಪ್ರಕಟಿಸುವಡ
ತ್ಯಂತ ತೇಜೋವರ್ತಿ ತಾಂ ಮತ್‌ಸಮಯಸದ್ಗುರುವು ೬೭

ಮೂಜಗಕೆ ರುದ್ರಾಕ್ಷಿ ಸಿತರ
ಕ್ಷಾ ಜಟಾವಳಿ ನಿತ್ಯ ಮುಕ್ತಿಗೆ
ನೈಜವಪ್ಪನುಸಾರಿವೇಷವು ಭವನಿವಾರಣವು
ಯೋಜಿಸಲು ಮಂತ್ರಂಗಳಿಗೆ [೧]ಮಿಗಿ[೨]
ರಾಜಮಂತ್ರವಿದೆಂದೆನಿಸಿ ವಿ
ಭ್ರಾಜಿಸುವದೀ ಮಂತ್ರವಿದಕೆ ಷಡಂಗವೆನಲಿಹುದು ೬೮

ಸುಕೃತ [೩]ದುಷ್ಕೃತ[೪] ಕುಜಕುತಾರಂ
ಪ್ರಕಟಸಶ್ಯ್ರಯೆಯೆನಿಸಿದಷ್ಟಾಂ
ಗಕಲಿತೋನ್ನತ ಭಕ್ತಿ ಸಂದರುಶನ ಗುಣತ್ವದಲಿ
ಸಕಳ ಪಾಪಕ್ಷಯವೆನಿಸಿ ಪರ
ಸುಕರ ಮೋಕ್ಷಾಂಗನೆಯನೊಂದುಗು
ನಿಕಟಫಲಸಂಪ್ರಾಪ್ತಿಯಿದುಯಿದಱಿಂದ ಮೇಲಪ್ಪ ೬೯

ಇಷ್ಟಲಿಂಗಪದಾಬ್ಜಭಜನೋ
ತ್ಕೃಷ್ಟ ಭವ್ಯಾನುಭವಸೌಖ್ಯಾ
ಭೀಷ್ಟಫಲವಿಂತಿಹುದಿದೆಂದುಸುರಲ್ಕೆ ನೆನೆಯಲ್ಕೆ
ದೃಷ್ಟಿಸಲು ಶ್ರುತಿಗಳಿಗೆ ಪವಣೆ ವಿ
ಶಿಷ್ಟ ಜೀವನ್ಮುಕ್ತಿಯುತ ಸಂ
ತುಷ್ಟ ತತ್ವಾತ್ಮಕವಿದಕ್ಕೆ ಸಮಾನವೊಂದುಂಟೆ ೭೦

೧–೨ ತಾ (ಕ). ೩–೪ ದುಃಕೃತ (ಬ, ಕ, ಚ).

CC-0. Jangamwadi Math Collection. Digitized by eGangotri

ತೊಳಸದಿರು [೧]ಬ್ರಾಹ್ಮ್ಯ[೨]ವನು ಭಕ್ತಿ
ಸ್ಥಳವು[೩] ಬೇಱಿಯೆ ಮಾರ್ಗವಹುದಿದು
ತಿಳಿದು ನೋಡಾ ದರ್ಶನಂಗಳಿನಲ್ಕೆ ತಾಂ ಕೆಲವು
ಒಳವ[೪]ಲಾಯೆನತ[೫]ಧಮ ಮನುಜರು
ಕೆಲಬರುಲಿದಪರಱಿಯದವರವ
ರೊಳಗೆ ಮುನ್ನೊಂದೊಂದಱಿಲಿ ಬೆರಸಿಪ್ಪ[೬] ಪರಿಯಿಂತೊ ೨೧

ದರುಶನಂಗಳನುಂಟುಮಾಳ್ಪಡೆ
ದರುಶನವು ತಾ ಬೇಱಿ[೭] ತತ್ವವು
ಪರಮ ಭಕ್ತಿಸ್ಥಳದ ಸೌಖ್ಯಿಫಲಕ್ಕೆ ಕಾರಣವೆ
ಪರಿಕಿಸುವಡಿದು ಕರ್ಮಮಾರ್ಗ
ಕ್ಕಿರವಲಾ ಅಂತಲ್ಲದೆರಡಂ
ಬೆರಸಿಯೊಂದೆಂದೆಂಬಡಾಗದುಮೇಶಭಕ್ತಂಗೆ[೮] ೨೨

ಧರೆಗೆ ಭಕ್ತಂಗನ್ಯದೈವ
ಸ್ಮರಣೆ[೯]ಯಿಪ್ಪತ್ತೆಂಟು[೧೦]ಕೋಟಿವಿ
ವರ ನರಕವಹುದೆಂಬ ಶ್ರುತಿಯಂ ಕೇಳ್ದಱಿಯಿರಲ್ಲ
ತರಣಿಯಂ ಪಾವಕನನಜನಂ
ಹರಿಯನಿಂದ್ರಾದ್ಯರನು ಮೂಱಿವ
ಸರದೊಳರ್ಚಿಸಿ ಬಿಡದೆ ವಂದಿಸಬೇಕು ಪಾರ್ವಂಗೆ ೨೩

ಕಡೆಗೆ ವಂದಿಸದಿದ್ದನಾದಡೆ
ಕೆಡುಗು ಪಾರ್ಬಿಕೆ ಮುಂದೆ ವಂದಿಸಿ
ದಡೆ ಕೆಡುಗು ಮೃಡಭಕ್ತಿಯಂತಾಗಿಂತೆರಡಱಿಂದ
ಕೆಡುವನಿಳೆಯೊಳು ಪಾರ್ಬನಾದಡೆ
ಮೃಡನ ಭಕ್ತನದೆಂತಹನು ತಾಂ
ಮೃಡನ ಭಕ್ತನು ಪಾರ್ಬನೆಂತಹನಯ್ಯ ಭಾವಿಪಡೆ ೨೪

೧–೨ ಬಾಹ್ಯ (ತ). ೩ ಕಿ (ತ, ದ, ನ). ೪–೫ ಲೈಸರಿಯ (ತ, ದ). ೬ ಟ್ಟ (ಡಾ). ೭ ರ್ಗೆ (ತ, ದ, ನ.) ೮–೯ ಯದುಹದಿನೆಂಟು (ಮ, ಕ); ಯಿಂಪದಿನೆಂಟು (ತ, ದ, ನ, ಬ).

CC-0. Jangamwadi Math Collection. Digitized by eGangotri

ಇಳೆಗೆ ಮಾವಿನ ಬೀಜಮಂ ಬಿ
ತ್ತಲದು ತಾಂ ಬೇವಹುದೆ ಬಹು[೧]ಕಥೆ
ಗಳನುಸುರಲೇಂ ಸಹಜ ಶಿವಲಿಂಗೈಕಭಕ್ತಿಯುಮಂ
ಹಲವು ದೇವಾಭ್ಯರ್ಚನಾಭ್ಯಾ
ಕುಲಮಹೀಸುರಪಥವನೆಣೆಸಲು
ಕುಲಸತಿಯವೊಲು ಭಕ್ತಿ ಬೆಲೆವೆಣ್ಣೆನವೊಲಾ ಬ್ರಾಹ್ಮ್ಯ ೨೫

ನಂದಿಮುಖ್ಯಸ್ಥಿತಿಯೊಳರ್ಚಿಸಿ
ಮುಂದೆ ದೈವಂ ಭರ್ಗನೊಬ್ಬನೆ
ಯೆಂದೆನಿಪ ಮಂತ್ರವನಱಿದು ತಾಂ ರುದ್ರವೇಷದಲಿ
ಒಂದಿಯಂತಾಚರಿಸಬೇಡವೆ
ತಂದೆ ಮನೆದೈವವು ನಿಮಗೆ ತರು
ಣೇಂದುಧರನಿರೆ ಅನ್ಯದೈವದ ಸೇವೆ ಸನ್ಮತವೆ ೨೬

ಕೇಳು ನೀವಂತಾಗಿನಿತುಮಂ
ಹೇಳಲೇ ಸಂದೇಹಮೇ ಬ್ರುತ
ಶೀಲ ಗೌತಮ ಭೃಗು ದಧೀಚಿ ವ್ಯಾಸ ಮುನಿವರರ
ಸ್ಥೂಲ ಶಾಪಾನಲದಿನುರಿದತಿ
ಖಿಳರಪ್ಪ ಮಹೀಸುರಾಳಿಗೆ
ಹೋಲುವುದೆ ಹೊಂದುವುದೆ ಸಜ್ಜನ ಭಕ್ತಿತಾತ್ಪರ್ಯ ೨೭

ಇದನುರವಣಿಸಿ ಮಾಡಿದುದ್ರೇ
ಕದೊಳೆ ಪರಮಾರ್ಥವನುಳಿದು ಹೇ
ಳಿದನೆನಲು ವೇದಾಗಮಂಗಳ ಮೂಲವಲ್ಲದಿದು
ಪದಕವಾದಮಿದೆಂದು ನೀನುಸು
ರದಿರು ಕರ್ಮಪದಂ ದ್ವಿಜತ್ವವು
ಸದಮಳೋತ್ತಮ ಭಕ್ತಿನಿಷ್ಠಿತವಹುದೆ ಭಾವಿಸಲು ೨೮

೧ಲು (ಥ).

CC-0. Jangamwadi Math Collection. Digitized by eGangotri

ಆಿಗಳುಂ ದ್ವಿಜಮಾರ್ಗವನೆ ದಿಟ
ವಾಗಿ ನೀ ಹಿಡಿದಾಡಿದಡೆಯೆಮ
ಗಾಗದೀ ಕರ್ಮಕ್ರಿಯಾಚಾರಪ್ರವರ್ತನವು
ಕಾಗೆ ಸಾಗಿಪ ಕೋಗಿಲೆಯ ಮಱಿ
ಕೂಗುವುದೆ ಸುಸ್ವರದೊಳಲ್ಲದೆ
ಕಾಗೆಯಂದದಿ ಕಾವು ಕಾವೆಂದಱಿಚುವುದೆ ಹೇಳಾ ೭೯

ಗುರುಪದಾರ್ಚನೆಗೊಲಿದು ಹಾರುವ
ಪರಮ ಶೈವೋನ್ನತಿಗೆ ಹಾರುವ
ಶರಣಾನುಭವಕ್ಕೆ ಹಾರುವ ತತ್‌ಪ್ರಸಾದಕ್ಕೆ
ಹರಿದು ಹಾರುವ ವೀರಭಕ್ತಿಗೆ
ಪಿರಿದು ಹಾರುವ ನಾನದೆಂದುಂ
ಬೆರಸಿ ಹಾರುವ ಕುಲಕೆ ಹಾರುವಸಲ್ಲ ನುಡಿಯದಿರು ೮೦

ತಂದೆ ಕೇಳೀರೇಳು ಲೋಕದ
ತಂದೆಯಂ ಭಜಿಸದೆ ರತೀಶನ
ತಂದೆಯಂ ಬಿದಿ ರವಿ ಶಿವಿಗಳಂ ಭಜಿಸಿ ಕರ್ಮಕ್ಕೆ
ತಂದೆ ನಿನ್ನೊಡಲಂ ಭವಾಳಿಗೆ
ತಂದೆಯಕ್ಕಟ ನೀನದೆಲ್ಲಿಯ
ತಂದೆಯೆನಗಿನ್ನೀಶಭಕ್ತರೆ ತಂದೆ ತಾಯಿಗಳು ೮೧

ಅಯ್ಯನಾರೆನಗವ್ವೆಯಾರ್ ಪಿರಿ
ಯಯ್ಯನಾರ್ ನೀನೆಲ್ಲಿಯವ ನಿ
ನ್ನಯ್ಯತನವೇತಕ್ಕೆ ಸುಡು ಶಿವಭಕ್ತಿಹೀನರಿರ
ಅಯ್ಯನಯ್ಯನು ಚಿನ್ನಯಂ ಚಿ
ಕ್ಕಯ್ಯ ಕಕ್ಕಯ್ಯನು ತೆಲುಗ ಜೊ
ಮ್ಮಯ್ಯನಯ್ಯನು ನಿಂಬಿ ತಾಯ್ ಚೇರಮನ ಮಗ ನಾನು ೮೨

೧ಏ (ತ, ದ, ನ). ೨ಬೊ (ಸ).

CC-0. Jangamwadi Math Collection. Digitized by eGangotri

ಸಾರ ಭಕ್ತಿಸ್ಥಿತಿಯೊಲುಮೆಯೊಳ
ನಾರತಂ ಸುಖವೊಂದುತಿರ್ಪನು
ವೀರಮಾಹೇಶ್ವರರೆ ಗತಿಯೆನಗಿದುವೆ ನಿಶ್ಚಯವು
ಸೇರದಿಂತಹದೆಮಗೆ ನಿಮ್ಮಾ
ಚಾರದಲಿ ನೀವಿಪ್ಪಿರೆಮ್ಮಾ
ಚಾರದಲಿ ನಾವಿಪ್ಪೆವಿನ್ನಾವಾರು[೧] ನೀವಾರು[೧] ೮೩

ಎನುತ ಬಸವಂ ನಿಜಸಹೋದರಿ
ಯೆನಿಪ ನಾಗಾಂಬಿಕೆಯು ತಾನುಂ
ತನಗೆಯಲ್ಲಿರಲಾಗದೆನುತೆಯ್ತಂದು ಮಹಮನೆಯ
ಮನೆಗೆ ಬರುತಿರೆ ಭಕ್ತರೆಲ್ಲರು
ಮನಮೊಸೆದಿವಂ ತಮ್ಮ ಮಗನೆಂ
ದೆನುತ ತಮ್ಮತ್ತಲು ತೆಗೆದುಕೊಂಡರು ಬಳಕಲಿತ್ತ ೮೪

ಸುಸರವಾಯಿತು ಮುಂಜಿಯೆನುತಂ
ವಸುಮತೀಸುರರೆಯ್ದೆ ದುಗುಡದ
ಮುಸುಡುಗಳುವೆರಸೆಯ್ದಿದರು ತಮತಮ್ಮ ಮನೆಗಳಿಗೆ[೨]
ಹೊಸತು ಲೋಕಕ್ಕೆನುತ ಪುರಜನ
ವೊಸೆದು ಕೀರ್ತಿಸಲಾ ಸಮಯದಲಿ
ಬಸವನುಪನಯನೋತ್ಸವಕ್ಕೆಂದಂದು ಬಂದಾತ ೮೫

ಮಾದಲಾಂಬೆಯ ಸೋದರನು ಶಿವ
ಪಾದಪಂಕಜಭಕ್ತಿಯುಕ್ತನು
ಮೇದಿನೀಶ್ವರ ಬಿಜ್ಜಳನ ಭಂಡಾರಿ ಬಲದೇವ
ಆದಿಶಿವಭಕ್ತಂಗೆ ಮದುವೆಯ
ನಾದರದಿ ನಾ ಮಾಳ್ಪೆನಲ್ಲದೆ
ಈ ದುಹಿತೆಯಂ ಭವಿಗೆ ಕೊಡೆನೆಂದೆಂಬ ಭಾಷೆಯಲಿ ೮೬

ಅಂತು ಸಂಧಿ ೩ಕ್ಕಂ ಪದಗಳು ೨೧೯ಕ್ಕಂ
ಮಂಗಲಂ ಮಹಾಶ್ರೀಶ್ರೀಶ್ರೀ

---

೧ ರ್ಗ (ತ, ದ, ನ). ೨–೩ ಗಳನು (ತ, ದ, ನ).

CC-0. Jangamwadi Math Collection. Digitized by eGangotri

ಸಂಧಿ : ೪

*

ಸೂಚನೆ : ಘನಶಿವಾಚಾರಾಂಕುರಂ ಮಿಗೆ
ಕೊನರುತಿರೆ ಬಲದೇವಧೀಮಣಿ
ತನಯಳಂ ಬಸವಂಗೆ ಭಕ್ತಿಯೊಳಿತ್ತು ಶರಣೆಂದ

ಈ[೧]ರಮಾಕರಭಕ್ತಿಯುಕ್ತಾ
ಚಾರಿಗೀಯದೆ ಮತ್‌ಸುತೆಯನಿ
ನ್ನಾರಿಗೀವೆನೆನುತ್ತ ತಾಂ[೨] ಬಲದೇವಮಂತ್ರೀಶ
ಭೂರಿ ಹರುಷದೊಳುಬ್ಬಿ ಬಸವ ಕು
ಮಾರನಿದ್ದೆಡೆಗೆಯ್ದಿ ತನ್ನ ಕು
ಮಾರಿಯಂ ಸದುವಿನಯಪೂರ್ವದಿನಿತ್ತು ಹೊಡವಂಟು[೩] ೧

ಎನ್ನ ಮಗಳಂ ಸ್ವೀಕರಿಸಿ ನೀ
ವೆನ್ನನುದ್ಧರಿಸುವುದು ವಿಶ್ವಜ
ಗನ್ನುತೈಕಾಮಾತ್ರ ಸಜ್ಜನ ಭಕ್ತಿಚಾರಿತ್ರ
ಎನ್ನ ಭಕ್ತಿಪ್ರಾರ್ಥನೆಗಳಂ
ಮನ್ನಿಸೆನುತಾ ಬಸವನನುಮತ
ದಿನ್ನಗರಿಯಂ ಶೋಭನಾರ್ಥವಲಂಕರಿಸವೇಳ್ದು ೨

---

* ರಾಗ : ಲಳಿತ (ಅ, ಡಾ, ಧ, ಮ); ಪರಾಳಿ (ಚ); ವಸಂತಭೈರವಿ (ತ).
೧ ನೀ (ಬ). ೨ವಾ (ತ, ದ, ನ). ೩ ಟ್ಟು (ತ, ನ).

CC-0. Jangamwadi Math Collection. Digitized by eGangotri

ಮಕರತೋರಣ ರತ್ನತೋರಣ
ಮುಕುರತೋರಣ ಪಚ್ಚಿಗಳನತಿ
ಸುಕರವೆನಲೆತ್ತಿಸಿದನಾ ಪುರವೀಥಿವೀಥಿಯಲಿ
ಪ್ರಕಟವಾಗಿರಲಾರ್ದ್ರ ಕಸ್ತೂ
ರಿಕೆಯ ಸಾರಣೆಯಿಂದೆ ನವಮಾ
ಣಿಕ್ಯ[೧]ಫಲಾವಳಿ ರಂಗವಾಲಿ[೨]ಗಳಭಿನವಿಸುತಿರಲು ೩

ಬನ್ನಿ ಬನ್ನಿ ಮಹಂತರಂ ಕರೆ
ತನ್ನಿ ಬಹಲಿಂಗೈಕ್ಯರಿಗೆ ಶರ
ಣೆನ್ನಿ ಶರಣರಿಗಾಸನಂಗಳನಿಕ್ಕಿ ಕುಳ್ಳಿರಿಸಿ
ಇನ್ನು ಬರ್ಪರ್ಗಿಂಬುಗೊಟ್ಟಿರಿ
ಸನ್ನಿ ಸನ್ನಿ ಕೆಲಕ್ಕೆ ಭಕ್ತರು
ತನ್ನಿ ತನ್ನಿ ವಿಭೂತಿಯಂ ವೀಳೆಯವನಳವಡಿಸಿ ೪

ಪಾಂಡುರಂಗನ ಭಕ್ತರಂ ಭೂ
ಮಂಡಲದೊಳಗೆ ಸುಳಿವ ಜಂಗಮ
ಮಂಡಳಿಗಳಂ[೩] ಕರಸಿದರು ಪಡಿಪಾರರಂ ಕಳುಹಿ
ತಂಡತಂಡದಿ ಬಪ್ಪವರ್ಗಿದಿ
ರ್ಗೊಂಡು ಪುರಜನವೆಯ್ದೆ ಮನೆಗೊಡ
ಗೊಂಡು [೪]ಬರುತಿರೆ[೫] ಮೂರ್ತಿಗೊಳಿಸಿ ಸುಖಾಸನಂಗಳಲಿ ೫

ಮಲಹರಾತ್ಮರ ಮಲ್ಲಡಿಗಳಂ
ತೊಳೆದು ಪರಿಮಳನವ್ಯಪುಷ್ಪಾಂ
[೬]ಜಲಿ[೭]ಯನಿತ್ತು ಸುಧೂಪ ದೀಪಂಗಳ ನಿವಾಳಿಸುತ
ಇಳೆಯೊರಸೆ ಮೈಯಿಕ್ಕಿ ಶಿವಗಣ
ಕುಲಕೆ ತಂದು ವಿಭೂತಿವೀಳೆಯ
ಗಳನೊಸೆದು ಮಾಡಲ್ಕೆ ತಮತಮಗಾಯವಸರದಲಿ ೬

೧–೨ ಫಲಂಗಳ ರಂಗವಲ್ಲಿ (ತ, ಥ, ದ, ನ, ಬ). ೩–೪ ಲಂಗಳ (ತ, ನ); ಳಿಕರಂ (ದ); ಳಿಗರಂ (ಧ). ೫–೬ ಬಂದುಱಿ (ತ, ನ). ೭–೮ ಜುಳಿ (ಸ).

CC-0. Jangamwadi Math Collection. Digitized by eGangotri

ಸಕಳ ಭಕ್ತಾಸ್ಥಾನದಲಿ ಕೇ
ಳಿಕೆಗಳೊಗ್ಗಿನ ಮೇಳವದ ನಾ
ಟಕದ ಪಾತ್ರದ ಪೇರಣೆಯ ಜೋಳಿಗಳ ಜೋಕೆಗಳ
ಪ್ರಕಟವೆಸೆಯಲು ವೇಣುವೀಣಾ
ನಿಕರನಾದಂ ಮೊರೆಯೆ ಕಕುಭಾ
ಷ್ಟಕವದಿರುತಿರೆ ಜಾಂಗು ಭಲಯೆಂಬಾ ರವಂಗಳಲಿ ೬

ರೀತಿಯಲಿ ಆನಂದಗೀತಸ
ಮೇತ ಶಂಕರಗೀತತತಿಯೊಳು
ಖ್ಯಾತರುದ್ರನ ಮಹಿಮೆಯಂಕಿಸಿ ಪಾಡುವರು ಕೆಲರು
ಗೀತ ಜತಿಗಳ ಮೇಳವಕೆ ಕೆಲ
ರೋತು ಕುಣಿವರು ಚಪ್ಪಳಿಕ್ಕ ಪು
ರಾತನರ ತತ್ವಾರ್ಥಮಂ ವಿಸ್ತರಿಸುವರು ಕೆಲರು ೭

ಶಿವಮರುಳಿನಗ್ಗಳಿಕೆಯಲಿಯಾ
ಡುವವರುಂ ಪೊಡಮಡುತ ಪರಮೋ
ತ್ಸವದಿ ತಮ್ಮಂ ಮಱೆದು ಯೋಗದಿ ನಿದ್ರೆಗೆಯ್ವುವರು
ಶಿವರಹಸ್ಯಾಗಮನಿಗಮದನು
ಭವಿಗಳೆನಿಸಿ ವಿನೋದಿಸುವರುಂ
ಶಿವಗಣಾವಳಿಯಿಂತು ಸುಖಿಗೋಷ್ಠಿಯೊಳಿರಲು ಬಸವ ೮

ಶರಣಪದಜಲಮಜ್ಜನಮನಾ
ಚರಿಸಿ ನಿರ್ಮಳ ನವ್ಯದಿವ್ಯಾಂ
ಬರವನುಟ್ಟು ಲಲಾಟದೊಳು ತ್ರೈಪುಂಡ್ರಮುಜ್ವಳಿಸೆ
ವರ ಭಸಿತಮಂ ಪೂಸಿ ಮೈಯಲಿ
ಶರದೊಳೀಶಾರ್ಪಿತ ಕುಸುಮಮಂ
ಧರಿಸಿ ರುದ್ರಾಕ್ಷಾಭರಣಭೂಷಿತವಿಳಸನಾಗಿ ೧೦

೧ಮೆ (ತ, ನ).

CC-0. Jangamwadi Math Collection. Digitized by eGangotri

ಅಸಮಲಿಂಗಪಸಾಯಿತಮೆನಿಪ
ಪೆಸರನುಳ್ಳ ಕಠಾರಿಯಂ ಬಂ
ಧಿಸಿ ಶಿವಾನಂದಾಶ್ರುಸಲಿಲಂ ಕೋಡಿವರಿವುತಿರೆ
ಬಸವ ತನುರೋಮಾಂಚಕಂಚುಕ
ವೆಸೆಯೆ ಭಕ್ತರ ಪಾದುಕಂಗಳ
ವೊಸಗೆಯಿಂದಾಯಿತ್ತೆನುತ್ತಡಿಗಡಿಗೆ ಪೊಡವಡುತ ೧೧

ಒಡೆಯರಿಗೆ ತನ್ನಡಿಗಳಂ ಮುಂ
ಗಡೆಗೆ ತೋಱಿಲ್ಕಂಜಿ ತಾಂ ಹಿಂ
ಗಡೆಗೆ ಮಡಿ[1]ದು ಮಡಂಗಿ ಪೊಡವಿಗವುಂಕುವನು ಬಸವ
ತೊಡೆಗಳಂ ಮೊಳಕೈಯೊಳೂಱುತ
ಬಿಡದೆ ಕೈಯಂ ಮುಗಿದು [2]ಬಾಗಿಸಿ[3]
ನಡುವನೊಯ್ಯನೆ ನೆಗಹಿ ಮುನ್ನಿನ ತನ್ನ ಭಾವದಲಿ ೧೨

ಸೇರಿಯನಿಮಿಷನಾಗಿ ಮಿಗೆ ಕ
ಣ್ಣಾರೆ ನೋಡುತ ಭಕ್ತಿನಿಜಶೃಂ
ಗಾರರಸವಂ ಸೂಱಿ[3]ಗೊಂಡಿಹ ಬಸವನಂ ನೋಡಿ
ಹಾರವಿಸಿ ನಾ ಧನ್ಯನಾದೆನು
ಧಾರುಣಿಯೊಳೆಂದೆನುತ ಸಜ್ಜನ
ಪಾರಿಜಾತನು ದಂಡನಾಥರ ದೇವ ಬಲದೇವ ೧೩

ಭಾವರೂಪ ವಿಳಾಸ ಗುಣ ಶೋ
ಭಾವಹಂಗಳನಾ ಪಿತಂ ನಾ
ನಾವಿಧದೊಳುಪಲಾಲಿಸುತ್ತಿರೆ ಭಕ್ತರಂಕಿಸಲು
ದೇವವಿಪ್ರರು ಪರಸುತಿರೆ ಬಲ
ದೇವ ಮಂತ್ರಿಯ ಮುಂದೆ ಗಂಗಾ
ದೇವಿಯಂ ವರ್ಣಿಸತೊಡಗಿದರು ಪುಣ್ಯಕಾಂತೆಯರು ೧೪

---

೧ ಣ (ಸ). ೨–೩ ಬಳ್ಕಿಸಿ (ತ, ದ, ನ, ಬ).

CC-0. Jangamwadi Math Collection. Digitized by eGangotri

ಹರಿಕುಮಾರನು ನೀತಿಯಂ ಬ
ಲ್ಲರಸನಲ್ಲಾ ಈ ಕುಮಾರಿಯ
ಚರಣಕಮಲವ ನಾವಿನಿತು ಪೋಲ್ತಹೆವಲಾಯೆಂಬ
ಅರುಣಪಲ್ಲವರಾಜಿಯಂ ಸಂ
ಹರಿಸಲಟ್ಟಿದನಲ್ಲದಿರ್ದಡೆ
ಪರಭೃತಂಗಳವೇಕೆ ಮುನಿದಹವಾ ತಳಿರುಗಳಿಗೆ ೧೫

ಬಾಲಕಿಯ ಮೆಲ್ಲಡಿಗಳೆಮ್ಮಯ
ಮೇಲೆ ಬಂದಪವೆಂದು ಪಂಕರು
ಹಾಳಿ ಕಡು ನಡುನೀರೊಳಗೆ ಪೊಕ್ಕಿಂತು ನಡೆಯುಡುಗಿ
ಸೋಲದಿಂ ದೆಸೆದೆಸೆಗೆ ಬಾಯ್ಬಿಡು
ತೇಳದಿರ್ದವು ಗಂಗಲಾಂಬೆಯ
ಲಾಲಿತ ಶ್ರೀಪದವನೆಂದೊಂದಿರ್ದಹೆವೊ ಎನುತ ೧೬

ಪೊಂಗುಳಿಗೆಗಳ ಪರಿಯೊಳಂಗು
ಷ್ಪಂಗಳೊಪ್ಪುಗು ನಿಮಿರ್ದ ಕೋಮಳ
ದಂಗುಳಂಗಳು ಮೆಱಿವವುಡುಗಣದೊಲು ಪದನಖಾಳಿ
ಅಂಗಜಾತನ ಕಂತುಕಂಗಳ
ರಂಗು ಮಡಗಳೊಳುದಯಿಸುಗು ಗು
ಲ್ಫಂಗಳೆಸೆವವು ವೃತ್ತವೆತ್ತತಿ ನವಕದಲಿ ಸತಿಯ ೧೭

ಅಲರುಗಣೆಯನ ದೊಣೆಗಳಿಂದ
ಗ್ಗಳಿನ ಕಿಱಿದೊಡೆ ತೊಡೆಗಳೊಪ್ಪುಗು
ಲಲನೆಗೊಳುನುಣ್ಪಾಗಿ ಕದಳೀಕಾಂಡಯುಗದಂತೆ
ಪುಳಿನಯುಗಮಂ ಕುಂಭಿ ಕುಂಭ
ಸ್ಥಳಯುಗಳಮಂ ಲೆಕ್ಕಿಸದೆ ಕೋ
ಮಳೆಯ ವೃತ್ತನಿತಂಬಬಿಂಬದ್ವಯಮಲರ್ದಪುದು ೧೮

೧–೨ ಪುದು (ತ, ನ). ೩ ಪ (ತ, ಥ, ದ, ನ). ೪–೫ ಳಿಸೆವುವು (ತ, ದ, ನ). ೬ಮ (ತ, ಥ, ದ, ನ).

CC-0. Jangamwadi Math Collection. Digitized by eGangotri



ಶ್ರೀ ಸಂಗಮೇಶ್ವರ ದೇವಾಲಯ, ಕೂಡಲಸಂಗಮ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ದೇವಗಂಗಾವರ್ತದತಿ ಶೋ
ಭಾವಹಮನವಮಾನಿಸುವದಿಂ
ದೀವರಾಕ್ಷಿಯ ರಾಜಿಸುವ ಗಂಭೀರನಾಭಿಬಿಲ
ತ್ರೈವಳೀಯುತರೇಖೆಗಳು ಕಾಂ
ತಾವಿಳಾಸಕ್ಕಡರ್ವ ಸೋಪಾ
ನಾವಳಿ[೧]ಗಳವೊಲಿಹವು ಗಂಗಾದೇವಿಯೊಳಮರ್ದು ೧೯

ಇಂದುವದನೆಯ ಮಧ್ಯವುಂಟಿ
ಲ್ಲೆಂದೆನಗೆ ಸಂದೇಹವಾಯ್ತುಂ
ಟೆಂದು ನೋಡಲು ಕಾಣಬಹುದಲ್ಲದಡೆ ಮೇಲೆಂತು
ನಿಂದಪ್ಪುದು ತಾನೆಂದೆಣಿಸಿವುಂ
ಟೆಂದಱಿದೆನೀ ಗಂಗಲಾಂಬೆಯ
ಛಂದವೆನಿಸಿದ ಬಡನಡುವನದನೇನ ವರ್ಣಿಸುವೆ ೨೦

ಭಾವಜನ ಸರಳಿಂದ ಸಣ್ಣವು[೫]
ಭಾವಿಸಲು ಲತೆಯಾ ಲತೆಗೆ ರಾ
ಜೀವದಳಲೋಚನೆಯ ಬಡನಡುವಿದುವೆ ಕಡುಸಣ್ಣ
ತಾವರೆಯ [೬]ಮುಗುಳುಗಳು[೭] ಗಂಗಾ
ದೇವಿಯುಲಿ ಪೊಗೆವಂತೆ ಗಂಗಾ
ದೇವಿಯುರದಲಿ ಮೊಳೆವುತಿರ್ದವು ಮೊಲೆಗಳಭಿನವಿಸಿ ೨೧

ಕುಸುಮಮಾಲಿಕೆಗಳ ನವಕಮಂ
ನಸುನಗುವಪಂಗನೆಯ ನಳಿತೋ
ಳಿಸೆವಪಂಗೈಗಳು ಗೆಲಿದು ಕೆಂದಾವರೆಯ ವ್ಯಾದುವ
ಬಿಸಜಲೋಚನೆಯಂಗುಳಂಗಳು
ವಸುಸಲಾಪೆಗಳಿಂದ ಮೆಱಿ[೮]ವವು
ಮಿಸುಪವುಱಿ [೯]ಕಲುಹಾರ್ದಳರುಚಿಯಿಂದೆ ನಖಿಪಙ್ತಿ ೨೨

೧–೨ ಯಪ್ಪೊಲ್ತೋರ್ಕುಮೀ ಸ್ತೀರತ್ನದೊ (ತ, ದ, ನ). ೩–೪ ರ್ಕುಮದಿ (ತ, ದ, ನ). ೫ ತು (ತ, ದ, ನ). ೬–೭ ಮೊಗ್ಗೆಗಳೆ (ತ, ದ, ನ). ೮–೯ ಕಲ್ಹಾ (ತ, ದ, ನ).

CC-0. Jangamwadi Math Collection. Digitized by eGangotri

ನಳನಳಿಪ ನವ ಕಂಬುಕಾಂತಿಗೆ
ನೆಲೆಯೆನಿಸಿತಲ್ಲಾ ಶ್ರೀರೇಖಾ
ಕಲಿತ ವಿಳಸಿತ ಕಂಧರಂ ಬಲದೇವನಂದನೆಯ
ಫಲಿತ ಮೃದುತಾಂಬೂಲಪತ್ರಂ
ಗಳನವಗಡಿಸಿ ಕದಪುಗಳು ನಿ
ರ್ಮಳವೊದಗಿ ಢಾಳೈಸುತಿಪ್ಪವು ಲೋಲಲೋಚನೆಯ ೨೩

ಸಮಧುರಾರುಣಬಿಂಬಮೋ ಯೆನ
ಲಮರ್ದುದಧರಂ ದಂತಪಙ್ತಿಯು
ಮಮಳಿದಾಡಿಮಬೀಜರಾಜಿಯವೊಲು ವಿರಾಜಿಸುಗು
ಸಮದ ಸುಖಿಸಲ್ಲಾಪಮಂ ರತಿ
ರಮಣವೀಣಾಮಂಜುಳಾರಾ
ವಮನಿಕ್ರಮಿಸುವದು ಕಾಂತೆಯ ವಚನರಚನಾಳಿ ೨೪

ತಿಲಕುಸುಮದಾಕಾರವಂ ವೆ
ಗ್ಗಳಿಸಿ ಚಂಪಕಪುಷ್ಪದಿರವಂ
ಪಳಿದು ಗಂಧೋಚ್ಛ್ವಾಸನಾಸಿಕವೆಸೆವುದಂಗನೆಯ
ಹೊಲಸುನಾರ್ವಳಜಲಚರಂಗಳು
ಬೆಳುಪು ನೆಲಿಸಿಯದ ಕಿಱುವೆಸಳ ನೆ
ಯ್ದಿಲುಗಳೀ ಮಡದಿಯ ಕುಡಿತೆಗಂಗಳಿಗೆ ಪಡಿಯಲ್ಲ ೨೫

ನಳಿನನಾಭನ ಮಗನ ಕೂರ್ಗಣೆ
ಗಳನನುಕರಿಸಿ ತೊಳತೊಳಗುವವು
ಮಲಯರುಹಗಂಧಿಯ ವಿಶಾಲವಿಲೋಚನವ್ಯಯವು
ಅಲರುವಿಲುಗಾಱಿನ ಸರಳ ಗಱಿ
ಗಳವೊಲೆವೆಗಳಲರ್ಗು ಕಾಮನ
ಬಿಲುಗಳಂ ನಗುತಿರ್ಕು ರಮಣಿಯ ಪುರ್ಬುಗಳ ಕೊರ್ಬು ೨೬

೧ಮ (ತ, ಥ, ದ, ನ). ೨ವ (ಥ).

CC-0. Jangamwadi Math Collection. Digitized by eGangotri

ವಿಮಳಿತ ಶ್ರೀಕಾರದಾಕಾ
ರಮನೆಣಕೆಗೊಳ್ಳದೆ ಮಿಱುಗುವವು
ಕುಮುದದಳಲೋಚನೆಯ ಕರ್ಣಂಗಳು ಪೊಸತಿವೆನಿಸಿ
ಕಮಳಮಂ ಶಶಿಬಿಂಬಮಂ ಮುಕು
ರಮನಜಂ ಮುನ್ನವೆ ರಚಿಸಿ ಜಾ
ಣಿಮೆ ಮೆಱಿಸಿದು ಕೋಮಳೆಯ ಮುಖಮಂ ಬಳಿಕ ಮಾಡಿದನೊ ೨೭

ಕಂದದೆಂದುಂ ದಿನದಿನಕೆ ಕಳೆ
ಗುಂದದೆಂದುಂ ರಾಹುಬಾಧೆಯೊ
ಳೊಂದದೆಂದುಂ ಪೌರ್ಣಮಿಯ ದಿನದಂದು ಶರದಿಂದು
ಕುಂದಗಂಧಿಯವದನರುಚಿಗೊರೆ
ವಂದು ಛಂದವೆನಿಪ್ಪುದೆಳೆವೆಱಿ
ಯಿಂದವತಿ ಕಾಂತಿಯೊಳಿಸೆವುದಬಳೆಯ ಮಿಸುಪ ನೊಸಲು ೨೮

ಅಳಿಕುಳಿಂಗಳ ಕಪ್ಪನಣಕಿಪ
ಸುಳಿಗುರುಳು ರಂಜಿಸುಗು ತರುಣಿಯ
ಮಿಳಿತ ಕೋಮಳನೀಲಕಚಭರವೊಪ್ಪಿ ಪಸರಿಸುಗು
ನಳಿನಮುಖಿಗಂಗಜನ ನೆತ್ತದ
ಹಲಗೆಯಿಂದಂ [೧]ಬಾಗುವೆತ್ತುದು[೨]
ಚಿಲುಪು ಮಿಗೆ ಬಲದೇವಪುತ್ರಿಯ ಬೆನ್ನಿನುನ್ನತಿಗೆ ೨೯

ಕ್ಷಿತಿಗೆ ಲಕ್ಷ್ಮಿಗೆ ರೋಹಿಣಿಗೆ ಭಾ
ರತಿಗೆ ರತಿಗೆ ಪ್ರಲೋಮಜೆಗರುಂ
ಧತಿಗೆ ಸೀತೆಗೆ ಜಾಹ್ನವಿಗೆ ರವಿಸತಿಗೆ ನೂಱುಮಡಿ
ಧೃತಿ ಸಿರಿ ಪ್ರಭೆ ಜಾಣ್ಮೆ ರೂಪು
ನ್ನತಿ ಪತಿವ್ರತದಾಚರಣೆ ಸಂ
ತತ ಪವಿತ್ರತೆ ತೇಜವೆಂಬಿವಱಿಂದ ಗಂಗಾಯಿ ೩೦

೧–೨ ಬಾಗಿ ಮೆಱಿಸಿದುದು (ತ, ದ, ನ).

CC-0. Jangamwadi Math Collection. Digitized by eGangotri

ಮದಪಿಕಂ ಮುಟ್ಟಿದ ತಳಿರೊ ಪ
ಟ್ಟಿದಿಯೆಱಿಗದರಲೋ ಶುಕಂ ಮು
ಟ್ಟಿದ ಫಳಮೊ ಗಱಿಮುಟ್ಟಿದಂಗಜನಂಬೊ ಕಳಹಂಸೆ
ಕರ್ದುಕದ ಮೃಣಾಳಮೊ ಸರಧಿಯು
ಪ್ಪುದಕವೊಂದದ ಮಣಿಯೊ ಫಣಿ ಹಿಡಿ
ಯದ ಸುಧಾಕರಬಿಂಬಮೋ ಯೆನಲೆಸೆವ ಕರ್ಣಿಕೆಯ ೩೧

ಇಂತು ಕಾಂತಾರತ್ನಮಂ ಸೀ
ಮಂತಿನಿಯರೊಲವುರ್ಮಿ ಮನದೊಳ
ನಂತಪರಿಯಲಿ ವರ್ಣಿಸುತ್ತಿರೆ ಕೇಳ್ದು ಬಲದೇವ
ಸಂತಸದೊಳೊಡಲುಬ್ಬಿ ಪರಿಣಯ
ವಾಂತ ತನ್ನ ತನೂಜೆಯಂ ಗುಣ
ವಂತೆಯಂ ಸಿಂಗರಿಸವೇಳ್ಕೆನೆ ಯುವತಿಯರು ನೋಡಿ ೩೨

ಆಭರಣತತಿಗೀ ತಳೋದರಿ
ಯಾಭರಣವಹುದಲ್ಲದೇ ಬಳಿ
ಕಾಭರಣವೀ ರೂಪವತಿಗಾಭರಣವಲ್ಲೆಂದು
ಶೋಭನಾರ್ಥಕ್ಯಾದಡಂ ಕೆಲ
ವಾಭರಣಮಂ ತೊಡಿಸವೇಳ್ಕು ಮ
ದೇಭಗಮನೆಗೆನುತ್ತೊಸೆದು ಮುತ್ತೈದೆಯರು ಬಂದು ೩೩

ಆಂಗನೆಗೆ ಸೌರಭ್ಯತೈಲಾ
ಭ್ಯಂಗನವನಾಚರಿಸಿ ಚಕಿತಕು
ರಂಗನಯನೆಗೆ ತಂದುಡಿಸಿದರು ನವ ದುಕೂಲವನು
ಸಂಗತಾಸಿತ ಕೋಮಳ ಶಿರೋ
ಜಂಗಳಂ ಬಗಿಬಗಿದು ಪೊಸಕುಸು
ಮಂಗಳಂ ತುಱುಬಿದರು ಸತಿಗಾ ಪುಣ್ಯವನಿತೆಯರು ೩೪

---

೧೩ (ಥ).

CC-0. Jangamwadi Math Collection. Digitized by eGangotri

ಅಗಿಲು ಸಾದು ಜವಾದಿ ಚಂದನ
ಮೃಗಮದಂ ಘನಸಾರ ಗಂಧಾ
ದಿಗಳನೆಲ್ಲಂ ತೆಗೆದು ಪನ್ನೀರಿಂದ ಮೇಳೈಸಿ
ಸೊಗಸುಮಿಗೆ ಸೌರಭ್ಯತನುವಿನ
ಮೃಗನಯನೆಗನುಲೇಪಿಸಿದರಾ
ಮೃಗಧರಾನನೆಯರು ತಿಲಕಮಂ ಕುಂಕುಮದೊಳಿಟ್ಟು ೩೫

ಹೊಗಳೆವುಂಗುಟದೆಳೆಗಳಂ ಮಂ
ಟಿಗೆಗಳಂ ಪಿಲ್ಲಿಗಳನಿಟ್ಟಂ
ದುಗೆಗಳಂ ಮಣಿಪಾಯವಟ್ಟಂಗಳನಮರ್ಚಿದರು
ಬಿಗಿದು ಕಾಂಚೀದಾಮಮಂ ಲಲ
ನೆಗೆ ಮಿಸುಪ ಭುಜವಳಿಯ ಭುಜಕೀ
ರ್ತಿಗಳನಂಕಿಸಿ ಕಡಗ ಕಂಕಣ ಸೂಡಗವನಿಕ್ಕಿ ೩೬

ಉಂಗುರಂಗಳನಿಟ್ಟು ಮುದ್ರಿಕೆ
ಯುಂಗುರವನಳವಡಿಸಿದರು ಹ
ಸ್ತಾಂಗುಲದೊಳುರದಲ್ಲಿ ಹೀರಾವಳಿಯನಿಕ್ಕಿದರು
ಅಂಗನಾಮಣಿಗಂಗನೆಯರು ಸು
ರಂಗಮೌಕ್ತಿಕಹಾರ ಮಣಿಪದ
ಕಂಗಳಂ ನೇವಳವನನುಸಂಧಿಸಿದರನುವಾಗಿ ೩೭

ಶ್ರೀಕರ ಶ್ರೀಕಾರವರ್ಣನಿ
ಭಾಕೃತಿಯ ಕರ್ಣದ್ವಯಾಪೂ
ರ್ಣಾಕಲಿತ ಸೌವರ್ಣಪತ್ರಂಗಳು ಸಮುಜ್ಜ್ವಳಿಸೆ
ಆ ಕಿವಿಗಳಲಿ ಹೊನ್ನ ಹೂಗಳ
ನಾ ಕಮಳಲೋಚನೆಗೆ ಕೀಲಿಸ
ಲಾ ಕಪ್ಪೋಳಸ್ಥಳಯುಗಳವತಿ ಥಳಥಳಿಸುತಿರ್ದಳು ೩೮

---

೧ ಣೆ (ತ, ದ). ೨ ಲೇ (ಸ). ೩ಪ್ಪತ್ತಿಪ್ಪರೆಂ.

CC-0. Jangamwadi Math Collection. Digitized by eGangotri

ಚಿಲುವ ರನ್ನದ ಬೆಳಗುಗಳ ಚೌ
ಕುಳಿಯ ಮುತ್ತಿನ ಸಣ್ಣ ಗಡುಕಿನ
ಹೊಳೆವ ಮುತ್ತಿನ ಕೊಪ್ಪುಗಳ ಕರ್ಣಾಭರಣವೆಸೆಯೆ
ಜಲರುಹಾಹಿತಬಿಂಬಮಂ ಸಾ
ರ್ದಲರ್ವ ತಾರಕಿಯಂತೆ ಮಿಱುಗುವು
ದಲಘುಕಾಂತಿಯೊಳೊಪ್ಪಿ ಕಾಂತೆಯ ಮೂಕುತಿಯು ಮುತ್ತು ೫೯

ಎಳೆವೞಿಕೆಯವೊಲು ಮಿಱುಪ ಭಾಳ
ಸ್ಥಳಕೆ ಮುತ್ತಿನ ಬೊಟ್ಟನಿಟ್ಟರು
ಲಲನೆಯರು ಪೊಂಬಾಸಿಗವನಿಕ್ಕಿದರು ಶಶಿಮುಖಿಗೆ
ಲಲಿತ ಮೃದುಸಿಂದೂರಮಂ ಕೋ
ಮಳೆಯ ಬೈತಲೆಯಲಿ ತಳಿದರು
ಜ್ವಳಿಪ ಮುತ್ತಿನ ಸೂಸಕವನಿಕ್ಕಿದರು ಮಂಡೆಯಲಿ ೬೦

ಆಂಗನೆಯ ಸೀಮಂತ ನವ್ಯಸು
ರಂಗಮಣಿ ಥಳಥಳಿಸಲಿಂತೀ
ಮಂಗಳಾಭರಣಂಗಳಂ ಸರ್ವಾಂಗದೊಳ್ ತೀವಿ
ಗಂಗಲಾಂಬೆಯನಾ ಸಮಯದಲಿ
ತುಂಗಕುಚೆಯರು ತಂದು ಬಲದೇ
ವಂಗೆ ತೋಱಿಲು ತನ್ನ ಮಗಳಂ ನೋಡಿ ಲಾಲಿಸುತ ೬೧

ಕನ್ನೆಯಂ [೧]ಪತಿ[೨]ಭಕ್ತಿಗುಣಸಂ
ಪನ್ನೆಯಂ ಗುರುಲಿಂಗಭಜನಾ
ಸನ್ನೆಯಂ ಶೃಂಗಾರರಸಸೋತ್ಪನ್ನೆಯಂ ಕೂರ್ಪ
ತನ್ನ ಮಗಳಂ ಮೂಜಗಂಗಳ
ಚೆನ್ನೆಯಂ ಗಂಗಾಂಬೆಯಂ ವಿಭ
ವೋನ್ನತಿಯೊಳೊಡಗೊಂಡು ಬಂದು ಸಮಸ್ತ ಭಕ್ತರಿಗೆ ೬೨

೧–೨ ಪರ (ಥ).

CC-0. Jangamwadi Math Collection. Digitized by eGangotri

ಪೊಡವಡಿಸಿ ಶುಭಚಿಹ್ನ ಮಿಕ್ಕೊಡ
ನೊಡನಿದಿರ್ಗೊಳೆ ಪರಸಿ ಸೇಸೆಯ
ನಿಡಲಖಿಳ ಭಕ್ತಾಂಗನೆಯರೀಶ್ವರ ಬಲ ಮುಹೂರ್ತ
ಕಡುಮಿಗಲು ವೇದೋಕ್ತ ಶಿವಪಥ[೧]
ವಡರಿದುತ್ತಮ ಧರ್ಮವಿಧಿಯಳ
ವಡಲು ಮಗಳಂ ಮದುವೆಯಂ ಮಾಡಿದನು ಬಸವಂಗೆ ೪೩

ನಿರುತ ನಕ್ಷತ್ರಾಧಿಪಗ್ರಹ
ವರನಯನ ನಿಧಿ ತನ್ನಯಂತಃ
ಕರಣಯೋಗದೊಳಿರೆ ವೃಷಭನಾನಂದವಾರಾಸಿ
ವರದನಾಗಿ ನಿರಂತರಂ ಸು
ಸ್ಥಿರಪದದೊಳಿರೆ ಬಸವರಾಜಂ
ಗರಿದಿದೆನಲೆಲ್ಲಾ ದಿನಂಗಳು ಶುಭದಿನಂಗಳಲಾ[೨] ೪೪

ಇದುವೆ ಮಾರ್ಗವಲಾ ಎಣಿಸಿ ನೋ
ಡಿದಡೆ ಪೂರ್ವದೊಳೀಶಭಕ್ತರ
ವಿದಿತ ಕರುಣಾಕರುಣದಿಂದಜಹರಿಮುಖಾಮರರು
ಮುದದೊಳಿಮುದದೊಳಿಪ್ಪರೆಂದಡು[೪]
ಳಿದ ನವಗ್ರಹ ತಾರಕಿಂದು ಬ
ಲದೊಳಹಂ ತಾ ಹೆಚ್ಚುಕುಂದುಗಳಂ ನುಡಿಯಲೇನು ೪೫

ವರ ಕೃಪಾಲೋಕನವೆ ಲಗ್ನಂ
ಶರಣರೊಳು ಮಾಟವೆ ಮುಹೂರ್ತವ
ವರ ಹರಕೆಯೇ ಸರ್ವಬಲವಂತಾಗಿ ಬಸವಂಗೆ
ಪರಮ ಭಕ್ತರ ಕರುಣವುಂಟೀ
ಧರೆಯೊಳೆಂದುಂ [೫]ಕೇಳ್ದ [೬]ಱಿಯೆವ
ಚ್ಚರಿಯು ಮದುವೆಯನೆನುತ ಲೋಕವದೆಯ್ದೆ ಕೀರ್ತಿಸಲು ೪೬

೧ದ (ತ). ೨ಲೆ (ಸ). ೩–೪ ಳಿಪ್ಪರೆಂದಡು (ಸ). ೫–೬ ಕಂಡ (ತ, ದ, ನ).

CC-0. Jangamwadi Math Collection. Digitized by eGangotri

ಪರಿಪರಿಯೊಳಿಂತಪಿಳ ಮಾಹೇ
ಶ್ವರರಿಗಿಷ್ಟಾರ್ಥಂಗಳಿಂದಾ
ದರಿಸಿ ಪರಿಚರಿಯಂಗಳಿಂ ತಣಿಸುತ್ತವರ್ಗಳಿಗೆ
ಧರಣಿಯೊಳು ಸಾಷ್ಟಾಂಗವಂದಿಸಿ
ಮರಳಿ ಮರಳಿ [1]ನಿಗುಳ್ದು[1] ವಂದಿಸಿ
ಕರಯುಗಳಮಂ ಮುಗಿದು ಬಸವನು ಶಿಷ್ಟಭಕ್ತರಿಗೆ ೪೭

ಮುಂಗಡೆಯೊಳಿದೆ ಒಪ್ಪಿ ಕಪ್ಪಡಿ
ಸಂಗಮೇಶ್ವರದಲ್ಲಿ ಮದ್ಗುರು
ಲಿಂಗವಿದ್ದಹನೆಯ್ದೆ ನಾವವರಡಿಗಳಂ ಕಂಡು
ಹಿಂಗದರ್ಚಿಸಿ ನಿಮ್ಮ ಕರುಣಾ
ಪಾಂಗದಿಂ ಭಕ್ತ್ಯಂಗನೆಯನಾ
ಲಿಂಗಿಸುವೆನೆನುತಾ ಮಹಾಭಕ್ತರ ನಿರೂಪದಲಿ ೪೮

ಧೀವರಂ ನಿಜ ವನಿತೆ ಗಂಗಾ
ದೇವಿಯುಂ ತನ್ನನುಜೆ ನಾಗಲ
ದೇವಿಯುಂ ತಾನೆಯ್ದಿದನು ಬಲದೇವನಟ್ಟಿದಡೆ
ಮಾವನಂ ಬೀಳ್ಕೊಂಡು ಸದ್ಗುರು
ದೇವನಂಘ್ರಿಧ್ಯಾನಯೋಗದೊ
ಳೋವಿ ತತ್ಪರದತ್ತಲಭಿಮುಖಿನಾಗಿ ನಡೆವುತ್ತ ೪೯

ಇಷ್ಟಸದ್ಗುರುವಿಪ್ಪ ಪುರವದು
ದೃಷ್ಟಿಗೋಚರವಾಗೆಸೆಯಲು
ತೃಷ್ಟಭಕ್ತಿಯೊಳಲ್ಲಿಗಲ್ಲಿಗೆ ವಂದಿಸುತ ಬಸವ
ಶಿಷ್ಟದಿಂ ಕಾಣ್ಬಳತೆಯಲಿ ನಡೆ
ವಷ್ಟು ದೂರಂ ಕೀರ್ತಿಸುತ್ತೊಸೆ
ದಷ್ಟಮಂತ್ರದೊಳಿಂತು ಯೋಜನಮಾತ್ರವೈತಂದು ೫೦

೧–೧ ನಿಮಿರ್ದು (ತ, ದ).

CC-0. Jangamwadi Math Collection. Digitized by eGangotri

ಮೊದಲಲಾ ಗುರುಭಕ್ತಿಯಭವಂ
ಗಿದು ಘನವೆ ತಾನೀತನಂ ನೋ
ಡಿದಡೆನುತ್ತೆಲ್ಲಾ ಜನಂಗಳು ಕೀರ್ತಿಸುತಮಿರಲು
ಮುದ[೧]ವಲರ್ದು[೨] ಸದ್ಗುರುಪದಧ್ಯಾ
ನದೊಳೆ ಸಲೆ ಪೊಕ್ಕಂ ಪುರವನಿಂ
ತದಱಿ ಮಹಿಮೆಯನೆಣಿಸುವಡೆ ಫಣಿಪತಿಗೆ ಹವಣಲ್ಲ ೫೧

ಪುರದ ನದಿಗಳು ಪುಣ್ಯತೀರ್ಥೋ
ತ್ಕರವುಳಿದ ದೇವಾಲಯಂಗಳು
ಹರನಿವಾಸಂಗಳು ಗಿರಿಗಳುಂ ಕಾಂಚನಾದ್ರಿಗಳು
ತರುಗಳುಂ ರುದ್ರಾಕ್ಷತರುಗಳು
ಪರಿಮಿತದ ವನವದು ಕುಸುಮವ
ಲ್ಲರಿಗಳಾ ಕಣಿಗಳು ವಿಭೂತಿಯ ಕಣಿಗಳಾಗಿರ್ಕು ೫೨

ಆ ಪಶುಗಳುಂ ಕಾಮಧೇನುಗ
ಳಾ ಪುರದ ಹೋರಿಗಳು ನಂದಿಯ
ರೂಪಿನಂತಹವಾ ಕೊಳಂಗ[೩]ಳು ತಾವು[೪] ಸರಸಿಗಳು
ಆ ಪುರದ ನರರೀಶ್ವರಾರ್ಚಕ
ರಾ ಪುರದ ಚರಜೀವಸಂತತಿ
ರೂಪಿಸಲು ವಸುಮತಿಗೆ ಕಾರಣಪುರುಷರೂಪ್ಪುಗಳು ೫೩

ನಾರಿಯರು ಸರ್ಬರು ಪತಿವ್ರತ
ಚಾರಿಯರು ನುಡಿಗಡಣ ತತ್ವವಿ
ಚಾರ ಭಾಷೆಗಳುಲಿವು ತೂರ್ಯತ್ರಯದ ಘೋಷಣವು
ಕೇರಿಗಳು ತಾ ರಂಗವಾಲಿಯ
ಚಾರುವೇದಿಕೆಗಳು ಬಗೆವಡಾ
ವೂರ ನೆಲ ನವಮುಕ್ತಿನಿಧಿಯ ಸಮಾನವಾಗಿಕ್ಕು ೫೪

೧–೨ ಪೊದಗಿ (ಸ). ೩–೪ ಳವಮೃತ (ಬ).

CC-0. Jangamwadi Math Collection. Digitized by eGangotri

ದುರುಳನಧಮನು ದುರ್ಜನಂ ನಿ
ಷ್ಠುರನುದಾಸೀನಂ ವಿಕಳನ
ಸ್ಥಿರವಚನನಾಚಾರದೂರನು ಪಾತಕಿಯು ಖಿಳನು
ವಿರಸನಜ್ಞನು ನಿಂದಕಂ ನಿಃ
ಕರುಣೆ ಮರ್ದಿಂಗಾದಡೊಬ್ಬನು
ಪುರದೊಳಿಸಿದಡಿಲ್ಲವೆಂದುನ್ನತಿಗೆ ಪರಿವಡಿದ ೫೫

ಧರೆಗೆ ಕಪ್ಪಡಿ ಸಂಗಮೇಶ್ವರ
ಪುರವೆಸೆವುದಲ್ಲಿ ಪ್ರಸಿದ್ಧೋ
ದ್ಧರಣ ಕೂಡಲಸಂಗಮೇಶನ ಮಂದಿರಕೆ ಪೋಗಿ
ನೆರೆದ ಭಕ್ತರು ತನ್ನನಿದಿರ್ಗೊಳು
ತಿರೆ ತದೀಯದ್ವಾರದೊಳು ಸ
ದ್ಗುರುಪದಕೆ ಸಾಷ್ಟಾಂಗವೆಱಗಿಯಲರ್ದು ಪ್ರೊಡವಟ್ಟು ೫೬

ಆಗಮ ಪುರಾಣಾರ್ಥ ವಿಹಿತ ವಿ
ಭಾಗಸೂಕ್ತಿಗಳಿಂದೆ ಮಂಜುಳ
ರಾಗರಸವೊಸರ್ದೆಸೆಯಲನುರಾಗಿಸಿ ನುತಿಸುತಿರಲು
ಆಗ ಮುನ್ನಿನ ವೇಷವೊಪ್ಪಿರ
ಲಾಗಿ ಸಂಗಮದೇವದೇವನು
ದೇಗುಲದ ಬಾಗಿಲ ಹೊಱಗೆ ತಲೆದೋಱಿದನು ಬಂದು ೫೭

ಇತ್ತ ಸದ್ಗುರುಮೂರ್ತಿಯಂ ಕಾ
ಣುತ್ತ ಧಿಕ್ಕನೆ ಪೆದಱಿ ಸಂಭ್ರಮಿ
ಸುತ್ತ ಬಸವನು ಪಿರಿದು ಭಯಮುಮನತಿಸುಖಭಕ್ತಿಯುಮುಂ
ಚಿತ್ತದೊಳು ಪೊರಿಗೊಂಡು ಹರುಷಂ
ಬೊತ್ತು ತಾವೊಂದೊಂದು ದೊಂದಣಿ
ಸುತ್ತಮಿರೆ ಮತ್ತೊಡನೆ ಸಾಷ್ಟಾಂಗದೊಳೆಱಗಿ ನಮಿಸಿ ೫೮

೧ತ (ಕ, ಬ). ೨–೩ದಣಿ (ಮ). ೪–೫ ಮುಂಪ್ರಿಯಮು (ಸ); ಮುಂಪ್ರೀತಿಯ (ಳ).

CC-0. Jangamwadi Math Collection. Digitized by eGangotri

ಹೊಸವೊಲುಮೆ ದಳವೇಱಿ ಸಲೆ ಪಸ
ರಿಸಿ ಮಹದ್ಗುರುವಿನ ಚರಣಸಾ
ರಸಯುಗವನಾನಂದ ಜಲದಿಂ ತೊಳೆದು ಗುರುಪೂಜೆ
ಒಸೆದೊಡನೆ ತನ್ನೊಡಲನಂತ
ರ್ಮಸುವೆನೆನುತಿರಲತಿ ದಯಾಮೃತ
ರಸದ ಕಡೆಗಣ್ಣಿಂದಮೈದಿಗೆಜಿಗಿದ ಮಗನನೆತ್ತಿ ೫೯

ಉಡುಗದಪ್ಪಲು ಮುಂದೆಯಾತನು
ಹೊಡವಡುತ ಕೈಮುಗಿದು ತತ್ಪರ
ವೆಡೆವಿಡದೆ ನೇತ್ರಾಂಬುವಿಕ್ರಿಯೆಗಳೆ ತೊಡಿಗೆಯಾಗೆ
ಆಡರ್ಮ ಬಸವನ ಭಕ್ತಿರತಿಗಿ
ಮ್ಮಡಿಸಿ ಕೂರ್ತು ನಿಜಪ್ರಸಾದವ
ನಡಸಿಕೊಟ್ಟಾತಂಗೆ ಸದ್ಗುರುದೇವನಿಂತೆಂದ ೬೦

ಬಂದವರ ಹೋದವರುಗಳ ಕೈ
ಯಿಂದ ನಿನ್ನಾಚಾರ ಸದ್ಗುಣ
ವೃಂದಮಂ ಕೇಳ್ದಾಗಳುಂ ಪರಿಣಾಮಿಸುತ್ತಿಹೆವು
ಹಿಂದಣದ ಕಾಲಪ್ರವರ್ತನೆ
ಯಿಂದೆ ಸಜ್ಜನಭಕ್ತಿಯೊಳು ಬಳಿ
ಸಂದು ನಿಶ್ಚಲಭಾವದಿಂದಾಚರಿಸುತಿರು ಬಸವ ೬೧

ಖಂಡಶಶಿಶೇಖರನ ಲಾಂಛನ
ಮಂಡಿತರನೊಲವಿಂದ ಗೌರಿಯ
ಗಂಡನೆಂದೇ ನಂಬು ನೀನವರುಗಳ ಗುಣಗಳನು
ಕಂಡಡೊಳ್ಳಿತ್ತಾಗಿಯೇ ಕೈ
ಕೊಂಡು ನಡೆ ಬೈದಡೆ ಬಡಿದಡಂ
ತಂಡಲೆಯದವರಡಿಗಳಿಗೆ ಶರಣೆನುತಮಿರು ಬಸವ ೬೨

೧–೨ ದೆಯ (ಧ, ಸ). ೩–೪ ಮುನ್ನೆ (ಸ). ೫ ಗ (ನ, ಮ). ೬–೭ ಯಂದದಿಂ ಸವ್ವಕ್ತಿ (ತ, ದ, ನ).

CC-0. Jangamwadi Math Collection. Digitized by eGangotri

ಅಹಿತರಾದಡೆ ಲಿಂಗಸಂಗದೊ
ಳಿಹಡೆ ಸುಹಿತರ ಭಾವದಿಂ ಕಂ
ಡಿಹುದು ಕಂಡೈ ಹಿಡಿದ ನೇಮಂ ನಿನ್ನ ಹರಣಕ್ಕೆ
ಬಹಡೆ ಫಲಮಂ ಬಿಡದಿರೆಂದುಂ
ಗಹಗಹಿಸಿ ಭಕ್ತರ ಕುಲಂಗಳ
ನಹಗೆಯಿಹಗೆಂದಱಿಸದದು ತುದಿಪದವಲಾ ಬಸವ ೬೩

ಅಸಮನೇತ್ರನ ಭಕ್ತರಂ ನಿಂ
ದಿಸುವವಂದಿರ ತಲೆಗಳಂ ಖಿಂ
ಡಿಸುತಮಿರು ವೇದೋಕ್ತಸಂಪಾದ್ಯೈಕಭಕ್ತಿಯನೆ
ವಸುಧೆಯೊಳು ಮೆಱಿಸಿಯಿಸುತಮಿರು ನಿಜ
ನಿಶಿತಭಕ್ತಿಗೆ ಗೆಲವನಿತು ವಂ
ಚಿಸದೆ ಮಾಡುವುದುತ್ತಮೋತ್ತಮ ಗುಣವಲಾ ಬಸವ ೬೪

ದೊರಕುವುದು ಭಕ್ತಿಪ್ರಸಾದೇ
ತರವಮೇಧ್ಯದ ಹಾಂಗೆ ಭಾವಿಸು
ಪರವನಿತೆಯರನೊಮ್ಮೆಯುಂ ನೀ ನೋಡದಿರು ಬಸವ
ಪರರೊಡವೆಯಂ ಬಯಸದಿರು ತನು
ಕರಣದಿಚ್ಛೆಗೆ ಪಾರುತಿರದಿರು
ಪರರ ವರ್ಮವನೆತ್ತಿ ನುಡಿಯದಿರಣ್ಣ ಬಸವಣ್ಣ ೬೫

ಜಂಗಮವನಾನೆಂದೆ [೧]ನೋಡಿರು
ಸಾಂಗದಿಂ ತ್ರಿವಿಧಪ್ರಸಾದಾ
ಸಂಗದೊಳು ಪರಿಣಾಮಿಸುತಮಿರು ಭಕ್ತರಂ ಕಂಡು
ಪೊಂಗಿ ನೀನಿದಿರೆದ್ದು ನಮಿಸಿ ಕ
ರಂಗಳಂ ಮುಗಿದವರ ಭಕ್ತಿಗು
ಣಂಗಳಂ ಕೊಂಡಾಡಿ ಮುಂಡಾಡುತ್ತಮಿರು ಬಸವ ೬೬

೧–೨ ಕಂಡಿ (ತ, ದ, ನ).

CC-0. Jangamwadi Math Collection. Digitized by eGangotri

ಒರೆದೊರೆದು ನೋಡುವನಭವನನ
ವರತವೆಚ್ಚರಿಕೆಯೊಳಿರೈ[1]ವೋ
ಸರಿಸಲೀಯದಿರಾಗಳುಂ ನಿಜ ಸತ್ಯಭಾಷೆಗಳ
ಬೆರಸಿ ನಾಂ ಕೊಡುತಿಹೆನು ನಿನ್ನವ
ಸರಕೆ ಬೇಕಾದುದನೆ ಬೇಡೈ
ನಿರುತವಿಂತಿದುಯೆಮ್ಮುವಂ ನೀ ಮಱಿಯದಿರು ಬಸವ ೬೭

ಎಂದು ಮೃದುಮಧುರಾಂಚಿತೋಕ್ತಿಗ
ಳಿಂದ ಬೋಧಿಸಿ [2]ತಕ್ಕವಿಸಿ[3] ತಾಂ
ಕಂದನಂ ಹೊಡವಡಿಸಿಕೊಂಡು ಮಹಾತ್ಮನಾಕ್ಷಣದೆ
ಎಂದಿನಾಕೃತಿಯಂ ಧರಿಸಿ ನಿಜ
ಮಂದಿರದೊಳಿಪ್ಪೆಡೆಯೊಳಚ್ಚರಿ
ವೊಂದಿ ಪುರಜನವೆಲ್ಲರುಂ ತಮತಮಗೆ ಬೆಱಗಾಗಿ ೬೮

ಮನಸಿಜಾಂತಕನಲ್ಲದೀತನು
ಮನುಜನೇ ದೇವಾಲಯದೊಳೀ
ಮುನಿಪತಿಯನಾರಾದಡಂ ಕಂಡವರೊಳರೆ ಮುನ್ನ
ತನಗೆಯೀ ಬಸವಣ್ಣನೆಂತಹ
ವಿನಯಭಕ್ತನೊ ಸಂಗಮೇಶನು
ಮನವೊಸೆದು ತಾಂ ಬಂದು ತಾಪಸರೂಪಮಂ ಧರಿಸಿ ೬೯

ಅಕ್ಕಱಿಂ ಮೈದಡಹಿ ಮಗನಂ
ತಕ್ಕವಿಸಿ ತನ್ನ ಪ್ರಸಾದವ
ನಿಕ್ಕಿ ಸನ್ಮುದವುಕ್ಕಿ ಸಂಗಮದೇವನಾ ಗೃಹವ
ಹೊಕ್ಕನಲ್ಲಿಯೆ ಅಡಗಿದನು ಲೋ
ಕಕ್ಕರಿ[4]ದು ಕೃತಕೃತ್ಯರಾದೆವಿ
ದಕ್ಕೆ ನಾವಿಂತೀತನಂ ಕಂಡಿಂದು ನುತಿ[5]ಸಲ್ಕೆ ೭೦

೧–೨ತ್ತಿರುತಿರೈ (ತ, ದ, ನ). ೩–೪ತಳ್ಕೈಸಿ (ತ, ದ, ನ). ೫ಱಿ (ತ, ದ, ಸ). ೬ಡಿ (ತ, ಥ).

CC-0. Jangamwadi Math Collection. Digitized by eGangotri

ಭಾಪುರೇ ಬಸವಣ್ಣ ಸತ್ಯಾ
ಲಾಪ [೧]ಭಾಪುರೆ[೨] ಭಕ್ತಿವರ್ಧನ
ಭಾಪುರೇ ಯೆಮ್ಮಯ್ಯ ಲೋಕತಮಂಧಹರದೀಪ
ಭಾಪುರೇ ಶಿವನಣುಗನಲ್ಲೋ
ಪಾಪನಾಶನ ಬಸವನಲ್ಲೋ
ಗೋಪತಿಯ ವರರೂಪನಲ್ಲೋನಲ್ಲೊ ಬಸವಯ್ಯ ೭೧

ಧರಣಿಯೊಳಗಂದಯಿಸಿದ ಫಲವಿಂ
ತಿರಲುವೇಡಾ ನಾವು ಜನ್ಮಿಸಿ
ದಿರವದೇತಕೆ ಬಾತೆ ತಂದೆಯ ತಲೆಯನುಂ ತಱಿದು
ವರ ತನಯನಂ ಕೊಟ್ಟು ದಿವ್ಯಾಂ
ಬರವನರ್ಪಿಸಿ ಸತಿಯನೊಪ್ಪಿಸಿ
ಹರನ [೩]ಕಯ್ಯಲಿ[೪] ಪಡೆದರಂದಾದ್ಯರು ಹೊಗಳಲೇನು ೭೨

ಅಡವಿಯೊಳಗನಶನವಿಧಿಗಳಿಂ
ದೊಡಲನೊಣಗಿಸಿಯುಗ್ರವಹ್ನಿಯ
ನಡುವೆ ನಿಂದು ತಪಂಬಡದೆ ತಲೆಗಳನರಿದುಕೊಡದೆ
ಪೊಡವಿಯೊಳಗಿಂತೀಗ ಬಸವಂ
ಪಡೆದನಮಮ ನಿರಾಯಸದೊಳೀ
ಮೃಡನ ಕರುಣವನೆನುತ ಸರ್ಬರು ಕೀರ್ತಿಸುತ್ತಿರಲು ೭೩

ವಿವಿಧಭಕ್ತರುವೆರಸಿ ಪರಮೋ
ತ್ಸವದಿ ಕೂಡಲಸಂಗಮೇಶನ
ಭವನಮಂಟಪದೊಳು ಮಹಾ ಒಡ್ಡೋಲ[೫]ಗವನಿತ್ತು[೬]
ನವರಸಾಂಚಿತ ನಾದದಿಂ ಮೂ
ಱವಸರದೊಳರ್ಚಿಸುತ ಸುಗುರು
ಸ್ತವನ ಪೂಜೆಯೊಳಿಂತು ಬಸವಂ ಸುಖದೊಳಿರುತಿರ್ದ ೭೪

೧–೨ ಸಜ್ಜನ (ತ). ೩–೪ ಕರುಣೆಯ (ಬ). ೫–೬ ಗಂಗೊಟ್ಟು (ತ, ದ, ನ).

CC-0. Jangamwadi Math Collection. Digitized by eGangotri

ಭಕ್ತಮುಖಿಪಂಕಜದಿವಾಕರ
ಭಕ್ತನೇತ್ರಚಕೋರಹಿಮಕರ
ಭಕ್ತಭವಸಮಿದಗ್ನಿ ಭಕ್ತಾಪದ್ಭಸಮೀರ
ಭಕ್ತಸಸ್ಯಧರಿತ್ರಿ ಭಕ್ತಾ
ಸಕ್ತ ಸೌಖ್ಯಾನಂದವಾರಿಧಿ
ಭಕ್ತಶಬ್ದಾಕಾಶ ಭಕ್ತಾತ್ಮಕ ಬಸವ ಶರಣು ೭೫

ಇದು ಸಕಳ ಮಾಹೇಶ್ವರಾಮಳ
ಪದಪಯೋಜಪರಾಗಮದಷ
ಟ್ಪದಿಯೆನಿಪ ಪಾಲ್ಕುಱಿಕೆ ಸೋಮೇಶ್ವರನ ಕಾರುಣ್ಯ
ಒದಗಿದಖಿಳಕಳಾಪ್ರಪೂರಿತ
ಹೃದಯ ಭೀಮಕವಿಪ್ರಣೀತಾ
ಭ್ಯುದಯ ಬಸವಪುರಾಣಕಥೆಯೊಳು ಪ್ರಥಮದಾ ೧ಕಾಂಡ೨ ೭೬

ಆಂತು ಕಾಂಡ ೧ಕ್ಕಂ ಸಂಧಿ ೪ಕ್ಕಂ ಪದಗಳು ೨೮೫ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

೧–೨ ಶ್ವಾಸ (ತ, ಥ, ದ, ಧ, ನ).

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಕಾಂಡ : ೨

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಂಧಿ : ೫

*

ಸೂಚನೆ : ಮುಂದೆ ಭಕ್ತಿಹಿತಾರ್ಥಮಾಗಿ[೧]ರ
ಲೊಂ[೨]ದು ನೆವದಲಿ ಸಂಗಮೇಶ್ವರ
ದಿಂದೆ ಬಸವನು ಬಂದು ಹೊಕ್ಕನು ಬಿಜ್ಜಳನ ಪುರವ

ವರ್ಣಪಂಚಕವೆತ್ತಕಾಂತಿ ಜಿ
ತಾರ್ಣವೋದ್ಭವಧೈರ್ಯ ವಿಜಿತಸು
ವರ್ಣಭೂಧರಸುಪ್ರತಾಪ ಜಿತಾಸುಗತಿಮಿತ್ರ
ಪೂರ್ಣತೇಜೋವಿಜಿತದಿನಕರ
ವರ್ಣಿಸುವೆ ನಾನೊಲಿದು ನೀನಾ
ಕರ್ಣಿಸಯ್ಯ ಮದೀಯ ವಿಜ್ಞಾಪನವನೆಲೆ ಬಸವ ೧

ಆದಿರುದ್ರಗಣಾದಿಪರ್ವಂ
ವಾದಿ[೩]ಗಳ[೪] ಹೃತ್‌ಶಲ್ಯಪರ್ವಂ
ಮೋದಭಕ್ತಿಗೆ ಬಸವಸಿಂಹಾಸನಸಭಾಪರ್ವಂ
ವೇದವಿದರುದ್ಯೋಗಪರ್ವಂ
ವೇದಿಸುವರಿಗೆ ಶಾಂತಿಪರ್ವಂ
ಮೇದಿನಿಯೊಳಖಿಳಾಗಮಜ್ಞರ ಕರ್ಣಪರ್ವವಿದು ೨

---

* ರಾಗ : ಧನ್ಯಾಸಿ (ಮ, ಚ, ಅ); ಭೈರವಿ (ತ). ೧–೨ ಲದೊಂ (ತ, ಥ, ದ, ನ). ೩–೪ ಜನ (ನ).

CC-0. Jangamwadi Math Collection. Digitized by eGangotri

ಅತ್ತಲಾ ಕಲ್ಯಾಣಕಟಕದೊ
ಳುತ್ತಮಾಚಾರ್ಯಕಭಕ್ತಿಗೆ
ಬಿತ್ತೆನಿಪ ಭಂಡಾರಿ ಬಲದೇವಂ ಸಚಿವವರನು
ಇತ್ತಲೀ ಬಸವಂಗೆ ತನಯಳ
ನಿತ್ತಡೊಲಿದು ಪ್ರಮಥರತಿಮುದ
ವೆತ್ತು ಕರೆಸಲು ಪೋಪವೊಲು ಶಿವಲೋಕಕೆಯ್ದಿದನು ೩

ಬಳಿಕವಾ[೧] ಬಲದೇವಮಂತ್ರಿಯ
ಬಳಗವಂ ಬಂಧುಗಳನಾಪ್ತರು
ಗಳನಿಳಾಧೀಶನು ಕರೆಸಿ ತಾನವರಿಗಿಂತೆಂದ
ಒಲಿವ ಹಿತವರು ಸೋದರರು ಮ
ಕ್ಕಳುಗಳಾರಾಯ್ತಾದಡೀತನ
ಬಲುನಿಯೋಗವನೆಲ್ಲವಂ ಪ್ರತಿಪಾಲಿಸುವರೊಳರೆ ೪

ಎನೆ ಮಹಾರಾಜೇಂದ್ರ ವುಂಟಾ
ತನ ತನಯಳ ಪ್ರಾಣನಾಥನು
ವಿನಯವಾಕ್ಯಂ ನಿಮ್ಮ ರಾಜ್ಯವನುದ್ಧರಿಸಲಾಪ
ಅನಘನತಿಬಳನಖಿಳಪಾವನ
ವನಧಿಯಾತನದೆಂತೆನಲು ಭೂ
ವಿನುತ ಸಂಗಮದೇವನಿಂ ಪಡೆದನು ಪ್ರಸನ್ನತೆಯ ೫

ಜನಪಪಿಯಲಂತಾಗಿಯಾತನು
ನಿನಗೆ ಮಂತ್ರಿತನಕ್ಕೆ ತಕ್ಕವ
ನೆನಲಿದೆಲ್ಲವ ಕೇಳ್ದು ಮುದದಿಂದುಬ್ಬಿ ಬಿಜ್ಜಳನು
ಘನದ ಭದ್ರೇಭವನಮಾತ್ಯರ
ನನಿಬರಂ ಬೆಸನಿತ್ತು ಬಸವನ
ನನುನಯದೊಳೊಡಗೊಂಡು ಬರಲೆಂದಟ್ಟಲೊಡನವರು ೬

---

೧ ಲಾ (ಕ, ಚ, ಬ). ೨ ನ (ಬ).

CC-0. Jangamwadi Math Collection. Digitized by eGangotri

ಆಗ ಸಂಗಮದೇವರಲ್ಲಿಗೆ
ಹೋಗಿ ಬಸವನನಸಮ ಭಾಕ್ತಿಕ
ಯೋಗನಂ ಕಾಣುತ ನಮಿಸಿ ಬಿನ್ನೈಸಿದರು ಮುಂದೆ
ನಾಗನರಸುರಲೋಕಸುಖಮುಖಿ
ಭೋಗಕೈವಲ್ಯಂಗಳೆಂಬವಿ
ವಾಗಳುಂ ನಿಮಗೊಂದು ಲೆಕ್ಕವ ನೀವೆ ಚಿತ್ತವಿಸಿ ೭

ಶಿವನ ಭಕ್ತಿಸುಧಾಸದನುಭವ
ಭವಸುಖಿಗೆ ರುಚಿಯಹವೆ ಮಿಕ್ಕಿನ
ವವಚವಲ್ಲದೆ ನೀವು ಲೋಕಹಿತಾರ್ಥರಂತಾಗಿ
ಅವಧರಿಸಿ ಮತ್ ಪ್ರಾರ್ಥನಂಗಳ
ನವನಿಪನ ಸತ್ ಪ್ರಿಯವನೆಯ್ದಿಪ
ಡವನಿಯೆಲ್ಲವನಾಳನೇ ನಿರ್ವಕ್ರದಿಂದಾತ ೮

ಧಾರುಣಿಗೆ ಸಚಿವಾಗ್ರಪಟ್ಟಕ
ಪಾರಭಂಡಾರಕ್ಕೆ ಬಹುಪರಿ
ವಾರಕಾಪ್ತಜನಕ್ಕೆ ವಿಶ್ವಾಸಕ್ಕೆ ಬಿಜ್ಜಳನ
ಭೂರಿಸಾಮ್ರಾಜ್ಯಕ್ಕೆ ಸಕಳದ
ಭಾರಮಂ ತಾಳಲ್ಕೆ ಮತ್ತೆ ವಿ
ಚಾರಿಸಲು ನೀವಲ್ಲದಾತಂಗಾವನಿರ್ದಹನು ೯

ಅರಸನೊಕ್ಕೈಯೋಗರಕೆ ತಾ
ನರುಹನುಳಿದಂತೀ ಧರಿತ್ರಿಗೆ
ನಿರುತವಧಿಪತಿ ನೀವೆಯಲ್ಲಾ ಬಸವಮಂತ್ರೀಶಾ
ಪ್ರರಕೆ ಬಿಜಯಂಗೆಯ್ದು ಸಲೆಯು
ದ್ಧರಿಸಿಯೆಂಬರ ಬಿನ್ನಪವಿನವ
ಧರಿಸಿ ಭಕ್ತಿಹಿತಾರ್ಥಮಂ ನೆನೆದಲ್ಲಿಗೊಡಬಟ್ಟು ೧೦

೧ವೆ (ತ). ೨–೩ನುದ್ಧರಿಸಿ (ಥ, ದ).

CC-0. Jangamwadi Math Collection. Digitized by eGangotri

ತನ್ನನೆಲ್ಲರು ವೋಲಯಿಸಿ ಬರೆ
ಬಿನ್ನವಿಸಿ ಭಕ್ತಾವಳಿಗೆ ನಯ
ದಿನ್ನಮಿಸಿಯವರುಗಳ ಕರುಣಾರಸದೊಳೋಲಾಡಿ
ಉನ್ನತಿಯೊಳೆಯ್ತಪ್ಪ ಬಸವಜ
ಗನ್ನುತನನಿದಿರ್ಗೊಂಬ ತವಕದಿ
ತನ್ನರೇಂದ್ರನು ಕೇಳಿದಡೆಯಿದೆ ಬಂದನೆಂದೆ[೧]ನುತ[೨] ೧೧

ಕೇರಿಕೇರಿಗೆ ಮನೆಮನೆಗೆ ಗುಡಿ
ತೋರಣಂಗಳನೆತ್ತಿ ಮಣಿಮಯ
ತೋರಣಂಗಳನಳವಡಿಸುತಂ ಕಳಶಕನ್ನಡಿಯ
ತೋರಣಂಗಳನಲ್ಲಿಗಲ್ಲಿಗ
ಪಾರರಚನೆಗಳಿಂದೆ ತತ್ತ
ದ್ವಾರಶಿಖರಂಗಳೊಳಮರ್ಚಿಸಿ ನಗರಿಯಗಲದಲಿ ೧೨

ಹನ್ನೆರಡು ಗಾವುದ[೩]ದಳತೆಯ ಸ
ಮುನ್ನತಿಯ ಕಲ್ಯಾಣಪುರವಂ
ಮುನ್ನವೇ ಸಿಂಗರಿಸವೇಳ್ದಿಂತಪ್ಪಶೋಭನದಿ
ಚೆನ್ನೆಸೆದು ಬಿಜ್ಜಳಮಹೀಪಾ
ಲಂ ನವಾಂಬರರತ್ನಭೂಷಣ
ದಿನ್ನೆಗಳ್ದಾ ಬಸವವಿಭುವಂ ಕಾಣ್ಬ ಕಾಂಕ್ಷೆಯಲಿ ೧೩

ದಂಡನಾಥಾಮಾತ್ಯ[೪]ಶೇಖರ[೫]
ಮಂಡಳಿಕ ಸಾವಂತ ಹಯವೇ
ದಂಡ ರಥ ಪರಿಕರ ಸಹಿತವಾತ್ಮಾನುರಾಗದಲಿ
ಚಂಡತೇಜದಿ ನಡೆವುತಿರಲು
ದ್ದಂಡಪದಹತಿಗಿಳೆ ಚಲಿಸಿ ದಿಗು
ಮಂಡಲಂ ಕಿವುಡಾಗೆ ಬಹು ವಾದ್ಯಧ್ವನಿಗಳಿಂದ ೧೪

೧–೨ನಲು (ತ, ದ, ನ). ೩ ಱ (ಬ, ಕ, ಚ). ೪–೫ ಲೇಖಾ (ನ, ಬ); ಲೇಖಿಕ (ಅ, ಡಾ, ತ, ಥ, ದ).

CC-0. Jangamwadi Math Collection. Digitized by eGangotri

ಧಾರುಣೀಪತಿಯಿದಿರೊಳೊಪ್ಪಚಿ[೧]
ದೂರದಲಿ ಕಂಡಸಮ ಬಸವಕು
ಮಾರನಂ ನಿಜ ಭಕ್ತಿಸಾರನನತ್ಯುದಾರನನು
ಸೂರಿಜನಮಂದಾರನಂ ಭವ
ದೂರನಂ ಕರುಣಾರಸಾಮೃತ
ಪೂರಿತಾಕಾರನನತುಳಿತಾಪಾರಶೂರನನು ೧೫

ಚಾರು ನಿಶ್ಚಲಧೀರನಂ ಗಂ
ಭೀರಗುಣಮಣಿಹಾರನಂ ಸಂ
ಸಾರಭೂಜಕುಠಾರನಂ ಸುಜನೋಪಕಾರನನು
ವಾರಿತಾಹಂಕಾರನಂ ಹೂಂ
ಕಾರ[೨]ಮದ[೩]ಧಿಕ್ಕಾರನಂ ಗತ
ಮಾರಕರ್ಮವಿಕಾರನಂ ವೀರಾವತಾರನನು ೧೬

ಲೋಕಪಾವನ ಕಾರಕನನಾ
ಲೋಕಿಸುತ್ತಾನೆಯನಿಳಿದು ತಾಂ
ಲೋಕಪಾಲನು ಕಾಲ್ನಡೆಯೊಳಿದಿರ್ವಂದೊಡನೆ ಸಾರ್ದು
ಪ್ರಾಕಟಪ್ರಿಯವಿನಯಪೂರ್ವ
ಸ್ವೀಕರಣ ಸತ್ಕಾರ ಸಂತು
ಷ್ಟಾಕಲನನಂ ಮಾಡಿ ಬಸವನನಾಗ ಬಿಜ್ಜಳನು ೧೭

ಏಳುನೂಱು ಮದಾಂಧಗಂಧಕ
ರಾಳಬಂಧುರ ಸಿಂಧುರಂಗಳು
ಲಾಲಿತೋತ್ತಮ ವಾಜಿಗಳು ತೊಂಬ[೪]ತ್ತುಸಾವಿರವು
ಕಾ[೫]ಲಬಲವೆಣಿಸಲ್ಕೆ ಲಕ್ಕದ
ಮೇಲೆ ತೊಂಬ[೬]ತ್ತೆಂಟುಸಾವಿರ
ಮೇಲೆನಿಪ ಭಂಡಾರಿಗಳು ಪನ್ನಿಬ್ಬರವರೊಳಗೆ ೧೮

೧ತಿ (ಥ, ನ, ಬ). ೨–೩ ಯಮ (ತ, ಥ, ದ, ನ). ೪ಭ (ಕ, ಚ, ತ, ಥ, ಧ, ನ). ೫ಮೂ (ಅ, ಕ, ಚ, ತ, ಥ, ದ, ಥ, ನ).

CC-0. Jangamwadi Math Collection. Digitized by eGangotri

ಹಿರಿಯ ಭಂಡಾರಾಧಿಪತ್ಯದೊ
ಳಿರಲನುಮತಿಸಿ ಸಕಲ ರಾಜ್ಯೋ
ದ್ಧರಣಕರಣಮನಿತ್ತು ಬಿಜ್ಜಳಧರಣಿವಲ್ಲಭನು
ಹರುಷದಿಂ ತಾನುಂ ಬಸವಧೀ
ವರನುಮಖಿಳ ನಿಯೋಗದೋಲಗ
ವೆರಸಿ ಬರುತಿಪ್ಪೆಡೆಯೊಳಾ ಪುರವೀಥಿವೀಥಿಯೊಳು ೧೯

ಅಳಿಗಳೋ ಅಳಕಂಗಳೋ ಶಶಿ
ಕಳೆಗಳೋ ಅಳಿಕಂಗಳೋ ಉ
ತ್ಪಳದಳಂಗಳೊ ಕಂಗಳೋ ಕಂಬುಗಳೊ ಕೊರಳುಗಳೊ
ಹೊಳೆವ ಕನ್ನಡಿಗಳೊ ಮೊಗಂಗಳೊ
ಜಲರುಹಂಗಳೊ ಕರತಳಂಗಳೊ
ತಳಿರುಗಳೊ ಮೆಲ್ಲಡಿಗಳೋಯೆನೆ ನೆರೆದರಬಲೆಯರು ೨೦

ಬಾಲಶಶಿಸಮಭಾಳತಟದಳಿ
ನೀಲಕುಂಚಿತ ಕಚಭರದ ಮೃಗ
ಲೋಲನಯನದ ನಳಿನವದನದ ವಟಫಲಾಧರದ
ಸ್ಥೂಲಕಠಿಣಸ್ತನದ ಮಿಸುಪ ಕ
ಪೋಳತಳದ ಮರಾಳಯಾನದ
ಬಾಲೆಯರು ಬಂದರು ಬಸವನಂ ನೋಡುವರ್ಥಿಯಲಿ ೨೧

ತಿಲಕುಸುಮನಾಸಿಕದ ಮುಖಮಂ
ಡಲದ ಮೃದುದೋರ್ಲತಿಕೆಗಳ ಕೋ
ಮಳಶರೀರದ ಕುಚಕಳಶದರವಿಂದಸೌರಭದ
ಥಳಥಳಿಸುವ ಕಟಾಕ್ಷವೀಕ್ಷಣ
ದಲಸಭಾವದ ಮಂದಹಾಸದ
ಲಲನೆಯರು ಬಂದರು ಬಸವನಂ [೩]ನೋಳ್ಪ ತವಕದೊಳು[೩] ೨೨

೧ಳ್ಕ (ದ, ನ, ಬ). ೨-೩ನೋಡುವರ್ಥಿಯಲಿ (ಸ).

CC-0. Jangamwadi Math Collection. Digitized by eGangotri

ಬಿಂಬಿಸುವ ಶಶಿಬಿಂಬದಿಂ ಪ್ರತಿ
ಬಿಂಬಿಸುವ ಮುಖಬಿಂಬದರ್ಪಣ
ಬಿಂಬಫಳರುಚಿಯಂ ಬಗೆಯದರುಣಾಧರೋನ್ನತಿಯ
ಶಂಬರಾಹಿತನಂಬಿನಿಂ ಕೂ
ರಂಬಲಿವ ಲೋಲಾಂಬಕಾಸ್ತ್ರದ
ಕಂಬುಕಂಧರೆಯರು ನೆರೆದರೆಡೆಗೆಡೆಗೆ [೧]ಸಂದಣಿಸಿ[೨] ೨೩

ಹರಿಣಧರನವೊಲೊಳುಮೊಗಂಗಳ
ಹರಿಯ ನಡುವಿಂದಸಿಯ ನಡುಗಳ
ಸುರನದಿಯಂ ಸುಳಿ[೩]ಗಳಿನಿ[೪]ಸೆವ ಗಂಭೀರ ನಾಭಿ[೫]ಗಳ[೬]
ಕರಿಕ[೭]ರನಿ[೮]ಭೋರುಗಳ ಮನ್ಮಥ
ಸರಧಿಸಮಜಾನುಗಳ ಮಣಿನೂ
ಪುರದ ಝಣರ್ಝ[೯]ಣ ನಿನದಯುತ[೧೦] ಸುಗತಿಗಳ [೧೧]ಯುವ[೧೨]ತಿಯರು ೨೪

ಚಾರು ಸೂಸಕ ಪದಕ ಮರಕತ
ಸಾರಕಂಕಣ ಕಿಂಕಿಣೀಮಣಿ
ಹಾರ ನೂಪುರ ಮೇಖಳಾವಳಿಯಾದಿ ಭೂಷಣದ
ಭೂರಿಘೋಷಣಪೂರಿತಾಖಿಳ
ನಾರಿಯರು ಬಂದರು ಬಸವಸುಕು
ಮಾರನಂ ಮುಂಕೊಂಡು [೧೩]ನೋಡುವ[೧೪] ಭರವಸದೊಳೆಸೆದು ೨೫

ಸಾರಕುಂಕುಮ ಮಲಯರುಹ ಕ
ಸ್ತೂರಿಕಾಗರು ಸರಸಕರ್ದಮ
ಧಾರೆಯರು ಸುರಪ್ಪನ್ನಿಕಾ ನವಮಾಲಿಕಾಮಾಲ
ಭಾರೆಯರು ವಿವಿಧಾಂಬರಾಳಂ
ಕಾರೆಯರು ಸರ್ವಾಭರಣಶೃಂ
ಗಾರೆಯರು ಬಂದರು ಬಸವನುನ್ನತಿಯನೀಕ್ಷಿಸಲು ೨೬

೧–೨ ಸಂಗಡಿಸಿ (ತ, ಥ, ದ, ಮ). ೩–೪ ಯಂತೆ (ತ, ದ). ೫–೬ ಬಿಲಂ (ನ). ೭–೮ ರಾಂ (ತ, ಥ, ದ, ಸ). ೯–೧೦ ಣಿತದ ದನಿಯ (ಸ). ೧೧–೧೨ ಸುದ (ತ, ದ, ನ). ೧೩–೧೪ ನೋಳ್ಪತಿ (ತ, ದ, ನ).

CC-0. Jangamwadi Math Collection. Digitized by eGangotri

ಮಂದಹಸಿತೋಲ್ಲಸಿತೆಯರು ಶರ
ದಿಂದುಬಿಂಬನಿಭಾನನೆಯರಿಂ
ದಿಂದಿರಾಸಿತವೇಣಿಯರು ಕಳಕಂಠವಾಣಿಯರು
ಇಂದಿರಾಜಾಸ್ಯಾಕ್ಷಿಯರು ಅರ
ವಿಂದಗಂಧಿಯರಂಗನೆಯರೆ
ಯ್ತಂದರೊಲವಿಂ ಬಸವರಸನಂ ಕಾಣ್ಬ ತವಕದಲಿ ೨೭

ಮುಡಿದ ಮುಡಿಗಳರಳ್ಗಳಿಗೆ ಬಿಗಿ
ವಡೆದ ತೋರ್ಗಳ ಕುಚಂಗಳಲುಗಲು
ತೊಡಿಗೆಗಳು ಥಳಥಳಿಸೆ ಕಡೆಗಂಗಳ ಬೆಳಗು ಹೊಳೆಯೆ
ನಡು ನಡುಗೆ ನಿಟಿ ಸಡಿಲೆ ನಡೆಗಳು
ಸಡಗರಿಸೆಯಂದುಗೆಗಳುಲಿಯಲ್
ಮಡದಿಯರು ಹರಿತಪ್ಪ ಕಡು ಸಂಭ್ರಮವನೇನೆಂಬೆ ೨೮

ವಿವಿಧವಿಧ ವಾದ್ಯಧ್ವನಿಗಳಂ
ತವೆಯಿನಿತು ತಾಂ ಕೇಳಲೀಯದು
ಕವಿ ಗಮಕಿ ವಾಗ್ಮಿಕಾದಿ ಜನಸಂಸ್ತವನ ರವವಿತತಿಲ
ಅವನವಗಡಿಸುತಿರ್ಕು ಸಾಕ್ಷಾತ್
ಶಿವ ಬಸವವಿಭುದರ್ಶನಾಗತ
ಯುವತಿಕಂಕಣ ಕಿಂಕಿಣೀ ಝಣಝಣಿತ ಘೋಷಣವು ೨೯

ಕುರುಳು ಷಟ್ಪದಿ ಮುಸುಡು ಶಶಿ ಕಣ್
ಸರಳು ಪೂರ್ಬೇ ಬಿಲು ತುಟಿಯೆ ತಳಿ
ರುರುಜಘನಚಕ್ರವೆ ಸುಚಕ್ರವು ದೋರ್ಲತೆಯೆ ಪಾಶ
ಪರಿಮಳದುಸುರೆ ತಂಬೆಲರು ವರ
ಸರಸವಚನವೆ ಮೂಲಮಂತ್ರವು
ತರುಣಿಯರ ಬಲವೇ ಬಲಂ ಕಾಮಂಗೆನಲು ಮೆಟಿವ ೩೦

೧–೨ ಯಿಂದಲರ್ಗ (ತ, ದ). ೩–೪ ದುತ್ತುಂಗ (ತ, ಥ, ದ). ೫ ಮಂ (ತ, ಥ, ದ, ನ). ೬ ದ್ಯಾ (ಅ, ಕ, ಚ, ತ, ದ, ನ). ೭–೮ ತತಿಯಂ (ತ, ದ, ನ). ೯ ಯೆ (ತ, ದ).

CC-0. Jangamwadi Math Collection. Digitized by eGangotri

ವನಜಮುಖಿಯರಗಣ್ಯಪುಣ್ಯಾಂ
ಗನೆಯಂರತಿ ಪುಣ್ಯಾತ್ಮ ಬಸವರ
ಸನನಸಮನಂ ಕಾಣ್ಬ ತವಕವನೇನ ಬಣ್ಣಿಸುವೆ
ವನಿತೆಯಾನಿನ್ನೊಡನೆ ಬಂದಪೆ
ನೆನುತ ಬೇಗದೊಳರ್ಥಿಗೆಡಿಸದೆ
ಘನಕುಚಿಯೆ ಬಾ ಯೆನುತ ಕಾಲ್ದೊಡಕೇಕೆ ಮಗುಳೆನುತ ೩೧

ಕೋಕಕುಚೆ ನಾಂ[೧] ಬಂದಡೇನಂ
ತೇಕತವೆ ನೀ ಹೋಗೆನುತ ರಜ
ನೀಕರಾನನೆ ನಿನ್ನ ಕಾಲಲಿ ನಡೆದಪೆನೆಯೆನುತ
ಈಕೆಯಂ ಗಂಡಂ ಕೆರಳದಿಹ
ನೇ ಕೆಳದಿ ಹೇಳೆನುತದಕೆ ಪತಿ
ಯೇಕೆ ಕೆರಳಿಹನೀ ಬಸವನಂ [೨]ನೋಡದಿರೆನೆ[೩]ನುತ ೩೨

ಉಟ್ಟುದಂ ಬಿಗಿದೆಯ್ದಿ ಬಾ ಮುಸು
ಕಿಟ್ಟೆನುತ ವೊಡಗೊಂಡು ಹೋದಡೆ
ವಟ್ಟಮೇ ನಿನಗೆನುತ ಮುಂದಿಯೊಳಗೆ ಹುಗದಿರೆನುತ
ನೆಟ್ಟನೆ[೪]ಯ್ತಾ[೫]ರೌ [೬]ದೆಸೆಗಳಂ[೭]
ದಿಟ್ಟಿಸದೆ ನೀನೆನುತ ಹೆಂಗುಸು
ದಿಟ್ಟಿಯಹಳಹಳಿದಕೆ ಸಂಭ್ರಮವೇಕೆ ನಿನಗೆನುತ ೩೩

ಕಾಣಲೇವೇಳ್ಕುಬಿಳ ಲೋಕ
ತ್ರಾಣ ಬಸವನನೆನುತ ಕೋಮಳೆ
ಮಾಣು ಭಕ್ತರನೆಯ್ದಿ ನೋಡಿದ ಬಳಿಕ ನೋಡುವೆವು
ಜಾಣೆಯಹೆ ನೀನೆನುತ ರಾಯನ
ಚೂಣಿ ಹೋದಹುದೀಸು ಸಂದಣಿ
ಕಾಣಿವೆಂದುವೆನುತ್ತ ನಿಲ್ಲದೆ ಬೇಗ ನಡೆಯೆನುತ ೩೪

---

೧ ಯಾಂ (ತ, ದ, ನ). ೨–೩ ನೋಡಿದೊಡೆಯೆ (ತ, ನ). ೪–೭ ಯ್ವಾನಾಲ್ (ಬ). ೫–೭ ಕಾಶದೆಸೆಗಳ (ಮ).

CC-0. Jangamwadi Math Collection. Digitized by eGangotri

ಕಂಡೆನಾಂ ಬಸವರಸನಂ ಭೂ
ಮಂಡಲದ ಶಂಭುವನೆ[೧]ನುತ[೨] ನೀ
ಕಂಡಡಂಗನೆ ನಿನ್ನ ಜನ್ಮಂ ಸಫಲವಾಯ್ತೆನುತ
ಕಂಡೆಯಾದಡೆ ಮನೆಗೆ ಹೋಹವ
ಪ್ರಂಡರೀಕೇಕ್ಷಣೆಯೆ[೧]ನುತ[೨] ಮುಂ
ಕೊಂಡು ನೋಡುತ್ತಿರದೆ ಹೋಗಲು ಸೊಗಸುವುದೆಯೆನುತ ೩೫

ಕೂಡಿಕೊಂಡೆಯ್ತಪ್ಪವರುಗಳು
ನೋಡುವವರುಡಕೊಡುವವರುಗಳು
ನೋಡಿ ಹೋಹವರೊಲಿದು ತಂದು ವಿಭೂತಿವೀಳೆಯವ
ಕೂಡೆ ಬಸವಂಗರ್ಪಿಸುವರುಂ
ನೋಡಿ ಬಹು ಪುಷ್ಪಾಂಜುಳಿಗಳಂ
ನೀಡಿ ಸತಿಯರು ನಮಿಸಿ ಶೋಭಾರತಿಯನೆತ್ತುವರು ೩೬

ಸ್ವಸ್ತಿ ದೀರ್ಘಾಯು ಪ್ರಶಸ್ತ ಸ
ಮಸ್ತ [೩]ಮಂಗಳ[೪]ಮೆಂದೆನುತ ತತ್
ಪ್ರಸ್ತುತದ ಹರಕೆಗಳನೀವರು ಪಂಡಿತೋತ್ತಮರು
ಹಸ್ತಮುಕುಳಿತರಾಗಿ ನವಗ
ದ್ಯಸ್ತವನ ಪದ್ಯಸ್ತುತಿಗಳಿಂ
ವಿಸ್ತರಿಸುವವರವರವರಿಗೆ ಕಡಂಗಿ ತು[೫]ತಿಸುವರು ೩೭

ಮಂದಗತಿಯಲಿ ನಡೆವ ರಾಯನ
ಮುಂದೆಸೆವ ಬಸವರಸನಂ ನಯ
ದಿಂದೆ ಮಂಗಳಪಾಠಕರು ಕೈವಾರಿಸುವರೊಸೆದು
ಸಂದಣಿಯ ಕಳಕಳದ ಮಂದಿಯ
ಗೊಂ[೬]ದಣಿಯನೊಲ್ಲದೆ ಕೆಲಬರರ
ವಿಂದವದನೆಯರುಪ್ಪರಿಗೆಗಳನೇಱಿ ನೋಡುವರು ೩೮

೧–೨ ನಲ್ (ತ, ದ). ೩–೪ ಶಂಕರ (ಸ). ೫ ನು (ತ, ದ, ನ). ೬ ದೊಂ (ಸ, ಥ, ದ).

CC-0. Jangamwadi Math Collection. Digitized by eGangotri

ಅತ್ತಲೊಬ್ಬಳು ಪ್ರೌಢೆ ಸತಿಯರ
ಮೊತ್ತಕೊಯ್ಯನೆ ಸನ್ನೆಯಂ ತೋ
ಱುತ್ತವೆಂದಳು ತಂಬಟದ [೧]ನಿಸ್ಸಾಳಕೋಟಿಗಳ[೨]
ಒತ್ತಿ ಬಾರಿ[೩]ಪ ವಾದ್ಯವಿತತಿಗ
ಳೆತ್ತಲುಂ ಪಿರಿದುಲಿಯಲುದ್ದ
ಕ್ಕೆತ್ತಿ ಚಾಂಗು ಬಲಾಯೆನಲು ನಂದಿಧ್ವಜವ್ರಜವು ೩೯

ತಾವೊಲಿದು ತೂಗಾಡಲಗ್ಗದ
ಬಾವುಲಿಯ ತೊಡರುಗಳ ವೀರಗ
ಣಾವತಾರದ ವೀರಭಕ್ತರು ವೀರಪಲಗೆಗಳಂ
ಆ ವಿಗಡರಡಿಗಡಿಗೆ ತಾಟಿಪ
ರಾವ ರಭಸದ ಬೊಬ್ಬೆಗಳಿಗೆ ದಿ
ಶಾವರರು ನಡುನಡುಗೆ ಭೋರನೆ ನಡೆವ ಮುಂದೆಸೆಯ ೪೦

ನೋಡು ಸರಿಸದೊಳೆನ್ನ ಬೆರಳಂ
ನೀಡಿದಾ ಸ[೪]ರಿಸ[೫]ದ ನಡುವವೊಡ
ಗೂಡಿ ನಡೆವ ಹಲವು ರಥಂಗಳ [೬]ಮುಂದೆಮುಂದೆಯಲಿ[೭]
ಆಡುವಾ ತ್ರಿಪುರಾಂತಕನ ನೆಱಿ[೮]
ಱೂಢಿಸಿದ ನರ್ತನದವರಿಗಾರ್
ಪಾಡನಲು ಪೊಂಗಿಱುಗಟೆಯ ಕೇಳಿಕೆಯ ಜೋಕೆಗಳ ೪೧

ಭೂರಿಯೆನಿಸಿದ ಸೊನ್ನಲಿಗೆಪುರ
ಚಾರು ಭೋಗದವರು ನಟಿಸುತಿಹ
ಪೇರಣೆಯ ಸೌರಾಷ್ಟ್ರನಾಥನ ಸಾಂಪ್ರದಾಯದಲಿ
ಸೇರಿಸಿದ ಚಿಂದುಗಳ ಜತಿಗಳ
ಹಾರವಿಪ ಸುಗತಿಗಳೊಳಾಡುವ
ಪೂರಿಸುವ ವೀಣಾದಿ ವಾದ್ಯಧ್ವನಿಗೆ ಕುಣಿವವರ ೪೨

೧–೨ ನಿಸ್ಸಹಣಾದಿಗಳ (ಅ, ಕ, ತ, ಥ, ದ, ಧ, ನ, ಮ). ೩ ಜಿ (ತ, ಥ, ದ, ನ). ೪–೫ ಸಿನ (ಸ). ೬–೭ ಸಂದಣಿಯ ಮುಂದೆ (ತ, ಥ, ದ, ನ).

CC-0. Jangamwadi Math Collection. Digitized by eGangotri

ಮೇಲೆ ಕೂಡಲಸಂಗಮೇಶನ
ಮೇಳವದವರ ರಾಗಿರಸದಿ ಸು
ಧಾಲಹರಿಯ ವಹಣಿಯೊಳೋಲಾಡುವರ ಬಿಜ್ಜಳನ
ಓಲಗದವರ ಚಿತ್ರದಾಟದ
ತಾಳಧರಿಗಳ ಕಹಳೆಕಾಱರ
ನಾಲಿಸುವ ಕಂಸಾಳಗಿತ್ತಿಯರತ್ತಲೊತ್ತರಿಸಿ ೪೩

ಸಂಗಡಿಸಿ ನಲಿನಲಿದು ನಡೆವ ತು
ರಂಗ ಕರಿ ಘಟೆಗಳ ವಿಕೀರ್ಣದ
ಹಿಂಗಡೆಯ ಬಿಜ್ಜಳಮಹೀಶನ ಮುಂಗಡೆಯೊಳೊಪ್ಪಿ
ತುಂಗನಾಗಾರೂಢನಾಗಿಯ
ಭಂಗ ಘನ ತೇಜಪ್ರಭಾಯತ
ಸಂಗದಿಂದೆಯ್ತಪ್ಪ ಮಾಹೇಶ್ವರರ ಮಧ್ಯದಲಿ ೪೪

ಒಲಿದು ಭಕ್ತರ ಮೇಲೆ ದೃಷ್ಟಿಗ
ಳೊಲೆಯೆ ನೋಡುತ್ತತಿ ವಿನಯ ನಿ
ಶ್ಚಲ ಭಯಾಸಕ್ತಾತ್ಮದಿಂದಭಿವಂದಿಸುತ್ತವರಿ
ಅಲಘು ಸನ್ಮಣಿ ಕಳಶರುಚಿವು
ಜ್ವಳಿಸೆ ಮುತ್ತಿನ ಸತ್ತಿಗೆಯ ತ
ಣ್ಣೆಳಲೊಳಿತ್ತರದಾಲವಟ್ಟದ ಸೊಗಸಿನೊಳಮರ್ದು ೪೫

ನತಸಚಿವಜನಮೌಳಿವರಮಣಿ
ವಿತತಿಯಂ ಕೂಡಿರ್ದ ಪಾದಾ
ನ್ವಿತನಖಿಂಗಳಲರ್ವ ಭದ್ರಾನೇಕಪವನೇಱಿ
ಅತಿಶಯೋನ್ನತಿವೆತ್ತ ಧರ್ಮ
ಬ್ರತಿಯನುತ್ತಮ ಭಕ್ತಿರತಿಯಂ
ಧೃತ ಸುಧೃತಿಯಂ ಕಲಿಮಲಾಪಹ ಪುಣ್ಯಸಂಸ್ಥಿತಿಯ ೪೬

೧–೨ ಸರಸ (ತ, ಥ, ದ, ನ). ೩ ರ್ಗ (ತ, ಥ, ದ, ನ).

CC-0. Jangamwadi Math Collection. Digitized by eGangotri

ಸರಸಕರುಣಾಮೂರ್ತಿಯಂ ಶಂ
ಕರಪರಾಕ್ರಮ ಚಕ್ರವರ್ತಿಯ
ನುರುತರೋಜ್ವಳಕೀರ್ತಿಯಂ ಸತ್ಯಪ್ರಪೂರ್ತಿಯನು
ಪರಮ [೧]ಮಹಿಮೋನ್ನಿದ್ರನಂ[೨] ಸುವಿ
ತರಣಗುಣಮಣಿಗಣಸಮುದ್ರನ
ನರಿದಿನತಿಬಲ ವೀರಭದ್ರನನಾದಿರುದ್ರನನು ೪೭

ಧೀರನಂ ಸದುಭಕ್ತಿನಿಜಶೃಂ
ಗಾರನಂ ನೋಡಿರೆ ಬಸವಸುಕು
ಮಾರನಂ ನೀವೆನಲು ಸರ್ಬರು ಕಂಡು ತಾವಾಗ
ಹಾರವಿಸಿ ಹೊಡವಂಟು[೩] ನಾರಿಗೆ
ನಾರಿಯೊರ್ವಳು [೪]ಮತ್ತೆಯಿಂದಳು[೫]
ವಾರಿಜಾನನೆಯೀತನೇ ನಂದೀಶ್ವರನ ಮೂರ್ತಿ ೪೮

ಕುವಲಯೇಕ್ಷಣೆ ಈತನೇ ತ್ರೈ
ಭುವನಪಾವನನಕ್ಕ ಈತನೆ
ಅವನಿಯೊಳು ಮೆಱಿ[೬]ವಿಂಗುಳೇಶ್ವರ ಬಾಗವಾಡಿಯಲಿ
ಯುವತಿ ಮಾದಲೆ ನೋಂತು ಪಡೆದೊ
ಪ್ಪುವ ಸುಪುತ್ರಂ ಮಡದಿಯೀತನೆ
ಸವಿನಯದಿ ಬಲದೇವನಿತ್ತಾತ್ಮಜೆಯ ವಲ್ಲಭನು ೪೯

ವನಿತೆಯೀತನೆ ಸಂಗಮೇಶನ
ಮನವೊಲಿಸಿ ನುಡಿಸಿದ ಮಹಾತ್ಮಂ
ವನಜಲೋಚನೆಯೀತನೇ ಈ ಮನುಜಪತಿಯಿಂದೆ
ಘನದ ಮನ್ನಣೆವೆತ್ತಮಾತ್ಯಂ
ವಿನುತಿಸಲು ಜಿಹ್ವೆಗಳ ಪರ್ಬವು
ಅನಘನಂ ನೋಡಿದಡೆ ಕಂಗಳ ಪರ್ಬವಾಯ್ತೆಮಗೆ ೫೦

೧–೨ ಮಹಿಮಾನಿದ್ರನಂ (ಸ). ೩ ಟ (ಸ). ೪–೫ ಹರುಷಿಸೆಂದಳ್ (ತ, ಥ, ದ, ನ).

CC-0. Jangamwadi Math Collection. Digitized by eGangotri

ಎನಿತು ಪುಣ್ಯಂಗೆಯ್ದೆವೋ ಮ
ಜ್ಜನನಸಾಫಲ್ಯತ್ವವಾಯ್ತೆಂ
ದೆನುತ [೧]ಹೇಳುತ ಬೆಸಗೊಳುತ[೨] ಜನರೆಯ್ದಿ ಕೀರ್ತಿಸಲು
ಮನುಜಪತಿ ಕಲ್ಯಾಣವಂ ಭೋ
ರನೆ ಹೊಗುತ ನಗರೋಪಕಂಠದೊ
ಳನುನಯದಿ ತಾಂ ಬಸವದಂಡಾಧಿಪನನೊಡಗೊಂಡು ೫೧

ಪರಿಮಿತ ಪುರೋಹಿತ ಸಚಿವ ಹಿತ
ಪರಿಕರಾವೃತನಾಗಿ ನಡೆತಂ
ದರಸನಾ ಭುವನಾಶ್ರಯಾಭ್ಯಂತರದೊಳಿರ್ದಾ[೩]ಗ
ಹರಲಿಖಿತವಪ್ಪೋಲೆಯೊಂದಂ
ಬರದೊಳಿರ್ದಾಕಸ್ಮಿಕಂ ಭೂ
ವರನ ಸಮ್ಮುಖದಲ್ಲಿ ಬೀಳಲು ಕಂಡದಂ ಕೊಂಡು ೫೨

ತೆಲುಗಲಿಪಿ ನಾಗರದ ಲಿಪಿ ಗ್ರಂ
ಥಲಿಪಿ ಹಳೆಗನ್ನಡದ ಲಿಪಿ ದ್ರಾ
ವಿಳಲಿಪಿಯು ಪಾ[೪]ರಿಸ[೫]ಲಿಪಿಯು ಲಾಳಲಿಪಿ ಮೊದಲಾದ
ಹಲವು ಲಿಪಿಗಳನೋದಬಲ್ಲ
ಗ್ಗಳದ ಕರಣಿಕರಂ ಕರೆಸಿ ಬಿ
ಜ್ಜಳಮಹೀಪತಿಯಾಗ ತಾ ಹಿಡಿದಿರ್ದ [೬]ಲೇಖೆಯನು[೭] ೫೩

ಆವರ ಕೈಯೊಳು ಕೊಟ್ಟು ಲೇಖಾ
ರ್ಥವನಱಿದು ನೀವನಿಬರುಂ ಹೇ
ಳುವುದೆನಲು ಕೈಕೊಂಡು ತಾವಾ ವೋಲೆಯುಂ ನೋಡಿ
ಶಿವಲಿಖಿತವದನೋದಲಱಿಯದೆ
ತವತವಗೆ ಬೆಱಿಗಾಗಿ ಪತ್ರವ
ನವನಿಪನ ಮುಂದಿರಿಸಿ ಬಿನ್ನೈಸಿದರು ಕರಣಿಕರು ೫೪

೧–೨ ಬೆಸಗೊಳಲುಂ ಮಮ (ನ). ೩ ರಲಾ (ತ, ದ, ನ). ೪–೫ ರಸ (ತ, ದ, ನ). ೬–೭ ಲೇಖಿವನು (ತ).

CC-0. Jangamwadi Math Collection. Digitized by eGangotri

ಈ ಲಿಪಿಗಳಂ ತಿಳಿದು ಯೋಚಿಸಿ
ಹೇಳುವಡೆ ಗುಹಗಣಪರಜವನ
ಮಾಲಿಮುಖ್ಯರ್ಗಲ್ಲದೀ ಮಾನವರಿಗರಿದೆನಲು
ಕೇಳಿ ನೃಪನಾರಾದಡಿಂತೀ
ವೋಲೆಯಂ ತಿಳಿದರ್ಗೆ ಕೊಡುವೆಂ
ಶ್ರೀಲಸದಮಾತ್ಯಾದಿ ಸಕಲ ನಿಯೋಗದೊಡೆತನವ ೫೫

ಎನಲೊಡನೆ ಬಸವಣ್ಣನಾ ಭೂ
ಪನ ಕರದೊಳಿರ್ದೋಲೆಯಂ ಕರ
ಮನುನಯದಿ ತಾನೀಸಿಕೊಂಡಭಿವಂದಿಸುತ ತೆಗೆದು
ಜನವಿ್ಮಿತಿಶಯಂಬಟ್ಟು ಪೊಗಳಲು
ಘನಮಹಿಮ ನೋಡಿದನು ಗೌರೀ
ಶನ ಲಿಖಿತಲೇಖಾರ್ಥವಂ ಗಳಗಳನೆ ನಿಮಿಷದಲಿ ೫೬

ನನ್ನಿಯಂ ಪೇಳುವೆನರಸ ಕೇ
ಳಿನ್ನು ಚಾಳೋಕ್ಯಾನ್ವಯದವರು
ಮುನ್ನ ನಿಕ್ಷೇಪಿಸಿದುದೆಂಬತ್ತೆಂಟುಕೋಟಿ ಧನ
ನಿನ್ನ ಸಿಂಹಾಸನದ ಕೆಳಗಿದೆ
ಯಿನ್ನು ಸಂಶಯವೇಕಗಿಸು ನಾ
ನಿನ್ನ ಕಣ್ಮನವೆಯ್ದೆ ತಣಿಯಲು ತೋಱಿದಪೆನೆನಲು ೫೭

ಜನಿತಹರುಷಿತವದನನಾಗುತ
ಜನಪನಾಕ್ಷಣವಗಿಸಿ ಮುಚ್ಚುಳ
ನನಿತಱಿಕೊಳು ತೆಗೆಯಿಸಲದಱಿ ಸತ್ಪ್ರಭೆಯನೇವೊಗೞ್ದೆ
ದಿನಕರಂ ಬಂದುದಯವಾದನೊ
ಧನವರಂ ಬೈಚಿಟ್ಟ ನಿಧಿಯೋ
ಕನಕಗಿರಿ ಮೂಡಿದುದೊ ಯೆನಲುಜ್ವಳಿತವಾಗಿರಲು ೫೮

---

೧ ರ (ತ, ಥ, ದ, ನ).

CC-0. Jangamwadi Math Collection. Digitized by eGangotri

ಅರಸನೀಕ್ಷಿಸುತದುಭುತಾಂತಃ
ಕರಣನಾಗುತ ಸಭೆಯು ಮುಕುಳಿತ
ಕರಕಮಲರಾಗುತ್ತ ನೋಡುತ್ತತಿಶಯಮಿದೆನುತ
ಸರಸ ಮೃದುಮಧುರೋಕ್ತಿಗಳಿನೆ
ಲ್ಲರು ನು[೧]ತಿಸುತಿರೆ ಸಸ್ಮಿತಾನನ
ಸರಸಿರುಹನಾಗುತ್ತ ಬಸವಂ ತತ್‌ಸಮಯದಲ್ಲಿ ೫

ಭೂವರನ ಸಿಂಹಾಸನದ ಕೆಳ
ಗೋವಿ ತೀವಿದ ವಸ್ತುವಂ ತೆಗೆ
ವೀಯೆಡೆಯೊಳಾ ಬಸವನ ಕರಸ್ಪರ್ಶಮಾತ್ರದಲಿ
ದೇವಲಿಪಿಯಲಿ ಬಂದ ಲೇಖೆಯೊ
ಳಾವ ಸಂಖ್ಯೆಯವಿತ್ತೊವದಱಿಂ
ಭಾವಿಸಲು ನೂರ್ಮಡಿಯೆನಿಸಿ ಧನರಾಶಿಯಾಗಿರಲು ೬

ಲಕ್ಕಸಂಖ್ಯೆಯ ಪೊನ್ನ ರಾಶಿಗ
ಳುಕ್ಕುತಿರೆ ಬಿಜ್ಜಳನು ನೋಡುತ
ಬೆಕ್ಕಸಂಬಟ್ಟಿಕ್ಕಜಂ ಮಿಕ್ಕಲುಗಿಸುತ ಶಿರವ
ಆಕ್ಕಱಿಂದಿದಿರೆದ್ದು ಮಂತ್ರಿಗ
ಳಿಕ್ಕೆಲದೊಳಿರೆ ಬಸವವಿಭುವಂ
ತಕ್ಕೈಯಿಸಿ ಮುಂಡಾಡಿ ಸಲೆ ಕೊಂಡಾಡಿ ಕೈಮುಗಿದು ೭

ಈ ಪುರುಷನಲ್ಲಾ ಯುಗಾದಿಮ
ಹಾಪುರುಷರಿಗೆ ಮೊದಲ ಪುರುಷನು
ಈ ಪುರುಷನಲ್ಲಾ ತ್ರಿಪುರುಷ ಗುಣತ್ರಯದ ಪುರುಷ
ಈ ಪುರುಷನಲ್ಲಾ ತ್ರಿಭುವನ
ಸ್ಥಾಪನಾಚಾರ್ಯಕ್ಕೆ ಪುರುಷನು
ಈ ಪುರುಷನೈತಂದನಿಂದೆಮ್ಮಂ ಸಲಹಲೆಂದು ೮

೧ತು (ತ, ಥ, ದ, ನ).

CC-0. Jangamwadi Math Collection. Digitized by eGangotri

ತನ್ನ ೧ಭಾವಸ್ಪರ್ಶದಿಂದು
ತ್ಪನ್ನವಪ್ಪವಖಿಳ ಜಗಂಗಳು
ತನ್ನ ದೃಷ್ಟಿಸ್ಪರ್ಶದಿಂ ಬೆಳೆವುದು ಭುವನವಿತತಿ
ತನ್ನ ಹಸ್ತಸ್ಪರ್ಶದಿಂ ಸಂ
ಪನ್ನಿಕಾಯವಜೇಯವಪ್ಪುದು
ತನ್ನ ವಾಚಸ್ಪರ್ಶದಿಂದಹುದಾಗಮಶ್ರೇಣಿ ೬೩

ಎರಡು ಮೂಱಿಂ ಮೂಱಿನಾಲ್ಕುಂ
ಪರಿವಿಡಿದು ನಾಲ್ಕೈದು ಐದಾಱಿಪ್
ಪೆರಸು ವಿತರಣ ಧೈರ್ಯ ವಿದ್ಯಾಗೌರವಂಗಳಲಿ
ಸುರಮಹೀಜನರಾಜ ರುದ್ರರ
ಚರಿತೆಗಳಿಗಿಮ್ಮಡಿಯೆನಿಸಿ ಸತ್
ಪುರುಷನಿಲ್ಲಿಗೆ ಸಲಹಬಂದನು ಬಸವವಿಭುವೆನುತ ೬೪

ಧರಣಿಪತಿಯು ಸಕಳನಿಯೋಗಂ
ಪುರಜನಂಗಳು ಕೀರ್ತಿಸುತ್ತಂ
ಕರಮತಿಶಯವೆನುತ್ತ ರಾಯಂ ಬಸವಮಂತ್ರಿಯನು
ಕರೆದು ಮನ್ನಣೆವೆತ್ತ ಪನ್ನಿ
ಬ್ಬರು ಮಹಾಮಾತ್ಯರೊಳಗಗ್ರೇ
ಶ್ವರನೆನಲು ಮಿಗೆ ಪಿರಿಯ ಗದ್ದುಗೆಯಲ್ಲಿ ಕುಳ್ಳಿರಿಸಿ ೬೫

ಸುರುಚಿರಾಂಬರ ನೂತ್ನರತ್ನಾ
ಭರಣಕಿರಣಾಲಂಕರಣಸಂ
ಧರಣದಿಂದಾದರಿಸಿ ಬಸವಂಗಾತನಿಂತೆಂದ
ಧರೆಗಖಿಳಸಾಮ್ರಾಜ್ಯಪೂಜ್ಯ
ಕ್ಕರಸು ನೀನೇಯಂತುಮಲ್ಲದೆ
ಹರಣವೆನ್ನರ್ಥಕ್ಕೆ ಕರ್ತಂ ನೋಡಿವುದ್ಧರಿಸು ೬೬

೧–೨ ಚಿತ್ತ (ಬ, ಕ).

CC-0. Jangamwadi Math Collection. Digitized by eGangotri

ಬಸವರಾಜಾ ನಿನ್ನನೆಲ್ಲಾ
ದೆಸೆಗೆ ನಂಬಿದೆನೆನುತ ಮನ್ನಣೆ
ಪಸರಿಸಲು ಬಿಜ್ಜಳಮಹೀಪತಿಯೆಂದ ನುಡಿಗಳಿಗೆ
ಎಸೆವಖಿಳ ಲೋಕಂಗಳಂ ರ
ಕ್ಷಿಸುವ ಶಂಭುಗೆ ನಿನ್ನನೊರ್ಬನ
ನೊಸೆದು ರಕ್ಷಿಸುವುದು ಘನವೆ ನೀನಿನ್ನು ಕೇಳೊಂದ ೬೭

ವೈರವಿಲ್ಲದೆ ಭಕ್ತ್ಯಾವಿತತಿಗೆ
ಸೇರಿ ಆಂಜಿರು ಸಾಕು ಬಳಿಕೀ
ಧಾರುಣಿಯನಾಳಿಸುವುದೊಂದೇನರಿದೆ ನಾ ನಿನ್ನ
ನೀರಧಿಯ ಪರಿಯಂತ ಭೂವಿ
ಸ್ತಾರಮಂ ಪೊರೆಯಿಸುವೆನೆಂದನು
ಸಾರಿಯಾಗಿಂತುಪಚರಿಸಿ ನುಡಿಯಲ್ಕೆ ಬಿಜ್ಜಳನು ೬೮

ತರುಗಳೊಳು ಕಲ್ಪಾವನೀಜಂ
ಗಿರಿಗಳೊಳು ಕನಕಾದ್ರಿ ರತ್ನನಿ
ಕರದೊಳಗೆ ಚಿಂತಾಮಣಿಯು ಧೇನುಗಳೊಳಮರದುಘ
ಹರಿಮುಖಾಖಿಲ ದೇವರೊಳು ಶಂ
ಕರನುಮಿಪ್ಪವೊಲೊಪ್ಪಿದನು ಬಸ
ವರಸನೀ ಮಂತ್ರಿಗಳ ಮಧ್ಯದೊಳಿನುತ ಕೊಂಡಾಡಿ ೬೯

ಮತ್ತೆಯುಂ ಮಣಿಭೂಷಣಂಗಳ
ನಿತ್ತು ಸತತಾನಂದಹರುಷಿತ
ಚಿತ್ತದಿಂದಂ ಕಳುಹಿದನು ಕಳುಹಿದಡೆ ಬಸವಣ್ಣ
ಇತ್ತ ಶಿವಗಣಸಹಿತ ಸಮ್ಮೃದ
ವೆತ್ತು ತಾನೈತಂದು ಬಲದೇ
ವೋತ್ತಮನ ಭಿರಿಯಶಮನೆಯೆ ತನ್ನರಮನೆಯದಾಗೆ ೭೦

೧–೨ ರುಗಳಿಗೆ (ಧ, ಸ).

CC-0. Jangamwadi Math Collection. Digitized by eGangotri

ಬಂದು ತನ್ನ ನಿಯೋಗದೋಲಗ
ದಿಂದ ಶಿವಕೇಳೀವಿನೋದಾ
ನಂದಸುಖದಿಂ ವರ್ಧಮಾನೈಶ್ವರ್ಯನಾಗಿಂತು
ಮುಂದೆ ಬಿಜ್ಜಳನಖಿಳರಾಜ್ಯವ
ನಂದದಿಂ ಪ್ರತಿಪಾಲಿಸುತ್ತುಮ
ಮಂದಕೀರ್ತಿಯೊಳೆಸೆವ ಬಸವನ ಭಾಷೆಯೆಂತೆನಲು ೭೧

ಅಂತು ಸಂಧಿ ೫೯ಕ್ಕಂ ಪದಂಗಳು ೩೫೬ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

SRI JAGADGURU VISHWARADHYA
JNANA SIMHASAN JNANAMANDIR
LIBRARY,
Jangamwadi Math, VARANASI,
Acc: No. 3739
1018

CC-0. Jangamwadi Math Collection. Digitized by eGangotri

ಸಂಧಿ : ೬

*

ಸೂಚನೆ : ಧನಕನಕ ವಸ್ತ್ರಾಭರಣವಾ
ಹನ ನಿಚಯಮಂ ಲಿಂಗ ಜಂಗಮ
ಕನವರತವಾರಾಧಿಸುತ್ತಂ ಭಜಿಸುವನು ಬಸವ

ನಿಚ್ಚಲುಂ ಶಿವರಾತ್ರಿಯಂ ಮಾ
ಳ್ಪಚ್ಚರಿಯೆನಿಪ ಭಾಷೆ ಭಕ್ತರ
ನಚ್ಚ ಶಿವನೆಂದಿಪ್ಪ ಭಾಷೆ ಶಿವೈಕ್ಯರೆಗ್ಗುಗಳ
ಎಚ್ಚರಿಸದಿಹ ಭಾಷೆ ಶರಣರ
ಹೆಚ್ಚು ಕುಂದುಗಳಂ ನುಡಿಯದಿಹ
ಸಚ್ಚರಿತ್ರದ ಭಾಷೆಯನುವನು ವಂಚಿಸದ ಭಾಷೆ ೦

ಮೃಡನನಾದಡೆಯೊಂದು ಬಾರಿಗೆ
ಕಡಗಿ ಬೇಡದ ಭಾಷೆಯೇನಾ
ದಡೆ ಬಯಸಿದೊಡವೆಗಳನಡಿಯಿಡದೀವುದದು ಭಾಷೆ
ನುಡಿದು ಹುಸಿಯದ ಭಾಷೆ ನೆನಹಿನ
ಗಡಣೆಯೆಂತೆಂತೋರೆಯಿಲ್ಲದೆ
ನುಡಿವ ಭಾಷೆ ನುಡಿಗಳಹಗೆ ತಾಂ ನಡೆಸುವುದು ಭಾಷೆ ೨

---

* ರಾಗ : ದೇಶಿ (ಚ, ಮ, ಡಾ) : ವಸಂತಭೈರವಿ (ತ).

CC-0. Jangamwadi Math Collection. Digitized by eGangotri

ಛಲವನಿಳಿಯದ ಭಾಷೆ ಭಕ್ತರ
ಸಲಿಗೆಯಂ ಸಲಿಸುವುದು ಭಾಷೆಯ
ಚಲಿತ ದಾಸೋಹವನವಿರತಂ ಮಾಡುವುದು ಭಾಷೆ
ನಲಿದು ಕನಸಿನೊಳಂ ಪಿನಾಕಿಗೆ
ಗೆಲವನೀಯದ ಭಾಷೆ ಭಕ್ತರು
ಗಳಿಗೆ ಗೆಲವಂ ಕೊಟ್ಟು ತಾ ಶರಣೆಂಬುದದು ಭಾಷೆ ೩

ಪರಸಮಯಿಗಳ ದರ್ಪವಂ ಸಂ
ಹರಿಪ ಭಾಷೆ ಕುತರ್ಕದಿಂ ಮ
ತ್ಸರಿಪ ಪರವಾದಿಗಳನೊಮ್ಮೆಯು ಸೋಲಿಸುವ ಭಾಷೆ
ಪರಮನಂ ನಿಂದಿಸುವವಂದಿರ
ನೊರಸಿಕಳೆವುದು ಭಾಷೆ ಹರಭ
ಕ್ತರನುದಾಸೀನದಿ ನುಡಿವ ನುಡಿಗೇಳದಿಹ ಭಾಷೆ ೪

ಹರಶರಣಪರ[೧]ತಂತ್ರ[೨]ಭಾವದಿ
ಬೆರಸಿ ಚರಿಸುವ ಭಾಷೆಯೆಂದುಂ
ಹರಗಣಾನರ್ಪಿತವನಿನಿತಂ ಮುಟ್ಟದಿಹ ಭಾಷೆ
ಶರಣರೇನೆಂದಡೆಯವರಿಗು
ತ್ತರವನೀಯದ ಭಾಷೆ ಜಂಗಮ
ವರರನಾಗಳು ಪ್ರಾಣಲಿಂಗವೆನಿಪ್ಪುದು ಭಾಷೆ ೫

ನರರುಮಂ ಯಾಚಿಸದ ಭಾಷೆಯಿ
ತರಜನಕೆ ಕೈಮುಗಿಯದದು ನಿ
ಬ್ಬರದ ಭಾಷೆ ಭವೌಘಬಾಧೆಗೆ ಸಿಲುಕದಿಹ ಭಾಷೆ
ಕರಣವಿಷಯಕ್ಕಿಂಬುಗೊಡದ
ಚ್ಚರಿಯ ಭಾಷೆ ಷಡರಿಗಳಂ ಪರಿ
ಹರಿಪ ಭಾಷೆ ಶಿವೈಕ್ಯಭಕ್ತಿಯನಲರಿಸುವ ಭಾಷೆ ೬

೧–೨ ತತ್ವ (ಬ). ೩–೪ ಧರಣಿ (ದ).

CC-0. Jangamwadi Math Collection. Digitized by eGangotri

ನೆಟ್ಟನೀಶಾಚಾರವಂ ಮುಂ
ದಿಟ್ಟು ಬೆಳೆಯಿಪ ಭಾಷೆ ತಲೆ ಪಟ್ಟಿ
ದಟ್ಟೆಯುಳಿದಡೆ ಶರಣನೆನುತ್ತಿಹ ಭಾಷೆ ತಲೆಗಟ್ಟಿ
ಬಿಟ್ಟಡಂ ವಂದಿಸುವ ಭಾಷೆಯು
ಮುಟ್ಟಿದಡೆ ಹಿಮ್ಮೆಟ್ಟದಗ್ಗದ
ಘಟ್ಟಿಭಾಷೆಯಿವೆಲ್ಲವಂ ತುದಿಮುಟ್ಟಿಸುವ ಭಾಷೆ ೭

ಬಸವರಾಜನ ಘನಚರಿತವಂ
ಬಸವರಾಜನೆ ಬಲ್ಲನಲ್ಲದೆ
[೧]ವಶಮೆಯಾರಿಗೆ ಗಣಿದಿಸಲು ವಾಙ್ಮನಕಗೋಚರವು
ಅಸಮ ವೀರದ ಪೆಂಪು ಧೈರ್ಯದ
ರಸದ ಸೊಂಪು ವಿವೇಕದಿಂಪು ವಿ
ಕಸಿತಸುಮತಿಯಲಂಪು ಶಾಂತಿಕೆಯರಳ ಪೊಸ ಕಂಪು ೮

ಜ್ಞಾನವಹ್ನಿಯ ಬಾಗು ಸಾರಾ
ನೂನ ಭಕ್ತಿತ್ರಿತಯದಾಗು ಸು
ಮಾನಸದ ಬ್ರತಿಗಳಿಗೆ ಲಾಗುವದನ್ಯರಿಗೆ ಮೇಗು
ದಾನ ಧರ್ಮ ಖ್ಯಾತಿ ಭಕ್ತ
ಸ್ಥಾನ ಮಧ್ಯಜ್ಯೋತಿ ಸಂತತ
ಸೂನೃತಂಗಳ ಭೂತಿ ಶೈವಾಚಾರಸಂಪ್ರೀತಿ ೯

ಸವಿನಯಂಗಳ ಮೇಟಿ ದಾಸೋ
ಹವನಲರ್ಚುವ ಜೇಟಿ ಮೃತ್ಯುವ
ಜವನ ಮಾರಿಯ ದಾಟಿ ವೇದಾಂತಾದಿಗಳ ಪಾಟಿ
ಶಿವನ ಪೊಸಕರವಾಳು ಸುಖಿದನು
ಭವದ ಬಾಳು ವಿವೇಕತತ್ವೋ
ತ್ಸವದ ಸೂಳು ದಯಾಳು ಶಂಕರನೊಲುಮೆಯುಳ್ಳಾಳು ೧೦

---

೧ ವಸುಮತಿಗೆ (ಮ); ಸಸನೆಯಾರಿಗೆ (ಚ)

CC-0. Jangamwadi Math Collection. Digitized by eGangotri

ವಸುಧೆಯೊಳು ಸಾಮಾನ್ಯಭಕ್ತನೆ
ಬಸವನೆಂದೆಲ್ಲಾ ಜನಂ ಕೀ
ರ್ತಿಸುತಿರಲುವೊಂದೊಂದು ನಿಯಮಾಚರಣೆ ಕುಱಿಹಾಗೆ
ಸಸಿನೆ ಭೋರೆಂದಾತನಂ ದ
ರ್ಶಿಸುವ ತವಕದಿ ಬಪ್ಪವರನು
ಪ್ಶಿಸುವ ನಿಜನೇಮಂಗಳಂ ಸಲೆ ಸಲಿಸಿದಹನೆಂದು ೧೧

[೧]ಆರ್ತದಿಂ[೨] ನಡೆತಪ್ಪವರ್ಗಳು
ಕೀರ್ತಿಪರನೋ ಭಕ್ತಿಪಥದಿನ
ವರ್ತಿಯೋ ಆರೈದು ನೋಡುವೆವೆನುತ ಬಪ್ಪವರು
ಕರ್ತು ಭೃತ್ಯಾಚಾ[೩]ರಿ ಪಶುಪತಿ
ಮೂರ್ತಿಬಸವಾಮಾತ್ಯನಿಂ ಸಂ
ಪೂರ್ತಿಯಾಗಲು ಪೂಜೆಪಡೆದಪೆವೆನುತ ಬಪ್ಪವರು ೧೨

ಆತನಂ ನೋಡಿದಡೆ ಸಾಕು ಪು
ನೀತ ಭಕ್ತಿಗುಣತ್ವವಹುದೆಂ
ಬಾತುರದೊಳೆಯ್ತಪ್ಪವರ್ಗಳು ಬಸವತೀರ್ಥಕ್ಕೆ
ಪ್ರೀತಿಯಿಂದೆಯ್ದುವ ಪರುಷೆಯೆನೆ
ಭೂತಳಂ ಬೆಸಲಾದುದೆಂಬ ವಿ
ಖ್ಯಾ[೪]ತಿಯಲಿ ನೆಱಿ[೫] ತೀವಿ ಸಂದಣಿಸುತ್ತ ಬಪ್ಪವರು ೧೩

ಕರಿತುರಂಗಾಂದೋಳಸಂಗತ
ವರ[೬]ರಥಾ[೭]ಂಗಾರೂಢರಾಗಿ ಪ
ಸರಿಸಿ ಬಪ್ಪವರುಂ ಪ್ರಕಟರುದ್ರಾಕ್ಷಲಕ್ಷಣದ
ಗುರುಮಕುಟವರ್ಧನರು ಮಂಗಳ
ತರ ಭಸಿತಸರ್ವಾಂಗಶಾಸನ
ಧರರು ನವವಸ್ಫೋಪವೇಷ್ಟಿತ ಘನಜಟಾಭರರು ೧೪

೧–೨ ಆರ್ಥದಿಂ (ಆ, ಕ, ಚ, ಥ, ಧ, ಮ); ಆರ್ತಿಯಿಂ (ಬ). ೩ ಕಾ (ಮ). ೪ ಖ್ಯಾ (ಸ). ೫–೬ ಶತಾ (ತ, ದ).

CC-0. Jangamwadi Math Collection. Digitized by eGangotri

ಉತ್ತಮಾಂಗಾಭರಣ ಶಾಸನ
ವೆತ್ತ ಕಕ್ಷ ಕರಸ್ಥಲ ಗ್ರೀ
ವೋತ್ತಮಾಂಗೋರಸ್ಥಲಾಧಿಕ ಲಿಂಗಧಾರಕರು
ಉತ್ತಮೋತ್ತಮ[೧] ಯತಿಗಳುಂ ಸತ್
ಚಿತ್ತ ಸುವ್ರತಿಗಳು ಸುಶೀಲೋ
ದಾತ್ತಚರಿತರನಘರಿತರ ಪಾಕಾದಿವರ್ಜಿತರು ೧೫

ಪರಮ ಲಿಂಗಧ್ಯಾನವಂತರು
ವರಶಿವೈಕ್ಯರು ಭವಿಜನಸಮಾ
ಚರಣಸಂಭಾಷಣಸದಾಸಂಸರ್ಗದೂರಕರು
ನಿರವಧಿಸ್ಥಿತ ಲಿಂಗನಿಷ್ಠಿತ
ಸುರುಚಿರೇಂದ್ರಿಯರತುಳ ಚಿದಮಳ
ನಿರತರುಂ ಪ್ರಚ್ಛನ್ನಲಾಂಛನರುಂ ಸಲಾಂಛನರು ೧೬

ಮಾನಿಗಳು ಮೌನಿಗಳು ಸ್ವಚ್ಛಶಿ
ವಾನುಭಾವೇಚ್ಛಾತ್ಮಸುಖಿಗಳು
ದಾನಿಗಳು ಗಾಯಕರು [೨]ನಟಿಕರು[೩] ನವರಸಾಯತರು
ದೀನರಾರ್ಯರು ವೇದವೇತ್ತರ
ನೂನತತ್ವಜ್ಞರು ಸಕಳ ವಿ
ದ್ಯಾನಿಪುಣರುಂ ಕವಿಗಮಕಿವಾದಿಗಳು ವಾಗ್ಮಿಗಳು ೧೭

ಲಾಳ ಮಾಳವ ಸಿಂಧು ಸಿಂಹಳ
ಗೌಳ ಗುರ್ಜರಮುರು ಮಗಧ ಪಾಂ
ಚಾಲ ಮತ್ಸ್ಯ ಕುರಂಗ ವಂಗ ಕಳಿಂಗ [೪]ಬಂಗಾಳ[೫]
ಕಾಲವಾಂಧ್ರ ತುರುಷ್ಕ ಕುರು ನೇ
ಪಾಳ ಕುಂತಳ ಕುಕುರ ಬರ್ಬರ
ಚೋಳ ಪಾಂಡ್ಯ ತುಳುವ ಮಲಯ ಮಲೆಯಾಳ ಕರ್ಣಾಟ ೧೮

೧–೨ನ್ನತ (ತ, ದ, ಸ). ೩–೪ನಟರ್ಗಳ್ (ತ, ದ). ೫–೬ಗಂಗಾಂಗ (ತ, ಥ).

CC-0. Jangamwadi Math Collection. Digitized by eGangotri

ಚೀರ ಕೊಂಕಣ ಪಲ್ಲವಕ ಹ
ಮ್ಮೀರ ಜಾಳಾಂದ್ರ ದ್ರವಿಳ ಕಾ
ಶ್ಮೀರ ಬಾಹ್ಲಿಕ ಭೋಟಭೂ ಕಾಂಬೋಜ ಕನ್ನೋಜ
ಸೂರಸೇನ ವರಾಳ ಖರ್ಪರ
ಪಾರಿಯಾತ್ರಕ ಕೇರಳಮುಖಾ
ಪಾರ ದೇಶಂಗಳೊಳಿಸೆವ ಜಂಗಮವು[೧] ಭಕ್ತಾಳಿ ೧೯

ಎಡೆಯೆಡೆಯೊಳೀ ಗಡಣೆಯಿಂದೆಡೆ
ವಿಡದೆ ನಡೆವುತ್ತಿರಲು ಪೊಡವಿಯೊ
ರ್ಗುಡಿಸಿತೆನೆ ಮೃಡಭಕ್ತಗಣತತಿ ತಂಡತಂಡದಲಿ
ಸಡಗರದೊಳೆಯ್ತರೆ ಮೃಗಮದದ
ಷಡುಸಮಾರ್ಜನೆ ಮಾರ್ಗದೊಳು ಬೆಡ
ಗಡರೆ[೨] ಮುಕ್ತಾಫಳಸಮುಜ್ವಳರಂಗವಾಲಿಗಳ ೨೦

ಚೂತ ಪಲ್ಲವ ಮುಕುರ ಮೌಕ್ತಿಕ
ಜಾತಿಮಣಿಗಣ ಮಕರತೋರಣ
ಭಾತಿ ಮಿಗೆ ಉತ್ತುಂಗ ವೃಷಭಸಮೇತವಾಗೆಸೆವ
ಕೇತನಾನೀಕಪ್ರಕೀರ್ಣದೊ
ಳಾತು ತೋಱುವ ವ್ಯಾಸಹಸ್ತೋ
ಪೇತಪೂರಣವಾತಪೂರಣರಾಜಿ ರಾಜಿಸಲು ೨೧

ಅಂಬರಸ್ಥಳವಂ ಮುಸುಕಿದಾ
ಡಂಬರದ ನಡೆ ಚಪ್ಪರಂಗಳು
ಬಿಂಬಿಸುವ ಧವಳಾತಪತ್ರವು [೩]ಚಾಮರಾ[೪]ದಿಗಳು
ತುಂಬಿ ತತವಿತತಾದಿ ವಾದ್ಯಕ
ದಂಬದಗ್ಗದ ಕೇಳಿಕೆಗಳು[೫]ಲಿ
ವಿಂ[೬] ಬಧಿರವಾಗಲು ದಿಶಾವಳಯಂಗಳೋರಂತೆ ೨೨

೧ಸು (ತ, ದ, ನ). ೨ರಿ (ಧ, ಸ). ೩–೪ ಚಮರಿರುಹಾ (ತ, ಥ, ದ, ನ).
೫–೬ ಲುಪಿಂ (ತ, ದ, ನ).

CC-0. Jangamwadi Math Collection. Digitized by eGangotri

ರಭಸದಿಂದೆ ವುಘೇ ವುಘೇ ಚಾಂ
ಗು ಭಲವೆಂಬ ಮಹಾನಿನದದಿಂ
ನಭವದಿರೆ ಘೂರ್ಮಿಸಲು ಬಸವಂ ಭಕ್ತಿಭಂಡಾರಿ
ಸುಭಗ ಸಜ್ಜನ ಭಕ್ತಿಯುಕ್ತಿ
ಪ್ರಭವಿಸಲು [೧]ಪ್ರತಿದಿನವತುಳ[೨] ಶಿವ
ವಿಭವವೆಸೆಯಲು ಭಕ್ತಕೋಟಿಯನಿಂತಿದಿರ್ಗೊಳುತ ೨೩

ಮಂಗಳಪ್ರಮುದೋದಿತಾಸಂ
ಗಾಂಗವಿಕ್ರಿಯೆಗಳೊಳು ತನು ಮಿಗೆ
ಪೊಂಗಿ ಪೊಂಗಿ ಸವಿನಯ ಭಯಭಕ್ತಿಪ್ರಯುಕ್ತಿಯಲಿ
ಲಿಂಗಭಕ್ತಾಂಘ್ರಿಗಳ ಮೇಲ
ಷ್ಟಾಂಗವೆಱಗಿ ನಮಿಸಿ ನಮಿಸಿ ವರ
ಜಂಗಮಚರಣರಜಶಯನದಲಿ ತಾಂ ಪೊರಳಿ ಪೊರಳಿ ೨೪

ಹರಶರಣಕರುಣಾಮೃತದ ಮಳೆ
ಸುರಿಯೆ ತೊಪ್ಪನೆ ತೋದು ತೋದೀ
ಶ್ವರಗಣಾಂಘ್ರಿಜಲದ ಕಡಲೊಳೋಲಾಡಿವೋಲಾಡಿ
ಪರಮ ಭಕ್ತಪ್ರಮುದಿತಾರ್ಘ್ಯೋ
ತ್ಕರ ಬಹಳ ನಿಶ್ಚಲ ಸಪರ್ಯಾ
ವಿರತಸಂಪದದಿಂದೊಡಲು ಕರಮುಬ್ಬಿ ಕರಮುಟ್ಟಿ ೨೫

ವೀರಭಕ್ತಸಮುಚಿತ ಪರತಂ
ತ್ರೋರುಪೂಜೆಯೊಳೊಲಿದೊಲಿದು ಮಾ
ರಾರಿಗಣನಿತ್ಯಪ್ರಸಾದಾನುಭವಸೌಖ್ಯವನೆ
ಹಾರಿ ಹಾರಿ ವಚೋಕ್ತಿಯಲಿ ಬಾ
ಯಾರೆ ನುತಿಸಿ ನುತಿಸಿಯವರನತಿ
ಸಾರಮೃದುಗಾಂಧರ್ವದಿಂ ಪಾಡುತ್ತ ಪಾಡುತ್ತ ೨೬

೧–೨ ತವಕದಿನಮಳ (ಧ, ಸ).

CC-0. Jangamwadi Math Collection. Digitized by eGangotri

ದರಹಸಿತಮುಖವಲರಿ ನೋಡು
ತ್ತಿರೆ ತದಾಸ್ಥಾನದೊಳೆ ನಲಿ ನಲಿ
ದುರುತರ ಪ್ರಿಯಪರವಶದಿ ತನ್ನಂ ಮಱಿದು ಮಱಿದು
ಪರಿಪರಿಯೊಳಿಷ್ಟಾರ್ಥರಿಗೆ ವಿ
ಸ್ತರಿಸಿ ತನು ಮಾನಸ ಧನಂಗಳ
ನರಿದಿದೆನಲಿಂತಿತ್ತು ತಾಂ ಹೊಡವಂಟು ಹೊಡವಂಟು ೨೭

ಅರ್ಥಿಯೊಳು ಪರತತ್ವಸ್ವಾನುಭ
ವಾರ್ಥಿಗಳಿಗೆ ಮಹತ್ವತತ್ವಮ
ನರ್ಥವಿಸಿಯರ್ಥವಿಸಿ ತತ್ಸುಖರಸವನೆಱೆದೆಱೆದು
ಪ್ರಾರ್ಥಿತತ್ರಿವಿಧೈಕಭಕ್ತಿಸು
ಪಾರ್ಥಿಗಳನಾ ತ್ರಿವಿಧಭಕ್ತಿಸ
ದರ್ಥಸುಖಿತರಶರಧಿಯಲಿ ನೆಱೆಯದ್ದಿ ನೆಱೆಯದ್ದಿ[೧] ೨೮

ಹೇಮ ನವ ನವ ರತ್ನವಸ್ತ್ರ
ಸ್ತೋಮದಾನಾರ್ಥಿಗಳನಂಬರ
ಹೇಮಮಣಿಗಣ ಭೂಷಣಾವಳಿಯಿಂ ತಣಿಸಿ ತಣಿಸಿ
ಕಾಮಭೋಗಾಪೇಕ್ಷಿತರ್ಗಂ
ಕಾಮಿನೀರತ್ನಂಗಳಂ ಸತ್
ಪ್ರೇಮದಿಂ ಪೂಜಿಸುತ ಪೂಜಿಸುತಮಳಬುದ್ಧಿಯಲಿ ೨೯

ರಾಜವದುಪಚರಣನಿಯಮಸಂ-
ಪೂಜಿತಾರ್ಥಿಗಳಂ ನಿರಂತರ
ರಾಜವದುಪಚರಣ ನಿಯಮದಿಂದಂ ಭಜಿಸಿ ಭಜಿಸಿ
ಓಜೆಮಿಗೆ ಅಷ್ಟಾಂಗ[೨]ಭಕ್ತಿ[೩]ಸ
ಮಾಜಸೌಖ್ಯಾರ್ಥಿಗಳನೆಲ್ಲಂ
ನೈಜದಿಂದಷ್ಟಾಂಗ ಭಕ್ತಿಯೊಳೊಲಿದೊಲಿಸಿಯೊಲಿಸಿ ೩೦

---

೧ ಳ್ದಿ (ತ. ದ. ಸ). ೨–೩ ಯೋಗ (ಬ).

CC-0. Jangamwadi Math Collection. Digitized by eGangotri

ಶೀಲಸಂಬಂಧವ್ರತಿಗಳಂ
ಶೀಲಸಂಬಂಧಸ್ಥಿತಿಯೊಳನು
ಕೂಲಭಾವದೊಳಿರಿಸಿಯಿರಿಸಿ ನಿಯಮಿತಶೀಲರನು
ಸ್ಥೂಲವಸ್ತುಗಳಂ ಸಮರ್ಪಿಸಿ
ಲಾಲಿಸುತ್ತಂ ಬಸವರಾಜನು
ಲೋಲಚಿತ್ತದಿ ಭಕ್ತಿರಾಜ್ಯವನಿಂತು ಮಾಡು[ಗ]ತ್ತ ೩೧

ಮೂಱವಸರದೊಳೋಗರಂಗಳ
ನಾಱುಸದ ರಸಾಯನಂಗಳ
ನೂಱಿದ ಪದಾರ್ಥಂಗಳಂ ಬಾಸಣಿಸಿ ವಿವರದಲಿ
ಬೇಱೆ ಬೇಱುಱೆ ಕಂಬಿಗಳೊಳಗೆ
ನೇಱೆ ತಪ್ಪದೆ ಕಳುಹುವನು ಮುದ
ವೇಱಿ ಜಂಗಮವಿದ್ದೆಡೆಗೆ ಶಿವಭಕ್ತಿಭಂಡಾರಿ ೩೨

ಪರಿ ಪರಿಯ ವೇಶಿಯರ ಮನೆಗಳೊ
ಳಿರವಿನಲಿ ಭೋಗಿಸುವವರು ಹ
ನ್ನೆರಡುಸಾವಿರ ಮಿಂಡಜಂಗಮವೆಂದಡಿ[ನ್ನಿ]ರ್ದ[ಸಿ]
ಶರಣಸಂಖ್ಯೆಯನೆಣಿಸಿನೋಡುವ
ಡರಿದು ಭರ್ಗಂಗಾದಡೆನುತ
ಚ್ಚರಿಯೊಳಿಲ್ಲಾ ಭಕ್ತರುಂ ಪರಿಣಾಮಿಸುತ್ತಿರಲು ೩೩

*

* (ತ, ಬ) ಪ್ರತಿಗಳಲ್ಲಿ ಕೆಳಗಣ ಭಾಗ ದೊರೆಯುತ್ತದೆ:

ಆಂತು ಸಂಧಿ ೭೫ಕ್ಕಂ ಪದಗಳು ೩೮೯ಕ್ಕಂ
ಮಂಗಳಮಹಾ

ಏಳನೆಯ ಸಂಧಿ
(ಚೆನ್ನಬಸವಣ್ಣನ ಉದಯ)

ಸೂಚನೆ : ತರುಣಿ ನಾಗಾಂಬೆಯ ಸುಗರ್ಭದಿ
ನಿರುಪಮಜ್ಞಾನಸ್ವರೂಪಂ
ಪರಮಕಾರಣ ಚೆನ್ನಬಸ[ಗ]ವಂ ಉ[ದ್ಭ]ವಂಗೈದ

೧ ಳು (ಧ). ೨–೩ ನ್ನುಳಿದ (ತ, ದ, ನ). ೧–೨ ವಣನು (ತ).

CC-0. Jangamwadi Math Collection. Digitized by eGangotri

ನಿರವಧಿಕದಿಂ ಭೂತಿಶಾಸನ
ಭರಣರಾದಿ ಸಮಸ್ತಮಾಹೇ
ಶ್ವರರಿಗಿಷ್ಟಾರ್ಥಂಗಳಂ ಸಲಿಸುತ್ತಮಿರುತಿರಲು
ಪರಮಭಕ್ತಿಯೆ ತನಗೆ ಸತತಂ
ಹರಣವಾಗಿಹ ನಾಗಲಾಂಬೆಯ
ವರ ತನೂಭವನಪಗತೋಭಯ[೧]ಕರ್ಮದುರ್ಭವನು[೨] ೩೪

ವಿಸ್ತರಿಸಲಾ ಬಸವಕರುಣಾ
ಹಸ್ತಸಂಭೂತಪ್ರಭಾಮಯ
ಶಸ್ತದೇಹಂ ಚೆನ್ನಬಸವಂ ಭಕ್ತಿರಂಜಿಸುವ[೩]
ಅಸ್ತಮಿತಲೌಕಿಕನು ಗುರುಭ
ಕ್ತಿಸ್ತವನಪಾತ್ರೋತ್ತಮಂ ಮಾ
ತೃಸ್ತನಸ್ತನ್ಯಾಹಿತಂ ನಿರ್ಧೂತಷಡ್ವರ್ಗಂ[೪] ೩೫

ಮಂಗಳದ ಸರ್ವಾಂಗಲಿಂಗಿ ವಿ
ಭಂಗಿತಾನಂಗಪ್ರಸಂಗಿ ಸು
ರಂಗಿ ತತ್ವಕಳಾವಿದಂ ಸಂಸಾರನಿಸ್ಸಂಗಿ
ಸಾಂಗಸುಚಿದ[೫]ನುಭಾವಿ ಜಂಗಮ
ಲಿಂಗಸಂಸೇವಿ ಪ್ರಸಾದಾ
ಭಂಗುರಾಮಳಜೀವಿ ಲೋಕವಿಸರನಿ[೬]ರುಪಧಾದಿ[೭] ೩೬

ವಿರಹಿತೇಂದ್ರಿಯಕರ್ಮಿಯಸದೃಶ
ಪರಮಲಿಂಗಸಧರ್ಮಿ ಕರುಣಾ
ಭರಿತಶರಧಿಪಟೂರ್ಮಿ ದೃಢಭಕ್ತಿಕ್ರಿಯಾವರ್ಮಿ
ನಿರುಪಮಗುಣಾವೇಷಿಯಚಲಿತ
ಸರಸಸೂನೃತಭಾಷಿ ಸತತಂ
ಶರಣಜನಪರಿತೋಷಿ ಕಾಲದ್ವೇಷಿ ನಿರ್ದೋಷಿ ೩೭

೧–೨ ಕರ್ಮಕರ್ಮಠನು (ಕ); ಕರ್ಮದುರ್ಭಯನು (ಸ). ೩ ತ (ಚೆ, ಕ). ೪ ರ್ಗಿ (ಸ). ೫ ರ (ಚೆ); ಗ (ಮ, ಬ). ೬–೭ ರುತದಾನಿ (ಚ); ರುಪದಾನಿ (ಕ, ನ, ಬ, ಮ).

CC-0. Jangamwadi Math Collection. Digitized by eGangotri

ಆ[೧]ಗಳುಂ ಲಿಂಗಾಭಿಮಾನಿ ಸ
ದಾಗಣಿತಸುವಿಧಾನಿ ಭಕ್ತವಿ
ಭಾಗಮಹದವಧಾನಿ ನಿಗಮಾರ್ಥಾವಿರತ ದಾನಿ
ಆಗಮೋಕ್ತತ್ಯಾಗಿ ಸು[೨]ಹೃದನು
ರಾಗಿ ತಾ ತ್ರಿವಿಧಪ್ರಸಾದಸು
ಭೋಗಿ ವಿಮಳಜ್ಞಾನ[೩]ಯೋಗಿ ಜನಕ್ಕೆ ತಾನಾಗಿ ೩೮

ಆರ್ಯಗುಣದಿಂ ವರ್ಧಮಾನೈ
ಶ್ವರ್ಯನಾಗುತ್ತೀ ತೆಱದೊಳೆ ಸ
ಪರ್ಯೆಯಲಿ ಬಸವಾಂಘ್ರಿಕಮಳವನರ್ಚಿಸುತ ಭಕ್ತಿ
ಸ್ಥೈರ್ಯತನುರೋಮಾಂಚಕಂಚುಕ
ಭಾರ್ಯ ಗದ್ಗದ ಕಂಠವೆಸೆಯಲು
ಪೂರ್ಯಹರುಷಸಮುದ್ಗತಾಶ್ರುಗಳಕ್ಷಿಗಳೊಳುಗಲು ೩೯

ಜೀವಸಂಭೃತಲಿಂಗಲಿಂಗೋ
ಜೀವಸಂಜನಿತಪ್ರಸನ್ನಾ
ಸೇವ[೪]ನಾ ಸರಸಾ[೫]ನುಭವಸಂಪ್ರಾಪ್ತಿಯಲಿ ಹೊಂದಿ
ಓವುತ ಕಪಿನ್ಯಾಯ[೬]ದೊಲು[೭] ನಿ
ತ್ಯಾವಿರತಫಲವೊಂದುವಂ ಸ
ದ್ಭಾವಿ ಸೋಪಾನವನುಡುಗಿ ವಾಯಸಫಲೋಕ್ತಿಯಲಿ ೪೦

ನೆರೆಯಲುಳ್ಳ ಕೃತಾರ್ಥಭಾವದಿ
ವರದ ಸದ್ಗುರುಭಕ್ತಿಸತ್ಫಲ
ಸರಸವಂ ಗುಹ್ಯಪ್ರಸಾದಾಸೇವನಾಸುಖದ
ಪರವಶದಿ ಲಿಂಗವೆ ಹರಣವಾ
ವರ ತನುವೆ ಭರಿತಪ್ರಸಾದಂ
ಪರಮಭಕ್ತಿಯೆ ಚಿತ್ತವರ್ಥಂ ಶರಣಗೋಷ್ಠಿಸುಖಂ ೪೧

---

೧ ಏ (ತ, ದ, ನ). ೨ ಸ (ಧ). ೩ ನಿ (ತ). ೪–೬ ಕಾವರನಾ (ತ). ೫–೮ ದಿಂ (ನ).

CC-0. Jangamwadi Math Collection. Digitized by eGangotri

ಆಗಿ ಕೂಡಿಯಿವೆಲ್ಲವಂತೊಂ
ದಾಗಿಯೆಲ್ಲಾ ಚೆನ್ನಬಸವಣ
ನಾಗಿ ಹೆಚ್ಚಿದನಮಿತಲಿಂಗವೆ ಜೀವವಾಗುತ್ತ
ಯೋಗನಿರ್ಮಲಿತಪ್ರಸಾದಕೆ
ಭೋಗಿಸುವ ರುಚಿಯಾಗುತಂ ನೆಲೆ
ಯಾಗುತಂ ಚರಲಿಂಗನಿಷ್ಠಾಭಕ್ತಿವಿಭವಕ್ಕೆ ೪೨

ಮಂಗಳಪ್ರಾಪ್ತಿಗೆ ನಿರಂತರ
ಸಂಗವಾಗುತೆ ವಾಕ್ಕಿಗಂ ಮನ
ಸಿಂಗೆ ಗಣನಾತೀತನಾಗುತೆ ನೆಱಿಪ ಸೇವೆಯಲಿ
ಪೊಂಗಿ ತತ್ವಾಲಭ್ಯವೆಂಬುದ
ಡಂಗಿಸುತವಿನಿತಿನಿತು ನೆನಪುಗ
ಳಂಗವಿಪ ತಮತಮ್ಮ ಹವಣಿನ ನುಡಿಗಡಣೆಯಿಂದ ೪೩

ವಿನುತಿಸುವಡದು ಕೊರತೆಯಲ್ಲಾ
ಘನಮಹಿಮನಹ ಚೆನ್ನಬಸವಾಂ
ಕನ ನೆಲೆಯನಂತಾಗಿ ಬಸವನೆ ಗಣಿದಿಸಲು ಬಲ್ಲ
ಅನಘಬಸವನ ನಿಜಚರಿತ್ರವ
ನನುನಯದೊಳಾ ಚೆನ್ನಬಸವನೆ
ನೆನೆದು ಕೀರ್ತಿಸಲಱಿವನೆನುತೆಲ್ಲರು ಪೊಗಳುತಿರಲು ೪೪

ಗುರುಸ್ತೋತ್ರ

ಮಾನಿತಧ್ರುವಕೀರ್ತಿ ಸರ್ವ
ಜ್ಞಾನ ಶಾಶ್ವದ್ದಿಗ್ಗಣಗಣಾಂಕಾ
ನೂನ ವಿಶ್ವೇಶ್ವರ ಮಹಾತ್ಮಶ್ರೀಗುರುವೆ ಜಯತು
ಧ್ಯಾನನಿಧಿ ಸದ್ಯಪ್ರಸನ್ನ ಸ
ದಾನವದ್ಯಾಗಮರಹಸ್ಯನಿ
ಧಾನ ತತ್ವಕಳಾದಿವೇತ್ತ ಶ್ರೀಗುರುವೆ ಜಯತು ೪೫

೧ನಾ (ಧ, ಸ). ೨–೩ ಸ್ತವನ (ನ). ೩+ಪದಂಗಳು (ಥ). ೪–೫ ದೃಢ (ಕ). ೬–೭ ಸಮ್ಮ (ಚ, ತ, ಥ, ದ). ೮ವಾ (ಚ, ಬ). ೯–೧೦ ಶರಣು (ಕ).

CC-0. Jangamwadi Math Collection. Digitized by eGangotri

ದತ್ತ ಮಹದಪವರ್ಗಮಹಿಮೋ
ದಾತ್ತ ಸದ್ಭಕ್ತಿಪ್ರಪೂರಿತ
[೧]ಚಿತ್ತ[೨] ನಾಥ ಅನಾಥನಾಥಾ ಶ್ರೀಗುರುವೆ [೩]ಜಯತು[೪]
ಉತ್ತಮಜ್ಯೋತಿರ್ಮಯಾ ವು
ತ್ಪತ್ತಿ ಗುಪ್ತಿ ವಿಪತ್ತಿರಹಿತ ಜ
ಗತ್ತಿಮಿರಹರಣಪ್ರದೀಪ ಶ್ರೀಗುರುವೆ [೩]ಜಯತು[೪] ೪೬

ಚಿರ ಸಕಳ ನಿಃಕಳ ಚರಾಚರ
ಪರಮರೂಪು ವಿರೂಪತತ್ಪರ
ಪರವಿಗತ ವಿಕೃತಾಂಗ ನಿತ್ಯ ಶ್ರೀಗುರುವೆ [೩]ಜಯತು[೪]
ನಿರುಪಮಿತಪದ ಆದಿಮಧ್ಯಾಂ
ತರಹಿತಪ್ರಕಟೋರುತೇಜ
ಸ್ಫುರಣ ವಿದ್ಯಾತ್ಮಪ್ರಗಲ್ಭ ಶ್ರೀಗುರುವೆ [೩]ಜಯತು[೪] ೪೭

ಅಕ್ಷರಾಕ್ಷರಮಂತ್ರಕುಕ್ಷಿ ಮು
ಮುಕ್ಷುರಕ್ಷಣದಕ್ಷ ಸರಸಕ
ಟಾಕ್ಷವೀಕ್ಷಣ ಭಕ್ತಿಪಕ್ಷ ಶ್ರೀಗುರುವೆ [೫]ಜಯತು[೬]
ಶಿಕ್ಷಿತಪ್ರತಿಪಕ್ಷ ಪಾಪೌ
ಘಕ್ಷಯಕ್ಷಮನಕ್ಷಯೈಶ್ವ
ರ್ಯಕ್ಷಯಾತ್ಮ ಷಡಧ್ವದೂರ ಶ್ರೀಗುರುವೆ [೫]ಜಯತು[೬] ೪೮

ದುಸ್ತರಜ್ಞಾನಪ್ರಪಂಚಕಿತ
ಮಸ್ತತಿ[೭]ಪ್ರಹರಾರ್ಥ ದತ್ತ
ಪ್ರಸ್ತುತಜ್ಞಾನಪ್ರತಾನ ಶ್ರೀಗುರುವೆ ಜಯತು
ಶಸ್ತ ಶಿವದೀಕ್ಷಾರ್ಥಿಜನ ತ
ನ್ಮಸ್ತಕಾಭಯವರದ ಕರುಣಾ
ಹಸ್ತವಿನ್ಯಸ್ತಪ್ರಭಾವ ಶ್ರೀಗುರುವೆ ಜಯತು ೪೯

೧–೨ ವೀತ (ಕ, ಮ). ೩–೪ ಶರಣು (ಸ, ತ). ೫–೬ ಶರಣು (ದ). ೭–೮ ತನುಸ್ತತಿ (ಕ)

CC-0. Jangamwadi Math Collection. Digitized by eGangotri

ಕ್ಷಾಮಡಾಮರಭಯನಿವಾರಣ
ನೇಮಭಕ್ತಮನೋನಳಿನ ವಿ
ಶ್ರಾಮನಾಮಾಖಿರ್ವ ಸರ್ವಸುಪರ್ವನತಚರಣ
ಶ್ರೀ ಮಹದ್ಗುರುವೇ ನಮೋ ಮತ್
ಸ್ವಾಮಿ ಸದ್ಗುರುವೇ ನಮೋ ಮತ್
ಪ್ರೇಮಿ ಸದ್ಗುರುವೇ ನಮೋ ಮದ್ವರ ನಮೋಯೆನುತ ೫೦

ಈ ಪ್ರಕಾರದೊಳೊಲಿದು ಗುರುಬಸ
ವಪ್ರಭುವನಾ ಚೆನ್ನಬಸವನ
ತಿಪ್ರಿಯೋಕ್ತಿಗಳಿಂದ ಕೀರ್ತಿಸುತಂ ಶ್ರಿಸಂಧ್ಯೆಯಲಿ
ಸುಪ್ರಸಿದ್ಧಾಚಾರದಿಂ ಸ
ರ್ವಪ್ರಯತ್ನದೊಳರ್ಚಿಸುತ ದಂ
ಡಪ್ರಣಾಮವನಿಕ್ಕಿ ನಮಿಸುತ ಭಜಿಪ ಸಮಯದಲಿ ೫೧[೧]

ಅಂತು ಸಂಧಿ ೬ಕ್ಕಂ ಪದಂಗಳು ೪೦೭ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

---

೧ ಈ ಪದ್ಯ ಕ ಪ್ರತಿಯಲ್ಲಿಲ್ಲ.

CC-0. Jangamwadi Math Collection. Digitized by eGangotri

ಸಂಧಿ : ೭

*

ಸೂಚನೆ : ಬಸವರಾಜನ ಭಕ್ತಿಯಶವೆ
ಣ್ಡಿಸೆಗೆ ಪಸರಿಸಲಲ್ಲಮಪ್ರಭು
ವಸಮನೊಸೆದೆಯ್ತಂದನಾ ಭಂಡಾರಿಯರಮನೆಗೆ

ಅಲ್ಲಮಪ್ರಭುವೆಂಬ ಸಂಯಮಿ
ವಲ್ಲಭಂ ಲೋಕಪ್ರಪಂಚಕೆ
ದುರ್ಲಭಂ ಚರಲಿಂಗಮೂರ್ತಿ ಸಮುಜ್ಜ್ವಲಿತಕೀರ್ತಿ
ಬಲ್ಲಹರ ಬಲ್ಲಹನವಿರತೋ
ತ್ಪಲ್ಲಮುಖಿಕಮಳಂ ಜವಂಗೆದೆ
ದಲ್ಲಣನುಭಯಕರ್ಮಕ್ರಂತನು ಕರ್ಮಕರ್ಮಿತನು ೧

ಘೋರಭವಮಾಯಾವಿರಹಿತನು
ದೂರದೃಷ್ಟಾದೃಷ್ಟಸಾರಾ
ಚಾರಕಂ ದಾನಪ್ರತಿಗ್ರಹಹೀನವರ್ತನನು
ಚಾರುಮಾನಸ ಮಾನಸಂ ದಾ
ನಾರತಶ್ರುತಕರ್ತನುಂ ಸಂ
ಸಾರವೈರಾಗ್ಯಪ್ರಪಂಚವಿವರ್ಜಿತಾತ್ಮಕನು ೨

ಸಮಹಿತಾಹಿತ ಸಮಸುಖಾಸುಖಿ
ಸಮ ಕನಕಲೋಷ್ಟಾದಿ ಸದ್ಭಾ
ವ ಮಹಿತಾತ್ಮನು ಸಪ್ತಧಾತು ಮದಾದಿ ಷಡ್ವರ್ಗ
ಗಮನ ಸರ್ವಾಂಗ ಗುಣಲುಪ್ತ
ಪ್ರಮುದಚಿತ್ತಂ ಪ್ರಳಯದೂರಂ
ದಮಿತ ಕಾಲಾಕಾಲ ಸಂಕಲ್ಪಿತ ವಿಕಲ್ಪಿತನು ೩

---

* ರಾಗ : ದೇಸಿ (ಚ); ದೇಸೋಕ್ತಿ (ಮ); ವಡ್ಡಿ ಧನ್ಯಾಸಿ (ತ).
೧ ಮಾ (ಥ).

CC-0. Jangamwadi Math Collection. Digitized by eGangotri

ಸಾಂದ್ರಮಾಯಿಕಮಾಯಿಕನು ಯೋ
ಗೀಂದ್ರವರನವಿಳಪ್ರಪಂಚಮ
ಹೇಂದ್ರಜಾಲಧ್ವಂಸಿ ನಿಜಸುಖಿವರವಶೀಭೂತ
ಚಂದ್ರಧರನಪರಾವತಾರನು
ರುಂದ್ರಗಾಂಧರ್ವಜ್ಞನಿಧಿ ವಿಜಿ
ತೇಂದ್ರಿಯೋತ್ಕರನನಿಮಿಷಾಮೃತದೃಷ್ಟಿಭಾಸನನು ೪

ಮುಕ್ತಕೇಶಯುತೋತ್ತಮಾಂಗಂ
ವ್ಯಕ್ತನಾನಾವೇದವೇದಾಂ
ತೋಕ್ತನಂತರ್ಯಾಗತ ನಿರಂತರ ಸ್ಥಿಯೋಗಪರ
ಭಕ್ತನಿಧಿ ನಿರ್ದೇಹ ದೇಹಿ ವಿ
ರಕ್ತಗತಿ ನಿರ್ನಾಮಿ ನಾಮಿ ಚಿ
ದುಕ್ತಮತಿ ನಿಃಶಬ್ದಶಬ್ದಿ ವಿಭಾವಭಾವಿತನು ೫

ದ್ವೈತಯೋಗದ್ವೈತಯೋಗಾ
ತೀತ ನೂತನ ಸತ್ಕ್ರಿಯಾವಿ
ಖ್ಯಾತನೆಂದೆನೆ ಮೂಜಗುಲೋಕಂಗಳಿಗಱಿಕೆಯಾಗಿ
ಪ್ರೂತಭಕ್ತಿಗೆ ಲಕ್ಷ್ಯಮಾಗಿ ಸ
ನಾತನಸ್ವೇಚ್ಛಾಗಮನದೊಳು
ವೀತಕೃತ್ಯದೊಳನವರತ ಸಾನಂದವೃತ್ತಿಯಲಿ ೬

ವರ ಕರಸ್ಥಳಲಿಂಗದತ್ತ
ಸ್ಫುರಿತ ಲೋಲಾಲೋಕನಾನಂ
ದರಸಕೇಳೀಸುಖಿದೊಳಾಳುತ ತನ್ನುವಂ ಮಱಿದು
ತರು ಬಿದಿರು ಗಿಡು ಬೆಟ್ಟ ಘಟ್ಟವಿ
ದಿರದಡವಿ ತೊಱಿ ಹಳ್ಳವೆಂಬ ವಿ
ವರವುಡುಗಿ ನಡೆವುತ್ತಿರಲು ಹಜ್ಜೆಯು ನೆಳಲುಮಿಲ್ಲ ೭

೧ಸು (ಬ); ಸಂ (ಮ). ೨ವಾ (ಧ, ನ). ೩ನ್ವೀ (ಥ, ಧ, ಸ).

CC-0. Jangamwadi Math Collection. Digitized by eGangotri

ನರರು ತವತವಗಲ್ಲಿಗಲ್ಲಿಗೆ
ಸರಸರನೆ ತತ್ಪ್ರಭವನಿತ್ತೋ
ಸರಿಸಲರಿ[೧]ದರಿ[೨]ದೆನುತ ಲೋಕಂ ಹೊಗಳುತಿರಲಿಂತು
ಧರೆಗೆ ಬಸವನ ಭಕ್ತಿರಸ ಘನ
ಶರಧಿಯದುವಗಲಕ್ಕೆ ನೆಱಿ[೩]ದು
ಬ್ಬರಿಸೆ ಬಂದಹನಲ್ಲಮಪ್ರಭುವಾದಿ ಶಿವಯೋಗಿ ೬

ತರತರದ ತೆರೆ ನಡೆವ ಭರದಲಿ
ತೆರಳ್ದು[೪] ನಡೆವ ಬ[೫]ಹಿತ್ರದಂತೆ
ಸ್ಫುರಿತ ರತ್ನಪರೀಕ್ಷೆಯಂ ತಾನಱಿ[೬]ದು ಕೈಕೊಂಬ
ಹರದನಂದದಿ [೭]ಬರ್ಪ ತತ್ಪ್ರಭು
ವರನ ಭಾವಂ[೮] ಸಂಗಮೇಶನ
ವರ ತನುವಿನೊಳು [೯]ಹೊಳೆಯೆ ಬಸವಂ[೯] ಕಂಡು ವಂದಿಸುತ ೭

ರುಚಿರಮಾಣಿಕ್ಯಪ್ರಭಾಮಯ
ನಿಚಿತಮಾಗಿರ್ದಚಲಕಾಂಚನ
ರಚಿತಘನಸಿಂಹಾಸನವನೆಯ್ತಂದು ತಾನೇಱಿ[೧೦]
ಸುಚಿದನೂನಪ್ರಭುವಿರಲು ತನು
ರುಚಿವಿಶದದಿಂದಾವರಿಸಿ ದಿಗು
ಪ್ರಚಯದೊಳು ಥಳಥಳಿಸಿ ಬೆಳಗಿದುದೇನ ಬಣ್ಣಿಸುವೆ ೮

ಒಡಲಲಸುವುಂಟಾಗಿಯಿಲ್ಲದ
ಬೆಡಗಿನಪ್ರತಿಮಾನರೂಪಂ
ಬಿಡದೆ ನಡೆಯುಂಟಾಗಿ ವರ್ತನವಿಲ್ಲದಸಮಾನ
ಕಡಗಿ ಕಣುಕರುಳಾಗಿಯುಳ್ಳ ವಿ
ಗಡ ಮಹಾಂತನು ಮುನ್ನ ಲಿಂಗವೆ
ಯೆಡವಿದಡೆ ಸತ್ಪ್ರಾಣವಾಗಿರುತಿಪ್ಪ ಶಿವಯೋಗಿ ೯*

೧–೨ದೆಂ (ಧ, ಸ). ೩ಳಿ (ಸ). ೪ವ (ಕ, ಚ, ಥ, ಬ, ಮ). ೫–೬ ಬಸವನಂ ಪ್ರಭುವಿರೆ ಸುಭಾವಂ (ಡಾ, ಥ). ೭–೮ ಸುಳಿದು ಹೊಳೆಯಲು (ಅ, ಕ, ಚ, ಡಾ, ಥ, ಧ, ಮ).
* ಈ ಪದ್ಯ ಮ ಪ್ರತಿಯಲ್ಲಿಲ್ಲ.

CC-0. Jangamwadi Math Collection. Digitized by eGangotri

ಚೇತನಂ ತಾನಾಗಿಯುಂ ನಿ
ಶ್ಚೇತನದ ಪರಿಣಾಮಿ ಭುವನ
ಖ್ಯಾತಿಯಿಲ್ಲದೆಯುನ್ನತಿಗೆ ಸಲೆ ಸಂದ ನಿಶ್ಚಿಂತ
ಮಾತುಗಳ ನೆ[೧]ಱಿ ಮೀಱಿದಗ್ಗದ
[೨]ಮಾತಿ[೨]ನಾರ್ಯನು ನೆನಹುಗಳಿಗೆಯ
ತೀತನಪ್ಪ ಮಹಾನುಭಾವಪ್ರಜ್ಞಮಾನಸನು ೧೨

ಓವಿ ನಿರ್ಗುಣಿಯಾಗಿ ಸಗುಣವ
ನೀವನಂ ಪ್ರಣವಾತ್ಮನಾಗಿ ಸ
ದಾವಯವದಿಂದೊಳಿದವನಂ[೩] ಕಂಡು ಶರಣೆನುತ
[೪]ದೇವ ಮಮ ಗುರು ಲಿಂಗ ಜಂಗಮ
ದೇವಯೆನುತಂ ಬಸವನಾ ಪ್ರಭು
ದೇವರ ಶ್ರೀಪಾದಪದ್ಮಕ್ಕರ್ಚನೆಯ ಮಾಡಿ[೫] ೧೩

[೬]ವಿಮಳ ಪಾದಾಂಬುವ ಧರಿಸಿಯಾ
ಗಮವಿಧಿಯೊಳಾ ಆಯ್ಕಗಂ ತ
ನ್ನ ಮನ ವಾಕ್‌ಕಾಯಕ ಕರಣಗಳಿನೊಸೆದು ಭಕ್ತಿಯಲಿ[೭]
ಕ್ರಮವೆರಸಿ ಹೊಸಹೊನ್ನ[೧೦]ಪರಿಯಾ
ಣ[೧೧]ಮನಳವಡಿಸಿ ಪಂಚಪಕ್ವಾ
ನ್ನಮನಮಳ ದೇವಾನ್ನ ದಿವ್ಯಾನ್ನಂಗಳಂ ಬಡಿಸಿ ೧೪

೧ನು (ಕ, ತ, ಥ, ದ, ಮ). ೨–೩ ನೂತ (ಕ). ೪–೫ ದಿರವನಂ (ಅ, ಮ).

೬–೭ ಗ್ರೀವದೊಳ್ ಗದ್ಗದಿಕೆ ಕಣ್ಣೊ
ಳ್ಕೀವಿ ಹರುಷಾಶ್ರುಗಳುಗಲ್ ಪ್ರಭು
ದೇವನಂಘ್ರಿಗೆ ಸೈಗೆಡೆದು ಬಸವಣ್ಣ ವಂದಿಸುತೆ ॥ (ತ, ದ, ನ).

೮–೯ ಸಮುಚಿತಾರ್ಚನೆಗೆಯ್ದು ಲಿಂಗೋ
ತ್ತಮನ ತೂರ್ಯತ್ರಯ ನಿನದವಾ
ಕ್ರಮಿಸಿ ಮಣಿಮಯ ಮಂಗಳಾರತಿಯೊಳ್ನಿವಾಳಿಸುತೆ ॥ (ತ, ದ, ನ).

೧೦–೧೧ ಹರಿವಾಣ (ಮ).

CC-0. Jangamwadi Math Collection. Digitized by eGangotri

ಚಿತ್ತವಲರಿಸಿ ತೋರ ತೋರಿಹ
ತುತ್ತುಗಳನೊಡನೊಡನೆ ತಾ ಮಾ
ಡುತ್ತ ಪಿಡಿದು ಶಿವಂಗೆ ಸುರಗಿಯ ಚೌಡರಸನಂದು
ಅರ್ತಿಯಲಿ ನೀಡುವ ತೆಱದಿ ನೀ
ಡುತ್ತಿರಲು ಬಸವಣ್ಣನಿಂ ಪ್ರಿಯ
[೧]ವೆತ್ತಿಯಲ್ಲಮದೇವ[೨]ನಿಂತಾರೋಗಿಸುತ್ತಿರಲು ೧೫

ಒಂದು ಲಕ್ಕದ ಮೇಲೆ ತೊಂಬ
ತ್ತೊಂದುಸಾವಿರ ಜಂಗಮಕ್ಕಿಂ
ದಂದು ಮಾಡಿದ ಪದಪದಾರ್ಥಾವಳಿಗಳೆಲ್ಲವನು
ಒಂದು ವಿಘಳಿಗೆಯೊಳಗೆ ಸವೆಯಲು
ಕುಂದದೇಗುವೆನೆನ್ನ[೩]ದುಬ್ಬುತಳೆ
ನಿಂದು ನಿಮಗಿನ್ನೋಗರವು ನಾನೆಂದೊಡಲನೀಯೆ ೧೬

ತನುವನಿತ್ತ ಮಹಾತ್ಮ ಬಸವಂ
ಗನಿತಱಿಂಗಳು ಪ್ರಭು ಮೆಚ್ಚಿ ಮಾ ಮಾ
ಯೆನುತ ಭಕ್ತಾನೀಕವತಿಶಯವೆನುತ ಕೀರ್ತಿಸಲು
ಘನ ದಯಾಮತಿಯಿಂದೆ ಹೋ ಹೋ
ಯೆನುತ ಭಾಪುರೆ ಭಕ್ತಿದೀಪಕ
ವಿನಯಭಕ್ತಿಧುರೀಣ ಭಾಪುರೆ ಭಾಪುರೇ ಬಸವ ೧೭

ಮಿಸುಪ ಮಾಣಿಕದೊಳಗೆ ದೀವಿಗೆ
ವಸುವಿನೊಳು ಕಂಪಿಕ್ಕುದಂಡದೊ
ಳೆಸೆವ ಪಣ್ಣಮೃತದೊಳು ಕೆಚ್ಚು ಮಲಯಜ ವೃಕ್ಷದೊಳು
ಕುಸುಮವಭಿನವ ಚಿತ್ರರೂಪಿನೊ
ಳಸುವು ಪುತ್ಥಳಿಯೊಳಗೆ ಜೀವಂ
ಒಸೆದೊಗೆದವೊಲು ವೊಗೆದೆ ಮಗನೇ ಭಕ್ತಿಗಿಂಬಾಗಿ ೧೮

೧–೨ ವೆತ್ತು ಮಿಗೆ ಪ್ರಭುರಾಯ (ತ, ದ, ನ). ೩–೪ ದ ಭಕ್ತ (ಮ).

CC-0. Jangamwadi Math Collection. Digitized by eGangotri

ದಂಡನಾಯಕ ಬಸವ ವಿದ್ಯಾ
ಪಂಡಿತೋತ್ತಮ ಬಸವ ಪಶುಪತಿ
ಪಿಂಡ ಬಸವಾ ತ್ರಿಜಗದುದ್ಧರಣಾಭರಣ ಬಸವ
ಮಂಡಿತಾಮಳಭಕ್ತಿರತ್ನಕ
ರಂಡ[೧]ನೇ ಕುಸುಮಶರ[೨]ಮದವೇ
ದಂಡಕಂಠೀರವ ಬಸವ ಭಂಡಾರಿ ಬಸವಣ್ಣ ೧೯

ಆದಿಬಸವ ಪ್ರಮಥರುದ್ರಗ
ಣಾದಿಬಸವ ಮದಾದಿಬಸವ ಅ
ನಾದಿಬಸವ ಯುಗಾದಿಬಸವ ಪುರಾತನರ ಬಸವ
ನಾದಬಿಂದುಕಳಾದಿ ಬಸವ ಶಿ
ವಾದಿ ತತ್ವಮಹತ್ವಸ್ವಾನುಭ
ವಾದಿ ಬಸವ ಮಹಾತ್ರಿವಿಧಭ[೩]ಕ್ತಾದಿ[೪] ವರಬಸವ ೨೦

ಬಸವ ಆದ್ಯರ ಬಸವ ವೇದ್ಯರ
ಬಸವ ನಿತ್ಯರ ಬಸವ ಸತ್ಯರ
ಬಸವ ಸಿದ್ಧರ ಬಸವ ಬು[೫]ದ್ಧರ ಬಸವ ಸರ್ವಜ್ಞ
ಬಸವ ಭಕ್ತರ ಬಸವ ಶಕ್ತರ
ಬಸವ ಜಂಗಮ ಬಸವ ಸದ್ಗುರು
ಬಸವ ಸಚ್ಚಿದಮಳ ಬಸವ ಶಿವಬಸವ [೬]ಮುಕ್ತೀಶ[೭] ೨೧

ಹರಿವ ಜಲಕೊಡಲೆಲ್ಲವಡಿಗಳು
ವುರಿವ ಶಿಖಿಗೊಡಲೆಲ್ಲವುಂ ಬಾಯ್
ಭರದಿ ಬೀಸುವ ಮಾರುತಂಗೊಡಲೆಲ್ಲವುಂ ಶಿರವು[೮]
ನಿರುತದಲಿ ಮಾಡುವ ಬಸವವಿಭು
ಗರರೆ ತನ್ನೊಡಲೆಯ್ದೆ ಭಕ್ತಿಯೆ
ಪರಿಕಿಪಡೆಯಿನ್ನಾರೊಳರು ನಿರ್ವಂಚಕತ್ವದಲಿ ೨೨

೧–೨ ಬಸವ ಕುಶಲಮಯ (ತ); ಬಸವ ಕುಸಮಯ (ಥ, ದ, ನ). ೩–೪ ಕ್ಯೈಕ (ಮ, ಅ). ೫ ವು (ತ, ಥ, ದ, ನ). ೬–೭ ಮೂರ್ತೀಶ (ಮ). ೮ ಸು (ಧ, ಸ).

CC-0. Jangamwadi Math Collection. Digitized by eGangotri

ಬಸವನೆಂದುಸುರಿದಡೆ ಸಾಲದೆ
ಪಶುವಿಗಾದಡೆ ಭಕ್ತಿ ದೊರಕುಗು
ಬಸವನೆಂದುಸುರಿದಡೆ ಸಾಲದೆ ಶಿಶುಗಹುದು ಭಕ್ತಿ
ಬಸವ ಬಸವಾಯೆಂಬ ಭಕ್ತರ
ದೆಸೆಯನೀಕ್ಷಿಸುತಿರ್ಪ ಪಕ್ಷಿ
ಪ್ರಸರಕಾದಡೆಯೆಸೆಯದೇ ಶಿವಭಕ್ತಿ ವಸುಧೆಯಲಿ ೫೩

ಬಸವನಂ ಕೀರ್ತಿಸುವರೆಡೆಯಲಿ
ವಸಿಸಿದಾ ಪ್ರಾಣಿಗಳಿಗಾದಡೆ
ಯೆಸೆಯದೇ ಶಿವಭಕ್ತಿ ಬಸವಾ ಬಸವಯೆನುತಿರ್ಪ
ಅಸಮನಯನಂಗಾದಡೆಯು ರಂ
ಜಿಸದಿಹುದೆ ಸದುಭಕ್ತಿ ಬಸವಾ
ಬಸವಯೆಂದುಸುರಿದಡೆ ಸಾಲದೆ ವಿಷವಮೃತವಹುದು ೫೪

ಬಸವ ಬಸವಾಯೆಂದಡೆಯ್ದದೆ
ನಿಶಿತಕುಲಿಶಂ ಕುಸುಮವಪ್ಪುದು
ಬಸವ ಬಸವಾಯೆಂದಡೆಯ್ದದೆ ಪಲವುಸುರಲೇನು
ಮಸೆದ ಹಗೆಗಳು ನಂಟರಪ್ಪರು
ಬಸವ ಬಸವಾಯೆಂದಡೆಯ್ದದೆ
ದೆಸೆಯೊಳುರುಪ್ರವಿ ದಾವಶಿಖಿ ಬೆಳುದಿಂಗಳಾಗಿರ್ಕು ೫೫

ಲಿಂಗಸುಖಕೇಳೀವಿಲೋಲಾ
ಸಂಗತತ್ಪರಯುಕ್ತಿ ಸುಬ್ರತ
ಜಂಗಮಪ್ರಾಣಾನುಸಂಧಾನೈಕ ನಿಜಭಕ್ತಿ
ಹಿಂಗದಂತುಭಯಪ್ರಸಾದಸು
ರಂಗಸಂಯೋಗೋಪಭಕ್ತಿ ಜ
ಗಂಗಳೊಳು ಪರಿಭಾವಿಸುವಡಿನ್ನುಂಟೆ ಪೆಱರ್ಗಳಿಗೆ ೫೬

---

೧೬ (ಮ). ೨–೩ ದೆಸೆಗೆ ಸ್ಫುರಿಸುವ (ಚ). ೪ ಮು (ತ, ದ, ನ).

CC-0. Jangamwadi Math Collection. Digitized by eGangotri

ಎಂದು ಮುಂ[1]ಡಾಡುತ್ತ ನಾನಾ
ಛಂದದಲಿ ಕೊಂಡಾಡೆ ಬಸವಂ
ವಂದಿಸುತ್ತತಿ ಭಕ್ತಿಯಲಿ ಮನವೊಲಿದು ಕೈಮುಗಿದು
ನಿಂದು ಶಾಶ್ವತಮೂರ್ತಿ ಪರಮಾ
ನಂದ ಪರ ಪರಮೇಶ ಸದ್ಗುಣ
ವೃಂದ ಭಕ್ತಿಸುಮಾನ ಮುಕ್ತಿನಿಧಾನ ಸರ್ವಜ್ಞ ೨೭

ಪ್ರಭುವೆ ಜಂಗಮಲಿಂಗಭಕ್ತ
ಪ್ರಭುವೆ ಸಂಗಮದೇವ ವಿಶ್ವ
ಪ್ರಭುವೆ ಮತ್‌ಪ್ರಮಥಾಗ್ರಗಣ್ಯ ಅಗಣ್ಯಪುಣ್ಯಾಂಗ
ವಿಭುವೆ ಬಿನ್ನಪವವಧರಿಸು ನಿಮ
ಗಭಿಮತಾರೋಗಣೆಯನೆಯ್ದಿಸಿ
ಸಭರಿತಾರ್ಥದಿ ಮಾಡುವಂತಹ ಭಕ್ತನೇ ನಾನು ೨೮

ರಾಜತಾಚಲ ಶಿಖಿರದೊಳು ಗಿರಿ
ರಾಜನಂದನೆ ಮುನ್ನಭವನಂ
ಪೂಜೆಯಂ ಮಾಡಿದಪೆನೆಂದೆಯ್ತಪ್ಪ ಸಮಯದಲಿ
ರಾಜಧರನಂತಾ ಪ್ರಮಥಗಣ
ರಾಜಿ ಸಾರೂಪ್ಯದೊಳಮರ್ದು ವಿ
ರಾಜಿಸುತ್ತಿರೆ ಸಾರ್ದು ನೋಡಿ ತದಂಬಿಕಾದೇವಿ ೨೯

ಪ್ರಥಮರಾರೋ ಇವರೊಳಗೆ ಮ
ದ್ರಮಣನಾವನೊ ಯೆನುತ ತಿಳಿಯದೆ
ಹಿಮನಗಾತ್ಮಜೆ ನಿಂದಡಾ ಸಂಶಯವನಱಿದಾಗ
ಉಮೆಯ [2]ನಲ್ಲನು[3] ಉಳಿಯಲವರ್ಗಳು
ಕ್ರಮದಿ ನಿಜ ವೇಷಂಗಳಡಗಿಸಿ
ತಮ ತಮಗೆವೊಂದೊಂದು ರೂಪುಗಳಚ್ಚರಿಗಳಾಗೆ ೩೦

೧ಕೊಂ (ತ, ದ, ನ). ೨–೩ರಸ ತಾ (ತ, ದ, ನ); ವಲ್ಲಭ (ಥ).

CC-0. Jangamwadi Math Collection. Digitized by eGangotri

ಕರಿ ಮಹಿಷ ಗೋ ಮೇಷಮುಖರುಂ
ಹರಿಣ ಕುಕ್ಕುಟ [೧]ಕೀಶ[೨]ಮುಖರುಂ
ಹರಿ ಶರಭ ಶಾರ್ದೂಲಮುಖರುಂ ರುಷ್ಯ ವೃಕಮುಖರು
ತುರಗ ಭೇರುಂಡೋಷ್ಟ್ರಮುಖರುಂ
ಪುರುಷಮೃಗ ಮಾರ್ಜಾಲಮುಖರುಂ
ಗರುಡ ಭಲ್ಲೂಕಾಹಿಮುಖರುಂ ಹಂಸಬಕಮುಖರು ೩೧

ಆಮುಖರೇಕಮುಖದ್ವಿಮುಖರುಂ
ತ್ರಿಮುಖರುಂ ಚಾತುರ್ಮುಖರು ಪಂ
ಚಮುಖ ಷಣ್ಮುಖ ಸಪ್ತಮುಖರಷ್ಟಮುಖ ನವಮುಖರು
ಕ್ರಮದಿ ದಶಮುಖ ಶತಮುಖ ಸಹ
ಸ್ರಮುಖರುಂ ಮುಖಪಾದರುಂ ಪಾ
ದಮುಖರುದರಮುಖರ್ ಮುಖೋದರರುಂ ಮಹೋದರರು ೩೨

ಲಂಬನಾಸಿಕ ಲಂಬಕರ್ಣರು
ಲಂಬಜಿಹ್ವ ಲಂಬನೇತ್ರರು
ಲಂಬಜಠರರಜಶ್ರವಣರುಂ ವಾರಣಶ್ರುತರು
ಜಂಬುಕಶ್ರುತರುಂ ಹ[೩]ರಿಶ್ರುತ
ರುಂ ಬಿಡಾಲಶ್ರುತರು ಘಂಟಾ
ಡಂಬರಶ್ರುತ ವೃಕ ಕುರಂಗ ತುರಂಗಮಶ್ರುತರು ೩೩

ಹಸ್ತಮುಖ ಮುಖಹಸ್ತ ಜಂಘಾ
ಹಸ್ತ ಹಸ್ತೋರುಪ್ರಜಂಘಾ
ಹಸ್ತಪದ ಪದಹಸ್ತ ಹಸ್ತಶಿರಃ ಶಿರೋಹಸ್ತ
ಹಸ್ತದೇಹರು ದೇಹಹಸ್ತರು
ನಾಸ್ತಿಹಸ್ತರನೇಕಹಸ್ತರು
ವಿಸ್ತರಿಸೆ ಬಹುವರ್ಣರುಂ ಬಹುರೂಪುಧರರಾದ ೩೪

೧–೨ ಕೇಕಿ (ಧ, ಸ). ೩ ಕ (ತ, ದ, ನ).

CC-0. Jangamwadi Math Collection. Digitized by eGangotri

ಅತಿಶಯಪ್ರಮಥೇಂದ್ರಕೋಟಿ
ಪ್ರತತಿಗಳನುಮೆ ನೋಡಿಯತ್ಯ
ದ್ಭುತ ಹೃದಯಗತೆಯಾಗುತತುಳ ನಿಜಾಕೃತಿಯೊಳಿಪ್ಪ
ಪತಿಗೆ ವಂದಿಸಿ ಹರುಷಪೂರ್ವಕ
ಸುತಿಗಳಿಂ ಗಣನಾಥ ಕೇಳ
ಪ್ರತಿಮರಿವರೆನ್ನಯ ಮನೋಧರ್ಮವನಱಿದು ತಾವು ೩೫

ಕಾಮರೂಪುಗಳಾದುದಕ್ಕಭಿ
ರಾಮವಾಯಿತು ನಿಮಿಷದೊಳಗಾ
ನೀ ಮಹಾಗಣಕೋಟಿಗಾರೋಗಣೆಯನಿಕ್ಕಿದಪೆ
ಸೋಮನೇಮಾಚೊಡಭಕ್ತಿ
ಪ್ರೇಮವಾದಪ್ಪೆನಗೆನುತ್ತಾ
ಹೈಮವತಿಯವರಿಗೆ ವಿಭೂತಿಗಳಂ ಕೊಡಿಸಿ ಬಂದು ೩೬

ಸುಲಲಿತ ಮಹಾಕಾಶವೆಂಬ ಬ
ಯಲೊಳಮಿತ ತತ್ವಂಗಳೆಂಬ ವಿ
ಪುಳತರದ ಪೊಸ ಚಪ್ಪರಂಗಳನಳವಡಿಸಿ ಗೌರಿ
ನಳಿನಗರ್ಭಾಂಡಂಗಳೆಂಬ
ಗ್ಗಳದ ಘಟಕಳಶಾದಿಗಳೊಳಗೆ
ಪಲತೆಱದ ಪಕ್ವಾನ್ನ ದಿವ್ಯಾನ್ನಂಗಳಂ ತೀವಿ ೩೭

ಭವ್ಯ ಕಲ್ಪದ್ರುಮ ಫಲಂಗಳ
ನವ್ಯಯಾಮೃತದಿಂದ ತಾಳಿಸಿ
ದಿವ್ಯ ಸುಕ್ಷೀರೇಕ್ಷುರಸ ದಧಿ ಘೃತ ಜಲಧಿಗಳೊಳು
ನವ್ಯ [೧]ಸುಕ್ಷೀರೇಕ್ಷು ರಸ ದಧಿ[೨]
ಸೇವ್ಯ ಘೃತತತಿಗಳನಿಳುಹಿ ಸಂ
ಭಾವ್ಯ ಸಿರಸರಸಾಯನಂಗಳನೆಲ್ಲವಂ ತುಂಬಿ ೩೮

೧–೨ ಪಡುರಸ ಸುರಸಮಾಗಿರೆ (ಥ). ೩ ಸು (ಧ).

CC-0. Jangamwadi Math Collection. Digitized by eGangotri

ಆ ವಿವಿಧ ನದಿಗಳಲಿ ವಾಸನೆ
ತೀವಿ ಬಹು ಚಿಂತಾಮಣಿಗಣವಿ
ಭಾ ವಿಭಾಸುರರಚಿತ ಮಂದಿರವೃಂದದೊಳು ಮತ್ತೆ
ಭಾವಿಸುತ ಮನದೊಳು ಪದ ಪದಾ
ರ್ಥಾವಳಿಗಳಂ ಚಿತ್ರಿಸುತ್ತಾ
ದೇವಿ ಸುರಭಿಸಹಸ್ರವಸ್ತುಗಳಿಲ್ಲವೊದವಿಸುತ ೪೯

ತನ್ನ ದಿವ್ಯಕಟಾಕ್ಷವೀಕ್ಷಣ
ದಿಂ ನಿಖಿಳ ಭೋಜ್ಯಾದಿ ಭೋಗೋ
ತ್ಪನ್ನ ನಾನಾ ವಸ್ತುಗಳನಭಿಮತ ಫಲಾದಿಗಳ
ಮುನ್ನವೊಡನೊಡನೊದವಿಸುತ ಹಿಮ
ವನ್ನಗಜೆಯಿರಲುಂ ಪ್ರಮಥಕುಲ
ವಿ[1]ನ್ನುವಾರೋಗಣೆಸಮಯವಾಯ್ತಾಗದೋಯೆನುತ ೫೦

ಪ್ರಮಥಸುಕುಮಾರಕನನೊಬ್ಬನ
ನುಮೆಯ ನಿಳಯಕೆ ಕಳುಹಲಾತನು
ನಿಮಿಷವಲ್ಲಿಗೆ ಹರಿದುಹೋಗಿ ಭವಾನಿಯಂ ಕಂಡು
ಸಮಯವೇ ಆರೋಗಣೆಗೆ ಶಿವ
ರಮಣಿಯೇ ಹಸಿದರು ಗಣಂಗಳು
ಸ್ತಿಮಿತವಲ್ಲಪೆ ಯೆಂದೆನಲು ಸಂಭ್ರಮಿಸಿ ಶರ್ವಾಣಿ ೫೧

ಆ ಗಣಂಗಳನೆಲ್ಲರುಮನೀ
ವೇಗದಿಂದೊಡಗೊಂಡು ಬಾರೈ
ಹೋಗೆನಲು ಪ್ರಮಥೇಂದ್ರಸುತನಿಂತೆಂದನಗಸುತೆಗೆ
ಓಗರವನೆನಗಿನಿತನಿಕ್ಕಾ
ರೋಗಿಸಿದಪೆಂ ಬಳಿಕವರ್ಗಳ
ನೀಗ ಬಿಜಯಂಗೆಯ್ಸಿತಹೆ ನಾಂ ದೂರವೆಯ್ತಂದು ೫೨

---

೧೬ (ಥ).

CC-0. Jangamwadi Math Collection. Digitized by eGangotri

ಹಸಿದೆನವ್ವಾ ಯೆನಲು ಲಿಂಗಾ
ವಸರಮಂ ಸರಸರನೆ ಮಾಡಿಸಿ
ರಸರಸಾಯನಗಳನಗಜೆ ಗಡಣಿಸಲು ಗಡಣಿಸಲು
ಪೊಸತು ಪೊಸತೀ ಪರಿಯೆನಲ್ಕೆ ಕ
ಲಸಿ ಸುರಾದ್ರಿಗಳ್ಕೈಸು ತೋರದೊ
ಳಿಸೆವ ತುತ್ತುಗಳಂ ಪಿಡಿವುತಾರೋಗಿಸುತ್ತಿರಲು ೪೩

ಸಾಂಗದಿಂ ಮಾಡಿದ ಬಹುಪದಾ
ರ್ಥಂಗಳಂ ಹಿರಿದೋಗರಂಗಳ
ಹಾಂಗೆ ಸವೆಯಲು ಗೌರಿಯಚ್ಚರಿವಟ್ಟು ಬೆಱಗೊಂದಿ
ಹಿಂಗದೆಲ್ಲಾ ಪ್ರಮಥರಿಗೆ ಪಲ
ವಂಗದಿಂ ಮಾಡಿದವನೆಲ್ಲಂ
ಹೊಂಗಿವೊಬ್ಬನೆ ಚಿಕ್ಕ ಗಣವಾರೋಗಿಸಿದನೀಗ ೪೪

ಅತಿಶಯವಿದೇಗುವೆನೆನುತ ಪಾ
ರ್ವತಿ ನಿಜೇಶನನೆಯ್ದಿ ವಂದಿಸಿ
ಮತಿಯೊಳತಿ ಚಿಂತಾಕುಳದಿ ತಲೆಬಾಗಿ ನಾಚಿರಲು
ಸ್ಮಿತಮುಖಾಂಬುಜದಿಂ ಪ್ರಮಥರಂ
ಸ್ತುತಿಸುತಿಂತಿವನೀ ಕಿಱಿಯಗಣ
ವತುಳಿತ ಮಹಂತರ ಮಹಾಗೌರವವದೆಂತಹುದೊ ೪೫

ಭಾಸುರಾಂಗಿಯೆ ಕೇಳಸಂಖ್ಯಾ
ತಾಸಹಸ್ರಾಣಿಯೆನುತ ಸಮು
ಲ್ಲಾಸದಿಂದೊಸೆದೇವಮೇತದೆನುತ್ತವಾ ಪೊತ್ತು
ಆ ಸಕಳ ವೇದಂಗಳತ್ಯಾ
ಯಾಸಗೊಂಬವು ನುತಿಸಲಾಱಿದೆ
ಈ ಸಮರ್ಥಗಣಂಗಳಿರವತಿಚಿತ್ರವಂತಾಗಿ ೪೬

CC-0. Jangamwadi Math Collection. Digitized by eGangotri

ಪ್ರಮಥರತ್ಯರಪಾಯರಕ್ಷರ
ರಮಳರಾದಿಜರಭವರವ್ಯಯ
ರಮಿತ ಮಹಿಮರಚಿಂತ್ಯರಕ್ಷಯರಾದ್ಯ ೧ರನುಪಮರು
ಅಮೃತಕಾಯರಜೇಯರಚಲಿತ
ರಮರರನಿಶಾನಂದಯುತರು
ತ್ತಮರತೀತರಗಣ್ಯರೂರ್ಜಿತ ಪುಣ್ಯವರ್ತನರು ೪೭

ವೇದ ವೇದಾಂತಾದಿಕೋವಿದ
ರಾದಿಕಾರಣಕಾರಣಕರಣ
ಮಾದಿ ೨ಷಡ್ಗು ೩ಣವ್ಯಂದರಾರ್ಯರು ಸುಭಗರತಿಬಲರು
ಆದಿಲಿಂಗಾಂಶಿಕರು ಲಿಂಗಶು
ಭೋದಯರು ಲಿಂಗಸ್ಥಿತರು ಲಿಂ
ಗೋದರರು ಲಿಂಗೈಕತನುಗಳು ಲಿಂಗಮೂರ್ತಿಗಳು ೪೮

ಲಿಂಗಭಾವರು ಲಿಂಗಜೀವರು
ಲಿಂಗವಂತರು ಲಿಂಗಶಾ ೪ಂತರು
ಲಿಂಗಗಂಭೀರರು ಮಹಾಲಿಂಗತ್ರಯಾನ್ವಿತರು
ಲಿಂಗವೇದ್ಯರು ಲಿಂಗಬೋದ್ಯರು
ಲಿಂಗಚರಿತರು ಲಿಂಗಭರಿತರು
ಲಿಂಗಸೌಖ್ಯರು ಲಿಂಗಸಖ್ಯ ೫ರು ಲಿಂಗಸಂಗಿಗಳು ೪೯

ಆಯುವೆನಗಾ ಪ್ರಮಥರವರಿಂ
ಗಾಯುವಾನಾ ಪ್ರಮಥನಾಥರ
ಕಾಯವೇ ಮತ್ಕಾಯವಲ್ಲದೆ ಮತ್ತೆ ಬೇಱೊಂದು
ಕಾಯುವುಂಟೇ ಗೌರಿಯಿಲ್ಲಿಯ
ಜೇಯನೊರ್ಬಪ್ರಮಥನಿಚ್ಛೆಯೊ
ಳಾಯಜಾಂಡಾನೀಕವಳಿಗುದಯಿಸುಗು ಬಾಳುವುದು ೫೦

---

೧ ಡ್ಯ (ತ, ದ). ೨–೩ ಸದ್ಗು (ತ, ಥ, ದ, ಪ). ೪ ಕಾ (ಮ). ೫ ತ್ಯ (ಅ, ಕ, ಚ, ಮ, ಸ).

CC-0. Jangamwadi Math Collection. Digitized by eGangotri

ಇದುಮದಲ್ಲದೆ ಹರಿಯಜೇಂದ್ರ
ತ್ರಿದಶರಂ ನಿರ್ಜಾಡಿಸುವರೆಂ
ಬುದು ವಿಚಿತ್ರಮೆವೊಬ್ಬನಿಲ್ಲಿಂತೆವೆಯನಿಕ್ಕಿದಡೆ
ಇ[೧]ದಱಿಂಳಖಿಳ ಪ್ರಳಯವಹುದೆನೆ
ಇದುನಿಮಿತ್ತವಗೋಚರಂ ಬಾ
ರದು ನುತಿಗೆ ನೀ ನೋಡು ತತ್‌ಪ್ರಮಥರ ಮಹತ್ವವನು ೫೧

ಎನುತ ಕೀರ್ತಿಸುತಿರೆ ಹಿಮಾಚಳ
ತನಯೆ ಸಂಚಿತಮಾನಸಾದ್ಭುತೆ
ಯೆನಿಸಿ ತಾನಿರುತಿರ್ದಳಂತಾ ದೇವಿಯರು ಮುನ್ನ
ಘನವೆನಿಪ್ಪಾರೋಗಣೆಯನೊ
ರ್ಬನಿತು ಬಾಲಂಗಿಕ್ಕಲಾಱಿದೆ
ಮನವಿಳಿದಳೆಂದಡೆ ದಯಾರಸಸಂಭರಿತಚಿತ್ತ ೫೨

ದೇವ ದೇವಸ್ತುತ್ಯ ನಿತ್ಯದ
ಯಾವಲೋಕನ ಲೋಕಪಾವನ
ಭಾವಜಾಹಿತ ಚಿನ್ಮಯಜ್ಯೋತಿಪ್ರಭಾರೂಪ
ಭಾವನಾತೀತ ಪ್ರಭುವೆ ಸದ್
ಭಾವಸನ್ನಹಿತ ಕ್ಷಮಾಮಯ
ಭಾವ ಸಾಕ್ಷಾತ್‌ಸಂಗಮೇಶ್ವರ ಜೀಯ ಚಿತ್ರೈಸು ೫೩

ಮಣಿಯದಂಜದೆ ನಿಮಗೆಯಾರೋ
ಗಣೆಯನೆಯ್ದಿಸಿ ನೀಡಲೆನ್ನ ಪ
ವಣೆ [೨]ಘೃಣಾ[೩]ನಿಧಿ ಯೆನುತ ಕೀರ್ತಿಸಲಲ್ಲಮಂ ಮೆಚ್ಚಿ
ಪ್ರಣಯಕರುಣದಿ ನೋಡಿ ಚಿಂತಾ
ಮಣಿ ಸುರಭಿಸಂತಾನತತಿಯಂ
ಗಣದೊಳಿರೆ ತನ್ನ ಪ್ರಸಾದವನಿಕ್ಕಿ ಮುಂಡಾಡಿ ೫೪

೧ಆ (ತ, ದ). ೨–೩ ಗುಣ (ಥ, ಚ, ಪ, ಬ).

CC-0. Jangamwadi Math Collection. Digitized by eGangotri

ನೆನೆದಡಾವ ಪದಾರ್ಥವಾದಡೆ
ಮನೆಯೊಳಿರಬೇಕೆಂಬ ವಸ್ತುಗ
ಳನಿತು ಹೊಂದಿರೆ ನುಡಿದ ಭಾಷೆಯೆ ಭಾಷೆಯಾಗಿರಲು
ಅನವರತ ಮುನ್ನಿರ್ದ [೧]ಮಾರ್ಗ[೨]ವೆ
ತನಗೆ ನೆಲೆಯಾಗಿರುತಿರಲು ಸು
ಮ್ಮನೆ ಹಿಡಿದ ಮಣ್ಣಾದಡಂತು ಸುವರ್ಣವಾಗಿರಲು ೫೫

ಮುಟ್ಟಿದಡೆ ಬಯಲಾದಡಾಕೃತಿ
ಗೊಟ್ಟಿರಲು ತೊಡರಿದಡೆ ತಾಂ ಕೈ
ಗಟ್ಟಿ ಮೃಡನೊಡನಾದಡಂಜದೆ ಗೆಲಲು ಜಂಗಮದ
ದಟ್ಟಣೆಗೆ ಸೈರಿಸುವ ಮನವಳ
ವಟ್ಟಿರಲು ನಿಜಲಿಂಗಸುಭಗಂ
ಕೊಟ್ಟು ತತ್ವಾರ್ಥಾನುಭವ ಸಮ್ಮೇಳನವನಿತ್ತು ೫೬

ಮೋಹಮಾಯಾಧಿಕ ತಮಂಧಸ
ಮೂಹಮಂ ಸಂಹರಿಸಿ ದೇಹಯು
ತಾಹಿತೇಂದ್ರಿಯ [೩]ವರ್ಗ[೪]ಮಂ ಮರ್ದಿಸಿ ಸದಾನಂದ
ಸೋಹದಿಂ ತನ್ನನುವಟ್ಟಿದು ದಾ
ಸೋಹಭಾವನ ಸತ್ಕ್ರಿಯಾತ್ಮ
ಗ್ರಾಹಕವನೊಂದಿಸಿ ಅಜಸ್ರೋದಾತ್ತಚಿತ್ತದಲಿ ೫೭

ಯೋಗಲೀನಪ್ರಾಣಲಿಂಗವಿ
ಭೋಗದೊಳು ಹೊಂದಿರೆ ಸದಾನಂ
ದಾಗಣಿತ ಸುಖದಿಂ ದಿವಾರಾತ್ರಿ ಚ ವರ್ಜಯೆನೆ
ಭಾ[೫]ಗಿಸಲುಪಟ್ಟಾ ಪದಾಂತ
ರ್ಯೋಗ ಭಾತಿ ಖ್ಯಾತಿಯೆಸೆಯಲು
ಕೈಗೊಳಿಸಿ ಬಹಿರಂಗಶೃಂಗಾರಾರ್ಥ ರಂಗದಲಿ ೫೮

೧–೨ ಭಾವ (ಬ). ೩–೪ ಗರ್ವ (ಸ). ೫ ಭೋ (ಮ, ಬ).

CC-0. Jangamwadi Math Collection. Digitized by eGangotri

ನು[೧]ತಮಥನಸಂವಿತ್ಸುಖೈಕಾ
ಮೃತರಸಾನುಭವಾಂಬುರಾಶಿಯೊ
ಳತಿಶಯದಿನೋಲಾಡಿಸಲು ಭಂಡಾರಿ ಬಸವಣ್ಣ
ಅತುಳಿತಾಮಳಲಿಂಗತತ್ವ
ಸ್ಥಿತಿಯನೆಲ್ಲವನಱಿದು ಸಂತೋ
ಷಿತಹೃದಯದಿಂದಲ್ಲಮನ ದಿವ್ಯಾನುಭಾವದಲಿ ೫೯

[೧]ಉದದೊಳುಪ್ಪಿನ[೧] ಪೊಟ್ಟಣವನಿರಿ
ಸಿದ ತೆಱದಿ ಕರ್ಪುರವನುರಿಯ
ಪ್ಪಿದವೊಲಂಬುಧಿಯೊಳು ಘನೋಪಲವೃಷ್ಟಿ ಕಱಿ[೨]ದಂತೆ
ಮುದದಿ ತಾ ನಿಲ್ಲದೆ ಚರಿಸುವಂ
ಸದಮಳಪ್ರಭುಚರಿತವಂ ಕೇ
ಳಿದಡೆ ವೋದಿದವರ್ಗಭೀಷ್ಟಸುಖಂಗಳೊಂದುವವು ೬೦

ಅಂತು ಸಂಧಿ ೭ಕ್ಕಂ ಪದಗಳು ೪೭೭ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

---

೧ ಮ (ತ). ೨ ಉದಕದೊಳಗುಪ್ಪಿನ (ತ, ಥ, ದ, ಮ); ಉದಧಿಯೊಳಗುಪ್ಪಿನ (ಪ).

CC-0. Jangamwadi Math Collection. Digitized by eGangotri

ಸಂಧಿ : ೮

*

ಸೂಚನೆ : ಭಕ್ತರಾದರು ಬಂದಿಕಾಱರು
ಮೌಕ್ತಿಕಾವಳಿಯಾಯ್ತು ಜೋಳವು
ಭಕ್ತ ಬಸವನ ಭಾವಶುದ್ಧವ ನೋಡಿದನು ಮೃಡನು

ಒಂದು ದಿನವಾ ಬಸವರಸನೊಲ
ವಿಂದಸಮ ಭಕ್ತಿಪ್ರಭಾವದೊ
ಳೊಂದಿ ಜಂಗಮಪೂಜೆಯಂ ಮಾಡಲ್ಕೆ ತಸ್ಕರರು
ಬಂದಿಯಂ ಹಿಡಿಯಲು ಬಯಸಿ ಭರ
ದಿಂದೆ ಭಕ್ತರ್ಗಲ್ಲದೀತನ
ಮಂದಿರದೊಳನ್ಯರ್ಗೆ ವರ್ತಿಸಬಾರದೆಂದೆನುತ ೧

ಕರಿಯ ಬದನೆಯ ಕಾಯಿಗಳನಂ
ಬರದ ಸೆಱಗಿಂ ಪ್ರದಿದು ಬಿಗಿದೀ
ಶ್ವರನ ಭಕ್ತರ ತೆಱದಿ ಬಂದಾ ಬಸವನಂ ಕಂಡು
ಹಿರಿದು ಭಯದಿಂ ನಮಿಸಿ ಕಂಗಳ
ನರಳ್ಚಿ ಲಿಂಗೈಕ್ಯರುಗಳಲ್ಲದ
ನರರಿಗಭವನ ಭವನದೊಳು ತಾನೆಂತು ಹುಗಬಹುದು ೨

---

* ರಾಗ : ಮಾಳವಗೌಳ (ಅ, ಚ, ಧ, ಪ, ಮ); ವಡ್ಡಿ ಧನ್ವಾಸಿ (ತ).
೧ರ (ತ, ಥ, ದ, ಪ).

CC-0. Jangamwadi Math Collection. Digitized by eGangotri

ಇವರು ಶಿವಸನ್ನಹಿತರಲ್ಲದೆ
ಭವಿಗಳಲ್ಲಿನ್ನೀಶ್ವರಾರ್ಚನೆ
ಯವಸರವನಂಜದೆ ಸಲಿಸಿರೇ ಕುಳ್ಳಿರೆಂದೆನಲು
ಎವೆಯನಿಕ್ಕದೆ ನೋಡುತಂ ಭ್ರಮೆ
ಗವಿದೆದೆಗಳುಱಿ ರುಳ್ಲೆನುತ್ತೇ
ಗುವೆನೆನುತ್ತಂ ತನುಗಳಸುಗಳು ಧಿಗಿಲು ಧಿಗಿಲೆನುತ ೩

ಬಂದು ಸಿಕ್ಕಿದೆವಿಲ್ಲಿ ನಾಾವೊಡ
ಬಂದಿಯಲಿ ಮಗುಳ್ವೋಡಲರಿದಾ
ವಂದದಿಂದಂ ದೇವರುಳ್ಳಡೆ ಸಾವು ತಪ್ಪುವುದು
ಎಂದು ಕೃತನಿಶ್ಚಯಮನಂಗಳಿ
ನಿಂದವರು ಕುಳ್ಳಿರ್ದುಾ ಭಕ್ತರ
ಮುಂದಿಯೊಳಗೊಬ್ಬನ ಮುಸುಡನಂತೊಬ್ಬನೀಕ್ಷಿಸುತ ೪

ಲಿಂಗವಂತರ ಮಾರ್ಗದಿಂ ಹ
ಸ್ತಂಗಳಂ ಸಲೆ ನೀಡಲುಟ್ಟು ಸೆ
ಱಿಂಗಿನಲಿ ಕಟ್ಟಿರ್ದ ಬದನೆಯ ಕಾಯಿ ನಿಮಿಷದಲಿ
ಸಂಗಮೇಶ್ವರ ಬಸವರಾಜನ
ಸಂಗಭಾವದಿ ಬಾಣಲಿಂಗ ಸು
ರಂಗಮಾದುವು ಪರಮ ಭಕ್ತರಿಗಾವ ಗಹನವಿದು ೫

ಧೀವರಂ ಬಿವಹಾರಕೆಯ್ದಿದ
ಠಾವಿನಲಿ ಕಣ್ಬೇನೆಯಾಗಿರ
ಲಾವಗಂ ಶಿವಲಿಂಗದರ್ಶನನಿಯತಿ ತಪ್ಪಿದಡೆ
ಜೀವಮಂ ತಾಂ ತ್ಯಜಿಸುವಂ ಗಡ
ಭಾವನೆಂದತಿ ಕುಟಿಲಚಿತ್ತದ
ಗಾವಿಲರು ಪುಲುದೇಗುಲವನೊಂದಂ ರಚಿಸಿಯಲ್ಲಿ ೬

೧ತಾ (ಮ). ೨ರ್ದ (ತ, ಧ). ೩ಸ (ಚ, ತ, ದ).

CC-0. Jangamwadi Math Collection. Digitized by eGangotri

ಬಳ್ಳವಂ ತಂದಿರಿಸಿ ಅಡವಿಯ
ಮಲ್ಲಿಗೆಗಳಂ ಕೊಯ್ದು ಪೂಜಿಸಿ
ಇಲ್ಲಿಯಿದೆ ಶಿವಭವನವೆಂದಾತಂಗೆ ತೋಱಿದಡೆ
ಅಲ್ಲಿಗೆಯ್ದಿ ವಿಶೇಷಭಕ್ತಿ ಸ
ಮುಲ್ಲಸನದಿ ಶಿವಾಯ ಗೌರೀ
ವಲ್ಲಭಾಯ ನಮೋ ಯೆನುತ ಮೂಱ್ಸೂಳು ಕೈಮುಟ್ಟಿ[೧] ೭

ಪರುಶನವನಾಚರಿಸಿ ವಂದಿಸಿ
ಮರಳಿ ಬೀಡಿಗೆ ಬಂದು ತಾನುಂ
ಡಿರಲು ಹೇಱಿನ ಸೆಟ್ಟಿಗಳು ತಾವೊಬ್ಬರೊಬ್ಬರನು
ಕರೆದು ಎಲಹೋ ಮಲ್ಲಭಾವನು
ಧರೆಗೆ ಲಿಂಗಮಿದೆಂದು ಬಳ್ಳಕೆ
ಸರಸರನೆ ಪೊಡಮಟ್ಟು ಉಂಡಿನು ಹೊಟ್ಟೆಬಿರಿವನಕ ೮

ಹುಲ್ಲಗುಡಿಸಿಲೊಳಾಗ ಮಡಗಿದ
ಬಳ್ಳವಂ ತೆಗೆತನ್ನಿ ಅಳೆಯಲಿ
ಕಿಲ್ಲೆಮಗೆ ತಾಂ ಹಸುವಿಗಾಪತಿಗುಳ್ಳುದದೆ[೨] ದೈವ
ಒಳ್ಳಿತಾಯ್ತೆನಲಗತನೂಜೆಯ
ನಲ್ಲನಂ ನಗುತಿಪ್ಪವಂದಿರ
ಸೊಲ್ಲನಾಲಿಸಲಾಗದೆನುತವೆ ಕಿವಿಗಳಂ ಮುಚ್ಚಿ ೯

ಪೊಂಗಿ ಜಟಿವುತ್ತೆಲವೊ ಸಾಕ್ಷಾತ್
ಲಿಂಗವಲ್ಲದೆ ಬಳ್ಳವೇ ಅದು
ಲೆಂಗಿಗಳಿರಾ ಕಂಡುಕಂಡಿನ್ನೇಕೆ ಗಳಹುವಿರಿ
ಮುಂಗಡೆಯೊಳದೆ ನಂಬದಿರ್ದಡ
ನಂಗಹರನಂ ತೋಱಿದಪೆ ನಾ
ವಂಗದಿಂ ನಡೆಯೆನುತ ನಡೆತರಲಂದಿನಿಕ್ಕೆಯಲಿ ೧೦

---

೧ ಗಿದು (ಸ). ೨–೩ ವಂಟನುಂಡ (ಅ, ಕ, ಚ, ತ, ಥ, ದ, ಪ). ೪ದು (ಥ). ೫ ವೆ (ಬ).

CC-0. Jangamwadi Math Collection. Digitized by eGangotri

ಪ್ರಾಕಟ ಪ್ರಾಕಾರ ಮುಖ ಭ
ದ್ರಾಕಲಿತ ಮಂಟಪ ಕನಕ ಶೋ
ಭಾಕಳಶ ಶಿವ[೧]ನಿಳಯ[೨]ದಿದಿರೊಳು ನಂದಿಕೇಶ್ವರನು
ಶ್ರೀಕರಂ ಮಿಗೆ ಬಳ್ಳವದು ಲಿಂ
ಗಾಕೃತಿಯೊಳಿಸೆದಿರ್ದುದೆಲ್ಲಾ
ಲೋಕದೊಳು ಬಳ್ಳೇಶ್ವರನೆ ಮಲ್ಲಯ್ಯನೆನಿಸಿದನು ೧೧

ಕಾಟಕೋಟನೆನಿಪ್ಪ ಗೊಲ್ಲರ
ಮೇಟಿ ಆಡಿನ ಹಿಕ್ಕೆಯಂ ಶಶಿ
ಜೂಟನೀಶ್ವರನೆಂದು ಪಾಲಂ ತಾನದಱಿ ಮೇಲೆ
ಪಾಟಿಕುಂಭದಿ ಕಱ[೩]ದೆಱಿ[೪]ದು ಕಾ
ಲಾಟದಿಂ ಬು[೫]ಬುಬೆಂದು ಕುಣಿವುತ
ನೋಟವಾ ಶಿವಲಿಂಗದೊಳೆ ಸಲೆ ಸಿಲುಕಿ ಭಜಿಸುತಿರೆ ೧೨

ಹಾಲನೆಲ್ಲವನಿಂತು ಹಿಕ್ಕೆಯ
ಮೇಲೆ ಕೆಡಹುತ ಕೆಡಿಸಿದಪನೀ
ಕಾಳುಮೂಲನೆನುತ್ತ ಕಾಲಿಂದೊದೆದು ಬೈವುತಿರೆ
ಕೇಳಿ ಹರ ಹರ ಯೆನುತ ಕೈಯ ಕ
ರಾಳಪರಶುವನೆತ್ತಿ ನೆಲದಲಿ
ಬೀಳಹೊಡೆದನು ಪಿತನ ತಲೆಯನು ದ್ರೋಹಿ ಕೆಡೆಯೆನುತ ೧೩

ಕೊಡಲಿ ಕುಜನ ಮಹೀಜರಾಜಿಗೆ
ಕೊಡಲಿ ಭಾಳಾಂಬಕನ ಹಸ್ತದ
ಕೊಡಲಿಯೆಂದಗಜೇಶ್ವರಂ ಚಂಡೇಶ್ವರಂಗಿತ್ತ
ಕೊಡಲಿ ಬೇಡಿದವರ್ಗೆ ಪದಮಂ
ಕೊಡಲಿ ವೀರವ[೬]ನೆನುತಲಾತನ
ಕೊಡಲಿಯಂ ಕೊಂಡಾಡಿದರು [೭]ರುದ್ರ[೮]ಪ್ರಮಥರೊಲಿದು ೧೪

೧–೨ ಲಿಂಗ (ತ). ೩ ಕು (ದ). ೪ ಮ (ಸ). ೫–೬ ವೀರ (ತ, ದ).

CC-0. Jangamwadi Math Collection. Digitized by eGangotri

ಭವವೆನಿಪ್ಪಾ ಪೆರ್ಬುಲಿಯ [೧]ಶಿರ[೨]
ಸುವನರಿದವೋಲಿತ್ತಲೀತನು
ತವೆ ಹೊಡೆಯ[೩]ಲಂತತ್ತಲಾ[೪] ಶಿವಪ್ರರದ ಕದಪುಗಳು
ತವತವಗೆ ಫಳಫಳವೆನುತ ಬಿ
ದ್ದವು ವಿಚಿತ್ರಂ ಗೊಲ್ಲಳನ ಪರ
ಶುವಿನ ಧಾರೆಯೆ ಕೀಲಲಾ ಕೈಲಾಸಶೈಲಕ್ಕೆ ೧೫

ಎನುತ ಲೋಕಂ ಪೊಗಳೆ ಹಿಕ್ಕೆಯ
ವನಿಯೊಳಗೆ ಶಿವಲಿಂಗವಾಯಿ
ತ್ತನಘ ಗೊಲ್ಲಳರಾಯನಿಂ ಮತ್ತಂತುಮಲ್ಲದೆಯು
ಜನವಟಿ[೫]ಯೆ ಬಾಹೂರ ಬೊಮ್ಮ
ಯ್ಯನ ಮನೋಭಾವದೊಳಲಾ ಶ್ರಿಭು
ವನಕೆ ಜೋಳವು ಲಿಂಗವಾಗಿ ನೆಗಳ್ವುದಂತಾಗಿ ೧೬

ಪರಮಭಕ್ತರ ಭಾವವೇ ಶಂ
ಕರನ ಜನ್ಮನಿವಾಸವಾಗಿಂ[೫]
ತಿರೆ ಬಸವನ ಸುಭಕ್ತಿಸೌಭಾಗ್ಯಪ್ರಭಾವವದು
ಪರಿಕಿಪಡದೇತಱ ಘನಂ ದು
ರ್ಧರಕಪಟರುಂ ಲಿಂಗಲಾಂಛನ
ಧರಣರಾದಡೆ ಮೋಕ್ಷಕಾರಣರಪ್ಪರಂತಾಗಿ ೧೭

ಆದಿದೇವರದೇವನ ಶ್ರೀ
ಪಾದಪಂಕಜಭಕ್ತಿಗೆಱಗುವ
ನಾದರೇಣ ಯೆನುತ್ತಮಿಹ ಶಾಸ್ತ್ರೇನ ಯೆನುತಿರ್ಪ
ಓದು ಸಹಜವಲಾ ಶಿವಂಗೆ ವಿ
ಭೇದವೇ ತನ್ನವರೊಳೆನುತಾ
ಹ್ಲಾದಮಾನಸರಾಗಿ ಭಕ್ತರು ಪರಿಣಮಿಸುತಿರಲು ೧೮

೧–೨ ಮಸ್ತಕ (ಚ, ತ, ದ, ಮ). ೩–೪ ಲತ್ತತ್ತಲಾ (ಅ). ೫ ರು (ಚ).

CC-0. Jangamwadi Math Collection. Digitized by eGangotri

ಕಳ್ಳರುಂ ಕರುಣಾಕಟಾಕ್ಷದಿ
ಬೆಳ್ಳರಾಗಿರೆ ನೋಡಿ ಬಸವಂ
ಸಲ್ಲಲಿತ ಕಾಮಿತಫಲಂಗಳನಿತ್ತವರ್ಗಳನು
ನಲ್ಲಭಕ್ತರನಂದು ಮಾಡಿದ
ನೆಲ್ಲರುಂ ಕೊಂಡಾಡುತಿರಲಂ
ತಲ್ಲದೆಯು ಮತ್ತೊಂದು ದಿವಸಂ ದಂಡನಾಯಕನು ೧೯

ಸಂಗಮೇಶಾರ್ಪಿತದ ತೈಲಾ
ಭ್ಯಂಗನಂ ಮಾಡುವ ಸಮಯದಲಿ
ಜಂಗಮಯ್ಯನು ಬಂದು ಮುತ್ತಿನ ಚೂರ್ಣವೀ ದಿನಕೆ
ಹಿಂಗದೊಕ್ಕುಳ ನಿತ್ಯನೇಮದ
ರಂಗವಾಲಿಗೆ ಸಲಿಸಬೇಕಾ
ವಂಗದಿಂದೋಸರಿಸಬಾರದು ನಿಮಿಷಮಾತ್ರದಲಿ ೨೦

ಹತ್ತುಖಿಂಡುಗ ಮುತ್ತನೆಮಗಿಂ
ತಿತ್ತಡಲ್ಲದೆ ಬಸವ ಹೋಗೆವೆ
ನುತ್ತಮಿರೆ ಲಿಂಗದ ಪಸಾಯಿತಶಸ್ತ್ರಕರನಾಗಿ
ಅತ್ತ ನೋಡಲು ದೃಷ್ಟಿಗೋಚರ
ವೆತ್ತ ಜೋಳದ ರಾಶಿ ರುಚಿರಾ
ಯತ್ತ ಮೌಕ್ತಿಕಪುಂಜವುನ್ನತವಾಗಿರಲು ನಗುತ ೨೧

ಅನಘ ನಿಮಗೀ ಹತ್ತುಖಿಂಡುಗ
ವೆನಿಪ ಸಂಖ್ಯೆಯದೇಕೆ ಬೇಕಾ
ದನಿತುಮಂ ಕೈಕೊಂಡು ನೀವಿಂತೀಗಳುದ್ಧರಿಸು
ಎನಲು ಜಂಗಮದೇವನಾಗಲಿ
ಎನುತ ಹೊಸಮುತ್ತುಗಳನಾಗಳೆ
ತನಗೆ ಹೇಱುಗಳಲಿ ಹಿಡಿಸಿಕೊಂಡೊಯ್ದನಾ ಆಯ್ಯ ೨೨

೧ಮು (ಮ). ೨ದಿ (ಚ, ಕ, ಬ). ೩–೪ ರಾಶಿಯಾಗಿರಲು (ತ, ದ). ೫ಹೊ (ಪ).

CC-0. Jangamwadi Math Collection. Digitized by eGangotri

ಅಂದು ಮೊರಟದ ಬಂಕಿದೇವ[೧]ನು
ಒಂ[೨]ದುದಿನ ನಡುವಿರುಳು ಭೋಂಕನೆ
ಬಂದು[೩] ಲಿಂಗೈಕ್ಯಂಗೆಱಗಿ ಅವರಡಿಗಳಂ ತೊಳೆದು
ತಂದು ಭಸಿತಮನಿತ್ತು ಸಮುಚಿತ
ದಿಂದೆ ಲಿಂಗಾವಸರಮಂ ಸಲಿ
ಸೆಂದು ಬಿನ್ನೈಸಲ್ಕೆ ತನಗಾ ಶರಣನಿಂತೆಂದ ೨೩

ಕೇಳು ಬಂಕಾ ಎಮ್ಮ ಲಿಂಗದ
ವೇಳೆಗ[೪]ದು ತಾನೊಂದು[೫]ಗೊಡ್ಡಿನ[೬]
ಹಾಲುಮುಂ ಹೊಸ[೭]ಬೆಲ್ಲ[೮]ಪತ್ರೆಯು ಬೇಕದಿಲ್ಲದಡೆ
ಮೇಲೆ ಲಿಂಗಾವಸರವಾಗದು
ಲೀಲೆಯಿಂ ನೀ ಸಲಿಸಿದಪನೆಂ
ಬೇಳಿಗೆಯೊಳೆಯ್ತಂದೆವೀಗಳೆ ಘ[೯]ಳಿಸಲಾಱದಡೆ ೨೪

ಎನ್ನುವಂ ನೀ ಕಾಣಲಱಿಯೈ
ನಿನ್ನಿಯೆನೆ ಬೇಱೂರು ದೂರವ
ದೆನ್ನದಾರಂ ಬೇಡೆನೂರೊಳು ಭಕ್ತರುಗಳಿಲ್ಲ
[೧೦]ಇನ್ನು ಹೇಂಗಿದಕೇನ ಮಾಡುವ[೧೦]
ನೆನ್ನದಾತ್ಮದೊಳಿನಿತು ಕೊಂಕದೆ
[೧೧]ಭಿನ್ನವಾಗದೆ[೧೧] ಗೊಡ್ಡನಾಗಳೆ ಹೋಗಿ [೧೨]ಹಿಡಿ[೧೨]ತಂದು ೨೫

ಒಂದು [೧೩]ಗೂಟದೊಳಂತು[೧೩] ಸಂದಿಸಿ
ಇಂದುಮೌಳಿಯ ಭಕ್ತರಂ ಮುದ
ದಿಂದ ನೆನೆದೀ ಕೊರಡಿನಿಂದವೆ [೧೪]ಬೆಲ್ಲ[೧೪]ಪತ್ರೆಯುಮಂ
ಮುಂದೆ ಕಟ್ಟಿರ್ದೀ ಬರಡು ಪಶು
ವಿಂದೆ ಹಾಲಂ ಮಿಗೆ ಪಡೆವೆ ನಾ
ನೆಂದು ಗಡಿಗೆಯನಾಕ್ಷಣವೆ ತೊಳೆತಂದು ಕಱಿಯಲ್ಕೆ ೨೬

೧–೨ನದೊಂ (ತ, ದ, ಪ). ೩ದ (ತ, ಥ, ದ). ೪ಯಿ (ಥ, ಧ, ಪ). ೫–೬ ಗೋವಿನ (ತ, ಥ, ದ, ಪ). ೭–೮ಬಿಲ್ವ (ತ, ದ). ೯ಸ (ದ). ೧೦–೧೦ಇನ್ನಿದಕೆ ನಾಸೇನ ಮಾಳ್ಪೆನು (ತ, ದ). ೧೧–೧೧ವಿನ್ನವಾಗದೆ (ಅ, ತ, ದ, ಪ, ಬ, ಮ). ೧೨–೧೨ಪೊಡೆ (ಚ, ದ). ೧೩–೧೩ಗೂಂಟದೊಳದನು (ತ, ದ). ೧೪–೧೪ಬಿಲ್ವ (ತ, ದ, ಪ).

CC-0. Jangamwadi Math Collection. Digitized by eGangotri

ಬರಡು ಕುಂಭವು ತುಂಬಿ[೧] ಕಟಿಯಲು
ಕೊರಡು ಕೊನರಲು [೨]ಬೆಲ್ಲ[೩]ಪತ್ರೆಯ
ನರರೆ ಭರದಿಂ ಕೊಯ್ದು ಪಾಲಂ ತಂದು ತಾನಿತ್ತು
ಶರಣನಗ್ಗದ ನೇಮವಂ ಭರ
ಭರಿತಮಾಗಿರೆ ಸಲಿಸಿದನು ಶಂ
ಕರನ ಕಿಂಕರನಂದು ಮೊರಟದ ಬಂಕ[೪]ತಂದೆಗಳು ೨೭

ಎನೆ ಪುರಾತನರಲ್ಲಿ ಕೇಳ್ವಿ[೫]ವು
ಜನವಟಿ[೬]ಯೆ ನಾ[೭]ವಿಂದು[೮] ಕಂಡೆವು
ಘನಕಟಕದೊಳು ಬಸವರಾಜನ ದೃಷ್ಟಿಮಾತ್ರದಲಿ
ಮನೆಯ ಮುಂದೊದವಿಸಿದ ಜೋಳವ
ವನಿಯೊಳೆಲ್ಲರು ನೆರೆದು ನೋಡಲ
ಭಿನವ ಸಿತಮುಕ್ತಾಫಲಂಗಳ ರಾಶಿಯಾಯ್ತೆಂದು ೨೮

ಸರ್ವಭಕ್ತರು ನುತಿಸುತಿರಲೋ
ರೊರ್ವರಿಗೆ ಕಾಮ್ಯಾರ್ಥತತಿಯನ
ಪೂರ್ವಭಕ್ತಿಯೊಳಿಂತು ಬಸವಂ ಕೊಡುತಿರಲು ನೋಡಿ
ಪಾರ್ವತೀಪತಿ ಸಂಗಮೇಶನ
ಲರ್ವ ಮನದೊಳು ಬೇಡಲರ್ತಿ[೯]ಸಿ
ಪೂರ್ವರೂಪಮನುಳಿದು ಜಂಗಮವೇಷಮಂ ತಳೆದು ೨೯

ರಸಿಕತನದೊಳು ಬಂದು ದಿಕ್ಕನೆ
ನೊಸಲಕಣ್ಣಂ ಬೇಡಲೊಡನಂ
ತಸಮಲಿಂಗಪಸಾಯಿತದ ಮೋಹಳಕೆ ಕೈದುಡುಕಿ
ಹೊಸತೆ ನಿನಗಿದು ನಿನ್ನ ಮಾಯೆಯ
ಪಸರವಂ ನಾ ಬಲ್ಲೆನೆನುತಾ
ಬಸವನಾತನ [೧೦]ಮುಖಿ[೧೦]ಕಿ ಮುಕುರವನಾಗ ತೋಱುತ್ತ ೩೦

೧ಬ (ಚ, ಮ, ಕ). ೨–೩ ಬಿಲ್ವ (ಕ, ಚ, ತ, ದ, ಪ, ಮ). ೪ಕಿ (ಥ, ಪ). ೫ಳ್ದಿ (ತ, ದ). ೬–೭ ವಿಲ್ಲಿ (ಥ, ಪ). ೮ಳ್ಳಿ (ತ). ೯–೧೦ ಮೊಗ (ತ, ದ).

CC-0. Jangamwadi Math Collection. Digitized by eGangotri

ಮೂಜಿಕಣ್ಣವೆ ನಿನಗೆ ಸಹಜಂ
ಜಾಜಿದೀಶ್ವರ ನೋಡು ನೀನೆನೆ
ತೋಜಿದಾ ಕನ್ನಡಿಯೊಳಗೆ ಭಾಳಾಕ್ಷಮಂ ಕಂಡು
ಮೋಜಿಯಂ ಬಾಗಿಸುತ ಬಸವನ
ದೂಜಿಗೊಳಗಾದೆನೆಯೆನುತ ತಲೆ
ದೋಜಿದತ್ತಲೆ ಸರಿವುತಿರೆ ನೋಡೆಲೆಲೆ ನಿಲು ನಿಲ್ಲು ೩೧

ಓಡದಿರು ಸಂಗಯ್ಯ ಹೋ ನಿಲು
ವೋಡದಿರು ನಾ ನಿಮ್ಮನೊಂದಂ
ಬೇಡೆನೆನ್ನಂ ಬೇಡು ಬೇಡಿದಡೀವೆನಡಿಯಿಡದೆ
ಬೇಡನಾಗದಿರಿತ್ತಲೆನ್ನಂ
ನೋಡು ನಿಜಭಕ್ತರ ಮನೆಗಳೊಳು
ಜೂಢಿಸಿದ ನೆಜಿಯಂಕಕಾಜಿನನೆನ್ನ ನೀನಜಿಯ ೩೨

ದಾಸಿಮಯ್ಯನ ತೆಜಿದಿ ತಪನಿಧಿ
ಗಾಸೆಮಾಡೆನು ನಂಬಿಯಂತೆ ವಿ
ಳಾಸಿನಿಯೊಳೆಡೆಯಾಡಿಸೆನು ಸಿರಿಯಾಳನಂದದಲಿ
ಆ ಸುತನನರ್ತಿಸೆನು ಹೊಮ್ಮಳೆ
ಸೂಸವೇಳೆನು ಚೋಳನಂತಿದು
ವಾಸಿ ಬೇಡೆನು ಗುಂಡಯನವೊಲು ಮಿಂಡಹರೆಯವನು ೩೩

ಸ್ವರ್ಗಭೋಗಾದಿಗಳ ನಾನಪ
ವರ್ಗ ಸೌಖ್ಯಾದಿಗಳನೊಲ್ಲೆನು
ಭರ್ಗ ನಿಮ್ಮ ಪ್ರಮಥರಾರೋಗಿಸಲುಡುಗಿವೊಕ್ಕ
ವರ್ಗ ವರ್ಗದ ತತ್ಪ್ರಸಾದನಿ
ರರ್ಗಳಾನುಭವೈಕಸುಖಿಸಂ
ವರ್ಗವುಂಟಿನ್ನೆನ್ನ ಬಾಳುವ ಕಾಲವುಳ್ಳನ್ನ ೩೪

೧ಸ (ತ, ಥ, ದ, ಪ).

CC-0. Jangamwadi Math Collection. Digitized by eGangotri

ಭುವನವಲ್ಲಭ ನಿಮ್ಮ ಮಜ್ಜನ
ದವನು ಗೊಲ್ಲಳರಾಯನಗಜಾ
ಪ್ರವರ ಕೇಳಾ ಪುಷ್ಪದತ್ತನು ನಿಮ್ಮ ಪೂವಡಿಗ
ಭವಹರಣ ನಿಮಗಿಂಡೆಯಂ ಕ
ಟ್ಟುವಳು ತಾ ರೇಕವ್ವೆ ವೇದ
ಸ್ತವನಿಧಿ ಕಣ್ಣಪ್ಪದೇವನು ನಿಮ್ಮ ಪೂಜಾರಿ ೩೫

ಚಿತ್ತಜಾರಿಯಖಿಂಡದೀಪವ
ನೆತ್ತುವಂ ದೀಪದ ಕಲಿಯರೊಲ
ವೆತ್ತಿ ನಿಮ್ಮರಮನೆಗೆ ಕಡವಳ ನಂಬಿ ದೀವಟಿಗ
ಮುತ್ತಿನಾರತಿಯಂ ರಚಿಸಿ ಹಾ
ಡುತ್ತಿಹಂ ಸೋವಣ್ಣ ಭೂತಿಯ
ನಿತ್ತು ಹರಸುವನೀಶ ನಿಮ್ಮಂ ಜ್ಞಾನಸಂಬಂಧಿ ೩೬

ಸರ್ಪಕಂಕಣ ನಿಮಗೆ ಗಂಧವ
ನರ್ಪಿಸುವನಣುಮೂರ್ತಿ ಧೂಪವ
ನಾರ್ಪನಿತುವಂ ಕುಡುವವಂ ಮಾಚಯ್ಯನೋಹಿಲನು
ಕೂರ್ಪ ಘಂಟೆಯವಂ ವಿಜಿತಕಂ
ದರ್ಪ ಪಡಿಯಂ ಕೊಡುವನರಿವಾಳ್
ಕರ್ಪುರದ ವೀಳೆಯವನಿಕ್ಕುವನೆಮ್ಮ ರೇಚಯ್ಯ ೩೭

ಲೇಸೆನಿಪ ಪಾಲಂ ಕಱಿವವಂ
ಭಾಷೆವಂತನು ಬಂಕಿದೇವನು
ಕಾಸಿ ಚಿಲುಪಾಲಂ ಕೊಡುವವಳು ನಿಮಗೆ ಕೊಡಗೂಸು
ಆಸುರದ ಕಟ್ಟಾಳು ಶಂಕರ
ದಾಸಿಮಯ್ಯನು ದೇವ ದೇವರ
ದಾಸಿ ಬಹುಧಾನ್ಯಂಗಳಂ ಸಂಗ್ರಹಿಸಿ ನಡೆಸುವನು ೩೮

CC-0. Jangamwadi Math Collection. Digitized by eGangotri

ಲೆಂಕನನಘಂ ಮಂಚಿದೇವನು
ಸುಂಕಿಗಂ ಬಂಕಯ್ಯ ಶಿವನಿ
ಮ್ಮಂಕಕಾಟಿನು ಮೂಜಗದೊಳೇಣಾದಿನಾಯಕನು
ಶಂಕರಯ್ಯಂ ನಿಮಗೆ ರಾಗರ
ಸಾಂಕಿತಂ ಶಿವರಾತ್ರಿನೇಮದ
ಸಂಕಿದೇವಂ ನಿಮ್ಮ ನಗರಿಯೊಳಿರುಳುದಳವಾಟಿ ೩೯

ಶೂಲಧರ ನಿಮ್ಮಡಬಳಂ ಸಿರಿ
ಯಾಳ ಬಾಣಸಗಿತ್ತಿ ಚಂಗಳೆ
ಜೋಳರಾಯಂ ನಿಮಗೆ ಪರಿಯಾಣಮನಮರ್ಚ್ಯಪನು
ಲೀಲೆಯಿಂದೋಗರದ ಪಡಿಸಣ
ದಾಳು ಚೆನ್ನಯ್ಯಂ ಜಗತ್ರಯ
ಪಾಲ [೧]ನಿಮ್ಮುವನುಣಬಡಿಸುವಳು[೨] ವೀರಜೋಳವ್ವೆ ೪೦

ನಂಬಿ ಕೆಳೆ ಬಲ್ಲಳನೆ ಕುಂಡಣೆ
ಸಾಂಬ ನಿಮ್ಮಂ ನಗಿಸುವಂ ಕಲಿ
ಯೆಂಬನಾರ್ಪಾಠಕನು ತಾ ವಾಗೀಶನೈನಾರು
ಕಂಬಿಕಾಟಿಂ ಹೊನ್ನಿದೇವಂ
ನಿಂಬಿ ಸಮ್ಮಾರ್ಜನೆಯವಳು ನಿಟಿ
ಲಾಂಬಕನೆ ಮಾರಯ್ಯನಡುಗಬ್ಬುಗಳನಡಕುವನು ೪೧

ದೇವಗಣನಾಥಂ ಪ್ರಧಾನಿಯು
ಮಾವರದ ದಂಡಾಧಿಪಂ ಜಗ
ದೇವಧೀಮಣಿ ಸೇನಬೋವಂ ಕೇಶಿರಾಜಯ್ಯ
ಆವಗಂ [೩]ಕೊತ್ತಾರಿ[೪] ಸೊಡ್ಡಳ
ದೇವ ಬಾಚಯ್ಯಂ ಧರೆಗೆ ಕೆಂ
ಬಾವಿಯಲಿ ಭೋಗಯ್ಯನೀಶ್ವರ ನಿಮ್ಮ ವಿಶ್ವಾಸಿ ೪೨

೧–೨ ನಿಮಗುಣಬಡಿಸುವವಳೇ (ತ, ದ). ೩–೪ ಕೋಠಾರಿ.

CC-0. Jangamwadi Math Collection. Digitized by eGangotri

ಪಂಡಿತಯ್ಯನು ನಿಮ್ಮ ಮೋಹದ
ಪಂಡಿತಂ ಶಿವಯೆಮ್ಮಿ ಸಿರಿಪತಿ
ಪಂಡಿತಯ್ಯನು ನಿಮ್ಮ ಕಾಬ್ಯನು ಸಾಮವೇದಿಗಳು
ಪಾಂಡುರಂಗ ಪುರೋಹಿತರು ಭೂ
ಮಂಡಲದ ಪೌರಾಣಿಕರು ಶಶಿ
ಖಂಡಶೇಖರ ಮಾಯಿಭಟ್ಟರು ಪ್ರಭುವೆ ಮತ್‌ಪ್ರಭುವು ೪೩

ದಾದಿ ಅಮ್ಮಪೆ ಅಂಕಮಾಲೆಯ
ನೋದುವವನುದ್ಭಟನಭವ ಎ
ಮ್ಮಾದಿವೈದ್ಯರು ನಿಮಗೆ ನಾಟ್ಯನಮಿತ್ತಡಿಯನಾರು
ಆದಿವೀಣೆಗಳಿಂದ ಕೇಳಿಪ
ಮಾದಿರಾಜಂ ಗಾರುಡಿಗನ
ಬ್ಧೋದರಾರ್ಚಿತ ಕೇಳು ಹಾವಿನಹಾಳ ಕಲ್ಲಯ್ಯ ೪೪

ರುದ್ರಪಶುಪತಿ ಮಂತ್ರವಾದಿ ಜ
ಗದ್ರಮಣ ನಿಮ್ಮ ಪ್ರಸಾದಿ ಮ
ಹದ್ರಮಾಕರ ಬಿಬ್ಬಿಬಾಚಯ್ಯಗಳು ಕಿನ್ನರನು
ಮುದ್ರೆಯಂ ಪಿಡಿದೊತ್ತುವಂ ಶಿವ
ಭದ್ರನಾಪ್ತಂ ಭಕ್ತಜನಕ
ಲ್ಪದ್ರುಮನೆ ಚೇರಮಮಹೀಶನು ನಿಮ್ಮ ದಳವಾಯಿ ೪೫

ಅಯ್ಯ ಕೇಳ್ ಬಳ್ಳೇಶ್ವರನ ಮ
ಲ್ಲಯ್ಯ ಕೊಟ್ಟಿಗೆಯವನು ಚಂಡೇ
ಶಯ್ಯ ಕೀಲಾರಕ್ಕೊಡೆಯನಿಳಿಹಾಳ ಬೊಮ್ಮಯ್ಯ
ಗೆಯ್ಯಬಲ್ಲಹ ಕಮ್ಮತಿಗನ
ಲ್ಲಯ್ಯನತಿ ಸುಯಿಧಾನಿ ತಾ ಕ
ಕ್ಕಯ್ಯನಂತರ್ವರ್ತಿ ಸಾಮಂತಂ ಮಲಯರಾಜ ೪೬

೧–೨ ಎಂಬ (ಥ). ೨–೩ ಶ್ರೀ (ತ, ದ). ೪–೫ ಲ್ಲಿದ (ತ, ದ).

CC-0. Jangamwadi Math Collection. Digitized by eGangotri

ಸಂರಗಿಕಾಱಿಂ ಚೌಡರಾಯನು
ತುರಗ ಗಜ ಸಾಹಣಿಗಳಂತಕ
ಹರಣ ತಿರುವಾರೂರ ನೈನಾರಿಱಿವತಾಂಡಾರಿ
ವರದ ನಿಮ್ಮೇಕಾಂತವಂತಂ
ಧರೆಗೆ ರಾಮಯ್ಯಂ ಮುಡಿವಳಂ
ಶರಣ ಮಾಚಯ್ಯಂ ಕುಲಾಲಂ ನಿಮಗೆ ಗುಂಡಯ್ಯ ೪೭

ಮಾರವರ ಹೆಗ್ಗಡೆ ಕುಲಚ್ಚಿಱಿ
ಯಾರು ಬಲ್ಪಿನ ಬೇಂಟೆಕಾಱಿನು
ಕಾರಣಿಕಬೊಮ್ಮಯ್ಯನೇಲೇಶ್ವರದ ಕೇತಯ್ಯ
ದ್ವಾರಪಾಲನು ಶಿವ ನಿಮಗೆ ಪಡಿ
ಹಾರಿ ಬಸವಯ್ಯಂ ಮನೆಯ ಭಂ
ಡಾರಿ ಬಲದೇವಂ ಮಧುವರಸನಾಲವಟ್ಟಿದವ ೪೮

ಇಂತು ಸಕಳನಿಯೋಗವೆಮ್ಮ ಮ
ಹಂತರಾಗಿರೆ ಯಾವ ಕೊಱಿತೆ ಸ
ಮಂತಂದಾರಿಯನೆನ್ನುವಂ ನೀ ಬೇಡು ಬೇಡಿದುವ
ಅಂತರಿಸದೀವೆನು ಮನೋಹರ
ಕಾಂತ ಇದಕಂಜಿದಡೆ ಮನದೊಳು
ಚಿಂತಿಸಿದಡಿನ್ನುಂ ಪ್ರಮಥವರರಾಣೆ ನಿಮ್ಮಾಣೆ ೪೯

ನಿನ್ನ ಕೊರಳಿಗೆ ಕಪ್ಪು ಬಾರದ
ಮುನ್ನವಾ ತ್ರಿಪುರಂಗಳುರಿಯದ
ಮುನ್ನ ಗೌರಿಯ ಮದುವೆಯಾಗದ ಮುನ್ನ ಭೂಗಗನ
ದಿಙ್ನಿಚಯಮಂ ಜಗಕೆ ರಚಿಸದ
ಮುನ್ನ ಮೂರ್ತಿಗಳೆಂಟುವಿಲ್ಲದ
ಮುನ್ನಪಜಹರಿಗಳು ಜನಿಸದತ್ತತ್ತಲಿಂ ಮುನ್ನ ೫೦

---

೧ ದಾಂ (ನ).

CC-0. Jangamwadi Math Collection. Digitized by eGangotri

ಅತ್ತಲಿಂ ಮುನ್ನತ್ತಲಿಂ ಮು
ನ್ನತ್ತ ನೀವೆನ್ನಾಳ್ದ ನಾನಾಳ್
ಚಿತ್ತಜಾರಿಯದೇಕೆ ಕಳವಳಿಸಿದಪಿರೆನ್ನೊಡನೆ
ಬಿತ್ತರಿಸಿ ನೀ ಹೋಗಬಹುದೆಯೆ
ನುತ್ತ ಶಿವನೊಳು ಗೆಲಿದನಂಕವ
ನುತ್ತಮೋತ್ತಮ ಭಕ್ತಿಯಲಿ ಭಂಡಾರಿ ಬಸವಣ್ಣ ೫೧ *

ಆಂತು ಸಂಧಿ ೮ಕ್ಕಂ ಪದಗಳು ೫೧೮ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

---

* ಥ, ಪ ಪ್ರತಿಗಳಲ್ಲಿ ಈ ಪದ್ಯವಿದೆ :
ಬಸವರಾಜಾ ಭಕ್ತಿಬೀಜಾ
ಬಸವರಾಜಾ ವಿಮಳತೇಜಾ
ಬಸವರಾಜಾ ನತಜನಮನೋಭೀಷ್ಟ ಸುರಭೂಜ
ಬಸವರಾಜಾ ಗುಣಸಮಾಜಾ
ಬಸವರಾಜಾ ಲಿಂಗಭಾಜಾ
ಬಸವರಾಜಾ ರಾಜರಾಜಪ್ರಿಯ ಕುವರ ಶರಣು

CC-0. Jangamwadi Math Collection. Digitized by eGangotri

ಸಂಧಿ : ೯

*

ಸೂಚನೆ : ಅಂಗಡಿಯೊಳಿಪ್ಪೊ೧ತ್ತು ಬರುತಿರೆ
ಮುಂಗಡೆಯೊಳಡಿ ಜಾಱಿ ಕೆಡೆಯುದ
ಹಾಂಗೆ ಹಿಡಿದನು ಬಸ೨ವನಾ೩ ಗೊಲ್ಲಿತಿ೪ಯ ಹರವಿಯನು

ದಂಡನಾಥಾಗ್ರೇ೫ಸರಂ೬ ಜಗ
ದಂಡಮಂಡಿತಸಿತಯಶಂ ಶಶಿ
ಖಿಂಡಚೂಡಾಖಿಂಡಿತಾಮಳಭಕ್ತಿನಿ೭ಶ್ಚಳ೮ನು
ಚಿಂ೯ಡಬಲ೧೦ನರಿ೧೧ಮದಜಲಜವೇ
ದಂಡನೊಂದುದಿನಂ ಬಸವನಾ
ಮಂಡಲಾಧಿಪನೋಲಗದೊಳೊಲವಿಂದ ಕುಳ್ಳಿರ್ದು ೧

ಸೂಸದಂಜದಿರೋಹೊಯೆನುತ ವಿ
ಕಾಸಮುಖದಿಂ೧೨ದೊರೆದು೧೩ ಹರವಿಯ
ನಾ ಸವಂಯದಿಂದೆತ್ತುವಂದದಿ ಕೈಗಳಂ ನೀಡೆ
ಲೇಸು ಬೊಟ್ಟಿನನಿತು ಭಸಿತಮಂ
ಪೂಸಿದಾತಂ ಬೆಟ್ಟವೆಂತುಟ
ದೈಸು ಮರುಳನನೆಂಬುದಿ೧೪ದು ನೆಲೆಯೆನುತ ಬಿಜ್ಜಳನು ೨

* ರಾಗ : ನಾಂಬಿ (ಚ); ಮಾಳವಕಾಳ (ಅ); ಬಹುಳಿ (ಡಾ). ೧ ಹೊ (ಬ, ಮ, ಕ); ಯೊ (ಚ, ಅ). ೨–೩ ವಣ್ಣ (ಚ). ೩–೪ ಳಗೊಲ್ಲತಿ (ಬ, ಕ). ೫–೬ ಶ್ವರಂ (ಅ, ತ, ಬ); ಚರಂ (ಕ, ಚ, ಥ, ಮ). ೭–೮ ರ್ಮಳ (ಅ); ಶ್ವರ (ಕ). ೯ ದಂ (ಥ). ೧೦–೧೧ರಿಪ್ಪ (ತ, ದ). ೧೨–೧೩ ದೊಂದು (ಥ, ನ). ೧೪ ದ (ಸ).

CC-0. Jangamwadi Math Collection. Digitized by eGangotri

ನಸುನಗುತ ಬಸವಯ್ಯ ಅಕ್ಕಟ
ಮಸುಕಿತೇ ಶಿವಮರುಳು ನಿನ್ನುಪ
ನಸಮಭಕ್ತಿರಸಂ ನಿನಗೆ ತಲೆಗೇಱಿತೇ ಭ್ರಮಿಸಿ
ಸಸಿನೆ ೧ದ್ದಂತಿರ್ದು ತುಂಬಿ
ರ್ದಸಮ ಸಭೆಯೊಳು ಆಂಜದಿರುಯೆನು
ತೊಸೆದು ತೋಳ್ಗಳನೆತ್ತಿ ನೀಡುತ ಹಿಡಿದುದೇನೆನಲು ೩

ಹೇಳಲಾಗದು ತನ್ನ ಸದ್ಗುಣ
ಜಾಲವಂ ತನತನಗದಂ ತಾಂ
ಹೇಳದಿರ್ದಡೆ ಸಭೆ ನಗುವುದೆಂದಾ ಬಸವರಾಜ
ಹೇಳಿದನು ಬಿಜ್ಜಳಧರಾಧಿಪ
ಕೇಳು ತತ್ತ್ರಿಪುರಾಂತಕನ ದೇ
ವಾಲಯದ ಮೂಡಣ ಕಡೆಯೊಳರೆಗಾವುದಱಿೊಳುಂಟು ೪

ಭೂವಿನುತ ಕಪಿಲೇಶ್ವರಂ ತ
ದ್ದೇವದೇವಂಗೊರ್ವ ತಾಪಸಿ
ಸಾವಿರಱನೂಱ್ ಖಂಡುಗ ಕ್ಷೀರಾಭಿಷೇಕವನು
ಓವಿ ಮಾಡಲು ಬೀದಿಬೀದಿಗೆ
ತೀವಿ ಕಾಲುವೆಗಟ್ಟಿ ಹರಿಯೆ ಗ
ಜಾವಳಿಯ ಪದಘಟ್ಟಣದಿ ಜೌಗೆದ್ದಿ ಕೆಸಱಿೊಳಗೆ ೫

ಹೊತ್ತು ಅಳಿಯಂ ಬೀದಿಯಲಿ ಮಾ
ಱುತ್ತ ಿಕಾಟಕಳೆನಿಂಬವಳು ನಡೆ
ವುತ್ತ ೫ಕೊಗ್ಗೆ ಿಸಱಿಲ್ಲಿ ಕಾಲ್ಗಳು ಜಾಱಿ ನಡನಡುಗಿ
ಇತ್ತಲೀಕ್ಷಿಸಿ ಕೆಡೆವ ಮಡಕೆಯ
ನೆತ್ತು ಬಸವಾ ಎನಲು ಹರವಿಯ
ನತ್ತ ಕಯ್ಯಂ ನೀಡಿ ಬೀಳದ ಮುನ್ನ ನೆಗಹಿದೆನು ೬

೧ದೊ (ಆ. ಕ. ಬ). ೨ಳ್ದ (ದ). ೩–೪ ಡಾವುಕ (ದ). ೫–೬ ಕೊಳ್ಗೆ (ದ).

CC-0. Jangamwadi Math Collection. Digitized by eGangotri

ಎನುತ ಗೊಲ್ಲಿತಿಯಾಕೃತಿಯನಾ
ಮನೆಯನಾ ಸತಿಯಿದ್ದ ಠಾವಂ
ತನಗೆ ಬಸವಂ ಹೇಳಿದಡೆ ತಾನಾಕೆಯಂ ಪರಿಸಿ
ಇನಿತುಮಂ ಬೆಸಗೊಳುತಿರಲ್ಕಾ
ಜನಪತಿಗೆ ಭಂಡಾರಿ ಹೇಳಿದು
ದನಿತುಮಂ ವಂಚಿಸದೆ ವಿವರಿಸಿ ಗೋಪಿ ಹೇಳುತ್ತ ೭

ಜಾಜಿಲಂಟಿದ ಕಾಲಜಿಕೊಂಪೆಯ
ನೂಜಿಗೆ ಬಿದ್ದಿಂಗಯ್ಯ ಕೆಸಱಿಂ
ತೋಱುತಂ ಭೂನಾಥ ನೀನಱಿಯಾ ಜಗತ್ರಯಕೆ
ಬೀಱುವೀತನ ಘನಮಹಿಮೆಯಂ
ವಿೂಱಿದುದನೇ ವೊಗಳ್ವೆನಭವಂ
ಗೇಱಿದುತ್ತಮ ಭಕ್ತಿಯುಳ್ಳಱಿವತ್ತು ಮೂವರೊಳು ೮

ತ್ರ್ಯಂಬಕಾರ್ಚನೆಗೆಂದು ತಿರುಚಿ
ಟ್ಟಂಬಲಂ ಪರಿದೊಂದು ದಿನವಾ
ಡಂಬರದ ಮಳೆಯೊಳ್ಕುಸುಮತತಿಯಂ ತಿಱಿದುಕೊಂಡು
ತಾಂ ಬರುತ್ತಿರೆ ಜಾಜಿ ಬೀಳು
ತ್ತಂಬುಧಿಯ ತಟದಲ್ಲಿ ಪುಷ್ಪಕ
ದಂಬವುಗದಂತಚಲಭಕ್ತನು ನಿಮಿಷಮಾತ್ರದಲಿ ೯

ವರದ ತಿರುಚಿಟ್ಟಂಬಲಾಧೀ
ಶ್ವರ ಎನಲ್ಕಾ ಭಕ್ತನಂ ಪತಿ
ಕರಿಸಿ ಪರಮಂ ಬೀಳದಂತೆತ್ತಿದವೊಲಿಂದೆನ್ನ
ಕರುಣದಿಂದೆತ್ತಿದನು ಬಸವೇ
ಶ್ವರನಮಮನಿ ಮೇಣಂತುಮಲ್ಲದೆ
ಧರಣಿಪತಿಗಿ ಕೇಳ್ ಪಿಂತೆ ನಾಂ ಸೊನ್ನಲಿಗೆ ಪುರಕೆಯ್ದಿ ೧೦

೧–೨ ಇರ್ಪ ನೆಱ್ಪಂ (ತ, ದ). ೩–೪ ಕರೆಸಿ (ತ). ೪ಡೆ (ಬ). ೫ಡಿ (ಅ). ೬ಳ್ದ (ತ, ದ). ೭–೮ ನೇಂ ಪೇಳ್ದೆ (ಕ, ತ, ಥ, ಪ, ಮ). ೯–೧೦ ತ್ತುಱಿ (ತ, ದ). ೧೧–೧೨ ಪಮ (ಥ, ಪ); ನು ಮದು (ದ). ೧೩ನೆ (ಥ, ಪ).

CC-0. Jangamwadi Math Collection. Digitized by eGangotri

ಸಿದ್ಧರಾಮಂ ಸರ್ವಲೋಕ ಸ
ಮುದ್ಧರಣಗುಣಸಾರ್ವಭೌಮಂ
ಶುದ್ಧ ತತ್ವಾತ್ಮ[1]ಪ್ರಬುದ್ಧಕಳಾದಿ ವಿಶ್ರಾಮಂ
ಸಿದ್ಧಮುನಿಕುಲಮುಖಿಲಲಾಮಂ
ಬುದ್ಧಬೋಧಸ್ಫುರಣಸೀಮಂ
ವೃದ್ಧಜನಸಂತಾನನಾಮಂ ದಮಿತಮದಕಾಮಂ ೧೧

ಆ ಪುರದೊಳತಿ ಭಕ್ತಿಸುಖಿಗೋ
ಷ್ಠೀಪರಾಯಣರೊಲಿದು ಸಭೆಯಲು
ಮಾಪನೆನಿಪಾ ಸಿದ್ಧರಾಮಯತೀಂದ್ರನಂ ನೋಡಿ
ಆ ಪರಮಭಕ್ತಾಳಿ ಮಧುರಾ
ಲಾಪದಿಂ ಬೆಸಗೊಂಡರಮಳೋ
ದ್ದೀಪರೂಪ ಕಳಾಕಳಾಪ ವಿಧೂತಸಂತಾಪ ೧೨

ಉತ್ತಮೋತ್ತಮದುನ್ನತಶ್ರೀ
ವೆತ್ತ ಸಿರಿಗಿರಿಗೆಣೆಯೆನಲು ಪ್ರಭೆ
ವೆತ್ತ ಪುರವಂ ರಚಿಸಿ ಪರ್ವತನಾಥನಂ ತಂದು
ಇತ್ತ ಸೊನ್ನಲಿಗೆಯೊಳಿರಿಸಿ ದೃಢ
ಚಿತ್ತದಲಿ ಮಿಗೆ ಲಕ್ಷಮುಂ ತೊಂ
ಭತ್ತುಸಾವಿರದಚಳತಿವಲಿಂಗಂಗಳಂ [2]ರಚಿಸಿ[3] ೧೩

ನೆಗಳ್ದು[4] ಮರ್ತ್ಯದೊಳನ್ನಪಾನಾ
ದಿಗಳ ಹಂಗಿಲ್ಲದೆ ತನಗೆ ತಾ
ನೊಗೆದ ಮಕುಟಂ ನೊಸಲ ಕಣ್ಣುಂ ಹೊಳೆಯೆ ಯೋಗದಲಿ
ಬಗೆವಡಾನಂದಪ್ರಪೂರ್ಣತ
ನು[5]ಗೆ ನೆಳಲು ನಡೆದಾಡಿದಡೆ ಹೆ[6]
ಜ್ಜೆಗಳಿಣಿಸಲಿಲ್ಲೆ[7]ನುತ[8] ಚರಿಸಿ ಸಮಾಧಿಯಂತ್ಯದಲಿ ೧೪

೧ರ್ಥ (ಆ, ಕ, ಬ). ೨–೩ನಿಲಿಸಿ (ಬ, ಕ, ಚ, ಮ). ೪ಳಿ (ಬ). ೫ನ (ಪ). ೬ಹ (ಬ, ಚ, ಕ); ಪ (ತ, ದ). ೭–೮ನಲು (ಕ, ಚ, ತ, ಥ, ಪ).

CC-0. Jangamwadi Math Collection. Digitized by eGangotri

ಪ್ರಮಥಲೋಕಕ್ಕೆಯ್ದಿ ತತ್ಪಾ
ರ್ಥಮನಱಿದು [೧]ಸಂಗೋಷ್ಠಿ[೨]ಯಲಿ ತತ್
ಪ್ರಮಥ[೩]ರೊಡನ[೪]ರ್ದಿ ಧರೆಗೆ ಬಂದಪಿರಿ ನೀವ[೫]ಲ್ಲಿ
ಪ್ರಮಥಪುಂಗವನೆನಿಪ ಬಸವನ
ನಮಳನಂ ಕಂಡಿರೆ ಸುಭಕ್ತಿಯ
ಸಮತೆಯೆಲ್ಲಿಹುದಲ್ಲಿ ತಾನಿಹನೆಂದು ಕೇಳ್ದಪೆವು ೧೫

ಎನೆ ವಿನಿಶ್ಚಳಭಕ್ತಿರತಿಯಿಂ
ದನುನಯ[೬]ದೊಳಿಂದ್ಯೆದೆ[೭] ನಾನಾ
ತನ ನೆಲೆಯನಾರೈದು ಪೇಳ್ದಪೆನೆಂದು ತಾಂ ಹೋಗಿ
ಘನರಜತಶೈಲಾಗ್ರಲಾಲಿತ
ಕನಕಹರ್ಮ್ಯಸ್ಥಳದೊಳತಿ ಪಾ
ವನಮಹತ್ವದೊಳೊಪ್ಪಿ ತೋರ್ಪಾಸ್ಥಾನದಲಿ ಮೆಱಿ[೮]ವ ೧೬

ಪಿಂಗಳಾಕ್ಷ ಮುಕುಂದಹರ ಮಾ
ತಂಗಹರ ಮೃಗರಾಜಹರ ಧೂ
ಮಾಂಗ ಸರ್ವಜ್ಞ ಪ್ರಕಾಶ ವಿರಿಂಚಿಮದಹರಣ
ತುಂಗವಿಕ್ರಮ ಭರ್ಗ ಭದ್ರ ವಿ
ಹಂಗವರಪಕ್ಷಾಪಹರ ಶಿವಿ
ಭಂಗಧಾತೃ ವಿಧಾತೃ ಪಾವಕಹರ ಮಹಾತೇಜ ೧೭

ಕಾಲಘಸ್ಮರ ಘಸ್ಮರಸ್ಮರ
ಕಾಲಭೈರವ ಕಾಲಲೋಹಿತ
ಕಾಲರುದ್ರ ಮಯೂರರುದ್ರ ದ್ವಿಪದಮನು[೯]ರುದ್ರ
ವ್ಯಾಲರುದ್ರ ಪಿನಾಕಿರುದ್ರ
ಸ್ಥೂಲ[೧೦]ರುದ್ರ ವಿಶಾಲರುದ್ರ ಕ
ಪಾಲರುದ್ರ ಕರಾಳರುದ್ರ ಮಹಾಪ್ರಳಯರುದ್ರ ೧೮

೧–೨ ಸದ್ಗೋಷ್ಠಿ (ಬ). ೩–೪ ರಿಡೆಗಿ (ದ). ೫ ವಿ (ತ, ದ). ೬–೭ ದಿ ಭಜಿಸುತ್ತ (ಸ). ೮ ನ (ತ, ದ, ಪ, ಸ). ೯ ಲಿ (ತ, ದ).

CC-0. Jangamwadi Math Collection. Digitized by eGangotri

ಈಶ ನಿರ್ಮಳ ನಿತ್ಯ ನಿಃಕಳ
ಕಾಶ ಶುಭಕರ ಭೀಮ [೧]ಭವಿ ಗೌ
ರೀಶ ವಾಮನ ದೀರ್ಘಲೋಚನ ದೀರ್ಘದೋರ್ದಂಡ
ಪಾಶಹಸ್ತ ಕಪಾಲಹಸ್ತ ಹು
ತಾಶನಾಶನ ವಜ್ರಹಸ್ತ ನಿ
ಧೀಶ ಸೌಮ್ಯ ಸುಷೇಣಮುಖಿ ರುದ್ರಪ್ರಕರಸಹಿತ ೧೯

ನಂದಿಕೇಶ್ವರ ನಂದಿನಾಥಾ
ನಂದಿವೃಷಭ ಮಹೋಗ್ರಕರ ಸಾ
ನಂದ ಗೋಮುಖಿ ತುರಗಮುಖಿ ಹರಿಮುಖಿ ಕುರಂಗಮುಖಿ
ಮಂದರೋದರ ರೌದ್ರಕಾಯ
ಸ್ಕಂದಸಖಿ ಚಂಡೇಶ ಘೂರ್ಜಟಿ
ನಂದಕಾಯುಧ ಶಾಂತ ಶಾಶ್ವತ ಪರ್ವತಾಭರಣ ೨೦

ದಂಡಧರ ರುಂಡಾಭರಣ ಭೀ
ರುಂಡವದನಾಂಡಾಭರಣ ದೋ
ರ್ದಂಡಬಲ ದಾರುಕ ಮಹಾಬಲ ರೇಣುಕೋರ್ಧಕರ
ಪುಂಡರೀಕ ಮು[೨]ರಾರಿ ಪುಷ್ಕಳ[೩]
ಚಂಡಕರ ಸರ್ವೇಶ ಪದ್ಮಭ
ವಾಂಡಖಿಂಡನ ಸ[೪]ರ್ವ ಸರ್ವಗ ಸರ್ವಸಂಹಾರ ೨೧

ಮೇರುಪಾತನ ವಜ್ರಪಾತನ
ಶೌರಿಪಾತನ ಶಕ್ತಿಪಾತನ
ಸೂ[೫]ರಪಾತನ ಚಂದ್ರಪಾತನ ತಾರಕೋತ್ಪಾತ
ಮಾರಪಾತನ ಶಮನಪಾತನ
ವೀರಪಾತನ ಮೃತ್ಯುಪಾತನ
ಘೋರಪಾತನ ಧಾತ[೬]ಪಾತನ ವಾತನಿರ್ಘಾತ ೨೨

೧–೨ಭುಜ (ಸ). ೩ವ (ತ). ೪ಮು (ಚ, ಬ). ೫ರ (ತ, ದ). ೬ಶ (ದ). ೭ಶೂ (ಕ, ಚ, ಥ, ಪ, ಮ). ೮ತ್ರ (ಚ); ರ (ಚ).

CC-0. Jangamwadi Math Collection. Digitized by eGangotri

ವೀರ ವೀರಕ ವೀರಭದ್ರ
ಕ್ರೂರಗಿರಿ[೧]ಕಂತು[೨]ಕ ಮರುತ್‌ಸಂ
ಹಾರ ಘಂಟಾಕರ್ಣ ನೀರಜಕರ್ಣ ಜಿತಕರ್ಣ
ಮಾರುತಾಶನ ಮಂದರಾಶನ
ತಾರಕಾಶನ ವೃಷಭ ವಿಷಧರ
ಧಾರುಣೀಕಂಪನ ನಭಃಕಂಪನ ವಿಜಯಕರ್ಣ ೫೫

ಲಂಬಮುಖ ಹನುಲಂಬನಿಶ್ಚಲ
ಲಂಬನಾಸಿಕ ಲಂಬಲೋಚನ
ಲಂಬಕರ್ಣ ವಿಲಂಬಕಂಧರ ಲಂಬಲಾಲಾಟ
ಲಂಬದಂತಾಂಬರಜಟಾಧರ
ಲಂಬಗರ್ಭ ವಿಲಂಬವಿಕ್ರಮ
ಲಂಬನಾಭ ವಿಲಂಬವಿಗ್ರಹ ಲಂಬನೈತಂಬ ೫೬

ಸುಖಿಕರಾಕ್ಷಯ ಭವ್ಯದಿವ್ಯಾಂ
ಗ ಖರಮುಖಿ ವಿಮುಖೈಕಮುಖಿ ದಶ
ಮುಖಿ ಶತಮುಖಿ ಸಹಸ್ರಮುಖಿ [೩]ಪಂಚಮುಖಿ [೪]ಷಷ್ಟ[೫]ಮುಖಿ
ಮುಖಿಚರಣ ಮುಖಿಬಾಹು ವಕ್ಷೋ
ಮುಖಿ ಮುಖೋದರ ಬಾಹುಮುಖಿ ಪದ
ಮುಖಿ ವಿರೂಪ ಸರೂಪ ನಾನಾರೂಪ ಚಿ[೬]ದ್ರೂಪ ೫೭

[೭]ಉರು[೮]ವಿಲೋಚನ ಲೋಚನತ್ರಯ
ತರಳಲೋಚನ ವಿವಿಧಲೋಚನ
ಶರಭಲೋಚನ ಪೃಥುಕ[೯]ರಶ್ವೇತಾಕ್ಷ ನಿಃಶಂಕ
ಗರುಡಪಕ್ಷಚ್ಛೇದ ಭೀಮಾ
ವರಣ ಚಕ್ರಾಯುಧಕರಂಡೋ
ದರ ಘಟೋದರ ಪಿಂಗಳಾದಿ ಪ್ರಮಥರೋಲೈಸೆ ೫೮

೧–೨ಕಂದು (ತ, ದ); ಕುಂದಕ (ಪ). ೩–೫ಪಂಚಮ ಮುಖಾಷ್ಟ, (ತ, ದ). ೪–೫ಸಪ್ತ (ಮ). ೬ವಿ (ತ, ದ). ೭–೮ವರ (ಥ, ದ, ಪ). ೯ತ (ತ, ದ).

CC-0. Jangamwadi Math Collection. Digitized by eGangotri

ಶ್ವೇತ ಮಾರ್ಕಂಡೇಯ ಕಶ್ಯಪ
ಸೂತ ಕಪಿಲಾಂಗಿರಸ ಬಿ[೧]ಲ್ಲುಕ
ಗೌತಮ ಬ್ರಾಹ್ಮಣ್ಯ ಶಕ್ತಿ ವಶಿಷ್ಠ ಮೌದ್ಗಲ್ಯ
ವಾತಭಕ್ಷಣ ಕಣ್ವ ಭೃಗು ಘಟ
ಜಾತವತ್ಸ ಪುಲಸ್ತ್ಯ ಕುತ್ಸ ಸ
ನಾತನಂದಂಕೋಪಮನ್ಯು ಶಿಲಾದ ಪರ್ಣಾದ ೨೭

ಆತ್ರಿ ಭಾರದ್ವಾಜ ವಿಶ್ವಾ
ಮಿತ್ರ ಸುಮಹ ಸುಮಂತ ಪುಲಹ ಸು
ಮಿತ್ರ ಮೈ[೨]ತ್ರಾವರ[೩]ಣ ನಾರದ ರೈಭ್ಯಕ ಬ್ರಹ್ಮ
ಪುತ್ರ ಮಂಕಣ ವಾಮದೇವ ಸ[೪]
ವಿತ್ರಪಾಣಿ ವ್ಯಾಘ್ರಪಾದ ಸು
ಪುತ್ರ ಪರ್ವತ ಮಂದಪಾಲ ವ್ಯಾಸ ದೂರ್ವಾಸ ೨೮

ಸನಕ ಭಾರ್ಗವ ಕಾಂಡ ಶುಕ ಜೈ
ಮಿನಿ ಫಲಾದ ಪರಾಶರ ಕಣಾ
ಶನ ದಧೀಚಿ ಚ್ಯವನ ಜಹ್ನು ಮ್ಯಕಂಡು ಜಮದಗ್ನಿ
ಸನದ ಪ[೫]ತ್ಯ ಸುಪ[೬]ತ್ಯ ಶೌನಕ
ಸು[೭]ನಕ ಗಾರ್ಗ್ಯ ಮತಂಗ ರುರುಮುಖಿ
ಮುನಿವರೇಣ್ಯರು ವೇದನಾದದಿನೊಲಿದು ಕೀರ್ತಿಸಲು ೨೯

ತೇಜದಿಂ ದಿನರಾಜ ತಾರಕ
ರಾಜ ಕುಜ ಬುಧ ಜೀವ ದಾನವ
ರಾಜ ಮಂತ್ರಿ ವಿಕರ್ತನೋದ್ಭವ ರಾಹುಕೇತುಗಳು
ಓಜೆಯೊಳು ಸುರರಾಜ ಶಿಖಿ ಯಮ
ರಾಜ ರಾಕ್ಷಸರಾಜ ವಾರಿಧಿ
ರಾಜ ಮಾರುತರಾಜ ರಾಜೇಶಾನರೋಲ್ಮೈಸೆ ೩೦

೧ಭ (ಬ). ೨ಚ (ಥ). ೩ಮಿ (ತ, ದ). ೪ರು (ಕ, ಬ). ೫ಪ (ತ, ದ). ೬ ಸ (ಥ, ಪ). ೭ಸ (ಸ). ೮ಸ (ಕ, ಚ, ಬ).

CC-0. Jangamwadi Math Collection. Digitized by eGangotri

ಸರಸಿಜಾಂಬಕೆ ಪದ್ಮಭವರಾ
ಮಿರಥ ಗುಹರಷ್ಟವಸುಗಳು ಪ
ನ್ನೆರ್ಡಿನೆರು ಪನ್ನೊಂದು ರುದ್ರರು ಬ್ರಹ್ಮರೊಂಬತ್ತು
ನೆರೆದು ಭಜಿಸಲು ಸಪ್ತಮಾತೃಕೆ
ಯರ ದಿವಿಜೆಯರ ಸಿದ್ಧಕರ್ನಿಕೆ
ಯರ ಮಹಾಶಕ್ತಿಗಳ ವಂಗಡವೋಲಯಿಸುತಿರಲು ೩೧

ಸುರ ನರೋರಗ ಕಿಂಪ್ರರುಷ ಕಿ
ನ್ನರ ಗರುಡ ಗಂಧರ್ವ ವಿದ್ಯಾ
ಧರ ಮಯೂರಾಸುರ ವಿಯಚ್ಚರ ಯಕ್ಷರಾಕ್ಷಸರು
ತರತರದಿ ಪರಿವೇಷ್ಟಿಸುತಮಿರೆ
ಸ ರಿ ಗ ಮ ಪ ಧ ನಿ ಯೆಂಬ ಸಪ್ತ
ಸ್ವರನಿಯಮದಿಂ ಪಾಡೆ ತುಂಬುರನಾರದಾದಿಗಳು ೩೨

ಶೈಲರಾಜತನೂಜೆವರಸಿ ವಿ
ಶಾಲ ಮಹಿತಾಸ್ಥಾನಭವನದೊ
ಳೋಲಗಂಗೊಟ್ಟಿಸೆವ ಭವನಂ ಸಿದ್ದವಿಭು ಕಂಡು
ಭಾಳದೊಳು ಕೈಯಿಟ್ಟು ನಮಿಸಿ ಸು
ಶೀಲ ಭಕ್ತಾಲೋಲ ನೀವೊಲಿ
ದಾಲಿಪುದು ಬಿನ್ನಪವನಿಳೆಯೊಳು ಭಕ್ತರೆನ್ನೊಡನೆ ೩೩

ಪ್ರಮಥಲೋಕದೊಳುಂಟೆ ಬಸವಂ
ಪ್ರಮಥವರನೋಲಗದೊಳೆಂದರು
ಪ್ರಮಥನಿಜಸುಖಿಬಸವ ಸಮಸುಖಿಸಹಜವಾಗಿರ್ದ
ಕ್ರಮವನೆನಗೊರೆಯೆನಲು ಬೆಸಸಿದ
ನುಮೆಯರಸನಾಲೋಕವೀಲೋ
ಕಮೆನಲೇಕಿಂತಾವ ಲೋಕದೊಳೇಂ ಬಸವನಿಲ್ಲಾ ೩೪

೧–೨ಡಪ (ಬ). ೩ ಗಿ (ಬ). ೪ಸು (ಥ, ದ). ೫ರೋ (ಥ, ಪ). ೬+ಸ (ತ). ೭ನ್ನಾ (ತ, ದ).

CC-0. Jangamwadi Math Collection. Digitized by eGangotri

ಪ್ರಮಥರೊಳು ಸದ್ಭಕ್ತರೊಳು ಜಂ
ಗಮದೊಳೆನ್ನ ಮನೋಂಬುರುಹಮ
ಧ್ಯಮದೊಳಿಲ್ಲವೆಯಾದಿಬಸವಂ ನೋಡೆನುತ ಶಿವನು
ಪ್ರಮೋದವೆಸೆಯಲು ತನ್ನ ಹೃದಯಾ
ಬ್ಜಮನಲರ್ಚಲು ಕರತಳದೊಳಿ
ಷ್ಟಮಳಲಿಂಗಂ ಜಂಗಮಕೆ ಶರಣೆಂಬ ಕೈವೆರಸಿ ೩೫

ನಿರ್ನಿತದನಿಮಿಷನಾಗಿ ನೋಳ್ಪೀ
ಶ್ವರನ ಮೇಲಣ ದೃಷ್ಟಿಗಳು ಘನ
ತರಸುಖಾಶ್ರುಕಣಂಗಳುಂ ದರಹಸಿತ ಮುಖವೆಸೆಯೆ
ಪರಶಿವಧ್ಯಾನಾವಿರತ ತತ್
ಪರವಶದಿ ಪದ್ಮಾಸನದ ಸು
ಸ್ಥಿರದೊಳಭವನ ಚಿತ್ತದೊಳಗಿಹ ಬಸವನಂ ನೋಡಿ ೩೬

ಬಸವರಾಜಾ ಭಕ್ತಿಬೀಜಾ
ಬಸವದೇವಾ ಸಕಳಭಾವಾ
ಬಸವಲಿಂಗಾ ಲಿಂಗಸಂಗಾ ಸಚ್ಚಿದಮಳಾಂಗ
ಬಸವಸಶಿವಾ ಶರಣು ಶರಣೆನು
ತೊಸೆದು ಹರಿಯಜವಾಸವರು ಕೀ
ರ್ತಿಸುತೆ ಪಶುಪನ ಮುಂದೆ ಮುಕುಳಿತಹಸ್ತರಾಗಿರಲು ೩೭

ಪ್ರಮಥರಾನಂದಿಸೆ ನಿಳಿಂಪರು
ನಮಿಸಲುಮೆ ಬೆಱಗಾಗುತಿರಲಾ
ವಿಮಳಮೂರ್ತಿಯನಾಗ ಕಾಣುತ ಸಿದ್ಧರಾಮಯ್ಯ
ಪ್ರಮುದಿತಾಂತಃಕರಣ ಭರಣ
ಕ್ಷಮೆಯೊಳಿರೆ ಶಿವನದ್ರಿಪುತ್ರಿಯ
ನಮೃತಸರಸಾಂಬಕದೊಳಡಿಗಡಿಗಂತು ನೋಡುತ್ತ ೩೮

---

೧ ಮು (ಕ, ಚ, ತ, ಬ). ೨ ರು (ಚ, ತ, ದ, ಬ, ಮ). ೩–೪ ಳಂತಡಿಗಡಿಗೆ (ತ, ಥ, ದ, ಪ).

CC-0. Jangamwadi Math Collection. Digitized by eGangotri

ಸರಸಿಜಾನನೆ ನೋಡಿದೌ ಬಸ
ವರಸನತಿಯುನ್ನತಿಯ ನೀ ಚೆ
ಲ್ವಿರವದಾರ್ಗುಂಟಾದಿವೃಷಭೇಶ್ವರನೆನಲು ನಾನೇ
ಎರಡು ಮೂರ್ತಿಗಳಂ ಧರಿಸಿದೆನು
ವರ ಶಿಲಾದಂಗೊಗೆದೆ ನಾನೇ
ನಿರ್ಮಿತವಿದು ಪಾಲ್ತೊ ಭವಿಷ್ಯಾಮಿ ಯೆನುತಿರಲಾಗಿ ೩೯

ಅಸಮಭಕ್ತಿಹಿತಾರ್ಥಮಾಗಲು
ಬಸವನೆನಲಾನೇ ಜನಿಸಿದೆನು
ವಸುಧೆಯೊಳಗಂತಾಗಿ ಶಿವ ನಾನೇ ಬಸವನೆಂಬ
ಪೆಸರ ಸಜ್ಜನಭಕ್ತ ನಾನೇ
ಕುಸುಮಗಂಧಿಯೆ ಮುನ್ನವೇ ನಿಜ
ಬಸವನಂಚಿತಗುಣವನಱಿಯಾ ಆಂತುಮಲ್ಲದೆಯು ೪೦

ಲೋಕಕರ್ತಂ ನಾನೆ ಈತಂ
ಲೋಕಪಾವನಮೂರ್ತಿಕಾರಣ
ಲೋಕಶಿಕ್ಷಕ ನಾನೆ ಈತನು ಲೋಕರಕ್ಷಕನು
ಕೋಕಕುಚೆಯಾಂ ಭಕ್ತವತ್ಸಲ
ನೀ ಕರುಣ ತಾಂ ಭಕ್ತನಿಧಿ ಭ
ಕ್ತೈಕತನು ನಾಂ ಭಕ್ತಲೋಕತ್ರಾಣೆ ಬಸವಣ್ಣ ೪೧

ಮುಕ್ತಿಗರಸಂ ನಾನೆ ಬಸವಂ
ಭಕ್ತಿಗರಸಂ ತಾನೆಯಾನು
ದ್ಯುಕ್ತಲಿಂಗಸುಪಟ್ಟಬದ್ಧನು ಬಸವಲಿಂಗೈಕ್ಯ
ಶಕ್ತ ಭಕ್ತಸುಪಟ್ಟಬದ್ಧಂ
ವ್ಯಕ್ತದಿಂದಾನಚಲಲಿಂಗಂ
ಯುಕ್ತಿಸಲು ಸಚರಾಚರದ ಚರಲಿಂಗವೀ ಬಸವ ೪೨

೧–೨ನಿಶ್ಚಲದಿ (ಬ). ೩ರು (ತ, ದ, ಬ). ೪ಪ್ಪ (ತ, ದ). ೫ಲ (ದ).

CC-0. Jangamwadi Math Collection. Digitized by eGangotri

ಪಸರಿಸುವುದೆಲ್ಲೆಡೆಯೊಳೆಮಗೀ
ಪೆಸರು ಶಂಭುವೆನಲ್ಕೆ ಈತನ
ಪೆಸರೆಸೆವುದೆರಡನೆಯ ಶಂಭುವೆನಲು ಜಗತ್ರಯಕೆ
ಒಸೆದು ಭಾವಿಸುತೆಮ್ಮುವಂ ಪ್ರೂ
ಜಿಸಿದಡಲ್ಲದೆ ಭಕ್ತಿ ದೊರಕದು
ಬಸವನಂ ಭಜಿಸಿದಡನಿತಱಿಂಪಿಳೆ ಭಕ್ತಿ ದೊರಕುವುದು ೪೩.

ಕೊಡುವರೆಲ್ಲಾ ಭಕ್ತರೆಮಗೊಂ
ದೆಡೆಯೊಳರ್ಥಪ್ರಾಣತನುಗಳ
ನೊಡಲನಸುವಂ ಧನವನೊಡೆಯರಿಗೆಲ್ಲೆಡೆಯೊಳಿತ್ತು
ಉಡುಗದರ್ಚಿಪನೆಮ್ಮ ಬಸವಂ
ಬಿಡದೆ ಬಸವಾಕ್ಷರವನಾವನು
ನುಡಿವನವನ ವದನವೆ ಸದನಂ ಪ್ರಮಥರಿಗೆ ನಮಗೆ ೪೪

ಉದಯಿಪುದು ಸದ್ಭಕ್ತಿಯಾವನೊ
ಳದುವೆ ಬಸವಮಹತ್ವವಲ್ಲಾ
ಮುದದೊಳಾವಂ ಪಡೆದಪಂ ತ್ರಿವಿಧಪ್ರಸಾದವನು
ಅದುವೆ ಬಸವನ ಸೀಮೆಯಲ್ಲಾ
ಯೆದೆಯೊಳಾವಂ ನೆನೆವನೆಮ್ಮುವ
ನದುವೆ ತಾಂ ಬಸವಾಂಶವಲ್ಲಾ ಈ ಜಗಂಗಳೊಳು ೪೫

ಎಸೆವ ಜಂಗಮಭಕ್ತಿಯಾವಂ
ಪಸರಿಸುವನದು ಬಸವರಾಜನ
ಜಸವಲಾ ೧ನಿಜ೨ಭಕ್ತಿಪಟ್ಟವನೊಸೆದು ಧರಿಸುವಡೆ
ಬಸವನಲ್ಲದೆ ಭ೨ಕ್ತಿಯುಕ್ತರು
ವಸುಮತಿಯೊಳಾರುಂಟು ನೋಳ್ಪಡೆ
ಬಸವನಿಪ್ಪನು ಸಕಲ ಭಕ್ತರೊಳೆನ್ನೊಳಿಪ್ಪಂತೆ ೪೬

೧–೨ ಶಿವ (ತ, ದ). ೩ ಶ (ತ).

CC-0. Jangamwadi Math Collection. Digitized by eGangotri

ಎಂದು ಕೊಂಡಾಡುತ್ತ ಬಳಿಕಾ
ನಂದದಿಂ ಬಸವಣ್ಣನೊಡನಿಂ
ತೆಂದನಿಳೆಯೊಳು ಭಕ್ತರೊಳರೇ ಸುಖಿವೆ ಸಂಸಾರ
ಎಂದು ಬೆಸಗೊಳಲಾತನಾ ತರು
ಣೇಂದುಮೌಳಿಯ ಚಿತ್ತಪದ್ಮದೊ
ಳೊಂದಿ ಬೆಳಗುತ ಬಿನ್ನವಿಸಿದನು ತನ್ನ ಕೈಮುಗಿದು ೪೭

ದೇವ ಮರ್ತ್ಯದೊಳಿಲ್ಲ ಭಕ್ತನ
ದಾವನುಂ ನಾನೊಬ್ಬನಲ್ಲದೆ
ಭಾವಿಸಲು ಶಿವಭಕ್ತರೆಲ್ಲರು ನಿಮ್ಮ ರೂಪಾಗಿ
ಭಾವಜಾಂತಕ ಚಿತ್ತವಿಸಿ ಆ
ವಾವ ಭವವೆನಗಾದಡೊಳ್ಳಿ
ತ್ತಾವಗಂ ತ್ರಿವಿಧಪ್ರಸಾದವಿಭೋಗವೇ ಸಾಕು ೪೮

ವಿವಿಧ ಮೋಕ್ಷಾನುಭವಸುಖದಿಂ
ಸವಿಯೆನಗೆ ಖಿಗ ಮೃಗ ಭುಜಗಮುಖ
ಭವಭವಂಗಳೊಳಾದಡಂ ನಿಜ ಜಂಗಮಪ್ರತತಿ
ಸವಿದು ಮಿಕ್ಕಮಿ[1]ತಪ್ರಸಾದವ
ಸವಿದು ಸವಿದೋಲಾಡುತಿಪ್ಪಾ
ಸವಿ ದೊರಕಿದಡೆ ಸಾಕು ಸಂಸಾರಸ್ಥಿತಿಯೆ ಲೇಸು ೪೯

ಎನಲುಮೇಶ್ವರನತಿ ದಯಾಲೋ
ಕನದಿ ನೋಡುತ ಸಿದ್ಧರಾಮಂ
ಗನುನಯದಿ ಬಸವಣ್ಣನಂ ತೋಱಿಲು ಶಿವಂಗೆಱಗಿ
ಮನುಜಲೋಕಕ್ಕಿಳಿದು ಬಸವನ
ಘನಮಹತ್ವಮನಾ ಯತೀಂದ್ರನು
ತನಗೆ ಭರ್ಗನು ತೋಱಿದಂತೆ ಸಮಸ್ತಭಕ್ತರಿಗೆ ೫೦

---

೧ ಮ್ಯ (ತ, ದ).

CC-0. Jangamwadi Math Collection. Digitized by eGangotri

ತನ್ನುದರಮಂ ಬಗಿದು ತೋಱಿಲು
ಮುನ್ನಿನಂದದಿ ಶರಣು ಶರಣೆನು
ತಂ ನಮಿಸುವಾ ಬಸವನಂ ಕಂಡುಬ್ಪಿ ಶರಣೆನುತ
ಚೆನ್ನೆಸೆದು ಕೀರ್ತಿಸುವ ಭಕ್ತರ
ಸನ್ನಿಧಿಯೊಳಾ ಸಿದ್ಧರಾಮ ಜ
ಗನ್ನುತಂ ಪುರದೊಳಗೆ ಹೇಳಲು ಕೇಳ್ದೆ ನಾನೆನಲು ೫೧

ತಪ್ಪ[೧]ದಿದು[೨] ಲೋಕಕ್ಕೆ ದೃಷ್ಟವಿ
ದಪ್ಪುದೆಂದಾ ಬಿಜ್ಜಳನು ಮುದ
ವೊಪ್ಪಿ[೩] ಗೊಲ್ಲಿತಿಗಭಿನವಾಂಬರ ಭೂಷಣಮನಿತ್ತು
ಇಪ್ಪ ಸಭೆಯುಂ ತಾನುಮಚ್ಚರಿ
ಯುಪ್ಪರಿಸಿ ಶಿವಭಕ್ತಿಮಹಿಮೆಯ
[೪]ನಪ್ಪಿ[೫] ರಂಜಿಪ[೬] ಬಸವರಾಜನ ಘನತೆ[೭]ಯೆಂತೆನಲು[೮] ೫೨

ಅವಿಕಲಬ್ರಹ್ಮಾಂಡತತ್ವ
ಪ್ರವರ ನಿತ್ಯಾತ್ಮಕನೆನಿಪ ಪರ
ಶಿವನೊಸೆದು ಹಸ್ತಾಂಬುಜದೊಳಾಮಳಕದಂತಿರಲು
ತವೆ ಸಕಳ ಸಂಗತವೆನಿಪ ಶಂ
ಭುವಿನ ಭಕ್ತಂಗಖಿಳಸಂಗತ
ವಿವರಣೆಯೆ ತಾ ನೈಜವಲ್ಲದೆ ಪರವೆ ಪರಿಕಿಸಲು ೫೩

ಸರ್ವಮಯನಣುಗಂಗದೆಂತುಂ
ಸರ್ವಮಯವೇ ಸಹಜವಲ್ಲಾ
ಸರ್ವಪತಿಭಕ್ತಂಗದೆಂತುಂ ಸರ್ವಪತಿಯಾಗಿ
ನಿರ್ವಹಿಸುವುದದೇಂ ವಿಚಿತ್ರಮೆ
ಸರ್ವರಕ್ಷಕ ಪೂಜಕಂಗಂ
ಸರ್ವರಕ್ಷಕ ಕೋವಿದತ್ವಮದೇನಪೂರ್ವಕಮೆ ೫೪

೧–೨ದೀ (ತ, ದ). ೩ಪ್ಪೆ (ಡಾ). ೪–೫ನೊಪ್ಪಿ (ತ, ನ, ಬ). ೫–೬ತೋಱುವ (ತ, ದ). ೭–೮ಯಂ ನೆನೆದು (ಕ, ಥ, ವ, ಬ); ಯಂ ಕಂಡು (ತ, ದ).

CC-0. Jangamwadi Math Collection. Digitized by eGangotri

ದೂರದಿಂ ತವೆ ನೋಳ್ಪ ನೋಟವು
ದೂರದಲಿ ಸಲೆ ಕೇಳ್ವ ಕರ್ಣಂ
ದೂರದಿಂದಱಿವಱಿವು ಮೊದಲಾದಖಿಳ ಸಿದ್ಧಿಗಳು
ದೂರವೇ ಶಿವಪಾದಭಕ್ತಂ
ಗಾರೆಣಿಸಲೆಣೆಯೆಂದು ಸಭೆ ವಿ
ಸ್ತಾರಿಸಲು ಬಸವಂಗರಸನುಡಲಿತ್ತು ಕೈಮುಗಿದ ೫೫

ಪತ್ರವಾಹನನೇತ್ರ ದಶಶತ
ಪತ್ರಸಂಚಯಮಿತ್ರಮಂಡಲ
ಪತ್ರವಾಹನಪುತ್ರವಿಗ್ರಹಗೋತ್ರ ಶತಕೋಟಿ
ಪತ್ರವಾಹನಪುತ್ರಪುತ್ರ
ಸ್ತೋತ್ರಪಾತ್ರ ಪವಿತ್ರಗಾತ್ರವಿ
ಚಿತ್ರ ಘನಚಾರಿತ್ರ ಗುರುಸಿದ್ಧೇಶ ಪೂಂ ತ್ರಾಹಿ ೫೬

ಇದು ಸಕಳ ಮಾಹೇಶ್ವರಾಮಳ
ಪದಪಯೋಜಪರಾಗ ಮದಷಟ್
ಪದಿಯೆನಿಪ ಪಾಲ್ಕುಱಿಕೆ ಸೋಮೇಶ್ವರನ ಕಾರುಣ್ಯ
ಒದಗಿದಖಿಳಕಳಾಪ್ರಪೂರಿತ
ಹೃದಯಭೀಮಕವಿಪ್ರಣೀತಾ
ಭ್ಯುದಯ ಬಸವಪುರಾಣಕಥೆಯೊಳಗೆರಡನೆಯ ಕಾಂಡ ೫೭

ಅಂತು ಕಾಂಡ ೨ಕ್ಕಂ ಸಂಧಿ ೯ಕ್ಕಂ ಪದನು ೫೭೫ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಕಾಂಡ : ೩

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಂಧಿ : ೧೦

*

ಸೂಚನೆ : ಕೊಟ್ಟು ವಿಟಜಂಗಮಕೆ ರಾಯನ
ಪೆಟ್ಟಗೆಯ ಪೊನ್ನಂ ಬಿಗಿಳಿಸಿ ಸತಿ
ಯುಟ್ಟುದಂ ಸುಗಿದಿತ್ತು ಮೆಱಿದನು ಕಟಕದೊಳು ಬಸವ

ದುಷ್ಪಸಮಯಾರಿಷ್ಪ ಮಹಿಮೋ
ತ್ಕೃಷ್ಪ ಕರುಣಾದೃಷ್ಟಿಮಾತ್ರಾ
ಭೀಷ್ಪದಾಯಕ ಶಿಷ್ಪ ಭಕ್ತಿಸುಪುಷ್ಪ ಸರ್ವಾಂಗ
ಅಷ್ಪವಿಧಪೂಜೇಷ್ಪ ನಿಷ್ಪಾ
ತುಷ್ಪಸಾನಸ ಕಷ್ಪಸಂಸೃತಿ
ನಷ್ಪ[೨]ದೃಷ್ಪಾದೃಷ್ಪಗೋ[೩]ವಿಸ್ಪಷ್ಪ ಬಸವೇಶ ೧

ದಂಡನಾಥರ್ವೆರಸಿ ಬಸವಣ
ದಂಡನಾಥಾಗ್ರೇಸ[೪]ರಂ ಭೂ
ಮಂಡಳಾಧಿಪನನುಮತದಿ ಮತ್ತೊಂದು ದಿನದಲ್ಲಿ
ತಂಡತಂಡದ ಪೆರ್ಬಲಕೆ ಮುಂ
ಕೊಂಡು ಜೀವಿತಮಂ ಕೊಡುವೆಡೆಗೆ
ಮಿಂಡಜಂಗಮವಾಗಳೆಯ್ತಂದುರವಣಿಸಿ ನಿಂದು ೨

---

*ರಾಗ : ನಾಟಿ (ಅ, ಡಾ, ಧ, ಮ); ದೇಶಿ (ತ). ೧ ಬ (ಕ, ತ, ದ, ಮ). ೨-೩ ದುಷ್ಪಾದುಷ್ಪಗುಣ (ಅ, ಡಾ, ಚ). ೩ ಗುಣ (ತ, ಥ, ದ, ಪ). ೪ ಚ (ಕ, ಚ, ಥ); ಶ್ನ (ಮ, ಬ).

CC-0. Jangamwadi Math Collection. Digitized by eGangotri

ದಟ್ಟಿಸುತ್ತೆಲೆ ಬಸವ ಕೊಡು ಕೊಡು
ಪೆಟ್ಟಿಗೆಯ ಪೊನ್ನೆಲ್ಲವಂ ಹಿ
ಮ್ಮೆಟ್ಟದೀಗಳೆ ಎಂಬ ಮಾತಿಂಗೊಲಿದು ನಸುನಗುತ
ಕೊಟ್ಟನಾಗಳೆ ಕೊಡಲೊಡನೆ ಮರ
ವಟ್ಟು ಮಂತ್ರಿಗಳೆಯ್ದೆ ಭೂಪನ
ಕಟ್ಟಿದಿರೊಳಭವಂದಿಸುತ್ತಂ ಕೈಗಳಂ ಮುಗಿದು ೩

ಕಾಳಿಮರ ಸಂಕರಿಯಕೇಶವ
ಚೋಳಿಯಣ್ಣಂ ಕುಂದ[ಗ]ತಮಿ[ಙ]ಭೂ
ಪಾಳ ಹೆಮ್ಮಡಿಯುಗ್ರಚಂಡಿಯು[ಚ] ಕಸವಮಂತ್ರಿ[ಛ]ಗಳು
ಮೇಳಿ[ಜ]ಗರಸನು[ಝ]ಸಹಿತ ತಮ್ಮೊಳು
ಮೇಳವಿಸಿ ಬಿಜ್ಜಳ[ಞ]ಮಹೀಶಗೆ[ಟ]
ಹೇಳಿದರು ದೂಱಿದರು ಬಸವಣದಂಡನಾಯಕನ ೪

ಹೇಳದಡೆ ಕೊಂಡೆಯವ[ಡ]ಹುದು ಮೇಣ್[೧೦]
ಹೇಳದಡೆ ತಪ್ಪಪ್ಪುದಾಗಿಯೆ
ಹೇಳಲೇವೇಳ್ಕೀಗ ಭಂಡಾರದ ಧನವನೆಯ್ದೆ
ಕೇಳರಸ ಮಿಂಡರ್ಗೆ ಕೊಟ್ಟನು
ಭಾಳನೇತ್ರನು ಬಸವರಸನೊಡ
ನಾಳುತನವೆಮಗಾಗದಂಜುವೆವೆನುತ ಕೊಂಡಿಸಲು ೫

ಮುಳಿದು ಭರದಿಂ ಬರಿಸಿ ಕಾಣು
ತ್ತಳವಿಯಲಿ ಬಸವಣ್ಣನಂ ಬಿ
ಜ್ಜಳನಿದೇನೈ ನಚ್ಚಿದವರೊಡವೆಯನೆ ಪಾಳ್ಗಿಯ್ದೆ
ಗಳಿಸಿತಂದೆಮಗರ್ಥವೀವುದ
ನುಳಿದು ಭಂಡಾರವನೆ ಮಿಂಡ
ರ್ಗೆಳಸಿ ಚೆಲ್ಲುವುದುಚಿತವೇಯೆಂದಾಗ್ರಹಿಸಿ ನುಡಿದು ೬

೧–೨ ಮನು (ಚ); ಮತಿ (ದ). ೩–೪ ಕಸಪ ಮಂತ್ರಿ (ಮ); ಕಸಪ ಮಿಂಚಿ (ಕ); ಕೇಸವ ಮಂತ್ರಿ (ಅ); ಕಸಮ ಮಂಚಿ (ತ, ಥ, ದ, ಬ). ೫–೬ ಗೆಯನುಂ (ಚ, ಥ, ಪ, ಮ); ಗೆಯಮಂ (ಬ). ೭–೮ ಜನಪತಿಗೆ (ತ, ದ). ೯–೧೦ ದಪ್ಪುದು (ತ, ದ).

CC-0. Jangamwadi Math Collection. Digitized by eGangotri

ತ[೧]ಪ್ಪದೇ[೨]ವುದು ನಮ್ಮ ಧನವಂ
ತಪ್ಪದೊಪ್ಪಿಸಿಹೋಗು ಸಾಕಿ
ನ್ನೊಪ್ಪದಿಂ ಭಂಡಾರದೊಡೆತನಮುಂ ಪ್ರಧಾನಿಕೆಯುಂ
ತಪ್ಪೆನನ್ಯಧನಕ್ಕೆ ನೀನೆಂ
ಬೊಪ್ಪವೇನಾಯ್ತುಕಟಕಟ ನಾ
ವಪ್ಪಡನ್ಯರಲಾ ವೃಥಾಳಾಪಂಗ[೩]ಳೀಕೆಮಗೆ[೪] ೭

ದಂಡಿಸುವರಾರೆನ್ನನೆಂಬು
ದ್ದಂಡಿಕೆಯೊಳಿಮ್ಮರ್ಥಮಂ ನೀಂ
ಕೊಂಡೆಯಲ್ಲದೆ ವಿಕ್ಕಿನವರಾರಾದಡೇನವರ
ದಂಡಿಸದೆ ಬಿಡುವೆನೆ ಜವನ ಮಱಿ[೫]
ಗೊಂಡಡಂ ಕೇಳೆನಲು ಬಸವಣ
ದಂಡನಾಥಂ ನಸುನಗುತಮಿಂತೆಂದನರಸಂಗೆ ೮

ಅತಿಶಯದ ಶಿವಭಕ್ತಿಯೆಂಬ
ಪ್ರತಿಮಚಿಂತಾಮಣಿಯುಮಮರ
ಕ್ಷಿತಿಜಮುಂ ಸುರಧೇನುವುಂ ಕನಕಾಚಲಮುಮಿರಲು
ಮತಿಯೊಳೆಂದುಂ ಭಕ್ತನಾದವ
ನಿತರಧನಮಂ ಬಯಸಿದಪನೇ
ಅತಿವಿವೇಕವನುಡುಗಿ ನುಡಿವುದು ನೀ[೬]ತಿಯೇ ಭೂಪ ೯

ವಾರಿಜಕ್ಕೊಲಿದೆಱಗುವಳಿ ದು
ತ್ತೂರಕುಸುಮಕ್ಕೆಱಗುವುದೆ ಪರಿ
ಪೂರಿತಾಮೃತಕಿರಣರುಚಿಯಂ ರುಚಿಸುವ ಚಕೋರ
ಸೇರಿ ಮರ್ಬಿಂಗೆಳಸುವುದೆ ದಿ
ಗ್ವಾರಣದ ಮಱಿ[೭]ಯುಂಬುದೇ ಬಂ
ದೂರುವಂದಿಯ ಮೊಲೆಯನೆಲೆ ಬಿಜ್ಜಳಮಹೀಪಾಲ ೧೦

೧–೨ ಪ್ಪದೀ (ತ). ೩–ಳ ಳೆಮಗೇಕೆ (ತ, ದ). ೫ ಱೀ (ತ).

CC-0. Jangamwadi Math Collection. Digitized by eGangotri

ಕ್ಷೀರಶರಧಿಯೊಳಿಪ್ಪ ಹಂಸಂ
ಕ್ಷಾರನೀರಂ ಸೇವಿಪುದೆ ಕಂ
ಠೀರವಂ ಪುಲ್‌ಮೇವುದೇ ಮಾವಣ್ಗಳಂ ಪೀರ್ವ
ಕೀರವಿಟ್ಟಿಯ ಪಣ್ಗೆ ಚಿತ್ತಂ
ಹಾರಿದಪ್ಪುದೇ ಪೆಱರವೊಲು ಮಾ
ರಾರಿಭಕ್ತರು ಪರಧನಕೆ ಕೈನೀಡುವರೆ ಭೂಪ ೧೦

ಪೊಡವಿ ನಡುಗಿದಡುರಗರಾಜನ
ಹೆಡೆ ಬಳುಕಿದಡೆ ಜಲಧಿ ಬಱಿತಡೆ
ವಡಬಶಿಖಿ ನಂದಿದಡೆ ಕುಲಶೈಲಂಗಳಲುಗಿದಡೆ
ಉಡುವರಂ ಹಿಮವುಡುಗಿದಡೆ ರವಿ
ಪಡುವಲುದಯಂಗೆಯ್ದಡಂ ಕೇಳ್
ಮೃಡನ ಭಕ್ತರು ಪರಧನಕೆ ಕೈದುಡುಕುವರೆ ಭೂಪ ೧೧

ಪಾವನ ಜ್ಯೋತಿರ್ಮಯಾಂಗಿ[೧]ಗೆ
ದೀವಿಗೆಯ ಹಂಗುಂಟೆ ಪರಶಿವ
ಭಾವನಾಮೃತದನುಭವಿಗೆ ಮಾಧುರದ ಹಂಗುಂಟೆ
ಈವಡಣಿಮಾದಿಗಳನಣುವೆಂ
ದೀವ ಲಿಂಗಸದರ್ಥರೊಲಿದೆಮ
ಗೀವ ಧನವುಂಟರಸ ನಿನ್ನಯಂ ಧನದ ಹಂಗುಂಟೆ ೧೩

ಬಿಡುಬಿಡಾ ಸಂದೇಹಮಂ ನಿ
ನ್ನೊಡವೆಯಲ್ಲದು ನಮ್ಮೊಡೆಯರುಗ
ಳೊಡವೆಯನೆ ಒಡೆಯರ್ಗೆ ಕೊಟ್ಟಿನದಲ್ಲದೇ ನಿನ್ನ
ಒಡವೆಯೊಳಗರೆಕಾಣೆಯುಂ ಸವೆ
ದಡೆ ಬಳಿಕ ನಾಂ ಭಕ್ತನಲ್ಲೈ
ಮುಡುಪಿನೆಣಿಕೆಗೆ ಕುಂದದಂತೆ ವಿಚಾರಿಸೈ ಯೆನುತ ೧೪

---

೧೧ (ದ).

CC-0. Jangamwadi Math Collection. Digitized by eGangotri

ಪೆಟ್ಟಿಗೆಗಳಂ ತೆಗೆತರಿಸಿ ಮುಂ
ದಿಟ್ಟು ಜನಪನ ಸಂಶಯದ ಬೇ
ರೊಟ್ಟವಿಸಿ ಕೀಳ್ವಂತೆ ನಗುತಂ ಕೀಲ್ಗಳಂ ಕಳಿಯೆ
ದಿಟ್ಟಿಪರ ದಿಟ್ಟಿಗಳಿಗಚ್ಚರಿ
ಹುಟ್ಟಿ ಪೊನ್ನುಕ್ಕಿದಡೆ ಹರುಷಂ
ಬಟ್ಟು ಭೂಪಂ ಬಸವರಸನಂ ಕೀರ್ತಿಸುತಮಿರಲು ೧೫

ಮಧುರ ಪಾಂಡ್ಯನು ತನ್ನ ಮಂತ್ರಿಯ
ನಧಿಕಧನವಂ ಕೊಟ್ಟು ಸಿಂಧುವ
ಸುಧೆಯೊಳಿಗೆದುತ್ತಮ ಹಯಬ್ರಜಮಂ ತರಲು ಕಳುಹೆ
ಬುಧವರಂ ತಾನೊಯ್ದ ಪೊನ್ನಂ
ವಿಧುಕಳಾಧರಭಕ್ತರಿಗೆ ಬಹು
ವಿಧದೊಳಾರಾಧಿಸಿ ಸವೆದ ವಿತ್ತಕ್ಕೆ ಚಿಂತಿಸದೆ ೧೬

ನರಿಗಳಂ ಪಿಡಿತರಿಸಿ ನಾಯಕ
ಹರಿಗಳೆಂದೊಪ್ಪಿಸಿ ಮೆಱಿದನಂ
ದರರೆ ಪಾಂಡ್ಯಮಹೀಭುಜಂಗಾ ಚೊಕ್ಕನಾಯ್ನಾರು
ಹರಗಣಂಗಳ ಮಹಿಮೆಯಂ ವಿ
ಸ್ತರಿಸಲಿದು ವಿಸ್ಮಯಮೆ ಧರಣಿಯೊ
ಳರಸ ಕೇಳಿಂದಖಿಳಭಕ್ತರು ನಲಿದುಲಿ[೧]ವುತಿರಲು[೨] ೧೭

ಭೂತಳಾಧಿಪನಧಿಕವಿಸ್ಮಯ
ಚೇತನಾಗಿ ಕರಂಗಳಂ ಮುಗಿ
ದೀತನೀಶ್ವರನಲ್ಲದೇ ಮನುಜಾತನೇಯೆನುತ
ಪ್ರೀತಿಯಿಂದಂಬುಧಿಗೆ ವರ್ಣೆಯಂ
ಶೀತರುಚಿಗಳಿಯಂ ಕೊಡುವವೊಲು
ಪೂತ ನವರತ್ನಾಂಬರಂಗಳನಿತ್ತು ವಿನಯದಲಿ ೧೮

೧–೨ ದು ಪೇಳೆ (ಥ, ಪ).

CC-0. Jangamwadi Math Collection. Digitized by eGangotri

ಬಸವರಾಜನನಾವನುಂ ಕೊಂ
ಡಿಸಿದಡಿನ್ನಾ ಚಂಡಿಗುನ್ನಿಯ
ರಸನೆಯಂ ತವೆ ಕೊಯ್ದು ಸುಣ್ಣವನೊರಸಿ ಮಿಗೆ ಹುರಿದ
ಬಿಸಿಯ ಮಳಲಂ ತರಿಸಿ ಬಾಯ್ದುಂ
ಬಿಸಿದಪೆಂ ನಾನೆನುತ ಬಿಜ್ಜಳ
ನೊಸೆದು ಕಳುಹಲು ದಂಡನಾಥನು ಬಂದನರಮನೆಗೆ ೯

ಒಂದುದಿನದಲಿ ಮತ್ತೆ ವೇಶ್ಯಾ
ಮಂದಿರದೊಳೊಬ್ಬಯ್ಯನಿರ್ದೊಲ
ವಿಂದ ದಾಸಿಯನೊಬ್ಬಳಂ ಕರೆದಾ ಬಸವರಸನಾ
ಮಂದಿರಕೆ ನೀ ಹೋಗಿ ನಮಗೊಂ
ದೊಂದು ದಿನದಲಿ ಕೊಡುವ ಪಡಿಯಂ
ತಂದುಕೊಡು ಮನೆಗೆನಲು ಶೀಘ್ರದೊಳಲ್ಲಿಗವಳೆಯ್ದಿ ೧೦

ಬಸವರಾಜನ ಪಟ್ಟದರಸಿಯ
ದೆಸೆಗೆ ಹೋಗಿ ತದೀಯ ಸತಿಯು
ಟ್ಟಸಮ ದಿವ್ಯದುಕೂಲಮಂ ಕಾಣುತ್ತ ತಲೆದೂಗಿ
ಉಸುರ್ದ ಪಡಿಯಂ ಬೇಡಲೊಲ್ಲದೆ
ಸಸಿನೆ ತನ್ನೊಡತಿಯ ಮನೆಗೆ ಭರ
ವಸದೊಳೆಯ್ತಂದಿಂದುಮುಖಿಗಿಂತೆಂದಳಾ ದಾಸಿ ೧೧

ಅಕ್ಕ ಹೇಳಲಗೋಚರವು ವಚ
ನಕ್ಕೆ ತಂದೆಗಳಾಣೆ ಕೇಳೊಂ
ದಕ್ಕಜವನಾಂ ಕಂಡೆನಲ್ಲಿಗೆ ಹೋಗಿ ಬಂದೀಗ
ಲಿಕ್ಕಿಸಲು ಗಂಗಾಂಬಿಕೆಯ ವ
ಸ್ತ್ರಕ್ಕೆ ಮೇಣಾವಂಬರಂ ಸರಿ
ಯಿಕ್ಕಬಾರದು ಮೂಜಗದೊಳದನೀಶ್ವರನೆ ಬಲ್ಲ ೧೨

CC-0. Jangamwadi Math Collection. Digitized by eGangotri

ಭಾವನೀಗಳೆ ಹೋಗಿ ಬೇಡಿದ
ಡೀವನಾಗಳೆ ಬಸವರಾಜನು
ದೇವಿಯುಟ್ಟಿರ್ದಮಳವಸ್ತ್ರವನಂದು ನಮ್ಮವರು
ನಾವು ಪಡೆದೆವು ಮಿಂಡಜಂಗಮ
ದೇವರೆಮಗೊಲಿದಿತ್ತ ನವವಸ
ನಾವಳಿಗಳಂ ದಿನದಿನದೊಳಿಂತುಟ್ಟು ಭೋಗಿಸುವ ೨೩

ಮಲಯಜಶ್ರೀ ಗೌರಿಗೆಣೆಯುಂ
ಕೊಳನ ಮೇಘಂಜಿನಿಯು ಭಾವಜ
ತಿಳಕಮುಂ ಜಯರಂಜಿಯುಂ ಕಾಂಬೋಜಿಯುಂ ರುದ್ರ
ತಿಳಕಮುಂ ಚಂದ್ರಾತಪಂ ಭೂ-
ತಿಳಕಮುಂ ಮಣಿವಟ್ಟ ಪಿಂಜಾ-
ವಳಿಯು ಸಂಧ್ಯಾರಾಗವುಂ ಕೈದೊಡಕುದಯರಾಗ ೨೪

ಪಳಿಯು ಪಟ್ಟಾವಳಿಯು ನೇತ್ರಾ-
ವಳಿಯು ಹಂಸಾವಳಿಯು ಮನುಜಾ-
ವಳಿಯು ತುರಗಾವಳಿಯು ನಾಗಾವಳಿಯು ಗಜದಾಳ
ಪುಲಿಯುಗುರ ಪಟ್ಟೀಂದ್ರರಾಗಂ
ಲಲಿತ ವೀಣಾವಳಿಯು ಚಿತ್ರಾ-
ವಳಿಯು ಶರನಿಧಿರಾಜ ವಲ್ಲಭರಾಯಶೇಖರನು[೧] ೨೫

ಕೆಟ್ಟುವಣ್ಣದ ಪಟ್ಟಿ ಬಲ್ಲಳ
ಿದಟ್ಟಿ[೪] ಭೂಸಲೆ ಮೇಘವಣ್ಣದ
ಪಟ್ಟಿ ತವರಾಜಂ ಮರಕತದ ಪಟ್ಟಿ ಮಾಂದಳಿರ
ಪಟ್ಟಿ ಸಣ್ಣವಡಂಜಿಯುಂ ಪೊಂ-
ಬಟ್ಟಿ ಸಿರಿಗಣೆ[೫] ಗುಜ್ಜರಾಷ್ಟ್ರದ
ಪಟ್ಟಿ ವಾರಾಣಸಿಯ ದಸರಿಯಿ ಹೊತ್ತಿ ಸಿರಿವಣ್ಣ ೨೬

೧ವು (ಚ, ತ, ದ, ಬ). ೨ಪ (ಚ). ೩–೪ವಟ್ಟಿ (ತ). ೫ಣ (ಕ, ಥ, ಮ); ಣು (ಪ).

CC-0. Jangamwadi Math Collection. Digitized by eGangotri

ಕೂಡೆ ವಿಸ್ಮಯವಾಗುತಂ ಕೊಂ
ಡಾಡುತಿಪ್ಪ ಸಮಸ್ತ ಜನರಂ
ನೋಡಿ ನಗುತಿಂತೆಂದನಾಗಳು ಮಿಂಡಜಂಗಮವು
ಊಢಿಯಲಿ ಕೊಡುತಿರ್ಪ ಭಕ್ತರ
ಕೋಡಿಗಿದು ತಾನಾವ ಗಹನಂ
ಬೇಡಿದಡೆ ಮುನ್ನೀಯದವರೊಳರೇ ಪುರಾ॥ತರೊಳು ೩೫

ಇಡುಗುಡಿಯನಾಯ್ನಾರು ತನ್ನಯ
ಮಡದಿಯಂಬರಮಂ ಸುಗಿದು ತಾಂ
ಕೊಡನೆ ಈರಾಱ್ವತ್ಸರಂಗಳು ಜಾಣ್ಮೆಯಲಿ ನೆಯ್ದು
ಮಡಗಿದುತ್ತಮವಸ್ತ್ರಮಂ ಪ್ರಿಯ
ವಡರಿ ಬೇಡಿದಡೊಬ್ಬ ತಪಸಿಗೆ
ಕೊಡನೆ ಜೇಡರದಾಸನಿಂತುಮಿವಂ ಕೊಡುವುದರಿದೆ ೩೬

ಸ್ವೀಯನೀಯನೆ ಸಿಂಧುಬಲ್ಲಳ
ರಾಯನೊರ್ಬಯ್ಯಂಗೆ ಮೊನೆಯಿಡು
ನಾಯಿನಾರ್ ಮಾಣಿಕ್ಯವೀಯನೆ ತಪಸಿ ಬೇಡಿದಡೆ
ಈಯನೇ ಇಮ್ಮಡಿಸಿ ಧನವನ
ಜೇಯಮತಿಯೊಳು ಮಿಂಡಭಕ್ತಂ
ಗೀಯವನಿಯಱಿಯಲ್ ಮೊನೆಯಧರನೆಂಬ ಗಣನಾಥ ೩೭

ಗಹನದುರ್ಭಿಕ್ಷಾವಸರದೊಳು
ದಹನಲೋಚನಭಕ್ತವಿತತಿಗೆ
ಬಹಳ ವಸ್ತುವನೊಪ್ಪಿಸನೆ ಇಡುಗುಡಿಯ ಪೆರ್ಮಾಡಿ
ಮಹಿಯೊಳಗೆ ತಾಪಸಿಗೆ ಪಾಣಿ
ಗ್ರಹಣಸಮಯದಿ ತನಯಳ ಶಿರೋ
ರುಹನಿಚಯಮಂ ಕೊಯ್ದುಕೊಡನೇ ಮಾನಕಂಜರನು ೩೮

---

೧ ರಂ (ಸ).

CC-0. Jangamwadi Math Collection. Digitized by eGangotri

ಎನುತವಂ ತಾಂ ಕೆಲವನೆಣಿಸುತ
ಜನವತಿಶಯಂಬಟ್ಟು ಹೊಗಳಲು
ಮುನಿವಳೋ ತಳುವಿದಡೆ ವೇಶಿಯೆನುತ್ತಮಾ ವಿಟನು
ತನಗೆ ಬಸವಾ ಸಾಕು ಸಾಕಿ
ನ್ನೆನುತವನಿಯಲಿ ಗುಡಿಸಿ ದೀಪಿಸು
ವನಿತು ದಿವ್ಯಾಂಬರವಿತಾನಮನೊಯ್ದು ಬಳಿಗಿತ್ತ ೩೯

ಧರಣಿ ಧೃತಿಯಂ ಪಡೆದಳೀಕೆಯ
ಚರಣದಡಿಯಿಂದಗಲದಿರ್ದಿಂ
ದಿರೆ ಸೊಬಗುವೆತ್ತಳು ಸತಿಯ ಕಣುಸನ್ನೆಯಲಿ ನಡೆದು
ಸರಸತಿಯುಮತಿ ಚದುರೆಯಾದಳು
ತರುಣಿಯೊಳು ನುಡಿಗಲಿತರುಂಧತಿ
ಪುರುಷಭಕ್ತಿಯೊಳಿಹಳು ಗಂಗಾಂಬಿಕೆಯ ಮನವಂದು ೪೦

ನಡೆಯ ಕಲಿ[1]ತುದು[1] ಹಂಸೆ ಮಡದಿಯ
ನಡೆಯನೀಕ್ಷಿಸಿ ರಾಜಕೀರಂ
ನುಡಿಯ ಕಲಿ[1]ತುದು[1] ಮಾನವತಿಯೊಳು ನುಡಿಗಳಂ ಕೇಳಿ
ಕಡುಮಿಸುಪ ಕಪ್ಪಂ ಪಡೆದುವಾ
ಉಡಿಗಳೀಕೆಯ ಮುಡಿಗೆ ಸುಳಿಸುಳಿ
ದುಡುಗಳುಜ್ವಳಿಸಿದುವು ಕಾಂತೆಯ ಪರಕಟಾಕ್ಷದಲಿ ೪೧

ಇಂದು ಬಸವನ ಭಕ್ತಿಭಾವನೆ
ಯಿಂದೆ ಭಕ್ತಸಭಾಂತರದೊಳರ
ವಿಂದಗಂಧಿಯ ಮಾನವದು ಕುಂದಾಗದಾಯಿತ್ತು
ಎಂದು ತಮತಮಗೆಲ್ಲರುಂ ಬೆಱ
ಗೊಂದಿ ಕೀರ್ತಿಸುತಿರೆ ನಿಜಾಂತರಾ
ಮಂದಿರಕೆ ನಡೆತಂದಳಾ ದಂಡಾಧಿಪನ ರಾಣಿ ೪೨

---

೧ ತಿತು (ನ).

CC-0. Jangamwadi Math Collection. Digitized by eGangotri

ಮತ್ತೆ ಒಬ್ಬಯ್ಯಂ ಬಸವಸಚಿ
ವೋತ್ತಮನ ಪೊರೆಗೆಯ್ದಿ ಆತನ
ಮತ್ತಗಜಗಮನೆಯ ಕಿವಿಯ ಪೊನ್ನೋಲೆಯಂ ಕಂಡು
ಒತ್ತಿ ಬೇಡಲು ಮಾಯಿದೇವಿಯ
ಮುತ್ತಿನೋಲೆಯನೀಸಿಕೊಂಡೊಲಿ
ದಿತ್ತು ನಮಿಸಲು ಮಿಂಡಜಂಗಮವಿತ್ತಲೆಯ್ತಂದ ೪೩

ತೀವಿ ಬಸವನ ಭಕ್ತಿ ಸತ್ಪ್ರಭೆ
ಭೂವಿಯತ್ತಳ ದಶದಿಶೆಗಳೊಳ
ಗಾವರಿಸೆ ನಿಜ ತೇಜವಱತುಱಿ ನಾಚಿ ಸರಿದಪರ
ಜೀವನಿಧಿಯೊಳು ಬಿರ್ದನೋಯೆನ
ಲಾ ವಿಭಾಕರನಸ್ತಮಿಸಿದನು
ತಾವರೆಗಳ ಮೊಗಂಗಳಾಗಳು ತಾವರೆಗಳಾಗೆ ೪೪

ಬಲದ ಕಣ್ಣೊಂದೆಡದ ಕಣ್ಣೊಂ
ದೆಲೆಯಭವ ಸರಿಯೆಂದು ನೋಡದೆ
ತಲೆಯನೇಱಿಸಿಕೊಂಡೆ ದೋಷಾಕರನನಿಂತೆನ್ನ
ಲಲನನಂ ಪಶ್ಚಿಮಸಮುದ್ರ
ಕ್ಕಿಳಿಹಿದಿರಿ ನೀವೆನುತ ದಿನಸತಿ
ಸಲೆ [೧]ಕರಂ ಮುಗಿದಿಹ[೨]ವೊಲು ಕರಂ ಮುಗಿದವಬ್ಜಾಳಿ ೪೫

ಉದಧಿಯೊಳು ಪುಟ್ಟಿದೆನು ಒಡಹು
ಟ್ಟಿದಳು ಸಿರಿ ಹರಿಯೆನ್ನ ಭಾವಂ
ಮದನಹರ ನೀಂ ಧರಿಸಿದುಡುಪತಿ ಹಿರಿಯನೆನಗೆಂದು
ಇದನುಱಿದೆ ಪಿಡಿದಂಧಕಂ ಕ
ರ್ಚಿದಪನೆಂದೀಶಂಗೆ ಹುಯ್ಯಲ
ನೊದರೆಯಿಡುವವೊಲಿರ್ದು[೩]ದಗ್ಗದ ಶಂಖಘೋಷಣವು ೪೬

೧–೨ ಕರಂಗಳ ಮುಗಿದ (ಥ, ಪ). ೩–೪ ದಂಕದ (ಕ, ಥ, ಪ); ಗದ್ಗದ (ನ).

CC-0. Jangamwadi Math Collection. Digitized by eGangotri

ಹಗಲೊಡೆಯನಸ್ತಮಿಸಲಿನಿಯಂನ
ನಗಲ್ದ ಪದ್ಮಿನಿಯಿರವನೀಕ್ಷಿಸಿ
ನಗುವವೊಲು ನೆಯ್ದಿಲುಗಳೆಯ್ದೆ ವಿಕಾಸವೆಯ್ದಿ ದವು
ದುಗುಡವಾಯ್ತು ರಥಾಂಗಮಿಥುನಕೆ
ನೆಗೆವಳಿಕುಳಿದ ಮೊರಹು ನಿಂದಿತು
ಖಗವಿತಾನಂ ಕೋಟರಂಗಳ ನೆಲೆಗೆ ಸೇರಿದವು ೪೭

ವಿತತ ನಾನಾ ಧೂಪಧೂಮವ್ರ ಜ
ನಿತ ಘನಾವಳಿ ಮುಸುಕಿದಂದದೊ
ಳತಿತಮಂ ಪರ್ಬಿದುದು ಮುಕ್ತಿವಧೂಟಿ ಬಸವಂಗೆ
ರತಿಯೊಳಿತ್ತುವ ಬಹಳ ದೀಪಾ
ರತಿಗಳೋಯೆನೆ ಪರಿವಿಡಿಯೊಳುಡು
ವಿತತಿ ದಿವಿಯೊಳು ತೀವಿಯುಜ್ವಳಕಾಂತಿ ರಂಜಿಸಿತು ೪೮

ಭೇರಿಗಳ ನಿನದಾಳಿ ಜಯಘಂ
ಟಾರವಾಳಿಯು ಶಂಖಘೋಷಣ
ಪೂರಣಂ ಭೋರೆನಲಭವಭವನಾಂತರಂಗಳೊಳು
ಮಾರಮಥನನ ಭಕ್ತಲೋಕಾ
ಗಾರನಿಕರದೊಳೆಯ್ದೆ ಪಂಚಮ
ಹೋರುವಾದ್ಯಧ್ವನಿಗಳುಲಿಯಲು ತತ್‌ಸಮಯದಲ್ಲಿ ೪೯

ಬಸವದಂಡಾಧೀಶ್ವರಂ ಮನ
ಮೊಸೆದು ಕಳುಹಲು ಮಿಂಡಜಂಗಮ
ವಿಸರವಾಭರಣಾಂಬರಾಗರು ಗಂಧ ಕರ್ಪೂರ
ಕುಸುಮ ತಾಂಬೂಲಾದಿಗಳನೊದ
ವಿಸಿಕೊಳುತ್ತಾನಂದದಿಂ ಕರ
ಮೆಸೆದು ಪೋಪೆವು ಸೂಳೆಗೆಯ್ಯಲೆನಿಪ್ಪ ಸಮಯದಲಿ ೫೦

೧–೨ ರಲು (ಕ).

CC-0. Jangamwadi Math Collection. Digitized by eGangotri

ಕಡುಹುಗಳ್ಳನು ಹಾದರಿಗನುಂ
ಗಡಣಿಗಿವರೆನೆ ಶೂದ್ರಿಕಂ ಕುಲ
ಗೆಡಿಕನಹ ಕೀಚಕನು ನಿೆಱಿ ಕಡಿವಡೆದರೆಂದಱಿದು
ಪೊಡವಿಯೊಳಗಣ ಜಾರ ಚೋರರ
ಿಜಡರಿನೆಣಿಸುವ ಕವಿಯ ಜಾಣ್ಮೆಯ
ನುಡುಳಿಗೆನುತ ಭಕ್ತರು ಶಿವಾರ್ಚನೆಗೆಯ್ದು ಸಂಜೆಯಲಿ * ೫೧

ಅಂತು ಸಂಧಿ ೧೦ಕ್ಕಂ ಪದಗಳು ೬೨೬ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

* ಈ ಪದ್ಯ 'ನ' ಪ್ರತಿಯಲ್ಲಿಲ್ಲ. ೧ ಉ (ಮ, ಚ). ೨–೩ ಬೆಡಗ (ಥ, ಪ). ೪ ಡಿ (ಧ).

CC-0. Jangamwadi Math Collection. Digitized by eGangotri

ಸಂಧಿ : ೧೧

*

ಸೂಚನೆ : ಸೂಳೆಗೆಯ್ಯಲು ಹೋಗಿ ಸತಿಯ ಸ
ಮೇಳವುಳಿದಿರುಳೀಶ್ವರಾರ್ಚನೆ
ವೇಳೆಯೊಳು ಬೆಳಗನ್ನಕಿರ್ದನು ಮುಗ್ಧಸಂಗಯ್ಯ

ಲಿಂಗಸರ್ವೇಂದ್ರಿಯ ವಿಲೀನದ್ಯ
ಧ್ಯಾಂಗನಾರ್ಯನು ಮುಗ್ಧಸಂಗ
ಯ್ಯಂ ಗತಾಂಗಜಭೋಗಿ ನೋಡುತ್ತಾಗಳಿಂತೆಂದ
ಸಾಂಗದಿಂ ಬಸವಂ ಕಳುಹುವಂ
ಜಂಗಮಂಗಿ ಪ್ಪೋಪವರ್ಗಳೊಯ್ದುಪ
ರಂಗಲೇಪನ ಮಾಲ್ಯ ತಾಂಬೂಲಂಗಳಂತಾಗಿ ೧

ಓಳಿಯಿಂದಿವು ಲಿಂಗದವಸರ
ವೇಳೆಗೆಯ್ದುವ ಭಂದವಲ್ಲದೆ
ಕಾಳುಗೆಲಸಕೆ ಹೋಹ ಪರಿಯಲ್ಲೆನುತ ಇದುವೊಂದು
ಶೂಲಿಪೂಜನೆಯೆಂದು ಭಾವಿಸಿ
ಸೂಳೆಗೆಯ್ದುಪೆವೆಂಬ ಮಾತಂ
ಕೇಳಿ ಎಂದುಂ ಅಜಿಯದಾತನು ಬಸವನಂ ನೋಡಿ ೨

---

* ರಾಗ : ಗೌಳ (ಅ, ಚ, ಡಾ, ಧ); ರಾಮಕ್ರೀ (ಮ). ೧ಮರ್ (ಬ).

CC-0. Jangamwadi Math Collection. Digitized by eGangotri

ಪೋಪೆ ನಾನುಂ ಸೂಳೆಗೆಯ್ಯಲು
ಪೋಪ ಜಂಗಮದೇವರೊಡನೆ ನಿ
ರೂಪಿಸೈ ಎನೆ ನಸುನಗುತ್ತಂ ಹೋಗು ಹೋಗಯ್ಯ
ತಾಪಸೋತ್ತಮ ಸಂಗಮೇಶ್ವರ
ರೂಪ ಹೋಗೆಂದೆನುತ ಸರಸಾ
ಳಾಪದಿಂ ಭಂಡಾರಿ ಿಮಿಗೆಿ ಕೊಂಡಾಡಿ ಮುಂಡಾಡಿ ೩

ಭೂರಿ ವಸ್ತ್ರಾಭರಣ ಕುಸುಮ ಪ
ಟೀರ ಘನಸಾರಂಗಳಾದಿಯ
ಪಾರವಿತ್ತಾ ಆಯ್ಕನಂ ಶೃಂಗಾರಪಂ ಮಾಡಿ
ಹಾರಯಿಪ ಮನದಲ್ಲಿ ನಿಜ ಪರಿ
ಚಾರರಂ ಕರೆದಚಲಭಕ್ತಿ ವಿ
ಚಾರನಾರಿಯ ಮನೆಗೆ ಕಳುಹಿದಡಾಗ ಿಳೀವೊಗಳ್ದಿ ೪

ಶಶಿಮುಖಿದ ಕುಟಿಲಾಳಕಂಗಳ
ಕುಶಜನಯನಂಗಳ ಸಮುಜ್ವಳ
ದಶನಪಙ್ತಿಯ ಪಕ್ವಬಿಂಬಾಧರದ ನಸುನಗೆಯ
ವಿಶದಗಂಡಂಗಳ ಪೃಥುಳಕ
ರ್ಕಶಕುಚಂಗಳ ನಿಮ್ನನಾಭಿಯ
ಕೃಶಸುಮಧ್ಯದ ತನುಲತೆಯ ಗಜಗಮನೆಯಂ ನೋಡಿ ೫

ಪರಿಕಿಸಲ್ ಪ್ರಮಥೇಂದ್ರಕನ್ನೆಯೊ
ಗುರುಪಯೋಧರೆ ರುದ್ರಗಣಕೆಯೊ
ಸರಸಿಜಾನನೆ ಚಿತ್ರರೂಪವೊ ಹೊನ್ನಪುತ್ಥಳಿಯೋ
ತ ೌರಳಿ ಮನ್ಮಥನಂಕಕಾರ್ತಿಯೊ
ಅರರೆ ಎನಲಾ ಮುಗ್ಧಮಿಂಡನ
ಚರಣಯುಗಳಕ್ಕೆಱಗಿ ತನ್ನ ವಿದಗ್ಧತನವೆಸೆದು ೬

೧–೨ ಸಲೆ (ಥ, ಪ). ೩–೪ ಳೀಂ ಪೇ (ಬ, ಕ) ೫–೬ ರುಣಿ (ಕ, ಥ, ಬ, ಪ).

CC-0. Jangamwadi Math Collection. Digitized by eGangotri

ಪಡಿಗವಂ ತರವೇಳ್ದು ಮುಂದಿ
ಟ್ಟಡಿಗಳಂ ತೊಳೆದಧಿಕ ನಯವಿ
ಮೃಡಿಸಿ ಪಾದೋದಕವನೀಂಟಿ ವಿಭೂತಿವೀಳೆಯವ
ಮಡದಿಯರ್ಪಿಸಿ ಕಳುಹಬಂದರ
ನೊಡನೆ ಹಿಂದಕೆ ಕಳುಹುತಂ ತ
ನ್ನೊಡೆಯನಂ ಕೈಗೊಟ್ಟು ಮನೆಗೊಡಗೊಂಡು ಹೋಹಾಗ ೭

ಮಗಿಲು ಬಾಗಿಲುವಾಡದೊಳಗಣ
ಜಗಲಿ ಚಪ್ಪರದುಪ್ಪರಿಗೆ ಚವು
ಕಿಗೆ ವಿನೋದಾಲಯದಮೃತಕಾಸಾರದುಪವನದ
ಸೊಗಯಿಸುವ ಶುಕ ಪಿಕ ಮಯೂರಾ
ದಿಗಳ ಮೃದುನಾದಕ್ಕೆ ಹರುಷಂ
ಬಗೆವ ಗಣಕೆಯರೊಗ್ಗಿನಲಿ ಮೆಱಿದುದು ಸತಿಯು ಭವನ ೮

ಹಾಸುಮಂಚಪರಳ್ಗಳುಯ್ಯಲ
ವಾಸುಮಣಿ ತಲೆಗಿಂಬು ಮೇಲ್ಕಡಿ
ವಾಸು ಿಗದ್ದುಗೆಿ ಮಲಗುಗನ್ನಡಿ ಕುಂಚ ಕಾಳಂಜಿ
ಬೀಸಣಿಗೆ ತೆರೆಗಿಂಡಿ ತಂಬುಗೆ
ವಾಸಿಸುವ ಪಾನಾಂಬುವೊಪ್ಪೆ ವಿ
ಳಾಸ ವಿಭ್ರಮದಂಗವಣಿಯ ವಿಳಾಸಿನೀವಾಸ ೯

ಠಾಣದೀವಿಗೆ ಮಂಗಳಾರತಿ
ಸಾಣಿಕಲ್ಲನುಲೇಪನದ ಪಾ
ಷಾಣವಡಕೆಲೆಯಡಕೆಗತ್ತಿಗೆ ಹಡಪ ಸಂಬಳಿಗೆ
ವೀಣೆ ವಸ್ತ್ರಾಭರಣದಡಕದ
ಕೋಣೆ ಬೀಯಗವುಚಿತವಸ್ತು
ಶ್ರೇಣಿಯಿಂದೊಪ್ಪಿದುದು ವಾರಳಿವಿಳಾಸಿನೀಿಸದನ ೧೦

೧ಎ (ಧ, ಪ). ೨–೩ ಕೌಳುಡೆ (ನ). ೪–೫ ನಿತಂಬಿನೀ (ಧ, ಪ, ಸ).

CC-0. Jangamwadi Math Collection. Digitized by eGangotri

ತಿಗುರನಿಕ್ಕುವ ಲೇಪಿಸುವ ತ
ಟ್ಟಿಗಳ ತಿಲಕಾಂಜನಕರಂಡದ
ಸುಗಿದ ಫಲಪುಂಡ್ರೇಕ್ಷು ನಾನಾ ಭಕ್ಷಣಾದಿಗಳ
ಮೃಗಮದದ ಚಂದನದ ಕರ್ಪೂರ
ದಗಿಲು ಸಾದು ಜವಾದಿಗಳ ಸಿಂ
ಪುಗಳಿನೆಸೆದುದು ನೋಡೆ ವಾರವಧೂಟಿಕಾನಿಳಯ ೧೦

ಆರಳಪಡಲಿಗೆ ಧಾರೆವಟ್ಟಲು
ಭರಣಿ ಸುಣ್ಣದ ಕುಡಿಕೆ ಮಣಿವುಪ
ಕರಣತತಿ ಬಟ್ಟಲು ಪಡಿಗವಡ್ಡಣಿಗೆ ಪರಿಯಾಣ
ಮೊರೆವ ಹಾವುಗೆಮೆಟ್ಟುವರಗಿಳಿ
ಹಿರಿಯಚಿತ್ರದ ಭಿತ್ತಿಯಿಂ ಪೊಸ
ಪರಿಯೆನಿಸಿ ರಾಜಿಸಿದಪುದು ಗಣಿಕಾನಿಕೇತನವು ೧೨

ಸಂಗಡಿಪ ಶಶಿಕಾಂತಸೋಪಾ
ನಂಗಳಿಂ ವಸುಕುಟ್ಟಿಮಂಗಳ
ತುಂಗಹರ್ಮ್ಯಸ್ಥಳದ ಕಸ್ತೂರಿಕೆಯ ಚಳೆಯದಲಿ
ಮಂಗಳೋದಯವೆತ್ತ ಮುತ್ತಿನ
ರಂಗವಾಲಿಗಳಿಂದೆ ಕಂಗೆ ಸು
ರಂಗವೆನಿಸಿದ ಮೇಲುಕಟ್ಟಿನ ಕಂಬಗಟ್ಟುಗಳಿಂ ೧೩

ಲಲನೆ ಶಯನಿಸುವಮಳಪುಷ್ಪಕ
ನಿಳಯಲಂಬಿತರತ್ನಮಾಲಾ
ಕಲಿತ ಮಣಿಗಣದೀಪವಿಭ್ರಮಕಾಂತಿಯಿಗ್ಗಳಿಸೆ
ಲಲಿತ ಮೃದುತರ ಹಂಸತೂಲದ
ತಳಿತ ಮಂಚದ ತಂಬೆಲರ ನಸು
ಸುಳಿವಿನಲಿ ಥಳಥಳಿಪ ಜಾಳಕಪಙ್ತಿ ರಂಜಿಸಲು ೧೪

---

೧ ವೆ (ಬ). ೨–೩ ತಳುಪ (ತ, ನ).

CC-0. Jangamwadi Math Collection. Digitized by eGangotri

ಗೌರಿಯರಸಂ ನಿರ್ಮಿಸಿದ ಶೃಂ
ಗಾರಸಿಂಹಾಸನವೊ ಶಿವನ ವಿ
ಹಾರಧವಳಾಯತವೊ ಶಂಕರರಚಿತ ಮಂಟಪವೋ
ಮಾರಹರನ ವಿನೋದಶಯ್ಯಾ
ಗಾರವೋ ಗಂಗಾವತಂಸನ
ಚಾರುಪುಷ್ಪಕವೋಯೆನಲ್ಕತಿ ರಮ್ಯವಾಗಿರ್ದ ೧೫

ಸುದತಿ ಶಯನಿಪ ಮಂಚಮಂ ಕಂ
ಡುದಿತವಿಸ್ಮಿತನಾಗಿಯಾ ಸತಿ
ಗಿದು ಶಿವಾರ್ಚನೆಗೆಯ್ವ ಮನೆಯೆಂದಾತ್ಮದೊಳು ನೆನೆದು
ವಿದಿತ ಮಂಚವನು[೧]ಳಿದು ನೆಲದಲಿ
ಪದುಳದಿಂ ಕಂಬಳಿಯನಿಕ್ಕಿಸಿ
ಅದಱ ಮೇಲೀಶ್ವರಸಮಾರಾಧನೆಗೆ ಕುಳ್ಳಿರ್ದು ೧೬

ಭಸಿತಮಂ ಮೈದುಂಬಲುದ್ಧೂ
ಳಿಸುತ ಭಸಿತವನೇಕೆವುದ್ದೂ
ಳಿಸೆ ತಳೋದರಿ ನೀನೆನಲು ಮುನ್ನೆಮ್ಮ ಗಿರಿಜಾತೆ
ಒಸೆದು ಹೂಸುವ ಹಳದಿವಣ್ಣದ
ಭಸಿತಮಂ ಹೂಸಿದೆನೊಡಲೊಳಿದೆ
ರಸಿಕ ನೋಡೆಂದೆನುತ ತೋಱಿದಳರಿಸಿನವನಬಲೆ ೧೭

ಜಿಡಿಗಳಂ [೨]ಬಿಗಿಬಿಗಿದು[೩] ಸುತ್ತುತ
ಜಿಡಿಯನೇ[೪]ಕೌಧರಿಸೆ[೫] ನೀನೆನೆ
ಮೃಡಸಮರ್ಪಿತ ಕುಸುಮವಿಸರಕೆ ಮಡಗಿಯರ್ಘವನು
ಜಿಡಿಗಳಂ ನಾಂ ತಳೆದೆ ಅರ್ಘದೊ
ಳಡರಿ ಬೆನ್ನೊಳು ನೋಡೆನುತ ಗಳ
ದೊಡಿಗೆಯಹ ಪ[೬]ಟ್ಟಳಿಯ[೭] ತೊಂಗಲನಾಕೆ ತೋಱಿದಳು ೧೮

---

೧೨ (ಪ). ೨–೩ ಬಗಿಬಗಿದು (ತ, ಥ, ನ, ಮ). ೪–೫ ಕಾದರಿಸೆ (ಡಾ, ಪ). ೬–೭ ಡ್ಡಳಿ (ಬ); ಠ್ಠಳಿ (ಅ, ಡಾ, ಥ, ಧ, ನ); ಟ್ಟಾಳಿ (ಮ).

CC-0. Jangamwadi Math Collection. Digitized by eGangotri

ಎಡೆಗೆಡೆಗೆ ರುದ್ರಾಕ್ಷೆಗಳನಳ
ವಡಿಸಿಕೊಳುತಂ ಮುಗ್ಧಮಿಂಡನು
ತೊಡುವುದಿಲ್ಲಾ ನೀನದೇಂ ರುದ್ರಾಕ್ಷೆಮಾಲೆಗಳ
ಮಡದಿ ಪೇಳಿನೆ ನಗುತವುಪ್ಪಿನ
ಕಡಲತಡಿಯಲಿ ಪುಟ್ಟಿ ಕರ್ಕಶ
ವಡೆದ ರುದ್ರಾಕ್ಷೆಗಳನೊಡಲಲಿ ಧರಿಸುವುದನುಳಿದು ೯

ಕ್ಷೀರಶರಧಿಯೊಳೊಗೆದ ಬೆಳ್ಪಿನ
ತೋರ ರುದ್ರಾಕ್ಷಂಗಳಂ ವಿಟ
ಚಾರನೊರ್ಬನು ತಂದುಕೊಟ್ಟನೆನುತ್ತ ಮೌಕ್ತಿಕದ
ಹಾರಮಂ ತೋಱಿಲ್ಕೆ ಮನದೊಳು
ಹಾರವಿಸಿ ಸೂಸಕದ ಮುತ್ತಂ
ನಾರಿ ಧರಿಸಿದ ಮೂಕುತಿಯನಾ ಆಯ್ಯನೀಕ್ಷಿಸುತ ೧೦

ಉತ್ತಮಾಂಗದ ಮೇಲೆ ಧರಿಸುವು
ದುತ್ತಮಂ ಭಕ್ತರ್ಗೆ ಪೊಸತೆಮ
ಗೆತ್ತಲುಂ ಕೇಳ್ದಱಿಯೆವೀ ರುದ್ರಾಕ್ಷೆ ಮೂಗಿನಲಿ
ತೆತ್ತಿಸುವುದಾವುದು ವಿಶೇಷಮೊ
ವ್ಯತ್ತಕುಚೆ ನೀಂ ಪೇಳಿನಲಿದಂ
ಚಿತ್ತಜಾರಿಯೆ ಬಲ್ಲನೇನೆಂಬೆಂ ಶ್ರುತಿಗತೀತ ೧೧

ಭುವಿಯೊಳಿಂತಹ ಭಕ್ತಿರತಿಯು
ಳ್ಳವಳಿದೇನೌ ಕೌಪನುಡೆಯೆನೆ
ಭವಿಯ ದೃಷ್ಟಿಗಳೆನ್ನ ಮೇಲೆಂದುಂ ಪರಿಯದಂತೆ
ಅವಧರಿಸು ಸರ್ವಾಂಗಕೌಪೀ
ನವನಮರ್ಚಿದೆನಿದೆಯೆನುತ್ತಂ
ಯುವತಿ ತಾನುಟ್ಟಂಬರವನಾತಂಗೆ ತೋಱಿದಳು ೧೨

---

೧ ಕೌ (ತ, ನ).

CC-0. Jangamwadi Math Collection. Digitized by eGangotri

ವಾರಿಜಾಸ್ಯೆಯಪೂರ್ವಲಾಂಛನ
ಧಾರಿಯಾಗಲು ತನ್ನ ಮನದೊಳು
ಹಾರವಿಸಿ [೧]ಹೊಡಪಂಟು[೨] ಮುಗ್ಧರದೇವನಿಂತೆಂದ
ನಾರಿ ನಿನ್ನ ವಿಶೇಷವೇಷ
ಕ್ಕಾರು ಸದ್ಗುರು ಬಳಿಕ ನಿನ್ನಾ
ಚಾರವಾವುದು ನಿನ್ನ ಸುವ್ರತನಿಯಮವಾವು[೩]ದದು[೪] ೨೩

ಯುವತಿ ನಿನ್ನಾರಾಧ್ಯಸಂತತಿ
ಯವರು ತಪವನದೆಲ್ಲಿ ಮಾಡುವ
ರವನಿಯೊಳು ನೀನಾರ ಸಂಗೋಷ್ಠಿಯೊಳಗಲದಿಪ್ಪೆ
ಪ್ರವಿಮಳಾರೋಗಣೆಯದಾವುದ
ನವರತಮುಮಾದ್ಯಂತಮಂ ಪೇಳ್
ವಿವರವಾಗಿಂದೆಮಗೆನಲು ಹೇಳಿದಳು ಸತಿ ನಗುತ ೨೪

ಆಗಮೋಕ್ತದಿ ವಾಮದೇವ ಸು
ಯೋಗಿ ಮಾಡಿದ ದೀಕ್ಷೆಯಂ ತಾ
ಳ್ದಾ ಗಿರಿಜೆ ತಪ[೫]ವಟ್ಟು[೬] ಮೆಚ್ಚಿಸಿ ರಾಜತಾದ್ರಿಯಲಿ
ನಾಗಕಂಕಣನಿಂ ಪಡೆದಳನು
ರಾಗದಿಂದೀ ಲಾಂಛನವನಂ
ತಾಗಿ ಪೂರ್ವಾಚಾರಿ ವಿಶ್ವವನುದ್ಧರಿಪ ಗೌರಿ ೨೫

ಚಿತ್ರಭವನಂ ಗೆಲಿದು ನಲವಿಂ
ಚಿತ್ರಜಾರಿಯನೊಲಿಸಿ ನಿಷ್ಕಾ
ಚಿತ್ರದಿಂದಂ ತತ್ಪನುವಿನೊಳಗರ್ಧವಂ ಕೊಂಡ
ಉತ್ತಮೆಯವಂಗಡವು[೭] ಜಗದು
ತ್ಪತ್ತಿಕಾರಣವೆನಿಸಿದಂಬಿಕೆ
ಯಿತ್ತ ಜನಮೋಹನದ ಲಾಂಛನಧಾರಿಯೆರು ನಾವು ೨೬

೧–೨ ಪೊಡಮಟ್ಟು (ತ, ನ). ೩–೪ ದೆನೆ (ಕ, ಚ, ಥ, ಪ). ೫–೬ ದಿಂದ (ತ, ಥ, ನ). ೭ ವೆ (ತ).

CC-0. Jangamwadi Math Collection. Digitized by eGangotri

ಶಿವರಹಸ್ಯ ಪುರಾಣಕಥೆಗಳ
ವಿವರವನು ಸಂಪೂರ್ಣಮಾಗಲು
ಶಿವನ ಕೈಯಿಂದಱಿದೊರೆದ ಸೌಭಾಗ್ಯೆಯರ ಮನೆಯ
ಯುವತಿಯರು ನಾವಖಿಳಭುವನ
ಸ್ತವನಭವನೆಯೆನಿಪ್ಪ ಗೌರಿಯ
ಶಿವೆಯ ಶರ್ವಾಣಿಯ ಭವಾನಿಯ ಸಂತತಿಗಳಾವು ೨೭

ಆವಗಂ ಜನ್ನಿಗೆಯ ಪಾಲ
ಷ್ಪಾವಸಶೇಷದ ಪಾಕಮಾಗಿರೆ
ತೀವಿ ಕಬ್ಬಿನ ಕಟ್ಟಿಗೆಯ ಪುಡಿಯೊಂದು [೩]ಸೇರೆಯನು[೪]
ದೇವರಿಗೆ ಕೊಟ್ಟಾ ಪ್ರಸಾದಾ
ಸೇವನಮೆ ಜೀವನವೆಮಗೆ ಪೆಱ
ತಾವುದುಂಟೇ ಕನಸಿನೊಳು [೫]ಕಂಡಱಿ[೬]ಯೆವೋಗರವ ೨೮

ಕಂದ[೭]ಮೂಲಫಲಾದಿ ಸತ್[೮]ಫಲ
ವೃಂದಮಂ ಶಿವಭಕ್ತರೊಲವಿಂ
ತಂದುಕೊಟ್ಟಡವಂ ಶಿವಂಗಿತ್ತಾ ಪ್ರಸಾದವನೆ
ಕುಂದದಾರೋಗಿಸುತಮಿಹೆವೇ
ನೆಂದು ಹೇಳುವೆವಯ್ಯ ಎಮಗಾ
ವಂದದಿಂ ನೀವೊರೆದು ನೋಡುವಡಿದು ತಪಶ್ಚರಣೆ ೨೯

ತನು ಮನಂ ಧನವೆಂಬವಂ ವಂ
ಚನೆಗಳಿಲ್ಲದೆ ಕೊಟ್ಟು ರಸಿಕದಿ
[೯]ಮನಸು ಕರಗಿಸಿ[೧೦] ಮೇಳರಾಗಿ ವಿಮಗ್ನಗೋಷ್ಠಿಯಲಿ
ಅನುನಯದೊಳೊಂದಿಪ್ಪ ಜಂಗಮ
ದನುಭವಂಗಳೊಳಿಪ್ಪವಗಲದೆ
ಅನಘಲಿಂಗಾರ್ಚನೆಯದಲ್ಲದೆ ಕೆಲಸವೊಂದುಂಟೇ ೩೦

೧–೨ ಳಹೆವು (ತ, ಥ, ನ, ಸ). ೩–೪ ಸೆರೆಯೆನಲು (ಪ); ಸೆರೆಯದನು (ತ).
೫–೬ ನಾವರಿ (ಕ, ಚ, ತ, ನ, ಪ). ೭–೮ ಮೂಲಾದಿಗಳ ತತ್ (ಅ, ಡಾ, ಧ, ದ, ಬ, ಮ).
೯–೧೦ ಮನಿಕರಾಗಿಸಿ (ಅ, ಚ, ಡಾ, ತ, ಥ, ನ, ಪ).

CC-0. Jangamwadi Math Collection. Digitized by eGangotri

ಗತಿಯೆಮಗೆ ಬೇಱುಂಟೆ ನಾನಾ
ಗತಿಗಳೊಳು ವರ ಜಂಗಮವೆ ತಾಂ
ಗತಿ ಮನೋವಾಕ್ಕಾಯಕರ್ಮಂಗಳೊಳಿರುಳು ಹಗಲು
ಸತತಮಿಂತಹವೆಮ್ಮ ಸದ್ಗುರು
ಮತದ ಮಾರ್ಗವು ತಾನಿದುವೆ ಸು
ವ್ರತವಿದುವೆ ಚಾರಿತ್ರವೆಮಗಿದು ಸಹಜಲಾಂಛನವು ೩೧

ಸ್ವಾಮಿಸದ್ಗುರು ಸಾಂಪ್ರದಾಯದ
ಭಾಮೆಯರು ಶ್ರೀಪರ್ವತಂ ಮೊದ
ಲೀ ಮಹಿಯೊಳೊಳರಧಿಕ ಸಾಕ್ಷಾತ್ ಪಾರ್ವತಿಯ ಸರಿಯ
ರಾಮೆಯರು ಪಲರುಂಟು ದಾಕ್ಷಾ
ರಾಮದೊಳಗೆಂದತಿ ಚದುರಿನಿಂ
ವಾಮಲೋಚನೆ ಹೇಳುತಿರೆ ಬೆಬಿಗಾಗಿ ಸಂಗಯ್ಯ ೩೨

ಆ ಸತಿಯ ಮಂಚವು ಶಿವನ ಸಿಂ
ಹಾಸನವಲಾ ಎಂದು ಭಾವಿಸಿ
ವಾಸನಾದ್ರವ್ಯಾದಿಗಳನೊಂದೊಂದ ಶೋಧಿಸುತ
ಬಾಸಣಿಸಿದಗ್ಘವಣೆಯಂ ಪಿಡಿ
ಯೌ ಸುದತಿಯೆನಲವರ ಮನಕು
ಲ್ಲಾಸವಂ ಮಾಡುವುದೆ ತನ್ನ ವಿವೇಕವಹುದೆನುತ ೩೩

ಬೆಳಕಿನಿಂದಗ್ಘವಣೆಯಂ ಕಂ
ಗೊಳಿಸಿ ತುಂಬಿದ ಹೊನ್ನಬಿಂದಿಗೆ
ಗಳನಿರಿಸಿ ಲಲಿತಾಂಗಿ ಮಜ್ಜನಸಾಲೆಗಳನಿಟ್ಟು
ಬೆಳಗಿದುಪಕರಣಂಗಳಂ ಮುಂ
ದಿಳುಹಿ ಘಂಟಾ ಕಂಸ ತಾಳಾ
ವಳಿಯ ಘೋಷಣವೆಸೆಯಲಾ ಧೂಪಾರತಿಯ[೧]ನೀಯೆ[೨] ೩೪

೧–೨ ನಿತ್ತು (ಕ, ಚ, ತ, ಥ, ಪ).

CC-0. Jangamwadi Math Collection. Digitized by eGangotri

ಗುರುಕುಚೆಯ ಲೋಚನರುಚಿಗಳಾ
ಕೊರಳಹಾರ ಮರೀಚಿಗಳು ತತ್
ಕರಕನಕಕಂಕಣ ಕಿರಣಗಣವೊಂದಟಿಂದಟಿಲಿ
ಬೆರಸಿ ನೋಡುವ ಕಣ್ಗೆ ಬೆಳಗಾ
ವರಿಸೆ ಹೊನ್ನಾರತಿಗಳಂ ತರ
ತರದ ಪರಿಯಾ೧ಣಂಗಳಂ ನೀಡುವ ಸಮಯದಲ್ಲಿ ೩೫

ಮಲಹರನು ತನ್ಮುತ್ತಮಾಂಗದ
ಕೆಲದೊಳಿಟ್ಟಂದೆನ್ನ ಕಪ್ಪಂ
ಕಳೆಯಲಾಜಿನು ಭಕ್ತಪದಸಂಸ್ಪರ್ಶನದೊಳಿಂದು
ಚೆಲುವನಾಗಿ ಶರೀರದೊಳು ನಿ
ರ್ಮಳವನೊಂದುವೆನೆಂದು ಬಂದವೊ
ಲೊಲಿದು ಕೈರವಬಾಂಧವಂ ೨ಮೂಡಣ೩ದೆಸೆಯೊಳೊಗೆದ೪ ೩೬

ಬಸವನಸದೃಶಕೀರ್ತಿ ಪರ್ಬಿತು
ದೆಸೆದೆಸೆಯೊಳಾ ವಿಷಮನಯನನ
ಲಸಿತ ಸಿತಭಸಿತಾಂಗರಾಗಪ್ರಭೆ ಮುಸುಕಿತೆನಲು
ಹಸನದೀಧಿತಿ ಮಿಗೆ ರಜತಗಿರಿ
ವಸುಗಳಭಿನವವಾಯಿತೆನಲಾ
ಗಸದೊಳಿಲ್ಲೆಡೆಯೊಳು ಬಲಿದು ಬೆಳುದಿಂಗಳಗ್ಗಳಿಸೆ ೩೭

ತುಂಗಕುಚೆ ತಾಂ ಮುಗ್ಧಸಂ
ಯ್ಯಂಗೆ ಮಾಡುವ ಸತ್ಕ್ರಿಯಾಲಾ
ಪಂಗಳಿಂದೊಡಲುಬ್ಬಿಯಾತನು ತನ್ನ ಘನವಲರೆ
ಲಿಂಗಪೂಜಾವಸರದೊಳು ಪಲ
ವಂಗದಿಂ ನಟಿಸುವ ಸಮೇಳನ
ದಂಗನೆಯರಂ ಸಖಿಯರಂ ಕಂಚಾಸ್ಕೆ ಕರೆಸಿದಳು ೩೮

---

೧ ವಾ (ಮ). ೨–೩ ಪ್ರಾಚ್ಯಮಿದೊಳುದಯಿಸಿದ (ಬ). ೩–೪ ಕಡೆ (ಡಾ, ಅ).

CC-0. Jangamwadi Math Collection. Digitized by eGangotri

ಶಿಂಗಳವೊಲಳಿಕಂಗಳಳಿಕಳ
ಭಂಗಳವೊಲಳಕಂಗಳತನುಶ
ರಂಗಳವೊಲಲರ್ಗಂಗಳಾ ಮುಕುರಂಗಳಮಳತೆಯಾ
ಹಂಗಿಸುಪ ವದನಂಗಳಬುಜಾ
ತಂಗಳಂತೆ ಗಳಂಗಳುನ್ನತ
ಸಂಗ ವೃತ್ತಕುಚಂಗಳೊಪ್ಪುವ ಪೆಣ್ಗಳೆಯ್ತರಲು ೩೯

ರಾಜಿತಾಳಿ ವಿನೀಲಭಂಗ ಶಿ
ರೋಜೆಯರು ವಸುಕಳಶಸದೃಶೋ
ರೋಜೆಯರು ಕೋಮಳೆಯರಂಗಜನಂಕಕಾರ್ತಿಯರು
ರಾಜಬಿಂಬನಿಭಾನನೆಯರಂ
ಭೋಜದಳನಯನೆಯರು ದಾಡಿಮ
ಬೀಜಕಾಂತಿಯ ದಂತಪಙ್ತಿಯ ಕಾಂತೆಯರು [೧]ಬರಲು[೨] ೪೦

ಬೋಹಣಿಸಿ ಮದ್ದಳೆಗಳಂ ಶ್ರುತಿ
ಮೋಹಿ ಸಂಧಿಸಿಕೊಂಡು ನಿಲ್ಲಿರೆ
ಬೇಹವರು ನೀವಿದಕೆ ಗುಡ್ಡಾದೇವಿ ಮಹದೇವಿ
[೩]ಕಾಹಳೆಗಳಂ[೪] ಹಿಡಿ ಸಮೇಳ
ಗ್ರಾಹಕವನಱಿದೊಡನೊಡನೆ ದಾ
ಸೋಹದಲ್ಲಮದೇವಿ ಗೌರಾದೇವಿಯರು ನೀವು ೪೧

ಆಡಿಗಡಿಗೆ ದುರಪದವನೊಯ್ಯನೆ
ನುಡಿಸು ಲಿಂಗಾದೇವಿ ಕೊಳಲಂ
ನುಡಿಸು ಚಂಗಳೆ ತಾಳಧರಿ ನೀನಾಗು ಭೋಗಾಯಿ
ಮಡದಿ ಗೌರಿ ಪ್ರರಾತಿ ಪಾರ್ವತಿ
ಪಡಿಹರಿಯ ದಾಸವ್ವೆ ದುಗ್ಗಳೆ
ಒಡರಿಚುವುದೇಂ ಕೇಳಿಕೆಯ ನೀ ನರ್ತನೋಚಿತಕೆ ೪೨

೧–೨ ನೆರೆದು (ಬ). ೩–೪ ಕಾಳಿವಾಳೆಗಳಂ (ಚ); ಕಾಳಿಗಳನಂ (ಕ).

CC-0. Jangamwadi Math Collection. Digitized by eGangotri

ಇಟ್ಟು ಜಡೆ ಚೊಲ್ಲೆಹವಮರ್ದಿರೆ
ತೊಟ್ಟು ಕಂಚುಕಮಂ ದುಕೂಲವ
ನುಟ್ಟು ಚಲ್ಲಣಮಂ ಖಿಚಿಸಿ ಮಣಿರಚಿತಸಿಂಜಿನಿಯ
ಕಟ್ಟಿಕೊಂಡು ಬೆಡಂಗಡರೆ ನೆಱಿ
ದಿಟ್ಟಿ ನೀನೀ ನಾಟಕಕ್ಕಳ
ವಟ್ಟು ರೀ[೧]ತಿಯೊಳೊಪ್ಪಿ ಸೋವಲದೇವಿ ನಡೆ[೨]ತಾರೌ[೩] ೪೩

ಏಳಿ ಕಂಸಾಳಂಗಳಂ ಪಿಡಿ
ದೋಳಿಯಿಂದಂ ತಾರವಿಸುತಿರಿ
ಆಳತಿಯವೇಳೆಯೊಳೆನುತಮಿಂತಾರ್ಭಟಂಗೊಟ್ಟು
ಮೇಲೆ ಜವನಿಕೆಯಂ [೪]ಪಿಡಿದು[೫] ಸ
ಮ್ಮೇಳನದೊಳೆಯ್ತಂದು ನಿಂದು ಸು
ಲಾಲಿತಂ ಮಿಗೆ ನಟಿಸಿ ಪುಷ್ಪಾಂಜಲಿಯನಿತ್ತೆಸದು ೪೪

ಸುಲಲಿತದ ಮುಖರಸದ ಸೌಷ್ಠವ
ದಲಸಭಾವದ ವಿಭ್ರಮದ ನಿ
ಶ್ಚಲದ ನೋಟದ ದೃಢದ ಝಂಕೆಯ ಬಿಂಕದಂಕಿತದ
[೬]ಲಳಿತಠೀವಿಯ[೭] ನಿಜಸುರೇಖೆಯ
ಲಲನೆಯೀ ಪರಿಯಿಂದ ನೃತ್ಯವ
ಸಲಿಸೆ ಶಿವಲಿಂಗಾರ್ಚನೆಯನೊಲ[೮]ವುಣ್ಮಿ[೯] ಮಾಡುತಿರೆ ೪೫

ಮಂಗಳೋದಯ ಘೋಷಣಂಗಳು
ಸಂಗತಿಯೊಳುಲಿಯಲು ಸುಚಿತ್ತ ಸು
ಸಂಗದಿಂ ಬೆಳಗನ್ನಕಿಂತಾ ಮಿಂಡಸಂಗಯ್ಯ
ಅಂಗನಾಮಣಿ ಕೂರ್ತು ಪರಿಚರಿ
ಯಂಗಳಂ ಮಾಡುತ್ತಿರಲು ತನು
ಪೊಂಗಿ ಲಿಂಗಾವಸರಮಂ ಸಲಿಸಲ್ಕೆ ಪೂರ್ವದಲಿ ೪೬

---

೧ ಠೀ (ಕ, ಚ, ತ, ಥ, ನ, ಪ). ೨–೩ ತರಲು (ಕ, ಚ, ಪ). ೪–೫ ತೆಗೆಯೆ (ತ, ಥ, ನ); ನೆಗೆಯೆ (ಪ). ೬–೭ ಲಳಿಯರೇಖೆಯ (ಮ); ಲಳಿಯ ಠೀವಿಯ (ಥ, ಪ, ಸ). ೮–೯ ವೊಂದಿ (ಥ, ಪ).

CC-0. Jangamwadi Math Collection. Digitized by eGangotri

ಸೂರಿನುತ ಸುಮನೋಹರನ ಪದ
ವಾರಿಯಂ ಮುನ್ನೀಂಟೆ ದಿವ್ಯಶ
ರೀರಿಯಾದೆನು ನಿಖಿಳ ಮಾಹೇಶಪ್ರಸಾದಸುಖಿ
ಸೇರಿದಡೆ ನಾಂ ಕಾಲು ನಿಲ್ಲದ
ನಾರತಂ ತೊಳಲುವ ಬಳಲ್ಕೆ ನಿ
ವಾರವಹುದಿನ್ನೆಂಬವೊಲು ಬಂದಿನನುದಯವಾದ ೪೭

ಜಕ್ಕವಕ್ಕಿಗಳಿಕ್ಕೆಗೊಂಡವು
ಪಕ್ಕಿಗಳು ಗಗನಕ್ಕೆ ನೆಗೆದವು
ಸಿಕ್ಕಿದಳಿ ಹೊಱಿವಂಟವಬ್ಜಂಗಳ ಬಸುಱಿಸೊಳಿರ್ದು
ಉಕ್ಕು ಬಱಿತುದು ಚಂದ್ರಮನ ಮಸು
ಕಿಕ್ಕಿದವು ನೆಯ್ದಿಲುಗಳುಡುಗಳು
ದಿಕ್ಕುಗೆಟ್ಟವು ದೆಸೆದೆಸೆಗೆ ಪದ್ಮಂಗಳರಳಿದವು ೪೮

ಬಸವರಾಜನ ಮಾನಸಕ್ಕಿಂ
ಪೆಸೆಯೆ ಮಿಂಡರದೇವನತಿ ಭರ
ವಸದೊಳೆಯ್ತಂದುಬ್ಬಿ ತಾನಿಂತೆಂದನರ್ಥಿಯಲಿ
ಬಸವ ನಾನೇನೆಂದು ಹೇಳುವೆ
ನಸಮನೇತ್ರನೆ ಬಲ್ಲನೀಯಿರು
ಳೊಸೆದು ಸುಖಿರಸವೊಸರೆ ರತಿಮಿಗೆ ಸೂಳೆಗೆಯ್ದುದನು ೪೯

ಎನ್ನೊಡನೆ ನೀ ಬಾರದಾದೈ
ನಿನ್ನಿನಿರುಳೇನೆಂದಪೆಂ ಬೆಳ
ಗನ್ನಕಂ ಹೊಂದಿದೆನದೊಂದೇ ಛಂದದುರುಸುಖಿವ
ಮುನ್ನವಲ್ಲಿಂ ಸೂಳೆಗೆಯ್ವುತ
ನಿನ್ನುವಂ ನೆನೆದೆನು ಕಣಾ ತ್ರಿಜ
ಗನ್ನುತೋನ್ನತ ಬಸವರಾಜಾ ಭಕ್ತಿಗುಣಬೀಜ ೫೦

೧–೨ ವಿನುತ (ಸ). ೩–೪ ಯೊಸು (ತ,ನ).

CC-0. Jangamwadi Math Collection. Digitized by eGangotri

ಜನಿಯಿಸಿದೆವಲ್ಲದೆ ಧರಿತ್ರಿಯೊ
ಳನಿತು ಪುಣ್ಯ ನಿಜೈಕ್ಯಸೌಖ್ಯವ
ದಿನಿತು ಸೊಬಗಿನ ಸೂಳೆಗೆಯ್ದುದನಱಿಯೆ ನಾನೆಂದು
ಜನನರಹಿತನ ಕರುಣವಿಲ್ಲದ
ಮನುಜರಿಗೆ ದೊರಕುವುದೆ ತಾನಿಂ
ತನವರತಮುಂ ಸೂಳೆಗೆಯ್ದುದನಿರುಳುವುಂ ಹಗಲು ೫೧

ಸಾಂಗದಿಂದಾವಾವ ಯುಗ ಕಾ
ಲಂಗಳೊಳು ನೆಱಿ ಸೂಳೆಗೆಯ್ದ ಫ
ಲಂಗಳಂ ನೀ ಪಡೆದೆ ಹೇಳೈ ಶಿವನ ಕೈಯಿಂದ
ಲಿಂಗ ಜಂಗಮ [೧]ಸಂಪದಮನು[೨]
ತ್ತುಂಗ ಸದುಭಕ್ತಿಪ್ರಭಾವನೆ
ಹಿಂಗದೊಡಗೂಡುವುದೆ ಮತ್ತೊಂದನ್ಯಮಾರ್ಗದಲಿ ೫೨

ಹಿಂದಿನಿರುಳುಂ ಸೂಳೆಗೆಯ್ದುದು
ಸಂದಿಸಿತಲಾ ನಿನ್ನ ಕಾರಣ
ದಿಂದವೆನಗಂ ಬಸವ ನಾಂ ಕಿಱುವರೆಯದಿಂ ತೊ[೩]ಡಗಿ[೪]
ಬಂದಿಹೆನು ಶ್ರೀಗಿರಿಯೊಳಲ್ಲಿಯ
ಮಂದದನುಪಮ ಬಿಲ್ವ ಕದಳೀ
ವೃಂದವನವಾಸಂಗಳೊಳಗೇಕಾಂತವಾಸದೊಳು ೫೩

ನೊಸಲಕಣ್ಣಂಗಾಲಕಣ್ಣು
ಳ್ಳಸಮ ವೀರಗಣಂಗಳೊಳಗೀ[೫]
ಕ್ಷಿಸುವೆನ[೬]ಲ್ಲದೆ[೭] ಕಾಣೆನಿಂತಹ ಲಾಂಛನದ [೮]ರುಷಿ[೯]ಯ
ಮಿಸುಪನುಣ್ಬೆನ ಹಳದಿವಣ್ಣದ
ಭಸಿತಲೇಪದ ಕೆಂಜಡೆಯ ಬೆ
ಳ್ಪಿಸೆದ ರುದ್ರಾಕ್ಷಾವಳಿಯ ಸರ್ವಾಂಗಕಚ್ಚುಟದ ೫೪

೧–೨ ಮಹಿಮೆ ಮಾಮು (ತ); ಸಮ್ಮದದಮು (ಸ). ೩–೪ಳಲಿ (ಬ). ೫ರೀ (ಸ); ನೀ (ಥ, ನ). ೬–೭ಲ್ಲಿಯು (ತ, ನ). ೮–೯ಸತಿ (ತ, ಥ, ನ, ಪ).

CC-0. Jangamwadi Math Collection. Digitized by eGangotri

ಸತಿಯ ವೇಷಂ ಪ್ರೊಸತೆನಿಸಿತೀ
ಕ್ಷಿತಿಯೊಳಂತಾ ಸಮತೆ[೧]ಯಂ ತಾ
ವ್ರತಿಯದಂತಾ[೨] ಲಾಂಛನದ ವೈರಾಗ್ಯದನುಭಾವಿ
ಸತಿಯನೊರ್ವನನುಸುರಲೇಕಾ
ಸತಿಗೆ ಪರಿಚರಿಯಂಗಳಂ ಮಾ
ಡುತಮಿರುತ್ತಿಹ ಸತಿಯರುಂ ಶಿವ[೩]ಲಾಂಛ[೪]ನಾಂಕಿತರು ೫೫

ತರುಣಿಯರ ಮಹಿಮೆಗಳನಂಬಾ
ವರನೆ ಬಲ್ಲನೆನುತ್ತವಾ ಸರ
ಸಿರುಹಮುಖಿಯರ ಲಾಂಛನಂಗಳನಲ್ಲಿ ತಾ ಮಾಳ್ಪ
ವರ ವಿಟತ್ವಮನಂತು ತಪ್ಪದು
ಸುರಲಡಿಗಡಿಗೆ ಬೆಸಗೊಳುತ್ತಂ
ನೆರೆದ ಜಂಗಮವೊರ್ಬರೊರ್ಬರು ಕೈವೊಯಿದು ನಗಲು ೫೬

ಬಸವದಂಡಾಧೀ[೫]ಶನುಂ[೬] ದರ
ಹಸಿತವದನದಿ ಚನ್ನಬಸವನ
ಮುಸುಡನೀಕ್ಷಿಸಿ ಮಿಂಡಸಂಗಯ್ಯಗಳನಂಕಿಸುತ
ಉಸುರ್ದನಿಂತಹ ಲಿಂಗನಿಷ್ಠಾ
ನಿಶಿತಭಕ್ತಿಮಹತ್ವಮಂ ರಂ
ಜಿಸುವ ನಿಜಮುಗ್ಧಸ್ವಭಾವಂ ಸಹಜವಾಯಿತ್ತು ೫೭

ಎಂದುವುಂ ಮನವಚನಕಾಯಕ
ದಿಂದಲೀಶನನಲ್ಲದನ್ಯ[೭]ಶಿವ
ನೊಂ[೮]ದುವಜಿ[೯]ಯದ ಪರಮಭಕ್ತರು ಮುಗ್ಧರುಗಳಲ್ಲ
ಎಂದು ಕೊಂಡಾಡುತ್ತಮಿರಲಾ
ನಂದದಿಂದಂ ಚನ್ನಬಸವಂ
ವಂದಿಸುತ್ತಂ ತನ್ನ ಕರಕಮಳಂಗಳಂ ಮುಗಿದು ೫೮

೧–೨ ಯಂತಹ ವ್ರತದ ನಿಯತದ (ತ, ನ). ೩–೪ ಶಾಸ (ಡಾ). ೫–೬ ಶ್ವರಂ (ಕ, ತ). ೭–೮ ಥವೊಂ (ಸ).

CC-0. Jangamwadi Math Collection. Digitized by eGangotri

ಕರಮೆಸೆವ ನೂತನಪುರಾತನ
ವರಗಣಂಗಳೊಳಿಣಿಸಿ ತೋಱಲು
ಧರೆಯೊಳಿಂತಹ ಮುಗ್ಧ ರೊಳರೇ ಯೆಂದು ಬಿನ್ನೈಸೆ
ಪರಮ ಹರುಷದಿ ಮುಗ್ಧಭಕ್ತರ
ಚರಿತೆಗಳನೊರೆದಪೆನೆನುತ್ತಂ
ವಿರಚಿಸಲು ತೊಡಗಿದನು ಬಸವಂ ಚನ್ನಬಸವಂಗೆ ೫೯

ಅಂತು ಸಂಧಿ ೧೧ಕ್ಕಂ ಪದಗಳು ೬೮೫ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ರುಂಟೇ (ಕ, ಚ, ತ, ಥ, ನ, ಪ).

CC-0. Jangamwadi Math Collection. Digitized by eGangotri

ಸಂಧಿ : ೧೨

*

ಸೂಚನೆ : ಹರನನೊಲಿಸಿದ ಮುಗ್ಧಭಕ್ತರ
ಚರಿತೆಗಳನುಪಲಾಲಿಸುತ ವಿ
ಸ್ತರಿಸಿ ಪೇಳ್ದನು ಬಸವರಾಜನು ಚನ್ನಬಸವಂಗೆ

ಪೃಥಿವಿಗೆಸೆವೆಲವೂರೊಳಗೆ ಮ
ನೃಥಹರಾರ್ಚಕನಚಲಭಕ್ತಿಸು
ಪಥದೊಳಿಪ್ಪನು ರುದ್ರಪಶುಪತಿಯೆಂಬ ಗಣನಾಥ
ಪ್ರಥಮ ಶಿವಮಂದಿರದೊಳೊಂದು
ಪ್ರಥಿತವಾದ ಪುರಾಣದೊಳಮೃತ
ಮಥನಕಥನವನೊರ್ಬ ಕಥಿಕನು ಕಥಿಸುತಿರಲಾಗಿ ೧

ದಿವಿಜದನುಜರು ಕಡೆವುತಿರ್ದು
ತ್ಸವವುಳಿದು ಕೆಟ್ಟೋಡಲಾವಿ
ರ್ಭವಿಸಿ ನಳಿನಭವಾಂಡನಿಚಯಮನುರುಪುತುರವಣಿಸಿ
ಕವಿದ ವಿಷಮಂ ನುಂಗಿದನುಮಾ
ಪ್ರವರನೆನಲಾ ರುದ್ರಪಶುಪತಿ
ಅವರ ನುಡಿಗಳನಾಲಿಸುತ ಬೆಱಗಾಗುತಿಂತೆಂದ ೨

---

* ರಾಗ : ಕನ್ನಡಗೌಳ (ಅ, ಚ, ಡಾ, ಧ, ಮ); ಸೌರಾಷ್ಟ್ರ (ತ).

CC-0. Jangamwadi Math Collection. Digitized by eGangotri

ಆಸಮನೇತ್ರನು ವಿಷವನಾರೋ
ಗಿಸಿದುದುಂಟೇ ಹೇಳು ಹೇಳಿನ
ಲಸಮನೇತ್ರನು ವಿಷವನಾರೋಗಿಸಿದುದುಂಟುಂಟು
ಎಸೆವ ಮೇಲಣ ಕಾರ್ಯಮಂ ಮೇ
ಣುಸುಖಿಲಖಿಯೆವು ನಾವೆನಲು ಕೇ
ಳ್ದನು ಹೆದಖಿ ಹೋ ಕೆಟ್ಟೆನೆನುತಂ ಹಮ್ಮಯಿಸಿ ಬಿದ್ದು ೩

ಪೊರಳಿ ಪೊರಳಿಯಳುತ್ತ ನಿನ್ನಂ
ಮರುಳುಮಾಡಿದರಲ್ಲದೇ ತಾಂ
ಮರುಳರಾಿದಡಿ ವಿಷವನುಂಬರೆ ವಿಷವನುಂಡವರು
ಹರಣವುಳಿದಿಹನಾವನೇವೆನು
ಪರಿಹರವಿದಕ್ಕಾವುದೀ ದು
ರ್ಧರ ವಿಷವು ನಿರ್ವಿಷವದೆಂದಪ್ಪುದೊ ಮಹಾದೇವ ೪

ಆವ ಪರಿಯಲಿ ನಿನ್ನನಲ್ಲದೆ
ಭಾವದೊಳು ಮತ್ತೊಂದನಱಿಯೆನು
ದೇವ ದಿಕ್ಕಾರುಂಟಿನಗೆ ಹಿತವಾಿಗಿಯಾದಡೆಯು
ಈ ವಿಷವನಿಂತುಗುಳಿ ರಕ್ಷಿಸು
ದೇವಿಯರು ನೀವರ್ಧದೇಹದೊ
ಳಾವಗಂ ಬಿಡದಿರ್ಪರೆಲ್ಲಿಗೆ ಹೋದಿರೆಲೆ ತಾಯೆ ೫

ಪ್ರಮಥರಿರ ರುದ್ರಾದಿಗಳಿರಾ
ದಿಮಪುರಾತಗಣಂಗಳಿರ ನೀ
ವಮಿತ ಗಂಗಾವಾಳುಕಾಸಂಖ್ಯಾತರಿರ ಎಮ್ಮ
ಉಮೆಯಂ ನಲ್ಲನು ವಿಷವನುಂಡು
ಭ್ರಮಿಸಿ ಬಿದ್ದಿಬಳಿಕ್ಕ ಕಾವಡೆ
ನಿಮಗೆ ಶಕ್ಯವೆ ಇದಕುಪಾಯವದಾವುದಕಟಕಟ ೬

೧–೨ದರು (ಬ). ೩ರಾ (ತ). ೪ಳ್ದು (ತ, ಥ). ೫ಳ್ದ (ತ, ನ).

CC-0. Jangamwadi Math Collection. Digitized by eGangotri

ಈ[೧] ವಿಷವನಾರೋಗಿಸಿದನಿ
ನ್ನೇವನೆನ್ನಯ ಜೀವಿತೇಶನು
ಜೀವಿಸುವುದರಿದರಿದಲಾ ಎಲೆ ವೀರಭ[೨]ದ್ರಯ್ಯ[೩]
ಸಾವ ತಪ್ಪಿಸಿ ನೀಲಕಂಠನ
ಜೀವಮಂ ಬದುಕಿಸಿರೆ ಸದ್ಗುರು
ದೇವ ಭಕ್ತರ ಹರಕೆಗೊಂಬುದು ಲೇಸು ಲೇಸಯ್ಯ ೭

ಪೊರೆವ ತಾಯಿಗಳಿಲ್ಲದವರಂ
ಸರಕುಗೊಂಬರೆ ತಾಯಿಯುಳ್ಳಡೆ
ದುರುಳ ಗರಳವನೇಕೆ ಸುತನಂ ಕುಡಿಯಲೀಸುವಳು
ಪರಮನೀ ಬಾರಿಗೆ ಬದುಕಿದಡೆ
ಮರಣವಿಲ್ಲೆನ್ನೆಂದಿಗೆಂದಿಗೆ
ನಿರತವೆನುತಂ ರುದ್ರಪಶುಪತಿ ತಾಂ ಪ್ರಳಾಪಿಸುತ ೮

ಈ ವಿಷದ ನುಡಿಗೇಳಲಾಱಿನು
ಜೀವವಂ ತ್ಯಜಿಸುವೆನೆನುತ್ತಂ
ಬಾವಿಯೊಳು ಧುಮ್ಮಿಕ್ಕಿ[೪]ಬಿದ್ದಂತಾತನಂ[೫] ಹಿಡಿದು
ದೇವಿಯರು[೬]ಸಹಿತಪ್ರಮಥ ರು
ದ್ರಾ[೭]ವಳಿಯು ಆಜಹರಿಮುಖಾಖಿಳ
ದೇವರೋಲೈಸಲು ಶಿವಂ ಪ್ರತ್ಯಕ್ಷಮಾಗಿರ್ದು ೯

ಆವುದೈ ನಿನಗಭಿಮತಾರ್ಥಮ
ನೀವೆನೀವೆನು ಬೇಡು ಬೇಡೆನ
ಲಾ ವಿಮಳಮತಿ ರುದ್ರಪಶುಪತಿ ಸಂಭ್ರ[೮]ಮದೊಳಾಗ್[೯]
ದೇವನಡಿಗಳಿಗೆಱಗಿ ಕೈಮುಗಿ
ದಾವುದುಮನಾನೊಲ್ಲೆನೀ ವಿಪ
ಸೇವೆಯಿಂದೇನೇನಹುದೊ ಮೇಣ್ ಕೇಳಲಾಱಿನಿದ ೧೦

---

೧ ಹಾ (ಧ, ಸ). ೨–೩ ದ್ರೇಶ (ಧ, ಸ). ೪–೫ ಕೆಡುವಂತಪ್ಪನಂ (ತ, ನ). ೬–೭ ತಾಂ ಸಹಿತಲಾ ಪ್ರಮಥಾ (ಪ). ೮–೯ ಮಂ ಬೆತ್ತು (ಕ, ಚ, ಥ, ಪ).

CC-0. Jangamwadi Math Collection. Digitized by eGangotri

ಈ ವಿಷವನಿಂ[೧]ತುಗುಳುಗುಳು ನೀ
ನೀವ ಸಾವಿರ ವರಪದಾದಡೆ
ಆವಗಂ ಬಂದಿತ್ತೆನಗೆ ಸಾಕವಧರಿಪುದೆನಲು
ಭಾವದೊಳು ಕರುಣಾರಸಂ ಮಿಗೆ
ತೀವಿ ದರಹಸಿತಾನನಾಬ್ಜದೊ
ಳೋವಿ [೨]ನೋಡುತ ರುದ್ರಪಶುಪತಿಗೀಶನಿಂತೆಂದ[೩] ೧೦

ಇಂತು ಲೋಕದೊಳಿಂಸಲಿಲ್ಲದೆ
ಅಂತು ನುಂಗುವಡುಗುಳುವಡೆ ತಾ
ನೆಂತುಟ್ಟೆ ಅಣುಮಾತ್ರವೆನ್ನಯ ಕಂಠದೊಳೆ ಸಿಕ್ಕಿ
ತುಂತುರಂತದೆ ಹೇಳಲಿಲ್ಲೋ
ರಂತೆ ಸಂತಾಪಿಸದಿ[೪]ರೇನುಂ[೫]
ಚಿಂತಿಸದಿರೆಂದಂ[೬]ಬಿಕಾಪತಿ ಸಂತವಿಸುತಿರಲು ೧೨

ಪರಮಪರಮಾ[೭] ನಂಬಲಾಱಿ[೮]ನು
ಕೊರಳ ಗರಳವದಿನಿತಿನಿತುವೊ
ತ್ತರಿಸಿ ನಿಮ್ಮುದರದೊಳಗಿಳಿದಡತಿ ಪ್ರಮಾದವಲಾ
ಮರುಳನೇ ನಾ ನಿಮ್ಮ ಹರಣಕೆ
ಮು[೯]ರಣಮಂ ತಪ್ಪವನೆ ಯೆನ್ನಯ
ಹರಣಮಂ ಕೊಟ್ಟಾದಡೆಯು ನಿಮ್ಮನು ಬದುಕಿಸುವೆನು ೧೩

ಸಾಯಲೀಯಿರಿ ಎನ್ನನೆಂತುಂ
ಸಾಯಲೀಯದಡುಗುಳು ವಿಷವನು
ಪಾಯವೇನುವನುಸುರದಿರು ಮಿಕ್ಕಿನ ನುಡಿಗಳಿಲ್ಲ
ವಾ[೯]ಯವೇವೆನಿದಕ್ಕೆ ಮುನ್ನವೆ
ಕಾಯವಂ ತೊಱಿ[೩]ದಲ್ಲದಿರೆನೆಂ
ದಾಯುಧವನೊಂದಂ ಪಿಡಿದು ತಾನಿರ್ದನನುವಾಗಿ ೧೪

೧ನಂ (ಧ). ೨–೩ನೋಡಿ ಪಶುಪತಿ ರುದ್ರಪಶುಪತಿಗೆಯಿಂತೆಂದಂ (ತ); ನೋಡಿಮೆ ರುದ್ರನೆಂದನು ರುದ್ರಪಶುಪತಿಗೆ (ಥ); ನೋಡಿಯೆ ರುದ್ರಪಶುಪತಿಗೆಂದನಾ ರುದ್ರ (ಪ). ೪–೫ರಿನ್ನುಂ (ಕ, ಥ, ಪ); ರೆನುತಂ (ನ). ೫–೬ಕಂತುಮರ್ದನವಂ (ಚ). ೭ನಾ (ಥ, ನ); ಮನೆ (ಪ). ೮ಹ (ಕ, ಥ, ನ, ಪ). ೯ಕಾ (ತ, ನ).

CC-0. Jangamwadi Math Collection. Digitized by eGangotri

ಉಗುಳದಿರ್ದಡೆ ಸಾವನೋ ಈ
ವಿಗಡನೆಂದು[೧]ಮ್ಮಳಿಸಿ ವಿಷ[೨] ತಾ
ನು[೩]ಗುಳಲೊಡನಱಿ[೪]ಯಟ್ಟಿ ಸುಡುವುದೊ ತಮ್ಮನೆಂದೆನುತ
ಅಗಧರಾಜೇಂದ್ರಾದಿದೇವರು
ಬೆಗಡಪತ್ತಲು ಪ್ರಮಥರಾತನ
ಬಗೆವ ಭಕ್ತಿಗೆ ಮೆಚ್ಚಿಯಚ್ಚರಿ[೫]ಯಾಗಿ[೬] ನೋಡುತಿರೆ ೧೫

ನಸುನಗುತ ಶಿವನೆತ್ತಿಯಾಲಿಂ
ಗಿಸುತವೆಂದುಂ ಸಾಯೆ ನಾನೀ
ವಿಷದ ಕೈಯಿಂದಂ ಪ್ರಮಥವರರಾಣೆ ನಿನ್ನಾಣೆ
ಹುಸಿವುದಿಲ್ಲೈ ರುದ್ರಪಶುಪತಿ
ಬಸವಳಿಯದಿರು ನಂಬದಿರ್ದಡೆ
ಅಸಿತಗ[೭]ರಳವ[೮] ನೋಡು ಎನ್ನಯ ಬಲದೊಡೆಯನೇಱಿ ೧೬

ಎಂದು ತನ್ನುತ್ಸ[೯]ಂಗಪೀಠದೊ
ಳಂದಿರಿಸಿದನು ಮುಗ್ಧತನವೇ
ನೆಂದೆಣಿಸುವೆನು ಶಿವನನಲ್ಲದೆ ಪೆಱತನಱಿ[೪]ಯದದು
ಮುಂದೆ ಮತ್ತಂ ಶಂಕರನ ಕೊರ
ಳಿಂದ ಮಿಱಿಗುವ ಕಾಳಕೂಟವ
ದೊಂದಿನಿತು ಮಿಡುಕಿದಡೆ ಸಾವೆನೆನುತ್ತ ನಿಶ್ಚಯಿಸಿ ೧೭

ಪೆದರದಂಜದೆ ಕಿತ್ತಕೈದುವ
ನೆದೆಯೊಳಾನಿಸಿಕೊಂಡೆವೆಯನಿ
ಕ್ಕದೆ ಕೊರಳನೀಕ್ಷಿಸುತ ಪಶುಪನ ಬಲದೊಡೆಯ ಮೇಲೆ
ಪದುಳದಿಂ ಕುಳ್ಳಿರ್ದಪಂ ತೊಲ
ಗದೆ ಸತತಮುಂ ರುದ್ರಪಶುಪತಿ
ಒದಗಿಸುವನೀ ಕಥೆಯನೋದುವ[೯]ರಿಂಗಭೀಷ್ಟವನು[೧೦] ೧೮

೧–೨ ಮೆಯುಮ್ಮಳಿಸಿ (ತ, ಥ) ೩ ವು (ತ, ಥ). ೪–೫ ಪಟ್ಟು (ನ). ೬–೭ ಳವಂ (ತ, ಥ, ಪ). ೮ ತ್ತು (ಪ). ೯–೧೦ ರಿಗಭಿಮತವ (ತ, ಥ, ನ, ಪ).

CC-0. Jangamwadi Math Collection. Digitized by eGangotri

ಇಳೆಯೊಳೊಪ್ಪುವ ಶಾಂತಮಂಡಲ
ದೊಳಗೆ ಮತ್ತಂ ಶಂಭುಪೂಜಾ
ಚಲಿತಭಕ್ತನು ನಕ್ಕನಾಯ್ನಾರೆಂಬ ಗಣನೊಬ್ಬ
ಲಲನೆಯುಂ ತಾನುಂ ದಿನಂಪ್ರತಿ
ಒಲಿದು ಶಿವನಂ ಪೂಜಿಪೆಡೆಯಲಿ
ಸೆಲದಿಪ್ಪುವಾ ಲಿಂಗತನುವಂ ಪರ್ಬುತಿರಲೊಡನೆ ೯

ಶಿವಶಿವೇಗುವೆನಿನ್ನು ಹುಗುಳೇ
ಳುವವಲಾ ಶಿವನಂಗವೆನುತಂ
ಶಿವನ ತನುವಂ ನೋಡಿ ತೂತೂ ಎಂದು ತೂಪಿಟ್ಟಿದ
ಯುವತಿಯಂ ಕಂಡಿನಿಯನಾಗ್ರಹ
ವವಗಡಿಸುತಿಂತೆಂದನಿದು ಪಾ
ಪವಹುದೆಂಬ ವಿಚಾರವಿಲ್ಲದೆ ಪಾಪಿ ನೀನೆನ್ನ ೧೦

ಕೂರ್ಪ ನಲ್ಲನ ತನುವಿನೊಳು ತುಂ
ತುರ್ಪನಿಗಳುಗೆ ತೂಪಿಟ್ಟಿವರೇ
ಹಾರ್ಪಿಶಾಚಿಯೆನುತ್ತ ಸತಿಯಂ ತಗುಳ್ದು ತಾನಿರುಳು
ಆರ್ಪನಿತು ಶಿವನಂ ಭಜಿಸೆ ಕಂ
ದರ್ಪದರ್ಪಪ್ರಹರನೊಡಲಲಿ
ಕರ್ಪುರದ ಮಣಿಗಳನನುಕರಿಪ ಹುಗುಳುಗಳು ಮೊಳೆಯೆ ೧೧

ಆಗಳಂಗನೆ ತೂಪಿಟ್ಟಿದ ತನು
ಭಾಗವುಳಿಯಲು ಶಿವನ ಮಿಕ್ಕಿನ
ಭಾಗದೊಳು ಹುಗುಳೇಳಿ ಬೆಬ್ಬೆಱಿಗಾಗಿ ಮನಗುಂದಿ
ಬೇಗದಲಿ ಸತಿಯಿದ್ದ ಠಾವಿಗೆ
ಹೋಗಿ ನಲ್ಲನು ನಲ್ಲಳಿಗೆ ತಲೆ
ವಾಗಿ ವಂದಿಸಿ ವಿನಯದಿಂದಿಂತೆಂದು ಬೋಧಿಸಿದ ೧೨

CC-0. Jangamwadi Math Collection. Digitized by eGangotri

ಪಾಪಿ ಪೋಗೆಂದಂದು ನಿನ್ನಂ
ಕೋಪದಿಂ ನಾಂ ನುಡಿದು ತಗುಳಿದ
ಪಾಪವಂ ಸೈರಿಸುವುದಚಳಿತ ಭಕ್ತಿಯುತೆ ನೀನು
ತೂಪಿಟ್ಟಿದ ಠಾವುಳಿಯೆ ಬಳಿಕಂ
ಬಾಪತಿಯು ಮೆಯ್ಯೊಳು ಹುಗುಳುಗಳು
ಪ್ರಾಪಿ[೧]ಸಿದವತಿ ಪಾಪಿಯಾದೆನಿದಕ್ಕೆ ವಿಧಿಯೇನು ೨೩

ಆಕ್ಕಟಿಂ ಬಂದೆನ್ನ ದೇವನ
ಮಿಕ್ಕ [೨]ತನುವಂ[೩] ತೂಪಿಟ್ಟಿದು ಸ
ಮ್ಯಕ್‌ಕರುಣದಿಂ ಮಾಣಿಸೆನುತಂ ಮತ್ತೆ ಹೊಡವಡಲು
ದಿಕ್ಕನೆಯ್ತಂದಾ ಲಲನೆ ಕಂ
ಡಕ್ಕಟಕಟ ಮದೀಶ್ವರನ ದೇ
ಹಕ್ಕೆ ಸಂಕಟವಾಯ್ತಲಾ ಈ ಹುಗುಳುಗಳು ನೆಗೆದು ೨೪

ಎಂದು ತಗ್ಗು[೪]ವವಿವು ಶಿವಂಗೇ
ನೆಂದು ಹೇಳುವೆನೆನ್ನುವಂ ಪತಿ
ಕೊಂದಡಂ [೫]ಕೊಲ್ಲಲಿ ಎನುತ[೬] ತೂಪಿಟ್ಟಿಯದೆಯ್ದಿದೆನು
ಮಂದಮತಿಯಾದೆನ್ನ ತಪ್ಪಿನೊ
ಳಿಂದು ಹುಗುಳುಗಳೆದ್ದವೀ ಬಾ
ಲೇಂದುಧರನಪ್ಪೆನ್ನ ಜೀವಿತ[೭]ನಾಥ[೮]ನೊಡಲಲ್ಲಿ ೨೫

ಇದನಟ್ಟಿದು ಸೈರಿಸುವೆನೇ ಇ
ನ್ನಿದಕೆ ಮದ್ದಂ ಕಾಣೆನೆಂದುಂ
ಮದನ[೯]ದಹನಂ[೧೦]ಗಾದುದೆನ್ನ ನಿಮಿತ್ತದಿಂದೀಗ
ಇದಟುಪದ್ರವನೆಂತು ನೋಡುವೆ
ನಿದಕೆ ಮುನ್ನವೆ ಸಾವೆನೆನುತಂ
ಸುದತಿ ತನ್ನ ಶಿರಕ್ಕೆ ಮುನಿಯಲ್ಕಾ ಸಮಯದಲ್ಲಿ ೨೬

೧ಪ್ತಿ (ಧ). ೨–೩ದಿಕ್ಕಂ (ತ, ಥ, ನ, ಪ). ೪ವು (ಧ). ೫–೬ಕೊಲಲೆನುತೆ ಮಿಗೆ (ತ, ನ). ೭–೮ತಾತ (ತ). ೯–೧೦ದಳನಂ (ತ, ದ); ಹರನಿಂ (ಥ, ಪ).

CC-0. Jangamwadi Math Collection. Digitized by eGangotri

ಪರಮಭಕ್ತಿಯ ಮುಗ್ಧತನವಂ
ಧರಣಿಯೊಳು ಮೆಱೆದಪೆನೆನುತ್ತಂ
ಹರನನುಪಮಂ ಮೆಚ್ಚಿ ತಾಂ ಪ್ರತ್ಯಕ್ಷಮಾಗಿರ್ದು
ನೆರೆದು ರುದ್ರಪ್ರಮಥಮುಖ್ಯಾ
ಮರನಿಕರವೋಲ್ಕೈಸೆ ಕರುಣಾ
ಸರಸಭರಿತಾಂಬುಧಿಯೊಳೋಲಾಡಿಸುತಮಿರ್ಪರನು ೨೭

ನಿಮಗೆ ಬೇಡಿದ ವರವನೀವೆನು
ಸುಮತಿಗಳಿರಾ ಬೇಡಿ ನೀವೆನೆ
ರಮಣಿಯುಂ ರಮಣನುಮಲರ್ದಷ್ಟಾಂಗದಲಿ ನಮಿಸಿ
ಪ್ರಮಥನಾಥ ಹಿಮಾದ್ರಿಜಾವಿ
ದ್ರುಮಲತಾವೃತಫಲಿತಕಲ್ಪ
ಧ್ರುಮ ಅವಧರಿಸು ನೀವೆ ಸನ್ನಿಧಿಯಾಗಿರಲು ಮುಂದೆ ೨೮

ಇನ್ನು ಮತ್ತೊಂದಂ ಬಯಸಿದಡೆ
ನಿನ್ನ ನಾವೊಲ್ಲದುದಲಾ ಈ
ಬಿನ್ನಣದ ನುಡಿಯಂ ನುಡಿಯದೇ ಚಿತ್ತವಿಪ್ಪುದೆನ್ನ
ಬಿನ್ನಪವನೊಲಿದಾಗಳುಂ ಭವ
ದುನ್ನತಾಂಘ್ರಿಯುಗಸ್ಮರಣಸಂ
ಪನ್ನತೆಯನಿತ್ತುದ್ಧರಿಸು ನಮಗಿದುವೆ ಸಾಕೆನಲು ೨೯

ಅತುಳಿತ ಮಹಾದಾನಿ ಪಶುಪತಿ
ಯತಿಜನಾನಂದಕರನಭವಂ
ಕ್ಷಿತಿಧರೇಂದ್ರಸುತಾಸ್ಯಶತದಳಮದಮಧುವ್ರತನು
ಸತಿಪತಿಗಳಿಬ್ಬರನನಾರತ
ಅತಿ ದಯಾಲೋಕನದಿನೀಕ್ಷಿಸಿ
ವಿತತ ಮೋಕ್ಷಾನುಭವಸೌಖ್ಯವನಿತ್ತು ಸಲಹಿದನು ೩೦

ಅಂತು ಸಂಧಿ ೧೨ಕ್ಕಂ ಪದಗಳು ೭೧೫ಕ್ಕಂ
ಮಂಗಲಂ ಮಹಾಶ್ರೀಶ್ರೀಶ್ರೀ

೨-೨ ಮೇಲೆ (ಕ. ಚ. ತ. ಥ, ನ, ಪ). ೩–೪ ಗಿಂತು (ಕ, ಥ, ಪ).

CC-0. Jangamwadi Math Collection. Digitized by eGangotri

ಸಂಧಿ : ೧೩

*

ಸೂಚನೆ : ಕನ್ನೆ ತಂದಿತ್ತನ್ನೆವಾಲಂ
ಮುನ್ನವೀಂಟುತ ಕಲ್ಲಿನಾಥಂ
ತನ್ನುದರದೊಳಗಿರಿಸಿದಂ ಕೋಳೂರ ಕೊಡಗೂಸ

ಧಾರುಣೀವಳಯದೊಳೆಸೆವ ಕೋ
ಳೂರೊಳುತ್ತಮ ಶೈವಧರ್ಮಾ
ಚಾರನೊರ್ಬ ಶಿವಾರ್ಚಕಂ ಶಿವದೇವನೆಂಬಾತ
ನಾರಿಯುಂ ತಾನುಂ ಕಪಿಲಗೋ
ಕ್ಷೀರವೊಬ್ಬಳವಂ ಶಿವಂಗವ
ಧಾರೆನುತ್ತರ್ಪಿಸಿ ದಿನಂಪ್ರತಿಯಿಂದೆ ಭಜಿಸುತ್ತ ೧

ಒಂದು ದಿವಸಂ ದೇವಕಾರ್ಯ
ಕ್ಕೆಂದು ನೆರೆಯೂರಿಂಗೆ ಪೋಗುತ
ತಂದೆ ತನ್ನಯ ಕಿಱಿಯ ಮಗಳಂ ಕರೆದು ಮೈದಡವಿ
ಮಂದಿರದ ಕಾಪಿರಿಸಿ ಮತ್ತಿಂ
ತೆಂದನೆಲ್ಲಿಗೆ ಮಿಸುಕದಿರು ಮನೆ
ಯಿಂದಗಲದಿರು ತರುವಲಿಗಳೊಡನಾಡದಿರು ತಾಯೆ ೨

---

* ರಾಗ : ಮಧುಮಾಧವಿ (ಧ); ಭೂಪಾಳಿ (ತ).

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 1018
CC-0. Jangamwadi Math Collection. Digitized by eGangotri

ನಿರುತವಾದೆಮ್ಮ ವ್ರತವನಂ
ತರಿಸದೊಬ್ಬಳ ಹಾಲನಗಜಾ
ವರ[೧]ನಿವಾಸ[೨]ಕ್ಕೊಯ್ದು ಶಂಭುವಿಗುಣಬಡಿಸು [೩]ಕಂಡೌಳ
ಪರಿವಿಡಿಯ ದಿನವೇಳೆದಪ್ಪಿಸ
ದಿರು ಮಱಿ[೪]ಯದಿರು ನೀನಲಸದಿರು
ತರಳೆ ನಿನ್ನಂ ನಂಬಿ ಹೋದಹೆವಕ್ಕ ಚನ್ನಕ್ಕ ೩

ಓಲೆ ಚೌಕುಳಿ ಕಡುಕು ಮೂಕುತಿ
[೫]ತಾಲಿ[೬] ಕಡಗಂ ಬಣ್ಣಸರವುಂ
ತೋಳಬಂದಿಯೆನಿಪ್ಪ ಚಲ್ವಿನ ಬಾಲದೊಡಿಗೆಗಳ
ಬಾಲೆಯರು ಹಿಡಿದಾಡುವೊಳ್ಪಿಹ
ಕೀಲಬೊಂಬೆಯನದಱುಡುಗೆಯಂ
ಬಾಲೆ ತಂದಪೆವೆನುತ ಮನೆಯಿಂದಪ್ಪಯಿಸಿ ಹೋಗೆ ೪

ಇಂತು ವರ ಕೊಡಗೂಸು ಆಗಳೆ
ದಂತಧಾವನಗೆಯ್ದು ಮಿಂದೊಲ
ವಾಂತು ದಣಿಬವನುಟ್ಟು ಭಸಿತವನಿಟ್ಟು ಭಾಳದಲಿ
ಕಾಂತೆ ಮಡಗಿದ ಜನ್ನಿಗೆಯ ಪಾ
ಲಂ ತೆಗೆದು ಚನ್ನಾಗಿ ಕಾಸಿದ
ನಂತರದೊಳಾ ತರುಣಿಯೊಬ್ಬಳವಳೆದು ಬಟ್ಟಲಲಿ ೫

ಹಿಡಿದುಕೊಂಡು ಸೆಱಿಂಗಿನಿಂದಿ
ಮ್ಮಡಿಸಿ ಮುಚ್ಚಿ ಕಡಂಗಿ ಭೋರನೆ
ನಡೆದು ಪೊಕ್ಕಾ ದೇಗುಲದೊಳಿಪ್ಪಭವನಂ ಕಂಡು
ಹೊಡವಡುತ್ತಂ ಬಟ್ಟಲಂ ಮುಂ
ಗಡೆಯೊಳಿಟ್ಟಾರೋಗಿಸೈಯೆ
ನ್ನೊಡೆಯನೇ ಗುರು ಕಲ್ಲಿನಾಥಾ ಎಂದು ಬಿನ್ನೈಸಿ ೬

೧–೨ ನ ನಿಳಯ (ತ, ಥ, ಪ). ೩–೪ ಕಂದಾ (ಕ, ಥ, ಪ). ೫–೬ ತಾಳಿ (ಡಾ, ಆ, ಥ, ಪ, ಮ). ಕ್ಕಾಲ (ಬ).

CC-0. Jangamwadi Math Collection. Digitized by eGangotri

ಒಂದಿನಿತು ಹಿಮ್ಮೆಟ್ಟಿ ಮಱೆಯಲಿ
ನಿಂದು ಮತ್ತೆಯ್ತಂದು ನೋಡಲು
ಮುಂದೆ ಬಟ್ಟಲು ತರುಣಿ ತಾ ಮುನ್ನಿರಿಸಿದಂತಿರಲು
ಕುಂದಿ ಮನದೊಳು ತಾಪದಿಂ ತನು
ಕಂದಿ ಎಲೆ ನಾ ತಂದ ಪಾಲಂ
ತಂದೆ ನೀನಾರೋಗಿಸದ ಕಾರಣವದೇನಯ್ಯ ೭

ಹಾಲು ಕಾಯವೊ ಪರಿಮಳಿಸವೋ
ಹಾಲು ಕಡುಬಿಸಿಯಾದವೋ ಚಿಲು
ಪಾಲಿವಲ್ಲವೊ ಒಡೆದವೋ ಆರೋಗಿಸುವಡಿನ್ನು
ವೇಳೆಯಾಗದೊ ನಿನ್ನ ಮೀಸಲ
ಹಾಲು ಬೀಸರವಾಯಿತೋ ನಾ
ಬಾಲೆಯೆಂದೊಲ್ಲೆಯೊ ತರಲ್ಕಾರಕ್ಕೆ ನೋಡಿದರೋ ೮

ಬಟ್ಟಲಂ ಬೆಳಗೆನೊ ಮನವ ನಾ
ನಿಟ್ಟೆನೋ ಪಾಲಿಂಗೆ ಪಾಲ್ಕೆನೆ
ಗಟ್ಟವೋ ನೀರ್ವೆರಸಿದವೊ ಆರೋಗಿಸುವ ಬುದ್ಧಿ
ಹುಟ್ಟದೋ ಸೀಯಿತ್ತೊ ತುಪ್ಪವ
ನಟ್ಟೆನೆಂದೋ ಕುಡಿಯಲಱಿಯೋ
ಹೊಟ್ಟೆಗೆಯ್ವವೊ ಮಧುರವಿಲ್ಲವೊ ಹೊತ್ತು ಹೋಯಿತ್ತೋ ೯

ಬೇಕು ಬೇಡೆಂದುಸುರಲೊಲ್ಲೆಯ
ದೇಕೆ ಪಾಲಂ ಕುಡಿಯೆ ಕರೆಯಲು
ಮೂಕನೇ ಮಾರ್ನುಡಿಯೆ ನೀಂ ದಿಟವಾಗಿ ಹಸಿಯದಡೆ
ಓಕರಿಸದೊಕ್ಕುಡಿತೆಗೊಂಡಡೆ
ಸಾಕು ಮಿಕ್ಕಿನ ಹಾಲನಿರಿಸು ಪಿ
ನಾಕಿ ತಹೆನೇ ಉಂಬಡಟ್ಟೋಗರವನೊಂದಿನಿತ ೧೦

CC-0. Jangamwadi Math Collection. Digitized by eGangotri

ಮನೆಯ ಬೋನದ ಭಾಜನದೊಳಿನಿ
ದೆನಿಪ ಹೂರಿಗೆ ಘಾರಿಗೆಗಳಂ
ನಿನಗೆ ಮೆಲುವಡೆ ತಂದುಕೊಡುವೆನು ಕಳುಹು ನೀನೆನ್ನ
ಮನಕೆ ಬಂದಡೆ ತುಪ್ಪವದೆ ನೆಲ
ಹಿನ ಗಡಿಗೆಯಲಿ ಮಡಗಿ ಬೇಕಾ
ದನಿತನಾದಡೆ ತಂದಪೆಂ ನಿನಗಿಷ್ಟವೇಂ ಪೇಳು ೧೦

ಹರವಿಯಲಿ ಬೈಚಿಟ್ಟ ಪೊಸಸ
ಕ್ಕರೆಯನೊಲಿವಡೆ ಹೋಗಿ ತಹೆನೇ
ಗುರುಮಠದೊಳೆಮ್ಮಯ್ಯಗಳ ಪರ್ಬಕ್ಕೆ ನಾಳಿರ್ದು
ಕರೆಯಬಹೆ ನಾ ನಿನ್ನನಾಯವ
ಸರಕೆ ತೇರಸ ವೀರ ಷೋಡಶ
ವರ ಗಣಾರ್ಚನೆಗೆಯ್ದಿ ನೋಡುವವವಧರಿಸು ಪಾಲ ೧೧

ಎನ್ನ ಶಿವಸೋದರಿಯ ಮಠದಲಿ
ಚನ್ನ ಪಾಯಸವುಂಟು ಬೇಕೆಂ
ದೆನ್ನು ನಿನಗಾನೆಯ್ದಿ ತಂದಪೆನೆಲೆ ಮಹಾದೇವ
ಮುನ್ನ ನೀನೀ ಪಾಲನೀಂಟೈ
ನಿನ್ನ ಮೆಚ್ಚಿನ ಹೆಸರಹುಗ್ಗಿಯ
ದಂ ನಿರೂಪಿಸು ಮಹಮನೆಯೊಳದೆ ಕೊಡುವೆನೈ ತಂದು ೧೨

ವೀರಭದ್ರನ ಹಲಗೆ ಮೆಱಿವುದು
ವೀರಭಕ್ತರ ತಿಂಥಿಣಿಯೊಳತಿ
ವೀರವಂ ತೋಱಿದಪೆನೇಳಾರೋಗಿಸೈ ಪಾಲ
ಕ್ಷೀರದೊಳಯಿಂಕವಲನಾದಡೆ
ತಾರೆನೇ ಬೇಕೆಂದಡಂ ಶಿಶು
ಹಾರಿಯಹಳಿಂದೆನ್ನದಿರು ನಾ ಉಸುರುವೊಂದಾಗಿ ೧೩

---

೧ ಮೆ (ನ)

CC-0. Jangamwadi Math Collection. Digitized by eGangotri

ಚಿಗುಳಿ ಚಕ್ಕುಲಿ ಹಾಲವುಗ ಮಂ
ಡಗೆ ತಱಿಗುವಿಡ್ಡಲಿಗೆಯುಂ ಲ
ಡ್ಡುಗೆ ಕಳವೆಯವಲಾದಿಯಾದ ಪಲವು ಫಲಂಗಳನು
ನಿಗಳ ಉಂಗುರ ಗೆಜ್ಜೆ ಪೊನ್ನಂ
ದುಗೆ ಪವಳಮಂ ಮುತ್ತು ಪೊಸ ಱವ
ಕಿಗೆ ಕಿಱಿಗೆಯುಂ ಬೊಂಬೆದೊಟ್ಪಿಲು ಮೊದಲಿವೆಲ್ಲವನು ೧೫

ತಂದುಕೊಡುವರು ನಾಳೆಯೆಮ್ಮಯ
ತಂದೆತಾಯಿಗಳೆನಗಿವೆಲ್ಲವ
ತಂದುಕೊಡುವೆನು ನಾ ನಿನಗೆ ಹುಸಿಯಲ್ಲ ನಿನ್ನಾಣೆ
ಮುಂದೆ ಬಟ್ಪಲೊಳಿರ್ದ ಪಾಲಂ
ಚಂದವಳಿಯದ ಮುನ್ನ ಕುಡಿಯೈ
ಇಂದುಧರ ಎನ್ನೊಡನೆ ನುಡಿಯದೆ ಕಾಡಲೇಕೆನುತ ೧೬

ಹಸುಳೆ ಹೊಡವಡುಗಿಡಿಗಡಿಗೆ ಕೋ
ಪಿಸುಗು ಸಂತಾಪಿಸುಗಳುಗು ಗುಂ
ಪಿಸುಗು ಮೃಡನೊಡನೆರಡು ಕೈಯಂ ಜಡಿಜಡಿದು ಬಿದಿರ್ದು
ಹಸಿದು ಬಳಕುಗು ತಟತಟನೆ ತಾ
ಟಿಸುಗಡಿಗಳಂ ಪೊಡವಿಯೊಳು ಹೊಸೆ
ಹೊಸೆದುಕೊಳುಗಂತಸಿಯ ಬಸುಱಿಂ ಬಸವಳಿಗು ಸುಯ್ಗು ೧೭

ಬಟ್ಪಲಂ ನೋಡುಗುಮಭಪನಂ
ದಿಟ್ಪಿಸುಗು ನೆಱಿ ನಂಬಿಸುಗು ಮರ
ವಟ್ಟು ನಿರ್ಜೀವಿಯ ತೆಱಿದೊಳಿರ್ದಂತಿರುತ್ತಳುಗು
ದಟ್ಪಿಸುಗು ತೊಪ್ಪನೆ ಕೆಡೆಗು ದನಿ
ಗೊಟ್ಟು ಕರೆದು ಕರಂ ಮುಗಿದು ಹೊಡ
ವಟ್ಟು ಗಿಣ್ಣಲನಂತು ನೂಕುಗು ಮತ್ತೆ ಮುಂದಿಡುಗು ೧೮

---

೧೪ (ಕ).

CC-0. Jangamwadi Math Collection. Digitized by eGangotri

ಮೃಡನಡಿಗೆ ಹೊಡವಡುಗು ಪಾಲಂ
ಕುಡಿಯದಿರ್ದಡೆ ನೋಡಿ ಕಡು ಸಿಡಿ
ಮಿಡಿಗೊಳುತ್ತೋರಂತೆ ಚಿಂತಿಸುತಿರ್ಕು ಕೊಡಗೂಸು
ಬಡಮಿಗುವೆ ನಾನೆಂದು ಕಾಡುವ
ಡೊಡೆಯ ನಿಮ್ಮುವನೇನನೆಂಬೆನು
ಕಡೆಗೆಯಾರೋಗಿಸಿದಡಲ್ಲದೆ ಬಿಡೆನು ನಿಮ್ಮಾಣೆ ೧೯

ಹಾಲನೀಗಳೆ ಕುಡಿಯದಿರ್ದಡೆ
ಕೇಳಿ ಎಮ್ಮವರೆನ್ನನಾಗಳೆ
ಬೀಳಸದೆದಸುಗಳೆವರಿನ್ನವರಿಂದಲುಂ ನನಗೆ
ಮೇಲದೆಂತುಂ ಸಾವು ತಪ್ಪದು
ಶೂಲಿ ಚಿತ್ತೈಸಯ್ಯ ಹಿಂದಕೆ
ಕಾಲನಿಕ್ಕುವಳಲ್ಲ ಇಲ್ಲಿಯೆ ಸತ್ತು ಸರಿಯಹೆನು ೨೦

ಎಂದು ಶಿವನೊಳು ತನ್ನ ತಲೆಯಂ
ನಿಂದು ತಾಟಿಸಿಕೊಳುವನಿತಟಿಲಿ
ನಂದನೆಯನಾಗಳೆ ಹಿಡಿದು ದರಹಸಿತ ಮುಖಿನಾಗಿ
ಇಂದುಮೌಳಿ ದಯಾಳು ಭಕ್ತಾ
ನಂದಕರನಘವೈರಿ ಬಾಲಕಿ
ತಂದ ಬಟ್ಟಲ ಹಾಲನೀಂಟಲು ತತ್ತರುಣಿ ನಗುತಳ್ ೨೧

ಕಿಱಿಯಳಿವಳೆಂದೆನ್ನುವಂ ನೀಂ
ಬಱಿದೆ ಕಾಡದಿರೆಮ್ಮ ಬೊಪ್ಪಂ
ಗಱುಹಿಯೆಲ್ಲಾ ನಿನಗೆ ಎನಗಂ ಮತ್ತೆ ಸಂವಾದ
ಮಱಿಯದಿರು ಕಱಿಕಂಠ ಎನುತಿಂ
ತೊಱಿಲಿ ಬಟ್ಟಲನೀಸಿಕೊಂಡೆ
ಚ್ಚಱಿಸಿ ನಿಚ್ಚಂ ಹಾಲನೀಯಲು ಶಿವನವಧರಿಸಲು ೨೨

೧–೨ ಗಳು (ಡಾ. ಆ). ೩–೪ ತರುಣಿ ನಗುತಾಗ (ಸ).

CC-0. Jangamwadi Math Collection. Digitized by eGangotri

ಈ ಪ್ರಕಾರದಿ ಮನೆಗೆ ಹೋಗಿ ದಿ
ನಂಪ್ರತಿಯೊಳಾ ಬಾಲೆಯತ್ಯಂ
ತ ಪ್ರಯತ್ನದಿ ಜನ್ನಿಗೆಯ ಹಾಲಂ ಕಱಿದು ಕಾಸಿ
ಕ್ಷಿಪ್ರದಿಂದಂ ತಂದುಕೊಡಲಂ
ಬಾಪ್ರವರನುಂ [೧]ಕೊಳುತಿರಲು[೨] ಚಿ
ತ್ತಪ್ರಿಯದೊಳಾ ಬಱಿಯ ಬಟ್ಟಲನಬಳೆ ಹಿಡಿತರಲು ೨೩

ಆತ್ತಲೂರಿಗೆ ಹೋದವರು ತಾ
ವಿತ್ತ ಮನೆಗೆಯಿತರುತಲಿದಿರೊಳು
ತತ್ತರುಣಿಯಂ ಕಂಡು ಪಿತ[೩]ನಾಗ್ರಹಿಸುತಿಂತೆಂದ
ಎತ್ತಲೆಯ್ದಿದೆ ಹಾಲನಿಂತಾ
ರ್ಗಿತ್ತೆ [೪]ತರುವಲಿ[೫] ಬಱಿಯ ಬಟ್ಟಲ
ನೆತ್ತಿಕೊಂಡೆಲ್ಲಿರ್ದು ಬಂದಪೆ ಹೇಳು ಹೇಳೆನಲು ೨೪

ನೀವು ಹೇಳಿದ [೬]ಹಾಂಗೆ[೭] ಮನೆಯಿಂ
ದಾವಾಗಂ ತಂದಣ್ಣೆವಾಲಂ
ತೀವಿ ಬಟ್ಟಲೊಳೊಬ್ಬಳವನಿಂತಳೆದುಕೊಂಡೊಯ್ದು
ಈವೆನೀಯಲೊಡಂ ಮೃಡಂ ಕಲಿ
ದೇವನಾರೋಗಿಸೆ ನಮಿಸಿ ನಲ
ವೋವಿ ಗಿಣ್ಣಲನೀಸಿಕೊಂಡೆಯಿತಪ್ಪೆ ನಾನೆನಲು ೨೫

ಕ್ಷೀರವಂ ಸೇವಿಸುವ ನೇಮದ
ನಾರಿಯೆಂದುಂ ಕಾಳುನುಡಿದೆ ವಿ
ಕಾರಿ ತರುವಲಿ ನೀನೆ ಕುಡಿದೆಯೊ ನಿನ್ನ ಸಂಗಡದ
[೮]ಓರ[೯]ಗೆಯ ಮಕ್ಕಳಿಗೆ ಕೊಟ್ಟೆಯೊ
ಆರು ಕೊಂಡರು ಹೇಳು ನಡೆವುತ
ದಾರಿಯಲಿ ಕೆಡಹಿದೆಯೊ ಮೈಮಱಿದೆಲ್ಲಿ ಚೆಲ್ಲಿದೆಯೋ ೨೬

೧–೨ ಸೇವಿಸಲು (ಡಾ). ೩–೪ ನಿಂತೆಂದನಾಗ್ರಹಿಸಿ (ತ, ಥ, ಪ). ೫–೬ ಪೈದತಿ (ತ, ಥ, ನ, ಪ). ೭–೮ ತೆಱಿದಿ (ತ, ನ). ೯–೧೦ ವಾರಿ (ಪ, ಸ).

CC-0. Jangamwadi Math Collection. Digitized by eGangotri

ಅಸಮಮಾಹೇಶ್ವರರನುದ್ದೇ
ಶಿಸಿ ಮಹಾಶಿವಲಿಂಗವಾರೋ
ಗಿಸಿತೆನುತ್ತತಿ ಭಕ್ತಿಯಿಂ ಪ್ರಾರ್ಥಿಸುತ ವಂದಿಸಲು
ಒಸೆದು ತಾನಿಂತಭವನಾರೋ
ಗಿಸುವದಿದು ದುರ್ಲಭವೆನಲ್ಕೀ
[೧]ಶಿಶುವಿನಿಂ[೨]ದಾರೋಗಿಪನೆ [೩]ಇದು ಹುಸಿಯೆನುತ ಬೈದು ೨೭

ನಾವಿದಂ ನೋಡುವೆವೆನುತ ಶಿವ
ದೇವನಾ ಮಱುದಿವಸವಬಳೆಯ
ನಾ ವಿಧದೊಳೊಬ್ಬಳವಳೆದು ಪಾಲ್ಪಟ್ಟಲಂ ಕೊಟ್ಟು
ದೇವನಿಳಯಕೆ ಕಳುಹುತಂ ಮೇಣ್
ತಾವು ಹಿಂದೆ ತನೂಜೆ ಮುಂದೆಯು
ಮಾವರನ ಸಮ್ಮುಖಿಕೆ ನಡೆತಂದಾಗ ನೀಡಲ್ಕೆ ೨೮

ಕೊಟ್ಟ ಪಾಲಂ ಕಲ್ಲಿನಾಥಂ
ಮುಟ್ಟಿದಾದನದೇಕೆ [೪]ಬಾಲೆಯ[೫]
ಘಟ್ಟಿಯಹ ಮುಗ್ಧಸ್ವಭಾವವನಬಳಭಕ್ತಿಯನು
ನೆಟ್ಟನೀ ಲೋಕಕ್ಕೆ ತೋಱಿಲ್
ಪಟ್ಟಿರಲು [೬]ಬಗೆದ[೭]ನಿತಱಿಲಿ ಕ
ಣ್ಬೆಟ್ಟು ನೋಡುತ್ತಾಗ್ರಹಿಸುತಂ ತಂದೆಯಿಂತೆಂದ ೨೯

ಎಲಗೆ ತರುವಲಿ ಮೂಲಹಾಲಂ
ಸಲೆಯಭವನಿಂದೇಕೆವೊಲ್ಲನು
ಹಲವ ಗಳಹಿದೆ ಮುಟ್ಟಿದನೆ ಪಾಲ್ ಮೂಸಿನೋಡಿದನೆ
ಮಲಹರಂಗುಣ್ಣಿಸಿದ ಪಾಲಂ
ನಲಿದು ನಿಚ್ಚಂ ಕುಡಿದ ಪಾತಕಿ
ತಲೆಯನಟ್ಟಿಯೊ[೮]ಳಿತ್ತಿ[೯] ಬಿಸುಡದೆ ಮಾಣ್ಬೆನೇ ನಿನ್ನ ೩೦

೧–೨ ಹಸುಳೆಯಿಂ (ಬ). ೩–೪ ಬಳಿಕ (ಸ). ೫–೬ ಬಟ್ಟು (ಚ, ತ, ಥ, ನ, ಪ, ಮ).

CC-0. Jangamwadi Math Collection. Digitized by eGangotri

ಎನ್ನ ಬಾರಿಯೊಳೆಂತು [೨]ಬದು[೩]ಕುವೆ
ಛಿನ್ನಛಿನ್ನಂ ಮಾಡುವೆನು ನಾ
ನಿನ್ನನೆನುತತಿ ಕೋಪದಿಂದಱಿಯಟ್ಟಿ ಬರೆ ಮುನ್ನ
ಕನ್ನೆಯೊಱಿಲುತ ಹಾ ಶಿವಾ ಹಾ
ಪನ್ನಗಾಧಿಪಹಾರ ಹಾ ಎನ
ಗಿನ್ನು ಗತಿ ನೀನೊಬ್ಬನೆನುತಂ ಸಾರ್ದಿರಲು ಮುಂದೆ ೩೧

ಕೈಯ ಬಟ್ಟಲ ಹಾಲಿಗಂ ತಾಂ
ಕೈಯ ನೀಡುತ್ತೀಂಟೆ ಬಾಲಕಿ
ಆಯ್ಯನಂ [೪]ಬಿಟ್ಟೋದಱಿ[೫]ಲೋಹೋ ಅಂಜಬೇಡೆನುತ
ಮೈಯನೊರಸುತ್ತಪ್ಪಿ ಅಭಯದ
ಕೈಯ ನೀಡುತ್ತುದರಮಂ ಬಗಿ
ದೊಯ್ಯನೊಯ್ಯನೆ ತತ್ತರುಣಿಯಂ ಪ್ರೊಗಿಸುತಿರಲೊಡನೆ ೩೨

ಆ ಹೊಗುವಳೀ ಹೊಗುವಳದೆಯಿದೆ
ಹೋಹಳೆಂದತಿ ಶೀಘ್ರದಲಿ ನಿರ್
ಮೋಹದಲಿ ಪಿತನೆಯ್ದಿ ಚಂಡಿಕೆಯಂ [೬]ಪಿಡಿದುಕೊಳಲು[೭]
ಆಹ ಶಿವಿ ಹೊಱಿಗುಳಿದುದಬಳೆಯ
ದೇಹವಾ ಲಿಂಗದೊಳು ಸಿಕ್ಕಿದು
ದೀ ಹದನನಱಿ[೮]ದೆಲ್ಲರುಂ ಗುಡಿಗಟ್ಟಿ ಕೊಂಡಾಡೆ ೩೩

ಪ್ರಕಟವಿದು ಮುಂಗೈಯ ಕಡಗಕೆ
ಮುಕುರವೇತಕೆ ಬೆಳೆವ್ರತಿಹ ಚೆಂ
ಡಿಕೆಯ ಕೂದಲನಾಜ್ಞಾತಿಂಗಳಿಗೊಮ್ಮೆ ಕತ್ತರಿಸಿ
ಆಕುಟಿಲ ಸ್ಫುಟ ಮುಗ್ಧಭಕ್ತಿಗೆ
ಸುಕರಮೆನೆ ಕೊಡಗೂಸು ನೆಗಳ್ದೀ
ಸುಕಥೆಯಂ ಕೇಳ್ದ ಪರಿಗಭಿಮತ ಸೌಖ್ಯವೊಂದುವುದು ೩೪

ಅಂತು ಸಂಧಿ ೧೩ಕ್ಕಂ ಪದಗಳು ೭೪೯ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

೧ಧೆ (ಸ). ೨–೩ ಮಿಸು (ಅ, ಡಾ, ತ, ಮ). ೪–೫ ಬಿಟ್ಟೋಡ (ಥ, ಧ, ಪ).
೬–೭ ಪಿಡಿಯಲೊಡನೆ (ಸ).

CC-0. Jangamwadi Math Collection. Digitized by eGangotri

ಸಂಧಿ : ೧೪

*

ಸೂಚನೆ : ತಾಯಿಯಿಲ್ಲೆಂದಱಿದು ತನ್ನಂ
ತಾಯಿಯೋಪಾದಿಯಲಿ ಸಾಕಿದ
ತಾಯಿಯಾದಮ್ಮವ್ವೆಯಂ ಮೆಱಿದಂ ಮಹೇಶ್ವರನು

ಧರಣಿಯೊಳು ಕೇಳ್ ಮತ್ತೆಯುಂ ಶಿವ
ಚರಣಸಂಸ್ಮರಣಾಂಚಿತಾಂತಃ
ಕರಣಸಜ್ಜನಭಕ್ತಿಯೆನಿಪಳು ಬಿಜ್ಜಮಹದೇವಿ
ಪುರಹರಂಗಿಂತಾವಕಾಲಂ
ತರುಣಿಯರು ಸುತ ಬಾಂಧವರ್ಕಳು
ಪರಿಪರಿಯೊಳಿಲ್ಲಾ ನಿಯೋಗದವರ್ಗಳುಂಟಾಗಿ ೧

ಜನನಿಯಿಲ್ಲದುದದು ವಿಚಿತ್ರಂ
ಜನನಿಯಿಲ್ಲದಡೆಂತು ಒಗೆದಂ
ಜನನಿ ಸತ್ತಳೊ ತಾಂ ಪಿನಾಕಿಗೆ ಏನ ಮಾಡುವೆನು
ಜನನಿ ಸತ್ತ ಬಳಿಕ್ಕಲಾ ತಾಂ
ನಿನಿತು ಬಡವಾಗಿರ್ದಿನಯ್ಯೋ
ಜನನಿ ಸತ್ತಡೆ ದುಃಖವಿಲ್ಲದರಾರು ಲೋಕದಲಿ ೨

---

* ರಾಗ : ಗುಜ್ಜರಿ (ಧ); ಲಲಿತೆ (ತ). ೧ನಾ (ತ, ಥ, ನ, ಪ). ೨ರ್ದೆ (ತ, ಥ, ನ, ಪ).

CC-0. Jangamwadi Math Collection. Digitized by eGangotri

ತಾಯಿ ತಪಸಿಯನಾಗಲೀವಳೆ
ತಾಯಿಯಿರೆ ಜಿಡೆಗಟ್ಟುವುದೆ ತಲೆ
ತಾಯಿ ಮಗನನದೇಕೆ ವಿಷವಂ ಕುಡಿಯಲೀಸುವಳು
ತಾಯಿ ಉಡಲೀಸುವಳೆ ತೊಗಲಂ
ತಾಯಿ ತೊಡಲೀಸುವಳೆ ಫಣಿಗಳ
ತಾಯಿಯುಳ್ಳಡೆ ಭಸ್ಮದೊಳಗಿರಲೀಸುವಳೆ ತನ್ನ ೩

ತಾಯಿ ಮಗನಂ ತಿರಿಯಲೀವಳೆ
ತಾಯಿ ಮರುಳ್ಗಳೊಳಾಡಲೀವಳೆ
ತಾಯಿಯಿದ್ದಡೆ ಮಸಣಗಾಡಿಗೆ ಕಳುಹುವಳೆ ಮಗನ
ತಾಯಿ ಎಲುವಂ ಧರಿಸಲೀವಳೆ
ತಾಯಿಯಿಲ್ಲದ ತನಯನಾಗಿ ಆ
ಪಾಯದಿಂದವರಿವರೊಳುಂಡುಟ್ಟೀ ವಿಧಿಗೆ ಬಂದ ೪

ಒಡನೊಡನೆ ಮೊಲೆಯೂಡಿ ನಿಚ್ಚಂ
ಕಡೆದ ಬೆಣ್ಣೆಯನಿಕ್ಕಿ ಹಾಲಂ
ಕುಡಿಯಲೆಱೆದುಱಿ ಪಸಿಯದಂತಿರೆ ಹೊಟ್ಟೆಯಂ ನೋಡಿ
ಬಿಡದೆ ಸಾಗಿಸುತಿರ್ಪ ತಾಯು
ಳ್ಳಡೆ ಸುತಂ ತಾನೆಷ್ಟು ಬೆಳೆವನೊ
ಹುಡುಗನಾಗಿಸಿತುದ್ದವಾದನು ಮಾತೆಯಿಲ್ಲದೆಯು ೫

ಮದುವೆಯೊಳು ನೋಂಪಿಗಳೊಳುಂ ಪ
ರ್ಬದೊಳುಚಿತ ಶೋಭನದಿನಂಗಳೊ
ಳೊದಗಿಬಂದಡೆ ಮೀಯಲೆಱೆದುಣಲಿಕ್ಕಿ ಉಡಲಿತ್ತು
ಮುದವನೆಯ್ದಿಸುವಡೆ ಜನನಿಯಿ
ಲ್ಲದಡೆಯೆಂತಹ ಸುತರು ಉಮ್ಮಳಿ
ಸದಿಹರೇ ಮೇಣಿಂತುಪೇಕ್ಷಿಸಿ ಸುಮ್ಮನಿರಲಹುದೆ ೬

CC-0. Jangamwadi Math Collection. Digitized by eGangotri

ಭೂತಪತಿಗಾನಾದಡಂ ಬಡ
ಮಾತೆಯಾಗಿ ಸಮುದ್ಧರಿಸುವೆನು
ಪ್ರೀತಿಯಿಂ ಕಱಿಮಱಿಗಳಿಲ್ಲದೆ ಪೊರೆವ ಸತಿ ತಾನೆ
ಮಾತೆಯಲ್ಲಾ ಎನುತ ನಿಜತನು
ಜಾತನಂ ಮಾಡುತ್ತಭವನಂ
ಮಾತೆಯಾಗಿ ಸದಾಶಿವಂಗಾ ಬಿಜ್ಜಮಹದೇವಿ ೭

ಎರಡು ತೊಡೆಗಳ ಮೇಲೆ ಪರಮನ
ನಿರಿಸಿ ಸತಿ ಅಭ್ಯಂಗನವನಾ
ಚರಿಸುತೊಯ್ಯನೆ ಮೂಗನೊತ್ತುತ ಕಿವಿಯಿನೂದುತ್ತಿ
ಒರೆಸುತಂ ಮುಕ್ಕಂಗಳಂ ಮೇ
ಲುರವನುದರವನೊತ್ತುತೊತ್ತುತ
ಶಿರವನಿಕ್ಕೈಯಿಂದೆ ಬಟ್ಟಿತ್ತಾಗಲೊತ್ತುತ್ತ ೮

ಬೆಳೆಯಬೇಕೆಂದೆನುತ ಕೈಕಾ
ಲ್ಗಳನೊಡನೊಡನೆ ಮಿಗೆ ನಿಗುರದೆಗೆ
ವಳುಗುರಳನಿರ್ಕುವಳು ಕೋಮಲ ತನುವನೊರೆಸುವಳು
ಲಲನೆಯಂಜುಲಿಸಲಿಲದಿಂ ಚ
ಪ್ಪಳಿಸುತಂ ಬೆನ್ನೊಳು ಶಿರಸಿನೊಳು
ಜಲವನೊತ್ತುವಳಾತ್ಮಜಗೆ ಬೆಗಡೊಂದದಂತೋವಿ ೯

ಬಾಯೊಳುದಕಂ ಪೊಗದ ಹಾಗೊ
ಕ್ಕಯ್ಯನಡ್ಡಂ ಬಾಚಿ ಮೇಣ್ಪೊಬಿ
ಕಯ್ಯಲುದಕವನೊಯ್ಯನೊಯ್ಯನವುಂಕಿ ತಿರುಹುವಳು
ಮೈಯೊಳಿರಿಸಿನವೊರೆದೊರೆದು ತಾಂ
ಮೀಯಲೆಱೆವಳು ಮೃಡಶಿಶುಗೆ ಬಿ
ಜ್ಞಾಯಿ ಕಿವಿಗಳನಕ್ಷಿಗಳುಮಂ ನೆಟ್ಟನೂದುವಳು ೧೦

೧–೨ ನೊತ್ತುತ್ತ (ಆ, ಡಾ, ಮು). ೩–೪ ಶಿರದೊಳಗೆ (ತ, ನ). ೫–೬ ಮಡಗಿ (ಥ, ಧ, ಪ); ಚಾಚಿ (ತ, ನ).

CC-0. Jangamwadi Math Collection. Digitized by eGangotri

ಅಂಗುಳಿನ ಮುಳ್ಕಂ ಸುದತಿ ತ
ನ್ನಂಗುಲದಿನೊತ್ತುವಳು [೧]ತುಂಗೋ[೨]
ತ್ಸಂಗದಿಂ ಸುರಿವಂಬುವಿನಿತಂ ನೆತ್ತಿಯೊ[೩]ಳಗೆಱಿ[೪]ದುಳಿ
ಸಾಂಗರೂಪಿಂದೆಸೆವ ಸುಕುಮಾ
ರಂಗೆ ನೀರಿಂ[೫] ತೂಪಿಱಿ[೬]ದು ಕಾ
ಲುಂಗುಟದ ಮೈತ್ತಿಕೆಯ ತಿಲಕವನಿಡುವಳೊಲವಿಂದ ೧೧

ಉತ್ತಮೋತ್ತಮ ಸತಿ [೭]ಹರಸಿ ಮುದ
ವೆತ್ತಿ ಮುಂಡಾಡುತ್ತ ಭಸಿತವ[೭]
ತತ್ತನೂಜನ ನಿಟಿಲತಟದಲಿ ತುಂಬ ಹೂಸುವಳು
ನೆತ್ತಿ ಬಿದ್ದಿಹಿತೆಂದಿರುಳು ಹಗ
ಲೆತ್ತಲಂಜುತ್ತುರವೊಳುದರದೊ
ಳೊತ್ತಿಕೊಂಬಳು ಕಣ್ಣಿವೆಂಗಂಜನವ[೮]ನೆಚ್ಚು[೯]ವಳು ೧೨

ಮೊಲೆಯನೀವಳು ಮೇಲೆ ಬೆಕ್ಕಂ
ಸುಳಿಯಲೀಯಳು ಬೆಳಕಿನಿಂದಂ
ತೊಳೆದ ಬೆಣ್ಣೆಯನಿಕ್ಕುವಳು ಗಲ್ಲವನೊಡನೆ ಮಿಡಿಯೆ[೧೦]
ಕಳಕಳನೆ ಆಳುತಿರಲುವ್ವೊಂದಂ
ಗುಲವನಿಟ್ಟಿನಿತಿನಿತು ಪಾಲುಮ
ನೊಳಲೆಯಿಂದೆಱಿ[೩]ವಳು ಸುತಂಗಾ ಬಿಜ್ಜಮಹದೇವಿ ೧೩

ಉಗ್ಗುಗಳನಾಗಾಗ ಬಯಸಲು
ಹಿಗ್ಗುವಳು ಮುದ್ದಾಡುವಳು ಮುಸು
ಡೊಗ್ಗಿ ಮುದ್ದಂ ಬೇಡುವಳು ಜಕ್ಕುಲಿಸಿ ನಗಿಸುವಳು
ಮಗ್ಗುಲಿಂದಗಲಿಸಳು ಜೋಗುಳೆ
ಯಗ್ಗಳಿಸಿ ಹಾಡುತ ಸುತನ ಸ
ಮ್ಯಗ್ಗುಣಂಗಳನಂಕಿಪಳು ತನ್ನುದರದಿಂದಪ್ಪಿ ೧೪

೧–೨ ತನ್ನೋ (ಸ). ೩–೪ ಳಿಳಿಱಿವಳು (ಥ, ಧ, ಪ); ಳಿ ಸುರಿದು (ತ, ನ). ೫ ರಂ (ತ, ಥ, ನ, ಪ). ೬–೭ ಹಜಿವಿಯಲಿ ಹತ್ತಿದಾ ಬೆಜಿಣಿಯ ಭಸಿತಮಂ । (ಕ, ಚ, ತ, ಥ, ನ, ಪ, ಮ). ೮–೯ ನಿಕ್ಕು (ಧ, ಸ). ೧೦ ದು (ಸ).

CC-0. Jangamwadi Math Collection. Digitized by eGangotri

ಈ ಪರಿಯೊಳನವರತಮುಂ ಸತಿ
ಯೋಪ ಶಿವನಂ ತನಯನೆಂದೇ
ರೂಪಿಸುತ್ತುಪಲಾಲಿಸುತ ಕೊಂಡಾಡುತಿರಲಾಗಿ
ಆ ಪಶುಪನಂಗನೆಯು ಮುಗ್ಧಾ
ಲಾಪದಿಂ ಮಾಡುತ್ತಮಿಹ ಬಾ
ಲ್ಯೋಪಚಾರಂಗಳಿಗೆ ಮೆಚ್ಚಿ ಒಡಂಬಡುತಮಿರ್ದ ೧೫

ವಿನುತಿಸಲು ಶ್ರುತಿ [೧]ಏಕಮೇವ ಹಿ[೨]
ಎನುತಿರಲು ರೂಪೇಣ ಎನುತಿರೆ
ಪುನರಪಿ [೩]ಶ್ರುತಿ ಪಾತಕೇ ಸಂಸ್ಮರೆತ್ತಥಾ[೪] ಎನಲು
ಅನುನಯಂ ಮಿಗೆ ತಸ್ಯ ತನ್ಮಯ
ಮೆನೆ ಯಥಾ ಭೂಯಾತಿ ಎನುತಿರೆ
ಮನಸಿಜಾರಿಯ ವಾಕ್ಯವಾಗಿಯದೇಕೆ ತಪ್ಪುವದು ೧೬

ಎಹಗೆ ಭಕ್ತಂ ಭಾವಿಸುತ್ತಿಹ
ನಹಗೆ ಶಿವನಾ ರೂಪುಗೊಂಡೊಲಿ
ದಿಹುದು ಚೋದ್ಯಮೆ ಎನುತ ಭಕ್ತರು ಪರಿಣಮಿಸುತಿರಲು
ಮಹಿಯೊಳೋವಿಂ ಕೆಲವು ದಿನಗಳು
ಮಹಗೆ ನಡೆಯಲು ಮಹಿತ ಭಕ್ತಿಯ
ಸಹಜಮುಗ್ಧೆಯನೀಶ್ವರಂ ತಾಂ ಮೆಚ್ಚಿ[೫]ಯಿಸುವೆನೆಂದು ೧೭

ಕಣ್ಣು ಮುಸುಡಂ ಬೆಚ್ಚಿತು ಮೊಲೆಯಂ
ಉಣ್ಣದಕ್ಕೆಯನುಳಿದು ವೊಮ್ಮೈಯು
ಬೆಣ್ಣೆಗಂ ಬಾಯ್ದೆ[೬]ಱಿಯದಿರೆ ಕಂಡಾಗ ನಿಮಿಷದಲಿ
ಹೆಣ್ಣು ಹವ್ವನೆ ಹಾಱಿ[೭]ಬಿದ್ದೆ[೮]
ಮ್ಮಣ್ಣ ಯೆಮ್ಮೈಯ್ಯಕಟಕಟ ಮು
ಕ್ಕಣ್ಣ ಚಿಣ್ಣಾ ಎನ್ನ ಚನ್ನಿಗ ಮೊಲೆಯನೇಕುಣ್ಣೆ ೧೮

೧–೨ ಏನಯೇನಪಿ (ಕ, ಚ, ತ, ಥ, ನ, ಪ, ಬ); ಏವಏವಪಿ (ಧ). ೩–೪ ಸ್ಮೃತಿ ಸಾಥ ಸ್ಸಂಸ್ಮರೆತ್ತಥಾ (ಕ, ಚ, ತ, ಥ, ನ, ಪ). ೫ ಳ್ದಿ (ನ).

CC-0. Jangamwadi Math Collection. Digitized by eGangotri

ಚಿತ್ತದಲಿ ನಾ ನಿನ್ನ ಬೆಮರಂ
ನೆತ್ತರೆಂದೇ ಕಾಣ್ಬೆ ನೀ ಬಲು
ಗುತ್ತವಿದ್ದಂತಿದ್ದು ನಿನಗೆಂತಾಯಿತೆಲೆ ಕಂದಾ
ಹೆತ್ತತಾಯಿವೊಲಾನಿನಿತುದಿನ
ವೆತ್ತಿ ಸಾಕಿದೆನೆಡೆವಿಡಿದು ನೋ
ಡುತ್ತವಿಂತಿರಲಾಱಿನಕಟಿಂತಾದ ಸಂಕಟವ ೧೯

ಆವೆಡೆಯೊಳನ್ಯಥವನಱಿಯೆನು
ನೀವೆಯಲ್ಲದೆ ಎನ್ನ ಜೀವದ
ಜೀವವೇ ಉಂಟಿಲ್ಲವಾಗಿಯು ನೀವೆ ಮತ್ತೆನಗೆ
ನೀ ಉಸುರಿ ಪೇಳ್ ನಿನಗಜೀರ್ಣವೊ
ಕೋವೆಯೋ ಆಂಗುಳಿಯ ಮುಳ್ಳೋ
ಭಾವಿಸಲು ನಾ ಮದ್ದುಮರನೆಂಬಾವುದುಮನಱಿಯೆ ೨೦

ಎಂದಳುತ್ತಂ ಹಲುಬುತತ್ಯಾ
ಕ್ರಂದನಧ್ವನಿವೆರಸಿ ಕರಯುಗ
ದಿಂದ ತಡಹುತ ಮೇಲೆ ಕೆಡೆದುರುಳುತ್ತ ಬಳಲುತ್ತ
ಕಂದನಂ ನೋಡುತ್ತ ಕೌಂಕುಳಿ
ಯಿಂದವಪ್ಪುತ ತಾಯಿ ಮೇಲ್ಪೆಱ
ಗಿಂದ ಹೊದಿಸುತ ತೆಱವುತಂ ಹೊದಿಸುತ್ತ ತೆಱವುತ್ತ ೨೧

ದಿಟ್ಟಿಸುತ್ತಂ ಮತ್ತೆಯುಂ ಬಾ
ಯ್ವಟ್ಟೊಱಲುವಳು ತಲ್ಲಣಿಸುವಳು
ಹೊಟ್ಟೆಯುಬ್ಬರಿಸುತ್ತಮಿದೆ ಮುಪ್ಪಿನಲಿ ಬೊಪ್ಪಂಗೆ
ಬೆಟ್ಟಿತಂಗುಳಿ ಮುಳ್ಳದಾಯಿತು
ಕೆಟ್ಟೆನಿನ್ನೇಗುವೆನೆನುತಳಲ್
ಮುಟ್ಟಿ ಸತಿ ಸುಕುಮಾರನಿರ್ದಾ ಚೇಷ್ಟೆಯಂ ನೋಡಿ ೨೨

೧–೨ ತಾಯಿಂದಧಿಕವಲ್ಲವೆ । ಎತ್ತಿ ಸಾಕಿದ ತಾಯಿ ನಾ (ಕ, ಚ, ಥ, ಧ, ಮ); ತಾಯಲ್ಲಾ ಯಿನಿತು ಭವಮೆತ್ತಿ ಸಾಕಿದೆನೆರ್ದೆವಿಡಿದು (ನ). ೩–೪ ಗತಿಯೆ (ತ, ಥ, ನ). ೫ ಲ (ಧ). ೬ ನಿ (ಕ, ಚ, ಥ).

CC-0. Jangamwadi Math Collection. Digitized by eGangotri

ಬಸುಱಿ ತುಂಬದಿರಲ್ಕೆ ನಂಬಿಯ
ಬೆಸನದಿಂದೆಡೆಯಾಡಿಯಾತನ
ದೆಸೆಯೊಳುಣಲಿಲ್ಲದೆ ಮಗುಳೆ ಗುಂಡಯನ ವಾದ್ಯಕ್ಕೆ
ಒಸೆದು ಕುಣಿಕುಣಿದಾಡಿಯಲ್ಲಿಯು
ಹಸಿದುಬಂದಾ ಚೀರಮಂ ಬಾ
ಱಿಸುತಿರಲು ನಲಿದಾಡಿ ಊಟಕ್ಕೇನುವಿಲ್ಲದಡೆ ೨೩

ಮುನ್ನ ಬಱಿಯಾಟಂಗಳಿಂ ಬೆಳ
ಗನ್ನ ಕಾಡಿದಡೆನ್ನ ಜಠರವ
ದಿನ್ನು ತುಂಬದೆನುತ್ತ ಪಿಟ್ಟವ್ವೆಯ ಮನೆಗೆ ಬಂದು
ಚೆನ್ನ ಪಿಟ್ಟಂ ಮೆಲಿದು ಕರಿಕಾ
ಲಂ ನಿರೂಪಿಸೆ ಬಿಟ್ಟಿಯಂ ತಾಂ
ಬಿನ್ನಣದಿ ಮಾಡುತ್ತ ಮಣ್ಣಂ ಪೊತ್ತು ಬಸವಳಿದು ೨೪

ಇತ್ತ ಕೇಳ್ಕೈ ಸಾಮವೇದಿಯು
ಸತ್ತ ಕಱುವಂ ಮಾಡಿ ನೀಡಲು
ತುತ್ತು ತುತ್ರಿಗೆ ಸವಿದು ತಣಿಯದೆ ಕಾರಿಕಾಲಮ್ಮೆ
ಮುತ್ತ ಮಾವಿನ ಹಣ್ಣನೀಯಲು
ಮತ್ತೆ ಮೆಲಿದಾ ವೀರಚೋಳವೆ
ಯಿತ್ತ ಹುಗ್ಗಿಯನುಂಡು ಬಸುಱಿಂಗೆಯ್ದದಿರೆ ಬಂದು ೨೫

ಮಾದರನ ನಿಳಯಕ್ಕೆ ನಡೆತಂ
ದಾದರದಿ ಹುಳಿಯಂಬಕಳವಂ
ಕೈದೆಗೆಯದುಱಿ ಸುಱಿಸುಱಿದು ಸಿರಿಯಾಳನಾತ್ಮಜನ
ಸೂದನಂ ಮಾಡಿಸಿದ ಮಾಂಸ
ಸ್ವಾದುಖಿಂಡಮನಿಕ್ಕಲುಂಡು ವಿ
ವಾದದಿಂ ನಿಂಬಿಯ ಮನೆಗೆ ಬಂದುದರಮಂ ಪೊರೆದು ೨೬

---

೧ ಜಿ (ತ, ನ).

CC-0. Jangamwadi Math Collection. Digitized by eGangotri

ಸುರಗಿ ಚವುಡಂ ಮಾಡಿ ನೀಡುವ
ಕರವ ತುತ್ತಿಂಗಿಲ್ತಿವಟ್ಟೆಯೊಳ್
ತಿರುಗಿ ತಿರಿದುಣಲೇಕೆ ನಿನಗಾಂ ಮಾಡುವುದು ಕೊಱತೆ
ತರುಣ ಎನ್ನಂ ದೂಱಲಹುದೇ
ತರುಣಿಯೊಬ್ಬಳು ಬಂದು ಹೇಳಿದ
ಳಿರುಳಿನಿತು ವೃತ್ತಾಂತವೆಲ್ಲಂ ನಿನ್ನನೇನೆಂಬೆ ೨೭

ಮಲಮಲನೆ ಮಱುಗುತ್ತವನಿಯೊಳು
ತೊಳಲಲೇಕಾ ಸ್ವಾದದೂಟವ
ನೆಲೆ ಮಗನೆ ಉಣಲೇತಕೀ ಹಸಿವಿಲ್ಲದೂಟದಲಿ
ಸಿಲಿಕಿದಡೆ ಬದುಕುಂಟೆ ರೋಗಂ
ಬಲಿದುದರಿವ್ಪೊದುತ್ತಳಿವೆ ನಾಂ
ಮೊಲೆಯನೀವೆನು ಹಾಲನೆಱಿವೆನು ಬೆಣ್ಣೆಯಂ ಕೊಡುವೆ ೨೮

ಬೇಡಿಕೊಂಡುಣಹೋದೆ ನಿನಗಾ
ನೂಡಿ ಮಾಡಿದುದೆಯ್ದದೇ ಭವ
ಗೇಡಿಮಗನೇ ಇನಿತುದಿನವೆಂತಯ್ಯ ಸಾಕಾಯ್ತು
ನಾಡೆ ಹೇಳ್ಕೈ ಎನ್ನನೇಕಿತಕೆ
ನೋಡೆ ನಿನ್ನಯ ಹೊಟ್ಟೆ ತುಂಬದು
ಕಾಡಿದಪೆ ನೀನೆಂದು ಬೇಸತು ಸಾಕದಲಸಿದೆನೆ ೨೯

ಎಡೆಗೆಡೆಗೆ ವಂಚಿಸೆನಿರುಳು ಪಗ
ಲಡಸಿ ಕೈಯಿಂದಿಳುಹೆನಿಂತಹಳ್
ಕಡು ಸಿತಗನುಂಟೇ ಎನುತ್ತಂ ತಾಯಿ ನಾನೆಂಬ
ನುಡಿಸಲುಗೆಯಿಂದೊಂದನೆನ್ನೆನು
ಪೊಡವಿಯಟಿಯಲು ತಾಯಿ ನಾನೆ
ಲ್ಲೆಡೆಯೊಳುಂ ನಿನಗೆನ್ನ ಛಂದದೊಳುಂಟೆ ತಾಯಿಗಳು ೩೦

೧–೨ ರ್ತಿಯೊಡೆದೆಯೊ (ಕ, ಚ); ರ್ತಿಯಾಗದೆ (ಧ); ರ್ತಿಯೋದೆಯೆ (ಥ, ಪ, ಸ). ೩–೪ ಉಬ್ಬುತ (ಬ); ಮೂಡುತ (ಸ). ೫–೬ ನೀನೆಯೆಂ (ತ, ನ); ನನ್ನಿಯೇ (ಸ). ೭–೮ ಳಿಯನಿಂತಹ (ಕ, ಚ, ತ, ಥ, ದ, ಬ); ಳಿಯನಿಂದಾ (ಮ).

CC-0. Jangamwadi Math Collection. Digitized by eGangotri

ತರುಣ ಸಂತತಯೆನ್ನ ಹರಣದ
ಹರಣವಾಗಿಹ ನಿನ್ನುವಂ ಬೋ
ಸರಿಸಿ ಕೊಂಡಾಡುವೆನಿದಕ್ಕಂ ನೀನೆ ಸಾಕ್ಷಿಯಲಾ
ಇರಿಸಿದಂತಿದ್ದಿಕ್ಕಿದಂತುಂ
ಡಿರುತಮಿರ್ದಡೆ ಬಳಿಕದೇತಕೆ
ನಿರತವಾಧಿವ್ಯಾಧಿಗಳು ಬಂದೊಂದುವವೆ ನಿನಗೆ ೩೧

ಕೆಂಡವಂ ಗೆದ್ದಿಲೊಂದುವುದೆ ಮುಂ
ಕೊಂಡು ನಿನ್ನೊಳು ನೀನೆ ನಿರ್ಮಿಸಿ
ಕೊಂಡಡೀ ರುಜೆಯಾಯಿತಲ್ಲದೆ ಸಂಕಟಂ ಬಳಿಕ
ಅಂಡಲೆವುದೇ ನಿನ್ನುವಂ ಮರುಳ್
ತಂಡದೊಳಗಾಡುವನನಱಿಯದ
ಗಂಡಿಗನನೇನೆಂದು ನುಡಿವೆನು ಹಲವಿವೇಕಿನ್ನು ೩೨

ಒತ್ತಿಬಳಲಿಪ ಕುತ್ತಮಂ ನೋ
ಡುತ್ತಮಿಂತಿರಲಾಜಿನಳಲಂ
ಪೊತ್ತು ಜೀವವ ನಾಂ ತ್ಯಜಿಸುವೆಂ ನಿನ್ನಮೇಲಿನುತ
ಉತ್ತಮಾಂಗನೆ ತನ್ನ ಶಿರಮಂ
ಕತ್ತರಿಸಿಕೊಳುವೆಡೆಯೊಳತಿ ಮುದ
ವೆತ್ತು ತಾಯಿಗೆ ತತ್‌ಕ್ಷಣಂ ಪ್ರತ್ಯಕ್ಷಮಾಗುತ್ತ ೩೩

ನಿನಗಭೀಷ್ಟವದಾವುದೀವೆನು
ಜನನಿಯೇ ಕೋಕೋ ಯೆನುತ್ತಿರೆ
ತನಯ ನೀನೀವಭಿಮತಂಗಳು ಸಾಕು ಪಿರಿದೆನಗೆ
ಅನಘ ನೀವು ನಿರೋಗಿಯಾಗಿ ಸು
ಮನದ ಸುಖನಿಧಿಯಾಗಿ ಶಾಶ್ವತ
ತನುಶುಭಸ್ಥಿತನಾಗಿರನುದಿನವನ್ಯಥವನೊಲ್ಲೆ ೩೪

---

೧ ಜ (ಸ). ೨–೩ ವದೇ (ಧ, ನ, ಪ). ೪–೫ ಗಿರ್ದು (ತ, ನ).

CC-0. Jangamwadi Math Collection. Digitized by eGangotri

ಹೆತ್ತ ಮೋಹಕ್ಕಧಿಕವಲ್ಲಾ
ಎತ್ತಿ ಸಾಕಿದ ಮೋಹವ ದಱಿ ನಿ
ಮಿತ್ತವಾಗಳು ನಿನ್ನುವಂ ಕಣ್ಣಾರೆ ನೋಡುತ್ತ
ಚಿತ್ತದೊಳು ನೆನೆವುದನೆ ನೀವನ
ಗಿತ್ತ ವರವದು ಸಾಕೆನಲು ಗಜ
ಕೃತ್ತಿಕೃತವಸ್ತ್ರಂ ಮುಗುಳ್ನಗೆ ಮೊಳೆಯೆ ಜನನಿಯನು ೩೫

ತೆಗೆದು ಬಿಗಿದಾಲಿಂಗಿಸುತ್ತಂ
ಸೊಗಸುಮಿಗೆ ಹೆತ್ತವ್ವೆ ನೀನೀ
ಜಗದ ನಿಕರಕ್ಕೆ ನಿಗೆ ತಾಂ ಕೇಳ್ ತಾಯೆ ನಿನ್ನಂಥ
ಬಗೆವ ತಾಯಿಗಳಿರುತಿರಲ್ ವ್ಯಾ
ಧಿಗಳವೇಗೆಯ್ದುಪವೆನುತ್ತವ
ನಿಗೆ ಮೆಱಿಯಲಮ್ಮವ್ವೆಗಂ ನಿತ್ಯತ್ವಮಂ ಕೊಟ್ಟ ೩೬

ಶೀತನಗಜಾಳಿನಾಥ ನಿಭಮುಖಿ
ತಾತನಮಳಸಮೇತನಚ್ಯುತ
ದಾತ ಪುರುಹೂತಾದಿ ಸುರಮುನಿಜಾತಪೂಜಿತನು
ಮಾತೆಯಾಗಿಯಜಾತನುಂ ಸಂ
ಪ್ರೀತಿಯಲಿ ಕೊಂಡಾಡುತಿರೆ ವಿ
ಖ್ಯಾತಿವೆತ್ತಮ್ಮವ್ವೆಯೆಂಬ ಪೆಸರ್ ಪ್ರಚುರವಾಯ್ತು ೩೭

ಭೂತಳದೊಳಮ್ಮವ್ವೆಯರ ಪರಿ
ಪೂತ ಕಥೆಯಂ ಹಾರವಿಸಿ ಕೇ
ಳ್ದಾತನುಂ ಬಿಡದೋದುವಾತನು ಬರೆದುಕೊಂಬಾತ
ಭೂತನಾಥನ ಕರುಣದಿಂ ಪ್ರ
ಖ್ಯಾತಮಪ್ಪ ಸದಾಯುರಾರೋ
ಗ್ಯಾತಿಶಯ ಸಂಪತ್‌ಸಮೃದ್ಧಿಯೊಳಿಪ್ಪರನವರತ ೩೮

ಅಂತು ಸಂಧಿ ೧೪ಕ್ಕಂ ಪದಗಳು ೭೮೭ಕ್ಕಂ
ಮಂಗಲಂ ಮಹಾಶ್ರೀಶ್ರೀಶ್ರೀ

೧ವಿ (ಧ). ೨–೩ ಜೀವರ್ಗೆ (ಸ). ೪–೫ ಮಾತ (ತ, ಥ, ನ).

CC-0. Jangamwadi Math Collection. Digitized by eGangotri

ಸಂಧಿ : ೧೫

*

ಸೂಚನೆ : ಜೆಡೆಯ ದೀಪವನಿತ್ತು ಮೆಚ್ಚಂ
ಪಡೆದು ಕೈಲಾಸಕ್ಕೆ ಮೃಡನಂ
ಗುಡಿವೆರಸಿಕೊಂಡೊಯ್ದನಾ ದೀಪದ ಕಲಿಯನಾರು

ಚೋಳದೇಶದೊಳೊಪ್ಪುತಿಪ್ಪ ವಿ
ಶಾಲ ಕಾಂಚಿಯ ಪುರದೊಳಿಪ್ಪನು
ಕೇಳು ದೀಪದ ಕಲಿಯೆನಿಪ್ಪ ಶಿವೈಕ್ಯನತಿಧರ್ಮಿ
ಶೀಲಿ ನೆರೆಯೂರಿಂಗೆ ಹೋಗುತ
ಶೈಲಜಾಧಿಪನೊಬ್ಬನುಂ ಜೀ
ರ್ಣಾಲಯದೊಳಿರೆ ನೋಡಿ ತನ್ನೊಳು ಹೆದಱುತಿಂತೆಂದ ೧

ಹೆಚ್ಚಿದಡವಿಯೊಳೊಬ್ಬನೇ ಶಿವ
ನೞ್ಚಿಗದೊಳಿಹನಕಟಕಟಿದೇಂ
ಬೆಚ್ಚುತಂ ಬೆದಱುತ್ತಮೆಂತಿಹನಿಲ್ಲಿಹಗೆ ಘನವು
ಮಚ್ಚರಿಪ ದಕ್ಷನ ಮುಖಿಕ್ಕುರಿ
ಗಿಚ್ಚನಿಕ್ಕಿದನಾ ದಿತೇಯ ಸ
ಮುಚ್ಚಯವನೊಚ್ಚರ್ದಲೆಯ್ದಿಸಿ ಬಾಧಿಸಿದನಂದು ೨

---

೦ ರಾಗ : ಗೌಳ (ಚ, ಡಾ, ಧ); ದೇಸಿ (ಮ, ಅ); ಪಂತುವರಾಳಿ (ತ). ೧ ರ್ಮಿ (ಥ, ನ, ಪ). ೨ ಲಿ (ತ, ನ). ೩ ನುಂ (ಥ, ಧ, ಪ). ೪–೫ ಚ್ಚರಿಯೊ (ಕ, ಚ, ಥ, ಪ). ೫–೬ ರ್ದಹನಕಟಕಟ (ತ, ಥ, ಧ, ಪ). ೭–೮ ದೈತ್ಯಬಲದ (ಸ). ೯–೧೦ ವನೆ (ತ, ಥ, ಧ, ಪ).

CC-0. Jangamwadi Math Collection. Digitized by eGangotri

ರೂಪನಳಿದನು ರತಿಪತಿಯ ವಾ
ಣೀಪತಿಯ ನಿಜ ಶಿರವನರಿದನು
ಕೋಪದಿಂ ಮದಗಜದನುಜನಂ ಮೆಟ್ಟಿ ಸೀಳಿದನು
ತ್ರೈಪುರಂಗಳನುರುಪಿದನು ತ
ದ್ವೀ[೧]ಪಿ ದಿತಿ[೨]ಜನ ತಿದಿಯನುಚ್ಚಿದ
ನೀ ಪರಿಯೊಳಭಿಯಾತಿಗಳನಪಹರಿಸಿದನು ಮುಳಿದು ೩

ವರ ಕೃಪಾಕರನೆನಿಸಿ ತನ್ನಂ
ಶರಣುವೊಕ್ಕರನುದ್ಧರಿಪ ಬಲು
ಬಿರಿದು ಪಿರಿವಹ ಹಿರಿಯನೆಂದೆಲ್ಲರು ನುತಿಸುತಿರಲು
[೩]ಆರಿದಿನೆಲುಂ[೪] ವಿಶ್ವಮಂ ಸಂ
ಹರಿಸುವಂ ತಾನಾಗಿಹಗೆ ಘನ
ಉರುತರಾಟವಿಯೊಳು ಮಹೇಶ್ವರನೊಬ್ಬನಿರಬಹುದೆ ೪

ದೇಗುಲಂ ಜರಿಜರಿದು ಬೀಳ್ತ[೫]ರೆ
ಬಾಗಿಲೊಳು ಕದಹುಗಳು ನೆಜ[೬] ಹಳ
ದಾಗಿ ಬಿದ್ದವು ಮಂಟಪಂ ಬಿರಿಬಿರಿದು ಬಯಲಾಯ್ತು
ಬಾಗಿ ಬಿದ್ದವು ಕೋಟೆಗಲ್ಲುಗ
ಳೀಗುವೆಂ ತಾನರ್ಘತನುವಿನೊ
ಳಾ ಗಿರಿಜೆ [೭]ಶಿವ[೮]ನೊಳು ಬೆರಸಿ[೯]ವಳೊ ರೂಪುಗಾಣಿಸದು ೫

ಎತ್ತು ತಾ[೧೦]ನೊಂದೇ[೧೧]ಳಲಾಱಿದೆ
ನೆತ್ತಿಯಲಿ ಹುಲ್ಲಂ ಕವುಚಿಕೊಂ
ಡೆತ್ತುವವರಿಲ್ಲದೆ ಬಳಲುತಿರ್ದುದು ಶಿವನ ಮುಂದೆ
ಚಿತ್ತಭವರಿಪು ಹುಟ್ಟಿದುದು ಮೊದ
ಲಿತ್ತಲೆಂದುಮನಗ್ಗವಣೆ ಹೂ
ಹೊತ್ತುತಂದು ತಪೋಧನಂ ಪೂಜಿಸಿದ ಕುಱುಹಿಲ್ಲಾ ೬

೧–೨ ಪ ದನು (ನ, ಸ). ೩–೪ ಅರಿದರಿದೆನಲು (ಥ, ಧ, ಪ). ೫ ದ್ದಿ (ಕ, ಚ, ಥ, ಪ). ೬–೭ತನುವಿ (ಕ, ಚ, ಥ, ಪ). ೮ + (ಥ, ಪ). ೯–೧೦ ನೊಲಿದೇ (ಕ, ತ, ನ, ಬ).

CC-0. Jangamwadi Math Collection. Digitized by eGangotri

ಸಾವಿರವ[೧]ನ್ನೆ[೨]ಣಿಸಲೇಕೀ
ಠಾವಿನಲ್ಲಿರ್ದಡೆ ರಿಪುಗಳ ಮ
ಹಾ ವಿಘಾತಿಗಳಹವಲಾ ಅಸಹಾಯನಾಗಿರಲು
ದೇವನಕ್ಕಟ ವೀರನಹುದಹು
ದೀ ವಿಪಿನದೊಳಗೊಬ್ಬನುಂ ಬಿಡ
ದಾವಗಂ ತಾನಿಪ್ಪನಾಗಿ ವಿಚಾರ[೩]ಮುಮನುಳಿದು[೪] ೭

ಅಲ್ಲಿ ದೀಪದ ಕಲಿಯರಗಜೆಯ
ನಲ್ಲನಂ ಬಿಡದಿರ್ದು ತನ್ನ
ಲ್ಲುಳ್ಳ[೫]ನಿತು ಧ[೬]ನಕನಕವಸ್ತ್ರಾಭರಣರತ್ನಾಳಿ
ಬೆಳ್ಳಿ ಮೂಕುತಿ ಮುರುಹು ತಾಂಬ್ರಂ
ನಲ್ಲಲೋಹಂ ಕಂಚುಮೊದಲಾ
ದೆಲ್ಲವಂ ಒಟ್ಟೈಸಿ ತರಿಸಿಯವಂಚಕತ್ವದಲಿ ೮

ಶಿವಭವನಮಂ ಮಂಟಪವನಭಿ
ನವವೆ[೭]ಸೆಯೆ[೮] ಮಾಡಿಸಿಯದಱಿ ಸು
ತ್ತುವರೆ ಕೋಂಟೆಯನಿಕ್ಕಿಸಿದನಗಳುಗಳನ[೯]ಗಿಸಿದನು[೧೦]
ಜವಳಿಗದವಂ ದ್ವಾರ[೧೧]ವಂದ[೧೨]ದ
ಹವಣಿಗಾ ಬಾಗಿಲೊಳಮರ್ಚಿಸಿ
[೧೩]ನವಕವಾಟವದೆಸೆಯೆ ನಿಲಿಸಿದ ದ್ವಾರದ್ವಾರದಲಿ[೧೪] ೯

ಇತ್ತರದೊಳುದ್ದಕ್ಕೆ ಕೋಂಟೆಯ
ಕೊತ್ತಳಂಗಳ ಸಂದಿ ಸಂದಿಯೊ
ಳೆತ್ತಿಸಿದನಟ್ಟಣೆಗಳಂ ಡೆಂಕಣಿಗಳಂ ಹಲವ
ಮುತ್ತಿ[೧೫]ಗೆಗೆಯೊ[೧೬]ಳಗಾಗದಂತಹ
ಚಿ[೧೭]ತ್ರಿತ್ತನಲಿ ಕಲುಗುಂಡುಗಳನುಂ
ಸುತ್ತಿವರೆ ಹಾಕಿಸಿದನವಗಡವಾಗೆ ದಾರಿಯಲಿ ೧೦

೧–೨ ನಿಂತೆ (ತ, ನ). ೩–೪ ಮಂ ಬಿಸುಟು (ತ, ನ). ೫–೬ ಯಾವದ್ಧ (ಕ, ಚ, ಥ, ಧ, ಪ, ಮ). ೭–೮ ನಲ್ (ತ, ನ). ೯–೧೦ ಗುಳಿಸಿದ (ಧ). ೧೧–೧೨ ವಟ್ಟ (ಸ). ೧೩–೧೪ ಯವಕಗುಸೆಯಂ ನಿಲಿಸಿದನು ಬಲವಂಕದಾರದಲಿ (ಕ, ಚ, ತ, ಥ, ನ, ಪ, ಬ, ಮ). ೧೫–೧೬ ಗಕ್ಕೊ (ಕ, ಚ, ಘ, ಧ, ಪ).

CC-0. Jangamwadi Math Collection. Digitized by eGangotri

ಎಸೆವ ಕೋಂಟೆಯ ತೆನೆಗಳಲಿ ಕ
ಟ್ಟಿಸಿ ಪತಾಕೆಗಳಂ ಬಸಿದ ಬಲು
ದಸಿಗಳಂ ಮಲಗಿಸಿ ಮರಂಗಳನಿರಿ[೧]ಸಿ ಎಡೆಗೆಡೆಗೆ
ಅಸಮಸದ್ಪಟರೆನಿಬರೋ ಎಂ
ದುಸುರುತಿರೆ ಪ್ರೊಸ ದುರ್ಗವಂ ಪಾ
ಟಿಸಿ ಪಿರಿಯನಡಬಾವಿಗಳನ[೨]ಗುಳಿ[೩]ಸಿದನದಱ[೪]ಕೊಳಗೆ ೧೧

ನೆಲ್ಲು ಜೋಳವು ಮೊದಲು ದವಸವ
ನೆಲ್ಲವಂ ಸಂಗ್ರಹಿಸಿ ಗೌರೀ
ವಲ್ಲಭನ ದೇಗುಲದ ಸುತ್ತಂ ದೀಪಕಲಿಯಾರು
ಮಲ್ಲಿಕಾ ವನಮಾಲಿಕಾ[೫]ವನ[೬]
ವಲ್ಲಿಕಾ ಪಾಟಲ ವಕುಳ ಕಂ
ಕೆಲ್ಲಿ ಚಂಪಕ ಮುಖ್ಯ ತರುಗಳ[೭]ನಿಕ್ಕಿ[೮]ಸಿದನಲ್ಲಿ ೧೨

ಕಲುಕುಟಿಗರಂ ಬಡಿಗಿಯರನಾ
ಬಳಿಗೆಲಸಮಂ [೯]ಮಾಳ್ಪವರುಗಳ
ತಳುವದಿಱನಚ್ಚಾಳು[೧೦]ಗಳನೆಕ್ಕಟಿಗ ಸಬಳಿಗರ
ಹಲಗೆಕಾಱರನಾಪ್ತರಂ ದೇ
ವಲಕರಂ ಪೂವಡಿಗರಂ ಬಾ
ಗಿಲವರಂ ಸುಯಿಧಾನರಂ ಹಲವಾಳುಗಳನಾಯ್ದು[೧೦] ೧೩

ತಾನುಮವರುಂ ಕಟ್ಟಿ ಬಿಗಿದು ಸು
ಮಾನದಿಂದನುವಾಗಿ ಮಿಗೆ ಸುಯಿ
ಧಾನವೆನುತಾಲುತ್ತ ಕೋಂಟೆಯೊಳಾಳ್ವರಿಯ ಮೇಲ
ಸೇನೆಯಂ ನೆರೆಯಿಸಿ ಬಳಸುತಸ
ಮಾನ ವಿಕ್ರಮದಿಂದೆ ಪಂಚಮ
ಹಾನಿನದವಾಕ್ರಮಿಸುತಿರೆ ಬಲುದುರ್ಗಮಂ ಬಲಿದು ೧೪

---

೧೪ (ಧ). ೨–೩ ಗಿಯಿ (ತ, ನ). ೪–೫ನವ (ತ, ನ). ೬–೭ ಬಿತ್ತಿ (ಧ). ೮–೯ ಮಾಳ್ಪರಂ ತರ । ವಳರನಚ್ಚಾಳು (ಕ, ಚ, ತ, ಥ, ನ, ಪ, ಬ). ೧೦ ಳ್ದು (ಕ, ಚ, ತ, ಥ, ಧ, ನ, ಪ, ಬ).

CC-0. Jangamwadi Math Collection. Digitized by eGangotri

ಪೋಟರಪ್ಪಜ ಹರಿ ಸುರೇಂದ್ರರಿ
ಗಾಟವಿಕ ದಿತಿಸುತವಿತತಿಗೀ
ಕೋಟಿಯಂ ಸಾಧಿಸುವುದವಗಡವೆನುತ ಜನರೆ್ಲ್ಲ
ಕೋಟಿಪರಿಯಲಿ ಹೊಗಳುತಿರಲು ಲ
ಲಾಟಲೋಚನನಣುಗನಿಳೆಯೊಳು
ಮೇಟಿಕೀರ್ತಿಯೊಳಿಂತು ಕಾಲಂ ಕೆಲವು ನಡೆವುತಿರೆ ೧೫

ಧನವನೆಲ್ಲಂ ತನ್ನಮಿತ್ತುದೊ
ಳಿನಿತುವುಳಿಯದೆ ಸವೆದಡಂ ಪರಿ
ಜನಕೆ ಜೀವಿತವಿಕ್ಕಲಿಲ್ಲದವರು ಪರೆದುಪ್ಪೋಗೆ
ವನದೊಳಳುಕದೆ ಸಾಹಸದ ಕುಡಿ
ಕೊನರುತಿರಲಾಳ್ವರಿಯ ಸುತ್ತಂ
ಘನಭುಜಂ ಸುಯಿಧಾನಮೆನುತಾಲುತ್ತೆ ತೊಳಲುತ್ತೆ ೧೬

ಎಡೆಗೆಡೆಗೆ ಕೈದೀವಿಗೆಗಳಂ
ನಡೆಸಿ ಬೆಳಗುತ್ತೆಂದಿಗಿಂದಂ
ಕಡುಹುಮಿಗೆ ವುಡಿಘಂಟೆ ಘಣಘಣ ಎಂದುಲಿವುತಿರಲು
ನಡೆನಡೆಗೆ ಬಾವುಲಿಯ ಪೆಂಡೆಯ
ತೊಡರುಗಳು ಫಲಫಲನೆ ಮೊರೆಯಲು
ಬಿಡದೆ ತಾಟಿಪ ಹಲಗೆ ಘಂ ಘಂ ಫಲಿಗು ಫಲಿಲೆನಲು ೧೭

ಬಿಂಕದಿಂದಸಿಯಂ ಜಡಿದು ಜಡಿ
ದಂಕಕಾಟಿನವೊಲು ವಿರೋಧಿಭ
ಯಂಕರಂ ಸುಯಿಧಾನವತಿ ಸುಯಿಧಾನವೆಂದೆನುತ
ಭೋಂಕೆನಲು ತೆನೆತೆನೆಗೆ ತಪ್ಪದ
ವುಂಕಿ ಪಲವಾಳಿ್ಪ್ಪವೊಲು ನಿಃ
ಶಂಕತೆಯೊಳೊಬ್ಬನೆ ಬಳಸುತಾಳ್ವರಿಯ ಮೇಲಿರ್ದು ೧೮

---

೧೫ ವೆ (ತ, ಥ, ನ, ಪ). ೨೧ (ಸ).

CC-0. Jangamwadi Math Collection. Digitized by eGangotri

ಪಲವು ಮುಖದಲಿ ಸುಳಿದು ದೀಪದ
ಕಲಿಯನಾರ್ ಕಲಿಯಾಗುತಂ ಗಳ
ಬಳವನೆಯ್ದಿಸುತಿಂತು ಪಿರಿದಿರುಳಂ ಕಳೆವುತಿರಲು
ಬಳಿಕ ಕೈದೀವಿಗೆಗಳಿಗೆ ಸಲೆ
ಬಳಸಿದೆಣ್ಣೆಯುಮೆಯ್ದಿ ತೀರಲು
ಚಲಿಸದಾತನು ತನ್ನ ಮನದೊಳು ಭಾವಿಸುತ ಮುಂದೆ ೧೯

ತಬ್ಬಿ ತಂದಡುಗಬ್ಬುಗಳಿಗುರಿ
ಹಬ್ಬಿಸುತ ಕೈದೀವಿಗೆಗಳಂ
ತೆಬ್ಬಿಸಲು ಪ್ರಭೆ ದೆಸೆಯೊಳಾವರಿಸಲ್ಕೆ ನಿರ್ಭರದ
ಬೊಬ್ಬೆಗೊಟ್ಟಾಲುತ್ತ ತನ್ನೊಡ
ಲುಬ್ಬುತಬ್ಬರಿಸುತ್ತ ಕಲಿ ತಾ
ನೊಬ್ಬನೆಂದಾಳ್ವರಿಯ ಸುತ್ತಂ ಸುತ್ತಿ ಬರುತಿರಲು ೨೦

ಕೊರಡುಮರನಡುಗಬ್ಬು ಸೀಬು ಬಿ
ದಿರು ಬಡಿಗೆ ಬೆತ್ತಂಗಳೇನುಂ
ದೊರಕದಿದ್ದಡೆ ಹುಲುಸರವಿಗಳನೆಯ್ದಿ ಹೊಸೆಹೊಸೆದು
ಕರಮೆಸೆವ ಕೈದೀವಿಗೆಗಳಂ
ತಿರೆ ಪಿಡಿದು ಪವನತ್ವರಿತದಿಂ
ತಿರುಗು[೩]ತೀಪ[೩]ರಿಯಲ್ಲಿ ಕೆಲದಿವಸಂಗಳಂ [೩]ಕಳೆದುಳಿ ೨೧

ಆಸಮಬಲ ಹುಲುಕಡ್ಡಿ ಮೊದಲಹ
ಕಸವು ಸವೆಯೆಲೆ ಸೊಪ್ಪು ಸೊಡಗುವಿ
ನಿಸುವಱಿಸಿ ಕಾಣದೆ ವಿಚಾರಿಸಿ ಕೌಪು ಮೊದಲಾದ
ವಸನವಿಸರವನಿನಿಸುವಂ ಪ್ರೊಸೆ
ಪ್ರೊಸೆದನಲನಂ ಹೊತ್ತಿಸುತ್ತಾ
ಗಸದೊಳೆಸೆದುಱಿ[೩] ಮಿಱುಪ ಮಿಂಚಿನ ಬಳ್ಳಿಯೋ ಎನಲು ೨೨

೧–೨ ತಾಳ್ವ (ಥ, ಧ, ಪ, ಸ). ೩–ಳಿ ಸಲಿಸಿ (ಕ, ಥ, ಧ, ಪ, ಬ).

CC-0. Jangamwadi Math Collection. Digitized by eGangotri

ಲೇಸೆನಿಪ ಕೈದೀವಿಗೆಗಳ ವಿ
ಭಾ[೧]ಸದಿಂ ಎಮಗೆ ಪಿಡಿದುಕೊಂಡು
ಲ್ಲಾಸವೆತ್ತಾಳ್ವರಿಯ [೨]ಮೇಲಿಂತಿರುಳು[೩] ತಿರುಗುತಿರೆ
ಆ ಸರವಿಗಳು ಸವೆಯೆ ಪರಿತಂ
ದಾಸುರದಿ ಬಲುಗತ್ತಲೆಯ ಮಱಿ[೪]
ಯಾಸೆಯಲಿ ಹಗೆಯರು ಹೊಗುವರೋ ಅರಿದು ಪರಿಕಿಪಡೆ ೨೩

ಆಹಿತರಱಿದಡತಿ ಪ್ರಮಾದಂ
ಬಹುದಲಾ ಎಂದಾತ್ಮದೊಳು ಸಂ
ದೆಹವುಳಿದು ತಲೆಗೂದಲಲಿ ಜೆಡೆಯಂ ಹೆಣೆದು ಸೊಡರ
ವಹಿಲದಿಂ ಪೊತ್ತಿಸಿ ಪಿಡಿದು ಗಹ
ಗಹಿಸುತಂ ಪೊತ್ತೀಸಱಿಲಿ ಬೆಳ
ಗಹುದೆನುತ್ತಾಳ್ವರಿಯೊಳೆಂದಿನ [೫]ಹಾಂಗೆ[೬] ಬಳಸುತಿರೆ ೨೪

ಹೊತ್ತಿಸಿದ ಜೆಡೆ ಬೆಂದು ದಳ್ಳುರಿ
ಹತ್ತಿ ಭಗಭಗ ಎನುತಲುತ್ತಮ
ನುತ್ತಮಾಂಗಂ ಬೇವುತಿರಲಿಂತತ್ತಲಿಂ ಮುನ್ನ
ಮತ್ತವಾರಣಚರ್ಮಧಾರಿ ವಿ
ಪತ್ತವೋವಾಸರರಮಣನು
ನ್ಮತ್ತ ಚಿತ್ತಭವಾರಿ ಗೌರೀಚಿತ್ತಹಿತಕಾರಿ ೨೫

ಶತದಳಾಂಬಕ ಶತದಳಾಸನ
ಶತಮಖಾಮರ ನತಚರಣದಶ
ಶತದಳಂ ದಶಶತದಳಾಹಿತಯುತಜಟಾಜೂಟ
ಶತದ[೭]ಳಾಸದನ[೮]ತುಳ ತೇಜೋ
ಜಿತದಶಶತದ್ಯುತಿ ವಿತತಿ ಸ
ಸ್ಮಿತವದನದಶಶತದಳಂ ಪ್ರತ್ಯಕ್ಷಮಾಗಿರ್ದು ೨೬

---

೧ ಕಾ (ಸ). ೨–೩ ಮೇಲಿರುಳೋವಿ (ಕ, ಚ, ತ, ಥ, ಧ, ನ, ಪ, ಬ, ಮ). ೪–೫ ತೆರದಿ (ತ, ನ). ೬–೭ ಶರಾಶನ (ಕ, ಚ, ತ, ಥ, ಧ, ನ, ಪ, ಬ).

CC-0. Jangamwadi Math Collection. Digitized by eGangotri

ಆಲಘು ಧೀರೋದಾರನಂ ನಿ
ಶ್ಚಲಿತಮತಿಯಂ ನೋಡಿ ದೀಪದ
ಕಲಿಯನಾರಂ ಬಹಳ ಕರುಣಾಶರಧಿಯೊಳಗದ್ದಿ
ಎಲೆ ನಿನಗೆ ಮೆಚ್ಚಿದೆನಭೀಷ್ಟಿತ
ಫಲವನೀವೆನು ಬೇಡು ನೀನೆನೆ
ಎಳೆಯನಗೆಮೊಗವೆಸೆಯೆ ಸಾಷ್ಟಾಂಗದೊಳೆಱಗಿ ನಮಿಸಿ ೨೭

ಎಣಿಸದಿರು ಸಾವಿರವರಂಗಳ
ಗಣನೆ ಬಂದಿತ್ತೊಲ್ಲೆನೊಂದುವ
ನಣಕವಲ್ಲಿದು ಚಿತ್ತವಿಸು ನೀನೆನ್ನ ಬಿನ್ನಪವ
ಫಣಿಪಕಂಕಣ ವಿಶ್ವರಕ್ಷಾ
ಮಣಿಯೆ ಈ ಕಾನನದೊಳೆಲ್ಲಿಯ
ಬಣಗುದೇವರುಪೊಬ್ಬನಿರ್ದಹನೆನಲುಚಿತವಲ್ಲ ೨೮

ಕೇಳಭವ ಕೈಲಾಸದಂತಹ
ಮೇಲುದುರ್ಗಮದೆಮಗಿರಲ್ಕೀ
ಕೀಳುಮನ್ನೆಯರಿಂತೆ ವನದುರ್ಗದೊಳಗಿರಲೇಕೆ
ಏಳು ನಡೆ ನಡೆ ಎನುತ ಭಕ್ತಿವಿ
ಲೋಲ ದೀಪದ ಕಲಿಯನಾರು ವಿ
ಶಾಲ ಘನಪುಷ್ಪಕವಿಮಾನಂ ಮುಂದೆ ಬಂದಿರಲು ೨೯

ಆ ವಿಮಾನವನೇಱಿ ದೇವರ
ದೇವನುಂ ತಾನುಂ ಮಹಾಶೋ
ಭಾವಹಪ್ರಾಸಾದ ಮಂಟಪವಪ್ರಮುಖಸಹಿತ
ಭೂ ವಿಯತ್ತಳ ದೆಸೆಗಳೊಳು ಪ್ರಭೆ
ಯಾವರಿಸೆ ದೀಪದ ಕಲಿಯನಾ
ರೋವಿ ಸುರರುಘೆಯೆನುತಿರಲು ಹರಗಿರಿಗೆ ಕೊಂಡೊಯ್ದ ೩೦

೧–೨ ರಸನಿಧಿಯೊಳ (ಕ, ಥ, ಚ, ಪ). ೩–೪ ರಾಗಿ (ಕ, ಚ, ತ, ಥ, ಧ, ನ, ಪ, ಬ).

CC-0. Jangamwadi Math Collection. Digitized by eGangotri

ಪುರಹರನನಂದೊಲಿಸಿ ಕಾಯಂ
ಬೆರಸಿ ಮುಕ್ತಿಗೆ ಹೋಹ ಮಾಹೇ
ಶ್ವರರೊಳರು ಲೋಕಂಗಳೊಳಗೀ ದೇಗುಲಂ ಸಹಿತ
ಪರಮನಂ ಕೊಂಡೊಯ್ದ ಸಜ್ಜನ
ಶರಣರುಂಟೆ ಜಗಂಗಳೊಳಗ
ಚ್ಚರಿಯಲಾ ಧರೆಯೊಳಗೆ ಹುಟ್ಟಿದ ಭಕ್ತಿ ಹುಟ್ಟಿದುದು ೩೧

ಎಂದು ಸುರ ಮುನಿ ದನುಜ ಮನುಜರು
ಸಂದಣಿಸಿ ಕೊಂಡಾಡೆ ವೀರಾ
ನಂದಭಕ್ತಿಯ ಕಂದನಹ ದೀಪದ ಕಲಿಯನಾರ
ಸಂದಚಲಮುಗ್ಧಸ್ವಭಾವಂ
ಚಂದವಾಯ್ತಾತನ ಚರಿತೆಯಂ
ಬಂದು ಕೇಳ್ದರಿಗೋದಿದರ್ಗಿಷ್ಟಾರ್ಥವೊಂದುವುದು ೩೨

ಆಂತು ಸಂಧಿ ೧೫೯ಕ್ಕಂ ಪದಗಳು ೮೧೯ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಸಂಧಿ : ೧೬

*

ಸೂಚನೆ : ಉತ್ತಮಾಧಿಕ ಮುಗ್ಧಭಕ್ತಿಗೆ
ಚಿತ್ಸಮೊಲಿದು ಕಪರ್ದಿ ನಾಟ್ಯನ
ಮಿತ್ರಡಿಯರಿಗೆ ತನ್ನ ನಾಟ್ಯವನಾಡಿ ತೋಱಿದನು

ಮತ್ತೆಯುಂ ಕಾಂಚಿಯೊಳು ನಾಟ್ಯನ
ಮಿತ್ರಡಿಯನಾರೊಂದು ದಿವಸಂ
ಚಿತ್ರಮೊಸೆದೇಕಾಂಬ್ರನಾಥನ ದೇಗುಲಕೆ ಹೋಗಿ
ಆತ್ರಲಾಕೂ[೧]ತಾಡಿ[೨] ದೇವರು
ಪೊತ್ತ ತಾಂಡವಮೂರ್ತಿಯಂ ಕಾ
ಣುತ್ತ ನಿಬ್ಬೆಱಗಾಗುತಂ ಪೂಜಾರಿಗಿಂತೆಂದ ೧

ಮಲಹರನ ನಡುವೊಂದೆಸೆಗೆ ಒಲಿ
ದೊಲಿದುಕೊಂಡಿದೆ ಕೈಗಳುಂ ಕೆಲ
ಕೆಲಕೆನೆಸೆದುಱುಗಿದವು ಮೂಡೊಂಕಾಗಿ ಕಾಲೊಂದು
ನೆಲನನೂಱಿತ್ತೊಡಲನಾಂತುದು
ಉಳಿದ ಮೆಲ್ಲಡಿ ನೆಗೆದು ಕೊಂಕಿತು
ಹೊಳೆವ ಮೋಱೆಯು ಬೆಱಿತು ಕೊರಳುಂ ನುಲಿದು ಬಿಗಿಯಿತ್ತು ೨

---

* ರಾಗ : ಮಾಳವಗೌಳ (ಅ, ಡಾ, ಮ); ನಾಟಿ (ಚ, ಥ); ತೋಡಿ (ತ).
೧-೨ ತಾಂಡಿ (ಕ, ಚ, ನ, ಬ).

CC-0. Jangamwadi Math Collection. Digitized by eGangotri

ಶೂಲಪಾಣಿಯ ಕಂಗಳುಂ ನ
ಟ್ಟಾಲಿ ಬಿದ್ದೆವೆಗಳಲಿವೊಂದವು
ಮೇಲೆ ಶಿರವುಂ ನಿಲ್ಲದೊಂದೆಸೆಗಾಗಿ ಬಾಗಿದುದು
ಕೀಲಿಸಿದ ಜಡೆಮುಡಿಯು ಸಡಿಲ್ದುಱಿ
ನೇಲುತಿರ್ದುದು ಕಾರಣವಿದೇಂ
ಹೇಳು ನೀನೆನಲಾ ಶಿವಬ್ರಾಹ್ಮಣನು ನಸುನಗುತ ೩

ಆಯಿತೀಯಭವಂಗೆ ರೋಗವು
ವಾಯುದೋಷವಿದಂ ಕೆಡಿಸಿದಡೆ
ಕಾಯಜಾರಿಗತಿ ಪ್ರಮಾದಂ ತಳುವುಮಾಡಿದಡೆ
ಈಯೊಡಲು ಕೈಕಾಲು ಶಿರವ
ಯ್ಯೋ ಯಿವೀಗಳೆ ಡೊಂಕುಹೋಹವು
ಪಾಯವಲ್ಲಿದಕೌಷಧಿಗಳಂ ಬಲ್ಲೆ ನಾಂ ಕೆಲವ ೪

ಹೂಣೆ ಮಾಡಿಸು ಮಾಡಿ ರುಜೆಯಂ
ಮಾಣಿಸುವೆನೆಂದಣಕಿಸುತ್ತಂ
ಮೇಣುಸುರ್ವ ನುಡಿಗಡಣೆಯಂ ದಿಟವಾಗಿ ಕೈಕೊಂಡು
ಕ್ಷೀಣಕರ್ಮನು ಮುಗ್ಧಭಕ್ತಿ
ಪ್ರಾಣಿ ತನಗುಳ್ಳರ್ಥವೆಲ್ಲವ
ಕೀಣವಱಿಯದೆ ತಂದು ತದ್ಬ್ರಾಹ್ಮಣನ ಮುಂದಿರಿಸಿ ೫

ಒಡವೆಯಂ ಕೊಂಡಾದಡೆನ್ನಯ
ಮೃಡನ ರುಜೆಯಂ ಮಾಣಿಸಿದೆಯಾ
ದಡೆ ನಿನಗೆ ನಾನೆನ್ನ ಮಡದಿಯು ಯೆನ್ನ ನಂದನರು
ಬಿಡದೆ ದಾಸಿಯರಾಗಿ ನಡೆವೆವು
ತಡೆಯದಿಂತಾವಂದದಿಂದಾ
ದಡೆಯನಿತು ಪುಣ್ಯಂಗಳಂ ನೀ ಕಟ್ಟಿಕೊಳ್ಳೆನಲು ೬

CC-0. Jangamwadi Math Collection. Digitized by eGangotri

ಇತ್ತ ವಿತ್ತವನೆಲ್ಲವಂ ಕೊಂ
ಡತ್ತ ಪಾರ್ವಂ ಪೋಗಿ ಎಳೆಯಂ
ನೃತ್ತದೆಲೆ ಪಣ್ಣೆಕ್ಕೆಯೆಲೆಯವುಡಲಿಕೆಯೆಲೆಗಳನು
ಮತ್ತೆ ಕಿಱಿದೌಷಧಿಗಳಂ ಕೂ
ಡುತ್ತಮಿಟ್ಟಿದು ವಾಯುತೈಲಮೆ
ನುತ್ತದಂ ತಂದೀಶ್ವರನ ಸರ್ವಾಂಗದೊಳು ಪೂಸಿ ೭

ದಿಟ್ಟಪಾರ್ವಂ ಕಾಸಿ ತೆಗೆವುತ
ಪೊಟ್ಟಣವನಂಗೈಯ್ಯೊಳೊಯ್ಯನೆ
ಮುಟ್ಟಿ ಮುಟ್ಟಿ ಶರೀರದೊಳು ನಸುಶೇಖಮಂ ಮಾಡಿ
ಅಟ್ಟ ವಾತದ ತೈಲವಂ ತಾಂ
ಬೊಟ್ಟಿಡಿಸಿ ಲೇಪಿಸುತ ಪಥ್ಯಂ
ಗೊಟ್ಟಿದಕೆ ತಕ್ಕನಿತು ಜೋಪಾಸನವನಾಚರಿಸಿ ೮

ಇಂತು [1]ಪ್ರೋಗಲು ಕೆಲವು ದಿನಗಳು[2]
ಕಂತುಹರನಂ ನೋಡಿ ಭಕ್ತನು
ಚಿಂತಿಸುತ್ತಕಟಕಟಿನಿತು ದಿವಸಂಗಳಾಯಿತ್ತು
ಇಂತುಟಾದಡೆ ಗುಣವಳಿನೀಯದು[3]
ಮುಂತೆ ಗೌರೀಶನ ಶರೀರದೊ
ಳಿಂತು ಮಾಡಿದಡಂತಲಾ ನಾಂ ಭ್ರಾಂತಿಗೊಂಡಡಿದು ೯

ಈಯಡವಿಯೆಲೆ ಮದ್ದು ಮರನುಂ
ಕಾಯಿ ನಾರುಂ ಬೇರುಮಭಪನ
ಕಾಯರುಜೆಯಂ ಕಡೆಗೆ ಮಾಣಿಸಲಾಪವೇ ಇನ್ನು
ವಾಯವವು ತಡೆಯದೆ ಮದೀಶನ
ವಾಯುದೋಷಕೆ ವೈದ್ಯ ನಾನೆಯ
ಲಾಯೆನುತ್ತಾ ಅಯ್ಯನಚಲಿತ ಧೈರ್ಯಯುತನಾಗಿ ೧೦

---

೧ ಲ (ಕ, ಚ, ಥ, ಧ, ಪ). ೨–೩ ಕಿಱಿದು ದಿನಂಗಳ್ಕೈದಲು (ಬ); ಕೆಲವು ದಿನಂಗಳ್ಕೈದಲು (ಥ). ೪–೫ ದೋಱಿದು (ಥ).

CC-0. Jangamwadi Math Collection. Digitized by eGangotri

ಆಳುಕದಂಜದೆ ತನ್ನ ಕೊರಳಿಂ
ಗಲಗನಾನಿಸಿಕೊಳಲೊಡನೆ ಹೋ
ನಿಲು ನಿಲೆನುತಾಗಳೆ ಪ್ರಸನ್ನತನಾಗಿ ಶಂಕರನು
ಎಳೆವೆಱಿಯ ಬಾಂದೊಱಿಯ ಕೆಂಜೆಡೆ
ಗಳ ನಿಟಿಲನಯನದ ಮುಗುಳ್ನಗೆ
ಗಳ ಮೊಗದ ಕಱಿಗೊರಳ ಫಣಿಕುಂಡಲದಭಯಕರದ ೧೧

ಶೂಲ ಖಿಡ್ಗ ಕಪಾಲಹಸ್ತಂ
ವ್ಯಾಲಚರ್ಮಾಂಬರಧರಂ ಸೌ
ಖ್ಯಾಲಯಾತ್ಮನು ಸರ್ವ ನಿಗಮಸ್ತುತ್ಯ[೧]ನನು[೨]ಪಮನು
ಕೈಲಭಿದಜಮುರಾರಿಮುಖಿ ಸುರ
ಜಾಲಪೂಜಿತಪದಯುಗಂ ಕರು
ಣಾಳು ನಾಟ್ಯನಮಿತ್ತಡಿಯನಾಲಿಂಗನಂಗೈದು ೧೨

ನಿನಗೆ ಮೆಚ್ಚಿದೆನೀವೆನೀವೆನು
ಮನದ ಬಯಕೆಗಳಾವವೈ ಬೇ
ಡೆನಲಭವ ನಾನೊಲ್ಲೆನೊಂದುವನವಧರಿಸು ನಿಮ್ಮ
ತನುವು ಬೇಱಿಂದಂದವಾಯಿತು
ಅನುವಳಿದು ವಿದ್ರೂಪಗೊಂಡುದಿ
ದೆನಿಸಿ ನೋಡುವಡೊಪ್ಪ[೩]ದಿದು ಎಡೆ[೪] ಡೊಂಕು ನೆಲೆಗೊಂಡು ೧೩

ಇದು ಸಹಜವೋ ರೋಗವೋ ಮಾ
ಜದೆಯಿದಂ ಪೇಳೆನಲಿದೆಲ್ಲಾ
ಮುದಿತ ತಾಂಡವರೂಪಮೆಂತೆನೆ ನೋಡು ನೀನೆನುತ
ಮದನರಿಪು ನಾಟ್ಯಕ್ಕೆ ನಿಂದು
ನ್ಮದದಿ ಹೋ ಎಂದೊಮ್ಮೆ ಡಮರುನಿ
ನದವನೀಯಲು ಸರ್ವಮಂ ಸಂಹಾರಪೆಯ್ದಿಸಲು ೧೪

೧–೨ ನಿರು (ಚ). ೩–೪ ದೀ ದೇಹದ (ಅ, ಡಾ, ತ, ನ, ಬ, ಮ).

CC-0. Jangamwadi Math Collection. Digitized by eGangotri

ಚರಣಗತಿಗಳ ಸಂ[೧]ಚಲತೆಯಿಂ
ನೆರೆದ ನಕ್ಷತ್ರಂಗಳುದುರಲು
ಭರಿತ ರೌದ್ರೋದ್ರೇಕ ವಿಕಟಾಲೋಕನೋತ್ಕರದಿಂ
ಸುರಪ ಹರಿಯಜಮುಖ್ಯರಳುಕಲು
ಪಿರಿದು ನಿಗಳದ ಗೆಜ್ಜೆಗಳ ಪೆ
ರ್ಮೊರಹಿಗಂಜಿ ಭವಾನಿಯ[೨]ರ್ಧಶರೀರಮಂ[೩] ಬಿರಸೆ ೧೫

ಭಾಸುರೋನ್ನತ ಬಹಳ ಪಟು ಘಂ
ಟಾಸುರಧ್ವನಿಯಿಂದೆ ದಿಕ್ಕುಗ
ಳೋಸರಿಸೆ ವುಚ್ಛ್ವಾಸ ನಿಶ್ವಾಸೋಪಹತಿಯಿಂದ
ಆ ಸಮುದ್ರಜ್ವಲನವಾಹಿಲು
ಲೇಸೆನಿಪ ಭೀಕರ ಸುಗತಿ ಗು
ಲ್ಲಾಸದಿಂ ಮೆಟ್ಟುವ ಪದದೊಳಿಳೆ ಧೂಳಿಪಟವಾಗೆ ೧೬

ತ್ವರಿತದಿಂ ಫಿಲ್ಲನೆ ತಿರುಗಿ ನಿಂ
ದುರವಣಿಗೆ ದಿಕ್ಕರಿಗ[೪]ಳುಡು[೫]ಗಲು
ನಿರುತವೆಸೆಯಲು ಜಾ[೬]ಱಿ ಠಂಕಾರಧ್ವನಿಯ ಮೇಲೆ
ಭರದಿ ಮೆಟ್ಟಲು ಕುಲನಗಂಗಳು
ಬಿರಿಯೆ ಚರಣಾಂಗುಷ್ಠದಿಂ[೭] ನಿ
ಷ್ಠುರದಿ[೮]ನುಜಿ[೯]ರ್ ನಟಿಸಿದಡೆಯಜಿಗಿಜಿಯಾಯ್ತು ತತ್‌ಕಮಠ ೧೭

ಮಂಡಿತೋರು ಜಟಾ ಘಟಪ್ರೋ
ದ್ದಂಡಹತಿಯಿಂದಂಬುರುಹಗ
ರ್ಭಾಂಡಕೂಟಕಟಾಹಮೊಡೆಯಲು [೧೦]ಪೃಥುಸ[೧೧]ಮುತ್ತುಂಗ
ಚಂಡಚೂಡಾಘಾತದಿಂದಲ
ಖಿಂಡ ತತ್ವಂಗಳು ತೆರಳುತಿರೆ
ತಾಂಡವೋದ್ಧತಿಯಿಂ ಧರಿಸಿದಹಿ ಭುಸ್ಸು ಭುಸ್ಸೆನಲು ೧೮

---

೧ ಚು (ಧ). ೨–೩ ರ್ಧಂ ತನ್ನುಮಂ (ತ, ಥ, ನ, ಪ). ೪–೫ ಳಡ (ತ, ಥ, ನ, ಪ). ೬ ನಾ (ಮ). ೭ ವತಿ (ತ, ಥ, ನ, ಪ). ೮–೯ ನೂಜಿ (ತ, ಥ, ನ, ಪ). ೧೦–೧೧ ತ್ರಿದಶ (ಕ, ಚ, ಥ, ಪ).

CC-0. Jangamwadi Math Collection. Digitized by eGangotri

ಬಿಡದೆ ಭುಸ್ಸೆನುತಿರ್ಪ ಫಣಿಪನ
ನಿಡುಸುಯಿಲುಗಳಿಗಳುಕಿ ದ್ರುಗು ಶಿವಿ
ಕಿಡಿಗಳೊಗೆ ಭುಗಿ ಭುಗಿಲು ಛಿಟಿ ಛಿಟಿಲೆನುತ ಮಿಗೆ ನೆಗೆಯೆ
ಕಡುನೆಗೆದ [೧]ಪಣಿಗಣ್ಣ ಶಿವಿ[೨]ಯಿಂ
ಜಡೆಗಳೆಡೆಯುಡುಪತಿ ಕರಂಗಲು
ಒಡನೆ ಸಸಿ ಕರಗಿದಡೆ ಸುಧೆ ತಲೆಯಿಂದಿಳಿದು ಪ[೩]ರಿಯೆ ೧೯

ಶಿರದ ಮೇಲಿಂದಿಳಿದು ಪರಿವುತ
ನೆರೆದಮೃತರಸಪೂರವಂತಾ
ವರಿಸುತಿರೆ ಜೀವಂಗಳಾಗಳೆ ಬಂದು ನಿಮಿಷದಲಿ
ಕರದೊಳುರದೊಳು ಮಂಡೆಯೊಳು ಕಂ
ಧರದೊಳಾಭರಣಂಗಳಾಗಿಹ
ಸುರರಸುರರ ಕಪಾಲಮಾಲೆಗಳಭಯಮೆನುತಿರಲು ೨೦

ಬೇಡಿ ಕರುಣವನೀಯೆನುತ್ತಂ
ಕೂಡೆ ಬೊಬ್ಬಿಡುತಾರುತಾಣತಿ
ಗೂಡಿ ತಾರೈಸುತ್ತಮುಬ್ಬುತ ಗೀತಜತಿಗಳಿಗೆ
ಹಾಡುತಂ ಸುಗತಿಗೆ ವಿನೋದ
ಕ್ರೀಡೆಯೆಸೆಯಲು ಪ್ರಮಥನಾಥರು
ನೋಡುತಿರೆ ತಾಂಡವಮನಾಡುವೆನಿಳೆಯೊಳಂತಾಗಿ ೨೧

ಎಸೆವ ತಾಂಡವಮೂರ್ತಿಯಂ ಭಾ
ವಿಸಿ ಭಜಿಸುವರು ಭಕ್ತರುಗಳೆಂ
ದೊಸೆದು ಬೆಸಸಿದನಾದಿದೇವನು ಮುಗ್ಧಭಕ್ತಂಗೆ
ಅಸಮ ನಾಟ್ಯನಮಿತ್ತಡಿಯರಂ
ವಸುಮಯಾಂಚಿತ ಪುಷ್ಪಕವನೇ
ಱಿಸಿ ರಜತಶೈಲಕ್ಕೆ ಕೊಂಡೊಯಿದನು ಮಹಾದೇವ ೨೨

೧–೨ ದೃಗುಶಿವಿಯ ಸೆಕೆ (ಕ, ಚ, ಥ, ಪ, ಬ, ಮ). ೩ ಸು (ತ, ನ).

CC-0. Jangamwadi Math Collection. Digitized by eGangotri

ಮುಗ್ಧ ನಾಟ್ಯನಮಿತ್ತಡಿಯ ಸಂ
ಸ್ನಿಗ್ಧಭಕ್ತಿಚರಿತವನೊಲ್ದು ವಿ
ದಗ್ಧತನದಿಂದೋದಿದವರುಂ ಕೇಳಿದವರುಗಳು
ದಗ್ಧಕಲ್ಮಷರಾಗಿ ವಿಶ್ರುತ
ವಾಗ್ವನಿಕರೆಂದೆನಿಸಿ ನಿಜ ಸ
ಮ್ಯಗ್ಧವಳ ಕೀರ್ತಿಪ್ರಭಾವಿಭವಂಗಳಿಂದಿಹರು ೨೩

ಅಂತು ಸಂಧಿ ೧೬ಕ್ಕಂ ಪದಗಳು ೮೪೨ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಸಂಧಿ : ೧೭

*

ಸೂಚನೆ : ಕಣ್ಣನರ್ಪಿಸಿ ತನ್ನಸೊಲಿಸಿದ
ಕಣ್ಣಪನ ಭಕ್ತಿಸ್ಥಿತಿಗೆ ಮು
ಕ್ಕಣ್ಣದೇವನು ಮೆಚ್ಚಿ ಮೆಱೆದನು ಕಾಳಹಸ್ತಿಯಲಿ

ಕಾಳಹಸ್ತಿಗಿರಿಪ್ರದೇಶವಿ
ಶಾಲವನದೊಳು ಚರಿಸುತಿಪ್ಪ ಸು
ಲೋಲಮುಗ್ಧಶಿವೈಕ್ಯನಪ್ಪುಡುವೂರ ಕಣ್ಣಪ್ಪ
ನೀಲದೀರ್ಘಶರೀರಿ ದುಃಕಲಿ
ಕಾಲವೈರಿ ಕಿರಾತರುದ್ರಾ
ಭೀಳ ಕಾರಣಮೂರ್ತಿ ಪರಹಿತಕರುಣಗುಣವರ್ತಿ ೧

ಹೊಳೆವ ಹೀಲಿಯ ದಂಡೆ ಮಂಡೆಯೊ
ಳೊಲೆವ ಚವರಂ ಬೆನ್ನಿನೊಳು ಪಸು
ರ್ದಿಳಿರಿ ಕುಪ್ಪಸದೊಡಿಗೆ ಗುಂಜಾಭರಣವೆಡಗೈಯ
ಬಿಲು ಬಲದ ಕೈಯಂಬು ಟೊಂಕದೊ
ಳಲಗೆಸೆಯೆ ಒಡತಣ ಪುಳಿಂದರು
ಬಳಸಿ ಬೇಂಟೆಯನೆಯ್ದಿ ಬನದೊಳು ತೋಹಿನಲ್ಲಿರ್ದು ೨

---

* ರಾಗ : ಕಾಂಬೋದಿ (ಧ); ಭೂಪಾಳಿ (ತ). ೧ ಮೂ (ದಾ, ಅ). ೨–೩ ಳದ (ಸ).

CC-0. Jangamwadi Math Collection. Digitized by eGangotri

ಕಿಱಿದು ನಿದ್ರಿಸಲಲ್ಲಿ ರುದ್ರನ
ಕುಱುಪುವೆರಸಿ ತಪಸ್ವಿವೇಷಂ
ಮೆಱೆಯೆ ಶಿವನೆಯಿತಂದು ಚೌಕದೊಳಿರಿಸಿ ನೊಸಲಿನಲಿ
ನೆಱೆ ಭಸಿತಮಂ ಪೂಸಿಯಾತಂ
ಗೆಱೆದಮಳ ಶಿವತೀರ್ಥಕಳಶವ
ನಱುಹಿ ಪಂಚಾಕ್ಷರಿಯನಭಯಕರವ ಶಿರದೊಳಿಟ್ಟು ೩

ಹೋಗ ಹೋಗಲು ಕಾಣ್ಬೆ ಮುಂದಣ
ಭಾಗದಲಿ ಶಿವಲಿಂಗವೆಸೆ ನೀಂ
ಹೋಗು ನಿನ್ನಯ ಪ್ರಾಣಲಿಂಗಂ ತಾನದುವೆಯೆಂದು
ರಾಗದಿಂದುಪದೇಶಿಸಿದನೆನು
ತಾಗಳ್ ಕನಸಂ ಕಂಡು ನಿದ್ರಾ
ಯೋಗವಂ ತಿಳಿದೆದ್ದು ತಾ ದೆಸೆದೆಸೆಯನೀಕ್ಷಿಸಲು ೪

ಎಂದುವಿಲ್ಲದದೊಂದು ಮಾರ್ಗಂ
ಮುಂದೆಸೆಯೊಳಿರೆ ನೋಡಿ ಚೋದ್ಯಮ
ನೊಂದಿ ದರುಶನವಿದು ನಿದರ್ಶನವಾಯ್ತಲಾ ಎನಗೆ
ಎಂದು ತನ್ನೊಡತಣ ಶಬರರಂ
ಪಿಂದಿರಿಸಿಯೊರ್ವನೆ ಬರುತ ಕ
ಣ್ಣಿಂದನಿದಿರಲಿ ದಿವ್ಯಲಿಂಗವಿರಲ್ಕೆ ಕಂಡುಬ್ಬಿ ೫

ಹೊಡವಡುತ್ತಂ ಕನಸುವಂ ಕಂ
ಡೆಡೆಗೆ ಗೋಣೆಯನೊಯ್ದಡಱಿಕೊಳ
ಗೊಡನೊಡನೆ ಫಲಸಿದ್ಧಿ ಪಿರಿದಾಗಿಹುದು ಭಾಗ್ಯವಲಾ
ಜಿಡೆಯ ತಾಪಸಿ ಮುನ್ನ ಹೇಳಿದ
ಮೃಡನೆ ತನ್ನಯ ಪ್ರಾಣವಲ್ಲಭ
ನೊಡೆಯನಹನೆಂದಾತ್ಮದೊಳು ಹಾರೈಸಿ ನಿಶ್ಚಯಿಸಿ ೬

೧–೨ ಮಂ (ಕ, ಚ, ಥ, ಪ, ಬ, ಮ). ೩–೪ ಶಿವನಾಗ (ತ, ನ).

CC-0. Jangamwadi Math Collection. Digitized by eGangotri

ಲೇಸೆನಿಸಿದೀ ಪ್ರಾಣಲಿಂಗವ
ನೋಸರಿಸಿದಡೆ ಮಾರ್ಗವಲ್ಲಿದು
ಭಾಷೆಯೆ[೧]ನ್ನಯ ಪಳ್ಕಿಗೀತನನೀಗ ಕೊಂಡೊಯ್ದು
ಬೇಸಟಿದೆ ಹುಲುಗುಡಿ[೨]ಲನಿ[೩]ಕ್ಕುವೆ
ನಾಸುರದೆಡೆಯೊಳಿರಿಸಬಾರದು
ಬೋಸರಿಸಿ ನಂಬಿಸಿ ನಮಿಸಿ ಕೊಂಡಾಡಿ ಮುಂಡಾಡಿ ೭

ಬೇಕೆನಿಪ ವಸ್ತುಗಳನಾದಡೆ
ಲೋಕದೊಳ[೪]ಗೆಲ್ಲ[೫]ಅಸಿ[೬] ಕೊಟ್ಟು ವಿ
ವೇಕದಿಂದಾನೊಲಿಸಿ ಕೊಂಡೊಯಿದಪೆನೆನುತ ನೆನೆದು
ಏಕ ಶಿವನಿಷ್ಠಾಪರಂ ಮು
ಗ್ಧೈಕಹರುಷಿತಭಾವನಿಂದುಕ
ಳಾಕಿರೀಟಂಗರ್ಥಿಯೊಳು ಕಣ್ಣಂದನಿಂತೆಂದ ೮

ಕಟಕಟಾ ಪೇರಡವಿಯೊಳಗೆ
ಕ್ಕಟಿಯಿದೇತಕೆ ನವೆವುತಿರ್ದಪೆ
ಘಟಿಸದಾವಾವೂರ ಗೊರವರೊಡನೆ ಮುನಿದು ಬಂದೈ
ದಿಟವುಸುರು ಮುನಿಸಂ ತಿಳುಹುವೆಂ
ನಿಟಿಲಲೋಚನ ಬಹ ಪರುಷೆಯು
ತ್ಕಟದ ದೊಂದಣಿಗಲಸಿ ಬಂದೈ ಸಿರಿಗಿರಿಯೊಳಿರದೆ ೯

ಚನ್ನನಂ ಕೂಡಿದಡೆ ಕೆಟ್ಟಿತು
ಚನ್ನಕುಲವೆಂದೆಯಿದೆ ಲೋಕಂ
ನಿನ್ನುವಂ ಹೊಱಗಿಕ್ಕಿದಡೆ ಸಿಗ್ಗಾಗಿ [೭]ಬಂದಿರ್ದೈ[೮]
ಮುನ್ನಿನಂತಜನಿಂದು ಕಾಮೋ
ತ್ಪನ್ನದಿಂ ಮರಿಯಾದೆ ತಪ್ಪಲು
ತನ್ನ ಬೇಂಟೆಯನಾಡಲೆಂದೀ ಅಡವಿಗೈತಂದೈ ೧೦

---

೧ ಗೆ (ಪ, ಸ). ೨–೩ ಸಲಿ (ಸ). ೪–೫ ಗಾನ (ತ, ನ). ೪–೬ ಗಜಿಸಿ ತಂದು (ಥ, ಧ, ಪ). ೭–೮ ನೀ ಬಂದೈ (ಸ).

CC-0. Jangamwadi Math Collection. Digitized by eGangotri

ಬಲದ ಕಡೆಗಿನ್ನೊಬ್ಬ ಹೊಸಕೋ
ಮಲೆಯನರ್ಥಿಸಿ ಮುನ್ನಿನಂದದೊ
ಳೊಲಿದು ತಪವಂ ಮಾಡಬಂದೈ ಉಗ್ರಕಾನನಕೆ
ಮುಳಿದು ಸವತಿಯರಿಬ್ಬರುಂ ಜೆಡೆ
ಗಳಿಗೆಯೊಡಲಿಗೆ ಪ್ರೋರಲವರಂ
ನಿಲಿಸಲಾಱದೆ ಬಂದು ಘೋರಾರಣ್ಯಮಂ[೧] ಪೊಕ್ಕೆ ೧೧

ಹಲವು ಸೂಳ್ಗೋರಂತೆ ನಂಬಿಯ
ಬಳಿಗೆಲಸಮಂ ಮಾಡಲಾಱದೆ
ಬಳಲಿಕೆಯನಾಱಿಸಿಕೊಳಲು ಬಂದಡವಿಯೊಳಗಿರ್ದೈ
ಹೊಲದೊಳಗಣುನ್ಮತ್ತದೆಲೆಗಳ
ನೆಳಸಿ ಗೊರವರು ತಂದು ಪೂಜಿಸ
ಲೆಲೆಮರುಳು ತಲೆಗೇಱಿ ಬಂದೀ ಅಡವಿಯಲಿ ಹೊಕ್ಕೆ ೧೨

ಎನ್ನ ಮೇಲಣ ಮೋಹಭಾವದೊ
ಳೆನ್ನುವಂ ಸಲಹಲ್ಕೆ ಬಂದಿರೊ
ಬಿನ್ನಹಂ ಶಿವಲಿಂಗ ಬಿಜಯಂಗೆಯ್ದಿರೆಲ್ಲಿರ್ದು
ನಿನ್ನ ಜೀವನವೆಂತು ನೀವಾ
ಸನ್ನವರ್ತಿಯೊಳಿಪ್ಪುದಾವೆಡೆ
ಎನ್ನೊಡನೆ ಪೇಳೀಸುವತ್ಸರವಿತ್ತಲಿರತೊಡಗಿ ೧೩

ಹೊತ್ತು ಬಹ ಮುದಿಯೆತ್ತು ನಿನ್ನುವ
ನೆತ್ತಿಹಾಕಿಯದೆತ್ತಲೋಡಿತು
ಕೃತ್ತಿವುಡೆಯನ್ನಿತ್ತಪೆಂ ನೀಂ ಬತ್ತಲಿರಲೇಕೆ
ಆರ್ತಿಯಿಂ ತನು ಹಸ್ತಿಕೊಂಡಿಪ
ವೃತ್ತಕುಚೆಯುಮೆ ಎಸಿತ್ತ ಸರಿದಳೊ
ಉತ್ತಮರಿಗಾಪತ್ತು ಬಂದಾ ಹೊತ್ತಿಗಾರುಂಟು ೧೪

---

೧ ಮೊಳು (ತ, ನ). ೨-೩ ಗಿರಿಜೆ (ಕ, ಚ, ತ, ಥ, ಧ, ನ, ಪ, ಬ, ಮ).

CC-0. Jangamwadi Math Collection. Digitized by eGangotri

ಘಟ್ಟದೊಳು ಬೆಟ್ಟಂಗಳೊಳಗನು
ಗೆಟ್ಟು ನೀವಿಲ್ಲಿರ್ದಡಂಜಿಕೆ
ಹುಟ್ಟಿದಿಹುದೇ ಕಾಳ್ಕೃಗಂಗಳ ಬಾಧೆಗಳು [೧]ಘನವು[೨]
ಧಿಟ್ಟ ಚೆಂಚರು ಬಂದು ಚಪ್ಪಳೆ
ಗುಟ್ಟಿಯೇಡಿಸಿ ಕಾಡಿದಲ್ಲದೆ
ಬಿಟ್ಟುಹೋಗರು ನಿನ್ನನೆನ್ನಯ ಪಳ್ಳಿಗೆಯಿತಂದು ೧೫

ತಣ್ಣನಿರು ಮೆಲುವಡೆ ಬೆಳಲ ತನಿ
ವಣ್ಣು ಮಾವಿನಹಣ್ಣು ನೇಱಿಲ
ಹಣ್ಣು ಕಳವೆಯ [೩]ಹಣ್ಗಳಿಲಚೆಯ[೪] ಹಣ್ಣು ತುಂಬುರದ
ಹಣ್ಣು [೫]ನೇಬಿಯ[೬] ಹಣ್ಗಳತ್ತಿಯ
ಹಣ್ಣು ಹುಣಸೆಯ ಹಣ್ಣು ಜೇನೆಯ
ಹಣ್ಣುಯಿಪ್ಪೆಯ ಹಣ್ಣದಱಿ ಹೂ ಮಧುರ ಮಧುವುಂಟು ೧೬

ಮಿಕ್ಕ ಹೆಮ್ಮರವಾಲುಮಂ ಹೊಡೆ
ಯಿಕ್ಕಿದುಯ್ಯಲು ವಾಯ್ದೆಯಿದ ಬಿದಿ
ರಕ್ಕಿಯೋಗರ ವೊಲಿವಡುಡುವಿನ ತುಪ್ಪವುಂಟಲ್ಲಿ
ಹಕ್ಕಿಗಳ ಪಲಲಂಗಳುಂಟೀ
ಸಕ್ಕೆ ಮೃಗಮಾಂಸಂಗಳುಂಟೀ
ತಕ್ಕೆ ಹಸಿದಿರಲೆಮ್ಮ [೭]ಕಾವಿಗೆ[೮] ಬಂದು ಸುಖಿದೊಳಿರು ೧೭

ಎಂದು ಮಿಗೆ ಬೋಧಿಸಲಭವನೇ
ನೆಂದಡುತ್ತರವೀಯದಿರೆ ಕ
ಣ್ಣಂದನೀ ಶಿವನೇಸುದಿನದಿಂದುಣ್ಣದಿರ್ದಹನೋ
ಎಂದು ನೆಱಿ[೩] ಹಸಿದುಸುರಲಾಱನೊ
ನಿಂದು ಮಾಣದೆ ಕಿವುಡರಂ ಕರೆ
ವಂದದಿಂದಾಂ ಕರೆಯಲೇನೇನಾದಡೀತಂಗೆ ೧೮

೧–೨ ಪಿರಿದು (ತ, ನ). ೩–೪ ಹಣ್ಣು ಏರದ (ಕ, ಚ, ಥ, ಪ). ೫–೬ ಬಿಲ್ವಿಯ (ಚ): ನಿಂಬಿ (ಅ, ಕ, ತ, ಬ); ಬಿಣ್ವೆ (ಮ). ೭–೮ ತಾಣಕೆ (ತ, ನ).

CC-0. Jangamwadi Math Collection. Digitized by eGangotri

ತಂದುಕೊಡುವೆನೆನುತ್ತ ಗಮನಿಸಿ
ಕಂದಮೂಲಫಲಂಗಳಂ ಮೃಗ
ವೃಂದವಂ ನಿಜ ದೃಷ್ಟಿಮಾತ್ರದಿ ತಾಂ ಪರೀಕ್ಷಿಸಲು
ಮುಂದೆಯದಱಿಂ ಮುನ್ನ ಧರೆಯೊಳು
ಸಂದ ರವಿಸುತ ಕೀರ್ತಿಮುಖಿ ಶಿಬಿ
ಕಂದವಾಹನರೀಶ್ವರಂಗರ್ಪಿಸಲಱಿಯದಿಂತು ೯

ಪರಹಿತಾರ್ಥದಿ ತಮ್ಮ ತನುಧ್ಯಾನ
ಹರಣ ವಸ್ತುಗಳಂ ಸವೆಸಿ ಸುರು
ಚಿರ ಯಶೋಧಿಕರಾದರಲ್ಲದೆ ದಿವ್ಯಲಿಂಗಕ್ಕೆ
ಪರಮ ಭಾಜನರಾಗರೆಂದು
ತ್ವರಿಸಿಯುತ್ತಮ ಭಕ್ತಿಯಲಿ ಸೌಂ
ದರ ಮಹಾಕಾಯರುಮೆನಿಪ ದನುಜೇಂದ್ರಪುಂಗವರು ೧೦

ಘೋರತಪವಂ ಮಾಡುತಿರೆ ಮಾ
ರಾರಿ ಹರುಷಿತನಾಗಿ ದನುಜರ
ವೀರಭಕ್ತಿಗೆ ಮೆಚ್ಚಿ ತಾನಿಂತೆಂದು ಬೆಸಸಿದನು
ಶೌರಿ ಪದ್ಮಭವೇಂದ್ರಭೋಗಾ
ಪಾರಪದವಿಗಳಂ ಕೊಡುವೆನತಿ
ಧೀರರಿರ ಬೇಡುವುದೆನಲ್ಕಭಿವಂದಿಸುತ್ತವರು ೧೧

ಹಿಂದೆಯಮ್ಮ ಜಲಂಧರಾಸುರ
ನಿಂದ ತನ್ನಭಿಮಾನವಳಿದ ಮು
ಕುಂದಪದವಿಯದೇಕೆಯೆಮ್ಮ ಮತಂಗಜಾಸುರನು
ಮುಂದುಗೆಡಿಸಿದಜತ್ವವೇತಕೆ
ಇಂದುಶೇಖರಯೆಮ್ಮ ತಾರಕ
ನಿಂದ ಭಂಗಂಬಟ್ಟ ದೇವೇಂದ್ರತ್ವವೇಕೆಮಗೆ ೧೨

---

೧ ಮ (ಕ, ಚ, ಥ, ಪ).

CC-0. Jangamwadi Math Collection. Digitized by eGangotri

ಅಂತುಮಲ್ಲದೆ ನಿಮ್ಮನರ್ಚಿಸಿ
ಸಂತತಂ ವ್ಯಾಘ್ರಾಂಧಕಾದಿ ಮ
ಹಂತ ದಾನವರಂದು ಪಡೆದರನಂತ ಮುಕ್ತಿಗಳ
ಅಂತಕಾಂತಕಭಕ್ತರಾಗಿ ನಿ
ತಾಂತ ಭಕ್ತಿಯೊಳೊಲಿಸಿ ಪಡೆವುದ
ದೆಂತರಿದು ನಿಮ್ಮಿಂದ ಪಡೆಯದದಾವುದೊಂದುಂಟೆ ೨೩

ದೇವ ನಿತ್ಯಾನಂದ ಕಾರು
ಣ್ಯಾವಲೋಕನ ಲೋಕಜೀವನ
ಜೀವಪಾವನರೂಪ ವಿಶ್ವಭುವನಭವನದೀಪ
ದೇವ ನಿಜಪದವಿಗಳನೆಲ್ಲವ
ದೇವ ಭೋಗಸುಖಿಂಗಳೆಲ್ಲವ
ನಾವು ಬಲ್ಲೆವು ಬಲ್ಲೆವೇನುವನೊಲ್ಲೆವವಧರಿಸು ೨೪

ಲಿಂಗವೆಮ್ಮಯ ಸೌಖ್ಯಮಯ ದೇ
ಹಂಗಳಂ ನಿಮಗಿಷ್ಟದಾಹಾ
ರಂಗಳಾಗಿರಲಿತ್ತು ಪಾಲಿಸು ಸಾಕು ನೀವೆನಲು
ಅಂಗಜಾರಿಯವರ್ಗೆ ಬೇಡಿದ
ಹಾಂಗೆ ಮಾಡುವೆನೆಂದು ಕರುಣಾ
ಪಾಂಗದಿಂದಾಲೋಕಿಸು[೧]ತಲಿಂ[೨]ತೆಂದನಸುರರಿಗೆ ೨೫

ಇಳೆಗೆಸೆವ ತಿರುಕಾಳತಿಯ ಮಲೆ
ಯೊಳಗೆ ಹೋಗಿ ಮೃಗಾಕೃತಿಗಳಂ
ತಳೆದು [೩]ಜನ್ಮಿಸಿಯಲ್ಲಿ[೪] ಚರಿಸಲು ನಿಮ್ಮುಪಂ ವಧಿಸಿ
ಪಲಲಪಾಕಂ ಮಾಡಿ ನೀಡಲು
ತೊಲಗದಾರೋಗಿಸುವೆ ನಾನಿಂ
ತೊಲವಿನರ್ಪಿಸಬಲ್ಲನಾ ಕಣ್ಣಪ್ಪನಂತಾಗಿ ೨೬

೧–೨ ತ್ತಿಂ (ತ, ನ). ೩–೪ ಜನಿಯಿಸಿ ನೀವು (ಕ, ಚ, ತ, ಥ, ನ, ಪ, ಬ, ಮ).

CC-0. Jangamwadi Math Collection. Digitized by eGangotri

ಎಂದು ಬೆಸಸಿದಡಸುರರಾಗಳೆ
ಬಂದು ಸತಿಸುತಹಿತರು ಸಹಿತಾ
ನಂದವೊಂದಿ ಮೃಗಂಗಳಾಗೀಶ್ವರಸಮೀಪದಲಿ
ಒಂದಿ ಜನ್ಮಿಸಿ ದನುಜ[೧]ವರ[೨]ರಿವ
ರೆಂದು ತಮ್ಮೊಪನಾರುಪಱಿಯದ
ಚಂದದಲಿ ವರ್ತಿಸುತಿರಲು ಮೇಣೆತ್ತ ಕಣ್ಣಪ್ಪ ೨೭

ಮುಂದೆ ಪಾಱುವ[೩] ಪರಿವ ವರಮೃಗ
ವೃಂದಮಂ ಕಾಣುತ್ತ ನಲಿದೊಂ
ದೊಂದು ಸರಳಿಂದಂ ಮೃಗವನೊಂದೊಂದನುಱಿ[೪] ಕೆಡಹಿ
ತಂದು ಕಿಚ್ಚಂ ಹೊಸೆವ ಕೋಲಂ
ಸಂಧಿಸುತ ಹೊಸೆಹೊಸೆದು ಸಂಭ್ರಮ
ದಿಂದ ಪಿರಿದುರಿಗೊಳಿಸಿ ಕೆಲವ[೫]ಡುಗಬ್ಬ[೬]ನಾಯ್ದೊಟ್ಟಿ[೭] ೨೮

ಪಲಲಮಂ ಖಿಂಡಿಸುತ ಶೋಧಿಸು
ತೆಲೆಯಮೇಲೊಳ್ಳಿತ್ತನಿರಿಸು
ತ್ತಳವಡಿಸಿ ಸುಂಟಗೆಯ ಕೋಲಲಿ ಪೊರಳ್ಚಿ ಕಾಸುತ್ತ
ಚಲುವವಹ ಮೃದುತರವೆನಿಪ ಪರಿ
ಮಳಿಪ ಹೊಸ ಖಿಂಡಂಗಳಂ ಸವಿ
ಗೊಳುತ ಪುಳಕಿಸಿ [೮]ಹೊಲಿದ ದೊ[೯]ನ್ನೆಯೊಳಿರಿಸಿ ಬಾಸಣಿಸಿ ೨೯

ಹಸುರಳಿದ ಛಿದ್ರದ ಕಿಱಿಯ ನೀ
ರಸದ ಕಠಿಣದ ಹಱಿದ ಗಾಳಿಂ
ಗೆಸಳು ಮುರುಟಿದ ಕೊನೆಮುಱಿದ ನೆಱಿ[೩] ಮುತ್ತದಿಂ ತೊಱಿದು
ಹೊಸಯೆಳೆಯ ಕೋಮಲದ ನವಕಂ
ಪಿಸುವ ನುಣ್ಪಿನ ತಂಪಿನಾವೋ
ದಿಸುವ ಸೊಂಪಿನ ಬಿಲ್ವಪತ್ರೆಯನಾಗ ಕೊಯಿತಂದು ೩೦

೧–೨ ರವ (ತ, ನ). ೩ ತ (ಕ, ಚ, ತ, ಥ, ನ, ಪ, ಬ, ಮ). ೪ ದ (ಕ, ಚ, ಥ, ಪ, ಬ, ಮ) ೫–೬ ಗಳನಿಕ್ಕಿ (ತ, ನ). ೭–೮ ಹೋಲಿಜೊ (ಅ, ಡಾ).

CC-0. Jangamwadi Math Collection. Digitized by eGangotri

ಆಲರ್ವ ಜುಂಜುರುದಲೆಯ ಸೆಜ್ಜೆಯೊ
ಳಳವಡಿಸಿ ಕೇದಗೆದೊಱಿಯ ನಿ
ರ್ಮಳಸಲಿಲಮಂ ಮುಕ್ಕುಳಿಸಿ ಕಣ್ಣಂದನೊಲವಿಂದ
ಬಿಲು ಸರಳುಗಳು ಎಡದ ಕೈಯಲಿ
ಬಲದ ಕೈಯಲಿ ಮಾಂಸವಿಹ ಪೇ
ರೆಲೆಯ ಜೊನ್ನೆಯನಾ ಶಿವೈಕ್ಯಂ ಪಿಡಿದು ನಡೆತಂದು ೩೧

ಹರನ ಮುನ್ನಿನ ಪೂಜೆಯಂ ಬಲು
ಗೆರಹುಗಾಲಲಿ ನೂಂಕಿ ವದನಾಂ
ಬುರುಹದೊಳು ತುಂಬಿರ್ದುದಕದಿಂ ಮಜ್ಜನಕ್ಕೆಱಿದು
ಶರದ ಪತ್ರೆಯನುದುರ್ಚಿ ಜೊನ್ನೆಯೊ
ಳಿರಿಸಿ ತಂದಾ ಮಾಂಸವರ್ಪಿಸಿ
ನಿರುತದಿಂ ಕಣ್ಣಪ್ಪದೇವಂ ಭಜಿಸುತಿರಲಿಂತು ೩೨

ಅಂದು ಭಜಿಸುವ ತಾಪಸಂ ನಡೆ
ತಂದು ತಚ್ಛಿವಲಿಂಗಮೂರ್ತಿಯ
ಮುಂದೆಸೆಯೊಳೀ ಪರಿಯನೆಲ್ಲಂ ಕಂಡು ಖಿತಿಗೊಂಡು
ನೊಂದು ಮನದೊಳಗಾವನಿಲ್ಲಿಗೆ
ಬಂದನೆಂತಹ ಮ್ಲೇಂಚ್ಛನೋ ಯೆಂ
ದಿಂತು ಈ ಅನ್ಯಾಯಮಂ ಮಾಡಿದಪನವನೆನುತ ೩೩

ತತ್ತಪೋಧನನೇನ ಮಾಳ್ಪೆನೆ
ನುತ್ತ ಹೇಸುತ ಮಾಂಸಮಂ ಹೊಱಿ
ಗತ್ತ ನೂಂಕಿ ಶಿವಾಲಯವಿದಪವಿತ್ರವಾಯ್ತೆನುತ[೩]
ಮತ್ತೆ ಮಿಂದಮಳಾಂಬುವಂ ತಾಂ
ಪೊತ್ತು ತಂದು ಸುಗೋಮಯದಿ ಬೆರ
ಸುತ್ತ ಶೋಧಿಸಿ ಸಾರಿಸಿದನಾ ದೇಗುಲವನೆಲ್ಲ ೩೪

---

೧ ದೊ (ತ, ಥ, ಪ). ೨–೩ ಯ್ತೆಂದು (ತ, ನ).

CC-0. Jangamwadi Math Collection. Digitized by eGangotri

ಮಂಗಳಾಗಮಮಮಂತ್ರಪೂತ ಜ
ಲಂಗಳಂ ತಳಿದೊಳಗೆ ಸಾಂಗೋ
ಪಾಂಗದಿಂ ಪಂಚಾಮೃತಸ್ನಪನಂಗಳಂ ಮಾಡಿ
ಲಿಂಗಮಂ ಪೂಜಿಸಿ ತದೀಶನ
ಹಿಂಗಡೆಯೊಳಿರುತಿರ್ದು ಶಾಬರ
ಪುಂಗವನ ಚಂದವನಱಿದು ಬೆಳಗಾಗಲೆಯಿತಂದು ೩೫

ಅಕ್ಕಟೆಂಜಲಮಾಂಸವಾತನ
ಮುಕ್ಕುಳುದಕಂ ಕಾಲಕೆರಹಿಂ
ದಿಕ್ಕಿ ನೂಂಕುವ ಭಕ್ತಿಯುಂಟೆಯಿದಾರು ಮೆಚ್ಚುವರು
ಸೊಕ್ಕಿ ನಡೆವನದೆಂತು ಸೈರಿಸ
ಲಕ್ಕವಂ ಬಲವಂತನಾನೇ
ಸಕ್ಕೆ ದುರ್ಬಲನಸಮವಿಗ್ರಹನೆಂದಿರಲುಬಹುದೆ ೩೬

ಬಲ್ಲಿದಂ ತಾನಾದಡಾಗಲಿ
ಮಿಲ್ಲಬೇಡನನಾವ ತೆಱದಿಂ
ಕೊಲ್ಲದೆಂತಹೆನೀ ಶಿವದ್ರೋಹವನಿದಂ ನೋಡಿ
ಬಲ್ಲಿಹಾನೆಯುವೊಂದು ಸೆಲದಿಯು
ಮಿಲ್ಲಿ ಹೆಣಗಿದವೆಂತೆನಲುಮಾ
ವಲ್ಲಭಂ ಬಿಸಿಲೊಳಗೊಣಗಿದಹನೆನುತವಾ ಜೇಡ ೩೭

ಪರಿವಿಡಿಗಳಿಂ ತನ್ನ ನೂಲಿಂ
ತೆರೆಯವೊಲು ಮೇಲ್ಕಟ್ಟಿನಂದದಿ
ಪರಿವೃತೋನ್ನತ ವೃಕ್ಷಗುಲ್ಮಲತಾ ತೃಣಂಗಳಲಿ
ಹುರಿಗೊಳಿಸಿ ಮೇಲಕೆ ಕಪೋತವ
ನಿರೆ ರಚಿಸಿ ಕರುವಿಟ್ಟದಱಿಂಗೊಳಂ
ಕುರಿಸಿ ಘಂಟೆಯಭೇರಿಯೆಸೆಯಲು ಶಿವಿರವಂ ನಿಲಿಸಿ ೩೮

೧ದು (ಅ, ಡಾ, ತ, ನ). ೨ತಾ (ತ, ನ). ೩ ಲೊಳು (ತ, ನ). ೪–೫ ಯುಮೆಯ್ದೆ (ಅ, ಡಾ, ತ, ನ).

CC-0. Jangamwadi Math Collection. Digitized by eGangotri

ದ್ವಾರಬಂಧ ಕವಾಟ ಕಲಿನ
ದ್ವಾರ ಗರ್ಭಾಗಾರಯುತ ಕರ
ವೀರ ಜಾತಿ ವಿ[೧]ಕುಳ[೨] ಮುಕುಳಕೋಹಳ ವಿಭಾತಿಯಲಿ
ಚಾರುತರದಶಶತ ಸಹಸ್ರದ
ಳಾರವಿಂದಾಪಾರ ಬಂಧಾ
ಕಾರ ಪೂಜಾವಿರಚನಾಲಂಕಾರಮಾಗಿರಲು ೩೯

ಸೆಲದಿ ಈ ಪರಿಯಲಿ ತ್ರಿಕಾಲದೊ
ಳೊಲಿದು ಭಜಿಸುತಮಿರಲನಿತರೊಳು
ಬಲವದಿಭನೆಯ್ತಂದದಱಿ ತೆಱಿನೆಲ್ಲವಂ ಕಂಡು
ಮುಳಿದು [೩]ಘುಳುಘುಳಿ[೪]ಸುತ್ತಿದೇತಱಿ
ಹುಳುವೊ ಲಿಂಗದ ಮೇಲೆ ನಿಚ್ಚಂ
ಬಳಸಿ ಹೊಲ್ಲಹ ನೂಲನಡರಿಸಿ ಹೋಗುತಿದೆಯೆಂದು ೪೦

ಶ್ರವಣಸಂಚಲಿತಾಕಲಿತ ಭವ
ಪವನದಿಂದದನಳಿದು ತತ್ಕರ
ವಿವರದಲಿ ತುಂಬಿರ್ದ ಕೇದಗೆದೊಱಿ[೫]ಯ ಸಲಿಲದಲಿ
ಶಿವನಿಗಭಿಷೇಕವನೆಱಿ[೬]ದುಮಾ
ರ್ದ್ರವದ ಕುಂಭಸ್ಥಳದ ಮೇಲಾಂ
ತವಸರಕೆ ತಂದಬ್ಜತತಿಯೊಳು ಪೂಜೆಯಂ ಮಾಡಿ ೪೧

ಮತ್ತಗಜವಿಂತಭವನಂ ಭಜಿ
ಸುತ್ತಮಿರೆ ಮೂಱಿವಸರದೊಳುಂ
ಮತ್ತೆ ಚೇಡಂ ಬಂದದಱಿ ವೃತ್ತಾಂತವಂ ನೋಡಿ
ಚಿತ್ತದೊಳು ಕೋಪಿಸುತ ನಾನಲ
ವೆತ್ತು ಮಾಡಿದ ದೇಗುಲವ ನೀ
ವುತ್ತಮರ್ಚನೆಗಳನಳಿದು ಹೋದಪುದಧಿಕಕರ್ಮಿ ೪೨

೧–೨ ನಜ (ಅ, ಡಾ). ೩–೪ ಘುಡುಘುಡಿ (ತ, ನ, ಬ).

CC-0. Jangamwadi Math Collection. Digitized by eGangotri

ಶಿವಶಿವಾ ಇಂತಹ ಶಿವದ್ರೋ
ಹವನೆಹಗೆ ಸೈರಿಸುವೆನಿನ್ನೇ
ಗುವೆನೆನುತಮೊಂದೆಡೆಯೊಳಡಗಿರಲಾನೆಯೆಯಿತಂದು
ಅವಗಡಿಸಿ ಮಾಡುವ ಪರಿಯನೆ
ಲ್ಲವನಱಿದು ಮುಳಿಸಿಂದುಪಾಯದ
ತವಕದಿಂ ತನ್ನಂತರಾಂತರಮಂ ವಿಚಾರಿಸದೆ ೪೩

ಕಾಲನೂಱಿತ್ತದಱಿ ಶುಂಡಿಲ
ನಾಳಮಂ[೧] ಹೊಕ್ಕಿಱಿದಿಱಿದು ಶುಂ
ಡಾಲಮಂ ತಲೆಗೇಱಿಕೊಂಡಿತು ಮುನ್ನವಂತಾಗಿ
ಕಾಳುಮಾರ್ಗವನಿಲ್ಲಿ ಮಾಳ್ಪಾ
ಭೀಳವಿಕ್ರಮನಾದಡಾಗಲಿ
ಬೀಳಹೊಡೆದುಱಿ[೨] ಕೆಡಹಿದಲ್ಲದೆ ಹೋಗೆ ನಾನೆನುತ ೪೪

ಶಿವನ ಮಱಿಯಲಿ ತಪಸಿಯಡಗಿ
ರ್ದವಸರದೊಳಾ ಕಣ್ಣಪನ ಮನ
ದವಿರಳ ಪ್ರಿಯಭಕ್ತಿಯಂ ಮುಗ್ಧಸ್ವಭಾವವನು
ಭವಹರಂ ತಾಂ ತಮ್ಮಡಿಗೆ ತೋ
ಱುವೆನೆನುತ ತತ್‌ಕ್ಷಣದೊಳಗೆ ನೋ
ಡುವಡೆ ವಿಪರೀತ ತ್ರಿಣೇತ್ರಂ ಭರಿತವಾಗಿರ್ದ ೪೫

ಒಂದು ಮುಖಮಂ ಧರಿಸಿ ಬಲಗ
ಣ್ಣಿಂದುದಕ ಸುರಿವುತ್ತಮಿರೆ ಕ
ಣ್ಣಿಂದನೆಂದಿನ ಚಂದ[೩]ದಿಂ ನಡೆತಂದು ನಿಂದಿರಲು[೪]
ಮುಂದೆ ಲಿಂಗದ ಕಂಬನಿಗಳೊಗು
ವಂದಮಂ ಕಂಡಾಗ ಬೆ[೫]ಬ್ಬೆಱಿ
ಗೊಂದಿ ಭಯವಿಭ್ರಾಂತಿಗೊಂಡು ಮನಂ [೬]ಕೆದಱಿ[೭] ಹೆದಱಿ ೪೬

---

೧ ದೊಳು (ಕ, ಚ, ತ, ನ, ಪ, ಬ,) ೨–೩ ದಿಂ ನಡೆತಂದು ನಡೆತಂದು (ತ, ನ); ದಲಿ ಭರ ದಿಂದ ನಡೆತಂದು (ಥ, ಪ). ೪ನಿ (ಥ, ಪ). ೫–೭ ಕರಗಿ (ಸ).

CC-0. Jangamwadi Math Collection. Digitized by eGangotri

ಹರನ ಮುನ್ನಿನ ಪೂಜೆಯನಿತಂ
ಕೆರಹುಗಾಲಲಿ ನೂಂಕಿ ಕಳೆದು
ಬ್ಬರಿಸೆ ಮುಕ್ಕುಳೊಳಿರಿಸಿ ತಂದುದಕವಿನುಗುಳ್ದು ತನ್ನ
ಶರದಿಮೇಲಣ ಪತ್ರೆಯಲಿ ಶಂ
ಕರನನರ್ಚಿಸಿ ಕರದೊಳೊದವಿದ
ಸರಸಮಾಂಸವನರ್ಪಿಸುತಮಿರಲಾಯವಸರದಲಿ ೪೭

ಗೌರಿಯರಸಂಗಕ್ಷಿಜಲಪರಿ
ಹಾರವಾಗಲ್ಕೆಂದು ಸಂತತ
ಧಾರೆಗಳನೆತ್ತುವವೊಲುದಕಂ ನೇತ್ರದೊಳು ಮುಸುಕೆ
ವೀರಭಕ್ತನ ಪದನಿಹತಿಗೆ ಶಿ
ರೋರುಗಂಗಾವಾರಿ ತುಳುಕಿಯ
ಪಾರಪಾದೋದಕವೆನಿಸಿ ಮೇಲ್ವರಿದು ಪೂರಿಸಲು ೪೮

ಆಕುಟಿಲಾತ್ಮನ ಮುಕ್ಕುಳುದಕಂ
ಪ್ರಕಟವಾಗಲು ಸುಪ್ರಸಾದೋ
ದಕವೆನಿಸಿತು ತದೀಯ ಲಿಂಗಾಪಾಂಗಸಲಿಲವದು
ಸುಕರಲಿಂಗೋದಕಮದಾಗಿಯ
ಧಿಕವುಗಲು ತ್ರಿವಿಧೋದಕಂ ಪಾ
ವಕನಯನನೊಡಲಲ್ಲಿ ನಿರ್ಮಳವಾಗಿ ರಂಜಿಸಲ್ ೪೯

ವಿವರಿಸುವಡಾದಿಪ್ರಸಾದಿಯೊ
ಳವಿರತಂ ತ್ರಿವಿಧೋದಕಂ ಸಂ
ಭವಿಸುವುದು ಮರಿಯಾದೆಯೆಂಬವೊಲವಯವಂಗಳಲಿ
ಪ್ರವಿಮಲಾಂಬುಗಳೆಯ್ದೆ ಪಸರಿಸೆ
ತವಕದಿಂ ಕಣ್ಣಪ್ಪನಚ್ಚರಿ
ಗವಿದಪಾಂಗಾಶ್ರುಗಳಧಿಕವಾಯ್ತೆನುತ ಬೆಱಗಾಗಿ ೫೦

೧–೨ ನೆಜಿದು (ಸ). ೩–೪ ಲಿರಿಸಿದ (ಥ, ಪ). ೫–೬ ಪತ್ರೆಯಲಿ (ಕ, ಚ, ಥ, ಪ, ಬ). ೭ ಜಿ (ಥ, ನ). ೮–೯ ಸಿತು (ಥ, ಪ).

CC-0. Jangamwadi Math Collection. Digitized by eGangotri

ಹತ್ತೆ[೧]ಸಾರ್ದಂದಕ್ಷಿ[೨]ಯಂ ನೋ
ಡುತ್ತವಯ್ಯೋ ಅಯ್ಯೊ ಹೇಳು ನಿ
ಮಿತ್ತವಾವುದು ನಿನ್ನ ಕಣ್ಣಲಿ ನೀರು ಸುರಿವು[೩]ತಿದೆ[೪]
ಮೈತ್ತಿಕೆಯ ನೆಱಿ[೫] ಪೊತ್ತ ಭಾರದಿ[೬]
ನೆತ್ತಿವೊತ್ತಿದಡಳುಕಿ ನೀ ಬೇ
ಸತ್ತೆಡೆಯೊಳಾದಡೆಯಪಾಂಗೋದಕಮಿನಿತುಯಿಲ್ಲ ೫೧

ನಿನ್ನ ನಿಂದೆಯನಂದು ಕೇಳ್ದುಮೆ
ತನ್ನೊಳುರಿ[೭]ದಲ್ಲಿಲ್ಲ[೮] ಕಂಬನಿ
ಮುನ್ನ ಕಲ್ಲೊಳಿಡಲ್ಕೆ ನೋವಂದಿಲ್ಲ ಕಣ್ಣೀರು
ಚಿನ್ನ ಮಗನಂ ಪಿತನ ಕೈಯಲಿ
ಛಿನ್ನ ಛಿನ್ನಂಗೆಯ್ಸಿದೆಡೆಯಲಿ
ಪನ್ನಗೇಂದ್ರಾಭರಣ ಕರುಣದಿನಶ್ರುಜಲವಿಲ್ಲ ೫೨

ಹಿಂದೆ ಪರಸತಿಗಾಗಿ ಹಿಡಿವಡೆ
ದಂದು ಭಂಗಿಸುವಲ್ಲಿ ದೃಗುಜಲ
ಬಿಂದುವೊಂದುಂ ಹೊಱಿವಡದು ಪರಿಪರಿದು ಸೀರೆಯನು
ಮುಂದೆ ಬಿಸುಡಲು ಭೂಸುರರು ಮುಳಿ
ಸಿಂದ ಕಾಡಿದಡಿಲ್ಲ ಕಂಬನಿ
ಇಂದದೇನು ನಿಮಿತ್ತ ಸಲಿಲಂ ನಿನ್ನ ನಯನದಲಿ ೫೩ *

ಮಕ್ಕಳಂ ಪೆಂಡಿರುಗಳಂ ತೊಱಿ[೯]
ದುಕ್ಕಿ ಗಹನದ ಮೃಗ[೧೦]ವಿತತಿಯೊ[೧೧]ಳು
ಸಿಕ್ಕಿದೆನು ನಾನೆಂದಳುವ ಪರಿಯೋ ಮಱಿಗಿ ಮಱಿಗಿ
ಅಕ್ಕಟಕಟೇಕಾತಿಯಾದೆನು
ಮಿಕ್ಕ ಲೋಕಾವಳಿಯ ನೀನೆಂ
ತಕ್ಕಱಿಂ ಸಲಹುವೆನೆನುತ ಧೃತಿ[೧೨]ಗೆಟ್ಟಳುವ ಪರಿಯೆ[೧೩] ೫೪

೧–೨ ಗಯ್ತಂದಕ್ಷಿ (ಕ, ಚ, ಥ, ಪ, ಬ). ೩–೪ ದೇಕೆ (ತ, ನ). ೫ ಕೆ (ನ). ೬–೭ ದಂದಿಲ್ಲ (ತ, ಬ); ವಲ್ಲಿಲ್ಲ (ಕ, ಚ). ೮–೯ ನಿಕರದೊ (ಥ, ಪ). * ಈ ಪದ್ಯ ತ ಪ್ರತಿಯಲ್ಲಿಲ್ಲ. ೧೦–೧೧ ಯಿಲ್ಲದಳುತಿರ್ದ್ಯೆ (ಥ, ಪ).

CC-0. Jangamwadi Math Collection. Digitized by eGangotri

ಬಲಿದುದರದುರಿಯಿಂದೆ ಹಸಿವಿಂ
ನಿಲಲಱಿಯೆನೆನ್ನಾಳು ಬಾರದೆ
ತಳುವಿದನು ತಾನೇತಕಿಂದೆಂದಳುತಮಿರ್ದಪೆಯೊ
ಕೆಲಸವಾಗಳು ಮಾಡಲಾಱಿದೆ
ಬಳಲುತೆನ್ನಂ ತೊಱೆದು ತನ್ನಯ
ನಿಳಯಕೆಯ್ದಿದನೆಂದು ಚಿಂತಿಸಿ ನೀನಳುವ ಪರಿಯೊ ೫೫

[೧]ಚಂಡ[೨]ಮೃಗಕುಲವಲ್ಲಿಯೆನ್ನುವ
ನಂಡಲೆವವೆಂದಳುತಮಿರ್ದೆಯೊ
ಚಂ[೩]ಡಿಹುಳುಹೊಟ್ಟೆಗಳಡಿಗಡಿಗೆ ನಿನ್ನನಡರಿದಡೆ
ಕಂಡು ಹರಣಕ್ಕಂಜಿ ನೆಱಿ[೩] ಭಯ
ಗೊಂಡು ನೀನಳುತಿರ್ದೆಯೋ ಮಱಿಂ
ಕೊಂಡಖಿಂಡಾಶ್ರುಗಳೊಗುತ್ತಿರಲಳುತಮಿರಲೇನು ೫೬

ಆಪ್ಪ ದೇವರೆ ಪೇಳೆನುತ ಬಿಗಿ
ಯಪ್ಪುವಂ ಮುದ್ದಿಸುವನೆನ್ನಂ
ತಪ್ಪ ಮಗನಿರಲಪ್ಪುಗಳಿನೀ ನೆನೆಯಲೇಕೆನುತ
ಱಿಪ್ಪೆಯಂ ತೆಗೆದೀಕ್ಷಿಪಂ ಕ
ಣ್ಣಪ್ಪುವಂ ತೊಡೆವಂ ಬಿಡದೆ ಕ
ಣ್ಣಪ್ಪದೇವನು ತನ್ನ ಮನದೊಳಗೆಯ್ದೆ ಬಿಸುಸುಯಿವ ೫೭

ಪಿಂಗಿಯುಂ ನೆಱಿ[೪] ಪಿಂಗದೀ ವ್ಯಾ
ಸಂಗವಯ್ಯೋ ಎನುತ ಶಿವನಂ
ಹಂಗಿಸುವನೀ ಪರಿಯ ದೇವರು ನಿನ್ನುವಂ ನಗರೆ
ಲಿಂಗವುಡುಗುಡುಗುಡುಗು ತಂದೆಯ
ನಂಗಹರ ಹರ ಎನುತ ನೇತ್ರಜ
ಲಂಗಳಂ ಪೇರುರದೊಳೊತ್ತುವನಳಲಬೇಡೆಂದು ೫೮

೧–೨ ದಂಡಿ (ಥ, ಪ, ಸ). ೩ ದಂ (ತ, ನ).

CC-0. Jangamwadi Math Collection. Digitized by eGangotri

ಚಿತ್ರವೆನ್ನಯ ಮುಗ್ಧತನವೀ
ನೇತ್ರದೊಳಗಣ ಕಸವಿದೆಂಬವೊ
ಲಾ ತ್ರಿನೇತ್ರನ ನೇತ್ರವಂ ಶೋಧಿಸುವನಾಸಱದೆ
ಮೈತ್ರದಿಂ ಕೈವೆರಳ್ಗ[೧]ಳಿಂ ಸಿತ
ಗಾತ್ರನಂಬಕದೆವೆಗಳಂ ಸತ್
ಪಾತ್ರನೊತ್ತುತ ರವೆ ಸಿಲುಕಿತೆಂದುಡುಗದೂದುವನು ೫೯

ನೀಳನಾಲಗೆಯಿಂದಮಾಲಿಯ
ಮೇಲೆ ತಿರುಹುತ್ತೊರೆದೊರೆದು ಶಿವ
ನಾಳು ನೋಡುವನುಟ್ಟ ಸೀರೆಯ ಪೊಟ್ಟಣಂಗಟ್ಟಿ
ಶೂಲಿಯಕ್ಷಿಗೆ ಬಾಯ ಶೇಖಿವ
ನೋಳಿಯಿಂ ನಸು ಹತ್ತಿಸುತ್ತಿರೆ
[೨]ಸೇಲಿ[೩]ಯೆಲ್ಲಂ ನನೆಯಲಚ್ಚರಿವಡುವನೊಡನೊಡನೆ ೬೦

ಮತ್ತೆ ಈ ಕಡೆಗಣ್ಣೊಳಂಗುಲ
ನೊತ್ತಲಾ ಕಡೆಗಣ್ಣೊಳಪ್ಪುಗ
ಳೊತ್ತಿ ಸುರಿವುತ್ತಿರ್ಪವೀ ಕಡೆಗಣ್ಣನಂಗುಲದಿ
ಒತ್ತಲಾ ಕಡೆಗಣ್ಣೊಳುದಕವೊ
ಗುತ್ತಮಿಪ್ಪವದಕ್ಕೆ ಶಿವನಂ
ಸುತ್ತಿ ಸುತ್ತಿ ಬರುತ್ತ ನೋಡುತ ಹತ್ತಿರಿಗೆ ಬಂದು ೬೧

ಎರಡು ಕಣುಕುಣಿಕೆಗಳನಾತಂ
ಬೆರಳುಗಳಿನಿಂತೊತ್ತಲೊತ್ತಲು
[೪]ನೆರೆ ನೆರೆದು[೫] ಕಣ್ಣೆಯ್ದೆ ಕುಣಿಕೆಗಳಾಗಿ ಮೇಲ್ಪರಿದು
ಸುರಿವ ಕಣ್ಣಿನ ಕುಣಿಕೆಗಳನಾ
ಕರತಳದಿ ನೆಪಿ[೬] ಮುಚ್ಚಲೊಡನಿ
ತ್ತರದೊಳು[೭]ಚ್ಚಳಿ[೮]ಸುತ್ತ ಚಿಮ್ಮಿಸಿ ಪಾಟುವಂಬುಗಳು ೬೨

೧ಳೊ (ಕ, ಚ, ಬ, ಮ, ಸ). ೨–೩ ಸೀರೆ (ಕ, ಚ, ಥ, ನ). ೪–೫ ತರತರದೆ (ತ, ನ). ೬–೮ ಚ್ಚರಿ (ಸ).

CC-0. Jangamwadi Math Collection. Digitized by eGangotri

ಎಡೆವಿಡದೆ ನೇತ್ರಾಶ್ರುಗಳು ಸೆರೆ
ಯೊಡೆದೊಗುತ್ತಿರಲಾವ ತೆಱದಿಂ
ದುಡುಗವೇಗುವೆನೆನುತ ಸಂತಾಪಿಸುವನೊ೧ಱಲು೨ವನು
ಆಡಿಗಡಿಗೆ ಪೊಡಮಡುವನಂಜುಳಿ
ಗೊಡುವನಳುವನು ಬೀಳ್ವನೇಳುವ
ನೊಡನೆ ಶಿವನಂ ನೋಡುವನು ಮೇಣ್ ತನ್ನೊಳಿಂತೆಂಬ ೬೩

ಸುಕರ ಹರುಷಾಶ್ರುಗಳಿವೆಂಬೆನೆ
ಸುಕರ ಹರುಷವದಿಲ್ಲ ಮುಖದಲಿ
ಸ್ವಕರುಣಾಂಬುಗಳೆಂಬೆನೇ ಕರುಣಾಂಬುಗಳಿವಲ್ಲ
ಅಕಟ ಉಷ್ಣದ ವಾರಿಘರ್ಮೋ
ದಕವಿದೆಂದೂಹಿಪೆನೆ ಘರ್ಮೋ
ದಕವೊಳವೆ ನೇತ್ರಂಗಳೊಳಗೆಂದುಂ ವಿಚಾರಿ೩ಸಲು೪ ೬೪

ಒಂದು ದುಃಖಿದ ನೆವದೊಳಳುತಿಪ
ನೆಂದಡಂ ತಾನೆರಡು ಚಕ್ಷುಗ
ಳಿಂದುದಕವು೫ಗದಿಪ್ಪವೇ ಮೇಣೊಂದೆ ನಯನದಲಿ
ಮುಂದುಗೆಡಿಸಿತು ನೀರಧಾರೆಗ
ಳಿಂದ ತೊಪ್ಪನೆ ತೋದುದೊಡಲಿದ
ಕೊಂದುಪಾಯವನಱಿಯೆನಕ್ಷಿಗೆ ರೋಗವಾದಪ್ಪುದೋ ೬೫

ಆಲಿ ನೊಂದುದೊ ಕಣ್ಣ ಬೇನೆಯೊ
ಮೈಲಗೆಯೊ ಹೂ ಹುಟ್ಟಿದುದೊ ಕಣು
ಶೂಲೆಯೋ ಅಳಿಗಣ್ಣೊ ತಿಮಿರವೊ ಟೊಳ್ಕೆ ಪೋದಪ್ಪುದೋ
ಬೀಲಿದುದೊ ಪಱಿಗವಿದುದೋ ರವೆ
ಕೀಲಿಸಿತೊ ದುರ್ಮಾಂಸದೋಷವೊ
ನೀಲಿಗಣ್ಣೋ ಮಾಱಿವೆಯೊ ಕಣ್ಮುಟಿಲವೋ ಅರಿಯೋ ೬೬

೧–೨ ರಚು (ಮ, ಚ, ಕ, ಬ). ೩–೪ ಪಡೆ (ತ, ನ). ೫ ಮೊ (ಸ).

CC-0. Jangamwadi Math Collection. Digitized by eGangotri

ಇನ್ನಿದಕೆ ನಾ ಮದ್ದು ಮರನಂ
ಮುನ್ನಱಿಯೆನೇಗೆಯ್ವೆನೆಲೆ ಶಿವ
ಎನ್ನ ವರವೇ ಯೆನ್ನ ಗುರುವೇ ಯೆನ್ನ ಸುರತರುವೇ
ಎನ್ನ ಗತಿಯೇ ಎನ್ನ ಮತಿಯೇ
ಎನ್ನವನೆ ಸರ್ವಾಂಗಸೌಂದರ
ನಿನ್ನ [೧]ಕಣ್ಣಿಂಗಾದ ನೋವನ[೨]ದೆಂತು ಸೈರಿಸುವೆ ೬೭

ಕಣ್ಣು ಮೂಱುಳ್ಳಾತನೆಂದುರಿ
ಗಣ್ಣ ಕೇಳ್ ಮೂಲೋಕವಂಜುವು
ದಣ್ಣ ಪರಿಭಂಗಂಗಳೆಂದುಂ ಇಲ್ಲದಿಹ ನಿನ್ನ
ಕಣ್ಣಿನೀಕ್ಷಿಸಿದವರು ಬಗೆವರೆ
ಕಣ್ಣ ಕಿಚ್ಚಿಂದಂದುರಿದವರು
ಕಣ್ಣವಾರ್ತೆಗೆ ಕನಲದಿಹರೇ ಮಗುಳೆ ತಾವಿನ್ನು ೬೮

ಎಂತೊ[೩]ಲಿವರೀ ಕಣ್ಣ ಕಂಡಾ[೪]
ಕಾಂತೆಯರು ತಾವಂಗಹೀನಂ
ಗೆಂತು ಸಿಕ್ಕುವರಯ್ಯ ಬಳಿಕ ಕುರೂಪಿಯಾಗಿರಲು
ಅಂತಕಾಂತಕದೇವ ನಿನ್ನನ
ನಂತ ಭಕ್ತರನಂತ [೫]ಪರಿಯಲಿ[೬]
ಸಂತತಂ ನೆರೆದೆಯ್ದೆ ಹೋ ಹೋ ಎನುತ ನಗುವರಲಾ ೬೯

ಇಂದದೆಲ್ಲಿಗೆ ಹೋಯಿತಂಬಕ
ವಂದು ಪರಿಗಿತ್ತುನ್ನತಿಯು ಎಲೆ
ತಂದೆ ಹೊಲದಲಿ ಗೂಳಿಯಂ ಹುಲಿ [೭]ಕೊಂದವೋಲಾಯ್ತು[೮]
ಇಂದವಸ್ಥೆಯನೆಂತು ನೋಡುವೆ
ನೆಂದು ಮಾಬುದು ನಿನ್ನ ಕಂಬನಿ
ಮುಂದೆ ಯಾರಿಗೆ ತೋಱಿದಪೆ ನಾನಾರಿಗಱಿಪುವೆನು ೭೦

೧–೨ ಕಣ್ಣಿಂಗಹ ವಿಗುರ್ಬಿಗ (ಕ, ಚ, ಥ, ಪ, ಬ, ಮ). ೩–೪ ಲುಮೆಯಲಿ ಕಣ್ಣು ಕಾಣದ (ಥ, ಪ). ೫–೬ ಪಿರಿಯರು (ಅ, ಡಾ). ೭–೮ ಕೊಂದ ತೆರನಾಯ್ತು (ಬ); ಕೊಂದೊಲಾಯಿತ್ತು (ಸ).

CC-0. Jangamwadi Math Collection. Digitized by eGangotri

ಎನ್ನ ಕಣ್ಮೊಳು ಹುಟ್ಟಿದುದು ಮೊದ
ಲಿನ್ನೆವರ ರುಜೆಯೆಂದುವಾಗದು
ನಿನ್ನ ನಯನದೊಳೆನ್ನ ಚನ್ನಕ್ಷಿಯನಮರ್ಚಿಪೆನು
ಬಿನ್ನಪಂ ಶಿವ ನಿನ್ನ ಕಣ್ಣಿಂ
ಗೆನ್ನ ಕಣ್ಣೇ ಮದ್ದೆನುತ ಚಿ
ತ್ತಂ ನಲಿದು ತನ್ನೇತ್ರವಂ ತನ್ನಂಬಿನಲಿ ತೆಗೆದು ೭೧

ಕಪ್ಪುಗೊರಳನ ಕಣ್ಮೊಳಗೆ ಕ
ಣ್ಣಪ್ಪದೇವನು ತನ್ನ ನೇತ್ರವ
ನೊಪ್ಪಲರ್ಪಿಸಲೊಡನೆ ತಲ್ಲೋಚನದೊಳೊಗುತಿರ್ಪ
ಆಪ್ಪು ನಿಮಿಷದೊಳುಡುಗಿ ಎಡಗ
ಣ್ಣಪ್ಪು ಭೋರನೆ ಕುಪ್ಪಳಿಸುತಂ
ತುಪ್ಪರಿಸುತಿರೆ ಸಸ್ಮಿತಾನನತಾಮರಸನಾಗಿ ೭೨

ತನ್ನ ನಯನಾಂಬುಜವೆ ಭರ್ಗನ
ದೃಙ್ನಳಿನವಾಗೆಸೆಯೆ ಹರುಷೋ
ತ್ಪನ್ನ ಮಾನಸದಿಂ ಶಿವನ ಪಾಮಾಕ್ಷಿಯಂ ನೋಡಿ
ತನ್ನಯನಕೀ ನಯನವೇ ಮ
ರ್ದಿನ್ನಿದೇಕೆನುಮಾನವೆನುತಂ
ತನ್ನಯನಜನಿತಾಂಬುಧಾರೆಗಳೆಯ್ದೆ ಸುರಿವುತಿರೆ ೭೩

ಕಂಗುಬಿಪನಿಟ್ಟಾ ಕೆರಹುಗಾ
ಲುಂಗುಟವನಾತಂ ಮನಸಿನೊಳು
ಪಿಂಗದೆಡಗಣ್ಣಂಬಿನಲಿ ತಾಂ ತೆಗೆಯಲನಿತಱಿಂಬಳು
ಅಂಗಜಾಹಿತನಾಗ ಮೆಚ್ಚಿಯ
ಭಂಗನಹ ಕಣ್ಣಪ್ಪದೇವನ
ತುಂಗ ಕರಯುಗಳಗ್ರಹಣಕರನಾಗಿ ಮುಂದಿರಲು ೭೪

---

೧೦ (ಥ, ಪ). ೨ನ (ತ, ಥ, ನ, ಪ). ೩–೪ ತೆಗೆಯಲನುಗೆಯ್ಯ (ಕ, ಚ, ಥ, ಪ, ಮ).

CC-0. Jangamwadi Math Collection. Digitized by eGangotri

ಕಲಿತಸಮಸಮುದಾವ[೧]ಲೋಕದಿ
ನಲರಿದುದು ಕಣ್ಣಪ್ಪದೇವನ
ಬಲದ ನೇತ್ರವು ಆತನಿಂ ಕೊಂಡಾ ವಿಲೋಚನವ
ಒಲಿದು ಕೊಟ್ಟನೊ ತನ್ನ ಕಣ್ಣಂ
ಮಲಹರಂ ಕೊಟ್ಟನೊ ಎನುತ ತ
ಲ್ಲಲಿತ ವಾಮಾಂಬಕಜನಿತ ಘನಬಾಷ್ಪಜಲವುಡುಗೆ ೭೫

ಆರರೆ ಕಣ್ಣಪ್ಪನ ವಿಮಲ ವಿ
ಸ್ಫುರಿತ ಲೋಚನಯುಗಳಮೇ ಶಂ
ಕರನ ಕಂಗಳ ಕುಣಿಕೆಗಳೊಳೊಂದಾಗಿ ಬೆರಸಿರ್ದ
ಪರಿಯೊಳಾತನ ಚಕ್ಷುಗಳೊಳಾ
ವರಿಸಿ ತತ್‌ಸಮಯದೊಳಮಿತ ಸಂ
ಜ[೨]ರಿತವಾನಂದಾಶ್ರುಧಾರೆಗಳಿಯ್ದೆ ಸುರಿವುತಿರೆ ೭೬

ಫಣಿಧರನ ಕಣ್ಮೊಳು ತ್ರಿಪುರವೀ
ಕ್ಷಣದಿನಂದುಗುವಂಬುಗಳೆ ಭೂ
ಷಣವದಾಯಿ[೩]ತ್ತೆಂದಡಂ[೪] ಕರುಣಾನಿರೀಕ್ಷಣದ
ಪ್ರಣುತ ಕಂಕಣನಿಕರಮದು ತಾಂ
ಗಣಿದಿಸುವಡಾನಂದಕರ ಕಾ
ರಣಮೆನಿಸಿದುದು ಜೋದ್ಯಮೇ [೫]ಮೇಣೇ[೬]ಯವಸರದಲಿ ೭೭

ದೇವ ದನುಜ ಪ್ರಮುಖರೆಲ್ಲರು
ತಾವು ವಂದಿಸುತಭಯವೆನುತಿರೆ
ದೇವಋಷಿಮುಖ್ಯರು ಸಮಸ್ತರು ಕೈಮುಗಿದು ನುತಿಸೆ
ದೇವದುಂದುಭಿವೃಂದವುಲಿಯಲು
ತೀವಿ ಹೂಮಳೆಗಱಿ[೭]ಯೆ ಮಣಿದೀ
ಪಾವಳಿಯನಮರಿಯರು ಹಿಡಿಯಲು ಪ್ರಮಥರುತ್ಸವಿಸೆ ೭೮

೧ತ್ತ (ತ). ೨ಭ (ಥ, ಪ). ೩–೪ತ್ತೆಂದೆನಲು (ಕ, ಚ, ಥ, ಪ, ಮ). ೫–೬ ಪೇಳಾ (ಸ).

CC-0. Jangamwadi Math Collection. Digitized by eGangotri

ಓಪ ಕಣ್ಣಪ್ಪನ ವಿಮುಗ್ಧಾ
ಲಾಪಮಂ ಸಹಜೈಕಭಕ್ತಿಯ
ನಾ ಪರಾಪರನೊಲುಮೆಯಂ ಕಂಡತಿಶಯಂಬಟ್ಟು
ಕೋಪದಿಂ ಮುನ್ನವಿತುಕೊಂಡಿಹ
ತಾಪಸಂ ನಡೆತಂದು ಮನದನು
ತಾಪವುಳಿದಷ್ಟಾಂಗವೆಱಗುತ ನಮಿಸಿ ಕೈಮುಗಿದು ೮೯

ನಿನ್ನ ಮುಗ್ಧತ್ವಮು[೧]ಮನಱಿಯದೆ[೨]
ಮುನ್ನಹಿತಮಂ ನೆನೆದೆ ನಾ ನಿನ
ಗೆನ್ನ ತಪ್ಪಂ ಕ್ಷಮಿಸು ಕಾರುಣ್ಯಾತ್ಮ ಕಣ್ಣಪ್ಪ
ಇನ್ನು ನೀನೇ ಶಿವನಲಾ ಇದು
ನನ್ನಿ ಇಂತಹ ವೀರಭಕ್ತಿಸ
ಮುನ್ನತಿಕೆ ಇಂತಹ ಮಹತ್ವಮದುಂಟೆ ಲೋಕದೊಳು ೯೦

ಕಾಣೆವವಿಕ[೩]ಳ ವೇದಶಾಸ್ತ್ರ ಪು
ರಾಣ ಕಥೆಗಳೊಳಱಿಸಿ ಭುವನ
ಶ್ರೇಣಿಯೊಳು ಕೇಳ್ದಱಿಯೆವೆಂದುಮನೀ ಚರಿತ್ರವನು
ಕ್ಷೀಣಕಲ್ಮಷ ಭಾಪು ಮುಗ್ಧರ
ಜಾಣ ಭಾಪುರೆ ಭಾಪು ಲಿಂಗ
ಪ್ರಾಣಿ ಶಿವನೊಂದೊಪ್ಪವಹ ಎನ್ನಪ್ಪ ಕಣ್ಣಪ್ಪ ೯೧

ಎನುತವಿಂತಾ ತಾಪಸಂ ನಯ
ವಿನಯದಿಂ ಕೀರ್ತಿಸುತಲಿರಲುಮೆ
ಮನದೊಳತಿಶಯಮಾಗಲಾ ಕಣ್ಣಪ್ಪನುಂ ಶಿವನುಂ
ತನತನಗೆ ತಾವೊಬ್ಬರೊಬ್ಬರು
ಕೊನರ್ದಮಳ ನಯನಂಗಳಿಂ ನೆ
ಟ್ಟನೆ ಸತತಮುಂ ನಿಂದು ನೋಡುತ್ತಿರ್ಪ ಸಮಯದಲಿ ೯೨

---

೧ × (ತ). ೨ + ನಾ (ತ). ೩ ರ (ಚ).

CC-0. Jangamwadi Math Collection. Digitized by eGangotri

ಸಿಕ್ಕಿವೊಂದೊಂದಕ್ಕೆ ತಾನಿವು
ತಕ್ಕವೆಂದೊರೆದೊಂದಱಿಂದಱಿಂ
ಳುಕ್ಕಿ ಸಕ್ಕಸಮನೆಯೆನಿಸಿ ಕೊನೆ ಕೊನರಿ ತವೆ ಬೆರಸಿ
ಮಿಕ್ಕ ನೋಟಂ ನೋಟದೊಳು ಸಲೆ
ಹೊಕ್ಕುಯಿಬ್ಬರ ಕಂಗಳೆರಡೆರ
ಡಕ್ಕಜಂ ಮಿಗೆ ಏಕವಾಗಿಂತೆಯ್ದೆ ಚೆಲುವೆತ್ತು ೮೩

ಹೊಳೆವ ಕಣ್ಣಪನಕ್ಷಿಗಳ ೧ಶಶಿ
ಗಳೊ ಗರಳಕಂಧರನ ನಯನಂ
ಗಳ ಕವಲೊ ಕಣ್ಣಪನ ಕಂಗಳ ದರ್ಪಣದ್ವಯವೋ
ಮಲಹರನ ಲೋಚನಯುಗಳಮು
ಜ್ವಳಿಸುವ ಪ್ರತಿಬಿಂಬಯುಗಮೋ
ಚಲುವ ಕಣ್ಣಪನಂಬಕಂಗಳ ತಳಿರ್ವ ಲತಿಕೆಗಳೋ ೮೪

ಪುರಹರನ ದೃಗುಯುಗದ ಗುಪ್ತಾಂ
ಕುರಯುಗಳಮೋ ಕಣ್ಣಪನ ಸುರು
ಚಿರನಯನಬೀಜಂಗಳೋ ಶೀತಾಂಶುಶೇಖರನ
ಸ್ಫುರಿತನೇತ್ರಫಲಂಗಳೋ ಎನೆ
ಪರಿವಡೆದು ಕಣ್ಣಪ್ಪದೇವನ
ವರ ವಿಲೋಚನಯುಗ್ಮಮೇ ಶಿವನಕ್ಷಿಯುಗಮಾಗೆ ೮೫

ಬಿಡದಭವನಕ್ಷಿಗಳೆ ಕಣ್ಣಪ
ನಡರ್ವ ಚಕ್ಷುಗಳಾಗೆ ನಾಲ್ಕುಂ
ಕಡೆಗೆ ಕಣ್ಣಪನಕ್ಷಿಗಳೊ ನಾಲ್ಕುಂ ಮಹೇಶ್ವರನ
ಕಡುಹಿನಕ್ಷಿಗಳೋ ಎನಲ್ಕಾ
ಮೃಡನ ಮಚ್ಚಿದ ಕಣ್ಣ ಕೆಳಗೆರ
ಡೆಡೆಯೊಳಿರಡೆರಡುಂ ಬೆರಸಿ ಕಡು ಥಳಥಳಿಸುತಿರಲು ೮೬

೧–೨ ಶಿಖಿ (ನ). ಶಿ ನ (ಸ).

CC-0. Jangamwadi Math Collection. Digitized by eGangotri

ಓವ ತೋಱುವ ನೋಳ್ಪ ರೂಪಂ
ತಾವು ಮೂರ್ವಿಧವೇಕವಾಗಿರೆ
ತಾವು ತಮ್ಮಕ್ಷಿಗಳೆ ತಮ್ಮೊಳು ತಾವೆ ಈಕ್ಷಿಸುವ
ಭಾವವಾಯ್ತುಭವಂಗೆ ಕಣ್ಣಪ
ದೇವನೊಳು ಚತುರಕ್ಷಿಗಳ ಬೆಳ
ಗಾವರಿಸೆ ಪಱಿ[1] ಮುಸುಕಿದಂತಿರ್ದುದು ನಿಟಿಲನಯನ ೮೭

ಆವ ಕಣ್ಣಲಿ ನೋಡಿದಡೆಯಿಂ
ಬೇವುದೀ ಪುರತ್ರಯವಿದಿರ್ಚಿದ
ಡಾವ ಕಣ್ಣೊಳು ನೋಡಿದಡೆ ಉನ್ಮತ್ತಚಿತ್ತಜನು
ಬೇವನೇ ಇನ್ನೊಡಲುಗೊಂಡಡೆ
ಆವ ಕಣ್ಣೊಳು ನೋಡಿದಡೆಯಿಂ
ಬೇವನೇ ಯಮರಾಜನುಂ ಮರಿಯಾದೆ ತಪ್ಪಿದಡೆ ೮೮

ಮುನ್ನ ಕಣ್ಣಪ್ಪನ ಸಕರುಣಾ
ಸನ್ನುತಾಂಬಕವಿರ್ದಡೀ ಹಿಮ
ವನ್ನಗೇಂದ್ರಸುತಾರಮಣನುಗ್ರಾಕ್ಷನೆನಿಸುವನೆ
ಮುನ್ನ ಕಣ್ಣಪನಕ್ಷಿಯಿರೆ ಧೃತ
ಪನ್ನಗಂ ಚಿರುತೊಂಡ [2]ಚಂಗಳಿ[2]
ಚನ್ನ ಶಿಶುವಂ ಬೇಡಿಯಾರೋಗಿಸುವನೇ ಬಂದು ೮೯

ಅಂದು ಕಣ್ಣಪ್ಪನ ನಯನಮಿರೆ
ಇಂದುಜೂಟಂ ಭ್ರೂಣಹತ್ಯಕೆ
ಬಂದು ನಿಲುವನೆ ಕಣ್ಣಪನ ಲೋಚನವಿರುತ್ತಿರಲು
ಅಂದು ನಿಂಬಿಯ ಶಿಶುವಧೆಗೆ ಮುನ
[3]ಮೊಂದಿ[3]ಹನೆ ಕಣ್ಣಪನ ಕಣ್ಣಿರೆ
ಅಂದು ನಂಬಿಯ ಕಣ್ಣನೀತಕೆ ಕೆಡಿಸಿ ನೋಡುವನು ೯೦

೧–೨ ನಂಬಿಯ (ಸ). ೩–೪ ಸಂದಿ (ತ); ದಂದ (ನ).

CC-0. Jangamwadi Math Collection. Digitized by eGangotri

ಕಣ್ಣಪನ ಕಣ್ಣೆರ್ದಡೀ ಮು
ಕ್ಕಣ್ಣದೇವ[೧]ನದೆಂತು[೨] ನೋಡುತ
ಚಿಣ್ಣನಂ ಕೈದುಡುಕಲೀವನೆ ಫಣಿಯ [೩]ಹುತ್ತದೊಳು[೪]
ಕಣ್ಣಪನ ಕಣ್ಣೆರ್ದಡಿಂತಾ
ಹೆಣ್ಣುಗಳು ಮರುಳಾಗಿ ಹೋಗರೆ
ಕಣ್ಣಪನ ಕಣ್ಣೆರಲಭವನತಿ ಕರುಣೆಯಾಗಿರನೆ ೯೧

ಈತನಮೃತಾಂಬಕವಿರುತ್ತಿರೆ
ಭೂತನಾಥನು ರೂಪು ಸೌಂದ
ರ್ಯಾತಿಶಯನಾಗಿರನೆ ಆತನ ನಯನವಿರೆ ಶಿವನು
ಖ್ಯಾತಿವೆತ್ತು ಸಮಸ್ತಗುಣಪರಿ
ಪೂತನಾಗನೆ ಈತನಕ್ಷಿ
ಜ್ಯೋತಿಯಲಿ ತ್ರೈಲೋಕ್ಯಚೂಡಾಮಣಿಯೆನಿಸಿದನಲ ೯೨

ಆದಿದೇವಂ ಕಣ್ಣಪಯ್ಯನ
ಪಾದರಕ್ಷಸ್ಪರ್ಶಮಾತ್ರದೆ
ವೇದಿತೋತ್ಸುಕ ಭಕ್ತವತ್ಸಲನಾಗಿ ನುತಿವೆತ್ತ
ಆ ದಯಾತ್ಮನ ಕಣ್ಣಪನ ನಿಜ
ಪಾದರಕ್ಷೆಯನೊಂದಿ ಚಂದ್ರನು
ಮೇದಿನಿಯೊಳಭವಂದ್ಯನೆನಿಸಿ ಕಳಾಭರಿತನಾದ ೯೩

ಗಂಗೆಯೀತನ ಕೆರ್ಪು ಸೋಂಕಿ ಜ
ಗಂಗಳೊಳು ಸಲೆ ತೀರ್ಥಮಾಗಿ ಸು
ರಂಗಿಸಿದಳೀ ಕೆರ್ಪು ತಾನಾದಡೆಯಜಂ ಶಿವನ
ತುಂಗ ಶಿರವಂ ಕಾಣದಿಹನೆ ರ
ಥಾಂಗಧರನುಂ ಕಾಣನಂ[೫]ಗಭ
ವಾಂಗನಾಶನಪಾದಭಕ್ತರ ಪಾದರಕ್ಷೆಯನು ೯೪

೧–೨ನೆಹಂಗೆ (ಕ, ಚ, ಥ, ಪ). ೩–೪ ಹುತ್ತಿನೊಳು (ತ, ಥ, ಸ, ಪ). ೫ದಂ (ಥ, ಪ).

CC-0. Jangamwadi Math Collection. Digitized by eGangotri

ಸರಸಿಜಾಸನನಱಿಸಿ ಕಾಣದ
ಪರಮ ಗುರುತರ ಲಿಂಗಮೂರ್ತಿಯ
ಶಿರದೊಳೆಸೆವ ವಿ[೧]ಶೇಷ[೨]ಭೂಷಣವೇನನುಸುರ್ದಪೆನು
ಶರಣ ಕಣ್ಣಪದೇವನ ಶ್ರೀ
ಚರಣರಕ್ಷೆಯ ಮಹಿಮೆಯಂ ವಿ
ಸ್ತರಿಸಲರಿದರಿದರಿದು ಸಾವಿರ ಹೆಡೆಗಳಹಿಪತಿಗೆ ೭೫

ಈತನಂಘ್ರಿಪಯಃಸಮೇತ ಪು
ನೀತದಿಂದಾ ರೂಢಿವೆತ್ತನ
ಜಾತನೀ ನಿರ್ಮಾಲ್ಯಸಂಗತಿಯಿಂದಲಾ ಶಿವನು
ಖ್ಯಾತನಿರ್ಮಳದೇಹನಾದಂ
ಶೀತಕರಲಕ್ಷಣಕಪರ್ದಿ ಸ
ದಾತಿಲೋಕನನೆನಿಸಿದನು ಗಂಡೂಷವಾರಿಯೊಳು ೭೬

ರಕ್ತಿಯಲಿ ಶಿವಲಿಂಗವೀತನ
ಭುಕ್ತಶೇಷವನುಂಡಲಾ ಬುಧ
ರುಕ್ತಿಸಲು ಶಾಶ್ವತವೆನಿಸಿದನು ಪಾರ್ವತೀಶ್ವರನು
ವ್ಯಕ್ತವೀತನ ಸುಪ್ರಸಾದಾ
ಸಕ್ತ ಸೇವನೆಯಿಂದಲಾ ವೇ
ದೋಕ್ತ ಶಾಸ್ತ್ರಾಧಿಕ್ಯಚತು[೩]ರೋಕ್ತಿಗಳನತಿಗಳೆದ ೭೭

ಈತನುಚ್ಛಿಷ್ಟವನೆ ಕೊಂಡೀ
ಭೂತನಾಥಂ ವಿಧಿನಿಷೇಧಾ
ತೀತನಾದಂ ಲಿಂಗವೀತನ ಲೆಂಗಿ ತಾನಾಗಿ
ಪ್ರೇತಸೂತಕ ಜಾತಿಸೂತಕ
ಜಾತವಿರಹಿತನಾಗಿ ದಿವಿಜ
ವ್ರಾತದೊಳು ತಾನುತ್ತಮಾಂಗಮದಾಯ್ತು ಸರ್ವಾಂಗ ೭೮

೧–೨ ಶಿಷ್ಟ (ತ, ನ). ೩–೪ ರತಿಗಳನತಿಗಳೆದನು (ಅ, ಡಾ, ತ, ನ, ಮ).

CC-0. Jangamwadi Math Collection. Digitized by eGangotri

ಪರಮಲಿಂಗಸಮೇತನಾದಂ
ನಿರುತವಾ ಗಣನಾಥನಿಂದವೆ
ಧರಣಿಯಱಿಯಲು ಭಕ್ತನಾದನು ನಂಬಿಯಿಂದಂದು
ಶರಣನಹ ಕಣ್ಣಪ್ಪನಿಂದವೆ
ಪುರಹರಂ ಸರ್ವಪ್ರಸಾದಾ
ಪರಿಮಿತಾನಂದಾಂಗನಾದನೆನುತ್ತ ಹರುಷದಲಿ ೯೯

ಸರ್ವ ಭಕ್ತರು ವಿಸ್ತರಿಸುತಿರೆ
ಸರ್ವರುಂ ಕೀರ್ತಿಸಲನಿತಱಲಿ
ಪಾರ್ವತೀಪತಿ ಕಣ್ಣಪನನೊಡನೊಡನೆ ಬಿಗಿಯಪ್ಪಿ
ನಿರ್ವಿಕಲ್ಪಾಕಲ್ಪ ಕೇಳು ಚ
ತುರ್ವಿಧದ ಪದವಿಗಳು ಮೊದಲಹ
ಸರ್ವಭೋಗಸುಖಂಗಳಂ ಕೊಡುವೆಂ ಬಯಸು ನಿನಗೆ ೧೦೦

ಏನೆ ಮುಗುಳ್ನಗೆ ಮೊಗದೊಳೊಗೆಯಲು
ವಿನಯದಿಂ ಕೈಮುಗಿದು ವಂದಿಸಿ
ಆನಘ ಮೋಕ್ಷಂಗಳ ಹೆಸರ ನಾನಱಿಯೆನಭಿಮತವ
ಮನದೊಳಱಿಯೆನು ಬೇಡಿದಪೆನೆಂ
ಬನುವನಱಿಯೆಂ ನೀವಱಿವುತಿರೆ
ಇನಿತುವಱಿಯೆನು ಅಱಿಯೆನಱಿಯೆನು ಮೂಱು ಸೂಳಿಂಗೆ ೧೦೧

ಈವ ಶಿವರ ನನಗೇನು ಳಿ ಕೊಱತೆಯೆ
ದೇವ ಮೂಲಸ್ತಂಭ ಶಂಭುವೆ
ನೀವು ನಿಮ್ಮತುಳಿತ ದಯಾದೃಷ್ಟಿಗಳನೆನ್ನಲ್ಲಿ
ತೀವಿ ಪಸರಿಸಲೆನ್ನ ಸಂಸ್ಪೃಹ
ತಾವಲೋಕನವಿಂತು ನಿಮ್ಮ ಸ
ದಾ ವಿಲೋಕನದೊಳು ನಿಲಿಸಿ ಪೊರೆ ಮಿಕ್ಕಿನವನೊಲ್ಲೆ ೧೦೨

೧–೨ ಗಡ (ತ, ನ, ಸ). ೩–೪ ವರದೀನೆನಗೆ (ಕ, ಚ, ಬ, ಮ, ಬ).

CC-0. Jangamwadi Math Collection. Digitized by eGangotri

ಎಂದು ಬಿನ್ನೈಸಲ್ಕೆ ಪರಮಾ
ನಂದ ಕೈಪಲ್ಯಪ್ರದಂ ಮುದ
ವೊಂದಿ ಕಣ್ಣಪ್ಪಂಗೆ ಸಮ್ಮುಖವಾಗಿ ನಿಲಲೊಡನೆ
ಅಂದದಿಂದನ್ಯೋನ್ಯದೃಷ್ಟಿಗ
ಳಿಂದನಾರತಮಿಬ್ಬರುಗಳತಿ
ಸೌಂದರಾಕೃತರಾಗಿ ತಿರುಕಾಳತಿಯ [೧]ಪುರದಲ್ಲಿ[೨] ೧೦೩

ಈಗಳುಂ ಕಣ್ಣಪ್ಪದೇವನು
ಮಾ ಗಿರೀಶನು ತನ್ನಿರೀಕ್ಷಣ
ಯೋಗದಿಂದಿರ್ದಿಹರು ಆತನ ಮುಕ್ಕುಳುದಕದಲಿ
ನಾಗ[೩]ಕಟಕನ[೪] ಮಜ್ಜನಂ ತುಹಿ
ನಾಗರಾಜಸುತಾಧಿಪಂಗಿಂ
ತೇಗಳುಂ ಕಣ್ಣಪನ ನಿರ್ಮಾಲ್ಯವನೆ ಪೂಜಿಪರು ೧೦೪

ಅಸಮನೇತ್ರನು ಕಣ್ಣಪಂಗ
ರ್ಪಿಸಿದಡಲ್ಲದೆ ಮುಂಚೆ[೫]ಯಾರೋ
ಗಿಸನುಮಾಪತಿಗೊಲಿದು ಕಣ್ಣಂ ಕೊಟ್ಟ ಕಾರಣದಿ
ವಸುಧೆಯೊಳು ಕಣ್ಣಪ್ಪನೆಂಬೀ
ಹೆಸರೆಸೆವುದಾ ಪುರದೊಳೀಗಳು
ಒಸೆದು ಕಣ್ಣಪ್ಪನುಪಭವನುಂ ಸತತಮಿರ್ದಪರು ೧೦೫

ಧರೆಯೊಳೀ ಕಣ್ಣಪ್ಪದೇವನ
ಚರಿತೆಯಂ ಕೊಂಡಾಡಿದಡೆ ವಿ
ಸ್ತರಿಸಿದಡೆ ಪಠಿಸಿದಡೆ ಬರೆದಡೆ ಹರನ ಕರುಣದಲಿ
ಚಿರತರಾಯುರ್ವೃದ್ಧಿ ಸಂಪ
ತ್ಕರ ಸಮೃದ್ಧಿ ವಿವೇಕಬುದ್ಧಿ
ಸ್ಥಿರ ಮನೋರಥಸಿದ್ಧಿ ದೊರಕುಗು ನರರಿಗಂತಾಗಿ ೧೦೬

೧–೨ ಮಲೆಯಲ್ಲಿ (ಕ. ಚ. ಥ. ಪ. ಮ). ೩–೪ ಕಂಕಣ (ತ). ೫ ದೆ (ಥ. ಪ).

CC-0. Jangamwadi Math Collection. Digitized by eGangotri

ಎಸೆವ ನಿಜಮುಗ್ಧಸ್ವಭಾವ
ರ್ಗಸಮನಯನಂ ಕರುಣಿಸುವುದೇಂ
ಪೊಸತೆ ತಾನಿದು ದೃಷ್ಟವಲ್ಲಾ ಎನುತವರ್ತಿಯಲಿ
ಬಸವರಾಜಂ ಮುಗ್ಧಭಕ್ತ
ಪ್ರಸರದುತ್ತಮ ಕಥೆಗಳಂ ಸಲೆ
ಪಸರಿಸಿದನಾ ಚೆನ್ನಬಸವಂ ಕೂರ್ತು ಕೇಳುತಿರೆ ೧೦೭

ಪೃಥುವಿಯೊಳಗೀ ಮುಗ್ಧಭಕ್ತರ
ಕಥೆಗಳಂ ಸಮ್ಮುದದಿ ಹೇಳಲು
ಕಥೆಗಳಾದವೆನುತ್ತವಾಗಳು ಕಥೆಕಥೆಗೆ ನಗುತ
ಪ್ರಥಿತಹರುಷಿತ ಚಿತ್ತರಹ ಮನು
ಮಥಮಥನಪದಭಕ್ತವಿತತಿಗೆ
ಪೃಥುಳಭಕ್ತಿಯೊಳಾಗ ವಂದಿಸಿ ಬಸವನಿಂತೆಂದ ೧೦೮

ಕೇಳಿದಿರೆ ಮುನ್ನಿನ ಪುರಾತನ
ರೋಳಿಯಲಿ ಕಲಿಯಂಬಿನೆಂಬಾ
ಲೋಲಭಕ್ತನು ನಿಮ್ಮನೊಮ್ಮೆಯು ನಗಿಪ ನೇಮದಲಿ
ಶೂಲಿಯಂ ಮೆಚ್ಚಿಸಿದನಾತನು
ಲೀಲೆಯಲಿ ನೀವೊಮ್ಮೆ ನಕ್ಕಡೆ
ಸಾಲದೇ ಎನ್ನಂ ಬದುಕಿಪಡೆ ಎನುತ ನಗಿಸುತ್ತ ೧೦೯

ಅನುಪಮಿತಯುತಭಕ್ತಿದೃಢಸಂ
ಜನಿತ ಹರುಷಾಮೃತರಸದೊಳನು
ದಿನದೊಳೋಲಾಡುತ್ತ ಬಸವಂ ಜಂಗಮಾವಳಿಯ
ಘನತೆ ಮಿಗೆ ನಾನಾ ಜನಂಗಳು
ವಿನುತಿಸಲು ಒಡ್ಡೋಲಗವನಿ
ತ್ತನುಭವದ ಗೋಷ್ಠಿಗಳಿಸಕಳದೊಳಗಿಪ್ಪ ಸಮಯದಲಿ ೧೧೦

ಅಂತು ಸಂಧಿ ೧೭ಕ್ಕಂ ಪದಗಳು ೯೫೨ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

೧–೨ಗಣವರ (ಕ, ಚ, ಥ, ಪ, ಬ). ೩–೪ಗರಿಷ್ಠ (ಥ, ಪ, ಬ). ೩–೫ಗಳೊಳಿಪ್ಪ ದೊಳಿಪ್ಪ (ತ, ನ).

CC-0. Jangamwadi Math Collection. Digitized by eGangotri

ಸಂಧಿ : ೧೮

*

ಸೂಚನೆ : ಶ್ರೀ ಗಿರೀಂದ್ರಕೆ ಹೋಗಿಯದಱಿ ಮ
ಹಾ ಗಹನ ಗುಹೆಗಳೊಳಱಿಸಿ ಶಿವ
ಯೋಗಿಮಲ್ಲರಸರನು ಕಂಡಂ ಮಾದಿರಾಜಯ್ಯ

ಪರಮಭಕ್ತರ ಪರಮಭಕ್ತಂ
ಶರಣರಿಗೆ ಶರಣಂ ಹಿರಿಯರಿಗೆ
ಹಿರಿಯನರಸರಿಗರಸನುಂ ಮೊದಲಿಗರ ಮೊದಲಿಗನು
ಸರಸರಿಗೆ ಸರಸಂ ವಿರಸರಿಗೆ
[೧]ವಿರಸನಿತರರ ಬೆರಸಿದವರಂ
ಬೆರಸನೀಶ್ವರ ವಿರಹಿತರ ವಿರಹಿತನತುಳ ಸುಮತಿ[೨] ೧

ನಾದವಿದ್ಯಾಪಂಡಿತಂ ವೀ
ಣಾದಿ ಸಕಳಕಳಾವಿದಂ ಭರ
ತಾದಿ ಶಾಸ್ತ್ರವಿಚಕ್ಷಣಂ ಸದ್ಗುಣಗಣಾನ್ವಿತನು
ವೇದ ವೇದಾಂತಾದಿ ಕಥನಾ
ಪಾದಿತೋಪರಿ ತತ್ವನಿಶ್ಚಯ
ವಾದಿ ಘನಸಂಸಾರ ದುರ್ವ್ಯಾಪಾರಸಂಹಾರಿ ೨

---

* ರಾಗ : ನಾಟಿ (ಅ, ಡಾ); ಕೇತಾರಗೌಳ (ತ); ಭೂಪಾಳಿ (ಮ).
೧–೨ ವಿರಸನಿತರಂ ಬೆರಸನೀಶ್ವರ
ವಿರಹಿತರ ವಿರಹಿತನು ಸುಮತಿಗಳೊಳಗತುಳ ಸುಮತಿ (ಸ).

CC-0. Jangamwadi Math Collection. Digitized by eGangotri

ಯಮನಿಯಮಮಯೋಗಪ್ರತಾಯತ
ಶಮದಮಾಶ್ರಯ ಸಚ್ಚರಿತನು
ತ್ತಮ ಶಿವಾಚಾರಪ್ರವರ್ತಿ ನಿರಸ್ತಸಕಳಾರ್ಥಿ
ಅಮಿತ ಕರುಣಾಮೂರ್ತಿ ದಶದಿ
ಗ್ವ್ಯಾಮಿತಕೀರ್ತಿಯುದಾರ ಧೀರಂ
ನಮಿತಲೋಕನೆನಿಪ್ಪವಂ ಸಕಳೇಶ ಮಾದರಸ ೩

ಆ ಮಹಂತಂ ನಿಯತಿ ಭಕ್ತಿಮ
ಹಾಮಹಿಮೆಯಿಂದೊಪ್ಪುತಿಪ್ಪ ಭಿ
ರಾಮಪುರವೇ ರಾಜಧಾನಿಯೆನಲ್ಕೆ ನುತಿವೆತ್ತು
ಭೂಮಿಯಂ ಪರಿಪಾಲಿಸುತ್ತು
ದ್ದಾಮ ವಿಕ್ರಮ ವೀರ ವಿತರಣ
ನೇಮರೂಪ ವಿವೇಕದಿಂದಾಳುತ್ತ ರಾಜ್ಯವನು ೪

ಚಾರು ಗೌರವ ಲೈಂಗ್ಯಭಕ್ತ್ಯಾ
ಚಾರದಿಂದರ್ಚಿಸುತ ಧರ್ಮವಿ
ಚಾರದೊಳು ವಿವಿಧೋಪಚಾರಂಗಳಿನೊಡಂಬಡಲು
ಸೂರಿಲೋಲಂ ಗಳಿಗೆಗಳಿಗೆಗ
ನಾರತಂ ಭಜಿಸುತ್ತ ನಾನಾ
ಚಾರುಪ್ರಪ್ಪಕ ಶೀತಳಪ್ರದಯುತ ನಿವಾಸದಲಿ ೫

ಆದಿಶಿವನಂ ಸ್ತುತಿಸುವುದಱಿಂ
ಮಾದಿರಾಜಂ ಮತ್ತೆ ಬತ್ತೀ
ಸಾದಿ ರಾಗಂಗಳಿಗನಿತು ದಂಡಿಗೆಗಳಂ ರಚಿಸಿ
ವೇದಿಸಲು ತಾನಾವರಾಗನಿ
ನಾದವಾ ಸಕಳೇಶನೊಳು ಪ್ರಿಯ
ವಾದ ರಾಗದ ವೀಣೆ ಮೊರೆಯಲು ಪ್ರಸ್ತುತವನಱಿದು ೬

೧–೨ ನಿಪಿಳ (ಕ, ಚ, ಥ, ಪ, ಮ); ನಿಹಿತ (ತ, ಧ, ನ, ಬ). ೩–೪ ದಂಬೆಯೆಂಬ (ತ, ಥ, ಧ, ನ, ಪ). ೫ವೈ (ಅ). ೬ ಮ (ತ). ೭–೮ ರಗಳಿಂದೊ (ಅ, ಮ).

CC-0. Jangamwadi Math Collection. Digitized by eGangotri

ಕ್ಷೋಣಿಯೊಳು ಪೆಸರುಳ್ಳ ರಾವಳ
ವೀಣೆ ವಾ[೧]ರಣಾ[೨]ಹಸ್ತ ಗೌರೀ
ವೀಣೆ ಕಿನ್ನರವೀಣೆ ಕಚ್ಛಪವೀಣೆ ಕೈಲಾಸ
ವೀಣೆ ತುಂಬುರವೀಣೆ ಪದ್ಮಜ
ವೀಣೆಯುಂ ಸ್ವಾಯಂಭುವೀಣೆಯು
ವೇಣಿಸೆವ ಸಾರಂಗವೀಣೆ ಪಿನಾಕವೀಣೆಗಳು ೭

ತಾನು ಮೊದಲವು ಮುನ್ನವವಱಿ[೩]ಕೊಳು
ಗಾನಮೊಪ್ಪುವ ದಂಡಿಗೆಯನವ
ಧಾನಿಸುತ ಮಿಗೆ ಮೇಘಚಾಳವನೊಡನೆ ಯೆತ್ತಾಣ
ಮಾನಿತಂ ನವತಾಣಮುಂ ಸಂ
ಧಾನಮಮರಂ ತಾಳ ಪತ್ಯಮ
ನೂನಪ[೪]ತ್ರಂ ಪೊಟ್ಟವಣೆ ಸಾರಣಮಲ[೫]ರ್ದಿರಲು ೮

ದೇವ ಸಕಳೇಶ್ವರ ಶುಭಾವಹ
ಜೀವಿತೇಶ್ವರ ನಾದಮೂರ್ತಿ ದ
ಯಾವಲೋಕನ ಭಕ್ತವತ್ಸಲ ಭಕ್ತಸಂಜೀವ
ನೀವು ಚಿತ್ತೈಸೆನುತ ಬಾಜಿಸು
ತಾ ವಿಮಳ ರಾಗದೊಳಿ ಮಾನಸ
ವೋವಿಯಭಿಮುಖಿನಾಗುತಂ ತತ್ವಾನುಭಾವದಲಿ ೯

ಸೊಗಯಿಸುವ ಸಪ್ತಸ್ವರಂಗಳೊ
ಳೊಗೆದವಿಪ್ಪತ್ತೆರಡು ಶ್ರುತಿಗಳು
ನೆಗಳುತಿರೆ ನಾರಾಟಕಾ[೬]ವುಳವೆಂಬ ಧ್ವನಿಗೂಡಿ
ನಿಗುರ್ವ ಚೌಕುಳವೆಂಬ ಶಾರಿರ
ಸುಗತಿಯಿಂದನು[೭]ಬದ್ಧಗೂಡಿ
ಪ್ರಗಣಿತಾಳ[೮]ಕ್ರಿಯೆಸೆಯೆ ಸಂಧಿಸೆ ಗಮಕಸಪ್ತಕವು ೧೦

೧ರಾ (ತ, ಥ, ನ, ಪ). ೨ಳ (ಥ, ಪ). ೩ವಿ (ತ, ಥ, ಧ, ನ, ಪ). ೪ಮ (ತ, ಥ, ಧ, ಪ). ೫ಭಾ (ಕ). ೬ನಿ (ಥ, ಧ, ಪ). ೭ಣ (ತ, ನ) : ಳ್ಗ (ಪ).

CC-0. Jangamwadi Math Collection. Digitized by eGangotri

ಸಾರ ಮಾರ್ದವ ಮಂದ್ರ ಮಧ್ಯಮ
ತಾರವೆಂಬ ತ್ರಿವಿಧವೊಂದಲು
[೧]ಚಾರುತರ[೨] ಲಯ ಲಂಕಿ[೩]ತಂಗಳು ನಿಮಿರ್ದಮರ್ದಿರಲು
ಸೇರಿ ಲಾಲಿತ ಶುದ್ಧ ಸಾಳಗ
ಪೂರ ದೇಶೀಮಾರ್ಗವೆಸೆಯಲ
ಪಾರ ಲಳಿದ್ರುತ ಮಧ್ಯಲಲಿತ ವಿಳಂಬಿತಂಗಳೊಳು ೧೧

ಜಾತಿತಾಳದ ಮಾನದಿಂಪಿನ
ಧಾತುವಂಗಂ ಮಾತು ರೀ[೪]ತಿ ಸ
ಮೇತವಾಗಲೊಡರ್ಚಿ ಸಿದ್ಧನಿಬದ್ಧರೂಪದಲಿ
ಭಾತಿವಹಿಳಂ ತಾಳಸಾರಿಪ
ರೀತ ಪೇಳಾಪೇಳಿಯುಂ ಸಂ
ಜಾತಜಾಯನು ಜಾ[೫]ಯುಚಿತಮೊಯ್ಯಾರಮೊಡಗೂಡಿ ೧೨

ಗಮಿಪ ಪಂಜಳ ಖಿಚರ ವಿಷಯ
ಕ್ರಮ ವಿಮೋಕ್ಷಭ ಜವಣಿ ಶವಣಿಗ
ಳಮಮ ಭರಣ ವಿಶಾಯಿ ನಿಜವಣಿವಳಿಯು ಮುಂಚಿಯುಮಂ
ಕ್ರಮದಿನಿಂ[೬]ಚಿಯುಮೈವಸಮುಪ
ಕ್ರಮಿಸೆ ವಿಗತಿ ಸುಶಾಯಿ ಸಮನಿತ
ಮಮರ್ದುವಿಶ್ರಮವ[೭]ಗ್ರಹತ್ರಿತ[೮]ಯಂಗಳಂಶಿಕವು ೧೩

ಲಲಿತ ಗಾಡಂಗಳುವೆರಸುತಂ
ತಳಿರ್ದೊಡನೆ ಲಳಿರಾಗ [೯]ಕಾಕುಂ[೧೦]
ಮಿಳಿತಮಾಗಿರೆ ಪೊಚ್ಚಗಾಡಂ ಲುಳಿಯ ಪರಿವಡೆದು
ಬಳಿಕ ಭಾಸುರ ದೇಶಿಕಾಕುಂ
ಕಲಿತ ಬಿಂದುವೆನಿಪ್ಪ [೧೧]ಲುಳಿಸರ[೧೨]
ಸುಲಲಿತಾಸ್ಪದಮಪ್ಪ ಕರುಣಾಕಾಕು ಕರ್ತರಿಯು ೧೪

೧–೨ಚಾರವೆಂಬ (ಸ). ೩ಚಿ (ಥ, ಧ, ಪ). ೪ನೀ (ಸ). ೫ಬಾ (ಅ). ೬ನಂ (ಸ). ೭x (ತ). ೮ತ್ರ (ಅ, ಕ, ತ, ಸ). ೯–೧೦ತೌಂಕುಳಿ (ಕ); ಕೌಂಕುಳಿ (ತ, ನ, ಮ); ತೌಂಕುಂ (ಚ, ಥ). ೧೧–೧೨ ದೊಪ್ಪಲು (ತ, ಥ, ಪ); ದೊಪ್ಪಲೇ (ಧ).

CC-0. Jangamwadi Math Collection. Digitized by eGangotri

ಆಯತದ ಹಳು ವಾಯಿದರ ಹಳು
ವಾಯುಗುಂಡಾಗುಂಡಿ ಮಾನಸ
ಜೇಯವೆನಿಪ ಭ್ರಮರಲೀಲೆಯು [೧]ಕುರುಟಿ[೨] ರಂಜಿಸಲು
ಶ್ರೀಯು[೩] ಮೋಡಾಮೋಡಿ ಸರಸೋ
ಪಾಯಸದುಪಾಯಂ ಮೆಱಿ[೪]ಯೆ ತಿ[೫]
ಕ್ಕಾಯಿ ಹಾಯಿಲರಕ್ತಿ ವೈಧರಿರಂಗ ಜೊಕ್ಕಾಯಿ ೧೫

ಧರೆಯೊಳಿವು ಮೊದಲಾಗಿ [೬]ಸೊಗ[೭]ಸುವ
ಹಿರಿಯ ರಾಗಂಗಳು ಮೆಱಿ[೮]ಪ ಮಲ
ಹರಿ ಲಳಿತೆ ಧನ್ಯಾಸಿ ಮಂಗಳಕೌಸಿ ದೇಶಾಕ್ಷಿ
ಕುರಜೆ ಗುಜ್ಜರಿ ದೇಶಿ ವೇಳಾ
ವುರಿಯು ತೊಂಡಿಯು ಚಿತ್ರವೇಳಾ
ವುರಿಯು ಕಂಭಾವರಿಯು ಮಧುಮಾಧವಿಯು ಕಾಂಬೋಜಿ[೯] ೧೬

ಮಾಳವಶ್ರೀ ಮೇಘರಂಜಿ ವ
ರಾಳಿ ಸಿಂಧುವರಾಳಿ ನಾಗವ
ರಾಳಿ ದೇವಕ್ರಿಯೆಯು ಸಾಳಗ ನಾಟಿ[೧೦] ಭೂಪಾಳಿ
ಗೌಳ[೧೧]ಪಂಚಕ ಮುಂಬಹುಳಿ ಬಂ
ಗಾಳಮುಂ ಗುಂಡಾಕ್ರಿಯೆಯು ಮೇಣ್
ಓಳಿಯಿಂ ಫಳಮಂಜರಿಯು ರಾಮಾಕ್ರಿಯೆಗಳೆಲ್ಲ ೧೭

ದೇ[೧೧]ವಗುಪ್ತಿಯು ಭೈರವಿವ್ವಯ
ಮಾವಸಂತಿಮಿವಾದಿಯಾದನು
ಭಾವಿಸಲು ಸ್ತ್ರೀ[೧೧]ರಾಗ ಪುರುಷಾರಾಗವಿತತಿಗಳು
ಭಾವಸರಸ ಸಲಕ್ಷ್ಯಲಕ್ಷಣ
ಜೀವಮೇಳನ ನಿರ್ವಿಕಾರಕ
ಳಾವಿವೇಕನಿನಾದ ನೂತನ[೧೨]ಗೀತಜಾತದಲಿ ೧೮

೧–೨ ಕೂಡಿ (ಕ, ಚ, ಥ, ಧ, ಪ, ಬ, ಮ); ಕುರುಳಿ (ತ, ನ). ೩ ಯ (ತ, ನ). ೪ವೆ (ಚ, ಕ); ಜೊ (ಮ). ೫–೬ ಚರಿ (ಸ). ೭ ದಿ (ತ, ನ, ಬ). ೮ ಟ್ಟ (ಬ). ೯ ಳಿ (ಚ): (ಕೌಳ (ಕ). ೧೦ ರೇ (ಥ, ನ). ೧೧ ಶ್ರೀ (ಸ).

CC-0. Jangamwadi Math Collection. Digitized by eGangotri

ಪೊಂಗಿಯಾ[೧]ಡುತ ತಮತಮಗೆ ವಾ
ದ್ಯಂಗಳುಲಿಯಲು ಕೇಳಿಕೆಗಳ ಸು
ರಂಗ ಗೀತಿಗಳಿಗಾಡುತವರವರಿಗೆ ಪರಿಣಮಿಸಲು
ಜಂಗಮವನರ್ಚಿಸುತ ಲಿಂಗಾ
ಸಂಗಪೂಜಾರತಿಯೊಳಿರುತಂ
ಸಾಂಗದಿಂ ಸಾಮ್ರಾಜ್ಯಭೋಗಕೆ ತಾಂ ಸೊಗಸಿ[೨]ದಿರಳೆಲು ೧೯

ಮಲ್ಲರಸನೆಂದೊಬ್ಬ ಧರಣೀ
ವಲ್ಲಭಂ ಮುನ್ನಿಹಿಗೆ ರಾಜ್ಯವ
ನೊಲ್ಲದೆಲ್ಲಾ ತ್ಯಜಿಸಿ ತಾಂ ಶ್ರೀಪರ್ವತಕೆ ಹೋಗಿ
ಅಲ್ಲಿ ನಿಶ್ಚಿಂತವ ಸಮಾಧಿಯೊ
ಳುಲ್ಲಸನದಿಂದಾ ಗಿರೀಂದ್ರದ
ಸಲ್ಲಲಿತ ಘನ ಬಿಲ್ವವಿಪಿನಾಂತರದೊಳಿಹನೆಂದು ೨೦

ಆವರ ಗುರುತರ ಭಕ್ತಿಚರಿತವ
ನವರ ಸದ್ಗುಣವಿಹಿತ ಕಥನವ
ನವರ ಪರಮಧ್ಯಾನಯೋಗದ ನಿಜಮಹೋನ್ನತಿಯ
ಆವರ ಶಿವತತ್ವಾನುಭವ ಸಂ
ಭವ ಮಹತ್ವಸಮಗ್ರತೆಯುಪಯಂ
ಶಿವಗಣಂಗಳು [೩]ನುತಿಸು[೪]ತಿರಲಿಂತಾಗಳುಂ ಕೇಳ್ದು ೨೧

ಆ ಮಹಾಶಿವಯೋಗಿವರನಂ
ಪ್ರೇಮದಿಂದಾನೆಂದು ಕಾಣ್ಬೆನೊ
ಆ ಮಹಂತನ ಮೆಲ್ಲಡಿ[೫]ಯನೆಂ[೬]ದರ್ಚಿಸುವೆನೆನುತ
ಆ ಮಹಾಪರ್ವತಶಿಖಿರದು
ದ್ಭಾಮಮಂ ಕಂಡಾ ಗಿರೀಂದ್ರಮ
ಹಾಮಹಿಮೆಯಂ ಮಾದಿರಾಜಂ ನುತಿಸುತಿಂತೆಂದ ೨೨

---

೧ ಹಾ (ಥ, ಧ). ೨ ತ (ತ). ೩–೪ ಸುತಿರ (ಮ). ೫–೬ ಪೇಳು (ತ, ಥ, ಧ, ನ, ಪ). ೬–೫ ಗಳಂ (ಕ).

CC-0. Jangamwadi Math Collection. Digitized by eGangotri

ದೂರವೆಯ್ದಿ ಹಿಮಾಂಬುವಂ ಕೇ
ತಾರದಲಿ ಸೇವಿಸುವರಂತೆ ಶ
ರೀರವಂ ಬಿಡವೇಳ್ಕು ಗಡ ತತ್‌ಕಾಲಿಯಲಿ ಮುನ್ನ
ಘೋರವಿಂತಿಂತಪ್ಪವಸ್ಥೆಗೆ
ಸ್ಮೈರಿಸುವರಾರೀ ಗಿರೀಂದ್ರದ
ಚಾರು ಶಿಖಿರವನೊಮ್ಮೆ ಕಂಡಡವಂಗಹುದು ಮುಕ್ತಿ ೨೩

ಈ ನಗೇಂದ್ರವನೊಮ್ಮೆ ನೋಡಿದ
ಮಾನ[೧]ವರ್ಗ[೨]ಪವರ್ಗವಹುದನು
ಮಾನವಿಲ್ಲಡಿಗಡಿಗೆ ನೋಡುತ ನೋಡುತೆಯ್ತಪ್ಪ
ಮಾನುಷನ ತತ್‌ಪುಣ್ಯಫಲಕವ
ಸಾನಮುಂಟೇ ಅನವರತವಾ
ಸ್ಥಾನದಲ್ಲಿಯೆ ವಸಿಸಿಕೊಂಡಿರ್ದಾತನೀಶ್ವರನು ೨೪

ಸರ್ವ ತೀರ್ಥಂಗಳ ನಿವಾಸಂ
ಸರ್ವ ದೇವರ್ಷಿಗಳ ನೆಲೆವನೆ
ಸರ್ವ ಸಾಧಕ ಸಿದ್ಧರಿಗೆ ಕಾಮ್ಯಾಭಿವೃದ್ಧಿಕರ
ಸರ್ವ ದೃಷ್ಟಾದೃಷ್ಟ ಭೋಗಾ
ಪೂರ್ವಸೌಖ್ಯಪ್ರತತಿಗೀ ಶ್ರೀ
ಪರ್ವತೇಂದ್ರಂ ಮಱಿಪುದಿದಱಿ ಮಹಿಮೆ ಘನಕೆ ಘನವು ೨೫

ಮುಳಿದಗಸ್ತ್ಯನು ಮೆಟ್ಟಿದಡೆ ಭೂ
ತಳಕೆ ಕುಗ್ಗಿದ ವಿಂಧ್ಯನಗದ
ಗ್ಗಳಿಕೆಯೆಂತುಟು ಹರಿ ನೆಗಹಿದಡೆ ನೆಗೆದ ಮಂದರದಾ
ಬಲುಹೆನಿತು ದಶಮುಖಿನಲುಗಿಸಿದ
ಮಲಹರಾದ್ರಿಯ ಗುಂಪೆನಿತು ಘನ
ವುಳಿದು ಲಘುಧನವಾದ ಮೇರುವಿನುನ್ನತಿಕೆಯೆನಿತು ೨೬

೧–೨ ವಂಗ (ತ, ಥ, ಧ, ನ).

CC-0. Jangamwadi Math Collection. Digitized by eGangotri

ಪವಿಧರನ ಭಯಕಂಜಿ ಸರಿದ
ರ್ಣವದೊಳಿಹ ಪೈನಾಕದ ವಿಶಾ
ಲವದೆನಿತು ತಾನೆಡೆಗೆಡೆಗೆ ಗಂಗಾಜಲೋದ್ಧತಿಗೆ
ತವೆ ಸವೆವುತಿಹ ಮಾಲ್ಯವಂತದ
ಹವಣೆನಿತು ರವಿರಶ್ಮಿಗಾಱಿದೆ
ಜವಗೆಡುವ ಹಿಮವನ್ನಗೇಂದ್ರದ ಘನತರವದೆನಿತು ೨೭

ದಿನಕರೋದಯಸಮಯಕಗ್ಗಿಲ್ಲದ
ವನಿಯೊಳೊಪ್ಪುದುದಯ ಕುಧರದೊ
ಳ್ಪೆನಿತು ಬಸುಱಿಗೊಳು ಪೊಕ್ಕ ಮಿತ್ರನ ತೇಜವಂ ಕೆದಿಸಿ
ಕನಲುವಸ್ತಾಚಲದ ಗೌರವ
ವೆನಿತು ಚಂದನವಲ್ಲದೇ ಮಿ
ಕ್ಕಿನ ತರುಗಳಿಲ್ಲದ ಮಲಯಭೂಧರದ ಪೆಂಪೆನಿತು ೨೮

ಹರನಸೊಂದಿನವಾದಡಂ ತಾಂ
ಧರಿಸಲಾಱಿದ ಮಾನಸೋತ್ತಮ
ಗಿರಿಯ ನಿಲವೆನಿತೀಶ್ವರಂ ತನ್ನುವನಗಲಿ ಪೋದ
ಸುರಪಕೀಲದ ಧೈರ್ಯವೆನಿತು
ಸ್ಫುರದರುಣ ಪಾಷಾಣವರ್ಣೋ
ತ್ಕರದಿ ನಟಿಸುವ ರೋಹಣಾದ್ರಿಯ ಘನತೆಯೇತಱಿದು ೨೯

ಪೊಡವಿಪನ ರಾಘವನ ಧನುವಿಂ
ಕಡಿವಡೆದುಳಿದ ಗಂಧಮಾದನ
ದಡರುವಿಕೆ ತಾನೆನಿತು ಭೂಭಾರಕತನದ ಮಾತು
ಬಿಡದ ಕುಲಶೈಲಂಗಳಗ್ಗದ
ಕಡುಹೆನಿತು ವಾನರರು ಹೊಱಿಲೆಡೆ
ಗೆಡೆಗೆ ಜರಿವಾ ಮಣ್ಣುಬೆಟ್ಟಂಗಳ ಬಿಗುಹದೆನಿತು ೩೦

೧ವ (ಅ). ೨ಪ್ಪೆ (ಥ, ಪ).

CC-0. Jangamwadi Math Collection. Digitized by eGangotri

ಅಂದುವಿಂದಾವಾವ ಕಾಲದೊ
ಳೆಂ[೧]ದುವುಂ ತಾಂ ಕುಂದು ನಿಂದೆಗ
ಳೊಂದುವಿಲ್ಲದಮಂದ ಮಹಿಮಾನಂದದಿಂದಿಪ್ಪ[೨]
ಹೆಂದದುದ್ಯಚ್ಪ್ರ್ರ[೩]ನಗೇ[೪]ಂದ್ರವು
ನಂದದಿಂ ಕೀರ್ತಿಸುತಡಿಗಡಿಗೆ
ವಂದಿಸುತ ಮಾದರಸನಾ ಗಿರಿವನಸಮೀಪದಲಿ ೩೧

ಶ್ರೀಗಿರಿಗೆ ನಡೆತಂದನಾ ಶಿವ
ಯೋಗಿ[೫]ಮಲ್ಲರಸರು[೬]ಗಳಂ ಆ
ವಾಗ ಕಂಡಪೆನೆಂಬ ಭರದಲಿ ಮಾದಿರಾಜಯ್ಯ
ಆ[೭] ಗಿರೀಂದ್ರವನಾಂತರದ ಪು
ಣ್ಯಾಗಣಿತ ತೀರ್ಥಂಗಳೊಳು ತ
ದ್ಭಾಗಪುಣ್ಯಾಯತನ ಗ[೮]ಣ್ಯಸ್ಥಾನಭೂಮಿಯಲಿ ೩೨

ಮಂಗಳಪ್ರದ ದೀರ್ಘಕಾತೀ
ರಂಗಳೊಳು ಪಟು ವಿವಿಧಗಿರಿದು
ರ್ಗಂಗಳೊಳು ವನದುರ್ಗಜಲದುರ್ಗಂಗಳೊಳು ಬಿಡದೆ
ಪಿಂಗದತಿ ಗಹ್ವರ ಗುಹಾದಿ ಬಿ
ಲಂಗಳೊಳ್ ಸ್ಫಾಟಿಕಕುಧರ ಶೃಂ
ಗಂಗಳೊಳು ಸೌವರ್ಣವಜ್ರಮಯೋರುಗಿರಿಗಳೊಳು ೩೩

ಭೂತಳಪ್ರಚ್ಛನ್ನಪುರವರ
ಜಾತದೊಳು ಪಾತಾಳ ಗುಹೆಗಳೊ
ಳಾತತಾಭ್ರಂಶಿಕ ಶಿಲೆಗಳೊಳು ರತ್ನಗಿರಿಗಳೊಳು
ಸ್ಫೀತವಿಲಸತ್ [೯]ಪುರುಷ[೧೦]ವೇದೀ
ವ್ರಾತದೊಳು ದರುಶನ ವಿಮುಕ್ತಿ
ಖ್ಯಾತದಾಸ್ಥಾನಂಗಳೊಳು ನಂದನವನಂಗಳೊಳು ೩೪

---

೧ ಳೊಂ (ಧ). ೨ ಪ್ಪಾ (ಸ). ೩–೪ ಗಿರೀ (ಸ). ೫–೬ ಮಲ್ಲಯ್ಯಂ (ಕ, ಚ, ತ, ಥ, ನ, ಪ, ಬ, ಮ). ೭ ಶ್ರೀ (ಪ). ೮ ಪು (ತ, ನ, ಸ). ೯–೧೦ ಸ್ಪರ್ಶ (ಥ, ಧ, ಪ).

CC-0. Jangamwadi Math Collection. Digitized by eGangotri

ಸಂಗತೋರಗ ಖಿಗ ಮೃಗಾವಾ
ಸಂಗಳೊಳು ಗಿರಿಶಿಖಿರನಿಪತಿತ
ತುಂಗ ಧಾರೋದ್ಧಾರ ಕಲ್ಪೋರ್ವೀತಳಂಗಳೊಳು
ಪೊಂಗಿ ನಡೆವುತ ಪರಿಮಿತಾವಾ
ಸಂಗಳೊಳಗೆಡೆಗೆಡೆಗೆ ನಿಲುತಂ
ಲಿಂಗಪೂಜೆಗಳಂ ಸಲಿಸುತಂ ಬರಬರಲು ಮುಂದೆ ೩೫

ವಿನುತ ಬಿಲ್ವವನಪ್ರದೇಶಾ
ವನಿ ಸಮೀಪದೊಳೆಸೆವ ರುದ್ರಾ
ಕ್ಷನಗ ರುದ್ರಾಕ್ಷತರು ರುದ್ರಾಕ್ಷಿವನಿ ರುದ್ರಾಕ್ಷ
ಘನ ಕಣಿಗಳೊಳು ಭಸಿತಗಿರಿಗಳೊ
ಳನತಭಸಿತ ಕುಜಂಗಳೊಳು ಪಾ
ವನ [ಭಸಿತ] ಸಿಂಧುಗಳೊಳುತ್ತಮ ಭಸಿತಕಣಿಗಳೊಳು ೩೬

ಲಿಂಗ ಶೈಲಂಗಳೊಳು ಲಿಂಗ ಕು
ಜಂಗಳೊಳು ಲಿಂಗಾಪಗೆಗಳೊಳು
ಲಿಂಗ ತೀರ್ಥಂಗಳೊಳು ಜಂಗಮ ಭೂಧರಂಗಳೊಳು
ಜಂಗಮ ಕ್ಷಿತಿರುಹನಿವಹದೊಳು
ಜಂಗಮಾಯತ ಗುಲ್ಮತತಿಯೊಳು
ಜಂಗಮ ಲತಾಶ್ರೇಣಿಯೊಳು ಸಕಳೇಶಮಾದರಸ ೩೭

ವ್ಯಾಪಿಸುತ ಸಲ್ಲಾಪತರು ಸ
ಲ್ಲಾಪಗಿರಿ ಸಲ್ಲಾಪಲತೆ ಸ
ಲ್ಲಾಪವಲ್ಲರಿ ದೀಪಿಸುವ ಘನಗಹನಮಧ್ಯದಲಿ
ಧೂಪಿಸುವ ಗಾಯಕ ಗಿರಿಗಳೊಳು
ಪ್ರಾಪಿಸುವ ಗಾಯಕ ತರುಗಳೊಳ
ಗೀ ಪರಿಯ ಗಾಯಕ ಬಹಳ ಗುಲ್ಮಪ್ರತಾನದೊಳು ೩೮

೧–೨ ನದ (ತ, ಥ, ನ, ಪ). ೩ ರೂ (ತ, ಥ, ನ, ಪ).

CC-0. Jangamwadi Math Collection. Digitized by eGangotri

ಗಾಯಕದ ಲತಿಕಾಪ್ರತತಿಯೊಳು
ಗಾಯಕದ ಮೃಗಸಂತತಿಗಳೊಳು
ಗಾಯಕದ ಮಧುಪಂಗಳೊಳು ಗಾಯಕದ ಫಣಿಗಳೊಳು
ಗಾಯಕದ ವಾನರನಿಕರದೊಳು
ಗಾಯಕದ ಸಿಂಹಾವಳಿಗಳೊಳು
ಗಾಯಕದ ಕರಿಗಳೊಳು ಗಾಯಕದಂಡಜಂಗಳೊಳು ೩೯

ನಾಟ್ಯ ಧರಣೀಧರನಿಕರದೊಳು
ನಾಟ್ಯ ಭೂಜಾತಪ್ರತತಿಯೊಳು
ನಾಟ್ಯ ಗುಲ್ಮಾನಿಕರದೊಳು ನವ ನಾಟ್ಯಲತೆಗಳೊಳು
ನಾಟ್ಯ ಮೃಗಯೂಥಂಗಳೊಳು ನವ
ನಾಟ್ಯ ಪಕ್ಷಿವಿತಾನದೊಳು ನವ
ನಾಟ್ಯ ವಾನರವೃಂದದೊಳು ನಾಟ್ಯೋರಗಂಗಳೊಳು ೪೦

ಹೊಳೆವ ಕಾಷ್ಠಜ್ಯೋತಿಗಳೊಳು
ಜ್ವಲಿಸುವ ಶಿಲಾಜ್ಯೋತಿಗಳೊಳಂ
ಬೆಳಗುವ ತೃಣಜ್ಯೋತಿಗಳೊಳುಂ ವಾಳುಕಜ್ಯೋತಿ
ಗಳೊಳಗಂ ಜ್ಯೋತಿರ್ನದಿಗಳೊಳು
ಜಲಗಿರಿಗಳೊಳು ಜಲತರುಗಳೊಳು
ಜಲವಿಹಂಗಮವಿತತಿಯೊಳು ಜಲಮೃಗಸಮೂಹದೊಳು ೪೧

ಹಲವುವರ್ಣ ದ್ರುಮಸಮಿತಿಯೊಳು
ಹಲವುವರ್ಣ ಶಿಲಾವಳಿಗಳೊಳು
ಹಲವುವರ್ಣ[ದ] ಗುಲ್ಮಲತಿಕಾಸಂಕುಲಂಗಳೊಳು
ಹಲವುರೂಪ ಮಹಾತರುಗಳೊಳು
ಹಲವುರೂಪ ಮಹಾಶಿಲೆಗಳೊಳು
ಹಲವುರೂಪ ಮಹಾಲತಾಗುಲ್ಮೋತ್ಕರಂಗಳೊಳು ೪೨

CC-0. Jangamwadi Math Collection. Digitized by eGangotri

ಭೀರಿತ ಪೇಚರ ತರುಗಳೊಳು ಪೇ
ಚರ ಶಿಲೆಗಳೊಳು ಪೇಚರದ ವ
ಲ್ಲರಿಗಳೊಳು ಪೇಚರವಿಪುಳ ಗುಲ್ಮಂಗಳೊಳು ಹರ್ಮ್ಯ
ಗಿರಿಗಳೊಳು ಹರ್ಮ್ಯಾವನೀಜ ನಿ
ಕರದೊಳುಂ ಶಿಖನಗಿರಿಯ ಗುಲ್ಮೋ
ತ್ಕರದೊಳುಂ ಹರ್ಮ್ಯಪ್ರಥಿತವಲ್ಲೀನಿಕಾಯದೊಳು ೪೩

ಸುಲಲಿತದ ಮೃಗರೂಪವೃಕ್ಷಾ
ವಳಿಗಳೊಳು ಮೃಗರೂಪಶೈಲಾ
ವಳಿಗಳೊಳು ಖಗರೂಪ ವೃಕ್ಷಾವಳಿಯೊಳಱಿಸುತ್ತ
ನಳನಳಿಪ ಖಗರೂಪದುಪಲಾ
ವಳಿಗಳೊಳು ನರರೂಪ ವೃಕ್ಷಾ
ವಳಿಗಳೊಳು ನರರೂಪದುಪಲಾವಳಿಗಳೊಳು ಬಳಿಕ ೪೪

ದೇವರೂಪ ಕುಜಾವಳಿಗಳೊಳು
ದೇವರೂಪ ಶಿಲಾವಳಿಗಳೊಳು
ದೇವಸಂಭೂತಪ್ರಸೂತಧ್ರುಮಸಮೂಹದೊಳು
ಭೂವಿನುತ ಭೂತಪ್ರಸೂತ ನ
ಗಾವಳಿಗಳೊಳು ಮಹಿತ ಗಂಧ
ರ್ವಾವನೀಜಸಮಾಜದೊಳು ಗಂಧರ್ವಶಿಲೆಗಳೊಳು ೪೫

ಲಲಿತಕರಗಂಧರ್ವಗುಲ್ಮಾ
ವಳಿಗಳೊಳು ಗಂಧರ್ವಲತಿಕಾ
ವಳಿಗಳೊಳು ನೆಳಲುಗಳು ತಿರುಗದ ನಿತ್ಯತರುಗಳೊಳು
ನೆಳಲು ತಿರುಗದ ನಿತ್ಯ ಶೈಲಾ
ವಳಿಗಳೊಳು ನೆಳಲಿಲ್ಲದಗಸಂ
ಕುಳದೊಳುಂ ನೆಳಲಿಲ್ಲದಿಪ ಸಾನ್ನಿಧ್ಯಗಿರಿಗಳೊಳು ೪೬

---

೧ ಚ (ಸ). ೨–೩ ಸಲೆ ಪಿರಿ (ತ, ನ). ೪ ಪಾ (ಕ)

CC-0. Jangamwadi Math Collection. Digitized by eGangotri

ದೂರದಲಿ ನೆಳಲೊಪ್ಪಿ ತೋಱುವ
ಧಾರುಣೀಜಾತಾವಳಿಗಳೊಳು
ದೂರದೊಳು ನೆಳಲೊಪ್ಪಿ ತೋಱುವ ಭೂಧರಂಗಳೊಳು
ಆರಿಗೆಯು ಹೊತ್ತೊಂದು ಛಾಯದ
ಧಾರುಣೀಜಾತಾವಳಿಗಳೊಳ
ಗಾರಯಲು ಹೊತ್ತೊಂದು ಛಾಯದ ಭೂಧರಂಗಳೊಳು ೪೭

[೧]ತರುತರುಗಳೊಡ[೨]ನೆರೆಯಲಾಗಳೆ
ಧರೆಯೊಳುದಯಿಪ ಬಾಲತರುಗಳು
ಗಿರಿಗಿರಿ[೩]ಗಳೊಡ[೪]ನೆರೆಯಲುದಯಿಪ ಬಾಲಗಿರಿತತಿಯ
ತರುಗಳೋಲೈಸಲ್ಕೆ ತರುಗಳ
ನರಸುತನದಿಂದೇಱಿ ವಿಹರಿಸು
ವರಸುತರುಗಳನಿಹಗೆ ವಿಹರಿಸುವರಸುಲ[೫]ನಗತತಿಯ[೬] ೪೮

ಏಱಿ[೭]ನೋಡಲು ಲೋಕವೆಲ್ಲಂ
ತೋಱಿಲಾಪ ಮಹೀರುಹಂಗಳ
ನೇಱಿ ನೋಡಲು ಲೋಕವೆಲ್ಲಂ ತೋಱುವದ್ರಿಗಳ
ಏಱಿ[೭]ಯುಂಕಿಸಲೆಲ್ಲಿಗಾದಡೆ
ಜಾಱಿದೊಯ್ವ ಮಹೀರುಹಂಗಳ
ನೇಱಿಯುಂಕಿಸಲೆಲ್ಲಿಗಾದಡೆ ಒಯ್ವ ನಗತತಿಯ ೪೯

ರೂಪಿಸುತ ಬಂದೇಱಿಲೊಡನೆ ನಿ
ರೂಪನಾಗಳೆ ಮಾಳ್ಪ ತರುಗಳ
ರೂಪಿಸುತ ಬಂದೇಱಿಲೊಡನೆ ನಿರೂಪನಾದಡೆಯು
ಏಪರಿಯೊಳುಂ ಮಾಳ್ಪ ಗಿ[೮]ರಿಗಳ
ತಾಪಿಸುವ ಬಿಸಿಲಾದಡೇಱಿ ಪ
ರೋಪಕಾರದಿ ಚಂದ್ರಿಕೆಯನೊಂದಿಸುವ ಶಾಖಿಗಳ ೫೦

೧–೨ ತರುಗಳೊಳ್ ತರುವೊಡ (ತ, ನ); ತರುವು ತರುವೊಡ (ಸ). ೩–೪ ಯೊಡನೆ (ಕ, ಚ, ಥ, ಧ, ಪ, ಬ, ಮ). ೫–೬ ಲತಿಕೆಗಳ (ಕ, ಚ, ಧ, ಬ, ಸ). ೭ ಕ (ಅ, ಡಾ).

CC-0. Jangamwadi Math Collection. Digitized by eGangotri

ಶೈಲವರ್ಧಂ ಮೃಗವದರ್ಧಂ
ಸಾಲವರ್ಧಂ ವಿಹಗವರ್ಧಂ
ಮೇಲೆ ತತ್ಫಲವಾದ ತರುಗಳ ಚಂವ್ರಚಂದ್ರಿಗಳ
ಶೈಲವೋ ೧ಕಱಿಗೊಂಡುದೆಂ೨ಬ ವಿ
ಶಾ೩ಲವಿಂತೊಂದೊಂದು ಘಳಿಗೆಗೆ
ಓಳಿಯಿಂದೊಂದೊಂದು ಪಣ್ಣುದುರ್ತಿಪ್ಪ ವಿಟಪಿಗಳ ೫೧

ಆಡಿಗಡಿಗೆ ಒಂದೊಂದು ಘಳಿಗೆಗೆ
ತಡೆಯದಿಂತೊಮ್ಮೊಮ್ಮೆ ಬಲುದನಿ
ಗೊಡುವ ಗಿರಿಗಳ ಮೊದ೪ಲುದಱಿ೫ದಡೆ ಪತ್ತುವದ್ರಿಗಳ
ಬಿಡದೆ ಮೊದಲಂತಱಿಯೆ ಪತ್ತುವ
ನಿ೬ಡುಲತೆಗಳಂ ಹಾಯ್ಕಿದಡೆ ಬಂ
ದೊಡನೆ ಮುನ್ನಿನ ೭ಠಾವಿನಲಿ೮ ನೆಲೆಗೊಂಬ ಕಲ್ಲುಗಳ ೫೨

ರವಿಯಕೂಡುದಯಿಸಿ ನಭಂಬರೆ
ತವೆ ಬೆಳೆದ ರವಿಯೊಡನಿಳಿದು ಬೆಳೆ
ದವನಿತಳದೊಳು ಬೆರಸುವುನ್ನತ ಭೂಜರಾಜಿಗಳ
ರವಿಯ ಕೂಡುದಯಿಸಿ ನಭಂಬರೆ
ತವೆ ಬೆಳೆದು ರವಿಯೊಡನಿಳಿಯೆ ಬೆಳೆ
ದವನಿತಳದೊಳು ಬೆರಸಲುನ್ನತ ಭೂಧರಾವಳಿಯ ೫೩

ನಾಲ್ಕುಶಾಪೆಯನೇಱಿ ನೋಡಲು
ನಾಲ್ಕು ಬಾಗಿಲುಗಾಣಿಸುವುದೆಣೆ
ಸಲ್ಕೆ ಪುರವಂ ಕಾಣಿಸುಗು ಸಿರಿಗಿರಿಯೆನಿಪ ತರುವು
ನಾಲ್ಕು ಶಿಖಿರವನೇಱಿ ನೋಡಲು
ನಾಲ್ಕು ಬಾಗಿಲುಗಾಣಿಸುವುದೆಣೆ
ಸಲ್ಕೆ ಪುರವಂ ಕಾಣಿಸುಗು ಸಿರಿಗಿರಿಯೆನಿಪ ಗಿರಿಯು ೫೪

೧–೨ ಮೇ (ತ, ಧ, ನ). ೨–೩ ಬಿನಶ್ಯೆ (ಕ). ೪–೫ ಲ ತಱಿ (ತ, ನ). ೬ ಗಿ (ಸ). ೭–೮ ತಾಣದೊಳ್ (ತ, ನ).

CC-0. Jangamwadi Math Collection. Digitized by eGangotri

ಮೇಲನೇಱಿದ ಮನುಜರಂ ಪಾ
ತಾಳಗಂಗೆ[೧]ಯೊಳಾಡಿ[೨]ಸುತ್ತನು
ಕೂಲವಾಗಿಹ ತುಂಗ ಗಂಗಾವೃಕ್ಷಪಙ್ತಿಗಳ
ಮೇಲನೇಱಿದ ಮನುಜರಂ ಪಾ
ತಾಳಗಂಗೆ[೨]ಯೊಳಾ[೧]ಡಿಸುತ್ತನು
ಕೂಲವಾಗಿಹ ತುಂಗ ಗಂಗಾಶೈಲಪಙ್ತಿಗಳ ೫೫

ಅರ್ಥಿಸೇಱಿದಡಪ್ಪಷಷ್ಟಿ
ತೀರ್ಥತತಿಯಂ ಮೀ[೨]ಱಿಲಾಪ ಸ
ಮರ್ಥಿಕೆಯನುಳ್ಳಪ್ಪಷಷ್ಟಾ ಶೈಲಸಂತತಿಯ
ಅರ್ಥಿಸೇಱಿದಡಪ್ಪಷಷ್ಟಿ
ತೀರ್ಥತತಿಯಂ ಮೀ[೨]ಱಿಲಾಪ ಸ
ಮರ್ಥಿಕೆಯನುಳ್ಳಪ್ಪಷಷ್ಟಾ ವೃಕ್ಷಸಂತತಿಯ ೫೬

ಒಂದನೊಂದಱಿ[೨]ಳೊಱಿಸಲೊಱಿಸಲು
ಮುಂದೆ ಪೇರುರಿಯೊಗೆದು ಬೇಯಲು
ಮಂದವಾಗಿ ನೆಗಳ್ದ ಧಾತ್ರೀ[೧]ಧರ ಸಮುಚ್ಚಯವ[೨]
ಒಂದನೊಂದಱಿ[೨]ಳೊಳೊತ್ತಿ ಪಾಱಿಲು
ಮುಂದೆ ಪೇರುರಿಯೊಗೆದು ಬೇಯಲು
ಮಂದವಾಗಿ ನೆಗಳ್ದ ಧಾತ್ರೀಜಾತಜಾತಿಗಳ ೫೭

ಶೀತವಾದಡೆ ನಡುವಿರುಳು ಬಂ
ದೋತು ತತ್‌ಕ್ಷಣವೇಱಿಲೊಡನಿಂ
ತಾತಪವನೊಂದಿಸುವ ಧಾತ್ರೀಜಾತಜಾತಿಗಳ
ಶೀತವಾದಡೆ ನಡುವಿರುಳು ಬಂ
ದೋತು ತತ್‌ಕ್ಷಣವೇಱಿಲೊಡನಿಂ
ತಾತಪವನೊಂದಿಸುವ ಧಾತ್ರೀಧರಸಮುಚ್ಚಯವ ೫೮

೧–೨ಯ ನಾಡಿ (ನ); ಯ ಕಾಣಿ (ಸ). ೩–೪ಯನಾ (ತ, ಸ). ೫ತೋ (ತ, ಥ, ಧ, ನ, ಪ). ೬–೭ಜಾತಜಾತಗಳು (ಮ. ಬ); ಜಾತಸಮುಚ್ಚಯವ (ಕ); ಜಾತಸಂತತಿಯು (ಚ, ಥ, ಪ).

CC-0. Jangamwadi Math Collection. Digitized by eGangotri

ಆತಪಂ ಪಿರಿದಾವಡಂ ಸಂ
ಪ್ರೀತಿಯಲಿ ಬಂದೇಱಿದಡೆ ಚಂ
ದ್ರಾತಪದೊಳಿರಿಸುವ ಧರಿತ್ರೀಜಾತಜಾತಿಗಳ
ಆತಪಂ ಪಿರಿದಾವಡಂ ಸಂ
ಪ್ರೀತಿಯಲಿ ಬಂದೇಱಿದಡೆ ಚಂ
ದ್ರಾತಪದೊಳಿರಿಸುವ ಧರಿತ್ರೀಧರ ಸಮುಚ್ಚಯವ ೫೯

ಕ್ಷೀರಧಾತ್ರೀಧರ ಸಮೂಹ
ಕ್ಷೀರ ಧಾತ್ರೀರುಹ ವಿತಾನ
ಕ್ಷೀರಪೂರ್ಣತಟಾಕಸಂಚಯ ದೀರ್ಘಿಕಾವಳಿಯ
ಪೂರದಧಿನಗ ಪೂರದಧಿಕುಜ
ಪೂರದಧಿಕೂಪೋತ್ಕರಂಗಳ
ಪೂರದಧಿತಟಿನೀಪಟಿಲದಧಿದೀರ್ಘಿಕಾವಳಿಯ ೬೦

ಘೃತಮಹೀಧರ ಘೃತಮಹೀರುಹ
ಘೃತತಟಾಕ ಘೃತಾಂಬುಜಾಕರ
ವಿತತಿಗಳ ಮೇಣಮೃತಶೈಲಾಮೃತ[೧]ಕುಜಾವಳಿಯ[೨]
ಅತಿಶಯಾಮೃತ ದೀರ್ಘಿಕಾಮೃತ
ಶತದಳಾಕರ ರಸನಗ ರಸ
ಕ್ಷಿತಿಜ ರಸಕಾಸಾರವೃಂದದ ಬಿಲ್ವವನದೊಳಗೆ ೬೧

ಕನಕಪರ್ವತ ಕನಕಪಾದಪ
ಕನಕವಲ್ಲಿ ಸುಕನಕಗುಲ್ಮಂ
ಕನಕ ವಿಪುಲತಟಾಕ ಕನಕಸರೋವರಾವಳಿಯ
ಕನಕಮೃಗಕುಲ ಕನಕವಿಗಕುಲ
ಕನಕಫಣಿಕುಲ ಕನಕ ಮಧುಕರ
ಕನಕರೇಣು ಸುವರ್ಣಮಯವಹ ವಾಳುಕಾನಿಕರ ೬೨

೧-೨ ಕುಜವ್ರಜದ (ಕ, ಚ, ತ, ನ, ಪ, ಬ.)

CC-0. Jangamwadi Math Collection. Digitized by eGangotri

ಕನಕನಗರೀ ಕನಕ ಹರ್ಮ್ಯಸು
ಕನಕವಪ್ರ ಕನಕಸುರಾಲಯ
ವಿನುತ ಮಣಿನಗ ಮಣಿಮಹೀರುಹ ಮಣಿಲತಾಗುಲ್ಮ
ಘನದ ರತ್ನಾದ್ರಿಗಳ ರತ್ನಾ
ವನಿರುಹಂಗಳ ರತ್ನಮಯಗು
ಲ್ಮನಿಕರಂಗಳ ರತ್ನಲತೆಗಳ ಬಿಲ್ದವನದಲ್ಲಿ ೬೩

ಒಂದು ಕೊಂಬಶ್ವತ್ಥಮುಂ ವಟ
ವೊಂದು ಕೊಂಬು ಕ್ರಮುಕಶಾಖೆಯ
ದೊಂದು ನೇಱಿಲದೊಂದು ಶಾಖೆಯಶೋಕವೊಕ್ಕೊಂಬು
ಒಂದು ಶಾಖಿಂ ನಾಗಕೇಶರ
ವೊಂದು ಶಾಖಿಂ ನಾರಿಕೇಳವ
ದೊಂದು ಶಾಖಿಂ ಚಂದನಂ ಘನಸಾರವೊಕ್ಕೊಂಬು ೬೪

ಒಂದರಳು ಇರವತಿಗೆ ಪಡ್ಡಳಿ
ವೊಂದರಳು ಸೇವತಿಗೆ ಚಂಪಕ
ಒಂದರಳು ಸುರಹೊನ್ನೆ ಬಂದುಗೆ ಒಂದರಳು ಜಾಜಿ
ಒಂದು ಹೂವೊಂದರಳುಮಲ್ಲಿಗೆ
ಒಂದು ಹೂ ಮಂದಾರವುತ್ಪಲ
ಒಂದು ಚೆನ್ನೆಯ್ದಿಲು ಬಕುಳ ಒಂದೊಂದು ಅರವಿಂದ ೬೫

ಒಂದು ಜಂಬುಫಲಂ ಆರುಣಫಲ
ವೊಂದು [೧]ಚೂತ[೨]ಫಲಂ ಬಳಿಕ ತಾ
ನೊಂದು ಕದಳೀಫಲ ಕಪಿತ್ಥಫಲಂಗಳೊಂದೊಂದು
ಒಂದು ಫಲವದು ಮಾತುಳಂಗವ
ದೊಂದು ಫಲವದು ತಿಂ[೩]ತ್ರಿಣೀ[೪]ಕವ
ದೊಂದು ಫಲವದು ಪಲಸು ಮೇಣಾ ನಾರಂಗಫಲವೊಂದು ೬೬

೧–೨ ಬದರಿ (ತ, ಥ, ಧ, ನ, ಪ). ೩–೪ ಥಿಣೀ (ಕ, ಚ).

CC-0. Jangamwadi Math Collection. Digitized by eGangotri

ಒಂದು ಮೊದಲಾಗಿಕ್ಕು ನೋಡಲು
ಮುಂದೆ ಬಹುವರ್ಣದ್ರುಮಾವಳಿ
ಒಂದು ಕಡೆ ಬಿಳಿದೊಂದು ಕಡೆ ಕರಿದೊಂದು ಕಡ ಕೆಂಪು
ಒಂದು ಕಡೆ ಪೀತಂ ಕಪೋತವ
ದೊಂದು ಕಡೆ ಮಾಂಜಿಷ್ಠಮೊಂದೆಸೆ
ವೊಂದಱಲಿ ತೋಱಿಲ್ಕೆ ಬಹುವರ್ಣದ ಮರಂಗಳೊಳು ೬೭

ಹಲವು ವರ್ಣಂಗಳ ನಗಂಗಳ
ಫಲಿತ ವಿದ್ರುಮವಿನಿತಿನಿತು ಕೋ
ಮಳ ಮರೀಚಿದ್ರಾಕ್ಷೆವೊಂದಿನಿತಿನಿತು ತಾಂಬೂಲಿ
ನೆಲೆಗೆ ಮೊದಲೊಂದಾಗಿ ಪಸರಿಪ
ಪಲವು ರೂಪಂಗಳ ಲತಿಕೆಗಳ
ಸುಳಿಸುಳಿದು ಲಿಂಗಾಂಗಣದ ರಜಮುಂ ಗುಡಿಸುವನಿಲ ೬೮

ಎಸೆವ ಲಿಂಗಾಂಗಣಕೆ ಸಮ್ಮಾ
ರ್ಜಿಸುವ ಕಿಱುವಳಿ ಲಿಂಗಭವನದೊ
ಳೊಸೆದು ಸಾಂಗದಿ ರಂಗವಾಲಿಯನಿಕ್ಕಿ ನಡೆತಪ್ಪ
ಹೊಸಪರಿಯ ಸಸ್ಯಂಗಳುಂ ಬಂ
ದಸಮಲಿಂಗಕೆ ಮಜ್ಜನಂ ಮಾ
ಡಿಸುವ ಬಹುತೀರ್ಥಂಗಳಂ ವಿಭ್ರಾಜಿಸಲು ನಿಚ್ಚ ೬೯

ಬಂದು ಶಿವಲಿಂಗಂಗಳಿಗೆ ಮೃದು
ಚಂದನವನನುಲೇಪಿಸುವ ಬಹು
ಚಂದನಕ್ಷ್ಮಾಜಂಗಳುಂ ಲಿಂಗಂಗಳಿಗೆ ಕೂರ್ತು
ತಂದು ಪೂಜಿಪ ಪುಷ್ಪವಾಟಿಕ
ವೃಂದಮುಂ ಲಿಂಗಂಗಳಿಗೆ ನಯ
ಮೊಂದಿ ಧೂಪವನೀವ ಗುಗ್ಗುಳತರುಸಮುಚ್ಚಯವು ೭೦

CC-0. Jangamwadi Math Collection. Digitized by eGangotri

ಪ್ರೀತಿಯಲಿ ಲಿಂಗಂಗಳಿಗೆ ಹೊಸ
ಜ್ಯೋತಿಗಳನೆತ್ತುವ ಬಹು ತೃಣ
ಜ್ಯೋತಿ ಕಾಷ್ಠಜ್ಯೋತಿಗಳು ಲಿಂಗಂಗಳಿಗೆ ಬಂದು
ಜಾತಿಪಣ್ಣಿಳನರ್ಪಿಸುವ ಭೂ
ಜಾತಜಾತಂ ಲಿಂಗಕನುದಿನ
ಓತು ವೀಳೆಯವಂ ಕೊಡುವ ಪೂಗಾದಿ ವಿಟಪಿಗಳು ೭೧

ಧರಣಿಯೊಳು ಮೇಣ್ ತಮ್ಮ ತಮ್ಮ ಪೆ
ಸರುಗಳೊಳು ಹರನಾಮವಂ ಸಲೆ
ಧರಿಸಿ ಭಜಿಸುವವೊಳ ಗಿರಿ ತರು ಖಗ ಮೃಗಾದಿಗಳು
ಗಿರಿವರೇಣ್ಯಂ ಶರಣೆನುತ್ತಂ
ಗಿರಿಸಮೂಹದೊಳನವರತಮುಂ
ಬೆರಸಿ [೧]ಗಿರಿ[೨]ಲಿಂಗಂಗಳಂ ಭಜಿಸುವ ಗಿರಿಪ್ರಕರ ೭೨

ವೃಕ್ಷವಲ್ಲಭ ಶರಣೆನುತ್ತಂ
[೩]ವೃಕ್ಷಸಂಘಾತಂಗಳೊಳು ಘನ
ವೃಕ್ಷ[೪]ಲಿಂಗವನೋಲಯಿಸುತಿಹ ವೃಕ್ಷ[೫]ಸಂದೋಹ[೬]
ಪಕ್ಷಿವಲ್ಲಭ ಶರಣೆನುತ್ತಂ
ಪಕ್ಷಿಮಂಡಲದೊಳಗೆ ಸತತಂ
ಪಕ್ಷಿಲಿಂಗವನೋಲಯಿಸುತಿಹ ಪಕ್ಷಿಸಂಚಯವು ೭೩

ವರ ಮೃಗೇಶಂ ಶರಣೆನುತ್ತಂ
ವರ ಮೃಗಾನೀಕಂಗಳೊಳು ಮನ
ವೆರಸಿ ಮೃಗಲಿಂಗಂಗಳಂ ಭಜಿಸುವ ಮೃಗಸ್ತೋಮ
ಉರಗವಲ್ಲಭ ಶರಣೆನುತ್ತಂ
ಉರಗಸಂದೋಹದೊಳನಾರತ
ಉರಗಲಿಂಗವನೋಲಯಿಸುತಿಪ್ಪುರಗ[೭]ಸಂತಾನ[೮] ೭೪

೧–೨ ಗುರು (ಸ). ೩–೪ ಪಕ್ಷಿಮಂಡಲದೊಳಗೆ ಸತತಂ ಪಕ್ಷಿ (ಸ). ೫–೬ ಸಂಚಯವು (ಸ). ೭–೮ ಸಂದೋಹ (ಸ).

CC-0. Jangamwadi Math Collection. Digitized by eGangotri

ಆಳಿಕುಳೇಶ್ವರ ಶರಣು ಶರಣೆನು
ತಳಿಕುಳಪ್ರಕರಂಗಳೊಳು ನೆರೆ
ದೊಲವಿನಲಿ ಲಿಂಗಂಗಳ ಸಲೆ ಭಜಿಸುವಳಿಕುಳವು
ಜಲವರೇಣ್ಯಂ[೧] ಶರಣು ಶರಣೆನು
ತೊಲಿದು ಜಲರುಹನಿಕರದೊಳು ಮನ
ವೊ[೨]ಲಿದು ಜಲಲಿಂಗಂಗಳಂ ಭಜಿಸುವ ಕೊಳಂಗಳೊಳು ೨೫

ತೀರ್ಥವಲ್ಲಭ ಶರಣೆನುತ್ತಂ
ತೀರ್ಥಯೂಥಂಗಳೊಳಜಸ್ರಂ
ತೀರ್ಥಲಿಂಗವನೋಲಯಿಸುತಿಹ ತೀರ್ಥಸಂದೋಹ
ಆರ್ಥಿಯಲಿ ಮುನಿನಾಥ ಶರಣೆಂ
ಬ[೩]ರ್ಥದಲಿ[೪] ಮುನಿ[೫]ಪಜ್ತಿ[೬]ಗಳೊಳು ಸ
ಮರ್ಥ ಮುನಿಲಿಂಗಂಗಳಂ ಭಜಿಸುವ ಮುನಿಪ್ರಕರ ೨೬

ಶಬರನಾಥಂ ಶರಣೆನುತ್ತಂ
ಶಬರರಾವಾಸಂಗಳೊಳು ನಿಜ
ಶಬರಲಿಂಗವನೋಲಯಿಸುತಿಹ ಶಬರ[೭]ಮಂಡಲ[೮]ವು
ವಿಬುಧಮುಖ್ಯರು [೯]ಸಂಚರಿ[೧೦]ಸುತಿಹ
ನಿಬಿಡ ಪಟುತರ ವೀರಘೋರ
ಪ್ರಬಲತಪವಂ ಮಾಡುವುತ್ತಮ ತಾಪಸಪ್ರಚಯ ೨೭

ಆಂಗವೆಲ್ಲಂ ಮುಸುಕಿ ವಲ್ಮೀ
ಕಂಗಳುದ್ದಕೆ ಬೆಳೆವುತಿರೆ ಬೆ
ಟ್ಟಂಗಳೋ ಎಂದೆಂಬವೊಲು ಇಹ ಸಂಯಮೀಪ್ರಕರ
ಸಾಂಗವಾಗಲು ಮೇಲೆ ಪಲವು ಮ
ರಂಗಳೊಗೆದಾವರಿಸುತಿರೆ ವ್ಯ
ಕ್ಷಂಗಳಂತಿರುತಿರ್ಪ [೧೧]ದಿವ್ಯ ಮುನೀಂದ್ರ[೧೨]ಸಂದೋಹ ೨೮

---

೧ ಣ್ಯನೆ (ತ). ೨ ನ (ಸ). ೩–೪ ರ್ಥಯಲಿ (ತ, ಥ, ಧ, ಪ). ೫–೬ ಪಾಳಿ (ಧ). ೭–೮ ಸಂಕುಳ (ಸ). ೯–೧೦ ಸಲೆ ಭಜಿ (ತ). ೧೧–೧೨ ಯತಿ ಮುನಿವ್ರಂದ (ಥ, ಪ).

CC-0. Jangamwadi Math Collection. Digitized by eGangotri

ಶಿಲೆಗಳೊಡನೆಯು ಬೆರಸಿ ಬೆಳೆವುತ
ಶಿಲೆಗಳಾಕಾರಪ್ರಕಾರದಿ
ಚಲಿಸದಾಗಳು ಯೋಗದಿಂದಿಹ ವರ ತಪೋಧನರು
ನಳನಳಿಪ ನೆಱಿ[3] ಮುಕ್ತಕೇಶಂ
ಗಳಿನೊಡಲನಾವರಿಸಿ ಬೆಳೆಯಲು
ಲಲಿತ ನೀಲಾದ್ರಿಗಳವೊಲು ಇಹ ಸನ್ಮುನೀಶ್ವರರು ೮೯

ಪರಮ ಕಾಷ್ಮೀಭೂತ ಭಾವನ
ನಿರುತದಿಂ ಕಾಷ್ಠಂಗಳಂತಿಹ
ವರ ಮುನಿಗಳುಂ ಶಿರವನಿಳೆಗಾಂತೂರ್ಧ್ವಕರರಾಗಿ
ಉರುತಪವನಾಚರಿಪ ಮುನಿಗಳು
ಚರಣದುಂಗುಟದಗ್ರವೊಂದನೆ
ಧರೆಯೊಳೂಱಿ[3] ವಿಶೇಷತಪವಂ ಮಾಳ್ಪ ತಾಪಸರು ೯೦

ಜ್ವಲಿಪ[೧] ಪಂಚಾಗ್ನಿಯ ನಡುವೆ ನಿ
ಶ್ಚಲದಿ ಬಯಲೊಳು ಮುಸುಕಿ ಪೆರ್ದೊಱಿ[3]
ಗಳು ಪರಿಯೆ ಪಟುತಪವನಾ[2]ಚರಿ[3]ಸುವ ತಪಸ್ವಿಗಳು
ಸಲಿಲಕಣ ಕಣವಾಳುಕಾ ತೃಣ
ದಳ ಫಲಾನಿಲ ಕಂದಮೂಲಂ
ಗಳನೆ ಮೆಲಿದು ತಪಂಗಳಂ ಮಾಡುವ ಮುನೀಶ್ವರರು ೯೧

ತರುಗಳೀಯಲು ಭಿಕ್ಷಮಂ ಕೊಂ
ಡಿರುವಿನಲ್ಲಿಹ ಮುನಿವರೇಣ್ಯರು
ಗಿರಿಗಳೀಯಲು ಭಿಕ್ಷಮಂ ಕೊಂಡಿಪ್ಪ ಮುನಿವರರು
ಸ್ಥಿರಜಲಕ್ರೀಡಾವಿನೋದದಿ
ನುರುವನಕ್ರೀಡಾವಿನೋದದಿ
ಪರಿಣಮಿಪ ಗಂಧರ್ವದಂಪತಿಗಳ ಸಮುಚ್ಚಯವು ೯೨

೧ತ (ತ, ಥ, ಧ, ನ, ಪ). ೨–೩ ಶ್ರಯಿ (ಥ, ಪ, ಸ).

CC-0. Jangamwadi Math Collection. Digitized by eGangotri

ಅಮಿತ ಶಿವಲಿಂಗಾರ್ಚನಾ ಸಂ
ಭ್ರಮಕಲಿತ ಮಾನಸದೊಳೈತ
ಪ್ಪಮರಿಯರುಮಮರರು ದಿಶಾರಮಣಿಯರು ದಿಗ್ಪರರು
ವಿಮಲ ಜಲಕನ್ನೆಯರ ಪೊತ್ತದಿ
ನಮರ್ದ ಬಿಲಕನ್ನೆಯರ ಪೊತ್ತಂ
ಕ್ರಮದಿ ಜಲಪುರುಷರುಗಳಿಂದೊಪ್ಪುವ ಬಿಲಪುರುಷರು ೮೩

ಗಂಡಮೃಗ ಮೃಗರಾಜ ಹರಿ ಪೇ
ದಂಡ ಸೂಕರ ಪುರುಷಮೃಗಕುಲ
ಚಂಡ ಭೀಲ್ಲುಕ ವೃಕ ಹರಿಣ ಸಾರಂಗ ಮಾರ್ಜಾಲ
ಪುಂಡರೀಕ ಶರಭ ಮಹಿಷ ಭೇ
ರುಂಡ ಚಮರೀಮೃಗ ಶಿವಿರಿಗಳ
ತಂಡವಿಂತನ್ಯೋನ್ಯವೈರವನುಳಿದು ಚರಿಸುತಿಹ ೮೪

ಘನದ ಬಿಲ್ವಾವನದ ಮಹಿಮೆಯ
ವಿನುತಿಸುತ ನೋಡುತ್ತವದಱಿೊಳು
ವಿನಯದಿಂ ತಮ್ಮಂಘ್ರಿಯಂ ಮುನ್ನಱಿಸುತೆಯ್ತಪ್ಪ
ಅನಘನಪ್ಪಾ ಮಾದಿರಾಜನ
ಮನದ ಬಲುಹಂ ನೋಡಿದಪೆ ನಾ
ನೆನುತ ಸದ್ಗುಣಿ ಮಲ್ಲಿಕಾರ್ಜುನದೇಶಿಕೋತ್ತಮನು ೮೫

ಅಂತು ಸಂಧಿ ೧೮ಕ್ಕಂ ಪದಗಳು ೧೦೩೮ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

---

೧ ವ (ಕ, ಚ, ಮ).

CC-0. Jangamwadi Math Collection. Digitized by eGangotri

ಸಂಧಿ : ೧೯

*

ಸೂಚನೆ : ಮಲ್ಲಿಕಾರ್ಜುನಯೋಗಿ ಬೆಸಸಿದ
ಸೊಲ್ಲನಾಲಿಸಿ ಬಸವರಸನಿ
ರ್ದಲ್ಲಿಗೆಯ್ತಂದಿರುತಮಿರ್ದನು ಮಾದಿರಾಜಯ್ಯ

ಸುರುಚಿರೋನ್ನತ ವಿಪುಳ ತನುವನು
ಧರಿಸಿ ಬಟ್ಟೆಯೊಳಡ್ಡಲಾಗಿಯೆ
ಧರೆಗೆ ಗಗನಕೆ ಬೆಳೆದು ನೀಳಕೆ ಬಿದ್ದಿರಲು ನೋಡಿ
ಪರಮ ಯೋಗೀಂದ್ರನೊ ವಿಭೂತಿಯ
ಗಿರಿಯೊ ಬಹಳಜ್ಯೋತಿರಂಗವೊ
ಧರಣಿಯೊಳು ಕೆಡೆದಿರ್ದ ರುದ್ರಾಕ್ಷವೃಕ್ಷವೊ ೧

ಘೋರಭೀಕರ ಶಂಭುವಿನ ಸಾ
ಕಾರವೋ ತಾನಿಲ್ಲಿ ಹೋಗಲು
ಬಾರದಿನ್ನೇಗುವೆನೆನುತ ಮಾದರಸನೀ ಕ್ರಮವ
ಸೇರಿ ನೋಡುವೆನಿದನೆನುತ್ತಾ
ಸೂರಿ ಶಿರಸಿನ ದೆಸೆಗೆ ನಡೆದು
ತ್ತಾರವಿಲ್ಲದೆ ಮೂಱು ವರುಷಂ ಗಮಿಸಿ ಕಾಣಿಸದೆ ೨

---

* ರಾಗ : ಕೇತಾರಗೌಳ (ಚ, ಧ, ಮ); ಕನ್ನಡಗೌಳ (ಅ, ಡಾ); ಗುಂಡಾಕ್ರಿ (ತ). ೧–೨ ಕ್ಷಾ ಮಹೀ (ಸ).

CC-0. Jangamwadi Math Collection. Digitized by eGangotri

ಅತ್ತಲಡಿಗಳ ಮೇಲೆ ಹೊಡವಡ
ದಿತ್ತ ಬಹುದಿದು ತಪ್ಪಲಾ ಎನು
ತುತ್ತಮಾಂಗದ ದೆಸೆಯೊಳಿರ್ದಾ ಪದಯುಗದ ಕಡೆಗೆ
ಮತ್ತೆ ವರುಷಾಷ್ಟಕವನೆಯ್ತಂ
ದೆತ್ತಲೆಂದಱಿಯದೆ ಭಯಭ್ರಮೆ
ವೊತ್ತು ನಿಮ್ಮಯ ರೂಪುದೋಱಿದೆ ಕಾಡಲೇಕೆನ್ನ ೩

ಏತಱಿವನಾ ನಿಮ್ಮ ಘನರೂ
ಪಾತಿಶಯಮಂ ಬಲ್ಲೆನೇ ಅತಿ
ಪೂತ ಸಾನಂದಾತ್ಮ ನಿಮ್ಮ ಪದಾಬ್ಜಮಂ ತೋಱಿ
ಪ್ರೀತಿಯಿಂ ಕೃಪೆ ಮಾಡೆನುತ ಮೃದು
ರೀತಿ ಮೊಳೆಯಲು ಕೀರ್ತಿಸುತ್ತಂ
ಭೀತಿಯಲಿ ಪಕ್ಷದ್ವಯಂ ಸೈಗೆಡಿದಿರಲು ನೋಡಿ ೪

ಮೆಲ್ಲಮೆಲ್ಲನೆ ನಗುತ ಕರುಣೋ
ತ್ಪುಲ್ಲಲೋಚನನಾಗಿ ಸದ್ಗುಣಿ
ಮಲ್ಲಿಕಾರ್ಜುನಯೋಗಿ ಭೀಕರವಪ್ಪ ತನುವುಡುಗಿ
ಸಲ್ಲಲಿತವಹ ತನ್ನ ಮುನ್ನಿನ
ನಲ್ಲರೂಪನೆ ತಾಳ್ದು ನಿನ್ನೊಳು
ಬಲ್ಲತನಮಂ ನೋಡೆಂದಿಂತಾದೆ ನಾನೆನುತ ೫

ಶರಣ ಇನ್ನೇಕೇಳೆನುತ ಸಾ
ವರದಿನಾಗಳಿ ಸೈಗೆಡೆದ ಮಾ
ವರಸನಂ ನಿಜ ಕರಕಮಲದಿಂ ತೆಗೆದು ಬಿಗಿಯಪ್ಪಿ
ಪರಮ ಸಾಹಸನಾಗಿಯಿಂತಿಹ
ಗಿರಿಯೊಳಿಮ್ಮಂ ನೋಡಲೆಂತೈ
ಭರವಸದೊಳೆಯ್ತಂದಿರೆಂದೆನುತಾ ಮಹಾಪುರುಷ ೬

೧–೨ ಲಾನಿಂ (ಡಾ); ಲಿಂದಿಂ (ಸ, ಬ). ೩–೪ ತಿಡ (ಧ).

CC-0. Jangamwadi Math Collection. Digitized by eGangotri

ಸಸಿನೆ ತನ್ನಾಶ್ರಮಕೆ ಕೊಂಡೊ
ಯ್ದುಸಮ ಲಿಂಗಾವಸರಮಂ ಮಾ
ಡಿಸಿ ನಯದಿ ತನ್ನ ಪ್ರಸಾದವನಿಕ್ಕಿ ಅನಿತಱಿಂಗೊಳು
ರಸಿಕ ಶಿವತತ್ವಾನುಭವಸುಖ
ರಸದೊಳೋಲಾಡಿಸುತ ಮಿಗೆ ಸಂ
ತಸದಿನಾತನನೊಂದಿನಿತು ಹೊತ್ತಿರಿಸಿಕೊಂ[೧]ಡಿರ್ದು[೨] ೭

ಇಳೆಯೊಳಿನ್ನುಂ ಕಿಱಿದು ಕಾಲಂ
ಬಳಸಬೇಹುದದಲ್ಲದಿಲ್ಲಿರ
ಲಳವಡದು ಹೋಗೆಂದು ಸದ್ಗುಣಿ[೩] ಮಲ್ಲಿಕಾರ್ಜುನನು
ಅಲಘುಮತಿ ಬೆಸಸಲು ಮನದೊಳು
ಮ್ಮಳಿಸುತಂ ಮಾದರಸನೆಂದನು
ಎಲೆಲೆ ಕರುಣಾಸುಲಭ ಹೋಗಲದೆಂತು ನಾಂ ಬಲ್ಲೆ ೮

ಬಡವನೆಂ[೪]ತು ನಿಧಾನವಂ ಕಂ
ಡಡೆ ಬಿಡುವನೇ ಕೋಟಿಯೆಂದಡೆ
ಒಡೆಯ ಕೇಳ್ ನಿಮ್ಮಡಿಗಳಂ [೫]ಕಂಡಾನು[೬] ಬದುಕಿದೆನು
ಬಿಡೆನದೇತಕೆ ಮರಳಿ ಪೋಪೆಂ
ಪೊಡವಿಗಿನ್ನಾ[೭]ನೊಲ್ಲೆನೆನುತಿರ
ಲೊಡನೆ ನಸುನಗುತಾದಡೇನಿದು ಲೇಸುಲೇಸೆನುತ ೯

ಶರಣನಿಧಿ ಮಲ್ಲಯ್ಯನಾ ಮಾ
ದರಸನಂ ಪ್ರತ್ಯಯದೊಳೊಡಬಡ
ಲೊರೆಯಬೇಕೆಂದಾದಡೆನ್ನೊಡನೀಗ ಬಾ ಎನುತ
ಹಿರಿಯ ಬೊಬ್ಬುಲಿಮರನ ನೆಳಲಿದು
ಪರಿಮಿತಂ ಕುಳ್ಳಿರೆನುತತ್ತಲು
ಸ[೮]ರಿದು ಕುಟಿಲಾಕಾರದಿಂದಂ ಗೊಲ್ಲನಂದದಲಿ ೧೦

೧–೨ ಡೊಯ್ದು (ಚ, ಮ). ೩ ರು (ಧ). ೪ ನಿಂ (ಧ). ೫–೬ ಕಂಡಿಂತು (ತ, ನ). ೭ ಡವಿಯ (ಧ). ೮ ಸು (ಆ, ಡಾ).

CC-0. Jangamwadi Math Collection. Digitized by eGangotri

ಬಿರಿದ ಬೆರಳ್ಗಳ ಬಿಟ್ಟೆಯಡಿಗಳ
ಮುರಿದ ತೊಡೆಗಳ ಕುಸಿದ ನಡುವಿನ
ಹೊರಟ ಬೆನ್ನಿನ ಬೀಸುಗೈಗಳ ಡೊಂಕುಗಾಲುಗಳ
ನರೆಗೊರಳ ನೊರೆವಾಯ ಹಾವಸೆ
ವರಿದ ಪಲ್ಗಳ ಜೋಲ್ದುಟಿಯ ನಸು
ಮುರುಟುಗಿವಿಗಳ ಹಱಿಕಗಡ್ಡದ ಕೆಂಪುಮೀಸೆಗಳ ೧೧

ಬೆಱಿತ ಮೋಱಿಯ ಗಂಟುಪುರ್ಬಿನ
ತಱಿಟುಮಂಡೆಯ ದೊಡ್ಡಮೂಗಿನ
ಬಱಿತೆದೆಯ ಹೊಱಿಗಱಿತ ಬಱಿ[೧]ಗಳ ತೋಱಿ ಕಾರೊಡಲ
ಕುಱಿಬನುಱಿ[೨] ಮುಳುಗತ್ತಿಯಿಂ ತಿಱಿ[೩]
ಯಱಿಪೆಗಳು ಬರೆಗುಡುಪು ಮಡಗಿದ
ಕುಱಿ[೪]ದೊವಲ ತಿದಿಯೆಸೆಯೆ ಟೊಂ[೫]ಕದ ದೊಡ್ಡಗಚ್ಚೆಯನು ೧೨

ಗಾಳಿಯಿಂ ತಲೆಗೂದಲಲುಗಲು
ಸೀಳಿಡುತ ಕಣುಬಿಟ್ಟು ನೋಡು
ತ್ತಾಲಿಸುತ [೬]ಕಿಕ್ಕಿಱಿ[೭]ವುತಂ ನಾಯಂ ಕರೆ[೮]ವುತೊಡನೆ[೯]
ಕಾಲನ[೯]ಡ್ಡಲುವೊಡ್ಡಿ [೯]ನಿಲುತಂ
ಜೋಲಿನಡೆವುತ ಕೊಡಲಿ ಗಡಿಗೆಯು
ಕೋಲುವಿಡಿದಾಡಿನ ಮಱಿ[೩]ಗಳಿಂ ಕೌಂಕುಳೊಳಗಮರ್ಚಿ ೧೩

ತೊಪ್ಪ ತೊಪ್ಪನೆ ಪಿರಿಯ ಕಲ್ಲೊಳು
ತಪ್ಪಲಿಡುತಂ ಸೋಹುತಂ ಹರಿ
ತಪ್ಪ ಕೆಲವಾಡುಗಳನಾ ಬೊಬ್ಬುಲಿಯ ಮರನಿಪ್ಪ
ನೆಪ್ಪಿಗಾತನು ಹೊಡೆದದಱಿ ಕಾ
ಯ್ಪೊಪ್ಪುವಂ ತಱಿ[೩]ವುತ ತನಗೆ ನೆಳ
ಲಪ್ಪ ಕೊಂಬನೆ ಕಡಿಯಲೊಡನಾಗ್ರಹಿಸಿ ನೋಡುತ್ತ ೧೪

೧ದಿ (ಕ, ಚ, ಪ, ಬ). ೨ ಪೊಂ (ಅ, ಡಾ). ೩–೩ ಕಿಕ್ಕಿರಿ (ಮ). ೪–೪ ಯಲೊಡನೆ (ಮ). ೫–೫ನಡ್ಡವನೊಡ್ಡಿ (ಕ, ಚ, ಥ, ಧ, ಪ).

CC-0. Jangamwadi Math Collection. Digitized by eGangotri

ಇಲ್ಲಿ ನಮಗಿರಲಪ್ಪ ಮರನಂ
ಖುಲ್ಲತನದಿಂದೇಕೆ ತಱಿದಪೆ
ಗೊಲ್ಲ ಯೆನ್ನಂ ಕಾಣೆಯಾ ನಾವಿಂತು ನೆಳಲಲ್ಲಿ
ಕುಳ್ಳಿರಿರ್ಪಿ ಬೊಬ್ಬುಲಿಯ ಮರ
ನಲ್ಲದೇ ವಿಕ್ಕಡವಿಯೊಳಗೇ
ನಿಲ್ಲವೇ ಕಡಿಯಲು ಮರಂಗಳು ಕೊಬ್ಬಿದದಕೇನು ೧೫

ಪಾಪಿ ಕುಟಿಬಾ ಎಲವೊ ನಿನ್ನಂ
ಸಾಪಿಸದೆ ಬಿಡೆ ನಾನೆನುತ್ತಂ
ಕೋಪದಿಂ ಬಯ್ಯಲ್ಕೆ ಗೊಲ್ಲನು ಗಹಗಹಿಸಿ ನಗುತ
ಭಾಪುರೇ ನಿರ್ವಾಣತಾಪಸ
[೧]ಭಾಪು ಭಾಪುರೆ ಕೋಪಪುಂಜವೆ[೨]
ಕೋಪಿಸುವನೇ ಪಾಪಿಯಲ್ಲದೆ ಪಾಪಿ ನಾನಹೆನೆ ೧೬

[೩]ಪುದಿದ[೪] ಕೋಪಾಂಬುಧಿಯ ತೆರೆಯಿಂ
ಕದಡದೇ ಮಾನಸಸರೋವರ
ಮುದಿತ ಕೋಪದ ಕಿಚ್ಚಿನಿಂದವೆ ಬತ್ತದೆಂತಿಹುದು
ಹೃದಯವೆಂಬರವಿಂದ ಮಕರಂ
ದದ ಕೆಸಱು ಕೋಪಾಗ್ನಿಯಿಂ ಕಂ
ದದೆ ವಿಕಾಸವನೆಯ್ದುವುದೆ ಸಾನಂದ ಸು[೫]ಚಿದಬ್ಜ ೧೭

ಜ್ಞಾನದೊಂದಗ್ಗಳಿಕೆಯೋ ಅವ
ಧಾನದೊಂದು ವಿಚಾರಮೋ ತ
ದ್ಧ್ಯಾನದೊಂದಱ ಫಲಮೊ ಇದು ತಾಪಸಗುಣಮೊ ನಿನ್ನ
ಏನನೆಂಬೆನು ಮನದ ಘನವಂ
ನೀನುಸುರಲೇಕೆನಗೆ ಕೀಳೀ
ಕಾನನದೊಳಿಲ್ಲವೆ ಮರಂಗಳು ನಿನಗೆ ಕುಳ್ಳಿರಲು ೧೮

೧–೨ ಭಾಪುರೇ ಕೋಪಪ್ರಪುಂಜವೆ (ಸ). ೩–೪ ಕುದಿವ (ಸ). ೫ ಶು (ನ, ಪ).

CC-0. Jangamwadi Math Collection. Digitized by eGangotri

ಭಲರೆ ನಿನ್ನಂತಪ್ಪ ಶಾಂತರು
ಮೊಳರೆ ಇಂತಹ ಮುನಿಗಳುಂಟೇ
ಇಳೆಯೊಳಿಂತಿರುತಿರ್ಪ ಸಾಧುಗಳಿಲ್ಲಿ ಪುಟ್ಟುವರು
ತಿಳಿಯಲರಿದು ಸಮಸ್ತ ಭೋಗಂ
ಗಳನುಳಿದು ತಾನಾಶ್ರಯಕೆ ಮ
ತ್ತೆಳಸುತಿರ್ಪ ತಪೋಧನನ ಮನದಂದವಾಯಿತ್ತು ೧೯

ಆಸೆಗಳನೆಲ್ಲಂ ತ್ಯಜಿಸಿ ಸಂ
ನ್ಯಾಸಮಂ ಮಾಡಲ್ಕೆ ಹೋಗಿ ನಿ
ವಾಸಮಂ ತಾನಪ್ಪಯಿಸುವ ವಿವೇಕಿಯಂದದಲಿ
ಲೇಸೆನಿಪ್ಪಾ ಕಿಚ್ಚಿನೊಳಗು
ಲ್ಲಾಸದಿಂ ಬೀಳುತ ಸೆಜಿಗನಂ
ತೋಸರಿಸುವಾ ವೈಶಿಕದ ಹೆಂಗೂಸಿನಂದದಲಿ ೨೦

ಹರಣವಂ ತ್ಯಜಿಸುವೆನೆನುತ ಬಂ
ದುರವಣಿಸಿ ಬಾವಿಯೊಳು ಬೀಳುತ
ಸರಸರನೆ ಮೆಟ್ಟುಗಳನಜಿಸುವ ಮೂರ್ಖನಂದದಲಿ
ಮರುಳು ತಿಳಿಯಿತ್ತೊನಕೆಯಂ ತಾ
ಶರದೊಳಾಂ ಸುತ್ತಿದಪೆನೆಂಬಾ
ನರನವೊಲು ಆಯಿತ್ತು ನಿನ್ನೊಳು ಸಮತೆ ಸೈರಣೆಯು ೨೧

ತೊಜಿಕೆಯ ಹೊನಲಲಿ ಹೋಹ ಕರಡಿಯ
ನಜಿಯದದು ಕಂಬಳಿಯೆನುತ್ತಾ
ಸಜಿದೆಯಂಬಿಗನೆಯ್ದಿ ಹಿಡಿಯಲು ಮರಳಿಯವನನದು
ನೆಜಿ ಪಿಡಿಯಲಾ ತಡೆಯೊಳಿರ್ದವ
ನೊಜಿಲುತೆಲವೋ ಬಿಡು ಬಿಡೆಂದೆನ
ಲಜಿಜುತಂ ನಾಂ ಬಿಟ್ಟೆನೆನ್ನಂ ಬಿಡದಿದೆಂಬವೊಲು ೨೨

೧ಱಿ (ಪ, ಸ). ೨ ಸಂ (ತ, ನ, ಸ). ೩ ನವೆ (ಸ). ೪–೫ ನುತ್ತಿರೆ (ಥ, ಧ, ಪ).

CC-0. Jangamwadi Math Collection. Digitized by eGangotri

ಬಿಟ್ಟಡಂ ತಾನೇಕೆ ಬಿಡುವುದು
ಮುಟ್ಟಿದಾಶಾಪಾಶದಿಂದಂ
ಕಟ್ಟುವಡೆದವ ನಿನಗೆ ಹಲವಂ ಹೇಳುತಿರಲೇನು
ಇಟ್ಟ ಕಬ್ಬಿನ ಜೂಜಿನೊಳಗೊ
ಬ್ಬೊಟ್ಟಿನರ್ಥದೊಳಿನಿತುಳಿದಡಂ
ದೃಷ್ಟಿಸಲ್ಕದು ಸೋಲವಲ್ಲಾ ಕೇಳ್ ನಿರಾಭಾರಿ ೫೫

ಹೇಸಿಸಂಸಾರವನುಡುಗಿ ಇನಿ
ತಾಸೆ ಮಾಡಿದಡವನೆ ಭವದಿಂ
ಘಾಸಿಯಾಗನೆ ಎಂದೆನುತ ಮೂದಲಿಸುತಾ ಆಯ್ಯ
ಲೇಸನುಸುರುತ ತನ್ನ ಮುನ್ನಿನ
ವೇಷಮಂ ತೋಱಿಲ್ಕೆ ನೋಡುತ
ರೋಷವಱಿತು ಮನಂಗದಡಿ ಲಜ್ಜಿಸುತ ತಲೆವಾಗಿ ೫೪

ಬಲಿದ ಘನಶೋಕಾಶ್ರು ಕಂಕಣ
ಕಲಿತಮುಖಿನಾಗುತ್ತ ಮನದೊಳು
ಕಳವಳಿಸುತೆನಗೆಲ್ಲಿಯದು ಸದ್ಭಕ್ತಿಯೆಲ್ಲಿಯದು
ಅಲರ್ವ ಮುಕ್ತಿಯದೆಲ್ಲಿಯದು ನಿ
ಶ್ಚಲಿತ ಶಾಂತತೆ ಎಲ್ಲಿ ಹೊಕ್ಕಡೆ
ತೊಲಗುವುದೆ ಸಕಳೇಶ ನೀ ಮಾಡಿದ ಮಹಾಮಾಯೆ ೫೫

ಗತಿಮತಿಯು ಚೈತನ್ಯಕರ್ಮ
ಸ್ಥಿತಿಗಳುಳ್ಳನ್ನಬರ ತನ್ನೊಂ
ದತಿಶಯಕ್ರಿಯೆ ಎಹಗಹಗೆ ವರ್ತಿಸುವೆ ಮಾರ್ಗದಲಿ
ಕ್ಷಿತಿಯೊಳಾರಿಂಗಾದಡಂ[೧] ಪಶು
ಪತಿಯ ಕರುಣವದೆಂತಹುದು ಕಾಂ
ಕ್ಷಿತದಿ ಕಸುಗಾಯಂ ಕೊಯಿದವಂಗಹುದೆ ತನಿವಣ್ಣು ೫೬

---

೧ ಡೆಯು (ಸ).

CC-0. Jangamwadi Math Collection. Digitized by eGangotri

[೧]ಪರಮ[೨] ನಿಶ್ಚಲಭಕ್ತಿ ಸಕಳೇ
ಶ್ವರನ ಕೃಪೆಯಿಂದಲ್ಲದಹುದೇ
ದೊರಕುವುದೆ ನಿಸ್ಪೃಹತೆ ಎನಗತಿ ಕರ್ಮಿಗಕಟಕಟ
ವರದ ಕರುಣಾಭರಣ ಶಾಶ್ವತ
ಶರಣ ಶರಣಾಗೆನುತಮಿಹ ಮಾ
ದರಸನಂ ತೆಗೆದಪ್ಪಿ ಮಲ್ಲರಸರು ನಯೋಕ್ತಿಯಲಿ ೨೭

ಓವಿ ಕರ್ಮವಿದೂರ ನೀ ದುಃ
ಖಾವಹವನುಡುಗುಡುಗು ನಿರ್ಮಳ
ಭಾವಯುತಕರ್ಮಿಗಳಿಗೆಮ್ಮಡಿ[೩]ಗೆಂತು[೪] ಬರಬಹುದು
ನೀವು ಮರ್ತ್ಯಕೆ ಹೋಗೆಂದಡೆ
ಈ ವಿಕಲ್ಪವ ನಾವು ಮಾಡಿದೆ
ವಾವ ಕಾರಣವೆಂದು ಕೇಳ್ದಡೆ ಪೇಳ್ವೆನೆಂದೆನಲು ೨೮

ಆಸಮನೇತ್ರನ ಬೆಸನದಿಂದಂ
ಬಸವನೆಂಬ ಪ್ರಮಥನೊರ್ವಂ
ನಿಶಿತ ಸದ್ಭಕ್ತಿಪ್ರವರ್ಧನ ಕಾರಣಾರ್ಥದಲಿ
ವಸುಮತಿಗೆ ಬಂದಿದ್ದಪನು ನೀ
ನೊಸೆದು ತತ್ಸ್ಥಾನುಭವಗೋಷ್ಠೀ
ರಸಸುಧಾ[೫]ಶರನ[೬]ಧಿಯೊಳೋಲಾಡಿಸುತವಾತನನು ೨೯

ವರ ಶಿವಾಚಾರಾಬ್ಧಿವರ್ಧಿಸು
ತಿರೆ ಚರಿಸವೇಳ್ಕೆಯೊಳಿತ್ತಲು
ನಿರುತದಿಂದೈವತ್ತು ವರುಷಂಗಳಿಗೆ ನಿನಗಿಂತು
ಬರವಿದೇಳ್‌ನೂಱ್ ವತ್ಸರಂಗಳು
ಚರಿಸಿದವು ಬಳಿಕಿನ್ನು ನಾವೇ
ಬ[೭]ರಿಸಿಕೊಂಬೆವು ನಿನ್ನ ನಾವೈವತ್ತು ವರುಷಕ್ಕೆ ೩೦

೧–೨ ಸರಸ (ಕ, ಚ, ತ, ಥ, ಧ, ನ, ಪ, ಬ). ೩–೪ ಗೇಕೆ (ಸ). ೫–೬ ರಸ (ಥ, ಫ). ೭ ತ (ಸ).

CC-0. Jangamwadi Math Collection. Digitized by eGangotri

ಅಂತು ಮೊದಲಿಂದೇಳುನೂರ್ವರು
ಪಾಂತಕಲ್ಲದೆ ನಿನಗಿದುಂ[೧] ನಿ
ಶ್ಚಿಂತವಲ್ಲಿಲ್ಲೀಗಳಭಿಮಂತವೇನನಾದಡೆಯು
ಮುಂತೆ ಕೊಡುವೆವು ಬೇಡೆನಲು ಮನ
ಸಂತಯಿಸುತಂ ಮಾದಿರಾಜಮ
ಹಂತನಾ ಶಿವಯೋಗಿ ಮಲ್ಲರಸರಿಗೆ ಕೈಮುಗಿದು ೩೧

ಶ್ರೀಯನರ್ಥಿಪೆನೆಂದಡನ್ಯ
ಸ್ತ್ರೀಯದಾಯುವದೆಂಬೆನೇ ಬಲು
ಮಾಯಿಗಾಗರವಮರ ಭೋಗವದೆಂಬಡಧ್ರುವವು
ಆಯತದ ಕೈವಲ್ಯಪೆಂಬೆನೆ
ಕಾಯಜಾರಿಯ ಪದವಿಯದು ತಾ
ನೀಯನುವನಾನೊಲ್ಲೆನೊಲ್ಲೆನು ನೀವೆ ಬಲ್ಲಿರಿದ ೩೨

ಸ್ವಾಮಿ ಸರ್ವಜ್ಞಾ ದಯಾವಿ
ಶ್ರಾಮ ಮತ್ಸಕಳೇಶ ಎನುತಂ
ಭೂಮಿಯೊಳು ಸೈಗೆಡೆದು ವಂದಿಸಲನಿತಱಿಂಳು ಮೂಡಿ
ಶ್ರೀಮಹಿತ ಕಲ್ಯಾಣದೊಳಗಭಿ
ರಾಮ ಬಸವನ ಮುಂದೆ ನಿಂದಿರ
ಲಾ ಮಹಾತ್ಮಂ ಮಾದಿರಾಜನ ರೂಪನಾಕ್ಷಣದೆ ೩೩

ಸಂಗಮೇಶ್ವರನಲ್ಲಿ ಕಂಡ
ಷ್ಟಾಂಗವೆಱಗಿ ನಮಿಸುವ ಮಾತ್ರದಿ
ಮುಂಗಡೆಯೊಳಿರೆ ಬಸವನಚ್ಚರಿವಡುತ ಪೊಡಮಡಲು
ಹಿಂಗದಚಲಿತ ವತ್ಸಲತ್ವಂ
ಸಾಂಗಮಾಗಿರಲತುಳಿತೋತ್ಸುಕ
ತುಂಗ ಲೀಲಾಲೋಲ ಮಾನಸನಾಗಿ ಆ ಆಯ್ಯ ೩೪

---

೧ ರವು (ಥ. ದ. ಪ). ೨ ಶ್ರೀ (ಸ. ಮ).

CC-0. Jangamwadi Math Collection. Digitized by eGangotri

ಚಾರುತರ ಶಿವಲಿಂಗಸೌಖ್ಯಾ
ಪಾರ ಸಾರರಸಾಮ್ಯತಾಕೂ
ಪಾರದೊಳು ನಲಿದದ್ದಿಯೆತ್ತುತ ಮಾದಿರಾಜಯ್ಯ
ಚಾರು ಗೌರವ ಲೈಂಗ್ಯಭಕ್ತ್ಯಾ
ಚಾರಿಯಹ ಬಸವಣ್ಣನಿಂದವ
ನಾರತಮುಮರ್ಚಿಸಿಕೊಳುತ್ತುಂ ಸುಖದೊಳಿರುತಿರ್ದ ೩೫

ಧರಣಿಯೊಳು ಸಕಳೇಶ ಮಾದರ
ಸರ ಚರಿತ್ರವ[೧]ನೊಲಿದು[೨] ಕೇಳ್ದಡೆ
ಬರೆದಡಂ ಪಠಿಸಿದಡೆ ವಿಸ್ತರಿಸಿದಡೆ ಮನುಜರಿಗೆ
ಪರಮ ಭಕ್ತಿಯು ಪುಣ್ಯ ಮುಕ್ತಿಯು
ಚಿರತರಾಯುವಜೇಯ ಸೌಖ್ಯಂ
ಸರಸ ವಿದ್ಯೆಯು ಬುದ್ಧಿಯುಂ ದೊರೆಕೊಳುವುದನವರತ ೩೬

ನಯನಕರ್ಣಾಹಾರವಾಹನ
ನಯನ ಭುವನೇಶಯನ ನಯನಾ
ನಯನಭುವನತ್ರಯನಯನ ಕರ್ಣಾಕಲಿತ ಕರ್ಣ
ನಯನ ಕರ್ಣಾಶನ ವರಧ್ವಜ
ನಯನ ಭುವನೇಜಾರ್ಚಿತಕ್ರಮ
ನಯನಕರ್ಣವಿಪಕ್ಷಲಕ್ಷಣ ಜಯತು ಸಿದ್ಧೇಶ ೩೭

ಈಷಣತ್ರಯದೂರ ಸೂನೃತ
ಭಾಷಣಪ್ರಿಯ ಸಾರ ಶಿವಗಣ
ದೂಷಣಾಹಿತಕಾರ ಜಂಗಮತೋಷಣಾಚಾರ
ರೋಷಣಪ್ರತಿವೀರರಣವಿಜಿ
ಗೀಷಣಾಧಿಕಶೂರ ಹಿಮಕರ
ಭೂಷಣಾಜ್ಞಾಧಾರ ಬಸವಕುಮಾರ ಮಾಂ ತ್ರಾಹಿ ೩೮

೧–೨ ನೋದಿ (ಸ).

CC-0. Jangamwadi Math Collection. Digitized by eGangotri

ಇದು ಸಕಳ ಮಾಹೇಶ್ವರಾಮಳ
ಪದಪಯೋಜಪರಾಗ ಮುದಷ
ಟ್ಪದಿಯೆನಿಪ ಪಾಲ್ಕುಱಿಕೆ ಸೋಮೇಶ್ವರನ ಕಾರುಣ್ಯ
ಒದವಿದಖಿಳಕಳಾಪ್ರಪೂರಿತ
ಹೃದಯ ಭೀಮಕವಿಪ್ರಣೇತಾ
ಭ್ಯುದಯ ಬಸವಪುರಾಣಕಥೆಯೊಳು ಮೂಱನೆಯ ಕಾಂಡ ೩೯

ಅಂತು ಕಾಂಡ ೩ಕ್ಕಂ ಸಂಧಿ ೧೯ಕ್ಕಂ ಪದಗಳು ೧೦೭೭ಕ್ಕಂ

ಮಂಗಳಂ ಮಹಾಶ್ರೀ ಶ್ರೀ ಶ್ರೀ

CC-0. Jangamwadi Math Collection. Digitized by eGangotri

ಕಾಂಡ : ೪

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಂಧಿ : ೨೦

*

ಸೂಚನೆ : ಮತ್ತಗಜಮಂ ಕೊಂದದಱಿಸುವ
ನೆತ್ತಿ ಮುನ್ನಿಱಿದವನ ಹರಣವ
ನಿತ್ತು ಮೆಱಿದನು ಕಟಕದೊಳು ಮಡಿವಾಳ ಮಾಚಯ್ಯ

ವಿಷಧರಾಹಿತಗಮನಬಂಧುವೆ
ವಿಷಧರಾಹಿತಗಮನಗುರುವೇ
ವಿಷಧರಾಹಿತಮಿತ್ರ ಮರುತಾಪೇಕ್ಷಣಾಯ ನಮೋ
ವಿಷಧರಾಯ ನಮೋ ನಮೋ ಧೃತ
ವಿಷಧರಾಯ ನಮೋ ನಮೋ ನತ
ವಿಷಧರವರೂಥಾಯ ವಟಪುರಸಿದ್ಧನಾ[೧]ಥಾಯ[೨] ೧

ಜ್ವಾಲಿಕಾಬ್ಜವಿಲೋಚನಪ್ರತಿ
ಕೂಲವಾಹನ ಲೋಕಮೋಹನ
ಶೀಲ ಭಕ್ತಿತ್ರಯವಿಲೋಲ ವಿಧೂತಭವಜಾಲ
ಕಾಲಕರ್ಮಾರಣ್ಯದಹನು
ಜ್ವಾಲಮಾಯಾಮೂಲ ಪಟುಕು
ದ್ದಾಲ ನಿಜ ಸಮಯಾನುಪಾಲಾ ಬಸವ ಶರಣಾಗು ೨

---

* ರಾಗ : ವರಾಳಿ (ಅ, ಡಾ); ನಾಟಿ (ಧ, ಪ, ಚ, ಮ); ಮೇಘರಂಜೀ (ತ).
೧–೨ ಥ ನಮೋ (ತ).

CC-0. Jangamwadi Math Collection. Digitized by eGangotri

ಕೇಳವನಿಯೊಳು ಮತ್ತೆಯುಂ ಮಡಿ
ವಾಳ ಮಾಚಯ್ಯಂ ಶಿವಗಣಾ
ಲೋಲನತಿ ವೀರವ್ರತಾಚಾರ ಪ್ರಯು[1]ತ ಚರ್ಯೆ
ಕಾಲಕರ್ಮವಿರಹಿತನುತ್ತಮ
ಶೀಲ ನಿಜಭಾಷಾನುಪಾಲನ
ಶಾಲಿ ಭವಿಸಂಸರ್ಗಪಥಸಂತತಪರಿತ್ಯಾಗಿ ೩

ಶ್ರೇಷ್ಮನಘಸಂಹಾರಿ ಭಕ್ತ
ಶ್ರೇಷ್ಮನರಿಷಡ್ವರ್ಗದೂರಂ
ನಿಷ್ಕಿತೇಂದ್ರಿಯ ಲಿಂಗಸುಖನಿಷ್ಠಾಪರಂ ನ್ಯಾಯ
ನಿಷ್ಕ್ರಾಳಾಪ ಪ್ರಕಟಿತ ಮ
ಹಿಷ್ಮಮಂಡನನಮಳ ತತ್ವವ
ರಿಷ್ಮಗೋಷ್ಮೀವಾಗ್ವರಿಷ್ಮಯಶಃಪ್ರತಿಷ್ಠಿತನು ೪

ವಿಜಿತವಾದಿಯುದಾರ ಧೀರಂ
ಕುಜನಭಂಗಂ ಸುಜನಸಂಗಂ
ಭುಜಬಲಂ ಹಿಪ್ಪಲಿಗೆಯೆಂಬಾ ಪುರವರದೊಳಿ[2]ಹನು[3]
ರಜಕಜಾತ್ಯಾವೃತ ಪುರಾಂತಕ
ನಜರನಮರನಯೋನಿಜಂ ಶಿವ
ಭಜನ[4]ರತ್ನಂ[5] ಶರಣನಿಧಿಯಾಸ್ಥಾನ [2]ಸಜ್ಯೋತಿ[3] ೫

ಬಸವರಾಜನ ಭಕ್ತಿಶರನಿಧಿ
ದೆಸೆದೆಸೆಗೆ ನೆಟಿ[2]ದೊತ್ತಿ ಪಸರಿಸೆ
ಒಸೆದು ಹರುಷಿತಚಿತ್ತನಾಗುತ ಮಾಚಿದೇವಯ್ಯ
ಒಸಗೆಯಾಯಿತ್ತೆನ್ನ ದಾಸಿಗೆ
ಲಸಕೆ ಬದುಕಿದೆ ನಾನೆನುತ ತಾಂ
ಅಸಮ ಜಂಗಮ ದರುಶನಾಪೇಕ್ಷತೆಯೊಳೆಯ್ತಂದು ೬

೧–೨ ತಾಜಾ (ಕ, ಚ). ೩–೪ ರುವ (ಚ); ರಲು (ಕ, ಮ, ಬ). ೫–೬ ತಾತ್ಮನು (ಚ, ತ, ನ, ಮ); ನಾತ್ಮನು (ಥ, ಪ, ಬ). ೭–೮ ಸಂಜ್ಯೋತಿ (ತ, ನ, ಬ, ಮ).

CC-0. Jangamwadi Math Collection. Digitized by eGangotri

ಇತ್ತಲೀ ಬಸವಣ್ಣನಿಂ ಪ್ರಣಿ
ಪತ್ತಿಯಂ ಕೈಗೊಳುತ ಕೂರ್ತಾ
ಪೊತ್ತು ಭಕ್ತರಿಗೆನ್ನ ಕೈಗಳ ತೀಟೆ ಹೋಗಲ್ಕೆ
ತೊತ್ತುಗೆಲಸಂಗೆಯ್ಯಲನುವಾ
ಯಿತ್ತೆನುತ ಜಂಗಮವನೋಲ್ಕೈ
ಸುತ್ತ ಸಜ್ಜನಭಕ್ತಿಯಲಿ ದೃಢಭಾಷೆ ವರ್ಧಿಸಲು ೭

ತಂದು ಭಕ್ತರ ಮಾಸಿದಂಬರ
ವೃಂದಮಂ ಪೊಳಿಗಟ್ಟಿ ಪೊತ್ತುರ
ವಿಂದಹಿತನುದಯಕ್ಕೆ[೨] ಮುನ್ನವೆ ಹೋಗಿ ತಾ ಬೇಱೆ[೩]
ಒಂದು ಹೊಳೆಯಂ ಮಾಡಿಯೊಗೆದೊಗೆ
ದೊಂದನೊಂದಂ ಹರಡಿ ಗಳಿಗೆಯ
ನೊಂದಿಸುತ್ತಾ ಮಡಿಗಳಂ ತೆಗೆದೊಟ್ಟಿ ಮಿಗೆ ಬಿಗಿದು ೮

ಹೊಂಗಿ ಶಸ್ತ್ರಸಮೇತನಾಗಿ ಬೆ
ಡಂಗಡರಿ ಮಾಹೇಶ್ವರರ ವ
ಸ್ತ್ರಂಗಳಂ ರಜತಾದ್ರಿಯಂದದಿ ಪೊತ್ತು ನಡೆವುತ್ತ
ಮುಂಗಡೆಯ ಬೀದಿಯಲಿ ಭವಿಗಳು
ಲಿಂಗವಂತರ ಹೊಸಮಡಿಯ ವ
ಸ್ತ್ರಂಗಳಂ ಸಂಧಿಸಿದಿರಾದಡೆ ಇಱಿವು ಕೆಡಹುವೆನು ೯

ಜಡರುಗಳಿರಾ ತೊಲಗಿ ಬೋ[೪] ಎನು
ತಡಿಗಡಿಗೆ ಜಯಘಂಟೆಯನು ಹೊಯಿ
ದೆಡೆಗೆಡೆಗೆ ಸಾಱುತ್ತ ಶರಣನು ಮಠಕೆ ನಡೆತಂದು
ಮಡಿಗಳಂ ಮೃದುವಾಗಿ ಘಟ್ಟಿಸಿ
ಮಡಿಯ [೫]ಒಡೆಯರು[೫] ಬಂದು ಬೇಡಲು
ಕೊಡುವನೆಂತಹ ವಸ್ತ್ರವಾದಡೆ ನಮಿಸಿ ಮಾಚಯ್ಯ ೧೦

೧–೨ ಯಿಸವ (ತ, ನ, ಮ). ೩ ವ (ಧ). ೪ ವ (ಧ). ೫ರೋ (ಬ). ೬–೭ ಜಂಗಮ (ಕ, ಚ, ಫ, ಧ, ಪ).

SRI JAGADGURU VISHWARADHYA JNANA SIMHASAN JNANAMANDIR LIBRARY Jangamwadi Math, Varanasi ACC. No. 1018

CC-0. Jangamwadi Math Collection. Digitized by eGangotri

೧ಸೇಲೆ೨ಯೊಡೆಯರು೩ ಬಂದು ಬೇಡಿದ
ಡೋಳಿಯಿಂದಿಲ್ಲೆನ್ನ ದೀಪಂ
ಭಾಳನೇತ್ರಪ್ರತಿಮನದ್ಭುತಚಿತ್ತನಾಗಿಯಿದಂ
ಕೇಳಿ ಬಸವಂ ಸಂತತಂ ಸ
ಲ್ಲೀಲೆಯಿಂ ಕೊಂಡಾಡುತಿರೆ ಭ
ಕ್ತಾಳಿ ಸಂತಸ೪ವೆತ್ತು೫ ತಾವಿಂತೆಂದು ಹೇಳಿದರು ೧೧

ಪುಲಿಯುಡುಪ೬ನೆಂಬಸಗನಚಳಿತ
ಲಲಿತ ಭಕ್ತಿಯದೊಳ್ಳಿತಾಯಿ
ತ್ತಿಳೆಯೊಳಂದೇಕಾಳಿಯೆಂಬಾ ಮಡಿವಳನ ಭಕ್ತಿ
ಫಲದ ಭಾಷೆಯುಮೊಪ್ಪಿತಲ್ಲದೆ
ಬಳಿಕವೀ ಸಾಮರ್ಥ್ಯವೀ ನಿ
ಶ್ಚಳಿತಭಕ್ತಿಯುಮೀ ಮಹತ್ವತೆ ನಾವಱಿಯೆವೆನುತ ೧೨

ಸಂತತಂ ಭಕ್ತರು ಹೊಗಳುತಿ೭ರ
ಲಿಂತು೮ ಕೆಲವು ದಿನಂಗಳೊಳು ಮು
ನ್ನೆಂತಹಗೆ ನಡೆತಪ್ಪೆಡೆಯೊಳಿಡುಮುಡುಕಿನಿಂದೊಬ್ಬ
ಮುಂತೆ ಸಂಧಿಸಲೊಡನವನ ತಲೆ
ಯಂ ತಱಿದು ಗಗನಕ್ಕೆ ಬಿಸುಟು ಮ
ಹಂತನಾ ಮಂಡಿವಾಳ ಮಾಚಯನಿಪ್ಪ ಸಮಯದಲಿ ೧೩

ಆಲ್ಲಿ ಇವರವರೆನ್ನದೂರವ
ರೆಲ್ಲರುಂ ನೆರೆದಾ ಧರಿತ್ರೀ
ವಲ್ಲಭನ ಸಭೆಗೆಯ್ದಿ ವಂದಿಸಿ ಕೈಗಳಂ ಮುಗಿದು
ಬಲ್ಲಹನೆ ಕೇಳ್ ನಿಮ್ಮ ಪಟ್ಟಣ
ದಲ್ಲಿ ಹೊಲ್ಲಹನಸಗನೊಬ್ಬನು
ಬಲ್ಲ ಭಕ್ತನೆನುತ್ತ ಗರ್ವಿಸಿ ತೊಲಗನಾ೯ರಿಗೆಯು ೧೪

೧–೨ ಶಾಲೆ (ಕ); ಸೀಲೆ (ಅ, ಥ, ಧ, ಪ, ಬ, ಮ). ೨–೩ ಗಳವರು (ಮ). ೪–೫ ಮೆಮತ (ಮ). ೬ ತ (ತ, ಥ, ನ, ಪ, ಮ). ೭–೮ ರೆ ಇಂತು (ಸ). ೯ ದಾ (ಕ, ಚ, ಥ, ಪ).

CC-0. Jangamwadi Math Collection. Digitized by eGangotri

ಟೊಂಕದಲ್ಲಿ ಕಠಾರಿಯೊಂದಿರೆ
ಬಿಂಕದಲಿ ಮಾರ್ಮಲೆತು ನಡೆವಂ
ಕೊಂಕನಳುಕಂ ಸಾಟುತಂ ಸೀರೆಗಳ [೧]ವೊಟ್ಟೆಯನು[೨]
ಸೋಂಕಿದವ[೩]ದಿರನಿ[೪]ಟಿವೆನೆನುತಂ
ಝಂಕಿಸುತ ಪುರವೀದಿಯಲಿ ನಿ
ಶ್ಶಂಕನೆಂತಹ ಬಲ್ಲಿದರನಟ[೫]ಯಟ್ಟಿ ಕುಟ್ಟುವನು ೧೫

ಅಂಗಡಿಗಳುಡುಗಿದವು ಬಿ[೬]ವಹಾ
ರಂಗಳಾಟವು ಮಾದವಾರುಂ
ಸಂಗಡದೊಳಿತ್ತತ್ತಲುಂ ಸುಳಿಯಲ್ಕೆ ಅಂಜುವರು
ಮುಂಗಡೆಯೊಳೆತ್ತೆಮ್ಮೆ ಭಂಡಿ ತು
ರಂಗವಾನೆಗಳೇನು ಚೋದ್ಯವೊ
ಹಾಂಗೆ ದೂರಕೆ ಕೆದಱಿ ದೆಸೆಗೆಟ್ಟೋಡುವವು ಹ[೮]ಲವು ೧೬

[೯]ಇಂದು ಹೊಸಬನದೊಬ್ಬನೀ ಪರಿ
ಯೆಂದಱಿಯದಂಗಡಿಗೆ ಹೋಗುತ
ಸಂಧಿಸಿದಡಿಱಿದೆತ್ತಿ ಚಿಮ್ಮಿದನಾಗ ಮೇಲ[೨]ಕ್ಕೆ
ಕೊಂದ ಹೆಣನಂ ಕಾಣೆವಾತಂ
ತಿಂದನೋ ವಿಧಿ ನುಂಗಿದುದೊ ಅದ
ಱಿಂದವಱಿಯೆವು ನಿಮಗೆ ಹೇಳಲು ಬಂದೆವಾವೆನಲು ೧೭

ಬಸವರಾಜನ [೧೦]ಮೊಗವ[೯]ನೀಕ್ಷಿಸಿ[೧೦]
ಮುಸುಡ ಕೆಚ್ಚನೆ ಮಾಡಿ ಕೋಪಂ
ಮಸಗಿ ಬಿಜ್ಜಳರಾಯನೆಂದನಿದೇನು ವಿಪರೀತ
ಮಿಸುಕಬಾರದು ನಿಮ್ಮ ಭಕ್ತರ
ದೆಸೆಯೊಳಾರಿಗೆ ಬದುಕಬಹು[೧೧]ದೀ
ಯ[೧೨]ಸಗಗೇಕಿನಿತುಂ ಸಘಾಟಿಕೆ ಜನರನೊಗೆದಹನು ೧೮

೧–೨ ಹೊಱಿಗಳನು (ಸ). ೩–೪ ರನ್ನಿ (ತ, ಸ). ೫ ವ್ಯ (ಬ, ಕ, ಚ). ೬ ಕೆ (ಬ, ಆ, ಕ, ಚ). ೭ ಫ (ತ, ನ, ವ). ೮–೯ ಮುಖವ (ಸ). ೯–೧೦ ನಿಟ್ಟಿಸಿ (ತ, ಚ, ಥ, ಪ). ೧೧–೧೨ ದಿನ್ನ (ತ, ಥ, ಧ, ನ, ಪ).

CC-0. Jangamwadi Math Collection. Digitized by eGangotri

ಈಸು ಚೋದ್ಯವನಾವಱಿಯೆವೀ
ದೇಶದೊಳಗೆಂದುಂ ಕಡೆಗೆ ಪರ
ದೇಶಿಗಳಿಗಿನ್ನಾರಿಗೆಮ್ಮ ಪುರಕ್ಕೆ ಬರಲಿಲ್ಲ
ಮಾಸಿದಱಿವೆಗಳಂ ಬಡಿವುದಕೆ
ಹೇಸದಸಗಂ ಕೊಬ್ಬಿ ಮನುಜರ
ನಾಸುರದೆ ಹಾಣಾಹಣಿಗಳಂ ಮಾಡುತಿರ್ದಪನು ೧೯

ಕಟ್ಟರಸು ನಾನೆಂದು ನೋಡದೆ
ದಿಟ್ಟನಸಗಂ ಭಕ್ತನೆನುತೀ
ಪಟ್ಟಣದ ಜನರಂ ಚರಿಸಲೀಯಂ ತಗುಳ್ದಪನು
ಮುಟ್ಟಿದಡೆ ಮುರುಟುವುದೆ ಸೀರೆಯ
ಮೊಟ್ಟೆಯೊಬ್ಬನು ಹೊಸಬನಂಗಡಿ
ಮುಟ್ಟಿ ಹೋಗುತ್ತಿರಲು ಕೊಂದನು ಅವನ ಹೆಣನಿಲ್ಲಿ ೨೦

ಗಗನಭಾಗಕೆ ನೆಗೆದು ಪೋಪ
ಟ್ಟಿಗಳೊಳಪೆ ರಕ್ತಸನ ಪಟಿಯೊಳ
ಸಗನುಱಿದೆ ಲೆಕ್ಕಿಸದೆ ಜನರಂ ನುಂಗುತಿರ್ದಪನು
ನಗನವಂ ಬಯ್ಯನು ವೃಥಾ ಸೀ
ರೆಗಳನಂಟಿದಡಂತು ಕೊಲುವುದು
ಸುಗತಿಯೇ ಭಕ್ತರಿಗೆ ಮರಿಯಾದೆಯನಱಿಯೆವೆನುತ ೨೧

ಬಲ್ಲಹಂ ತನ್ನವರನೀಕ್ಷಿಸಿ
ಖಿಲ್ಲನಸಗನ ಹೋಗಿಯಲ್ಲಿಯೆ
ಕೊಲ್ಲಿಯೆಲ್ಲಾ ನುಂಗಿದವನಂ ಕಾಱಿದಡೆ ಬನ್ನಿ
ಎಲ್ಲರನುಮತಪೆಂಬ ಮಾತಿಗೆ
ಮೆಲ್ಲನೆ ನಗುತ ಬಸವನವನೀ
ವಲ್ಲಭಂಗಿಂತೆಂದನೆಲೆ ಬಿಜ್ಜಳಧರಾಧೀಶ ೨೨

---

೧೮ (ಥ, ಪ, ಬ). ೨–೩ ನವನ ಹೆಣನುಮಿಲ್ಲ (ಕ, ಚ, ಥ, ಪ, ಮ); ಗಡಸ ಹೆಣವಿಲ್ಲ (ಬ). ೪–೫ ಮಧ್ಯ (ಕ). ೬ ಡಿಂ (ಧ). ೭–೮ ಬೆಜವಾಡ (ಕ, ಚ, ತ, ಥ, ಧ, ನ, ಪ). ೯–೧೦ಮೆಲ್ಲನೆಯು ನಗುತಂ ಬಸವ ಭೂ (ಸ); ಮೆಲ್ಲನೆಯು ಬಸವಣ್ಣನವನೀ (ಕ, ಚ, ಬ, ಮ).

CC-0. Jangamwadi Math Collection. Digitized by eGangotri

ಮೇಲನಱಿಯದೆ ಮಿಕ್ಕು ನುಡಿದಪೆ
ಕಾಳುವಮೂಳರ ಖಿಳರ ಕಾಕರ
ಖಿಳರಧಮರ ಕೀಳುಮಾತಿಂಗೇಕೆ ಮರುಳಾದೈ
ಕೇಳ್‌ಸಗಿನಸಗನುಮೆನುತೆ ಹೀ
ಯಾಳಿಸುತ್ತಿಹೆಯಾತನಸಗನೆ
ಭಾಳನೇತ್ರನ ತನು ಕಣಾ ನೀ ಚುನ್ನವಾಡದಿರು ೨೩

ಆತನೇ ಕುಲಜಾತನಿನ್ನತ
ನಾತನೇ ಕುಲವಲ್ಲದಾತನು
ಆತನೇ ಕುಲವಿಲ್ಲದಖಿಳ ಕುಲೀನನಾದಾತ
ಆತನೇ ಸಾಕ್ಷಾತ್ ಸದಾಶಿವ
ನಾತನೆಂತಪ್ಪಾತನುತ್ತಮ
ನಾತನಾತನೆ ಸರ್ವಗತನೆಂಬಾತನೆಂತೆನಲು ೨೪

ಮುನ್ನ ಪಂಕಜಭವನ ಜೆಡೆಗಳ
ಜನ್ನಿವಾರವನಿಕ್ಕಿಕೊಂಡು ಜ
ಗನ್ನಿಕರದೊಳು ಭಿಕ್ಷಿಸುವ ಸದ್ಬ್ರಾಹ್ಮಣಂ ತಾನೆ
ಸನ್ನುತಾನಂದಾಪವರ್ಗೋ
ತ್ಪನ್ನ ಸಾಮ್ರಾಜ್ಯಾಧಿಪಟ್ಟವ
ನುನ್ನತಿಕೆಯಿಂ ಪಾಲಿಸುವ ತತ್‌ಕ್ಷತ್ರಿಯನು ತಾನೆ ೨೫

ಚಟುಲ ದುರ್ಭವ ಭೂರಿಕರ್ಮೋ
ತ್ಕಟ ಘಟವಹಿತ್ರವನಳವಡಿಸಿ
ಪಟು ಭವಾಂಬುಧಿಯೊಳು ತಿರುಗಿಸುವ ವೈಶ್ಯನುಂ ತಾನೆ
ಘಟಿಸಲಿಳೆಯೊಳು ಸತ್ಕ್ರಿಯಾವಿ
ಸ್ಫುಟ ಪ್ರದಾರಂಭೋದಯ ಪ್ರಾ
ಕಟ ಫಲಂಗಳ ಕೊಯ್ದು ಒಕ್ಕುವ ಶೂದ್ರನುಂ ತಾನೆ ೨೬

೧–೨ ರಸ (ಸ). ೩–೪ ನುಂ ಮೇಣ್ (ಸ); ತಾ ಮೇಣ್ (ಕ, ಚ, ಬ, ಮ). ೫ ಧಾ (ಸ).
೬–೭ ನೆಂತೆನುತ (ಅ); ನೆಂದೆನಲು (ಮ). ೮ ರ (ನ) ೯ ಸ (ಥ, ಧ, ಪ).

CC-0. Jangamwadi Math Collection. Digitized by eGangotri

ನಾದ ಬಿಂದುಗಳಡ್ಡಪಲಿಗೆಗ
ಳಾದಿಶಕ್ತಿಯೆ ತಿಗುರಿ ಮೂಲಿ
ಕ್ಯಾದಿಯಾದುದು ಪಾದವಾ ನಾಲ್ಕಱಿ ಕಳೆಯೆ ಕೋಲು
ವೇದಿಸಲು ಬ್ರಹ್ಮಾಂಡ ಖಾಂಡ ನಿ
ಷಾದ ಭಾಂಡಾವಳಿಗಳಂ ಸ
ಮ್ಮೋದದಿಂದಂ ವಿರಚಿಸುವ ಕುಂಬಾಱಿನುಂ ತಾನೆ ೨೭

ಮುರಹರನ ನಿ[೧]ಟ್ಟಿಲುವೆ ಕಟ್ಟಿಗೆ
ಉರಗರಾಜನೆ ನೇಣು ನರಕೇ
ಸರಿಯ ನಖಿವೇ ಕೊಂಕಿಯಾದಿವರಾಪ ನೆರೆಯಾಗೆ
ವರ ಕಮಠ ಮತ್ಸ್ಯಂಗಳಂ ನಿಜ
ಕರದಿನೇಕೋದಕದೊಳೊಡರಿಚಿ
ಪಿರಿಯ ಗಾಳವನಿಕ್ಕುವಾ ಬಲೆಗಾಱಿನುಂ ತಾನೆ ೨೮

ಅಮಿತ ಸಂಸೃತಿ ಜೀವಘಟ ಚ
ಕ್ರಮಲ ಕರ್ಮಬಲಪ್ರವರ್ಧ
ಭ್ರಮಣಮೊಡಗೂಡಲ್ಕೆ ಸೂತ್ರದ ಕೀಲ್ಗಳಂ ಬಲಿದು
ಕ್ರಮದಿನಾಡಿಪ ಬಡಗಿ ತಾನೇ
ಗಮಿಸುವಸುವಿನ ಲೋಹಮಂ ಚಿ
ದ್ಧಮನದಿಂ ಹದಗೊಳಿಸುವಾ ಕಮ್ಮಾಱಿನುಂ ತಾನೆ ೨೯

ಕೊಳುವ ಕೊಡುವೆಡೆಯಲ್ಲಿಯಱಿಯದೆ
ಮೊಳೆಗಳಂ [೨]ಪೆಱಿ[೩]ನೂಂಕಿವೊಳ್ಪಿಹ
ಮೊಳೆಯನೊಳಕೊಂಬಕ್ಕಸಾಲೆಯು ತಾನೆ ಕೇಳರಸ
ಬಲಿದ ಮದದಿಂ ಹರಿಣವೇಷಂ
ದಳಿದು ರಮಿಸುವ ವಿಧಿಯ ತಲೆಯಂ
ಮುಳಿದು ಶರದಿಂ ಪಱಿಯಲೆಚ್ಚ ಕಿರಾತನುಂ ತಾನೆ ೩೦

೧ನೆ (ಸ). ೨–೩ ಪೊಱಿ (ಮ); ಪೊಱ (ಕ, ಚ, ಧ, ಥ, ಪ, ಬ).

CC-0. Jangamwadi Math Collection. Digitized by eGangotri

ಮಿತ್ರ ಶತ್ರು ವಧಾತ್ರು ಪಂಕಜ
ನೇತ್ರ ಮುಖ್ಯಾಖಿಳ ಪಶುಗಳಂ
ಮೈತ್ರದಿಂ ಪರಿಪಾಲಿಸುವ ತುಜುಗಾಜನುಂ ತಾನೆ
ಚಿತ್ರಮಾಗಲು ಕಪಟನಾಟಕ
ಸೂತ್ರದಿಂ ವಿಕೃತಿ ಪ್ರಕೃತಿ ಚಾ
ರಿತ್ರಗತಿಗಳನಾಡಿಸುವ ತತ್‌ಸೂತ್ರಿಕನು ತಾನೆ ೩೧

ನೆರೆದು ಪಿರಿದೇಕಾರ್ಣವಾದವ
ಸರದೊಳಜ ಹರಿ ಮುಖ್ಯ ದೇವನಿ
ಕರಮನೆಲ್ಲಂ ಕರಮಿಸೆಯಲೊಗೆದಸಗನುಂ ತಾನೆ
ಪರಮ ಭಕ್ತಾಳಿಗೆ ಮಡಿಗಳಂ
ಸುರುಚಿರಂ ಮಿಗೆ ಮಾಡಿ ನೀಡುವ
ಧರೆಯೊಳೀಗಳು ತಾನೆ ಈ ಮಡಿವಾಳ ಮಾಚಯ್ಯ ೩೨

ಇಂತಿವೆಲ್ಲಂ ತಾನೆಯಾದ ಮ
ಹಂತನಂ ನೀನೊಂದು ಕುಲವೆಂ
ದಂತರವನಱಿಯದೆ ನುಡಿವ ನುಡಿ ಸಲ್ಲದಾ[೧] ಅಯ್ಯ
ಕಂತುಮರ್ದನಮೂರ್ತಿಯಾತನ
ಸಂತತಾಚರಣೆಗಳನೆಣಿಸುವೊ
ಡಂತನಂತನನಂತಜಿಹ್ವೆಗಳಿಯ್ದಪೆಂತೆನಲು ೩೩

[೨]ಕರಟಿ[೩] ಸಿಂಹ ವ್ಯಾಘ್ರಚರ್ಮಾಂ
ಬರಧರನ ಸದ್ಭಕ್ತರುಗಳಂ
ಬರವಿತಾನಮನಲ್ಲದೊಂದುವನೊಗೆಯನನವರತ
ನರರನಾರಂ ಮುಟ್ಟಲೀಯನು
ಶರಣರುಗಳಂಬರನಿಚಯಮಂ
ಶರಣರಿಗೆ ಕೊಡುವಂ ವಿನಿಶ್ಚಲ ಭಕ್ತಿಯುಕ್ತಿಯಲಿ ೩೪

೧ವಾ (ಕ, ಚ). ೨–೩ ಹರಿಣ (ಸ); ಕರಡಿ (ಮ).

CC-0. Jangamwadi Math Collection. Digitized by eGangotri

ಜಂಗಮವು ಬೇಡಿದಡೆ ಹೊಸ ವ
ಸ್ತ್ರಂಗಳನೆ ಕೊಡುವಂ ನಿರಂತರ
ಲಿಂಗಸಂಪದಮೊದಗಿ ಹಾಕಿದ ಸೀರೆಗಳನವರ್ಗೆ
ಹಿಂಗದಾ ಸೀರೆಗಳನೀವನ
ಭಂಗನಾ ಆಯ್ಯನ ಸುಚಾರಿ
ತ್ರಂಗಳಂ ಕೇಳಲ್ಕೆ ಕುಟಿಲಾತ್ಮರ್ಗದೇಕಹುದು ೩೫

ಸೀರೆ ಮುಟ್ಟಿದ ಮಾತ್ರದಲಿ ಸಂ
ಹಾರಿಸುವ ಭಕ್ತಂ ಕೊಲಲ್ಕಿವ
ರಾರು ಹೋದಡೆ ಮನ್ನಿಸುವನೇ ಪಾಣವೇತಕ್ಕೆ
ಹೋರಿ ಮಾ[ಿ]ನವ ಕೆ[ೆ]ಡಿಸಿಕೊಳದಿರು
ಭೂರಮಣ ಇವರಲ್ಲಿ ಬಳಿಕ ವಿ
ಚಾರದಿಂ ನೀನವರ ಮೇ[ಿ]ಲಕ್ಕೆ [ೆ]ತ್ತಿ ಹೋದಡೆಯು ೩೬

ಸಸಿನೆ ಬೊಟ್ಟಂ ತೋಱಿಲಾಪೈ
ಅಸಮಬಲನೊಡನೇಕೆನಲು ಕೋ
ಪಿಸುತ ಕಾರಣಕಥೆಗಳಂ ಕಲ್ಪಿಸದೆ ನೀನಿಲ್ಲಿ
ಉಸಿಕನೇ ನೋಡುತ್ತಿರೆನುತಾ
ಬಸವನಂ ವಾದಿಸಿ ಕುಟಿಲಮಾ
ನಸದರಸನಾಕ್ಷಣವೆ ನಿಜ ಮಾವಂತರಂ ನೋಡಿ ೩೭

ವಹಿಲದಲಿ ನೀವಿಯ್ದಿಯಾತನು
ಬಹ ಪಥದೊಳಿದಿರಾಂತು ನಿಂದಾ
ಗ್ರಹದೊಳಗಲಗಲೆನುತ ಬೇಱಿಂತೊಂದುಪಾಯದಲಿ
ಬಹಳ ಮದಗಂಧೇಭಮಂ ವಿ
ಗ್ರಹಿಸುವನ ಮೇಲಕೆ ಹರಿಸಿ ನಿ
ಗ್ರಹಿಸಿ ಕೊಲ್ಲೆನಲಾ ಪುರದ ಜನರುತ್ಸವಿ[ೆ]ಸುತಿರಲು ೩೮

೧–೨ ನಂಗೆ (ಧ, ಥ, ಪ). ೩–೪ ಲಿಂಗೆ (ಕ, ಚ, ಧ, ಥ, ಪ, ಬ, ಮ). ೫ ಯಿ (ಮ).

CC-0. Jangamwadi Math Collection. Digitized by eGangotri

ಮುಂಗಡೆಗೆ ಮಾವಂತರಾ ಮಾ
ತಂಗವಂ ತವೆ ಹಾಯ್ಸಿ ನೋಡುತ
ಲಿಂಗವಂತನ ಬರವಿಗವರುಗಳಡ್ಡಗಟ್ಟಿರಲು
ತುಂಗವಿಕ್ರಮನೈಸಱಿಲಿ ವ
ಸ್ತ್ರಂಗಳಂ ಪೊತ್ತೈತ್ತರುತ ನೆರೆ
ದಂಗವಿಸಿ ಬಪ್ಪವರನಾ ಮದದಾನೆಯಂ ಕಂಡು ೩೯

ನಿಲ್ಲು ನಿಲ್ಲೆನುತಬ್ಬುತಾಲುತ
ಕಲ್ಲಿನಾಥನ ಭದ್ರಮದಕರಿ
ಮಿಲ್ಲ ಹುಲುಮಂಡಳಿಕನಾನೆಗದೇಕೆ ತಕ್ಕುದುವು
ಇಲ್ಲಿ ಬಂದಿದಿರಾಂತು ಸಾಯದೆ
ಹೊಳ್ಳುಗಳಿರಾ ಹಾಱಿನುತ್ತಾ
ಬಲ್ಲಿದನು ಜಯಘಂಟೆಯೊಳು ಕುಡುಹೊಂದಿಸಿದನೊಡನೆ ೪೦

ಕರಿಘಟೆಗಳಂ ಮದಿಸಲಾಱಿದೆ
ಹರಿದು ದೆಸೆದೆಸೆಗೋಡಲೈಸಱಿಸಿ
ಳಿರದೆ ಮೇಣ್ ಮಾವಂತರಿಭವಂ ನೂಂಕಿ ಮುಂದೆಸೆಗೆ
ಬರುತ ಮುಟ್ಟಿದ ಮುನ್ನ ಬೆನ್ನಿಂ
ಧರಿಸಿ ತಪ ಪಸ್ತ್ರಾವಳಿಯನಂ
ಬರದೊಳಂಕಿಸಿ ಕೈಯ ಘಂಟೆಯನಲ್ಲಿಯೇ ಸಿಕ್ಕಿ ೪೧

ಎರಡು ಕೈಗಳನುದ್ದಿಕೊಳುತಿ
ಬ್ಬರಿಸಿ ಬೆಳೆದೆಯ್ತಂದು ಪುಟನೆಗೆ
ದುರವಣಿಸಿ ಮಾವಂತುರುಗಳಂ ಕೆಡಹಿ ಮದಕರಿಯ
ಕರವನುಱಿ ಪಿಡಿದೊತ್ತಿ ನೂಂಕುತ
ಬರಸೆಳೆದು ಹೊಡೆದಪ್ಪಳಿಸುತಂ
ಶರಣನೊಗೆವಂತಂಬರವನುರ್ವೀತಳಾಗ್ರದೊಳು ೪೨

೧ಡಿ (ಬ, ಕ). ೨ರು (ತ, ಧ, ಥ, ನ, ಪ). ೩ಗ್ಗು (ಬ). ೪ಕ (ಪ). ೫–೬ ಘಟೆ (ಕ, ಚ, ಥ, ಪ, ಮ); ಮಥಿ (ನ, ಬ). ೬ಉ (ತ, ಧ, ಥ, ನ, ಪ). ೮–೯ ದಂಬರದವೊಲು ಉ (ಕ, ಚ, ತ ಧ, ಥ, ನ, ಪ).

CC-0. Jangamwadi Math Collection. Digitized by eGangotri

ನರಹರಿಯನಾ ವೀರಗಣನಂ
ಬರಕೆ ಹಾಯ್ಕುವ ತೆಱದೆ ಹಾಯ್ಕುತ
ಭರದೊಳೊಳಕ್ಕೈಯಿಂದೆ ಹೊಱಕ್ಕೈಯಿಂದೆ ಹೊಡೆಹೊಡೆದು
ಧರೆಗೆ ಬೀಳದ [೧]ಹಾಂಗೆ[೨] ಹಾಯ್ಕುವ
ನರರೆ ಹರನಿಭದೈತ್ಯನಂ ಸಂ
ಹರಿಸಿ ಸೀಳುವ ಮಾ[೩]ರ್ಗದಿಂ[೪]ದೊಡೆಸೀಳ್ದನುರ್ಬಿನಲಿ ೪೩

ಅಳಿಕನೇತ್ರನು ವಿಷ್ಣುವಿನ ನಿ
ಟ್ಟೆಲುವನುಗ್ರತೆಯಿಂದ ಮುಱಿದವೊ
ಲೆಲುವ ನಾಯಿಗೆ ಹೊಲೆಯಗಂ ಮಾಂಸವನು ಮಚ್ಚಿಗಗೆ
ಬಳಿಕ ತೊವಲೆಂಬಂತೆ ಮುಳಿಸಿಂ
ಕೆಲಕೆ ಬಿಸುಡುವನನ್ಯರಿಗೆ ತಾಂ
ತೊಲಗದಗ್ಗದ ಭಾಷೆಯದು ಕಾ[೫]ರಣವ[೬]ತುಳಬಳನು ೪೪

ಚೆನ್ನ ಮಂಡಿವಳನಮಳ ಚಾರಿ
ತ್ರೋನ್ನತಿಗೆ ಭಕ್ತರು ಪರಿಣಮಿಸೆ
ಛಿನ್ನ ಛಿನ್ನಂ ಮಾಡಿ ವಂದಕರಿಯಂ ಕ್ಷಣಾರ್ಧದಲಿ
ಎನ್ನ ಮೇಲಾನೆಯನೊಡರ್ಚಿದ
ತನ್ನರಸುತನದವನ ಗರ್ವವ
ನಿನ್ನು ಮುಱಿಯದೆ ಬಿಡುವೆನೇ ಎಂದಾಗ್ರಹಿಸುತಿರಲು ೪೫

ಇನಿತು ವೃತ್ತಾಂತವನಱಿದು ತ
ಜ್ಜನಪನದಱಿಂ ಮುನ್ನ ತನ್ನಾ
ನನದ ಹಾಸ್ಯರಸಂ ಬಱಿತು ನೆಱಿ[೭] ನಾಂಚಿ ತಲೆವಾಗಿ
ಅನಘಬಸವನ ಮುಖವನೀಕ್ಷಿಸೆ
ಮನದೊಳನುರಾಗಿಸುತ ನಲಿದೊ
ಯ್ಯನೆ ನಗುತ ಭಂಡಾರಿಯಿಂತೆಂದಂ ನೃಪಾಲಂಗೆ ೪೬

೧–೨ ತೆಱದೆ (ತ, ನ). ೩–೪ ಳ್ಕೈಯಿಂ (ಮ). ೫ ವಾ (ಸ). ೬ ಕ (ಸ).

CC-0. Jangamwadi Math Collection. Digitized by eGangotri

[೧]ನಾನು ಮುನ್ನೊರೆದೊರೆದು[೨] ಬೇಡೆನೆ
ಈ ನುಡಿಯನಾಲಿಸದೆ ನೀನೀ
ಮಾನವರ ಮಾತಿಂಗೆ ಕಳುಹಿದೆ ಮತ್ಸರದೊಳಿಂತು
ಆನೆಯಂ ಹೋಗಾಡಿದಕಟಬಿ
ಮಾನವಂ ನೀಗಿದೆ ಬಲುಹನುಳಿ
ದೇನನೆಂಬೆನು ನಿನಗೆ ಅತಿ ಶಿವದ್ರೋಹವಾಯಿತ್ತು ೪೭*

ಅಂತು ಸಂಧಿ ೨೦ಕ್ಕಂ ಪದಗಳು ೧೧೨೪ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

---

*ತ ಪ್ರತಿಯಲ್ಲಿ ಸಂಧಿ ಮುಗಿದ ಸೂಚನೆಯಿಲ್ಲ. ಅದು ಮುಂದುವರಿಸಲ್ಪಟ್ಟಿದೆ.
೧-೨ನಾನೊರೆದೊರೆದು ಬೇಡ (ಥ, ಧ, ಪ).

CC-0. Jangamwadi Math Collection. Digitized by eGangotri

ಸಂಧಿ : ೨೧

*

ಸೂಚನೆ : ಮದಕರಿಗಳಂ ಕೊಂದದಱಿಸುವ
ನೊದವಿಸುತ ಮಗುಳಿತ್ತು ಮೆಱಿದರು
ಸದಯದಿಂದಿಱಿವತ್ತಿನುಂ ಬಾಹೂರಬೊಮ್ಮಯನು

ದ್ರವಿಡದೇಶದೊಳರಸ ಕೇಸಿಱೊ
ರ್ವಳಿವನಿಪಂ ಕರವೂರ ಚೋಳ
ಪ್ರವರನಾಳುವ ಸೀದೇಶದೊಳಗಱುವತ್ತುಮೂವಱಿಂಗಳು
ಭವರಹಿತನಿಱಿವತ್ತನೊರ್ಬನು
ಶಿವಗಣಾಗ್ರಣಿ ವಿತರಣದ ಕಣಿ
ಪ್ರವಿಮಳ ಸದಾಚಾರಮಾರ್ಗ ಸದಾನುಪಾಲಕನು ೧

ಪರಿವೃತಾಖಿಳಸಂಗಭರಿತನು
ಪರಿಮಿತೋದ್ದೀಪಿತ ಪ್ರತಾಪನು
ಸ್ಥಿರವಿಶದಯಶನಮಳ ಸದ್ಗುಣಮಣಿಗಣಾಭರಣ
ಧುರದೊಳತಿಬಳವೀರಭದ್ರನು
ಪರಮ ಸಾಹಸಿಗಂ ಶಿವದ್ರೋ
ಹರಿಗೆ ಗಂಡನು ಚಂಡತೇಜೋವಿಜಿತ ಮಾರ್ತಾಂಡ ೨

---

* ರಾಗ : ಬುವಳಿ (ಕ); ನಾಟ (ಅ, ಡಾ); ಫಳಮಂಜರಿ (ಧ, ಪ). ೧–೨ ಭಕ್ತ (ಸ). ೩–೪ ಳಂದ (ಕ, ಚ, ಥ, ಧ, ಪ, ಮ). ೫–೬ ರಾಜ್ಯ (ಬ, ಮ). ೭–೮ ಇಱಿಭಕ್ತನೆಂಬಾ (ಸ). ೯ ಹ್ಯ (ಬ, ಕ, ಚ, ತ, ಥ, ಧ, ನ, ಪ).

CC-0. Jangamwadi Math Collection. Digitized by eGangotri

ಸಕಲ ಶಾಸ್ತ್ರಾಭ್ಯಾಸ ಶೌರ್ಯ
ಪ್ರಕಟಿತಂ ಲೋಕಪ್ರಪಂಚಾ
ಧಿಕ ವಿರಕ್ತನು ಕಾಲಕರ್ಮವಿಮುಕ್ತನತಿಭಕ್ತ
ಅಕುಟಿಲಾತ್ಮಂ ಶೈವದರುಶನ
ಮುಕುರನಪಗತಮುಷ್ಪಶಾಸ್ತ್ರಾ
ನಿಕರವೆಂದೆನಲೊಪ್ಪಿ [1]ಮೆಱೆವಿಲಿಸಿವತ್ತಳಿನಾರಿಂತು ೩

ಯೌವನಪ್ರಾಯದೊಳುಮೇಶ್ವರ
ಸೇವನಾಂಚಿತ ಭಕ್ತಿನಿಷ್ಠಾ
ಭಾವನತೆಯಿಂ ಲೋಕವಿಭ್ರಾಂತಿಗಳನತಿಗಳೆದು
ಪಾವನ ಶ್ರೀಭಸಿತ ರುದ್ರಾ
ಕ್ಷಾವಳೀಯುತದೇಹನಾಗಿ ಸ
ದಾ ವಿನಯದಿಂ ಶರಣ ಪರಿಚರಣಕ್ರಿಯೆಗಳೆಸೆಯೆ ೪

ಮಾರಹರಭಕ್ತರ್ಗಿಳೆಯೊಳಪ
ಕಾರಮಂ ಮಾಡುವವದಿರನವಿ
ಚಾರದಿಂ ಕೊಲುವುದು ತನಗೆ ನಿಜ ನೇಮವಾಗಿರಲು
ಸಾರ ಶೈವಾಗಮಪುರಾಣ ವಿ
ಶಾರದಂ ತಾನೆನಿಸಿ ನಡೆವುತ
ವೀರಮಾಹೇಶ್ವರನಿಱಿಂವದಾ[2]ಂಡಾರಿಯೊಂದು ದಿನ ೫

ಚೋಳಭೂನಾಥನ [3]ಪಿರಿಯ ಕರಿ
ಕಾಲಸಂಕಲೆ ಪಱಿದುಕೊಂಡು
ತ್ತಾಲ ರೌದ್ರಾವಾರಿತೋದ್ಧತ ಬಹಳ ವೇಗದಲಿ
ಸಾಲುಗಟ್ಟಿ ಮದಾಂಬುಧಾರಾ
ಜಾಲವುಗೆ ಪುರವೀಥಿ[4]ವಿಡಿದಾ[5]೦
ಭೀಳದಿಂದೆಯ್ತಪ್ಪ ಸಮಯದೊಳೊಬ್ಬ ಶಿವಭಕ್ತ ೬

೧–೨ರುವ ನಿ (ಥ, ಪ). ೩–೪ ಭಕ್ತ (ನ, ಸ). ೫–೬ ತ್ತಾ (ಕ, ಚ). ೭–೮ ಬರಿ (ಪ). ೯–೧೦ ಯಿದಿರೊಳ (ಸ).

CC-0. Jangamwadi Math Collection. Digitized by eGangotri

ಬೆಳಗುಜಾವಿನಲೆದ್ದು ಸೆಜ್ಜೆಯ
ನಳವಡಿಸಿಕೊಂಡೊಯ್ದು ಘಮ್ಮನೆ
ಬೆಳಗಹುದೊ ಹೊತ್ತೆನುತ ಹೂದೋಂಟಗಳನುಱಿ[3]ಹೊಕ್ಕು
ಚೆಲುವವಾ[೧]ಗಿ ಪರೀಕ್ಷಿಸುತ್ತಂ
ಸುಳಿದ ಘಾಳಿಂಗೊಡೆದೆಸಳ ನಯ
ವಳಿದ ತಚ್ಛಿದ್ರಪ್ರಸೂನಾವಳಿಗಳಂ ತ್ಯಜಿಸಿ ೭

ಹೊಡೆವ ಗಾಳಿಗೆ ನೊಂದು ಮುನ್ನೆಡೆ
ಗೆಡೆಗೆ ಕಂದಿದ ಮೊಗ್ಗೆಯರಳ್ಗಳ
ನುಡುಗಿ ಬಿಱುಗಾಳಿಂಗೆ ಕೆದಱಿ[3]ರ್ಪಸಿಯ ಹೂಗಳನು
ಬಿಡಿಸದಗ್ಗದ ಗಾಳಿಯಿಂದೊಡ
ನೊಡನೆ ಬೀತು ತೊಡಂಬೆಗಳು ಕಡು
ಸಡಿಲಿ ತಮತಮಗವನಿಯಲಿ ಬಿದ್ದರಳುಗಳನುಳಿದು ೮

ವಿವಿಧಕೀಟಕನಿಹತಿಯಿಂ ಶಂ
ಭುವಿನ ಪೂಜೆಗೆ ಸಲ್ಲದಿಹ ಕುಸು
ಮವಿತತಿಯನೆಲ್ಲೆಂದು ವರ್ಜಿಸಿ ಲಲಿತ ಕೋಮಳದ
ನವ ಪರಿಮಳದ ಬಿರಿಮುಗುಳ್ಗಳ
ನವಿಕಳಾತ್ಮನು ಸೆಜ್ಜೆದುಂಬಲು
ತವಕದಿಂ ತವೆ ಕೊಯ್ದುಕೊಂಡಾ ಮದಕರಿಯ ಮುಂದೆ ೯

ಸರಸರನೆ ಹರಪೂಜನೋತ್ಸವ
ಪರವಶದೊಳೆಯ್ತಪ್ಪೆಡೆಯೊಳಾ
ಕರಿಯುರವಣಿಸಿ ಬಂದು ದೀರ್ಘಕರಾಗ್ರದಿಂ ಪಿಡಿದು
ಭರ[೨]ದೊಳುದ್ದಕೆ[೩] ಹಾಯ್ಕಿ ಕೊಂಬುಗ
ಳೆರಡ[೪]ನೆಗ್ಗಲು[೫] ದೇಹವದು ನೆ
ತ್ತರು ಸುರಿಯೆ ತಟುವುಚ್ಚಿ ಜೀವವಿಯೋಗ[೬]ತಾಪ[೭]ದಲಿ ೧೦

೧ನಾ (ತ, ಥ, ನ, ಪ). ೨–೩ದಿ ಮೇಲಕೆ (ತ, ನ); ದೊಳುಪರಿಗೆ (ಥ, ದ, ಪ). ೪–೫ನೊಡ್ಡಲು (ತ, ನ); ನೊಗ್ಗಲು (ಥ, ಧ, ಪ). ೬–೭ಕಾಲ (ನ).

CC-0. Jangamwadi Math Collection. Digitized by eGangotri

ಶರಣನಾಕ್ಷಣದಲ್ಲಿ ಶಿವಶಿವ
ಹರಹರಾ ಪ್ರಾಣೇಶ ಶಂಕರ
ವರದ ಎಂದೆಂಬಾ ಧ್ವನಿಯನಾಲಿಸಿ ಹೆದಱಿ ಬಿದ್ದು
ಪರಮ ಭಕ್ತನ ನುಡಿಗಳಹವಿವು
ನಿರುತವೆಂದಾಗ್ರಹಿಸುತಾರ್ತ
ಸ್ವರವಿದೇನೆನುತಾಗ ಹರಿತಂದಿಱಿವದಾಂಡಾರಿ ೧೧

ಧಾರುಣಿಯೊಳೊಱಗಿರ್ದ ಶರಣಶ
ರೀರವಂ ನೋಡುತ್ತಿವಾ ಮದ
ವಾರಣವನೀಕ್ಷಿಸಿ ಸಮಕ್ಷದೊಳಿನಿತು ದೂರದಲಿ
ವೀರಮಾಹೇಶ್ವರನುದಗ್ರ ಕು
ಠಾರಯುತಕರನಾಗಿ ನಿಲ್ಲುವಿ
ದಾರಿಸುವೆನೋಡದಿರೆನುತ ಮಾರ್ಮಲೆತು ಬರುತಿರಲು ೧೨

ಮಲೆವುತಾತನ ಕಟ್ಟಿದಿರೊಳ
ತ್ಯಲಘುಗಜವುನ್ಮದವೊದಗಿ ಭುಜ
ಬಲನಿಭಾಸುರನೀಶ್ವರನ ಮೇಲೆತ್ತಿ ಬಪ್ಪಂತೆ
ಮುಳಿದು ಪರಿತರೆ ಕಂಡು ರೌದ್ರಾ
ಕಲಿತ ಸತ್ವವಿಜೃಂಭಿತಾ ಸಂ
ಚಲಿತ ಘೋರಾಕಾರನಾಗಿ ಮಹಾಪ್ರತಾಪದಲಿ ೧೩

ಪ್ರಳಯರುದ್ರನ ಮಾಳ್ಕೆಯಿಂದತಿ
ಕಲುಷವಿಹ್ವಲನಾಗಿ ಕೋಳಾ
ಹಳದ ಸಿಂಹಧ್ವನಿಯನೀಯಲು ನೋಡುವವರೆಲ್ಲ
ಅಳುಕಿ ಅಗಲಕೆ ಕೆದಱಿ ಓಡಲು
ನಿಲಿಸಿ ಗಜವಂ ಕಾದಿ ಭಂಗಿಸಿ
ಕೊಲುವೆನೆನುತಾಲುತ್ತ ಬೊಬ್ಬಿಱಿದುಬ್ಬಿ ಹರಿತಂದು ೧೪

೧ಪ (ತ, ಥ, ಸ, ಪ). ೨–೩ ಲಾಕ್ಷಣ (ಥ, ಬ); ವಾರಣ (ಸ). ೪–೫ ಲುತ (ಮು). ೬–೭ ಹೋಗಲು (ಥ, ಪ).

CC-0. Jangamwadi Math Collection. Digitized by eGangotri

ವ್ಯಗ್ರದಾನೆಯ ಸುಂಡಿಲಂ ಹ
ಸ್ತಾಗ್ರದಿಂ ಪಿಡಿದೊತ್ತಿ ಬರಸೆಳೆ
ದಾಗ್ರ[೧]ಹಿಸಿ[೨] ಹಿಂದಕ್ಕೆ[೩] ತೆಗೆದಾ ಮೇಲ್ಗಡೆಗೆ ಪಾಯ್ದು
ಉಗ್ರರೂಪನು ಮಾವತಿಗನಂ
ನಿಗ್ರಹಿಸಿ ಕೆಡೆನೂಂಕಿ ಕಾಲಲು
ದಗ್ರ ವೃತ್ತಿಯೊಳದಱಿ ಕೊರಳಂ ಮೆಟ್ಟಿ ಬೊಬ್ಬಿಡುತ ೭೫

ವ್ಯಾಳ ಕುಂಭಸ್ಥಳಯುಗಳಮಂ
ಸ್ಥೂಲ ಹಸ್ತಕುಠಾರದಿಂದೊಡೆ
ಸೀಳಲೊಡನದು ಘೀಳಿಡುತ ಕೆಡೆದುದು ಪೊಡವಿಯಲ್ಲಿ
ಲೈಲ ವ[೪]ಜ್ರನಿ[೫]ಘಾತಪಾತದಿ
ಬೀಳುವಂದದೊಳಾ ಸಮಯದಲಿ
ಚೋಳಭೂವರನೀ ಹದನ[೬]ನಱಿದತ್ತ[೭] ತಾನೆಯ್ದಿ ೭೬

ಇಱಿಪದಾಂಡಾರಿಯ ಪದಾಬ್ಜ
ಕ್ಕೆಱಗಿ ನಿಂದು ಕರಂಗಳಂ ಮುಗಿ
ದುಱಿಯಕಟಕಟ ಭಕ್ತನಂ ನೋಯಿಸಿತು [೮]ಕರಿ ಎ[೯]ನುತ
ಮಱುಗಿ ಮನದೊಳುಮೇಶಭಕ್ತ
ರ್ಗಱಿಸಲಜ ಹರಿ ಮುಖ್ಯರೆಣೆ ಬರ
ಲಱಿಯರೆಂದಡೆ ಮತ್ತೆ ಈ ಬಡ ಕರಿಯ ಸಾವೆಣೆಯೆ ೭೭

ಆನೆಯದು ಪಶುವೇನನಱಿದಪ
ದಾನೆಯಂ ಬಿಡದಾಳ್ವ ಪಾತಕ
ನಾನೆಯಲ್ಲದೆ ಸಾವೆನ್ನಯ ಸಾವು ಸರಿಯೆಂದು
ನಾನೆಣಿಸಿದಡೆ ಬಾಯ್ವುಳಿವುದನು
ಮಾನವೇ ನಾಂ ಸತ್ತು ಶುದ್ಧನು
ತಾನೆನುತ್ತಿಱಿ[೧೦]ವತ್ತ[೧೧]ನಿದಿರೊಳು ಚೋಳಭೂಭುಜನು ೭೮

೧–೨ ಹದಿ (ಧ). ೨–೩ ಹಿಂಡಿಕ್ಕಿ (ಪ). ೪–೫ ಶನೀ (ಕ, ಚ, ತ, ಥ, ಧ, ನ, ಪ, ಬ). ೬–೭ ಮುನ್ನಱಿದು (ಧ, ಸ). ೮–೯ ಗಜವೆ (ತ, ಧ, ನ, ಬ, ಮ). ೧೦–೧೧ ಭಕ್ತ (ತ, ನ, ಸ).

CC-0. Jangamwadi Math Collection. Digitized by eGangotri

ಆಗ ತನ್ನ ಶಿರವನರಿಯಲೊಡ
ನಾಗಳಿಗಾಪ್ರೇಮಿ ಸನ್ನಿಧಿ
ಯಾಗಿ ಭೂಪನ ಸದುವಿನಯ ಭಯಭಕ್ತಿ ಸಕ್ರಿಯೆಗೆ
ರಾಗನಿಧಿ ಇಱಿವತ್ತಿನಚಲ ಸ
ದಾಗಣಿತ ನಿಜಭಕ್ತಿಗಂ ತಾಂ
ನಾಗಕಂಕಣನಭವನಕ್ಷಯನಿನುಪಮನು ಮೆಚ್ಚಿ ೧೯

ಮತ್ತೆ ಭಕ್ತನ ಜೀವಮಂ ತಂ
ದಿತ್ತುಮಾವತಿಗನ ಹರಣಮಂ
ಸತ್ತ ಮತ್ತಮತಂಗಜಾತಮನೆತ್ತಿ ಕರುಣದಲಿ
ಚಿತ್ತವಲರಿ ಮಹಾಮಹಿಮನಿಱಿ
ವತ್ತನಂತಾ ಚೋಳನಂ ಪ್ರಭೆ
ವೆತ್ತ ನಿಜಕೈಲಾಸವಾಸದೊಳಿರಿಸಿ ಸಲಹಿದನು ೨೦

ಮದಿಸಿ ಕಾಣದೆ ಭಕ್ತನಂ ಮಡು
ಹಿದ ಗಜೇಂದ್ರಂ ಸತ್ತುದಾಗಳೆ
ವಿದಿತವಿದು ಭೃತ್ಯಾಪರಾಧಃ ಸ್ವಾಮಿನೋ ದಂಡ
ಆದುವೆನುತ್ತಿರೆ ತನ್ನ ಕರಿ ಮಾ
ಡಿದಪರಾಧಂ ತನ್ನದೆನುತಂ
ಹೆದಱಿ ಚೋಳನು ತನ್ನ ಜೀವಕೆ ಮುನಿದನಂತಾಗಿ ೨೧

ಸಾಱಿಸಾಱಿಲು ಎನ್ನ ಮಾತಂ
ಮೀಱಿ ಕಳುಹಿದೆ ಮತ್ತಕರಿಯಂ
ಗಾಱಿಬುದ್ಧಿಯೊಳೀ ಶಿವದ್ರೋಹಕ್ಕವಧಿಯಿನ್ನು
ತೋಱಿಲುಂಟೇ ಹೇಸಿ ಪಾಪ
ಕ್ಕಾಱಿನೆನ್ನದೆ ರಾಜ್ಯಗರ್ವವ
ನೇಱಿ ಮಾಡಿದ ತಪ್ಪಿಗಾವುದು ಹೇಳು ಭೂಪಾಲ ೨೨

೧–೨ ಭಕ್ತ (ಥ, ಪ, ಸ). ೩ ರ (ತ, ನ). ೪–೫ ಕೊಟ್ಟಿ (ತ, ಥ, ಧ, ನ, ಪ). ೬–೭ ವಂತನ (ಕ, ಚ, ತ, ದ, ನ, ಪ, ಮ). ೮–೯ ನೆಂದಡೆ (ಥ, ಪ).

CC-0. Jangamwadi Math Collection. Digitized by eGangotri

ಚಾರುಚರಿತಂ ಮತ್ತೆಯುಂ ಬಾ
ಹೂರಬೊಮ್ಮಯನೆಂಬ ಭಕ್ತನು
ದಾರಕೀರ್ತಿ ನಿರೂಢ ಗಾಢಮಹತ್ವತತ್ವಾರ್ಥಿ
ವೀರಶೈವಾಚಾರ ಸುವ್ರತ
ಕಾರಿ ಸೂರಿಜನೋಪಕಾರಿ ವಿ
ಕಾರದೂರನು ಸಾರಭಕ್ತಿಶರೀರಿ ದುರಿತಾರಿ ೫೩

ಸ್ಥೈರ್ಯ ಶೌರ್ಯಂ ವರಕೃಪಾನಿಧಿ
ಪೂರ್ಯಧೈರ್ಯಂ ಶರಣಜನ ಪರಿ
ಚರ್ಯಭರ್ಯಾ ವಿಮಳಮತಿಯಾಚಾರ್ಯ [೧]ಹಿತಕಾರ್ಯಂ[೨]
ಆರ್ಯವಾರ್ಯಂ ಸತ್ಯವಾಕ್ಯನ
ವಾರ್ಯವೀರ್ಯಂ ಸಜ್ಜನಂ ಶಿವ
ಕಾರ್ಯಧೂ[೩]ರ್ಯಂ ಭೂಜನ ನಮಸ್ಯಾರ್ಯನೆನಲೆಸೆದ[೪] ೫೪

ಒಲಿದು ಜಂಗಮಲಿಂಗ ಗುರುಪದ
ಜಲಜಪರಿಚರಿಯ ಕ್ರಿಯಾಸಂ
ಕಲಿತ ಭಕ್ತಿಯೊಳಲಸದಾಗಳು ಮಾಡಬೇಕೆಂದು
ಹಲವು ಹೂದೋಟಗಳನ[೫]ರ್ಜಿಸಿ
ಬೆಳಗುಜಾವಿನಲೆದ್ದು ಕುಕ್ಕುಟ
ನುಲಿಯಲೊಡನಂತೆಯ್ದಿ ಹೂಗಳನೆಯ್ದೆ ಕು[೬]ಯಿತಂದು ೫೫

ಕುಸುಮಮಾಲೆಗಳಂ ರಚಿಸಿ ತಂ
ದೊಸೆದು ಭಕ್ತರಿಗಿತ್ತು ತಾ ನಿ
[೭]ತ್ಯಶನ[೮]ಕಾಯಕಲಬ್ಧಿಯಲಿ ಜಂಗಮಕೆ ಮಾಡುತ್ತ
ಪೆಸರು ಪಸರಿಸಿ ಕೀ[೯]ರ್ತಿಸುತ್ತಿರೆ
ವಸುಧೆಯೊಳು ಮತ್ತೊಂದು ವಾದದೊ
ಳಸಮಭರ್ಗನೆ ಕರ್ತನೆಂಬುದದಂ ಪ್ರತಿಷ್ಠಿ[೧೦]ಸಿದ[೧೧] ೫೬

೧–೨ ಸಂಪದನು (ಥ, ಪ). ೩ ಯಾ (ಪ). ೪ ವಂ (ನ); ದು (ಕ, ಚ, ಥ, ಧ, ಬ, ಮ). ೫ ನಾ (ನ). ೬ ಕೊ (ಕ, ಚ, ಥ, ಧ, ಪ, ಬ). ೭–೮ ಬ್ಯಸನ (ಕ, ಥ, ಪ, ಬ, ಮ). ೯ ವ (ಧ, ಥ, ನ, ಪ). ೧೦–೧೧ ಸುತ (ನ).

CC-0. Jangamwadi Math Collection. Digitized by eGangotri

ಕಲ್ಲನಂದಿಯನೆಬ್ಬಿಸುತ್ತಂ
ಪುಲ್ಲು [೧]ಕವಣಿ[೨]ವನಿಕ್ಕಿ [೩]ಮೆಲಿಸಿದಳ್
ನೆಲ್ಲರಱಿಯಲು ಜೋಳವಂ ಶಿವಲಿಂಗವಂ ಮಾಡಿ
ಸಲ್ಲಲಿತದಿಂದೋ ಎನಿಸಿದಂ
ಬಲ್ಲಿದಂ ಬೊಮ್ಮಯ್ಯನತ್ಯು
ತ್ಕಲ್ಲ ಭಾಸುರ ಭಕ್ತಿವಾಸನೆಯಿಂದಿರಲು ಮತ್ತೆ ೨೭

ಒಂದುದಿನಮವನೀಶನೊರ್ವನು
ಮುಂದಿ ಸೇನಾಸಹಿತವಾಗೆ
ಯ್ತಂದು ಪರಮಂಡಲಪತಿಯಮೇಲೆತ್ತಿಹೋಗುತ್ತ
ಮುಂದೆಸೆಯ ಬಾಹೂರ ಮೂಡಲು
ವೊಂದಿ ರಂಜಿಪ ಪುಷ್ಪವಾಟೀ[೪]
ವೃಂದದೊತ್ತಿನೊಳೆಯ್ದಿ ಭೂಪತಿ ದಂಡುಬಿಟ್ಟಿರಲು ೨೮

ತನ್ನರೇಂದ್ರನ ಸಿಂಧುರೇಂದ್ರಂ
ತನ್ನ ಸಂಕಲೆಯಂ ಪಱಿದು ಮದ
ದಿನ್ನಿವಾರಿಸುತಿರ್ಪ ಬಲು ಮಾವತಿಗರಂ ಕೆಡಪಿ
ತನ್ನ ನೆಳಲಿಗೆ ತಾನೆ ಮುನಿವುತ
ತನ್ನ ತಾನಱಿಯದೆ ಮದೋದ್ಧತ
ದಿನ್ನೆರವಿಗಳನೋಡಿಸುತ್ತುಱಿ[೫] ಕೊಲುತ ಮನುಜರನು ೨೯

ವೀ[೬]ರಕೋಪಾಟೋಪದಿಂ ಮದ
ವಾರಣಂ ಬರೆ ಕಾಣುತಂ ಬಾ
ಹೂರ ಬೊಮ್ಮಯ್ಯಂ ಬಗೆಯದಂಜದೆ ತೊಲಗದಿಂತು
ದಾರಿಗೊಂಡೆಯ್ತರಲದುಗ್ರಾ
ಕಾರದಿಂ ಮೇಲ್ಬರಿಯೆ ಹೋ ಹೋ
ಬಾರದಿರು ಕೆಡೆಕೆಡೆಯೆನುತ್ತುಚ್ಚಾಟನಂಗೆಯ್ದು ೩೦

೧–೨ ಖಾಣ (ಧ, ಸ); ೩–೪ ಮೆಯ್ಸಿದ (ಥ, ಪ). ೫ ಟಕ (ಧ, ಥ, ಪ). ೬ ಘೋ (ಧ, ಸ).

CC-0. Jangamwadi Math Collection. Digitized by eGangotri

[೧]ಸಡಿ[೨]ಫಡಾ ಎಂದೊದಱಿ ಕೈಕಾಲ್
ಕೊಡಹಿಕೊಳುತಂ ಹಿಂದ ಹಿಂದಕೆ
ಅಡಿಯಿಡುತ ಘೀಳಿಡುತ ಸುಂಡಿಲ ತಲೆಯೊಳೊಂದಿಸುತ
ನಡನಡುಗಿ ಮದದಾನೆ ತಟಿನಿಯ
ತಡೆಯೊಳಾಗಳೆ ಮಡಿದು ಕೆಡೆಯಲು
ಒಡನೆ ಮಾವತಿಗರು ಮಹೀಪತಿಗೆಯ್ದಿ ಹೇಳಿದರು ೩೧

ಮಂಡಲಾಧಿಪ ಕೇಳು ಮದವೇ
ದಂಡವದು ಸಂಕಲೆಯ ಮು[೩]ಱಿದು
ದ್ದಂಡದಿಂ ಪರಿತಪ್ಪೆಡೆಯೊಳೀ ಊರೊಳೊಬ್ಬಯ್ಯ
ಇಂಡೆದಂಡೆಯ ಹೂವನೊದವಿಸಿ
ಕೊಂಡು ಬರಲಾ [೪]ಭಕ್ತಿಪ[೫]ರನಂ
ಕಂಡು ರೌದ್ರೋದ್ರೇಕದಿಂದಲು ಪಿಡಿವ ಸಮಯದಲಿ ೩೨

ಬೆಚ್ಚದಗಲದೆ ಲೆಕ್ಕಿಸದೆ ಧೃತಿ
ಬಿಚ್ಚದತಿಬಳ ಬೊಮ್ಮಿದೇವಂ
ಹೆಚ್ಚಿ ಹೋ ಹೋ ನಿಲ್ಲು ನಿಲ್ಲೆಂದೆನುತ ಝಂಕಿಸಲು
ಕೆಚ್ಚು ಸಡಿಲಿ ಮನಂ ಕದಡಿ ಕಣ್
ಮುಚ್ಚಿ ಹಿಮ್ಮೆಟ್ಟುತ್ತ ಭಯದಿಂ
ಬೆಚ್ಚಿ ಮದಕರಿ ಕೆಡೆದು ಮಡಿಯಿತು ನದಿಯ ತೀರದಲಿ ೩೩

ಎಂದು ಪೇಳಲು ಕೇಳಿ ಮನದೊಳು
ನೊಂದು ಚಿಂತಿಸುತೇವೆನೇವೆಂ
ಮಂದಗಜವಾ ಅಯ್ಯನಂ ಪಾಯ್ದೆಂತು ಕಾಡಿದುದೊ
ಎಂದು ಭೂಭುಜನಂಜುತೊಯ್ಯನೆ
ಬಂದು ಭಕ್ತಂಗೆಱಗಿ ಮದಕರಿ
ಇಂದು ನಿಮಗಿದಿರಾಂತ ತಪ್ಪಂ ಸೈರಿಸುವುದೆಂದು ೩೪

೧–೨ ಪಡ (ಸ). ೩ ಪ (ಥ. ಧ. ನ. ಪ). ೪–೫ ಭಕ್ತವ (ನ).

CC-0. Jangamwadi Math Collection. Digitized by eGangotri

ಮತ್ತೆಯುಂ ಹೊಡವಡಲೊಡನೆ ಮುದ
ವೆತ್ತಿ ಕರುಣಾರಸದೊಳಗೆ ತೋ
ದೆತ್ತಿ [೧]ಭೂಭುಜನಂ ಪುರದ ಜನ[೨]ವಾಶ್ಚರ್ಯಬಡಲು[೩]
ಸತ್ತ ಮದವಾರಣಕೆ ಹರಣವ
ನಿತ್ತು ಬೊಮ್ಮಯ್ಯಂ ಮೆಚ್ಚಿದನಿಂ
ತುತ್ತಮನ ಮಚ್ಚಿಯೊಕ್ಕು ಭೂಪತಿ ಪುಣ್ಯತನುವಾದ ೩೫

ಇಂತೆಸೆವ ಭಕ್ತರ ಚರಿತೆಗಳ
ನಂತವುಂಟಿವರ್ನೆಸಲು ಭೂ
ಕಾಂತಬಿಜ್ಜಳ ಮಾರ್ಮಲೆತರಂ [೪]ಸಲೆ ಕೊಲುವರಂಜಿ[೫]
ಮುಂತೆ ಶರಣೆನಲಾಗ ಕಾಯ್ದುರು
ಕಂತುಮಥನನ ಭಕ್ತಿಪರರು ಮ
ಹಂತರವರುಂ ತಾನಿನಿತುವಂ ಹೇಳಲೇನಿನ್ನು ೩೬

ಆದಿಪುರುಷನಯೋನಿಸಂಭವ
ನಾದಿ [೬]ಕರ್ತುವು ತತ್ಪ[೭] ತತ್ಪರ
ನಾದಿ ಕಲಿಯುಗರುದ್ರನಲ್ಲದೆ ನರನೆ ಮಾಚಯ್ಯ
ಮೇದಿನೀಶ್ವರ ನೀ ಬದುಕಬೇ
ಕಾದಡಲ್ಲಿಗೆ ಹೋಗಿಯಾತನ
ಪಾದಪದ್ಮ[೮]ದ ಗತಿ[೯]ವಿಡಿದಿರಲ್ [೧೦]ಕಾಯ್ದು ನಿಮ್ಮುವನು ೩೭

ಕಜ್ಜವಿದು ತಾನೆಂದು ಬಸವಂ
ಬಿಜ್ಜವಿ[೧೧]ಸಿ ಜೇಳಲ್ಕೆ ರಾಯಂ
ಲಜ್ಜೆಯಂ ನಾಚಿಕೆಯನುಳಿದಾಗಲಿ ಎನುತ ಬಂದು
ತಜ್ಜನರು ಶಿಷ್ಯರುಗಳಂ ವಿ
ದ್ವಜ್ಜನರು ಮಂತ್ರಿಗಳು ಸಹಿತಂ
ಬಿಜ್ಜಳಂ ಸಾಷ್ಟಾಂಗವೆಱಗಿರಲ್ಕೈಸು ದೂರದಲಿ ೩೮

೧–೧ ಭೂಜನವೆಲ್ಲರುಗಳಾಶ್ಚರ್ಯರಾಗಿರಲು (ಧ. ಘ. ಪ). ೨–೨ ಮಚ್ಚರಿಯರಾಗಿರಲು (ಕ. ಚ. ಬ). ೪–೪ ಮರ್ದಿಸುವರಂಜಿ (ಧ). ೬–೭ ಗಾದಿ ಮಹತ್ಪ (ಸ). ೮–೮ ವ (ಥ. ಪ). ೧೦+ತಾ (ಥ. ಪ). ೧೧ ಬು (ಸ).

CC-0. Jangamwadi Math Collection. Digitized by eGangotri

ಸೈಗೆಡೆದು ೧ಜಗದೀ೨ಶನಿರುತಿರೆ
ಹೋಗಿ ಬಸವಂ ಮಾಜಿದೇವಂ
ಗಾಗ ವಂದಿಸಿ ಸದುವಿನಯಭಯಭಕ್ತಿಯುಕ್ತಿಯಲಿ
ರಾಗರಸವೆಸೆಯಲ್ಕೆ ಕೀರ್ತಿಸಿ
ಕೈಗಳಂ ಮುಗಿದುಬ್ಬಿ ಬಿನ್ನಹ
ವಾಗಿ ಇಂತೆಂದೊರೆದನಾ ಅಯ್ಯಂಗೆ ಭಂಡಾರಿ ೩೯

ಬೇಡವೆಂದು ನಿವಾರಿಸಲು ಮತಿ
ಗೇಡಿ ಛಲದಲಿ ಮೂಗನುಜಿ೩ ಹೋ
ಗಾಡಿ೩ದಂತ೪ಭಿಮಾನವಂ ನೀಗಿತ್ತ ಬರಲಂಜಿ
ಮಾಡಿದಪರಾಧಕ್ಕಭಯಮಂ
ಬೇಡಿಯಾಗಳು ತೊಡಗಿ ದೈನ್ಯಂ
ಮಾಡಿ ಸಾಷ್ಟಾಂಗ೩ದೊಳ೪ಜಿಗಿ ತಾನತ್ತಲಿರ್ದಪನು ೪೦

ಮೃಡಸಮಾನರು ನೀವು ಪಕ್ಷಿಗೆ
ತೊಡಲದೇತಕೆ ಪಾಶುಪತಮಂ
ಪೊಡವಿಪತಿಯೆನಲೇಸಱಿವನೀರೇಳು ಲೋಕದಲಿ
ತೊಡರ್ವರಾರ್ ನಿಮ್ಮಡಿಗಳೊಳು ಕೃಪೆ
೨ಯಿಡರಿ ಈ೪ ತಪ್ಪಂ ಕ್ಷಮಿಸಪೇ
ಳ್ಕೊಡೆಯ ಚಿತ್ತೈಸೆಂದಡಾಗಲಿ ಎನುತ ಮಾಚಯ್ಯ ೪೧

ಮಾನವೇಶನನಿಬ್ಬಿಸಲುವೇ
ಳ್ವಾ ನಿಮಿಷದೊಳು ಮುನ್ನಳಿದ ಮದ
ದಾನೆಯಟ್ಟೈಯ ಪೊಟ್ಟೈಯೆಲುಗಳನೊಂದಱಿಕೊಂದಱಿಲಿ
ದಾನಿ ಭಸಿತವನದಱಿ ಸಕಲ
ಸ್ಥಾನ ಸಂದಿಗಳಲ್ಲಿ ತಳಿತಳಿ
ದಾ ನರೇಂದ್ರನ ಗಂಧಸಿಂಧುರದಸುವನೊಸೆದಿತ್ತು ೪೨

೧–೨ ಭುವನೇ (ಸ); ಧರಣೀ (ಪ). ೩–೪ ತನ್ನ (ಧ). ೫–೬ ವನೆ (ಸ). ೭–೮ವಡೆಯಲೀ (ಥ, ಪ).

CC-0. Jangamwadi Math Collection. Digitized by eGangotri

ಮತ್ತೆಯುಂ ಮುನ್ನಿನ ದಿವಸವಿಂ[೨]
ದೆತ್ತಿಹಾಯ್ದಿದ ಹೆಣನುಮಂಬರ
ದತ್ತ[೧]ಲಿರ್ದುದು ಕಡೆಯಲಾಗಳೆ ಸಭೆ ನಡುಗಿ ಬೆದಱಿ[೨]
ಇತ್ತಲೀ ಮನುಜಂಗೆ ಜೀವವ
ನಿತ್ತ ಭೂಜನರೆಲ್ಲರುಂ ಹೊಗ
ಳುತ್ತ ನೋಡುತ್ತಿರಲನಘ ಮಡಿವಾಳ ಮಾಚಯ್ಯ ೪೫

ಪೊಂಗಿ ಗಗನಸ್ಥಳದೊಳಿಪ ವ
ಸ್ತ್ರಂಗಳಿಗೆ ಬೆನ್ನೊಡ್ಡಿ[೩] ಸಾಯುಳಿತ
ಭಂಗನೆಯ್ದಿದನಿಂತು ಬಸವಂ ಮಾಚಿತಂದೆಗಳ
ಪಿಂಗಡೆಯೊಳೊಲ್ಮೆಸುತಾ ಅ
ಯ್ಯಂಗಳಂ ತಾಂ[೪] ಮತಕೆ ಕಳುಪಿ ಕ
ರಂಗಳಂ ಮುಗಿದಕ್ಕಱಿಂ ಭಂಡಾರಿ ಎಯ್ತಂದ ೪೬

ಆಗಳರಸನುಮಾ ಸಮಸ್ತ ನಿ
ಯೋಗಮುಂ ಹಸ್ತಾಬ್ಜಮುಕುಳಿತ
ರಾಗಿ ಹೊಡವಡುತಿದು ವಿಚಿತ್ರವೆನುತ್ತಲಿ[೫]ಯ್ದಿದರು
ಆಗಳುಂ ಶಿವಗಣಸಪರ್ಯೋ
ದ್ಯೋಗ ನಿಶ್ಚಲಭಕ್ತಿ ನಿಷ್ಠಾ
ಯೋಗದಿಂ ಮಾಚಯ್ಯನೆಂದಿನ ಪರಿಯೊಳಿರುತಿರಲು ೪೭

ಬಳಿಕ ಕಲವು ದಿನಂಗಳಲಿ ಮನ
ವಲರಿ ಬಸವನದೊಂದು ಗೀತವ
ನೊಲಿದು ಬೆಸಸಲು ಕಲಿತು ಭಕ್ತರು ತಮ್ಮೆಡೆಗೆ ಬಂದು
ನಲಿದು ಪಾಡಲು ಮಾಚಿದೇವಂ
ಮುಳಿದು ಕೈಯಂ ಕವಿಯೊಳೊಂದಿಸಿ
ಕೊಳುತ ಏವ ಏವ ಎನುತ [೬]ತನಗಿದು ಯುಕ್ತಿ[೭]ಯೇ ಎನುತ ೪೮

೧–೨ನಾಗಿ ನೆಲಕ್ಕೆ ಕೆಡೆಯಲು ಸಭೆ ನಡುಗಿ ಕೆದಱಿ (ಕ, ಚ, ಧ, ಥ, ಪ, ಮ): ಲಿದ್ದು ನೆಲಕ್ಕೆ ದಿಮ್ಮನೆ ಕೆಡೆಯೆ ಸಭೆ ಬೆದಱಿ (ಬ). ೩ ಗ್ಗಿ (ಕ, ಚ, ಧ, ಥ, ಪ, ಬ, ಮ). ೪ ರು (ಥ, ಧ, ನ). ೫ ನಿಜ (ಮ). ೬ ವೈ (ಕ, ಚ, ಧ, ಥ, ಪ). ೭–೭ ತಾನಿದು ಭಕ್ತಿ (ಧ, ಬ). ತಾನಿದು ಯುಕ್ತಿ (ಕ, ಚ, ಥ, ಪ, ಮ).

CC-0. Jangamwadi Math Collection. Digitized by eGangotri

ಬಸವನೇಕವಿವೇಕಿಯಾದನು
ಹೊಸತೆನಗೆ ಕಲಿನಾಥ ೧ದು ಗ
ರ್ವಿಸಿದನಕಟಾ ದೀನರಂ ಮಾಡಿದನೆ ಜಂಗಮವ
ವಸುಧೆಯೊಳು ತಾನೀವವಂ ಗಡ
ಹಸನ೧ವೈ ನುಡಿ ಈ೨ ನುಡಿಯನಾ
ಲಿಸುವರೇ ಶಿವಭಕ್ತರುಗಳತಿ ದೋಷವಹ ದಲ್ಲ ೪೭

ಎಂದು ಕೋಡಗವಾದನೇಡಿಸ
ಲೆಂದು ಕಲಿತನು ತನ್ನ ಭಕ್ತಿಯ
ದೆಂದು ನಿಜವಹುದೆಲ್ಲಿಯದು ಭಾಷೆಗಳು ಗೀಷೆಗಳು
ನಿಂದು ಹಾಡಂ ಪಾಡದಿರಿ ನೀ
ವೆಂದುವೆಮ್ಮಯ ಮುಂದೆನುತ ಮುಳಿ
ಸಿಂದ ಕೋಪಿಸಿ ಕಾಯಕಕೆ ಮಾಚಯ್ಯನೆಯ್ತಂದ ೪೮

ಇನಿತು ವೃತ್ತಾಂತಂಗಳಂ ಕೇ
ಳ್ದನಿತಱಿೞಿಯೊಳು ನಡನಡುಗಿ ಬಸವಂ
ಮನಗದಡಿ ಎಡೆಯೆ೩ಡೆಗಿಳೆಯೊಳಪ್ಪಾಂಗವೆಱಿಗುತ್ತ
ಆನಘಭಕ್ತಸಹಾಯನಾಗುತ
ಘನ ಭಯದೊಳೆಯ್ತಂದು ವರಪದ
ವನರುಹದ್ವಯದೊತ್ತಿನಲಿ ಸೈಗೆಡೆದು ಭಂಡಾರಿ ೪೯

ಸಂತತಾಘಸಹಾಯಿಗನನ
ಶ್ರಾಂತದುರಹಂಕಾರಯುತನನ
ನಂತ ನಿರ್ವಕ್ರಾಪರಾಧಿಯನಧಿಕ ಕೋಪಿಯೆನು
ಶಾಂತ೪ದೂರ೫ನಲ್ಪಮತಿಯಂ
ದಾಂತರಹಿತನನಶುಚಿಯಂ ವಿ
ಭ್ರಾಂತನಂ ನಿರ್ಭಾಗ್ಯಜೂಡಾಮಣಿಯನವಗುಣಿಯ ೫೦

೧–೨ ದಾಯಿತ್ತೀ (ಥ, ಪ). ೩ ಗೆ (ಕ, ಚ, ಧ, ಥ, ನ, ಪ, ಬ, ಮ). ೪–೫ ರೂಪ (ಸ).

CC-0. Jangamwadi Math Collection. Digitized by eGangotri

ಊರ್ಜಿತಾಂಗವಿಕಾರಲೀಲನ
ವರ್ಜಿತಾಶಾಪಾಶಗತನನ
ನಿರ್ಜಿತೇಂದ್ರಿಯನಂ ಖಿಳಸನಜ್ಞಾನಸಂಚಿತನ
ವರ್ಜಿತಪ್ರಜ್ಞಾನಪರನಂ
ದುರ್ಜನಾತ್ಮನನನ್ಯತಭಾಷಾ
ಗರ್ಜಿತನನೆನ್ನಂ ಸಲಹು ಮದಗರ್ವಮಂ ಹರಿಸಿ ೫೧

ಭಾಳನಯನಪ್ರತಿಮ ಕರುಣಾ
ಲೋಲಮಾನಸ ನಾಲ್ಕು ಲಕ್ಷದ
ಮೇಲೆ ತೊಂಬತ್ತಾಱುಸಾವಿರ ಗೀತಸಂಕುಳವ
ಪೇಳಿದಪೆವಿದು ಬೆಟ್ಟವಂ ಕಂ
ಡೂಳಿಡುವುದಱಿ ಛಂದವಾಯ್ತೆ
ನ್ನಾಳುತನವೇಗೆಯ್ವೆ ನೀಂ ಕೈಕೊಳ್ವುದಿಲ್ಲಾಗಿ ೫೨

ಓವಿ ಓ ಎನದಿರ್ದಡೆಂತೆಲೆ
ದೇವ ಸಾಯೆನಲಾಗದೇ ಗುರು
ದೇವ ಸಂಗಮದೇವ ಎನುತತಿ ದೈನ್ಯವಚನದಲಿ
ಆವಗಂ ತನ್ನಾತ್ಮನಿಂದಾ
ಭಾವನತೆಯಿಂ ಬಿನ್ನವಿಸುತಿರ
ಲಾ ವಿಮಳ ಸುಜ್ಞಾನಿ ಕೇಳದ ಹಾಂಗೆ ಕೇಳುತ್ತ ೫೩

ಏಲವೊ ಆಧಮಾ ಕೊಬ್ಬಿದೆಯಲಾ
ಮಲಹರಾರ್ಚಕರಧಮರೇ ನೀ
ಬಲು ಧನಿಕನೇ ಬೇಳ್ಪರಿಲ್ಲದೆ ಹೇಂಗೆ ಬಡವಾದ್ಯೆ
ಭಲರೆ ಭಲರೇ ತ್ಯಾಗಿ ಯಾಚಕ
ಕುಲಕೆ ನೀನೊಬ್ಬನೆಯಲಾ ಸರಿ
ಯೊಳರೆ ಜಾಗಗಳಿಂತು ನಿನಗೀರೇಳು ಭುವನದೊಳು ೫೪

೧ನ (ಥ, ಧ, ಪ). ೨ನಾ (ಥ, ಪ). ೩ನ (ಸ). ೪–೫ ಕೊಂಬು (ಥ, ಧ, ಪ). ೬–೭ ಲೋಕ (ಸ).

CC-0. Jangamwadi Math Collection. Digitized by eGangotri

ವಿನನೆಂಬೆನು ಬಸವ ನೀನೇ
ವಾನೆಮಱಿಗಳು ಬಡ ಕುಮರೆಗಳ
ನೂ೧ನ ಸತಿಯರು ವರುಣ ಪೃಕ್ತಿಕೆ ಕೆಂಪಿನಱಿವಿಗಳು
ತಾನಿವೆಲ್ಲಂ ಸ೨ರಕೆ ಶರಣವಿ
ತಾನಕಿತ್ತಲು ನೋಡು ಎನ್ನ ಮ
ಹಾನುಭಾವರ ಬಡತನದಿರವ ೩ನಗೆ೪ ತೋಱಿಪೆನು ೫೫

ಅವಕೊ ಎನುತಂ ಬಿಲ್ಲಲೊಡ೬ನಾ
ಪ್ರವಿಮಲ ಕರಣದಕ೭ ಕಣಂಗಳು
ನವ ಮರಕತಮಣಿ ಪ್ರವಾಳಕ ಪಪ್ರ ವೈಡೂರ್ಯ
ನವಕ ಮೌಕ್ತಿಕ ಪುಷ್ಯರಾಗಾ
ದಿವಿಲಸಿತ ರತ್ನಾದ್ರಿಗಳವೊಲು
ತವೆ ಬೆಳಗುತಿರಲಾಗಿ ಸೂರ್ಯನ ದೀಪ್ತಿ ಮಸುಳಿ೮ಸಲು೯ ೫೭

ಅತ್ತಲೆಲ್ಲಾ ಪುರಜನಂಗಳ
ಮೊತ್ತವದ್ಭುತಚಿತ್ತರಾಗುತ
ಲತ್ತ ಬಿಜ್ಜಳನೊಡನೆ ತಾವೆಯ್ತಂದು ನೋಡುತಿರೆ
ಉತ್ತಮಂ ಮಾಚಿಯ್ಯನುನ್ನತಿ
ವೆತ್ತನಾ ಪ್ರಮಥ ಪ್ರಸಾದಾ
ಯತ್ತ ನವ್ಯಪ್ರಸವವೃಷ್ಟಿಯು ಮೇಲೆ ಸುರಿವುತಿರೆ ೫೮

ಸಾಂಗದಿಂ ಬಸವನನಭೀಷ್ಟ ಫ
ಲಂಗಳಂ ತಣಿಸಲ್ಕೆ ಬಂದು ಸಿ
ತಾಂಗನರ್ಚಿತವಾಗಲಂತೊಪ್ಪಿದುದು ಜಂಗಮವು
ಮಂಗಳದ ಲಿಂಗಾವತಾರರ
ಸಂಗದಿಂ ಮಡಿವಳನ ಭಕ್ತಿಸು
ರಂಗಮಹಿಮೆಯನಱಿಯಲಾಱಿದೆ ಪಲವು ರೂಪುಗಳ ೫೯

---

೧ ಮಾ (ಥ. ಧ. ಪ). ೨ಶ (ಸ). ೩–೪ನೀಗ (ಸ). ೫–೬ನೆ ನೆಗವ ಸದಮಳೊಡಾ (ಥ. ಧ. ಪ). ೭–೮ಸಿತು (ಧ. ಸ).

CC-0. Jangamwadi Math Collection. Digitized by eGangotri

ಧರಿಸಿದವೊಲಾ ಜಂಗಮಸಭಾಂ
ತರದೊಳೊದವಿದ ರತ್ನ ರತ್ನಾ
ಕರದ ಶಿವಭಕ್ತಾವಳಿಯ[೧] ಭಂಡಾರಿ ನಾನೆ ಕಣಾ
ನಿರುತವೆಂದೆನಲಾ ಬಸವನಾ
ಶರಣ ಮಾಚಯ್ಯನ ನಿಜ ಶ್ರೀ
ಚರಣಕಮಲಕ್ಕೆಱಗಿ ಮುನ್ನವೆ ಸಾರ್ದು ಕೀರ್ತಿಸಲು ೫೯

ಘರ್ಮಜಲವುಗೆ ಶರಣುಬೇಡುತ
ಕೂರ್ಮ ಮಿಗೆ ನಿಮ್ಮಯ ಮಪತ್ಸದ
ಪೆರ್ಮೆಯಂ ನೋಡಲ್ಕೆ ನಾನೇತಱಿವನಸಮಾನ
ನಿರ್ಮಲಂ ನೀಂ ದುರ್ಮಲಂ ನಾಂ
ಧರ್ಮಿ ನೀಂ ನಿರ್ಧರ್ಮಿ ನಾಂ ನಿಃ
ಕರ್ಮಿ ನೀಂ ದುಷ್ಕರ್ಮಿ ನಾಂ ನೀಂ ಪಶುಪ ನಾಂ ಪಶುವು ೬೦

ನೀವೊಡೆಯ ನಾನಾಳು ಸುಚಿದನು
ಭಾವಿ ನೀವು ಕುಚಿತ್ತ ನಾಂ ಗುರು
ನೀವು ಶಿಶುವಾನುತ್ತಮಂ ನೀವಧಮನಾನಯ್ಯ
ನೀವನವರತದಾನಿ ನಾಂ ಕೃಪ
ಣಾವತಾರನು ನೀವು ಭಕ್ತಿಗೆ
ಜೀವವಾಂ ನಿಜ ಭಕ್ತಿಹೀನನು ದೇವ ಸಂಗಯ್ಯ ೬೧

ಎಣಿಸಲಿಂತಹ ದುರ್ಗುಣಂಗಳ
ಕಣೆಯೆನಿಸಿದೆನ್ನಾತ್ಮದೊಳು ಸ
ದ್ಗುಣವನಱಿಸಿದಡುಂಟೆ ಗರ್ವಪ್ರಾಪ್ತನಾನಿಂತು
ಮಣೆಯ[೨]ದೇನು[೩]ವನಪಹರಿಸಿ ನಿಜ
ಗುಣಸಮೂಹದೊಳುದ್ಧರಿಸು ಕಾ
ರುಣ ಪುರುಷ ಸರ್ವಜ್ಞ ಭಕ್ತ[೪]ವರೇಣ್ಯ[೫] ನೀವೆನ್ನ ೬೨

೧ಗೆ (ಥ). ೨–೩ ದೆನ್ನು (ಥ, ಧ, ನ, ಪ). ೪–೫ ಧುರೀಣ (ಥ, ಸ, ನ).

CC-0. Jangamwadi Math Collection. Digitized by eGangotri

ಶೀತಶತಸಹಸ್ರಾಪರಾಧ
ಪ್ರತತಿಯಂ ಸೈರಿಸಿ ಸಲಹು ಶಾ
ಶ್ವತಮಹಿತ ಮಹಿಮಾಢ್ಯ ಎನುತಿಹ ಬಸವಮಂತ್ರಿಯನು
ಸ್ಮಿತಮುಖಾಂಬುಜನಾಗುತಂ ಹರು
ಷಿತದೊಳೊಡನೊಡನಪ್ಪಿ ಕರುಣಾ
ಮೃತರಸದೊಳೋಲಾಡಿಸಲು ಮಾಹೇಶ್ವರರು ನಲಿದು ೬೫

ಪರಿಕಿಪಡೆ ಕೋಪ ಪ್ರಸಾದವಿ
ವೆರಡು ಉಂಟಲ್ಲಾ ಶಿವನೊಳುಂ
ಧರೆಯೊಳೊಮ್ಮನ ಧಾನ್ಯಕಾದಡೆ ಮಾಣಿಗೊಂಬವರು
ಹರವಿಯಂ ಬಾಚಿಸಿಯಲಾ ಸ್ವೀ
ಕರಿಸುವರು ಇವಱಿಂದಮೇಂ ಭೃ
ತ್ಯರನೊಡೆಯರೊರೆದೊರೆದಲಾ ಕೈಕೊಂಬರಂತಾಗಿ ೬೬

ಅದಱಿ ಮಲಿನಂ ಹೋಗಲೆಂದ
ಲ್ಲದೆ ಮುನಿದಪನೆ ಸೀರೆಗಸಗನು
ಇದು ನಿಮಿತ್ತಂ ಬಸವನಂ ದಟ್ಟಿಸುತ ಮಾಚಯ್ಯ
ಸದಮಳತ್ವಮನೊಂದಿಸಿದನುಡು
ಗದೆ ಪಲವು ಸೂಳ್ ಕನಕದದು ಕಾ
ಸಿದಡೆ ಮಿಗೆ ಮಿಗೆ ಬಣ್ಣವಗ್ಗಳವಾಗಿ ತೋರ್ಪುದಲಾ ೬೭

ತಡೆಯದಿನಿತಿನಿತಾಗಲಿಕ್ಷುವ
ಕಡಿದಡಗ್ಗದ ಮಧುರವಾಗದೆ
ಇಡಿದು ಕರಗಸದಿಂದ ಕೊಚ್ಚಿದಡೆ ಚಂದನವ್ರಮವು
ಒಡನೆ ಕಡುಗಂಪಹುದಲಾ ಕೈ
ವಿಡಿದು ಮಡಿವಳನೊರೆದು ನೋಡಲು
ಬಿಡದೆ ಬಸವನ ಭಕ್ತಿ ತುದಿಮುಟ್ಟಿಪ್ಪುದಿಂದೆಲ್ಲಾ ೬೮

---

೧ ಆ (ಸ). ೨–೩ ಸಿನಿಸಾ (ನ, ಸ). ೪ ಪಿ (ಕ, ಚ, ಥ, ದ, ಬ). ೫–೬ ದಂತಾಗಿ (ಥ, ಬ); ದಿಂದಿನೊಳು (ನ).

CC-0. Jangamwadi Math Collection. Digitized by eGangotri

ಎನುತ ಭಕ್ತರು ಕೀರ್ತಿಸುತ್ತಿರೆ
ಮನದೊಳತಿಭಯಕಂಪಿತದಿ ಕರ
ವನಜಮುಕುಳಿತನಾದ ಬಸವಕುಮಾರನಂ ನೋಡಿ
ಅನಘ ಮಾಚಿಯ್ಯಂಗಳೆಂದರ
ವನಿಯೊಳುಬ್ಬಿ ಆಹಂಕರಿಸಿದಡೆ
ಘನವಹುದೆ [೧]ದೃಢ[೨]ಭಕ್ತಿ ಕೇಳು ಪ್ರಭಾತರೊಳಗಱಿಯೆ ೬೭

ಆಂತು ಸಂಧಿ ೨೧ಕ್ಕಂ ಪದಗಳು ೧೧೯೧ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಮೃಡ (ಸ).

CC-0. Jangamwadi Math Collection. Digitized by eGangotri

ಸಂಧಿ : ೨೨

*

ಸೂಚನೆ : ಭಕ್ತಿಮದದಲಿ ನುಡಿದ ಬಸವನ
ಭಕ್ತಿಯಲ್ಲಿಂವಾದಿ ಭಕ್ತರ
ಭಕ್ತಿದೃಷ್ಟಂಗಳನರುಹಿ ಹೇಳಿದನು ಮಾಚಯ್ಯ

ಧರೆಯೊಳೊಪ್ಪುವ ಜೆಡೆಯಶಂಕರ
ವರ ಮಹಾಸ್ಥಾನದೊಳಮಿತ ಯಶ
ನರಿಭಯಂಕರನೆನಿಪ ಶಂಕರದಾಸಿಮಯ್ಯಗಳು
ಮರಣ ಜನ್ಮ ಜರಾ ರುಜೋನ್ಮದ
ಹರಣ ಕಾರಣಭರಿತನಮಳ
ಸ್ಫುರಿತ ಸಚಿದಾನಂದ ಸೌಖ್ಯವಪೀಕೃತಾತ್ಮಕನು ೧

ಕಾಲಕರ್ಮ ಮಹೀಂದ್ರಜಾಲ ವಿ
ಲೋಲ ನಿರ್ಮೂಲನನಹಿತಕುಲ
ಖೇಳನಂ ಪರದೈವಕೋಳಾಹಳ ಕಳಾಶಾಲಿ
ಕಾಲಭೀಕರರುದ್ರನತ್ಯಾ
ಭೀಳ ವಿಕ್ರಮ ವೀರಭದ್ರ
ಸ್ಥೂಲ ದೀರ್ಘ ವಿಶಾಲ ಚಂಡಕರಾಳ ಭುಜದಂಡ ೨

---

* ರಾಗ : ಕನ್ನಡಗೌಳ (ಆ, ಡಾ, ಥ, ಧ, ಮ): ಕನ್ನಡ ಕಾಂಬೋಧಿ (ಚಿ): ಘೆಂಟ್ಟಿ ಧನ್ಯಾಸಿ (ತ).

CC-0. Jangamwadi Math Collection. Digitized by eGangotri

ಮಂಡಿತಾತರ್ಕ್ಯಪ್ರತಾಪನ
ಖಂಡಿತೋದ್ಧಾರನು ಭವದ ತಲೆ
ಗೊಂಡ ಗಂಡನೆನಲ್ಕೆ ವಿಖ್ಯಾತ ಸುಮಹಿಮೆಯಿಂದ
ದಂಡಿಯೊಳ್ ಪ್ರಚ್ಛನ್ನವೇಷದ
ಖಂಡ ಪರಶುವನಲ್ ಮೆಱೆದಿಮ ಕೈ
ಕೊಂಡು ಕೌದಿಗಳಂ ಹೊಲಿವ ಕಾಯಕವ ತನಗಾಗಿ ೩

ಆದಱಿ ವಿಕ್ರಯದಿಂದ ಧಾನ್ಯವ
ನೊದವಿಸಿವಡದು ನಿಕ್ಕಲುಂ ನೋ
ಡಿದಡೆ ಹೆಚ್ಚವು ಕುಂದವೀ ತೆಱದ್ಯೆದು ಮಾನದಲಿ
ಮುದವಲರಿ ಜಂಗಮವಿತಾನಕೆ
ತದುಚಿತಾರಾಧನೆಗಳಂ ಮಾ
ಣದೆ ಸಲಿಸುತಿಂತೊಪ್ಪಿ ಶಂಕರದಾಸಿಯಿರುತಿರಲು ೪

ಆ ಸಮಯದಲಿ ದಾಸಿ ಶಂಕರ
ದಾಸಿಮಯ್ಯನ ನೋಡಲೆಂದು
ಲ್ಲಾಸದಿಂ ಬಂದವರಡಿಗೆ ಹೊಡವಂಟು ವಿನಯದಲಿ
ಲೇಸೆನಿಸಿದನುಭಾಪಸುಖಿಗೋ
ಷ್ಠೀಸರಸದಿಂದಿರ್ದು ತನ್ನ ನಿ
ವಾಸಕೆಯ್ತಂದುಮ್ಮಳಿಸಿ ತಾನತಿ ಧನಿಕನಂತೆ ೫

ನಿತು ಲಿಂಗಸದರ್ಥನಾಗಿಯು
ಘನ ದರಿದ್ರತೆಯಾದುದಯ್ಯೋ
ದನಿಯೊಳಗೆ ನೋಡಲು ತವುಡು ನೊಣವಿಂಗೆಱಿಗಲಿಲ್ಲ
ಆನಘ ದಾಸಿಗೆ ಮಾಡದೆನ್ನಯ
ವಿನಯ ಭಕ್ತಿಯದೆಂದಿಗಿನ್ನೆಂ
ದೆನುತ ಜೇಡರ ದಾಸಿಮಯ್ಯನು ದುಗ್ಗಳಿಗೆ ಹೇಳಿ ೬

CC-0. Jangamwadi Math Collection. Digitized by eGangotri

ಒಂದು ಹೆಡಗೆಯ ಬತ್ತವಂ ಧರ
ದಿಂದ ಕಳುಹಲು ನೋಡಿ ಮುಖಿದಲಿ
ಮಂದಹಾಸಂ ಮೊಳೆಯೆ ಶಂಕರದಾಸಿಯಿಂತೆಂದಂ
ಇಂದಲಾ ದಾಸಯ್ಯನೆಮಗುಂ
ಟೆಂದಱಿದನೆಮ್ಮಡರುಗಳಿಗೀ
ಸೊಂದು ಬತ್ತವನೊಸೆದು ಕಳುಹಿದನಮಮ ಲೇಸಾಯ್ತು ೭

ಇತ್ತನಱಿವೆಯನಂದು ಬತ್ತಕೆ
ಬಿತ್ತವಂ ಕೊಟ್ಟಿಂದು ಧರೆಯೊಳು
ಮತ್ತೆ ಏನಂ ಬೇಡಿದಪನೋ ಕೊಡುವಡೆಮಗಿಲ್ಲ
ಚಿತ್ತದೊಳಗೆಮ್ಮಂ ಮಱಿಯದೀ
ಬತ್ತವಂ ಕಳುಹಿದುದು ಸಾಲದೆ
ಉತ್ತಮರ ಗುಣವಿಂತು ಕೊಡಲೇನುಂಟು ತನಗೆನುತ ೮

ಹಿಡಿದ ಹಿಡಿಯಿಂದೊಮ್ಮೆ ಹುಡಿಕಿದ
ಡೊಡನೆಯೊಪ್ಪಿಡಿಯೊಳಗಡಂಗಿತು
ಹೆಡಗೆ ತುಂಬಿದ ಬತ್ತವೆಲ್ಲವನಾಗ ತವನಿಧಿಯ
ಅಡಗಿಸಿದನಲ್ಲಿಯೆ ನಿಮಿಷದಲಿ
ಯಡರಿ ಸೂಸುವ ಬಹಳ ಸಂಪದ
ಉಡುಗಿಹೋದುದು ಧಾನ್ಯಮೌಷಧಕಿಲ್ಲದಂತಾಯ್ತು ೯

ಹಿರಿಯ ಕಣಜಗಳಲ್ಲಿಗಲ್ಲಿಗೆ
ಪರಕಿಸಲು ನೆಱಿ ಹಾಳುಬಿದ್ದವು
ಹರನ ಕೈಯಲು ಮುನ್ನ ದಾಸನು ಪಡೆದ ತವನಿಧಿಯ
ಶರಣ ಶಂಕರದಾಸಿ ತೆಗೆಯಲು
ಪರಿಭವಾದ್ಭುತ ಶೋಕಮಾನಸ
ಪರವಶದೊಳಿಹ ಪತಿಗೆ ದುಗ್ಗಳದೇವಿ ಹೇಳಿದಳು ೧೦

೧ಮ (ಸ). ೨ಸು (ಸ). ೩ಹಿ (ಸ). ೪–೫ದಪಸ (ನ, ಸ).

CC-0. Jangamwadi Math Collection. Digitized by eGangotri

ಇಂತು ನೀವುಬ್ಬರಿಸಿ ಉಳ್ಳವ
ನಂತೆ ಕಳುಹಿದೆ ಬತ್ತವಂ ಮದ
ದಂತಿಯೊಳು ದಂತಂಗಳಂ ತಾ ಪಿಡಿವ ಮಾನವನು
ಏಂತು ಬಾಳ್ವನು ಮಡಿವನಲ್ಲದೆ
ಕಂತುಹರನ ಸಮಾನವೆನಿಪ ಮ
ಹಂತರುಗಳಂತರವನಱಿಸಲು ಪ್ರಾಪ್ತಿಯೇ ನಿಮಗೆ ೧೧

ವಿವಿಧ ಜಂಗಮತುಷ್ಟಿಯಂ ಮಾ
ಡುವರ ಲಿಂಗಸದರ್ಥರಾಗಿ
ಪ್ಪವರ ಬಡತನವೆಂತಪುದು ಗೌರೀಶ್ವರಂ ಮತ್ತೆ
ಭುವನದೊಳಗಾ ಅಯ್ಯನಂ ಮಱಿ
ಸುವೆನೆನುತ ಶಿಸನ್ನದ್ಧನಾಗಿ
ಪ್ಪವನೊಸೆದು ನಿನಗಾವುದೀವೆಂ ಬೇಡು ಬೇಡೆನಲು ೧೨

ಅಸಮ ಶಂಕರದಾಸಿಮಯ್ಯನು
ನಸುನಗುತ ಒಡೆಯರುಗಳೊಡೆಯನೆ
ನಿಸಿ ಮದೀಶ್ವರ ನೀವೆ ವರ್ತಿಸಲಿನ್ನು ಬೇಱಿಸೊಂದು
ಹೊಸ ವರಂಗಳನರ್ಥಿಸುವೆನೇ
ಒಸೆದು ಮೇಣಿಂತೆನ್ನುವಂ ಕಾ
ಮಿಸದಿಹುದು ನಾಚಿಕೆಯಲಾ ನಿನಗೆಂಬಡವಧರಿಸು ೧೩

ರಾತ್ರೆಯುಂ ಪಗಲಹಗೆ ಸೂಜಿಗೆ
ಸೂತ್ರವೇಱಿಸುವಂತೆ ಎನ್ನಯ
ನೇತ್ರಯುಗ್ಮಕೆ ದೃಷ್ಟಿಗಳನೀಯಯ್ಯ ಸಾಕೆನಲು
ಮಿತ್ರವರದಂ ನಗುತ ಒಂದು ವಿ
ಚಿತ್ರ ಭಾಳಾಂಬಕವನೀಯಲು
ಗೋತ್ರಯನ ಕೈಯಿಂದ ಪಡೆದಾ ನಿಟಿಲನಯನವನು ೧೪

೧–೨ ಱಿಯ (ತ, ಧ, ನ, ಪ). ೩–೪ ಸಾನ್ನಿಧ್ಯ (ಅ, ಡಾ, ತ, ಧ, ನ, ಪ, ಮ).

CC-0. Jangamwadi Math Collection. Digitized by eGangotri

ಅಹಿತ ದೇವೋದ್ದಂಡ ದರ್ಪ
ಪ್ರಹರಣಾರ್ಥ ಸಮರ್ಥನಾಗುತ
ಬಹಳ ನಿರ ಸುರ ಗರ್ವಪರ್ವತ ಕುಲಿಶನಾಗುತ್ತ
ಗಹನ ಪರಸಮಯಪ್ರಚಯ ಮಂದ
ಗಹನದಹನ ಕೃಶಾನುವಾಗುತ
ಕುಹಕ ಕುಸುಮಶಯ ವಾದಗಜಪಂಚಾಸ್ಯನಾಗುತ್ತ ೧೫

ನಿಟಿಲತಟ ವಿಸ್ಫುಟಧ್ಯಗುತ್ಕಟ
ಚಟುಲಲಲಿಖಿ ಪಟುದೃಷ್ಟಿಪಾತಕೆ
ಕುಟಿಲ ದೈಪಂಗಳು ಛಿಟಿಲುಛಿಟಿಲೆನುತ ಬೇವುತ್ತ
ಪಟುಪಟನೆ ಸಲೆ ಬಿರಿವುತಂ ಮೇಣ್
ಛಟಛಟನೆ ಕಿಡಿಯಲ್ಕೆ ನೋಡುತ-
ಕಟಕಟೆನ್ನದೆ ದೈವವಂಬಾ ಪೆಸರ್ಗೆ ಮುನಿವುತ್ತ ೧೬

ಸಾಮದಿಂ ದೈವಾಳಿಯಂ ನಿ
ರ್ಧೂಮಧಾಮಂ ಮಾಡುತಿರೆ ಭಯ
ತಾಮಸದಿ[೨] ಕಿಱಿ[೩]ದುಳಿದ ದೇವರು ಕೆಟ್ಟು ಪರಿತಂದು
ಕ್ಷೇಮಮಂ ದಯಮಾಡೆನುತಲು
ದ್ದಾಮ [೪]ಶಿವಭಾವದಿ[೪] ಶರಣುವೊಗ
ಲಾ ಮಹಿಮನಾ ದೇವತೆಗಳಂ ಕಾಯ್ದು ಸಲಹುತ್ತ ೧೭

ಬೆಸಸುತಂ ತವ ಬಿಟ್ಟಿಯಂ ಮಾ
ಡಿಸಿಕೊಳುತ ಬಡಕೆಲಸಮಂ ಸಂ
ತಸದಿ ಮಾಡಿಸೆ ಮಾಡಿ ಬದುಕುವವೆನುತ ಸಂತತವು
ಮಸಣಿ ಶರಣನ ಮನೆಯ ಮುಂದಣ
ಕಸವನುಡುಗಲು ಕಾಳರಾತ್ರಿಯು
ಬಸವಳಿಯದಿರುಳಾಗೆ ಮಠವಂ ಬಳಸಿ ತೊಳಲುತಿರೆ ೧೮

೧ಪ (ಘ. ಪ). ೨ರು (ತ. ಥ. ನ). ೩–೩ ಸಂ. ಕವಿ (ಧ). ೪–೪ ಶುಭ್ರವೆಯು (ತ. ಥ. ನ).

CC-0. Jangamwadi Math Collection. Digitized by eGangotri

ದಿಟ್ಟಿಬಳ ಹರಿಮಾರಿ ಬತ್ತಪ
ಕೊಟ್ಟಣಂಗುಟ್ಟಿಲು ಭರವಸಂ
ಮುಟ್ಟಿ ಚಂಡಿಕೆಯಾ ಪಶುಗಳಂ ಕಾಯ್ದುಕೊಂಡಿರಲು
ಆಟ್ಟಡವಿಯೊಳಗೆಯ್ದಿ ಭೈರವ
ಕಟ್ಟಿಗೆಗಳಂ ತರುತಿರಲು ರತಿ
ಹುಟ್ಟಿ ಕೊಡೆವಿಡಿದೊಡನೆ ನಡೆಯೆ ಕಟಿಕದ ಮ್ಯಲಾರ ೧೯

ಸಹಜವಾ ಬಲ ಜೇಟಿಕಾಟಿಮೆ
ಕಹಳೆಯಂ ಪಿಡಿಯಲು ಸಮುದ್ಯ
ನ್ಮಹಿತ ಕೀರ್ತಿಗಳುಲಿಯೆ ಬೆಂತಱಿ ದೈವಮೆಂಬವವು
ವಹಿಲದಿಂದೊಂದೊಂದು ಕೆಲಸಕೆ
ವಿಹಿತವಾಗಲು ಮಾಡಿ ಿಭಜಿಿಸಲು
ಮಹಿಯೊಳಾ ಜಕ್ಕಿಯರು ದಾಸಿಯರಾಗಿ ವರ್ತಿಸಲು ೨೦

ಯೋಗಪೀಠಂಗಳವು ಪದಿನೆಂ
ಟಾಗಿ ದಾಸಿಗೆ ವರುಷ ವರುಷಕೆ
ಹೋಗಿ ವಂದಿಸಿ ಕಪ್ಪವಂ ತವೆ ತೆತ್ತು ಬದುಕುವವು
ಆ ಗಳುಂ ಮೆಱಿಸಿವಾ ಮಹಿಮನ ಮ
ಹಾಗರಿಮೆಯಂ ಕೇಳಿ ಮುಖದೊಳು
ರಾಗಿಸುತ ಜಗದೇಕ ಿಮಲ್ಲನಸಹ್ಯಭಾವದಲಿ ೨೧

ಹರಿಯ ಮದವಂ ಹರಿಸುವಂ ಗಡ
ಸರಸಿಜಾಸನ ಮುಖ್ಯ ದೇವರ
ನೊರಸುವಂ ಗಡ ಬಳಿಕ ಮಿಕ್ಕಿನ ಬಣಗು ದೈವಗಳ
ಪರಿಿಬವಿ ಿಸುವುದದೇನರಿದು ಪುರ
ಹರನ ಕೈಯಲಖಿಂಡ ಚಂಡ
ಸ್ಫುರಿತ ಭಾಳಾಭೀಳಲೋಚನಮಂ ಪಡೆದು ಮುಂದೆ ೨೨

೧–೨ಳು ಕಾಲ (ಸ). ೩–೪ಚರಿ (ಕ, ಚ, ತ, ಥ, ಧ, ನ, ಪ, ಬ, ಮ). ೫ ಈ (ಚ); ಬ (ನ). ೬ವ (ಸ). ೭–೮ಹರಿ (ಸ).

CC-0. Jangamwadi Math Collection. Digitized by eGangotri

ಆ ದಿವಿಜರಂ ಪೊಗಳ್ವುದದು ದಿಟ
ವಾದಡಂಜದೆ ಬಂದು ಮದ್ವಾ
ಮೋದರನ ಕಟ್ಟಿದಿರೊಳೀಕ್ಷಿಸಿ ಪ್ರೋದಡೆಯು ಸಾಕು
ಆದಿದೇವಂ ಕೊಟ್ಟ ನೇತ್ರದ
ಭೇದವಱಿಯಲು ಬಹುದೆನುತ ಪರ
ವಾದಿ ಗರ್ವಿತನಾಗಿ ಆ ಪಟ್ಟಣದ ಮಧ್ಯದಲಿ ೫೩

ಉಕ್ಕಿನಲಿ ವಿಷ್ಣುಪ್ರತಿಮೆಯಂ
ಬೆಕ್ಕಸಂಬಡೆ ನೋಡಿ ಮಾಡಿಯ
ದಕ್ಕೆ ಕೂಡಿದ ಪಂಚಲೋಹವನೆಱಿದುದಂ ನಿಲಿಸಿ
ತಕ್ಕ ಮಣಿಮಯ ಭೂಷಣಂಗಳ
ನಿಕ್ಕಿ ಪೂಜಿಸಿ ವಾದ್ಯಘೋಷಣ
ವಿಕ್ಕಿವುಲಿಯಲು ಪಗಲುಮಿರುಳುಂ ಭಜಿಸುತಿರಲಾಗಿ ೫೪

ಆ ಸಮರ್ಥತೆಯಱಿದು ಶಂಕರ
ದಾಸಿಮಯ್ಯಂ ಬಂದು ಪೇರು
ಲ್ಲಾಸಚಿತ್ತದೊಳಂಕಕಾಜಿನವೊಲು ಶರಣಿಸಲರೆ
ಆಸುರದಿ ಕಣ್ದೆಱಿದು ನೋಡ
ಲ್ಯಾಸಮಯದೊಳದೇವೊಗಳ್ವಿನಾ
ವಾಸುದೇವನ ರೂಪು ಜರಿ ಜರಿದೊಡೆದು ಪುಡಿಯಾಗೆ ೫೫

ಹರಿಯ ರೂಪಿಂಗೆಱಿದ ಲೋಹಂ
ಕರಗಿಯಿತ್ತಲು ಪದಕೆಱಿಗಬಹ
ಪರಿಯೊಳೆಯ್ತರೆ ವಿಷ್ಣುವಂ ನುಗ್ಗೊತ್ತಿ ಭಂಜಿಸಿದ
ಪರಸಮಯಿಗಳು ಪರೆದು ಸಭೆಯಾ
ತುರದಿ ಪರಿಯಲು ದಾಸಿಮಯ್ಯಂ
ಪಿರಿದು ಬಿರಿದಿನೊಳಿಂತು ವರ್ತಿಸಲೀ ನರರು ಪೊಗಳೆ ೫೬

೧–೨ಡಲು (ಕ, ಚ, ಥ, ಮ). ೩–೪ನಿರುತ (ಪು); ನಾಗ (ಚ); ಬಂದು (ಕ); ನಿರೆ (ನ). ೫ಗಿ (ಸ). ೬ಸ (ಥ). ೭–೮ಲಿತರರುಂ ಪೊಗಳೆ (ಚ. ಥ. ನ).

CC-0. Jangamwadi Math Collection. Digitized by eGangotri

ಆಜಿಯಿರೇ ಕೇಳ್ವಂದು ನೋಡಿಯು
ಆಜುಹಲೇತಕೆ ನಿನಗೆ ನಾನೀ
ಕಜಿಸಿಗೊರಳವಂಗಾದಡಂ ಕಾಯಲ್ಕುಶಕ್ಯವಲ
ನೆಜಿಸಿಯ ಭಕ್ತರೊಳನುಭವದೊಳಿರೆ
ನೆಜಿಸಿವಿ ಭಕ್ತಿಯು ಭಯವದೊಂದುಗು
ನೆಜಿಸಿಯಿ ಭಕ್ತರೊಳನುಭವದಿ ಭಯಭಕ್ತಿಗಳು ಕೆಡುಗು ೨೭

ಓದಲಿಕ್ಕಿದಡಿವ್ವ ಮತಿಯುಂ
ಹೋದ ಪರಿಯಾಯ್ತುಸುರಲೇಕ
ನ್ನಾ ದಯಾತ್ಮನನೆಯ್ದಿ ಶರಣಂಬೊಗುವಮೇಳಿನುತ
ನೋದವಜಿತೆದೆಗುಂದಿ ಕೆಂದಿ ಭ
ಯೋದಯಂ ಮಿಗಲಲ್ಲಿಗಲ್ಲಿಗೆ
ಮೇದಿನಿಯೊಳಪ್ಪಾಂಗವಜಿಗುತಲಿಬ್ಬರುಂ ಬಂದು ೩೮

ಜೇಯ ಕರುಣಾಕಾರ ಅಭಯವ
ನೀಯಲಾಗದೆ ಶರಣಮಾನಸ
ಶಯ್ಯ ಬುಧನುತ ನಿಮ್ಮ ಧರ್ಮದ ಕವಿಲೆಗಳನೆಮ್ಮ
ಹುಯ್ಯಲಂ ಕೇಳ್ ತೊತ್ತುಗೆಲಸಂ
ಗೆಯ್ಯಿವೇಳ್ವುದ್ಧರಿಸು ಲವಡಾ
ಸಯ್ಯ ದಿಕ್ಕುಂ ದೆಸೆಯು ಗತಿಯುಂ ನೀವೆ ನಮಗೆನುತ ೩೯

ಮತ್ತೆಯುಂ ಕೈಮುಗಿದು ಪೊಡಮಡ
ಲತ್ತಲೊಯ್ಯನೆ ನೋಡಿ ನಸುನಗು
ತೆತ್ತ ಹೋದಿರೆ ನೀವು ದಾಸಯ್ಯಗಳೆ ಶರಣಾರ್ಥಿ
ಉತ್ತಮರಲಾ ಕೊಡುವೆಡೆಗೆ ನಿ
ಮ್ಮೊತ್ತ ಬಹೆವೇ ನಾವು ಬಡವರು
ತೆತ್ತಿಗರು ನಮಗಾರೊಳರು ಮೇಣ್ ನೀವು ಧನಿಕರಲಾ ೪೦

೧ಸ (ಕ. ಚ. ಥ. ನ). ೨ಕುಂ (ಸ). ೩–೪ ಲಿತ್ತು (ತ. ಥ. ಧ. ನ. ಪ).

CC-0. Jangamwadi Math Collection. Digitized by eGangotri

ಇತ್ತ ಬಿಜಯಂಗೆಯ್ಯಿರೇ ನೀ
ವೆತ್ತ ಪಯಣವದಾವಿಡೆಗೆ ಹೋ
ಗುತ್ತ ಬಂದಿರಿ ಹರಹರಾ ನೀವೆಮ್ಮಿ ಮಱಿಯಿರಲಾ
ಬಿತ್ತಲಾ ಶಿವಭಕ್ತಿಗಿಂತಪ
ಚಿತ್ತವಿಂತಪ ಭೀತಿಯುನ್ನತಿ
ವೆತ್ತ ನಿರಹಂಕಾರವಾರಿಂಗುಂಟು ನಿಮ್ಮಂತೆ ೩೧

ಭಾಪುರೇ ಭಕ್ತರ ನಿಧಾನವೆ
ಭಾಪುರೇ ಬೇಡುವರ ಪರುಷವ
ಭಾಪುರೇ ದಾಸಯ್ಯ ಭಾಪುರೆ ಬಡವರಾಧಾರ
ಆಪತಿಗೆ ಬಂದೊದಗಿದೈ ತಂ
ದೈ ಪಣವನೊಂದೆರಡನಾದಡೆ
ಕೂಪರಾರ್ ನೀನಲ್ಲದೆಮಗಿತ್ತಡೆ ಬದುಕುವೆವಲಾ ೩೨

ಒಂದಱಿವೆಯಂ ಮಾಱಿ ಪಶುಪತಿ
ಗಂದು ಪಡೆದೊದವಿಸಿದ ದವಸಂ
ಪಿಹೆಂದವಹ ಕಣಜಂಗಳೊಳಗೇನಿಲ್ಲವೇ ನಿಮಗೆ
ಇಂದು ಪಿನುವ ನಮಗೆ ತಾರದೆ
ಬಂದೆ ಹೇರಾಳವ ಕಡವರಂ
ಬಂದುದಿಂದದು ತಾನೆತ್ತ ಹೋಯಿತು ಹೇಳು ದಾಸಯ್ಯ ೩೩

ಹಾರಲೇತಕೆ ಪೆಱರನಿನ್ನೀ
ಹಾರೆಯಂ ನೀಂ ಕೊಂಡು ಬಾರಾ
ತಾರ ವೀಸವ ಕಟ್ಟುವಲಿ ಬಿಡುವಲ್ಲಿ ಬಿದ್ದಿರ್ದಾ
ಭೂರಿಯಿಪ್ಪುದೊ ಈಯೆಡೆಯೊಳಿಂ
ತಾರಯಿದು ಅಗೆ ಅಗೆ ಎನುತ್ತ ಉ
ದಾರಿ ಶಂಕರದಾಸಿ ದಾಸಿಯು ಕೈಯಲಗೆಯಿಸಲು ೩೪

---

೧ ಯ್ವಿ (ಥ, ಧ, ಪ). ೨–೩ ವುದಕೆ (ಕ, ಚ, ಥ, ಧ, ಪ, ಬ). ೪ ಮ್ಮಂ (ತ, ಫ, ನ). ೫–೬ ನಿರ್ಗರ್ವತೆಯದಾರಿಂಗುಂಟು (ಕ, ಚ, ತ, ಥ, ಧ, ನ, ಪ, ಬ, ಮ); ಕುಂದದಿಹ (ತ, ನ). ೭–೧೦ ಹೊಂದ (ಧ, ಪ).

CC-0. Jangamwadi Math Collection. Digitized by eGangotri

[೧]ಜಂಗವಾ[೨]ಸ್ಥಾನದಲಿ ಮಿಸುನಿಯ
ಹೊಂಗಳೊಡನೊಡನುಕ್ಕಿ ಹೊಳಿವಡ
ಲಂಗಣದಲದ್ಭುತರಸಂ ಮಿಗೆ ಮೂಡುತಿರೆ ನೋಡಿ
ಪ್ರೊಂಗಿ ದಾಸಿಯು ದುಗ್ಗಳೆಯು ಸಾ
ಷ್ಟಾಂಗವೆಱಗಿಯೆ[೩] ನಮಿಸಿ ದಾಸ
ಯ್ಯಂಗಳಡಿಗಳ ಮೇಲೆ ಇಬ್ಬರು ಕೆಡೆದು [೪]ಬಿಡದಿರಲು[೫] ೩೫

ಮತ್ತೆ ನೂಲಿಗೆ ಮೊದಲು ಕೂಲಿಯ
ನಿತ್ತ ನೀರೆಯನೀಸಿಕೊಂಬಂ
ತತ್ತ ಸೇಲೆಯನಿತ್ತು ಪಡೆದೊವಸಿವ ಬತ್ತವನು
ಇತ್ತ ಕೋಡಂ ಸಲಿಸದೆಮಗಿ
ನ್ನೆತ್ತ ಹೋದಿಹಿರೆನ್ನ ಕೈಯಲೆ
ನುತ್ತ ಶಿವನಂ ತೆಗೆದುಕೊಳ್ಳಾ ಅಂತುಮಲ್ಲದೆಯು ೩೬

ತ[೬]ಡುಪನೊಂದಂ ನೆಯಿದುಕೊಟ್ಟಾ
ದಡೆ ಮೃಡನ ಕೈಯಿಂದಲಿನ್ನಂ
ಪಡೆಯದೇಂ ದಮಸವನು ಖಂಡುಗ ಹತ್ತು ಕೊಳಗವನು
ಆಡಿಗಡಿಗೆಯುಂಡುಟ್ಟವರ್ಗಳ
ಕೆಡೆಬಡಿದುಕೊಳ್ಳಿಮ್ಮಡಿಸಿ ಶಿವಂ
ಮೃ[೭]ಡಿಸಿ ಸಾಧುಗಳಿತ್ತ ಹರಕೆಗಳಿಂದಲೇನಹುದು ೩೭

ಕೇಳು ಬಡಭಕ್ತರುಗಳಡಿಗಳ
ಮೇಲೆ [೮]ಬಿದ್ದಡೆ[೯] ನಿಃಫಲಂ ಹೇ
ರಾಳ [೧೦]ಉಣಲುಡಲುಳ್ಳವರ ಕೊಡಲುಳ್ಳವರಿಗೆಱಗಿ[೧೦]
ಬಾಳು ನೀನೆಮ್ಮಡಿಗಳಂ ಬಿಡು
ಸಾಲವಿಲ್ಲೆಂದಡೆ ಬಿಡುವರೇ
ಹೇಳಲೇನೆವಗುಳ್ಳ ಬಡಪರಿಯಿಂದ ವಂಚಿಸದೆ ೩೮

೧–೨ ಜಂಗಮಾ (ಅ. ಡಾ. ಧ. ಪ, ಮ). ೩ ವಿ (ತ, ಥ, ಧ, ನ, ಪ). ೪–೫ ಬಿದ್ದಿರಲು (ಮ). ೬ ಬು (ಥ). ೭–೮ ಮೂಪ (ತ. ನ). ೯–೧೦ ಇದ್ದರೆ (ಮ). ೧೦–೧೨ ಉಣಲುಡಲುಂ ಕೊಡಲು ಬಿಡಲುಳ್ಳವರಿಗೆಜಿಗಿ (ಥ. ನ).

CC-0. Jangamwadi Math Collection. Digitized by eGangotri

ಈ ಮಿಸುಪ ಹೊಮ್ಮಣ್ಣಿನಾದಡೆ
ಕಾಮಿಪಡೆ ಕೆಲ ಹೇಱುಗಳನು
ದ್ದಾವಮಮತಿ ನೀಂ ಕೊಂಡು ಹೋಗೈ ಎನಲು ದಾಸಯ್ಯ
ಕೈಮುಗಿದು ನೀವಿಂತು ಬಿಸಸುವ
ರೇ ಮಹಾತ್ಮಾ ದಾನವಿಸ್ಮಯ
ತಾಮಸಾಂಧನನೆನ್ನನಪರಿಮಿತಾಪರಾಧಿಯನು ೪೯

ಪ್ರತಿಯಿಡಲುಬಾರದ ಮಹಾ ಗ
ರ್ವಿತಹೃದಯನಂ ಕಪಟಿನಂ ದು:
ಕೃತನನೆನ್ನತನನ್ನು ಸೈರಿಸಿ ತಪ್ಪುಗಳನೆನ್ನ
ಅತಿ ಕರುಣದಲಿ ನೋಡಿ ಭಕ್ತಿ
ಸ್ಥಿತಿಯೊಳಿರಿಸಿ ಸಮುದ್ಧರಿಸು ಸೂ
ನೃತವಚನ ನೀವೆನುತಭಯವಂ ಬೇಡಿ ಕೀರ್ತಿಸಲು ೫೦

ಆ ಸಮಯದೊಳಘಾರಿ ಶಂಕರ
ದಾಸಿ ಭಕ್ತರು ಹೊಗಳಿ ಜೇಡರ
ದಾಸಿಯಂ ದುಗ್ಗಳೆಯನೆತ್ತಿ ದಯಾಮೃತದ [೧]ಸೋನೆ[೨]
ಸೂಸುತಿರೆ ನೋಡಿ ಪ್ರಸಾದಿಸ
ಲೈಸಱಿಂ ಮಿಕ್ಕೆಂದಿನಿ[೩]ಂದಂ
ಲೇಸೆನಿಸಿ ತವನಿಧಿ ಸಮುನ್ನತಿವೆತ್ತು ಪಸರಿಸಿತು ೫೧

[೪]ಇದು ನಿಮಿತ್ತವಹಂಕರಿಸಿದಡೆ
ಸದಮಳೋತ್ತಮಭಕ್ತಿ ದೊರಕೊಳು
ವುದೆ ವಿಚಾರಿಸೆ ಭಕ್ತನೆಂಬಂಗಪ್ಪಮದವುಂಟೆ
ಹದುಳಿಗರು ದಾಸೋಹತನದಲಿ
ವಿದಿತ ಕಾಮಕ್ರೋಧಲೋಭಾ
ಸ್ಪದ ವಿರಹಿತರವರ್ಗಳಿರವಂ ಕೇಳು ಬಸವಣ್ಣಾ ೫೨

ಅಂತು ಸಂಧಿ ೨೨ಕ್ಕಂ ಪದಗಳು ೧೨೩೩ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಸೊನೆಯು (ಸ). ೩ ಗಿ (ಚ).

CC-0. Jangamwadi Math Collection. Digitized by eGangotri

ಸಂಧಿ : ೨೩

*

ಸೂಚನೆ : ಶಿಶುಮನಿತ್ತೆನು ತಾನೆನುತ ಗ
ರ್ವಿಸಿ ನುಡಿದ ಸಿರಿಯಾಳನಂ ನಾ
ಚಿಸಿ ತನಯನಂ ಕೊಂದ ನಿಂಬಿಯನೀಶ್ವರಂ ಮೆಚ್ಚಿದ

ನಿಂಬಿಯಕ್ಕನೆನಲ್ಕೆ ಶರಣ ಪ
ಡಾಂಬುರುಹಸೇವಾನಿರತೆ ನಿಟಿ
ಲಾಂಬಕಧ್ಯಾನಪ್ರಮತ್ತೆ ಸುಚಿತ್ತೆ ಜಂಗಮವ
ಸಿಂಬಿ ಸಂಸಾರ ಪ್ರಪಂಚಾ
ಡಂಬರಕ್ಷಯಕಾರಿ ಭಕ್ತನಿ
ತಂಬಿನೀಪ್ರಿಯೆ ಸಾರ ವೀರವ್ರತಭರಿತೆ ಚರಿತೆ ೧

ಶಿವನ ಭಕ್ತರ ಮನೆಗಳಿಗೆ ಅ
ಗ್ಘವಣಿಗಳನಡುಕುವಳು ನಂದನ
ನವರ ಪಶುಗಳನಾರಯಿದು ಕಾಯ್ವುತ್ತಿಪ್ಪನನುದಿನವು
ಸವಿನಯದೊಳೀ ಕಾಯಕೋದ್ಯೋ
ಗವ ತನಗೆ ನೆಲೆಯಾಗಿ ಜಂಗಮ
ಕವಿರತಂ ಮಾಡುತ ದಿನಂಗಳು ಸವೆವುತಿರಲಿತ್ತ ೨

---

೦ ರಾಗ : ಫಲಮಂಜರಿ (ಆ. ಪಾ. ಚ. ಧ); ಭೂಪಾಳಿ (ಮ); ದೇಶಿ (ತ. ಪ).

CC-0. Jangamwadi Math Collection. Digitized by eGangotri

ಕಂಚಿಯೊಳು ಸಿರಿಯಾಳನೆಂಬಂ
ಸಂಚಿತೋತ್ತಮ ಭಕ್ತಿಯುಕ್ತನ
ವಂಚಕತ್ವದಿ ನಿಚ್ಚ ಸಾವಿರ ಜಂಗಮಂಗಳಿಗೆ
ಪಂಚವಿಧಾಪಕ್ವಾನ್ನಪಾನಾ
ದ್ಯಂಚಿತಿಷ್ಟಾರ್ಥಂಗಳಂ ನಿಃ
ಸಂಚಲಿತ ಮತಿಯಿಂದೆ ನೀಡುತ ವರ್ತಿಸುತ್ತಿರಲು ೬

ಬಾಲಶಶಿಧರಕಪೌಳಿಯಾ ಸಿರಿ
ಯಾಳಸೆಟ್ಟಿಯ ಭಕ್ತಿಮಾನಸ
ದಾಳವಂ ನೋಡಲ್ಕಿ ಬಗೆದು ತಪಸ್ವಿವೇಷವನು
ತಾಳಿ ಬರುತಿರೆ ಜಂಗಮಾರ್ಥಾ
ಲೋಲದಿಂದಾ ಸೆಟ್ಟಿ ಮಸ್ತಕ
ಕೀಲಿತಾಮಳಹಸ್ತನಾಗಿ ಪದಾಂಬುಜಕ್ಕೆರಗಿ ೭

ಸ್ವಾಮಿ ವಿಜಯಂಗೆಯ್ದು ಸಾಕ್ಷಾತ್
ಸೋಮಶೇಖರ ನಿಮ್ಮವೊಮ್ಮನ
ನೇಮವಂ ಸಲೆ ಸಲಿಸಿ ಸಲಹೈ ಎನುತ ಬಿನ್ನೈಸೆ
ಆ ಮಹಾಪ್ರರುಷಂ ನಗುತ್ತನ
ಘಾ ಮದೀಯವ್ರತವನೀಗಳು
ಪ್ರೇಮಮುದಯಿಸಿ ಮಾಡಲಾಪಡೆ ಇದುವೆ ಸುಖವೆಮಗೆ ೮

ಎನುತ ಸಂತಸಮೊಂದಿ ಸದಯಾ
ತ್ಮನವೊಲಾ ಸಿರಿಯಾಳುವಂ ದಿ
ಕ್ಕನೆ ಲಸತ್ಕರುಣಾಮೃತದಿನಭಿಷೇಕವಂ ಮಾಡಿ
ಅನುಪಮವ್ರತವೊಂದು ನಮಗುಂ
ಟನಘ ಮಾಡಲುಬಾರದೆಂತಪ
ಜನವರೇಣ್ಯಂಗಾದಡಂ ನೀ ಮಾಡುವಡೆ ಮಾಡು ೯

೧–೨ ಭಕ್ಷಾ (ಸ). ೩–೪ ನಿಶ್ಚಂ (ಕ. ಚ. ತ. ಥ. ಧ. ನ. ಪ. ಬ). ೫–೬ ಹಿಮಕರ (ಪ. ಬ).

CC-0. Jangamwadi Math Collection. Digitized by eGangotri

ಮಾಂಸವಾಗಲೆವೇಳ್ಕುವಶ್ಯಂ
ಮಾಂಸಮುಂ ನರಮಾಂಸಮಲ್ಲಿಯು
[೧]ವಂಶ[೨]ವಾಕಾರಂ ಮಱಿಪ ಮದ್ವಂಶಜನೆ ಬೇಕು
[೩]ಮಾಂಸಹಿತನೆಮಗಾತನುಂ ದು
ರ್ಮಾಂಸತನುವಲ್ಲದ ಸುತನ ವಿ
ಧ್ವಂಸವಂ ಮಾಡಿಕ್ಕಿದಡೆಯಾ ಭೋಜನವ ಹಿತವು[೪] ೭

ಸಿರಿಯನಿಲ್ಲದ ಕಾಂತೆಯಾದಡೆ
ಸಿರಿಯಿಲ್ಲದ ಪುರುಷನಾದಡೆ
ತನಯನಿಲ್ಲದ ಮನೆಯದಾದಡೆ ಆಗಮೋಕ್ತಿಯಲಿ
ವನಗಪಥ್ಯವಪಥ್ಯವೀ ಭೋ
ಜನವಸಂಭವವಿದಕೆ ಮಾಡುವ
ಮನವಿದುಳ್ಳಡೆ ನಿನ್ನ ಜನ್ಮಂ ಸಫಲ[೫]ವಹುದೆಂದ[೬] ೮

ಮನುಜಮಾಂಸವನಿನ್ನು ನಾ ನೆರೆ
ಮನೆಗೆ ಬಿಲಿತರಹೋದಪೆನೆ ಆರಿ
ದೆನಿಪ ನಿಮ್ಮ ಮಹಾವ್ರತೋದ್ಯಾಪನವನೊಲಿದಿಂದು[೭]
ಸನಯದಿಂ ಮಾಳ್ಪೆಂ ಕ್ಷಣವನಿಂ
ತನಘ ಕೊಳ್ಳಿನುತಾ ಯತಿಯ ಪದ
ವನಜಯುಗಳಕ್ಕೆಱಗಿ ಆ ಅಯ್ಯನನೊಡಂಬಡಿಸಿ ೯

ಬದುಕಿದೆಂ ನಾನೆನುತ ಸೆಟ್ಟಿ ಸ
ಮುದಿತಮಾನಸನಾಗುತಂ ನಿಜ
ಸದನಕೆಯ್ತಂದಂಗನೆಗೆ ತತ್‌ಕಾರ್ಯದಂದವನು
ವಿದಿತ[೮]ವಾಗಿಯೆ[೯] ಮೆಲ್ಲನಱಿಹಲು
ಹೆದಱಿಲೇತಕೆ ನೀಪನುತ್ತಾ
ಸುದತಿ ಜಂಗಳೆ ಗಂಡನಂ ಸಂತೈಸಿ ನಿಮಿಷದೊಳು ೧೦

೧-೨ ಮಾಂಸ (ಚ). ೩-೪ ಮಾಂಸಹಿತವೆಮಗಾಸುತಂದು
ರ್ಮಾಂಸತನುವಾಗದವನಂ ವಿ
ಧ್ವಂಸವಂ ಮಾಡಿಕ್ಕಿದಂತಹ ಭೋಜನವೆ ಹಿತವು(ಕ.ಚ.ಥ.ಪ.ಬ)
ಹಿಂಸೆಯಲ್ಲಿಮಗಾಸುತಂ ದು.....(ಪ. ಬ. ಮ).
೫-೬ ವಾ ಎನುತ (ಕ, ಚ. ಬ. ಮ). ೭ ತು (ನ. ಪ). ೮-೯ ಮಾಗಲು (ಕ. ಚ. ತ. ಥ. ಪ. ಬ. ಮ); ವಹುದೆನಲು (ತ. ನ).

CC-0. Jangamwadi Math Collection. Digitized by eGangotri

ಜನನಿ ಕರೆಯವ ಮುನ್ನವೋದುವ
ಮನೆಗೆ ತಾಪಸನೆಯ್ದಿ ಚೀಲಾ
ಳನನತಿ ಪ್ರಿಯದಿಂದ ನೋಡುತ್ತೊಯ್ಯನಿಂತೆಂದ
ತನಯ ಕೇಳಕಟಕ್ಕಟಾ ನಿಜ
ಜನಕನೀಗಳೆ ಒಬ್ಬ ರಕ್ಕಸ
ಮುನಿಗೆ ನಿನ್ನಂ ವಧಿಸಿ ಬಿಂಡವನಿಕ್ಕಿದಪನೆಂದ ೧೦

ಎತ್ತಲಾದಡೆ ಹೋಗಿಬಡಗಿರು
ಸತ್ತು ಪಡೆವಪವರ್ಗವೇತಕೆ
ನುತ್ತಮಿಹ ತಾಪಸನ ಬಿಟ್ಟಿನುಡಿಗಳಿಗೆ ಬಾಲಕನು
ಇತ್ತರವ ಕರ್ಣಂಗಳೋಕರಿ
ಸುತ್ತ ತಪ್ಪಿಲ್ಲಾಳನೆಂದನು
ಉತ್ತಮರಿಗಿದು ಗುಣವೆ ನೀವೀ ಮಾತನಾಡಲ್ಕೆ ೧೧

ಹಿರಿದು ಭಯಮಂ ತೋಱಿ ಭೀತಿಯ
ನೊರೆದಡಿದಕಂಜುವನೆ ನಾನೀ
ಹರೆಯವೇ ಕಿಱಿದಲ್ಲದೇ ಎನ್ನಾತ್ಮ ಕಿಱಿದಲ್ಲ
ಗುರುಜನನಿಯರ ಮಾತುಗಳನಾ
ದರಿಸಿ ಮನ್ನಿಸದಿದ್ದೆನಾದಡೆ
ಹಿರಿಯ ಕೇಳಿಹ ಪರವೆರಡು ಎನಗುಂಟೆ ನೀನಱಿಯ ೧೨

ತ್ರಿಶತಸಂಯುತಷಷ್ಟಿ ರುಜೆಗಳ
ವಶದಿ ನೊಂದುಮ್ಮಳಿಸುವದಱಿಂ
ಏಶುವಲಾ ನಾನೆನ್ನದುತ್ತಮ ತಪಸಿಗೆನ್ನೊಡಲ
ಆಶನವಾಗಿ ಕೃತಾರ್ಥನಪ್ಪೆನು
ಸಲಿವನಾಣೆ ಯತೀಂದ್ರ ಕೇಳ್ ಕ
ರ್ಕಶವೆನಗೆ ನೀ ನುಡಿವ ನುಡಿಗಳು ಸಾಕು ಹೋಗಯ್ಯ ೧೩

CC-0. Jangamwadi Math Collection. Digitized by eGangotri

ತಂದೆ ತಾಯ್ಗಳ ಮಾತುಗಳನಾ
ನೆಂದುವುಂ ಧಿಕ್ಕರಿಸಲಮ್ಮನು
ಒಂದುವಜಿಯೆನವರ್ಗಳಿತ್ತ್ರಿಪದೇಶವಂ ಮಜಿಕೆಯಿ
ಎಂದ ಚೀಲಾಳನ ನುಡಿಗಳಿಗ
ಮಂದ ದೃಢಚಿತ್ತಕ್ಕೆ ವಿಸ್ಮಯ
ವೊಂದಿ ನುತಿಸುತ ತಪಸಿಯೆಯ್ದಿದನಿತ್ತಲ್ಕೈಸಱಿಲಿ ೧೫

ಹೊಂಗುತೆಯ್ತಂದೊಂದುತಿಹ ತ
ನ್ನಂಗಜನನೊಡಗೊಂಡು ಬಂದತಿ
ಮಂಗಳದ ದಿನವಿಂದು ನಿಜಮಂದಿರದೊಳೆಂದೆನುತ
ಸಾಂಗಮಾಗಿಲು ವಧ್ಯಶೃಂಗಾ
ರಂಗಳಿಂದವಲಂಕರಿಸಿ ಮೋ
ಕ್ಷಾಂಗನಾಪೇಕ್ಷಿತನನಾ ಶೀಲಾಳನಂ ನೋಡಿ ೧೬

ಕಂಪ ಕೇಳ್ ನಿಮ್ಮಯ್ಯನುಂ ನಾಂ
ಹಿಂದೆ ಸಂಸಾರಾನುಭವದೊಳು
ದಂದುಗದೊಳಿರಲೆಮ್ಮ ಪುಣ್ಯದಲೊಬ್ಬ ತಾಪಸನು
ಬಂದು ಕಲ್ಪಿತ ಪಿಪಿತಳಿಭಿಕ್ಷವ
ನೊಂದನರ್ಥಿಸಿ ಬೇಡಲಾಗಲಿ
ಎಂದವರ್ಗಂ ಕ್ಷಣವನಿತ್ತೆನೆನಲ್ಕೆ ಸುತನೆಂದ ೧೭

ಧನ್ಯನಾದೆಂ ಪುಣ್ಯನಾದೆಂ
ಮಾನ್ಯನಾದೆಂ ಸರ್ವರೊಳಗೆ ಪ
ವಾನ್ಯನಾದೆನು ಯತಿವರಂಗಿಂದೆನ್ನುದಂ ಕೊಟ್ಟು
ದೈನ್ಯಭಾವವನಿನ್ನು ಬಿಡು ಸೌ
ಜನ್ಯನಿಧಿಯಾಯಿತು ನಿಮ್ಮ ಬಯಕೆ ಫ
ವಾನ್ಯಧೀಶನ ನಾಲ್ಕು ಮುಕ್ತಿಗಳಾದವೆಮಗೆನಲು ೧೮

೧–೨ ಸಲಜಿಯೆನ । ದೊಂದು ಮನದೊಳವರ್ಗಳಿತ್ತ್ರಿ... (ತ. ನ). ೩–೪ ಲು ವೇದ್ಯ (ತ): ಲು ವತ್ಸ (ಧ. ಪ): ಲು ವಸ್ತು (ಸ): ನವದ್ಯ (ಥ). ೫–೬ ಸಿರಿಯಾಳನಂ (ಮ). ೭–೮ ಶಾಖಿ (ಸ). ೯–೧೦ ಸಾಮಾನ (ಪ).

CC-0. Jangamwadi Math Collection. Digitized by eGangotri

ಆಪ್ತ ಕರುಣಿಗಳಹಗೆ ತಾಯುಂ
ಜೊಪ್ಪನುಂ ಬೋಧಿಸಿದರಿಂತೆ
ಮೃಪ್ಪ ಹಿಂದಂ ನೆನೆಯದಿರು ಕವಡದಿರು ಹೆದಱಿದಿರು
ಒಪ್ಪುಗೊಂಡಹನೀಶ್ವರಂ ನೀ
ನೊಪ್ಪದಿಂದ ನಮಃ ಶಿವಾಯ ಯೆ
ನಿಪ್ಪ ನುಡಿಯಂ ಮಱಿಯದಿರು ತುದಿಪದವಿ ನಿನಗೆನುತ ೧೯

ವಧ್ಯಚಿಹ್ನಗಳಿಂದೆಸದು ಸಾ
ನ್ನಿಧ್ಯದಲಿ ನಲಿವಾತ್ಮಜನ ಸದು
ಬುಧ್ಯನುಪತಿಗೆ ಮಚ್ಚಿ ಮಾತಾಪಿತರು ಹರುಷದಲಿ
ಸಾಧ್ಯವಾಯಿತು ಮುಕ್ತಿನಿಖಿಳಾ
ರಾಧ್ಯ ಶಿವಕೈಲಾಸದುರ್ಗದ
ಮಧ್ಯದಲ್ಲಿರಲಾದುದೆನುತಾ ಸ್ತುತ್ಯಮಾರಕನ ೨೦

ಕಂಡು ಮಱಿಗದೆ ಸೂನೆಗಾಱಿನ
ದಂಡಿಯಲಿ ಮಗನಂ ವಧಿಸಿ ಆ
ಮುಂಡವಂ ವಿಂಗಡಿಸಿ ತನು ಪ್ರಳಕಿಸುತ ಮನೆಯೊಳಗೆ
ಗಂಡಪೆಂಡಿರು [೧]ತತ್ಪಿಶಿತಮಂ[೨]
ವಿಂಡಿಸುತ ಶೋಧಿಸುತ ನೋಡುತ
ತಂಡ ತಂಡದ ನವ್ಯ ಶಾಕಂಗಳನೊಲಿದು ಮಾಡಿ ೨೧

ಕ್ಷಾರದಲಿ ಮುದ್ರಿಸಿ ಮಡದಿ ಜನ
ರಾರುವಱಿಯದ [೩]ಹಾಂಗೆ[೪] ರುದ್ರಾ
ಕಾರನಂ ಬಿಜಯಂಗೆಯಿಸಿ ತಂದವರ ಪದಯುಗವ
ನಾರಿ ವಾರಿಯನೆಱಿಯೆ ತೊಳೆದಾ
ಚಾರವಂತನು ಸೆಟ್ಟಿ ತತ್ಕರ
ಣಾರವಿಂದಾಂಬುಗಳನೀಂಟಿ ಸುಖಾಸನದೊಳಿರಿಸಿ ೨೨

೧ತ (ಅ. ಹಾ. ಮ). ೨ಂ (ಥ. ಧ. ಪ. ಸ). ೩–೪ಮುಟ್ಟಿ ಶಿರಮಂ (ನ): ತತ್ ಶಿರಮುಖಂ (ಆ ಡಾ); ಮುಟ್ಟಿ ಶಿರಮಂ (ತ. ನ). ೩–೪ ವೋಲು (ನ).

CC-0. Jangamwadi Math Collection. Digitized by eGangotri

ಚಂದನಾಕ್ಷತೆಯಿಂದವರ್ಚಿಸಿ
ಚಂದವರಳುಗಳಿಂದ ಪೂಜಿಸಿ
ತಂದು ಗಡಣಿಸಿ ಬೋನಮಂ ಹೊಡಪಂಟು ಕೈಮುಗಿದು
ಮುಂದೆ ಶಾಕಂಗಳೊಳಗಟ್ಟಿಸು
ತ್ತೊಂದನೊಂದಂ ವಿವರಿಸುತ್ತಾ
ವಂದದಿಂ ಕಾಣದೆ ಶಿರೋಮಾಂಸವನು ತಾಪಸನು ೨೩

ಬಳಿಕವರಿಗಿಂತೆಂದು ನುಡಿದನು
ತಲೆಯನೀಕ್ಷಿಸುತಾದಡಂ ತ
ಲ್ಲಲಿತ ತನಯನ ಮೇಲಣ ವ್ಯಾಮೋಹವುಳ್ಳುದಕೆ
ತಲೆಯನೀತಕೆ ಪೈತರಣುಗನ
ತಲೆಯಲಲ್ಲದೆ ನೀವು ಬದುಕಿರೆ
ಎಲೆ ಶಿರೋಮಾಂಸವದೆಮಗೆ ನೇಮಕ್ಕಿನಿತುಮಿಲ್ಲ ೨೪

ಆಗಮಾಡಿದ ಸುಕೃತವಂ ನೆಚಿ
ಚೀಗೆಯಾಗಲು ಬಗೆದೆ ಶಿವಶಿವ
ಆಗಮಂ 'ಸರ್ವಸ್ಯ ಗಾತ್ರ ಶಿರಃ ಪ್ರಧಾನ'ಮೆನೆ
ಆಗದೆಮಗೀ ಭೋಜನವನೆನ
ಲಾಗ ನಡನಡುಗುತ್ತಮಿಪ್ಪಿರು
ಕೈಗಳಂ ಮುಗಿದಿಂತು ಬೆಸಸುವರೇ ಮಹಾಪುರುಷ ೨೫

ಪೂತವಲ್ಲದ ಕೇಶವಟ್ಟ ಪ
ರೀತ ಶಾಕೋಪಹತಿಯೆಂಬೀ
ಮಾತಿಗಂಜಿಯೆ ತೊಲಗದಿರ್ದಡೆ ನಂದನನ [೧]ತಾಯಿ
ಆ ತತ್ಕ್ಷಣಮೊಯ್ದುದಂ ಸಂ
ಪ್ರೀತಿಯೊಳೆ ಮಾಡಿದಳು ಪಾಕವ
ನಾ ತರುಣಿಯಿನುತಾ ಶಿರೋಮಾಂಸಮುಮನರ್ಪಿಸಲು ೨೬

೧–ಶಿದಾದಿ (ಚ. ತ. ನ. ಪ. ಮ).

CC-0. Jangamwadi Math Collection. Digitized by eGangotri

ಗರಳಕಂಧರಮೂರ್ತಿ ನೋಡುತ
ಧರೆಯೊಳಿಂತಪ್ಪನ್ನದಾತರ
ಸರಿಯಿಡುವರಾರಯ್ಯ ನಿನಗತಿ ಸಾಂಗವಾಯಿತ್ತು
ನಿರುತಪೆಲ್ಲಿಹೆಯೊಳು ಸಮಾನವ
ನೊರೆಯಲಿಲ್ಲದಭೀಷ್ಟದಾನವ
ನರರೆ ಎಮಗಿಕ್ಕಿದೆ ಇದಕೆ ತಕ್ಕೊಂದು ಫಲವುಂಟು ೩೭

ನಾವು ಬಲದಲು ನಮ್ಮ ಎಡದಲು
ನೀವು ಕುಳ್ಳಿರ್ದಪಿ ವಿಶೇಷದ
ದೇವತಾರ್ಚನೆಯಂ ಸಲಿಸಿ ಮುದದಿಂದ ಪಬ್ಪಿಯಲಿ
ಭಾಪವಲರಿ ಶಿವಪ್ರಸಾದಾ
ಸೇವೆಯಿಂ ದಣಿದಲ್ಲದುಸಿಕನೆ
ಯಾವ ಪರಿಯಿಂದಾದಡೆಮ್ಮೊಡನೊಡಬಡಿಕೆಯಲ್ಲ ೩೮

ಸೆಟ್ಟಿ ಕೇಳಕ್ಕಕ್ಕು ಎನುತೀ
ಹೊಟ್ಟೆಯಂ ನಾ ಹೊರೆವನಲ್ಲೈ
ಮುಟ್ಟಿದೆನೆ ಮೂಸಿದೆನೆ ಸವಿದೆನೆ ಮಗನ ಮಾಂಸವನು
ನೆಟ್ಟನೆಮ್ಮಿಚ್ಛೆಯನು ಮಾಡಲು
ಕೊಟ್ಟೆನೀಕ್ಷಣವಂ ನಿನಗಿದಂ
ಕೊಟ್ಟೆಹೆವು ನೀನೀಸಿಕೊಳ್ಳಾ ನಾವು ಹೋದಹೆವು ೩೯

ಎಂದಡಾ ಸಿರಿಯಾಳನತಿ ಭಯ
ದಿಂದ ಸತಿಯಂ ನೋಡುತಿರಲಿಂ
ತೆಂದಳೀ ಸಂದೇಹವೇತಕೆ ಬನ್ನಿ ನೀವೆನುತ
ಇಂದುಮುಖಿ ಲಿಂಗಾರ್ಚನೆಯನೊಲ
ವಿಂದ ಸಲಿಸಿ ಪದಾರ್ಥವೆಲ್ಲವ
ತಂದು ಗಡಣಿಸಲಾ ತಪೋಧನನವರಿಗಿಂತೆಂದ ೪೦

೧–೨ ನಾಗ (ಕ, ಜ, ಥ). ೩–೪ ವಾವೆ (ಥ, ಪ).

CC-0. Jangamwadi Math Collection. Digitized by eGangotri

ಸಂಧಿ : ೨೩

ಅತಿಥಿಪೂಜಾವಸರದೊಳು ನಿಜ
ಸುತನು ತಾವೊಡನುಂಬರೊಲಿದನು
ಮತಿಸಿ ಪುರುಷರು ನಿನ್ನ ಕೈ ಎಂತಾಡುವದು ಸೆಟ್ಟಿ
ಸುತನ[೧]ನೀಗಳು[೨] ಕಾಣಬಾರದು
ಸುತನೆಲ್ಲಿಗೆ ಹೋದನೈ ಪರ
ಸುತನುಮಿಲ್ಲದ ಮನೆಯೊಳೂಟವದಾಗದೆಂತೆನಲು ೩೧

ತನಯನಿಲ್ಲದ ಮನೆಯೊಳೆಮಗೆಂ
ತನುಭವಿಸಬಹುದನ್ನದಾನವ
ನನುಮತವೆ ಹೇಳಾ 'ನ ಪುತ್ರಸ್ಯ ಗತಿ ನಾಸ್ತಿ' ಎನೆ
ಮುನಿವರೇಣ್ಯರು ಗತಿವಿಹೀನನ
ಮನೆಯೊಳುಂಬರೆ ಇದು ನಿಮಿತ್ತಂ
ತನಯನುಳ್ಳಡೆ ಕರೆಸು ಇಲ್ಲದಡೊಲ್ಲೆ ನಾವೆನಲು ೩೨

ನಡೆನಡುಗಿ ಸಿರಿಯಾಳನಾ ಮುನಿ
ಯಡಿಗೆಱಗಿ ಕೈಮುಗಿದು ನೀವುಂ
ನುಡಿದಿರಾಗಳೆ ಕೇಳ್ದೆ ನಾನುಂ ಸುತನುಮಿರ್ದಹನು
ಒಡೆಯ ಚಿತ್ತೈಸಯ್ಯ ಓದುವ
ಕಡೆಯೊಳೋದುತ್ತಿಹನೊ ಬಾಲಕ
ರೊಡನೆ ಆಡುತ್ತಿಹನೊ ಚೀಲಾಳಂ ಬಳಿಕ ಬಂದು ೩೩

ಬೇಗದಲಿ ನಿಮ್ಮ ಪ್ರಸಾದವ
ನೀಗಳೇ ಕೊಂಡಹನೊ ನೀವೀ
ಯೋಗರವು ಶಾಕಂಗಳಾಱಿದ ಮುನ್ನ ಕಾರುಣ್ಯ
ಸಾಗರನೆ ನಿಶ್ಚಿಂತದಿಂದಾ
ರೋಗಣಂಗೆಯ್ದಿಮ್ಮುವಂ ಪೊರೆ
ಯೋಗಿಜನವತ್ಸಲ ಎನುತ ಪೊಡಮಡಲು ತಾಪಸನು ೩೪

೧–೨ ನಾಗಳೆ (ಆ. ಡಾ. ಪ. ಮ).

CC-0. Jangamwadi Math Collection. Digitized by eGangotri

ಚಂಗಳವ್ವೆಯ ಮು[೧]ಖವ[೨]ನೀಕ್ಷಿಸಿ
ತಂಗಿ ಕೇಳಾ[೩] ನಾವು ಬೆಸಸಿವ
ಹಾಂಗೆ ಸುತನಂ ಕರೆಯಲಾಗದೆ ತಾಯಿ ಕರೆಯಲಿಕೆ
ಹೊಂಗಿ ಬಾರದ ತನಯರೊಳರೇ
ಸಾಂಗವಾಗಲು ನಾಲ್ಕು ದೆಸೆಗಳ
ಮುಂಗಡೆಯೊಳಿದ್ದೆಮಗೆ ಕೇಳಬಹಾಂಗೆ ದನಿಗೊಟ್ಟು ೬೫

ಕರೆಯಲಿಲ್ಲಿಗೆ ಬಾರದಿಹನೇ
ಕರೆಯೆನಲು ನಡೆತಂದು ಚಂಗಳೆ
ಸರಸರನೆ ಆ ಮೂಡಗಡೆ ಮೊದಲಾಗಿ ನಿಂದಿರ್ದು
ವರ ತಪ್ತೋಧನಮೂರ್ತಿ ಹೇಳಿದ
ಪರಿಯೊಳಾನಂದಿಸುತ ಸುತನಂ
ಹಿರಿಯ ದನಿ ದೆಸೆ[೪]ಗೆಯ್ದಿ[೫] ಕರೆಯಲು ತೊಡಗಿದಳು ಜನನಿ ೬೬

ಪೂರ್ವಕರ್ಮಾರ್ಜಿತ ಭವಂಗಳ
ಕೊರ್ವನಡಗಿಪ ಮಗನೆ ಬಾರಾ
ಗರ್ವಿಸುವ ದಕ್ಷಿಣಪತಿಯ ಮದವಂ ವಿಘಾಡಿಸುವ
ಸರ್ವಮಂಗ[೬]ಳದಿ[೭]ನುಗ ಬಾರಾ
ಪೂರ್ವಪಶ್ಚಾಜ್ಜನ್ಮಮರಣಾ
ಖರ್ವದುಃಖಿಂಗಳನಪಹರಿಪ ಪುತ್ರನೇ ಬಾರಾ ೬೭

ಉತ್ತರವನಾಡದಿರಸಮ ಸಮು
ದಾತ್ತಯೋಗೀಂದ್ರನ ವಿನಿರ್ಮಳ
ಚಿತ್ತದೊಳು ಸಂದಿರ್ದ ಮತ್ಪ್ರಿಯನಂದನನೆ ಬಾರಾ
ಉತ್ತರಿಪನಾ ಕೋಪ ಭೋಗಾ
ಯತ್ತ ಸೌಖ್ಯಾತೀತ ಪದವಿಯ
ನೆತ್ತಿಕೊಳಲೆಂದಿಪ್ಪ ಮತ್‌ಸಂತಾನವೇ ಬಾರಾ ೬೮

೧–೨ ಸುಡ (ಅ. ಡಾ. ಪ. ಬ. ಮ). ೩ ಳಾ (ಕ. ಚ. ತ. ಥ). ೪–೫ ದೆಸೆಯ (ತ. ಥ. ಪ). ೬–೭ ಳಿಯ (ಕ. ಚ. ಥ. ಬ).

CC-0. Jangamwadi Math Collection. Digitized by eGangotri

ಸಂಧಿ : ೫೫

ದಂಡಪಾಣಿಯ ಶಕ್ತಿಯಂ ತವೆ
ಖಂಡಿಸುವ ವರ ಸುತನೆ ಬಾರಾ
ಅಂಡಲೆವ ಘನಮೋಹಪಾಶಾಭೇದನಂ ಮಾಳ್ಪ
ದಂಡಿಯುಳ್ಳಿನ್ನಪ್ಪ ಬಾರಾ
ಚಂಡವಿತ್ತಾರಿ[1]ಷಣತ್ರಯ
ಖಂಡನಕ್ಷಮನೆಂದೆನಿಸಿದೆಮ್ಮೋಪನೇ ಬಾರಾ ೩೯

ಅಮರಪರಪಂಡಿತನಸಮ ಸಂ
ಯಮಿ ವರದನಾಗಿರ್ದಪನು ಮತ್
ಪ್ರಮಾದವಿಸೆಯಲು ಸತ್ಕುಮಾರಶಿರೋಮಣಿಯೆ ಬಾರಾ
ಶಮನು ಶಮನಾಕಾರನಾದು
ತ್ತಮ ತಪೋವೇಷಿಗೆ ಸವಾನಂ
ದಮನೊದಗಿಸುವ ಶಿಸತ್ಕುಲಾಧಿಪ[2] ಚಿನ್ನಿಗನೆ ಬಾರಾ ೪೦

ಘೋರತರ ನಿಸ್ಸಾರ ಪಟು ಸಂ
ಸಾರ ಪಾರಾವಾರದಂ ಮಿಗೆ
ಪಾರಮಿಪ್ಪಿಸಲಾ[3]ಪುಮಾ[4]ಪತನೂಭವನೆ ಬಾರಾ
ಚಾರುಸಾರಾಗಣ್ಯಪುಣ್ಯಾ
ಪಾರಸಂಪ್ರಾಪ್ತಿಯೊಳಿಸಪ ಕಾಂ
ಚೀರಚಿತ ವಿಶ್ರುತ ವಿಳಾಸಾಗ್ರಜನೆ ಬಾರಣ್ಣಾ ೪೧

ತ್ರಿದಶಕನ್ನಿಕೆಯರುವರಿಸಿ ಗಗ
ನದೊಳುದಂಚಿತ[1] ಮುಕ್ತಿಕನ್ನಿಕೆ
ಯಿದಿರುಗೊಳುತಿದೆ ಭಕ್ತಿಕಾಂತಾಕಾಂತನೇ ಬಾರಾ
ಸಮಮಲಾತ್ಮಕ ನಿನ್ನ ಪಿತನ ಬ
ಲದ ಭುಜಂ ಬಿಡದೊಡನೆ ಕೆತ್ತುತ
ಮಿದ ಮದೀಯ ಪ್ರಿಯವನೆಯ್ದಿಪ ತನಯನೇ ಬಾರಾ ೪೨

೧ದೀ (ತ, ಥ, ಪ). ೨–೩ ಸುಕುಲದೀಪಕ (ಕ, ಚ, ತ, ಥ, ಪ). ೩–೪ ಪ ಕೂ (ತ, ಥ, ಪ). ೧–೨ ಳಗಂಚಿತ (ಅ, ಡಾ).

CC-0. Jangamwadi Math Collection. Digitized by eGangotri

ತರಣಿ ಪಡುವಲಿಕೆಯ್ದಿ ಬಾಗಿವ
ನಿರದೆ ನೀ ಜೀಲಾಳ ಬಾರೈ
ವರ ಯತೀಂದ್ರನ ಸುಪ್ರಸಾದಮನುಂಬಿ ಬಾರೆನುತ
ಪರಿವಿಡಿಯೊಳೀ ನಾಲ್ಕು ದೆಸೆಯೊಳು
ತಿರುಣಿನಂ ತಜ್ಜನನಿ ಮಾಣದೆ
ಕರೆವ ಶಬ್ದಂಗಳೊಳಗಾ ಕ್ಷಣಮಾತ್ರದಲಿ ಮುಂದೆ ೪೩

ದೆಸೆದೆಸೆಗಳೊಳು ಸಂಜ್ಞೆಗಳು ಸೂ
ಚಿಸೆ ತಳೋದರಿ ಕರೆವುತಿರೆ ಮುಂ
ದೆಸೆಯೊಳಂದುಗೆ ಘಲಿರು ಘಲಿರೆನೆ ಗೆಜ್ಜೆಗಳು ಮೊರೆಯೆ
ಮಿಸುಪ ಕುಂಡಲ ಓಲೆ ಅರಳೆಲೆ
ಯೆಸೆಯೆ ಚಂಡಿಕೆ ಮಿಡಿಯೆ ತೊಡಿಗೆಗ
ಳೆಸೆಯೆ ನಡೆ ಸಡಗರಿಸೆ ನಸುನಗೆ ಮೊಳೆಯೆ ಮೊಗವಲರೆ ೪೪

ನೋಡೆ ಲೋಕಂ ಮೂಡೆ ವಿಸ್ಮಯ
ಓಡೆ ಸಂಶಯವಾಡೆ ಭಕ್ತರು
ಪಾಡೆ ಶೋಭನಗೂಡೆ ತಾಯ್‌ಮೊಲೆಯೂಡೆ ಮುದ್ದುಗಳ
ಬೇಡೆ ಧನಮಂ ನೀಡೆ ಬುಧರಿದು
ಕೋಡೆನುತ ಕೊಂಡಾಡೆ ಪೆಂಪಂ
ಸೂಡೆ ಜಸಮಂ ಮಾಡೆ ನಟಿಸಿ ಕೈಗೂಡೆ ಮುಕ್ತಿಸತಿ ೪೫

ತಾಪಸೋತ್ತಮನೀಕ್ಷಿಸುತ್ತಿರೆ
ಆ ಪಿತಂ ತನು ಹೆಚ್ಚುತಿರೆ ಇಂ
ತೋಪ ತನಯಂ ನಡೆತರಲ್ ತದಪಸರವೇವೇಳ್ದೆ
ಶ್ರೀಪತಿಪ್ರಿಯನಂಬಿಕಾಪತಿ
ಗೋಪತಿಧ್ವಜನಜನಮಳ ಚಿ
ದ್ರೂಪನಾ ಸಿರಿಯಾಳಸೆಟ್ಟಿಯ ಕಟ್ಟಿದಿರೊಳೊಪ್ಪೆ ೪೬

೧–೨ ದೆಸೆಗೆ (ಕ, ಚ, ಥ, ಧ) : ಗಿರಿಗೆ (ಪ) : ದೆಯ್ದೆ (ತ, ನ). ೩–೪ ರಳ (ಬ).

CC-0. Jangamwadi Math Collection. Digitized by eGangotri

ಆ ಕ್ಷಣದೊಳತಿ ಮಹಿಮೆಯೊಳ್ ಪ್ರ
ತ್ಯಕ್ಷನಾಗಿ ನಿಲಲ್ಕನಿತಱಿಯೊಳ್
ವೀಕ್ಷಿಸುತ ಸಿರಿಯಾಳನುಂ ಚಿಂಗಳೆಯುಂ ಚೀಲಾಳೆ
ರಕ್ಷಿಸೆನುತಷ್ಟಾಂಗವೆಱಗಿ ಸ
ಮಕ್ಷದೊಳು ವಂದಿಸುತ ಹರುಷಾ
ಪೇಕ್ಷಮಾನಸರಾಗಿ ಅಕ್ಕರಿವಟ್ಟು ಕೀರ್ತಿಸಲು ೪೭

ಶ್ರೀಶ ಭಾಷಾಧೀಶರುಂ ವೇ
ವೇಶ ಮುನಿಖ್ಯದಿಗೀಶರುಂ[1] ದಿವ
ಸೇಶ ರಾತ್ರೀಶಾಧಿಕಗ್ರಹ ತಾರಕಾವಳಿಯ
ಧೀಶ ಸಕಲ ಮುನೀಶರುಂ ಭೃಂ
ಗೀಶ ವೀರಗಣೇಶರುಂ ರು
ದ್ರೇಶ ಯೋಗಾಚಾರ್ಯರುಂ ನೆರೆದೋಲಯಿಸುತಿರಲು ೪೮

ಲೀಲೆ ಮಿಗೆ ಚಿಂಗಳೆಯ ಮಿತ್ರಜ
ನಾಳಿಯಂ ಅಂಗನೆಯ ಬಾಂಧವ
ಜಾಲವಂ ಸಿರಿಯಾಳನಂ ಚೀಲಾಳನಂ ಪ್ರರವ
ಱಳು ಕೇರಿಯುವೆರಸಿ ರಾಜತ
ಶೈಲದಲ್ಲಿಗೆ ಕನಕಮಣಿಗಣ
ಲಾಲಿತ ವಿಮಾನಂಗಳಂಬರವೀಥಿಯಲಿ ಹೊಳೆಯೆ ೪೯

ಕೂಡೆ ಶಿವನೊಯ್ಯಲ್ಕೆ ಸತ್ಪಭೆ
ಮೂಡಿ ಕೈಲಾಸದೊಳಮರ್ದಿರೆ
ಓಡಿಸಲು ಜಿಱುತೊಂಡನುಂ ತಾನೋಲಗದೊಳಿದ್ದು
ನೋಡಿ ಮೃಡನುಂ ಸತ್ಪಮಥರಂ
ನೋಡಿ ತಾನಿಕ್ಕಿದ ತನಯನುಂ
ನೋಡಿ ಪಕ್ಷಿಯ ನೋಡಿ ತನ್ನೊಳು ಸಾನುರಾಗದಲಿ ೫೦

೧-೨ ವ್ಯಾಧೀಶರುಂ (ಅ. ಡಾ. ಧ. ಸ).

CC-0. Jangamwadi Math Collection. Digitized by eGangotri

ಅವನಿಯೊಳು ಸುತನಂ ವಧಿಸಿ ಶಂ
ಭುವಿನ ಕೈಯೊಳು ಮರಳಿ ಪಡೆದತಿ
ಯವಗಡದ ಕೈಲಾಸಮಂ ನೆಱಿ ಸೂಱಿಗೊಂಡವನು
ವಿವರಿಸುಪಡೆ[೧]ನ್ನಹಗೆ[೨] ಭಕ್ತ
ಪ್ರವರ[೩]ದೊಳಗಿನ್ನಾವನೆ[೪]ನುತಂ
ತವಕದಿಂದವಹಂಕರಿಸಿ ಮನದೊಳು ನೆನೆಯಲೊಡನೆ ೫೧

ಮುಗುಳುನಗೆ ಮೊಗದೊಳು ಮೊಳೆಯೆ ಹಿಮ
ನಗಸುತೇಶನು ಮದಿಸಿದಾತನ
ಬಗೆಯನಱಿದಾ ಸೆಟ್ಟಿಯಂ ಬಾ ಎನುತ ಕೈವಿಡಿದು
ಜಗತಿತಳಕೆಯ್ತಂದು ಸಮ್ಮದ
ವೊಗೆಯೆ ನಿಂಬಿಯ ಮುಂದೆ ನಿಂದಿರೆ
ಮಿಗೆ ನಲಿದು ಸಂಭ್ರಮದೊಳಾ ಲಲಿತಾಂಗಿ ಮೈ[೫]ಯಿಕ್ಕಿ[೬] ೫೨

ಅವರ ಚರಣಾಬ್ಜಂಗಳಂ ತೊಳೆ
ದವಿರಳ ಪ್ರಚ್ಛನ್ನಗೌರೀ
ಧವನನತಿ ಸಾಂಗೋಚಿತಾಲಾಪಂಗಳಿಂ ತಣಿಸಿ
ವಿವಿಧ ಭಕ್ಷ್ಯಂಗಳನಮಳ ಮಾ
ರ್ದವ ರಸರಸಾನ್ನಂಗಳಂ ತ
ದ್ಭವತಿಯುತ್ಸವದಿಂದ ಮಾಡುತ್ತಿರ್ಪ ಸಮಯದಲಿ ೫೩

ಪುರಹರನು ಸೆಟ್ಟಿಯು ಪಥಶ್ರಾಂ
ತರ ತೆಱಿದಿ ವೈಷಿಕದ ನಿದ್ರೆಯೊ
ಳಿರಲು ತತ್[೭]ಸತಿಯಗ್ಘವಣಿಯಂ ತರಲು ಹೋಗಲ್ಕೆ
ಭರದಿ ಕಱುವಂ ಕಾಯ್ವ ತನುಜನು
ಹರಿದುಬಂದಾಸತ್ತು ಹಸಿದಾ
ತುರದೊಳವ್ವಾ ಎನುತ ಬಾಗಿಲ ಕದವನುಱಿ[೮] ನೂಂಕೆ ೫೪

೧–೨ನ್ನಂತೆ (ತ, ನ). ೩–೪ನಾವಂ ನಾನೆಯೆ (ತ, ಥ, ನ, ಪ). ೫–೬ ಹಿಗ್ಗಿ (ತ, ಥ, ನ).
೭–೮ಳಿರುತಿರಲ್ (ತ, ನ, ಪ).

CC-0. Jangamwadi Math Collection. Digitized by eGangotri

ಸಂಧಿ : ೨೩

ತತ್ತನುಜನಾ ಜನನಿಯಿಲ್ಲದ
ಡತ್ತಲಿತ್ತಲು ಪರಿಕಿಸುತ ಹಸಿ
ವೆತ್ತಿ ಬೋನದೊಳೊಂದು ಹೂರಿಗೆಯಂ ತೆಗೆದು ಮೆಲಲು
ಹೆತ್ತ ತಾಯ್ ಬಂದೈಸಱಿಲಿ ಕಾ
ಣುತ್ತ ಛಿಃ ಛಿಃ ಕೆಟ್ಟ ನಾಯಿಯೆ
ನುತ್ತ ಮನದೊಳು ಹೇಸಿ ಮನೆಯೊಳು ಹೊಕ್ಕು ಚಿಂತಿಸುತ ೫೫

ಮಿಡಮಿಡನೆ ಮಿಡುಕುತಪೆ ಪಾಪ
ಕ್ಕಡಸಿ ತರುವಲಿ ಮೂಲ[೧]ನಕಟಾ
ಮೃಡನ ಬೋನವನಿಂತು ತುಡಿ[೨]ತಿಂದನು ಶಿವದ್ರೋಹಿ
ಕಡು ದುರುಳನಿವನೆಂದೆನುತ ತಲೆ
ವೊಡೆಯಹೊಯ್ದ[೩]ಳು ಹಸಿಯ ದಡಿಯಲಿ
ಕಿಡಹಿ ಹೆಣನಂ ಸಱಿಸಱಿನೆ ಕಾಲ್ವಿಡಿದೆಳೆದು ನಿಂಬಿ ೫೬

ಸುತನ ಮೇಲಣ ಮೋಹವಿಲ್ಲದೆ
ಸುತನ ಸಾವಂ ಲೋಗರಱಿಯದ
ಗಱಿಯೊಳಾ ಗೋದಣದೊಳಗದಂ ಹಾಯ್ಕಿ ಹುಲುಮುಚ್ಚಿ
ಮತಿಯೊಳತ್ಯಾ[೪]ನಂದಮೊದಗುತ
ಸತಿಯು ಮತ್ತೆಯು ಪಾಕಯತ್ನವ
ನತಿಶಯದಿ ಮಾಡುತ್ತಿರಲ್ಕಾ ಸುತನ ಮರಣವನು ೫೭

ಇಂತು ಸಿರಿಯಾಳಂಗೆ ಶಿವನೇ
ಕಾಂತದಲಿ ಹೇಳಿದನು ಕಂಡ್ಯೆ
ಕಾಂತೆಯೊಂದು ವಿಚಿತ್ರವಿದು ಶಿಶುವೆಂದು ಚಿತ್ತದಲಿ
ಚಿಂತಿಸಳು ಮಱಿಗಳು ಬಲಿದ ಹಸು
ವಿ ತರಹರಿಸದೊಂದು ಹೂರಿಗೆ
ಯುಂ ತೆಗೆದವಂ ಮೆದ್ದನೋ ಮೆಲನೋ ಲಲನೆ ನೋಡಿ ೫೮

೧ಥ (ಬ). ೨ಡು (ಥ, ನ, ಪ). ೩ಡೆದ (ತ, ಥ). ೪ತಿಯಾ (ಸ).

CC-0. Jangamwadi Math Collection. Digitized by eGangotri

ಪಾಕವೆಲ್ಲವನಕ್ಕಟ ವೃಥಾ
ಪಾಕವಂ ಮಾಡಿದನಿವಂ ನಮ
ಗೇಕೆನುತ್ತವ ತನಯನಂ ಕೊಂದೆಳೆದು ಹಾಯ್ಕಿದಳು
ಈ ಕಡೆಯೊಳಿದೆ ನೋಡೆನುತ್ತ ಪಿ
ನಾಕಿ ಪದದಿಂ ಕವಿದ ಕಸಮಂ
ನೂಂಕಲೊಡನಾ ಸೆಟ್ಟಿ ಕಂಡಾಶ್ಚರ್ಯನಾಗಿರಲು ೫೯

ಬಿಡಗಡರೆ ಪಾಕಪ್ರಯತ್ನದ
ಕಡೆಯೊಳಾ ಜಂಗಮದ ಜಳಕಕೆ
ಹಿಡಿದು ಮಾಂದಿ ಶಿವಾರ್ಚನಾವಸರದೊಳು ಬೋನವನು
ಗಡಣಿಸುವ ಸಮಯದೊಳು ಮಗನಂ
ಮಡದಿ ಕೊಂದುದನಱಿಯದಂತುಮೆ
ಯೊಡೆಯನೊಯ್ಯನೆ ನಿಂಬಿಯಕ್ಕಂಗಾಗಳಿಂತೆಂದ ೬೦

ವನಿತೆ ನಿನ್ನಂ ಕುಮಾರನಿಂತೀ
ಮನೆಗೆ ಹಸಿದೆಯ್ತಂದು ಕರೆ ಕರೆ
ದನಿತಱಿಂದೆಲ್ಲಿರ್ದಹನೊ ತಾನೆತ್ತಲೆಯ್ದಿದನೊ
ತನಯನಕಟಾ ಕಡು ಬಳಲಿದನು
ಜನನಿ ಸಾಗಿಸಿ ಸಲಹಬೇಡಾ
ಮನದೊಳಿನಿತಾದಡೆ ಕರುಣವಿಲ್ಲವ್ವ ಇಂತಿಹರೇ ೬೧

ಶಿವ ಶಿವಾ ಎಮಗೆಂತು ಕೈಯಾ
ಡುವದು ಹೇಳಾರೋಗಿಪಡೆ ತನು
ಭವರ ನಾವೇನೆಂದು ಕಾಣೆವೆ ಸಾಕೆವೇ ಹೆತ್ತು
ಯುವತಿ ಒಳ್ಳಿತನಟ್ಟಿ ಪರ್ವದ
ದಿವಸವೆಂತಹರಾದಡುಂಬರೆ
ಭುವನದೊಳು ಮಕ್ಕಳನಿರಿಸಿ ನಿನಗಿನಿತು ಕೃಪೆಯಿಲ್ಲ ೬೨

---

೧ ನೀ (ತ, ಥ, ನ). ೨–೩ ವ ನೀಗಳಿಂತೀ (ಅ, ಡಾ, ಬ, ಮ).

CC-0. Jangamwadi Math Collection. Digitized by eGangotri

ಶಿಶುಗಳಿರೆ ನಮಗೇತಕೌ ಗಡ
ಣಿಸಿದೆ ಭಕ್ಷಾನ್ನಂಗಳಂ ನೀ
ನುಸಿಕನಿರ್ಪುದು ಧರ್ಮವೇ ಕರೆಯೌ ತನೂಭವನ
ದೆಸೆದೆಸೆಯೊಳಾರೈದೆನಲು ಸತಿ
ನಸುನಗುತ್ತಕ್ಕಕ್ಕು ವಾಯವ
ನುಸುರದಿರು ನಾನಱಿದೆನಱಿದೆನು ನಿನ್ನ ಮಾಯವನು ೬೩

ಹೆಂಗುಸಿವಳಿಂತೆಂದು ಬಗೆದಾ
ಲಿಂಗ ನಾ ಮರುಳಲ್ಲ ಕೇಳಾ
ಪಂಗದಿಂ ಬಹು ಕಥೆಗಳಂ ನೀ ಹಣ್ಣಿದಿರು ನಿನ್ನ
ಹಂಗಿಗನು ಸಿರಿಯಾಳಸೆಟ್ಟಿಯ
ಹಾಂಗೆ ಎನ್ನಂ ನೋಡದಾ ಮತಿ
ಹಿಂಗಿದವಳೇ ನಿಂಬಿ ಶರಣರ ಸಿಂಬಿ ನಾನಯ್ಯ ೬೪

ಅಸಮಲೋಚನ ಈಗಳಾರೋ
ಗಿಸಿದಡಲ್ಲದೆ ನಿಮ್ಮ ಡಿಗಳಂ
ನುಸುಳಲೀಯೆನು ನಿಮ್ಮ ತಕ್ಕಿಗೆ ಸಿಕ್ಕುವಂತಾಗಿ
ಪಸುಳೆಯೇ ನಾಂ ನೀವಱಿಯಿರೇ
ಶಿಶುವನಱಿಸುವ ಮರಳಿ ಬರಿಸುವ
ಗಸಣಿಯೇತಕೆ ನೀ ಕೊಡುವ ರಜತಾಚಲವನೊಲ್ಲೆ ೬೫

ಮದಿಸಿ ಮುನ್ನ ದ್ರೋಹಮಂ ಮಾ
ಡಿದಪಂ ತಾಂ ಮಾಡಿದುಹೋದನು
ಬೆದಕದಿರು ತದ್ರೋಹಿಯಂ ನೀನೆನಲದಂ ಕೇಳ್ದು
ಹೆದಱಿ ಸಿರಿಯಾಳಂ ಹೃದಯದಲಿ
ಬೆದಬೆದನೆ ಕುದಿವುತ್ತ ಶೋಕಂ
ಪದಮಳಿಸದೆ ತಲೆವಾಗಿ ಲಜ್ಜಿಸಿಯಳಲುತಿಂತಿರಲು ೬೬

---

೧ ಪಾ (ಪ).

CC-0. Jangamwadi Math Collection. Digitized by eGangotri

ಸತಿಯ ನಿರ್ಮಲ ಭಕ್ತಿಭಾವಕೆ
ಜಿತರತೀಶಂ ಮೆಚ್ಚಿ ಸಹಜಾ
ಕೃತಿಯನಾಗಳೆ ತಾಳ್ದು ತಾಂ ಪ್ರತ್ಯಕ್ಷಮಾಗಿರಲು
ಖಿತಿಗೊಳುತ್ತಿಂತೆಂದಳೋಹೋ
ಚತುರರರಸಾ ಇದು ನಿನಗೆ ಸಮು
ಚಿತವೆ ಆಹಾ ಇದು ಮಹಂತರ ಗುಣವೆ ಚಿತ್ರೈಸು ೬೭

ಕಳಕಳನೆ ಮೊಲೆವಾಲನರ್ಥಿಸಿ
ಅಳುತಮಿಹ ಬಾಲಕನ ಕೈಯಲಿ
ಮೆಲುವ ಹಿಂಡಿಯ ಕರಣಿಯಂ ಕೊಟ್ಟಂತು ತಾಯ್ತನ್ನ
ಮೊಲೆಯನುಱಿ ಮಱಿಪಿಟ್ಟು ಮೆಲ್ಲನೆ
ತೊಲಗುವಂದದಿ ಹೋಗಬಾರದು
ಮಲಹರನೆ ನೀನೆನ್ನ ಮುಂದೀ ಸಂಶಯವನುಡುಗು ೬೮

ತನುಗೆ ಜೀವಂ ಜೀವ ತನುವಿಂ
ಗನುಮತಿಸಿಕೊಂಡಿಪ್ಪವೊಲು ಪಾ
ವನದುಭಯನಾಮಂಗಳೊಪ್ಪುವ ಲಿಂಗಜಂಗಮದ
ತನುವನುಳಿದೀ ಭ್ರಮೆಗೆ ಕಾರಣ
ವೆನಿಪ ಭಾವವನಿಂತು ತಾಳ್ದಡೆ
ಮನದೊಳಾದ್ಯರು ನಗುವರೆಲ್ಲಾ ನಿನ್ನನೆನ್ನುವನು ೬೯

ಇದಕೆ ನಾನೊಳಗಹೆನೆ ಪಲವಂ
ದದಲಿ ರೂಪುಗಳೇಕೆ ನಿನ್ನಯ
ಹೃದಯದೊಳಗಾನಿಂತು ಜಾವಳನಾಗಿ ನೋಡಿದೆನೆ
ಮದನಹರ ನೀನೇಕೆ ಕಳವಳಿ
ಸಿದಪೆ ಅಂಜದಿರಂಜದಿರು ಚಿ
ತ್ತದೊಳಗೆಂದುಮನಿನಿತುವುಂ ಬೆಬಿಗಾಗಿ ಭಾವಿಸೆನು ೭೦

---

೧೩ (ನ).

CC-0. Jangamwadi Math Collection. Digitized by eGangotri

ಈ ತ್ರಿಣೇತ್ರದ ಮೇಲೆ ಮೇಣ್ ಮೂ
ಱು ತ್ರಿಣೇತ್ರವು ಹೊಳೆವುತಿರ್ದಡೆ
ನೇತ್ರವುಂ ತಾನಿಲ್ಲದಿರ್ದಡೆ ತತ್‌ತ್ರಿಲೋಚನನ
ಗಾತ್ರವಾಗಿರುತಿಪ್ಪ ಮಾನಸ
ಗಾತ್ರನಾಗೆಸೆದಿಪ್ಪ ಸದ್ಗುರು
ಗಾತ್ರವಲ್ಲಾ ಜಗಕೆ ಗುರುಸನ್ನಿಹಿತರಾದವರು ೭೧

ಓವಿ ಗುಂಡಯ್ಯಂಗೆ ಹರೆಯವ
ನೀವ ಠಾವಿನೊಳಾವ ಗರಳ
ಗ್ರೀವಸಹಿತಂ ಹೋದೆ ದಾಸನ ವಸ್ತ್ರದಾನಕ್ಕೆ
ಆವಹಿಗಳಂ ತೊಟ್ಟು ಪ್ರೋದ್ಯೈ
ನೀವು ಭೋಗನ ಮನೆಗೆ ಪ್ರೋಪಂ
ದಾವ [1]ಪಾರ್ವತಿ[2]ದೇವಿಸಹಿತಂ ಹೋದೆ ಹೇಳಯ್ಯ ೭೨

ಸಿಂಧುಬಲ್ಲಾಳನ ವಧುವನೊಲ
ವಿಂದ ಬೇಡುವ ಅವಸರದೊಳಾ
ವಿಂದುಕಳೆಯಂ ತಳೆದು ಪ್ರೋದ್ಯೈ ಮಾನಕಂಜರನ
ಮಂದಿರಕ್ಕಾವಸಮಲೋಚನ
ದಿಂದವೆಯ್ದಿದೆ ಯಾವ ಚೌಭುಜ
ದಿಂದ ಪಿಟ್ಟವ್ವೆಯ ಹೊರೆಗೆ ನೀ ಹೋದೆ ಹೇಳಯ್ಯ ೭೩

ಸಾಮವೇದಿಯ ಜನ್ನಕಾವು
ದ್ದಾಮನಂದಿಯನೇಱಿ ಹೋದ್ಯೈ
ಪ್ರೇಮದಿಂ ಸಿರಿಯಾಳಸೆಟ್ಟಿಯ ಮನೆಗೆ ನೀವಾವ
ವ್ಯೋಮನದಿಯಂ ತಳೆದು ಪ್ರೋದ್ಯೈ
ಕಾಮಹರ ಇದು ಕಾರಣಂ ನಿ
ಸ್ಸೀಮರೈ ಇಂತಹ ಚಮತ್ಕಾರಂಗಳಂ ಮಾಣು ೭೪

೧-೨ ಗೌರೀ (ತ, ನ).

CC-0. Jangamwadi Math Collection. Digitized by eGangotri

ನಿನ್ನ ಗೊಡ್ಡಾಟವನಱಿದೆನೀ
ಗನ್ನಗತಕದೊಳಿದ್ದಡಿರು ನಿನ
ಗುಣ್ಣಿಸಿವ ಬೋನವನದುಣ್ಣದೆ ಹೋದಡೆನ್ನಾಣೆ
ಇನ್ನೆನುತ ನಿಟ್ಟಿಸಿ ನುಡಿಯಲಭ
ವಂ ನಗುತ್ತಾ[೧] ನಿಂಬಿಯಕ್ಕನ
ಚೆನ್ನ ಭಕ್ತಿಗೆ ಮೆಚ್ಚಿಯಾರೋಗಿಸಿ ಮುದಂಬೆತ್ತು ೮೫

ಇಂದುಧರನಾ ಸೆಟ್ಟಿಯೊಡನಿಂ
ತೆಂದನತಿ ಭಕ್ತಿಪ್ರಯುಕ್ತಾ
ನಂದದಲಿ ಚಂಡೇಶ ಗೊಲ್ಲಳರಾಯರಾದಿಯಲಿ
ತಂದೆಗಳನಾಪ್ತರುಗಳಂ ತ
ಪ್ಪೆಂದು ಕೊಲ್ಲರೆ ಹಡೆಯಲೇ ಬೇ
ಕೆಂದು ಬೇಡರೆ ಎಮ್ಮುವಂ ಪ್ರತ್ಯಕ್ಷವಾದಲ್ಲಿ ೮೬

ಆಂತುಮಲ್ಲದೆ ಕೇಳು ಸಂದ ಮ
ಹಂತರೊಳು ದ್ರಾವಿಳ ಧರೆಯೊಳ
ತ್ಯಂತ ಭಕ್ತನು ನಮಗೆ ನೃಪನರಸಿಂಗ[೨]ಪೊನೆಯಾರ
ಕಾಂತೆಯಾ ಬಾಹೂರ ಗೌರೀ
ಕಾಂತನಂ ಭಜಿಸಲ್ಕೆ ಹೋಗುತ
ಮುಂತೆ ತಮ್ಮಡಿ[೩]ತಪ್ಪಿ[೪]ರಳನೊಂದಂ ತೆಗೆದುಕೊಂಡು ೮೭

ಮೂಸಿನೋಡಲು ಪೂವಡಿಗನಂ
ತಾ ಸತಿಯ ನಾಸಿಕವನರಿಯ
ಲ್ಕಾ ಸಮಯದಲಿ ಚೋಳನೃಪನಾ [೫]ಠಾವಿಗೆ[೬]ಯ್ತರಲು[೭]
ಆ ಸತಿಯ ಸಖಿಯರು ನಮಿಸುತೆಲೆ
ಭೂಸತೀಶ್ವರ ನಿಮ್ಮ[೮]ರಸಿ[೯]ಯರು
ದೋಷವೇನುವನಲ್ಲಿ ಮಾಡಿದುದಿಲ್ಲ ಚಿತ್ತೈಸು ೮೮

೧ತ್ತವೆ (ತ, ನ). ೨ಹ (ನ, ಬ). ೩–೪ತಂದ (ಬ). ೫–೬ತಾಣಕೆ (ತ, ನ). ೭–೭ಯ್ತುಂದು (ಸ). ೮–೯ಸತಿ (ತ, ನ).

CC-0. Jangamwadi Math Collection. Digitized by eGangotri

ಪರಮಸಂಪ್ರೀತಿಗೆ ನಮಿಸಹೋಗು
ತ್ತ್ರರೆಳನೊಂದಂ ಕಳೆದುಕೊಂಡಂ
ಬಿರುಹಲೋಚನೆ ಮೂಸಿನೋಡಲು ನೋಡಿ ಪೂವಡಿಗ
ಹರನ ಪೂಜಾರ್ಥದ ಕುಸುಮಮಂ
ಪರಿಮಳವನೀಂಟಿದಳೆನುತ್ತೀ
ಅರಸಿಯರ [1]ಮೂಗಂ ಕಡಿದನಾಕ್ಷಣದೊಳೆಂದೆನಲು[2] ೭೯

ಪೊಡವಿಯೊಡೆಯನು ಕೇಳ್ದು ನೀತಿಯ
ನುಡುಗಿ ಕೊಯ್ದನಲಾ ಎನುತೆ ಪೂ
ವಡಿಗನಂ ಕರೆದಿದು ನಿನಗೆ ಮರಿಯಾದೆಯೇ [3]ನೀನುಳಿ
ಕಡು ವಿವೇಕವನುಳಿದು ಪೂವಂ
ಪಿಡಿದ ಕೈಯಂ ಮೊಟ್ಟಮೊದ[4]ಲಲಿ[3]
ಕಡಿದು ಕಳೆದು ಬಳಿಕ್ಕಲಾ ಕಡಿವುದು ಸತಿಯ ಮೂಗ ೮೦

ನಿನ್ನನೇನೆಂದೆಂಬೆನಱಿಯದೆ
ಮುನ್ನ [3]ಮಾಡಿದೆ ಎನುತ[2] ಸತಿಯಂ
ತನ್ನೆಡೆಗೆ ಕರೆತರಿಸಿ ಬಾಚಿಯನೆತ್ತಿ ಭೂಭುಜನು
ನಿನ್ನ ನೀನಱಿಯದೆ ಮದಸಮು
ತ್ಪನ್ನದಿಂ ಲಿಂಗಾರ್ಥಮಾಗಿಪ
ಚೆನ್ನ ಚೆನ್ನೈದಿಲಕುಸುಮ ಪರಿಮಳಕೆ ನೀ ಬಯಸಿ ೮೧

ನೀಡಿದಾ ಕೈಯೆಲ್ಲಿ ಮುನ್ನಂ
ನೀಡಿದಂದದಿ ನೀಡು ನೆಟ್ಟನೆ
ನೀಡು ಬಾಬಾ ನೀಡೆನುತ ಮುಟ್ಟಿದ ಬೆರಳ್ಗಳನು
ಕೂಡೆ ಮೊದಲಿಗೆ ಪಿಡಿದು ಖಿಂಡಿಸಿ
ನೀಡಿದಂಗೈಯಂ ತಱಿದು ಮೇಣ್
ನೀಡಱಿಪ ಮುಂಗೈಯನಾ ಮೊಳಕೈಯನುಂ ತಱಿಯೆ ೮೨

೧–೨ ಮೂಗರಿದನಾಕ್ಷಣದಿಂದವೆಂದೆನಲು (ಕ, ಚ, ತ, ಥ, ನ). ೩–೪ ಅಣ್ಣಾ (ಸ). ೩–೩ ಲೊಳ್ (ತ, ನ); ಲಿಗೆ (ಪ). ೨–೨ ಕಡಿದೆಯೆನುತ್ತೆ (ತ, ನ).

CC-0. Jangamwadi Math Collection. Digitized by eGangotri

ಆಗಳೀಕ್ಷಿಸಿ ನಾವು ಸನ್ನಿಧಿ
ಯಾಗಿ ನಿಂದೊಲವಿಂದ ಕಡಿಕಡಿ
ಯಾಗಿ ಬಿದ್ದಿಹ ಸತಿಯ ಕೈಯಂ ಕೊಟ್ಟು ಮುನ್ನ[೧]ರಿದಾ
ಮೂಗನಿತ್ತರಸಂಗೆ ಸಾಮೀ
ಪ್ಯಾಗಣಿತ ಪದಮಂ ಕೊಡಲು ಸಲೆ
ಭೋಗಿಸನೆ ಕೈಕೊಂಡು ತನ್ನರಸಿಂಗಮೊನೆಯಾರು ೩೩

ಭೂವಳಯದೊಳು ಕೇಳು ಮತ್ತೆಯು
ಭೂವರೇಣ್ಯಂ ತನ್ನ ಪಟ್ಟದ
ದೇವಿ ಕಣಜದೊಳೆಮ್ಮ ಬತ್ತವನುಂಡಾಗ್ರಹಿಸಿ
ಆ ವನಿತೆ ಗರ್ಭಿಣಿಯಲಾ ಎಂ
ದೋವದರಸನು ಗರ್ಭದೊಳು ಬಲಿ
ದಾವರಿಸಿದರ್ಭಕನು ಸಹಿತಂ ಸೀಳ್ದ ಸಮಯದಲಿ ೩೪

ನಾವು ಮೆಚ್ಚಲು ಬೇಡಿಕೊಳನೇ
ಭೂವರಂ ತಚ್ಛೋಳನಂದು ಮ
ಹಾ ವಿಮೋಕ್ಷವನಿಂದು ತನಗಭಿಮತ ಫಲಂಗಳನು
ಈವೆನೀವೆನು ಬೇಡೆನಲು ಪರಿ
ಭಾವಿಸಳು ಲೆಕ್ಕಿಸಳದಂ ನೋ
ಡೀ ವಿಮಳಮತಿ ನಿಂಬಿಯಕ್ಕನು ಭಕ್ತಿಯೊಳು ಮಿಕ್ಕು ೩೫

ತಪ್ಪ ಮಾಡಿ[೨]ದರಂ[೩] ಕೊಲುವುದಿದು
ತಪ್ಪೆ ಸುತನಂ ಮರಳಿ ಬೇಳ್ಪುದು
ತಪ್ಪೆ ಕಾಮಿನಿ ಕಾಮಿಸಳಮಮ ನಾವು ಮೆಚ್ಚಿದಡೆ
ಒಪ್ಪವಾಯಿತು ದಾಸಭಾವದೊ
ಳಿಪ್ಪ [೪]ಭಾಷೆಯೆ[೫]ನುತ್ತ ನಿಂಬಿಯ
ನಪ್ಪಿ ಮುಂಡಾಡುತ್ತ ಕೊಂಡಾಡುತ್ತ ಶಶಿ[೬]ಜೂಟ[೭] ೩೬

೧ನ್ನಿ (ಸ). ೨–೩ದೊಡಂ (ಸ). ೪–೫ಭಾವವೆ (ಸ). ೬–೭ಚೂಡ (ಧ, ಸ, ಪ).

CC-0. Jangamwadi Math Collection. Digitized by eGangotri

ಇತ್ತೆ ಈಯೆಂದಡೆ ತನುಜನಂ
ಮತ್ತೆ ಕರೆಯೆಂದಡೆ ಕರೆಸಿದೆ ಸು
ಚಿತ್ತವೇ ಇದು ಸೆಟ್ಟಿ ತಪ್ಪಿನ ಮೇಲೆ ಈ ಸುದತಿ
ಪೆತ್ತಮಗನಂ ಕೊಂದಳೆಮ್ಮಯ
ತೊತ್ತು ಭಕ್ತಿಗೆ ಬಿತ್ತು ಭಾಪುರೆ
ಸತ್ತ ಸುತನಂ ಮರಳಿ ಕರೆದಳೆ ಬೇಡಿದಳೆ ಬಳಿಕ ೮೭

ಇಂತು ಜಗದೊಳು ಮೆಱೆದ ಭಕ್ತರ
ನಂತರಿರುತಿರೆ ಭಕ್ತ ನಾನೆಂ
ದೆಂತು ನುಡಿದೈ ಭಕ್ತಿಯೊಳಹಂಕರಿಸಿ ಸಿರಿಯಾಳ
ಪಂಥವಲ್ಲೆಂದೊರೆದು ಶಂಕರ
ನಂತು ನಿಂಬಿಯ ಪುತ್ರನಂ ಜೀ
ವಂತನಾಗಲು ನೋಡಿ ಕೈಲಾಸಕ್ಕೆ ಕಳುಹಿದನು ೮೮

ಲಿಂಗ ಜಂಗಮ ಪೂಜನಂಗಳೆ
ತುಂಗ ಚಾತುರ್ವರ್ಗ ಸೌಖ್ಯ ಫ
ಲಂಗಳೆರೆ ಮಿಗಿಲೆಂದು ಧರಣಿಯೊಳಿದ್ದಳಾ ನಿಂಬಿ
ಮಂಗಳಪ್ರದ ಸತ್ಕ್ರಿಯೆಗಳೊಳೆ
ಹಂಗೆ ಗರ್ವಿಸಿ ನುಡಿದವಂಗಂ
ಸಾಂಗವಹುದೇ ಭಕ್ತಿಪರಿಣತಿ ಬಸವ ಸುಕುಮಾರ ೮೯

ಅಂತು ಸಂಧಿ ೨೩ಕ್ಕಂ ಪದಗಳು ೧೩೨೨ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಣಯ (ಕ. ಚ. ಫ).

CC-0. Jangamwadi Math Collection. Digitized by eGangotri

ಸಂಧಿ : ೨೪

*

ಸೂಚನೆ : ಆಯತಾಮಳ ಭಕ್ತಿಗೊಲಿದು ಪ
ಲಾಯುಧನ ನವಪ್ರರಸಹಿತ ಶೂ
ಲಾಯುಧಂ ಕೊಂಡೊಯ್ದನಾ ಕೈಲಾಸಪುರಕಂದು

ನಾಗಕಂಕಣನೈಸಱಿಲಿ ತಾಂ
ಹೋಗಲೀಯದೆ ಮತ್ತೆಯುಂ ತಲೆ
ತಾಗಿ ಬಾಗಿದ ಸೆಟ್ಟಿಯಂ ಬಾ ಎಂದು ಕೈವಿಡಿದು
ಬೇಗದಲಿ ಶಿವಭಕ್ತವೇಷಿಗ
ಳಾಗಿ ಬಂದು ಹಲಾಯುಧನ ಪುರ
ಭಾಗದಲಿ ನಿಲಲಾ ಹಲಾಯುಧದೇವನರ್ಥಿಯಲಿ ೧

ಆ ಮಹಾತ್ಮರ ಮೆಲ್ಲಡಿಗಳಿಗೆ
ಭೂಮಿತಳವೊಂದಲು ನಮಿಸುತಂ
ಪ್ರೇಮದಿಂದಾವರಂ ಸಮುಚಿತಕ್ರಿಯೆಗಳಿಂ ತಣಿಸಿ
ಸೋಮಲಾಂಛನಲಾಂಛನರು ಪರಿ
ಣಾಮವಂಕುರಿಸಲ್ಕೆ ಸುಖಿಗೋ
ಷ್ಠೀಮಧುರ ವಚನಂಗಳಿಂ ಮಾತುಗಳನಾಡುತ್ತ ೨

---

* ರಾಗ : ಬಹುಳಿ (ಧ, ಪ); ನಾಗಗಾಂಧಾರಿ (ತ).
೧–೨ನೆ ಸರ (ಸ). ೩–೪ ಳಂ ಸಲಿಸಿ (ಸ).

CC-0. Jangamwadi Math Collection. Digitized by eGangotri

ಇಂಗಿತವನಱಿದೊಲಿದು ಚರಿಸುವ
ಜಂಗಮದವೊಡನಾಡುತಿರ್ಪವಿ
ಹಂಗೆ ಭಕ್ತರಿ[1] ಗತಿಯು ಮತಿಯುಂ ಪ್ರಾಣಮಾಗಿರಲು
ಹಿಂಗದೆಮ್ಮಂ ತಮ್ಮ ಭಾವದ
ಲಿಂಗವೆಂದೇ ಭಾವಿಸುತ ಪಲ
ವಂಗದಲಿ ಕೊಂಡಾಡುವರು ಕೊಂಡಾಡಿದಪೆವವರ ೩

ಚೇರಮಂ ಶ್ವಪಚಯ್ಯನುಂ ಕರ
ವೂರ ಚೋಳಂ ಚೆನ್ನಯಂ ಬಾ
ಹೂರ ಬೊಮ್ಮಂ ಜ್ಞಾನಸಮ್ಮಂಧಿಗಳು ಮೊದಲಾದ
ವೀರಮಾಹೇಶ್ವರರೊಲಿದು ಕೈ
ಯಾರೆಯಾರಾಧಿಸುತಿರಲ್ಕೆಯ
ನಾರತವನಾರಾಧನೆಗಳಂ ಕೊಂಡವರು ನಾವು ೪

ನಾವು ಸುಳಿಯದ ಲೋಕವಿಲ್ಲೈ
ನಾವು ನೋಡದ ಭಕ್ತರಿಲ್ಲೈ
ನಾವು ನಿಚ್ಚಂ ಹೊಗದ ಮಾಹೇಶ್ವರರ ಮನೆಯಿಲ್ಲ
ಭೂವಳಯದೊಳಗೆಮ್ಮವಱಿಯದ
ಶೈವನಾವನು ಇಲ್ಲ ಕೇಳೈ
ಆವಗಂ ಸುಳುಹೆಮಗೆ ನೋಡಲಪಾರ ಕಾಲವಿದು ೫

ಆರುವುಂ ಮೆಚ್ಚಿದ ಶಿವೈಕ್ಯರ
ಗೌರವಾಚಾರಾಚರಣೆಯಲಿ
ಸೇರಿ ಎಮ್ಮ ದಿನಂಗಳೆಲ್ಲವದಿಂತು ಸವೆಯಿತ್ತು
ಆರಯಿದು ಕೈವಿಡಿದು ಒಂದಾ
ಕಾರಮಂ ಮಾಡಿದವರೆಮ್ಮಂ
ವೀರಮಾಹೇಶ್ವರರದೆಂತೆನೆ ಎಮ್ಮ ಬದುಕರಿದು ೬

೧ರು (ತ, ಸ). ೨ವೀ (ಬ).

CC-0. Jangamwadi Math Collection. Digitized by eGangotri

ಆದಿಯಲಿ ಹುಟ್ಟಿದುದು ಬೆಳೆದುದು
ವೇದಿಸುವಡೆ ನಿರಾಳಪುರವೆನ
ಲಾದ[೧]ವಿಂತುದಯಿಸಿ[೨]ದವಲ್ಲದೆ ಮಾತೃಪಿತರೆನಗೆ
ಆದ ಹೊಲಬಂ ಮುನ್ನಱಿಯೆನೀ
ಮೇದಿನಿಯೊಳಮ್ಮವ್ವೆ ತಾಯೋ
ಪಾದಿಯಲಿ ಮೊಲೆಯೂಡಿ ಬೆಳೆಸಲು ಬೆಳೆದೆ ಮಗನಾಗಿ ೬

ಪೊಡವಿಯಲಿ ಕೈಗೊಟ್ಟು ಭೋಗಂ
ನಡೆಸಲಡಿಯಿಡಕಲಿತೆನಂಗನೆ
ಯೆಡೆಗೆ ಬಳಿಗೆಲಸಕ್ಕೆ ನಂಬಿಯುಸುರ್ದು ಕ[೩]ರಯಳ್ಳಿಕ್ಕಿ
ನುಡಿಯ ಕಲಿತೆನು ಚೆನ್ನ ಎನುತಂ
ಒಡನೊಡನೆ ಉಣಲುಣಕಲಿತೆನಿಂ
ಪಡರೆ ವಸ್ತ್ರವನುಡಿಸೆ ದಾಸನೊಳುಡಕಲಿತೆ ನಾನು ೭

ತನ್ನ ತನಯಳ ಪೆರ್ಮುಡಿಯನರಿ
ದೆನ್ನ ಜಡೆಯಂ ಕಟ್ಟಿಸಿದನಂ
ದುನ್ನತಿಯೊಳಾ ಮಾನಕಂಜರನೈಸಜಿಲಿ ಬಳಿಕ
ಚೆನ್ನ ಮಿಂಡಪ್ರಾಯದಾಟದೊ
ಳಿನ್ನು ಬೇಕೆಂದೆನಗೆ ಬಲ್ಲಾ
ಳಂ ನಳಿನಲೋಚನೆಯ[೪]ನೊರ್ವಳನೊಸೆದು ಮಿಗೆ ಕೊಟ್ಟ[೫] ೮

ಬೀಯವೆಯ್ದಿಸದಿಂತು ಮಿಂಡ
ಪ್ರಾಯದಾತಂಗೆಂದು ಭಕ್ತಿ[೬]ಸ
ಹಾಯಿ ಮುಮ್ಮಡಿ ಪಡಿಯನಿತ್ತನು ಪೊನೆಯಧರನೆನಗೆ
ಆಯತಿಕೆ ಮಿಗೆ ಸರ್ವಭಾಗ್ಯ
ಶ್ರೀಯ ದ್ರಾಕ್ಷಾರಾಮದೊಳು ನಾ
ನಾ ಯುವತಿ[೭]ಯುತ[೮] ಸುಖರಸದೊಳೋಲಾಡುತೆಯ್ತಂದು ೯

೧–೨ ಬಿಡದುದಯಿಸಿ (ಕ, ಚ, ತ, ಧ, ಥ, ನ, ಪ, ಬ, ಮ). ೩–೪ಲಿಸೆ (ಧ, ಪ). ೫–೬ ನೊರ್ಬಳನಿತ್ತನೊಲವಿಂದ (ಬ). ೬ಕ್ತಿ (ಅ, ಡಾ). ೮–೯ ಯರ (ಕ, ಚ, ನ, ಬ).

CC-0. Jangamwadi Math Collection. Digitized by eGangotri

ಲಾಲಿಸುತ್ತಂ ಮೊನ್ನೆ ಈ ಸಿರಿ
ಯಾಳನಂ ನೋಡಲ್ಕೆ ಕಂಚಿಯೊ
ಳೀಳು ಕೇರಿಯನೊಯ್ಯಲದಱಿಲಿ ಬೆರಸಿ ಶಿವಪುರಕೆ
ಬಾಲಕಂ ತಾ ಪೋದನಿಳೆಯೊಳು
ಹೋಲಿಸುವಡೆಣೆಯೊಳರೆ ಸೆಟ್ಟಿಗೆ
ನೀಲಗಳನಾತನ ಮನಸ್ಸಿನ ಗುಣ್ಪನಱಿಯಲ್ಕೆ ೧೧

ಅಿತ್ತ ಶಂಕರ ಕಿಂಕರರುಮೆನಿ
ಪ್ಪತ್ತಮವ್ರತಶೀಲರಂ ಮುದ
ವೆತ್ತಿ ಕಳುಹಲು ಬೇಡಿದಂತೆ ಅವರ್ಗೆ ಭಕ್ತಿಯಲಿ
ಚಿತ್ತವಲರಿಸಲಿಕ್ಷುರಸಮುಂ
ಮತ್ತಭೀಷ್ಟಿ ಿತ ವಸ್ತುನಿಚಯವ
ನಿತ್ತು ಗರಳಗ್ರೀವನಂ ಗೆಲಲಂತುಮಲ್ಲದೆಯು ೧೨

ಧರೆಯೊಳಿಪ್ಪತ್ತೊಂದು ದಿನವ
ಚ್ಚರಿಯ ಮಳೆಯಂ ಕಱಿಸೆ ಕಾಂಚೀ
ಪುರದೊಳಾ ಸಿರಿಯಾಳಸೆಟ್ಟಿ ಿದುರಿತವನೆಬ್ಬಟ್ಟಿ ಿ
ನಿರುತದಲ್ಲಿ ದಿನಂಪ್ರತಿಯೊಳಂ
ತಿರದೆ ಸಾವಿರವತಿಥಿಮಾಹೇ
ಶ್ವರರಿಗಿಚ್ಛಾಭೋಜನಂಗಳನಿಕ್ಕಿ ಶರಣೆನಲು ೧೩

ಶೇಷಧರನಂತಿರದೆ ತಾಪಸ
ವೇಷದಿಂದೆಯ್ತಂದು ಸೂನೃತ
ಭಾಷಣಂ ಸಿರಿಯಾಳಸೆಟ್ಟಿಯ ಪುತ್ರನಂ ಬೇಡೆ
ದೋಷವೆನ್ನದೆ ತನ್ನ ಸುತನಂ
ಶೇಷಶಾಕಂಗಳನಮರ್ಚಿ ವಿ
ಶೇಷ ಭಕ್ತಿಯೊಳಿತ್ತು ಮೆಚ್ಚಿಸೆ ಪಾರ್ವತೀಶ್ವರನ ೧೪

೧-೨ಯುವೆರಸಿ ಪೋದಂ ಶಿವನ ಪುರಿಗಾಗಿ (ಕ, ಚ, ತ, ನ). ೩ ೇ (ಕ, ಚ, ಬ). ೪ಪ್ಸ (ಕ, ಚ, ತ, ನ, ಮ). ೫-೬ ಧುರೀಣಭಕ್ತಿಯಲಿ (ಕ, ಚ, ಮ).

CC-0. Jangamwadi Math Collection. Digitized by eGangotri

ಮರಳಿ ಸುತನಂ ಪಡೆದು ರಾಜತ
ಗಿರಿಯನಾಗಳೆ ಸೂಜಿಗೊಂಡನು
ಕರಮುರಿದು ನಾವಿದ್ದೆವೆಂದುಂ ಜಗದೊಳಿಂತಪ್ಪ
ಪರಮ ಶಿವಭಕ್ತರುಗಳೊಳರೇ
ವರ ಸುತನನಿಕ್ಕಲ್ಪಹುದೆ ಮ
ತ್ಸರದ ನುಡಿಗಳನಾಡಬಹುದಲ್ಲದೆ ಏನುತ ಹಿಗ್ಗಿ ೧೫

ತವಕದಿಂ ಕೀರ್ತಿಸುತಿರಲು ಶಿವ
ಶಿವ ಇದೇನಂ ಪೇಳುತಿರ್ದಪೆ
ಶಿವನು ತಾನೇಂ ಮನುಜರನು ಭಕ್ಷಿಸಲು ರಾಕ್ಷಸನೇ
ಶಿವಪರಾಯಣನಂ ಹಸುಳೆಯಂ
ತವಿಸಿ ಕೊಲಲಾ ಸೆಟ್ಟಿಯೇನೀ
ಭುವಿಯೊಳಿಂತಾ ಭಕ್ತಿಹೀನನೆ ಏತಕೀ ಮಾತು ೧೬

ಎಮ್ಮೊಡೆಯರುಗಳಾಗಿ ದೇವಾ
ನಿಮ್ಮ ಮಾತಂ ಹುಸಿ ಎನಲು ನಾ
ನಮ್ಮೆನಲ್ಲದೆ ಮಿಥ್ಯವೀ ನುಡಿ ಎನಲಭವನೆಂದ
ತಮ್ಮ ಕೇಳು ಪ್ರಾತರೊಳಗೊಲ
ವಿಂ ಮಹಿಳೆಯರನಾತ್ಮಭವರಂ
ತಮ್ಮುವಂ ಕೊಟ್ಟವರೊಳರು ಶತಕೋಟಿಕೋಟಿಗಳು ೧೭

ಇಲ್ಲವೆನಲಹುದೇ ಹಲಾಯುಧ
ಸಲ್ಲದೀ ನುಡಿ ಏಕೆ ಗೌರೀ
ವಲ್ಲಭಂ ಭಕ್ತರ ಮನಂಗಳನೊರೆಯಲೆಯ್ತಂದು
ನಲ್ಲ ವಸ್ತುಗಳಂ ಬಯಸುವಂ
ಒಳ್ಳಿತಾಗಿಯೆ ಹಾಂಗೆ ಕೊಡುವರು
ಬಲ್ಲಿದರು ಶಿವಭಕ್ತರಾ ಶಿವನವರಿಗೆ ನಿಜಶಿ ಮಜಶಿದ ೧೮

೧–೨ನೇ (ಸ).

CC-0. Jangamwadi Math Collection. Digitized by eGangotri

ಇಳೆಯೊಳಾ ಸಿರಿಯಾಳಸೆಟ್ಟಿಯ
ತಲೆಯಲೇ ಶಿವಭಕ್ತಿ ಹುಟ್ಟಿತು
ಮಲಹರಂ ಬೇಡಿದನು ತಾನಂತಾಗಿ ಚಿಜಿುತೊಂಡ
ಆಲಘುಭಕ್ತಿಯೊಳಿಕ್ಕಿದನು ನಿ
ರ್ಮಳ ಮನದ ಜೀಲಾಳನಂ ಭೂ
ವಳಯದೊಳಗದೆ ನಂಬದಿರ್ದಡೆ ಕಳುಹು ನೋಡಲ್ಕೆ ೧೯

ಸರಸ ಭಾಷಾಂಗಕ್ರಿಯಾಂಗೋ
ತ್ಕರವ ನಾಟಕ ಗದ್ಯಪದ್ಯ ವಿ
ಸರ ಮಧುರಗೀತೋಕ್ತಿಯಿಂ ಸಲೆ ದೇಶದೇಶದಲಿ
ಕರಮೆಸೆಯಲೂರೂರೊಳತಿ ಶುಭ
ಕರಮೆನಲು ಸಿರಿಯಾಳ ಚರಿತೆಯ
ನೊರೆದೊರೆದು ವಿರಚಿಪರು ಭಕ್ತಸಭಾಂತರಂಗಗಳೊಳು ೨೦

ಕೂಡೆ ಮನೆಮನೆಗೊನಕೆವಾಡಂ
ಪಾಡುವರು ತಮತಮಗೆ ಸತಿಯರು
ಬೇಡೆನಲುಬಹುದೇ ಎನುತ್ತಿರಲಾ ಹಲಾಯುಧನು
ನೋಡಿ ಭುಗಿಭುಗಿಲೆಂಬ ಕೋಪಂ
ಮೂಡಿಯಹುದಹುದಾ ಉಮಾಪತಿ
ಬೇಡಿದನೆ ಮಾಂಸವನು ತನುಜನನಿಕ್ಕಿದನೆ ಸೆಟ್ಟಿ ೨೧

ಭಕ್ತವತ್ಸಲನೇ[೧]ಪರಿಯೊಳೀ
ಭಕ್ತನಂ ಮಡುಹಿದನಕಟ ಶಿವ
ಭಕ್ತನಾದ[೨]ಡೆ ಹೇಂಗೆ[೩] ತಾ ಶಿವಭಕ್ತನಂ ಕೊಂದ
ಭಕ್ತನಿಂತಿವಿವೇಕಿಯಾದನೆ[೪]
ಭಕ್ತರಾರ್ ಮಿಚ್ಚುವರಿದಕೆ ಶಿವ
ಭಕ್ತನಹು[೫]ದಹುದರಿದು[೬] ಭಕ್ತಂಗಾರು ಸರಿಯೊಳರು ೨೨

೧ನೀ (ಪ). ೨–೩ಡಮಂತೆ (ತ, ಪ). ೪ಡ (ಸ). ೫–೬ದರಿದರಿದು (ಕ, ಚ).

CC-0. Jangamwadi Math Collection. Digitized by eGangotri

ಜನನಿ ರಕ್ಕಸಿಯಾದಡಾ[1]ಕಟಾ[2]
ತನಯನೇಪರಿಯಿಂದ ಬಾಳ್ವಂ
ದನುಜನಾದಂ ಭ್ರಮಿಸಿ ಹರನುಂ ಮುತ್ತುಮುಷ್ಟಿನಲಿ
ಇನಿತು ಧೃತಿಗೆಡಲೇಕೆ ಕೋಮಟಿ
ಯನುಮತದಿ ಮರುಳಾಗಿ ಶಿವನುಂ
ತನಯನಂ ಕಾಮಿಸಿ ಕೊಲಿಸಿದನು ತಾನದೆಂತೆನಲು ೫೩

ಮುಟ್ಟಿರೆಂದುಂ ಮಾಂಸವಂ ಕ
ಣ್ಣಿಟ್ಟು ನೋಡರು ಭಕ್ತರಿದನನು
ಗೆಟ್ಟು ತಾನಿಕ್ಕುವರೆ ತನ್ನಂ ಹಿರಿದು ಮಾಡುವರೆ
ನೆಟ್ಟನಾ ಭಕ್ತರ ಮನಂಗಳ
ಘಟ್ಟಿಯಂ ನೋಡಲ್ಕೆ ದುರಿತಘ
ಜಿಟ್ಟನುಂ ತಾಂ ಬಂದು ಬೇಡಿದನ[3]ನಿತಜ[4]ಕೊಳು ತಪ್ಪೇ ೫೪

ತತ್ತನೂಜನ ಗಂಟಲಲಿ ಬಲು
ಗತ್ತಿಯಂ ಪಿತನೊತ್ತುವಾಗಳೆ
ಕೃತ್ತಿವಾಸಂ ಜಾಣನಾದಡೆ ಮೆಚ್ಚಿ ಕೊಡಬೇಡಾ
ಚಿತ್ತದಲಿ ಮೋಹಿಸಿದನಲ್ಲದೆ
ಮತ್ತೆ ಪುತ್ರಂಗಂತುಮಲ್ಲದೆ
ಉತ್ತಮೋತ್ತಮ ಭಕ್ತನಾದಡೆ ಮುಂದೆ ಸಿರಿಯಾಳ ೫೫

ಓರೆಯಲಿ ನೋಡುವನೆ ತನ್ನ ಶ
ರೀರವಂ ಬೈಚಿಟ್ಟು ಭಕ್ತಾ
ಚಾರವೇ ತತ್‌ಪ್ರಾಣದಾಸೆಯನೇಕೆ ಮಾಡಿದನೋ
ವೀರಶೈವರ ಮೆಚ್ಚಿ ತನ್ನ ಕು
ಮಾರನಾದಡೆ ಜಂಗಮವಲಾ
ಕ್ರೂರಚಿತ್ತನು ಕೊಂದನಾ ಪಾಪಕ್ಕೆ ಶಂಕಿಸದೆ ೫೬

೧–೧ಕ್ಕಟ (ಸ). ೩ಡ (ಥ, ಪ); ನಿ (ಸ).

CC-0. Jangamwadi Math Collection. Digitized by eGangotri

ನೆರೆಮನೆಯ ಕಿಚ್ಚಿಂದವಲ್ಲದೆ
ಉರಿಯದೇ ಮನೆ ತನ್ನ ಕಿಚ್ಚಿನೊ
ಳಿರವೆ ಹೊಱಿಗಣ [೧]ಮಾರಿಯದು[೨] ಹೊಱಿ[೩]ಹೊಱಿಗೆ ಹೋದಂತೆ
ಆರರೆ ಹೊಸತಾಯಿತ್ತು ಲೋಕಕೆ
ಹರದನಿರವಿನ ಭಕ್ತಿ ತಾನೀ
ಪರಿಯೊಳಿರ[೪]ವೇಡಾ[೫]ಯಿದಾರಿಂಗಹುದು ಹೇಳಯ್ಯ ೨೭

ಬಳಿಕವೀ ನರಮಾಂಸವಲ್ಲದೆ
ಮಲಹರನ ಗಂಟಲೊಳಗಿಳಿಯದೆ
ಛಲರೆ ತಾನೀಶ್ವರನ ಮೇಲತಿ[೬] ಭಕ್ತಿಯುಳ್ಳವನು
ಒ[೭]ಲಿದು ತನ್ನಂ ಶಾಕಪಾಕಂ
ಗಳನಮರ್ಚಿಯದೇತಕಿಕ್ಕನು
ಜ್ವಲನನೇತ್ರಂಗಕ್ಕಟಾ ಇದು ಭಕ್ತಿ[೮]ಹಿಂಸೆಯಲಾ ೨೮

ಶಿಶುವನೊಪ್ಪಿಸಿ ತನ್ನುವಂ ವಂ
ಚಿಸಿದನೆಂಬಪವಾದ[೯]ಕಂಜಿಂ[೧೦]
ತಸಮನೇತ್ರಂ [೧೧]ಪ್ರತ್ರನಂ[೧೨] ಕರೆಸಿದನದಲ್ಲದೆಯು
ಒಸೆದು ಕೊಟ್ಟೆನು ಕರೆಯಲಟ್ಟುವು
ದೆಸೆವ ಭಕ್ತಿಗೆ ಧರ್ಮವಲ್ಲೆಂ
ದುಸಿಕನಿರ್ದನೆ ತನಯನಂ ಕರೆಸಿದನೆ[೧೩] ಸಿರಿಯಾಳ[೧೪] ೨೯

ಮಗನನರ್ಥಿಸಿ [೧೫]ಕೊಲಿಸಿ[೧೬] ನುಂಗಿವ
ನಗಸುತೇಶ್ವರ[೧೭]ನೆಂದು[೧೪] ಭಕ್ತರು
ನಗುವರಲ್ಲಾ ಎಂಬ ಮಾತಿಂಗಾಗಳಾ ಶಿವನು
ಉಗುಳ್ದನಲ್ಲದೆ ತನ್ನ ಉದರಂ
ಬಿಗಿಯೆ ಗಜ್ಜಿನೆ ತೇಗುತಂ ಪ್ರಿಯ
ವೊಗೆಯಲಾರೋಗಿಸಿದುದುಂಟೇ ನೀವು ಬಲ್ಲಿರಿವ ೩೦

೧–೨ ದುಃಖವದು (ಪ). ೧–೩ ಮಾರಿಯಾದೊಡೆ (ತ). ೪–೫ ದೆರಡಾ (ಸ). ೬ಣ (ಸ). ೭ಬ (ಸ). ೮ಕ್ತ (ತ). ೯–೧೦ ಗಿಂತ (ತ, ಸ). ೧೧–೧೨ ತನುಜನಂ (ಥ); ಕರೆಯಲ್ (ತ, ಸ). ೧೩ × (ತ, ಸ). ೧೪ ಳಂ (ತ, ಸ). ೧೫–೧೬ ಬೇಡಿ (ಸ). ೧೭–೧೮ ನೆಮ್ಮ (ಸ).

CC-0. Jangamwadi Math Collection. Digitized by eGangotri

ಕರ್ಮವಾಯಿತು ಸೆಟ್ಟಿಗೀ ಕರಿ
ಚರ್ಮಧಾರಿಗೆ ಬೈಗಳಾದವು
ದುರ್ಮತಿ ಭಕ್ತರನು ನುಂಗುವ ಹಸಿಯ ರಕ್ಕಸನು
ಮರ್ಮಭಕ್ತರನೇ ಕೊಲುವ ನಿ
ರ್ಧರ್ಮಿಯಾತನು ಸೂನೆಗಾಱನು
ನಿರ್ಮಳದ ಕಥೆಯೆಂದಿದಂ ನಲಿದೋದಿ ವಿರಚಿಸುವ ೩೧

ವಿರಹಿತಜ್ಞಾನಿಗಳಸಂಖ್ಯಾ
ತರಿಗೆ ಹೊಱಿಹೊಱಿಗೆಂದು ಮುಳಿದ
ಬ್ಬರಿಸಿ ಕೈತಾಳಂಗಳಂ ಹೊಯ್ದನು ಹಲಾಯುಧನು
ಹರನುಮಾ ಸಿರಿಯಾಳನುಂ ದು
ಸ್ತರ ಭಯಾತುರರಾಗಿಯಾತನ
ಹಿರಿದು ಕೋಪಾಟೋಪದೃಷ್ಟಿಗೆ ಸರಿವುತೊಂದೆಸೆಗೆ ೩೨

ಕದಡುವೆದೆಗಳೊಳೊಬ್ಬರೊಬ್ಬರ
ವದನಮಂ ನೋಡುತ್ತ ತಲ್ಲಣ
ವೊದಗಿ ಚಿಂತಿಸುವಿಬ್ಬರುಮನೀಕ್ಷಿಸಿ ಹಲಾಯುಧನು
ವಿದಿತ ಜಂಗಮವಾಗಿ ಮುನ್ನಾ
ಡಿದ ನುಡಿಗಳೊಳು ೨ಹಿಡಿಯೆ ತಪ್ಪುಮ೩
ನಿದಕೆ ನಿಮ್ಮಂ ಮನ್ನಿಸಿದೆ ನೀವೊಂದನವಧರಿಸು ೩೩

ಆದರಿಸಿ ಸಿರಿಯಾಳಸೆಟ್ಟಿಯ
ನಾದಮೂರ್ತಿಯ ವಾರ್ತೆಯಂ ಮಜಿ೨
ದಾದಡಾಡಿದಿರಾದಡೆಮ್ಮ ಮಹಂತರುಗಳೆಡೆಗೆ
ಆದಿದೇವನ ಕೋಮಟಿಗನೊಳ
ಗಾದವರು ನೀವೆಂದಡುತ್ತರ
ವಾಡಲಂಜಿ ಮನೋಜಭಂಜನನಗಜೆಯಂ ನೆನೆಯೆ ೩೪

---

೧ ದ (ಸ). ೨–೩ ತಪ್ಪು ಹಿಡಿಯೆನು (ಕ, ಚ, ಥ, ಪ, ಬ, ಮ).

CC-0. Jangamwadi Math Collection. Digitized by eGangotri

ಸಾಂಗದಿಂದುಮೆ ಭಕ್ತಿಯೆಂಬ ಲ
ತಾಂಗಿ ಸರ್ವಾಂಗಪ್ರಯುಕ್ತಿ ಸು
ರಂಗಮಾಗೆಯ್ತಪ್ಪ ಪರಿಯಲಿ ಚಂಗಳೆಯು ತಾನು
ಮಂಗಳಂ ಮಿಗೆ ಬರುತಿರಲ್ಕಾ
ಜಂಗಮಾಕೃತಿಯವರನೀಕ್ಷಿಸಿ
ಹೊಂಗುತಂ ಸಾಷ್ಟಾಂಗದಂಡಪ್ರಣಮವಂ ಮಾಡಿ ೩೫

ಆಯತದೊಳೊಡಗೊಂಡು ಬಂದು ಪ
ಲಾಯುಧನು ಉಚಿತಕ್ರಿಯೆಗಳಿಂ
ದೀಯಲಾ ಸಮಯದೊಳಗಾತ್ಮಜೆಯೆಂದಳಾತಂಗೆ
ಆಯಘೋಕ್ಷಜ ಧಾತ್ರಗಳ ಮೆಱಿ
ವಾಯುರದೊಳಾನನದೊಳಿರುತಿ
ರ್ದಾ ಯುವತಿಯರು ಪ್ರೋಗಿ ಬೇಕಾದವರನೊಂದುವರು ೩೬

ಅಪರ ಕಾಮಿನಿಯರ ಗುಣಂಗಳ
ನವನುಸುರಲೇನುಂಟು ತನ್ನ
ಪ್ರವರನಲ್ಲದೆ ಪರರನಱಿಯಳು ಕನಸಿನೊಳು ಗೌರಿ
ಭುವನದೊಳು ನಾವಹಗೆ ಪರಮೋ
ತ್ಸವದ ಪಾತಿವ್ರತೆಯರಾಗಿಯು
ಶಿವಚರಣ ಸಮುಭಕ್ತಿಯುಕ್ತಿಯೊಳಾಚರಿಸುತಿಹೆವು ೩೭

ತನುವು ಮೊದಲಾದಭಿಮತಂಗಳ
ನನುದಿನಂ ಮಾಹೇಶ್ವರರಿಗತಿ
ವಿನಯಪೂರ್ವಕಮಾಗಿ ಕೊಡುತಿರ್ಪಂ ಹಲಾಯುಧನು
ಎನುತ ಭಕ್ತಸಭಾಂತರಂಗಳೊ
ಳೆನಿತು ಭಕ್ತಿಯನುಳ್ಳ ನಿನ್ನಂ
ವಿನುತಿಸುತ್ತಿರೆ ಕೇಳ್ದು ನಾವೆಯ್ತಂದೆವೀ ಎಡೆಗೆ ೩೮

೧ಕ (ಪ, ಬ).

CC-0. Jangamwadi Math Collection. Digitized by eGangotri

ನಾವು ಬೇಡಿದ ವಸ್ತುಗಳನು
ತ್ತೋವಿ ಎಮ್ಮಾಶೀರ್ವಚನಮಂ
ನೀವು ಕೈಕೊಂಬುದು ಹಲಾಯುಧದೇವ ಸುಕೃತಾತ್ಮ
ಶೈವಧರ್ಮಾಚಾರ ಸನ್ಮಾ
ರ್ಗಾವಲಂಬನ ಲಿಂಗಜಂಗಮ
ಜೀವ ಸಜ್ಜನ ಭಕ್ತಿಗುಣಮಣಿಹಾರ ಘನಧೀರ ೫೯

ಧನ್ಯಮಾನಸ ವಿಗತಬುಧಮುಖಿ
ದೈನ್ಯಸಹಜಕೃತ ಪ್ರಮುದಿತವ
ದಾನ್ಯ ಮಾಯಾಶೂನ್ಯ ಸೂನೃತ ಲೋಕಸೌಜನ್ಯ
ಮನ್ಯುವಿರಹಿತ ೨ಭುವನಮಾನ್ಯ ಜಿ
ತಾನ್ಯಸಮಯ೩ ಹಲಾಯುಧಾ ಸಾ
ಮಾನ್ಯನೇ ನೀನೆನುತ ಕೀರ್ತಿಸೆ ಕೈಗಳಂ ಮುಗಿದು ೬೦

ಆ ಹಲಾಯುಧನಿಂದ೪ನಧಿಕ
ಸ್ನೇಹದಿಂ೬ ಮಾಹೇಶ್ವರರ ದಾ
ಸೋಹಿಯಾನ೭ತ್ಯಂತ೮ ಕೀರ್ತನೆಗಾಪನೇ ಸಾಕು
ಓಹೊ ಭಕ್ತರು ವಾಂಛಿತಾರ್ಥಸ
ಮೂಹದಾತರು ಕೊಟ್ಟಪರು ಸಂ
ದೇಹವಿಲ್ಲದೆ ಏನನಾದಡೆ ಬೇಡಿ ನೀವೆನಲು ೬೧

ಈಕೆ ಸಿರಿಯಾಳನ ಲತಾಂಗಿ ಪಿ
ನಾಕಧರನರ್ಧಾಂಗಿಯಾನಾ
ಲೋಕಿಸೈ ಪತಿಬಾಹ್ಯರಾಗಿಹ ಸತಿಯರೇಕೆನಲು
ಲೋಕದೊಳು ನಿಶ್ಚಲಿತ ಭಕ್ತಿವಿ
ವೇಕಬಾಹ್ಯದ ಪತಿಗಳೇತಕೆ
ಏಕಭಾವದಿ ಸತ್ಪ್ರಣಯಮಂ ಕರುಣಮಂ ತಾಳ್ದು ೬೨

---

೧ ದೇ (ಪ). ೨–೩ ಚೌದಶ ಭುವನ ಮಾನ್ಯ ದೇವ (ಸ). ೪–೫ ದೇವ (ಥ, ಧ, ಪ, ಸ). ೬ ದಲಿ (ಪ). ೭–೮ ತ್ಯಧಿಕ (ಪ).

CC-0. Jangamwadi Math Collection. Digitized by eGangotri

ರಮಣರಿಗೆ ಸದುಭಕ್ತಿ ಭಿಕ್ಷವ
ನೆಮಗೆ ನಿಜ ಸೌಭಾಗ್ಯಭಿಕ್ಷವ
ನಮಳಮತಿ ನೀನಿಕ್ಕೆನುತ್ತತಿ ದೈನ್ಯಭಾವದಲಿ
ಹಿಮನಗಾತ್ಮಜೆ ಬೇಡುತಿರಲಾ
ಸಮಯದಲಿ ಸಿರಿಯಾಳನಂಗನೆ
ನಮಿಸಲಿಂತು ಹಲಾಯುಧನು ಮಾಹೇಶ್ವರಾವಳಿಯು[೧] ೪೩

ಆಂಗಜಾರಿಗೆ ಸೆಟ್ಟಿಗೆಯುಮಭ
ಯಂಗಳಂ ಕೊಡಲೊಡನೆ ಗಂಗಾ
ಸಂಗಮಕುಟಿಮಹೇಶ್ವರಂ[೨] ಪರಮೇಶ್ವರಂ ಹರನು
ಮಂಗಳಪ್ರದನನುಪಮಂ ಮಾ
ತಂಗಚರ್ಮಾಂಬರಧರಂ ಧವ
ಳಾಂಗನಪ್ರತಿಮಂ ಶಿವಂ ಪ್ರತ್ಯಕ್ಷಮಾಗಿರಲು ೪೪

ಪ್ರಮಥರುದ್ಯಾನೀಕಕೋಟಿಗ
ಳಮರ್ದು ಸಾರ್ದೋರ್ಲೈಸುತಿರೆ ಸಂ
ಭ್ರಮವೆರಸಿ ಹಿಂದೆಸೆಯೊಳಾ ಚೆಂಗಳೆಯು ಸಿರಿಯಾಳ
ಸುಮುಖದಿಂ ಕೀರ್ತಿಸುತಿರಲು ಸತ್
ಪ್ರಸಿಮಥಿವೆಸೆಯಲು ಭಕ್ತವೃಂದಂ
ನಮಿಸುತಾನಂದಿಸುತ ಮುಂದಣ ದೆಸೆಯೊಳೊಂದಿರಲು ೪೫

ಹರಿ ಸರೋರುಹಭವ ಪುರೋಗಮ
ಸುರವರಾನಲ ಯಮ ನಿಶಾಚರ
ವರುಣ ಮಾರುತ ಧನದ ರುದ್ರಾದ್ಯಮರ ಸಂದೋಹ
ಖರಕಿರಣ ಮುಖ್ಯ ಗ್ರಹಂಗಳು
ಗರುಡ ಕಿನ್ನರ ಸಿದ್ಧ ವಿದ್ಯಾ
ಧರರು ಪಂಚಾವರಣರಾಗಿಯಲರ್ದು ಕೀರ್ತಿಸಲು ೪೬

೧ಗೆ (ಬ). ೨ತುಂ (ಮ). ೩–೪ನುಮೇಶ್ವರಂ (ಕ); ನನೀಶ್ವರಂ (ತ); ನನಶ್ವರಂ (ಥ. ನ. ಪ). ೫–೬ಮುದ (ತ).

CC-0. Jangamwadi Math Collection. Digitized by eGangotri

ಸರ್ವ ಸನ್ಮುನಿಗಳು ಸಮಧುರಾ
ಲೀರ್ವಚನರಚನಾಧಿಕಪ್ರಿಯ
ಪೂರ್ವಕದಿ ಮುಕುಳಿತಕರಾಂಭೋಜಾತರಾಗಿರಲು
ಅರ್ವಮಿದನರುಹಿ ವಿರಚಿಸುವ ಗಂ
ಧರ್ವ ನಾರದ ಸಾಮ್ಯತಂ ಶ್ರುತಿ
ಪೂರ್ವಮಾಗಲು ದೇವತೂರ್ಯಂಗಳು ಮೊರೆಯುತಿರಲು ೪೭

ಚೋಳರಾಯನ ಚೀರಮನ ಸಿರಿ
ಯಾಳನಂಚಿತ ಚರಿತಕಥೆಗಳ
ನೋಲಿಯಿಂ[೪] ಪಾಠಕರು ಕೀರ್ತಿಸಲಾ ಹಲಾಯುಧನು
ಶೂಲಧರನ ಪದಾಬ್ಜಘಟನಾ
ಭಾಳತಟಕರಯುಗಳನಾಗುತ
ಲೋಲನೇತ್ರಾನಂದಜಲಯುತವದನನಾಗುತ್ತ ೪೮

ಜನಿತ ಗದ್ಗದ ಗಳಸಮುದ್ಗತ
ಶಿನಿನದ ಸಂಕಲಿತಾತ್ಮನಾಗುತ
ವಿನಯ ಸಂಭ್ರಮ ಸಕ್ರಿಯಾಂತಃಕರಣನಾಗುತ್ತ
ಮನವಲರ್ದಾನಂದಿಸುತ್ತಿ
ರ್ದನಘನಪ್ಪ ಹಲಾಯುಧನನಾ
ಧನದಸಖಿನಸುರಾಗನಾಗುತ ತೆಗೆದು ಬಿಗಿಯಪ್ಪಿ ೪೯

ಆತನೂರ್ಜಿತ ಭಕ್ತಿ ಸನ್ಮತಿ
ಗಾತನತಿ ನಿಷ್ಕಾರತಿಗೆ ಸಂ
ಪ್ರೀತಿಯಚ್ಚರಿ ಮೆಚ್ಚಿ ತಮ್ಮೊಳು ಸಂಭ್ರಮಿಸುತಿರಲು
ಆತನಾಳುವ ನವ ಪ್ರರಂಗಳ
ನಾತನಂ ಶಿವಭಕ್ತಜಾತಸ
ಮೇತನಾಗಿರಲಖಿಳವಲ್ಲಭನಂಬಿಕೆಯು ಸಹಿತ ೫೦

---

೧ ಸು (ತ, ನ). ೨ × (ಸ). ೩ + ಜಿ[೩] (ಸ). ೪ ಯಲಿ (ಸ). ೫–೬ ಘನತರಾ (ಥ, ಪ). ೭–೮ ತಾಂಗ (ಪ). ೯ ದ (ಸ).

CC-0. Jangamwadi Math Collection. Digitized by eGangotri

ಶತಸಹಸ್ರ ಸಹಸ್ರಕಿರಣ
ದ್ಯುತಿಗಳಂ ಮಸಳಿಸುತೆ ದೆಸೆದೆಸೆ
ಗತಿಶಯದ ಮಣಿಮಯ ವಿಮಾನಂಗಳ ಬೆಳಗು ನೆರೆಯೆ
ಕ್ಷಿತಿಜನರುಂ ಜಯ ಜಯ ಎನುತ್ತಿರ
ಲತುಳ ಭಕ್ತಿ ಹಲಾಯುಧನನೂ
ರ್ಜಿತ ರಜತಶೈಲಕ್ಕೆ ಕೊಂಡೊಯ್ದನು ಶಿವಾರಮಣ ೫೧

ಮನಸಿನೊಳು ಗರ್ವಿಸಿದ ಸಿರಿಯಾ
ಳನ ಮದಾಪಹರಾರ್ಥಮಾಗಲು
ಧನಪತಿಪ್ರಿಯನಾ ಹಲಾಯುಧನಂ ಮಱೆಸಿದನಂದು
ಜನವಱಿಯಲಿಂತಪ್ಪ ಕಾರಣ
ವಿನಿತಹಂಕೃತಿ ಭಕ್ತಿಯುಮು ಪ
ರ್ಧನವಹುದೆ ಹೇಳೈ ಬಸವಸುಕುಮಾರ ಭಕ್ತರೊಳು ೫೨

ಆಂತು ಸಂಧಿ ೨೪ಕ್ಕಂ ಪದಗಳು ೧೩೭೪ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧-೨ ಜನಂಗಳ್ (ತ. ನ).

CC-0. Jangamwadi Math Collection. Digitized by eGangotri

ಸಂಧಿ : ೨೫

*

ಸೂಚನೆ : ನಂಬಿ ಶಂಭು ಸಮಸ್ತ ಭಕ್ತಾ
ಡಂಬರಕೆ ಹೊಜಗೆಂದು ಡಂಗುರ
ವಂ ಬಡಿದ ಮೆಜಿಕಿಮಿಂಡನಾರಂ ಮೆಜಿಕಿದನಾ ಶಿವನು

ದಂಡನಾಯಕ ಮತ್ತೆಯುಂ ಮೆಜಿಕಿ
ಮಿಂಡನಾರೆಂಬೊಬ್ಬ ಗಣವು
ದ್ದಂಡಜನ ದರ್ಪಾಪಹಾರನು ಭಕ್ತಿಶೃಂಗಾರ
ಮಂಡಿತಾಮಳಕೀರ್ತಿ ಪೂರ್ತಿಯ
ಖಂಡಿತೋತ್ತಮ ಗುಣಮಣಿಗಣಕ
ರಂಡನತುಳಿತ ಲಿಂಗಜಂಗಮಪಾದ[೧]ಸೇವಕನು[೨] ೧

ಖ್ಯಾತಶಾಪಾನುಗ್ರಹ ಸಮ
ರ್ಥಾತಿಶಯರೂಪಂ ಶಿವೈಕ್ಯಪು
ನೀತಮಾನಸನಪಗತಾಂಗವಿಕಾರಿ ದುಷ್ಟಾರಿ
ಪಾತಕಕ್ಷಯಕಾರಿ ಭಕ್ತ
ವ್ರಾತ ಚೇತೋರಂಜನಂ ರಿಪು
ಜಾತ ಭಂಜನನಾರ್ಯಜನ ಶೀಲಾನುಪಾಲಕನು ೨

---

೦ ರಾಗ : ವರಾಳಿ (ಅ, ಡಾ, ಚ, ಧ, ಪ); ಮಧುಮಾಧವಿ (ಮ); ಭೈರವಿ (ತ).
೧–೨ ಶೇಖರನು (ಥ).

CC-0. Jangamwadi Math Collection. Digitized by eGangotri

ಧರಣಿಯೊಳು ಚೆಂಗೊಂಡೆಯೆಂಬಾ
ಪುರವರದೊಳತ್ಯಂತ ಭಕ್ತಿ
ಸ್ಮರಣದಲಿ ಶಿವರಾತ್ರೆನೇಮಂ ಮಾಸಮಾಸದಲಿ
ನಿರುತದಿಂ ಪನ್ನೆರಡು ವರುಷಂ
ಬರೆ ಸಲಿಸಿ ಪದಿಮೂಜಿನೆಯ ವ
ತ್ಸರದ ಕಡೆಯಲಿ ಬಂದು ತಿರುವಾರೂರಿಂಗೆ ಮೆಜಿಸಿವ ೩

ಪರಮ ವಾಲ್ಮೀಕೇಶ್ವರನ ಮಂ
ದಿರದೊಳಚಲಿತ ಭಕ್ತಿಯಲಿ ಜಾ
ಗರವನೆಯ್ದಿಸಿ ಭಕ್ತರುಂ ತಾನಿಪ್ಪಗೋಷ್ಠಿಯಲಿ
ಇರುತಿರಲು ಗೋಪುರದೊಳಾಯವ
ಸರದೊಳನಘಂ ನಂಬಿಯಣ್ಣಂ
ಸರಸಿರುಹ ಪರಿಮಳದ ಕೋಮಳ ಕಾಯಕಾಂತಿಗಳ ೪

ಸರಸ ಕೀರಾಲಾಪದೊಳ್ಪಿನ
ಗುರುತರ ಸ್ತನಕಳಶಯುಗಳದ
ಪರಿಣಯನಸಮಾನಲೋಚಕಿನ ನೀಲಕಚಭರದ
ತರುಣಚಂದ್ರಿನಿಭಾಳಕೆದ ಪೀ
ವರ ಜಘನಯುಗದಲ್ಪಮಧ್ಯದ
ಪರಮೆನಾಚಿಯ ಮನೆಯೊಳಿರ್ದಾ ವಾಲ್ಮೀಕೇಶ್ವರನ ೫

ದೇಗುಲಕೆ ನಲವೇಱೆ ನಡೆತ
ಪ್ಪಾಗ ಪರಿಜನವಿಕ್ಕೆಲದೊಳನು
ರಾಗದಿಂದೋಲೈಸಿ ಬರುತಿರೆ ಕೇರಿಕೇರಿಯೊಳು
ಮಾರ್ಗಥಿಯರುಂ ಭಲರೆ ಭಲರೇ
ಚಾಗು ಚಾಗಿಗಳರಸ ಪುರುಷರ
ಭಾಗಧೇಯ ಎನುತ್ತ ಕೈವಾರಿಸುತ ಬಂರಿ ಮುಂದೆ ೬

೧–೨ ಗೋಂಚೆ (ಸ). ೩ ಲೂ (ಸ). ೪–೫ ಗೀತಾ (ಸ). ೬ ಕ (ತ, ಥ, ಧ, ನ, ಪ). ೭–೮ ಸಮಾಳಿಕ (ಕ, ಚ, ಥ, ಧ, ಪ, ಬ). ೯–೧೦ ತಿಯರು (ಡಾ, ಥ, ಧ, ಮ); ಧರುಗಳ್ (ತ, ನ). ೧೧ ಮಿ (ಕ, ಚ, ಥ, ಪ).

CC-0. Jangamwadi Math Collection. Digitized by eGangotri

ಗದ್ಯಪದ್ಯಾ[೧]ನಿಕರ[೨]ದಿಂದ ನ
ವದ್ಯ [೩]ಕಾವ್ಯಂ[೪]ಗಳಿನಲರ್ದು ಸು
ಹೃದ್ಯಮಾಗಲು ಸತ್ಕವೀಂದ್ರರು ಕೀರ್ತಿಸುತ್ತಿರಲು
ಜೋದ್ಯತರ ಶೃಂಗಾರಲಾವ
ಣ್ಯಾದ್ಯರೂಪ್ಪಗುಣಾವಳಿಗಳಂ
ವೇದ್ಯವೆಸೆಯಲು ಪಾಠಕರು ಭಟ್ಟರುಗಳಂಕಿಸಲು ೭

ಜೀಯ ಜೀಯವಧಾರೆನುತ್ತವೆ
ಗಾಯಕರು ತಾಳಂಗಳನುಗುಡೆ
ಗೇಯರಸವ ಲಹರಿಗಳಂ ದೆಸೆದೆಸೆಗೆ ಬೀಱುತಿರೆ
ಆ ಯತೀಂದ್ರರು ಪರಸಲೆಲ್ಲರು
ಘೇಯೆನುತ ನುತಿ[೫]ಸಲ್ಕಭೀಷ್ಟ
ಶ್ರೀಯನೀವುತ್ತೋವುತೆಡೆಗೆಡೆಗೊತ್ತಿ ನಡೆವುತ್ತ ೮

ಅತುಳಪದನಖಿಕಾಂತಿ ಧಾತ್ರೀ
ಸತಿಯುರೋರುಹ ಪದಕರತ್ನ
ದ್ಯುತಿ ವಿಳಸಿತಪ್ರಖ್ಯಮಾಗಲು ಭೂಷಣಾಂಶುಗಳು
[೬]ಅತಿದಿಶೇಭ[೭]ಶಿರೋಜಮೌಕ್ತಿಕ
ತತಿ ಮರೀಚಿಯನನುಕರಿಸಿ ರಾ
ಜಿತತನುಪ್ರಭೆಯುದಯದಿನಪಜ್ಯೋತಿಯಂತೆಸೆಯೆ ೯

ಸಾರದಶನಗಭಸ್ತಿಗಳು ಶೃಂ
ಗಾರಲಕ್ಷ್ಮಿಯ ಮುಖಮುಕುರ ವಿ
ಸ್ತಾರ[೮]ಭಾಸ್ವರ ಲೀಲೆಯಿಂ[೯] ಮಿಗೆ ಪ್ರಜ್ವಲಿಸುತಿರಲು
ಚಾರು ಲೋಚನರೋಚಿಗಳ್ ತಪೆ
ಸೇರಿ ವಾಲ್ಮೀಕೇಶ್ವರನ ಚರ
ಣಾರವಿಂ[೧೦]ದಾಮಂದ[೧೧]ಸುರುಚಿರ ವಿಸ್ಫುರಣಪೊಪ್ಪಿ ೧೦

೧–೨ ನೇಕ (ಚ. ಥ. ಪ). ೩–೪ ಪದ್ಯ (ಸ). ೫ ದಿ (ತ). ೬–೭ ವಿತತದಿಗಿಭ (ತ). ೮–೯ ಭಾಸ್ಕರ ಲೀಲೆಯಂ (ಸ). ೧೦–೧೧ ದದ ಮುಂದೆ (ಕ. ಚ. ಥ. ಪ).

CC-0. Jangamwadi Math Collection. Digitized by eGangotri

ಪರ ಮಕುಟಿಮಣಿಗಣಕಿರಣ ಮುಂ
ಜರಿಗಳಮರಾಚಳಕಲಿತ ಶೇ
ಖರ[1] ಲಸತ್ಶ್ರೀರಂಜಿಸಲು ಸುಕಟಾಕ್ಷತಿಯೊಳಿಸೆದು[2]
ಸ್ಮರಪರನ ನಿರವದ್ಯಕರುಣಾ
ಚಿರ[3]ಕಟಾಕ್ಷಸುಧಾ ಪ್ರಕಲ್ಪಿತಳ್
ಶರನಿಧಿಯೊಳೋಲಾಡುತಂ ವಿಟಕೋವಿದಂ ನಂಬಿ ೧೧

ಹೊಂಗತಾರಿಯ ಕೋಲುವಿಡಿದು
ಲ್ಲುಂಘಿಸುತ ಜಡಿಜಡಿದು ಚಿಮ್ಮುತ
ಹೊಂಗಿ ಮುಂಗೈದಂಡಿಗೊಡುತಂ ಜಾಜಿಲಡಿಯಿಡುತ
ರಂಗಿಸುತ ಮೊನೆಗಾಣಿಸುತ್ತಂ
ಸಂಗಡಿಗರಂ ಹಿಂಗಿಸುತ ತ
ನ್ನಂಗವಂ ತಾನೇಱಲಿಳಿಯಲು ನೋಡುತಾಡುತ್ತ ೧೨

ನೆಳಲನೀಕ್ಷಿಸುತಣಕಿಸುತಲ
ಪ್ಪಳಿಸುತಂ ಬಯಲಿಱಿವುತಂ ಕೋ
ಮಳೆಯ ಘಾವಮನೆಣಿಸುತಂ ಭುಜಯುಗವನುಬ್ಬಿಸುತ
ಎಳನಗೆಯ ಮೊಗವಲರಿಸುತ್ತಂ
ಹೊಳೆವ ಲೋಚನ ಲೋಕವಿಜಯಮ
ನೊಳಕೊಳುತ ಮೆಱಿವುತ್ತ ಬೆಬ್ಬನೆ ಬೆಱಿವುತೊಲೆವುತ್ತ ೧೩

ಹಿರಿಮ ವಿಟಚೇಷ್ಟೆಗಳಿನಾರಂ
ಸರಕುಮಾಡದೆ ನಂಬಿಯಣ್ಣಂ
ಪರಮ ಲೀಲೆಯೊಳುದ್ದ ಚಮ್ಮಾವುಗೆಗಳಂ ಮೆಟ್ಟಿ
ಸರಸರನೆ ನಡೆತಂದು ಮಾಹೇ
ಶ್ವರರಿಗೆಱಗದೆ ಕೈಮುಗಿಯದೀ
ಶ್ವರನಿಳಯಮಂ ಪೊಕ್ಕು ಪಡಿಯಂ ಬೇಡುತಿರಲಾಗಿ ೧೪

೧–೨ ಖಿರ ಸರಸ ಸಿರಿ ರಂಜಿಸಲು ವಿಕಟಾಕೃತಿಯೊಳಿಸೆದು (ಸ). ೩–೪ ಕಟಾಕ್ಷೋಪ
ಪ್ರಕಟತರ (ಕ, ಚ, ಥ, ಪ, ಮ); ಕಟಾಕ್ಷ ಪ್ರಕಟಿತಸುಧಾ (ಬ); ಕಟಾಖ್ಯ ಸುಧಾಪ್ರಕಟತರ (ತ).

CC-0. Jangamwadi Math Collection. Digitized by eGangotri

ಮಿಡುಮಿಡನೆ ಮಿಡುಕುತ್ತ [೧]ಕೋಪದಿ[೨]
ಘುಡುಘುಡಿಸಿ ಮೆಱಿ[೩]ಮಿಂಡನೆಂದನು
ಹೊಡವಡನು [೪]ನಂಬಿಸನು[೪] ಹೋದನು ದ್ರೋಹಿ [೫]ಇವನಾರೋ
ಮೃಡನ ಹೇರಾನೆಗಳನಿನಿತುಂ
ಗಡಣಿಗೊಳ್ಳದಹಂಕರಿಸಿದನು
ಕೆಡೆಬಿಗೆದ ನಮ್ಮ[೬]ಸಮಭಕ್ತರ ಹವಣನಱಿ[೭]ಯನಲಾ ೧೫

ತನಗೆ ವಾಲ್ಮಿಕದೇವನಡ್ಡಮೆ
ಯನಲನೇತ್ರಂ ಕೋಪಿಸಿದಡಂ
ತನಘಭಕ್ತರು ಕಾಯಲಾಪರದಲ್ಲದುಳಿದಂತೆ
ಘನತರೋದ್ಧತ ಭಕ್ತನಿಕರಂ
ಮುನಿದಡಂ[೮] ಕಾಯಲ್ಕೆ ಶಕ್ಯಮೆ
ಮನಸಿ[೯]ಜಾಂತಕನಾದಡೇಂ[೯] ಮುಂಗಾಣದಿಪ್ಪವನ ೧೬

ದೇಗುಲದೊಳಿರಲೀಸ[೯]ದಿರಿಯತಿ
ಬೇಗದಲಿ ಹೊಱವಡಿಸಿ ನೋಡಲಿ
ಕಾಗದವನನೆನುತ್ತಿರಲು ಜನವಚ್ಚರಿಯರಾಗೆ
ಆಗಳಾ ಪೂಜಾರಿಯೊಬ್ಬನು
ಕೈಗಳಂ ಮುಗಿದಯ್ಯ ಬಿನ್ನಹ
ವೀಗುಣಾಂಕನ ಮಹಿಮೆಯಂ ಕೇಳ್ದಱಿ[೭]ಯಿರೇ ಮುನ್ನ ೧೭

ನಚ್ಚಿಯಾ[೯]ತನ ಚೆಲುವ ಹಾಡಿಗೆ
ಮೆಚ್ಚಿಯೋ ನಿಜ ಭಕ್ತನಿಷ್ಠೆಗೆ
ಮೆಚ್ಚಿಯೋ ನಾವಱಿ[೭]ಯೆವಿದನೀ ವಾಲ್ಮಿಕೇಶ್ವರನು
ನಿಚ್ಚ ಸಾವಿರ ಹೊನ್ನ ಪಡಿಯಂ
ಮೆಚ್ಚಕುಡುಗದೆ ಕೊಡುವನಾತನೊ
ಳೊಚ್ಚತಂಗೊಂಡೇನನಾದಡೆ ಬೇಡಿದುದನೀವ ೧೮

೧–೨ ಕುಪಿತದಿ (ಆ, ಕ, ಚ, ತ, ಥ, ಪ, ಬ, ಮ). ೩–೪ ಶಂಕಿಸನು (ಕ, ಚ. ತ, ಥ, ಪ). ೫ ಡೇಂ (ತ). ೬–೭ ಜ ಹರಂಗಾದೊಡಂ (ಕ, ಚ, ಥ, ಪ): ಜಾರಿಗೆಯಾದೊಡಂ (ತ). ೮ ಯ (ಬ). ೯ ದಾ (ಥ, ಪ, ಮ): ನಾ (ಚ).

CC-0. Jangamwadi Math Collection. Digitized by eGangotri

ತನ್ನ ಮಗನಿವನೆಂದು ಮುದದಲಿ
ಮನ್ನಿಸುವನುಪಲಾಲಿ[೧]ಸುವನಾ
ಸನ್ನನಾಗೆಡೆಯಾಡುವಂ ವೇಲಿಯ ಮನೆಗೆ ತಾನೆ
ಜೆನ್ನೆಸೆವು ಸಕಳಾರ್ಥಯುತ ಸಂ
ಪನ್ನಚಯದಿಂ ತಣಿಸಿ ನಯವಿನ
ಯೋನ್ನತದಿ ನಂಬಿಗೆ ವಿಟತ್ವಮನೆಯ್ದೆ ಸಲಿಸುವನು ೧೯

ಸಲೆ ವಿಮೋಹಕನಂತೆ ಮೋಹಂ
ಗಳಲಿಯೊಬ್ಬೊಬ್ಬರ ಗುಣಂಗಳ
ನಲರು ಮಿಗೆ ಕೊಂಡಾಡುವಂ ನಾಗರಿಕನಂದದಲಿ
ಲಲಿತ ಸರಸೋಚಿತವಚನಮಂ
ಸಲಿಸುವಂ ಪರಿಚರಿಯೆಗಳುಮಂ
ಬಳಿಗೆಲಸಮಂ ಪೀಠಮರ್ದನನಂತೆ ಮಾಡುವನು ೨೦

ತೋಷಿಯಾಡಲದೇಕೆ ಪಲವಂ
ಮೂಜುಗಂಗಳ ಶಂಭು ನಂಬಿಗೆ
ಮಾಜುವೋಗಿದ್ದಹನೆನಲು ಕೇಳ್ದಾಗ ಮೆಜಿಮಿಂಡ
ಸೀಜುತಿವನೇ ನಂಬಿಯಾತನ
ಗಾಜುಗೆಲಸಕೆ ಶಂಕರಂ ಮನ
ಪೂಜಿ ನಿಚ್ಚಂ ಪಡಿಯನಿಕ್ಕುವನಹುದೆ ಲೇಸಾಯ್ತು ೨೧

ನಂಬಿದೀತನ ಭಕ್ತಿಯುಂ ಮನ
ದಿಬ್ಬುಗೊಂಡಾತಂಗೆ ಕೂರ್ಪ ತ್ರಿ
ಯಂಬಕನ ಕೂರ್ಮಗಳನೀಗಳೆ ನೋಡಿದಹೆನೆನುತ
ನಂಬಿಗಿಂಬಿಯ ನಂಬಿಗೊಲಿದಿಹ
ಶಂಭುಗಿಂಭು ಸಮಸ್ತ ಭಕ್ತಾ
ಡಂಬರಕೆ ಹೊಜಿಹೊಜಿಗೆನುತ ಹೊಯ್ಸಿದನು [೨]ಡಂಗುರವ[೩] ೨೨

---

೧ ಪಿ (ಸ). ೨–೩ ನಾದವನು (ತ, ಥ, ನ, ಬ).

CC-0. Jangamwadi Math Collection. Digitized by eGangotri

ಅತ್ತಲಿದ್ದವರೆಲ್ಲರದ್ಭುತ
ಚಿತ್ರರಾಗಲು ನೋಡುತಂ ತಲೆ
ಗುತ್ತಿಕೊಂಡಿಲ್ಲಮದು ನೀತಿಯದಲ್ಲ ಬಾ ಎನುತ
ಸುತ್ತಿ ಮುಖಮಂಟಪದೊಳೋಲಗ
ವಿತ್ತಲಿಳ ಭಕ್ತರ ಮಹಾಗ್ರಹ
ದೊತ್ತನಾಲಿಸಿ ಕೇಳುತಂ [೧]ನಿಜಭಕ್ತ[೨]ವತ್ಸಲನು ೨೩

ಭಕ್ತಿಯುಕ್ತಿಯನಧಿಕ ಭಯಮಂ
ಭಕ್ತದೇಹಿಕದೇವ ತನುವಂ
ವ್ಯಕ್ತಮಾಗಲು ನಂಬಿಯಣ್ಣಂಗಜಿಹಬೇಕೆಂದು
ರಕ್ತಿಯಿಂದಯ್ಯಾ ಎನಲ್ಕನು
ಶಕ್ತಿಯಿಂದೋ ಎನುತಮಿಪ ಪೂ
ರ್ವೋಕ್ತಪಚನಂಗಳನುಡುಗಿ ವಾಲ್ಮೀಕವಲ್ಲಭನು ೨೪

ಆಗಳತಿ ಸಾಕಾರರೂಪವ
ವಾಗಿ ನಡನಡುಗುತ್ತ ಹತ್ತಿರೆ
ಗಾಗ ಕೈಸನ್ನೆಯಲಿ ಕರೆವುತ್ತೊಡೆಯ ನಂಬಿಯನು
ಆಗ ತನ್ನುಡೆಗಚ್ಚಿಯನು ಬಲು
ಹಾಗಿ ಪಿಡಿಸುತ್ತಾತನಂ ತಲೆ
ವಾಗಿಸುತ್ತಂ ಭಯದ ಬಿತ್ತಂ ಬಿತ್ತಿ ಚಿತ್ರದಲಿ ೨೫

ಹೆದಱುತಂ ಮಾಹೇಶ್ವರರ ಕ
ಟ್ಟಿದಿರೊಳಿಯ್ತರಲಂಜಿ ಪನಿಯಾ
ಗದ ತೆಱಿದಿ ಜಲಪರಿಯ ದಿಕ್ಕಿಂಗಾಗಿ ತೊಲಗುತ್ತ
ಪವನಿಡುತಂ ಮೂಲೆಗಳಿಗೆ ಸ
ರಿದು ಸೊಡರುಗಳ ಮಱಿಸಿಗೊಳುತ್ತಂ
ಬೆದಱಿ ನೋಡುತ್ತತ್ತಲವರುಲಿವುಲಿವನಾಲಿಸುತ ೨೬

೧–೨ ಶಿವಭಕ್ತಿ (ಸ).

CC-0. Jangamwadi Math Collection. Digitized by eGangotri

ಸಲ್ಲಲಿತನವಪುಷ್ಪಕೋಮಳ
ಫುಲ್ಲಮಾಲಾಲಂಬಿ ಸಂಕುಲ
ನೋಲ್ಲಸನ ಪಜಿ್ತಗಳುಭಯ ಪಾರ್ಶ್ವಂಗಳಿಗೆ ಹೋಗಿ
ತಲ್ಲಣಿಸುತಂ ಕಂಪಿಸುತ್ತೆದೆ
ಝಲ್ಲಣಿಸುತಂ ಗರ್ಭಗೃಹಮಂ
ಮೆಲ್ಲಮೆಲ್ಲನೆ ಹೊಱವಡುತ ಸಾರ್ದಾಕದಪುಗಳಿಗೆ ೨೭

ಜಾಲಕಂಗಳನುಳಿದು ಮುಂದಕೆ
ಜೋಲಿ ನೋಡುತ್ತಗಲಿ ಕುಳ್ಳಿರು
ತೇಳುತಿರಲಿಂತಂಜಿ ಹೋಗಲ್ಕಂಜಿ ಹೋ ಎನುತ
ಕಾಲ ತಡಬಡಿಸುತ್ತ ನಿಲುತಂ
ಹಾಳಿಗೆಡುತಂ ಭಕ್ತಭೀತಿಗೆ
ಸೋಲುತಂ ವಾಲ್ಮೀಕವಿಭು ಸಂದಣಿಯೊಳೊಳಪೊಕ್ಕು ೨೮

ತೊಱಿಯದಿಹ ಪೂಜಾರಿಗಳ ಕ
ಣ್ಣಱಿಕೆಮಾಡಲ್ಕಂಜಿ ದೃಷ್ಟಿಗೆ
ನೆಜಿ ಕರಾಗ್ರವನಡ್ಡವಿಡುತಂ ಮಂಟಪದೊಳಿರ್ದು
ಹೊಱವಡುತ ದೇಗುಲದ ಹಿಂದ
ಕ್ಕಿಱಗೆಱಿಗಿ ನೋಡುತ್ತ ಹೋಗು
ತ್ತಱಿದು ಭಕ್ತರು ತನ್ನನಿಂತಱಿಯಟ್ಟುವರೊ ಬಳಿಕ ೨೯

ಹಿಂದೆ ಮುಂದೆ ಮರಳಿ ಮರಳಿ ಬೆಗ
ಡೊಂದಿ ನಡೆವುತ ಗಾಳಿಯದು ಗಿಱು
ಕಿಂದಡಳುಕುತ ಬಳುಕುತಂ ಮೊಳಕಾಲನೂಱಿತ್ತ
ನಿಂದು ನಿಂದು ನಿಲುಕಿ ನಿಲುಕಿ ಕೈ
ಗುಂದಿ ನೋಡುತ ದೆಸೆದೆಸೆಯನಾ
ನಂದವಳಿದುಳಿದುಳಿದು ಪೌಳಿಯ ಕಡೆಗೆ ನಸುಸಾರ್ದು ೩೦

---

೧ ಜೀ (ಚ). ೨–೩ ಉಸ್ (ತ, ನ). ೪–೫ ಎನುತ (ನ). ೬–೭ ಬೆಡಗೊಂದಿ (ಸ).

CC-0. Jangamwadi Math Collection. Digitized by eGangotri

ಅಲ್ಲಿ ಮುಂದಣ ಸುತ್ತುಗೋಂಟೆಯ
ಕಲ್ಲನೊಂದಂ ಪಾದದುಂಗುಟ
ದಲ್ಲಿಳೆಗೆ ಕೆಡೆನೂಂಕಿಯಾ ಕಂಡಿಯಲಿ ಹೊಱಿವಂಟು
ಎಲ್ಲಿಗೆಯ್ದುವೆವೆಲ್ಲಿ ಹೊಗುವೆವ
ದೆಲ್ಲಿ ಸಾರುವೆವೆನುತ ಕಳವಳ
ದಲ್ಲಿ ಮಿಗೆ ಕುಱುಜಂಘೆಯಂ ನಿಡುಜಂಘೆಗಳನಿಡುತ ೩೧

ಕು೦ದುಕುವರಿಯಲಿ ಪರಿದು ಪೇರೋ
ಟದಲಿ ಪ೨ರಿದೋಡುತ್ತವಾಯಾ
ಸದಿ ಬಳಲುತೊಯ್ಯನೆ ನಡೆದು ಹರಿದಾರಿಯಳತೆಯಲಿ
ಇದಿರೊಳೊಂದುದ್ಯಾನವನವಿರ
ಲದಱಿ ಸೊಬಗಂ ನೋಡುತಂ ಹೋ
ಗದೆ ಮತಿಭ್ರಮೆಗೊಂಡು ವಾಲ್ಮೀಕೇಶ್ವರನು ನಿಂದು ೩೨

ಊರಲಾ ಊರಲ್ಲಡವಿಯಹು
ದೂರಡವಿಯುಂ ಅಲ್ಲವಿದು ವಿ
ಸ್ತಾರಚಾರುದ್ಯಾನವನ ಉದ್ಯಾನವನವಲ್ಲ
ಊರಡವಿಯುದ್ಯಾನವನವಹು
ದೂರು ತಾನಲ್ಲದಡೆ ಸಾಕೀ
ಹೇರಡವಿಯಾಗಲಿ ಬಳಿಕ್ಕುದ್ಯಾನವಾಗಲಿದು ೩೩

ಎನುತ ಮೆಲ್ಲನೆ ಗಮನಿಸುತ್ತಂ
ಘನ ವನಾಂತರದೊಳು ಪೊಗುತ ಮು
ನ್ನಿನ ಪಥವನಂತಗಲಿ ಬಹು ತಿಂತಿಣಿಗಳೊತ್ತಿನಲಿ
ಪನಸುತರುಗಳ ಕೆಲದೊಳಾಮ್ರಾ
ವನಿರುಹಂಗಳ ೩ತರ೪ದೊಳೊಪ್ಪುವ
ವಿನುತ ಶೀತಳ ವಿಪುಳ ಕಾಸಾರವನೆಡದಲಿಕ್ಕಿ ೩೪

೧ಗು (ಸ). ೨ಪಿ (ಕ, ಚ, ಥ, ನ, ಮ). ೩–೪ಕೆಲ (ಸ).

CC-0. Jangamwadi Math Collection. Digitized by eGangotri

[೧]ಪಾರಿಜಾತ[೨] ಲವಂಗ ಮಧು[೩] ಮಂ
ದಾರ ಬಂದೂಕಾಮಳಕ ಘನ
ಸಾರ ಕುರವಕ ಮಾತುಳಂಗಂಗಳ ಬಲದೊಳಿಸೆವ
[೪]ಪಾರಿಭದ್ರಾ[೫]ಶೋಕ ಚಂಪಕ
ನಾರಿಕೇಳ ಕಪಿತ್ಥ ತಳ ಜಂ
ಭೀರ ಪಾಟಲ ಭೂರುಹಂಗಳ [೬]ಸೇರುವೆಗೊಳೆಯ್ದಿ[೭] ೩೫

ಮಾಲತೀ ಸುರಪುನ್ನಿಕಾ ನವ
ಮಾಲಿಕಾ ಕರವೀರ ಕುಂದ ತ
ಮಾಲವಿದ್ರುಮ ಚಂದನದ್ರುಮತತಿಯ ಸಾಲ್ವಿಡಿದು
ವಿಲತೀ ವಿರ್ಜೂರ ವಟಕೃತ
ಮಾಳ ಬಿಲ್ವಾಶ್ವತ್ಥ ಜಂಬೂ
ದಾಳಿಮಾ ದ್ರಾಕ್ಷಾಕ್ಷಮಾಜ ಸಮಾಜಮಧ್ಯದೊಳು ೩೬

ಪೂಗ ಪೂನಾಗಂಗಳೆಡೆಯಲಿ
ಮಾಗಧೀ ವಿಚಿಕಿಲ ಲತೆಗಳಲಿ
ಹೋಗಿ ಮೃದುಪಲ್ಲವಕುಸುಮ ಫಲಮಂಜರೀಪುಂಜ
ಯೋಗಸತ್ಪಭೆ ರಂಜಿಸಲ್ಕಾ
ವಾಗಳುಂ ಫಲಭಾರನತರಂ
ಭಾಗಪರಿವೃತಕಲ್ಪಭೂಜವನಗ್ರದಲಿ ಕಂಡು ೩೭

ನಿಂ[೮]ದು ಮುನ್ನಿನ ತನ್ನ ದೇಗುಲ
ವೆಂದು ಬಗೆದಡಿಯಿಡದೆ ಸಂಶಯ
ವೊಂದಿ ನೋಡುತ್ತೀ ಬನದೊಳಗಿದೊಂದು ದೇಗುಲವೊ
ಅಂದು ರಚಿಸಲ್ಪಟ್ಟ ಘನಹರಿ
ಚಂದನವೊ ಈ ಕಲ್ಪವೃಕ್ಷಾ
ಮಂದಶಾಖೆಗಳೋ ಕನಕಕಳಶಂಗಳೋ ಬಳಿಕ ೩೮

೧–೨ ಚೀರಬಿಲ್ವ (ತ, ನ). ೩ ರು (ತ, ನ). ೪–೫ ವೀರವೃಕ್ಷಾ (ತ, ನ). ೬–೭ ಸಾಲ್ಗ ೊಳಗೆಯು (ತ, ನ). ೮ ಬಂ (ಪ).

CC-0. Jangamwadi Math Collection. Digitized by eGangotri

ರಂಜಿಸುತ್ತಿಹ ವಿದ್ರುಮಲತಾ
ಸಂಜನಿತ ಮಂಜರಿಗಳೋ [೧]ಈ
ಮಂಜರಿ[೨]ಗಳೊಳಗಿದುವೆ[೩] ನವರತ್ನಪ್ರಭಾವಳಿಯೋ
ಮಂಜುಳಾಮಳ ಮಲ್ಲಿಕಾಧಿಕ
ಪುಂಜ ಕುಸುಮಂಗಳೊ ಲತಾಂತ ನಿ
ರಂಜನಾವಳಿಯಿದುವೆಮಗೆ ಸಾದೃಶ್ಯವಲ್ಲೆಂದು ೩೯

ನಳನಳಿಸಿ ಬೆಳೆಬೆಳೆದು ಕೋಮಲ
ವೆಳಸಿ ಬಳಸಿದ್ದೆಮಗೆ ಮಾಡಿದ
ನಿಳಯ ಸಂಕುಳವೋ ಕುಸುಮಗುಲ್ಮಾಳಿಗಳೊ ಎನಲು
ಲಲಿತತರ ಗುಲ್ಮಾವಳಿಯ ನಡು
ವಲರುತಿರ್ಪ ಮಹೀಜರಾಜಂ
ಗೊಲವು ಮಿಗೆ ತಂಬೆಲರ[೪]ನಿಂತೋ[೫]ರಂತೆ ಕೊಡಲಾಪ ೪೦

ಹೋಲಿಸುವಡೊಪ್ಪುವ ಪಸುರ್ವ
ಟ್ಟಾಲವಟ್ಟಂಗಳೊ ಚೆಲುವನಹ
ಬಾಳೆಯೆಲೆಗಳೊ ನೋಡಲೀ ಬಾಳೆಗಳೊ ಸೊಗಸಾಗಿ
ಸಾಲುಗೊಂಡಾವರಣವಾದ ವಿ
ಶಾಲ ಕಲ್ಪವನಲ್ಕೆ ಪೆಂಪಂ
ತಾಳಿದುದುವಿದು ಕಲ್ಪತರುವನುಮಾನವೇಕೆನುತ ೪೧

ಶೀತಳಪ್ರದವಾಗಿ ರಾ[೬]ಜಿಸು
ವಾ ತರುಚ್ಛಾಯೆಗೆ ಮನಸಿಜಾ
ರಾತಿ ಒಯ್ಯನೆ ಬಂದವನಿಯೊಳು ನಿಪತಿತಪ್ರಸವ
ಜಾತವಾಸನನಾಗೆ ಕುಳ್ಳಿ
ರ್ದಾತು ಬಿಡೆ ನಿಡುಸುಯಿಲುಗಳು ತಾ
ಬೀತೆದೆಯನೀವುತ್ತ ನಂಬಿಯ ಮೊಗವನೀಕ್ಷಿಸುತ ೪೨

೧–೨ವಾ । ಮಾಂಜರಿ (ಅ, ಡಾ). ೧–೩ ಇದು ಪಂಜರಿಸಿ ಪ್ರಭೆವೆತ್ತ (ತ). ೪–೫ ನಿತ್ತೋ (ಕ, ಚ, ಥ, ನ. ಪ, ಬ). ೬ ರಂ (ಬ).

CC-0. Jangamwadi Math Collection. Digitized by eGangotri

ಸಂಗತಾನನಘರ್ಮಪಾನೀ
ಯಂಗಳಂ ತೆಗೆತೆಗೆದು ಹಸ್ತ[೧] ತ
ಳಾಂ[೨]ಗುಳಗಳಿಂ ಬಿದಿರುತಂ ಕವಳೀದಳಾಚಲವ[೩]
ಸಂಗಮಲಯ ಸಮೀರಣಕ್ಕೆ ಮ
ನಂಗೊಡುತ ನಾನಾವಿಧಪ್ರಸ
ವಂಗಳತಿ ಸೌರಭ್ಯವಾಸನೆಗೊಡಲನೊಂದಿಸುತ ೪೩

ಪರಿಪರಿಯ ಘನಸಾರಚಂದನ
ಧರಣಿಜಾತಾಮೋದ ಶೀತಳ
ಪರಮ ಸಂಗತಿಗಂಗಮಂ ತಾನೊಗ್ಗು[೪]ತಂ ಶಿವನು
ಪರಿಮಳಾರ್ಥಾಗತ ಸಮದ ಮಧು
ಕರನಿಕರ ಪಕ್ಷೋಪಹತಿಗಂ
ಸುರಿವ ನವ ಮಕರಂದಧಾರೆಗೆ ಶಿರವನಾನುತ್ತ ೪೪

ಹಿಮಕಿರಣ ಶಕಲಾಭರಣ ನಿಜ
ನಮ್ರೀ[೫]ತವಿಗ್ರಹನೀ ಪರಿಯೊಳಾ
ಗಮನ ಪರಿತಾಪಪ್ರಶಮನವನಾಂತಿರಲು ಮುಂದೆ
ಸಮದವೊಡನೊಡಸುಡುಗೆ ನಂಬಿಗೆ
ವಿಮಳ ಭಕ್ತಿಭಯಂ ತೊಡಗಲಾ
ಸಮಯದಲಿ ಬಿನ್ನೈಸಿದನು ವಾಲ್ಮೀಕನಾಥಂಗೆ ೪೫

ದೇವ ನಮಗಿಂತಪ್ಪ [೬]ಘನ ಭಯ[೭]
ಭಾವಮೆಂತಾಯ್ತಯ್ಯ ಮದ್ಗುರು
ದೇವ ನಿನಿತಾತುರದೊಳಿಹ ಕಾರಣವಿದೇನೆನಲು
ದೇವನೆಂದನು ನಂಬಿಯಣ್ಣಂ
ಗಾವಗಂ ಬಹು ವೇದವೇದಾಂ
ತಾವಿರಳಿತ ಪ್ರರಾಣಶಾಸ್ತ್ರಾರ್ಥಪ್ರಮಾಣದಲಿ ೪೬

೧–೨ ಕರಾಂ (ಕ, ಚ, ಥ). ೩ ದ (ತ); ನ (ಥ, ಧ, ನ, ಪ). ೪ ಡ್ಡು (ತ, ನ). ೫ ಮಿ (ಸ).
೬–೭ ಭಯದನು (ಸ).

CC-0. Jangamwadi Math Collection. Digitized by eGangotri

ಎಮಗೆ ಮದ್ಭಕ್ತರ್ಗೆ ಭಕ್ತಿ
ಕ್ರಮದಿ [1]ಬೇಱೆ ವಿಭೇದವಿಲ್ಲೆಂ[2]
ತಮಳ ಭಕ್ತರಿಗಾ[3]ಗಳುಂ[4] ನಾಂ ಪ್ರಾಣವಾಗಿಹೆನು
ಎಮಗೆ ಭಕ್ತರು ಪ್ರಾಣವಾಗಿಹ
ರೆಮಗೆ ಭಕ್ತರ ತನುವೆ ತನು ಸ
ತ್ಯಮಿದು ಭಕ್ತರ ಸೇವೆಯೇ ಮತ್[5]ಪಾದಸೇವನೆಯು ೪೭

ಭಕ್ತತನುವೆ ಮದರ್ಪಣಂ ಮ
ದ್ಭಕ್ತನುತಿಯೇ ಮದ್ಗುಣಸ್ತುತಿ
ಭಕ್ತನಿಂದೆಯೆ ವಿವರಿಸಲು ಮತ್ ತತ್ತ್ವನಿಂದೆಯದು
ವ್ಯಕ್ತವೆಮ್ಮಯ ಜಂಗಮವನಾ
ಸಕ್ತಿಯಲಿ ಮನ್ನಿಸದಿರಲು ವಿಫ
ಲೋಕ್ತಿಯದು ಶಿವಪೂ[1]ಜನಂ[2] ಸ್ಥಾವರವು ನಿಶ್ಚಲವು ೪೮

ಯುಕ್ತಿಸುವಡಿದು ದಿಟವೆನುತ ಶ್ರುತಿ
ಸೂಕ್ತಿ ಸಾಱುವುದಾಗಿ ನಿಶ್ಚಳ
ಭಕ್ತವಶ್ಯವೆ ವಶ್ಯಮುಂ ಮದ್ಭಕ್ತವತ್ಸಲನು
ಭಕ್ತಲೋಕಾಶ್ರಿತನು ನಾ ಮ
ದ್ಭಕ್ತ ಚಿತ್ತಾಧೀನನಪ್ಪೆನು
ಭಕ್ತಿಗೊಲಿದಿಪ್ಪೆಂ ಪ್ರಸಿದ್ಧಂ ಕೇಳದಂತೆನಲು ೪೯

ಚಾರುಶೈವಾಚಾರಸಾರವಿ
ಚಾರಯುಕ್ತನುಮೇಶಭಕ್ತನು
ದಾರಶೀಲನು ಧರ್ಮಲೋಲಂ ಬಾಣನೆಂಬವನು
ಸೇರಿ ಶಿವಲಿಂಗಕ್ಕೆ ಸಾವಿರ
ಬಾರಿ ನಿತ್ಯಂ ನೇಮವಾಗಿರೆ
ವೀರಭಕ್ತಿಯೊಳೊಲಿದು ಪೂಜಿಸುತೋಲಗಿಸು[3]ತಿರಲು[4] ೫೦

೧–೨ ನುಜಕಿ ಬೇಱಕಿಂಬುದಿನಿತಿಲ್ಲಂ (ತ. ನ). ೨ ಲ್ಲಂ (ಸ). ೩–೪ ಮಗಂ (ತ. ನ). ೬–೭ ಜೆಯುಂ (ಬ). ೮–೯ ತಿಹನು (ತ, ಥ, ನ).

CC-0. Jangamwadi Math Collection. Digitized by eGangotri

ಇಳೆಯೊಳಾಗಲು ದೇಹಧರ್ಮಂ
ಗಳಿಗೆ ತೆಱಹಿಲ್ಲದಿರೆ ಬಾಣಂ
ಗಲಘುಬಾಹುಸಹಸ್ರಮಂ ಕೂರ್ತಿತ್ತೆ ನಾನಿಂತು
ಪಲವು ಕೈಗಳೊಳೊಂದೆ ಸೂಳವಿ
ಚಲಿತ ಭಕ್ತಿಯೊಳರ್ಚನೆಗಳಂ
ಸಲಿಸಿ ಮಾಡಲದಕ್ಕೆ ಸರ್ವರು ಚೋದ್ಯವೆನುತಿರಲು ೫೧

ವಿಣಧರಧರನೀಗಳಿತ್ತನು
ಬಾಣದನುಜಂಗೊಲಿದು ಸಾವಿರ
ಪಾಣಿಗಳನೆಂದೆನುತ ಭಕ್ತಾನೀಕವರ್ತಿಯಲಿ
ಕಾಣಲಿಯ್ತೆಂದಮಳ ತತ್ತ್ವಧು
ರೀಣ ಶಿವಕಥನಾನುಭವದಲಿ
ಮಾಣದಿರಲದನಱಿದು ಲಿಂಗಾರ್ಚನೆಗೆ ತೆಱಹಿಲ್ಲ ೫೨

ಹೊಸತಿದೇಗುವೆನೆನುತ ಲಿಂಗಾ
ವಸರಮಂ ಸಲಿಸಿ ಪ್ರಸಾದವ
ನೊಸೆದು ಸೇವಿಸುವನ್ನಬರ ಹುಗಲೀಯದಾರುವನು
ಮಿಸುಕದಿರ್ದಾ ದ್ವಾರದಲಿ ವಾ
ರಿಸುತ ಗೋಷ್ಠಿಯನಾರಿಗಾದಡೆ
ಉಸುರುತಾತನ ಬಾಗಿಲಂ ಕಾಯ್ವೆಂ ಭುವನವಱಿಯೆ ೫೩

ಧರಣಿಯೊಳು ಮುದುಗೊಂಡೆಯೆಂಬಾ
ಪ್ರರದೊಳಿಪ್ಪಳು ಲಿಂಗಪೂಜಾ
ನಿರತೆ ಸಜ್ಜನಭಕ್ತೆ ನಿಷ್ಠಾಭರಿತೆ ಪಿಟ್ಟಿವ್ವೆ
ಪರಮ ಮಾಹೇಶ್ವರರಿಗೊಲಿದನ
ವರತಮುಂ ಪರಿಚರಿಯಗಳನಾ
ಚರಿಸುತಿರೆ ಕಾವೇರಿಯಂ ಕಟ್ಟಿಸುವ ತವಕದಲಿ ೫೪

೧–೨ ಳೊಲಿದು (ಪ). ೩–೪ ಳ್ತಿಯೊಳು (ತ, ನ). ೫–೬ ರಿಯಾ (ಕ, ಚ, ಬ, ಮ). ೭ ಯೆನೆ (ಕ, ಚ, ಥ, ಪ, ಬ, ಮ). ೮–೯ ಗೊಂಟಿ (ಸ).

CC-0. Jangamwadi Math Collection. Digitized by eGangotri

ಜನಪನಾ ಕರಿಕಾಲಜೋಳಂ
ಮನೆಮನೆಗೆ ಊರೂರಿಗೆಲ್ಲಾ
ಜನಕೆ ಬಿಟ್ಟಿಯನೊರೆವ ಕೆಲಸಕೆ ಪ್ರೋಪ ಸಮಯದಲಿ
ವನಿತೆ ಕೇಳ್ ನಿನಗಾಗಿ ಪೋದಪೆ
ನೆನುತ ಪಿಟ್ಟವ್ವೆಯ ವಿನಿಶ್ಚಳ
ವಿನಯ ಭಕ್ತಿಗೆ ಕೂರ್ತಲಾ ನಾಂ ಬಿಟ್ಟಿಗವ್ವಿದೆನು ೫೫

ಭೂಮಿತಳದೊಳು ಕೇಳು ಮತ್ತಂ
ಸ್ವಾಮಿಭೃತ್ಯಾ[೧]ಚರಣೆ[೨] ನಿಯಮೋ
ದ್ದಾಮ ಸಂಬಂಧ ಕ್ರಿಯಾಸದ್ಭಾವ[೩]ಮಿಂಪೆಸೆದು[೪]
ಪ್ರೇಮದಿಂ ಶ್ರೀಕುಡಿಯೊಳಿಹ ಕಲಿ
ಕಾಮದೇವನು ರೂಪನೂರ್ಜಿತ
ಕಾಮದೇವನು ಭಕ್ತಿಯಲಿ ನಿಸ್ಸೀಮನಿಂತೆಂದ ೫೬

ಆರಿಗಱಿಪುವೆನಕ್ಕಟಾ ದಾ
ತಾರದೇವನ ಮೃದುಳ ಪದಸರ
ಸೀರುಹಂಗಳವೆಯ್ದೆ ಕಂದುವವೆನ್ನದೋರಂತೆ
ಕ್ರೂರಚಿತ್ತನು ನಂಬಿಯೆಂಬ ವಿ
ಚಾರದೂರನು ಮಂದೆವಾಳದಿ
ಮಾರಮರ್ದನನೆಂದಿನಿತು ಭಯವಿಲ್ಲದಾತ್ಮದಲಿ ೫೭

ಕಾಳುಗೆಲಸಂಗಳಿಗೆ ಕಳುಪುತ
ಸೂಳೆಯೆಡೆಗೆಡೆಯಾಡಿಸುತ ಕೀ
ಳಾಳಿನಂದದಿ ಮಾಡಿಸುತ್ತಿರಲಿಂತು ನೋಡುತ್ತ
ಪಾಳಿಯಿಲ್ಲದೆ ಸುಮ್ಮನಿಹುದಿದು
ಖೂಳತನವಲ್ಲಾ ಹೆಜಿರು ಕಂ
ಡಾಳಿಗೊಳರೇ ತಮ್ಮುಪಂ ವಾಲ್ಮೀಕವಲ್ಲಭನ ೫೮

೧–೨ ಚಾರ (ಪ). ೩–೪ ಮಿಗೆ ಸಂದು (ಸ). ೪ ಯೆ (ತ, ನ).

CC-0. Jangamwadi Math Collection. Digitized by eGangotri

ಸೂರಿಗಳು ಮೆಚ್ಚುವರೆ ತಿರುವಾ
ರೂರ ಭಕ್ತರುಪೇಕ್ಷಿಸಿವರಗ
ಜಾರಮಣನಂಗೈಸಬೇಡೆಂದುಸುರರಾತಂಗೆ
ವೀರಭಕ್ತಿಗೆ ಗುಣವೆ ಕಾಮವಿ
ಕಾರ ನಂಬಿಗೆ ಒಬ್ಬನಂ ಪರಿ
ಚಾರ[೧]ಕನನಿತ್ತಾ[೨] ಪರಮನಂ ಮಾಣಿಸುವರಿಲ್ಲ ೫೯

ಪಸರಿಸಲು ಪಲವೇಕೆನುತ [೩]ಕೋ
ಪಿಸುತ [೪]ಕಲಿ[೫] ಕಲಿಕಾಮನುಗ್ರತೆ
ಮಸಗಿ ನೋಡುತ್ತೊಡನೆ ಸಿಡಿಮಿಡಿಗೊಳುತ ನಿನ್ನೂರ
ಹೆಸರುಗೊಂಡಡೆ ನಿನ್ನ ವಾರ್ತೆಯ
ನುಸುರಿದಡೆ ಕೇಳಿದಡೆಯಂತ
ಪ್ಪಸಮವಿಕ್ರಮನಾದಡವನಂ ಪಿಡಿದು ಕೊಲಿಸುವೆನು ೬೦

ಆಯೆಡೆಯೊಳಾನೆಯ್ದಿ ವಿವಿಧೋ
ಪಾಯದಿಂದೊಡಬಡಿಸಿಯಾತನ
ಈಯೆಡೆಗೆ ತಂದೊಂದುಮಾ[೬]ಡೆನೆ[೭] ನಿಮ್ಮನಿಬ್ಬರನು
ಆಯತಿಗೆಗೆಟ್ಟೆಮ್ಮ ಬೊಪ್ಪನ
ಪಾಯದಿಂ ಸಲೆ ನಿಮ್ಮ ಬೊಪ್ಪನ
ಕೈಯೊಳೇಂ ಕೈಯಾಂತುಕೊಂಡೆನೆ ಪಳೆಯ ಸಾಲವನು ೬೧

ಬೇಡಿದಾಗಳೆ ನಿನಗೆ ಧನಮಂ
ನೀಡಿಕೊಡುವುದು ಬಳಿಗೆಲಸಮಂ
ಮಾಡಿ ತೋಱುವುದೊಲಿದು ನಿನ್ನೊಡನಾಡುತಿಹುದೆಲ್ಲ
ನೋಡೆ ಭಕ್ತಿನಿಮಿತ್ತವಲ್ಲಾ
ಜೂಡಿಸುವ ಎಮ್ಮಸಮಭಕ್ತರ
ಕೂಡೆ ಗರ್ವಿಸಿ ನಿಲಲದಾವ ಸಮರ್ಥನೈ ನೀನು ೬೨

೧–೨ ನಿತ್ತಾ ನೀ (ಪ). ೩–೪ ತಾನಸಮ (ತ, ನ). ೪–೫ ಲಾ (ಪ). ೬–೭ ಡಿದೆ (ಸ).

CC-0. Jangamwadi Math Collection. Digitized by eGangotri

ವಿದಿತವಲ್ಲಾ ನಿನ್ನ ಸಂಸ
ರ್ಗದೊಳೆಮಗೆ ತಾಂ ದೋಷಗುಣವಾ
ದುದುಮದಲ್ಲದೆ ಭಾವಿಸು[೧]ವಡಿಂ[೨]ತೆಮಗೆ ಭಕ್ತರಿಗೆ
ಹೃದಯದೊಳಗಗಲಿಕೆಯದುಂಟೇ
ಸದಮಳಾತ್ಮರ ಚಿತ್ತಪದ್ಮವೆ
ಸದನವೆಮಗಿದು ಎಮ್ಮ ಮನವೇ ಮನೆಯವರಿಗೆನುತ ೬೩

ಇರದಿನಿತು ವೃತ್ತಾಂತ[೩]ರಂಗಳ
ನು[೪]ರಗಕಟಕಂ ನಂಬಿಯಣ್ಣಂ
ಗೊರೆದು ಭಕ್ತರ ಮಹಿಮೆಯಂ [೫]ಭಕ್ತರ[೬] ಘನತ್ವವನು
ಪರಮಭಕ್ತರ ಚರಿತೆಯಂ ವಿ
ಸ್ತರಿಸಿ ನಯಮುಂ ಸದುವಿನಯಮುಂ
ಸರಸ ಭಕ್ತಿಭಯಂಗಳಂ ಶಿವತತ್ತ್ವನಿರ್ಣಯವ ೬೪

ತಿಳುಪಿ ಜಂಗಮಲಿಂಗ ಭಕ್ತಿ
ಸ್ಥಳಮನಾ ತ್ರಿವಿಧಪ್ರಸಾದ
ಸ್ಥಳಮನಮಳಾಚಾರಪದಮಂ ತೋಱಿ[೭]ವಡೆ ನಂಬಿ
ಇಳೆಯೊರಸಿ ಸಾಷ್ಟಾಂಗವೆಱಗಿ ಮು
ಕುಳಿತ ಕರಯುಗನಾಗಿ ಮನ್ಮಥ
ದಳನೆ ಮದ್ಗುರುಮೂರ್ತಿ ಶಾಶ್ವತ ಬಹಳ[೮]ಸಿತ[೯]ಕೀರ್ತಿ ೬೫

ಎನ್ನೊಳಾವರಿಸಿರ್ದ ಪಟು ಗ
ರ್ವೋನ್ನತಿಯನಪಹರಿಸಿ ಸದ್ಗತಿ
ಯನ್ನಿರೂಪಿಸಿ [೧೦]ನಿಮ್ಮ[೧೦] ಜಂಗಮ ಭಕ್ತಿ[೧೧]ಶ್ರದ್ಧತೆಯಂ[೧೨]
ಎನ್ನೊಳೊಂದಿಸಿ ನೀವು ಸಲಹಿದಿ
ರಿನ್ನು ಜಗದೊಳು ಧನ್ಯನಾದೆನು
ಎನ್ನ ಜನ್ಮಂ ಸಫಲವಾಯಿತ್ತಲ್ಲಿಗಾನೆಯ್ದಿ ೬೬

೧–೨ ವುದಿಂ (ಸ). ೩–೪ ಶರಣರ (ತ, ನ). ೭–೮ ಸತ್ (ಕ). ೯–೧೦ ಲಿಂಗ (ಸ). ೧೧–೧೨ ತದ್ಗತವ (ಸ).

CC-0. Jangamwadi Math Collection. Digitized by eGangotri

ನಾಡೆ ದೈನ್ಯಂಬಟ್ಟಭಯಮಂ
ಬೇಡಿ ಪಾಠಕನಾಗಿ ಸಲೆ ಕೊಂ
ಡಾಡಿ ಶರಣಂಬೊಕ್ಕು ಪೊಡ[೧]ವಂಟು[೨] ಪ್ರಸಾದಕ್ಕೆ
ನೀಡಿ ಕೈಯಂ ಪ್ರಾರ್ಥನೆಗಳಂ
ಮಾಡಿ ಭಕ್ತರ ಕರುಣವಡೆವೆನು
ನೋಡು ನಿನ್ನಾತ್ಮಜನ ಭಕ್ತಿಯ ನೀವೆನುತ ನಂಬಿ ೬೭

ತೊಡಗಿಯಭಿಮುಖನಾಗಿ ಭಕ್ತರಿ
ಗೆಡೆಗೆಡೆಗೆ ಸಾಷ್ಟಾಂಗವಂದನ
ವಿಡುತ ಘಮ್ಮನೆ ತಾಳವಂದನೆಗೆಯ್ದು ಹೊಡವಂಟು
ನಡೆವುತಂ ವೇಳಾನುಕೂಲ
ಕ್ಕಡರ್ವ ರಾಗಂಗಳು ಪಿರಿದು ಪರಿ
ವಡೆಯೆ ತಿರುಪಾಡಂಗಳಂ ವಿರಚಿಸಿ ಪುರಾತನರ ೬೮

ವರ ಚರಿತೆಗಳನೆಯ್ದೆ ನಾದಸ
ಭರಿತಮಾಗಿರೆ ಪಾಡುತೊಬ್ಬೊ
ಬ್ಬರ ಮಹಾಭಕ್ತರ ಮೆಜಿಮಿಣಿಗಳಂ ಶಿವನ ಮುಂದೆ
ಪರಮ ಭಕ್ತನು ನಂಬಿ ಹೊಗಳುವ
ಪರಿಯದೀ ಪರಿ ಕೇಳು ನೀನೆನು
ತೊರೆದಪನು ಬಸವಂಗೆ ಮಡಿವಳ ಮಾಚಿದೇವಯ್ಯ ೬೯

ಅಂತು ಸಂಧಿ ೨೫ಕ್ಕಂ ಪದಗಳು ೧೪೪೩ಕ್ಕಂ

ಮಂಗಲಂ ಮಹಾಶ್ರೀಶ್ರೀಶ್ರೀ

೧-೨ ಮಟ್ಟು (ತ, ನ).

CC-0. Jangamwadi Math Collection. Digitized by eGangotri

ಸಂಧಿ : ೨೬

*

ಸೂಚನೆ : ಹರಗಣಂಗಳ ಚರಿತೆಗಳನತಿ
ಸರಸಮಾಗಲು ನಂಬಿ ಪೊಗಳುವ
ಪರಿಯನೊರೆದನು ಮಾಚಿದೇವಂ ಬಸವರಾಜಂಗೆ

ಲೀಲೆಯಿಂ ಲಿಂಗಕ್ಕೆ ತತ್ಪ್ರೇ
ಕಾಲನೇಮವೆ ಭಕ್ತಿಗಿಂತನು
ಕೂಲಮಾಗಲು ಚಂದನಮನರ್ಪಿಸುತಿರಲು ತನ್ನ
ಮೂಲಧನವೇಸುಂಟದೆಲ್ಲವ
ನೋಳಿಯಲಿ ಚಂದನಕೆ ಸವೆಯಲು
ಮೇಲೆ ಕಡುಬಡತನವಡಸಿರಲು ಮುಂದೆ ಚಂದನವ ೧

ಎಲ್ಲಿ ಏಪರಿಯಿಂದ ದೊರಕಿಸ
ಲಿಲ್ಲದಿರೆ ನಿರ್ಣೈಸಿಯೆನ್ನ
ಲ್ಲುಳ್ಳುದೆಂತಾ ಭಕ್ತಿಯುಳ್ಳುದದಲ್ಲದರ್ಥವನು
ಉಳ್ಳುದುಳ್ಳುದೆ ಚಿತ್ತದಲಿ ಪರಿ
ವಿಲ್ಲದಿಪ್ಪುದೆ ಭಕ್ತಿಯಿಲ್ಲದು
ದಲ್ಲದರ್ಥವದಿಲ್ಲದಿಲ್ಲದುದೇ ಹೆದಱಲೇಕೆ ೨

---

* ರಾಗ : ನಾಟ (ಡಾ); ಸೌರಾಷ್ಟ್ರ (ತ); ಆಹಿರ (ಧ, ಪ).

CC-0. Jangamwadi Math Collection. Digitized by eGangotri

ತನುವಿರಲು ಮೇಣ್ ಮನವಿರಲು ಸು
ಮ್ಮನೆ ಕಳಕಳಿಸುತಿರ್ದಡೀ ವಂ
ಚನೆಗೆ ಮೆಚ್ಚುವನೇ ಮದೀಶ್ವರನೆಮ್ಮ ಮನಮುಟ್ಟಿ
ತನುವನೆಲ್ಲವನೆಯ್ದಿ ಪೊಸ ಚಂ
ದನಮದಾಗಲು ತೇದು ತೇದಿಂ
ತನುನಯದಿ ದಿನದಿನದ ನೇಮಂ ತಪ್ಪದರ್ಚಿ[೧]ಸುವೆ ೩

ಕಡೆಗೆ ನೆತ್ತರು ಪೊಣ್ಮೆದಡೆ ನಯ
ವುಡುಗಿದಡೆ ಮೃದುವಾಗದಡೆ [೨]ಜಿಗಿ
ಯಡಗದಡೆ ಬೇಱಿ[೩]ಕೊಂದು ನಾತಡೆ ಜೆಲುವ ಚಂದನದ
ಪಡಿಯನಿಸದಡೆ [೪]ಲೇಪನಂಗೆ
ಯ್ವೆಡೆಯೊಳ್[೫]ಳಿದಡೆ ತನ್ನ ಗುಣವೀ
ಯೆಡೆಯೊಳಿನಿತುಂ ತೋಱಿ[೬]ದಡೆ ವಾಸನೆಗೆ ಬಾರದಡೆ ೪

ಕಂಪಿನಲಿ ಸಾಮಾನ್ಯಮಾದಡೆ
ತಂಪಿನೊ[೭]ಳಗಣು[೮] ಕೊಱಿತೆಯಾದಡೆ
ನುಂಪಿನಲಿ ಕುಂದಿದಡೆಯನುಲೇಪನಕೆ ನೆಱಿ[೯]ಯದಡೆ
ಇಂಪನೊಡಲಿಂಗೀಯದಿರ್ದಡೆ
ಕೆಂಪು ಮಾದಡೆ ಗಂಧಕಾಂತಿಯ
ಸೊಂಪು ಬಱಿತಡೆ ಬಳಿಕಲಾ ಎನಗೀಶ[೧೦]ನೊಡನಂಕ್ ೫

ಹಲವ್ಮಸುರಲೇಕೆನುತ ತನ್ನಯ
ಬಲದ ಮೊಳಕೈ ಸಾಣೆಕಲ್ಲಲಿ
[೧೧]ನಿಲಿಸಿ[೧೧] ತವೆ ತೇದುತ್ತಮ ಶ್ರೀಗಂಧಮಂ ಪಡೆದು
ಮಲಹರಂಗರ್ಚಿಸಿ ಭಜಿಸಿ ತಾ
ನೊಲಿಸಿ ಹೊಮ್ಮಾಡದಲಿ ರಜತಾ
ಚಲಕೆ ಕಾಯಂವೆರಸಿ ನಡೆದಣುಮೂರ್ತಿಯರ ಬಂಟ ೬

೧ರ್ಚಿ (ಸ). ೨ಬಿ (ಸ). ೩–೪ಪ್ರಾಸುವಲಿಯೊ । ಕ್ಕಡೆತೆರ (ಕ, ಚ, ಥ, ಪ, ಮ). ೫ಱಿ (ತ, ನ). ೬–೭ ಳಿನಿತು (ಸ). ೮–೯ ನೊಳಗಂಕಾ (ಸ); ನೋಡನಕಾ (ಬ). ೧೦–೧೧ ಪೊಳೆಯೆ (ಸ).

CC-0. Jangamwadi Math Collection. Digitized by eGangotri

ಪ್ರಾಣಲಿಂಗಕೆ ನಿತ್ಯವಿಧಿಯಲಿ
ಜಾಣಭಕ್ತನು ಸುವ್ರತದಿನ
ಕ್ಷೀಣರತಿಯೊಳಖಿಂಡ ದೀಪಸಹಸ್ರಮುಜ್ವಲಿಸೆ
ಮಾಣದಿರುಳುಂ ಪಗಲು ಪ್ರೊತ್ತಿಸಿ
ಮೇಣಿದಱ ನೆವದಿಂದಲರ್ಥ
ಶ್ರೇಣಿಯೆಲ್ಲಂ ತೀರಲದಕನುಮಾನವಂ ಬಿಟ್ಟು ೭

ತನುವುಳಿಯಲಿಲ್ಲರ್ಥವೆಯ್ದಲು
ತನುವನರ್ಪಿಪ ಸಮಯವಾಯಿತು
ತನುಗೆ ಶಿರಸಿಂಗುರಿಗೊಳಿಸಿ ಪೆರ್ಮಳಗನಿಕ್ಕುವೆನು
ಎನುತ ಬಿಚ್ಚಿದ ಕೂದಲಂ ಧಿ
ಕ್ಕನೆ ಕೃಶಾನುವಿಗೊಡ್ಡಿ ಪಾರ್ವತಿ
ಯಿನಿಯನಂ ಮೆಚ್ಚಿಸಿದ ಕಡವಳ ನಂಬಿಯರ ಬಂಟ ೮

ಲೇಸೆನಿಪ ಮಹಿಷಾಕ್ಷಿಧೂಪದ
ಭಾಷೆ ನಡೆಯಂಲು ಮತ್ತೆಯುಂ ಪ್ರೋ
ಲ್ಲಾಸದಿಂ ಮೂಱವಸರದೊಳಂ ಪ್ರಾಣನಾಥಂಗೆ
ಭಾಸುರಜ್ಯೋತಿಗಳಿಗರ್ಘವ
ನೋಸರಿಸದಿಂತರ್ಪಿಸುತ್ತಿರೆ
ನೈಸಱಿಲಿ ಪೆಂಡಿತಿಯ ಮಂಗಳಸೂತ್ರವದು ಮೊದಲು ೯

ಇಂದು ನಾಳೆನ್ನದೆ ದಿನಂಪ್ರತಿ
ಯಿಂದೆ ಧನವಂ ಸಲಿಸಲಿತ್ತಲು
ಹಿಂದೆ ವಸುಧೀಶಂ ತಿರುಪರಂಧಾಮನೆಂಬವನು
ವಂದಿಸುವ ನಿಜನಾಗನಾಥನ
ಮುಂದೆ ಪನ್ನಗಕನ್ನಿಕೆಯರೆ
ಯ್ತಂದು ಮಂಜುಳರೀತಿಯಲಿ ಪಾಡುತ್ತಿರಲು ಸೋಲ್ತು ೧೦

---

೧ ಱಿ (ತ, ನ). ೨–೩ ತದ (ತ, ನ). ೪–೫ ನೀಸರಲಿ (ಸ). ೬–೭ ಮೊದಲಾಗಿ (ಕ, ಚ, ಥ, ಮ).

CC-0. Jangamwadi Math Collection. Digitized by eGangotri

ನಾಗನಾಥನು ಮುಂದೆಸೆಗೆ ನಸು
ಬಾಗಿರಲು ಕಂಡವನಿಪಂ ಬೆಱ
ಗಾಗಿ ನೆಟ್ಟನೆ ನಿಂದಿರಿಸಲಾಱದೆ ಮಱುಗುತಿರಲು
ಆಗಳರಸನ ಪೊರೆಗೆ ಭಕ್ತನು
ಹೋಗಿ ಸಸ್ನೇಹಾನುಪೂರ್ವಕ
ವಾಗಲಿಂತೆಂದನು ತನಗೆ ಗುಗ್ಗಳವನೊಲಿ[೧]ವೈಸುತ್ತ ೧೧

ತಂದುಕೊಟ್ಪಡೆ ಸಾಕು ನೆಟ್ಟನೆ
ನಿಂದಿರಿಸುವೆಂ ಭಾಳನೇತ್ರನ
ನೆಂದೆನಲು ಮಹಿಷಾಕ್ಷಿಧೂಪವನೊಂದು ರಾತಿಯನು
ಮುಂದೆಯೊಪ್ಪಿಸುತಂ ನೃಪಾಲನು
ವಂದಿಸಲು ಕೈಕೊಂಡು ಪರಮಾ
ನಂದಮೊಂದಿ ಶಿವೈಕ್ಯನೆಲ್ಲಾ ಲೋಕ[೨]ವಱಿತಿರಲುಳ ೧೨

ಒಂದು ಪಟ್ಟಾಪಳಿಯ ಚಿಂದಿಯೊ
ಳೊಂದೆಸೆಯೊಳೀಶ್ವರನೊಡನೆ ಬಲು
ಹೊಂದಿ ಸಂಧಿಸಿ ಒಂದು ದೆಸೆಯಂ ಕೂರಲಗಿನೊಡನೆ
ಬಂಧಿಸುತ್ತಾ ಶಸ್ತ್ರಮಂ ಧರ
ದಿಂದೆ ತನ್ನಯ ಕೊರಳಿಗಾನಿಸಿ
ಹಿಂದುಹಿಂದಕ್ಕೊತ್ತಿ [೩]ನಿಗುರಲು[೪] ತದವಸರದಲ್ಲಿ ೧೩

ಎಂದಿನಂದದಿ ನಾಗನಾಥಂ
ನಿಂದು ಸನ್ನಿಧಿಯಾಗಿ ತತ್‌ಕ್ಷಣ
ವಿಂದುಕಳೆ ಪಿಂಗಳ ಜಟಾಬಂಧದ ನೊಸಲಕಣ್ಣಿ
ಮಂದಹಾಸಂಬೆರಸಿ ಕರುಣಿಸ
ಲಂದು ಮೆಱಿದಪವರ್ಗ ಪದವಿಗೆ
ಸಂದ ಗುಗ್ಗಳ ಕಲಿಯನಾರಾಳಿನ ಶಿಶುವು ನಾನು ೧೪

೧–೨ ವನಿತಂ (ತ, ನ). ೩–೪ ನೋಡುತಿರೆ (ತ, ನ). ೫–೬ ನೂಂಕಲು (ಸ).

CC-0. Jangamwadi Math Collection. Digitized by eGangotri

ಮತ್ತೆಯುಂ ಪ್ರಾಣೇಶ್ವರಂಗೆ ಸು
ಚಿತ್ತದಲಿ ಮೂಱಿವಸರಂ ಬಿಡ
ದುತ್ತಮದ ರಾಜಾನ್ನದಕ್ಕಿಯ ಬೋನವಂ ಮಾಡಿ
ಇತ್ತು ತಲ್ಲಿಂಗಪ್ರಸಾದವ
ನರ್ಥಿಯಿಂ ಭೋಗಿಸಲು ತನ್ನಯ
ವಿತ್ತವೆಲ್ಲಂ ತನ್ನಿಮಿತ್ತವೆ ಸವೆಯಲಾ ಆಯ್ಮ ೧೫

ಮೇಲುಪಾಯವದಿಲ್ಲದಿರೆ ಕುಡು
ಗೋಲನೊಂದುವನಳವಡಿಸಿ ಕೈ
ಕೂಲಿಯಂ ರಾಜನದ ನೆಲ್ಲಿಂಗೆಂದೊಡಂಬಡಿಸಿ
ಲೀಲೆಯಿಂ ಮಾಡುತ್ತ ಹಿಡಿದ ಸು
ಶೀಲವಂ ನಡೆಸಲ್ಕನಿತಱಿಲಿ
ಕೂಲಿ ಹುಟ್ಟದೆ ನಿಟ್ಟುಪಾಸದೊಳೇಳು ದಿನವಿರಲು ೧೬

ಎಂತೊ ಕೇಳ್ ಮಾನಕ್ಕಿ ದೊರಕಲು
ಸಂತಸದಿ ಕೊಂಡಧಿಕ ಸಂಭ್ರಮ
ವಾಂತು ಪರಿತರಲೆಡಪೆ ಅಕ್ಕಿ ಧರಾತಳ[೨]ದೊಳೊಗಲು[೩]
ಎಂತುವಕ್ಕಿಯನೆತ್ತಬಾರದೆ
ಮುಂತೆ ಗದ್ದೆಯ [೪]ಬೀಟಿ[೫]ಗಳೊಳಿಳಿ
ದಂತುಳಿಯೆ ಚಿಂತಿಸುತ ಭಕ್ತನು ತನ್ನೊಳುಮ್ಮಳಿಸಿ ೧೭

ಪನ್ನಗೇಂದ್ರಾಭರಣ ನಿಮಗೆಂ
ದುನ್ನಿಸಿದ ಚಿಲುವಕ್ಕಿಯವು ವಿ
ಚ್ಛಿನ್ನವಾದವಕಟಕಟಾ ನಾಂ ಪ್ರಾಣವಂ ಬಿಡುವೆ
ಇನ್ನು ಸಂಶಯವಿಲ್ಲೆನುತ ಚಿ
ತ್ತನ್ನಲಿದು ಹಿಂಗಚ್ಚಿಯೊ[೬]ಳಗಿಹ[೭]
ತನ್ನ ಕುಡುಗೋಲಂ ತೆಗೆದು ಕೊರಳಂ ಪಱಿದುಕೊಳಲು ೧೮

೧ತ (ಕ. ಚ, ಮ). ೨–೩ಕ್ಕೊಗಲು (ಸ). ೪–೫ಬಟ್ಟೆ (ಆ, ಕ, ಥ, ಮ). ೬–೭ಳೆಸೆವ (ಸ).

CC-0. Jangamwadi Math Collection. Digitized by eGangotri

ತದವಸರದೊಳುಮೇಶನಾತನ
ವಿದಿತ ಭಾಷೆಗೆ ಮೆಚ್ಚಿ ಸಮ್ಮದ
ಪೊದಗೆ ಸನ್ನಿಧಿಯಾಗಿ ಕರುಣಾದೃಷ್ಟಿಯಲಿ ನೋಡಿ
ಸದಮಳಾವಿರಳಾಪ್ತನರ್ಘವ
ಪದವಿಯಲಿ ಸಂಪ್ರಾಪ್ತನಾದ
ಗ್ಗದ ಮಹಿಮನರಿವಾಳತಾಂಡಾರಿಯರ[೧] ಮಗ[೨] ನಾನು ೧೯

ಇಳೆಯೊಳೆಸೆವಾ ಪಾಂಡ್ಯಮಂಡಲ
ದೊಳಗೆ ಮತ್ತೆಯು ಕಾಯಕವ ಬೆಂ
ಬಳಿಯನಾವುದನಱಿಯನಾಗಿಯು ಬೇಱುಪಾಯದಲಿ
ಬಲೆಯನೊಂದಂ ಗಳಿಸಿ ನಿಚ್ಚಂ
ಬಲೆಯನುದಕದೊಳಿತ್ತಿ[೩] ಬೀಸಲು
ಬಲೆಗೆ ಮೊದಲಲಿ ಸಿಕ್ಕಿದಾ ಮೀನಂ ತೆಗೆದು ಕಳೆದು ೨೦

ಆದು ಶಿವಪ್ರಿಯವೆಂದು ಬಿಡುವಂ
ಮುದದೊಳಿಂತಹ ನೇಮವಾಗ
ಲ್ಮುಳಿದ ಜಲಚರನಿಚಯವೆಯ್ದಂಗದಿಯೊಳಗೆ ಮಾಱಿ
ಆದಱ ಲಬ್ಧಿಯೊಳಾದೊದಗಿನಿಂ
ಪದುಳದಿಂ ಜಂಗಮಕುಲಕೆ ಮಾ
ಣದೆ ದಿನಂಪ್ರತಿ[೪] ಮಾಡುತಿಂತುಂ ಕಿಱಿದಿನಂ ಸವೆಯೆ ೨೧

ತನಗೆ ಬೇಂಟೆಯುವೆರಡು ಮೂಱ್ದಿನ
ತನಕ ಹರಿಯದಡುಮ್ಮಳಿಸಿ ಮಱಿ
ದಿನ ಬಲೆಯನೊಯ್ದೆತ್ತಿಹಾಕಲು ಮೊದಲ ಬಲೆಯಲ್ಲಿ
ವಿನುತ ರತ್ನಾಕ್ಷಿಗಳ ಪೊಸ ಕಾಂ
ಚನದ ಮತ್ಸ್ಯವು ಸಿಕ್ಕಿಬರಲಾ
ಅನಘನೀಶಾರ್ಪಿತವೆನುತ್ತದನಲ್ಲಿಯೇ ಬಿಟ್ಟು ೨೨

೧–೨ ತನಯ (ಥ, ಪ). ೩–೪ ಳೆಲ್ತಿ (ಆ, ಡಾ, ಕ, ಚೆ. ಬ); ಳಲ್ಲಿ (ಥ, ಪ). ೫–೬ ದಿನ ದಿನಂ (ಥ).

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 1018
CC-0. Jangamwadi Math Collection. Digitized by eGangotri

ಬಳಿಕ ಹಾಯ್ಕಲು ತತ್‌ಸುವರ್ಣದ
ಜಲಚರವೆ ಬರಲಾ ಹೊಳೆಯನುಳಿ
ದಲರಿ ಬಲೆಯಂ ಬೀಸಲೆಂದಿನ ಮತ್ಸ್ಯವೇ ಬರಲು
ಸಲೆ ಬಿಡುತ್ತಿರೆ ಸಲೆ ಬರುತ್ತಿರೆ
ಸಲೆ ಬಿಡುತ್ತಿರೆ ಜಾಲಮುಖದಲಿ
ಹೊಳೆಹೊಳೆದು ಹಗಲೆಲ್ಲವಾ ಮತ್ಸ್ಯವೆ ತೊಡಕಿ[೧] ಬರಲು ೩೩

ಮಲಹರಪ್ರೀತ್ಯರ್ಥಮಾಗಿಹ
ಜಲಚರವನಾತ್ಮಾರ್ಥವಾಗಿದ
ಕೊಳುವಿದನುಚಿತವೆನುತ ಮನೆಗೆಯ್ತಂದು ಆ ಇರುಳು
ಕಳೆದು ಮುನ್ನಿನ ತೊಱೆಗೆ ಹೋಗದೆ
ಬಳಿಕ ಮೂಡಣದೆಸೆಯ ಹೊಳೆಯಲಿ
ಬಲೆಯನಿಕ್ಕಲು ಮಗುಳೆಯಾ ಮತ್ಸ್ಯವೆ ಬರಲು ಬಿಟ್ಟು ೩೪

ಮತ್ತೆ ಹಾಕಲು ಮೊದಲ ಮೀನೆ ಬ
ರುತ್ತಿರಲು ನಸುನಗುತ ಶಿವನ ನಿ
ಮಿತ್ತ ಮತ್ಸ್ಯವೆ ತಾನೆಯಾಗಿದೆ ಎತ್ತ ನೋಡಿದಡೆ
ಇತ್ತಲೀ ತೊಱೆಯಲ್ಲಿಯಭವಂ
ಗಿತ್ತ ಮತ್ಸ್ಯವೆ ಬಂದುದಾದಡೆ
ಎತ್ತೆನೆಂದುಂ ಬಲೆಯನೆನ್ನಯ ಕೈಯೊಳಿದು ಭಾಷೆ ೩೫

ಒಂದು ಬಾರಿಗೆ ಹಾಯ್ಕಿ ನೋಡುವೆ
ನೆಂದು ಘಮ್ಮನೆ ಬೀಸಿ ಸೆಳೆಯಲು
ಬಂದುದಾ ಬಲೆಯೊಡನೆ ತೊಡಕಿರೆ[೨] ಅಮಮ ಮುಕ್ಕಣ್ಣ
ಅಂದದಹಿಕುಂಡಲ ಚತುರ್ಭುಜ
ನಂದಿವಾಹನ ಗೌರಿಸಹಿತಂ
ಮುಂದೆ ನಿಂದು ಮಹೇಶನೀಶನು [೩]ಪಾಶಧರಕರನು[೪] ೩೬

೧ರಿ (ಪ). ೨ಲು (ಪ). ೩ಯೆ (ತ, ನ, ಪ). ೪–೪ ಪಾಪನಾಶನನು (ತ).

CC-0. Jangamwadi Math Collection. Digitized by eGangotri

ಶಮನ ಶಮನಂ ನೀಲಲೋಹಿತ
ನಮಮ ಪೂರ್ವಾಮರ ವಿಯಚ್ಚರ
ನಮಿತವಿಕ್ರಮನಾದಿದೇವನು ಮೆಚ್ಚಿ ತಾನೊಲಿದು
ಪ್ರಮಥನಾಯಕಪದವಿಯಂ ಕೊ
ಟ್ಟಮಿತ ಕರುಣಾಮೃತದೊಳದ್ದಲು
ವಿಮಳ ತೇಜೋಮಹಿಮೆವೆತ್ತತಿಭಕ್ತನಾಳಾನು ೨೭

ವರ ಭಸಿತ ರುದ್ರಾಕ್ಷಶಾಸನ
ಧರರನೆಲ್ಲಂ ಪ್ರಾಣಲಿಂಗದ
ಪರಿಯೊಳತಿ ವಿಶ್ವಾಸಭಕ್ತಿಯೆ ನೇಮವಾಗಿರಲು
ಧರೆಯೊಳೆಲ್ಲಾ ನಗರಿಗಳೊಳನ
ವರತ ಸುಖದಿಂ ರಾಜ್ಯಮಂ ಸು
ಸ್ಥಿರದೊಳಾಳುತ ಮಾರ್ಮಲೆತ ಭೂಪಾಲರಂ ಗೆಲಿದು ೨೮

ಸೋತ ನೃಪರೊಳು ಕಪ್ಪಮಂ ವಿ
ಖ್ಯಾತಿವಿಗೆ ಕೊಂಡಹಿತ ಭೂಭುಜ
ಜಾತಮದಜೀಮೂತ[1]ಘಾತನ[2]ವಾತನೆಂದೆನಿಸಿ
ನೀತಿಯೊಳು ವರ್ತಿಸುತಿರಲ್ಕಾ
ಭೂತಳಾಧಿಪರತಿ ಕಪಟದಲಿ
ಭೂತಿಶಾಸನ[3]ಧಾರನಂ[4] ಮಾಳ್ಪೊಬ್ಬ [5]ದಳಪತಿಯ[6] ೨೯

ಬಲಸಮೇತಂ ಕಳುಹಲೊಡನತಿ
ಬಳನು ತನ್ನಯ ಬಲಸಹಿತವವಿ
ಚಲಿತದಿಂ ನಡೆತಂದುರವಣಿಸಿ ತಾಗಿ ಬೆಂಬತ್ತಿ
ಕೊಲುತ ಬರೆ ರುದ್ರಾಕ್ಷ ಭಸಿತಾ
ಕಲಿತ ದೇಹಿಯನಂತು ಕಾಣು
ತ್ತಳುಕಿ ಶಿವ ಶಿವ ಎನುತ ಕರವಾಳಂ ಬಿಸುಟು ಕಳೆದು ೩೦

೧-೨ ನಾಶನ (ಫ). ೩-೪ ನಾಗಿ (ತ, ನ). ೫-೬ ಪಡೆವಳನ (ತ, ನ).

CC-0. Jangamwadi Math Collection. Digitized by eGangotri

ಬಂದು ಸಾಷ್ಟಾಂಗಪ್ರ[೧]ಣಾಮಂದಿ[೨]
ವಂದಿಸುತ್ತಿರೆಯ[೩]ಹಗೆ ಹೋಗದೆ
ನಿಂದಿರೆನುತವಗಡಿಸಿಯಾತನು ತನ್ನ ಕರವಾಳ
ಮುಂದೆ ಕೊರಳಿಗೆ ಮೋಹಿಸಲು ಶಿವ
ನೆಂದು ಮತ್ತೆಯು ನಮಿಸೆ ಕಂಠದೊ
ಳೊಂದಿಸಿದ ಕೂರಲಗುಮಂ ಪೂಮಾಲೆಯಂ ಮಾಡಿ ೩೧

ಆಕ್ಷಯಂ ನಿಟಿಲಾಕ್ಷನಭವಂ
ದಕ್ಷ ದಕ್ಷಮಖಿಕ್ಷಯಕ್ಷಮ
ನುಕ್ಷಗಂ ಪ್ರತ್ಯಕ್ಷವಾಗಿ ಸಮಕ್ಷದಲಿ ನಿಂದು
ಆ ಕ್ಷಣದೊಳುರುಮೋಕ್ಷಮಂ ಕೊಡ
ಲೀಕ್ಷಮೆಯೊಳಸದುಕ್ಷ ತೇಜೋ
ಧ್ಯಕ್ಷನಪ್ಪೇಣಾದಿನಾಥನ ಕೂರ್ಪ ಕಿಂಕರನು ೩೨

ಈ ಕ್ಷಿತಿಯೊಳಾವಾಗಳುಂ ರು
ದ್ರಾಕ್ಷಿ ಭಸಿತಾಭರಣರಂ ಭಾ
ಳಾಕ್ಷನೆಂಬಾ ಭಾವನೋಕ್ತಿಯೊಳಿಂತು ವರ್ತಿಸಲು
ಪಕ್ಷವುಳಿದರಿ[೪]ರಾಜ[೫]ಕುಲಮಂ[೬]
ಶಿಕ್ಷಿಸಲು ರಣದಲ್ಲಿ ತನ್ನತಿ
ರೂಕ್ಷ ಕೋಪದಿ ವಿರತನಾಗುತ್ತೋಡಿ ಬೇಸತ್ತು ೩೩

ಶೈವರಂದದಿ ಪಂಚಮುದ್ರೆಗ
ಳೋವಿವೊಪ್ಪುತವಿಪ್ಪರಂ ಪದಿ
ಮೂವರಂ ವಿರಚಿಸಿ ಕಳುಹಲಾ ಕಪಟವೇಷಿಗಳು
ತಾವು ಬರುತಿರೆ ಕಂಡು ಭಕ್ತರ
ಜೀವನಾಗಳು ಭಕ್ತಿನಿಷ್ಠಾ
ಭಾವದಲಿ ಹೊಡವಡಲವರು [೭]ಬೈತಾ[೮]ಯುಧಂಗಳಲಿ ೩೪

೧–೨ ಣಮದಿಂ (ಸ). ೩ ಲ (ತ). ೪ ತಿ (ಪ). ೫–೬ ಕಮಲವ (ಸ). ೭–೮ ಬತ್ತಿಸಾ (ಚ).

CC-0. Jangamwadi Math Collection. Digitized by eGangotri

ಒಡಲನರೆಗಡಿವುತ್ತಿರಲು ಧೃತಿ
ಬಿಡದೆ ಜಂಗಮಲಿಂಗವೆಂದೇ
ಹೊಡವಡಲು ಪ್ರತ್ಯಕ್ಷಮಾಗಿ ಶಿವಾರಮಣನಾಗ
ಬೆಡಗಡರಿ ಸಾರೂಪ್ಯಪದವಮಂ
ಕೊಡಲಪರಿಮಿತ ನಿತ್ಯ ಸುಖಮಂ
ಪಡೆದು ರಾಜಿಪ ಸೇದಿರಾಜನ ನಿಂಬಕನು ನಾನು ೩೫

ಸಾಂಗಮಾಗಲು ಭೂತಿಶಾಸನ
ಸಂಗದವರಂ ಪ್ರಾಣಲಿಂಗವ
ಹಾಂಗೆ ಭಾವಿಸಿ ಪರಮ ವಿಶ್ವಾಸೈಕಭಕ್ತಿಯಲಿ
ಹಿಂಗದಾಚರಿಸುತ್ತ ಗರಿಮೋ
ತ್ತುಂಗತೇಜದಿ ತನ್ನ ನಿಜ ಚಿತ
ರಂಗಬಲಮಂ ಪರನೃಪಾಲರ ಮೇಲೆ ಕಳುಹಲ್ಕೆ ೩೬

ಕಲಹದಲಿ ಮೂವತ್ತು ಕುನಿಕಲು
ತಲೆಗಳಂ ತಱಿದೊಟ್ಟಿ ತರುತಿರೆ
ತಲೆಯದೊಂದತಿರಕ್ತಪಂಕದಿ ತೋದು ಬಿಗಿದಿರಲು
ಬಳಿಕವಾ ತಲೆ ಜೆಡೆದಲೆಯವೊಲು
ಬಲಿದಿರಲು ಕಂಡಾಗ ಚಿತ್ತದೊ
ಳಳುಕಿ ಹರಹರ ಎನುತ ತತ್‌ಕ್ಷಣಮಾತ್ರದಲಿ ತನ್ನ ೩೭

ತಲೆಯನರಿದಾ ತಲೆಯಮೇಲಿಡ
ಲೊಲಿದನಿತಱಿಲಿ ಮೆಚ್ಚಿ ಗೌರೀ
ಲಲನನಕ್ಷಯ ಮೋಕ್ಷಮಂ ಕರುಣಿಸಲು ಕೈಕೊಂಡು
ಮಿಳಿತ ಪರಮಾನಂದದಲಿ ಜೆಡೆ
ದಲೆಗೆ ಕೊಟ್ಟನು ಮುಡಿದಲೆಯನೆನ
ಲಲಘುಮತಿ ಕರವೂರಜೋಳನ ಭೃತ್ಯರಾಳಾನು ೩೮

---

೧ ಸಾಂ (ಸ).

CC-0. Jangamwadi Math Collection. Digitized by eGangotri

ಮನೆಗೆಲಸವಂ ಮಾಡಲಾಱಿದೆ
ತನುಬಳಲಿ ದಾಸಿಯ ಮಗಂ ತಾ
ನನಘಜಂಗಮವೇಷಮಂ ತಾಳ್ದಿಯ್ತರಲು ಕಂಡು
ವಿನಯದಿಂದಭಿವಂದಿಸುತ ಘ
ಮ್ಮನೆ ಪದದ್ವಯಮಂ [೧]ತೊಳೆಸಿಯಲಾ
ವನಿತೆಯೆಂದಳು ನಮ್ಮ ಸಿರಿಗಿಯ ಮಗನಿವನನಱಿಯ ೪೯

ಮಾಡಲಾಱಿದೆ ಹೋಗಿ ಭಕ್ತರ
ಕೂಡೆ ಬಂದವನೀಗ ಕಾಲಂ
ನೀಡಿ ತೊಳೆಯಿಸಿಕೊಂಡಹನು [೨]ಲೇಸಿನ ಸೌಘಾಟಿಕೆಯು
ನೋಡೆನುತ ಕುಲವೆತ್ತಿ ಪೂರ್ವಪ
ನಾಡಿ ಉದಕವನೆಱಿಯದಿರೆ ಖಿತಿ
ಮೂಡಿ ಸತಿಯವಳಾಳಿಗೊಂಡಳು ಜಂಗಮವನೆನುತ ೫೦

ಹೆಂಡತಿಯ ಕರಯುಗವನಾಗಳೆ
ಖಿಂಡಿಸಲು ಸಲೆ ಪೆಚ್ಚಿ ನಮಿತಾ
ಖಿಂಡಳಾದಿ ಸುಪರ್ವಮಂಡಳಿ ಪಾಂಡುರಾಕಾರ
ಖಿಂಡಪರಶುವು ಖಿಂಡಶಶಿಧರ
ಮಂಡನಂ ಕೂರ್ತೀಯಲಮಿತಾ
ಖಿಂಡಗಣಪದವಿಯೊಳೆಸೆದ ಕಲಿಯಂಬರಾಳಾನು ೫೧

ಲಿಂಗ ಚರಲಿಂಗಾರ್ಚನಾರತ
ಸಂಗತಾಚರಣೆಯಲಿ ಕೆಲವು ದಿ
ನಂಗಳೀ ಪರಿಯಲಿ ಸವೆವುತಿರಲೀಶ್ವರೇಶ್ವರನು
ಜಂಗಮಾಕೃತಿಯಂ ಧರಿಸಿ ನಿ
ಸ್ಸಂಗಿಯಾಗೆಯ್ತಂದು ಭಕ್ತಗೃ
ಹಾಂಗಣದೊಳಾಡುತ್ತವಿನಿತು ಮುಹೂರ್ತವಲ್ಲಿರ್ದು ೫೨

೧–೨ ಪಿಡಿ (ಕ, ಚ, ಥ, ದ, ಪ, ಬ). ೩–೪ ಲೇಸವನ (ಕ, ಚ, ಬ).

CC-0. Jangamwadi Math Collection. Digitized by eGangotri

[೧]ಕಂಥೆಯಂ ಕಚ್ಚುಟವನಿರಿಸಿ ಮು
ಹಂತನವರಿಗಮಂ ಮಡಗವೇ
ಳ್ದಂತದೃಶ್ಯಂ[೨] ಮಾಡಿ ಬಳಿಕ್ಕೈತಂದೊಡನೆ ತನ್ನ
ಬೊಂತೆಯಂ ಕಚ್ಚುಟವನಾತನು
ಮುಂತೆ ಬೇಡಲು ಮುನ್ನ ಮಡಗಿದ
ಬೊ[೩]ಂತೆಯಂ ಕಚ್ಚುಟವನಱಿಸಿಯುಂ ಕಾಣದುಮ್ಮಳಿಸಿ ೪೩

ನಿಮ್ಮ ಕಂಥೆಗೆ ಕೌಪಕೆಣೆಯೆನ
ಲಮ್ಮನಾವಡೆಯವಱಿ ಪಾ[೪]ಡಿನ[೫]
ದಿಮ್ಮಿತಪ್ಪಾ ಕಂಥೆಯಂ ಕೌಪೀನಮಂ ಕೊಟ್ಟು
ನಿಮ್ಮಡಿಯ ಕೃಪೆವಡೆದು ಬದುಕಿದ
ಪೆಂ ಮಹಾಪುರುಷಾ ಎನುತ್ತಂ
ಸಮ್ಮದಂ ಮಿಗೆ ಒಂದು ಕಂಥೆಯನೊಂದು ಕಚ್ಚುಟವ ೪೪

ತಂದು ಭಕ್ತನು ತತ್ತೊಲೆಯೊಳವ
ನೊಂದೆಸೆಯೊಳಿಟ್ಟಂಬರಂಗಳ
ನೊಂದೆಸೆಯೊಳಿಟ್ಟೊಮ್ಮೆ ತೂಗಲು ಸದೃಶಮಾಗದಿರೆ
ಮುಂದೆ ತನ್ನಖಿಳಾಂಬರಂಗಳ
[೬]ಮಂದ[೭]ವಿತ್ತಂ ಬೆರಸಿ ತಾನುಂ
ಬಂದು ಮೇಣಾ ತೊಲೆಯನೇಱಲು ತದವಸರದಲ್ಲಿ ೪೫

ಫಾಳನೇತ್ರನು ನೀಲಕಂಠನು
ಶೂಲಹಸ್ತನು ವ್ಯಾಳಕಟಕನು
ಬಾಲಶಶಿಧರಮೌಳಿ ಶಾರ್ದೂಲಾಜಿನಾಂಬರನು
ಕಾಲಕಾಲಂ ಮೆಚ್ಚಿ ಕರುಣಾ
ಲೋಲದಿಂ ಪ್ರಮಥತ್ವಮಂ ಕೊಡೆ
ಲೀಲೆಯಿಂ ಮೆಱೆದವನಿದಾಂಡಾರಿಯರ [೮]ಕಿಂಕರನು[೯] ೪೬

೧–೨ಬೊಂತೆ (ಬ). ೩ಪ್ಪಂ (ಪ). ೪ಕ (ತ, ಥ, ನ). ೫–೬ಟಿನ (ತ, ನ). ೭–೮ ತಂದು (ನ). ೯–೧೦ಮಗ ನಾನು (ತ).

CC-0. Jangamwadi Math Collection. Digitized by eGangotri

ವಿತ್ತವೆಲ್ಲಂ ಲಿಂಗಜಂಗಮ
ಕಿತ್ತೊಲಿದು ಮಾಡುತ್ತಲೆಣ್ಣೆಯು
ಬತ್ತಿಯುಂ ಸವೆವಂತೆ ಸವೆಯಲು [೧]ದುರ್ದೆಸೆಯೊಳಿರಲು[೧]
ಚಿತ್ತಜಾಂತಕನೊಂದುದಿನವು
ದ್ಯುತ್ ತಪೋಧನವೇಷದಿಂ ನೆನೆ
ವುತ್ತ ಮಳೆಯೊಳು ನಡುಗುತಂ ನಡುವಿರುಳು ನಡೆತರಲು ೪೭

ಘನ ತಪೋಧನಮೂರ್ತಿ ನಡುಗಿಹ
ನೆನುತ ಗುಡಿಲಂ ಹಿರಿಹಿರಿದು ಧಿ
ಕ್ಕನೆ ಸುಡಲು ಹರ ಹರ ಎನುತ್ತಂ ಕಿಚ್ಚಿನಲಿ ತನ್ನ
ತನುವನೊಯ್ಯನೆ ಕಾಸಿಕೊಳುತಿರ
ಲನಿತಱಲಿ ಚಳಿಯುಡುಗಿ ದೇವಂ
ತನಗೆ ಹಸಿವಾಯ್ತುಂಟೆ ಭಕ್ತಾ ಅಂಬಕಳವೆನಲು ೪೮

ಎದ್ದು ಮುನ್ನಿನ ದಿವಸದಲಿ ಬಿ
ತ್ತಿದ್ದ ಬೀಜವನಾಯ್ದುದಕದಿಂ
ದದ್ದಿ ತೊಳೆತಂದಾಗ ಹುರಿಯಿಸಿ ಮಿದಿಸಿ ಬೋನವನು
ಇದ್ದ ಪರಿಯಲಿ ಮಾಡಿ ಗಡಣಿಸಿ
ತದ್ದಯಾತ್ಮನನೊಲಿಸಿ ಮುಕ್ತಿಯೊ
ಳಿದ್ದೆಳೆಯ ದಂಗುಳಿಯ ಮಾರಯ್ಯಗಳ ಮಗ ನಾನು ೪೯

ಭವಿಯನೊರ್ಬನನೆಂದುವುಂ ತ
ನ್ನವನಿಯೊಳಗಿರಲೀಯದೊಲವಿಂ
ಶಿವಸಹಿತರಂ ಮಾಡುವಂ ಕೈಕೊಳ್ಳದಿರ್ದವರಾ
ವಿವಿಧ ವೇದಾಂತಾದಿ ಪರಮಾ
ರ್ಥವನಱುಪಿಯದಱಿಂದೊಡಂಬಡ
ದವರಿಗಾತಂ ದೃಷ್ಟ ಸಂಪಾದನೆಗಳಂ ತೋಱಿ ೫೦

೧–೧ ದುರ್ದಿನಂ ಬರಲು (ತ, ನ).

CC-0. Jangamwadi Math Collection. Digitized by eGangotri

ಒಡವೆಯಂ ಬೇಳ್ಪನಿತನಿತ್ತಾ
ದಡೆ ಒಡಂಬಡಿಸುವನೊಡನೆ ಪಲ
ವೆಡೆಯೊಳಂ ಮೃಡಭಕ್ತರಾಗದವರ್ಗಳಂ ಕೊಲುವ
ಪೊಡವಿಯೊಳಗೀ ನೇಮದಿಂದವೆ
ನಡೆವುತಿರೆ ಪರಮೇಶನಾತನ
ನುಡಿಯನಾರೈದಪೆನೆನುತ ಬಂದೊಕ್ಕಲಿಗನಾಗಿ ೫೧

ಬಿಟ್ಟಿ ಬೀಡಾರಂ [೧]ಹೊಱಿಗೆ[೨] ತೆಱಿ
ಕೊಟ್ಟಣಂ ಕಾಣಿಕೆಯು ಸೊಲ್ಲಿಗೆ
ವಟ್ಟವಾಸೆಯು ಸುಂಕಸೋದಿಗೆ ಶಾಣಕಡ್ಡಾಯ
ಕೊಟ್ಟಗುತ್ತಗೆವಾರವುಂಟೆಂ
ದಟ್ಟಿ ನಿನ್ನವರಿಂದವೆನ್ನಂ
ಕಟ್ಟಿ ಕುಟ್ಟಿಪ್ಪದರಸ ಧರ್ಮವೆ ಎನುತ ಮೊಱಿಯಿಡಲು ೫೨

ಕಾಪಿನವರಿರೆ ಬಾಗಿಲಲಿ ನೀ
ನೇಪರಿಯಲೆಯ್ತಂದೆ ಗೌಡಾ
ಆಪನಿತು ಹೊಲವಿ[೩]ತ್ತಡೀವೆನು ಸರ್ವಮಾನ್ಯವನು
ಕಾಪುರುಷತನವುಳಿದು ಕೇಳಂ
ಬಾಪತಿಯ ಪದಭಕ್ತನಾಗಿಂ
ತೀ ಪದ[೪]ದೊಳಾಚರಿಸೆನಲು ನರರೂಪನಿಂತೆಂದ ೫೩

ಭಕ್ತಿ[೫]ವೊಮ್ಮದು[೬] ಎಮ್ಮ ಕುಲದಲಿ
ಭಕ್ತರಾರುಂ ಬಾಳರಿಂತಹ
ಭಕ್ತಿಗಂಜುವೆನಲು ಬಾಳಿಸುವದಕೆ ಹೊಣೆ ನಾನು
ಭಕ್ತನಾಗು ಸಮಸ್ತ ವಸ್ತುವ
ಯುಕ್ತ ರಾಜ್ಯವನೀವೆನೆಂದತಿ
ಸೂಕ್ತಿಯಿಂದೊಡಬಡಿಸಲದಕೊಡಬಡದಿರಲು ಮುಳಿ[೭]ದು ೫೪

೧–೨ಗಳಂ (ಥ, ಧ, ಪ). ೩ನು (ತ, ಥ). ೪ಥ (ನ, ಬ); ರಿ (ಕ, ಚ). ೫–೬ ಯೊಮ್ಮದು (ತ, ನ, ಬ, ಮ, ಕ); ಯೆಂಬುದು (ಚ). ೭ನಿ (ತ, ನ).

CC-0. Jangamwadi Math Collection. Digitized by eGangotri

ಖಿಂಡೆಯವನುಱ[3] ಝಳಪಿಸುತ್ತಂ
ಮಂಡೆಯಂ ಹೊಡೆವೆಡೆಯೊಳಾಕ್ಷಣ
ವಂಡಜಾಧಿಪಕುಂಡಲಂ ಪ್ರತ್ಯಕ್ಷಮಾಗಿರ್ಮ
ಮಂಡಲೇಶ್ವರ ನಿನಗೆ ಕೊಡುವೆನ
ಖಿಂಡಿತಾಭಿಮತಂಗಳಂ ಕೈ
ಕೊಂಡು ಭೋಗಿಸೆನಲ್ಕೆ ನೀ ಕೊಡುವೀ ಪರವೆ ಸಾಕು ೫೫

ಲಿಂಗಸನ್ನಹಿತಾಂಗನಾಗಿರು
ಮಂಗಳೋದಯವಿದುವೆನುತ್ತ ಕು
ರಂಗಧರ ಶೀಕಲಾಭರಣನಂ ಭಕ್ತನಂ ಮಾಡಿ
ಪೊಂಗಿ ರುದ್ರಪ್ರಮಥ ಮುನಿಗಣ
ಪುಂಗವರ ಸಂಗಡದೊಳಿಸೆವ ಸು
ರಂಗಗಣನಾಥೋತ್ತಮನ ಕಿಂಕರರ ಕಿಂಕರನು ೫೬

ಇಳೆಗೆಸೆವ ಪೆನುಬಟ್ಟಪುಲಿಯೂ
ರೊಳಗೆ ತತ್ತಿರುನೀಲಕಂಠನ
ನಿಳಯಕೆಯ್ದಿ ಶಿವಂಗೆ ವಂದಿಸಿ ನಿಚ್ಚ ಬರುತಿರಲು
ಬಳಿಕಲೊಂದುದಿನಂ ಬಲಿದ ಕ
ತ್ತಲೆಯೊಳಿರುಳೊಬ್ಬಬಲೆ ಹರ್ಮ್ಯ
ಸ್ಥಲದ ಮೇಲಿರ್ದೆಂಜಲಂಬುವನೆತ್ತಿ ಚೆಲ್ಲಿದಡೆ ೫೭

ಮೇಲೆ ಬೀಳಲು ಶಿವಶಿವಾ ತಿರು
ನೀಲಕಂಠಾ ಎಂಬ ನುಡಿಯಂ
ಕೇಳಿ ತಲ್ಲಣಿಸುತ್ತ ನಡೆತಂದಡಿಗೆಱಗಿ ನಿಂದು
ಲೋಲಲೋಚನೆ ವಿದ್ರುಮಾಧರೆ
ನೀಲಕಚಭರಿ ಕುಟಿಲಕುಂತಲೆ
ಬಾಲಹಿಮಕರಸಮನಿಟಿಲತಟಸರಸಿರುಹವದನೆ ೫೮

---

೧ ಸ (ತ, ಥ, ಪ).

CC-0. Jangamwadi Math Collection. Digitized by eGangotri

ಸ್ಥೂಲಕಠಿಣೋರೋಜೆ ರಾಜಮ
ರಾಳಯಾನೆ ನವೀನ [೧]ವಿಚಕಿಲೆ[೨]
ಮಾಲಿಕಾಲಂಕಾರೆ ಚಂದನಗಂಧಿ ಲಲಿತಾಂಗಿ
ಬಾಲೆ ನಯವಿನಯೋಕ್ತಿಯಲಿ ತ
ನ್ಮಾಲಯಕೆ [೩]ಕೊಂಡೊಯ್ದು[೪] ಭಕ್ತಿವಿ
ಲೋಲುಪನನಭ್ಯಂಗನಾದಿ ಕ್ರಿಯೆಗಳಿಂ ತಣಿಸಿ ೫೯

ಎನ್ನ ತಪ್ಪಂ ಸೈರಿಸೆನುತಂ
ಬಿನ್ನವಿಸಿ ಆ ಲಲನೆ ಕಳುಹಲು
ತನ್ನ ಮನೆಗೆಯ್ತರಲು ಸತಿ ಪತಿಗೆಂದಳವಗಡಿಸಿ
ನಿನ್ನ ಸುವ್ರತಗತಿಗೆ ತಕ್ಕುದ
ಚೆನ್ನ ಮಾಡಿದೆ ಯಾವ ಮಾನಿನಿ
ಯಂ ನೆರೆದೆಯೋ ಈ ಕನಂಬಾಮೋದವಲ್ಲಿಯದು ೬೦

ಎನುತಿನಿಯನಂ ಪೊರ್ದದಿರೆ ಸಾ
ರ್ದಿನಿಯಳಂ ವರನಿತ್ತ ಬಾಬಾ
ಎನುತ ಸೆಜಿಗಂ ಪಿಡಿದು ಘಮ್ಮನೆ ತೆಗೆಯೆ ಕೋಪಿಸುತ
ನಿನಗೆ ಎನ್ನಂ ಮುಟ್ಟಿದಡೆ ಈ
ಮನಸಿಜಾಂತಕನಾಣೆ ಎನಲಾ
ವನಿತೆಯಂ ಮುಟ್ಟದೆಯಿದಕ್ಕಂತಾಗಲೆಂದೆನುತ ೬೧

ಹೊತ್ತ ಭಾಷೆಯೊಳೀ ಪರಿಯೊಳೆಂ
ಬತ್ತು ವರುಷಂಗಳು ಶಿವೈಕ್ಯರ
ತೊತ್ತುಗೆಲಸಂ ಮಾಡಲಿಬ್ಬರ ನಿಷ್ಠೆಗಳಿಗೊಲಿದು
ಕೃತ್ತಿವಾಸಂ ತಪಸಿವೇಷಂ
ಬೆತ್ತು ನಡೆತಂದೊಂದು ಪಾತ್ರೆಯ
ನಿತ್ತು ಕಡು ಸುವಿಧಾನದೊಳಿದಂ ಮಡಗಿ ನೀವೆನುತ ೬೨

೧–೨ ಗುಣಮಣಿ (ಡಾ). ೩–೪ ಕರೆದೊಯ್ದು (ಸ).

CC-0. Jangamwadi Math Collection. Digitized by eGangotri

ವರ ತಪೋಧನನತ್ತಲೊಯ್ಯನೆ
ಸರಿದಿನಿತು ಹೊತ್ತಿರ್ದು ಮತ್ತವ
ಸರಿಸಿ ಬಂದಾ ಪಾತ್ರೆಯಂ ತಾಂ ಮಾಯವಂ ಮಾಡಿ
ಮರಳಿ ಬೇಡಲು ಮನೆಯೊಳಗೆ ತಾ
ವಿರಿಸಿದೆಡೆಯಲಿ ನೋಡಿ ಕಾಣದೆ
ಪುರುಷನುಂ ಸತಿಯುಂ ಪೆದಱುತಿರಲಾ ತಪಸಿಯಿಂದ ೬೩

ಮಡಗಕೊಟ್ಟವರೊಡವೆಯಂ ನೀಂ
ಮಡಗಿಕೊಂಡಿಂತಿಲ್ಲಮೆಂದಡೆ
ಪೊಡವಿಯೊಳಗಿದನಾರು ಮೆಚ್ಚುವರೆನ್ನ ಕಪ್ಪರವ
ಕೊಡುಕೊಡೀಕ್ಷಣ ಸಲ್ಲದಡೆ ನಾ
ನುಡಿದ ಶಪಥವನಾಂತಡಲ್ಲದೆ
ಬಿಡೆನೆನುತ್ತೋರಂತೆ ಶಿವಧೋ ಎನುತ ಱಿಟ್ಟಿಕ್ಕಿ ೬೪

ಗಂಡಿಗಂ ತಾಪಸನವರನೊಡ
ಗೊಂಡು ಬಂದತಿ ಪೂತಜಲದಲಿ
ದಂಡ[೧]ಮಂ ಪಿಡಿಯಿಸಿ[೨] ಮುಳುಂಕಿಸಲೊಡನೆ ನಿಮಿಷದಲಿ
ಮಿಂಡ ಹರೆಯಗಳಾಗಿ ಗಂಡನು
ಹೆಂಡತಿಯು ಮೇಲಕ್ಕೆ ನೆಸ[೩]ಯಲು
ಕಂಡು ಸರ್ವರು ಕೀರ್ತಿಸುತ್ತಿರಲತ್ತಲಿಂ ಮುನ್ನ ೬೫

ಶಂಕರಂ ಪ್ರತ್ಯಕ್ಷನಾಗಿ ದ
ಯಾಂಕುರಾಪ್ಯತಪೂರ್ಣಲೋಚನ
ದಿಂ ಕಟಾಕ್ಷಿಸಿ ಎಂದಿನಂತೆಂಬತ್ತು ವತ್ಸರವ
ಸೋಂಕಿ ಸುಖದಿಂದಿರ್ದ ಮೇಲಕ
ಳಂಕ ಗಣಪದವಿಯೊಳಮರ್ದು ಶು
ಭಾಂಕನಹ ತಿರುನೀಲಕಂಠರ ಮಗನ ಮಗ ನಾನು ೬೬

೧–೨ ಮುಂಡಹದಲ್ಲಿ (ಆ, ಡಾ, ತ, ನ, ಪ, ಮ). ೩ ಗೆ (ಸ).

CC-0. Jangamwadi Math Collection. Digitized by eGangotri

ಶೂಲಿಭಕ್ತನು ಧರೆಗೆ ವಿಕ್ರಮ
ಜೋಳನೊಬ್ಬನು ಹೇಮದಲಿ ದೇ
ವಾಲಯವನೊಲವಿಂ ರಚಿಸಿ ಲಿಂಗಪ್ರತಿಷ್ಠೆಯನು
ಲಾಲಿತಂ ಮಿಗೆ ಮಾಡಲಿಂತು ವಿ
ಶೋಲಭಕ್ತಿಯೊಳೆಸೆದು ತಾನುಂ
ಮೇಲೆನಿಪ ಮನದೊಳಗೆ ಮಣಿಮಯವಪ್ಪ ದೇಗುಲವ ೬೭

ಮಾಡಿ ಮೆಚ್ಚಿಸಿ ಬಾಲಚಂದ್ರಾ
ಚೂಡನೊಳು ಶಾಶ್ವತಪದವಿಯಂ
ಕೂಡೆ ರುದ್ರರೊಳೆಸೆವ ಪ್ರಸಾಲನಾಯಿನಾರಾಳು
ನಾಡೊಳಗೆ ಸಾಮ್ರಾಜ್ಯಮುಮನೀ
ಡಾಡಿ ತಿರುಮುಡಿಯಂ ಧರಿಸಿ ರತಿ
ಮೂಡೆ ಶಿವನಂ ಮೆಚ್ಚಿಸಿದ ಕಲಿಪಾಲನಾಳಾನು ೬೮

ಧರಣಿಯೊಳು ತಿರುವಾಕರೇಶನ
ಕರುಣದಿಂದಂ ಪ್ರಾಣನಾಥನ
ಇರವನರಿದರ್ಚಿಸಿ ಮೆಱಿಸಿದ ತಿರುಕುಱುಪಿಯೆಯಾಳಾನು
ನಿರುತದಿಂ ರೋಹಿಣಿಯು ತಾನುಂ
ಹರನ ಕೃಪೆಯುಂ ಪಡೆದು ಮುಕ್ತಿಗೆ
ವರನೆನಿಪ ತಿರುವೂರ ತಿರುಮೂಲನಶಿಶುವು ನಾನು ೬೯

ಒಸೆದು ಸಾವಿರ ಭಕ್ತರಿಗೆ ವಂ
ಚಿಸದೆ ಮಾಡಿ ವಿಮುಕ್ತಿಪದವಿಯೊ
ಳೆಸೆದ ಚಿಱುಪುಲಿಯಾರ ಲಿಂಕರ ಲಿಂಕ ನಾನಯ್ಯ
ಅಸಮಲೋಚನನಿಂದೆ ನಿಚ್ಚಂ
ವಸುಧೆಯೊಳು ಪಡಿಯೊಂದು ಹೊನ್ನಂ
ಹೊಸತೆನಲು ಕೊಳುತಿಹ ಚಿಱುತ್ತೊಣೆಯರ ಅಣುಗ ನಾನು ೭೦

೧ಶ (ಸ). ೨–೩ತನಯ (ಪ). ೪ನಾ (ತ, ನ).

CC-0. Jangamwadi Math Collection. Digitized by eGangotri

ಸಂದ ಮುನ್ನಿನ ಶರಣರಾಳಾ
ನಿಂದು ಚರಿಸುವ ಭಕ್ತರಾಳಾಂ
ಮುಂದೆ ಶಿವನಂ ಭಜಿಸಿ ಮೆಱಿವ ಶಿವೈಕ್ಯರಾಳಾನು
ಎಂದು ಭಕ್ತರ ಚರಿತೆಗಳನಾ
ನಂದದಿಂ ತಿರುಪಾಟರೀತಿಯೊ
ಳೊಂದಿ ಪಾಡುತ [೧]ಪೊಸ ಒಲುಮೆ ಸಲೆ ಪೊಣ್ಮ್ಯೆ[೨] ಕೀರ್ತಿಸುತ ೭೧

ಪೊಡವಿಯೊಳು ಸೈಗೆಡೆವುತೆಡೆಗೆಡೆ
ಗಡಿಗಡಿಗೆ ಹೊಡವಡುತ ಕೈಗಳ
ನೊಡನೊಡನೆ ಮುಗಿಯುತ್ತ ದಿಕ್ಕುಂ ದೆಸೆಯು ನೀವೆನುತ
ಒಡೆಯರಿರ ನಿಮ್ಮಡಿಗಳೆನ್ನಂ
ಬಿಡದೆ ಸಲಹಿ ಎನುತ್ತ ದೈನ್ಯಂ
ಬಡುತ ಶರಣಾಗನ್ಯಥಾ[೩] ಎನಗಾರು ಇಲ್ಲೆನುತ ೭೨

ನಿಮ್ಮ ಕಂದನು ನಿಮ್ಮ ಶಿಷ್ಯನು
ನಿಮ್ಮ ಪರಿಚಾರಕರ ಚಾರಂ
ನಿಮ್ಮ ಧರ್ಮದ ಕವಿಲೆ ನಿಮ್ಮಯ ಡಿಂಗರಿಗ ನಾನು
ನಿಮ್ಮ ಭೃತ್ಯನು ನಿಮ್ಮ ಭಟ್ಟನು
ನಿಮ್ಮ ಬಂಟನು ನಿಮ್ಮ ಲೆಂಕನು
ನಿಮ್ಮ ದಾಸಿಯೆನಿಪ್ಪ ಎನ್ನಂ ಕಾಯ್ದು ಕರು[೪]ಣದಲಿ[೫] ೭೩

ಎಂದು ನುತಿಸುತ ನಂಬಿಯಣ್ಣಂ
ವಂದಿಸುತ್ತಂ ಸಕಳಭಕ್ತರಿ
ಗಿಂದು ಮೌಳಿಯ ಹಿಂದೆಸೆಯೊಳಭಯಾರ್ಥಿಯಾಗಿರ್ದ
ಕಂದನಂ ಕೈಗೊಂಡು ಪರಮಾ
ನಂದದಿಂ ಭರ್ಗಂಗೆ ತಾನಿದಿ
ರ್ದಂದು ಹೊಡವಡಲೊಡನೆ ಮುಂದಸ್ಮಿತವದನನಾಗಿ ೭೪

೧–೨ ಪೊಡವಡುತ ಪೊಲವಣ್ಮ್ಯೆ (ಸ). ೩ ಥವು (ಸ). ೪–೫ ಣಪ್ಪದು (ತ, ನ).

CC-0. Jangamwadi Math Collection. Digitized by eGangotri

ಪುರಹರಂ ಮೆಱಿ[೩]ಮಿಂಡದೇವನ
ನಿರತಭಕ್ತಿಯ ಮೆಱಿ[೩]ವಣಂಗೆ ಕೂ
ರ್ತರರೆ ನಿಜಪುರಿಗೆಯ್ದಿಸಿದನಾ ಭಕ್ತಗಣಸಹಿತ
ಧರೆಯೊಳಿರ್ದನು ನಂಬಿ ಜಂಗಮ
ಶರಣನಾಗಿದುಕಾರಣಮಹಂ
ಕರಿಸಲಹುದೇ ಭಕ್ತಿಭಾವನೆ ಬಸವಸುಕುಮಾರ ೨೫

ಎಂದನಘ ಮಾಚಯ್ಯನಿಂತೊಲ
ವಿಂದೆ ಶಾಶ್ವತ ಭಕ್ತಿಯುಕ್ತಿಯೊ
ಳೊಂದಿ ಸಂದಾದ್ಯರ ಸುಚಾರಿತ್ರಂಗಳಂ ತಿಳುಹಿ
ಮುಂದೆ ಬುದ್ಧಿಗಳಂ ವಿನೀತಿಗ
ಳಂ ದಯಾನ್ವಿತ ಶುದ್ಧಬೋಧೆಯ
ನಂದದಿಂದೊರೆದಧಿಕ ಗರ್ವವನೆಲ್ಲಪಂ ಹರಿಸಿ ೨೬

ಬೆಳಗುಗಳು ಕಂಗಳಿಗೆ ಸಲೆ ಫಳ
ಫಳಿಸಿ ಮಿಱುಗುವ ರತ್ನಶೈಲಂ
ಗಳನಲರ್ದಾ ಜಂಗಮಕ್ಕರ್ಪಿಸಿ ಬಸವರಸನ
ಕಳುಹಲೊಡನಾ ಮಡಿವಳಯ್ಯಂ
ಗಳ ಪದಾಬ್ಜಕ್ಕೆಱಗಿ ಹಿಗ್ಗುತ
ನಲಿವುತಾ ಭಂಡಾರಿ ಭಕ್ತರು ತಾವುಮೆಯ್ದಿದರು ೨೭

ಆ ಪುರದ ಜನವೆಯ್ದಿ ಪಂದಿಸು
ತೀ ಪುರುಷನೀಶ್ವರನೆನುತ ಸ
ಲ್ಲಾಪದಿಂ ಕೊಂಡಾಡುತಂ ಹಸ್ತಂಗಳಂ ಮುಗಿದು
ಭೂಪನುಂ ತಾವೆಯ್ದಿದರು ಭ
ಕ್ತೋಪಕಾರಂ ಮಾಡಿದೇವಂ
ಪಾಪದೂರಂ ಮುನ್ನಿನಂ[೧]ತತಿ[೨] ವಂದ್ಯನಾಗಿರ್ದು[೩]

೧–೨ ದದಿ (ಸ). ೩ ರ್ದಂ (ತ, ನ).

CC-0. Jangamwadi Math Collection. Digitized by eGangotri

ಶರಣ ಮಡಿವಳ ಮಾಚಿದೇವನ
ವರಚರಿತೆಯಂ ಕೇಳಿದವರಿಗೆ
ಬರೆದವರಿಗೋದಿದವರಿಗೆ ವಿಸ್ತರಿಸಿ ಪೇಳ್ವರಿಗೆ
ದೊರೆಕೊಳುಗು ಹರಭಕ್ತಿ ಬುದ್ಧಿಯು
ಸರಸ ವಾಚಾಸಿದ್ಧಿಯುಂ ಶುಭ
ಕರ ಸಮೃದ್ಧಿಯು ಭವ್ಯ ದೃಷ್ಟಾದೃಷ್ಟ ಸಿದ್ಧಿಗಳು ೭೯

ಪಣಲಾಂಛನಲಾಂಛನಂ ಗಣ
ತ್ರಾಣ ಜಂಗಮಲಿಂಗಗಾತ್ರಾ
ಪ್ರಾಣ ಸಕಲಾಗಮಪುರಾಣಧುರೀಣ ಜಿತಕುಸುಮ
ಬಾಣ ಶಿವತತ್ವಾನುಭವ ಪಾ
ರೀಣ ಖಂಡಿತರಿಪುಕುಯಂತ್ರಕ
ಘೋಣ ಭಕ್ತಿನವೀನ [೧]ಗುಣಮಣಿ[೨]ಶಾಣ ಜಯ ಬಸವ ೮೦

ಇದು ಸಕಳ ಮಾಹೇಶ್ವರಾಮಳ
ಪದಪಯೋಜ ಪರಾಗಮದಷಟ್
ಪದಿಯೆನಿಪ ಪಾಲ್ಕುಱಿಕೆ ಸೋಮೇಶ್ವರನ ಕಾರುಣ್ಯ
ಒದವಿದಖಿಳಕಳಾಪ್ರಪೂರಿತ
ಹೃದಯ ಭೀಮಕವಿಪ್ರಣೀತಾ
ಭ್ಯುದಯ ಬಸವಪುರಾಣಕಥೆಯೊಳು ನಾಲ್ಕನೆಯ ಕಾಂಡ ೮೧

ಅಂತು ಕಾಂಡ ೪ಕ್ಕಂ ಸಂಧಿ ೨೬ಕ್ಕಂ ಪದಗಳು ೧೫೨೪ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಮಣಿಗಣ (ತ, ಸ).

CC-0. Jangamwadi Math Collection. Digitized by eGangotri

ಕಾಂಡ : ೫

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಂಧಿ : ೨೭

*

ಸೂಚನೆ : ಕಟಕದೊಳು ತ್ರಿಪುರಾರಿಯಂ ದಿಟ
ಪ್ಪಟದಿ ಕರೆದೋ [೧]ಎಂದೆನಿಸಿದು
ತ್ಕಟದ[೨] ಭಕ್ಕನು ಕಿನ್ನರಯ್ಯನು ಮೆಚ್ಚಿದನಂದಮಮ

ಈಷಣತ್ರಯದೂರ ಸೂನೃತ
ಭಾಷಣಪ್ರಿಯ ಸಾರ ಶಿವಗಣ
ದೂಷಣಾಹಿತಕಾರ ಜಂಗಮತೋಷಣಾಚಾರ
ರೋಷಣಪ್ರತಿವೀರ ರಣವಿಜಿ
ಗೀಷಣಾಧಿಕ ಶೂರ ಹಿಮಕರ
ಭೂಷಣಾಜ್ಞಾಧಾರ ಬಸವಕುಮಾರ ಮಾಂ ತ್ರಾಹಿ ೧

ಶ್ರೀಕರಂ ದೃಢಭಕ್ತಿಮಣಿರ
ತ್ನಾಕರಂ ಸ್ವಸಮಯಕುವಲಯ ಸು
ಧಾಕರಂ ಜಂಗಮಚರಣಸೇವಾಕರಂ ದೋಷಾ
ಭೀಕರಂ ಸಂಗೀತನುತ ವಿ
ದ್ಯಾಕರಂ ಭಸಿತಾಂಗರಾಗ ಶು
ಭಾಕರಂ ಕರುಣಾಕರಂ ವಿತರಣಗುಣಾಕರನು ೨

---

* ರಾಗ : ನಾಟ (ಧ, ಪ); ಶುದ್ಧಕಾಂಬೋಧಿ (ತ).
೧–೨ ಎನಿಸಿದುತ್ಕಟ । ಪಟುತ (ಆ, ಡಾ, ಮ).

CC-0. Jangamwadi Math Collection. Digitized by eGangotri

ಸರ್ವಜೀವದಯಾಪರಂ ನಿ
ರ್ಗರ್ವಿ ಕಿನ್ನರಜಿನ್ನಿಲೋಚನ
ಪೂರ್ವ ಪೀರವ್ರತಸದಾಚಾರಾನುಪಾಲಕನು
ಉರ್ವರಿಯೊಳು ಪರಸಮಯಮರ್ದನ
ಪರ್ವತಾಶಾ ಬಹುಕಳಾಪಿತ
ಗೀರ್ವರಂ ಲೋಕೈಕಪೂಜ್ಯಂ ಶರಣಮಾರ್ಗದಲಿ ೩

ಜಂಗಮಾವಳಿಗೊಸೆದು ಪರಿಚರಿ
ಯಂಗಳಂ ಮಾಡುತ್ತ ತೇಜೋ
ತ್ತುಂಗ ಭಕ್ತಿಯೊಳಿಂತು ಪೂಡೂರೊಳು ಪೆಸರ್ವೆತ್ತು
ಸಾಂಗಮಾಗಿರೆ ವಿವಿಧ ಕಾಯಕ
ಸಂಗತಂಗಳನಱಿದು ಪಲವ
ರ್ಥಂಗಳಂ ನಾನಾ ಪ್ರಕಾರದೊಳುಂ ಗಳಿಸಿ ತಂದು ೪

ಪಂಚವದನನ ಭಕ್ತರಿಗೆ ನಿ
ರ್ವಂಚಕದೊಳರ್ಥಂಗಳೆಲ್ಲವ
ನಂಚಿತಪ್ರಿಯದಿಂದವಾರಾಧಿಸಿ ಸವೆಯಲೊಡನೆ
ಸಂಚಲಿಸದಿರ್ದನಿತುಪುಂ ಪ್ರಾ
ಪಂಚಿಕವನಱಿಯದೆ ಪರಮ ಭ
ಕ್ತಂ ಚಮತ್ಕೃತಿಯಿಂದೆ ಕಿನ್ನರವೀಣೆಯಂ ಪಿಡಿದು ೫

ಒಂದು ದಿವಸಂ ಕೇಳಿಸಲು ಬಾ
ಲೇಂದುಮೌಳಿ ಸುನಾದರಸಲೋ
ಲಂ ದಯಾನಿಧಿ ಮೆಚ್ಚಿ ನಿಚ್ಚಂ ತನಗೆ ಪಡಿಯಾಗಿ
ಒಂದು ಹೊನ್ನುಮನೊಂದು ಪಣಮುಮ
ನೊಂದು ಹಾಗಮನೀಯಲಚ್ಚರಿ
ವೊಂದಿ ಲೋಕಂ ಪೊಗಳೆ ಜಂಗಮಕಿಂತು ಮಾಡುತಿರೆ ೬

---

೧೧ (ಥ).

CC-0. Jangamwadi Math Collection. Digitized by eGangotri

ಬಸವನಸದೃಶ ಭಕ್ತಿ[೧]ಭಾವನೆ[೨]
ವಸುಧೆಯೊಳು ನೆಱೆ ತೀವಿ ಪಸರಿಸಿ
ದೆಸೆದೆಸೆಗಳಂ ಮುಸುಕೆ ಕಿನ್ನರ ಬೊಮ್ಮಿದೇವಯ್ಯ
ಒಸಗೆಯಿಂದಾ [೩]ಬಸವನ ನಿರೀ[೪]
ಕ್ಷಿಸುವ ಕಾಂಕ್ಷೆಯೊಳೆಯ್ತರಲು ತ
ದ್ಪಸವರಾಜನು ಸಂಗಮೇಶ್ವರನಲ್ಲಿ ಕಾಣುತ್ತ ೭

ಘನತರೋತ್ಸುಕಚಿತ್ತದಿಂ ಮೇ
ದಿನಿಯೊರಸಲಭಿವಂದಿಸುತ ತಾ
ನನುನಯೋಚಿತ ಸತ್ಕ್ರಿಯಾದಿಗಳಿಂ ಪ್ರಿಯಂಬಡಿಸಿ
ಮನವೊಲಿದು ಕೈಯೊಡ್ಡಿ ಆ ಅ
ಯ್ಯನ ಪದೋದಕಮಂ ಪ್ರಸಾದಮ
ನನುಭವಿಸುತಂ ತತ್ವಗೋಷ್ಠಿಯೊಳಾ ಬಸವನಿರಲು ೮

ಒಂದು ದಿವಸ ವಿನೋದಮಾಗೆ
ಯ್ತಂದು ತತ್ತ್ರಿಪುರಾಂತಕೇಶ್ವರ
ಮಂದಿರದ ಗೋಪುರದೊಳಗೆ ಕುಳ್ಳಿರ್ದ ಸಮಯದಲಿ
ಮುಂದೆ ವೇಶ್ಯಾರ್ಥಕ್ಕೆ ವಧಿಸ
ಲ್ಕೆಂದು ಕುಱಿಯಂ ಬಿಲಿತುಕೊಂಡೊಲ
ವಿಂದಲೊಬ್ಬ ವಿಟಂ ಪಿಡಿದು ನಡೆತರಲು ಬೀದಿಯಲಿ ೯

ಕುಱಿಯುರವಣಿಸಿ ಕೊರಳ ನೇಣಂ
ಪಱಿದುಕೊಂಡೋಡಲ್ಕಪಂ ಬೇ
ಸಱವೆ ಹಿಡಿ ಹಿಡಿ ಎನುತದಱಿ ಬೆಂಬತ್ತಿ ಪರಿಯಲದು
ಱಱುಚುತಭವನ ಭವನಮಂ ಪುಗ
ಲುಱಿದೆ ಮಿಂಡನು ಹಿಂದೆ ಹತ್ತಲು
ಮಱುಗುತಾಗಳು ಕಿನ್ನರಯ್ಯಂ ಕರುಣದಲಿ ನೋಡಿ ೧೦

೧–೨ ವಾಸನೆ (ಕ, ಚ, ಥ, ಧ, ಬ, ಮ). ೩–೪ ಬಸವಣನನೀ (ತ, ಥ, ಧ,).

CC-0. Jangamwadi Math Collection. Digitized by eGangotri

ಹೋಗದಿರು ಹೋಗದಿರು ತಮ್ಮಾ
ಹೋಗದಿರು ನಿನಗುಚಿತವಲ್ಲಿದು
ದೇಗುಲದೊಳುಟ್ಟಿ ಹೊಕ್ಕುದೀ ಕುಟ್ಟಿ ಸಾಪ ಭಯಂಕಂಜಿ
ಹೋಗು ಕೊಲುವುದು ದೋಷ ನೀನಂ
ತಾಗದಡೆ ನೀ ಬಿಲಿತ ಬೆಲೆಯನ
ದೀಗ ತಪ್ಪದೆ ಹೇಳು ಇಮ್ಮಡಿಯಾದಡಂ ಕೊಳ್ಳು ೧೧

ಹರಪದಾರ್ಚಕರೊಪ್ಪಿಸುವರೇ
ಶರಣುಹೊಗೆ ನರರಾದಡಂ ಪತಿ
ಕರಿಸಿ ಕಾವರು ಸಾವು ನೋವುಂ ಜೀವಿಗಳಿಗೆಲ್ಲ
ಸರಿಯಲಾ ಕೇಳ್ ನಿನಗಿದನೆ ಬಲು
ಕರಿಸಿ ಕೊಲುವುದು ನೇಮವೇ ತತ್
ತರುಣಿಗೀ ಕುಟ್ಟಿಯಲ್ಲದಿಳಿಯದೆ ಗಂಟಲಲಿ ಮಗನೆ ೧೨

ಪಡೆಯಬಾರದ ವಸ್ತುವೆಂಬುದು
ಪೊಡವಿಯೊಳು ಕಾಂಚನವಲಾ ಛಲ
ವುಡುಗಿ ಬೇಡಿದಡೀವೆ ನಿನಗಾನೊಂದೆರಡು ಪೊನ್ನ
ತಡೆಯದೀವೆನು ಕೊಳ್ಳೆನಲು ಪಾ
ಕಡುಗರುಣೆ ಇಂತಪ್ಪ ಭಕ್ತರು
ಕೊಡುವರಾರ್ ನಿನ್ನಂತೆ ನಿನ್ನಯ ಮಾತು ಪಸನಾಯ್ತು ೧೩

ಹೊಗುವುದಂಬಲಮಂ ಮನೆಗಳಂ
ಹೊಗುವುದೀ ದೇಗುಲವನಾದಡೆ
ಹೊಗುವಡಂ ಬಿಡುವರೆ ಕುಟ್ಟಿಗಳಂ ಬಿಲಿತುತಂದವರು
ಆಗಲದೆಂತೆಯ್ವುವುದು ಪಥದಲಿ
ಜಗದೊಳಚ್ಚರಿ ನೀನಲಾ ನೀ
ತಿಗಳನಟ್ಟಿವ ವಿಚಾರವಂತನು ನಾವಟ್ಟಿಯೆವಿದನು ೧೪

೧–೨ ಳಿಗೆ (ತ, ಥ, ಧ, ನ). ೩–೪ ವಡಗಿ (ಥ); ವಡಸಿ (ಸ). ೫–೬ ಕೊಂಡ (ನ).

CC-0. Jangamwadi Math Collection. Digitized by eGangotri

ತಳುವುಮಾಡಿದಡೆನ್ನ ನಲ್ಲಳು
ಮುಳಿಯದಿರಳಿಂತೇವೆನೇವೆನು
ಬಿಲಿತ ಬೆಲೆಯನೆನುತ್ತ ತಾನಡಿಗಡಿಗೆ [೧]ಹಿಗ್ಗಿಹಸು[೨]
ಇಳೆಯೊಳಿಂತಹ ಕರುಣವುಳ್ಳವ
ರೊಳರೆ ಚರಜೀವಿಗಳಿಗೆಲ್ಲಂ
ಬಳಿಕ ಸಾವುಂ ನೋವು ಸರಿಯೆಂದುಲಿವುತಿರ್ದಪನು ೧೫

ಮುನ್ನ ನರರಸುವೊಂದು ಸಾವಿರ
ಹೊನ್ನಲಾ ಈ ಕರುಣಿ ಸಾವಿರ
ಹೊನ್ನನಾದಡೆ ಕೊಟ್ಟು ಕುಱಿಯಂ ಬಿಡಿಸದಿರನಲ್ಲಾ
ಇನ್ನು ಹುಸಿವನನೇ ಎನುತ್ತವ
ಚಿನ್ನವಾಡಲು ನಸುನಗುತವಾ
ಕಿನ್ನರಯ್ಯಗಳಾಗ ಸಾವಿರ ಹೊಂಗಳಂ ತರಿಸಿ ೧೬

ಇತ್ತು ಹುಸಿದಡೆ ಹೋಗಬಿಡೆನ
ಚ್ಯೊತ್ತಿ ಬಿಡುವೆನು ಬಸವನಿದು ನಾ
ಮತ್ತೆ ಕುಪರಿಯನಱಿಯೆನೆನೆ ವಿಟನಾಗಲೀ ಎನುತ
ಆರ್ಥಿಯಲಿ ಪೊಂಗಳನೆಣಿಸಿಕೊಂ
ಡಿತ್ತ ಸೂಳೆಯ ಮನೆಗಿವಂ ಹೋ
ಗುತ್ತ ಕುಱಿಯಿಲ್ಲದುಱಿ[೩] ಪೋಪುದಧಮವೆನುತ ತಿರುಗಿ ೧೭

ಬಳಿಕ ತೋರಿಹದೊಂದು ಕುಱಿಯಂ
ಬಿಲಿತುಕೊಂಡೋಪಳ ಮನೆಗೆ ಹೋ
ಗಲವನಿಂದಾವನಿತು ಪ್ರತ್ಯಂತವನಱಿದು ಸೂಳೆ
ಮುಳಿವುತಂ ಪೊಗಲೀಯದೊದರು
ತ್ತಿಲವೊ ನೀನೇತಱಿ ಭೂಜಂ[೪]ಗನೊಳ
ತೊಲಗು ಭಂಡರ ಭಾವ ನಿನ್ನಂ ಸರಿವಿಟರು ನಗರೆ ೧೮

೧–೨ ಹಿಗ್ಗುವನು (ಸ). ೩–೪ ಗಂ (ತ, ನ, ಸ).

CC-0. Jangamwadi Math Collection. Digitized by eGangotri

ಎನ್ನ ಮನೆಯಂ ಸಸಿನೆ ಹೊಗುವರಿ
ಗಿನ್ನು ನಾಚಿಕೆಯಿಲ್ಲವೇ ನೀ
ನೆನ್ನ ಹೊರೆಯಲಿ ನಿಂದಿರದಿರುಲಿವುತ್ತಿರದೆ ಹಾಱು
ನಿನ್ನ ಧನಗಿನವೆನಗೆ ಬಾತೆಯೆ
ಎನ್ನ ಸೊಬಗಂ ನೋಳ್ಪೆಯಾದಡೆ
ಹೊನ್ನನೀಗಳೆ ಬಿತ್ತಿಸುವೆನೇ ೧ಬೀದಿ ಬೀದಿಯಲಿ ೧೯

ಸೂಳೆಗೆಯ್ವಾ ವಿಟರೆ ತಲೆಗಳ
ಮೇಲೆ ಹುಲ್ಲಂ ಕಟ್ಟಿದೆಯೆಲೋ
ಖೂಳ ವಾಣಿಗನಾದೆ ಹಡೆದುಣಲೀತಕೀ ಬಾರಿ
ಬಾಳಲಾಪರೆ ಬಾಳೆ ಕುಱಿಗಳ
ನೋಳಿಯಿಂ ವ್ಯವಹರಿಸಿ ಕೊಡುವರು
ಕೂಳು ಸೀರೆಯು ಸಾಲದೇ ವಿಟರಿಂ ಪ್ರಜೆಗೆ ತನಗೆ ೨೦

ಮಹಿಯೊಳಗೆ ಮಱು ಭಾಪುರೇ ಬದು
ಕಿಹಳೆ ಸೂಳೆಯೆನಲ್ಕೆ ಸತಿಯರೊ
ಳಿಹಗೆ ಗುಜು ಗುಜು ಎಂಬ ನುಡಿಗಳಿಗೆಯ್ದೆ ಗುಱಿಯಾದೆ
ಗಹಗಹಿಸಿ ನಗೆ ನಗುವ ನಗೆಗಳ
ರ೧೧ಹಣಿಗಳಿಗೊಳಗಾದೆನಲ್ಲಾ
ಮಹಿಳೆಯರೊಳಭಿಮಾನಗಿತ್ತಿಯನೆನ್ನ ನೀನಱಿಯೆ ೨೧

ಎಂದು ೧೧ಮೂದಲಿಸುತ್ತ೧೨ ಹೇಳುವ
ಸುಂದರಿಯ ಮಾತುಗಳಿಗವನಿಂ
ತೆಂದ ನಾ ನಿನ್ನುವನಗಲೆನೀ ಹಿರಿಯ ಹಬ್ಬದಲಿ
ಇಂದು ಮಾಡಿಸುವೆಂ ಮಹೋತ್ಸವ
ದಿಂದೆ ಸಾವಿರ ಹೊಂಗಳಿಗೆ ಬಲಿ
ತಂದು ಕುಱಿಗಳ ಹಿಂಡು ಹಿಂಡಿನ ಛಂದದಲಿ ನೆರಹಿ ೨೨

೧–೨ ಕೇರಿ ಕೇರಿ (ಸ). ೩–೪ ಯ್ಯೆಂಬವರ (ತ). ೫–೬ ಲೊ ನೀಂ (ತ, ನ); ಯಲಾ (ಥ, ಪ). ೭ ಲೆ (ತ, ನ) ೮ ಳು (ಥ, ಪ); ಡೆ (ಥ); ್ (ತ, ನ). ೯ ಲೆ (ಥ, ಧ, ಪ); ಲ (ತ); ಳ (ನ). ೧೦ ಗ (ಸ). ೧೧–೧೨ ಮುದ್ದಿಸುತಿಂತು (ತ, ಥ, ನ).

CC-0. Jangamwadi Math Collection. Digitized by eGangotri

ಮತ್ತೆ ಬೇಕಾದನಿತು ವಿತ್ತವ
ನಿತ್ತು ಬೀಯಕೆ ವಾರಸತಿಯರ
ಮೊತ್ತದಲಿ ಪೆಸರೆನಿಸಿ ನಿನ್ನುವನೀ ಕಟಕದೊಳಗೆ
ವೃತ್ತಕುಚೆ ನಿನಗೊಸಗೆಗಳನೊ
ಳಿತ್ತೆನಲು ಮಾಡಿಸುವೆನಗಲದೆ
ಚಿತ್ತದೊಳು ಚಿಂತಿಸದೆ ಹಬ್ಬವನುಬ್ಬಿ ಮಾಡೆನಲು ೨೩

ಆಂ[೧]ದು ದೇವತೆಗೆಂದು ನೀ ಬಿಲಿ
ತಂದ ಕುಱಿಯಂ ತಾರದಡೆ ನಾ[೨]
ವಿಂದೊಸಗೆಯಂ ಮಾಡಲಮ್ಮೆವು ನಮ್ಮನಾ ದೈವ
ಕೊಂದಪ್ಪದು ಅದಕಂಜುವೆವು ನಾ
ವೆಂದೆನಲ್ಕವನವಳ ಮಾತಿಗೆ
ಸಂದು ಕಾಮಾಂಧಕಗೆ ಕಾಣಿಸದೊಂದು ಕಾರ್ಯವದು ೨೪

ಕಡು ದುರುಳನೆಯ್ತಂದು ಕುಱಿಯಂ
ಪಿಡಿಯಲೊಡನಾ ಶರಣನಾಗ್ರಹ
ವಡಿಸಿ ನೋಡು[೩]ತ್ತೆಯ್ದೆ[೪] ಸಾಱಿದೆನೆಲವೊ ಸಾಱಿದೆನು
ಹಿಡಿಯದಿರು ತೊಲತೊಲಗು ನೀ ಹಿಡಿ
ದಡೆ ಬಸವರಸನಾಣೆ ಪಾತಕ
ಹಿಡಿ[೫]ದಡಿನ್ನಾಂ[೬] ನಿನ್ನ ತಲೆಯಂ ಹೊಡೆದು ಕೆಡಹುವೆನು ೨೫

ನಂಜು ನಿನಗಿದು ಲಿಂಗಮುದ್ರೆ ಸು
ರಂಜಿಸುವ ಕುಱಿ ಬೇಡ ನಾನಿದ
ಕಂಜುವವನಲ್ಲೆಲವೊ ಶರಣಾಗತಜನಕೆ ಪಜ್ರ
ಪಂಜರಂ ನಮ್ಮವರ ಬರಿದಿದು
ಕುಂಜರಂ ನಾ ನಿನ್ನ ಮಸ್ತಕ
ಕಂಜನಾಳಕ್ಕೆನುತಡಸಿ ಬರೆ ಮುಳಿದವಂ ತನ್ನ ೨೬

---

೧ ಂ (ಸ). ೨ ತಾ (ತ, ಥ, ನ, ಪ). ೩–೪ ಲವೊ (ಸ). ೫–೬ ದೊಡೆಯು ನಾ (ಸ).

CC-0. Jangamwadi Math Collection. Digitized by eGangotri

ಮಿಟ್ಟಿಗುವಲಗಂ ಕೀಳಲೊಡನಂ
ತುಟಿದೆ ಕೋಪೋದ್ರೇಕದಿಂ ತಲೆ
ಪಟ್ಟಿಯ ಹೊಡೆದನು ಕಿನ್ನರಯ್ಯಂ ಬೀಳು ಕೆಡೆ ಎನುತ
ಬಿಟ್ಟಿಸಿನಡ್ಡಾಯುಧನಿಹತಿಯಿಂ
ಹೆಟ್ಟಿದಲೆಯಪನ ದೇಗುಲದ ಹೊಱ
ಹೊಱಗೆ ಬಿದ್ದುದು ಖಳನ ತಲೆ ಜನರದ್ಭುತವಿದನಲು ೩೭

ಭಾಷೆಹೀನನ ಹೆಣನನೀಶನಿ
ವಾಸದೊಳಗಿರಿಸುವುದನುಚಿತಂ
ದೋಷವೆಂಬವೊಲಟ್ಟಿಯಂ ಹೊಱಗೆಳೆದು ಹಾಯ್ಕಿಸಲು
ಐಸಱಿಂದಾ ಕ್ರೂರಕರ್ಮಿಯ
ದೂಸಱಿಂ ಬಂದವನ ಬಳಗಂ
ಭೂಸತೀಶನನೆಯ್ದಿ ಬೆನ್ನೈಸಿದರು ಮೊಱೆಯಿಡುತ ೩೮

ಅವಧರಿಸು ತಪ್ಪೇನುವಿಲ್ಲಿ
ಮ್ಮವನಱಿಯದೇ ಕುಱಿಯ ಬಳಿವಿಡಿ
ದವಸರಿಸಿ ಬರುತಾ ಶಿವಾಲಯಮಂ ಪೊಗಲುವಿಡಿದ
ನೆಪದಿ ಕೊಂದನು ಭಕ್ತರೊಳಗತಿ
ದಪಡ ಕಿನ್ನರಬೊಮ್ಮಯನುಮೆಂ
ಬವಗಡೆಯನೆಂದೆನಲು ಬಿಜ್ಜಳನತಿ ಕುಪಿತನಾಗಿ ೩೯

ಬಸವನಂ ನೋಡುತ್ತಮಿಂತೆಂ
ದುಸುರ್ದನಿಳೆಯೊಳಗತಿ ದಯಾಪರ
ರಸಮನಯನನ ಭಕ್ತರೆಂಬರು ನಿರಪರಾಧಿಗಳ
ಮಸಗಿ ಕೊಲುವುದು ನೀತಿಯೇ ಮಾ
ನಿಸರನೂರೊಳು ಬದುಕಲೀಸರು
ಸಸಿನೆಯಿಹುದೇ ನಿಮಗೆ ಕುಱಿಗಳಿಗೇನು[೧] ಸಂಬಂಧ ೪೦

೧ಕೆ (ತ, ನ, ಪ).

CC-0. Jangamwadi Math Collection. Digitized by eGangotri

ಧರಣಿಯೊಳಗಿನ್ನೆಮ್ಮ ಮೇಲೊ
ಬ್ಬರಸನುಂಟೇ ಎಂಬವೋಲಾ
ಸುರದಿ ಕೊಂದಿಹರಲ್ಲದೇ ಮೇಣರಸನಾದಡೆಯು
ನಿರಪರಾಧಿಯನಿಂತು ಕೊಲುವನೆ
ಪರಮ ಪಾತಕವಾಗದೇ ಭ
ಕ್ತರಿಗಿದೋಜೆಯೆ ಅವರೊಳುಚಿತವನಱಿಸಲೇನುಂಟು ೩೧

ಕಾಲಲೊದೆವುದು ಮಾಂಸವಂ ಸವಿ
ದಾಳಿಗೊಳುವುದು ಕಲ್ಲಿಲಿಡುವುದು
ಬಾಲನಂ ಕೊಲುವುದು ಸತಿಯನೀವುದು ಕುಲಂಗೆಟ್ಟು
ಕೀಳುಜಾತಿಯ ಮನೆಯೆಲುಂಬುದು
ಮೇಲೆ ತಂದೆಯ ತಲೆಯನಿರಿವುದು
ಚಾಳಿಯೇ ಭಕ್ತರಿಗೆ ಭಕ್ತರ ಭಕ್ತಿ ವಿತಱಿವು ೩೨

ಧರ್ಮವೆಂಬರು ತಾವು ನುಡಿದುದು
ಕರ್ಮವೆಂಬರು ಪರರು ನುಡಿದಡೆ
ಮಾರ್ಮುನಿವುದೇಂ ನೀವೆಯಾಳೀ ರಾಷ್ಟ್ರವೆಲ್ಲವನು
ನಿರ್ಮಳದೊಳೆಮಗಾಳಲುಂಟೇ
ಮರ್ಮವೇಕಡಿಗಡಿಗೆ ನಿಮಗೀ
ಪೆರ್ಮೆ ಘನವಂಜುವೆವು ರಾಜ್ಯಪನೊಪ್ಪುಗೊಳ್ಳೆನಲು ೩೩

ದರಹಸಿತಮುಖಿನಾಗುತಂ ಬಸ
ವರಸನರಸಂಗೊರೆದನಿಂತು
ಬ್ಬರಿಸಿ ಕಜ್ಜದ ತುದಿಯನಱಿಯದೆ ನುಡಿವುದಿದು ನಿನಗೆ
ಹಿರಿಯತನವೇ ಧರ್ಮವಂ ದುರ್
ನರರು ತಪ್ಪುವರಲ್ಲದೇ ಶಂ
ಕರನ ಭಕ್ತರು ತಪ್ಪುವರೆ ಶಿವಧರ್ಮಮಾರ್ಗವನು ೩೪

೧ತ (ಕ, ಚ). ೨–೩ ದುದ (ತ, ನ, ಪ). ೪–೫ ದಿನ್ನೀ (ಸ).

CC-0. Jangamwadi Math Collection. Digitized by eGangotri

ಕೇಳು ಭೂಪಾ ಕಿನ್ನರಯ್ಯನು
ಭಾಳನೇತ್ರಪ್ರತಿಮನಾತನು
ಬಾಲಕನೆ ಸೈತಿರ್ದವನನಂತೆಯ್ದಿ ಕೊಲುವುದಕೆ
ಹೇಳಲೇನೆತ್ತೀಯಿತೆಂದಡೆ
ಮೂಲೆಯಲಿ ಕಟ್ಟಿಸುವುದೆಂಬನ
ಚಾಳಿಯೇತಕೆ ಕಾರ್ಯ್ಯಧಾರೆಯೆ ಕೀಲನಾರೈದು ೩೫

ನಿಮ್ಮವರನಲ್ಲಿಗೆ ಕಳುಹಿಯವ
ರೆಮ್ಮವರ ಮೇಲಿನಿತು ತಪ್ಪಂ
ನೆಮ್ಮಿಸಿದಡಱಿ ಬಳಿಕ ಮರ್ಯಾದೆಗಳನೈಸಱಿಲಿ
ಸುಮ್ಮನಿರದೇ ಕಳುಹು ಬೇಹವ
ರಂ ಮಹೀಪತಿ ಎನಲು ಕಿನ್ನರ
ಬೊಮ್ಮದೇವನ ಹೊರೆಗೆ ತನ್ನಯಮಾತ್ಯರಂ ಕರೆದು ೩೬

ಆಗಲಟ್ಟಿದಡಾ ಪುರಾರಿಯ
ದೇಗುಲಕ್ಕವರೆಯ್ದಿ ತತ್ಶಿರ
ಣಾಗತಪ್ರತಿಪಾಲನಂ ಕಾಣುತ್ತ ಪೊಡವಂಟು
ಕೈಗಳಂ ಮುಗಿದಯ್ಯ ನಿಮ್ಮಂ
ಥಾ ಗರುವರೀ ಹಿಂಸೆಗಳಿಗೊಳ
ಗಾಗಲಹುದೇ ಭವಿಯೊಡನೆ ಸರಿಮಾಡಿಕೊಳಲೇಕೆ ೩೭

ಅಸಗರಿಗೆ ಸವಣರಿಗೆ ಸಂಬಂ
ಧಿಸುವುದೇ ಕೆಳೆ ಹುಳಿಗೆ ಹಾಲಿಗೆ
ಸುಸರವಹುದೆ ವೃಥಾಪರಾಧವು ನಿಮಗೆ ಬಂದುದಲಾ
ಪಿಸುಣರಹ ದುರ್ಜನರ ಕುಱಿಗಳ
ದೆಸೆಗೆ ಹೋಹರೆ ಸಜ್ಜನರ್ಕಳು
ಸಸಿಗೆ ಬಿಸಿಲಿಗೆ ಸೇರುವುದೆ ನೀವೆತ್ತಲವರೆತ್ತ ೩೮

೧–೨ ದಾರ್ಯದ (ಸ). ೩ ಚ (ಪ). ೪ನೆ (ನ, ಪ).

CC-0. Jangamwadi Math Collection. Digitized by eGangotri

ಭೂಪನಿದನಾರಯ್ಯಲೆಂದು ನಿ
ರೂಪಿಸೆಮ್ಮಿಪನಿಲ್ಲಿಗಟ್ಟಿದ
ನೀ ಪರಿಯನೇನೆಂದು ಹೇಳುವೆವಿಲ್ಲಿ ನಾವೆನಲು
ಈ ಪಲವು ಮಾತೇತಕವನತಿ
ಪಾಪಿ ಕುಜಿಯಂ ಪಿಡಿದು ತರಲುಪ
ತಾಪಿಸುತ ನೇಣಂ ಪಜಿದುಕೊಂಡೀ ಪುರಾಂತಕನ ೩೯

ದೇಗುಲವನೆಯ್ತಂದು ಪೊಗೆ ಕೊಲ
ಲಾಗದಕಟಾ ನೀನೆ ಬಿಡು ಆಂ
ತಾಗದಡೆ ಕೊಳ್ಳಿದಜಿ ಬೆಲೆಯಂ ಹೇಳಿಯದಜಿಂದ
ಆಗದಡೆ ಇಮ್ಮಡಿಯು ಮುಮ್ಮಡಿ
ಯಾಗಿ ಕೊಟ್ಟಿಹೆನೈಸಜಿಂದಂ
ಹೋಗದಿಂತಾವಂದದಿಂದವನೆಮ್ಮನಿಂತೆಂದ ೪೦

ಸಾವಿರವನಿತ್ತಾದಡಂ ಪಶು
ಜೀವಿಯಂ ಕೊಲಲೀಯನಯ್ಯನು
ಜಾವಳನೆ ಬಿಡಿಸಿಹನಲಾ ಎಂದೆಮ್ಮನಣಕಿಸಿದ
ಆವಜೆಯೊಳುಂ ಕೇಳಿರೇ ಮು
ನ್ನೀ ವಿೀರಸವೆಪಸರವಿ ನುಡಿಗಳ
ನೀವರೇ ಕುಜಿಗಳಿಗೆ ಸಾವಿರ ಹೊನ್ನನಿಳೆಯೊಳಗೆ ೪೧

ಆವಗೆ ಸಾವಿರ ಹೊಂಗಳಂ ಚೌ
ಕವನೆಣಿಸಿ ಕೊಟ್ಟಿನ್ನಳುಪಿ ಬಂ
ದವಗಡಿಸಿದಡೆ ಬಿಡೆನೆನುತ ನಾಂ ಹೇಳಿ ಈ ಕುಜಿಯ
ಶಿವನ ಮುಂದುಂಡಿಗೆಯನೊತ್ತಿದೆ
ಶಿವನ ಲಾಂಛನವಿದು ಬಳಿಕ್ಕಾ
ಕುವಿಟನಲ್ಲಿಂದೊಚ್ಚಿ ಹೊತ್ತಿಂಗಿಲ್ಲಿಗೆಯ್ತಂದು ೪೨

೧–೨ ಆ (ಪ). ೩ ದಚ್ಚರಿಯ (ಪ). ೪–೫ ಬಳಿಕನ್ನ (ತ, ನ, ಪ).

CC-0. Jangamwadi Math Collection. Digitized by eGangotri

ಇದಱ ಕೊರಳಲಿ ನೇಣನಿಕ್ಕಿದ
ಡೊದಱಿ ನಾಂ ಬೇಡೆಂದು ನಿಲಿಸಲು
ಮದಿಸಿ ಭಾಷೆಯನುಳಿದು ಕೈದುವನೆನ್ನಮೇ[೧]ಲುರ್ಚಿ[೨]
ಗದಱಿದನ ತಲೆಯಂ ಪಱಿದು ಹಾ
ಯ್ಕಿದೆನಿದಾರದು ತಪ್ಪು ಹೇಳಿರೆ
ವಿದಿತವಿಂತಾದುದಕೆ ಈ ಶ್ರೀಪುರಾಂತಕನೆ ಸಾಕ್ಷಿ ೪೩

ಹಿಡಿವರುಳ್ಳಡೆ ನುಡಿಸುವೆನು ನಿ
ನ್ನೊಡೆಯನೊಡನಿಂತೆಂದು ಹೇಳೆನ
ಲೊಡನಮಾತ್ಯರಿದಕ್ಕೆ ವಿಸ್ಮಯರಾಗಿ ತಾವೆಯ್ದಿ
ಪೊಡವಿಪಂಗೀ ಹದನನಱಿಪಲು
ಘುಡುಘುಡಿಸುತಹುದಹುದು ಭಕ್ತನು
ಕಡುಹು ಗೊಡ್ಡಾಟಂಗಳಂ ಕುಪರಿಗಳನಾಡಿಹನು ೪೪

ಆತನಾಡುವ ಮಾತುಗಳು ವಿಪ
ರೀತವಾಗಿವೆಯೆಂದುವಿಂತಹ
ಮಾತುಗಳನಾವಱಿಯೆವೆಲ್ಲರು ಕೇಳಲೀಶ್ವರನ
ಖ್ಯಾತಿ ಮಿಗೆ ನುಡಿಸಿದವೆನೆನಲಾ
ಮಾತು ಕಪಟವೊ ನಿಜವೊ ಬಳಿಕೀ
ರೀ[೩]ತಿಗಳನಾರೈದು ನೋಡುವೆನೆನುತ ಬಿಜ್ಜಳನು ೪೫

ತನ್ನ ನಿಪಿಳ ನಿಯೋಗಸಹಿತಂ
ತನ್ನರೇಂದ್ರನು ಸಂಭ್ರಮಾ[೪]ಕ್ರಾಂ
ತೋ[೫]ನ್ನತಿಯೊಳೆಯ್ತಂದನಧಿಕ ವಿಭೂತಿ ಭಾತಿಯಲಿ
ಕಿನ್ನರಯ್ಯನ ಪಾದಪಂಕಜ
ಕಂ ನಮಿಸುತಾ ಬಸವರಾಜನು
ಸನ್ನುತಿಗಳಂ ಮಾಡುತಿರ್ದನು ಪರಮ ಹರುಷದಲಿ ೪೬

೧–೨ ಲಿತ್ತಿ (ತ, ನ, ಪ). ೩ ನೀ (ಸ). ೪–೫ ಕಾರೋ (ಥ).

CC-0. Jangamwadi Math Collection. Digitized by eGangotri

ಮಂಗಳಂಗಳ ಸಾಲು ಶೃಂಗಾ
ರಂಗಳೊಪ್ಪದ ಕೀಲು ಭಕ್ತ್ಯಜ
ನಂಗಳಿಗೆ ಬಲದೋಳು ಹರನುದ್ದಂಡಕರವಾಳು
ಲಿಂಗಜಂಗಮವಾಳು ಸಜ್ಜನ
ಸಂಗತಂಗಳ ಸೂಳು ವೀರರ
ಸಂಗಳಗ್ಗದ ಬಾಳು ಜಯಿಸುವ ಶಕ್ತಿಗಳ ಮೇಲು ೪೭

ಆಚ್ಚ ಶಿವನೊಂದಚ್ಚು ಭಕ್ತಿಯ
ನಚ್ಚು ಶರಣರ ಮಚ್ಚು ಹಿರಿಯರ
ಮೆಚ್ಚು ಸತ್ಯರಿ ಕೆಚ್ಚು ಪರವಾದಿಗಳೆದೆಯ ಕಿಚ್ಚು
ಮುಚ್ಚಿರಿಸುವರ ಬಿಚ್ಚು ಕುಜನರ
ಬೆಚ್ಚು ಶಾಂತಿಯ ಹೆಚ್ಚು ಧೂರ್ತರ
ಕೊಚ್ಚು ಕಲಿತನದಚ್ಚು ಸುಖಿಕಂ ಮುಚ್ಚುಮಱಿಯಿಲ್ಲ ೪೮

ಎನುತ ಸರಸಾಚುಂಬಿತಾರ್ಥ ಸ
ವಿನಯಪೂರ್ವಕನಾಗಿ ಕೀರ್ತಿಸಿ
ಜನವಖಿಳವೋಲ್ಕೈಸೆ ಭಕ್ತರು ತಂಡತಂಡದಲಿ
ಮನಮುಲರೆ ತತ್ ಶಿವಸ್ಥಿನಿವಾಸದ
ಘನಕವಾಟವನಿಕ್ಕಿ ತಮ್ಮಡಿ
ಮನೆಗೆ ಮುನ್ನವೆ ಪೋದೆವೆಯೊಳಾ ಬೊಮ್ಮಿದೇವಯ್ಯ ೪೯

ಹರ್ಷಿತಮುಖಿಂದಾ ಕದಹುಗಳ
ದೆಸೆಯನಿಂತಿನಿತೋರೆಯಲಿ ದಿ
ಟ್ಟಿಸಲದಕೆ ಮುನ್ನಾ ಪುರಾಂತಕನಂಜಿ ಕದಹುಗಳ
ಮುಸುಕನಾಗಳಿ ಹೊಱಿಗೆ ತೆಗೆದನು
ಸಸಿನೆ ಕದಹುಗಳಂ ತೆಱಿದನಂ
ದೊಸೆದು ದಾಸಂಗೆಂದುಸುರ್ವರು ಕೇಳಿ ಬಲ್ಲೆವದ ೫೦

---

೧ ದ (ತ, ಫ, ಘ, ನ, ಪ). ೨–೩ ಹರ (ಪ). ೪ ಱಿ (ಸ).

CC-0. Jangamwadi Math Collection. Digitized by eGangotri

ಇದು ವಿಚಿತ್ರವಲಾ ಪುರಾರಿಯ
ಕದಹುಗಳು ಕರುಣಾಳು ನಸುನೋ
ಡಿದಡನಿತಱಿೊಳಗಲ್ದು ಬಿದ್ದವು ಅಮಮಂ ಮರುಳು ಭಾಪು
ಸದಮಳಾತ್ಮನು ಕಿನ್ನರಯ್ಯನು
ಮದನಮರ್ದನನಂ ನುಡಿಸಿದ
ಲ್ಲದೆ ಬಿಡಂ ತಾನೆನುತ ನೋಟಕ ಜನರು ಕೀರ್ತಿಸಲು ೫೧

ಸಂತಸಂ ಮಿಗೆ ಬಂದು ಬೊಮ್ಮಮ
ಹಂತನೆಂದನು ಕೈದುಡುಕಿ ಸುರ
ತಾಂತದಲಿ ಕಾಂತೆಯ ಮೊಲೆಯೆ ನೀವೆಂದು ನಿಶ್ಚಯಿಸಿ
ಮುಂತೆ ಆಯ್ಯಾ ಎಂದು ಕರೆಯೆ ತ
ದಂತರದೊಳಾ ನಂಬಿಯಣ್ಣಂ
ಗಂತರಿಸದೋ ಎಂದು ಮಾತಾಡಿದ ೧ಮಹಾಮಹಿಮೆ ೫೨

ದಾಸಿಮಯ್ಯಂಗಂದು ವಾದಿನೊ
ಳೋಸರಿಸದೆ ಪಿಪೀಲಿಕೆಯೊಳು
ಲ್ಲಾಸದಿಂ ನುಡಿದಭವನೇ ಬಾಹೂರ ಬೊಮ್ಮಂಗೆ
ದೇಶವಱಿಯಲು ನುಡಿದ ಜೋಳದ
ರಾಶಿ ನೀನಾಗಿರ್ದು ಸರ್ವಾ
ವಾಸ ನುಡಿಯೈ ಎನ್ನ ಮೂರಿ೩ಗೆ ಸಿಕ್ಕದೆಂಬಂತೆ ೫೩

ಕಡಗಿ ಕಿನ್ನರ ಬೊಮ್ಮಿದೇವಂ
ಮೃಡಗಣಂಗಳ ಆತ್ಮದೊಳ೪ಗಳ
ವ೫ಡಿಸಿ ೬ಖಡ್ಗದ೭ ಮೋಹರ೮ಕೆ ಕೈದುಡುಕಿ ಚಿಲುವಲರೆ
ತಡೆಯದಭಿಮುಖಿನಾಗಿ ವೀರದ
ಕಡುಹಿನಿಂ ಶ್ರೀಪುರಾಂತಾಕಾ ಎನ
ಲೊಡನೆ ಓ ಎನುತಿರ್ದನದ್ಭುತವಾಯವಸರದಲಿ ೫೪

೧–೨ನು ಮಹದೇವಾ (ಸ). ೩ ಲಿ (ಧ, ನ, ಪ). ೪–೫ ಗುಳ್ಳ (ತ, ಸ). ೬–೭ ಬಾಳದ (ನ). ೮ಳ (ತ, ಥ, ಧ, ನ, ಪ).

CC-0. Jangamwadi Math Collection. Digitized by eGangotri

ಬೆಗಡುಗೊಂಡುದು ಭ್ರಮಿಸಿ ಮೂರ್ಚ್ಛನೆ
ಬಿಗಿದು ಲಿಂಗಸಮೇತರುಳಿಯಲು
ಖಗಮೃಗೋರಗತುರಗವಾ ಕುಂಭಿಗಳು ಮೊದಲಾದ
ಜಗದೊಳುಳ್ಳ ಚರಾಚರ ಪ್ರಾ
ಣಿಗಳವೆಲ್ಲಿರ್ದೆಡೆಯೊಳಸುಗಳ
ತಗಹು ಬಿಟ್ಟವು ಕಟಕವದಿರಿತು ಲೋಕವಳುಕಿದವು ೫೫

ಉದಧಿಗಳು ಕದಡಿದವನಲನಾ
ಶಿದನನಿಲನುಡುಗಿದನವನಿ ನಡು
ಗಿದುದುವೆಂಟು ನಗಂಗಳುಂ ತಗ್ಗಿದವು ಮುಗ್ಗಿದವು
ಮದಗಜಂಗಳು ಕಚ್ಚಪಂ ನೆ
ಗ್ಗಿದನುರಗಪತಿ[೧] ಕುಗ್ಗಿತಮರರು
ಹೆದಱಿದರು ರವಿಯಸ್ತಮಿಸಿದಂ ಭಗಣವುದುರಿದವು ೫೬

ಪ್ರಳಯವೊಂದಿಸಿ ಜಗವನತಿಕಳ
ವಳವನೆಯ್ದಿಸುತಂ ಪ್ರಮಥಸಂ
ಕುಳವಲರೆ ಲೋಕಂಗಳೆಲ್ಲ ತಮಂಧಮಯವಾಗೆ
ನಲಿದು ಪಾಡುತ್ತಾಡುತಂ ವೆ
ಗ್ಗಳಿಸಿ ಲೀಲಾ ಕೌತುಕಕ್ರಿಯೆ
ಗಳವೊಲಿಪ ಪೂರ್ವಪ್ರಕಾರಂ ತೋಱುತಿದೆ ಮತ್ತೆ ೫೭

ನೆರೆದಱಿಳ ಮಾಹೇಶ್ವರರು ಪರಿ
ಪರಿಯ ನಾಟಕರಚನೆಗಳನು
ಬ್ಬರಿಸಿ ಮಾಡಲು ಪಗಲುಮಿರುಳುಂ ಮಾಣದೇಳುದಿನ
ಮೊರೆವುತಿರಲೈಸಱಿಲಿ ಭುವನೋ
ದ್ಧರಣಕಾರಣಬುದ್ಧಿಯಲಿ ಬಸ
ವರಸಸೊಲವಿಂ ಕಿನ್ನರಯ್ಯನ ಪದಯುಗಕ್ಕೆಱಗಿ ೫೮

---

೧ ಣೆ (ಚ).

CC-0. Jangamwadi Math Collection. Digitized by eGangotri

ಸೂರಿಜನವಿಸ್ತಾರ ದುರ್ಜನ
ದೂರ ಸಜ್ಜನಸಾರ ಕರುಣಾ
ಪೂರ ಪುಣ್ಯಶರೀರ ಗುಣಮಣಿಹಾರ ನುತಧೀರ
ವಾರಿತಾಪಂಕಾರ [೧]ಶರಣಾ
ಧಾರ[೨] ಜಗದುಪಕಾರ ಸುಚಿದಾ
ಕಾರ ಘನಗಂಭೀರ ಜಿತಸಂಸಾರ ಧೃತಸೂ[೩]ರಾ ೫೯

ಮಂಗಳೋತ್ತಮ ಭಕ್ತಿಲಲನಾ
ಲಿಂಗ ಲಿಂಗಾಸಂಗತಾಂಗ ಗ
ತಾಂಗಜಾತವಿಕಾರ ಕಾರಣಪುರುಷ ಪುರುಷಾರ್ಯ
ತುಂಗ ತುಂಗಭ್ರಮಿತಕೀರ್ತಿಭು
ಜಂಗ ಜಂಗಮಚರಣಸರಸಿಜ
ಭೃಂಗ ಕಿನ್ನರಬೊಮ್ಮಿದೇವಾ ಕರುಣಿಸೈ ಎನಲು ೬೦

ಬಸವರಾಜನ ಕೈವೊಯಿದು ದರ
ಹಸಿತ ಮುಖನಾಗುತ ಪುರಾರಿಯ
ದೆಸೆಯನೀಕ್ಷಿಸಿ ಸಾಕು ಹೋ ಎನುತಂ ನಿವಾರಿಸಲು
ವಸುಮತಿಯೊಳದ್ಭುತವುಡುಗಿ ರಂ
ಜಿಸಿತು ಮುನ್ನಿನ ಹಾಗೆ ಲೋಕಂ
ಪಸರಿಸಿತು ಕಟಕಂ ಬದುಕಿತಾ ಸರ್ವ ಜೀವಿಗಳು ೬೧

ಆನಿತಱಿಸೊಳು ಬಿಜ್ಜಳನೃಪಂ ಮೂ
ರ್ಖನೆ ತಿಳಿದು ತಾನದ್ದು ತನ್ನಯ
ಜನಸಮೂಹಂ ಬೆರಸಿ ದಂಡಪ್ರಣಮಂ ಮಾಡಿ
ಘನತ[೪]ರಾದ್ಭುತ[೫] ಕೀರ್ತಿಯಭಯಂ
ವಿನುತ ತೇಜೋಪರ್ತಿಯಭಯಂ
ಮನಸಿಜಾಂತಕಮೂರ್ತಿಯಭಯಂ ಬೊಮ್ಮಿದೇವಯ್ಯ ೬೨

೧–೨ ಶರಣೋದ್ಧಾರ (ಥ, ಧ, ಪ). ೩ ಶೂ (ತ, ನ). ೪–೫ ರೋದ್ಭುತ (ನ).

CC-0. Jangamwadi Math Collection. Digitized by eGangotri

ಕಾಯಿ ಕಾಯ್ಕುಂ[೧]ಗಾಣದಜ್ಞಾ
ನಾಯತರನಪಗತಮತಿಗಳನ
ಪಾಯಗತಿಗಳನಕ್ಷಮರನತಿ ಕಷ್ಟಮಾನಸ[೨]ರ
ನ್ಯಾಯಮೂರರನಪಜಯರನ
ನ್ಯಾಯಕಾಱರನಧಿಕ ಕಪಟೋ
ಪಾಯರಂ ಸರ್ವಾಪರಾಧಿಗಳಂ ದುರಾತ್ಮರನು ೬೩

ಕರುಣದಲಿ ನೋಡೆನ್ನನನುಪಮ
ಚರಿತ ನಿಮ್ಮ ಮಹತ್ವಮಂ ವಿ
ಸ್ತರಿಸಿ ಹೊಗಳುವಡೆಮಗೆ ಪವಣೇ ನಿಮ್ಮಯಾಜ್ಞೆಯನೆ
ಶಿರದೊಳಾಂತು ಪ್ರರಾಂತಕಂ ನೀಂ
ಕರೆಯಲೋ ಎನುತಿರ್ದನತಿಕೃಪೆ
ವೆರಸಿ ಹೋ ಎನಲುಡುಗಿದನು ಬಳಿಕಾಯವಸರವಲಿ ೬೪

ಲೋಕವೆಲ್ಲಂ ಪ್ರಳಯತಾಪ
ವ್ಯಾಕುಳವನೆಯ್ದಿತ್ತು ಕರುಣಾ
ಲೋಕನದಿ ನೀ ನೋಡಲೊಡನಭಿವೃದ್ಧಿಕರವಾಯ್ತು
ಪ್ರಾಕಟವಿದಂ ಹೇ[೩]ಳಲರಿದಿಹ
ಲೋಕ ಪರಲೋಕಂಗಳಿಗೆ ಜಗ
ದೇಕರಕ್ಷಕ ಶಿಕ್ಷನಲ್ಲದೆ ಬಳಿಕದಾರುಂಟು ೬೫

ಶರಣವತ್ಸಲ ಬಿನ್ನಪವನವ
ಧರಿಸು ಹರನುಂ ನೀಮೆಮಗೆ ಶಂ
ಕರನು ನೀವೇ ಭವನು ನೀವೇ ಭಕ್ತನುಂ ನೀವೇ
ಧರಣಿಯೊಳು ಪ್ರತಿದೋಷಿಲುಂಟೇ
ಒರೆಯಲುಂಟೇ ನಿಮಗೆ ತಂದೆಯೆ
ಕರುಣೆ ಎಮ್ಮಂ ಹಾಲಲದ್ದೈ ನೀರಲದ್ದಯ್ಯಾ ೬೬

---

೧ ಯುಂ (ಸ). ೨ ವ (ಸ) ೩ ಹೊಗ (ತ, ಫ, ಸ).

CC-0. Jangamwadi Math Collection. Digitized by eGangotri

ಕಾವವಂ ನೀನಲ್ಲದನ್ಯಥ
ವಾವನುಂಟೆಮಗೊರ್ವನೆಮಗೇ
ಕಾವಗಂ ಬ್ರಹ್ಮೋಕ್ತ ಸಕಲ ಪ್ರಾಣಿಗಳಿಗೆಯ್ದೆ
ನೀವೆಯಲ್ಲಾ ದಿಕ್ಕು ದೆಸೆಯುಂ
ಭಾವದೊಳು ಕರುಣಾರಸಂ ಮಿಗೆ
ದೇವ ನೀನೆಮಗಭಯಮಂ ಕೊಟ್ಪೋವಿ ಸಲಿಹೆನುತ ೬೭

ಮತ್ತೆಯುಂ ಹೊಡವಂಟು ಮಿಗೆ ಹೊಗ
ಳುತ್ತಮಿಹ ಭೂಪಾಲನಂ ನೋ
ಡುತ್ತ ದರಹಸಿತಾಸ್ಯನಾಗುತ ಬೊಮ್ಮಿದೇವಯ್ಯ
ಚಿತ್ರಜಾಂತಕಭಕ್ತರೊಡನಿದಿ
ರುತ್ತರವನಾಡದಿರೆನುತ್ತವ
ರತ್ತ ಕಳಿಸಿಮಳಿಸಿಯಿಲ್ಲದಿರು ನೀ ಬದುಕು ಹೋಗೆನುತ ೬೮

ಧರಣಿಯೊಳು ತಲೆ ಹಳಿದು ಬಿದ್ದಿಹ
ನರನ ಹರಣಮನಿತ್ತು ಭೂಭುಜ
ನರಿದೆನಲು ಭಕ್ತರು ಬಸವನನುರಾಗಿಸುತ್ತಿರಲು
ಪರಮ ಹರುಷಿತನಾಗಿ ಕಿನ್ನರ
ಶರಣನೆಯ್ದಿದನೀತನೇ ಶಂ
ಕರನೆನುತ ಕೀರ್ತಿಸುತ ಬಿಜ್ಜಳನರಮನೆಗೆ ಹೋದ ೬೯

ಮುನ್ನಿನಂತೆ ವಿಶೇಷಭಕ್ತಿಸ
ಮುನ್ನತಪ್ರಭೆಯೆಸೆಯಲಿರ್ದನು
ಕಿನ್ನರಯ್ಯನು ಧರೆಯೊಳೀ ಶರಣನ ಚರಿತ್ರವನು
ಚೆನ್ನಲರೆ ಓದಿದಡೆ ಕೇಳ್ದಡೆ
ಸನ್ನುತಾಮಳ ಭಕ್ತಿಯುಂ ಪ್ರೌ
ಢ್ಯನ್ನ ಭುಕ್ತಿಯು ಮುಕ್ತಿಯುಂ ದೊರೆಕೊಳ್ಗು ಮನುಜರಿಗೆ ೭೦

ಅಂತು ಸಂಧಿ ೨೭ಕ್ಕಂ ಪದಗಳು ೧೫೯ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಹಯ್ಯಾ (ಧ). ೩ ಭ (ಅ, ತ, ನ, ಮ).

CC-0. Jangamwadi Math Collection. Digitized by eGangotri

ಸಂಧಿ : ೨೮

*

ಸೂಚನೆ : ಕನ್ನರಯ್ಯನವಗಡಿಸಿ ಹೊಸ
ಹೊನ್ನರಾಶಿಯನಿತ್ತು ಭಕ್ತಂ
ಗುನ್ನತಿಕೆಯಿಂದೊಪ್ಪಿದಂ ಕಲಕೇತಬೊಮ್ಮಯ್ಯ

ಮತ್ತೆಯುಂ ಕಲಕೇತಬೊಮ್ಮಗು
ಣೋತ್ತಮಂ ಮೆಱೆವಾದಿಭಕ್ತನು
ದಾತ್ತಚರಿತಂ ಸಿತಯಶಂ ಜಂಗಮದ ವಿಶ್ವಾಸಿ
ಚಿತ್ತದೊಳು ಲಿಂಗಾಭಿಮಾನಿ ಸು
ಚಿತ್ತರಂ ಸಿದ್ಧಪ್ರಸಾದಾ
ಯತ್ತಸುಖಿ ನಿರ್ಮೂ[೧]ಲಿತೋಭಯ ಕರ್ಮಸಂಚಯನು ೧

ಲೋಕಸನ್ನುತಗುಣಿ ತೃಣೀಕೃತ
ಲೋಕನವಿರಳಶೀಲಿ ವಸುಲೋ
ಪೈಕಭಾವಾಲೋಕನನು ಸಂಸಾರಮಾಯೆಯಾರಿ
ಸ್ವೀಕೃತೋತ್ತಮಧರ್ಮಿ ಶಿವಲಿಂ
ಗೈಕನಿಷ್ಠಾಸುಸ್ಥಿರಂ ದೂ
ರೀಕೃತಾಘಂ ಮಹಿತ ಜೀವನ್ಮುಕ್ತಮಾನಸನು ೨

---

* ರಾಗ : ಕನ್ನಡಗೌಳ (ಚ, ಬ); ಶಾಂತಮಲಹರಿ (ಅ, ಧ, ಪ); ಮುಖಾರಿ (ತ).
೧ ರ್ಮಾ (ಸ).

CC-0. Jangamwadi Math Collection. Digitized by eGangotri

ಮುಂದಲೆಯ ಮುಡಿ ನಡುಗೆ ಭಸಿತವ
ನೊಂದಲಳಿಕದೊಳಿಟ್ಟು ಕಿವಿಯಲಿ
ಕೆಂದಳಿರನಳವಡಿಸಿ ಕಾಗಿನ ಕಪ್ಪಡವನುಟ್ಟು
ಅಂದುಗೆಯನೆಡದೆಡಿಯೊಳೊಡರಿಚಿ
ಒಂದು ಕಾಲಲಿ ಗೆಜ್ಜೆಯಂ ಬಿಗಿ
ದಂದದಿಂದೊಲೆದೊಲೆದು ನಡೆವುತ ಗಹಗಹಿಸಿ ನಗುತ ೩

ಗಿಲಿಕೆ ಫಲಿಲೆಂದುಲಿಯೆ ದಕ್ಷನ
ತಲೆಯ ಕೋಡಿನ ತೆಱದಿ ತಗರಿನ
ಬಲಿದ ಕೊಂಬಂ ತನ್ನೆಡದ ಕೈಯಲಿ ಪಿಡಿದುಕೊಂಡು
ಬಲಿಹರಣ ಕಾರಣಕವತರಿಸಿ
ಬೆಳೆದವನ ನೆಟ್ಟಿಲುವಿನಿನಂದದಿ
ಬೆಳುಗುದುಗೆಯಂ ಬಲದ ಕರದಲಿ ಪಿಡಿದು ತಿರುಪುತ್ತ ೪

ಅಳವಡಿಪ ಕಲಕೇತವೇಷಂ
ದಳೆದು ಶಿವಭಕ್ತರ ನಿವಾಸಂ
ಗಳಿಗೆ ಗಮನಿಸಿ ತನ್ನ ಮೋಹಿಯನಂತು ಮುಚ್ಚಿಕಿಸುತ
ಮುಳಿದು ಪರಸಮಯಂಗಳಂ ವೆ
ಗ್ಗಳಿಸಿ ತಾಗುವ ಹರನ ನಿಟಿಲಾ
ನಲನಿದಗ್ರದ ತಗರು ಬಂದಿದೆ ನೋಡಿ ನೀವೆನುತ ೫

ಕಲಿಮಲಾಂಬುಜಷಂಡಮಂ ತೊ
ತ್ತಳದುಳಿವ ಘನ ವೀರಭದ್ರನ
ಬಲವದಿಭವಿದೆ ಬಂದುದರಿಷಡುವರ್ಗಮಾತಂಗ
ಕುಲವನೊತ್ತಿ ವಿದಾರಿಸುವ ಕಳೆ
ಕಳದ ನಖಿರಾಯುಧನು ಬಂದನು
ನಲವಿನಿಂ ಪ್ರಮಥಾವಳಿಯ ಕೂರ್ಪಣುಗನೆಯ್ತಂದ ೬

೧–೨ ರಡ (ಸ). ೩–೪ ಳಿಗೆ (ಬ, ಪ). ಲೊಳ್ (ನ). ೫–೬ ಥನದಿಂ (ಸ). ೬ ದ (ಥ, ಪ).

CC-0. Jangamwadi Math Collection. Digitized by eGangotri

ಹೊದ್ದಲೀಯದೆ ಮಾಯೆಯಂ ನೆಱಿ[೫]
ಗೆದ್ದ ಶರಣರು ನೋಡಿ ಲಾಲಿಪ
ಮುದ್ದಿಗಂ ಬಂದಂ ಮಹಾಶಿವಭಕ್ತರರಮನೆಯ
ಬಿದ್ದಿನಂ ಬಂದಂ ಪ್ರಸಾದಕೆ
ಕದ್ದೆಯಿಸುವಂ[೧] ಬಂದನಾದ್ಯ[೨]ರೊ
ಳೆದ್ದು ಕೋಡಗದಾಟವಾಡುವ ಭೃಂಗಿಯೆಯ್ತಂದ ೭

ಲಿಂಗವಂತರ ಲಿಂಗಿ ಬಂದನು
ಜಂಗಳೆಯ ಶಿಶು ಬಂದನಾವ
ಯ್ಯಂಗಳಾಳಿಯ್ತಂದನೀ ದುಗ್ಗಳೆಯ ಮನೆಯವರ
ಸಂಗಡಿಗನೆಯ್ತಂದನಭವನ
ಡಿಂಗರಿಗನೆಯ್ತಂದನಿದೆಯ
ಕ್ಕಂಗಳಿರ ಅವ್ವೆಗಳಿರೆನುತಡಿಗಡಿಗೆ [೩]ನಗಿಸುತ್ತ[೪]ಳೆ ೮

ನಿಚ್ಚಲರ್ಜಿಸಿ ತಂದ ಬತ್ತವು
ಪೆಚ್ಚಕಿಬ್ಬಳವಾಗಿ ಕುಂದವು
ಹೆಚ್ಚವದಱಿಂ ಜಂಗಮಾವಳಿಗೊಲಿದು ಮಾಡುತ್ತ
ಆಚ್ಚಿಗವನುಳಿದಮಳಚಿತ್ತಂ
ಪೆಚ್ಚಿ ಸತತಂ ದಾಸಭಾವದ
ಸಚ್ಚರಿತದಿಂದಸಮ ಭಕ್ತಿಸಮುನ್ನತಿಯೊಳಿರಲು ೯

ಎಡಱಿಡಸಿ ಬಡಭಕ್ತನೊಬ್ಬಂ
ಕಡಗಿ ಕಿನ್ನರಶರಣನಂಘ್ರಿಯ
ನ[೫]ಡರಿ ನೋಡಲು ಬರುತ ಬರಲಾಱದೆ ಕರಂ ಬಳಲಿ
ನಡೆಯುಡುಗಿ ಕಲಕೇತಬೊಮ್ಮಯ್ಯ
ಗಡನ ಸಮ್ಮುಖದಲ್ಲಿ ಕೆಡೆದಿರೆ
ಒಡಲಡಸಿತಡಿಯೊಡೆಯಿತು ಪಥಶ್ರಾಂತನಾಗಿಂತು ೧೦

೧ತಂ (ಸ). ೨ರ್ಯ (ತ). ೩–೪ ನಮಿಸುತ್ತ (ತ, ನ, ಬ). ೫ ವ (ಕ, ಚ, ಡಾ, ಥ, ಮ).

CC-0. Jangamwadi Math Collection. Digitized by eGangotri

ಇನಿತು ದೂರಂ ನಡೆತರಲು ಪೇಳ್
ನಿನಗೆ ಮುಡುಕಿದ ಕಾರ್ಯವೇನೆಂ
ದೆನಲು ಭಕ್ತಂ ನೋಡಿಯಾ ಬೊಮ್ಮಯ್ಯಗಿಂತೆಂದ
ದಿನದಿನಕೆ ಪಡಿಯಂ ಕೊಡುವನುಪೆ
ಯಿನಿಯನಾ ನಂಬ್ಯಣ್ಣಗೀಗಳು
ಜನವಱಿಯೆ ಪಡಿಯಂ ಕೊಡುವನೀ ಕಿನ್ನರಯ್ಯಂಗೆ ೧೦

ಎಂ೧ದು ಸರ್ವರು ಪೇಳುತಿರೆ ಕೇ
ಳ್ದಿಂದು ನೋಡುವ ಕಾಂಕ್ಷೆಯಲಿ ಎ
ಯ್ತಂದೆನಾಪತ್ತಿಂದೆ ನೊಂದಿರ್ದೆನ್ನ ಸಂತಾಪ
ಮುಂದೆ ಇನ್ನಾ ಕಿನ್ನರಯ್ಯಗ
ಳಿಂದ ಪರಿಹರಿಸುವುದೆನುತ ನಾ
ಬಂದೆನಾ ಆಯ್ಯನ ಮತವು ಹೇಳೀ೨ಸು ದೂರವದು ೧೧

ಹೋಗವೇಳ್ಕಾ ಆಯ್ಯನಂ ಕಂ
ಡಾಗಳಲ್ಲದೆ ತ೩ನ್ನ ಬಳಲಿಕೆ
ಹೋಗಲಱಿಯದೆನುತ್ತ ತಪ್ಪದೆ ನುಡಿದ ನುಡಿಗಳನು
ಆಗ ಕೇಳ್ದು ನಗುತ್ತ ಕಲುಷಿತ
ನಾಗಿ ಉಸುರದಿರುಸುರದಿರು ಭೂ
ಭಾಗದೊಳು ಕೈಕೂಲಿಕಾಱಿನನೆನ್ನ ಮುಂದಿಂತು ೧೨

ಬೆಲೆಗೆ ಕೆಲಸಂಗೆಯ್ವ ಬಂಟನು
ಕೊಳಬಹುದೆ ರಾಶಿಯ ದವಸಮಂ
ಫಲವನರ್ಥಿಸಿ ಪೂಜಿಸುವ ಸಾಮಾನ್ಯಭಕ್ತರಿಗೆ
ಆಳವಡದುದಂ ಹೇಳದಿರು ನಿ
ಶ್ಚಲ ನಿರಂತರ ನಿಜಸುಖಿಂ ಸಂ
ಚಲ ಪದವಿಗಿದವಿಯು ಪಡಿಯುಗಿಡಿಯೆಮ್ಮವರಿಗರಿದೆ ೧೩

---

೧ ಬಂ (ಸ). ೨ ಳ್ಕೆ (ಸ). ೩ ನ (ತ, ನ).

CC-0. Jangamwadi Math Collection. Digitized by eGangotri

ಹೆಂದದೀಶ್ವರನೊಲುಮೆ ಗಡ ನಿಜ
ದಿಂದ ನಿಚ್ಚಂ ಕೊಡುವುದದು ಹೊ
ನ್ನೊಂದು ಗಡ ಹಣವೊಂದು ಹಾಗವದೊಂದು ಗಡ ತನಗೆ
ಇಂದು ಕೊಡುವೊಡೆಯಂ ಕೊಳುವವಂ
ಛಂದಗೆಟ್ಟರು ಈ ದಿನದೊಳೇ
ನೆಂದು ನಗುವರೊ ಲಿಂಗವಂತರು ತಮ್ಮ ನಿರ್ಧಾರನು ೧೫

ಕಿನ್ನರನನಡಿಗಡಿಗೆ ಬಣ್ಣಿಸಿ
ಬಿನ್ನಣದ ನುಡಿಗಳನುಸುರದಿರು
ನ್ನಿಯುಳ್ಳ ಶಿವೈಕ್ಯರಂ ಪೆಸರ್ಗೊಂಡವರ ಮುಂದೆ
ಚುನ್ನವಾಡುವ ಛಂದವಲ್ಲದೆ
ಚೆನ್ನ ಮಾತಲ್ಲಯ್ಯ ನಿನಗಾ
ತಂ ನಿಧಾನವನಿತ್ತಪನೆ ನೀ ಬಂದೆ ತನು ಬಳಲಿ ೧೬

ಇನಿತು ದೂರವದೆಂತು ಪೋದಪೆ
ನಿನಗೆ ಬೇಕಾದರ್ಥಮಂ ಕೊ
ಳ್ಳಿನುತ ದೊಡ್ಡಿಯಲಿ ಕಲುಗಳಂ ತಾಟಿಸಲೊಡನೆ ಬೆಳೆದು
ಕನಕದಾವರೆಯೆರಳುಗಳವೊಲ
ವನಿಯೊಳುನ್ನತ ರಾಶಿಯಾಗಿರೆ
ಮನದಣಿದು ಕಣ್ದಣಿದು ಹರುಷಾಶ್ರುಗಳುಗುತ್ತಿರಲು ೧೭

ಲೇಸಿಗುಬ್ಬುತ ಮೇಲ್ಪೊದಕೆಯಂ
ಹಾಸಿಯಗಲಕೆ ಮಿಸುಪ ಪೊಂಗಳ
ರಾಶಿಯಂ ತೆಗೆತೆಗೆದು ಭಕ್ತಂ ಪೊಟ್ಟೆಯಂ ಕಟ್ಟಿ
ಆಸೆ ಸೂಸಲು ಪೊತ್ತುಕೊಂಡು
ಲ್ಲಾಸದಿಂ ನವೆತರುತ ಬಪ್ಪಾ
ಯಾಸದಿಂ ಬಸವಳಿದು ಬಸವಣದಂಡನಾಯಕನ ೧೮

೧ಬ್ಲ (ಥ, ಧ, ಪ). ೨ಆ (ತ, ನ, ಬ). ೩–೪ ವೆ ಪೇಂಗೆ (ಥ, ಧ, ಪ). ೫ವ (ಡಾ).

CC-0. Jangamwadi Math Collection. Digitized by eGangotri

ಅರಮನೆಯ ಬಾಗಿಲಲಿ ಮೊಟ್ಟೆಯ
ನಿರಿಸಿ ಬೇಗದೊಳೆಯ್ದಿ ಪೊನ್ನಂ
ಸರಸರನೆ ತಾಂ ತಂದ ಪರಿಯಂ ಬಂದ ಛಂದವನು
ಶರಣನಾಡಿದ ವಾರ್ತೆಯಂ ೧ವಿ
ಸ್ತರಿಸಿ ಹೇಳುತ ಭಕ್ತನೆಲೆ ಬಸ
ವರಸ ಕೇಳ್ ಕಲಕೇತಬೊಮ್ಮಯ್ಯಂಗಳೆನಗಿತ್ತ ೧೯

ವಿತ್ತವಂ ಹೊರಲಾಱಿಸೊಬ್ಬನೆ
ಮತ್ತೆನಗೆ ಪರಿಚರನನೊಬ್ಬನ
ನಿತ್ತು ಕಳುಹೆನಲಾ ಬಸವನತ್ಯದ್ಭುತೋದ್ಭೂತ
ಚಿತ್ತನಾಗುತ್ತಿದು ವಿಚಿತ್ರವೆ
ನುತ್ತ ಇಂತಹರುಂಟೆ ಭಕ್ತರು
ದಾತ್ತಚರಿತವನಾರು ಬಲ್ಲರಿದಂ ಶಿವನೆ ಬಲ್ಲ ೨೦

ಕಾಮಧೇನುವು ನಿತ್ಯವೆಂಬಿನೆ
ಕಾಮಿಸಿದವರ್ಗಲ್ಲಿದುಱಿಕೊಡ
ದೀ೪ ಮಹಾಕಲಕೇತಬೊಮ್ಮಯ್ಯನ ಮಹತ್ವ೫ವದು೬
ಭೂಮಿಯೊಳಿದೆಲ್ಲಕ್ಕೆ ವಿಸ್ಮಯ
ಧಾಮವೆನಲಖಿಳಾರ್ಥಸಿದ್ಧಿ
ಸ್ತೋಮದಸಮಸ್ಥಿತಿಗಳಿಗೆ ಕಾರಣವಿದೆನಿಸಿತಲ್ಲ ೨೧

ಇಂತು ಕಿನ್ನರಬೊಮ್ಮಿದೇವಪ
ಹಂತನಂ ಧಿಕ್ಕರಿಸಿ ನುಡಿಯಲು
ದಂತಹುದು ಕಲಕೇತ೭ಶರಣಂ೮ಗಲ್ಲದುಳಿದವರ
ಅಂತರವೆ ಸಾಕ್ಷಾತ್ ಸದಾಶಿವ
ನಂತೆ ಮಱಿ೯ವಾ ಅಯ್ಯನಂ ವಿ
ಭ್ರಾಂತಚಿತ್ತರು ಬಲ್ಲರೇ ಆ ಮಹಿಮನನು ಬೇಱಿ೯ ೨೨

೧–೨ ಬಿತ್ತ (ತ, ನ). ೩–೪ ದೀಯದು । ಆ (ಥ, ಧ, ಪ). ೫–೬ ವಿದು (ನ): ವನು (ಪ, ಮ). ೭–೮ ಬೊಮ್ಮ (ನ).

CC-0. Jangamwadi Math Collection. Digitized by eGangotri

ಇರವನಾರ್ಗಂ[೧] ಕಾಣಲೀಯದೆ
ಚರಿಸುವೀಶ್ವರನಲ್ಲದಿಳೆಯೊಳು
ನರನೆ ಈತನೆನುತ್ತಲಾ ಭಕ್ತಂಗೆ ನೆರೆಯೊಬ್ಬ
ಪರಿಚರನನಿತ್ತಾಕ್ಷಣಪೆ ತತ್
ಶರಣ ಸಂದರುಶನ ನಿಮಿತ್ತಾ
ತುರದೊಳಾ ಭಂಡಾರಿ ಬಸವಣಮಾತ್ಯನೆಯ್ತಂದು[೨] ೨೩

ಹೊಂಗುತಂ ಕಲಕೇತಬೊಮ್ಮ
ಯ್ಯಂಗಳಿಗೆ ಭಯಭಕ್ತಿಯಲಿ ಸಾ
ಷ್ಟಾಂಗವೆಱಗುತ್ತಂಜಲೀಕೃತಕರಕಮಲನಾಗಿ
ಕಂಗಳೊಳು ಸಂಜನಿತ ಪರುಷಾ
[೩]ಶ್ರುಂಗಳಸಲಿಲ[೪]ಪ್ರವಾದಿಂ ಸಂ
ವ್ಯಾಂಗವುಂ ನೆನೆವುತ್ತ ನುತಿಸುವ ಬಸವನಂ ನೋಡಿ ೨೪

ಸಂತಸದಿ ಕಲಕೇತಬೊಮ್ಮಮ
ಹಂತನೆಂದನು ಭಕ್ತಿಕಾಂತಾ
ಕಾಂತನಲ್ಲಾ ನಿಮ್ಮ ಕಿನ್ನರಬೊಮ್ಮಿದೇವಯ್ಯ
ಇಂತು ಕೇಳ್ ಬಸವಣ್ಣ ಭಕ್ತಸ
ಭಾಂತರದೊಳಾರುಂಟು ಪೇಳ್ವಡೆ
ಮುಂತೆಯಾತನನಾದಿತೋಱಲುದೇಕೆ ನೀನಱಿಯಾ ೨೫

ಪಡಿಯನಿಕ್ಕುವನಂದು ಶಂಕರ
ನೊಡನೆ ನಂಬ್ಯಣ್ಣಂಗೆ ನಿಚ್ಚಂ
ಪಡಿಯನಿಕ್ಕುವನಿಂದು ಕಿನ್ನರ ಬೊಮ್ಮಿದೇವರಿಗೆ
ಒಡನೆ ಮಾತಾಡಿಸುವುದುಂ ಮೇಣ್
ಪಡಿಯನೀಸಿಕೊಳುತ್ತಮಿಹುದುಂ
ಪೊಡವಿಯೊಳಗೀ ಪರಿಯೊಳಿಬ್ಬರ ಚಾಳಿಯೊಂದೆಯಲಾ ೨೬

೧ರಿಗೆ (ಧ). ೨ದ (ಚ, ಪ). ೩–೪ ಸಂಗ ಸಲಿಲಾ (ತ, ಥ, ಧ, ನ, ಪ).

CC-0. Jangamwadi Math Collection. Digitized by eGangotri

ಮಲಹರನನೊಲವಿಂದ ಭಜಿಸಿದ
ಫಲವಿದಿಂತಿರಬೇಕು ಬಿಜ್ಜುನುಡಿ
ಗಳನುಸುರಲೇಕಭಿಮತಂಗಳು ಶಿವನನರ್ಚಿಸದೆ
ಒಳವೆ ನಾವಿನಿತಿನಿತು ಕಾಲಂ
ಸಲೆ ಭಜಿಸಿಯುಂ ವ್ಯರ್ಥವಾಯಿ
ತ್ತಿಳೆಯೊಳಯ್ಯೋ ಒಂದು ಹಾಗವನೆಮಗೆ ಕೊಡಲಿಲ್ಲ ೭೭

ಮೃಡಸಮರ್ಚನ ಫಲವಲಾ ಕೈ
ಯೊಡನೆ ತೋಱಿತ್ತವರನಿಂತು
ಗ್ಗಡಿಸಿ ಕೀರ್ತಿಸಲೆಮ್ಮಳವಿಯೇ ನಾವು ಸಿರಿಗೆಟ್ಟ
ಬಡವರಿದ್ದಪೆವೆಮ್ಮ ಇರವಂ
ಸುಡು ಸುಡೇತಕೆ ಬಾತೆ[೧] ಮೂಜಗ
ದೊಡೆಯನಂ ಪೂಜಿಸಿದವರ್ ಪೊನ್ನಂ ಪಡೆವುದರಿದೆ ೭೮

ಹೊತ್ತಱಿಸೀಳುತ ಬೈಗೆ ಮುಟ್ಟಲು
ತೊತ್ತುಗೆಲಸಂಗೆಯ್ಯಲದಱಿಲಿ
ಬತ್ತವೊಬ್ಬಳವಲ್ಲದಿಲ್ಲ ಧರಿತ್ರಿಯಲಿ ನಿಮ್ಮ
ತೆತ್ತಿಗನು ಬೊಮ್ಮಯನ ಕೀರ್ತಿಮ
ಹತ್ತು ಘನವಂದೊಮ್ಮೆ ರಾಗಂ
ಬೆತ್ತು ಕೈಲಾಸಕ್ಕೆ ಹೋಗಿ ಮರಳ್ದುದನುವಾಯ್ತು ೭೯

ಜನವಱಿಯಲೀಶ್ವರನನೋ ಎಂ
ದೆನಿಸಿದವರಂ ನೋಡಬೇಕೆಂ
ದೆನುತ ಬಪ್ಪವರೊಳರು ಬೀಯಕೆ ಬೇಕಲಾ ಧನವು
ತನಗೆ ಭರ್ಗನು ಪಡಿಯನಿಕ್ಕುವ
ಧನಕೆ ನೆರವಾಗಮ್ಮ ಕಾಯಕ
ದನುವಿನಿಂ ಪಡೆದಿನಿತು ಧನವಿದೆ ಪೊಡವಿಯಲಿ ಹೂಳ್ದು ೮೦

೧ಳಿ (ತ, ನ). ರ್ತೆ (ಧ, ಪ). ೨–೩ ದ ರೀತಿ (ಸ).

CC-0. Jangamwadi Math Collection. Digitized by eGangotri

ಶರಣ ಶಂಕರದಾಸಿಮಯ್ಯನ
ಚರಣಯುಗಳವನೋಲಯಿಪ ಕಿಂ
ಕರಗೆ ಧನವಿಲ್ಲೆನಲು ಬಾರದು ಬಸವ ನಿಮ್ಮಾಣೆ
ಹಿರಿಯ ಕಿನ್ನರ ಬೊಮ್ಮಿದೇವಂ
ಗೊರೆದು ಕಳುಹ್ಯೆ ಬಂಡಿಗಳನೊಂ
ದೆರಡು ಲಕ್ಷವನಾದಡಿನ್ನಿರದೀವೆನಿವೆ ಎನುತ ೩೧

ನಗೆನಗುತ ಕೆಲಕೇತಬೊಮ್ಮ
ಣ್ಣಗಳಲರಿ ಮಣ್ಣಂ ಪಿಡಿಯೆ ಪೊ
ನ್ನುಗಳ ಮಯವಾಗಿಸೆಯಲಚ್ಚರಿಬಡುತ ಬಸವಯ್ಯ
ಹೊಗಳುತಿರಲಾ[೧] ಪವನನಱಿದೆವೆ
ಧಿಗಿಲೆನುತ್ತಾ ಕಿನ್ನರಯ್ಯನು
ಮುಗಿದ ಕೈಗಳುವೆರಸಿ ಪರಿತಂದಾಗ ಸ್ಯೈಗೆಡೆದು ೩೨

ಹೊಡವಡುತಲಿಪ ಕಿನ್ನರಯ್ಯನ
ನೊಡನೆ ಕೈವಿಡಿದೆತ್ತಿ ಕಲಕೇ
ತೊಡೆಯನತಿ ಸಂಭ್ರಮವೊಗೆವುತಿರೆ ತೆಗೆದು ಬಿಗಿದಪ್ಪಿ
ಜಡವಿರಹಿತಂ ನಿಃಪ್ರಪಂಚದ
ಬೆಡಗಿನೊಳ್ಪಿನ ಮತಿಯ ಕೀಲಂ
ಪಿಡಿಸಿ ಲಿಂಗಪ್ರಾಣಮಥನ ಸದನುಭವವನಱಿಪಿ ೩೩

ಆಸಮ ಲಿಂಗಾವಸರಮಂ ಮಾ
ಡಿಸಿ ಶರಣನಾ ಭಕ್ತನಂ ಮನ
ಮೊಸೆದುಚಿತ ಸತ್ಕ್ರಿಯೆಗಳಿಂ ಸಂತುಷ್ಟಿಯಂ ಪಡಿಸಿ
ಬಸವನಂ ಬೊಮ್ಮಯ್ಯನಂ ಲಾ
ಲಿಸಿ ಕಳುಪಿ ಕಲಕೇತ ಬೊಮ್ಮಯ
ನೆಸೆವ ಭಕ್ತಸ್ಥಿತಿಯೊಳಿಂದಿನ ಪರಿಯೊಳಿರುತಿರ್ದ ೩೪

೧ಲೀ (ತ, ಥ, ನ).

CC-0. Jangamwadi Math Collection. Digitized by eGangotri

ಖ್ಯಾತಲಿಂಗಸದರ್ಥನಪ ಕಲ
ಕೇತಬೊಮ್ಮಯ್ಯನ ಚರಿತ್ರವ
ನೋತು ಕೇಳಿದವರ್ಗೆ ಓದಿದವರ್ಗೆ ಬರೆದರ್ಗೆ
ಭೂತನಾಥನ ಸರಸ ಕಾರು
ಣ್ಯಾತಿಶಯವೀಕ್ಷಣ ಸಮೇಳನ
ಭಾತಿಯಲಿ ದೊರೆಕೊಳ್ಗ ಭೀಷ್ಟಾರ್ಥಂಗಳಿನವರತ ೩೫

ಆಂತು ಸಂಧಿ ೨೮ಕ್ಕಂ ಪದನು ೧೬೨೯ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

---

೧ ಮು (ಕ, ಚ, ಥ, ಬ, ಮ). ೨–೩ ವನಿಯೊಳು (ತ, ನ).

CC-0. Jangamwadi Math Collection. Digitized by eGangotri

ಸಂಧಿ : ೨೯

*

ಸೂಚನೆ : ಕಟ್ಟಿಗೆಯ ಹೊಜ್ಜಿ ನೆಜ್ಜಿ ಸುವರ್ಣದ
ಘಟ್ಟಿಯಾಗಿರೆ ಜಂಗಮಾಳಿಗೆ
ಕೊಟ್ಟು ಬಸವನ [೧]ಕೋಡನಣ[೨]ಕಿಸಿ ಮಾರಯಂ ಮೆಜ್ಜಿದ

ಮತ್ತೆಯುಂ ಶಿವಲಿಂಗನಿಷ್ಠಾ
ವೃತ್ತಿ ಮೋಳಗೆಮಾರವಿಭುವೆಂ
ಬುತ್ತಮಾಚಾರ್ಯಕ ಭಕ್ತಿಸ್ಥಳಕೆ ತಾನೊಂ[೩]ದು
ಬಿತ್ತು ಲಿಂಗಪ್ರಾಣಮಥನಾ
ಯತ್ತ ವರ್ಮಜ್ಞಂ ವಿನಿರ್ಮಳ
ಚಿತ್ತನವಿಕಳ ವಿಧಿ ನಿಷೇಧಾ [೪]ವಿಕಳ[೫]ವರ್ಜಿತನು ೧

ಸನ್ನುತಾಮಳ [೬]ಸುಚರಿತಂ[೭] ಪ್ರ
ಭೆನ್ನಭಾಳವಿಲೋಚನನವಿ
ಚ್ಛಿನ್ನ ಕೀರ್ತಿಸ್ವಚ್ಛ ಶರಣೇಚ್ಛಾನುಪಾಲಕನು
[೮]ಚಿನ್ಮಯೋರ್ಜಿತ[೯] ತತ್ವವೇತ್ತನ
ಭಿನ್ನ ಸುವ್ರತಲೋಲ ಗುಣಸಂ
ಪನ್ನನಂಗವಿಕಾರದೂರೈಕಪ್ರವರ್ತನ[೧೦]ನು ೨

---

* ರಾಗ : ಮಾಳವಗೌಳ (ಮ); ಗೌಳ (ಅ, ಚ, ಧ, ಪ); ಮಸಂತಭೈರವಿ (ತ).
೧–೨ ಕೊಡುವುದಣ (ಬ); ಕೊಡನನಣ (ಅ, ಕ, ಚ). ೩ ನೆಂ (ಸ). ೪–೫ ವಿರಳ (ಸ).
೬–೭ ಶುಭಚರಿತ (ತ, ನ). ೮–೯ ಚಿನ್ಮಯಾರ್ಜಿತ (ಕ, ಚ, ತ, ನ). ೧೦ ಕ (ತ, ನ, ಪ).

CC-0. Jangamwadi Math Collection. Digitized by eGangotri

ವಿಜಿತಷಡ್ವರ್ಗನು ನಿರರ್ಗಳ
ನಿಜಶಿವೈಕ್ಯನು ನಿರುಪದಾದಿ ಭ
ವಿಜನಸಂಗತ್ಯಾಗಿ ಮಾಯಾಬಂಧಮೋಚನನು
ವೃಜಿನರಹಿತನು ಲಿಂಗಜಂಗಮ
ಭಜನಶೀಲನೆನಲ್ಕೆ ಭಕ್ತ
ವ್ರಜದೊಳಗೆ ದಾಸೋಹಭಾವನೆಯಿಂದ ಪೆಂಪೆಸೆದು ೩

ಘೋರ ಕಾಂತಾರಕ್ಕೆ ಹೋಗಿ ಕು
ಠಾರದಿಂ ಕಟ್ಟಿಗೆಗಳಂ ಕೈ
ಯಾರೆ ಕಡಿಕಡಿದೊಟ್ಟಿ ಕಟ್ಟಿ ಬಲಿಷ್ಠವಾಗಿರ್ದ
ತೋರ ಹೊಱಿಯಂ ಹೊತ್ತುಕೊಂಡತಿ
ಭಾರವೆನ್ನದೆ ತಂದು ಮೋಳಿಗೆ
ಮಾರವಿಭುವಂಗಡಿಯೊಳಗೆ ವಿಕ್ರಯಿಸಿಯುವಱಿಂದ ೪

ಒಸೆದು ಜಂಗಮಕೋಟಿಗಾರಾ
ಧಿಸುತಿರಲು ದಿನದಿನದೊಳಿತ್ತಲು
ರಸರಸಾಯನಮಂ ಬಸವನರಮನೆಯೊಳನುಭವಿಸಿ
ಬಸುಱು ದಣಿಯದೆ ನಿಚ್ಚಲುಂ ತ
ಪ್ಪಿಸದೆ ತಾವೊಪ್ಪೊತ್ತು ಆರೋ
ಗಿಸಿ ಬರುತ್ತಾ ಅಯ್ಯಗಳು ಭಂಡಾರಿಯಂ ನೋಡಿ ೫

ಬಸವ ಮೋಳಿಗೆ ಮಾರನಂತಹ
ಪೆಸರುವೆತ್ತ ಶಿವೈಕ್ಯನಾವನು
ವಸುಧೆಯೊಳು ನಿನ್ನರಮನೆಯ ಹೊಸ ರಸರಸಾಯನದ
ಪಸರವಾತನ [೧]ಸದನ[೨]ದಲಿ ಮಾ
ಡಿಸಿದ ತೆಳ್ಳಪನಂಬಕಳಕೆಣೆ
ಯುಸುರಲುಂಟೇ ಪಲವು ಪರಿಯಲಿ ಹೋಲಿಸುವಡಿನ್ನು ೬

೧–೨ ಸದ್ಮ (ಸ).

CC-0. Jangamwadi Math Collection. Digitized by eGangotri

ಇಂದು ನಾಳೆನ್ನದೆ ದಿನಂಪ್ರತಿ
ಯಿಂದ ಕಾಯಕಲಬ್ಧ ಹೆಚ್ಚದು
ಕುಂದದೊಕ್ಕುಳ ಬತ್ತವದಱಿಂದಾತನನುದಿನವು
ಬಂದ ಜಂಗಮಕೋಟಿಯಂ ಸಾ
ನಂದದಿಂ ಸಂತುಷ್ಟರಂ ಮಾ
ಳ್ಪಂದವವನೊಳು ಭಾಪು ಮೋಳಿಗೆ ಮಾರ ಸದುಭಕ್ತ ೭

ಎನುತ ತನ್ನ ಸಮಕ್ಷದಲಿ ಕೀ
ರ್ತನೆಗಳಂ ಮಾಡುತ್ತಿರಲು ಸಂ
ಜನಿತ ವಿಸ್ಮಯನಾಗುತಂ ಪ್ರಚ್ಛನ್ನಭಾವದಲಿ
ವಿನಯದಿಂ ಬಸವಣ್ಣನೆಯ್ತಂ
ದನಘ ಮೋಳಿಗೆ ಮಾರದೇವನ
ವನಿತೆಯಂ ಕಾಣುತ್ತ ಶರಣಾರ್ಥನುತ ಮೈಯಿಕ್ಕಿ ೮

ಹೊಡವಡುತವದಱಿಂದ ಮುನ್ನಾ
ಮಡದಿ ಶರಣಾರ್ಥಂದೆನುತ ತ
ನ್ನಡಿಗಳಿಗೆ ತಪ್ಪಗ್ಘವಣೆಯಂ ತಾನೆ ಕಳಕೊಂಡು
ಆಡಿಗಳಂ ತೊಳಕೊಳುತ ಬಸವಂ
ಸಡಗರಿಸಿ ತನ್ನುವನಱಿದರಾ
ದಡೆ ವಿವೇಕಂ ತಪ್ಪುಗೆಂಬನುಮಿತಿಯೊಳವ್ವೆಯಂರೇ ೯

ಎಮ್ಮ ದೇವರು ಹಸಿದು ಬಂದರು
ನಿಮ್ಮ ಮನೆಯಲಿ ಉಳ್ಳಹಗೆ ತಾ
ರಮ್ಮ ಗಡಣಿಸೆನುತ್ತ ಲಿಂಗಾರ್ಚನೆಗೆ ಕುಳ್ಳಿರ್ದು
ಹಮ್ಮುಳಿದು ಪೊನ್ನೆರಡು ಸಾವಿರ
ವಂ ಮುದದಿ ಜಾಳಿಗೆವೆರಸಿ ತಂ
ದೊಮ್ಮೆ ಮಜ್ಜನ ಸಾಲೆಯೊತ್ತಿನೊಳಱಿಯದಂತಿರಿಸಿ ೧೦

೧–೨ ತಡೊ (ಪ).

CC-0. Jangamwadi Math Collection. Digitized by eGangotri

ಬಳಿಕ ಲಿಂಗಾವಸರಮಂ ಸಲೆ
ಸಲಿಸಿ ಮೋಳಿಗೆ ಮಾರದೇವಂ
ಗಳ ಸತಿಗೆ ಕೈಮುಗಿದು ಶರಣಾರ್ತೆನುತ ಬಸವಣ್ಣ
ಲಲಿತ ಶಿವಲಿಂಗ ಪ್ರಸಾದವ
ನೊಲವು ಮಿಗೆ ಆರೋಗಿಸುತೆ ತನು
ಪುಳಕಿಸುತೆ ಬಡವಂ ನಿಧಾನವನೆಯ್ದೆ ಕಂಡಂತೆ ೧೦

ಇದುವಲಾ ಭವರೋಗಕೌಷಧಿ
ಇದುವಲಾ ಭಕ್ತಿಯ ಬೆಳಸು ತಾ
ನಿದುವಲಾ ಎನ್ನಯ ತಪರ್ಮನೆಗೊದವಿಸಿದ ಧನವು
ಇದುವಲಾ ನಿಜಪದವಿಗಳಿಗಾ
ಸ್ಪದವೆನುತ್ತಂ ತತ್‌ಪ್ರಸಾದಸ
ಮುದಿತ ಭೋಗಿತನಾಗಿ ತತ್‌ಸದನಾಂಗಣಕೆ ಬಂದು ೧೧

ಈ ಸದನವಂ ನೋಡಿದಾತನ
ದೋಷವೆಲ್ಲಂ ಕೆಟ್ಟುಹೋಗದೆ
ಈ ಸದನದೊತ್ತಿನಲಿ ಚರಿಸುವವಂ ಕೃತಾರ್ಥನಲಾ
ಈಸದನಸೀಮೆಯೊಳಗೊಗೆದಿಹ
ವಾಸಿಸುವ ಜೀವಿಗಳ ಭಾಗ್ಯವ
ದೇಸೊ ಈ ಗೃಹರೇಣು ಸಿಕ್ಕಿದವಂಗಹುದು ಮುಕ್ತಿ ೧೨

ಘೋರ ಪಾತಕವಳಿವುದೀ ಆ
ಗಾರಮಂ ಸಾರ್ದು ಪ್ರಸಾದಾ
ಹಾರ[೧]ದಿಂದದು ದೊರಕದಡೆ[೨] ಈ ಹರವಿಯೊಳಗಿರ್ದ
ನೀರನಾದಡೆ ಒಕ್ಕುಡಿತೆಯಂ
ಸೇರಿ ಕೊಂಡಡೆ ಸಾಕೆನುತ ಭಂ
ಡಾರಿ ನುತಿಸುತ್ತತ್ತಲೆಯ್ದಿದನಿತ್ತಲೈಸಱಲಿ ೧೩

೧–೨ ಪೇಂದದು ದೊರಕದೊಡೆ (ಬ); ದಿಂದಿದು ಕೊಂಕಿದೊಡೆ (ಮ); ವದು ದೊರೆಕೊಳ್ಳ ದಿರೆ (ಸ).

CC-0. Jangamwadi Math Collection. Digitized by eGangotri

ಅರ್ಥಿಯಲಿ ಮಧ್ಯಾಹ್ನಸಮಯಕೆ
ಕರ್ತು ಲಿಂಗಧ್ಯಾನ ಸುಖಿಯುತ
ಪರ್ತಿಯಾಗುತ ಬಾಗಿಲಲಿ ಕಟ್ಟಿಗೆಗಳಂ ಹಾಯ್ಕಿ
[೧]ಭರ್ತನೆ[೨]ಯ್ತರೆ ಕಾಣುತಾ ಸತಿ
ಕೂರ್ತಡಿಗ[೩]ಳಂ ಕರ್ಚಿ[೪] ಜಂಗಮ
ಮೂರ್ತಿಗಳನನುರಾಗದಲಿ ಪ್ರಣಿ[೫]ಪತ್ತಿ[೬]ಯಂ ತೀರ್ಚಿ ೧೫

[೭]ಓಳಿ[೮]ಯಿಂ ಲಿಂಗಾರ್ಚನೆಯನಾ
ಲೋಲದಿಂ ಮಾಡುತ್ತ ಮಜ್ಜನ
ಸಾಲೆಯೊತ್ತಿನೊಳಾಗ ಬಸವಂ ಮಡಗಿದಾ ಹೊನ್ನ
ಜಾಳಿಗೆಗಳಂ ಕಾಣುತಿಂತೆ
ಮ್ಮಾಲಯಕ್ಕಾರ್ ಬಂದರೆಲ್ಲಿಯ
ಚೀಲವಿವು ಹೇಳೆನುತ ಸತಿಯಂ ಬೆಸಗೊಳುತ್ತಿರಲು ೧೬

ದೇವನೊಬ್ಬಯ್ಯಂ ಭರದೊಳೀ
ಠಾವಿಗೆಯ್ತಂದಿರ್ದು ಶಿವಲಿಂ
ಗಾವಸರಮಂ ಮಾಡಿ ಬಿಜಯಂಗೆಯ್ದರೆಂದೆನಲು
ಭಾವದೊಳಗದನಱಿದು ಭಕ್ತಿಗೆ
ಜೀವನಲ್ಲಾ ಬಸವನಹುದಹು
ದೀವನಾರುಂಟಾತನಲ್ಲದೆ ಬಣಗು ಭಕ್ತರಿಗೆ ೧೭

ಪುಣ್ಯವುಳ್ಳ ಶಿವೈಕ್ಯರತಿ ಕಾ
ರ್ಪ್ಣ್ಯ ಭಕ್ತರನುದ್ಧರಿಸುವುದು
ಗಣ್ಯವೇ ತಾನೀವ ಕಾವ ಸಮರ್ಥದಾತನಲಾ
ಪುಣ್ಯಹೀನರನಾರಯಿದು ಕಾ
ರುಣ್ಯದಿಂದಂ ಸಲಹುವಂ ತ್ರೈ
ಗುಣ್ಯಕಾರಣಪುರುಷನಲ್ಲಾ ಭಕ್ತಿಭಂಡಾರಿ ೧೮

೧–೨ ಕರ್ತುವೆ (ಸ). ೩–೪ ಳನಮರ್ಚಿ (ಸ). ೫–೬ ಪರ್ತಿ (ಸ). ೭–೮ ವೇಳೆ (ಅ, ಕ, ಚ, ತ, ಥ, ಧ, ಪ, ಬ, ಮ). ೯ ರು (ಕ, ಚಿ, ಮ).

CC-0. Jangamwadi Math Collection. Digitized by eGangotri

ತಮ್ಮ ಮಕ್ಕಳು ನಾವಲಾ ಎಂ
ದೆಮ್ಮೊವಂ ನೆನೆದಿಲ್ಲಿಗೆಯ್ತಂ
ದಂ ಮಹಿಮನಿದು ಸಾಲದೇ ಬದುಕಿದೆವು ಎಂತ್ತೇನು
ಎಮ್ಮ ಲಿಂಗವು ಕೊಟ್ಟ ಕಾಯಕ
ವೆಮ್ಮೊಳೆಯಿಸಿಬಹುದೆಮಗೆ ಈ
ಹೆಮ್ಮೆಗಳ ನಾವಱಿಯೆವಾತನೆ ಬಲ್ಲನೆಂದೆನುತ ೧೯

ಮುಂದೆ ಇಬ್ಬರು ಜಂಗಮಕೆ ಒಂ
ದೊಂದು ಜಾಳಿಗೆಯಂ ಸಮರ್ಪಿಸಿ
ವಂದನಂಗೆಯ್ದು ತಿ[೧] ವಿನಯದಿಂ ಜಂಗಮಾವಳಿಗೆ
ಬಂದು ಪಾದಾರ್ಚನೆಗಳಂ ಮನ
ವೊಂದಿ ಮಾಡಿ ತದಂಘ್ರಿಜಲಪಂ
ತಂದು ಚಿಲ್ಲಲು ಕಟ್ಟಿಗೆಯ ಹೊಱಿ ಕನಕಮಯವಾಗೆ ೨೦

ಒಡನೊಡನೆ ಕಡು ಬೆಳೆದು ಬೆಳಗುವ
ಕಡವರವನೊಂದೊಂದು ಸಾವಿರ
ಪಡಿಯ ಹೊನ್ನಿನ ತೂಕವಂ ಕಡಿಕಡಿದು ಜಂಗಮಕೆ
ಕೊಡುತಿರಲು ವಿಸ್ಮಯವಿದೆನುತತಿ
ವೆಡಗನಾ ಜಂಗಮವು ಬಸವನ
ಎಡೆಗೆ ನಡೆತಂದುಬ್ಬುತಾತನ ಮುಂದೆ ಪಸರಿಸುತ ೨೧

ಅತುಳ ಭಕ್ತಿಗೆ ನಿಜ ನಿಯತಿಗತಿ
ಯತಿಶಯದ ಮಾಟಕ್ಕೆ ಗಾಢ
ವ್ರತಕೆ[೨] ನೆಲೆವನೆಯಾಗೆಸೆವ ಮೋಳಿಗೆಯ ಮಾರಂಗೆ
ಕ್ಷಿತಿಯೊಳಿಣೆಯಪ ಭಕ್ತರಿಲ್ಲ
ಪ್ರತಿಮನಾತನೆನುತ್ತ ಹಿಗ್ಗುತ
ನುತಿಸೆ ಬಸವಂ ಪೆದಱಿ ಬೆಬ್ಬೆಱಿಗಾಗಿ ನಡೆತಂದು ೨೨

೧ಲ್ಲಿ (ಕ, ಚ, ಬ). ೨ವೆ (ಕ, ಚ, ಥ, ಧ, ಪ, ಬ, ಮ).

CC-0. Jangamwadi Math Collection. Digitized by eGangotri

ಶರಣು ಶರಣಾಗತ ಮನೋರಥ
ವರದ ಕಾಯ್ಕೆ ಕಾಯೆನುತ್ತಂ
ಧರೆಯೊರಸಿ ಸಾಷ್ಟಾಂಗ ದಂಡಪ್ರಣಮವಂ ಮಾಡೆ
ಕರಕಮಲವಂ ಮುಗಿದು ಕೇಳ್ ಬಸ
ವರಸ ಈ ಪರಿಯಲಿ ನಿರೂಪಿಸು
ವರೆ ಬಳಿಕ ನಾಂ ಮುನ್ನ ನಿಮ್ಮ್ಯಪನೆಂದುದೊಂದುಂಟೇ ೨೩

ಬಣಗು ಭಕ್ತರ ಹರಣವಹ ಕಾ
ರಣಪುರುಷ ನಿನಗೊಬ್ಬ ಭಕ್ತಂ
ಎಣಿಸಲುಂಟೇ ಪೋಲ್ವಡೆಮ್ಮಂತಪ್ಪ ಬಡವರಿಗೆ
ಗಣಿಸುವಡೆ ಎಮ್ಮಿರವು ಬದುಕು ಹ
ರಣವು ನಿಮ್ಮ ಕರುಣವಲಾ ಧಾ
ರುಣಿಯೊಳಗೆ ನಿಖಿಳೋಪಕಾರಾ ಬಸವ ಸುಕುಮಾರಾ ೨೪

ಕೇಳಿ ಎಂದುಂ ಮುನ್ನಳಿಯೆವೀ
ಜಾಳಿಗೆಗಳಂ ಕಂಡೆವಿಂದು ವಿ
ಶಾಲ ಸಿತಯಶ ನಿನ್ನ ಕಾರಣದಿಂದ ಮರುಳು ಭಾಪು
ಸ್ಥೂಲ ಭಾಗ್ಯಪ್ರಾಣಿ ಭಾಪುರೆ
ಲೋಲಕಾರುಣ್ಯಾತ್ಮ [೧]ಭಲರೇ[೨]
ಪಾಲಿತಾರ್ಥನಿಕಾಯ ಭಲರೇ ಭಲರೆ ಧನವಂತ ೨೫

ಒಲಿದು ನಮಗಿತ್ತಹಗೆ ಭಕ್ತಾ
ವಳಿಗೆ ಕೊಚ್ಚೈ ಮುನ್ನ ಧರೆಯಲಿ
ಭಲರೆ ಮಡಿವಳ ಮಾಚಿದೇವನ ಮೊಮ್ಮಗನನೆನ್ನ
ಸಲಹು ಕಂಡ್ಯೈ ಎನುತ ನಸುನಗೆ
ಮೊಳೆಯೆ ಬಸವನನಾಳಿಗೊಳುತಿರೆ
ಆಳುಕಿ ಘನತರ ಶೋಕಜಲಕಲಿತಾಸ್ಯನಾಗುತ್ತ ೨೬

೧–೨ ಭಾಪುರೆ (ಥ, ಧ).

CC-0. Jangamwadi Math Collection. Digitized by eGangotri

ಅವನಿಯೊಳು ಲೋಹದ ಗುಣವನಱಿ
ಸುವುದೆ ಪರುಷಂ ಕನಕಗಿರಿಯಱಿ
ಸುವುದೆ ಕಾಗೆಯ ಗುಣವನಯ್ಯಾ ಸುಗುಣನಿಧಿ ನೀವು
ಅವಗುಣಂಗಳಿಗಿಕ್ಕೆ ಿಯಾಂ ನೀ
ನೆವಧರಿಸು ಎನ್ನಲ್ಲಿ ಸದ್ಗುಣ
ವಿವರವಱಿಸಿದಡುಂಟೆ ಮೋಳಿಗೆ ಮಾರಿದೇವಯ್ಯ ೨೭

ಎಲವದಲಿ ಫಲವುಂಟೆಯಾವಗೆ
ಯೊಳಗೆ ತಂಪುಗಳುಂಟೆ ಕುಪ್ಪಟೆ
ಯೊಳಗೆ ತಾವರೆಗೆಡ್ಡೆ ಹುಟ್ಟುವುದೇ ಧರೆಯೊಳೆಂದು
ಶಿಲೆಯೊಳುಂಟೇ ಮೃದುವಱಿಸಲಂ
ಬಿಲದೊಳುಂಟೇ ಬೆಣ್ಣೆ ಕರುಣಾ
ಸುಲಭ ಹೊಲೆಗೇರಿಯೊಳಗುಂಟೇ ಿವೇದಳಫೋಷಣವು ೨೮

ಇನಿತಿವೆಲ್ಲಂ ಪೂಡಲಿಸಲೇ
ಕನುನಯದೊಳೆನ್ನಂ ಸಲಹು ನೀ
ನೆನಗೆ ಸದ್ಗುರು ಸಂಗಮೇಶ್ವರದೇವ ಕೇಳೆನುತ
ವಿನಯದಿಂ ಮಾರಯ್ಯಗಳ ಪದ
ವನಜಯುಗಳಕ್ಕೆಱಗಿ ಮಧುರ ವ
ಚನ ರಚನೆಗಳಿನಂಕಿಸುತ ಕೀರ್ತಿಸುತ ಬಸವಣ್ಣ ೨೯

ಅಭಯವಂ ಬೇಡುತ್ತ ಮತ್ತಂ
ಸಭಯಮಾನಸನಾಗಿ ಭಕ್ತಿ
ಪ್ರಭವಿಸಲು ತನ್ನಡಿಗಳಿಗೆ ಕೆಡೆದಿರ್ದವನನೆತ್ತಿ
ಅಭಿನವೋತ್ಸಕದಿಂದ ಭಕ್ತಿಸು
ಲಭನನಾಲಿಂಗಿಸುತ ಮಾರ
ಪ್ರಭು ಸರಸ ಕರುಣಾಂಬುಧಿಯೊಳಭಿಷಿಕ್ತನಂ ಮಾಡಿ ೩೦

೧–೨ ಯಾನೆಸಲ್ ಆ (ಥ). ೩–೪ ದೇವ (ಸ).

CC-0. Jangamwadi Math Collection. Digitized by eGangotri

ಸಮಧುರಾಲಾಪಂಗಳಿಂದುಪ
ಶಮನವಾಗಲು ಬೋಧಿಸುತ್ತಂ
ಪ್ರಮುದದಿಂ ಲಾಲಿಸಲು ಮಾರಯ್ಯಂಗಳಿಗೆ ಮತ್ತೆ
ನಮಿಸಿ ಬಸವಾಮಾತ್ಯನೆಯ್ದಿದ
ನಮಳ ಭಕ್ತಿಸ್ಥಿತಿಯೊಳಿಂತು ವ
ಸುಮತಿಯೊಳು [೧]ಮುನ್ನಿನ ಪರಿಯೊಳಿರುತಿರ್ದನಾ ಅಯ್ಯ[೨] ೩೧

ಅನಘ ಮೋಳಿಗೆ ಮಾರದೇವನ
ಘನ ಚರಿತ್ರವನೋದಿದವರಿಗೆ
ಮನಮೊಸೆದು ಕೇಳಿದವರಿಗೆ ಲಾಲಿಸಿ ರಚಿಸುವರಿಗೆ
ಅನುಪಮಂ ಗಿರಿಜಾಮುಖಾಂಬುಜ
ದಿನಕರಂ ಕಾಮಿತ ಪದಂಗಳ
ನನವರತಮುಂ ಕೊಟ್ಟು ಪಾಲಿಸುವನು ವಸುಮತಿಯೊಳು ೩೨

ಅಂತು ಸಂಧಿ ೨೯ಕ್ಕಂ ಪದನು ೧೬೬೧ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧-೨ ಸುಖಮಿರ್ದ ಮುನ್ನಿನ ಪರಿಯೊಳಾ ಅಯ್ಯ (ಸ).

CC-0. Jangamwadi Math Collection. Digitized by eGangotri

ಸಂಧಿ : ೩೦

*

ಸೂಚನೆ : ಅಗಣಿತ ಮಹಿಮನೆಂದು ಕಟಕಂ
ಪ್ರೊಗಳೆ ಕನ್ನದ ಬೊಮ್ಮಿದೇವನು
ಹಗಲುಗನ್ನವನಿಕ್ಕಿ ಮೆಚ್ಚಿದನು ಬಿಜ್ಜಳನ ಮನೆಯ

ಸೂರ್ಪಕಾರೀ ಪ್ರಹರ ಭಕ್ತನು
ಕೂರ್ಪ ಕನ್ನದ ಬೊಮ್ಮಿದೇವನು
ಸರ್ಪಿಕಂಕಣಿ ಭಕ್ತಿಯುಕ್ತನೆನಲ್ ಪೆಸರ್ವಡೆದು
ಇರ್ಪನುರುಸಂಸಾರಮಾಯಾ
ದರ್ಪವಿದಳನ ಮೂರ್ತಿ ಚರಲಿಂ
ಗಾರ್ಪಿತಾರ್ಥಪ್ರಾಣವಪುರಭಿಮಾನಿ ಸುಜ್ಞಾನಿ ೧

ಚಾರು ಬಾಹ್ಯಸಮರ್ಚನಾತಿ ವಿ
ಶಾರದಂ ಶಾಶ್ವತ ಯಶೋವಿ
ಸ್ತಾರನಸಮಾಂತರ ಸಪರ್ಯಾಯಂತ ಪರಾಯಣನು
ಸಾರ ವೀರವ್ರತ ನಿಯಮಿತಾ
ಚಾರನದುಭುತಚರಿತನಮಿತೋ
ದ್ಧಾರಿ ಜಂಗಮ ಭಕ್ತರೊಳಗಾಧಿಕ್ಯನೆನಲೊಪ್ಪಿ ೨

---

* ರಾಗ : ನಾಟಿ (ಅ, ಧ, ಮ); ಬಹುಳಿ (ಚ, ಡಾ, ಪ); ತೆಲಗು ಕಾಂಬೋದಿ (ತ).
೧–೨ ತೋತ್ರ (ಥ, ಧ). ೩–೪ ಕಟಕನ (ತ, ನ). ೫–೬ ದಿತ್ಯ (ಪ).

CC-0. Jangamwadi Math Collection. Digitized by eGangotri

ಕತ್ತಿ ಬಳಹಂ ಮುಳ್ಕುಸೆಂಡು
ನೃತ್ತಬೀಜಂ ಮದ್ದಿನಂಜನ
ಉತ್ತರಣಿ ಬಿತ್ತುಗಳ ಮಸಣದ ಬೂದಿಯಕ್ಷತೆಯು
[೧]ಕತ್ತರಿ ಮಳಲು[೨] ಚಂಡವೇದಿಯು[೩]
ಕಿತ್ತ ಹಿಡಿಯಂ ಬಿಡುವ ಕಲ್ಲುಂ
ಮತ್ತೆ ಮುಖಮಾಯದ ತಿಲಕಮುಂ ಕರ್ಕಟಿಯ ರಜ್ಜು ೩

ನೀಲಗಪ್ಪಡದುಡಿಗೆ ಘಾಳಿಯ
ಸೀಲೆ ಕೊಂಕಿಯನಾರಸಂ ಸೆಳೆ
ಗೋಲು ಒಂದಟ್ಟೆಯ ಕೆರಹು ನಾಯಿಗಳ ಬಾಯ್ಕಟ್ಟು
ಓಳಿಯಿಂದಿವು ಮೆಱಿ[೪]ಯೆ ನಡೆದಾ
ಭೀಳ ಎಸೆಯಲು ಸೂಜಿ[೫]ಮುಖಮಂ
ಕೀಲಿಸುವಡರಿದೆನಿ[೬]ಸಿದುಱಿ[೭] ಕತ್ತಲೆಯ ಮೊತ್ತದೊಳು[೮] ೪

ಮನೆಮನೆಯ ಹಿತ್ತಿಲುಗಳಿಡುಮುಡು
ಕಿನೊಳಗೊಬ್ಬನೆ ಸಾರ್ದು[೯]ಲುಹ[೯]ನೊ
ಯ್ಯನೆ ಪರೀಕ್ಷಿಸುತೆಱಿಗೆಱಿಗಿ ನಿಲಿನಿಲಿಕಿ ನೋಡುತ್ತ
ಘನದ ಹೊಸತಿಲುಗನ್ನವಂ ಘ
ಮ್ಮನೆಯಗಿದಗುಳಿಗನ್ನವಂ ಸು
ಮ್ಮನೆಯಗಿದು ನೆಲಗನ್ನವಂ ಬಲು ಗೋಡೆಗನ್ನವನು ೫

ತೋಡಿ ಮನೆಯೊಳಪ್ಪೊಕ್ಕು ಪರಿಕಿಸಿ
ನೋಡುವಲ್ಲಿಯ ಮನೆಗಳುಂ ಶಶಿ
ಚೂಡಭಕ್ತರ ಮನೆಗಳಾದಡೆ ದೀಪಮಂ ಬೆಳಗಿ
ಬೇಡನಾಗುತ್ತವರಡಿಗಳಿಗೆ
ಕೂಡೆ ವಂದಿಸುತೆಬ್ಬಿಸುತ ರತಿ
ಮೂಡಿ ಪಾದೋದಕಪ್ರಸಾದವನಾಗಳನುಭವಿಸಿ ೬

೧–೩ ಕತ್ತರಿಪ ಕಿರುಮಳಲು ದಂಡಿಯು (ತ). ೨–೩ ಚಂಡಿಪೋತಿಯು (ನ); ಚಂಡ ಪೋರಿಯು (ಪ). ೪ ಚಿ (ಸ). ೫–೬ ಸಿದಗ್ಗದ ಕಾಳಗತ್ತಲೊಳು (ಕ, ಚೆ, ಥ, ಧ, ಪ, ಬ). ಸುವಗ್ಗದ ಕಾಳಗತ್ತಲೊಳು (ಮ). ೭–೮ ಲಿವ (ಥ, ಧ, ಪ).

CC-0. Jangamwadi Math Collection. Digitized by eGangotri

ಶರಣೆನು[೧]ತ್ತಿರ್ದಪೆ ನಿಮಗೆ[೨] ನಿಜ
ಶರಣರ ಮನೆಯ ಕಿಂಕರರ ಕಿಂ
ಕರನು ಕನ್ನದ ಬೊಮ್ಮನೆಂಬವನೆನುತ[೩]ವಡಿಗಡಿಗೆ[೪]
ಸರಿವುತಿತರರ ಮನೆಗಳಾದಡ
ವರ ಸಮಸ್ತ ಧನಂಗಳಂ ಸರ
ಸರನೆ ಕನ್ನವನಿಕ್ಕಿ ಬಾಚಿಕೊಳುತ್ತ ನಡೆತಂದು ೭

ಜಂಗಮಾವಳಿಗಿತ್ತು ಸಾಂಗೋ
ಪಾಂಗಮಾಗಲು ನಿತ್ಯಪರಿಚರಿ
ಯಂಗಳಂ ಮಾಡುತ್ತಿರಲು ಮತ್ತೊಂದು ದಿವಸದಲಿ
ಜಂಗಮಂ ಘನವಾಗಿ ಬಂದಡೆ
ಹಂಗೆ ಇದು ಹಗಲೆಂಬ ಭಾವವು
ಹಿಂಗದವನೀಶ್ವರನ ಮನೆಯಲಿ ಕನ್ನಮಂ ತೋಡಿ ೮

ಬಹಳ ವಸ್ತುವನೆಲ್ಲವಂ ತೆಗೆ
ತಹೆನೆನುತ ಪುರವೀದಿಗೊಂಡತಿ
ವಹಿಲದಿಂ ಬರೆ ಕಂಡು ಬಸವಂ ಬೊಮ್ಮದೇವಂಗೆ
ಮಹಿಯೊ[೫]ರಸಿ[೬] ಮೈಯಿಕ್ಕಿ ಕರಜಲ
ರುಹಯುಗಳಮಂ ಮುಗಿದು ನಿಲೆ ಗಹ
ಗಹಿಸುತಲೆ ಭಂಡಾರಿ ಕನ್ನವನಿಕ್ಕಬೇಕೆನಗೆ ೯

ಹಿಡಿ ಬಳಹಮಂ ಕತ್ತಿಯಂ ನೀ
ನಡೆ ನೃಪನ ಬೊಕ್ಕಸದ ಮನೆಯಾ
ವೆಡೆಯೊಳಿರ್ದುದು ತೋಱು ಮತ್ತೊಂದೆಡೆಯೊಳಱಿಸಿದಡೆ
ಒಡವೆ ದೊರಕದು ಬಸವ ಏಳೆನೆ
ನುಡಿದ ನುಡಿಗುತ್ತರವನೆಂದುಂ
ಕೊಡದ ಭಾಷೆಯನಿಂತು ಸಲಿಸುವನಾಗಿ ಶರಣ[೭]ರೊಳು[೮] ೧೦

೧–೨ತ್ತಲಿದೇನೆ (ಥ, ದ). ೩–೪ ಲೆಡೆಗೆಡೆಗೆ (ಸ). ೫–೬ ಳಗೆ (ಕ, ಚ, ಥ, ಧ, ಬ). ೭–೮ ರಿಗೆ (ಸ).

CC-0. Jangamwadi Math Collection. Digitized by eGangotri

ಅನುಚಿತವಿದೆಂದೆನ್ನದಾಗಲಿ
ಎನುತ ಕನ್ನದ ಬೊಮ್ಮಿದೇವ
ಯ್ಯನನೊಲವಿನೊಡಗೊಂಡು ಬರುತಾ ಗಳಿಹಮಂ ಕೊಂಡು
ಮನವೊಸೆದು ತಹಿಕಾಱನವೊಲರ
ಮನೆಯನಂಜದೆ ಹೊಕ್ಕು ಬಸವಂ
ಘನದ ಭಂಡಾರದ ಮನೆಗಳಿವೆ ಎಂದು ತೋಱಿದಡೆ ೧೧

ಆಗಳಿಗನ್ನವನಿಕ್ಕಲೊಡನಾ
ಬಿಗೆದ ಮಣ್ಣೆಲ್ಲಂ ಮಿಸುಪ ಹೊ
ನ್ನಿಗುತುಮಿರೆ ಸಲೆ ಪೊಕ್ಕು ಪೆಟ್ಟಿಗೆಗಳ ಧನವನೆಯ್ದೆ
ತೆಗೆದುಕೊಂಡೊಯ್ಯಲ್ಕೆ ಸೋವಾ
ಸಿಗಳಿದಂ ಕಂಡೆಯ್ದೆ ಕೈಗಳ
ಮುಗಿದು ಭೂಪಾಲಂಗೆ ಹೇಳಲು ಕೇಳುತಾಗ್ರಹಿಸಿ ೧೨

ಸೊಕ್ಕಿ ಬಸವಣನೆನ್ನ ಿಮೂರಿಗೆ
ಸಿಕ್ಕಿದನಲಾ ಎನುತ ಕೋಪಂ
ಮಿಕ್ಕು ಮೀಸೆಗಳಲುಗುತೌಡಂ ಕಚ್ಚಿಕೊಳುತೆಂದ
ಅಕ್ಕಟಾ ಶಿವಭಕ್ತನೆಂದೇ
ಸಕ್ಕೆ ತನ್ನಂ ನಂಬಿಕೊಂಡಿಹು
ದಕ್ಕೆ ತಕ್ಕತಿಯುಚಿತವಂ ಮಾಡಿದನೆಯಕ್ಕಕ್ಕು ೧೩

ಕಿೞಿಯನೆಂದಾಪ್ರೊತ್ತು ನಾಂ ಕಱಿ
ಮಱಿಯಳಿದು ಮನ್ನಿಸುವುದೆಲ್ಲಂ
ತೊಱಿಯಲದ್ದಿದ ತನ್ನ ನಿಜ ವಿಶ್ವಾಸತನವಿಂದು
ಅಱಿ ದೆವ ಲ್ಲಾ ಪಗಲುಗನ್ನವ
ನುಣಿವೆ ತೋಡಿಸಿ ಧನವುಮಂ ನೆಱಿ
ಬಱಿಕೆಯಿವ ಬಸವಂ ಹರಣಮಂ ೪ಹಿಡಿದು ಹೇ೯ಗಿರ್ದ೧೦ ೧೪

೧ಗೊ (ಸ). ೨ನ್ನಾ (ಸ). ೩–೪ ಮಾತಿಗೆ (ಕ, ಚ, ಬ, ಮ); ಊರಿಗೆ (ಸ). ೫ಪಿ (ಚ). ೬–೭ ಹಿತ (ತ, ನ). ೮–೧೦ ಬಿಡದದೆಂತಿರ್ದಂ (ತ, ನ). ೯ಹೇಂ (ಥ, ಧ, ಪ, ಬ, ಮ).

CC-0. Jangamwadi Math Collection. Digitized by eGangotri

ತನಗೆ ಬೇಡಿದಡೀಯೆನೇವೊಲಿ
ದಿನಿತು ವಿತ್ತವನಾದಡಂ ಕಾ
ಳ್ತನದ ಬುದ್ಧಿಯೊಳಿಂತು ವಿಶ್ವಾಸವನುಳಿದು ಕಳೆದ
ಮನದೊಳಾ[೧]ನೇನೆಂದು ನಂಬುವೆ
ನೆನಗೆ ತಾನಿನ್ನೇನ ಬಗೆವನೊ
ಎನುತ ಕಂಗಳೊಳುರಿಯನುಗುಳುತ್ತುರವಣಿಸಿ ಬಂದು ೧೫

ಕನ್ನವಂ ತೋಡಿದ್ದ ಬಾಗಿಲ
[೨]ಹೊನ್ನನೀ[೩]ಕ್ಷಿಸುತದುಭುತಸ್ವಾಂ
ತನ್ನಿಗುರಿ ಚಿಟುಕಿಡುತ ಬೆರಳಂ ನಾಸಿಕದೊಳಿಟ್ಟು
ತನ್ನರಾಧಿಪನೈಸಱಿಂ ಸಲೆ
ತನ್ನ ಕೋಪವನುಡುಗಿ ಇಂತೆಂ
ದಂ ನಯದೊಳಿಲ್ಲಿಯ ಕನಕವೀ ಕಳ್ಳನೆಲ್ಲಿಯವ ೧೬

ಏನ ಹಣ್ಣಿದೆ ಬಸವಮಂತ್ರಿಯ
ದೇನಿನಿತುಮಂ ತಿಳಿಯಪೇಳೆನ
ಲಾ ನರೇಂದ್ರಂಗಾಗಳಾ ಭಂಡಾರಿ ಇಂತೆಂದ
ಜ್ಞಾನಿ ಕನ್ನದ ಬೊಮ್ಮಿದೇವಮ
ಹಾನುಭಾವನು ತನ್ಮಹಾತ್ಮನ
ನೂನ ಮಹಿಮೆಯನೆಣಿಸುವಡೆ ಗೌರೀಪತಿಗಶಕ್ಯ ೧೭

ಆತನ ಪದಾಂಗುಷ್ಠಯುಗಳಂ
ಖ್ಯಾತಮೂಲಂ ಸುರ[೪]ತರುಗಳಿಗೆ
ಯಾ[೫]ತನತಿ ದಿವ್ಯಾವಲೋಕನವಮರಧೇನುಗಳ
ಸೂತಿಕಾಗೃಹಮಾತನತುಳ ಪು
ನೀತ ಚೇತೋಭಾತಿಪಲ್ಲವ
ಜಾತವದು ಚಿಂತಾಮಣಿಗಳಿಗೆ ಸಂತತಾಶ್ರಯವು ೧೮

---

೧ ಳೀ (ಪ). ೨–೩ ವನ್ನುವೀ (ಬ). ೪–೫ ಕುಜಂಗಳಿಗಾ (ಕ, ಥ, ಧ, ಪ, ಬ)

CC-0. Jangamwadi Math Collection. Digitized by eGangotri

ವರ ಕರತಳಸ್ಪರ್ಶನಂ ವಿ
ಸ್ತರಿಸುವಡೆ ತಾಂ ಪರುಷವೇದಿಗ
ಳಿರವನಘನಂಘ್ರಿಪ್ರಸಂಗತಿ ಮುಕ್ತಿಗಾಗರವು
ಚಿರಸು[೧]ಧಾಸಾ[೨]ರಪ್ರಸಾದವ
ವರ ಮುನಿಸೆ ಸಂಹಾರಕಾಲವ
ವರ ಕೃಪೆಯೆ [೩]ಅಪವರ್ಗದಿಕ್ಕೆಯವರನದೇವೊಗಳ್ವೆ[೪] ೧೯

ಅವರ ಕಿಂಕರರಷ್ಟಸಿದ್ಧಿಗ
ಳವರು ಲಿಂಗಸದರ್ಥರಾಗಿಂ
ತವರ ನೇಮಂ ಕನ್ನವಿಕ್ಕಿದಡಲ್ಲದೇನುವನು
ಅವರು ಮುಟ್ಟಿರು ತಾನಿದೇಂ ಮಾ
ರ್ಗವೊ ಇದೇತರ ಭಕ್ತಿಗುಣವೆಂ
ದವಗಡಿಸಬೇಡಿಂತಿದುವೆ ಸನ್ಮಾರ್ಗವೆಂತೆನಲು ೨೦

ಜೂಜಿನಿಂ ಪಾಂಡವರು ಕೆಟ್ಟರು
ಜೂಜಿನಿಂದವೆ ಮೂರ್ಖನಾರ್ ಗಣ
ರಾಜಪದವಿಯೊಳಿಹನು ಬೇಂಟೆಯನಾಡಿ ರಘುರಾಮ
ಆ ಜನಕಜೆಯನಂದು ನೀಗಿದ
ನೋಜಿಸಿದ ಬೇಂಟೆಗಳನಾಡಿ ವಿ
ರಾಜಿಸುತ ಕಣ್ಣಪ್ಪನಿಪ್ಪನು ಶಿವಸಮಕ್ಷದಲಿ ೨೧

ಸೌಂದರಿಯವಶರಾಗಿ ಭೂವರ
ನಂದನರು ನಿರ್ಮೂಲವಾದರು
ಸೌಂದರಿಯ ವಶವಾಗಿ ನಂಬಿಯು ಅಭವನೊಳಗಾದ
ಕೊಂದು [೫]ಮಾಂಡವ್ಯಮುನಿ[೬] ಶೂಲದೊ
ಳೊಂದಿದನು ಚಂಡೇಶ್ವರಂ ತಾಂ
ಕೊಂದು ಪಡೆದನು ಶಂಕರನ ವಿಮಲಪ್ರಸಾದವನು ೨೨

೧–೨ ದಾಜಾ (ಸ). ೩–೪ ಪ್ರಣ್ಯಗಳ ಮನೆಯವರನದೇಂ ವೊಗಳ್ವೆ (ಕ, ಚ, ಥ, ಧ). ೫–೬ ತಾಂ ಮಾಂಡವ್ಯ (ತ, ನ, ಬ).

CC-0. Jangamwadi Math Collection. Digitized by eGangotri

ಹುಸಿದು ಬ್ರಹ್ಮನು ಹುಟ್ಟುಗೆಟ್ಟನು
ಹುಸಿದು ಸಿರಿಯಾಳಂ ತನುವೆರಸಿ
ಆಸವಮನೇತ್ರನ ಪುರಕೆ ನಡೆದನು ಶೂದ್ರಿಕನು ಮುನ್ನ
ವಸುಧೆಯೊಳು ಕುಱಿಗಳ್ಳನಾಗಿಯೆ
ಬಸಿದ ಶೂಲಕೆ ಸಿಲುಕಿದನು ಪೆ
ಚ್ಚಿಸಿದನಾ ಕಲವತ್ತಿ ಶಿವನಂ ಬಟ್ಟೆಯಂ ಬಡಿದು ೫೩

ಆರಸರಿಗೆ ರಾಜ್ಯಾಂತನರಕಂ
ನಿರು[೧]ತವೆನೆ ಪಡೆದರು ವಿಮುಕ್ತಿಯ
ನರರೆ ಚೇರಮರಾಯ ಚೋಳಮಹೀಶರಂತಾಗಿ
ಧರೆಯೊಳಿದು ದುರ್ಮಾರ್ಗವೆನಿಸದು
ಹರನಿಮಿತ್ತವಿದೆಂಬ ಭಾವನೆ
ಯಿರಲಧರ್ಮೋ ಧರ್ಮತಾನೆಂದುದು ಶಿವನ ವಾಕ್ಯ ೫೪

ತಪ್ಪದೀಪಥವೆಲ್ಲರೊಳು ಮಿಗಿ
ಲಪ್ಪ ಕನ್ನದ ಬೊಮ್ಮಿದೇವಗ
ಳಿಪ್ಪಿರವದೆಂತೆನಲು ಮನೆಗಾವಾಗ ಜಂಗಮವು
ಬಪ್ಪರದನಱಿದಾಗಳಲ್ಲದೆ
[೨]ಯುಪ್ಪೊ[೩]ರಿಸಿ ಹೋಗನು ಸಹಾಯವ
ನಪ್ಪನಿದು ಹಗಲಿರುಳಿದೆಂತೆಂದಂಜನೇನುವನು ೫೫

ಅದು ಶಿವೈಕ್ಯರ ಮನೆಗಳಾದಡೆ
ಮುದದಿ ಹೆಸರಂ ಹೇಳಿ ವಂದಿಸಿ
ಹದುಳಿಸುತ ಬಹನಿಂತು ಮನೆಮನೆದಪ್ಪದಿತರುಗಳ
ಸದನಮಂ ಪೊಕ್ಕರ್ಥವೆಲ್ಲವ
ನೊದವಿಸಿಹ ಪರದೂರರೆಂದೆನಿ
ಸಿದ ಪಿಸುಣರ ಗೃಹಂಗಳಿಗೆ ತಾನೆಯ್ದಿ ಬೊಮ್ಮಯ್ಯ ೫೬

೧ರ (ಸ). ೨–೩ಯಪ್ಪ (ಕ, ಚ, ತ, ಧ, ನ, ಪ, ಬ, ಮ); ಮ (ಚ, ಕ). ೪ತ (ಸ).

CC-0. Jangamwadi Math Collection. Digitized by eGangotri

ಆವರನಿತಿ ಕೃತಕೃತ್ಯರಂ ಮಾ
ಡುವ ವಿನೋದಕೆ ಜನಿಸಿದಾದಿ
ಪ್ರವರನಾದುದಕೆಂ[೧]ತು ನೋಡುವಡಿದು ವಿಚಿತ್ರವಲಾ
ಕವಿದಗಿದ ಮಣ್ಣುಂ[೨] ಪದಾಂಬುರು
ಹವನಿ[೩]ಡುವೆ[೪]ಡೆಯು ಹಿಡಿದ ಠಾವುಂ
ನವ ಕನಕಮಯವಾಗಿ ಥಳಥಳಿಸುತ್ತಮಿದೆ ಭೂಪ ೨೭

ಇಂದು ನಿನ್ನಂ ಸಲಹಲೆಂದೆ
ಯ್ತಂದನಲ್ಲದೆ ಬೊಮ್ಮಿದೇವಂ
ಗೊಂದು ಗಡಣವೆ ವಸ್ತುವೆಂಬುದನೆಣಿ[೫]ಸಲೇತಕ್ಕೆ[೬]
ಸಂದು ಮಿಗಿಲಿಲ್ಲದಡೆ ತ[೭]ಪ್ಪಿಂ
ತೆಂ[೮]ದು ಭಂಡಾರದ ಸಿವುಡಿಯಂ
ಮುಂದಿರಿಸಿ ಬಸವಣ್ಣನಾ ಕರಣಿಕರನೋದಿಸಲು ೨೮

ಬೆಕ್ಕಸಂಬಟ್ಟಕ್ಕಜಂ ಮಿಗೆ
ಲೆಕ್ಕಕ್[೯]ಗ್ಗಳವಾಗಿರಲು ಮನ
ವ್ಪಕ್ಕಿ ಬಿಜ್ಜಳನಿರ್ದನಿತ್ತಲು ಬೊಮ್ಮಿದೇವಯ್ಯ
ಧಿಕ್ಕನೆಯ್ತರೆ ಸತಿ ಮನೆಯೊಳಿ
ದ್ದಕ್ಕಱಿಂದಿದಿರ್ವಂದು ಪಾದಯು
ಗಕ್ಕೆಱಗಿ ಕನ್ನದಗಳಿಯವಂ ಕೈಯ ಸೊಮ್ಮುಗಳ ೨೯

ಈಸಿಕೊಳುತಾ ಜಂಗಮಕ್ಕು
ಲ್ಲಾಸದಿಂ ಸಾಷ್ಟಾಂಗವೆಱಗು
ತ್ತಾ ಸತಿಯು ಬೊಮ್ಮಯ್ಯನುಂ ದಿವ್ಯಾನ್ನಪಾನಾದಿ
ವಾಸನದ ಭಕ್ಷಾವಳಿಗಳಂ
ಲೇಸು ಲೇಸೆನೆಯವರಿಗರ್ಪಿಸಿ
ದಾಸಭಾವದೊಳಾ ಪ್ರಸಾದಾಮೃತದೊಳೋಲಾಡಿ ೩೦

೧ಕಿಂ (ಥ). ೨ಣ್ಣಾ (ಸ). ೩–೪ ಟ್ಟೆ (ಥ, ಧ). ೫–೬ ಸು ಲೆಕ್ಕಕ್ಕೆ (ಚ, ಥ, ಪ, ಬ, ಮ). ೭–೮ ಪ್ಪೇನೆಂ (ಸ). ೯ವೆ (ತ, ಸ).

CC-0. Jangamwadi Math Collection. Digitized by eGangotri

ಮಂತ್ತೆಯುಂ ಜಂಗಮಕೆ ಧನಧಾ
ನ್ಯೋತ್ತಮಾಭರಣಾಂಬರಂಗಳ
ನಿತ್ತವರ [೧]ವರಲಸಿತ[೨] ಕಾರುಣ್ಯಾಭಿವೃದ್ಧಿಯಲಿ
[೩]ಚಿತ್ತ ಪಲ್ಲವಿತಾನುರಾಗಂ[೪]
ಬೆತ್ತು ಕನ್ನದ ಬೊಮ್ಮಿದೇವನು
ದಾತ್ತ ಭಕ್ತಿಸ್ಥಿತಿಯೊಳೆಂದಿನ ಪರಿಯೊಳಿರುತಿರ್ದ ೩೧

ಇಂತು ಕನ್ನದ ಬೊಮ್ಮಿದೇವನ
ನಂತಚರಿತವನೋದಿದವರುಂ
ಸಂತತಂ ವಿಸ್ತರಿಸಿದವರುಂ ಕೇಳುತಿರ್ದವರು
ಕಂತುಹರನ ಕರುಣದೊಳಾಯು
ರ್ವಂತರಪ್ಪರು ಸಿತಯಶಶ್ರೀ
ಕಾಂತರಪ್ಪರು ಧನ್ಯರಪ್ಪರು ಧರ್ಮಪರರಹರು ೩೨

ಅಂತು ಸಂಧಿ ೩೦ಕ್ಕಂ ಪದಗಳು ೧೬೩೩ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ದರಹಸಿತ (ಸ). ೩–೪ ಚಿತ್ತವಲರಿ ಮಹಾನುರಾಗಂ (ಸ).

CC-0. Jangamwadi Math Collection. Digitized by eGangotri

ಸಂಧಿ : ೩೧

*

ಸೂಚನೆ : ಆಸುಗಳೆದ ತಾಪಸಿ[೧]ಗೆ ಗೂಳಿಗೆ
ಬಿಸಜನಯನೆಗೆ ಕೃತಕರೂಪಿಂ
ಗೊಸೆದು ಜೀವವನಿತ್ತು ಮೆಱೆ[೨]ದನು [೩]ಮುಸುಟೆ ಚೌಡಯ್ಯ[೩]

ಕುಂಡಳೀಶ್ವರ ಕುಂಡಳಾರ್ಚಕ
ಮಂಡನಂ ಮತ್ತೆಯು ಮುಸುಟೆಚಾ
ವುಂಡರಾಯನೆನಲು ಸಕಲ ಮಾಹೇಶ್ವರಸಹಾಯ
ಪಂಡಿತೋತ್ತಮ ಜನವಿಧೇಯನ
ಖಂಡಿತಪರಾಕ್ರಮ [೪]ಸುಕಾಯಂ[೪]
ದಂಡಿತಪ್ರತಿಪಕ್ಷಸಮಯನಿಕಾಯನನಪಾಯ ೧

ಅಖಿಳ ಜನನುತಕೀರ್ತಿ ಸಜ್ಜನ
ಮುಖಿಮುಕುರನವಿರುದ್ಧ ಕೋವಿದ
ಸಖಿನಭಯನಫಲಾರ್ಥಕೃತ ನಿಜ ಸಕ್ರಿ್ರಯಾನ್ವಿತನು
ನಿಖಿಳಗುಣಶೃಂಗಾರಿ ಕುಸುಮವಿ
ಶಿಖಿವಿಕಾರವಿದೂರನನುಭವ
ಸುಖಿ ಸಫಲತಾಮೋಘಸಮಧುರ ಸತ್ಯಸಲ್ಲಾಪಿ ೨

---

* ರಾಗ : ನಾಟ (ಟ, ಪ); ಮೇಚಬಹುಳಿ (ಅ, ಡಾ); ಬಹುಳಿ (ಮ); ತೊಂಡಿ (ತ); ಗುಂಡಕ್ರೀ (ಧ). ೧ಸ (ಸ). ೨–೩ ಚೌಡನಾಚಾರ್ಯ (ಥ, ಪ, ಬ). ೪–೪ ಸಹಾಯಂ (ಸ); ಸಕಾಯಂ (ತ, ಥ, ಮ).

CC-0. Jangamwadi Math Collection. Digitized by eGangotri

ಖ್ಯಾತ ದೃಷ್ಟಾದೃಷ್ಟ ಸಾಕ್ಷೀ
ಭೂತ ಲೋಕಪ್ರತ್ಯಯಾತಿ ಪು
ನೀತ ಜಂಗಮಮೂರ್ತಿ ಶಾಪಾನುಗ್ರಹಸಮರ್ಥ
ಭೂತಳ ಪ್ರಚ್ಛನ್ನವೇಷದ
ಭೂತನಾಥನು ವೀರರಸನಿಧಿ
ವೀತಕಲ್ಮಷನಾಗಿ ಭಕ್ತಿಯೊಳಿಂತು ಪೆಂಪೆಸೆದು ೩

ಕಡೆಗೆ ಗೂಳಿ ತಪಸ್ವಿ ಭಕ್ತರ್
ಮಂಡಿದಡಂ ಪ್ರಾಣಮನದಾಗಳೆ
ಪಡೆವ ಬಿರಿದಿನ ಭಾಷೆ ಗಮನಿಸುತಿರ್ಪ ದಾರಿಯಲಿ
ಕಡುಪಿನುರಿ[೧]ನದಿಯಡ್ಡಬಿದ್ದಡೆ
ಅಡಗಿಸುತ್ತಂ ಸಸಿನೆ ಪಥದೊಳು
ನಡೆವ ಭಾಷೆ ಸುಭಕ್ತಿ ಸತ್ಕ್ರಿಯೆ ತಪ್ಪದಿಹ ಭಾಷೆ ೪

ವಸುಮತೀವಳಯದೊಳಗೊಪ್ಪುವ
ಮುಸುಟಿಯೆಂಬಾ ಪುರವರದೊಳು
ಲ್ಲಸಿತ ಭಕ್ತಿಯೊಳಿಂತು ಚೌಡಾಚಾರ್ಯನಿರುತಿರಲು
ಬಸವನಸದೃಶ ಭಕ್ತಿಯಶವೆ
ಣ್ದೆಸೆಗೆ ಪಸರಿಸೆ ನೋಡುವರ್ಥಿಯೊ
ಳೊಸೆದು ಭಕ್ತರು ತಾನುವೆಯ್ತರಲೊಂದು [೨]ತಾವಿನಲಿ[೩] ೫

ಎತ್ತ ಚೆಲ್ಲಿದ ಮಳಲು ಬೀಳದ
ಮೊತ್ತವೆತ್ತಟ್ಟಡವಿಯಲಿ ನಯ
ವೆತ್ತು ಬೆಳೆದಿಟ್ಟಿಯ ಮರಂಗಳು ಪಿರಿದು ಫಲವಾಗಿ
ಎತ್ತ ನೋಳ್ಪಡೆ ಹೊನ್ನ ಬಣ್ಣವ
ನೊತ್ತರಿಸುವಂತೊಪ್ಪಿ ಹೊಳೆಯಲು
ತತ್ತರುಗಳ ಫಲಂಗಳಂ ಮಾಹೇಶ್ವರರು ನೋಡಿ ೬

---

೧ ರು (ಕ, ಚ, ತ, ಥ, ನ, ಬ). ೨–೩ ತಾಣದೊಳು (ತ, ನ).

CC-0. Jangamwadi Math Collection. Digitized by eGangotri

ನೆಟ್ಟನಿಟ್ಟಿಯ ಪಣ್ಗಳಿಗೆ ಮನ
ವಿಟ್ಟುದೈ ಎಮ್ಮಿಷ್ಟ[೧]ಲಿಂಗಕೆ[೨]
ಕೊಟ್ಟು ನಾವಾರೋಗಿಸಲುವೇಳ್ಕೆನೆ ಮುಖಾಬ್ಜದಲಿ
ಒಟ್ಟಹಾಸಂ ಮೊಳೆಯೆ ದುರಿತಘ
ಜಿಟ್ಟ ಚೌಡಯನಾ ಮರಂಗಳ
ಮೊಟ್ಟ ಮೊದ[೩]ಲ್ಗಳಿ[೪]ಗೆಯ್ದಿ ಕೈದುವನೂಡಿ[೫] ತಾನಿಂದು ೭

ದೇವರಿನ್ನಾರೋಗಿಸೆನುತ ಮ
ನೋವಿಕಾಸದಿ ಬಿನ್ನವಿಸೆ ಭ
ಕ್ತಾವಳಿಯುಮವರವರಿಗೆಯ್ತಂದಾ[೬]ಯ್ದು ಮಿಗೆ ಕೊಯ್ದು[೭]
ತಾವಮೃತಕಿರಣಾಂಕಜೂಟಂ
ಗೀವುತಮೃತಸಮಾನವಾಯ್ತೆನು
ತೋವುತಿಟ್ಟಿಯ ಹಣ್ಣನಾರೋಗಿಸುತ ಲಾಲಿಸುತ ೮

ಮುಸುಟೆ ಚೌಡಯನೆಂಬ ಮುನ್ನಿನ
ಪೆಸರು ಮೆಱಿ[೮]ವುದು ಜಗದೊಳಿನ್ನಂ
ತೆಸೆವುದೆನುತಂ ನಗುತ ಸಂತಸವೆತ್ತು ನಡೆತರಲು
ಪಸರಿಸುತ ಕಲ್ಯಾಣದೊಳು ರಂ
ಜಿಸುತ ಸಂಗಮ[೯]ನಾಥ[೯]ನಲ್ಲಿಯೆ
ಬಸವರಾಜನು ಚೌಡರಾಜನ ಭಾವಮಂ ಕಂಡು ೯

ಧಿಕ್ಕನೆಯ್ತಂದಕ್ಕಱಿಂ ಮೈ
ಯಿಕ್ಕಿ ವಂದಿಸಿ ಪರಮ ಹರುಷದೊ
ಳುಕ್ಕಿ ಬಿಜಯಂಗೆಯ್ಸಿತಂದುಚಿತೋಪಚಾ[೧೦]ರದಲಿ[೧೦]
ಮಿಕ್ಕ ಸತ್ಕ್ರಿಯೆಗಳಿನವರನೈ
ಸಕ್ಕೆ ಸಂತೋಷಂಬಡಿಸಿ ಸ
ಮ್ಯಕ್ಕರುಣಮಂ ಪಡೆದು ಬಸವಂ ಚೌಡಿ[೧೧]ದೇವಗಳ ೧೦

೧–೨ ದೈವಕೆ (ತ, ಸ). ೩–೪ ಲಿಂ (ಬ). ೫–೬ ಯ್ದುವರ್ಗೆ ಕೊಡಲು (ಸ); ಯ್ದಾಯ್ದು ಕೊಯ್ದು (ಅ, ತ, ನ, ಮ). ೭–೮ ದೇವ (ತ, ನ, ಮ). ೯–೧೦ ರಾದಿ (ತ, ನ, ಮ); ರದೊಳು (ಕ, ಚ, ಥ). ೧೧ ಡ (ಬ).

CC-0. Jangamwadi Math Collection. Digitized by eGangotri

ಬಸವನಾಲವಿದಂಬುದೇತಕೆ
ಹೆಸರು ಬಂದಿತ್ತುಸುರಿ ನೀವೆನೆ
ಪಶುಗಳಂ ಕಾವವರೊಳಗ್ರಜನೊರ್ವನಿಂತೆಂದ
ಒಸೆದು ಹೆತ್ತಯ್ಯಂಗಳಿಂದಾ
ಲಿಸಿದೆನೆಂದೆಮ್ಮಯ್ಯನೊಲವಿಂ
ಶಿಶುಗಳಪ್ಪೆಮ್ಮೆಲ್ಲರಿಗೆ ಹೇಳಿದನು ಕೇಳಯ್ಯ ೧೯

ಎರಡು ಗೂಳಿಗಳಿಲ್ಲಿ ತಮ್ಮೊಳ
ಗುರವಣಿಸಿ ಮಾರ್ಮಲೆತುವೇಳ್ದಿನ
ವಿರದೆ ಕಾದುತ್ತಿರಲು ನೆತ್ತರ ಹೊನಲು ಪರಿವುತಿರೆ
ಹಿರಿದು ಬಸವಳಿದೊಂದು ವೃಷಭನು
ಮರಣವಾಗಲು ಹೂಳಿದಲಿಯಂ
ಕುರಿಸಿ ಬೆಳೆಯಿತ್ತೀ ಮಹಾವಟವೃಕ್ಷವಂತಾಗಿ ೨೦

ಬಸವನಾಲವಿದೆಂದು ನುಡಿವರು
ಹೊಸತು ಮೇಣಂತಲ್ಲದಿದಱಲಿ
ಒಸೆದು [೧]ಮೆಲಿದಡೆ[೨] ಮಾಂಸದಂದದೊಳಿಪ್ಪುದೀ ಹಣ್ಣು
ಬಸಿವುದರುಣಾಂಬುಗಳಿದಂ ಖಿಂ
ಡಿಸಿದಡಂತಾವೆಡೆಯೊಳಾಲದೊ
ಳೊಸರ್ವ ಪಾಲೀ ರಕ್ತವಹುದಿದ ನಂಬದಡೆ ನೋಡು[೩] ೨೧

ಎಂದಡಿದು ಹಳೆವಾರ್ತೆಯಲ್ಲಾ
ನಿಂದಿರದೆ ಮುಂದಕೆ ನಡೆಯಬೇ
ಕೆ[೪]ಂದೊಡತಣವರೊರೆದು ನಿಲಿಸಲು ನಿಲ್ಲದಾ [೫]ಗ್ರಹಿಸಿ[೬]
ಇಂದು ಹೊಸತೇನಂದು ಹಳದೇ
ನೆಂದುವುಂ ದೃಢ ವೀರಭಕ್ತಿಗೆ
ಸಂದವರ್ಗೆ ಬಸವನಳಿವಂ ಕೇಳ್ದಿರಲುಬಹುದೇ ೨೨

೧–೨ ಮೆಲ್ದೊಡೆ (ತ, ನ). ೩ ಡಿ (ತ, ಥ, ಧ, ಪ). ೪ ಡೆಂ (ತ, ನ, ಮ). ೫–೬ ಅಯ್ಯ (ಸ).

CC-0. Jangamwadi Math Collection. Digitized by eGangotri

ಮುಂದೆ ಬಸವಂ ಕೆಲೆವುತಂ ನಡೆ
ತಂದಡಲ್ಲದೆ ಪರಿಣಯಕ್ಕೆನ
ಗಿಂದು ಹೋದಡೆ ನೀತಿಯಹುದೇ ಪಡೆಯದಿರ್ದಡಿದು
ಕುಂದಲಾ ಶಿವಭಕ್ತಿ ಲೋಕದೊ
ಳೆಂದು ನಿಡುಬೊಬ್ಬೆಗಳನಿಡುತಾ
ನಂದಿಸುತ್ತಾರು[೧]ತ್ತ ಮುಸುಟೆಯ ರಾಯನೆಯ್ತಂದು ೨೩

ಎಲೆಲೆ ಪೋಪಿಮಂಡು ವೃಷಭ ಪೋಪಿಮಡು
ತಳುವು ಮಾಡದಿರಿನ್ನೆನುತ ಕೂ
ರಲಗನಾಲದೊಳೂಳಿ ನಿಲಲೊಡನತ್ತಲಿಂ[೨] ಮುನ್ನ
ನಲಿನಲಿದು ಹೆಗ್ಗೂಳಿ ಹಿಗ್ಗಲು
ನೆಲನುಮಿಬ್ಬಗಿಯಾಗಿ ವಟಕುಜ
ವಲೆಯೆ ಬೇರ್ಗಳು ಛಿಟಿಛಿಟೆನುತಂ ಕೀಳೆ ಪುಟನೆಗೆದು ೨೪

ಎಲ್ಲರದುಭುತರಾಗಿ ನೋಡಲು
ನಿಲ್ಲದಲ್ಲಿಂದಿಳೆಗೆ ಲಂಘಿಸಿ
ನಲ್ಲ ವೃಷಭನು ನಿಂದು ನಿಲುಕುತ ಮಲೆತು ಕೆಲೆವುತ್ತ
ಮೆಲ್ಲನಡಿಯಿಡುತುಬ್ಬುತಂ ಕಾ
ಲಲ್ಲಿ ನೆಲನಂ ಬೆರಟುತಂ ಕಣು
ಮಿಳ್ಕಿಸುತ ನೋಡುತ್ತ ಬಾಲವನೆತ್ತಿ ಬೀಸುತ್ತ ೨೫

ಉಚ್ಚಳಿಸುತಪ್ಪಳಿಸುತಂ ಹು[೩]ಲು
ಗಚ್ಚಿ ಹಾಯ್ಕುತ ಮೆಲುಕಿಲಿ[೪]ದು ತನು
ಹೆಚ್ಚುತುಪರಿಗೆ ನೆಗೆವುತಂ ಗೂಳಾಡುತಂ ನೆಲನ
ಆಚ್ಚರಿಯ[೫]ನೊಂದಿ[೬]ಸುತ ಮಂದಿಗೆ
ಬೆಚ್ಚುತಂ ಬೆದಱುತ್ತ ಜನರಂ
ಬೆಚ್ಚಿಸುತ್ತಂ ತನ್ನ ನೆಳಲಿಗೆ [೭]ಹೆದಱಿ[೭] ನೋಡುತ್ತ[೭] ೨೬

೧ಲು (ಸ). ೨ಣಿಂ (ತ, ನ). ೩ಹ (ಸೆ). ೪–೪ನೆಯ್ದಿ (ತ, ನ, ಸೆ). ೫–೫ತಾನೆ ಬೆದಱುತ್ತ (ಸೆ).

CC-0. Jangamwadi Math Collection. Digitized by eGangotri

ದೆಸೆದೆಸೆಗೆ ಪಾಯುತ್ತ ಬಲವೆ
ಯ್ದಿಸುತ ಕೋಡಂ ಬಾಗಿಸುತ್ತಂ
ಕಿಸುತ ವಟಮಂ ಮೂಸಿನೋಡುತ ಕಿವಿಯನಲುಗಿಸುತ
ಮುಸುಡನೆತ್ತುತ್ತುಸಿರಿಡುತ ಘೂ
ರ್ಮಿಸುತ ಸಗಣವನಿಕ್ಕುತಂ ಮೂ
ತ್ರಿಸುತವಲರುತ ಕೆಲನ ನೋಡುತ ಚೆಲ್ಲಪಾಡುತ್ತ ೭೭

ಒತ್ತರಿಸುತಂ ಮೋಚಿಯಂ ಮುರಿ
ವುತ್ತ ನಕ್ಕುತ ಪರಿವುತಂ ಪಾ
ಱುತ್ತ ಕುಱುಜಂಘೆಗಳನಿಡುತಂ ನಿಲುತ ನಡೆವುತ್ತ
ಸುತ್ತಿಬರುತಂ ಚವುಡರಾಯನ
ಹತ್ತಿರಕೆ ಬಂದೀಕ್ಷಿಸುತ ಬೆಂ
ಬತ್ತುತಾ ತಾಪಸನ ತನು ರೋಮಾಂಚವಾಗುತ್ತೆ ೭೮

ಅರಿಸಿಣಂ ಬಾಸಿಗವು ಪೂವಿನ
ಸರ ಸುಗಂಧಾಲೇಪನವಲಂ
ಕರಿಸಿದಂದಿನಘಂಟೆಗಳು ಕಿಱುಗೆಜ್ಜೆಗಳು ಮೊ[೧]ರೆಯೆ
ಪರಿವಡೆದು ಚೆನ್ನೆಸೆದು ವೃಷಭೇ
ಶ್ವರನಿರಲು ಚಾವುಂಡರಾಯಂ[೨]
ಹರುಷದಿಂ ನೋಡುತ್ತ ಪಶುಪನ ಕೊರಳ [೩]ಪಿಡಿದಪ್ಪಿ ೭೯

ಒಲವಿನಿಂದಾ ಮೆಲ್ಲಡಿಗಳಂ
ತೊಳೆದು ಪುಷ್ಪಾಂಜುಳಿಗಳಂ ಕೈ
ಗೊಳಿಸಿ ಗುಗ್ಗುಳ ಧೂಪ ದೀಪಾರತಿಗಳಂ ಕೊಟ್ಟು
ಚಿಲುವ ಪಾಲಂ ತುಪ್ಪವಂ ಮುಂ
ದೊ[೪]ಲಿವನಿತನರ್ಪಿಸಿ ತಣಿಸಿ ಗೋ
ಕುಲಪತಿಯೆ ನಡೆ ನೀವು ನಡೆಯೆನೆ ನಡೆಯೆ ನಿಮ್ಮಾಣೆ ೮೦

೧ಮೆ (ಚ). ೨ಜಂ (ತ, ನ). ೩–೪ನಂತಪ್ಪಿ (ತ, ಥ, ಧ, ನ, ಪ). ೪ನ್ನೊ (ತ, ಪ).

CC-0. Jangamwadi Math Collection. Digitized by eGangotri

ಎನಲಿಖಿಳಿ ಜನವಿದು ಮಹಾದ್ಭುತ
ವೆನುತ ಪೊಗಳಲು ಭಕ್ತಲೋಕಂ
ಮನದೊಳನುರಾಗಿಸಲು ಸರ್ವರು ಮುಂದೆ ನಲವೇಱಿ
ಮುನಿವರೇಣ್ಯನು ನಡೆಯಲಾ ಅ
ಯ್ಯನ ಸಮಕ್ಷದೊಳುಕ್ಷಪತಿ ಭೋ
ರನೆ ನಡೆಯೆ ಚಾವುಂಡರಾಯನು ಪೋಗುತಿರೆ ಮುಂದೆ ೩೧

ಅಂಬರಂಬರೆ ಮೀಱಿಯಿಿದ್ದೊಱಿ
ಯೆಂಬ ಪೆದ್ದೊಱಿ ತುಂಬಿ ಿಬರೆಯಾಿ
ಡಂಬರಂ ಮಿಗೆ ಪರಿಯೆ ತಡಿಯಂ ಪೆಟ್ಟಿ ತಾ ನಿಂದು
ಆಂಬುನಿಧಿಿಗಳನೆಲ್ಲ ೆವೊಬ್ಬ
ಯ್ಯಂ ಬಗೆಯದಂಗೈಯಲಡಗಿಸಿ
ಕೊಂಬುದಂ ನೀನಱಿಯಲಾ ಮೇಣಂತುಮಲ್ಲದೆಯು ೩೨

ಭವಿಯ ಹಱುಗೋಲೊಲ್ಲದಿರ್ದಡೆ
ಯವನದಂ ಮೂದಲಿಸಿ ನುಡಿಯ
ಲ್ಕಪಗಡಿಸಿ ಭಕ್ತಂ ಪ್ರಸಾದಿಯ ದಾಸಿದೇವಯ್ಯ
ಭುವನವಱಿಯಲು ನಿನ್ನ ಬಲು ದ
ರ್ಪವನಡಂಗಿಸಿ ಕಾಲ್ನಡೆಯೊಳು
ತ್ಸವವೆಸೆಯೆ ದಾಂಟಿದನಲಾ ಕೇಳಂತುಮಲ್ಲದೆಯು ೩೩

ವಸುಧೆಯೊಳು ಮತ್ತಂ ಗಜೇಶ್ವರ
ಮಸಣಿದೇವಂ ತನ್ನೊಳಗೆ ಮಱಿಿ
ದಸಮಶಿವಲಿಂಗಾರ್ಚನಾ ಮಗ್ನದೊಳಿರಲು ನಡುವೆ
ಮುಸುಕಿ ಬರಲಂಜಿದ್ದೆಸೆಗೆ ಖಿಂ
ಡಿಸಿದವೊಲು ನೀಂ ಪರಿದೆಯಲ್ಲಾ
ಉಸುರಲೇನಿನ್ನಡಗಡಗು ಕೊಡುಕೊಡು ಪಥವನೆನುತ ೩೪

೧–೨ ಳುಖಿ (ಥ). ೩–೪ ದ್ದೊಡಲೆಂ (ಮ). ೫–೬ ರಲು ವಾ (ನ, ಪ). ೭–೮ ಯನದೆಲ್ಲ (ಥ, ಧ).

CC-0. Jangamwadi Math Collection. Digitized by eGangotri

ಕೈದುವಂ ರುಳಿಪಿಸುತ ನಿನ್ನಂ
ಛೇದಿಸುವೆನೆಂದೆಱಗಲುರವಣಿ
ಮಾದು ನಿಲೆಯೊಂದೆಸೆಗೆ ನಿಂದಂತಂಬುಗಿರಿಯವೊಲು
ಆ ದಿವಿಯ ಮೇಲುಕ್ಕಿದುದು ಶಿವ
ಪಾದಭಕ್ತ ಮಹತ್ವಮಂ ಸಂ
ಮೋದದಿಂ ಸುರಗಂಗೆಯಂ ಕೇಳಲ್ಕೆ [೧]ಬಂದಂತೆ[೨] ೩೫

ಆಂವಮಾ ಚವುಡುಯ್ಯಗಂಜಿ ಜ[೩]
ಲಂ ಮುರಿದು ವಿತಳಕ್ಕಿಳಿಯಿತೆನೆ
ಬಿಮ್ಮಳಿದು ನೆಱಿ[೪] ಸರಿಯಲದು ತಾಯ್ಮಳಲುಗಾಣಿಸಲು
ಘಮ್ಮನಲು ನೀರ್ನಡುವೆ ಹೊಯ್ದಡೆ
ಸಮ್ಮದಿಸಲೆರಡಾಗದೆಂಬರ
ಪೆ[೫]ರ್ಮೆಯಂ ಮಾಣಿಸಿದನಲ್ಲಾ ಎನುತ ಪೊಗಳುತ್ತ ೩೬

ಚವುಡರಾಯನು ಮುಂದೆ ನಡೆಯಲು
ಶಿವಗಣಾವಳಿ ನಲಿದು ಪರಮೋ
ತ್ಸವದೊಳುಬ್ಬುತ್ತಲ್ಲಿಗಲ್ಲಿಗೆ ನಿಲುವುತಾರುತ್ತ
ತವಕದಿಂ ಪಾರ್ಗುಪ್ಪೆಯಾಡುತ
ತವತವಗೆ ಗತಿಗಳಿಗೆ ಕುಣಿವುತ
ಕವಿಕವಿದು ಕರಣಂಗಳಂ ಹಾಯ್ಕುತ್ತುಬುಬುಯೆನುತ ೩೭

ಪರಿವುತಂ ಪಾಡುತ್ತ ನಡೆಯಲು
ಸರಸರನೆ ಮುಂದೆಸೆಯೊಳೊಲವಂ
ಕುರಿಸೆ ತಾಪಸರಾಜನಂ ಗೋಪತಿಯು ಗಮನಿಸಲು
ದರಹಸಿತ ವಿಕಸಿತ ವದನ ಸರ
ಸಿರುಹನಾಗುತ್ತೆಯ್ದಿ ಭಕ್ತರು
ವೆರಸಿ ಚಾವುಂಡಯ್ಯನಾ ತೊಟಿ[೧]ಯಾಚೆ[೨]ನಿಂದಿರ್ದು ೩೮

೧–೨ ಪೋಪಂತೆ (ತ, ನ). ೩ ಬ (ಪ, ಬ). ೪ ಮ್ಮು (ಥ, ದ). ೫ ನೊ (ತ, ಪ). ೧–೨ ಯಲಿ ನಿಂದು (ಸ).

CC-0. Jangamwadi Math Collection. Digitized by eGangotri

ಕಡುಹು ಮಿಗೆ ಲೋಕಂಗಳಂ [೧]ಪರಿ
ದಡರಿ[೨]ತೆನೆ ಕಾ[೩]ಡಿಸದೆ ರಭಸವ
ನುಡುಗಿ ಪೆಲ್ಲನೆ ಪರಿಯೆನುತ್ತಂ ಚವ್ವುಡರಸನೆಯ್ದಿ
ಮೃಡಗಣಾವಳಿಸಹಿತ ಪೆಂಪಂ
ಪಡೆದು ಸೊಂಪಗ್ಗಳಿಸೆ [೪]ಸಮ್ಮದ
ವಡಸಿ[೫] ಪರಿಣಯಮಂ ನೆಗಳ್ದು ಸಮಾಪ್ತಿಯಂ ಮಾಡಿ ೩೯

ಮರಳಿ ಕಲ್ಯಾಣಕ್ಕೆ ಬರುತಿರೆ
ನೆರೆದು ಭಕ್ತರಿದಿರ್ಗೊಳಲು ತ
ದ್ವರ ತಪಸಿಯುಂ ವೃಷಭನುಂ ತನ್ನೊಡನೆ ನಡೆತರಲು
ಪುರಜನಂ ಬೆಱಗಾಗಿ ನೋಡು
ತ್ತರಿದರಿದು ವಿಪರೀತವೆನುತೆ
ಲ್ಲರು ಜಯ ಜಯ ಧ್ವನಿಗಳಿಂ[೬]ದಂಬರವದಿರುತಿರಲು[೭] ೪೦

ಮುಂದೆಸೆಯೊಳಿದ್ದೊಬ್ಬ ಸತಿ ಪರಿ
ತಂದು ಚವ್ವುಡಯ್ಯನ ಪದಕೆ ನೊಸ
ಲೊಂದಿ ವಂದಿಸೆ ನೋಡುತಂ ದೀರ್ಘಾಯು ನಿನಗೆನುತ
ಬಂದು ತಮ್ಮ ನಿಜಾಲಯದೊಳಾ
ನಂದ ಲೀಲಾರಸದೊಳಾಡು
ತ್ತೆಂದಿನಂತತಿಶಯದ ಭಕ್ತಿ ಮಹತ್ವದಿಂದಿರಲು ೪೧

ಆ ಯುವತಿ ವ್ಯತವಾಗೆ ಮಱುದಿನ
ತಾಯಿ ತಂದೆಯರಳುತೊಱಲುತಂ
ಬಾಯ ಬಿಡುತಂ ಕೊಂಡು ಬಂದೆಯ್ತಂದವರು ಚವ್ವುಡಾ
ರಾಯನಂ ಕಾಣುತ್ತ ವಂದಿಸಿ
ಜೀಯ ನಿಮಗಂ ನಿನ್ನೆ ನಮಿಸಿದ
ತೋಯಜಾನನೆ ಇಂದು ಮರಣಂಗೆಯ್ದಳವಧರಿಸಿ ೪೨

೧–೩ ಪಿರಿದಡಸಿ ತೇ (ಥ, ಧ, ಪ). ೨–೩ ತೇಂ ಕಾ (ತ, ನ). ೪–೫ ಸಂಪದವಡರಿ (ಕ, ಚ, ಧ, ಬ); ಸಂಪದವಡಗಿ (ಥ); ಸಂಪದವಡಸಿ (ಪ). ೬–೭ ದಂಬರವಸದಿ ಬರುತಿರಲು (ಕ); ದವರಿದಿರುವರುತಿರಲು (ಸ).

CC-0. Jangamwadi Math Collection. Digitized by eGangotri

ನೀವು ಹರಸಿದ ಹರಕೆ ತಪ್ಪದು
ದೇವ ಕಾಯೆನುತಂ ಚರಣರಾ
ಜೀವಯುಗ್ಮಮಂ ಪಿಡಿದು[೨] ಬಿಡದೊಯಿಲುತ್ತಿರಲು ನೋಡಿ
ಭಾವದೊಳು ಕೃಪೆ ಹುಟ್ಟಿ ಏಳೇ
ಳಾವಗಂ [೩]ಬೀಳ್ದ[೪]ಱಿಚುತಿರದೀ
ತಾವಿನಲಿ ತೊಲತೊಲಗೆನುತ ಸಿದಿಗೆಯನಿಳುಹವೇಳ್ದು ೪೩

ಹರಸುವವರಾಯುಷ್ಯಮಂ ಕೊಡು
ವರೆಯೆನುತ್ತಿಪ್ಪವರ ಮಾತಂ
ಪರಿಹರಿಸಿ [೫]ಚವುಡರಸನಾ ಸಿದ್ದಿಗೆಯನುಱಿ[೬] ತಟ್ಟಿ[೭]
ಕರದ [೮]ಕೈದುವನುಚ್ಚಿ ಪೆಚ್ಚುತ
ತರಳೆ ಏಳೇಳೆನುತ ಪೆಸರಲಿ
ಕರೆಯಲಾಗಳೆ ಚಿಟುಕು ಚಿಟುಕೆನೆ ಕಟ್ಟುಗಳು ಪಱಿದು ೪೪

[೯]ನಿದ್ರೆಗೆಯ್ವುತ್ತಿರ್ದು[೯] ಪೆದಱಿ
ತ್ತೆದ್ದವೋಲತಿ ಸಂಭ್ರಮದೊಳಂ
ತೆದ್ದು ನೋಡುತ ಚವುಡರಾಯನ ಪದಯುಗದ ಮೇಲೆ
ಬಿದ್ದು ಕೋಮಲೆ ವಂದಿಸುತ್ತಿರೆ
ಮುದ್ದಿನಾತ್ಮಜೆಯೊಡನೆ ಹರುಷಂ
ಪೊದ್ದಿ ಜನನಿಯು ಜನಕರುಂ ಸಾಷ್ಟಾಂಗದಲಿ ನಮಿಸಿ ೪೫

ಭಾಪು ಶರಣಾಗತಜನಾಯು
ಸ್ಥಾಪನಾಚಾರ್ಯಕ್ಷಮಪ್ರಾ
ಣೋಪಕಾರಿಗೆ ಮರಳಿಯುಪಕಾರ[೧೧]ವನ್[೧೧] ಮಾಡಲ್ಕೆ
ಆಪೆವೇ ನಾವಿನ್ನು ನಿಮ್ಮ
ಶ್ರೀ[೧೨]ಪದಾಂಬುಜ[೧೩]ನಿತ್ಯ ಸೇವೆಯೊ
ಳೋಪ ತೊತ್ತಿರ ತೊತ್ತಿರಾಗಿರಲೆಮ್ಮುವಂ ನೋಡಿ ೪೬

೧–೨ ಳಕ್ಕಿಱಿಗಿ (ಕ, ಚ, ಧ, ಬ). ೩–೪ ಬಿಡದೆ (ಸ). ೫–೬ ಚಾವುಂಡರಸನಾ ಸಿದಿಗೆಯಂ ತಟ್ಟಿ (ಬ); ಚಾವುಂಡರಸನಾ ಸಿದ್ದಿಗೆಯನಂ (ಕ, ಚ). ೮–೭ ಕರೆದು (ನ). ೯–೯ ನಿದ್ರೆಯಿಂದೆದ್ದು (ಮ); ಸಿದ್ಧಿಗೆಯ್ವುತ್ತಿದ್ದು (ಚ). ೧೦–೧೦ ಗಳ (ಸ). ೧೨–೧೩ ಪದಂಗಳ (ಕ, ಚ, ಪ, ಬ).

CC-0. Jangamwadi Math Collection. Digitized by eGangotri

ಮುತ್ತಿಕೊಂಡಿಹ ಮಂದ್ಪವಾಬ್ಧಿಯ
ನುತ್ತರಿಸಿ ಪೊರೆ ಎಂಬ ಮೂವರ
ನುತ್ತಮೋದ್ಧತ ಪ್ರಾಣಲಿಂಗಯುತಾಂಗರಂ ಮಾಡಿ
ಮತ್ತೆ ಗತವರುಷಂಗಳಾಗಿದು
ದಾತ್ತ ಶತವರುಷಂಗಳಾಗಿರ
ಲಿತ್ತವರನುದ್ಧರಿಸಿದನು ಮುಸುಟೆಯ ಚವುಡದೇವ ೪೭

ಪ್ರಾಣದಾನವನೀಯಲಳವೇ
ಕ್ಷೋಣಿಯೊಳಗಿಂತಾರಿಗಾದಡೆ
ಏಣಲಾಂಛನಲಾಂಛನಂಗಂ ತಾನಿದರಿ[1]ದೆನಲು[2]
ಜಾಣಭಕ್ತನು ಚವುಡರಾಯನು
ಪ್ರಾಣದಾನವನಿತ್ತನೆಂದುಂ
ಕಾಣೀ ಜೋದ್ಯವನೆನುತ ನರರೆಡೆಗೆಡೆಗೆ ನೆರೆ[3]ದು ೪೮

ಹೊಡವಡುತ ಕೀರ್ತಿಸುತವಚ್ಚರಿ
ವಡುತಿರಲು ಚಾವುಂಡರಾಯನ
ಕಡುಮಹಿಮೆ ಮಹಿಯೊಳಗೆ ಪಸರಿಸೆ ವೀರ ಭಕ್ತಿಯಲಿ
ನಡೆವುತಿರಲಾತನ ಮಹೋನ್ನತಿ
ವಡೆದ ಪೆಂಪಂ [4]ನೋಡ[5]ಲಾಱಿದೆ
ಜಡಮತಿಗಳಾಗಿತರ ಸಮಯಿಗಳತಿ ಕುಟಿಲದಿಂದ ೪೯

ತೊಡೆಯ ನಡುವಂ ಸುಟ್ಟ ಗೂಳಿಯ
ಜಡೆಯ ತಮ್ಮಡಿಯರ ಹರಣಮಂ
ಪಡೆದಪಂ ಗಡ ಚವುಡರಾಯನ ಪರಿಯರಿದು ತನಗೆ
ಪೊಡಮಡುವರಂ ಪರಸುವಂ ಗಡ
ಕಡೆಗೆ[6]ಯವರಂ[7] ಸಾಯಲೀಯಂ
ಗಡ ಚಿರಾಯುವನೀವ [8]ಗಡ ಇದ[9]ನಱಿಯಬೇಕೆನುತ ೫೦

೧–೨ದೆನಿಸಿ (ಮ, ಕ, ಚ, ಬ); ದಲ್ಲ (ತ, ನ). ೩ಗೆ (ಮ). ೪–೫ಕಾಣ (ಪ, ಬ, ಮ). ೬–೭ಗುರುಗಳ (ತ, ನ). ೮–೯ಕಂಡಿದ (ಪ, ಬ).

CC-0. Jangamwadi Math Collection. Digitized by eGangotri

ಪಾಪಚಿತ್ತರು ಗೋಣಿಯಲಿ ನರ
ರೂಪನೊಂದಂ ರಚಿಸಿಯುಡಿಯಲಿ
ಕೌಪನುಡಿಸಿ ವಿಭೂತಿಯಂ ಸರ್ವಾಂಗದಲಿ ಪೂಸಿ
ಸ್ಥಾಪನಂಗೆಯ್ದಿಕ್ಕಿ ಜೆಡೆ ಯ
ಜ್ಞೋಪವೀತವನಿಕ್ಕಿ ಕೃತಕದ
ತಾಪಸಂಗೆಡೆಗೆಡೆಗೆ ರುದ್ರಾಕ್ಷಿಂಗಳಂ ತೊಡಿಸಿ ೫೧

ಕಡೆಯ ಪಾಳ್ದೇಗುಲದೊಳದನೊಂ
ದೆಡೆಯೊಳಿರಿಸಿ ಕುಬುದ್ಧಿಯಲಿ ಸಂ
ಗಡಿಸಿ ದೂಷಕರಂಗಡಿಯೊಳೆಡೆಗೆಡೆಗೆ [೧]ನಗೆ[೨] ನಗುತ
ನುಡಿವುತಂ ದೇವಾಲಯದೊಳಗೆ
ಬಡ ತಪಸ್ವಿಯ ಬೆಱುತ ಪೆಣನದೆ
ಕೆಡೆದು ಬಾತಿದ್ದುದು ತೆಗೆವರಿಲ್ಲಾರುವಕಟಕಟಾ ೫೨

ಉಣಲುಡಲು ತಮಗಿಲ್ಲವೆಂದೋ
ಬಣಗು ತಪಸಿಯ ಶಿವನೀಶ್ವರ
ಗಣಗಳಾರುಂ ನೋಡರತ್ತಲು ಪ್ರಾಣವೆಲ್ಲರಿಗೆ
ಕ್ಷಣಿಕವಲ್ಲದೆ ನಿತ್ಯವೇ ಧಾ
ರುಣಿಯೊಳಗೆ ಪರದೇಶಿ ತಪಸಿಯ
ಹೆಣನನಾ ಚವುಡಯ್ಯನಯ್ಯೋ ಕಾಣನೇ ಎನುತ ೫೩

ಗೊರವರಂ ತಾಪಸಿಗಳಂ ಕೆಲ
ಬರನವಂದಿರು ಕರೆದುಕೊಂಡತಿ
ದುರುಳತನದಿಂದೊಂದುಮಾಡುವನಾಗಳಳವಡಿಸಿ
ಹರನ ದೇಗುಲದೊಳಗೆನಿ[೩]ತು ದಿನ
ವಿರುತ[೪]ಲಿರ್ದುದೊ[೫] ಹಡಿಕೆನಾಟುತ
ನರರಿಗಾರಿಗೆ ಸಾರ್ದು ಮುಟ್ಟಲು ಬಾರದೆಂದೆನುತ ೫೪

೧–೨ ನಸು (ಮ, ಬ). ೩ ಗಿ (ಸ). ೪–೫ ಲಿರ್ದುದು (ಸ).

CC-0. Jangamwadi Math Collection. Digitized by eGangotri

ತಾವೆ ಕೃತಕ ತಪಸಿಯ ಶಬಮುಮ
ನಾ ವಿಮಾನದೊಳಿರಿಸಿ ಬಂಧಿಸಿ
ಭೂವಿನುತರಹ ಚವುಡಿ[೧]ದೇವರ[೨] ಮನೆಯ ಬೀದಿಯಲಿ
ಗಾವಿಲರದಂ ಪೊತ್ತು ತರವೇ
ಳ್ದಾವಗಂ ಕುಪರಿಗಳನಾಡುತ
ತೀವಿ ದುರ್ಜನರಲ್ಲಿಗಲ್ಲಿಗೆ ನಗುತ ಬರುತಿರಲು ೫೫

ಹೊತ್ತುಬಹ ಮಾಡದೊಳಗಿಹ ಪೆಣ
ನತ್ತಲತಿದೂರದೊಳು ಕಾಣುತ
ಚಿತ್ತದೊಳಗದು ಕೃತಕಶಬವೆಂದಱಿದು ಗಹಗಹಿಸಿ
ಉತ್ತಮಂ ಚಾವುಂಡರಸನು
ಬ್ಬುತ್ತ ತನುರೋಮಾಂಚಕಂಚುಕ
ವೆತ್ತಿ ಕರುಣಾರಸಸಮಗ್ರದೊಳಾಗಳಿಂತೆಂದ ೫೬

ಆಡರಿಸುವಜಾಂಡಂಗಳಂ ಖಿತಿ
ವಿಡಿದು ಕೆಡಿಸಲು ಕೂರ್ತು ನಡೆಸಲು
ಕಡುನಿಪುಣರಹ ಮೃಡಗಣಂಗಳ ಮಹಿಮೆಗಿದುವೊಂದು
ಗಡಣಿಯೇ ಈ ರೂಪಿನಲ್ಲಿಯೆ
ಪಡೆವೆನೊಡಲಂ ಪ್ರಾಣಮಂ ಕೈ
ಯೊಡನೆನುತ ಚವುಡಯ್ಯ ನೆನೆದಾದ್ಯರುಗಳಡಿಗಳನು ೫೭

ಪತ್ತಿರಕೆ ಪರಿದೆಯ್ದಿ ಯಲಗಂ
ಕಿತ್ತು ತಾಂ ಜಡಿಜಡಿದು ಪೊನೆದೋ
ಱುತ್ತವಲ್ಲಿರ್ದತ್ತ ಲಂಘಿಸಿ ಮಾಡದೊಳಗಿರ್ದ
ಕೃತ್ತಿ[೩]ಮಾಂಗನ ಹಸ್ತಮಂ ಪಿಡಿ
ದೆತ್ತಿ ಏಳೇಳೆಲೆ ತಪಸಿಯೆ ಯೆ
ನುತ್ತ ಕರೆವಾ ಮಾತ್ರದೊಳು ಜೀವಾತ್ಮವಾಗೆದ್ದು ೫೮

೧–೨ ರಾಯನ (ಧ, ಪ). ೩ ತ್ರಿ (ಸ).

CC-0. Jangamwadi Math Collection. Digitized by eGangotri

ಪೊಂಗಿ ಮುಸುಟೆಯ ಚವ್ವಡರಾಯನ
ಮುಂಗಡೆಗೆ ಧುಮ್ಮಿಕ್ಕಿ ಪೌರಜ
ನಂಗಳದುಭುತರಾಗೆ ಚೌಡಾಚಾರ್ಯನಡಿಗಳಿಗೆ
ಆಂಗವೆಲ್ಲಂ ಮುಟ್ಟಿ ನಮಿಸಿ ಕ
ರಂಗಳಂ ಮುಗಿದಾರ್ತದಿಂ ಶಿವ
ಲಿಂಗವುಂ ನೀವೆನಗೆ [೧]ಶ್ರೀಗುರು[೨]ಲಿಂಗವುಂ ನೀವೆ ೫೯

ನೀವು ಕರುಣಿಸಿ ನಿಮ್ಮ ಪದಯುಗ
ಸೇವೆಯುಂ ಭವದೀಯ ಕರುಣಾ
ಭಾವಗರ್ಭದೊಳುದಯಿಸಿದೆನಾನನ್ಯಥವನಱಿಯೆ
ದೇವ ಎನುತಂ ಪ್ರಾರ್ಥಿಸಲು ಕರು
ಣಾವಲೋಕನದಿಂ ಸತತಮುಂ
ಜೀವಿಸುತಿರೆಂದಾತನಂ ಶಿವಭಕ್ತನಂ ಮಾಡಿ ೬೦

ಅತುಳ ಕೋಪೋದ್ರೇಕನಾಗಿ ಕು
ಮತಿಗಳಂ ಮರ್ದಿಸದೆ ಹೋಗೆನೆ
ನುತಮಿರಲು ಕಡು ಭೀತಿಯಲಿ ಪರವಾದಿಗಳು ಬಂದು
ಕ್ಷಿತಿಯೊರಸಲಭಿವಂದಿಸುತ ಸೂ
ನೃತವಚನ ಗುಣರಚನ ಶರಣಾ
ಗತಭಯಾಪಹರಣ ಚವುಂಡಾಚಾರ್ಯ ಬುಧವರ್ಯ ೬೧

ದೆಸೆಯು ದಿಕ್ಕುಂ ದೈವಮುಂ ಗುರು
ವಸುಧೆಯೊಳು ನೀವಲ್ಲದನ್ಯವ
ನುಸುರಲಱಿಯೆವು ಕಾಯಿರೇ ಸರ್ವಾಪರಾಧಿಗಳ
ಪಿಸುಣರಂ ದುರ್ಮತಿಗಳಂ ಸೈ
ರಿಸಿ ಸುಕೃತರಂ ಮಾಡಿ ಎಮ್ಮುವ
ನಸಮ ಮಹಿಮೋದ್ಧಾರ ಸೂರ ಸುಧೀಜನಾಧಾರ ೬೨

೧–೨ ಗುರು ಚರ (ಧ, ಪ).

CC-0. Jangamwadi Math Collection. Digitized by eGangotri

ಎನುತಭಯಮಂ ೨ಕ್ಕೈಡುವವರಂ
ಘನ ಕೃಪಾಭಾವನೆಯೊಳಾಸ್ತಿಕ
ಜನಶರಣ್ಯನಗಣ್ಯಪುಣ್ಯನು ಮುಸುಟೆ ಚೌಡಾರ್ಯ
ವಿನುತ ವಿಮಳಾಪೂರ್ವಲಾಂಛನ
ತನುಗಳಾಗಿರಲಿತ್ತು ನಿಜ ಪಾ
ವನತೆಯೊಪ್ಪಲು ನೋಡಿ ಶಿವಸಮಯಸ್ಮರಂ ಮಾಡಿ ೬೩

ಧರಣಿಯೊಳು ಚಿವುಡಯ್ಯನೆಂದಿನ
ಪರಿಯೊಳುನ್ನತಿಪೆತ್ತು ಸುಖದಿಂ
ದಿರುತಮಿರ್ದನು ತತ್ ಶಿವೈಕ್ಯನ ಸಚ್ಚರಿತ್ರವನು
ಬರೆದಡಂ ಪಠಿಸಿದಡೆ ಕೇಳ್ದಡೆ
ಚಿರತರಾಯುಂ ಶ್ರೀಯು ಕೀರ್ತಿಯು
ದೊರಕುವುದು ಮನುಜರಿಗೆ ಸತತಂ ಶಿವನ ಕರುಣದಲಿ ೬೪

ಅಂತು ಸಂಧಿ ೩೧ಕ್ಕಂ ಪದಗಳು ೧೭೫೭ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಳುಂ ನು (ನ). ೩–೪ ಪರ (ಧ, ಪ, ಸ).

CC-0. Jangamwadi Math Collection. Digitized by eGangotri

ಸಂಧಿ : ೩೨

*

ಸೂಚನೆ : ತುತ್ತುಗಳನಳವಡಿಸಿ ನೀಡಲು
ತುತ್ತು ತುತ್ತಿಗೆ ಶಂಭು ನೀಡಿಕೊ-
ಳುತ್ತವಾರೋಗಿಸಿ ಸುರಗಿ ಚಿವ್ವಡಯ್ಯನುಂ ಮೆಚ್ಚಿದ

ಧವಳಿತೋಜ್ವಳಕೀರ್ತಿ ಸುರಗಿಯ
ಚವ್ವಡರಾಯನೆನಲ್ಕೆ ಮತ್ತೆಯು
ಭುವನದೊಳು ಕಾರಣಪುರುಷರತ್ನಂ ಭವ ಸಪತ್ನಂ
ತ್ರಿವಿಧಭಕ್ತಿಪರಾಯಣಂ ಮಾ
ರ್ದವ ಮಧುರ ತತ್ವಾನುಭಾವಂ
ಶಿವ ಸುಮರ್ಮಜ್ಞಾನಿ ನಿಜಲಿಂಗಾಭಿಮಾನನಿಧಿ ೧

ಗಾಢ ವೀರವ್ರತ ನಿಯಮಿತ
ವ್ಯೂಢವಿಕ್ರಮದೇಹಿ ನಿರುಪಮ
ಗೂಢ ಲಿಂಗೈಕ್ಯನು ಉಭಯಲಿಂಗಪ್ರಸಾದಸುಖಿ
ರೂಢ ಶಿವಲಿಂಗಪ್ರಯೋಗಾ
ಲೀಢಚಿತ್ತನು ಸಾನುಭಾವ
ಪ್ರೌಢನಮಳಸ್ಫೂರ್ತಿ ಭಾಸ್ವತ್‌ಪುಣ್ಯಮಯಮೂರ್ತಿ ೨

---

* ರಾಗ : ಮಧುಮಾಧವಿ (ಆ, ಡಾ, ಮ). ಕೇತಾರಗೌಳ (ತ). ಶ್ರೀರಾಗ (ಕ, ಪ). ಗುಜ್ಜರಿ (ಧ).

CC-0. Jangamwadi Math Collection. Digitized by eGangotri

ಅಪ್ಪವಿಧಭಕ್ತಿಕ್ರಿಯಾ ಸ್ಥಲ
ಪುಷ್ಪ ಸಪ್ತೇತನನಪಗತಾ
ರಿಷ್ಪ ಕರ್ಮೇಂದ್ರಿಯ ಕಲನ ಬುದ್ಧೀಂದ್ರಿಯೋದ್ಧತನು
ಶಿಷ್ಪಮಹನೀಯಾನುಕೂಲೋ
ತ್ಕೃಷ್ಪಶೀಲಸದಾನುಪಾಲನು
ದುಷ್ಪ ಸಂಸಾರ ಪ್ರಪಂಚವಿದೂರನೆನಲೆಸೆದು ೩

ಅನುದಿನಂ ಕಲ್ಯಾಣಕಟಕವೊ
ಳನುನಯಂ ಮಿಗೆ ಕೂರ್ತು ಗುರುಭಾ
ವನೆಯೊಳುಡುಗದೆ ಜಂಗಮಾರಾಧನೆಯನೆಯ್ದಿ ಸುತ
ಇನಿದೆನಿಪ ಮೃದುತರರಸರಸಾ
ಯನ ಪದಪದಾರ್ಥಂಗಳಂ ಪಾ
ವನವ ಪಾನಾದಿಗಳನೊದವಿಸಿ ಕೂಡೆ ಗಡಣಿಸುತ ೪

ಅತುಳ ಭಕ್ತಿ ಪ್ರೇಮದಿಂ ಮುಕು
ಳಿತ ಕರಾಂಬುಜದಿಂ ನಮಿಸುತಂ
'ಶ್ರುತಿರಸಾನ್ ಭಕ್ತಸ್ಯ ಜಿಹ್ವಾಗ್ರೇ' ಎನುತ ಮೊರೆಯಿ
ಸತತವಿದುಕಾರಣದಿ ಭಕ್ತಾ
ಕೃತಿಯೊಳಾರೋಗಿಸಿರೆ ದೇವ ಎ
ನುತ ಸುರಗಿ ಚೌಡಯ್ಯನಾತ್ಮದೊಳುಬ್ಬಿ ಬಿನ್ನೈಸೆ ೫

ಜಂಗಮವೆಯಾರೋಗಿಸಲು ನಿಜ
ಲಿಂಗಪೂಜಾವಸರದಲ್ಲಿಯೆ
ಸಾಂಗಮಾಗಲು ಮಜ್ಜನೋದಕದಿಂದವೇ ಮುನ್ನ
ಲಿಂಗಮೂರ್ತಿಯನತಿ ಹರುಷ ಬಾ
ಪ್ಪಂಗಳುಗುತಿರೆ ಪೂಜಿಸುವ ಪು
ಷ್ಪಂಗಳಿಂದಂ ಮುನ್ನ ಲಿಂಗಕೆ ಹೃತ್ಕಮಳವಲರೆ ೬

CC-0. Jangamwadi Math Collection. Digitized by eGangotri

ಧೂಪವಾಸನೆಯಿಂದ ಮುನ್ನ ಉ
ಮಾಪತಿಯ ಮುಂದೆಸೆಯೊಳುದಿತ
ವ್ಯಾಪಿತಾಂತರ್ಗತಸುವಾಸನೆ ರಂಜಿಸುತ್ತಿರಲು
ದೀಪಿಸುವ ನೀರಾಜನಾತಿ ವಿ
ಭಾಪಟಲದಿಂದತ್ತ ಮುನ್ನವೆ
ಆ ಪರಮನೊಳು ತನ್ನಯಾತ್ಮಜ್ಯೋತಿ ಬೆಳಗುತಿರೆ ೭

ಸಂಗತ ನಿವೇದಿತ ಪದಪದಾ
ರ್ಥಂಗಳಿಂ ಮುನ್ನಂಬಿಕಾನಾ
ಥಂಗೆ ತನ್ನ ಪ್ರಾಣಪದಮಂ ತಾ ಸಮರ್ಪಿಸಲು
ಲಿಂಗವಂ ನಲಿನಲಿದು ಪೂಜಿಸು
ತಂಗಚೇಷ್ಟೆಗಳೊಡನೊಡನೆ ಪೆಱ
ಹಿಂಗುತಿರೆ ಸಲೆ ನೋಡಿ ನೋಡಿ ಮುಪಾಬ್ಜವಲರಿಸುತ ೮

ಪರಮನಮೃತವನಾನುತಾನುತ
ಸುರುಚಿರೋಕ್ತಿಗಳಿಂದೊಸೆದೊಸೆದು
ವರ ಸುಧಾಂಭೋರಾಶಿಯೊಳು ನೆಱಿ ತೋದು ನೆಱಿ ತೋದು
ಕರಮೆಸೆವ ವಿಮಳಾಂತರಂಗವ
ನಿರವೆನಿಪ ಬಹಿರಂಗಮಂ ಸು
ಸ್ಥಿರಶುಭಮಯ ಪ್ರಾಣಲಿಂಗ ನಿಜಸ್ಥ[೧]ಮಾಗುತ್ತ ೯

ಅಮಳ ಲಿಂಗಾರ್ಚನಸಮಯದಲಿ
ಸಮುಚಿತದ ನೈವೇದ್ಯವೇಳೆಯೊ
ಳಮರ್ದು ಮೆಱಿವಣಿಯಲಿ ಸುರಗಿಯಂ ಕಿತ್ತು ಹರಣಕ್ಕೆ
ಅಮಮ ಪೊ[೨]ರೆಯಂ ಕೊಯ್ವವೋಲು
ತ್ತಮನದಂ ಕೆಲದಲಿ ಮಡಗಿ ಜಂ
ಗಮದ ಲಿಂಗಾ[೩]ವಸರಮಂ[೪] ಮಾಡಿಸುವವೊಲು ತನ್ನ ೧೦

---

೧ ಸ್ವ (ದ) ೨ ಆ (ಮ). ೩–೪ ರ್ಚನವ (ಮ).

CC-0. Jangamwadi Math Collection. Digitized by eGangotri

ಪ್ರಾಣಲಿಂಗಕ್ಕಕ್ಕಱಿಂ ಪೞ್ಕಿ
ಯಾಣದಲಿ ಪೊಸ ಪೊಸ ಪದಾರ್ಥ
ಶ್ರೇಣಿಯಂ ಲೇಸಾಗಿ ಗಡಣಿಸಿ ವಿವರ ವಿವರದಲಿ
ಪಾಣಿಯಿಂದಂ ತುತ್ತುತುತ್ತಿಗೆ
ಕೇಣವಿಲ್ಲದೆ ನೀಡುತಿರಲಾ
ಸ್ಥಾಣುವೊಲವಿಂ ತುತ್ತು ತುತ್ತಿಗೆ ನೀಡಿಕೊಳುತಿರಲು ೧೧

ಅಸಮ ಭಕ್ತಪ್ರಾಣನಿಧಿ ಕರ
ಮೊಸೆದು ಕೈಕೈಯಿಂದವಾರೋ
ಗಿಸುತಿರಲ್ ತ್ರೈಸಂಧಿಯಲಿ ಲಿಂಗಪ್ರಸಾದವನು
ಲಸಿತ ಜಂಗಮದ ಪ್ರಸಾದವ
ನೆಸೆಯಲನುಭೋಗಿಸುತ ಉನ್ನತಿ
ವೆಸೆವೆಸೆಗೆ ಪಸರಿಸುತ ಸುರಗಿಯ ಚೌಡರಸನಿರಲು ೧೨

ಮಲಪರನ ಬೋನಕ್ಕೆ ನಿಚ್ಚಂ
ಹಲಗೆಗಳ ಮೇಲಾಯ್ದು ಕೊಡುವವು
ಹಳೆಯ ರಾಜನದಕ್ಕಿಯೇ ಮುನ್ನೂಱಿವಱುವತ್ತು
ಸೊಲಗೆ ಫಲ ಪತ್ರಾದಿ ಶಾಕಂ
ಗಳ ಮೆಣಸು ಮೂವತ್ತು ಕೊಳಗಮೆ
ನಲು ಬಳಿಕ ಕರಿಕಾಲಚೋಳಮಹೀರಮಣನಿಂತು ೧೩

ಸಲಿಸಲಾರೋಗಿಸುವನಲ್ಲವೆ
ಹಲವು ಛಂದದ ತತ್ಪದಾರ್ಥಂ
ಗಳ ಪೆಸರನಱಜಾರಮಣನುಂ ತಾನಱಿಯನೆನಲು
ಚೆಲುವನಾಗಿ ಸಮಸ್ತ ಭಕ್ಷ್ಯ
ವಳಿಗಳಂ ನೃಪನೆಯ್ದೆ ಗಡಣಿಸಿ
ಅಲಗನುರ್ಚಿ ಕರದೊಳಮರ್ಚಿ ತೊಲಂಗಿ ನಿಂದಿರಲು ೧೪

CC-0. Jangamwadi Math Collection. Digitized by eGangotri

ರಸರಸಾಯನದಿನಿದನಾಸ್ವಾ
ದಿಸುತ ಪಾನಾದಿಗಳನೀಂಟುತ
ರಸಿಕತನದಿಂ ಚಪ್ಪಿಱಿವ ದನಿ ತೋಱಲಡಿಗಡಿಗೆ
ಅಸಮನೇಶ್ವನು ನಿಚ್ಚಲನುರಾ
ಗಿಸುತ ಜೋಳನ ಭಕ್ತಿಗಾರೋ
ಗಿಸುತವಿಹನೆನಲಂದು ಕೇಳುವೆವಂತುಮುಲ್ಲದೆಯು ೧೫

ಸನ್ನುತಾಮಳಕೀರ್ತಿ ಮಾದರ
ಚೆನ್ನಯಂ ಕಟ್ಟಿಂಬಕಳವಂ
ತನ್ನ ನಿಜ ಜಿಹ್ವಾಗ್ರವೇ ಪರಿಯಾಣವಾಗಿರಲು
ಪನ್ನಗಾಭರಣಂ ನಿಷೇಧವ
ದೆನ್ನದಾರೋಗಿಸಿದನೆಂಬರು
ಪಂನ್ನ ಲೋಕಖ್ಯಾತಿಯಲ್ಲಾ ಇದಱಿಹಗೆ ಮತ್ತೆ ೧೬

ವೀರಜೋಳಾದೇವಿ ನಿಸ್ಸಂ
ಸಾರಿ ದಾಕ್ಷಾರಾಮದಲಿ ರತಿ
ಸೇರಿ ಸವಿಯಲು ಹುಗ್ಗಿಯಂ ಸವಿಯಾದಡುಣಲಂಜೆ
ನಾರಿ ದಾಸಿಯ ಕೈಯಲಟ್ಟಲು
ಭೋರನವಳೆಯ್ತಂದು ಕಂದ
ರ್ಪಾರಿ ಎಮ್ಮಕ್ಕನು ಕಳುಹಿದಳು ತಂದೆನವಧರಿಸು ೧೭

ಬಟ್ಟಲೊಳಗಿದೆ ಹುಗ್ಗಿಯಂ ಕೈ
ಯಿಟ್ಟು ಕೊಳ್ಳಿ ಎನುತ ನೀಡಿದ
ಡಟ್ಟಹಾಸಂ ಸೂಸೆ ಭೀಮೇಶ್ವರನದಂ ಕೊಂಡು
ಹೊಟ್ಟೆತುಂಬಲು ಸವಿದು ಚೋದ್ಯಂ
ಬಟ್ಟು ಸರ್ವರ ನೋಡುತಿರಲಾ
ತಟ್ಟೆಯಂ ದೇಗುಲದ ಿಹೊಱಯಿಕೆ ಹಾಯಿಕಿದನೆನಲು ೧೮

೧–೨ ವೊಲು (ಸ). ೩–೪ ಹೊಜಗಣ್ಗಿಟ್ಟನಂದನುತೆ (ತ, ನ).

CC-0. Jangamwadi Math Collection. Digitized by eGangotri

ಅಂದು ಕೇಳಲ್ಬಡುಗು ಕ್ಷಫೆಗಳೊ
ಳಿಂದು ನೋಡಲ್ಬಟ್ಟುದುನ್ನತಿ
ಸಂದುದೀ ಕಟಕದೊಳು ಸುರಗಿಯ ಚೌಡಿದೇವಗಳು
ಮುಂದೆ ತುತ್ತಂ ಮಾಡಿ ನೀಡ
ಲ್ಕಿಂದುಜೊಡಂ ಕೂರ್ತು ಕೈ ಕೈ
ಯಿಂದೆ ನೀಡಿಕೊಳುತ್ತವಾರೋಗಿಸಿದನೆಂದೆನುತ ೧೯

ಸಕಳ ಮಾಹೇಶ್ವರರು ಜಂಗಮ
ನಿಕರಮುಂ ಕೊಂಡಾಡುತಿರೆ ಪಾ
ವಕನಯನನಪರಾವತಾರನು ಲಿಂಗಶೃಂಗಾರಿ
ಸುಕರ ಭಕ್ತಾಸಕ್ತ[1]ನಿಂತು ಕ
ಟಕದೊಳೆಂದಿನ[2]ಹಂಗಿ[3] ಕೀರ್ತಿ
ಪ್ರಕಟಿಸಲು ಸುಖದಿಂದೆ ಸುರಗಿಯ ಚೌಡರಸನಿ[4]ರ್ದ[5] ೨೦

ಶರಣ ಸುರಗಿಯ ಚಿವುಡರಾಯ[6]ನ
ವರ ಚರಿತ್ರವನೋದಿದವರಿಗೆ
ಬರೆದವರ್ಗಂ ಕೇಳಿದವರಿಗೆ ವಿಸ್ತರಿಸುವರಿಗೆ
ಸರಸ ಜಂಗಮಲಿಂಗಸದಯಾ
ಭರಿತ ನಿರತಿಶಯ ಪ್ರಸಾದ
ಸ್ಫುರಣವೊಪ್ಪುವುದಭಿಮತಾರ್ಥಪ್ರದಮೊದಗುತಿಹುದು ೨೧

ಅಂತು ಸಂಧಿ ೩೨ಕ್ಕಂ ಪದಗಳು ೧೨೭೯ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

---

೧ ಶ (ಧ, ಪ, ಸ). ೨–೩ ವೊಲು (ಸ). ೪–೫ ರಲು (ಧ, ಪ, ಸ). ೬ ಜ (ತ, ಸ).

CC-0. Jangamwadi Math Collection. Digitized by eGangotri

ಸಂಧಿ : ೩೩

*

ಸೂಚನೆ : ವರಮೃಗಾಕೃತಿಗಳಿನಡವಿಯೊಳು
ಚರಿಸುವಾ ಗಂಧರ್ವರಂ ಸಂ
ಹರಿಸಿ ಶಿವಲೋಕಕೆ ಕಳುಹಿದನು ತೆಲುಗ ಬೊಮ್ಮಯ್ಯ

ಮಲಹರನ ಸದ್ಭಕ್ತಿಯುಕ್ತನು
ತೆಲುಗ ಬೊಮ್ಮಯನೆನಲು ಮತ್ತೆಯು
ಕಲಿಮಲಾಪಹನರ್ಥಿಜಂಗಮ ಪರಿಚರಣಮೂರ್ತಿ
ವಿಲಸಿತಾಶಾಕಾಶಕೀರ್ತಿಯು
ಚಲಿತ ಕಾರಣ ಪುಣ್ಯಮೂರ್ತಿ ವಿ
ಮಳ ಶಿವಾಚಾರಪ್ರಸಿದ್ಧನು ಸಚ್ಚಿದನುಬದ್ಧ ೧

ಕಲಿಯುಗೋದ್ಧರಣಾರ್ಥಸಂಭವ
ಬಲಯುತಂ ಮೃಗವ್ಯಾಧರುದ್ರಂ
ಕಲಿತನದ ಮಹಿಮಾವನೀಧ್ರಂ ಗುಣಮಣಿಸಮುದ್ರಂ
ಅಲಘು ಧೀರೋದ್ಧಾರಶೂರನು
ವಿಲಯದೂರನು ವೀರವಿಕ್ರಮ
ನಿಲಯ ದಿವ್ಯಶರೀರನಭಿಮತ ಲೋಕವಿಸ್ತಾರ ೨

---

* ರಾಗ : ಗುಜ್ಜರಿ (ಪ); ಗೌಳಪಂತು (ತ); ಕೇತಾರಗೌಳ (ಧ).

CC-0. Jangamwadi Math Collection. Digitized by eGangotri

ಭುವನಪಾವನನೆನಲೆಸೆಗ್ಗು ಜನ
ವಿರತಂ ಕೀರ್ತಿಸುತಿರಲು ನಿಜ
ಶಿವಸಮರ್ಚನೆವೇಳೆಯೊಳು ತನ್ನಂ ಮಱೆಸಿದು ಮಱೆಸಿದು
ವಿವಿಧ ಜಂಗಮದಾಸಭಾವೋ
ತ್ಸವಮೊಳೊಸೆದೊಸೆದಿಂತು ಕಟಿಕಟೊ
ಳವಿರಳಾನಂದದೆ ತೆಲುಗ ಬೊಮ್ಮಯ್ಯನಿರುತಿರಲು ೩

ಅತ್ತಲೊಬ್ಬಯ್ಯಂ ಶಿವಾನಂ
ದೋತ್ತಮಂ ತಾನೆಂಬ ಪೆಸರಂ
ಪೊತ್ತು ಲಿಂಗಧ್ಯಾನ ತದ್ಗತಪಾರವಶ್ಯದಲಿ
ಎತ್ತಲೆಂದಱಿಯದೆ ಸುನಿಷ್ಠಾ
ವೃತ್ತಿಯೊಳೆ ಶ್ರೀಶೈಲವಿಪಿನೋ
ದಾತ್ತಭೂಮಿಯೊಳವಿರಳ ಸಮಾಧಿಸ್ಥನಾಗಿರಲು ೪

ಪವನಖಿಂಗಳು ಪರ್ವಿಯುರ್ವಿಯೊ
ಳದಱಿ ಬೇರುಗಳೆಯ್ದೆ ಕೆಳಯಿ
ಕ್ಕಿಳಿದು ನಿಮಿರ್ದಿರೆ ತತ್‌ಕರಸ್ಥಳನಖಿರನಿಕರವದು
ಪ್ರದಿವಡರ್ದಿರೆ ಥಳಥಳಿಸಿ ಬೆಳು
ಪ್ಪೊದಗಿ ಬೆಳ್ಳಿಯ ಬಳ್ಳಿಗಳ ಭಂ
ದದಿ ಬೆಳೆದು ಮೇಲ್ಪೆಸೆಗೆ ಪಸರಿಸಿ ಸಲೆ ಬೆಳಗುತಿರಲು ೫

ಆತನುರುತರ ಮುಕ್ತಕೇಶ
ವ್ರಾತವೊಡಲಂ ಮುಸುಕಿಕೊಳಲತಿ
ಶ್ವೇತಶೈಲದ ಮಾಳ್ಕೆಯಿಂ ಗುರುಮೂರ್ತಿಯೊಪ್ಪಿರಲು
ಪ್ರೀತಿಯಿಂದಾ ಯೋಗಿವರನ ಪು
ನೀತಶಿಷ್ಯನು ನಿಹಿತಭಕ್ತಿಸ
ಮೇತಚಿತ್ತದೊಳನವರತಮುಂ ಬಿಡದೆ ಭಜಿಸುತ್ತ ೬

CC-0. Jangamwadi Math Collection. Digitized by eGangotri

ಸಾರಮತಿಯಲಿ ಕಂದಮೂಲಾ
ಹಾರನಾಗಿಂತಲ್ಲಿಯೇ ಪರಿ
ಚಾರವಂ ಮಾಡುತ್ತಮಿರಲ್ಕೈಸರಲಿ ಗಂಧರ್ವ
ನಾರಿಯರು ಪುರುಷರು ವಿನೋದ ವಿ
ಹಾರ ಲೀಲೆಯೊಳೆಂಪ್ಪೆಯೆಯ್ದಿ ವಿ
ಚಾರಗೇಡಿಗಳಾಗಿ ತಾವವರಿದ್ದರಣ್ಯದಲಿ ೭

ಬಿಳಿಯ ಬಳ್ಳಿಗಳೊಡನೆ ಬೆಳೆದತಿ[೧]
ಬಲಿದ ಕರ್ರನದಾವುದೆನುತಂ
ತಿಳಿಯದೊಪ್ಪಚಿ ದೂರದಲಿ ನೋಡುತ ವಿಚಾರಿಸುತ
ಶಿಲೆಯೊ ತಾನದು ಶಿಲೆಗೆ ಬಳ್ಳಿಗ
ಳೊಳವೆ ತರುವೋ ತರುವದಾದಡೆ
ಎಲೆಗಳೇಕಿಲ್ಲದು ಮುದುಗರಡಿಯಾಗಲಾಪ್ಪದಲಾ ೮

ವಿಸುಕಲಾಱಿದೆ ಕುಳ್ಳಿತಿರ್ದುದು
ವಸುಮತಿಯೊಳದೆ ಎನುತ ನೋಡು
ತ್ತುಸುರುತಿರಲಾ ಖೇಚರರ ನೋಟಂಗಳಂ ನೋಡಿ
ಅಸಮಯೋಗಿಯು ಶಿಷ್ಯನತಿ ಕೋ
ಪಿಸುತೆಲೆಲೆ ಗಂಧರ್ವರಿರ ಕಾ
ಣಿಸದಲಾ ನಿಮಗೀ ಶಿವಾನಂದರ ಮಹತ್ವವದು ೯

ಮುಂದುಗಾಣದೆ ಪರಮಯೋಗಾ
ನಂದಮೂರ್ತಿಯನನ್ಯಭಾವನೆ
ಯಿಂದ ಭಾವಿಸಲಹುದೆ ನೀವಜ್ಞಾನಚಿತ್ತದಲಿ
ಇಂದು ಚಿನ್ಮೃಯನಂ ಮೃಗಾಕೃತಿ
ಯೆಂದು ಹೋಲಿಸಿ ನುಡಿದಡೀ ತ
ಪ್ಪಿಂದೆ ಹೋಗಿ ಮೃಗಂಗಳಾಗಿ ಖಗತ್ವಮಂ ನೀಗಿ ೧೦

---

೧ ಡೆ (ಅ, ಮ). ೨ಯಿ (ತ, ನ).

CC-0. Jangamwadi Math Collection. Digitized by eGangotri

ಧರೆಯೊಳುದಯಿಸಿ ನ್ನೀವೆನುತ ನಿ
ಬ್ಬರದ ಶಾಪವನಾಗಳೀಯಲು
ಕರಭಯಾತುರರಾಗಿಯವರೆಯ್ತಂದು ಮೈಯಿಕ್ಕಿ
ಪರಮ ಪುರುಷನೆ ನೀವು ಬೆಸಸಿದ
ಪರಿಯೊಳಿಮ್ಮ ಮನಂಗಳೊಳಗಾ
ವರಿಸಿದಪಿ ದುರ್ಬುದ್ಧಿ ಫಲವಿಲ್ಲೆನುತಲವಧರಿಸು ೧೧

ಈಗಳಿವನಪಹಾಸ್ಯಭಾವನೆ
ಯಾಗಿ ಮನದೊಳು ನೆನೆವುದಿಲ್ಲಂ
ತಾಗಿ ಪರಿದಜ್ಞಾನವುಂಟದು ತಮ್ಮ ಕರ್ಮಫಲ
ಹೋಗದೆಂತುಂ ಮುನ್ನ ತಾವನು
ಭೋಗಿಸದೆ ಮೇಣ್ ಶಾಪಮೋಕ್ಷವ
ದಾಗಿ ಬದುಕುವ ಮಾರ್ಗವೆಮಗೆಂದಿಂಗಹುದು ದೇವಾ ೧೨

ಬೆಸಸಿ ಎಮ್ಮಪರಾಧವಂ ಸೈ
ರಿಸಿ ಕರುಣದಿಂದೆನುತವರು ವಂ
ದಿಸಲಮೋಘಂ ತಪ್ಪಲಱಿಯದು ನಿಮ್ಮ ಶಾಪವದು
ಉಸುರಲೇನಿನ್ನೆಯ್ದಿ ನೀವ್ ಉದ
ಯಿಸಿ ಮೃಗಾಕಾರಂಗಳಾಗಿಳೆ
ಗೆಸೆವುದಾ ಕಲ್ಯಾಣಕಟಕಾಂತಿಕ ವಿಪಿನದಲ್ಲಿ ೧೩

ತೆಲುಗ ಬೊಮ್ಮಯನೆನಲು ಲೋಕಂ
ಗಳಿಗೆ ಕಾರಣಮೂರ್ತಿಯಾತನ
ಬಲುಸರಳಿನಿಂ ಮರಣವದು ಸಿದ್ಧಿಸಿದಡಂ ನಿಮಗೆ
ಫಲವಹುದು ನಿಜ ಶಾಪಮೋಕ್ಷಕೆ
ಬಳಿಕ ಕೇಳಾ ಅಯ್ಯನಿಂದಪೆ
ಸಲೆ ಮಡಿದಿರಾದಡೆ ದೊರಕುವದು ಮುಕ್ತಿ ಸಂಪದವು ೧೪

೧–೨ಪಾ (ಅ, ಬ, ಕ, ಚ, ಧ, ಪ). ೩ದು (ಸ). ೪ತ (ನ, ಮ).

CC-0. Jangamwadi Math Collection. Digitized by eGangotri

ಎಂದಡಾ ಗಂಧರ್ವರಾಗಲಿ
ಎಂದು ಕಟಕಾಂತಿಕ ವನದೊಳೆಯಿ
ತಂದು ಜನಿಸಿ ಮೃಗಂಗಳಾಗಿಯೆ ಸತಿಯರುಂ ಅವರುಂ
ಮುಂದೆ ಬೊಮ್ಮಯ್ಯನ ಬರವನಾ
ನಂದದಿಂ ಬಯಸುತ್ತಮಿರಲಂ
ತೊಂದು ದಿನವಾ ಅಯ್ಯನೊಯ್ಯನೆ ಬಂದರಣ್ಯದೊಳು ೧೫

ಅತ್ತಲೊಲವಿಂ ಪತ್ರೆಯಂ ಕೊ
ಯ್ವುತ್ತ ನಡೆತರಲಾ ಮೃಗಂಗಳ
ಮೊತ್ತವೀತಂ ಬೊಮ್ಮಿದೇವ ಮಹಂತನಹುದೆನುತ
ಸುತ್ತಿ[೧]ಬರಿ[೨] ನಿಂದಿರ್ದು ತಾವಱಿ
ಚುತ್ತವೆತ್ತಲು ಪೋಗಲೀಯದೆ
ಮುತ್ತಿಕೊಂಡಿರಲೊಂದು ಮೃಗವಿಂತೆಂದುದಾತಂಗೆ ೧೬

ನಿಮ್ಮ ಕೈಯಲಿ ಮಡಿದಡಲ್ಲದೆ
ಎಮ್ಮ ಶಾಪ [೩]ವಿಮೋಕ್ಷ[೪]ವಾಗದು
ಬೊಮ್ಮಿದೇವ ದಿನಂಪ್ರತಿಯೊಳಾದಡೆ ವಿನೋದದಲಿ
ಎಮ್ಮ ಬೇಂಟೆಯನಾಡಿ ಸಲಹೈ
ನಿಮ್ಮಡಿಗಳಖಿಲೋಪಕಾ[೫]ರಿಗ[೬]
ಳೆ[೭]ಮ್ಮ ಮುನ್ನಿನ ಜನ್ಮದಲಿ ಗಂಧರ್ವರುಗಳಹೆವು ೧೭

ಒಂದು ದುಃಕೃತಕಾರ್ಯಕಾರಣ
ದಿಂದವಿಂತಹ ಶಾಪವಾಯಿ
ತ್ತೆಂದು ತದ್ವೃತ್ತಾಂತವೆಲ್ಲವನಾಗಳೊರೆವುತ್ತ
ಮುಂದೆಮಗೆ ಗತಿ ಮೋಕ್ಷವಹುದಕೆ
ಸಂದೆಹಂಗಳವೇಕೆ ನಾವೊಲ
ವೊಂದಿ ನಿಮ್ಮಿಂದವೆ ಮಡಿದಡಾ ನಿಮಿಷಮಾತ್ರದಲಿ ೧೮

೧–೨ ವರೆ (ಧ, ಪ). ೩–೪ ವಿಶಾಪ (ತ, ನ). ೫–೬ ರರು (ಕ, ಚ, ಧ, ಪ, ಮ). ೭ ಎ (ಕ, ಚ, ಧ, ಪ, ಮ).

CC-0. Jangamwadi Math Collection. Digitized by eGangotri

ಕನಕದಿವ್ಯ ವಿಮಾನ ಪ್ರಾಪ್ತಿಗ
ಳನುನಿಯದಿ ಬಂದೀಶ್ವರೇಶ್ವರ
ಘನರಜತಪರ್ವತಕೆ ಕೊಂಡೊಯ್ದವು ವಿಳಾಸದಲಿ
ಜನಕೆ ದೃಷ್ಟಪ್ರತ್ಯಯಂ ಮೇ
ದಿನಿಗೆ ಶಾಪಂಬಡೆದೆವಾಯ
ಯ್ಯನ ವರಂ ತಪ್ಪದು ಮೃಗಂಗಳ ರೂಪ್ರವಿಂತೆಮಗೆ ೧೯

ಅವಧರಿಸುವುದು ನೀವದೆಂತೆನೆ
ವಿವರಿಸಲು ಗಂಧರ್ವಲೋಕ
ಪ್ರವರರಪ್ಪೆವು ನಿಮ್ಮ ಕೈಯೊಳು ಸಾಯಲೊಡನೆಮಗೆ
ಅವಿರಳೈಶ್ವರ್ಯಾಪವರ್ಗ ಪ
ದವಿ ದೊರಕುಗಂತಾಗಿ ಎಮ್ಮನು
ಭುವನವಂದಿತ ಕರುಣದಿಂ ಸಲಹೆನುತ ಕೀರ್ತಿಸಲು ೨೦

ಸಂತವಿಸುತಂ ಜ್ಞಾನದೃಷ್ಟಿಯೊ
ಳಂತು ನೋಡುತ ತತ್ಪ್ರಕಾರವ
ದೆಂತಹುದಿದೆಂದಱಿದು ಹೋಹುದನುಡುಗಿಯೈಸಱಲಿ
ಪಿಂತೆಗಾಗಳೆ ತಿರಿಗಿ ಪತ್ರೆಗ
ಳಂ ತಿಱಿದುಕೊಂಡಾ ಮಹಂತನು
ಸಂತಸದೊಳೆಯಿತಂದು ಸುಖದಿಂದಿರ್ದು ಮಱುದಿವಸ ೨೧

ನಳನಳಿಪ ಪೊಸ ಪಚ್ಚೆಗುಪ್ಪಸ
ವಳವಡುತ್ತಿರೆ ಪಚ್ಚೆಟೊಪ್ಪಿಗೆ
ತಲೆಯೊಳೆಸೆಯಲು ಹಿಡಿದು ಬಿಲ್ಲಂ ಸರಳನಾಯ್ದಾಯ್ದು
ಬಲಿದು ನಂದನವನವರಣ್ಯ
ವಳಿಯ ಮೇಲೆಯ್ತಂದು ಬಿಸುಟೆವೊ
ಲಲರೆ ಸಹಜಕ್ರಿಯೆಗಳಿಂ ಮೃಗಯಾವಿನೋದದಲಿ ೨೨

೧–೨ ಯಿಸಿ (ಪ. ಸ). ೩ ದ (ತ. ಪ). ೪–೫ ಬಿಟ್ಟ (ತ. ಧ. ನ. ಪ).

CC-0. Jangamwadi Math Collection. Digitized by eGangotri

ಕಲಿತನದ ಮೃಗವೇಂಟಿಕಾಱಿರು
ಅಲಘುಕೇಸರಿಯಂ ತೊಡರ್ವತಿ
ಛಲದ ಸತ್ವದ ಜಾಯಿಲಂಗಳು ತವಕವೆಗ್ಗಳಿಸೆ
ಬಳಸಿ ತನ್ನುವನೆಯ್ದಿ ಬರುತಿರೆ
ತೆಲುಗ ಬೊಮ್ಮಯ್ಯನು ಗಮಿಸೆ ಮೃಗ
ಕುಲವರಣ್ಯದೊಳುಬ್ಬಿ ಆತನ ಮೇಲೆ ಬರುತಿರಲು ೨೩

ಕೊರಳಹಾಸಂ ಬಿಡಲೊಡನೆ ಬಿ
ತ್ತರಿಸುವಂಕದ ಮಾಳ್ಕೆಯಲಿ ಕರ
ಮುರವಣಿಸುತಂ ಜಾಯಿಲಂಗಳು ವಾಯುವೇಗದಲಿ
ಪರಿದು ಕವಿಯಲವಕ್ಕೆ ಸಿಕ್ಕದೆ
ಭರದೊಳೆಸುವಾ ಬೇಂಟಿಕಾಱಿರ
ಸರಳುಗಳಿಗುಲ್ಲಂಘಿಸು[1]ತ ರಭಸದೊಳಗೆಯ್ತರಲು[2] ೨೪

ಆ ತೆಲುಗ ಬೊಮ್ಮಯನ ಶರನಿ
ರ್ಘಾತಪಾತಕೆ ತೊಡರ್ದು ಮಡಿಯಲು
ಭೂತಳದೊಳಗೆ ಶಾಪಮೋಕ್ಷಿತರಾಗಿ ತಾವಲ್ಲಿ
ಖ್ಯಾತಿ ಮಿಗೆ ಗಂಧರ್ವರಾಗಿ ಪ್ರ
ನೀತ ಶರಣನ ಚರಣಸರಸೀ
ಜಾತಕಭಿವಂದಿಸುತ ಸಮ್ಮು[3]ದವೆತ್ತು ಕೀರ್ತಿ[4]ಸುತ[5] ೨೫

ಶರಣ ಬೊಮ್ಮಯ್ಯಗಳ ಕೈಯಲಿ
ಮರಣವಾದನಿತಱಿಲಿ ಗಂಧ
ರ್ವರು ಸುರುಚಿರಾಗಣ್ಯಪುಣ್ಯಪ್ರಾಪ್ತಿಗಳನೆಯ್ದಿ
ಸ್ಫುರಿತ ದಿವ್ಯ ವಿಮಾನತತಿಗಳು
ವೆರಸಿ ಕೈಲಾಸಕ್ಕೆ ಹೋಗು
ತ್ತಿರಲಿದಚ್ಚರಿಯೆನುತ ಶುನಕಂಗಳಿಗೆ ಬೆಂಗೊಡದೆ ೨೬

೧–೨ ತ್ತಂ ಭರದೊಳ್ಕೆತರಲು (ಕ, ಚೆ); ತ್ತಂ ಮಹಿಲದೊಳೆಯ್ತಂದು (ಅ); ತ್ತಂ ರಯದೊಳೆಯ್ತರಲು (ತ, ನ, ಪ, ಬ); ತುರವಣಿಪೊಳೆಯ್ತಂದು (ಮ). ೩ ಮ್ಮ (ಮ). ೪–೫ ಸಲು (ಸ).

CC-0. Jangamwadi Math Collection. Digitized by eGangotri

ಉರವಣಿಸಿ ನಾವೆಸುವ ಭೀಕರ
ಸರಳ್ಗಳಿಂ ತಪ್ಪಿಸಿಕೊಳುತ ತತ್
ಶರಣ ಮಾರ್ಗಣಹತಿಗೆ ಮಡಿದು ಮೃಗಾಕೃತಿಗಳುಡುಗಿ
ಶರಣೆನುತ ಗಂಧರ್ವರಾಗಿಯೆ
ಸುರುಚಿರ ವಿಮಾನಂಗಳಿಂದಂ
ಬರಕೆ ಹೋಗುತ್ತಿಪ್ಪುದದು ತಾನತಿ ವಿಚಿತ್ರವಲಾ ೨೭

ಆದದೆ ಕುನ್ನಿಗಳೆಯ್ದಿದವೆನ
ಲ್ಕದದೆ ಹೋಯಿತು ಹೋಯಿತೆನೆ ರಭ
ಸದಿ ನೆಗೆದು ಪಾಱಿದವು ಸಂಧಿಸಿ ತಾವೆಸುವ ಸರಳು
ವಿದಿತವೆಂದುಂ ತಪ್ಪದೆಮ್ಮೃ
ಪ್ರದಶಿಪೊಮ್ಮೆಯು ತಾಗದೇ ತ
ಪ್ಪಿದಪವಾವ ಮೃಗಂಗಳೋ ಇವನಾರು ಬಲ್ಲವರು ೨೮

ಮೃಗ ಮೃಗೀಕುಲಕಾವ ಿನಾಡೊಳು
ಗಗನಘಾಗದೊಳುಜ್ವಳಿಪ ಮಿಂ
ಚುಗಳ ಹೊಮ್ಮಾಡಿಂಗಳೊಳವೇ ಮುನ್ನ ತಾವಿವರು
ಜಗದೊಳಾದಿಯೊಳಾರೊ ಕಾರಣ
ಮೃಗತನುಗಳಂ ತೆಲುಗ ಬೊಮ್ಮ
ಯ್ಯಗಳೆ ಬಲ್ಲರು ಬಳಿಕವರು ವರ್ತಿಸುವ ನೆಲೆಗಳನು ೨೯

ಧರಣಿಯೊಳು ಸಾಮಾನ್ಯಪುರುಷನೆ
ಶರಣನಿಧಿ ನರಲೋಕ ರುದ್ರನು
ಪರಮಕಾರಣಮೂರ್ತಿಯೆನುತಾಶ್ಚರ್ಯರಾಗುತ್ತ
ಹರುಷದಿಂ ಕೊಂಡಾಡುತಂ ಪರಿ
ಪರಿಯೊಳೊಡತಣ ಬೇಂಟೆಕಾಱರು
ವೆರಸಿ ನಿಚ್ಚಂ ಬೊಮ್ಮಯಂ ಬೇಂಟೆಗಳನಾಡುತ್ತ ೩೦

೧ಕೆ (ಬ, ಕ ಚ, ಧ). ೨ತ (ಸ). ೩–೪ ವನದೊಳು (ಬ, ಕ, ಚ).

CC-0. Jangamwadi Math Collection. Digitized by eGangotri

ವರ ಮೃಗಂಗಳನುಗ್ರ ಶರದಿಂ
ಹರಿಸಿ ಶಿವಲೋಕಕೆ ಕಳುಪ್ರತಿರೆ
ಧರಣಿಪಂ ಮೊದಲಾಗಿ ತಾವೊಂದೊಂದು ದಿನದಲ್ಲಿ
ನರರು ಸರ್ಬರು ಬಂದು ನೋಡಲು
ಹರಗಣಂಗಳು ನೆರೆದು ನೋಡು
ತ್ತಿರಲರಿದರಿದೆನುತ್ತ ಪೊಗಳಲು ತೆಲುಗ ಬೊಮ್ಮಯ್ಯ ೩೧

ಗುರುಪದಾಂಬುಜಭಜನೆಯೆಂಬಾ
ಸುರಗಿಯಲಿ ಸಂಸಾರವೆಂಬಾ
ಮರೆಯನರಿದು ಶಿವೈಕ್ಯದರುಶನವೆಂಬ ಕೊಂತದಲಿ
ಉರು ಪುರಾಕೃತಕರ್ಮವೆಂಬಾ
ಹರಿಣನಂ ಕೊಂದೀಶ್ವರಾಜ್ಞಾ
ಪರಶುವಿಂ ಪೂರ್ವಾಶ್ರಯೋಗ್ರವ್ಯಾಘ್ರನಂ ಕೆಡಹಿ ೩೨

ಜ್ಞಾನವೆಂಬಡ್ಡಾಯುಧದಿನ
ಜ್ಞಾನವೆಂಬುದ್ದಂಡಬಲ ಪಂ
ಚಾನನವನಪಹರಿಸಿ ಸತ್‌ಕ್ರಿಯೆಯೆಂಬ ಕತ್ತಿಯಲಿ
ಹೀನ ಮಾಯಾಮೋಹವೆಂಬು
ದ್ದಾನಗಿಮೃಗವಿಂ ಕಡಿದು ಪರಮ
ಧ್ಯಾನವೆಂಬಿಟ್ಟಿಯಲಿ ಭವವೆಂಬೀ ಮೃಗವನಿಟ್ಟು ೩೩

ವೀರಭಕ್ತಿವಿಚಾರವೆಂಬ ಕ
ಠಾರಿಯಿಂದರಿವರ್ಗವೆಂಬಾ
ವಾರಣವನೊಡೆಸೀಳ್ದು ಸತ್ಯವೆನಿಪ್ಪ ಸಬಳದಲಿ
ದಾರುಣೈಷಣದರ್ಪವೆಂಬಾ
ತೋರ ಕರಡಿಯನಿಚ್ಚಿದು ಸಮಯಾ
ಚಾರವೆಂಬಾ ತೋಪುರದಿನಘಖಡ್ಗಿಯಂ ಪರಿಸಿ ೩೪

೧–೨ ವೃಕ (ಪ, ಬ).

CC-0. Jangamwadi Math Collection. Digitized by eGangotri

ವಿನುತ ಶಿವಪದವೆಯ್ದು ಬಾಣಾ
ಸನವನೇಱಿಸಿ ತಿರುಗುವಿಂದ್ರಿಯ
ವೆನಿಪ ಬಲುಸಾರಂಗವಂ ನಿಮಿಷಕೆ ಪಱಿಯಲೆಚ್ಚು
ಘನ ಮಹತ್ವವೆನಿಪ್ಪ ಗದೆಯಿಂ
ದನತ ಪರವಾದಿಗಳೆನಿಪ ಗ
ರ್ಜನೆಯ ಮೃಗಸಂದೋಹಮಂ ಬೆಂಬತ್ತಿ ನುರ್ಗೊತ್ತಿ ೩೫

ಮೆಱವಣೆಯ ನೆಱಿ ಬೇಂಟೆಕಾಱಿಂ
ಗುಱಿ ಮೃಗಂಗಳನಸುಗಳೆವುದೇ
ತಱಿ ಘನಂ ತಾನಂತುಮಲ್ಲದೆ ಪರಿಕಿಸದೆ ನಡೆವ
ಬಿಱಿನಡೆಯ ಪದಪತಿಗಳಿವ ಪಲ
ತೆಱಿವ ಜೀವಿಗಳಿಗೆ ವಿಮೋಕ್ಷಂ
[1]ದೊಱಿಪ್ಪೆ[2]ದೆಂದಡೆ ಬೊಮ್ಮಯನ ಕೈಯಲಿ ಮರಣವಾದ ೩೬

ಅವನಿಯೊಳಗೀ ಮೃಗವಿತಾನಂ
ಶಿವಪುರಕೆ ನಲಿದೆಯ್ದುವುದು ಜೋ
ಧ್ಯವೆ ಎನುತ್ತಾ ಬಸವರಾಜನು ಕೀರ್ತಿಸುತ್ತಿರಲು
ಧವಳಯಶದಿಂ ಬೊಮ್ಮಿದೇವಂ
ಭುವನವಂದಿತನಾಗಿ ಪರಮೋ
ತ್ಸವದೊಳಾ ಕಲ್ಯಾಣಕಟಕದೊಳೆಂದಿನಂತಿರ್ದ ೩೭

ತೆಲುಗ ಬೊಮ್ಮಯ್ಯಗಳ ಪುಣ್ಯಾ
ಮಳ ಚರಿತ್ರವನೋದಿದಡೆ ಮನ
ವೊಲಿದು ಬಿತ್ತರಿಸಿದಡೆ ಕೇಳಿದಡಂ [3]ವಿರಚಿಸಿದಡೆ[4]
ಮಲಹರನ ಕಾರುಣ್ಯದಿಂದವಿ
ಚಲಿತ ಭಕ್ತಿಯು ಶಕ್ತಿಯುಂ ಪ್ರ
ಜ್ವಲಿತ ಕೀರ್ತಿಯು ಶುಭಗಪೂ[5]ರ್ತಿಯುಮಹುದು ಮನುಜರಿಗೆ ೩೮ *

ಅಂತು ಸಂಧಿ ೩೩ಕ್ಕಂ ಪದಗಳು ೧೪೧೬ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

೧–೨ದುಱುವ (ಹಾ, ತ, ಧ, ಥ, ಪ, ಮ). ೩–೪ವಿರಚಿಸಿದವರ್ಗೆ (ಕ, ಚ, ಧ, ಪ); ವಿಸ್ತರಿಸಿದೊಡೆ (ಬ, ಮ). ೫ ಮೂ (ತ, ನ).

* 'ತ' ಪ್ರತಿಯಲ್ಲಿ ಇಲ್ಲಿಗೆ ಆಶ್ವಾಸ ೫ಕ್ಕೆ ಮುಗಿತಾಯವಾಗಿದೆ.

CC-0. Jangamwadi Math Collection. Digitized by eGangotri

ಸಂಧಿ : ೩೪

*

ಸೂಚನೆ : ಜಂಗಮವು ಹೋಗಲ್ಕೆ ಹೋಯಿತು
ಜಂಗಮಂ ಬರಲೊಡನೆ ಬಂದಿತು
ಜಂಗಮಪ್ರಾಣದ ಬಸವನಸುವತಿಶಯಮಿದೆನಲು

ಪಂತ್ತೆಯೊಂದೆವಸಂ ಬಸವ ಸಜಿ
ವೋತ್ತಮಂ [೧]ಸದ್ಭ[೨]ಕ್ತಿಯುನ್ನತಿ
ವೆತ್ತು[೩] ಜಂಗಮ ಪರಿಚರಣಪೂಜಾವಸಾನದಲಿ
ಚಿತ್ತದೊಳು ರತಿ ಮೂಡಿ ಸರಸಾ
ಯತ್ತ ಲಿಂಗಾಭ್ಯರ್ಚನಕ್ರಿಯೆ
ವೊತ್ತು ತತ್‌ಶಿವಪರವಶಾಲೀಢಾನುಶಕ್ತಿಯಲಿ ೧

ಲಿಂಗವಂ ತಾ ನೋಡಿ ನೋಡಿ ಸು
ರಂಗಿಸುತ್ತಂ ಪರಮ ಶಿವಸುಖ
ಸಂಗಸುಧೆಯಂ ಸವಿಸವಿದು ತಣಿವಿಲ್ಲದೀಂಟುತ್ತ
ಹೊಂಗಿ ಹರನಂ ಮುಟ್ಟಿ ಮುಟ್ಟಿ ಕ
ರಂಗುತವಿರಳ ಭಕ್ತಿ [೪]ಶುಭಗ[೫]ನು
ಹಿಂಗದವಿರತವೊಂದಿವೊಂದಿಯಲರ್ದು ನಲಿವುತ್ತ ೨

---

* ರಾಗ : ಬಂಗಾಳ (ಅ, ಮ); ರಾಮಕ್ರೀ (ಡಾ, ಚ, ಪ); ಶಾಂತಮಲಹರಿ (ಧ); ಆಹಿರ (ತ). ೧–೨ ಶಿವಸೆ (ಪ). ೩ ವೆತ್ತ (ಬ). ೪–೫ ಸುಲಭ (ಕ); ಸುಭಗ (ಪ).

CC-0. Jangamwadi Math Collection. Digitized by eGangotri

ತನುಗುಣಂಗಳನುಳಿದುಳಿದು ಧಿ
ಕ್ಕನೆ ತೊಲಗಿಸುತ ಸಾನುರಾಗಂ
ಕೊನರ್ದು ಕೊನರ್ದಾ ಶಿವಶರಣರಂ ಕಂಡು ಕಂಡುಬ್ಬಿ
ವಿನತನಾಗಿ ಪ್ರಣುತಿಯಿಂಪುಗೆ
ಮನಮೊಸೆದೊಸೆದು ಹಾಡಿ ಹಾಡಿ ಸ
ವಿನಯದಿಂ ಲೀಲಾಂಬುಧಿಯೊಳೋಲಾಡಿಯೋಲಾಡಿ ೩

ಆಕ್ಕಱಿಂ ಬಾಲೇಂದುಧರನೊಳು
ಪೊಕ್ಕುಪೊಕ್ಕಲ್ದರ್ದಲರ್ದು ಕೂಡುತ
ಸೊಕ್ಕಿ ತಲ್ಲಿಂಗದೊಳಗಿಂತು ವಿಲೀನನಾಗಿರ್ದು
ಮಿಕ್ಕ ವಿಷಯಾಸಂಗ ಚಿತ್ತ ದೊ
ಳುಕ್ಕುವಾ ಚರಿತಂಗಳಿಡಗು
ತ್ತಿಕ್ಕಿ ಪರಶಿವನಲ್ಲಿ ಸನ್ಮತಿ ತಗ್ಗುತಿರಲಾಗಿ ೪

ಬಿಡದೆ ಸೋಂಕುವ ಕೈಗಳಾದಡೆ
ತೊಡರಿಸುವ ಸಕ್ರಿಯೆಗಳೊಡನೊಡ
ನುಡುಗೆ ಗದ್ಗದಕಂತಸಂಗತಿಯಿಂದೆ ದನಿಗೊಡುವ
ಮೃಡಗುಣಸ್ತುತಿಗೆಯ್ವ ಘೋಷಣ
ವಡಗೆ ಸಾನಂದಾಶ್ರುಗಳಿನೆ ಡೆ
ವಿಡದೆ ನೋಡುವ ನಯನಗಳು ಹೊಳೆದಾವರಿಸುತಿರಲು ೫

ಕವಿಯಿಂ ಕಲ್ಲಿಯ ನೇಣುಮಂ ಬಿ
ಟ್ಟವೊಲೊಡಗಿರ್ಚುವ ಸಕಲಕರಣೇಂದ್ರಿಯ
ನಿವಹವರ್ಕನ ಕೂಡೆ ರಶ್ಮಿಗಳಸ್ತಮಿಸಿದಂತೆ
ಶಿವನೊಳಸ್ತಮಿಸಲು ಹೊಱಿಗೆ ನೋ
ಡುವ ನಯನಮುಂ ತನ್ನನೀಕ್ಷಿಸ
ಲವಸರಿಸುವಾ ಚಿತ್ತಮುಂ ಶಿವನಲ್ಲಿ ಸಿಕ್ಕಿರಲು ೬

೧–೨ ರಲರಿ (ಬ). ೩ ಲಿಂ (ಧ, ಪ). ೪–೫ ಸಂಗ (ಸ). ೬ ಹಿ (ನ). ೬ ಚು (ತ). ೮ ಗೆ (ಸ). ೯–೧೦ ಚಕ್ಕು (ಕ, ಚ, ತ, ನ, ಪ, ಬ, ಮ). ೧೧ ದ (ಬ). ೧೨–೧೩ ರ್ಚಿದಶ (ಕ, ಚಿ, ತ, ನ, ಪ, ಬ, ಮ).

CC-0. Jangamwadi Math Collection. Digitized by eGangotri

ತನ್ನುವಂ ಜಗವಂ ನೆನಪಿನು
ತ್ಪನ್ನತೆಯನಾಲೋಕನಂಗಳ
ನುನ್ನತಾಂತರ್ಬಾಹಿರಾಚರಣಂಗಳಂ ಮಱಿಸಿದು
ಸನ್ನುತಾಕಲಿತಾಷ್ಟದಳನಿ
ರ್ಭಿನ್ನ ಮಧ್ಯಸ್ಥಿತಕನದ್ವಿಲ
ಸನ್ನವಕ ಕರ್ನಿಕೆಯೊಳಿಸವೀಶ್ವರನೊಳಡಗಿರಲು ೭

ಅಸಮನಿರತಿಶಯಾನುಭವ ಭ
ವ್ಯ ಸುಖಿಮೆಯ್ದೆ ನಿಗುಳ್ದು ನಿಶ್ಚಲ
ವೆಸೆವ ಪರಶಿವಯೋಗನಿದ್ರಾಮುದ್ರಿತದೊಳಿರಲು
ಬಸವನಿಹ ಸದ್ಭಾವಮಂ ವೀ
ಕ್ಷಿಸುತ ನಲಿದಾ ಚೆನ್ನಬಸವಣ
ನೊಸೆದು ವಂದಿಸಿ ಕೀರ್ತಿಸುತ್ತಂ ತನ್ನೊಳಿಂತೆಂದ ೮

ಮುದ್ರಿಸಿದ ಶಿವಯೋಗನಿದ್ರಾ
ಭದ್ರ ಸೌಖ್ಯ ಸಮುದ್ರನೆನಿಪ ಸು
ಚಿದ್ರಮಣನೆನ್ನಯ ಮಹದ್ಗುರುಗಲ್ಲದೆಯು ಮತ್ತೆ
ನಿದ್ರೆ ತಿಳಿಯದೆ ತೊಳಲುವತಿ ಜಡ
ನಿದ್ರೆ ಮುಸುಕಿದವರ್ಗೆ ಸತತಂ
ನಿದ್ರೆಯಲ್ಲದೆ ಯೋಗನಿದ್ರೆಯದೆಂತು ದೊರಕುವುದು ೯

ಅತುಳಿತಾಮಳ ಯೋಗನಿದ್ರೋ
ದಿತ ಸಮಯದಲಿ ಸದ್ಗುರುವಿನಿರ
ವತಿಶಯವು ನೋಡಲ್ಕೆ ತೆರೆಯಿಲ್ಲದ ಶರಧಿಯಂತೆ
ಮಿತಚಲನವಿಲ್ಲದೆ ಮೆಱಿವ ಮಾ
ರುತನವೊಲು ನಿರ್ಮೇಘವಾಗಿಹ
ವಿತತ ನಭದವೊಲಿಂದ್ರಿಯಂಗಳ ಗಜಬಜಿಯನುಡುಗಿ ೧೦

೧ತ (ತ, ಸ).

CC-0. Jangamwadi Math Collection. Digitized by eGangotri

ಸನ್ಮತಾನಂದೈಕ್ಯಸೌಖ್ಯಾ
ಭಿನ್ನಭಾವದೊಳನವರತಮುಂ
ತನ್ನ ತಾ ಮಱೆದಿರ್ದಹನೊ ಶಿವಲೀಲೆಯಲಿ ಮತ್ತೆ
ತನ್ನ ಕರತಳವೊತ್ತುವುದೊ ಸಂ
ಪನ್ನ ಶಿವನೆಂದೆನುತ ಮದ್ಗುರು
ತನ್ನ ಹೃತ್ಪದ್ಮಾಸನಸುಖಾಸೀನನಂ ಮಾಡಿ ೧೧

ಹಲವು ಸೂಳ್ ಶೀತೋಷ್ಣನಿರ್ಮಳ
ಸಲಿಲದಭಿಷೇಕಂಗಳಿಂ ಕೋ
ಮಳ ಮಹಾಶಿವಲಿಂಗದಂಗಂ ಕಂದುವುದೊ ಎನುತ
ಲಲಿತ ಚಿದ್ವಿಸ್ಫುರದಮೃತಕರ
ಕುಲಜನಿತ ಪಂಚಾಮೃತವನೆಱಿ
ದಿಳೆಯೊಳೊಗೆದ ಲತಾಂತಪೂಜನೆ ಕಠಿಣವಹುದೆನುತ ೧೨

ಪೊಡವಿಯೊಳಗೆಂದುಂ ಪ್ರಭವಿಸದ
ಗಿಡುವಿನೊಳು ಛವಿವಡೆದು ನವಕಂ
ಬಡೆದ ನವ್ಯಸಹಸ್ರದಳ ಶತದಳಮನರ್ಪಿಸುತ
ಕಡು ಪರಿಮಳದ ಧೂಪ ಧೂಪವ್ರುವು
ತೊಡಗಿ ತತ್‌ಪ್ರಾಣೇಶ್ವರಂಗಿಂ
ತೊಡಲು ಕಪ್ಪಾದಪುದೊ ಎನುತಂ ಚಿತ್ತದೊಳು ನೆನೆದು ೧೩

ಸಂಗತಜ್ಞಾನಾಗ್ನಿಯೊಳಗೆ ದ
ಶಾಂಗಮುಂ ತಾನಿಡದೆ ನಿಶ್ಚಲ
ಸಾಂಗಧೂಪವನರ್ಪಿಸುತ್ತಂ ಭಾವರತಿಯಿಂದ
ಮಂಗಳಾರತಿಗಳ ಬೆಳಗು ಶಿವ
ಲಿಂಗಕೂಷ್ಣಂ ಮಾಳ್ಪುದೆಂದು
ತ್ತುಂಗಮಹಿಮಾಖಂಡಿತಾತ್ಮಜ್ಯೋತಿಯಂ ನೀಡಿ ೧೪

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc No. ....1018..

CC-0. Jangamwadi Math Collection. Digitized by eGangotri

ಕ್ಷಾರವಾಮ್ಲಂ ಮುಖ್ಯಿವಾ[೧]ದುಪ[೨]
ಹಾರನಿಚಯಂ ಕೂರವಹುದೊ ಪ್ರ
ಕಾರಿಗೆನುತೆಂದಿಂಗೆ ಬೀಸರವಾಗದೊದಗಿರ್ದ
ಸಾರ ವಿಮಲ ಪ್ರಾಣಪದದಲಿ
ಸೇರಿದೋಗರವಂ ಸಮರ್ಪಿಸಿ
ಪೂರವಿಸುವುಪಚಾರವುಪಚಾರಂ ಶಿವಂಗೆನುತ ೧೫

ಯೋ[೩]ಜಿಸುವ ನಿರುಪಮ [೪]ನಿರಂತರ[೫]
ಪೂಜನಾರತಿ ಮೂಡಿ ಕೂಡಿ ವಿ
ರಾಜಿಸಲು ತನ್ನೊಳಗೆ ತಾ ಮಂಜಿ[೬]ದಿದ್ದಪನೊ ಬಳಿಕ
ತೇಜವೆಸೆಯಲು ಪ್ರ[೭]ಮುದಿ[೮]ತೇಂದ್ರಿಯ
ರಾಜಿವರ್ತನವೆಸೆಯೆ ಮಂಗಳ
ಬೀಜಮೆನಲಸದೃಶದೊಳೊಪ್ಪುತ ಪೊಸ ಪರಿಯೊಳಿರಲು ೧೬

ಎಲ್ಲೆಡೆಯೊಳುಂ ಪ್ರಾಣಲಿಂಗಮ
ನಲ್ಲದಱಿಯದ ನಿಯಮವೇ ತ
ನ್ನಲ್ಲಿ ನಿಯಮಗುಣಪ್ರಚಯವಾಗಿಂತೆಸೆವುತಿರಲು
ಸಲ್ಲಲಿತ [೯]ನಿರ್ಜ[೯] ಯೋಗನಿದ್ರಾ
ಪುಲ್ಲವಸದಿ[೧೦]ಚ್ಛಾಸನಮ ಮಿಗೆ
ಪಲ್ಲವಿಸಿ ಮಿಱುಗುವ ಸುಪ್ರಾಸನವನಿಸಿ ಪಸರಿಸಲು ೧೭

ಪ್ರೇಮವಲ[೧೧]ರಲು[೧೨] ಬಸವರಸನಭಿ
ರಾಮ ಮಂದ[೧೩]ಶ್ವಾಸತತಿಯೆನೆ
ನೇಮಿಸಲ್ಕೆ ನಿಗರ್ಭಪೂರಿತವಾಗಿರಲ್ ಪ್ರಾಣಾ
ಯಾಮವಂತರ್ಮುಖಿಸವಿಷಯ
ಸ್ತೋಮ ಚಾರಿತ್ರಪ್ರವರ್ತನ
ಸೀಮೆಯಲಿ ಪೊಸತೆನಿಸೆ ಪ್ರತ್ಯಾಹಾರವೊದಗಿರಲು ೧೮

೧–೨ ದಾ (ಪ, ಬ). ೩ ಓ (ಬ). ೪–೫ ನಿಜಾಂತಕ (ಮ); ನಿಜಾಂತರ (ತ, ನ, ಬ). ೬–೭ ಶಮಿ (ಸ). ೮–೯ ಶಿವ (ಪ, ಬ). ೧೦ ದು (ಕ, ಚ, ತ, ನ, ಪ, ಬ). ೧೧–೧೨ ರುತ (ಬ). ೧೩ ದೋ (ಸ).

CC-0. Jangamwadi Math Collection. Digitized by eGangotri

ಅಕ್ಷಯದ ಶಿವಜಂಗಮದ [1]ಪದ[2]
ಪ್ರೇ[3]ಕ್ಷಣವೆ ನಿರತಾನವರತ ಸ
ಮಕ್ಷ ಮೂರ್ತಿಧ್ಯಾನಮಾಗಲು ನಿಶ್ಚಲಿತ ಭಕ್ತಿ
ಪಕ್ಷವಲಿ ಶಿವಯೋಗನಿದ್ರಾ
ಪೇಕ್ಷಿತ ಸಮಾಧಿಯೆ ಶುಭೋದಯ
ಲಕ್ಷಣಾದ್ಭುತಸುಖವೆನಿಪ್ಪ ಸಮಾಧಿಯಾಗಿರಲು ೧೯

ಸ್ವಾನುಭವದಷ್ಟಾಂಗಯೋಗಾ
ನೂನ ಭಕ್ತಿಯೊಳಿಂತು ತನ್ನೊಳು
ತಾನೆ ಮಱಿಹಿಂದಿಪ್ಪ ವೇಳೆಯೊ ಮತ್ತೆಯುಂ ನೆನೆವ
ತಾನು ತನ್ನಯ ನೆನಹು ಚಿತ್ರದೊ
ಳೇನ ನೆನೆಯಲು ತೋಱುವರ್ಥವು
ತಾನವಲ್ಲಿಯೆ ಅಡಗಿಕೊಂಡಿ[4]ರಲೇನ[5] ಬಣ್ಣಿಸುವ ೨೦

ಅಲರ್ದು[6] ನೋಡುವ ತಾನು ತನ್ನವಿ
ರಳದ ನೋಟಂ ಕೂಡೆ ನಿಟ್ಟಿಸಿ
ತಿಳಿದು ನೋಡಿದಡಲ್ಲಿ ಕಾಣಿಪ ಸುಭಗನೊಳಗಡಗೆ
ಒಳುನುಡಿಗಳಂ ನುಡಿ[7]ವ ತಾ ತ
ನ್ನೊಳು ನುಡಿಯುತಂ[8] ಮುಡುಕಿ ನುಡಿವೆಡೆ
ಯಲಿ ಸಲಿಸಿ ದೀಪಿಸುವ ಶಿವಲಿಂಗದೊಳಡಂಗಿರಲು ೨೧

ನಟಿ[9]ಯೊಲಿವ ತಾಂ ತನ್ನೊಲುಮೆಗಳಿ
ಗ್[10]ಱಿಗಿದೊಲುವೆಡೆಯೊಳು ಸುಖಿರಸವ
ನಟಿದವರನೊಳಡಂಗಿರಲು [11]ಜ್ಞಾತೃವಿನವಿಜ್ಞಾನ[11]
ಹೊಟಿಗೆಯಸಮಜ್ಞೀಯವ[12]ಲ್ಲಿಯೆ
ಕುಟಿಹಡಂಗಿರಲಟಿ[13]ವ ತಾ ತ
ನ್ನಟಿವು ಮಟಿ[14]ದಟಿದೊರೆದು ಶಿವಮಗ್ನತೆಯೊಳಿರ್ದಹನೊ ೨೨

೧–೨ಸ್ಥ (ತ, ಪ, ಸ). ೩ವಿ (ಸ). ೪–೫ದೆ ಏನ (ಕ, ಚ, ತ, ಥ, ಧ). ೬ರಿ (ಬ). ೭–೮ವುತಾತನ್ನಲಿದು ನುಡಿಯುಂ (ಸ); ವತಾ ತನ್ನೊಲವ ನುಡಿಯುಂ (ತ); ವುತಾ ತನ್ನುಲಿವ ನುಡಿಯಂ (ಪ). ೯ ನೆ (ಥ, ಧ, ಬ). ೧೦–೧೧ ಜ್ಞಾತೃಕವಿನಜ್ಞಾನಾ (ನ).

CC-0. Jangamwadi Math Collection. Digitized by eGangotri

ಮುಂದೆ ನೋಡಲು ದೃಷ್ಟಿ [೧]ನಡಲುಱಿ[೨]
ನೊಂದಪುದೊ ತನು ತನ್ನ ಲಿಂಗ
ಕ್ಕೆಂದು ಭಾಪದ ನೋಟದಲ್ಲಿಯೆ ನೋಡುತಿಹ ಪರಿಯೊ
ಸಂಧಿಸುವ ಕೈಯಿಂದೆ ಮುಟ್ಟಲು
ಕಂದಿದಪುದೋ ಎನುತ ಪರಮಾ
ನಂದವೊಂದಿ ಮನಸ್ಸರುಶನವನಾಚರಿ[೩]ಪ ತೆಱಿನೊ[೪] ೫೩

ಪುಳಕತತಿ ತಾಗುವುದೊ ಬಾಲೋ
ತ್ಪಳಸಖಾಂಕಕಪರ್ದಿಗೆನುತ ವಿ
ಚಲಿತಮಪ್ಪ ನಿಜಾತ್ಮದಿಂದಾಲಿಂಗಿಸುವ ಪರಿಯೊ
ಒಲಿದು ಕೀರ್ತಿಸಲೊತ್ತುವವೊ ತಾಂ
ಪಲವು ಮಾತ್ಯಕೆಗಳಿಗೆನುತ ಕೋ
ಮಳ ಸಿತಾಂಗನನಾವಗಂ ನೆನೆವಂದವೋ ಮತ್ತೆ ೫೪

ಭ್ರಮರಕೀಟನ್ಯಾಯಭಾವದಿ
ರಮಣಿಯೊಬ್ಬಳು ತನ್ನಿನಿಯನಂ
ಕ್ರಮದಿ ನೆನೆಯಲು ನೆನೆಯಲಾ ಪುರುಷತ್ವವಳವಟ್ಟು
ನಿಮಿರ್ದ[೫] ರತಿಕೇಳೀವಿನೋದದಿ
ನಮರ್ದುದಕ್ಕೆನ್ನಂತರಾಯ
ತ್ವಮವಹುದೊ ತನಗೆನುತ ತತ್‌ಕಮಲಾಸ್ಯೆ ತನ್ನೊಳಗೆ ೫೫

ನಿಯನಂ ತಾ ನೆನೆಯಲಂಜುತ
ನೆನೆವುತಂಜುತ[೬]ಲಿನಿಯಳಿದ್ದಳು[೭]
ನೆನೆಯಲುಂ ಮಱಿಯಲ್ ಸ್ವತಂತ್ರಿಕೆಯಿಲ್ಲದಬಳೆಯರ
ಮನದೊಲುಮೆಗಳನೆಣಿಸಲೇನುಂ
ಟಿನಿತಿನಿತು ಮೋಹಂಗಳೆಯ್ದಿಸ
ವನುತಭವನಂ ನೆನೆನೆನೆಯೆ ತದ್ರೂಪಮಾ[೮]ಗಿರಲು ೫೬

೧–೨ ನಾಟಲು (ಬ); ನಾಂಟಲು (ಮ); ನಟ್ಟಲು (ಥ, ಧ, ಪ, ಸ). ೩–೪ ಸುವಿರಪೆ (ಬ, ಕ, ಚ); ಸುವಹಗೊ (ಥ, ಧ, ಸ); ಸುವಹನೊ (ಪ); ೫ ರಿ (ಬ); ರ್ದು (ತ, ಸ). ೬–೭ ನೆನೆಯದಿದ್ದಳು (ಬ); ನೆನೆವುತಿರ್ದಳು (ಪ). ೮ ನಾ (ಅ).

CC-0. Jangamwadi Math Collection. Digitized by eGangotri

ಸ್ವಾಮಿಭೃತ್ಯಜ್ಞಾನಸುಖಿದಭಿ
ರಾಮವದು ತಪ್ಪುವುದೊ ತುದಿಯಲಿ
ನೇಮಿಸುವುದೆಂದೆನುತ ತನ್ನಂ ತಾನೆ ನೆನಪುಗಳ
ತಾ ಮಱೆದು ಶಿವಯೋಗನಿಷ್ಠಾ
ಸೀಮೆಯಲ್ಲಿ ಮುದೀಯ ಸದ್ಗುರು
ಸ್ವಾಮಿಯಿರುತಿರ್ದಂದಮೋ ಮತ್ತಂತುಮಲ್ಲದೆಯು ೨೭

ಪ್ರಿಯದ ತನ್ನಾತ್ಮೇಶನಂ ನಿ
ಶ್ಚಯಿಸಿ ಕರತಳವೇಳ್ದು ಪಂಕಜ
ನಯನೆಯೊಬ್ಬಳು ವಂನವನಟ್ಟಿದಡದು ಮನೋಹರನ
ನಯದಿ ನೆರೆಯಲು ತನ್ನುವಂ ಬೋ
ಳಿಯಿಸಿತಲ್ಲಾ ಮನವೆನುತ ನಿ
ರ್ಣಯ ಮನಃಶಬ್ದವು ನಪುಂಸಕವಹುದಲಾ ಎನುತ ೨೮

ಹೇಳುತಿಹ ಪಾಣಿನಿಯ ಸೂತ್ರವ
ನಾಳಿಗೊಳುತಂ ಕೋಪಿಸುತ್ತಂ
ಲೋಲಲೋಚನೆಯಿರಲನಿತಱಿಗೊಳು ಬಂದಿತಾ ಮನವು
ಆ ಲಲನೆಯರ ಪುರುಷರೊಲುಮೆಗ
ಳಾಳಿಯಿಂತಹವಿಂತವಿರಳಾ
ಲೋಲ ಸದ್ಗುರು ಲಿಂಗವೆರಡಱಿ ಕೂಟದನುವಿಂಗೆ ೨೯

ಇಂತು ಮನಸು ನಪುಂಸಕಮೆನ
ಲ್ಕಿಂತು ಬಂದಿತು ಪ್ರಸ್ತ್ರಪುಂಸಕ
ದಂತರಗುಣಂಗಳಿಗೆ ಹೋದಡೆ ಕಾಮಿನಿಯೆ ತಾನು
ಆಂತುಮಲ್ಲದೆ ಗಂಡರಿಗೆ ಬಲ
ವಂತನೆನಿಸಿದ ಗಂಡನೆನ್ನಯ
ಕಾಂತನಂ ನೆರೆಯಲ್ಕೆ ಗಂಡರು ಹೆಂಡಿರಹರೆನಲು ೩೦

೧ಕ (ಪ). ೨ಜಾ (ಅ, ಕ, ಚ, ತ, ಥ, ಫ, ಪ, ಮ). ೩–೪ಕಾಮಿಯೇ (ಅ).

CC-0. Jangamwadi Math Collection. Digitized by eGangotri

ಸರಸರತಿಯಲಿ ಮನಸು ಕೂಡುವು
ದರಿದೆ ನಿಜನಾಥನನೆನುತ್ತಂ
ಕುರಿತ ಮನಸಿಂಗತ್ತ ಮುನ್ನವೆ ತನ್ನ ವಲ್ಲಭನ
ಬೆರಸಿ ರಸಿಕಾಭಾವದಿಂದಂ
ನೆರೆದು ಮದ್ಗುರು ತನ್ನ ತಾ ಪಂಚಿ
ದಿರುತಮಿರ್ದನುವಿನ ಪರಿಯಲಾ ಅಂತುಮಲ್ಲದೆಯು ೩೧

ಎಱಿಗಿ ನೋಡುವುದೊಂದಱಿಲಿ ಎರ
ಡಱಿಲಿ ಚಿಂತನೆ ನಿಡುಸುಯಲ್ ಮೂ
ಱಿಲಿ ತಾಪಂ ನಾಲ್ಕಱಿಲಿ ಬಡವಾದುದೈದಱಿಲಿ
ನೆಱಿಯಲುಣದಿಹುದಾಱಱಿಲಿ ಏ
ಳಱಿಲಿ ಮರುಳೆಂಟಱಿಲಿ ಪೋನಂ
ಬಱಿತುಸುರುವೊಂಬತ್ತಱಿಲಿ ಪೇಣ್ಪತ್ತಱಿಲಿ ಮರಣ ೩೨

ಇವು ದಶಾವಸ್ಥೆಗಳಿನಲು ಹೇ
ಳುವವು ವಿರಹಿಜನರ್ಗೆ ತಾನು
ಚ್ಛವದೊಳಿನಿಯನನೆಂದುವಗಲದೆ ಸಾಯದೇ ಸಾವ
ಕವಿವ ವಿಷಯಾವಸ್ಥೆ ಮೇಣುಳಿ
ದವರಿಗುಂಟೇ ಭಾವಿಸುವಡೀ
ವಿವಿಧ ಜೀವನ್ಮುಕ್ತಿಯಿವು ವಿಷಯಕ್ಕೆ ಕಾರಣವು ೩೩

ಸರಸ ಭಕ್ತಿಸ್ಥಿತಿಯ ಪರವಶಾ
ವರಣದಿಂ ನಿರುಪಾಧಿಕದ ವಿ
ಸ್ತರದವಸ್ಥೆಯೊಳುರು ಸುಖಾಸ್ತಿಮಿತೇಂದ್ರಿಯದೊಳಿಪಗೆ
ಭರದ ನೋಟಂ ಚಿಂತೆ ಸುಯ್ಲುಂ
ಜ್ವರವಲಿತ ತನು ನಿರಶನತೆಯುಂ
ಮರುಳುಸುರದಾದುದು ಉಸುರ ಮಾಂಬುದು ಮರಣವೆಂಬ ೩೪

೩೧ಯ (ಅ). ೨–೩ ಯ್ಯೆಕ (ಅ, ತ). ೪ರ (ಅ). ೫–೬ ಸುರದುದು (ಅ, ಕ, ಕ, ತ, ಮ).

CC-0. Jangamwadi Math Collection. Digitized by eGangotri

ಸನ್ನುತ ದಶಾವಸ್ಥೆಗಳನುಱಿ
ಮುನ್ನ ಮಱಿದುಳಿದವಿರತವ ವಿ
ಚ್ಛಿನ್ನವಿಚ್ಛಿನ್ನೇಶ ಯೋಗಾವಸ್ಥೆಯಲಿ ಹೊಂದಿ
ಚೆನ್ನೆಸೆದು ತಾನೆಂಬ ಹೊಲಬಿಗ
ನೆನ್ನದಾವ ಕಳಂಕವಿಲ್ಲದೆ
ತನ್ನೊಳದು ತಾನಾಗಿ ತಾನಿಪ್ಪಂದಮೋ ಮತ್ತೆ ೩೫

ಪ್ರಾಕಟಂ ಮಿಗೆ ಭಕ್ತ ನಿಜದೇ
ಹೈಕ ದೇ[೧]ಹಂಗಿಮಳತರ ರುಚಿ
ರೈಕದೇಹಮೆ ದೇಹವಾಗೆ ಸಮರ್ಪಿಸುತ್ತೊಲಿದು
ಶ್ರೀಕರಾಂಕುರಭಕ್ತಿಸ್ವಾ[೨]ನುಭ
ವೈಕ ಸತ್‌ಪ್ರಾಣಂಗೆ ನಿಶ್ಚಲಿ
ತೈಕರತಿಯೊಳು ಪ್ರಾಣವೇ ತತ್‌ಪ್ರಾಣವಾಗಿಂತು ೩೬

ಶರಣಕರಣವೆ ಕ[೪]ರಣ ಶಿವಗಂ
ಕರಣವೇ ಚರಣಂಗಳಾಗು
ತ್ತಿರೆ ನಿಯೋಜಿಸಿ [೫]ಭಕ್ತಗಣ[೬] ವಿಷಯೇಂದ್ರಿಯೇಂದ್ರಿಯಗೆ
ಕರಮೆ[೭]ಸೆವ ವಿಷಯೇಂ[೮]ದ್ರಿಯಂಗಳ
ನಿರಲಳವಡಿಸಿ [೯]ತೊಲಗದೊಂ[೧೦]ದಗ
ಲಿರಿಸಿ ತಾ ಬೆಳೆದಿ[೧೧]ಲ್ಲದಿಪ್ಪಾ ಬೆಳಸಿನಂದದಲಿ ೩೭

ಪರಗುಣಂಗಳನೊಂದನೊಂದಂ
ಪರಿವಿಡಿಯೊಳೀಶ್ವರನೊಳರ್ಪಿಸಿ
ಪರಿಕಿಪಡೆ ತಾನೆಂಬ ಭಾವನೆಯಿಲ್ಲದೇನುವನು
ಹಿರಿದು ಹೊರೆಗಳನೊಂದನೊಂದಂ
ತೆರಳಿ ಸುಲಿಯಲು ಬಾಳೆಯದು ತಾ
ನೊರೆಯಲಿಲ್ಲದೆ ಮುನ್ನಿನಾಕೃತಿಯಿಲ್ಲದಿ[೧೨]ಪ್ಪವೊಲು[೧೩] ೩೮

೧–೨ ಹಕ್ಕ (ಬ). ೩ ಸಾ (ಅ, ಕ, ಚ, ತ, ಥ, ಪ, ಬ). ೪ಕ (ಪ). ೫–೬ ಭಕ್ತಿಗುಣ (ಅ, ಕ, ತ, ಥ, ಧ, ಪ). ೭–೮ ಸಗುವ್ಯೆದಿಂ (ತ). ೯–೧೦ ಬೆಳೆದುವೊಂ (ಥ, ಧ, ಪ). ೧೧ (ಧ). ೧೨–೧೩ ಪ್ಪಂತೆ (ಪ).

CC-0. Jangamwadi Math Collection. Digitized by eGangotri

ಕ್ರಿಯೆಗಳೊಡಗೂಡಲ್ಕೆ ವಪುರಿಂ
ದ್ರಿಯ ಮನಃಪ್ರಾಣಂಗಳೆಂಬಾ
ಶ್ರಯದ ಹೊರೆಗಳನೊಡನೆ ಸುಲಿಸುಲಿದೀಶನಂ [೧]ಕೂಡಿ[೨]
ಪ್ರಯುತ ಸುಖ ಶಿವಯೋಗಮಯ ನಿ
ದ್ರೆಯೊಳೆಚ್ಚಿಗಿ ತಾನಿರ್ದೆಸೆವ ಮಾ
ಳ್ಕೆಯೊ ಬಳಿಕ ಮನಮಂ ಶಿವಂಗೆ ಸಮರ್ಪಣಂಗೆಯ್ದು ೩೯

ಅತುಳಿತಾಂಗ ಮನಃಪ್ರಸಾದಾ
ರ್ಪಿತವನಾಚರಿಸುತ್ತ ನಿಯತಾ
ಯತ ನಿಜ ಪ್ರಾಣಮನೊಸೆದು [೩]ತಾ ಜಂ[೪]ಗಮಕೆ ಕೊಟ್ಟು
ಸತತ ಜೀವ ಮನೋ ವಪುಃ ಪ
ದ್ಧತಿಗಳಂ ಮಱಿ[೫]ದಮಳಲಿಂಗದೊ
ಳತಿ ವಿಲೀನಿತನಾಗಿ ತಾನಿರ್ದಹನೆ ಬಸವೇಶ ೪೦

ಎಂದು ತ[೬]ದ್ಗುರುಲಿಂಗವಂ ಪಲ
ವಂದದಿಂದಾ ಚೆನ್ನಬಸವನು
ವಂದಿಸುತ್ತಂ ಕೀರ್ತಿಸುತ್ತಿರಲಾ ಸಮಯದಲ್ಲಿ
ಮುಂದೆ ಸಂದರುಶನನಿಮಿತ್ತದೊ
ಳಂದು ಪೊಸ ಜಂಗಮವು ತಾವೆಯಿ
ತಂದು ಘನ ಶಿವಯೋಗನಿದ್ರಾಪರವಶದೊಳಿರ್ದ ೪೧

ಬಸವನಿರವಂ ದ್ವಾರಪಾಲರ
ದೆಸೆಯೊಳಱಿದು ಮರಳ್ದು ತಾಂ ಗಮ
ನಿಸಲೊಡನೆ ಬಸವಣ್ಣ ಜಂಗಮ ಜೀವ ತಾನಾಗಿ
ಬಸವರಾಜನ ಜೀವಮುಂ ಭರ
ವಸದೊಳಾ ಲಿಂಗೈಕ್ಯನೊಡನಂ
ತೊಸೆದು ಪೋಗಲು ಹೆದಱುತಂ ಪರಿಚರರು ಸಂದಣಿಸಿ[೭] ೪೨

೧–೨ ಕಂಡು (ಅ). ೩–೪ ತಜ್ಜಂ (ಥ, ಧ, ಪ). ೫ ಸ (ಅ). ೬ ಸೆ (ಸ).

CC-0. Jangamwadi Math Collection. Digitized by eGangotri

ಈ ಹದನನಱಿದಾ ಕಟಕದೊಳು
ಬೇಹ ಜಂಗಮಲಿಂಗವಂತಸ
ಮೂಹವೆಯಿತಂದೆಯ್ದೆ ಸಂಧ್ಯಾವಸರ ಸಮಯದಲಿ
ಮೋಹಿ ಶಿವಲಿಂಗಾರ್ಚನಾತಿ
ಸ್ನೇಹದೊಳು ಕುಳ್ಳಿರ್ದು ಲಿಂಗ
ಗ್ರಾಹಕಂ ಬಸವಣ್ಣನಿಪ ಸದ್ಭಾವಮಂ ನೋಡಿ ೪೩

ಹುತವಹಾಂಬಕಭಕ್ತರತ್ನ
ದ್ಭುತಮನೊಂದಿ ಇದಾವುದೋ ಪ್ರ
ಸ್ತುತವಿದಾವ ನಿಮಿತ್ತವೋ ೧ನೆಪವಾ೧ವುದೋ ಇದಱ
ಸ್ಥಿತಿಯನಱಿಯಲುವೇಳ್ಕು ಕರೆಯಿರೆ
ಹಿತವರಂ ಕರಣಿಕನಿಯೋಗ
ಪ್ರತತಿಯಂ ಪರಿಚಾರಕರನಾ ದ್ವಾರಪಾಲಕರ ೪೪

ಇಂದಿನೀಶಾರ್ಚನೆಯುಚಿತವೇ
ನೆಂದು ತಿಳಿಯಿರೆ ಗೀತದವಸರ
ವಿಂದಱಿಯಿರೇ ವಚನಭಂಡಾರದ ಕವಳಿಗೆಗಳ
ತಂದು ನೋಡಿರೆ ಭಾಷೆಗಳನೇ
ನೆಂದು ನುಡಿದನು ತ೩ದ್ವ್ರತಂಗಳ
ನಿಂದು ಹಿಡಿದ ಕ್ರಮವದಾವುದಿದಂ ವಿಚಾರಿಸಿರೆ ೪೫

ಆರು ಬಂದರು ಮುನ್ನಲಿ೪ತ್ತಲ
ದಾರು ಹೋದವರಿದ್ದವರು ತಾ
ವಾರು ಹೇಳಿರೆ ಬಲ್ಲಿರಾದಡೆ ಕಾರ್ಯವಿದನೆನಲು
ಸಾರ ಮತಿಯಾ ಚಿನ್ನಬಸವಕು
ಮಾರನೆಯ್ತಂದವರ್ಗೆ ವಂದಿಸಿ
ಸೇರಿ ಮುಕುಳಿತಹಸ್ತನಾಗಿಂತೆಂದನೊಲವಿಂದ ೪೬

೧–೧ನೆವವಾ (ತ, ಬ); ನೆನಪಾ (ಕ, ಚ, ಥ, ಭ). ೩ ಸ (ಅ). ೪ ವಿ (ಅ, ತ).

CC-0. Jangamwadi Math Collection. Digitized by eGangotri

ಅವಸರದ ವೇಳೆಯೊಳತಿ ಸುಖೋ
ತ್ಸವವಲರಿ ಶಿವಯೋಗನಿದ್ರೆಯೊ
ಳವಿರತಂ ಸಿಕ್ಕಿರಲು ಮದ್ಗುರು ಜಂಗಮವು ಬಂದು
ಅವಿರಳಧ್ಯಾನೈಕ ಭಾವಂ
ಕವಿದಿರಲ್ಕಾ ಬಾಗಿಲವರಿಂ
ದವೆ ಶಿವೈಕ್ಯನು ಕೇಳುತಾಗಳೆ ಇತ್ತ ಬರುತಿರ್ದ ೪೭

ತಿರುಗಿ ಜಂಗಮವತ್ತ ಹೋದನು
ಮರಳಿ ಕಾಣೆವು ನಾವವರನೀ
ಪರಿಯ ನೆವವಂತಾಗಲಾಪ್ತುದಲಾ ಅದೆಂತೆನಲು
ಅರಿದರಿದು ಜಗಕೆನಲು ೧ಈ ನಿ೨
ಬ್ಪರದ ಭಾಷೆಯಗೀತವೊಂದಂ
ಗುರುವರೇಣ್ಯಂ ಬಿಸಸಿದನು ತಾನೀಗಳಿಕೆ೩ ಮುನ್ನ ೪೮

ಒಡೆವುದೆರ್ದೆ ತದ್ಭಾಷೆಯಂ ನೆನೆ
ದಡೆ ರಸನೆ ನೀಳಕ್ಕೆ ಸೀಳ್ವುದು
ನುಡಿದಡಿಂತಹ ಭಾಷೆಯಂ ತದ್ಭಾಷೆಗಳ ಮೇಲೆ
ನಡೆಯಲನ್ಯರಿಗೀ ಪರಿಯೊಳಳ
ವಡುವುದೇ ಈ ಮಹಿಮೆಗಳನವ
ಗಡದ ಭಾಷೆಯನಱಿಯೆ ಬಿನ್ನೈಸುವನು ಬಲ್ಲಂತೆ ೪೯

ಕ್ಷೋಣಿಯೊಳು ಭಕ್ತಾಳಿಗೆಲ್ಲಂ
ಪ್ರಾಣಲಿಂಗಂ ಸದ್ಗುರುದಯಾ
ತ್ರಾಣಲಿಂಗಂ ಪ್ರಾಣಲಿಂಗಕೆ ತದ್ಗುರುಸ್ವಾಮಿ
ಪ್ರಾಣವಾ ಗುರು ತಾನೆನಿಪ್ಪ ಧು
ರೀಣ ಜಂಗಮಲಿಂಗವೇ ಮ೪ತ್
ಪ್ರಾಣಲಿಂಗಮಿದಕ್ಕೆ ಸಂಗಮದೇವನೇ ಸಾಕ್ಷಿ ೫೦

೧–೨ತನ್ನಿ (ಪ, ಬ). ೨ವು (ಅ); ಗೆ (ತ). ೩ಕ್ಷ (ಸ). ೪ತ (ಡಾ, ಪ, ಬ).

CC-0. Jangamwadi Math Collection. Digitized by eGangotri

ಕಡೆಗೆ ನೆನೆಯಲುಬಹುದೆ ನೆನೆದಡೆ
ನುಡಿಯಬಹುದೇ ನುಡಿದಡಂ ಮೇಣ್
ನಡೆಯಬಹುದೇ ಧರೆಯೊಳೆನ್ನಂತಪ್ಪ ಜಡವಂತಿಗೆ
ಬಿಡದೆ [೧]ನೆನೆಯಲು[೨] ಬಲ್ಲನಹಗೇ
ನುಡಿಯಬಲ್ಲನು ನುಡಿದ ಪರಿಯಲಿ
ನಡೆಯಬಲ್ಲನು ಜಂಗಮಂ ಪ್ರಾಣ್ಯಕಭಾಷೆಯಲಿ ೫೧

ಸತ್ಯವಿದು ಮ[೩]ದ್ವ್ರತವೆನುತ್ತಂ
ನಿತ್ಯ ಜಂಗಮ ಭಕ್ತಿರಚ[೪]ನೌ
ಚಿತ್ಯ[೫]ದೊಳು ಭಾಷೆಯ ವಚನಮಂ ಬಿಸಸಿದನು ನಿಮ್ಮ
ಭೃತ್ಯನಿಂತಿದ್ದಿರವಿನತಿಕೃತ
ಕೃತ್ಯ ಭಾವನೆಯುಂಟೆ ವಾಚಾ
ಮತ್ಯತೀತದ ಭಾಷೆಯಂ ಕೇಳುವೆವೆ ಲೋಕದೊಳು ೫೨

ಭಾಷೆ[೬]ಗಳನುಱಿ[೭] ಮೆಱಿ[೮]ಸಿ ನಿಮ್ಮಯ
ದಾಸಿಯಾಗಿಹನಾಗಿ ಬರಿದಿನ
ಭಾಷೆಯಂ ನುಡಿಯಲ್ಕೆ ಭಾಷೆಯೊಳಿಂದು[೯] ನಡೆಯಲ್ಕೆ
ಭಾಷೆಗಳ ಬಲ್ಲಹನು ಭಕ್ತನಿ
ವಾಸಿ ಬಸವೇಶ್ವರನ ಭಾರಂ
ಭಾಷೆಗಳನೆಲ್ಲಂ ಪತಿಕರಿಸಿ ನಿಮ್ಮ ಸಿವುಡಿಯಲಿ ೫೩

ಸೇರಿಸಲು ಕೈಕೊಂಡು ಮೆಱಿ[೮]ಸಲು
ಪಾರವೆಯ್ದಿಸಿ ನಿಮ್ಮ ಭಾರ[೯]ವು
ಭಾರವುಂಟೇ ಬಸವವಿಭುಗೀ ಹದನನವಧರಿಸಿ
ಹಾರಿ ಜಂಗಮವಿತ್ತ ಬರುತಂ
ಬಾರದತ್ತಲೆ ಮರಳಿಹೋದನು[೯]
ಚಾರುಲಿಂಗವನಱಿಸಿ ತರವೇಳ್ಕೀ ಕಟಕದೊಳಗೆ ೫೪

೧–೨ನುಡಿಯಲು (ಅ). ೩ತ (ಕ, ಚ). ೪–೫ ನೋಚಿತ್ತ (ಮ, ಅ); ನವು ಚಿತ್ತ (ಕ, ಜ, ತ, ಥ, ಧ, ಪ, ಬ). ೬ಸೆ (ಬ). ೭ತು (ಅ, ತ, ಮ). ೮ಗ (ಅ, ತ). ೯ರು (ಅ, ತ, ನು).

CC-0. Jangamwadi Math Collection. Digitized by eGangotri

ಮೇಟಿ ಶೀಲವ್ರತಶಿವೈಕ್ಯರ
ಪಾಟಿಯೆಸೆವುಪ್ಪರ ಗುಡಿಗಳಂ
ಮಾಟಕೂಟದ ಮಹಮನೆಗಳೆನಿಸಿದವು ಕೋಟಾನು
ಕೋಟಿ ಭಕ್ತರ ಮನೆಗಳಲಿ ಪರಿ
ಪಾಟಿಯಿಂದಲಿಸುತ್ತ ಗಂಗಾ
ಜೂಟನಗ್ಗದ ಜಂಗಮಾಂಘ್ರಿಗೆ ನಮಿಸಿ ನಿಮಿಷದಲಿ ೫೫

ಹೋಗಿ ನೀವೊಡಗೊಂಡುಬಹುದೆನ
ಲಾಗಳಂತೆ ಪಸಾದಮೆನುತನು
ರಾಗದಿಂ ಪಡಿಹಾರರಾ [೧]ಗಣತಿಂಥಿಣಿಗೆ ನಮಿಸಿ
ಹೋಗಿ ತಾವಲ್ಲಲ್ಲಿಯ[೨]ಱಿಸುತ
ಹೋಗಿ ಕಂಡೊಡಗೊಂಡು ಬರುತಿರ
ಲಾಗಿ[೩] ಜಂಗಮದೊಡನೆ ತನ್ನ ಪ್ರಾಣವೊತ್ತರಿಸಿ ೫೬

ಬಸವರಾಜನು ಜಂಗಮ ಪ್ರಾ
ಣಸಹನಾಗಿ ವಿವರ್ಧಿಸುತ್ತಾ
ಬಸವನಸು ಉರವಣಿಸಿ ಬಂದಿತು ಕಿನ್ನರಯ್ಯಗಳ
ಅಸುವೊದಗಿ ಮೆಯ್ದುಂಬಿ ಬರೆ ತ
ನ್ನಸುವೊಡನೆ ಬಂದಂ[೪]ದವೆ[೫]ಂತೆನೆ
ಬಸವನಾ ಬೊಮ್ಮಯ್ಯನೊಳಗತಿ [೬]ಪ್ರಾಣ[೭]ವಾಗಿರಲು ೫೭

ಅಂತು ಸಂಧಿ ೩೪ಕ್ಕಂ ಪದನು ೧೮೭೩ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧ನಾ (ಸ). ೨ಗ (ಅ, ಡ, ತ). ೩ಗ (ಪ). ೩–೪ ತದೇ (ತ, ಪ, ಬ). ೫–೬ ಹರಣ (ಬ).

CC-0. Jangamwadi Math Collection. Digitized by eGangotri

ಸಂಧಿ : ೩೫

*

ಸೂಚನೆ : ಮುಂಚೆ ಕಿನ್ನರ ಶರಣನಸುವಂ
ಹಿಂಚೆ ಬಸವರಸನ ಹರಣಮಂ
ಪಂಚಮುಖಿನಲಿ ಪಡೆದು ಮೆಜಿದನು ಮಾಚಿದೇವಯ್ಯ

ಇವನಜಿಯಬೇಕೆಂದು ಬಸವನ
ಹೃದಯದಗ್ಗದ ಗುಣ್ಪನೆನುತಂ
ಮದನರಿಪು ತನ್ನೊಳಗೆ ಕಿನ್ನರನಸುವನಡಗಿಸಲು
ಹೆದಱಿ ದಂಡಾಧೀಶ್ವರಂ ಮನ
ಗದಡಿ ಬೊಮ್ಮಯ್ಯಗಳನೀಕ್ಷಿಸಿ
ಹದುಳಿಸದೆ ನಿಬ್ಬರದ ಶೋಕಾಕ್ರಾಂತನಾಗುತ್ತ ೧

ಕಿನ್ನರೇಶ್ವರ ಬೊಮ್ಮಿದೇವಾ
ಎನ್ನ ಜೀವಾ ಎನ್ನ ಭಾವಾ
ಎನ್ನ ಲಿಂಗವೆ ಎನ್ನ ಗುರುವೇ ಎನ್ನ ಸುರತರುವೇ
ಎನ್ನ ಪರುಷದ ಕಣಿಯೆ ಗುಣಿಯೇ
ಎನ್ನ ಚಿಂತಾಮಣಿಯೆ ಮೇರುವೆ
ಎನ್ನ ಸಜ್ಜನಮಿತ್ರನೇ ನೀನಿಂದು ಬಯಲಾದೈ ೨

ರಾಗ : ಮಲಹರಿ (ಕ, ಚ, ಡಾ, ಪ); ಆಪರಿ (ಮ); ಶಂಕರಾಭರಣ (ತ).
೧–೨ನೊಳ್ (ತ, ನ).

CC-0. Jangamwadi Math Collection. Digitized by eGangotri

ಎನ್ನ ಕರುಣಾಸಿಂಧುವೇ ನೀ
ಎನ್ನತಿಪ್ರಿಯ ಬಂಧುವೇ ನೀ
ಎನ್ನ ಸತ್ಕುಲದೈವವೇ ಮನೆ[೧]ದೈವವೇ ಆಕಟ
ಎನ್ನ ದಾತನೆ ಎನ್ನ ತಾತನೆ
ಎನ್ನ ಭಕ್ತಿತ್ರಯನಿಧಾನವೆ[೨]
ಎನ್ನ ಚಿತ್ಪ್ರಸುಮಾನವೇ ಇಂದಡಗಿದ್ಯೆ ನೀನು ೩

ಸ್ಥಿರ ಸುಧೀರಾ ಕಿನ್ನರಯ್ಯಾ
ವಿರಸದೂರಾ ಕಿನ್ನರಯ್ಯಾ
ಸರಸಸಾರಾ ಕಿನ್ನರಯ್ಯ ಮದೀಯ ಹೃತ್‌ಶಯ್ಯ
ದುರಿತನಾಶಾ ಕಿನ್ನರೇಶಾ
ವರಗಿ[೩]ಣೇಶಾ ಕಿನ್ನರೇಶಾ
ವಿರಹಿತಾಶಾ ಕಿನ್ನರೇಶಾ ಮುನಿದೆಯೆನ್ನೊಡನೆ ೪

ಎನ್ನ [೪]ಚಿತ್ತೋ[೫]ಲ್ಲಾಸವಾಸಾ
ಎನ್ನ ಭಕ್ತಿವಿಲಾಸಭಾಷಾ
ಎನ್ನ ವಿಮಳಾಚಾರಪೂರಾ ಎನ್ನ ವಿಸ್ತಾರಾ
ಎನ್ನ ವಚನಾಮೃತರಸಜ್ಞಾ
ಎನ್ನ ಸಕಳಕಳಾವಿದಜ್ಞಾ
ಎನ್ನ ಮತಿಯೇ ಎನ್ನ ಗತಿಯೇ ನುಡಿಯಲೇಕೊಲ್ಲೆ ೫

ಹಾ ಮಹಾಮಹಿಮಾಭಿರಾಮಾ
ಹಾ ಮಹೇಶ್ವರ ಭಕ್ತಿಧಾಮಾ
ಹಾ ಮದೀಯಾನನಲಲಾಮಾ ಹಾ ಗುಣಸ್ತೋಮ
ಹಾ ಮದನಹರಣಾವತಾರಾ
ಹಾ ಮನುಜ ಲೋಕೈಕವೀರಾ
ಹಾ ಮುದಿತ ಸೂನೃತವಿಚಾರಾ ಮಾಯವಾದೆಯಲಾ ೬

೧ನ (ಪ). ೨ನೆ (ಡಾ). ೩ಗು (ಡಾ. ನ). ೪–೫ಚಿತ್‌ಳು (ಸ).

CC-0. Jangamwadi Math Collection. Digitized by eGangotri

ಬೊಮ್ಮಿ ದೇವ ಮಹಾನುಭಾವಾ
ಬೊಮ್ಮಿದೇವಾ ಎನ್ನ ದೇವಾ
ಬೊಮ್ಮಿದೇವಾ ಸಂಸೃತೀಂಧನದಾವ ಮಾತಾಡು
ಬೊಮ್ಮಿದೇವ ಭವಾಬ್ಧಿನಾವಾ
ಬೊಮ್ಮಿದೇವಾ ನಮಿತಶೈವಾ
ಬೊಮ್ಮಿದೇವಾ ಪ್ರಾಣಸಖನಾದೆನ್ನೊಡನೆ ಮುನಿಸೇ ೭

ಎಂದು ಬಸವಯ್ಯಂ ಪ್ರಳಾಪಿಸು
ತೊಂದನೊಂದಂ ಕಿನ್ನರನ ಗುಣ
ವೃಂದವಂ ನೆನೆನೆನೆದು ಲೋಚನವಾರಿಯಲಿ ನನೆದು
ನೊಂದು ಮನದಲಿ ಶೋಕಪಾವಕ
ನಿಂದೆ ತನು ಬೆದಬೆದನೆ ಬೇವುತ
ಮಂದದುಃಖಿದೊಳಳಲುತೀ ಪರಿಯಲಿ ಬಸವನಿರಲು ೮

ಆ ಸಮಯದಲಿ ಮನದೊಳಳಿದು
ಲ್ಲಾಸದಿಂ ಪಡಿಹಾರಿ ಬಾಚಯ
ನಾ ಸದಾಶಿವನಸಮ ಗಜಪಹ ಮಾಚಿದೇವಗಳಾ
ವಾಸಕಾಗಳೆ ಹೋಗಿ ಆ ಗಣ
ದಾಸಿಯಾ ಕಿನ್ನರನ ವಾರ್ತೆಯ
ನಾ ಸಕಲ ಭಕ್ತರ ನಿರೂಪದಿ ಬಿನ್ನವಿಸೆ ಕೇಳ್ದು ೯

ಒಡೆಯರಿಲ್ಲಿಗೆ ಬಂದರೇ ಅಪಿ
ರೊಡನೆ ಬಸವಣನೇನವಾಡಿಹ
ನಡೆಸಿದಾ ಪ್ರಸ್ತುತವದೇನುಂಟಿಲಿಹು ನೀನೆನಲು
ಹೊಡವಡುತ ಪಡಿಹಾರಿ ಚಿತ್ತೈ
ಸೊಡೆಯ ಮಾದರಸಯ್ಯನೊಳಗಾ
ದೊಡೆಯರಿದ್ದಹರೆಲ್ಲರುಂ ಪೇರೋಲಗಂಗೊಟ್ಟು ೧೦

೧–೨ ರೆಲ್ಲರು (ಅ, ಕ, ಚ, ಡ, ಮ). ೧–೩ ರೆಲ್ಲಿಗೆ ಬಂದರಾರವ (ಸ).

CC-0. Jangamwadi Math Collection. Digitized by eGangotri

ಬಸವರಾಜನು ಕಿನ್ನರಯ್ಯನ
ನೊಸಗೆ ಮಿಗೆ ತರ್ಕೈಸಿಕೊಂಡು
ಬ್ಬಸದ ಶೋಕಾಕ್ರಾಂತನಾಗಿದ್ದಹನು ತಾನೆನಲು
ಹಸಿತಮುಖಿನಾಗುತ್ತಯೇನೇ
ನಸಮಭಕ್ತರು ಬಂದರಲ್ಲಿಗೆ
ಬಸವನೇ ಕಿನ್ನರನನಪ್ಪಿಯೆ ಅಳುತಮಿರ್ದಹನೊ ೧೦

ಜಂಗಮಪ್ರಾಣಪ್ರಲೀನಾ
ಜಂಗಮಪ್ರಾಣಪ್ರದಾನಾ
ಜಂಗಮಪ್ರಾಣಪ್ರಯಾಣಾ ಭಾಪುರೇ ಭಾಪು
ಜಂಗಮಪ್ರಾ೧ಣಸುಖಿ೨ಸಂಗಾ
ಜಂಗಮಪ್ರಾಣಾಂತರಂಗಾ
ಜಂಗಮಪ್ರಾಣೈಕ ಚಾಗುರೆ ಚಾಗು ೩ಮರುಳೆ ಭಾಪು ೧೧

ಹಿಡಿದ ಭಾಷೆಗಳಱಿ೨ಯದಸುವಂ
ಹಿಡಿದೆ ಹೊಂಗಿದ್ದಹನೊ ಮತಿಯವ
ಗಡಿಸಿ ತಾನೊಂದೊಂದು ಸೂಳ್ ಬಸವಂಗೆ ಭಕ್ತಿಮದ
ಅಡರಿ ತಲೆಗೇಱುವುದದೇಱಲು
ನುಡಿವನತಿ ದುರ್ಘಟದ ಭಾಷೆಯ
ನೊಡನೆ ತದ್ಭಾಷೆಯ ಕೊಱತೆ ನೆಱಿ೨ಯಿಸುವನೀಗಳ್ಕೆ ೧೨

ಜಂಗಮವೆ ತತ್‌ಪ್ರಾಣವೆಂಬಾ
ಸಾಂಗಭಾಷೆಯನಿಂದು ಮಱಿ೨ದನೆ
ಅಂಗಲಾಚುತ್ತಳಲುವುದು ನಿಶ್ಚೇಷ್ಟನಾಗಿಹುದು
ಹಿಂಗದೊಱಿಲುತ್ತಳುವುದಶ್ರುಜ
ಲಂಗಳಿಂ ನನೆವುತ್ತಲಿಹುದುಂ
ಜಂಗಮಪ್ರಾಣಿಗಳ ಗುಣವೇನಲ್ಲವೋ ಬಸವಾ ೧೩

೧–೨ ಣಾ ಸು (ತ, ಪ, ಬ). ೩–ಳ ರೇ (ಫ, ಧ, ಪ).

CC-0. Jangamwadi Math Collection. Digitized by eGangotri

ಭಾಷೆಗಳು ಗೀಷೆಗಳಿವೆಲ್ಲಂ
ಘಾಸಿಯಾಗಲು ಗಾಱುನುಡಿವುತ
ಮೋಸವಾಗಿದ್ದಹನಲಾ ನೆಱಿ ಭಕ್ತಿ ಮರುಳಾಗಿ
ಲೇಸುಲೇಸಿದು ಜಂಗಮಪ್ರಾ
ಣಾಂಶವದು ಬಿಡದೀ ಪ್ರಕಾರದೊ
ಳಾಸಱಿದೆ ತಾಂ ಮುಂಡ ೧ಮೋಚಿದ ೨ಹಾಂಗೆ೩ ಆಱುವಳೆರೆ ೧೫

ಅಕ್ಕಟಾ ಮೆಚ್ಚುವನೆ ಇಂತಪ
ತಕ್ಕರಿಗೆ ಕಲಿನಾಥನಿದನೆಂ
ತಕ್ಕೆ ಕೇಳ್ದೆವ೪ ಭಕ್ತಿಹೀನತೆಯಾದ ವಾರ್ತೆಯನು
ಆಕ್ಕು ಕಿನ್ನರಬೊಮ್ಮಯಂ ಪ್ರಭೆ
ಮಿಕ್ಕ ಭಕ್ತನು ಶಂಭುವಾತನ
ನಕ್ಕಱಿಂ ತನ್ನೊಳು ಬೆರ೫ಸಿಕೊಂಡಿರ್ದಡೇನಾಯ್ತು ೧೬

ಆತನೊಲಿದಿದ್ದವರಿಗಳುತಿರ
ಲೇತಕ್ಕೆ ಸಂಸಾರಿಗಳವೊಲು
ಖ್ಯಾತ೩ ಭಾಷೆಯನ೪ಳಿದವರನತಿ ಭಕ್ತಿಪರರೆಂದು
ಕೂರ್ತು೪ ಭಾ೧೦ಷಣವಾಡಲಱಿಯೆವು
ಕಾತರಿಸಿ ಕಱಿ೩ಮಱಿ೩ಯೆನಾಡುವ
ಮಾತನಱಿಯೆವು ಮುಂದೆ ೧೧ನೆಱಿ೩೧೨ವಳಲಱಿಯೆವೆದೆಗುಂದಿ ೧೭

ಹಾಡಲಱಿಯೆವು ಶೋಕಿಸುತ ಕೊಂ
ಡಾಡಲಱಿಯೆವು ಬಣ್ಣಿಸುತ ಕೈ
ಗೂಡಿ ಕೈವಿಡಿಗೊಡಲಱಿಯೆವಾವಲ್ಲಿಗೈತಂದು
ಮಾಡುವಂತಹ ಕೆಲಸವೇನವ
ಕೋಡದಿಹ ಬಸವಣ್ಣನೇ ಸಾ
ಕಾಡಿ ತೋಱಲವೇತಕೀಗಳು ಹೋಗು ನೀನೆನಲು ೧೮

೧ಡೆ (ತ, ಥ, ಧ, ಪ). ೨–೩ವೊಲು (ತ, ನ). ೪ತಿಪ (ತ, ನ). ೫ವು (ಬ). ೬ಬ (ತ, ನ). ೭ತಿ (ಸ). ೮ನು (ತ). ೯ತು (ತ, ಥ, ಧ, ಪ). ೧೦ಭೂ (ತ, ಥ, ಧ, ನ). ೧೧–೧೨ನಿಂ (ತ, ನ).

CC-0. Jangamwadi Math Collection. Digitized by eGangotri

ಬೇಗದಲಿ ಪಡಿಹಾರಿ ಪರಿತಂ
ದಾ ಗಣಾವಳಿಗೆಱಿಗಿ ನಡುಗುತ
ಕೈಗಳಂ ಮುಗಿದಂಜುತಂ ಮಾಚಯ್ಯ ನೊರೆದಿದನು
ಆಗ ಹೇಳಲು ಕೇಳ್ದು ಬೆಬ್ಬೆಱಿ
ಗಾಗಿ ಬಸವಂ ಶೋಕವೆಲ್ಲವ
ನೀಗಿ ನೆಟ್ಟನೆ ತನ್ನ ಭಾಷೆಯ ಮರ್ಮಮಂ ಮುಟ್ಟಿ ೧೯

ಪ್ರಾಣವಾ ಕಿನ್ನರವರನ ತತ್
ಪ್ರಾಣದೊಳೆ ಸಂಬಂಧವಾಯಿತು
ಪ್ರಾಣಬಂಧದ ಭಾಷೆಗಳನಱುಪಲ್ಕೆ ಬಸವಣ್ಣ
ಪ್ರಾಣದಲಿ ತಾನೇಕೆ ಇಪ್ಪನು
ಪ್ರಾಣವಲ್ಲಾ ಜಂಗಮಕೆ ಸತ್
ಪ್ರಾಣವಲ್ಲಾ ಭಕ್ತಲಿಂಗಪ್ರಾಣಿ ಭಂಡಾರಿ ೨೦

ಒಂದುವಂ ನೆನೆಯಲ್ಕೆ ತಾ ಬೇ
ಱಿಕೊಂದು ಘಟಿಯಿಸಿತಕಟಕಟಯೇ
ನೆಂದು ಹೇಳಲು ಬಹುದು ನಿರ್ವಂಚಕದ ಭಕ್ತಿಯನು
ಎಂದುವಗಲದ ಮರ್ಮಕರ್ಮವ
ನಿಂದು ಮಾಚಯನಾಡಬಲ್ಲನು
ಸಂದ ಬಸವನೆ ಬಲ್ಲನೀ ಎರಡನು ಏವನೆ ಬಲ್ಲ ೨೧

ಆವಡೆಯೊಳೀ ಪರಿಯನೆಂದುಂ
ನಾವಱಿಯೆವೆಂದೆನುತ ಭಕ್ತರು
ತಾವು ಸರ್ಬರು ಸಂದಣಿಸಿ ನೋಡಲ್ಕೆ ಕೇಳಲ್ಕೆ
ಭಾವಿಸಲ್ಕೆ ವಿಚಿತ್ರವೆನುತ ಗ
ಣಾವಳಿಯು ಪಡಿಹಾರಿಯಂ ಮು
ತ್ತಾ ವಿಗಡ ಮಾಚಯ್ಯನಲ್ಲಿಗೆ ಕಳುಹಿದಡೆ ಹೋಗಿ ೨೨

೧–೨ನೆಂ (ತ, ಸ).

CC-0. Jangamwadi Math Collection. Digitized by eGangotri

ಸೊಸಲೊರಸಲವರಡಿಗಳಿಗೆ ವಂ
ದಿಸುತ ಬಸವನ ವಾರ್ತೆಯಂ ವಂ
ಚಿಸದೆ ಬಿನ್ನೈಸಲ್ಕೆ ಕೇಳುತ ಹರುಷನಾಗುತ್ತ
ಬಸವ ಜಂಗಮಜೀವ ಭಾಪುರೆ
ಬಸವ ಜಂಗಮಭಾವ ಭಾಪುರೆ
ಬಸವ ಜಂಗಮನಿತ್ಯ ಸತ್‌ಪ್ರಾಣ್ಯೈಕ ಮರುಳು ಭಾಪು ೨೩

ಭಾಪುರೇ ಚರಲಿಂಗಜೀವಕ
ಳಾಪ ಚರಲಿಂಗೈಕಜೀವನ
ಭಾಪುರೇ ಚರಲಿಂಗಜೀವಾಲೀನ ಮರುಳು ಭಾಪು
ಭಾಪುರೇ ಚರಲಿಂಗಜೀವ
ಸ್ಥಾಪನಪ್ರಾಣಾನುಕೂಲಾ
ಭಾಪುರೇ ಚರಲಿಂಗಜೀವಸ್ಥಾನಸಂಧಾನಾ ೨೪

ಜಂಗಮಪ್ರಾಣಿಯುಮೆನಲು ಬಸ
ವಂಗೆ ಸಲುವುದು ಸಲುವುದಖಿಳ ಜ
ಗಂ[೧]ಗಳೊಳು ಸಲುವುದು ನಿರುಪಮಂ ನಿರುಪಮಾನವಿದು
ಸಾಂಗಮಾಗಲು ಹೇಳಲೊಪ್ಪುಗು
ಹಿಂಗವಾಗಲು ಕೇಳಲೊಪ್ಪುಗು
[೨]ಮಂಗಳಾದ್ಭು[೩]ತ ಭಕ್ತಿಯು[೪]ಕ್ತನ[೫]ನುತ್ತ ನಿಮಿಷದಲಿ ೨೫

ಕಲ್ಲಿನಾಥನ ಭವ್ಯಗಜಮೊ
ಕಲ್ಲಿನಾಥನ ಕರದ ಖಡ್ಗಮೊ
ಕಲ್ಲಿನಾಥನ ರತ್ನಮಯ[೬]ಕನ್ನಡಿಯೊ[೭] ತಾನೆನಲು
ಕಲ್ಲಿನಾಥನ ವೀರಗಣಮೊ
ಕಲ್ಲಿನಾಥನ ಬಿರಿದಿನಾಳೊ
ಕಲ್ಲಿನಾಥನೆ ತಾನೆನಲು ಮಡಿವಾಳ ಮಾಚಯ್ಯ ೨೬

೧ಸಂ (ಅ, ಮು). ೨–೪ಳಿ ಭಂಗ ಜಂಗಮ (ತ, ಪ, ಸ). ೩ ಧೃ (ಅ). ೪–೫ಕ್ತಿಯೆ (ಸ). ೫–೭ಕಂತಿಕೆಯೊ (ತ, ಥ, ಪ).

CC-0. Jangamwadi Math Collection. Digitized by eGangotri

ನಡೆತರಲು ಕಂಡಿತರ ಸಮಯಿಗ
ಳೊಡನೊಡನೆ ಮದವುಡುಗೆ ಭಕ್ತರು
ಕಡೆಗೆ ಶುಭಶೋಭನಕೆ ವೈವಸ್ವತನು ನಡನಡುಗೆ
ಮೃಡನತಿಶಯಂ ತೊಡಗೆ ಬಿಕ್ಕುಗ
ಳೆಡೆಗೆಡೆಗೆ ನಿಜ ಭಕ್ತಿಯಶಮಂ
ಮಡಗೆ ದುಷ್ಕೃತವಡಗೆ ಶರಣರ ಪಡಿಗೆ ಬಹರಾರು ೭೭

ಮೀಱಿ ಕೇಳಿಕೆ ಜಾಱಿ ಸುಗತಿಗೆ
ಹಾಱಿ ಕುಜನರು ದೂಱಿ ಹರನಂ
ಸೇಱಿ ಭಕ್ತರು ಮಾಱಿ ಪುಱಿಹಂ ಹೇಱಿ ಮಹಿಮೆಗಳ
ಏಱಿ ಶಿವರತಿ ತೋಱಿ ದೃಷ್ಟವ
ನೂಱಿ ವಿಜಯತೆ ಸಾಱಿ ಪ್ರರದೊಳು
ಬೀಱಿ ವಾಸನೆ ಹೇಱಿ ನಿಂಬಿಯ ಸೂಱಿಯೆಲ್ಲರಿಗೆ ೭೮

ವೀರಭಕ್ತಿಯ ಹೆಂಪ್ರ ಧೀರೋ
ದ್ಧಾರತೆಯ ಸೊಂಪು ಪ್ರತಾಪಾ
ಪಾರದಿಂಪು ಮಹತ್ವತತ್ವದ ಗುಂಪು ಚರಲಿಂಗ
ಸಾರಭಕ್ತಿಯಲಂಪ್ರ ವಿಮಳಾ
ಚಾರಮಾರ್ಗದ ನುಂಪು ಸುಜನಾ
ಗಾ್ರರದೊಳು ತಂಪು ಪ್ರಸನ್ನಮುಖಾಂಬುಜದ ಕಂಪು ೭೯

ಬರುತಿರಲು ಗಣಕೋಟಿ ಮಡಿವಳ
ಶರಣನಂ ಕಂಡುಬ್ಬುತೊಬ್ಬೊ
ಬ್ಬರ ನಮಸ್ಕಾರಾಭಿಗಮನಾಲಿಂಗನಂಗಳಲಿ
ಸರಸವೆಸೆಯಲು ತಾನುಮುವರುಂ
ಹರುಷಮೊಂದಿ ತದೀಯ ಮಾಪೇ
ಶ್ವರವಿತಾನಾಜ್ಞಾಪನದೊಳಾ ಮಾಚಿದೇವಯ್ಯ ೮೦

---

೧ ಕಾ (ಆ. ತ. ನ. ಪ).

CC-0. Jangamwadi Math Collection. Digitized by eGangotri

ಮತ್ತೆಯುಂ ಪೈಯಿಕ್ಕಿ ಭಕ್ತರ
ಪೊತ್ತಕಭಿವಂದಿಸಿ ಮಹಾ ಪ್ರಮ
ಥೋತ್ತಮ ಪ್ರಭಾತನ ಗಣಾಂಘ್ರಿಗಳಂ ಹೃದಯದಲ್ಲಿ
ಹೊತ್ತು ಮಾಚಯ್ಯಂ ಸಮುದ್ದತ
ವೃತ್ತಿಯಲಿ ನಡೆತಂದು ಸಾರ್ದೊಲ
ವೆತ್ತಿ ಕಿನ್ನರದೇವ ಸಾಕ್ಷಾತ್ ಶ್ರೀ ಮಹಾದೇವ ೩೧

ಪ್ರಾಣಮಿತ್ರನೆನಿಪ್ಪ ಭಕ್ತ
ತ್ರಾಣನಂ ಬಸವಣನನಗಲ್ದಿಂ
ತೇಣಧರಧರನಲ್ಲಿಗೆಂತುಱಿ ಹೋಗಬಹುದಯ್ಯ
ಮಾಣದೀಶ್ವರನಾಜ್ಞೆಗಳನೀ
ಕ್ಷೋಣಿಯೊಳು ಪರಿಪೂರ್ತಿಯಾಗಲು
ಕಾಣಿಸದೆ ನಿಮ್ಮೊಳು ಬಸವನಸುವೊಂದಿಸಲು ಬಹುದೆ ೩೨

ಶಿವಗಣಂಗಳುವಾರಿವಱಿಯದೆ
ಶಿವನೆಹಗೆ ಕೊಂಡೊಯ್ಯಬಹುದೀ
ತ್ರಿವಿಧಭಕ್ತಿವಿವೇಕಿಯಹ ಬಸವಣ್ಣ ಚರಲಿಂಗ
ನಿವಹ ಸತ್‌ಪ್ರಾಣಾಶ್ರಿತೋಕ್ತಿಯೊ
ಳವಗಡೆಯನಿಂತೀಗ ನಿನ್ನೊಳ
ಗವಿಗವಿಸಿ[1] ಬೆರಸಿದನು ಬೆರಸಲು ಶಿವಮಹಿಮೆಯಲ್ಲಾ[2] ೩೩

ಬಸವನೊಳಗಡಗುವುದು ಭಕ್ತಿಯ
ಹೆಸರು ಹೋಹುದಿದಱಿ ನಿಮಿತ್ತದೊ
ಳೊಸೆದು ನಿಮ್ಮಿಚ್ಛೆಯಲಿ ಹೋಗಲು ಸಲ್ಲದಂತಾಗಿ
ಬಸವರಸನುಳ್ಳನಿತುಕಾಲಂ
ಬಸವರಾಜನ ಕೂಡೆ ನೀವುಂ
ವಸುಧೆಯೊಳಗಿರಲುಚಿತವೀಳೀಲೆಂಬ ಸಮಯದಲಿ ೩೪

---

೧ ಪ್ರಾ (ತ). ೨ ಮಾ (ಕ, ಜ, ಥ, ಧ, ಬ). ೩–೪ ಗಹಿಸಿ (ಅ, ತ, ಪ, ಬ); ಫಡಿಸಿ (ಕ, ಚ). ೫ ಯ್ಯಾ (ತ).

CC-0. Jangamwadi Math Collection. Digitized by eGangotri

ತನುವೊಲೆದೊಲೆದು ಕಿನ್ನರಯ್ಯಂ
ಕನಸುಮಂ ಕಂಡುಪ್ಪವಡಿಸಿದ
ನೆನಲು ತತ್‌ಕ್ಷಣದಿಂದವೇಳ್ದಚ್ಚರಿಯೊದಗುತಿರಲು
ಘನಮಹಿಮನಹ ಮಾಚಿದೇವ
ಯ್ಯನ ಚರಣಯುಗಳಕ್ಕೆಱಗಿ ಧಿ
ಕ್ಕನೆ ಬಸವನೆಯ್ತಂದು ತಾನಾ ಶರಣನ[೧]ಡಿಗೆಱಗಿ ೩೫

ತಾವು ಮೂವರು ಸಕಲ ಭಕ್ತಗ
ಣಾವಳಿಗೆ ಸೈಗೆಡೆಯಲದ್ಭುತ
ಭಾವದಿಂ ಮಾಹೇಶ್ವರರು ಮಾಚಯ್ಯನಂ ನೋಡಿ
ಓವಿ ರಕ್ಷಿಸುವೆಡೆಗೆ ಕೋಪಂ
ತೀವಿ ಶಿಕ್ಷಿಸುವೆಡೆಗೆ ಅರಸನು
ನೀವೆಯಲ್ಲಾ ಎನುತ ಮಂದಿತಾಂತಃಕರಣರಾಗಿ ೩೬

ಧಾರುಣೀನವರುದ್ರಸಾಕ್ಷಾತ್
ವೀರಭದ್ರ ದಯಾಸಮುದ್ರ ಉ
ದಾರಚ[೨]ರಿತೋನ್ನಿದ್ರ ಪರಿಹೃತನತಜನದರಿದ್ರ
ಶೂರಗುಣ ಶೃಂಗಾರಹಾರ ಪ
ಟೀರ ತಾರಕ್ಷೀರ ಹರಿಮಂ
ದಾರಹೀ[೩]ರಾ ಸಿತಯಶೋವಿಸ್ತಾರ [೪]ನಿಸ್ತಾರ[೫] ೩೭

ಜಿತಭವೋತ್ಕರ ಕದನಯುತ ಸ
ಸ್ಮಿತವಿರಾಜಿತವದನ ಸಂತತ
[೬]ಗ[೭]ತವಿಜೃಂಭಿತಮುದಮದನ ತತ್ತ್ವಾನುಭವಸದನ
ನುತವಶೀಕೃತಭರ್ಗ ನಿತ್ಯಾ
ಶ್ರಿತ ಮಹೇಶ್ವರ ಭಕ್ತವರ್ಗಸು[೮]
ಹಿತ್‌ಘನ[೯೧೦]ಪ್ರತಿ[೧೧]ವೀರಮಾರ್ಗ ಬಹಿಷ್ಕೃತಸ್ವರ್ಗ ೩೮

---

೧ ರ (ಬ). ೨ ಭ (ತ, ನ, ಪ, ಮ). ೩ ತಾ (ಥ, ಸ). ೪–೪ ಗಂಭೀರ (ಕ, ಚ, ಥ, ಬ). ೫–೫ ನ (ಅ). ೬ ಮ (ಬ, ಮ). ೭ + ಮಹಿತ (ತ, ನ, ಪ). ೮–೧೧ × (ಥ).

CC-0. Jangamwadi Math Collection. Digitized by eGangotri

ಪರಸಮಯಜಯ[೧]ಶೌಂಡ ಶಂಕರ
ಶರಣರತ್ನಕರಂಡ ಬಹಳ
ಸ್ಫುರಿತ ತೇಜೋದ್ಯತ್ ಪ್ರಚಂಡ ಪ್ರಹತವೇದಂಡ
ಪರಿವೃತ ಕ್ಷಿತಿರಮಣಗರ್ವ
ಸ್ಥಿರಸರಸ ಗಾಂಧರ್ವಶೋಭಾ
ಕರ ನಿರತಿಶಯ ಶುಚಿವ[೨]ಖಿರ್ವ[೩] ಮದೀಯ ದೃಕ್‌ಪರ್ವ ೩೯

ನ್ಯಾಯನಿಷ್ಠುರವಾಕ್ಯ ಬಿಜ್ಜಳ
ರಾಯ ಕರ್ಮಾಶಕ್ಯ ಭಕ್ತಿ
ಶ್ರೀಯುತಗುಣೋತ್ಸುಕ್ಯ ಗುರುತರ ಶಾಶ್ವತಶಿವೈಕ್ಯ
ಆಯತೋತ್ತಮಶೀಲ ಭಕ್ತಸ
ಹಾಯಲೋಲ ಗತಾಘಜಾಲ ಅ
ಜೇಯ ವೀರ ಗಣಾನುಕೂಲಾ ಎಮ್ಮ ಮಡಿವಾಳಾ ೪೦

ವಿದಿತಭಕ್ತಿ ಶಿವೈಕ್ಯ[೪]ಸಖ್ಯ[೫] ಸ
ಮುದಿತ ಸಜ್ಜನ ಮುಖ್ಯ ಜಂಗಮ
ಹೃದಯ ಭಾವಾನುಭವಸೌಖ್ಯಾ ಮಾಚಿ[೬]ದೇವಾಖ್ಯಾ[೭]
ವಿದಳಿತಾಖಿಳ ನೀಚ ಮರ್ದಿತ
ಮದಕುದರುಶನವಾಚ ನಿಷ್ಠಳ
ಸದಮಳಾಂತಃಶೌಚ ರಜಕಾಕಾರ ಚರ ಮಾಚಾ ೪೧

ಮೂದಲಿಸಲುಂ ಮನಸುಗಳನಾ
ರೈದೊರೆದು ನೋಡಲು ಜಡತೆಯಿಂ
ಛೇದಿಸಲು ಭಾಷೆಗಳನೊದಗಿಸಲಸಮ ಭಕ್ತಿಯನು
ವೇದಿಸಲು ಶಿವನಾಜ್ಞೆಯಂ ಸಂ
ಪಾದಿಸಲು ಪಾಲಿಸ[೮]ಲಖಿ[೯]ಳರಂ
ಭೇ[೧೦]ದಿಸಲು ಲೋಕಂಗಳಂ ಪೊಗಳಿಸಲು ನೆಗಳಿಸಲು ೪೨

೧ಸ (ಅ). ೨–೩ ಕರ್ಮ (ಅ). ೪–೫ ಶಕ್ಯ (ಧ, ಸ). ೬–೭ ದೇವಯ್ಯ (ತ, ನ, ಪ). ೮–೯ ಲುಖಿ (ಥ, ಧ). ೧೦ ಛಿ (ಥ).

CC-0. Jangamwadi Math Collection. Digitized by eGangotri

ರೂಢಿಸಲು ನಿಜಕೀರ್ತಿಯಂ ಕೊಂ
ಡಾಡಿಸಲು ಭೂಪ್ರಜೆಗಳಿಂ ನೆಱಿ
ಪೀಡಿಸಲು ಪರವಾದಿಗಳನವನೀಶ ಬಿಜ್ಜಳನ
ಓಡಿಸಲು ಬ್ರಹ್ಮಾಂಡಪಂ ಸೆಂ
ಡಾಡಿಸಲು ಶಿಷ್ಟರುಗಳಂ ಕೃಪೆ
ಮಾಡಿ ಸಲಹಲು ದುಷ್ಟರುಗಳಂ ಕಾದಿ ಭಂಜಿಸಲು ೫೩

ಈ ಮಣಿಹವಾಗಿಳೆಗೆ ಬಂದ ಮ
ಹಾಮಹಿಮ ಹರಮೂರ್ತಿ ಜಗದು
ದ್ದಾಮ ವಿಶ್ರುತಕೀರ್ತಿ ತೇಜಃಸ್ಫೂರ್ತಿ ಮಾಚಯ್ಯ
ಪ್ರೇಮವೆಸೆಯಲು ಬಸವನಂ ಸ
ನ್ನಾಮಿ ಕಿನ್ನರ ಶರಣನಂ ಸು
ಕ್ಷೇಮದಿಂ ಜೀವಂತರಂ ಮಾಡಿದನುಸಿ ನುತಿವೆತ್ತು ೫೪

ಲೋಕದೊಳು ಮುಂಗೈಯ ಕಂಕಣ
ಕೇಕೆ ಕನ್ನಡಿ ಕಾಬುತಿರೆ ಸು
ಶ್ಲೋಕಯುಷ್ಮನ್ಯಾಯನಿಷ್ಕರ ಹಿತವಚನರಚನೆ
ಆ ಕವಿಗಳಿಗೆ ಕಠಿಣವಾಗಿ ವಿ
ವೇಕಿಪಡೆ ಸೊಗಸಾಗಿ ಮುಂತೆಯ
ನೇಕ ಸತ್ಕಲಸಿದ್ಧಿಯಹುದಿದು ತಥ್ಯವೆಂತೆನಲು ೫೫

ಪದಪದಾರ್ಥಂಗಳು ಪಚನಕಾ
ಲದೊಳೊಡನೊಡನೆ ತೆಕ್ಕು ತೆಕ್ಕನೆ
ಕುದಿಯೆ ಪಕ್ವಾನ್ನಂಗಳವು ಪಾಕಕ್ಕೆ ಬರೆ ಮೇಲೆ
ಒದಗಿ ಸವಿಯಂ ಸವಿವುದಕ್ಕ
ಲ್ಲದೆ ರಸನೆಯಂ ಸುಡುವುದಕ್ಕ
ಲ್ಲದು ಶಿವೈಕ್ಯರ ಶಿಕ್ಷೆಗಳು ತಾವೀ ಪ್ರಕಾರವಲಾ ೫೬

೧–೨ ಡೀಗ (ಅ, ತ, ಥ, ನ, ಪ, ಬ, ಮ); ಡೀಗಳ್ (ಧ). ೩–೪ ಸೂಸ (ಮ).

CC-0. Jangamwadi Math Collection. Digitized by eGangotri

ಕುದಿಸಿ ಉದಕದೊಳಲುಬಿ ಬೀಸುತೊ
ಗೆದು ಪರಡಿ ತೆಗೆತೆಗೆದು ಘಳಿಗೆಯ
ನೊದಗಿಪುದು ಮೈಲಿಗೆ ಮಡಿಗಳಹುದಕ್ಕಲಾ ಮುನಿದೆ
ಇದು ನಿಮಿತ್ತಂ ನೀವು ಶಿಕ್ಷಿಸು
ವದಱ ನಿವದಿಂ ಮಲಿನವಳಿಯಿತು
ಸದಮಲಾತ್ಮಾ ನಿಮ್ಮ ಸತ್ಕೀರ್ತಿಪ್ರಭಾವದಲಿ ೪೭

ಈ ಪ್ರಕಾರದಿ ಬಸವರಾಜನ
ತಿಪ್ರತಿಜ್ಞೆಗೆ ಕಳಸವಾಯ್ತಖಿ
ಳ ಪ್ರಮಥ ರುದ್ರರ ಸಿವುಡಿಗಳಿಗೇಱಿ ಸಂದಿತ್ತು
ಸುಪ್ರಸನ್ನರು ನೀವು ನಿಮ್ಮೂಳ
ಯ ಪ್ರಕಟತರವಚನಪೀಯೂ
ಷಪ್ರಮಥನಾಭಾವದಿಂದೀ ಶಿವಗಣಾವಳಿಯು ೪೮

ಪ್ರವಿಮಳಸ್ವಾಂತಾಲವಾಲೋ
ದ್ಭವ ಸುರದ್ರುಮವಂಕುರಿತ ಪ
ಲ್ಲವಿತ ಕೋರಕಿತ ಪ್ರಸವಿತ ಫಲಿತ ಪರಂಪರದಾ
ವಿವರದಿಂ ವರ್ಧಿಸಿತೆನುತ ಉ
ಚ್ಚವಿಸುತಂ ಮಡಿವಾಳ ಮಾಚಿ
ಪ್ರವರನಂ ಕೊಂಡಾಡುತಂ ಪರಮಾನುರಾಗದಲಿ ೪೯

ಬಸವನಂ ಸಮ್ಯಕ್‌ಕೃಪಾಮೃತ
ರಸಪಯೋರಾಶಿಯೊಳಗೋಲಾ
ಡಿಸಲಮಾತ್ಯಾಧೀಶನಂದಾ ಭಕ್ತರುಂ ತಾನುಂ
ಅಸಮಲೀಲೆಯೊಳಿರ್ದನೆಂದಿಂ
ತೊಸೆದು ಮಾಹೇಶ್ವರರು ವಿಭ್ರಾ
ಜಿಸಿ ಮಹಾ ಒಡ್ಡೋಲಗಂಗೊಟ್ಟಿಂತು ಕುಳಿ ರ್ದು ೫೦

೧–೨ ಳಗಿದು (ಕ); ಳಲೆದು (ಸ).

CC-0. Jangamwadi Math Collection. Digitized by eGangotri

ಸರಸ ಕರುಣಾದೃಷ್ಟಿಯಲಿ ಬಸ
ವರಸನಂ ನೋಡುತ್ತಮಿರ್ದಪ
ರುರಗಕಟಕಂ ಕೂಡಿಕೊಂಡನು ನೋಡ ನೋಡಲ್ಕೆ
ಶರಣ ಕಿನ್ನರನಂ ಬಳಿಕ್ಕೋ
ಸರಿಸದಾತನ ಹಿಂದೆ ನೀವುಂ
ಸರಿದು ಮಾಚಯ್ಯನ ದಯಾರ್ದ್ರೀಭೂತಭಾವದಲಿ ೫೧

ಬಂದುದಿದು ತಾನೆನುತ ಜಂಗಮ
ವಿಂದು ಬಂದೆಯ್ದಿದಡವರ್ಗಳ
ಹಿಂದೆ ನಿನ್ನ ಪ್ರಾಣವೆಯ್ದಿತ್ತಾ ಶರಣರುಗಳು
ಬಂದು ಹುಗೆ ಮತ್ತೊಡನೆ ಭೋರನೆ
ಬಂದಿತಮಿತ ಮಹತ್ವತೆಯನೇ
ನೆಂದುಪಮಿಸಲು ಬಹುದು ಶಿವಶಿವ ಬಸವಮಂತ್ರೀಶಾ ೫೨

ಜಂಗಮಸ್ವೀಕೃತಯುತ ಪ್ರಾ
ಣಾಂಗಜಂಗಮ ಪರಿವೃತ ಪ್ರಾ
ಣಾಂಗ ಶಿವಶಿವ ಜಂಗಮಾಶ್ರಿತ ಸಂಚಿತಪ್ರಾಣ
ಜಂಗಮಾಯತ ಶಾಶ್ವತ ಪ್ರಾ
ಣಾಂಗ ಜಂಗಮ ಪರಿವೃಢ ಪ್ರಾ
ಣಾಂಗ ಹರಹರ ಜಂಗಮಾವಿರತಾರ್ಪಿತಪ್ರಾಣ ೫೩

ಚಾಣನಲ್ಲೋ ಜಂಗಮಾಂಗ
ಪ್ರಾಣನಲ್ಲೋ ಜಂಗಮೋದ್ಯತ್
ತ್ರಾಣನಲ್ಲೋ ಜಂಗಮಾಂತಃಪ್ರಾಣ ಚರಲಿಂಗ
ಪ್ರಾಣನಲ್ಲೋ ಜಂಗಮೈಕ
ಪ್ರಾಣನಲ್ಲೋ ಜಂಗಮಂ ನಿಜ
ಪ್ರಾಣನಲ್ಲೋ ನಲ್ಲೊ ಜಂಗಮಮಿಶ್ರಿತಪ್ರಾಣಾ ೫೪

CC-0. Jangamwadi Math Collection. Digitized by eGangotri

ಪ್ರೊತುರೇ ಚರಲಿಂಗ ಪರಿಪ್ರೂ
ತಾತ ತತ್‌ಪ್ರಾಣಪ್ರಯುಕ್ತಾ
ಪ್ರೊತುರೇ ಚರಲಿಂಗನಿಷ್ಟಲಪ್ರೊರಿತಪ್ರಾಣಾ
ಪ್ರೊತುರೇ ಚರಲಿಂಗದೇಹ ಸ
ನಾತನ ಪ್ರಾಣಪ್ರಸಿದ್ಧಾ
ಪ್ರೊತುರೇ ಚರಲಿಂಗ ಸರ್ವಾಲಿಂಗಿತಪ್ರಾಣಾ ೫೫

ಧನವನೀಯಲು ಬಪ್ಪುದಲ್ಲದೆ
ತನುವನೀಯಲದೆಂತು ಬಪ್ಪುದು
ತನುವನೀಯಲು ಬಹುದು ನಿಜದಾಸೋಹನೀತಿಯಲಿ
ಮನವನೀಯಲದೆಂತು ಬಪ್ಪುದು
ಮನವನೀಯಲು ಬಹುದು ಮುಕ್ತಿಕೆ
ಯನುವನಱಿದಾ ಪ್ರಾಣವಂ ಮತ್ತೆಂತು ಕೊಡಲಹುದು ೫೬

ಮಹಿತ ವೀರೋದಗ್ರಭಕ್ತಿ
ಸ್ನೇಹದಿನೊಮ್ಮೆ ಪ್ರಾಣಮಂ ಕುಡ
ಬಹುದು ಜಂಗಮದೊಳು ನಿಜ ಪ್ರಾಣಪ್ರ್ರಿಚರ್ಯ್ರಿದಲಿ
ಸಹಜಮಾಗ್ರಿಲಿಪಂಗಳಿ ಸಂಧಿಸ
ಬಹುದು ತಾ ನಿನಗಲ್ಲದಾರಿಗೆ
ಬಹುದು ಜಗದೊಳು ಚಾರ್ರಿಲಿಂಗ ಪ್ರಾಣಿಯೆನಿಸಲ್ಕೆ ೫೭

ತಂಗಟೂರೊಳು ಮಾರಿದೇವನ
ಲಿಂಗನಿಷ್ಠಾಭಾಷೆ ಸರ್ವಜ
ನಂಗಳಱಿಯಲು ಮೆಱಿಯಿತಾ ಸತ್ಯೇಶ ್ರಿಚಾಮ್ರಿ ಯನ
ಸಾಂಗಭಾಷೆ ಧರಾತಳದೊಳು
ತ್ತುಂಗವಾಯಿತು ನುಲಿಯ ಚಂದ
ಯ್ಯಂಗಳತುಳಿತ ಭಾಷೆಯತಿಶಯವೆನಿಸಿ ರಂಜಿಸಿತು ೫೮

೧–೨ ಚರಿಯ (ಸ). ೩–೪ ಲು ಹಾಂಗೆ (ಕ). ೫ ರು (ಪ). ೬–೭ ಮಾಚ (ಕ).

CC-0. Jangamwadi Math Collection. Digitized by eGangotri

ಕೊಂಡಗುಳಿಯೊಳು ಕೇತಿರಾಜನ
ಖಂಡಿತಪ್ರತಿಭಾಷೆ ಧರಣೀ
ಮಂಡಳದೊಳತಿ ಕೀರ್ತಿಯಾಯಿತ್ತೀ ಕಟಕವಱಿಯೆ[೧]
ಖಂಡಪರಶುವಿನಚಳ ಭಕ್ತಿಗೆ
ಮಂಡನತೆ ಕಮಳಾಯ ಭಾಷೆಯ
ದಂಡಿ ಲೇಸೆನಿಸಿತ್ತು ಲೋಕದೊಳಂತುಮಲ್ಲದೆಯು ೫

ಮೇಣವಿರಳತ ಪರಮಲಿಂಗ
ಪ್ರಾಣಿಗಳು ತತ್‌ಪ್ರಾಣಲಿಂಗ
ಪ್ರಾಣಿಗಳುಮೆನಲಂದು ಕೇಳಲ್ಬಟ್ಟುದಂತಾಗಿ
ಪ್ರಾಣಲಿಂಗಿಗಳೊಳರು ಸಕಲ
ಕ್ಷೋಣಿಯೊಳು ಚರಲಿಂಗವೇ ಸತ್
ಪ್ರಾಣವಾಗಲು ವರ್ತಿಸುತ್ತಿಹ ಭಕ್ತರುಗಳೊಳರೆ ೬

ಲಿಂಗವಂತರು ಸರ್ವರೊಳಗತಿ
ಸಾಂಗಭಕ್ತಿಯಲರ್ದು ಜಂಗಮ
ಲಿಂಗವೇ ಸತ್‌ಪ್ರಾಣಲಿಂಗವೆನಿಪ್ಪ ಭಾಷೆಯದು
ಮಂಗಳಪ್ರದವಾಗಿ ಸಂದಿತು
ಸಂಗಮೇಶ್ವರ ಬಸವ ನಿನಗೆನು
ತಂಗಜಾಂತಕಭಕ್ತರತಿ ಉಪಲಾಲಿಸುತ್ತಿರಲು ೭

ಪ್ರಾಕಟಂ ಮಿಗೆ ಜಂಗಮ ಪ್ರಾ
ಣೈಕತನುವೆನಲೊಪ್ಪಿ ಭಕ್ತಿ
ಶ್ಲೋಕನೆಂದೆಣ್ದೆಸೆಗಳೊಳು ಪೆಗ್ಗಳಿಸಿ ಪಸರಿಸಲು
ಆ ಕಟಕದೊಳು ಬಸವರಾಜನ
ನೇಕ ಲೋಕಂ ಪೊಗಳೆ ಭಕ್ತಾ
ನೀಕಸಹಿತಂ ಮುನ್ನಿನಂತೆ ಸುಖಸ್ಥಿತಿಯೊಳಿರಲು ೮

ಅಂತು ಕಾಂಡ ೫ಕ್ಕಂ ಸಂಧಿ ೩೫ಕ್ಕಂ ಪದಗಳು ೧೯೩೫ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

---

೧ ಯಲ್ಕೆ (ತ. ನ). ೨ ಭ್ಯ (ಪ. ಬ).

CC-0. Jangamwadi Math Collection. Digitized by eGangotri

ಸಂಧಿ : ೩೬

*

ಸೂಚನೆ : ಶರಣ ಮೇದರ ಕೇತಿದೇವನ
ಹರಣಮಂ ಬಸವಣ್ಣನಸುವಂ
ಹರನ ಕೈಯಲಿ ಮರಳಿ ಪಡೆದನು ಮಾಚಿದೇವಯ್ಯ

ತ್ರಿವಿಧ ಭಕ್ತಿನಿಯುಕ್ತರಾಜ್ಯೋ-
ತ್ಸವಮೊಳಾ ಬಸವಣ್ಣನಿರಲೊಂ-
ದೆವಸವಾತನ ಜಂಗಮಪ್ರಾಣವನಳಿಯಲೆಂದು
ಶಿವನು ಮೇದರ ಕೇತಿದೇವನ
ನವಗಡಿಸಿ ತನ್ನೊಳು ಬೆರಸಿಕೊಂ
ಡವಸರದೊಳಾ ಕಟಿಕದೊಳಗಣ ಭಕ್ತರಾಯೆಡೆಗೆ ೧

ಬಸವರಾಜನುಸಹಿತವೆಯಿತಂ
ದಸಮ ಜಂಗಮದೋಲಗಂಗೊ
ಟ್ಟೆಸೆವುತಿರಲಾ ಸಮಯದಲಿ ಕೇಳಿಕೆಗಳನುಗೊಳಿಸಿ
ಹೊಸಪರಿಯ ರೀತಿಗಳ ಗೀತ ಸ
ರಸದ ತತವಿತತಾದಿ ಪಾದ್ಯ
ಪ್ರಸರಮೇಳನದಲಿ ಸೊಗಸಲಾಡುತ್ತ ಕೇಳಿಸಲು ೨

---

* ರಾಗ: ವರಾಳಿ (ಡಾ, ಚ, ಧ, ಪ); ಶೋಕವರಾಳಿ (ಅ, ಮ); ಪಹಡಿ (ತ).

CC-0. Jangamwadi Math Collection. Digitized by eGangotri

ಹಿರಿಯರೆಲ್ಲರು ಬಂದು ಕುಳ್ಳಿತು
ನೆರೆದು ಮಾಚಯ್ಯಗಳನಿಲ್ಲಿಗೆ
ಕರೆಯೆನಲ್ಕೆ ಹಸಾದಮೆನುತಂ ಬಾಚಪಡಿಹಾರಿ
ಸರಸರನೆ ತಾನೆಯ್ದಿ ಮಡಿವಳ
ಶರಣನಂ ಕಾಣುತ್ತ ವಂದಿಸಿ
ಕರಯುಗಂ ಮುಗಿದಿರ್ದವಂಗಾ ಆಯ್ಯನಿಂತೆಂದ ೩

ಉಸುರುಸುರು ನೀನೀಗ ಬಂದ ಕೆ
ಲಸವದಾವುದೆನುತ್ತಿರಲು ವಂ
ದಿಸಿ ಮುಗಿದ ಕೈವರಸಿ ಬಿನ್ನೈಸಿದನು ಪಡಿಹಾರಿ
ಅಸಮನೇತ್ರನು ಕೇತಿದೇವನ
ನೊಸೆದು ತನ್ನೊಳು ಕೂಡಿಕೊಂಡಡೆ
ಬೆಸಸಿ ಕಳುಹಿದರೆನ್ನನಿಲ್ಲಿಗೆ ಶಿವಗಣಶ್ರೇಣಿ ೪

ನೀವು ಬಿಜಯಂಗೈದು ಭಕ್ತಗ
ಣಾವಳಿಯೊಳಿರವೇಳ್ಕು ಸಜ್ಜನ
ಜೀವ ಚಿತ್ತೈಸೆನಲು ಮಡಿವಳ ಮಾಚಿದೇವಯ್ಯ
ದೇವನೊಳಕೊಂಡಿರ್ದ ಭಕ್ತನ
ನೋವಿ ಒಸಗೆಯನೀಯಲೆಂದಾ
ವಾವ ಹಿರಿಯರು ಬಂದರಲ್ಲಿಗೆ ಹೇಳು ನೀನೆನಲು ೫

ಆಯ್ಯ ಬಿನ್ನಹವಲ್ಲಯಂ ಮಧು
ವಯ್ನುಂ ಸಕಳೇಶ ಮಾದರ
ಸಯ್ನುಂ ಜಗದೇವ ದಣ್ಣಾಯಕನು ರೆಬ್ಬಯ್ಯ
ತುಯ್ಯಲ್ಲಮದೇವನುಂ ದಸ
ರಯ್ಯನುಂ ಗೊಗ್ಗಯ್ಯನುಂ ಕ
ಕ್ಕಯ್ಯ ಕಿನ್ನರ ಬೊಮ್ಮಿದೇವನು ತೆಲುಗ ಬೊಮ್ಮಯ್ಯ ೬

CC-0. Jangamwadi Math Collection. Digitized by eGangotri

ಕೇತಿರಾಜನು ಬಾಚಿರಸರುಂ
ದಾಸಿಮಯ್ಯನು ಶಂಕರಯ್ಯನು
ಕಾಶಿನಾಥನು ಕಲ್ಲಿದೇವನು ಮೂಱನ ಮೇಮಯ್ಯ
ಆ ಸುರಗಿ ಚೌಡಯ್ಯನುಂ ಗಣ
ದಾಸಿ ಭೀಮಯ್ಯನು ಒರತೆಯ ವಿ
ಳಾಸದೇವನು ಮಾಯಿದೇವ[೧]ಗಳಿವರು[೨] ಮೊದಲಾದ ೭

ಸಕಳ ಮಾಹೇಶ್ವರರು ಜಂಗಮ
ನಿಕರಸಹಿತಂ ಬಸವರಾಜನು
ಪ್ರಕಟದಿಂ ಬಂದಿದ್ದಹರು ಕೇತಯ್ಯಗಳ ಮುಂದೆ
ಟಕ ವಿಕಟ ಧಿಕ್ಕಟ ಧಿಕಟಧಿಂ
ಮಿಕಟವೆಂಬಾ ರವವೆಸೆವ ಕೇ
ಳಿಕೆಯನಾಡಿಸುತಿದ್ದಹರು ತಾವೆನಲು ಮಾಚಿಕಯ್ಯ ೮

ಗಹಗಹಿಸುತಂ ಬಸವನಂ ತಾ
ನೆಹಗೆ ಬಂದಿವ್ವಹನೊ ನಾಚಿಕೆ
ಯಹುದಲಾ ತನಗೆಂದಱಿಯನೇ ಮಱಿದನೇ ತನ್ನ
ಗಹನ ಭಾಷೆಯನಿಂದಕಟ ಬಂ
ದಿಹ ಮಹಂತರು ಮೌನಗೊಂಡಿ
ದ್ದಹರದೇತಕ್ಕಲ್ಲಿ ವಿಕಳತೆಯಾದವನ ಕೂಡೆ ೯

ಜಂಗಮಪ್ರಾಣಾಂತ್ಯಮಾಗಿರೆ
ಜಂಗಮಪ್ರಾಣದೊಳೆ ಬೆರಸದೆ
ಜಂಗಮಪ್ರಾಣಿಗಳು ಸುಮ್ಮನೆ ನೋಡುವುದು ಗುಣವೆ
ಸಾಂಗವಹುದೇ ಜಂಗಮಪ್ರಾ
ಣಾಂಗಸಮತೆಗೆ ಭಕ್ತಿಯುಕ್ತಿಗೆ
ಲಿಂಗವಂತರು ಮೆಚ್ಚುವರೆ[೩] ಕಲಿನಾಥಾ ೧೦

೧–೨ ಯ್ಯಗಳು (ಬ). ೩–೪ ತಾನಿದಕೆ (ಅ, ಮ).

CC-0. Jangamwadi Math Collection. Digitized by eGangotri

ಭೂತನಾಥನು ಕೂರ್ತು ಮೇದರ
ಕೇತಿದೇವನನೊಯ್ದಡಂ ತಾ
ನಾತನೊಡನೊಂದಾಗಿ ಹೋಗದದೇತಕಿದ್ದಹನು
ಮಾತು ಪಲ್ಲಟವಾಯ್ತು ತನಗಿ
ನ್ನೇತಱದು ತಜ್ಜಂಗಮಪ್ರಾ
ಣಾಂತಿಕೈಕಪ್ರಾಣಿಯೆಂಬುದು ವೈಶಿಕವೊ ನಿಜವೊ ೧೧

ಭಾಷೆಗೆಟ್ಟಿರ್ದವನ ಸಭೆಯಲಿ
ದೋಷವಲ್ಲಾ ಕುಳ್ಳಿರಿದ್ದಡೆ
ಶೇಷಭೂಷಣಭಕ್ತರಿದ್ದಪರಪರೆ ಸಾಕಿನ್ನು
ದೂಷಿಸಲು ನಾವಱಿಯೆವದಱಿಕೊಳು
ದೋಷಮುಂ ಮುನ್ನಿಲ್ಲವರ ಸಂ
ತೋಷವೆಂಬುದು ಬಾರೆವಲ್ಲಿಗೆ ಕೆಲಸವುಂಟೆಮಗೆ ೧೨

ಹೋಗು ಹೋಗೈ ನೀನೆಮಗೆ ಬರ
ಲಾಗದಲ್ಲಿಗೆ ಬಸವನಿದ್ದಪ
ನಾಗಿ ಬಾರೆವು ಹೋಗೆನಲು ಪಡಿಹಾರಿ ಅಲ್ಲಿರ್ದು
ಆಗ ನಡನಡ ನಡುಗುತಂ ಕಡು
ವೇಗದಿಂ ಪರಿತಂದು ಭಕ್ತಮ
ಹಾಗಣಾವಳಿಗಾತನಭಿವಂದಿಸಿ ನಿಲಲು ನೋಡಿ ೧೩

ಮಾಚಿದೇವರದೇಕೆ ಬಾರರು
ಬಾಚಯಾ ಹೇಳೆನೆ ಪಣಿಗೆ ಕೈ
ಚಾಚಿ ಗಣಕೂಟಕ್ಕೆ ಬಿನ್ನೈಸಿದನು ಪಡಿಹಾರಿ
ಸೂಚಿಸುವೆನಾ ಅಯ್ಯನಾಡಿದ
ವಾಚನಂಗಳನಿಂತು ಕೇಳ್ದಡೆ
ನಾಚುವನಲಾ ಬಸವರಾಜನಿದಕ್ಕೆ ಬೆಱಗಾಗಿ ೧೪

---

೧ ರೋ (ನ). ೨–೩ ಲ್ಲಿಂದ (ಆ, ಬ). ೪ ರಸ (ಬ); ಯ್ಯ (ಮ). ೫ ದು (ನ).

CC-0. Jangamwadi Math Collection. Digitized by eGangotri

ಇದು ನಿಮಿತ್ತಂ ಹೇಳಲಂಜುವೆ
ನಿದಕೆ ಪಂಚಿಸಿ ನಾಂ ಬಳಿಕ ಹೇ
ಳದಿರಬಾರದು ಮಡಿವಳಯ್ಯನ ಮಾತು ನೆಱಿ[೩] ಬಿಱುಸು
ಇದನವಧರಿಸಿ ನೀವೆ ಬಲ್ಲಂ
ದದೆ ವಿಚಾರಿಸಿಯೆನಲು ಗಣತತಿ
ಇದಱಿ ಹದನಂ ಹೇಳು ಹೇಳಾ ಅಯ್ಯನೆಂದುದನು ೧೫

ಎಂದಡಾ ಪಡಿಹಾರಿ ಬಿನ್ನಹ
ವೆಂದನೊಯ್ಯನೆ ಜಂಗಮಕೆ ತನ
ಗೊಂದೆಯೆಲ್ಲಾ ಪ್ರಾಣವೆಂಬಾ ಜಂಗಮಪ್ರಾಣಿ
ಇಂದು ಜಂಗಮವಸುಗಳೆದಡೇ
ನೆಂದು ನೋಡುತ್ತಿರ್ದನಾತನ
ಹಿಂದೆ ತನ್ನ ಪ್ರಾಣಿವಂ ಶಿವಗೊಪ್ಪಿಸಲುವೇಡಾ ೧೬

ತಾಮಸಂ ಮಾಡಿದನು ಬಸವನು
ಶ್ರೀಮಹಾದೇವಾ ಇದೇತಱಿ
ನೇಮವೇತಱಿ ಸೀಮೆ ಏತಱಿ ಜಂಗಮಪ್ರಾಣಿ
ಆ ಮಹಂತರು ಸುಮ್ಮನಿರ್ದಪ
ರಾ ಮದಾಂಧನ ಕೂಡೆ[೨]ಯವರಿಗೆ[೩]
ಕ್ಷೇಮವಾಗಲಿ ಜಂಗಮಂ ಹೋದಂತೆ ಹೋಗಿರಲಿ ೧೭

ಪ್ರಾಣವಂ ತ್ಯಜಿಸಿದ ಶರಣನಂ
ಕಾಣುತಂ ಮೈಮಱಿದು ತಾನುಂ
ಪ್ರಾಣವಂಚಕನಾದನಯ್ಯೋ ನಾವು ತನ್ನಹಗೆ
ಕೇಣವಱಿಯೆವು ಜಂಗಮೈಕ
ಪ್ರಾಣಿಯೆನ್ನೆವು ಭಾಷೆಯಂ ಕ
ಳ್ಯಾಣಭಕ್ತರ ಮುಂದೆ ನುಡಿಯೆವು ನಡೆಯಲರಿದೆಮಗೆ ೧೮

---

೧ ಹರ (ನ). ೨–೩ ಯಾತನು (ಡಾ, ಥ, ನ, ಪ, ಮ).

CC-0. Jangamwadi Math Collection. Digitized by eGangotri

ಸಂತತಂ ನಿಜ ಜಂಗಮಪ್ರಾ
ಣಾಂತರಂಗಪ್ರಾಣ ಭಾಷೆಯ
ಹೊಂತಕಾಱಿನು ಬಸವನಿರ್ದಡೆ ಬಾರೆವಾಯೆಡೆಗೆ
ಅಂತಕಾಂತಕಭಕ್ತರಿದ್ದಹ
ರಂತವರೆ [೧]ಸಾಕದಕೆನುತ[೨]ವೆ
ನ್ನಂ ತಗುಳ್ದಡೆ ಬಂದೆನಿಲ್ಲಿಗೆ ನೀವು ಚಿತ್ತೈಸಿ ೧೯

ಇದನಿ[೩]ನಿತು ಪಡಿಹಾರಿ ಹೇಳಲು
ಹೆದಱಿ ಬಸವಂ ತನ್ನನೆಚ್ಚಱಿ
ಸಿದನು ಮಡಿವಳತಂದೆ ಎನ್ನ ಸ್ವಾಮಿ ಸಂಗಯ್ಯ
ಬದುಕಿಸಿದನೊರೆದೊರೆದು ಮನ[೪]ಚಿ
ತ್ತದ ಮಲಿನಮಂ ಕಳೆದು ಭಾಷೆಯ
ನೊದವಿಸಿದನೆನಗೆನುತ ಪ್ರಾ[೫]ಣವನಂತು ಬಿಡಲೊಡನೆ ೨೦

ಆ ಸಮಯದಲಿ ಭಕ್ತಗಣ ಸಿಂ
ಹಾಸನದೊಳಿಹ ಜಂಗಮಾವಳಿ
ಯಾಸುರದ ಕೋಳಾಹಳಧ್ವಾನಂಗಳಾಕ್ರಮಿಸೆ
ಐಸರಲಿ ಕಲ್ಯಾಣಕಟಕ ನಿ
ವಾಸಿಗಳು ಹಾ ಹಾ ರವಂಗಳು
ಸೂಸುವಾನನರಾಗಿ ಬಸವಾ ಎನುತೊಱಲುತಿರಲು ೨೧

ಕೇತಿದೇವನನೊಯ್ದಡೆಯ್ದದ
ಜಾತನೀ ಬಸವಣ್ಣನಂ ದುರ್
ನೀತಿಯಲಿ ಕೊಂಡೊಯ್ದನಿನ್ನೆಲ್ಲಿಯದು ಸದುಭಕ್ತಿ
ಬೀತುದಲ್ಲಾ ಹರಹರಾ ಧಾ
ತ್ರೀತಳದೊಳೆಂದೆನುತ ಭಕ್ತ
ವ್ರಾತವುಮ್ಮಳಿಸುತ್ತವಾ ಪಡಿಹಾರನಂ ನೋಡಿ ೨೨

೧–೨ ಸಾಕೆಂದೆನುತ (ಥ, ಪ, ಬ). ೩ ನೆ (ಅ, ಕ, ಚ, ಥ, ದಾ, ನ, ಪ, ಬ). ೪ ಮ (ಪ). ೫ ಹರ (ನ).

CC-0. Jangamwadi Math Collection. Digitized by eGangotri

ಹೇಳು ಹೋಗೀ ಪದನನಾ ಮಡಿ
ವಾಳ ಮಾಚಯ್ಯಂಗಳಿಗೆ ನೀ
ಹೇಳೆನಲು ತಾನಲ್ಲಿಗಾಕ್ಷಣವೆಯ್ದಿ ಮೈಯಿಕ್ಕಿ
ಭಾಳತಟದೊಳು ಕರಯುಗಳವಂ
ಕೀಲಿಸುತ್ತವಧರಿಸು ಕರುಣಾ
ಲೋಲ ಬಸವಂ ಸಂದನಾ ಕೇತಯ್ಯನೊಡನೆನಲು ೨೩

ಕೇಳ್ದು ಮಾಚಯ್ಯಂ ಹರುಷಮಂ
ತಾಳ್ದು ಮನದೊಳುಮುತ್ಪಳಕಚಯ
ವೇಳ್ದು ಸರ್ವಾಂಗದೊಳಗಾನನದೊಳು ಹಸನವೆಸೆಯೆ
ಬಾಳ್ದನಲ್ಲಾ ನುಡಿದ ಭಾಷೆಯ
ನಾಳ್ದು ಬಸವಂ ಮೃಡನ ಬೆಡಗಂ
ಗೆಲ್ದನಲ್ಲಾ ಭವದ ಬೇರಂ ಕೀಳ್ದು ಬಿಸುಟಿನಲಾ ೨೪

ನುಡಿದು ತಪ್ಪದ ಭಾಷೆ ಬಸವನ
ನುಡಿ ಶಿಲಾಶಾಸನವು ತಪ್ಪ[ಿ]ದ
ನುಡಿಗಳಲ್ಲದೆ ಮಿಕ್ಕಿನಂತೆ ಕೆಡುತ್ತ ಹುಟ್ಟುತಿಹ
ಕಡಲ ತೆರೆಗಳ ಬುದ್ಬುದಂಗಳೆ
ಜಡಧರಂಗಳೆ ಶಕ್ರಚಾಪವೆ
ಸೊಡರೆ ಬೀದಿಯ ಗಾಳಿಯೇ ಮಿಂಚುಗಳೆ ಚಂದ್ರಮನೇ ೨೫

ನುಡಿದ ಭಾಷೆಯನೆಚ್ಚರಿಸಿದಡೆ
ಕಡು ಹೆ[ಿ]ದಱಿದನು ತನ್ನೊಳಗೆ ತಿಳಿ
ದೊಡನೆ ಜಂಗಮದೊಡನೆ ತಾನುಂ ಲಿಂಗದೊಳಗಾದ
ನುಡಿಯಬಹುದೇ ತ್ರಿಭುವನದೊಳವ
ಗಡದ ಭಾಷೆಯನಾರಿಗಾದಡೆ
ನುಡಿದ ಭಾಷೆಯನಿಂತು ನಡೆಸಲು ಬಸವನೇ ಬಲ್ಲ ೨೬

೧ತ್ಪ (ಥ, ಪ). ೨ಬೆ (ಸ).

CC-0. Jangamwadi Math Collection. Digitized by eGangotri

ಎಂದು ಕೊಂಡಾಡುತ್ತ ಮಡಿವಳ
ತಂದೆಯಾಗಳೆ ಮಠದೊಳಿರ್ದ್ಯೆ
ತಂದ ಶಿವಗಣತಿಂಥಿಣಿಗೆ ಕೈಮುಗಿದು ಹೊಡವಡಲು
ಬಂದಿರೇ ಮಾಚಯ್ಯ ಕುಳ್ಳಿರಿ
ಸಂದ ಶರಣನ ಹಿಂದೆ ಬಸವಂ
ಸಂದ ಪರಿಯಂ ನೋಡು ಭಾಷೆಗೆ ನಿಂದು ಸಂದನಲಾ ೩೭

ಆವ ಯುಗದೊಳಗಾವ ಲೋಕದೊ
ಳಾವ ಭೂಮಿಯೊಳಾವ ದೇಶದೊ
ಳಾವ ನಾಡೊಳಗಾವ ಪುರದೊಳಗಾವ ಕಾಲದೊಳು
ದೇವ ದಾನವ ಮಾನವರೊಳಾ
ವಾವ ಭಕ್ತರುಪೊಳರೆ ಬಸವನ
ಭಾವದಂದದಿ ಜಂಗಮಪ್ರಾಣಿಗಳೆನಿಸಿದವರು ೩೮

ಜಂಗಮೈಕಪ್ರಾಣಿ ಬಸವಾ
ಜಂಗಮಾತ್ಮತ್ರಾಣ ಬಸವಾ
ಜಂಗಮಾರಾಧನಕಳಾಪಧುರೀಣ ಬಸವಣ್ಣ
ಜಂಗಮಪ್ರಿಯಶೀಲ ಬಸವಾ
ಜಂಗಮೇಚ್ಛಾಲೋಲ ಬಸವಾ
ಜಂಗಮಾಲಾಪಾನುಕೂಲಾ ಪಶುಪ ಬಸವಯ್ಯ ೩೯

ಕ್ಷಾಮವಾಯಿತು ಭಕ್ತಿಯಕಟ ಟ
ಕ್ಷೇಮವೆಲ್ಲಿಯದೆಮಗೆ ಶಿವ ಶಿವ
ಸೋಮನೇಮಾಚೂಡ ನೋಡಾ ನಿಮ್ಮ ವಾಹನವ
ವಾಮದೇವಾಭೀಮ ಭೀಮಾ
ಕಾಮಹರ ಹರ ಭರ್ಗ ದುರ್ಗಾ
ಕೋಮಳಾಮಳದೋರ್ಲತಾವೃತ ಕಲ್ಪಭೂಜಾತ ೪೦

CC-0. Jangamwadi Math Collection. Digitized by eGangotri

ಭಾನುವಿಲ್ಲದ ದಿವಸಮುಂ ಹಿಮ
ಭಾನುವಿಲ್ಲದ ರಾತ್ರೆಯುಂ ಸ
ನ್ಮಾನವಿಲ್ಲದ ನಂಟನುಂ ಪ್ರಭುವಿಲ್ಲದಾ ಗ್ರಾಮ
ದಾನವಿಲ್ಲದ ದಂತಿ ತುರಗವಿ
ತಾನವಿಲ್ಲದ ಮೋಹರಂ ಸು
ಜ್ಞಾನವಿಲ್ಲದ ಯೋಗಿ ಸೂನ್ಯತವಿಲ್ಲದಾಲಾಪ ೩೧

ದಾನಗುಣವಿಲ್ಲದನ ಸಿರಿಯಭಿ
ಮಾನವಿಲ್ಲದ ಭಾರ್ಯೆ [೧]ಸದ್ಗುರು[೨]
ಧ್ಯಾನವಿಲ್ಲದ ಶಿಷ್ಯನಾಪತಿಗಿಲ್ಲದರ್ಥವದು
ಗಾನವಿಲ್ಲದ ನರ್ತನಂ ವಿ
ದ್ವಾನಿಪುಣನಲ್ಲದ ಬುಧಂ ಸಂ
ತಾನವಿಲ್ಲದ ಮನೆ ಜನನಿಯಿಲ್ಲದ ತನೂಭವನು ೩೨

ನಲ್ಲನಿಲ್ಲದ ನಲ್ಲಳಂಗನೆ
ಯಿಲ್ಲದಿಪ್ಪ ಗೃಹಸ್ಥನುಂ ನೃಪ
ನಿಲ್ಲದವನಿಯಮಾತ್ಯನಿಲ್ಲದ ಭೂಪರಂ ಹಂಸೆ
ಇಲ್ಲದಿಪ್ಪ ಕೊಳಂ ಮಧುವ್ರತ
ವಿಲ್ಲದಬ್ಜವನಂ ಶುಕಾವಳಿ
ಯಿಲ್ಲದಾರವೆ ಶಾಸ್ತ್ರಕೋವಿದರಿಲ್ಲದಾಸ್ಥಾನ ೩೩

[೩]ಸದಯವಿಲ್ಲದ ಚಾಗಿ[೪] ಸೊಡರಿ
ರಿಲ್ಲದ ನಿವಾಸಂ ಭೂತದಯೆಯಿ
ಲ್ಲದನ ಮಾಟಂ ಶಾಂತಿಯಿಲ್ಲದ ತಾಪಸನ ತಪವು
ಹದುಳವಿಲ್ಲದ ದೇಹರಂ ಸಂ
ಮುದಿತವಿಲ್ಲದ ರತಿ ಬಸವನಿ
ಲ್ಲದ ಬಹಳ ಭಕ್ತಿ ಪ್ರವರ್ಧನವಪ್ಪುದೆ ಲೋಕದೊಳು ೩೪

೧–೨ ಶ್ರೀಗುರು (ಪ). ೩–೪ ಸದಯವಿಲ್ಲದ ಚಾರಿ (ಡಾ); ಚದುರನಲ್ಲದೆ ಚಾಗಿ (ಕ, ಚ, ಥ, ನ, ಮ); ಸದನವಿಲ್ಲದ ಬಾಳ್ಕೆ (ಅ).

CC-0. Jangamwadi Math Collection. Digitized by eGangotri

ದೇವ ನೀನೊಳಕೊಂಡ ಬಸವನ
ನೀವುದುಚಿತಂ ಜಂಗಮಕೆ ಭ
ಕ್ತಾವಳಿಗೆ ಹಿತವಾಗಿ ಜಗದುಪಕಾರವಾಗಲ್ಕೆ
ನೀವು ಬರಿಸಲು ಬಂದನಿಲ್ಲಿಗೆ
ನೀವು ಬೆಸಸಲು ನಡೆವುತಿರ್ದನು
ನೀವು ಕರೆಯಲು ಕಾಲವಲ್ಲದ ಕಾಲವಾತಂಗೆ ೩೫

ಆರನಾಶ್ರಯಿಸುವರು ಜಂಗಮ
ವಾರ ಸಂಗೋಷ್ಠಿಯೊಳಿಹರು ಬಳಿ
ಕಾರನಾಗಳು ಕಾಡುವರು ಬೇಡುವರು ಮನ್ನಾಥಾ
ಚಾರು ಗೌರವಲೈಂಗ್ಯಭಕ್ತ್ಯಾ
ಪೂರಿತತ್ರಿವಿಧಪ್ರಸಾದಾ
ಹಾರಸಂತುಷ್ಟಾಂಗ ಬಸವನನೊಯ್ದಿರೇಯೆನುತ ೩೬

ಗೋಳಿಡುವ ಭಕ್ತರುಗಳಂ ಮಡಿ
ವಾಳಮಾಚಯ್ಯಂ ನಿವಾರಿಸಿ
ಹೇಳಿದಪೆನೆಲ್ಲರು ಗಜಬಜಿಸದೆನ್ನ ಬಿನ್ನಪವ
ಕೇಳಿ ಜಂಗಮಜೀವಿಯಹ ಕರು
ಣಾಳು ಬಸವನ ಮನವನಱಿಯಲು
ಶೂಲಿ ಮೇದರಕೇತಿದೇವನನೊಯ್ದ ಕಾರಣವು ೩೭

ಬಸವರಾಜನು ತನ್ನೊಳೆಚ್ಚ
ತ್ತಸುಗಳಿದನಾತನ ಬಳಿವಿಡಿದು
ಹೊಸತೆ ತಾನಿದು ಜಂಗಮಪ್ರಾಣೈಕಭಾಷೆಯನು
ಬಸವನುದ್ಧರಿಸಿದನು ವಿಜಯನು
ಬಸವನಂ ಕೇತಯ್ಯನಂ ಹರ
ನೊಸೆದು ತಾನೊಳಕೊಂಡಡಿದ[೧]ಕಾನಾಯ್ತು ತಾನಾಯ್ತು[೨] ೩೮

೧–೨ ಕೇನಾಯ್ತು ತಾನಾಯ್ತು (ಕ, ಚ, ನ, ಮ); ಕೇನಾಯ್ತು ಏನಾಯ್ತು (ಬ).

CC-0. Jangamwadi Math Collection. Digitized by eGangotri

ಬೆದಱಿದಿರಿ ಬೆಚ್ಚಿದಿರಿ ಕಳವಳಿ
ಸದಿರ್ಕಳುಕದಿರಿ ಕಂದದಿರಿ ಕುಂ
ದದಿರಲಸದಿರಿ ಕುಸಿಯದಿರಿ ಕೊಂಕದಿರಿ [೧]ಕೊಡಹದಿರಿ[೨]
ಕವಡದಿರಿ ಹೆದಱಿದಿರಿ ಬೆಂಬೀ
ಳದಿರಿ ಮಱುಗದಿರಂಜದಿರಿ ಕರ
ಗದಿರಿ ಕೊರಗದಿರೋಡದಿರಿ ಎನ್ನಾ[೩]ಪ್ತ ಹರನಾಪ್ತ[೪] ೩೯

ಪ್ರಮಥರಱಿಯದೆ ರುದ್ರರಱಿಯದೆ
ಉಮೆಯಱಿಯದೆ ಮಹಾಪುರಾತನ
ಸಮಿತಿಯಱಿಯದೆ ಆದ್ಯರಱಿಯದೆ ಬಾಲಶಶಿಮೌಳಿ
ಕ್ಷಮೆಯುಳಿದು ನಿಜಧರ್ಮಮಾರ್ಗ
ಕ್ರಮವುಳಿದು ಭಕ್ತೈಕಭಾವದ
ಸಮತೆಯುಳಿದಿಬ್ಬರನು ಮಡಗಿದ ಬೆಡಗು ಲೇಸಾಯ್ತು ೪೦

ಕೇತಿದೇವನನೀಗ ಕೊಡು ಕೊಡು
ಆತನೊಡನೀ ಬಸವನೆಯ್ತಹ
ನೇತಕೀ ತಾಮಸವು ಹರ ಹರ ತಳುವು ಮಾಡದಿರಿ
ನೀತಿಯಲ್ಲಿದು ಜಂಗಮಪ್ರಾ
ಣಾತಿಶ[೫]ಕ್ತಪ್ರಾಣಿಯಂ ಪ್ರ
ಖ್ಯಾತಪ್ರತತ್ರಿವಿಧಭಕ್ತಿಸ್ಥಲದ ಮ[೬]ರ್ಮಿಗನಾ ೪೧

ಜಂಗಮಾವಳಿಗೊಲಿದು ಮಾಡುವ
ಲಿಂಗವಂತರನಿತ್ತಲಿರಿಸದೆ
ನುಂಗಿಕೊಂಡಿಂತುಗುಳದಿದ್ದಹನನ್ನು ಸೈರಿಸೆನು
ಅಂಗಜಾರಿಯ ಮೇಲೆ ಹೊಯಿ ಹೊಯಿ
ಡಂಗುರವನೆಂದೆನುತ ಮಾಚ
ಯ್ಯಂ ಗಣಂಗಳ ಮುಂದೆ ಹೊಯ್ದನು ನಭವದರುತಿರಲು ೪೨

೧–೨ ಕೋಡದಿರಿ (ಆ, ಕ, ಚಿ, ಥ, ನ, ಬ, ಮ). ೩–೪ ಮಹರನಾಮ (ಮ). ೫ ಸ (ನ). ೬ ವ (ಆ, ಕ, ಚ, ಡಾ, ಥ, ನ, ಮ).

CC-0. Jangamwadi Math Collection. Digitized by eGangotri

ಅತ್ತಲಾ ಕೈಲಾಸಪುರವರ
ದತ್ತವಿತ್ತಲದಾಯ್ತು ದೆಸೆಗಳ
ಸುತ್ತಣಮರರು ತಲ್ಲಣಿಸಿದರಜಾಚ್ಯುತಾದಿಗಳ
ಚಿತ್ತ ಸಂಚಲವಾಯ್ತು ಮುನಿಗಳ
ಮೊತ್ತಕದ್ಭುತವಾಯಿ[೧]ತೊಡನೆ[೨] ನ
ಗುತ್ತ ಶಂಕರನಿದ್ದನಾಸ್ಥಾನಂ ಗಜಬಜಿಸಿತು ೪೩

ಶೂಲಪಾಣಿಯ ಮೇಲೆ ನಂಬಿಯ
ಮೇಲೆ ಹೊಯ್ದನು ಡಂಗುರವನಾ
ಭೀಳಭಕ್ತನು ಮುನ್ನ ಮೆಱಿ[೩]ಮಿಂಡನು ಹಲಾಯುಧನು
ತಾಳವಂ ಹೊಯ್ದನು ಹರನ ಸಿರಿ
ಯಾಳುವಿನ ಮೇಲಿಂದು ತಾಂ ಮಡಿ
ವಾಳ ಮಾಚಯ್ಯನು ಪಿನಾಕಿಗೆ ನಾದವಂ ಹೊಯ್ದ ೪೪

ಆಮಮ ಚೋದ್ಯವೆನುತ್ತ ನಾನಾ
ಪ್ರಮಥನಿಚಯ ಪುರಾತನಾರ್ಯ
ಪ್ರಮುಖರೆಲ್ಲರು ಮಾಚಿದೇವನು ಹೊಯ್ದ ನಾದಕ್ಕೆ
ಸುಮುಖರಾಗುತ್ತಾಗಳೊಂದೆಸೆ
ಸಮತೆಗಟ್ಟಿ ಗಣಂಗಳಗಜಾ
ರಮಣನೊಡನಿಂತೆಂದು ನುಡಿದರು ಸಭೆ ನಡುಗುತಿರಲು ೪೫

ಕೊಡು ಕೊಡೀಗಳೆ ದೇವ ಕೊಡದಿ
ರ್ದಡೆ ಹೊಱಗು ನೀವಲ್ಲಿಗಿಲ್ಲಿಗೆ
ಮಿಡುಕಬಾರದು ಭಕ್ತರಂ ಕೊಟ್ಟಲ್ಲದೆಲ್ಲಿಗೆಯು
ಮಡಗದಿರು ಮಡಿವಳ ಶರಣನವ
ಗಡೆಯನಾತನು ಕಲ್ಲಿನಾಥನ[೪]
ಕಡುಗಲಿಯ ಮಾಸಾಳು ಮಾಹೇಶ್ವರರ [೫]ಬಲದೋಳು[೫] ೪೬

೧–೨ ತೆಂದು (ಪ). ೩ ನು (ಪ). ೪–೫ ಬಲದೊಳಗೆ (ಡಾ); ಬಳಗದೊಳು (ಮ).

CC-0. Jangamwadi Math Collection. Digitized by eGangotri

ವೀರಭಕ್ತಿಗೆ ಬೀರುವಲ್ಲಾ
ಮಾರಮಾರಣ ನೀವು ಬಸವಕು
ಮಾರನಂ ಕೇತಯ್ಯನೊಡನೀಗಳೆ ಕಳುಹು ಕಳುಹು
ಧಾರುಣಿಗೆ ನಿಜಭಕ್ತಿಯಂ ನೆಲಿಸಿ
ಪಾರವೆಯ್ದಿಸು ಕೊಲಿತೆ ಮಾಡದೆ
ಸೈರಿಸುವರಾರ್ ನಿಮ್ಮ ಜಂಗಮದಟ್ಟಣೆಗೆ ಬಳಿಕ ೪೭

ಬಸವನಿಲ್ಲದೆ ಸಕಳಜಂಗಮ
ವಿಸರದಿಚ್ಛೆಯನಱಿದು ಮಾಡುವ
ಹೊಸನಲವಿನಂತಃಕರಣಶುದ್ಧಾತ್ಮರಾರೀಶ
ಬಸವನಿಲ್ಲದೆ ಮರ್ತ್ಯಲೋಕ
ಕ್ಕಸದೃಶಾಮಳಭಕ್ತಿಯದು ಪಸ
ರಿಸುವುದೇ ಪಾವನವಹುದೆ ಬಸವಣ್ಣನಿರದವನಿ ೪೮

ತ್ರಾಣವಲ್ಲಾ ಭಕ್ತರಿಗೆ ಸತ್
ತ್ರಾಣವಲ್ಲಾ ಜಂಗಮಕೆ ಪರಿ
ಯಾಣವಲ್ಲಾ ಶುದ್ಧಸಿದ್ಧಾದಿ ಪ್ರಸಾದಕ್ಕೆ
ಸಾಣೆಯಲ್ಲಾ ಭಕ್ತಿಗುಣಮಣಿ
ಜಾಣನಲ್ಲಾ ಪರಮತತ್ವದೊ
ಳೇಣಿಯಲ್ಲಾ ಮುಕ್ತಿಗೇಱುವ ನಿಮ್ಮ ಬಸವಣ್ಣ ೪೯

ಎಂದು ವೀರಕ ವೀರಭದ್ರಾ
ನಂದನಂದ್ಯಾದಿಪ್ರಮಥಗಣ
ವೃಂದವಖಿಳಪುರಾತನ ಮಹಾಭಕ್ತರೀಶ್ವರನ
ಮುಂದೆ ನಿಂದಿತು ನಿಮ್ಮ ಮೋಹದ
ಕಂದನಂ ನಿಜ ಭಕ್ತಿಕಂದನ
ನಿಂದುಧರ ನೀವೀ ಬಸವನಂ ಕಳುಹು ಕಟಕಕ್ಕೆ ೫೦

CC-0. Jangamwadi Math Collection. Digitized by eGangotri

ಎನಲೊಡನೆ ಕೇತಯ್ಯನಂ ಬಸ
ವನನಸಂಖ್ಯಾತರ ಸಮಕ್ಷದೊ
ಳನುನಯದಿ ಲಾಲಿಸುತ ಹರುಷಂಬಟ್ಟು ಮುಂದಿಟ್ಟು
ಮನಸಿಜಾಂತಕನಿತ್ತಲವರ್ಗಳಿ
ಗನಿತಱಿಂಗಳಿ ತತ್ಪ್ರಮಥರಿಗೆ ಸದು
ವಿನಯದಿಂ ಸಾಷ್ಟಾಂಗದಂಡಪ್ರಣಮವಂ ಮಾಡಿ ೫೧

ಕೈಗಳನು ಮುಗಿದಿಬ್ಬರುಗಳನು
ರಾಗದಿಂ ಬಿನ್ನೈಸಿದಪೆವು ಮ
ಹಾಗಣಂಗಳು ಚಿತ್ತವಿಸಿ ನಾವಿನ್ನು ಮರ್ತ್ಯಕ್ಕೆ
ಹೋಗಲೊಲ್ಲೆವು ಬಲ್ಲೆವಲ್ಲಿಯ
ಭೋಗವಂ ನಿಮ್ಮಡಿಗಳೋಲಗ
ವಾಗಿ ಬಾಳ್ವುದು ಸಾಕೆನಲ್ಕಾ ಬಸವನಂ ನೋಡಿ ೫೨

ಆಹ ಬಸವಾ ಲೇಸು ಮಾಡಿದೆ
ಸೋಹವಂ ಬಯಸಿದೆಯಲಾ ದಾ
ಸೋಹವೊಲ್ಲದೆ ಲಿಂಗಜಂಗಮದಲ್ಲಿ ನೀ ನಿನ್ನಾ
ಬೇಹ ಸಜ್ಜನಶುದ್ಧಭಕ್ತಿ
ಗ್ರಾಹಕಸ್ಥಿತಿಯಂ ಕ್ಷಿತಿಗೆ ನಿ
ರ್ವಾಹವೆಯ್ದಿಸದಿತ್ತಲಿರ್ದಹೆನೆಂಬ ತೆಱನೇನು ೫೩

ಜಲದ ನಿನದಕೆ ಕುಣಿವ ನವಿಲ್ಗಳ
ವೊಲು ವಸಂತಸಮಯಕೆ ಬಯಸುವ
ಗಿಳಿಗಳವೊಲಾ ಪೂರ್ಣಶಶಿರುಚಿಗೆಳಸುವ ಚಕೋರ
ಕುಲದವೊಲು ಸೂರ್ಯೋದಯಕೆ ಮನ
ವಲರ್ವ ಚಕ್ರಂಗಳವೊಲಾಗಳ
ಖಿಳಶಿವೈಕ್ಯರು ನಿನ್ನ ಬರವಂ ಬಯಸುವರು ಬಸವ ೫೪

CC-0. Jangamwadi Math Collection. Digitized by eGangotri

ಇಲ್ಲಿಗಲ್ಲಿಗೆ ಎನಗೆ ನಿನಗೊಂ
ದೆಳ್ಳನಿತು ತೆಱಹಿಲ್ಲ ಮಗನೇ
ಬಲ್ಲೆ ನೀನದನೆನ್ನ ಮಣಿಹವನಂದು ಕೈಕೊಂಡೆ
ಒಳ್ಳಿತಾಗಲು ತ್ರಿವಿಧ ಭಕ್ತಿಯ
ನೆಲ್ಲೆಡೆಯೊಳುಂ ವಸುಮತಿಗೆ ನೆಱಿ
ಪಲ್ಲವಿಸಿ ಬಾ ಹೋಗೆನುತ ಬೋಧಿಸಿ ಕಳುಹಲೊಡನೆ ೫೫

ಕೃತ್ತಿವಾಸಂಗಾ ಪ್ರಮಥರಿಗೆ
ಮತ್ತೆ ವಂದಿಸುತಿಬ್ಬರುಂ ಮುದ
ವೆತ್ತಸಂಖ್ಯಾತರ ನಿರೂಪದೊಳಿಳೆಗೆ ನಡೆತಂದು
ಇತ್ತಲೀ ಕಟಕದೊಳು ಸಕಲ ಮ
ಹತ್ತುಸಹಿತಂ ಮಾಚಿದೇವ ಗ
ಣೋತ್ತಮಂ ಒಡ್ಡೋಲಗಂಗೊಟ್ಟಿರ್ದ ಸಮಯದಲಿ ೫೬

ಕೇತಿದೇವಂ ಬಸವರಾಜನು
ಪ್ರೀತಿಯುಂ ಭೀತಿಯುವೆರಸಿ ಪರಿ
ಪೂತ ಚೇತಸ[೧]ರಾಗಿ ಮಾಚಯ್ಯಂಗೆಱಗಲೊಡನೆ
ಆತನುಂ ತಾವಿಬ್ಬರುವಸಂ
ಖ್ಯಾತ ಭಕ್ತಗಣಂಗಳಿಗೆ ಧರ
ಣೀತಳದೊಳಷ್ಟಾಂಗದಂಡಪ್ರಣಮವಂ ಮಾಡಿ ೫೭

ನಿಮ್ಮ ಭೃತ್ಯರು ಬಂದರಿಲ್ಲಿಗೆ
ನಿಮ್ಮ ದಾಸೋಹಂಗಳಂ ಹರು
ಷಂ ಮಿಗಲು ಮಾಡಿಸಿಕೊಳುತ್ತಂ ಮುನ್ನಿನಂದದಲಿ
ನಿಮ್ಮ ಕಾರುಣ್ಯಪ್ರಸಾದವ
ನೊಮ್ಮೆಯುಂ ಕೊಟ್ಟುದ್ಧರಿಸಿ ನೀ
ವೆಮ್ಮನೆನುತಂ ಮಾಚಿದೇವನು ಮತ್ತೆ ಶರಣೆನಲು ೫೮

೧ನ (ನ, ಮ).

CC-0. Jangamwadi Math Collection. Digitized by eGangotri

ಪರಮ ಹರುಷಿತರಾಗಿ ಮಾಹೇ
ಶ್ವರರಖಿಳ ಜಂಗಮವು ಮಡಿವಳ
ಶರಣನಂ ಕೊಂಡಾಡಿ ತಾವಿಂತೆಂದು ಬೆಸಸಿದರು
ನರರು ಸುರರುಂ ಪೆದಱುತಿರೆ ಡಂ
ಗುರವನಭವನ ಮೇಲೆ ಹೊಯ್ದಾ
ಸುರದ ವೀರಪರಾಕ್ರಮಂ ಮೆಱಿಪಿದುಭಯಲೋಕದಲಿ ೫೯

ಆರಿದೆನಲು ಕೇತಯ್ಯನಂ ಬಸ
ವರಸನಂ ಕೊಂಡೊಯ್ದು ದರ್ಪಕ
ಹರನ ಕೈಯಲು ಮೂದಲಿಸಿ ಮಿಗೆ ಮರಳಿ ಕೊಂಡೆಸೆವ
ಬಿರುದಿನಗ್ಗದ ಭಕ್ತಿಯಾರಿಗೆ
ದೊರಕುವುದು ನಿನಗಲ್ಲದೆಯೆ ವಿ
ಸ್ತರ ಮಹಾದ್ಭುತ ವೀರಭಕ್ತಿಸಮರ್ಥ ಮಾಚಯ್ಯ ೬೦

ಪ್ರಾಣವೀ ಜಂಗಮಕೆ ಬಸವಂ
ಪ್ರಾಣವಹೆ ಬಸವಂಗೆ ನೀವುಂ
ಪ್ರಾಣವೆಮಗೆಲ್ಲರಿಗೆ ಸೂನೃತವಾಚ ಮಾಚಯ್ಯ
ಕ್ಷೋಣಿಯೊಳು ನರರೂಪಧಾರಣ
ಸ್ಥಾಣುವಲ್ಲಾ ನೀವೆನುತ ಕ
ಲ್ಯಾಣದೊಳಸಂಖ್ಯಾತ ಭಕ್ತರು ಮಾಡಿದೇವಗಳ ೬೧

ಸಂಗತಾನಂದಾಶ್ರುಸಲಿಲಂ
ಕಂಗಳಲಿ ಪೂರಿಸಲು ಕರುಣಾ
ಪಾಂಗದಿಂ ನೋಡುತ್ತ ಕೊಂಡಾಡುತ್ತಿರಲು ಮತ್ತೆ
ಜಂಗಮಕೆ ಭಕ್ತಾವಳಿಗೆ ಸಾ
ಷ್ಟಾಂಗವೆಱಗಿ ನಮಿಸುತ ಮಾಚ
ಯ್ಯಂಗಳೆಯ್ತರೆ ಒಡನೆ ತಾವವರಂ ಮತಕೆ ಕಳುಹಿ ೬೨

CC-0. Jangamwadi Math Collection. Digitized by eGangotri

ಅವರ ಚರಣಯುಗಕ್ಕೆ ವಂದಿಸು
ತವರ ನಿರ್ಮಳ ಬೋಧೆಯಂ ತಿಳಿ
ದವರ ಕಾರುಣ್ಯಪ್ರಸಾದಾಮೃತದೊಳೋಲಾಡಿ
ಅವರ ನಿಜ ಭಕ್ತಿಸ್ಥಳದ ಮ
ರ್ಮವನಱಿದು ಕೇತಯ್ಯನುಂ ಮಂ
ತ್ರಿವರಬಸವಂ ತನ್ನರಮನೆಗೆ ಬಂದನೊಲವಿಂದ ೬೩

ಭದ್ರಮಯ ಭೂಲೋಕರುದ್ರ ಸು
ಚಿದ್ರಮಣ ಸಂಸಾರದುರಿತದ
ರಿದ್ರ ಕರುಣಾರಸಸಮುದ್ರ ಮಹಾಸಮರವೀರ
ಭದ್ರ ದೂರೀಕೃತಸಮಸ್ತ
ಕ್ಷುದ್ರ ಪರಿವೃತ ಪರಿಹೃತಜನೋ
ಪದ್ರ ಜಂಗಮದೇವತಾದ್ರುಮ ಶರಣು ಬಸವೇಶ ೬೪

ಇದು ಸಕಳ ಮಾಹೇಶ್ವರಾಮಳ
ಪದಪಯೋಜಪರಾಗಮಂದಷಟ್
ಪದಿಯೆನಿಪ ಪಾಲ್ಕುಱಿಕೆ ಸೋಮೇಶ್ವರನ ಕಾರುಣ್ಯ
ಒದಗಿದಖಿಳಕಲಾಪ್ರಪೂರಿತ
ಹೃದಯ ಭೀಮಕವಿಪ್ರಣೀತಾ
ಭ್ಯುದಯ ಬಸವಪುರಾಣಕಥೆಯೊಳು ಪಂಚಮಾಶ್ವಾಸ ೬೫ *

ಅಂತು ಕಾಂಡ ೫ಕ್ಕಂ ಸಂಧಿ ೩೬ಕ್ಕಂ ಪದಗಳು ೨೦೦೦ಕ್ಕಂ

ಮಂಗಳ ಮಹಾಶ್ರೀಶ್ರೀಶ್ರೀ

---

೧ ಮಿ (ಸ). * ಈ ಪದ್ಯ ನ ಪ್ರತಿಯಲ್ಲಿಲ್ಲ.

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಕಾಂಡ : ೬

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಂಧಿ : ೩೭

*

ಸೂಚನೆ : ಗಳೆದ ಬಜಿಸೆಜ್ಜೆಯಲಿ ಲಿಂಗವು
ನೆಲಸಿಮದು ಮೋಟಿಂಗೆ ಕೈಗಳು
ಮೊಳೆತಮಂಗುಳಿಸಹಿತವಾ ದಸರಯನ ಭಾವದಲಿ

ವಾಗ್ಮಲೀಲಾಭೃದ್ವರಾಮರ
ಭುಗ್ಮರಿನ ಮುಜಿಬಿದ್ದಯಾರ್ಜುನ
ರುಗ್ಮಿಮಾನಿ ಮರುದ್ವನೀಪನಪ್ರಂಡರೀಕಾಬ್ಜ
ವೃಗ್ಮಸನ ವಿಲಸದ್ಧವಳಸ
ಮ್ಯಗ್ಮನತರ ವಿಯದ್ವರಾಖಿಳ
ದಿಗ್ಮಿತಯಶೋರಾಶಿ ಭಕ್ತಸಮುದ್ಧರಣ ಬಸವ ೧‡

ಧರಣಿಯೊಳು ದಸರಯ್ಯನೊರ್ಬನು
ಪುರಹರನ ಸದ್ಭಕ್ತ ಸಂಯಮಿ
ದುರಿತಸಂಸಾರಂ ವಿಶಿಷ್ಟಾಚಾರನತಿಧೀರ
ವಿರಹಿತಾಶಂ ಕರ್ಮಪಾಶೋ
ತ್ಕರವಿನಾಶಂ ವಿಶದಕೀರ್ತಿ
ಸ್ಫುರಣಾಂತಃಕರಣಶುದ್ಧನು ಸಚ್ಚಿದನುಬದ್ಧ ೨

ಸ್ವೀಕೃತಮಹೇಶ್ವರಶರಣ ದೂ
ರೀಕೃತಾಧ್ವನು ಪುಣ್ಯಜೀವಿ ತೃ
ಣೀಕೃತಪ್ರಾಪಂಚಿಕಂ ಸೂನೃತವಚನರಚನ
ಪ್ರಾಕೃತಾತ್ಮನಿರಸನನತಿದೂ
ರೀಕೃತಾಘನು ಸರ್ವಜೀವಸ
ದಾಕೃಪಾಲೋಕನನಹಿಂಸಾಭಾವಜೀವನನು ೩

---

* ರಾಗ: ವಸಂತ (ಕ, ಚ, ಡಾ, ಧ, ಪ); ಕನ್ನಡಗೌಳ (ಅ); ಮಾಳವಗೌಳ (ಮ); ಸೌರಾಷ್ಟ್ರ (ತ). ‡ ಈ ಪದ್ಯ ನ ಪ್ರತಿಯಲ್ಲಿಲ್ಲ. ೧ ಶಾ (ಬ).

CC-0. Jangamwadi Math Collection. Digitized by eGangotri

ವೀರನಚಲಿತಭಕ್ತಿಮಣಿಶೃಂ
ಗಾರನಪಗತಚಿತ್ತಜನ್ಮವಿ
ಕಾರನಭವೋತ್ಸವಿಸುಖಾಳಂಕಾರಪರಿಪೂರ
ಸೂರಿಜನವನಜಾತಹಂಸನು
ಸಾರನಿಗಮೋತ್ತಂಸನುತ್ತಮ
ಚಾರುಸುವ್ರತರತವತಂಸನೆನಲ್ಕೆ ಪೆಂಪೆಸೆದು ೪

ರಮಣ ಸದಯಾ ದಾನ ಶಮ ದಮ
ಯಮ ನಿಯಮಮುಖಿಶೈವಧರ್ಮ
ಕ್ರಮವೆಸೆಯೆ ಗುರುಲಿಂಗಜಂಗಮಪೂಜೆಗಳನೊಲಿದು
ಸುಮುಖಿಭಕ್ತಿಯೊಳಾಚರಿಸುತಂ
ಪ್ರಮಥನಾಥಾರ್ಚನನಿಮಿತ್ತಂ
ಸುಮನಸಂಗಳಿಗೆಯ್ದುವಡೆಯಲಿ ದುರ್ಜನರು ನೆರೆದು ೫

ಭುವನವಖ್ಯಾತಿರಲೆಮ್ಮ ಊರೊಳು
ಶಿವನ ಭಕ್ತಿಯ ಹೆಂಜಿನಲಿ ಮೇ
ಣಿವರು ಹಿರಿಯರು ಕಂಡ ಶಾಂತತೆಯುಳ್ಳವರು ಕಂಡಾ
ಲವವಿ[೧]ನಿತುವುಂ ಕೋಪವಿಲ್ಲದ
ಸವಿನಯಸ್ಥರು ಕಂಡ ಸುವ್ರತ
ದವಿರಳಾತ್ಮರು ಸರ್ವಜೀವದಯಾಪರರು ಕಂಡಾ ೬

ಆವ ತೆಱದಿಂ ತಮ್ಮ ಹಿತವಂ
ತಾವಱಿಯದಶ್ರಾಂತವೆಲ್ಲಾ
ಜೀವಹಿತವನೆ ಬಯಸುವಾರ್ಯೋತ್ತಮರಿವರು ಕಂಡಾ
ತಾವು ಸೊಂದುಂ ಮನದೊಳಿನಿತುಂ
ನೋವನಱಿಸದೆ ಸೈರಿಸುವ ಸುಜ
ನಾವತಂಸರು ಕಂಡ ತಾವತಿ ಕರುಣೆಗಳು ಕಂಡಾ ೭

---

೧ ದ (ನ, ಬ). ೨ ಪ್ರ (ಮ).

CC-0. Jangamwadi Math Collection. Digitized by eGangotri

ಮತ್ತದಲ್ಲದೆ ಕಣ್ಣೆಱಿದು ಪರ
ರತ್ತ ನೋಡನು ಮನದೊಳೇನನೆ
ನುತ್ತಮಿಹರೋ ತಾವನುತ ಬಾಯೆತ್ತಿ ಮಾತಾಡ
ಚಿತ್ತದಲಿ ನೊಂದಪರು ಲೋಗರೆ
ನುತ್ತ ಜಂತುಗಳಿಳೆಯೊಳಳಿವವೆ
ನುತ್ತ ತಾನೆಡೆಯೆಡೆಯೊಳಾರಯ್ವೊಯ್ಯನಡಿಯಿಡುವ ೮

ತೊಡರಿಯಡ್ಡಂ ಪಾರ್ವ ಜೀವಿಗ
ಳೆಡೆಗುಪದ್ರವದಹುದೊ ತಾ ಪೋ
ಪೆಡೆಯೊಳೆನುತಂ ಕೈಗಳಂ ತವೆ ಬೀಸದಿಹನಂತೆ
ನುಡಿಯಲೇತಕೆ ಪಲವನಿನ್ನೀ
ಒಡೆಯನರಳ್ಗಳಿಗೆಯ್ದಿ ಪೂವಿನ
ಗಿಡುವಿನಲಿ ಕೊಯ್ಯಲ್ಕೆ ನೊಂದಿತು ನೊಂದೆನೆಂದೆನುತ ೯

ಆವಗಂ ಗಿಡು ಮುನ್ನ ಚಿವುಟಿದ
ಠಾವು ಭೋರನೆ ನೆತ್ತರುಗೆ ತಾ
ವಾವ ಗಿಡುವಂ ಮುಟ್ಟಿದಡೆ ಹೋ ನೊಂದೆವೆನುತಿಹವು
ಆವ ಗಿಡುವಂ ನೋಯಿಸಿದಡಂ
ಭಾವಿಸುವಡಿದು ಹಿಂಸೆಯೆನುತಂ
ತೋವಿ ಹೂಗಿಡುಗಳ ಕೆಳಗೆ ಸುತ್ತುವರೆ ಸಾರಿಸುತ ೧೦

ಗಾಳಿ ಸೋಂಕದ ಹಾಂಗೆ ಗಿಡುಗಳಿ
ಗೋಳಿಯಲಿ ನಿಡುಚಾಪೆಗಳನಾ
ಟೀಳನಾಗಳೆ ಕಟ್ಟಿ ಮಱಿಯಲಿ ತಮತಮಗೆ ಧರೆಯ
ಮೇಲೆ ಬಿದ್ದೊಂದೊಂದರಳನಾ
ಲೋಲಮನದಲಿ ತಂದು ಶಿವನಂ
ಕಾಲ ವೇಳೆಯನಱಿದು ಪೂಜಿಪನಲ್ಲದುಳಿದಂತೆ ೧೧

೧–೨ ನಡವೆಡೆ (ಬ). ೩–೪ ನಿಂತೀ (ಸ, ಬ).

CC-0. Jangamwadi Math Collection. Digitized by eGangotri

ಆವ ಗಿಡುವಂ ನೋಯಿಸಂ ಗಡ
ಆವಗಮಹಿಂಸಾತ್ಮನಪ್ಪನು
ಶೈವರೆಡೆಗಿದು ನೋಡಿದಡೆ ತಾಂ ಸರ್ವಸಾಮಾನ್ಯ
ಭಾವನಿಶ್ಚಳಭಕ್ತಿಯೆಂತುಟೊ
ತೀವಿದತಿವಿಶ್ವಾಸವೆಂತುಟೊ
ಜೀವಹಿತಮತಿಯೆಂತುಟೋ ಸೈರಣೆಯದೆಂತಹುದೊ ೧೨

ಎಂತುಟೊ ಅಹಿಂಸಾಪರತ್ವತೆ
ಎಂತುಟೋ ಕಾರುಣ್ಯಚಿತ್ತವ
ದೆಂತುಟೋ ಶಾಂತತೆಯದೆಂತುಟೊ ಅಪರತಿಕ್ಷಾಂತಿ
ಎಂತುಟೋ ೧ದನಾವಱಿಯೆ೧ವೆನು
ತಂತಿರದೆ ದುರ್ಜನರು ಪರರ ಸ
ಭಾಂತದಲಿ ಖಿಂಡಿಸಿದ ಕೈಯಿಲ್ಲದವನಂ ಕರೆದು ೧೩

ಕಾಳುಮೂಲನ ಮಂಡೆಯಂ ನು
ಣ್ಪೇಳಿ ಬೋಳಿಸಿ ೨ಮೂಹುರಿಗಳಲಿ೨
ಮೇಳವಿಸಿದುಡಿದಾರವಂ ಬಂಧಿಸಿಯವನ ತಲೆಯ
ಮೇಲೆ ಮೋಟಿ೩ಯೊಳೊಡಲೊಳಂತು
ದ್ಭೂಳಿಸುತ ಜಲಮಿಳಿತಭಸಿತವ
ನೋಳಿಯಿಂ ರುದ್ರಾಕ್ಷೆಯಂ ಸ್ಫಟಿಕಂಗಳಂ ಕಟ್ಟಿ ೧೪

೪ಬಿಳಿಯ೪ ಸೀರೆಯನುಡಿಸಿ ಪಲ್ಲಂ
ಸುಲಿಸಿ ಕೊರಳಲಿ ಬಟ್ಟಿಯ ಸೆಜ್ಜೆಯ
ನಳವಡಿಸಿ ಅದಱಿಲ್ಲಿ ಮೃದುವಸ್ತ್ರಂಗಳಂ ಸುತ್ತಿ
ತೊಳೆದು ಕಾಲ್ಗಳನಿಂತು ಜಂಗಮ
ಕಳವಡುವ ಲಾಂಛನವನೇಱಿಸಿ
ಪಲಬರಚ್ಚರಿವಡುತ ಪುರದೊಳು ನೋಡುತಿರಲಾಗಿ ೧೫

---

೧ ವೆ (ಬ). ೨–೩ ಮುಪ್ಪುರಿಗಳೊಳು (ಅ). ೪–೪ ಬಳಿಕ (ಅ).

CC-0. Jangamwadi Math Collection. Digitized by eGangotri

ಹೋಗಿ ದಸರಯ್ಯಗಳ ಮಂಡೆಯ
ನೀಗ ನಿನ್ನಯ ಮೋಟ ಕೈಯಲಿ
ಬೇಗದಲಿ ತಿವಿ ಮರಳಿ ತಿವಿಯನು ನಿನ್ನನಾ ಆಯ್ಯ
ರಾಗಿಸನು ನೀನಂಜವೇಡೆನ
ಲಾಗ ಬೆಬ್ಬನೆ ಬೆಱಿವುತಂ ತಲೆ
ವಾಗಿಸುತ ನಿಲುಕುತ್ತ ಘರ್ರನೆ ತೇಗುತೊಲೆವುತ್ತ ೧೬

ಒತ್ತರಿಸಿ ನಡೆವುತ್ತ ಕಾಲ್ಪಿ[೧]
ಚ್ಚುತ್ತ ಒ[೨]ದೆವು[೩]ತ ಬೆನ್ನ ಮುರಿದುಕೊ
ಳುತ್ತ ತನ್ನಂ ತಾನೆ ನೋಡುತ ತಿರುಗಿಸುತ ತಲೆಯ
ಎತ್ತಿ ಮುಸುಡಂ ಮುಱುಕಿಸುತ ಕೆಲೆ
ವುತ್ತ ಕೇಕರಿಸುತ್ತ ಉಗುಳು
ತ್ತಿತ್ತರದ ಮುಡುಹುಗಳನಲುಗುತ ತಪ್ಪಲಡಿಯಿಡುತ ೧೭

ಭಂಡಿಸುತ್ತಪಸರಪನಾಡುತ
ತಂಡನಿಕ್ಕುತ ಮೋಟಕೈಗಳ
ದಂಡಗೊಡುತಂ ಗಹಗಹಿಸುತಂ ಹಾಡುತಾಡುತ್ತ
ಚೆಂಡಿಗೊಂಡು ನಿಲುತ್ತ ನಡೆವುತ
ಕುಂಡೆಗಳ[೪]ನಂತಾಟ[೫]ಸುತ್ತಂ
ಮುಂ[೬]ಡುಗಾ[೭]ಟಿನು ದಸರಿದೇವನ ಬಳಿವಿಡಿದು ಸಾರ್ದು ೧೮

ಅಂದದಿಂ ಶರಣಾರ್ಥಿಯೆಂದಹೆ
ನೆಂದು ಬಾಯ್ತುಡಬಡಿಸಿ ನಾಲಗೆ
ಹೊಂ[೮]ದದಂತಲ್ಪಾಯು ದೀರ್ಘಾಯುವು ನಿನಗೆ ಎನುತ
ಹಿಂದೆ ಜಂಗಮವೇಷಮಂ ನೆವ
ದಿಂದೆ ಧರಿಸಿದ್ದುದನಱಿದು ಸಿ
ಗ್ಗೊಂದಿ ದಸರಯಲಿಂಗ ಎಲೆ ಎಲೆ ದಸರಿದೇವಯ್ಯಾ ೧೯

೧ಲ್ಪೆ (ಸ). ೨–೩ದರು (ಥ). ೪–೫ನಂತಾಡಿ (ಕ, ಚ, ಥ, ಪ, ಬ); ನಲ್ಲಾಡಿ (ಬ, ಅ). ೬–೭ಡಕಾ (ಥ, ನ, ಪ, ಬ). ೮ಹೆಂ (ಬ).

CC-0. Jangamwadi Math Collection. Digitized by eGangotri

ದೇವ [೧]ಖನೆನ್ನುವನಱಿಯಿರೇ
ನಾವು ಆಗಳು ತೊಡಗಿ ನಿಮ್ಮ ಗು
ಣಾವಳಿಗಳಂ ಕೇಳ್ದು ನಿಮ್ಮಯ ಹಿಂದೆ ಬರುತಿರಲು
ನೀವಿನಿತು ಬಗೆಗೊಳ್ಳಿರೆಮ್ಮನು
ನೀವು ನಿಂದೆಮ್ಮೊಡನೆ ನುಡಿಯಿರಿ
ಆವೆಡೆಗೆ ಹೋದಿಹಿರಿ ನೀವೇಂ ಕಾರ್ಯವೆಂದೆನ್ನ[೨] ೨೦

ಅಳುಕದಂಜದೆ ಸರಕುಮಾಡದೆ
ಮಲೆವುತಿರ್ದಪೆ ಗರ್ವವೇತಕೆ
ಎಲೆಲೆ ಎನ್ನಂ ಮೋಟ ಮಲಿದೇವಯ್ಯನೆಂಬರಲಾ
ಇಳೆಯೊಳಱಿಯಾ ಎನ್ನ ಹೆಸರನು
ತಿಳಿದು ನೀನೋಡಂತುಮಲ್ಲದೆ
ಬಳಿಕ ಪರ್ವತನಾಥನಣುಗನು ಜಾವಳನೆ ಹೇಳಾ ೨೧

ತಿರುಗಿ ನೋಡಿದಡೀಗ ನಿನ್ನಯ
ಹಿರಿಯತನವಳಿವುದೆ ಮುಗಿದ ಕೈ
ವರಸಿ ಶರಣೆಂದಡೆ ಇದಕ್ಕಭಿಮಾನಹೀನತೆಯೆ
ಸರಸರನೆ ಬಂದಡಿಗೆಱಗಿದಡೆ
ಪುರುಷತನವೇಂ ಕೆಡುವುದೇ ಮ
ಚ್ಚರವುಡುಗಿ ಮಾತಾಡಿದಡೆ ನಿಜಭಕ್ತಿ ಕುಂದುವುದೆ ೨೨

ಎನ್ನನೀಗಳು ನೋಡೆ ನೀವಾ
ರೆನ್ನೆ ಇದು ನಿನಗಾಳಿಯೇ ಪುಃ
ನಿನ್ನ ನೋಟಕೆ ನಾವು ಜಂಗಮವಲ್ಲವೇ ಹೇಳಾ
ಳೆನ್ನ[೩] ಭಯ ನಯ ವಿನಯ ನಿರ್ಣಿಯ
ಚಿನ್ನಶಾಂತತೆ ಸೈರಣೆಗಳುಂ
ನಿನ್ನೊಳುಳ್ಳಪರೆಂದು ನೋಡಲು ಬಂದ ಫಲವಾಯ್ತು ೨೩

೧–೨ ಎಂದೆ (ಬ). ೩ನ್ನೆ (ಕ. ಚ. ಪ). ೪–೫ನನ್ನ (ಡಾ); ನಿನ್ನ (ಅ, ಥ, ಪ). ೬ನ್ನ (ಡಾ, ಪ); ಮ್ಮ (ಕ, ಚ).

CC-0. Jangamwadi Math Collection. Digitized by eGangotri

ಹಲವು ಮಾತೇಕೆನುತ ತನ್ನಂ
ಬಲುಕರಿಸುತಂ ಹರನ ವೇಷವ
ನಳವಡಿಸಿಕೊಂಡಿದ್ದವನನೀಕ್ಷಿಸುತ ದಸರಯ್ಯ
ಕಲುಷಮಾನಸನೆನ್ನದಲೆ ಸಂ
ಚಲಿತನೆನ್ನದೆ ಕುಟಿಲಕುಹಕಂ
ಗಳ ವಿಗಡನೆನ್ನದೆ ಮದಾಂಧಕನೆನ್ನದಾತ್ಮದಲಿ ೨೪

ಭಂಡನೀತನು ಕಪಟವೇಷದ
ತೊಂಡುಕಾಱನು ಪೋಟಕೈಗಳ
ಮುಂಡನೆನ್ನದೆ ತನ್ನ ಭಾವಕೆ ಜಂಗಮಾಕೃತಿಯ
ಕಂಡು ತಾನಂಗೀಕರಿಸಿ ಶಶಿ
ಖಂಡಮೌಳಿಯೆ ಎಂದದಂ ಕೈ
ಕೊಂಡು ನೆಱಿತ ವಿಶ್ವಾಸಭಕ್ತಿಪ್ರಾಣಪದವಾಗಿ ೨೫

ದೇವ ನರಚರ್ಮಾವೃತಮಹಾ
ದೇವ ಎನ್ನೊಳು ದುರ್ಗುಣಂಗಳು
ಸಾವಿರವೊಳವು ಮನ್ನಿಸೆನ್ನೊಳಗಱಿಯದವು ಕೋಟಿ
ಭಾವಿಸುವಡೊಳವೀಶಮೂರ್ತಿಯೆ
ಕಾವುದೆನ್ನುವನೆನ್ನೊಳಪರಾ
ಧಾವಳಿಗಳೊಳವೆಯ್ದೆ ಹರನವತಾರ ಚಿತ್ತೈಸು ೨೬

ಗರ್ವವುಂಟೆನ್ನೊಳಗಪಾರಂ
ಪಾರ್ವತೀಶ್ವರಮೂರ್ತಿ ಕರುಣಿಸು
ಸರ್ವವುಂಟೆನ್ನಲ್ಲಿ ತಪ್ಪುಗಳನಘ ಸಲಹೆನುತ
ಉರ್ವಿಯೊಳು ಸ್ಥೈಗೆಡೆದು ಸವಿನಯ
ಪೂರ್ವಕದಿ ವಂದಿಸುತ ದಸರಯ
ನಿರ್ವಿಕಾರನು ಮತ್ತೆ ಅಡಿಗಳಿಗೆಱಗಲೊಡನಾತ ೨೭

೧ತಂ (ಅ, ಕ, ಚ, ಥ, ನ, ಬ, ಮ).

CC-0. Jangamwadi Math Collection. Digitized by eGangotri

ಎರಡು ಮೋಟಿಕರಂಗಳಿಂ ನಿ
ಷ್ಠುರದೊಳಾ ಅಯ್ಯನ ಶಿರವನೋ
ಸರಿಸದುಡುಗದೆ ತಿವಿವುತಂ ಹೊಡೆವುತ್ತ ಬಿಡಿವುತ್ತ
ಮರಳಿ ಮತ್ತೆಯು ಕುಟ್ಟುತಿರೆ ತಲೆ
ಹಿರಿದು ಬುಗುಟಿಗಳೆದ್ದೊಡೆದು ನೆ
ತ್ತರು ಬಿಡದೆ ಜೋರನೆ ಸುರಿಯೆ ರಂಧ್ರಂಗಳಿಡೆಗಳಲಿ ೫೮

ನೊಂದಿತಯ್ಯೋ ನೊಂದೆನೆನ್ನದೆ
ಬಂದು ಹೊಡೆದಪನೇಕೆ ಹೋಗದೆ
ನಿಂದೆನೆನ್ನದೆ ಮನದೊಳುಪತಾಪಿಸದೆ ಕೋಪಿಸದೆ
ಕುಂದದಾಗಳು ನಿಮ್ಮ ನಾನೇ
ನೆಂದೆನೆನ್ನದೆ ಕುಟ್ಟುತಿರಲಿದ
ರಿಂದ ಸೈರಿಸಲಾಱಿನೆನ್ನದೆ ಶಾಂತಿಯಂ ಬಿಡದೆ ೫೯

ಇನ್ನು ಬಡಿದಡೆ ಆಣೆ ನಿನಗೆಂ
ದೆನ್ನದೀಶ್ವರಭಕ್ತರಱಿದಡೆ
ಮನ್ನಿಸುವರೇ ನಿನ್ನನೆನ್ನದೆ ನಿರಪರಾಧಿಯನು
ಬನ್ನಬಡಿಸುವುದುಚಿತವೇ ಹೇ
ಳೆನ್ನದಳುಕದೆ ಬಳುಕದಕಟಕ
ಟೆನ್ನದೇಗುವನೆನ್ನದೊದಱಿದೆ ಗದಱಿದಾ ಅಯ್ಯ ೬೦

ಧೃತಿಬಿಡದೆ ರತಿಗೆಡದೆ ಭಕ್ತಿ
ಸ್ಥಿತಿ ಮಱಿಯದೆ ಸುಮತಿದೊಱಿಯದು
ನ್ನತಿವುಡುಗಿದಿಹ[೫] ಗತಿಯಡಗದಾಸಱಿದೆ ಬೇಸಱಿದೆ
ಸ್ತುತಿಯಱಿಯದೆ ನಿಯತಿ ಬಱಿಯದೆ ವಿ
ಕೃತಿವುಳಿದು ಸಂಪ್ರತಿ ಬಲಿದ ಸದ್
ವ್ರತಿಯ ಸಮತೆಗೆ ಪುರಜನಂ ವಿಸ್ಮಯವಿದೆನುತಿರಲು ೬೧

---

೧ ಜ (ಬ). ೨–೩ ಯಲ್ಲಿ (ನ). ೪–೫ ದತಿ (ಅ, ಕ); ದುರು (ನ).

CC-0. Jangamwadi Math Collection. Digitized by eGangotri

ನಿಲ್ಲದಾತಂ ಹೊಡೆವುತಿರೆ ತಲೆ
ಯೆಲ್ಲ ಒಡೆಯಲದಕ್ಕೆ ಮನದೊಳು
ತಲ್ಲಣಿಸದಿಂತೆಂದನೀಶ್ವರಮೂರ್ತಿಯೆನ್ನಲ್ಲಿ
ಹೊಲ್ಲೆಹವನಱಿದಿಂತು ಬಡಿದಪ
ನಲ್ಲದೆಯೆ ಕೈಮುಟ್ಟಿ ತಾನೇ
ಬಲ್ಲನರ್ಹಿಯೆ ತನಗೆ ಬಡಿಬಡಿದಾಡಲೀ ಶಿರವ ೩೨

ಹರವಿಯಂ ಬಾಱಿಸಿಯಲಾ ಸ್ತ್ರೀ
ಕರಿಸುವರು ಕೊಂಬವರು ಹಾಂಗೀ
ಪುರುಷನೆನ್ನಂ ಬಡಿದು ಕೈಕೊಳದಿಪನೆ ತಾ ಬಳಿಕ
ಕರವನಿಟ್ಟನು ಪೂರ್ವಕಾಯಂ
ಪರಿಹರಿಸಲೆಂದಂದು ಕೈಯಂ
ಶಿರದೊಳಿಟ್ಟನು ಮುಕ್ತನಂ ಮಾಡುವುದಕಿಂದೆನ್ನ ೩೩

ಹಿರಿದುತಡವಾಯ್ತಕಟವೆನ್ನಯ
ಶಿರಸುವತಿಕಾರಿಣ್ಯವಯ್ಯನ
ಕರಯುಗಂ ಮೃದುವಾದವಿಂತೆಡೆವಿಡದೆ ಬಡಿವುದಕೆ
ಹರನ ಶರಣರ್ಗಳಿಗಳವಡುವ
ಶಿರವಿದಾದಡೆ ಎನ್ನ ಒಡೆಯನ
ಕರಯುಗಳಮಂ ನೋಯಿಸದೆ ನಯವಾಗುತಿರವೇಡ ೩೪

ಕೃತ್ತಿಧರನಾಕೃತಿಯ ಕೈಗಿದು
ಉತ್ತಮಾಂಗವಿದಾಯಿತಾದಡೆ
ಮತ್ತಗಾಗಿರಬೇಡವೇ ಇದು ಎನ್ನ ಮಸ್ತಕದ
ನೆತ್ತಿಯಾದಡೆ ಕರ್ಕಶಂ ಮಾ
ಡುತ್ತಿಹುದೆ ಜಂಗಮದ ಕೈಗೆ ನ
ಗುತ್ತ ನಾ ಬೇಡೆಂದಡಯ್ಯನ ಮನಸು ನೊಂದಪ್ಪುದೊ ೩೫

CC-0. Jangamwadi Math Collection. Digitized by eGangotri

ಉಸಿಕನಿರ್ದಡೆ ನೋಯವೇ ಕರ
ಬಿಸರುಹಂಗಳೆನುತ್ತವಾಲೋ
ಕಿಸುತ ಕುಟ್ಟಿಸಿಕೊಳುತ ನಯದಿಂ ಮತ್ತೆ ಹೊಡವಡುತ
ಮಿಸುಪ ತನುವಿನೊಳೆಯ್ದೆ ಮೃದುತರ
ದೆಸೆವ ಠಾವುಗಳಿರೆ ಕಪಾಲವ
ನಸಮನಯನಪ್ರತಿಮ ಕೈಗಳು ನೋಯೆ ತಿವಿದಪರೆ ೩೭

ಎನ್ನ ಘಟ್ಟಿಯ ಶಿರವನೊರಸಿದ
ನಿನ್ನ ಕೈಗಳು ನೊಂದವೊಡೆಯಾ
ಎನ್ನ ಕಠಿಣದ ಶಿರವುಮಂ ಮುಟ್ಟಿಸಿದ ಮಾತ್ರದಲಿ
ನಿನ್ನ ಹಸ್ತಂ ನೊಂದಿತಯ್ಯೋ
ಎನ್ನ ಕರ್ಕಶ ಶಿರವನಂಟಿದ
ನಿನ್ನ ಕರಕಮಳದ್ವಯಂ ಚರಲಿಂಗ ನೊಂದವಲಾ ೩೮

ಎನುತೊಡನೆ ದಸರಯ್ಯನಾ ಅ
ಯ್ಯನ ಕರಂಗಳನಾಗ ಹಿಡಿಹಿಡಿ
ದನುನಯೋಕ್ತಿಯೊಳೊಯ್ಯನೊಯ್ಯನೆ ಒರಸುತೊರಸುತ್ತ
ಇನಿತಿನಿತನೊತ್ತೊತ್ತಿ ಮೇಣೊ
ಯ್ಯನೆ ನಿಗುರ್ಚಿ ನಿಗುರ್ಚಿ ತೆಗೆಯಲು
ಅನಿತಱಿಂದಾತನ ಕಡಿದೆರಡು ಮೋಟಕೈಗಳವು ೩೯

ಮೊಳೆತು ಮೊಳೆ ದಳವೇಱಿ ನಿಮಿರ್ದಮ
ರ್ದಳರ್ದು ಹಸ್ತಾಂಭೋರುಹಂಗಳು
ತಳಿತು ನಳನಳಿಸಿದವು ಅಮಮಾ ವೀರ ದಸರಯನ
ಸಲೆ ದೃಢಾಚಾರಕ್ಕೆ ಕೋಡ
ಗ್ಗಳಿಸಿ ಬಂದಂತಭವನಿಂ ಕರ
ಜಲರುಹಂಗಳು ಬಿಟ್ಟ ಬಾಣಂಗಂಕುರಿಸಿದವೊಲು ೪೦

೧–೨ ನಿಮಿರಮರಳಿ (ಬ). ೩ ಬಿ (ಕ).

CC-0. Jangamwadi Math Collection. Digitized by eGangotri

ಶರಣ ಪೊರಟಿದ ಬಂಕತಂದೆಗೆ
ಕೊರಡು ಕೊನರ್ದು ನಿಮಿರ್ದವೊಲು ಅ
ಚ್ಚರಿಯ ದಸರಯ್ಯಗಳ ದಿವ್ಯಶಿರೋದಿವಿಜಧೇನು
ಕರದ ಕಟ್ಟುಗಳನೀದವೊಲು ಒ
ತ್ತರಿಸಿ ದಸರಯ್ಯನ ವಿಶುದ್ಧೋ
ದ್ಧರಣಭಕ್ತಿಸರೋವರದೊಳಬ್ಜಂಗಳಲರ್ದವೊಲು ೪೦

ಚೆನ್ನಯನ ನಾಲಗೆಗೆ ಕೈಗಳು
ಚೆನ್ನೆಸೆದು ಬಂದಿರ್ದವೊಲು ಪೃಥು
ಳೋನ್ನತಕರಾಂಬುಜಯುಗಂ ಚೆಲುವಾಯಿತಯ್ಯಂಗೆ
ಸನ್ನುತೋತ್ತಮಭಕ್ತಿಸುರತರು
ವನ್ನಯದಿ ದಸರಯ್ಯ ಬಿತ್ತಲು
ಮುನ್ನ ಬೇರ್ವರಿದಂತೆ ಮೆಱೆದವು [೧]ಬೆರಳು ದೋಸ್ಥಳದ[೨] ೪೧

ಚಿರನವಿಮುಕುರಭಕ್ತಿಯೆಂಬಂ
ಬುರುಹನಯನೆಯ ಚೆಲುವ ಮುಖಸರ
ಸಿರುಹಕ್ಕಿದ ಕನ್ನಡಿಯವೊಲು ಹಸ್ತಪಲ್ಲವವು
ಕರಮೆಸೆದುವಂತೆಯ್ದಿ ಕೋಮಳ
ತರವೆನಿಸಿದಾಚಾನುಬಾಹುಗ
ಳೆರಡುಮೊಪ್ಪಿದವತಿಸಲಕ್ಷಣವಂತಮಾಗುತ್ತ ೪೨

ಸ್ಥಿರವಿನಿರ್ಮಳಭಾಸುರಯಶೋ
ಭರಿತನಾಗಿ ಮುನೀಂದ್ರರ ತಪೋ
ನಿರತದಂತೆ ಸಮಸ್ತಪುರುಷಾರ್ಥಂಗಳಿರವಾಗಿ
ವರಭಸಿತಧಾರಿಗಳ ಭಾವೋ
ತ್ಕರದ ಪರಿಯಲಿ ಪೂರ್ವಲಿಖಿತಾ
ಕ್ಷರವಿತಾನನಿಬರ್ಹಣಕಳಾನಿಪುಣನಾಗುತ್ತ ೪೩

೧–೨ ಬೆರಳ ಪಂಜ್ತಿಗಳು (ಬ); ಬೆರಳು ಹಸ್ತದೊಳು (ಅ. ವ).

CC-0. Jangamwadi Math Collection. Digitized by eGangotri

ಸಾ೧ಂಗಮಾಗಲು ಕರ್ಣಿಕಾತೀ
ರಂಗಳಂತೆ ವಿಮಳಕಳಾಪ್ರ
ತ್ಯಂಗಳಂತಾದರ್ಶಿತಪದಾಸ್ಪದವಿದಿತಮಾಗಿ
ಲಿಂಗಪೂಜಾಯತ೨ಫಲಂ೩ಗಳ
ಸಂಗದಂಗದೊಳವಿರತಸಮು
ತ್ತುಂಗವಿಳಸದಗಣ್ಯಪುಣ್ಯಸಮುದಯಕರವಾ೪ಗಿ ೪೪

ಹರನ ದಾನಾಭಯಕರಂಗಳ
ಪರಿಯೊಳತಿ ದಾನಾಭಯಪ್ರದ
ಭರಿತಮಾಗಿಯು ಮೂಲಮಂತ್ರಂಗಳ ವಿಭಾತಿಯಲಿ
ನಿರತ ಶಿಷ್ಯಜನಂಗಳಿಗೆ ಮಂ
ದಿರವೆನಿಸಿ ಲೋಹಕ್ಕೆ ಪರುಷದ
ಸರಣಿಯಿಂ ಗತಪೂರ್ವವರ್ಣಾಂತಪ್ರಯುತ್ತಮಾಗಿ ೪೫

ಧರಣಿಯೊಳು ಶಿವನಾಗಮಯ್ಯನ
ವರ ಕರಸ್ಥಳಯುಗಳದಂದದಿ
ವಿರಚಿತಾಮೃತರಸಪುನೀತ ಸಮೇತವೆಂದೆನಿಸಿ
ಸ್ಥಿರಸುಮತಿಕಣ್ಣಪ್ಪದೇವನ
ಚರಣರಕ್ಷಂಗಳ ತೆಱದಿ ಶಶ
ಧರಕಳಾಶೇಖರನ ಚಾರುಶಿರೋಮಣಿಗಳಾಗಿ ೪೬

ಮಂಗಳಸ್ತುತಿವೆತ್ತು ಮೆಱೆದುದು
ಜಂಗಮದ ಕೈಯೆರಡು ದಸರ
ಯ್ಯಂಗಳ ಕರ೫ಸ್ಪರ್ಶ೬ದಿಂದಾ ಕೊರಳ ಸೆಜ್ಜೆಯಲಿ
ಲಿಂಗವಂತವತರಿಸಿ ತೀವಿತು
ಮುಂಗಡೆಯೊಳಾ ಆಯ್ಯನಿಂದು ಸು
ರಂಗಿಸುತ ಸಂತೋಷವತಿಶಯಭೀತಿಯುಂ ಬೆರಸಿ ೪೭

---

೧ ಸ (ಕ). ೨–೩ ಪದಂ (ಪ). ೪ ಮಾ (ಬ). ೫–೬ ಸ್ಪರುಷ (ಅ).

CC-0. Jangamwadi Math Collection. Digitized by eGangotri

ಚಿತ್ತವಲರ್ದು[೧] ಕರಂಗಳಂ [೨]ನೋ
ಡುತ್ತ[೩] ಕಾತದ ಲಿಂಗಮಂ ನೋ
ಡುತ್ತ ಕೈಯಲಿ ಮುಟ್ಟಿ ಮುಟ್ಟಿ ಕರಂಗಳನೆ[೪] ಮರಳಿ[೫]
ಮತ್ತೆ ನೋಡುತ್ತಾ ದಸರಶರ
ಣೋತ್ತಮನನೀಕ್ಷಿಸುತ ತಲೆವಾ
ಗುತ್ತ ಚರಣಾಂಗುಷ್ಠದಿಂದವೆ ಬರೆವುತಂ ನೆಲನ ೪೮

ಮುನ್ನ ಮಾಡಿದ ತಪ್ಪುಗಳನೆ
ಲ್ಲಂ ನೆನೆವುತಂ ದಸರಯಗಳ ಸ
ಮುನ್ನಚಲಸದ್ಭಕ್ತಿಯಂ ನೆನೆವುತ್ತ ಜಂಗಮವು
ತನ್ನೊಳನುರಾಗಿಸುತಮಿರ್ದನು
ಸನ್ನುತಿಗೆ ಸಂದು ವ್ರತಸಮು
ತ್ಪನ್ನಮಹಿಮೆಯೊಳೊಪ್ಪಿಯಾ ಮಾಹೇಶ್ವರನು[೬] ಮತ್ತೆ ೪೯

ನೆಟ್ಟನಾ ಆಯ್ಕಗಳ ಕೈಯಾ
ಮುಟ್ಟಿ ಮೆಲ್ಲನೆ ನಿಗುಚಿದೆಗೆವುತ
ನೆಟ್ಟೆಯಂ ತೆಗೆವುತ್ತ ಬೆರಳ್ಗಳನೆಂದಿನಂದದಲಿ
ದಿಟ್ಟಿಸುತಲೊತ್ತುತ್ತ ಹರುಷಂ
ಬಟ್ಟು ಪುನರಪಿ ಜಂಗಮಕೆ ಪೊಡ
ವಟ್ಟು ಭಕ್ತಿನಿಯುಕ್ತಿಯಲಿ ದಸರಯ್ಯನಿರುತಿರಲು ೫೦

ಈಸಱಿಂದದಱಿಂದ ಮುನ್ನವೆ
ಲೇಸು ಲೇಸೆಂದೆನುತ ಮನ್ಮಥ
ನಾಶನನ ಭಕ್ತರು ನಮಿಸುತಂ ಪ್ರಿಯನಯೋಕ್ತಿಯಲಿ
ಭಾಸುರಾ[೭]ಸಮ[೮]ಬಹಳಮಹಿಮಾ
ವಾಸ ಶಮದಮಯಮನಿಯಮಸದ
ಯಾಸಮಗ್ರಭ್ಯಾಸಿತಸದಾಂತರ್ನಿ ವಿಶಿಷ್ಟಪರ ೫೧

೧ರಿ (ಬ). ೨–೩ ಮುಗಿ । ವ್ರತ್ತ (ಅ). ೪ನು (ಮ). ೫ಳಿ (ಕ, ಚ, ಮ). ೬ರು (ಆ, ಮ). ೭–೮ ಮಳೆ (ಪ).

CC-0. Jangamwadi Math Collection. Digitized by eGangotri

ದಸರ ಸುಜನರ ಸುಸರ ಭಕ್ತ
ಪ್ರಸರಸೇವಾವಸರಶಕ್ತಾ
ದಸರ ಸದ್ಗುಣವಿಸರ ಸರಸರ ಬಯಕೆಗಳ ಪಸರ
ದಸರಶರಣಾ ನಿನ್ನ ತಲೆಯಲು
ಹೊಸತು ಪುಟ್ಟಿದುದಲ್ಲದೀಗಳು
ವಸುಧೆಯೊಳಗಿಂತಪ್ಪ ಜೋದ್ಯವ ನಾವಱಿಯೆವೆಂದು ೫೨

ನಿರತ ಬಸವನ ಭಾವದಿಂ ಜೋ
ರುಗಳುಟ್ಟ ಸೆಱಿಂಗುಗಳೊಳಿಹ
ಕರಿಯ ಬದನೆಯ ಕಾಯ್ಗಳಾದುವು ಬಾಣಲಿಂಗಗಳು
ಅರರೆ ದಸರಾ ನಿನ್ನ [೧]ಚೇತ[೨]
ಸ್ಫುರಣಸಂಗತಿಯಿಂದೆ ಇಂದೀ
ಧರಣಿಯೊಳಗವನೀತನಾದಡೆ ದುರುಳನಾದಡೆಯು ೫೩

ಅಂಗಹೀನ[೩]ನುಮಾ[೪]ದಡಂ ಶಿವ
ಲಿಂಗಬಾಹಿರನಾದಡಾ[೫]ತನು
ಲಿಂಗಸನ್ನಹಿತಾತ್ಮನಾದನು ನಿನ್ನ ದೋರ್ದಂಡ
ಸಂಗದಿಂ ಮೋಟಂಗೆ ಮಿಗೆ ಹ
ಸ್ತಂಗಳಿರಡುಂ ಬಂದವಂತಪ
ಲಿಂಗವಂತನ ಕರಸರೋಜಸ್ಪರುಶನದಿ ನಿನ್ನ ೫೪

ಉತ್ತಮಾಂಗಂ ಶಿವನ ಸಾಕ್ಷಾ
ದುತ್ತಮಾಂಗವೆನಲ್ಕೆ ತಾನಿ
ದ್ದತ್ತು ಪಾವನವೆಂತದೆಂತೆನೆ ಅದಕೆ ಅತಿಶಯವು
ಎತ್ತಿ ಸಾಂಬ್ಯಿನು ಕಲ್ಗಳಿಂದಮಿ
ಡುತ್ತಿರಲು ನೆಱಿ[೬] ತಾಗಿ ತಾಗಿಂ
ದು[೭]ತ್ತಮಾಂಗದೊಳೂರಿದಂತಾ ಡೋಱುಗಳ ತೆಱಿದಿ ೫೫

೧–೨ ಚಿತ್ತ (ಅ, ದು). ೩–೪ ತನಾ (ಪ, ಮ). ೫ ಡಂ (ಅ). ೬ ತು (ಅ, ನ, ಪ, ಮ).

CC-0. Jangamwadi Math Collection. Digitized by eGangotri

ಮತ್ತೆ ಪಿಟ್ಟವ್ವೆಯು ಸುಭಕ್ತನಿ
ಮಿತ್ತದಿಂ ಚೋಳಂಗೆ ಮಣ್ಣಂ
ಪೊತ್ತು ಪೊತ್ತೊತ್ತಿದ ತಲೆಯ ಕಿಱುಕುಣಿಗಳಂದದಲಿ
ಉತ್ತಮನ ಕಣ್ಣಪ್ಪನಿಂದಾ
ಪೊತ್ತು ಕಾಲ್ಕೆರ್ದೊರಸೊರಸಿ ನೆಱಿ[1]
ನೆತ್ತಿಯಲಿ ಸುಲಿದಿರ್ದಕಲೆಗಳ ಚಂದದಿಂ ಬಳಿಕ ೫೬

ಸಿಂಧುಮಂ[2] ತಾನಾಗಿ ಧರೆಯೊಳು
ನಿಂದು ಹೊಡಸಿಕೊಳಲ್ಕೆ ಕರಕರ
ನೊಂದ ಗಂಟುಗಳಂತೆ ಕೆಂಭಾವಿಯಲಿ ಭೋಗಯನ
ಹಿಂದುಗೊಂಡುರುಳುರುಳಿ ಭರವಸ
ದಿಂದೆ ಹೋಗಲು ಗು[3]ಳಿತೆವರುಗಳ
ಸಂದಿಗಳ ನಡೆವೆಡೆಯೊಳೊರಸಿದ ಹೊರೆಗಳಂದದಲಿ ೫೭

ಹೋಗಿ ಸಿರಿಯಾಳಂಗೊಲಿದು ನೆಱಿ
ವಾಗಿ ಕಬ್ಬಂ ಪೊತ್ತಡೆ ಶಿರೋ
ಭಾಗವೂ[4]ದ ಬೋರೆಗಳವೊಲು ಹೊಡೆದು ಠಾವುಗಳು
[5]ತಾಗಿದೊರಸಿದ ಮಸಗಿದೊತ್ತಿನ[6]
ಮೇಗಣಿಡೆಗಳು ಭಕ್ತವತ್ಸಲ
ಯೋಗದೊಳೆಸೆವ ಶಿವನ ತಲೆಯೇ ನಿನ್ನ ತಲೆಯೆನಿಸಿ ೫೮

ಬಳಿಕ ಜಗದೊಳು ತನ್ನ ತಲೆಯೇ
ತಲೆಯೆನಿಸಿ ಬಾಳುತ್ತಮಿಪ್ಪನ
ತಲೆಯೆ ನಿನ್ನಯ ತಲೆಯಲಾ ಬ್ರಹ್ಮಾಚ್ಯುತಾದಿಗಳ
ಒಳಗೆ ಹೊ[7]ದ್ದಲೆಯಾಗಿ ಬಾಳ್ವನ
ತಲೆಯು ನಿನ್ನಯ ತಲೆಯು ಸರಿಯಾ
ವಳಿವುಮಿಲ್ಲದೆ ಬಾಳುತಿಪ್ಪನ ತಲೆಯೆ ನಿನ್ನ ತಲೆ ೫೯

---

೧ ಮಂ (ಅ, ಬ). ೨ ಕು (ಅ, ನ, ಮ). ೩–೪ ತಾಗಿ ದೊಸರಿದ ಮಸಕಿದೊತ್ತಿದ (ಅ). ತಾಗಿ ದೊಡಕಿದ ಮಸಕಿದೊತ್ತಿನ (ಮ); ತಾಗಿ ದೊರಸಿದ ಮಸಗಿದೊತ್ತಿದ (ಕ, ಚ, ಥ, ನ, ಪ, ಬ). ೫ ಹೆ (ಥ, ಬ).

CC-0. Jangamwadi Math Collection. Digitized by eGangotri

ವಿನುತಿಸುತ್ತ ಸಹಸ್ರಲೀರ್ಷಾ
ಎನಲು ಸಾವಿರ ತಲೆಗಳೆಸೆವಾ
ತನ ತಲೆಯೆ ತಾ ನಿನ್ನ ತಲೆಯದು ವಿಶ್ವವಲ್ಲಕ್ಕೆ
ಅನುನಿಯದಿ ಮಿಗೆ ಒಂದು ತಲೆಯೆಂ
ದೆನಿಸಿ ಥಳಥಳಿಸುತ ಬೆಳಗುವಾ
ರ್ಯನಿನ ತಲೆಗೆ ಮೇಣ್ ನಿನ್ನ ತಲೆಯೇಂ ಸಮನವಾದಪ್ಪುದು ೭೦

ಬಾಲನಲ್ಲದ ವೃದ್ಧನಲ್ಲದ
ಲೋಲತರಯೌವನ ವಯಸ್ಸಿನ
ಲೀಲೆಯಲಿ ಆಡುವನ ತಲೆ ಸರಿ ನಿನ್ನ ತಲೆಯೊಡನೆ
ಮೇಲು ತಲೆಗಳ ಮೇಲೆಯೊಂದಾ
ಭೀಳವೆನಿಸಿದ ತಲೆಯವನ ತಲೆ
ಹೋಲುವುದಲಾ ನಿನ್ನ ತಲೆಯೆಲೆ ದಸರಿದೇವಯ್ಯ ೭೧

ಆದಿಗಾದಿಯ ತುದಿಗೆ ತುದಿಯ ಸ
ನಾದಬಿಂದುಕಳಾವಳಿಯ ಮೇ
ಲಾದವನ ತಲೆ ನಿನ್ನ ತಲೆಗೆಣೆ ನಾಲ್ಕುಂ ತಲೆಯವರ
ಛೇದಿಸುವ ತಲೆಯವನ ತಲೆ ಸರಿ
ಯಾದ ತಲೆ ನಿನ್ನದು ಕಡೆಗೆ ನೆಲೆ
ಯಾದವನ ತಲೆ ನಿನ್ನ ತಲೆಗೆ ಸಮಾನವಹುದಲ್ಲಾ ೭೨

ಸರಸಿಜಾತೋದ್ಭವನ ನಾಲ್ಕುಂ
ಗಿರಿಜೆಯಾತ್ಮಜನಾಱು ದಶಕಂ
ಧರನ ಹತ್ತಹಿಪತಿಯ ಸಾವಿರ ತಲೆಗಳೆಣೆಸಲ್ಕೆ
ಸರಿಯೆ ನಿನ್ನಯ ತಲೆಯೊಡನೆ ಶಂ
ಕರನ ತಲೆಯೆ ಸಮಾನವಲ್ಲದೆ
ಧರಣಿಯೊಳಗೀಶ್ವರನು ಗುರುವುಂ ಭಕ್ತನುಂ ನೀನೆ ೭೩

೧–೨ ಯಂ (ಥ, ಪ). ೩ ತ (ಕ, ಚ, ಥ, ಪ, ಬ). ೪–೫ ಮೂಜು (ಡಾ. ಚ. ಥ. ಪ. ಮ, ಸ). ೬ ವೇ (ಆ, ಬ, ಕ, ಜ).

CC-0. Jangamwadi Math Collection. Digitized by eGangotri

ಪ್ಯಾತಿ ಎಸೆಯಲು ಶಾಂತಿಯೆಂಬ ನಿ
ಶಾತಖಡ್ಗದಿ ಕೋಪವಂ[೧]ಬಭಿ[೨]
ಯಾತಿಯಂ ಖಂಡಿಸುವವಂ ತಾನಾವನವನಿಯೊಳು
ಆತನೇ ಶೂರತ್ವವುಳ್ಳವ
ನಾತನೇ ಮಾಂತ್ರಿಕನು ತಪಸಿಯು
ಮಾತನೇ ವಿದ್ವಾಂಸನಾತನೆ ಎಂದು ಹೇಳುತಿಪ ೬೪

ಶೈವಶಾಸ್ತ್ರಾರ್ಥಂ ನಿನಗೆ ದಿಟ
ವೋ[೩]ವುದಲ್ಲದೆ ಮಿಕ್ಕನವರ್ಗಳಿ
ಗಾವವಂಗೇಕಹುದಹಿಂಸಾ ಪರಮ ಧರ್ಮಮೆನೆ
ಆವಗಂ ನಿನಗಾಯಿತಲ್ಲದೆ
ಜಾವಳಂಗಿಂತೇಕಹುದು ನರ
ಜೀವಿಗಳಿಗಹುದೇನಹಂತವ್ಯಪ್ರಯತ್ನತೆಯು ೬೫

ಏನಲೊರೆವುದಿದು ಸಹಜವಲ್ಲದೆ
ನಿನಗೆ ಅವಿಚಾರಂ ಶಿವಾಜ್ಞೆಯೆ
ಏನುತಮಿಹ ನಿಜಸೂಕ್ತಿ ನಿನಗಹುದಲ್ಲದೇ ಸ್ವಲ್ಪ
ಜನರಿ[೪]ಗಹುದೇ ನಿನಗೆಯಲ್ಲದೆ
ವಿನುತಿಸಲು ಲಿಂಗದ್ವಯಮೆನಲ
ವನಿಯೊಳಸಮಖ್ಯಾತವೆನಲನ್ಯರಿಗದೇಕಹುದು ೬೬

ಸುರುಚಿರಾಗಮಶೈವಶಾಸ್ತ್ರಾ
ವಿರಳಸಂಚಿತಧರ್ಮಮಾರ್ಗಾ
ವಿರತಪರಿಪಾಲಪ್ರಮಥವರಪರಿಷದನುಕೂಲ
ಸರಸಭಕ್ತಿಸಮೇತ[೫] ಸುವ್ರತ
ಚರಿತಲೋಲ ವಿಧೂತಕಾಲ
ಸ್ಥಿರದಿಗಂತಯಶೋವಿಶಾಲ ಪ್ರಹತಭವಮಾಲ ೬೭

೧-೨ಬಾ । ರಾ (ಕ. ಚ). ೩ವಾ (ಧ). ೪ತೆ (ಫ) ೫ಳ (ಅ. ನ. ಮ).

CC-0. Jangamwadi Math Collection. Digitized by eGangotri

ಶೂಲಿಭಕ್ತ ಸಕೀಲಸುಕೃತೋ
ತ್ಪಾಲ ಬುಧಲೋ[೧]ಲನ ಭವತ್ಪ್ರತಿ
ಕೂಲ ಚರಲಿಂಗಾನುಭವಸುಖಿಜಾಲಕಾರುಣ್ಯ
ಶೀಲಮಹಿಮಾಭೀಳ ಸಕಲಗು
ಣಾಲವಾಲ ಕರಾಳರಿಪ್ರನಿ
ರ್ಮೂಲ ಶರ್ವಾಪ ಘನ ಭಸಿತೋದ್ಧೂಳ ಶಿವಲೀಲ ೬೮

ಎನುತ ನಾನಾವಿಧದೊಳನುಕೀ
ರ್ತನೆಗಳಂ ಮಾಡಲ್ಕೆ ತತ್ಪುರ
ಜನರು ಜಯಜಯ ಘೋಷಣಂಗಳುವೆರಸಿ ಹೊಡವಡಲು
ಅನಘ ದಸರಯ್ಯಂಗಹಿತಮಂ
ನೆನೆದು ಮಾ[೨]ಡುವ[೩] ಕಪಟಿಗಳು ದುರ್
ಜನರು ತಾವ್ಯೆಸಱಿಲಿ ಸಭಯಾಕ್ರಾಂತರಾಗುತ್ತ ೬೯

ಎಡೆಗೆಡೆಗೆ ಸಾಷ್ಟಾಂಗವೆಱಗುತ
ಹೊಡವಡುತ್ತಪರಾಧಿಗಳನತಿ
ಜಡರನಪವಿತ್ರರನಧಮರಂ ಕುಟಿಲಮಾನಸರ
ಕಡುದುರುಳರಂ ಧೂರ್ತರಂ ಬ
ಗ್ಗಿ[೪]ಡೆಯರಂ ದುರ್ನೀತರಂ ನಾ
ಣ್ಗೆಡಿಕರಂ ಸುಜನಾಹಿತರನಾಚಾರದೂರರನು ೭೦

ಮತ್ತರಂ ಸಂಸಾರಮಗ್ನಾ
ಯತ್ತರಂ ಕಠಿಣಾತ್ಮರಂ ದು
ರ್ವೃತ್ತಿಗಳನಘನಿಳಯರಂ ಕಷ್ಟರನಹಂಕಾರ
ಚಿತ್ತರಂ ವ್ಯಾಕುಳರನತಿಕೃಪೆ
ವೆತ್ತು ಕಾಯ್ಯಾಯೆಮ್ಮುವಂ ನೀ
ಉತ್ತಮೋತ್ತಮ ದಸರಿದೇವ ದಯಾಭರಿತಭಾವ ೭೧

---

೧ ಲಾ (ಸ, ಸ). ೨–೩ ಡಿದ (ಪ). ೪ ಗೆಗೆ (ಸ).

CC-0. Jangamwadi Math Collection. Digitized by eGangotri

ದೇವ ಚಿತ್ತೈಸಯ್ಯ ಎಮ್ಮೊಳು
ಸಾವಿರಪರಾಧಂಗಳೊಳವೆಮ
ಗೀವುದಭಯವನೆಲೆ ಶರಣಮಾನಸಬಿಸಜಶಯ್ಯ
ದೇವ ನಿಮ್ಮ ಮಹತ್ವತೆಯನಾ
ದೇವದೇವನೆ ಬಲ್ಲನಲ್ಲದೆ
ನಾವಱಿದೆಹೆವೆನಲ್ಕೆ ಪವಣೇ ಭೂಜನಸ್ತುತ್ಯ ೭೨

ಮದಿಸಿ ನಿನಗಪರಾಧವಂ ಮಾ
ಡಿದವನೆರಡು ಕರಂಗಳಂ ನಿಮಿ
ಷದಲಿ ಹಡೆದನು ಮುನ್ನಹಿತವಂ ಮಾಡಿ[೧]ಸಿದ ನಾವು[೨]
ಬಮಕ[೩]ಬೇಡಾ ತಂದೆ ಕುಜನರ
ಹುದುಗು ಮಾಳ್ಪುದಱಿಂದ ಭಾವಿಪ
ಡದು ಮಹಾಸಜ್ಜನವಿರೋಧವದೊಳ್ಳಿತೆಂಬರಲಾ ೭೩

ಇದು ನಿಮಿತ್ತಂ ನಿಮ್ಮ ಸುಮಪ
ತ್ವದ ಘನತೆಯುಂ ನೆನೆದು ಕರುಣಾ
ಹೃದಯದಿಂದೆಮ್ಮೆಲ್ಲರಂ ರಕ್ಷಿಸಲುಚಿತವೆನುತ
ಪದಯುಗಕೆ ಮತ್ತಂ ನಮಿಸೆ ಮಾ
ಣದೆ ಕೆಲಬರಚ್ಚರಿವಡುತ್ತಂ
ಸದಮಳಾತ್ಮಕನೆಮ್ಮ ನೇಮದ ದಸರಿದೇವಯ್ಯ ೭೪

ಹರಹರಾ ವಿಸ್ಮಯವಲಾ ಇದು
ಉರವಣಿಸಿ ದಟ್ಟಿಸುತ ತನ್ನಯ
ಶಿರವನುಡುಗದೆ ಹೊಡೆವುತಿರಲಾ ಮೋಟಮಲ್ಲಂಗೆ
ಎರಡು ಕೈಗಳನಾಗಲಿತ್ತು
ದ್ಧರಿಸಿದನು ತಾ ಮೆಚ್ಚಿಯೆಮಗೀ
ಶರಣನಿಂತೇನೇನನೀವನೊ ಚರಣಕೆಱಗಿದಡೆ ೭೫

೧–೨ ಸಿದೆವಾಲು (ಅ); ದಾನಾವು (ಕ. ಚ). ೨–೩ ಬೆದಕ (ಅ).

CC-0. Jangamwadi Math Collection. Digitized by eGangotri

ಎಂದು ಮಾಣದೆ ಕೀರ್ತಿಸುವರುಂ
ಬಂದು ಹೊಡವಡುವವರು ಸಂತಸ
ವೊಂದಿ ಕೊಂಡಾಡುವರು ಮುಂಡಾಡುವರು ತಮತಮಗೆ
ಮುಂದೆ ಈ ಪರಿಯೊಳು ವಿಚಿತ್ರಾ
ನಂದರಾಗಲು ಪರಸಮಯಿಗಳು
ವಂದಿಸಲು ದಸರಯ್ಯನಾತನ ಕೈಗಳಂ ಕೊಟ್ಟ ೭೬

ದಸರಿದೇವನ ಸಚ್ಚರಿತ್ರವ
ನೊಸೆದು ಕೇಳಿದಡೋದಿದಡೆ ವಿರ
ಚಿಸಿದಡಂ ಕೊಂಡಾಡಿದಡೆ ಶಿವಭಕ್ತಸಭೆಗಳಲಿ
ವಸುಧೆಯೊಳು ಕಾಮಿತ ಫಲಂಗಳ
ನಸಮಲೋಚನನಿತ್ತು ೧ಪರಿ೨ಪಾ
ಲಿಸುವನೆಲ್ಲಾ ಕಾಲದೊಳು ಕಾರುಣ್ಯಭಾವದಲಿ ೭೭

ಅಂತು ಸಂಧಿ ೩೭ಕ್ಕಂ ಪದಗಳು ೨೦೭೭ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಪ್ರತಿ (ಸ).

CC-0. Jangamwadi Math Collection. Digitized by eGangotri

ಸಂಧಿ : ೩೮

*

ಸೂಚನೆ : ಆಜಿನೆನ್ನದೆ ಗುರುವಚನಮಂ
ಮೀಜಿದಾಗೆಯ್ತಂದು ಶೂಲವ
ನೇಜಿ ಮಜಿದನು ಲೋಕದೊಳು ಗುರುಭಕ್ತನಂದಮಮ

ಪರಮಸದ್ಗುರುಲಿಂಗಚರಣ
ಸ್ಮರಣಪರವಶಮತ್ತಚಿತ್ತನು
ನಿರುತಸದ್ಗುರುಭಕ್ತಿಸರಸಸುಧಾಪಯೋರಾಶಿ
ಸ್ಫುರಿತಸದ್ಗುರುಭಕ್ತಿಮೇರುವು
ಭರಿತಸದ್ಗುರುಭಕ್ತಿಸುರತರು
ಸುರುಚಿರೋದಿತನಿತ್ಯಸದ್ಗುರುಭಕ್ತಿಕಾಮಧುಘ ೧

ಗಣುದಿಸಲು ಗುರುಭಕ್ತಿಚಿಂತಾ
ಮಣಿ ವಿಮಲಗುರುಭಕ್ತಿಪರುಷದ
ಕಣಿ ಲಸದ್ಗುರುಭಕ್ತಿನಿಧಿ ಗುರುಭಕ್ತಿಮೌಳಿಮಣಿ
ಪ್ರಣುತಿಸಲು ಗುರುಭಕ್ತಿಪರಿಪೋ
ಷಣನತುಳಗುರುಭಕ್ತಿಗುಣಭೂ
ಷಣನೆನಲು ಗುರುಭಕ್ತಿಯಲಿ ಗುರುಭಕ್ತನೊಪ್ಪುವನು ೨

ಯುಕ್ತಿಯುಂ ಗುರುಭಕ್ತಿ ತನಗಾ
ಭಕ್ತಿಯುಂ ಗುರುಭಕ್ತಿ ಜಾತು
ರ್ಮುಕ್ತಿಯುಂ ಗುರುಭಕ್ತಿಯೇ ವ್ರತ ಯೋ ಗುರುಸ್ಸ ಶಿವಃ
ಪ್ರೋಕ್ತವೆನುತಂ ಮತ್ತೆಯುಂ ಶ್ರುತಿ
ಸೂಕ್ತಿಯಾಗಳು ಹೇಳುವುದು ಸು
ವ್ಯಕ್ತಮಾಗಲು ಯಶ್ಶಿವಸ್ಸಗುರುಸ್ಸ್ಯಾತವೆನುತ್ತ ೩

---

* ರಾಗ : ಬಹುಳಿ (ಚ, ಡಾ, ಪ, ಮ); ದೇವಗಾಂಧಾರ (ಅ); ಮೇಘರಂಜಿ (ತಾ).
೧ನಾ (ಕ, ಚ, ಥ, ಧ, ನ, ಬ, ಮ). ೨ಯೋ (ಬ).

CC-0. Jangamwadi Math Collection. Digitized by eGangotri

ಅನುದಿನಂ ಶ್ರುತಿ ನಾಸ್ತಿತತ್ವಮಿ
ದೆನುತುಸುರ್ಗು ಗುರೋಃ ಪರಮಿದೆಂ
ದೆನುತ ನಿಗಮೋಕ್ತ ತ್ರಿಸಂಧ್ಯಾಯಾಂ ಗುರೋಃ ಪೂಜಾ
ಎನುತಮೂರೆಯಲು ಮೂಱುಸಂಧ್ಯೆ[೧]ಯೊ
ಳನುನಯಂ ಮಿಗೆ ತನ್ನ ಗುರುಪದ
ವನಜರಜಮೋರಂತೆ ತನಗವತಂಸಮಾಗಿರಲು ೪

ಸ್ತುತಿಸುತಂ ಸಾಷ್ಟಾಂಗದಲಿ ನಮಿ
ಸುತಗುರುಶ್ರೀಚರಣಯುಗಮಂ
ರತಿಮಿಗಲ್ ಪ್ರಕ್ಷಾಲನಂಗೆಯ್ದಂಘ್ರಿಸಲಿಲವನು
ವ್ರತಯುತಾತ್ಮನು ತನ್ನ ಶಿರದೊಳು
ಸುತನುವಿನೊಳಂ ತಳಿದುಕೊಳುತಂ
ಸಿತದುಕೂಲದಿನೊಯ್ಯನೊತ್ತುವ ತತ್‌ಪದದ್ರವವ ೫

ಮೋದದಿಂ ಶ್ರೀಗಂಧದಿಂ ಗುರು
ಪಾದಲೇಪನಗೆಯ್ದು ನವ್ಯಾ
ಮೋದಕುಸುಮಪ್ರಚಯದಿಂದರ್ಚಿಸುತ ಪೂಜಿಸುತ
ವೇಧಿಸುತ ಸೌರಭ್ಯರಸಧೂ
ಪಾದಿ ದೀಪಾರತಿಗಳಿಂ ಮೃದು
ನಾದದಿಂ ಹಾಡುತ ನಿವಾಳಿಸಿ ಕೈಮುಗಿದು ನಮಿಸಿ ೬

ನಲಿದು ವಂದಿಸಿ ನವ್ಯಪುಷ್ಪಾಂ
ಜಲಿಯನಿತ್ತು ಶಿರಃಕಲಿತಕರ
ನಲಿನನಾಗಿ ಗುರುಸ್ತವನಮಂ ಮಾಡುತಡಿಗೆಱಿಗಿ
ಬಳಸಿ ಮತ್ತೆಯು ಸ್ಮೈಗೆಡೆದು ಮನ
ವಲರಿ ನಮಿಸುತ ಪರಿಚರಿಯಗಳ
ನೊಲವು ಮಿಗೆ ಮಾಡುತ್ತ ದಿನದಿನವೀ ಪ್ರಕಾರದಲಿ ೭

---

೧ ಜೆ (ಚ, ನ, ಮ).

CC-0. Jangamwadi Math Collection. Digitized by eGangotri

ಗುರುಪದಾಂಬುಜಭಕ್ತಿಯುಂ ಗುರು
ಕರುಣಕಾರ್ಯನಿಯುಕ್ತಿಯುಂ ಗುರು
ಪರಿಚರಣತಾಶಕ್ತಿಯುಂ ಗುರುದೇವವಚನೋಕ್ತಿ
ನಿರುತದಿಂ ರಂಜಿಸುತಮಿರಲನ
ವರತಮುಂ ತನುಧರ್ಮವಂ ಮಱಿ
ದರಿದೆನಲು ವರ್ತಿಸುವನದು ತಾನಾವ ಪರಿಯೆನಲು ೬

ಅಪ್ರತರ್ಕ್ಯಮಭೇದ್ಯಮವ್ಯಯ
ಮಪ್ರಮೇಯಮಜೇಯಮಕ್ಷಯ
ಮಪ್ರಮಾಣಮಗಮ್ಯಮನುಪಮಮಪ್ರತಿಮರೂಪ
ಅಪ್ರಚಿಂತ್ಯಮನಾದ್ಯಮಕ್ಷರ
ಮಪ್ರಪಂಚಮಸಾಧ್ಯಮಚಲಿತ
ಮಪ್ರನಾಶಮನಂ[೧]ತಮೆ[೨]ನಲೊಪ್ಪುವುದು ಶಿವತತ್ವ ೯

ಇಂತು ಮೆಱಿ[೩]ವಾ ಶಿವನಭವನ
ತ್ಯಂತಮಹಿಮಾಧಾರನಂಬಾ
ಕಾಂತನೀಶ್ವರನಾದಿಭಕ್ತಾನುಗ್ರಹಾರ್ಥಕ್ಕೆ
ಸಂತಸಂ ಮಿಗೆ ಗುರುವಿನಾಕೃತಿ
ಯಂ ತಳೆದು ಭವಪಾಶಬಂಧವ
ನಂತು ಪರಿಯಲ್ಕೆಂದು ತಾನೆಯ್ತಂದು ಧರಣಿಯಲಿ ೧೦

ಅಸಮಸೋತ್ಪ್ಲಕಾಂಕ್ಷರನು ಬೋ
ಧಿಸುವ ಮತಿ[೪]ಯಲಿ[೪] ಘನದಯಾಮೃತ
ರಸಕರಾಂಭೋಜಾತನಾಗುತ ತನ್ನುವಂ ತಾನೆ
ಒಸೆದು ಕಾಣಿಸಬಗೆದು ಸದ್ಗುರು
ಲಸದವಾಙ್ಮನಸಾತ್ಮಕನನ
ವ್ಯಸನಿಯಂ ಶಿವನಂ ಮನೋವಾಗ್ವ್ಯಾಪ್ತನಂ ಮಾಡಿ ೧೧

೧–೨ತೆಯೆ (ಸ). ೩–೪ಯಿಂ (ಥ).

CC-0. Jangamwadi Math Collection. Digitized by eGangotri

ವ್ಯಕ್ತಮಾಗಲು ಸರ್ವಗತನಂ
ಭಕ್ತಹೃದ್ಗತನಾಗಿ ಕರುಣಿಸಿ
ಯುಕ್ತಿಸಲು ಸರ್ವಾತ್ಮನಂ ಭಕ್ತಾತ್ಮನಂ ಮಾಡಿ
ಸೂಕ್ತಿ ಹೊಗಳಲು ಸರ್ವಮಯನಂ
ಭಕ್ತಹೃನ್ಮಯನಾಗಿ ಕರುಣಿಸಿ
ಶಕ್ತಿಂ ಸರ್ವೇಶನಂ ಪ್ರಾಣೇಶನಂ ಮಾಡಿ ೧೨

ಸೊಲ್ಲಲಭಿಮಾನಂ ಗೃಹಿತಮನ
ನಲ್ಲದಾ ತತ್ವವನಱಿಯಲದು
ದುರ್ಲಭವದಂತಾಗಿ ಶಿವತತ್ವಾದಿಗುಣನಿಚಯ
ಸಲ್ಲಲಿತವಾದವಯವಂಗಳ
ವಿಲ್ಲದಿರಪಂ ಮಾಡಿ ಶಿಷ್ಯನೊ
ಳುಳ್ಳಹಂಕಾರಾದಿಗುಣದೂರಸ್ಥನಾಗಿರ್ದು ೧೩

ಆತನಂ ತಾನುಭಯಸಂಸ್ಕಾ
ರಾತಿಶಯನಂ ಮಾಡಿ ಮೂರ್ತಿ
ವ್ಯಾತಮಂ ಮೀಱಿದ ಮಹಾಶಿವಮೂರ್ತಿಯಂ ಮತ್ತೆ
ಖ್ಯಾತಲಿಂಗಸುಮೂರ್ತಿಯಾಗಿರ
ಲೋತು ನಿಯಮಿಸಿ ಶಿಷ್ಯನ ಕರಾ
ಬ್ಜಾತಮಧ್ಯದೊಳಿರಿಸಿ ಗುರು ತತ್‌ಪ್ರಾಣದೊಳಮರ್ಚಿ ೧೪

ಹಿಡಿಸಿಯಾತ್ಮದೊಳೊಲಿಸಿ ಮಾಯಾ
ಜಡತೆಯಂ ಬಿಡಿಸಲ್ಕೆ ಶಿಷ್ಯನು
ಪಡರಿಗಳನಳಿದುಳಿದನಿತಱಲಿ ತಾನೆ ತಾನಾಗಿ
ಒಡನೆ ಗುರುದಕ್ಷಿಣೆಯನೊಂದಂ
ಕೊಡುವಡಿಲ್ಲದೆ ತಾನೆಯೆಲ್ಲಾ
ಬಿಡೆ ಶರೀರಂ ಪ್ರಾಣಮರ್ಥಂ ಚ ಯೆನುತ್ತಿರಲು ೧೫

CC-0. Jangamwadi Math Collection. Digitized by eGangotri

ಆನುನಯಂ ಮಿಗೆ ಸದ್ಗುರುಭ್ಯೋ
ಎನುತಿರಲ್ಕೆ ನಿವೇದಯೇತ್ತೆಂ
ದೆನುತಿರಲು ತತ್‌ಪ್ರಾಣಮಂ ತನ್ಮರ್ಥಮಂ ತನುವ
ವಿನಯದಿಂ ಗುರುವಿಗೆ ಸಮರ್ಪಿಸಿ
ಘನದ ಲಿಂಗಸಮರ್ಥಮಂ ಮು
ತ್ತನಘಜಂಗಮಭಕ್ತಿಯಂ ಪ್ರಾಸಾದಮಂ ಪಡೆದು ೧೬

ಇಂತು ವರ್ತಿಸುತಿರ್ಪುದಿದು ನಿ
ಶ್ಚಿಂತಗುರುಭಕ್ತಿಪ್ರಯುಕ್ತಿಯು
ದಂತುಮಲ್ಲದುದರನಿಮಿತ್ತಕೆ ಭಾಷೆಯಂ ನೀಗಿ
ಸಂತತಂ ಗುರುರೂಪಜಂಗಮ
ಸಂತತಿಗೆ ಗುರುಲಿಂಗಲಿಂಗಕ
ನಂತಪರಿಯೊಳು ಪ್ರಾಣದೇಹಾರ್ಥಪ್ರಕಾರದಲಿ ೧೭

ಕುಟಿಲನುಂ[೧] ವಂಚಕನು ಮಾಟಕ
ಪಟಿಗೆ ಹೋಹುದು ಮೊದಲ ಭಾಗ[೨]ಕೆ
ದಿಟಕೆ ಮುಟ್ಟಿದ ಲಿಂಗಸಂಗದ ಮೊದಲ ಸೌಭಾಗ್ಯ
ಸಟೆಯಹುದು ತಾಂ ಕೊಂಡ ಬೆಲೆ ಪ
ಲ್ಲಟಿಸಿ ಮರಳಿದ ಭಂದದಲಿ ದುರ್
ಘಟವೆನಿಪ ಗುರುಭಕ್ತಿಯಿಂತಹದಂತುಮಲ್ಲದೆಯು ೧೮

ಮೂದಲಿಸಲುಂ ಪ್ರಾಣವಂಚಕ
ನಾದವಂಗಂ ಲಿಂಗಭಕ್ತಿಸು
ವೇಧಿಸದು ಧನವಂಚಕಂಗೆ ಸುಸಾಧ್ಯವಾಗದದು
ಆದಿಜಂಗಮಭಕ್ತಿ ತತ್‌ಪ್ರಾ
ಸಾದಭೋಗಂ ದೇಹವಂಚಕ
ನಾದವಂಗಳವಡದೆನಲು ಶಿವಧರ್ಮಸೂಕ್ತಿಯಲಿ ೧೯

೧ಕುಲ (ಮ). ೨ಪ (ಕ).

CC-0. Jangamwadi Math Collection. Digitized by eGangotri

ಅವಿರಳಾದಿ ಮಹದ್ಗುರುವಿಗಂ
ತ್ರಿವಿಧಮಂ ನೆಱಿ ತೋಱಿದಂ ತಾ
ತ್ರಿವಿಧತನುವಿಗೆ ತತ್ತ್ರಿವಿಧಮಂ ಪಂಚಿಸದೆ ಬಳಿಕ
ತಿವಿಧವುಂಟೇ ಗುರುವೆ ಬಲ್ಲನು
ಭುವನದೊಳು ತದ್ಗುರುಮಹಿಮೆಯಂ
ವಿವರಿಸಲು ಶಕ್ಯವೆ ಪುರಹರಂಗಾದಿಜೇಪೊಗಳ್ದಿ ೨ ೨೦

ವಾರಣಂ ಗುರುಭಕ್ತಿ ಪಾತಕ
ವಾರಿಜಕೆ ಗುರುಭಕ್ತಿ ಭವಘನ
ಮಾರುತಂ ಗುರುಭಕ್ತಿ ವಿಷದಿಂಧನಧನಂಜಯನು
ಸೂರನುಂ ಗುರುಭಕ್ತಿ ಮಾಯಾ
ಕೈರವಕೆ ಗುರುಭಕ್ತಿ ಗದಭೇ
ಕೋರಗಂ ಗುರುಭಕ್ತಿಯಜ್ಞಾನದ್ರುಮಕುಠಾರ ೨೧

ಧಾತ್ರಿಯೊಳು ಗುರುಭಕ್ತಿಯಾತನ
ಗೋತ್ರಪವಿ ಗುರುಭಕ್ತಿ ರಿಪುಗುಣ
ಧಾತ್ರುವುಂ ಗುರುಭಕ್ತಿ ಸಂಸಾರಾರ್ಣವವಹಿತ್ರ
ಶಾತ್ರವಂ ಗುರುಭಕ್ತಿ ತನುತಾ
ಪತ್ರಯಕೆ ಗುರುಭಕ್ತಿಯುಕ್ತಿವಿ
ಚಿತ್ರಮುಪಮಿಸಲನಘರಾಗತಕಾರಣಂ ಮತ್ತೆ ೨೨

ಮಾತೆಯಾಗಿಯೆ ಸಾಗಿಸುವುದು ವಿ
ನೀತಿಯಲಿ ಗುರುಭಕ್ತಿ ನಿಚ್ಚ
ಭ್ರಾತನಾಗಿ ಸಹಾಯವಪ್ಪುದು ಕೂರ್ತು ಗುರುಭಕ್ತಿ
ತಾತನಾಗಿಯೆ ಶಿಕ್ಷಿಸುಗು ಸಂ
ಪ್ರೀತಿಯಲಿ ಗುರುಭಕ್ತಿವೊಮ್ಮೆಯು
ದಾತನಾಗಿಯೆ ರಕ್ಷಿಸುತಮಿಹುದೊಲಿದು ಗುರುಭಕ್ತಿ ೨೩

೧–೨ ಡೇಂ ಪೇಳ್ದಿ (ಬ. ಮ).

CC-0. Jangamwadi Math Collection. Digitized by eGangotri

ಆಗಳುಂ ಗುರುಭಕ್ತಿ ಭೇಷಜ
ನಾಗಿ ರುಜೆಯಂ ತೀರ್ಚುವುದು ಚೆ
ನ್ನಾಗಿ ಸದ್ಗುರುಭಕ್ತಿ ಸಾತ್ವಿಕನಾಗಿ ಬೋಧಿಸುಗು
ಶ್ರೀಗುರುಸ್ಥಿರಭಕ್ತಿಯಿದು ಹೊಸ
ಗಾಗಿ ಕೋಟಿವಿಧಂಗಳಲಿ ಶ್ರುತಿ
ಯೋಗದಲಿ ಹರಭಕ್ತಿಯಂ ಮಾಡಿದಡೆ ನಿಷ್ಫಲವು ೨೪

ಮಿಗೆ ಮೊದಲು ಗುರುಭಕ್ತಿ ಹರಭ
ಕ್ತಿಗೆ ಸದಾ ಗುರುಭಕ್ತಿ ಹರಭ
ಕ್ತಿಗೆ ಬಯಕೆ ಗುರುಭಕ್ತಿ ಹರಭಕ್ತಿಗೆ ತವರ್ಮನೆಯು
ಸೊಗಸು ತಾಂ ಗುರುಭಕ್ತಿ ಹರಭ
ಕ್ತಿಗೆ ಕಳಸ ಗುರುಭಕ್ತಿ ಹರಭ
ಕ್ತಿಗೆ ವಿಳಸ ಗುರುಭಕ್ತಿ ಹರಭಕ್ತಿಗೆ ನಿಮಿತ್ತವಿದು ೨೫

ಸಕಳ ಸಂಪತ್‌ಸುಖನಿಕಾಯಕೆ
ಸಕಳ ಶಕ್ತ್ಯಾದ್ಯಾಕೃತಿಗಳಿಗೆ
ಸಕಳ ಮೋಕ್ಷಪದವಿಗಳಿಗೆ ಸಿದ್ಧಿಗಳಿವ[1]ಲ್ಲಕ್ಕೆ
ಸಕಳನಾಥನ ಭಕ್ತಿಗಂ ತಾಂ
ಪ್ರಕಟಿಸಲು ಗುರುಭಕ್ತಿಯೇ ಕಾ
ರಕವಹುದು ಪರಮಾರ್ಥವಿದನಾರೈದು ನೋಡಿದಡೆ ೨೬

ಸಾಂಗಮಾಗಲ್ ಪ್ರಾಣದೇಹಾ
ರ್ಥಂಗಳುಂ ಕ್ರಮದಿಂದ ಗುರುಚರ
ಣಂಗಳಿಗೆ ನಲವಿಂ ಸಮರ್ಪಿಸಿ ವಿನಯಭಾವದಲಿ
ಹಿಂಗದಾಗಳು ತದ್ಗುರುಸಪ
ರ್ಯಂಗಳಂ ಮಾಡುತ್ತ ಸಾತ್ವಿಕ
ಸಂಗಸನ್ಮತಿಯಿಂದೆ ಗುರುಭಕ್ತ್ಯಯ್ಯನೆನಲೊಪ್ಪಿ ೨೭

---

೧ ಗೆ (ಕ. ಡಾ. ಮ).

CC-0. Jangamwadi Math Collection. Digitized by eGangotri

ಧರಣೀಜನರೆಲ್ಲರು ನುತಿಸುತಿರೆ
ಭರಿತಸಚ್ಚಿದಮಳಸುಸೌಖ್ಯ
ಸ್ಫುರಿತಮತಿಗುರುಭಕ್ತಿಯುಯ್ಯನ ನಿತ್ಯತಂತ್ರಪದು
ವರ ಗುರುಚರಣತಂತ್ರಕೃತ್ಯವು
ನಿರತ ಮಂತ್ರವು ತನಗೆ ಸದ್ಗುರು
ಪರಮ ಮಂತ್ರಸ್ತುತಿ ಗುರುಪದಧ್ಯಾನರತಿಯೆ ತಪ ೮೮

ಗುರುಚರಣಸಂಸ್ಮರಣೆ ಜಪವದು
ಗುರುಚರಣವಸ್ಯಪ್ರವರ್ತನ
ದಿರವೆ ಸುಪ್ರತಪದು ಮತಂ ಗುರು ದಿವ್ಯಮಾರ್ಗಾನು
ಚರಿತೆಯದು ಗುರುಪಾಜ್ಞೆ ನೇಮಂ
ಗುರುಪದಾಭ್ಯರ್ಚನೆಯೆ ಹೋಮವ
ವಿರತಮುಂ ಗುರುತತ್ವಚಿಂತನವದು ಗುರುಧ್ಯಾನ ೮೯

ಗುರುಪದಾಂಗಾರ್ಪಣವೆ ದಾನಂ
ಪರಿಪರಿಯೊಳಿಂತನವರತಮು
ಸರಸಸೌಮ್ಯದಿನಾಗಿ ಗುರುಭಕ್ತಿಪ್ರಭಾವದಲಿ
ಚರಿಸುತಂ ತಾನೊಂದು ದಿನದಲಿ
ಪರುಷದಿಂ ಗುರುಪೂಜನಾರ್ಥ
ಕ್ಕರಳ್ಗಳಂ ತರಲೆಂದು ಘಮ್ಮನೆ ಬೆಳಗಜಾಪದ್ದು ೯೦

ಮೋದದಿಂ ಪೋಪೆಡೆಯೊಳಾ ಗುರು
ಪಾದುಕಂಗಳ ಮುಂದೆ ತನ್ನಯ
ಪಾದಯುಗಳಂ ಸೋಂಕಿದಡೆ ಗುರುಭಕ್ತನಾತ್ಮದೊಳು
ವೇದನಂಗೊಳುತಾಗ ಪಾತಕ
ನಾದೆನಾನಕಟಕಟ ಎನಗಿಂ
ತಾದುದೇ ಗುರುದ್ರೋಹದಿಂದತಿ ಪಾಪವೊಂದುಂಟೆ ೯೧

೧ವಿ (ಮ). ೨–೩ ಮಂ । ನ (ಕ, ಚ, ಥ). ೪–೫ನ್ಮತ (ಕ).

CC-0. Jangamwadi Math Collection. Digitized by eGangotri

ಪಾಮುಕಾಸನ ಶಯ್ಯೆಯೆನುತಂ
ತಾದಿ ಗುರುಣಾಮಂದೆನುತ್ತಂ
ವೇದವದು ಯದಿ ತಿಷ್ಠತಪೆನುತ ನ ಸ್ಪೃಶೇತ್ತೆನುತ
ಓದುತಿಹುದದು ತಪ್ಪದದಱಿಂ
ದಾವ ತಪ್ಪನದೆಂತು ಹೊಱಿವೆನ
ನಾದರೋದ್ಧತದಂಡಪಾಣಿಯು ದಂಡಹತಿಗಾಱಿ ೩೨

ಉಡುಗದಡಿಗಳನೆರಡುಮಂ ಕಡಿ
ಕಡಿದು ಕಡಿಕಡಿಮಾಡಿ ತೊವ್ವಿಲ್ಗಳ
ನೊಡನುಗಿದುಗಿದು ಮಾಂಸವಂ ಖಿಂಡಂಗಳಂ ಮಾಡಿ
ಬಿಡದೆ ದೊನ್ನೆಗಳಲಿ ರುಧಿರಮಂ
ಹಿಡಿದೆಲುಗಳಂ ತಱಿತಱಿದು ಮಿ
ಕ್ಕಡೆ ಸವಿಧೆಯಂ ಮಾಡಿ ಪರಪಕ್ಷಿಗೆ ಹವಿಯನೀವೆ ೩೩

ಇದು ವಿಧಿಯು ತಾನಿದಕೆನುತ್ತಾ
ಪದಯುಗಳಮಂ ಪಿಡಿದು ಹರಡಿನ
ಮೊದಲಿಗಿಕ್ಕಡಿಯಾಗಿ ಕಡಿಕಡಿದುರವಣಿಸುತಿರಲು
ತದವಸರದೊಳು ತನ್ನ ಗುರು ಸ
ಚ್ಚಿದಮಳವಮರಗುಂಡಪಂಡಿತ
ನಿದಱಿ ವೃತ್ತಾಂತವನಱಿದು ಏವಭಕ್ತರುಂ ತಾನು ೩೪

ಬರುತಿರಲು ಕಾಣುತ ಹೆದಱಿ ಸರ
ಸರನೆ ಭಯಮುಂ ನಯವಿನಯಮುಂ
ಬೆರಸಿ ಸಂಭ್ರಮಿಸುತಮಿರಲು ಸಾಷ್ಟಾಂಗನಾಗುತ್ತ
ಪರವಶದಿ ತಾಂ ಮಱಿದೊಡನೆ ತಿಳಿ
ಮರವಣಿಸಿ ಹೊಡವಡುವೆನೆಂದಪ
ಸರಿಸುತೇಳಲಿ ಕುಂಕಿಸುವ ಗುರುಭಕ್ತಿಯಯ್ಯಂಗೆ ೩೫

೧ಗ (ಥ, ಸ).

CC-0. Jangamwadi Math Collection. Digitized by eGangotri

ಅಸಮಸದ್ಗುರುವರದಯಾಮೃತ
ರಸಸರೋವರಮಧ್ಯದಲಿ ಪದ
ಬಿಸರುಹಂಗಳು ಮೇಣು ವಿಕಸನವಾದವೆಂತೆನಲು
ಹೊಸತೆನಿಸಿ ಕಾಲ್ಗಳು ಪೊಳೆತವು
ಬೈಸೆದ ಗುರುಭಕ್ತಿಗೆ ಚರಣಸಾ
ರಸ್ಯಯುಗಳಗಳು ಮುನ್ನುದಿಸಿದವೊಲೊಪ್ಪಲೈಸಟಿಲಿ ೩೬

ನಲಿವು ಮಿಕ್ಕಿ ಸಪಾದನಾಗಿಂ
ತಿಳಿಯೊರಸಿ ಮೈಯಿಕ್ಕಿ ವಂದಿಸಿ
ತಲೆಯೊಳೊಂದಿಸಿ ಕೈಗಳಂ ಶಿಷ್ಯೋತ್ತಮಂ ಗುರುವ
ಹಲವು ಪರಿಯಲಿ ಕೀರ್ತಿಸಲು ಮನ
ವಲರಿ ಭಕ್ತರು ನೋಡಿ ಇದು ಭೂ
ತಳಕೆ ಚೋದ್ಯಮೆ ನಿನ್ನ ಭಕ್ತಿಸ್ಥಿತಿಗೆ ಗುರುಭಕ್ತ ೩೭

ದೂರವಲ್ಲಿದು ಮೊನ್ನೆಯಲ್ಲಾ
ಧಾರುಣೇಜನವಟಿಯಲೆಂತೆನೆ
ಸಾರಸದ್ಗುರುಪಾದಪರತಂತ್ರೈಕಸನ್ಮತಿಗೆ
ಚಾರುಸದ್ಗುರುವರನಿರತಪರಿ
ಚಾರಭಕ್ತಿಗೆ ಸದ್ಗುರುದಯಾ
ಪೂರಿತಾತ್ಮಸ್ಥಿತಿಗೆ ಸದ್ಗುರುಭಾವನೋನ್ನತಿಗೆ ೩೮

ತನ್ನ ಗುರುಶಿಷ್ಯರುವಸಹ್ಯೋ
ತ್ಪನ್ನಭಾವದೊಳಿರಲು ಚಿತ್ಸಂ
ಪನ್ನನಾ ಗುರುವದನವಿದು ಗುರುಭಕ್ತನುನ್ನತಿಯ
ತನ್ನ ಶಿಷ್ಯರುಗಳಿಗೆ ತೋರ್ದಪೆ
ನಿನ್ನೆನುತ ಶಿಷ್ಯರನನಿಬರಂ
ತನ್ನ ಹತ್ತಿರೆ ಕರೆದು ಹಾಸುಂ ಮಂಚವುಂ ತನ್ನ ೩೯

೧–೨ ಯುಗಂ ಮುನ್ನುದಯಿವೋ (ಕ, ಚ, ಥ, ಧ, ಪ, ಬ, ಮ).

CC-0. Jangamwadi Math Collection. Digitized by eGangotri

ಹಿಂದೆಸೆಯೊಳಿದೆ ಒಬ್ಬರೊಬ್ಬರು
ಬಂದು ಕುಳ್ಳಿರಿ ನೀವೆನಲು ಬೆಚಿ
ಗೊಂದಿ ಶಿಷ್ಯರು ನಗುತವಿಂತಹುದುಂಟೆ ವಿಪರೀತ
ಎಂದುಮಱಿಯೆವು ಕೇಳ್ದು ಗುರುವಿನ
ಮುಂದೆಯುನ್ನತಪೀಠಶಯ್ಯೆಗ
ಳಿಂದೆಸೆದು ತಾ[೧]ವೆಂತು ಕುಳ್ಳಿರಬಹುದು ದೋಷವಲ ೪೦

ಎನುತ ತಾವದನಾಳಿಗೊಳುತಿರೆ
ವಿನಯದಿಂದೆಯ್ತಂದು ನಿಜಪದ
ವನಜಯುಗಳವನರ್ಚಿಸುವ ಗುರುಭಕ್ತನಂ ನೋಡಿ
ತನಯ ಕುಳ್ಳಿರು ಹೋಗು ನಾವು ಶ
ಯನಿಪ ಹಾಸಿನ ಪಟ್ಟೆಮಂಚದೊ
ಳೆನೆ ಹಸಾದವೆನುತ್ತ ತದ್ಗುರುಚರಣಯುಗಕೆಱಗಿ ೪೧

ಸಲೆ ಗುರೋರಾಜ್ಞಾ ನ ಲಂಘ್ಯ ಏ
ನಲು ಮೆಱಿಪ ನುಡಿಯಂ ಧರಿಸಿ ಶಿರ
ದಲಿ ಗುರೋರಾಜ್ಞಾನುವರ್ತನವೆಂಬ ಸೂಕ್ತಿಯದು
ತಿಳಿಯಲಱಿಯದು [೨]ಪ್ರಾಣ[೩]ಪದವೆಂ
ದೊಲಿದು ಗುರುಭಕ್ತಯ್ಯನಾ ಗುರು
ಗಳಿಗೆ "ನಮಿಸುತ" ಪಟ್ಟೆಮಂಚದ ಮೇಲೆ ಕುಳ್ಳಿರಲು ೪೨

ಆನಿತಱಿಲಿ ಶಿಷ್ಯರುಗಳೆಲ್ಲರು
ಕನಲುತಿಂತೆಂದರು ವಿಜೃಂಭಿಸಿ
ಮನದೊಳಂಜದೆ ನೋಡಿದಿರೆ ಇವನೆಮ್ಮಿಪಂ ಕಂಡು
ಇನಿತು ಲೆಕ್ಕಿಸನೆಯ್ದೆ ಮದ್ಗುರು
ವಿನ ಸಮಕ್ಷದ ಪಟ್ಟೆಮಂಚದೊ
ಳನುವಿನಲಿ ಕುಳ್ಳಿರ್ದಹನು ಬೆಪ್ಪನೆ ಬೆಟಿತುಕೊಂಡು ೪೩

---

೧ ನಾ (ನ). ೨–೩ ಜೀವ (ನ). ೪–೫ ವಂದಿಸಿ (ನ).

CC-0. Jangamwadi Math Collection. Digitized by eGangotri

ಗುರುಪರಂ ಶಿಷ್ಯರ ಮನಂಗಳ
ನೊರೆಯಲೆಂದಟ್ಟಿ[೧]ದಡಿನಿತಱಿಸಿಳಿ
ಸರಸರನೆ ಕುಳ್ಳಿರಲಹುದೆ ತಾಂ ಪಟ್ಟಿಪುಂಚದಲಿ
ಗುರುಗಳಿವ್ಮಂಳಿ ಕುಳ್ಳಿರೆಂದಡೆ
ಗುರು ಬಿಸಿಸಿದನಿದೆಂದು ತನ್ನಯ
ಪರಿಯೊಳೇಂ ಕುಳ್ಳಿತೆವೆ ಗುರುಸನ್ನಿಧಿಯೊಳು[೨]ದ್ಧಟದಿ[೩] ೪೪

ನಾವಧಿಕ ಶಿಷ್ಯರುಗಳುಂ ಭಯ[೨]
ಭಾವನೆಯೊಳಿರೆ ಈಯಧಮನಹ
ಗಾವಿಲಂಗೆಂತೇಱಿಬಹುದೀ ಪಟ್ಟಿಪುಂಚವನು
ಸಾವಿರವದೇಕೀ ಗುರುದ್ರೋ
ಹಾವಲಂಬನ ತಲೆಯನಿದು ಮ
ಹೀವಳಯದೊಳು ಹಾಯ್ಕಿದಲ್ಲದೆ ಹೋಗಬಿಡೆವೆನುತ ೪೫

ಸಂದಣಿಸುತಿಹ ಶಿಷ್ಯವೃಂದದ
ಛಂದವಂ ಗುರು ನೋಡಿ ನಗುತೊಲ
ವಿಂದ ತದ್ಗುರುಭಕ್ತನಂ ಪುಂಚವನಿಳಿಯವೇಳ್ದು
ಮುಂದೆಸೆಯೊಳುಱಿ[೪] ಬಸಿದ ಶೂಲವ
ನೊಂದನಾಗಳೆ ತರಿಸಿ ನಡಿಸಿಂ
ತೆಂದನವರ್ಗಳಿಗೆಲ್ಲರಿಂಗಾರಾಧ್ಯಪುಂಗವನು ೪೬

ಆಪನತಿಗುರುದ್ರೋಹಿಯಧಮನು
ಅವನಿರಲಿ ಗುರುಭಕ್ತಿಪರ್ಧನ
ರವನಿಯೊಳು ನೀವಧಿಕರಹಿರಾರಾದಡಿಂತೀಗ
ಅವನಳುಕುತಿರಲೇಱಿರೇ ಶೂ
ಲವನಿದಂ ನೋಡಿದಪೆ ನಾ ನಿ
ಮ್ಮವಿಚಲಿತ ಭಕ್ತಿಯನೆನಲು ತದ್ಗುರುಚರಣಕೆಱಗಿ ೪೭

೧–೨ದನ (ಕ). ೩–೪ಳಿಂತು (ನ). ೫–೬ದ್ಧದಲಿ (ಧ): ದ್ಧದೊಳು (ಪ): ದ್ಧಕ್ಕೆ (ನ). ೬ಪ (ಧ).

CC-0. Jangamwadi Math Collection. Digitized by eGangotri

ಕಟ್ಟಿದಿರೊಳಂತೊಮ್ಮೆ ಎಮ್ಮನು
ಪಟ್ಟೆಮಂಚವನೇಱಿ ಎಂದಿರಿ
ನಟ್ಟಶೂಲವನೇಱಿಯೆಂದು ನಿರೂಪಿಸಿದಿರೀಗ
ಕೆಟ್ಟೆವಂಜುವೆವೀಸು ಭಕ್ತಿಗೆ
ಱಟ್ಟಿದಡೆ ಬೆಸಕೆಯ್ವವಂ ಮು
ನ್ನಟ್ಟಿದಾತನನಟ್ಟಿರೇ ನಿಮ್ಮಡಿಗಳಾವೇಕೆ ೪೪

ಜಾಱಿದಂಜದೆ ಮುನ್ನ ಮಂಚವ
ನೇಱಿದಂತೀ ಬಸಿದ ಶೂಲವ
ನೇಱಿದಹನಲ್ಲದೆ ಬಳಿಕವಂ ನಿಮ್ಮ ವಚನವನು
ಮೀಱಿದಹನೇ ಎನಲು ಸನ್ಮು[೧]ದ
ಱೂಱಿದತಿ ಕರುಣಾಸುಧಾರಸ
ವೇಱಿದಾಲೋಕನದೊಳಾ ಗುರುಭಕ್ತನಂ ನೋಡಿ ೪೫

ಒಲಿದು ಗುರು ತನ್ನ ಪ್ರಸಾದವ
ನೆಲೆ ಮಗನೆ ಕೊಳ್ಳೆನುತ ಕೊಡಲಾ
ಗಳೆ ಪಸಾದವೆನುತ್ತ ತಾಂಬೂಲಪ್ರಸಾದಕ್ಕೆ
ಎಳಸಿ ಕೈಕೊಳುತಂಗಲೇಪನ
ಮಿಳಿತಲಲಿ[೨]ತಾಸ್ವಾದನದಲವಿ[೩]
ಚಲಿತಗುರುಭಕ್ತಂಗೆ ಶೂಲಪನಾಗ ತೋಱಿದಡೆ ೪೦

ಗುರುಗಳಿಗೆ ಮೈಯಿಕ್ಕಿ ವಂದಿಸಿ
ಶರಣೆನುತ ಸರಸಾನುರಾಗಾಂ
ಕುರಿತನಾಗುತ ಪಟ್ಟೆಮಂಚವನೇಱಿದಂದದಲಿ
ಹಿರಿಯ ಶೂಲವನೇಱಿದಂ ಸರ
ಸರನೆ ನೆತ್ತಿಯ ಮೇಲೆ ಮೂಡಲು
ವರಗುರುಭ್ಯೋ ನಮ ಎನುತ ಪೊಡಪಡುತ ಭಾವಿಸುತ ೪೧

೧ಮ್ಮ (ನ. ಪ). ೨–೩ತಾದನಾದವಿ (ಕ); ತಾಸ್ವಾದನಾದವಿ (ಚ. ಥ. ಧ. ನ. ಪ, ಬ, ಮ).

CC-0. Jangamwadi Math Collection. Digitized by eGangotri

ಶೂಲಮಂ ನೆಱಿ[೩] ನುಂಗಿಯಾತನು
ಶೂಲಮಂ ನುಂಗಿದವೊಲಿರದೆ ವಿ
ಶಾಲರತಿಯಲಿ ಕರಕಮಳವಂ ಮುಗಿದುಕೊಂಡದಱಿ
ಮೇಲೆ ಗುರುಶರಣೆನುತಮಿಹ ಗುರು
ಲೋಲನಂ ಗುರುಭಕ್ತನಂ ಗುರು
ಶೀಲಯುಕ್ತನನಮಳಗುರುಕರುಣಾಭಿ[೧]ಷಿಕ್ತ[೨]ನನು ೪೭

ಗುರು ಕೃತಾ[೩]ಜ್ಞಾಪ್ರಾ[೪]ಣನಂ ನಿಜ
ಗುರುಭಜನಪಾರಿಣನ ಸದುಗುರು
ಗುರುಸರಸವಚನಪ್ರಮಾಣನನಾರ್ಯವಾರ್ಯನನು
ಗುರುಸುಮತಸ[೫]ತ್ಪ್ರಾಣನಂ ನಿಜ
ಗುರುಸಪರಿಯಕ್ಷೀಣನಂ ಗುರು
ಚರಣಗಂಧಾಘ್ರಾಣನಂ ಗುರುಕಾರ್ಯಧುರ್ಯನನು ೪೮

ಅಸ್ತಮಿತದುರಿತನನವಿರತ [೬]ವಿ
ರ[೭]ಸ್ತದೇಹಪ್ರಾ[೮]ಕೃತಗುಣಸ
ಮಸ್ತನಂ ನಿಜಮಸ್ತಕಪರಿನ್ಯಸ್ತಹಸ್ತನನು
ಪ್ರಸ್ತುತಬುಧಸ್ತವನಭಾಜನ
ಶಸ್ತನಂ ಗುರುಭಕ್ತಿಕೀರ್ತಿಗ
ಭಸ್ತಿಭಾಸುರನಂ ಸಮುದ್ಯತ್‌ಚಿತ್‌ಪ್ರಭಾಕರನ ೪೯

ಶ್ರೀಕರನನತಿನಯವಿನಯಸುಗು
ಣಾಕರನನರಿಭೇಕಕುಲದ
ರ್ವೀಕರನನಾರಾಧ್ಯಭಕ್ತಿಶರಧಿಸುಧಾಕರನ
ಶೂಕಶೂಲಸುಖಾಸನಸ್ಥಾ
ಸ್ತೋಕನಂ ಸಿತಶೂಲಸಂಗವಿ
ವೇಕನಂ ಶೂಲಾನ್ವಿತಕ್ರೀಡೈಕಮಾನಸನ ೫೦

೧–೨ ಷೇಕ (ಸ). ೩ ಪಾ (ಕ). ೪ ತ್ರಾ (ಸ). ೫ ತ (ಪ). ೬–೭ ಸ । ಮ (ಕ, ಚ, ಮ): ನ । ರ (ನ, ಪ, ಬ). ೭–೮ ಸ್ತದೇಹಾಪ್ರ (ಸ).

CC-0. Jangamwadi Math Collection. Digitized by eGangotri

ಚಂಡಘನತೇಜೋವಿಜಿತಮಾ
ರ್ತಾಂಡನಂ ಖಂಡಿತಮದನಕೋ
ದಂಡನಂ ದಂಡಿತಯಮಸಮುದ್ದಂಡನಂ ನೋಡಿ
ಪಂಡಿತೋತ್ತಮನೆನಲೆಸೆದಮರ
ಗುಂಡಮಲ್ಲೀಶ್ವರನನಿತಱಲಿ
[1]ತಂಡತಂಡದ[2] ತನ್ನ ಶಿಷ್ಯರು ಕೇಳಲಿಂತೆಂದ ೫೬

ಈತನಂಚಿತಸಚ್ಚರಿತ್ರಕೆ
ಈತನುನ್ನತಭಕ್ತಿನಿಷ್ಠೆಗೆ
ಈತನತಿಸುವ್ರತಕಸಹ್ಯಂ ಮಾಡುವಿರಿ ನೀವು
ಖ್ಯಾತಮಪ್ಪಖಿಳಾಗಮಪುರಾ
ಣೇತಿಹಾಸಪ್ರಕರದಲ್ಲಿ ಪು
ರಾತನ ಗಣಂಗಳಲಿ ನೂತನ ಭಕ್ತಜಾತದಲಿ ೫೭

ಕೇಳಿದಿರೆ [3]ಇಂತಪ್ಪ[4] ವಿಕ್ರಮ
ಲೋಲಸದ್ಭಕ್ತಿಯನವನಿಯೊಳು
ಹೇಳಲಿಂತಹ ಭಕ್ತಿಫಲವಂ ಕಾಣ್ಬಿರೇ ನೀವು
ಮೇಲನಱಿಯದೆ ಭಕ್ತರೆಂದಿಂ
ತಾಳಿಗೊಳುತಂ ಬೆಱಿವುತಿಪ್ಪಿರಿ
ಕಾಳುಮಾತುಗಳಿನ್ನವೇತಕೆ ನಿಮಗೆ ಹವಣಲ್ಲ ೫೮

ಪರಿಕಿಸುವಡೆಮ್ಮ ಕ್ಷಮಾಪಾ
ತ್ರರುಗಳೈ ನೀವೆಲ್ಲರುಂ ವಿ
ಸ್ತರಿಸಲಿವನೆಮ್ಮಯ ಕೃಪಾಪಾತ್ರಂ ನಿರಂತರವು
ಧರಣಿಯೊಳು ಪ್ರಾಣಪದವೀತಂ
ಗೊರೆಯ[5]ಲಿಂತೆ[6]ಮ್ಮಾಜ್ಞೆ ನಿಮಗಿನಿ
ಬರಿಗೆ ತಾನಪಹಾಸ್ಯವಾಗಿಹುದೆಮ್ಮಯಾಜ್ಞೆಯದು ೫೯

೧–೨ ತುಂಡತುಂಡದ (ಕ). ೩–೪ ನೀವಿಂತ (ಚ). ೫–೬ ಲೆಂದೆ (ಕ, ಚ).

CC-0. Jangamwadi Math Collection. Digitized by eGangotri

ಮಾನನಿಧಿಯೀತನು ಮದೀಯೇ
ಚ್ಛಾನುಸಾರಿಯಹಂ ತ್ವದೀಯೇ
ಚ್ಛಾನುಸಾರಿಗಳಹಿರಿ ನೀವೀತಂಗೆ ನಿಮಗಿಂತು
ಪಿನನುಸುರ್ವೆಂ ಪರ್ವತಾಣುಸ
ಮಾನವೆಂಬವೊಲಂದು ಮಂಚಂ
ತಾನಿದೆಂ[1]ದಱಿಯನು ಱಿಯನಿದು[2] ಶೂಲವೆಂದಿಂದು ೭೦

ಆಗಳೆಮ್ಮ ನುಡಿ ಪ್ರಮಾಣಮು
ದಾಗೆ ಎಮ್ಮ ವಚನವೆ ಮೃದುತರ
ಯೋಗವೇ ಪರಿಯಂಕ ಶೂಲವಿದಕ್ಕೆ ದೃಷ್ಟವಲಾ
ಈಗಳಿನಿಬರು ನೀವು ನೋಡೆನು
ತಾ ಗುರುವರಂ ಕೃಪೆವಱಿಸಿದನು
ರಾಗಚಿತ್ತದಿ ನಿನ್ನ ಗುರುತರ[3]ಮಾದಳೆ ಗುರುಭಕ್ತಿ ೭೧

ಪ್ರಮಥರುದ್ರಪುರಾತನಗಣೋ
ತ್ತಮರ ಕವಳಿಗೆಗೆಯ್ದೆ ಸಂದಿ
ತ್ತಮಮ ನೀನಿನ್ನಿಳಿದು ಬಾರೆನಲೊಡನೆ ಗುರುಭಕ್ತ
ನಿಮಿರ್ದು ಹಲಗೆಯನೂಱಿ ಕೈಗಳಿ
ನಮರ್ದು ನೆಗೆದಿಳಿಗೈಸುದೂರಕೆ
ಧುಮುಕಿ ಭರದಿಂ ಬಂದು ತದ್ಗುರುಪದಕೆಱಗಿ ನಿಲಲು ೭೨

ಗುರುವರೇಣ್ಯಂ ಪರಮಹರುಷಾಂ
ಕುರಿತಮಾನಸನಾಗಿ ಸದ್ಗುರು
ಚರಣಭಕ್ತನನೆತ್ತಿ ಕೈಯಿಂ ತೆಗೆದು ಬಿಗಿದಪ್ಪಿ
ಕರುಣದಿಂ ಸ್ವಾದುಸ್ವಕೀಯ
ಸ್ಫುರಿತವಿಮಳತರಪ್ರಸಾದ
ಭರಿತಸುಧೆಯಿಂ ತಣಿದ ತನ್ನಿಜಶಿಷ್ಯನಂ ನೋಡಿ ೭೩

೧–೨ ದಱಿಯನಱಿಯನಿದು (ಕ. ಚ. ಮ). ೩–೪ ಮಪ್ಪ (ಕ. ಚ. ಪ, ಬ).

CC-0. Jangamwadi Math Collection. Digitized by eGangotri

ಲಸಿತದಿವ್ಯೋನ್ನತಶರೀರಂ
ನಿಸಿತ [೧]ಶೂಲಶ್ಯೂಕ[೨]ನಿಪತಿಗೆ
ಕುಸಿಯದೇ[೩] ಕಂದದೆ ಮನಂಗುಂದದೆ ರುಧಿರವಿನಿತು
ಬಸಿಯದಿನಿತುಂ ಬಾತುದಿಲ್ಲದೆ
ರಸಿಗೆ ಸುರಿಯದೆ ರಂಧ್ರವಿನಿತುಂ
ಮುಸುಡುಹಸಗೆಡದೇ ವ್ರಣಂಗಳುಮಿಲ್ಲದಣುಮಾತ್ರ ೬೪

ಇದುವೆ ದೃಷ್ಟಪ್ರತ್ಯಯವಿದೆನಿ
ಸಿದುದು ಜ್ಞೋದ್ಯವಿದೆನುತವದ್ಭುತ
ಹೃದಯರಾಗುತ ಶಿವಸಹೋದರರುದ್ಧತಿಯನುಳಿದು
ಪೆದಱಿ[೪] ಕೀರ್ತಿಸುತಿರೆ ಧರಾವಳ
ಯದೊಳಗಂದುಂ ಮೆಱಿ[೫]ಯಿತಲ್ಲಾ
ಸದಮಳಾತ್ಮಕ ನಿನ್ನ ಗುರುಭಕ್ತಿಪ್ರಭಾಮಹಿಮೆ ೬೫

ಈಗಳುಂ ನೆಱಿ[೬] ಮೆಱಿ[೭]ಯಿತೀ ಭೂ
ಭಾಗದೊಳು ನಾವೆಲ್ಲರಱಿಯ
ಲ್ಯಾಗಳುಂ ಗುರುಭಕ್ತಿವಿಖ್ಯಾತಿಪ್ರಭಾ[೮]ಮಹಿಮೆ
ಶ್ರೀಗುರುಕರುಣವುಂಟು ನಿನಗಂ
ತಾಗಿ ದೃಷ್ಟಪ್ರತ್ಯಯದ ಮಹಿ
ಮಾಗರಿಷ್ಟಾಯತಪರಂಪರಕಾರಣವಿದಾದ ೬೬

ನಿನ್ನ ಮಹನೀಯಪ್ರಬಲಿತೋ
ತ್ಪನ್ನನಿಜಗುರುಭಕ್ತಿಯುತಮಹಿ
ಮೋನ್ನತಿಕೆಯನದಾರು ಬಲ್ಲರು ಶಂಭುಗಾದಡೆಯು
ಮುನ್ನಲ[೯]ಱಿಯಲಶಕ್ಯವೆಂದಡೆ
ಭಿನ್ನಮತಿಗಳ ಪವಣೆ ಸತತಾ
ಸನ್ನಗುರುಭಕ್ತಿಪ್ರಕಾಶ ವಿಧೂತಭವಪಾಶ ೬೭

೧–೨ ಶೂಲದಶೂಕ (ಬ). ೩ ದೆದೆ (ಕ, ಚ, ಪ, ಬ). ೪–೫ ಪಿತಮಪಾ (ಅ, ಡಾ, ಧ, ನ, ಷ, ಮ). ೬ ಮ (ಪು).

CC-0. Jangamwadi Math Collection. Digitized by eGangotri

ಗುರುಪದಾಂಬುಜ[೧]ಸರಳ[೨]ಭಕ್ತಾ
ಗುರುದಯಾಮೃತರಸನಿಷಿ[೩]ಕ್ತಾ
ಗುರುಗುಣಗಣಾರತವಿರಚನಾಯತಚಿದನುಶಕ್ತ
ಗುರುನಿರಂತರಪರಿಚರಣವಿ
ಸ್ಮರಣಸದ್ಭಾವಾನುರಕ್ತಾ
ವರದ ಗುರು[೪]ಲಿಂಗ[೫]ವಿಮುಖಪದಾರ್ಥಕೋವಿದ ವಿರಕ್ತ ೮೮

ಪರಮಗುರುಪರತಂತ್ರನಿರ್ಭರ
ಚರಿತ ಸುಗುಣೋದ್ಯುಕ್ತ ಸಂತತ
ಗುರುಸುಕಾರ್ಯಸ್ಥಿರಧುರಂಧರ ಸತ್ಕಳಾಯುಕ್ತ
ಗುರುಮನೋಜ್ಞಾಂಚಿತಚರಿತ್ರಾ
ವಿರತ ನಿರತಾಶಕ್ತಮಾಯಾ
ಪರಣಕರಣವಿರಕ್ತ ಮಹಿಮಾಸುಗುಣ ಗುರುಭಕ್ತ ೮೯

ಎಂದು ಭಕ್ತಾನೀಕವಚ್ಚರಿ
ಯೊಂದಿಯಾನಂದಿಸುತ ಸತ್ಕ್ರಿಯ
ದಿಂದ ನುತಿಸಲು ಗುರುಕರುಣದಿಂ ತನ್ನ ಪಾದಾರ
ವಿಂದಯುಗಮಂ ಪಡೆದನಾಕ್ಷಣ
ದಿಂದ ಗುರುಭಕ್ತ್ಯಯ್ಯನೀ ಪರಿ
ಯಿಂದ ಮೆಱಿ[೬]ದನು ಸರ್ವರುಂ ಕೊಂಡಾಡುತಿರಲಂದು ೯೦

ದೊರಕುವುದು ಗುರುಭಕ್ತಸನ್ನುತ
ಚರಿತೆಯಂ ಬರೆದೋದಿದಡೆ ವಿ
ಸ್ತರಿಸಿದಡೆ ಕೊಂಡಾಡಿದಡೆ ಕೇಳಿದಡೆ ಮನುಜರಿಗೆ
ನಿರುತದಿಂ ಶಿವಲಿಂಗಭಕ್ತಿಯು
ಗುರುಚರಣಭಕ್ತಿಯು ನಿರಂತರ
ಪರಮಜಂಗಮಭಕ್ತಿಯುಂ ವರಭುಕ್ತಿಮುಕ್ತಿಗಳು ೯೧

ಅಂತು ಸಂಧಿ ೩೮ಕ್ಕಂ ಪದಗಳು ೨೧೪೮ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಶರಣ (ಮ); ಸ್ಮರಣ (ಕ). ೩ ಯು (ಧ, ನ, ಮ). ೪–೫ ವರ (ಕ, ಚ, ಧ).

CC-0. Jangamwadi Math Collection. Digitized by eGangotri

ಸಂಧಿ : ೩೯

*

ಸೂಚನೆ : ಪ್ರೌಢವತಿಯ ಕಟಾಕ್ಷಜಾಲಾ
ರೀಢಮಾನಸನಾಗಿ ಕಾಮನ
ಗಾಢ ಶರಿರಪತಿಗಳುಕಿದನು ಗುರುಭಕ್ತಿಯಾಂಡಾರಿ

ಲಲಿತಗುರುಭಕ್ತಿಪ್ರಸಂಗನ
ಚಲಿತಗುರುಭಕ್ತಿಸ್ಥಿರಾಂಗನು
ಮಿಳಿತಗುರುಭಕ್ತಿಪ್ರಿಯನು ಗುರುಭಕ್ತಿನಿಶ್ಚಳನು
ಫಲಿತಗುರುಭಕ್ತಿಪ್ರಸಿದ್ಧನ
ತುಳಿತಗುರುಭಕ್ತಿಪ್ರಬುದ್ಧನು
ಕಲಿತಗುರುಭಕ್ತಿಸ್ಥಿತಿನು ಗುರುಭಕ್ತಿವರ್ಧಿತನು ೧

ಭವ್ಯಗುರುಭಕ್ತಿಪ್ರಕಾಶನು
ಸೇವ್ಯಗುರುಭಕ್ತಿಪ್ರದೇಶನು
ನವ್ಯಗುರುಭಕ್ತಿಕ್ರಮನು ಗುರುಭಕ್ತಿವಿಶ್ರಮನು
ದಿವ್ಯಗುರುಭಕ್ತಿಕ್ರಿಯಾಭಿ
ಜ್ಞಾವ್ಯಸನಿ ಗುರುಭಕ್ತಿಸೌಭಾ
ಗ್ಯಾವ್ಯಯಂ ತಾನೆನಲೆಸೆದು ಗುರುಭಕ್ತಿಯಾಂಡಾರಿ ೨

ಆಂದವಹ ಬೆಜವಾಡಪುರದೊಳು
ಸೌಂದರಾಕಾರನು ವಿಶಿಷ್ಟಾ
ನಂದಶೀಲನು ಬರುತಬರುತಂ ವಾಟಿಕಾಸ್ಥಳದ
ಮುಂದೆಯೊಬ್ಬಳು ಪ್ರೌಢವತಿಯೆಂ
ಬಿಂದುಮುಖಿ ವಾರಾಂಗನಾಮಣಿ
ಯೊಂದು ದಿನದಲಿ ತನ್ನ ಸದನಾಂಗಣದೊಳೊಪ್ಪೆಸೆದು ೩

---

* ರಾಗ : ಗುಂಡಾಕ್ರೀ (ಚ. ಧ. ಪ); ಭೈರವಿ (ಅ); ರಾಮಾಕ್ರೀ (ಡಾ); ಪೀತಶಾಖಿ (ಮ); ಮೇಘರಂಜಿ (ತ). ೧ಸ (ಸ). ೨ರ (ನ). ೩-೪ ಚರಿತನು (ನ, ಮ).

CC-0. Jangamwadi Math Collection. Digitized by eGangotri

ಮುಚ್ಚರಿಪ ವಿಟಕೋಟಿಯಂ ತಟ
ವುಚ್ಚಿನೋಡುವ ನೋಟದಂಬಿನ
ಹೆಚ್ಚಿನೀಕ್ಷಿಸೆ ಸತಿಯ ಕಂಗಳೊಳೊಡ್ಡಿದುರುಳುಗಳೊ
ಬೆಚ್ಚುವಂಬಕರೋಚಿಗಳೊ ನೆಱಿ
ಚುಚ್ಚುವುದ್ದಾಮಾಂಕುಶಂಗಳೊ
ಅಚ್ಚರಿಯ ಕಣುಮಿಂಚುಗಳೊ ಮಿಱುಗುಗಳ ಪಂಗಡವೊ ೪

ನಳಿನವದನೆಯ ನಯನರುಚಿಗಳೊ
ಸುಳಿವ ದೀ೯ಹಗಳೋ ಲತಾಂಗಿಯ
ತೊಳಗುವಕ್ಷಿಯೊ ಕುಸುಮಬಾಣನ ಮಸೆದ ಸರಳುಗಳೊ
ಲಲನೆಯಾಲೋಕಂಗಳೋ ವಿಟ
ಕುಲದ ಗಳಪಾಶಂಗಳೋ ಕೋ
ಮಳಿಯ ನೇತ್ರಾಂಶುಗಳೊ ಹಣ್ಣಿದ ಬಲೆಗಳೋ ತಾವು ೫

ಆರು ಪರುಳಾಗರು ಪಧೂಟಿಯ
ತೋರಮೊಲೆಗಳ ಬಿಗುಪನೀಕ್ಷಿಸಿ
ಆರು ಧೃತಿಗೆಡರೀ ಸತಿಯ ಮೆಲ್ನುಡಿಗಳಂ ಕೇಳಿ
ಆರು ಸೋಲರು ಮಾನಿನಿಯ ಸ
ಸ್ಮೇರಯುತಮುಖಬಿಂಬವಂ ಕಂ
ಡಾರು ಬೀಳರು ಪ್ರೌಢವತಿಯ ಕಟಾಕ್ಷಶರಹತಿಗೆ ೬

ಅತಿವಿಚಿತ್ರವಿದೆನುತ ತನ್ನೊಳು
ಶತದಳಾಯತಲೋಲದೃಗುದೀ
ಧಿತಿಗಳಲ್ಲಿಯೆ ಸಿಕ್ಕಿ ಕಾಲಿಡಲಱಿಯದೋರಂತೆ
ರತಿಪನೆಸುವ ನಿಶಾತಮಾರ್ಗಣ
ಹತಿಗೆ ಗುಱಿಯಾದೆನು ಬಳಿಕ್ಕನು
ಮತಿಸಲರಿದರಿದೀ ಸುದತಿಯ ಕಟಾಕ್ಷಪಾತಕ್ಕೆ ೭

---

೧ ದೇ (ಅ. ಕ. ಡಾ. ಬ. ಮ).

CC-0. Jangamwadi Math Collection. Digitized by eGangotri

ತೆರಳಿ ಮುಂದಕೆ ಹೋಗಬಾರದು
ಮರಳಿ ಹಿಂದಕೆ ಬರಲುಬಾರದು
ತರಳನಯನೆಯ ನೀಗಬಾರದು ಮಾನವಂ ಧೃತಿಯ
ಪರಿಹರಿಸಬಾರದು ಸತಿಯನೇ
ಪರಿಯೊಳಿದಕೇಗುವೆನೆನುತ್ತೀ
ಶ್ವರನ ಭಕ್ತನು ತನ್ನೊಳೂಹಿಸುತಿದಕೆ ತಪ್ಪೇನು ೮

ಅವಳು ಭಕ್ತಿಯದಂತುಮಲ್ಲದೆ
ಶಿವಪುರಾಣದೊಳಾಗಳುಂ ಹೇ
ಳುವುದು ತಪ್ಪದೆ ಮೈಥುನೇ ರತವಂದೆನುತ ಮತ್ತೆ
ಅವಿರತಂ ತತ್ಸೂತಸಂಹಿತೆ
ವಿವರಿಸುತ ತಾನಹಗೆ ಮೊರೆವುದು
ತವಕದಿಂದಂ ಯತ್ನಿಖಿಂ ತತ್ಅರ್ಪಿತಮೆನುತ್ತ ೯

ಇದುನಿಮಿತ್ತಂ ತನ್ನುವಂ ಹೊಂ
ದಿದ ಸುಖಿಂಗಳನಿಂದ್ರಿಯಂಗಳ
ಹುದುಗು ಸೋಂಕಿದ ಹಾಂಗೆ ಮುಖಿವನರಿದು ಶಿವಂಗೀವ
ಹದನನಱಿದಡೆ ಸಾಕು ಶ್ರುತಿವಾ
ಕ್ಯದಲಿ ದುರ್ವಿಟನಲ್ಲ ಶಮೆದಮೆ
ಹೃದಯದಿಂದಲಿ ಉತ್ತಮಂ ವಿದ್ವಾಂಸರಱಿತಿರಲು ೧೦

[೧]ಸಂಧಿಸಲು ಶಿವಭಕ್ತಿಯೊಳಗಿದು
ವೊಂದು ಪಕ್ಷಮದಾಗೆ ಸಂಶಯ
ವೊಂದಲೇಕಿನ್ನೆನುತ ತನ್ನಯ ಸಖಿನ ಕೈಯಿಂದ
ಸೌಂದರಿಗೆ ಸಲುವೊತ್ತೆಯಂ ನಯ
ದಿಂದ ಕಳುಹಲು ತತ್ತಳೋದರಿ
ಮಂದಹಾಸಂ ಮೊಳೆಯಲಾ ಶಿವಭಕ್ತನಂ ನೋಡಿ ೧೧

೧–೨ ನಿಂದಿ (ನ).

CC-0. Jangamwadi Math Collection. Digitized by eGangotri

ಒತ್ತೆಯಂ ನಾನೊಲ್ಲೆನೆನಲವ
ನಿತ್ತಲೆಯ್ತರೆ ಆತನವನಂ
ಮತ್ತೆ ಕಳುಹಲು ಲಲನೆ ಬಳಿಕಾನೊಲ್ಲೆನಡಿಗಡಿಗೆ
ಇತ್ತ ಬರಬೇಡೆಲವೊ ಹೋಗೆನು
ತುತ್ತರಿಸುತಾನಂದದಿಂದಂ
ವೃತ್ತಕುಚಿಯಂತೊಲ್ಲದಿರೆ ಕಡುತವಕ[ಗ]ದಲಿ[ಲಿ] ತಾನೆ ೧೨

ಆಲ್ಲಿಗೆಯ್ದಿಯಿದೇಕೆವೊತ್ತೆಯ
ನೊಲ್ಲೆನೆಂದೆ ಗಡಕ್ಕಟೀ ಪುರ
ದಲ್ಲಿ ತ[ನ್ನಂ] ಹೋಲುವಂತಹ ಮಿಂಡರುಗಳೊಳರೆ
ಇಲ್ಲಿ ಇತ್ತುದದೆಯಿದ[ಲಿ]ದಿರಲದ[ಱ]
ಕೊಲ್ಲೆನೆಂ[ಬು]ದಡೆ ಬಳಿಕ[ಮೆ]ವೊತ್ತೆಯ
ದಲ್ಲ ನಿನ್ನುದ್ದಕ್ಕಿ ಹೊನ್ನಂ ಸುರಿಯೆನೇ ತರಿಸಿ ೧೩

ಪಲ್ಲವಾಧರೆ ಕೇಳು ಭವಿಯೆಂ
ದೊಲ್ಲದಡೆ ನಾಂ ಪರಮಭಕ್ತನು
ಬಲ್ಲತನವಿಲ್ಲೆಂದಡೆನ್ನೊಡನಿರ್ದು ನೀ ನೋಡು
ನಲ್ಲರೂಪಿಲ್ಲೆಂದಡೀಕ್ಷಿಸು
ಚೆಲ್ಲೆಗಂಗಳಿನಾಪ್ತಬಂಧುಗ
ಳಿಲ್ಲವೆಂದಡೆ ಸಕಲಮಾಹೇಶ್ವರರು ಎನಗುಂಟು ೧೪

ದೊರೆತನವದಿಲ್ಲೀತಗೆಂದಡೆ
ದೊರೆಯ ಮಗನೀ ಊರೊಳಗೆ ಸತ್
ಪುರುಷನಲ್ಲೆಂದೂಹಿಪಡೆ ಪುರುಷಾರ್ಥಪರನಾನು
ಹಿರಿದು ಕಿ[ಱಿ]ದೆಂದೊಲ್ಲದಿರ್ದಡೆ
ಹರೆಯವೊಂದೇ ನೋಡು ತಮಗಿ
ಬ್ಬರಿಗೆ ಕೋವಿದನಲ್ಲವಡೆ ನುಡಿಗಳಿನಱಿದುಕೊಳ್ಳಾ ೧೫

೧–೨ ದಿಂ (ಚ, ಕ, ಥ, ನ). ೨–೩ ನ (ಬ, ಮ); ಎ (ಥ, ಪ). ೪–೫ ದೆಂದೇ (ಕ, ಚ, ಥ, ನ, ಪ, ಬ). ೬–೭ ದೆ ಬಳಿಕ್ಕ (ಅ, ಡಾ, ನ, ಸ).

CC-0. Jangamwadi Math Collection. Digitized by eGangotri

ಸುದತಿ ನೀನೊಬ್ಬಂಗೆ ಕೂರ್ತೊ
ಲ್ಲದಡೆ ತನ್ನೊಡನೊಂದುಬಾರಿ ನೆ
ರೆದು ಬಳಿಕ ನೋಡಂತುಮಲ್ಲದೆ ಹೇಳುವೆನು ಕೇಳು
ವಿದಿತಜಾತಿಗಳಿಚ್ಛೆಗಳು ಸ
ಮ್ಮೃದಗುಣಂಗಳು ಯೋನಿ[೧]ದಂಡಾ
ಸ್ರದಕಳೆಗ[೨]ಳುಂ ನಾಡಿ[೩]ಕಂಗಳು ಸೊಂಪಿನಿಂಪುಗಳು ೧೬

ಓಳಿ[೪]ಯಲಿ[೫] ಸಮರತಿಗಳಾಗದೆ
ಮೇಲೆ ವಿಷಮಾರತಿಗಳಾದನು
ಕೂಲಸಮರತಿಹೊಂದುವಾಸನಭೇದಸಮತಿಗಳ
ಕೀಲಿಸುವ ಕರಣಂಗಳಂ ರ
ತ್ಯಾಳಿಗಳನೊಡಗೂಡಿಸುವ ತತ್
ಕಾಲವೇಳೆಗಳಂ ಮನೋರತಿಭಾವನೆಯನಱಿದು ೧೭

ಬಾಲಕಿಯರುಂ ಯೌವನೆಯರುಂ
ಲೋಲೆಯರು ಪ್ರೌಢೆಯರೆನಲು ನಾ
ನಾಲಲನೆಯರುಗಳ ವಯೋಧರ್ಮಂಗಳಂ ತಿಳಿದು
ಕೇಳು ಭದ್ರನೊ ದತ್ತಕನೊ ಪಂ
ಚಾಳನೋ ಮೇಣ್ ಕೂಚಿಮಾರನೊ
ಮೇಲೆ ಧನಿಸುತನೋ ಜಯಂತನೊ ಕಾಮನೋ ಎನಲು ೧೮

ಪರಿವಿಡಿಯೊಳುಂಗುಟದೊಳಡಿಯೊಳು
ಪರಡಿನೊಳು ಜಂಘೆಯೊಳು ಜಘನಾಂ
ತರದೊಳುಂ ನಾಭಿಯೊಳುರದೊಳು ಕುಚದೊಳು ಕಕ್ಷೆಯೊಳು
ಸ್ಫುರಿತಗಳದೊಳು ಗಲ್ಲದಲ್ಲಿಯ
ಧರದೊಳಳಿಕದೊಳಕ್ಷಿಯೊಳು ಕಚ
ಭರದೊಳೀ ಪರಿಯಿಂದೆ ತತ್ತತ್‌ಸ್ಥಾನಕಳೆಗಳಲಿ ೧೯

---

೧೧ (ಸ). ೨–೩ ಳೂ ನಾದಿ (ಸ). ೪–೫ ಯಿಂ (ಕ, ಚ, ಥ).

CC-0. Jangamwadi Math Collection. Digitized by eGangotri

ನಲಿದು ಬಿರಳಿಂ ಕಟಿಯ ಕೆಳಗನು
ಗೊಳಿಸಲದಱಿಂ ಕೆಳಗೆ ಸಂಧಿಸ
ಲಳವಡಲು ಭ್ರಮೆಗೊಳಿಸಿ ತಿರುಹಲು ಪಿಡಿಯೆ ಸರಸದಲಿ
ಅಲರಿಸಲು ಮೂಱಱಿಲಿ ಸಲೆ ತೋ
ಱಲು ಸುರೇಖೆಗಳಂ ಮುದದೊಳಾ
ನಲುಗಬಳಸಲ್ಕಿರಡೆಱಲಿಸಿ ಮುಟ್ಟಲ್ಕಿ ವೇಣಿಯನು ೨೦

ಕಳೆಗಳೇಱಲು ಶುಕ್ಲಪಕ್ಷದಿ
ಬಲದೊಳಿಳಿಯಲು ಮುನ್ನೆಡದ ಕಡೆ
ಯಲಿ ಮೊಳೆವ ಮನುಮಥರಸಾಂಭೋನಿಧಿಯೊಳಂತಬ್ಜಿ
ಜಲಜದಳಲೋಚನೆಯರಂ ತ
ಮ್ಮೊಳಗೆ ತಾವೇ ಮಱೆವಪಗೆ ಕೈ
ಗೊಳಿಸಿ ಮಾಡುವುದರಿದೆ ಸಮ್ಮುಖವಿತ್ತು ನೋಡೆನಗೆ ೨೧

ವೃತ್ತಕುಚೆಯಾಲಿಂಗನಾದ್ಯುಚಿ
ತೋತ್ತಮಾಲಾಪಂಗಳಿಂ ನಿಱಿ
ಯತ್ತ ಸಡಿಲುತ್ತಿರಲು ಉನ್ಮೀಲಿತನಯನೆಯಾಗೆ
ಚಿತ್ತಭವರಸಶರಧಿ ತುಳುಕಾ
ಡುತ್ತಿರಲು ನಿನ್ನಂ ಮರುಳುಮಾ
ಡುತ್ತಮಿರದಿರ್ದಡೆ ನಿನಗೆ ನಾಂ ಸೋತವನು ಬಳಿಕ ೨೨

ಎನುತ ತದ್ವಿಷಯಂಗಳಾಗಿ
ದ್ದನುನಯಾಲಾಪಂಗಳಿಂ ಮಾ
ನಿನಿಗೆ ತನ್ನಯ ಜಾಣ್ಮೆ ಮಱಿಯಲು ಪ್ರೌಢವತಿ ನಗುತ
ನಿನಗೆ ಎನಗಂ ಭಕ್ತಿನೀತಿಯೊ
ಳನುಮತಿಸಲಳವಡದು ಹೋಗೆಂ
ದೆನುತಿರಲು ಮೇಣ್ ನಿನ್ನ ಚದುರಂ ತೋಱುವುದು ಮತಿಯೆ ೨೩

೧ಬೆ (ಬ). ೨–೩ಱಿಂ (ಕ. ಚ).

CC-0. Jangamwadi Math Collection. Digitized by eGangotri

ಆಜ್ಞಿತವುಳ್ಳವನಾದಡಿನಿತಜ್ಞೊ
ಳಜ್ಞಿಯವೇಡಾ ಹೆಱರ ಮನವಂ
ನೆಜ್ಞಿ ರಸಿಕನಾದಡೆ ಹಸನನುಳಿದುಸುರಿದಡೆ ಬಾಯ
ತೆಜ್ಞಿಯಲುಂಟೇ ಬಳಿಕ ನಿನಗಾಂ
ಬಿಜ್ಞಿಸನಾಡಿದ ಭಾವಮಂ ನೀ
ವಜ್ಞಿದು ಭಾವಕನಾದಡಾಗಳೆ ಹೋಗಬೇಕಲ್ಲ ೨೪

ಮಿಂಡನಾದಡೆ ಮೀಱಬಹುದು
ದ್ದಂಡವಲ್ಲಾ ಕುಂಟಣಿಗನೊಡ
ನಂಡಲೆದು ಬೇಡೆನಲು ಮನುಮಥತಂತ್ರವಿದ್ಯಾದಿ
ಪಂಡಿತಂ ಗಡ ಮುಂದೆ ನಿನ್ನಂ
ಕಂಡು ರತಿಯಂ ತೋಱಿದಿರೆ ನೀ
ಗಂಡುಗೂಸಾದಡೆ ಬಳಿಕ ನಿನ್ನೊಳಗಜ್ಞಿಯವೇಡ ೨೫

ಶೈವರೊಳು ಲಿಂಗಾವಧಾನದ
ಭಾವಿಯಾದಡೆ ಹೊಲಬುಗೆಟ್ಟ ಮ
ನೋವಿಕಾರದ ಮಾತುಗಳನಾಡಲಿಕುಚಿತವಹುದೆ
ಭಾವಜಾತುರನಾಗಿಯಕಟ ವೃ
ಥಾ ವಿಕಳನಾಗದಿರು ಗುರುಪದ
ಸೇವಕಂ ನಿನಗಿನಿತು ಕಳವಳವೇಕೆ ಹೋಗೆನಲು ೨೬

ಇಂತು ಪ್ರೋಪವನಲ್ಲ ಕೇಳ್ ಪುರು
ಷಾಂತರವನೇನುವನಱಿಯೆ ವಿಳಿ
ಭ್ರಾಂತೆ ನೀನತಿ ದಿಟ್ಟತನದಿಂದೊಲ್ಲದಿಹುದೇನು
ಎಂತು ಹೇಳಲ್ಲದಡೊಡಂಬಡು
ಮುಂತೆ ಹಡೆದುಣಲೊಲ್ಲದಿದ್ದಡೆ
ಕಾಂತೆ ಎನ್ನಂ ಮಾಡಿಕೊಂಡಿರು ಅಂತುಮಾಗದಡೆ ೨೭

---

೧೪ (ಸ). ೨–೩ ರೂಪಾ (ಸ). ೪ನಿ (ಕ, ಚ).

CC-0. Jangamwadi Math Collection. Digitized by eGangotri

ನರರನಿದು ಮೊದಲಾಗಿ ಆರಂ
ಕರೆಯದಿದ್ದಡೆ ಭಾಷೆಯಂ ನುಡಿ
ತರಳೆ ನೀನುಡುತಡಿಯ ಮಹದೇವಿಯರ ಛಂದದಲಿ
ಪರಿಹರಿಸು ವಿಷಯಪ್ರಪಂಚ[೧]ವ
ನರಿದೆನಲು ತಿಳಕವ್ವೆಯಂದದಿ
ಪುರುಷರೂಪಂ ಧರಿಸಿಕೊಳ್ಳಾ ಪಲವುಸುರಲೇನು ೨೮

ನಾರಿಯರೊಳಭಿಮಾನವುಳ್ಳಾ
ಚಾರವಂತದ ಭಕ್ತಿಯಾದಡೆ
ವೀರಚೋಳ[೨]ವೆಯಂತೆ ಶಿವನಂ[೩] ನೆರೆಯಬಯಸಿದಡೆ
ಚಾರು ದ್ರಾಕ್ಷಾರಾಮದಲ್ಲಿಗೆ
ವಾರಿಜಾನನೆ ಹೋಗು ನೀನವಿ
ಚಾರದಿಂ ಹೋಗೆಂದು ಸಾವಿರವೆಂದಡಂ ಹೋಗೆ ೨೯

ಇದಕೆ ಕಾರಣವಾವುದುಸುರ
ಲ್ಲದಡೆ ನಾನಾಯಿತ್ತು ನೀನಾ
ಯ್ತುಬುಜಲೋಚನೆ ನಿನ್ನನೆಂತುಂ ಹೋಗಬಿಡೆನೆ[೪]ನಲು[೫]
ಗದರುತಹುದಹುದಾರು ಮೆಚ್ಚುವ
ರಿದನಹಪ ಲೇಸಾಯ್ತು ಹರಹರ
ಚದುರನಹೆ ನೀ ನಿನ್ನ ಒಡತಣಕೂಟವರಿದೆನಗೆ ೩೦

ನಲ್ಲೊ ಮಿಂಡನೆ ನಲ್ಲೊ ಭಕ್ತನೆ
ನಲ್ಲೊ ಸತಿಯರ ಭಾತಿಯೇ ನೀ
ನಲ್ಲವೋ ಸುದತಿಯರು ತಾವಿಂತೊಲ್ಲದುದನಱಿ[೬]ದು
ಗೊಲ್ಲನಾದಡೆ ರತಿಗೆಳಸುವನೆ
ಒಲ್ಲದರಸನನೊಲ್ಲದಬಳೆಯ
ನೊಲ್ಲದಿಹ ಕೆಳೆಯಂ ಬಳಿಕ ಬಿಡಲೊಲ್ಲದಿಪ್ಪವನೆ ೩೧

---

೧ ಚು (ಅ, ಡಾ, ಥ, ಪ, ಮ). ೨–೩ ವೈಯವೊಲೀಶನ (ಅ). ೪–೫ ನುತ (ಕ, ಡಾ, ಬ, ಸ).

CC-0. Jangamwadi Math Collection. Digitized by eGangotri

ಗೊಲ್ಲನಲ್ಲದೆ ಜಾತಿಗೊಲ್ಲನು
ಗೊಲ್ಲನೇ ತಾನೆಲ್ಲಿಡೆಯೊಳುಂ
ಗೊಲ್ಲನಾದಡೆ ಮಡದಿಯರ ಮನಸುಗಳ ಕೀಲುಗಳ
ಬಲ್ಲವನೆ ನೆಱಿ[1] ವಿಟನು ಕಾಮನು[೧]
ಬಲ್ಲುದಿ[೨]ಲ್ಲಾ ಬಹುಕಥೆಗಳಂ
ಬಲ್ಲ ಬೊಜಗರ ತಲೆಗಳಲಿ ಕಟ್ಟಿದೆಯಲಾ ಹುಲ್ಲ ೩೨

ಹೇಸಿಕೆಯ ಮಾತುಗಳನಾಡದಿ
ರೋಸರಿಸು ಕಕ್ಕುಲಿ[೩]ತೆ ಮಿಕ್ಕಪು
ದೈಸೆ ಬಹರೇ ನಿನಗೆ ಸತಿಯರು ಹಾರಿಬಿದ್ದಡೆಯು
ಈಸು ಕಳವಳವೇಕದೇತಱ
ವಾಸಿಯೆನ್ನೊಡನಿಂತು ನೀನಳಿ
ಯಾಸೆಗೆಯ್ದಡೆ ನಿನ್ನ ಸರಿವಿಟರೆಂತು ಮೆಚ್ಚುವರು ೩೩

ಚಂಡಿಗೊಂಡೋರಂತೆ ಹೋಗದೆ
ಭಂಡಿಸುವುದಿದು ಭಕ್ತಿನೀತಿಯೆ
ಮಿಂಡತನಕಿದು [೪]ನೀತಿಯೇ[೪] ಕೇಳ್ ನಿನ್ನ ನೀನಱಿಯೆ
ಗಂಡುಮಿಕ್ಕುಪತಾಪಿಸುವುದು
ದ್ವಂಡಿಸುವುದೇನೆನ್ನ ಸಾಕಿದ
ಗಂಡನೋ ನೀನೀಗ[೫]ಳೋಹಿಯ[೨] ಬೊಜಗನೋ[೪] ಮತ್ತೆ ೩೪

ಮಿಡುಮಿಡನೆ ಮಿಡುಕಿದಪೆ ಗಜಬಜ
ಉಡುಗಿ[೬]ದೇತಕೆ ಹಬ್ಬಹಾಡಿಯ
ದೆಡೆಯೊಳುಂಡೆವೆ ಉಟ್ಟೆವೇ ನಿನ್ನಯ ಮನೆಗೆ ಬಂದು
ಕೊಡುವ ಮಿಂಡನ ಕಡುಹು ಲೇಸೆ
ಮ್ಮಡರನಱಿ[೭]ದೊಂದೆರಡು ಹೊನ್ನಂ
ಬಿಡದೆ ಕೊಟ್ಟಿಯೊ ಕಳವಳಿಸಿದಪೆ ಭಲರೆ ವಿಟಜಾಣ ೩೫

೧ನ (ಅ, ನ, ಮ). ೨ದೆ (ಧ, ಬ). ೩ಲ (ಸ). ೪–೪ ಯೋಗ್ಯವೇ (ಬ); ಜಾಣ್ಮೆಯೇ (ಅ). ೫–೫ ಳೋವಿದ (ಥ, ಬ). ೬–೬ ಮಿಂಡನೋ (ಅ). ೭ಗ (ಅ); ಕಿ (ಕ, ಚ).

CC-0. Jangamwadi Math Collection. Digitized by eGangotri

ತಿಳಿದು ನುಡಿದೆಹೆನೆಂದಡಂ ನಿ
ನ್ನೊಳು ವಿಚಾರಿಸಿ ನೀನೆ ನೋಡವಿ
ಚಳಿತಭಕ್ತನು ಗುರುಭಜನೆಯಲಿ ನಿರತನಂತಾಗಿ
ಹೊಳಲೊಳುಂ ಪ್ರಭುವಪ್ಪವಂ ಜನ
ರೊಳತಿಯುಕ್ತಿಪರಂ ಕುಯುಕ್ತಿಗ
ಳುಳಿದು ನೀತಿಯನುಳುಹಿಕೊಳ್ಳಾ ನಿನಗುಚಿತವಲ್ಲ ೩೬

ಮಡದಿಯರೊಳೆನ್ನಂ ವಿಚಾರಿಸಿ
ನುಡಿದಡಾನುದರಾರ್ಥಿಯಲ್ಲೈ
ಕಡೆಗೆ ಕೇಳಿದಡೆಮ್ಮ ಲಿಂಗವು ಕೊಟ್ಟ ಕಾಯಕವ
ನಡಸುತಿಹೆವಂತಾಗಿಯುಂ ಭವಿ
ಯೊಡನೆ ಮಾತಾಡೆವು ಕನಸಿನೊಳು
ಮೃಡನ ಭಕ್ತರನಲ್ಲದಾರುವನಱಿಯೆ ವರ್ತಿಸೆವು ೩೭

ಒಡಲೊಳವಗುಣವಿಲ್ಲವಿ[೧]ದಱಿಂ
ಪಡೆದ ಧನವಂ ಮಡಗಿ[೨]ಲಱಿ[೩]ಯೆವು
ಒಡೆಯರುಗಳೇ ಬಲ್ಲರಿದನೇನೆಂದು ಹೇಳುವೆನು
[೪]ನುಡಿಸಿ[೫]ಯಱಿಯೆವು ಕಂಡು ಕೇಳ್ದುಂ
ತೊಡಕಲಱಿಯೆವು ನಿನ್ನನೆಂದುಂ
ಗಡಬಡಿಸಿ ನೀನೆನ್ನುವಂ ಝಂಕಿಸಲೆಹಗೆ ಬಹುದು ೩೮

ಮುಡಿಸಿದವನೋ ಚಂಡಿಕೆಯನಂ
ದುಡಿಸಿದವನೋ ಹೊಸ ಉಡಿಗೆಯಂ
ತೊಡಿಸಿದವನೋ ಬಾಲದೊಡಿಗೆಯನರ್ಥಿಯಂ ಮಾಡಿ
ಕೆಡಿಸಿದವನೋ ಕನ್ಯೆಯಾಗಿರೆ
ನುಡಿಸಿದವನೋ ಮೆಲುನುಡಿಗಳಂ
ನಡಸಿದವನೋ ಎಮ್ಮವರನೆನಗಾಗಿ ನೀನೋತು ೩೯

೧ವ (ಟ). ೨–೩ ಲೀ (ಸ). ೪–೫ ಮಡಗಿ (ಮ).

CC-0. Jangamwadi Math Collection. Digitized by eGangotri

ಕಲಿಸಿದವನೋ ಕಾಮತಂತ್ರವ
ನೊಲಿಸಿದವನೋ ಕಿಱುವರೆಯದಲಿ
ಸಲಿಸಿದವನೋ ಮುನ್ನ ನೀನೆನ್ನವರ ಸಲಿ[೧]ಗೆಗಳ
ನಿಲಿಸಿದವನೋ ನೆಲೆಗೆ ಸೇರಿಸಿ
ಬೆಳೆಸಿದವನೋ ಬೇಟವಂ ಪೆ
ಗ್ಗಳಿಸಿದವನೋ ಕೊಡುಪ ವಿಟರೊಳು ಸಮುಚಿತವನಱಿದು ೪೦

ನಚ್ಚಿದವನೋ ಬಂಧುಬಳಗಕೆ
ಮೆಚ್ಚಿದವನೋ ಸುರತಕೇಳಿಗೆ
ಮಚ್ಚಿದವನೋ ಚಿತ್ತವೃತ್ತಿಯ ಗುಣ್ಪನಾರೈದು
ಬೆಚ್ಚಿದವನೊ ಮುಱಿದ ಮನವಂ
ಮೆಚ್ಚಿಸಿದವನೊ ಎನ್ನ ಧನವಂ
ಹೆಚ್ಚಿಸಿದವನೊ ಎನ್ನ ಜಸವಂ ವಾರಸತಿಯರೊಳು ೪೧

ಕಾಡಿದವನೋ ನಾನೊಲಿದಿರಲು
ಕೂಡಿದವನೋ ಕೇಳಿಗೂಟಕೆ
ಮಾಡಿದವನೋ ನೀನೆನಗೆ ಉಪಕಾರವಂ ಕಱಿದ
ಆಡಿದವನೋ ಎಮ್ಮೊಡನೆ ಕೊಂ
ಡಾಡಿದವನೋ ನೋಡಿ ಲೇಸಂ
ನೀಡಿದವನೋ ಕುಸುಮಗಂಧಾಲೇಪನಾದಿಗಳ ೪೨

ಬೆರಸಿದವನೋ ಮನಸು ಮರ್ಮವ
ನಿರಿಸಿದವನೋ ನಿನ್ನೆಡೆಯೊಳು
ದ್ಧರಿಸಿದವನೋ ಎಮ್ಮನೆಲ್ಲರನೆಡರಡಸಿದಲ್ಲಿ
ವರಿಸಿದವನೋ ಕೆಲವು ದಿನ ಪತಿ
ಕರಿಸಿದವನೋ ತಪ್ಪ ಸೈರಿಸಿ
ತರಿಸಿದವನೋ ಹೊನ್ನರನ್ನದ ತೊಡಿಗೆಗಳನೆನ[೨]ಗೆ ೪೩

೧ಲು (ಬ). ೨ನಿ (ಧ, ಥ, ಪ). ೩ಮ (ಮ).

CC-0. Jangamwadi Math Collection. Digitized by eGangotri

ಮದನವೈರಿಯ ಭಕ್ತಿಯಂ ತೋ
ರಿದವನೋ ಭವಪಾಶಮಂ ಪಱಿ
ಸಿದವನೋ ಜೀವಿತವನಿತ್ತಾಳಿದವನೋ ಮುನ್ನ
ಮದುವೆ ಮಂಗಳವಾಗೆ ಮನೆಗಳಿ
ಗೊದಗಿದವನೋ ಎಮ್ಮ ವಿತ್ತವ
ಹುದುಗಿದವನೋ ಭಕ್ತಭರಣವನಿಕ್ಕಿ ಪೊರೆದವನೊ ೪೪

ತವೆ ಕೊಲಲು ಕಾಯಲು ಬಲುಹನು
ಳ್ಳವನೊ ಹಡೆಯಲು ಕಂಡು ನೀ ಹಿಡಿ
ದವನೊ ಸಂತೆ[೧]ಯೊಳೆನ್ನನಿಂತೊಮ್ಮನದ ಬಱಿದಲ್ಲಿ
ನವೆವುತಿರೆ ಸಾಕಿದವನೋ ಎ
ಮ್ಮಪರನೇಂ ಸೆಱಿಯಂ ಬಿಡಿಸಿಕೊಂ
ಡವನೊ ವಾಯದ ಮಾತನಾಡದಿರಂತುಮಲ್ಲದೆಯು ೪೫

ಮತ್ತೆ ಕೇಳ್ ಮನೆವೆಂಡಿತಿಯೊ ನಾ
ನೊತ್ತೆಸೂಳೆಯೊ ನಿನಗೆ ಸೋದರ
ದತ್ತಿಗೆಯೊ ನಾದುನಿಯೊ ತೊತ್ತಿನ ಮಗಳೊ ನಿನ್ನವರ
ಒತ್ತಿ ನೀನೆನ್ನಂ ಬಲುಹುಮಾ
ಡುತ್ತ ಕಾಡಲದೆಂತು ಬಹುದಾ
ನೆತ್ತಮ್ಮೆ ನೀನೆತ್ತಲೇತಱಿ ಮಾತು ಬಾಯ್ಪಡಿಕಾ ೪೬

ಏಸನುಸುರಿದಡರ್ಥಿಕಾಱಿನು
ದೋಷವಂ ತಾನಱಿಯನೆಂಬಾ
ದೇಶವಾಡುವ [೨]ಮಾತನಿಂದಾಂ[೩] ಕಂಡೆ ನಿನ್ನಲ್ಲಿ
ಆಸೆ ಮೋಹವು ದುರ್ಗತಿಗಳ ನಿ
ವಾಸವೆಂಬುದನಱಿಯಲಾ ಕೇ
ಳ್ದೋಸರಿಸು ನೀನಿನಿತು ಕಾಮವಿಕಾರವಿದು ಹೊಲ್ಲ ೪೭

೧ದೆ (ಸ, ಪ, ಬ). ೨–೩ ಗಾದೆಯಂ ನಾಂ (ಸ, ಸ).

CC-0. Jangamwadi Math Collection. Digitized by eGangotri

ಧಾರುಣಿಯೊಳಾನಲ್ಲದಿಲ್ಲಾ
ನಾರಿಯರು ಬಿಜಿನಾಯ್ತೆ ಕಾಮವಿ
ಕಾರವೇಕೆ ಶಿವಾರ್ಚಕಂಗೀ ಮಾನವಾಚಂದ್ರ
ತಾರಕಮಿದೆಂದೆನುತಿರಲ್ಕೆ ವಿ
ಚಾರಿಸದೆ ನೀಗುವರೆ ಮಾನವ
ನಾರಿಗಾದಡೆ ಪುರುಷರೊಳಗಭಿಮಾನವೇ ಬೇಕು ೪೮

ಅಂಗದವಗುಣವೇಕೆ ಬಿಡು ಶಿವ
ಲಿಂಗವಂ ಪೂಜಿಸಿದುದಕೆ ಪರ
ರಿಂಗಿತಜ್ಞಾನಂ ನಿನಗೆ ಇನಿತಾದಡಂ ಬೇಡ
ಮುಂಗೆಡಿಸುವುದು ಲಜ್ಜೆ ನಾಚಿಕೆ
ಯಂಗಸಂಗವದೇಕೆ ಹೊಲ್ಲ ತೊ
ಲಂಗು ನೀನೆಂದಾಪ ಪರಿಯಲಿ ಹೇಳಿದಡೆ ಮಾಣೆ ೪೯

ಬಲುಕರಿಸಿ[1] ಎನ್ನಂ ನಿನಗೆ ಎನ
ಗಳವಡದು ಹೋಗೆಂದಡಂ ಬಿಡೆ
ಛಲವನೆನುತಂ ಭಕ್ತಿಯಂ ವಿಟಧರ್ಮವಂ ತೋಱಿ[2]
ಹಲವನುಸುರಲದಕ್ಕೊಡಂಬಡ
ದೆಳಸುವಾತಂಗಂತುಮಲ್ಲದೆ
ಬಳಿಕ ಸತಿ ತನ್ನೊಳಗೆ ತಾನೆ ವಿಚಾರಿಸಿದಳೊಂದ ೫೦

ಮಕರಕೇತನರತಿಗಳಲಿ ಹೇ
ಸಿಕೆಗಳಂ ಹುಟ್ಟಿಸುವೆನೆನುತ ತ
ಪಕಿಗೆ ಸತಿಯಿಂತೆಂದಳೆಲೆ ವಿಟಕೋವಿದನೆ ಕೇಳು
ವಿಕಟವಹ ವೇಶ್ಯಾವಿಡಂಬರ
ವಕಟ ಮುನ್ನಱಿಯಾ ಬಱಿಯ ವೈ
ಶಿಕದ ಡೊಂಬಿನ ಡಂಬಕಂಗಳ ವಾರವನಿತೆಯರ ೫೧*

೧–೨ ನಾಶನವಹುದು (ಅ. ಸ). ೩ ಸೆ (ಬ). * ಈ ಪದ್ಯ ನ, ಪ ಪ್ರತಿಗಳಲ್ಲಿಲ್ಲ.

CC-0. Jangamwadi Math Collection. Digitized by eGangotri

ಠಕ್ಕಿತೆಯರಧಮೆಯರು ಕತ್ತಿಗೆ
ಮಿಕ್ಕ ಗೋ[೧]ಟುಗಳಣಕಿಗಳು ಶತ
ದಿಕ್ಕಿಯರು ಭಂಡಿತಿಯ[೨]ರಾಗಳು[೩] ಕೊಂಡೆಗಿತ್ತಿಯರು
ಎಕ್ಕಸೆಕ್ಕೆಯರವರವರುಗಳ
ನಕ್ಕು ಬಸಲೆಯರುಗಿದು ತಿಂಬಾ
ರಕ್ಕಸಿಯರಾಶಾಪಿಶಾಚಿಯರಿಚ್ಛೆಗಾತಿಯರು ೫೨

ವಿರಸೆಯರು ವಿಶ್ವಾಸಘಾತಕಿ
ಯರು ವಿಕಾರಿಯರನುಚಿತೆಯರ
ಸ್ಥಿರಚರಿತೆಯರು ವಿಗಡೆಯರು ಮನಗಂಟುಗೊಯ್ಕೆಯರು
ದುರುಳೆಯರು ಕಷ್ಟೆಯರು ಪಂಚಕಿ
ಯರು ಜಗಳಗಂಟಿಯರು ಕಾಮಾ
ತುರೆಯರತಿದವಡಿತಿಯರಂತಃಕರಣಮಲಿನೆಯರು ೫೩

ಕಪಟೆಯರು ಧೂರ್ತೆಯರು ಹಾಸ್ಯದ
ಕುಪರಿಯರು ಕಾಕೆಯರು ನಿಷ್ಠುರ
ಚಪಳೆಯರು ದುರ್ವ್ಯಸನಿಯರು ಜನಮೋಹಪಾಶೆಯರು
ಅಪಸರಿಯರುಱ[೪] ಕುಲಗೆಡಿಕೆಯರು
ಕೃಪಣೆಯರು ಚೋರಕರ ತಾಯ್ಗಳು
ಕುಪಿತಮತಿಯರು ಖಿಲ್ಲೆಯರು ಕಳ್ಳೆಯರು ಚಿಳ್ಳೆಯರು ೫೪

ಕೃತ್ರಿಮದ ರೂಪುಗಳು ಬಾಹಿರ
ಗತ್ತುಗಳು ಪೊಣಿಸ್ಕಿಯಿಲ್ಲಡೊಂದುವ
ಪಾತ್ರೆಗಳುದರಪೋಷಣೆಯರುಂ ಗೋಣುಗೊಯ್ಕೆಯರು
ಭಕ್ತಿಯಲೆಷ್ಟಧ್ಯರಿಯರಾ
ಪೊತ್ತು ಹಾಳುಗಳಿಲ್ಲರೆಯರು ಬ್ರ
ಹ್ಮತ್ಯ[೫]ಕಾತಿಯರೆಷ್ಟರತಮುಂ ಹೊನ್ನುಬಾಕಿಯರು ೫೫

೧ಗೊಂ (ಆ, ಧ, ನ, ಪ). ೨–೩ ರಸಿಕಂ (ಅ). ೪–೫ ಮೃತ್ಯು (ಥ). ೬–೭ ಹ್ಕೇಕಿ (ಡಾ, ಮ).

CC-0. Jangamwadi Math Collection. Digitized by eGangotri

9234:221 33M8

ದಿಟ್ಟಿಯರು ಕುಟಿಲೆಯರು ಕುಹಕದ
ಘಟ್ಟಿಯರು ಲಟ್ಟಿಯರು ಮಿಂಡರ
ಬೆಟ್ಟಿಯರು ಮಟಮಾಯೆಗಳ ಬಲು ಮುದ್ದುಕಾತಿಯರು
ಕೆಟ್ಟಜಾತಿಯನಾರನಾದಡೆ
ಮುಟ್ಟಿಕೊಂಬರು ಹಣವಿನಾಸೆಗೆ
[೧]ಬಟ್ಟಿ[೨]ಗುತ್ತೆಯರಿಂತು ವಾರಪ್ರರಂಧ್ರಿಯರು ಮತ್ತೆ ೫೬

ಕಲುಷಿತಂಗಳು ಸಂಚಳಂಗಳು
ಹೊಳೆವ ಮಸೆದಲಗುಗಳ ಮಿಂಚಿನ
ಕೆಳದಿಯರು ಕ್ರೂರಂಗಳವಿಚಾರೆಯರು ಜಾರೆಯರು
ಬಲೆದೊಡಕುಗಳು ಕರ್ಮಮಾರ್ಗಂ
ಗಳ ಮೊಳೆಗಳುಗ್ರಂಗಳಾಶಾ
ವಳಯಿತಂಗಳು ಜಾಜಿಗಳು ಬೀಜಿಗಳು [೩]ರವಣಿ[೪]ಗಳು ೫೭

ಒಲವರಂಗಳು ವ್ಯಾಕುಳಂಗಳು
ಮುಳಿಸುಗಳು ಬೆಳಸುಗಳು ಸಲೆ ಮೊ
ಕ್ಕಳದ ಸುಳುವಿನ ಕಳ್ಳರುಗಳೋರೆಗಳು ಮಾನವರ
ಕುಲವನಜಿ[೫]ಯವೆ ಬೆರಸುವತಿಚಾ
ಪಳದಿರವುಗಳೆರವುಗಳುಜಿ[೬]ಪೊಜಿ[೭]
ಗಳನಜಿ[೮]ಯದೆಜಿಗುವ ಕೆಡಿಕಿಗಳನಿಷ್ಪಪುಷ್ಪಿಗಳು ೫೮

ಹಿಂಗದಾಲೋಕಂಗಳುಂ ಭ್ರಮಿ
ತಂಗಳಪವಿತ್ರಂಗಳುಪತಾ
ಪಂಗಳಾವಾಸಂಗಳಿಂದ್ರಿಯಸಂಗದುರುಳುಗಳು
ಭಂಗುರಂಗಳನಂಗನೊಳು ಪಾ
ಶಂ[೯]ಗಳಿತರಾಲಿಂಗನಾ[೧೦]ಚ[೧೧]ರ
ಣಂ[೧೨]ಗಳಾಗಳಿಹಂಗ್ ಪೆಣ್ಗ[೧೩]ಳ ಕಂಗಳಿವು ಮತ್ತೆ ೫೯

೧–೨ಬಟ್ಟಿ (ಅ); ಬಿಟ್ಟಿ (ಮ). ೩–೪ಬೀಡು (ಕ, ಚ, ಥ). ೫ಸಂ (ಡಾ, ಅ). ೬ವಾ (ಸ). ೭ ಭ (ಮ). ೮ಸಂ (ಕ, ಚ). ೯–೯ಳುರದೈಹಿಂಗೆ (ಅ). ೯–೧೦ಪಿಂಗ (ಕ, ಚ, ಥ, ಪ).

JAGADGURU VISHWARADHYA LIBRARY SRI SIMHASAN JNANAMANDIR Jangamwadi Math, Varanasi ACC. NO. ೫೫೫ 1018

CC-0. Jangamwadi Math Collection. Digitized by eGangotri

ಮಱಿಗಳಱಿಗಳು ವೈರಿಕಂಗಳು
ಬಱಿಯ ಹುಸಿನುಸುಳುಗಳು ಕಾಮುಕ
ರಱಿಕೆಗಳು ಬಹು ಭಾ೧ಷಣಂಗಳು ಹೊರೆಗಳಿ೨ರವುಗಳು
ಬೆಱಿಗುಗಳ ಪ೩ಸರಾನ್ವಿತಂಗಳು
ಬಿಱಿಸುಗಳುದಾಸೀನವೃತ್ತಿಗ
ಳಱಿ೪ವುಗಳು೫ ಕೀಣಂಗಳಪಹಾಸ್ಯಂಗಳಿಚ್ಛೆಗಳು ೮೦

ಮಚ್ಚರಂಗಳು ಕುಶ್ಚಿತಂಗಳು
ಮುಚ್ಚುಮಱಿ೨ಗಳ ಕೆಚ್ಚುಗಳು ಒಳ
ಚುಚ್ಚುಗಳು ಕಳ್ಳಚ್ಚುಗಳು ಹೆಬ್ಬಚ್ಚುಗಳು ಧೃತಿಯ
ಬಿಚ್ಚಿ ಬಿಸುಡಿಸುವೆಚ್ಚಱಿ೨ಕೆಗಳು
ಹೆಚ್ಚುಕುಂದುಗಳೊಚ್ಚೆಯಂಗಳು
ಮುಚ್ಚುಗಳ ಜನರಚ್ಚರಿಗಳೆದೆಗಿಚ್ಚುಗಳು ವಿಟರ ೮೧

ಸಡಗರಂಗಳು ಗುಜುಗುಜುಗಳಾ
ಟಿಡಿಗಳನುಚಿತ ಕಾರಣಂಗಳು
ತ೫ಡಬಡಂಗಳು ತಪ್ಪುಗಳು ಮುಂಡುಗಳು ಮುಱಿ೨ಹುಗಳು
ಉಡುಗದುಲಿವಪ್ರಸ್ತುತಂಗಳು
ಬೆಡಗುಗಳು ನಂಬಿಸುವ ಸೋಲಿಸು
ವಡರುಗಳು ಕಡುಯಂತ್ರತಂತ್ರಂಗಳಿಗೆ ಬಿತ್ತುಗಳು ೮೨

೧ಯತ್ರತತ್ರ೯ಂಗಳು ಭುಜಂಗಕ
ಳತ್ರಪುತ್ರದ್ವೇಷಿಗಳಿಹಪ
ರತ್ರದೂರಂಗಳು ವಿರಹಿಗಳು ದುರ್ಗತಿಗೆ ಮೊದಲು
ಗಾ೯ತ್ರದೊಳು ವಿಷಯಾತುರಂಗಳ
ಪಾತ್ರ ಪಾತ್ರಂಗಳು ಲಘುಗಳಪ
ವಿತ್ರಮಿತ್ರಂಗಳು ಗಣಿಕೆಯರ ಮಾತುಗಳು ಬಳಿಕ ೮೩

---

೧ ಭೂ (ಅ). ೨ ಳಿ (ಅ, ಕ, ಚ, ಬ). ೩ ವಿ (ನ, ಪ). ೪ ಳ (ಕ, ಚ, ಡಾ. ಫ). ೫ ಚ (ಕ). ೬ ಡು (ನ). ೭–೮ ಯಂತ್ರತಂತ್ರ (ಅ, ಕ, ಚ, ನ, ಮ). ೯ ಗೋ (ಮ).

CC-0. Jangamwadi Math Collection. Digitized by eGangotri

ನೀರಸಂಗಳು ಕಲ್ಮಷಂಗಳ
ಪಾರಮಾಲಿನ್ಯಪ್ರದಂಗಳ
ನಾರತಾಶಾಪಾಶಬಂಧಂಗಳು ವಿಕಳತೆಗಳು
ಸಾರಸಂಸಾರಪ್ರಪಂಚಾ
ಧಾರಭೂತಿಗಳತಿಕತೋರರು
ಕ್ರೂರವರ್ತಿಗಳಲ್ಪಭೋಗಾಸ್ಪದನಿಯುಕ್ತಿಗಳು ೬೪

ಆದಿಗಳಿಗಾದಿಗಳು ಕಾಮ
ಕ್ರೋಧಲೋಭಾದೀಷಣತ್ರಯ
ಸಾಧನಂಗಳು ಮಂದಮತಿಗಳು ಪಕ್ಷಪಾತಿಗಳು
ಬೋಧವಕ್ರೋಪಕ್ರಮಿಗಳಪ
ರಾಧತತಿಗಳು ಸುಕೃತಧರ್ಮವಿ
ರೋಧಿಗಳು ಕುಪಥಾಲವಾಲಂಗಳು ಕುತಾಪಿಗಳು ೬೫

ಗನ್ನಗತಕಂಗಳ ನೆಲೆಗಳಾ
ಪನ್ನಿಧಿಗಳತಿ ಮೋಹ ಮಾಯಾ
ಸನ್ನವರ್ತಿಗಳಸ್ಥಿರಂಗಳು ದೈನ್ಯವೃತ್ತಿಗಳು
ಭಿನ್ನಭಾವಪ್ರಕೃತವಿಕೃತೋ
ತ್ಪನ್ನಭೂತಂಗಳು ದುರಭಿಮಾ
ನೋನ್ನತಂಗಳು ವಾರಸಜಿಯರಸಿ ಮನಸುಗಳು ಮತ್ತೆ ೬೬

ಸಾವಿರವನೆನಲೇಕೆ ರೂಪುಕ
ಳಾವಿಳಾಸಂಗಳು ಮೆಚ್ಚಿವ ರಾ
ಜೀವಮುಖಿಯರ ತನುಗಳಲ್ಲಿಯದಾವ ಲೇಸುಗಳು
ಆವಗಂ ನೋಡಿದಡತಿಶ್ಲೀ
ಷ್ಮಾವಿಳಂಬಿತನಾಸಿಕಂಗಳು
ಕೀವಿ ಲಾಲಾಕೀಲಿತಂಗಳೆನಿಪ್ಪ ಮುಸುಡುಗಳು ೬೭

೧ವಿ (ಅ). ೨–೩ಗಳ (ಸ).

CC-0. Jangamwadi Math Collection. Digitized by eGangotri

ಕಂಗಳುಂ ಬಾಷ್ಪಾಂಬುಪರಿಪೂ
ರ್ಣಂಗಳಾ ವಾರಾಂಗನೆಯರುದ
ರಂಗಳಾಗಳಮೇಧ್ಯಯುತವಾಸಂಗಳಾಗಿಕ್ಕು[೧]
ತುಂಗಜಘನತಳಂಗಳುಂ ಪಾ
ಪಂಗಳೆಲ್ಲಕ್ಕಾಗರವು ಪಲ
ವಂಗದಿಂ ಕಾಮಾಂಧರೆಲ್ಲರು ಕೆಡೆವ ಖಂಡಿಗಳು ೬೮

ಕೊಳಕುನಾರುವ ದುರ್[೨]ವ್ರ್ಯಾ[೩]ಣಂಗಳು
ತೊಳಲು[೪]ವರಿವರ್ಗಕೆ ತವರ್ಮನೆ
ವೊಳವೊಳಗುಳಿದ ಶೌಚಭಾಂಡಂಗಳು ಪುರಂಧ್ರಿಯರ
ಚಲಿಸಿ ಮೂತ್ರವೊಸರ್ವ ತೂತುಗ
ಳಳಿಪಿದವದಿರು ತದಸಿಕೊಂಬಾ
ಕುಳಿಗಳು ರಜೋದೂಷ್ಯವಹ ರೋಹಿತದ ಕುರುವುಗಳು ೬೯

ಹರಿಯಜೇಂದ್ರಾದಿಗಳನಡಗಿಸಿ
ದುರುಬಿಲಂಗಳು ಶುಕ್ಲರಕ್ತೋ
ತ್ಕರಕರಂಡಂಗಳು ಸದಾ ಪ್ರತ್ಯಕ್ಷಮಾಗಿರ್ದ
ನರಕಕೂಪಂಗಳು ಕುಲವಿಹೀ
ನರು ಕನಿಷ್ಠರು ಕುಲಜರುತ್ತಮ
ಪುರುಷರೀ ನಾಲ್ವರು ತೊಲಂಗದೆ ಪೋಪ ಬಟ್ಟೆಗಳು ೭೦

ಒಲವಿನಿದಱಿಂದಾದ ಸುಖಮಂ
ಕೊಳುವೆನೆಂದೆನಲಿಲ್ಲ ನಿತ್ಯವು
ಚಲಿತ ಪವಮಾನಾಂತರಶ್ರೀವೃಕ್ಷಪರ್ಣಾಗ್ರ
ಜಲಕಣ[೫]ಕ್ಷಣಚಲನಮಾತ್ರೌ
ಬಳಿಕಮಿಂತುಟುಕಾ[೬]ಗಿ ಮೈಮಱಿ
ದಿಳೆಯೊಳಂಗನೆಯರಿಗೆಳಸಿ ಪೋಪತಿದುರಾತ್ಮರಿಗೆ ೭೧

---

೧ ರ್ಕು (ಬ). ೨–೩ ದುರ್ಗು (ಸ). ೪ ಸು (ಅ, ನ, ಪ, ಮ). ೫ ಣಾ (ಅ, ಸ, ಪ). ೬ ಮಾ (ಅ).

CC-0. Jangamwadi Math Collection. Digitized by eGangotri

ಮಾನಭಂಗವದೊಂದು ಕಾಣದೆ
ದೀನನಾಗಿಹುದೆರಡು ನಾಚಿಕೆ
ತಾನಳಿಯದುದು ಮೂಜಿ ನಗೆಗೆಡೆಯಾಗಿಹುದು ನಾಲ್ಕು
ಮಾನಸವ್ಯಥೆಯೈದು ನಿಜಧನ
ಹಾನಿಯಾಜಿ ವಿಶುದ್ಧಮುಕ್ತಿವಿ
ಹೀನವಾಗಿಹುದೇಳು ತಾನಿಂತೇಳಲಿ ಕೆಡುವ ೭೨

ಕೇಡು ತಪ್ಪದು ವೇಶೆಯರೊಳನು
ಗೂಡಿದವರಿಗೆ ಕೇಳು ಮುತ್ತೈಯು
ಕೂಡಿದರು ಮಾನಿನಿಯರೆನಲಿಲ್ಲೆಣ್ಣೆಯಂಬಿಲವು
ಕೂಡಿದಂತಿರುತಿಪರು ಮಾನಸ
ಪೀಡೆಯರು ತಮ್ಮಂ ಹಿಡಿದರೆಂ
ದಾಡಲಿಲ್ಲೈ ಹಿಡಿವರಾ ಜಿಗುಳೆಗಳು ಹಿಡಿವಂತೆ ೭೩

[೧]ಬಂದು[೨] ಹರೆಯವು[೩] ರೂಪು ಜಾತಿಗ
ಳೆಂದು ಭಾವಿಸಲಿಲ್ಲ ತಾವೊಂ
ದೊಂದು ಪರಿಯಾಗಿಪ್ಪರೂಸುರುವಳ್ಳಿಗಳ ತೆಱದಿ
ಮುಂದೆ ನಡೆಯಲು ಬಲ್ಲರಬಳೆಯ
ರೆಂದು ನಂಬುಗೆಯಿಲ್ಲ ಸುಳಿವುಗ
ಳಿಂದೆ ಜಲದೊಳು ಚರಿಸುವಾ ಮತ್ಸ್ಯಂಗ[೪]ಳಂದದಲಿ[೫] ೭೪

ಮಚ್ಚಿದರು ತಮಗೆಂದು ಮನದೊಳು
ನಚ್ಚಲಿಲ್ಲೊಳಪೊಕ್ಕು ಕಟ್ಟುವ
ರಚ್ಚು ಬಂದಡೆ ಜೂಜುಗಾಱರ ಪರಿಯೊಳಬಲೆಯರು
ಇಚ್ಛೆಗೊಳಿಸುವರೆಂದು ಗುಂಪಂ
ಬಿಚ್ಚಿ[೬] ಗುಂಪಿಸಲಿಲ್ಲ ಬಿಟ್ಟಡೆ
ಹೆಚ್ಚಿ ಪಾಱುವರಾಗಳೇ ಸಾಳುವನ ಪರಿಯಿಂದ ೭೫

೧–೨ ಒಂದೆ (ಅ, ಥ, ಪ, ಬ, ಮ); ಒಂದಿ (ಪ). ೩ ದ (ಅ). ೪–೫ ಳಂತಿಹರು (ಪ)
೬ ಚ್ಚಿ (ಅ, ಥ, ನ, ಸ, ಮ).

CC-0. Jangamwadi Math Collection. Digitized by eGangotri

ಸಿಕ್ಕಿದರು ತಮಗೆಂದು [೧]ಮನದೊಳು[೨]
ಲೆಕ್ಕಗೊಳಲಿಲ್ಲೊಂದನಡರ್ದೊಂ
ದಕ್ಕೆ ಕೈನೀಡುವರಬಳೆಯರು ಲತೆಗಳಂದದಲಿ
ಲಿಕ್ಕಿಜಿಂದಿತ್ತೆವು ಧನವನೇ
ಸಕ್ಕೆ ಮುಂದೆನಲಿಲ್ಲ ತಾವೊಂ
ದಿಕ್ಕಿಗೊಲೆವರು ತೊಲೆಗಳಂದದೊಳೊಂದು ನೆಲ್ಲನಿತ ೭೬

ಒಲಿದರಬಳೆಯರೆಂದು ಮನದೊಳು
ನಲಿಯಲಿಲ್ಲೊಲುಮೆಗಳವೆಲ್ಲಂ
ಬಳಿಕ ಕಾರ್ಯವಶಂಗಳಾ ವೇಶ್ಯಾವಿಡಂಬರ[೩]ವು
ಲಲನೆಯರ ಮಾತುಗಳು [೪]ನಟ[೫]ನಾ
ವಳಿಗಳುಂ ದೃಷ್ಟಿಗಳು ಭಾವಂ
ಗಳು ಬಜಿಯ ಹೇಯಂಗಳಲ್ಲದೆ ಸೌಖ್ಯತರವಹುದೆ ೭೭

ತುಂಗಕುಚೆಯರೊಳಾದನಂಗಸು
ಖಿಂಗಳಂ ಕಾಮಿಸುವರೇ ಚಿ
ತ್ತಂಗಲಿ ಕಾಮಾರಿಭಕ್ತರು ವಾರವನಿತೆಯರ
ಸಂಗಸುಖಮಂ ಗಡಣಿಗೊಂಬರೆ
ಲಿಂಗಭಕ್ತಿಸುಖಿಗಳನವರತ
ವಂಗನೆಯರಾಲೋಕನಂಗಳವೇಕೆ ಭಕ್ತರಿಗೆ ೭೮

ತರುಣಿಯರ ಮಾತುಗಳು ಶಿವಭ
ಕ್ತರಿಗರೋಚಕವಲ್ಲದೇ ಹಿತ
ಕರಮೆ ಬೆಲೆವೆಣ್ಣುಗಳ ನಗೆಗಳು ಲಿಂಗವಂತರಿಗೆ
ವಿರಸವಲ್ಲದೆ ಸರಸವೇ ಸರ
ಸಿರುಹವದನೆಯರಂಗಕಳಿಗಳು
ಶರಣರಿಗೆ ನಿಸ್ಸಾರವಲ್ಲದೆ ಸಾರತರವಹುದೆ ೭೯

೧–೨ತಮ್ಮೊಳು (ಅ, ಮ). ೩ನ (ನ). ೪–೫ಲಲ (ಅ, ನ, ಮ).

CC-0. Jangamwadi Math Collection. Digitized by eGangotri

ವಾರನಾರಿಯರನುಭವಂಗಳು
ಕ್ರೂ[೧]ರವಲ್ಲದೆ ಮಾರ್ದವಂಗಳೆ
ಮಾರವೈರಿಯ ಭಕ್ತರಿಗೆ ವೇಶ್ಯಾವಿಡಂಬರ[೨]ವು
ಆರಯಲು ಹೇಸಿಕೆಗಳಲ್ಲದೆ
ಸೂರಿಜನದ ಮನೋಹರಂಗಳೆ
ಧಾರುಣಿಯೊಳು ಶಿವೈಕ್ಯರಿಗೆ ಮೋಕ್ಷಕ್ಕೆ ಕಾರಣವೆ ೮೦

ಭಾವಿಸಲು ಭಕ್ತಿಕ್ರಿಯಾಮಹಿ
ಮಾವಿಡಂಬರಸಾನುಭವರಹ
ಸ್ಯೆಸರಿಗೆ ತಾನಿಮು ನಿಮಿತ್ತವು ನಿನ್ನ[೩]ಸಮ[೪]ಭಕ್ತಿ
ಸೇವಕಂ [೫]ಶಿವಭಕ್ತಿ[೬]ತತ್ಪರ
ಭಾವಕಂ ಸದ್ಭಕ್ತಿಸಂಗತ
ಜೀವಕಂ [೭]ಭಕ್ತಿಪ್ರಿಯಂ[೮] ಗುರುಭಕ್ತನಂತಾಗಿ ೮೧

ಸಾಕು ನಿನ್ನಂ ನೀನಱಿಯದಿರ
ಲೇಕೆ ನೀನಱಿಯದ ವಿಷಯವುಂ
ಟೇ ಕಿಱಿದು ನೀನಱಿಯಲೊಲ್ಲೆಯದಲ್ಲದೇ ಬಳಿಕ
ಕಾಕುಮತಿಗಳು ನಾವು ಚಿತ್ತ
ವ್ಯಾಕುಳತೆಯರು ನಾವು ಭಕ್ತಿ ವಿ
ವೇಕಸಾಮಾನ್ಯರು ನಾವತಿ ಕಾಮ[೯]ಚಾರಿ[೧೦]ಯರು ೮೨

ಭಾವಿಸುವಡೆಮ್ಮಿಂದ[೧೧]ವಿಳಿ[೧೨]ಯೊಳು
ನೀವು ಹೀನವೆ ನಿಮಗೆ ಲೌಕಿಕ
ಭಾವನತೆಯುಂ ಭಕ್ತಿಸಂಭಾವನೆಯು ಬೇಕೆನುತ
ಆ ವನಿತೆ ಪಲವಂದದೊಳು ವೇ
ಶ್ಯಾವಿಡಂಬರಮಂ ಶಿವನ ಮಹಿ
ಮಾವಿಡಂಬರಮಂ ವಿವರದಲಿ ಹೇಳುತಿರಲಾಗಿ ೮೩

೧ಕೂ (ಬ). ೨ ನ (ನ). ೩ನಗ (ಪ). ೩–೪ ಸಮ (ಅ, ಧ, ಮ). ೫–೬ ಸದ್ಭಕ್ತಿ (ಸ). ೭ನಂ (ಅ, ನ, ಮ). ೭–೮ ಶಿವಭಕ್ತಿಯುಂ (ಅ); ಸದ್ಭಕ್ತಿ ಕ್ರೀಯಂ (ಮ). ೯–೧೦ ಜಾತಿ (ಥ). ೧೧–೧೨ ಧರೆ (ಅ, ನ).

CC-0. Jangamwadi Math Collection. Digitized by eGangotri

ಕೇಳಲೊಲ್ಲದೆ ಮಿಂಡನೆಂದಿನ
ಚಾಳಿಯಲಿ ಮತಿಗೆಟ್ಟು ವಿರಹಕ
ರಾಳದಿಂ ಮದಮುಂ [೧]ಮುನಿಸು ಹರಿವುಂ[೨] ತವಕವೈಗೆಯೆ
ಶೂಲಿಭಕ್ತನು ತನ್ನನಱಿಯದ
ಕೀಲನಱಿದೈಸಱಿಲಿ ಹೋಗದೆ
ಲೋಲಲೋಚನೆ ಮತ್ತೆಯುಂ ಬೋಧಿಸುವ ಬುದ್ಧಿಯಲಿ ೮೪

ಈತನೊಳು ವಿಟನೀ[೩]ತಿಯೆಂಬುದು
ಬೀತುದೀಶ್ವರಭಕ್ತಿನೀತಿಯು
ಬೀತುದಯ್ಯೋ ಲಜ್ಜೆ ನಾಚಿಕೆ ಹೇಸಿಕೆಯು ಮುನ್ನ
ಬೀತುದೇಗುವನೆಂದು ಸಂದ ಪ್ರ
ಖಾತನರ ಶರಣರ ಸುಭಕ್ತಿವಿ
ನೀತಿಯಂ ತಾಂ ಕೇಳಿಯಾದಡೆ ಮನವಲರದಿಹುದೆ ೮೫

ಶ್ವೇತನಾದಿಯೆನಿಪ್ಪ ಸದ್ವಿಟ
ರೋತು ತಮ್ಮಾಪ್ತರ ಸುಬುದ್ಧಿಯ
ಮಾತುಗಳನಾದರಿಸಿ [೪]ಕೇಳುವ ತತ್ಪ್ರಕಾರವನು[೫]
ಪ್ರೀತಿಯಲಿ ಸಂಪೂರ್ಣಭಕ್ತಿಸ
ಮೇತರಾಗಿಹರಂ[೬]ದಮಂ ಪ್ರ
ಖ್ಯಾತಮುಕ್ತಿಗಳೊಂದಿ ಶಿವನೊಳು ಬೆರಸಿದಂದವನು ೮೬

ಹೇಳಿನೋಡುವನೆನುತ ನೆನೆದನು
ಕೂಲವಾಗಲು ಪ್ರೌಢಪತಿ ಸ
ಲ್ಲೀಲೆಯಿಂ ಗುರುಭಕ್ತಿಯಾಂಡಾರಿಯನಹಗೆ ನೋಡಿ
ಕೇಳು ಮುನ್ನಿನ ಭಕ್ತರೊಳಗೆ ವಿ
ಶಾಲಮತಿಯುತರಿಷ್ಟಬಂಧುಜ
ನಾಳಿಗಳನಂಗೀಕರಿಸಿ ಮಾಡಿಸಿದನಘರುಂಟು ೮೭

೧–೨ ಮುಳಿಸು ಮರಹುಂ (ಆ). ೩ ರೀ (ಬ). ೪–೫ ಕೇಳುವತಿ ಪ್ರಕಾರವನು (ಆ, ಪ, ಮ). ೬ ವಂ (ಮ).

CC-0. Jangamwadi Math Collection. Digitized by eGangotri

ಬಲ್ಲರಾಗಳೆ ಕಾರ್ಯದನುಗಳ
ನೆಲ್ಲಮಂ ನೆರೆವುತ್ತಮರು ಕರೆ
ಯಿಲ್ಲ ಹೇಳಿದ ಮಾತ್ರದಲಿ ಕಾರ್ಯಂಗಳಂ ಮಾಡ
ಬಲ್ಲರಾ ಮಧ್ಯಮರು ಹಿರಿಯರು
ಸೊಲ್ಲಿದಡೆ ಕಾರ್ಯಂಗಳಂ ತಾ
ವೆಲ್ಲಿಯುಂ ಕಾಣಿಸರಧಮರತಿ ಕರ್ಮವಶದಿಂದ ೮೮

ಇದು ನಿಮಿತ್ತಂ ತ[೧]ಜ್ಞರೊರೆದಡೆ
ಹೃದಯದೊಳು [೨]ಕಾರ್ಯಂಗಳಂ[೩] ಮಾ
ಡಿದ[೪] ವಿವೇಕವದೊಳ್ಳಿತಲ್ಲಾ ಇದಕೆ ತಪ್ಪೇನು
ಮುದದೊಳಂದಾ ರಂಭೆಯಾವಂ
ದದಲಿ ಹಿತವನೆ ಬಗೆದೊಲಿದು ಹೇ
ಳಿದ ನುಡಿಗಳಂ ಕೇಳನೇ [೫]ತತ್[೬]ಪ್ರೇತ[೭]ನೆಂತೆ[೮]ನಲು ೮೯

ಅಂತು ಸಂಧಿ ೩೯ಕ್ಕಂ ಪದಗಳು ೨೨೩೭ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

---

೧ ಪ್ರಾ (ಬ). ೨–೩ ಕಾರ್ಯವನಱಿದು (ಅ, ನ, ಮ). ೩–೪ ಮಾಡುವ (ಅ). ೫–೬ ಕಲಿ (ಬ). ೭–೮ ನೆಂದೆ (ಥ).

CC-0. Jangamwadi Math Collection. Digitized by eGangotri

ಸಂಧಿ : ೪೦

*

ಸೂಚನೆ : ಶ್ವೇತನಾ ರಂಭೋಪದೇಶದೊ
ಳೋತು ಶಿವನಂ ಭಜಿಸುತೊಲಿಸಿ ಪ
ರೇತಪತಿಯಂ ಗೆಲಿದು ಕಾಮ್ಯಾರ್ಥಂಗಳಿಂ ಪಡೆದ

ಕುಂಭಿಕುಂಭಸ್ಥಳನಿಭಸ್ತನ
ದಂಬೆ ಬಿಂಬಫಲಾರುಣಾಧರೆ
ಶುಂಭದಮಳನಿತಂಬಬಿಂಬೆ ಶಶಾಂಕಬಿಂಬಾಸ್ಯೆ
ಜಂಭಹರಸುರಭೋಗಸೌಖ್ಯಾ
ರಂಭೆ ರಂಭಾಂಭೋರುವಿಳಸಿತ
ರಂಭೆ ಗಂಗಾವರ್ತಸಮಗಂಭೀರತರನಾಭೆ ೧

ಪದ್ಮದಳವಿಪುಳಾಕ್ಷಿ ವಿಕಸಿತ
ಪದ್ಮವದನೋಲ್ಲಸಿತಸಸ್ಮಿತೆ
ಪದ್ಮವರ್ಣಮಯೂಖರೇಖಾತ್ರಿತಯಸದ್ಗ್ರೀವೆ
ಪದ್ಮನವ್ಯಾಮೋದತನುಲತೆ
ಪದ್ಮಮುಕುಳಸಮ್ಮದುಳಕೋಮಳೆ
ಪದ್ಮರಾಗಾರುಣಕಿರಣಯುತೆ ಪದ್ಮಿನೀಜಾತೆ ೨

ಮಾರವಿಲಿಖಿಸಮಾನಲೋಚನೆ
ವೀರಭಟಸಂಧಾನಸೂಚನೆ
ಪಾರಿಜಾತಜಸಿಂಧುಮಿತ್ರೆ ಕಳಾನಿಪುಣಚಿತ್ತೆ
ಭೂರಿನವಶೃಂಗಾರಿ ದಿವ್ಯಶ
ರೀರಿ ಕಾಂತಾಲೋಕನಾಯಕ
ನಾರಿ ಚಾರುತರಾಪ್ಸರಾಸ್ತ್ರೀವಂದ್ಯೆಯಹ ರಂಭೆ ೩

---

* ರಾಗ : ನಾಟಿ (ಡಾ, ಚ, ಪ, ಮ); ಭೈರವಿ (ಅ); ಕುರಂಜಿ (ತ).
೧ ದ (ಧ, ಪ).

CC-0. Jangamwadi Math Collection. Digitized by eGangotri

ಓತು ತನ್ನಯ ಪೊರೆಯೊಳಿಹ ಕಾ
ಮಾತುರಾಂಧನನಧಿಕಪಾಪಸ
ಮೇತನಂ ದುರ್ಜಾತನಂ ತತ್‌ಶ್ವೇತನಂ ನೋಡಿ
ಆ ತರುಣಿ ಸಸ್ಮಿತವದನವನ
ಜಾತೆಯಾಗುತ ಮತ್ತೆ ಚಿಂತಾ
ಜಾತಚೇತಸೆಯಾಗೆಯಾತನು ರಂಭೆಗಿಂತೆಂದ ೪

ಸುಗುಣೆ ನಿನಗನಿಮಿತ್ತವೀಗಳು
ಮೃಗನಯನೆ ನೀನೆನ್ನನೀಕ್ಷಿಸಿ
[1]ಮುಗುಳು ನಗೆಯುಂ ಚಿಂತೆಯುಂ ನಿನಗೇಕೆ ಪೇಳೆನಲು[2]
ನಗಹರನ ಗಣಿಕಾಶಿರೋಮಣಿ
ಮಿಗೆ ದಯಾಮತಿಯಿಂದೆ ಬೋಧಿಸ
ಬಗೆದು ತಾನಿಂತೆಂದಳಾ ಶ್ವೇತಂಗೆ ಹಿತವಾಗಿ ೫

ಮಾನವರೊಳೆಲ್ಲಂ ದುರಿತಸಂ
ತಾನಮೂಲಂ ನಿನ್ನ ಚರಿತವು
ತಾನದೆಂತೆನೆ ನಿನ್ನ ನೀನಱಿದುದು ಮೊದಲು ನಿನ್ನ
ನೀನಱಿಯದಾವಾಗಳುಂ ಸ್ವೇ
ಚ್ಛಾನುರೋದೋನ್ಮತ್ತಮದವೆ
ತ್ತಾನೆಯಂತನಿವಾರಿತೋದ್ಧತವೃತ್ತಿಯಲಿ ಕೊರ್ಬಿ ೬

ಇರುಳು ಹಗಲುಂ ಬಿಡದೆ ಕಾಮಿನಿ
ಯರ ಕುಮಾಯೆಗಳಿಗೆ ತೊಡಕಿ ಕಡು
ಮರುಳುಗೊಂಡು ಶಿವಾಲಯಕೆ ಪುಱಿದಾದಡಂ ಹೋಗಿ
ಶರಣು ಶರಣೆಂದೆನ್ನೆ ಲಿಂಗಕೆ
ಗುರುವನೆಂದುಂ ಕಾಣೆ ಹೊಡವಡೆ
ಹರಗಣಂಗಳಿಗೊಮ್ಮೆಯುಂ ದುರ್ಮಾರ್ಗವಂ ಪಾಣೆ ೭

೧–೨ ಮುಗುಳುನಗೆ ನಿನಗೇಕೆ ಬಂದಿತು ಪೇಳುಪೇಳೆನಲು (ತ, ಥ, ಧ, ಪ, ಸ).

CC-0. Jangamwadi Math Collection. Digitized by eGangotri

ಕೊಟ್ಟುವಱಿಯೆ ಬುಧರ್ಗೆ ಕಾಣೆಯ
ನಿಟ್ಟುವಱಿಯೆ ವಿಭೂತಿಯಂ ಕೇಳ್
ಮುಟ್ಟಿಯೆಂದುಂ ಅಱಿಯೆ ರುದ್ರಾಕ್ಷಿಂಗಳಂ ಮುನ್ನ
ಹುಟ್ಟಿದುದು ಮೊದಲಿದುವೆ ಕಡೆ ಮುಂ
ಗೆಟ್ಟು ದುರ್ವೃತ್ತಿಯಲಿ ಪುಣ್ಯದ
ಬಟ್ಟೆಯೆಂತಹದೆಂದಱಿಯೆ ನೀ ಕನಸಿನೊಳಗಾಗಿ ೮

ಪಾಪಕರ್ಮವೆ ಧರ್ಮ ಉಲಿವ ಪ್ರ
ಲಾಪನೆಯೆ ಜಪವಾಡುವ ದುರಾ
ಲಾಪವೇ ಮಂತ್ರವು ನಿನಗೆ ದುಷ್ಕಾಮವೇ ನೇಮ
ಓಪಭೋಗವೆ ನಿನ್ನ ಯಾಗ
ಸ್ಥಾಪನಂ ಕಪಟಾತ್ಮವೇ ತಪ
ವೀ ಪರಿಯೊಳಿಂತಾಗಿ ನಡೆವುತ ಮತ್ತೆಯೊಂದು ದಿನ ೯

ಸೂಳೆಗೆಂದತಿವೇಗದಿಂ ಪೂ
ಮಾಲಿಕೆಗಳಂ ಕೊಂಡು ಬಪ್ಪಾ
ವೇಳೆಯೊಳಗುಚ್ಚಿಷ್ಟಭೂಮಿಯೊಳೊಂದರಳು ಪಱಿದು
ಬೀಳೆ ಕಳೆದುಕೊಳಲ್ಕೆ ಲಜ್ಜಿಸಿ
ಏಳಿಲದೊಳಾ ಕುಸುಮವಂ ಶಶಿ
ಮೌಳಿಗರ್ಪಿತವೆನುತ ಮನದೊಳು ನೆನೆಯಲಣುಮಾತ್ರ ೧೦

ಏನನೆಂಬೆನು ನಿನ್ನ ಮುನ್ನಿನ
ದಾನಪುಣ್ಯದ ಫಲದೊಳನುಸಂ
ಧಾನವಾಯ್ತಂತಹ ನೆನಪು ತಾನಹಗಹಗೆ ನಿನ್ನ
ಆ ನಿಜಫಲಪ್ರಾಪ್ತಿಯಲಿಯನು
ಮಾನವಿಲ್ಲದೆ ಫಲಿಸಿ ನಿನ್ನಾ
ಧೀನವಾಯಿತ್ತೀಗಳೀ ದೇವೇಂದ್ರಪಟ್ಟವಿದು ೧೧

CC-0. Jangamwadi Math Collection. Digitized by eGangotri

ಅದು ತದೀಯ ಫಲಾನುಭವದಿಂ
ದದು ದಿವಸವೊಂದಾಯ್ತು ತಾನಿಂ
ತಿದುನಿಮಿತ್ತವು ನೀವಿರುಳು ಬೆಳಗಾಗಲೊಡನೀಗ
ಕುದಿವ ನರಕಾರ್ಣವಕಿಳಿದು ಹೋ
ಹುದಕೆ ನೀನತಿ ಮದಿಸಿ ನೀನಱಿ
ಯದಕೆ ಚಿಂತೆಯು ನಸುನಗೆಯುಮೆನಗಾಯಿತೆಂದೆನಲು ೧೨

ಚಿಂತಿಸಲು ನಗಲುಂ ನಿನಗಿದೇ
ಕಿಂತು ಕಾಂತೇ ಎನ್ನುವಂ ನೀ
ಮಂತಿನೀಜನವೆಯ್ದೆ ತಾನೀತನೆ ಕಲಿಯುಗಕ್ಕೆ
ಕಂತುವೆನಲೆಲ್ಲಾ ವಿಟರುಗಳ
ನಂತಪರಿಯಲಿ ಈತನೇ ಗುಣ
ವಂತ ಜಾಣನೆನಲ್ಕೆ ಬದುಕಿದೆ ನಾನಹರ್ನಿಶವು ೧೩

ಈಗಳಿದೆ ನಾನಮರವಲ್ಲಭ
ಭೋಗವಿಹಿತಾನುಭವಸೌಖ್ಯವಿ
ಭಾಗನಾದೆನು ಅಂತುಮಲ್ಲದೆ ದೇವಸತಿಯರೊಳು
ರಾಗದಲಿ ಸುರತಕ್ರಿಯಾಸುಖಿ
ಯಾಗಿ [೧]ಬಾಳ್ದೆನು[೨] ರಂಭೆ ಕೇಳ್ ಸುಮ
ನೋಗಣಿಕೆಯರೊಳತಿ ವಿರಾಜಿತಕೀರ್ತಿಯುತೆ ನೀನು ೧೪

ಇಂತು ರಂಜಿಪ ನಿನ್ನ ಕೂಡೆ ಲ
ತಾಂತಮಾರ್ಗಣಸೌಖ್ಯವಂ ನಿ
ಶ್ಚಿಂತವಾಗಲು ಹೊಂದಿದಪೆನೆಂದಿದ್ದೆನಿವೆಯಲ್ಲ
ಮುಂತೆ ವಿಜಯನು ನಾನೆ ಹೋ ಭುವ
ನಾಂತ[೩]ರಂಗಳೊಳೂ[೪]ಹಿಸುವಡೋ
ರಂತೆ ನಾಳಿನ ನರಕವಂ ಬಗೆಗೊಂಬೆನೇ ಷಡ ಹೊ ೧೫

೧–೨ ನಡೆದೆನು (ಅ, ನ, ಮ). ೩–೪ ರಂಗಳೊಳಂದೂ (ಅ, ಕ, ಚ, ಬ); ರದೊಳಂತೂ (ಧ, ಪ).

CC-0. Jangamwadi Math Collection. Digitized by eGangotri

ಕಾಷ್ಠ :೬

ಆ ಕುಸುಮಮಂ ಪಾರ್ವತೀಶಂ
ಸ್ವೀಕರಿಸಿತುಂಟಾದಡಾ ಪು
ಷ್ಪಾಕಲಿತಫಲದಿಂದ ಸುರಪದವಾಯಿತಾದಡದು
ಏಕೆ ತಪ್ಪುವುದಾಗದಿಹುದೆ ಪಿ
ನಾಕಿ ಕೊಟ್ಟುದು ಹುಸಿಯಹುದೆ ನೀ
ವ್ಯಾಕುಳವನುಳಿದೆನ್ನ ಶಯ್ಯೆಗೆ ಕಾಂತೆ ಬಾಯೆನಲು ೧೭

ಇದಕೆ ಬೇಗವೆ ನಿನಗೆ ತಲ್ಲಣಿ
ಸದಿರು ನಾ ಬೇಱಿಂದೆಡೆಗೆ ಗಮಿ
ಸಿದಪೆನೇ ಎನ್ನಿದಿರೊಳಿದ್ದಿಂದಿನ್ನು ನೀ ನಾಳೆ
ಒದವಿಸಿದಧೋಗತಿಗಿಳಿದು ಹೋ
ಹುದಕೆ ನಿನ್ನಂ ನೋಡಲಾಱಿನು
ಪ್ರಿದುಳದಿಂದ ಮದೀಯ ವಚನವನಾದರಿಸಿ ಕೇಳ್ದು ೧೮

ಸುರರಮಣ ನಳಕೂಬರಾಧಿಕ
ಸರಸಕಾಮುಕರಂ ಸಮಸ್ತಾ
ಮರರಿನೆಲ್ಲರಳಿ ಬಗೆಯದನುಮಿಷಸತಿಯರು ಸಹಸ್ರ
ನೆರೆದು ನಿನ್ನಂ ಹರುಷಮುಂ ಪ್ರಿಯ
ತರವೊದಗೆ ಮನಸಿಜಸುಖಾಮೃತ
ಶರನಿಧಿಯೊಳೋಲಾಡಿಸುತ್ತಿರಲಿಪ್ಪನುವಿನಿರವಳ ೧೯

ಹೇಳಿದಪೆನಿದೆ ಅರ್ಧರಾತ್ರೆಯ
ಮೇಲೆ ಸಂದಿತ್ತೆನ್ನೆಡೆಯೊಳನು
ಕೂಲವಾಗಿರುತಿಪ್ಪುದೊಂದೇ ಜಾವ ಕಾಮಸುಖಿ
ಕೇಳು ನೀನಂತಾಗಿ ನಿನಗೇ
ಕಾಲಮುಂ ಶಾಶ್ವತಸುಖಿಂಗಳ
ನಾಳಿಸುವೆ ನಾ ನಂಬು ನಿಶ್ಚಯವಿದುಯೆನುತ ರಂಭೆ ೨೦

೧ಹ (ಕ, ಚ). ೨ಳು (ನ, ಪ). ೩–೪ ಎಲ್ಲಂ (ಕ, ಚ, ಧ, ನ, ಪ, ಮ). ೫–೬ ಸಖಿಯೊಳಗೋ (ಸ). ೭–೮ ನಿಂದ (ಕ, ಚ).

CC-0. Jangamwadi Math Collection. Digitized by eGangotri

ಶ್ವೇತನನೊಡಂಬಡಿಸಿ ತೊಡಿಸಿ ಪು
ನೀತರುದ್ರಾಕ್ಷಿಗಳನಮಳವಿ
ಭೂತಿಯಂ ಸರ್ವಾಂಗದೊಳು ಉದ್ಧೂಳನಂಗೆಯ್ಸಿ[೧]
ಭೂತನಾಥನ ನಿಳಯಮಂ ಮನ
ಪೋತು ತೋಱಿದಡಾತನಾ ಕಂ
ಜಾತಲೋಚನೆ ಹೇಳಿದುಪದೇಶವನೆ ಕೈಕೊಂಡು ೨೦

ಒಸೆದು ಭರ್ಗನ ಭವನದೊಳಗಣ
ಕಸವನುಡುಗುವನೊಡನೆ ಸಮ್ಮಾ
ರ್ಜಿಸುವನಗ್ರದೊಳಿಕ್ಕುವಂ ಪೊಸ ರಂಗವಾಲಿಗಳ
ಕುಸುಮಪತ್ರೆಗಳಂ ಕೊಯಿದು ಶೋ
ಧಿಸುವನಾ[೨]ಕ್ಷಣವೆಯ್ದಿ ತಂದಾ
ಗಸದ ಗಂಗಾಂಬುವನೆಱಿ[೩]ವನಭಿಷೇಕಮಜ್ಜನಕೆ ೨೧

ಚೆಲುವು ಮಿಗೆ ಪೂಜಾಪ್ರಬಂಧಂ
ಗಳನಭಿನಯಿಸುವಂ ದಶಾಂಗಾ
ಮಿಳಿತಧೂಪವನಿತ್ತು ದೀಪಾರತಿಯನೆತ್ತುವನು
ಬಳಸುವಂ ಸಾಷ್ಟಾಂಗವೆಱಗುವ
ನಲರ್ದು ಪೊಡಮಡುವಂ ಪೊಗಳುವನು
[೪]ನಲಿನಲಿದು ಕುಣಿ[೫]ದಾಡುವಂ ಪಾಡುವನು ನೋಡುವನು ೨೨

ಮಣಿದು ಭಯದಿಂ ಷೋಡಶೋಪಚ
ರಣ[೬]ಯಿಸಿ[೭]ಯೆ ಶಿವರಾತ್ರೈವಿಧಿಯಲಿ
ಪ್ರಣವಯುತಪಂಚಾಕ್ಷರಿಯನುಚ್ಚರಿಸುತಾಚರಿಸೆ
ಫಣಿಧರನ ಕೃಪೆಯಿಂದವಾ ಸ
ದ್ಗುಣಿಯ ಪಾಪಾಸ್ಪದದ ಪೊತ್ತಾ
ಕ್ಷಣದೊಳಗೆ ಬೆಳಗಾದವೋಲ್ ಬೆಳಗಾಗಲೈಸಱಿಲಿ ೨೩

---

೧ ಯ್ಸಿ (ಸ); ಯ್ದು (ಅ, ಪ). ೨ ತ (ಡಾ, ಧ, ಪ). ೩–೪ ನಲಿದು ಕುಣಿಕುಣ (ಅ, ಕ, ಚ, ಥ, ನ, ಮ). ೫–೬ ಮಱಿ (ಧ, ಪ).

CC-0. Jangamwadi Math Collection. Digitized by eGangotri

ಬಂದು ನಿನ್ನಿರುಳಿಂದ್ರಭೋಗದೊ
ಳೊಂದಿ ನಿನ್ನೊಡನಿರ್ದ ಮನುಜನ
ನಿಂ[೧]ದು ತೋಱಿಸಾ ರಂಭೆಯೆನುತಂ[೨] ಜವನ ಕಿಂಕರರು
ಮುಂದೆ ಸಂಭ್ರಮಿಸುತ್ತ ಬರಲರ
ವಿಂದಗಂಧಿಯು ದಾಸಿ ತಾನೆಯಿ
ತಂದವರ್ಗಳಿಗಱುಹಿದಳು ದೇಗುಲಕೆ ಹೋಗೆಂದು ೪೪

ಪರಮಶಿವಭಕ್ತಿಪ್ರಭಾಭಾ
ಸುರಸಮುನ್ನತಭಾಸ್ವರಾನ
ಶ್ವರ[೩]ನಿಜೈಶ್ವರ್ಯಸ್ಥಿರೋರುಸ[೪]ಮಗ್ರತೆಯೊಳೆಸೆದು
ವರತಪೋಧನಲೀಲೆಯಿಂದೀ
ಶ್ವರನನೊಸೆದರ್ಚಿಸುತ ಭಜಿಸುತ
ಮಿರುತಮಿಪ್ಪಾ ಶ್ವೇತಮುನಿಯಂ ದೂರದಲಿ ಕಂಡು ೪೫

ಮುಂದಕಡಿಯಿಡಲಂಜಿ ಮನದೊಳು
ಕುಂದಿ ನಡನಡ ನಡುಗಿ ಮರಳ್ದೈ
ತಂದು ದೂತರು ದಂಡಪಾಣಿಗೆ ಹೇಳಲಂತೊಡನೆ
ಹೆಂದದುಗ್ರದಿ ತೊಡೆಹೊಯಿದುಕೊಳು
ತೆಂದನಾ ಶ್ವೇತನೆ ಗುಡಿಗೆ ಹೋ
ಗಿಂದು ಶಿವನಂ ಭಜಿಸಿದಹನಾ ರಂಭೆ ಕಳುಹಿದಳೆ ೪೬

ಅಹುದೆ ಇದಕೇನಾಯ್ತುವಂಗಾ
ದಹನಲೋಚನನಡ್ಡಮೇ ಆ
ಗ್ರಹಿಸಿಕೊಂಡಡೆ ಕೊಳಲಿ ಎನ್ನಧಿಕಾರವಂ ರುದ್ರ
ಪ್ರಹರಿಸದೆ ಬಿಡೆನಾ ದುರಾತ್ಮನ
ನೆಹಗೆಯಾದಡೆನುತ್ತುರವಣಿಸಿ
ಬಹ ಕೃತಾಂತನ ರೌದ್ರಭಾವವನಂತು ಕಾಣುತ್ತ ೪೭

---

೧ ತಂ (ಕ, ಚ, ಥ, ಬ). ೨ ತಾ (ಥ). ೩–೪ ನಿಜೇಶ್ವರಿಯ ಸ್ಥಿತೋರು ಸ (ಕ, ಚ, ಥ, ಮ).

CC-0. Jangamwadi Math Collection. Digitized by eGangotri

ಶ್ವೇತಮುನಿಯಂ ಕಾಯ್ದು ತನ್ನ ನಿ
ಶಾತಶೂಲದೊಳಿಟ್ಟನುಗ್ರನು
ಪ್ರೇತನಾಥನ ವಕ್ಷಮಂ ನಿರ್ಜರರು ಕೀರ್ತಿಸಲು
ಶ್ವೇತನಂ ಪ್ರಮಥಾಗ್ರಗಣವಿ
ಖ್ಯಾತಪದವಿಯೊಳಿರಿಸಿದನು ತತ್
ಶ್ವೇತನಾ ರಂಭೋಪದೇಶವಿಶುದ್ಧಬುದ್ಧಿಯಲಿ ೨೮

ಮರಳಿ ಜೀವವನಿತ್ತು ಯಮನಂ
ಕರೆದು ಮನ್ನಿಸಿ ಎಮ್ಮ ಲಾಂಛನ
ಧರರ ಮನೆಗಳ ದೆಸೆಗೆ ಹೋಗದಿರೊಮ್ಮೆಯುಂ ನಿನ್ನ
ಪರಿಚರರಿಗೆಯು ನಾವು ಬೆಸಸಿದ
ಪರಿಯಲೇ ಹೇಳ್ ನಿನ್ನ ಮಣಿಪದೊ
ಳಿರು ಹದುಳವೆನುತಂ ಶಮನನಂ ಕಳುಹಿದನು ಹರನು ೨೯

ಪ್ರಹರಂ ಪ್ರತ್ಯಕ್ಷವಾದನು
ಕರುಣದಿಂದಾ[೧]ತನ ವಿನಿರ್ಮಳ
ನಿರತಭಕ್ತಿಗೆ ಮೆಚ್ಚಿ ಇದು ಕಾರಣ[೨]ಸುಹಿತರಾದ[೩]
ಸರಸಿಜಾತಾಯತನಯನೆಯರ
ಸರಸಬೋಧೆಗಳೊಳ್ಳಿತಲ್ಲದೆ
ವಿರಸವಹುದೇ ಮತ್ತೆಯುಂ ಕೇಳಂತುಮಲ್ಲದೆಯು ೩೦

ಅಂತು ಸಂಧಿ ೪೦ಕ್ಕಂ ಪದಗಳು ೨೨೬೭ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧ದೀ (ಅ, ಕ, ಚ, ಥ, ನ, ಮ). ೨–೩ ಮಹಿತರಾದ (ಸ); ಸುಹಿತವಾದ (ಚ).

CC-0. Jangamwadi Math Collection. Digitized by eGangotri

ಸಂಧಿ : ೪೧

*

ಸೂಚನೆ : ಮಲುಹಣನನಾ ಮಲುಹಣಿಯನಾ
ಮಲುಹಣನ ತಾಯಂ ಗಿಳಿಯನಾ
ಮಲಹರಂ ವಿಜಯೇಶ್ವರಂ ನಿಜಪ್ರಕಟಿ ಕೊಂಡೊಯ್ದ

ಮಲಹರನ ಭಕ್ತನು ಕವೀಂದ್ರನು
ಮಲುಹಣನು ವಿಟಪುಂಗವಂ ಗುಣ
ನಿಳಯಮಾನಸನೊರ್ಬ ವೇಶಿಯು ತಾನು ಒಲವುಣ್ಮಿ
ಸುಲಲಿತಾನ್ಯೋನ್ಯಪ್ರಿಯವಿನಯ
ಕಲಿತಮತಿಯಿಂ ನವರಸಂ ಮಿಗೆ
ಮಿಳಿತಸೌಖ್ಯಿಂಗಳು ಮೊಳೆಯೆ ವರ್ತಿಸುವ ಸಮಯದಲಿ ೧

ನೆಲಕೆ ಗಗನಕೆ ಸೂತ್ರವಿಡಲಂ
ಬಿಲದೊಳಗೆ ಹೊಸ ಬೆಣ್ಣೆಯಂ ತೆಗೆ
ಯಲು ಮರೀಚಿಯ ಜಲವನೀಂಟಲು ಹಿಡಿದೊನಕೆಯಲ್ಲಿ
ತಳಿರನಲರಿಸಿ ಕೊಯ್ಯಲೋಡಿಸ
ಕಲಿಸೆ ಹೆಳವನನೊಕ್ಕುಡಿತೆ ನೀ
ರಲಿ ಮುಳುಗಲೇಳಲ್ಕೆ ಮಳಲಿಂ ಸರವಿಯಂ ಹೊಸೆಯೆ ೨

ಹಗಲನಿರುಳಂ ಮಾಡಲಿರುಳಂ
ಹಗಲು ಮಾಡಲು ಚಿತ್ರರೂಪಂ
ಗಗನದಲಿ ಬರೆಯಲು ಬಯಲನಾಕಾರವಂ ಮಾಡಿ
ಗಗನದರಳಂ ನಿಲಿಕಿ ಕೊಯ್ಯಲು
ಗಗನಚಾಪವನೇಱಿಸಲು ಬೊಂ
ಬೆಗಳಿಗಸುಗಳನೀಯೆ ಕಲ್ಲಲಿ ನಾರುವಂ ಕೊಳಲು ೩

ರಾಗ : ನಾಟಿ (ಡಾ, ಚ, ಥ, ಪ); ಮಲಹರಿ (ತ). ೧ನ (ನ). ೨ದು (ನ).

CC-0. Jangamwadi Math Collection. Digitized by eGangotri

ಗಾಳಿಯಂ ಗಂಟಿಕ್ಕಲುಂ ಕ
ಣ್ಣಾಲಿಗಳೊಳಿಹ ಬಾಲಕರನೊಳು
ಸೂಳುಮಾತಂ ಹೇಳಿಸಲು ಮಿಂಚುಗಳನೆಳೆದೊಯ್ಯೆ
ಆಲಿಕಲುಗಳ ಮಾಲೆ ಕೊರಳಲಿ
ಕೀಲಿಸಲು ಎರಡಾಗಿ ನೀರಂ
ಸೀಳಲುಂ ಬೆಳುದಿಂಗಳಂಬರವಾಗಿ ಹೊದೆಯಲ್ಕೆ ೪

ಹುಲಿಯ ಗಿಣ್ಣಂ ಮಾಣಿಲಂಗಡಿ
ಯೊಳಗೆ ಕುರುಡನನೋದಿಸಲು ತ[೧]
ಜ್ಜಲಲಿಪಿಗಳಂ ಮುಂದೆ ಮಂಜಂ ಗುಡಿಸಿ ಬಳ್ಕದಲಿ
ಆಳೆದುಕೊಳಲುಂ ಕೊಡಲು ತನ್ನಯ
ನೆಳಲನುಲ್ಲಂಘಿಸಿ ಪರಿಯಲಿಂ
ತಿಳಿಯೊಳಾಗಳು ಸತ್ತು ಹುಟ್ಟಲು ಬಲ್ಲ ನೆಬಿ[೨]ಜಾಣೆ ೫

ಕೋಡಿಗಾಸಿಸಿ ಕಾಡಿ ಬೇಡುವ
ಪೀಡೆ ವೇಶ್ಯಾಮಾತೆ ದಿಟ್ಟಿಸಿ
ನೋಡಿ ಆಳಿಯನ ಕೂಡೆ ತಾನಿಂತೆಂದಳಣಕದಲಿ
ಊಢಿಸಿದ ಕವಿತಾಪ್ರವೀಣನು
ನಾಡೊಳೂರೊಳು ನೀನೆ ನಿನಗಾರ್
ಪಾಡು ದೊರೆತನದಲ್ಲಿ ವಿಟತನದಲ್ಲಿ ಕೊಡುವಲ್ಲಿ ೬

ಬಲ್ಲೆ ಚಿಕ್ಕಂದಿಂದ ನಿನ್ನುವ
ನಲ್ಲದಱಿಯಳು ಕನ್ಯೆಯಾಗಿ
ದ್ದಲ್ಲಿ ಒಲಿದಳು ನಿನಗೆ ಮರುಳಾಗೆನ್ನ ಮಗಳಿಂತು[೩]
ನಲ್ಲಿಳೋತುದು[೪] ಪಾಪವೇ ಕೊಡ
ಲೊಲ್ಲೆ ಉಚಿತಕೆ ಬಱಿಯ ಬೇಟದ
ಭುಲ್ಲವಣೆ ಸಲಿಸುವುದು ನೀತಿಯೆ ಸರಿವಿಟರು ನಗರೆ ೭

೧ಕ (ನ). ೨ದು (ಡಾ). ೩–೪ಳ್ಳೊಲಿದುದು (ಕ, ಚ, ಥ, ಬ).

CC-0. Jangamwadi Math Collection. Digitized by eGangotri

ಎನ್ನ ಗಳಗೆಯ ಬತ್ತವಾಹುದೇ
ನಿನ್ನ ದೊರೆತನವೆನ್ನ ಮಗಳಿಗೆ
ನಿನ್ನ ಕವಿತಾಪ್ರೌಢಿ ರನ್ನದ ತೊಡಿಗೆಯಾದಪ್ಪುದೆ
ನಿನ್ನ ಒಳುನುಡಿಗಡಣೆ ಮಡದಿಯ
ಹೊನ್ನ ಜಾಳಿಗೆಯಹುದೆ ಹೇಳಾ
ನಿನ್ನ ಭಕ್ತಿಯದೆಂಬುದೆಮಗೆ ಸುಗತಿಗೆ ಪಥವಹುದೆ ೮

ಲೇಸು ಲೇಸಿಂತಾದಡೇಳೀ
ಳೋಸರಿಸು ನೀನಿನ್ನು ಸಾಕು ವಿ
ಳಾಸಿನಿಗೆ ಮಿಗೆ ಕೊಟ್ಟು ಕೊಟ್ಟೆದೆಯಾಱಿತೇ ನಿನಗೆ
ಹೇಸಿ ಇದಕೇನೆಂದಡಂ ಸತಿ
ಯಾಸೆಯಂ ಬಿಡೆ ಹಬ್ಬಹಬ್ಬಕೆ
ಮೀಸಲಂ ತೆಗೆದಿರಿಸಿದಂತದೆ ಬೀಯಕೆಮಗಿಲ್ಲ ೯

ವೀರಭದ್ರನ ಜಾತ್ರೆಗೆಲ್ಲಾ
ನಾರಿಯರು ಹೋಗುತಮಿರಲು ಕೇ
ಯೂರಮಂ ಸುತೆ ಮಾಱಿ ಮಾಡಿದಳೆಯ್ದೆ ಹಬ್ಬವನು
ಹಾರವಂ ವಿಕ್ರಯಿಸಿ ಎನ್ನ ಕು
ಮಾರಿಯಾ ಶಿವರಾತ್ರಿಯಲಿ ಮಾ
ರಾರಿಭಕ್ತರಿಗೀಯಳೇ ಆರಾಧನಂಗಳನು ೧೦

ಆ ವಸಂತೋತ್ಸವಕೆ ಮಾಡಳಿ
ನೇವುರವನೊತ್ತೆಯನಿರಿಸಿ ತಾ
ನೀ ವನಿತೆ ಗುರುಪೂಜೆಯಂ ಮಾಡಳಿ ದವನದಲ್ಲಿ
ನೇವಳವನೊತ್ತೆಯನಿರಿಸಿ ಶರ
ಣಾವಳಿಗೆ ಮಾಡಳಿ ಮಗಳು ಕ
ರ್ಣಾವತಂಸವನೊತ್ತೆಯಿಟ್ಟಾ ನೂಲಹಬ್ಬವನು ೧೧

೧ವಾ (ಸ). ೨ಸದ್ (ಸ).

CC-0. Jangamwadi Math Collection. Digitized by eGangotri

ಸಲೆ ಪದಕವಂ ಮಾಱಿ ಸತಿ ದೀ
ವಳಿಗೆಯಲಿ ಹೊಸ ದೀಪಕಂಭಂ
ಗಳನುಮಾರಮಣಂಗೆ ಮಾಡಿಸಿ ಎತ್ತಿಸಿದಳಲ್ಲ
ಬಳಿಕಲಿದೆ ಶಿವರಾತ್ರಿ ಬಂದಿತು
ಹುಲಿಯಹಗೆ ರಾಜೀವಲೋಚನೆ
ಕಳುಹಿದಳು ವಿಕ್ರಯಿಸಲೆಂ೧ದದೆ೨ ಪಾಯವಟ್ಟವನು ೧೨

ಎಂದು ಕೊಟ್ಪೆಹೆನಿನ್ನು ಸಾಲವ
ನೆಂದು ತಿದ್ದುವೆವಕ್ಕಟಕಟೀ
ಸೌಂದರಿಯ ೩ಭಂಡಾ೪ರವೆಲ್ಲವನಿಂತು ನೀಗಿದೆವು
ಹೊಂದಿ ಸುದತಿಯನಱಿದುವಱಿಯದ
ಛಂದದಲಿ ಕಾಡುತ್ತ ಬರುತಿಹೆ
ವೆಂದುವಿಳಿಯೊಳು ಬಿಟ್ಟಿಯುಂಟೇ ಸೂಳೆಮಿಂಡರಿಗೆ ೧೩

ಪ್ರಣಯಕಲಹವನೊಡರ್ಚಿ ನಸುಸೈ
ರಣೆಯ ಗೆಲವಂ ಕೊಟ್ಟು ಮೆಲ್ಲನೆ
ಸೆಣಸಿ ಮುನಿದಡೆ ಸೋಲ್ತು ಮನವಲರಿಸುತೊಡನೆ ಸಾರ್ದು
ಕ್ಷಣವಗಲಿದಡೆ ಮೇಲೆ ಬಿದ್ದುರ
ವಣಿಸಿ ಪಿಡಿವಡೆ ಸುಕ್ಕಿ ಹೊಯ್ದುಡೆ
ಮಣಿದೊಡಲನಾಂತೊಂದಿದಡೆ ನೆರೆದೊಂದಿ ಮೇಳೈಸಿ ೧೪

ಸೊಗಸಿದಡೆ ರತಿಗೆಯ್ದು ಸೊಕ್ಕಿದ
ಡಗಲದೊಳಪ್ಪೊಕ್ಕಿಂಪುಗಲು ಕಣು
ಮುಗಿವಡಂ ಕೈಕೊಂಡು ಮುಂಕೊಂಡಡೆ ನಲಿವು ಮಿಕ್ಕು
ಮಿಗೆ ನುಡಿಗಳಿಂದೊಲಿಸಿ ನೇಹಂ
ನಿಗುರ್ದು ಕೂಟದ ಮನವನಿತ್ತಾ
ವಗವೊಲುಮೆಯಂ ತೋಱಿ ಕಳೆಗಳು ಪೊಣ್ಮೆದುದನಱಿದು ೧೫

೧–೨ ದಾ (ಡಾ, ನ, ಬ). ೩–೪ ಭಂಗಾ (ಧ, ಪ, ಸ).

CC-0. Jangamwadi Math Collection. Digitized by eGangotri

ಸಲಿಸಿ ಕಾಮಕ್ರೀಡೆಯಂ ವೆ
ಗ್ಗಳಿಸಿ ಸರಸದೊಳದ್ದಿ ಸಿಕ್ಕಿಸಿ
ಲಲನೆಯಂ ಮೇಣಲಸಿದೆಡೆಯ[೧] ಶ್ರಮಮನಾಱಿಸುತ
ತಿಳುಹಿ ಮಱಿಹಾದಲ್ಲಿ ಜಾಣ್ಮೆಯ
ನಲರಿಸುತ್ತೊಯ್ಯಾರದಲಿ ಸುಳಿ
ಸುಳಿದು ಬೆಱಿವುತ ಗಂಡುಸೂಳೆಯ ತೆಱಿದಿ ನಡೆವುತ್ತ ೧೭

ಎಮ್ಮ ತನಯಳನೊಲಿಸಿ ಕವಿತೆಯ
ಹೆಮ್ಮೆಯಲಿ ವಿಟಕೋವಿದತ್ವದ
ಹಮ್ಮಿನಿಂ ನೀನಿಂತು ತಲೆ ಕೆಳಕಾಗಿ ನಡೆಯುತಿಹೆ
ಒಮ್ಮೆಯುಂ ಕರಕರಿಸಿ ಠಕ್ಕಿನ
[೨]ತೊಮ್ಮೆಯಲಿ[೩] ಮಾಯೆಗಳ ಮದ್ದುಗ
ಳಿಂ ಮಱಿಹುಗಳ ಸೊಕ್ಕನಿಕ್ಕಿಸಿ [೪]ಸುಗುಡತನ[೫] ಮೆಱಿದು ೧೮

ನಯಮಧುರವಂ ಬೀಱಿ ನೀನ
ನ್ವಯಿಪ ಮದನಕಳೆಗಳನೆನ್ನ ತ
ನಯಳ ಮಂಚದ ತುದಿಯ ಕಾಲಲಿ ಕಟ್ಟಿಸೆನೆ ನಿನ್ನ
ಪ್ರಿಯವುಗಿಯವುಂ ಕೊಡುವಗಿಡುವಂ
ಬಯಲವೆಲ್ಲಂ ಸಾಕೆನುತ್ತಂ
ಬಯಿದು ನಾಚಿಸಿ ಮೂದಲಿಸಿ ಮಲುಹಣಕವೀಶ್ವರನ ೧೯

ತೊಂಡನಿಕ್ಕಿ ಠವಾಳತನದಲಿ
ಭಂಡುಗೆಲೆವುತ ಮಲುಹಣೆಯ ತಾಯ್
ಮಿಂಡನಂ ಹೊಱಿವಡಿಸಿ ತಾ ತನ್ನಾತ್ಮಜೆಯನೊಬ್ಬ
ಮಂಡಳೀಶನ [೬]ಪೊರೆಗೆ[೭] ಕಳುಹಲು
ಪಂಡಿತೋತ್ತಮನೈಸಱಿಂದಾ
ಪುಂಡರೀಕಾಕ್ಷಿಯನಗಲಿ ವಿರಹಾಗ್ನಿಯಿಮ್ಮಡಿಸಿ ೨೦

---

೧ ಯೊಳ್ (ಥ, ನ). ೨–೩ ಲೊಮ್ಮೆಯುಂ (ಬ). ೪–೫ ಗಂಡುತನ (ಕ). ೬–೭ ಬಳಿಗೆ (ಥ).

CC-0. Jangamwadi Math Collection. Digitized by eGangotri

ತನ್ನ ತನುಧರ್ಮಗಳುಳಿದು ವಿ
ಚ್ಛಿನ್ನೈಕರಣಿಯಲಿ ಮಲುಹಣನು
ತನ್ನ ನಲ್ಲಳ ಸಲ್ಲಲಿತಭಾವಾತಿರೇಕವನು
ತನ್ನ ಮನದೊಳು ನಿಲಿಸಿ ಪರಶಿವ
ನಂ ನೆನೆವ ಯೋಗೀಂದ್ರನಂದದಿ
ತನ್ನನಂಗನೆ ಮುನ್ನೊಲಿಸಿ ನೋಳ್ಪೊಲುಮೆಯಂ ನೆನೆವ ೨೦

ಹವಳದರುಣಾಧರದ [೧]ನವ್ಯ[೨]
ಚ್ಛವಿಯ ಮೃದುವಂ ನೆನೆವನೊಂದುವ
ತವಕವಂ ನೆನೆವಂ ಮನೋಹರರೂಪಮಂ ನೆನೆವ
ಯುವತಿ ಶೃಂಗಾರಿಸುವ ಚೇಷ್ಟೆಯ
ನವಿರತಂ [೩]ನೆನೆವಂ[೪] ನಸುನಗೆಯ
ನ[೫]ವಕವಂ ನೆನೆವಂ ಸರಸದೊಯ್ಯಾರವಂ ನೆನೆವ ೨೧

ಆಂಗದೀಧಿತಿಯಂ ನೆನೆವನಾ
ಲಿಂಗನಾದಿಗಳಂ ನೆನೆವನು
ತ್ತುಂಗನಿಬಿಡಸ್ತನಕಳಸಯುಗದಂದವಂ ನೆನೆವ
ಆಂಗನೆಯ ಗಂಭೀರನಾಭಿಸು
ರಂಗವನು ನೆನೆವನು ಸುವೃತ್ತಾ
ಸಂಗಪೀನನಿತಂಬಬಿಂಬದ [೬]ಶೋಭೆ[೭]ಯಂ ನೆನೆವ ೨೨

ಮಿಸುಪ ಕಪ್ಪಿನ ಬಾಸೆಯಂ ಭಾ
ವಿಸುವನೆಳಲತೆಯಂತೆ ಕೋಮಳ
ದಸಿಯ ನಡುವಂ ಭಾವಿಸುವನೊಳುನ[೮]ಡೆಗಳಂ ನೆನೆವ
ರಸಿಕಸುರತಾನಂದವಂ ಭಾ
ವಿಸುವನುಪಲಾಲಿಸುವ ಕೂಟದ
ಪೊಸಕಳಾಭಾವಂಗಳಂ ಮಲುಹಣನು ಭಾವಿಸುವ ೨೩

೧–೨ ಆಬ್ಜ (ಕ, ಚ, ಬ). ೩–೪ ನೆನೆನೆನೆದು (ಥ). ೫ ತ (ಬ). ೬–೭ ಸೊಕ್ಕಿ (ಮ). ೮ ದೊ (ಕ, ಚ, ಬ).

CC-0. Jangamwadi Math Collection. Digitized by eGangotri

ಎಳವೆಱಿಯವೊಲು ಮಿಱುಪ ನಿರ್ಮಳ
ದಳಿಕದೊಪ್ಪವ ನೆನೆವ ನಳಿನೀ
ಕುಲದ ನೀಲವನನುಕರಿಸುವಳಕಂಗಳಂ ನೆನೆವ
ನಳನಳಿಪ ಸಿತಕಚಭರದ ಸ
ಲ್ಲಲಿತವಂ ನೆನೆವಂ ಕುಡಿತೆಗಂ
ಗಳ ಚೆಲುವ ಬೆಳಗಂ ನೆನೆವನಬಲಾವಿಯೋಗದಲಿ ೪೪

ಮೊಳೆವ ಪುಳಕಾಂಕುರದ ತನುಕೋ
ಮಳತೆಯಂ ಭಾವಿಸುವನಡಿಗಡಿ
ಗಳುಪಿ ನೋಡುವ ಮಚ್ಚಿನಗ್ಗದ ಮೋಹಮಂ ನೆನೆವ
ಮೆಲುನುಡಿಗಳಿನಿದಂ ನೆನೆವನಾ
ಗಳು ಸಮೇಳಂ ಮೆಱಿವ ಜಾಣುಮೆ
ಗೆಳಸಿ ನೆನೆವಂ ರಂಜಿಸುವ ಮುಖಕಾಂತಿಯಂ ನೆನೆವ ೪೫

ವಾಸನಾವಾಸದಿಪರಿಮಳೋ
ಶ್ವಾಸನಾಸಿಕವಂ ನೆನೆವನಳಿ
ಯಾಸೆಯಲಿ ನೆನೆವಂ ಸಮುಜ್ವಲದಂತಪಂತಿಯನು
ಆ ಸತಿಯ ನವಕಂಬುಕಂಠದ
ಭಾಸವಂ ನೆನೆವಂ ನೆನೆವನತಿ
ಭಾಸುರಶ್ರೀಕಾರದಾಕಾರಶ್ರುತಂಗಳನು ೪೬

ದೇವಪೂಜಾಭಜನೆಯಂ ತವೆ
ಭಾವಿಪಂ ಗುರುದೇವಜಂಗಮ
ದೇವಸೇವಾರಾಧನೆಗಳಂ ಭಾವಿಪನು ಮತ್ತೆ
ಆ ವನಜನಯನೆಯ ರತಿಕಳಾ
ಭಾವಭವಸೌಖ್ಯಂಗಳಂ ತಾ
ನಾವಗಂ ನೆನೆನೆನೆದು ವಿರಹದೊಳಿರಲಱಿಯದಿಂತು ೪೭

೧ನ (ಡಾ, ಧ, ಬ).

CC-0. Jangamwadi Math Collection. Digitized by eGangotri

ಮಲುಹಣನು ಕಾಂತಾವಿಯೋಗಾ
ನಲದೊಳುಪತಾಪಿಸುವ ಧೃತಿಯಂ
ನಿಲಿಸಲಾಜಿದೆ ಮಾನವಂ ಹೋಗಾಡಿಯಳಲುತ್ತ
ಮಲುಹಣಿಯ ಮಾತುಗಳನಾದಡೆ
ಕಿಲವನಾಲಿಸಿ ಕೇಳಿದಲ್ಲದೆ
ತಳುವಿದಡೆ ತ[೧]ನ್ನೊಡಲ ಜೀವಂ ನಿಲಲಱಿಯದೆನುತ ೨೮

ಬಂದು ಕಮಲಾನನೆಯ ಕೇಳೀ
ಮಂದಿರದ ಮುಂದೆಸೆಯ ಕೀಳಿಲೊ
ಳೊಂದಿಯಾಕೆಯ ದನಿಯನಾಲಿಸುತಿಪ್ಪ ಸಮಯದಲಿ
ಹಿಂದೆ ಹಿತ್ತಿಲುಮನೆಯೊಳಗೆ ಪೂ
ರ್ಣೇಂದುಮುಖಿ ಹೊಸ ಮಿಂಡನೊಡನೆಂ
ತೊಂದಿನಿತು ಹೊತ್ತಿದ್ದು ಕವಪಂ ತೆಱ[೨]ದಿವನ ಮೇಲೆ ೨೯

ಗಳಗಳನೆ ಮುಕ್ಕುಳಿಸಿ ನೀರನು
ಗುಳೆ [೩]ತಳಕ್ಕನೆ[೩] ಮಿಂಚಲೊಡನಾ
ನಳಿನಲೋಚನೆ ಕಾಣುತಂ ನೀನಾರು ಮಲುಹಣನೆ
ಎಲೆ ಮರಳಿ ಬಹುದುಚಿತವೇ ನೀ
ನುಳಿದುಹೋದ ಬಳಿಕ್ಕ ತನುವಸು
ಗಳೆದಡಂ ನಿನಗಿಂತು ಧರ್ಮವೆ ಮತ್ತೆ ಬಂದಿಹುದು ೩೦

ಬೆಳಗಿದಲ್ಲದೆ ಕಾಣಬಾರದು
ಬಲಿದ [೪]ಕತ್ತಲೆಯೊಳಗೆ ಒ[೫]ರ್ಬನೆ
ಬಳಲುತಿರ್ದುದನಱಿಯದುಗುಳ್ದಿನು ನಿನ್ನ ಮೇಲಕಟ
ಸಿಲುಕಿತಲ್ಲಾ ನೀರೆನುತ ಕೋ
ಮಳೆ ತವಕದಿಂ ತನ್ನ ಕೈಗೊ
ಟ್ಟಳಲುತಂ ಹಿತ್ತಿಲಮನೆಗೆ ವೊಡಗೊಂಡು ತಾನೆಯ್ದಿ ೩೧

೧ಎ (ಥ, ಪ). ೨–೩ ಪಳಲ್ಕನೆ (ಚ); ದಳಕ್ಕನೆ (ಮ); ಪಳಚ್ಚನೆ (ಕ, ಥ). ೪–೫ ಕರ್ಗತ್ತಲೆಯೊ (ಅ, ನ).

CC-0. Jangamwadi Math Collection. Digitized by eGangotri

ನೆರೆಯಲನುವಾದಬಳೆಯಂ ಬೋ
ಸರಿಸಿ ನಿನ್ನಂ ನೋಡಿದಲ್ಲದೆ
ಹರಣವೊಂದಂ ಹಿಡಿಯಲಾಱದೆ ಬಂದು ನಾ ನಿನ್ನ
ತರುಣಿ ಕಂಡೆ[೧]ನದೆ[೨]ಷ್ಟು ಸಾಲದೆ
ಪುರುಷನೊಬ್ಬನಿರಲ್ಕೆ ಕಾಮಾ
ತುರವಡಿಸಿ ನಿನ್ನಂ ರಮಿಸುವುದು ನೀತಿಯಲ್ಲೆನಗೆ ೩೨

ಇತ್ತಲೀ ಹೊತ್ತಿಂಗೆವೊತ್ತೆಯ
ನಿತ್ತವನೆ ವಲ್ಲಭನಲಾ ಎನು
ತತ್ತಲೊಯ್ಯನೆ ಸರಿವ ಮಲುಹಣನೊಡನೆ ಮಲುಹಣಿಯು
ಮತ್ತೆಯೆಂದಳು ನಿನ್ನ ಮೇಲಣ
ಚಿತ್ತವಾಗಿಹೆನೆನ್ನ ಮೇಲಣ
ಚಿತ್ತವಾಗಿಹೆ ನೀನುಭಯಚಿತ್ತಂಗಳಂ ಬಲ್ಲೆ ೩೩

ಎವಗೆ [೩]ತಾನಿನ್ನಿರವಡೀ[೪]ತ
ಮ್ಮವರು ಧನವಂ ತಣಿಯಲೀಯದೆ
ತವಕವಱಿ[೫]ಯರು ತೊಲಗಿಸಿದರಿಂತೆಮ್ಮನಿಬ್ಬರನು
ಶಿವನ ಸದುಭಕ್ತಿಪ್ರಯುಕ್ತನು
ಕವಿವರನು ಸಜ್ಜನನು ನೀನಭಿ
ನವರಸಾಳಂ[೬]ಕಾರ[೭] ಕವಿತಾಪ್ರೌಢಿಯಂ ಮೆಱಿ[೮]ದು ೩೪

ಹೃದಯವಲ್ಲಭ ಕನ್ನಡಿಯ ಮ
ಧ್ಯದಲಿ ಉದ್ದಿನ ಬೀಜವನು ಹಾ
ಯ್ಕಿದಡೆ ಬೀಳುವುದೆನಿತು ತಳುವಿಂತನಿತು ಮಾತ್ರದಲಿ
ಸದಮಳೆದ್ದಸಮಾಧಿಯಲಿ ಸ
ಮ್ಮುದದೊಳಿದ್ದೇಕಾಗ್ರಮಾನಸ
ವೊದಗಿ ಶಿವನಂ ಕೀರ್ತಿಸಾ ಪ್ರತ್ಯಕ್ಷ[೯]ವಾದಹನು[೧೦] ೩೫

೧–೨ ನಿದಿ (ಬ, ಮ). ೩–೪ ತಾನಿವನೆರೆವಡೀ (ಚ). ೫–೬ ಕರಣ (ಕ, ಚ, ಥ, ಮ). ೭–೮ ವಹ ಶಿವನ (ಕ, ಚ, ಥ).

CC-0. Jangamwadi Math Collection. Digitized by eGangotri

ನಿರತ ಸಂತತ ಭುಕ್ತಿ ಮುಕ್ತಿಗ
ಳೆರಡು [೧]ಸಿದ್ಧಿ[೨]ಸುಗೆಮಗೆನಲು ನಿ
ನ್ನುರು[೩]ಕುಚಕಳಸ[೪]ಯುಗಳವನ್ನಯ ಬೆನ್ನಿನಲಿ ಮೋಹಿ
ಸರಸ[೫]ದಿಂದಾ[೬]ಲಿಂಗನಂಗೆ
ಯ್ದಿರು ಮಡದಿ ನೀನೆನಲಹಗೆ ತತ್
ಸರಸಿಜಾನನೆ ವಲ್ಲಭನ ಹಿಂದೆಸೆಯೊಳಿರುತಿರಲು ೩೬

ಹಲವು ಮಾತೇನೊಂದು ಪದ್ಯದೊ
ಳೊಲಿಸಿ ಮಾತಾಡಿಸುವೆನೆಮ್ಮೊಡ
ನೆಳವೆಜಿ[೭]ಯತಲೆಯಭವನಂ ಸಂಕೀರ್ತನಂ ಮಾಡಿ
ಲಲನೆ ನೋಡೆಂದೆನಲು ಮಱುದಿನ
ಮಲುಹಣನು ಮಲುಹಣಿಯುಮಭವನ
ನಿಳಯಕೆಯ್ದಿಯುಮಾರಮಣನ ಸಮಕ್ಷದಲಿ ನಿಂದು ೩೭

ಇಂದುಮುಖಿ ಮುನ್ನಿನವೊಲಿನಿಯನ
ಹಿಂದೆ ಬಿಗಿಯಪ್ಪಿರಲುಮೇಶನ
ಮುಂದೆ ಮಲುಹಣನೀಕ್ಷಿಸುತ ಕಾಂತಾಕಚಪ್ರಚಯ
ಎಂದೆನುತಲುದ್ಯುಕ್ತಮತಿರತಿ
ಯಿಂದ ಭರ್ಗನ ಚಿತ್ತವಲರಲು
ಮಂದಮಧುಕರಪ್ರಸ್ತುತಾಳಂಕಾರನವರಸದ ೩೮

ಮಲಹಣನ ಸ್ತವಮೆನಲು ತಕ್ಷಣ
ದೊಳಗೆ ಮೂವತ್ತಾಱು ಶ್ಲೋಕಂ
ಗಳನಭಿನವಿಸಿ [೮]ರಚಿಸಿ[೯]ದಾಗಳೆ ಮೆಚ್ಚಿ ಶಂಕರನು
ಮಲುಹಣನನಾ ಮಲುಹಣಿಯೆನಾ
ಮಲುಹಣನ ತಾಯಂ ಗಿಳಿಯನಾ
ಮಲಹರಂ ವಿಜಯೇಶ್ವರಂ ನಿಜಪುರಕೆ ಕೊಂಡೊಯ್ದ ೩೯

೧–೨ ಸಂಧಿ (ಮ). ೩–೪ ಕಳಶಕುಚ (ತ, ಥ). ೫–೬ ಗಾಢಾ (ನ). ೭–೮ ಹೇಳಿ (ಸ).

CC-0. Jangamwadi Math Collection. Digitized by eGangotri

ಮಂಗಳೋದಯಮಣಿಮಯವಿಮಾ
ನಂಗಳಲಿ ಕಾಯಂಬೆರಸಿ ಭುವ
ನಂಗಳೆಲ್ಲಂ ಕೀರ್ತಿಸಲು ಕೊಂಡೊಯ್ದನಂತಾಗಿ
ಅಂಗನೆಯರತ್ಯಂತಹಿತವಚ
ನಂಗಳಂ ಕೇಳುತ್ತಮಿಹ ಮನು
ಜಂಗೆ ಸದ್ಗತಿಯಹುದರಿದೆ ಗುರುಭಕ್ತಿಯಾಂಡಾರಿ ೪೦

ಅಂತು ಸಂಧಿ ೪೧ಕ್ಕಂ ಪದಗಳು ೨೩೦೭ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಸಂಧಿ : ೪೨

*

ಸೂಚನೆ : ೀನಿಯನಿಂದನಿಮಿತ್ತಹಾಸ್ಯಂ
ಜನಿಸಿದಡೆ ಸೂರುಳಿಸಿ ಕೇಳುವ
ವನಿತೆಗೊರೆದನು ಗುರ್ಜರನು ನಗುತೋಹಿಲನ ಕಥೆಯ

ಮಾರಮರ್ದನನಚಲಭಕ್ತರು
ಧಾರುಣಿಯೊಳಣಕದಿ ನುಡಿದಡದು
ಸಾರಹಿತವಾಗಿಪ್ಪುದಲ್ಲಾ ತಾನದೆಂತೆನಲು
ವೀರಮಾಹೇಶ್ವರನನಘನಾ
ಚಾರವಂತನು ಪರಬಲಾರಿ ಕು
ಮಾರಪಾಲಕ ಗುರ್ಜರಕ್ಷಿತಿರಮಣನೊಂದು ದಿನ ೧

ಪರಮಹರುಷಿತರಾಗಿ ಅರಸನು
ಮರಸಿಯುಂ ನೆತ್ತವನೊಡರ್ಚಿಸಿ
ಸುರುಚಿರಾಕ್ರಾಂತಪ್ರಸಾದಿಗಳನು ನಯೋಕ್ತಿಯಲಿ
ಬೆರಸಿ ಪನ್ನೊಂದಿಂದ್ರಿಯಂಗಳ
ನರಿದೆನಿಸಿದಂತಶ್ಚ ತುಷ್ಟಯ
ದಿರವಿನಲಿ ಮೂಱಿಂ ನಿಯೋಜಿಸಿ ಮೋಹವೆಂದೆಂಬ ೨

ಧಾರುಣಿಗೆ ಲೋಕಾನುಸಾರಿಯೆ
ಸಾರಿಯಾಗಲು ನೆತ್ತದಲಿ ಪರಿ
ಪೂರಿತೋದಾತ್ತಪ್ರಸಾದಾನುಭವದವಧಾನ೧
ಸಾರಮತಿ ಪದಿನೈದು ತನ್ನಯ
ನಾರಿ ಪದಿನೈದುಂ ಚದುರಿನ ವಿ
ಚಾರನಿರ್ಣಯವೆಂಬ ಪಲಗೆಯ ಮೇಲೆ೨ಯಂತಿರಿಸಿ ೩

---

* ರಾಗ : ಬಹುಳಿ (ಡಾ, ಧ, ಚ, ಪ); ರಾಮಶ್ರೀ (ಅ); ಪಹಡಿ (ತ).
೧ನಿ (ಕ, ಚ, ಥ, ಪ, ಮ). ೨–೩ ತಾನಿ (ಅ, ನ, ಪ, ಮ).

CC-0. Jangamwadi Math Collection. Digitized by eGangotri

ಸೊಲ್ಲಲಿಹಪರವೆಂಬ ಕೇರಿಗ
ಳಲ್ಲಿ ಪಾಪಂ ಪುಣ್ಯಮೆಂಬಾ
ನಲ್ಲ ಹಾಸಂಗಿಗಳನೊಯ್ಯನೆ ಹಾಯ್ಕಲದಱಿಂದ
ಒಳ್ಳಿತಾಗಲು ಪ್ರಾಪ್ತಿಸುವ ಫಲ
ದಲ್ಲಿ ಬೀಳಲು ಪಟ್ಟದಾಯಗ
ಳಲ್ಲಿ ಭಕ್ತಿಯೆನಿಪ್ಪುದೊಂದೀರೈದೊಡಗಿತೆನುತ ೪

ನಿರತವೀರೈದಿಂತು ಬಂದಡೆ
ಪರವಿಹವೆನಿಪ್ಪಿದ್ದುಗೆಯೊಳೀ
ಶ್ವರನ ಭಕ್ತಿಯಲರ್ದುದೆನುತಿದ್ದುಗೆಯನಾಡುವನು
ಸರಸಲಿಂಗತ್ರಯಕೆ ಪೂಜಿವ
ಸರದೊಳಂ ತ್ರಿವಿಧಾರ್ಪಣಕ್ರಿಯೆ
ವೆರಸಲಿತ್ತಿಗವೆಂಬ ದಾಯವನಾಡುವನು ನೋಡಿ ೫

ಬೇಡ ಚೌಕದ ಮಾತು ನಿನಗೆಂ
ದಾಡುವನುದಚ್ಚೌಕದಾಯವ
ನಾಡುವನು ಪಂಚೇಂದ್ರಿಯಕೆ ಲಿಂಗಪ್ರಸಾದವನು
ಕೂಡಿಪಂ ಚಿಕ್ಕುವ ತೆಱದೊಳನು
ಗೂಡಿ ಪಂಚಿಯನಿಕ್ಕಿ ಗುರ್ಜರ
ನಾಡುವನು ತಾಂ ಚೌಕದುಗವಂ ಚೌಕದುಗಕಿಕ್ಕಿ ೬

ವೀರಭದ್ರ ಶರಣ್ಯವೆನುತಂ
ವೀರಭಕ್ತನು ಭದ್ರದಾಯವು
ಸೇರಿತೆನುತಾಡುವನು ಚಿತ್ತಂ ನಟ್ಟು ನಟ್ಟಿಯನು
ಸಾರಲಿಟ್ಟಾಡುವನು ಜಿತಸಂ
ಸಾರಿ ಮತ್ತೀ ವಂಚನೆಯನುಳಿ
ದಾರಯಿದು ತೀರ್ಪಿವಂಚದಾಯಂ ಬಿದ್ದಡಾಡುವನು ೭

---

೧ ತ್ರಿ (ಕ, ಚ, ಪ); ತಿರಿ (ಮ, ಬ).

CC-0. Jangamwadi Math Collection. Digitized by eGangotri

ವನಿತೆ ಮೆಚ್ಚುಗು ಹಂಚಿಹಾಯ್ಕಿದ
ಡೆನುತ ಚೌಹಂಚಿಯನೊಸೆದು ತಾ
ನನಘನಾಡುವನೀ ಪರಿಯ ನೆತ್ತವನಿಳೆಯೊಳಿತರ
ಜನರಿಗಾಡಲಶಕ್ಯವಗಜೇ
ಶನ ಕರುಣವಿಲ್ಲದರಿಗೆನುತು
ಬ್ಬಿನೊಳಖಿಳಮಾಹೇಶ್ವರರು ಕೊಂಡಾಡಲೆಡೆಗೆಡೆಗೆ ೮

[೧]ಸ್ಫೀತ[೨]ಭಕ್ತಿಸಮಗ್ರದೊಳು ಪ್ರ
ಖ್ಯಾತಭಕ್ತಿವಿರುದ್ಧವಾದ
ದ್ಯೂತಸವಿನೋದವೆ ಸುಭಕ್ತಿವಿನೋದಮಾಗಲ್ಕೆ
ಪ್ರೀತಿಯಿಂದಿಂತಾಡುತಾಡುತ
ಶೀತಕರಧರನೊಲಿದ ಭಕ್ತನು
ಭೂತಳೇಶನು ನಗಲೊಡನೆ ತನ್ನಳಿನಮುಖಿ ನೋಡಿ ೯

ಸ್ಫುರಿತದರಹಾಸಪ್ರಭಾಭಾ
ಸುರವದನನಾಗಿಪ್ಪ ವಸುಧೇ
ಶ್ವರನ ವಲ್ಲಭೆ ನಾಲ್ಕು ದೆಸೆಗಳನೀಕ್ಷಿಸುತ ಬಳಿಕ
ಪರಿಕಿಪಡೆ ನಾವಿಬ್ಬರಲ್ಲದೆ
ಪರರನಾರಂ ಕಾಣೆವಿತ್ತಲು
ಒರೆಯಲೊಂದಱ ಕಾರ್ಯವುಂ ಮುನ್ನಿಲ್ಲ ನೆಪ[೩]ವೇನೊ ೧೦

ಎಸೆವ ದರಹಾಸಪ್ರಭಾಸ
ಪ್ರಸರವೆನ್ನಂ ನಿರ್ಮಿಮಿತ್ತಂ
ಮುಸುಕಿತೆನುತುಂ ಲಜ್ಜೆಯುಂ ನಾಚಿಕೆಯು ಮೊಳೆವುತಿರೆ
ಲಸಿತವಿಕಸಿತಮುಖಿಕಮಳಮಂ
ನಸುಮುಗಿದು ಪಾಸಂಗಿಗಳನಾ
ಬಿಸಜಲೋಚನೆ ನೆತ್ತವಲಗೆಯ ಮೇಲೆಯಂತಿರಿಸಿ ೧೧

೧–೨ ಸ್ವೀಕ (ಚ); ಸ್ಫೀತ (ಡಾ, ಬ). ೩ ವ (ಕ, ಚ, ಥ, ಬ).

CC-0. Jangamwadi Math Collection. Digitized by eGangotri

ನೆತ್ತದಾಟವನುಡುಗಿ ನಿನಗನಿ
ಮಿತ್ತಹಾಸ್ಯವದೇಕೆ ಸಂಭವಿ
ಸಿತ್ತು ಸಂಶಯವಾದುದೆನಗೆ ಮದೀಶ ಜಗದೀಶ
ಚಿತ್ತವಿಸು ಬಾಹ್ಯಾಂತರಾನೂ
ನೋತ್ತಮಾರ್ಪಿತಸಾವಧಾನೋ
ದಾತ್ತಸೌಖ್ಯಾನಂದ ಭಾವವತಿಕ್ರಮಿಸಿತೆಂದೊ ೭೨

ಇಂದಿನವಧಾನವಿದು ತಪ್ಪಿದೆ
ನೆಂದೊ ಎನ್ನೊಳು ಕಂಡೆನೆಗ್ಗನಿ
ದೆಂದೊ ನೆತ್ತವನಾಡುವುದು ಶಿವಭಕ್ತಿಪಥವಲ್ಲ
ಎಂದೊ ಸಾರಿಯನಿಡುತ ತಪ್ಪಿದೆ
ನೆಂದೊ ಪಾಸಂಗಿಗಳ ನಾನಿಂ
ತೊಂದನೊಂದಂ ಪಿಡಿದು ತಪ್ಪಿಸಿ ಹಾಯಿಕಿದೆನೆಂದೊ ೭೩

ಒಂದು ಹಲಗೆಯನಾದಡಂ ಗೆಲೆ
ನೆಂದೊ ಮೊಲೆಗಳ ಮುಸುಕು ತೊಲಗಿದು
ದೆಂದೊ ಸರಸದ ನುಡಿಗಳಿನಿದೊಂದಿನಿತು ತಪ್ಪಿದುದೊ
ಸಂದಿರುಳು ರತಿ ಪೂರವಿಸದೋ
ಬಂದು ಕಾಮನು ಕೈವಿಡಿದಡೋ
ಬಂದಿತೆಂದೋ ಸತ್ತಸಾರಿಯೆ ಮತ್ತೆ ಭೂನಾಥ ೭೪

ಕೊಂದೆನೆಂದೋ ಎನ್ನ ಸಾರಿಯ
ನಿಂದು ದುಗುಣವನಿಕ್ಕಿ ಗೆಲಿದಪೆ
ನೆಂದೊ ನಿಃಕಾರಣದ ಹಾಸ್ಯವದಾವುದಿಂತಿದಱಿ
ಚಂದವೆಲ್ಲಂ ಹೇಳದಡೆ ಗುಣ
ವೃಂದ ನಿಮ್ಮಡಿಯಾಣೆಯೆನಲೊಲ
ವಿಂದ ನೆತ್ತವನುಡುಗಿ ಭೂಪತಿ ಮತ್ತೆ ನಗುತೆಂದ ೭೫

CC-0. Jangamwadi Math Collection. Digitized by eGangotri

ಭಾಮೆ ಕೇಳ್ ಸೌರಾಷ್ಟ್ರಪುರಪತಿ
ಸೋಮನಾಥನನನವರತಮುಂ
ಪ್ರೇಮದಿಂ ಭಜಿಸುವ ವಿನಿಶ್ಚಲಭಕ್ತನೋಹಿಲನು
ಆ ಮಹಾತ್ಮನ ಚರಿತಮೆಂತೆನೆ
ಕಾಮವೈರಿಗೆ ಹೇಳಲತಿಶಯ
ವೀ ಮಹೀವಳಯಕ್ಕೆ ಶಿವನ ನಿರೂಪದಿಂ ಬಂದು ೧೬

ಅನುಪಮನನಸಮಾನನಂ ಗುಹ
ಜನಕನಂ ಸೌರಾಷ್ಟ್ರಸೋಮೇ
ಶನನಭವನಂ ಕಂಡು ಪಾದಾಂಬುಜಯುಗಕ್ಕೆಱಗಿ
ಜನಿತ ಸಾನಂದಾಶ್ರುಪೂರ್ಣಾ
ನನಸರೋರುಹನಾಗುತಂ ತತ್
ತನುವಿನೊಳು ಪುಳಕಾಂಕುರಂಗಳು ಪಸರಿಸುತ್ತಿರಲು ೧೭

ಗಳದೊಳಾಗಳು ಗದ್ಗದಿಕೆಗಳು
ಮೊಳೆಯಲಚಲಿತಭಕ್ತಿಯಲಿ ಮನ
ವೊಲಿದು ಶಿವನಂ ಕೀರ್ತಿಸುತ್ತಂ ಸಿತಲಸಿತಭಸಿತ
ಕಲಿತಸಲ್ಲಲಿತಾಂಗನಾಗುತ
ಫಲಿತರುದ್ರಾಕ್ಷಾಭರಣನೋ
ಹಿಲನು ಸೌರಾಷ್ಟ್ರಾಧಿಪತಿಗಾ ಸೋಮನಾಥಂಗೆ ೧೮

ಸಲೆ ದಿನಂಪ್ರತಿಯಿಂದ ಗಂಗಾ
ಮಳಸಲಿಲವಂ ತಂದು ನಿರ್ಮಳ
ಕಳಶದಶಶತದಿಂ ಶಿವಂಗಭಿಷೇಕವಂ ಮಾಡಿ
ಲಲಿತಮಾರ್ದವಪರಿಮಳದ ಕೋ
ಮಳದಖಿಂಡಿತಬಿಲ್ವಪತ್ರೆಯ
ನೊಲವಿನಿತನರ್ಚಿಸಿ ಮನದೊಳತಿ ವಿನಯಪರನಾಗಿ ೧೯

---

೧ +ಳ (ಥ). ೨–೩ ಭಯದಲಿ (ನ).

CC-0. Jangamwadi Math Collection. Digitized by eGangotri

ಚೆನ್ನೆಸೆದು ಮಹಿಷಾಕ್ಷಿಗುಗ್ಗಳ
ವಂ ನಿಧೂ[1]ಪಿಸಿ ಸೋಮಧಾರಿಗೆ
ತನ್ನ ತೂಕವನಿಕ್ಕಿಯಂತರ್ಘೂಪವಂ ಕೊಟ್ಟು
ಸನ್ನುತೋಜ್ವಳಮಂಗಳಾರತಿ
ಯಂ ನಿವಾಳಿಸಿ ಪಂಚಭಕ್ಷರ
ಸಾನ್ನಯುತನೈವೇದ್ಯಮಂ ಸೌರಾಷ್ಟ್ರಪತಿಗಿತ್ತು ೨೦

ಪಲವುಸೂಳ್ ಬಲಗೊಂಡು ಕೀರ್ತಿಸಿ
ನಲಿದು ಪಾಡುತ್ತೀ ಪ್ರಕಾರದೊ
ಳೊಲಿದು ಸೌರಾಷ್ಟ್ರೇಶ್ವರನನೋರಂತೆ ಭಜಿಸುತ್ತ
ತೊಲಗದಾಗಳು ತನ್ನ ತೂಕದ
ತೊಲೆಯ ಮಹಿಷಾಕ್ಷಿಪ್ರಮುಖಿಗು
ಗ್ಗುಳವನೀವನು ನೇಮವಿದು ತನಗೆಂದು ನಿಶ್ಚಯಿಸಿ ೨೧

ನಿರ್ಜಿತಸ್ಮರನಂ ಭಜಿಸುತಿರ
ಲರ್ಜಿತಾರ್ಜುನಘನಯಶನ ಪೂ
ರ್ವಾರ್ಜಿತಾರ್ಥಮದೆಲ್ಲಮುಂ ಗುಗ್ಗುಳಕೆ ಸವೆಯಲ್ಕೆ
ವರ್ಜಿತಪ್ರಚಲಾತ್ಮನಾಗಿ ನಿ
ರ್ಜೋರ್ಜಿತಾಮಳಭಕ್ತಿರತಿಯಲಿ
ವರ್ಜಿತಾಹಿತನೋಹಿಲನು ನಿಷ್ಕಾಕುತೂಹಳನು ೨೨

ಕಂತುವೈರಿಗೆ ತನ್ನ ನೇಮವ
ನಿಂತು ತಪ್ಪಿಸಬಹುದೆನುತ ನಿ
ಶ್ಚಿಂತಬುದ್ಧಿಯೊಳಿರುಳು ಹಗಲಿದು ಕಾಲವಿದಕಾಲ
ಎಂತು ಪೋಪೆನರಣ್ಯಕೆಂಬಾ
ಚಿಂತೆಯಿಲ್ಲದೆ ದಕ್ಷಿಣಸಮು
ದ್ರಾಂತಿಕಾನಂತಾಟವೀದುರ್ಗಂಗಳಿಗೆ ಹೋಗಿ ೨೩

---

೧ ಕೂ (ಆ, ಡಾ, ಮ). ೨ ತ (ಬ).

CC-0. Jangamwadi Math Collection. Digitized by eGangotri

ಹಲವು ಗುಗ್ಗು ಳಭೂರುಹಂಗಳ
ನೆಲೆಯನಾರೈದಲ್ಲಿಗಲ್ಲಿಗೆ
ಸುಳಿಸುಳಿದು ನೋಡುತ್ತ ಹೊಸ ಮಹಿಷಾಕ್ಷಿಯಂ ನೋಡಿ
ಚಿಲುವು ಮಿಗೆ ಕೈಯಾರೆ ಶೋಧಿಸಿ
ಮಲಹರಾತ್ಮನು ತನ್ನ ತೂಕವ
ನಳವಡಿಸಿ ಕಂಬಿಯೊಳಿರಡುಕಡೆಗಂತು ಸಂಪರಿಸಿ ೨೪

ಮಲಯಪರ್ವತದಡವಿಗೆಯ್ದಿಯ
ಚಲಿತಭಕ್ತನು ನಾಲ್ಕು ಜಾವಂ
ಸಲೆ ಪರಿಮಳಿಪ ಮಲಯರುಹವೃಕ್ಷಂಗಳಂ ಕಂಡು
ಹೊಳಚಿ ತಂದಾ ಸೌಕ್ಕೆಗಳನೊಳ
ಗೊಳಗೆ ಶೋಧಿಸಿ ತನ್ನ ಕಂಬಿಯ
ನೆಲಹಿನಿತ್ತರದಲ್ಲಿ ಸುತ್ತಲು ೨ಸೆಕ್ಕೆ೩ ಬಿಗಿಬಿಗಿದು ೨೫

ಚಿಲ್ವಪಹ ಪ್ಯದುಪಪ್ಪ ಗಂಧಂ
ನಿಲ್ವ ಕೋಮಲವಾದ ನುಣ್ಪಂ
ತಾಳ್ವ ಶೋಭಿತವೆನಿಪ ಛಿದ್ರಿತವಾಗಿರದವಿಂಡ
ಬಿಲ್ವಪತ್ರೆಯನೆಯ್ದಿ ಕೊಯ್ದಂತಿ
ನಲ್ವಿನಿಂ ೨ವಲಿಂಗಪೂಜೆಗೆ
ಸಲ್ವ ವಸ್ತುವಿದೆಂದು ಶೋಧಿಸಿ ಸೆಜ್ಜೆಯೊಳು ತುಂಬಿ ೨೬

ತನ್ನ ಕಂಕುಳಿಯಲಿ ತೊಡರ್ಚಿಯ
ಭಿನ್ನಭಾವನು ಗುಗ್ಗು ಳವನೆ
ಲ್ಲಂ ನಯಂ ಮಿಗೆ ಧೌತಕಪ್ಪಡದಿಂದಿಳಿಯ ಮುಸುಕಿ
ಮುನ್ನಮರ್ಚಿದ ಕಂಬಿಯಂ ಪೊ
ತ್ತುನ್ನತೋತ್ಸುಕವೆತ್ತು ಭರವಸ
ದಿಂ ನಡೆತರಲು ಕಂಡು ಲೋಕಂ ಕೀರ್ತಿಸುತಮಿರಲು ೨೭

೧ಸಿ (ಸ). ೨–೩ ಶಕ್ತಿ (ಡಾ).

CC-0. Jangamwadi Math Collection. Digitized by eGangotri

ಅತ್ತ ಮುನ್ನವೆ ಗೌಳತಪಸಿಗ
ಳಿತ್ತ ಕಾಂತಿಯ ಪೂಜೆಯಂ ಚೆಲು
ವೆತ್ತ ಹೂವಿನ ಪೂಜೆಯಂ ಶೃಂಗಾರವಾಗಿರಲು
ಚಿತ್ತಜಾರಿಯ ಸನ್ನಿಧಿಯೊಳಾ
ರ್ಯೋತ್ತಮರು ಮೂದಲೆನಿಪೆನಿಪ ಬಾ
ಹತ್ತರನಿಯೋಗಂ ಪ್ರಮೋದಂ ಮಿಗೆ ಭಜಿಸುತಿರಲು ೮೮

ಅವಸರವಿದನವಸರವೆನ್ನದೆ
ಶಿವನನರ್ಚಿಸುವರ್ತಿಯಿಂದತಿ
ತವಕದಿಂ ದೇಗುಲದೊಳಗೆ ಪೊಕ್ಕಿಳುಹಿ ಕಂಬಿಯನು
ಪ್ರವಿಮಳಾಕೂಪಾರವಾರಿಯ
ನವಿಕಳಾತ್ಮನು ತಂದು ಮುನ್ನಿನ
ವಿವಿಧ ಪೂಜೆಯನಾಗಳಂಜದೆ ನೂಂಕಿ ಭಕ್ತಿಯಲಿ ೮೯

ಲಿಂಗಮೂರ್ತಿಗೆ ಮಜ್ಜನಕ್ಕೆಱಿ[೧]
ದಂಗವಸ್ಯದಿ[೧]ನೊತ್ತಿ ಶಿವನಖಿ
ಳಾಂಗಮಂ ಶ್ರೀಗಂಧವಂ ತೆಯ್ದಂಗದಲಿ ಪೂಸಿ
ಸಾಂಗಮಾಗಲಖಿಂಡಬಿಲ್ವದ
ಳಂಗಳಿಂ ಸೌರಾಷ್ಟ್ರಸೋಮೇ
ಶಂಗೆ ಪೂಜಿಸಿ ತಂದ ಮಹಿಷಾಕ್ಷಿಯನಹಿಂಗಿತ್ತು ೯೦

ದೇವ ಅವಧರಿಸವಧರಿಸು ಧೂ
ಪಾವಸರಮಂ ಭಕ್ತಜನಸಂ
ಜೀವ ಅವಧರಿಸವಧರಿಸು ಕಾರುಣ್ಯಮಯಮೂರ್ತಿ
ದೇವ ಅವಧರಿಸವಧರಿಸು ಜಿತ
ಭಾವಭವ ಸೌರಾಷ್ಟ್ರಸೋಮಯ
ದೇವ ಸೋಮಕಪರ್ದಿ [೩]ಸೋಮಾನಲಕ ನಮೊ ಎನುತ[೪] ೯೧

೧ವ (ಡಾ, ಧ, ಪ). ೨ವ (ಮ). ೩–೪ ನುತನಯನ ಎನುತ (ಅ); ಸೋಮಕಾನಲನಯನ ಎನುತ (ಚ); ಸೋಮಾನಲನಯನನೆನುತ (ಕ, ಥ, ಧ, ಪ, ಬ).

CC-0. Jangamwadi Math Collection. Digitized by eGangotri

ವಸುಧೆಯೊಳು ಮೈಯಿಕ್ಕಿ ವಂದಿಸಿ
ನೊಸಲೊಳೊಂದಿಸಿ ಮುಗಿವ ಕೈಗಳ
ನೊಸೆದುಘೇ ಉಘೆ ಚಾಂಗು ಭಲ ಎಂದೆಂಬ ಘೋಷಣವು
ಪಸರಿಸುತ್ತಿರೆ ಘಂಟೆಯಂ ಬಾ
ರಿಸುತ ಶಿವನ ಗುಣಂಗಳಂ ಭಾ
ವಿಸುತ ಹಾಡುತ್ತಾಡುತಂ ತುತಿಸುತ್ತ ನಲಿವುತ್ತ ೩೨

ವಿಸ್ಮಯಾಪರಿಮಿತಚರಿತ್ರದ
ವಿಸ್ಮಯಸ್ಮರಮೃತ್ಯುಹರಯಮ
ಘಸ್ಮರಕ್ಷವ ಸೋಮನಾಥಾ ಪಶುಪತಿವರೂಥ
ಸಸ್ಮಿತಾನನ ಪಾರ್ವತೀಶ್ವರ
ಭಸ್ಮವಾಗಲಿ ಪಾಪಸಂಕುಳ
ವಸ್ಮದೀಯ ಕೃತೈಕಧೂಪಜ್ವಲನನಿಂದೆನುತ ೩೩

ತುಂಗಮತಿಯೋಹಿಲನು ಸಾಂಗೋ
ಪಾಂಗಮಾಗಲು ಧೂಪವಂ ಶಿವ
ಲಿಂಗಕರ್ಪಿಸಿ ಮಿಕ್ಕ ನವ್ಯಾರ್ಚನವಿಧಾನವನು
ಹಿಂಗದಂತಾಚರಿಸಿ ಭಕ್ತಿದೃ
ಢಾಂಗನಾಗಿ ದಿನಂಪ್ರತಿಯೊಳೀ
ಶಂಗೆ ಮಾಡುತ್ತೀ ಪ್ರಕಾರದೊಳೊಲಿದು ವರ್ತಿಸಲು ೩೪

ಅಸಮಕಲುಷಿತರಾಗಿ ಗೌಳತ
ಪಸಿಗಳೆಲ್ಲರು ಕೂಡಿ ತಾವು
ಬ್ಬಸಗೊಳುತ್ತಿಂತೆಂದರೀ ಸೌರಾಷ್ಟ್ರಪುರದೊಳಗೆ
ಹೊಸತಿನಿತು ವಿಪರೀತವಿದನೀ
ಕ್ಷಿಸೆವು ಕೇಳಿವು ಬಂದನಿಲ್ಲಿಗೆ
ಭಸಿತಧರನೋಹಿಲನೆನಿಪ್ಪವನೊಬ್ಬನೆಲ್ಲಿರ್ದೊ ೩೫

---

೧ ಭ್ಯ್(ಧ, ನ, ಪ).

CC-0. Jangamwadi Math Collection. Digitized by eGangotri

ಮುಂದುಗಾಣನು ಲೋಗರಂ ತೃಣ
ವೆಂದುವಱಿಯನು ತನ್ನನಱಿಯನ
ಮಂದಗರ್ವದಿ ತಾ ಮಹಾನಿಯಮಸ್ಥನಂದದಲಿ
ನಿಂದ ನೆಲನಂ ಸಸಿನೆ ಮೆಟ್ಟಿಸು
ತಂದಡವಿಗಿಡುಮರಹಗಿನವಂ
ಚಂದಚಂದದ ಸೊಪ್ಪುಸೊಗಡಂ ಹಲವ್ರ ಸೆಕ್ಕೆಗಳ ೩೭

ಹೊತ್ತುಕೊಂಡೈತಹನು ಗುಡಿಯೊಳ
ಗೊತ್ತರಿಸಿ [೧]ಹೊಗುವನು ಸುಪ್ರಜೆಯ[೨]
ನತ್ತ ನೂಕುತ ತನ್ನ ಮೆಚ್ಚಿನ ಪೂಜೆಯಂ ಮಾಳ್ಪ
ಇತ್ತ ಮುನ್ನಿನ ಪೂಜೆಗಳನಾ
ಪೊತ್ತು ಕಳಿದಲ್ಲದೆ ಪರಮನಂ
ಮತ್ತೆ ಪೂಜಿಸಬಾರನೋಹಿಲನೇಗೆಯುವೆವಿದಕೆ ೩೮

ಶಿವನನಚ್ಯುತಮುಖ್ಯಿರುಗಳು
ಚ್ಚವದಿ ಮಾಡಿದ ಪೂಜೆಯಂ ತೆಗೆ
ದವಿರತಂ ಪೂಜಿಸುವ ಭೃಂಗೀಶ್ವರನಹನೆ ತಾನು
ತವೆ ಸೆಲದಿ ನೂಲಿಂದಮರ್ಚಿದ
ಭವನಮೇಲಣ ಪೂಜೆಯಂ ಕಳೆ
ದವಿರಳೋತ್ಸುಖಚಿತ್ತದಿಂ ಪೂಜಿಸುವ ಕರಿಯಹನೆ ೩೯

ಸಲೆ ತಪಸಿ ಪೂಜಿಸಿದ ಪೂಜೆಯ
ನಳಿದು ತನ್ನಯ ಕಣ್ಣನರ್ಪಿಸಿ
ಮಲಹರನ ಕಣ್ಣಪ್ಪ ಕಲಿಕಣ್ಣಪ್ಪನೇ ತಾನು
ಒಲಿದು ಭೂಸುರರಂದು ಮುದನೂ
ರೊಳಗೆ ಮಾಡಿದ ಮೃಡನ ಪೂಜೆಯ
ನಿಳುಹಿ ಪೂಜಿಸಿ ಮೆಱಿದ ದಾಸಯ್ಯಂಗಳಂತಹನೆ ೪೦

೧–೨ ಹೋಗುವನು ಪೂಜೆಯ (ಚ, ಬ).

CC-0. Jangamwadi Math Collection. Digitized by eGangotri

ಮಲ್ಲಿಕಾದಿಪ್ರಸವಪೂಜೆಯ
ನೆಲ್ಲವಂ ಮೆಚ್ಚದೆ ಪರಮನಂ
ಕಲ್ಲಲಿಟ್ಟಾ ಸಾಂಖ್ಯನಹನೇ ಅಂತುಮಲ್ಲದೆಯು
ಖಿಲ್ಲನಾಗಿಂತನವಸರವಾ
ದಲ್ಲಿ ಗುಡಿಯೊಳು ಹೊಗುವ ಸಲಿಗೆಯ
ದೆಲ್ಲಿಯದು ತನಗಾರು ಕೊಟ್ಟರು ಮಾಣದಶ್ರಾಂತ ೪೦

ಹರನಿಳಯದೊಳು ಹುಗುವ ನಂದೀ
ಶ್ವರನೊ ಉಪಮನ್ಯುವೊ ದಧೀಚಿಯೊ
ವರಮುನಿಪ ದೂರ್ವಾಸನೋ ಭೃಗುವೋ ಬಳಿಕ್ಕಾದಿ
ಪ್ರರುಷರೊಳು ತಾನೊರ್ಬನೋ ಶ್ರೀ
ಧರನು ಸೋಮೇಶ್ವರನನರ್ಚಿಸ
ಬರುತ ಮಿಗೆ ಪುಗಲಂಜಿ ಸುಖನಾಸಿಯೊಳು ನಿಂದಿಹನು ೪೧

ಜಡಜಭವನಭವನ ಸಮಯಮಂ
ಪಡೆವನಕ ದೇಗುಲದ ಹೊಱಿಗೆಯೆ
ರಡು ಕರವ ಮುಗಿದಿಹನು ನುತಿಸುತ ಪಲವು ಮುಖದಿಂದ
ಮೃಡನನೋಲೈಸಲ್ಕೆ ಬಾಗಿಲ
ಕಡೆಗೆ ಹೋಗಿ ಸುಪರ್ವನಾಥನು
ಬಿಡದೆ ನೋಡುತಲಿವೆಯನಿಕ್ಕದೆ ಕಾಯ್ದುಕೊಂಡಿಹನು ೪೨

ಹರನವಸರವಹನ್ನೆವರ ತಾ
ವರೆಗಳಂ ಪಿಡಿದಹಿಮಕಿರಣಂ
ತಿರುಗುತಿಪ್ಪಂ ವೇಳೆಯಪ್ಪನ್ನಕ ಸುಧಾಕರನು
ಗಿರಿಶನಂ ಭಜಿಸಲ್ಕೆ ಮೌಳಿಯೊ
ಳಿರುತಮಿಹನಿಂ[೧]ತಪ್ಪಗರ್ಗ್ಯ
ಶ್ವರಸಮಯವತಿ ಗಹನವೆಂದಡೆ ಈತನೇತಱಿವಂ ೪೩

---

೧ ವಿಂ (ಸ); ಗಿಂ (ಜ).

CC-0. Jangamwadi Math Collection. Digitized by eGangotri

ಹುಗದಿರೆಂದಡೆ ಶಿವಭವನಮಂ
ಹುಗಬಹುದೆ ಹೋಗೆಂದಡಿಲ್ಲಿ ತ
ನಗೆ ತೊಲಗದಿರಬಹುದೆಯಾತ್ಮಾರ್ಥಕ್ಕೆ ಮನೆಮನೆಗೆ
ಹುಗುವವಂಗೇಕೀ ಸಘಾಟಿಕೆ
ಯಗಲದಂತರ್ವರ್ತ್ತಿಯಹ ತಪ
ಸಿಗಳಿಗರ್ಚಿಸಬೇಕು ಗುಡಿಯೊಳು ಪ್ರೊಕ್ಕು ಶಂಕರನ ೪೪

ಬಳಿಕ ಪರಿಚಾರಕಜನಂಗಳಿ
ಗುಳಿದ ಪರದೇಶಿಗಳಿಗೀ ದೇ
ಗುಲದೊಳಗೆ ಹುಗಬಾರದನ್ಯರು ಹೊಕ್ಕೊಡಿದು ತಪ್ಪು
ಸಲೆ ಭಜಿಸುವಾಕಾಂಕ್ಷೆಯುಳ್ಳಡೆ
ತೊಲಗದೀಶಾಲಯದ ಹೊಱಗಿ
ದ್ದೊಲಿದು ಭಜಿಸುತ್ತಿರಲಿ ತಾನೆನುತಾಜ್ಞೆಯಂ ಮಾಡಿ ೪೫

ಬಾಹಿರಾತ್ಮರು ಗೌಳತಾಪಸ
ರೋಹಿಲಯ್ಯನು ಹುಗದಹಗೆ ಶಿವ
ಗೇಹದಲಿ ಹಗಲೆಯ್ದೆ ಕಾವಲನಿರಿಸಿ ರಾತ್ರೆಯಲಿ
ದ್ರೋಹವಹುದೆಂದೆನ್ನದೇ ಛಲ
ಗ್ರಾಹಕದಿ ಬಾಗಿಲಕದವನುಱಿ
ಮೋಹಿ ಸಿಬೀಯಗವಿಕ್ಕಿಳಿಯನಿಬರು ಗಹಗಹಿಸಿ ನಗುತ ೪೬

ಬಿಡದೆ ನಿಚ್ಚಂ ಹುಗುವ ಭಕ್ತನ
ಕಡುಹ ನೋಡಲು ಬಹುದೆನುತ್ತಾ
ಜಡತಪಸಿಗಳು ಹೋಗೆ ಮುನ್ನಿನ ಪರಿಯೊಳೋಹಿಲನು
ನಡೆತರಲು ಶ್ರೀ ಸೋಮನಾಥನು
ನಡುವಿರುಳು ಭಕ್ತಂಗೊಲಿದು ಧಡ
ಧಡನೆ ಕದವಂ ಹಾಱಿತೆಗೆಯಲು ಪ್ರೊಕ್ಕು ಭಯವುಡುಗಿ ೪೭

೧–೨ ರ್ವರ್ತಿ (ಅ, ಕ, ಚ, ಥ, ಧ, ನ, ಪ, ಬ). ೩–೪ ಬೀಗವನಿಕ್ಕಿ (ಕ).

CC-0. Jangamwadi Math Collection. Digitized by eGangotri

ಎಂದಿನಂದದಿ ಶಿವನನರ್ಚಿಸಿ
ವಂದಿಸಲು ಬೆಳಗಾಗೆ ತಾಪಸ
ವೃಂದವೀ ವೃತ್ತಾಂತವೆಲ್ಲವನಱಿದು ಬೆಱಗಾಗಿ
ಇಂದುಧರಪದಭಕ್ತಿಯಲಿ ಸಲೆ
ಸಂದಭಕ್ತನು ದಾಸಿಮಯ್ಯಂ
ಗಂದು ರಾಮೇಶ್ವರನು ಕದವಂ ತೆಱಿದನತಿಶಯವು ೪೮

ಕಿನ್ನರಯ್ಯಂಗೋತು ಕದವಂ
ಮುನ್ನ ತತ್ತ್ರಿಪುರಾಂತಕಂ ತೆಱಿ
ದಂ ನಿಱಿಲವಱಿಯಲು ಕಟಕದೊಳು ತಿರುಮಡಕಡೆಯೊಳು
ತನ್ನ ಕದವಂ ತೆಱಿದನತಿ ಮಹಿ
ಮೋನ್ನತ ಬ್ರಹ್ಮೇಶ್ವರಂ ತ್ರಿಜ
ಗಂ ನುತಿಸುತಿರಲಾಗಿ ಅಂದೊಸೆದೊಡೆಯಱಿಳ್ಕಂಗೆ ೪೯

ನಿಂಬಿಯಕ್ಕಂಗಾಗಿ ಏಳ್‌ದಿನ
ವಂಬಿಕಾಪತಿ ತನ್ನ ಪುರದವ
ಲಂಬದ ಕವಾಟಂಗಳಂ ನೆಱಿ ತೆಱಿದನಂದೊಲಿದು
ನಂಬಿ ಭಜಿಸುವ ಗೊಲ್ಲಳಂಗೀ
ತ್ರ್ಯಂಬಕಂ ಕೈಲಾಸದುರ್ಗಾ
ಡಂಬರದ ಕದಹುಗಳನಾಗಳೆ ತೆಱಿದು ಹುಗಿಸಿದನು ೫೦

ಮತ್ತೆ ಇನ್ನೊಬ್ಬಂಗೆ ಕದವಂ
ಕೃತ್ತಿವಾಸಂ ತೆಱಿದನೆಂಬುದು
ಕೃತ್ರಿಮವಲಾ ಎಮ್ಮ ಆಜ್ಞೆಯನಿನಿತು ಬಗೆಗೊಳ್ಳ
ಒತ್ತರಿಸಿ ನಡುವಿರುಳು ಚೋರಕ
ವೃತ್ತಿಯಲಿ ಬಂದಾವ ಪರಿಯಲಿ
ಚಿತ್ತಜಾರಿಯ ನಿಳಯದೊಳು ಪೊಕ್ಕೆಂದಿನಂದದಲಿ ೫೧

CC-0. Jangamwadi Math Collection. Digitized by eGangotri

ಮಾಡುವಟಮಟದರ್ಚನೆಗಳಂ
ಮಾಡಿ ಹೋದನು ತೊಲಗದಾತನು
ಮಾಡುತಿರ್ದಡಿದಕ್ಕೆ [1]ಮುಂದಣ[2] ಕಾರ್ಯವೇನಹುದೊ
ಗಾಡಿಗನಿರಲೀಸಲಾಗದು
ಬೇಡ ಬೇಡಾವಂದದಿಂದೀ
ಬೀಡಿನಲಿ ಹೊಲಿವಡಿಸಿಯತ್ತಲೆ ತಗುಳುವುದು ಮತವು ೫೨

ಭಿಕ್ಷೆಗಳ ನಾವಿಕ್ಕದಿದ್ದಡೆ
ಈ ಕ್ಷಣವೆ ಹೋದಹನೆನುತ್ತಪೆ
ಭಿಕ್ಷೆಗಳನಾರುಂ ಮನೆಗಳಿಂದಿಕ್ಕದುದನಱಿದು
ಉಕ್ಷವಾಹನಭಕ್ತನೋಹಿಲ
ನಕ್ಷಯೋದಕದಳಕಣಾನಿಲ
ಭಕ್ಷಣೋಪ[ಪ]ಲಕಂದಮೂಲಸಭಕ್ಷಣಂಗಳಲಿ ೫೩

ಭಕ್ತರಂದು ತಪಂಗಳಂ ಸ
ದ್ಭಕ್ತಿರತಿಯಲಿ ಮಾಡಿ ಕರುಣಾ
ಯುಕ್ತನಂ ಪರಮೇಶ್ವರನನರ್ಚಿಸಿದರಂತಾಗಿ
ವ್ಯಕ್ತವಾಗಲು ಪ್ರಾಣವಸ್ಥೆ[3]ಗೆ
ಮುಕ್ತನಾದಡೆ ತಲೆ ಪಱಿದಡಂ
ಭುಕ್ತಿಗೋಸುಗ ಕಳವಳಿಸುವರೆ ಮುಕ್ತಿಕಾಂಕ್ಷಿತರು ೫೪

ಅವಿಚಲಿತಭಕ್ತಿಪ್ರಯುಕ್ತನು
ಜವಗೆಡುವನೇ ಶಂಕಿಪನೆ ಕೊಂ
ಕುವನೆ ಸಡಿಫಡಯೆಂಬನಲ್ಲದೆ ಭಕ್ತನಂತಾಗಿ
ಅವನಿಯೊಳು ಭುಕ್ತ್ಯರ್ಥಮಾಗಿ ಕ
ಳವಳಿಸುತಮಿರ್ದಡೆ ನಗನೆ ತಾಂ
ಶಿವನುಮಾಧವನಭವನಕ್ಷಯನಂತುಮಲ್ಲದೆಯು ೫೫

೧–೨ ಮೇಲಣ (ಮ). ೩ ಟ್ಟ (ಧ, ಪ).

CC-0. Jangamwadi Math Collection. Digitized by eGangotri

ಹಿಂಗದಾಗಳು ಮಾತ್ಸ್ಯಕಾಸ್ತ್ರ
ನ್ಯಂಗಳಂ ಪೀರ್ದಂದಲರ್ದ ತ
ದಂಗವಲ್ಲಾ ಇದು ಬಳಿಕ್ಕಿನಿತಿನಿತು ಬೆಣ್ಣೆಯಲಿ
ಪೊಂಗಿದುದರವಲಾ ಪರಿಮಿತಾ
ನ್ನಂಗಳಂ ದಿನದಿನದೊಳುಂಡು ಸು
ರಂಗಿಸುವ ತನು ತಾನಿದಲ್ಲಾ ತಿಳಿದು ನೋಡಿದಡೆ ೫೬

ಎಹಗೆ ಮನವಾಕಾಂಕ್ಷಿಸುವುದೊಡ
ಲಹಗೆ ಬೆಳೆದಪ್ಪುದಶನದಿಚ್ಛೆಗೆ
ಎಹಗೆ ಮನದಾಕಾಂಕ್ಷೆ ಕುಂದುವುದಶನದಿಚ್ಛೆಯದು
ಆಹಗೆ ಕುಂದುವುದಾಗಿ ಸಂತತ
ವೆಹಗೆ ಪರಿಣಾಮಿಸಿಕೊಳುತ ತನು
ವಹಗೆ ಕಾಮಿಸುವುದೆ ಸುರಂಜಿಪ್ಪುದಲ್ಲದೇ ಬಳಿಕ ೫೭

ಕಪಟಚಿತ್ತರು ಮಾಡುವಂತಾ
ಕುಪರಿಗಳಿಗಂಜುವೆನೆ ಸೌರಾ
ಷ್ಟ್ರಪತಿಸೋಮೇಶ್ವರನ ಕೃಪೆಯುಂಟಾದುದಕೆ ಫಲವು
ವಿಪುಳವಾಯಿತ್ತೆನಗಿದುತ್ತಮ
ಸುಪಥವಾದುದು ಮುಂದೆ ನಾ ಮಾ
ಣ್ಬಪೆನೆನುತ್ತಿರೆ ತಾನೆ ತಿರಿದುಂಬೂಟ ಉಡುಗಿತ್ತು ೫೮

ಕಡುಚಿಲುಪನಾಯ್ತಸಿಯ ಕಲ್ಲಂ
ಮಡಗಿಕೊಂಡಡೆ ಮದುವೆ ಕೆಡುವುದೆ
ಕೆಡಕುತನದಿಂ ತಿರಿವುದಂ ಮಾಣಿಸಿದಡೇಂ ಭಕ್ತಿ
ಕೆಡುವುದೇ ಉದರಾರ್ಥಮಾಗಲು
ಬಿಡದೆ ತಿರಿಕಗೆ ಹೋಗೆನೆನುವುದು
ಮೃಡನಡಿಗಳಂ ನೆನವುದರಿಂದೇ ಕೇರಿಕೇರಿಯಲಿ ೫೯

---

೧ ಹು (ಕ, ಚ, ಧ, ಬ).

CC-0. Jangamwadi Math Collection. Digitized by eGangotri

ಮನೆಮನೆಗೆ ತಪ್ಪದೆ ನಡೆವುದೀ
ಶನ ಗುಡಿಗೆ ಬಳಸುವುದಹುದೆ ದಿನ
ದಿನದೊಳಾತ್ಮಾರ್ಥಕ್ಕೆ ಪರರನ್ನವನೆ ಬೇಡುವುದು
ಘನಶಿವನ ಸದುಭಕ್ತಿಯುಂ ಬೇ
ಳ್ಪನುವಹುದೆ ಪಲವನ್ನವಂ ಭೋ
ರನೆ ತಹುದದೇಂ ಕುಸುಮಪತ್ರೆಗಳಂ ತಹುದದಹುದೆ ೬೦

ಆ ವಿರಳಭುಗ್ರಕ್ತಿ ಶಿವಪದ
ಭಾವನಾಮೃತಭುಕ್ತಿಯಹುದೇ
ಆವಗಂ ಬಾಹ್ಯಾಂತರಾರ್ಪಿತಸುಮಹದವಧಾನ
ಈ ವಿದಿತ ಹಿತಸನ್ನಿಹಿತನಿರ
ತಾವಿರತಸಂಜನಿತಸೌಖ್ಯವ
ನೀವುದಿದು ಕಾರಣವಸಮಭಕ್ತಿಕ್ರಿಯೋಕ್ತಿಯಲಿ ೬೧

ಸುಪ್ರಕಟಸತ್ಪ್ರಾಣಲಿಂಗಮ
ಹಪ್ರಸಾದಸುಧಾಸರಸಸಾ
ರಪ್ರಶಸ್ತಸದಾನುಭವಸಂಪ್ರಾಪ್ತಿಯಿಲ್ಲದಿಹ
ಕುಪ್ರತರ್ಕಿಗನಾವನಾದಡೆ
ಭೂಪ್ರಚರನಾಗೆಯ್ದಿ ತಿರಿತಿಂ
ಬ ಪ್ರಸಿದ್ಧನಶುದ್ಧನಲ್ಲದೆ ಭಕ್ತನೆಂತಹನು ೬೨

ಏನುತ ಕಿಂಚಿತ್‌ಪ್ರಹಸಿತಾನನ
ವನಜನಾಗುತ ದಕ್ಷಿಣಾರ್ಧ
ಕ್ಕನುಗೊಳಲದೇಕಿನ್ನು ತಾನಾವುದನನುಭವಿಸಲು
ಮನುಜನಸುವಮೃತತ್ವವಂ ಪಡೆ
ದನುವಹುದು ಮೇಣಾವುದಂ ಬಿಡ
ದನುಭವಿಸುವವನೊಂದುವಂ[೧] ಸಿದ್ಧಪ್ರಸಾದಸುಖಿ ೬೩

---

೧ ವರ (ಪ).

CC-0. Jangamwadi Math Collection. Digitized by eGangotri

ಆವುದಂ ಭೋಗಿಸುವನಾತನ
ಭಾವಮತಿಯತಿವಿಶದವಾಗಿಹು
ದಾವುದಂ ಭೋಗಿಸುವನಾತನ ಮನದೊಳಿಹನಭವ
ಆವುದಂ ಭೋಗಿಸುವನಾತನ
ಸೇವೆ ಜನನುತಿಗೇಱಿ ಮೆಱೆದಪು
ದಾವುದಂ ಭೋಗಿಸುವನಾತನ ಹೃದಯವೀಶನದು ೬೪

ಆವುದಂ ಭೋಗಿಪನವನ ಕವಿ
ತಾವಿವೇಕಂ ರಂಜಿಪುದು ಧರೆ
ಗಾವುದಂ ಭೋಗಿಸುವನಾತನು ಮನುಜರೆಲ್ಲರೊಳು
ದೇವ ಎನುತಂ ನುತಿಸಿಕೊಂಬನು
ಪಾವನಪ್ರದವೆನಿಸಿದ ಮಹಾ
ದೇವ ನಿರ್ಮಾಲ್ಯವನೆ ಮೆಲಿದಾಚರಿಸುವನುದಿನವ ೬೫

ಮೂಲ್ಯಪತಿ ಕಲ್ಯಾಣಯುಕ್ತಪ
ಮೂಲ್ಯವತಿಹೃತ್ಕಲ್ಯಪಸದೃಶ
ಕಲ್ಯತತ್ವಾತ್ಮಕವಮಳಸುಜ್ಞಾನಪೀಯೂಷ
ಕುಲ್ಯವಾದ್ಯರ ಲಾಲ್ಯವನಘರ
ತಾಲ್ಯವಕ್ಷಯ ಮೂಲ್ಯವಭವ
ಸ್ಥೈಲ್ಯವಹ ಕೈವಲ್ಯವೀ ನಿರ್ಮಾಲ್ಯವೆನಲೆಸೆದು ೬೬

ಕರಮೆಸೆಯೆ ಮುನ್ನಿನ ದಿನಂ ಶಂ
ಕರನನರ್ಚಿಸಿ ಮಱುದಿವಸ ಪರಿ
ಹರಿಸಿದಾ ಪತ್ರೆಯನಿನಿತನಾವೋಹಿಲನು ತಂದು
ನಿರತದಿಂದದನೇ ಪ್ರಸಾದ
ಸ್ಫುರಣಭಾವದಿನನುಭವಿಸುತಿರೆ
ದುರುಳರಪ್ಪಾ ಗೌಳತಾಪಸರೀ ಹದನನಱಿದು ೬೭

CC-0. Jangamwadi Math Collection. Digitized by eGangotri

ನುಡಿದರಿಂತೆಂದೀ ಪರಿಯೊಳುಂ
ಮಡಿಯನೀತನು ಹೋಗನಿಲ್ಲಿ
ರ್ದಡಸಿಕೊಂಡಿರ್ದಹನು ಭಿಕ್ಷೆಯು ಹುಟ್ಟದಿರ್ದಡೆಯು
ಗಡಣಿಗೊಳ್ಳನು ಪತ್ರೆಯಂ ತಿನ
ತೊಡಗಿದನು ಬದುಕಿದಹನಿಂತಾ
ದಡೆ ಬಳಿಕ್ಕಾ ಪತ್ರೆಯೆಲ್ಲವ ಸುಡುವೆವಡಿಗಡಿಗೆ ೬೮

ಇಲ್ಲಿ ಭಕ್ಷಿಸಲೊಂದುವುಂ ಮು
ನ್ನಿಲ್ಲದಿದ್ದಡೆ ತಾನೆ ಹೋದಪ
ನಲ್ಲದಡೆ ಸತ್ಕಹನು ನಿಮಿಷದೊಳೀ ಉಪಾಯಕ್ಕೆ
ಎಲ್ಲರನುಮತವೆನುತ ಪತ್ರೆಯ
ನೆಲ್ಲವಂ ಕೂಡಿಕ್ಕಿ ತಾವದ
ಱಿಲ್ಲಿ ಅನಲವನಿಕ್ಕಿ ತಪಸಿಗಳಾಱುತಂ ಸುಡಲು ೬೯

ಪತ್ರೆಯಂ ನೆಱಿ ಸುಟ್ಟ ಭಸಿತಂ
ನೇತ್ರಗೋಚರವಾಗೆಯಚಲಿತ
ಗಾತ್ರನೋಹಿಲನುರ್ಬಿ ತಾನಿದು ಮುನ್ನ ನಿರ್ಮಾಲ್ಯ
ಚಿತ್ರವದುವೆ ವಿಭೂತಿ ಮುಂದೆ ಪ
ವಿತ್ರ್ಯವಪ್ಪೀ ಪುಣ್ಯವೆನಗೆ ಧ
ರಿತ್ರಿಯೊಳು ದೊರಕಿದುದಲಾ ಸೌರಾಷ್ಟ್ರಸೋಮೇಶ ೭೦

ಜನನಹರ ಮುನಿದೊದ್ದಡಂ ಹಾ
ಸಿನ ನಡುವೆ ಬಿದ್ದಂದವಾಯಿ
ತ್ತೆನಗೆ ಉಪ್ಪೊಕ್ಕಿಮ್ಮಡಿಸಿದಂತಾಯಿತೆನ್ನೊಡೆಯ
ಇನಿದು ಪಾಯಸದೊಳಗೆ ಘೃತವೊ
ಕ್ಕನುವಿದಾಯಿತು ತೆಲ್ಲಿಗಂಗೆ
ಳ್ಳನುದಿನಂ ಬೆಳೆದಂದವಾಯ್ತು ಮದೀಶ ಸೋಮೇಶ ೭೧

೧–೨ ವೆನಿಸಿ (ಪ).

CC-0. Jangamwadi Math Collection. Digitized by eGangotri

ಪುದಿದ ಪಶುಗಳಿಗೊಲಿದ ಶಾವಿನೊ
ಳೊದಗಿ ಹುಲು ಮೊಳೆದಂದವಾಯಿತು
ಮುದದೊಳರ್ಥಿಸಿ ದೂರವಾಡಲು ಪೋಪ ತೀರ್ಥವದು
ಇದಿರುವಂದಂತಾಯ್ತು ದೇವ ನೆ
ನೆದ ನೆನಪು ತಪೆ ಕೂಡಿದಂತಾ
ಮುದು ವರದಯೆನ್ನಿದ್ದ ವೇಷಕೆ ತಕ್ಕಶನವಾಯ್ತು ೭೨

ಓಳಿಯಿಂ ಶಾತಾತಪಸ್ಮೃತಿ
ಹೇಳುತಿಹ ಭಸ್ಮಾಸನಪ್ರತಿ
ಕೂಲವೆನಗಾದುತ್ತು ಮೇಣ್ ಶಾತಾತಪಸ್ಮೃತಿಯ
ಮೂಲಮಾಗಿಹ ಭಸ್ಮಶಯ್ಯಾ
ಲೋಲಸಂಗತಿಯಾಯಿತದಱಿಂ
ಮೇಲೆ ಭಸ್ಮಚ್ಛನ್ನಸಿದ್ಧಿಯದಾಯಿತೆನಗಭವ ೭೩

ಅನುನಯಪ್ರಿಯದಿಂ ತ್ರಿಯಾಯುಷ
ಮೆನೆ ಯಜುಸ್ಸೂಕ್ತ್ಯರ್ಥವೊದಗಿ
ತ್ತೆನಗೆ ತಾ ಕಾಲಾಗ್ನಿರುದ್ರೋಪನಿಷದುರುವಚನ
ಅನುವಿನೊಳು ಹೇಳುತ್ತಮಿಹ ಪಾ
ವನವಿಭೂತಿಯ ಘನಮಹತ್ವತೆ
ಯೆನಗೆ ಸಿದ್ಧಿಸಿತಯ್ಯ ಸೌರಾಷ್ಟ್ರೇಶ ಸೋಮೇಶ ೭೪

ಮೋದದಿಂ ಜಾಬಾಲಕೈವ
ಲ್ಯಾದಿ ಶಾಖೆಗಳೊಳ್ ಪ್ರವರ್ಧಿತ
ವಾದ ಭಸ್ಮೈಶ್ವರ್ಯಪದವಿ ಸಮಗ್ರವಾಯ್ತೆನಗೆ
ವೇದಿಸಲು ಸರ್ವಂ ಹವಾಯೆನು
ತೋದುತಮಿದಂ ಭಸ್ಮವೆಂಬಾ
ಪಾದಿತಾಥರ್ವೋಕ್ತಿ ಕಾಮಿತಸಿದ್ಧಿಯಾಯಿತ್ತು ೭೫

೧ಗ (ಕ, ಬ). ೨ವ (ಮ).

CC-0. Jangamwadi Math Collection. Digitized by eGangotri

ಪರಮಶೈವ ಸ್ಕಂದ ಲೈಂಗ್ಯಾ
ವಿರಳ ನಾರದ ಮತ್ಸ್ಯ ಕೂರ್ಮ
ಸ್ಫುರಿತ ವಾಮನ ಗಾರುಡ ಬ್ರಹ್ಮಾಂಡ ವಾರಾಹ
ನಿರತ ಮಾರ್ಕಂಡೇಯ ವೈಷ್ಣವ
ವರ ಭವಿಷ್ಯದ್ಭಾಗವತ ವಿ
ಸ್ತರಣಪದ್ಮಾಗ್ನೇಯ ಬ್ರಾಹ್ಮ್ಯಬ್ರಹ್ಮಕೈವರ್ತ ೭೬

ಸಾಂಗದಿಂದಷ್ಟಾದಶಪುರಾ
ಣಂಗಳೊಳಿಸೆವ ಭಸಿತಸೇವಾ
ಸಂಗವಾಯಿತ್ತೆನ್ನ ಜನ್ಮವು ಸಫಲವಾಯಿತ್ತು ೧
ಮಂಗಳೋದಯನಿಳಯವಾಯ್ತೆ
ನ್ನಂಗವಾಂ ಬದುಕಿದೆನೆನುತ್ತ ಆ
ಭಂಗಭಕ್ತನು ಹರುಷರಸಶರನಿಧಿಯೊಳೋಲಾಡಿ ೭೭

ಆ ಸಿತಭಸಿತವಿನಿತನೊಡಲಲಿ
ಪೂಸಿಕೊಂಡದನಿನಿತನಾತ್ಮೋ
ಲ್ಲಾಸದಿಂ ಸೇವಿಸುತ ಬಳಿಕುಳಿದಿರ್ದ ಭಸ್ಮವನೆ
ಹಾಸಿಕೆಯೆ ತಾನಾಗಿವ್ಹೋಹಿಲ
ನಾ ಸದಾಶಿವನಂ ಭಜಿಸುತಿರೆ
ಈಸಟ್ಟಿಂದಿಂತಪ್ಪ ಚೋದ್ಯವ ನಾವಟ್ಟಿಯೆವೆನುತ ೭೮

ಇಳಿಯೊಳಿಲ್ಲದ ಯಂತ್ರತಂತ್ರಂ
ಗಳು ಜನಿಸಿದವು ನಮ್ಮ ಪಟ್ಟಣ
ದೊಳಗೆ ಪತ್ರೆಯನೆಯ್ದಿ ಸುಟ್ಟಾ ಭಸ್ಮವನೆ ತಿಂದು
ಅಳಿಯದೋಹಿಲನಿದ್ದಹಂ ಗಡ
ಒಲಿದು ಭಸಿತವನುಡುಗದಾಗಳು
ಮೆಲಿದೆಹೆಗೆ ಬದುಕುವನು ಸುಮ್ಮನೆ ತಾನಿರಲುಬಹುದೆ ೭೯

---

೧ ತೆನುತ (ಪ).

CC-0. Jangamwadi Math Collection. Digitized by eGangotri

ಭಸ್ಮವನೆ ತಿನುತಿದ್ದನಾದಡೆ
ಭಸ್ಮವಾಗನೆ ತಾನೆಯಾಗಳಿ
ಭಸ್ಮವನೆ ತಿನುತಿದ್ದಡಂ ಮಾಯೆಗಳೊ ಮದ್ದುಗಳೊ
ವಿಸ್ಮಯವು ತಾನಿದು ಕುಟಿಲಕುಹ
ಕಸ್ಮಯವೊ ಅಭ್ಯಾಸಯೋಗಾ
ವಿಸ್ಮರಣಸಾಧನೆಯೊ ಕಪಟಾರಾಧನೆಯೊ ಬಳಿಕ ೮೦

ಆವನಾದಡೆ ನೋಡಿ ಕರುಣದೊ
ಳೋವಿ ಅನ್ನವನಿಕ್ಕಲುಂಬನೊ
ಆವಗಂ ಕದ್ದೊಬ್ಬನುತ್ತರಸಾಧಕನು ಬಂದು
ಆವುದಾದಡೆ ತಂದುಕೊಟ್ಟಡೆ
ತೀವಿಕೊಂಬನೊ ತನುವಿನಾಪ್ಯಾ
ನಾವಸರಕಿಂತಪ್ಪುದೆಂದಿದಿ ನಿಶ್ಚಯಿಸಬಹುದೆ ೮೧

ಲಿಂಗಮೂರ್ತಿಯೊಳರ್ಚನಾಸ
ಕ್ತಂಗೆ ನಿದ್ರಾಹಾರಮೈಥುನ
ಸಂಗಭಯವಿಕೃತಂಗಳೆಂದುಂ ಹೊಂದದೆನುತಿಹರು
ಸಾಂಗದಿಂ ಸ್ವೇಚ್ಛೆಗಳು ತರುಣಕು
ರಂಗಧರಧರಭಕ್ತರಾಚಾ
ರಂಗಳಿಂತಹವೆಂದು ತತ್ತಾಪಸರು ವಿಧಿಸಲ್ಕೆ ೮೨

ಒಂದುದಿನವೋಹಿಲನರಣ್ಯ
ಕ್ಕೆಂದಿನಂದದೊಳೆಯ್ದಿ ಆಲ್ಲಿ ಸು
ಚಂದನದ ಸೆಕ್ಕೆಗಳನೊದವಿಸಿ ಪತ್ರೆಯಂ ಕೊಯ್ದು
ಒಂದು ಸೆಜ್ಜೆಯೊಳಿಕ್ಕಿ ಗುಗ್ಗುಳ
ವೊಂದು ತೊಲೆಯನಮರ್ಚಿ ಕಂಬಿಯೊ
ಳಂದಮಾಗಿರೆ ಪೊತ್ತುಕೊಂಡುರವಣಿಸಿ ಬರುತಿರಲು ೮೩

೧–೨ ತಿದು (ಥ, ಸ).

CC-0. Jangamwadi Math Collection. Digitized by eGangotri

ಒಂದು ದಸಿಯಂಗಾಲ ನಟ್ಟಡೆ
ನೊಂದು ನರಗಳು ಸುಕ್ಕ ತೆಗೆಯಲು
ನಿಂದು ನೆಲನಂ ಮೆಟ್ಟಿದಲ್ಲದೆ ನಡೆಯಬಾರದಡಿ
ಹಿಂದೆಸೆಗೆ ಕಾಲ್ ಮುದುಡಬಾರದು
ಮುಂದೆಸೆಗೆ ನೀಡಲ್ಕೆ ಬಾರದು
ಎಂದು ಕುಂದದೆ ಧೃತಿಗೆಡದೆ ದೃಢಮನದ ಬಲುಹಿಂದ ೮೪

ಅಡಿಯನೂ೧ಱುತ್ತಿನಿತು ದೂರಂ
ನಡೆದು ಬಾಗುತ್ತಿನಿತು ದೂರಂ
ನಡೆದು ಕುಂಟುತ್ತಿನಿತು ದೂರಂ ತುದಿಯ ಕಾಲಿಂದ
ನಡೆದು ವೋರೆಯೊಳಿನಿತು ದೂರಂ
ಮಡಹನೂಱಿನಿತಿನಿತು ದೂರಂ
ನಡೆದು ದಸಿ ನಟ್ಟಿರ್ದ ಪದದಲೆ ನಡೆದಿನಿತು ದೂರ ೮೫

ನಿಲ್ಲದಾತನು ನಡೆಯೆ ಮೇಗಾ
ಲಲ್ಲಿ ದಸಿಮೊನೆದೋಱಿಲೈಸಱಿಂ
ಳುಲ್ಲಸಿತಕರುಣಾರಸಾರ್ದ್ರೀಭೂತಚೇತಸನು
ವಲ್ಲಭರ ವಲ್ಲಭನು ಗೌರೀ
ವಲ್ಲಭಂ ದುರಿತಾರಿದುರ್ಜನ
ದುರ್ಲಭಂ ನಿಜಭಕ್ತರೋಮಕ್ಷೇಮಭಾವಿತನು ೮೬

ಅಂತು ಸಂಧಿ ೪೨ಕ್ಕಂ ಪದಗಳು ೨೩೩ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಱಿನಿತಿ (ಸ).

CC-0. Jangamwadi Math Collection. Digitized by eGangotri

ಸಂಧಿ : ೪೩

*

ಸೂಚನೆ : ದೇವದೇವನ ನಗರಿಗೋಹಿಲ
ದೇವನೊಬ್ಬನು[೧] ಹೋಹುದಿದು ಅರಿ
ದಾವುದೆನುತೆಯ್ದಿದನು ನಿಜಪ್ರಸಹಿತ ಗುರ್ಜರನು

ಶರಣನಿಧಿಸೌರಾಷ್ಟ್ರಸೋಮೇ
ಶ್ವರನ ನಿಶ್ವರಮೂರ್ತಿ ಶಬರೇ
ಶ್ವರನ ರೂಪಂ ಧರಿಸಿ ತಾ ಸಿದ್ಧಕ್ತಿ[೪] ಚಿಹ್ನೆಗಳು
ವೆರಸಿ ತೋಱಿಲು[೫] ಮಸಿಯಱುವೆಯಾ
ವರಿಸಿ ಬೆಳಗುವ ನೂತ್ನರತ್ನದ
ಪರಿಯೊಳಾಗಳು ಬೂದಿ ಮುಚ್ಚಿ ಮಿಱುಗುವನಲನಂತೆ ೧

ಕಪ್ಪುಹಿಡಿದ ಕಲಂಕಕಾಂಚನ
ದೊಪ್ಪದಂದದಿ ಕಾರ್ಮುಗಿಲ ಮಱಿ
ಯಪ್ಪಿನನವೊಲು ಶಬರಚರ್ಮಾವೃತನೆನಿಸಿ ಮೆಱೆದು
ತಪ್ಪದಡಿಯಿಡುವೆಡೆಯೊಳೆಡೆಗೆಡೆ[೧೦]
ಗುಪ್ಪರಿಸುತಾಘ್ರಾಣಿಸುತ ಹಿಂ
ದಪ್ಪಿ[೧೧]ಯಾಗಮ[೧೨]ಕುಕ್ಕುರಂಗಳು ಕೂಡಿ ಬರುತಿರಲು ೨

ಅಂದು ಕಾಮೋದ್ರೇಕದಿಂ ಮಱಿ
ಹೊಂದಿ ತನ್ನುವನಱಿಯದಿಪ್ಪರ
ವಿಂದಗರ್ಭನ ಮಸ್ತಕವನುದ್ದಂಡಚಾಪದಲಿ
ಸಂಧಿಸಿದ ಸರಳಿಂ ಪಱಿಯಲೆಸ
ಬಂದ ಶಬರೇಶ್ವರನೊ ಮುನ್ನ ಪ್ಪ
ಳಿಂದವೇಷದಿನಿಂದ್ರಕೀಲದೊಳಿರ್ದ ಶಶಿಧರನೊ ೩

---

*ರಾಗ : ಗುಂಡಾಕ್ರೀ (ಧ) ; ನಾದರಾಮಕ್ರೀ (ಪ) ; ವಸಂತಭೈರವಿ (ತ). ೧ನೆ (ಪ,ಮ) ೨ನೇ (ಪ). ೩–೪ ತದ್ಭಸ್ಮ (ಥ, ಧ, ಪ). ೫ ವ (ನ). ೬ ತು (ಧ, ನ, ಪ). ೭–೮ ದೊಪ್ಪವಂ (ನ) ; ವೊಪ್ಪನಿ (ಮ). ೯–೧೦ ಳೆಡಿಗಡಿ (ಧ). ೧೧–೧೨ ಶ್ರುತಿತತಿ (ಥ).

CC-0. Jangamwadi Math Collection. Digitized by eGangotri

ಉನ್ನತಾಸಮಭಕ್ತಿಯುಕ್ತನು
ಹೊನ್ನಿದೇವನು ತುಂಗಭದ್ರಾ
ಸನ್ನುತಾಂಬುವೆ ನೇಮವಾಗಿ ದಿನಂಪ್ರತಿಯೊಳೆಯ್ದಿ
ಚೆನ್ನಲರಿ ಪುಲಿಗೆಱಿಗೆ ತಂದಾ
ಮುನ್ನ ನೆಲಸಿದ ಸೋಮನಾಥ ೧ಜ
ಗನ್ನುತಿಗೆ ವಾಸಿಸುವ ಜಲದಿಂ ಮಜ್ಜನಕ್ಕೆಱಿದು ೪

ಚಿತ್ತವೊಸೆದರ್ಚಿಸುತಿರಲು ತೊಂ
ಬತ್ತು ವರುಷಂಗಳು ಸಲಲು ನೆಱಿ
ಮುತ್ತುದಲ್ಲಾ ದೇಹವೆನ್ನದಹಂಗೆ ವರ್ತಿಸುತ
ಮತ್ತೆ ಕಂಬಿಯೊಳೊಂದು ದಿನದಲಿ
ಹೊತ್ತುದಕವಂ ೨ೀಷ್ಟ್ರದಿಂದ ತ
ರುತ್ತ ಹಳ್ಳವನಾಚೆ ದಾಟಲು ಬೆನ್ನು ಮುರಿದಿರಲು ೫

ಬಿಡದೆ ಕಂಬಿಯನವಚಿಕೊಂಡೆ
ನ್ನೊಡೆಯ ಸೋಮಯದೇವ ದೇವ
ನ್ನೊಡಲಲಸುವಿಪ್ಪೈಸುದಿನ ನಾನೆನ್ನ ಸುವ್ರತವ
ಬಿಡೆನೆನುತ್ತಲ್ಲಿದ್ದು ಧೃತಿಯಂ
ಬಿಡದೆ ತೆರಳ್ದಪೆನೆನುತವುಂಕಿಸ
ಲೊಡನೆ ಹುಲಿಗೆಱಿಯರಸನಾ ಕ್ಷಣದೊಳಗೆ ಹರಿತಂದು ೬

ಹೆಗಲಮೇಲಣ ಕಂಬಿ ನಾಲ್ವೆರ
ಳುಗಳ ಹವಣಿಗೆ ೩ನೆಗೆದುಳಿ ಬರುತಿರೆ
ಜಗವಱಿಯಲೊಸೆದಿತ್ತ ಶಬರಾಕೃತಿಯ ಶಂಕರನೊ
ಹಗಲುಮಿರುಳುಂ ಚಿಂಚಿತಿಯರೊಡ
ನಗಲದೆಡೆಯಾಡುತ್ತ ಬಂದಿ
ಲ್ಲಿಗೆ ವಿಹರಿಸುತಮಿಪ್ಪ ಪರ್ವತಮಲ್ಲಿಕಾರ್ಜುನನೊ ೭

೧–೨ ಜಗನ್ನಿಧಿ (ಅ, ಡಾ, ಧ, ಪ, ಮ). ೩–೪ ಎಸೆದು (ಕ, ಥ, ಧ, ಪ, ಮ).

CC-0. Jangamwadi Math Collection. Digitized by eGangotri

ಎನಲೆಸೆದು ತಾನೊಬ್ಬನೆಯ್ತಂ
ದನುನಯದೊಳೋಹಿಲನನಾಲೋ
ಕನಗೆಯಿದುವಕಟಕಟ ನಿನ್ನಂಗಾಲು ದಸಿ ನಟ್ಟು
ನಿನಗೆ ನಡೆಯಲು ಬಹುದೆಯಿಂತಾ
ಮನದಗಿವಸ್ಥಿಯನಱಿಯಿವಾವ ಭು
ವನದೊಳೀತಕೆ ಮಾಡಿಕೊಳಲೀಯಾತ್ಮಘಾತಕವ ೮

ಬಡವೊಡಲು ನಾನಿದಱ ಬಿಗುಹಂ
ಸಡಿಲಿದಡೆ ನೀ ಮತ್ತೆ ಮುಂದ
ಕ್ಕಡಿಯನಿಡಬಾರದೆ ನಿಲುವೆಯಿಹಗಲ್ಲದೇ ನಿನಗೆ
ಮೃಡನೊಲಿಯನೇ ಕಟಕಟಾ ಛಲ
ವುಡುಗು ದೋಷವು ನೋಡಲಾಗದು
ಪೊಡವಿಯೊಳು ಕಂಬಿಯನಿಳುಹಿಕೋ ನಿಲ್ಲು ನಿಲು ಭಕ್ತ ೯

ಕಿತ್ತುಕೋ ನೀನಾದಡಂಜದೆ
ಕಿತ್ತುಕೊಳಲಂಜಿದಡೆ ದಸಿಯಂ
ಕಿತ್ತು ಕಳೆವೆನು ತೋಱಿಡಿಯ ನಾನಾದಡೆನುತಾತ
ಹತ್ತಿರಿಗೆ ಬರಲೊಡನೆ ಹೋ ಹೋ
ಇತ್ತ ಬಂದಿರು ಶಬರವರನೀ
ನತ್ತಲಗಲಗಲೆನ್ನ ಕಾಲಂ ಮುಟ್ಟಬೇಡಯ್ಯ ೧೦

ಮುಟ್ಟುವುದು ನಿನ್ನದು ಮರುಳುತನ
ಮುಟ್ಟಲೆಂತಹುದೆನ್ನ ಕಾಲಂ
ಮುಟ್ಟಬಹುದಿದು ಮುಟ್ಟಬಾರದಿದೆಂದು ನೀನಱಿಯ
ಧಿಟ್ಟ ಜೆಂಬನೆನಲ್ಕೆ ಬಹುದೇ
ನೆಟ್ಟನೀಶ್ವರಭಕ್ತನಂ ಕಾಲ್
ಮುಟ್ಟಿಸಿದ ಮಾತ್ರದೊಳೆ ನಿನಗತಿ ದ್ರೋಹವಹುದಲ್ಲ ೧೧

೧–೨ ಬಲುಮೆ (ಕ, ನ, ಬ, ಮ).

CC-0. Jangamwadi Math Collection. Digitized by eGangotri

ಶಿವನ ಕಂಬಿಯನಾಗಳುಂ ಮು
ಟ್ಟುವ ಕರಂಗಳಿಗಿಂತು ನಾಂ[೧] ಮು
ಟ್ಟುವುದು ಮುನ್ನವೆ ತಪ್ಪು ಮಧ್ಯದೊಳಿಳುಹುದಿದು ತಪ್ಪು
ಜವವಳಿಯಲಿಂತಾದಡಂ ಶಿವ
ಶಿವಯೆನುತ ನಡೆಯಂ ನಡೆವ ನಾ
ನವನಿಯೊಳಗೆನಲೋಹಿಲಂಗಾ ಶಬರನಿಂತೆಂದ ೧೨

ಭಲರೆ ಸಾಹಸಪುರುಷನಹೆ ದೇ
ಗುಲಕೆ ಸಾರದೆ ಹೆಗಲ ಕಂಬಿಯ
ನಿಳುಹದೆಲ್ಲಿಯುಂ ನಿಲ್ಲದಡಿಯಿಡಬಾರದಿಂತಪ್ಪ
ಬಲಿದವಸ್ಥೆಯೊಳೆಯ್ದಿ ಸಂಕಟ
ಗೊಳಲದೇತಕೆ ನಿನ್ನ ಮನಸಿನೊ
ಳಳವಡಿಕೆಯೆಹಗಹಗೆ ಮಾಡುವೆನಣ್ಣ ನೋಡೆನ್ನ ೧೩

ಕಾಲುಮುಟ್ಟಿದ ಹಾಂಗೆ ಕಿತ್ತಡೆ
ಸಾಲದೇ ತಂಡಸದಿನೊಯ್ಯನೆ
ಕೀಳುವೆಂ ನೀ ನೆಮ್ಮಿಕೋ ಬಂದೀ ಮರನನೆನುತ
ಕೀಲಿಸಿದ ಪಾದದ ದಸಿಯನನು
ಕೂಲಪಹ ತಂಡಸದಿನಾಗಳೆ
ಕೀಳಲೊಡನಾರೋಗಿಸಿದ ತಪ್ಪಸಿತವೊಡಲೊಳಗೆ ೧೪

ಚೀರದಲಿ ನೆಱಿ[೩] ತುಂಬಿದಂ[೪]ತಿರೆ[೫]
ಪೂರವಿಸಿ [೬]ಬುದಿ[೭]ಲೆನಿಸಿ[೮] ಭಸಿತದ
ಧಾರೆ ಪೊಱಮಡೆ ಜೀರ್ಕೊಳವೆಯಲಿ ಚಿಮ್ಮಿದಂತಾಯ್ತು
ಆ ರಮಾಕರಮೂರ್ತಿ ಮನದೊಳು
ಹಾರವಿಸಿ ನೀ ಬಸವಳಿಯದಿರು
ಧೀರನಾಗೋಹಿಲಯೆನುತ ಸಂತೈಸಿ ಕರುಣದಲಿ ೧೫

---

೧ ತಾಂ (ನ). ೨–೩ ದದಿ (ನ). ೪–೫ ಭುಗಿ (ಬ). ೫–೬ ಲೆನುತ (ನ).

CC-0. Jangamwadi Math Collection. Digitized by eGangotri

ಭಸಿತವುಗುತಿಪ್ಪಡಿಯ ರಂಧ್ರದೊ
ಳೊಸೆದು ಧಿಕ್ಕನೆ ತೆಗೆದೆಲೆಗಳಲಿ
ಮುಸುಕಿ ಬಂಧಿಸಿ ಕಟ್ಟುಗೊಳಿಸಿ ಬಲಿಷ್ಠಪಂ ಮಾಡಿ
ನಸುನಗುತ ನೀನಿನ್ನು ನಡೆ ಹೋ
ಗಸಮಸೋಮೇಶನು ನಿನಗೆ ಕರು
ಣಿಸುವನೀಮೋಹಿಲಯೆನುತ ಶಬರಂ ಮಾಯವಾಗಿರಲು ೧೬

ಪುರದ ಸೋಮಯನೆನ್ನ ಮೇಲಣ
ಕರುಣದಿಂದೀ ಮೂರ್ತಿಯನೆ ತಾ
ಧರಿಸಿ ಬಂದನವಲ್ಲದೇ ಸಾಮಾನ್ಯಶಬರಂಗೆ
ಆರಿದೆನಿಸಿದಿಂತಪ್ಪದೃಶ್ಯಾ
ಕರಣಶಕ್ತಿಯು ನಿರತ ಸದಯಾ
ಭರಿತಭಾವನೆಯುಂಟೆಯೆನುತಂ ನುತಿಸುತೋಹಿಲನು ೧೭

ಬಂದನಿತಱಿಂದಿಂದುಶೇಖರ
ನಿಂದೆ ಕವಹುಗಳಂ ತೆಗೆಸಿ ಹೊ
ಕ್ಕಿಂದಿನಂತರ್ಜನ ವಿಧಾನಕ್ರಿಯೆಗಳಂ ಸಲಿಸಿ
ಹೆಂದವಗಲಿಹ ಧೂಪಪಾತ್ರೆಯೊ
ಳೊಂದಿಯನಲನನುರಿಗೊಳಿಸಿ ನಲ
ವಿಂದ ಘಂಟೆಗೆ ಪೋಪೆಡೆಯೊಳಾ ಗೌಳತಪಸಿಗಳು ೧೮

ಅನಿತು ಗುಗ್ಗುಳವಂ ಮಡಗಲೊಡ
ನಿನಿತಱಿಂದೋಹಿಲನು ಘಣಘಣ
ಯೆನುತ ಘಂಟೆ ಕರಾಗ್ರದಲಿ ಮೊರೆಯಲ್ಕೆ ನಡೆತಂದು
ಘನತರದ ಮಹಿಷಾಕ್ಷಿಗುಗ್ಗುಳ
ವಿನಿತುವುಂ ತಾನಲ್ಲಿ ಕಾಣದೆ
ಮನವಿಳಿಯಲೇಕಿದಕೆ ಸೋಮೇಶನ ನಿರೂಪವಿದು ೧೯

೧–೨ ಸಿದ (ಧ. ನ. ಪ).

CC-0. Jangamwadi Math Collection. Digitized by eGangotri

ತಾನೆಯೆಲ್ಲಾ ಇನ್ನು ಗುಗ್ಗುಳ
ವೀ ನಿಟಿಲನಯನಂಗೆ ಈ ಕಾ
ಲಾನುಕೂಲಕ್ಕೆನುತ ನೋಡಲು ಮುಂದೆ ಧೂಪಾಗ್ನಿ
ತಾನೊಡನೆ ಕೊನರುತ್ತ ಕನಲುತ
ಮಾನಿತಪ್ರಭೆ ಥಳಥಳಿಸುತಸ
ಮಾನವಾಗುತ ಕೆಂಡವುದುರುತ ಕಿಡಿಯನುಗುಳುತ್ತ ೨೦

ಉಬ್ಬುತುಪರಿಗೆ ಧಗಧಗಿಸುತಡು
ಗಬ್ಬುಗಳನಾಹುತಿಗೊಳುತ್ತಂ
ಕೊಬ್ಬುತಾವರಿಸುತ್ತ ಕಡುಮಿಂಚುತ್ತ ಮಿಟಿಗುತ್ತ
ಹೆಬ್ಬೊಗೆಯನಡಗಿಸುತ ಪಿರಿಯುರಿ
ಹಬ್ಬುತಡರುತ ಭಾಳನೇತ್ರನ
ನಿಬ್ಬರದ ಭಾಳಾಂಬಕಾಗ್ನಿಗೆ ಸಮವೆನಿಸುತಿರಲು ೨೧

ಅದಱಿ ಶಕೆಯಂ ಕಂಡು ಬೆಚ್ಚದೆ
ಬೆದಱಿದಂಜದೆ ಶಿವನಗದಡಿದಳು
ಕದೆ ಕಳವಳಿಸದುಬ್ಬುಗೆಡದಡಿಯಿಡದೆ ಹಿಂದಕ್ಕೆ
ಪದವನಾಶ್ರಯಿಸದೆ ಛಲವನಿಳಿ
ಯದೆ ಮುಳಿಯದನ್ಯರ್ಗೆ ಧೃತಿ ಸಡಿ
ಲದೆ ಫಲವನರ್ಥಿಸದೆ ತಾಂ ಸೋಲದೆ ಶಿವಂಗಾಗ ೨೨

ವರದ ಸೋಮೇಶ್ವರನೆ ನೀನವ
ಧರಿಸು ಮತ್ತನುಗುಗ್ಗುಳವನವ
ಧರಿಸುವುದಕೆ ಮಹಪ್ರಸಾದಂ ನಿಮಗೆ ಮುನ್ನೀವ
ಸರಸಮೃದುಮಹಿಷಾಕ್ಷಿಧೂಪದ
ಪರಿಮಳದ ಪರಿನಾಳಿದಿರ್ದಡೆ
ನಿರತವೆನ್ನ ದೃಢವ್ರತಕ್ಕಿದು ಭಂಗವಹುದೆನುತ ೨೩

೧ನಾ (ಕ, ಥ, ನ, ಬ, ಮ). ೨–೩ ಮಸಮಸಗ (ಮ). ೪ಗಾ (ಮ).

CC-0. Jangamwadi Math Collection. Digitized by eGangotri

ಅಂದು ಧೂಪದ ಮಾಚಿದೇವನ
ಮಂದಕೀರ್ತಿ ವಿವೈಕ್ಯಮಾರ್ಗಾ
ನಂದವರ್ತಿ ದಿನಂಪ್ರತಿಯು ಮಹಿಷಾಕ್ಷಿಯೊಪ್ಪಲವ
ತಂದು ಮೂಱಿವಸರದೊಳುಂ ಬಾ
ಲೇಂದುವಮೌಳಿಗೆ ಕೊಡುತಿರಲು ಮ
ತ್ತೊಂದುದಿನವೆಂತುಂ ದೊರಕದಿದ್ದಡೆ ಕಳವಳಿಸದೆ ೨೪

ಹಿಂಗದುಬ್ಬುತ ತನ್ನೊಡಲ ಖಿಂ
ಡಂಗಳಂ ಕೊಯಿಕೊಯಿದು ಸಾಂಗೋ
ಪಾಂಗವಾಗಿರಲೊಪ್ಪಲೊಪ್ಪಲವಂ ತ್ರಿಸಂಧ್ಯೆಯಲಿ
ಲಿಂಗಕನುರಾಗದಿ ಸಮರ್ಪಿಸು
ವಂಗದಲಿ ಮಹಿಷಾಕ್ಷಿಧೂಪದ
ಸಂಗಪರಿಮಳವಲ್ಲದೇ ಬೇಱಿಂದು ನಾಱಿದಡೆ ೨೫

ಪರಿಮಳಿಸದಡೆ ಚಂದವಳಿದಡೆ
ವಿರಸವಾದಡೆ ಬೇಱೆ ಕಂಪಾ
ವರಿಸಿದಡೆ ತನುವಿನ ನರಂಗಳು ಸುಕ್ಕತೆಗೆಿದಡೆಯು
ಹರಣವದಿರಿದಡೊಡಲು ಕಪ್ಪಂ
ಕುರಿಸಿದಡೆ ಜಿಗಿಿಗುಂದಿದಡೆ ಿಮೊಗಳ
ದಿರಿಗಿದಡೆ ಚರ್ಮಾಸ್ಥಿಗಳು ಮೇಣ್ ಕರಗದಿದ್ದಡೆಯು ೨೬

ಹೊಂಗಿ ಪೈತ್ಯಶ್ಲೇಷ್ಮತತಿ ರಂ
ಧ್ರಂಗಳಲಿ ಮುಸುಕಿದಡೆ ತನುರೋ
ಮಂಗಳಿನಿತುಂ ಕವು಼ಱುನಾತಡೆ ರಕ್ತವಣುಮಾತ್ರ
ಆಂಗವೊಡೆದುಕ್ಕಿದಡೆ ಮುನ್ನಿನ
ಹಾಂಗಿರದೆ ಹೊಗೆ ಛಾಯೆಗೆಟ್ಟಡೆ
ಇಂಗಳಂ ಕೊಳದಿದ್ದಡಂ ಮಿಕ್ಕುರಿವುತಿದ್ದಡೆಯು ೨೭

೧ರ (ನ). ೨ನ (ಥ, ಮ). ೩–೪ ಮುಖ (ಮ). ೫ ಮ (ಸ, ಬ).

CC-0. Jangamwadi Math Collection. Digitized by eGangotri

ಸಂದ ಗುಗ್ಗುಳದಿಂದ ವರ್ಣಂ
ಕುಂದಿದಡೆ ಹೊಗೆ ಹೊಕ್ಕು ಕಂಬನಿ
ವೊಂದೆರಡು ಬೀಳ್ದಿರ್ದಡಂ ತದ್ಧೂಪವದು ಶೈತ್ಯ
ವೊಂದದಿರ್ದಡೆ ಬಹಳಧೂಪಾ
ಮಂದಧೂಪ್ರುದಿ ಜನಿತ ಪರಿಮಳ
ಬಂದು ನಿಮಗಂ ತನಗೆ ತಾನರ್ಪಿತವದಾಗದಡೆ ೫೮

ಎನ್ನ ಒಡಲು ಸಮಾಪ್ತವಾಗದ
ಮುನ್ನ ಸವೆದಡೆ ದೃಷ್ಟಿಗಳು ವಿ
ಚ್ಛಿನ್ನವಾದಡೆ ನಿಮ್ಮಯಾಣೆ ಪ್ರಮಥರುಗಳಾಣೆ
ಬಿನ್ನಪವನವಧರಿಸೆನುತ ಮಹಿ
ಪೋನ್ನತಾಸಂಖ್ಯಾತಗಣವರ
ರಂ ನೆನೆದು ಸದ್ಭಕ್ತಿಯುಕ್ತಾಸಕ್ತನೋಹಿಲನು ೫೯

ಕಿಡಿಗಳುಗುಳ್ವಾ ಧೂಪಪಾತ್ರೆಯಿ
ನಡುವೆ ಕುಳ್ಳಿರೆ ಆಂಗಧೂಪದ
ಕಡುಪರಿಮಳಂ ನೆಗೆದು ಸೋಮೇಶ್ವರನ ಮೇಲಾಗ
ಅದರುತಿರಲಾ ಸಮಯದಲಿ ಮೃಡ
ನೊಡನೆ ಸನ್ನಿಧಿಯಾಗಿ ನಿಂದೊಲ
ವಡಸಿ ತಾನೋಹಿಲನನಾ ಗಣನಾಥನಂ ಸಾರ್ದು ೬೦

ಮೋಹಕರುಣಾಮೃತದೊಳದ್ದಿ ಮ
ಹಾಹಿಕಟಿಕಂ ತತ್‌ಪ್ರಸಾದಸು
ದೇಹನಂ ಮಾಡಿ ಪ್ರಿಯದೊಳಡಿಗಡಿಗೆ ಬಿಗಿದಪ್ಪಿ
ಓಹಿಲನನನವರತ ಸುಗುಣಾ
ದೋಹಲನನವಿಚಲಿತಭಕ್ತಿಕು
ತೂಹಳನನಘಸಂಗಕೋಳಾಹಳನನವಿರಳನ ೬೧

೧–೨ ತ್ರುಪ (ನ. ಮ).

CC-0. Jangamwadi Math Collection. Digitized by eGangotri

ಕಟ್ಟಿ ತನ್ನ ಪ್ರಮಥನಾಯಕ
ಪಟ್ಟಮಂ ಸಾರೂಪ್ಯಪದಮಂ
ಕೊಟ್ಟು ಮನ್ನಿಸಲೊಡನಿನಿತಱಿಂದೋಹಿಲನು ನೆನೆ[೧]ದು
ಅಟ್ಟಹಾಸಂ ಮೊಳೆಯೆ ಕೈಗಳ
ಮಟ್ಟ ಘಂಟೆಯ ಘಣಘಣರವಂ
ಮುಟ್ಟಿ ಎಣ್ಪೆಸೆಗಳಿಗೆ ಕೈಲಾಸಕ್ಕೆ ನಲ[೨]ವೇಱಿ ೩೨

ಆದಿದೇವನ ಕರುಣದಿಂ[೩]ದಪೆ[೪]
ಹೋದನವೆ ಆ ಹೋದನೆನಲಾ
ಹ್ಲಾದದಿಂ ಹೋಗುತ್ತಮಿರ್ದಹನತ್ತಲಿಂ ಮುನ್ನ
ಭೂದೆಸೆಗಳೊಳಗೆಯ್ದೆ ಮಂಗಳ
ನಾದವುಲಿಯಲು ಭಕ್ತತತಿ ಸ
ಮ್ಮೋದದಿಂದಾಡುತ್ತಿರಲು ಪುರಿಸೊಬಗು ಪೆಗ್ಗಳಿಸೆ ೩೩

ಧೂಪಧೂಮ್ನಂ[೫] ತೀವಿ ಪ್ರರವೊಳು
ವ್ಯಾಪಿಸಲು ಪರವಾದಿಗಳು ಸಂ
ತಾಪಿಸಲು ಜಯಜಯ ಉಘೇ ಉಘೆ ಚಾಂಗು ಭಲ ಎನಲು
ದೀಪಿಸಲು ಶಿವಭಕ್ತಿಸತ್ಪ್ರಭೆ
ಪಾಪಸಂಕುಳವಳಿಯೆ ದೂಪಕ
ತಾಪಸರು ತಾವೈಸಱಿಂ ಸಾಷ್ಟಾಂಗದಿಂ ನಮಿಸಿ ೩೪

ಶರಣು ಶರಣೋಹಿಲಮಹಾತ್ಮ
ಶರಣು ಶರಣೋಹಿಲಮಹಂತಾ
ಶರಣು ಶರಣೋಹಿಲಶಿವೈಕ್ಯಾ ನಿಮಗೆ ಶರಣಾರ್ಥಿ
ಶರಣು ಶರಣಾಗತಭಯಾಪರ
ಶರಣು ಶರಣಾಗತಶುಭಾಕರ
ಶರಣು ಶರಣಯ್ಯಾ ಶರಣಜನವಜ್ರಪಂಜರನೆ ೩೫

೧ಗೆ (ಥ, ನ, ಪ). ೨ ಲಿ (ಸ). ೩–೪ ದಿದೆ (ಅ, ಡಾ, ಥ, ಧ, ನ, ಪ). ೫ ಮ್ಮಂ (ನ).

CC-0. Jangamwadi Math Collection. Digitized by eGangotri

ಅಭಯಕರ ಶಾಂತಸ್ವಭಾವಾ
ಅಭಯಕರ ಸತ್ಯಾನುಭಾವಾ
ಅಭಯಕರ ಕಾರುಣ್ಯಭಾವಾ ದೇವ ಮದ್ದೇವ
ಅಭಯಕರ ವರವೀರಶೈವಾ
ಅಭಯಕರ ವಿಗತಾನ್ಯದೈವಾ
ಅಭಯಕರ ನರಲೋಕದೇವಾ ದುರಿತವನದಾವಾ ೩೬

ಎನುತ ಕೀರ್ತಿಸಲಾ ಪುರದೊಳಗೆ
ವಿನುತಭಕ್ತಿಪ್ರಯುಕ್ತನೋಹಿಲ
ನನಘಚಿತ್ತನು ಹೋಗುತಿರ್ದಹನಾಗಿ ಕೇಳಬಲೆ
ಘನರಜತಶೈಲಕ್ಕೆ ತಾನೊ
ಬ್ಬನೆ ಗಮನಿಸಲು ಕಂಡೆನಗೆ ನಗೆ
ಜನಿಸಿದುದು ತಾನೆಂತೆನಲು ನಿಶ್ಚಲಿತ ನಿಷ್ಕಯಲಿ ೩೭

ಅಪರಿಮಿತದತಿವೀರಘೋರಸು
ತಪವ ನಿರತದಿನೊಸೆದು ಮಾಡುತ
ವಿಪುಳವಪ್ಪ ದೃಢವ್ರತಂಗಳನಾಚರಿಸುತಿದಱಿ
ನೆಪದೊಳಿಂತಿಂತಪ್ಪವಸ್ಥಾ
ಕ್ಷುಪಿತನಾಗೀಶ್ವರನ ಕೈಯಲಿ
ಸುಪದಮಂ ಪಡೆದೊಬ್ಬನೇ ತಾನಿಂತು ಹೋದಹನು ೩೮

ಧರಣಿಯೊಳು ಕೆಲವೂರ್ಗಳಿಲ್ಲವೆ
ನರರನಿನಿಬರನೊಯ್ಯಲಿಲ್ಲವೆ
ಪುರದೊಳಗೆ ತನ್ನೊಡನೆ ಪೋಪ ಮನುಷ್ಯರೇನಿಲ್ಲ
ಹರಹರಾ ತನಗಿನಿತು ದೈನ್ಯಂ
ಬೆರಸಿ ಹೋಗಲದೇಕೆನುತ ಗು
ರ್ಜರಮಹೀಶನು ಮತ್ತೆಯುಂ ನಗಲೊಡನೆ ಹರುಷದಲಿ ೩೯

CC-0. Jangamwadi Math Collection. Digitized by eGangotri

ದೇವಿ ಎವೆಗಳನಿಡದೆ ನೋಡು
ತ್ತಾ ವಿಯತ್ತಳದಲ್ಲಿ ಓಹಿಲ
ದೇವನಂ ತಾನಱಿಸಿ ಕಾಣದೆ ಬಳಲಿ ಪತಿಗೆಱಗಿ
ಆವ ಮೇಘಂಗಳ ಸಮೀಪದೊ
ಳಾವ ದಿಕ್ಕಿನೊಳಾವ ತಾವಿನೊ
ಳಾವ ಹವಣಿನೊಳಾವ ಕಡೆಯಲಿ ಏಸು ದೂರದಲಿ ೪೦

ಆ ಗಣಾಗ್ರಣಿ ಓಹಿಲಯ್ಯನು
ಹೋಗುತಿದ್ದಹನೆನಗೆ ನೀವನು
ರಾಗದಿಂ ನೃಪ ಹೇಳೆನಲು ಕೈಘಂಟಿಯಾಕಾಶ
ಭಾಗದೊಳು ಘಣಘಣ ರವಂ ಮಿಗೆ
ಹೋಗುತಿದ್ದಹನೀತನಿದೆ ಚೆ
ನ್ನಾಗಿ ದಿಟ್ಟಿಸಿ ನೋಡೆನುತ ತೋಱಿಕ್ಕೆ ಸತಿ ಕಂಡು ೪೧

ಪರಮಹರುಷಿತೆಯಾಗಿ ಮನವ
ಚ್ಚರಿಪಡುತ್ತಾ ಓಹಿಲಯ್ಯಗೆ
ಧರಣಿಯೊಳು ಸಾಷ್ಟಾಂಗದಂಡಪ್ರಣಮವಂ ಮಾಡಿ
ಆರಸಿ ಕೀರ್ತಿಸುತಡಿಗಡಿಗೆ ತ
ನ್ಮರಸನೊಡನಿಂತೆಂದಳತಿ ದು
ರ್ಧರತಪಃಪರಿಪೂರ್ತಿಯಾಗಲು ಸಲಿಸಿ ಭಕ್ತಿಯಲಿ ೪೨

ಅಂಗವಂ ಧೂಪಾಗ್ನಿ ಸುಡದಿಹು
ದಂಗಧೂಪವ ಕಂಪು ಬೀಱಿಕೊಂ
ದಂಗವಾಗದಮುಂ ತದಂಗಂ ಬೆರಸಿ ಹರಗಿರಿಗೆ
ಅಂಗಜಾರಿಯನೊಲಿಸಿ ಪುರದ ಜ
ನಂಗಳೆಲ್ಲರು ಪೊಗಳೆ ರುದ್ರಗ
ಣಂಗಳಿದಿರ್ಗೊಳುತಿರಲು ಹೋಹುದು ಚೋದ್ಯವಹುದಲ್ಲ ೪೩

CC-0. Jangamwadi Math Collection. Digitized by eGangotri

ನಡೆಯಬಹುದೇ ಆರಿಗಾದಡೆ
ನುಡಿಯಬಹುವಲ್ಲದೆ ಬಳಿಕ್ಕೇ
ನುಡಿಯನಾಡದಿರೆನಲಿದೇತಕಿ ಚೋದ್ಯವಿದಱಿಲ್ಲಿ
ಮೃಡನನೊಲಿಸಿ ತಪಂಗಳಂ ಮನ
ವಡರ್ದು ಮಾಳ್ಪಾದ್ಯರಿಗೆ ತಾನವ
ಗಡವದಾವುದು ಕೇಳು ಮತ್ತೆಯು ಮುನ್ನ ನೀನಱಿಯಾ ೪೪

ಜ್ವಲನವೇಂ ಶಿವಭಕ್ತರಿಂದ
ಗ್ಗಳಮಯಾತನ ನಾಲಗೆಗಳಂ
ಬಲುಗರಂಗಳನಱಿದು ಕಳೆಯನೆ ವೀರಗಣನೊಬ್ಬ
ಮುಳಿದು ಪಡಬಾನಲವನೆಲ್ಲಂ
ತಿಲಕದಂದದಿನಿಟ್ಟುಕೊಳ್ಳನೆ
ಕಲಿಗಣೇಶ್ವರನೊರ್ಬನೊರ್ಬ ಗಣಾಧಿನಾಯಕನು ೪೫

ಪ್ರಳಯವಹ್ನಿಯನೆಯ್ದೆ ಸಂತತ
ವಳಿಕತಳದೊಳು ಮಡಗಿಕೊಳ್ಳನೆ
ಯಲಘುಮತಿಯಂ ವ್ಯಾಘ್ರಪಾದನ ಸುತನನಾವರಿಸಿ
ಬಲಿದ ವಹ್ನಿಯದೇನ ಮಾಡಿತು
ಹುಲಿಯನನಲಂ ನೊಸಲ ಕಣ್ಣಲಿ
ಹೊಳೆವುತಿಪ್ಪುದು ಬಿಡದೆ ಶಂಕರದಾಸಿಮಯ್ಯಗಳ ೪೬

ಮಸಗಿ ವಾಗೀಶಾರ್ಯರಂ ಬಂ
ಧಿಸಿ ರಿಪುಗಳ ನೆಲಕ್ಕೆ ನೂಕಲು
ಹೊಸಸರೋವರವಾಯಿತಲ್ಲದೆ ತತ್ಕೃಶಾನುವದು
ಎಸೆಯಿತೇ ಇನಿತಾವಡಂ ಹೊಗೆ
ವಸುಧೆಯೊಳಗಂತಾಗಿ ಭಕ್ತರ
ದೆಸೆಗೆ ಶಿಬಿಯಂಜುವುದು ತಾನಿದು ಚೋದ್ಯವನಲುಂಟೆ ೪೭

CC-0. Jangamwadi Math Collection. Digitized by eGangotri

ಅಂಗವಾ ಮಹಿಷಾಕ್ಷಿಧೂಪದ
ಹಾಂಗೆ ನಾಱಿದುದೆನುತವೀಗಳಿ
ಹೀಂಗೆ ಜೋದ್ಯವಿದೆಂಬಡಂ ಕೇಳಂತುಮಲ್ಲದೆಯು
ಲಿಂಗವಂತನು ದಾಸಿ ಹುತ್ತವ
ನಂಗಜನ ಕೈಯಲಿ ತುಡುಕಿಸೆ ಭು
ಜಂಗವಾಗಳೆ ಹೊನ್ನ ನೇವಳವಾಗಿ ಮೆಱೆಯಿತಲಾ ೪೮

ಮತ್ತೆ ಇಂತಹ ಭಕ್ತರುಗಳು ಜ
ಗತ್ತಿನಲಿ ಮೆಱೆದವರು ಹಲಬರು
ಕೃತ್ತಿವಾಸನನೊಲಿಸಿ ಪಡೆದರಭೀಷ್ಟಸಿದ್ಧಿಗಳ
ಚಿತ್ತದೊಳಗಣ ಕ್ಲೇಶದಿಂದು
ದ್ಯತ್ತಪೌರುಷರತ್ನದಿಂದಂ
ತತ್ತನುವನೇ ಧೂಪವಂ ಮಾಡಿದನಲಾ ಕೂರ್ತು ೪೯

ಈಗಳೋಹಿಲನಂ ಪ್ರೊಗಳೆ ಘನ
ವಾಗಿಯಾತನ ಮಹಿಮೆ ತಾನೆ
ಷ್ಟಾಗಿ ಕಾಯಂ ಬೆರಸಿ ಘಣಘಣ ಎಂಬ ಕೈಘಂಟೆ
ಈ ಗಗನದಲಿ ಮೊಱೆಯೆ ಕೈಲಾ
ಸಾಗ್ರಕೆಯ್ದುವುದರಿದಿದೆಂಬಡೆ
ಹೋಗುತಿರ್ದಹನೊರ್ಬನೇ ಪಿನರಿದಿದೆಂತೆನಲು ೫೦

ಮುದವಲರ್ದೆಂಬತ್ತು ಸಾವಿರ
ಕುದುರೆಗಳಿಗೊಂದೊಂದವೆಲ್ಲ
ಕ್ಕೊದವಿಸಿದ ರುದ್ರಾಕ್ಷಿಗಳ ಹಕ್ಕಱಿಕೆಗಳನಿಕ್ಕಿ
ಮದನಹರನ ಪುರಕ್ಕೆ ನೆಗೆದೆ
ಯ್ದಿದನಲಾ ದಾಳಿಯನಹಿತನೃಪ
ವಿದಳ ಚೇರಮರಾಯನಂಬರಚರರಳುಕುತಿರಲು ೫೧

CC-0. Jangamwadi Math Collection. Digitized by eGangotri

ಮಳೆಯರಾಜನು ಪರಿಜನಂಗಳು
ಬಳಸಿ ಕೈಲಾಸಕ್ಕೆ ಹೋಗನೆ
ಅಳಿಯನುಂ ಮಗಳುಂ ಸಖಿಯು ತಾ ಮಾನಕಂಜರನು
ಮಲಹರಾದ್ರಿಗೆ ಹೋಗನೇ ಕೋ
ಮಳೆಯರಿಬ್ಬರು ತಾನು ಬಂಧುಗ
ಳೊಲಿದು ಪೋಗನೆ ನಂಬಿಯಣ್ಣನು ಶಂಕರನ ಪುರಕೆ ೫೭

ಪುರಜನಂಗಳು ತಾನು ಹೋಗನೆ
ಹರನೊಳಾಗಲು ಪಿಳ್ಳೈನಾಯ್ನಾರ್
ಧರಣಿಯೊಳಗಂತಾಗಿ ಮತ್ತೆಯು ಆದ್ಯರುಗಳೊಳಗೆ
ಶರಣರುಗಳೊಳರಿಂತನಂತರು
ಭರದೊಳೊಬ್ಬನೆ ಹೋದನೋಹಿಲ
ನರಿದಿದೆಂದಾತನನು ನೆಱಿ ಕೊಂಡಾಡಲೆಲ್ಲಿಯದು ೫೮

ಏನುತ ಗುರ್ಜರರಾಯನಾ ಅ
ಯ್ಯನನತಿನಿರಾಕರಿಸಿ ನುಡಿಯಲು
ಇನಿಯಳಿನಿಯನ ಮಾತುಗಳನಾದರಿಸದತಿಗಳೆದು
ಅನವರತಮುಂ ಕಾಮಿ ನೀ ಅ
ಅನಘಮತಿ ನಿಷ್ಕಾಮಿ ಕೇಳ್ ನೀ
ಮನುಜನಾಯಕ ಭೋಗಿಯಾ ಶರಣಂ ಪರಮಯೋಗಿ ೫೯

ವಸುಧೆಯೊಳು ದ್ಯೂತವ್ಯಸನ ನೀ
ಅಸಮಶಿವಲಿಂಗಾರ್ಚನಾಯುತ
ವ್ಯಸನಿಯಾತನು ನೀನು ಸಂಸಾರಾನುಭವಯುಕ್ತ
ನಿಸಿತಮತಿ ಸಂಸಾರಮುಕ್ತನು
ಹೊಸತೆ ನೀ ನರಲೋಕಚರನ
ನ್ನುಸುರಲೇಂ ಹರಲೋಕಚರನೋಹಿಲನು ಅಂತಾಗಿ ೬೦

---

೧೧ (ಪ). ೨–೩ ಮಹಾ (ಸ).

CC-0. Jangamwadi Math Collection. Digitized by eGangotri

ನಾಡ ಮಾತೇನೊಲಿದಡಂ ಕೊಂ
ಡಾಡು ಮೇಣಿಲ್ಲದಡೆ ಲಘುವಂ
ಮಾಡಿ ನುಡಿಯದಿರೋಹಿಲಯ್ಯನೆನಲು ಸತಿಗೆಂದ
ಆಡುವೆನ್ನಯ ನುಡಿಗಳೇನಿಂ
ದಾಡುತಿರ್ದಪೆ ಭಕ್ತಿವರ್ಮವ
ನಾಡುವೆನ್ನಯ ನುಡಿಗಳಂ ನೀನೆತ್ತ ಬಲ್ಲಬಳಿ ೫೬

ಕಾಮವಿಲ್ಲದ ಕಾಮಿಗಳಿಗತಿ
ಕಾಮಿಸೀಶನನಂತೊಲಿಸುವರು
ಕಾಮಿಯಿವನೆನುತಂ ಬೆರಸದಾ ನಂಬಿಯಂ ವಿಗತ
ಕಾಮಿಗಳನೇ ಬೆರಸಿದನೆ ಗೌ
ರೀಮನೋಹರನಿಂತು ವಿತ್ತಂ
ಭೂಮಿಯಿಲ್ಲದೆ ಭಕ್ತರಿಗೆ ದಾಸೋಹಮೆಂತಹುದು ೫೭

ಕೇಳು ಧರಿಣೀಶ್ವರನೆನಿಪ ಕರಿ
ಕಾಲಚೋಳನನಸಮವಿಕ್ರಮ
ಚೋಳನಂ ಕರವೂರ ಚೋಳನ ವೀರಚೋಳನನು
ಮೇಲೆ ಮೇಣುತ್ತುಂಗಚೋಳನ್ಯ
ಪಾಳನಂ ರಾಜೇಂದ್ರಚೋಳನ
ನೋಳಿಯಿಂದ ನರೇಂದ್ರಚೋಳನನೆಂದು ಶಂಕರನು ೫೮

ಬೆರಸದತಿ ವಂಚಿಸುವ ನಿರ್ಧನಿ
ಕರನೆ ಬೆರಸಿದನೇ ಏವಂ ಜನ
ವರರು ಭಕ್ತಿಗೆ ಹೊಱಗು ಹೇಳಾ ಜಲಜದಳನಯನೆ
ಪರಿಕಿಪಡೆ ಈ ಜೂಜು ನಿಂದ್ಯಮೆ
ಹರವಿನೋದಮದಾಗೆ ಸಂಧಿಸು
ವಿರವಿನೊಡನೆ ನಿವೇದಿಸುವ ತೆಱನಱಿವಡಂ ಸಾಕು ೫೯

---

೧ ಮ (ಸ).

CC-0. Jangamwadi Math Collection. Digitized by eGangotri

ಕೆಲಸವಂ ಮತ್ತೊಂದನಱಿಯದೆ
ಕಲಿತ ನೆತ್ತವನಾಡಿ ಪರರಂ
ಗೆಲಿದು ವಿತ್ತವನೊದವಿಸುತ್ತಾ ಮೂರ್ಖಿನಾಯ್ನಾರು
ಹಲವು ಸುಪದಾರ್ಥಂಗಳಂ ಮನ
ವೊಲಿದು ಜಂಗಮಕರ್ಪಿಸುತ್ತಿರೆ
ಮಲಹರಂ ತಾ ಜೂಜುಗಾಱಿನ [1]ಪರಿ[2]ಯೊಳೆಯ್ತಂದು ೬೦

ನೆತ್ತದಲಿ ಭಕ್ತಂಗೆ ಹಿರಿದಹ
ವಿತ್ತಮಂ ಸೋಲ್ತೀಯಲೊಲ್ಲದೆ
ಕೃತ್ತಿಧರನದೆಯಿದೆಯೆನುತ್ತಪಲಾಪಿಸುವುದರಿದು
ಒತ್ತಿ ಬೇಡುತ ಮಂಡೆಸುತ್ತಿನೊ
ಳೆತ್ತಿ ಕಾಲಂ ಕಟ್ಟಿ ಬಿಡದಿರೆ
ಯತ್ತ [3]ಲೀಶಂ[4] ತನ್ನುಡಿಯ ಶಿವಸೂತ್ರಮಂ ತೋಱಿ ೬೧

ಹರಹರಾ ಕಟ್ಟಿದೆನುವಱಿಯದೆ
ಹರನ ಲಾಂಛನಧರನೆನುತ್ತಂ
ಹರನ ಕಾಲಂ ಬಂಧಿಸಿದ ತಲೆಚಿಂದಿಯಿಂ ತನ್ನ
ಶಿರವನಾಗಳೆ ಕೊಯ್ದುಕೊಳಲವ
ಸರಿಸುವೆಡೆಯಲಿ ಮೆಚ್ಚಿ ಯುಭವಂ
ಶರಣ ನಿನಗಭಿಮತವನೀವೆನು ಬೇಡು [5]ಬೇಡೆನಲು[6] ೬೨

ಒಡೆಯರೊಡೆಯನೆ ಮುನ್ನೆನಗೆ ಸೋ
ಲ್ತೊಡವೆಯಂ ಕೊಡು ಸಾಕು ಜಂಗಮ
ದೊಡವೆಯದು ವಂಚಿಸಲು ಬಾರದೆನುತ್ತ ತದ್ಧನವ
ಮೃಡನ ಕೈಯಲು ಕೊಂಡು ಸಮ್ಮದ
ವಡಸಿ ಮಾಹೇಶ್ವರರಿಗರ್ಪಿಸಿ
ನಡೆದನಲ್ಲಾ ಶಿವನ ನಗರಿಗೆ ಮೂರ್ಖಿನಾಯ್ನಾರು ೬೩

೧–೨ ತೆರ (ಮ). ೩–೪ ಲಿನಿತಂ (ಅ, ಕ, ಚ, ಡಾ, ಥ, ಧ, ಪ, ಬ). ೫–೬ ನೀಡೆನಲು (ನ, ಮ).

CC-0. Jangamwadi Math Collection. Digitized by eGangotri

ನೋಡಲಾಗದು ಜೂಜನಾಡುವ
ಗಾಡಿಗನನೆಂದರ್ಘಚಂದ್ರಾ
ಜೂಡನೊಲ್ಲದೆ ಬಿಟ್ಟನೇ ವ್ಯಸನಾರ್ಥದಿಂ ಜೂಜ
ನಾಡಿ ಧರ್ಮಜಮುಖ್ಯರಳಿದರು
ಕೂಡೆ ಭಕ್ತಿಹಿತಾರ್ಥದಿಂದೊಲಿ
ದಾಡಿ ಶಂಕರನೊಳು ಬೆರಸನೇ ಮೂರ್ಖನಾಯ್ನಾರು ೬೪

ಯುಕ್ತಸಂಸಾರಾನುರಕ್ತಿವಿ
ರಕ್ತಿಯೊಂದು ನಿರೂಪಣದೊಳು
ದ್ಯುಕ್ತಪಹುದೆಂತೆನೆ ಶಿವಾರ್ಪಿತವಪ ಸುಖವಿರಕ್ತಿ
ವ್ಯಕ್ತವಪ ಸಂಸಾರಸೌಖ್ಯವಿ
ರಕ್ತಿ ಶಿವ[೨]ಭುಕ್ತ[೩]ಪ್ರಸಾದಸು
ರಕ್ತಿಹೀನತೆ ಸಂಸೃತಿಯದನುರಕ್ತಿಯಂತಾಗಿ ೬೫

ಬೆರಸಿದಂತಿಹನಿಂತು ನೋಡುವ
ಪರರುಗಳಿಗೆ ಬೆರಸದುದಕದೊಳು
ಸರಸಿಜದವೊಲು ಬೆರಸದಂತಿಪ್ಪನು ಪರರ ಕಣ್ಗೆ
ಶರಣನುಂ ಸಂಸಾರಮಾಯೆಗೆ
ಬೆರಸದಿಪ್ಪನು ಲೋಕದೊಳು ತಾಂ
ಬೆರಸನೆಂದುಂ [೪]ವಿಗತ[೫]ಲೋಕಂ ಭಕ್ತನಂತಾಗಿ ೬೬

ಪರಿಪಡೆ ನರಲೋಕವನಲೀ
ಶ್ವರನ ಲೋಕವೆನಲ್ಕೆ ಶಿವಯು
ಕ್ತರಿಗೆ ತಾನೇನಿಲ್ಲಿಯಲ್ಲೆನಲುಂಟೆ ನೀ ಹೇಳ
ತರಳೆ ಭಕ್ತಿಸಕೀಲಕದ ವಿ
ಸ್ತರಣವಱಿಯೆಯಿದೇತಕೀ ಸಾ
ವಿರ ನುಡಿಗಳಂ ನಿನಗೆನಲು ಸತಿಯೆಂದಳಿನಿಯಂಗೆ ೬೭

---

೧ ಭ (ನ, ಪ). ೨–೩ ಭಕ್ತ (ನ); ಭಕ್ತಿ (ಪ). ೪–೫ ಲಿಂಗ (ಮ).

CC-0. Jangamwadi Math Collection. Digitized by eGangotri

ಅಱಿಯೆನಱಿಯೆನು ಭಕ್ತಿಯಂ ನೀ
ನಱಿವವಂ ಗಡ ಓಹಿಲಯ್ಯನ
ನುಱಿದೆ ನುಡಿವ ಶಿವೈಕ್ಯನೆಂತುಂ ಹೋಗದಿರೆಯಲ್ಲ
ಕಱಿಗೊರಳವನ ರಜತಗಿರಿಗೇ
ತೆಱಿದೊಳಾವಾಗೇಸು ದಿವಸಕೆ
ಮೆಱಿದೆನಿಬರಂ ಕೂಡಿ ಹೋಹೆ ಮದೀಶ ಹೇಳೆನಲು ೬೪

ಇಂದೆ ಈಗಳೆ ಈ ತೆಱಿದೊಳೀ
ಮಂದಿಯಂ ಕೊಂಡೊಯ್ದು ಪೆಂ ನೋ
ಡೊಂದಿನಿತು ತಳುವಿಲ್ಲ ಹೇಳಲು ಕಿಱಿದುಮಿನಗಿಪೆನಲು
ಮುಂದೆ ಮೂದಲಿಸಿದ ಬಳಿಕ್ಕಿಹು
ದಂದವಲ್ಲಿದು ಭಕ್ತಿನೀತಿಗೆ
ಕುಂದಿದಂ ಕಂಡಬ್ಜಮುಖಿ ಪರಿಣಮಿಸು ನೀನೆನುತ ೬೫

ಹರುಷದಲಿ ಪಡಿಹಾಜಿರಂ ಕರೆ
ತರಿಸಿ ತನ್ನ ಸುಭಾಷೆಯಂ ಪತಿ
ಕರಿಸಿ ಕೈಲಾಸಪ್ರಯಾಣಕೆ ಸಾಱಿಸಲುವೇಳ್ದು
ಆರಸನಾಗಳು ನಾಡನಿಬರಂ
ಬರಿಸಿ ನಿಜ ಶೃಂಗಾರವನಲಂ
ಕರಿಸಿ ಪರಮಾನಂದದಿಂದಶ್ವೋತ್ತಮನನೇಱಿ ೬೬

ತರುಣಿಯರು ನಂದನರು ಹಿತವರು
ಪರಿಜನಂಗಳುವೆರಸಿ ಭಜಿಸು
ತ್ತಿರಲುಘೇ ಉಘೆ ಚಾಂಗು ಭಲ ಎನುತೊಡನೆ ಭಕ್ತಚಯ
ಬರುತಿರಲು ಸಂಗೀತನಾದಂ
ಮೊರೆಯೆ ಮಂಗಳರವವೆಸೆಯಲೊ
ತ್ತರಿಸೆ ಚಾಮರಕೇತನಚ್ಛತ್ರಂಗಳಲರು ಮಿಗೆ ೬೭

೧–೨ ವೇನು (ಅ, ಥ, ನ, ಪ).

CC-0. Jangamwadi Math Collection. Digitized by eGangotri

ದೇವವಾದ್ಯಧ್ವನಿಗಳುಲಿಯಲು
ತೀವಿ ಪೂಮಳೆ ಸುರಿಯೆ ಪುರದೊಳು
ದೇವಕಾರ್ಯಕೆ ನೆರೆದು ನೆರೆಯೂರಿಂಗೆ ಪೋಪಂತೆ
ಆ ವಿಯತ್ತಳವದಿರೆ ನೆಗೆದು ಮ
ಹಾ ವಿಭವದಿಂದೊತ್ತಿ ನಡೆಯಲು
ದೇವನಿಕಯಂ ಪೊಗಳಲುದ್ದೀಪಿತಮಹಿಮೆವೆತ್ತು ೭೨

ಹರಗಣ್ಣಾವಳಿಯಾಜ್ಞೆಯಂ ತತ್
ಪರದೊಳಾಂತಪರುಗಳ ಕರುಣಾ
ಶರನಿಧಿಯೊಳೋಲಾಡಿ ಸದ್ಭಕ್ತಿಪ್ರಭಾವದಲಿ
ಸುರುಚಿರಂ ಮಿಗೆ ರೌಪ್ಯಧರಣೀ
ಧರಕೆ ಪೋದನು ತತ್ಪ್ರಣುತ ನಿ
ರ್ಜರನುದಾರಕುಮಾರಪಾಲಕಗೂರ್ಜರನು ತಾನು ೭೩

ಅಂತು ಸಂಧಿ ೪೩ಕ್ಕಂ ಪದಗಳು ೨೪೬೬ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಸಂಧಿ : ೪೪

*

ಸೂಚನೆ : ತರುಣಿ ಹೇಳಿದ ದೋಷಮಂ ಕೇ
ಳ್ದಿರಡು ಕಣ್ಣಂ ಕಳೆದುಹಾಯ್ಕುಲು
ಮರಳಿ ಪಡೆದನು ಗುರುತನಯನಾಂಡಾರಿಯಕ್ಷಿಗಳ

ಇದು ನಿಮಿತ್ತಂ ಸುಹಿತರಾಗಿಹ
ಸುದತಿಯರು ಹೇಳಿದ ನುಡಿಗಳುಂ
ವಿದಿತವಹುದಲ್ಲದೆ ವಿರಸವೇ ಇಷ್ಟವನಿತೆಯರ
ಸದಮಳೋಕ್ತಿಗಳಣಕವಾದಡೆ
ತುದಿಯೊಳೊಳ್ಳಿತ್ತಹುದೆನುತ ಶಶಿ
ವದನೆಯೊರೆವುತ್ತಿಪ್ಪ ಸಲ್ಲಾಪಂಗಳಾತಂಗೆ ೧

ಉರಿಯೊಳಾಜ್ಯವನೆಱೆದಡಂತು
ಬ್ಬರಿಸಿ ಧಗಧಗ ಎನುತ ಶಕೆಯಾ
ವರಿಸಿದವೊಲಾ ಪ್ರೌಢವತಿಯ ಕಳಾಪ್ರವೀಣತೆಯ
ಸರಸವಚನಂಗಳನಭಪಭ
ಕ್ತರ ಚರಿತೆಯಂ ಕೇಳಲಾತಂ
ಗೊರೆಯಲಾ ಕಂಬೇಟದಿಂ ಕಿವಿವೇಟ ವೆಗ್ಗಳಿಸೆ ೨

ಪ್ರಾಗಣಿಯವನ ಕಿಚ್ಚು ನೂರ್ಮಡಿ
ಯಾಗಿ ಮುಂದೆಯಪಾಯವಂ ಪರಿ
ಯೋಗಿಸುವುದದನಱಿದು ಕೋಮಳೆ ತನ್ನ ಹರಣಕ್ಕೆ
ಆಗಳಾತಂ ಮುನಿದುದಂ ಕಂ
ಡೇಗುವೆಂ ಕಾಮಾಂಧಕಂಗಾ
ಮೇಗೆ ಬಪ್ಪಾ ಕಾರ್ಯವಂ ಕಾಣಿಸದೆನುತ ಮಱುಗಿ ೩

---

* ರಾಗ : ವರಾಳಿ (ಅ, ಚ, ಡಾ, ಧ, ಪ); ನಾಟಿ (ಮ); ಶುದ್ಧ ಕಾಂಭೋಧಿ (ತ).

CC-0. Jangamwadi Math Collection. Digitized by eGangotri

ಮುಂದೆ ಶಿವನ ನಿರೂಪದಿಂ ತಾ
ನಿಂದು ನಿನಗೇನಾದಪುದೊ ಆ
ವಂದದಿಂ ಹೇಳಿದರೊಡಂಬಡಲೊಲ್ಲೆ ನೀನಿವಕೆ
ಇಂದುಮೌಳಿಯೆ ಬಲ್ಲನಿನ್ನೆ
ನ್ನಿಂದ ತಪ್ಪಿಲ್ಲಣ್ಣ ಕೇಳೆಂ
ತೆಂದಡಂ ಮೇಣ್ ಹೇಳಿದಲ್ಲದೆ ಹೋಗದೇಗುವೆನು ೪

ಭಾವಿಸಲು ಗುರುಭಕ್ತಿಯೇ ತಾ
ಜೀವವೆಮಗಿಬ್ಬರಿಗೆ ನಿಜವಿಂ
ತಾವಗಂ ನಾ ನಿನ್ನ ಕೋಡಿಂಗಾಸೆಯಂ ಮಾಡಿ
ಓವಿ ನಿನ್ನಂ ಕರೆವುದುಚಿತವೆ
ಯಾವ ಪರಿಯೊಳು ನಿನ್ನ ಸದ್ಗುರು
ದೇವನೊಲಿದೊಂದಿರುಳು ಬಿಜಯಂಗೆಯ್ದು ಹರುಷದಲಿ ೫

ಎನ್ನ ಕೂಡಿದ್ದೆಯಿದ್ದದಱಿಂ
ನಿನ್ನುವಂ ಬೇಡೆಂದೆನೆನಲೆವೆ
ಭಿನ್ನವಾಗುತ ಕೆಂಡವಂ ಮೆಟ್ಟಿದ ತೆಱದಿ ಹೆದಱಿ
ತನ್ನ ಬಾಯಂ ಹೊಯ್ದುಕೊಳುತಂ
ತನ್ನ ಶೋಕಾಕ್ರಾಂತದಿಂದಂ
ತನ್ನ ತಾ ಮಱಿದಿಂತು ಧೊಪ್ಪನೆ ಕೆಡೆದು ನೆಲದಲ್ಲಿ ೬

ಹೊರಳುತೊಱಲುತ್ತಳಲುತಳುತಂ
ಹಿರಿದು ದುಃಖಾರ್ಣವದೊಳಾಳುತ
ಹರಹರಾ ಗುರುದೈವವೇ ಹಾಹಾ ಗುರುಸ್ವಾಮಿ
ಗುರುವೆ ಹಾ ಗುರುನಾಥನೇ ಹಾ
ಗುರುವೆ ಹಾ ಗುರುದೇವನೇ ಸ
ದ್ಗುರುವೆ ಕೆಟ್ಟೆನೆನುತ್ತಱಚುತೆಯಿತಂದು ಸತಿಗೆಱಗಿ ೭

೧–೨ ಲಿಂಗವೇ (ನ, ಮ).

CC-0. Jangamwadi Math Collection. Digitized by eGangotri

ಎನ್ನ ತಾಯೇ ನಿನ್ನನೀಕ್ಷಿಸು
ತೆನ್ನೊಡಲನಱಿಯದಕೆ ತೆಱಿನೇ
ನಿನ್ನು ನಿನಗರ್ಥಿಸಿದ ತಪ್ಪೆಂದಳಿವುದೆನ್ನವ್ವ
ನಿನ್ನೊಡನೆ ನಗುತಿಪ್ಪ ಪಾತಕ
ವೆನ್ನೊಳೆಂದಿಗೆ ಪರಿಹರಿಸುವುದು
ನಿನ್ನುವಂ ಕೋಪಿಸುವ ಪಾಪಂ ಹಱಿವುದೆನಗೆಂದೊ ೬

ಅಕ್ಕ ನಿನ್ನಂ ನುಡಿದ ಮದ್ದೊ[1]ೀ
ಹಕ್ಕೆ ನಿರ್ಣಯವೇನೊ ನಿನಗಾ
ನುಕ್ಕಿ ಮನವಿಟ್ಟೆನ್ನ ದುಶ್ಚರಿತಕ್ಕೆ ವಿಧಿಯುಂಟೆ
ಅಕ್ಕಱಿಂದಡಿಗಡಿಗೆ ನಿನ್ನಂ
ತಕ್ಕವಿಸಲೆಂದಾಲಿಸುವ ಕ
ರ್ಮಕ್ಕೆ ತೊಲಗುವುಪಾಯವಾವುದೊ ಹೇಳಕಟ ತಾಯೆ ೭

ಉಡುಗಿ[2]ದಿದ್ದಂತಿದ್ದಕಟ[3] ಬಱಿ
ಸಿಡಿಲು ಹೊಡೆದುದನಱಿಯದೇವೆನು
ಪೊಡವಿಯೊಳಗೆಂತಪ್ಪ ಪಾಪಿಯೊ ಪೂರ್ವಜನ್ಮದಲಿ
ತೊಡಗಿ ನಾ ಮೂಱಿವಸರದೊಳುಂ
ಮೃಡಸಮಾರ್ಚನೆಗಳನಲರ್ದಳ
ವಡಿಸೆನೇಯದ್ವೈತಮತಿಯಿಂದೀ ಪರಿಯೊಳವ್ವಾ ೮

ಹರನೊಡೆಯ ನಾನಾಳುವೆಂಬ ವಿ
ವರಣದಿಂದಂ ಸ್ವಾಮಿಭೃತ್ಯಾ
ಚರಣದಿಂದಾನಾಚರಿಸೆನೇ ಷೋಡಶುಪಚಾರ
ಚರಣವಿಷಯಭ್ರಾಂತಿಯಿಂದಂ
ಚರಿಸಿ ರಾಜವದುಪಚರಣ [4]ಸಾ
ಧರಣ[5]ಕರಣಂಗಳನುಳಿದೆನೇ ಭಾಂದಸತ್ವದಲಿ ೯

೧–೨ ದಂತಿರ್ದಕಟಕಟ (ಸ). ೩–೪ ದಾ । ದಿರಣ (ಮ).

CC-0. Jangamwadi Math Collection. Digitized by eGangotri

ಫಲವನರ್ಥಿಸಿ ಅರ್ಚಿಸಿದೆನೇ
ಮಲಹರನ ನಾನನ್ಯಶಾಸ್ತ್ರಾ
ವಳಿಗಳೊಳು ವರ್ತಿಸಿದೆನೇ ಮುನ್ನಪಸರೋಚಿತಕೆ
ಬಳಲಿ ಬಂದಂತಾರ್ಯರುಗಳಂ
ನಿಲಿಸಿ ಧಿಕ್ಕರಿಸಿದೆನೆ ಜಂಗಮ
ಕುಲಕೆ ಕಂಡಷ್ಟಾಂಗವೆಱಗಿನೆ ಮುಗಿಯೆನೇ ಕೈಯ ೧೨

ಅನುಮೇಶನ ಭಕ್ತರನುದಾ
ಸೀನದಲಿ ಕಂಡಾತ್ಮದೊಳು ಅಪ
ಮಾನಭಾವದೊಳುನ್ನತಾಸನದಲ್ಲಿ ಕುಳ್ಳಿತೆನೆ
ಸಾನುಭವಜಂಗಮವು ಬರೆ ಸಮ
ಯಾನುಕೂಲಕ್ರಿಯೆಗಳಂ ಸ
ನ್ಮಾನದಿಂದವೆ ಸಲಿಸೆನೇ ಪಟುಗರ್ವವೃತ್ತಿಯಲಿ ೧೩

ಅನುನಯಂ ಮಿಗೆ ಜಂಗಮಾರಾ
ಧನೆಗಳಂ ಭಯಭಕ್ತಿಯಲಿ ಮಾ
ಡಿನೆ ಯಥಾ ಶಕ್ತಿಯಲಿ ಜಂಗಮಲಿಂಗವೇಳೆಯಲಿ
ಅನುವನಱಿಯದೆ ಪಜ್ಜಿಭೀದವ
ನಿನಿತ ಮಾಡಿದೆನೇ ವಿಚಾರಿಸಿ
ದೆನೆ ಕುಲವನಾ ಜಂಗಮಾವಳಿಯೆಡೆಯೊಳೆಲೆ ತಾಯೆ ೧೪

ಬೆರಸಿದೆನೆ ಭವಿ ಭೇದ ಉಳಿದನು
ಕರಿಸಿ ಕೈಕೊಂಡೆನೆ ಅಸಂಸ್ಕಾ
ರರ ರಚಿತಪಾಕಂಗಳಂ ಪರಿಹರಿಸೆನೇ ಪರರ
ಹರಗಣಂಗಳನೆಗ್ಗಹಿಡಿದೆನೆ
ಹಿರಿಯರುಗಳಂ ನಾಚಿಸಿದೆನೇ
ಶರಣಜನತತ್ವಾನುಭವಗೋಷ್ಠೀಪ್ರಸಂಗದಲಿ ೧೫

೧–೨ ಪಾಚಾ (ಚ). ೩ ಸ್ವಾ (ನ).

CC-0. Jangamwadi Math Collection. Digitized by eGangotri

ಮದಿಸಿ ಮನದೊಳು ಭೇದವಂ ಮಾ
ಡಿದೆನೆ ವಿದ್ಯಾಶಿವಗುರುಗಳಲಿ
ಮುದವಲರ್ದಾಚರಿಸೆನೇ ೧ಸದು೨ಗುರುಸಪರಿಯೆಗಳ
ಹೃದಯದೊಳು ಧ್ಯಾನಿಸೆನೆ ಗುರುವಂ
ಪದುಳದಿಂ ಶಿರವಾಗೆನೇ ಗುರು
ಪದಕೆ ಮನ್ನಿಸೆನೇ ಗುರುಕುಲಾವಳಿಯನೊಲವಿಂದ ೧

ಮಱಿಯೆನೇ ಮುನ್ನಿನ ಜನನವಂ
ತೊಱಿಯೆನೇ ನಾ ಭವಿಯ ಸಂಗವ
ನಱಿಯೆನೇ ಶಿವಧರ್ಮವಂ ಪರವಾದಿಗಂಜಿದೆನೆ
ಜಱಿಯೆನೇ ಸಂಸಾರಮಾಯೆಯ
ನಱಿಯೆನೇ ವಿಷಯೇಂದ್ರಿಯಂಗಳ
ನೆಱಿಗಿದೆನೆ ವಿಭ್ರಮಿಸಿ ಲಿಂಗನನಾರ್ಪಿತದ ರುಚಿಗೆ ೨

ಮೀಱಿದೆನೆ ಶಿವನಾಜ್ಞೆಯಂ ಮನ
ವ್ಯಾಱಿದೆನೆ ಮಱಿದನ್ಯದೈವಕೆ
ಜಾಱಿದೆನೆ ದಿನದಿನಕೆ ನಿಯಮಾಚಾರಭಾಷೆಗಳ
ಸೇಱಿದೆನೆ ಕಂಡಾರ್ಯರುಗಳಂ
ದೂಱಿದೆನೆ ಶಿವಭಕ್ತರುಗಳಂ
ಮಾಱಿದೆನೆ ಶಿವಲಾಂಛನಿಯನನ್ಯರ ನಿವಾಸಕ್ಕೆ ೩

ಹುಗಿಸಿದೆನೆ ಮನೆಗಿತರ ಪಾಕವ
ನುಗಿಸಿದೆನೆ ಲಿಂಗಪ್ರಸಾದವ
ನಗಲಿಸಿದೆನೇ ಕಲಹವಂ ಮಾಡಿಷ್ಪಶಿಷ್ಪ೩ರನುಳಿ
ಬಗೆಯೆನೇ ಸತ್ಪುರುಷರುಗಳಂ
ಸೊಗಸಿದೆನೆ ನಾ ನ೫ನ್ನ೬ ಕೀರ್ತಿಗೆ
ತೆಗೆಸಿದೆನೆ ಬುಧರ್ಗಿತ್ತ ವೃತ್ತಿಯನುಚಿತವಂ ಮಱಿದು ೪

೧–೨ಸದ್ (ಸ). ೩–೪ರಿಗೆ (ನ). ೫ನೆ (ಥ, ಪ, ಬ). ೬ನ್ಯ (ಕ, ಚ, ಮ).

CC-0. Jangamwadi Math Collection. Digitized by eGangotri

ನುಡಿದೆನೇ ಪಕ್ಷದೊಳಸತ್ಯದ
ನುಡಿಯನಾನಳುಕಿದೆನೆ ದೂಷಕ
ರೆಡೆಗೆ ಕಂಡೆನೆ ಇದಿರೊಳುಂ ವ್ರತಗೇಡಿಗಳನವ್ವಾ
ಸಡಿಲಿದೆನೆ ದೃಢಭಕ್ತಿಯಂ ಹೆಱಿ
ರೊಡವೆಯಂ ಕೊಂಡೆನೆ ಪರಾಂಗನೆ
ಗಡಸಿದೆನೆ ಶಿವನಿಂದೆಯಂ ಕಿವಿಗೊಟ್ಟು ಕೇಳಿದೆನೆ ೨೦

ದುಷ್ಟನೇ ಸಮಯಾಕಪಟಿಯೇ
ಇಷ್ಟವಂಚಕನೇ ದುರಾತ್ಮನೆ
ಕಷ್ಟನೇ ಕಾರ್ಪಣ್ಯಭಾವನೆ ಕಪಟಮಾನಸನೆ
ಶಿಷ್ಟಜನದೂರನೆ ವಿಚಾರ
ಭ್ರಷ್ಟನೇ ಗರ್ವಿತನೆ ಸುಜನಾ
ರಿಷ್ಟನೇ ತಾಮಸನೆ ನೀತಿವಿಹೀನನೇ ಖಳನೆ ೨೧

ಪಾಪಿಯೇ ದುರ್ವ್ಯಸನಿಯೇ ನಾ
ಕೋಪಿಯೇ ಸಮದಾಂಧನೇ ಸಂ
ತಾಪಚಿತ್ತನೆ ಕರ್ಮವಾದಿಯೆ ಧರ್ಮವಿಕ್ರಯನೆ
ಕಾಪುರುಷನೇ ಧೂರ್ತನೇ ಅಪ
ಲಾಪನಾಲಾಪನೆ ದುರುಳನೇ
ಈ ಪರಿಯ ಗುರುತಲ್ಪವೆನಗಿಂತಾಯಿತೆಲೆ ತಾಯೆ ೨೨

ಕ್ಷಿತಿಯೊಳಿದು ತಾನೆಂತೆನಲು ಕೇಳ್
ಶ್ರುತ ನಯದಿ [೧]ಉದಿತಾ[೨] ಧೃತಾಚಯೆ
[೩]ನುತವೆ ಮೇಣ್ ಪ್ರೀತಾ ಚ ಮೌಲ್ಯೇನ ಚಳ ಎನುತ ಮೇಲೆ
ಶ್ರುತಿಸಮಾಹಿತವೆನುತ ಮುದದಿಂ
ಶ್ರುತಿ ಸಕೃತ್ಕಾಮಗತ ಎಲೆ ತತ್
ಶ್ರುತಿಗತಾವಾಪೀ ಎನಲ್ ಶ್ರುತಿಮಂಜುಳೋಕ್ತಿಯಲಿ ೨೩

೧–೨ನಿರುತಾ (ಚ); ನಿವೃತಾ (ಅ, ಡಾ). ೩–೪ನುತ್ತ ಮೇಣ್ ಪ್ರೀತಾ ಮೌಲ್ಯೇನ ಚ (ಡಾ, ಅ).

CC-0. Jangamwadi Math Collection. Digitized by eGangotri

ಪಂಚಿತಾ ಗುರುಯೋಷಿತಾ ಎನು
ತಂ ಚದುರು ಮಿಗೆ ಹೇಳ್ವುದಾಗಿ ಸ
ಮುಂಚಿತದ ತಮ್ಮಯ ಗುರುವಿನತ್ತಿಗೆಯ ನಾದಿನಿಯ
ವಂಚಿಸದೆ ಒಡನುಂಡಡಂತಾ
ಮುಂಚಿರಿಸಿಕೊಂಡಿದ್ದು ಬಿಟ್ಟಾ
ಸಂಚಲಾಕ್ಷಿಯರಂ ಬಳಿಕ ತಾನರ್ಥಿಯಂ ಮಾಳ್ಪ ೨೪

ವರ ವನಿತೆಯರನೊತ್ತೆಗೊಟ್ಟಾ
ತರುಣಿಯರನಂತೊಮ್ಮೆ ಮುಟ್ಟಿದ
ಸರಸಿಜಾಕ್ಷಿಯರಂ ಬಳಿಕ್ಕೀ ಪಳು ವಿಧದವರು
ಪರಕಿಪಡೆ ಗುರುರಾಣಿವಾಸದ
ಸರಿಯಲಾ ಎಲೆ ತಾಯಿಯೀ ದು
ಸ್ತರಮಹಾಪಾತಕವನೆಂತುತ್ತರಿಸುವೆನು ಮುಂದೆ ೨೫

ಏನ ಮಾಡುವೆನಿದಕೆ ಹೇಳ
ವ್ವಾ ನಿವಾಡವನೆನುತವಳಲುತ
ನೂನಶೋಕದಿ ಬೀಳ್ವನೇಳ್ವನು ನಿಂದು ನೋಡುವನು
ತಾನಳುತ ಬಳಲುತ್ತ ಬಂದಾ
ಮಾನಿನಿಯ ಮೆಲ್ಲಡಿಗೆಱಗಿ ತ
ನ್ನಾನನವನಂತೊರಸಿಕೊಳುತಂ ಸತಿಯ ಪಾದದಲಿ ೨೬

ತಲೆಯೊಡೆಯಲಡಿಗಡಿಗೆ ತಾಗಿಸಿ
ಕೊಳುವನುದರವನೊತ್ತಿ ಸೀಳಿದು
ಕೊಳುವನಿಳೆಯೊಳು ಕೆಡೆದು ಹೊರಳುವನೊಬಿಲುವನು ತನುವ
ಅಳಿಯಲೆಂದೇ ನೋಡುವಂ ತಾಂ
ಲಲನೆಯಂ ನೋಡುವನು ಬಾಯ್ಬಿ
ಟ್ಟಳುತ ಲಿಂಗದ ಗರ್ಭದೊಳು ಹುಗಲೆಂದು ನೋಡುವನು ೨೭

CC-0. Jangamwadi Math Collection. Digitized by eGangotri

ತಿಳಿಯದೊಡಲಂ ಕಡಿಕಡಿದು ದಿಗು
ಬಲಿಯನೀಯಲೆ ನೋಡುವಂ ಮುದ
ವಲರ್ದ ತನುವಂ ಕುಸುರಿದಱಿದುಱಿ ಕಲ್ಲೊರಳೊಳಿಕ್ಕಿ
ತುಳಿತುಳಿದು ತಾಂ ಹರಿವ ತೊಱಿಯಲಿ
ಕಲಸಬೆವನು ಕಾಡ ಹೆಗ್ಗಾ
ವಲಿಯ ಮೇಲರಿದರಿದು ದೇಹವನುರುಹಲೂಹಿಸುವ ೨೮

ಬಿಡದೆ ಮಡದಿಯ ಮೇಲೆ ದೃಷ್ಟಿಗ
ಳಡರ್ದು ನೋಡಿವ ಕಂಗಳಂ ಕಳೆ
ದೊಡನೆ ಬೇಟವನರ್ಥಿಸಿವ ಮೂಗಂ ಕೊಯಿದು ಹಾಕಿ
ನಡೆದು ಬಂದಡಿಗಳನೆರಡುಮಂ
ಕಡಿದು ತರ್ಕ್ಯಸಲು ಬಯಸಿದಾ
ನಿಡುಕರಂಗಳನರಿದು ಚಿದುರಂ ನುಡಿವ ನಾಲಗೆಯ ೨೯

ಮೊಟ್ಟಮೊದಲಿಗೆ ಕೊಯ್ದು ಸತಿಯೊಡ
ನಟ್ಟಹಾಸಂ ಮಿಗುವ ವದನವ
ನಟ್ಟೊರಸಿ ತಲೆಯೆತ್ತಿ ನೋಡಿದ ತಲೆಯನೊಡಕುಟ್ಟಿ
ನಟ್ಟನಾಗಳು ಪೃಳಕಸಂತತಿ
ಹುಟ್ಟಿದೊಡಲಂ ತಱಿತಱಿದಿಳೆಯೊ
ಳೊಟ್ಟಿ ಕುಚಯುಗಕರ್ಥಿಸುವ ವಕ್ಷಸ್ಥಳವನಿಱಿದು ೩೦

ಕೂಡಿ ಕಾಯವನುರುಹಿ ಹುಡಿಹುಡಿ
ಮಾಡಿ ಬಿಜುಗಾಳಿಯಲಿ ಚಲ್ಲಲಿ
ನೋಡುವಂ ಪಿರಿಮುರಿಯೊಳೊಡನಱಿಯಲುಱಿ ಕಾಸಿ
ಪೀಡೆ ತನು ಬಯಲಾಗಲೆಂದೇ
ನೋಡುವನು ತಾನೆಂತುವಳಿಯಲೆ
ನೋಡುವಂ ಮತ್ತಂತಿರವೆ ಗುರುಭಕ್ತಿಯಾಂಡಾರಿ ೩೧

---

೧ ಲು (ಪ).

CC-0. Jangamwadi Math Collection. Digitized by eGangotri

ಮತ್ತೆ ಬಸುಱಿಂ ನೀಳಿ ಕರುಳಂ
ಕಿತ್ತು ದೇವಾಲಯದ ಸುತ್ತಂ
ಸುತ್ತಲೇ ನೋಡುವನಿಹಂಗಾದಲ್ಲದೀ ಕರ್ಮ
ಉತ್ತರಿಸದೆಂದೆನುತ ಕನಲುತ
ಳುತ್ತವತಿ ಶೋಕಾಗ್ನಿ ಕಂಗಳೊ
ಳೊತ್ತರಿಸೆ ನೋಡುತ್ತ ತನ್ನೊಳು ತಾನಱಿಯದಿದ್ದು ೩೨

ಪೋಪನಲ್ಲಿಯೆ ನಿಲುವನೆಯ್ದೆ ಪ್ರಾ
ಲಾಪಿಸುತ ಮರುಳಾದ ತೆಱದಿಂ
ದಾ ಪೊಳಲನಾತಂ ಪೊಱಮಡುವ ನೋಡುವನು ಮತ್ತೆ
ಆ ಪುರಕೆ ಮರಳೆಯ್ತಹನು ಗೌ
ರೀಪತಿಯ ಗುಡಿಯೊಳು ಪುಗುವನುಪ
ತಾಪಿಸುವ ಪೊಱಮಡುವನಾಗಳೆ ಬೀೞ್ವನೇಳುವನು ೩೩

ಆಡವಿಗೆಯ್ದುವನಲ್ಲಿ ಹಲುಬುವ
ನೆಡೆಗೆಡೆಗೆ ಶೋಕಾತುರದೊಳೊಂ
ದೆಡೆಯೊಳುಂ ಕಾಲ್‌ನಿಲ್ಲದೇ ಭ್ರಮೆಗೊಂಡು ತಿರುಗುತ್ತ
ಕಡು ಬಳಲುತೆಲೆ ಪೋಪ ಭಕ್ತಾ
ನುಡಿವುದೆನ್ನೊಡನೆನ್ನ ಪಾಪಂ
ಕೆಡುವುದೆಂದೋ ಕೆಲವ ವೃಷಭಾ ಹೇಳೆನಗೆ ವಿಧಿಯ ೩೪

ಚಂದನವೆ ಹೇಳೆಂದಿಗೆನಗೀ
ಚಂದವುಡುಗುವ ಚಂದವಂ ಮಾ
ಕಂದವೇ ಹೇಳೆನ್ನ ಮನಸಿನ ಕಂದಳಿವುದೆಂದೊ
ಮಂದಮತಿಯಾಗಿದ್ದೆನೆಲೆ ಪಿಱಪು
ಮುಂದ ಹೇಳು ಅಶೋಕೆಯಾಗಿಹು
ದೆಂದೆನಗೆ ನೀ ಹೇಳಶೋಕೆಯೆ ಸುಮ್ಮನಿರವೇಡಾ ೩೫

---

೧೨ (ಸ).

CC-0. Jangamwadi Math Collection. Digitized by eGangotri

ಬಸುಱಿಯೇ ಹೇಳ್ ಪೋಗಿ ಪರಮನ
ಬಸುಱಿನೆಂದಿಗೆ ಹುಗುವೆನರಳಿಯೆ
ಉಸುರುಸುರು ನೀನೆನ್ನ ಮೊಗವರಳಿಸುವ ಪರಿಯೆಂತೊ
ಸಸಿನವಹುದೇ ನಾಚಿ ಬಾಗಿವ
ಮುಸುಡೆನಗೆ ಹೇಳ್ ಬಾಗಿಯೇ ತಾ
ಪಿಸುವ ತಪಸೆನಗೆಂದು ಕೆಡುವುದು ತಪಸಿಯೇ ಹೇಳಾ ೩೬

ಬನ್ನಿಯೇ ಗುರುಕರುಣಿಸಿವನಿದೆ
ಬನ್ನಿ ನೀವೆನಲಾಗದೇ ಸುರ
ಹೊನ್ನೆ ಉಸುರಾ ನಿನ್ನ ಮಾತಿದು ಹೊನ್ನೆ ಬೇಳ್ಪರಿಗೆ
ಹೊನ್ನೆ ಹೊನ್ನಯ್ಯಗಳ ಮಗನಂ
ಮನ್ನಿಸಾ ಚೆನ್ನಂಗಿಯೇ ಆ
ಚೆನ್ನಯಂಗೊಲಿದಭವನೆಂದಿಗೆ ಚೆನ್ನ ಮಾಡುವನು ೩೭

ಮುತ್ತುಗವೆ ಮುತ್ತಪ್ಪೆ ಚಂಗಳೆ
ಅತ್ತಿಯೇ ನಾನಿಹಗಿಹುದು ನಿನ
ಗರ್ತಿಯೇ ತಱಿಯವೆ ಕರೆವುತಿರಲಿಂತಱಿಯದಿಹರೆ
ಮತ್ತಿಯೇ ಹೇಳೆನ್ನ ದುಃಖಿಕೆ
ಮತ್ತೆ ಪರಿಹರವಾವುದೋ ಉ
ನ್ಮತ್ತವೇ ದುಶ್ಚರಿತದಿಂದುನ್ಮತ್ತನಾದೆನಲಾ ೩೮

ನಾರಿಕೇಳವೆ ಕೇಳು ನಾರಿಯ
ಸಾರಬೋಧೆಯನಾದರಿಸದವಿ
ಚಾರಿಯಾದೆನು ನೆಲ್ಲಿಯೇ ಇನ್ನೆಲ್ಲಿಯದು ಬದುಕು
ಮಾರವೈರಿಯ ನಗರಿಗಾಗಳು
ಹಾರುವನು ನಾನಿಂದು ಕಾಲನ
ಘೋರ ನಗರಿಗೆ ಹೋದಡಾರ್ಯರು ನಗರೆ ಎಲೆ ನಗರೆ ೩೯

---

೧ ಚ (ಮ).

CC-0. Jangamwadi Math Collection. Digitized by eGangotri

ತಾಳವೇ ಈ ಶೋಕದುರಿಯಂ
ತಾಳಲಾಱೆನು ಮಾತುಳಂಗವೆ
ಹೇಳು ಮಾತುಗಳಂ ಬಳಿಕ ಬಳಿ ಮಾತುಗಳಿನಹುದೆ
ಬಾಳೆ ನೋಡಕಟಕಟ ಎನಗಿದು
ಬಾಳೆ ಎಲೆ ನಾರಂಗವೇ ನೀ
ಕೇಳು ಮುನ್ನಿನ ಕರ್ಮಕಿನ್ನಾರಂಗವಿಸುವವರು ೪೦

ಚಿಲ್ಲವೇ ಹೇಳಕಟ ಎನ್ನೀ
ಚಿಲ್ಲತನವೆಂದಿಂಗೆ ಪೂಣ್ಚುದು
ಸೊಲ್ಲು ತಗ್ಗಿಯೆ ಎನ್ನಳಲು ತಗ್ಗುವುದದೇತಱಿಲಿ
ಮಲ್ಲಿಗೆಯೆ ಹೇಳವಧಿಯಂ ನಿ
ಮ್ಮಲ್ಲಿಗೆಯ್ತಂದಿದ್ದೆನಲ್ಲಾ
ಮೊಲ್ಲೆಯೇ ಹೇಳಿದಕೆ ಮೊಲ್ಲೆಗನಾದೆನೇಗುವೆನು ೪೧

ಮರಗಳಿರ ನೀವಿಂತು ಮರವ
ಟ್ಟಿರವೆ ಹೇಳಿರೆ ವಿಧಿಯನೆನಗೇ
ಪರಿಯೊಳಿಲೆಗಳಿರೆಲೆಲೆ ಎನುತಂ ಕರೆವುತಿದ್ದೆನಲಾ
ಪರಿಪರಿಯ ಕಾಯ್ಗಳಿರ ಕಾಯ್ಕಾಯ್
ಹರಹರಾ ಎನಲಾಗದೇ ೧ಸದು೨
ಗುರುಭಜನೆ ಫಲಿಸುವುದದೆಂದೋ ಎಲೆ ಫಲಂಗಳಿರ ೪೨

ಭ್ರಮಿಸುತಿಪ್ಪ ಭ್ರಮರವೇ ಹೇಳ್
ಭ್ರಮಿಸುವೆನ್ನಯ ಭ್ರಮೆ ತಿಳಿವ ತತ್
ಕ್ರಮವದೇನೋ ರಾಜಹಂಸವೆ ನಿನ್ನ ಗತಿಯಹಗೆ
ಎಮಗೆ ಗತಿಯಳವಡುವುದೆಂದೋ
ಸಮಧುರಂ ಮಿಗೆ ನುಡಿವ ಗಿಳಿಯೇ
ಸಮತೆಯಿಂದವೆ ನುಡಿವ ನುಡಿಯೋ ನುಡಿಗಳೆಂದಹುದೊ ೪೩

೧–೨ ಸವ್ (ನ. ಪ).

CC-0. Jangamwadi Math Collection. Digitized by eGangotri

ವನಮಯವೂರವೆ ಘನಮಯವೂರಗೆ
ಮನಹಿತಂ ಕರುಣಿಸುವನೆಂದೋ
ಎನಗೆ ಪರಪ್ರಷ್ಟಿಯೆ ಸದಾ ಪರಪ್ರಷ್ಟಿ ದೊರಕುವುದೆ
ಬನದ ಪಕ್ಷಿಗಳಿರ ವಿಪಕ್ಷಂ
ನೆನೆಯಲಾಗದು ಭಕ್ತಿಪಕ್ಷದ
ಮನವನೆಂದೀವನೊ ಲಿಪಂ ತಾನೆನುತವೆಯ್ತಂದು ೪೪

ದಿಪ್ರಮಾಗಿ ಮನೋನ್ನತಿಯೊಳಿಪ
ವಪ್ರಮೇ ಮೌನದೊಳಿರವೆ ಹೇ
ಳೀ ಪ್ರಮಾದಂ ಮಾಣ್ಬುದೆನಗಾವ ಪ್ರಮಾಣದಲಿ
ಸುಪ್ರಸನ್ನದ ಗೋಪುರವೆ ಗೌ
ರೀಪ್ರವರನಿಪ್ಪರಮನೆಗೆ ಮಜಿಕಿ
ವಪ್ರತಿಮಗೋಪುರವ ನಾನೆಂದಿಂಗೆ ಕಾಯ್ದಿಪ್ಪೆ ೪೫

ರುದ್ರನಂ ಕಂಡಿಪ್ಪೆ ನೀ ಮುಖಿ
ಭದ್ರವೇ ಹೇಳೀ ಉಪದ್ರಂ
ಭದ್ರಮಾಗಿಹುದೆಂದಿಗೆನಗೆಲೆ ನಂದಿ ಮಹಕಾಳ
ರುದ್ರರಿರ ನಾನಾವ ಕಾಲದೊ
ಳದ್ರಿಜೇಶನ ಪದಯುಗವನು
ದ್ಯದ್ರೃತಿಯೊಳರ್ಚಿಸಿ ಬದುಂಕುವ ಪುಣ್ಯವಾದಪ್ಪುದೊ ೪೬

ಮುಂದೆಸೆಯೊಳಿಹ ನಂದಿಕೇಶ್ವರ
ನಂದಿಸಯ್ಯ ಮದೀಯ ತಾಪವ
ನಿಂದು ಕರುಣಿಸು ವೀರಭದ್ರಾ ವೀರಭಕ್ತಿಯನು
ನಂದಿತಪ್ರಮಥರಿರ ಎನ್ನಘ
ವೃಂದವೆಂದೋ ಪ್ರಮಥನವಹುದು
ಎಂದಿಗೆನಗೀ ಪೀಡೆ ಹರಿಗು ಪುರಂತರಿರ ಹೇಳಿ ೪೭

CC-0. Jangamwadi Math Collection. Digitized by eGangotri

ಏಲೆ ಅಸಂಖ್ಯಾತರಿರ ಈ ಪು
ಣ್ಯಲನವಧರಿಸಿ ಸಲಹಿ ಭಕ್ತರು
ಗಳಿರ ಹೇಳಿರೆ ಎನ್ನ ವಿಧಿಗಿನ್ನಾವವಧಿಯುಂಟು
ಹಲವನುಸುರಲದೇಕೆ ನಾನೊಡ
ಲಳಿದು ಶುದ್ಧನು ಶಂಕರಾಭವ
ಕುಲಭಯಂಕರ ಎನುತೊಡನೆ ಗುರುಭಕ್ತಿಯಾಂಡಾರಿ ೪೮

ಎರಡು ಕಂಗಳನಾಗಳಂತು
ಬ್ಬರಿಸಿ ಕಳಚಿ ಬಳಿಕ್ಕವಳುಕದೆ
[೧]ಭರದೊಳೊಡಲಂ[೨] ಕಡಿದುಕೊಳಲನುವಾದುದಕೆ ಮುನ್ನ
ಒರೆಯಲೀ ಪೃತ್ತಾಂತವನು ಕೇ
ಳ್ದುರವಣಿಸಿ ಬಂದಾ ಸುವೃತ್ತನು
ಸ್ಥಿರಸುಚಿತ್ತನು ಸ್ವಗುರುಹಸ್ತಾಗ್ರಜನಮಳಚರಿತ ೪೯

ತನ್ನ ತಮ್ಮನ ಸಮ್ಮುಖದೊಳಾ
ಸನ್ನವಾಗಲೊಡನೆ ಹೆದಱಿ[೩]ಯಾ
ತಂ ನಯ ವಿನಯ ಭಯಸ[೪]ಭಕ್ತಿಯು ಸಂಭ್ರಮಿಸುತಿರಲು
ಸನ್ನಿಧಿಗೆ ಬಂದಗ್ರಜಾತನ
ಪನ್ನಿನವಲಿ ಬಿದ್ದು ಹೊರಳು
ತ್ತಂ ನರಳುತೊಱಿಲುತ್ತ ಬಾಯ್ಬಿಟ್ಟಳಲುತ್ತಿರಲು ೫೦

ಭಲಭಲರೆ ಗುರುಭಕ್ತಿತಿಲಕಾ
ಭಲಭಲರೆ ಗುರುಭಕ್ತಿಪುಳಕಾ
ಭಲಭಲರೆ ಗುರುಭಕ್ತಿನಿಶ್ಚಳಕರತಳಾಮಳಕಾ
ಭಲಭಲರೆ ಗುರುಭಕ್ತಿ[೫]ಬೀಜಾ[೬]
ಭಲಭಲರೆ ಗುರುಭಕ್ತಿತೇಜಾ
ಭಲಭಲರೆ ಗುರುಭಕ್ತಿರಾಜಾ ಕಳಸವಾಯಿತ್ತು ೫೧

೧–೨ ಭರದಿ ತನುವಂ (ಧ. ಬ). ೩ ಸು (ಧ). ೪–೫ ಜೀವಾ (ಮ).

CC-0. Jangamwadi Math Collection. Digitized by eGangotri

ಏಳು ಗುರುಭಕ್ತಿಪ್ರತಾಪಾ
ಏಳು ಗುರುಭಕ್ತಿಪ್ರದೀಪಾ
ಏಳು ಗುರುಭಕ್ತಿಸ್ವರೂಪಾ ಸತ್ಯಸಲ್ಲಾಪ
ಏಳು ಕುಂದದೀರೇಳು ಕಂದದಿ
ರೇಳು ಬೆದಱದಿರೇಳು ಹೆದಱದಿ
ರೇಳು ನೀನಿನ್ನೇಳು ನಿನ್ನಲಿ ಕೊಱತೆಯಿನಿತಿಲ್ಲ ೫೨

ಸಲೆ ಭವದ್ಗುರುಭಕ್ತಿಯೆಸೆವಾ
ಗಳು ಸಮಸ್ತಪ್ರಮಥವರರ ಕ
ವಳಿಗೆಗೇಱಿತು ದುಃಖಿಗೊಳದಿರು ತಾಪವುಡುಗುಡುಗು
ಅಳಲುವೇಡೇಳೆನುತ ತಮ್ಮನ
ನೊಲಿದು ಕೈವಿಡಿದೆತ್ತಿ ಘಮ್ಮನೆ
ಪುಳಕಿಸುತ ಬಿಗಿದಪ್ಪಿ ಶಿರವನುರಸ್ಥಳದೊಳೊತ್ತಿ ೫೩

ಸುರಿವರುಣಬಾಷ್ಪಾಂಬುವಂ ನಿಜ
ಕರದೊಳಂತೊಡನೊಡನೆ ತೊಡೆವುತ
ನಿರತಭಕ್ತಿಯೊಳಾ ಗುರುಸ್ವಾಮಿಯ ಚರಣಯುಗವ
ಸ್ಮರಿಸಲೊಡನಾಂಡಾರಿಗಾಕ್ಷಣ
ಮರಪು ಕಂಗಳು ಥಳಥಳಿಸಿದವು
ಹರಗಣಂಗಳುಘೇ ಎನಲು ಪುರಜನರು ಕೀರ್ತಿಸಲು ೫೪

ಅವಿರಳಾಮಳಭಕ್ತಿಯಿಂ ತತ್
ಶಿವಸಹೋದರನಾ ಸುವೃತ್ತನು
ಭುವಿಯೊಳಾ[೧] ಗುರುಭಕ್ತಿಯಾಂಡಾರಿಗೆ ನಯನಯುಗವ
ಭುವನವಱಿಯಲು ಕೊಟ್ಟನಿಂತು
ಚ್ಛವದೊಳಾ ಅಯ್ಯನ ಸುಚಾರಿ
ತ್ರವನೊಸೆದು ಪಲಿಸಿದಡೆ ಕೇಳಿದಡಹುದಭಿಮತಾರ್ಥ ೫೫

ಅಂತು ಸಂಧಿ ೪೪ಕ್ಕಂ ಪದಗಳು ೨೫೨೧ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

---

೧ ಯ (ಘ. ಧ. ನ. ಪ). ೨–೩. ಭವನ ಭಕ್ತಿಯೊಳಾ (ನ).

CC-0. Jangamwadi Math Collection. Digitized by eGangotri

ಸಂಧಿ : ೪೫

*

ಸೂಚನೆ : ಉರಗದಷ್ಟದ ನೃಪಕುಮಾರನ
ಹರಣಮಂ ಕೊಟ್ಟವರನೆಲ್ಲಂ
ಹರಭಜಕರಂ ಮಾಡಿ ಪೊರೆದನು ವೇಮನಾರಾಧ್ಯ

ಶೈವಸಮಯಾಚಾರ್ಯ್ಯಪಾರ್ಯ್ಯನು
ಭಾವ[೧]ಭವಹರ[೨]ಭಕ್ತಮದದಂ
ತಾವಳಂ ಬೆ[೩]ಲಿದೇವಿಯರ ವೇಮಯ್ಯನಘಹರನು
ಪಾವನಾತ್ಮನು ಪಾಶದಳನಕ
ಳಾವಿದಂ ದಿವ್ಯಾಗಮಪುರಾ
ಣಾವಿರಳಪರಮಾರ್ಥವೇತ್ತನು ಚಿದಮಳೋದಾತ್ತ ೧

ಅತಿಶಯದ ಚತುರ್ವೇದಪಾರಂ
ಗತನತು[೪]ಳಶಿವಧರ್ಮಮಾರ್ಗಾ
ಯುತಪವಿತ್ರಚರಿತ್ರನುತ್ತಮಭಕ್ತಿಯುತಚಿತ್ತ
ಕ್ಷಿತಿಪತಸ್ಕರಮೃಗಜಲಾನಿಲ
ಹುತವಹೋರಗವೃ[೫]ಶ್ಚಿಕಭಯ
ಪ್ರತತಿಮರ್ದನನಸಮಶಾಪಾನುಗ್ರಹಸಮರ್ಥ[೬] ೨

ರಕ್ಷಿತಾರ್ಯ್ಯನು ಪ್ರಕಟತರಪಂ
ಚಾಕ್ಷರೀ[೭]ವರ[೮]ಮಂತ್ರಸಿದ್ಧ[೯]
ಪ್ರಕ್ಷಮಂ[೧೦] ಕರುಣಾಕಟಾಕ್ಷಪ್ರೇ[೧೧]ಕ್ಷಣಾಲೋಲ
ಅಕ್ಷಯದ ಧರ್ಮಾರ್ಥಕಾಮವಿ
ಮೋಕ್ಷದೀಪಿತಮಾರ್ಗ ಸಂತತ
ಲಕ್ಷಣಸ್ಥಾಪಿತ ಸಮುನ್ನತಮಹಿತ ಸಿತಕೀರ್ತಿ

---

* ರಾಗ : ಶ್ರೀರಾಗ (ಅ, ಚ, ಡಾ, ಥ); ರೇಗುಪ್ತಿ (ಮ); ವರಾಳಿ (ಪ); ಶಂಕಾಭರಣ (ತ). ೧–೨ ಭಯದೂರ (ಪ). ೩ ಬ (ನ, ಪ). ೪ ಮ (ಥ). ೫ ಗ್ರ (ತ, ನ, ಪ, ಸ). ೬–೭ × (ನ, ಪ). ೮ ದ್ವಂ (ನ, ಪ). ೯ ಯಂ (ನ, ಪ). ೧೦ ಷೇ (ಥ).

CC-0. Jangamwadi Math Collection. Digitized by eGangotri

ನಮಿತಜನಕಲ್ಪಾವನೀಜನು
ನಮಿತಜನಮೃತ್ಯುಪ್ರಹರಣಂ
ನಮಿತಜನಘನರೋ[೧]ದ್ಯತಾಯುಷ್ಯಪ್ರದಾಯಕನು
ಅಮಿತವೀರವ್ರತನಿಯತವಿ
ಶ್ರಮ ಸದಾಚಾರೈಕಭಕ್ತಿ
ಪ್ರಮುದಿತಾತ್ಮಕನೆನೆ[೨] ಜನರು ಕೀರ್ತಿಸಲು ವರ್ತಿಸುತ ೪

ಒಂದು ದಿನ ನೆರೆವೂರೊಳಿದ್ದೊಲ
ವಿಂದರಸನೊಬ್ಬಂ ಮದುವೆಯಾ
ಗಿಂದುಮುಖಿಯುಂ ತಾನು ಹರುಷಂ ಮಿಗೆ ರಥವನೇಱಿ[೩]
ಬಂದು ಬಂದಾ ವೇಮವಿಭುವಂ
ಮುಂದೆಯಾತನು ಕಂಡು ಜೋಹಾ
ರೆಂದು ಹೊಡವಡಲಾ ಬುಧವರಂ ತೋಟದೊತ್ತಿನಲಿ ೫

ಪ್ಪಗಳಂ [೪]ತವೆ[೪] ಕೊಯ್ದು ಧರಣೀ
ಭಾಗದೊಡೆಯನನಂತು ಕಾಣುತ
ನಾಗತಾತೀತಪ್ರವರ್ತಜ್ಞಾನನಿಧಿಯಾಗಿ
ಮೇಗೆ ಅಲ್ಪಾಯುಷ್ಯವಾತಂ
ಗಾಗಿಹುದನಱಿದಾತನಂ ತಾ
ನಾಗಳಾಶೀರ್ವಾದ[೫]ಮಂ ಕೊಡಲೊಲ್ಲದಗಲಿರಲು ೬

ವಿನತನಾದೆನು ಹರಸಲೊಲ್ಲನು
ವನಿತೆ ನಗುವಳೊ ಎನುತ ಲಜ್ಜಿಸಿ
ಜನಪನೆಂದನು ಕೇಳನೇಕೈ ಯೆನ್ನ ಜೋಹರವ
ಅನಘಚಿತ್ತನು ಕೇಳಿದಡದೇ
ಕಿನಿತಗಲಿ ಹೋದನು ಬಳಿಕ ನೋ
ಡನೊ ಕರಂಗಳ ನಾ ಮುಗಿದುದಂ ನೋಡದಡೆ ತಾ[೬]ನು ೭

೧ಲೋ (ಬ). ೨ನುತ (ಪ). ೩–೪ಕೊಯ್ (ತ). ೫–೬ರ್ವಚನ (ತ, ಪ). ೬ನಾ (ನ, ಪ).

CC-0. Jangamwadi Math Collection. Digitized by eGangotri

ಮತ್ತಜಿಪಗಿನೆಂದೆನುತವಂ ಕರ
ವೆತ್ತಿ ನಮಿಸಿದಡಯ್ಯನುಂ ಬಾ
ಯಿತ್ತದಿಹುದತಿಗರ್ವವೆನುತಂ ಬಂಡಿಯಿಂದಿಳಿದು
ಿಹತ್ತಿಗೆಯ್ತುಂಿದೆರಡು ಕರಗಳ
ನೆತ್ತಿ ಜೋಹಾರಯ್ಯ ನಿಮಗೆಯೆ
ನುತ್ತಿರಲು ತಾವಾತನಂ ಮೇಣ್ ಪರಸದಿರುತಿರಲು ೬

ಐಿಸಜಿಂ ಹೋಗದೆ ಜನಪಸುತ
ನೀಸುಲಜ್ಜೆಯುಮೀಸುಕೋಪಮ
ದೀಸುಭಕ್ತಿಯುಂ ತೋಜಿುತಿರಲಿಂತೆಂದನಯ್ಯಂಗೆ
ಲೇಸೆನಿಸಿದಭ್ಯುದಯಕರರು
ಲ್ಲಾಸಭಕ್ತಿರತಿಸ್ಥಿರರು ಧರ
ಣೀಸುರರು ಹರವೇಷಧರರಘಹರರು ಚಿದ್ವರರು ೭

ಹಿರಿಯರುಗಳುತ್ತಮರು ಸದಯಾ
ಪರರು ಪೂಜ್ಯರು ಪರಮಮಾಹೇ
ಶ್ವರರು ನೀವೆಂದಾಂ ನಮಿಸೆ ಲೇಸಾಗಲೀ ಎಂದು
ಹರಸಲೊಲ್ಲದೆ ಸುಮ್ಮನಿಹುದಿದು
ಪುರುಷತನವೇ ಗುಣವೆ ಪೆಂಪೇ
ಗರುವಿಕೆಯೆ ಗಂಭೀರತೆಯೆ ಸನ್ಮಾರ್ಗವರ್ತನವೆ ೮

ಈ ವಿನಿರ್ಮಳಮೂರ್ತಿಯೀ ಕರು
ಣಾವಲೋಕನವೀ ಮಹತ್ವತೆ
ಯೀ ವಿಶೇಷಜ್ಞಾನವೀ ಗೌರವಮಹಾವೇಷ
ಈ ವಿನುತಸಿತಕೀರ್ತಿಯೀ ಸ
ದ್ಭಾವಶುದ್ಧತೆಯೀ ಪ್ರಸಿದ್ಧತೆ
ಯೀ ವಿಬುಧಸನ್ಮಾನತೆಯು ನಿಮಗೀಯಹಂಕೃತಿಯೆ ೯

---

೧ ವೆ (ಕ. ಚ); ದ (ತ. ಥ. ನ. ಪ. ಮ). ೨–೩ ಹತ್ತಿರಕೆ ಬಂ (ಅ). ೪ ಈ (ಥ. ಪ. ಸ).

CC-0. Jangamwadi Math Collection. Digitized by eGangotri

ಇಂದು ನೀವೆನ್ನಂ ಪರಸವಡೆ
ಕುಂದುವುದೆ ಇನಿತಾಯುವದು ನೀ
ವಿಂದು ಹರಸಿದಡೆನ್ನನೆನಗಿನಿತಾಯು ಹೆಚ್ಚ್ವುದೆ
ಇಂದು ಬಾಳದವಂದಿರಂ ನೀ
ವೆಂದುವುಂ ಬಾಳಿಸುವಿರೇ ಹರಿ
ತಂದು ತನ್ನಂ ಹೊಡೆವ ಮೃತ್ಯುವು ದಾಸಿಯೇ ನಿಮಗೆ ೧೨

ಸರಸಿಜಾಸನನಂದು ನೊಸಲಲಿ
ಬರೆದ ಲಿಪಿ ಹೆಡತಲೆಗೆ ಹೋಹುದೆ
ಧರಣಿತಳದೊಳು ತನ್ನ ಮುನ್ನಿನ ಕರ್ಮವೆನಗಲ್ಲಿ
ಮರಳಿ ತೊಡೆಯೆಲು ಕಾಯಲುಂ ಪಂ
ಕರುಹಗರ್ಭಂಗಾಗದೆಂದಡೆ
ನರರ ಪವಣೇನಾವಱಿಯಿವಾವೆಡೆಯೊಳೀ ಪರಿಯ ೧೩

ನೀವೆ ಲೋಕಕೆ ಗುರುಗಳಹಿರೇ
ನೀವೆ ಹೀಂಗಿದ್ದಡೆ ಕೃತಿಮತಿಗ
ಳಾವಗಂ ಮನ್ನಿಸುವರೇ ಹೊಡವಡುವರೇ ನಿಮಗೆ
ನಾವು ನಮಿಸಲು ಸುಮ್ಮನಿಪ್ಪುದ
ದಾವ ಮಾರ್ಗವು ಹರಸಲಾಗದೆ
ನೀವು ಹರಸಿದ ಬಾಯ್ಗೆ ಕೋರಂ ಕೊಂಬರೇ ಹೇಳ ೧೪

ನಿಮ್ಮ ಹಿರಿಯತನಂಗಳಾಗಳು
ನಿಮ್ಮೊಳೇಯಿರಲೆಮಗವೇತಕೆ
ಎಮ್ಮುವಂ ಹರಸಲ್ಕೆ ಬುಧರೇನಿಲ್ಲವೇಯೆನುತ
ಹಮ್ಮಿನಿಂ ನೃಪನೆಂಬ ಮಾತಿಗೆ
ಸುಮ್ಮನಿರಲೇಕನ್ನೆನುತ ಎಂ
ದಂ ಮಹಾತ್ಮನು ನಾಳೆ ಕೇಳ್ ಮಧ್ಯಾಹ್ನಸಮಯದಲಿ ೧೫

CC-0. Jangamwadi Math Collection. Digitized by eGangotri

ಮರಣಿವಾದುದಿವಶ್ಯಮುಂ ನಿನ
ಗರಸ ಸಿಂತಪ್ಪ ಲ್ಪಜೀವಿಯ
ನೊರೆಯಲೀಂ ತಾ ರಾಯನಾದಡೆ ಮುನ್ನವಚಿದಚಿದು
ಹರಸುವೆನೆ ನಾನೀಗಳಾಯು
ರ್ವಿರಹಿತನನೆಂತಯ್ಯ ಶಿವಭ
ಕ್ತರು ಹರಸುವರು ಬಳಿಕ ತಾನೀ ಮಾರ್ಗದಿಂದವರು ೭೬

ಚಿರದಯಾಮತಿಯಿಂದ ಭಾವಿಸಿ
ಪರಸಿದಡೆ ದೀರ್ಘಾಯುವಾಗಿರೆ
ಕರುಣಿಸಲುಬೇಕಿದುನಿಮಿತ್ತದೊಳೆನ್ನ ನಾಲಗೆಗೆ
ಹರಕೆ ಬಾರದು ನಿನ್ನ ಮುನ್ನಿನ
ಹಿರಿದಹ ಪ್ರಾರಬ್ಧವೆಂತೋ
ಮರಣವಪ್ಪುದು ನಾಳೆ ತಪ್ಪದು ಹೋಗು ನೀನೆನಲು ೭೭

ಭೂಮಿಪಂ ಕೋಪಿಸುತಪೆಂದನು
ವೇಮನಯ್ಯಂಗೊಲಿದು ಕಾಯ್ದನೆ
ಕಾಮನಂ ಹರ ಮುನಿದು ಕೊಂದನೆ ತಜ್ಜಲಂಧರನ
ಪ್ರೇಮದಿಂದಂ ತನ್ನ ತಲೆಯಂ
ಹೇಮಗರ್ಭಂ ಕಾಯ್ದನೇ ಮದ
ಸಾಮಜಾಸುರನಂ ಮುನಿದು ತಾಂ ಕೊಂದನೇ ಮುನ್ನ ೭೮

ಮುಳಿದಡಾಗಳೆ ಕೊಲುವನೊಲಿದಡೆ
ಸಲಹುವಂ ಭಾಳಾಕ್ಷನಲ್ಲದೆ
ಕೊಲುವಡಂ ಕಾವಡೆ ಉಳಿದ ಮನುಜರಿಗದೇಕಹುದು
ಮಲಹರನ ಲಾಂಛನವನಾಗಳು
ತಳೆದು ಸುಳಿವವನಲ್ಲದೇ ಜನ
ರಿಳೆಯೊಳಭಿವಂದಿಸಿದ ಮಾತ್ರದಿ ಹರನು ನೀನಹಡೆ ೭೯

೧–೨ ವಪ್ಪು (ನ, ಪ, ಬ). ೩–೪ ಕೀಳಿಂತ (ಥ). ೫–೬ ವಾದುದು (ತ, ಥ, ಸ).

CC-0. Jangamwadi Math Collection. Digitized by eGangotri

ನಿನ್ನ ಮಾತುಗಳಿಲ್ಲವುಂ ದಿಟ
ವಿನ್ನು ನಾಳಿನ ದಿನಕೆ ಸತ್ತಡೆ
ನನ್ನಿಯುಳ್ಳಯ್ಯಗಳು ಲೋಕಕೆ ನೀವೆ ಹೋ ಎನುತ
ಚುನ್ನವಾಡುತ ಹೋಗಿ ನೃಪತನ
ಯಂ ನಿಜಾಂತರ್ಮಂದಿರದೊಳೀ
ತನ್ನ ಸತಿಯುಂ ತಾನು ಸುರತಸುಖಾನುಭೋಗದಲಿ ೨೦

ಸರಸಭಾಷಾನ್ಯೋನ್ಯಮದನ
ಸ್ಫುರಿತಸನ್ಮೃದನವ್ಯಲೀಲಾ
ಪರವಶದಿ ಸುರತಾಂತದೊಳು ತಾವಲಸಿ ನಿದ್ರಿಸಲು
ಆರಸು ಪವಡಿಪ ತೂಗುಮಂಚದ
ಸರಪಳಿಯ ಬಳಿವಿಡಿದು ಪಟುಭೀ
ಕರವಿಷೋರಗವಾಗಳೊಂದುರವಣಿಸಿ ಹರಿತಂದು ೨೧

ಪೊಡವಿಯೊಡೆಯನ ಕೈಯ[೧]ಹದಡಂ[೨]
ಕಡು ವಿಷಂ ಮಿಗೆ ಕಚ್ಚಿ ಮೊಱಿ[೩]ವುತ
ಹೊಡಮಗುಚಿದನಿತಱಿ[೪]ಳಗಾ ಸತಿ ನಿದ್ರೆ ತಿಳಿದೆದ್ದು
ನಡನಡುಗಿ ಹಾ ಎನುತೊಱಲುತಿಹ
ನಿಡುದನಿಗಳಂ ಕೇಳಿ ಪತಿಯೆ
ದ್ದೊಡನೆ ರಕ್ತಂ ಸುರಿವ ಕರವಂ ಸರ್ಪನಂ ಕಂಡು ೨೨

ಆಗ ಹೌವನೆ ಹಾರಿ ಮೂರ್ಛಿತ
ನಾಗಿ ಸತ್ತನು ಸಾಯಲೊಡನತಿ
ವೇಗದಲಿ ಗಾರುಡಿಗರನುಭವವೈದ್ಯರನು[೫]ಶಾಸ್ತ್ರ[೬]
ಯೋಗವೈದ್ಯರು ಬಂದು ಮಂತ್ರಿಸಿ
ನಾಗವಿಷದಿಂ ಮಡಿದ ರಾಯನ
ನಾಗದಯ್ಯೋ ತಮ್ಮ ಕೈಯಲೆನುತ್ತ ತೊಲಗಿದರು ೨೩

೧–೨ ಹದಜಂ (ಕ, ಚ, ಡಾ, ನ, ಪ); ಹಗರಂ (ಅ, ತ, ಥ, ಮ). ೩–೪ ಶಸ್ತ್ರಾ (ಧ, ಸ).

CC-0. Jangamwadi Math Collection. Digitized by eGangotri

ಮತ್ತೆ ಗಾರುಡಮಂತ್ರಸಿದ್ಧನು
ದಾತ್ತನೊಬ್ಬನು ಬಂದಕಟಕಟೆ
ನುತ್ತ ಮಱುಗುತ ಸರ್ಪದಷ್ಟದ ಭಾವಮಂ ನೋಡಿ
ಎತ್ತಣಿಂದೆಯ್ತಂದು ಫಣಿ ಕ
ಚ್ಚಿತ್ತೊ ಹರಹರ ಕಾಲವದು ತುಂ
ಬಿತ್ತಲಾಯಿದಕೇನ ಮಾಡುವೆನೆನುತವಾ ಜೋಗಿ ೪೪

ವಿಮಲನಾರ್ಯಕಶಿಲಮಹೋರಗ
ವಿಮಳವಾಸುಕಿ ಕೋಟನಖಿಲಪಿ
ಕುಮುದ ಸರ್ವರ್ತಕ ಮಣಿಂಜಯ ಕಂಬಲಾಶ್ವತರ
ಸುಮಣಿ ನಾಗಪುರಾಣ ವಾಮನ
ಸುಮನಗುಹ ಕುಮುದಾಕ್ಷ ತಕ್ಷಕ
ವಿಮನಮುಖಿದ್ಗಲ ಪುಷ್ಪದೌಷ್ಟ್ರ ಬಲಾಕ ಪಾಂಡುರಕ ೪೫

ಕಾಲಿಕೈರಾವತ ಧನಂಜಯ
ನೀಲಪುಂಡ್ರಕ ಹವ್ಯಕರ್ಣಾ
ನೀಲಕರ್ಕೋಟಕ ಹವಿರ್ಮುಖಿ ಕುಧರ ಧೃತರಾಷ್ಟ್ರ
ಕಾಲಿಯಪರಾಜಿತ ವಿಭಾಕರ
ಶಾಲಿ ಪಿಂಡಪತಂಗಕಂಧರ
ಕೈಲಿಕಾಸುತ ಶಂಕಪಾಳ ಕುಹರ ಸಬಲಮುಖ್ಯ ೪೬

ಪನ್ನಗಂಗಳು ಸಾವಿರವಱಿಂಗಳ
ಗುನ್ನಿತಪ್ಪಿಫಣಿಗಳೆನಲ್ಕೆ ಬ
ಲಂ ನಿಗುರ್ದಪವೆಂಟು ಚಾವಿಗಳಿಗೆ ಪತಿಗಳಾಗಿ
ಉನ್ನಿಸಿದ ತಮತಮ್ಮ ಜಾವಳಿಗ
ಳಿಂ ನೆಗಳ್ದು ಕಚ್ಚುವವನಿತಕೇ
ಭನ್ನಿಕಾಯಂ ಗಾರುಡೌಷಧ ಮಂತ್ರತಂತ್ರಕ್ಕೆ ೪೭

---

೧ ತಿ (ಬ, ಮ). ೨ ಪ್ಪ (ನ, ಪ). ೩ ಸು (ತ, ಮ). ೪–೪ ತಾಷ್ಟ್ರ (ತ, ಥ). ೫–೫ ಪಾಲ್ಕ (ಅ, ಕ, ಡಾ, ತ, ಥ, ಬ, ಸ). ೬ ತಿ (ತ, ಮ).

CC-0. Jangamwadi Math Collection. Digitized by eGangotri

ಪರಮಮೃತ್ಯುವದುಳಿಯೆ ತದ್ವಿಷ
ಪರಿಹರಿಸುವುದು ಮತ್ತೆಯುಂ ವಿ
ಸ್ತರಿಸೆ ೧ಗಜನುಂ೨ ದುರ್ಮುಖಂ ಮಿತ್ರಾರಿರೇಣುಕನು
ದುರುಳಜಿನಕಂ ಸ್ವರ್ಗಕಂ ದು
ರ್ಧರಕುಳಿಕನುಂ ದಂಡಿಪಾದಾ
ದ್ಯುರುತರದ ಕಿಲ್ಬಿಷದ ಫಣಿಗಳು ಲಕ್ಷ ಸಂಖ್ಯೆ೩ಯವುಳ್ ೨೮

ಕಾಲಮೃತ್ಯುವದೊಯ್ಯದಿರ್ದಡೆ
ಕಾಲಕಿಲ್ಬಿಷಪನ್ನಗಂಗಳು
ಮೇಲೆ ಗಾರುಡಕರ್ಮದಿಂದಂ ನುಡಿಯಲಱಿಯದಡೆ
ಕೀಲಿಸುವ ಮಂತ್ರೌಷಧಾದ್ಯನು
ಕೂಲದಿಂ ತೊಲಗುವುದು ಬಳಿಕೀ
ಕಾಲವೀ ಕುಲವಿನಿತು ಪಲ್ಲಿನ ಯುಗವಿದೆಂದರುಹಿ ೨೯

ತವತವನು೪ಗಳು ತಪ್ಪದಿರೆ ಕ
ಚ್ಚುವ ಮಹಾಪ್ಪಫಣೀಶ್ವರಾಂಶವ
ಪವನ ಭಕ್ಷಣರಾಜಿ ಗಾರುಡಮಂತ್ರಸಂಸ್ಕಾರ
ವಿವಶದಿಂದಾ ವೇಷವದು ಮಾ
ನವನ ಮೇಲಕೆ ಬಂದೊಡನೆ ಹೇ
ಳುವದನಾಗತವಂ ವಿಷಂ ತೊಲಗಿಸುವುದಾತಂಗೆ ೩೦

ಕಾಲಮೃತ್ಯುವದಾಗದಿರ್ದಡ
ಕಾಲಮೃತ್ಯುವದಾದಡಂದಂ
ತಾಳಿಯೆಲ್ಲಂ ನಟ್ಟಡಂ ನರನಿಂತು ಮಾಣೆಪಡೆ
ಮೇಲೆ ಬೆಂಕಿಯ ಶಾ೫ಖಿದಿಂ ಕೀ
ಲಾಲದಭಿಷೇಕಂಗಳಿಂದನು
ಕೂಲವಾದಡೆ ಲೇಸಹುದು ಪಲ್ಲೊಂದು ನಟ್ಟಡದು ೩೧

೧–೨ ಜಗನುಂ (ಥ. ಸ). ೩–೪ ಗಳು (ನ. ಪ). ೫ ಸು (ತ). ೬ ಸೇ (ತ. ಪ, ಸ).

CC-0. Jangamwadi Math Collection. Digitized by eGangotri

ಘೋರತರಮಂತ್ರಂಗಳಿಂ ಪರಿ
ಹಾರವೂಱಿದಡೆರಡು ಪಲ್ಗಳು
ಸಾರವೆನಿಪೌಷಧವಿಧಾನದಿ ಮಾಣ್ಗು ಮಾನವರ
ಕ್ರೂರದಂತತ್ರಿತಯವೂಱಿಲು
ಭಾರವದು ಪಲ್ಮಾಲ್ಕು ನಟ್ಟಡೆ
ತೀರ್ದೆಂತಾ[೨] ಮಂತ್ರತಂತ್ರೌಷಧವಿಧಿಗಳಿಂದ ೮

ಹರಿವಿರಿಂಚ್ಯಾದಿಗಳಿಗಾದಡೆ
ಆರಿದರಿದು ಕಾಯಲ್ಕೆ ಬಳಿಕೀ
ಉರಗವಿದು ಕರ್ಕೋಟಕನ ಬಗೆಯಿದಱಿ ಹಲ್ಲುಗಳು
ಎರಡೆರಡು ತಟವುಚ್ಚಿದವು ಶಂ
ಕರನೆಂಪಕಂಕಣನಭವನ
ಕ್ಷರನಸಮನೇತ್ರನು ಯಮಹರನು ಮೃತ್ಯುಭಯಹರನು ೯

ಕಾಯಭವರಿಪು ಕಾಲಕಂತನು
ಕಾಯಲಾಪನೊ ಆತನುಂ ಮೇಣ್
ಕಾಯಲಾಱಿನೊಯೆಂಬೆ ಸಂಶಯವೆನುತವೆಯ್ದಿದರು
ಆಯವಸರದೊಳಾರ್ತರಾವನಿ
ಕಾಯಮುಂ ಹಾಹಾ ರವಂಗಳ
ಪಾಯದಿಂ ವಕ್ಷಸ್ಥರಾವಂಗಳು ಪಿರಿದು ಮೊರೆಯೆ ೧೦

ಪರಿಜನಂಗಳು ಪುರಜನಂಗಳು
ನೆರೆದು ಮಿತ್ರಜನಂಗಳಿಷ್ಟರು
ಪಿರಿದಳುತ್ತಿರೆ ಬಂದೊಡನೆ ನಿಶ್ಚೈಸಿ ಸತಿ ತನ್ನ
ವರನ ಶಬವಂ ನೋಡಿ ಶೋಕಾ
ತುರದೊಳಾಯಯ್ಯನ ವಚನವದು
ನಿರತವಾಯ್ತೆನುತಾ ಪ್ರಸಂಗವನಾಗ ಹೇಳಲ್ಕೆ ೧೧

೧–೨ ದೆಮ್ಮಯ (ತ, ಥ, ಪ).

CC-0. Jangamwadi Math Collection. Digitized by eGangotri

ಕೇಳಿ ತಾಯ್ತಂದೆಯರು ಹಿತವರು
ಫೋಳಿಡುತ್ತಿರಲೇತಕಿನ್ನೇ
ಳೀಳಿ ನಾವೆಯ್ದೆಲ್ಲರುಂ ಮೊಱೆವೊಗುವವಯ್ಯಗಳ
ಆಲಿಸುವನೀ ಹುಯ್ಯಲಂ ಕರು
ಣಾಳು ಕಾವಂ ಶರಣುವೊಕ್ಕಡೆ
ಬಾಳಿಸುವನೀ ಹೆಣನನವರ್ಗಳ ಮುಂದೆ ಹಾಯ್ಕಿದಡೆ ೩೬

ಎನುತನಿಬರುಂ ಹೋಗಿಯಾ ಅ
ಯ್ಯನ ಪದಾಬ್ಜಕ್ಕೆಱಗಿ ಸಭಯಂ
ಕೊನರೆ ಚಿತ್ತೈಸಯ್ಯ ನಿಮ್ಮಾಳ್ಕಡಿದನಿಂತಕಟ
ಘನದಯಾತ್ಮಾ ನಿಮ್ಮ ಹರಕೆಯ
ದಿನಿತುಮಿಲ್ಲದೆ ಕಾಲಪವನಾ
ಶನನ ಕೈದುತ್ತಾದನಲ್ಲಾ ನಿಮ್ಮ ವಾಕ್ಯವಿದು ೩೭

ಏಕೆ ತಪ್ಪುವುದಯ್ಯ ಭಕ್ತಾ
ನೀಕಸತ್ಯಸಹಾಯ ಶರಣ
ಸ್ತೋಕಮಾನಸಶಯ್ಯ ಕರುಣಿಸು ನೀವೆಮಗೆ ಜೀಯ
ಪ್ರಾಕಟಾಶೀರ್ವಾದನಾದವಿ
ವೇಕಪರಿಚಿತವೇದತತ್ವಕ
ಳಾಕುಶಲಸಮ್ಮೋದ ಸಂತತವಿತರಣವಿನೋದ ೩೮

ಸಮುದಿತಸದಾಗಣ್ಯಪುಣ್ಯಾ
ಶಮನಹರ ಭಕ್ತಾಗ್ರಗಣ್ಯಾ
ಸುಮಹದಮಳಾಚಾರಗುಣ್ಯಾ ಬುಧಜನವರೇಣ್ಯಾ
ಪ್ರಮಥ್ಯಯುತಕಾರುಣ್ಯ ಆಶರಣ
ವಿಮುವಿ ಲೋಕಶರಣ್ಯ ಸಂತತ
ನಮಿತಜನಕಾರ್ಪಣ್ಯಬರ್ಹಣಕರಣನೈಪುಣ್ಯಾ ೩೯

೧ದ (ಡ, ತ, ಥ, ನ, ಪ).

CC-0. Jangamwadi Math Collection. Digitized by eGangotri

ಭುವನಜನವಿಶ್ರುತವಿಶದಕೀ
ರ್ತ್ಯವಿಚಲಶಿವಧ್ಯಾನಮೂರ್ತಿ
ಪ್ರವಿಮಳಸಚಿದ್ರೂಪವರ್ತಿ ಸುಸತ್ಕ್ರಿಯಾವರ್ತಿ
ವಿವಿಧದೇಶಿಕಚಕ್ರವರ್ತೀ
ಯವಿರತಾಪಗತಾನತಾರ್ಥೀ
ಯವಿರಳಿತತೇಜಃಪ್ರಪೂರ್ತಿ ಸಮಸ್ತ[೧]ವಿಸ್ಫೂರ್ತಿ ೪೦

ಜೀಯ ಕಾಲವ್ಯಾಲದಷ್ಟದ
ಪಾಯತನುಗೀ ಪ್ರಾಣದಾನವ
ನೀಯಲುಂ ಮೊಱೆಹೊಕ್ಕಡಂ ಕಾರುಣ್ಯದಲಿ ನೋಡಿ
ಕಾಯಲುಂ ಸಭಯಾತ್ಮರಾದೆವು
ಗೀ ಯುಗಕೆ ನೀವಲ್ಲದೇ ದೀ
ರ್ಘಾಯುವಂ ಕೊಡುವವನದಾವಂ ವೇಮನಾರಾಧ್ಯ ೪೧

ಪೊಡವಿಯೊಡೆಯಂ ನಿಮ್ಮ ಕೃಪೆಯಂ
ಪಡೆಯಲಿಲ್ಲದೆ ಕಾಲವಹ್ನಿಯ
ಕಡುಹಿನಾಹುತಿಗಾದನೀಗಳು ನಿಮಗೆ ಹೊಡವಡದೆ
ಕೆಡುವುದದು ತಾ ಮೋಸವಲ್ಲದೆ
ಬಿಡದೆ ಜೋಹರ ಜೋಹರೆನುತಂ
ಪೊಡವಡುತ ಮುನ್ನಿರ್ದ್ದನಲ್ಲಾ ಆತನವಧರಿಸು ೪೨

ಮುಸುಟಿ ಚೌಡಯ್ಯಂಗಳಿಗೆ ವಂ
ದಿಸಿದ ಬಾಲಕಿ ಹರಕೆಗೊಳ್ಳಳೆ
ಒಸೆದು ಹರಕೆಯನೀಸಿಕೊಳುತವೆ ಹೋಗಿ ಮಱುದಿವಸ
ಅಸುಗಳೆದಡಾ ಆಯ್ಯನಂತೀ
ಕ್ಷಿಸುತವಾ ಕ್ಷಣದಲ್ಲಿಯಾ ಸಾ
ರಸವದನೆಯೊಳು ಪ್ರಾಣವಂ ಪಡೆದೀಯನೇ ಮುನ್ನ ೪೩

---

೧ ರ್ಥ (ತ).

CC-0. Jangamwadi Math Collection. Digitized by eGangotri

ತರುಣಿಗಲ್ಪಾಯುಷ್ಯವೆನುತಂ
ಹರಸಲೊಲ್ಲದೆ ಹೋದನೇ ಶಿವ
ಶರಣನಯ್ಯಂ ತನ್ನ ಮಗಳಂ ತಂದವರ ಮುಂದೆ
ಇರಿಸಿ ಎಂದುಂ ನಿಮ್ಮ ಸತ್ಯದ
ಹರಕೆ ತಪ್ಪದಿದೆನುತವಾ ಚೌ
ಡರಸನಡಿಗಳ ಮೇಲೆ ಬಿದ್ದಂತೇಳದಳುತಿರಲು ೪೪

ಯುವತಿಯಸುವಗಲಿದಡೆ ಮುಸುಟಿಯ
ಚವುಡಿರಾಯನು ಪಡೆಯನೇ ತ್ರೈ
ಭುವನವಱಿಯಲ್ಕಿದುನಿಮಿತ್ತಂ ವೇಮನಾರಾಧ್ಯ
ಶಿವನ ಭಕ್ತರ ಭಕ್ತಿಘನತೆಗೆ
ವಿವರಿಸುವಡೇನರಿದು ನೀವಿದ
ನವಧರಿಸು ಕಾರುಣ್ಯದೃಷ್ಟಿಯೊಳೆಮ್ಮಿವಂ ನೋಡಿ ೪೫

ಈತಗೀಗಳು ಪ್ರಾಣದಾನವ
ನೋತುಕೊಟ್ಟುದ್ಧರಿಸೆನುತ್ತಂ
ಪ್ರೀತಿ ಮಿಗೆ ಭಯಭಕ್ತಿಯೊಳು ಹೊಡವಡುತ ಕೀರ್ತಿಸುತ
ದಾತ ಶರಣಾಗತಜನರುಳಿಗಳ
ನೇತೆಱದೊಳುಂ ಕಾವ ಬಿರುದಿನ
ಮಾತು ನಿಮ್ಮದಿದಂ ಮಱಿಯಲಿಂತುಚಿತವೇ ದೇವ ೪೬

ದೇವ ನಾವಭಯವನು ಬೇಡಲು
ನೀವೊಲಿದು ಕೊಡದಿಹುದು ಹೆಂಪೇ
ದೇವ ಮೊಱೆಯೆಕ್ಕವರನೋವದೆ ನುಸುಳ್ದು ಹೋಹುದಿದು
ಶೈವವೀರವ್ರತಕೆ ಯೋಗ್ಯವೆ
ನೀವು ದಿಕ್ಕುಂ ದೆಸೆಯುಯೆನುತಿರೆ
ದೇವ ತಪ್ಪಿಸಿಕೊಂಡು ಹೋಹುದು ನೀತಿಯೇ ನಿಮಗೆ ೪೭

೧–೨ ಸಂ (ಪ).

CC-0. Jangamwadi Math Collection. Digitized by eGangotri

ಗತಿಯು ಮತಿಯುಂ ತಂದೆ ತಾಯುಂ
ಹಿತವರಿಷ್ಪರು ನೀವೆಯೆನುತಿರೆ
ಪತಿಕರಿಸದದು ಭಕ್ತಿಗುಣವೇ ದೇವ ಎಂದೆನುತ
ಸತತಮುಂ ಬೋಧಿಸುತಡಿಗೆ ನಮಿ
ಸುತ ಕರಂ ಮುಗಿವುತ್ತ ಮೂದಲಿ
ಸುತ ಕಡಂಗಿ ಗುಣಸ್ತುತಿಗಳಂ ಮಾಡುತಡಿಗಡಿಗೆ ೪೮

ಪ್ರಾರ್ಥಿಸುತ್ತಂ ಪ್ರಾಣದಾನವ
ನರ್ಥಿಸುತ್ತ ಕೃಪಾಕಟಾಕ್ಷಸ
ಮರ್ಥತೆಯನೋರಂತೆ ಬಯಸುತಮಿಪ್ಪ ಸಮಯದಲಿ
ಅರ್ಥನಾಥಸಖಿಪ್ರತಿಮನಭ
ಯಾರ್ಥರಾಗಿದ್ದವರನಧಿಕ
ಸ್ವಾರ್ಥಕರುಣಾವರಣ ನಿಶ್ಚಲಭಾವದಲಿ ನೋಡಿ ೪೯

ಅಸಮಭಕ್ತಮಹಾತ್ಮೆಯಂ ಭಾ
ವಿಸಿ ಶರಣುವೊಗುವರ್ಗಳಂ ಪಾ
ಲಿಸದಿಹುದೆ ಕುಂದೀಶಭಕ್ತಿಗೆ ಮೂದಲಿಸಿ ನುಡಿಯೆ
ಘಸಣಿಗೊಳುವುದು ಕೊಱತೆಯಲ್ಲಾ
ನಿಸಿತನಿರ್ಮಳಭಕ್ತಿವರ್ಮವ
ನೊಸೆದು ಹೇಳಲು ಜಾಱಿಹೋದಡೆ ಶರಣನಿಧಿ ನಗರೆ ೫೦

ಒಡೆಯನಟ್ಟಿದ ದಂಡು ಮೇಲ್ವರಿ
ದಡೆ ತೆರಳ್ದೋಡುವುದು ವೀರವೆ
ಕಡಗಿ ಬಂದು ಪ್ರಾಣದಾನವನೊಮ್ಮೆಯುಂ ಬೇಡಿ
ಮೃಡನ ಭಕ್ತಿಯ ಮೂದಲಿಸುತಡಿ
ಗಡಿಗೆ ಹೇಳಲು ಪ್ರಾಣವಂ ನೆಱಿ
ಕೊಡದೆ ವಂಚಿಸಿದಡೆ ಶಿವೈಕ್ಯರು ಮೆಚ್ಚರಿದನೆನುತ ೫೧

CC-0. Jangamwadi Math Collection. Digitized by eGangotri

ಲಿಂಗಜಂಗಮಭಕ್ತರನು ಬಿಜ
ಯಂಗೆಯಿಸಿತಂದವರ್ಗಳಿಗೆ ಸಾ
ಷ್ಟಾಂಗದಿಂ ಪೊಡವಂಟು ಘನಸಿಂಹಾಸನದೊಳಿರಿಸಿ
ಚಾಂಗು ಭಲ ಚಾಂಗು ಭಲವೆಂಬ ರ
ವಂಗಳುಲಿಯಲು ಕೇಳಿಕೆಗಳು ಸು
ರಂಗಿಸುತ್ತಿರೆ ಕವಿಗಳುಂ ಪಾಠಕರು ಕೀರ್ತಿಸಲು ೫೨

ವಿವಿಧವಾದ್ಯಧ್ವನಿಗಳಾಶಾ
ನಿವಹದೊಳು ಭೋರೆಂದು ಮೊರೆಯಲು
ಶಿವನ ಭಕ್ತಪ್ರತತಿಗಳ ಚರಣಂಗಳಂ ತೊಳೆದು
ಅವರ ತತ್ಪಾದಾಂಬುಗಳನಭಿ
ನವಕಳಶವಿಸರದೊಳು ತುಂಬಿಸಿ
ಯವಿರಳಮಹಾಗಣಸಭಾಮಧ್ಯದಲಿ ತಂದಿರಿಸಿ ೫೩

ವಾಸನದ್ರವ್ಯಗಳಿನರ್ಚಿಸಿ
ಬಾಸಣಿಸಿ ಬಹುಜನರು ನೋಡಲು
ಭಾಸುರಾಕ್ಷತೆಗಂಧನವ್ಯಪ್ರಸವಮಾಲೆಗಳ
ಆ ಸಕಳಮಾಹೇಶ್ವರರಿಗು
ಲ್ಲಾಸದಿಂದರ್ಪಿಸಿ ಬಹಳ ಘಂ
ಟಾಸಮೇಳನಕಂಸತಾಳರವಂಗಳಿಂಪೆಸೆಯೆ ೫೪

ಧೂಪದೀಪಾರತಿಗಳಿಂ ಗೌ
ರೀಪತಿಗಣಾವಳಿಯನರ್ಚಿಸಿ
ಕೂಪ ಭಕ್ತಿಪ್ರಿಯದೊಳವರ್ಗೆ ವಿಭೂತಿವೀಳೆಯವ
ಆಪನಿತನಿತ್ತಂಜುಳೀಕುಸು
ಮೋಪಹಾರವನೆತ್ತಿ ನಮಿತಜ
ನೋಪಕಾರನು ಮೂಱುಸೂಳ್ ಬಲಗೊಂಡು ಪೊಡವಂಟು ೫೫

---

೧ ಭಾ (ಪ). ೨ ರ್ಪಿ (ಬ).

CC-0. Jangamwadi Math Collection. Digitized by eGangotri

ಚಿರದಯಾನಿಧಿವೇಮನಾರ್ಯನು
ಹರಗಣಂಗಳ ಬೆಸನದಿಂ ಭೂ
ವರನ ಶಬವಂ ಬೇಗದಲಿ ತರವೇಳ್ದು ಕಳುಹಲದು
ಆರೆಮುಗಿದ ರೆಪ್ಪೆಗಳ ಬೆಳ್ಪಿನ
ತಿರುಗದಿಹ ಕಣ್ಣಾಲಿಗಳ ನಸು
ಮುರಿವ ಕೊರಳ್ಗಳ ಬಿಗಿದ ನರಗಳ ತೆಱಿದ ನೊರೆವಾಯ ೩೬

ಉಱುಗಿ ಬಾಗಿದ ಶಿರದ ಸಡಿಲಿದ
ತುಱುಬಿನುಚ್ಚಿದ ವಿರಳಮುಟಿಗಳ
ಬೆಱಿತ ಮೋಱಿಯ ಕೆದಱುಮೀಸೆಯ ಬಿಗಿದ ಹುಬ್ಬುಗಳ
ಅಱಿತುಸುರ ನಾಳದ್ವಯದ ನಡು
ಮುಱಿದು ಕುಗ್ಗಿದ ನಾಸಿಕದ ಹಸು
ರ್ನ್ಗಿದ ಪಲ್ಗಳ ಬೀಳ್ವಲೋಳೆಯ ಬಿಗಿದ ಗಲ್ಲಗಳ ೩೭

ಆಂಗವಿಚ್ಛಾಯೆಯ ತೆಱಿದ ರಂ
ಧ್ರಂಗಳೂದುವ ಬಸುಱಿ ಕೀಲು ತೊ
ಲಂಗಿ ಡೊಂಕುಗಳೆಡೆಗೆಡೆಗೆ ನೆಲೆಗೊಂಡ ಕೈಕಾಲ
ಆಂಗುಳಂಗಳ ಸಂದಿಗಳ ಕಳೆ
ಯಿಂಗಿ ನೆತ್ತರುಸತ್ತ ತೊಗಲ ನ
ರಂಗಳತಿಮರ್ಗಂಧವಾಗಳು ನಾರ್ವ ಬಾತೊಡಲ ೩೮

ಮುಸುಕಿ ಝುಮ್ಮನೆ ತೆಗೆವುತೆಱಿಗುತ
ಮಸಗಿ ನೆಗೆದೋಡುವ ನೊಣಂಗಳ
ದೆಸೆದೆಸೆಗೆ ಹೇಸಿಕೆಯು ನಾತವಧಿಕಭಯಂಕರವು
ಪಸರಿಸಲು ನೋಡುತ್ತಮಿಹ ಮಾ
ನಿಸರುವಕಟಕಟಾ ಎನುತ ದುಃ
ಖಿಸುತ ಮೂಗುಗಳಂ ಹಿಡಿದುಕೊಳುತುಗುಳುತಗಲ್ದಿರಲು ೩೯

೧ನೆ (ಮ, ಆ).

CC-0. Jangamwadi Math Collection. Digitized by eGangotri

ಅನಿತರಲಿ ಶಿವಭಕ್ತಿಸಭೆಗಾ
ಜನಪತಿಯ ಹೆಣನಂ ತರಿಸಿ ಧಿ
ಕ್ಕನೆ ಮಹಾಮಾಹೇಶ್ವರರ ಪದಜಲದಿನಾ ನೃಪನ
ತನುವಿನೊಳು ದುರ್ಗಂಧವೆಂಬುದ
ನಿನಿತುವಿಲ್ಲದಹಂಗೆ ವೇಮಾ
ರ್ಯನ ನಿರೂಪದಿನರಸನಾಳುಗಳೊರೆಸೊರೆಸಿ ತೊಳೆದು ೬೦

ಭಕ್ತಲಿಂಗಾಂಘ್ರಿಗಳ ೧ರಜಮಂ
ಭಕ್ತಹಸ್ತಾರ್ಪಿತಭಸಿತಮಂ
ಭಕ್ತತತ್ಪಾದೋದಕದಿ ಸಮ್ಮಿಶ್ರಮಂ ಮಾಡಿ
ಭಕ್ತಿನಿಷ್ಠಾಮತಿಯೊಳಾ ಭೂ
ಭೃತ್ತನುವಿನೊಳು ಪೂಸಿ ಕರುಣಾ
ಯುಕ್ತಭಾವನೆಯಿಂದವನುಲೇಪಿಸಿಯದಱ ಮೇಲೆ ೬೧

ಸಂಗತೋಲ್ಲಸಿತತ್ರಿಪುಂಡ್ರಾಂ
ಕಂಗಳಂ ತತ್‌ಶ್ರುತಿನಿರೂಪಿತ
ಸಾಂಗದಿಂದಾಲೇಪನಂಗೆಯ್ದು ಖಿಳಶಿವಭಕ್ತ
ಪುಂಗವರ ನಿರ್ಮಾಲ್ಯಕುಸುಮಚ
ಯಂಗಳಿಂ ಮಾಲಿಕೆಗಳಂ ರಚಿ
ಸಂಗದಲಿ ನೆಱಿ ಸುತ್ತಿ ಮತ್ತೆಯು ವೇಮಗುರುಮೂರ್ತಿ ೬೨

ಅಪ್ರತಿಮಶಿವಗಣಕುಲಕೆ ದಂ
ಡಪ್ರಣಾಮವನಾಚರಿಸಿ ವಿನ
ಯಪ್ರಿಯೋಕ್ತಿಗಳಿಂದ ವಿನಮಿತಹಸ್ತನಾಗುತ್ತ
ಆ ಪ್ರವರರಿಗೆ ಬಿನ್ನವಿಸಿಯವ
ರ ಪ್ರಸನ್ನವನಾಜ್ಞೆಯಂ ಕರು
ಣಾಪ್ರಭಾವನೆಯಂ ಪಡೆದು ತಾ ಮತ್ತೆ ವಂದಿಸುತ ೬೩

೧–೨ ಜಲಮಂ (ಆ).

CC-0. Jangamwadi Math Collection. Digitized by eGangotri

ಪ್ರಮಥರುದ್ರಪುರಾತನಗಣ
ಪ್ರಮುಖಿಮಾಹೇಶ್ವರಪದಾಂಬುಜ
ಸಮುದಿತಸ್ಮರಣಪ್ರಯುತಸುಕೃತಾತ್ಮನಾಗುತ್ತ
ವಿಮಳತರಪಂಚಾಕ್ಷರೀಮಂ
ತ್ರಮಹಿತಕಳಾನುಷ್ಠಿತಾಸಮ
ರಮಣವೆಸೆಯಲು ವೇಮನಾರ್ಯನು ತತ್‌ಪ್ರಮೋದದಲಿ ೪೨

ಅಸಮಭಕ್ತಗಣಾರ್ಪಿತಾಮಳ
ಭಸಿತಶೇಷವನಿನಿತನಾಗಳ
ರಸುಮಗನ ಮುಸುಡಲಿ ತಳಿದು ಕರುಣಾ[೧]ಸಮಗ್ರದಲಿ[೨]
ಒಸೆದು ನೋಡುತ ವೇಮನಾರ್ಯನು
ನಸುನಗುತವೇಳೇಳೆನುತ ಭರ
ವಸದೊಳಾತನ ಕೈವಿಡಿದು ತೆಗೆವಾಗಲ್ಕೈಸಱಿಲಿ ೪೩

ಅತಿಶಯದ ಜೀವಾತ್ಮನಾಗಿ ವಿ
ಗತಕೃತಾಂತಕ ಮೃತ್ಯುಭಯಯುತ
ಮತಿಯೊಳಾತನು ವೇಮನಾರ್ಯನ ಪಾದಮಂ ಪಿಡಿದು
ನುತಿಸುತಂ ಸಾಷ್ಟಾಂಗದಲಿ ನಮಿ
ಸುತಮಿರಲು ಕಾರುಣ್ಯದಲಿ ಭೂ
ಪತಿಯ ಸುತನಂ ನೋಡಿ ಶಿವಸನ್ನಿಹಿತನಂ ಮಾಡಿ ೪೪

ವೇಮನಾರ್ಯನು ಭಕ್ತಿಮಹಿಮೋ
ದ್ದಾಮವಿಶ್ರುತಕೀರ್ತಿಯಿಂದಭಿ
ರಾಮವಾಗಿರೆ ನೃಪಸುತನುವಾತಾಯಿತಂದೆಗಳು
ಆ ಮಹಾಸಂಖ್ಯಾತಭಕ್ತ
ಸ್ತೋಮಕಭಿಮುಖರಾಗಿ ಧಿಕ್ಕನೆ
ಭೂಮಿಯೊಳು ಸಾಷ್ಟಾಂಗವೆಱಗಿ ನಮಸ್ಕರಿಸುತಿರಲು ೪೫

೧–೨ ಸಮುದ್ರದೊಳು (ಚ).

CC-0. Jangamwadi Math Collection. Digitized by eGangotri

ಆ ಮಹಾಶಿವಗಣವಿತಾನಂ
ಪ್ರೇಮಮುಂ ಕರುಣಂಬೆರಸಿ ತದ್
ವೇಮನಾಚಾರಿಯೆನನಾರ್ಯನನಸಮಶೌರ್ಯನನು
ಸೋಮಧರಭಕ್ತಾಂಘ್ರಿನಿಹಿತಾ
ರಾಮಮಸ್ತಕಭಾಗನಂ ಸ
ನ್ನಾಮಗುಣಯೋಗನನಮಿತತತ್ವಾನುರಾಗನನು ೬೮

ಪರಮಮಾಹೇಶ್ವರಚರಣವಾ
ರಿರುಹರೇಣುಪ್ರಕಲಿತವಿಭಾ
ಸ್ಕರಲಲಾಟನನಭವಭಕ್ತಿಸ್ಫಳಕಿರೀಟನನು
ಶರಣಜನ ಪಾದಾರವಿಂದ
ಸ್ಫುರಿತಮಕರಂದಾಭಿಷೇಕಾ
ಭರಿತಸರ್ವಾಂಗನನಭಂಗನನಾರ್ಯಸಂಗನನು ೬೯

ಹರಗಣಾಮಳಚರಣನಖಿರಮು
ಕುರವಿಭಾಸ್ಕರಗುಣಗಣಾಲಂ
ಕರಣದೇಹನನಹಿತಮದಘನಗಂಧವಾಹನನು
ಶರಣಪದನಖಿಕಾಂತಿಪಟುವಿ
ಸ್ತರಣಶಶಿಕಿರಣಪ್ರಶಸ್ತ[೧]
ಸ್ಫಿರಚಕೋರನನಘವಿದೂರನನತುಳಧೀರನನು ೭೦

ಸರಸಿರುಹಸಂಭವಕೃತದುರಾ
ಕ್ಷರವಿನಿಯತನಿರಾಸಕ ಮಹಾ
ನಿರುಪಮಿತಮಹಿಮಾಢ್ಯನಂ ಪ್ರೌಢನನಮೌಢ್ಯನನು
ಪರಿವೃತಾಯತವಿಷ್ಣುಮಾಯಾ
ಹರಣಚಿದ್ವಿದ್ಯಾಪ್ರವೀಣನ
ನುರುಭವಕ್ಷೀಣನನನುಭವಕಳಾಘುರೀಣನನು ೭೧

೧ಕ್ಕ (ತ, ನ).

JAGADGURU VISHWARADHYA
JNANA SIMHASAN JNANAMANDIR
LIBRARY
Jangamwadi Math, Varanasi
ACC. No. 1018
CC-0. Jangamwadi Math Collection. Digitized by eGangotri

ಪಾಶಮೋಚನನಂ ಕೃಪಾಮಯ
ಕಾಶಲೋಚನನಂ ಸಮಂಚಿತ
ಪಾಶುಪತಸುವ್ರತನಿರತನಂ ಪುಣ್ಯಚರಿತನನು
ದೇಶಿಕಗುಣಾವೇಷನಂ ವಿಗ
ತಾಶನಂ ಶರಣಾಗತಭಯವಿ
ನಾಶನಂ ಗಣಲಾಲ್ಯನಂ ಸದ್ಭಕ್ತಿಲೌಲ್ಯನನು ೮

ಪ್ರತ್ಯನೀಕಯಮಪ್ರಹರಣವಿ
ಭೃತ್ಯಪ್ರಹರಣನಕರ್ಮಕರ್ಮಠ
ಸತ್ಯವಚನನನಭವಮಹಿಮಾಚಾರನಂ ಸಮದ
ಮೃತ್ಯುದಂಷ್ಟ್ರೋತ್ಪಾಟನಕ್ಷಮ
ಕೃತ್ಯನಂ ನತಜನಮುಖಾಬ್ಜ
ದಿತ್ಯನಂ ಕೃತಕೃತ್ಯನಂ ಗುರುಚರಣಭೃತ್ಯನನು ೯

ಘೋರಕಾಲಭುಜಂಗವಿಷಸಂ
ಹಾರನಂ ವೃಷಭೇಂದ್ರಗಮನಾ
ಕಾರನಂ ಭವದೂರನಂ ಕೊಂಡಾಡಿ ಮುಂಡಾಡಿ
ಸಾರನಿಜಕರುಣಾರಸಾಮೃತ
ವಾರಿಧಿಯೊಳೋಲಾಡಿಸಲು ೧ಸ
ದ್ಧೀರಮಣನೊಲಿದಡಿಗಡಿಗೆ ಸಾಷ್ಟಾಂಗದಲಿ ನಮಿಸಿ ೧೦

ಲೋಲಮತಿಯೊಳು ಮತ್ತೆಯುಂ ನಿಜ
ಭಾಳವೊಂದಿಸಿ ವಂದಿಸಿದ ಕರು
ಣಾಳುವಂ ವೇಮಪ್ರಭುವನಾ ಶಿವಗಣಶ್ರೇಣಿ
ಏಳೆನುತ ಕೈವಿಡಿದು ನೆಗಹುತ
ಲಾಲಿತನ್ಯೋನ್ಯಪ್ರಿಯವಿನಯ
ಲೋಲನಾಲಿಂಗನಸಮೇಳಕ್ರಿಯೆಗಳಿಂ ತಣಿಸಿ ೧೧

೧–೧ ತದ್ಧೀ (ತ); ಸದ್ಧಿ (ನ).

CC-0. Jangamwadi Math Collection. Digitized by eGangotri

ಭಾಪುರೇ ವೇಮಾರ್ಯವಾರ್ಯಾ
ಭಾಪುರೇ ಶಿವಕಾರ್ಯಧೂರ್ಯಾ
ಭಾಪುರೇ ವೇಮಯ್ಯಶರಣಮನೋನಲಿನಶಯ್ಯ
ಭಾಪುರೇ ವೇಮನಶುಭಾಂಕಾ
ಭಾಪುರೇ ಮನನಿಃಕಳಂಕಾ
ಭಾಪುಭಾಪುರೆ ವೇಮವಿಭುವೇ ವೇಮಸಗ್ಗತ್ಯಭುವೆ ೭೬

ವೇಮ ಸಜ್ಜನಮಿತ್ರನಲ್ಲವೊ
ವೇಮ ಸುಗುಣಾಮಂತ್ರನಲ್ಲವೊ
ವೇಮ ಚಾರುಚರಿತ್ರನಲ್ಲವೊ ವೇಮಸನ್ನಾಮ
ವೇಮ ಸಾನಂದೈಕ್ಯಮೂರ್ತೀ
ವೇಮ ಸಕಳದಿಗಂತಕೀರ್ತೀ
ವೇಮನಲ್ಲವೊ ನಲ್ಲವೋ ಶಿವಧರ್ಮಪದವರ್ತಿ ೭೭

ಕ್ಷೋಣಿ ಪ್ರೊಗಳಲು ನೃಪನ ಹೆಣನೊಳು
ಪ್ರಾಣವಂ ತುಂಬುವ ಸಮರ್ಥರು
ವೇಣಿಕೊಳರೆ ನೀವಲ್ಲದನ್ಯರು ವೇಮನಾರಾಧ್ಯ
ವಾಣಿಯರಸನ ಹರಿಯ ವಶವೇ
ಮಾಣದಿನಜನ ಬಾಯನೊದೆವ
ಕ್ಷೀಣಮೃತ್ಯುವನೊತ್ತರಿಸಿ ಹರಣವನೊಸೆದು ಕೊಡುವ ೭೮

ಈ ಮಹಾವೀರತ್ವವೀ ಮಹಿ
ಮಾಮಹತ್ವತೆಯೀ ಸುಧೀರತೆ
ಯೀ ಮಧುರಮೃದುವಾಕ್ಯವೀ ಸಾಮರ್ಥ್ಯವೀ ಸತ್ವ
ಭೂಮಿಯೊಳು ಕೇಳುವೆವೆ ಕಾಂಬೆವೆ
ವೇಮಧೀಮಣಿ ನಿಮ್ಮೊಳಲ್ಲದೆ
ಸೋಮನೇಮಕಪರ್ದರೂಪಾ ಸತ್ಯಸಲ್ಲಾಪ ೭೯

---

೧ ಮ (ಅ, ತ).

CC-0. Jangamwadi Math Collection. Digitized by eGangotri

ಎಂದು ಮಾಹೇಶ್ವರನಿಕರವಾ
ನಂದದಿಂ ನುತಿಸುತ್ತಿರಲು ನೃಪ
ನಂದನಂಗಾ ಪ್ರಾಣದಾನವನಿತ್ತು ಸಲಹಿದನು
ಎಂದಿನಂತೆ ವಿಶುದ್ಧಭಕ್ತಿಗೆ
ಸಂದು ಶಿವತತ್ವಾನುಭವಸುಖ
ದಿಂದೆ ಬಿೞಿದೇವಿಯರ ವೇಮಾರಾಧ್ಯನಿರುತಿರ್ದ ೮೦

ಆ ಮಹಾತ್ಮನ ಪುಣ್ಯಚರಿತಾ
ನಾಮವಂ ಬರೆದೋದಿದವರುಂ
ಪ್ರೇಮದಿಂ ವಿಸ್ತರಿಸುವವರುಂ ಕೇಳುತಿರ್ದವರು
ವೇಮನಾರಾಧ್ಯರ ಕರುಣದಲಿ
ಕಾಮಿತಾರ್ಥಿಫಲಂಗಳೊದಗಲು
ಕ್ಷೇಮದಿಂ ಬಾಳುತ್ತಮಿಪ್ಪರು ಭೂತಳಾಗ್ರದೊಳು ೮೧

ಅಂತು ಸಂಧಿ ೪೫ಕ್ಕಂ ಪದಗಳು ೨೬೦ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

---

೧ ಬಿ (ತ, ನ). ೨–೩ ಪದಂ (ಪ).

CC-0. Jangamwadi Math Collection. Digitized by eGangotri

ಸಂಧಿ : ೪೬†

*

ಸೂಚನೆ : ಮನೆಯೊಳಿರ್ದಂತಿರ್ದು ಜೀವಂ
ತನುವನಗಲಿದ ಚಿಕ್ಕಮಾದ
ಣ್ಣನ ಹರಣಮಂ ಪಡೆದನಾ ಸಕಳೇಶ ಮಾದರಸ

ಧರಣಿಯೊಳು ಸಕಳೇಶ್ವರನ ಮಾ
ದರಸನಭವಾಚಾರಮಾರ್ಗಾ
ವಿರತವರ್ತನನಮಳಚಿತ್ತನು ಕಾಲಮೃತ್ಯುವಿನ
ಎರಡು ಕಣ್ಣಲಿ ಚಲ್ಲಿ ಮಣ್ಣಂ
ದುರುಳಕಾಲನ ಬಾಯನೊದೆದಾ
ಕರಿಸಿ ತಾಟಿಸಿ ಅವಧಿವಿಧಿಗಳ [೧]ಕುಂಡೆಗಳನುಱಿದೆ[೨] ೧

ಉರವಣಿಸುವ ವಿಧಾತನಂ ಸಂ
ಹರಿಸಿ ಹರಿ ಮಾಯಾರಿಯೆಂಬಾ
ಬಿರಿದನಗ್ಗದ ಕಹಳೆ ಘೂರ್ಮಿಸಲಧಿಕತೇಜದಲಿ
ವರ ಶತಾಯುರ್ವ್ಯೆಪುರುಷ ಎಂ
ದೊರೆವ ವೇದದ ಮೂಗ[೩]ನರಿದಾ
ಧರಣಿಯೊಳಗೇಳ್ನೂಱು ವರುಷಂಗಳು ನಡೆವುತಿರಲು ೨

ಪರಮಶಿವಲಿಂಗಾರ್ಚನಕ್ರಿಯೆ
ವೆರಸಿ ಕಾಲತ್ರಯದೊಳಂ ತತ್
ಪರಮನೋನಿಷ್ಠೆಯೊಳಿರಿದು ಗುರುಲಿಂಗಜಂಗಮದ
ಪರಿಚರಣಯುತಭಕ್ತಿರತಿಯೊಳು
ಸರಸನಾದಸುಖಾಮೃತದೊಳನ
ವರತ ಲೋಲಾಡುತ್ತ ತತ್ವಜ್ಞಾನಭಾವದಲಿ ೩

---

† ಈ ಸಂಧಿ ನ ಪ್ರತಿಯಲ್ಲಿಲ್ಲ.

* ರಾಗ : ವರಾಳಿ (ಡಾ, ಚ, ತ, ಪ); ಶೋಕವರಾಳಿ (ಮ); ಜೋನಿಗ ವರಾಳಿ (ಅ); ಗುಂಬ್ರ ಕಾಂಬೋಧಿ (ತ). ೧–೨ ತಾರಕುಂಡೆಗಳ (ಅ, ಬ). ೩–೪ ಕೊಯ್ದಾ (ತ, ಮ).

CC-0. Jangamwadi Math Collection. Digitized by eGangotri

ಶರಣಸನ್ಮತಿಯೀಪ್ರಕಾರದಿ
ಚರಿಸುತಿರೆ ಸಾತ್ವಿಕಸುಭಕ್ತಿ
ಸ್ಥಿರಮನಸ್ಕನು ಚಿಕ್ಕಮಾದಯ[೧]ನೆಂಬ [೨]ಸದು[೩]ಭಕ್ತ
[೪]ಹರನತಿ[೫] ಪ್ರಿಯಭಕ್ತಿಯುಕ್ತಿಯೊ
ಳಿರುಳು ಹಗಲುಂ ಮಾದಿರಾಜನ
ಚರಣಮಂ ಭಜಿಸುತ್ತ ತಾನುಂ ಹೆಂಡತಿಯು ಸುತನು ೪

[೧]ಇದುವೆ ಜೀವನವೀ ಕುಟುಂಬ
ಕ್ಕಿದು ಉಪಾರ್ಜನೆ ಬದುಕಿದೆಂದೆ
ನ್ನದೆ ಮೃಡನ ಕಲ್ಪಿತದಿನಹ ಬಡಕಾಯಕದೊಳಿಂತು
ಒದಗಿ ಪಡಿಯಂ ಕೊಡುತಿರಲು ಚಿ
ತ್ತದೊಳದಕೆ ಪರಿಣಮಿಸಿ ನಡೆವು
ತ್ತದಱಿ[೨]ಕೊಳೆಯಿಸಿ ಬಾರದಿರೆ ಚಿಂತಿಸದೆ ಧೃತಿಗೆಡದೆ ೫

ಮನದೊಳಿನಿತುಂ ತನ್ನ ಗೃಹಚಿಂ
ತನೆಗೆ ಬೆಂಬೀಳದೆ ನಿರಂತರ
ವನುನಯಂ[೪]ಮಿಗೆ ಮಾದಿರಾಜನ ಪಾದಪಂಕಜವೆ
ತನಗೆ ಗತಿಯುಂ ಮತಿಯು ಗುರುವುಂ
ಜನಕನುಂ ತತ್ಪ್ರಾಣವಾ ಅ
ಯ್ಯನೆಯೆನುತ್ತಾಚರಿಸುತಿರಲು ಕಲವು ದಿನಂಗಳಿಗೆ ೬

ಆತನಿದ್ದಿದ್ದಸುಗಳೆಯಲೊಡ
ನಾತನಂ ಪಾದೋದಕದಿ ತೊಳೆ
ದಾ ತರುಣಿ ತನ್ನಿನಿಯನವಯವವಂಗಳೆಲ್ಲಕ್ಕೆ
ಭೂತಿಯಂ ನೆಱಿ[೩] ಪೂಸಿ ಚಿಂತೆಯು
ಬೀತು ಚಿತ್ತದೊಳಾಕೆ ನಿಮಿಷದೊ
ಳಾತನ ಶಬವನೋವಿ ಮಲಗಿಸಿಯೊಂದು ಕಂಬ[೫]ದಲಿ[೪] ೭

---

೧ ಣ (ತ). ೨–೩ ಸದ್ (ಥ). ೪–೫ ಪರಮನ (ಅ, ತ, ಬ). ೬ ಯೆದಿ (ಥ, ಸ). ೭–೮ ಕ್ಕೆ (ಬ).

CC-0. Jangamwadi Math Collection. Digitized by eGangotri

ನೆರೆಮನೆಯವರಸಱಿಯಲೀಯದೆ
ತರುಣಿಯನಿತಱಿಳಾತ್ಮಗೇಹಾಂ
ತರದೊಳಾ ನಿಜನಾಥನಂ ನಿಕ್ಷೇಪಿಸಲಿಕೆಂದು
ಸರಸರನೆ ಸತಿ ಗೊಪೆಯನಗೆವು
ದ್ವರದ ದನಿಯಂ ಕೇಳಿ ಧಿಕ್ಕನೆ
ತರುಣನಾಗಳೆ ನಿದ್ರೆ ತಿಳಿದೆದ್ದಿಂತು ನಡುವಿರುಳು ೮

ಎಲೆಲೆ ತಾಯ್ ನೀನೇನ ಮಾಡಿಹೆ
ಎಲೆಲೆ ಹೇಳಿಮ್ಮಯ್ಯನುಂ ಮನೆ
ಯೊಳಗೆ ಸಮ್ಮನೆ ಕುಳ್ಳಿತ್ತೈದನೆ ಕಂಬದೊತ್ತಿನಲಿ
ಎಲೆಲೆ ತಾಯ್ ನಿಮ್ಮೊಡನೆ ಮುನಿಸಿ
ಲ್ಲಲೆ ಒಡೆಯರುಗಳೋಲಗಕೆ ತಾ
ನುಳಿದು ತಳುವಿದನಿಂದಿದೇತಕೆ ಹೋಗದಿದ್ದಹನು ೯

ಹಗಲಿರುಳು ಲಿಂಗಾರ್ಚನೆಯ ತಾಂ
ಸೊಗಸಿ ಮಾಡುವ ಪೇದಿಕೆಯನಿಂ
ತಗುಳುತಿರ್ದಪೆ ಮಾಣದೊರ್ಬಳೆ ನೀನಿದೇಕವ್ವಾ
ಅಗಜೆಯರಸಗೆ ಯೋಗ್ಯವಾಗಿಹ
ಜಗಲಿಯಲಿ ಹೊಸವೊಜಿತೆಯಂ ಬಗಿ
ಬಗಿದು ತೋಡಿದಡಲ್ಲದೇ ಕೈಕೊಳ್ಳನೆಂದೆನುತ ೧೦

ನೇಮವಂ ದಿಟಕಿಂದು ಹಿಡಿದನೊ
ಕಾಮಿಸದಱಿಲಿ ಉದಕವಾದಡೆ
ಸೋಮಧಾರಿಗೆ ಮಜ್ಜನಕ್ಕೆಱಿದಲ್ಲದೆಮ್ಮಯ್ಯ
ತಾ ಮುಸುಡನೆತ್ತೀಗ ಭಾಷಿಸ
ನೋ ಮುದದೊಳೀ ನೋಡನಲ್ಲದೆ
ನೀ ಮುನಿದು ಮಾತಾಡದಿದ್ದಡೆ ನುಡಿಯದಿದ್ದಹನೊ ೧೧

೧–೨ ಗಳಂ (ಮ. ತ. ಮ) ; ಗೆ ತಾಂ (ಡಾ. ಥ. ಪ).

CC-0. Jangamwadi Math Collection. Digitized by eGangotri

ಏತೆಱಿದೊಳುಂ ಮುನಿಯನಯ್ಯನು
ಖಾತಿಗೊಳ್ಳನದಾವ ಕಾಲದೊ
ಳೀತಕವ್ವಾ ನಿನ್ನೊಡನೆ ಮುನಿದಿದ್ದಹನೊ ಹೇಳ
ಓತು ಮಾಡುವ ಕಾಲವೇಳಾ
ಭಾತಿಯಂ ತಪ್ಪಿಸಿದೊ ನಿತ್ಯ ಪು
ನೀತಶೀಲಬ್ರುತಚರಿಯೆಯಂ ಸಿಕ್ಕುಗೊಳಿಸಿದೆಯೊ ೭೩

ಹಿಂಗದಾ ಸಮಯೋಚಿತಾಗತ
ಜಂಗಮಾಳಿಗೆ ಸಮುಚಿತವಿಧಾ
ನಂಗಳಿಂ ನೀಂ ಸಲಿಸದಿದ್ದೆಯೊ ಉಪಕರಣತತಿಯ
ಸಾಂಗಮಾಗಲು ಬೆಳಗೆಯೋ ಶಿವ
ಲಿಂಗಮಜ್ಜನಸಾಲೆಗಳ ಮಲಿ
ನಂಗಳಂ ತೊಳೆಯೆಯೊ ತಡಂಬಡಿಸಿದೆಯೊ ಬಿಂದಿಗೆಯ ೭೪

ಒಳ್ಳಿತಾಗವೊ ನಿನ್ನ ಸಾರಣೆ
ಯಲ್ಲಿ ಜಂತುಗಳಿದ್ದು[೧] ಶೋಧಿಸಿ
ತಿಲ್ಲವೋ ಗೋಮಯವದೆಯ್ದದೊ ರಂಗವಾಲಿಯದು
ಅಲ್ಲಿಗಲ್ಲಿಗೆ ಕೆದಱಿದವೊ ಸಂ
ಪುಲ್ಲಕಮಲದಳಂಗಳುಂ ನು
ಣ್ಪೆಲ್ಲವೋ ಪೊಸ ಗಂಧವಕ್ಷತೆ ತುದಿಮುಱಿದವೆಂದೊ ೭೫

ದ್ರುವವನೊತ್ತುವ ವಸ್ತ್ರವುಂ ಕಱಿ
ಗವಿದು ನನೆದಿದ್ದಿತ್ತೊ ಶಿವನ
ಗ್ಭವಣೆಯಂ ಶೋಧಿಸುವುದಿಲ್ಲವೊ ಪಾವ[೨]ಡೆಯ[೩]ನಿಕ್ಕಿ
ನವಕವಿಲ್ಲದ ಕಳಿಂದ ಮುನ್ನಿನ
ದಿವದ ತೊಟ್ಟಂ ಕಳೆಯದರಳಂ
ವಿವರದಲಿ ಶೋಧಿಸದೆ ಪೂಗಳೊಳೇನಕಿದ್ದಡೆಯು ೭೬

೧ರಲು (ಪ). ೨–೩ ಡವ (ಕ, ಚ, ಬ, ಮ). ೪ವಿ (ಚ).

CC-0. Jangamwadi Math Collection. Digitized by eGangotri

ಗುಗ್ಗುಳಂ ಸಾಮಾನ್ಯವಾಯಿತೊ
ಆಗ್ಗಳವನಿಕ್ಕಿದಡೆ ಅದಱಿಂ
ದಗ್ಗಿ ತಗ್ಗಿದುದೋ ಬಳಿಕ್ಕಾ ರಸವಧಿಕವಾಗಿ
ಮೆಗ್ಗಳಿಪ ನೀರಾಜನಪ್ರಭೆ
ಕುಗ್ಗಿ ಮಸುಳಿಸಿತೋ ಮಱಿಸಿದು ನೀ
ಮುಗ್ಗಿಸಿದೊ ಏಕಾರತಿಯನಯ್ಯಂಗೆ ಕೊಡುವಾಗ ೧೬

ಕೆಲಬಲದ ದೀವಿಗೆಗಳುಂ ಪ್ರ
ಜ್ವಲಿಸದಿದ್ದುವೊ ಮೃಡನ ಬೋನಂ
ಗಳನೊಡನೆ ಗಡಣಿಸುವೆಡೆಯೊಳಾಸ್ವಾದಿಸಿತೊ ಮನವು
ಒಲವಿನರ್ಪಿಸಿದ ಪ್ರಸಾದಂ
ಬಳಿಕಲರ್ಪಿಸದಿಹ ಪದಾರ್ಥಂ
ಗಳಲಿ ಕೂಡಿತೊ ಬೆರಸಿತೋ ತ್ರಿವಿಧೋದಕಂಗಳನು ೧೭

ಬೆಸಸಿದಡೆ ಏನಾದಡೇಂ ಬಂ
ದೊಸೆದು ಕೆಲಸಂಗೆಯ್ಯದಡೆಯೋ
ಬೆಸನವೇನೆಂದೆನ್ನೆಯೋ ಮುಂಲಿಕೆಯೊ ಕರೆವುತಿರೆ
ಉಸಿಯಿನಿದ್ದಿದ್ದೇನು ಕಾರಣ
ಉಸುರನಯ್ಯನು ಮುನಿದನೇತಕೆ
ಹೊಸತುವೆನಗಿದು ನಿನ್ನೊಡನೆ ಮಾತಾಡದಿದ್ದಹನು ೧೮

ಕೇಳಲಮ್ಮೆಮ್ಮಯ್ಯನಡಿಗಳ
ಮೇಲೆ ಬೀಳುವ ನಾನು ನೀನೇ
ಳೇಳು ಶರಣೆಂದಡೆ ಮುನಿಸು ತಿಳಿದಹನು ನುಡಿದಹನು
ಹೇಳದಿಹನೇ ಮುನಿದ ನೆವವಂ
ಲೋಲಮತಿ ಮಾಡುವ ಶಿವಾರ್ಚನೆ
ವೇಳೆಗೆಯ್ತಹನಲ್ಲದೇ ಮುನಿದೇತಕಿದ್ದಹನು ೧೯

---

೧೭ (ಕ, ಚ); ವೆ (ಅ). ೨೮ (ಪ). ೩೫ (ಚ, ಕ, ಪ).

CC-0. Jangamwadi Math Collection. Digitized by eGangotri

ಇಂದೊಡೆಯರಿಗೆ ಹೋಗಿ ತಾ ಶರ
ಣೆಂದಹನು ನೀನನ್ನೆಬರ ಕೈ
ಗುಂದಿ ಒಱಿತೆಯನಗುಳದಿರು ಮುನಿಸಂ ತಿಳುಹಿಯೀಗ
ವಂದಿಸುವವಂತೇಳದಿರ್ಪನೊ
ತಂದೆಗವ್ವಾ ಬಾರೆಯೆನುತಂ
ಕಂದನಮ್ಮನ ಕಚ್ಚೆಯಂ ಪಿಡಿದಾಗ ತೆಗೆವುತಿರೆ ೨೦

ಅಲ್ಲಿಗಲ್ಲಿಗೆ ನುಡಿಗಲಿತ ಮಗ
ನಲ್ಲದೇನುವನಱಿಯಲಾ ನೀ[೧]
ನಿಲ್ಲಿ ಒಱಿತೆಯನಗಿದಡಲ್ಲದೆ ಮುನಿಸು ತಿಳಿಯಲ್ಕೆ
ಒಲ್ಲನಯ್ಯನು ನಾನೊಱಿತೆಯನ
ದೆಲ್ಲವಂ ಮಾಡಿದ ಬಳಿಕ ತಳು
ವಿಲ್ಲವೀ ಬಪ್ಪೆನೆ ಕುಮಾರಾ ಪವಡಿಸೈ ಹೋಗಿ ೨೧

ಬಿಡದೆ ನಿಮ್ಮಯ್ಯಗಳವಸರವ
ನೊಡನೆ ಪರಿಪೂರ್ತಿಗಳನೆಯ್ದಿಸಿ
ತಡೆಯದೀಗಳೆ ಿಕಂದಿ ಎಂದುಂ ಕೋಪವಿಲ್ಲದುದು
ಬಡಮುನಿಸು ಇಂತೊಂದು ಬಾರಿಯು
ನುಡಿಯಲಿಲ್ಲದಹಂಗೆ ಹದುಳಿಸಿ
ಕಡೆಯೊಳಾಂ ತಿಳುಹಿದಪೆನೆಲೆ ನೀ ನಿದ್ರೆಗೆಯ್ವುತಿರು ೨೨

ಬಲಿದ ಮುಳಿಸಂ ತಿಳುಹಲಿಕೆಯೆ
ಮ್ಮಳವಿಯಲ್ಲೆನುತಾತ್ಮಜನ ಕೈ
ಗಳನೆರಡನೊಯ್ಯನೆ ಬಿಡಿಸಿ ತನ್ನಿನಿಯನಂ ನೋಡಿ
ನಳಿನಮುಖಿ ನಗುತಂ ಸಮಾಧಿಯ
ನಲಸದಗಿವುತ್ತಿರೆ ತನೂಜಂ
ನಿಳಯವಂ ಪೊಱಿಮಟ್ಟು ಸಂತಾಪಿತಹೃದಯನಾಗಿ ೨೩

---

೧ ನಾ (ಬ). ೨–೩ ತಂದೆ (ಮ).

CC-0. Jangamwadi Math Collection. Digitized by eGangotri

ಕಂದನೊರ್ಬನೆ ಮುನ್ನ ತನ್ನಯ
ತಂದೆ ಹೋಗಲು ತಾನೊಡನೆ ಪೋ
ಪಂದದಲಿ ಪರಿದೆಯ್ದಿ ಘಟ್ಟನೆ ಕದಹನುಱಿ ತೆಱಿದು
ಮುಂದೆ ನಾದಸುಧಾಸರಸಸು೧ಖ
ದಿಂದಿರುತಮಿಹ ಮಾದರಸರಿಗೆ
ವಂದಿಸುತ್ತಯ್ಯಯ್ಯ ಇಂದೆಮ್ಮಯ್ಯನೇನೆಂದೊ ೨೪

ನುಡಿಯದಿರ್ದಹನೆನ್ನ ತಾಯಿಗ
ಳೊಡನೆ ಮುನಿಸಂ ಮಾಣಿಸುವರೆ
ನ್ನೊಡೆಯ ಬಾರಾ ದ್ರೋಹವಿದು ತಪ್ಪಿದ ನೆವದೊಳೆನ್ನ
ಮಿಡುಕನಲುಗನು ನೆಱಿ ಪಱಿದ ಕ
ಪ್ಪಡವನೀಕ್ಷಿಸಿ ಮೊನ್ನೆ ತಾ ನಿ
ಮ್ಮಡಿಗಳಿತ್ತಾ ಹಚ್ಚಡವನಯ್ಯಂ ಮುಸುಕನಿಟ್ಟು ೨೫

ಶಿರದೊಳಾನನದೊಳು ಶರೀರದೊ
ಳುರುಭಸಿತವಂ ಪೂಸಿಕೊಂಡೇ
ಪರಿಯೊಳುಂ ಮಾತಾಡನಯ್ಯನು ಕಂಬಮಂ ನೆಮ್ಮಿ
ನಿರತ ನೇಮವನಿಂದು ಹಿಡಿದನು
ಪುರುಷನೆನುತೆಮ್ಮವ್ವೆಯುಂ ದೇ
ಹರದ ಜಗಲಿಯೊಳೊಱಿತೆಯಂ ತಾನಗಿವುತಿದ್ದಹಳು ೨೬

ಮುಳಿಸಿನೀ ತೆಱಿದಿಂದವಲ್ಲದೆ
ತಿಳಿಯನೆನುತಯ್ಯಂಗೆ ವಂದಿಸಿ
ಮುಳಿದ ಮುಳಿಸಂ ತಿಳುಹುವೌ ಬಾರಪ್ಪ ಎಂದಡೆಯು
ಮುಳಿದಡಂ ಮುಳಿದಿರಲಿ ಮುನಿಸಂ
ತಿಳುಹಲೆಮ್ಮಳವಲ್ಲವೆನುತಂ
ತೊಲಗದೊಱಿತೆಯನಗಿದಹಳು ನಸುನಗುತ ನೋಡುತ್ತ ೨೭

---

೧ ಮು (ಅ). ೨ ಯ (ಕ, ಚ, ಥ).

CC-0. Jangamwadi Math Collection. Digitized by eGangotri

ಮುನಿದಡಮ್ಮನ ಕೂಡೆ ಮುನಿಯಲಿ
ಜನಕನೇಕೆನ್ನೊಡನೆ ನುಡಿಯನೊ
ಎನಗೆ ತಾನುಂ ಪ್ರಾಣವಾಗಿದ್ದೆಂತು ಮುನಿದಿದ್ದ
ತನಗೆ ದರಾಹಾಸಾಂಕಲಿತಮುಖ
ವನಜವಪ್ಪುದು ಕಾಂಬಳತೆಯಲಿ
ತನುವಿನೊಳು ಪುಳಕಂಗಳೊಗೆವವು ಕಾಣಲೊಡನೆನ್ನ ೮

ಬಾಲಲಿಂಗವೆ ಬಾರೊವಣ್ಣಾ
ಬಾಲಲಿಂಗವೆ ಬಾರ ತಂದೆ
ಬಾಲಲಿಂಗವೆ ಬಾರ ಬಾರಾಯೆನುತ ಕರೆವುತ್ತ
ತೋಳನೆರಡಂ ನೀಡುವನು ಕ
ಣ್ಣಾಲಿ ತುಂಬಲು ನೋಡುವನು ನಾ
ಲೀಲೆಯಿಂ ಬರಲುರದೊಳುಂ ಕಯ್ಯಾರಲಪ್ಪುವನು ೯

ಹರುಷದಿಂ ತನ್ನೂರುಪೀಠದೊ
ಳಿರಿಸಿ ಚೆಂಡಿಕೆಯಂ ಬಗಿದುಬಗಿ
ದೆರಡು ಕೈಯಲು ಬಾಚಿ ಜಡೆಯಂ ಹೆಣೆದು ಕೊನೆಯಲ್ಲಿ
ಇರುಹುರಿಯ ಕಿಱುದಾರವಂ ಬಿಗಿ
ದರಳಸರವಂ ಕಟ್ಟುವಂ ಬೋ
ಸರಿಸುವಂ ಮಿಗೆಯಂಜನವನಂತಿಡುವನೆನಗಯ್ಯ ೧೦

ನೊಸಲು ತುಂಬಲು ಹೂಸುವಂ ಸಿತ
ಭಸಿತವಂ ತಲೆವಾಗಿಯೆನ್ನುವ
ನೊಸೆದು ನೋಡುವನೆನ್ನ ತಲೆಯಲಿ ತನ್ನ ತಲೆಮೋಹಿ
ನಸುನಗುವನಡಿಗಡಿಗೆ ತನು ಪುಳ
ಕಿಸುವನಯ್ಯನು ಹಿಗ್ಗುವಂ ಲಾ
ಲಿಸುವನೆನ್ನಂ ಕಂಡು ಮತ್ತೆಯು ಮುಖವನಲರಿಸುವ ೧೧

---

೧೨ ಹಸಿತಾ (ಕ, ಚ, ಥ, ಬ). ೩ ಕಾಂ (ಡಾ, ತ).

CC-0. Jangamwadi Math Collection. Digitized by eGangotri

ಗಲ್ಲವಂ ಹಿಡಿಹಿಡಿದು ಎನ್ನನು
ಭುಲ್ಲವಿಸುವನು ತುದಿಯ ಬೆರಳಲಿ
ಆಳ್ಕೆಯಂ ಜಕ್ಕುಲಿಸುತಂ ಗಹಗಹಿಸಿ ನಗಿಸುವನು
ನಲ್ಲಮುದ್ದಿಗೆ ಬಯಸುವಂ ಮನ
ದಲ್ಲಿ ಕೇಳ್ವನು ನಸು ತೊದಲಿಸುವ
ಸೊಲ್ಲುಗಳನೋರಂತೆ ಪಂಚಾಕ್ಷರಿಯನೋದಿಸುವ ೩೨

ಎನ್ನ ಚಿತ್ತಪ್ರಿಯನೆ ಸಖನೇ
ಎನ್ನ ಕಂದನೆ ಎನ್ನ ತಂದೆಯೆ
ಎನ್ನ ಚಿನ್ನಾ ಎನ್ನ ಮುದ್ದಿನ ತಮ್ಮ ನಿವನಾರ
ಚೆನ್ನಿಗಂ ತಾನಾರ ದಾಸಿಯಿ
ವಂ ನಿಜಕ್ಕಿವನಾರ ಬಂಟನು
ಮುನ್ನಿವನದಾರಾಳಿವಂ ಬಳಿಕಾರ ಮನೆಯವನು ೩೩

ಬಸವರಾಜನ ಬೊಕ್ಕಸದವನೊ
ದಸರಿದೇವನ ಕೂರ್ಪ ಸುತನೋ
ಮುಸುಟಿ ಚೌಡಯ್ಯನ ಸುಪುತ್ರನೊ ಸುರಗಿ ಚೌಡಯನ
ಶಿಶುವೊ ಕರಿಕಾಲನ ಕರಾಳುವೊ
ಮಸಣಿದೇವನ ಕಿಂಕರನೊ ಬಾ
ಣಸಿಗನೋ ಚೇ ರಮನ ಕಕ್ಕಯ್ಯಗಳ ಸಿಂಬಕನೊ ೩೪

ಕೇಶಿರಾಜನ ಶಿಷ್ಯನೋ ಸ
ತ್ಕೇಶ ಚಾಮ ಯ್ಯನ ಮನೆಯ ಸಾ
ವಾಸಿಯೋ ಯೇಲೇಶ ಕೇತಯ್ಯಗಳ ತುಡುವಳನೊ
ದಾಸಿಮಯ್ಯನ ಕಣಜದವನೋ
ದಾಸಿಯೋ ದೂಳ ಯನ ಶಂಕರ
ದಾಸಿಮಯ್ಯನ ಲೆಂಕನೋ ಬಂಕಯನ ಹಡಪಿಗನೊ ೩೫

೧–೨ ನೀನಾರಾ (ಚ). ೩ ಚಾ (ಕ, ಬ). ೪–೫ ಬೊಮ್ಮ (ಸ). ೬ ಡ (ಪ, ಬ).

CC-0. Jangamwadi Math Collection. Digitized by eGangotri

ತೆಲುಗ ಬೊಮ್ಮನ ಬೇಂಟೆಕಾಱಿನೊ
ಮಲಯರಾಜನ ಕುದುರೆಗಾ[೧]ವನೊ
ಇಳಿಯದಂಗುಳಿಯಾರನಾಳೋ ಜಂಗಳಿಯ ಮಗನ
ಕೆಳೆಯೊ ನಂಬಿಯ ಸಂಗಡಿಗನೋ
ಕಳುವನೋ ಕರವೂರಜೋಳನ
ಬಳಿಗೆಲಸಿಯೋ ಮಲ್ಲಿಕಾರ್ಜುನಪಂಡಿತರ ಮನೆಯ ೩೭

ಚೆನ್ನಬಸವ[೨]ನ ಸು[೩]ಪ್ರಸಾದಿಯೊ
ಹೊನ್ನಿತಂದೆಯ ಕಂಬಿಕಾಱಿನೊ
ಕಿನ್ನರನ ಡಿಂಗರಿಗನೋ ಬಾಹೂರ ಬೊಮ್ಮಯನ
ಚೆನ್ನ ಪರಿಚಾರಕನೊ ಮಾದರ
ಚೆನ್ನನಣುಗನೊ ಬೊಮ್ಮಿದೇವನ
ಮನ್ನಿಸುವನೋ ನಿಂಬಿಯಕ್ಕನ ಮಗನ ಓರಗೆಯೊ ೩೮

ಮಗನೊ ಬಳ್ಳೇಶ್ವರನ ಮಲ್ಲ
ಯ್ಯಗಳ ಗುಡ್ಡನೊ ಸಿದ್ಧರಾಮ
ಯ್ಯಗಳ ಸೊಡ್ಡಳ ಬಾಚಿ[೪]ರಾಜ[೫]ನ ಪಡಿಯನಳಿವವನೊ
ಹೊಗಳತೆಯ ಸಕಳೇಶ ಮಾದರ
ಸಗಳ ಮೊಮ್ಮನೊ ಚಿಕ್ಕಮಾದ
ಣ್ಣಗಳ ಮಹದೇವಿಯರ ಮೋಹದ ಕಂದನೋಯೆನುತ ೩೯

ಹಾಡುವನು ಮುಂಡಾಡುವನು ಕೊಂ
ಡಾಡುವನು ಮನವೊಲಿದು ಸರಸವ
ನಾಡುವನು ಮುದ್ದುಗಳನೆನ್ನಂ ಬೇಡುವನು ತನ್ನ
ನೋಡೆನುತ್ತಾನೆತ್ತಿಕೊಂಡೊಡ
ನಾಡುವಂ ಹಸಿದಿದ್ದಡೆನಗನು
ಗೂಡಿ ಕರೆದಾರೋಗಣೆಗೆ ನೀಡೆಂಬನವ್ವೆಯನು ೪೯

೧ಗೋ (ಅ, ಕ, ಚ, ಡಾ, ತ, ಥ, ಪ). ೨–೩ನೊಳು (ಕ, ಚ, ತ, ಥ, ಪ, ಮ). ೪–೫ದೇವ (ತ).

CC-0. Jangamwadi Math Collection. Digitized by eGangotri

ಹಸಿದಿನಿತುಹೊತ್ತಿದ್ದಡೆನ್ನುವ
ನೊಸೆದು ನೋಡುತ ನಿನ್ನದಾವ ಕೆ
ಲಸವೆಲೆ ಕೇಳ್ ಬಾಲಲಿಂಗಂಗುಣಬಡಿಸು ಬಾರ
ಶಿಶು ಬಳಲಿದನೆನುತ್ತ ತಾಯಿಗೆ
ಬೆಸಸಲವ್ವೆಯು ತಳುವಿದಡೆ ಭರ
ವಸದಿ ಬಂದೂಡುವನು ತಾನೇ ತುತ್ತುತುತ್ತಿಂಗೆ ೪೦

ಹೆಗಲನೇಱಿಸಿಕೊಂಡು ಮೆಲ್ಲನೆ
ನೆಗೆನೆಗೆದು ನಡೆವುತ್ತ ನಿಮ್ಮೋ
ಲಗಕೆ ಬಂದಾಗಳು ಜಡರವೋಲಾತ್ಮಸಂತತಿಗೆ
ಸೊಗಸವಳಿಮೋಹದಲಿ ಲಾಲಿಸ
ಬಗೆಯದಲ್ಲಿಂತೆನ್ನುವಂ ತ
ಮ್ಮ ಗುರುಲಿಂಗದ ಹೆಸರಲಾ ಎಂದೆಯ್ದೆ ಮನ್ನಿಸುವ ೪೧

ಚಪ್ಪಳಿಕ್ಕುತ ಕುಣಿಸುತೆನ್ನಯ
ಬೊಪ್ಪನೀ[೧] ಬಂದಪನೆನುತ ಬಿಗಿ
ದಪ್ಪಿಕೊಳುತಂ ಹಾಡುತಾಡುತ್ತೆನ್ನ ಮುದ್ದುಗಳ
ಒಪ್ಪವಿಡುತಾನಂದಿಸುತ ನಲಿ
ವಪ್ಪ ಮನದಾಕಾಂಕ್ಷೆಯಿಂದೆ
ನ್ನಪ್ಪನೆನ್ನೊಡನನುದಿನಂ ಕೂಡಿಪ್ಪನಿಂದೀಗ ೪೨

ಕರೆದಡಂ ಮುಂದಿದ್ದಡೆನ್ನಂ
ಸರಕುಮಾಡನು ನೋಡನಯ್ಯನು
ಸುರದಿಹನು ತಾನೊಮ್ಮೆಯುಂ ಕಡುಮುನಿಸದೆಂತಹುದೊ
ಪರಿಹರಿಸಿ ಮಜ್ಜನಸಮಯವಂ
ತರುವಲಿಗಳೊಡನಾಡೆನೆಂದುಂ
ಪುರದಿ ಮಾಱುವ ಹಣ್ಣುಗಳಿಗಾನಾಸೆಯಂ ಮಾಡೆ ೪೩

---

೧ ನಿದೆ (ಬ).

CC-0. Jangamwadi Math Collection. Digitized by eGangotri

ಆಮ್ಮ ಎನಗಿದನಿಕ್ಕು ನೀನೆನ
ಲಮ್ಮೆ ನಾನೊಲಿದೆನ್ನ ಲಿಂಗ
ಕ್ಕೊಮ್ಮೆಯುಂ ಕೊಟ್ಟಲ್ಲದೆ ಪದಾರ್ಥಂಗಳಂ ಮುಟ್ಟೆ
ತಮ್ಮ ಮನವೇ ಬಲ್ಲುದೀಗಳು
ಸುಮ್ಮನೇ ಮುಗಿದ್ಯೆಸು ಹೊಲ್ಲೆಹ
ವಂ ಮದಿಸಿ ಮಾಡೆನು ನುಡಿಯೆನೆನ್ನಲ್ಲಿ ತಪ್ಪಿಲ್ಲ ೪೪

ಪೊಡವಿಗತಿಶಯವೀ ಮುನಿಸು ನಿ
ಮ್ಮಡಿಗಳಿಂದವೆ ಸಸಿನವಾದಪು
ದೊಡೆಯ ಬಿಜಯಂಗೆಯ್ದು ಪೊರೆ ಬಿಜಯಂಗೆಯಿದು ಸಲಹು
ತಡವುಮಾಡದೆ ದೇವ ನೀವಾ
ಯೆಡೆಗೆ ಬಿಜಯಂಗೆಯ್ದು ಕಾಯ್ ಕೃಪೆ
ಯಡಸಿ ಎನ್ನ ಸ್ವಾಮಿ ಬಿಜಯಂಗೆಯ್ಮೆನುತ್ತೊಱಲಿ ೪೫

ಅಡಿಗಳಿಗೆ ತಾನೆಱಗುವಂ ಸೈ
ಗೆಡೆದು ಗದ್ಗದವೆರಸಿಯೇಳ್ವನು
ಬಿಡದೆ ಮತ್ತೆಯು ನಮಿಸುವಂ ತನ್ನುರದ ಸೆಜ್ಜೆಯನು
ಒಡನೆ ಕಂಕುಳಲವಚಿಕೊಳುತಂ
ನಡುಗಿ ಘೋಳಿಡುತೇಳ್ವನಂಘ್ರಿಗೆ
ಹೊಡವಡುವನಂತೇಳ್ವನಡಿಗಡಿಗಳುವ ಮು[illegible]ಸುಡಿಂದ ೪೬

ಹಲವು ಪರಿಯಿಂದಿಂತು ನಮಿಸುವ
ನಲಸುವಂ ಪ್ರಾರ್ಥಿಸುವನಯ್ಯಂ
ಗಳು ಹೊದೆದ ಹಚ್ಚಡದ ಸೆಱಗಂ ಪಿಡಿದು ಕೈಯಿಂದ
ಸೆಳೆಸೆಳೆದು ಜೋಲುತ್ತ ತೆಗೆವಂ
ಬಲು ಮುನಿಸು ನಿಮ್ಮಿಂದವಲ್ಲದೆ
ತಿಳಿಯದೆನುತಂ ಬಾಲಲಿಂಗನವಸ್ಥೆಗೊಳುತಿರಲು ೪೭

೧–೨ ಳಸಿಂ (ಚ). ೩–೪ ಹನು (ಅ).

CC-0. Jangamwadi Math Collection. Digitized by eGangotri

ಸಾದರಾಂಚಿತಸಕರುಣಾನಿಧಿ
ನಾದವಿದ್ಯಾಧಿಕನನಿತಜಲಿ
ಮಾದಿರಾಜನು ದಶನದೀಧಿತಿಮುಖದೊಳುಗುತಿರಲು
ಮೋದದಿಂ ನಸುನಗುತ ಶಿಶುವಿನೊ
ಳಾದ ನುಡಿಗಳಿಗಾಗಳಿಂದನು
ಮೇದಿನೀವಳಯದೊಳು ನಾವೇನಱಿಯೆವೇ ಮುನ್ನ ೪೮

ಮನೆಮನೆಯೊಳೊಳರಲ್ಲದೇ ಹೆಂ
ಪಿನಸಮಾನದ ಶೀಲವಂತರು
ಮನೆಯೊಳೊಜತೆಯನಗಿದರುಂಟೇ ಸತಿಸುತಾದಿಗಳು
ಮುನಿದಡಂ ಬೈವುದು ಜಡಿವುದಿಂ
ತಿನಯಗಿದುಚಿತವಲ್ಲದೇ ಸು
ಮ್ಮನೆ ನುಡಿಯದಿಹುದಿದು ಕಪಟವಲ್ಲದೆ ಸುಮಾನಸವೆ ೪೯

ಚಿಕ್ಕಮಕ್ಕಳು ಧರೆಯೊಳೊಳರೇ
ಸಕ್ಕೆ ಕಾಬೆವದಲ್ಲದೇ ಲೋ
ಕಕ್ಕೆ ಇಂತಹ ಮುಗ್ಧರುಂಟೇ ಇವನ ಮಾತುಗಳು
ಮಿಕ್ಕು ಬೇಱೊಂದಂದಮಾಗಿವೆ
ಯಕ್ಕು ಸಕಳೇಶನ ನಿರೂಪವಿ
ದಕ್ಕೆ ನಡೆ ನಡೆ ಮಗನೆ ಹೋಹವೆನುತ್ತವಲ್ಲಿದ್ದು ೫೦

ತೆರಳ್ದು ನಡೆತಪ್ಪಾಗಳತಿ ಘನ
ತರದ ಪದವಿಗೆ ಬಯಸದಿಹುದಕೆ
ಧರಣಿಯೊಳಗಿದೆ ಸಾಕ್ಷಿಯಲ್ಲಾ ಆಂತುಮಲ್ಲದೆಯು
ಪರಮಮಾಹೇಶ್ವರರಿಗಾಗಳು
ಕರುಣಿಸುವ ವರದಾನ ನೀವಾ
ಗಿರುತಿರಲು ಸಕಳೇಶ ದುರಿತವಿನಾಶ ಚಿತ್ತೈಸು ೫೧

CC-0. Jangamwadi Math Collection. Digitized by eGangotri

ಎಂದುವುಂ ಮಾನಸದೊಳಿದು ಬೇ
ಕೆಂದಪೇಕ್ಷಿಸೆನಾ೧ಗಿ ಸಂತಸ
ದಿಂದ ಮನ್ನಿಸಿ ಪೊರೆವೆನೆನ್ನಯ ಮಾತನಿಂದೆನುತ
ಒಂದು ಗೀತವನೀ ಪರಿಯೊಳೊಲ
ವಿಂದ ಸಮಧುರಸವರಸೋಕ್ತಿಗ
ಳಿಂದ ಬೆಸಸುತ ನಸುನಗುತ ಮನೆಗಾಗಳಿಯ್ತಂದು ೪೭

ಒಳಗೆ ಮಹದೇವೇನ ಮಾಡಿಹೆ
ಎಲೆ ೨ದೇತಕೆ ಮುನಿದನಿನಿಯೆನು
ಲಲನೆ ನಿನ್ನೊಳು ಹೇಳ್ ತನೂಜನು ಬಾಲಲಿಂಗಣ್ಣ
ಬಳಲುತಂ ನಡುವಿರುಳು ಬಂದನು
ನಿಳಯಮಂ ಪೊಱಮಟ್ಟಿದೇತಕ
ಬಳಿ ಎನುತ ಬೆಸಗೊಂಬ ತಕ್ಷಣಮಾತ್ರದೊಳೆ ಕೇಳಿ ೪೮

ಕಡುಹೆದಱಿ ಸಂಭ್ರಮಿಸುತೆಯಿತಂ
ದೊಡನೆ ಸೈಗೆಡೆದಾಕೆ ಹೊಡವಡು
ತೊಡೆಯರಡಿಗಳ ಮೇಲೆ ಬೀಳುತ ಮತ್ತೆ ನಮಿಸುತ್ತ
ಎಡೆವಿಡದೆ ಪಲವಂದದಿಂದಾ
ಮಡದಿ ಶರಣೆನುತಿರಲು ಮೆಲ್ಲನೆ
ನಡುಮನೆಗೆ ನಡೆತಂದನಘನಾ ಮಾದಿರಾಜಯ್ಯ ೪೯

ಮೌನದಿಂದವೆ ಕುಳ್ಳಿತಿರ್ದಪೆ
ಏನ ಮಾಡಿಹೆ ಚಿಕ್ಕಮಾದ
ಣ್ಣಾ ೩ನಿನಗಿ೪ದೇಕಿಲ್ಲಿ ಏಳೇಳಿಂತಿರದೆ ಬಾರ
ನೀನಸಮಲಿಂಗಾರ್ಚನಕ್ಕಿದು
ತಾನವಸರಂ ಬಾರಬಾರ ನ
ವೀನಮುಕ್ತಿಪದವಿಯೊಳೆಣೆಸುವಡಾವ ಸುಖವುಂಟು ೫೦

---

೧ ಲಾ (ಬ). ೨–೩ ನೀನಿ (ಥ).

CC-0. Jangamwadi Math Collection. Digitized by eGangotri

ಭಕ್ತಿಮಾರ್ಗವಿದೆಮ್ಮ ಸೊಮ್ಮ
ದ್ಯುಕ್ತವಂ ತಾನಿನ್ನು ಮೌನ
ತ್ಯಕ್ತನಾಗಿದು ಹಿತವೆಮಗೆ ನೀ ನುಡಿಯೆನೆಂಬ ಛಲ
ಯುಕ್ತಿಸಲು ಮುನಿಸಿನ ನೆವದಿ ಕಲು
ಷೋಕ್ತಿಯುಂ ನಿನಗುಂಟೆನುತ್ತನು
ರಕ್ತಿಯಲಿ ಮುನಿಸಂ ತಿಳುಹಿ ಹೋಗೆಂದು ಬಾಲಕನು ೫೬

ಏಮ್ಮನೊಡಗೊಂಡೀಗ ಬಂದನು
ತಮ್ಮನಿದೆಯೆನುತಾ ಮಹಂತನು
ಸಮ್ಮದದಯಾಲೋಕನಸುಧಾರಸದಿ ನಾಂದಿರಲು
ಸುಮ್ಮನೇ ಪಥಶ್ರಾಂತನೊಂದಂ
ನೆಮ್ಮಿ ನಿದ್ರಿಸಲಿಬ್ಬಿಸಿದವೋ
ಲಮ್ಮಮಂಗಮೊಳೆಯೆದ್ದ ಜೀವಂ ತೀವಿ ನೆಲೆಗೊಳಲು ೫೭

ಬೆನ್ನನೊಯ್ಯನೆ ನುಲಿದುಕೊಳುತಾ
ತಂ ನಿಗುರೆ ಕೈವೆರಳುಗಳು ತಲೆ
ಯಂ ನಿಲಿಸಿಯಳ್ಳಿಗಳದಿರೆ ತೋಳೆರಡು ಪೂರ್ಯೆಸೆ
ತನ್ನ ಕದಪುಗಳೊದಗೆ ಪುರ್ಬುಗ
ಳುಂ ನಯಂಬಡೆ ನಾಸಿಕಾಪ್ರುಟ
ದಿಂ ನಡೆಯಲುಶ್ವಾಸವಧರಂ ಮಿಡುಕೆ ಮುಖವೆತ್ತಿ ೫೮

ತನು ೧ಮುರಿಮುರಿದು ನಿಲುಕಿಸುತ್ತಂ೨
ಮನವಲರಿಸುತ್ತಾಗಳಿಸುತುಸು
ರನುಗೊಳಿಸುತಂ ಕಣ್ದೆಱೆದು ನೆಱೆ ಚಿಕ್ಕಮಾದಣ್ಣ
ಅನಘ ಮಾದರಸಯ್ಯನಂ ಕಂ
ಡನಿತಱಲಿ ಸಂಭ್ರಮಿಸುತಂ ಪ್ರಿಯ
ವಿನಯಭಯಭಕ್ತಿಗಳು ತಮ್ಮೊಳು ಸಂದಣಿಸುತಿರಲು ೫೯

೧–೨ ವಮುಱಿಮುಱಿದಲುಗಿಸುತ್ತಂ (ಕ, ಜ, ಥ).

CC-0. Jangamwadi Math Collection. Digitized by eGangotri

ಸರಸರನೆ ಮುಕುಳಿತಕರಂಗಳು
ವೆರಸಿ ನಡನಡುಗುತ್ತ ಚರಣಾಂ
ಬುರುಹಯುಗಳದ ಮೇಲೆ ಬಿದ್ದವರಡಿಗಳಂ ತನ್ನ
ಶಿರದೊಳಾನನದಲ್ಲಿ ಕಂಗಳೊ
ಳುರದೊಳೊಡನೊಡನೊತ್ತಿಕೊಳುತಂ
ಪರಮಪುರುಷಾ ಎನ್ನ ಜನ್ಮವು ಸಫಲವಾಯಿತ್ತು ೬೦

ಧನ್ಯನಾದೆನು ಪುಣ್ಯನಾದೆನು
ದೈನ್ಯನಿರುಹರಣಾ ನಿರಸ್ತಜ
ಘನ್ಯ ಬಹಳವದಾನ್ಯ ಮಾಯಾಶೂನ್ಯ ಲೋಕೈಕ
ಮಾನ್ಯ ಸಂತತರಹಿತಮಾತ್ಯ
ಸ್ತನ್ಯ ಜನಚೈತನ್ಯ ಬುಧಸೌ
ಜನ್ಯ ಹತಭವಜನ್ಯ ನಿರ್ಜಿತಭಾವಭವಸೈನ್ಯ ೬೧

ಎಂದು ಮೂವರು ಮತ್ತೆ ನಮಿಸುತ
ಮುಂದೆ ಕೀರ್ತಿಸಲಖಿಳಭಕ್ತರು
ವಂದಿಸುತ್ತಿದು ಚಿತ್ರವಲ್ಲಾ ಪಿತನ ಭಕ್ತಿಯಲಿ
ಕಂದನಸುವಂ ಶೂಲಿಯಿತ್ತುದು
ಸಂ೧ದಿತಂದೀ೨ ಸುತನ ಭಕ್ತಿಗೆ
ತಂದೆಯಸುವಂ ಕೊಟ್ಟುದಿದು ನಿಮಗಿಂದು ಸಂದಿತಲಾ ೬೨

ಭಾಪು ಸಜ್ಜನಜನಸಹಾಯಾ
ಭಾಪು ಭಕ್ತಸುಹೃದಯಶಯ್ಯಾ
ಭಾಪುರೇ ಸಕಳೇಶಮಾದರಸಯ್ಯ ಎಲೆ ಜೀಯಾ
ಕೋಪದೂರಾ ನಿಮ್ಮ ನಿರ್ಮಳ
ರೂಪಮಂ ಕಂಡವರುಗಳ ಬಹು
ಪಾಪಸಂಕುಳವಳಿದು ಹೋಗವೆ ದೂರದೂರದಲಿ ೬೩

೧–೨ ದುತಂದೀ (ಸ); ಸಂದುಸಂದೀ (ಅ, ಪ, ಬ).

CC-0. Jangamwadi Math Collection. Digitized by eGangotri

ಭವದತುಳಸನ್ಮೂರ್ತಿಯಂ ಕಂ
ಡವರುಗಳು ಚರಿತಾರ್ಥರಾಗರೆ
ತವ ಶರೀರಚ್ಛಾಯೆ ಮೇಲೆಱಗಿದಡೆ ಜೀವಿಗಳ
ವಿವಿಧಪಾಶಚ್ಛೇದನವಲಾ
ಭವಹರಣ ಯುಷ್ಮತ್‌ಕಟಾಕ್ಷದಿ
ಕಿವುಡನಾದಡೆ ಸಕಳಶಬ್ದಶ್ರೋತ್ರನಾಗಿರನೆ ೬೪

ಆಗಳುಂ ನಿಮ್ಮೊಲಿವ ನೋಟದಿ
ಮೂಗನುಂ ಚತುರ್ವೇದಿಯಾಗನೆ
ಈಗ ನಿಮ್ಮ ಕೃಪಾವಲೋಕದಿ ಹುಟ್ಟುಗುರುಡಂಗೆ
ಆಗಳಲರವೆ ದೃಷ್ಟಿಗಳು ಚೆ
ನ್ನಾಗಿ ನೀವನುನಯದಿ ನೋಡಲು
ರೋಗಿಯಾದವನುಂ ನಿರೋಗಿಯೆನಲ್ಕೆ ಬಾಳ್ವನಲಾ ೬೫

ಬದ್ಧಕರುಣದಿ ನೀವು ನೋಡಲು
ವೃದ್ಧನಾದಡೆ ಬಾಲನಾಗನೆ
ಸಿದ್ಧವಿದು ನೀವೊಲಿದು ನೋಡಲು ಕೊರಡು ತಳಿರ್ವುದಲಾ
ಶುದ್ಧಮಾನಸ ನೀವು ಲಸದವಿ
ರುದ್ಧದಿಂ ನೋಡಿದಡೆ ಹೆಣನುವ
ದುದ್ಧತಿದ್ದೀ ಪೊಡವಿಯೊಳಗೆಡೆಯಾಡುತಿಪ್ಪುದಲಾ ೬೬

ಭಾವಿಸಲು ನಿಮ್ಮುಲ್ಲಸತ್ಕರು
ಣಾವಲೋಕನದಿಂದವನಲನ
ದಾವಗಂ ಮಂಜಹುದಲಾ ನಿಮ್ಮಲರ್ವ ದೃಷ್ಟಿಯಲಿ
ಆವ ವಿಷವಾದಡೆಯಮೃತವಹು
ದೋವಿ ನಿಮ್ಮ ಮಹಾಮಹಿಮೆಯಂ
ದೇವ ಸಹಜವದಲ್ಲದೇ ಕೊಂಡಾಡಲೆಲ್ಲಿಯದು ೬೭

CC-0. Jangamwadi Math Collection. Digitized by eGangotri

ಪ್ರಾರ್ಥಿಸಲು ಕೈಕೊಂಡು ನಂದನ
ವರ್ತಿಯಂ ಸಲಿಸಲ್ಕೆಯವನತ
ದರ್ಥದಿಂದೆಯ್ತಂದು ಪಿತನೊಳು ಪ್ರಾಣದಾನವನು
ಸ್ವಾರ್ಥವಾಗಿರಲಿತ್ತು ಪೊರೆವ ಸ
ಮರ್ಥತೆಯದಾರ್ಗುಂಟು ಲಿಂಗಸ
ದರ್ಥ ನಿಮಗಲ್ಲದೆ ಬಳಿಕನಘ ಮಾದಿರಾಜಯ್ಯ ೬೮

ಭೇದವೇಂ ಮಾದಣ್ಣನುಂ ನೀ
ವಾದುದಕ್ಕರಿದಲ್ಲೆನುತ್ತಾ
ಹ್ಲಾದದಿಂದಾ ಭಕ್ತರೆಲ್ಲರು ಕೀರ್ತಿಸುತ್ತಿರಲು
ಮಾದಿರಾಜಯ್ಯಂಗಳುಂ ಸಂ
ಮೋದದಿಂ ಮಾದಣ್ಣನೊಳು ಸಂ
ವೇದಿಸಲು ಪ್ರಾಣವನೊದಗಲಿತ್ತಂತು ಸಲಹಿದನು ೬೯

ಧರಣಿಯೊಳು ಸಕಲೇಶ್ವರನ ಮಾ
ದರಸನೆಂದಿನಹಂಗೆ ನಾದಸು[೧]
ಭರಿತದಿಂ ಲಿಂಗಾರ್ಚನಾಸಕ್ತಿಯೊಳಿರುತ್ತಿರಲು
ನಿರತದಿಂದಾಯಯ್ಯಗಳ ಸ
ಚ್ಚರಿತವಂ ಕೇಳ್ದಡೆ ಪಠಿಸಿದಡೆ
ಒರೆದಡಾಯುಶ್ರೀಯು ಮುಕ್ತಿಯುಮಹುದು ಮನುಜರಿಗೆ ೭೦

ಅಂತು ಸಂಧಿ ೪೬ಕ್ಕಂ ಪದಗಳು ೨೬೭೫ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

---

೧ ಸ (ಪ, ಸ).

CC-0. Jangamwadi Math Collection. Digitized by eGangotri

ಸಂಧಿ : ೪೭

*

ಸೂಚನೆ : ಚಿಕ್ಕವಂ ಮಡಿದಡೆ ಸಮಾಧಿಯೊ
ಳಿಕ್ಕಿದೇಳು ದಿನಂಗಳಿಗೆ ಬಂ
ದಕ್ಕಜಂದವನಸುವನಿತ್ತನು ಕದಿರ ರೇಮಯ್ಯ

ಕದಿರ ರೇಮಯ್ಯಂಗಳೆಂಬ ಸ
ಮುದಿತಕಾರುಣ್ಯಪ್ರವರ್ತಿ ವಿ
ಶದಮಹಿಮಕೀರ್ತಿಪ್ರಸಿದ್ಧ ವಿಶುದ್ಧಗುರುಮೂರ್ತಿ
ವಿದಳಿತನತಜನಾರ್ತಿಯುಚಿತ
ಸದಮಳಾಚಾರಪ್ರಪೂರ್ತಿ ಸ
ಹೃದಯಗತಚಿದ್ದೀಪಭಾಜನವರ್ತಿ ವಿಸ್ಫೂರ್ತಿ ೧

ಒಂದು ದಿನ ಗುರುದರುಶನಾರ್ಥ
ಕ್ಕೆಂದೊಡೆಯರಿದ್ದೆಡೆಗೆ ಹೋಗುತ
ಮುಂದೆಯೊಂದೂರಿರಲು ಕಾಲ ಶಿವಾರ್ಚನೆಯ ವೇಳೆ
ಸಂಧಿಸಿತಿದನತಿಕ್ರಮಿಸಿದವ
ಱಿಂದ ಶಿವಭಕ್ತರ್ಗೆ ತಪ್ಪಹು
ದೆಂದು ಹೇಳುವವೀಶ್ವರಪುರಾಣಂಗಳಂತಾಗಿ ೨

ತತ್ರಿಕಾಲಾಯತನಿಯತಮಣು
ಮಾತ್ರದನಿತುಂ ತಪ್ಪಬಾರದು
ಧಾತ್ರಿಯೊಳಗೆನುತಂ ಶರಣನಾ ಗ್ರಾಮವಂ ಪೊಕ್ಕು
ಪುತ್ರನುಂ ಸತಿ ಪುರುಷನುಂ ಗುರು
ಪಾತ್ರರಾದುದನಱಿದುವಿಲ್ಲಿ ಪ
ವಿತ್ರವೆನುತಾ ಭಕ್ತನಿಳಯಕೆ ಭರದೊಳ್ಪೆತರಲು ೩

---

* ರಾಗ : ನಾಟ (ಅ, ಚ, ಡಾ, ಧ, ಪ); ಆಹರಿ (ಮ); ವಸಂತಭೈರವಿ (ತ).

CC-0. Jangamwadi Math Collection. Digitized by eGangotri

ಆ ಮನೆಯ ಭಕ್ತನ ಪೆಸರು ತಾಂ
ಸೋಮನಾಥನು ತಲ್ಲತಾಂಗಿಯ
ನಾಮವಣ್ಣಲದೇವಿಯಾಕೆಯ ಸೂನು ಮಲಿನಾಥ
ಆ ಮಹಾತ್ಮನ ಮೂರ್ತಿಯಂ ಸತ್
ಪ್ರೇಮದಿಂ ಕಾಣುತ್ತ ಮೂವರು
ತಾಮಸಂಗಳನುಳಿದು ಸರ್ವಾಂಗಂ ಪುಳಕಿಸುತ್ತ ೪

ಅತಿಶಯಪ್ರಿಯವಲರ್ದು ಭಕ್ತನು
ಸತಿಯು ಸುತನುಂ ತಾನು ವಂದಿಸು
ತತಿವಿನಯದಿಂ ನಿತ್ಯಲಿಂಗಾರ್ಚನನಿಯತಿಯಾಗಾ
ರತಿಯೊಳೆನಿತುಂ ತಪ್ಪದೇ ಸಲಿ
ಸುತ್ತವೇ ಪೂಜಾಂತ್ಯದೊಳು ಸಮು
ದಿತಮನದೊಳಾರೋಗಿಸುತಮಿರ್ದಯ್ಯಗೆಯ್ತಂದು ೫

ಸಸಿನೆ ನೀಳಕ್ಕೆಱಗಿ ಜನಕನ
ಪಸರಿಸುತ್ತವರ ಪ್ರಸಾದವ
ನೊಸೆದು ಕೊಂಡನಹಂಗೆ ಸುತನುಂ ನಮಿಸಿ ನಾ ನಿಮ್ಮ
ಶಿಶುವೆನಗೆ ನಿಮ್ಮೊಕ್ಕುದಂ ಕರು
ಣಿಸಿಯೆನುತ ಕಳಕೊಂಡು ಮಿಗೆ ಸಂ
ತಸದಿ ತಾನುಂ ತನ್ನ ತಾಯುಂ ಕೂಡೆ ಭೋಗಿಸಲು ೬

ಅನಿತಱಿಂದಾ ಕದಿರ ರೇಮ
ಯ್ಯನವರಾ ಗುರುಲಿಂಗಸಂದರು
ಶನನಿಮಿತ್ತದೊಳೆಯ್ದಿ ಯಾಯಾರಾಧ್ಯರಂ ಕಂಡು
ವಿನಯದಿಂ ಮೈಯಿಕ್ಕಿಯವರ್ಗಳ
ಘನದಯಾಮೃತವನಿಧಿಯೊಳೊಲಿ
ದನವರತವೋಲಾಡುತಿರಲಿಂತಿತ್ತಲೈಸಱಿಲಿ ೭

---

೧ ವಿ (ತ, ಥ, ನ, ಪ, ಬ). ೨–೩ ನೋಡಿ (ನ). ೪ ತ (ಥ).

CC-0. Jangamwadi Math Collection. Digitized by eGangotri

ತನಯನುಂ ತನ್ನೊಡನೆ ಬರುತಿರೆ
ಜನನಿ ಬೆರಣಿಯನಾಯ್ದುಕೊಂಡಾ
ಮನೆಗೆ ಬರುತಿರೆ ಹಿಂದೆ ಬರುತಿಹ ಸುತನನುರವಣಿಸಿ
ಘನಭುಜಂಗಂ ಕಚ್ಚಲೊಡನೊ
ಯ್ಯನೆ ನಗುತ್ತ ಶಿವನ ನಿರೂಪವಿ
ದೆನುತವೆಲೆಯಮ್ಮ ಮ್ಮ ಹಾವಿದೆಯತ್ತ ಹೋಗದಿರು ೮

ನಡೆಯೆನುತ್ತಾಕ್ಷಣದೊಳಸುವಂ
ಬಿಡೆ ತನುಜನಂ ನೋಡಿ ತಾಯ್ಪಾಯ್
ಬಿಡದೆ ವೈದ್ಯರನೀಗ ಕರೆಯೆನ್ನದೆ ಮನಂ ಬಿಡದೆ
ಕೆಡಿಕ ಹುಳು ಕಚ್ಚಿತ್ತು ಮಗನಂ
ಸುಡು ಸುಡೀ ಸಂಸಾರವೆನ್ನದೆ
ಸಿಡಿಮಿಡಿಗೊಳುತ್ತಕ್ಕಟಕಟಾ ಎಂದು ಘೋಳಿಡದೆ ೯

ಚೆನ್ನಿಗನು ಮಡಿದನು ಶಿವಶಿವಾ
ಎನ್ನದಿನ್ನೇವೆನು ಸುಪುತ್ರಾ
ಎನ್ನದಯ್ಯೋ ಕೆಟ್ಟೆನಲ್ಲಾ ಎನ್ನದಳುತಿರದೆ
ತನ್ನ ಎದೆಗುಂಡಿಗೆ ಧಿಗಿಲುಧಿಗಿ
ಲೆನ್ನದೊರ್ಬನೆ ಸುತನಲಾ ತನ
ಗೆನ್ನದಹಿಯೆಲ್ಲಿದ್ದು ಬಂದಿತೊ ಎನ್ನದಾತ್ಮದೊಳು ೧೦

ನ್ಯಾಯವೇ ತನಿವಣ್ಣಿರಲು ಕಸು
ಗಾಯನೇತಕೆ ಕೊಯ್ದಿ ಹರಹರ
ಕಾಯವೇಡಾಯೆನ್ನದುಪತಾಪಿಸದೆ ಶಾಪಿಸದೆ
ಈಯಣುಗನಂ ಕ್ರೂರಸರ್ಪನ
ಬಾಯಿಗೀವರೆ ದೇವಯೆನ್ನದೆ
ಯಾಯುರಗನಿಂ ಮಡಿದನೆನ್ನದೆ ಕಂಬನಿಗಳುಗದೆ ೧೧

CC-0. Jangamwadi Math Collection. Digitized by eGangotri

ಈಯವನಿಯೊಳು ಧರ್ಮವೇ ತಲೆ
ಗಾಯಿತೆಂಬರು ಮನುಜರೆಲ್ಲರು
ಕಾಯಜಾಂತಕ ನಿಮ್ಮನರ್ಚಿಪ ಭಕ್ತತತ್ಪರನ
ಕಾಯಜಾತನ ಕಾಯವಂ ಕಾ
ಯ್ಕಾಯಿಯೆನ್ನದೆ ಪೂರ್ವಲಿಖಿತವಿ
ದಾಯಿತೆನ್ನದೆ ಮುಖಿದ ಕಳಿಗುಂದದೆ ಕಳವಳಿಸದೆ ೧೨

ತನ್ನ ಮಗನಂ ಕೊಂದ ಪಾಪದ
ಪನ್ನಗಂ ತವೆ ತನ್ನನೇತಕೆ
ತಿನ್ನದಾಯ್ತೆನ್ನದೆ ಮಹೇಶ್ವರ ನಿಮ್ಮ ಭಕ್ತರಿಗೆ
ಬನ್ನವುಂಟೇ ಒಂದು ಬಾರಿಗೆ
ಮನ್ನಿಸದಿಹುದು ಧರ್ಮವೇ ನಿಮ
ಗೆನ್ನದೇಗು[೧]ವೆವಿದಕೆ ಹಾಹಾ ಎನ್ನದಾಸರದೆ ೧೩

ಪರಮಭಕ್ತರ ಕೈಯಲಾದಡೆ
ವರವಿಭೂತಿಯನಿಡಿಸಿದಡೆ ನಿಜ
ತರುಣನಾಗಳೆ ಬದುಕುವನಲಾ ಎನ್ನದಗಜೇಶ
ನಿರುತದಿಂ ನಿಮ್ಮಂ ನಿರಂತರ
ವಿರದೆ ಪೂಜಿಸುತಿಪ್ಪ ಫಲವೀ
ಪರಿಯೊಳಾಯಿತ್ತೆಮ್ಮ ಪುತ್ರಂಗೆನ್ನದೋರಂತೆ ೧೪

ಶಿವನೆ ನೀವೇ ನುಂಗಿದಡೆ ನುಂ
ಗುವಿರದಲ್ಲದೆ ಸುತನನಕ್ಷೀ
ಶ್ರವಗದೇತಕೆ ನುಂಗಲೀಸಿದಿರೆನ್ನದೇ ಗಳದ
ವಿವರದೊಳು ವಿಷವಹ್ನಿ ತೀವಿ
ರ್ದವಗಡದ ಫಣಿವರಕಟಕ ನಿ
ಮ್ಮವನೆ ಹೊಂದಿದವರ್ಗೆ ಕೇಡಹುದಲ್ಲದೇ ಬಳಿಕ ೧೫

೧ಸು (ಚ).

CC-0. Jangamwadi Math Collection. Digitized by eGangotri

ತನಯನಸುವಂ ಕೊಟ್ಟಡಿಂದ
ರ್ಚನೆಯ ಮಾಡುವೆನಭವಗೆನ್ನದೆ
ನಿನಗೆ ವೀರೇಶ್ವರ ಸುತನನೀ ಬಾರಿ ಕಾಯಿದಡೆ
ಮನವೊಲಿದು ಪರ್ಬಂಗಳಂ ದಿನ
ದಿನಕೆ ಮಾಡಿಹೆನೆನ್ನದೇ ನಂ
ದನನ ಜೀವವನೆತ್ತಿ ಗುರುವೇಯೆನ್ನದರ್ಥಿಸದೆ ೧೬

ಹತ್ತು ಬೆರಳಾರತಿಗಳಂ ನಿಮ
ಗೆತ್ತುವೆಂ ಪ್ರಮಥರಿರ ಪುತ್ರನ
ನಿತ್ತು ಸಲಹೆನ್ನದೆ ಭುಜದ ಖಿಂಡಂಗಳಂ ಕೊಯ್ದು
ಇತ್ತಪೆವು ನಿಮಗೆಲೆ ಪುರಾತರೆ
ಮತ್ತನಯನೊಳ್ಳಾಣದಾನವ
ನಿತ್ತು ಪೊರೆಯೆಂದೆನ್ನದೇ ಬೆಂಬೀಳದನುಗೆಡದೆ ೧೭

ವೀರಗೆಲಸದ ಜೋಡಶರಿಗೆಯು
ತೇರಸಗಣಂಗಳಿಗೆ ನಮಿಸಿಯ
ಪಾರಪರಿಯಲಿ ಹರಸಿಕೊಂಡೆಹೆವೆನ್ನದಾತ್ಮ[೧]ಜಗೆ[೨]
ಮಾರಹರ ನಿಮಗುಚಿತವೇ ಮ
ತ್ತಾರಿಗಾಹಿವೆ ಕುಂಟದೇವತೆ
ಸೇರಿ ಮನೆಯವರ್ಗಾಪನೆನ್ನದೆ ಸೂನು ತೀರಿದಡೆ ೧೮

ಸೂನು ಬದುಕಿದಡಿಂದು ನಿನ್ನಂ
ನೋನುವೆವು ಗುಡ್ಡವ್ವೆ ತಾಯ್ವರ
ದಾನಿ ಎನ್ನದೆ ಜನನಿ ಜನಕರು ಪುತ್ರನಂ ನೋಡಿ
ಆನನದೊಳೆಳೆನಗೆ ಮೊಳೆಯೆ ಸು
ಮ್ಮಾನದಿಂ ಲೇಸಾಯಿತೆನುತ ಮ
ಹಾನುಭಾವಪ್ರಮಥರಿಗೆ ಸಂದನು ತನಯನೆನುತ ೧೯

೧–೨ ದೊಳು (ನ).

CC-0. Jangamwadi Math Collection. Digitized by eGangotri

ನೆರೆಮನೆಯು ಮುಮ್ಮನೆಯು ಭಕ್ತರು
ನರರುಪಱಿಯದ ಹಂಗೆ ಸತಿಯುಂ
ಪುರುಷನಾ ಮನೆಯೊಳಗಣುನ್ನತ ವೇದಿಕೆಯನಗಿದು
ತರುಣನಂ ನಿಕ್ಷೇಪವಂ ಮಾ
ಡಿರುತಿರಲು ತದ್ಗುರುಚರಣಸರ
ಸಿರುಹಮದಮಧುಕರನೆನಿಸಿದಾ ಕದಿರ ರೇಮಯ್ಯ ೨೦

ಗುರುಸಪರಿಯಾರ್ಚನೆಗಳಂ ಸು
ಸ್ಥಿರಮತಿಯೊಳಾಚರಿಸಿ ೞರದೊಳು
ಧರಿಸಿಯವರ ನಿಜಾಜ್ಞೆಯಂ ಮತ್ತೇಳು ದಿನದೊಳಗೆ
ಮರಳಿಯಾ ಭಕ್ತನ ಮನೆಗೆ ಸರ
ಸರನೆ ಬರೆ ಕಂಡಾತನೆಂದಿನ
ಪರಿಯೊಳಭಿವಂದಿಸಿ ಸಮುಚಿತಕ್ರಿಯೆಗಳಂ ಮಾಡಿ ೨೧

ಹೊಸಪರಿಯ ತತ್ಕಾಲಲಿಂಗಾ
ವಸರಮಂ ಸಲಿಸಿ ಪ್ರಸಾದವ
ನೊಸೆದು ಭೋಗಿಸುವಾಗ ರೇಮಯ್ಯ[೧]ನಾ ಸತಿ ಪುರುಷರ[೨]
ಸಸಿನೆ ದಿಟ್ಟಿಸಿ ನಿಮ್ಮ ಮಗನೇ
ದೆಸೆಯೊಳಿದ್ದಹನಾವೆಡೆಗೆ ಗಮ
ನಿಸಿದನಿಲ್ಲಿಗದೇಕೆ ಕರೆಯಿರಿ ನಿಮ್ಮೊಡನೆ ಮುನಿಸೆ[೩] ೨೨

ನಾವು ಬಂದುದು ತೊಡಗಿ ಕಾಣೆವು
ನೀವಿದೆಲ್ಲಿಗೆ ಕಳುಹಿದಿರಿ ನೀ
ವೋವ ಮಗನೊಬ್ಬನೆಯಲಾ ನಾವಂದು ಬಂದಲ್ಲಿ
ನೀವು ನಮಿಸಲು ನಿಮಗೆ ಮುನ್ನವೆ
ಸೇವೆಯಂ ಮಾಡುವನು ಪಂದಿಸಿ
ನಾವು ಮೋಹವನೆಯ್ದಿ ಮಾಡುವೆವಾ ಕುಮಾರಂಗೆ ೨೩

೧–೨ ಸತಿಪತಿಯನೊಲಿದು (ಚ). ೩ ಸಿ (ಕ, ಚ, ಥ, ಪ, ಬ, ಮ).

CC-0. Jangamwadi Math Collection. Digitized by eGangotri

ಆಂಗನೆಯು ನೀವೊಲಿದು ಪರಿಚರಿ
ಯಂಗಳಂ ಮಾಡಲ್ಕೆ ಸುತನುವ
ಹಂಗೆ ನೀಡುತ ನೋಡುತಿಪ್ಪನು ನೀವು ಬಂದೆಮ್ಮ
ಲಿಂಗದಾರೋಗ್ಯಪ್ರಸಾದಕೆ
ಹೊಂಗಿ ಕೈಗಳನೊಗ್ಗಿಕೊಳಲು ಕ
ರಂಗಳಂ ತಾ ನೀಡಿಕೊಂಡನು ಬಳಿಕ ನಿಮ್ಮೊಡನೆ ೨೪

ಬಿಡದೆ ನಿ[೧]ಮ್ಮೊಡನಿಪ್ಪನಾವೀ
ಎಡೆಯೊಳಿರೆ ನಂದನನು ಮತ್ತೊಂ
ದೆಡೆಯೊಳಿರನೀ ಮನೆಯೊಳಿಲ್ಲಾ ಮುಮ್ಮನೆಯೊಳಿರನು
ಎಡವನೆಯೊಳೀ ಕಡೆಮನೆಯೊಳಾ
ಕಡೆಮನೆಯೊಳುಂ ಹೊಗನವಂ ಶಿಶು
ಮಡದಿ ಕೇಳ್ ಮನೆಹೊಱಗೆ ನಿಂದಿತು ನೀನೊಱಲಿ ಕರೆಯೌ[೨] ೨೫

ಜನನಿ ಕರೆಯಲು ಕೇಳಿ ಬಾರದ
ತನಯನುಂಟೇ ಕರೆ ಎನುತ್ತಿರೆ
ತನಯನಂ ಕರೆಯಲ್ಕೆ ಚಂಗಳೆದೇವಿಯೇ ನಾನು
ತನಯನಂ ತಾಂ ಕರೆಯದಿಹ ಸ
ಜ್ಜನದ ಭಕ್ತಿಯ ನಿಂಬಿಯಕ್ಕನೆ
ಯನಘ ಕರೆಯದ ನಿಂಬಿಯಪ್ಪೆಯ ಕರೆದ ಚಂಗಳೆಯ ೨೬

ಮನೆಯ ತೊತ್ತಿನ ಮಗಳ ಮಕ್ಕಳಿ
ಗಿನಿತುವುಂ ಸರಿಯಾಗದೆನ್ನನ
ವನಿಯೊಳುತ್ತಮ ಭಕ್ತ ನಾನೆಂದಾತ್ಮದೊಳು ನೆನೆದು
ತನಯನಂ ಕರೆಯೆಂದು ಹೇಳುವು
ದನುಚಿತವಲಾ ನಿಮಗೆ ಈಗಳು
ತನಯನಂ ಕರೆಯದಡೆ ಇದು ವೈರಾಗ್ಯವನಿಸುವುದೋ ೨೭

೧ನಿ (ತ. ಪ .ಬ). ೨ಯೆ (ಬ); ಯವ್ವಾ (ಚ).

CC-0. Jangamwadi Math Collection. Digitized by eGangotri

ತನಯನಂ ಕರೆದಡಿದು ಲೌಕಿಕ
ವೆನಿಸುವುದೊ ಅಂತಾಗಿ ಕರೆದ[೧]ಹೆ
ನೆನಲಱಿಯೆ ನಾಂ ಕರೆಯೆನೆಂದುಂ ಕರೆಯೆಯೆನಲಱಿಯೆ
ಘನದಯಾತ್ಮಾ ನೀವಱಿವಿರೀ
ಯನುವನಿದ ನಿಮ್ಮಡಿಗಳಡಿಯಲೆ
ತನಯನಿರೆ ಬೇಱಿಂದೆಡೆಯೊಳುಂ ಕರೆಯಲೇಕೆನಲು ೨೮

ಈಸಱಿಂ ಸಂಭ್ರ[೨]ಮಿಸಿ ತಾನೆಸೆ
ವಾ ಸಮಾಧಿಯನಾಗ ತೆಗೆಸು
ತ್ತಾ ಸುತನ ಮೇಲಣ ಭಸಿತವಂ ಬೆಲ್ಲಪತ್ರೆಯನು
ಓಸರಿಸದಿಕ್ಕೆಲಕೆ ನೂಕಿ ವಿ
ಕಾಸಮುಖದಿಂ ನೋಡಿ ಪೆಸರ್ಗೊಂ
ಡಾ ಸುಪುತ್ರಕನಂ ಕರೆಯಲೊಡನತಿಶಯಮಿದೆನಲು ೨೯

ಕಣ್ದೆಱಿದು ನೋಡುತ್ತ ಶರಣಾ
ರ್ಥಂದು ರೇಮಯ್ಯಗೆ ಮುಗಿದ ಕೈ
ಯಿಂದಿರಲು ಸರಸರನೆ ಮೊಲೆವಾಲ್ ಸುರಿವುತಿರೆ ತಾಯಿ
ಕಂದನಂ ತಾನೆತ್ತಿಕೊಂಡ್ಯೆ
ತಂದವರ ಚರಣಾಂಬುಜಕೆ ಪಣೆ
ಯೊಂದೆ ಹೊಡವಡಿಸಲ್ಕೆ ಕರುಣಾರಸವೊಸರುತಿರಲು ೩೦

ಆಕ್ಕಱಿಂ ತನ್ನ ಪ್ರಸಾದವ
ನಿಕ್ಕಿ ಮಾತಾಪಿತರ ನೋಟ
ಕ್ಕಕ್ಕಜಂ ಮಿಗೆ ಕದಿರ ರೇಮಯ್ಯಗಳು ಪತಿಕರಿಸಿ
ಮಿಕ್ಕ ಭಕ್ತಿಯೊಳೇಳು ದಿನದ ಶ
ಬಕ್ಕೆ ಕೊಟ್ಟನು ಪ್ರಾಣವಂ ಸ
ಮ್ಯಕ್‌ಕರುಣದಿಂ ಸಕಳ ಭಕ್ತರು ಕೀರ್ತಿಸುತ್ತಿರಲು ೩೧

೧ದಿ (ಥ). ೨ಕ್ರ (ಥ).

CC-0. Jangamwadi Math Collection. Digitized by eGangotri

ಕದಿರ ರೇಮಯ್ಯಗಳ ಪುಣ್ಯಾ
ಸ್ಪದಚರಿತೆಯಂ ಕೇಳಿದವರೋ
ದಿದವರುಂ ವಿಸ್ತರಿಸಿದವರುಂ ಭಕ್ತಸಭೆಗಳಲಿ
ವಿದಿತವಾಯು ಶ್ರೀಯು ಕೀರ್ತಿಯು
ಸದಮಳಜ್ಞಾನಾಭಿವೃದ್ಧಿಯು
ಒದಗಿ ಬಾಳುತ್ತಿಪ್ಪರವಿರತವೀ ಧರಾಗ್ರದೊಳು ೩೨

ದುಷ್ಪಸಮಯಾರಿಷ್ಪ ಮಹಿಮೋ
ತ್ಕೃಷ್ಪಕರುಣಾದೃಷ್ಪಿವಾತಾ
ಭೀಷ್ಪದಾಯಕ ಶಿಷ್ಪಭಕ್ತಿಸುಪುಷ್ಪಸರ್ವಾಂಗ
ಆಷ್ಪವಿಧಪೂಜೇಷ್ಪನಿಷ್ಠಾ
ತುಷ್ಪ ಮಾನಸಕಷ್ಪ ಸಂಸೃತಿ
ನಷ್ಪ ದೃಷ್ಪಾದೃಷ್ಪಗುಣವಿಸ್ಪಷ್ಪ ಬಸವೇಶ ೩೩

ಇದು ಸಕಳ ಮಾಹೇಶ್ವರಾಮಳ
ಪದಪಯೋಜಪರಾಗಮದಷಟ್
ಪದಿಯೆನಿಪ ಪಾಲ್ಕುರಿಕೆ ಸೋಮೇಶ್ವರನ ಕಾರುಣ್ಯ
ಒದಗಿದಖಿಳಕಳಾಪ್ರಪೂರಿತ
ಹೃದಯಭೀಮಕವಿಪ್ರಣೀತಾ
ಭ್ಯುದಯ ಬಸವಪುರಾಣಕಥೆಯೊಳು ಷಷ್ಠಮಾಶ್ವಾಸ ೩೪

ಅಂತು ಕಾಂಡ ೬ಕ್ಕಂ ಸಂಧಿ ೪೭ಕ್ಕಂ ಪದಗಳು ೨೭೦೬ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಕಾಂಡ : ೭

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಂಧಿ : ೪೮

*

ಸೂಚನೆ : ಮೂದಲಿಸಿ ಹೇಳಿದನು ಜಿನಸಮ
ಯಾದಿಗಳ ಭಂಗಂಗಳಂ ಪೊಗ
ಳ್ವಾದಿಭಕ್ತರ ಮಹಿಮೆಗಳನೇಕಾಂತರಾಮಯ್ಯ

ದುಸ್ಸಹಸ್ಥಿರದೇಹವಿಗತೈ
ನಸ್ಸಮೂಹ ಸಮಸ್ತಭಕ್ತಮ
ನಸ್ಸರೋರುಹಗೇಹ ದಮಿತವಿನಮಿತಜನದಾಹ
ನಿಸ್ಸಚಿತ್ತೋತ್ಸಾಹ ಗುರ್ವೀ
ಕಸ್ಸದಾದಾಸೋಹ ಬಹಳಯ
ಶಸ್ಸರಿತ್ಸಲಿಲಪ್ರವಾಹಾ ಶರಣು ಬಸವೇಶ ೧

ಶ್ರೀಕ[1]ನದಮಳ[2] ದಿಗ್ಭರಿತಸು
ಶ್ಲೋಕನೆನಲೇಕಾಂತರಾಮ ೨
ವೈಕ್ಯನಿಪ್ಪನು ವಸುಮತಿಗೆ ಮೆಱೆ[3]ವಬ್ಬಲೂರೊಳಗೆ
ಲೋಕವಂದ್ಯನು ಭಕ್ತಲೋಕಾ
ಲೋಕನಪ್ರಿಯವರ್ತನಂ ನರ
ಲೋಕರುದ್ರನು ವೀರಭದ್ರಪ್ರತಿಮವಿಕ್ರಮನು ೨

ಸಂತತಂ ಗುರುಪಾದಪಂಕಜ
ಚಿಂತನಂ ಪರವಾದಿಮಸ್ತಕ
ಕೃಂತನಂ ಶಿವಲಿಂಗಸಮ್ಯಜ್ಞಾನ[3]ಭೂಷಿತನು[4]
ಶಾಂತಿದಾಂತಿ [5]ಕ್ಷಮದಮಾಯುತ[6]
ಕಾಂತನೇಕಾಂತೈಕಭಕ್ತನಿ
ತಾಂತನತುಳಿತಶಿವಸಮಯಪರಿಪಾಲನಕ್ಷಮನು ೩

---

*ರಾಗ : ನಾಟಿ (ಚ, ಧ, ಮ); ಆಹರಿ (ಡಾ); ಸಾವೇರಿ (ತ); ವಸಂತ (ಪ).

೧–೨ ರಾಮಳ (ಚ); ರದಮಳ (ಸ). ೩–೪ ವಂತನನು (ಅ, ಆ, ಕ, ಚ, ಡಾ, ಸ).
೫–೬ ಪ್ರಶಮದಮಯುತ (ಧ, ಪ, ಸ).

CC-0. Jangamwadi Math Collection. Digitized by eGangotri

ಶ್ರೀಮಹಿತಶಿವಭಕ್ತಿಸದ್ಗುಣ
ಧಾಮನುದ್ಧತಜಿನಸಮಯವನ
ಧೂಮಕೇತು ಸುಶೈವಧರ್ಮಲಲಾಮನೇಕಾಂತ
ರಾಮತಂದೆ ನಿರಸ್ತಭವಿಜನ
ಸೀಮನಪಗತಸಕಳಮಾಯಾ
ಸ್ತೋಮನೆನಲೆಸೆದಿಳೆಯೊಳತಿಶಯ ನಿತ್ಯನೇಮದಲಿ ೪

ಅಮಿತಶಿವಲಿಂಗಾರ್ಚನಾಂತ್ಯದೊ
ಳಮಳಮತಿರಾಮಯ್ಯನೊಲವಿಂ
ಪ್ರಮಥಲೋಕಕೆ ಹೋಗಿ ವೀರಕ ವೀರಭದ್ರಾದಿ
ಪ್ರಮಥಗಣನಿಚಯಕೆ ನಮಿಸಿ ಸತ್
ಪ್ರಮುದವಂಕುರಿಸುತ್ತಿರಲು ತತ್
ಪ್ರಮಥಗಣಗುಣಕೀರ್ತನೆಗಳಂ ಮಾಡಿ ರತಿಮೂಡಿ ೫

ಅಭವಭಕ್ತಿಮಹತ್ವತತ್ವಾ
ನುಭವಲಸದೇಕಾಂತಗೋಷ್ಠಿ
ಪ್ರಭವಸುಖಿರಸಶರಧಿಯೊಳಗೋಲಾಡಿ ವಸುಮತಿಗೆ
ಸಭಯಭಕ್ತಿಯೊಳೆಂದಿನಂದದೊ
ಳುಭಯಲೋಕಕೆ ಬರುತ ಹೋಗುತ
ಶುಭಚರಿತನೇಕಾಂತರಾಮಯ್ಯಂ ಪ್ರವರ್ತಿಸಲು ೬

ಬಸವರಾಜನ ಭಕ್ತಿಜಲನಿಧಿ
ವಸುಮತಿಯೊಳಾಗಸದೊಳಾಶಾ
ವಿಸರದೊಳು ಸಲೆ ತೀವಿ ಪಸರಿಸಿ ಮೇಲ್ವರಿವುತಿರಲು
ಒಸೆದು ನೋಡುವ ಕಾಂಕ್ಷೆಯಲಿ ಭರ
ವಸದೊಳೆಯಿತಂದಾದಿಗಣವಹ
ಬಸವನಂ ಪ್ರಚ್ಛನ್ನರೂಪದಿ ನೋಡಿ ರಾಮಯ್ಯ ೭

CC-0. Jangamwadi Math Collection. Digitized by eGangotri

ಆ ಕಟಕದೊಳೆ ವರ್ತಿಸುತ ಲಿಂ
ಗೈಕನಿಷ್ಠೆಯೊಳಿರುತಿರಲ್ಕೆ ಪಿ
ನಾಕಿಭವನವನೊಬ್ಬ ಜೈನನು ಕೆರಹುಗಾಲ್ವೆರಸಿ
ನೀಕರಿಸಿ ಹುಗಲೊಳಗೆ ರಾಮಶಿ
ವೈಕನಿರ್ದಾಗ್ರಹಿಸಿ ನೋಡುತ
ಕಾಕ ಕೇಳೋ ನಿನ್ನ ಪಾಪಕ್ಕನ್ನವಧಿಯುಂಟೆ ೮

ಎಲೊ ಸ್ರ್ಮಣ ಇದು ಧರ್ಮವೇ ಶಿವ
ನಿಳಯಮಂ ಬಂದೀ ಕೆರಹುಗಾ
ಲಲಿ ಹುಗುವರೇ ಹೊಕ್ಕೆನಟ್ಟಿಯದೆ ತಪ್ಪಹುದಿದೆಂದು
ಕಳೆದು ಕೆರಹುಗಳಂ ಬಿಸುಟು ನೀ
ಮಲಹರಂಗಭಿವಂದನಂಗೆ
ಯ್ದುಳುಹಿಕೋ ನಿನ್ನೊಡಲನಂತೊಲ್ಲದಡೆ ಬಳಿಕಿನ್ನು ೯

ಕಾಲನುದ್ದಂಡೋಗ್ರದಂಡಕ
ರಾಳಬಾಧೆಗೆ ಬಿದ್ದೆಯಲ್ಲಾ
ಕಾಲ ಕೆರಹುಗಳಂ ತೆಗೆಯದಿಂತಿರ್ದಡೆಲೊ ನಿನ್ನ
ಬೀಳಹೊಡೆವೆನು ಸಂದುಸಂದಿಗೆ
ಸೀಳಿದಪೆನೆನಲೋಸರಿಸದವ
ನಾಳಿಗೊಳುತಿನಿತೇತಕಾಗ್ರಹಿಸಿದಪೆಯೆನ್ನೊಡನೆ ೧೦

ಪನ್ನಗಧರನ ದೇಗು್ಯಲಿಂಗಳಿ
ಗಿನ್ನು ದಿಕ್ಕುಂಟಾದೆಯಲ್ಲಾ
ನಿನ್ನ ತಲೆಯಲೆ ಶಿವಮಹಿಮೆ ತಲೆಯೆತ್ತಲಾದುದಲಾ
ನನ್ನಿಯುಳ್ಳ ಮಹಂತನಪಸರ
ವಂ ನುಡಿವನೇ ನೋಳ್ಪೆನೆನುತಂ
ಚುನ್ನವಾಡುತ್ತೆಂದನೇಕಾಂತಯ್ಯನೊಡನವನು ೧೧

---

೧ ಶ್ರ (ಸ). ೨–೩ ಲದೊಳ (ತ. ಪ).

CC-0. Jangamwadi Math Collection. Digitized by eGangotri

ದೇಗುಲಂ ಬಸತಿಯೆ ಜಿನನೆ ತಾಂ
ಮೇಗೆ ದೈವವದಲ್ಲದಡೆ ಕೇಳ್
ಹೇಗಭಕ್ತಾ ನಿನ್ನ ಮಸ್ತಕವಂ ಪಱಿದುಕೊಂಡು
ನಾಗಕಂಕಣನಿಂದೆ ಪಡೆ ದಿಟ
ವಾಗಿ ಭಕ್ತನು ನೀನೆ ಜಗದೊಳು
ಭೋಗಮೋಕ್ಷಂಗಳಿಗೆ ಶಿವನೇ ದೈವವಹುದೆನಲು ೧೨

ದುರುಳನರನಂ ಕೊಲುವುದಿಂತೇ[೧]
ನರಿದೆ ಮೂದಲಿಸಿದ ಬಳಿಕ್ಕೀ
ಧರಣಿಯೊಳ್ ಪ್ರತಿದೋಱಿದಿದ್ದಡೆ ಪಥ[೨]ವಿದಲ್ಲಲ್ಲ
ಶಿರವನರಿದೀವೆನು ಪಡೆವೆನೀ
ಶ್ವರನ ಕೈಯಲು ಜಿನಸಮಯದುರು
ಶಿರವನರಿವೆನು ಭಾಷೆಯಂ [೩]ಪ್ರತಿ[೪]ಪಾಲಿಸುವೆನೆನುತ ೧೩

ಹರನ ಭಕ್ತಿಗೆ ಕೆಚ್ಚು ಮಿಗೆ ಉ
ಬ್ಬರಿಸಿ ತನುವೇಕಾಂತರಾಮಯ
ನರರೆ ತಾನಿಂತೆಂ[೫]ದು ನುಡಿದನು ವೇದಬಾಹ್ಯಂಗೆ
ಶಿರವನೊಪ್ಪಿಸಿ ಪಡೆವುದತಿಶಯ
ತರವಲಾಯೆಂದೆಂಬಡೆಂತೆನೆ
ಪರಸಮಯಿ ಕೇಳೆಮ್ಮ ಮಾಹೇಶ್ವರರ ಮಹಿಮೆಗಳ ೧೪

ಧಾರುಣೀವಳಯದೊಳಿಸೆವ ಜಂ
ಬೂರೊಳಗೆ ಮಹಕಾಳನೆಂಬ ಪು
ರಾರಿಭಕ್ತನು ತನ್ನ ಶಿರವಂ ಶಂಕರಂಗಿತ್ತು
ವೀರಭಕ್ತಿಯೊಳಟ್ಟಿಯಲಿ ತಲೆ
ಸೇರಿಸಲು ಪ್ರಾಣಂ ಪಡೆದನೀ[೬]
ಪೌರಜನವಾಶ್ಚರ್ಯವೆನುತಂ ಕೀರ್ತಿಸುತ್ತಿರಲು ೧೫

---

೧ ತಾ (ಮ). ೨ ದ (ಮ). ೩–೪ ಪರಿ (ತ, ಥ, ಪ). ೫ ತೊಂ (ಕ). ೬ ನಾ (ತ, ಪ).

CC-0. Jangamwadi Math Collection. Digitized by eGangotri

ಮುಂದಿದಱ ವಾರ್ತೆಯನಱಿದು ನಡೆ
ತಂದು ಮುನಿದೀ ಕಟಕದೊಳ್ ಗೋ
ವಿಂದಭಟ್ಟಾರಕನೆನಿಪ [1]ಸದು[2]ಭಕ್ತನಿಂತೆಂದ
ಇಂದುವಮೌಳಿಗೆ ಮುನ್ನವರ್ಪಿಸಿ
ಸಂದ ನಿರ್ಮಾಲ್ಯದ ಶಿರೋಬ್ಜಮ
ನಿಂದು ಸಂದಿಸಿಕೊಳುವರೇ ಇದು ತಪ್ಪು ತಪ್ಪೆನುತ ೧೬

ಗರಳಧರಗಂ ತನ್ನ ಶಿರಮುಮ
ನರಿದು ಪೂಜಿಸಿ ಮೂಱು ದಿವಸಕೆ
ಮುರಳಿ ಮತ್ತೊಂದುತ್ತಮಾಂಗವನೊಪ್ಪದಿಂ ಪಡೆದ
ಪರಮಭಕ್ತನು ಮತ್ತೆಯೊಬ್ಬನು
ನಿರತವೀರವದಲ್ಲೆನುತದಂ
ಸರಕುಮಾಡದೆ ನೋಡುವರಿಗಪಹಾಸ್ಯವಂ ಮಾಡಿ ೧೭

ಇಲ್ಲಿಯಭವಂ ಮೂಱು ದಿನತನ
ಕಿಲ್ಲವೇ ಸತ್ತಿದ್ದನೋ ತಾ
ನುಳ್ಳಡಿಹಿಗೇಕಾದುದೆನುತತಿ ಕೀರ್ತಿಮಾನಿನಿಯ
ವಲ್ಲಭಂ ಪರವಾದಿಗಳಿಗೆದೆ
ದಲ್ಲಣಂ ಹರಮೂರ್ತಿ ಭೂತಳ
ದಲ್ಲಿ ಮೊರಟದ ಬಂಕಿದೇವನು ವೀರಭಕ್ತಿಯಲಿ ೧೮

ತಲೆಯನರಿಯಲು ಮೊಳೆಯಲರಿಯಲು
ತಲೆಯನರಿಯಲು ಮೊಳೆಯಲರಿವಾ
ತಲೆಗಳುಂ ಕುಂದವು ಸುಭಕ್ತಿಯು ಕುಂದದಿಹುದಾಗಿ
ಚಲಿಸದಾಯವಸರದೊಳರ್ಚಿಪ
ತಲೆಯನಲರ್ದರ್ಚಿಸಿದ ತಲೆಯುಂ
ಬಳಿಕವರ್ಚಿಸಿದಪೆನೆನುತ ಖಂಡಿಸಿಕೊಳುವ ತಲೆಯು ೧೯

೧–೨ ಸದ್ (ತ, ನ).

CC-0. Jangamwadi Math Collection. Digitized by eGangotri

ಮೊಳೆವ ತಲೆಯುಂ ಮೊಳೆತ ತಲೆಯುಂ
ಮೊಳೆಯಲೆಂದೊಡನೊಡನೆ ಹಿಗ್ಗುವ
ತಲೆ ಪಱಿವ ತಲೆ ಪಱಿದ ತಲೆ ಪಱಿಯದೆ ತನಗೆ ತಾನೆ
ಮೊಳೆವ ತಲೆ ಮುಲಹರನ ಮೇಲಂ
ತಲರಿವೊಂದುವ ತಲೆ ಬಲಿದು ನಿಂ
ದಲುಗದಿಹ ತಲೆ ಕಂಗಳಂ ಮೆಳ್ಳಿಸುತಮಿಹ ತಲೆಯು ೨೦

ಉಲಿವ ತಲೆ ಬೊಬ್ಬಿಡುವ ತಲೆಯಾ
ಗುಳಿಪ ತಲೆ ಗಹಗಹಿಪ ತಲೆ ಮೂ
ದಲಿಪ ತಲೆ ಸಂತೈಪ ತಲೆ ಸಂದಣಿಸುತಿಹ ತಲೆಯು
ಹಲುಗಿರಿವ ತಲೆ ಪೊಗಳ್ವ ತಲೆಯ
ವ್ವಳಿಪ ತಲೆ ನಾಲಗೆಯನಾಡಿಪ
ತಲೆ ನಗುವ ತಲೆ ಮತ್ತೆ ಸಂಧಿಸಿ ಕಡಿಪಡೆವ ತಲೆಯು ೨೧

ಇಂತು ವೀರಂ ಮೆಱಿದು ಗೌರೀ
ಕಾಂತನಂ ಪೂಜಿಸಲು ತಲೆಗಳ
ನಂತಕೋಟಿಗಳಾಗಿ ದೇಗುಲವೆಲ್ಲವಂ ತುಂಬಿ
ಇಂತುಟುಂ ತೆಱಿಹಿಲ್ಲದಿರಲಾ
ಕಂತುಮರ್ದನನಂತತಿಶಯಾ
ಕ್ರಾಂತಮಾನಸನಾಗುತಂ ತಾನೊಯ್ಯನಿಂತೆಂದ ೨೨

ಎಲೆಲೆ ಬಂಕಾ ಭಾರವಾಯ್ತೀ
ತಲೆಗಳೆಲ್ಲಂ ಮುಸುಕಿಯುಬ್ಬಸ
ಗೊಳುತಲಿದ್ದೆನೆ ಸಾಕು ಸೈರಿಸಲಾಱಿ[1] ನಾ[2]ನಿನ್ನು[3]
ಗೆಲವು ನಿನ್ನದು ಸೋತೆನೆಂದಡೆ
ಕೊಲುವುದುಚಿತವೆ ನಿನ್ನ ವೀರಾ
ಚಲಿತಭಕ್ತಿಗೆ ನಿಂದು ನೋಡಲ್ಕೆನ್ನಳವೆಯೆನುತ ೨೩

೧–೨ ನಿಂತು (ತ, ಸ).

CC-0. Jangamwadi Math Collection. Digitized by eGangotri

ಪುರಮಥನನಾ ವೀರಭಕ್ತನ
ಕರಯುಗಳಮಂ ಪಿಡಿದು ಮುದವಂ
ಕುರಿಸುವಾ ಶಿರಸುಗಳನೆಲ್ಲವ ಲಿಂಗಮೂರ್ತಿಯಲಿ
ಧರಿಸಿ ಮೊರಟಿದ ಮಲ್ಲಿಕಾರ್ಜುನ
ನರಿದೆನಲು ಜನವೆಯ್ದೆ ಕೀರ್ತಿಸು
ತಿರಲಭವನಂ ಬಂಕಯಂ ಮೂಱಿಂಕವಂ ಗೆಲಿದ ೨೪

ಲೋಕದೊಳು ನೆಱಿ ಮೆಱಿದ ಭಕ್ತರ
ನೇಕರೊಳರೀ ಪರಿಯೊಳೆಲೆ ಚಾ
ರ್ವಾಕ ನಿನಗಿದು ಕೇಳುವಡೆ ಪವಣಲ್ಲದೆಂತೆನಲು
ಪ್ರಾಕಟವಿದಂ ಮುನ್ನವಱಿಯಾ
ವ್ಯಾಕುಲದ ನಿನ್ನಾರುಹತರಂ
ಭೀಕರದೊಳಪಹರಿಸಿದೆಮ್ಮಾದ್ಯರ ಮಹಿಮೆಗಳನು ೨೫

ಒಪ್ಪುವಾ ತಿರುನಾಪಿವಲೂರೊಳ
ಗಿಪ್ಪ ಮುನಿ ತಿರುವಾಕರೀಶನೆ
ನಿಪ್ಪ ಜೈನಾಚಾರ್ಯನೊರ್ಬನು ಜಿನಸಮಯಮುಖ್ಯ
ನಪ್ಪನಾತನು ಶೂಲೆ ಬಾಧಿಸು
ತಿಪ್ಪ ಸಂಕಟಕಾಱಿದಿಳೆಯೊಳು
ದೊಪ್ಪದೊಪ್ಪನೆ ಕೆಡೆದು ಹೊರಳುತ ಮಿಗೆ ನರಳುತಿರಲು ೨೬

ಆಯವಸರದೊಳಾತನಗ್ರಜೆ
ಯಾಯಿಡೆಗೆ ಪರಿತಂದು ಕಾಣುತ
ವಾಯಿವಿದು ದುರ್ಮಂತ್ರತಂತ್ರಂಗಳಿಗೆ ಮಾಣದಿದು
ಕಾಯಜೀವಂ ಪದುಳವಿರಬೇ
ಕಾಯಿತಾದಡೆ ನಿನಗೆ ಪೇಳ್ವೆನು
ಪಾಯವೊಂದಂ ಕೇಳು ನೀ ಶಿವಭಕ್ತಿಮಾರ್ಗದಲಿ ೨೭

೧ನ (ಸ). ೨ತಿಹ (ಸ). ೩ವಾ (ಅ, ಧ, ಬ, ಮ). ೪–೫ತೊಪ್ಪತೊ (ಸ). ೬–೭ನಡೆ (ಧ, ಪ). ೮–೯ವೆಂದುಂಮಂತ್ರ (ಚ); ವೀ ದುರ್ಮಂತ್ರ (ಸ).

CC-0. Jangamwadi Math Collection. Digitized by eGangotri

ಶೂಲಿಮಂತ್ರವನಱಿದೆಯಾದಡೆ
ಶೂಲರೋಗ ನಿರೋಗ[1]ವಹುದಿದು[2]
ಮೇಲಭೀಷ್ಟಾರ್ಥಂಗಳೊಂದುವವೆಯ್ದೆ ನಿನಗೆನಲು
ನಾಳೆಯಾಂ[3] ಶಿವಭಕ್ತನಹೆಯೆನು
ಕೂಲವಾದೆ[4]ಲೆಯ[5]ಕ್ಕ ಶಪಥವ
ನಾಳುವೆಂ ನಿನಗೆನಲು ಮಾನಿನಿ ಸಂತಸಂಬಟ್ಟ್ಟ ೨೫

ಹರಶರಣರಂ ನೆನೆದು ಪಂಚಾ
ಕ್ಷರಿಯ ಮಂತ್ರದಿ ಮಂತ್ರಿಸಿದ ಸುರು
ಚಿರಭಸಿತವಂ ತಳಿದು ತಾಂ ತೊಡೆಯಲ್ಕೆ ತತ್‌ಶೂಲೆ
ಪರಿಹರಿಸಲೊಡನಾತನಾಗ
ಚ್ಚರಿವಡುತ್ತಾ ಸತಿಗೆ ವಂದಿಸಿ
ಸರಸಿಜಾನನೆ ನಿನ್ನ ಕತದಿಂ ಬದುಕಿದೆನು ನಾನು ೨೯

ಇಂದವಶ್ಯಂ ಭಕ್ತನಾದೆಹೆ
ನೆಂದು ಶಿವನಾಜ್ಞಾಪನದಿನೊಲ
ವೊಂದಿಯಾ ಪೊಗಱೂರಿಗೆಯ್ದಿ ಬಳಿಕ್ಕ ತಾನಲ್ಲಿ
ಮುಂದೆ ಪಂಕದೊಳಿದ್ದ ತಾವರೆ
ಯಂದದಲಿ ಹೊಲೆಗೇರಿಯೊಳಗಿಹ
ಸೌಂದರಾಮಳಚರಿತನಂ ಗುರುಮೂರ್ತಿಯಂ ಕಂಡು ೩೦

ಆನಘನಾ ತಿರುವಾಕರೀಶನ
ವನಿಯೊರಸಿ ಮೈಯಿಕ್ಕಿ ವಂದಿಸಿ
ವಿನಯದಿಂ ಕೈಮುಗಿದು ನಿಲಲೊಡನಾ ಗುರುಸ್ವಾಮಿ
ಮನದೊಳಾತಂಗಿಷ್ಟಲಿಂಗಾ
ರ್ಚನವಿಧಾನವನಱಿಪಿ[6] ಮಾಡಲು
ನೆನೆದು ತನ್ನ ಕೃಪಾವಲೋಕನನೇತ್ರಮಾತ್ರದಲಿ ೩೧

೧–೨ ವಾದುದು (ಥ, ಸ); ಪಪ್ಪುದು (ತ, ನ). ೩ ನಾಂ (ಡಾ, ಪ). ೪ ಗೆ (ಸ). ೪–೫ ಮ್ಮ (ಥ, ಪ). ೬ ದು (ಮ).

CC-0. Jangamwadi Math Collection. Digitized by eGangotri

ಸಲೆ ಪುರಾಕೃತಕರ್ಮಕಲುಷಾ
ವಳಿಯನುಪಸಂಹರಿಸಿ ಬಾಳ
ಸ್ಥಳದೊಳೆಯ್ದೆ ಭಸಿತಸದೈಶ್ವರಪಟ್ಟಮಂ ಕಟ್ಟಿ
ನಳಿನಸಂಭವಲಿಖಿತಮುರ್ಲಿ[1]
ಗಳತೊರಳಿ ಶಿವತೀರ್ಥಕಳಶಾ
ಮಳಜಲವನೆಱೆ[2]ದಮಳಶಿವಸಂಸ್ಕಾರಿಯಂ ಮಾಡಿ ೩೨

ಮಂಗಳೋದಯಲಿಂಗಕರತಳ
ಸಂಗತಸ್ಥಿತಿಯಂ ತಿಳಿಹಿಯಾ
ಸಂಗದುಃಪ್ರಾಪಂಚಿಕಾಶಾ[3]ಬಂಧವಂ ಪಱಿದು
ಸಾಂಗಮಾಗಲು ಸಿದ್ಧಮಂತ್ರಸು
ರಂಗಿತವನೊದವಿಸಿ ವಿಶುದ್ಧೋ
ತ್ತುಂಗಚಿನ್ಮಯಸತ್ಪ್ರಭೆಯನಾತ್ಮದೊಳಗಳವಡಿಸಿ ೩೩

ಶಕ್ತಿನಿರ್ಮಲಿತಾಂಗಲಿಂಗನಿ
ಯುಕ್ತಸತ್ಕ್ರಿಯೆಗಳಿನಲರ್ದನು
ರಕ್ತಿಸಲು ಸದ್ಯಃಪ್ರಸಾದ ಶರೀರಿಯಂ ಮಾಡಿ
ವ್ಯಕ್ತವಾಯುಪ್ರಾಣಸದ್ದಿ
ದ್ಯೋಕ್ತಿಗಳನಳವಡಿಸಿ[4] ಘನಸು
ವ್ಯಕ್ತಲಿಂಗಪ್ರಾಣನಿಷ್ಠಿತಮಾನಸವನಿತ್ತು ೩೪

ವಿನುತಜೀವನ್ಮುಕ್ತಿಕಾರಣ
ವನಿಪ ಲಿಂಗರಹಸ್ಯತತ್ತ್ವೋ
ಜ್ವಲಿತಸೂಕ್ತಿಗಳಂ ತಿಳಿಸಿ ಗುರುವಧಿಕಕಾರುಣ್ಯ
ಘನತರಾವಿರಳಪ್ರಸಾದಮ
ನನುಗೊಳಿಸಲಾ ತ್ರಿವಿಧಭಕ್ತಿಗೆ
ಮನವೊಸೆದು ತಿರುವಾಕರೀಶನು ಭಕ್ತತೇಜದಲಿ ೩೫

೧ಸಂ (ಧ, ಪ). ೨ತ್ಯ (ತ, ಥ, ನ, ಸ). ೩ದ್ಯು (ಕ, ಚ, ಧ, ಪ, ಮ). ೪–೪ ಪಹರಿಸಿ (ಧ, ಸ).

CC-0. Jangamwadi Math Collection. Digitized by eGangotri

ಪರಮ ಶೈವಾಚಾರವರ್ತನ
ಪರವಶೀಭೂತಾತ್ಮನಾಗುತ
ಹರಗಣವಿತಾನಕ್ಕೆ ಸಾಷ್ಟಾಂಗದೊಳೆಱಗಿ ನಮಿಸಿ
ಸುರುಚಿರಂ ಮಿಗೆ ಶಿವಮಹೋತ್ಸವ
ವಿರಚನೆಗಳಂ ಕೂಡಿ ಮಾಡಿಸಿ
ಧರೆಕನಕವಸ್ತ್ರಾಭರಣವಾಹನಚಯಮನಿತ್ತು ೩೬

ನಯವಿನಯಸದುಭಕ್ತಿಯಲಿ ತ
ನ್ನಯ ಮನೋವಾಕ್ಕಾಯಕರ್ಮ
ಕ್ರಿಯೆಗಳಿಂ ಪ್ರಾಣಾಂಗವಿತ್ತವಿತತಿಯನರ್ಪಿಸುತ
ಪ್ರಿಯಭಸಿತರುದ್ರಾಕ್ಷಭೂಷಣ
ಮಯವಿಶಿಷ್ಟಶರೀರನಾಗಿ
ಸ್ಮಯವುಡುಗಿ ಸುವ್ರತನಿಯಮದಿಂ ವರ್ತಿಸು[ಿ]ತಮಿ[ೆ]ರಲು ೩೭

ಶೈವದರುಶನಮಾರ್ಗನಾದನು
ಗಾವಿಲನಿವನೆನುತ್ತ ಮುಳಿಸಿಂ
ಶ್ರಾವಕರು ನೆರೆದಾತನಂ ದಂತಾವಳಕೆ ನೂಕೆ
ಓವಿ ಮದದಂತಾವಳಂ ತಿರು
ವಾಕ[ೆ]ರೀಶನನಂಟದಿರೆ ದಂ
ತಾವಳಾರಿಯ ಕಿಂಕರನನೇಗೆಯ್ವುದಾ ದಂತಿ ೩೮

ವಿಷವನಿಕ್ಕಿದಡುಂಡು ತಾ ವಿ[ೆ]
ದ್ವಿಷವಿಜಯನಾಗಿರುತಮಿರ್ದನು
ವಿಷಧರನ ಕಿಂಕರನನಾ ವಿಷವೇನ ಮಾಡುವುದು
ವಿಷಮವಿಷದಲಿ ಕಟ್ಟಿಹಾಯ್ಕಲು
ವಿಷಕ[ೆ] ಮುಳುಗದೆಯೆಸೆದು ನಿಂದನು
ವಿಷಕಪರ್ದನ ಭಕ್ತನಂ ವಿಷವೇನ ಮಾಡುವುದು ೩೯

೧–೨ ತ್ರಿ (ಚ, ತ, ನ, ಬ). ೩ ವ (ಧ, ಪ). ೪ ತ (ಥ). ೫ ದಿ (ಕ, ಚ, ಥ, ಬ)

CC-0. Jangamwadi Math Collection. Digitized by eGangotri

ಗಹನದಹನದೊಳಹಿತರಿಕ್ಕಲು
ದಹನವಾಱಿತು ದಹಿಸಲಮ್ಮದೆ
ದಹನಜಿಹ್ವಾಂತಕಶರಣನಂ ದಹನವೇಗುವುದು
ಬಹುವಿಧದೊಳಂತಾರುಹತರಾ
ಗ್ರಹಿಸಿ ಕೊಲಲಾಱಿದೆ ಬಳಿಕ ನಿ
ಗ್ರಹಿಸಿ ತಮ್ಮಂ ಕೊಲುವನೋ ಎಂದೆಯ್ದೆ ಮೊಱಿಯೊಕ್ಕು ೪೦

ಭೀತಿಯಲಿ ವಂದಿಸಿದ ಜೈನ
ಬ್ರಾತಮಂ ಸಲೆ ಕಾಯ್ದು ಮುನ್ನಿನ
ಪ್ರೇತಮುದ್ರೆಗಳಂ ತೊಡೆಸಿ ತಿರುವಾಕರೀಶರನು
ಪೂತಶಿವಮಂತ್ರಾಭಿಮಂತ್ರಿತ
ಭೂತಿ ರುದ್ರಾಕ್ಷಾದಿಭೂಷಿತ
ಜಾತನಿರ್ಮಳಪಂಚಮುದ್ರಾಧಾರರಂ ಮಾಡಿ ೪೧

ಅಗಣಿತಯಶೋನಿಧಿ ಜಿನಪ್ರತಿ
ಮೆಗಳನುಱಿ ಹೊಡೆದಪ್ಪಳಿಸಿ ಬಸ
ದಿಗಳನೆಲ್ಲಂ ಹಿರಿಹಿರಿದು ಹುಡಿಮಾಡಿಸಿದನಲ್ಲಾ
ವಿಗಡಭಕ್ತನು ಜಿನಸಮಯಮದ
ನಗಸುಲಿಶನೆನಲತಿಬಿರಿದಿನೊಳು
ನೆಗಳುವಂ ತಿರುವಾಕರೀಶನು ಭೂತಳಾಗ್ರದೊಳು ೪೨

ಎಲವೊ [೧]ಕೇಳ್ ಪರವಾದಿಯಾರೂ[೨]
ರೊಳಗೆ ಮತ್ತೆಯು[೩] ಪಾರ್ವತೀಶ್ವರ
ನೊಲಿವ ಭಕ್ತನು ತಾನಿರಿತ್ತಾಂಡಿಯರೆನಲು ಪೆಱಿವ
ಇಳೆಯೊಳಗೆ ಜಾತ್ಯಂಧನಾಗಿ
ರ್ದಲಘುಮತಿ ಶಿವಮಜ್ಜನಾರ್ಥಕೆ
ಕೊಳನನಗೆಯಲು ಬೇಕೆನುತ್ತಾ ದೇಗುಲದ ಮುಂದೆ ೪೩

೧–೨ ಕೇಳಲ್ಲ ತಿರುವಾರೂ (ಅ). ೧–೩ ತಿರುವಾರೂರೊಳೊರ್ವಂ ಲಲಿತಗುಣಮಣಿ (ಥ). ೪ ವತಾಂ (ಥ, ಸ).

CC-0. Jangamwadi Math Collection. Digitized by eGangotri

ಒಂದು ಗುದ್ದಲಿಯಂ ಪೆಡಗೆಯಂ
ತಂದುಕೊಂಡಾ ಬಾವಿಗಂ ಶಿವ
ಮಂದಿರಕೆ ಕುಱುಹಾಗೆರಡು ಕಂಬಂಗಳಂ ನೆಟ್ಟು
ಒಂದು [೧]ಮಿಳಿಯಂ ಕಟ್ಟಿ[೨]ಯಗೆವುತ
ಸಂಧಿಸಿದ ಬಲು[೩]ಸೂತ್ರವಂ ಪಿಡಿ
ದೊಂದು ರಾಶಿಯ [೪]ಮಣ್ಣಿಗಡಕುತ[೫] ಹೊತ್ತು ಹಾಯ್ಕುತಿರೆ ೪೪

ಈ ಪದನನಱಿದಾಗ್ರಹಿಸಿ ತ
ದ್ರೋಹಿಗಳು ಸೈರಿಸದೆ ಕೆಡಿಸಲು
ಬೇಹುದಿದನೆನುತಂ ಹಲವು ವಿಘ್ನಂಗಳಂ ಮಾಡಿ
ಸಾಹಸಿಗನೆಂದಿನ ಪರಿಯ ದಾ
ಸೋಹದಿಂ ಬಿಡದಗೆಯಲುಂ ಛಲ
ಗ್ರಾಹಕದಿನವರೆಯ್ದಿ [೬]ಮಿಳಿಯಂ[೭] ಪಱಿದು ಬಿಸುಡಿಸಲು ೪೫

ಮೃಡನ ಕೈಯಲು ಕಂಗಳಂ ತಾಂ
ಪಡೆದು ನಿಮಿಷದೊಳಾರುಪತರಂ
ಕಡುಗುರುಡರಂ ಮಾಡಿ ಬಸದಿಗಳಂ ಹಿರಿದು ಕೆಡಹಿ
ಘುಡುಘುಡಿಸಿ ತಜ್ಜಿನಪ್ರತಿಮೆಗಳ
ನೊಡೆಬಡಿದು ಭಕ್ತಿಯೊಳಿಸೆದನೀ
ಪೊಡವಿಯೊಳಿರಿತ್ತಾ[೮]ಂಡಿಯರ ಮಹಿಮೆಯನಱಿ[೯]ಯಿರಲ್ಲ[೧೦] ೪೬

ಅಂತು ಸಂಧಿ ೪೬ಕ್ಕಂ ಪದಗಳು ೨೬೫೩ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೩ ಪಾಶಂಗಟ್ಟಿ (ತ, ನ, ಸ). ೨ ಣಿ (ಕ, ಬ). ೪ ಹು (ಚ). ೫–೬ ಮಣ್ಣನಗೆವುತ (ಬ): ಮಣ್ಣನಗೆಯುತ (ತ): ಮಣ್ಣನೊಬ್ಬನೆ (ಅ, ನ). ೭–೮ ರಜ್ಜುವ (ತ, ನ). ೯ ವಣಾ (ಥ, ಸ). ೧೦–೧೧ ಯೆ ಜೈನಾ (ಥ, ಪ).

CC-0. Jangamwadi Math Collection. Digitized by eGangotri

ಸಂಧಿ : ೪೯

*

ಸೂಚನೆ : ಕೂನಪಾಂಡ್ಯನನುದ್ಧರಿಸಿ ನೆಱಿ
ಜೈನರಂ ಶೂಲದೊಳ್ಕೊಡರ್ಚಿ
ಜ್ಞಾನಸಂಬಂಧಿಯರು ತಿರುನೂರಂ ನೆರಪಿ ಪೊರೆದ

ಜಗತಿಯೊಳು ಶ್ರೀಕಾಳಿಯೆಂಬಾ
ನಗರಿಯಲ್ಲಿ ಕುಮಾರನಂಶದಿ
ನೊಗೆದು ಶಿವವಿಪ್ರಂಗೆ ಪಿಳ್ಳೈಯನಾಯನಾರೆನಲು
ಹೆಗಲನೇಱಿಸಿಕೊಂಡು ಜನಕನು
ಮಗನನೊಂದು ದಿನಂ ಪ್ರಮೋದಂ
ಸೊಗಸಲೆಯ್ದಿ ಕೊಳನ ತಡಿಯೊಳಾ ಬಾಲಕನನಿರಿಸಿ ೧

ತಾನಲರುತಘಮರುಷಣೋದ್ಯತ್
ಸ್ನಾನಮಂ ಮಾಡು[೧]ತಿಪ ಸಮಯದೊ
ಳಾ[೨] ನಭೋವೀಥಿಯೊಳುಮಾಕಾಂತೆಯುಂ ಮಹೇಶ್ವರನು
ಮಾನಿತೋನ್ನತದಿವ್ಯರತ್ನವಿ
ಮಾನರೂಢಿತಯಾನರಾಗಿ ಸು
ಮಾನದಿಂ [೩]ಗಮನಿಸುತ[೪] ಶಿವನೊಡನೆಂದಳಾ ದೇವಿ ೨

ಮಾರಹರ ನೋಡಿದಿರೆ ಈ ಸುಕು
ಮಾರನೆಮ್ಮ ಕುಮಾರನಹಗೆ ವಿ
ಚಾರಿಸುವಡೆನುತಂ ಕಟಾಕ್ಷಿಸಿ ಮೊಲೆ ತೊಱಿ[೫]ವುತಿರಲು
ಧಾರುಣೀತಳಕವತರಿಸಿ ಸುಕು
ಮಾರನಂ ತರ್ಕ್ಯಿಸುತಂ ಕೈ
ಯಾರೆ ಚೆಂಡಿಕೆಯಂ ಹುಡುಕುತನುರಾಗಚಿತ್ತದಲಿ ೩

---

* ರಾಗ : ನಾಟಿ (ಅ, ಚ, ಘಾ, ಧ, ಮ); ಗುಂಡಕ್ರಿ (ಪ); ಕೇತಾರಗೌಳ (ತ).
೧–೨ ತ್ತಿರಲು ಬಳಿ । ಕಾ (ಚ). ೩–೪ ಗಮಿಸುತ್ತೆ (ತ).

CC-0. Jangamwadi Math Collection. Digitized by eGangotri

ದೇವಿ ಶಾಂಭವಿದೀಕ್ಷೆಯಂ ಕೊ
ಟ್ಟೋವಿ ದೃಢಶಿವಭಕ್ತಿಮಹಿಮಾ
ಭಾವನೆಯನಿತ್ತುದರವುಬ್ಬಲು ಮೊಲೆಯನೊಲಿದೂಡಿ
ಸೇವಿಸೆನುತಂ ಹೊನ್ನ ಬಟ್ಟಲು
ತೀವಿ ಪಾಲಂ ಕಱಿದು ಮತ್ತೆಯು
ಜೀವಿಸೆನುತಂ ನೀಡಿ ಶಿವೆ ಶಿವನಲ್ಲಿಗೆಯ್ದಿದಳು ೪

ಐಸಿಱಿಲಿ ನೀರಲಿ ಮುಳುಗಿದವ
ನೀಸುರೋತ್ತಮನಾಗಳಿದ್ದು ವಿ
ಳಾಸದಿವ್ಯಾಂಗಚ್ಛವಿಯೆಸೆವ ಪುತ್ರನಂ ನೋಡಿ
ಈ ಸೊಬಗಿದೇನಾರ ಕೈಯಿಂ
ದೀಸಿಕೊಂಡೆಲೊ ಹೊನ್ನ ಬಟ್ಟಲೊ
ಳೀ ಸುಪಾಲಂ ಮೊಲೆಯನೂಡಿದರಾರು ಬಂದಿಲ್ಲಿ ೫

ಆವ ದೆಸೆಗೆಯ್ದಿದರವರು ತಾ
ವಾವಡೆಯೊಳಿಹರುಸುರೆನುತ ಭೂ
ದೇವನಾತ್ಮಜನಂ ಹೊಯಿಿದನಾ ಜನ್ನಿವಾರದಲಿ
ಆ ವಟುಕನುಂ ಹೊಯ್ಲು ತಾಗಿದ
ಠಾವನೊಯ್ಯನೆ ಮುಟ್ಟಿ ನೋಡು
ತ್ತಾವಗಂ ನಡುನಡುಗಿ ಪಾಲ್‌ಕಟವಾಯೊಳೊಗುತಿರಲು ೬

ಚಿಕ್ಕವಂ ಕಂಬನಿಗಳುಗುತಿರೆ
ಬಿಕ್ಕಿ ಬಿಕ್ಕಿಯಳುತ್ತ ಹೋ ೪ಲಿ
ಕ್ಕಕ್ಕ ಎನುತಂ೫ ಬಟ್ಟಲಂ ಕೈಯಿಂದೆ ಮುಚ್ಚುತ್ತ
ಸುಕ್ಕುತಂ ಪೊಯ್ಲಿಂಗೊಱಿಲುತೇ
ತಕ್ಕೆ ಪೊಯ್ದುಪಿರೆನ್ನ ಿನಯ್ಯಾ
ಯಕ್ಕ ಿಟಿಂದಂಬರದೊಳೆಯ್ದುವ ಶಿವನೆಡೆಯೊಳಿದ್ದು ೭

೧–೨ ಜಿಂ (ಥ); ಜಿಂಳ್ (ತ). ೩ ಡ (ಪ). ೪–೫ ಹೋ ಅಕ್ಕಟೆನುತಂ (ಬಿ).
೬–೭ ನಣ್ಣಣ್ಣ (ತ, ಧ, ಪ, ಸ).

CC-0. Jangamwadi Math Collection. Digitized by eGangotri

ಸರ್ವಮಂಗಳಮೂರ್ತಿ ಬಂದಳು
ಸರ್ವಪಿತನರ್ಧಾಂಗದಲ್ಲಿಹ
ಸರ್ವಮಾತೆ ಕಡಂಗಿ ಬಂದಳು ಶರ್ವನಲ್ಲಿರ್ದು
ಪೂರ್ವವಹ ಶರ್ವಾಣಿ ಬಂದಳು
ಸರ್ವಪುರುಷಾಧಿಪನಗಲ್ದೀ
ಸರ್ವಶಕ್ತಿಗಳೊಡತಿ ಬಂದಳು ಮಜ್ಜನನಿಯಾಗಿ ೮

ಉರಿರುಜಟಾಜೂಟನನಿರಿಸಿ ಸುರು
ಚಿರವಸುಮಯಕಿರೀಟಿ ಬಂದಳು
ತರುಣಶಶಿಲೇಖಾವತಂಸನ ವಾಮದಲ್ಲಿರ್ದು
ನಿರುತ ಸುಗುಣೋತ್ತಂಸೆ ಬಂದಳು
ಉರಗಹಾರನ ಸಾರೆಯಿರ್ದು
ಸ್ಫುರಿತಮೌಕ್ತಿಕಹಾರೆ ಬಂದಳು ತ್ರಿಣಯನೊಡನಿರ್ದು ೯

ವನಜಲೋಚನಯುಗಳೆ ಬಂದಳು
ಕನದಸಿತಕಂಧರನ ಬಳಿಯಿಂ
ವಿನುತಕಂದುಗ್ರೀವೆ ಬಂದಳು ಸ್ತನಕಮಲಯಜಾಂಕ
ಘನತರೋರಸ್ಥಲನನಗಲ್ದು
ಸ್ತನಮಲಯಜಾಂಕಿತದುರದ ಪಾ
ವನಚರಿತೆ ಬಂದಳು ವೃಷಭಗಮನನ ಕೆಲದೊಳಿರ್ದು ೧೦

ಚಣಮರಾಳಕಗಮನೆ ಬಂದಳು
ಫಣಿಕಟಕನಲ್ಲಿರ್ದು ಮಣಿಕಂ
ಕಣಕರಾಂಬುಜೆ ಬಂದಳಮಳಾಂಗನನಿರಿಸಿ ಸಕಳ
ಗುಣನಿಳಯಿಯಹ ಗೌರಿ ಬಂದಳು
ಗಣನೆಗೆಯ್ದದವನನಿರಿಸಿ ಗುಣ
ಗಣನೆ ಬಂದಳು ಹೊಟ್ಟೆ ತುಂಬಲು ಮೊಲೆಯನೂಡಿದಳು ೧೧

೧ಸ (ಸ). ೨ಗು (ಧ). ೩–೪ನವ (ತ).

CC-0. Jangamwadi Math Collection. Digitized by eGangotri

ಬಳಿಕಿನಿತು ಪಾಲ್ಗಡಿಸಿದು ಹೊಂಬ
ಟ್ಟಲೊಳಿರಿಸಿ ತಾಂ ನಿಲಿಸಿ ಬಂದಾ
ಮಲಹರನ [೧]ಬಳಿಗದೆ ಯುವತಿ ಹೋದಹಳು ನೋಡೆನಲು[೨]
ಇಳಿಗಿದರಿದೆನುತಾ ಮಹೀಸುರ
ಕುಲನುಮಾಪರಮೇಶ್ವರರಿಗೊಲ
ವಲರೆ ಸಾಷ್ಟಾಂಗಪ್ರಣಾಮವನಿಕ್ಕಿ ಕೈಮುಗಿದು ೧೨

ಕಂಡ ಮಗನಂ ಹೆಗಲಲೇಱಿಸಿ
ಕೊಂಡು ಮನೆಗೈತಂದು ಮನದೊಳ
ಖಿಂಡಿತೋತ್ಸ್ಫುಕರಾಗಿ ಪತಿಯುಂ ಸತಿಯುಮಿರುತಿರಲು
ಪಾಂಡುರಂಗನ ಸತಿಯ ಮೊಲೆವಾ
ಲುಂಡು ಸರ್ವಜ್ಞತ್ವಮಂ ಕೈ
ಕೊಂಡು ವಿಜಯಶ್ರೀಯುಮಂ ವಾಕ್ಸಿದ್ಧಿಯಂ ಪಡೆದು ೧೩

ಇಂತು ಬೆಳಗಾಗಲು ಶಿವಾ[೩]ಪಾ
ಸಾಂತರಕೆ ತಾನೆಯ್ದಿ ಗೌರೀ
[೪]ಕಾಂತನಂ[೫] ನಾನಾಪ್ರಕಾರದೊಳೊಸೆದು ಕೀರ್ತಿಸಲು
ಸಂತಸಂ ಮಿಗೆ ದೇವಿ ತನ್ನ
ಸ್ವಾಂತವಲರ್ದು ಸುವರ್ಣತಾಳವ
ನಂತು ಕೊಡಲಾ ತುಂಬುರಾದಿಗಳಂ ಗೆಲಿದು ಪಾಡೆ ೧೪

ಲೋಲನಾಗಿ ಸುನಾದದಿಂ ಶ್ರೀ
ಕಾಳಿನಾಥನು ಮೆಚ್ಚಿ ಲಸಿತವಿ
ಶಾಲಧವಳಚ್ಛತ್ರಚಾಮರ ಶಂಖಿಕಹಳೆಗಳ
ಮೇಲೆನಿಪ ಮೌಕ್ತಿಕವಿಕಚಿತ
ಸ್ಥೂಲಪುಷ್ಪಕವಂ ಸುವರ್ಣಾಂ
ದೋಳಮಂ ಕನಕಾಸನವನತಿ ವಿಭವದಿಂ ಕೊಡಲು ೧೫

೧–೨ ಬಳಿಗೆಯ್ದೆ ಹೋದಳು ನೋಡು ನೋಡೆನಲು (ಸ). ೩ ವಪ (ಸ). ೪–೫ ಕಾಂತೆಯಂ (ತ. ನ. ಪ).

CC-0. Jangamwadi Math Collection. Digitized by eGangotri

ಮೃಡನ ಕೈಯಲು ಪಡೆದು ವೈಭವ
ವಡರಿ ಶಿವಭಕ್ತಿಪ್ರಭಾವಂ
ಕಡು ಮೆಱಿಯೆ ಬೆಳುಗೊಡೆಯ ನೆಳಲಲಿ ಚಾಮರವನಿಡಲು
ಒಡನೆ ಮಂಗಳಪಾಠಕರು ಸಂ
ಗಡಿಸಿ ಬಿರಿದುಗಳಂ ಪೊಗಳುತಂ
ನಡೆಯೆ ಪಿಳ್ಳೆಯನಾಯನಾರ್ ಪ್ರೊಂದಂಡಿಗೆಯನೇಱಿ ೧೬

ಬಹಳ ಶಂಖಧ್ವನಿಗುಡಲು ಬಿಱಿ
ಗಹಳೆಗಳು ಪರಸಮಯಕಾನನ
ದಹನವೆನುತಂ ಮೊರೆಯಲುರುತರ ಮಹಿಮೆಯಲಿ ಮೀಱಿ
ಆಹಿತರೆದೆಗಳು ಬಿರಿಯೆ ಲೋಕಂ
ಮಹಿಯೊಳಭಿವಂದಿಸಲು ಶಿವಸ
ನ್ನಿಹಿತನಂ ಮಾಡಿದನಿನಕುಲೋತ್ತುಂಗಚೋಳನನು ೧೭

ಎರಡುಸಾವಿರ ಬೌದ್ಧರೋಲಗ
ವೆರಸಿ ವಾದಿಪ ಬೌದ್ಧಮುಖ್ಯನ
ನರಿದೆನಲ್ಕೆಬ್ಬಿಟ್ಟಿ ಮೇಣ್ ಶರಣೆಂದರಂ[೧] ಕಾಯ್ದು
ಎರಡು ಸಾವಿರ ಬೌದ್ಧರಂ ಪತಿ
ಕರಿಸಿ ಶಿವಮಂತ್ರವನಱಿಪಿ ನಿಜ
ಕರುಣದಿಂ ಶಿವಭಕ್ತಿಪರರಂ ಮಾಡಿ ಸಲಹಿದನು ೧೮

ತಿರುಮರಕ್ಕಡವೆಂಬ ಪೆಸರಿನ
ಪುರದೊಳಾ ಬ್ರಹ್ಮೇಶ್ವರನ ಸು
ಸ್ಥಿರಕವಾಟಂಗಳನೊಡನೆ ತಾಂ ಹಾರ ತೆಗೆಸಿದನು
ಧರಣಿಯೊಳು ತಿರುವಾಲವಾಯೆಂ
ದೊರೆಯಪಟ್ಟಿಹ ಪಟ್ಟಣಕೆ ಬಂ
ದರಿಗಳಪ್ಪೆಲ್ಲಾರುಹತರಂ ಮುನ್ನ ಜಯಿಸಿದನು ೧೯

---

೧ ಡಂ (ಧ, ಪ).

CC-0. Jangamwadi Math Collection. Digitized by eGangotri

ಉರಗದಪ್ಪದಿ ಮಡಿದ ಶೂದ್ರನ
ಹರಣವಂ ಸಲೆ ಪಡೆದು ಮಧುರೇ
ಶ್ವರನ ರಾಣಿಯ ಸನ್ಮತದೊಳಾ ಮಧುರೆಗೆಯ್ತರಲು
ನರಪತಿಯ ಹೊರೆಗಾ ಸಮಯದಲಿ
ನೆರೆದು ಜೈನರು ಬೌದ್ಧರುಂ ಧಿ
ಕ್ಕರಿಸಿ ಬಂದಿಂತೆಂದು ಹೇಳಿದರಾ ಮಹೀಶಂಗೆ ೨೦

ಜ್ಞಾನಸಂಬಂಧಿಯರೆನಿಪ ಶೈ
ವಾನುಕೂಲನು ಬಾಲನೊರ್ವನು
ತಾನಿಳೆಗೆ ಜಿನಸಮಯಧೂಮಧ್ವಜನೆನಲು ಕೊರ್ಬಿ
ಈ ನಗರಿಗೆಯಿತಂದನೀಗಳೆ
ಮಾನವೇಶ್ವರ ನೀನವನನನು
ಮಾನವಿಲ್ಲದೆ ಹೊಱಿವಡಿಸು ನಿಲಲೀಸವೇಡೆನಲು ೨೧

ಗುರುವಹಂ ಗಡ ಚೋಳರಾಯನ
ಹರಸಮಯಿ ಗಡ ಈತನಂ ಧಿ
ಕ್ಕರಿಸಿ ಸುಮ್ಮನೆ ಹೊಱಿವಡಿಸುವುದು ಧರ್ಮವಲ್ಲವಿದು
ಅರಸನಾಗಿದ್ದೆನಗಸತ್ಯವ
ನೊರೆಯಲಾಗದು ನೀನವರನೇ
ಪರಿಯೊಳಾದಡೆ ತರ್ಕದಲಿ ಸೋಲಿಸುವುದೇ ಮತವು ೨೨

ಎಂದಡಂ ಹದಿನೆಂಟು ಸಾವಿರ
ಹೆಂದದಾರುಹತರು ಕಡಗಿ ನಡೆ
ತಂದು ತರ್ಕಿಸಿ ತರ್ಕವಾದಕ್ಕಾಱಿದೇ ಸೋಲ್ತು
ನಿಂದು ನಡುವಿರುಳಾತನಿಪ್ಪಾ
ಮಂದಿರ[೧]ದೊಳಗೆ[೨] ಕಿಚ್ಚನಿಕ್ಕಲು
ಮುಂದೆ ದಹನಂ ದಹಿಸಲಂಜಿ ಸಮಕ್ಷದಲಿ ನಿಲಲು ೨೩

೧–೨ ಕೆತಾಂ (ಕ)

CC-0. Jangamwadi Math Collection. Digitized by eGangotri

ಮುಳಿದೆಲವೊ ಪಾವಕ ಇದೇನೋ
ನಿಳಯವಂ ಸುಡಲೆಂದು ಬಂದಾ
ಭಲರೆ ನೀನಹುದಹುದು ವೀರಗಣೇಶ್ವರನು ನಿನ್ನ
ಬಲುಗರಂಗಳನೇಳು ನಾಲಗೆ
ಗಳನರಿದು ಹಾಯ್ಕಿದನಲಾ ಇ
ನ್ನುಳಿದ ಮೂಗಂ ಕೊಯ್ಸಿಕೊಳಲೆಂದೇ ಮಱುಗಿ[೧]ಹೆಯಲಾ[೨] ೨೪

ಕಲುಷಜೈನರ ನಿಚಯದಗ್ಗದ
ಬಲುಹನೀಗಳೆ ನೋಡುವೆನು ಭೂ
ತಳಪತಿಯ ದೇಹದೊಳಗುಷ್ಣಜ್ವರದ ರೂಪಿನಲಿ
ನೆಲಸಿ ಪರಿತಾಪವನೊಡರ್ಚು
ಜ್ವಳನೆ ಕಾಯ್ದೆನು ನಿನ್ನನೆನಲ
ಗ್ಗಳಿಸಿಯಾತನ ತನುವಿನೊಳ್ [೩]ಪ್ರಾಪ್ತಿಸಿದುದೇವೊಗಳ್ದೆ[೪] ೨೫

ಪಟುತರಜ್ವರರೂಪದಿಂದು
ತ್ಕಟಿಸಿ ಸುಡಲಾಯವಸರದೊಳ
ಕ್ಕಟ ಎನುತ್ತಂ ಮಂಗಯಕ್ಕರಸಿಯರೆನಿಪ ನೃಪನ
ಕುಟಿಲಕುಂತಳೆ ಪತಿಯ ಮತವನು
ಘಟಿಸಿಯಾಗಳೆ ಬರಿಸಿ ಕಲಿಯುಗ
ನಿಟಿಲನಯನಜ್ಞಾನಸಂಬಂಧಿಯರ ಮೆಲ್ಲಡಿಗೆ ೨೬

ಬಂದು ಸಾಷ್ಟಾಂಗಪ್ರಣಾಮದಿ
ವಂದಿಸುತ ಬಿನ್ನವಿಸಿ ಲಾಲಿಸಿ
ಇಂದೆಲವೊ ಆರಾದಡೊಬ್ಬನು ಈ ಮಹೀಪತಿಯ
ಒಂದಿದಂಗವ್ಯಥೆಯನೀಕ್ಷಣ
ದಿಂದ ಮಾಣಿಪರುಳ್ಳಡೇಳೇ
ಳೆಂದೆನುತ ಬಲವಮ್ಮ ಭಾಗಂ ನಿಮ್ಮ ಕಡೆ ಎಡನು ೨೭

೧–೨ ಬಯಲಾ (ಮ) ೩–೪ ವೇಪಿಸಿದುದೆಂ ಪೇಳ್ದೆ (ಬ).

CC-0. Jangamwadi Math Collection. Digitized by eGangotri

ನೀವು ಮಂತ್ರಿಸೆನುತ್ತ ತಿರುನೂ
ರೋವಿ ಮಂತ್ರಿಸಿ ಹಾಯ್ಕಲೊಡನಂ
ತಾವರಿಸಿದುರಿ ಬಲದ ಭಾಗದೊಳುಡುಗಿ ಎಡದಲ್ಲಿ
ತೀವಿ ತಜ್ಜ್ವರವಿಮ್ಮಡಿಸಿತಾ
ಶ್ರಾವಕರು ಮಂತ್ರಿಸಿದ ಮಂತ್ರ
ಕ್ಕಾವಗಂ ಪಿರಿದುರಿವುತಿರೆ ಬೆದಬೆದನೆ ಬೇವುತ್ತ ೨೮

ಎನ್ನ ರೋಗವನುಡುಗಿಸಯ್ಯ ಸು
ಚಿನ್ನಿಧಾನಾಲಯಶರೀರನೆ
ಎನ್ನ ರುಜೆಯಂ ಮಾಣಿಸಯ್ಯ ಕೃಪಾರ[೧]ಸ ಸಮುದ್ರ[೨]
ಎನ್ನ ತಾಪವನಪಹರಿಸು ಜಗ
ದುನ್ನತಾಶಾಭರಿತಕೀರ್ತಿಯೆ
ಎನ್ನ ದೇಹಜ್ವರವನೀಗಳೆ ಕೆಡಿಸು ಸಮ್ಮರುವೆ ೨೯

ಎನುತ ಬಹುವಿಧದಲ್ಲಿ ಹಾಹಾ
ಎನುತಮಿಹ ಘೋಷಣವುಲಿಯಲಾ
ಜನಪನೊಲವಿಂ ಪ್ರಾರ್ಥಿಸಲು ತಾ ಜ್ಞಾನಸಂಬಂಧಿ
ಜಿನಸಮಯಕೋಲಾಹಲನು ಸು
ಮ್ಮನೆ ಭಸಿತವಂ ಪಿಡಿದು ಕರುಣದಿ
ತನುವಿನಲಿ ತಳಿತಳಿದು ಮೂರ್ಸೂಳಿಳಿಯ ತೊ[೩]ಡೆಯಲ್ಕೆ ೩೦

ಹೊರಟು ಪಾಂಡ್ಯನ ಚೆಲುವಳಿದು ನೆಱಿ[೪]
ಹೊರಟು ನೆಲೆಗೊಂಡಿದ್ದ ಬೆನ್ನಿನ
ಹೊರಟು ಹೋಗಲು ಮಿಥ್ಯೆಯಾಯಿತು ಸಾಯದಿರಬಹುದೆ
ಹೊರಟ ಬೆನ್ನಿಂತೆಂಬ ನುಡಿಯದು
ಧರೆಗೆ ಕೂನನೆನಿಪ್ಪುದಂ ಪರಿ
ಹರಿಸಿ ಸೌಂದರಪಾಂಡ್ಯರಾಯನೆನಲು ಪೆಸರ್ವಡೆದ ೩೧

೧–೨ ಸಾಮಂತ್ರ (ಥ, ಧ, ಪ, ಸ). ೩ ನೊ (ಚ, ಮ).

CC-0. Jangamwadi Math Collection. Digitized by eGangotri

ಎಡದ ಭಾಗದೊಳಿಮ್ಮಡಿಸಿ ಕಡು
ಸುಡುವ ತಜ್ಜ್ವರವೆಯ್ದೆ ನಿಮಿಷದೊ
ಳುಡುಗಲೊಡನರಸಿಯುಮರಸನುಂ ಪರಮಹರುಷದಲಿ
ಪೊಡವಿಯಲಿ ಸೈಗೆಡೆದು ಹೊಡವಡು
ತೆಡೆವಿಡದೆ ತಾವವಸರೋಚಿತ
ಕಡರ್ಪಿ ಸತ್ಕ್ರಿಯೆಗಳನೊಡರ್ಚಲು ಸಾನುರಾಗದಲಿ ೩೨

ನಾವು ಮಾಡುವುದೇನು ನಿಮಗಿ
ನ್ನಾವುದೊಂದುವನಾಯ್ದುಕೊಳ್ಳಿರೆ
ನೀವೆನಲು ಜಿನಮುನಿಗಳೆಂದರು ಶಿವಕುಮಾರಂಗೆ
ನಾವು ಮಜ್ಜಿನಮಂತ್ರಲೇಖೆಯ
ನೀವು ತಪೆ ಶಿವಮಂತ್ರಲೇಖೆಯ
ಪಾವಕನೊಳಗೆ ಹಾಯ್ಕುಲಾವುದು ಬೇಯದೆಸೆದಿಪ್ಪ ೩೩

ಅವರದೇ ಗೆಲವೆಂದು ನುಡಿಯಲು
ಶಿವಸಮಯಿ ನಸುನಗುತ ಧಾತ್ರೀ
ಧವನ ಮುಖವಂ ನೋಡಿ ತಾನಿಂತೆಂದು ಬೆಸಸಿದನು
ನವಸುವರ್ಣದೊಡನೆ ಶುನಕದಂ
ತವನಿರಿಸಿ ತೂಗಿದಡೆ ಲೋಕಕೆ
ನವಸುವರ್ಣದ ಸರಿಯಹುದೆಯಾ ಶುನಕದಂತವದು ೩೪

ಹಾಲಕಂಬಿಯೊಳೊಂದು ಕಲ್ಲಂ
ಕೀಲಿಸಿದ ತೂಕಕ್ಕೆ ಹೊತ್ತಡೆ
ಹಾಲುವಾ ಪಾಷಾಣಮುಂ ಸರಿಯಹುದೆ ಭಾವಿಸಲು
ಮೇಲು ಚಂದನಮುಂ ನಗರೆಯುಂ
ಹೋಲಿಸುವಡೆ ಸಮಾನವಹುದೇ
ಶೂಲಿಮಂತ್ರದ ಲೇಖೆಯಂ ಜಿನಮಂತ್ರಲೇಖೆಯನು ೩೫

---

೧೮ (ಬ). ೨ರೇ (ತ, ನ). ೩–೪ ಪರಿ (ಥ); ಸಲೆ (ಪ). ೫ ಪಾ (ಚ, ಮ).

CC-0. Jangamwadi Math Collection. Digitized by eGangotri

ಕೂಡೆ ಎಣಿಸಿದಡೇನಿದಕ್ಕದು
ಪಾಡೆಯೆನುತಂ ಪಂಚವ[೧]ರುಷದ
ಗಾಡಿಗಂ ಶಿವ ಎಂಬ ವರ್ಣದ್ವಯಮನೋಲೆಯಲಿ
[೨]ಱೂಢಿ[೩] ಮಿಗೆ ಬರೆದಾ ಜನಪತಿಗೆ
ನೀಡಲೆರಡುಮನೀಸಿಕೊಂಡಾ
ನಾಡೊಡೆಯನುರಿವುರಿಯೊಳಗೆ ಪತ್ರಂಗಳಂ ಹಾಯ್ಕಿ ೩೭

ಕರವನೆತ್ತದ ಮುನ್ನ ಬೆಂದಿತು
ಸುರುಸುರನೆ ಜಿನಮಂತ್ರಪತ್ರಂ
ಸರಸರನೆ ಶಿವಮಂತ್ರಪತ್ರಂ ತರಣಿಯಂ ಕಂಡ
ಸರಸಿರುಹಪತ್ರದ ಪರಿಯೊಳತಿ
ಕರಮೆಸೆದಿರಲು ಜಿನಮುನಿಗಳೋ
ಸರಿಸದೇ ತಲೆ ಸತ್ತು ಬಾಲಂ ಸಾಯದೆಂಬಂತೆ ೩೮

ನೋಡಬೇಹುದು ಮೂಱು ಬಾರಿ ನಿ
ವಾಡಬಹುದೆಂದಿಂದುಲೇಖಾ
ಚೂಡಮಂತ್ರದ ಲೇಖೆಯಂ ಜಿನಮಂತ್ರಲೇಖೆಯನು
ಕೂಡೆ ಕಾವೇರಿಯಲಿ ಹಾಯ್ಕಲು
ಱೂಢಿದೊಱೆ[೩]ಯಲಿ ಹೋದಡಪಜಯ
ಓಡದಿದಿರೇಱಿದಡೆ ಜಯವೆಂದೆಂಬ ನುಡಿಗಳಿಗೆ ೩೯

ಒತ್ತಿ ತಿವಿಯಲು ಕೋಮಟಿಗನಂ
ಮತ್ತೆ ತಿವಿತಿವಿಯೆಂಬವೋಲು
ನ್ಮತ್ತರೊಡನೇನೆಂಬೆನುಸಿಕನೆ ಹೋಗಲೀಸ[೪]ದಿರು
ಇತ್ತ ಕೇಳ್ ಸೋತವರ್ಗಳಂ ಭೂ
ಪೋತ್ತಮಾ ಮಿಗೆ ಕಾಸಿಸಿದ ಕೆಂ
ಬೊತ್ತ ಲೋಹದ ನಿಸಿತಶೂಲಾಗ್ರಂಗಳಲಿ ತೆಗೆಸು ೪೦

---

೧ ಪ (ಸ). ೨–೩ ಕೂಡಿ (ಚ). ೪ ಯ (ತ, ನ).

CC-0. Jangamwadi Math Collection. Digitized by eGangotri

ಎಂದಡಾಗಲಿಯೆಂದು ಜಿನಮುನಿ
ವೃಂದವವನೀಪತಿಯು ತಾವೆಯಿ
ತಂದು ನೋಡಲು ಲೇಖೆಗಳನಾ ಸಿಂಧುಮಧ್ಯದಲಿ
ತಂದು ಹಾಯ್ಕಲು ಪರಿವ ನದಿಗಿದಿ
ರ್ವಂದುದೀ ಶಿವಮಂತ್ರಪತ್ರವು
ಮುಂದೆ ತೊಟಿಯಲು ಹೋಯಿತಾ ಜಿನಮಂತ್ರಪತ್ರವದು ೪೦

ಸಾಂಗವಹುದೇ ಕಡೆಗೆ ದುರ್ಮಂ
ತ್ರಂಗಳೆನುತ್ಸೈಸಱಿಲಿ ಸರ್ವಜ
ನಂಗಳಚ್ಚರಿವಟ್ಟು ನೋಡಲು ಜ್ಞಾನಸಂಬಂಧಿ
ಪೊಂಗಿ ಚಿತ್ತದೊಳಾ ಮಹೀವರ
ಪ್ರಂಗವನನಗಜೇಶಭಕ್ತಿಯು
ತಾಂಗನಂ ಮಾಳ್ಪಧಿಕನಿರ್ಮಳ ಬೋಧೆಯಂ ಕೊಟ್ಟು ೪೧

ಜ್ಞಾನನಿಧಿ ಪದಿನೆಂಟುಸಾವಿರ
ಜೈನರಂ ಪಿಡಿತರಿಸಿ ಭಕ್ತಿಸು
ಮಾನವೆಗ್ಗಳಿಸಲು ಕುಲಚ್ಚರಿಯಾರು ಮಾಡಿಸಿದ
ಆ ನಿಸಿತಯುತತಪ್ತಲೋಹಸ
ಮಾನಶೂಲಂಗಳಲಿ ತೆಗೆಸನೆ
ನೀನಱಿಯಲಾ ಧರಣಿಯೊಳು ತಿರುನೂರ ನೆಱಿ ನೆರಪಿ ೪೨

ಆರುಹತ ಕೇಳ್ ಮತ್ತೆಯುಂ ನಿಡು
ಮಾರನೆಂಬಾ ಧಾರುಣೇಶನು
ವೀರಶೈವಾಚಾರ್ಯವಾರ್ಯನುದಾರಿ ತಾನಾಳ್ದ
ಧಾರುಣೇತಳವುಳಿಯೆ ಮಿಕ್ಕಿನ
ಧಾರುಣೇವಳಯದೊಳಗೆಯ್ದೆ ಅ
ನಾರತಂ ಜಿನಮಾರ್ಗವರ್ತನರಾಗಿ ವರ್ತಿಸಲು ೪೩

CC-0. Jangamwadi Math Collection. Digitized by eGangotri

ಧಾತ್ರಿಗೌಷಧಕಾದಡಂ ಭಸಿ
ತತ್ರಿಪುಂಡ್ರಾಂಕಿತತನುವಿನ ಪ
ವಿತ್ರನೊರ್ಬನುವಿಲ್ಲದಿರೆ ಏಗೆಯ್ವೆನೆಂದೆನುತ
ಕ್ಷತ್ರಿಯಂ ಯೋಜಿಸಿಯಱಿದು ಶಿವ
ಪುತ್ರನಂಶಿಕದಾತನೀಗ ಧ
ರಿತ್ರಿಯೊಳು ಸದ್ಭಕ್ತಿಪರ್ಧನಕಾರಣಾರ್ಥದಲಿ ೪೪

ಜ್ಞಾನಸಂಬಂಧಿಯರೆನಿಪ್ಪಭಿ
ಧಾನದಿಂದೀ ಪರಸಮಯಮದ
ಮೀನಜಾಲನೆನಲ್ಕೆ ಪಾಂಡ್ಯವಸುಮತಿಗೆಯ್ತಂದು
ಮಾನಿತೋನ್ನತವೀರಭಕ್ತಿವಿ
ಧಾನಮಂ ಪೆರ್ಚಿಸುತ ದುರ್ಮದ
ಜೈನರಂ ಶೂಲದಲಿ ತೆಗೆಸಿದನೆಂಬ ವಾರ್ತೆಯನು ೪೫

ಕೇಳಿಯಾ ನಿಡುಮಾರಜಗತೀ
ಪಾಲಕಂ ತನ್ನವನಿಯೊಳು ಪೆಸ
ರೋಳಿವೆತ್ತಾರುಹತರಂ ಜಿನಮಂತ್ರವಾದಿಗಳ
ಹೇಳಲೇನಿಂತೆಲ್ಲರಂ ಶಶಿ
ಮೌಳಿಭಕ್ತನು ಕರೆತರಿಸಿಯಾ
ಭೀಳಕೋಪದೊಳರುಹ ಮುನಿಗಳಿಗಾಗಳಿಂತೆಂದ ೪೬

ಪಿರಿದವಾಂತರಶಾಸ್ತ್ರಮತವಿ
ಸ್ತರಣದಿಂ ಶ್ರುತಿಬಾಹ್ಯರಾಗಿಯೆ
ಚರಿಸುತಿಪ್ಪ ಕುಬುದ್ಧಿಗಳಿರ ಅಬದ್ಧಚರಿತರಿರಾ
ಧರಣಿಯೊಳು ಪಶುಕರ್ಮಿಯಾಗಿಹ
ನರನನೀಶ್ವರನೆನುತ ಪಶುಪನ
ಚರಣವಂ ಪೂಜಿಸದ ಪಶುಜೀವಿಗಳಿರಧಮರಿರಾ ೪೭

೧–೨ ನಿದಕೆನುತಾ (ಆ, ಮ). ೩ ನಿ (ತ, ನ, ಪ).

CC-0. Jangamwadi Math Collection. Digitized by eGangotri

ನಿಗಮವಿರಹಿತಶೂನ್ಯದುರ್ಭೋ
ಧೆಗಳಿಗೊಲಿದು ಸಮಸ್ತ ಭಯರ
ಕ್ಷೆಗೆ ಭಸಿತವಂ ಪೂಸಲೊಲ್ಲದ ಪಾಪಚಿತ್ತರಿರಾ
ನಿಗುರುವದ್ವೈತಕ್ರಿಯಾಮಾ
ಯೆಗಳ ದುರ್ಮತದಿಂದ ಸದ್ವಿ
ದ್ಯೆಗೆ ಪರಶಿವನ ಭಜನೆಯಿಲ್ಲದನಾಮಿಕರುಗಳಿರಾ ೪೮

ಒದವಿದಜ್ಞಾನಪ್ರಬೋಧಾ
ಸ್ಪದರೆನಿಸಿ ಸುಜ್ಞಾನರತಿಯಿ
ಲ್ಲದ ದುರುಳರಿರ ನಿನಿತು ಕಾಲವಿದೆಮ್ಮ ಭೂಪ್ರಜೆಯ
ಮದಿಸಿ ದುರ್ಬೋಧೆಯನಿಟ್ಟಿಪಿ ಕೆಡಿ
ಸಿದಿರಕಟ ನಿನ್ನಹಗೆ ಹೋಗದು
ಮದನಹರಸಪ್ಪಕ್ತನೊರ್ಬನು ಜ್ಞಾನಸಂಬಂಧಿ ೪೯

ಬಂದು ಪಾಂಡ್ಯಮಹೀತಳದೊಳಾ
ನಂದದಿಂ ಸರ್ವಪ್ರಮಾಣದೊ
ಳೊಂದೆ ದೃಷ್ಟಪ್ರತ್ಯಯಂಗಳೊಳೀಶ್ವರನೆ ಕರ್ತ
ಎಂದು ಪಸುಮತಿಯೊಳ್ ಪ್ರತಿಷ್ಠಿಸಿ
ಯೆಂದುವುಂ ಜಿನ ಬುದ್ಧ ಸಮಯವಿ
ದೆಂದುಲಿವ ಪೆಸರಿಲ್ಲದಂತಾತನು ತೊಡೆದು ಕಳೆದು ೫೦

ಜಿನಮುನಿಗಳಂ ಪಿಡಿತರಿಸಿ ಕ
ಬ್ಬುನದ ಶೂಲಂಗಳಲಿ ತೆಗೆಸಿದ
ನೆನಲಿದಂ ಕೇಳಿದಿರೆ ನೀವಂತಾಗಿ ಭಕ್ತಿಯಲಿ
ತ್ರಿನಯನಂ ಪೂಜಿಸಿಯಿದಕೆ ಮನ
ವನುಮತಿಸದಡೆ ಲೋಹಶೂಲದೊ
ಳಿನಿಬರಂ ತೆಗೆಸುವೆನು ತಲೆಕೆಳಕಾಗಿ ನಿಮ್ಮುವನು ೫೧

CC-0. Jangamwadi Math Collection. Digitized by eGangotri

ಎನುತ ಶಿವಭಕ್ತಿಪ್ರಯುಕ್ತನು
ಮನುಜಪತಿ ಖಿಡ್ಗಾಯುಧಾನ್ವಿತ
ಘನಭುಜಾಯತನಾಗುತವರಂ ಪೇಡೆಯವನಿಕ್ಕಿ
ಕನಲಿ ಶೂಲಂಗಳಲಿ ತೆಗೆಸು
ತ್ತನಿತಱಿಕೊಳು ಶಿವಭಕ್ತರಾದಾ
ಜಿನಮುನಿಗಳಂ ಕಾಯನೇ ನಿಡುಮಾರನೆಲೊ ಜೈನ ೪೨

ಮತ್ತೆಯುಂ ನಮಿನಂದಿಯೆಂಬ ಗ
ಣೋತ್ತಮಂ ಶಿವಭಕ್ತಿಯಲಿ ಚಿ
ಲ್ಲತ್ತಿರುವದೂರೆಂಬ ಪೊಳಲಲಿ ಮಾಣದೋರಂತೆ
ಸುತ್ತಲಾರ್ಜಿಸಿ ತಂದ ಘೃತವಂ
ಚಿತ್ತಚಾರಿಗೆ ನಿತ್ಯನೇಮಂ
ಪೊತ್ತು ಸಾವಿರ ದೀವಿಗೆಗಳಂ ಪೊತ್ತಿಸು[1]ತಮಿರಲು ೪೩

ದುರುಳತನದಲಿ ಜೈನರೆಲ್ಲರು
ನೆರೆದು ನಮ್ಮೂರೊಳು ಮಹೇಶನ
ಗೊರವನಿರ್ದಹನೊರ್ಬನಂ ತಗುಳ್ವಂದವೆಂದೆನುತ
ಪಿರಿದನೂಹಿಸಿ ನೋಡಿಯಿದೆ ಬಾ
ಹಿರದ ಪಾಳ್ದೀಗುಲದೊಳಗೆ ಸಾ
ವಿರ ಸೊಡರುಗಳನೆತ್ತಿ ಭಜಿಸುವ ನೇಮವಾತಂಗೆ ೪೪

ಇಂದು ಪೊಳಲಲಿ ಘೃತವನಾರುಂ
ತಂದೆಱಿಯದಿರೆ ತಾನೆ ಹೋದಹ
ನೆಂದನುಮತಿಸಿ ತುಪ್ಪವಿನಿತುಮನೆಱಿಯಲೀಯದಡೆ
ಬಂದು ತಾನಾವೆಡೆಯೊಳಾಜ್ಯವು
ಸಂಧಿಸದೆ ನಮಿನಂದಿ ದೀವಿಗೆ
ನಂದಿದಡೆ ಸಾವೆನು ಜಗತ್ರಯದೇವ ಮಜ್ಜೀವ ೪೫

೧–೨ ತಲಿ (ಚ, ಮ); ತ್ತಿ (ತ, ನ).

CC-0. Jangamwadi Math Collection. Digitized by eGangotri

ಎಂದು ತನ್ನ ಶಿರಕ್ಕೆ ಮುನಿಯಲು
ಮುಂದೆ ತದ್ದೇವಂ ಪ್ರಮೋದವ
ನೊಂದಿ ಸನ್ನಿಧಿಯಾಗಿ ಪೇಳ್ದನು ವರದ ಸೋಮಪ್ಪೆ
ಆಂದು ತಾನೊಲಿದುತ್ತಮೋದಕ
ದಿಂದೆ ಬಹುದೀಪಂಗಳಂ ಬೆಳ
ಗೊಂದಿಸುವವೋಲೆಮ್ಮ ಮಜ್ಜನಬಾವಿಯೊಳಗಿರ್ದ ೫೬

ಸಲಿಲವಂ ನೀನೆಱಿವುತಿರು ಪ್ರ
ಜ್ವಳಿಸುವವು ದೀವಿಗೆಗಳಿಂತಿ
ಗ್ಗಳಿಸಿ ಮುಂಗಾಣದಿಹ ಜೈನರ ಪಶುಗಳೀ ದಿನವೆ
ಇಳೆಯೊಳಗೆ ಮಡಿದಹವೆನುತ ತ
ಜ್ವಲನನೇತ್ರನು ಬೆಸಸಿದಡೆ ಕೇ
ಳ್ದಲರು ಮಿಗೆ ರೋಮಾಂಚಕಂಚುಕಿತಾಂಗನಾಗುತವೆ ೫೭

ಕೊಳನ ಜಲದಲಿ ಕೋಟಿದೀಪಂ
ಗಳು ಬೆಳಗೆ ಪಾಡುತ್ತಮಿರಲೂ
ರೊಳಗಱಿಚುತಿಹವೊಂದು ಕರುವುಮದಿಲ್ಲದಂತೆಯ್ದೆ
ಸಲೆ ಪಶುಗಳೆಲ್ಲಂ ಮರಣವಾ
ಗಲು ಹೆದಱಿ ನೋಡುತ್ತವರು ಸಂ
ಚಲಿಸುತೀ ವಿಪರೀತವುಂಟೇ ನಿಮಿಷಮಾತ್ರದಲಿ ೫೮

ಮಿಸುಕದುಸುರಿಡದುಸಿಕನಿದ್ದಂ
ತಸುಗಳೆದವಾ ದೇವನಲಿ ತಾ
ಪಸಿ ಪಡೆದು ಕೋಟಾನುಕೋಟಿ ಸೊಡರ್ಗಳಲಿ ಶಿವನ
ಹೊಸಕೊಳನ ಸಲಿಲವನೆಱಿದು ಹೊ
ತ್ತಿಸಿದಪಂ ಗಡ ಧರೆಯೊಳಿಂತಾ
ವಿಸ್ಮಯಂ ಪುಟ್ಟುವುದೆ ಭಕ್ತರ ಮಹಿಮೆಯೆಂತಹುದೊ ೫೯

೧ತು (ಕ). ೨ಪ (ಚ).

CC-0. Jangamwadi Math Collection. Digitized by eGangotri

ನಾವು ತುಪ್ಪವನೆಱೆಯಲೀಯದ
ಡಾ ವಿಗಡನುಱೆ ಶಾಪಿಸಿದನೋ
ವೀ ವಿಧವಿದಹುದಲ್ಲದಡೆ ಬಱಿಸಿಡಿಲು ಹೊಡೆದಂತೆ
ಆವುಗಳು ತಾವಿಂತು ಸಾವವೆ
ಏವೆವಕಟಿನ್ನಾ ಮಹಂತನ
ಠಾವಿಗೆಯ್ದಿ ಶರಣುವೊಗುವವೇಳೇಳಿನುತ ಬಂದು ೮೦

ಕರಯುಗಳವಂ ಮುಗಿದು ವಂದಿಸಿ
ಶರಣು ಶರಣಾಗೆನುತ ಕೀರ್ತಿಸೆ
ಸರಸಕರುಣಾದೃಷ್ಟಿಯಿಂದವೆ ನೋಡಿ ನಮಿನಂದಿ
ಧರಣಿಯೊಳು ಮಡಿದಿರ್ದ ಪಶುಗಳ
ಹರಣಮಂ ಕೊಟ್ಟಾರುಹತರಂ
ಪೊರೆಯನೇ ಶಿವದೀಕ್ಷೆಗಳನಿತ್ತೆಲೊ ಅಧಮಜೈನ ೮೧

ಕೇಳು ಮತ್ತೆಯು ಸಾಂಖ್ಯಿತೊಂಡನು
ಚೋಳಭೂಮಂಡಲದೊಳೆಸೆವ ವಿ
ಶಾಲವೆನಿಸಿದ ಶಾಂತಮಂಡಲವೆಂಬ ಪುರದೊಳಗೆ
ಕಾಳುಬೌದ್ಧನ ಬಸುಱಿಕೊಳುದಯಿಸಿ
ಬಾಲತನವು೧ಳಿದಪ್ರಬುದ್ಧದ
ವೇಳೆಯಲಿ ತಾಂ ಬೌದ್ಧಮಾರ್ಗವಿರುದ್ಧಬುದ್ಧಿಯಲಿ ೮೨

ಓವಿದಂದಿನ ತನ್ನ ಪುಣ್ಯಫ
ಲಾವಹದಿ ಶಿವಭಕ್ತಿವಾಸನೆ
ಯಾವರಿಸಿ ಮನದೊಳು ಶಿವಶಿವಾ ಬೌದ್ಧರಿನ್ನುವನು೪
ಶೈವನಾದಡೆ ಬಾಳಲೀಯರು
ಶೈವನಾಗಿರದೆಂತು ಬಾಳ್ವೆನು
ಗಾವುದಳತೆಯೊಳೀರಯಿದು ಗಾವುದಱ ಸೀಮೆಯಲಿ ೮೩

---

೧ ವ (ತ, ನ). ೨ ಕೋ (ಮು). ೩–೪ ರೆನ್ನವರು (ತ, ನ).

CC-0. Jangamwadi Math Collection. Digitized by eGangotri

ಶೈವನೆಂಬಾ ಪೆಸರನೆನಗಿಂ
ತಾವ ಕರ್ಮವೊ ಕೇಳಬಾರದು
ದೇವ ಇಂತಹ ಭಕ್ತಿಹೀನನ ಬಸುಱಿಕೊಳೆನ್ನುವನು
ನೀವು ಹುಟ್ಟಿಸಲಹುದೆ ಕರುಣಾ
ಭಾವ ನೀವೇಕಿನಿತು ಕೃಪೆಯಿ
ಲ್ಲಾ ವಿಭುವೆ ಬರಿಸಿದಿರಿ ಮಲಧಾರಿಗಳ ಮನೆಗಳಲಿ ೬೪

ನಿರತಭಕ್ತಿಯೊಳೊಲಿದು ನಿನ್ನನ
ವರತಮುಂ ಪೂಜಿಸುವುಪಾಯಂ
ದೊರಕದೊಂದುವನಂತುಮಲ್ಲದೆ ಶ್ರುತಿರಹಿತರಾಗಿ
ಚರಿಸುತಿಹ ಜಿನ ಬೌದ್ಧ ಚಾರ್ವಾ
ಕರ ಕುಪಥಸಮಯತ್ರಯಂ ನಿ
ಷ್ಠುರದಿ ನಿರ್ಮೂಲಂಗಳಾಗಲ್ಕೆಂದು ನಿಶ್ಚಯಿಸಿ ೬೫

ಮೂಱು ಕಲ್ಲುಗಳಿಂದೆ ನಿಚ್ಚಂ
ಮೂಱು ಹೊತ್ತುಂ ನಿಮ್ಮನಿಡುವೆನು
ಜಾಱಿದೆನ್ನ ನಿಜಪ್ರತವಿದೆಂದಿಂತು ಪರ್ತಿಸಲು
ಮೂಱು ದಿನ ತೊಱಿ ಮೀಱಿ ಪರಿಯಲು
ಮೂಱು ದಿನ ಉಪವಾಸವಿದ್ದನು
ಮೂಱು ಕಂಗಳ ಶಿವನ ಭವನಕೆ ಹೋಗಬಾರದಿರೆ ೬೬

ಬಳಿಕ ಮೂಱು ದಿನಕ್ಕೆ ತೊಱಿ ತಾ
ಯ್ಮಳಲುಗಾಣಿಸಲೆಯ್ದಿ ಆ ದೇ
ಗುಲಕೆಯಣಿದೊಂಭತ್ತು ಕಲ್ಲಲಿ ಶಿವನನಿಡಲೇನು
ಹಲವು ಸೂಳಿಟ್ಟಿಟ್ಟಪಕೆ ಕರ
ಮಲಸಿದೆನು ನಾನಿನ್ನು ತೋರಿಹ
ಬಲಿದ ಕಲ್ಲಿದುವೊಂದು ಸಾಕೆನುತೆತ್ತಿಕೊಂಡೊಯ್ದು ೬೭

೧ಸೆ (ಅ, ತ, ನ).

CC-0. Jangamwadi Math Collection. Digitized by eGangotri

ಶೂಲಿ ಇದ ಕೋ ಎನುತ ಹಾಯ್ಕಲು
ಮೇಲೆ ಬೀಳದ ಹಾಂಗೆ ಲಿಂಗವು
ನೀಳಕೈಗಳಿನೆತ್ತಿ ಕಲ್ಲಂ ತೊಲಗಿಸುತ ನಗುತ
ಲಾಲಿಸುತ ಮೆಚ್ಚಿದೆನು ನಿನ್ನತಿ
ಲೋಲಭಕ್ತಿಗೆ ಕೂರ್ತು ಭಕ್ತಾ
ಮೇಲಭೀಷ್ಟವನೀವೆನಾವುದು ಬೇಡು ನೀನೆನಲು ೬೮

ಧರಣಿಯೊಳು ಸಾಷ್ಟಾಂಗವೆಱಗಿ ೧ಪು
ನರಪಿ ವಂದಿಸಿ ಬಿನ್ನವಿಸಿದನು೨
ಹರಿಯಜರು ನಿಮ್ಮಾದಿಯಂತ್ಯವನಱಿಸಿ ಕಾಣದಿಹ
ಪರಮಸದ್ಗುರುಲಿಂಗಮೂರ್ತಿಯೆ
ಹಿರಿದು ಪರಿಯಲಿ ಶ್ರುತಿವಿತತಿ ವಿ
ಸ್ತರಿಸಲಱಿಯದೆ ನಡನಡಗುವತಿಶಯದ ಗುರುಮೂರ್ತಿ ೬೯

ಮೇಣಖಿಳ ಸಿದ್ಧಾಂತ ಶಾಸ್ತ್ರ ಪು
ರಾಣ ತರ್ಕಂಗಳಿಗೆ ನಿಜವಂ
ಕಾಣಿಸದೆ ಸೂಕ್ಷ್ಮದೊಳಿಸೆವುತಿಹ ಲಿಂಗಸನ್ಮೂರ್ತಿ
ಮಾಣದತ್ರಿಪ್ರಮುಖಮುನಿಪ
ಶ್ರೇಣಿಗಳ ವಾಙ್ಮನಸುಗಳಿಗೆ
ಕ್ಷೀಣಪದದಲಿ ಮೀಱಿ ತೋಱುವ ನಿರುಪಮಿತಮೂರ್ತಿ ೭೦

ಶೇಷವಾಸುಗಿ ಬಹಳನುತಬಹು
ಭಾಷಣಂಗಳನತಿಗಳೆದೆಸೆದ
ಶೇಷಮಹಿಮಾಮೂರ್ತಿ ಕಂಡೆನು ನಿಮ್ಮ ಪದಯುಗವ
ದೋಷವೊಂದದೆ ಬದುಕಿಸಿದೆ ಶುಭ
ವೇಷಿಯಾದೆನು ಸಾಲದೇ ಶಶಿ
ಭೂಷಣನೆ ಮತ್ತೊಂದಭೀಷ್ಟವನೊಲ್ಲೆನವಧರಿಸು ೭೧

೧–೨ ಯೆ । ಮರಳಿ ಪುನರಪಿ ವಂದಿಸಿದನು (ಚ).

CC-0. Jangamwadi Math Collection. Digitized by eGangotri

ಮೊಲ್ಲೆಗಳನಿಟ್ಟಂಗಜನನಿಳೆ
ಯೆಲ್ಲವಱಿಯಲು ಮುನ್ನಲುರುಹಿದೆ
ಕಲ್ಲಲಿಟ್ಟೆನ್ನನು ದಯಾರಸದೃಷ್ಟಿಯಲಿ ನೋಡಿ
ಸಲ್ಲಲಿತರತಿಯಲ್ಲಿ ನಿಮ್ಮಯ
ಮೆಲ್ಲಡಿಗಳಂ ಪೂಜಿಸುವ ಸಂ
ಫುಲ್ಲಭಕ್ತಿಯನಿತ್ತು ಪರಿಪಾಲಿಸಿದೆ ಸಾಕೆನಗೆ ೭೨

ಕ್ಷಿತಿಯೊಳಿಂತನ್ಯಾಯದಿಂದವ
ಹಿತವನಾಚರಿಸಲ್ಕೆ ಮಿಗೆ ಧೀ
ನ್ಯತೆಯನೀವುದು ಚೋದ್ಯವಲ್ಲಾ ಸ್ತುತಿಯು ನಿಂದೆಯುಮುಂ
ಹಿತವಹಿತಮುಂ ಸದೃಶವಲ್ಲಾ
ಮತಿಯೊಳನುಮತಿಸಲ್ಕೆ ಭಕ್ತಿ
ಸ್ಥಿತಿಗೆ ಕೂರ್ತಿಹೆ ಭಕ್ತಿವತ್ಸಳ ಭಕ್ತಪರತಂತ್ರ ೭೩

ಮೋಕ್ಷವಲ್ಲಭ ವಿಶ್ವರಕ್ಷಣ
ದಕ್ಷ ಕರುಣಾಮೂರ್ತಿಯಾಗಿ ಕ
ಟಾಕ್ಷಿಸಿರೆ ನಿಂದಿಸಿದ ಮಲುಹಣನೊಮ್ಮೆಯುಂ ನಿಮ್ಮ
ಲಕ್ಷಣದ ಗುಣಕೀರ್ತಿಯಿಂದವೆ
ಈ ಕ್ಷಿತಿಯೊಳಭಿವಂದ್ಯನಾಗಿಹೆ
ನುಕ್ಷವಾಹನ ಚಿತ್ತಯಿಸು ನೀವೆನ್ನ ವಿನ್ನಪವ ೭೪

ಆಗಳುಂ ನಿಮ್ಮುತ್ತಮಾಂಗದ
ಭಾಗಕೀ ಕಲ್ಲುಗಳ ಹೂಗ
ಲ್ಲಾಗಿಯೆಲ್ಲಾ ದೇಗುಲಂಗಳೊಳಿರಿಸಿ ಪೊರೆಯೆನುತ
ಆಗಮಾಹಿತಮಾರ್ಗವರ್ತನ
ರಾಗಿ ನಡೆವರನಪಹರಿಸನೇ
ಮೇಗೆ ಭಕ್ತಿಯೊಳಿಸೆದು ಸಾಂಖ್ಯಶಿವೈಕ್ಯನೆಲೊ ಜೈನ ೭೫

---

೧ ಧ (ಪ). ೨ ದೈ (ತ, ಥ, ನ).

CC-0. Jangamwadi Math Collection. Digitized by eGangotri

ಧಾರುಣಿಯೊಳಿನ್ನಹಗೆ ಕೇಳ್ ಕೋ
ಪೂರ ಬೊಮ್ಮಯ್ಯಗಳೆನಲ್ಕೆ ಪು
ರಾರಿಭಕ್ತನು ಸಜ್ಜನಂ ಬಳಿಕೊಂದು ದಿವಸದಲಿ
ಭೂರಮಣನಾಸ್ಥಾನದಲಿ ತನ
ಗಾರುಹತರೊಳು ತರ್ಕವಾಗೆ ನಿ
ವಾರಿಸಿದನಾ ಜಿನಮುನಿಗಳಂ ವಾದದಲಿ ಗೆಲಿದು ೭೬

ವಾದದಲಿ ತಲೆವಾಗಿ ಭಂಗಿತ
ರಾದ ಜೈನರು ಮತ್ತೆಯುಂ ಸಂ
ವಾದಿಸಿದರೀಯಾಲಫೊಂದಿದ್ದಿಹುದು ಕೇಳ್ಕಕ್ಕ
ಆದಡೊಂದೇ ಬಾರಿ ಈ ವಟ
ಪಾದಪವನುರುಪಲ್ಲದಡೆ ಪಡೆ
ಮೇದಿನಿಯೊಳೀ ದೃಷ್ಟವಂ ತೋಱಿದಡೆ ಸಾಕೆನಲು ೭೭

ಸುಡಲಹುದೆ ಭೂರುಹವನಿದನಾಂ
ಪಡೆವೆನೆನಲಾ ಜಿನಮುನಿಗಳು
ಗ್ಫಡಿಸಿ ನಾನಾ ಮಂತ್ರತಂತ್ರಂಗಳಲಿಯಾ ವಟವ
ಸುಡಲೊಡನೆ ಗಹಗಹಿಸಿ ನಗುತಂ
ಘುಡಿಘುಡಿಸಿ ಬೊಮ್ಮಯ್ಯನೀಗಳೆ
ಪಡೆವೆನೆನುತಂ ಮಂತ್ರತಂತ್ರಕುಯಂತ್ರಮಾಯಾರಿ ೭೮

ಉರಿದು ಕರಿಕರಿಯಾದಡಾಲದ
ಮರದ ಬೂದಿಯ ಮೇಲೆ ನಿರ್ಮಳ
ವರಭಸಿತವಂ ತಳಿಯಲಾಗಳು ಮುನ್ನಿನಂದದಲಿ
ಧರೆಯಮೇಲೊಡೆದಂಕುರಿಸಿ ಕೊನೆ
ವರಿದೊಡನೆ ಪಲ್ಲವಿಸಿ ಬೆಳೆದುದು
ಪರಸಮಯಿಗಳ್ ಕೆಾದಱಿ ಓಡಲ್ಕಾಯವಸರದಲಿ ೭೯

---

೧೬ (ಅ).

CC-0. Jangamwadi Math Collection. Digitized by eGangotri

ಆರುಹತರಂ ತಗುಳ್ದು ಮಿಗೆ ಕೋ
ವೂರ ಬಸದಿಗಳೆಲ್ಲಮಂ ಸಂ
ಹಾರಮಂ ಮಾಡಿದನಭಯಮಂ ಬೇಡಿದರಿಗಿತ್ತ
ಸಾರಭಕ್ತಿಯನಿಳೆಗೆ ಮೆಱೆದನು
ವೀರಭಕ್ತನು ಬೊಮ್ಮಿದೇವನು
ದಾರನಾತನ ಮಹಿಮೆಯಂ ನೀನಱಿಯಲಾ ಜೈನ ೮೦

ಅಂತು ಸಂಧಿ ೪೯ಕ್ಕಂ ಪದಗಳು ೨೮೩೫ಕ್ಕಂ

ಮಂಗಳಂ ಮಹಾಶ್ರೀ ಶ್ರೀ ಶ್ರೀ

CC-0. Jangamwadi Math Collection. Digitized by eGangotri

ಸಂಧಿ : ೫೦

*

ಸೂಚನೆ : ಶ್ರಾವಕರನಪಹರಿಸಿ ಸುಗ್ಗಲ
ದೇವಿಯರ ಗುರು ದಾಸಿಮಯ್ಯನು
ಶೈವನಂ ಮಾಡಿದನೊಲಿದು ದೇಸಿಂಗರಾಯನನು

ಕೇಳು ಮತ್ತೆಯುಂ ಹೊಟಲಕೆಱೆಯೊಳ
ಗೇಳುನೂರ್ಬಸದಿಗಳವೆಲ್ಲಕೆ
ಓಳಿಯಿಂದಿಪ್ಪತ್ತುಸಾವಿರ ಜಿನಮುನಿಗಳಲ್ಲಿ
ಓಲಗಿಸಲಾ ಮುನಿಗಳೆಲ್ಲಕೆ
ಮೇಲೆನಿಪ ಗುರುವೊಬ್ಬನಾ ಭೂ
ಪಾಲಕಂಗಾಚಾರ್ಯನಾಗಿ ಜಿನಪ್ರಬುದ್ಧಿಯಲಿ ೧

ಮನುಜರಂ ಬೋಧಿಸುತಿರಲ್ಕಾ
ಜನಪನಹ ದೇಸಿಂಗರಾಯನ
ವನಿತೆ ಸುಗ್ಗಲದೇವಿ ದೇವರದಾಸಿಮಯ್ಯಗಳ
ಘನದಯಾಮೃತಕರತಳೋದರ
ಜನಿತೆಯಾಗಿಯು ತನ್ನ ಸದ್ಗುರು
ವೆನಿಪ ದಾಸಯ್ಯಂಗಳಿಗೆ ತಾನೀ ಸ್ಥಿತಿಯನೆಲ್ಲ ೨

ಬಿನ್ನವಿಸಿ ಹಿತರಂ ಕಳುಹಲಾ
ಬಿನ್ನಹವನಾದರಿಸಿ ದಾಸ
ಯ್ಯಂ ನಲಿವು ಮಿಗೆ ಭಕ್ತರುಂ ತಾನಾ ಹೊಟಲಕೆಱೆಗೆ
ಉನ್ನತಿಯೊಳೆಯಿತಪ್ಪೆಡೆಯೊಳವ
[೧]ರಂ ನಿಲಿಸ[೨]ಬೇಕೆಂದು ಸೊಗಸದೆ
ಬಿನ್ನಹಂ ಮಾಡುತ್ತಮಿಹ ಜಿನಮುನಿಗಳಂ ನೋಡಿ ೩

---

* ರಾಗ : ಗೌಳ (ಅ, ಚ, ಡಾ, ಧ, ಪ); ಮಲಹರಿ (ತ, ಮ).
೧–೨ ರನ್ನಿರಿಸ (ತ).

CC-0. Jangamwadi Math Collection. Digitized by eGangotri

ಪರಿಹರಿಸುತಂ ಗಡಣಿಗೊಳ್ಳದೆ
ಬರುತಮಿರಲೊಲಿದಾ ಗುರುಶ್ರೀ
ಚರಣಕಮಳಕ್ಕೆಱಗಿ ಸುಗ್ಗಲದೇವಿ ತಾನವರ
ಪರಮಕಾರುಣ್ಯೋದಯಾಮೃತ
ಶರನಿಧಿಯೊಳೋಲಾಡುತಂ ತಂ
ದರಸಿ ಬಿಜಯಂಗೆಯ್ಸಿದಳು ಬೇಱಿ[೧]ಂದು [೧]ತಾವಿನಲಿ[೨] ೪

ಈತನಿಲ್ಲಿಗೆ ಬಂದಡೆಮ್ಮ
ಖ್ಯಾತಿಗೆಡುವುದೆನುತ್ತ ಜೈನರು
ಭೂತಳೇಶಂಗಱುಹಲಾತನು ಜಿನಸಮಯಿಯಾಗಿ
ಖಾ[೩]ತಿಗೊಳುತಿಂತೆಂದನಂಘೋ
ಜಾತನಯನೇ ಕೇಳಿದೇತಱಿ
ಮಾತು ನಿನ್ನದಿದಾವ ಬುದ್ಧಿ ವಿಚಾರಗೇಡಿಯಲಾ ೫

ಪತಿಗೆ ಸತಿಗೆಯು ಬೇಱಿ[೪]ಬೇಱಿ[೪]ಂ
ಗತಿಗಳುಂಟೇ ಯಾವ ನಾಡೊಳು
ಸತಿಗೆ ಪತಿಯೇ ಗುರುವಲಾ ಪತಿರೇವ ಗುರು ಎನಲು
ಸತಿಯೆ ನಿನಗೆಲ್ಲಿಯ ಗುರುಗಳೀ
ಗತಿಯನುಳಿದವರಂ ಕಳುಹು ಜಿನ
ಯತಿಗಳಱಿ[೪]ದಡೆ ಮೇಲೆ ವಿಪರೀತಂಗಳಪವಿನ್ನು ೬

ಪಂಕಜಾನನೆ ನಿನ್ನ [೫]ಸ್ವಾಮಿ[೫]ಗ
ಳಂ ಕಳುಹಿ ಕಳೆ ನೀನೆನಲು ಖಿತಿ
ಯಂಕುರಿಸಿ ಭುಗಿಲೆನುತ [೬]ಖಿಳ[೬]ರಪ್ಪಾರುಹತರುಗಳ
ಬಿಂಕವಂ ಮುಱಿ[೪]ವಲ್ಲಿಗಲ್ಲಾ
ಶಂಕರಪ್ರತಿಮಾನನಹಿತಭ
ಯಂಕರಂ ಬಿಜಯಂಗೆಯಿದನಿಂದೆಮ್ಮ ಸದ್ಗುರುವು ೭

೧–೨ತಾಣದೊಳು (ತ, ನ). ೩ಖ್ಯಾ (ತ, ನ, ಪ). ೪–೪ಸಮಯಿ (ಕ, ಥ)
೫–೫ಬಲ (ಮ).

CC-0. Jangamwadi Math Collection. Digitized by eGangotri

ಪತಿಗೆ ಸತಿಗೆಯು ಮುಂದೆಯೊಂದೇ
ಗತಿಯಹುದು ಗಡ ಮತ್ತೆ ಬೇಱೀಂ
ಗತಿಗಳುಂಟೇ ಗುರುಶಿಶುಗಳಿಗೆ ಪರಿಣಯದೊಳಿನಗೆ
ಮತಿಯೊಲಿದು ನೀನಿತ್ತ ಸೂನೃತ
ಯುತವಚನಮಂ ಮಱಿಯಲಹುದೇ
ಕ್ಷಿತಿಪ ನಿನ್ನೊಳು ನೆನೆದುಕೊಳ್ಳಾ ಪಲಪ್ರಸುರಲೇನು ೬

ಮಾಡಿಕೋ ಮತ್ತೊಬ್ಬ ಸತಿಯಂ
ಕೂಡದೆನ್ನಂ ಬಿಟ್ಟುಕಳೆ ಶಶಿ
ಚೂಡನಲ್ಲದತಃಪರವನಾನಱಿಯೆನಲ್ಲದಡೆ
ನಾಡ ಮಾತುಗಳೇಕೆ ಜಗದೊಳು
ಪಾಡೆ ಎನ್ನೊಡೆಯರಿಗೆ ಜೈನರ
ನಾಡಿಸಾಗಮತರ್ಕಶಾಸ್ತ್ರಪುರಾಣವಾದದಲಿ ೯

ಎಂದು ಸುಗ್ಗಲದೇವಿ ನುಡಿಯಲು
ಮಂದಬುದ್ಧಿಗಳಾದ ಜಿನಕುಲ
ವೃಂದಮಂ ಕರೆಸಿದಡವರು ಭೂಪಾಲಕನ ಸಭೆಗೆ
ಬಂದ ಜೈನರ ಬಲದೊಳುದ್ದಿ[೧]ಹ
ದೊಂದು ಮಣಿಮಯಸಿಂಹಪೀಠದೊ
ಳಿಂದುಮುಖಿ ಕುಳ್ಳಿರಿಸಿ ಸದ್ಗುರು ದಾಸಿಮಯ್ಯಗಳ ೧೦

ಚರಣಸರಸಿಜಯುಗವನೀಕ್ಷಿಸು
ತರಸಿ ಓಲೈಸುತ್ತಮಿರಲಾ
ಆರುಹಮುನಿಗಳು ಮಂತ್ರತಂತ್ರಕುಯಂತ್ರವಿದ್ಯೆಗಳ
ವಿರಚಿಸುತ್ತ ಮಹೇಂದ್ರಜಾಲಾ
ಪರಿಮಿತಾದ್ವಯ ಶೂನ್ಯಮಾಯಾ
ಕರಣವಿದ್ವಿಷಜೈನವೃತ್ತಿಯೊಳಿಂತು [೨]ತರ್ಕಿಸಲು ೧೧

---

೧ ದ್ಧ (ಕ). ೨–೩ ವರ್ತಿ (ತ, ಸ, ಮ).

CC-0. Jangamwadi Math Collection. Digitized by eGangotri

ವೇದ ವೇದಾಂತಾದಿ ಸಿದ್ಧಾಂ
ತಾದಿ ತರ್ಕವಿವಾದದಿಂ ಸಂ
ವಾದಿಸುತ್ತಾ ನ್ಯಾಯ ವೈಶೇಷಿಕಮುಖಾನೇಕ
ವಾದವಾಗ್ದೃಷ್ಟಾದಿ [೧]ವಿಧಿ[೨]ಯು
ಕ್ತಾದಿಗಳಿನೊಡಬಡಿಸುತಂ ಮೇ
ಲಾದ ವಸ್ತು ಸಮಸ್ತಕಧಿಕಂ ರಾಮನಾಥನಲಾ ೧೨

ವಿಶ್ವಕರ್ತನು ರಾಮನಾಥನು
ವಿಶ್ವಭರ್ತನು ರಾಮನಾಥನು
ವಿಶ್ವಹರ್ತನು ರಾಮನಾಥನು ವಿಶ್ವಸುರರೊಳಗೆ
ವಿಶ್ವಗುರುವುಂ ರಾಮನಾಥನು
ವಿಶ್ವಮಯನುಂ ರಾಮನಾಥನು
ವಿಶ್ವಧಾತಂ ರಾಮನಾಥನು ಮತ್ತೆ ಪರವಿಲ್ಲ ೧೩

ಉತ್ತಮ ಶ್ರುತಿ ಏಕ ಏವ ಎ
ನುತ್ತ ರುದ್ರೋ ನ ದ್ವಿತೀಯ ಎ
ನುತ್ತಮಿರಲಂತಾಗಿಯೊರ್ಬನೆ ರಾಮನಾಥನಲಾ
ಮತ್ತೆ ತತ್ಪಂ ಲಿಂಗಮಧ್ಯೆ ಎ
ನುತ್ತಿರೆ ಜಗತ್‌ಸರ್ವವೆಂದೊರೆ
ವುತ್ತಮಿದೆಯಾ ಲಿಂಗಬಾಹ್ಯಾತ್ಪರವು ನಾಸ್ತಿಯೆನೆ ೧೪

ಎಲ್ಲವುಂ ಶಿವಮಯವಿದಕೆ ಮೇ
ಲುಳ್ಳಡಂ ತರ್ಕಿಪುದು ನೀವೆನ
ಲಿಲ್ಲರಂ[೩] ಶಿವನೆಂದು ನುಡಿದಪೆ ತರ್ಕವಿನ್ನೆಮಗೆ
ಎಲ್ಲಿಯದು ಸಚರಾಚರಂಗಳು
ಬಲ್ಲ ದೇಗುಲಕೆಯ್ದಿ ಹೊಡವಡ
ಲಿಲ್ಲಲಾ ಎಲ್ಲಿಡೆಯೊಳುಂ ಶಿವನಿದ್ದಹನು ಮತ್ತೆ ೧೫

೧–೨ ಸಂ (ತ, ನ). ೩ ರುಂ (ಆ, ಧ, ಪ, ಬ, ಮ); ವುಂ (ಕ, ತ, ಥ, ನ).

CC-0. Jangamwadi Math Collection. Digitized by eGangotri

ಭಾವಜಾರಿ ಚರಾಚರಾಧಿಕ
ಜೀವಿಗಳಿಗೇನಂಗವೋ ತಾಂ
ಜೀವನೋ ಮೇಣಾತ್ಮನೋ ಹೇಳಿಂತು ನೀವೆನಲು
ಶ್ರಾವಕರಿರಾ ಆದಿ ಪ್ರಶ್ನೆಗೆ
ನೀವು ಕೇಳಿನ್ನುತ್ತರವನೆನು
ತಾ ವಿಮಳಮತಿ ದಾಸಿಮಯ್ಯನು ಮತ್ತೆ ಇಂತೆಂದ ೧೬

ಈ ಮಹಾರಾಷ್ಟ್ರಕ್ಕೆ ತಾನೀ
ಭೂಮಿವಲ್ಲಭನಲ್ಲದೇ ಮ
ತ್ತೀ ಮಹಿಯೊಳಗೆ ಹೇಳಲಿಲ್ಲೆಂದೆಂಬ ಬುದ್ಧಿಯದು
ತಾಮಸಮತಿ ಪಿಪೀಲಿಕಾದಿ
ಸ್ತೋಮಮಪ್ಪ ಕಿರಾತರುಗಳುಮ
ನಾಮಿಕರುಮವನೀಶನೆಂಬುದಬದ್ಧವೋ ನಿಜವೋ ೧೭

ಸರ್ವಪತಿಯಿ ಸುಶಿಗುಣಚರಿತ್ರಾ
ಪೂರ್ವವೃತ್ತಿಯನಶ್ವರಂ ತತ್
ಸರ್ವಮಯವದು ಪರಿಕಿಪಡೆ ಸಂಕೀರ್ಣಪದವಲ್ಲ
ನಿರ್ವಿಭವವಂಶಿತಲ್ಲ ಕೇಳಿರೆ
ಪಾರ್ವತೀಶಾದ್ವೈತವೆಂಬುದ
ದೊರ್ವನಖಿಳಾದ್ವೈತವದು ತಾನಂತುಮಲ್ಲದೆಯು ೧೮

ದೇಗುಲಕೆ ನಿಮಗಿನ್ನು ನಿಚ್ಚಂ
ಹೋಗಿ ಹೊಡವಡಲೇತಕೆಂಬ ನಿ
ರಾಗಮಪ್ರಶ್ನೆಗೆ ಕೊಡುವೆನುತ್ತರವನೆಂತೆನಲು
ಹೇಗರಿರ ಕೇಳಿಂತಖಿಳದೊಳ
ಗಾಗಿ ಬೆಳಗುವ ಚಂದ್ರದೀಪ್ತಿಯ
ಭಾಗದೊಳಖಿಳ ಶಿಲೆಗಳಿರುತಿರೆ ಚಂದ್ರಕಾಂತವದು ೧೯

---

೧ ಯು (ಸ). ೨ ಸ (ಕ, ನ, ಮ). ೩ ದಂ (ತ, ನ).

CC-0. Jangamwadi Math Collection. Digitized by eGangotri

ಕರಗುಗೆರಡಱಿ ಸಾದ[೧]ರುಸ್ಯದಿ
ಕರಗುವುದೆ ಮಿಕ್ಕಿನ ಶಿಲೆಗಳಂ
ತಿರದೆ ಶಿಲೆಗಳ ಮೇಲೆ ಚಂದ್ರಿಕೆಯಿದ್ದು ಫಲವೇನು
ಎರವಲಾ ತಾಂ ಪ್ರಾಣಪದವೀ
ಪರಿಯೆ ಚಂದ್ರಿಕೆ ಚಂದ್ರಕಾಂತಕೆ
ಧರಣಿಯೊಳಗಾ ಚಂದ್ರಕಾಂತವು ಚಂದ್ರಿಕೆಗೆ ಸಹಜ ೨೦

ಸಕಳಗುರುವಪ್ಪಾದಿ ಶಿವನೊಳು
ಸಕಳವಿರೆ ಶರಣನ ಹೃದಯದು
ತ್ಸುಕಕೆ ಕರಗುವುದೆರಡಕಂ ಸಮಕಳೆಯದುಂಟಾಗಿ
ಪ್ರಕಟವಿದು ಮಿಕ್ಕಿನ ನರರ ವೈ
ಶಿಕದ ಚಿತ್ತಂಗಳು ಕರಗುವವೆ
ಸಕಲಮುಂ ಲಿಂಗದೊಳಗಿದ್ದಪುದಿದ್ದು ಫಲವೇನು ೨೧

ಪರಮ ಶರಣನಿಮಿತ್ತವೇ ಶಂ
ಕರನ ಲೀಲೆಯು ಶರಣನುದಯಂ
ಪರಿಕಿಪಡೆ ಶಂಕರನಿಮಿತ್ತವೆ ಮತ್ತೆಯುಂ ಕೇಳೀ
ಧರೆಯೊಳೊಕ್ಕಲಿಗಂ ಪಶುವನಾ
ಧರಿಸಿ ನೆನೆವಂ ತನ್ನದೆಂದೇ
ಸ್ಮರಿಸಿ ಪಶುಗಂ ಪ್ರಾಣಪದವಾಗಿಪ್ಪುದಾ ಕರುವು ೨೨

ಬಾಳುವನು ಗೌಡನುವೆ[೨]ರಡಱಿನು
ಕೂಲದೊಳೆ ಪಶುವಿಂತು ಕರುವಿನ
ಮೇಲೆ ಮೋಹಿಸುವಂತೆ ಗೌಡನನಱಿವುದೇ ಮೋಹ
ಲೋಲ ಮನದೊಳು ಲಿಂಗಭಕ್ತಸ
ಮೇಳದೆರಡಱಿ ಸನ್ಮಥನದಿಂ
ಬಾಳಿನಿರವುಂ ಪ್ರಾಣಪದವಾಗಿಪ್ಪುದದಱಿಲ್ಲಿ ೨೩

---

೧ ಮ (ನ, ಸ). ೨ ಮೆ (ಧ, ಸ).

CC-0. Jangamwadi Math Collection. Digitized by eGangotri

ಧರೆಯೊಳೆಲ್ಲಂ ಸ್ವಾತಿವರುಷಂ
ಸುರಿಯಲೆಂತಪ ಪನಿಗಳಿಗೆ ಏ
ಪರಿಯೊಳಂ ಕಱಿಗೊಳ್ಳದಂತಾಗಿದಱಿ ಪರಿ ಬೇಱಿ
ನಿರತವದಱಿಂ ಪ್ರಾಣಪದವಾ
ದಿರವಿಗಲ್ಲದೆ ಬಾಯಿದೆಱಿಯದು
ಕರಮೆಸೆವ ಸಿಂಪೊಂದು ನೆನೆವುತಮಿಹುದು ಮಳೆಗಳಿಗೆ ೨೪

ಇಂತುಭಯಸಂಗದಿ ಜನಿಸುವುದು
ಕಾಂತಿರಂಜಿಪ ವಾಕ್ತಿಕವದೆಂ
ತಂತೆ ಶಿವಶರಣರ ನಿಲವುಮುಂ ಚೆಲುವವಂತಾಗಿ
ಮುಂತೆ ಶಿವಶರಣರ ನಿಜಸ್ನೇ
ಹಾಂತರವನಱಿಯಲಿಕಶಕ್ಯವು
ಭ್ರಾಂತುಗಳಿರಾ ಶಿವಮಥನಸುಖವಿವೇಕಹುದು ನಿಮಗೆ ೨೫

ಆಂಗವೋ ಜೀವನೊ ತದಾತ್ಮನೊ
ಹಿಂಗಿಸೆಂಬಾ ಪ್ರಶ್ನೆಗುತ್ತರ
ವಂಗವಲ್ಲ ಶಿವಂ ನುಡಿಯದಿರಿ ಕೇಳಿದೆಂತೆನಲು
ಆಂಗವೆಂಬುದು ಪೂರ್ವಕರ್ಮಾ
ಸಂಗಶೇಷವು ಪುಣ್ಯಪಾಪೋ
ತ್ತುಂಗನಿಳಯಂ ಸುಕೃತದುಃಕೃತಗತಿಗಳಾಶ್ರಯವು ೨೬

ಜೀವನಂ ಶಿವನೆಂಬಿರಾದಡೆ
ಜೀವನತಿ ಮಲಿನಂ ಶಿವಂ ಪರಿ
ಭಾವಿಸುವಡತಿ ನಿರ್ಮಳಂ ದುಃಕರ್ಮಿ ಜೀವನಪೆ
ದೇವನತಿ ನಿಃಕರ್ಮಿಯಪ್ಪನು
ಜೀವನುಂ ಪಶು ಶಿವನೆ ತತ್ಪತಿ
ಜೀವನುಂ ಸಕಳನು ಶಿವನು ನಿಷ್ಕಳನು ತತ್ತ್ವವಿದು ೨೭

೧ತ (ಸ). ೨ವಂ (ತ); ನಂ (ನ); ವಾ (ಥ).

CC-0. Jangamwadi Math Collection. Digitized by eGangotri

ಮುಕ್ತನಪ್ಪನು ಜೀವನುಂ ನಿರ್
ಮುಕ್ತನಪ್ಪನು ಶಿವನು ತತ್‌ಶ್ರುತಿ
ಯುಕ್ತಿಯಲಿ ಜೀವಂ ಸಭವನೀ ಶಿವನಭವನಹನು
ವ್ಯಕ್ತವಧ್ರುವನಹನು ಜೀವನು
ಸೂಕ್ತಿಯಲಿ ಧ್ರುವನಹನು ಶಿವನು
ದ್ಯುಕ್ತದಿಂ ಸಂಸಾರಿ ಜೀವನು ಶಿವನಸಂಸಾರಿ ೨೮

ಜೀವನುಂ ಮೃತದುಃಖಿ ಅಮೃತಂ
ದೇವನಾ ಜೀವನುಮಶುದ್ಧನು
ದೇವನತಿಶುದ್ಧನು ಬಳಿಕ ಸಂದೇಹಿ ತಜ್ಞೀವ
ದೇವ ನಿಸ್ಸಂದೇಹಿಯಾಗಿಹ
ನಾವಗಂ ತಾನಿದುನಿಮಿತ್ತಂ
ಜೀವನುಂ ಶಿವನಲ್ಲ ಕೇಳಿರೆ ಮತ್ತೆಯುತ್ತರವ ೨೯

ಆತ್ಮನೆಂಬುದು ಯೋಚಿಸಲು ಪರ
ಮಾತ್ಮನೆಂದೆನಬಾರದೆಂತೆನೆ
ಆತ್ಮವದು ತಾ ಪಂಚಭೂತಾತ್ಮಕವದೆಂದೆನಿಸಿ
ಆತ್ಮವದು ಪಂಚೇಂದ್ರಿಯಾತ್ಮಕ
ಆತ್ಮವಂ ಗುರುಜ್ಞಾತ್ಮಕಂ ಮೇ
ಜ್ಞಾತ್ಮನೋ ಶಿವನಲ್ಲ ಹೋಗಲಿ ಸಲ್ಲದೀ ಮಾತು ೩೦

ಅಪರಿಮಿತಸೂಕ್ಷ್ಮದೊಳಖಿಳಮಂ
ಕಪಟನಾಟಕಸೂತ್ರವಿದ್ಯಾ
ನಿಪುಣದಿಂ ಪ್ರಕಟಿಸುವ ತತ್‌ಚೈತನ್ಯಭಾವಿ ಶಿವಂ
[೧]ವಿಪುಳಸಚರಾಚರದೊಳಗನಂ
ತ ಪರಿಯೊಳ್ ತೆಱಹಿಲ್ಲದೇ ಪರ
ಮಪರನೊಪ್ಪಿ ಅಣೋರಣೀಯಾನೆಂಬ ಭಾವದಲಿ ೩೧

೧–೨ ವಿಮ (ಮ); ವಪು (ಕ).

CC-0. Jangamwadi Math Collection. Digitized by eGangotri

ತಿಲದೊಳಿಹ ತೈಲದವೊಲಿಂಧನ
ದೊಳಿಹ ಪಾವಕನಂತೆ ಕನ್ನಡಿ
ಯೊಳಿಹ ನೆಳಲವೊಲಕ್ಷಿಯೊಳಗಿಹ ರೂಪಿನಂದದಲಿ
ಶಿಲೆಯೊಳಿಹ ಕಾಂಚನದವೊಲು ಪಾ
ಲೊಳಿಹ ತುಪ್ಪದ ತೆಱದಿ ಜಲಘಟ
ದೊಳಿಹ ಚಂದ್ರಮನಂತೆ ೧ಬೀಜದೊಳಿಹ ತರುವಿನಂತೆ ೩೨

ಉಲಿವ ಶಬ್ದಂಗಳೊಳಗರ್ಥದ
ವೊಲು ಮಣಿಗಳೊಳಗಿಪ್ಪ ದಾರದ
ವೊಲು ಘಟಪಟಾದಿಗಳೊಳಿಪ್ಪಾಕಾಶದಂದದಲಿ
ಥಳಥಳಿಪ ೩ಪಟಿಕದ೪ ಶಿಲೆಯೊಳಿಹ
ವಿಳಸಿತಪ್ರತಿಬಿಂಬದಂತೆಯ
ಜಳಕುಲದೊಳಿಹ ತತ್‌ಪ್ರತಿಧ್ವನಿಗಳವೊಲಖಿಳದೊಳು ೩೩

ಮುಳ್ಳಿಱಿಯಲಿನಿತಾದಡಂ ತೆಱಿ
ಹಿಲ್ಲದೇ ಸಂಕೀರ್ಣಪದದಿಂ
ದೆಲ್ಲೆಡೆಯೊಳುಂ ತಾನೆಯಾಗಿದ್ದಹನಲಾ ವಿಶ್ವ
ವಲ್ಲಭಂ ಸಕಳಾಗಮಸ್ತುತಿ
ದುರ್ಲಭಂ ಸುರವಲ್ಲಭನುಮಾ
ವಲ್ಲಭಂ ಗುರು ರಾಮನಾಥನು ಸರ್ವಗತನೆನಲು ೩೪

ಸವಣರಿಂತೆಂದರು ಸಕಳದೊಳು
ಶಿವನೊಳುಳ್ಳ ವಿಶೇಷವಾವುದು
ಶಿವನು ನಿತ್ಯನು ಗಡ ಬಳಿಕ್ಕ ಅನಿತ್ಯವಿವು ಕಂಡಾ
ಶಿವನು ನಿತ್ಯ೫ನುವಲ್ಲಿ೬ ಇಲ್ಲಾ
ಶಿವನು ಶಿವನುಂ ದೈವವಂತೇ
ಇವು ಅದೈವಂಗಳೊ ಶಿವನದೈವವೊ ಶಿವನು ಮತ್ತೆ ೩೫

೧–೨ ಬಿತ್ತಿನೊ (ತ. ನ). ೩–೪ ಪಳುಕಿನ (ತ. ನ). ೫–೬ ನೊ ಆಲ್ಲಿ (ಥ. ಧ. ಅ).

CC-0. Jangamwadi Math Collection. Digitized by eGangotri

ಆವಱಿಂಗಿಲ್ಲಾ ಶಿವನು ಪಶುಪತಿ
ಇವು ಪಶುಗಳೋ ಶಿವನು ಪಶುವೋ
ಶಿವನುವಲ್ಲಿಲ್ಲಾ ಇವಱಿಂಗಿಂತೊಬ್ಬನಾದಡೆಯು
ಶಿವನ ಗುಣಮಂ ಹೊಂದವೇಡಾ
ಆವಱಿಂಗಿನಲನ್ಯಾಯವಾದದ
ಶ್ರವಣರುಗಳಂ ನೋಡಿ ಜೇಡರ ದಾಸಿಯಿಂತೆಂದ ೩೬

ನಲ್ಲತೈಲದೊಳಡ್ಗಿರ್ವ ಸೊಡರಾ
ಎಳ್ಳಿನಿಂದಲರುವುದೆ ಹೇಳಿರೆ
ಎಳ್ಳೊಳಿಣ್ಣೆಯ ಗುಣವದುಂಟೇ ಎಳ್ಳಿನೊಳಗೆಣ್ಣೆ
ಇಲ್ಲವೇ ನೋಡಿದಡೆ ಗೌರೀ
ವಲ್ಲಭನ ಗುಣವೇಕೆ ಹೊಂದುವು
ದೆಲ್ಲಿಡೆಯೊಳುಂ ಶಿವನು ತಾನೇನೆಲ್ಲಿಡೆಯೊಳಿಲ್ಲ ೩೭

ಎಳ್ಳಿನಲಿ ತಾಂ ತೈಲವಿಲ್ಲಾ
ಎಳ್ಳು ತೈಲದೊಳುಂಟೆ ಸರ್ಬರೊ
ಳಿಲ್ಲವೇ ಸರ್ವಜ್ಞನುಂ ಸರ್ವಜ್ಞನಿದ್ದಹನೆ
ಎಲ್ಲೆಡೆಯೊಳುಂ[೧] ಕಾರಣಂಗಳಿ
ಗೆಲ್ಲವುಂ ತಾನಿಹಗೆ ನೋಡಿರೆ
ಇಲ್ಲದಿದ್ದುಂಟಾದ ಪರಿಯಂ ಸಲ್ಲಲಿತವಾಗಿ ೩೮

ಸಲೆ ಮಥನಪಕ್ಷಕ್ರಿಯಾಸಂ
ಕಲನಮಾನಂಗಳೊಳು ಪ್ರತಿತ
ಸ್ಥಳಮದಾಗಲು ಮೇಲೆ ಇದು ಸನ್ಮಾರ್ಗವಲ್ಲೆನುತ
ಒಲಿದು ಶಿವನುಂಟೆಂದಡಂ ನಿ
ರ್ಮಳಸುಮತಿಗುಂಟಾಗಿ ತೋರ್ಪನು
ಮಲಿನಮತಿ ಬೇಕೆಂದಡಂ ತಾನಿಲ್ಲದಿಹನಭವ ೩೯

---

೧ ಲ (ಥ). ೨–೩ ನೊಳಗಿಂತು, ಎಲ್ಲಮಿಲ್ಲವು (ತ. ನ).

CC-0. Jangamwadi Math Collection. Digitized by eGangotri

ಈ ಪರಿಯೊಳಿಹನಭವನಖಿಳ
ವ್ಯಾಪಕಂ ತಾನಾಗಿಯಿದು ನಾ
ನಾ ಪುರಾಣಾಗಮನಿಗಮಸರ್ವಪ್ರಮಾಣದಲಿ
ರೂಪಿಸಲು ಸಂಸಿ[೧]ದ್ಧವೆಂ[೨]ಬಾ
ಲಾಪಮಂ ಕೇಳ್ದಾರುಹತರಪ
ಲಾಪಿಸುತ್ತಂ ಮತ್ತೆಯೆಂದರು ನೆ[೩]ನೆದು[೪] ಕಪಟವನು ೪೨

ಹಲವನಱಿದಿಂತೊರೆದುದಕೆ ಕರ
ಚಿಲುವನಾಯಿತ್ತೆಲ್ಲಪಂ ತಾ
ನಳಿಕಲೋಚನನಾದಡಂ[೫] ಮಲಮೂತ್ರವಂ ಬಿಡುವ
ನೆಲನದುಂಟೇ ಮೆಟ್ಟಲಹುದೇ
ಇಳೆಯನುಸುರೆಂದೆನಲು ನಸುನಗೆ
ಮೊಳೆಯೆ ಜೈನರನೆಲ್ಲರಂ ನೆಱಿ[೬] ಖಿಳರಂ ಮಾಡಿ ೪೩

ದಾಡೆ ಬಂಧನವಾಗಿ ಜೈನರ
ಕೂಡೆ ದೇ[೭]ವರದಾಸಿಯೆಂದನು
ನಾಡೊಳಱಿಯಿರೆ ನಿಮಗೆ ಹೊಸತೇ ನೀವಱಿವ ಕಾರ್ಯ
ಱೂಢಿಸುವ ಶಿವನಿಲ್ಲವೆನುತಿಹ
ಪೀಡೆಗಳ ತಲೆಗಳನೆ ಮೆಟ್ಟಿಡೆ
ಯಾಡುವವು ನಾವಾಗಳುಂ ನೀವೆಲ್ಲರುಂ [೮]ಕೇಳಿ[೯] ೪೪

ಶಿವನನಿಲ್ಲೆಂದೆಂಬಧಮ ಮಾ
ನವರ ಬಾಯಿಗಳಿಮ್ಮ ಮಱಿವಡ
ವನಿಯಲಿ [೯]ಹೇಸದಿರಿ[೧೦] ಹುಸಿಯಂ ನುಡಿಯಲಾನಱಿಯೆ
ವಿವರವಿದಕಿನ್ನೇನನಾದಡೆ
ತವಕಿ[೧೧]ಸದೆ[೧೨] ಕೇಳಿದಡಿಹಗೆ ಪೇ
ಳುವೆನೆರಡು ಠಾವುಳಿಯಲೀಶ್ವರನಿಲ್ಲದೆಡೆಯುಂಟೆ ೪೫

೧–೨ ದ್ಧಿಯೆಂ (ಮ). ೩–೪ ರೆದ (ಅ). ೫ ಡೇಂ (ಮ). ೬ ಜೇ (ಥ). ೭–೮ಕೂಡಿ (ಡಾ). ೯–೧೦ ಪಿಸುರದಿರಿ (ಅ). ೧೧–೧೨ ಪಡೆ (ಥ).

CC-0. Jangamwadi Math Collection. Digitized by eGangotri

ಸಕಳಮುಂ ತಾನಾಗಿರುತ್ತವೆ
ಸಕಳಮಂ ಹೊಂದಿರದ ನಿರ್ಗುಣಿ
ಸಕಳಮಂ ಪುಟ್ಟಿಸಿ ಸಕಳದೊಳು ಪುಟ್ಟದಿರ್ದಭವ
ಸಕಳಮಂ ಕೌತುಕದಿ ನಡೆಸುತ
ಸಕಳದೊಳು ನಡೆಯದ ಸುಜಾಣನು
ಸಕಳವಳಿಯಲು ಸಕಳದೊಳು ತಾನಳಿಯದಿಹ ನಿತ್ಯ ೪೪

ಸಕಳಮಂ ತನ್ನೊಳಗಿರಿಸಿ ಮೇಣ್
ಸಕಳಮಂ ತೊಡೆದೆಸೆವ ನಿಜಗಲಿ
ಸಕಳಮಂ ತನ್ನಾಜ್ಞೆಯಿಂ ಪ್ರಕಟಿಸುವ [೧]ಸರ್ವಜ್ಞ[೨]
ಸಕಳಮಂ ಹುರಿಗೊಳಿಸಿ ಲೀಲಾ
ಸುಕರದಿಚ್ಛಾಮಾತ್ರದಿಂದಂ
ವಿಕೃತಿಗಳನೆಯ್ದಿಸುವ ಮಹಿತ ಮಹಾಮಹಿಮನೀತ[೩] ೪೫

ನಿರತವುಂಟಾಗಿಂತಖಿಳದೊಳು
ಬೆರಸದವನುಂಟೆಂಬವರಿಗೋ
ಸರಿಸದುಂಟಾಗಿಪ್ಪವಂ ನೆನಹುಗಳನತಿಗಳೆದ[೪]
ಪರಮತತ್ವದಮಂ ನೆನೆವವ
ರ್ಗಿರದೆ ತನ್ನಂ ಕೊಡುವವಂ ವಿ
ಸ್ತರಿಸಲಳವಿಲ್ಲದವನಳವಟ್ಟಿದವನನಗಲದವ ೪೬

ಒಲಿಸಬಾರದ ಗಾಡಿಗಂ ತಾ
ನೊಲಿದವನನೊಂದಿಪ್ಪವಂ ಬಗೆ
ಗಳಿಗೆ ಗಮಿಸಲು ಬಾರದಂತಾ ನಿರ್ಗಮನದವನು
ನೆಲೆಗೆ ನೆಲೆಯಾಗಿಪ್ಪವಂ ಸಟೆ
ಗಳಿಗೆ ಸಟೆಯಂ ತೋಱುವಂ ದಿಟ
ವಲರಿಸುವವನ ಮನದ ಕೊನೆಯಲಿ ಹೊಳೆವುತಿಪ್ಪವನು ೪೭

೧–೨ ಸುಜ್ಞಾನಿ (ಕ). ೩ ಶ (ಥ). ೪ ವ (ಮ).

CC-0. Jangamwadi Math Collection. Digitized by eGangotri

ಹಿಡಿಯಬಂದಡೆ ತಪ್ಪಿಸುವವಂ
ಹಿಡಿದಡಂ ಮೇಣ್ ಬಟ್ಟಬಯಲಾ
ಗೆಡೆವಿಡದವಂ [೧]ಸ್ತುತಿಗೆ[೨] ಮೀಱಿದ ತುದಿಯ ಪದದವನು
ನುಡಿಗಳಂ ಮಿಕ್ಕವ ನುಡಿದ[೩]ವಂ
ನುಡಿದ ಹಂಗಿದ್ದಡೆ ಬಿಡದವಂ
ತೊಡಕಲಱಿಯದವಂ ತೊಡಕಿದವನಂ ತೊಡಕು[೪]ವವನು ೪೮

ದೃಷ್ಟಿಗಳಿಗೆಯ್ದಿ ಸದವಂ ನಿಜ
ದೃಷ್ಟಿಪೂರ್ವಕಮಾಗಿ ನೋಡಲು
ದೃಷ್ಟವಾದವನಱಿಹಿದಪೆನೆಂದವರನಱಿಸುವವ
ಸೃಷ್ಟಿಸುವ ರಕ್ಷಿಸುವ ಕೆಡಿಸುವ
ತಪ್ಪಿಯಿಲ್ಲದವಂ ಸವಿಗಳಿಂ
ದೃಷ್ಟವಾಗದವಂ ಸವಿಗಳಂ ಬಿಟ್ಟಡೊಲಿವವನು ೪೯

ವಾಸನೆಗಳಂ ಮಿಕ್ಕವಂ ಮಿಗೆ
ವಾಸನೆಗಳಿಂ ವರ್ತಿಸುವವಂ
ಲೇಸು ಹೊಲ್ಲೆಹವೆಂಬೆರಡುಮಂ ನಾಸ್ತಿಯಾದವನು
ಆಸೆಯಿಲ್ಲದ ಭಕ್ತಚಿತ್ತಾ
ವಾಸನಾಗಿದ್ದವನ ಭಕ್ತರಿ
ಗೋಸರಿಸುವವನಾದಿಗಾದಿಗನಾದಿಯಾದವನು ೫೦

ಈ ಪ್ರಕಾರದೊಳಿರ್ದು ವರ್ತಿಸು
ವಪ್ರತಿಮನಹ ಶಿವಮಹಿಮೆಯಂ
ಕುಪ್ರಬೋಧಾತ್ಮರಿರ ಕೇಳಲು ಪ್ರಾಪ್ತಿಯೇ ನಿಮಗೆ
ಅಪ್ರತರ್ಕ್ಯನು ರಾಮನಾಥನು
ಸುಪ್ರಸನ್ನನು ಸರ್ವನಾಗಿಹು
ದಪ್ರಸಿದ್ಧದ ನುಡಿಗಳಿಂದೆನವೇಡ ತತ್ತ್ವವಿದು ೫೧

೧–೨ನುಡಿಗೆ (ತ, ನ). ೩ಯ (ಥ, ಸ). ೪ಸು (ಮು, ಆ).

CC-0. Jangamwadi Math Collection. Digitized by eGangotri

ಈಗ ದೃಷ್ಟಪ್ರತ್ಯಯಂಗಳ
ನಾಗಮೋಕ್ತದಿ ತೋಱುವೆಂ ತಲೆ
ವಾಗಿಸುವೆನಿನಿಬರನು ಬೆಸಗೊಳಲಾಪಡಂ ಕೇಳಿ
ಹೇಗರಿರ ಈ ಹೊಟಲಕೆಱಿಯಲಿ
ಸಾಗಿಸುವ ಬಸದಿಗಳನೆಲ್ಲವ
ಬೇಗದಿಂ ಹಿರಿಹಿರಿದು ಕೆಡೆಹಾಯ್ಕಿಸುವೆ ನಾನೆನಲು ೫೨

ತರಟುದಲೆಗಳ ತಟ್ಟರೋಮದ
ನೊರೆ ಸುರಿವ ಬಾಯ್ಕಿನಿ ಪಡಿಕೆಗಳೊ
ಕರದ ಕಸಿಕಿಲಕಾಕರೋ ಬಸದಿಗಳೊಳೂಳಿಡುವ
ನರಿಗಳೋ ಬತ್ತಲೆಯ ಭಂಡರೊ
ಮರುಳುಗಳೊ ತಟ್ಟುಗಳ ಹಗರಣಿ
ಗರೊ ಎನಲು ಮಲಧಾರಿಗಳು ಗಜಬಜಿಸಿ ನೆರೆವುತ್ತ ೫೩

ಮಿಂಚುದಲೆಗಳ ಖಿಂಡಿವಲ್ಗಳ
ಸಂಚದವದಿರ ಕುಟಿಲಕುಹಕದ
ಕುಂಚಿತರ ಹೆದ್ದಿನಿಗಳಾ ಡೊಳ್ಳುಗಳ ಹೇರೊಡಲ
ಪಂಚಕರ ನಿಜ ವೇದಬಾಹಿರ
ಹಂಚುಗಳ ಸನ್ಮಾರ್ಗವಿಲ್ಲದ
ಪಂಚಮಹಪಾತಕರ ಜೈನರ ಹಿಂಡು ನೆರೆದಾಗ ೫೪

ಬೌದ್ಧರಿರ ಕೇಳ್ ನಿಮ್ಮ ಬೌದ್ಧವ
ಬದ್ಧಚರಿತಂ ಸಕಳವೇದವಿ
ರುದ್ಧಮಾರ್ಗಂ ನಿಮ್ಮ ಶಾಸ್ತ್ರಮತಂಗಳತಿ ಪಾಪ
ಬದ್ಧವಾದಿಯೊಳಿಲ್ಲದಂತರ
ಬುದ್ಧನಧಮನು ನಿಮ್ಮ ದೈವವ
ಶುದ್ಧಮಂತ್ರಕುಯಂತ್ರಕುಟಿಲಾರಾಧನೆಗಳಿನಲು ೫೫

---

೧ ಹೇ (ಆ, ಮ). ೨ ಬ (ಪ).

CC-0. Jangamwadi Math Collection. Digitized by eGangotri

ಆವ ಮಾರ್ಗದೊಳಾದಡಾತನ
ನಾವು ಕೆಡಿಸಿದಡಲ್ಲದಾಗದು
ಭಾವಿಸಲು ದೃಷ್ಟಾಂತಮೀಗಳೆ ದೃಷ್ಟವಹುದೆನಲು
ಶ್ರಾವಕರು ತಮ್ಮೊಳು ವಿಚಾರಿಸಿ
ಪಾವಕಜ್ವಾಲಾಪ್ರಭಾವದ
ಹಾವನೊಂದಂ ತರಿಸಿ ಘಟದೊಳಗಿರಿಸಿ ತುಡುಕಿಸುವ[೧] ೫೬

ಎನುತ ವಾಸುಗಿಗೆಣೆಯೆನಿಪ ಪಟು
ಘನಭುಜಂಗವನಿರಿಸಿ ಹರವಿಯೊ
ಳನಘನಿಲ್ಲುಂಟೇ ಶಿವಂ ಸರ್ವಜ್ಞನೆಂದೆಂಬೆ
ಎನಲಭವನೀ ಘಟದೊಳುಂಟುಂ
ಟಿನಿತು ಸಂದೆಹವಿಲ್ಲವಿಲ್ಲದ
ಡನುಪಮಂ ರಾಮೇಶ್ವರಂ ತಾಂ ಸರ್ವಗತನಹನೆ ೫೭

ಎನುತ ನೂತನಭಕ್ತರ ಪುರಾ
ತನಮಹಾಭಕ್ತರ ಚರಣಜೀ
ವನಜ ಸಂಸ್ಮರಣಾತ್ಮನಾಗುತ ದಾಸಿಮಯ್ಯಗಳು
ಜನರು ಕೀರ್ತಿಸುತಾ ಮಹಾದ್ಭುತ
ಜನಿತಮಾನಸರಾಗಿ ನೋಡಲು
ಮನದೊಳಂಜದೆ ಸಾರ್ದು ನಿಲಲಾ ಕುಂಭದೊಳಗಿರ್ದ ೫೮

ಕಾಲದುರ್ಭರಭೋಗಿ ಜಿಹ್ವಾ
ಜ್ವಾಲೆ ಕಿಡಿಯುಗುಳುತ್ತ ಮಡಕೆಯ
ಮೇಲೆ ಹೆಡೆಯಂ ಬಳಿದುಕೊಳುತಂ [೪]ಕಡು ಗಡಬಡಿಸುತ[೫]
ಬಾಲವಂ ನುಲಿನುಲಿದುಕೊಳುತಾ
ಭೀಳಭೂತ್ಕೃತಿ ಪೊಣ್ಮೆ ಮೊರೆವು
ತ್ತ್ತೇಳುತ ವಿಜೃಂಭಿಸುವ ತತ್[೬]ಘಟ[೭]ಸರ್ಪನಂ ನೋಡಿ ೫೯

೧ತ (ಚ). ೨–೩ ತಜೇತ (ತ, ನ). ೪–೫ ಗಡಬಡಿಸುತಲ್ಲಿ (ಕ). ೬–೭ ಪಟು (ಚ, ಥ, ಮ).

CC-0. Jangamwadi Math Collection. Digitized by eGangotri

ರಾಮನಾಥನು ಸರ್ವಗತನೀ
ರಾಮನಾಥನ ಭಕ್ತರನಘರು
ರಾಮನಾಥನನರ್ಚಿ[೧]ಸಿದವರು ಪರಮ ಪಾವನರು[೨]
ಈ ಮಹೀಜನವೆಯ್ದೆ ಕೇಳಿರೆ
ಪ್ರೇಮದಿಂದಿಂದೆನ್ನ ಶಪಥವ
ನೀ ಮತದೊಳೀ ಪರಸಮಯವಂ ಭಂಜಿಸುವೆನೆನುತ ೬೦

ನಿಟಿಲನಯನಪ್ರತಿಮತನುವಾ
ಘಟದೊಳಗೆ ಕೈದುಡುಕಿ ಪಟುದು
ರ್ಘಟಗರಳಧರನಂ ಪಿಡಿಪಿಡಿದು ತೆಗೆವ ಸಮಯದಲಿ
ಸ್ಫಟಿಕಲಿಂಗಸ್ಫುಟಮರೀಚಿಗೆ
ಚಟುಲಭಾಸ್ಕರಕರಪಟಲ[೩]ವನು[೪]
ಘಟಿಸದಡಗಲು ದಿಕ್ತಟಂಗಳೊಳಾವರಿಸಲೊಡನೆ ೬೧

ಕುಟಿಲಪರಸಮಯಕ್ರಿಯಾಪ್ರವಿ
ಘಟನದೇವರದಾಸಿಗಳ ತತ್
ಪಟುಕರಸ್ಖಳಘಟಿತಮಾಗಿ ಪ್ರಭವಿಸುತಮಿರಲು
ಹೊಟಲಕೆಱೆಯ ಸಮಸ್ತ ಜನರು
ತ್ಕಟವಿದೆನುತಂ ಹೊಗಳುತಂಜುಳಿ
ಪುಟಕಲಿತಶಿರರಾಗಿ ಜಯಜಯನಿನದವಗ್ಗಳಿಸೆ ೬೨

ದೇವಿ ಸುಗ್ಗಲೆ ತನ್ನ ಸಮ್ಮರು
ದೇವನಡಿಗಳನೋಲವಿಸುತಿರೆ
ಭಾವಿಸುತ ಕೀರ್ತಿಸಲು ಬಲ್ಲಹನಾದಿಯಾದೆಲ್ಲ
ಶ್ರಾವಕರು ಭಯವೊಂದಿಯಭಯವ
ನೀವುದೆನುತಡಿಗಡಿಗೆ ಹೊಡವಡ
ಲಾ ವಿಮಳಮತಿ ದಾಸಿಮಯ್ಯಂ ಹರುಷಚಿತ್ತದಲಿ ೬೩

೧–೨ ಸದವರು ಪರಮಪಾತಕರು (ಕ, ಚ, ಡಾ, ಫ). ೩–೪ ಉದ್ (ಸ).

CC-0. Jangamwadi Math Collection. Digitized by eGangotri

ತನ್ನರೇಂದ್ರನನೈಸಱಿಲಿ ಶಿವ
ಸನ್ನಹಿತನಂ ಮಾಡಿ ಭಕ್ತಿಸ
ಮುನ್ನತಿಯೊಳಾ ತರ್ಕವಂ ತಾನುತ್ತರಿಸಿದುದಱಿಂ
ಚೆನ್ನುತ್ತರನಾಥನೆನಲು ಜ
ಗನ್ನುತಿಸಲಲ್ಲಿ ಪ್ರತಿಷ್ಠಿಸಿ
ಮುನ್ನಿನೇಳ್ನೂರ್ಬಸದಿಗಳನೆಲ್ಲಂ ಹಿರಿದು ಹಾಯ್ಕಿ ೧೦

ಆ ಕ್ಷಪಣರಂ ಕಾಯನೇ ಶಿವ
ದೀಕ್ಷೆಯಂ ಕೊಟ್ಟಭವಭಕ್ತವಿ
ಚಕ್ಷಣಂ ದಾಸಯ್ಯನೆಲೊ ಕೇಳ್ ಮತ್ತೆಯುಂ ಜೈನ
ಈ ಕ್ಷಿತಿಯೊಳಗಜೇಶಭಕ್ತಾ
ಧ್ಯಕ್ಷನೊರ್ಬನು ಮಾರುಡಿಗೆಯೆಂ
ಬಕ್ಷಯಗ್ರಾಮದ ಹಿರಿಯನಾಚಯ್ಯನೆನಲೆಸೆದು ೧೧

ಪರರಱಿಯದಿಪ್ಪಂತೆ ಭಕ್ತಾ
ಚರಣೆಯಿಂದಿರುತಿರಲು ಜೈನರು
ದು[೧]ರುಳತನದಿಂ ಕೂ[೨]ರ್ಬಿ ಊರೊಳಗೆಲ್ಲಿ ನೋಡಿದಡೆ
ತರತರದಿ ಹೊಸಪರಿವಡೆದು ಸಾ
ವಿರದ ಮೇಲೇಳ್ನೂಱು ಬಸದಿಗ
ಳಿರಲವಕೆ ಮುಳ್ಳಾಗಿವೊಂದಿರ್ದುದು ಶಿವಾಲಯವು ೧೨

ತಡೆಯದೀ ದೇಗುಲವನೀಗಳೆ
ಕೆಡಿಸಬೇಕೆನುತಾರುಹತರವ
ಗಡಿಸಿಯಾ ಶಿವಭವನಮಂ ಹಿರಿಹಿರಿದು ಕೆಡೆನೂಕಿ
ಬಡಿದು ತಮ್ಮಡಿಯಂ ತಗುಳ್ದಡೆ
ಕಡುಮುನಿದು ನಾಚಯ್ಯನಿವದಿರು
ಕೆಡಬಗೆದರಹಿತರ[೩]ನಪಹರಿಸಿದಲ್ಲದಾನಿನ್ನು ೧೩

೧ಮ (ಚ). ೨ಉ (ಆ, ನ). ೩–ಳ ನು ಕೊಲ್ಲದೆ ಮಾಣೆನಾನಿನ್ನು (ಕ, ಚ, ಥ).

CC-0. Jangamwadi Math Collection. Digitized by eGangotri

ಮದನನಾಶಂಗುಣಬಡಿಸಬಾ
ರದು ಮಹಾದ್ರೋಹವು ತಡವುಮಾ
ಡಿದಡೆನುತ ಪೊಱಮಟ್ಟು ಪೊಳಲಂ ಹತ್ತುದಿನದೊಳಗೆ
ವಿದಿತದಿಂ ಪನ್ನೆರಡುಸಾವಿರ
ಒದವಿದೀಶ್ವರಭಕ್ತರುಂ ತಾಂ
ಪದುಳ ಸಾವಿರವೇಳುನೂಱ್ ಲಿಂಗಂಗಳಂ ತರಿಸಿ ೬೮

ಬಂಡಿಗಳ ಮೇಲಳವಡಿಸಿ ಮುಂ
ಕೊಂಡು ನಡೆತಂದೂರ ಮೇಲು
ದ್ದಂಡದಿಂ ವೇಡೈಸಿಬಿಟ್ಟನು ನಾಚಿದೇವಯ್ಯ
ದಿಂಡುದಱಿದನು ಶ್ರಾವಕರನೇ
ರಂಡವನವಂ ಪೊಕ್ಕ ಮದವೇ
ತಂಡದಂದದಿ ಹೋಗಿರೋ ಪರದೇಶಿಗಳಿರೆನುತ ೬೯

ನರರು ಕೇಳಲು ಕೂಡೆ ಸಾಱಿಸಿ
ಭರದೊಳವರೊಳು ತೇರಸರುಮನೆ
ಬಿರಿದೆಸೆವ ಪದಿಮೂವರುಂ ತಾವೆಲ್ಲರಂ ನಿಲಿಸಿ
ಹರಗಣಾವಳಿ ಹರುಷಪುಳಕಾಂ
ಕುರಿತಮಾನಸರಾಗೆ ಜೈನರ
ಸುರವಣಿಸಿ ಹಳಚಿದರು ಸುತ್ತುಂ ವೇಡೆಯವನಿಕ್ಕೆ ೭೦

ಮುಂದಲೆಗಳಂ ಹಿಡಿಹಿಡಿದು ನಲ
ವಿಂದ ಕಾದುತ ತಮತಮಗೆ ನೆಱಿ
ಸಂದಣಿಪ ಕೋಪದೊಳೆ ತಲೆಗಳನರಿದರಿದುಕೊಳುತ
ಮುಂದೆ ತಲೆಗೆಳೆದ ಕರಂಗಳೊ
ಳೊಂದಿ ಜೋಲಲು ಕಿತ್ತ ಕೈದುಗ
ಳಿಂದೆಯದುಭುತರಾಗೆಯಾಡು[೧]ತ್ತಾರುತಿರಲಾಗಿ ೭೧

---

೧ ರು (ಮು).

CC-0. Jangamwadi Math Collection. Digitized by eGangotri

ಕಳವಳಿಸಿ ಬಿದ್ದೊರಲ್ವ ಜಿನಮುನಿ
ಗಳ ತಲೆಗಳಂ ಪೊಡೆದು ಕೆಡಹುತ
ಮುಳಿದು ಜಿನರೂಪುಗಳ ತಲೆಗಳನರಿದು ಹುಡಿಗುಟ್ಟಿ
ಬಲುಮೆ ಮಿಗೆ ಜಿನಬಸದಿಗಳ ಮೇ
ಲಳವಡಿಪ ಶಿಖಿರಂಗಳಂ ಭೂ
ತಳಕಿಳಿಯನೂಕಿಸುತಿವೆಲ್ಲಂ ನುಚ್ಚುನುಚ್ಚಿಮಾಡಿ ೭೨

ಲೀಲೆಯಿಂದಾಡುತ್ತ ಸಾವಿರ
ದೇಳುನೂಱ್ ಬಸದಿಗಳಿಂಕೆಗನು
ಕೂಲಮಾಗಲು ಬಸದಿಯೊಂದೊಂದಕ್ಕೆ ಒಂದೊಂದು
ಮೇಲೆನಿಪ ಲಿಂಗಂಗಳಂ ತಂ
ದೋಳಿಯಿಂದಲ್ಲಿ ಪ್ರತಿಷ್ಠಿಸಿ
ಕೂಲು ಬಲಿಯಲೊಡರ್ಚಿ ತಲೆಗಳನಟ್ಟಿಗಳ ಕೂಡೆ ೭೩

ಧಾರುಣೀಜನವೆಯ್ದೆ ಪೊಗಳಲು
ವೀರತೇರಸರೆನಲು ಮೆಱಿಯರೆ
ಮಾರುಡಿಗೆಯಲಿ ಹಿರಿಯ ನಾಚಯ್ಯಗಳ ಮಹಿಮೆಗಳ
ಆರುಹತ ನೀನಱಿಯಲಾ ಇದು
ಸಾರೆ ನಿನ್ನಿನ ವಾರ್ತೆಯಲ್ಲಾ
ಕ್ರೂರಕರ್ಮಿಗಳಂ ಕೊಲುವುದೇನರಿದು ನಿಮ್ಮುವನು ೭೪

ಪಾಟಿದೈವವಿದೆಂದು ನಾಡೊಳು
ಪಾಟಿಸುವರೆಲೊ ಜಿನನ ವಿಧಿಗಳ
ಕೋಟಲೆಯನೆಣಿಸುವಡೆ ತಾಂ ಫಣಿಪತಿಗೆ ಹವಣಲ್ಲ
ಮೇಟಿ ಶಿವನೊಳು ಮೆಱಿವ ಭಕ್ತರ
ಕಾಟದಿಂದವೆ ನಿಮ್ಮ ದೈವವು
ಕೋಟಿಭಂಗಂಬಟ್ಟು ಕೆಟ್ಟಿನು ಹೇಳಲಿನ್ನೇನು ೭೫

೧–೨ ಲೇನಿಸ್ಸು (ತ, ನ).

CC-0. Jangamwadi Math Collection. Digitized by eGangotri

ಬಳಿಕ ಕೇಳ್ ಪುಲಿಗೆಱಿಯೆನಿಪ್ಪಾ
ಪೊಳಲೊಳಿಪ್ಪನುಮೇಶಭಕ್ತಿಯೊ
ಳೊಲುಮೆಯಿಂ ಸೋಮಣ್ಣನೆನೆ ಮೂಱುವಸರಂಗಳಲಿ
ಸಲಿಸುವಂ ಲಿಂಗಸ್ಪರುಶನವ
ನಿಳೆಯೊಳಿಂತಪ ನೇಮವಂ ಕೈ
ಗೊಳಿಸಿ ವರ್ತಿಸಲೊಂದುದಿನ ಕಣ್ಪೈನೆಯಾಗಿರ್ದು ೭೬

ಶಿವನ ಭವನಕೆ ಹೋಗಲಱಿಯದೆ
ಶಿವಶರಣನುಣದಿರ್ದು ಮಗುಡಂ
ಕವಿದಿರುತ ತಾನೊಬ್ಬನುಳಿಯಲು ತನ್ನ ಸುತರೆಲ್ಲ
ಶ್ರವಣರಾಗಿಯಸಹ್ಯಭಾವದಿ
ನವದಿರಿಂತೆಂದರು ಬಗುತ ನಡೆ
ಶಿವಭವನಕೊಡಗೊಂಡು ಹೋದೆಹೆವುಣ್ಣದಿರಲೇಕೆ ೭೭

ಎಂದು ತಾವೊಡಗೊಂಡು ವಂಚನೆ
ಯಿಂದಲಾ ಪಿರಿದೊಂದು ಬಸದಿಗೆ
ಬಂದು ವಂದಿಸು ಸೋಯಿದೇವಾ ನಿಮ್ಮ ಶಿವನಿವಗೆನೆ
ಎಂದು ಕೈಯಂ ಜಿನನ ತಲೆಯಲಿ
ಸಂಧಿಸಲು ತಾನೊಡನೆ ಕರಯುಗ
ದಿಂದೆ ಹುಡುಕುತ ಲಿಂಗಮೂರ್ತಿಯನಱಿಸುತವೆ ಮುನ್ನ ೭೮

ಕಡಗಿ ಕೈಯಲು ಮೂಱುಸೂಳಿಂ
ಹೊಡವಡುತ ಬಲಗೊಳುತದಕೆ ಸೈ
ಗೆಡೆದು ನಮಿಸಲು ನಗುತ ಸಾಕೇಳೆಮ್ಮ ಜಿನದೇವ
ಒಡನೆ ಮೆಚ್ಚಿದೆನಿಂತು[1] ತನ್ನಂ
ಬಿಡದಿರೆಂದೋಲಗವನಿತ್ತನು
ಮೃಡನ ಭಜನೆಯನುಡುಗಿ ತಮ್ಮೊಳು ಬುದ್ಧಿಯಂ ಕೇಳ್ದು ೭೯

೧ಹ (ಧ. ಪ. ನ). ೨–೩ ನಿನ್ನು (ತ. ನ. ಮ).

CC-0. Jangamwadi Math Collection. Digitized by eGangotri

ಬದುಕು ನೀನಿಂತೆನಲು ಭುಗಿಲೆಂ
ದೊದರುತವದಿರನಾಗಮವಿರು
ದ್ಧದ ಜಿನಂಗೆ ಗಿನಂಗೆ ನಾನೆತ್ತುವನೆ ಕರಯುಗವ
ಮದಿಸದಿರಿ ಸಾಕ್ಷಾತ್‌ಪರಾಪರ
ಸದಮಳಿತಶಿವಲಿಂಗಮಂ ತೋ
ಱಿದಪೆನಿದೆ ಬನ್ನೆನುತ ಒಳಯಿಂಕೆಯ್ದಿ ಸೋವಣ್ಣ ೮೦

ಕಂಗಳಲಿ ಕಟ್ಟಿದ್ದ ಮುಸುಕನ
ಭಂಗನಾಗ ತೆಗೆದು ಬಿಸುಟು ನಯ
ನಂಗಳಂ ಬಲುಹಿಂದ ತೆಱಿದುಱಿ ನೋಡಲಾ ಜಿನನ
ಆಂಗವದು ಛಟಛಟ ಎನುತ್ತ ತೊ
ಲಂಗಿ ಫಟಿಫಟ ಎನುತೆರಡು ತುಂ[೧]
ಡಂಗಳಾಗಿಕ್ಕೆಲಕೆ ನೀಳಕ್ಕೊಡೆದು ಕೆಡೆದಿರಲು ೮೧

ಭಾಳತಟಪಟುಚಟುಲದಹನವಿ
ಶಾಲನಯನಂ ಜಿನನ ನಡುವಾ
ಭೀಳಮಾಗಲು ನಿಂದನಾಕ್ಷಣ ಲಿಂಗರೂಪಿನಲಿ
ಸ್ಥೂಲಗೋಪತಿವಾಹನಂ ಮಿಗೆ
ಲಾಲಿಸಲು ಸೋವಣ್ಣಗೊಲಿದನು
ಲೀಲೆಯಿಂ ಸೋಮೇಶ್ವರಂ ಪುಲಿಗೆಱಿಯ ಬಸದಿಯಲಿ ೮೨

ಲೋಕದೊಳು ಮುಂಗೈಯ ಕಂಕಣ
ಕೇಕೆ ಕನ್ನಡಿ ಭಂಗಬಟ್ಟ ಜಿ
ನಾಕೃತಿಯೆ ತಾಂ ಸಾಕ್ಷಿಯಲ್ಲಾ ಇಂದು ನೀನಱಿಯಾ
ಪ್ರಾಕಟವಲಾ ಸೋಯಿದೇವನೊ
ಳೇಕಶಿವಲಿಂಗಪ್ರತಿಷ್ಠಾ
ಸ್ತೋಕಭಕ್ತಿಯೊಳಿಂತು ಪುಲಿಗೆಱಿಯೊಳಗೆ ಕೇಳ್ ಜೈನ ೮೩

ಅಂತು ಸಂಧಿ ೫೦ಕ್ಕಂ ಪದಗಳು ೨೯೧೫ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

---

೧ ತಂ (ಅ, ಕ, ಚ, ಡಾ).

CC-0. Jangamwadi Math Collection. Digitized by eGangotri

ಸಂಧಿ : ೫೧

*

ಸೂಚನೆ : ಶಿರವನಿತ್ತಭವಂಗೆ ಕಟಕದೊ
ಳರಿದೆನಿಸಿಯೇಳ್ದನ ಮೆಚ್ಚಿದು ತಾಂ
ಮರಳಿ ಮಸ್ತಕಮಂ ಪಡೆದನೇಕಾಂತರಾಮಯ್ಯ

ಪರಿವಳಿಗೆಯೊಳು ಮತ್ತೆಯುಂ ಶಂ
ಕರಪದಾಂಬುಜಭಕ್ತಿರತಿಯಲಿ
ನಿರತಮತಿ ಗಂಡನು ಮೊದಲು ತತ್‌ಪುರದ ಜನವೆಲ್ಲ
ಧರಣಿಯೊಳು ಜಿನಮಾರ್ಗವಾಗಿಯೆ
ಚರಿಸಲೊಂದುದಿನಂ ಲತಾಂಗಿಯ
ಪುರುಷನಾರುಹತರಿಗೆ ಚರಿಗೆಯನಿಕ್ಕಬೇಕೆಂದುೆ ೧

ಅಂಗನೆಯ ಕೈಯಲು ಪದಪದಾ
ರ್ಥಂಗಳಂ ಮಾಡಿಸಿ ವರಪ್ರಿಯ
ಸಂಗದಿಂ ಜಿನಮುನಿಗಳಂ ಕರೆಯಲ್ಕೆ ಹೋಗಿರಲು
ತುಂಗಕುಚೆ ತಾನಾ ರಸರಸಾ
ನ್ನಂಗಳಂ ನೋಡಿಂತಕಟ ಶಿವ
ಲಿಂಗ ಇವು ಲೋಗರಿಗೆ ಭಾಜನವಾಯ್ತೆನುತ ಮಱುಗಿ ೨

ಹಿರಿದು ಸಂತಾಪಿಸುತ ಶೋಕಾ
ತುರದೊಳಿಪ್ಪೆಡೆಯೊಳು ಮಹೇಶನು
ವರತಪೋಧನವೇಷಿಯಾಗೆಯ್ತರಲು ಕಂಡೆದ್ದು
ಸರಸಿಜಾನನೆ ನಯವಿನಯಭಯ
ಸರಸಭಕ್ತಿಯೊಳಾಗಳಚ್ಚರಿ
ವೆರಸುತಂ ಸಾಷ್ಟಾಂಗವೆಱಗಿ ನಮಿಸಿ ಚರಣಯುಗದ ೩

---

* ರಾಗ : ಮಾಳವಶ್ರೀ (ಧ. ಪ); ಕನ್ನಡಗೌಳ (ತ).
೧–೨ ನಲು (ಬ).

CC-0. Jangamwadi Math Collection. Digitized by eGangotri

ಮೇಲೆ ಬಿದ್ದು ಪೊರಳ್ದು ಭಕ್ತಿಸು
ಶೀಲೆ ಮುನಿನಾಥನ ಪದಪ್ರ
ಕ್ಷಾಲನಂಗೆಯ್ದಂಘ್ರಿಸಲಿಲವನೀಂಟಿ ಹೊಡವಂಟು
ಲೋಲಸಮುಚಿತಸತ್ಕ್ರಿಯಾಸ
ಮ್ಮೇಳನದೊಳತಿ ತೃಪ್ತಿವಡಿಸಿ ದ
ಯಾಳುವಂ ಬಿಜಯಂಗೆಯಿಸಿ ತಂದೊಳಗೆ ಕುಳ್ಳಿರಿಸಿ ೪

ಮಧುರಭಕ್ಷಾನ್ನಂಗಳಂ ಬಹು
ವಿಧಪದಪದಾರ್ಥಂಗಳಂ ಸ
ದ್ವಿಧಿಯೊಳಾ ವೈಜಪ್ಪೆ ಕದಳೀಪತ್ರಮಂ ಹಾಸಿ
ಅಧಿಕನಯವಿಮ್ಮಡಿಸಿ ಗಡಣಿಸಿ
ವಿಧುಧರಾಕೃತಿಯಂ ತಪೋಧನ
ನಿಧಿಯನರ್ಚಿಸಿ ಕೈಮುಗಿಯಲಾಪೋಷಣವನೆತ್ತಿ ೫

ಒಸೆದು ತಾಪಸರಾಜನಾರೋ
ಗಿಸುತಮಿರಲಾ ಸಮಯದಲಿ ಸಂ
ತಸದೊಳುಣಲೆಯಿತಪ್ಪ ಜಿನಮುನಿಗಳು ಸಮಕ್ಷದಲಿ
ಅಸಮಯತಿಯಂ ಕಾಣುತವೆ ಶಾ
ಪಿಸುತ ಮರಳಿಯ್ದಿದರು ಕೋಪಂ
ಮಸಗಿ ಪತಿ ಬರಲಾಗ ತಪಸಿಯದೃಶ್ಯವಾಗಿರಲು ೬

ಪರಮ ಪಾತಕಿಯಾದೆ ವೈಜೇ
ಗೊರವನೆಲ್ಲಿಗೆ ಸರಿದನೋ ಆ
ಕರಿಸಿಕೊಳ್ಳದೆ ತೋಱು ನೀ ಕ್ಷಪಣಕರ ಕೈಯಿಂದ
ಮರುಳುಗೊಂಡೆಯೊ ನೋಡಲಾಗದು
ಹರತಪಸಿಗುಣಲಿಕ್ಕಲಹುದೇ
ಯರುಹನಾಜ್ಞೆಯನುಳಿದು ಮನೆಯಂ ಹಾಳುಮಾಡಿದಲಾ ೭

೧–೨ ಮುನಿ (ತ. ನ).

CC-0. Jangamwadi Math Collection. Digitized by eGangotri

ತಮ್ಮಡಿಯನಿಂತೆಲ್ಲಿ ಪುಡಗಿದೆ
ಸುಮ್ಮನಿರದೇ ತೋಱು ಸಾಯದಿ
ರೆಮ್ಮ ಕೈಯಲಿ ವರನ ಮಾತಂ ಮೀಱುವುದು[೧] ಭಾರ್ಯೆ
ಸಮ್ಮತವೆ ತಪಸಿಗೆ ನಿನಗೆ ಕೂ
ಟಂ ಮಿಗಿಲೊ ಹೇಳೆನುತ ಸತಿಯಂ
ಚಮ್ಮಟಿಗೆಯಲಿ ಚಾಟುಚಾಟನೆ ಪತಿ ಹೊಡೆವುತಿರಲು ೮

ಸತಿಯು ಹೊಯ್ಲುಗಳಿಂಕೆಗೊಳ್ಳದೆ
ಮತಿಯೊಳತಿಶಯಭಕ್ತಿಯಲಿ ಪಶು
ಪತಿಯೆ ನೀವೇ ಗತಿಯೆನುತ್ತಂ ಭಾವಿಸುತಮಿರಲು
ಅತಿ ಕುಪಿತಯುತನಾಗಿ ನೋಡುತ
ಪತಿ ಬಿಱಿಸಿನಲಿ ಹೊಯ್ವ ಹೊಡೆಗಳು
ಸತಿಯ ಮೇಲಣುಮಾತ್ರವನಿತುಂ ತಾಗವೆಂತೆನಲು ೯

ಚೋಳರಾಯನ ಬಿಟ್ಟಿಗೆಯ್ದಿ ಕ
ಪಾಲಿ ಪಿಟ್ಟವ್ವೆಯ ನಿಮಿತ್ತದಿ
ನಾಳುಗೆಲಸಕೆ ಮಣ್ಣನಡಕುತ ಸಸಿನೆ ನಡೆಯದಡೆ
ಮೂಲನಿವನಾಟವಿಕನೆನುತರ
ಸಾಳು ತನ್ನಂ ಹೊಯ್ದ ಹೊಯ್ಲು ನೃ
ಪಾಳನಖಿಳನಿಯೋಗದವರಂ ತಾಗುವಂದದಲಿ ೧೦

ಮನೆಗಳೊಳು ಬಸದಿಗಳೊಳೋದುವ
ಮನೆಗಳೊಳು ಕೇರಿಗಳೊಳಂಗಡಿ
ಮನೆಗಳೊಳು ಕೆಱಿತೊಱಿಯ ತಡಿಯಲಿ ವಿಹರಿಸುವ ಜೈನ
ಮುನಿಕುಲವ ನೆಱಿ ತಾಕುತಿರೆ ಹೊ
ಯ್ಲಿನ ಬಿಱಿಸಿನಲಿ ಬಾಸುಳಿದ್ದಾ
ತನುಗಳಂ ನಸು ಮುಟ್ಟಿನೋಡುತ ಹೆದಱುತೋಡುತ್ತ ೧೧

೧ಳಿ (ತ).

CC-0. Jangamwadi Math Collection. Digitized by eGangotri

ಎತ್ತಿ ಹೊಡೆಯಲು ಬೆನ್ನ ಚರ್ಮಂ
ಕಿತ್ತುಹೋಗಲು ಗಡಗಡನೆ ನಡು
ಗುತ್ತ ಬೆನ್ನುಗಳಂ ಪಲವುಸೂಳ್ ಮುರಿಮುರಿದುಕೊಳುತ
ಎತ್ತಲೋಡುವೆವೆನುತ ಸಂದಣಿ
ಸುತ್ತ ಕೈಗಳನೊಡ್ಡಿಕೊಳುತಂ
ಸುತ್ತಿ ಸುತ್ತಿ ಬರುತ್ತವೇಗುವವೆನುತ ಸುಯ್ಯು೧ತ್ತ ೦೨

ಹಾಱಿ ಕೆಡೆವುತ ಜಿನಬಸದಿಗಳ
ನೇಱಿಯಲ್ಲಿಂದಿಳಿಯಜಾಱುತ
ಸೀಱುತುಪತಾಪಿಸುತ ಹೋಹೋ ಎನುತ ಬಾಯ್ವಿಡುತ
ಮೋಱಿಗಳು ಬೆಮರಿಡುತ ಹೊಯ್ಲಂ
ತೋಱುತೊಬ್ಬೊಬ್ಬರಿಗೆ ವೇದನೆ
ಗಾಱಿವಯ್ಯೋ ಕೆಟ್ಟೆವೆನುತಂ ಕರ್ಮವೇ ಎನುತ ೦೩

ಸಾವು ಬಂದಿತು ತಮಗೆ ತಮ್ಮಂ
ಕಾವರಿಲ್ಲಾಯೆನುತ ಮೊಱಿಯಿಡು
ತಾವ ಠಾವಂ ಹೊಗುವೆವೆನುತಂ ಜಿನನ ಮೊಱಿಗೊಳುತ
ತಾವು ಸಿಕ್ಕಿದೆವೆನುತಕಟಕಟ
ದೈವವೇ ಇದನಱಿಯೆವೆನುತಂ
ಜೀವಿಸುವ ಪರಿಯೆಂತೆನುತ ಬೆದಬೆದನೆ ಬೇವುತ್ತ ೦೪

ಕೆಱಿಗಳಲಿ ಧುಮ್ಮಿಕ್ಕಿ ಮುಳುಗುತ
ಸಱಿಗಳಂ ತಾವಡರುತಂ ಪಿರಿ
ದೊಱಿಲುತಳುತಂ ತಲೆಗಳಂ ತಾಟಿಸಿಕೊಳುತ್ತಳುತ
ಕಱಿಗೊರಳವನ ಕೃತ್ರಿಮವೊ ಇದ
ನಱಿಯಲರಿದೆನುತೀ ಪ್ರಕಾರದಿ
ಬಿಱುಹೊಯಿಲ್ಗಳಿನೊಂದಱಿಳಜೈನರು ಹೊರಳುತಿರಲು ೦೫

---

೧ ಯ್ಲು (ಒ)

CC-0. Jangamwadi Math Collection. Digitized by eGangotri

ಏಸಱಲಿ ಮತಿಪಂತನೊಬ್ಬನು
ಬಾಸುಳಗಳಂ ನೋಡಿ ಚಟುಕೆನೆ
ಯಾ ಸತಿಯನಂತೊಮ್ಮೆ ಹೊಡೆಯಲು ಚಟುಕು ಚಟುಕೆನಲು
ಆ ಸ್ರವಣರಂತಾಗುತ್ತೈದವೆ
ಆಸುರದೊಳರ್ಜುನನ ಸರಳಂ
ತೋಸರಿಸದೊಂದೊಂದು ಹೊಯ್ಲು ಸಹಸ್ರಮುಖಿವಾಗಿ ೧೬

ಶ್ರೀವಿಜಯಮುನಿ ಹೋಗಿ ತಾ ನಡು
ಬಾವಿಯಲಿ ಬಿದ್ದನು ಕ್ಷಪಣಮುನಿ
ದೇವನೆಯ್ದಿ ತಟಾಕದೊಳು ಮುಳುಗಿದನು ದಮನಮುನಿ
ಆ ವಿಪಿನಪಂ ಹೊಕ್ಕು ತನ್ನಯ
ಜೀವಕೆಳತಟವಾಯ್ತು ಧರ್ಮ
ಸ್ರಾವಕೇಂದ್ರನು ಮುಂದೆ ಬಸದಿಯನೇಱಿ ಧುಮುಕಿದನು ೧೭

ಚಂದ್ರಮುನಿಯಗಳೊಳು ಕೆಡೆದನಮ
ರೇಂದ್ರಮುನಿ ಕಡು[೧]ನೊಂದನಾಚಾ
ರ್ಯೇಂದ್ರಮುನಿ ಬಸವಳಿದು ಬಿದ್ದನು ಹೊಯ್ಲಿನುಪಹತಿಗೆ
ಚಂದ್ರಕೀರ್ತಿ ಬಳಿಕ್ಕಿದನು ರಾ
ಜೇಂದ್ರಮುನಿ ಕೊಂಕಿದನು ನೆಱಿ ವಿಮ
ಳೇಂದ್ರಮುನಿಪನ ಬೆನ್ನು ಬಿಕ್ಕನೆ ಬಿರಿಯಿತಿಂತಕಟ ೧೮

ಜೈನರವರಿವರೆನ್ನದೆಲ್ಲರು
ಮಾನಭಂಗಿತರಾಗಿ ಮಡಿದರು
ತಾನಿದೆಲ್ಲಂ ಶಿವನ ಕೃತ್ರಿಮವಹುದಲಾ ಎನುತ
ಮಾನವತಿಯವಗಡ್ಡ ಬಿದ್ದೆಲೆ
ನೀನುಡುಗು ಹೊಡೆಯದಿರೆನುತ ಯಜ
ಮಾನನಂ ಕೈವಿಡಿದು ಮಾಣಿಸಲಾಗಲಂತೊಡನೆ ೧೯

೧ರ (ಅ, ಬ, ಕ, ಧ, ಪ).

CC-0. Jangamwadi Math Collection. Digitized by eGangotri

ಶ್ರವಣಕುಲವಂ ನಿಬ್ಬರದಿ ತಾ
ಗುವ ಹೊಯಿಲುಗಳು ಮಾದವಾ ಪೈ
ಜವೆ ವಿನಿರ್ಮಳಭಕ್ತಿಮಾನಸೆಯಾದ ಕಾರಣವು
ಅವನದಂ ತಾನಱಿಯದಂತಿ
ಪ್ಪವೊಲೆಲೆಗೆ ನೀನೆನ್ನಯಾಜ್ಞೆಯ
ನವಗ[೧]ಡಿಸಿ ನೀನಱಿಯದುಣಲಿಕ್ಕಿದೆ ತಪಸಿಗಾಗ ೨೦

ಅನಿತಱಿಲಿ ಸೈತಿರಿಸಿ ನೀನೀ
ಜಿನಮುನೀಂದ್ರರಿಗೆಲ್ಲ[೨]ಕೆಗ್ಗಂ[೩]
ಮುನಿದು ಮಾಡಿದೆ ಮುದುತಪಸಿಗಳ ಮಂತ್ರಯಂತ್ರಾಳಿ
ವನಿತೆ ನಿನ್ನಂ ಬಾಳಲೀಯೆವು
ಮನೆಯೊಳಿರಬೇಡೀಗ ಹೊಱಿವಡು
ನಿನಗೆ ನಾವಂಜುವೆವೆನುತ ನೂಕಿದಡೆ ವೈಜವ್ವೆ ೨೧

ಬಂದುಬಂದರುಹನ ನಿಳಯಮಂ
ಮುಂದೆ ಕಾಣುತ್ತಪ ಶಿವಾಲಯ
ವೆಂದು ಮನೆಯಿಂದೆಂದುವುಂ ಹೊಱಿವಂಟಱಿಯಳಾಗಿ
ಇಂದುಮುಖಿ ಇದು ಬಸದಿ ದೇಗುಲ
ವೆಂದು ನೋಡಿದುದಿಲ್ಲದಿಪ್ಪುದ
ಱಿಂದ ಶಂಭುವೆ ಶರಣೆನುತ ಕೈಮುಗಿದು ವಂದಿಸುತ ೨೨

ಸತಿ ಬಸದಿಯಂ ಹೊದ್ದಲೊಡನದು
ಭುತವದೇನೋ ಲೋಕಕರುಹ
ಪ್ರತುಮವೊಡೆದಿಕ್ಕಿಲಕೆ ಬಿದ್ದಿರಲದಱಿ ಮಧ್ಯದಲಿ
ಅತುಳಿತಪ್ರಭೆಯಾವರಿಸಿ ಮೂ
ಡಿತು ಮಹಾಶಿವಲಿಂಗದುಗ್ರಾ
ಕೃತಿ ಮುದಿತಹರುಷಿತಮನೋಂಬುಜೆಯಾದಳೀ[೪]ವೆಗಳ್ದೆ[೫] ೨೩

---

೧ ಗೆ (ಡಾ). ೨–೩ ಕಿಲ್ಲಂ (ಮ). ೪–೫ ವೇಳ್ದೆ (ಬ).

CC-0. Jangamwadi Math Collection. Digitized by eGangotri

ಪುರುಷನೊಳು ಶಿವಭಕ್ತಿಯಿಲ್ಲದೆ
ತರುಣಿ ಶಿವಭಕ್ತಿಯೊಳಿರುತ ತತ್
ಪುರುಷನಂ ಮೀಱಿದ ತರುಣಿ ದುರ್ಗತಿವಡೆಯಳೆಂದು
ಪುರುಷನಂ ತೊಲಗಿರ್ದು ಪರಮೇ
ಶ್ವರನನಾರಾಧಿಸುವ ತರುಣಿಗೆ
ಪರಮ ಸದ್ಗತಿಯಲ್ಲದೇ ಬೇಱಿೊಂದು ಗತಿಯಿಲ್ಲ ೨೪

ಆಯತದಿನಾಲಾಯಯೆನಲನ
ಸೂಯೆಯೆನೆ ಭಾರ್ಯರುಗಳಿಬ್ಬರ
ಜೇಯಶಿವಭಕ್ತಿಯೊಳು ೧ತನ್ಮುನಿೆ ಪುರುಷನಂ ಮೀಱಿೆ
ಕಾಯಜಾಂತಕನಂ ಭಜಿಸಿದ
ಬ್ಭಾಯತೇಕ್ಷಣೆಯರ್ಗೆ ಸದ್ಗತಿ
ಯಾಯಿತಲ್ಲಾ ಮುನ್ನ ಶಂಭುನಿಮಿತ್ತವಾಗಿಂತು ೨೫

ಧರಣಿಯೊಳು ತಿಲಕವ್ವೆಯೆಂಬಾ
ತರುಣಿಯೊಬ್ಬಳು ಪಾರ್ವತೀಶನ
ಚರಣಭಕ್ತಿವಿರಹಿತನಾಗಿಹ ಗಂಡನಂ ತ್ಯಜಿಸಿ
ಇರಲವಂ ಕೊಂದಪೆನೆನುತ ಬರೆ
ಸರಸಿಜಾನನೆ ಹೋಗಿ ಪರಮೇ
ಶ್ವರನ ದೇಗುಲಮಂ ಹೊಗಲು ಬೆಂಬತ್ತಿ ನಿಮಿಷದಲಿ ೨೬

ಮೃಡನ ಮಱಿೆಗೊಂಡಿಪ್ಪ ಸತಿಯಂ
ಕಡು ಮಿಡುಕುತಂ ಹೋಗಿ ಸೆಱಿಗಂ
ಪಿಡಿದು ತೆಗೆಯಲು ಮುಂದೆ ಪುರುಷಾಕಾರವಾಗಿರ್ದ
ಮಡದಿಯಂ ಹೇಳಲ್ಕೆ ಕೇಳ್ದಿವು
ಪೊಡವಿಯೊಳು ಮುನ್ನಿಂದು ಕಾಣ
ಲ್ವಡೆದುದೀ ವೈಜಾಂಬಿಕೆಯ ನಿಶ್ಚಲಿತಶಿವಭಕ್ತಿ ೨೭

೧–೨ ತನ್ನಿಜ (ಸ).

CC-0. Jangamwadi Math Collection. Digitized by eGangotri

ಎಂದಖಿಳ ಮಾಹೇಶ್ವರಪ್ರಿಯ
ವೊಂದಿ ಪೊಗಳಲು ಜನನಿಕಾಯಂ
ವಂದಿಸುತ ಜಯಜಯಯೆನುತಮಿರೆ ಜಿನಮುನಿಗಳೆಯ್ದಿ
ಸೌಂದರಿಗೆ ಹೊಡವಡುತ ಭಯದಿಂ
ಸಂದಣಿಸುತಂ ಕೀರ್ತಿಸುತಮಿರೆ
ಇಂದುಧರನಂ ಮೆಚ್ಚಿಸಿದಳಂದೊಲಿದು[೧] ವೈಜಪ್ಪೆ ೪೮

ಸುದತಿ ವೈಜಪ್ಪೆಯ ಮನೋಭಾ
ವದೊಳುದಯಿಸಿದನಾಗಿ ಧರೆಯೊಳು
ವಿದಿತಮಾಗಲು ವೈಜನಾಥನೆನಲು ವಿರಾಜಿಸಿದ
ಇದು ನಿಮಿತ್ತದಿ ಪರಿವಳಿಗೆಯೊಳು
ಸದಮಳೋತ್ತಮಭಕ್ತಿಚರಿತಾ
ಸ್ಪದೆಯ ಮಹಿಮೆಯನೆಲವೊ ಜೈನಾ ಕೇಳ್ದು ನೀನಱಿಯಾ ೪೯

ಸಂದ ಸದುಭಕ್ತರ ಮಹಾಗುಣ
ವ್ಯಂದಶೌರ್ಯಾತಿಶಯಕಥನಾ
ನಂದಚರಿತಂಗಳನೆಣಿಸುವೊಡನಂತಪಂತಿರಲಿ
ಆಂದಿನೀಶ್ವರನಿಂದು ನರ[೨]ತನೆ
ಯಂದಿನಚಳಿತಭಕ್ತಿಮಹಿಮೆಯ
ದಿಂದು ನವೆಯಿತೆ ಕಿಱಿಕಿಱಿಯ ಸಮಯಿಗಳನೆಬ್ಬಟ್ಟಿ ೫೦

ಕೊಲುವಡಂದಿನ ಹಿರಿಯರೇಕಿ
ನ್ನುಳಿದವರಿಗಾವಾದಡಂ ಸಾ
ಕೆಲವೊ ಗರ್ವಿಸಿ ನಿಮ್ಮ ಜಿನಮಾರ್ಗವೆ ಚೆಲುವವೆಂದು
ಉಲಿವುತಿಪ್ಪರಿ ಜೈನಮುನಿ ಸಂ
ಕುಲವಿ[೩]ದೆಮ್ಮೊಡನಬ್ಬಲೂರೊಳು
ಮಲೆವುತಂ ಪ್ರತಿದೋಱಿಯಾಡಲು ವಾದವಂ ನಿಲಿಸಿ ೫೧

೧ಸಿ (ಅ. ತ. ನ. ಮ). ೨ಗ (ಥ). ೩–ಳ ದೆಂದೊ (ಅ. ಕ. ಮ).

CC-0. Jangamwadi Math Collection. Digitized by eGangotri

ಗೆಲಿದಡದಱಿಂ ಹೋಗಲೀಯದೆ
ಬಳಿಕ ದೃಷ್ಟಪ್ರತ್ಯಯಂಗಳ
ಬಲುಮೆಯಲಿ ತೋಱಿಯೆನುತ ಮೂದಲಿಸಿಯಾಡಿದಡೆ
ಪೊಳಲೊಳೆಲ್ಲಕೆ ಹಿರಿಯ ಬಸದಿಯೆ
ನಲು ಮೆಱಿಪ ಘನಜಿನಭವನವದು
ನಳಿನಸಖನುದಯಕ್ಕೆ ಮುನ್ನವೆ ಗೋಡೆಗಳುವೆರಸಿ ೩೨

ನೆಲನ ಸರಿಸಕೆ ಬಿದ್ದು ನಿಮ್ಮಂ
ಸಲಹುವೊಡೆಯನ ತಲೆಯೊಡೆದು ಕೆಡೆ
ದಳಿದಡೀಶನ ಬಂಟನಹೆ ನಿಜದೃಷ್ಟವಂ ನೋಡಿ
ಸಲಿಸುವೆಂ ಭಾಷೆಯನೆನುತ ಮೂ
ದಲಿಸಿ ಬರಲಂತನಿತಱಿಂಗಳು ಜಿನ
ನಿಳಯಸಹಿತಲು ಸೀಳ್ದು ಬಿಸುಡುವ ಛಂದದಲಿ ಹೋಳ್ದು ೩೩

ಆಗಳರುಹನ ರೂಪು ಕಡಿಕಡಿ
ಯಾಗಿ ಬಿದ್ದುದು ಸರ್ಬರತಿಶಯ
ರಾಗಿ ಕಟಕದೊಳಿರ್ದ ಬಸದಿಗಳಿಹಗೆ ಕೆಡೆದಪವು
ಈಗಳಿನಿತಂ ಹೇಳಲೇನಂ
ತಾಗಿ ಮುದುಿಸೂಳೆಯ ಪಡಿಪದಂ
ತಾಗಿಯುಂ ಮುನ್ನಿನ ಕಥೆಯನೊರೆದೊರೆದು ತೋಱುತಿಹ ೩೪

ಶಂಕಿತದ ಮನದವನೆ ಮೊರಟದ
ಬಂಕಿದೇವನ ಲೆಂಕನೆನಗಾ
ತಂಕವುಂಟೇ ವೀರಭಕ್ತಂಗೆಲೊ ಅಘಮು ಜೈನ
ಶಂಕರಂಗಿಂತೀಗ ಮಸ್ತಕ
ವಂ ಕಡಿದು ಕೊಟ್ಪೀಗ ಪಡೆವುದು
ಬಿಂಕವೇ ಶಿರವೀಗಳಿತ್ತೇಳ್ದಿನವದಂ ಮೆಱಿದು ೩೫

೧ದಿ (ಅ). ೨ ಜಿನಂ (ತ, ನ).

CC-0. Jangamwadi Math Collection. Digitized by eGangotri

ಬಳಿಕ ಶಿರವಂ ಪಡೆದಪೆಂ ಭೂ
ತಳದ ಜನವಱಿಯಲ್ಕೆ ಹೇಳಿದೆ
ನೆಲವೊ ನೋಡಲು ಶಕ್ತಿಯುಳ್ಳಡೆ [೧]ನೋಡಿ ಭೋ[೨] ಮುಂದೆ
ಅಳಿದು ಕಳೆವೆನು ಬಸದಿಗಳನ
ಪ್ಪಳಿಸುವೆನು ಜಿನರೂಪುಗಳನಿದ
ಱಿೊಳಗೆ ಮರ್ದಿಂಗೊಂದು ಬಸದಿಯುಮಿಲ್ಲವೆನಿಸುವೆನು ೩೭

ಭಾಷೆಯಿದು ನಿಮ್ಮನಿಬರಂ ಪಸು
ಗೂಸುಗಳನಿನ್ನಪಹರಿಸಿ ಮಿಗೆ
ಘಾಸಿಮಾಡಿದಡೇನು ಫಲವೆನಗೀಗಳೆಂದೆನುತ
ಆ ಸಮಯವೊಂದೆಸೆಯೊಳಿರಲು
ಲ್ಲಾಸದಿಂ ಬಸವಂಸಹಿತ ಮಹಿ
ಮಾಸಮರ್ಥರು ಭಕ್ತರೋಲಗವಿತ್ತು ಕುಳ್ಳಿರಲು ೩೮

ಧಾರುಣೀಶನು ಬಿಜ್ಜಳನು ಪರಿ
ವಾರಸಹಿತಂ ಬಂದು ನೋಡಲು
ಪೌರಜನ[೩]ವೆಲ್ಲರು ನೆರೆದು[೪] ನಡೆತಂದು ಹಿಂದಿರಲು
ವೀರಶೃಂಗಾರದೊಳಮರ್ದಿಭ
ವೈರಿಯಂತೇಕಾಂತರಾಮನು
ವೀರಭಕ್ತಿಯೊಳಂಕಕಾಟಿನವೊಲು ಕರಂ [೫]ಪೆರ್ಚಿ[೬] ೩೯

ದರಹಸಿತಸಿತಕಾಂತಿಮುಖಿ ಪಂ
ಕರುಹದೊಳು ತುಳುಕಾಡೆ ಮಾಹೇ
ಶ್ವರನಿಕಾಯಕೆ ನಮಿಸಿ ಬೊಬ್ಬಿಟ್ಟೊಲ್ದು ಶರಣೆಂದು
ಉರವಣಿಸಿ ಕೂರಲಗುಮಂ ಕಂ
ಧರದೊಳೊಂದಿಸಿಯೊಂದು ಕೈಯಲಿ
ಶಿರದ ಮುಡಿಯಂ ಪಿಡಿದು ಮುನಿಯಲುದಗ್ರವೃತ್ತಿಯಲಿ ೪೦

೧–೨ ನೋಡು ನೀ (ಅ, ತ, ನ); ನೋಡಿಕೋ (ಬ). ೩–೪ ತಾವೆಲ್ಲರು (ಪ).
೫–೬ ಮೆಟ್ಟಿ (ತ, ಪ).

CC-0. Jangamwadi Math Collection. Digitized by eGangotri

ಆಟ್ಟೆಯಿಂದವಗಲ್ದು ಕೈಗಳ
ವಟ್ಟ ತಲೆ ಮರುಳು ಭಾಪೆನುತ ಬೊ
ಬ್ಬಿಟ್ಟು ಹೊಗಳಲು ಬಸವನಾಗಳೆ ಕೀರ್ತಿಸುತಮಿರಲು
ಆಟ್ಟಹಾಸಂ ಮಿಕ್ಕು ಹರುಷಂ
ಬಟ್ಟು ಭಕ್ತರುಳ್ಳೇ ಎನುತಮಿರೆ
ಪಟ್ಟಬದ್ಧನು ಶಿರವನಲಗಿಸುತಂ ಕರಂ ಮುಗಿಯೆ ೪೦

ತವತವಗೆ ಜಯಜಯಯೆನಿಪ ರವ
ನಿವಹವಾಳೂರ್ಮಿಸಲಖಿಳ ಮಾ
ನವರು ನಮಿಸಲು ಬಹಳ ವಾದ್ಯಧ್ವನಿಗಳಗ್ಗಳಿಸೆ
ವಿವಿಧವಿಧನವನಾಟಕಮಹೋ
ತ್ಸವಸಮುಚ್ಚಯವೆಸೆಯೆ ಏಕಾಂ
ತ ವಿಭು ಬಲಗೈಯಲಗೆಡದ ಕರವಲಿ ಶಿರಂ ಮೆಱೆಯೆ ೪೧

ನಲಿನಲಿದು ಪುರವೀಧಿವೀಧಿಗ
ಳೊಳಗೆ ಜತಿಗಳ ತಾಳಗತಿಗಳ
ಗೆಳಸಿ ಕುಣಿದಾಡುವ ಶಕಾರದ ಮೇಲೆ ನಿಲುವುತ್ತ
ಭಲರೆ ಭಲರೇ ಎನುತ ಭಕ್ತಾ
ವಳಿಗೆ ಶರಣಾರ್ಥನುತ ನಮ್ಮದು
ಗೆಲವೆನುತ ಜಯವಿಡಿಯೆನುತ ಬಿಟ್ಟಾಲ್ದು ಬೊಬ್ಬಿಡುತ ೪೨

ಇಂತು ಕಟಕದೊಳೇಳುದಿನಪರಿ
ಯಂತರಂ ತಾನೆಯ್ದಿ ಮೆಱೆದೇ
ಕಾಂತರಾಮಮಹಂತನೆಂದಿನ ದೇಗುಲಕೆ ಬಂದು
ಮುಂತೆ ನಿಂದಿಂತೆಂದನೆಲೆಯರು
ಹಂತಮುನಿಗಳಿರಾ ನಿಮಗೆ ನಾ
ನಾಂತು ಮಾಡಿದ ಭಾಷೆ ಸಂದಿತೆ ನೋಡಿ ನೀವೆನುತ ೪೩

CC-0. Jangamwadi Math Collection. Digitized by eGangotri

ಅಂತಕಾಂತಕ ಭಕ್ತರೊಲಿದೇ
ಕಾಂತವೀರಗುಣಾಕರನು ಲೋ
ಕಾಂತನಾದನು ಸೂರಿನುತನೇಕಾಂತರಾಮಯ್ಯ
ಸಂತಸದೊಳಾ ಶಿರವನಟ್ಟಿಯೊ
ಳಂತು ಸಂಧಿಸಲೊಡನೆ ಮಸ್ತಕ
ವಿಂತುಟೊಂದೆಸೆಗೋರೆಯಾಗಿರ್ದುದು ವಿರಾಜಿಸುತ ೪೪

ಕಂತುಹರನೇ ದೈವವೆಂದೇ
ಕಾಂತರಾಮಯ್ಯನ ಶಿರೋಬ್ಜವು
ಸಂತತಂ ಲೋಕಂಗಳೊಳಗಿದು ಸಾಕ್ಷಿ ಎಂಬಂತೆ
ಚಿಂತಿಸುವರೇಕಾಂತರಾಮನ
ನಂತತೇಜೋಮಹಿಮೆಯದು ಲೋ
ಕಾಂತವಾಯಿತ್ತೀ ಚತುರ್ದಶಭುವನಮಧ್ಯದಲಿ ೪೫

ಈತನೇ ಪ್ರತ್ಯಕ್ಷ ಶಿವನೆಂ
ದೋತು ಮನುಜಬ್ರಾತವದುಭುತ
ಜಾತಮಾನಸರಾಗಿ ಪೊಗಳಲು ನೋಡಲಾಗದಲಾ
ಪಾತಕರನೆನುತಡ್ಡ ಮೊಗವಿ
ಟ್ಟಾ ತೆಱದೊಳೇಕಾಂತರಾಮನು
ಭೂತಳೇಶನ ಕೈಯಲಾ ಜಯಪತ್ರಮಂ ಕೊಡಲು ೪೬

ಬಂದು ಜಿನಸಮಯಿಗಳು ಶಿವಗಣ
ವೃಂದಕಂ ಸಾಷ್ಟಾಂಗಮಾಗಲು
ವಂದಿಸುತ ಮುಂದೆಸೆಯೊಳಿರಲಂತವರ ಹಣೆಗಳಲಿ
ನಂದಿಮುದ್ರೆಯನೊತ್ತಿ ಭಕ್ತರ
ಮುಂದೆ ತೇಜೋವೀರಮಹಿಮಾ
ನಂದದಿಂ ನಿಡುಬೊಬ್ಬೆಗಳನಿಡುತಾರುತಾಡುತ್ತಾ ೪೭

CC-0. Jangamwadi Math Collection. Digitized by eGangotri

ಕವಿಕವಿದು ಬಸದಿಗಳನಧಿಕಾ
ರವದಿ ಹಿರಿದೊಡಕುಟ್ಟಿ ಜಿನರೆಂ
ಬವರ ತಲೆಗಳನೆಲ್ಲವಂ ಮುಱಿಮುಱಿದು ನುಗ್ಗೊತ್ತಿ
ಅವಿರತಂ ಕಲ್ಯಾಣದೊಳಗೆಣೆ
ಸುವರೆ ಜಿನನುಂ ಬಸದಿಯೆಂಬೀ
ಜವಳಿನುಡಿಯಿಲ್ಲೆನಲು ಪುಡಿಪುಡಿ ಮಾಡಿ ಭಕ್ತಾಳಿ ೪೮

ಜನವಱಿಯಲತಿಶೌರ್ಯಗುಣವ
ರ್ಧನನೆನಿಸಿದೇಕಾಂತರಾಮ
ಯ್ಯನ ಮಹಿಮೆಯಂ ಹೊಗಳುತಿರಲಾ ಬಸವನುಂ ತನ್ನ
ಮನದೊಡೆಯನೀ ಸಂಗಮೇಶ್ವರ
ನೆನುತ ಭಕ್ತಿಯೊಳೋಲವಿಸುತಿರ
ಲನವರತವತಿಕೀರ್ತಿಯಿಂದಾ ಆಯ್ಯನಿರುತಿರ್ದ ೪೯

ಇಂತನಂತಾನಂತಗಳೊಳೇ
ಕಾಂತರಾಮಯ್ಯನ ಕಥೆಯನ
ಶ್ರಾಂತಮುಂ ಕೇಳಿದಡೆ ಬರೆದೋದಿದಡೆ ರಚಿಸಿದಡೆ
ದಂತಿ ಹರಿ ಮೃಗರಿಪು ಭುಜಗಭೂ
ಕಾಂತ ವಿಷ ವಿಷವಹ್ನಿಬಾಧೆಗ
ಳಂತರಿಸುಗಿಷ್ಟಾರ್ಥಸಂಸಿದ್ಧಿಗಳು ಸಿದ್ಧಿಸುಗು ೫೦

ಅಂತು ಸಂಧಿ ೫೧ಕ್ಕಂ ಪದಗಳು ೨೯೬ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 1018

CC-0. Jangamwadi Math Collection. Digitized by eGangotri

ಸಂಧಿ : ೫೨

*

ಸೂಚನೆ : ಮೂದಲಿಸೆ ಸೌರಾಷ್ಟ್ರಪತಿಯಂ
ಮೋದದಿಂ ಕೋಶಾರದಲ್ಲಿಗೆ
ಮೇದಿನೀಶಂ ಪೊಗಳಿ ತಂದನು ಬಾಚರಸನಂದು

ಪಾವಕಾಂಬಕಮೂರ್ತಿ ಸೊಡ್ಡಳ
ದೇವ ಬಾಚರಸಯ್ಯನೆನಲತಿ
ಪಾವನಾತ್ಮನು ಲಿಂಗಜಂಗಮಪೂಜನಾಸಕ್ತ
ಭಾವನರಿಷಡ್ವರ್ಗಗುಣವಿ
ದ್ರಾವಣಂ ವಿಗತೇಂದ್ರಿಯಾದಿ ಮ
ನೋವಿಷಯನಭವಾನವರತಂತರ್ಗತಧ್ಯಾನಿ ೧

ಉಗ್ರಲೋಚನನಚಳಭಕ್ತಗ
ಣಾಗ್ರಗಣ್ಯನು ೧ಪರಸಮಯ ಮದ೨
ವಿಗ್ರಹಾನುಗ್ರಹಸಮಗ್ರೋದಗ್ರಬಲಶೌರ್ಯ
ವಿ೩ಗ್ರಹಂ ವಿ೪ಗ್ರಹ ಸಮಯಕುಮು
ದಗ್ರಹಾಗ್ರಣಿ ಸುಗುಣನಿಧಿ ಸ
ಮ್ಯಗ್ರಚನತಾರಾಪಥಾಶಾಪೂರ್ಣಸಿತಕೀರ್ತಿ ೨

ದುರ್ಭವಕ್ಷಯಕರನಗರ್ಭಾ
ವಿರ್ಭವಂ ನಿರ್ಭಿನ್ನಭಾವಂ
ನಿರ್ಭರಾಶಾಪಾಶಮೋಚನಕರ್ಮಕರ್ಮಠನು
ನಿರ್ಭಯಾಶ್ರಯನತುಳಬಲನಘ
ನರ್ಭವಕ್ಷಯನರುಹ ಬುದ್ಧಚ
ತುರ್ಭುಜ ಬ್ರಹ್ಮಾದಿದೇವ ಮದಪ್ರಹಾರಕನು ೩

---

* ರಾಗ : ನಾಟಿ (ಅ, ಚ, ಡಾ, ಧ, ಮ); ಸಾಳಂಗ (ಪ); ಕೇತಾರಗೌಳ (ತ).
೧–೨ ಭಕ್ತಿ ಪುಣ್ಯನು (ಕ, ಬ, ಮ). ೩ ನಿ (ಕ, ಚ, ಬ, ಮ). ೪ ನಿ (ಥ).

CC-0. Jangamwadi Math Collection. Digitized by eGangotri

ಅನ್ಯದೈವಧರಾಧರಾಶನಿ
ಅನ್ಯದೇವಾರ್ಣವಕಳಶಭವ
ಅನ್ಯದೈವಮದಾಟವೀಪಟುಶಾತನಕುಠಾರ
ಅನ್ಯದೈವಮತಂಗಮದಹರಿ
ಅನ್ಯದೈವಕುರಂಗಮೃಗರಿಪು
ಅನ್ಯದೈವಲತಾವಿತಾನವಿಲೂನಸಿತಗಾ[1]ತ್ರ ೪

ಹರನ ಘನಶೌರ್ಯತೆಯು ನಂದೀ
ಶ್ವರನ ಸರ್ವಜ್ಞತೆಯು ಭೃಂಗೀ
ಶ್ವರನ ಶಿವಲಿಂಗೈಕಭಾವನೆ ವೀರಗಣವರನ
ಪರಮರೌದ್ರತೆ ಭೃಗುದಧೀಚ್ಯಾ
ದ್ಯರ ಮಹೋದ್ಧತಶಾಪಶ[2]ಕ್ತಿಯು
ನಿರತ ಗೌತಮಮುಖ್ಯರತುಳಿತತರ್ಕಯುಕ್ತಿಗಳು ೫

ಓವಿಯಿನಿತಂ ಕೂಡಿ ಸದ್ಗುರು
ದೇವನೀ ಬಾಚರಸರಂ ಶೋ
ಭಾವಹೋನ್ನತಮೂರ್ತಿಯಾಗಲು ವಿರಚಿಸಿದನಲ್ಲ
ಭಾವಿಸುವಡಿಂತಲ್ಲದಿದ್ದಡೆ
ಭೂವಳಯದೊಳಗುದಯಿಸಿದ ರು
ದ್ರಾವತಾರದ ದಿವ್ಯ ಮಹಿಮೆಯದೆಂತಮರ್ದಪುದು ೬

ಎಂದು ಲೋಕಂ ತಮತಮಗೆ ಪಲ
ವಂದದಿಂ ಕೀರ್ತಿಸುತಿರಲು ಸಾ
ನಂದಲೀಲೆಯೊಳಮಿತಸದ್ಭಕ್ತಿಪ್ರಭಾವದಲಿ
ಸಂದು ಸಿದ್ಧಾಂತಾಗಮಶ್ರುತಿ
ವೃಂದವೇದಾಂತಪ್ರಯುಕ್ತಿಗ
ಳಿಂದ ಸಂಪಾದಿತವಿವರಣಾನುಮತಚತುರ[3]ತೆಯಿಂ ೭

---

೧ ಘಾ (ತ, ಥ, ಪ). ೨ ಭ (ಮ). ೩–೪ ದೊಳು (ತ, ನ).

CC-0. Jangamwadi Math Collection. Digitized by eGangotri

ನ್ಯಾಯ ವೈಶೇಷಿಕ ಸಮಸ್ತಾ
ಜೇಯ ಶಾಸ್ತ್ರಕಳಾ ಪುರಾಣಾ
ಮ್ನಾಯ ನಾನಾರ್ಥಾನುಮಾನಾದಿಪ್ರಮಾಣದಲಿ
ಆಯತಾಖಿಳ ತರ್ಕವಾದೋ
ಪಾಯಜಲ್ಪವಿದಂಡತತಿಯೊಳು
ಧೀಯುತಂ ಬಾಚಯ್ಯನಸಮೋದಾತ್ತಚಿತ್ತದಲಿ ೬

ಭೂರಿ ಉತ್ಪತ್ತಿಸ್ಥಿತಿವಿಲಯ
ಕಾರಣಂ ನಿತ್ಯಾತ್ಮನಜನಂ
ಬಾರಮಣನಹ ಪಶುಪತಿಯೆ ತಾನೊರ್ಬನೇ ಕರ್ತ
ಶೌರಿ ಪದ್ಮಭವಪ್ರಮುಖ ವ್ಯಂ
ದಾರಕರು ಸರ್ವರು ಪಶುಗಳು ವಿ
ಚಾರಿಸುವಡೆಂದಿದನೆ ಸಂಪಾದಿಸಿ ವಿಜೃಂಭಿಸುತ ೯

ಸವಣರಂ ತಲೆಗಳನರಿದು ವೈ
ಷ್ಣವರ ಘೋಣಾಗ್ರಂಗಳಂ ಮಿಗೆ
ಚಿವುಟಿ ಬೌದ್ಧರುಗಳ ಮದೋದ್ಧತಿಯೆಂಬ ಕಾನನವ
ಸವರಿ ಅದ್ವೈತರನಪಹರಿಸಿ
ತವಿಸಿ ಚಾರ್ವಾಕರನವನಿಯೊಳು
ಶಿವನ ಭಕ್ತಿಯ ತಾಂ ಪ್ರತಿಷ್ಠಿಸಿ ತೇಜವಂ ಮಱೆದು ೧೦

ಆಸಮಭಕ್ತಿಮಹಿಷ್ಪದಿಂ ಪ
ರ್ತಿಸುತಿರಲು ತಾಂ ವರುಷ ವರುಷದೊ
ಳೊಸೆದು ಸೌರಾಷ್ಟ್ರಕ್ಕೆ ಪೋಗಿ ಮನೋನುರಾಗದಲಿ
ಒಸಗೆಯೆಸೆಯಲು ಜಾಗರವನೆ
ಯ್ದಿಸುವ ದಿನವೆಯ್ತರಲು ಸಂತೋ
ಷಿಸುತ ಶಿವರಾತ್ರಿಗೆ ಗಮನಿಸಲುವೇಳ್ಕು ನಾನೆನುತ ೧೧

CC-0. Jangamwadi Math Collection. Digitized by eGangotri

ಪೊಡವಿಪಂಗಱಿಹಿದಡೆ ತನ್ನ ೃಪ
ನೊಡನೆ ಕೆಲಸವಪಾರವುಂಟೈ
ಪಡಿಗಳಂ ಕಣಜದೊಳಿಳಿಯಬೇ ಕೆಮ್ಮಿ ಮಣಿಹವನು
ಕೆಡಿಸಿ ಹೋಗಲುಬಾರದಿಂತೆರ
ಡೆಡೆಯೊಳೋಲಗವೆಂತು ನಿನಗಳ
ವಡುವುದಿದು ಬಾಣತಿಯ ಸೂಳೆಯ ಪಡಪಿನಂದದಲಿ ೧೨

ಮುಂತೆ ಆರಸೂಳಿಗವು ಭಕ್ತಿಯು
ಮಿಂತೆರಡುಮಂ ಕೂಡಿ ನಡೆಸುವೊ
ಡೆಂತಹುದು ಸೌರಾಷ್ಟ್ರಕೀಗಳಿ ಹೋಗದಲ್ಲದಡೆ
ಆಂತು ತತ್ಶಿವನಂ ಬರಿಸಿಕೊಂ
ಬಂತೆ ಮಾಡೇನರಿದು ನಿಮಗೆ ಮ
ಹಂತರಿಗೆ ಶಿವರಾತ್ರಿಯುಂ ಗಿವರಾತ್ರಿಯುಂ ಮತ್ತೆ ೧೩

ಮಾಡು ಮಾಡದಿರೆನ್ನ ಕೆಲಸಂ
ಮಾಡಬೇಕೆಂದೆನುತ ಕಿಟಕಿಯ
ನಾಡಿ ಬಿಜ್ಜಳನನ್ಯರನುಮತದಿಂದ ಹೋಗದಿರು
ಬೇಡೆನುತ ನಿಲಿಸಿದಡೆ ನಸುನಗೆ
ಮೂಡಿ ಹೋಗದೆ ನಿಂದು ತನ್ನಯ
ಕೂಡೆ ಭೂಪತಿ ಮೂದಲಿಸಿ ನುಡಿಯಲ್ಕೆ ಹೋಹುದದು ೧೪

ಕಷ್ಟವಲ್ಲಾ ಆತನೆಂದಂ
ತಿಷ್ಟ ಸೊಡ್ಡಳದೇವನೆಲ್ಲರ
ದೃಷ್ಟಿಗೋಚರವಾಗಲಿಲ್ಲಿಗೆ ಬಹನದಲ್ಲದಡೆ
ಸೃಷ್ಟಿಯಜಿಯ ಲುವಲ್ಲಿಗಾಂ ಪೋ
ಪೈಷ್ಟ ಮಾಡಿಹನಲ್ಲದೇ ಹಿಮ
ಘೃಷ್ಟಿಶೇಖರನೆನ್ನ ನೇಮವನೆಂತು ತಪ್ಪಿಸುವ ೧೫

೧–೨ ಕೆಂಬ (ಬ); ಕೆಂದು (ಕ. ಚ. ತ. ನ. ಮ). ೩ ಪ (ಕ. ಚ). ೪–೫ ಲ್ಕಲ್ಲಿಗಾ (ಆ. ತ. ನ); ಲುವಲಸಿಗಾ (ಸ).

CC-0. Jangamwadi Math Collection. Digitized by eGangotri

ಎಂದು ನಿಶ್ಚಿಂತಾತ್ಮನಾಗಿರ
ಲಿಂದುಚೂಡನು ಸುತ್ತಿದೋಲೆಯ
ನೊಂದು ನಂದಿಯ ಹಳವಿಗೆಯನಾಗಳು ಹಿಡಿದುಕೊಂಡು
ಮುಂದೆವಸದಲಿ ಹಗಲು ಪಡಿಹರಿ
ಯುಂದದಲಿ ಕಣಜಂಗಳಿಗೆ ಹರಿ
ತಂದು ಪಡಿಗಳನಳೆವ ಬಾಚರಸಂಗೆ ಇಂತೆಂದ ೧೬

ಹಿಂದೆ ಸೋಮೇಶನು ಬರುತ್ತಂ
ಮುಂದೆಯೆನ್ನಂ ಕಳುಹಿದಡೆ ನಾ
ತಂದೆ [೧]ನೀನಿದ[೨] ನೋಡಿಕೋ ಶಿವನಟ್ಟಿದೋಲೆಯನು
ಸಂದೆಹವ ನೀನುಡುಗು ನಾಳೆ
ಯ್ತೆಂದಹನು ಸೌರಾಷ್ಟ್ರಪತಿ ರತಿ
ವೊಂದಿ ಬಿಡದಿರವೇಳ್ಕು ನಿನ್ನಯ ಸನ್ನಿವಾಸದಲೆ ೧೭

ಹಿರಿಯ ಕಣಜದ ದವಸವೇನುಪ
ನಿರಿಸದೀಗಳೆ ತೆಗೆಸು ಸೋಮೇ
ಶ್ವರನೊಸೆದು ನಿನಗಿಲ್ಲಿಯೇ ಪ್ರತ್ಯಕ್ಷವಾದಹನು
ನಿರುತವೊರೆದೆನೆನುತ್ತವಾಯಪ
ಸರದೊಳಾತನು ಮಾಯವಾಗಲು
ದರಹಸಿತಮುಖನಾಗುತಂ ಬಾಚರಸನಿಂತೆಂದ ೧೮

ವರದನಾಗೆಮ್ಮೆಡೆಗೆ ಸೋಮೇ
ಶ್ವರನವಶ್ಯಂ ಬಪ್ಪುದದು ನೆಲೆ
ಪರಿಕಿಸುವಡೆಂತೆನಲು ನಂಬಿಸಬಂದನೇ ಮುನ್ನ
ಎರಡಯಿದುಶಿರದಸುರಪತಿಗೋ
ಸರಿಸಿ ಆಲ್ಲಿಯೆ ನಿಂದನಲ್ಲಾ
ಪುರಹರಂ ತಾನೆಂದಿದಂ ನೀವಿಂತು ನುಡಿಯದಿರಿ ೧೯

೧–೨ ನಿದ ನೀ (ತ. ಧ. ನ).

CC-0. Jangamwadi Math Collection. Digitized by eGangotri

ಭಕ್ತನೇ ಆತನು ಘನತಪೋ
ದ್ಯುಕ್ತಭಾವಫಲಪ್ರಭಾವದ
ಶಕ್ತಿವಂತನದಲ್ಲದೇ ಆರೈದು ನೋಡಿದಡೆ
ಭಕ್ತರೊಳು ಸಲೆ ಸಂದುವಡೆದನು
ಭಕ್ತರಿಗೆ ಹಿಡಿವಡೆವನಲ್ಲದೆ
ಭಕ್ತಹೀನರಿಗೇಕೆ ಸಿಕ್ಕುವನೀಶ್ವರೇಶ್ವರನು ೨೦

ಲಲಿತಭಕ್ತಿಗೆ ಕೂರ್ತಲಾ ಭೂ
ತಳವಱಿಯೆ ಗುಡ್ಡವ್ವೆಗಂ ಮನ
ವಲರ್ದಿದಿರ್ವಂದಲ್ಲಿಯೇ ಸಿಕ್ಕಿದನಲಾ ಶಿವನು
ಬಳಿಕ ಆದಯ್ಯಗಳ ಭಕ್ತಿಗೆ
ಸುಲಭನಾಗೆಯಿತಂದು ಹುಲಿಗೆಱೆ
ಯಲಿ ಬಿಡದೆ ನೆಲಸಿದನಲಾ ಸೋಮೇಶನಂತಾಗಿ ೨೧

ಆವ ಪರಿಯಿಂದಿಲ್ಲಿಗೆನ್ನಯ
ದೇವನೆಯ್ತಪ್ಪಂ ದಯಾಮಯ
ಭಾವಿ ತಾನೇ ಬಂದನಾ ಪಡಿಹಾರಿವೇಷದಲಿ
ಆವ ಪಡಿಪರಿಗಿಂತದೃಶ್ಯಾ
ಭಾವನತೆ ದೊರಕೊಂಬುದೇ ಜಿತ
ಭಾವಜಂಗಲ್ಲದೆಯೆನುತ ನಿಶ್ಚೈಸಿ ಮನಸಿನಲಿ ೨೨

ಪರಮಹರುಷಾಶ್ರುಗಳು ಭೋರೆನೆ
ಸುರಿವುತಿರೆ ನಯನಂಗಳಲಿ ಶಂ
ಕರನಿರೂಪದ ಲೇಪೆಯಂ ತಾಂ ಶಿರಸಿನಲಿ ಧರಿಸಿ
ಪುರವರವನಿಂತಪ್ಪಶೋಭಾ
ಭರಿತದೊಳು ಮಾಡಿಸಿ ಅನಘ ಬಾ
ಚರಸನಾನಂದಾತ್ಮದೊಳು ಬೆಳಗಾಗಲಂತೊಡನೆ ೨೩

CC-0. Jangamwadi Math Collection. Digitized by eGangotri

ಬಸವರಸರುಂ ಭಕ್ತರುಂ ತಾ
ವಸಮ ಒಡ್ಡೋಲಗವನಿತ್ತೂ
ರ್ಜಿಸುವ ಹೆಂಪಿಂದಿಪ್ಪೆಡೆಯೊಳೆಡೆಗೆಡೆಗೆ ಪಾಡುತ್ತ
ರಸವೊಸರುತಿರಲಲ್ಲಿಗಲ್ಲಿಗೆ
ಪೊಸಪರಿಯೊಳಾಡುತ್ತವಾನಂ
ದಿಸುತ ಸೋಮೇಶ್ವರನ ಬರವಿಂಗಿದಿರುಗೊಳುತಿರಲು ೨೪

ಬಂದನದೆ ಬಂದನು ನಭಸ್ಥಳ
ದಿಂದೆ ಬಂದನು ಸೋಮನಾಥನು
ಬಂದನಿದೆಯೆನಲೇಳು ವಾರಾಸಿಗಳು ಘೂರ್ಣಿಸುವ
ಛಂದದಲಿ ಗಂಭೀರವಾದ್ಯಾ
ಮಂದಘೋಷಣವೆಸೆವುತಿರೆ ಭೋ
ರೆಂದುಲಿವ ಪಿರಿಯ ಧ್ವನಿಗಳುಜಿ ಕೇಳಬರುತಿರಲು ೨೫

ಪುರಜನಂಗಳು ವಿಸ್ಮಿತಾಂತಃ
ಕರಣರಾಗುತ ಜಯಜಯಧ್ವನಿ
ನೆರೆಯೆ ಮುಗಿದ ಕರಂಗಳಿಂದಾಲೋಕಿಸುತಮಿರಲು
ಸರಸರನೆ ಸೌರಾಷ್ಟ್ರನಾಥನು
ಪಿರಿಯ ಕಣಜವನೊಡೆದುಕೊಳುತಂ
ಕರಮೆಸೆದು ಧರೆಯೊಳ್ ಪ್ರತಿಷ್ಠಿತನಾದನರಿದೆನಲು ೨೬

ಎಲ್ಲರಟಿಯಲು ಮುನ್ನ ಪರ್ವತ
ದಲ್ಲಿಗೆಯ್ದಾ ಸಿದ್ಧರಾಮಂ
ಮಲ್ಲಿಕಾರ್ಜುನನಂ ಪ್ರಬೋಧಿಸಿಯಲ್ಲದೇ ಬಳಿಕ
ಅಲ್ಲಿ ಸೊನ್ನಲಿಗೆಯ ಪುರಕೆ ತೆರ
ಲಿಲ್ಲದಿರ್ದನು ಬಾಚರಸನಿಂ
ತಿಲ್ಲಿಗೀಗಳು ಬರಿಸಿಕೊಂಡನು ಸೋಮನಾಥನನು ೨೭

---

೧ ರ್ಮಿ (ಸ). ೨–೩ ಡ । ವಿ (ತ. ನ. ಮ).

CC-0. Jangamwadi Math Collection. Digitized by eGangotri

ಇಂತು ನಿಶ್ಚಳಭಕ್ತಿಯುಳ್ಳ ಮ
ಹಂತನುಂಟೇ ಎನುತ ಭಕ್ತರ
ಸಂತಪರಿಯಲಿ ಕೀರ್ತಿಸುತ್ತಂ ಪರಿಣಮಿಸುತಿರಲು
ಸಂತಸಂ ಮಿಗೆ ಬಿಜ್ಜಳಕ್ಷಿತಿ
ಕಾಂತನುಂ ತಾ ಬಂದತಿಶಯಾ
ಕ್ರಾಂತಮಾನಸನಾಗುತಂ ಸಾಷ್ಟಾಂಗದಲಿ ನಮಿಸಿ ೨೮

ಜನಪನಖಿಳನಿಯೋಗಮುಂ ಜಯ
ಎನುತಿರಲು ಬಸವರಸನುಂ ನಯ
ವಿನಯದಿಂದಾ ಬಾಚಿರಾಜನನಂಕಿಸುತಮಿರಲು
ಅನಿತಱಿಸೊಳು ಕಣಜಂಗಳಂ ಘೆ
ಮ್ಮನೆ ಹಿರಿದು ನೆಲಗಟ್ಟ ಕಟ್ಟಿಸಿ
ಕನಕ ನವನವರತ್ನ ಮಯ ಶಿವಭವನಮಂ ರಚಿಸಿ ೨೯

ಪರಿವೃತಪ್ರಾಕಾರವಂ ಗೋ
ಪುರವನೆತ್ತಿಸಿ ಸರ್ವ ಸಂಭ್ರಮ
ವೆರಸಿ ಬಾಚರಸಯ್ಯನಾ ಶಿವರಾತ್ರಿನೇಮವನು
ಹರುಷದಿಂ ಸಲಿಸಿದನು ಜನರ
ಚ್ಛರಿವಡಲು ಕೋಠಾರಸೋಮೇ
ಶ್ವರನೆನಲು ಲೋಕಪ್ರಸಿದ್ಧದೊಳೆಸೆದನವನಿಯಲಿ ೩೦

ಆವಗಂ ಕಟಕದೊಳು ಸೊಡ್ಡಳ
ದೇವಬಾಚರಸಂ ಸುಭಕ್ತಿವಿ
ಭಾವದಿಂ ಪರಸಮಯಕೊಳಾಹಳಮಹಿಮೆವೆತ್ತು
ಭೂವಿನುತನಾಗಿರಲಸಹ್ಯಾ
ಭಾವದಿಂ ಸೊಗಸದೆ ಶಿವೈಕ್ಯಗೆ
ಭೂವರಂ ಪ್ರಾತಾಪನಾರಾಯಣ ಪುರದ ನಡುವೆ ೩೧

೧–೨ ದಿಂ (ತ, ನ). ೩–೪ ಭಾವಿಸು (ಬ).

CC-0. Jangamwadi Math Collection. Digitized by eGangotri

ಪುರದ ಪರವಾದಿಗಳು ತಾನುಂ ಶಾಪ:೭
ನೆರೆದು ಗೋವಿಂದಪ್ರಭುವೆಯಂ
ಕರಮೆಸೆಯೆ ಮಾಡಿಸಿ ಬಳಿಕವೊಂದಭಿನವಾಲಯವ
ವಿರಚಿಸಲು ಶುಭದಿನ ಮುಹೂರ್ತಂ
ಬೆರಸಿ ಆ ಪೊಳಲೊಳು ಪ್ರತಿಷ್ಠಿಸಿ
ಆರಸನೋಲಗವಿತ್ತು ಸಕಳ ನಿಯೋಗವೊಲ್ಮೈಸೆ

ಕುಳ್ಳಿತಿರ್ದಾ ಬಿಜ್ಜಳಂ ತಾ ೮
ನೆಲ್ಲರಂ ನೋಡುತ್ತ ಬಾಚಿರ
ಸಿಲ್ಲಿಗೇತಕೆ ಬಾರನಿಂತಿದನಱಿಯನೋ ಮುನ್ನ
ಬಲ್ಲನೋ ಬಗೆಗೊಳ್ಳನೋ ೞ
ನ್ನೊಲ್ಲನೋ ತಮ್ಮೋಲಗವನಂ
ತಲ್ಲದಡೆ ತಾಂ ಭಕ್ತನೆಂದೋ ಈ ಮಹಾಸಭೆಯ ೯

ಓಲಗಕೆ ತಾಂ ಬಾರನೆನುತಾ
ಭೀಳಕೋಪಂ ಮುಸಗುವವನೀ
ಪಾಲಕಂಗೆಂದನು ಬಸವನೆಲೆ ಕೇಳರಸ ನಿಮ್ಮ
ಊಳಿಗವ ತಪ್ಪಿಸಿದನಾದಡೆ
ಕಾಳಗದೊಳೋಡಿದಡೆ ತಪ್ಪಿನ
ಮೇಲೆ ದಂಡಿಸಿದಡೆ ಉಚಿತವಹುದಲ್ಲದೇ ಬಳಿಕ ೧೦

ಜನವರನೆ ಕೇಳನ್ಯದೈವದ
ಮನೆಗದೇತಕೆ ಬಾರರವರೆಂ
ದೆನಲಹುದೆ ಪತಿ ಜೋಳವಾಳಿಗೆ ಮೇಳವಾಗಿರ್ದು
ಕನಲಲಹುದೇ ಅನ್ಯದೈವಸ
ದನಕೆ ಭಕ್ತರು ಬಹರೆ ಹುಗುವರೆ ೧೧
ನೆನೆವರೇ ನೋಡುವರೆ ಕೇಳ್ವರೆ ತಾನದೆಂತೆನಲು

೧–೨ಯ । ನಿ (ತ, ನ, ಬ). ೩–೪ ವೇಳೆಯಾಳಿಗಿದು (ತ, ಥ, ಧ, ನ, ಪ, ಬ); ಮೇಳೆಯೊಳಿನಿತು (ಚ); ವೇಳವಾಗಿನಿತು (ಮ). ೪–೫ ಕನಲುಬಹುದೇ (ಬ).

CC-0. Jangamwadi Math Collection. Digitized by eGangotri

ಲಿಂಗನಿಷ್ಠೈಕಪ್ರಲೀನನು
ಭೃಂಗಿನಾಥನನಂಗರಿಪುವ
ರ್ಧಾಂಗಿಯಹ ಪಾರ್ವತಿಗೆ ನಮಿಸದೆ ಶಿವನ ಬಲದೆಸೆಗೆ
ಹಿಂಗದಭಿವಂದಿಸಿದನೆಂದಡೆ
ಹಂಗೆ ಮಾಹೇಶ್ವರರಿತರ ದೈ
ವಂಗಳಂ ಕೈಕೊಂಬರೇ ಕೇಳ್ ಮತ್ತೆ ಭೂನಾಥ ೩೬

ಸುಮತಿಘಂಟಾಕರ್ಣನೊರ್ಬ
ಪ್ರಮಥವರನೆಂದುವನಿತರ ಶ
ಬ್ದಮನಿನಿತುಮಂ ಕೇಳದಿಪ್ಪುದೆ ನೇಮವಂತಾಗಿ
ಅಮಿತಕರ್ಣಂಗಳೊಳನೇಕಂ
ನಿಮಿರ್ದು ಘಣಘಣ ಎಂದು ಮೊರೆವಾ
ಕ್ರಮಿಪ ಘಂಟೆಗಳಿಂದ ಘಂಟಾಕರ್ಣನೆನಲೆಸೆದ ೩೭

ಮತ್ತೆಯರಿಯಮರಾಜನೆಂದಱಿ
ವತ್ತುಮೂವಱಿಗತ್ತ ಮುನ್ನಲು
ದಾತ್ತಬುದ್ಧಿ ಮಹೇಂದ್ರಮಂಡಲವೆಂಬ ಪುರದೊಳಗೆ
ಉತ್ತಮೋತ್ತಮ ಭಕ್ತಿನಿಷ್ಠಾ
ವೃತ್ತಿಯಲಿ ಲಿಂಗೈಕಭಾವಂ
ಬೆತ್ತು ನಡೆವುತ ತನ್ನಿದಿರೊಳಾದನ್ಯ ಶಬ್ದವನು ೩೮

ಹೆಸರುಗೊಂಡವನಂ ಕೊಲುವನೆಂ
ಬಸಮಭಾಷೆಯೊಳಿರುತಿರಲು ಛಾಂ
ದಸನದೊರ್ಬನು ಭೂಸುರೇಂದ್ರನು ಭಿಕ್ಷವಂ ಬೇಡಿ
ರಸಿಕದಿಂ ಶ್ರೀರುದ್ರವಂ ಪಠಿ
ಯಿಸುತ ಮನೆಗೆಯ್ತರಲರಿಯಮಂ
ಒಸೆದು ತಾನೇ ತಂದು ಭಿಕ್ಷವನಿಕ್ಕಲೊಡನಲ್ಲಿ ೩೯

---

೧ ವೀ (ಮ). ೨–೩ ನೆಂದೆ (ಧ).

CC-0. Jangamwadi Math Collection. Digitized by eGangotri

ಒಂದಗುಳು ನೆಲದಲ್ಲಿ ಬೀಳಲು
ಸಂದಣಿಸುತಂತನ್ಯಶಬ್ದವ
ನೊಂದಿ ನುಡಿಯಲು ಕಯ್ಯ ಸಟ್ಟುಗದಿಂದ ಕೆಡೆಹೊಡೆದು
ಕೊಂದು ಪಾರ್ಬನನೆಳೆದು ಹಾಯ್ಕಲು
ಬಂದಕಟ ಕಾಣುತ್ತೆ ದೋಷವಿ
ದೆಂದು ಭಾವಿಸದರಿಯಮಂ ಮಾಡಿಹಿದನು ಭೂಸುರನ ೪೦

ಭಾವ್ಯವಹುದೇ ಬ್ರಾಹ್ಮಣನಹಂ
ತವ್ಯಮೆನೆ ವೇದೋಕ್ತಿಯದು ಕ
ರ್ತವ್ಯಮೇ ಸ್ವಾಧ್ಯಾಯಪರನಹ ಭೂಸುರೋತ್ತಮನ
ಭವ್ಯನೆಂದುಂ ವಂದನೆಯ ಭೋ
ಕ್ತವ್ಯವಯ್ಯೋ ಬೇಡಿದತಿಥಿಗೆ
ಸೇವ್ಯಭಿಕ್ಷವನಿಕ್ಕುವುದು ನಡೆಯೆಂಬುದಿಲ್ಲದಡೆ ೪೧

ಇಂದು ಕೊಲುವರೆ ಎನುತ ಕುಪಿತಾ
ಕ್ರಾಂತರಾಗುತ ಭೂಸುರರು ಭೂ
ಕಾಂತನಲ್ಲಿಗೆ ಹೋಗಿ ಹೇಳಿದರವಿಧಿಗಳನಿಡುತ
ಮುಂತೆ ಉಲಿವವರುಲುಹನಾಲಿಸಿ
ಅಂತರಸನಾಕ್ಷಣದೊಳಾ ಮದ
ನಾಂತಕನ ಸದುಭಕ್ತನಂ ಕರೆತರಿಸಿಯಿಂತೆಂದ ೪೨

ಏತಕರಿಯಮನೇನು ಮಾಡಿದ
ನೀತನಪರಾಧವನಕಟ ದುರ್
ನೀತಿಯಲಿ ವಧಿಸುವರೆ ನೀನೀ ಬ್ರಾಹ್ಮಣೋತ್ತಮನ
ಭೂತದಯವುಳ್ಳುದಕೆ ಫಲವೇ
ಪಾತಕವಲಾ ಭಕ್ತನಾಗಿ
ರ್ದೇತಱದು ನಿನ್ನಾಚರಣೆ ವಿದ್ವಾಂಸನಂ ಕೊಂದೆ ೪೩

೧–೨ ಡುಪಿ (ತ, ನ).

CC-0. Jangamwadi Math Collection. Digitized by eGangotri

ಹೇಳು ಮೇಣ್ ತಪ್ಪಾವುದಾತನ
ಮೇಲೆ ನಿನ್ಗಂ ಕಾಯ್ದಪೆವಿದಂ
ಹೇಳದಡೆ ಸರಿಮಾಡಿದಪೆವೆನಲರಿಯಮನು ನಗುತ
ಹೇಳಬಾರದು ಮಾತು ಪಲವಂ
ಹೇಳಲೇತಕೆ ಕೊಂದೆನರಸಾ
ಕೇಳು ಕೊಲೆಯೇಂದವನದಱ ವಿಧಿಯಂ ಶಿವನೆ ಬಲ್ಲ ೪೪

ಕಾವಡಂ ಕೊಲುವಡೆ ಸಮಸ್ತಕೆ
ದೇವನೊರ್ಬನೆ ಕರ್ತನಲ್ಲದೆ
ಕಾವಡಂ ಕೊಲುವಡೆಯಿದಕೆ ನೀ ಕರ್ತನೇ ಎನಲು
ಭೂವರಂ ಭವಿಯೊಡನೆ ಸುಬ್ರತ
ಶೈವನಂ ಸರಿಮಾಡುವುದು ದುರ್
ಭಾವವೆನ್ನದೆ ಮದಿಸಿ ಕೊಲಲೆಂದವನ ಹೆಣನೊಡನೆ ೪೫

ಧರಣಿಪಾಲಕನಾಗ ಕಳುಹಿದ
ಡರಿಯಮರಸಂ ಮರಳಿ ಬರುತಂ
ಹರನಿಳಯದೊಳು ಪೊಕ್ಕು ತಾನಗ್ಗವಣೆಯಂ ಕೊಡುತ
ಪರಮಪಾತಕನೊಡನೆಯೆನ್ನುವ
ನಿರಿಸಿ ಸರಿಮಾಡುವರೆ ಪರಮೇ
ಶ್ವರ ಉಮಾವರ ಹರಿಣಧರಧರ ವರದನಾಗೆನಲು ೪೬

ಆರಿಯಮರಸನ ಲಿಂಗನಿಷ್ಠೆಗೆ
ನಿರತನಿರ್ಮಳಭಕ್ತಿಭಾಷೆಗೆ
ವರದನಾಗಿ ಮಹೇಶ್ವರನು ಹೃದಯಾನುರಾಗದಲಿ
[೨]ಧರಣಿಸುರನಿವ[೩]ನೊಡನೆಯಿತರೇ
ತರ ಕುಭಾಷೆಯ ಕೂಡೆ ಮತ್ಪ್ರಿಯ
ಶರಣನಂ ಸರಿಮಾಡಬಹುದೇ ಎನುತ ಕರುಣದಲಿ ೪೭

೧ಹ (ಸ). ೨-೩ ನರವರೇಶ್ವರ (ಬ); ಪರಸುರಸ್ಮರ (ಸ).

CC-0. Jangamwadi Math Collection. Digitized by eGangotri

ರಕ್ಷಿಸುವೆನೊಲವುಣ್ಮೈಯಿನಿತುಮ
ನಕ್ಷತಂಗೊಳಲೇಕೆಯೆನ್ನಯ
ವಕ್ಷಮಂ ತೆಱಿದಪೆನು ಹುಗುಹುಗು ಅರಿಯಮಾ ಎನಲು
ಆ ಕ್ಷಣದೊಳಾ ಲಿಂಗಮೂರ್ತಿಯ
ಕುಕ್ಷಿಯೊಳು ಹುಗುತಿರ್ದನೈಸಱಿಂ
ವೀಕ್ಷಿಸುತ ತಳವಾಱಿರದೆಯಿದೆ ಪೋದನೆಂದೆನುತ ೪೮

ಹಿಡಿಯಪೋಪುದಱಿಂದ ಮುನ್ನವೆ
ಮೃಡನ ಹೊಱಿಗೊಮ್ಮಾರುಸೀರೆಯ
ಕಡೆಸೆಱಿಂಗಿರೆ ಲಿಂಗದೊಳಗಾತಂ ಪ್ರವೇಶಿಸಿದ
ಪೊಡವಿಯೊಳು ಶಿವಭಕ್ತರುಗಳಾ
ವೆಡೆಯೊಳುಂ ಪರದೈವವೆಂಬಾ
ನುಡಿಯನಾಲಿಸದದಕೆ ಅರಿಯಮನಂಬರವೆ ಸಾಕ್ಷಿ ೪೯

ವೀರ ಶಂಕರ[೧]ದಾಸ[೨]ನೊರ್ಬನು
ವೀರಭಕ್ತನು ಮತ್ತೆಯಾತನ
ವೀರಭಕ್ತಿಚರಿತ್ರಮಂ ಕೇಳ್ ಕನಸಿನೊಳಗಾಗಿ
ಸಾರಧೀರನು ಪರಸಮಯಿಗಳ
ನಾರುವಂ ಪರದೈವಗಳನವಿ
ಚಾರದಿಂ ಮುಟ್ಟಿನು ನೆನೆಯನವರೊಡನೆ ಮಾತಾಡ ೫೦

ತನಗೆ ನೇಮವದಾಗಿ ಗೌರೀ
ಶನ ಪದಾಬ್ಜವನೊಸೆದು ಪೂಜಿಸು
ತನುನಯದೊಳಾಚರಿಸುತಿರಲಂತೊಂದು ದೆವಸದಲಿ
ಇನಿತು ನಿದ್ರಾವಸ್ಥೆ ಮುಸುಕಲು
ಕನಸಿನಲು ಮುಟ್ಟಿದನು ಬೌದ್ಧನು
ಎನುತವತಿ ಖಿತಿಗೊಳುತ ತನ್ನೊಳು ತಾನೆ ತಿಳಿದೆದ್ದು ೫೧

೧–೨ ನೆಂಬ (ಥ. ಸ).

CC-0. Jangamwadi Math Collection. Digitized by eGangotri

ಕುನ್ನಿ ಮುಟ್ಟಿದ ಘಟನೆ ವಿಧಿಯೇ
ನಿನ್ನು ಸುಟ್ಟಡೆ ಸಾಕಲಾ ೀದ
ಱಂ ನಿವಾಡವಿದಕ್ಕೆನುತ ಕೃತನಿಶ್ಚಯದೊಳಾತ
ಉನ್ನತಶ್ರೀಗಿರಿಗೆ ಬಂದು ಸ
ಮುನ್ನತಿಯೊಳಾ ಹಾಟಕೇಶ್ವರ
ಸನ್ನಿಧಿಯೊಳುರು ವಿಸ್ಫುಲಿಂಗಂಗಳು ಸಮುಜ್ವಳಿಸೆ ೫೨

ಬೆಳಗುವನಲಂ ಧಗಧ್ಗಿನೆ ಶಕೆ
ಬೆಳಿದುರಿವುತಿಹ ಕಬ್ಬುನದ ಕಾ
ವಲಿಯೊಳಗೆ ಕುಳ್ಳಿರ್ದು ರೌದ್ರೋದ್ರೇಕ ವೃತ್ತಿಯಲಿ
ಥಳಥಳನೆ ಕಾಹೇಱಿದದಱಿಲಿ
ನಲಿದು ಬತ್ತೀಸಾಯುಧಂಗಳಿ
ನಲಘುಮತಿಯಲಿ ವೀರಗೆಲಸವನಾಚರಿಸಿ ಮುನ್ನ ೫೩

ಮದನರಿಪುವಂ ಕುಱಿತು ಮೆಚ್ಚಿಸಿ
ಪದುಳದಿಂ ಸಾಯುಜ್ಯಪದವಿಯೊ
ಳೊದಗಿ ಪಡೆದನು ನಿಮಿಷದಲಿ ಶಿವಭಕ್ತರಂತಾಗಿ
ಹೃದಯದೊಳು ಪರದೈವಭಾವನೆ
ಯದು ಕನಸಿನೊಳಗಿಲ್ಲದಿಹುದಕೆ
ವಿದಿತವಲ್ಲಾ ಭೂವಳಯದೊಳು ಮತ್ತೆ ಕೇಳರಸ ೫೪

ಶಂಕರನ ಗಣಕಿಂಕರಂ ಶಿವ
ಲಿಂಕ ಮಂಚಯ್ಯಂ ಕುಸಮಯ ಗ
ಜಾಂಕುಶಂ ನಿಶ್ಶಂಕನಹಿತಭಯಂಕರಂ ಶರಣ
ಕಿಂಕರಂ ನಿರಹಂಕರಣ ವಿನ
ಯಾಂಕುರಿತನಕಳಂಕ ಭಕ್ತಿಗು
ಣಾಂಕ ನಿತ್ಯಶುಭಾಂಕರಾಂಚಿತ ಸಂಕಲಿತ ದೇಹ ೫೫

೧ಳ (ಧ, ಪ).

CC-0. Jangamwadi Math Collection. Digitized by eGangotri

ಶ್ರೀಮಹಾಕಾಶಿಯೊಳು ತತ್ಪುರ
ಧಾಮವಿಶ್ವೇಶ್ವರನನತಿಶಯ
ನೇಮವಾಗಲು ತನ್ನ ಹತ್ತು ಬೆರಳ್ಗಳಂ ಕಡಿದು
ಪ್ರೇಮದಿಂದರ್ಚಿಸಿ ಪಡೆದನಭಿ
ರಾಮವೆನಲಿಂತು ತ್ರಿಕಾಲಂ
ಭೂಮಿಜನವಚ್ಚರಿವಡುತ ಕೀರ್ತಿಸಲು ವರ್ತಿಸುತ ೫೩

ಒತ್ತರಿಪ ಸಿತಕೀರ್ತಿಯೊಳು ಪ್ರಭೆ
ವೆತ್ತು ಪರದರುಶನದ ಮೂಗಿನ
ಕತ್ತಿಯೆಂಬಾ ಕೆಕ್ಕೆಯವನಾ ಪುರದೊಳಿತ್ತಿಸಿದ
ಉತ್ತಮಂ ಶಿವಭಕ್ತಿಪದಮೇ
ಚಿತ್ತಜಾರಿಯೆ ಕರ್ತನೊರ್ಬನೆ
ನುತ್ತ ಸಂಪಾದಿಸಲಖಿಳಸಮಯಿಗಳು ನಡೆತಂದು ೫೪

ನೆರೆದು ವಾರಾಣಸಿಯೊಳು ಗದಾ
ಧರನ ದೇಗುಲದೊತ್ತಿನಲಿ ಸಭೆ
ವೆರಸಿ ಕುಳ್ಳಿತು ತರ್ಕದುನ್ಮುಖರಾಗಿ ಕರೆಸಿದಡೆ
ಶರಣ ಮಂಚಣ ಪಂಡಿತರು ಸುರು
ಚಿರಮಹಿಮೆಯಲಿ ಕರಮೆಸೆದು ನಡೆ
ತರಲಿತರ ಸಮಯಿಗಳು ತಾವೊಂದೊಂದು ಮತಿಗಳಲಿ ೫೫

ಹೊಂಗಿ ಮದಿಸುತ ತಮ್ಮ ಶಾಸ್ತ್ರಮ
ತಂಗಳಿಂ ಪ್ರಶ್ನೆಗಳನೆತ್ತಿ ಕ
ಡಂಗಿ ತೋಱಿಲ್ಕವರೊಳೊಂದೊಂದಕ್ಕೊಡಂಬಡಿಸಿ
ಸಾಂಗದಿಂದ ಪುರಾಣ[೧]ಸೂಕ್ತ್ಯಾ[೨]
ರ್ಥಂಗಳೊಳು ಬಹುಸಮಯಿಗಳ ಚಿ
ತ್ತಂಗಳೊಳಗಹುದಹುದೆನಿಸಿ ಚಾತುರ್ಯಧುರ್ಯದಲಿ ೫೬

೧–೨ ಶೋಕಾ (ಸ).

CC-0. Jangamwadi Math Collection. Digitized by eGangotri

ಸಕಳಶಾಸ್ತ್ರಪುರಾಣಸಾರ
ಪ್ರಕಟವಿಪುಳಾರ್ಥಪ್ರವಾದ
ಪ್ರಕರದಿಂ ವಿಖ್ಯಾತಿಯೆಸೆಯಲು ತೋಱುತಂ ಬಳಿಕ
ವಿಕಟವೇದಾಗಮನಿರೂಪಿತ
ಸುಕರನಾನಾರ್ಥಂಗಳಿಂ ಗೆಲಿ
ದಕುಟಿಲಾತ್ಮನು ಮಂಚಣಾಚಾರ್ಯನು ಮೆಱಿವುತಿರಲು ೬೦

ಮತ್ತೆಯುಂ ಪರಸಮಯಿಗಳು ಬಾ
ಯೆತ್ತಲಂಜಿಂತೆಂದರಾತಂ
ಗುತ್ತರವನೀವೋದುಗೀದುಗಳೇಕೆ ಪಲ[೧]ವಿನ್ನು[೨]
ಇತ್ತಲೀಗಳೆ ತೋಱಿ ದೃಷ್ಟವ
ನುತ್ತಮರು ನೀವೆನಲು ಗಹಗಹಿ
ಸುತ್ತ ನುಡಿದನು ಶರಣನಾ ಉನ್ಮತ್ತಚಿತ್ತರಿಗೆ ೬೧

ತನಗೆ ತಾನೇ ಹೋಗಲಚ್ಯುತ
ನೆನಿಪನಂ ಕೊಂಡೊಯ್ದು ವಿಶ್ವೇ
ಶನ ಪದಾಬ್ಜಕೆ ಹೊಡವಡಿಸಿದಪೆನಿನ್ನು ನೋಡೆನುತ
ಜನವತಿಶಯಂ ಬಟ್ಟು ಪೊಗಳಲು
ಮನಸಿಜಾಂತಕಭಕ್ತತಿಯಂ
ನೆನೆದು ಮಂಚಣಪಂಡಿತರು ಪರವಾದಿಯೆದೆಗುದಿಯೆ ೬೨

ತಡವರಿ[೩]ಸದೆಲೆ ಚಕ್ರಧರ ನಿನ
ಗೊಡೆಯನಾಗಿಹ ವಿಶ್ವಪತಿಗಂ
ಹೊಡವಡುವೆ ಪೊಱಮಟ್ಟು ಬಾರಾ ಎಂಬ ಸಮಯದಲಿ
ನಡುಗಿ ಮಂಚಯ್ಯನ ಬೆಸನಮಂ
ಪಡೆದು ತಾನೆ ಗದಾಧರನು ಪೊಡ
ವಡುತ ತನ್ನಾವಾಸಮಂ ಪೊಱಮಟ್ಟು ಬಟ್ಟೆಯಲಿ ೬೩

೧–೧ ವೇನು (ತ, ನ, ಬ). ೩ ಡಿ (ತ, ನ).

CC-0. Jangamwadi Math Collection. Digitized by eGangotri

ಸಸಿನೆ ನಡೆತರಲಸಮಭಕ್ತ
ಪ್ರಸರಸಹಿತಂ ಮಂಚಣಾರ್ಯನು
ಜಸವೆಸೆಯೆ ಮುಂದೆಸೆಯೊಳಾನಂದಿಸುತವೆಯ್ತರಲು
ಬಿಸರುಹಾಕ್ಷನ ಬಳಿವಿಡಿದು ಸಂ
ತಸವಱಿತು ಬಸವಳಿದು ದುಗುಡಂ
ಮುಸುಕುತಿಹ ಮುಸುಡುಗಳಿನೆಲ್ಲಾ ದರುಶನರು ಬರಲು ೮೪

ಸಂದಣಿಸುತ ಸಮಸ್ತರದುಭುತ
ವೊಂದಿ ನೋಡುತ್ತಿರಲು ಹರಿಯಂ
ತಂದು ವಿಶ್ವೇಶಂಗೆ ಹೊಡಪಡಿಸಿದನು ಮಂಚಾರ್ಯ
ಇಂದು ಶಿವಭಕ್ತಪ್ರಭುರ್ಮಮ
ಎಂದುದವಿರಳವಾಯ್ತು ತಾನರ
ವಿಂದನಾಭನ ವಾಕ್ಯವದು ಮುನ್ನೇಕೆ ತಪ್ಪುವುದು ೮೫

ಮತ್ತೆ ಮಂಚಣಪಂಡಿತರು ತ
ಮ್ಮತ್ತ ಕರೆಯಲು ಹೇಳ್ದ ಕೆಲಸಂ
ಬೊತ್ತು ಮಾಡಿ ಬದುಂಕುವೆಂ ತಾನೆನುತ ನಡೆತಂದು
ಎತ್ತಿ ಹೊಡವಡಲಾಗಿ ಅಲ್ಲಿಯೆ
ಹತ್ತಿ ಸಿಕ್ಕಿದನೆಂದೆನುತ ಮುದ
ವೆತ್ತಿ ಭಕ್ತರು ಚಿತ್ತದೊಳಗನುರಾಗಿಸುತ್ತಿರಲು ೮೬

ಆದೆಯೆಲಾ ವಿಶ್ವೇಶ್ವರನ ಕ
ಟ್ಟಿದಿರೊಳಿಂದುಂ ಶ್ರೀಧರಂ ನಮಿ
ಸಿದ ತೆಱದೊಳಿರ್ದಹನಿಳೆಯ ಮೇಲಾವ ವಾದಿಗಳು
ಹದುಳವೇಳೆಂದೆತ್ತಲಾಱದೆ
ಹೊದಕುಳಿಗೊಳುತ ನೋಡುತಿರ್ದಹ
ರಿದನಱಿದು ಭರ್ಗಂಗೆ ಸರಿಯಿಲ್ಲದಕೆ ಮಾತೇನು ೮೭

CC-0. Jangamwadi Math Collection. Digitized by eGangotri

ಧರಣಿಯೊಳು ನೀಳಕ್ಕೆ ಕೆಡೆದಿಹ
ಹರಿಯ ರೂಪಮ ಸಾಕ್ಷಿಯಲ್ಲಾ
ಹರಗಣಾಜ್ಞಾಪಾಶವಲಿ ಸಿಕ್ಕಿಪ್ಪನಾ ಹರಿಯು
ಪರಮಭಕ್ತರು ಮುನಿದಡಳಿವನು
ಹರಿ ಬಮಕುವನವರ್ಗಳೊಲಿದಡೆ
ನಿರುತವಿಂತಿದು ತಾನದೆಂತೆನಲರಸ ಕೇಳ್ ಮತ್ತೆ ೬೮

ಶರಣ ಶಂಕರದಾಸಿಯೆನಲೆಸೆ
ದೆರಡನೆಯ ಭಾಳಾಂಬಕಂ ಭೀ
ಕರದೊಳೆತ್ತಲು ಮುನಿದು ನೋಡಿದಡತ್ತಲೊಡನೊಡನೆ
ಬಿರಿದು ಕಡಿಕಡಿಯಾಗಿ ಕೆಡೆವವು
ಧರಣಿಯೊಳಿತರ ದೈವವೆಂಬವು[೧]
ಪರಸಮಯಿ ಜಗದೇಕಮಲ್ಲಂ ಕೇಳಿದಂ ಮುನ್ನ ೬೯

ಪರಸಮಯಿಗಳು ಸಹಿತವಾಗಳು
ಹಿರಿಯಬಲ್ಲಹನಿದಿರೊಳಿಲ್ಲರು
ನೆರೆದು ಸಂಪಾದಿಸಲಿತರ ವಾದಿಗಳಿದೆಗಳದಿರೆ
ಅರಿಭಯಂಕರ[೨]ನಾ ನಮಷ್ಟನ[೩]
ವರಶುಭಂಕರಮೂರ್ತಿ ನಡೆತಂ
ದರರೆ ಶಂಕರದಾಸಿ ಕಟ್ಟಾಸುರದಿ ದೃಷ್ಟಿಸಲು ೭೦

ಭಾಳಚಟುಲಾಭೀಳದೀರ್ಘ ವಿ
ಶಾಲ ನೇತ್ರೋತ್ಪಾಲ ಕೀಲಾ
ಜ್ವಾಲಘಟನಾಕಾಲವಹ್ನಿಯಡರ್ದು ನಿಮಿಷದಲಿ
ಸ್ಥೂಲವನಮಾಲಿಪ್ರತುಮ ನೆಲಿ[೪]
ಹೋಳಿದಿಬ್ಬಗಿಯಾಗಿ ನೆಲದಲಿ
ಧೂಳಿಪಟವಾಯ್ತುದಕಿದಱ ಶೂನ್ಯಾಲಯವೆ ಸಾಕ್ಷಿ ೭೧

---

೧ ರು (ಕ, ಚ). ೨–೩ ಪ್ರಮಥನೆನಿಂ (ತ, ನ). ೪ ಸೀ (ತ, ನ).

CC-0. Jangamwadi Math Collection. Digitized by eGangotri

ಧರೆಯಱಿಯಲಂತಾಗಿ ಮಾಹೇ
ಶ್ವರರ ಮಹಿಮೆಯನೇನನಱಿದಪೆ
ನರವರೇಣ್ಯಾ ಮುನ್ನವೀ ಬಾಚರಸನುನ್ನತಿಯ
ಒರೆಯಲೇ[೧]ನಿದ[೨]ನಱಿಯದುದೆ ಧಿ
ಕ್ಕರಿಸಿ ಕಟಕಿಯನಾಡಲಾಗಳೆ[೩]
ಬರಿಸನೇ ಸೋಮೇಶನಂ ನೀವಂದು ಕೀರ್ತಿಸಲು ೬೮

ಹಿರಿಯ ಕೋಠಾರದಲಿ ಪಡಿಗಳ
[೪]ನರ[೫]ಮನೆಯ ಕೋಟಾನುಕೋಟಿಯ
ಪರಿಚರರಿಗಳಿವಲ್ಲಿ ಸಿವುಡಿಯೊಳ[೬]ವರ[೭] ಪೆಸರುಗಳ
ಬರೆಯನೆಂದುಂ ಮುಂದೆ ಪಂಚಾ
ಕ್ಷರಿಯನಕ್ಷರವಾಗಿ ಲಿಖಿಸುತ
ಬೆರಸಿ ಲಿಕ್ಕದ ಸರಿಗೆ ಬಂದಿರಲೋದುವುದನಱಿಯ ೬೯

ಅಱುಹಲೇತಕೆ ನಾನಿದಂ ನೀ
ನಱಿಯದುದೆ ಮುನ್ನವರ ಮಹಿಮೆಯ
ನಱಿದುಕೊಳ್ಳಿನ್ನಿದಱಿ ಕಾರ್ಯವನೆನುತ ಬಸವಣ್ಣ
ನೆ[೮]ಱಿಯಲೀ ವೃತ್ತಾಂತವಂ ತಾ
ನಱಿದು ಬಾಚಯ್ಯಂಗಳಂ ಮನ
ವೆಱಿಗಿ ಬಿನ್ನಹವಾಗಿ ಬರವೇಳ್ದಟ್ಟಿದಡೆ ಕೇಳ್ದು ೭೦

ವಾದವೆಂದಡೆ ಹೋಗದಡೆ ಮರಿ
ಯಾದೆಯಲ್ಲೆಂದಾತನುದ್ಧತ
ಭೇದದಿಂದೆಯಿತಂದು ಭಕ್ತತತಿಗೆ ನಮಿಸಿ ನಿಲಲು
ಮೇದಿನೀಶಂ ಸಮಯಿಗಳ ದು
ರ್ಭೇದದಿಂ ತಾನಾಗಳತಿಕುಪಿ
ತೋದಿತಾನನನಾಗುತಂ ಬಾಚಯ್ಯಗಿಂತೆಂದ ೭೧

ಅಂತು ಸಂಧಿ ೫೨ಕ್ಕಂ ಪದಗಳು ೩೦೪೦ಕ್ಕಂ
ಮಂಗಳಂ ಮಹಾಶ್ರೀಶ್ರೀಶ್ರೀ

೧–೨ನೀ (ಥ, ಪ). ೩ ಡೆ (ನ). ೪–೫ನೆರೆ (ಬ). ೬–೭ದಱಿ (ಬ). ೮ನೊ (ಕ, ಚ, ಬ).

CC-0. Jangamwadi Math Collection. Digitized by eGangotri

ಸಂಧಿ : ೫೩

*

ಸೂಚನೆ : ಗೆಲಿದು ಬಹು ವಾದಂಗಳಂ ಬಿ
ಜ್ಜಳನನೋಡಿಸಿ ಹರಮಹಿಮೆ ವೆ
ಗ್ಗಳಿಸಿ ಸೊಡ್ಡಳಬಾಚಿರಾಜನು ಕಟಿಕದೊಳು ಮೆಚಿ[1]ದ

ಈ ಸಕಳ ಜಗಕಧಿಕನಪ್ಪ
ಶ್ರೀಸತೀಶನ ಸುಪ್ರತಿಷ್ಠೆಗೆ
ಭೂಸುರಾಮಾತ್ಯಾದಿ ಪರಿಜನವೆಯ್ದೆ ಬಂದಿರಲು
ಈ ಸಭೆಗೆ ಬರಲೊಲ್ಲದಿರ್ದಪೆ
ಈ ಸಮಯವದು ನಿನ್ನದಲ್ಲಿಂ
ದೇ ಸರಕು ಮಾಡದಿಹೆ ನೀನೆನಲೊಡನೆ ಬಾಚರಸ ೧

ಕೋಪದೀಪಿತರೂಪನಾಗಿಯು
ಮಾಪತಿಪ್ರತಿಮಂ ಪ್ರತಾಪಾ
ಟೋಪದಿಂದಿಂತೆಂದನಾ ಬಿಜ್ಜಳಮಹೀಪಂಗೆ
ಏಪರಿಯೊಳುಂ ಜನನ ಮರಣಮು
ಪಾಪರಾಧಸಹಸ್ರದಿಂ ಮುನಿ
ಶಾಪಹತರಾಗಿರ್ದ ದೈವಗಳೆಂತು ಭೂಪಾಲ ೨

ಕರ್ತನೆಂದೆನುತಿರ್ಪೆಯಿದಱಿ[2]ಳು
ಕರ್ತನಾವನು ಕರ್ತ ಕರ್ತರ
ಕರ್ತನೆಮ್ಮಯ ಕರ್ತು ಸೊಡ್ಡಳನಲ್ಲದೊಂದುಂಟೇ
ಕರ್ತನೊರ್ಬನೆ ಶಂಭುವೆಲ್ಲಕೆ
ಕರ್ತನೀ ಕರ್ತವ್ಯವೆಲ್ಲಂ
ಕರ್ತನೇ ಕರ್ತವ್ಯವೆಂದುಂ ಕರ್ತ[1]ಗೆಣೆಯ[2]ಹನೆ ೩

---

* ರಾಗ : ದೇಸಿ (ಆ, ಡ, ಚ, ಧ, ಪ); ನಾಟಿ (ಮ); ನಾಗಗಾಂಧಾರಿ (ತ).
೧–೨ ನೆಣೆಗ (ಧ, ಪ, ಸ).

CC-0. Jangamwadi Math Collection. Digitized by eGangotri

ಕರ್ತ [೧]ಸುರರಿಗೆ[೨] ವಜ್ರಿ ವಜ್ರಿಗೆ
ಕರ್ತನಜನುವಜಂಗೆ ಮುರರಿಪು
ಕರ್ತನಾ ಮುರರಿಪುಗಜಾದ್ಯರಿಗೀಶ್ವರನೆ ಕರ್ತ
ಕರ್ತ ತಾನಲ್ಲ ಪ್ರಧಾನಂ
ಕರ್ತನುಂ ಸರ್ವಕ್ಕೆ ಭರ್ತನು
ಹರ್ತನುಂ ಪರಮೇಶನಲ್ಲದೆ ಭರ್ತ ಬೇಱುಂಟೇ ೪

ಹರಿಯು ಗಿರಿಯುಮಜಂ ಗಿಜಂ ದಿವಿ
ಜರು ಗಿವಿಜರುಂ ಹರನ ಸರಿಯೇ
ಧರಣಿಯೊಳು ಮಮ ಕರ್ತನು ಮಹೇಶ್ವರನೆನುತ ನುಡಿದ[೩]
ಹರಿ ಸದಾಶಿವನಹನೆ ಸಲ್ಲದಿ
ದೊರೆಯದಿರು ಸ್ಥಿತಿಕರ್ತನಾದಡೆ
ಹರಿಯದೇತಕೆ ತನ್ನ ಮಗನಂ ಕಾಯ್ವುಕೊಳಲಾಱಿ ೫

ಜಡಜಗರ್ಭಂ ದೈವನೆಂಬು
ಗ್ಫಡಣಿಯುಡುಗಿತು ತನ್ನ ಹೆದ್ದಲೆ
ಕಡಿವಡೆದ ಕತದಿಂದ ಮುನ್ನುತ್ಪತ್ತಿ ಕಾರಣದ[೪]
ಒಡೆಯನಾದಡೆ ಶಿರಸುವಂ ತಾ
ನೊಡನೆ ಪುಟ್ಟಿಸಿಕೊಳ್ಳನೇ ಈ
ಪೊಡವಿಯೊಳಜಂ ಪೂಜೆವಡೆಯನೆ ದೇಗುಲದೊಳಿರ್ದು ೬

ದೈಪಗಳು ಜಿನಬುದ್ಧರಾದಡೆ
ಆವಗಂ ಮನುಜಾಕೃತಿಯೊಳಿಹ
ರೇ ವಸುಧೆಯೊಳು ನಿಜ ಮಹತ್ವಮನುಡುಗಿ ಪಶುಕರ್ಮ
ಜೀವಿಗಳು ಶ್ರುತಿಬಾಹಿರರುಗಳ್
ತಾವಿಹಗೆ ಪಶುಪತಿಗಳಹರೇ
ಭಾವಿಸಲು ಪ್ರತ್ಯಕ್ಷಮಾಗಿದು ತೋಱುತಿರ್ದುದಲಾ ೭

೧–೨ನಮರರ (ಥ, ಥ, ಪ, ಸ). ೩ಯೆ (ನ). ೪ವು (ಸ).

CC-0. Jangamwadi Math Collection. Digitized by eGangotri

ಉರವಣಿಸಿ ಕರಿ ಪಿಂತೆ ಕೊಲುತಂ
ಬರೆ ಬಸದಿಯಂ ಹುಗರದಾರುಂ
ಧರೆಗೆ ಮಾಯೆಯೆ ದೈವವೆಂಬೀ ಮಾತನಾಡದಿರಿ
ಒರೆದ ಪೆಸರದು ಮಾಯೆ ಗಡ ಪತಿ
ಕರಿಪ ದೈವವೆ ಈಶನಧಿಕಾ
ರರು ಹರಿಯಜರು ಉಳಿದ ಮೂವರು ವೇದಬಾಹಿರರು ೮

ಆವನೊರ್ಬನು ಕರ್ತನಹನೀ
ದೇವರೊಳು ಮೇಣ್ ದರುಶನಂಗಳ
ನಾವವಱಿ ಮೇಲಾಱಿನೆಣಿಸುವವಿಂತು ಶ್ರುತಿಯೇಕ
ಏವ ರುದ್ಘೋ ನ ದ್ವಿತೀಯೆಂ
ದಾವಗಂ ಪೇಳ್ವಂದದಿಂ ಪರ
ದೈವಗಳನೆಂಬವರನೀ ಲೋಕದೊಳಱಿಸಲುಂಟೇ ೯

ವೇದವೆಲ್ಲಾ ದೈವವೆಂದಡೆ
ಆದಿಯಲು ಸೋಪುಖಿನ ಕೈಯಲು
ಭೇದಿಸಲುಪಟ್ಟುಬ್ಬುಗೆಡುವುದೆ ಕದ್ದುಕೊಂಡೊಯ್ಕೆ
ಮೇದಿನಿಯಲಾ ದೈವವೆಂದಡೆ
ಓದಲೇನಿನ್ನಿಂತು ಮಲಮೂ
ತ್ರಾದಿಗಳಿಗಿಂಬಾಗಿಹುದೆ ತಾನಾವ ಕಾಲದಲಿ ೧೦

ನೀರು ದೈವವಿದೆಂಬಡಂ ಗಂ
ಭೀರವುಳಿದುಱಿ ಹೆಚ್ಚು ಕುಂದುಗ
ಳೋರೆಯಿಂದಿರುತಿಪ್ಪುದೇ ಆಂಗೈಯಲಡಗುವುದೇ
ಮಾರುತಾಪ್ತನು ದೈವವೆಂದು ವಿ
ಚಾರಿಪಡೆ ಭಂಗಂಬಡುವುದೇ
ಧಾರುಣಿಯೊಳಗೆ ಸರ್ವಭಕ್ಷಕನಾಗಿ ಚರಿಸುವನೇ ೧೧

CC-0. Jangamwadi Math Collection. Digitized by eGangotri

ಗಾಳಿ ದೈವವಿದೆಂಬಡಂ ದಿ
ಕ್ಪಾಲನಾಗಿಂತೊಂದು ದಿಕ್ಕಿನ
ಮೂಲೆಯಲಿ ತಾನಿಹನೆ ದೈವವಲಾ ಗಗನವೆಂದು
ಹೋಲಿಸುವಡಂ ಪ್ರಮಥರಿಂ ಲಯ
ಕಾಲವೆಯ್ದಿತಲಾ ಸತತಮುಂ
ಕಾಲು ನಿಲ್ಲದೆ ತೊಳಲ್ವ ಸೂರ್ಯನು ದೈವವೆಂತಹನು ೧೨

ದಿನದಿನಕೆ ಕಳಿ ನಷ್ಟವಾಗುತ
ತನುವಚಿತವಂ ದೈವವಹನೆ ತು
ಹಿನಕರಂ ಸಕಳಕ್ಕೆ ಕರ್ತನು ಆತ್ಮನಾದಡೆಯು
ಅನವರತ ಸುಖದುಃಖಿಸಮಿತಿಯೊ
ಳನುಭವಿಸುತಲಸುವನೆ ಅಂತಾ
ಗಿನಿತು ಒಂದೊಂದಕ್ಕೆ ದೈವಗಳುದಯಿಪವೆ ತಾವು ೧೩

ಮುಂದೆ ದೈವವು ಕರ್ಮವಲ್ಲ
ಕ್ಕೆಂದಡಂ ನಿಶ್ಚೇತನಂ ಕಡು
ಮಂದವಾ ಕರ್ಮಂ ಬಳಿಕ್ಕಾ ಕರ್ಮವೆಂತೆನಲು
ಒಂದಿ ಏನೇನಕ್ಕೆ ಮಾಡಿದ
ಹೆಂದದಪರಾಧಿಗಳನೊಡೆಯನು
ತಂದು ವಧಿಸುವನೋ ತನಗೆ ತಾಂ ವಧಿಸಿಕೊಳುತಿಹನೊ ೧೪

ಮುಸುಕಿದಾ ಕರ್ಮದ ಫಲಮೊ ಬಂ
ಧಿಸಿಕೊಳುವನೋ ತಾನೆ ಕರ್ತನು
ಸಸಿನವಿದಕಿಂತಾಗಿ ದಂಡಿಪ ಕರ್ತನುಂಟೊರ್ಬ
ನಿಸಿತಕರ್ಮಫಲಂಗಳಂ ಮಾ
ಡಿಸುವ ಕರ್ಮಾಧೀಶನೀಶ್ವರ
ನಸಮಕರ್ತನು ಸುಫಲದಾತನುಮಾಪತಿಯೆ ದೈವ ೧೫

CC-0. Jangamwadi Math Collection. Digitized by eGangotri

ಸಕಲಕರ್ತನು ದೈವವಾದಡೆ
ಸುಕೃತಕರ್ಮಿಯನೇಕೆ ದಕ್ಷನ
ನಕಟ ಮಖವಿದೊಳು ಪಾರವೆಯ್ದಿಸದಾಯ್ತು ತತ್ಕರ್ಮ
ಸುಕುಪಿತದೀಪಿತನ ವಧಿಸಿದಾ
ವಿಕಟ ಕರ್ಮಫಲಕ್ಕೆ ತೊಲಗಿಸಿ
ಸುಕರ ಗಣಪದವಿಯೊಳಿರಿಸಿದನು ಶಂಭು ಗೊಲ್ಲಳನ ೧೬

ಮೇಟಿ ಕರ್ಮದ ಕರ್ತನುಡುಪತಿ
ಜೂಟನಪ್ಪನಿದಕ್ಕೆ ದೃಷ್ಟದ
ಪಾಟಿಯೆಲ್ಲಾ ಪೂರ್ವಕರ್ಮ ಶುಭಾಶುಭವೆನಿಪ್ಪ
ಮೋಟುವಾದಂ ಸಲ್ಲದೀ ನರ
ಕೀಟಕರ ಮಾತುಗಳವೇತಕೆ
ಕೋಟಿಯೇಕೋ ರುದ್ರ ನ ದ್ವಿತಿಯೆಂದು ಶ್ರುತಿ ಮೊರೆಯೆ ೧೭

ಹರನೆ ಕರ್ತನು ಹರಿಮುಖಾಮರ
ಪರಿಚರರು ಪಂಚಾವರಣದಲಿ
ವರಸಿ ಭಜಿಸುವ ಪಶುಗಳಲ್ಲದೆ ಕರ್ತರೇ ತಾವು
ಪರಿಪಡೆ ಒಂದೊಂದು ಕಾರ್ಯೋ
ದ್ಧರಣಕಾರಣಮಾತ್ರದಿಂದಾ
ಚರಿಸುವದಕೇ ಕರ್ತರಲ್ಲದೆ ಅವರದೆಂತೆನಲು ೧೮

ಕಿಲಸವಂ ಮಾಳ್ಪಾಳು ತಮತಮ
ಕೆಲಸಗಳಿಗೇ ಕರ್ತರಲ್ಲದೆ
ಫಲದ ಕರ್ತರೆ ಇಂತು ಕರ್ತರ ಕರ್ತನೀಶ್ವರನೇ
ಬಳಿಕಿದಕೆ ಇನ್ನೇಕೆ ದೃಷ್ಟವ
ನಿಳೆಯೊಳೂರೂರೊಳು ಪರಮನಂ
ಬಳಸಿ ಪರಿಚರರಾಗಿ ಹರಿಮುಖ್ಯರು ಭಜಿಸುವರಲಾ ೧೯

CC-0. Jangamwadi Math Collection. Digitized by eGangotri

ಲೋಕದೊಳಗಪ್ರತಿಮಶಿವಲಿಂ
ಗಾಕೃತಿಯೊಳಿಪ್ಪಂಗೆ ಈ ಪ್ರತಿ
ಮಾಕೃತಿಗಳೆಣೆಯೇ ವಿನಿರ್ಮಳ ನಿತ್ಯ ನಿಃಕರ್ಮ
ವಿಕ ಪರಮಾನಂದಮೂರ್ತಿ ಗು
ಣೈಕ ದುರ್ಮಲದಪ್ಪದುಃಕ
ರ್ಮಾಕೃತಿಗಳವರುಂ ಸಮಾನವೆ ಆಗಮೋಕ್ತಿಯಲಿ ೨೦

ಭಾವನಿರ್ಭಾವಪ್ರಸಿದ್ಧ ಕ
ಳಾವಿರುದ್ಧ ವಿಶುದ್ಧಮೂರ್ತಿಗೆ
ಜೀವಬದ್ಧಾಶುದ್ಧಬುದ್ಧಿಗಳೆಂತು ಸರಿಯಹರು
ಸಾವು ಹುಟ್ಟುಗಳಿಲ್ಲದಂಗಂ
ಸಾವು ಹುಟ್ಟುಗಳುಳ್ಳವರ್ಗಳು
ತಾವು ಸರಿಯೇ ಕಾಮವೈರಿಗೆ ಕಾಮಿಗಳು ಸರಿಯೇ ೨೧

ಈಶತತ್ವ ಬ್ರಹ್ಮಮಯ ಪಶು
ಪಾಶುಪತಿಗೆ ಸಮಾನವೇ ತತ್
ಕೇಶವಂ ಬ್ರಹ್ಮಾದಿ ಪಶುಗಳು ಕೇಳು ಭೂಪಾಲ
ಕ್ಲೇಶರಕ್ಲೇಶಂಗಣೆಯೆ ಕೀ
ನಾಶದಂಡೋದ್ದಂಡಪತಿಗೆ ವಿ
ನಾಶವೆಯ್ದುವವರ್ ಪ್ರತಿಯೆ ಕೀನಾಶನಾಶಂಗೆ ೨೨

ಶಂಕರಂಗೆ ಶಿವಂಗೆ ಕಂಕಾ
ಳಾಂಕಪಾಣಿಗೆ ಶಂಕರತ್ವದ
ಕಿಂಕರರು ಸರಿಯೇ ಸಕಳಮಂ ಸಂಹರಂ ಮಾಡಿ
ಬಿಂಕದುನ್ನತಿಯಂ ಪ್ರಕಟಿಪ ಭ
ಯಂಕರಂಗೆ ಮಹಾ ಪ್ರಳಯಭಯ
ದಿಂ ಕೆಡೆವುತಂ ಕೆಡೆವುತಿಹ ಬ್ರಹ್ಮಾದ್ಯೈವತ್ತಿಗಳು ಸರಿಯೇ? ೨೩

---

೧ ಜ (ಮ). ೨–೩ ಪಡಿಯಹವೆ (ತ. ನ).

CC-0. Jangamwadi Math Collection. Digitized by eGangotri

ಯಮಿಜನಾಧಿಕಶಾಪದಗ್ಗರು
ಯಮಿಜನಾರ್ಚಿತಪದಯುಗಂಗೇ
ಸಮವೆ ಪೂಜಿತನಪ್ಪ ಶಿವಲಿಂಗಕ್ಕೆ ಸಂತತವು[೧]
ನಮಿಸಿ ಪೂಜಿಸಿ ಉಂಬ ಪೂಜಕ
ಸಮಿತಿ ದೊರೆಯೇ ಸರ್ವದೇವೋ
ತ್ತಮಮಹಿಮಗೀ ವಾಸುದೇವಾಚಾದಿ ಸುರರೆಣೆಯೇ ೨೪

ಘೋರ ಗರಳಾನಲಹರಂಗಂ
ಘೋರ ಗರಳಾನಲದಿ ಘಾತ ಶ
ರೀರಿಗಳು ಸಾದೃಶ್ಯಮೇ ಮುಕ್ಕಣ್ಣದೇವಂಗೆ
ಧಾರುಣಿಯೊಳಿಕ್ಕಣ್ಣ ದೈವಗ
ಳಾರು ಸರಿ ಪುರದನುಜದಹನವಿ
ಶಾರದಂಗಂ ಪುರದನುಜಭಯಕಂಪಿತರು ಸರಿಯೇ ೨೫

ಬಿರಿದಿನಂಧಾದ್ಯಸುರಭೇದಿಗೆ
ಬಿರಿದಿನಂಧಾದ್ಯಸುರ ಭೀತರು
ಸರಿಯೆ ಹರಿಕಮಲಜಸುರಕಪಾಲಾಸ್ಥಿಧಾರಂಗೆ
ಹರಿ ಕಮಲಜ ಸುರಾಸುರಾವಳಿ
ಸರಿಯೆ ಜನಿಸದಯೋನಿಜಂಗಂ[೨]
ಪಿರಿದು ಜನನಂಗಳಲಿ ಜನಿಸುವ ಯೋನಿಜರು ಸರಿಯೇ ೨೬

ಲಿಂಗಮೂರ್ತಿಗೆ ವಿಶ್ವವಿಷ್ಣುಪ
ಸಂಗತಾನಂದೋರುತನುಗೀ
ಲಿಂಗಮಧ್ಯದೊಳಿಪ್ಪ ಲೆಂಗಿಗಳೆಂತು ಸರಿಯಹರು
ಮಂಗಳೋದಯ ನಿತ್ಯ ಪರಮೇ
ಶಂಗನೀಶರು ಸರಿಯೆ ಸೊಡ್ಡಳ
ಲಿಂಗದೇವನ ಸದೃಶವೆ ಆಸಡ್ಡಾಳ ದೈವಗಳು ೨೭

೧ರು (ಚ). ೨ಗಳ (ಸ).

CC-0. Jangamwadi Math Collection. Digitized by eGangotri

ಹರನಖಿಳ ಗುರು ಶಿವನಭವನೀ
ಶ್ವರನು ಪಶುಪತಿ ಶಾಶ್ವತಂ ಶಂ
ಕರನನುಪಮಂ ಶ್ರೀ ಮಹಾದೇವಂ ಪರಮನೆಂಬಾ
ನಿರುತ ನಾಮಾವಳಿ ಇತರ ದೇ
ವರಿಗೊಳವೆ ನೋಡುವಡೆ ಶಾಸ್ತ್ರೋ
ತ್ಕರ ಪುರಾಣಾಗಮನಿಗಮಸೂಕ್ತಿಗಳ ವಿವರದಲಿ ೪೮

ವಿನುತ ತದ್ವಿಷ್ಣೋ ಪರಮ ಪದ
ಮೆನಲು ತದ್ವಿಷ್ಣುವಿಗೆ ಪರವಹ
ಘನಪದವಲಾ ಶ್ರುತಿ ಸದಾ ಪಶ್ಯಂತಿ ಸೂರಯೆನೆ
ಅನಘಮತಿಗಳುಮೇಶನೊರ್ಬನೆ
ಎನುತ ಕಾಣುತ್ತಿರಲಧಮ ಧೀ
ಮನರದೇತಕೆ ಕರ್ಮಶಾಸ್ತ್ರಂಗಳ ಬಲೆಗೆ ಸಿಕ್ಕಿ ೪೯

ಕುಮತಿಗಳು ನಾಯ್ವಾಲನುಂಡರೊ
ತಮವಿಡಿದು ಮರುಳ್ಗೊಂಡರೋ ವಿ
ಭ್ರಮಿಸಿ ಮೆಲಿದರೊ ಮದ್ದಕುಣಿಕೆಯ ಕಾಯಿಗಳನಿಂತು
ಸುಮಹದೀಶನ ಪಿಪವಣಿನಱಿಯದ
ಧಮರ ಪಾರ್ಬರ ನುಡಿಗಳಂ ಭೂ
ರಮಣ ಎಂದುಂ ಕೇಳದಿರು ನೀನಿನ್ನು ಹೇಳುವೆನು ೫೦

ಎಂದಜತ್ವಮನಚ್ಯುತತ್ವಮ
ನೊಂದಿಹಂ ಹರಿ ಭೃಗುವಿನಾಗ್ರಹ
ದಿಂದುದ್ಭಿಸಿದನಚ್ಯುತಂ ದಶಯೋನಿಗಳೊಳೆಯ್ದೆ
ಮುಂದೆಯುದೆ ವಿಷ್ಣುಃಪಿತಾಮಹ
ಮೆಂದುದಾ ಸಾಮಂ ಪುಸಿವುದೇ
ಇಂದಿರಾಪತಿ ಜನಿಸಿದನಲಾ ತತ್ಪಿತಾಮಹಗೆ ೫೧

೧ನೆಂ (ಚ). ೨–೩ ಪದವ (ಬ, ಪ).

CC-0. Jangamwadi Math Collection. Digitized by eGangotri

ಆಜನ ಗುದದಲಿ ಜನಿಸಿದನಧೋ
ಕ್ಷಜನೆನಿಪ ಪೆಸರಿಂದಲಿಂದ್ರಾ
ನುಜನೆನಲು ಪುಟ್ಟಿದನದಿತಿಗಂಭೋಜಲೋಚನನು
ನಿಜವಲಾ ದ್ವಾಪಾರದಲಿ ಭಾ
ವಜಜನಕನಾ[೧]ಗುದವಿಸಿದನು[೨]
ತ್ರಿಜಗವಱಿಯಲು ಬಾದರಾಯಣನೆಂಬ ನಾಮದಲಿ ೩೨

ದಾನವಾಂತಕನಾ ಯುಗದೊಳೇ
ತಾನೊಗೆಯನೇ ಕೃಷ್ಣನೆಂಬಭಿ
ಧಾನದಲಿ ಒಂದೊಂದೆಡೆಯೊಳಾ ವಿಷ್ಣು ಲಯವಾಗೆ
ತಾನೆ ತದ್ವಿಷ್ಣುತ್ವಮರ್ಥಿಸಿ
ತಾನುಮಾಧೀಶ್ವರನನರ್ಚಿಸಿ
ತಾನುದ್ಯೆಸುವನೊರ್ಬನೊರ್ಬನೆ ವಿಷ್ಣುವೆ[೩]ನಲಾಗಿ ೩೩

ಫುಲ್ಲನಾಭನ ಹುಟ್ಟುಗಳನಾ[೪]
ನೆಲ್ಲಿತನಕೆಣಿಸುವೆನು ಧರಣೇ
ವಲ್ಲಭನೆ ಕೇಳ್ ಮುಂದೆ ಆತನ ವಿಧಿಗಳವಧಿಗಳ
ಸೊಲ್ಲುವೆಂ ಶ್ರುತಿಮೂಲವಾಗಿರ
ಲಿಲ್ಲಿ ನೋಡೆನ್ನಪ್ರತಿಜ್ಞೆಯ
ನೆಲ್ಲರುಂ ಪ್ರತಿವಾದಮೆಂದೆನಲಾಗದಿದನಿಂತು ೩೪

ಶ್ರೀಯನಪ್ಪುವ ಹರಿಯುರಂ ಕ
ಪ್ಪಾಯಿತಾ ದೂರ್ವಾಸನೊದೆದಡೆ
ಯಾಯ ರಥದಲಿ ಕಟ್ಟಿಹೊಡೆಯನೆ ಹರಿ ರುಕುಮಿಣಿಗಳ
ಆ ಯತೀಂದ್ರನೆ ಪಾಲನೀಂಟುತ
ಜೀಯನುಪಮನ್ಯುವು ಗಳದೊಳಿ
ಪ್ಪಾಯುಧಿಶಯನನನುಗುಳನೇ ಮುನ್ನ ಜಗವಱಿಯೆ ೩೫

೧–೨ ವಿರ್ಭವಿಸಿದನು (ಧ, ಬ). ೩ ಮೆ (ಕ). ೪ ತಾ (ಮ).

CC-0. Jangamwadi Math Collection. Digitized by eGangotri

ಆ ಜಲಂಧರನೆಂಬ ದಾನವ
ರಾಜನೊರ್ಬನು ಗಗ[೧]ನಮಾರ್ಗದೊ
ಳಾಜಿಯಲಿ ಭಂಗಿಸಿ ತಗುಳ್ದನಲಾ ಜನಾರ್ದನನ
ಆ ಜರಾಸಂಧನ ಪರಾಕ್ರಮ
ತೇಜದಿಂ ನಿಲಲಾಱದಂಜಿ ಪ
ಯೋಜನಾಭನು ನಿರ್ಮಿಸನೆ ಚೌರಾಸಿ ದುರ್ಗಗಳ ೩೬

ಪಕ್ಷಿವಾಹನನಂ ಗಜಾಸುರ
ರಾಕ್ಷಸರು ನಿರ್ಜಾಡಿಸಿದಪುದ
ನೀಕ್ಷಿತಿಯೆ ಬಲ್ಲುದಿದು ಮೃಗಚಂಡಾಲಗಾರ್ದಭವು
ರಕ್ಷಿಸಿತು ವಿಷ್ಣುವಿನಸುವನಸ
ಮೇಕ್ಷಣಂ ವಿಷವಂ ಧರಿಸಿ ತನು
ವಕ್ಷಯದೊಳಿರೆ ಗಂಡುಡುಗಿ ಪೆಣ್ಣಾಗನೇ ಶೌರಿ ೩೭

ಮದಿಸಿ ವಿಷ್ಣು ದಧೀಚಿಯಂ ಚ
ಕ್ರದಿನಿಡಲು ಬೆನ್ನೊಗ್ಗಿಯಾ ಮುನಿ
ಯದನರೆಗಡಿದು ಹಿಂದೆಯಟ್ಟಲು ಬಿಟ್ಟ ಮಂಡೆಯಲಿ
ಹೆದಱಿ ಕೆಟ್ಟೋಡಿದನಲಾ ಹರಿ
ಯುದಧಿಯಲಿ ಹುಗನೇ ಧರೆಯನುಳಿ
ದೊದಱಿ ಬಲಿಯಂ ಕಟ್ಟಿ ಇಳೆಯಂ ಕೊಂಡ ಪಾಪದಲಿ ೩೮

ತ್ರೇತೆಯಲಿ ರಘುರಾಮನಾಮದಿ
ಸೀತೆಯಂ ಹೋಗಾಡಿ ದಶಶಿರ
ದಾತನಿಂ ಬ್ರಹ್ಮತಿಗೆ ಸಿಕ್ಕಿ ತೊಳಲ್ವಬಿಸುತಿರನೇ
ಪೀತವಾಸಂ ಕೃಷ್ಣನಾಗಿ ಕಿ
ರಾತನೆಚ್ಚ ನಿಶಾತಶರನಿ
ರ್ಘಾತಪಾತದಿ ಮಡಿದನಲ್ಲಾ ಭೂತಳಾಗ್ರದೊಳು ೩೯

---

೧ ಹ (ಸ).

CC-0. Jangamwadi Math Collection. Digitized by eGangotri

ಗೊಲ್ಲ[೧]ರಲ್ಲಿಗೆ[೨] ಬೆಣ್ಣೆಯಂ ಕಳು
ವಲ್ಲಿಗೆಯ್ದಿ ಮುರಾರಿ ಗೋಪಿಯ
ರಲ್ಲಿ ಹಾದರವಾಡಿ ಸಿಕ್ಕನೆ ಪೋಟತನದಿಂದ
ತಲ್ಲಣಿಸಿ ಹೋಗುತ ಬರುತ್ತಿದೆ
ಡಿಳ್ಳವಾಗುತ್ತಿರನೆ ಲಕ್ಷ್ಮೀ
ವಲ್ಲಭಂ ನಂದೀಶ್ವರನ ಪೇರುಸು[೩]ರುಗಳು[೪] ತೊಡಕಿ ೪೦

ಶೌರಿ ತಾನೇ ದೈವವೆಂದು ಮ
ಹೋರುಲಿಂಗಾಕಾರದಿಂ ಗಂ
ಭೀರವಂ ಹೋಗಾಡಿ ಮತ್ತೆ ವರಾಹನಾ[೫]ದನಲಾ
ವಾರಿಜಾಕ್ಷನು ಸುತನನರ್ಥಿಸಿ
ಸಾರಮತಿಯೊಳು ಮೇಘರೂಪದಿ
ಮಾರಹರನಂ ಬಹುಯುಗಂಗಳೊಳೋಲಯಿಸಿದನಲಾ ೪೧

ಪರಿಹರಿಸಿ ಮತ್ಸ್ಯಾವತಾರವ
ನುರಗಕಟಕಂ ಸುತ್ತಿದನಲಾ
ಶಿರಸಿನಲಿ ಕೂರ್ಮನ ಶಿರಂ ಹರ ಹಾರಮಧ್ಯದಲಿ
ಕರಮೆಸೆವುತದೆ ಶರಭರೂಪಂ
ಧರಿಸಿ ಸಂಹಾರಿಸಿಯಲಾ ನರ
ಹರಿಯ ಚರ್ಮಾಂಬರವನುಟ್ಟನು ಪಾರ್ವತೀಶ್ವರನು ೪೨

ನಿರುತವಾದಿವರಾಹದಂಷ್ಟ್ರವು
ಹರನ ಹಸ್ತದೊಳಿದ್ದುದಲ್ಲಾ
ಪುರಹರಂ ತ್ರೈವಿಕ್ರಮನ ನಿಟ್ಟಿಲುವನುಜ್ಜಿ[೬] ಮುಱಿದು
ಧರಿಸಿದನು ಖಿಟ್ವಾಂಗವೆನಲೀ
ಶ್ವರನ ಹೆಗಲಲಿ ಅಗ್ರಜೇಶನು
ಹರಿಯೆನಿಸಿದನಘನ ಕಳೇಬರವೊಪ್ಪುತಿರ್ದುದಲಾ ೪೩

೧–೨ ರೂರಿಗೆ (ಸ); ಗೇರಿಗೆ (ಧ, ಪ, ಬ, ಮ). ೩–೪ ರೊಳಗೆ (ಬ); ರಿನೊಳು (ಧ, ಪ).
೫ ವಾ (ಬ).

CC-0. Jangamwadi Math Collection. Digitized by eGangotri

ಗಿರಿಜೆಯರಸನ ಮೆಲ್ಲಡಿಯೊಳಿಂ
ದಿರೆಯ ನಲ್ಲನ ನಯನವಿರ್ದುದು
ಹರನು ವಿಷ್ವಕ್ಸೇನನಂ ಕೆಡೆಯಿಱಿದು ಪಿಡಿದೆತ್ತಿ
ಕರದ ಶೂಲದೊಳಿರ್ದನದೆಯಾ
ತುರದಿ ಹರಿ ಕಲಕೇತನಾಗಿಯೆ
ಸುರಿದನಲ್ಲಾ ರೋಹಿತವನುಗ್ರಾಂಬಕನ ಮುಂದೆ ೪೪

ಎತ್ತಿ ಶ್ರುತಿ ಹರಿಗುಂ ಹರಂತಿಯೆ
ನುತ್ತಪೊರೆಯಲು [೧]ರೌದ್ರ[೨]ಭಾವೋ
ದ್ವೃತ್ತಹರನಪಹರಿಸನೇ ಹರಿಹರನೆನಿಪ ಪೆಸರ
ಹೊತ್ತ ಹರನಂತಕಮದಹರಂ
ಚಿತ್ತಭವಹರನಹಿತಹರನು
ನ್ಮತ್ತಗಜಹರನಘಹರನು ಪುರಹರನು ಭವಹರನು ೪೫

ಕ್ರತುಪುರುಷನಂ ಕೊಂದು ರೌದ್ರೋ
ದ್ಧತ ಕುಪಿತದಿಂ ವೀರಗಣವ
ಚ್ಯುತನ ಶಿರವಂ ಪಱಿಯನೇ ಯಜ್ಞಸ್ಯ ಶಿರ ಎನಲು
ಅತಿ ಮದಿಸಿ ದೇವಾಧ್ವರಕೆ ತಾಂ
ಪತಿಯೆನುತ್ತಂ ದಕ್ಷನೊಡನಿರೆ
ಶತದಳಾಕ್ಷಂ ಹೊಡಸಿಕೊಳ್ಳನೆ ತನ್ನ ತಲೆ ಪಱಿಯೆ ೪೬

ಆತನೇತಕಪಂಕರಿಸಿದಂ
ತಾತಗಂ ಬದುಕುಂಟೆ ಜೀತೋ
ಜಾತವೈರಿಯ [೩]ಬಾರಿಯಲಿ[೪] ಮೇಣಮರರುಂ ಹರಿಯು
ಖ್ಯಾತನಲ್ಲಾ ಯಕ್ಷನಿಟ್ಟ ನಿ
ಪಾತತೃಣವಂ ನೆಗಪಲಾಱಿದೆ
ಧಾತುಗೆಟ್ಟರು ವಿಷ್ಣುಧಾತರು ತಾವೆ ಘನವೆಂದು ೪೭

೧–೨ ದುಷ್ಟ (ತ, ನ) : ದೌಷ್ಟ (ಥ, ಸ). ೩–೪ ಬಾಧೆಯೊಳು (ಕ) : ಬಾವೆಯಲಿ (ಚ) : ಬಾರಿಯೊಳ್ (ತ, ಥ, ನ) : ಬಾತಿಯಲಿ (ಪ).

CC-0. Jangamwadi Math Collection. Digitized by eGangotri

ಕಮಲ[1]ಗರ್ಭಂ[2] ಗರ್ವಿಸಿ[3]ದಡಂ[4]
ಪ್ರಮಥನಾಥನು ಮುನ್ನವರ ಪಂ
ಚಮಶಿರವನಾಗ್ರಹಿಸುತಾಗಳೆ ಚಿವುಟಿ ಬಿಸುಟಿನಲಾ
ಭ್ರಮಿಸಿ ಮಗಳಂ ಹರಿಣರೂಪದಿ
ರಮಿಸುವಾ ನೀರೇಜಭವನಂ
ನಿಮಿಷದಲಿ ಹರಿಸಿದನತಿ ಮೃಗವ್ಯಾಧರುದ್ರನಲಾ ೪೮

ಶ್ರೀ ಸದಾಶಿವನೊಡನೆ ಗರ್ವಿಸಿ
ಆ ಸನತ್ಸುತನೊಟ್ಟಿಯಾಗನೆ
ವಾಸುದೇವನೆ ದೇವನೆಂದತ್ಯಾಸುರದಿ ನುಡಿದು
ವ್ಯಾಸದೇವಂ ಕೈಯನೆತ್ತಿದೊ
ಡಾ ಸಮಯದಲಿ ನಂದಿಕೇಶನು
ಕೀಸಿ ಮುಖಿಯನೆ ಆತನೆರಡು ಕರಂಗಳಂ ಮುನಿದು ೪೯

ಆಂತುಮಲ್ಲದಹಂಕರಿಸಿದಾ
ಪಂತಿಕಂತನ ಶಂಕರಂ ಪಾ
ದಾಂತದಿಂದೊತ್ತಿದಡಧಃಸ್ಥಳಕಿಳಿದು ಹೋದನಲಾ
ಅಂತಕಾಂತಕನೊಡನೆ ಕಡುಮಾ
ಖಾಂತು ಕಾಮನು ಪರುಷ ಪರುಷಕ
ನಂತೆಯೊಳು ಜನವಖಿಯಲೆಲ್ಲಾ ಬೇವುತಿದ್ದಹನು ೫೦

ಕಾಲನಂ ಶ್ವೇತನನಿಮಿತ್ತಂ
ಶೂಲದಿಂದಿಖಿದೊತ್ತಿದನಲಾ
ಶೂಲಿ ದಕ್ಷನಹಂಕರಿಸೆ ತಲೆ ಹೋದುದಕ್ಕಲ್ಲಿ
ಕೀಲಿಸಿದ ಕುಖಿದಲೆಯೆ ಸಾಕ್ಷಿ ಸು
ರಾಳಿಯೊಳು ತಾನಖಿಳ ನೇತ್ರವಿ
ಶಾಲನೆಂದಪಗಡಿಸಿದಡೆ ಭಗನಕ್ಷಿಯೊಡೆದುದಲಾ ೫೧

೧–೨ ಜೀಶಂ (ತ. ನ). ೩–೪ ದುದಂ (ತ. ನ).

CC-0. Jangamwadi Math Collection. Digitized by eGangotri

ದೂಷಿಸಿದಡಾ ವೀರಭದ್ರನು
ಪೂಷನೆಂಬನ ಹಲ್ಲನುದುರ್ಕನೆ
ಭಾಷೆ ಮುಖಿಕೆಯಿತಂದಡಾಕೆಯು ನಾಸಿಕವನಱಿದ
ದೋಷಿ ಬಂದನೆನುತ್ತ ಜಂಭ
ದ್ವೇಷಿಯಂ ಬೆನ್ನಟ್ಟಿ ಕರವಂ
ರೋಷದಿಂ ಕಡಿದಮರಜನನಿಯ ಗೋಣಮಂ ಕೊಯ್ದ ೫೨

ತಾನೆ ಭುವನಪ್ರಾಣನೆನೆ ಪವ
ಮಾನನೂರುಗಳಂ ತಱಿಯನೆ ಕೃ
ಶಾನುವಂ ದ್ರೋಹಿಯ ಮುಖದೊಳಾಹುತಿಗೊಳಲು ಬಂದೆ
ನೀನೆನುತ ಕಡಿಯನೆ ಶಿವಿಯ ಜಿ
ಹ್ವಾನಿಚಯಮಂ ಬಾಹುಯುಗಳವ
ನಾ ನಿಶಾಕರನಂ ಪದಾಂಗುಷ್ಠದೊಳೊರಸಿ ಕಳೆದ ೫೩

ಇಂತಹಂಕರಿಸಿದ ಸುರಾವಳಿ
ಗಂತಕಂ ನಿರಹಂಕರಣ ಶರ
ಣಾಂತರಂಗನು ಸಕಳ ಜಗದುದ್ಧರಣಕಾರಣನು
ಅಂತರದೊಳತಿ ದುರ್ನಿರೀಕ್ಷಣ
ದಿಂ ತಿರುಗುವ ಪ್ರರತ್ರಯವನಹಿ
ಕಾಂತಕಟಕನು ಬೇಗೆಯಂ ಸುಡುವಂತೆ ಸುಟ್ಟನಲಾ ೫೪

ಕೂಡೆ ಮೂಜಗವಂ ಮುಸುಕಿ ತೇಂ
ಕಾಡಿಸುವ ಗಂಗೆಯನುಮೇಶನು
ಸೂಡಿದನಲಾ ಮಲ್ಲಿಕಾದಳದಂತೆ ಮೌಳಿಯಲಿ
ನಾಡೆ ಧರೆಯೆಲ್ಲಂ ಧರಿಸಿ ಸಲೆ
ಊಢಿಸಿದ ಫಣಿರಾಜನಂ ಶಶಿ
ಚೂಡನಿಕ್ಕಿದನೊಂದು ಬೆರಳಿಗೆ ಮುದ್ರಿಕೆಯ ತೆಱದಿ ೫೫

CC-0. Jangamwadi Math Collection. Digitized by eGangotri

ಬಂದ ತತ್ಕ್ಷಳಯಾಗ್ನಿಯೊಲು ಜಗ
ದಂ[೧]ದವಂ ಮಾಡುತ್ತ ಬಹ ವಿಷ
ವಂ ಧರಿಸಿದನಲಾ ಮೃಡಂ ಜಂಬೂಫಲದ [೨]ಹಾಂಗೆ[೩]
ಸಿಂಧುರ ಜಟಾ ಭಸ್ಮ ಶಾರ್ದೂ
ಲಾಂಧ ಲಾಲಾ ತಾರಕ ಗುಹ ಜ
ಲಂಧರಪ್ರಮುಖಾಸುರರನಪಹರಿಸನೇ ಹರನು ೫೬

[೪]ನಿತಿನಿತು ದೇವರ್ಕಳಿಗೆ ಎ
ಮ್ಮನಲನೇತ್ರನದೇಕೆಯಿಂತಾ
ತನ ಕಿಱಿಯ ಗಣನೊರ್ಬನೇ ಸಾಲದೆ ಜಗತ್ಕ್ಷಯಕೆ
ಜನಿಸುವವು ವರ್ಧಿಸುವವತಿ ಸಂ
ಹನನವೆಯ್ದುವವಖಿಳ ಲೋಕಂ
ಘನ ಶಿವನ ಗಣನೊರ್ಬನಿಂದಿಂತೆಂದಡಂತಾಗಿ ೫೭

ಶಿವನ ಘನಮಹಿಮೋನ್ನತಿಯನೆಂ
ಸುವಡಗೋಚರವಿನ್ನು ಪಲವುಂ
ವಿವರಿಸುವಡಳವಲ್ಲ ಪರಮೈಶ್ವರ್ಯದನುಪಮನ
ಅವಿರಳನನಜರನನಮರಣ
ತ್ವವನನಭವನನಪ್ರತರ್ಕ್ಯನ
ನವಿರತಾನಂದಸ್ವರೂಪನನಾವನಱಿವವನು ೫೮

ನಿತ್ಯ [೫]ತಾನೆ[೬]ಲ್ಲರು ಅನಿತ್ಯರು
ಸತ್ಯವೀ ಜನವಱಿಯಲೆನುತಂ
ನಿತ್ಯ ನೈರ್ಮಲ್ಯಸ್ವರೂಪ ವಿನಿರ್ಮಿತಂ ದೃಷ್ಟ
ಪ್ರತ್ಯಯವಲಾ ಧರಿಸಿಕೊಂಡಿಹ
ದೈತ್ಯವೈರಿ ವಿರಿಂಚಿ ಮುಖ್ಯಾ
ದಿತ್ಯ ಕಾಪಾಲಾಸ್ಥಿಮಾಲಾವಳಿಗಳೇ ಸಾಕ್ಷಿ ೫೯

೧ಕಂ (ತ. ಥ. ನ). ೨–೩ ತೆಱದೆ (ತ, ನ). ೪–೫ನಾವೆ (ಧ, ಪ. ಬ).

CC-0. Jangamwadi Math Collection. Digitized by eGangotri

ಶ್ರೀಶನಂದುಪಮನ್ಯುವೆಂಬ ಮು
ನೀಶನಿಂ ಶಿವದೀಕ್ಷೆಯಂ ಪಡೆ
ದಾ ಶರಣನಿಂದಿಂದ್ರನೀಲದ ಲಿಂಗವಂ ಧರಿಸಿ
ಪಾಶುಪತ ಸುಬ್ರತದಿನರ್ಚಿಸು
ತೀಶನಂ ಭಜಿಸುವನಲಾ ತತ್
ಕೇಶವಂ ತಲ್ಲಿಂಗವಂ ನಿಜ ಸೆಜ್ಜೆಯೊಳಮರ್ಚಿ ೭೦

ಒಂದುಸಾವಿರ ತಾವರೆಗಳಿಂ
ದಿಂದಿರಾಪತಿ ಪೂಜಿಸುತವ
ಲ್ಲೊಂದರಳು ಕುಂದಿದಡೆ ತತ್‌ಕ್ಷಣಮಾತ್ರದೊಳೆ ತನ್ನ
ಒಂದು ನಯನಾಂಬುಜವನರ್ಪಿಸಿ
ಇಂದುಮೌಳಿಯನೊಲಿಸಿ ಕಣ್ಣಂ
ಹಿಂದೆ ನೀಗಿದ ಚಕ್ರವಂ ತಾಂ ಮತ್ತೆ ಪಡೆದನಲಾ ೭೧

ರಾವಣಾಸುರ ಲಂಕೆಯಲಿ ಮು
ತ್ಸ್ಯಾವತಾರಂ ಮತ್ಸ್ಯಕೇಶ್ವರ
ದೇವರಂ ತಾ ನಿಲಿಸಿ ಭಜಿಸನೆ ದೋಶಿರವಾರ್ಧಿಯಲಿ
ಸೇವಿಸನೆ ಕೂರ್ಮೇಶನಂ ಕೂ
ರ್ಮಾವತಾರನು ಪೂಜಿಸನೆ ರಾ
ಮಾವತಾರನು ಸೇತುವಿನೊಳಾ ರಾಮನಾಥನನು ೭೨

ರಾಮನಾಥನನರ್ಚಿಸನೆ ಲ
ಕ್ಷ್ಮೀಮನೋಹರನೊಲಿದು ದುಗ್ಧಾ
ರಾಮದೊಳು ದ್ವಾರಾವತಿಯೊಳುಂ ಸ್ಥಾಪ್ಯವಂ ಮಾಡಿ
ಪ್ರೇಮದಿಂ ಗೋವಿಂದನಾಥನ
ನಾ ಮುರಾಂತಕ ಮುಖ್ಯ ಯಾದವ
ಭೂಮಿಪಾಲಕರೆಲ್ಲರುಂ ಭಜಿಸುತ್ತಮಿಪ್ಪರಲಾ ೭೩

---

೧ ರ್ಚಿ (ಧ). ೨ ದಾ (ಕ. ಚ) : ಘೋ (ತ).

CC-0. Jangamwadi Math Collection. Digitized by eGangotri

ಅಂದಲಂ[1]ಪೂರೊಳ್[2] ಪ್ರತಿಷ್ಠಿಸಿ
ವಂದಿಸುವನಾ ಬ್ರಹ್ಮನುತ್ಸುಕ
ದಿಂದವಾ ಬ್ರಹ್ಮೇಶ್ವರನನಾ ಪುಷ್ಪಗಿರಿಯಲ್ಲಿ
ಬಂದು ಭಜಿಸುವನಿಂದ್ರನತ್ಯಾ
ನಂದದಿಂದಿಂದ್ರೇಶ್ವರನನೊಲ
ವೊಂದಿ ಕಾಶಿಯೊಳರ್ಚಿಪಂ ವ್ಯಾಸೇಶನಂ ವ್ಯಾಸ ೬೪

ವಾರಣಾಸಿಯೊಳನುದಿನಂ ಗುರು
ಡೋರಗಾಮರ ಮುನಿ[3]ಕುಲಾಳ್ಯರು
ಸಾರಮತಿಯಲಿ ತಮ್ಮ ತಮ್ಮಯ ಪೆಸರೊಳೊಂದೊಂದು
ಚಾರು ಶಿವಲಿಂಗಂಗಳಂ ಸಲೆ
ಧಾರುಣಿಯ ಮೇಲೆ ಪ್ರತಿಷ್ಠಿಸಿ
ಹಾರವಿಸಿ ಭಜಿಸುತ್ತವಿಪ್ಪರು ಲೋಕದೃಷ್ಟವಲಾ ೬೫

ಅಭವನೇ ಘನದಾನಿಯಲ್ಲದೆ
ಅಭಿಮತಾರ್ಥವನೀವ ದಾತೃ
ಪ್ರಭುಗಳೊಳರೇ ಬ್ರಹ್ಮ ವಿಷ್ಣು ಜಿನಪ್ರಮುಖರಾವ
ವಿಭುಗಳಾರಾರಿಂಗೆ ನಿಜಪದ
ವಿಭವಮಂ ಕೊಟ್ಟರು ಸರೋಜ
ಪ್ರಭವ ಹರಿಮುಖ್ಯಾಮರಾಸುರ ನರ ಮುನೀಂದ್ರರಿಗೆ ೬೬

ಈಶ್ವರೇಶ್ವರನೀಯದಿದ್ದಡೆ
ಶಾಶ್ವತೈಶ್ವರ್ಯಂಗಳಿಂದಂ
ಪ್ರೇಶ್ವರಾಧಿಕ ದೇವದಾನವ ಮಾನವಾದಿಗಳು
ವಿಶ್ವಲೋಕದೊಳೆಂತು ಬಾಳ್ವರ
ನಶ್ವರಿಷ್ಟ ಪದವಿಗಳಿಗೆ ಸ
ಪ್ತಾಶ್ವ ಸಪ್ತಾರ್ಚಿ ಕ್ಷಪಾಕರನೇತ್ರನೇ ಕರ್ತ ೬೭

೧–೨ ಪುರದೊಳ್ (ಥ, ಧ, ನ, ಪ). ೩–೪ ಗಳಾ (ಧ, ಪ).

CC-0. Jangamwadi Math Collection. Digitized by eGangotri

ಈ ಪ್ರಕಾರದಿ ಷಡ್ಗುಣೈಶ್ವರಿ
ಯ ಪ್ರಭಾವದೊಳೆಸೆವ ಜಗದಂ
ಬಾಪ್ರವರನಂ ಕಂಡು ಪೂಜಿಸಿ ನುತಿಸಿ ಓಲೈಸಿ
ಸುಪ್ರಸನ್ನಂಗೈಸಿ ಕಾಮ್ಯಾ
ರ್ಥಪ್ರಸಿದ್ಧದ ಸುಪದವಿಗಳಂ
ಕ್ಷಿಪ್ರದಿಂ ಪಡೆದೆಸೆವ ಸಜ್ಜನ ಭಕ್ತರಂ ಕೇಳು ೬೮

ಕರವನರಿದರ್ಚಿಸಿದ ಬಾಣಂ
ಗೆರಡು ಕೈಯಂ ಕೊಡನೆಯಾತನ
ಸರಸ ಕೀರ್ತನೆಗೊಲಿದು ಚಿತ್ರದೊಳಂಬಿಕಾರಮಣ
ತರಣಿಯಿಂದಂ ಹೋಗದೊಳಗಾ
ವರಿಪ ಕುಷ್ಪವನಳಿದು ನಿರ್ಮಳ
ತರ ತನುವನೀಯನೆ ಮಯೂರಂಗಭಿನುತಿಗೆ ಮೆಚ್ಚಿ ೬೯

ಹರಿಯ ಕೈಯಲು ಹೋಗದಿಹ ದು
ರ್ಧರದ ಕುಷ್ಪವನಂತಪಹರಿಸಿ
ಪೊರೆಯನೇ ದಂಡಿಯನುಮೇಶನು ತನ್ನ ಮೊಚಿಯೊಗಲು
ಹರನ ಚರಣಕೆ ಕಣ್ಣನರ್ಪಿಸಿ
ಮುರಳಿ ಪಡೆಯನೆ ಪಲವು ಕಂಗಳ
ನರಿದೆನಲು ಕವಿಕಾಳಿದಾಸನು ಸಲಿವನಂ ನುತಿಸಿ ೭೦

ಕಂಗಳಂ ಕಳೆದರ್ಚಿಸಿದಡೆ ಜಿ
ತಾಂಗಜಂ ಶಿವನಾಗಿದೇವ
ಯ್ಯಂಗೆ ಚಕ್ಷುಗಳಂ ಕೊಡನೆ ಸೋಮನ ದಿನಂಗಳಲಿ
ಲಿಂಗಧೂಪಾವಸರದೊಳು ಗಣ
ಪುಂಗವಂ ಕೊಂಡೊಯ್ಯನೇ ಉ
ತ್ತುಂಗ ಕೈಲಾಸಕ್ಕೆ ಘಂಟೆಯು ಸಹಿತ ಓಹಿಲನು ೭೧

---

೧ ರ್ಚಿ (ತ. ಥ. ನ. ಪ).

CC-0. Jangamwadi Math Collection. Digitized by eGangotri

ಏಳುದಿನಪರಿಯಂತರಂ ಕರಿ
ಕಾಲಹೋಳನ ಭಕ್ತಿಗರ್ಥಿಸಿ
ಭಾಳನೇತ್ರನು ಕಱಿಸಿದನಲಾ ಕನಕವೃಷ್ಟಿಯನು
ಲೋಲಭಾಷೆಗೆ ಕೂರ್ತಲಾ ತಿರು
ನೀಲಕಂಠಂಗಾ ಸತಿಗೆ ಶಶಿ
ಮೌಳಿ ಕೊಟ್ಟನು ಯೌವನಪ್ರಾಯಾನುಭವಸುಖವ ೭೨

ತೆಲುಗಜೊಮ್ಮಯ್ಯಂ ಕೊಲುವ ಮೃಗ
ಕುಲವನೊಯ್ಯನೆ ರಾಜತಾದ್ರಿಗೆ
ಮಲಹರಂ ಚೀರಮಗೆ ಕುಡನೇ ತನ್ನ ಗದ್ದುಗೆಯ
ಆಳಿಕನೇತ್ರನು ಪ್ರಮಥಲೋಕವ
ನೊಲಿದು ನಂಬಿಗೆ ಸೂಚಿಸಿಗೊಡನೇ
ಇಳೆಯೊಳಗೆ ತವನಿಧಿಯನೀಯನೆ ದಾಸಿಮಯ್ಯಂಗೆ ೭೩

ಕದಿರರೇಮಯ್ಯಂಗೆ ಹರಣವ
ನೊದಗಿಸಿದನೇಳ್ವಿನದ ಹೆಣನೊಳು
ಸದಮಳವಿಮಾನದೊಳಗೊಯ್ಯನೆ ಮಳೆಯರಾಜನನು
ಮದನಹರನಪ್ಪುರ್ವದೊಳಿರಿ
ಸಿದನಲಾ ಪೆರ್ಮಾಡಿಯನು ಗಣ
ಪದವಿಗೊಯ್ಯನೆ ಮುಂದೆ ಹಾಡುತ್ತಿಪ್ಪ ಶಂಕರನ ೭೪

ನಾಗವಲಿಯಂ ಮೆಱಿಸಿವ ಸಮಯದೊ
ಳಾ ಗಿರಿಶನೂರವರು ಸಹಿತವ
ದಾಗ ಪಿಳ್ಳೆಯನಾರುವಂ ತನ್ನೊಳು ಬೆರಸಿಕೊಂಡ
ಭೋಗಿಕಟಕನ ಗಾಣಪತ್ಯಕೆ
ಹೋಗನೇ ತಂತ್ರಂ ಬೆರಸಿ ಶಿವ
ಯೋಗದಿಂದ ಕುಮಾರಪಾಲಕ ಗುರ್ಜರನು ಮುನ್ನ ೭೫

---

೧ ಬೊ (ಪ). ೨ ಚಾ (ಬ). ೩ ನಿಂ (ತ, ಥ, ನ, ಪ).

CC-0. Jangamwadi Math Collection. Digitized by eGangotri

ಧರಣಿಯೊಳು ಷೋಡಶಗಣಂಗಳ
ನಿರತವೀರತೆಗೊಲಿದು ಬ್ರಹ್ಮೇ
ಶ್ವರನು ನೆಲೆಗೊಂಡಿದ್ದನಲ್ಲಾ ಪೀಠಮಧ್ಯದಲಿ
ಪುರಹರನು ಮೆಚ್ಚಿದನು ತೇರಸ
ುರವಣೆಯ ಮೆಚಿ[1]ವಣಿಗೆ ಮೃಗಯಾ
ತುರದ ಬೇಡಂಗೀಯನೇ ಶಿವರಾತ್ರಿ ತತ್‌ಫಲವ ೭೬

ಓಳಿಯಿಂದಂ ಸಂದ ಭಕ್ತರ
ಚಾಳಿಗಳನಂತಂಗಳವರೊಳು
ಹೇಳಲೇತಕೆ ನೀನಚಿಯಲೆಣಿಸಲ್ಕೆ ಪಟ್ಟಿರ್ದ
ಭಾಳನೇತ್ರನ ಮೂರ್ತಿಯಹ ಮಡಿ
ವಾಳ ಮಾಚಯ್ಯಂ ಶರಣಜನ
ಲೋಲ ಕಿನ್ನರ ಬೊಮ್ಮಿದೇವನು ಮುಖ್ಯವಾಗಿರ್ದ ೭೭

ಲಿಂಗವಂತರಿಗಭಿಮತಾರ್ಥಫ
ಲಂಗಳಂ ಕೊಡುತಿರ್ದಹಂ ನೆಚಿ[2]
ಸಾಂಗದಿಂದಭವಂ ಬಳಿಕವಂತಾಗಿ ಲೋಕದೊಳು
ಅಂಗಜಾರಿಗೆ ಸದೃಶವೊಳರೆಂ
ಬಂಗಡಿಯೊಳಾಡುವ ನುಡಿಗಳಂ
ಹಿಂಗದೆಲ್ಲಾ ಶಿವನೆ ಎಂಬೇಕಾತ್ಮವಾದವನು ೭೮

ವಿವರಿಸೆ ಯಥಾ ಶಿವಮಯಂ ವಿ
ಷ್ಣುವೆನಿಪಾ ನುಡಿಗಳು ತ್ರಿಮೂರ್ತಿಗ
ಳಿವು ಶಿವನೆ ಎಂಬಾ [1]ದುರು [2]ಕ್ತಿಗಳಷ್ಟಮೂರ್ತಿಗಳು
ಶಿವನೆ ಎಂಬ [1]ಕುಯು[2]ಕ್ತಿಗಳು ಮಾ
ನವರನೀಶ್ವರ ಭಕ್ತರೆಣೆ ಎಂ
ಬವರ ಮಾತಂ ಕೇಳಿದರ್ಗತ್ಯಂತ ಪಾತಕವು ೭೯

೧–೨ ಕುಯು (ತ, ನ). ೩–೪ ದುರು (ತ, ನ).

CC-0. Jangamwadi Math Collection. Digitized by eGangotri

ಎಂದು ಸೊಡ್ಡಳ ಬಾಚರಸ ಮುಳಿ
ಸಿಂದ ಗೋವಿಂದಪ್ರತಿಮೆಯಂ
ಬಂದು ನೋಡಲು ಹೆದಱಿ ಮಿಗೆ ಜರಿಜರಿದು ಕರಗುತ್ತ
ಬೆಂದುದಾಗಳೆ ನೆರೆದ ತಾರ್ಕಿಕ
ವೃಂದವುಂ ಬಿಜ್ಜಳನು ತಲೆವಾ
ಗಿಂದುವೌಳಿಯ ಶರಣ ಸೊಡ್ಡಳ ಬಾಚರಸ ನಗುತೆ ೮೦

ಕೆಲಸವುಳ್ಳಡೆ ಮಾಡಹೇಳ್ ಬಿ
ಜ್ಜಳಜನಪಯೇತಕೆ ಕರೆಸಿದೆಯೆ
ನಲು ಮೊಗಂಗಳ ಬಾಡಿ ನೆಲನಂ ನೋಡುತೆದೆಗಳೊಳು
ಕಳವಳಿಸಿ ಗರಹೊಡೆದವೊಲು ತ
ಮ್ಮೊಳು ಮಱಿದು ತುಟಿಗಳು ಮಿಡುಕದಂ
ಗುಳವಡಿತು ಗುಕ್ಕೆನ್ನದೇ ಮಿಕ್ಕೆನ್ನದುಸುರಡಗಿ ೮೧

ಉತ್ತರಂಗೆಟ್ಟಿರ್ದ ವಾದಿಗ
ಳತ್ತ ನೋಡುತ್ತಾ ನರೇಂದ್ರೋ
ನ್ಮತ್ತನುಂ ತಾನಹಗೆ ಲಜ್ಜಿಸಿ ದರ್ಪವಡಗಿದನು
ಮತ್ತ ತಾರ್ಕಿಕರುಬ್ಬುಗುಂದಿದ
ರುತ್ತಮೋತ್ತಮ ಬಾಚಿರಾಜನು
ದಾತ್ತಮಹಿಮನು ಮರ್ತ್ಯನೇ ಸಾಕ್ಷಾತ್ ತ್ರಿಯಂಬಕನು ೮೨

ಸತ್ಯವಿದು ತಾನೆನುತವತಿ ಸಂ
ಸ್ತುತ್ಯವಂ ಮಾಡುತ್ತ ಮಿಕ್ಕಿನ
ಮಾತ್ಸರುಂ ತಾರ್ಕಿಗರುವೆರಸಂತೋಲಗಂ ಪರಿದು
ಮತು ಪಾಯವನೆಯ್ದಿ ಪೋದನು
ಕ್ಷಿತ್ಯಧಿಪನಾ ಸಮಯದಲಿ ಕೃತ
ಕೃತ್ಯನಪ ಬಾಚಯ್ಯನುಂ ಬಸವಣ್ಣ ಮೊದಲಾದ ೮೩

CC-0. Jangamwadi Math Collection. Digitized by eGangotri

ಆ ಸಕಳ ಮಾಹೇಶ್ವರರುಮು
ಲ್ಲಾಸದಿಂದೆಯ್ದಿದರು ಭಕ್ತಿವಿ
ಳಾಸಸಾಮ್ರಾಜ್ಯಪ್ರಭಾಘನಮಹಿಮೆ ವರ್ಧಿಸಲು
ಭಾಸುರೋನ್ನತಕೀರ್ತಿ ಜಗದೊಳು
ಸೂಸೆ ಸೊಡ್ಡಳಬಾಚಿರಾಜನು
ಲೇಸು ಲೇಸೆನುತಿರಲು ಮುನ್ನಿನ ಪರಿಯೊಳಿರುತಿರ್ದ ೮೪

ಧಾತ್ರಿಯೊಳು ಬಾಚಯ್ಯನಮಳಚ
ರಿತ್ರವಂ ಸದುಭಕ್ತಿಸಭೆಯೊಳು
ಸ್ತೋತ್ರವಂ ಮಾಡಿದಡೆ ಬರೆದೋದಿದಡೆ ರಚಿಸಿದಡೆ
ಪುತ್ರ ಮಿತ್ರ ಕಳತ್ರವರ್ಧನ
ಪಾತ್ರರಪ್ಪರು ಪುಣ್ಯವಹುದು ಪ
ವಿತ್ರ ಭಕ್ತಿಸುಶೀಲರಪ್ಪರು ಕೀರ್ತಿವೆತ್ತಿಹರು ೮೫

ವಿಗ್ರಹ ಸಮಯ ನಿಗ್ರಹ ಹಿತಾ
ನುಗ್ರಹ ಗರಳಭುಗ್ರಸನ ನುತ
ದಿಗ್ರಮಣ ಶೈವಾಗ್ರಗಣ್ಯವುದಗ್ರಬಲಶೌರ್ಯ
ಕುಗ್ರಹಾದಿಭಯಗ್ರಹಾರಿ ಶು
ಭಗ್ರಹಣ ಬುಧವಾಗ್ಯುಚಿರ ಸ
ಮ್ಯಗ್ರಚನನಿರತೋಗ್ರಭಕ್ತಿಸಮಗ್ರ ಬಸವೇಶ ೮೬

ಇದು ಸಕಳ ಮಾಹೇಶ್ವರಾಮಳ
ಪದ ಪಯೋಜ ಪರಾಗ ಮದಷಟ್
ಪದಿಯೆನಿಪ ಪಾಲ್ಕುಱಿಕೆ ಸೋಮೇಶ್ವರನ ಕಾರುಣ್ಯ
ಒದವಿದಖಿಳ ಕಳಾಪ್ರಪೂರಿತ
ಹೃದಯ ಭೀಮಕವಿಪ್ರಣೀತಾ
ಭ್ಯುದಯ ಬಸವಪುರಾಣಕಥೆಯೊಳು ಸಪ್ತಮಾಶ್ವಾಸ ೮೭

ಅಂತು ಕಾಂಡ ೭ಕ್ಕಂ ಸಂಧಿ ೫೩ಕ್ಕಂ ಪದಗಳು ೩೧೨೭ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಕಾಂಡ : ೮

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಂಧಿ : ೫೪

*

ಸೂಚನೆ : ಹಿರಿಯ ಭಕ್ತರ ಮಹಿಮೆಗಳನೊರೆ
ದೊರೆದು ಶಿವನಾಗಯ್ಯನು ಪತಿ
ಕರಿಸಿ ಮೆಚ್ಚಿದನು ಬಸವನಾ ಬಿಜ್ಜಳನ ಸಭೆಯೊಳಗೆ

ದೇವತಾವಕ ಸೇವಕಾಪ
ದ್ಭಾವದಾವ ದಯಾವಲೋಕನ
ಭಾವಭಾವ ಭವಾವಲೇಪಹ ಧೀವರವರೇಣ್ಯ
ಜೀವಿತೇಶ್ವರ ಜೀವಮದರಾ
ಜೀವ ಪೂರ್ಣವಿಭಾವರೀಶ ಗು
ಣಾವತಂಸ ಶುಭಾವಹ[೧] ಬಸವ [೨]ಗೋವರಾಭ[೩] ಜಯ ೧

ಮತ್ತೆಯುಂ ಸದ್ಭಕ್ತಿ ಸದ್ಗುಣ
ವೆತ್ತನುರುತರಕೀರ್ತಿ ಭಕ್ತಿಜ
ನೋತ್ತಮಂ ಶಿವನಾಗಮಯ್ಯಂ ಸದಮಳಾಚಾರ
ಚಿತ್ತಶಕ್ತನು ಬಸವನಿಂ ಪ್ರಣಿ
ಪತ್ತಿಯಂ ಕೈಕೊಳುತ ಸಂತಸ
ವೆತ್ತು ಭಕ್ತಿಸುಧಾಮೃತದೊಳೋಲಾಡುತಂತಿರಲು ೨

ಮಟ್ಟಿಗರು ತಮ್ಮೊಳಗೆ ಗುಜು ಗುಜು
ಗುಟ್ಟುತಂ ನಡೆತಂದಸಹ್ಯಂ
ಬಟ್ಟು ಬಿಜ್ಜಳರಾಯನೊಡನಿಂತೆಂದು ಹೇಳಿದರು
ಪಟ್ಟಬದ್ಧನೆ ಚಿತ್ತಯಿಸು ಕುಲ
ಗೆಟ್ಟು ವಿಪ್ರಾಚಾರಮಂ ನೆಟಿ[೪]
ಬಿಟ್ಟು ನಾಚಿಕೆಯಳಿಪುಳಿದು ಬಸವಯ್ಯ ತಾನಿಂತು ೩

---

* ರಾಗ : ನಾಟಿ (ಅ, ಡಾ, ಧ, ಪ, ಮ); ಶ್ರೀರಾಗ (ಚ); ಕೇತಾರಗೌಳ (ತ).
೧ ಪಂ (ಅ, ಕ, ಮ). ೨–೩ ಗೋಪರಾಜ (ತ, ನ).

CC-0. Jangamwadi Math Collection. Digitized by eGangotri

ಹಿರಿಯ ಭಕ್ತರು ಹಿರಿಯ ಭಕ್ತರು
ಹಿರಿಯ ಭಕ್ತರೆನುತ್ತವವರಂ
ಹಿರಿದು ಮನ್ನಿಪನವರ ಕಾಲ್ಗಳ ಮೇಲೆ ಬೀಳುವನು
ಮರಳಿ ತಾನವರುಂಡು ಮಿಕ್ಕುದ
ನಿರದೆ ಕೊಂಬನು ಕೈಯನಾಂತೋ
ಸರಿಸದನುದಿನವವರನೇ ಕೊಂಡಾಡುಪಂ ಬಳಿಕ ೪

ಹೆದಱಿದತಿ ಸಭ್ಯನವೊಲನುನಯ
ವೊದಗಿ ನಿಮ್ಮಂ ಸಾರ್ದಪಂ ಮಾ
ಣದೆ ನಿಜಾಂತರ್ವಾಸಮಂ ಪುಗುವಂ ಬಳಿಕ ತಾನು
ಹದುಳಿರಿಸಿಕೊಂಡಿದ್ದ ಭಕ್ತನು
ಮದಿಸಿ ಪುರವೀಧಿಯಲಿ ಬರುತಂ
ಬೆದಱಿ ಸಂಬೊಳಿಯೆನ್ನನೆಮ್ಮುವನಿನಿತು ಬಗೆಗೊಳ್ಳ ೫

ಬಲ್ಲಹನೆ ಕಲ್ಯಾಣಕಟಕವ
ದೆಲ್ಲವುಂ ಹೊಲಿಗಲಸಿಹೋಯಿತು
ಎಲ್ಲಿಯವು ವರ್ಣಾಶ್ರಮಂಗಳವೆಲ್ಲಿ ನೀತಿಗಳು
ಎಲ್ಲಿಯವು ಧರ್ಮಪ್ರವೃದ್ಧಿಗ
ಳೆಲ್ಲಿಯದು ಯಜ್ಞಾದಿ ಕರ್ಮವಿ
ವೆಲ್ಲವಂ ತಾಂ ಹೇಳಲೇನಿನ್ನೆಂತು ಸಂದಹವು ೬

ಭೂಪನಂ ಹೊದ್ದುವುದು ರಾಷ್ಟ್ರದ
ಪಾಪ ಓಜೆಯನುಳಿದವರ್ಗಳ
ನೇಪರಿಯೊಳಪಹರಿಸದಿರ್ದಡೆ ಕೇಳಿ ಹೇಳದಡೆ
ಭೂಪತಿಯ ಪಾಪಂ ಪ್ರವೇಶಿಪು
ದಾ ಪುರೋಹಿತರಂ ಬಳಿಕಿದಂ
ಭೂಪ ಹೊಂದದು ಪಾಪವೆಮ್ಮಂ ಹೇಳಿದೆವು ನಿಮಗೆ ೭

CC-0. Jangamwadi Math Collection. Digitized by eGangotri

ಧ್ರುವವಲಾ [೧]ರಾಜಾಗತೋ[೨] ಧ
ರ್ಮವು ವಿದಿತವಿದ ನೀವಱಿಯಿರೇ
ಅವನಿವಲ್ಲಭ ಎನಲು ಕೋಪಾಟೋಪರೂಪದಲಿ
ತವಕಿಸುತ ಬಿಜ್ಜಳನು ಬಸವಸ
ಚಿವವರನನಾಗಳೆ ಕರೆಸಲು
ತ್ಸವದಿನಾ ಭಂಡಾರಿಯುಂ ಶಿವನಾಗಮಯ್ಯಗಳ ೮

ದಂಡಿಗೆಯನೇಱಿಸಿ ನಿಗಮ ವಿದ
ಪಂಡಿತನು ಕೈಗೊಟ್ಟಪರನೊಡ
ಗೊಂಡು ಬರುತಿರಲಾ ಮಹೀಸುರರೈಸು ದೂರದಲಿ
ಕಂಡು ನೀವದ[೨] ನೋಡಿರೇ ಭೂ
ಮಂಡಳೇಶ್ವರ ಅಂತಿರದೆ ಮುಂ
ಕೊಂಡು ತಾನೈತಂದಹನು ಹೊಲೆಗಲಸಲೀಯೆಡೆಗೆ ೯

ಆಳುಕನಿನಿತುಂ ನೋಡ ತಾನಂ
ದಳವನೇಱಿಸಿ ಆತನಂ ನೃಪ
ನಿಳಯಕೆಯಿತಂದಹನು ಬಸವಾಮಾತ್ಯನಿನ್ನಾರ್ಗೆ
ಬಳುಕಿದಹನೆಂದೆನಲು ಕೋಪಂ
ಬಲಿದು ಬಿಜ್ಜಳನರಮನೆಯ ಬಾ
ಗಿಲೊಳು ಪುಗದಂತೋಲಗಂಗೊಟ್ಟಂತು ಹೊಱಗಿರಲು ೧೦

ಬೇಗದಿಂ ಬಗೆಗೊಳ್ಳದಂಜದೆ
ಹೋಗಿ ಬಸವಣನುದ್ದಗದ್ದುಗೆ
ಯಾಗಿ ತನ್ನಯ ಹೊದಕೆಯಂ ತೆಗೆದಿಳೆಯ ಮೇಲಿರಿಸಿ
ನಾಗಮಯ್ಯನನಲ್ಲಿ ಮನದನು
ರಾಗದಿಂ ಕುಳ್ಳಿರಿಸಿ ಎನ್ನುವ
ನೀಗ ಕರೆಸಿದ ಮಣಿಹವೇನೆನಲರಸು ಭುಗಿಲೆನುತ ೧೧

೧–೨ ರಾಜನ್ವತೋ (ಅ, ಚ, ಧ, ಪ, ಬ). ೩ ದೆ (ಚ, ತ, ನ, ಪ, ಮ).

CC-0. Jangamwadi Math Collection. Digitized by eGangotri

ಕಲುಷಿತಾನನನಾಗುತಂ ಬಿ
ಜ್ಜಳನೃಪಂ ಬಸವಣ್ಣಗೆಂದನು
ಸಲುವದಷ್ಟಾದಶವಿವರ ವರ್ಣಂಗಳಾದಿಯಲಿ
ಇಳೆಯೊಳಿವು ತಾನೀ[೧]ಗಲಾದವೆ
ಹೊಲೆಗಲಸಿ ಕುಲಸಂಕರವನ
ಗ್ಗಳಿಸಿ ಈ ಕಲ್ಯಾಣಕಟಕವನಿಂತು ಕೆಡಿಸುವರೇ ೧೨

ಮಲಹರನ ಸದ್ಭಕ್ತಿ ನಿನ್ನಯ
ತಲೆಯೊಳಾಯಿತೆ ನೀತಿಗಳನತಿ
ಗಳೆದು ನಡೆವುತ್ತಿಪ್ಪೆ ಸುರಿದಹವೇ ಮಳಿಗಳಿನ್ನು
ಬೆಳೆವವೇ ನೀನಿರ್ದ ಧರೆ ನಿ
ರ್ಮಳದೊಳಿರು ನಾವಂಜುವೆವು ನಿನ
ಗುಳಿದ ಮಾತೇನೆನಲು ನೃಪತಿಗೆ ಬಸವನಿಂತೆಂದ ೧೩

ಭೂವರನೆ ಕೇಳ್ ಬಡಗಿ ಮಾಚಲ
ದೇವಿಯಂ ಕ್ಷತ್ರಿಯಕುಲೀನೆಯ
ನೋವಿ ಮಾಡಿಹೆವೆಂದು ವಿಪ್ರರು ಸ್ವರ್ಣಧೇನುವನು
ತಾವು ಮಾಡಿಸಿ ಆ ಪಶುವಿನೊಳ
ಗಾ ವನಿತೆಯಂ ಪೊಗಿಸಿ ಅದಱಿಲಿ
ತೀವಿ ಹೊನ್ನಂ ಹೊಯ್ಸಿ, ಹರುಷಂ ಮಿಕ್ಕು ನಲಿವುತ್ತ ೧೪

ಅಂಗನೆಯ ಪೂರ್ವಾಶ್ರಯಂ ನೆಱಿ[೨]
ಹಿಂಗಿ ಹೋಯಿತು ಹೋಯಿತೆನುತಂ
ತುಂಗಕುಚೆಗಭಿವಂದಿಸುತ ಸೈತಿರದೆ ತಾವವಳ
ಅಂಗದೆಂಜಲಹಾಲುಮಂ ಹೇ
ವಂಗಳಿಲ್ಲದೆ ಕುಡಿದರಿಂತಿದ
ಕಂಗವಿಸಿ [೩]ದಯೆ[೩]ಗೆಟ್ಟು ಮತ್ತಾ ಹೊನ್ನಧೇನುವನು ೧೫

---

೧ ವೀ (ತ, ನ, ಮ). ೨–೩ ಮತಿ (ಕ).

CC-0. Jangamwadi Math Collection. Digitized by eGangotri

ಕಡಿವುತಂ ಕೈವೊಯ್ದು ತಮ್ಮೊಳು
ನುಡಿವುತಂ ಹಣೆ ಸೋಮಯಾಜಿಗೆ
ಕೊಡುವ ಭಾಗಂ ಬಲದ ಬದಿ ವೇದಾಂತಿಗಳ ಭಾಗ
ಎಡದ ಬದಿ ಪಂಡಿತರ ಭಾಗಂ
ನಡು ಉಪಾಧ್ಯರ ಭಾಗ[೧]ವಿಕ್ಕಿಲ
ದೆಡೆ ಚತುರ್ವೇದಿಗಳ ಭಾಗಂ ಮುಸುಡು ದೀಕ್ಷಿತರ ೧೬

ಭಾಗ ಎಡದೊಡೆ ಯಜ್ಞವೇದಿಯ
ಭಾಗ ಬಲದೊಡೆ ಕೃಷ್ಣಶರ್ಮರ
ಭಾಗ ಉರವಾದಿತ್ಯಭಟ್ಟರ ಭಾಗ ಹೊಟ್ಟೆಯದು
ಆಗಮಿಕರಪ್ಪಣ್ಣ ಹರಿಗಳ
ಭಾಗ ನಿಟ್ಟಿಲು ಮಾಂತ್ರಿಕರ ವರ
ಭಾಗ ಉಳಿದುದು ಆಶ್ರಿತರ ಪರದೇಶಿಗಳಿಗೆನುತ ೧೭

ಪಶುವನುಬ್ಬಸಗೊಳಿಸಿ ವಧಿಸುವ
ಹಸಿಯ ಹೊಲೆಯರ ನೇಣ ಹೊಲೆಯರ
ಹುಸಿವ ಹೊಲೆಯರ ನುಡಿಗಳಂ ಹೋಲುವುದೆ ಕೇಳುವಡೆ
ವಸುಮತೀಶ್ವರ ಶ್ರುತಿಗಳಾದಿಯೊ
ಳಿಸಿವ ವಿಧಿಕಲ್ಪಿತಮಿದಾದಿಯೊ
ಪಸರಿಸುವ ಜಾತಿಪ್ರತಾನಕೆ ತಾನದೆಂತೆನಲು ೧೮

ವೇದ[೨]ಚೋದಿ[೩]ತ ಜಾತಿಗಳು ಎರ
ಡಾದಿಯಲಿ ವರ್ತಕ ವಿವರ್ತಕ
ವಾದವವು ಭವಕರ್ಮಸಂಸ್ಕಾರಪ್ರವರ್ತಕನು"
ಆದಿ ಶಿವಸಂಸ್ಕಾರದಾತನು
ಮೇದಿನಿಯೊಳು ನಿವರ್ತಕನು ಶ್ರುತಿ
ವೇದಿತಾರ್ಥಚರಿತೆಗಳಿರುತಿರೆ ಮೊನ್ನೆ ಹುಟ್ಟಿರ್ದ ೧೯

೧–೨ ವೀ ಕೆ (ಡಾ). ೩–೪ ಬೋಧಿ (ಪ. ಸ). ೫ ವು (ಚ).

CC-0. Jangamwadi Math Collection. Digitized by eGangotri

ಆ ಕುಲಂಗಳ ಮಾತವೇತಕೆ
ಲೋಕನಾಥಪ್ರೋಕ್ತವಾದ
ಪ್ರಾಕಟದ ಜಾತಿಗಳಲಾ ಅಷ್ಟಾದಶಂಗಳವಂ
ಏಕೆ ಹೇಳಲು ಮತ್ತೆ ಮಿಕ್ಕಿನ
ಲೋಕದೊಳು ಪದಿನೆಂಟು ವರ್ಣಾ
ನೀಕರೆಲ್ಲಂ ಭಕ್ತಲೋಕವೆ ಕುಲವಲಾ ದಿಟಕೆ ೨೦

ಪುಣ್ಯಹೀನನ ಕೈಯಲಿದ್ದ ಹಿ
ರಣ್ಯ[1]ವೊಡ್ಡಾ[2]ಗಿಪ್ಪ ಪರಿಯೊಳ
ಗಣ್ಯ ಶಿವನಾಕೃತಿಯೊಳಿಹ ಭಕ್ತನು ಭವಿಯ ಕಣ್ಗೆ
ಗಣ್ಯಮಾನಸನಾಗಿ ತೋರ್ಪನು
ಗಣ್ಯವೇ ಅಂತಾಗಿ ಶರಣ
ಶ್ರೇಣ್ಯನುನ್ನತ ಮಹಿಮೆಯಂ ಭಾವಿಸುವಡಱಿಯಲ್ಕಿ ೨೧

ಸಾಮಜಾರಿಗೆ ಸರಿಯೆ ಶುನಕ
ಸ್ತೋಮವಾಶಾವಾರಣಕ್ಕಂ
ಗ್ರಾಮಸೂಕರವಿತತಿ ಸರಿಯೇ ಪಾರಿಜಾತಕ್ಕೆ
ಭೂಮಿಜಂಗಳು ಸರಿಯೆ ಉಡುಗಳು
ಸೋಮಗೆಣೆಯೇ ಕಲ್ಲುಗಳು ಚಿಂ
ತಾಮಣಿಗೆ ಸರಿಯೇ ಮಡುಗಳಂಭೋನಿಧಿಗೆ ಸರಿಯೇ ೨೨

ಸುರನದಿಗೆ ಪಳ್ಳಂಗಳಿಣೆಯೇ
ಸುರಗಿರಿಗೆ ಬೆಟ್ಟಂಗಳಿಣೆಯೇ
ಸರಿಯೆ ಸುರಧೇನುಗೆ ಪಶುಗಳಹಿಪತಿಗಹಿಗಳಿಣೆಯೆ
ಹರನೊಡನೆ ಮೇಣಿತರ ದಿವಿಜರು
ಸರಿಯಹರೆ ಶಿವನಾಗಮಯ್ಯಗೆ
ದುರುಳ ಭೂಸುರರೀ ಧರೆಯೊಳಿಣೆಯಲ್ಲದೆಂತೆನಲು ೨೩

೧–೨ ವೋಡಾ (ತ, ಥ, ನ, ಪ).

CC-0. Jangamwadi Math Collection. Digitized by eGangotri

ಕೇಳು ಸಿರಿಪತಿಪಂಡಿತಂ[೧] ಶಶಿ
ಮೌಳಿಭಕ್ತಪರಾಯಣಂ[೧] ವ್ರತ
ಶೀಲ ಶಿವಭಕ್ತರಿಗೆ ಕೋಟಿದ್ವಿಜರು ಸರಿಯೆಂದು
ಹೋಲಿಸುವವರ ನಾಲಗೆಗಳಂ
ಸೀಳಿ ಕಳೆವೆನನಂತಪಾಲ ನೃ
ಪಾಲನಾಸ್ಥಾನದೊಳೆನುತ ಕರಮುರ್ಬಿಯಾ ಅಯ್ಯ ೨೪

ಧಗಧಗಿಪ ಕೆಂಡಂಗಳಂ ಬಗಿ
ಬಗಿದು ದಸರಿಯ ಪೊತ್ತಿಯಲಿ ಬಿಗಿ
ಬಿಗಿದು ಶಿಕರಿಯುಗಳಿಂಗಳಿಂ ತೆಗೆದೊಪ್ಪಿ ಛಲವೊಪ್ಪಿ
ನೆಗಳನೇ ಶಿವಪಂಡಿತನಿದಂ
ಪೊಗಳಲೇಂ ಭಕ್ತರ ಮನೆಯ ನಾ
ಯಿಗಳ ಸರಿಯಲ್ಲ ದ್ವಿಜರು ಕೇಳಿನ್ನು ಭೂಪಾಲ ೨೫

ಧರೆಗೆ ಹಾವಿನಹಾಳವೆಂಬಾ
ಪುರದೊಳಿಪ್ಪನು ಕಲ್ಲಿದೇವಂ
ಹರನ ಮೂರ್ತಿಯದಲ್ಲದೇ ಮಾನುಷ್ಯರೂಪಲ್ಲ
ನಿರತವೆಂತಹನಾದಡಂ ಕಾ
ರಿರುಳಿನಲಿ ಪರದೇಶಿ ಬಂದಿರ
ಲುರಗನಾ ಊರೊಳಗೆ ಕೊಲುತಿರ್ಪ್ಪದು ನಿರಂತರವು ೨೬

ಒಂದು ದಿನ ಕಲಿದೇವನಂ ಫಣಿ
ತಿಂದು ಸತ್ತಿತು ಮತ್ತೆಯಾ ಅ
ಯ್ಯಂ ದಯಾಪರನಾಗಿ ಅದಱ ಪ್ರಾಣವಂ ಪಡೆದು
ವಂದಿಸುತ್ತಿರೆ ಸರ್ವರುಂ ಸಾ
ನಂದದಿಂ ಸಂಬಂಧಭಕ್ತಿಯೊ
ಳೊಂದಿ ಸಹಜ ಶುಭಸ್ಥಿತಿಯೊಳಾ ಊರೊಳಿರುತಿರಲು ೨೭

೧ರು (ಅ). ೨ + ಕಟ್ಟಿ (ತ, ನ, ಪ). ೩–೪ × (ತ, ನ, ಪ).

CC-0. Jangamwadi Math Collection. Digitized by eGangotri

ಮತ್ತೆ ಒಂದಿನ ಕಲ್ಲಿದೇವರ
ತೊತ್ತು ತಾನಗ್ಗವಣಿಗಂ ಹೋ
ಗುತ್ತಿರಲು ಸ[೧]ದ್ವಿಜನ ಕೈಸೋಂಕಿದಡವಳು ತನ್ನ
ಹೊತ್ತ ಮಡಕೆಯನಾಗಲಂತೊಡೆ
ದೊತ್ತಿ ನೆಲದಲಿ ಹೂಳ್ದು ಶಿವಶಿವೆ
ನುತ್ತ ಭಸಿತಶರೀರೆಯಾಗುತ ದಾಸಿ ಬೇಱಿಕೊಂದು ೨೮

ಹೊಸ ಮಡಕೆಯಂ ಪೊತ್ತುಕೊಂಡು ರ
ಭಸದಿ ಹೋಗಲು ಕಾಣುತಾಕ್ಷೇ
ಪಿಸುತ ನೋಡಾ ಕೊಬ್ಬಿದಳು ಮೂಸಂಡಿ ತೊತ್ತಿವಳು
ವಸುಮತೀಸುರನಾಗ ತನ್ನನೊ
ರಸಿದನೆನುತಾ ಭಾಂಡವಂ ವ
ರ್ಜಿಸಿ ನೆಲದೊಳೊಡೆಕುಟ್ಟಿ ತಾ ಬೇಱಿಕೊಂದು ಹರವಿಯನು ೨೯

ಈಸಿಕೊಂಡಿದೆ ಹೋದಹಳು ಧರ
ಣೀಸುರರಿಗಿತರರನೊರಸದಂ
ತೋಸರಿಪುದದು ನೀತಿ ಪೆಱಿರ್ಗೆ ದ್ವಿಜರನಂಟಿದಡೆ
ದೋಷವೆಂಬಾಗಮವದುಂಟೇ
ದಾಸಿಯಂ ಪಿಡಿತರಿಸಿ ಕಟ್ಟಿಸಿ
ಘಾಸಿಮಾಡಿಸಿದಲ್ಲದೇ ಮುಳಿಸೆಂತು ಮಾಣ್ದಪುದು ೩೦

ಎನುತ ವಿಪ್ರರು ನೆರೆದು ಕಲಿಯುಗ
ಮನಸಿಜಾರಿಯೆನಿಪ್ಪ ಕಲಿದೇ
ವನನವರು ಕರೆತರಿಸಿ ತಾವಿಂತೆಂದರಣಕದಲಿ
ಅನಘರಪ್ಪಿರಿ ನಿಮ್ಮ ದೆಸೆಯಿಂ
ದನವರತವೀಗ್ರಾಮದೊಳಗೊಂ
ದಿನಿತುವುಂ ಕೇಳ್ದಱಿಯೆವೆಂದುಂ ಮಾತುಕಥೆಗಳನು ೩೧

---

೧ ತ (ಅ. ಡ).

CC-0. Jangamwadi Math Collection. Digitized by eGangotri

ಕಲ್ಲಿದೇವಗಳವರು ದುರ್ಜನ
ರಲ್ಲ ಸಜ್ಜನರೆಂದು ಕೇಳುವೆ
ವೆಲ್ಲೆಡೆಯೊಳುಂ ನೀವು ಘಣಿಯಂ ಪಡೆದ ದಿನವೊಮ್ಮೆ
ಅಲ್ಲಿ ಕಂಡೆವು ಮುನ್ನವೀ ದಿನ
ದಲ್ಲಿ ಕಂಡೆವು ನಾವು ನಿಮ್ಮುವ
ನೊಳ್ಳಿಹವರಿವರೆಂದು ನಿಚ್ಚಂ ಮನ್ನಿಸುತಮಿಹೆವು ೩೨

ನಿಮ್ಮ ಮನೆದೊತ್ತಿನ ಮಗಳು ಕೇ
ಳೆಮ್ಮುವಂ ಕೀಳ್ಮಾಡಿದಳವಳ
ಹಮ್ಮ ನೋಡಿರೆ ತಂತುಹಾರುವನಲ್ಲ ಸಾಕ್ಷಾತ
ಬೊಮ್ಮನಪ್ಪನು ಆಗಿ ಬುಧರೊಳು
ದಿಮ್ಮಿತಪ್ಪಖಿಳಾಗಮಜ್ಞನು
ಗುಮ್ಮನೆಲ್ಲಾ ವಾದಿಗಳಿಗೀ ಸೋಮಯಾಜಿಗಳು ೩೩

ಸಮಿದೆಗಳಿಗೆಂದಾರ್ಯವಾರ್ಯನು
ಗಮನಿಸುವ ಗುಡಿಯೊತ್ತಿನಲಿ ವಿ
ಭ್ರಮಿಸಿದಳೊ ಕಲಿದೇವ ಕೇಳಿರೆ ನಿಮ್ಮ ಮನೆದಾಸಿ
ಕುಮತಿ ತನ್ನುವನಗ್ರಜನ್ಮೋ
ತ್ತಮನ ಕೈಸೋಂಕಿದುದೆನುತ ತಾ
ನಿಮಿಷದಿಂದೊಡೆಕುಟ್ಟಿ ಕಳೆದಳು ಹೊತ್ತ ಭಾಂಡವನು ೩೪

ಮದಿಸಿದಳವಳು ಶೂದ್ರರಂ ಮು
ಟ್ಟಿದ ಮಹೀದೇವತೆಗಳಿಗೆ ಮಾ
ಣದೆ ಸಚೈಲಸ್ನಾನವಂ ಮಾಡಲಿಕೆ ಬೇಕೆಂದು
ವಿದಿತಮಾಗಲು ಹೇಳಿದಪ್ಪುದ
ಲ್ಲದೆ ಧರಾಮರರಂ ಕನಿಷ್ಠ ಕು
ಲದ ಮನುಜರಿಗೆ ಸೋಂಕಲಾಗದಿದೆಂಬುದೊಂದುಂಟೇ ೩೫

CC-0. Jangamwadi Math Collection. Digitized by eGangotri

ಆವ ನೀತಿಯಿದಾವ ಧರ್ಮವಿ
ದಾವ ಶಾಸ್ತ್ರಪ್ರೋಕ್ತ ಭುವನದೊ
ಳಾವ ಭಕ್ತಿಯಿದೆಂತು ಸೈರಿಸಬಹುದು ಹೇಳಯ್ಯ
ನೀವು ಮಾನ್ಯರು ನಿಮ್ಮ ದಾಸಿ ಮ
ಹಾ ವಿಗಡೆಯಿಂದೆಮ್ಮ ಮಂಚಿಗ
ನಾ ವನಿತೆಯಂ ಸಾಯಿಸದವನು ನಿಮಗೆ ಮನ್ನಿಸಿದ ೩೬

ನಾಡೊಳಿಲ್ಲದ ಮಾರ್ಗವಂ ನೀ
ಮಾಡಲಹುದೇ ನಿಮ್ಮನಿದಿರೊಳು
ನೋಡಿ ನೋಡಿ[೧]ಹೆವೆಂ[೨]ಬೆವೆನಲಾ ಕಲ್ಲಿದೇವಯ್ಯ
ಆಡಬೇಕಿನ್ನುತ್ತರವನಿ
ನ್ನಾಡಿಕೊಡುವೆನ[೩]ವರ್ಗೆನುತ್ತಾ
ಬಾಡಬರ್ಗಿಂತೆಂದು ನುಡಿದನು ತತ್ಸಭೆಯ ಮುಂದೆ ೩೭

ಮಲಹರನ ಭಕ್ತರ ಮನೆಯ ಜಾ
ಯಿಲಕೆ ನಿಮ್ಮಂ ಮುಟ್ಟಲಾಗದು
ಬಳಿಕ ಶರಣರ ದಾಸಿ ನಿಮ್ಮಂ ಮುಟ್ಟಲೆಂತಹುದು
ಮುಳಿಯದಿರಿ ನಾವೆಂಬ ಮಾತಿಗೆ
ತಿಳಿದು ನೋಡಲು ಬ್ರಾಹ್ಮಣರೆ ನೀ
ವಿಳೆಯೊಳಂ ಬ್ರಹ್ಮ[ಣಿ] ಚರಂತಿ[ತಿ] ಬ್ರಾಹ್ಮಣಾ ಎನಲು ೩೮

ನಿಮಗೆ ತಾಂ ಬ್ರಾಹ್ಮಣ್ಯವೆಲ್ಲಿಯ
ದಮರ್ದು ಪರಮಬ್ರಹ್ಮವೆಂಬು
ತ್ತಮವಿದಕೆ ನೀವರ್ಥವಂ ವಿಸ್ತರಿಸಿದಡೆ ಸಾಕು
ಸುಮತಿಗಳು ಪರಮೇಶನೆಂದಡೆ
ರಮಣದಿಂ ಪರಮಾತ್ಮನೆಂದಡೆ
ವಿಮಳಿತ ಪರಬ್ರಹ್ಮವೆಂದಡೆ ಹರನ ನಾಮವಿವು ೩೯

೧–೨ ಯೆನೆಂ (ಅ, ಡಾ, ಥ, ಪ, ಮ). ೩ ನಿ (ತ, ನ, ಮ).

CC-0. Jangamwadi Math Collection. Digitized by eGangotri

ಪುರಹರಂಗಲ್ಲದೆ ಭುವನದೊಳು
ಪರರಿಗೀ ಪರ ಶಬ್ದವುಂಟೇ
ಪರಿಕಿಸುವಡುತ್ಕರುಷಪದ ಪರಶಬ್ದವಂತಾಗಿ
ಹರಿಯಜರು ಪರಮಾತ್ಮನೆಂದಿಂ
ತೊರೆಯಲಹುದೇ ವೇದ ಶಾಸ್ತ್ರೋ
ತ್ಕರ ಪುರಾಣಾರ್ಥಂಗಳೊಳು ವಿಸ್ತರಿಸಿ ನೋಡಿದಡೆ ೪೦

ಹರಿ ವಿರಿಂಚ್ಯಾದಿಗಳು ಜೀವಾ
ತ್ಮರು ಪರಬ್ರಹ್ಮನು ಹರಂ ಸಲೆ
ಚರಿಸುವರು ಬ್ರಹ್ಮಣ್ಯವಂ ಮಾಹೇಶ್ವರರು ಸತತಂ
ನಿರುತವಲ್ಲಾ ಕೇಳುತಿಪ್ಪಿರಿ
ವರ ಶ್ರುತಿ ಬ್ರಹ್ಮಾಧಿಪತಿ ಎನು
ತಿರಲು ಮತ್ತೆಯು ಬ್ರಾಹ್ಮಣಾಧಿಪತಿ ಎನುತಿರಲಾಗಿ ೪೧

ಇದುನಿಮಿತ್ತಂ ಬ್ರಹ್ಮವರ್ತನ
ಪದವಿ ನಿಮ್ಮೊಳಗೆಲ್ಲಿಯದು ಕೇ
ಳಿದಿರೆ ನಿಮ್ಮಂ ನೆನೆಯಲುಂ ಮುಟ್ಟಲು ವಿಹಿತವಹುದೇ
ವಿದಿತವೇತೆಱದಿಂದಗಲಲಾ
ಮುದನಱಿಯಿರೇ ಜಾತಿಶೂದ್ರ
ತ್ವದ ಪರೇತವಿಮುಕ್ತಿಯಾಚರಣೆಯೊಳಲಾ ಬಹುದು ೪೨

ಒಳವೆ ಮೇಣ್ ರುದ್ರೇತರಕ್ರಿಯೆ
ಗಳು ನಿರೂಪಿಸೆ ರುದ್ರನಲ್ಲದೆ
ಒಳರೆ ಶ್ರುತಿಕರ್ತರು ಶಿವೈಕ್ಯರಿಗೆಣೆಯೆ ನೀವೆಲ್ಲ
ಒಳವೆ ಮಾತುಗಳುಳ್ಳಡಿನ್ನೇ
ನುಲಿಯಿರೇ ಎನೆ ಲೇಸು ಲೇಸ
ಗ್ಗಳಿಸಿ ತಮ್ಮಂ ನಾಯ್ಗಳಿಗೆ ಕೀಳ್ಮಾಡಿ ನುಡಿದೆಯಲಾ ೪೩

---

೧ ಧ (ಅ). ೨–೩ ಸಂತತ (ತ). ೪–೫ ತರ್ಕ (ಚ).

CC-0. Jangamwadi Math Collection. Digitized by eGangotri

ಧಿಕ್ಕರಿಸಿ ತೊತ್ತಿನ ಮಗಳ ಮೇ
ಲಿಕ್ಕಿ ನೀವಿಂತೆಮ್ಮನಪಿ[1]ದಪಿ[2]
ದೆಕ್ಕಸ[1]ಕ್ಕಪನಾಡಿ ಮೊದಲಿಗೆ ಕೊಂಡೆ ಗುದ್ದಲಿಯ
ಅಕ್ಕಟಾ ಇದು ಗುಣವೆ ನಿಮಗ
ಕ್ಕಕ್ಕು ಮುಳ್ಳಂ ಕಳೆದು ದಸಿಯಂ
ಸಿಕ್ಕಿದಂತಾಯಿತ್ತಲಾ ನುಡಿ ಹೇಳಲೇನಿನ್ನು ೪೪

ಓದಿಸಾ ಪದಖಿಂಡವರ್ಗಾ
ಪಾದಶಾಖೆಗಳೆಂಬವಱಿ[3]ಯೊಳೊಂ
ದಾದಡೀಗಳೆ ನಿಮ್ಮ ಶುನಕನ ಕೈಯೊಳಿಂದೆನಲು
ವೇದವೊನಕೆಯ ಹಾಡು ಮತ್[2]ಶಿವ
ಪಾದಭಕ್ತರ ಮನೆಗಳಲ್ಲಿಯೆ
ಕಾದುಕೊಂಡಿಹ ಸಾರಮೇಯಂಗಳಿಗೆನುತ ನಗುತ ೪೫

ಸಚ್ಚರಿತ್ರಂ ಕಲ್ಲಿದೇವಂ
ಪೆಚ್ಚಿ ವೇದಪಿತಾಮಹಾಖ್ಯನ
ನೆಚ್ಚೆರಿಯ ಜಾಯಿಲವನಾಗಳೆ ಚಿಟುಕಿಡುತ ಕರೆದು
ಉಚ್ಚಿ ಲಿಂಗೋಚ್ಚಿಷ್ಟಭೋ[3]ಗಿಯ
ಉಚ್ಚಿ ಓಂಕಾರಾಂಕಯೋಗಿಯ
ಉಚ್ಚಿರೇ ದಿವ್ಯಾಂಗನಪುನರ್ಜಾತನುಚ್ಚಬ್ಚಿ ೪೬

ಎನುತ ಕರೆಯಲು ತತ್ಕ್ಷಣದೊಳಾ
ಶುನಕವೆಯಿತಂದುಬ್ಬಿ ಕಲಿದೇ
ವನವರಡಿಗಳಿಗೆಱಗಿ ನಿಲಲಂಚಿತ ದಯಾಮೃತದ
ವನನಿಧಿಯೊಳೋಲಾಡಿಸುತ್ತಂ
ಮನದೊಳನುರಾಗಿಸುತ ತತ್ಶ್ವಾ
ನನ ಮುಸುಡನೀಕ್ಷಿಸುತ ನಗುತಾ ಆಯ್ಯನಿಂತೆಂದ ೪೭

೧ಸೆ (ಚ); ಸಿ (ಕ, ತ, ಬ, ಮ). ೨ಯೋ (ಡಾ).

CC-0. Jangamwadi Math Collection. Digitized by eGangotri

ಆವ ವೇದದೊಳಾದಡೊಂದಱ
ಠಾವನೆತ್ತಿ ಅನುಷ್ಠಿಸಾ ಭೂ
ದೇವರಳುಕಲೆನಲು ಶುನಕಚರ್ಮಾವೃತಾಕಾರಿ
ಭಾವಿಸುತ ಪದ್ಮಾಸನಾಸೀ
ನಾವಿರಳನಾಗುತ್ತ ತನ್ನ ಮ
ನೋವನಜಕರ್ಣಿಕೆಯ ಮಧ್ಯದೊಳಭವನಂ ನಿಲಿಸಿ ೪೮

ಮೋದದಿಂದಾಕುಂಚನಂಗೆ
ಯ್ದಾದಿಶಕ್ತಿಯನಾಂತು ಮೆಟ್ಟಿ
ದ್ವಾದಶಾತ್ಮನನಮೃತಕರನಂ [೧]ಕಟ್ಟಿ[೨] ದೃಷ್ಟಿಯನು
ವೇದಿಸುತ ನಾಸಾಗ್ರದೊಳು ನಯ
ವಾದ ಮಾರ್ದವ ಮಧುರ ಸಕಳಾ
ನಾದ ಸುಕರ ವಿಶುದ್ಧ ಭಾಸ್ವರ ಸುಸ್ವರಂಗಳಲಿ ೪೯

ಲಕ್ಷಣೋಪೇತಸ್ಥಿರಪ್ರಚು
ರಾಕ್ಷರತ್ರಯಬಿಂದುನಾದಯು
ತಾಕ್ಷರ ಸದೋಂಕಾರವಂ ತಾನುಚ್ಚರಿಸಲೊಡನೆ
ಆ ಕ್ಷಣದೊಳಾ ಭೂಸುರಾವಳಿ
ಆ ಕ್ಷಿತಿಯೊಳಷ್ಟಾಂಗವಿಡುತ ಸ
ಮಕ್ಷದೊಳು ವಿಸ್ಮಯ ಭಯಾಕ್ರಾಂತಾತ್ಮರಾಗಿರಲು ೫೦

ಸುರುಚಿರೋದಾತ್ತಾನುದಾತ್ತ
ಸ್ಫುರಿತ ತತ್‌ಪ್ರಚಯಂಗಳಿಂಪುಗೆ
ಬೆರಸಿ ಪದವರ್ಗಕ್ರಮಾದಿಗಳೆಯ್ದೆ ಕೂಡಿರಲು
ನಿರುತ ಚಾತುಃಶ್ರುತಿಗಳೊಳು ವಿ
ಸ್ತರಣದಿಂದೊಂದೊಂದು ಠಾವಂ
ಕರಮೆಸೆಯಲಱಿದೆತ್ತಿ ಶುನಕವನುಷ್ಠಿಸುತ್ತಿರಲು ೫೧

೧–೨ ಮುಟ್ಟಿ (ಕ); ನಟ್ಟಿ (ಅ).

CC-0. Jangamwadi Math Collection. Digitized by eGangotri

ಆಗಳಾ ಕಲಿದೇವನೆದ್ದನು[೧]
ರಾಗದಿಂ ಹೋ ಮಾಣು ಕಾರಣ
ಯೋಗಿ ವೇದಪಿತಾಮಹಾ ಎನಲಧ್ಯಯನನುಡುಗಿ
ಮೇಗನೀಕ್ಷಿಸುತಿರಲು ಕೇಳ್ದಿರೆ
ಈಗ ಕಂಡಿರೆ ವಿಪ್ರರೆಲ್ಲರು
ಭೋಗಿಭೂಷಣಭಕ್ತರುನ್ನತಮಹಿಮೆಗಳನೆನುತ ೪೨

ಬಾಲಜಾಯಿಲನಿಂದ ವೇದವ
ನೋಳಿಯಿಂದೋದಿಸನೆ ಹಾವಿನ
ಹಾಳ ಕಲಿದೇವಂ ಬಳಿಕ್ಕಾ ಸಿದ್ಧರಾಮಯನ
ಆಲಯದೊಳಿರುತಿಪ್ಪುದೊಂದುಘೆ
ಕಾಳಕೊಂಡನೆನಿಪ್ಪ ಶುನಕಂ
ಮೇಲೆನಿಸಿದದುವಿದಕೆ ಗುರುವದಱಿವಿಗೋಚರವು ೪೩

ಸಾರಮೇಯವನೋದಿಸನೆ ಜಂ
ಬೂರೊಳಗೆ ವೇದವನಿಳಾಬ್ಯಂ
ದಾರಕರೊಡನೆ ವಾದಿಸಿ ಮಹಾಕಾಳಿದೇವನಿದು
ಕಾರಣಂ ಸರಿಯಲ್ಲ ಕೇಳ್ದಿರೆ
ಮಾರವೈರಿಯ ಪಾದಭಕ್ತಾ
ಗಾರವಂ ಕಾಯ್ದಿ[ಪಿ]ಪ್ಪ ಶುನಕಂಗಳಿಗೆ ಭೂಸುರರು ೪೪

ಮತ್ತೆಯುಂ ಭೂವಳಯದೊಳು ಶಿವ
ಚಿತ್ತನೆಂಬ ಶಿವೈಕ್ಯನೊಬ್ಬನು
ಬಿತ್ತರಿಪ ಭೂಸುರರೊಡನೆ ಸಂಪಾ[ಪಿ]ದ ವಾದದಲಿ
ಒತ್ತರಿಸಿ ಸಕಳಾಗಮ ಶ್ರುತಿ
ವೆತ್ತ ಸದ್ವಿಜರೊಂದುಕೋಟಿ ಜ
ಗತ್ತಿನಲಿ ಮಾಹೇಶ್ವರಂಗೆ ಸಮಾನವಲ್ಲೆಂದು ೪೫

೧ನೆಂದನು (ತ, ನ, ಬ). ೨ದಿ (ಸ). ೩ವಾ (ತ, ನ, ಬ, ಮ).

CC-0. Jangamwadi Math Collection. Digitized by eGangotri

ಸಕಳ ವೇದ ಪುರಾಣ ಶಾಸ್ತ್ರ
ಪ್ರಕರದೊಳು ವಿಸ್ತರಿಸಿ ತೋಱಿಲು
ಸಕುಟಿಲಾತ್ಮರು ತಾವನಿತಱಿಲಿ ಹೋಗದವಗಡಿಸಿ
ಪ್ರಕಟಚರ್ಚಾಪ್ರೌಢಮತಿ ವಾ
ಚಕಕಳಾವಿದನಹುದಹುದಿವೇ[೧]
ತಕೆ ನಿಜಪ್ರತ್ಯಯವನುಳ್ಕಡೆ ಕಾಣೆಸೈ ಎನಲು ೫೬

ಹಿರಿಯ ಭಕ್ತರ ಕೆರಹನೊಂದೆಸೆ
ಗಿರಿಸಿವೊಂದೆಸೆಯಲಿ ಮಹೀಸುರ
ವರರನೇಱಿಸಿ ತೊಲೆಯನೆಲ್ಲರು ತೂಗಿ ನೋಡಲ್ಕೆ
ಧರಣಿಸುರರಾ ಪಾದರಕ್ಷೆಯ
ಸರಿಯ ತೂಕಕೆ ಬಾರದಾದರು
ಹರಗಣಾಂಘ್ರಿತ್ರಾಣಕೆಂತುಂ ವಿಪ್ರರೆಣೆಯಲ್ಲ ೫೭

ಅಂತು ಸಂಧಿ ೫೪ಕ್ಕಂ ಪದಗಳು ೩೧೮ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

---

೧ ದೇ (ಅ, ಪ, ಮ).

CC-0. Jangamwadi Math Collection. Digitized by eGangotri

ಸಂಧಿ : ೫೫

*

ಸೂಚನೆ : ವಿಪ್ರರಿಗೆ ಗೊಬ್ಬೂರೊಳಗೆ ಸಿ
ದ್ಧಪ್ರಸಾದದ ಮಹಿಮೆಯಂ ತೋ
ರ್ದಪ್ರತಿಮರಹ ಬಿಬ್ಬಬಾಚಯ್ಯಗಳು ಮೆಚಿಸಿದರಲಾ

ಚಾರುಲಿಂಗಗುರುಪ್ರಸಾದಶ
ರೀರರಪ್ಪರು ಮತ್ತೆಯುಂ ಗೊ
ಬ್ಬೂರೊಳಿಪ್ಪರು ಬಿಬ್ಬಬಾಚಯ್ಯಗಳ ಮಹಿಮೆಯನು
ಗೌರಿಯರಸಂಗಾದಡಂ ವಿ
ಸ್ತಾರಿಸುವಡಳವಲ್ಲ ಎನಗಾ
ವೀರಭಕ್ತರನೆಯ್ದಿ ಪೊಗಳಲಶಕ್ಯವಂತಾಗಿ ೧

ಈ ಮಹಾಜನವವರ ಕೈಯೊಳು
ಗ್ರಾಮವಱಿಯಲು ಕೆಟ್ಟ ಕೇಡಂ
ಭೂಮಿಪಾಲಕ ಕೇಳು ಪೇಳ್ವೆನು ಲಿಂಗಜಂಗಮದ
ಆ ಮಹಿತ ಸಿದ್ಧಪ್ರಸಾದದ
ನೇಮವಂಗಂ ಪ್ರಾಣಮಾಗಿರ
ಲಾಮಹಾತ್ಮರು ವರ್ತಿಸುತ್ತ ತದಗ್ರಹಾರದಲಿ ೨

ಒಂದು ಭಾಗಕ್ಕದಱಿಂಳಗ್ರಜ
ರೆಂದುದಾಶ್ರಮಧರ್ಮಮತಜನ
ವ್ಯಂದ ಪದವಿಯನತಿಗಳಿದು ವೇದಾನುಮತದಿಂದ
ಸಂಧಿಸಿದ ನಿಜ ೧ಭಕ್ತಿ೨ಪದವಿಗೆ೩
ಸಂದು ಸುಸ್ಥಿತಿಯಿಂದೆ ಭಜಿಸು
ತ್ತೊಂದೆರಡು ಮೂರ್ನಾಲ್ಕುವೈದಾರ್ಯೋಜನಂಗಳಲಿ ೩

---

* ರಾಗ : ವರಾಳಿ (ಅ, ಡಾ, ಧ, ಪ); ನಾಟಿ (ಚ); ಸೌರಾಷ್ಟ್ರ (ತ).
೧–೩ ಪದವಿಭಕ್ತಿಗೆ (ತ, ನ). ೨ಕ್ತ (ಥ).

CC-0. Jangamwadi Math Collection. Digitized by eGangotri

ಅಂಗಜಾಂತಕಭಕ್ತರಲಿ ಪ
ರ್ಯಂಗಳಾದಡೆ ತಲೆಗಳೊಳು ಕ
ರ್ಣಂಗಳೊಳು ಕಂಠಂಗಳೊಳು ಕೈಗಳೊಳುರಂಗಳೊಳು
ಲಿಂಗವಂತರ ಪಾದರಕ್ಷಾ
ಸಂಗವಾಗಿಹ ಕುಣಿಕೆಗಳನತಿ
ಸಾಂಗಮಾಗಲು ಧರಿಸಿ ಸಿತಭಸಿತಾಂಗರಂಗದಲಿ ೪

ಕಣೆಯ ಕುಣಿಕಿಲ ಬಂಡಿಯಂ ಬ
ಚ್ಚಣಿಸಿ ನಂ[೧]ದಿಪತಾಕೆಗಳ ತೋ
ರಣವನದಱಿಕೊಳಲಂಕರಿಸಿ ಚವರಂಗಳಂ ಕಟ್ಟಿ
ಝಣಝಣಿಸುವಂದುಗೆಗಳಂ ಘಣ
ಘಣಯೆನಿಪ ಘಂಟೆಗಳನಾಘೋ
ಷಣದ ಕಿಱುಗೆಜ್ಜೆಗಳನಾಭರಣಂಗಳಂ ತುಡಿಸಿ ೫

ಚೆಲುವು ಮಿಗೆ ರುದ್ರಾಕ್ಷವಲಯಾ
ವಳಿಗಳಂ ಸೌವರ್ಣಪಟ್ಟಂ
ಗಳನಭಿನವಿಸಿ ಬಾಸಿಗಂಗಳನಿಕ್ಕಿ ಪಣೆಗಳಲಿ
ಬಲವದುಕ್ಷೇಶ್ವರನ ರೂಪ
ಗ್ಗಳಿಪ ಬಲ್ಲಿತ್ತುಗಳನೇ ಪೆಗ
ಲ್ಗೊಳಿಸಿ ಬಂಡಿಯೊಳಗ್ರದಲಿ ಕೇಳಿಕೆಗಳೊಡಗೂಡಿ ೬

ಮುಂದೆ ಚಾಂಗು ಭಲಾ ಎನಿಪ ರವ
ವೊಂದಿ ಮೊರೆಯಲುಘೇ ಎನುತ್ತಾ
ನಂದದಿಂ ನಲಿದೆಯ್ದಿ ಶರಣಪದಾಂಬುಜಂಗಳಿಗೆ
ಸಂಧಿಸಲು ಭಾಳಸ್ಥಳಂಗಳ
ಮಂದಭಕ್ತಿಯೊಳವರ ಸುಪದರ
ವಿಂದಸಂಘಟರೇಣುಪಟಲಾಘಟಿತಶಿರರಾಗಿ ೭

---

೧ ಮಂ (ಮ).

CC-0. Jangamwadi Math Collection. Digitized by eGangotri

ಲೀಲೆಯಿಂದವರುಗಳ ಪದಕೀ
ಲಾಲಪೀಯೂಷಾಬ್ಧಿ ಕೇಳೀ
ಲೋಲರಾಗಿ ತದುಭಯಸಮುದಯ ಸುಪ್ರಸಾದಾಯ
ಲಾಲಿತಾಯ ನಮೋ ಎನುತ್ತ ಸ
ಮೇಳರತಿಯಿಂ ಪೊಡವಡುತ್ತನು
ಕೂಲಮಾಗಲು ಶ್ರೀಗುರುಪ್ರತಿಬಿಂಬವೆನಲಿರ್ದ ೬

ಸಿದ್ಧಲಿಂಗೋಪಪ್ರಭೋಗ ವಿ
ಶುದ್ಧಭೋಗ ಸದಾನುರಾಗ ನಿ
ಬದ್ಧರಾಗುತಪರ್ಕಳುಂಡೊಕ್ಕ ಪ್ರಸಾದವನು
ಸಿದ್ಧಿತಾರ್ಥಮಿದೆಂದು ಮೊಗೆ ಮೊಗೆ
ದುದ್ಧರಿಸುತಂ ಹೆಡಗೆಗಳಿನಭಿ
ವೃದ್ಧಿಕರಮಾಗಲ್ಕೆ ತಂದಾ ಬಂಡಿಯಲಿ ತುಂಬಿ ೯

[೧]ಅಪ್ರತಿಸ್ಥಿತ[೨] ಮತಿಯೊಳಭವಗ
ಣಪ್ರಸಾದವನೆಯ್ದೆ ಒದಗಿ[೩]ಸಿ
ಸುಪ್ರಸನ್ನರು ಬಿಬ್ಬಬಾಚಯ್ಯಂಗಳೊಲವುಣ್ಮೆ
ಭೂಪ್ರಸಿದ್ಧದೊಳೆಂದಿನಂತೆ ಬ
ಹುಪ್ರಕಾರದ ಕೇಳಿಕೆಗಳ ರ
ವಪ್ರತತಿ ಮಿಗೆ ತಂದು ಗೊಬ್ಬೂರೊಳು ತ್ರಿಸಂಧ್ಯೆಯಲಿ ೧೦

ಆನುನಯಂ ಮಿಗೆ ತತ್‌ಪ್ರಸಾದಮ
ನನುಭವಿಸುತಿರೆ ಭೂಸುರಾವಳಿ
ಮ[೪]ನದೊ[೫]ಳತಿ ಖಿತಿಗೊಳುತ ಗುಜುಗುಜುಗುಟ್ಟುತಿರಲಾಗಿ
ಅನಘನಾ ಊರೊಳು ಹಿರಿಯ ಭ
ಕ್ತನ ಮನೆಯ ಪರ್ಬಕ್ಕೆ ತಾನೆಂ
ದಿನ ಪರಿಯೊಳತಿ ಸಂಭ್ರಮದೊಳನುರಾಗದಲಿ ಹೋಗಿ ೧೧

೧–೨ ಅಪ್ರತಿಸ್ಥಿರ (ತ, ನ, ಬ); ಅಪ್ರಸಿದ್ಧರ (ಅ). ೩ ವಿ (ಕ). ೪–೫ನೆಯೊ (ಸ).

CC-0. Jangamwadi Math Collection. Digitized by eGangotri

ಜಂಗಮಾಂಘ್ರಿಸರೋಜಸೌರಭ
ಸಂಗಮಸ್ತಕರಾಗಿಯುತ್ಪಳ
ಕಂಗಳಂಕುರಿಸಲ್ ಪ್ರಸಾದಾವೃತದೊಳೋಲಾಡಿ
ಹಿಂಗದಾ ಭುಕ್ತಾವಶೇಷವ
ನಂಗವಿಸಿ ಮೊಗೆಮೊಗೆದು ಸಾಂಗೋ
ಪಾಂಗಮಾಗಲು ಹೆಡಗೆಗಳಿನಾ ಬಂಡಿಯಲಿ ತುಂಬಿ ೧೨

ಎಂದಿನಂದದಿ ಬಂಡಿ ನಡೆಯಲು
ಮುಂದೆ ಹಿಂದೆಡೆಯೆಡೆಯೊಳಾಡು
ತ್ತಂದದಿಂ ಸತ್ತಿಗೆಗಳಂ ಸತ್ತಿಗೆಗಳೊತ್ತರಿಸೆ
ಸಂದಣಿಸಿ ಹಳವಿಗೆ ಹಳವಿಗೆಗ
ಳೊಂದಱಿಂದಱಿಂ ಕಳೊರೆಸುತಿರೆ ನಯ
ವೊಂದಿ ಮಂಗಳಮಧುರನಾದಂಗಳು ಮೊರೆವುತಿರಲು ೧೩

ಹೆಬ್ಬಱಿಗಳಂ ಬಾಱಿಸುವ ಗತಿ
ಗುಬ್ಬುತುಬ್ಬುತ ಗೀತಜತಿಗಳಿ
ಗೊಬ್ಬರೊಬ್ಬರುಘೇ ಉಘೇ ಚಾಂಗು ಭಲ ಎನುತಿರಲು
ನಿಬ್ಬರದ ನಿಡುಬೊಬ್ಬೆಗಳನಿಡು
ತುಬ್ಬರಿಸುತಬ್ಬರಿಸುತಾರುತ
ಬಿಬ್ಬಬಾಚಯ್ಯಗಳು ಗೊಬ್ಬೂರೊಳಗೆ ಹುಗುತಿರಲು ೧೪

ಜನವಿರುದ್ಧಂ ನಿಮ್ಮ ಪರಿವ
ರ್ತನವಪಾರವು ಮೀಱಿದದು ಭೋ
ರನೆ ಮದುವೆಗೆಯ್ದೆಪಿರೊ ಬಂಡಿಯಿದಕ್ಕೆ ಸಂಭ್ರಮವು
ಅನಿತಱಿಂಗಳು ಕೇಳುವೆವಿವರ ದು
ರ್ಜನತೆ ಮುನ್ನಂ ಕಂಡೆವಿಂದಿದೆ
ಎನುತ ವಿಪ್ರರು ಬಂದು ಹೋನಿಲ್ಲಿತ್ತ ಬಾರದಿರಿ ೧೫

೧–೨ತೀವಿ (ತ, ನ, ಮ). ೩–೪ಳಡ (ತ, ನ). ೫–೬ಭಲರೆ ಭಲರೆ (ತ, ನ). ೭ತು (ನ, ಸ). ೮–೯ಗಿಲ್ಲಿ (ಥ, ನ); ನೀವಿ (ಧ, ಪ). ೮ × (ಧ, ಪ).

CC-0. Jangamwadi Math Collection. Digitized by eGangotri

ದಾಳಿ ಬಂದುದೊ ತಲ್ಲಣಿಸದಿರಿ
ಕಾಳಗಕೆ ಹೋದಿಹಿರೊ ಹಗೆಯರ
ಮೇಲೆ ಬೊಬ್ಬಿಟ್ಟಿದಾರುವೀ ಬೊಬ್ಬಾಟವೇತಕ್ಕೆ
ಶೂಲಿಭಕ್ತನು ಸತ್ತನೋ ಈ
ಕೇಳಿಕೆಗಳೇಂ ಹಂತವಂ ಮುಟ್ಟಿ
ದಾಳಿನಂತೆ ನಿಗುರ್ದಪಿರಿ ಸಂಕಿಸದೆ ಬಿಂಕದಲಿ ೧೬

ಸಡಗರಂಗಳು ಬರಿಯ ಠಕ್ಕಿನ
ಗಡಬಡಂಗಳು ಚಾಂಗು ಭಲಗಳು
ಕೊಡೆಗಳುಂ ಹಳವಿಗೆಗಳುಂ ತಡಬಡಿಪ ವಾದ್ಯಗಳು
ಉಡುಗದೂದುವ ಬಿಟ್ಟುಗಹಳೆಗಳು
ಕಡೆಗೆ ಚೀರಮನಂತೆ ಭೋರನೆ
ಮೃಡಪುರಕೆ ನೀವೆಲ್ಲರೀಗಳಿ ಹೋಗುತಿದ್ದಿಹಿರೇ ೧೭

ಇಂತು ಭಯವುಳಿದಗ್ರಹಾರವ
ನೆಂತುರವಣಿಸಿ ಹುಗಬಹುದು ನಿಮ
ಗಂ ತರವೆ ಕುಲಹೀನರೆಂಜಲನಧಮರೆಂಜಲನು
ಮುಂತೆ ಹೇಸದೆ ಗುಡಿಸಿ ತಂದೋ
ರಂತೆ ಬಂಡಿಯ ತುಂಬಿ ಸೀರೆಯ
ನಂತು ಮುಚ್ಚಿ ಮಹಾಗಹನಮಂ ಮಾಡಿ ಬೆಟ್ಟಿತಿಹಿರಿ ೧೮

ಹಿಡಿದು ನೋಡಿದಡಿದಟ್ಟಿಕೊಳೊಂದಾ
ದಡೆ ವಿಶೇಷಮದುಂಟೆ ತೋಱಿಲು
ಬಿಡಿ ಬಿಡೇತಕೆ ಹಲವ ನಾವಿನ್ನಂಜುವೆವು ನಿಮಗೆ
ಪೊಡವಿಗಚ್ಚರಿ ನಿಮ್ಮ ಭಕ್ತಿಯ
ನಡೆ ಸೊಗಸದೆಮಗೀ ಹಿರಿಯತನ
ಗೆಡದೆ ಹೊಱಿವಡಿ ಸಾಕು ನಮ್ಮೂರೊಳಗಿರದಿರೆನಲು ೧೯

CC-0. Jangamwadi Math Collection. Digitized by eGangotri

ಗಾಱುನುಡಿಗಳನೇಕೆ ನುಡಿವಿರಿ
ಸೀಱುತಂ ಮೂದಲಿಸಿಯೆಮ್ಮಂ
ಮೀಱಿ ನುಡಿಯಲು ನಿಮ್ಮ ಪವಣೇ ಶಿವನ ಭಕ್ತರ್ಗೆ
ಗೋಱಿಗಳಿರಾ ನೀವು ಸರಿಯೇ
ತೂಱಿ ಕಳೆವೆವು ನಿಮ್ಮನೀಗಳೆ
ಹಾಱಿಹೋಗಲು ಹೊಳ್ಳುಗಳಿರಾ ೧ಬೇಗ೨ ಮಾಡಿದಿರಿ ೨೦

ಸೊಕ್ಕಲಾಗದು ನಿಮ್ಮ ಬಾಯಿಗೆ
ತಕ್ಕ ತುತ್ತಂ ಕೊಳ್ಳಿರಭಿಮಾ
ನಕ್ಕೆ ಕೇಡಂ ಬಯಸದಿರಿ ನಾವೆತ್ತ ನೀವೆತ್ತ
ಎಕ್ಕಸೆಕ್ಕದ ಮಾತುಗಳು ನಿಮ
ಗಕ್ಕುವವೆ ನಿಮ್ಮೂರೊಳಿರಲೇ
ತಕ್ಕೆ ಮಾದೆವು ನಿಮಗೆ ನಮಗೆಯು ಕಾರಣವದೇನು ೨೧

ಕುಂಜರಾರಿಗಣಪ್ರಸಾದವ
ನೆಂಜಲೆಂಜಲಿದೆಂದು ಪಾಪ
ಕ್ಕಂಜದೆಂಬಿರಿ ಜಂಗಮಪ್ರಾಸಾದದೂಷಕರ
ಭಂಜಿಸುತ ಯಮನಧಿಕ ೩ನಾರಕಳ
ಪುಂಜದಲಿ ಕೆಡಹುವನೆನುತಮಿಹ
ನಂಜುಗೊರಳನ ವಾಕ್ಯವಂ ಕೇಳ್ದಱಿಯಿರೇ ಮುನ್ನ ೨೨

ಅತ್ತ ಮೇಲಣ ವಿಧಿಯ ಪಧೆಗಳ
ನುತ್ತರಿಸುವವನಾವನುಂಟೇ
ನಿತ್ತ ಸದ್ಯೋಮರಣವಾದುದನಱಿಯಿರೇ ನಿಮಗೆ
ಉತ್ತಮದ ಸಿದ್ಧಪ್ರಸಾದಮ
ಹತ್ತರವನೆಣಿಸುವಡೆ ನೀವು
ನೃತ್ತಚಿತ್ತರು ನೋಡಲುಂ ಮುಟ್ಟಲ್ಕೆ ವಶವಹುದೇ ೨೩

೧–೨ ಬೆಗಡ (ಡಾ); ಬೆಡಗ (ಥ). ೩–೪ ನರಕಾ (ಡಾ).

CC-0. Jangamwadi Math Collection. Digitized by eGangotri

ಭಕ್ತರಿಗೆ ಪರಮಾಮೃತಂ ಶಿವ
ಭಕ್ತಿಹೀನರಿಗಿದು ಲಯಾಗ್ನಿ ಅ
ಭಕ್ತರುಗಳಿರ ಬೇಗೆಯೊಳಗಣ ಮಿಡು೧ಚಿಗಳ ತೆಱದಿ
ವ್ಯಕ್ತ ಉರಿದೇ ಹೋಹಿರಲ್ಲದೆ
ಶಕ್ತಿಯುಂಟೇ ನಿಲಲು ನಿಮ್ಮ ದು
ರುಕ್ತಿಗಳು ಬೇ೨ಡಿನ್ನು ಕೆಡುವಿರಿ ಸಾಱಿ೨ದೆವು ನಿಮಗೆ ೨೪

ಗರ್ಬದಲಿ ನೀವೆಂಬಿರಲ್ಲದೆ
ಪೊರ್ಬರಂ ನಾವೆನ್ನೆವಿದಕೇ
ಕುಬ್ಬಸಂ ಬಡ ಪಾರ್ಬರಂ ಕೊಲುವುದು ಪರಾಕ್ರಮವೇ
ಕೊಬ್ಬಿದಿರಿ ನೀವೆನಲು ತಮ ತಮ
ಗ೩ಬ್ಬರಿಸುತ ಮಹಾಜನಂಗಳು
ಬಿಬ್ಬಬಾಚಯ್ಯಂಗಳೊಡನಿಂತೆಂದರಾಗ್ರಹಿಸಿ ೨೫

ಬೋಳುಗೊರವರ ಹಲಬರೆಂಜಲ
ಕೂಳಿದೆಂಬುದು ಭುಜಗವೋ ಶುಂ
ಡಾಲವೋ ಸಿಂಹವೊ ಶರಭವೋ ಪೆರ್ಬುಲಿಯೊ ಸಿಡಿಲೋ
ಕಾಳಕೂಟವೊ ಕಾಳಗಿಚ್ಚೋ
ಕಾಲನೋ ಇದಕಂಜಲೇತಕೆ
ಹೇಳುತಿಹಿರಿ ಮಹಾಭಯಂಕರವಾಗಿ ನೀವೆನುತ ೨೬

ವಾಮನಾರ್ಯನು ಮಂಚಿಗಾ ಶ್ರೀ
ರಾಮಭಟ್ಟರು ಕೂಚಿಗಾ ಬಲ
ರಾಮಪಂಡಿತರಪ್ಪುಗಾ ದಾಮೋದರರ ಪೆದ್ದಿ
ಸಾಮವೇದಿಯ ಜನ್ನ ಶಿಷ್ಟರ
ಹೋಮಭಾಸ್ಕರ ದುಷ್ಟಕೇಶವ
ಕಾಮನೋಪಾಧ್ಯಾಯರಚ್ಯುತ ಧೂರ್ತ ನರಸಿಂಪ ೨೭

---

೧ ಡಿ (ಚ, ತ, ಥ, ಸ). ೨ ವೇ (ಡಾ, ಕ, ಥ, ಮ). ೩ ಗು (ಪ).

CC-0. Jangamwadi Math Collection. Digitized by eGangotri

ಮಿಗಿಲು ದೋವತಿ ದರ್ಭೆ ಸಂಬಳಿ
ಗೆಗಳನೊಂದೆಡೆಯಲಿ ಮಡಗಿಯ
ಟ್ಟಿಗಳನೆಲ್ಲರು ಕೊಂಡು ಹಿಡಿ ಹಿಡಿ ಬಂಡಿ ಎತ್ತುಗಳ
ಬಿಗಿದ ಬಲು ಹೋರಿಯ ಕೊರಳ ಜೊ
ತ್ತುಗೆಗಳಂ ಪಱಿ ಪಱಿ ನಿಮಿಷದಲಿ
ಬಗೆಯದಿನ್ನಿರದೆಯ್ದಿಸುತ್ತಂ ಮುತ್ತಿ ಕೈಕೊಳ್ಳಿ ೨೮

ಮುಱಿಯಿ ಕುನಿಕಿಲನದಱ ಮೇಲಣ
ನಿಱಿಯನೊಡನೊಡಸೀಳ್ದು ಕಟ್ಟಿದ
ಮಿಱುಪ ತೋರಣ ಕೇತನಂಗಳನು೦ಱಿ ಪಱಿದು ಕಳೆಯಿ
ಉ೦ಱಿವೆ ನೀವಾ ಬಂಡಿಯಂ ಕುಸಿ
ಕಿಱಿದು ಬರಲೀಸದಿರೆನುತ ಮನ
ದಱಿಯ ವಿಪ್ರರು ಸಂದಣಿಸುತಿರಲಾ ಪ್ರಸಾದಿಗಳು ೨೯

ಓಡುಗಳಿರಾ ನೋಡಲಾಪಡೆ
ನೋಡಬನ್ನಿರೆ ನೀವೆನುತ್ತಂ
ಬಾಡಬರನಾ ಬಿಬ್ಬಬಾಚಯ್ಯಂಗಳೊದಱಿತ್ತ
ಓಡಿರೈ ಕಲ್ಯಾಂತದಹನಂ
ಮೂಡಿ ಬರುತಿದೆ ಎನುತ ಕೋಪಿಸಿ
ಊಳಿಸಿದ ಸಿದ್ಧಪ್ರಸಾದದ ಮೇಲ್ವೊದಕೆದೆಗೆದು ೩೦

ಕೈಗಳಿಂ ಮೊಗೆದೆತ್ತಲೊಡನಾ
ಬೇಗದಲಿ ಕೆಂ೦ಬೊಗೆ೦ಯೊ ಮಿಂಚೋ
ಆ ಗಗನಮಣಿಯೋ ಅದಲ್ಲಿದು ಕೆಂಡವೋ ಉರಿಯೋ
ಆಗಲಾಪುದೆನುತ್ತ ಭೂಸುರ
ರಾಗ ವಿಕಳತೆಯಿಂದ ಭಯಯುತ
ರಾಗುತಿರೆ ಆದೆ ನೋಡಿ ಎನುತಂ ಚೆಲ್ಲಲೊಡನೆಯ್ದೆ ೩೧

೧ನೆ (ಬ). ೨ನೆ (ಬ). ೩–೪ ಜಾಜಿ (ಕ, ಚ, ಥ, ಬ, ಮ); ಜ್ವಾಲೆ (ಧ, ಪ).

CC-0. Jangamwadi Math Collection. Digitized by eGangotri

ಛಿಟಿ ಛಿಟೀ ಛಿಟಿ ಭುಗಿಲು ಭುಗಿ ಭುಗಿ
ಛಿಟಿಲು ಭುಗಿಲೆನೆ ನೆಗೆದು ವಿಸ್ಫುಟ
ನಿಟಿಲತಟನಯನನ ನಿಟಿಲತಟನಯನಶಿಖಿಯಿಂದ
ಪಟುಪುರಂಗಳು ಬೇವವೋಲು
ತ್ಕಟವೆನಿಸಿ ಗೊಬ್ಬೂರೊಳಗಣಿತ
ಕುಟಿಲವಿಪ್ರರ ಗೃಹಚಯಮನಾಹುತಿಗೊಳುತ್ತಿರಲು ೩೨

ಗುಡ್ಡ ಹರಿಗಳ ಮಾಳಿಗುರಿಯಿತು
ದೊಡ್ಡ ರಾಮರ[೧] ಮನೆ ಬೆಳಗಿದುದು
ಹೆಡ್ಡ ದಾಮೋದರರ ಗೇಹವು ದಹನವಾಯಿತ್ತು
ದೊಡ್ಡ ಹೊಟ್ಟೆಯ ಮಾಧವನ ಮನೆ
ಅಡ್ಡಗಾಲಯಿತಯನ ಮನೆಯುಂ
ಗ[೨]ಡ್ಡದಾದಿತ್ಯರ ಮನೆಯು ನೆಱಿ[೩] ಧೂಳಿಪಟವಾಯ್ತು ೩೩

ಹೊಟ್ಟೆಯಚ್ಯುತದೇವನಾಲಯ
ವೊಟ್ಟಿಕೊಂಡಿತು ಭಾಸ್ಕರನ ಮನೆ
ಸುಟ್ಟುಹೋಯಿತು ಯಾಜ್ಞಿಕರ ಮನೆಗಳವೆ ಸಿಕ್ಕಿದವು
ಪಟ್ಟವರ್ಧನ ನಾರಸಿಂಹನ
ಕೊಟ್ಟಿಗೆಯು ಉರಿಹತ್ತಿತರಿಯಮ
ಭಟ್ಟರಪ್ಪಣ್ಣಗಳ ಮನೆಯುಂ ಭಸ್ಮವಾಯಿತ್ತು ೩೪

[೪]ಯಾಗದವರ್ಗಳ[೫] ಮನೆಗಳುಱಿ[೬] ನೀ
ಟಾಗಿ ಹೋದವು[೭] ಯಜ್ಞಶರ್ಮರ
ಭಾಗೆಗಳವರ ಮನೆಗಳೆಲ್ಲಂ ಕಿಚ್ಚು ಹೊತ್ತಿದವು
ಆಗಮೀಕರ ಮನೆಯು ಕರಿಕರಿ
ಯಾಗಿ ಕೆಡೆಯಿತು ಮಾಸಕ[೮]ವೆಯಿ[೯]
ಪ್ಪಾ ಗುಡಿಲು ಸನ್ಯಾಸಿಗಳ ಮಠವೆಯ್ದೆ[೧೦]ಬೇಯಿತ್ತು[೧೧] ೩೫

---

೧ ನ (ಕ). ೨ ಗು (ಮ). ೩–೪ ಳ ಆಗಳವರ್ಗಳ (ಅ, ಮ); ಯಾಗವರ್ಗಳ (ಚ). ೪–೫ ಮನೆಗಳಿಕ್ಕಡಿ । ಯಾಗಿ ಬೆಂದವು (ಕ, ಚ); ಮನೆಗಳುಱಿ ನೀರಾಗಿ ಹೋದವು (ಮ, ಬ, ಅ). ೬–೭ ಬ್ಬಿ (ಕ, ಬ). ೮–೯ ಬೆಂದಿತ್ತು (ಅ, ತ, ನ).

CC-0. Jangamwadi Math Collection. Digitized by eGangotri

[೧]ಸೋಮಯಾಜಿ[೨]ಗಳಾಲಯಂ ನಿ
ರ್ಧೂಮಧಾಮವದಾಯ್ತು ವಿಷ್ಣು
ಸ್ವಾಮಿಗಳ ಮಂಟಪವುರಿದುದಾ ಬಸದಿ ಬೆಂದಿತ್ತು
ಸಾಮವೇದಿಗಳಾಚಿ[೩]ಪೆದ್ದಿಯ
ಧಾಮವಡಗಿತು ದಳ್ಳುರಿಗೆ ನಿ
ರ್ನಾಮವಾಯಿತ್ತದುವಿದೆನ್ನದೆ ಮನೆಗಳಾ ದ್ವಿಜರ ೩೬

ಕೂಡೆ ಶಿವದೂಷಕರ ಮನೆಗಳ
ಕೇಡೆನುತ್ತಂ ಪ್ರಳಯವಹ್ನಿಯೊ
ಳಾಡುತಂ ಪ್ರಮಥಾವಳಿಗಳಂತುಬ್ಬಿ ಬೊಬ್ಬಿಡುತ
ಪಾಡುತಾಡುತ ಭಕ್ತರಿರುತಿರೆ
ಬಾಡಬರು ಭೀತಾತ್ಮರಾಗುತ
ಪೋಡು[೪]ತಂ ಕೆಲಬರು[೫] ಮನೆಗಳೊಳು ಸಿಕ್ಕಿ ಮಡಿವವರು ೩೭

ಕಳವಳಿಸುತಂ ಬಿದ್ದೊಱಲುವರು
ತಲೆಗಳಂ ಸೆಕೆ ಹತ್ತಿ ದಹಿಸಲು
ಜ್ವಲನನೇತ್ರನ ದೇಗುಲಂಗಳಿಗೆಯ್ದಿ ಬದುಕುವರು
ಅಲಸಿ ಗಡ್ಡಂ ಮೀಸೆಗಳು ಬೇ
ಯಲು ಸಮೀಪದ ಗಡಿಗೆಬಾವಿಗ
ಳೊಳಗೆ ಧುಮ್ಮಿಕ್ಕುವರು ತಮ್ಮಯ ಪ್ರಾಣಸಂಕಟಕೆ ೩೮

ಉಟ್ಟ ಸೀರೆಗಳುರಿಯಲಕಟಾ
ಕೆಟ್ಟೆವೆನುತೇಳ್ತಂದು ದೈನ್ಯಂ
ಬಟ್ಟು ಮಾಹೇಶ್ವರರ ಶರಣಂಬೊಕ್ಕು ನಮಿಸುವರು
ಸುಟ್ಟು ಕಳಿಯದ ಮುನ್ನ ಭಕ್ತರ
ಕೊಟ್ಟಗೆಗಳಂ ಸಾರ್ದು ಬದುಕುವ
ರಿಟ್ಟ ಮಟ್ಟಿಯನಳಿದು ಭಸಿತವನಿಟ್ಟುಕೊಂಬುವರು ೩೯

೧–೨ ಸಾಮವೇದಿ (ಅ). ೩ ದಿ (ಕ); ರ್ಚಿ (ಚ). ೪–೫ ತಿರೆ ಕೆಲಕೆಲ (ಕ, ಚ, ಥ); ತವೆ ಕೆಲರು (ತ, ನ).

CC-0. Jangamwadi Math Collection. Digitized by eGangotri

ಒಡಲುರಿಯಲುಪತಾಪಿಸುತ ಬಂ
ದೊಡೆಯರಡಿಗಳ ಮೇಲೆ ಕೆಡೆವರು
ಸುಡದ ಮುನ್ನವೆ ಬಿಬ್ಬಬಾಚಯ್ಯಗಳ ಹಿಂದಿರ್ದು
ಹೊಡವಡುವರುಂ ಕಿಚ್ಚಿನಿಂದಿ
ಮ್ಮಡಿಸಿ ಬೆದಬೆದನುರಿವುತರ್ಧಂ
ಮಡಿದುದೀ ಪರಿಯಿಂದ ಕಡು ಕಂ[೧]ಗೆಟ್ಟು ಮರವಟ್ಟು ೪೦

ತೊಗೆಯ ಚೆನ್ನಪ್ಪಂಗಳುಂ ಮುಂ
ಡಗೆಯ ವಸುದೇವಗಳು ವೇದಾಂ
ತಿಗಳ ಕೃಷ್ಣಪ್ಪಗಳು ಪೌರಾಣಿಕರ ಬಲಭದ್ರ
ಹೆಗಲ ವಿಠ್ಠಣ್ಣಗಳು ಋಗ್ವೇ
ದಿಗಳ ಸಿಂಗರಿ ಸೂರ್ಯಘಟಿಸಾ
ಸಿಗಳ ಜಕ್ಕಣ್ಣನು ಪುರೋಹಿತ ಸಾಯಿದೇವಗಳು ೪೧

ಮಲ್ಲಿಭಟ್ಟರು ನಾರ[೨]ಣೋಜರುಳ
ಬೊಲ್ಲಿಭಟ್ಟರ ಕೇಶವನು ಶ್ರೀ
ವಲ್ಲಭರು ಗೋಪಾಲಭಟ್ಟರು ಬ್ರಹ್ಮಪಂಡಿತರು
ಮಳ್ಳಿಗಣ್ಣಲ್ಲಾಳನಾಥನು
ಡೊಳ್ಳುಹೊಟ್ಟೆಯ ಕೂಚಿಗಳು ಮೊದ
ಲೆಲ್ಲರುಂ ಗೊಬ್ಬೂರ ಹೆಬ್ಬಾರುವರು ಬಸವಳಿದು ೪೨

ನಿಮ್ಮ ಭಕ್ತರೆ ಗತಿಯೆನುತ್ತಂ
ನಿಮ್ಮ ಧರ್ಮದ ಕವಿಲೆಗಳನೀ
ನೆಮ್ಮುವಂ ಕಾಯೆನುತಳುತ ದೆಸೆದೆಸೆಗೆ ಬಾಯ್ವಿಡುತ
ನಿಮ್ಮ ಪಾರ್ಬರು ನಾವೆನುತ್ತಂ
ನಿಮ್ಮ ಶರಣಂಬೊಕ್ಕೆವೆನುತಂ
ಬಿಮ್ಮುಗೆಟ್ಟಷ್ಟಾಂಗದಿಂ ಪೊಡವಡುತ ನಸು ಸಾರ್ದು ೪೩

೧ನಡೆ (ಅ. ತ. ನ. ಮ). ೨ಟ (ಚ). ೩–ಳ ಣಾರ್ಯರು (ತ. ನ. ಬ).

CC-0. Jangamwadi Math Collection. Digitized by eGangotri

ದೀನರುಗಳಂ ಸಕಳ[೧]ಧರ್ಮ[೨]ವಿ
ಹೀನರುಗಳಂ ಖಿಳರನಪಗತ
ಮಾನರಂ ಭ್ರಷ್ಟರನವಗುಣಾಧೀನರಂ ದುಷ್ಟ
ಮಾನಸರನತಿ ಕಷ್ಟರಂ ಸು
ಜ್ಞಾನದೂರರನಘಮಾರಂ ದೋ
ಷಾನುಕೂಲರನಲ್ಪಶೀಲರನೆಮ್ಮನುದ್ಧರಿಸಿ ೪೪

ನಿ[೧]ಗ್ರಹಂಬಡುವೆಮಗಭಯವನ
ನುಗ್ರಹಿಸಿ ಕಾಯಿರೆ ಸದಾಚಾ
ರಾಗ್ರಗಣ್ಯರು ನೀವು ಜನಮೇಜಯನು ಮುನ್ನಿತ್ತ
ಉಗ್ರಹಾರವಿದಂ ಪುನರಪಿ ಸ
ಮುದ್ಗರಲ್ಲುದ್ಧರಿಸಿ ಧಾರೆಯ
ನಗ್ರದಿಂದಿಂದೆಱಿ[೨]ದು ನಿಮ್ಮ ಬ್ರಹ್ಮಪುರಿಗಳನು ೪೫

ಕರುಣದಿಂದಂ ಸಲಹಿಯೆನುತಂ
ಧರಣಿಸುರರಷ್ಟಾಂಗರಾಗಿ ಪು
ನರಪಿ ವಂದಿಸುತೇಳದಿರ್ಪರನೊಲವಿನಿಂ ನೋಡಿ
ಮರುಳುಗಳಿರೇಳೇಳೆನುತ್ತಾ
ವರಿಸಿ ಬೆಳಗುವ ತತ್ಪ್ರಸಾದಕೆ
ಕರಯುಗಂಗಳನೊಡ್ಡಿ[೧] ಶರಣರು ನೋಡಲಂತೊಡನೆ ೪೬

ಘಳುಘಳಿಸಿ ಥಳಥಳಿಪ ಬಹಳ
ಜ್ವಲನವಾಕ್ಷಣಮಾ[೨]ರಿ ಮುನ್ನಿನ
ವೊಲು ಸಹಜ ಸಿದ್ಧಪ್ರಸಾದವಿಭಾವನತೆಯಿಂದ
ಜೆಲುವು ಮಿಗಿಲಾ ಬಿಬ್ಬಬಾಚ
ಯ್ಯಗಳ ಕರ[೧]ತಳ[೨]ಯುಗಳದಲ್ಲಿಯೆ
ನೆಲಸಿದುದು ತತ್ ಸಮಯದಲಿ ವಿಪ್ರರ ಮನೆಗಳೆಲ್ಲಾ ೪೭

೧–೨ ಪ್ರಣ್ಯ (ತ, ನ, ಮ). ೩ ವಿ (ಮ). ೪ ಗ್ಗಿ (ಥ, ಪ, ಸ). ೫ ವಾ (ತ, ಪ, ಬ). ೬–೭ ಸ್ಥಲ (ಅ, ತ, ಚ, ಥ, ಪ, ಮ).

CC-0. Jangamwadi Math Collection. Digitized by eGangotri

ಎಂದಿನಂದದೊಳೊಪ್ಪಿದವು ಜನ
ವೃಂದವಱಿಯದೆ ದೂರವಲ್ಲಿದು
ಮುಂದೆ ದೃಷ್ಟವಲಾ ಇದಕ್ಕನುಮಾನವೇಕರಸಾ
ಇಂದುಧರನಂ ಭಜಿಸಲೊಲ್ಲದ
ಹೆಂದದಗ್ರಜನಾದಡಂ ಬಳಿ
ಸಂದ ಹೊಲೆಯರ ಹೊಲೆಯನಲ್ಲಾ ತಿಳಿದು ನೋಡಿದಡೆ ೪೮

ಹೊಲೆಯನಾದಡೆ ಶಿವನನರ್ಚಿಸಿ
ಕುಲಜನಪ್ಪನು ಜಾತಿನೇಣಿನ
ಹೊಲೆಯರಿಗೆ ಹುಸಿಗಳನುಸುರುತಿಹ ಹೊಲೆಯರಿಗೆ ಹುಸಿಯ
ಹೊಲೆಯರಿಗೆ ಹೊಲೆಯರಿಗೆ ಕೀಳಿನ
ಹೊಲೆಯರಿಗೆ ಶಿವಭಕ್ತಿಮಹಿಮೆಯ
ದಳವಿಯೇ ತಿಳಿಯಲಿಕೆ ಬಿಜ್ಜಳಧರಣಿವರ ಕೇಳು ೪೯

ಅಂಬಿಕಾಪತಿ ಚೆನ್ನಯನ ಮನೆ
ಯಂಬಲಿಯನುಂಬಾಗಲೆಂಜಲಿ
ದೆಂಬ ಭಾವನೆಯುಂಟೆ ಸಂಬೊಳಿಯೆಂದು ತೊಲಗಿದನೇ
ನಂಬಿದಾ ಮಾದರನ ಮಹಿಮಾ
ಡಂಬರವನಿಂತಱಿದಱಿದು ಭಾ
ಳಾಂಬಕನ ಸದುಭಕ್ತರುಗಳಂ ಹೊಲೆಯರೆನಲಹುದೇ ೫೦

ಕಾಳುಮೂಲರು ವಿಪ್ರರೆಲ್ಲರು
ಕೇಳುವಡೆ ಕರ್ಮಾಧಿಗತ ಚಾಂ
ಡಾಲರಿವದಿರ ಮಾತುಗಳನೆಲೆ ನಂಬದಿರು ಭೂಪ
ಹೇಳಿದಪೆವಿನ್ನುಂ ಮಹೇಶ್ವರ
ನಾಳು ಮಾದರ ದೂಳಿಯಂ ದೃಢ
ಶೀಲ ಭಕ್ತವಿಲೋಲನಾತನ ಮಹಿಮೆಯೆಂತೆನಲು ೫೧

---

೧ ಡ (ಡಾ, ಥ, ಧ, ಪ, ಬ, ಮ).

CC-0. Jangamwadi Math Collection. Digitized by eGangotri

ಆಂದು ಮೈಗೆಟ್ಟವನಿಸುರನಿರು
ಳೊಂದು ಪಶುವಿನ ಹಿಂದೆ ಹೋಗುತ
ಮುಂದೆ ದೂಳ[1]ಯ್ಯಗಳ ಮೀಹದ ಮನೆಯ ಕೆಲದಲ್ಲಿ
ಮಂದಯಿಪ ಜಲಪಂಕ ಊರುಗ
ಳೊಂದಿ ನೆನೆಯಲು ಹೊಕ್ಕು ಹೊಱಗೆಯಿ
ತಂದಡಿಗಳಂ ತೊಳೆದುಕೊಂಡುದಯದಲಿ ನೋಡಲ್ಕೆ ೫೨

ಬಳಿಕ ಪೂರ್ವಚ್ಛಾಯೆಯಿಂದು
ಜ್ವಲಿಸುತಿರಲಾ ವಿಪ್ರನಚ್ಚರಿ
ಮೊಳೆಯೆ ಮನದೊಳು ಹರುಷನಾಗುತ್ತಾಗ ಪರಿತಂದು
ನಲಿದು ದೂಳಯ್ಯಗಳ ಮಜ್ಜನ
ಜಲದ [2]ಕೋಳ್ಗಿ[3]ಸಱಿಲ್ಲಿ ಬಿದ್ದು ಪೊ
ರಳಿ ಪೊರಳಿಯಾಡಲ್ಕೆ ತನು ದಿವ್ಯಾಂಗ[4]ವಾಗಿರಲು[5] ೫೩

ಬಾಡಬಂ ತಾನಲ್ಲಿ ಮಾದರ
ದೂಡಿದೇವನ ಪದಕೆಱಗಿ ಕೊಂ
ಡಾಡಿ ಕೃಪೆಯಂ ಪಡೆದನಿತಱ[6]ಿಂಬಳು ಮನೆಗೆ ಹೋಗಿರಲು
ನೋಡಿದಿರೆ ವಿಸ್ಮಯವು ಮಾದರ
ದೂಡಿಗನು ನೀರ್ಮಿಂದೆಡೆಯೊಳೆಡೆ
ಯಾಡಿ ಬಿದ್ದನು ಎದ್ದನದೆ ಕೆಸಱಿಂ ತೊಳೆದು[7]ಕೊಂಡ[8] ೫೪

ಹರಿಗಳಪ್ಪಣ್ಣಗಳ ಕುಪ್ಪವು
ಪರಿಹರಿಸಿ ಹೋಯಿತ್ತು ಹರ ಹರ
ತರಣಿ ಮುನ್ನ ಮನೋಹರನ ಪಾದೋದಕದಿ ತನ್ನ
ನಿರುತ ತನುವಂ ಪಡೆದರೆಂದಾ
ದ್ಯರ ವಚನಮಂ ಕೇಳ್ದೆವಿಂದೀ
ಧರಣಿಯೊಳು ಕಾಣಲ್ಕೆಪಟ್ಟುದೆನುತ್ತ ಕೀರ್ತಿ[9]ಸುತರ್ ೫೫

---

೧ ಡ (ಡಾ. ಥ. ಧ, ಪ. ಬ. ಮ). ೨–೩ ಕೊಗ್ಗೆ (ಥ, ಧ. ಪ. ಸ). ೪–೫ ಮಾಗಲ್ಕೆ (ಕ). ೬–೭ ಕೊಳ್ಳ (ಆ, ಕ, ತ, ನ, ಮ). ೮–೯ ಸಲು (ಆ, ಕ).

CC-0. Jangamwadi Math Collection. Digitized by eGangotri

ವಿವಿಧ ಜನರಾಶ್ಚರ್ಯರಾಗಿರೆ
ಅವರಿವರಿದಂ ಕೇಳಿ ಪರಿತಂ
ದವರ ಮುಜ್ಜನಜಲದ ಕೆಸಱಿಲಿ ಪೊರಳುತಿರಲಾಗಿ
ಭುವನದೊಳಗೀ ಪರಿಯಲೇಳ್ಕೊ
ಱಿವನಿದಿವಿಜರ ಕುಷ್ಪರುಜೆಗಳು
ತವಿಸಿಹೋದುದನಱಿಯಿರೇ ದೂಡಯ್ಯನವರಿಂದ ೫೭

ಅಸಮನೇತ್ರನುದಾಸಿ ಭೀಮಯ
ನಸದೃಶನು ಮೈಗೆಟ್ಟ ಭೂಸುರ
ವಿಸರಕೆಲ್ಲಂ ಮೆಯ್ಯನೀಯನೆ ಲೋಕವಱಿಯಲ್ಕೆ
ಸಸಿನೆಯಾಚಮನಂಗಳಂ ಮು
ಟ್ಟಿಸಲಱಿಯದೀ ಕರ್ಮಿಗಳ ನೀ
ರಸದಬದ್ಧರ ನುಡಿಗಳಂ ಕೇಳುವರೆ ಭೂನಾಥಾ ೫೮

ಅಂತು ಸಂಧಿ ೫೫ಕ್ಕಂ ಪದಗಳು ೩೨೪೧ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಸಂಧಿ : ೫೬

*

ಸೂಚನೆ : ನೆರೆದ ಸಭೆಯುಂ ಬಿಜ್ಜಳನುಮ-
ಚ್ಚರಿವಡಲು ಶಿವನಾಗಮಯ್ಯನ
ಕರದೊಳಮೃತಾಸಾರವಂ ಕಱಿಸಿದನು ಬಸವಯ್ಯ ॥

ಸಾಮವೇದಿಗಳೆನಿಪ ಉತ್ತಮ
ಭೂಮಿದೇವಾಗ್ರಣಿ ನಭಸ್ಥಳ
ಗಾಮಿಯಾಗಿ ಚರಿಸುತಿರಲು ಶ್ವಪಚಯ್ಯನೆಂದೆಂಬ
ನಾಮನಚಲಿತ ಭಕ್ತಿಲೋಲುಪ
ನಾ ಮಹಾರಣ್ಯಾಂತರದೊಳಭಿ
ರಾಮು ಸದ್ವಿಧಿಯಿಂದ ಬೋನವನೊಸೆದು ಮಾಡುತ್ತ ೧

ಮೇಗೆ ಬರುತಿಹ ಸಾಮವೇದಿಯ
ನಾಗ ಕಾಣುತ್ತಿವನ ದೃಷ್ಟಿಗ
ಳೀಗ ಬೋನದ ಮೇಲೆ ಹರಿವವೊ ಎನುತ ಕೆರಹಿನಲಿ
ಬೇಗದಿಂದಲೆ ಮುಚ್ಚಲೊಡನಂ
ತಾಗಮೀಕನು ನಗುತಲೆಂದನು
ರಾಗಮುಖದಿಂದೀ ಶ್ವಪಚನಿಂತಡುವುದಡಗಕಟಾ ೨

ದುರುಳನೆಮ್ಮಂ ಕಾಣುತವೆ ಕಾ
ಲ್ಗೆರಹಿನಲಿ ಮುಚ್ಚಿದನು ಮಾಂಸವ
ನರಿದರಿದಿವಂ ಧೂರ್ತನೆಂದಾತ್ಮದೊಳಹಂಕರಿಸಿ
ನಿರತ ಮಂತ್ರವ ಶಕ್ತಿಗೆಟ್ಟಂ
ತಿರದೊಳಾಡುವ ದೋಷವತಿಗಳೀ
ಧರೆಗಿಳಿಯಲೊಡನಾತನಂಜುತ್ತಾಗಳೆಯಿತಂದು ೩

---

* ರಾಗ : ದೇಸಿ (ಅ, ಡಾ, ಧ, ಪ); ನಾಟಿ (ಮು); ಮಧುಮಾಧವಿ (ಚ); ಶ್ರೀರಾಗ (ತ).
೧ಬ (ತ). ೨ಧಾ (ಥ).

CC-0. Jangamwadi Math Collection. Digitized by eGangotri

ವಿನಯದಿಂ ಶ್ವಪಚಯ್ಯಗಳ ಪದ
ವನಜಯುಗಳಕ್ಕೆಱಗಿ ವಂದಿಸಿ
ಮನವೊಲಿದು ಶಿವದೀಕ್ಷೆಯಂ ಸಲೆ ಪಡೆದು ಶಿಶುವಾಗಿ
ಜನವಱಿಯಲವರ ಪ್ರಸಾದದ
ಘನ ಮಹಿಮೆಯಲಿ ಮುನ್ನ ಕೊಂಡೊ
ಯ್ಯನೆ ಮಹಾದೇವನ ಪುರಕೆ ಭತ್ತೀಸ ನಗರಿಗಳ ೪

ಸಾಮವೇದಿಗಳಿದುನಿಮಿತ್ತಂ
ವಾಮದೇವನ ಭಕ್ತರಂ ದಿನ
ನೇಮ ಸೀಮಾಮಾರ್ಗವಿಂದೇನಿಲ್ಲದಿರ್ದಪುದೇ
ಪ್ರೇಮದಿಂ ಶಿವಭಕ್ತನಾದಡೆ
ನಾಮಿಕಂ ತಾನಗ್ರಜನ್ಮನ
ನಾಮಿಕಾಧಮನೀಶಭಕ್ತಿವಿಹೀನಭೂಸುರನು ೫

ಅಂತುಮಲ್ಲದೆ ಬಳಿಕವೀ ನಗ
ರಾಂತದೊಳು ಉದುಭಟನೆನಿಪ್ಪ ಮ
ಹಂತನಿಪ್ಪನು ಭೋಜರಾಜೋತ್ತಮನ ಗುರುವಾಗಿ
ಶಾಂತದಿಂ ಶಿವದೀಕ್ಷೆಯಂ ವಿಧಿ
ವಂತನಾಗಲು ಕೊಟ್ಟು ಶ್ರುತಿ ವೇ
ದಾಂತ ಶಾಸ್ತ್ರ ಪುರಾಣ ಸಂಪಾದ್ಯೈಕ [೧]ಭಕ್ತಿಯಲಿ[೨] ೬

ಆತನಿಳೆಯೊಳಗಣ್ಯವಾದ
ವ್ರಾ[೩]ತವಡಗಿಸೆ ಭೋಜರಾಜಂ
ಗೋತು ಹಾಡುತ್ತಿಪ್ಪ ಜೊಮ್ಮವೆಯೆಂಬ ಶಿವಭಕ್ತೆ
ರೀತಿಯಿಂದಾ ಸುದತಿಗುದುಭಟ
ನಾತತಪ್ರಿಯ ಭಕ್ತಿರ[೪]ತಿಯಂ[೫]
ಪ್ರೀತಿಯಿಂದಱಿಪುತ್ತ ತಿಳಿಪುತ ಬೋಧಿಸುತ್ತಿರಲು ೭

೧–೨ ಯುಕ್ತಿಯೊಳು (ತ). ೩ ಭ್ರಾ (ಥ). ೪ ತ (ಪ). ೫ ಗಂ (ಕ).

CC-0. Jangamwadi Math Collection. Digitized by eGangotri

ಮನುಜರದುಭುತಚಿತ್ತರಾಗುತ
ತನತನಗೆ ದು೯ಬ್ಬಿಸುತವಿರಲಿಂ
ತನಘರುತ್ತಮ ಭೂಸುರರು ಕುಲಹೀನರಂ ತಾವು
ಮನಸು ಹೇಸದೆ ಕೂಡಿಕೊಂಡಿ
ಪ್ಪನುವ ನೋಡಾ ಹರಹರಾ ತನ
ಗನುಮತವೆಯಿದು ತಾವು ಸರ್ಬಕೆ ಹಿರಿಯರಾಗಿರ್ದು ೮

ಎನುತ ವಿಪ್ರರು ಭೋಜರಾಜಂ
ಗಿನಿತುಮಂ ಹೇಳಲ್ಕೆ ಕೇಳ್ದಿಂ
ದಿನ ಪರಿಯೊಳಭಿವಂದಿಸುತ ಕೊಂಡಾಡುತಿರಲಾಗಿ
ಮನಸಿಜಾಂತಕನುದುಭಟಯ್ಯನ
ಘನ ಮಹತ್ವದ ಶಕ್ತಿಯಂ ಮೇ
ದಿನಿಯೊಳಗೆ ಮೆಱೆಯಿಸ ೨ಬಗೆದು ವಟವಿಟಪಿಯೊಂದಱಿಲಿ೩ ೯

ಭೂತವೊಂದಾ ವಟದೊಳಿರ್ದಶ
ನಾತುರಂ೪ ಮಿಕ್ಕೆಯ್ದಿ ಮಱಿದಿನ
ಯಾತನದೊಳೆಯಿತಂದು ಕಾಣದೆ ಭೂತಜಾತವನು
ಕಾತರಿಸುತಳುತೊಱಿಲುತಂ ಸಂ
ಘಾತಿಗಳು ಹೋದರೆ ಆಕಟ ದು
ಶ್ಚೇತನಾದೆನೆನುತ್ತಿರಲು ಕೇಳ್ದಾ ಮಹಾಧ್ವನಿಯ ೧೦

ಧಾರಿಣೀತಳವದಿರೆ ಕೂಗುವ
ರಾರೆನುತ್ತಂ ಭೋಜರಾಜನು
ಪೌರಜನವುಂ ಸಹಿತವಲ್ಲಿಗೆ ಶೀಘ್ರದಲಿ ಬಂದು
ಆರು ನೀವಳುತಿಪ್ಪವರಿದೇಂ
ಕಾರಣಂ ತಾನಾವನಿಂ ಪರಿ
ಹಾರವಹುದೀಯಕ್ಕೆಯೆನಲಾ ಭೂತವೆಂದಿತ್ತು ೧೧

೧ತು (ತ). ೨–೩ ಲೊಯ್ಟರಿಸಿದರೊಂದು ವಟದಲ್ಲಿ (ಧ, ಪ); ಳರದಿ (ಪ).

CC-0. Jangamwadi Math Collection. Digitized by eGangotri

ಆರಸ ಕೇಳ್ ಪನ್ನೆರಡು ಸಾವಿರ
ವರುಷತನಕುದುಭಟ್ಟದೇವನ
ಮರಣವನೆ ಕಾಯ್ದೇಳುನೂಱ್ ಭೂತಂಗಳೋರಂತೆ
ಇರುತವಿಹೆವೀಯಾಲದಲ್ಲಿಯೆ
ಚರಿಸದೆತ್ತ[೧]ಲುವಿದಿರು[೨] ನೋಡುತ
ಬೆರಸಿ ನಾವಿದ್ದಿ[೩]ದ್ದುದರಶಿಬಿಗಾಱಿದೆಯ್ದಿದೆನು ೧೨

ತಿರುಗಿ ಬಂದಾನೊರ್ಬನುಳಿದೆನು
ಮರುಳನಾದೆನು ಕೂಳಭಣಗಿಗೆ
ನೆರವು ತಪ್ಪಿದುದೆಂಬ ನಾಣ್ಗುಡಿಯಾಯಿತೆನ್ನಲ್ಲಿ
ಧರೆಯೊಳಾನಿರಲಾಱಿ[೪]ನೊರ್ಬನೆ
ಕೊರಗುತಿದೆನೇ ನೃಪಶಿರೋಮಣಿ
ಕರುಣಿಸೈ ಎನಗೇಳುನೂಱ್ ಭೂತಂಗಳುದುಭಟನ ೧೩

ಸುಡುವ ಪೆರ್ಬೊಗೆ ತಾಗಲೊಡನಾ
ಮೃಡನ ಕೈಲಾಸಕ್ಕೆ ಪೋದವು
ಪೊಡವಿಯೊಳು ಗತಿಗೆಟ್ಟುಳಿದೆನಾ ಬಳಲಿದೆನು ತಂದೆ
ತಡೆಯದೀದಾ[೫]ಕಳು[೬]ಕಱುವನಂ
ತೊಡನೆ ನರಿಗಿತ್ತಂತೆ ಬೆಳಸಂ
ಕೊಡುವವೋಲಾಯಿತ್ತು ಕಾಡಮೃಗಂಗಳಿಗೆ ಭೂಪಾ ೧೪

ಮುಲುಕಿ ಬೆಳಗನ್ನೆಗ ಬಸುಱಿ[೭]ಯಸು
ಗಳೆದ ಕೂಸಂ [೮]ಹೆಱುವ[೯] ತೆಱದಿಂ
ಕಳಸದೊಳು ನೆಱಿ[೭] ತೀವಿ ಹಾಲಂ ಕೆಡೆವೊಡೆದ [೮]ಹಾಂಗೆ[೯]
ಹಲವು ಕಾಲಂ ತೊಡಗಿಯಾಲದ
ನೆಲೆಯೊಳಿದ್ದೆನ್ನಿರವಳಿದು ನಿಃ
ಫಲವೆನಿಸಿತಲ್ಲಾ ಪ್ರಳಾಪಿಸದೆಂತು ಸೈರಿಸುವೆ ೧೫

೧–೨ ಲುವಿರುತ (ಕ, ಚ, ಥ); ಲವಧಿಯು (ಧ, ಪ, ಬ). ೩ನಿ (ಮ); ರುತಿ (ಞ). ೪–೫ ಪಶು (ತ). ೬–೭ ಹೆತ್ತ (ತ, ನ). ೮–೯ ವೋಲು (ತ, ನ).

CC-0. Jangamwadi Math Collection. Digitized by eGangotri

ಜಗವಱಿಯಲಿನ್ನಾದಡಂ ಕ
ಟ್ಟಿಗೆಗಳಂ ತರಿಸೀಗಳೊಟ್ಟಿಸು
ಹೊಗೆಯಿನಿತು ಮೈಸೋಂಕಲೊಡನಾನೆಯ್ದುವೆನು ಶಿವನ
ನಗರಿಗಿದು ದಿಟವೀ ಜನರ ದೃ
ಷ್ಟಿಗಳಿಗೆಲ್ಲಂ ದೃಷ್ಟವಾದುದು
ನಿಗರ್ವ ವಟತರು ಬೇರುಸಹಿತಂ ಕಿತ್ತುಕೊಂಡಿಂದು ೧೬

ಹೋದಪೆಂ ಲೋಕಕ್ಕೆ ವಿಸ್ಮಯ
ವಾದುದೆನಲತ್ಯದ್ಭುತಾಕ್ರಾಂ
ತೋದಯಾತ್ಮದೊಳಾ ಪುರಜನಂ ನೋಡುತಿರಲಾಗಿ
ಮೇದಿನೀಶ್ವರನಿಹಗೆ ಮಾಡುವೆ
ನಾದರದೊಳೆಂದೆನುತ ಮನದೊಳು
ಮೋದವೆಯ್ದಲು ಮಲಯರುಹ ಕಾಷ್ಠಂಗಳಂ ಪಲವ ೧೭

ತರಿಸಿಯೊಟ್ಟಿಸಿ ನವ್ಯದಿವ್ಯಾಂ
ಬರನಿಕರಮಂ ಹೊಸೆಹೊಸೆದು ಮು
ಪ್ಪರಿಗೊಳಿಸಿ ತುಪ್ಪದೊಳಗಾ ವಸ್ತ್ರಂಗಳಂ ನಾದುಱ
ಉರಿಗೆ ಹವಿಯಂ ಕೊಡಲೊಡನೆ ಸಕೆ
ಪಿರಿದು ಭುಗಿಭುಗಿಲೆನುತ ಹೊಗೆಯಂ
ಬರಕೆ ನೆಗೆಯಲು ತತ್ಸಮಯದೊಳು ಭರದೊಳೆಯಿತಂದು ೧೮

ಬೋಜರಾಜಂ ತನ್ನ ಗೋತ್ರಸ
ಮಾಜ ಮಿತ್ರ ಕಳತ್ರ ಪುತ್ರರು
ಆ ಜನಾವಳಿವೆರಸಿ ಸಂಭ್ರಮದಿಂದ ಹರುಷದಲಿ
ನೈಜಭೂತದ ಮೇಲೆ ಹೊಗೆ ಮಿಗೆ
ರಾಜಿಸಲು ತತ್‌ಕ್ಷಣದೊಳಾ ವಟ
ಭೂಜಮಂ ನೆಱಿ ಕಿತ್ತುಕೊಳುತಂ ರಾಜತಾಚಳಕೆ ೧೯

೧–೨ ದಯದೊಳಾ (ಅ). ೩–೪ ನಂತೆ (ತ, ನ). ೫–೬ ನಾಂದು (ಅ, ಥ, ಮ); ಸನೆದು (ಕ, ಚ); ನಾದಿ (ಅ, ನ, ಬ); ನಾಂದಿ (ತ).

CC-0. Jangamwadi Math Collection. Digitized by eGangotri

ಪರಮ ಹರುಷಿತನಾಗಿ ಭೋಜನು
ಪರಿಜನಾವಳಿವೆರಸಿ ಪೋದನು
ಶರಣನುದುಭಟದೇವನತುಳಿತ ಭಕ್ತಿಮಹಿಮೆಯನು
ನರವರೇಣ್ಯಾ ಮುನ್ನವಱಿಯಿರೆ
ಧರಣಿಯೊಳು ಪ್ರಖ್ಯಾತವಲ್ಲಾ
ಹರಗಣಂಗಳ ಸುಚರಿತೆಗಳಂ ಮತ್ತೆಯುಂ ಕೇಳು ೨೦

ತ್ರಿವಿಧಭಕ್ತಿಪರಾಯಣಂ ಮತ್
ಶಿವಗಣಂ ಕಕ್ಕಯ್ಯನೀ ದ್ವಿಜ
ನಿವಹ ವೈರಿಯೆನಿಪ್ಪನಱಿಯಿರೆ ಒಬ್ಬ ಕೋವಿದನು
ಆವನಿಪನ ನಗರಾಗ್ರದಲಿವೊಂ
ದಿವಸವೋದುತ ಸತ್ಯವಂ ಹೇ
ಳುವ ಪುರಾಣಿಕನಂತೆ ಕೆಲಬರು ಕೇಳುತಿರಲಾಗಿ ೨೧

ಎಸೆಯಲಜನ ಕಪಾಲವಂ ಪಿಡಿ
ದಸಮನೇತ್ರನು ಭಿಕ್ಷಿಸುವನೆಂ
ದುಸುರ್ವನಲ್ಲದೆ ಮತ್ತೆ ವಿಷ್ಣುಕ್ಷೇನನೆಂಬವನ
ನಿಶಿತ ಶೂಲಾಯುಧದಿನಿಱಿದಾ
ಬಿಸರುಹಾಕ್ಷನ ಹರನಿಱಿದನೆಂ
ದುಸುರಲೊಲ್ಲನು ಸಹಜವಾದ ಪುರಾಣವಾಕ್ಯವನು ೨೨

ಅಂದನುವಿನಿಂ ಕಟ್ಟಿ ಬಲಿಯನು
ಮುಂದೆ ಬೆಳೆದುದ್ದಕ್ಕೆ ಹರಿ ಕಾ
ಲೊಂದನೆತ್ತಿದನೆಂಬನಲ್ಲದೆ ತತ್‌ತ್ರಿವಿಕ್ರಮನ
ಹಿಂದಣಿಲುವಂ ಮುಱಿದು ಪಿಡಿದನು
ಸ್ಕಂದಪಿತನೆಂದೋದಲೊಲ್ಲನು
ಬಂದು ವಾರಾಣಸಿಯೊಳಂ ವಿಶ್ವೇಶ್ವರನ ಮುಂದೆ ೨೩

CC-0. Jangamwadi Math Collection. Digitized by eGangotri

ವ್ಯಾಸದೇವಂ ಕೈಯನೆತ್ತಿದ
ನಾಸುರದೊಳೆಂದೆಂಬನಾ ತೋಳ್
ಕೀಸಿಕೊಂಡವು ನಂದಿನಾಥನ ಕೈಯಲೆಂದೆನ್ನ
ವಾಸುದೇವನು ಬ ದನಧ್ವರ
ವಾಸಕೆಂಬನು ಪುರಹರಂ ಮುರ
ನಾಶನನ ಶಿರವಂ ಪಱಿದೆನೆಂದುಸುರನಜ್ಞಾನಿ ೨೪

ನರಹರಿಯ ವೇಷಂದಳೆದು ಭೀ
ಕರದೊಳಂದು ಹಿರಣ್ಯಕನ ಸಂ[೧]
ಹರಿಸಿದನು ಹರಿಯೆಂಬನಲ್ಲದೆ ಶರಭರೂಪವನು
ಧರಿಸಿ ಹರ ಹರಿಯಂ ಹರಿಸಿ ತತ್
ಶಿರವನರಿದಾ ತಿದಿಯನುಗಿದಂ
ಬರವನುಟ್ಟನು ತೊಟ್ಟನೀಶ್ವರನೆಂದೊರೆಯನಿವನು ೨೫

ಆಡರ್ಮೆ ಸರ್ವಂ ವಿಷ್ಣುಮಯವಾ
ದೆಡೆಯನೊರೆದಪನಲ್ಲದಿಂತಾ
ವೆಡೆಯೊಳುಂ ಮೃಡನೊಡೆಯನಾ ಹರಿಗೆಂದುಸುರಲೊಲ್ಲ
ಎಡೆವಿಡದೆ ಹರಿ ವಿಶ್ವನೆಂದು
ಗ್ಘಡಿಪನಲ್ಲದೆ ವಿಶ್ವವಲ್ಲಭ
ನುಡುಪಖಿಂಡಶಿಖಿಂಡನೊರ್ಬನೆಯೆಂದುಸುರಲೊಲ್ಲ ೨೬

ಹರಿಯೆ ಧರಣೀಶಕ್ತಿ ತಾನೆಂ
ದೊರೆವನಲ್ಲದೆ ಹರನೆ ಧರಣೀ
ಧರಣನೆಂದೊರೆಯನು ಹರಿ ಮಹಾ ಮಾಯೆ ತಾನೆಂದು
ಒರೆವನಲ್ಲದೆ ನಿಜವನೊರೆಯನು
ಸುರುಚಿರ ಮಹಾದೇವನೆಂದೀ
ಶ್ವರನನಾ ಹರಿಹರನೆನಿಪ ಶಬ್ದಾರ್ಥ[೨]ವೊರೆಯನಲಾ[೩] ೨೭

---

೧ ಅಪ (ತ, ಥ, ನ, ಸ). ೨–೩ ಗಳನೊರೆಯಾ (ಕ, ಚ, ಥ); ವನರಿಯರಲ್ಲ (ಅ, ತ, ಮ).

CC-0. Jangamwadi Math Collection. Digitized by eGangotri

ಹರಿಹರನು ತಾನೊರ್ಬನೆಂದು
ಬ್ಬರಿಸಿ ಹೇಳುವನಲ್ಲದೇ ಮೇಣ್
ಹರನು ಹರಿಯಂ ಹರಿಸಿದಿದುಕಾರಣದಿ ಹರಿಹರನು
ಸ್ಮರಹರನು ಪುರಹರನು ಅಂತಕ
ಹರನೆನಲು ಮೆಱಿದನು ಯಥಾರ್ಥವ
ನೊರೆಯಲೊಲ್ಲನು ಪಕ್ಷಪಾತಿ ಪುರಾಣಭಟ್ಟನಲಾ ೫೮

ನುಡಿದಹನು ದುರ್ಭಾಷೆಗಳನಡಿ
ಗಡಿಗೆ ಶಿವನಿಂದೆಯನುಸುರ್ವ ಬ
ಗ್ಗಡೆಯನಂ ಕೊಲಲಹುದು ಸುಡಲಹುದವನ [1]ಹೊತ್ತಗೆಯ[2]
ಕಡೆಗೆ ಮಾರ್ಗವಿದಹುದೆನುತ ಘುಡು
ಘುಡಿಸಿ ಕಕ್ಕಯ್ಯಂಗಳಾಗ್ರಹ
ವಡಸಿ ತದ್ದ್ರೋಹಿಯನುಱಿದೆ ಸಬಳದಿನಿಱಿದು ತೆಗೆದು ೫೯

ಶಿರವನರಿದಟ್ಟಿಯೊಳಿರಿಸಿ ನಗು
ತಿರೆ ಪುರಾಣಿಕನೊಡಲು ಬಿಕ್ಕನೆ
ಬಿರಿದುದಾಗಳೆ ಬಾಲಪ್ರಳ್ಗಳ ರಾಶಿಯಾಯಿತ್ತು
ಧರಣಿಸುರರಿವರಱಿಯರೇ ಕೇ
ಳರಸ ಡೋಹರ ಕಕ್ಕಯಂಗಳ
ಪರಮ ಮಹಿಮೆಯನಱಿದು ಭಕ್ತರನಾಡಲೆಂತಹುದು ೬೦

ಭೂವಳಯದೊಳು ಮತ್ತೆಯುಂ ಕೆಂ
ಭಾವಿಯೆಂಬ ಮಹಾಗ್ರಹಾರದೊ
ಳಾವಗಂ ಭೋಗಯ್ಯನೆನಲತಿ ಶುದ್ಧಭಕ್ತಿಯಲಿ
ಓವಿ ನಿಚ್ಚಂ ಲಿಂಗ ಜಂಗಮ
ಸೇವನಾಂತಃಕರಣ ಪರವಶ
ಭಾವನಾ ಪರಿಮಿತ ಪರಿಚರಣ ಸತ್‌ಕ್ರಿಯೆಯೊಳಿರ[3]ಲು ೬೧

೧–೨ ಪುಸ್ತಕವಂ (ತ, ಸ). ೩ ಳುಗ (ಥ). ೪ ರುತಿ (ತ, ಧ, ಪ).

CC-0. Jangamwadi Math Collection. Digitized by eGangotri

ಕಟಿ[1]ಗೊರಳ್ಭವನಾ ಶರಣಂ
ಮೆಟಿ[1]ಯಿಸಲು ಬಗೆದೊಂದು ದಿನದಲಿ
ಕಿ[1]ಟುಕುಲನವೊಲು ಸತ್ತ ಕಟುವಂ ಹೊತ್ತು ನೋಟಕರು
ಹೊಟಿಗೆ ನೋಡಲು ರುದ್ರಮುದ್ರೆಯ
ಕುಟುಹಿನಲಿ ನಡೆತರಲು ಕಾಣು
ತ್ತೆಟಗಿ ಸಾಷ್ಟಾಂಗದೊಳೆರಡು ಕೈಮುಗಿದು ಭೋಗಯ್ಯ ೩೨

ಮಲಹರಾತ್ಮನ ಹೆಗಲ ಕಟುವಂ
ಕಳೆದುಕೊಂಡನು ತನ್ನ ಹೆಗಲಿಂ
ಗಳವಡಿಸಿಕೊಳುತಾತನಂ ನಿಜ ಮಂದಿರಕೆ ತಂದು
ನಲಿವು ಮಿಗೆ ತಾನವರಡಿಗಳಂ
ತೊಳೆದು ವಂದಿಸುವೆಡೆಯೊಳೆಳೆನಗೆ
ಮೊಳೆಯಲಾ ಮೃಡಮೂರ್ತಿ ಭೋಗಯ್ಯಗಳಿಗಿಂತೆಂದ ೩೩

ಸತ್ತ ಕಟುವಿನ ಮಾಂಸವಂ [2]ಮುದ[2]
ವೆತ್ತಿಯಾರೋಗಿಸುವ ನೇಮಂ
ಬೊತ್ತು ಬಂದೆನು ನಿನ್ನೆ ಜೇಡನ ದಾಸಿಯೆಡೆಗೆಯ್ದಿ
ಅರ್ತಿಯಿಂದೀ ಕಟುವನೆನಗೀ
ಹೊತ್ತು ಪಾಕಂ ಮಾಡಿ ನೀಡೆನ
ಲತ್ತಲಾ ದುಗ್ಗಳೆಗೆ ಹೇಳುತ ತಳುವು ಮಾಡಿದನು ೩೪

ಹಸಿದೆನ್ಹೈ ನೀನಾದಡಂ ಪಂ
ಚಿಸದಡಿಸಿ ನೀಡಿಸಿದಡಾರೋ
ಗಿಸುವೆನೊಸೆದಾ ಕಟುವನಾನೆನಲಾಗಲೀ ಎನುತ
ಹೊಸತೆನಲು ಕ್ಷಾರಾಮ್ಲಲವಣಾ
ದ್ಯಸಮ ರಸಯುತಮಾಗೆ ಸೌಗಂ
ಧಿಸುವ ಮಾಂಸವನಟ್ಟಿ ಬಹು ಶಾಕಂಗಳಂ ಮಾಡಿ ೩೫

೧ಕು (ಥ). ೨–೩ ಪ್ರಿಯ (ಸ, ಮ).

CC-0. Jangamwadi Math Collection. Digitized by eGangotri

ಸಾರ ಮೃದುತರವಾದವಂ ಕೈ
ಯಾರೆ ಗಡಣಿಸಲಾ ಮಹೇಶಾ
ಕಾರನಾರೋಗಿಸಲಿನಿತಱಿಂಬಳು ಗ್ರಾಮದೊಳಗಿರ್ದ
ಹಾರುವರು ತಾಪೆಲ್ಲರುಂ ನೆರೆ
ದೂರೊಳಗೆ ಕಲುದಡಿಗಳಂ ಕೊಂ
ಡಾರುತೊರ್ಬೊರ್ಬರ್ಗೆ ಮಿಕ್ಕುರವಣಿಸಿ ಪರಿತಂದು ೩೭

ಮಗಿಲಿನೆತ್ತಿಳಿ ಧುಮಿಕ್ಕಿ ಪೆರ್ಗದ
ಹುಗಳನೊಡೆಬಡಿ ಮನೆಗದಹನಂ
ತಗಳ್ದುಮಿಗೆ ಕೆಡೆನೂಕಿ ಒಳಪೊಕ್ಕಟಿಸಿ ಭೋಗಯನ
ಬಗೆಯದಿರಿ ಹಿಡಿದಾಕರಿಸಿ ಮಾ
ದಿಗ ದುರುಳನಂ ಹೋಗಲೀಯದೆ
ತೆಗೆದವನ ತಲೆಯಂ ಹಸಿಯ ದಡಿಯಲಿ ಹೊಡೆದು ಕೆಡಹಿ ೩೮

ಅಗ್ರಹಾರಂ ಹೊಲೆಗಲಸಿತೆನು
ತಾಗ್ರಹಿಸಿ ವಿಪ್ರರು ಸುಡಿವುತಿರೆ
ಉಗ್ರಲೋಚನಮೂರ್ತಿ ಆಗಳದೃಶ್ಯವಾಗಿರಲು
ಅಗ್ರಜಾಗ್ರಣಿ ಭೋಗಿದೇವನು
ದಗ್ರ ಕಲುಷಿತನಾಗಿ ಭಕ್ತಿಸ
ಮಗ್ರತಾಲಾಪಂಗಳಿಂದಾ ದ್ವಿಜರಿಗಿಂತೆಂದ ೩೯

ಇಂತು ಅಂತ್ಯಜರಂತ್ಯಜರುಮೆನು
ತಂತರವನಱಿಯದೆ ಗಳಹಿದಪಿ
ರೆಂತು ಹುಗಬಹುದಂತ್ಯಜರ್ಗೆಮ್ಮಾಲಯಂಗಳೊಳು
ಸಂತತಂ ಸತ್ಕುಲಜರಹ ನಿ
ಮ್ಮಂತವರ್ಗಂ ಪರಮಭಕ್ತ ಗೃ
ಹಾಂತದೊಳು ಹುಗಬಾರದೆಂದಡೆ ನಿಮ್ಮನೇನೆಂಬೆ ೪೦

೧–೨ ಸುತ (ಅ). ೩–೪ ನೇರಿ (ತ, ಥ, ನ, ಪ). ೫–೬ ಪಂ ತಗುಳಿ (ಬ).

CC-0. Jangamwadi Math Collection. Digitized by eGangotri

ಪುರಹರನ ಪ್ರತಿಬಿಂಬವೆನಿಸಿದ
ಶರಣರಂ ಧಿಕ್ಕರಿಸಿ ನಿಂದಿಸಿ
ನರಕಭಾಜನರಾದಿರೀಶ್ವರದೂಷಕರು ನೀವು
ಬೆರಸಿ ನಿಮ್ಮಂ ನೋಡಲಾಗದು
ಕರೆದೊಡನೆ ಮಾತಾಡಲಾಗದು
ನಿರುತವಿದು ದುರಿತಾತ್ಮರಿರ ನಾವೇಕೆ ನಿಮಗಿನ್ನು ೪೦

ಆ ಮನೆಗಳಂ ವೃತ್ತಿಗಳನೀ
ಗ್ರಾಮವಂ ಕೊಂಡಿದು ನಿಮಗೆ ಪರಿ
ಣಾಮವಾದಡೆ ಸಾಕು ನಿಮ್ಮ ತಲೆಯೊಳಿರಿದುಕೊಳ್ಳಿ
ಭೂಮಿಸುರರಿರ ನಾವು ನಮ್ಮ
ಸ್ವಾಮಿಗಳುವೆಯ್ದಿದಪೆವೆನುತ ಮ
ಹಾಮಹಿಮನಾ ಭೋಗಧೀಮಣಿಯಾಗ ಹೊಱಿವಂಟ ೪೧

ಊರ ಮುಂದಕೆ ಹೋಗಲೊಡನಾ
ಊರಲದುಭುತವೇನನೆಂದಪೆ
ಊರ ಶೈವರ ಮನೆಗಳೊಳಗಣ ಶೈವಲಿಂಗಚಯ
ಊರ ಶಿವಭವನಂಗಳಾ ಸ್ಥಾ
ಪ್ಯೋರು ಲಿಂಗಂಗಳು ಸ್ವಯಂಭೂ
ವಾರು ಲಿಂಗವು ತಮ್ಮ ನಿಜಪೀಠಂಗಳಿಂದಗಲ್ದು ೪೨

ಮುಚ್ಚುಗದಹುಗಳಂ ತೆಗೆದುಕೊಳು
ತುಚ್ಚದಿಂ[೧] ಗಮನಿಸುವ ಲಿಂಗಸ
ಮುಚ್ಚಯಂ ಪೂಗಲ್ಲನುಱಿ[೨] ಕಡೆನೂಂಕಿ ಪೊಱಿಮಡುವ
ಆಚ್ಚ ಲಿಂಗವು ಜಲಹರಿಯಕಡೆ
ಗುಚ್ಚಿ ಹೆಚ್ಚುತ ಪೋಪ ಲಿಂಗವು
ಮುಚ್ಚಿ ಭೋಗಯ್ಯಂಗೆ ಹಿಗ್ಗುತ ನಡೆವ ಲಿಂಗಚಯ ೪೩

---

೧ ಳಿಸಿ (ಧ. ಪ).

CC-0. Jangamwadi Math Collection. Digitized by eGangotri

ಕಂಗಳಿಗೆ ಕಾಣಿಸದೆ ಗಮಿಸುವ
ಲಿಂಗಸಂತತಿಯಲ್ಲಿಗಲ್ಲಿಗೆ
ಸಂಗಡಿಸಿ ಪಾಯ್ವಾಡುತೆಯ್ದುವ ಲಿಂಗಸಂಘಾತ
ಹಿಂಗದೊಂದೊಂದು[ರವಣಿಸುತಂ][೧]
ಮುಂಗಡೆಗೆ ಪೇರೋಟವೋಡುವ
ಲಿಂಗಸಂಗವು ಹೋಗಲಾಟಿದೆ ಮೆಲ್ಲನೆಯ್ದುವವು ೪೪

ಧರೆಗೆ ನಾಲ್ವೆರಳುದ್ದದಲಿಯಿಸೆ
ದುರುಳ್ವ ಲಿಂಗಪ್ರಸ[ರಮಂ ಖೇ
ಚರಗತಿಗಳಿಂ ಗಮನಿಸುವ ಶಿವಲಿಂಗಸಂದೋಹ
ನೆರವಿ ನೋಡಲು ಭೂಚರತ್ವದಿ
ಪೊರಳ್ದು ಪೊರಳ್ದು ತೆರಳ್ವ ಲಿಂಗೋ
ತ್ಕರವನಿಲವೇಗದೊಳಿಡೆವಿಡದೆ ನಡೆವ ಲಿಂಗಚಯ ೪೫

ಒಲಿದೊಲಿದು ನಲಿದೀ ಪ್ರಕಾರದಿ
ಪಲವು ಲಿಂಗಂ ಭೋಗಿದೇವನ
ಬಳಿವಿಡಿದು ನಡೆವುತ್ತಿರಲು ಶಿವಲಿಂಗಪರ್ವತವು
ಚಲುವಲರಿ ಪೋಪಂತೆ ಭಕ್ತರು
ಪುಳಕಿಸುತ ಕೇಳಿಕೆಗ[ಳಿಂ ತಾ
ವ[ಳವಡಿಸುತಾಡುತ್ತ ಪಾಡುತ ಹೋಗುತಿರಲಿತ್ತ ೪೬

ಹೊಳಲ ಭಾಗ್ಯವು ತೊಲಗಿ ಪಾಳಾ
ಯ್ತಿಳೆಯು ಸಂಚಳಿಸಿತ್ತು ಸಸ್ಯಂ
ಗಳು [ಒಣಗಿ[ದವು ಬಾಡಿ[ದವು ವೃಕ್ಷಂಗಳಂಬರವು
ಮೊಳಗಿ ತಾರಕಿ ಮೂಡಿದವು ಪುರ
ದೊಳಗೆ ಕವಿಯಿತ್ತಂಧಕಾರವು
ಬಲಿದು ಕೂಪ ತಟಾಕ ಸರಸಿಗ[ಳಹಗೆ[ಬತ್ತಿದವು ೪೭

೧ತವೆ (ತ). ೨ಕ (ಅ, ಮ, ಚ). ೩–೪ಳಿಂ ತಾನ (ಚ). ೫–೬ ಮುರುಟಿ (ತ, ಪ). ೭ಗಿ (ತ, ನ, ಸ). ೮–೯ಂತೆ (ತ, ಪ).

CC-0. Jangamwadi Math Collection. Digitized by eGangotri

ಹುಳಿತುದನ್ನವು ಪುಷ್ಪವಾಟಿಕೆ
ಗಳು ೧ಮುರುಟಿ೨ದವು ಪಶುಗಳಱಚಿದ
ವುಳಿದವೆಲ್ಲಾ ಪಕ್ಷಿಗಳು ನರಿ ಊಳಿದವು ಹಗಲು
ಒಳಗೊಳಗೆ ನೆಲನುರಿವುತಿರೆ ವೆ
ಗ್ಗಳಿಸಿ ಗಾಳಿಯು ಧೂಳಿ ನೆಗೆವು
ತ್ತಳೆಯೊಳೀ ಪರಿಯಿಂದ ಉತ್ಪಾತಂಗಳಾಗಿರಲು ೪೮

ನೆರೆದು ನರರುಂ ಭೂಸುರರುವ
ಚ್ಚರಿವಡುತ್ತಂ ನಡನಡುಗಿಯಾ
ತುರವಡಿಸಿ ಇಂತೆಂದರಾ ಭೋಗಯ್ಯನಿಲ್ಲಿರದೆ
ಪರಿಹರಿಸಿ ಹೋಗಲ್ಕೆ ತಾವೀ
ಪುರದ ಲಿಂಗಂಗಳು ಸಮಸ್ತಂ
ಭರದೊಳಾತನ ಹಿಂದೆ ಹೋದ ನಿಮಿತ್ತವಾಗಿಂದು ೪೯

ಇನಿತು ವಿಪರೀತಂಗಳಾಯಿ
ತ್ತೆನುತ ಚಿಂತಿಸುತೆಯ್ದಿ ಭೋಗ
ಯ್ಯನ ಶರಣುವೊಕ್ಕಾತನಂ ಕಾಣುತ್ತ ಬಲಗೊಂಡು
ವಿನಯದಿಂ ಸಾಷ್ಟಾಂಗವೆಱಗು
ತ್ತನಘ ಕಾಯ್ಯೆಯೆಮ್ಮನೆಲ್ಲರ
ನೆನುತ ದಿಕ್ಕುಂ ದೆಸೆಯು ನೀವೆಮಗೆನುತ ಜಯವಿಡುತ ೫೦

ಅವಿಧೆಯಿಡುತಂ ನಿಮ್ಮ ಧರ್ಮದ
ಕವಿಲೆರಡು ನಾವೆನುತ ದೈನ್ಯಂ
ಗವಿದು ಪೊಗಳುತ ಸಭಯಮಾನಸರಾಗಿ ವಂದಿಸುವ
ಅವನಿಸುರರಿಗೆ ಅಭಯವಂ ಕೊ
ಟ್ಟವಿರಳಾತ್ಮನು ಭೋಗಿದೇವನು
ಶಿವಗಣಾಗ್ರಣಿ ತಾಂ ಮಗುಳಿ ಕೆಂಭಾವಿಗೆಯ್ತರಲು ೫೧

೧–೨ ಒಣಗಿ (ತ. ನ).

CC-0. Jangamwadi Math Collection. Digitized by eGangotri

ಪೊರಳ್ದು ಪೋರಳ್ದಂತಿರದೆ ಪಥದೊಳು
ತೆರಳುತಿರೆ ಮೈ ಬಿರಿದು ರಕ್ತಂ
ಸುರಿಯಲನಿತಱಿಂಳಧಿಕ ಕರುಣಾವರಣಭಾವದಲಿ
ಸ್ಮರಹರಂ ತನ್ನಯ ಸ್ವರೂಪಂ
ಧರಿಸಿ ತಾಂ ಸೌರಾಷ್ಟ್ರದಲ್ಲಿ
ರ್ದರರೆ ಸೋಮೇಶ್ವರನಿದಿರ್ವಂದಾಗ ನಿಮಿಷದಲಿ ೭೦

ಅಂಗನೆಯ ಸರ್ವಾಂಗಮಂ ದಿ
ವ್ಯಾಂಗಮಾಗಿರಲೀಯಲಾ ಲಲಿ
ತಾಂಗಿ ಸರ್ವಾಂಗದೊಳಿಱಿಗಿ ವಂದಿಸುತ ಮುಂದಿರಲು
ಮಂಗಳಾಂಗನು ಮತ್ತೆ ಕರುಣಾ
ಪಾಂಗದಲಿ ನೋಡುತ್ತ ನಿನ್ನತಿ
ಸಾಂಗಭಕ್ತಿಗೆ ಮೆಚ್ಚಿದೆವು ನಾವಬ್ಜದಳನೇತ್ರೆ ೭೧

ಕೊಡುವೆವಭಿಮತ ಸಿದ್ಧಿಗಳನಿ
ಮ್ಮಡಿಸಿ ನಿನಗಿದೆ ಬೇಡು ಬೇಡೆನ
ಲೊಡನೆ ಗುಡ್ಡಾದೇವಿ ಬಿನ್ನೈಸಿದಳು ಕೈಮುಗಿದು
ಒಡೆಯ ಚಿತ್ಕೈಸಭಿಮತಂಗಳ
ತೊಡಕವೇತಕೆ ನಿಧಿಯಿದಿರೊಳಿರೆ
ಕಡೆಗೆ ಜಲಗಂ ತೊಳೆಯಹೋದೆಪೆವೆಂಬ ಮರು[೧]ಳುಂಟೆ ೭೨

ದೇವ ಜೀಯ ಮದೀಯ ಮಾನಸ
ಭಾವಗಮ್ಯ ಮದೀಪ್ಸಿತಪ್ರದ
ತಾವಕಾವಿರತಪ್ರಯುತ ಕರುಣಾಂಬುಪೂರದಲಿ
ಆವರಿಸಿದೆನ್ನಾತ್ಮಮಲಪಂ
ಕಾವಳಿಯನೆಲ್ಲಂ ತೊಳೆದು ಕಳೆ
ದೋವಿದಿರಿ ನೀವೆನ್ನ ಜನ್ಮಂ ಸಫಲವಾಯಿತ್ತು ೭೩

೧–೨ ಳಂತೆ (ವ).

CC-0. Jangamwadi Math Collection. Digitized by eGangotri

ಯೋಗಿವರ ವರದಾನಿ ಸುಸ್ಥಿರ
ವಾಗಿ ನೀವಿರಿ ಮನೆಯೊಳಿದು ಸಾ
ಕಾಗಳುಂ ಮಿಕ್ಕಿನ ವರಂಗಳನೊಲ್ಲೆ ನಾನೆನಲು
ರಾಗದಿಂದಾ ನಾವದಿ[೧]ಗೆ ಪುರ
ಭಾಗದೊಳು ಸೋಮೇಶ್ವರಂ ತೇ
ಜೋಗರಿಮೆಯಲಿ ಮೆಱೆ[೨]ದನಾ ಗುಡ್ಡವ್ವೆಗಂದೊ[೩]ಲಿದು ೬೪

ಇಂತು ಗುಡ್ಡವ್ವೆಯ ವಿಶಾಲಾ
ನಂತ ಕೀರ್ತಿ ವಿರಾಜಿಸು[೨]ವುದಳ
ಶ್ರಾಂತಮುಂ ಲೋಕದೊಳಗಾಕೆಯ ಭಕ್ತಿಮಹಿಮೆಯನು
ಕಂತುಹರನುಂ ಪೊಗಳಲಱಿ[೩]ಯನು
ಕಾಂತೆಯಂ ಬೈದವನಿಸುರರ
ತ್ಯಂತ ಕುಷ್ಠವ್ಯಾಧಿಯಲಿ ಮೆಯ್ಗೆಟ್ಟು ತೊಳಲಿದರು ೬೫

ಭಕ್ತಿ ಗುಡ್ಡವ್ವೆಯ ವಿನಿರ್ಮಳ
ಭಕ್ತಿ ಸರ್ವ ಜನಂಗಳೊಳು ಸು
ವ್ಯಕ್ತವಾಯಿತು ಬಿಜ್ಜಳಕ್ಷಿತಿನಾಥ ಅಂತಾಗಿ
ಭಕ್ತರಂ ಕುಲಹೀನರೆಂದು ದು
ರುಕ್ತಿಗಳನಿಂತಾಡಲಹುದೇ
ಭಕ್ತತನುವೇ ಶಿವನ ತನು ಶಿವತನುವು ಭಕ್ತನದು ೬೬

ಸಾಂಗಮಾಗಲು ಸುಪ್ರತಿಷ್ಠಾ
ಸಂಗಪೂರ್ವಕವಾಗಿ ಮೆಱೆ[೨]ದುದು
ಲಿಂಗವಲ್ಲದೆ ಮತ್ತದಂ ಪಾಷಾಣವೆನಲಹುದೆ
ಮಂಗಳಪ್ರದ ಶೈವದೀಕ್ಷಾ
ಲಿಂಗಿತನನಂತ್ಯಜನೆನುತ್ತವೆ
ಹೇಂಗೆ ನುಡಿಯಲು ಬಹುದು ಹೇಳಾ ಧಾರುಣೀನಾಥಾ ೬೭

---

೧ ಟಿ (ಡಾ, ತ, ಥ, ನ, ಮ). ೨ ತೊ (ತ, ನ). ೩–೪ ಗುಮ (ತ, ನ).

CC-0. Jangamwadi Math Collection. Digitized by eGangotri

ಚಾರು ಶಿವ ಸಂಯುತನ ಪೂರ್ವವ
ನಾರಯಿವು[೧]ದೆಲ್ಲಂ ಸುಲಿಂಗಾ
ಕಾರವಂ ಶಿಲೆಯೆಂಬವೋಲತ್ಯಂತ ಪಾತಕವು
ಮೇರುವಂ ಸೋಂಕಿದಡಲಾ ತ
ದ್ಭೂರಿವರ್ಣದೊಳಿಹುದು ಕಾಗೆ ವಿ
ಚಾರಿಸಲು ಲಿಂಗೈಕ್ಯಭಾವರ ಕುಲವನಱಿಸುವರೆ ೬೮

ಆಗದಿಹುದೇ ಸಿದ್ಧರಸ ಸಂ
ಯೋಗದಿಂ ಸೌವರ್ಣಮುಂ ಚೆ
ನ್ನಾಗಿ ಶುಕ್ತಿಯೊಳೊಂದಿ ತಾಮ್ರಪಹಂಗೆ ಲೋಕದೊಳು
ಶ್ರೀಗುರುಕರಸ್ಪರುಶನದಿ ಪರಿ
ಭಾಗಿಸಲು ಕುಲಮೊಂದೆಯಲ್ಲಾ
ಆಗಮೋಕ್ತಿಯೊಳಿಂತು ಅಂತ್ಯಜನಾದಡಗ್ರಜನು ೬೯

ಭೂಪ ಕೇಳ್ ಶ್ರುತಿ ತಾನುಮಾ ಮಾ
ತಾಪಿತಾ ರುದ್ರಯೆನಲೊಬ್ಬಳೆ
ಓಪ ತಾಯ್ ಪ್ರಜೆಗಳೆ ಬೇಱಿಲ್ಲಿಯದು ನೋಡುವಡೆ
ದೀಪಿಸುವ ಮಾಣಿಕ್ಯಪಂ ಮಲಿ
ನಾಪರಿಮಿತ ಪಟಂ[೨] ಮುಸುಕಿದಡೆ
ರೂಪುಗೆಡುವುದೆ ಅದಱಿಹಗೆ ಶಿವಭಕ್ತನಾದವನು ೭೦

ಧರಣಿಯೊಳು ದುರ್ಜಾತಿ ವೇಷಂ
ಬೆರಸಿದಾತನ ಪೆಂಪು ಕೆಡುವುದೆ
ಸರಸಿಜಂ ಪಂಕಜವಲಾ ಅದು ಪೂಜ್ಯವಾಯಿತ್ತು
ಅರಸ ಕಾಷ್ಠದೊಳೊಗೆದನಲವೆ
ಲ್ಲರಿಗೆ ಪಾವನತರವಲಾ ಈ
ಪರಿಯೊಳಂತ್ಯಜನಾದಡೇಂ ಶಿವಭಕ್ತನುತ್ತಮನು ೭೧

೧ದು (ಅ). ೨ಲ (ಬ).

CC-0. Jangamwadi Math Collection. Digitized by eGangotri

ಇಳೆಯೊಳೀ ಭೂಸುರರ ಗುರು ಕ
ಬ್ಬಿಲಿಗನಲ್ಲಾ ವ್ಯಾಸನೊಗೆದನು
ಕುಲಜರೆಲ್ಲರೊಳಗ್ರಜನ್ಮನು ಋಷಿ ವಸಿಷ್ಠನಲಾ
ತೊಳಸಲೇನೂರ್ವಸಿಗೆ ಜನಿಸಿದ
ಅಲಘು ಮುನಿ ಮಾತಂಗನೆಂಬ
ಗ್ಗಳೆಯನುದ್ಭವಿಸಿದನಲಾ ಮಾತಂಗಿಯುದರದಲಿ ೭೨

ಶುನಕ ಗರ್ದಭ ಕೀರ ದರ್ದುಗ
ವನಚರೋಷ್ಟ್ರ ಕುರಂಗಮಾದಿಕ
ಜನಿತ ಸನ್ಮುನಿವಲ್ಲಭರ ಜನ್ಮಂಗಳೆಲ್ಲವಿವು
ಘನ ಶಿವಾರ್ಚನೆಯಿಂದಲಾ ಪಾ
ವನವೆನಿಸಿ ವಿಖ್ಯಾತಿವೆತ್ತರು
ಜನರಮಣ ಈ ವಿಪ್ರರಱಿಯರೆಯೆಂದೆನಲು ಕೇಳ್ದು ೭೩

ಕಲುಷವಿಹ್ವಲನಾಗಿ ಮೀಸೆಯ
ನಲುಗಿಸುತ ಬಿಜ್ಜಳಮಹೀಶನು
ಮುಳಿದು ನೋಡುತ ಬಸವರಾಜಂಗಾಗಳಿಂತೆಂದ
ಹಲವು ಕಥೆಗಳ ನೋದುಗಳನ
ಗ್ಗಳಿಪ ನುಡಿಗಳನೆಮ್ಮೊಡನೆ ನೀ
ನುಲಿಯಲಾಪರೆ ಕೇಳುವರ್ಗೆ ವಿರುದ್ಧವೇತಕಿವು ೭೪

ಬಗುತರುಗಳಂ ಚಿವುಟಿದಡೆ ಪಾ
ಲುಗುವವೇ ಪೆಱರಂ ಚಿವುಟಿದಡೆ
ಉಗುವುದದು ರಕ್ತವು ಬಳಿಕ್ಕೀ ಮಾರ್ಗವೆಂಬುದನು
ಜಗದೊಳೆಂದುಮನಱಿಯೆಯೆಂಬಾ
ಜಗತಿಯೊಡೆಯನ ನುಡಿಗೆ ಮೆಲ್ಲನೆ
ನಗುತ ಬಸವಾಮಾತ್ಯನೈಸಱಿಕೊಳೆದ್ದು ತಾನೆಂದ ೭೫

---

೧ × (ಥ). ೨–೩ ನೊರೆ (ತ). ೪–೫ ವಿರೋಧ (ಕ, ಚ, ಥ).

CC-0. Jangamwadi Math Collection. Digitized by eGangotri

ಪರಮ ಭರ್ಗನೆ ಒಬ್ಬನೆಂದಱಿ
ದಿರದೆ ದುರ್ಮಾರ್ಗಂಗಳೊಳಗಾ
ಚರಿಪ ದುರ್ಗುಣರಾದತಿ ಶಿವದ್ರೋಹಿಗಳ ಕೂಡೆ
ಸುರುಚಿರ ಪ್ರಣವಾದಿ ದಿವ್ಯ
ಸ್ಫುರಿತ ವರ ಮಂತ್ರೋಪದೇಶಾ
ಚರಣೆಯಿಲ್ಲದ ಸುಪ್ರತಭ್ರಷ್ಟದ್ವಿಜರ ಕೂಡೆ ೭೭

ವೇದ ಭಾರಾಕ್ರಾಂತರೆನಲಿಹ
ಮೇದಿನೀಸುರ ಗಾರ್ದಭಾಧಮ
ರಾದವಂದಿರ ಕೂಡೆ ಭೃಗುಶಾಪೋಪಗತರಾಗಿ
ವೇದನಾವಸ್ಥೆಗಳೊಳಿಪ್ಪನಿ
ಷಾದ ಕರ್ಮಶ್ವಪಚರೊಡನೆಯ
ನಾದರದಿ ಪಶುವಂ ಕೊಲುವ ಪಶುಕರ್ಮಿಗಳ ಕೂಡೆ ೭೮

ವೀಷವೊಂದಕ್ಕಾಗಿ ಎಂತಹ
ದೋಷವಾದಡೆ ಮನದೊಳನಿಸುಂ
ಹೇಸದೇ ಕೈನೀಡಿ ಕೊಂಬತಿ ಪಾತಕರ ಕೂಡೆ
ವಾಸವಾಧಿಕ ಗಾನ ಸೌಖ್ಯವಿ
ಲಾಸಿತತ್ರೈಸೋಮಪಾನಪ
ನಾಸೆಯಿಂ ಸೇವಿಸುವ ಕಷ್ಟಮಹೀಸುರರ ಕೂಡೆ ೭೯

ಆನು ಕೊಲ್ಲೆನು ನೇಣುಕೊಂದಿತು
ತಾನೆನುತ್ತಿಹ ಪಾರ್ಬರೊಡನಾ
ಸ್ಥಾನದೊಳ್ ಪ್ರತಿ ನಿಂದು ನುಡಿದಡೆ ದೋಷವೊಂದುವುದು
ನಾನಿದಂ ಪ್ರತಿದೋಷವಿದಿರ್ದಡೆ
ಹೀನವಲ್ಲಾ ಭಕ್ತಿ ಭಾಷೆಗೆ
ಮಾನವೇಶ್ವರ ನೋಡು ನೀವೆಂಬಂತೆ ದೃಷ್ಟದಲಿ ೮೦

೧–೨ ಋತಿ (ಅ).

CC-0. Jangamwadi Math Collection. Digitized by eGangotri

ಜನವಱಿಯೆ ಶಿವನಾಗಮಯ್ಯನ
ತನುವಿನಲಿ ತೋಱುವೆನು ಹಾಲನ
ವನಿಸುರರೊಳೀ ಸೋಮಯಾಜಿಯೆನಿಪ್ಪನಂ ಕೊಯ್ದು
ಇನಿತು ನೀರಂ ತೋಱಿರೇ ಧಿ
ಕ್ಕನೆ ಇದಕೆ ಆಱಿದಡೆ ನಿಮ್ಮುವ
ನಿನಿಬರಂ ಪಟ್ಟಣದ ಸುತ್ತಿಳಿ[೧]ಹೂಟೆ ಹೂಡಿಸುವೆ[೨] ೮೦

ಎಂದು ರಾಯನ ವಿಪ್ರರನುಮತ
ದಿಂದ ಬಸವಾಮಾತ್ಯನತ್ಯಾ
ನಂದದಿಂ ಶಿವನಾಗಮಯ್ಯಂಗಖಿಳ ತನುವೆರಸಿ
ವಂದಿಸುತ್ತವೆ ಶಿವಪಸಾಯತ
ವೆಂದೆನಿಪ ಶಸ್ತ್ರಕ್ಕೆ ಹಸ್ತಂ
ಸಂಧಿಸುತ್ತಂ ಸರಸವಾಡುವ ಹಾಂಗೆ ಲಾಲಿಸುತ ೮೧

ಶರಣ ನಾಗಯ್ಯನ ಕರಸ್ಥಳ
ಸರಸಿರುಹವಂ ತನ್ನ ಹಸ್ತಾಂ
ಬುರುಹಯುಗದಿಂ[೩] ಹಿಡಿದು ಮೆಲ್ಲನೆ ಒತ್ತುತಿರಲೊಡನೆ
ಆರರೆ ಚಿಮ್ಮಿಸುತಂಬರಂಬರೆ
ಹಿರಿದು ನೆಗೆದಾವರಿಸಿ ಪರ್ಬಿ
ತ್ತರಿದೆನಲು ಶಿವಭಕ್ತಿಯೆಂಬಾ ಕಾಮಧೇನುವನು ೮೨

ಧರಣಿಯೊಳು ಬಸವಂಗೆ ಸಲೆ ಮೊಲೆ
ತೊ[೪]ರೆದು ಕಱಿಪಂತಾಯ್ತು ಭರ್ಗನು
ಕರುಣದಿಂ ಕರಿಕಾಲಜೋಳಂಗಂದು ಹೆಮ್ಮೆಳೆಯ
ಸುರಿಸಿದನು ಮೇಣಂದು ಲೋಕಂ
ನೆರೆದು ಪೊಗಳಲು ದಂಡನಾಥಂ
ಗುರು ಸುಧಾರಸವೃಷ್ಟಿಯಂ ಕಱಿ[೫]ಸಿದನು ಶಂಕರನು ೮೩

೧–೨ ಹೂಟೆಯೊಳೆಳಸುವೆ (ಅ). ೩ ಮೊಳ್ (ತ. ಸ); ಳದಿ (ಧ. ಪ). ೪ ಸೊ (ಸ).

CC-0. Jangamwadi Math Collection. Digitized by eGangotri

[೧]ಕೇಳು[೨] ಕಿಲ್ಬಿಷವಿವು ನಮಗೆ ಭೂ
ಪಾಲ ಮುಟ್ಟಲುಬಾರದೆನಲಾ
ಕೀಳು ಗೊರವನು ಮೆಲ್ದು[೩] ಕೊಟ್ಟಿಂಜಲ ಕಡಲೆಯಿಂದ
ಹೋಲಿಸುವಡಿವು ಕಷ್ಟವೆಂತೈ
ಹೇಳು ನೀನೆನಲೊಡನೆ ಬಸವನು
ಬಾಲಹುಳುಗಳನಾಗ ಕಜ್ಜಾಯದಲಿ ತೋಱಿಕ್ಕೆ ೬೭

ನೋಡಿ ಸಕಳ ನಿಯೋಗಸಹಿತಂ
ನಾಡೊಡೆಯನುಂ ಮನದೊಳಚ್ಚರಿ
ಮೂಡಿ ಬಸವನ ಭಕ್ತಿವಿಶ್ವಾಸಕ್ಕೆ ತಲೆದೂಗಿ
ಱೂಢಿವೆತ್ತೀತಂಗಿಳಿಯೊಳಾರ್
ಪಾಡೆನುತ್ತರಮನೆಗರಸನೊಡ
ಗೂಡಿ ಬಂದುಡಲಿತ್ತು ಭಂಡಾರಿಯನು ಕಳುಹಿದನು ೬೮

ಅನುಪಮಿತ ಶಿವಧರ್ಮಶಾಸ್ತ್ರ
ಧ್ವನಿಗಳುಂ ಶಿವತತ್ವಗೋಷ್ಠೀ
ನಿನದಮುಂ ತತ ವಿತತ ಘನ ಸುಷಿರಾದಿ ವಾದ್ಯರವ
ವಿನುತ ಶಿವವಿದ್ಯಾಗಮವಿಷಯ
ಜನಿತ ಸಾನುಭವಪ್ರಘೋಷಣ
ವನವರತಮುಂ ಬಸವರಸನರಮನೆಯೊಳೇಪೊಗೞ್ತೆ ೬೯

ಬಡಿದು ಕೆಡಪವನಂ ಹಿಡಿದು ಹೊಡೆ
ಗೆಡಹಿ ಕಡಿ ಕೊಲ್ಲೆಂಬ ನುಡಿಗಳು
ಪೊಡವಿಯೊಳಗೀ ಅಶುಭ ದಂಡಾಧಿಪರ ಮನೆಗಳಲಿ
ಹೊಡಪಡುವುದಿದಿರ್ಗೊಂಬುದರ್ಚಿಪು
ದೊಡೆಯರಿಗೆ ಬೇಡಿದುದನೀವುದು
ಬಿಡದಿರೆಂಬೀ ಮಾತು ಬಸವಣನರಮನೆಯೊಳೆಂದು ೭೦

೧–೨ಕೇಳು (ಅ): ಕೇಳುವುದು (ಕ). ೩ ಲುತ (ಸ).

CC-0. Jangamwadi Math Collection. Digitized by eGangotri

ನೂತನ ಪುರಾತನ ಶಿವಗಣ
ಪ್ರೀತಿಗಳು ಶಿವಧರ್ಮವರ್ಮವಿ
ನೀತಿಗಳು ಶಿವ[೧]ತತ್ವ[೨]ವೇತ್ತರ ವಿಧಿ[೩]ಗಳು [೪]ಜ್ಞಾನ
ಜ್ಯೋತಿಗಳು ಸಕಳಾಗಮೋಕ್ತವಿ
ಭೂತಿಗಳು ನಾನಾ ಭುವನ ವಿ
ಖ್ಯಾತಿಗಳು ಭಂಡಾರಿ ಬಸವನ ಗೀತಜಾತಗಳು ೯೬

ಓತು ಮಾಡುವ ಲಿಂಗವಂತರ
ಭಾತಿಗಳು ಶಿವಭಕ್ತಿಬೀಜಕೆ
ಪಾತಿಗಳು ಪರಮಾರ್ಥನಿಜಯೋಗಪ್ರಸೂತಿಗಳು
ಭೀತಿಗಳು ದುಶ್ಚರಿತೆಗಳಿಗೆ ವಿ
ಭೂತಿಗಳು ಮಾಹೇಶ್ವರಾಳಿಗ
ರಾತಿಗಳು [೫]ಸಂಸ್ಕೃತಿಗೆ[೬] ಬಸವನ ಗೀತಜಾತಗಳು ೯೭

ಬಸವನಾಮಮಘೌಘ ಮೇಘ
ಶ್ವಸನ ವಿಶ್ವಾಚಾರಧರ್ಮವಿ
ಕಸನವಿತರೇತರ ವಿಭೋಗಸುಖಾದಿನಿರಸನವು
ಬಸವನಾಮಂ ತ್ರಿವಿಧ ಭಕ್ತಿ
ವ್ಯಸನಮಕ್ಷಯ ಭುಕ್ತಿ ಮುಕ್ತಿವಿ
ಳಸನವಾಗಳು ಬಸವನಾಮಂ [೭]ವಿಶ್ವ[೮]ಲೋಕದೊಳು ೯೮

ಬಸವನಾಮವೆ ದಿವ್ಯನಾಮಂ
ಬಸವನಾ[೯]ಮವೆ ಭಕ್ತಿನೇಮಂ
ಬಸವನಾಮಮಗಣ್ಯಪುಣ್ಯಾರಾಮಯುತಧಾಮ
ಬಸವನಾಮಂ ಕ್ಷೇಮವಾದ್ಯರ
ಬಸವನಾಮವೆ ಬುಧಲಲಾಮಂ
ಬಸವನಾಮಂ ಪ್ರಮಥಗಣ ಪರಿಣಾಮ ವಿಶ್ರಾಮ ೯೯

೧–೨ ಧರ್ಮ (ನ, ಧ, ಪ). ೨–೩ ರಸಿಕರು ನೀತಿ (ತ). ೪ + ಸು (ಕ, ಧ, ಪ).
೫–೬ ಸುಶ್ರುತಿಗೆ (ಜ). ೭–೮ ಲಿಂಗ (ಕ). ೯ ನೇ (ಥ).

CC-0. Jangamwadi Math Collection. Digitized by eGangotri

ಕೇಶಿರಾಜನು ಉತ್ತಮಾಂಗದ
ಕೇಶಿ ಧವಳೇಶ್ವರನು ಧೂರ್ಜಟಿ
ಕೇಶಿ ಶಿವಮುದ್ದ[೧]ಯ್ಯನುಂ ಬಡಿಹೋರಿ ಬೊಮ್ಮಯ್ಯ
ಭಾಷೆವಂತಲ್ಲಯ್ಯನನುಮಿಷ
ಕೇಶಿ ದೇವರದಾಸಿ ಶಂಕರ
ದಾಸಿಮಯ್ಯನು ವಿಮಳದೇವನು ಕದಿರ ರೇಮಯ್ಯ ೪

ಗೋಡೆ ಮಲ್ಲಯ್ಯಗಳು ಮಾದರ
ದೂಡಿದೇವಯ್ಯಂಗಳುಂ ಮಳೆ
ಪೇಡದಾರ[೨]ಯ್ಯಂಗಳೇಲೇಶ್ವರದ ಕೇತಯ್ಯ
ಬಾಡಗಿಯ ದಾಸಯ್ಯ ಮುಷ್ಟಿಯ
ಚೌಡಿದೇವಯ್ಯಗಳು ಸುರಗಿಯ
ಚೌಡರಾಯನು ಹಾಟಕೇಶ್ವರ ಬೊಮ್ಮಿದೇವಯ್ಯ ೫

ಸಿಂಗಿಬೊಪ್ಪಯ್ಯಂ ಶರಣದೇ
ವಂಗಳುಂ ಶಿವರಾತ್ರಿ ಸಂಕ
ಣ್ಣಂಗಳುಂ ತೆಲುಗೇಶ ಮಸಣಯ್ಯನು ಮಹಾಬಲನು
ಲಿಂ[೩]ಗದೇವನು ತೆಲುಗ ಬೊ[೪]ಮ್ಮ
ಯ್ಯಂಗಳುಂ ಕಾಲಾಗ್ನಿ ರುದ್ರ
ಯ್ಯಂಗಳುಂ ಗೊಗ್ಗಯ್ಯನಪರೇಕಾಂತ ರಾಮಯ್ಯ ೬

ಮೋಳಿಗೆಯ ಮಾರಯ್ಯಗಳ್ ಕರಿ
ವಾಳ ಬೊಮ್ಮಯ್ಯಂಗಳು ಮಹಾ
ಕಾಳಿದೇವನು ನುಲಿಯ ಚಂದಯ್ಯನು ಧವಳದೇವ
ಶೀಲವಂತಗ್ಗಯ್ಯ ಹಾವಿನ
ಹಾಳ ಕಲ್ಲಯ್ಯಂ ನಿಸಂಗಿ ನಿ
ರಾಳದೇವನು ಸಿಗುರೆ ಚಂದಯ್ಯಂ ಮುರುಘದೇವ ೭

೧ಗ್ಧ (ತ, ಪ, ಸ). ೨ದ (ತ, ನ). ೩ಸಿಂ (ಅ). ೪ಜೊ (ತ, ಥ, ಧ, ನ).

CC-0. Jangamwadi Math Collection. Digitized by eGangotri

ಸಂಕಿದೇವಯ್ಯಗಳು ಸುಂಕದ
ಬಂಕಿದೇವಂ ಬಂಕನಾಥನು
ಬಂಕಿದೇವಯ್ಯಗಳು ಮೊರಟಿದ ಬಂಕಿದೇವಯ್ಯ
ಲೆಂಕ ಬೊಮ್ಮಯ್ಯಂಗಳುಂ ಶಿವ
ಕಿಂಕರಯ್ಯನು ಹೊನ್ನ ತಂದೆಗ
ಳಂಕದೇವಯ್ಯಗಳು ಮೇದರ ಕೇತಿದೇವಯ್ಯ ೮

ಕಲ್ಲಿನಾಥನು ಭೋಗಿದೇವನು
ಮಲ್ಲಿನಾಥನು ಶ್ರೀಗಿರಯ್ಯನು
ಬಲ್ಲ ಹರಿದೇವಯ್ಯ ಕಂಥೆಯ ಕಲ್ಲಿನಾಥಯ್ಯ
ಆಲ್ಲಯಂ ಮಧುವಯ್ಯ ಗೋಣಿಯ
ಮಲ್ಲಿದೇವಂ ಯೋಗಿದೇವನು
ಗೆಲ್ಲದುತ್ತಮದೇವನುಂ ಗಣದಾಸಿ ಭೀಮಯ್ಯ ೯

ಮಾಯಿದೇವನು ವೀರಗೆಲಸದ
ಸೋಯಿದೇವನು ದೇವದಂಡಿಯ
ಕಾಯಿದೇವನು ವೀರಿದೇವನು ವೀರಬೊಮ್ಮಯ್ಯ
ಸಾಯಿದೇವನು ಗಿಱುಗಟಿಯ ನವ
ಲಾಯಿದೇವನು ಪ್ರೋತಿದೇವನು
ಜಾಯಿದೇವನು ಶಾಂತದೇವನು ಪೊಱಿನ ಪೇಮಯ್ಯ ೧೦

ದೇವರಸಗಳುದರದ ಠಾವಯ
ದೇವನವಿಮುಕ್ತಯ್ಯ ಭಾಸ್ಕರ
ದೇವನಿಂಡೆಯ ಬೊಮ್ಮಿದೇವನು ಮುಂಡ ಬೊಮ್ಮಯ್ಯ
ರೇವಿದೇವನು ಬಾಣಸದ ಶಿವ
ದೇವನುಂ ಕಪಿಲೇಶ ವಿಶ್ವಯ
ದೇವನುಂ ನೊಣಬೇಶ ಚಿಕ್ಕಯ್ಯಂ ಧರಣಿದೇವ ೧೧

೧ಕಾ (ಅ).

CC-0. Jangamwadi Math Collection. Digitized by eGangotri

[೧]ತುಪ್ಪ[೨]ದಯ್ಯಮದೇವನೊಱಿತೆಯ
ಬೊಪ್ಪಿದೇವನು ಪೋಚಿದೇವನು
ಸಪ್ಪೆಯಲ್ಲಮದೇವನುಂ ನಾಗೂರ ಬೊಮ್ಮಯ್ಯ
ಹಿಪ್ಪಲಿಗೆ ಕಲ್ಲಯ್ಯ ಪಲ್ಲೆಹ
ದಪ್ಪಿದೇವನು ಬೆಲ್ಲಪತ್ರೆಯ
ಕೊಪ್ಪಿದೇವನು ಮೌಳಿದೇವಯ್ಯಗಳು ಮೊದಲಾದ ೧೨

ಅವಿರಳಿತ ಶಿವಭಕ್ತಿಯೆಲ್ಲಾ
ಭುವಿಗಳೊಳು ಪಸರಿಸಿ ನಿಮಿರ್ದಿರೆ
ಅವಿರತಂ ಸವಿಶೇಷ ದೃಷ್ಟಪ್ರತ್ಯಯಂಗಳಲಿ
ವಿವಿಧಯುಕ್ತಿಗಳಿಂದೆ ತೋಱಿ
ತ್ತವಘಡಿಸಿ ನಿಜ ವೀರಭಕ್ತ
ಪ್ರವರಸಂತತಿ ಪೆಂಪೆಸೆದು ಪರಮಾನುರಾಗದಲಿ ೧೩

ಭಕ್ತಿಮಾಹಾತ್ಮ್ಯಂಗಳಂ ಶಿವ
ಭಕ್ತರುಗಳಭಿವೃದ್ಧಿಕರಮಂ
ಭಕ್ತಚಾರಿತ್ರಪ್ರಭಾವೈಭವ ಸಮುನ್ನತಿಯ
ವ್ಯಕ್ತಮಾಗಲು ಕಂಡವರ್ಗಳು
ಯುಕ್ತಿಸಲು ಕೇಳಿದವರುಂ ಶಿವ
ಭಕ್ತಿಶಕ್ತಿಯೊಳೆಯ್ದೆ ತಾವನುರಕ್ತಿಯಲಿ ಸಿಲುಕಿ ೧೪

ಸೇವಕರು ಮಂತ್ರಿಪ್ರಕರ ದೀ
ಕ್ಷಾವಿಧಜ್ಞರು ಪೂಜನಾರ್ತರು
ಶೈಲ ಪಾಶುಪತಾದಿ ಶಾಸನಧಾರಕರು ಬಂದು
ತಾವು ತಮತಮಗೆಲ್ಲರುಂ ಮನ
ವೋವಿ ಲಿಂಗೈಕ್ಯರುಗಳಂ ಕಂ
ಡಾವಗಂ ತಮತಮಗೆ ಲಿಂಗೈಕ್ಯರುಗಳಾಗೆಯ್ದೆ ೧೫

೧–೨ ದೂಪ (ಮ).

CC-0. Jangamwadi Math Collection. Digitized by eGangotri

ವೀರಮಾಹೇಶ್ವರನಿರೂಪಾ[೧]
ಚಾರದಲಿ ಲಿಂಗಪ್ರಸಾದಾ
ಪಾರಭೋಗಿಗಳಾಗಿರುತ್ತಿರೆ ಕಬ್ಬಿಲರು ನಾವು
ಧಾರುಣೀಶನನೆಯ್ದಿ ಸರ್ವ[೨]ಶ
ರೀರವೊಂದಲು ನಮಿಸಿ ಜೀಯವ
ಧಾರು ನಿಮ್ಮಯ ಪ್ರಸಾದೊಳುತ್ಪಾತಂಗಳಾಯಿತ್ತು ೧೬

ಪರಮ ಶಿವರುಂ ಧರ್ಮಶಿವರುಂ
ದುರಿತಮೋಚನ ಶಿವರು ಲೋಕೇ
ಶ್ವರ ಶಿವರು ಶ್ರೀಕಂಠ ಶಿವರುಂ ಪಾಶ[೩]ಹರ ಶಿವರು
ಹರ ಶಿವರು ಪರಮಾತ್ಮ ಶಿವರೀ
ಶ್ವರ ಶಿವರು ಬ್ರಹ್ಮಾ ಶಿವರು ಶಂ
ಕರ ಶಿವರು ಸರ್ವಜ್ಞ ಶಿವರಿಂದ್ರಿಯವಿಜಯ ಶಿವರು ೧೭

ಜ್ಞಾನ ಶಿವರುಂ ಶಾಂತ ಶಿವರೀ
ಶಾನ ಶಿವರು ಅಘೋರ ಶಿವರು ಸು
ಮಾನ ಶಿವರುಂ ಚಂದ್ರಶೇಖರ ಶಿವರಚಲ ಶಿವರು
ಮೌ[೪]ನ ಶಿವರಾನಂದ ಶಿವರುಂ
ಭಾನು ಶಿವರಕ್ಷರ ಶಿವರು ವಿ
ದ್ಯಾನಿಧಿ ಶಿವರ್ ವಾಮ ಶಿವರುಂ ನಿಷ್ಕಳಾ ಶಿವರು ೧೮

ವಿಮಳ ಶಿವರಾಚಾರ್ಯ ಶಿವರು
ತ್ತಮಶಿವರು ವೇದಾಂತ ಶಿವರಾ
ಗಮ ಶಿವರು ವಿಶ್ವೇಶ ಶಿವರುಂ ನಿರ್ವಹಣ ಶಿವರು
ಅಮೃತ ಶಿವರುಂ ಸೋಮ ಶಿವರನು
ಪಮ ಶಿವರು ತ್ರಿಪುರಾಂತಕ ಶಿವರು
ಕ[೫]ಮಳ ಶಿವರಾಚಾರ ಶಿವರಿವರಿನಿತು ಮೊದಲಾದ ೧೯

---

೧ ಢಾ (ಧ, ಪ, ಸ). ೨ ರ್ಬ (ಸ). ೩ ಪ (ಪ). ೪ ಮೋ (ತ, ಥ, ಧ, ನ, ಪ, ಬ). ೫ ವಿ (ಬ).

CC-0. Jangamwadi Math Collection. Digitized by eGangotri

ಶೈವದೀಕ್ಷಾ[೧]ಮುಖ್ಯ[೨]ರೆಲ್ಲರು
ತಾವಿದಾವ ಮತಂಗಳೋ ಇವ
ನಾವಱಿಯೆವಾ ಬಸವರಸನುಂ ಭಕ್ತರಂ [೩]ನೋಡಿ
ಆವಗಂ ಲಿಂಗೈಕರೆನುತಂ
ಸೇವಿಸುತ್ತಿಹರಾ ಪ್ರಸಾದವ
ನೇವೆವೆಮಗಿನಿತಾದಡಂ ಕೊಡಲೊ[೪]ಲ್ಲದೀ ಊರು ೨೦

ಮಲ್ಲಜೀಯನು ಬೊಲ್ಲಜೀಯನು
ಕಲ್ಲಜೀಯನು ಕೊಡುವರೇ ಎಮ
ಗೆಲ್ಲಿಯದು ನೀವವಧರಿಸಿ ಬಿಜ್ಜಳಮಹಾರಾಯ
ಬಲ್ಲಿದಂ ಬಸವಯ್ಯ[೫]ಗಂಜುವೆ
ವೆಲ್ಲಿಯುಂ ಸಲುವೆಮ್ಮ ಸಾಮ್ಯವ
ನಿಲ್ಲಿ ಸಲಿಸನು ಕೇಳು ನಮಗಿದು ಬಂದ ಚಂದವನು ೨೧

ಆಂದು ತುಱುವಂ ಕಾಯಲೆಂದೆಯಿ
ತಂದು ಬಾಲಕನೊರ್ಬನಡವಿಯ
ಮಂದೆಯಲಿ ನಲಿದೊಂ[೬]ದೆ ಮಳಲಲಿ ಲಿಂಗವಂ ಮಾಡಿ
ಕಂದನಾವಿನ ಹಾಲನುಱಿ[೭] ಕಱಿ[೭]
ತಂದದಱಿ ಮೇಲೆಱಿ[೭]ದೆಱಿ[೭]ದು ತಾಂ
ತಂದ ಬಂದುಗೆ ಕಕ್ಕೆಯೆಕ್ಕೆಯ ಹೂವನೇಱಿ[೭]ಸುತ ೨೨

ಹಲವು ಸೂಳ್ ಕೈಮುಟ್ಟಿ ನಮಿಸುತ
ಬಳಸಿ ಬಳಸಿ ಬಳಿಕ್ಕೆ ಹೊಡವಡು
ತೊಲಿದು ಮುಂದಕೆ ಬಂದು ನೋಡುತ ಕುಬುಬುಬೆಂದೆನುತ
ಕೊಳಲನೂದುತ ಗತಿಗತಿಗೆ ಮನ
[೮]ವೊಲಿದು ಕುಣಿ[೯]ಕುಣಿದಾಡುತಾಡುತ
ಮಳಲಲಿಂಗವನಿಂತು ದಿನದಿನದಲ್ಲಿ ಭಜಿಸುತಿರೆ ೨೩

೧–೨ ಚಾರ್ಯ (ತ, ಥ, ನ). ೩–೪ ಮಾಡೆ (ಕ, ಥ). ೫ ಲಿ (ಧ, ಪ). ೬ ಣ್ಣ (ತ, ಥ, ನ). ೭ ವೊಂ (ಧ, ಪ, ಸ). ೮–೯ ನಲಿನಲಿದು (ತ, ಥ, ನ).

CC-0. Jangamwadi Math Collection. Digitized by eGangotri

ಒಂದು ಸೊಲ್ಲಗೆ ಹಾಲನಾದಡೆ
ತಂದು ಕೊಡನೀ ಮನೆಯ ಶಿಶುಗಳಿ
ಗೆಂದು ಜನನೀಜನಕರುಮ್ಮಳಿಸುತ್ತ ಚಿತ್ತದಲಿ
ಕ್ರಿಂದಿಯಿವನಾಟವಿಗ್ರಿನಕಟಾ
ಮಂದಮತಿಗೇಗೆಯ್ವೆನೆನುತಾ
ತಂದೆಯಿದನಱಿದಾಗ್ರಹಿಸುತಲ್ಲಿಂದ ಪರಿತಂದು ೨೪

ಹಾಲನೆಲ್ಲಂ ಮಳಲಗುಡ್ಡೆಯ
ಮೇಲೆಱೆದು ಕೆಡಿಸಿದಪನೆನುತಂ
ಕಾಲಲೊದೆಯಲು ತಂದೆಯೆನ್ನದೆ ಕಡುಮುಳಿದು ತನ್ನ
ನೀಳ ತೋ್ಳಲ್ಮರ್ದ ನಿಮಿರ್ದ ಕ
ರಾಳ ಪರಶುವನೆತ್ತಿ ಲಿಂಗವ
ನಾಳಿಗೊಂಡವನಡಿಗಳಂ ಕಡಿಖಿಂಡವಂ ಮಾಡಿ ೨೫

ಆ ಕ್ಷಣದೊಳುಕ್ಷಧ್ವಜನನು
ಗ್ರಾಕ್ಷನಂ ಮೆಚ್ಚಿಸಿ ತದೀಯ ಸ
ಮಕ್ಷದೊಳು ಪಡೆದಂ ಪ್ರಸಾದವನಾದಿಚಂಡೇಶ
ಈ ಕ್ಷಿತಿಯೊಳೆಮಗಿತ್ತನದು ಮೊದ
ಲಕ್ಷಯದೊಳನುಭೋಗಿಸಿದಪೆವು
ಪೇಕ್ಷಿಸದಿರಿಂತೆಮ್ಮ ವಂಶಪರಂಪರದಿ ಬಹುದು ೨೬

ಪುರದೊಳಾಗಳೆ ವೀರಮಾಹೇ
ಶ್ವರರೆನಿಸಿ ತಾವೀಗಳೀತಕೆ
ಧರಣಿಯೊಳು ಸಲಲೀಸುವವು ನಿಮಗೆನುತ ಧಿಕ್ಕರಿಸಿ
ನೆರೆದ ಭಕ್ತರು ಬಸವರಸನಿಂ
ತೊರೆದ ದುರ್ಮಂತ್ರಂಗಳಿಂದಾ
ಸುರದೊಳೆಮ್ಮೊಡನೆಯ್ದಿ ಬದ್ಧ ವಿರುದ್ಧರಾದ್ರೆಹರು ೨೭

೧ಕು (ಅ, ಮ). ೨ಕ (ಅ). ೩–೪ ಳೋಳ (ಥ). ೫ಗ (ಕ).

CC-0. Jangamwadi Math Collection. Digitized by eGangotri

ಸಲಿಸು [೧]ನೀತಿಯಿದಲ್ಲವೆಂದವ[೨]
ರ್ಗಳಿಗೆ ಹೇಳಿ ಆ[೩]ದಲ್ಲದಡೆ ನೀ
ವೆಲೆ ಮಹೀಶ್ವರ ಕೇಳು ನಿಮ್ಮರಮನೆಯ ಬಾಗಿಲಲಿ
ಜ್ವಳನ ಕೊಂಡವನಿಕ್ಕಿಕೊಂಡೀ
ಬಳಗವೆಲ್ಲಂ ಬಂದು ಪೇರುರಿ
ಯೊಳಗೆ ಬೀಳುವೆವೆನಲರಸನತಿ ಕುಪಿತಮುಖಿನಾಗಿ ೮೮

ಬಸವನಂ ಬರಹೇಳ್ದು ಕಳುಹಲು
ಬಸವನಾಗಳೆ ಕೇಳ್ದು ಬಂದಾ
ವಸುಮತೀಶನ ಮುಂದೆಸೆಯೊಳಿರಲಾತನಿಂತೆಂದ
ಬಸವ ನೆತ್ತರುಗೊಡುಗೆ ಕಬ್ಬಿಲ
ರೊಸಗೆಯಂ ಕೊಡು ನಿಮಗವಂದಿರ
ಘಸಣಿಯೇಕೆ ಶಿವಪ್ರಸಾದವನುಂಬುದಾವುದಿದು ೮೯

ಆದಿಮಾರ್ಗಮೊ ಬಲುಮೆಯೋ ಇದ
ನೋದಿಹೇಳಲ್ಲದಡೆ ಮತ್ತೇ
ನಾದಡಂ ಕಾರ್ಯಂಗಳುಳ್ಳಡೆ ಆಡಿಕೋ ಇದನು
ಮಾದು ಸುಮ್ಮನೆ ಉಣುತಿಪುದು ಮರಿ
ಯಾವೆಯೇ ನಿಮಗೆನಲು ಬಸವಂ
ಮೇದಿನೀಶ್ವರನಗ್ರದಲಿ ತಾನವರಿಗಿಂತೆಂದ ೯೦

ಇಲ್ಲಿ ಉಂಟೆ ಶಿವಪ್ರಸಾದವ
ನಲ್ಲಿ ಚಂಡೇಶಂಗೆ ಗೌರೀ
ವಲ್ಲಭಂ ಕೊಟ್ಟಿಂದವಂ ನೀವಱಿಯದಡೆ ಕೇಳಿ
ಬೆಳ್ಳಿಯಲಿ ಹೊನ್ನಲ್ಲಿ ಮಾಣಿಕ
ದಲ್ಲಿ ಮಾಡಿದ ಲಿಂಗಸಂಕುಳ
ದಲ್ಲಿ ಪಟದಲಿ ಬಾಣಲಿಂಗದೊಳಿಷ್ಟಲಿಂಗದಲಿ ೯೧

೧–೨ ನೀತಿಯದೆಂತುಟೋ ಆವ (ಬ). ೩. ಸ (ಥ).

CC-0. Jangamwadi Math Collection. Digitized by eGangotri

ಇಲ್ಲ ಇಂತಿವರಲಿ ಪ್ರಸಾದಂ
ಸಲ್ಲದೀಶ್ವರನಾಗಮಂಗಳು
ಸೊಲ್ಲುವವು ಮುನ್ನೆಹಗೆ ಶಿವಲಿಂಗಪ್ರಸಾದವಿದು
ಎಲ್ಲರುಂ ಕೇಳೆಮ್ಮ ಭಕ್ತರಿ
ಗಲ್ಲದೇ ಮಿಕ್ಕಿನ ನರರಿಗತಿ
ದುರ್ಲಭಂ ಲಿಂಗಪ್ರಸಾದಂ ಧರಿಸಲುಂ ಕೊಳಲು ೩೨

ಮಾನಿತೋರು ಶಿವಪ್ರಸಾದಾ
ನೂನಸುಖವೊಂದುವುದೆ ಪರರಿಗೆ
ಆನೆಗಿಕ್ಕುಪ ಹಲ್ಲಣಂ ಕತ್ತೆಗಳಿಗೇಕಹುದು
ಏನನೆಂಬೆವು ನಿಮ್ಮನೆನಲ
ಜ್ಞಾನಿಗಳಿರಾ ಕಣ್ಣ ಕಾಣರೆ
ಈ ನುಡಿಗಳೇ[೧]ಕಿಂತು[೨] ತೆಗೆದೆವೆ ನಿಮ್ಮ ಸಾಮ್ಯವನು ೩೩

ವೈರವೇಕೆಮ್ಮೊಡನೆ ಬಱಿದೇ
ಹೋರುತಿರವೇಡೆನಲವದಿರವಿ
ಚಾರದಿಂ ಬಸವರಸನೊಡನಿಂತೆಂದರಗ್ಗಳಿಸಿ
ವಾರಣಾಸಿಯೊಳುಂಟು ಯುಗಕೇ
ತಾರದಲಿ ಸೌರಾಷ್ಟ್ರದಲಿ ವಿ
ಸ್ತಾರ ದ್ರಾಕ್ಷಾರಾಮದೊಳು ಶ್ರೀಗಿರಿಯು ಮೊದಲಾದ ೩೪

ಆಗಮಸ್ಥಾನಂಗಳೊಳಗೆಮ
ಗಾ[೩]ಗಳುಂ ಸಲುತಿರಲು ನೀವಿಂ
ತೀಗಳಿನಿತಂ ಸಲ್ಲಲೀಸರಿ ತತ್ಪ್ರಸಾದವನು
ಭೋಗಿಪೆವು ಮೊದಲ್ಗೊಡಗಿ ಬಲ್ಲಿದ
ರಾಗಿ ನೀವೀಯದಡೆ ಸುಮ್ಮನೆ[೪]
ಹೋಗೆವಿಲ್ಲಿಯೆ ಸಾವೆವಲ್ಲದೆ ಎಮ್ಮ ವೃತ್ತಿಯನು ೩೫

೧–೨ ಕಿನ್ನು (ಸ). ೩ ಗೀ (ನ); ಗೇ (ಥ). ೪ ಗೆ (ಥ).

CC-0. Jangamwadi Math Collection. Digitized by eGangotri

ಬಿಡುವೆವೇ ಎಂದೆನುತ ಬೇಡರು
ಗಡಬಡಿಸಿ ಒಬ್ಬೊಬ್ಬರೆದ್ದವ
ಘಡಿಸಿ ನುಡಿಯಲು ಬಸವನವರಂ ನೋಡಿ ನಸುನಗುತ
ಬಿಡದೆ ತಲಿಗೆಲೆ ಹಾರ್ವುದಲ್ಲದೆ
ನಡುಗುವುದೆ ಗಿರಿ ಗಾಳಿಗಬ್ಬಿಗೆ
ಕಡೆಗೆ ಬೆಂಡುಗಳೇಳ್ವವಲ್ಲದೆ ನಿಗಿವವೇ ಗುಂಡು ೩೭

ಬಲುಹುಮಾಡಿ ಕೊಳಲ್ಕೆ ಹರಿಯಜ
ಬಲಹರರ ಪವಣಲ್ಲ ಎಂದಡೆ
ಅಳವಿಯೇ ನಿಮಗೆಮ್ಮೊಡನೆ ಮಾಱಾಂತು ಕೆಡಬೇಡ
ಛಲವುಡುಗಿ ಸಲೆ ತಿಳಿಪುವುಮು ಮೇಣ್
ತಿಳಿದುಕೊಂಬುದು ಸಾಮ್ಯವುಳ್ಳಡೆ
ಬಳಿಕ ಶೈವಶಿವಾಲಯಸ್ಥಾನಂಗಳುಳಿಯಲ್ಕೆ ೩೮

ಆವ ನಾಡೊಳಗಾವ ಪುರದೊಳ
ಗಾವಡೆಯೊಳಂದಿಂದು ಶಿವಭ
ಕ್ತಾವಳಿಯ ಮನೆಗಳಲಿ ಕೊಳುವಡೆ ಉಳ್ಳಡದನಱಿಪಿ
ನೀವು ಕೊಳ್ಳಿರೆ ನಾವು ಕೊಡುವೆವು
ಶೈವರಾಗಿಯುಮವರು ಶಿವನಿ
ಷ್ಠಾವಧಾನಿಗಳಾದವರು ಲಿಂಗಪ್ರಸಾದವನು ೩೯

ಮುಟ್ಟಲೀವರೆ ನೋಡಲೀವರೆ
ಕೆಟ್ಟ ನುಡಿಗಳನಾಡದಿರಿ ಮತಿ
ಗೆಟ್ಟವಂದಿರಿರಾ ಇದೇತಕೆ ಹೆಣಗುತಿದ್ದಪಿರಿ
ನೆಟ್ಟನಿಪ್ಪ ಶಿವಪ್ರಸಾದವ
ಕೊಟ್ಟೆನನ್ಯರಿಗಿದಕೆ ಚಿತ್ತಂ
ನಟ್ಟುಕೊಂಬಡೆ ಕೊಳ್ಳಿ ಕೇಳಿನ್ನೊಂದನುಸುರ್ದಪೆನು ೪೦

೧ಸೆ (ಆ, ಡಾ, ಕ, ಚ, ತ, ಥ, ಧ, ನ, ಪ, ಮ).

CC-0. Jangamwadi Math Collection. Digitized by eGangotri

ಸಪ್ತರಸನಾಶಾರ್ವರೀವರ
ಸಪ್ತಸಪ್ತಿ ವಿಲೋಚನಂಗಂ
ಸಪ್ತಲಾಸಿತ ಸಸ್ಮಿತಾನನ ಸರಸಿಜಾತಂಗೆ
ಸಪ್ತಯುಗ ಜಗದೀಶ್ವರಂಗಂ
ಸಪ್ತ ಮಾತೃವಿಧಾತೃಕೇಶವ
ಸಪ್ತಋಷಿನಮಿತಾಂಘ್ರಿ[೧]ಗಂ ಸಂ[೨]ಸುಪ್ತಿದೂರಂಗೆ ೪೦

ಸೂರ್ಪಕಪ್ರಹರಪ್ರಹಾರಿಗೆ
ದರ್ಪಿತ ತ್ರಿಪುರೇಂದ್ರನಾಗ್ನಿಗ
ಹರ್ಪತಿಪ್ರಣುತಪ್ರಭಾಮಯ ದಿವ್ಯದೇಹಂಗೆ
ಸರ್ಪಭೂಷಣಸಂಗಮೇಶಂ
ಗರ್ಪಿಸುವೆನಿಂದುಗ್ರ ಗರಳವ
ನಾರ್ಪವರು ಬಂದೀಪ್ರಸಾದವನೀಸಿಕೊಳ್ಳಿ[೩]ರಯಾ[೪] ೪೧

ಕೊಡುವೆವಿದಕಿನ್ನಾಱಿದಡೆ [೫]ನಡೆ
ನಡೆ[೬]ಯಿನಿಬರುಂ ನೀವೆನಲು ಸಿಡಿ
ಮಿಡಿಗೊಳುತ ಬಸವಯ್ಯನಕಟಾ ಒಮ್ಮೊಯೆಮ್ಮುವನು
ಮಡಿಹಿಸಲ್ಕಿಂದೊಂದುಪಾಯಂ
ಬಡೆದು ಲೇಸಾಯ್ತುಸಮ ವಿಷಮಂ
ಕುಡಿಸಿ ಕೊಂದೆಹೆನೆಂದು ನೆನೆದನು ಭೂಪ ಚಿತ್ತೈಸು ೪೨

ಚಂದವಾಯಿತು ಜೀವವುಳ್ಳಡೆ
ತಂದು ಕಾರೆಯ ಸೊಪ್ಪನಾದಡೆ
ತಿಂದು ಬದುಕಲುಬಹುದಲಾ ಅಕ್ಕಕ್ಕಿದೇಗುವೆವು
ಇಂದು ಸತ್ತಾವೇನನುಂಬೆವು
ಮುಂದೆ ನಿಮ್ಮೊಡತಣ ವಿವಾದವು
ಬಂದುದೆಮಗಿದು ಸಾಕು ನಿಮಗಂಜುವೆವು [೭]ಬಸವಯ್ಯ[೮] ೪೩

೧–೨ ಯುಗ ಗಂ (ಬ). ೩–೪ ರಿದಂ (ಕ). ೫–೬ ಕಡೆವಡೆ (ಕ, ಚ, ತ). ೭–೮ ಹೋಗಯ್ಯಾ (ಅ).

CC-0. Jangamwadi Math Collection. Digitized by eGangotri

ನಾಡಕೊಳ್ಳಿಗೆ ಹರಿದು ತಲೆ ಹೋ
ಗಾಡಿದಂತವನಲ್ಲವೇ ಹಿಂ
ಗಾಡ ಬಂದಿಲಿ ಕೋಟಿವಿ[ಱ]ಱಿಯಲಿ ಸಿಕ್ಕಿ [೨]ಮಡಿವಂತೆ[೩]
ಮಾಡುವಂತಹ ನಿಮ್ಮ ಕುಟಿಲ
ಕ್ಷ್ವೇಡದಲಿ ಸಾವರರೆ ಈ ನುಡಿ
ವೇಡ ನಾವಂತಾಗಿ ಮರುಳುಗಳಲ್ಲ ಕೇಳಯ್ಯ ೪೦

ಪೊಡವಿಯೊಳು ಶಿವಭಕ್ತರಾರಾ
ದಡೆ ವಿಷವ ನಂದೀಶ್ವರಂಗಂ
ಕೊಡುವರುಳ್ಳರೆ ಕೊಡು ಬಳಿಕ ಹೇಳಾವನಾದಡೆಯು
ಮೃಡನು ಕೈಕೊಂಡ ಪ್ರಸಾದವ
ಕಡು ವಿಷವನಿಂತುಂಡ ಠಾವು
ಳ್ಕಡೆ ಬಿಡದೆ ನಾವೀಸಿಕೊಂಬೆವೀವೇಕೆ ಟೊ[೪]ಳ್ಳಿಗಳು ೪೧

ಭೋಗಿಸುವುದೊಳ್ಳಿಹ ರಸಾಯನ
ದೋಗರಂಗಳು ನಿಮ್ಮ ಭಾಗವಿ
ದಾಗಿ ಹಾಲಾಹಲ ಮಹಾಪ್ರಳಯದ ಗರಳ[೫]ವೆಮ್ಮ[೬]
ಭಾಗವೇ ಇದನೆಹಗೆ ಕುಡುವಿರಿ
ನಾಗಕಟಕಂಗಿತ್ತು ವಿಷಮಂ
ರಾಗದಿಂ ನೀವುಂಡು ಸಾಯದಡಾ ಪ್ರಸಾದವನು ೪೨

ನೀವು ಕೈಕೊಂಡನುಭವಿಸುತಿರೆ
ನಾವು ಬೇಡವು ನಿಮಗೆ [೭]ಗೆಲವಿ
ನ್ನಾ[೮]ವೆಡೆಯೊಳೆರಡಕ್ಕೆ ಭಾಷೆಗಳೆಂದೊಡಂಬಡಲು
ಭೂವರನು ಉಭಯಾನುಮತದೊಳು
ದೇವ ದೇವನ ದೇಗುಲಕ್ಕೆ ಜ
ನಾವಳೀಯುತನಾಗಿ ತಾನೆಯಿತಂದನೈಸಱಿಲಿ ೪೩

೧ನ (ಸ). ೨–೩ ದಂದದಲಿ (ಸ). ೪ ಲೊ (ಪ). ೫–೬ ವೆಂದು (ಮ). ೭–೮ನಮಗೆ ವಿ । ದಾ (ಸ).

CC-0. Jangamwadi Math Collection. Digitized by eGangotri

ಒಡಲುಗೊಂಡ ತಮಂಧಪಟಮೋ
ನಡೆವ ನೀಲಾದ್ರಿಗಳೊ ಕೈಕಾಲ್
ಪಡೆದ ಕಜ್ಜಳಗಿರಿಗಳೋ ಕರ್ಬೊನ್ನ ಭಿತ್ತಿಗಳೋ
ನುಡಿಗಲಿತ ಮಾತಂಗಸಂಗಮೊ
ಹೆಡೆ ಉಡುಗಿದಸಿತಾಹಿಗಳೊ ಎನ
ಲೆಡೆವಿಡದೆ ಸಂದಣಿಸಿ ಬೇಡರು ಬಂದರಾಯೆಡೆಗೆ ೪೮

ತಟಿತದಲೆಗಳ ಮೆಳ್ಪೈಗಂಗಳ
ಬೆಟಿತ ಮೋಟಿಯ ಮುಂಟುಗಿವಿಗಳ
ಪಟಿಕುಗಡ್ಡದ ಕೆದಱುಮೀಸೆಯ ಕೀನಿವಲ್ಲುಗಳ
ಒಟಿತ ಬಾಯ್ಗಳ ಗಂಟುಗೈಗಳ
ಬಟಿತೆದೆಗಳೊಳಡೊಂಕುಕಾಲ್ಗಳ
ಕಿಟುಕುಲರು ಬಂದರು ನೆರೆದು ಕಾಗೆಯ ಹಳವಿಗೆಯೊಳು ೪೯

ಕರಿಯ ಕಬ್ಬಿಳಿ ಬಳಗಗಳೆ ಸಲೆ
ತರತರದ ಹೊರಳಿಗಳ ಜೋಳಿಯ
ನೆರವಿ ಕೂಡಿತು ಹಗಲುಗತ್ತಲೆ ಮುಸುಕಿದಂದದಲಿ
ಕರಿಯಿಱುಹೆಗಳ ರಾಸಿಗಳ ನೆಟಿಸಿ
ಹರಹಿದಂದದಿ ಕೂಡಿ ಪುರೊಳು
ಧರೆ ಹೊಱಿದಪ್ಪೊಲು ನೆರೆದರು ಅಸಂಖ್ಯಾತ ಕಬ್ಬಿಲರು ೫೦ *

ಉರು ಜಟಾಮಕುಟೋತ್ತಮಾಂಗರು
ಸ್ಫುರಿತ ಭಸಿತೋದ್ಧೂಳಿತಾಂಗರು
ಭರಿತ ರುದ್ರಾಕ್ಷಾವಳೀ ಮಾಲಾವಿಭೂಷಣರು
ನಿರತಿಶಯ ಕೌಪೀನ ಕಂಥಾ
ವರಣ ಶರಣರು ಕಕ್ಷ ಕರತಳ
ಸುರುಚಿರೋರಸ್ಥಳಕಲಿತ ಶಿವಲಿಂಗಧಾರಕರು ೫೧

೧–೨ದುಡು (ತ, ಧ, ನ). ೩ದ (ಮ). ೪ವ (ಮ, ಕ, ಚ). ೫–೬ಕಗ್ಗುಳ್ಳಿಗಳ ಗಳಿಗಳ (ಚ); ಕಬ್ಬಿಳಿಗಳ ಹಳಿಗಳ (ಕ); ಕಂಬಳಿಗಳಗಳಿಗಳ (ಅ). ೭ನು (ಬ, ಕ). ೮–೯ರಿಯೊ (ತ, ಥ). * ಈ ಪದ್ಯ ನ, ಪ ಪ್ರತಿಗಳಲ್ಲಿಲ್ಲ.

CC-0. Jangamwadi Math Collection. Digitized by eGangotri

ಪರಮ ಶೈವೋದ್ಧರಣಕರಣರು
ಪರಸಮಯ ನಿರ್ಧೂಪಧಾಮರು
ಪರಸಮಯಕೋಳಾಹಳರು ದಂತಾವಳರು ಹರನ
ಹರಯಶೋವಿಸ್ತಾರಕರು ಪುರ
ಹರಸಮಯವಿಸ್ತಾರಕರು ನತ
ನರವಿಪಜ್ವಲನಿಧಿ ಸಮುತ್ತಾರಕರೆನಲು ಮೆಱೆದು ೫೨

ಎತ್ತಿಸಿದ ನಂದಿಧ್ವಜಂಗಳ
ಮೊತ್ತದ ಪತಾಕೆಗಳ ಪಲ್ಲವ
ಸತ್ತಿಗೆಯ ಸಾಲುಗಳನೇಕ ವ್ಯಾಸಹಸ್ತಗಳಿಂ
ಒತ್ತರಿಸಿ ನಳ್ಕಿಱಿದು[1] ಗಗನವ
ನತ್ತಲಿತ್ತಿನ ದೀಪ್ತಿ ಹುಗಲಿಸ
ದುತ್ತಮೋತ್ತಮಪಂತದೇವಾ ಪೃಥ್ವಿ ಬಂದೆಸೆಯೆ ೫೩*

[2]ಮೇಲೆ ದಿವ್ಯ ವಿಮಾನ ತತಿಯಿಂ
ಲಾಲಿತಂ ಮಿಗೆಯುಮೆಸಹಿತ ಶಶಿ
ಮೌಳಿ ರುದ್ರಪ್ರಮಥ ವೀರಕ ವೀರಭದ್ರಾದಿ
ಭಾಳನೇತ್ರಸಮಾನ ಗಂಗಾ
ವಾಳುಕಾಸಂಖ್ಯಾತ ಗಣರ[3]ತಿ
ಲೀಲೆಯಿಂದೆಯಿತಂದುಮಿರ್ದರು ಗಗನಮಾರ್ಗದಲಿ ೫೪*

ಓಳಿಗೊಂಡು ಸಮಸ್ತ ಭಕ್ತಜ
ನಾಳಿಸಹಿತಂ ಬಸವಮಂತ್ರಿ ಶಿ
ವಾಲಯಕೆ ನಡೆತಂದು ಪರಮಾನಂದದಿಂದಂದು
ಕಾಲಕೂಟಂ ವತ್ಸನಾಭಿಯು
ಹಾಲಹಲಮುಂ ಸಿಂಗಿ ಮೊದಲಾ
ಭೀಳ ಗರಳಂಗಳನವೆಲ್ಲಂ [3]ಕಲಸಿ ಅರೆಯಿಸಲು ೫೫

೧ಯೆ (ಥ). ೨ತ (ತ). ೩–ಳಿಕರಿಸಿ (ಚ, ತ, ನ, ಪ).
* ಈ ಪದ್ಯಗಳು ನ, ಪ ಪ್ರತಿಗಳಲ್ಲಿಲ್ಲ.

CC-0. Jangamwadi Math Collection. Digitized by eGangotri

ಘನ ವಿಷಮತರವಾಗಿ ವಿಷಸಂ
ಜನಿತ ಸೌರಭವಂತು ಸೋಂಕಲೊ
ಡನೆ ಧರೆಯ ಜೀವಿಗಳಸುಗಳಂ ಬಿಟ್ಟವಿದ್ದಂತೆ
ಘನಪಥದೊಳಾಡುವ ಖಗಂಗಳ
ವನಿಗೆ ಬಿದ್ದುಸು[೧]ರಡ[೨]ಗಿದವು ಸು
ಮ್ಮನೆ ಅರೆದವರ ಕರುಳು ತುಂಡಿಸಿ ಬೀಳುತಿರ್ದಪವು ೫೬

ಘೋರ ವಿಷಮಂ ಕುಡಿದು ಬದುಕುವ
ರಾರೆನುತ ನಡನಡುಗಿ ಕಾಣುತ
ದೂರ ದೂರಕೆ ಬೇಡರೋಡಲು ಬಸವರಸನಾಗ
ಸ್ಮೇರಮುಖನಾಗುತ್ತ ಕೂಡಿದ
ಪಾರಪಟುಗರಳಂಗಳೆಲ್ಲಂ
ಭೂರಿಯಾಗಲು ಪೊನ್ನ ಕೊಪ್ಪರಿಗೆಗಳೊಳಗೆ ತೀವಿ ೫೭

ಅಸಮಸದುಭಕ್ತಾಂಘ್ರಿಗಳನ
ರ್ಚಿಸಿ ಸಮಸ್ತಾಂಗಂಗಳಂ ಹೊಂ
ದಿಸಿ ನಮಿಸಿ ಚಾತುರ್ಯರಸ ಸಂಸ್ತುತಿಗಳಂ ಮಾಡಿ
ಬಸವರಾಜನು ಮುನ್ನ ತಾಂ ಮು
ದ್ರಿಸಿದ ಮುಸುಕಂ ತೆಗೆಯಲೊಡನತಿ
ನಿಸಿತ ಗರಳೋದ್ರೇಕವಹ್ನಿಪ್ರಸರವೆಡೆಗೆಡೆಗೆ ೫೮

ನಿಟಿಲನಯನನ ಮೂಱನೆಯ ವಿ
ಸ್ಫುಟತರಾಂಬಕ ಪಾವಕನವೊಲು
ಛಿಟಿಛಿಟಿಲು ಭುಗಿಭುಗಿಲೆನುತ ಕೊಂಬೆಗೆ ನೆಗೆವುತಿರಲು
ಚಟುಲ ವಿಷಮ ವಿಷೋಗ್ರಕೀಲಾ
ಪಟಲಪಂಬರವಂ ಮುಸುಕಲಾ
ಪಟುದಹನಮಂ ಕಂಡು ಕೆಟ್ಟೋಡಿದ[೩]ನಹಸ್ಕರನು[೪] ೫೯

೧–೨ ರುಡು (ನ, ಪ). ೩–೪ ನು ಭಾಸ್ಕರನು (ಅ, ಚ, ಕ).

CC-0. Jangamwadi Math Collection. Digitized by eGangotri

ಲೋಕವಾಙ್ಮಕ್ಕತ್ತಲಿತ್ತ
ವ್ಯಾಕುಳಿತವಾಯಿತ್ತುಳಿದ ಭೂ
ಲೋಕವದಿರಿತು ಸರ್ವಜೀವಿಗಳವನಿಗೊಱಗಿದವು
ಪಾಕದೋಡಿನೊಳುರಿದರಳಿನವೊ
ಲಾಕಸದೊಳಿಡಿದಿರ್ದ[1] ತಾರಾ
ನೀಕವೊಡನೊಡನೆಯ್ದಿ ಕರಮುರಿಯಾಗುತುದುರಿದವು ೬೦

ಹೊಗೆಯನಾಗಳು ಕಾಣುತೆದೆಗಳು
ಧಿಗಿಲು ಧಿಗಿಲೆನೆ ಬೆಗಡುಗೊಂಡತಿ
ವಿಗತಚೇತಸರಾದರಷ್ಟದಿಶಾಧಿನಾಯಕರು
ನೆಗೆದ ಧೂಮ್ರವಜಾಂಡವೆಲ್ಲವ
ಮಿಗೆ ಮುಸುಕಿ ಕೆಂಪಡರೆ ಮಿಕ್ಕಿನ
ನಗಕುಲಂಗಳು ಕಜ್ಜಲಾದ್ರಿಗಳಂತೆ ತೋಱಿದವು ೬೧

ಪಡಬಶಿಖಿಯಲ್ಲಾ ವಿನುತವೇಳ್
ಜಡಧಿಗಳು ಕದಡಿದವು ಕಾಲದ
ಕಡೆಯ ವಹ್ನಿಯಿದೆನುತಜಂ ಗಡಗಡನೆ ನಡುಗಿದನು
ಒಡಲನಸಿತಂ ಮಾಡಿದಂದಿನ
ಕಡುಪಿನಗ್ಗದ ಹಾಳಹಳವಿಂ
ತಡಸಿ ಬಂದುದೆನುತ್ತ ಲಕ್ಷ್ಮೀರಮಣನಳುಕಿದನು ೬೨

ಕೊರಳ ಗರಳವಿದೀಪರಿಯೊಳೊ
ತ್ತರಿಸಿ ಪೊಱಮಟ್ಟಿಯ್ದಿದುದು ತಾ
ನರಿದೆನುತ ಗೌರೀರಮಣನದ್ಭುತವನೊಂದಿ[2]ದನು[3]
ಹರನ ನಿಟಿಲತಟಾಗ್ನಿ ನೆರೆದಾ
ವರಿಸಿತೆನುತಂ ತದ್ಗಣಾಡಂ
ಬರಸಮುದ್ಯೋಗಪ್ರಕಾರವು ಕಾಣಬರುತಿರಲು ೬೩

೧–೨ ಳಡರಿರ್ದ (ಡಾ, ಧ, ಬ, ಮ). ೩–ಳರಲು (ತ, ನ, ಪ).

CC-0. Jangamwadi Math Collection. Digitized by eGangotri

ನೆಲನುಮಾಗಸವಿಂತು ಹಾಳಾ
ಹಳ ದಹನಮಯವಾಗಲಿನಿತಱಿಂ
ಕೆಲವೊ ಭಕ್ತರ ಮಹಿಮೆಯಂ ಕೇಳಿದಿರೆ ಬೇಡರಿರ
ಹಲವು ಗುಜು ಗುಜು ಮಾದು ಕಂಡೆವು
ಬಳಿಕ ಕಾಣೆವು ಕೇಳಿದೆವು ಮೇಣ್
ಕೆಲರು ಕೇಳ್ದೆವು ಇದ್ದೆವಿರೆವೆಂದೆಂಬ ನುಡಿ ಬೇಡ ೬೪

ಅಖಿಳಲೋಕಾಲೋಕ ನಿಕರದೊ
ಳಖಿಳ ಜಗದೀಶ್ವರನ ಭಕ್ತರೆ
ಅಖಿಳಪಾವನರದ್ವಿತೀಯನುಮೇಶ್ವರನೆ ಕರ್ತ
ಅಖಿಳದೊಳು ನಾವೇ ಪ್ರಸಾದ
ಕ್ಕಖಿಳ ಯೋಗ್ಯರಿದಲ್ಲವೆನುತಿ
ಪ್ಪಖಿಳ ಪಾತಕರಿಗೆ ತೊಡರನಿಕ್ಕಿದೆನೆಂಡದ ಕಾಲ ೬೫

ಗೆಲುವೆನುಗ್ರಕ್ಷ್ವೇಡಪಂ ಮಾ
ರ್ಮಲೆತವಂದಿರ ಸಂದಿಸಂದಿಗೆ
ಮುಳಿದು ಕಡಿಸುವೆನೆಳಸುವೆನು ನಿಮಿಷದೊಳಧೋಗತಿಗೆ
ಛಲವಿದೆಮಗೆನುತುಬ್ಬಿ ಮನದೊಳು
ನ್ನೆಲೆದು ಮಾಹೇಶ್ವರರ ಕರುಣಾ
ಜಲನಿಧಿಯೊಳೋಲಾಡಿ ಬಸವಣದಂಡನಾಯಕನು ೬೬

ಚಂಡವೀರವರದಂಗೆ ದಶಶತ
ಚಂಡಕರ ಭಾಭಾಂಗರೋಚಿಗೆ
ಚಂಡಿಕಾರಮಣಂಗೆ ಕೂಡಲ ಸಂಗಮೇಶಂಗೆ
ಖಂಡಶಶಿಧರಕಲಿತವೆಱಿಗೆ
ಖಂಡಪರಶುಗೆ ನಿಸಿತವಿಷವನ
ಖಂಡ ಸದ್ಭಕ್ತಿಯೊಳಲರ್ದು ಸಮರ್ಪಣಂಗೆಯ್ದು ೬೭

೧ವೆ (ಕ. ಚ). ೨ಒ (ಬ). ೩ಕ (ತ, ಥ, ನ).

CC-0. Jangamwadi Math Collection. Digitized by eGangotri

ದೇವ ನೀವಾರೋಗಿಸೆನುತ ಮ
ನೋವಿಕಾಸದೊಳಾಳ್ದು ನಿಜ ಗರಿ
ಮಾ ವಿಜೃಂಭಿತವೃತ್ತಿಯಲಿ ಕೊಪ್ಪರಿಗೆಗಳಿಗೆಯ್ದಿ
ತಾವೊಲಿದು ತಮತಮಗೆ ಭಕ್ತರು
ತೀವಿ ಪೊಂಗಳಸಂಗಳೊಳು ತತ್
ಸ್ರಾವಗಳೊಳುಂ ಪೊನ್ನ ತಂಬುಗೆಗಳೊಳು ಮೊಗೆಮೊಗೆದು ೬೮

ತಂದು ಗಡಣಿಸುತಳವಡಿಸುತಾ
ನಂದಿಸುತ ಲಿಂಗಾರ್ಪಿತಂಗಳ
ನೊಂದಿಸುತ ಕೈಕೊಳುತ ಕೊಳುತಂ ೧ತತ್ ೨ ಪ್ರಸಾದವನು
ಬಂದು ಕುಳ್ಳಿರಿ ಜಂಗಮಾವಳಿ
ಸಂದಣಿಸದಿರಿ ಉಗಿಸದಿರಿ ಸಾ
ನಂದದೇವಾ ಮೆಲ್ಲನಾರೋಗಿಸುತಹನೆ ಮತ್ತೆ ೬೯

ಅಂತು ಸಂಧಿ ೫೭ಕ್ಕಂ ಪದಗಳು ೩೪೧೦ ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧–೨ ಲಿಂಗ (ತ. ನ).

CC-0. Jangamwadi Math Collection. Digitized by eGangotri

ಸಂಧಿ : ಜಿಲ

*

ಸೂಚನೆ : ಕಬ್ಬಿಲರಿಗೆ ಶಿವಪ್ರಸಾದವ
ನೊರ್ಬರಿಗೆ ಸಲಲೀಯೆನೆಂದೊಡ-
ಲುಬ್ಬಿ ಬಸವನು ರಾಯನಱಿಯಲು ತಗುಳ್ದನವದಿರನು

ಲಿಂಗದೇವಾ ತಂದಪೆಂ ಬಿಜ
ಯಂಗೆಯಿದು ಕುಳ್ಳಿರಿ ಬಸವಿದೇ
ವಂಗೆ ಗಡಣಿಸಿ ಬಂದಪೆಂ ಸೈರಿಸು ಸಕಳಿದೇವಾ
ಹೊಂ[೧]ಗುತಿದೆ ನಿನ್ನುದರವೆಯ್ದೆದೆ
ಸಂಗಿದೇವಾ ಸರಸವೇ ನಿಜ
ಲಿಂಗದೇವಂಗಿನ್ನು ಎಱಿ[೨] ಪರಿಣಾಮಿದೇವಯ್ಯಾ ೧

ನೀಲಕಂಠಯ್ಯಂಗೆ [೨]ತಂದೆಱಿ[೨]
ಸಾಲದೋಹೋ ಗಗನಿದೇವಾ
ಆಳಿಗೊಳಿಸದಿರೇಸನಾದಡೆ ಎಱಿ[೨]ದಡೀಂಟುವೆನು
ಕಾಳಿದೇವನ ಮುಂದಿಳುಹು ಗಂ
ಗಾಳವಂ ತ್ರಿಪುರಾರಿದೇವ ನಿ
ರಾಳದೇವಂಗಿನ್ನು ನೆಱಿ[೨]ಯದು ನೀಡು ಕಲಿದೇವಾ ೨

ಮಾಣುದರವಿದೆ ಬೀಗಿಹುದು ಕ
ಲ್ಯಾಣದೇವಾ ತಣಿಯಿರೇ ಒ
ಡ್ಯಾಣವಂ ಸಡಲಿಸಿದೆನಿನ್ನೆಱಿ[೨] ವೀರಭದ್ರಯ್ಯಾ
ಜಾಣನಹುದಹುದಲ್ಲಮಂ ನಿ
ನ್ಮಾಣೆ ಆರೋಗಿಸಿದಹನು ನಿ
ರ್ವಾಣದೇವಾ ನೋಡು ಸಿರಿಗಿರಿ ಹುರುಡಿಸುವ ಪರಿಯಾ ೩

---

* ರಾಗ : ಮಾಳವಶ್ರೀ (ಫ, ಪ); ಕಲ್ಯಾಣಿ (ತ).
೧ ಹಿಂ (ಡಾ). ೨–೨ ತಂದಿಡು (ತ, ಥ, ನ).

CC-0. Jangamwadi Math Collection. Digitized by eGangotri

ಈ ಕರಗದಲಿ ತುಂಬಿ ತಂದಡೆ
ಸಾ[೧]ಕಲಾ ವಿರುಪಾಕ್ಷದೇವಂ
ಗೇಕಣಕವ[೨]ಜ್ಜಯ್ಯ ನಿನಗಾಕಂಠಪೂರವಲಾ
ಓಕರಿಸದಿರು ಪರ್ವತಯ್ಯಾ
ಲೋಕನಾಥನ ಹೊಟ್ಟೆಗೆಯ್ದಿ [೩]ಸ
ದೇ ಕರಸ್ಥಳದಪ್ಪಿದೇವಾ ಗಡಣಿಸಾ ತಂದು ೪

ಮೀಸೆಗಳನಲುಗಾಡಿಸದಿರಾ
ದಾಸಿದೇವಾ ಭರಿತ ಬೋನದ
ಕೇಶಿರಾಜಂಗೊಮ್ಮೆಯಾಯಿತು ಮಿಂಡಸಂಗಯ್ಯಾ
ಲೇಸು ನಿನ್ನಾರೋಗಣೆಯ ಪರಿ
ಭಾಷೆಯಂ ಪೂರೈಸದಿಹನೇ
ಕಾಶಿನಾಥನು ಮೊಗಡಿಸದಿರಾ ಭೋಗಿದೇವಯ್ಯಾ ೫

ಮಾಯಿದೇವಿ ನಿರಂಜನದ ಧವ
ಳಾಯಿ ಹುಗ್ಗಿಯ ದುಗ್ಗಳವ್ವೆ ಶಿ
ವಾಯಿ ತುಪ್ಪದ ನಾಗಲಾಯಿ ಪುರಾತ ರೆಬ್ಬವ್ವೆ
ಸಾಯಿದೇವಿಯು ಚಿಕ್ಕಲಿಗೆ [೪]ಮಾ
ದಾಯಿ[೫] ಪರ್ಬದ ಪರ್ಬಿ ತಾಯ್ಮಂ[೬]
ಗಾಯಿ ಗಣದಾಸವ್ವೆ ನೇಮದ ವೀರಸಂಗವ್ವೆ ೬

ಸೋ[೭]ವರಿಸಿ ದಂಡಿಗೆಯ ಗುಡ್ಡಾ
ದೇವಿ ಪೋಚಲದೇವಿ ಮಾಚಲ
ದೇವಿ ಕಾಚಲದೇವಿ ಐಚಲದೇವಿ ಶಿವದೇವಿ
ದೇವಲಾಂಬಿಕೆ ಕೇಳಿಕೆಯ ಮಹ
ದೇವಿ ಗಂಗಾದೇವಿ ಲಿಂಗಾ
ದೇವಿ ಬಾಚಲದೇವಿ ಬೊಂತಾದೇವಿ ಕಲಿದೇವಿ ೭

೧ಬೇ (ನ). ೨ಕ (ನ). ೩ಟ್ಟಿ (ಅ). ೪–೫ ಮುದ್ದಾಯಿ (ಬ); ನಾಗಾಯಿ (ಧ, ಪ). ೬ನಿಂ (ಅ, ಚ). ೭ಸಾ (ಡಾ).

CC-0. Jangamwadi Math Collection. Digitized by eGangotri

ಸೇ[೧]ವಕದ ಗೌರವ್ವೆ ಕೇತಲ
ದೇವಿ ವೀರಲದೇವಿ ಕಾಮಲ
ದೇವಿ ಚೋಳಾದೇವಿ ಚಾಕಲದೇವಿ ಮಹದೇವಿ
ಹೂವಿನಲ್ಲಮದೇವಿ ಚಿಕ್ಕಾ
ದೇವಿ ಕಮಳಾದೇವಿ ವಿಮಳಾ
ದೇವಿ ರಾಮಾದೇವಿ ಸಿದ್ಧಾದೇವಿ ಉಮೆದೇವಿ ೮

ನೀವು ಬಂದೀ[೨] ಮೇಲುಪಂತಿಯ
ತಾವಿನಲಿ ಕುಳ್ಳಿರೆ ಎನುತ ಚೇ
ತೋವಿಕಾಸದೊಳತಿ ಚತುರಮನ್ಯೋನ್ಯಸಲ್ಲಾಪ
ಭಾವನೋಕ್ತಿಗಳಿಂಪು ಮಿಗೆ ನಯ
ವೋವಿ ಮಾತಾಡಿಸುತವೆಂದುಂ
ನಾವಱಿಯೆವೀ ಭಕ್ತಜನಮಂಡಳಿಯ ಸಂದಣಿಯ ೯

ಬಸವರಾಜನೆ ಬಲ್ಲನೆನುತಂ
ಬಸುಱು ತುಂಬಿಸುವನ್ನಕಾರೋ
ಗಿಸು ಸಮಾಧಾನದೊಳೆನುತ ನಾಲಗೆಯನಾಡಿಸುತ
ನುಸುಳದಿರು ತಂದಪೆನೊಡಲನು
ಬ್ಬಿಸದೆ ನೀನುಟ್ಟುದನೆ ಸಡಿಲಿಸಿ
ಮುಸುಡನುಱುಗಿಸದೀಂಟು ಮುಂದಿಱಿದಿದ್ದು ದಿದೆಯೆನುತ ೧೦

ಗೆಲ್ಲ ಸೋಲವದೇಕೆ ಸೇವಿಸು
ಮೆಲ್ಲಮೆಲ್ಲನೆ ನೀವೆನುತ್ತಂ
ಡೊಳ್ಳುಹೊಟ್ಟೆಗೆ ಸಾಲದಿನ್ನುಂ ಕೊಂಡು ಬಾ ಎನುತ
ಬಲ್ಲೆ ನೀನೆನ್ನನುವನೆನುತಂ
ಮೆಳ್ಳಿಸದಿರಾ ಕಣ್ಣನೆನುತಿದ
ನೊಲ್ಲೆನೆನ್ನೆನು ತಂದೆಱಿದುನೋಡೆನ್ನನಿಂದೆನುತ ೧೧

---

೧ ಸಾ (ಥ). ೨ ದಿರಿ (ಕ).

CC-0. Jangamwadi Math Collection. Digitized by eGangotri

ಶರಣ ಮೆಯ್ಮರಿಯದಿರುದರವು
ಬ್ಬರಿಸಿ ಬೆಳೆದಹುದೆನುತವೆನ್ನ ಜ
ತರಕೆ ಬೆಳೆವುದು ಸಹಜವದು ತಂದೆಱಿವುದೆನುತಾತ
ಶರಸಿಗೇಱಿತ್ತಯ್ಯಯೆನುತೋ
ಕರಿಸದಾರೋಗಿಪೆನು ನಿನ್ನಯ
ಪರಿಯನಱಿದೆನಲಾ ಎನುತ ಮುಂದಿರಿಸಿ ನೋಡೆನುತ ೧೨

ತಲೆಯನಲುಗಿಸಲಾಯಿತಯ್ಯಾ
ಭಲರೆ ಭಲರೇ ತಂದೆಯೆನುತ
ಗ್ಗಳಿಸೆ ನೀವೆನ್ನೊಡನೆ ವಾದವ ಹೋಗಬಿಡೆನೆನುತ
ಒಲಿವನಿತನಾರೋಗಿಸಿದಪೆಂ
ನಿಲಿಸಲಾಪೈ ಎನ್ನನೆನುತಂ
ಬಲುಹಲಾ ನೀನಿದಕೆ ನಾನೇನಱಿಯೆನೇ ಎನುತ ೧೩

ನಿನಗೆ ಕರಮಾಸ್ವಾದವೇಕೈ
ಎನುತ ನಿನ್ನೊಳು ಸವೆದುದೇನೆಂ
ದೆನುತ ತಲೆಯಲಿ ಬಾಯಿ ಮೂಡಿರ್ದಹುದಲಾ ಎನುತ
ಮನದೊಳಿದ್ದುದ ನೆಹಗೆ ಹೇಳಿದೆ
ಯೆನುತ ಪಡೆದಾ ದೊಡ್ಡ ಹೊಟ್ಟೆಯ
ನೆನುತ ಬಡನುಡಿಯಂ ನುಡಿವರೇ ಭಕ್ತರೊಳಗೆನುತ ೧೪

ಏಸನೀಂಟಿದಡೆನ್ನ ಬಳಲಿಕೆ
ಸೂಸದೆನುತಂ ಕೊಪ್ಪರಿಗೆಗಳಿ
ಗೋಸರಿಸದುಲ್ಲಂಘಿಸುತ ಕೈಕೊಳ್ಳಿ ನೀವೆನುತ
ಲೇಸು ಲೇಸೀ ಮಯ್ಯ ಸುರಿಯಲು
ಬೇಸಱಿನು ತಾನೆನುತ ಮೆಲ್ಲನೆ
ಮೀಸೆಗಳನಲುಗಿಸುತವಾರೋಗಿಸಿದಪೈ ಎನುತ ೧೫

೧–೨ ನೆಂತು (ತ. ಥ).

CC-0. Jangamwadi Math Collection. Digitized by eGangotri

ಚೆಲ್ಲವಾಡದೆ ಬನ್ನಿಯೆನುತಂ
ನಲ್ಲೊ ಎನ್ನಂ ಕರೆದೆ ನೀನೆನು
ತಿಲ್ಲಿಗೇತಕೆ ತಂದೆ ತಾರದಿರೆನುತ ನಿಮಗಳ್ಳ
ಆಲ್ಲಿ ಮೇಲಣ ಪಂತಿಗೊಯ್ದಪೆ
ನಲ್ಲದುರವಣಿಸದಿರೆನುತ ನಗೆ
ಯಲ್ಲ ನಾನೊಂದೆರಡು ತಂಬುಗೆ ತುಂಬಿ ತಹೆನೆನುತ ೧೬

ತುಂಬಿ ತುಳುಕಾಡಿದಪ್ಪುದಯ್ಯನ
ಲಂಬ ಜಠರವಿದೆನುತ ಮಾಣೇ
ನೆಂಬೆನೈ ನಿಮ್ಮಾಣೆಯಿದೆ ತಲೆಮುಳುಗಲೆಱೆದೆನುತ
ನಂಬದಿದ್ದಡೆ ನೋಡು ಬಱೆದೇ
ಡಂಬು ಬೇಡೆನುತೇಸನೀಂಟಿದ
ಡಿಂಬುಗೊಂಬುದು ಶರಣನುದರಕೆ ತುಷ್ಟಿಯಿಲ್ಲೆನುತ ೧೭

ಆನಘ ಪರಿಯಾಣಕ್ಕೆ ಮೇಲ್ವಾ
ಯ್ತೆನುತ ಪಿರಿಪಿರಿದಾಗಿ ಗಡಣಿಸಿ
ದೆನುತ ಉಗಿಸದಿರುಗಿಸಿದಡೆ ಬಸವಣ್ಣಗಂತಿರಲಿ
ಎನುತ ಒಳಗಿಹ ಕೊಪ್ಪರಿಗೆಗಳ
ನನಿತುಮಂ ತರಹೇಳು ಬೇಗದೊ
ಳೆನುತ ಹರ ಹರ ನಿಮಗದೇತಕೆ ಮಡಗಿದಪೆವೆನುತ ೧೮

ತಂದು ಗಡಣಿಸಲೀಂಟುತಂ ಗಣ
ವೃಂದವೆಯ್ತಂದವರವರಿಗಾ
ನಂದಿಸುತ ಶಿವಗರ್ಪಿಸುತ್ತಂ ಶಿವ ಶಿವಾ ಎನುತ
ಮುಂದೆಸೆಯೊಳವಧಾನ ಚಿತ್ತದೊ
ಳೊಂದಿಯಾರೋಗಿಸುತ ಜುಟ್ಟಿಜು
ಟ್ಟಿಂದು ಸುರಿವುತ ಘಟ್ಟಿಘಟ್ಟಿನೆ ತೇಗುತೊಲೆವುತ್ತ ೧೯

೧–೨ ದಡೆ (ಪ, ಬ, ಮ). ೩ ನ (ಮ). ೪ ಗೆ (ಬ, ಮ).

CC-0. Jangamwadi Math Collection. Digitized by eGangotri

ನೀಡಿಕೊಳುತಂ ಕಾಲ್ಗಳಂ ನಸು
ನೋಡುತಂ ನಿಗುರುತ್ತ ನಿಲುಕುತ
ಏಡಿಸುತವಕ್ಕುಳಿಸುತಂ ಮುಕ್ಕುಳಿಸುತುರ್ಬುತ್ತ
ಬೇಡುತಾರೋಗಿಸುತ ಶಿವರತಿ
ಮೂಡುತಂ ಸುಖಿಶರಧಿಯೊಳಗೋ
ಲಾಡುತಂ ಸೊಕ್ಕುತ ಸೊಗಸುತಂ ಸರಸವಾಡುತ್ತ ೨೦

ಕಂಗಳರೆ ಮುಗಿವುತ್ತ ನೆಱಿ ಧೈ
ರ್ಯಂಗಳೊಂದುತ ಗುಳುಗುಳಕ್ಕನೆ
ನುಂಗುತಂ ಮದಿಸುತ್ತ ಕೊರಳುದ್ದಕ್ಕೆ ಈಂಟುತ್ತ
ಆಂಗವಂ ಪೆಚ್ಚಿಸುತ ಸಲ್ಲಾ
ಪಂಗಳಿಂ ಮಾತಾಡಿಸುತ್ತಂ
ಲಿಂಗವಂತರು ಕೂಡಿ ನಲವೇಱುತ್ತ ತಮತಮಗೆ ೨೧

ಬಾಗುತಂ ನೆಗೆವುತ್ತ ಮಱಿವು
ತ್ಯಾಗಳಱಿವುತ ತನು ಬೆವಱಿತಾ
ರೋಗಿಸುತ ಮುಂದಿರ್ದ ಪರಿಯಾಣಂಗಳಂ ತೆಗೆದು
ಕೈಗಳಿಂದಳವಡಿಸಿಕೊಳುತನು
ರಾಗಿಸುತ ಬೆಱಿವುತ್ತ ನೋಡು
ತ್ಯಾಗುಳಿಸುತೆದ್ದೊಂದೆ ಕಾಲಲಿ ಡೊಂಕಿ ನಡೆವುತ್ತ ೨೨

ಒಬ್ಬರೊಬ್ಬರ ಭಾಜನಂಗಳ
ನೊಬ್ಬರೊಬ್ಬರು ತೆಗೆದುಕೊಳುತೊ
ಬ್ಬೊಬ್ಬರೀಸಿಕೊಳುತ್ತ ಕೈನೀಡಿ ಪ್ರಸಾದವನು
ಒಬ್ಬರೊಬ್ಬರ ಕೂಡೆ ಕುಳ್ಳಿ
ರ್ದೊಬ್ಬರೊಬ್ಬರು ಸೇವಿಸುತ ತಂ
ದೊಬ್ಬರೊಬ್ಬರಿಗೀಯಲೊಬ್ಬೊಬ್ಬರು [೧]ಕಳೆದು[೨]ಕೊಳುತ ೨೩

೧–೨ ತೆಗೆದು (ಬ).

CC-0. Jangamwadi Math Collection. Digitized by eGangotri

ಹೊಡವಡುತ ತರ್ಕೈಸುತಂ ಕೈ
ವಿಡಿದು ಕುಣಿವುತ ತಣಿವುತಂ ಬೊ
ಬ್ಬಿಡುತ ಹಾಱುತ ಚಪ್ಪಳಿಕ್ಕುತ ಪಾಡುತಾಡುತ್ತ
ಮೃಡಗಣಾವಳಿ ಈ ಪ್ರಕಾರದೊ
ಳುಡುಗದತಿ ವಿಕ್ರಮ ವಿನೋದದೊ
ಳಡರ್ದು ೧ಪಟು೨ವಿಷಕೇಳಿಯಂ ಸಲಿಸುತ್ತಮಿರಲೊಡನೆ ೨೪

ಶರಣಮಣಿಗಣವಾರಿನಿಧಿ ಬಸ
ವರಸನಾ ಸಮಯದಲಿ ಚಂಡೇ
ಶ್ವರವರದನವಧರಿಸಿದಾ ಶೇಷಪ್ರಸಾದವನು
ಕರೆದು ಜನಪನನಾ ನೃಪನ ವಿ
ಸ್ತರ ಸಮಸ್ತನಿಯೋಗದವರನು
ಬರಿಸಿ ಕರಮಾದರಿಸಿ ಪಂತಿಗಳಾಗಿ ಕುಳ್ಳಿರಿಸಿ ೨೫

ಅರಸರಿಗೆ ತಂದೆಱಿದು ಮೊದಲಲಿ
ಅರಸಿಯರಿಗೆಱಿದಾ ವಿಳಾಸಿನಿ
ಯರಿಗೆಱಿದು ದಾದಿಯರಿಗೆಱಿದು ಕುಮಾರಕರ್ಗೆಱಿದು
ತರಿಸಿ ಸಾವಂತರಿಗೆಱಿದು ಶಿ
ಷ್ಟರಿಗೆಱಿದು ನಂಟರಿಗೆಱಿದು ಬಂ
ಟರಿಗೆಱಿದು ಪಡಪಿಗರಿಗೆಱಿದು ಪಸಾಯಿತರಿಗೆಱಿದು ೨೬

ದಂಡನಾಥರ್ಗೆಱಿದು ಮಾನ್ಯರ
ತಂಡತಂಡಕ್ಕೆಱಿದು ಕರಣಿಕ
ಮಂಡಳೀಕರ್ಗೆಱಿದು ಕಟ್ಟಿಗೆಕಾಱಿರಿಂಗೆಱಿದು
ಬಂಡಿಬೋವರ್ಗೆಱಿದು ನಾಯಕ
ಮಂಡಳೀಕರ್ಗೆಱಿದು ನಾಟಕ
ಪಂಡಿತರಿಗೆಱಿದಾಲವಟ್ಟವನಿಕ್ಕುವರಿಗೆಱಿದು ೨೭

೧–೨ ವಿಷ (ಪ).

CC-0. Jangamwadi Math Collection. Digitized by eGangotri

ದಾಸವಾಸಿಜನಕ್ಕೆಱಿದು ವಿ
ಶ್ವಾಸಿಗಳಿಗಾರ್ಯರಿಗೆಱಿದು ಸಾ
ವಾಸಿಗಳಿಗೆಱಿದಂಗರಕ್ಷಕ[ಗೆ]ರಿಂಗೆಱಿದು ಮತ್ತೆ[ಪ]
ಭೂಸುರಾವಳಿಗೆಱಿದುಳಿದ ಪರ
ದೇಶಿಗಳಿಗೆಲ್ಲರಿಗೆಱಿದು ಪರಿ
ಹಾಸಕರಿಗೆಱಿದಶ್ವಗಜ ಸಾಹಣಿಗಳಿಗೆ ಎಱಿದು ೪೮

ಹಳೆಯರಿಗೆ ಕೊಟ್ಟಿಗೆಯವರಿಗೆಡ
ಬಳ[ಸಿ]ರಿಗೆಯು ಬಾಣಸಿಗರಿಗೆ[೨] ಕವಿ
ಗಳಿಗೆ ಪಾಠಕಜನಕೆ ದೈವಜ್ಞರಿಗೆ ವೈದ್ಯರಿಗೆ
ಲಲಿತ ತತವಿತತಾದಿ ವಾದ್ಯಾ
ಕಲಿತ ಭರತಜ್ಞರಿಗೆ ಗಾಯಕ
ಕುಲಕೆ [೩]ಕೊಠ್ಠಾರಿ[೪]ಗಳಿಗೆಯು ಭಂಡಾರಿಗಳಿಗೆಱಿದು ೪೯

ಆ ಗರಳಮಂ ಬಸವನಱಿಳ ನಿ
ಯೋಗಿಗಳಿಗೆಱಿಯಲ್ಕವರ್ಗಳ
ಭಾಗಕದು ಪಾಲ್ತುಪ್ಪವಾಗಿರೆ ಮತ್ತೆ ಭಂಡಾರಿ
ನಾಗಭೂಷಣನಂ ಹರನ ಪು
ನ್ನಾಗನಂ ತನ್ನಿ ಪ್ರಕಟದಿಂ
ನಾಗಮದಹರನೆನಿಪ ನಾಗವರೇಣ್ಯನಂ [ತನ್ನಿ][೫] ೫೦

ಸಾಮಜೇಂದ್ರನನಿಭವರನನು
ದ್ದಾಮರದನಲಲಾಮನಂ ಸಂ
ಗ್ರಾಮವಿಜಯದ್ವಿರದನಂ ವೇದಂಡಮಂಡನನ
ಭೀಮವಿಕ್ರಮ ಸಿಂಧುರಮನಭಿ
ರಾಮದಾನಗಜೇಶನಂ ಸು
ತ್ರಾಮದಂತಾವಳ ತಿರಸ್ಕರ ದಂತಿಯಂ ತನ್ನಿ ೫೧

೧–೨ ಬಾಣಸಿಗರ್ಗೆರೆದು (ಕ, ಚ, ತ, ಥ, ನ). ೩–೪ದವರ್ಗೆಱಿದೆಱಿದು ಸಲೆ (ತ, ಥ, ನ). ೫–೬ ಕೋಠಾರಿ (ಮ, ಕ). ೭–೮ ಕಂಡು (ಕ); ತಾಗಿ (ಚ).

CC-0. Jangamwadi Math Collection. Digitized by eGangotri

ವಾರಣಾಗ್ರಣಿಯಂ ಮಹಾಸ್ತ್ರಂ
ಭೇರಮೋತ್ತಮನಂ ನಖಾಯುಧ
ವೈರಿಯಂ [೧]ಮರ್ದ್ದಾರಿ[೨] ಕುಂಜರರಾಜನಂ ತನ್ನಿ
ಸೂರತಾನೇಕಪನನಸಮಾ
ವಾರಿತದ್ವಿಪಮುಖ್ಯನಂ ಕರಿ
ವೀರಪುಂಗವನಂ ಮತಂಗಜದೇವನಂ ತನ್ನಿ ೩೨

ನೀಲಕಂಠಪ್ರಿಯನನತ್ಯಾ
ಭೀಲ ಕುಂಭಿಯ[೩]ನೀಶ್ವರಾರ್ತಿ[೪] ವಿ
ಶಾಲ [೫]ಪಟು[೬]ಕರಟಿಯನಭವ ಶೃಂಗಾರಿಯಂ ತನ್ನಿ
ಫಾಳಲೋಚನ ವಾಹನೋಗ್ರ
ಬ್ಯಾಲನಂ ತನ್ನಿ ಪ್ರಬಲ ಶುಂ
ಡಾಲವಿಭುವಂ ತನ್ನಿ ತನ್ನಿ ಸುಭದ್ರಹಸ್ತಿಯನು ೩೩

ಅಪ್ರತಿಮನಂ ತನ್ನಿ ಜಂಗಮ
ಸುಪ್ರಸಾದಿಯನರಿಸಮರ ಸರ
ಸಿಪ್ರಹಾರಿಯನಸಿತಗಳ ಗಣನಾಥನಂ ತನ್ನಿ
ಸುಪ್ರತೀಕನನಧಿಕ ಸನ್ನಾ
ಹಪ್ರತಾಪನನಸಮ ರುದ್ರನಿ
ಜ ಪ್ರತಿಮನಂ ತನ್ನಿ ಮಾವಂತರಿರ ನೀವೆನುತ ೩೪

ಬಸವರಸನಿಂತೊಂದನೊಂದಂ
ಪೆಸರುಗೊಳುತಿವು ಮೊದಲೆನಿಪ ಗಜ
ವಿಸರಮಂ ಕ್ಷಣದೊಳು ತರಿಸಿ ಮತ್ತಂ ನಿರೂಪಿಸಿದ
ಕುಸುಮಶ[೭]ರನಂ ತನ್ನಿ ಹಯಸಾ
ಹಸದಿನಪನಂ ತನ್ನಿ ಸಮರೋ
ಲ್ಲಸನ ಹರಿಯಂ ತನ್ನಿ ತೇಜದ ತೇಜಿಯಂ ತನ್ನಿ ೩೫

೧–೨ ಮರ್ದಂತ (ತ, ಥ, ನ). ೩–೪ ವಿಶ್ವವಾರ್ಧಿ (ತ, ಥ, ನ). ೫–೬ ಮರ (ಕ, ಚ, ಮ); ಮದ (ತ, ಥ, ನ). ೭ ಸ (ಡಾ); ವ (ತ, ನ).

CC-0. Jangamwadi Math Collection. Digitized by eGangotri

ಸನ್ನುತೋನ್ನತ ವಾಜಿವರನಂ
ತನ್ನಿ ದೇವ ಮಹಾತುರಗಮಂ
ತನ್ನಿ ವಿಷಕಂಧರನ ಬಿರುದಿನ ವಾಹನವ ತನ್ನಿ
ಉನ್ನತಾಸಮಸಪ್ತಿವರನಂ
ತನ್ನಿ ಘೋಟಕರಾಜನಿಧಿಯಂ
ತನ್ನಿ ಜವಸತ್ವಾಧಿಕಾಶ್ವಶ್ರೇಷ್ಠನಂ ತನ್ನಿ ೩೬

ಪನ್ನಗೇಂದ್ರಾಭರಣದೋರಣ
ಮನ್ನಿಸಿತಜಯ ಸೈಂಧವನನಾ
ಪನ್ನಗೇಂದ್ರಪ್ರಹರಮಂ ಕಾಂಬೋಜಿಯಂ ತನ್ನಿ
ಚಿನ್ನಿಧಿಯನನ್ಯಾಯಕಾಜಿರ
ಬೆನ್ನ ಚಿಮ್ಮಟಿಗೆಯನತುಳಿತಾ
ಭಿನ್ನ ಬಲಯುತನಂ ಮಯೂರಮುಖಿಮುಕುರನ ತನ್ನಿ ೩೭

ಸರ್ವಮಂಗಳಸಿದ್ಧಿಯಂ ಗಂ
ಧರ್ವವರನಂ ತನ್ನಿ ಶಂಕರ
ನಿರ್ವಹನ ದೃಢತೀವ್ರ[೧]ಪ್ರಥುಲಾಶ್ವಂ[೨]ಗಳಂ ತನ್ನಿ
ಪೂರ್ವದಿಗಿನೋಚ್ಚೈಶ್ರವೋನ್ಮದ
ಗರ್ವನಿರ್ದಳನಂ ತ್ವರಿತನಿರ
ವಾರ್ವಚಯಮಂ ತನ್ನಿ ಘನಚಿತ್ರಾಂಗನಂ ತನ್ನಿ ೩೮

ವಾಯುವೇಗಿಯನತುಳ ಬಲಿಯನ
ಜೇಯಮುಖಿನಂ ತನ್ನಿ ಭಕ್ತಸ
ಹಾಯಿಯಂ ಶಿವಧರ್ಮಕೀರ್ತಿವಿಧೇಯನಂ ತನ್ನಿ
ಕಾಯಪುಷ್ಟಿಯನೂರ್ಜಿತೆಯನಿಂ
ದ್ರಾಯುಧನನುಗ್ರಾಕ್ಷಕರ ಕೌ
ಕ್ಷೇಯವರನಂ ತನ್ನಿ ಅತಿ ಧೌ[೩]ರೇಯನಂ ತನ್ನಿ ೩೯

೧–೨ ಪೃಥುರಥ್ಯಂ (ಕ, ಚ, ತ, ಥ, ನ). ೩ ದಾ (ಚ).

CC-0. Jangamwadi Math Collection. Digitized by eGangotri

ಜನ್ನನಂ ನೀಲನನಳಗನಂ
ತನ್ನಿ ಕತ್ತಳ ವೆೌಪಳಿಗನಂ
ತನ್ನಿ ಜಂಬಿನನಾಕಯಿರನಂ ತನ್ನಿ ಚೇರನನು
ತನ್ನಿ ಬೊಲ್ಲನ ಕೂಡೆ ಮಂಗಳ
ನನ್ನಿರದೆ ಕೊಂಗನನಸಮನಂ
ತನ್ನಿ ಬೋರನನಿರಿಸದಿರಿ ವಾಹಕರಿರಾ ನೀವು ೪೦

ನಯದ ಜವಸಮುದಯದ ಶೋಭನ
ಮಯದ ಸಂಗರಜಯದ ದೃಢವಿ
ಸ್ಮಯದ ಜಗದತಿಶಯದ ರಾಜಾನ್ವಯದ ನಿಶ್ಚಯದ
ರಿಯದ ಸತ್ಯಾಶ್ರಯದ ರೂಪ
ಕ್ಷಯದ ಧುರನಿರ್ಭಯದ ಲಿಂಗ
ಪ್ರಿಯದ ಪುಣ್ಯನಿಳಯದ ಶಿವಪಯನಿಚಯಮಂ ತನ್ನಿ ೪೧

ಒಂದನೊಂದಂ ವಿವರಿಸುತ ಪಲ
ವಂದದಿವು ಮೊದಲಾದ ಘೋಟಕ
ವೃಂದವಂ ಬಸವಯ್ಯನಾಕ್ಷಣಮಾತ್ರದೊಳು ತರಿಸಿ
ಪೆಂದದಾನೆಗಳಿಗೆ ಪಯಾಳಿಗೆ
ತಂದು ತಂದೆಱಿಯಲು ವಿಷಂ ಸಲೆ
ಸಂದು ಸವೆಯಲು ಚಂಡಿ ಕಬ್ಬಿಲಪಡೆ ನಡುಗುತಿರಲು ೪೨

ಹರನ ಭಕ್ತರು ಮೆಚ್ಚಿ ಪೊಗಳಲು
ವರ ತ್ರಿಗಣಾಂಘ್ರಿಗುಣಿಪ್ರಸಾದಾ
ಭರಿತ ರಸಘನವೃಷ್ಟಿ ಬಸವನ ಮೇಲೆ ಸುರಿಯಲ್ಕೆ
ನೆರೆದು ನಭದೊಳು ರುದ್ರರೀಕ್ಷಿಸು
ತಿರಲು ಸುರದುಂದುಭಿಗಳುಲಿಯಲು
ಅರಸನಚ್ಚರಿವಟ್ಟು ನಮಿಸುಲು ನರರು ಜಯವಿಡಲು ೪೩

೧ಜ (ಧ, ನ). ೨ದ (ಅ, ಚ, ಧ, ಪ, ಬ). ೩–೪ ಗಣಾತಿ ಘೃಣಾ (ತ); ಗಣಂ ತ್ರಿಗುಣ (ಧ, ನ, ಪ).

CC-0. Jangamwadi Math Collection. Digitized by eGangotri

ಭವಲತಾಸಿತಧಾತ್ರ ಪರಮೋ
ತ್ಸವ ಪವಿತ್ರ ಶಿವೈಕ್ಯಗೋತ್ರ
ಪ್ರವಿಮಳೋರುಚರಿತ್ರ ಸಜ್ಜನಮೈತ್ರ [೧]ಶುಭ[೨]ಗಾತ್ರ
ಶಿವಚಿದಂಚಿತನೇತ್ರ ದುಃಖಾ
ರ್ಣವವಹಿತ್ರ ಮಹೇಶಪುತ್ರ
ತ್ರಿವಿಧಭಕ್ತಿಕಳತ್ರ ಶರಣಾನರ್ಘ್ಯಮಣಿಸೂತ್ರ ೪೪

ಶತ್ರು[೩]ನಾಶ[೪]ಖನಿತ್ರಕರುಣಾ
ಪಾತ್ರ ದುರಿತಾಮಿತ್ರ ಭಕ್ತ
ಕ್ಷೇತ್ರ ಜಂಗಮಸುಪ್ರಸಾದಾಮೈತ್ರ ಪರವಾದಿ
ಚೈತ್ರ ಸುಖವಿಸ್ತೋತ್ರಧರ್ಮ
ಕ್ಷೋತ್ರ ನಿತ್ಯಜಗತ್ರಯಾದಿ ವಿ
ಚಿತ್ರಕೀರ್ತಿಕ್ಷಾತ್ರ ಸಂತತ ಶಿವಗಣಚ್ಛತ್ರ ೪೫

ಮತಿಯೊ[೪]ಳವಗತವಾಗಿಹವು ನಿನ
ಗತಿಶಯಮೆ ವೇದಂಗಳೆಲ್ಲಂ
ಶ್ರುತಿಯರಿರ್ಮಿತ್ರಂ ವಿಷಂ ಪಥ್ಯವೆನುತಿರಲಾಗಿ
ನುತಿಸಲಳವೇ ನಿನ್ನ ಮಹಿಮೋ
ನ್ನತಿಯನೆಮಗೆಲೆ ಬಸವ ತಂದೇ
ವಿತತ ಸದ್ಭಕ್ತಿಪ್ರವರ್ಧನ ಭಲರೆ ಎಮ್ಮಯ್ಯ ೪೬

ಭಲರೆ ಭಲರೇ ಲೋಕಪಾವನ
ಭಲರೆ ನಂದೀಶಪ್ರಭಾವನ
ಕಲಿಮಲಾಪಹ ಭಾಪುರೇ ಭಾಪು[೫]ಜ್ವಲಿತ[೬]ಕೀರ್ತಿ
ಅಲಘು ಧೀರೋದ್ಧಾರ ಭಾಪುರೆ
ಮಲಹರಪ್ರತಿಬಿಂಬಮೂರ್ತಿಯೆ
ಇಳೆಯೊಳೆಣೆಸಲು ತೋಱಿಲೊಳರೇ ಸರಿ ನಿನಗೆ ಬಸವ ೪೭

೧–೨ ಶಿವ (ಸ). ೩–೪ ಶಾಖಿ (ಡಾ, ಧ, ಪ). ೫ ಗ (ಡಾ, ಬ). ೬–೭ ಪ್ರಜ್ವಲಿತ (ಕ, ಚ).

CC-0. Jangamwadi Math Collection. Digitized by eGangotri

ಹರನು ಲೋಕಹಿತಾರ್ಥಮಾಗಲು
ಗರಳವಂ ನೆಱಿಸಿನುಂಗಲಮ್ಮಿದೆ
ಕೊರಳೊಳಂ ಧರಿಸಿದನಲಾ ತತ್ ಶಂಕರನ ಮಹಿಮೆ
ಒರೆಯಲೆನಿಸಿದು ಕಾಲಕೂಟಕೆ
ಕರಮದುಗ್ರವೆನಿಪ್ಪ ವಿಷವಂ
ಸರಕುಮಾಡನು ಅಮಮ ಬಸವಣ ದಂಡನಾಯಕನು ೪೮

ಇಂದು ಭಕ್ತಿಹಿತಾರ್ಥಮಾಗ
ಲ್ಕೆಂದು ತಾ ನಿರ್ವಂಚಕದೊಳೊಲ
ವೊಂದಿ ಆರೋಗಿಸಿದನಾಗಳಪೂರಮಾಗಿರಲು
ಆಂದಮೃತವಂ ಕುಡಿದುವಳಮರರು
ಸಂದಿಹರು ಪ್ರಳಯಕ್ಕೆ ಬಸವನ
ಮುಂದ ವಿಷಮಂ ಪೀರ್ದಸಮ ದಿವ್ಯಾಂಗನಾದನಲಾ ೪೯

ಎನುತ ಲೋಕವದೆಯ್ದಿಯದುಭುತ
ಜನಿತಮಾನಸರಾಗಿ ಪೊಗಳಲು
ತನುಗಳೊಳು ಬೆದಬೆದನೆ ಕುದಿವುತ ಕಬ್ಬಿಲರ ಬಳಗ
ವಿನುತಿಸುತ ಸೈಗೆಡೆದೆಡೆಗೆಡೆಗೆ
ವಿನಮಿಸುತ ಬಸವಯ್ಯ ಅಭಯಾ
ಘನ ದಯಾನಂಬುಧಿಯಭಯಮಭಯವಮಾತ್ಮಶೇಖರನೆ ೫೦

ಎಂದುವುಂ ನಿಮ್ಮಡಿಯ ಸರಿಯೇ
ತಂದೆ ತಮ್ಮಂ ಪರಿಭವಿಸುವುದಿ
ದೊಂದು ಶೌರ್ಯಮೆ ನಿಮಗೆ ಬಸವಪ್ರಭುವೆ ಚಿತ್ತೈಸು
ಮುಂದೆ ದುರ್ಜನಮಿತ್ರನಾದುದ
ಱಿಂದ ಸಜ್ಜನರೊಡನೆ ಹಗೆ ಲೇ
ಸೆಂದುದಲ್ಲಾ ಇದು ನಿಮಿತ್ತಂ ಕಾಯ್ದು ಸಲಹೆಮ್ಮಿ ೫೧

೧–೨ ಲಿಂ (ಪ). ೩–೪ ಸೇವಿಸ (ತ, ಥ, ನ). ೫ ನುತ (ದ, ಪ).

CC-0. Jangamwadi Math Collection. Digitized by eGangotri

ನೀವು ದಿಕ್ಕಂ ದೆಸೆಯುಮವನಿಯೊ
ಳಾವನುಂಟಿನ್ನೆಮಗೆನುತ ನಾ
ನಾವಿಧದೊಳುಂ ಕೀರ್ತಿಸುವರಂ ನೋಡಿ ಕರುಣದಲಿ
ಓವಿ ಕಾಯ್ದನು ಶರಣುವೊಕ್ಕೊಡೆ
ತೀವಿದನು ಸ್ವಸಮಯದ ಮಹಿಮೆಯ
ನಾವೆಡೆಯೊಳುಂ ನೂಂಕಿದನು ವಾದಂಗಳಿಲ್ಲವನು ೫೨

ಬಿಲ್ಲಮೊತ್ತಿಕೆ ಈ ಪ್ರಸಾದಂ
ಸಲ್ಲದೆಂದನು ಇಂದು ಮೊದಲಾ
ಗಿಲ್ಲವೆಂದನು ಹರನ ಭಕ್ತರ್ಗಲ್ಲದುಳಿದರ್ಗೆ
ಎಲ್ಲೆಡೆಯೊಳುಂ ಮುಟ್ಟಬಾರದು
ಸೊಲ್ಲಲಿನ್ನೇನೆನುತ ಧರಣೀ
ವಲ್ಲಭಂ ಕೇಳುತ್ತಿರಲು ಹೇಳಿದನವಂದಿರಿಗೆ ೫೩

ತಳಿದನಿಳೆಯೊಳು ಭಕ್ತಿಬೀಜಮ
ನಳಿದನಾ ಕಬ್ಬಿಲರ ಹೆಂಪಂ
ಕಳಿದನನ್ಯಾಯಿಗಳ ಪಲ್ಲಂ ತಳಿದನುನ್ನತಿಯ
ತೊಳೆದನಘಮಲಪಂಕಮಂ ಸಲೆ
ಹಳಿದನಂಗವಿಕಾರಮಂ ತೊ
ತ್ತಳದುಳಿದನರಿನಳಿನವನಮಂ ಬಸವ ಕುಂಜರನು ೫೪

ಕಲಿಸಿದನು ಶಿವಧರ್ಮಪಂ ಮೂ
ದಲಿಸಿದನು ಬಿಜ್ಜಳನ ಸಭೆಯಲಿ
ಗೆಲಿಸಿದನು ತನ್ನಯ ಸಮಯವಂ ಪರರನೆಬ್ಬಟ್ಟಿ
ನಿಲಿಸಿದನು ತಾರ್ಕಿಕರ ನುಡಿಗಳ
ನೊಲಿಸಿದನು ತ್ರಿವಿಧಪ್ರಸಾದಕೆ
ನೆಲಸಿದನು ಸಮಯಭಕ್ತಿವರ್ಧನನಾಗಿ ಬಸವಯ್ಯ ೫೫

೧–೨ಕ್ಕೀ (ತ, ಥ, ನ). ೩–೪ ಶಿವ (ಅ, ಮ); ಸದ್ (ತ, ಥ, ನ).

CC-0. Jangamwadi Math Collection. Digitized by eGangotri

ಈಶನ ಪ್ರಾಸಾದ ವೀರ ಮ
ಹೇಶಭಕ್ತರಿಗಲ್ಲದಿಲೆಯೊಳು
ಮೀಸಲಿದು ಮಿಕ್ಕಿನ ಸಮಯಿಗಳಿಗೆಂದುವುಂ ಎನುತ
ಶಾಸನವ ಹೊಯಿಸಿದನು ಶಿವಭವ
ನಾ ಸಮಗ್ರದ ಮುಂದೆ ಶಿಲೆಯೊಳು
ದೇಶ ದೇಶಂ ಅಱಿಯೆ ಕಲ್ಯಾಣದೊಳಗಾ ಬಸವ ೫೬

ಐಸಱಿಲಿ ಬಿಜ್ಜಳನೃಪತಿಯು
ಲ್ಲಾಸದಿಂ ಭಂಡಾರಿ ಬಸವ ಸ
ಚೀಶನಂ ನವರತ್ನಮಯ ಸಿಂಹಾಸನದ ಮೇಲೆ
ಭಾಸುರಂ ಮಿಗೆ ಕುಳ್ಳಿರಿಸಿ ನಾ
ನಾ ಸಮಸ್ತಾಭರಣ ನವವ
ಸ್ತ್ರಾಸಮುಚ್ಚಯವಂ ಸಮರ್ಪಿಸಿ ನಮಿಸಿ ಕೈಮುಗಿದು ೫೭

ದೇವಭಕ್ತರು ಸಹಿತ ಪಂಚಮ
ಹಾ ವಿಸರ ವಾದ್ಯಧ್ವನಿಗಳುಱಿ
ತೀವಿ ಗಗನಂ ಬಿರಿಯಲಾ ಮಹಿಮೋನ್ನತಿಯೊಳಾಗ
ಭೂವರಂ ಬಿಜ್ಜಳನಸಮ ದಂ
ತಾವಳಮನೇಱಿಸಿ ಮುದದಿ ನಾ
ನಾ ವಿಭವದಿಂ ಮೆಱೆಸಿ ಕಳುಹಿದನಾ ಬಸವರಸನ ೫೮

ಅಂತು ಸಂಧಿ ೫೮ಕ್ಕಂ ಪದಗಳು ೩೪೬೦ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

CC-0. Jangamwadi Math Collection. Digitized by eGangotri

ಸಂಧಿ : ೫೯

*

ಸೂಚನೆ : ಶುದ್ಧಭಕ್ತಿಯನಱಿಪಿ ಮುನ್ನಿನ
ವೃದ್ಧಭಕ್ತರ ಚರಿತೆಗಳನೊರೆ
ದುದ್ಧರಿಸಿ ಜಗದೇವನಂ ಸಲಹಿದನು ಬಸವೇಶ ॥

ಪಾವನಾತ್ಮನು[೧] ಮತ್ತೆಯುಂ ಜಗ
ದೇವಮಂತ್ರಿ ವಿರೋಧಿಮದವಿ
ದ್ರಾವಣಂ ರುದ್ರಾವತಾರನು ವೀರಶೃಂಗಾರ
ಶೈವಸಮಯಸಮುದ್ಧರಣ ವಿ
ದ್ಯಾವಿಶಾರದನತಿ ವಿಭವದಿಂ
ಜೀವಿಸುತ ಶುಭಕಾರ್ಯಮಂ ಮಾಡುತ್ತಲೊಂದು ದಿನ ೧

ಬಂದು ಬಸವಾಮಾತ್ಯ ಭಕ್ತಾ
ನಂದಸಿಂಧುಶಶಾಂಕ ಸತ್ಪ್ರಿಯ
ದಿಂದೆ ತಂದ ವಿಭೂತಿಯಂ ಕೈಕೊಂಡು ನೀವೆನ್ನ
ಮಂದಿರದೊಳಾರೋಗಿಸಿದಡಾ
ನಿಂದು ಬದುಕುವೆನೆಂದಡೆಳಿನಗೆ
ಸಂಧಿಸಲು ಭಂಡಾರಿ ಜಗದೇವಣ್ಣನಂ ನೋಡಿ ೨

ಲಿಂಗ ಜಂಗಮ ಮಂಡಳಿಯ ಬರ
ವಿಂಗೆ ಸೈರಿಸಲಾಪೆಯಾದಡ
ಹಂಗೆ ಮಾಡಿಸು ಹೋಗೆನಲು ಭರದಿಂದ ಮನೆಗಯ್ದಿ
ಸಾಂಗಮಾಗಲು ವಿವಿಧ ಪಕ್ವಾ
ನ್ನಂಗಳಂ ಬಹುವಿಧ ಪದಪದಾ
ರ್ಥಂಗಳಂ ಮಿಗೆ ರಚಿಸಿಯಾ ಜಗದೇವನೈಸಱಿಲಿ ೩

---

* ರಾಗ : ಫಲಮಂಜರಿ (ಧ, ಪ); ಪಂತುವರಾಳಿ (ತ).
೧ಕ (ಥ).

CC-0. Jangamwadi Math Collection. Digitized by eGangotri

ಕರಮೆಸೆದು ಬಸವರಸನಿಂತವ
ಸರಿಸಿ ಬಾರದ ಮುನ್ನ ತಾನಾ
ಚರಿಸಿದಪೆ ನಿಯಮಾಭ್ಯುದೈಕವನೆನುತ ಸಂಭ್ರಮಿಸಿ
ಸರಸರನೆ ನೆಲನಲ್ಲಿ ಸಗಣಪ
ತರಿಸಿ ಮಂಡಲವಾಗಿ ಸಾರಿಸಿ
ಪರಮ ಭಕ್ತಿಯನುಳಿದು ಪಾರ್ಬರ ಕಾಲ್ಗಳಂ ತೊಳೆಯೆ ೪

ಪರಿಚರರ ಕೈಯಲಿ ಬಸವನೀ
ಪರಿಯನಱಿದಾಗ್ರಹಿಸಿ ಕಟ್ಟಾ
ಸುರದೊಳಲ್ಲಿಗೆ ಹೋಗಲೊಲ್ಲದೆ ತಾನಿರುತ್ತಿರಲು
ಭರದೊಳಿತ್ತಲು ಮತ್ತೆ ಜಗದೇ
ವರಸನೆಯ್ತರೆ ಮುಂದೆ ಕಾಣುತ
ತೆರೆಯನಿಕ್ಕಿಸಿ ಕೋಪಪಹ್ನಿಯ ಕಿಡಿಯನುಗುಳುತ್ತ ೫

ಬಾರದಿರು ನೀಂ ಪ್ರಗದಿರೆಲೊ ಸಂ
ಸಾರಿ ಜಂಗಮಲಿಂಗಭಕ್ತಿಗೆ
ಮೂರವಾದೆಯೊ ಹೋಗು ಹೋಗೆಲೊ ಭಕ್ತರಿಗೆ ಹೊಱಿಗು
ವೀರಶೈವಾಚಾರಧರ್ಮಾ
ಪ್ತಾರಸಂಗತಸಾರಭಕ್ತಿವಿ
ಚಾರಭಾವನೆ ನಿನಗೆ ತಾನವಿಚಾರಿಗೇಕಹುದು ೬

ದೇವದೇವೇಶನು ನಿನಗೆ ಕುಲ
ದೈವಮುಂ ಮನೆದೈವವಾಗಿರೆ
ಆವಗಂ ಬಹುಮಾರ್ಗವರ್ಗಕೆ ಪೋಪುದಧಮವಲಾ
ಪಾವಕಾಕ್ಷನನರ್ಚಿಸುತ ಜಡ
ಜೀವಿಗಳಿಗೀಕ್ಷಣವನೀವುದ
ದಾವ ಸತ್ಪುಣ್ಯವು ಶಿವಾಗಮನಿಗಮ [೧]ದೃಷ್ಟಿಯೊಳು[೨] ೭

೧–೨ ದ್ರಕ್ಷದಲಿ (ಪ, ಸ).

CC-0. Jangamwadi Math Collection. Digitized by eGangotri

ಮಲಹರನ ಮಜ್ಜನಕೆಱಿವ ಕೈ
ಗಳಿನಿತರ ಭೂಸುರರಡಿಗಳಂ
ತೊಳೆಯಲಹುದೇ ಶಿವಪದಾಂಬುವನುತ್ತಮಾಂಗದಲಿ
ತಳೆದು ಭವಿಗಳ ಕಾಲ ನೀರಂ
ತಳೆದುಕೊಳುವರೆ ಪಾರ್ವತೀಶನ
ನೊಲಿದು ಪೂಜಿಸುತನ್ಯವಿಪ್ರರನರ್ಚಿಸಲುಬಹುದೇ ೬

ಚಿತ್ತಜಾರಿಗೆ ನೆಗೆವ ಕೈಗಳ
ನೆತ್ತುವರೆ ನೇಣಿನ ಹೊಲೆಯರಿಗೆ
ಉತ್ತಮದ ಲಿಂಗಪ್ರಸಾದಿಗೆ ಭಕ್ತಿವಿಮುಖಿರಹ
ಮತ್ತ ಕರ್ಮಶ್ವಪಚರೊಡನೊಲ
ವೆತ್ತಿಯುಂಡಡೆ ಪಾಪವಂ ನೆಱಿ
ಹೊತ್ತನುಭವಿಸುವಂದವಲ್ಲಾ ಕೇಳ್‌ದೆಂತೆನಲು ೭

ಸಾಂಗವಿದು ದಿವ್ಯಾಗಮಾರ್ಥದೊ
ಳಂಗಜಾಂತಕಭಕ್ತರಾವಾ
ಸಂಗಳೊಳು ಚರಿಸುವ ಸತೀ ಸುತ ಗೋತ್ರ ಮುಖ್ಯರೊಳು
ಲಿಂಗಪೂಜಕರಾಗದವರಿಗೆ
ಹಂಗೆ ಕೂಡಿರ್ದನಿತಱಿಂಗೊಳು ಮಾ
ತಂಗಸಂಗತಮಿತ್ರದೋಷವು ಪ್ರಾಪ್ತಿಸುವುದಾಗಿ ೧೦

ಈ ಪಥದೊಳಿದು ದರ್ಶನಾದಪಿ
ಪಾಪದಾಯೆನೆ ದರ್ಶನ ಿಸದಾ
ಲಾಪಿನ ಸ್ಪರುಶನ ಶಯನ ಭೋಜನ ಸದಾನಾದಿ
ರೂಪಸಂಪರ್ಕಾಸನಂಗಳು
ಪ್ರಾಪಿಸುವವೇ ಭಕ್ತನಾದಂ
ಗೇಪರಿಯೊಳುಂ ಭವಿಜನಂಗಳ ದೆಸೆಯನೊಂದುಪನೆ ೧೧

೧–೨ ದಿಂತಿರಲು (ಮ). ೩ ದ ಸಲ್ಲಾಪ (ಅ, ಕ, ತ, ಥ, ನ, ಮ).

CC-0. Jangamwadi Math Collection. Digitized by eGangotri

ಮದನಹರಪದಭಕ್ತಪದಸಂ
ಪದಮನೇ[೧]ವೇಳ್ವೆನು[೨] ಪಶುಗಳಂ
ಸದಮಳಾಚಲಭಕ್ತಿಪರರಂ ಮಾಡಿಸುವದ[೩]ಲ್ಲಾ
ಇದಕೆ ದೃಷ್ಟವದೆಂತೆನಲು ಸ
ಮ್ಮೃದಿತ [೪]ಶೀಲ[೫] ಬ್ರತಸುಭಕ್ತಿಯೊ
ಳೊದಗಿದೇಲೇಶ್ವರನ ಕೇತಯ್ಯಂಗಳಿನಲೊಪ್ಪಿ ೧೨

ಧಾತ್ರಿಯೊಳಗಾ ಅಯ್ಯನಮಳ ಚ
ರಿತ್ರವಂ ಪೇಳಲ್ಕೆ ತಾನತಿ
ಚಿತ್ರವತಿಶಯ ಶೀಲ ಸಬಂಧಪ್ರಯುಕ್ತಿಯಲಿ
ಪುತ್ರಪೌತ್ರರು ನಿಜಕಳತ್ರವು
ಗೋತ್ರವರ್ಗಂ ದಾಸದಾಸೀ
ಮಿತ್ರರುಂ ಗೋಪಾಲಕರು ಪಶು ಶುನಕ ಮಾರ್ಜಾಲ ೧೩

ಇವು ಮೊದಲು ಗೃಹಚರರನೆಲ್ಲಂ
ಶಿವಸಹಿತರಂ ಮಾಡಿ ತಾನುಂ
ಭವಿಗಳಂ ನೆನೆಯನು ಬಳಿಕ [೬]ದೃಷ್ಟಿ[೬]ಸನು ಮಾತಾಡ
ಅವರ ನುಡಿಯಂ ಕೇಳಲೊಲ್ಲನು
ಅವರ ಸೀಮೆಯನೆಯ್ದೆ ಮೆಟ್ಟನು
ಅವರ ಕೈಯಲಿ ಕೊಳ್ಳನೀಯನು ಬಿಲಿಯನುಂ ಮಾಱ ೧೪

ಕೊಡನೆರವನೀಯನು ಭವಿಗಳಲಿ
ಕಡನ ತಾರನು ತಂದುಕೊಳ್ಳನು
ಕಡೆಯಲಿನಿತಂ ಹೋಗಬಿಡ ಅಣುಮಾತ್ರವಂ ಬೆರಸ
ಪೊಡವಿಯೊಳು ಭವಿಯಂ ವಿವರ್ಜಿಸಿ
ಪೊಡವಡುತ ಭಕ್ತರ್ಗೆ ನಿಚ್ಚಂ
ಕೊಡುವುದುತ್ತಮವೆನುತವೀ ಪರಿ[೯]ಯೊಳ್ ಪ್ರ[೯]ವರ್ತಿಸಲು ೧೫

೧–೨ ಪೊಗಳ್ವೆನು (ತ. ಥ. ನ). ೩ ರ (ಅ). ೪–೫ ಸಕಲ (ಸ). ೬–೭ ನಿಟ್ಟಿ (ತ. ಥ. ನ). ೯–೯ ಯಲ್ಲಿ (ಬ): ಯಲಿಪ್ರ (ಸ).

CC-0. Jangamwadi Math Collection. Digitized by eGangotri

ಅನವರತವೇಲೇಶಕೇತ
ಯ್ಯನ ವಿನಿಶ್ಚಲ ಶೀಲಭಕ್ತಿಗೆ
ಜನರು ಸೈರಿಸದೆಡೆಗೆಡೆಗೆ ಕೆಲವೆಗ್ಗುಗಳನೆಯ್ದೆ
ನೆನೆದು ಮಾಡುತ್ತಿರಲವಂದಿರ
ಮನದ ಕುಟಿಲಂಗಳಿಗೆ ಸಿಕ್ಕದೆ
ಘನಮಹಿಮೆಯಿಂದಾ ಶಿವೈಕ್ಯನು ವರ್ತಿಸುತ್ತಿರಲು ೧೬

ಸಾಲವಂ [೧]ಕೊಳ್ಳ[೨]ನು ಕೊಡನು ದು
ಶ್ಶೀಲಭವಿಗಳ ಕೈಯಲಿನುತಂ
ಲೋಲಭಕ್ತನು ತಾನೆನುತ ಬಗೆಗೊಳ್ಳ[೩]ನಾರುವನು[೪]
ನಾಳೆ ಬಿತ್ತುವ ಬೆದೆವಡೆದ ಕೆಯಿ
ಹಾಳಹುದು ನಾವಿಂದು ಬಿತ್ತುಗ
ಳಾಲಯಂಗಳನುರುಹಿ ಕಳೆವೆವೆನುತ್ತ ನಿಶ್ಚಯಿಸಿ ೧೭

ಬಂದು ತದ್ಭೋಹಿಗಳು ಬೀಜದ
ಮಂದಿರಕೆ ನೆಟ[೫] ಕಿಚ್ಚನಿಕ್ಕಿಯ
ಪಂದಿರಿರುತಿರೆ ಅಱಿದು ಕೇತಯ್ಯಂಗಳೀಕ್ಷಿಸುತೆ
ಬೆಂದುಹೋಗಲಿ ಹೋದಡೇನಾ
ಯ್ತೆಂದು ಸೀಕರಿಯೋ[೫]ದ ಬೀಜವ
ನೊಂದಱಿ[೬]ಸೊಂದಱಿ ವಿವರವಳಿಯದೆ ಗುಡಿಸಿಕೊಂಡೊಯ್ದು ೧೮

ಹೊಸತಿದೆನುತೆಲ್ಲರು ಹೊಗಳುತಿರೆ
ಅಸಮಭಕ್ತನು ಕೇತಿದೇವನು
ಸಸಿನೆ ಬಿತ್ತಿಸಿ [೭]ಸಾಲು[೭] ಸಾವಿರವಾಗಿ ಬೆಳೆದನಲಾ
ವಸುಧೆಯೊಳಗಿಳಿಹಾಳಬೊಮ್ಮಯ
ನೆಸೆವನಾತನ ಮಹಿಮೆಯಂ ಕೀ
ರ್ತಿಸಲರಿದು ಬೀಜಂಗಳಂ ಬಿತ್ತದೆ ಬೆಳೆದ[೮]ನಂದು[೯] ೧೯

೧–೨ ಕೇಳ (ಸ). ೩–೪ ನಾವವನು (ಸ). ೫ ಯಾ (ತ, ಸ). ೬–೭ ನಾಲ್ಕು (ತ, ಥ, ಪ). ೮–೯ ನಲಾ (ನ).

CC-0. Jangamwadi Math Collection. Digitized by eGangotri

ಎಂದು ಕೇಳಲ್ಪಟ್ಟುದೆಲ್ಲರ
ಮುಂದೆ ಕಾಣಲ್ಪಟ್ಟುದಲ್ಲಾ
ಇಂದು ಶಿವಭಕ್ತರ ಮಹಿಮೆಯಂ ಕೇಳಲರಿದೆನುತ
ವಂದಿಸುತ ಲೋಕಂ ಪೊಗಳಲಿದ
ಱಿಂದ ಹೋಗದಸಹ್ಯಭಾವನೆ
ಯಿಂದವಂದಿರು ಮತ್ತೆಯುಂ ಪಾಪಿಷ್ಠರಾಗಿರ್ದು ೨೦

ಇತ್ತಲೀ ತುಱುವೆತ್ತ ಮೇಣ್ ತಾ
ನೆತ್ತ ತನ್ನಯ ಭಕುತಿಗಿಕುತಿಯ
ದೆತ್ತ ನಡೆಗಿಡೆಯಿತ್ತಲೀ ಡಂಬಕದ ವೇಷವನು
ಹೊತ್ತು ಪಸರಿಸಿಯುಂಬಕಾಯಕ
ವೃತ್ತಿಯಲ್ಲದೆ ಸಹಜವಲ್ಲವೆ
ನುತ್ತ ಜಱಿವುತ ನಗುತ ಮಿಗೆ ಜಂತ್ರಿಂಗಳಂ ಹಣ್ಣಿ ೨೧

ಚೋರರಿಗೆ ಯಂತ್ರಿಸಿ ಅವರ ಕೀ
ಲಾರವಂ ಹಿಡಿಸಿದಡೆ ಕಳ್ಳರು
ವೈರಿಗಳ ಮತದಿಂದ ಪಶುವೊಂದುವನುಳಿಯದಂತೆ
ಪಾರಹರಭಕ್ತನ ತುಱುವನಾ
ಊರ ಹೊಲದಲಿ ಮೇವುತಿರಲವಿ
ಚಾರದಿಂ ಕೊಂಡೊಯ್ಯಲಾವುಗಳಾಗ ಹೋಗುತ್ತ ೨೨

ಇತ್ತಲೀ ಪ್ರಾಣೇಶನಿದ್ದನಿ
ಮಿತ್ತದಲಿ ಪಶುಗಳು ಬೆಳೆದ ಹೊಲ
ದತ್ತ ತೆಗೆಯಲು ಸರಸಿಗಳು ತುಂಬಿರ್ದ ಬೆಂಚೆಗಳ
ಒತ್ತಿನಲಿ ನಿಲಿಸಿದಡೆ ಬಾಯ್ದೆಱಿ
ಯಿತ್ತೆ ಪುಲ್ಲಿಗೆ ಮೋಱಿಯಂ ನೀ
ಡಿತ್ತೆ ನೀರಿಂಗೀ ಪರಿಯೊಳೇಳ್ದಿನ ನಡೆವುತಿರಲು ೨೩

---

೧ ತಂ (ಆ, ಚ, ತ, ನ). ೨ ತಂ (ತ, ನ).

CC-0. Jangamwadi Math Collection. Digitized by eGangotri

ಇದನಟಿ[೧]ದು ಜೋರರು ಮಹಾದ್ಭುತ
ಹೃದಯರಾಗುತ ನಾವು ಹಿಡಿತಂ
ದದು ಮೊದಲು ನೀರ್ಗುಡಿಯಲೊಲ್ಲವು ಮೇಯಲೊಲ್ಲವಿವು
ಕುದಿವುತಿವೆ ಮೂರ್ನಾಲ್ಕು ದಿನವಿರಿ
ಸಿದಡವಶ್ಯಂ ಸತ್ತುಹೋಪವು
ಬದುಕನೊಂದುಂ ಬಟಿ[೨]ಯ ಕರ್ಮವನೇಕೆ ಹೊತ್ತಿರಲು ೪೪

ಈಗಳಿರ್ದಂತೀ ಪಶುಗಳಂ
ಹೋಗಬಿಡಿ ನೀವೆನುತ ಬಿಡಲೊಡ
ನಾಗಳಂತೆ ಮರಳ್ದು ಮಿಗೆ ನೆಗೆನೆಗೆದು ದಾಂಟುತ್ತ
ಬೇಗದಿಂದೋಡುತ್ತ ಪಾಟಿ
ತ್ಯಾಗಿನಿಕ್ಕೆಗೆ ದುಗುಡವಂ ನೆಟಿ[೩]
ನೀಗುತಂ ಬಾಲಂಗಳಂ ಬಿನ್ನಗಳೊಳೊಂದಿಸುತೆ ೪೫

ಬಂದ ಪಥಮಂ ತಪ್ಪದೇಳ್ದಿನ
ಬಂದ ದಾರಿಯನೇಳು ಜಾವಕೆ
ಸಂದಣಿಸಿ ಬರುತಿಪ್ಪೆಡೆಯೊಳೇಲೇಶಕೇತಯ್ಯ
ಮುಂದಿನಿತು ದೂರದಲಿ ಕಾಣುತ
ಬಂದು ಕೀಲಾರಕ್ಕೆ ಕಡು ಮುಳಿ
ಸಿಂದ ಹಟ್ಟಿಯೊಳಗುಸೆಯಂ ಹುಗಲೀಯದಿಕ್ಕಿದನು ೪೬

ಹರಹರಾ ಇಂದೀ ವ್ರತಭ್ರ
ಷ್ಟರ ದೆಸೆಯನೀಕ್ಷಿಪಡೆ ನುಡಿದಡೆ
ಪರಮ ಪಾತಕವೆನುತ ಹುಗಲೀಯದೆ ತಗುಳ್ಚಿ[೪]ದಡೆ
ನರರಕಟವೆಂದೆನುತ ಪುಣ್ಯಕಿ
ತರಿಸಿ ಕಣು[೫]ಕಂ ಹುಲ್ಲನಿಕ್ಕಲು
ನೆರೆದ ತುಟಿವಾ ಮೇವಿನತ್ತಲು ನೋಡದಿರುತಿರಲು ೪೭

೧ದಿ (ಆ. ಚ. ಥ. ಮ). ೨ಳಿಸಿ (ಚ. ಧ. ಬ). ೩ಳು (ತ. ಪ).

CC-0. Jangamwadi Math Collection. Digitized by eGangotri

[೧]ತಪ್ಪೆವೆ[೨]ಮ್ಮಯ ವ್ರತವೆ[೩]ನುತೊಱಲು
ತಿಪ್ಪವೊಲು ದನಿಗೊಟ್ಟು ಕರೆವು
ತ್ರಿಪ್ಪವಂಬೆಯೆನುತ್ತ ತಲೆಗಳನೆತ್ತಿ ನೋಡುವವು
ಇಪ್ಪೆಡೆಗೆ ಬಯಸುವವು ಬಾಗು
ತ್ರಿಪ್ಪವರ ಮನೆಯಂ ಬಳಸಿ ಬರು
ತಿಪ್ಪವಱಿಚುತ ನಾಲಗೆಗಳಂ ನೀಡಿಕೊಳುತಿಹವು ೨೮

ಹಟ್ಟಿಯೊಳಗಂದೆರಡು ಹೊತ್ತುಂ
ಮುಟ್ಟಿ ಪೂಜಿಪ ದೇವರಿಗೆ ಮನ
ವಿಟ್ಟು ತಾವಂತೆಱಗೆಱಗಿ ನಿಲಿನಿಲಿಕಿ ನೋಡುವವು
ನೆಟ್ಟನುಲ್ಲಂಘಿಸತೊಡಗಿ ದನಿ
ಗುಟ್ಟುವವು ತಪ್ಪಿಲ್ಲವೆಮ್ಮಂ
ದಿಟ್ಟಿಸೈ ಎಂಬವೊಲು ಕೇತಯ್ಯಗಳಿದಿರೊಳಿಹವು ೨೯

ಆ ಪಶುಗಳೀ ಮಾಳ್ಕೆಯಿಂದುಪ
ತಾಪಿಸುತ ಬಾಯ್ವಿಟ್ಟೊಱಿಲುತಿರ
ಲೀಪರಿಯನಱಿದೊಳಗೆ ಕಟ್ಟಿರ್ದಾ ಕಱುಗಳೆಲ್ಲ
ಈ ಪಥವು ತಪ್ಪಿದವಲಾ ಎನು
ತೋಪ ತಮತಮ ತಾಯಿಗಳ ದೆಸೆ
ಗೇಪರಿಯೊಳುಂ ನೋಡದಱಿಚದೆ ಮಱುಗದಿರುತಿರಲು ೩೦

ಕಱುಗಳಂ ಮೆಯ್ವಡವಿ ತಾನೆ
ಚ್ಚಱಿಸುತಂ ಕೇತಯ್ಯನಿರೆ ಕವಿ
ದಱಿಚುತಂ ಮೇಹುಗಳನಿನಿತುಂ ಮುಟ್ಟದಡೆ ನೋಡಿ
ತುಱುವಿನಲಿ ತಪ್ಪಿಲ್ಲದಿಪ್ಪುದ
ನಱಿದು ಹಟ್ಟಿಯ ಮುಖದಗುಸೆಯಂ
ತೆಱೆಯಲೊಡನಂಬೇಯೆನುತ ಪರಿತಂದುಳಿದನು ಕಂಡುೞ ೩೧

೧–೨ ತಪ್ಪದೆ (ಕ, ತ, ಥ, ನ). ೩ ಕೆ (ಥ, ಸ). ೪–೫ ವೊಳಪೊಕ್ಕು (ಬ); ಱದೆ ಪೊಕ್ಕು (ತ, ಥ, ನ, ಪ).

CC-0. Jangamwadi Math Collection. Digitized by eGangotri

ಕೆಲವುತಂ ಬಾಲಂಗಳಂ ನೆಗೆ
ದಲರುತಂ ದಿಟ್ಟಿಸುತ ನೆಟ್ಟನೆ
ತಲೆಗಳಂ ತಾಟಿಸಿಕೊಳುತ ಪರುಷನದ ದೇವರನು
ಬಳಸಿ ಬಳಸಿ ಬರುತ್ತ ಲಿಂಗದ
ಬಳಿಯೊಳಗಲದೆ ಮೂಸಿನೋಡುತ
ನಲಿವುತಾವುಗಳಿರಲು ನೋಟಕಜನರು ಬೆಬ್ಬಗಹರು ೩೨*

ಇತ್ತ ಲಿಂಗವನಗಲ್ದು ಖಿಳರಿಂ
ದತ್ತ ಹೋದುದು ಮೊದಲು ಪಶುಗಳ
ಮೊತ್ತವೊಮ್ಮೆಯು ಹುಲ್ಲನುದಕವನೊಲ್ಲದಿರ್ದುದಕೆ
ಉತ್ತಮದ ಶಿವಲಿಂಗವೇ ನಿಜ
ವೆತ್ತ ಸಾಕ್ಷಿಯೆನಲ್ಕೆ ಹರುಷಂ
ಬೊತ್ತು ಲಿಂಗಸ್ಪರುಶನದ ನಿಯಮಂಗಳಂ ತೀರ್ಚಿ ೩೩

ಸಂಗಡಿಸಿ ಕೇತಯ್ಯಗಳ ಪಾ
ದಂಗಳಿಗೆ ನಸುಬಾಗಿ ಹೊಡವಡು
ತಂಗವುಬ್ಬುತ್ತೆಯೆದ್ದ ಮೇಹಿಂಗಾಕ್ಷಣದೊಳೆಯ್ದಿ
ಹಿಂಗದೆಡೆಗೆಡೆಗಾಕಳುಗಳುದ
ರಂಗಳಾಗಳು ತುಂಬ ಮೆಯ್ದುದ
ಕಂಗಳಂ ಕುಡಿವುತ್ತೆ ನಕ್ಕಿಕೊಳುತ್ತ ಮೈಗಳನು ೩೪

ಮಲಗುತೇಳುತ ಕೆಚ್ಚಲುಗಳ
ಗ್ಗಳಿಸಿ ತೊರೆಯಲು ಮೋಹದಿಂದಾ
ಕಳುಗಳಂಬೆಯೆನುತ್ತ ಮುಂಕೊಂಡಱಿಚುತಿರಲಾಗಿ
ಬಳಿಕ ಕೇತಯ್ಯಂಗಳಾ ಗೋ
ಕುಲವನೆಲ್ಲಂ ಪತಿಕರಿಸಿ ಕೈ
ಕೊಳುತಿರಲ್ಕದನಱಿದು ಕಱುಗಳು ನಿಂದಱಿಚುತಿರಲು ೩೫

೧–೨ ಳನ್ನೆಸೆ (ಅ, ಚ, ಧ, ಬ, ಮ). ೩–೪ ಮುಖವ (ಮ). ೫–೬ ಸೊರೆ (ಸ): ಸುರಿ (ಅ, ಬ, ಮ). * ಈ ಪದ್ಯ ಕ ಪ್ರತಿಯಲ್ಲಿಲ್ಲ.

CC-0. Jangamwadi Math Collection. Digitized by eGangotri

ಬಿಡಲೊಡನೆ ತಾಯಿಗಳು ಮೊಲೆಗಳ
ನೊಡನೊಡನೆ ಕಱುಗಳಿಗೆ ಮಿಗೆ ಮೆ
ಯ್ದಡವಿ ಜಾಚಿಕೊಳುತ್ತಿರಲು ನಿಯತಿಗಳ ತಪ್ಪಿಸದೆ
ಅಡರಿತಾ ಕೀಲಾರಪಂತಾ
ಗೆಡೆವಿಡದೆ ಕೇತಯ್ಯಗಳ ಮನೆ
ಯೆಡೆಯ ಪಶುಗಳವೆಲ್ಲವುಂ ಶಿವಭಕ್ತರಹವಲ್ಲಾ ೩೬

ಇತರರಂ ಕೂಡಿಪ್ಪುದೆಲ್ಲಂ
ಮತಿವಿಹೀನತೆಯಲ್ಲದೇ ಗುರು
ಮತವಹುದೆ ಕೇಳ್ ಮತ್ತೆ ಸೌಂದರನಾಚಯಂ ತನ್ನ
ಸತಿಗೆಯಮಳರು ಗರ್ಭವಾಗಿ
ರ್ದತಿಶಯವಲಾ ಮುನ್ನ ಜನಿಸುವ
ಸುತಗೆ ಲಿಂಗವನೊಂದನುದಯಿಸುವೆಡೆಯೊಳರ್ಪಿಸಲು ೩೭

ಹಿಂದೆ ಜನಿಸುವ ಬಾಲಕಗೆ ಬೇ
ಱೊಂದು ಲಿಂಗವನಳವಡಿಸದಿರ
ಲಿಂದುಮುಖಿ ಪತಿಗಱುಹಿದಡೆ ಪಥಹೀನನಾದನಲಾ
ಕುಂದನಂ ನಿಲ್ಲದೆ ಬಿಸುಟು ಕಳೆ
ಕುಂದಹುದಿದಂ ನೋಡಲಾಗದು
ಸಂದ ಶರಣೋಕ್ತಿಗಳೊಳಿಂತಾರ್ಯೆಮು ನೋಡಿದಡೆ ೩೮

ವಿನುತ ಸದ್ಗುರುಲಿಂಗಸಂಗವು
ತನಯನಧ್ಯೋದಯದೆಡೆಯೊಳಿ
ಲ್ಲೆನುತ ಸೌಂದರನಾಚಿದೇವನು ಜಗವಱಿಯಲಂದು
ತ್ಯಜಿಸಿನಂ ವರ್ಜಿಸಿದನೆಂದಡ
ವನಿಯೊಳುತ್ತಮ ಮಾರ್ಗವಿರೆ ನೀ
ನನುಸರಿಸಿದೆ ಕುಮಾರ್ಗವಂ ಮಾರ್ಗವೆ ನಿನಗೆ ಹೇಳಾ ೩೯

೧–೨ ನಯ (ಸ).

CC-0. Jangamwadi Math Collection. Digitized by eGangotri

ನಿನಗೆ ಪತಿ[೧]ಪಾಶುಪತಿಯಿರೆ ತೊ
ಟ್ಟನೆ ಪಶುಗಳಂ ಕೊಲುವ ಮೆಲುವ ಕು
ಮನದ ಪಶುಕರ್ಮಿಗಳ ದುಃಕರ್ಮಂಗಳೊಳಗಿರಲು
ಮನಸಿಜಾಂತಕನಂತವನನುಸಿ
ಕನೆ ಬಿಡುವನೆ ಮೊದಲ್ಗನಕ ಮೂ
ಗನರಿದಿಟ್ಟಿಗೆಯಿಂದೊರಸಿ ತೋಱಿಸನೆ ಕನ್ನಡಿಯ ೪೦

ಬಾಲಹಿಮಕರಮೌಲಿಯೀ ಚಾಂ
ಡಾಲರೊಡನೇಕಿರ್ಪನಿಂತೇ
ಕಾಲವುಂ [೨]ಸದು[೩]ಭಕ್ತಿಯುಕ್ತಿಯೊಳಲ್ಲದೇ ಬಳಿಕ
ಮೇಲೆನಿಪ ನಿಜ ಶುದ್ಧಲಿಂಗಾ
ಲೋಲಭಕ್ತಮಹತ್ವಪಂ ವಾ
ಚಾಳ ನೀಚಾ ಕೇಳಿಲವೊ ನಿನಗೇಕಱಿಯಬಹುದು ೪೧

ಮರುಳನಱಿವನೆ ಬುದ್ಧಿಯಂ ವಾ
ನರನಱಿವುದೇ ಗರುವಿಕೆಯನಾ
ಚರಣೆಯಂ ಗಾರ್ದಭನಱಿವುದೇ ಸೊಡರ ದೀಪ್ತಿಯನು
ಕುರುಡನಱಿವನೆ ಕಿವುಡನೆಂದುಂ
ಮೊರೆವ ಶಬ್ದವನೆತ್ತ ಬಲ್ಲನು
ನಿರತವಱಿವುದೆ ಪಾಲ ಸವಿಯಂ ಕೆಸಱಿಂಗಿಳಿಪ ಬಕನು ೪೨

ಶ್ವಾನನಱಿವುದೆ ನಾಕ[೪]ಲೋಕವ
ನೇನಬಲ್ಲದು ಭೇಕವಂಬುನಿ
ಧಾನದಾಳವನಱಿವುದೇ ನೊಣ ಮಧುಕುಸುಮರಸವ
ಭಾನುವಂ ಕೌಶಿಕವು ಕಾಬುದೆ
ಜ್ಞಾನಹೀನರಿಗಸಮಲಿಂಗ
ಧ್ಯಾನ ಭಕ್ತಿವಿಧಾನ ಬೋಧೆಯದೆಂತಹುದು ಹೇ[೫]ಳ ೪೩

೧ಶು (ತ, ನ, ಪ). ೨–೩ಸದ್ (ಪ). ೪ಗ (ಅ, ಚ). ೫ಕೇ (ಅ, ಚ, ತ, ನ, ಪ).

CC-0. Jangamwadi Math Collection. Digitized by eGangotri

ಆಂಗಳಿಂದ ನಿಧಿಯಾವರೆಯ ಜೇ
ನಂಗುಳದ ಸುಧೆಯೆನಲೆಸೆವ ಶಿವ
ಲಿಂಗನಿಷ್ಠಾ ಭಕ್ತಿಪದದಲಿ ಚರಿಸುವುದ ಮಾಮಿ
ಕಂಗಳಿಗೆ ತಮವೂಱಿ ದುರ್ಮಾ
ರ್ಗಂಗಳಲಿ ವರ್ತಿಸುವದೆಲ್ಲಂ
ಮಂಗಳಾಂಚಿತ ರತ್ನವಿರೆ ಗಾಜಂ ಧರಿಸುವಂತೆ ೪೪

ಹಟ್ಟಿಯೊಳು ಸುರಧೇನು ಬಂದಳ
ವಟ್ಟಿರಲು ಗೊಡ್ಡಂ ಪಿಡಿದು ಮತಿ
ಗೆಟ್ಟು ಕಱಿದಪೆನೆಂಬವನವೊಲು ಪಿರಿದು ತವರಾಜ
ಕಟ್ಟಿದಿರೊಳಾಗಳುಮಿರಲದಂ
ಬಿಟ್ಟು ತೌಡಂ ಮುಕ್ಕುವನವೊಲು
ಘಟ್ಟಿವಜ್ರವಿರಲ್ಕೆ ಸುರಗಿಯನರ್ಥಿಸಿದನವೊಲು ೪೫

ಪಾರಿಜಾತಂ ನೆರೆಯೊಳಿರುತಿರೆ
ಭೂರುಹಂಗಳ ನೆಳಲನರ್ಥಿಸಿ
ಸಾರಿದನವೊಲು ಹೆದ್ದೊಱಿಯನುಱಿ ತಡಿಗೆ ದಾಂಟಿಸುವ
ತೋರವಹ ಬಲುದೆಪ್ಪವಿರೆ ಮನ
ಹಾರಿ ಸೊರೆಯೋಡಂ ಪಿಡಿದು ತಾಂ
ಪಾರವೆಯ್ದುವೆನೆಂಬವನವೊಲು ಕೇಳು ಜಗದೇವಾ ೪೬

ವಿಮಳ ಶುಭಕರ ಭಕ್ತಿಮಾರ್ಗಂ
ಸುಮುಖವಾಗಿರೆ ಕರ್ಮವಿಧಿಗಳ
ತಮಕೆ ಸಿಕ್ಕಿದೆ ಭಕ್ತಿಯಿಲ್ಲದೆ ಕೆಟ್ಟುಹೋದೆಯಲಾ
ಕುಮತಿಗಹುದೇ ಸಹಜ ಭಕ್ತಿಯು
ಸಮತೆ ಶಿವಲಿಂಗೈಕರತಿ ಆ
ಗಮವುಲಿವುತಿವೆ ತೇನ ಸಹ ಸಂವಸತೆ ಎಂದೆನುತ ೪೭

---

೧ ಣ (ತ, ನ, ಪ): ಸಂ (ಡಾ, ಧ). ೨–೩ ಚರಿಯಿಪುದ ಮಾಣ್ದು (ಕ, ಚ, ತ, ನ, ಪ). ೪ ರೆ (ಕ). ೫ ಜಂ (ಕ, ಚ).

CC-0. Jangamwadi Math Collection. Digitized by eGangotri

ಹಲವು ಸೂಳುದಕದೊಳಲುಬಿ ಸೆಳೆ
ಸೆಳೆದೊಗೆದಡಂ ಬಿಳಿದಹುದೆ ಕಂ
ಬಳಿ ಹಗಱಿಗಳನಿಕ್ಕಿ ಬಿಗಿದಡೆ ನಾಯ ಬಾಲವದು
ಬಳಿಕ ನೀಳಕೆ ಸಹಿನವಹುದೇ
ಜಲದೊಳಾಗಳು ನೆನೆವುತಿರ್ದಡೆ
ಶಿಲೆಯು ಮೃದುವಾಗಿಪ್ಪುದೇ ತಾನಾವ ಪರಿಯಿಂದ ೪೮

ಬಿಡದೆ ಹಾಲನದೇಸನೆಱಿಸಿದಡೆ
ಬಿಡುವುದೇ ಫಣಿ ವಿಷವನಿನಿತಾ
ದಡೆ ಮಧುವನೆಱಿಸಿದೆಱಿಸಿದಡಂ ತಾ ಬೇವಿನೊಳನಾರು
ಕಡೆಗೆ ತಾನಿನಿದಹುದೆ ಗೋಡೆಯ
ನಡುಗದೊರಸುತ್ತೊರಸುತಂ ತೊಳೆ
ದಡೆ ಬಱಿಯ ಮಣ್ಣಿಪ್ಪುದಲ್ಲಾ ಅಂತುಮಲ್ಲದೆಯು ೪೯

ಮತ್ತೆಯುಂ ಕೇಳ್ ಪೊನ್ನನೇಗಿಲ
ಲುತ್ತು ಗುಳ್ಳದ ಬೀಜವಂ ನೆಱಿಸಿ
ಬಿತ್ತುವಂದದಿ ಕರ್ಪುರದ ವೃಕ್ಷಂಗಳಂ ಕಡಿದು
ಸುತ್ತುವರೆ ಕಳ್ಳಿಯ ಗಿಡಗಳಿಗೆ
ಕೆತ್ತವೊಲು ಕಿಚ್ಚಿನಲಿ ಮೂರ್ತಿಸಿ
ಹತ್ತೆ ಸಾರ್ದಾಹುತಿಯನಿತ್ತಪೆನೆಂಬ [೧]ಛಂದದಲಿ[೨] ೫೦

ಒಲವು ಮಿಗೆ ಲಲಿತಾರ್ಘ್ಯಪುಷ್ಪಾಂ
ಜುಳಿಯನರ್ಪಿಸಿ ನಾಯಕಾಲಂ
ತೊಳೆದ ತೆಱಿದಿಂ ಭಿನ್ನ ಕುಂಭದೊಳೆಱಿಸಿದುದಕದಂತೆ
ನೆಲಲುಗೆಟ್ಟ ಮಹೀಜದಂತು
ಜ್ವಲಿಪ ಲಿಂಗಪರಾಙ್ಮುಖರನಾ
ಗಳು ಭಜಿಸಿ ಭವಬಂಧನಕ್ಕೊಳಗಾಗದೆಂತಿಹನು[೩] ೫೧

೧–೨ ರಂದದಲಿ (ಅ, ಚ, ತ, ಥ). ೩ ರು (ಸ).

CC-0. Jangamwadi Math Collection. Digitized by eGangotri

ಭೂತಳಾಗ್ರದೊಳಗ್ರಜನ್ಮರಿ
ಗೋತು [1]ಮುನ್ನು[2]ಣಲಿಕ್ಕಿದುದಱಿಂ
ಗೌತಮಂಗಾಯಿತ್ತಲಾ ಗೋಹತ್ಯ ಜಗವಱಿಯೆ
ಪ್ರೀತಿಯಿಂದವೆ ಕೋಟಿ ವೈದಿಕ
ಜಾತರೆನಿಸಿದ ಭೂಮಿದೇವ
ವ್ರಾತಕಿಚ್ಛಾಭೋಜನವನಿಕ್ಕಿದ ಫಲಂಗಳಿಗೆ ೫೨

ಅಕ್ಷಯನ ಭಕ್ತರ್ಗೆ ಒಕ್ಕೈ
ಭಿಕ್ಷಮಂ ತಂದಿಕ್ಕಿದುತ್ತಮ
ನಕ್ಷಯದ ಫಲಕೇಂ ಸಮವಹುದೆ ದೃಷ್ಟಮಾಗಿರಲು
ಈ ಕ್ಷಿತಿಯೊಳಧಮೋಕ್ತಿಯಿಂದವ
ಲಕ್ಷಣದೊಳಾಚರಿಸುತಿರ್ದಡೆ
ಈಕ್ಷಿಸಲು ಭಕ್ತಿಯು ಕಿಡುವುದಾ ಫಲವಫಲವಹುದು ೫೩

ಎಂದು ನಾನಾ [1]ಛಂದದಿಂದಿಂ[2]
ತೆಂದು ಬೆಸಸುತಿರಲ್ಕೆ ಕೇಳುತ
ಮಂದ ಶೋಕಜಲಾನ್ವಿತಾಂಬಕಯುಗದಿ ಜಗದೇವ
ಮುಂದೆಸೆಯೊಳಷ್ಟಾಂಗವೊಂದಲು
ವಂದಿಸುತ್ತಾ ಶಿವಮಹಾಗಣ
ವೃಂದಕಭಿಮುಖನಾಗಿ ತನ್ನ ಕರಂಗಳಂ ಮುಗಿದು ೫೪

ಕಷ್ಟನಂ ಖಿಳನಂ ಸಕಳ ಕ
ರ್ಮಿಷ್ಟನಂ ದುರ್ಮಲನಿಳಯನಂ
ನಷ್ಟಶೀಲನನಾರ್ಯದೂರನನಘಮಸೇವಕನ
ಅಷ್ಟಮದಗರ್ವಿತನವಿರತಂ
ದುಷ್ಟಮಾನಸನಂ ಕುಜನ ಜನ
ಶಿಷ್ಟನಂ ಕ್ರೋಧಿಯನಸತ್ಯನನಾದಿ [3]ಬಾಧಕನಾ[4] ೫೫

೧–೧ ಮುಂತು (ಸ). ೨–೨ ರೀತಿಯಿಂದಿಂ (ತ, ಥ, ನ). ೩–೪ ಬಾಧಿತನಂ (ಚ, ತ, ಥ, ನ, ಮ).

CC-0. Jangamwadi Math Collection. Digitized by eGangotri

ದೀನನಂ ದೃಢಭಕ್ತಿನಿಷ್ಠಾ
ಹೀನನಂ ದುರಹಂಕೃತನನಭಿ
ಮಾನಶೂನ್ಯನನಕರುಣಾವರಣನನಭಾಗ್ಯನನು
ದಾನವಿರಹಿತನಂ ವಿಗತಸು
ಜ್ಞಾನಿಯಂ ಪರಿಪೋಷಿತಾಶಾ
ಧೀನನಂ ದುಃಕೃತಯುತನನಪರಾಧ[೧]ದಶ[೨]ಶತನ ೫೬

ಎನ್ನನೇನಂ ಮಾಡಿಕೊಂಬೆನೊ
ಎನ್ನ ದೋಷಕ್ಕಾವುದೋ ವಿಧಿ
ಯೆನ್ನ ಭಕ್ತಿವಿಹೀನತೆಗೆ ಪರಿಹಾರವೆಂತಹುದೋ
ಪನ್ನಗೇಂದ್ರಾಹುತಿಗೆ ಬೀಳ್ದೆನೊ
ಛಿನ್ನ ಛಿನ್ನಂ ಕಡಿದುಕೊಂಬೆನೊ
[೩]ಎನ್ನವೊಡಲಂ[೪] ಲಿಂಗಪೂಜಾನಿಷ್ಠೆಯಿಲ್ಲದಕೆ ೫೭

ತಿರುಗಿ ಬಾಹೆನೊ ಧರೆಯನೆಲ್ಲವ
ನುರಿಪ ಬೇಗೆಯೊಳೆಯ್ದಿ ಬೇವೆನೊ
ಶರಧಿಯೊಳು ಮಕರಾಶನಕ್ಕೆನ್ನೊಡಲನಿಕ್ಕುವೆನೊ
ಗಿರಿಯ ಶಿಖಿರವನೇಱಿ[೫] ಕೆಡೆವೆನೊ
ದುರುಳ ಮದಕರಿಗಾಂತು ಮಡಿವೆನೊ
ಗುರುಭಜನೆಯಿಲ್ಲದಕೆ ಶಾಂತಿಯದಾವುದವಧರಿಸಿ[೬] ೫೮

ಎನುತ ಬಿನ್ನೈಸುತ್ತ ನಮಿಸುತೆ
ವಿನಯಭಾವದೊಳಿಪ್ಪ ಜಗದೇ
ವನನೊಲವು ಮಿಗೆ ನೋಡಿ ಬಸವನು ಶಿವಗಣಾವಳಿಯ
ಅನುಮತದೊಳಿಂತೆಂದನಾತಂ
ಗಿನಿತು ಹೆದಱದಿರಿನ್ನು ಕೆಲ ಕೆಲ
ದಿನಕತಿ ಶಿವದ್ರೋಹವುದಯಿಸಲಾದುದಂತಾಗಿ ೫೯

೧–೨ ಶತ (ತ, ಥ, ನ). ೩–೪ ಎನ್ನೊಡಲನುಜಿ[೩] (ತ, ಥ, ನ). ೫ ಸು (ನ).

CC-0. Jangamwadi Math Collection. Digitized by eGangotri

ಮಡಿಹಿಂಸಾ ದ್ರೋಹಿಯ ನಮಗೊಡಂ
ಬಡಿಕೆಯಾಯಿತು ನಿನ್ನ ಕೆಲಸಕೆ
ಮೃಡನೊಲಿ[೧]ದು ತಾ ಮೆಚ್ಚುವನು ನಿಜ ನಿರ್ಣಯಕ್ಕಿಂತು
ಪಡೆವೆ ಭಕ್ತರ ಕರುಣವಂ ನಿನ
ಗೊಡೆಯರುಗಳುಂ ಕೂರ್ತು ಕೊಟ್ಟರು
ಬಡಿದು ಹಾಲಂ ಕುಡಿಸಬಂದರು ತಂದೆಗಳು ನಿನ್ನ ೬೦

ಮೂಜುಸೂಳಿಗೆ ನಂಬು ನೆಲೆ ನಿನ
ಗೇಱಿಸಿದರೀ ಬಿರಿದ ನೀನೇಳ್
ಜಾಱದಿರು ನೀನೆನಲು ಮುಕುಳಿತಹಸ್ತವಳಿಕದಲಿ
ಊಱಿ ನಮಿಸುತ ಪುಳಕತತಿ ತಲೆ
ದೋಱಿ[೨] ಕೈಯಂ ನೀಡಿ ಬೆಸನ
ಕ್ಕಾಱಿನೆನ್ನದೆ ವೀರದಂಬುಲವಂ ಕೊಳುತಲಾಗ ೬೧

ವಿನಯನಿಧಿ ಜಗದೇವಶರಣನ
ಮನೆಗೆ ಬಸವಂ ಭಕ್ತಲೋಕದೊ
ಡನೆ ಸಹಾಯಿಗಳಾಗೆ ನಡೆತಂದಾತನುಂ ಮಾಳ್ಪ
ಅನುನಯೋಚಿತಸತ್ಕ್ರಿಯೆಗಳಿಗೆ
ಮನವಣೆದ[೩]ಖಿಳ ಭಕ್ತರುಂ ತಾ
ನಿನವರತಮುಂ ಸುಖದೊಳಿರ್ದನು [೪]ಭಕ್ತಿ[೫]ಭಂಡಾರಿ ೬೨

ಅಂತು ಸಂಧಿ ೫೯ಕ್ಕಂ ಪದಗಳು ೩೫೩೮ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

೧ಸೆ (ತ, ಥ, ನ). ೨–೩ ರಂತಖಿಳ ಭಕ್ತರು । ಮು (ತ, ಥ, ನ). ೪–೫ ಮತ್ತೆ (ಡಾ, ಥ, ಪ, ಬ).

CC-0. Jangamwadi Math Collection. Digitized by eGangotri

ಸಂಧಿ : ೬೦

*

ಸೂಚನೆ : ಮುಳ್ಳು ಭಕ್ತದ್ರೋಹಿಯಂ ಕೊಲ
ವೇಳ್ದು ಜಗದೇವನನಿರಿಸಿ ಭವ
ವಳ್ದು ಬಸವನು ಸಂಗಮೇಶನೊಳೆಯ್ದು ಸಯವಾದ

ಮತ್ತೆಯುಂ ಕಲ್ಯಾಣಕಟಕದೊ
ಳುತ್ತಮಾಚಾರವ್ರತನಿಯಮ
ಚಿತ್ತರರು ಹರಳಯ್ಯ ಮಧುವಯ್ಯಗಳು ಶಿವತತ್ವ
ವೇತ್ತರುಂ ಹೋಹರರು ಮಾನುಷ
ಕೃತ್ತಿಪರಿವೃತ ರುದ್ರಪಗತ
ವಿತ್ತ ಮುಖ್ಯೇಷಣ ೧ವಿವರ್ಜಿತದ ಕರ್ಮಸಂಚಯರು ೧

ಲಿಂಗನಿಷ್ಠಾಮಾನಸರು ಗುರು
ಲಿಂಗಸೇವಾತತ್ಪರರು ಚರ
ಲಿಂಗ ನಿತ್ಯಾರಾಧಕರು ತ್ರಿವಿಧಪ್ರಸಾದಿಗಳು
ಹಿಂಗದಾ ಕಲ್ಯಾಣದಲ್ಲಿಯೆ
ಮಂಗಳೋತ್ಸುಕ ೩ಭಕ್ತ್ಯಗೋಷ್ಠಿಸು
ಸಂಗತಿಯೊಳಾ ಬಸವನುಂ ತಾವುಂ ಪ್ರವರ್ತಿಸಲು ೨

ಕೆಲವು ಕಾಲಕ್ಕೈಸಱಿಲಿ ಬಿ
ಜ್ಜಳನೃಪಾಲಂ ತನಗೆ ಕಾಲನ
ಪೊಳಲಿಗೆಯ್ದಲು ಬಗೆದು ಬಸವನ ಬಹಳ ಮಹಿಮೆಯನು
ಫಲದ ಭಕ್ತಿಮಹತ್ವದೊಂದ
ಗ್ಗಳಿಕೆಯಂ ತಾನಱಿದುಮಱಿಯದ
ವೊಲು ನೆರೆಯಲಚ್ಛಾನ ಮದದಿಂ ಕಾಣದತಿ ಮದಿಸಿ ೩

---

* ರಾಗ : ಗುಂಡಾಕ್ರೀ (ಅ, ಡಾ, ಧ, ಪ); ಮಲಹರಿ (ಅ, ಮ); ನಾಟಿ (ಚ); ಶಂಕರಾಭರಣ (ತ). ೧–೨ ನಿವಾ (ತ, ಥ, ನ). ೩–೪ ತತ್ವ (ಥ).

CC-0. Jangamwadi Math Collection. Digitized by eGangotri



ಕೃಷ್ಣಾ-ಮಲಪ್ರಭಾ ಸಂಗಮದಲ್ಲಿರುವ ಶ್ರೀ ಬಸವೇಶ್ವರ ಮಂಟಪ, ಕೂಡಲಸಂಗಮ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸೊಗಸದವದಿರ ಮಾತಿ[೧]ಗ್ಹಳ್ಳಿ[೨]
ಯ್ಯಗಳ ಮಧುವಯ್ಯಗಳನಾಗಳೆ
ಜಗತಿಪಂ ತಪ್ಪೇನುವಿಲ್ಲದೆ ನೀತಿಯಲ್ಲೆಂದು
ಬಗೆಯದವರಂ ಕರೆಸಿ ಕಣ್ಣಂ
ತೆಗೆಸಿದನು ಮಾಹೇಶ್ವರರ ಮಹಿ
ಮೆಗಳನುದ್ದಂಡತೆಗಳಂ ತಾನಱಿಯನೇ ಮುನ್ನಾ ೪

ಲೋಕಪಾಲಂ ಕೇಡ ಬಗೆದನೆ
ಈ ಕಟಕವಿನ್ನಳಿದುದಕಟ ಪಿ
ನಾಕಿಭಕ್ತರು ಮುನಿದಡಂ ಬದುಕುವನೆ ತಾನೆನುತ
ವ್ಯಾಕುಲಿತಯುತ ಹೃದಯರಾಗುತ
ನೇಕರುಂ ಗುಜುಗುಜಿಸುತಿರಲು
ದ್ರೇಕಿಸುತ ಬಸವಂ ಸಹಿತ ಹರಭಕ್ತಸಂದೋಹ ೫

ಅಸಮಕೋಪೋದ್ದೀಪಿತಾಂಗೋ
ಲ್ಲಸನರಾಗುತ ಕೂಡಿ ವಿಕ್ರಮ
ವೆಸೆಯೆ [೩]ಹಳ್ಳಿ[೪]ಯ್ಯನ ಮಧುವಯನ ಕಂಗಳಂ ಪಡೆದು
ಬೆಸನವಾಯಿತು ಶಿವನೊಳುಂ ವ
ರ್ಜಿಸಿದೆವಿನ್ನೀ ಊರನೆನುತಂ
ಬಸವನುಂ ಭಕ್ತಾಳಿಯುಂ ಜಗದೇವನಂ ಕರೆದು ೬

ನಿನ್ನ [೫]ಮುನ್ನಿನ[೬] ಭಾಷೆಯಂ ಸಲಿ
ಸಿನ್ನು ತದ್ರೋಹಿಯನಪಹರಿಸಿ
ನನ್ನಿಯಂ ಮೆಱಿ[೭] ಎನುತ ಜಗದೇವಂಗೆ ಬೆಸನಿತ್ತು
ತನ್ನರೇಂದ್ರನ ನೊಸಲ ಬರೆಹವ
ಮುನ್ನೊರೆಸಿ ಬಿಜ್ಜಳನ ಸಾಮ್ರಾ
ಜ್ಯೋನ್ನತಿಯನೀಶನ ಕವಳಿಗೆಯೊಳಂತು ತೊಡೆ[೮]ಯಿಸು[೯]ತ ೭

೧–೨ಗಲ್ಲ (ತ, ಥ, ಧ, ನ, ಪ). ೩–೪ಲಲ್ಲ (ತ, ಥ, ಧ, ನ, ಪ). ೫–೬ ಅಂದಿನ (ಧ, ಪ, ಸ). ೭–೮ಯಿನು (ಮ).

CC-0. Jangamwadi Math Collection. Digitized by eGangotri

ಇಲ್ಲಿ ಇವರವರೆನ್ನದೇ ನೀ
ವೆಲ್ಲರುಂ ಕೇಳೀಕ್ಷಣದೊಳೀ
ಬಲ್ಲಹನ ಸಾಮ್ರಾಜ್ಯಮುಂ ಕಲ್ಯಾಣಪಟ್ಟಣವು
ಎಲ್ಲವುಂ ಹಾಳಹುದು ದಿಟವನೆ
ಸೊಲ್ಲಿದೆವು ನಾವೆನುತ ಶಪಿಸುತ
ಬಲ್ಲಿದರು ಮಾಚಯ್ಯನವರುಂ ಮು[೧]ಸುಟಿ[೨] ಬೌಡಯ್ಯ ೮

ಬೊಮ್ಮಿದೇವಂ ಶರಣ ಕಿನ್ನರ
ಬೊಮ್ಮಿದೇವನು ಸುಮತಿ ಕನ್ನದ
ಬೊಮ್ಮಿದೇವನು ಕಕ್ಕಯನು ಮಸಣಯ್ಯ ಕಲಕೇತ
ಬೊಮ್ಮಿದೇವನು ಕೇಶಿರಾಜ
ಯ್ಯಂ ಮಹಾಂತನು ಮಾದಿರಾಜ
ಯ್ಯಂ ಮೊದಲಿನಿಪ್ಪಾ ಕಟಕದೊಳಗಿರುತಮಿ[೩]ಹ ಸರ್ವ ೯

ಲಿಂಗವಂತರು ತಂಡ ತಂಡದ
ಜಂಗಮಾವಳಿ ತಮ್ಮೊಡನೆ ಬರೆ
ಸಂಗಮೇಶ್ವರಪುರಕೆ ಬಸವಂ ನಡೆವುತಿರಲಾಗಿ
ಇಂಗಿತಾ ಬಿಜ್ಜಳನ ಸಂಪತ್
ಸಂಗತಾಂಬುಧಿ[೪]ಯಕಟ[೫] ಶಿವನ ಗ
ಣಂಗಳೆಲ್ಲರು ಹೋಗೆ ಕಟಕದ ಭಾಗ್ಯವಳಿಯಿತ್ತು ೧೦

ಧರಣಿ ಕಂಪಿತವಾಯ್ತು ಕಾಗೆಗ
ಳಿರುಳುಡುಗದಟಿಚಿದವು ಹಗಲುಂ
ನರಿಗಳೂಳಿದವುಳ್ಕು ಬಿದ್ದವು ಕಲ್ಲಮಳೆ ಮೇಲೆ
ಸುರಿಯಿತಾದಿತ್ಯೇಂದುಗಳನಾ
ವರಿಸಿತಾ ಪರಿವೇಶವತಿ ನಿ
ರ್ಭರದೊಳನಿಲಂ ಬೀಸಿದನು ಕೆಂಧೂಳಿ [೬]ನೆಗೆಯಿತ್ತು[೭] ೧೧

೧–೨ ಕ್ಕಿ (ತ, ಥ). ೩ ಲಿ (ಥ). ೪–೫ ಯಾಗ (ಧ, ಪ, ಬ). ೬–೭ ಮುಸುಕಿತ್ತು (ಧ, ಪ).

CC-0. Jangamwadi Math Collection. Digitized by eGangotri

ಹಗಲು ಮುಸುಗಿತು ಮಂಜುಗತ್ತಲೆ
ಗಗನದೊಳು ಭೀಕರ ಕೃತಾಂತನು
ವಿಗಡರೂಪಂ ತೋಱಿದನು ಪಟ್ಟಣ ಸಮೀಪದಲಿ
ಜಗತಿಯೊಡೆಯನು ಶರಿಸುವಿಲ್ಲದ
ಬಿಗಿದ ಹೆಣನಂ ಕಂಡನುದಯಾ
ದ್ರಿಗೆ ತರಣಿ ಬಹ ಸಮಯದಲಿ ಪ್ರತಿಯಿನನುದಯಿಸಿದನು ೧೨

ಇದಱ ಮೇಲೇನಾಗಲಾಗಿ
ರ್ದುದೊ ವಿನುತ ಸಂತಾಪಿಸುತ್ತಂ
ಹೆದಱುತಿರೆ ಜನವಿತ್ತಲಾ ಜಗದೇವನುಂ ತನ್ನ
ಸದನಕೈತರೆ ತಜ್ಜನನಿ ಕಂ
ಡೊದಱುತಾತನ ಮುಸುಡನೀಕ್ಷಿಸು
ತಿದು ಸದಾಚಾರೈಕಭಕ್ತಿಗೆ ಪಥವೆ ಕೇಳ್ಕಗನೆ ೧೩

ಶಿವಗಣದ್ರೋಹದ ವಚನವದು
ಕಿವಿಗೆ ಸಿಲುಕಿದ ಮಾತ್ರದಲಿ[1] ಹಗೆ
ಯವನನಮಿಕಾರ[2]ದೊಳಿಱಿಸಲ್[3]ಬೇಹುದಾಱಿದಡೆ
ಸವೆವುದೈ ತಾನಾದಡನುಮಾ
ನವನುಳಿದು ಶಿವಭಕ್ತನಿಕರವು
ಸವೆಯಿಸಲ್ಕಿದಕೋಸರಿಸಿದಾ ಚಂಡಿಯಾದಡೆಯು ೧೪

ಸಾಯಲಾಱಿದೆ ಜೀವವಂಚಕ
ಕಾಯಧಾರಿಗೆ ಕೋಪಿಗಜ್ಞಾ
ನಾಯತಂಗುಪಜೀವಕಂಗತಿ ಕುಟಿಲನಾದಂಗೆ
ಶ್ರೇಯುಮಾರ್ಧಶರೀರಿ ಮಾಯಿಕ
ಮಾಯಿಕಂ ಮೆಚ್ಚುವನೆ ಭಕ್ತಿವಿ
ಧೇಯನಪ್ಪನೆ ಕೂರ್ಪನೇ ಪಲವಾಡಲೇಕಿನ್ನು ೧೫

೧–೨ ವದಿ (ತ. ಸ). ೩ ಲ್ಲಾ (ಚ). ೪–೫ ದಿ ಸವೆಯಿಸಲು (ಧ. ಪ. ಸ).

CC-0. Jangamwadi Math Collection. Digitized by eGangotri

ರಾಗದಿಂ ಕೃತಮೆಂದು ಜೀವ
ತ್ಯಾಗಕೋವಿವ ಸರಸಮುಚಿತೋ
ದ್ಯೋಗವಂ ನಿನಗಿತ್ತು ಹೋದರದಲ್ಲದೇ ಖಿಳನ
ಆಗಳೇಂ ಕೊಲಲಂಜಿ ತೊಲಗಿದ
ರೇ ಗಣಂಗಳು ಕೇಳವರೊಳಂ
ತಾಗಿ ವೊರ್ಬನು ಮುನಿದಡಂ ಲೋಕ ಪ್ರಳಯವಹುದು ೧೬

ಅಂದು ದಕ್ಷನದಕ್ಷನೆನಿಸಿ ಆ
ಮಂದಗರ್ವಿತನಾಗಿ ಹರನಂ
ನಿಂದಿಸಲು ಪತಿನಿಂದೆಯಂ ಕೇಳದೆ ಶಿವಾ ಎನುತ
ಸೌಂದರಾಂಗಿ ಭವಾನಿ ಕಲುಷಿತ
ದಿಂದೊಗೆದು ನಿಗೆದುರಿವುರಿಗೆ ಭರ
ದಿಂದ ಆಹುತಿಗೊಟ್ಟಳಲ್ಲಾ ತನ್ನ ದೇಹವನು ೧೭

ರೂಪಿಸುವ ತನ್ನೀಶನಿಂದಾ
ಲಾಪವಂ ಕೇಳದೆ ಮನದೊಳತಿ
ಕೋಪದಿಂದುಪಮನ್ಯುವಾಗಳೆ ಭಸ್ಮವಾದನಲಾ
ಗೋಪವಾಹನ ಭಕ್ತಹಿಂಸೆಯ
ನೀ ಪರಿಯೊಳೆಲೊ ಕೇಳುತಿರ್ದುಂ
ಪಾಪವೆನ್ನದೆ ಸುಮ್ಮನಿಹುದಿದು ನೀತಿಯೇ ನಿನಗೆ ೧೮

ಹಿಂದೆ ಭಕ್ತದ್ರೋಹಿಯರ ನೀ
ಕೊಂದು ಬಂದೈ ಇತ್ತಲೂಟಕೆ
ಬಂದೆ ಈ ಹುಲು ಊಟವಿನ್ನೆಹಗಿಂಪಹುದು ಕೇಳಾ
ನಿಂದಿರಾ ಭಿಃ ಕುನ್ನಿ ಕೈ ಕೈ
ಯಿಂದೆ ಶಿವಲಿಂಗಪ್ರಸಾದವ
ನಿಂದು ನಾಚಿಕೆಯಿಲ್ಲದಡೆ [೧]ನಾಯ್ಗ್ಳೈದುಡುಕು[೨] ಬಂದು ೧೯

೧–೨ ನಾಯ್ಬೈದುಕು (ಬ) : ನಾಯ್ಗುದುಕು (ಚ).

CC-0. Jangamwadi Math Collection. Digitized by eGangotri

ಎನುತವಿಂತುಬ್ಬಿಚ್ಚಿರೇಯೆಂ
ದೆನುತ ಚಿಟುಕಿಕ್ಕುತವೆ ತನ್ನರ
ಮನೆಯ ಹಿತ್ತಿಲಬಾಗಿಲಲಿ ಲಿಂಗಪ್ರಸಾದವನು
ಜನನಿ ತಂದವನಿಯಲಿ ಸುರಿಯಲು
ಶುನಕನಂದದೊಳುಚಿತವಹುದಹು
ದೆನುತ ಜಗದೇವಂ ಪ್ರಸಾದವನುಂಬ ಸಮಯದಲಿ ೨೦

ಲಿಂಗವಂತರು ಮೊಲ್ಲಿಜೊಮ್ಮ
ಯ್ಯಂಗಳೆನಲತಿ ವೀರಭಕ್ತಿ ಸು
ರಂಗದಿಂ ವರ್ತಿಸುತಿಳೆಯೊಳೀ ವಾರ್ತೆಯಂ ಕೇಳ್ದು
ಹಿಂಗದಾ ಜಗದೇವನೆಡೆಗೆ ಕ
ಡಂಗಿ ಬಂದೊಂದಾಗಿ ತಾವು
ತ್ತುಂಗ ವಿಕ್ರಮರಾ ಪ್ರಸಾದವನಾಗಳನುಭವಿಸಿ ೨೧

ದೇವವಸ್ತ್ರವನುಟ್ಟು ಭಸ್ಮಾಂ
ಗಾ ವಿಭೂಷಣರಾಂಕಿತಾ ವೀ
ರಾವತಾರರು ವೀರಭದ್ರಾದಿ ಪ್ರಮಥವರರ
ಭಾವದಲಿ ನೆನೆದುಗ್ರಕೈದುಗ
ಳೋವಿ ಮೂವರು ತಮತಮಗೆ ಪರಿ
ದಾ ವನಿತೆಗೊಲಿದೆಱಿಗಿ ಹರಕೆಯ ಸೇಸೆಗಳ ಧರಿಸಿ ೨೨

ನಿಳಿಯವಂ ಪೊಱಿಮಟ್ಟು ಬರಲತಿ
ಬಳವೃಷಭ ಕಲೆವುತ್ತ ಮುಂದಿಯ
ತೊಲಗಿಸುತ ಮುಂದೆಸೆಗೆ ದಾರಿಯ ತೋಱಿ[1] ನಡೆವುತಿರೆ
ಕೆಲಸ ತಳುವಿದಡೆಮ್ಮ ಮೇಲಣ
ಒಲುಮೆಯಿಂ ಬಸವೇಶ ಬಂದನು
ನಲವಿನಿಂ ನೆರವಾಗಿ ಕರೆಯಲ್ಕಿದುಪಲಾ ಎನುತ ೨೩

---

೧ ಲ್ಲಿ (ತ, ಥ, ಧ, ನ).

CC-0. Jangamwadi Math Collection. Digitized by eGangotri

ಬರಬರಲು ಸಂದಣಿಪ ನಾನಾ
ಕರಿ ಘಟಾವಳಿ ಮಾವತಿಗರುಂ
ತುರಗಚಯದೇಱಾಟದಾ ರಾಹುತರ ಸಂದೋಹ
ನೆರೆದು ಬರುತಿಪ್ಪವರ್ಗಳೆಲ್ಲಂ
ತರಿಸಿ ದಾರಿಯನೀಯೆ ಧೀರರು
ಉರವಣಿಸಿ ವೀರಾವತಾರರು ಮೂವರೆಯ್ತರಲು ೨೪

ಹರಿಗೆಗಳ ಅಡ್ಡಾಯುಧಂಗಳ
ಕರದ ಕರವಾಳುಗಳ ಬಿಲುಗಳ
ಸರಳ ಹೆದೆಗಳ ಸಬಳಗಳ ಈಟಿಗಳ ಕೋಲುಗಳ
ಸುರಿಗೆಗಳ ಶೂಲಾಯುಧಂಗಳ
ಪರಿಪರಿಯ ಕೈದುಗಳ ಪಿಡಿಪಿಡಿ
ದುರವಣಿಯ ಸಂದಣಿಯ ಪರಿವಾರಂಗಳನ್ಮೆಳುಹಿ ೨೫

ಉಟ್ಟ ಪಟ್ಟಾವಳಿಯ ಮೇಲಳ
ವಟ್ಟ ಬದ್ದುಗೆದಾರದೊಂಗಲ
ಕಟ್ಟಿ ಮೆಱಿವ ಕಠಾರಿಗಳ ಹೊಂಗಟ್ಟುಗಳೊಳಿಸವ
ಇಟ್ಟ ಕಬ್ಬುನ ಕೋಲುಗಳ ಪಿಡಿ
ದಿಟ್ಟಣಿಸಿ ಬಹ ಕೊಟ್ಟಗಾಱರ
ನೆಟ್ಟನೇಕಾಂಗಿಗಳನೆಲ್ಲರನೊಟ್ಟಯಿಸಿ ನಡೆದು ೨೬

ಕಾಲಕಡೆಹದ ಪೆಂಡೆಯಂಗಳ
ತೋಳಮಣಿಗಳ ಹಸ್ತಕಡಗದ
ನೀಲಮುತ್ತಿನ ತೊಂಬೆಗಡುಕಿನ ಕೊರಳ ದಾರಗಳ
ಜೋಲುವುತ್ತರಿಗೆಗಳ ಸರಪಳಿ
ಜಾಳದಾಭರಣಂಗಳಂ ಧರಿ
ಸೋಲಿಯಿಂದವೆ ಹಳಚುವಚ್ಚಾಳುಗಳನುಂ ಕಳೆದು ೨೭

೧–೨ ಳುಮಂ (ಕ, ಬ); ಪಳಕಳೆ ಕಳೆದು (ಚ).

CC-0. Jangamwadi Math Collection. Digitized by eGangotri

ಅಂದಣದ ಸಂದಣಿಯ ದೊಂ[೧]ದಣ
ಮಂದಿಯಿಬ್ಬಗಿಯಾಗಿ ಹಿಂಬೆರ
ಕಿಂದವಂದುಂ ತೊಳತೊಳಗುತುಚ್ಚಿಳಿಸಿ ನಡೆತರುವ
ಮುಂದೆ ತೊಲಗದೆ ಬಪ್ಪವರ ಮುಡು
ಹಿಂದಣಿದು ಹೊಯ್ವುತ್ತ ಕೈದುಗ
ಳಿಂದ ಚಿಮ್ಮುತ ಬಂದು ಹೊಕ್ಕರು ರಾಜಮಂದಿರವ ೨೮

ದ್ವಾರದ್ವಾರಂಗಳೊಳಗಲದಿಹ
ಪಾರಕರ ಬಗೆಗೊಳ್ಳದಂತ
ರ್ದ್ವಾರದಾ ಸಾವಾಸಿಗಳ ಮೀಱುತ್ತ ನಡೆತರಲು
ಭಾರತ ನಿಯೋಗಾಳಿ ಜನಪದ
ಪಾರ ವಿಭವಗಳಿಂದ ಪಾರಾ
ವಾರ ಗಂಭೀ[೨]ರಗಳೆಸೆವ[೩] ನೃಪಸಭೆ [೪]ಮೆಱೆ[೫]ವುತಿರಲು ೨೯

ಲಾಳ ಮಾಳವ ಗೌಳ ಕುರು ನೇ
ಪಾಳ ವಿರ್ದರ ಬರ್ಬರಂ ಪಾಂ
ಚಾಳ ಗುರ್ಜರ ಸಿಂಹಳಂ ಭೂಪಾಳರೋಲೈಸೆ
ಸಾಲ ಕೈದೀವಿಗೆಗಳಿಕ್ಕೆಲ
ದಾಲವಟ್ಟಂ ಚವರ ಕುಂಚಂ
ಢಾಳವಿಸೆ ಗದ್ದುಗೆಯ ಮೇಲಿಹ ಬಿಜ್ಜಳನ ಕಂಡು ೩೦

ಆ ಇರುಳಿನೋಲಗಕೆ ಗಮನಿಸಿ
ರಾಯನಂ ಕಾಣುತ್ತವೈಸಱಿ[೬]ಂ
ಳಾಯುಧಂಗಳನುರ್ಚಿ ಸಭೆ ರುಳ್ಳಿನಲು ಬಿಜ್ಜಳನ
ಕಾಯದಲಿ ಒಂದೆರಡು ಮೂರ್ಪ್ರ
ರಾಯ ಘಾಯದೊಳಿಱಿ[೭]ದು ಕೆಡಹಿಯ
ಜೇಯರಸಮರು [೮]ಮೂವರು[೯]ಗ್ರೋದಗ್ರವೃತ್ತಿಯಲಿ ೩೧

೧ಗೊಂ (ಥ, ಸ). ೨–೩ ರಂ ಮೆಱಿ[೪]ವ (ಧ, ಪ); ರಂ ಮೊಱಿ[೪]ವ (ತ). ೪–೫ ಎಸೆ (ಧ, ಪ). ೬–೭ ಕೊಂದು (ಸ).

CC-0. Jangamwadi Math Collection. Digitized by eGangotri

ಆರುತಾರುತ ಲಂಘಿಸುತ್ತ ಶ
ರೀರದೊಳು ರೋಮಾಂಚಕಂಚುಕ
ಪೂರವಾಗುತ್ತುಬ್ಬುತಂ ಕೊಬ್ಬುತ್ತ ಬೊಬ್ಬಿಡುತ
ವೀರಭಕ್ತರಿಗಿದಿರು ಮಲೆವವ
ರಾರೆನುತ್ತಂ ಗಹಗಹಿಸುತ ಕ
ಠಾರಿಗಳನುದ್ದಕ್ಕೆ ಚಿಮ್ಮುತ್ತೊಡನೆ ತಿರುಹುತ್ತ ೩೨

ಪಾಂಡುರಂಗಂ ತ್ರಿತನುವಂ ಕೈ
ಕೊಂಡು ಬಂದವೊಲಿತ್ತ ಮೂವರ
ದಂಡಿ ಲೇಸಾಯ್ತೆನುತ [೧]ಭಕ್ತರು[೨] ಕೀರ್ತಿಸುತ್ತಿರಲು
ಚಂಡಬಲರೀ ಪರಿಯೊಳತ್ಯು
ದ್ದಂಡಿಕೆಯೊಳಾ ಬಿಜ್ಜಳನ ತಲೆ
ಗೊಂಡ ಗಂಡಾ ಎಂಬ ಪೂರ್ಣಾಪೂರ್ಣ ರವವೆಸೆಯೆ ೩೩

ಅತ್ತಲರಮನೆಯಿಂದ ಪೊಱಮ
ಟ್ಟಿತ್ತ ತನ್ನರಮನೆಗೆ ವೀರಂ
ಬೆತ್ತು ಮೊಲ್ಲೆಯ ಬೊಮ್ಮಯಂಗಳು ತಾನುವೆಯಿತಂದು
ಹೆತ್ತತಾಯಿಗೆ ವಂದಿಸುತ ನಾಂ
ಪೊತ್ತ ಹಿಂದಣ ಕೆಲಸವಿಂದಾ
ಯಿತ್ತೆ ಎಂದುತ್ತಮೆಯ ಕೃಪೆಯಂ ಪಡೆದು ಜಗದೇವ ೩೪

ಇಹ ಪರೇತರ ವರನರಕ ವಿ
ಗ್ರಹನನೀಶ್ವರಭಕ್ತಜನ ನಿ
ಗ್ರಹನನಪಹರಿಸಿದಡನಿತಱಿಂಗಳೆ ಹೋಗದಾ ಖಿಳನ
ಅಹಗೆ ಕೊಲ್ಲದೆ ಬಂದ ತಪ್ಪಿಗೆ
ವಿಹಿತವಿನ್ನೊಂದುಂಟು ದಂಡನೆ
ಯಿಹಗೆನುತ್ತವೆ ತನ್ನ ಶಿರವಂ ತಱಿದುಕೊಳಲೊಡನೆ ೩೫

೧–೨ ಭಟ್ಟರು (ತ. ಥ. ನ).

CC-0. Jangamwadi Math Collection. Digitized by eGangotri

ಗೋತ್ರಪುತ್ರೀನೇತ್ರದಶಶತ
ಪತ್ರಮಿತ್ರಂ ಮಚ್ಚಿಯಾತನ
ಪುತ್ರ ಪೌತ್ರ ಕಳತ್ರ ಮಿತ್ರಪ್ರಮುಖಿಗೋತ್ರರನು
ಚಿತ್ರಮೆನೆ ಮಣಿಮಯ ಸುವರ್ಣ ಪ
ವಿತ್ರಿತ ವಿಮಾನಂಗಳಲಿ ನಿಜ
ಗೋತ್ರದಲ್ಲಿಂಗೊಯ್ದನಾ ಪುರಜನರು ನೋಡಲ್ಕೆ ೩೬

ಹೊದ್ದದೊಬ್ಬಬ್ಬರು ಕಲಹವಾ
ಗೆದ್ದು ತಾವಿಟಿದಾಡಿದರು ಪುರಿ
ದೊದ್ದೆ[1]ಪೋಪಿದುದು ಹುಟ್ಟಿದುದು ವಿಪರೀತವದಟಿ[2]ಕೊಳಗೆ
ಇದ್ದ ಭಕ್ತರು ವಾರ್ತೆಯಂ ಕೇ
ಳ್ದಿದ್ದ ಭಕ್ತರು ಕೂಡಿ ನೋಡು
ತ್ತಿದ್ದ ಭಕ್ತರು ಹೋದರೊಂ[ದೊಂ]ದೆಡೆಗೆ ಐಸಟಿಲಿ ೩೭

ಮಾನವೇಂದ್ರನು ಮಡಿದಡಾತನ
ನೂನ ಲಕ್ಷ್ಮಿಯಲಕ್ಷ್ಮಿಯಾಯಿ
ತ್ತಾ ನಗರಿಯಾ ಯಮನ ನಗರಿಯೊಲಾಯ್ತುದೇವೊಗಳ್ವಿ
ಆ ನರಾಧಿಪ ಬಿಜ್ಜಳನ ಸಂ
ತಾನವೆಲ್ಲಂ ಕಡೆಗೆ ನಿಸ್ಸಂ
ತಾನವಾಯಿತು ಕುಮರೆಗಳು ಶಾ[3]ಲೆಗಳೊಳಿ[4]ದ್ದಹಗೆ ೩೮

ಉರಿದು ಬಿಕ್ಕನೆ ಬಿರಿದು ಬಿದ್ದವು
ಸುರಿಯೆ ಬಾಲಂಗಳಲಿ ಕೆಂಡವು
ಕರಿಗಳುಂ ಕರಿಗಳೊಳು ಕನಲ್ದಿದಿರಾಗಿ ಮಿಗೆ ತಾಗಿ
ಧರಣಿತಳದೊಳು ಕೆಡೆದು ಮಡಿದವು
ನೆರೆದ ಸಾಮಂತಾದಿ ಭಟ ಪರಿ
ಕರನಿಕರವುದ್ಭ್ರಮಿಸಿ ಸವೆದರು ಕಾದಿ ತಮ್ಮೊಳಗೆ ೩೯

೧–೨ ಪೊಡ (ತ, ಥ, ನ, ಪ). ೩ ಸಾ (ಥ, ಪ, ಸ). ೪–೪ ದ್ದಂತೆ (ತ, ಥ, ನ).

CC-0. Jangamwadi Math Collection. Digitized by eGangotri

ಬಸವರಾಜನ ಸತ್ಯ ಶಾಪವು
ಮಸೆದೊರಸಿ ಹಾಳಾಯ್ತು ಕಟಕದ
ಪಸರವನಿತಱಿಗೊಳಿನಿತುಮಂ ಕೇಳಿದನು ಕೂಡಲಿಗೆ
ಸಸಿನೆ ತಾನೆಯ್ದಿದನು ಕಂಡನು
ಅಸಮ ಸದ್ಗುರು ಸಂಗಮೇಶನ
ನೊಸೆದು ತನುಪುಳಕಂಗಳುಗೆ ಸಾಷ್ಟಾಂಗವಱಿಗಿದನು ೪೮

ಭಕ್ತರುಂ ತಾವುಂ ಬಸವನನು
ರಕ್ತಿ ಮಿಗೆ ಗೋಷ್ಠಿಪ್ರಸಂಗ
ಪ್ರೋಕ್ತಿಯಿಂದಾ ಪುರದೊಳಿರ್ದನು ಸುಖದೊಳೈಸಱಿಲಿ
ಭಕ್ತಿಯೊಳು ಗುರುಲಿಂಗಭಜನಾ
ಸಕ್ತಮಾನಸನಾಗಿ ಮಂಜುಳ
ಸೂಕ್ತಿಯಿಂ ರಸಮೊಸರಲಿಂಪುಗೆ ಕೀರ್ತಿಸುತಮಿರ್ದ ೪೯

ಸ್ತೋತ್ರ

ಸರಸಮಯದಶಶತಕರಕ ಶಶ
ಧರನಯನ ಗದಘನಪವನ ವನ
ಧರಗಮನ ವನಶಯನನತಪದ ಭವಗಹನದಹನ
ವರದಕರ ಯಮಶಮನ ಗತಭಯ
ದರಹಸನಸಹವದನ ಗರಧರ
ಹರ ಕನಕನಗಸದನ ಚಿರಭವ ಮದನ ಮದದಮನ ೪೯

ನಿರವಮಾನ ನಿರಜ್ಞ ನಿಶ್ಚಲ
ನಿರಸನೇಂದ್ರಿಯ ನಿರ್ವಿಷಯ ನಿ
ರ್ನಿರುಹರಣ ನಿರಸೂಯ ನಿರ್ವಾಣಪದ ನಿರ್ವಿಘ್ನ
ನಿರತಿಶಯ ನಿಸ್ಸೀಮ ನಿಗಮೇ
ತರ [೧]ಗಿರೀಶ್ವರ[೨] ನಿಃಪಿತ ನಿರು
ತ್ತರ ನಿರಾಮಯ ನಿರ್ವಿಕಾರಾಕಾರ ಚಿತ್ಪ್ರಸು ೪೩

೧ನಿ (ತ, ನ). ೧–೨ನಿರರ್ಗಳ (ಪ).

CC-0. Jangamwadi Math Collection. Digitized by eGangotri

ನಿರುಪಮಾನ ನಿರಧಿಕ ನಿರ್ಭಯ
ನಿರತ ನಿಷ್ಕಳ ನಿಸ್ತ್ರಿಗುಣ ನಿ
ರ್ಮರಣ ನಿರವಯ ನಿಷ್ಕಳಂಕ ನಿರಂತ ನಿಶ್ಚಿಂತ
ನಿರಜ ನಿರ್ಜರ ನಿತ್ಯನಿರ್ಮಳ
ನಿರಘ ನಿರ್ಭವ ನಿರ್ವಿರಳ ನಿ
ಸ್ಮರಣ ನಿರ್ವ್ಯದ್ಯಾಂಗ ನಿಜ ನಿರ್ಮಾಯ ಚಿತ್ರೈಸು ೪೪

ಪರಮತತ್ವಕಳಾಪರಿಮಿಳಿತ
ಪರತರಾಪರಿಮಿತ ಸುಗುಣಪದ
ಪರಮ ಪುರುಷತ್ರಯ ಪರತ್ರ ವಿಚಿತ್ರಚಾರಿತ್ರ
ಪರಮಪರ ಪರಮಾತ್ಮ ಪರಮೇ
ಶ್ವರ ಪರಬ್ರಹ್ಮಾದಿ ತತ್ಪರ
ಪರ ಪರಂಜ್ಯೋತಿಸ್ವರೂಪ ನಿರೂಪ ಚಿತ್ರೈಸು ೪೫

ಶಾಶ್ವತಾಯ ಮಹೇಶ್ವರಾಯ ಗಿ
ರೀಶ್ವರಾಯ ಉಮೇಶ್ವರಾಯ ಗ
ಣೇಶ್ವರಾಯ ಮುನೀಶ್ವರಾಯ ಸು[೧]ರೇಶ್ವರಾಯ ನಮೋ
ವಿಶ್ವಲೋಕಾಧೀಶ್ವರಾಯ ಧ
ನೀಶ್ವರಾಯ ಪರೇಶ್ವರಾಯ ಮ
ದೀಶ್ವರಾಯ ನಮೋ ನಮೋ ಗುರು ಸಂಗಮೇಶಾಯ ೪೬

ಅಕ್ಷಯಾಯ ಮಹೋಕ್ಷಗಾಯ ಪ
ಡಕ್ಷರಪ್ರಣುತಕ್ಷಯಾಯ ವಿ
ಪಕ್ಷದಕ್ಷಮಖಿಕ್ಷಯಾಯ ಭವಕ್ಷಯಾಯ ನಮೋ
ಇಕ್ಷುಕೋದಂಡಕ್ಷಯಾಯ ಪು
ರಕ್ಷಯಾಯ ಸಮಕ್ಷಗತ ಮ
ದ್ರಕ್ಷಣಾಯ ನಮೋ ನಮೋ ಗುರು ಸಂಗಮೇಶಾಯ ೪೭

---

೧ ಪ (ಬ).

CC-0. Jangamwadi Math Collection. Digitized by eGangotri

ಪಾಹಿ ಮಾಂ ವಿನಮಜ್ಜನಾರ್ದನ
ಪಾಹಿ ಮಾಂ ದುರಿತಾಘಮರ್ದನ
ಪಾಹಿ ಮಾಂ ಮಜ್ಜನರಜ್ಜುಲವಿತ್ರ ಸಿತಗಾತ್ರ
ಪಾಹಿ ಮಾಂ ಕಾರುಣ್ಯಸಿಂಧುವೆ
ಪಾಹಿ ಮಾಂ ಶರಣೈಕಬಂಧುವೆ
ಪಾಹಿ ಮಾಂ ಗುರು ಸಂಗಮೇಶ್ವರದೇವ ಮದ್ದೇವ ೪೮

ಜಂಗಮಾಂಗಾ ಸಂಗಗಂಗಾ
ರಂಗಿದಳ ತರಂಗ ಸಂಗತ
ಪಿಂಗಳ ಜಟಾಜೂಟ ಕರುಣಾಪಾಂಗ ಮಾಂ ತ್ರಾಹಿ
ಮಂಗಳಾಂಗ ಮದಂಗಜಾಂಗ ವಿ
ಭಂಗ ವಾಮಾರ್ಧಾಂಗ ಮಹಿಮೋ
ತ್ತುಂಗ ಕೂಡಲ ಸಂಗಮೇಶ್ವರಲಿಂಗ ಮಾಂ ತ್ರಾಹಿ ೪೯

ನಯನಕರ್ಣಾಹಾರವಾಹನ
ನಯನ ಭುವನೇಶಯವನಭುವನ
ನಯನ ನಯನತ್ರಯನಯನ ಕರ್ಣಾಕಲಿತಕರ್ಣಾ
ನಯನಕರ್ಣಾಶನ ವರಧ್ವಜ
ನಯನ ಭುವನೇಜಾರ್ಚಿತಕ್ರಮ
ನಯನಕರ್ಣವಿಪಕ್ಷಲಕ್ಷಕ ರಕ್ಷಿಸೈ ಎನ್ನ ೫೦

ಸಾಮವೇದಾಗಮ ವಿವಾದೋ
ದ್ಧಾಮ ವಸ್ವಗಸದ್ಮ ಸೋಮಾ
ವಾಮ ಸಮ್ಮೋದಾಂಗ ಸುವಸುವಿವಸ್ವದಿಂದುಗುವ
ವಾಮದೇವ ಸದಾದಿ ಸೀಮಾ
ಸೀಮ ವಾಸವ ವಾಸುದೇವ
ಸ್ವಾಮಿ ಗದದವದಾವ ಸಂಗಪುದೇವ ಮದ್ದೇವ ೫೧

---

೧ ದಂ (ಸ).

CC-0. Jangamwadi Math Collection. Digitized by eGangotri

ಕಾಲಕಾಲಾತೀತ ದರ್ಪಿತ
ಕಾಲಕಾಲ ಕಪಾಲಿಕರತಳ
ಕಾಳಿಕಾಕುಚಕುಂಕುಮಾಂಕ ವಿಶಾಲಘನವಕ್ಷ
ಕಾಲಕೂಟಗ್ರೀವ ಹರಿಕಂ
ಕಾಳಧರ ಹರ ನಿಮ್ಮನೆಲ್ಲಾ
ಕಾಲದೊಳು ಕೀರ್ತಿಸುವೆನರ್ಚಿಸುವಂ ಭಜಿಸುತಿಹೆನು ೫೨

ಆತ್ಮಲಿಂದ್ರಿಗಜನಜಂಗ
ತ್ಮತ್ಮಲಚ್ಯುತನಚ್ಯುತಂಗ
ತ್ಮತ್ಮಲತ್ಮಲು ರುದ್ರನಾ ರುದ್ರಂಗೆ ಈಶ್ವರನು
ಆತ್ಮಿಲಿಂ ಮುನ್ನತ್ಮಲೀಶಂ
ಗತ್ಮಲತ್ಮತ್ಮತ್ಮಲತ್ಮಲು
ಮತ್ತೆಯು ಸದಾಶಿವನ ಮೇಲಣ ತತ್ವಿ ನೀವಲ್ಲಾ ೫೩

ಇಂತು ಸದ್ಗುರುವಂ ಸಮಧುರಾ
ನಂತ ಸಲ್ಲಾಪಾರ್ಚನಾದ್ಯ
ಶ್ರಾಂತ ಸಮುಚಿತ ಸತ್ಕ್ರಿಯಾದಿಗಳಿಂದ ತಣಿಸಿದನು
ಸ್ವಾಂತವಲರಿಸಿ ಭಜಿಸಿದನು ನಿ
ಶ್ಚಿಂತದಿಂ ಪಿತುತಿಸಿದನು ಮೆಚ್ಚಿಸಿ
ದಂ ತವಕದಲಿ ಬಿನ್ನವಿಸಿದನು ಪ್ರಾರ್ಥಿಸಿದನೊಸೆದು ೫೪

ದೇವ ಶರಣಮನೋನಿವೇಶನ
ದೇವ ಮದ್ಭವಪಾಶನಾಶನ
ದೇವ ಸದ್ಗುರುದೇವ ಮತ್ಕುಲದೈವ ಮಜ್ಜೀವ
ದೇವ ಸಂಗಮದೇವ ಮದ್ವರ
ದೇವ ನಿಜಭಕ್ತ ಪ್ರಸಾದವ
ನಾವಗಂ ಬಿಡದುಂಡು ಬಾಳ್ದಿಂತಾದೆನಂತಾಗಿ ೫೫

೧–೨ ಕಂಧರ (ತ). ೩–೪ ಲಿತ್ತತ್ಮತ್ತ (ತ, ಥ, ನ, ಪ). ೫–೬ ಮೇಲು (ತ, ಥ, ನ). ೭–೮ ದೊಲಿ (ತ, ನ).

CC-0. Jangamwadi Math Collection. Digitized by eGangotri

ಭವಭವಂಗಳೊಳವರ ಕಿಂಕರ
ರವರ ಕಿಂಕರನಾಗತಕ್ಕಪ
ನವರ ಋಣದಲಿ ಹೋದುದುಂಟಿಂತಲ್ಲದೇ ನಿನ್ನ
ಅವಸರಿಸಿ ನಾ ಬೇಡಿದಡೆ ಇನಿ
ತುವನೆನಗೆ ಕೊಟ್ಪಿಡೆಯು ತಪ್ಪಿನ
ನೆವದಿ ಸೈರಿಸಿ ಕಾಯ್ದೆಡೆಯು ನೀವುಳ್ಳಡಂ ಹೇಳ ೫೬

ಹಿಂದೆ ನಿನ್ನೊಳು ಪುಟ್ಟಿದದು ಮೊದ
ಲಿಂದುತನಕೊಂದಡಕೆ ಹಂಗಿನೊ
ಳೊಂದೆನುಸಿಕನೆ ನಿನ್ನ ನಾನೋಲೈಸಿದೆನು ಹೊದ್ದಿ
ಕುಂದದಲಸದೆ ಬಿಟ್ಪಿಗೆಲಸಕೆ
ಸಂದು ಮಾಡುತ್ತಿರ್ದಡದು ನಿನ
ಗಂದವಲ್ಲಾ ದೇವ ಸಾವಿರ ವರುಷವಾದಡೆಯು ೫೭

ಇಂತು ಮೌನದೊಳಿಹುದುಚಿತವೆ ಪು
ರಂತರಾಣೆನ್ನಾಣೆ ಅಸ್ಮತ್
ಕಾಂತ ವೃಷಭಾರೂಢ ನಾ ಬಿನ್ನೈಸುತಿರಲಾಗಿ
ಮುಂತೆ ಕೇಳದೆ ನಿನ್ನ ವೃಷಭನ
ನೆಂತು ಬಿಡಬಹುದೊಲ್ಲೆನೊಂದನು
ಸಂತಸದೊಳಿದು ಸೋಲವಲ್ಲೆನಗೀ ವ್ರತವನಿತ್ತು ೫೮

ಅತುಳಿತಾನಂದಿತ ಪರಮೇ
ಯುತ ಮಹಿಮ ತತ್ವಸ್ಫುರಣಗತಿ
ಮತಿ ಸಕಾಯ ಸಕರ್ಮ ಚ್ಯುತನ್ಯಸ್ಫುರ[೧]ತಿವಿತತಿ
ಸತತಮುಂ ನಿಮ್ಮಲ್ಲಿರಲು ಸ
ಮ್ಮತಿಸಿ ಕರುಣಿಸು ನಿಮ್ಮಯಾಜ್ಞೆಯ
ಗತಿವಿಡಿದು ಬಂದುಳ್ಳ ಕೆಲಸವನೆಯ್ದೆ ಮಾಡಿದೆನು ೫೯

---

೧ ಗ (ಧ).

CC-0. Jangamwadi Math Collection. Digitized by eGangotri

ಎನಲು ತದ್ಗುರುಮೂರ್ತಿ ಕರುಣಾ
ನಿಧಿವನೇಜಮನಲರಿಸುತ ಮು
ನ್ನಿನ ಪರಿಯನುಳಿದಾಕ್ಷಣದೊಳಾ ದೇಗುಲದೊಳಿರ್ದು
ಮನವೊಸೆದು ಪೊಱಮಡಲು ಕಾಣುತ
ವಿನುತಿಸುತವಾ ಬಸವನಾ ಗುರು
ವಿನ ಚರಣಸರಸಿಜಯುಗಕೆ ಪಣತಿಯೊಂದಿ[೧] ವಂದಿಸುತ ೬೦

ಭರಿತ ಸರಸಾನಂದಲೋಚನ
ಶರಧಿ ಮೇಲ್ವರಿದೊತ್ತಿ ಪಸರಿಸೆ
ನಿರತ ಗದ್ಗದ ಕಂತಮೆಸೆಯಲುಮುತ್ಪುಳಕರಾಜಿ
ನೆರೆದು ಪರ್ಬಲು ತನುವಿನೊಳು ತ
ತ್ಪರ ಹೃದಯನಾಗಿರ್ದ ಮಗನಂ
ಕರಮೊಸೆದು ಕರದಿಂ ನೆಗಹಿ ತನ್ನ ಪ್ರಸಾದವನು ೬೧

ಕೊಡುತ ಮೈಯ್ದಡವುತ್ತ ಕರಗುತ
ಒಡನೊಡನೆ ಬಿಗಿದಪ್ಪಿಕೊಳುತಂ
ಬಿಡದೆ ತನ್ನೊಳಗೊಳಗುಮಾಡಿಕೊಳುತ್ತ ಗುರುಮೂರ್ತಿ
ಗುಡಿಯೊಳಾಗಳೆ ಪೊಕ್ಕನಿಬ್ಬರ
ಬಿಡಗದೆಂತುಟೊ ಕಾಣಬಾರದು
ಕಡು ವಿಚಿತ್ರಮಿದೆಂದು ಸರ್ವರು ನೋಡಿ ಬೆಬ್ಬಿಗಾಗೆ ೬೨

ಬಸವನಾ ಗುರುಗರ್ಭವಾಸವ
ನೊಸೆದು ಪೊಕ್ಕರೆ ಸಂಗಮೇಶ್ವರ
ನಸಮ ಸದ್ಗುರುವಿನ ತೆಱದೊಳೆಯಿತಂದು ತನ್ನೊ[೨]ಳಗೆ
ಬಸವನಂ ಸಂಧಿಸಿಕೊಳಲು ತದ
ವಸರದೊಳು ಜಂಗಮವಿತತಿ ರಂ
ಜಿಸಲು ಭೋರನೆ [೩]ಲಿಂಗ[೪]ತೂರ್ಯಂಗಳು ಮೊಱ[೩]ವುತಿರಲು ೬೩

---

೧ ದಿ (ತ, ಥ, ಪ). ೨ ಮ್ಮೊ (ನ). ೩-೪ ದೇವ (ತ, ಥ, ನ)

CC-0. Jangamwadi Math Collection. Digitized by eGangotri

ಧರಣಿಯೊಳು ಹೂಮಳೆ ಸುರಿಯೆ ಭ
ಕ್ತರುಗಳಾರುತ ಹಾರವಿಸುತಿರೆ
ಪರಿದುಘೇ ಎನುತೆಲ್ಲೆಡೆಯೊಳುಂ ಕೀರ್ತನೆಗಳುಲಿಯೆ
ಮೊರೆಯೆ ಜಯ ಜಯ ಘೋಷಣಂಗಳು
ಪರಿಪರಿಯ ಕೇಳಿಕೆಗಳಿಂದಿ
ತ್ತರದೊಳಾಡುತ ಪಾಡುತಂ ಸಲೆ ಕೇಳಿಸುತ್ತಿರಲು ೬೪

ಅಲಘುಮತಿ ಮಾಚಯ್ಯನುಂ ನಿ
ಶ್ಚಲಿತಚಿತ್ತನು ಮಾದಿರಾಜನು
ಬಳಿಕಿವರು ಮೊದಲಾದ ಭಕ್ತರು ಪರಮ ಹರುಷದಲಿ
ಇಳೆಯೊಳುತ್ಪತ್ತಿ ಸ್ಥಿತಿ ಲಯಂ
ಗಳ ಮಹಾಪ್ರಾಪಂಚಿಕಂಗಳು
ಒಳವೆ ಬಸವಣ್ಣಂಗೆ ಭಾವದೊಳೆಣಿಸಿ ನೋಡಿದಡೆ ೬೫

ಗಾಳಿಯೊಳು ಸುಳಿಗಾಳಿಯೊಗೆದಾ
ಗಾಳಿಯೊಳು ತಾ ಮತ್ತೆ ಬೆರಸಿದ
ವೋಲುದಧಿಯೊಳು ನೊರೆಗಳೊಗೆದುದಧಿಯೊಳಡಗಿದಂತೆ
ಮೇಲೆ ನಭದೊಳಿಸದು ತಟಿಲ್ಲತೆ
ಮೇಲೆ ನಭದೊಳೆ ಹೊಳೆದಡಂಗಿದ
ವೋಲುದಕದಿಂದಾಲಿಕಲ್ಲೊಗೆದಲ್ಲಡಗಿದಂತೆ ೬೬

ಗುರುದಯಾಸಂಗತಿಯೊಳುದಯಿಸಿ
ಗುರುದಯಾಸಂಪದದಿ ವರ್ಧಿಸಿ
ಗುರುಜಠರ ವಿಶ್ರಾಂತಿಯಲಿ ತದ್ಗುರುವೆ ತಾನಾಗಿ
ಬೆರಸಿದನು ಶಿವಲಿಂಗತತ್ವದೊ
ಳರರೆ ಈಗಳಹಂಗೆಯೆಲ್ಲಾ
ಗುರುಚರಣವಂ ಭಜಿಪ ಭಕ್ತರ ಚಿತ್ತಪದ್ಮದಲಿ ೬೭

೧–೨ ಕೊಗೆದು (ತ, ಥ, ಫ, ಪ).

CC-0. Jangamwadi Math Collection. Digitized by eGangotri

ಬಸವರಾಜನು ತೊಲಗದಾಗಳು
ಕುಸುಮ ಪರಿಮಳವೆಹಗೆಹಗೆ ಸಂ
ಧಿಸಿವ [೧]ಹಂಗಿ[೨]ರ್ದಹನದಲ್ಲದೆ ಬಳಿಕ [೩]ಗತಿಯುಂಟೆ[೪]
ಅಸಮನೇತ್ರನ ಭಕ್ತರುಗಳಿಂ
ಪೆಸೆದು ತಾ ಉಳ್ಳೈಸುಕಾಲವು
ರಸಿಕ ಭಕ್ತಹಿತಾರ್ಥಮಾಗಲು ಭಕ್ತಿಭಂಡಾರಿ ೬೮

ಈತನೀಶ್ವರನ[೫]ಂಶವಾಗಿ ಮ
ಹೀತಳದೊಳುದಯಿಸುವನೆನುತಂ
ಪ್ರೀತಿಯಲಿ ನುತಿಸುತ್ತ ಮುನ್ನಿನ ತೆಱದಿ ಸದುಭಕ್ತಿ[೬]
ಜಾತ ಸೌಖ್ಯಾಮೃತ ಪಯೋಧಿಯೊ
ಳೋತು ತಾವೋಲಾಡುತಿರ್ಪರು
ಖ್ಯಾತಿವೆತ್ತೆಲ್ಲೆಡೆಯೊಳುಂ ಶಿವನಾಜ್ಞೆಯಂ ಮೆಱಿ[೭]ದು ೬೯

ಫಣಿವಿಭೂಷಣ ಭಕ್ತಲೋಕಾ
ಗ್ರಣಿಯೆ ಜಂಗಮನಿಕರ ಚಿಂತಾ
ಮಣಿಯೆ ಶರಣಾಗತಸುರಕ್ಷಾಮಣಿಯೆ ದುರಿತೇಭ
ಶ್ರೇಣಿಯೆ ಶಿವಸಮಯಾಬ್ಜವನ ದಿನ
ಮಣಿಯೆ ಭಕ್ತಿತ್ರಯವಿನಿಶ್ಚಲ
ಗುಣಿಯೆ ಸುಜನಶಿರೋಮಣಿಯೆ ಮದ್ಬಸವಧೀಮಣಿಯೆ ೭೦

ಉದಕದೊಳಗಂತುದಕವೇ ಬೆರ
ಸಿದ ತೆಱದಿ ಪಾಲೊಳಗೆ ಪಾಲ್ಬೆರ
ಸಿದವೊಲಾಜ್ಯದೊಳಾಜ್ಯವೇ ತಾ ಬೆರಸಿದಂದದಲಿ
ಸದಮಲಾತ್ಮಕ ಬಸವ ಸಲಿವಾ
ಮುದಿತ ಸಮುದಯ ಹೃದಯ ಸದ್ಗುರು
ಪದವಿಯೊಳು ಶಿವಲಿಂಗದೊಳೆ ನೀನೈಕ್ಯವಾ[೮]ದೆಯಲಾ ೭೧

೧–೨ ವೋಲಿ (ತ, ಸ). ೩–೪ ನೆರವುಂಟಿ (ಥ, ಪ, ಸ); ಲೆರಡುಂಟಿ (ಚ). ೫ ವ (ಆ, ಬ). ೬ ಕ್ತ (ತ, ಸ). ೭ ನಾ (ಬ).

CC-0. Jangamwadi Math Collection. Digitized by eGangotri

ಆರಿಗಳವಟ್ಟುವದು ಭವದೃಢ
ಸಾರ ವೀರಾಚಾರ ಭಕ್ತಿ ವಿ
ಚಾರ ಭಾವನೆಯೀ ಮಹಾಮಹಿಮಾಮಹೋನ್ನತಿಯ
ಆರು ಬಲ್ಲರಿದಂ ಬಸವ ಸುಕು
ಮಾರ ಸಕಳೇಶ್ವರನೆ ಬಲ್ಲನು
ಧಾರುಣೀ ವಳಯದೊಳಿಸಿವ ನಿಮ್ಮನುವಿನಿರವೆನುತ ೭೨

ಲಿಂಗತತ್ವದೊಳಿಹ ಬಸವಗಣ
ಪುಂಗವನನಭಿವರ್ಣಿಸುತ್ತಂ
ಲಿಂಗವಂತನು ಮಾದಿರಾಜನು ಲಿಂಗಭಕ್ತರಿಗೆ
ಜಂಗಮಪ್ರತತಿಗೆ ಮುಕುಳಿತ ಕ
ರಂಗಳಿಂ ಬಿನ್ನೈಸಿ ಕೂಡಲ
ಸಂಗಮೇಶ್ವರದಿಂದವಾ ಶ್ರೀಗಿರಿಗೆ ಗಮನಿಸಿದ ೭೩

ಇತ್ತಲಿರ್ದಾ ಭಕ್ತರುಗಳು ಮ
ಹತ್ತುಸಹಿತಂ ಮಾಚಿದೇವ ಗ
ಣೋತ್ತಮಂ ಬಸವಣ್ಣನಂ ಮಿಗೆ ಕೂರ್ತು ಕೀರ್ತಿಸುತ
ಚಿತ್ತಕಮಲವನರಳಿಸುತ ಮುದ
ವೆತ್ತಿ ತಾನುಂ ಚೆನ್ನಬಸವಂ
ಹತ್ತೆಬರೆ ನಡೆತಂದರಾ ಉಳುವಯ ಮಹಾಮನೆಗೆ ೭೪

ಚೆನ್ನಬಸವಂ ತದ್ಗುರು ಶ್ರೀ
ಪನ್ನಿನಯುಗಮಂ ಸತತಮುಂ
ತನ್ನ ಚಿತ್ತಾಂಭೋಜಮಧ್ಯದ ಕರ್ಣಿಕೆಯೊಳಿರಿಸಿ
ಚಿನ್ನಿಧಾನಂ ಭಾವಿಸುತ್ತಂ
ಸನ್ನುತಿಗಳಂ ಮಾಡುತಂ ವಿನ
ಯೋನ್ನತಿಯೊಳಾ ಮಾಚಿದೇವಗಳನುಭವದೊಳಿರ್ದ ೭೫

CC-0. Jangamwadi Math Collection. Digitized by eGangotri

ಉತ್ತಮೋತ್ತಮ ಭಕ್ತಿಯಲಿ ನುತಿ
ವೆತ್ತ ಬಸವಚರಿತ್ರವಂ ಭ
ಕ್ತೋತ್ತಮರ ಕೈಯಿಂದ ಕೇಳಿದ ಪಾಳ್ಕೆಯಿಂದೆನ್ನ
ಚಿತ್ತದೊಲವಿಂ ತಪ್ಪದೊರೆದೆನು
ದಾತ್ತ ಮತಿಯಿಂದಂ ಮಹದ್ಗುರು
ವಿತ್ತ ವಿದ್ಯಾಪ್ರೌಢಿಯಂ ಮೆಱೆದೆನ್ನೊಳಾಪನಿತ ೭೬

ಗಿರಿಜೆಯರಸಂಗಱಿಯಬಾರದ
ಪರಮ ಮಾಹೇಶ್ವರರ ವಿಸ್ಮಯ
ಚರಿತವಂ ವರ್ಣಿಸುವಡಾನೇತಱಿವನಂತಾಗಿ
ಸರಸದಿಂ ಕೀರ್ತಿಸಿದೆನಾ ಭ
ಕ್ತರನೆ ಮತ್ತನ್ಯತವನಱಿಯೆನು
ನಿರುತದಿಂದೀವೊಂದು ಬಲುಮೆಯೊಳಾದ ಹೆಂಪಿಂದ ೭೭

ಅಂತುಮಲ್ಲದೆ ತನ್ಮಹಾದಿ ಮ
ಹಂತರುಗಳತ್ಯಂತ ವಿಮಳಾ
ನಂತ ಸಂಕೀರ್ತನೆಗಳಿಂದಶ್ರಾಂತವೊಪ್ಪುತಿರೆ
ಇಂತುಮದ್ವಾಕ್ಯಾವನಾರ್ಥನಿ
ತಾಂತಮಾಗಲವರ ನಿರೂಪವ
ನಾಂತು ಕಥೆಯಂ ರಚಿಸಿದೆನು ಭಕ್ತರು ಮೆಱೆವುದಿದನು ೭೮

ಅಸಮ ಬಸವಪುರಾಣವಂ ಪಸ
ರಿಸುವವಂ ಪಾಪಂಗಳಂ ಪ್ರಹ
ರಿಸುವನತುಳಿತ ಪುಣ್ಯವೆಸೆವಂ ದುರ್ಭವದ ಬೇರ
ಸಲಿವನಾಪತ್ತುಗಳನಂತೋ
ಡಿಸುವನಾಶಾಪಾಶವಂ ಛೇ
ದಿಸುವನೂರ್ಜಿತ ಭಕ್ತಿಯಂ ರಂಜಿಸುವನನವರತ ೭೯

೧ದೆ (ತ). ೨ಶ (ಅ, ಕ, ಡಾ, ತ, ಸ).

CC-0. Jangamwadi Math Collection. Digitized by eGangotri

ಅಸಮ ಬಸವಪುರಾಣವಂ ಮನ
ವೊಸೆದು ಕೇಳಿದವರ್ಗೆ ಸತತಂ
ವಶಿಸುವುದು ಸದ್ಭಕ್ತಿವಾಸನೆ ಓದಿದವರ್ಗಳಿಗೆ
ಹಸನಹುದು ಭಕ್ತರ ಕರುಣವುಂ
ವಸುಧೆಯೊಳು ಬರೆದರ್ಗೆ ಸಂಪ್ರಾ
ಪ್ತಿಸುವುದಾದ್ಯರ ಸುಪ್ರಸಾದಾನಂದಸಂಸಿದ್ಧಿ ೮೦

ಆಯುರಾರೋ[೧]ಗ್ಯಯುತ[೨] ಸಂಪದ
ಜೇಯವೃದ್ಧಿಯನಧಿಕ ಬುದ್ಧಿಯ
ನಾಯತ ಯಶೋವೃದ್ಧಿಯಂ ಲೋಕಪ್ರಸಿದ್ಧಿಯನು
ಶ್ರೀಯುಮೇಶಂ ಕೊಡುತಿರಲು ಸ್ವ[೩]
ಶ್ರೇಯಸೋದಯರಾಗಿ ಬದುಕುವ
ರೀಯವನಿಯೊಳು ಬಸವಚರಿತೆಯನೋದಿದವರೆಲ್ಲ ೮೧

ಮಿತ್ರನುದ್ಯತ್‌ತೇಜನುತ್ಪಲ
ಮಿತ್ರನೂರ್ಜಿತಕಾಂತಿ ಮಾರುತ
ಮಿತ್ರನತ್ಯಂತ ಪ್ರತಾಪಂ ಭಾಳಲೋಚನನ
ಮಿತ್ರನಪರಿಮಿತಾರ್ಥವುಂ ಮಧು
ಮಿತ್ರನಂಚಿತರೂಪು ಜಂಭಾ
ಮಿತ್ರನುನ್ನುತ ಭೋಗಹುದೀ ಕೃತಿಯನೋದಿದಡೆ ೮೨

ಋಕ್ಷದಂತಿತರಕ್ಷುಘಣೆಹರಿ
ಯಕ್ಷ ಶಿಖಿಚೋರಕ್ಷಮಾಪವಿ
ಪಕ್ಷ ವಿಷಯಮಯಕ್ಷ ರಾಕ್ಷಸರೂಕ್ಷ ಭೀತಿಗಳು
ಆಕ್ಷಣವಳಿದು ರಕ್ಷೆಯಾಗಿಯ
ಪೇಕ್ಷಿಸುವ ಪದವೀ ಕ್ಷಿತಿಯೊಳಹು
ದುಕ್ಷಗಮನ ಸದೃಕ್ಷನಹ ಬಸವಾಕ್ಷರತ್ರಯದಿ ೮೩

೧–೨ ಗ್ಯಾದಿ (ಥ). ೩ ಸ (ಥ).

CC-0. Jangamwadi Math Collection. Digitized by eGangotri

ಬಸವನೆಂಬ ನಿಧಾನವಿರುತಿರೆ
ಬಸವನೆಂಬ ಸುಮೇರುವಿರುತಿರೆ
ಬಸವನೆಂಬ ವಿನೂತ್ನ ಚಿಂತಾರತ್ನವಿರುತಿರಲು
ಬಸವನೆಂಬುರು ಕಾಮದುಘವಿರೆ
ಬಸವನೆಂಬೀ ಕಲ್ಪತರುವಿರೆ
ಬಸವಕೃತಿಯಿಂ ಪಡೆಯಬಾರದ ವಸ್ತುವೊಂದುಂಟೆ ೮೪

ತಾರಕಾಸಿತನೀರಧರ ಕ
ಸ್ತೂರಿಕಾಂಜನ ಸೂರತನಯಾ
ವಾರಿ ಪಿಕ ಕಜಭಾರ ಯಮ ಕಾಳೋರಗ ತಮಂಧ
ವಾರಣ ನಿಶಾಚಾರ ಮಧುಕರ
ಶೌರಿಸಮ ನೀಲೋರುತರ ಪಟು
ಘೋರ ಗರಳಾಹಾರ ಬಸವಕುಮಾರ ಶರಣಾಗು ೮೫

ಬಸವ ಬಸವಣ್ಣಾ ಬಸವಯಾ
ಬಸವವಿಭುವೇ ಬಸವಪ್ರಭುವೇ
ಬಸವರಾಜಾ ಬಸವಚಕ್ರೇಶಾ ಬಸವದೇವಾ
ಬಸವಲಿಂಗಸ್ವಾಮಿ ಬಸವಾ
ಬಸವ ಎನ್ನ ಪ್ರಾಣನಾಥಾ
ಬಸವ ಆಯುಂ ಶ್ರೀಯುಂ ಗತಿ ಮತಿ ನೀವೆನಗೆ ಬಸವ ೮೬

ದೇವನಪ್ಪನು ನೀವೆ ಸದ್ಗುರು
ದೇವನಪ್ಪನು ನೀವೆ ಜಂಗಮ
ದೇವನಪ್ಪನು ನೀವೆ ಸಜ್ಜನಭಕ್ತನಪ್ಪವನು
ನೀವೆ ಜನನೀ ಜನಕನಪ್ಪನು
ನೀವೆ ಬಂಧೂ ಬಳಗವಪ್ಪನು
ನೀವೆಯೆನಗೀ ಸರ್ವಾಭಾರಕೆ ಬಸವ ಸುಕುಮಾರ ೮೭

೧–೩ ಗೆ ಸಮಸ್ತ (ಥ).

CC-0. Jangamwadi Math Collection. Digitized by eGangotri

ಪಾತಕೆಂದನಜಾತಪಟುವಸು
ರೇತಸೇ ವಿಖ್ಯಾತಚಿನ್ಮಯ
ಚೇತಸೇ ಮಾಯಾತಮಂಧಜ್ಯೋತಿ ಸೌಭಾಗ್ಯ
ಶ್ವೇತವಪುಷೇ ನೀತಿಧರ್ಮ ಪು
ನೀತ ಯಶಸೇ ಧೂತಭಕ್ತಾ
ರಾತಯೇ ಬಸವಾಯ ಜಯಯೆಂಬಾತನ[೧]ತಿ ಪುಣ್ಯ ೮೮

ಕ್ಷಾಲಿತಮಲಿನ ಪಂಕಪಯಸೇ
ಲಾಲಿತಾಸಮತೇಜಸೇ ನಿ
ರ್ಮೂಲಿತಸಮಸ್ತೈನಸೇ ಭವಪಾಶಹೃನ್ಮಹಸೇ
ಪಾಲಿತಾಖಿಲಸುಮನಸೇ ವಿಧು
ಮೌಳಿ ನಿರ್ಮಾಲ್ಯಪ್ರಸವಶಿರ
ಸೇ ಲಲಾಟಾಕ್ಷಪ್ರತಿಮಬಸವಾಯ ತೇ ಜಯತು ೮೯

ಕಾವುದಪಮೃತ್ಯುಗಳನೆಬ್ಬೆ
ಟ್ಟೀವುದಾಯುಷ್ಯಮನಹಿತರಂ
ಸೋವುದತ್ತಲೆ ಪಜ್ರಪಂಜರವಾಗಿ ಮುಚಿ[೨]ವುಗಲು
ಓವುದಾಶಾಪಾಶಮಂ ನೆಟಿ[೩]
ಕೋವುದುತ್ತಮ ಭಕ್ತಿರತಿಯಂ
ತೀವುದಾಗಳು ಬಸವ ನಿಮ್ಮಂ ನೆನೆವ ಮಾನವರ ೯೦

*ತ್ರಿದಶಶತಷಟ್‌ಶತ ತ್ರಿವಿಂಶತಿ
ವಿದಿತಸಂಖ್ಯಾಯುಕ್ತದಿಂ ಷಟ್
ಪದಿಗಳೆಂಟಾಶ್ವಾಸದಿಂದಱುವತ್ತು ಸಂಧಿಗಳಿಂ
ಒದಗಿ ನವರಸ ಲಕ್ಷಣಾರ್ಥಸ
ಮುದಯಭಾವೋಪಮೆಗಳಿಂದೊ
ಪ್ಪಿದುದು ಬಸವಪುರಾಣವೀಶ್ವರಗಣಕಥನವಾಗಿ ೯೧

---

೧ ಗ (ಸ).
* ತ್ರಿದಶಶತಮುಂ ಪಂಚಶತ ಪಂ
ಚದಶ ಪಂಚಕಯುಕ್ತದಿಂ ಷಟ್
ಪದಿಗಳೆಂಟಾಶ್ವಾಸದಿಂದಱುವತ್ತು ಸಂಧಿಗಳಿಂ ॥

CC-0. Jangamwadi Math Collection. Digitized by eGangotri

ಕೋವಿದರು ಕೇಳ್ದೊಳ್ಳಿತೆನಲುಡು
ದೇವನಿಧಿನಯನೇಂದು ಸಂಖ್ಯೆಗ
ಳೋವಿ ಶಕವರುಷಂಗಳಾಗಲು ಸೌಮ್ಯವತ್ಸರದ
ಶ್ರಾವಣ ಬಹುಳ ಪಕ್ಷ ದಶಮೀ
ಜೀವವಾರದೊಳಾದಿ ವೃಷಭೇಂ
ದ್ರಾವತಾರದ ಬಸವಚರಿತೆ ಸಮಾಪ್ತವಾಯಿತ್ತು ೯೨

ಶಿಕ್ಷಿತಪ್ರತಿಪಕ್ಷ ಸಜ್ಜನ
ಪಕ್ಷ ಸಾಕ್ಷಾದುಕ್ಷ ರಾಜಸ
ದ್ರುಕ್ಷ ದಕ್ಷಮಖಿಕ್ಷಯಕ್ಷಮ ಭಕ್ಷಿತಕ್ಷ್ವೇಡ
ತ್ರ್ಯಕ್ಷಗಣಪಸಮಕ್ಷ ಕರುಣಾ
ವೀಕ್ಷಣ ಜಗದ್ರಕ್ಷಣ ಗುಣವಿ
ಚಕ್ಷಣ ಬಸವ ಸೂಕ್ಷ್ಮ ಲಕ್ಷಯ ರಕ್ಷಿಸೆಮ್ಮುವನು ೯೩

ಶೌರಿಸಾರಸವಾಸವಾಸವ
ವಾರಿವರವಸುವಾಸಸರಸೀ
ಸೂರ ವಿವರಾವಾಸ ಸಶ್ರಮಸರ್ವಸರ್ವೇಶ
ಸೂರಿ ಸರಸಾಶೀರ್ವಿಸರವಶ
ವೀರಶೈವಾವೇಶಸಾರ ಶ
ರೀರ ಸಂಸಾರಾರಿ ಬಸವೇಶ್ವರ ಬಸವರಸರೆ ೯೪

ಶಾಂಬರಾ ಶಂಭರ ಶಿಶಿರ ವಸು
ಶಂಭರೋರ್ವೀರವಿವಸುವ ಸುವ
ಶಾಂಭರೇಶ್ವರ ವಿಶ್ವಸುರವರ ಶಾರ್ವರೀಶಶಿರ
ಶಂಬರಾರಿ ಶರೀರ ಶಶಿರವಿ
ಬಿಂಬ ಸರಸರ ಸರಸ ಸುರಸಾ
ಶಂಭಸರಸಕರಾಶಿ ಸಂವರಿಸೋವು ಬಸವೇಶ ೯೫

CC-0. Jangamwadi Math Collection. Digitized by eGangotri

ಬಸವೇಶ್ವರ ಎಂಬ ಐದಕ್ಷರದ ಪದ

ಪದವಿನಾಶನ ಭೀತಿಯಿಂದಂ
ಪದದ ಬಾಹುಲ್ಯದುರು ಭಯದಿಂ
ತ್ರಿದಶ ಶತಮುಂಮೆಂಬ ಪದನುಂ [೧]ಮುನ್ನೆ[೨] ಭೀಮಕವಿ
ಪದದೆ ಪೇಳ್ದನದೇಪ್ರಮಾಣಂ
ಪದದ ಸಂಖ್ಯೆಗೆ ನಿರಿಸಿಕೂಡಲ್
ಮುದದೆ [೩]ಮುಚ್ಚಾಸಿರದ ಮೂವತ್ತೊಂದು ಪದನಾಯ್ತು[೪] ೯೬*

ಇದು ಸಕಳ ಮಾಹೇಶ್ವರಾಮಳ
ಪದ ಪಯೋಜಪರಾಗ ಮದಷಟ್
ಪದಿಯೆನಿಪ ಪಾಲ್ಕುಱಿ[೫]ಕೆ ಸೋಮೇಶ್ವರನ ಕಾರುಣ್ಯ
ಒದವಿದಖಿಳ ಕಳಾಪ್ರಪೂರಿತ
ಹೃದಯ ಭೀಮಕವಿಪ್ರಣೇತಾ
ಭ್ಯುದಯ ಬಸವಪುರಾಣ ಕಥೆಯೊಳಗಷ್ಟಮಾಶ್ವಾಸ ೯೭

ಅಂತು ಕಾಂಡ ೮ಕ್ಕಂ ಸಂಧಿ ೬೦ಕ್ಕಂ ಪದಗಳು ೩೬೨೮ಕ್ಕಂ

ಮಂಗಳಂ ಮಹಾಶ್ರೀಶ್ರೀಶ್ರೀ

ಶ್ರೀ ಬಸವಪುರಾಣಂ ಸಮಾಪ್ತಂ

೧–೨ ಮುಂದೆ (ತ, ನ). ೩–೪ ಮೂಱು ಸಾಸಿರದಾಱ್ನೂಱಿಪ್ಪನಾಲ್ಕರನು (ತ, ಫ).

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಕಠಿನ ಶಬ್ದಕೋಶ

(ಅರ್ಥದ ಮುಂದೆ ಸಂಧಿ – ಪದ್ಯಗಳ ಸಂಖ್ಯೆಗಳನ್ನು ಸೂಚಿಸಿದೆ.)

ಅ

ಅಕುಟಿಲ = ವಂಚನೆಯಿಲ್ಲದ ೧೭–೪೯
ಅಕೂಪಾರ = ಸಮುದ್ರ ೧೯–೩೫
ಅಕ್ಕಜ = ಆತುರ ೫–೬೧
ಅಕ್ಕಜ = ಆಶ್ಚರ್ಯ ೧೦–೨೨
ಅಕ್ಕಱೆ = ಪ್ರೀತಿ ೧–೩೪
ಅಕ್ಕಳಿಸು = ಅಕಳಿಸು ೧–೪೯
ಅಕ್ಕು = ಆಗುವುದು ೧೭–೩೬
ಅಕ್ಕ್ಕು = ಆಗು, ದಕ್ಕು ೫೫–೧
ಅಕ್ಕ್ಕುಳಿಸು = ಅಕಳಿಸು ೫೮–೨೦
ಅಕ್ಕೈ = ರೋದನ ೧೪–೧೮
ಅಕ್ಷೀಣರತಿ = ಕುಗ್ಗದ ಆಸಕ್ತಿ ೨೬–೭
ಅಕ್ಷೀಶ್ರವ = ಸರ್ಪ ೪೭–೧೫
ಅಖಿರ್ವ = ಸಕಲ ೨೩–೩೭
ಅಗಜಾ = ಪಾರ್ವತಿ ೧–೨
ಅಗಧರ = ವಿಷ್ಣು ೧೨–೧೫
ಅಗಳು = ಕಂದಕ ೧೫–೯
ಅಗಿಲು = ಸುಗಂಧದ್ರವ್ಯ ೪–೩೫
ಅಗುರು = ಧೂಪ ೫–೨೬
ಅಗುಳಿಸು = ತೋಡಿಸು ೧೫–೧೧
ಅಗ್ಗ = ಶ್ರೇಷ್ಠ, ಉತ್ತಮ ೫–೩೯
ಅಗ್ಗಳ = ಹೆಚ್ಚಳ, ಅಧಿಕ ೩೦–೨೯
ಅಗ್ಗಳಿಸು = ಹೆಚ್ಚಾಗು ೧೧–೧೪
ಅಗ್ಗಿ = ಅಗ್ನಿ ೪೬–೧೬
ಅಗ್ಘವಣೆ = ಮಡಿನೀರು ೧೫–೬
ಅಗ್ರಜ = ಬ್ರಾಹ್ಮಣ ೩–೫೬
ಅಗ್ರಜನ್ಮ = ಬ್ರಾಹ್ಮಣ ೫೯–೫೨
ಅಗ್ರಣಿ = ಶ್ರೇಷ್ಠ ೩–೫೬
ಅಗ್ರೇಸರ = ಶ್ರೇಷ್ಠ ೧೦–೨
ಅಘಾರಿ = ಪಾಪನಾಶಕ ೨೨–೪೧
ಅಂಕ = ರಣರಂಗ ೮–೫೧
ಅಂಕಕಾಜ = ಸೇವಕ, ಬಂಟ ೮–೩೨
ಅಂಕಕಾರ್ತಿ = ಸೇವಕಿ ೧೧–೬
ಅಂಕಮಾಲೆ = ಬಿರುದಾವಳಿ ೮–೪೪
ಅಂಕಿಸು = ಸ್ತುತಿಸು, ಹೆಸರಿಸು ೨–೨೬
ಅಂಕುರ = ಮೊಳಕೆ ೧೭–೮೫
ಅಂಗ = ರೀತಿ, ಬಗೆ ೮–೨೦
ಅಂಗ = ಶರೀರ ೨೩–೧೬
ಅಂಗಜ = ಮಗ ೨೩–೧೬
ಅಂಗಜ = ಕಾಮ ೧೭–೭೪
ಅಂಗಜಾಹಿತ = ಕಾಮವೈರಿ, ಶಿವ ೧೭–೭೪
ಅಂಗವಣೆ = ಸಾಮರ್ಥ್ಯ ೧೧–೯
ಅಂಗವಿಸು = ಅಳವಡಿಸು ೬–೪೩
ಅಂಗವಿಸು = ಒಟ್ಟಾಗು ೨೦–೩೯
ಅಂಗುಳು = ಬಾಯ ಅಂಗಳ ೧೪–೧೧
ಅಂಘ್ರಿತ್ರಾಣ = ಪಾದರಕ್ಷೆ ೫೪–೫೭
ಅಚಳ = ಸ್ಥಾವರ ೯–೧೩
ಅಚ್ಚಿಗ = ಮೋಹ ೨೮–೯
ಅಚ್ಚುಕ = ಪ್ರೀತಿ ೨–೨೩
ಅಜರ = ಮುಪ್ಪಿಲ್ಲದ ೨೦–೫
ಅಜಸ್ರ = ಯಾವಾಗಲೂ ೧೮–೭೬
ಅಂಚಿತ = ಕೂಡಿದ ೨–೪
ಅಂಜನ = ಕಾಡಿಗೆ ೧೧–೧೧
ಅಂಜಲಿ = ಬೊಗಸೆ ೨೮–೨೫
ಅಂಜುಲಿ = ಬೊಗಸೆ ೧೪–೯
ಅಟವಿ = ಅರಣ್ಯ ೧೫–೪
ಅಟ್ಟಣೆ = ಅಟ್ಟ ೧೫–೧೦

CC-0. Jangamwadi Math Collection. Digitized by eGangotri

ಆಟ್ಟಣೆ = ದಾಳಿ ೩೬–೪೭
ಆಟ್ಟು = ಕಳುಹಿಸು ೫–೬
ಆಟ್ಟಿ = ಮುಂಡ ೬–೭
ಆಟ್ಟಿ = ಪಾದರಕ್ಷೆ ೫೫–೨೮
ಆಡಸಿಕೊಂಡಿರು = ಗಟ್ಟಿ ಗೊಂಡಿರು ೪೨-೬೮
ಆಡಕು = ತಂದೊಟ್ಟು ೮–೪೧
ಆಡಕೆಗತ್ತಿಗೆ = ಆಡಕೊತ್ತು ೧೧–೧೦
ಆಡಬಳ = ಆಡಿಗೆಯವ ೮–೪೦
ಆಡಸು = ಅಪ್ಪು ೧೪–೩೦
ಆಡಸು = ಹಾತೊರೆ ೨೩–೫೬
ಆಡು = ಆಟ್ಟಿಸು ೧೩–೯
ಆಡುಕು = ತುಂಬು ೨೩–೨
ಆಡುಗಬ್ಬು = ಉರುವಲು ೮–೪೧
ಆಡ್ಡ = ಆಡ್ಡಿ, ತಡೆ ೨೫–೧೬
ಆಡ್ಡವಲಿಗೆ = ಆಡ್ಡಹಲಗೆ, ಢಾಲರಿ ೨೦–೨೭
ಆಡ್ಡಾಯುಧ = ಆಡಾಯುಧ, ಕತ್ತಿ ೨೭–೨೭
ಆಣಕ = ನಗೆಚಾಟಿಕೆ, ವಿಡಂಬನೆ ೧೫–೨೮
ಆಣು = ಅಲ್ಪ ೧೦–೧೩
ಆಣುಗ = ಮಗು, ಮಗ ೯–೫೪
ಆಣೆ = ತಿವಿ ೬೦–೨೮
ಆಂಟು = ಸ್ಪರ್ಶಿಸು ೨೦–೨೧
ಆಂಡಜ = ಪಕ್ಷಿ ೧೮–೩೯
ಆಂಡಜ = ಸರ್ಪ ೨೬–೫೫
ಆಂಡಲೆ = ತ್ರಾಸಗೊಳ್ಳು ೪–೬೨
ಆಂಡಲೆ = ಕಾಡು ೧೭–೫೬
ಆಣ್ಣೆವಾಲು = ನೊರೆಹಾಲು ೧೩–೨೫
ಆತಃಪರ = ಬೇರೊಂದು ೫೦–೯
ಆತಿಗಳೆ = ತಿರಸ್ಕರಿಸು ೧೭–೯೭
ಆತಿಚಿತ್ರ = ಬಹು ವಿಚಿತ್ರ ೭–೪೬
ಆತಿಶಯ = ಆಶ್ಚರ್ಯ ೫–೫೬
ಆತುಳಿತ = ಅಸಮಾನ ೩–೧೨
ಆದ್ದು = ಎದ್ದು, ಮುಳುಗಿಸು ೬–೨೮
ಆದ್ರಿ = ಪರ್ವತ ೯–೩೮
ಆದ್ರಿಪುತ್ರಿ = ಪಾರ್ವತಿ ೯–೩೮
ಆಧಮಜಾತ = ಅಂತ್ಯಜ ೩–೪೭
ಆಧೋಕ್ಷಜ = ವಿಷ್ಣು ೨೪–೩೬
ಆಧ್ರುವ = ಅಶಾಶ್ವತ ೧೯–೩೨
ಆಧ್ವ = ಮಾರ್ಗ ೬–೪೮
ಆನಂಗ = ಕಾಮ ೧–೩೨
ಆನಂಗವೈರಿ = ಶಿವ ೧–೩೨
ಆನಂತ = ಆದಿತೇಪ ೨೦–೩೩
ಆನಲ = ಬೆಂಕಿ ೩–೨೭
ಆನವದ್ಯ = ಶ್ರೇಷ್ಠ ೬–೪೫
ಆನವರತ = ಯಾವಾಗಲೂ ೩೮–೮
ಆನಶ್ವರ = ಅಳಿವಿಲ್ಲದ ೪೦–೨೫
ಆನಾಮಿಕ = ಅಂತ್ಯಜ ೪೯–೪೮
ಆನಾರತಂ = ನಿರಂತರ, ಸತತ ೧೧–೪೭
ಆನಿತು = ಅಷ್ಟು ೫–೫೮
ಆನಿಮಿಷ = ಸುರ ೧–೪೬
ಆನಿತ = ಸಮೂಹ ೭–೧೭
ಆನುನಯ = ಪ್ರೀತಿ ೧–೧೪
ಆನುಮತಿಸು = ಒಡಂಬಡು ೨೩–೬೯
ಆನುರಾಗಿಸು = ಪ್ರೀತಿಸು ೪–೫೭
ಆನುವಳಿ = ವಿಕೃತವಾಗು ೧೬–೧೩
ಆನುವು = ಸ್ಥಿತಿ, ರೀತಿ ೧–೩೦
ಆನೂನ = ಕೊರತೆಯಿಲ್ಲದ ೬–೪೫
ಆನೇಕಪ = ಆನೆ ೫–೪೬
ಆಂತರ = ಒಳಗು ೨೦–೩೩
ಆಂತರ = ಒಳವು ೨೮–೨೨
ಆಂತರ = ಆಕಾಶ ೫೩–೫೪
ಆಂತರಾಂತರ = ಸ್ಥಿತಿಗತಿ ೧೭–೪೩
ಆಂತರಿಸು = ಹೆಚ್ಚುಕಡಿಮೆಯಾಗು, ತಪ್ಪು ೧೩–೩
ಆಂತರ್ಯಂದಿರ = ಅಂತಃಪುರ ೧೦–೪೨
ಆಂದುಗೆ = ಕಾಲ್ಕಡಗ ೪–೩೬
ಆಂಧಕ = ಕುರುಡ ೧೦–೪೬
ಆನ್ನಕ = ವರೆಗೆ ೧೧–೪೬

CC-0. Jangamwadi Math Collection. Digitized by eGangotri

ಆನ್ವೀತೆ = ಕೂಡಿದವಳು ೨–೪೭
ಆಪಗತ = ಕಳೆದ ೨೧–೩
ಆಪಗತಮತಿ = ಬುದ್ಧಿ ಕಳಕೊಂಡವ ೨೭–೬೩
ಆಪರ = ಪಶ್ಚಿಮ ೧೦–೪೪
ಆಪರಿಚ್ಛಿನ್ನ = ಎಡೆವಿಡದ ೨–೨೨
ಆಪಸರ = ಅಪಸ್ಸರ ೨೭–೪೧
ಆಪಾಂಗ = ಕಡೆಗಣ್ಣು ೧೭–೪೯
ಆಪ್ತನರ್ಜವ = ಮರುಹುಟ್ಟಿಲ್ಲದ ೨೬–೧೯
ಆಪ್ಪಯಿಸು = ಒಪ್ಪಿಸು ೧೩–೪
ಆಪ್ಪಯಿಸು = ಅಪ್ಪಿಕೊಳ್ಳು, ಹೊಂದು ೧೯–೨೦
ಆಪ್ಪು = ನೀರು ೧–೨೦
ಆಪ್ರತಿಮಾನ = ಪ್ರತಿಯಿಲ್ಲದ ೭–೧೧
ಆಬುಜಾತ = ಶಂಖ ೧೧–೩೯
ಆಬ್ಜ = ಕಮಲ ೧೦–೪೫
ಆಬ್ಜಾಳಿ = ಕಮಲಸಮೂಹ ೧೦–೪೫
ಆಬ್ಜೋದರ = ಬ್ರಹ್ಮ ೮–೪೪
ಆಭಿಧಾನ = ಹೆಸರು ೨–೩೯
ಆಭಿನಪಿಸು = ಹೊಸತಾಗು ೪–೩
ಆಭಿಮತ = ಮನಪೊದ್ದಿದ ೭–೨೮
ಆಭಿಮುಖಿ = ಇದಿರು ೧೫–೯
ಆಭಿಯಾತಿ = ವೈರಿ ೧೫–೩
ಆಭಿರಾಮ = ಶೋಭೆ ೭–೩೭
ಆಭ್ಯಂಗನ = ಎಣ್ಣೆಹೂಸಿದ ಸ್ನಾನ ೧೪–೮
ಆಭ್ರ = ಮೋಡ ೧೦–೩೪
ಆಮಂದ = ಅತ್ಯಂತ ೫–೭೧
ಆಮರ್ = ಹೊಂದು, ಕೂಡು ೫–೪೫
ಆಮರ = ಸುರ, ದೇವತೆ ೫–೫೯
ಆಮರದುಘ = ಕಾಮಧೇನು ೫–೬೯
ಆಮರವರ = ದೇವೇಂದ್ರ ೨೩–೪೦
ಆಮರಸಿಂಧು = ಗಂಗಾನದಿ ೧–೩೮
ಆಮರಿ = ದೇವತಾಸ್ತ್ರೀ ೧೭–೭೮
ಆಮರ್ಚಿಸು = ಮಾಡಿಸು ೧೫–೯
ಆಮರ್ಚು = ಧರಿಸು ೧೧–೨೨
ಆಮರ್ಚು = ಹೊಂದಿಸು, ಜೋಡಿಸು ೧೭–೭೧
ಆಮೃತಕರ = ಚಂದ್ರ ೩–೧೧
ಆಂಬಕ = ಕಣ್ಣು ೩–೩೭
ಆಂಬಕಳ = ಆಂಬಲಿ ೧೪–೨೬
ಆಂಬರ = ಬಟ್ಟೆ, ಅರಿವೆ ೨–೫೨
ಆಂಬರ = ಆಕಾಶ ೯–೨೪
ಆಂಬರಂಬರೆ = ಮುಗಿಲ ವರೆಗೆ ೩೧–೩೨
ಆಂಬಳಿಕು = ಆಂಬೆಗಾಲಿಕ್ಕು ೩–೩೯
ಆಂಬಿಲ = ಅಕ್ಕಿ ಕಚ್ಚು ೨೯–೨೮
ಆಂಬುಗಿರಿ = ನೀರಬೆಟ್ಟ ೩೧–೩೫
ಆಂಬುಜ = ಕಮಲ ೨–೨೨
ಆಂಬುಧಿ = ಸಮುದ್ರ ೯–೯
ಆಂಬುರುಹ = ಕಮಲ ೧೬–೧೮
ಆಂಬುರುಹಗರ್ಭ = ಬ್ರಹ್ಮ ೧೬–೧೮
ಆಂಭಸ್ = ನೀರು ೩೨–೯
ಆಂಭೋರಾಶಿ = ಸಮುದ್ರ ೩೨–೯
ಆರವಿಂದ = ಕಮಲ ೫–೨೭
ಆರವಿಂದಹಿತ = ಸೂರ್ಯ ೨೦–೮
ಆರಳು = ಹೂವು ೧೮–೬೫
ಆರಳ್ಚು = ಆರಳಿಸು ೮–೨
ಆರಿಷಡ್ವರ್ಗ = ಆರು ವೈರಿಗಳು: ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ೨೦–೪
ಆರುಣಪಟ = ಕಾವಿಬಟ್ಟೆ ೧–೫೩
ಆರಗಡಿ = ತುಂಡರಿಸ ೨೬–೩೫
ಆಱಕೆ = ಶೋಧನ ೨೫–೨೯
ಆಱಿಕೆ = ಪ್ರಸಿದ್ಧಿ ೭–೬
ಆಱಿ = ಇಂಗು ೧೦–೪೪
ಆಱಿಯಟ್ಟು = ಬೆನ್ನಟ್ಟು ೨೦–೧೫
ಆರ್ಣವ = ಸಮುದ್ರ ೧೯–೨೭
ಆರ್ಣವೋದ್ಭವ = ಚಂದ್ರ ೫–೧
ಆರ್ತಿಸು = ಬೇಡು, ಇಚ್ಛಿಸು. ೮–೩೩
ಆರ್ತಿಯೆ = ಪ್ರೀತಿಯಿಂದ ೩೭–೩೨
ಆರ್ಥನಾಥ = ಕುಬೇರ ೪೫–೪೯
ಆರ್ಥನಾಥಸಖ = ಶಿವ ೪೫–೪೯

CC-0. Jangamwadi Math Collection. Digitized by eGangotri

ಅಲಗು = ಕತ್ತಿ ೧೬–೧೧
ಅಲಘು = ಮಹತ್ತಾದ, ಶ್ರೇಷ್ಠ ೩–೫೮
ಅಲಂಕರಣ = ಆಭರಣ ೫–೬೬
ಅಲರು = ಹಿಗ್ಗು, ಹೆಚ್ಚಾಗು ೪–೫೧
ಅಲರುವಿಲುಗಾಱ = ಕಾಮ ೪–೨೬
ಅಲಸು = ದಣಿ ೪೬–೪೭
ಅರಬು = ಗಲಬಲಿಸು ೫೯–೪೮
ಅವಗಡ = ದುರ್ಗಮ ೧೫–೧೦
ಅವಗಡಿಸು = ಆವೇಶಗೊಳ್ಳು ೨–೩
ಅವಗಡಿಸು = ಧಿಕ್ಕರಿಸು ೪–೨೩
ಅವಗಡೆಯ = ಕ್ರೂರ ೨೭–೨೯
ಅವಚ = ಹೇಳತಕ್ಕವಲ್ಲದ ೫–೮
ಅವತಂಸ = ಆಭರಣ ೧೧–೧೫
ಅವಧರಿಸು = ಕೇಳು ೨–೨
ಅವಧಾರು = ಚಿತ್ರೈಸು ೧–೬೪
ಅವನೀತ = ನೀತಿಹೀನ ೩೭–೫೩
ಅವನೀ = ಭೂಮಿ ೩೩–೨
ಅವನೀಧ್ರ = ಪರ್ವತ ೩೩–೨
ಅವನೀಧ್ರ = ಪರ್ವತ ೩೩—೨
ಅವಲ = ಅವಲಕ್ಕಿ ೧೩–೧೪
ಅವಸರ = ವೇಳೆ ೭–೪೩
ಅವಸಾನ = ಕೊನೆ ೧೮–೨೪
ಅವಿಧೆ = ಮೆಗೆ ೫೧–೪೨
ಅವಿರತಂ = ಸತತ ೬–೩
ಅವುಂಕು = ಒತ್ತು ೪–೧೨
ಅವುಡಲಿಕೆ = ಕಿಡಲ ೧೬–೭
ಅವ್ಯಯ = ತೀರದ ೭–೩೮
ಅಶನ = ಆಹಾರ ೨೩–೧೪
ಅಶ್ವತ್ಥ = ಆರಳಿ ೨೫–೩೬
ಅಷ್ಟಮದ = ಛಲ, ಧನ, ರೂಪ, ಯೌವನ, ವಿದ್ಯೆ, ರಾಜ್ಯ, ತಪ–ಇವಕ್ಕೆ ಸಂಬಂಧಿಸಿದ ಮದಗಳು ೫೯–೫೫
ಅಷ್ಟವಿಧ ಪೂಜೆ = ಜಲ, ಗಂಧ, ಅಕ್ಷತೆ, ಪತ್ರಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ–ಇವುಗಳ ಸಮರ್ಪಣ ೧೦–೧
ಅಷ್ಟಷಷ್ಟಿ = ಅರುವತ್ತೆಂಟು ೧೮–೫೬
ಅಷ್ಟಾಂಗಯೋಗ = ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ ಧ್ಯಾನ, ಧಾರಣ, ಸಮಾಧಿ ೩೪–೨೦
ಅಷ್ಟಾದರ = ಹದಿನೆಂಟು ೫೪–೨೦
ಅಷ್ಟಾವಶೇಷದ ಪಾಕ = ಎಂಟರೊಳ ಗೊಂದಂಶ ಉಳಿಯುವಂತೆ ಅಟ್ಟಿಸಿದ ಪಾಕ ೧೧–೨೮
ಅಸಗ = ಅಗಸ ೨೦–೧೨
ಅಸಡ್ಡಾಳ = ಕೆಟ್ಟ ೫೩–೨೭
ಅಸಮನೇತ್ರ = ಬೆಸಕಣ್ಣುಳ್ಳ, ಶಿವ ೪–೬೪
ಅಸಿ = ಸಣ್ಣ. ತೆಳುವು ೫–೨೪
ಅಸಿ = ಖಡ್ಗ ೧೫–೧೮
ಅಸಿತ = ಕಪ್ಪು ೪–೩೪
ಅಸಿಯ ಕಲ್ಲು = ಅರೆಯುವ ತಳಗಲ್ಲು ೪೨–೫೯
ಅಸು = ಪ್ರಾಣ ೧೨–೩
ಅಸುಗತಿಮಿತ್ರ = ಅಗ್ನಿ ೫–೧
ಅಹಗೆ = ಹಾಗೆ ೪–೬೩
ಅಹಂತವ್ಯ = ಕೊಲ್ಲಬಾರದ ೫೨–೪೧
ಅಹಿಮಕಿರಣ = ಸೂರ್ಯ ೪೨–೪೩
ಅಳವಡು = ಹೊಂದಿಕೆಯಾಗು ೧೯–೮
ಅಳಿ = ಭ್ರಮರ ೧೮–೭೫
ಅಳಿಕ = ಹಣೆ ೫–೨೦
ಅಳುಪು = ಆಸಿಸು ೪೧–೭೫
ಅಳ್ತಿಕಾಱ = ಪ್ರೀತಿಯವ ೧–೩೪
ಅಳ್ಳೆ = ಪಕ್ಕಡಿ ೪೬–೩೨

ಆ

ಆಕರಿಸು = ಬಚ್ಚಿಡು ೫೧–೬
ಆಕರ್ಣಿಸು = ಕೇಳು ೫–೧
ಆಕಲಿತ = ಯುಕ್ತವಾದ ೮–೧೧
ಆಕ್ರಂದನ = ಶೋಕ ೧೪–೨೧
ಆಖಂಡಳ = ದೇವೇಂದ್ರ ೨೬–೪೧

CC-0. Jangamwadi Math Collection. Digitized by eGangotri

ಆಖಿ = ಇಲಿ ೯–೩೧
ಆಖಿರಥ = ಇಲಿದೇರ, ಗಣಪತಿ ೯–೩೧
ಆಗಾರ = ಮನೆ ೧–೭
ಆಗುಳಿಕೆ = ಆಕಳಿಕೆ ೩–೨
ಆಜ್ಯ = ತುಪ್ಪ ೨–೫೩
ಆಟವಿಕ = ಆಡವಿ ಸಂಚಾರಿ ೧೫–೧೫
ಆಡಂಬರ = ಅತಿಶಯ, ಸಮೂಹ ೯–೯
ಆಣಿ = ಆಜ್ಞೆ ೩–೨೯
ಆತತ = ವಿಸ್ತಾರವಾದ ೧೮–೩೪
ಆತಪ = ಬಿಸಿಲು ೧೮–೫೮
ಆದಿತೇಯ = ಆದಿತ್ಯ ೧–೪೨
ಆದಿಮ = ಮೊದಲಿನ ೧೨–೬
ಆನನ = ಮುಖ ೫–೫೯
ಆಂದೋಳ = ಪಲ್ಲಕ್ಕಿ ೬–೧೪
ಆಪ = ಸಮರ್ಥ ೫–೫
ಆಪಗೆ = ನದಿ ೧೮–೨೭
ಆಪತಿ = ಆಪತ್ತಿ ೮–೯
ಆಪನಿತು = ಶಕ್ತ್ಯನುಸಾರ ೨–೫೩
ಆಪು = ಆರ್ಪು, ಸಾಮರ್ಥ್ಯ ೩೬–೩೯
ಆಪೆನೆ = ಸಮರ್ಥನಾಗುವೆನೆ ೧–೩೫
ಆಪೊತ್ತು = ಯಾವಾಗಲೂ ೭–೪೬
ಆಪ್ಯಾನ = ಹಸಿವು ೪೨–೪೧
ಆಭೀಳ = ಭಯಂಕರ ೧೭–೧
ಆಭ್ರಂಲಿಕ ಶಿಲೆ = ಆಭ್ರವುಳ್ಳ ಶಿಲೆ ೧೮–೩೪
ಆಮಕಳ = ನೆಲ್ಲಿಕಾಯಿ ೯–೫೩
ಆಮೋದ = ಸುವಾಸನೆ ೨೬–೬೦
ಆಮ್ರ = ಹುಳಿ ೫೬–೩೫
ಆಯತಿಕೆ = ಶ್ರೇಷ್ಠತ್ವ, ಸಾಮರ್ಥ್ಯ ೨೪–೧೦
ಆರಯ್ = ವಿಚಾರಿಸು ೯–೧೬
ಆರುಹತ = ಅರ್ಹಂತ, ಜೈನ ೪೮–೫೫
ಆರೈ = ವಿಚಾರಿಸು, ಪರೀಕ್ಷಿಸು ೨೬–೫೯
ಆಱಡಿ = ಭ್ರಮರ ೧೦–೪೧
ಆಱಡಿ = ಪೀಡಕ ೩೯–೬೨
ಆರ್ತ = ದೈನ್ಯ ೬–೧೧
ಆರ್ಪನಿತು = ಶಕ್ಯವಿದ್ದಷ್ಟು ೧೨–೨೧
ಆಲವಟ್ಟ = ಬೀಸಣಿಗೆ ೫–೪೫
ಆಲವಾಲ = ಪಾತಿ, ಗಿಡಗಳ ಮಡಿ ೩೭–೬೮
ಆಲಾಪ = ಮಾತುಕತೆ ೨೩–೫೩
ಆಲು = ಕೂಗು ೧೫–೧೪
ಆಲೋಕ = ಕಣ್ಣು ೩೯–೫
ಆವರ್ತ = ಸುಳಿ ೪–೧೯
ಆವಳಿ = ಸಮೂಹ ೧೦–೪೮
ಆಶಾ = ದಿಕ್ಕು ೩೩–೧
ಆಸನ್ನವರ್ತಿ = ಸ್ಥಿರವಾಸಿ ೧೭–೧೩
ಆಸರು = ದಣಿ ೨೩–೫೪
ಆಸಟು = ತವಕ ೧೯–೨೧
ಆಸಹಸ್ರಾಣಿ = ಸಾವಿರಾರು ೭–೪೭
ಆಸುರ = ಆರ್ಭಟಿ, ಭೀಕರ ೧೫–೨೩
ಆಸ್ಥಿಮಿತ = ಅಚಲವಾದ ೩೪–೩೪
ಆಸ್ಥಾನ ಭವನ = ಸಭಾಮಂದಿರ ೧೦–೨೯
ಆಸ್ಯ = ಮುಖ ೧೦–೩೦
ಆಳ್ = ಕಾಪಾಡು ೩೬–೨೪
ಆಳತಿ = ಆರತಿ ೧೧–೪೪
ಆಳಿ = ಅವಹೇಳನೆ ೩೭–೨೩
ಆಳಿ = ಸಮೂಹ ೪೬–೧೩
ಆಳಿಕೊಳ್ = ಬಯ್ಯು ೧–೨೦
ಆಳಿಕೊಳ್ = ಹೀಯಾಳಿಸು ೨೫–೫೮
ಆಳ್ವರಿ = ಬುರುಜು ೧೫–೧೪

ಇ

ಇಕ್ಕೆ = ಇರುವ ಸ್ಥಳ ೮–೧೦
ಇಕ್ಕೆ = ಇರವು ೩೪–೪
ಇಕ್ಕೆಗೊಳ್ಳು = ಮನೆಸೇರು ೧೧–೪೮
ಇಕ್ಕುದಂಡ = ಕಬ್ಬಿನಗಳ ೭–೧೮
ಇಂಗಡಲು = ಕ್ಷೀರಸಮುದ್ರ ೧೦–೩೪
ಇಂಗಳ = ಬೆಂಕಿ ೪೩–೨೭
ಇಟ್ಟಿ = ಈಟಿ, ಭಲ್ಲೆ ೩೩–೩೩
ಇಡು = ಹೊಡೆ ೧೭–೫೨

CC-0. Jangamwadi Math Collection. Digitized by eGangotri

ಇಡುಮುಡುಕು = ಸಂದಿ, ಮೂಲೆ ೨೦–೧೩
ಇಂಡೆ = ದಂಡೆ ೨–೫೫
ಇತ್ತರ = ಎರಡು ಬದಿ ೫–೪೫
ಇತ್ತಿನ = ಎರಡು ಮೂರು ೪೨–೫
ಇದ್ದುಗೆ = ಎರಡು ಎರಡು ೪೨–೫
ಇದ್ದೊಱೆ = ಎರಡು ನದಿ ೩೧–೩೨
ಇನ = ಸೂರ್ಯ ೯–೩೧
ಇಂತುಟಾದಡೆ = ಇಷ್ಟು ಕೂಡ ೧೬–೯
ಇಂದಿಂದರ = ಭ್ರಮರ ೫–೨೭
ಇಂದಿರಾ = ಲಕ್ಷ್ಮಿ ೫–೨೭
ಇಂದಿರಾಜ = ಕಾಮ ೫–೨೭
ಇಂದೀವರ = ಕಮಲ ೪–೧೯
ಇಂದು = ಚಂದ್ರ ೧೭–೧೪
ಇಂದುಕಳಾಕಿರೀಟ = ಶಿವ ೧೭–೪
ಇಂಧನ = ಉರುವಲು ೩೪–೨೭
ಇಬ್ಬಗಿ = ಎರಡು ಹೋಳು ೩೧–೨೪
ಇಭ = ಆನೆ ೧೭–೪೦
ಇಭವೈರಿ = ಸಿಂಹ ೩೯–೩೪
ಇಭಾಸುರಾಜಿನ = ಗಜಚರ್ಮ ೧–೪೫
ಇಂಪಡರು = ಸೊಗಸಾಗು ೨೪–೪
ಇರುಹುರಿ = ಎರಡು ಹುರಿ ೪೬–೩೦
ಇಱಿ = ಚುಚ್ಚು ೫೦–೩೪
ಇರ್ಕು = ಹಿಕ್ಕು, ಬಾಚು ೧೪–೯
ಇಹಗೆ = ಹೀಗೆ ೪–೬೩

ಈ

ಈರೈದು = ಎರಡು ಐದು ೪೨–೫
ಈಷಣತ್ರಯ = ಮೂರು ಆಸೆಗಳು: ಪುತ್ರೇಷಣ, ದಾರೇಷಣ, ವಿತ್ತೇಷಣ ೧೯–೩೪
ಈಸಿಕೊಳ್ = ಇಸಿದುಕೊಳ್ಳು ೫–೫೬
ಈಸು = ಇಷ್ಟು ೫–೩೪

ಉ

ಉಕ್ಷ = ವೃಷಭ ೨೬–೩೨
ಉಗಿ = ಸೆಳೆ ೧೦–೩೪
ಉಗಿಸು = ಜೆಲ್ಲು ೫೮–೧೮
ಉಗು = ಸೂಸು, ಚೆಲ್ಲು ೨–೩೪
ಉಂಗುಟ = ಹೆಬ್ಬೆರಳು ೧೪–೧೧
ಉಚ್ಚಳಿಸು = ಮೇಲೆ ಹಾರು ೧೭–೬೨
ಉಡಿ = ನಡು ೩೧–೫೧
ಉಡಿಘಂಟೆ = ಸೊಂಟದ ಗಂಟೆ ೧೫–೧೭
ಉಡು = ನಕ್ಷತ್ರ ೧೬–೧೯
ಉಡುಪ = ಚಂದ್ರ ೨–೧೪
ಉಡುಗು = ಕುಗ್ಗು ೯–೪೪
ಉಡುಗು = ಮುಚ್ಚು ೨೦–೧೬
ಉಡುಗು = ತಡೆ ೩೩–೨೧
ಉಡುಪತಿ = ಚಂದ್ರ ೧೬–೧೯
ಉಡುವರ = ಚಂದ್ರ ೧೦–೧೨
ಉಂಡಿಗೆ = ಮುದ್ರೆ ೨೭–೪೨
ಉತ್ಕರ = ವೈಪುಳ್ಯ, ಸಮೂಹ ೩–೪೨
ಉತ್ತರಿಗೆ = ಹೂದೆವ ಸೆಲ್ಲೆ, ಉತ್ತರೀಯ ೬೦–೨೭
ಉತ್ತರಿಸು = ದಾಟು ೪೪–೨೫
ಉತ್ಪಾರ = ಪರಿಣಾಮ, ನಿರ್ಣಯ ೧೯–೨
ಉತ್ಪಳ = ನೀಲಕಮಲ ೫–೨೦
ಉತ್ಪಳಸಖ = ಚಂದ್ರ ೩೪–೨೪
ಉತ್ಪಾಟನ = ಕೀಳುವಿಕೆ ೪೫–೭೩
ಉದ್ಗತ = ಹುಟ್ಟಿದ ೬–೫೯
ಉತ್ಸಂಗ = ತೊಡೆ ೧೨–೧೭
ಉತ್ಸವಿಸು = ಹರ್ಷಿಸು ೨೦–೩೮
ಉದ = ನೀರು ೭–೬೦
ಉದಧಿ = ಸಮುದ್ರ ೫೩–೩೮
ಉದರ = ಹೊಟ್ಟೆ ೯–೫೧
ಉದ್ದಂಡಿಕೆ = ಉದ್ಧತತನ ೧೦–೮
ಉದ್ಧರ = ಹಾರೆ ೪೬–೮

CC-0. Jangamwadi Math Collection. Digitized by eGangotri

ಉದ್ಘೋಷಿಸು = ತೊಡೆದುಕೊಳ್ಳು ೧೧–೧೭
ಉನ್ನತಿಕೆ = ಶ್ರೇಷ್ಠತ್ವ, ಮೇಲ್ಮೆ ೧೭–೮೦
ಉನ್ಮತ್ತ = ಮದ್ದುಗುಣಿಕೆ ೧೬–೭
ಉಪಕಂಠ = ಹೊರವಲಯ ೫–೫೧
ಉಪಲ = ಕಲ್ಲು ೧೮–೪೪
ಉಪಲಾಲಿಸು = ಮುದ್ದು ಮಾಡು ೧೪–೧೫
ಉಪವೀತ = ಜನಿವಾರ ೧–೫೩
ಉಪಹತಿ = ಬಡಿತ ೧೬–೧೬
ಉಪ್ಪರಿಸು = ಪುಟಿದೇಳು, ಹಾರು ೯–೫೨
ಉಪ್ಪೊರಸು = ಹಾತೊರೆ ೩೦–೨೫
ಉಬ್ಬರಿಸು–ಹೆಚ್ಚಾಗು, ಉಬ್ಬು ೭–೮
ಉಮಾಪ = ಶಿವ ೧–೩೫
ಉಮ್ಮಳಿ = ದುಃಖ ೩–೫೯
ಉಮ್ಮಳಿಸು = ಕಳವಳಿಸು ೧೯–೮
ಉಯ್ಯಲ = ಜೋಕಾಲಿ ೧೧–೯
ಉರಗ = ಸರ್ಪ ೧–೪೩
ಉರವಣಿಸು = ಆರ್ಭಟಿಸು ೧೦–೨
ಉರವಣೆ = ಆರ್ಭಟಿ ೧–೫೪
ಉರಃಸ್ಥಲ = ಎದೆ ೨–೩೫
ಉರೋಜ = ಮೊಲೆ ೨೬–೫೯
ಉಱದೆ = ಆಬ್ಬರದಿಂದ ೨೦–೨೧
ಉಱುಗಿಸು = ಸೊಟ್ಟಮಾಡು ೧–೪೯
ಉಱೆ = ಅತ್ಯಂತವಾಗಿ, ಚೆನ್ನಾಗಿ ೧೦–೪೪
ಉರ್ವಿ = ಭೂಮಿ ೩–೩೦
ಉಷ್ಟ್ರ = ಒಂಟೆ ೭–೩೧
ಉಸಿಕನೆ = ಸುಮ್ಮನೆ ೨೦–೩೭
ಉಸಿಯನೆ = ಸುಮ್ಮನೆ ೪೬–೧೮
ಉಸುರು = ಹೇಳು ೩–೭೫
ಉಳಿದಂತೆ = ಮಿಕ್ಕ ರೀತಿಯಲ್ಲಿ ೩೭–೧೧

ಊ

ಊಡು = ಉಣಿಸು ೨–೫೩
ಊದು = ಉಬ್ಬು ೧೪–೨೮
ಊರು = ತೊಡೆ ೫–೨೪
ಊರುವಂದಿ = ಊರಹಂದಿ ೧೦–೧೦
ಊಳಿಗ = ಸೇವೆ ೫೨–೩೪
ಊಳಿಡು = ನರಿಯಂತೆ ಕೂಗು ೨೧–೫೨
ಋತ = ಸತ್ಯ ೨–೪

ಎ

ಎಕ್ಕಟಿ = ಒಬ್ಬೊಂಟಿಗ ೧೭–೯
ಎಕ್ಕಟಿಗ = ಏಕಾಂತದ ೧೫–೧೩
ಎಕ್ಕಸಕ್ಕ = ಆಕಳಾಸಕಳಾ ೫೪–೪೪
ಎಗ್ಗು = ದೋಷ, ಕುಂದು ೬–೧೩
ಎಗ್ಗು = ತಿಮಿ, ಚುಚ್ಚು ೨೦–೧೦
ಎಗ್ಗು = ತೊಂದರೆ, ಮಾನಭಂಗ ೫೯–೧೬
ಎಚ್ಚು = ಹಚ್ಚು ೧೪–೧೨
ಎಡೆಯಾಡಿಸು = ಎಡತಾಕಿಸು ೮–೩೩
ಎಣ್ = ಎಣಿಸು ೪೯–೬೭
ಎಣೆ = ಸಮಾನ ೯–೫೫
ಎತ್ತಿಸು = ನಿರ್ಮಿಸು ೪–೩
ಎತ್ತು = ತೆಗೆ, ಉದ್ಧರಿಸು, ಬದುಕಿಸು ೧೫–೬
ಎಂತುಟು = ಹೇಗುಂಟು ೯–೨
ಎನ್ನವರಿ = ನನ್ನನ್ನು ೧೨–೨೫
ಎಯ್ದು = ಹುಸಿಹೋಗು ೭–೨೫
ಎಯ್ದು = ಬರು ೨೬–೨೧
ಎರವು = ವಿರಹಿತ ೧–೨೯
ಎಱೆ = ಕೊಡು ೧೭–೩
ಎಲರು = ಗಾಳಿ ೫–೩೦
ಎಲವ = ವೃಕ್ಷವಿಶೇಷ ೨೯–೨೮
ಎಲೆಮರುಳು = ಎಲೆಯ ಹುಚ್ಚು ೧೭–೧೨
ಎಸಕ = ಶೋಭೆ, ರಂಜನೆ ೧೭–೧೧೦
ಎಹಗೆ = ಹೇಗೆ ೧–೬೩
ಎಳತಟ = ಎಳೆದಾಟ ೫೧–೧೭
ಎಳೆವೆಱೆ = ಬಾಲಚಂದ್ರ ೪–೨೯

CC-0. Jangamwadi Math Collection. Digitized by eGangotri

ಏ

ಏಕತ = ಯಾವ ಕಾರಣ ೫–೩೨
ಏಕತವೆ = ಏನಾದರೊಂದು ಕಾರಣ ದಿಂದ ೨–೩೮
ಏಕಾರ್ಣವಾಗು = ಜಲಪ್ರಳಯ ವಾಗು ೨೦–೩೨
ಏಕಾಲಮುಂ = ಯಾವ ಕಾಲವೂ, ಸತತವೂ ೪೦–೧೯
ಏಗುಳಂ = ಯಾವಾಗಲೂ ೧೭–೧೦೪
ಏಗುವೆ = ಏನು ಮಾಡುವೆ ೩–೧೬
ಏಡಿಸು = ಹಾಸ್ಯಮಾಡು ೧೭–೧೫
ಏಣ = ಚಿಗರೆ ೩೧–೪೮
ಏಣಧರ = ಚಂದ್ರ ೨೫–೪೨
ಏಣ = ನಿಶ್ಚಣಿಕೆ ೩೬–೪೯
ಏನಸ್ = ಪಾಪ ೪೮–೧
ಏಪಪದೊಳು = ಯಾವ ಬಗೆಯ ಲ್ಲಾದರೂ ೨೬–೫೩
ಏಪರಿ = ಯಾವ ರೀತಿ ೨೪–೨೩
ಏರಂಡ = ಔಡಲ ೫೦–೬೯
ಏವಮೇತತ್ = ಇದು ಹೀಗೆಯೇ ೭–೪೬
ಏಸಕ್ಕೆ = ಎಷ್ಟಾದರೂ ೪೬–೫೦
ಏಸು = ಎಷ್ಟು ೧೭–೩೬
ಏಳಿಗೆ = ಉತ್ಸಾಹ ೮–೨೪
ಏಳಿಲು = ಹೀಯಾಳಿಕೆ ೪೦–೧೦
ಏಸಟಿಸೊಳು = ಆಪ್ತರಲ್ಲಿ ೨–೪೪
ಏಸು = ಅಷ್ಟು ೨೬–೧೧

ಒ

ಒಕ್ಕುಡಿತೆ = ಒಂದು ಬೊಗಸೆ ೨೯–೧೪
ಒಗು = ಹೊರಸೂಸು ೧೬–೧೯
ಒಗೆ = ಹುಟ್ಟು ೨–೧೦
ಒಗ್ಗು = ಸಮೂಹ ೧೧–೪
ಒಗ್ಗು = ಬಾಗಿಸು ೧೪–೧೪
ಒಚ್ಚಿ = ಸ್ವಲ್ಪ ೨೭–೪೨
ಒಟ್ಟವಿಸಿ = ಸಂಪೂರ್ಣವಾಗಿ ೧೦–೧೫
ಒಟ್ಟೆ = ಒಂಟೆ ೫೩–೪೯
ಒಟ್ಟೈಸು = ಒತ್ತಿಟ್ಟಿಗೆ ನೂಕು ೬೦–೨೬
ಒಡಕುಟ್ಟು = ಒಡೆಯುವಂತೆ ಕುಟ್ಟು, ಕುಟ್ಟಿ ಒಡೆ ೪೪–೩೦
ಒಡತಣ = ಸಂಗಾತಿ ೧೭–೨
ಒಡನಾಳುತನ = ಸಹಕಾರಿತ್ವ ೧೦–೫
ಒಡರಿಚು = ಮಾಡು ೧೧–೪೨
ಒಡೆಯ = ಗುರು, ಜಂಗಮ ೩–೩೮
ಒಡ್ಡಾಗು = ಮಣ್ಣಾಗು ೫೪–೨೧
ಒಡ್ಡು = ಸಮೂಹ ೧೦–೩೪
ಒತ್ತೆ = ಸೂಳೆಗೆ ಕೊಡುವ ಸಂಚಕಾರ ೩೯–೧೨
ಒದಗು = ಪೂರೈಕೆ ೨೬–೨೧
ಒದವಿಸು = ಒದಗಿಸು ೭–೪೦
ಒಂದು = ಹೊಂದು ೧–೬೬
ಒಪ್ಪ = ಒಪ್ಪಿಗೆ ೧೦–೭
ಒಪ್ಪ = ಸರೂಪ ೧೭–೮೧
ಒಪ್ಪಚಿ = ಕೊಂಚ ೫–೧೫
ಒಬ್ಬಳ = ಒಂದು ಬಳ್ಳ ೧೩–೧
ಒಬ್ಬೊಟ್ಟು = ಒಂದು ಬೊಟ್ಟು ೧೯–೨೩
ಒಮ್ಮೈ = ಕೂಡಿಬರು ೨೬–೫೪
ಒರಸು = ತಿಕ್ಕು, ತಾಗು ೪–೬
ಒರೆ = ಸಮಾನ ೪–೨೮
ಒರೆ = ತಿಕ್ಕು ೪–೬೭
ಒರೆ = ಹೇಳು ೩–೪೬
ಒಱಲು = ಅಳು ೧೩–೨೨
ಒಗರ್ಡಿಸು = ಒಟ್ಟಾಗು ೬–೨೦
ಒಸಗೆ = ಪ್ರೀತಿಯ ಕಾಣಿಕೆ, ಮೆಚ್ಚು ೩–೩೩
ಒಸಗೆ = ಸಂತೋಷ ೩೬–೫
ಒಸರು = ಸೋರು ೧–೧೬
ಒಸೆ = ಮಾಡು, ಪ್ರೀತಿಸು ೪–೫೯
ಒಳರ್ = ಇರುವರು ೧೧–೩೨

CC-0. Jangamwadi Math Collection. Digitized by eGangotri

ಒಳಲೆ = ಗಿಂಡಿ ೧೪–೧೩
ಒಳವು = ಉಂಟು ೩–೭೧

ಓ

ಓ = ರಕ್ಷಿಸು ೧೭–೮೭
ಓ = ಪ್ರೀತಿಸು ೧೯–೯
ಓಕರಿಸು = ವಾಕರಿಸು ೧೩–೧೦
ಓಗರ = ಅನ್ನ ೫–೧೦
ಓಘ = ಸಮೂಹ ೬–೪೮
ಓಜೆ = ಕ್ರಮ, ಸಮ ೬–೩೦
ಓರಂತೆ = ಒಂದೇ ಸಮನೆ ೧೨–೧೨
ಓರೆ = ವಕ್ರ ೩೯–೫೮
ಓಲಗ = ಸೇವೆ ೫೨–೧೨
ಓಲವಿಸು = ಓಲಗಿಸು, ಕೊಂಡಾಡು ೫೧–೪೯
ಓಲಾಡು = ಈಸಾಡು ೬–೨೫
ಓಲೈಸು = ಸೇವಿಸು ೧೨–೯
ಓವು = ರಕ್ಷಿಸು ೧–೬೦
ಓವು = ಹೆಚ್ಚಾಗು ೧೩–೨೫
ಓಸರಿಸು = ಬದಿಗಿರಿಸು, ಉಪೇಕ್ಷಿಸು ೧–೨೧
ಓಳಿ = ಸಾಲು ೨೦–೧೧

ಕ

ಕಂಸಾಳ = ಕಂಚಿನ ವಾದ್ಯ, ತಾಳ ೫–೪೩
ಕಂಸಾಳಗಿತ್ತಿ = ತಾಳಧಾರಿಣಿ ೫–೪೩
ಕಕ್ಕಟಗರ್ಭ = ತ್ರಾಸಿನ ಬಸುರು ೩–೧೬
ಕಂಕಾಳ = ಅಸ್ಥಿಪಂಜರ ೩–೫೪
ಕಚ್ಚು = ತೊಳೆ ೨–೨೩
ಕಚ್ಚೂಟಿ = ಕೌಪೀನ ೧೧–೫೪
ಕಚ್ಛಪ = ಕೂರ್ಮ, ಆಮೆ ೨೭–೫೬
ಕಜ್ಜ = ಕಾರ್ಯ ೨೭–೩೪
ಕಂಚುಕಿತಾಂಗ = ಬಟ್ಟೆತೊಟ್ಟ ಶರೀರ ೨–೨೨
ಕಂಜನಾಳ = ಕಮಲದ ದೇಟು ೨೭–೨೬
ಕಟಕ = ಸೈನದ ಬೀಡು ೫–೩
ಕಟಕಟಾ = ಅಕಟಕಟಾ ೧೭–೯
ಕಟಾಕ್ಷ = ಕಡೆಗಣ್ಣು ೫–೨೨
ಕಟಾಕ್ಷಿಸು = ನೋಡು ೨೬–೬೬
ಕಟಾಹ = ಕೊಪ್ಪರಿಗೆ ೧೬–೧೮
ಕಟ್ಟಂಬಕಳೆ = ಕಟ್ಟಂಬಲಿ ೩೨–೧೬
ಕಟ್ಟಿಗೆಕಾಲು = ದಂಡಧಾರಿ, ದ್ವಾರ ಪಾಲಕ, ೫೮–೨೭
ಕಟ್ಟುವಡೆ = ಬಂಧನಕ್ಕೊಳಗಾಗು ೧೯–೨೩
ಕಡಗು = ಬಲಾತ್ಕರಿಸು ೬–೨
ಕಡವರ = ಬಂಗಾರ, ಗುಪ್ತನಿಧಿ ೨೨–೩೩
ಕಡುಕು = ಕವಿಯ ಆಭರಣ ೪–೩೯
ಕಡುಹು = ಬಲಾತ್ಕಾರ ೩೯–೩೫
ಕಡೆಹ = ಕಡೇವು, ಕಂಕಣ ೬೦–೨೭
ಕಣುಕು = ಕಣಿಕೆ, ದಂಟು ೫೯–೨೭
ಕಂಠೀರವ = ಸಿಂಹ ೭–೧೯
ಕತ = ಕಾರಣ ೪೮–೨೯
ಕಥಿಕ = ಕಥನಕಾರ, ಪುರಾಣಿಕ ೧೨–೧
ಕದಪು = ಕೆನ್ನೆ ೪–೨೩
ಕದಂಬ = ಸಮೂಹ ೬–೨೨
ಕದಂಬ = ವೃಕ್ಷವಿಶೇಷ ೨೬–೬೦
ಕದಹು = ಬಾಗಿಲು, ಕದ ೮–೧೫
ಕದಳೀ = ಬಾಳೆ ೧೧–೫೩
ಕದಳೀಪತ್ರ = ಬಾಳೆಯೆಲೆ ೫೧–೫
ಕನಲು = ಸಿಟ್ಟಾಗು ೧೯–೨೮
ಕಂತು = ಕಾಮ ೩೦–೩೨
ಕಂತುಕ = ಚೆಂಡು ೪–೧೭
ಕಂದರ್ಪ = ಕಾಮ ೮–೩೭
ಕಂದು = ಬಾಡು, ಕಪ್ಪಾಗು ೧೩–೭
ಕಂಧರ = ಕೊರಳು ೪–೨೩
ಕಪರ್ದ = ಜಡೆ ೩೪–೨೪
ಕಪಾಲ = ತಲೆಬುರುಡೆ ೯–೧೯

CC-0. Jangamwadi Math Collection. Digitized by eGangotri

ಕಪಿತ್ಥ = ಬೆಳವಲಗಿಡ. ಕಾಯಿ ೧೮–೬೬
ಕಪೋತ = ಪಾರಿವಾಳ ೧೭–೩೮
ಕಪೋತ = ಕಪೋತವರ್ಣ ೧೮–೬೮
ಕಪ್ಪದ = ಬಿಟ್ಟು ೨೮–೩
ಕಪ್ಪರ = ಭಿಕ್ಷಾಪಾತ್ರೆ ೨೬–೬
ಕಬ್ಬಿನ ಕಟ್ಟಿಗೆಯ ಪುಡಿ = ಸಕ್ಕರೆ ೧೧–೨೮
ಕಬ್ಬಿಲ = ಮೀನಗಾರ, ಭಿಲ್ಲ ೫೮–೫೦
ಕಬ್ಬಿಲಿಗ = ಮೀನಗಾರ, ಭಿಲ್ಲ ೫೬–೭೨
ಕಮಠ = ಆಮೆ ೧೬–೧೭
ಕಂಬಿ = ಕಾವಡಿ ೬–೩೨
ಕಂಬಿಕಾಬಿ = ಕಾವಡಿ ಹೊರುವವ, ನೀರಾಳು ೮–೪೧
ಕಂಬು = ಶಂಖ ೪–೨೩
ಕಮ್ಮಿತಿಗ = ಕಮತಿಗ, ಶೈತ ೮–೪೬
ಕರ = ಸೊಂಡಿಲು ೨೦–೪೨
ಕರಕ = ಆಣಿಕಲ್ಲು ೬೦–೪೨
ಕರಟಿ = ಆನೆ ೨೦–೩೪
ಕರಂಡ = ಕುಪ್ಪೆ ೭–೧೯
ಕರವೀರ = ಕಣಗಿಲು ೨೫–೩೬
ಕರವಾಳು = ಖಡ್ಗ ೬–೧೦
ಕರಾಳ = ಭೀಕರ ೮–೧೩
ಕರಾಳು = ಕತ್ತಿ ೪೬–೩೪
ಕರಿ = ಆನೆ ೬–೧೪
ಕರಿಮುರಿಯಾಗು = ಕರುಕಾಗು ೨–೧೩
ಕಱಿಗೊರಲ = ಏವ ೫೬–೩೨
ಕಱಿವುಱಿ = ವಂಚನೆ ೧೪–೭
ಕರ್ಚು = ತೊಳೆ ೨೯–೧೫
ಕರ್ದಮ = ಗಂಧ ೫–೨೫
ಕಲಧೌತ = ಶುಭ್ರ ೧–೩೯
ಕಲಿತ = ಕೂಡಿದ ೩೮–೭
ಕಲುಷ = ಕೋಪ ೨೧–೧೪
ಕಲುಹಾರ = ಕಲ್ಹಾರ ೪–೨೨
ಕಲ್ಮಷ = ಮಲ ೩೧–೩
ಕವಲು = ಶಾಖೆ ೧೭–೪೪
ಕವಳಿಗೆ = ಕಟ್ಟು ೩೪–೪೫
ಕವಳಿಗೆ = ಹೊತ್ತಗೆ ೩೮–೭೨
ಕವಾಟ = ಬಾಗಿಲು ೧೫–೯
ಕವಿಲೆ = ಕಪಿಲೆ, ಕೆಂದಾಕಳು ೨೨–೨೯
ಕವ್ವುಱಿ = ಕಮರು ೪೩–೨೭
ಕಳಕಂಠಿ = ಕೋಗಿಲೆ ೫–೨೭
ಕಳಶಭವ = ಅಗಸ್ತ್ಯ ೫೨–೪
ಕಳಿ = ಪಣ್ಣಾಗು ೪೬–೧೫
ಕಾಕುಮತಿ = ಹೀನಬುದ್ಧಿ ೫೯–೮೨
ಕಾಗು = ಕಗ್ಗು, ಶಾನಿ ೨೮–೩
ಕಾಂಕ್ಷಿತ = ಇಷ್ಟ ೧೯–೨೬
ಕಾಂಚನಾದ್ರಿ = ಹೇಮಗಿರಿ ೪–೫೨
ಕಾಂಚೀದಾಮ = ನಡಪಟ್ಟಿ ೪–೩೬
ಕಾಂತಾರ = ಅಡವಿ ೨೯–೪
ಕಾಪು = ಕಾವಲು ೧೩–೨
ಕಾಮತಾತ = ವಿಷ್ಣು ೧–೨
ಕಾಮದುಘ = ಕಾಮಧೇನು ೩೮–೧
ಕಾಮ್ಯಾರ್ಥ = ಇಚ್ಛಿತ ಸಂಪತ್ತು ೮–೨೯
ಕಾರೊಡಲು = ಕಪ್ಪು ಶರೀರ ೧೯–೧೨
ಕಾರ್ಪಣ್ಯ = ದುಃಖ ೪೫–೩೯
ಕಾಷ್ಮೀಭೂತ = ಮರವಟ್ಟ ೧೮–೮೦
ಕಾಳಂಜಿ = ಕಾರಂಜಿ ೧೧–೯
ಕಿಕ್ಕಿಱಿ = ಕುರಿ ಕುರಿ ಅನ್ನು ೧೯–೧೩
ಕಿಂಕಿಣಿ = ಗೆಜ್ಜೆ ೫–೨೫
ಕಿನಿ = ಪಲ್ಲ ಪೊಲಸು ೫೦–೫೩
ಕಿರಾತ = ಬೇಡ ೫೦–೧೭
ಕಿಱಿಗೆ = ದಟ್ಟಿ, ಸೀರೆ ೧೩–೧೫
ಕಿಱುಕುಣಿ = ಸಣ್ಣ ತಗ್ಗು ೩೭–೫೬
ಕೀಲ್ = ಕೀಲಿ ೧೦–೧೫
ಕೀಲಾರ = ಗೋಶಾಲೆ ೮–೪೬

CC-0. Jangamwadi Math Collection. Digitized by eGangotri

ಕೇಲಾಲ = ಗೋಶಾಲೆ ೪೫–೩೧
ಕೇಶ = ಕಪಿ ೭–೩೧
ಕೇಳಾಳು = ಕ್ಷುದ್ರ ಸೇವಕ ೨೫–೫೮
ಕೇಳಿಲು = ಆಂಗಳ ೪೧–೨೯
ಕುಕ್ಕುಟ = ಕೋಳಿ ೭–೩೧
ಕುಕ್ಕುರ = ನಾಯಿ ೪೩–೨
ಕುಜ = ಮರ ೩–೬೯
ಕುಜ = ಮಂಗಳ ಗ್ರಹ ೯–೩೦
ಕುಜನ = ಕೆಟ್ಟ ಜನ ೮–೧೪
ಕುಂಜರ = ಆನೆ ೨೭–೨೬
ಕುಟಿಲ = ಕೊಂಕು ೧೧–೫೫
ಕುಟ್ಟಿಮ = ನೆಲಗಚ್ಚು ೧೧–೧೩
ಕುಠಾರ = ಕೊಡಲಿ ೩–೬೯
ಕುಡಿತೆ = ಬೊಗಸೆ, ಸೆರೆ ೪–೨೫
ಕುದುಮೊಂದಿಸು = ಗರ್ಜಿಸು ೨೦–೪೦
ಕುಂಡಳೇಶ್ವರ = ಆದಿಶೇಷ ೩೧–೧
ಕುತ್ತ = ಬೇಗ ೧–೩೬
ಕುದುಕುವರಿ = ತಡೆತಡೆದು ನಡೆಯುವ ನಡೆ ೨೫–೩೨
ಕುದ್ದಾಲ = ಗುದ್ದಲಿ ೨೦–೨
ಕುಧರ = ಬೆಟ್ಟ ೧೮–೩೩
ಕುಂದ = ಜಾಜಿಮಲ್ಲಿಗೆ ೪–೨೮
ಕುಪರಿ = ನಿಂದೆ, ಹೀಯಾಳಿಕೆ ೩೧–೫೫
ಕುಪ್ಪಟಿ = ಸಣ್ಣ ಹೊಂಡ, ನೀರು ನಿಂತ ತಗ್ಗು ೨೯–೨೮
ಕುಪ್ಪಳಿಸು = ಚಿಮ್ಮು ೧೭–೭೨
ಕುಮಾರ = ಷಣ್ಮುಖ ೪೯–೧
ಕುಮುದ = ನೀಲಕಮಲ ೪–೨೭
ಕುಂಭಿ = ಆನೆ ೪–೧೮
ಕುರಂಗ = ಚಿಗರೆ ೯–೨೦
ಕುಱು = ಕಿರಿ, ಚಿಕ್ಕ ೨೫–೩೧
ಕುಱುಪು = ಕುರುಹು, ಚಿಹ್ನೆ ೧೭–೩

ಕುಲಜಾತ = ಉತ್ತಮ ಕುಲದವ ೨೦–೨೪
ಕುಲನಗ = ಗೋತ್ರಪರ್ವತ ೧೬–೧೭
ಕುಲಾಲ = ಕುಂಬಾರ ೮–೪೭
ಕುಲಿಶ = ವಜ್ರಾಯುಧ ೭–೨೫
ಕುಲೀನ = ಶ್ರೇಷ್ಠಕುಲದವ ೨೦–೨೪
ಕುಲ್ಕ = ಹೆಂಡ ೪೨–೬೬
ಕುಶಜ = ಕಮಲ ೧೧–೫೫
ಕುಸಿಕಿ = ಆಪ್ಪಳಿಸಿ ಮುರಿ ೫೫–೨೯
ಕುಸುರಿದಱಿ = ಸಣ್ಣಾಗಿ ತುಂಡರಿಸು ೪೪-೨೮
ಕುಳ = ಸಮೂಹ ೧೮–೭೫
ಕೂನ = ಗೂನು ಹಾಯ್ದವ ೪೯–೩೧
ಕೂಪ = ಬಾವಿ ೧೮–೬೦
ಕೂಪ = ಪ್ರೀತಿ ಮಾಡುವವ ೨೨–೩೨
ಕೂರ್ಮೆ = ಪ್ರೀತಿ ೨೧–೬೦
ಕೂರ್ = ಹದನ, ಪರಿತ ೫–೨೩
ಕೂರಲಗು = ಹದನವಾದ ಕತ್ತಿ ೧–೩೩
ಕೂರ್ಪ = ಪ್ರಿಯ ೧–೩೨
ಕೃತ್ತಿ = ತೊಗಲು ೧೪–೩೫
ಕೃತ್ತಿಮ = ಕೃತ್ರಿಮ ೩೧–೫೮
ಕೃಂತನ = ಕತ್ತರಿಸುವಿಕೆ ೪೮–೩
ಕೃಶಾನು = ಅಗ್ನಿ ೨೨–೧೫
ಕೆಚ್ಚನೆ = ಕೆಂಪಗೆ ೨೦–೧೮
ಕೆಡೆ = ಬೀಳು ೩–೧೭
ಕೆದಱು = ವಿಹ್ವಲವಾಗು ೧೭–೪೭
ಕೆರಳು = ಸಿಟ್ಟಾಗು ೫–೩೨
ಕೆರ್ಪು = ತೆರವು ೩೭–೫೭
ಕೇಣ = ಮಂಚನೆ ೧೬–೫
ಕೇತನ = ಧ್ವಜ ೬–೨೧
ಕೇಯೂರ = ಭುಜಕೀರ್ತಿ ೪೧–೧೦
ಕೇಳಿಕೆ = ಬಿರುದಿನ ಘೋಷಣೆ ೬–೨೨
ಕೈದು = ಆಯುಧ, ಕತ್ತಿ ೧೨–೧೮
ಕೈರವ = ನೀಲಕಮಲ ೧೧–೩೬
ಕೈರವಬಾಂಧವ = ಚಂದ್ರ ೧೧–೩೬

CC-0. Jangamwadi Math Collection. Digitized by eGangotri

ಕೈವಾರಿಸು = ಹೊಗಳು ೫–೩೮
ಕೈವೊಯ್ = ಚಪ್ಪಳಿಕ್ಕು ೧೧–೫೬
ಕೊಗ್ಗೆಸಜ್ಜು = ಬಲುಕೆಸರು ೯–೬
ಕೊಟ್ಟಣ = ಕುಟ್ಟುವಿಕೆ ೨೨–೧೯
ಕೊಶ್ಠಾರಿ = ಉಗ್ರಾಣದ ಅಧಿಕಾರಿ ೮–೪೨
ಕೊಂಡಿಸು = ಚಾಡಿ ಹೇಳು ೧೦–೫
ಕೊನರು = ಚಿಗುರು ೨–೩೪
ಕೊಂತ = ಲೋಡಿನಂತಹ ಗದೆ ೩೩–೩೨
ಕೊಪ್ಪು = ಕರ್ಣಾಭರಣವಿಶೇಷ ೪–೩೯
ಕೊಂಬು = ಟೊಂಗೆ ೧೮–೬೪
ಕೊರ್ವು = ಕೊಬ್ಬು ೨೩–೩೭
ಕೋ = ಪೋಣಿಸು ೧–೨೩
ಕೋಟರ = ಪೊದರು ೧೦–೪೭
ಕೋಡು = ಕೊಡುಗೆ, ವಿತರಣ ೧೦–೩೫
ಕೋಡಿವರಿ = ಕೋಡಿಯಾಗಿ ಹರಿ ೪–೧೧
ಕೋದಂಡ = ಬಿಲ್ಲು ೩೮–೫೬
ಕೋರು = ಪಾಲು ೪೫–೧೪
ಕೋವಿದ = ಚತುರ ೩೯–೧೫
ಕೋವಿದತ್ವ = ಪಾಂಡಿತ್ಯ ೯–೫೪
ಕೋವೆ = ಒಂದು ಕಿರುಕುಳ ಬೇನೆ ೧೪–೨೦
ಕೌಕ್ಷೇಯ = ಕುದುರೆ ೫೮–೩೯
ಕೌಂಕುಳಿ = ಕಂಕುಳು, ಬಗಲು ೧೪–೨೧
ಕೌಪು = ಕೌಪೀನ, ಲಂಗೋಟಿ ೧೧–೧೨
ಕೌಶಿಕ = ಗೂಗೆ ೫೯–೪೩
ಕ್ರತು = ಯಜ್ಞ ೫೩–೪೬
ಕೃತುಭುಜ = ದೇವತೆ ೨–೨೭
ಕ್ರಮ = ಪಾದ ೧೯–೩೭
ಕ್ರಮುಕ = ಅಡಕೆ ೧೮–೬೪
ಕ್ಷಣ = ಆಮಂತ್ರಣ ೨೩–೯
ಕ್ಷಪಣ = ಜೈನಮುನಿ ೫೦–೬೫
ಕ್ಷಪಾಕಾರ = ಚಂದ್ರ ೫೩–೬೭
ಕ್ಷಮಾಜ = ವೃಕ್ಷ (ಕ್ಷಮಾ–ಭೂಮಿ) ೨೫–೩೬
ಕ್ಷಮಾರುಹ = ವೃಕ್ಷ ೧೯–೧

ಕ್ಷಮೆ = ಭೂಮಿ ೯–೩೮
ಕ್ಷಾಂತಿ = ಕ್ಷಮಾಗುಣ ೩೭–೧೩
ಕ್ಷಾಮಡಾಮರ = ಪಿಡುಗು ೬–೫೦
ಕ್ಷಾರ = ಉಪ್ಪು ೧೦–೧೧
ಕ್ಷಿತಿಧರ = ಪರ್ವತ ೧೨–೩೦
ಕ್ಷೋಣಿ = ಭೂಮಿ ೮–೭

ಖ

ಖಚಿತ = ಕೆಚ್ಚಿದ ೪೯–೧೫
ಖಂಡಿಯ = ಖಡ್ಗ ೨೬–೫೫
ಖಾತಿ = ಕೋಪ ೩–೫೦
ಖರಕಿರಣ = ಸೂರ್ಯ ೨೪–೪೬
ಖಿಲ್ಲ = ದುರುಳ ೧೭–೩೭

ಗ

ಗಗನಚಾಪ = ಕಾಮನಬಿಲ್ಲು ೪೧–೩
ಗಗನಮಣಿ = ಸೂರ್ಯ ೫೫–೩೧
ಗಜಗಮನ = ಇಂದ್ರ ೧–೪೪
ಗಡಣಿಸು = ಬಡಿಸು ೨೩–೨೩
ಗಡಣಿ = ಸಮೂಹ ೬–೨
ಗಡಣಿಗೊಳ್ಳು = ಲೆಕ್ಕಿಸು ೨೫–೧೫
ಗಡಿಗೆಬಾವಿ = ಏತದ ಬಾವಿ ೫೫–೩೮
ಗಣಿಕೆ = ವೇಶ್ಯೆ ೧೧–೬
ಗಣಿದಿಸು = ಲೆಕ್ಕಮಾಡು, ಎಣಿಸು ೬–೮
ಗಣಿದಿಸು = ಲೆಕ್ಕಮಾಡು ೩೮–೨
ಗಂಡ = ಕಪೋಲ ೧೧–೫೫
ಗಂಡಿಗ = ದಿಟ್ಟ ೨೬–೬೫
ಗದ = ರೋಗ ೩೮–೨೧
ಗಂಧವಾಹ = ವಾಯು ೪೫–೭೦
ಗಂಧಸಿಂಧೂರ = ಮದ್ದಾನೆ ೨೧–೪೨
ಗನ್ನಗತಕ = ವಂಚನೆ ೨೩–೬೫
ಗಭಸ್ತಿ = ಕಾಂತಿ ೨೫–೧೦

CC-0. Jangamwadi Math Collection. Digitized by eGangotri

ಗರಹೊಡೆ = ಗ್ರಹಪೀಡೆ (ಸ್ತಬ್ಧವಾಗು) ೫೩–೮೧
ಗರಳ = ವಿಷ ೧೨–೮
ಗರಿಮೆ = ಮಹತ್ವ ೨೨–೨೧
ಗರಿಷ್ಟ = ಹಿರಿಯ ೩೮–೬೮
ಗರುವಿಕೆ = ಹೆಚ್ಚುಗಾರಿಕೆ ೬೯–೪೨
ಗರ್ಭಾಷ್ಟಕ = ಅನೆಯ ವಯಸ್ಸು ೩–೪೩
ಗಹನ = ಹಿರಿದು, ಜೋದ್ಯ ೮–೫
ಗಹನ = ಅರಣ್ಯ ೧೮–೩೮
ಗಹನದಹನ = ಕಾಳ್ಕಿಚ್ಚು ೪೮–೪೦
ಗಹ್ವರ = ಸಣ್ಣ ಗುಹೆ ೧೮–೩೩
ಗಳಬಿಳ = ಕಂಠತ್ರಾಣ, ಕೂಗಾಟ ೧೫–೧೯
ಗಳಹು = ಹರಟು ೧೩–೩೦
ಗಳಿಗೆ = ಮಡಿಕೆ ೨೦–೮
ಗಳಿಯ = ಉಪಕರಣ ೩೦–೨೯
ಗಳಿಪ = ಗಳಿಯ, ಗಳೆ ೩೦–೧೧
ಗಳು = ಗಳೆ ೧೯–೨೨
ಗಾಡಿಗ = ಮಾಯಕಾರ ೪೨–೫೨
ಗಾಡಿಗ = ಸುಂದರ ೪೪–೩೬
ಗಾತ್ರ = ಶರೀರ ೯–೫೬
ಗಾಜುಬುದ್ದಿ = ಹೀನಬುದ್ದಿ ೨೧–೨೨
ಗಾರ್ದಭ = ಕತ್ತೆ ೫೯–೪೨
ಗಾವಿಲ = ಅನಾಗರಿಕ ೮–೬
ಗಿಣ್ಣಲ = ಗಿಂಡಿ ೧೩–೧೮
ಗೀತಾರ್ಥ = ವಚನಾರ್ಥ ೧–೨೩
ಗೀರ್ವರ = ಬ್ರಹ್ಮ ೩೭–೩
ಗುಜ್ಜರಾಷ್ಟ್ರ = ಗುಜರಾತ ೧೦–೨೬
ಗುಂಜಾ = ಗುಲಗಂಜಿ ೧೭–೨
ಗುಡಿಗಟ್ಟು = ಉತ್ಸಾಹಿತವಾಗು, ಉಬ್ಬು ೧೩–೩೩
ಗುಡಿಲು = ಗುಡಿಸಲು ೧೭–೭
ಗುಡ್ಡ = ಶಿಷ್ಯ ೪೬–೩೮
ಗುತ್ತಿಕೊಳ್ = ಮರೆಸಿಕೊಳ್ಳು, ತಗ್ಗಿಸಿಕೊಳ್ಳು ೨೫–೨೩
ಗುದುಗೆ = ಡೊಣ್ಣೆ, ಕೋಲು ೨೮–೪
ಗುಂಪಿಸು = ಗಂಭೀರವಾಗು ೧೩–೭
ಗುಂಪು = ಗಾಂಭೀರ್ಯ ೧–೩೬
ಗುರು = ಹಿರಿಯ, ತಂದೆ ೨೩–೧೩
ಗುರುಳು = ಕುರುಳು ೧೪–೯
ಗುರ್ವಾವಶಸ್ = ಗುರುದೇವ ೪೮–೧
ಗುಲ್ಫ = ಕಣಕಾಲು ೪–೧೮
ಗುಲ್ಮ = ಕಂಟಿ ೧೭–೩೮
ಗುಹೆ = ಷಣ್ಮುಖ ೫–೫೫
ಗುಹ್ಯ = ಗುಪ್ತ ೬–೪೧
ಗುಳಿ = ತಗ್ಗು ೩೭–೫೭
ಗೆದಲು = ಗೆದ್ದಲು ೧೪–೩೧
ಗೇಯ = ಹಾಡಿಕೆ ೨೫–೮
ಗೇಹ = ಮನೆ ೪೮–೧
ಗೊಡ್ಡು = ಬಂಜೆ ೮–೨೪
ಗೊಂದಣ = ಗದ್ದಲ ೫–೩೮
ಗೊಪೆ = ಗುಹೆ ೪೬–೮
ಗೊರವ = ಶ್ಲೇಷಯತಿ ೧೭–೯
ಗೊಲ್ಲಳ = ದನಗಾಹಿ ೮–೧೫
ಗೋಟು = ಬದಿ, ಅಂಚು ೩೯–೫೨
ಗೋಣಿ = ಚೀಲ ೧೭–೬
ಗೋತ್ರ = ಪರ್ವತ ೬೦–೩೬
ಗೋತ್ರಯ = ಶಿವ, ಮುಕ್ಕಣ್ಣ ೨೨–೧೪
ಗೋತ್ರಾಳಿ = ಕುಲಪರ್ವತ ಸಮೂಹ ೨–೧೪
ಗೋದಣ = ಗೋದಲೆ ೨೩–೫೭
ಗೋಮಯ = ಆಕಳ ಸಗಣಿ ೪೬–೧೪
ಗ್ರಾಮಣಿ = ಗ್ರಾಮಾಧಿಕಾರಿ ೨–೪೬
ಗ್ರೀವ = ಕೊರಳು ೨೩–೭೨

ಘ

ಘನ = ಮೋಡ ೧೦–೪೮
ಘನಸಾರ = ಕರ್ಪೂರ ೪–೩೫

CC-0. Jangamwadi Math Collection. Digitized by eGangotri

ಘನೋಪಲ = ಆಣಿಕಲ್ಲು ೭–೬೦
ಘರ್ಮಜಲ = ಬೆವರು ೨೧–೬೦
ಘರ್ಮೋದಕ = ಬೆಮರು ೧೭–೬೪
ಘೂರ್ಮಿಸು = ಗರ್ಜಿಸು ೬–೨೩
ಘೋಟಕ = ಕುದುರೆ ೫೮–೩೭

ಚ

ಚಟುಲ = ಚಂಚಲ, ಚಪಲ ೨೦–೨೬
ಚಂಡಿಕೆ = ಮುಡಿ ೧೩–೩೦
ಚಂಡಿಗುನ್ನಿ = ಚಂಡಿನಾಯಿ, ಬೊಗಳುನಾಯಿ ೧೦–೧೯
ಚತುರ್ವಿಧ ಪದವಿ = ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯ ೧೭–೧೦೦
ಚದುರು = ಚಾತುರ್ಯ ೧೧–೩೨
ಚಂದವಳಿ = ಕೆಡು ೧೩–೧೬
ಚಂದ್ರಾಚೂಡ = ಶಿವ ೧–೫೧
ಚಂದ್ರಾತಪ = ಬೆಳುದಿಂಗಳು ೧೮–೫೯
ಚಮ್ಮಟಿಕೆ = ಬಾರುಕೋಲು ೫೧–೮
ಚಮ್ಮಾವುಗೆ = ಚರ್ಮದ ಮೆಟ್ಟು ೨೫–೧೪
ಚಯ = ಸಮೂಹ ೫೬–೪೩
ಚರ = ಜಂಗಮ ೪–೫೩
ಚರಿತಾರ್ಥತ್ವ = ಕೃತಕೃತ್ಯತೆ ೨–೩೬
ಚಾಗಿ = ತ್ಯಾಗಿ ೨೧–೫೪
ಚಾರ = ಜಂಗಮ ೧೧–೨೦
ಚಾರು = ಸುಂದರ, ಆಹ್ಲಾದಕರ ೭–೨
ಚಾರುತರ = ಅತಿ ಸುಂದರ ೧೯–೨೫
ಚಾಳಿ = ನಡತೆ ೫೩–೭೭
ಚಿಟುಕಿಡು = ಚಿಟಿಕೆ ಬಾರಿಸು ೩೦–೧೬
ಚಿಣ್ಣ = ಮಗು ೧೭–೯೧
ಚಿತ್ರಜಾರಿ = ಶಿವ ೮–೩೬
ಚಿತ್ರಭವ = ಕಾಮ ೧೫–೨೫
ಚಿಲುಪಾಲು = ಸೊರೆಹಾಲು ೮–೩೭
ಚಿಲ್ಲರತನ = ಕೀಳುತನ, ಚಿಲ್ಲರೆತನ ೪೪–೪೧
ಚೀರ = ಚೀಲ, ವಸ್ತ್ರ ೪೩–೧೫
ಚುನ್ನ = ಹೀಯಾಳಿಕೆ, ಹಾಸ್ಯ ೨೦–೨೩
ಚುನ್ನವಾಡು = ಹಾಸ್ಯವಾಡು ೪೫–೨೦
ಚೂಚುಕ = ಮೊಲೆಯ ತುದಿ ೩–೩
ಚೂಣಿ = ಸೈನ್ಯ ೫–೩೪
ಚೂತ = ಮಾವು ೬–೨೧
ಚೂರ್ಣ = ಪುಡಿ ೮–೨೦
ಚೆಂಚ = ಅನಾಗರಿಕ, ಕೆಂಚ ೧೭–೧೫
ಚೆಂಚ = ಬೇಡ ೪೩–೧೧
ಚೆಂಚಿತಿ = ಬೇಡಿತಿ ೪೩–೭
ಚೆಳೆಯ = ಥಳಿ ೧೧–೧೩
ಚೇಗೆ = ವ್ಯರ್ಥ, ಹಾಳು ೨೩–೨೫
ಚೇಟಿ = ದಾಸಿ ೬–೧೦
ಚೇತೋಜಾತ = ಕಾದು ೫೩–೪೭
ಚೊಲ್ಲೆಹ = ಹೆಳಲ ತುದಿಯ ಗೊಂಡೆ ೧೧–೪೩
ಚೋದ್ಯ = ಆಶ್ಚರ್ಯ ೨೫–೭
ಚೋಹ = ವೇಷ ೩೧–೧೫
ಚೌಗೇಳು = ರಾಡಿಯಾಗು ೯–೫
ಚೌರಾಸಿ = ಎಂಬತ್ತನಾಲ್ಕು ೫೩–೩೬
ಭವಿ = ನೆಳಲು ೩೪–೧೩
ಭಾಂದಸ = ಮಂದಬುದ್ಧಿ ೫೨–೩೯

ಜ

ಜಕ್ಕವಕ್ಕಿ = ಚಕ್ರವಾಕ ಪಕ್ಷಿ ೧೧–೪೮
ಜಕ್ಕುಲಿಸು = ಕಟ್ಟಾಡಿಸು ೪೬–೩೨
ಜಗತಿಪ = ಅರಸ ೬೦–೪
ಜಠರ = ಹೊಟ್ಟೆ ೫೮–೧೨
ಜಡ = ನೀರು ೩೬–೨೫

CC-0. Jangamwadi Math Collection. Digitized by eGangotri

ಜಡಧರ = ಮೋಡ ೩೬–೨೫
ಜಂತ್ರ = ಯಂತ್ರ ೫೯–೨೧
ಜನ್ನ = ಯಜ್ಞ ೨೩–೭೪
ಜಂಬೂ = ನೇರಿಲ ೨೫–೩೬
ಜಂಭಹರ = ದೇವೇಂದ್ರ ೪೦–೧
ಜಂಭಾರಿ = ಇಂದ್ರ ೫೩–೫೨
ಜಂಭೀರ = ವೃಕ್ಷವಿಶೇಷ ೨೫–೩೫
ಜಲಗು = ರಾಡಿಮಣ್ಣು ೪೬–೬೨
ಜರಾ = ಮುಪ್ಪು ೨೨–೧
ಜಲದ = ಮೋಡ ೩೬–೫೪
ಜಲರುಹಾಹಿತ = ಚಂದ್ರ ೪–೫೯
ಜವಗೆಡು = ಶಕ್ತಿಗುಂದು ೧೮–೨೭
ಜವನಿಕೆ = ತೆರೆ, ಪರದೆ ೧೧–೪೪
ಜವಳ = ಜೋಡು ೧೫–೯
ಜವಾದಿ = ಒಂದು ಬಗೆಯ ಸುಗಂಧದ್ರವ್ಯ ೪–೩೫
ಜಾತ = ಸಮೂಹ ೧೪–೩೭
ಜಾತವಿರಹಿತ = ಜನನರಹಿತ ೧೭–೯೮
ಜಾತಿ = ಸಮೂಹ ೧೮–೫೭
ಜಾತಿಪಣ್ = ಒಳ್ಳೆಯ ಹಣ್ಣು ೧೮–೭೧
ಜಾತಿಸೂತಕ = ಜನ್ಮಕಾಲದ ಮೈಲಿಗೆ ೧೭–೯೮
ಜಾತ್ಯಂಧ = ಹುಟ್ಟುಗುರುಡ ೪೮–೪೩
ಜಾನು = ಕಿರುದೊಡೆ ೫–೨೪
ಜಾಯಿಲ = ನಾಯಿ ೩೩–೨೩
ಜಾಲಕ = ಜಾಳಿಗೆ ೨೫–೨೮
ಜಾವ = ಯಾಮ, ಮೂರು ತಾಸು ೪೦–೧೯
ಜಾವಳ = ಸಾಮಾನ್ಯ ೧–೨೮
ಜಾಳಕ = ಜಾಳಿಗೆ ೧೧–೧೪
ಜಿತಭಾವಜ = ಶಿವ ೫೨–೨೨
ಜಿತರತೀಶ = ಶಿವ ೨೩–೬೭
ಜಿಹ್ವೆ = ನಾಲಗೆ ೫–೫೦
ಜೀಮೂತ = ಮೇಘ ೨೬–೨೯
ಜೀವ = ನೀರು ೧೦–೪೪
ಜೀವಿತ = ಸಂಬಳ ೧೦–೨

ಜೂಜು = ಪಣ ೧೯–೨೩
ಜೂಟ = ಜೆಡೆ ೧–೫೬
ಜೊತ್ತಗೆ = ಜತಿಗೆ, ಎತ್ತಿನ ಕೊರಳ ಪಟ್ಟಿ ೫೫–೨೮
ಜೋಹರ = ನಮಸ್ಕಾರ ೪೫–೭
ಜೋಹಾರು = ನಮಸ್ಕಾರ ೪೫–೫
ಜ್ವಲನ = ಅಗ್ನಿ ೨೪–೨೮

ಝ

ಝಂಕಿಸು = ಗರ್ಜಿಸು ೨೦–೧೫
ಝಂಕೆ = ಗರ್ಜನೆ ೧೦–೪೫
ಝಲ್ಲಣಿಸು = ಝಲ್ಲಿನ್ನು ೨೫–೨೭

ಠ

ಠವಾಳತನ = ಕುಂಟಿಣಿತನ ೪೧–೧೯
ಠಾಣದೀವಿಗೆ = ಸಮೆ ೧೧–೧೦
ಠಾವು = ಸ್ಥಳ ೫೪–೪೮
ಠೆಕ್ಕೆಯ = ಧ್ವಜ ೫೨–೫೭

ಡ

ಡಂಬು = ನಟನೆ, ಹಗರಣ ೫೮–೧೭
ಡಿಂಗರಿಗ = ಸೇವಕ ೨೬–೭೩
ಡೋಲು = ಹೊದರು ೩೭–೫೫

ತ

ತಕ್ಕವಿಸು = ಅಪ್ಪಿಕೊಳ್ಳು ೪–೬೮

CC-0. Jangamwadi Math Collection. Digitized by eGangotri

ತಗುಳು = ಹೊಡೆ ೩–೩೭
ತಗುಳು = ಆತಂಕಪಡಿಸು ೨೦–೨೦
ತಗುಳು = ಅಟ್ಟು ೩೭–೧೯
ತಟವುಚ್ಚು = ತಟ್ಟುಚ್ಚು, ಭೇದಿಸು ೩೯–೪
ತಟಾಕ = ಕೆರೆ ೫೬–೪೭
ತಟಿನೀ = ನದಿ ೧೮–೬೦
ತಟು = ತಟ್ಟು, ಚರ್ಮ ೨೧–೧೦
ತಡಂಬಡಿಸು = ತಾಕಿಸು ೪೬–೧೩
ತಡುಪು = ಬಟ್ಟೆ ೨೨–೩೭
ತಡೆ = ದಂಡೆ ೨೧–೩೧
ತಂಡನಿಕ್ಕು = ಜಗಳ ಹೂಡು ೩೭–೧೮
ತಂಡಸ = ಚಿಮುಟಿಗೆ, ಇಕ್ಕುಳ ೪೩–೧೪
ತದಸಿಕೊಳ್ = ರುಬ್ಬಿಸಿಕೊಳ್ಳು, ೩೯–೬೯
ತನೂಜೆ = ಮಗಳು ೧೩–೨೮
ತಪಸಿ = ವೃಕ್ಷವಿಶೇಷ ೪೪–೩೬
ತಪಸು = ತಾಪ ೪೪–೩೬
ತಪೋಧನ = ಪೂಜಾರಿ ೧೫–೬
ತಮಂಧ = ಕತ್ತಲೆ ೭–೫೭
ತಂಬೆಲರು = ತಂಗಾಳಿ ೧೧–೧೪
ತಂಬೆಲರು = ತಂಗಾಳಿ ೫–೩೦
ತಮ್ಮಡಿ = ಪೂಜಾರಿ ೧೭–೪೫
ತರಣಿ = ಸೂರ್ಯ ೩–೭೩
ತರುಣೇಂದುಧರ = ಶಿವ ೩–೭೬
ತರುವಲ = ಉಡಾಳ ೧೩–೨
ತಕ್ಕೈಸು = ತಬ್ಬಿಕೊಳ್ಳು ೫೮–೨೪
ತಲ್ಲಣಿಸು = ತಳಮಳಿಸು ೧೪–೨೨
ತವತವಗೆ = ತಮತಮಗೆ ೭–೮
ತವನಿಧಿ = ಸವೆಯದ ನಿಧಿ ೮–೩೨
ತವರಾಜ = ಸಕ್ಕರೆ ೫೯–೪೫
ತವಿಸು = ನಾಶವಾಗು ೫೫–೫೬
ತವೆ = ಚೆನ್ನಾಗಿ ೫–೧೯
ತಪ್ಪಿ = ಉಸಾಬರಿ ೫೦–೪೯
ತಸ್ಕರ = ಕಳ್ಳ ೮–೧
ತಳಿ = ಚಿಮುಕಿಸು ೩–೩೨
ತಳಿರ್ = ಚಿಗುರುಬಿಡು ೧೭–೪೪
ತಳುವದಿಱಿ = ತಳವಾರ ೧೫–೧೩
ತಳುವಾಗು = ತಡವಾಗು ೩–೩೭
ತಳುವು = ತಡಮಾಡು ೧೦–೧೯
ತಳೋದರಿ = ಸ್ತ್ರೀ ೪–೩೩
ತಾಟಿಸು = ತಾಗು, ಬಡಿ ೫–೪೦
ತಾಟಿಸು = ಬಾರಿಸು ೧೫–೧೭
ತಾತ್ಪರ್ಯ = ತತ್ಪರತೆ ೩–೨೭
ತಾಪಸ = ಪೂಜಾರಿ ೧೭–೩೩
ತಾಮರಸ = ಕಮಲ ೧೭–೭೨
ತಾಮಸ = ಮೈಮರೆತು ೩೭–೧೭
ತಾಯ್ಮಳಲು = ತಳದ ಉಸುಕು ೩೧–೩೭
ತಾರ, ವೀಸ = ಹಿಂದಿನ ಕಾಲದ ಎರಡು ಅಲ್ಪ ನಾಣ್ಯಗಳು ೨೨–೩೪
ತಾವರೆ = ೧ ಕಮಲ. ೨ ತಾವು + ಅರೆ = ಅರ್ಧ ೧೦–೪೪
ತಾಳಿಸು = ಬೇಯಿಸು ೭–೩೮
ತಿಗುರು = ಸುಗಂಧದ್ರವ್ಯ ೧೧–೧೧
ತಿಂಗಳು = ಚಂದ್ರ ೧–೩೨
ತಿದಿ = ತೊಗಲು ೧೫–೩
ತಿಂತ್ರಿಣೀಕ = ಹುಣಿಸೆ ೧೮–೭೭
ತಿಂಥಿಣಿ = ಸಮೂಹ ೧೩–೧೪
ತಿಮಿರ = ಕತ್ತಲೆ ೩–೩೧
ತಿರಿ = ಬಿಕ್ಷೆ ಬೇಡು ೧೪–೪
ತಿರುಮಡ = ತಿರುಗಣಿ ೪೨–೪೯
ತಿಱಿ = ಸಂಗ್ರಹಿಸು ೯–೯
ತೀಟೆ = ತಿಂಡಿ ೨೦–೭
ತೀವು = ತುಂಬು ೧೦–೪೮
ತುಡಿತಿನ್ = ಕದ್ದುತಿನ್ನು ೨೩–೫೭
ತುದಿಪದ = ಕೊನೆಯ ಸ್ಥಿತಿ ೪–೭೩
ತುಯ್ಯಲು = ಮಜ್ಜಿಗೆ ೩೭–೭
ತುರಂಗ = ಕುದುರೆ ೭–೧೪
ತುಱುಗಾರ = ದನಗಾಹಿ ೨೦–೩೧
ತುಱುಬು = ಮುಡಿಸು ೪–೩೪

CC-0. Jangamwadi Math Collection. Digitized by eGangotri

ತುಹಿನ = ಹಿಮ ೧೭–೧೦೪
ತುಹಿನಾದ್ರಿ = ಹಿಮಪರ್ವತ ೧೭–೧೦೪
ತುಂತುನೋಂಪಿ = ಟೊಳ್ಳುವ್ರತ ೨–೪೮
ತೂಪಿಜಿ = ತುಂತುರುಹಾರುವಂತೆ ಊದು ೧೨–೨೦
ತೂಲ = ತುಪ್ಪುಳು ೧೧–೧೪
ತೆತ್ತಿಗ = ಪೊಣೆಗಾರ ೨೨–೩೦
ತೆತ್ತಿಸು = ಸಿಕ್ಕಿಸು, ಕೂಡಿಸು ೧೧–೨೧
ತೆವರು = ದಿನ್ನೆ ೩೭–೫೭
ತೆಳ್ಳಹ = ತೆಳುವಾದ, ಅಳಕಾದ ೨೯–೬
ತೇಜಿ = ಕುದುರೆ ೫೮–೩೫
ತೇರಸರು = ಹದಿಮೂರು ಜಗ, ವೀರ ಮಾಹೇಶ್ವರರು ೫೦–೭೦
ತೈಲಾಭ್ಯಂಗನ = ಎರೆಯುವುದು ೪–೩೪
ತೊಂಗಲು = ಗುಚ್ಛ ೧೧–೧೮
ತೊಡಂಬೆ = ಗೊಂಚಲು ೨೧–೮
ತೊಡರು = ಕುಸ್ತಿಹಿಡಿ ೭–೫೬
ತೊಂಡನಿಕ್ಕು = ಜಗಳ ಹೂಡು ೪೧–೧೯
ತೊಂಡ-ಕಾಜಿ = ಜಗಳಗಂಟ ೩೭–೨೫
ತೊತ್ತು = ದಾಸ, ದಾಸಿ ೨೦–೭
ತೊಮ್ಮೆ = ಟೊಮ್ಮೆ ೪೧–೧೭
ತೊರಳು = ತೊಡೆ ೪೮–೩೨
ತೊಲೆ = ತಕ್ಕಡಿಯ ದಂಡಿಗೆ ೩೯–೭೬
ತೊಳಲು = ತಿರುಗಾಡು ೧೫–೧೬
ತೊಳಸು = ತಳುಕುಹಾಕು ೩–೭೧
ತೋ = ತೋಯು ೨೧–೩೫
ತೋಮರ = ಗದೆ ೩೩–೩೪
ತೋಯು = ನೀರು ೩೧–೪೨
ತೋಯಜಪ್ರಭವ = ಬ್ರಹ್ಮ ೧–೪೧
ತೋರ = ದೊಡ್ಡ ೫–೨೮
ತೋಷಣ = ಆನಂದ ೨–೫೬
ತೋಹು = ಗಿಡಗಳ ಜೊಂಪ, ತೋಪು ೧೭–೨
ತ್ರಾಣ = ಉದ್ಧಾರಕ ೫–೩೪
ತ್ರಿತಯ = ಮೂರು ೪೦–೨

ತ್ರಿದಶ = ಸ್ವರ್ಗ ೧–೭
ತ್ರಿದಶಧರಣೀರುಹ = ಕಲ್ಪವೃಕ್ಷ ೧–೭
ತ್ರಿವಿಧತನು = ಸ್ಥೂಲ ತನು, ಸೂಕ್ಷ್ಮ ತನು, ಕಾರಣ ತನು ೩೮–೨೦
ತ್ರಿವಿಧ ಪ್ರಸಾದ = ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದ
ತ್ರಿವಿಧೋದಕ = ದೀಕ್ಷೋದಕ, ಶಿಕ್ಷೋದಕ, ಜ್ಞಾನೋದಕ, (ಉದಕ–ಪಾದೋದಕ) ೧೭–೪೯
ತ್ರಿಶತಸಂಯುತಷಷ್ಟಿ = ಮುನ್ನೂರರವತ್ತು ೨೩–೧೪
ತ್ರಿಸಂಧ್ಯೆ = ಮುಂಜಾವು, ಮಧ್ಯಾಹ್ನ, ಸಂಜೆ ೬–೫೧
ತ್ವದೀಯ = ನಿಮ್ಮ ೩೮–೬೦

ದ

ದಕ್ಷಿಣಪತಿ = ಯಮ ೨೩–೩೭
ದಟ್ಟಣೆ = ಆಬ್ಬರ ೭–೫೬
ದಟ್ಟಿ = ಸೀರೆ ೧೦–೨೬
ದಟ್ಟಿಸು = ಆಗ್ರಹಿಸು ೧೦–೩
ದಡಿ = ದೊಣ್ಣೆ ೨೩–೫೬
ದಣಬು = ದುಕೂಲ ೧೩–೫
ದಂಡಪಾಣಿ = ಯಮ ೨೩–೩೯
ದಂಡಿಗೆ = ದಂಡಕ, ಪದವಿಶೇಷ ೧೮–೬
ದಂಡಿಗೆ = ಮೇಣ ೪೯–೧೬
ದಧಿ = ಮೊಸರು ೭–೩೮
ದನುಜ = ರಾಕ್ಷಸ ೧೫–೩
ದಂತಾವಳ = ಆನೆ ೪೮–೩೮
ದಂತಿ = ಆನೆ ೩೬–೩೧
ದರಹಸಿತ = ಮುಗುಳುನಗೆ ೬–೨೭
ದರುಶನ = ಸ್ವಪ್ನದರ್ಶನ ೧೭–೫
ದರ್ಪಗ = ಕಪ್ಪೆ ೫೬–೭೩
ದರ್ಪಣ = ಕನ್ನಡಿ ೧೭–೪೪

CC-0. Jangamwadi Math Collection. Digitized by eGangotri

ದರ್ವೀಕರ = ಸರ್ಪ ೩೮–೫೫
ದವಡ = ಉನ್ಮತ್ತ ೨೭–೨೯
ದಶನ = ಹಲ್ಲು ೧–೫೩
ದಶಶತದಳಾಹಿತ = ಸಾವಿರದಳ (ಕಮಲ)ದ ವೈರಿ, ಚಂದ್ರ ೨೫–೨೭
ದಶಶತ ಪತ್ರ = ಸಹಸ್ರದಳ ಕಮಲ ೯–೫೭
ದಸಿ = ಗೂಟ, ಕೋಲಿ ೧೫–೧೧
ದಹನ = ಅಗ್ನಿ ೧೦–೩೮
ದಳ್ಳುರಿ = ಧಗಧಗಿಸುವ ಉರಿ ೧೫–೨೫
ದಾಟಿ = ಧಾಟಿ, ರೀತಿ ೬–೧೦
ದಾನ = ಮದೋದಕ ೩೭–೩೧
ದಾನ = ವಿತರಣ ೩೭–೩೨
ದಾನವ = ರಾಕ್ಷಸ ೯–೩೦
ದಾನವರಾಜ ಮಂತ್ರಿ = ಶುಕ್ರ ೯–೩೦
ದಾವ = ಕಾಳ್ಕಿಚ್ಚು ೪೩–೩೭
ದಾವಶಿಖಿ = ಕಾಡುಗಿಚ್ಚು ೭–೨೫
ದಿಗೀಶ = ದಿಕ್ಪಾಲಕ ೨೩–೪೮
ದಿಂಡುದಜಿ = ದಿಂಡನ್ನು ತರಿವಂತೆ ತರಿ ೫೦–೬೯
ದಿತಿಸುತ = ದೈತ್ಯ ೧೫–೧೫
ದಿನೇಂದ್ರ = ಸೂರ್ಯ ೧–೪೦
ದಿವ್ಯಮತ್ತ = ದೊಡ್ಡದು, ಮಹಿಷ್ಮ ೨೭–೪೪
ದಿವಿ = ಆಕಾಶ ೧೦–೪೮
ದಿವಿಜ = ಸುರ ೩೭–೪೦
ದೀಧಿತಿ = ಕಾಂತಿ ೪೭–೪೮
ದೀಪಿಸು = ಹೊಳೆ ೧೦–೩೯
ದೀಪಿಸುವನಿತು = ಹೊಳೆದಪ್ಪು ೧೦–೪೦
ದೀಪ್ತಿ = ಪ್ರಕಾಶ ೫೯–೪೨
ದುಃಖಾವಹ = ದುಃಖಮಯ ೧೯–೨೮
ದುಕೂಲ = ರೇಶ್ಮೆಬಟ್ಟೆ ೪–೩೪
ದುಗುಡ = ದುಃಖ ೧೦–೪೭
ದುತ್ತೂರ = ಮದಗುಣಿಕೆ ೧೦–೧೦
ದುಬ್ಬಿಸು = ಹೊಟ್ಟೆಕಿಚ್ಚುಪಡು ೫೭–೮
ದುರ್ಭಿಕ್ಷ = ಬರ ೧೦–೩೮
ದುಹಿತೆ = ಮಗಳು ೩–೮೭
ದೂಜು = ಆಕ್ಷೇಪ ೮–೩೧
ದೂಸಜು = ಸಂಬಂಧ ೨೭–೨೮
ದೃಷ್ಟ = ಉದಾಹರಣೆ ೧೭–೧೧೭
ದೇವತಾದ್ರುಮ = ಕಲ್ಪವೃಕ್ಷ ೩೭–೩೪
ದೇವತಾವಕ = ದೇವತೆಗಳ ರಕ್ಷಕ ೧೪–೧
ದೇಶಿಕ = ಯತಿ ೧೮–೮೫
ದೇಹರ = ದೇವಾಗಾರ ೩೭–೩೪
ದೊಣೆ = ಬತ್ತಳಿಕೆ ೧–೩೯
ದೊಂದಣಿ = ಗದ್ದಲ ೧೭–೯
ದೊಂದಣಿಸು = ಗಜಬಜಿಸು ೪–೫೮
ದೋರ್ = ತೋಳು ೫–೨೨
ದೋವತಿ = ದೋತ್ರ, ಪಂಚೆ ೫೭–೩
ದೌವಾರಿಕ = ದ್ವಾರಪಾಲಕ ೧–೪೪
ದ್ಯುತಿ = ಕಾಂತಿ ೨೪–೫೧
ದ್ರವ = ಹಸಿ ೩೮–೫
ದ್ರಾಕ್ಷಾರಾಮ = ದ್ರಾಕ್ಷೆಯ ತೋಟ ೧೧-೩೨
ದ್ರುಮ = ಮರ ೭–೩೮
ದ್ವಾರವಂದ = ಬಾಗಿಲು ೧೫–೯
ದ್ವಿರದ = ಆನೆ ೫೮–೩೧

ಧ

ಧನದ = ಕುಬೇರ ೨೪–೪೭
ಧನದಸಖ = ಶಿವ ೨೪–೪೯
ಧನವರ = ಕುಬೇರ ೫–೫೮
ಧಮನ = ಕೊಡತಿ ೨೦–೩೦
ಧರಣೀರುಹ = ವೃಕ್ಷ ೧–೭
ಧವಳಾಯತ = ಸೌಧ ೧೧–೧೫
ಧಾಮ = ಮನೆ ೫೫–೩೭
ಧೀ = ಬುದ್ಧಿ ೫೩–೨೯
ಧೀವರ = ಬುದ್ಧಿಶಾಲಿ ೪–೪೯
ಧಿವರ = ವ್ಯಾಪಾರಿ ೮–೭

CC-0. Jangamwadi Math Collection. Digitized by eGangotri

ಧೂಮ್ರ = ಹೊಗೆ ೧೦–೪೮
ಧೂರ್ಜಟಿ = ಶಿವ ೯–೨೦
ಧೂರ್ಯ = ಧುರೀಣ ೨೧–೨೪
ಧೃತವಿಷಧರ = ಸರ್ಪಭೂಷಣ ೨೦–೧
ಧ್ರುವ = ಸತ್ಯ ೫೪–೪
ಧ್ವಾನ = ಧ್ವನಿ ೩೬–೨೦

ನ

ನಖಿ = ಉಗುರು ೫೮–೩೨
ನಖಿರ = ಉಗುರು ೨೮–೬
ನಖಿರಾಯುಧ = ಸಿಂಪ ೨೮–೬
ನಖಾಯುಧ = ಸಿಂಹ ೫೮–೩೨
ನಗ = ಪರ್ವತ; ಗಿಡ ೧೮–೪೫
ನಗಹರ = ದೇವೇಂದ್ರ ೪೦–೫
ನಡೆಚಪ್ಪರ = ಕೊಡೆ ೬–೨೨
ನಡೆಬಾವಿ = ಜೊಕ್ಕು ತುಂಬುವ ಬಾವಿ ೧೫–೧೧
ನಡೆತರು = ಬರು ೧೧–೪೩
ನಂದನ = ಮಗ ೨೩–೨
ನನ್ನಿ = ಸತ್ಯ ೧೭–೮೦
ನಭ = ಆಕಾಶ ೬–೨೩
ನಭಂಬರೆ = ಆಕಾಶದ ವರೆಗೆ ೧೮–೫೩
ನಯನಕರ್ಣಹಾರ = ನಂದಿ ೧೯–೩೭
ನರೆ = ಮುಪ್ಪಾಗು ೫೧–೩೦
ನಲವೆರು = ಪ್ರೀತಿಪಡು ೧೭–೪೨
ನಲ್ಲ = ಪ್ರಿಯ ೮–೧೯
ನಲ್ಲರೂಪು = ಪ್ರಿಯವಾದ ರೂಪು ೩೯–೧೪
ನವಕ = ಕೋಮಲತೆ ೪–೨೨
ನವಕ = ನಾವೀನ್ಯ ೪೬–೧೫
ನಳಿನ = ಕಮಲ ೭–೩೭
ನಳಿನಗರ್ಭ = ಬ್ರಹ್ಮ ೭–೩೭
ನಳಿನಭವಾಂಡ = ಬ್ರಹ್ಮಾಂಡ ೧೨–೨
ನಾಗ = ಸರ್ಪ ೧೧–೨೫
ನಾಗ = ಆನೆ ೫೮–೩೦
ನಾಗಕಂಕಣ = ಶಿವ ೧೧–೨೫
ನಾಳಿರ್ದು = ನಾಡದು ೧೩–೧೨
ನಿಕರ = ಸಮೂಹ ೧೪–೩೬
ನಿಕಾಯ = ಸಮೂಹ ೫–೬೩
ನಿಕೇತನ = ಮನೆ ೧೧–೧೨
ನಿಕ್ಷೇಪಿಸು = ಹುಗಿದಿಡು ೫–೫೭
ನಿಗಳ = ತೋಡಿ ೧೩–೧೫
ನಿಗುರದೆಗೆ = ನೀವು ೧೪–೯
ನಿಗುಜದೆಗೆ = ನೀವು ೩೭–೫೦
ನಿಗುರ್ಚು = ನೀಟುಮಾಡು ೩೭–೩೮
ನಿಗುಳು = ನೀಟಾಗು, ನಿಗುರು ೨–೧೨
ನಿಚಯ = ಸಮೂಹ ೨೬–೨೧
ನಿಚಿತ = ಕೆಟ್ಟಿದ ೭–೧೦
ನಿಜ = ತನ್ನ ೧೪–೭
ನಿಟಿಲ = ಹಣೆ ೮–೪೧
ನಿಟ್ಟುಪಾಸ = ಕಡುತರ ಉಪವಾಸ ೨೬–೧೭
ನಿತಂಬ = ತಿಗ ೧೦–೩೦
ನಿತಂಬಿನೀ = ಸ್ತ್ರೀ ೨೩–೧
ನಿತಾಂತ = ಅತಿಶಯ ೪೮–೩
ನಿದರ್ಶನ = ಪ್ರಾತ್ಯಕ್ಷಿಕೆ ೧೭–೫೫
ನಿಧಾನ = ಗುಪ್ತಧನ ೬–೪೫
ನಿಬ್ಬರ = ನಿರ್ಭರ ೬–೬
ನಿಭ = ಸಮಾನ ೫–೨೪
ನಿಮಗ್ನ = ಬೆರೆ ೧೧–೩೦
ನಿಯತ = ತಪ್ಪದ, ನಿಯಮಿತ ೧೮–೪
ನಿಯತಿ = ನೇಮ ೮–೬
ನಿಯೋಗ = ರಾಜಕಾರ್ಯ, ರಾಯಭಾರಿತ್ವ ೫–೪
ನಿರತ = ಸತ್ಯ ೯–೩೯
ನಿರವಧಿ = ಅವಧಿಯಿಲ್ಲದ ೬–೧೬
ನಿರಾಭಾರಿ = ಯತಿ ೧೯–೨೩
ನಿರಾಸಕ = ಕಳೆಯುವ ೪೫–೭೧

CC-0. Jangamwadi Math Collection. Digitized by eGangotri

ನಿರಾಳ = ಬಯಲು ೨೪–೭
ನಿರುತ = ಯಾವಾಗಲೂ ೩೮–೮
ನಿರ್ಜರ = ಸುರ ೪೦–೨೮
ನಿರ್ಜಾಡಿಸು = ಒಗೆದ ಬಟ್ಟೆಯ ನೀರು ಜಾಡಿಸುವಂತೆ ಜಾಡಿಸು ೫೩–೩೭
ನಿರ್ಧೂಮ = ಪೂರ್ಣಬೂದಿಯಾದ ೫೫–೩೬
ನಿರ್ವಹಿಸು = ತಳೆ, ಹೊರು ೯–೫೪
ನಿರ್ವಾಣ = ಮುಕ್ತಿ ೧೯–೧೬
ನಿಲುಕು = ಮೇಲಕ್ಕೆ ನಿಗುರು ೨೫–೩೦
ನಿವಹ = ಸಮೂಹ ೩೪–೬
ನಿವಾಡ = ಪರಿಹಾರ ೪೪–೨೬
ನಿವಾಡ = ನಿರ್ಣಯ ೪೯–೩೮
ನಿವಾಳಿಸು = ಬೆಳಗು ೪–೬
ನಿಶಿತ = ಹದನವಾದ, ಮಸೆದ ೭–೨೫
ನಿಶಾ = ರಾತ್ರಿ ೫೩–೫೩
ನಿಶಾಕರ = ಚಂದ್ರ ೫೩–೫೩
ನಿಶಾಚರ = ನಿರುಪ(ದಿಕ್ಪತಿ), ರಾಕ್ಷಸ ೨೪–೪೬
ನಿಶಾತ = ಸಾಣೆ ಹಿಡಿದ, ಮಸೆದ ೩೭–೬೪
ನಿಷಾದ = ಬೇಡ ೫೬–೭೭
ನಿಸ್ಸಾಳ = ಭೇರಿ ೫–೩೯
ನಿಹತಿ = ಹೊಡೆತ ೨೧–೯
ನಿಳಿಂಪ = ಸುರ ೯–೩೮
ನೀಕರಿಸು = ಧಿಕ್ಕರಿಸು ೪೮–೮
ನೀರಧಿ = ಸಮುದ್ರ ೫–೬೮
ನೀರ್ಜಾಡಿಸು = ನೀರು ಕೊಡವು ೭–೫೧
ನುಗ್ಗೊತ್ತು = ನುಗ್ಗಾಗುವಂತೆ ಒತ್ತು ೨೨–೨೬
ನುಗ್ಗೊತ್ತು = ನುಗ್ಗಾಗುವಂತೆ ಒತ್ತು ೩೩–೩೫
ನುಲಿ = ನಿಡಿದು ಮಾಡು ೧೬–೨
ನೂಪುರ = ಕಾಲ್ಗಡಗ ೫–೨೫
ನೆತ್ತರು = ರಕ್ತ ೧೪–೧೯
ನೆಗಳ್ = ಪ್ರಸಿದ್ಧವಾಗು ೫–೧೩
ನೆಟ್ಟೆ = ಲಟಿಕೆ ೩೭–೫೦
ನೆಪ್ಪು = ನೇರ್ಪು ೧೯–೧೪
ನೆಮ್ಮಿಸು = ಸಂಬಂಧಿಸು, ಆನಿಸು ೨೭–೩೭
ನೆಮ್ಮು = ಆಶ್ರಯಿಸು, ಆನು ೪೩–೧೪
ನೆಱಿ = ತುಂಬು ೩–೩೫
ನೆಱಿ = ಜಿನ್ನಾಗಿ ೩–೫೯
ನೆಱಿ = ಪರಿಪೂರ್ಣತೆ ೨೭–೫
ನೆಲಹು = ನೆಲುವು ೧೩–೧೧
ನೆಸೆ = ನೆಗೆ ೨೭–೬೫
ನೇಣು = ಹಗ್ಗ ೩೪–೬
ನೇಱಿ = ನ್ಯಾರಿ ೬–೩೨
ನೇವಳ = ಹಾರ ೪–೩೭
ನೇವುರ = ಕಾಲ್ಕಡಗ ೪೧–೧೧
ನೈಸಱಿಲಿ = ಅಪ್ಪರಲ್ಲಿ ೨೭–೯
ನೊಸಲು = ಹಣೆ ೨–೫೨
ನೋನು = ಪ್ರತಮಾಡು ೨–೪೮

ಪ

ಪಕ್ಷ = ಪಕ್ಕೆ, ರೆಕ್ಕೆ ೨೫–೪೪
ಪಂಕ = ಕೆಸರು ೨–೧೧
ಪಂಕರುಹ = ಕಮಲ ೨–೧೧
ಪಂಚವದನ = ಶಿವ ೨೭–೫
ಪಟ = ಬಟ್ಟೆ ೫೬–೭೦
ಪಟಲ = ಜಾಲ ೧೮–೬೦
ಪಟೀರ = ಕಪ್ಪುರ ೧–೭
ಪಟು = ಅತ್ಯಂತ, ಉಜ್ವಲ, ಪ್ರವೀಣ ೧೮-೮೧
ಪಟ್ಟಳಿ = ಪಡ್ಡಳಿ ೧೧–೧೮
ಪಟ್ಟೆ = ಬಟ್ಟೆ ೧೦–೨೬
ಪಡಪ = ಗಳಿಕೆ ೫೧–೩೪
ಪಡಲಿಗೆ = ಬುಟ್ಟಿ ೧೧–೧೨
ಪಡಿ = ಸೀದಾ, ದೈನಂದಿನ ಪ್ರತಿಫಲ ೨೫–೧೮
ಪಡಿ = ಪ್ರತಿ, ಸದೃಶ ೨೬–೪
ಪಡಿಗ = ಹರಿವಾಣ ೧೧–೧೭
ಪಡಿಸಣ = ಬಡಿಸುವಿಕೆ ೮–೪೦

CC-0. Jangamwadi Math Collection. Digitized by eGangotri

ಪಡಿಹಾರ = ಆಳು, ದ್ವಾರಪಾಲಕ ೪–೫
ಪಡಿಹರಿ = ದ್ವಾರಪಾಲಕಿ ೫೨–೨೨
ಪಡ್ಡಳಿ = ವೃಕ್ಷವಿಶೇಷ ೧೮–೬೫
ಪತಂಗ = ಸೂರ್ಯ ೧–೩
ಪತಿಕರಿಸು = ಸ್ವೀಕರಿಸು ೪೫–೪೮
ಪತಿರೇವ = ಪತಿ ಮಾತ್ರವೇ ೫೦–೬
ಪತ್ರವಾಹನ = ವಿಷ್ಣು ೯–೫೬
ಪತ್ರವಾಹನಪುತ್ರ = ಬ್ರಹ್ಮ ೯–೫೬
ಪತ್ರವಾಹನ ಪುತ್ರಪುತ್ರ = ಬ್ರಹ್ಮನ ಮಗ, ನಾರದ ೯–೫೬
ಪದಹತಿ = ತುಳಿತ, ಒದೆತ ೩೩–೩೬
ಪದುಳ = ಕ್ಷೇಮ ೧–೮
ಪದ್ಮಭವ = ಬ್ರಹ್ಮ ೨–೧೯
ಪದ್ಮರಾಗ = ಆರುಣವರ್ಣದ ರತ್ನ ೪೦–೨
ಪನ್ನಗ = ಸರ್ಪ ೧೩–೩೧
ಪನ್ನಗಾಧಿಪ = ಆದಿಶೇಷ ೧೩–೩೧
ಪನ್ನಿಬ್ಬರು = ಹನ್ನೆರಡು ಜನ ೫–೧೮
ಪನ್ನೊಂದಿಂದ್ರಿಯ = ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ ಮತ್ತು ಮನಸ್ಸು ೪೨–೨
ಪಯೋಜ = ಕಮಲ ೪–೨೬
ಪರ = ಅನ್ಯ ೯–೫೩
ಪರಭೃತ = ಕೋಗಿಲೆ ೪–೧೫
ಪರಮ = ಶಿವ ೬–೪
ಪರಶು = ಕೊಡಲಿ ೮–೧೩
ಪರಿಕರ = ಪರಿವಾರ ೫–೧೪
ಪರಿಕಿಸು = ಪರೀಕ್ಷಿಸು ೯–೫೩
ಪರಿಣತಿ = ಪರಿಪೂರ್ಣತೆ ೨೩–೮೯
ಪರಿಣಯ = ವಿವಾಹ ೩೧–೩೯
ಪರಿಣಮಿಸು = ತುಷ್ಟನಾಗು ೪–೬೬
ಪರಿನ್ಯಸ್ತ = ಇಡಲ್ಪಟ್ಟ ೩೮–೫೪
ಪರಿಪಾಟಿ = ಕ್ರಮ ೩೪–೫೫
ಪರಿಪೂತ = ಪವಿತ್ರ ೩೬–೫೭
ಪರಿಭಂಗ = ಕೇಡು ೧೭–೬೮
ಪರಿಮಿತ = ಆಪ್ತಮಂತ್ರಿ ೫–೫೨
ಪರಿಯಾಣ = ಹರಿವಾಣ, ತಟ್ಟೆ ೭–೧೪
ಪರಿವಡು = ಖ್ಯಾತವಾಗು ೪–೫೫
ಪರಿವಡೆ = ಕ್ರಮಗೊಳ್ಳು ೧೭–೮೫
ಪರುಶನ = ಸ್ಪರ್ಶನ ೮–೮
ಪರುಷವೇದಿ = ಮುಟ್ಟಿದ್ದೆಲ್ಲ ಚಿನ್ನವಾಗುವ ಗುಣವುಳ್ಳ ೩೦–೧೯
ಪರುಷೆ = ಯಾತ್ರಿಕ ಸಮೂಹ ೬–೧೩
ಪರ್ಬ = ಹಬ್ಬ ೫–೫೦
ಪರ್ಬು = ಹಬ್ಬು ೧೨–೧೯
ಪರ್ವತನಾಥ = ಮಲ್ಲಿಕಾರ್ಜುನ ೯–೧೩
ಪಲಲ = ಮಾಂಸ ೧೭–೧೭
ಪಲವಂಗ = ಹಲವು ಬಗೆ ೭–೪೪
ಪಲ್ಲಟಿಸು = ವ್ಯತ್ಯಾಸವಾಗು ೩೮–೧೮
ಪಲ್ಲವ = ಚಿಗುರು ೧೦–೩೦
ಪವಣು = ಸಾಧ್ಯ ೩–೭೦
ಪವನ = ಗಾಳಿ ೧೫–೨೧
ಪವನಭಕ್ಷಣ = ಸರ್ಪ ೪೫–೩೦
ಪವಿ = ವಜ್ರಾಯುಧ ೧೮–೨೭
ಪವಿಧರ = ದೇವೇಂದ್ರ ೧೮–೨೭
ಪಶುಪ = ವೃಷಭೇಂದ್ರ ೨–೬
ಪಸರ = ಹರಡಿಕೆ, ಜಾಲ ೮–೩೦
ಪಸಾಯಿಕ = ಪ್ರಸಾದಿತ ೪–೧೧
ಪಸುರ್ವಡು = ಹಸಿರಾಗು ೨೫–೪೧
ಪಾಟಿ = ಸಮ ೩೪–೫೫
ಪಾಣಿ = ಹಸ್ತ ೧೦–೩೧
ಪಾಂಡುರಂಗ = ಶುಭ್ರಾಂಗ, ಶಿವ ೪–೫
ಪಾತಕ = ಪಾಪ ೨೭–೨೫
ಪಾದಪ = ಗಿಡ ೧೮–೬೨
ಪಾಯವಟ್ಟ = ಕಾಲ ಆಭರಣ ೪೧–೧೨
ಪಾರವಶ್ಯ = ಪರವಶತೆ ೩೩–೪
ಪಾರಾವಾರ = ಸಮುದ್ರ ೨೩–೪೧
ಪಾರಿಸ = ಪಾರಸೀ ೫–೫೩
ಪಾರೀಣ = ಪರಿಣತ ೨೬–೮೦
ಪಾರ್ಗುಪ್ಪೆಯಾಡು = ಜಿಗಿಯುವ ಆಟ ೩೧–೩೭

CC-0. Jangamwadi Math Collection. Digitized by eGangotri

ಪಾರ್ಬಿಕೆ = ಬ್ರಾಹ್ಮಣಸ್ತ್ರ ೩–೫೯
ಪಾಲಾಶ = ಮುತ್ತುಗ ೩–೫೪
ಪಾವಕ = ಅಗ್ನಿ ೩–೭೩
ಪಾವಡೆ = ವಸ್ತ್ರ ೪೬–೧೫
ಪಾಶ = ಹಗ್ಗ ೫–೩೦
ಪಾಶುಪತ = ಶಿವನ ವರದತ್ತವಾದ ಅಸ್ತ್ರ ೨೧–೪೧
ಪಾಸಂಗಿ = ನೆತ್ತದ ದಾಳ ೪೨–೧೧
ಪಾಳಿ = ಶಿಕ್ಷೆ ೨೫–೫೮
ಪಿಕ = ಕೋಗಿಲೆ ೧೧–೮
ಪಿಂಗಳ = ಕೆಂಪ್ಪ ೯–೧೭
ಪಿಂಚುಮಂದ = ವೃಕ್ಷವಿಶೇಷ ೪೪–೩೫
ಪಿನಾಕಿ = ಶಿವ ೧೩–೧೦
ಪಿಪಾಲಿಕೆ = ಇರುವೆ ೨೭–೫೩
ಪಿಸಿತ = ಮಾಂಸ ೨೩–೧೭
ಪೀತ = ಹಳದಿ ೧೮–೬೭
ಪೀತವಾಸ = ಪೀತಾಂಬರಧಾರಿ ೫೩–೫೯
ಪೀನ = ದೊಡ್ಡ ೧೦–೩೦
ಪೀಯೂಷ = ಅಮೃತ ೪೨–೬೬
ಪುಂಜ = ಗೊಂಚಲು ೮–೨೧
ಪುಂಡರೀಕ = ಕಮಲ ೫೫–೫೫
ಪುಂಡರೀಕ = ಹುಲಿ ೧೮–೮೪
ಪುದಿ = ಮುಚ್ಚು, ತುಂಬು ೮–೨
ಪುರಾತ = ಪುರಾತನ ೧೨–೬
ಪುಷ್ಪಕ = ವಿಮಾನ ೧೧–೧೫
ಪ್ಲಕ್ಷ = ಮಳಲ ದಿನ್ನೆ ೪–೧೮
ಪ್ಲವಂದೆ = ಬೇಡ ೧೭–೨
ಪೂಗ = ಅಡಕೆ ೧೮–೭೧
ಪೂಗಣೆಯವ = ಕಾಮ ೪೪–೩
ಪೂತ = ಶುದ್ಧ ೧೯–೪
ಪೂನಾಗ = ಪುನ್ನಾಗ ೨೫–೩೭
ಪೂರಿಸು = ವಾದ್ಯಬಾರಿಸು ೫–೪೨
ಪೂವಡಿಗ = ಹೂಗಾರ ೨೩–೭೮
ಪೂಷ = ದ್ವಾದಶ ಸೂರ್ಯರಲ್ಲಿ ಒಬ್ಬ ೫೩–೫೨
ಪೃಥುಳ = ದೊಡ್ಡ ೧೧–೫
ಪೆಂಡೆಯ = ವೀರರ ಕಾಲ ತೊಡುಗೆ ೬೦-೨೭
ಪೇರಡವಿ = ಮಹಾರಣ್ಯ ೧೭–೯
ಪೇರಣೆ = ನಾಟ್ಯಭಂಗಿ ೫–೪೨
ಪೇರೋಲಗ = ಮಹಾಸಭೆ ೧–೫೧
ಪೊಂಗೀಱುಗಟೆ = ಬಂಗಾರದ ಕಿರುಗಂಟೆ ೫–೪೧
ಪೊಂಗಿಸು = ಉಬ್ಬಿಸು ೧–೪೯
ಪೊಂಗು = ಉಬ್ಬು ೬–೨೪
ಪೊಂಗುಳಿಗೆ = ಬಂಗಾರದ ಗುಳಿಗೆ ೪–೧೭
ಪೊಡವಡು = ನಮಸ್ಕರಿಸು ೪–೫೬
ಪೊಡೆಗಡೆ = ದಿಂಡುಗೆಡೆ, ಬೀಳು ೨–೧೪
ಪೊರೆ = ಬಳಿ ೧೦–೪೩
ಪೋಕು = ಹೋಗುವುದು ೩–೫೮
ಪೋಟು = ಉಡಾಳ ೧೫–೧೫
ಪೋಟುತನ = ಉಡಾಳತನ ೫೩–೪೦
ಪೋರು = ಹೋರಾಡು ೧೭–೧೧
ಪ್ರಕರ = ಸಮೂಹ ೧೮–೭೨
ಪ್ರಣವತ್ರಿ = ನಮಸ್ಕಾರ ೨೦–೭
ಪ್ರಣುತ = ಸ್ತುತ್ಯ ೧೭–೭೭
ಪ್ರಣುತಿ = ಸ್ತುತಿ ೩೪–೩
ಪ್ರತತಿ = ಸಮೂಹ ೭–೩೫
ಪ್ರತಾನ = ಗುಂಪ್ಪು, ಆಧಿಕ್ಯ ೬–೪೯
ಪ್ರತಿಮ = ಸಮಾನ ೨೦–೧೧
ಪ್ರತಿಮಾನ = ಸಮ ೨–೧
ಪ್ರತ್ಯಯ = ದೃಷ್ಟಾಂತ ೧೯–೧೦
ಪ್ರಥು = ಬಹಳ ೧–೫೨
ಪ್ರಭಾಕರ = ಸೂರ್ಯ ೩೮–೫೪
ಪ್ರಮಥವರ = ಶಿವ ೯–೩೪
ಪ್ರಮದ = ಹರ್ಷೋನ್ಮಾದ ೯–೩೫
ಪ್ರಸರ = ಸಮೂಹ ೧೭–೧೦೭
ಪ್ರಸವ = ಹೂ ೧–೩೫
ಪ್ರಸೂತ = ಹೂ ಬಿಟ್ಟ ೧೮–೪೫
ಪ್ರಾಕಟ = ಪ್ರಕಟವಾದ ೮–೧೧
ಪ್ರಾಪಿಸು = ಪ್ರಾಪ್ತವಾಗು ೨೨–೩೩
ಪ್ರಾಪ್ತಿ = ಸಾಧ್ಯ ೨೨–೧೧
ಪ್ರಾಸಾದ = ಪ್ರಸಾದ ಭಾವ ೩೮–೧೬

CC-0. Jangamwadi Math Collection. Digitized by eGangotri

ಪ್ರೇತನಾಥ = ಯಮ ೪೦–೨೮
ಪ್ರೇತಸೂತಕ = ಮರಣಕಾಲದ ಮೈಲಿಗೆ ೧೭–೯೮

ಫ

ಫಣಿ = ಹಾವು ೪–೩೧
ಫಣಿತಲ್ಪ = ಹರಿ ೨–೧೯

ಬ

ಬಗ್ಗನೆ = ರಾಡಿ ೩೭–೭೦
ಬಗ್ಗಡೆಯ = ಹೇಸಿ ೫೬–೨೯
ಬಚ್ಚಣಿಸು = ಹೂಡು ೫೫–೫
ಬಟ್ಟಿತ್ತು = ದುಂಡು ೧೪–೮
ಬಟ್ಟೆ = ದಾರಿ ೧೯–೧
ಬಣಗು = ಕರುಕುಳ ೨೨–೨೨
ಬಂಡಿಬೋವ = ಬಂಡಿ ನಡೆಸುವವ ೫೮–೨೭
ಬತ್ತೀಸ = ಮುಪ್ಪತ್ತೆರಡು ೫೨–೫೩
ಬದ್ಪುಗೆವಾರ = ಉಡುದಾರ ೬೦–೨೬
ಬಂದೊಕ = ವ್ಯಕ್ತವಿಶೇಷ ೨೫–೩೫
ಬಧಿರ = ಕಿವುಡು ೬–೨೨
ಬರವು = ಆಗಮನ ೧೯–೩೦
ಬರೆಗುಡುಹು = ಒಂದು ಬಗೆಯ ಕರ್ಣಾಭರಣ ೧೯–೧೨
ಬಱತುಸಿರು = ಬತ್ತಿದ ಉಸಿರು ೩೪–೩೨
ಬಱಿ = ಪಕ್ಕಡಿ ೧೯–೧೨
ಬಱಿ = ಬತ್ತು ೧೦–೧೨
ಬಲುಗುತ್ತ = ದೊಡ್ಡ ಬೇಳೆ ೧೪–೧೯
ಬಲ್ಲತನ = ಸಾಮರ್ಥ್ಯ ೧೯–೫
ಬಲ್ಲತನ = ಜ್ಞಾನ, ರತಿವಿದ್ಯೆಯ ಜ್ಞಾನ ೩೯–೧೪
ಬಲ್ಲಹ = ವಲ್ಲಭ, ಒಡೆಯ ೭–೧

ಬವರಿ = ಭ್ರಮರಿ ೩–೨೭
ಬಸವಳಿ = ನೋಯು, ನಿರ್ಮಿಣ್ಣವಾಗು ೧೨–೧೭
ಬಸಿ = ನಡು ೧೫–೧೧
ಬಹಡೆ = ಬರಬೇಕಾದರೆ ೪–೨೩
ಬಹಿತ್ರ = ದೋಣಿ ೭–೯
ಬಳ = ಹಿಂದಿನ ಕಾಲದ ಒಂದು ಮಾಪು (ಬಳ್ಳ) ೨೮–೯
ಬಳಸು = ಸುತ್ತು, ಸುತ್ತುವರಿ ೧೫–೧೪
ಬಳಸು = ವ್ಯವಹರಿಸು ೧೯–೮
ಬಳಿಗೆಲಸ = ಚಿಲ್ಲರೆ ಕೆಲಸ ೧೫–೧೨
ಬಳ್ಳ = ಅಳತೆಯ ಮಾಪು ೮–೭
ಬಾಚು = ಮರೆಮಾಡು ೧೪–೧೦
ಬಾಣಸಗಿತ್ತಿ = ಅಡಿಗೆಯವಳು ೮–೪೦
ಬಾಣಸಿಗ = ಅಡಿಗೆಯವ ೫೮–೨೯
ಬಾಣಾಸಾನ = ಹೆದೆ ೩೩–೩೫
ಬಾತೆ = ವಾರ್ತೆ, ಗಣನೆ ೨೭–೧೯
ಬಾಂದೊಜ = ಗಂಗಾನದಿ ೧೬–೧೧
ಬಾಪ್ಪ = ಕಣ್ಣೀರು ೧೭–೭೫
ಬಾಸಣಿಸು = ಮುಚ್ಚು ೬–೨೨
ಬಾಹತ್ತರ = ಎಪ್ಪತ್ತೆರಡು ೪೨–೨೮
ಬಾಹಿರಗಿತ್ತಿ = ದಂಭಾಚಾರಿಣಿ ೩೯–೫೫
ಬಿಟ್ಟೆ = ಬಿರುಕು, ಬೀಟೆ ೧೯–೧೧
ಬಿತ್ತು = ಬೀಜ ೫–೩
ಬಿದಿರ್ = ಕೊಡಹು ೧೩–೧೭
ಬಿದ್ದಿನ = ಅಭ್ಯಾಗತ ೨೮–೭
ಬಿಂಬ = ತೊಡೆಪಣ್ಣು ೧೧–೫
ಬಿಮ್ಮ = ಹೆಮ್ಮೆ, ಬಿಗುವು ೩೧–೩೬
ಬಿಲಿ = ಬೆಲೆ ಮಾಡಿಕೊಳ್ಳು ೨೭–೯
ಬಿಲಿತರು = ಬೆಲೆಗೆ ತರು ೨೩–೯
ಬಿಲ್ಲಮೊತ್ತ = ಭಿಲ್ಲರ ಸಮೂಹ ೫೮–೫೩
ಬಿಸಜ = ಕಮಲ ೪–೨೨
ಬಿಸ = ನೀರು ೪–೨೨
ಬೀ = ನುಗ್ಗಾಗು, ನಷ್ಟವಾಗು ೨೧–೪
ಬೀಟೆ = ಬಿರುಕು ೨೬–೧೭
ಬೀಯ = ವ್ಯಯ ೨೪–೧೦

CC-0. Jangamwadi Math Collection. Digitized by eGangotri

ಬೀಯಗ = ಬೀಗ ೧೧–೧೦
ಬೀಸರ = ವ್ಯರ್ಥ ೨–೪೨
ಬೀಸರವಾಗು = ಕೆಡು ೧೩–೮
ಬೀಳ = ಬಿಳಿಲು ೩೧–೬
ಬುಜ್ಜವಿಸು = ಉಪದೇಶಿಸು ೨೧–೩೮
ಬುದ್ಬುದ = ಗುಳ್ಳೆ ೩೬–೨೫
ಬೆಕ್ಕಸ = ಆಶ್ಚರ್ಯ ೫–೬೧
ಬೆಗಡು = ಭಯ, ಚಿಂತೆ ೧೨–೧೫
ಬೆಗಡು = ಬೇನೆ ಬೇಸರಿಕೆ ೧೪–೯
ಬೆಚ್ಚು = ಬೆಸೆ, ಕೂಡಿಸು ೩೯–೪೧
ಬೆಡಗು = ರಹಸ್ಯ ೩೯–೬೨
ಬೆದೆವೆಡೆ = ಹದಕ್ಕೆ ಬರು ೫೯–೧೭
ಬೆಬ್ಬೆಱಗು = ಆತ್ಯಾಶ್ಚರ್ಯ ೧೨–೨೨
ಬೆಂಬಳಿ = ಅನುಸರಣೆ ೨೬–೨೦
ಬೆರಟು = ಕೆರೆ, ಕೆದರು ೩೧–೨೫
ಬೆರಣಿ = ಕುಳ್ಳು ೪೭–೮
ಬೆಲೆವೆಣ್ಣು = ವೇಶ್ಯೆ ೩–೭೫
ಬೆಲ್ಲ = ಬಲ್ವ ೮–೨೪
ಬೆಸನ = ವ್ಯಸನ, ಆಪ್ಪಣೆ ೧೪–೨೩
ಬೆಸಲಾಗು = ಹಡೆ ೩–೧೫
ಬೆಸಸು = ಹೇಳು ೩–೧೮
ಬೆಳಲ = ಬೆಳುವಲಗಿಡ ೧೭–೧೬
ಬೆಳ್ಕ = ಬಿಳಿಯ ೮–೧೯
ಬೇಸಱಿ = ಬೇಸರಪಡು ೧೭–೭
ಬೇಹ = ಇಚ್ಛಿತ ೩೭–೨೩
ಬೇಹದ = ಬೇಹುಗಾರ, ಗುಪ್ತ ಚಾರ ೨೭–೩೭
ಬೈ(ಬಯ್) = ಬಚ್ಚಿಡು ೨೩–೨೪
ಬೈಗೆ = ಸಂಜೆ ೨೮–೨೯
ಬೈಚಿಡು = ಮುಚ್ಚಿಡು ೧೩–೧೨
ಬೈಸಿಗೆ = ಬೆಸುಗೆ ೨–೧೪
ಬೊಂತೆ = ಜೋಳಿಗೆ ೨೭–೪೩
ಬೊಪ್ಪ = ತಂದೆ ೩–೪೯
ಬೊಬ್ಬುಲಿ = ಬೂರಲ ೧೯–೧೦
ಬೋಧ = ಜ್ಞಾನ ೧೦–೩೨
ಬೋನ = ಅಡಿಗೆ ೨೩–೫೫
ಬೋಸರಿಸು = ಮೆಚ್ಚು ಮಾಡು; ಮನವೊಲಿಸು ೧೦–೨೮
ಬೋಳವಿಸು = ತಲೆದಡವು ೨–೩೩
ಬ್ಯಾಲ = ಆನೆ ೫೮–೩೩
ಬ್ರತಿ = ವ್ರತಧಾರಿ ೧೧–೫೫

ಭ

ಭಕ್ತಿತ್ರಯ = ಗುರುಭಕ್ತಿ, ಲಿಂಗಭಕ್ತಿ, ಜಂಗಮಭಕ್ತಿ ೨೦–೨
ಭಗ = ದ್ವಾದಶಸೂರ್ಯರಲ್ಲಿ ಒಬ್ಬ ೫೩–೫೧
ಭಂಗ = ತೆರೆ ೧–೩
ಭಂಗ = ಕೊಂಕು ೧೧–೪೦
ಭಜಿಸು = ಪೂಜಿಸು ೧೭–೩೨
ಭಟ್ಟ = ಭಟ್ಟಂಗಿ ೨೬–೭೩
ಭಂಡಿಸು = ಬಂಡುಮಾಡು ೩೭–೧೮
ಭದ್ರೇಭ = ಭದ್ರಗಜ, ಶುಭಕರ ಆನೆ ೫–೬
ಭರಭರಿತ = ಪರಿಪೂರ್ಣ ೮–೨೭
ಭರವಶ = ಆತುರವಶ ೫–೨೫
ಭರ್ಗ = ಶಿವ ೩–೫೩
ಭರ್ತ = ಪತಿ, ಒಡೆಯ ೫೩–೪
ಭಲ್ಲುಕ = ಕರಡಿ ೧೮–೬೪
ಭಲ್ಲೂಕ = ಕರಡಿ ೭–೩೧
ಭವ = ಜನ್ಮ ೯–೪೮
ಭವತ್ = ನಿಮ್ಮ ೪೭–೬೪
ಭವಿ = ಲಿಂಗಸಂಸ್ಕಾರವಿಲ್ಲದವರು ೬–೧೭
ಭಸಿತರುದ್ರಾಕ್ಷಶಾಸನಧರ = ಶಿವ ಭಕ್ತ ೨೭–೨೮
ಭಾಗದೇಯ = ಸುದೈವ ೨೫–೬
ಭಾಜನ = ಪಾತ್ರೆ ೪೭–೧
ಭಾತಿ = ಪ್ರಭೆ, ಶೋಭೆ ೬–೨೧
ಭಾತಿ = ರೀತಿ ೪೬–೧೨
ಭಾರ್ಯೆ = ಹೆಂಡತಿ ೫೧–೮

CC-0. Jangamwadi Math Collection. Digitized by eGangotri

ಭಾವ = ರೀತಿ ೩೬–೨೮
ಭಾವ = ಮನಸ್ಸು ೪–೨೧
ಭಾವಜ = ಕಾಮ ೪–೨೧
ಭಾವಜಾಹಿತ = ಕಾಮವೈರಿ, ಶಿವ ೭–೫೩
ಭಾಷಾಧೀಶ = ಬ್ರಹ್ಮ ೨೩–೪೮
ಭಾಸುರ = ಪ್ರಕಾಶಮಾನ ೩೭–೪೩
ಭಾಸ್ವರ = ಪ್ರಕಾಶ ೨೫–೧೦
ಭಾಳ = ಹಣೆ ೩೬–೨೩
ಭುಗ್ಯಕ್ತಿ = ಭೋಜನಾಸಕ್ತಿ ೪೨–೬೧
ಭುಜನ = ಸರ್ಪ ೧–೪೪
ಭುಜಂಗ = ವಿಟ ೩೯–೬೩
ಭುಜವಳಿ = ತೊಳುಬಳಿ ೪–೩೬
ಭುಲ್ಲವಣೆ = ಮಾತಿನಿಂದ ಮರುಳು ಮಾಡುವುದು ೪೧–೭
ಭುಲ್ಲವಿಸು = ಹುರಿದುಂಬಿಸು ೨–೪೦
ಭುವನ = ನೀರು ೧೯–೩೭
ಭೂತಿ = ವಿಭೂತಿ ೬–೩೪
ಭೂತಿ = ಮಹತ್ವ ೬–೯
ಭೂಧರ = ಪರ್ವತ ೫–೧
ಭೂಭೃತ್ = ದೊರೆ ೪೫–೬೧
ಭೂರಿ = ಅತ್ಯಂತ ೪–೧
ಭೇಕ = ಕಪ್ಪೆ ೩೮–೨೧
ಭೇದ = ರಹಸ್ಯ ೨೨–೨೩
ಭೇಷಜ = ವೈದ್ಯ ೩೮–೨೪
ಭೋಜಂಗ = ವಿಟ ೨೭–೧೪
ಭ್ರೂಣ = ಗರ್ಭಸ್ಥ ಶಿಶು ೧೭–೯೦

ಮ

ಮಕರ = ಮೊಸಳೆ ೪–೩
ಮಕರಕೇತನ = ಮೀನಧ್ವಜ, ಕಾಮ ೩೯-೫೧
ಮಕರಂದ = ಹೂರಸ ೧೯–೧೭
ಮಕುಟ = ಕಿರೀಟ ೯–೧೪
ಮಖ = ಯಜ್ಞ ೧೫–೨೬
ಮಗಿಲು = ಕುಂಬಿ ೧೧–೮
ಮಚ್ಚರಿಸು = ಹೊಟ್ಟೆಕಿಚ್ಚುಪಡು ೧೫–೨
ಮಂಜರಿ = ಗೊಂಚಲು ೨೫–೩೯
ಮಟ್ಟಿಗ = ಗಂಧ ಹಚ್ಚಿಕೊಳ್ಳುವವ ೫೪–೩
ಮಡ = ಹೊಮ್ಮಡ ೪–೧೭
ಮಡಗು = ಇಡು ೧೦–೩೬
ಮಡಂಗು = ಇಡು ೪–೧೨
ಮಡಿ = ಮಡಿಚು ೪–೧೨
ಮಡಿವಾಸು = ಒಗೆದ ಹಾಸಿಗೆ ೧೧–೯
ಮಣಿಹ = ಕರ್ತವ್ಯ ೩–೨೩
ಮಂಟಿಗೆ = ಕಾಲ್ಬೆರಳ ಆಭರಣ ವಿಶೇಷ ೪–೩೬
ಮಂಡಲ = ಸಮೂಹ ೧೮–೭೩
ಮಂಡಿತ = ಧರಿಸಲ್ಪಟ್ಟ ೭–೧೯
ಮಂಡೆ = ಶಿರಸ್ಸು ೨–೩೯
ಮತಂಗ = ಆನೆ ೨೧–೨೦
ಮದೀಯ = ನಮ್ಮ ೩೮–೬೦
ಮದೇಭ = ಮದ್ದಾನೆ ೪–೩೩
ಮದ್ದರಣ = ನನ್ನ ಪ್ರಾಣ ೨–೩೭
ಮಧು = ಜೇನುತುಪ್ಪ ೫೯–೪೯
ಮಧುವ್ರತ = ತುಂಬಿ ೧೨–೩೦
ಮನದಱಿ = ಕಲ್ಲುಮನಸ್ಸು ೫೫–೨೯
ಮನವಿಳಿ = ಮನಕುಗ್ಗು ೭-೫೨
ಮನವೊಂದು = ಮನಸ್ಸುಮಾಡು ೧೭–೯೦
ಮನಸಿಜಾರಿ = ಕಾಮವೈರಿ, ಶಿವ ೨೪–೪೩
ಮನುಜಪತಿ = ಅರಸ ೫–೫೦
ಮಂದಾರ = ಕಲ್ಪವೃಕ್ಷ ೧–೬೪
ಮಂದೆವಾಳ = ಯತ್ಸಾಮಾಸ್ಯ ೨೫–೫೭
ಮನ್ಮಥದಳನ = ಶಿವ ೨೫–೬೫
ಮಯೂಖ = ಕಿರಣ ೪೦–೨
ಮಯೂರ = ನವಿಲು ೧೧–೮
ಮಯೂರಗಮನ = ಷಣ್ಮುಖ ೪೪–೪೪
ಮರವಟ್ಟು = ಹೌಹಾರು ೧೦–೩
ಮರವಡು = ನಿಶ್ಚೇಷ್ಟವಾಗು ೧೩–೧೮
ಮರಾಳ = ಹಂಸ ೧–೨೦

CC-0. Jangamwadi Math Collection. Digitized by eGangotri

ಮರುಳ್ = ಭೂತ ೧೪–೪
ಮರೆ = ಚಿಗರೆ ೧೭–೧೭
ಮಱಿಪಿಡು = ಮರೆಯಿಸು ೨೩–೬೮
ಮರ್ದ = ಔಷಧ ೪–೫೫
ಮರ್ಬು = ಕತ್ತಲೆ ೧೦–೧೦
ಮರ್ಮ = ಅಂತರಂಗ ೨೪–೩೧
ಮಲಗು = ಆತುಕೊಂಡು ಒರಗು ೧–೪೬
ಮಲತ್ರಯ = ಆಣವಮಲ, ಮಾಯಾ ಮಲ, ಕಾರ್ಮಿಕಮಲ ೫೬–೮೪
ಮಲಯರುಹ = ಶ್ರೀಗಂಧ ೪–೨೬
ಮಲಹರ = ಶಿವ ೧೧–೩೬
ಮಲಹರಾದ್ರಿ = ಕೈಲಾಸಪರ್ವತ ೧೮–೨೬
ಮಲೆ = ಸೊಕ್ಕೇರು ೩೭–೨೧
ಮಸಣ = ಸ್ಮಶಾನ ೧೪–೪
ಮಸ್ತ = ತಲೆ ೨–೩೫
ಮಹಿತ = ಶ್ರೇಷ್ಠ ೧೪–೧೭
ಮಹಿಷ = ಕೋಣ ೭–೩೧
ಮಹೀಭುಜ = ಅರಸು ೧೦–೧೭
ಮಾಕಂದ = ಮಾವು ೪೪–೩೫
ಮಾಡು = ಮುಚ್ಚು ೧೬–೧೪
ಮಾಟ = ಕೃತ್ಯ, ಸೇವೆ ೪–೪೬
ಮಾಂಜಿಷ್ಠ = ವರ್ಣ ೧೮–೬೭
ಮಾಣಿಸು = ನಿಲ್ಲಿಸು, ನಿವಾರಿಸು ೧೨–೨೪
ಮಾತಂಗ = = ಗಜ, ಗಜಾಸುರ ೯–೧೭
ಮಾತುಳಂಗ = ಮಾದಾಳ ೧೮–೬೬
ಮಾದವು = ಮಾಣ್ದವು, ನಿಂತವು ೨೦–೧೬
ಮಾದು = ಮಾಣ್ದು, ನಿಂತು ೩೧–೩೫
ಮಾನ = ಹಳೆಯ ಕಾಲದ ಒಂದು ಮಾಪು ೨೬–೧೭
ಮಾಮಾ = ಮಾಣ್ ಮಾಣ್, ತಡೆ ತಡೆ ೭–೧೭
ಮಾರಕರ್ಮ = ಕಾಮಕ್ರೀಡೆ ೫–೧೬
ಮಾರುತಾಪ್ತ = ಅಗ್ನಿ ೫೩–೧೦
ಮಾಱಿವೆ = ಕಣ್ಣುಬೇನೆ ೧೭–೬೬
ಮಾರ್ಗ = ರೀತಿ ೨೦–೪೩
ಮಾರ್ಗಣ–ಬಾಣ ೩೩–೨೭
ಮಾರ್ಮಲೆ = ಪ್ರತಿಭಟಿಸು, ಎದುರಾಗು ೨೦–೧೫
ಮಾವಣ್ = ಮಾವಿನಹಣ್ಣು ೧೦–೧೧
ಮಾಸಪೋದರ = ಚಂದ್ರ ೧–೪೫
ಮಾಸಾಳು = ಸೇವಕ ೩೬–೪೬
ಮಿಡಿ = ಅದುಮು ೧೪–೧೩
ಮಿಡಿ = ಅಲುಗು ೨೩–೪೪
ಮಿಡುಕು = ಮಿಸುಕು, ಚಲಿಸು ೩೬–೪೬
ಮಿತ್ರ = ಸೂರ್ಯ ೧೮–೨೮
ಮಿಥುನ = ಜೋಡಿ ೧೦–೪೭
ಮಿದಿ = ಮಿದ್ದು, ತಿಕ್ಕು ೨೬–೪೯
ಮಿಸು = ಹೊಳೆ ೪–೨೮
ಮಿಸುಗು = ಹೊಳೆ ೨೩–೪೪
ಮಿಸುನಿ = ಬಂಗಾರ ೨೨–೩೫
ಮಿಸುಪ = ಹೊಳೆಯುವ ೧–೫೩
ಮೂ = ಸ್ನಾನಮಾಡು ೧೪–೬
ಮೂನಕೇತನ = ಮನ್ಮಥ ೧೦–೩೦
ಮುಕುರ = ಕನ್ನಡಿ ೪–೨೭
ಮುಕುಳಿತ = ಮುಗಿದ ೧–೫೪
ಮುಕುಂದಪರ = ಹರಿಪರ, ಶಿವ ೯–೧೭
ಮುಕುಳ = ಮೊಗ್ಗು ೧೭–೩೯
ಮುಕುಳಿತ = ಮುಗಿದ ೯–೩೭
ಮುಕ್ಕುಳು = ಬಾಯಿ ೧೭–೪೭
ಮುಡುಕು = ತಡೆದು ನಿಲ್ಲು ೨೮–೧೧
ಮುಡುಬು = ಒಡೆ ಮುದುಡಿ ಕೊಳ್ಳು ೫೬–೫೯
ಮುಡುಹು = ಭುಜ ೩೭–೧೭
ಮುತ್ತ = ಹಣ್ಣಾದ ೧೪–೨೫
ಮುರುಟು = ಮುದುಡಿ ಯಾಗು ೧೭–೩೦
ಮುಱುಕಿಸು = ಸೊಟ್ಟ ಮಾಡು ೨೮–೫
ಮೂರ್ತಿಗೊಳಿಸು = ಕುಳ್ಳಿರಿಸು ೪–೫
ಮುಲಿಕು = ಮುಲುಕು, ನರಳು ೪೬–೧೮
ಮುಲುಕು = ಬೇನೆತಿನ್ನು ೫೬–೧೫
ಮುಳಿ = ಕೋಪಿಸು ೧೦–೬

CC-0. Jangamwadi Math Collection. Digitized by eGangotri

ಮುಳ್ಳು = ಹುಗುಳು, ಗುಳ್ಳೆ ೧೪–೧೧
ಮುಳ್ಳುಸೆಂದು = ಮುಳ್ಳಿನ ಚೆಂಡು ೩೧–೩
ಮೂಲ = ಮೂಳೆ ೨೩–೫೬
ಮೃಗಮದ = ಕಸ್ತೂರಿ ೪–೩೫
ಮೃಗರಾಜ = ಸಿಂಹ ೯–೧೭
ಮೃಡನ ಹೇರಾಸೆ = ಶಿವನ ಮದ್ದಾಸೆ, ಶರಣ ೨೫–೧೫
ಮೃತ್ತಿಕೆ = ಮಣ್ಣು ೧೪–೧೧
ಮೆಱೆವಣೆ = ವೈಭವ, ಕೀರ್ತಿ ೨೬–೭೫
ಮೆಲ್ = ತಿನ್ನು ೧೩–೧೧
ಮೆಲುಕಿಡು = ಮೆಲುಕುಹಾಕು ೩೧–೨೬
ಮೇಖಿಳಾ = ನಡಪಟ್ಟಿ ೫–೨೫
ಮೇಟಿ = ಬಂಟ, ಬಂಡಿಗೆ ಆನಿಸುವ ಆನಿಕೆ ೮–೧೨
ಮೇಟಿ = ಕೇಂದ್ರ ೩೪–೫೫
ಮೇಟಿಕೀರ್ತಿ = ಸ್ಥಿರವಾದ ಕೀರ್ತಿ ೧೫–೧೫
ಮೇದಿನಿ = ಭೂಮಿ ೨೨–೨೮
ಮೇಧಾವಿ = ಗಂಧ, ಚಂದನ ೩–೫೪
ಮೇಲು = ವಿಶೇಷ ೩೮–೫೮
ಮೇಷ = ಹೋತ ೭–೩೧
ಮೇಳೈಸು = ಬೆರಸು ೪–೩೫
ಮೈತ್ರ = ಮಿತ್ರತ್ವ ೧೭–೫೯
ಮೆಯಿಸಿಕ್ಕು = ನಮಸ್ಕರಿಸು ೪–೬
ಮೊಕ್ಕಳೆ = ಆಧಿಕ್ಯ ೩೯–೫೮
ಮೊಗೆವಾಲು = ಚಟಿಗೆಯೊಳಗಿನ ಹಾಲು ೧–೨೦
ಮೊತ್ತ = ಸಮೂಹ ೫–೫೯
ಮೊನೆ = ತುದಿ ೪೨–೮೬
ಮೊರಹು = ಝೇಂಕಾರ ೧೦–೪೭
ಮೊರೆ = ಧ್ವನಿಮಾಡು ೧–೪೭
ಮೊಲ್ಲೆಗ = ಪಾಪಿ, ದೂಷಿತ ೪೪–೪೧
ಮೋನ = ಮೌನ ೩೪–೩೨
ಮೋಹಿ = ಮೋಹಿತನಾಗಿ ೩೪–೪೩
ಮೋಹಿಕೊಳ್ = ಮೂರ್ಛೆ ಹೊಂದು ೩೧–೧೫
ಮೋಹಿಸು = ಇರಿ ೨೬–೩೧
ಮೋಹು = ಮುಚ್ಚು, ಹೊಂದಿಸು ೪೨–೪೬

ಯ

ಯಮಿ = ತಪಸ್ವಿ, ಋಷಿ ೨೫–೨೪
ಯುಗ = ಜೊತೆ, ಜೋಡು ೧೨–೨೯
ಯೂಥ = ಸಮೂಹ ೨–೫೧

ರ

ರಜಕ = ಅಗಸ ೨೧–೫
ರಜತ = ಬೆಳ್ಳಿ ೧–೩೮
ರಜತಗಿರಿ = ಕೈಲಾಸಪರ್ವತ ೧–೫೨
ರಜನೀಕರ = ಚಂದ್ರ ೨೫–೩೨
ರಜ್ಜು = ಹಗ್ಗ ೩–೪೮
ರಟ್ಟಿಕ್ಕು = ಹುಯ್ಲೆಬ್ಬಿಸು ೨೬–೬೪
ರತಿ = ಆಸಕ್ತಿ, ಪ್ರೀತಿ ೧೦–೪೮
ರಥಾಂಗ = ರಥ ೬–೧೪
ರಥಾಂಗ = ಚಕ್ರವಾಕ ೧೦–೪೭
ರಥಾಂಗ = ಚಕ್ರ ೧೭–೬೪
ರಥಾಂಗಧರ = ವಿಷ್ಣು ೧೭–೬೪
ರದ = ಹಲ್ಲು ೫೮–೩೧
ರದನ = ಹಲ್ಲು ೫೯–೩೧
ರಂಧ್ರ = ಗಾಯ, ತೂತು ೩೭–೨೮
ರಮಾಕರ = ಸಂಪತ್ಕರ ೪–೧
ರಂಭಾಗ (ರಂಭಾ + ಆಗ) = ಬಾಳೆಯ ಗಿಡ ೨೫–೩೭
ರಯ = ವೇಗ ೫೮–೪೧
ರವ = ಧ್ವನಿ ೩೭–೨೧
ರವೆ = ಕಣ ೧೭–೫೯
ರಶ್ಮಿ = ಕಿರಣ ೧೮–೨೭
ರಸನೆ = ನಾಲಗೆ ೧–೯

CC-0. Jangamwadi Math Collection. Digitized by eGangotri

ರಹಣಿ = ರಗಳೆ ೨೭–೨೧
ರಾಕ್ಷಸರಾಜ = ನಿರುತಿ, ದಿಕ್ಪತಿ ೯–೩೦
ರಾಗಿಸು = ಸಿಟ್ಟಾಗು ೩೭–೧೬
ರಾಜತಾಚಲ = ಕೈಲಾಸಪರ್ವತ ೭–೨೯
ರಾಜಧರ = ಚಂದ್ರಧರ, ಶಿವ ೭–೨೯
ರಾಜರಾಜ = ಕುಬೇರ ೯–೩೦
ರಾಜಾನ್ನದಕ್ಕಿ = ಸುವಾಸನೆಯಅಕ್ಕಿ ೨೬–೧೫
ರಾಜಿ = ಸಮೂಹ, ಸಾಲು ೪–೨೪
ರಾಜಿತ = ಶೋಭಿಸುವ ೧೧–೪೦
ರಾಜೀವ = ಕಮಲ ೪–೨೧
ರಾಮೆ = ಸ್ತ್ರೀ ೧೧–೩೨
ರುಚಿ = ಕಾಂತಿ ೧–೩೮
ರುಜೆ = ಬೇನೆ ೧೪–೩೨
ರುದ್ರ = ಈಶಾನ ೨೪–೪೬
ರುಧಿರ = ರಕ್ತ ೫೪–೮೪
ರೂಕ್ಷ = ಉಗ್ರ ೨೬–೩೩
ರೇಣು = ಧೂಳಿ ಕಣ ೧೮–೬೨
ರೋಚಿ = ಕಿರಣ ೩೯–೪
ರೋಹಣ = ಮೇರು ೧೮–೨೯
ಜಿವಕಿ = ಕುಪ್ಪಸ ೧೩–೧೫
ಜೂಢಿ = ಜಗತ್ತು ೧೦–೩೫
ಜೂಢಿ = ಪ್ರಸಿದ್ಧಿ ೪೯–೩೬
ಜೂಢಿವೆರು = ಪ್ರಸಿದ್ಧವಾಗು ೨–೪೨
ಜೂಢಿಸು = ಪ್ರಸಿದ್ಧವಾಗು ೫೩–೫೫
ಜೊಂಪೆ = ಕೆಸರು ೯–೮

ಲ

ಲಗ್ನ = ಶುಭಮುಹೂರ್ತ ೪–೪೬
ಲಟ್ಟೆ = ಲೊಟ್ಟೆ ೩೯–೫೬
ಲತಾಂತ = ಹೂ ೨೫–೩೯
ಲತಾಂಗಮಾಗಣ = ಕಾಮ ೪೦–೧೫
ಲಬ್ಧ = ಉತ್ಪನ್ನ ೨೬–೨೧
ಲಲನ = ಪ್ರಿಯ ೧೦–೪೫
ಲಲಾಟ = ಹಣೆ ೪–೧೦
ಲಲಾಟಲೋಚನನಣುಗ = ಶಿವಭಕ್ತ ೧೫–೧೫
ಲಲಾಮ = ಮುಖ ೯–೧೧
ಲವಿತ್ರ = ಕುಡುಗೋಲು ೬೦–೪೮
ಲಸಿತ = ಶೋಭಿಸುವ ೧೧–೩೭
ಲಹರಿ = ತೆರೆ ೨೫–೮
ಲಾಗು = ಲಾಘವ, ಚಳಕ ೬–೯
ಲಾಲ್ಯ = ವತ್ಸಲತೆ ೪೫–೭೨
ಲಿಂಗಾದಸರ = ಲಿಂಗಪೂಜಾ ವಿಧಾನ ೭–೪೩
ಲೆಂಕ = ಸೇವಕ ೮–೩೯
ಲೆಂಗಿ = ಮಂದಮತಿ ೮–೧೦
ಲೇಪೆ = ಲೇಖನ ೫೨–೨೩
ಲೋಕಾಂತ = ಜಗತ್ಪ್ರಸಿದ್ಧ ೫೧–೪೪
ಲೋಗ = ಜನಸಾಮಾನ್ಯ ೫೧–೨
ಲೋಲ = ಚಂಚಲ ೫–೨೧
ಲೋಪ್ಪ = ಮಣ್ಣು ೨೮–೧
ಲೋಪ = ಕಬ್ಬಿಣ ೨೯–೨೭
ಲೋಹಿತ = ಕೆಂಪು ೯–೧೮

ವ

ವಂಗಡ = ಸಮೂಹ ೯–೩೧
ವಟ = ಆಲ ೪೯–೭೭
ವಟಫಲ = ಆಲದ ಹಣ್ಣು ೫–೨೧
ವಟುಕ = ಮಗು ೪೯–೬
ವಟ್ಟ = ಕೊರತೆ, ಕುಂದು, ಬಟ್ಟೆ ೫–೩೩
ವದನ = ಮುಖ ೧–೨೭
ವನ = ನೀರು ೫–೩೧
ವನಧರ = ಮೋಡ ೬೦–೪೨
ವನಮಾಲಿ = ವಿಷ್ಣು ೫–೫೫
ವನಶಯನ = ಜಲಶಾಯಿ, ವಿಷ್ಣು ೬೦–೪೨
ವಪು = ಶರೀರ ೩೪–೩೯

CC-0. Jangamwadi Math Collection. Digitized by eGangotri

ವಪ್ರ = ಸಾನು ೧೫–೩೦
ವರ = ಪತಿ ೫೧–೮
ವರೇಣ್ಯ = ಶ್ರೇಷ್ಠ ೯–೨೯
ವರ್ತಿ = ಬತ್ತಿ ೪೭–೧
ವಲ್ಮೀಕ = ಹುತ್ತ ೧೮–೭೮
ವಸು = ರತ್ನ ೪–೨೨
ವಸುಮತಿ = ಭೂಮಿ ೩–೮೫
ವಸ್ವಗ = ರತ್ನಗಿರಿ ೬೦–೫೦
ವಹಿತ್ರ = ದೋಣಿ ೩೮–೨೨
ವಹಿಲ = ಶೀಘ್ರ ೨೦–೩೮
ವಾಜಿ = ಕುದುರೆ ೫–೧೮
ವಾಟಿಕ = ಉಪವನ ೧೮–೭೦
ವಾಮ = ಎಡ ೧–೨
ವಾಯ = ವ್ಯರ್ಥ ೧೨–೧೪
ವಾಯಸ = ಕಾಗೆ ೬–೪೦
ವಾರಣ = ಆನೆ ೧೦–೧೦
ವಾರಸತಿ = ವೇಶ್ಯ ೨೭–೨೩
ವಾರಣಾಸಿ = ಬನಾರಸಿ ೧೦–೨೬
ವಾರಿ = ನೀರು ೨೩–೨೨
ವಾರಿತ = ಬಿಡಲ್ಪಟ್ಟ ೫–೧೬
ವಾರಿಧಿರಾಜ = ವರುಣ ೯–೩೦
ವಾರ್ವ = ವಾರುವ, ಕುದುರೆ ೫೮–೩೮
ವಾಸರ = ದಿನ ೧೫–೨೫
ವಾಸಿ = ಪಂಥ ೮–೩೩
ವಾಸುಗಿ = ವಾಸುಕಿ, ಆದಿಶೇಷ ೫೦–೫೭
ವಾಳುಕ = ಮಳಲು ೧೮–೪೧
ವಿಕರ್ತನೋದ್ಭವ = ಶನಿ ೯–೩೦
ವಿಕೀರ್ಣ = ಸಂದಣಿ ೫–೪೪
ವಿಕ್ರಯೆ = ಬೀಳುವಿಕೆ ೪–೬೦
ವಿಗಡ = ವೀರ ೫–೪೦
ವಿಗಡೆ = ಉತ್ಪ್ರತ್ಯ, ಧೂರ್ತೆ ೫೪–೩೬
ವಿಘಾತಿ = ಹೊಡೆತ ೧೫–೭
ವಿಚಕಿಲ = ಮಲ್ಲಿಗೆ ೨೫–೩೭
ವಿಚ್ಛಿನ್ನವಾಗು = ಸೂರೆ ಯಾಗು ೨೬–೧೮
ವಿಜಿಗೀಷಣ = ಪರಾಕ್ರಮ ೧೯–೩೮
ವಿಟಪಿ = ಮರ ೫೬–೯
ವಿಡಂಬರ = ನಡೆವಳಿಕೆ ೩೯–೮೩
ವಿತತ = ಪ್ರಸಿದ್ಧ ೧೦–೪೮
ವಿತತಿ = ಸಮೂಹ ೧೦–೩೮
ವಿತರಣ = ದಾನ ೫–೬೪
ವಿತಾನ = ಸಮೂಹ ೩–೨೨
ವಿದಗ್ಧ = ಪ್ರೌಢ, ತಜ್ಞ ೧೧–೬
ವಿದಳಿತ = ಕಳೆಯಲ್ಪಟ್ಟ ೪೭–೧
ವಿದಾರಿಸು = ಸೀಳು ೨೧–೧೨
ವಿದ್ರುಮ = ಹವಳ ೧೨–೨೮
ವಿಧು = ಚಂದ್ರ ೫೧–೫
ವಿಧೂತ = ತೊಳೆಯಲ್ಪಟ್ಟ ೯–೧೨
ವಿಪಿನ = ಆಡವಿ ೧೮–೨೦
ವಿಭಾ = ಪ್ರಕಾಶ ೩೨–೭
ವಿಭಾಕರ = ಸೂರ್ಯ ೧೦–೪೪
ವಿಭಾಡಿಸು = ನಾಶಮಾಡು ೨೩–೩೭
ವಿಭಾತಿ = ತೆರ, ರೀತಿ ೬–೧೩
ವಿಭಾವರೀ = ರಾತ್ರಿ ೫೪–೧
ವಿಭಾವರೀಶ = ಚಂದ್ರ ೫೪–೧
ವಿಭಾಸ = ಪ್ರಕಾಶ ೧೫–೨೩
ವಿಭಾಸ್ಕರ = ಪ್ರಕಾಶಿತ ೪೫–೬೯
ವಿಭೂತಿ ಕೊಡಿಸು = ಔತಣ ಹೇಳಿಸು ೭-೩೬
ವಿಯತ್ = ಆಕಾಶ ೧೦–೪೪
ವಿಯಚ್ಚರ = ವಿದ್ಯಾಧರ ೧–೪೩
ವಿಯತ್ತಳ = ಆಕಾಶ ೧೩–೩೦
ವಿರಿಂಚಿ = ಬ್ರಹ್ಮ ೯–೧೭
ವಿಲೋಚನ = ಕಣ್ಣು ೧೭–೭೫
ವಿಲೋಲತೆ = ಆಸಕ್ತಿ ೨–೩೨
ವಿವರ = ಅಣಿಮಾತ್ರ ೨೯–೨೭
ವಿಶದ = ಶುಭ್ರ ೨–೩೧
ವಿಶಿಖ = ಬಾಣ ೧೦–೩೦
ವಿಶ್ರಮ = ವಿಶ್ರಾಮ ೩೯–೨
ವಿಷ = ನೀರು ೪೮–೩೯
ವಿಷಕಪರ್ದ = ಜಡೆಯಲ್ಲಿ ನೀರು(ಗಂಗೆ) ಉಳ್ಳವ, ಶಿವ ೪೮–೩೯

CC-0. Jangamwadi Math Collection. Digitized by eGangotri

ವಿಷಧರ = ವಿಷಕಂಠ ೨೦–೧
ವಿಷಧರವರೂಥ = ಮೇಘವಾಹನ, ದೇವೇಂದ್ರ ೨೦–೧
ವಿಷಧರಾಹಿತ ಗಮನ = (ವಿಷಧರ + ಅಹಿತ = ಗರುಡ, ನವಿಲು) ವಿಷ್ಣು, ಷಣ್ಮುಖ ೨೦–೧
ವಿಸರ = ವಿಸ್ತಾರ ೧–೧೫
ವಿಸರ = ಸಮೂಹ ೧೫–೨೨
ವಿಸ್ತರಿಸು = ವರ್ಣಿಸು ೧೭–೧೦೦
ವಿಸ್ಫಟ = ಚೆನ್ನಾಗಿ ಹೊತ್ತಿದ ೨೫–೩೨
ವಿಹಂಗಮ = ಪಕ್ಷಿ ೧೮–೪೧
ವಿಳಸ = ವಿಲಾಸ, ಶೋಭೆ ೪–೧೦
ವಿಳಾಸಿನೀ = ವೇಶ್ಯೆ ೧೧–೯
ವೀತ = ಬಿಡಲ್ಪಟ್ಟ ೭–೬
ವೃಕ = ತೋಳ ೭–೩೧
ವೃಜಿನ = ಪಾಪ ೨೯–೩
ವೃತ್ತಾಂತ = ನಡೆವಳಿಕೆ ೧೭–೪೨
ವೃಥಾಳಾಪ = ವ್ಯರ್ಥ ಮಾತು ೧೦–೭
ವೃಂದಾರಕ = ದೇವತೆ ೫೨–೯
ವೆಗ್ಗಳಿಸು = ಮೀರು, ಹೆಚ್ಚಾಗು ೪–೨೫
ವೇಣ = ಹೆಳಲು ೧೦–೩೧
ವೇಣು = ಕೊಳಲು ೪–೭
ವೇಡೆ = ಮುತ್ತಿಗೆ ೪೯–೫೨
ವೇಡೆಯ = ಮುತ್ತಿಗೆ ೫೦–೭೦
ವೇಡ್ಕೈಸು = ಮುತ್ತು ೫೦–೬೯
ವೇದಂಡ = ಆನೆ ೫–೧೪
ವೇದಿಕ = ವಿದಿತ ೧೭–೬೩
ವೈರಿಪದ = ಅರಿಸಮಾನ ೧–೧೮
ವೈಶಿಕ = ವಂಚನೆ, ಅಸತ್ಯ ೧೯–೨೦
ವೈಷಿಕ = ನಟನೆ ೨೩–೫೪
ವ್ಯಾಲ = ಸರ್ಪ ೧೬–೧೨
ವ್ಯಾಳ = ಆನೆ ೨೧–೧೬
ವ್ಯೋಮ = ಆಕಾಶ ೨೩–೭೪
ವ್ರಜ = ಸಮೂಹ ೨೯–೩
ವ್ರಾತ = ಸಮೂಹ ೨೫–೨

ಶ

ಶಕಲ = ಕಲೆ, ರೇಪೆ ೨೬–೫೬
ಶಕ್ರ = ದೇವೇಂದ್ರ ೩೬–೨೫
ಶತದಳ = ಕಮಲ ೧೨–೩೦
ಶತದಳಾಸನ = ಬ್ರಹ್ಮ ೧೫–೨೬
ಶತಮುಖಿ = ಇಂದ್ರ ೧೫–೨೬
ಶಬರ = ಬೇಡ ೧೭–೫
ಶಮನ = ಯಮ ೨೩–೪೦
ಶಂಬರಾಹಿತ = ಶಂಬರವೈರಿ, ಮನ್ಮಥ ೫–೨೩
ಶರ = ನೀರು ೧೯–೨೯
ಶರ್ವಾಪ = ಶಿವ ೩೭–೭೮
ಶಸ್ತ = ಹೊಗಳಲ್ಪಟ್ಟ ೬–೪೯
ಶಾಣ = ಒರೆಗಲ್ಲು ೨೬–೮೦
ಶಾಠ್ಯ = ದುರ್ಜನತ್ವ ೮–೧೮
ಶಾತ್ರವ = ಶತ್ರುಭಾವ ೩೮–೨೨
ಶಾರ್ದೂಲ = ಹುಲಿ ೭–೩೧
ಶಿಖಿಂಡ = ಜಡೆ ೫೬–೨೬
ಶಿಖಿ = ಅಗ್ನಿ ೭–೨೨
ಶಿಖಿ = ಮುಂಡಿ ೧೩–೩೩
ಶಿಖಿರಿ = ನವಿಲು ೧೮–೮೪
ಶಿರೋಜ = ತಲೆಗೂದಲು ೪–೩೪
ಶಿರೋರುಹ = ತಲೆಗೂದಲು ೧೦–೩೮
ಶಿವಸಹೋದರ = ಭಕ್ತಬಾಂಧವ ೩೮–೬೫
ಶಿಷ್ಯ = ಶಿಷ್ಯ, ದೀಕ್ಷೆಯ ಮಗ ೫೬–೪
ಶೀತಕರಲಕ್ಷಣ ಕಪರ್ದಿ = ಜಡೆಯಲ್ಲಿ ಚಂದ್ರನ ಚಿಹ್ನವುಳ್ಳವ ೧೭–೯೬
ಶೀತನಗ = ಹಿಮಗಿರಿ ೧೪–೩೭
ಶೀತರುಚಿ = ಚಂದ್ರ ೧೦–೧೪
ಶೀತಾಂಶು = ಚಂದ್ರ ೧೭–೮೫
ಶುಕ = ಗಿಳಿ ೧೧–೮
ಶುಕ್ಲ = ವೀರ್ಯ ೫೯–೭೦

CC-0. Jangamwadi Math Collection. Digitized by eGangotri

ಶಂಡಾಲ = ಸೊಂಡಿಲು ೫೮–೩೩
ಶುನಕ = ನಾಯಿ ೧–೨೦
ಶುಂಭತ್ = ಶೋಭಿಸುವ ೪೦–೧
ಶೂಲಿ = ಶಿವ ೩–೧೩
ಶೋಭಾರತಿ = ಮಂಗಳಾರತಿ ೫–೩೬
ಶೃಂಗ = ಶಿಖರ ೧೮–೩೩
ಶೈಲಭಿದ್ = ದೇವೇಂದ್ರ ೧೬–೧೨
ಶ್ಯಾಮಕಂಧರ = ೧ ನವಿಲು, ೨ ಸರ್ಪ
೩ ಶಿವ ೧–೫
ಶ್ಯಾಮಳಾಂಗ = ೧ ಹರಿ
೨ ಗಜಾಸುರ ೧–೫
ಶ್ರವಣ = ಕಿವಿ ೧೭–೪೧
ಶ್ರೀಶ್ವರ = ವಿಷ್ಣು ೫೩–೬೭
ಶ್ರೇಣಿ = ಸಮೂಹ ೩೬–೪
ಶ್ಲೇಷ್ಮ = ಕಫ ೩೯–೬೯
ಶ್ವಪಚ = ಹೊಲೆಯ ೫೬–೭೭
ಶ್ವೇತಶೈಲ = ಹಿಮಗಿರಿ ೩೩–೬
ಶ್ವಸನ = ವಾಯು ೫೬–೯೮

ಷ

ಷಟ್‌ಸ್ಥಲ = ಭಕ್ತ, ಮಹೇಶ, ಪ್ರಸಾದಿ,
ಪ್ರಾಣಲಿಂಗಿ, ಶರಣ, ಐಕ್ಯ
ಷಡರಿ = ಷಡ್ರಿಪು ೬–೬
ಷೋಡಶ = ಹದಿನಾರು ೪೭–೧೮

ಸ

ಸಂಯಮಿ = ತಪಸ್ವಿ ೧೮–೭೮
ಸಂವಿತ್ = ಸುಜ್ಞಾನ ೭–೫೯
ಸಂಸರ್ಗ = ಸಂಬಂಧ ೨೦–೩
ಸಂಸೃತಿ = ಸಂಸಾರ ೧೦–೧
ಸಂಹನನ = ನಾಶ ೫೩–೫೭
ಸಂಹರಿಸು = ಅಳವಡಿಸು,
ಸಂವರಿಸು ೪೨–೨೪
ಸಕ್ಯಸಮ = ಅತ್ಯಂತ ಸಮಾನ ೧೭–೮೩
ಸಘಾಟಿಕೆ = ದರ್ಪ, ಮದ ೨೦–೧೮
ಸಂಕಲೆ = ಬೇಡಿ ೨೧–೬
ಸಂಗತಿ = ಮೇಳನ ೧೧–೪೬
ಸಂಘಾತ = ಸಮೂಹ ೧೮–೭೩
ಸಚೀಶ = ಮಂತ್ರಿಶ್ರೇಷ್ಠ ೫೮–೫೭
ಸಂಚಯ = ಸಮೂಹ ೧೮–೭೩
ಸತ್ತಿಗೆ = ಕೊಡೆ ೫–೪೫
ಸದನ = ಮನೆ ೯–೪೪
ಸದನಾಂಗಣ = ಮನೆಯಂಗಳ ೩೯–೩
ಸದೆ = ಹೊಡೆ ೧೩–೨೦
ಸದ್ಮ = ಮನೆ ೬೦–೫೦
ಸಂತತಿ = ಸಮೂಹ ೪–೫೩
ಸಂತ್ರಾಣ = ರಕ್ಷಕ ೧೦–೩೧
ಸಂದ = ಪ್ರಸಿದ್ಧವಾದ ೧೫–೩೨
ಸಂದಿಸು = ಸಂಧಿಸು, ದೊರೆ ೧೧–೫೨
ಸಂದುವಡೆ = ಏಕವಾಗು ೫೨–೨೦
ಸಂದೋಹ = ಸಮೂಹ ೧೮–೭೩
ಸನ್ನ = ಸರಿಯಿರಿ ೪–೪
ಸನ್ನಧಿ = ಸಮಕ್ಷ ೧೨–೨೮
ಸನ್ನಧಿಯಾಗು = ಪ್ರತ್ಯಕ್ಷನಾಗು ೨೧–೧೯
ಸಪರ್ಯೆ = ಪೂಜೆ, ಸೇವೆ ೬–೫೯
ಸಪ್ತಾರ್ಚಿ = ಅಗ್ನಿ ೫೩–೬೭
ಸಪ್ತಾಶ್ವ = ಸೂರ್ಯ ೫೩–೬೭
ಸಪ್ಪಿ = ಕುದುರೆ ೫೮–೩೬
ಸಬಳ = ಒಂದು ಆಯುಧ,
ಗದೆ ೧೫–೧೩
ಸಮತೆಗಟ್ಟು = ಒಂದಾಗು ೩೬–೪೫
ಸಮಂತು = ಚೆನ್ನಾಗಿ ೮–೪೯
ಸಮಯ = ಧರ್ಮ, ಮತ ೩–೬೭
ಸಮಿತ್ = ಉರವಲು ೪–೭೫
ಸಮಿತಿ = ಸಮೂಹ ೫೩–೨೪
ಸಮಿರಣ = ವಾಯು ೨೫–೪೩
ಸಮುಚ್ಚಯ = ಸಮೂಹ ೫೬–೪೩

CC-0. Jangamwadi Math Collection. Digitized by eGangotri

ಸಂಬಳಿಗೆ = ಬಡಿಗೆ ೫೫–೨೮
ಸಂಭ್ರಮಿಸು = ಭ್ರಮೆ ಗೊಳ್ಳು ೨–೧೮
ಸಮ್ಮದ = ಸಂತೋಷ ೨೩–೫೨
ಸಮ್ಮದಿಸು = ಆನಂದಿಸು ೧–೫೮
ಸಮ್ಮಾರ್ಜನೆ = ಸಾರಣೆ, ಕಸ ಗೂಡಿಸುವುದು ೬–೨೦
ಸಮ್ಮಾರ್ಜಿಸು = ಕಸಗುಡಿಸು ೪೦–೨೧
ಸರಕು = ಲಕ್ಷ್ಯ ೨೧–೫೫
ಸರಕುಗೊಳ್ಳು = ಲೆಕ್ಕಿಸು ೧೨–೮
ಸರಕುಮಾಡು = ಲಕ್ಷಿಸು ೨೫–೧೪
ಸರಧಿ = ಬತ್ತಳಿಕೆ ೫–೨೪
ಸರವಿ = ಹಗ್ಗ ೧೫–೨೧
ಸರಸಿಜಾಂಬಕ = ವಿಷ್ಣು ೯–೩೧
ಸರಸಿರುಹ = ಕಮಲ ೫–೫೯
ಸರಳು = ಬಾಣ ೪–೨೬
ಸರಿತ್ = ನದಿ ೪೮–೧
ಸಲಿಗೆ = ಅಪೇಕ್ಷೆ ೬–೩
ಸಲಿಲ = ನೀರು ೧೪–೯
ಸಲ್ಲಲಿತ = ಕೋಮಲ ೧೯–೫
ಸವೆ = ಬಳಸು, ಮೆಚ್ಚಿಸು ೧೫–೧೬
ಸಶಿವ = ಶಿವಸಹಿತ ೧–೩೧
ಸಸಿ = ಚಂದ್ರ ೨೭–೩೮
ಸಸಿನೆ = ಚೆನ್ನಾಗಿ ೬–೧೧
ಸಾಗಿಸು = ಸಲಹು ೩–೭೯
ಸಾದರುಸ್ಯ = ಸಾದ್ಯಸ್ಯ ೫೦–೨೦
ಸಾನ್ನಿಧ್ಯ = ಸ್ಥಿರ ೧೪–೪೬
ಸಾಮಜ = ಆನೆ ೫೪–೨೨
ಸಾರಮೇಯ = ನಾಯಿ ೫೪–೪೫
ಸಾರಸ = ಕಮಲ ೧–೨೭
ಸಾರಿ = ನೆತ್ತಿದಾಟದ ಫಾಸಿ ೪೨–೩
ಸಾರು = ಸಮೂಹಿಸು ೫–೧೭
ಸಾವಾಸಿ = ಸಹವಾಸಿ ೪೬–೩೫
ಸಾಹಣಿ = ಕುದುರೆ-ಆನೆ ಮೊದಲಾದವುಗಳ ಶಿಕ್ಷಕ ೮–೪೭
ಸಿಕ್ಕು = ತೊಡಕು, ಆತಂಕ ೪೬–೧೨
ಸಿಗ್ಗಾಗು = ಲಜ್ಜಿತನಾಗು ೧೭–೧೦
ಸಿಗ್ಗು = ಲಜ್ಜೆ ೩೭–೧೯
ಸಿಂಜಿನಿ = ಹೆದೆ ೧೧–೪೩
ಸಿಡಿಮಿಡಿಗೊಳ್ಳು = ಕೋಪಿಸು ೧೩–೧೯
ಸಿತ = ಬೆಳುಪು ೩–೧೨
ಸಿದ್ಧವಿಭಕ = ಸಿದ್ಧರಾಮ ೯–೩೩
ಸಿಂದೂರ = ಕುಂಕುಮ ೪–೪೦
ಸಿಂಧು = ಆನೆ ೧೦–೫೬
ಸಿಂಧು = ನದಿ ೧೪–೩೬
ಸಿಂಧೂರ = ಆನೆ ೫–೧೪
ಸಿಂಪು = ಕಪ್ಪೆಚಿಪ್ಪು ೧೧–೧೧
ಸಿಂಬಕ = ಸೇವಕ ೨೬–೩೫
ಸಿಂಬಿ = ದಾಸಿ, ತೊತ್ತು ೨೩–೧
ಸಿವುಡಿ = ಲೆಕ್ಕದ ಹೊತ್ತಗೆ ೩೦–೨೪
ಸಿರಿಗಿರಿ = ಶ್ರೀಪರ್ವತ ೨–೪೫
ಸೀ = ಹೊತ್ತು ೧೩–೯
ಸೀಕರಿಯೋಗು = ಕರಿಕಾಗು ೫೯–೧೪
ಸೀಮಂತಿನಿ = ಮುತ್ತಯಿದೆ ೪–೩೨
ಸೀಮೆ = ನಾಚು ೯–೪೫
ಸೀರೆ = ಉಡುವ ಬಟ್ಟೆ ೧೭–೫೩
ಸೀಱು = ಚೀರು ೨೫–೨೧
ಸೀಲೆ = ಸೆಲ್ಲೆ ೩೦–೪
ಸೀಳಿಡು = ಸಿಳ್ಳುಹಾಕು ೧೯–೧೩
ಸುಕೃತ = ಪುಣ್ಯ ೨೩–೨೫
ಸುಕ್ಕತೆಗೆ = ಮುಂದಡೆಯಾಗು ೪೩–೨೬
ಸುಗಿ = ಕಳಚು, ಸುಲಿ ೧೦–೩೩
ಸುಂಪಿಗೆ = ಸಮಟು, ಸಟ್ಟುಗ ೧೭–೧೯
ಸುದತಿ = ಸ್ತ್ರೀ ೪೪–೧
ಸುಧಾರಸ = ಬೆಳದಿಂಗಳು ೩–೧೧
ಸುಧಾ = ಅಮೃತ ೧–೪೧
ಸುಧಾಸನನಾಯಕ = ದೇವೇಂದ್ರ ೧–೪೧
ಸುಧೆ = ಅಮೃತ ೧೬–೧೯
ಸುಪರ್ವ = ದೇವತೆ ೨೬–೪೧

CC-0. Jangamwadi Math Collection. Digitized by eGangotri

ಸುಭಗ = ದೈವಶಾಲಿ ೭–೪೮
ಸುಮನಸ = ಹೂ ೩೭–೫೫
ಸುಮನೋಗಣಿಕೆ = ಸುರವೇಶ್ಯೆ ೪೦–೧೪
ಸುಯ್ = ಉಸುರುಗರೆ ೧೩–೧೭
ಸುಯಿಲ್ = ಉಸಿರು ೩೪–೩೨
ಸುಯಿಧಾನ = ಎಚ್ಚರ ೧೫–೧೭
ಸುರಗಿ = ಕಿರುಗತ್ತಿ ೮–೪೭
ಸುರಗಿರಿ = ಮೇರುಪರ್ವತ ೫೪–೨೩
ಸುರಂಗ = ಮನೋಹರ ೧೧–೧೩
ಸುರಂಗಿಸು = ರಂಜಿಸು ೧೭–೯೪
ಸುರಪಕೀಲ = ಇಂದ್ರಕೀಲ ೧೮–೨೯
ಸುರಭಿ = ಕಾಮಧೇನು ೭–೩೯
ಸುರಮಹಾಜನರಾಜ = ದೇವೇಂದ್ರ ೫–೭೪
ಸುರಾದ್ರಿ = ಮೇರುಗಿರಿ ೭–೪೩
ಸುರಾಲಯ = ದೇವಾಲಯ ೧೮–೬೩
ಸುರುಚಿರ = ಸ್ವಾರಸ್ಯಮಯ ೩–೯
ಸುಲಿಸು = (ಹಲ್ಲು) ತಿಕ್ಕಿಸು ೩೭–೧೫
ಸುವಿಧಾನ = ಜಾಗ್ರತ ೬–೩೮
ಸುಸರ = ಹಿತಕರ ೨೭–೩೮
ಸುಸರವಾಗು = ಚಿನ್ನಾಗು ೩–೮೫
ಸುಹೃತ್ = ಸಜ್ಜನ, ಮಿತ್ರ ೬–೩೮

ಸುಳುಹು = ಚರಿಸುವಿಕೆ ೨೪–೫೫
ಸೂಕರ = ಹಂದಿ ೧೮–೮೪
ಸೂಡಗ = ಮುಂಗೈಯ ಆಭರಣ ವಿಶೇಷ ೪–೩೬
ಸೂಡು = ಮುಡಿ, ಧರಿಸು ೧–೩೨

ಸೂದನ = ಆಡಿಗೆ ೧೪–೩೬
ಸೂನೃತ = ಸತ್ಯ ೩–೨೦
ಸೂನೆಗಾಱಿ = ಕೊಲೆಗಾರ ೨೩–೨೧
ಸೂರ = ಸೂರ್ಯ ೩೮–೨೧
ಸೂರಿ = ಪಂಡಿತ ೧–೬೬
ಸೂರ್ಪಕಾರೀಪ್ರಹರ = ಶಿವ ೩೦–೧
ಸೂಸು = ಹೊರಚೆಲ್ಲು ೯–೨
ಸೂಳು = ಸರತಿ ೮–೭

ಸೂಳೆಗೆಯ್ = ವೇಶ್ಯಾಗಮನ ಮಾಡು ೧೦–೫೦
ಸೆಜ್ಜೆ = ಕರಡಿಗೆ ೨೧–೯
ಸೆಜ್ಜೆ = ಸೆರಗು, ವಸ್ತ್ರ ೪೨–೨೬
ಸೆಲದಿ = ಜೇಡಹುಳು ೧೨–೧೯
ಸೈಗೆಡೆ = ಬೀಳು ೧೯–೪
ಸೇರುವೆ = ಗುಂಪು ೨೫–೩೫
ಸೇರೆ = ಸೆರೆ ೧೧–೨೮
ಸೇಲೆ = ಸೆಲ್ಲೆ ೧೭–೬೦
ಸೊಡರು = ದೀಪ ೩–೬
ಸೊಬಗುವೆರು = ಚೆಲುವು ಪಡೆ ೧೦–೪೦
ಸೊಮ್ಮು = ಸೊತ್ತು ೩೦–೨೯
ಸೊರೆ = ಕುಂಬಳಕಾಯಿ, ಸೋರೆ ೫೯–೪೬
ಸೊಲ್ಲು = ಮಾತಾಡು, ಹೇಳು ೨–೪೦
ಸೋನೆ = ಮಳೆ ೨೨–೪೧
ಸೋಲ = ಅಪಜಯ ೪–೧೬
ಸೋವಾಸಿ = ಸಹವಾಸಿ ಬ್ರಾಹ್ಮಣ ೩೦–೧೨
ಸೋಹ = ಅವನು ನಾನು ೭–೫೭
ಸೋಹ = ಆತ್ಮಹಿತ ೩೬–೫೩
ಸೋಹು = ಎಬ್ಬಿಸು, ಓಡಿಸು ೧೯–೧೪
ಸೌರಭ್ಯ = ಸುಗಂಧ ೪–೩೪
ಸ್ತಂಭೇರಮ = ಆನೆ ೫೮–೩೨
ಸ್ತವನ ಭವನೆ = ಸ್ತುತಿಯ ನೆಲೆ ೧೧–೨೭
ಸ್ತಿಮಿತ = ತಡ ೭–೪೧
ಸ್ತೋಕ = ಸಮೂಹ ೪೫–೩೮
ಸ್ತೋಮ = ಸಮೂಹ ೧೮–೭೪
ಸ್ಥಾಣು = ಶಿವ ೩೬–೬೧
ಸ್ಥೌಲ್ಯ = ದೊಡ್ಡತನ ೪೨–೬೬
ಸ್ನಪನ = ಸ್ನಾನ ೧೭–೩೫
ಸ್ಮೇರ = ನಗೆ ೧–೩೮
ಸ್ರೋತ = ಪ್ರವಾಹ ೨–೪೭

ಹ

ಹಕ್ಕಟಿಕೆ = ಥಡಿ ೪೩–೫೧

CC-0. Jangamwadi Math Collection. Digitized by eGangotri

ಹಗರು = ಬಿದಿರು ೫೯–೪೮
ಹಗಿನ = ಜ್ಞಾನ ೪೨–೩೬
ಹಡಪ = ಚಂಚಿ ೧–೪೬
ಹಡಪಿಗ = ಚಂಚಿ ಹಿಡಿಯುವವ ೪೬–೩೫
ಹಡಿಕೆ = ಹೊಲಸು ೩೧–೫೪
ಹಣ್ಣು = ಉಂಟುಮಾಡು ೨೩–೬೪
ಹಣ್ಣು = ಹಮ್ಮು, ರಚಿಸು ೩೦–೧೭

ಹತ್ತೆ = ಸಮೂಪ ೨–೨೧
ಹದನ = ಎತ್ತುಗಡೆ, ರೀತಿ ೧–೫೫
ಹದನು = ರೀತಿ, ಬಗೆ ೧೩–೩೩
ಹದುಳ = ಸಂತೋಪ ೩–೩೯
ಹದುಳಿಗ = ಸುಖಿ ೨೨–೪೨
ಹನು = ಗದ್ದ ೯–೨೪
ಹಮ್ಮಯಿಸು = ಹಲುಬು ೧೨–೩
ಹಮ್ಮು = ಅಹಂಕಾರ ೪೧–೧೭
ಹರದ = ವ್ಯಾಪಾರಿ ೭–೯
ಹರಿ = ಸಿಂಹ ೫–೨೪
ಹರಿ = ಕೈಗೂಡು ೨೬–೨೨
ಹರಿ = ಕುದುರೆ ೫೮–೫೫
ಹರಿಗೆ = ಢಾಲು ೬೦–೨೫
ಹರಿಣಧರ = ಚಂದ್ರ ೫–೨೪
ಹರಿತರು = ಗಡಬಡಿಸಿ ಬರು ೫–೨೮
ಹರಿಬುಧವರ = ಹರಿಹರ ಕವಿ ೧–೧೧
ಹರೆಯ = ಪ್ರಾಯ ೨೩–೧೩
ಹರ್ತ = ಸಂಹರಿಸುವವ ೫೩–೪
ಹರ್ಮ್ಯ = ಸೌಧ, ಮಹಡಿ ೯–೧೬
ಹಸನ = ನಗೆ ೧೧–೩೭
ಹಸು = ಹಸಿವು ೨೩–೫೮
ಹಸುವು = ಹಸಿವು ೮–೯
ಹಳಚು = ಹೊಡೆ ೫೦–೭೦
ಹಳವಿಗೆ = ಧ್ವಜ ೫೨–೧೬
ಹಾಣಾಹಣಿ = ಹೊಡೆಬಡಿ ೨೦–೧೯
ಹಾಯ್ಕು = ಹೊಡೆ ೨೦–೪೩
ಹಾರು = ಅಪೇಕ್ಷಿಸು ೨–೮೦
ಹಾಸು = ಹಗ್ಗ ೫೩–೨೪

ಹಿಮಕ್ಷಯಿ = ಚಂದ್ರ ೫೨–೧೫
ಹಿಮಭಾನು = ಚಂದ್ರ ೫೬–೫೧
ಹಿಂಬೆರಕು = ಹಿಂಬರಿಕೆ ೬೦–೨೮
ಹಿರಣ್ಯ = ಬಂಗಾರ ೫೪–೨೧
ಹೀರಾವಳಿ = ಮುತ್ತಿನ ಸರ ೪–೩೭
ಹೀಲಿ = ನವಿಲುಗರಿ ೧೭–೨
ಹುಗುಳು = ಗುಳ್ಳೆ ೧೨–೨೦
ಹುಟ್ಟಿಗೆ = ಸೀರೆ ೧೦–೫೩
ಹುಡುಕು = ಕೈಯಾಡಿಸು ೪೯–೩
ಹುತವಹ = ಅಗ್ನಿ ೩೪–೪೪
ಹುದುಗು = ಸ್ನೇಹ, ಸಹವಾಸ ೫೭–೭೩

ಹುಯ್ಯಲು = ಮೊರೆ ೧೦–೪೬
ಹೂಣ್ = ಶಪಥ ತೊಡು ೧೬–೫
ಹೂರಿಗೆ = ಹೋಳಿಗೆ ೧೩–೧೧
ಹೂವಡಿಗ = ಹೂವಾಡಿಗ ೧೫–೧೩
ಹೂಹುಟ್ಟು = (ಕಣ್ಣಿಗೆ) ಹೂ ಬೀಳು ೧೭–೬೬
ಹೆಗ್ಗಾವಲಿ = ದೊಡ್ಡ ಬಾಳೆಣಿ, ಕಡಾವಿಗೆ ೪೪–೨೮
ಹೆಟ್ಟಿಗೆ = ಹೆಂಡತಿ ೧೦–೫೩
ಹೆಡಗೆ = ದೊಡ್ಡ ಬುಟ್ಟಿ ೨೨–೭
ಹೆಂದು = ಕಡಿಮೆಯಾಗು ೧೮–೫೧
ಹೆಬ್ಬಟಿ = ದೊಡ್ಡ ಹಲಿಗೆ ೫೫–೧೪
ಹೆಜಿಹಿಂಗು = ನಪ್ಪವಾಗು ೩೨–೮
ಹೆಜಿ ನೂಂಕು = ಹಿಂದಕ್ಕೆ ನೂಕು ೨೦–೫೦
ಹೇಗ = ಮೂರ್ಖ, ಗಾಂಪ ೪೮–೧೨
ಹೇರೊಡಲು = ದೊಡ್ಡ ಹೊಟ್ಟೆ ೫೦–೫೪
ಹೇಱು = ಮೊಟ್ಟೆ, ತುಂಬಿದ ಚೀಲ ೮–೨೨
ಹೈಮವತಿ = ಪಾರ್ವತಿ ೭–೩೬
ಹೊಂಗು = ಉಬ್ಬು ೭–೪೪
ಹೊಡಮಗುಚು = ಮಗ್ಗುಲು ಹೊರಳು ೪೫–೨೨
ಹೊತ್ತಟು = ಹೊತ್ತಾರೆ, ನಸುಕು ೨೮–೯

CC-0. Jangamwadi Math Collection. Digitized by eGangotri

ಹೊದ್ದು = ಹೊಂದು ೩–೨೩
ಹೊನ್ = ಹಳೆಯ ಕಾಲದ ನಾಣ್ಯ ೨೨–೩೫
ಹೊನಲು = ಪ್ರವಾಹ ೧೯–೨೨
ಹೊಂತಕಾಱಿ = ಡಾಂಭಿಕ ೩೬–೧೯
ಹೊನ್ನುಬಾಕಿ = ಧನಾಸೆಯವಳು ೩೯–೪೫
ಹೊಮ್ಮಾಡ = ಸುವರ್ಣವಿಮಾನ ೨೬–೬
ಹೊಯಿಸು = ಕಂಡರಣೆ ಮಾಡಿಸು, ಕೆತ್ತಿಸು ೪೮–೫೬
ಹೊರೆ = ಸಮೀಪ ೧–೪೪
ಹೊರೆ = ಪೊರೆ, ಪದರು ೩೪–೩೮
ಹೊರೆ = ಗೀರು, ಚಿವುರುಗಾಯ ೩೭–೪೭
ಹೊಱಿಗಿಕ್ಕು = ಬಹಿಷ್ಕರಿಸು ೩–೪೮
ಹೊಱಿಬೆನ್ = ಗೂನು ಹಾಯ್ದ ಬೆನ್ನು ೪೯–೩೧
ಹೊಲ್ಲಹ = ಆಯುಃಕ್ಷ, ಕೆಟ್ಟ ೧೭–೪೦
ಹೊಸೆ = ತಿಕ್ಕು ೧೩–೧೭
ಹೊಳಚು = ಕೆತ್ತು, ಸವರು ೪೨–೨೫
ಹೊಳಲು = ಪಟ್ಟಣ ೩೯–೩೬
ಹೋಳಿದು = ಹೋಳ್ದು, ಹೋಳಾಗಿ ೪೨–೭೧

CC-0. Jangamwadi Math Collection. Digitized by eGangotri

ಬಸವ ಪುರಾಣದಲ್ಲಿ ಬರುವ

ವಿಶಿಷ್ಟಪದಗಳ ಸೂಚಿ

ಅಂತಃಕರಣ (ಸಂ. ೯–೩೮):

ಚಿತ್ತ, ಬುದ್ಧಿ, ಅಹಂಕಾರ, ಮನ ಇವು ನಾಲ್ಕು ಅಂತಃಕರಣಗಳು. ವೀರಶೈವ ಪರಿಭಾಷೆಯಲ್ಲಿ ಜ್ಞಾನ, ಭಾವ ಇವೆರಡನ್ನು ಸೇರಿಸಿ ಅಂತಃಕರಣಗಳು ಆರು ಎಂದು ಹೇಳಲಾಗಿದೆ.

ಅರುವತ್ತುಮೂವರು (ಸಂ. ೯–೮; ಸಂ. ೫೨–೩೮):

ತಮಿಳುನಾಡಿನಲ್ಲಿ ಹಿಂದಕ್ಕೆ ೬೩ ಶಿವಭಕ್ತರು ಜನಿಸಿದರು. ಇವರ ವೃತ್ತಾಂತವು ಶೇಕ್ಕಿಳಾರ್ ಕವಿಯ ತಮಿಳು ಪೆರಿಯಪುರಾಣದಲ್ಲಿ ಬರುತ್ತದೆ. ಇವರು ವೀರಶೈವರಿಗೆ ಪೂಜ್ಯರು. ಆದ್ದರಿಂದ ಹಂಪೆಯ ಹರೀಶ್ವರ ಕವಿಯಿಂದ ಮೊದಲುಮಾಡಿ ಅನೇಕರು ಇವರ ಕಥೆಗಳನ್ನು ಹೇಳಿದ್ದಾರೆ. ತ್ರಿಪಷ್ಟಿ ಪುರಾತನ ಚಾರಿತ್ರವನ್ನು ಬರೆದ ಸುರಂಗ ಕವಿಯು ಹೆಸರಿಸಿರುವ ಶಿವಭಕ್ತರಿವರು:

ತಿರುನೀಲಕಂಠ, ಇಹಪ್ಪಗೆಯಾಂಡ (ಸೇದಿರಾಜ), ಇಳೆಯಾಂಡಗುಡಿಮಾರ, ಸೇದಿರಾಜ, ಮೆರೆಮಿಂಡ, ಅಮರನೀತಿ, ಇರಿಭಕ್ತ, ಪಣಾಡಿನಾಥ, ಕಣ್ಣಪ್ಪ, ಕೊಂಗುಲಿಯ ಕಲಿಯಾಂಡ, ಮಾನಕಂಜರ, ಅರಿವಾಳ್ತಾಂಡ, ಆನೈನಾರ, ವಲಫಾಂಡಮೂರ್ತಿ, ಮುರುಘರ್, ರುದ್ರಪಶುಪತಿ, ತಿರುನಾಳ್ಳೀವರ್, ತಿರುಕುರುಂಪತೊಂಡ, ತಂಡೇಶ (ಚಂಡೇಶ), ವಾಗೀಶ, ಕುಲಿಚ್ಚರಿಯರ್, ಪೆರುಮಳಲೆಯ ಕುರುಂಬರ್, ಕಾರಿಕಾಲಮ್ಮೈ, ಆಪ್ಪೂತಿ ಅಡಿಗಳ್, ತಿರುನೀಲನಕ್ಕರು, ನಮಿನಂದಿ, ಪಿಳ್ಳೈನೈನಾರ್ (ತಿರುಜ್ಞಾನಸಂಬಂಧರ್), ಕಲಿಕಾಮ, ತಿರುಮೂಲರ್, ನಾಟ್ಯಮಹಿತಂಡಿ, ಅಚ್ಯುತ (ಮೂರ್ಕನಾಯನಾರ್), ಸೋಮಾಸಿಮಾರ, ಸಾಂಖ್ಯನಾರ, ಚಿರುಪ್ಪುಲಿಯಾಂಡ, ಚಿರುತೊಂಡ (ಸಿರಿಯಾಳ), ಚೇರಮ, ಗಣನಾಥ (ಕಲಿಗಣನಾಥ), ವೇಳ್ಳೂತ, ಪಗಲ್ಪೋಳ, ನರಸಿಂಗಮೊನೆಯರ್, ಅತಿಭಕ್ತ, ಕಲಿಕಂಬ, ಕಲಿಯನಾಯನಾರ (ಕೊಂಗುಲಿಯ ಕಲಿಯರು), ಕಳಚಿತ್ತಿಯಾಂಡ (ಕಲಿಚಿಟ್ಟ), ಆಯ್ಕುಡಿ, ಕಣಂಬುಲ್ಲನಂಬಿ, ಕಡವೂರ ಕಾಲಿ, ಸೌಂದರಪಾಂಡ್ಯ (ಕೂನಪಾಂಡ್ಯ, ನೆಡುಮಾರನಾಯನಾರ್), ವಾಹಿಲ್ಯ (ಓಹಿಲ), ಮೊನೆಯಾಂಡ, ಕುಲಚುಂಗರ್ (ಕಳಚಿಂಗಪೆರುಮಾಳಿ), ಆಡವಫೆಯಪೆರುಮಾಳಿ (ಎಡಗಣೆಯ ಪೆರುಮಾಳಿ, ನಿಡುಗುಡಿಯ ಪೆರ್ಮಾಡಿ), ಚಿರುತೊಣೆಯಾಂಡ, ಪಗಲ್ತೊಣೆಯಾಂಡ, ಕೊಲ್ಪುಲಿಯಾಂಡ, ಊರ್ಫಸಿಲೆಯಾಂಡ (ಪೂಸಲಾರ್ ಪೂಸಲೆಯಾಂಡ, ಪುಶಲನಾಯನಾರ್), ಮಂಗಾಯಕ್ಕರಸಿ (ಪಾಂಡ್ಯಮಹಾದೇವಿ), ನೈಶಭಕ್ತ, (ನೇಶನಾಯನಾರ್, ನೈಸವ), ಕಳಚಿಂಗುಪೆರುಮಾಳಿ, ತಿರುನೀಲಕಂಠಪಾಣರು, ಜಡೆಯನಾಯನಾರ್, ಯಸ್ಯ ಜ್ಞಾನದೇವಿಯರು, ಸೌಂದರನಂಬಿ (ನಂಬಿಯಣ್ಣ).

CC-0. Jangamwadi Math Collection. Digitized by eGangotri

ಅಷ್ಟದಿಶಾಧಿನಾಯಕರು (ಅಷ್ಟದಿಕ್ಪಾಲಕರು) (ಸಂ. ೫೭–೬೧):

ಪೂರ್ವ ಮೊದಲಾದ ಎಂಟು ದಿಕ್ಕುಗಳಿಗೆ ಒಡೆಯರು:

ಇಂದ್ರ, ಅಗ್ನಿ, ಯಮ, ನೈಋತ, ವರುಣ, ವಾಯು, ಕುಬೇರ, ಈಶ್ವರ ಇವರು ಅಷ್ಟ ದಿಕ್ಪಾಲಕರು.

ಅಷ್ಟಮದ (ಸಂ. ೨೨–೪೨; ಸಂ. ೫೯–೬೫):

ಕರಣಹಸಿಗೆಯಲ್ಲಿ ಆಂತರಂಗದ ಅಷ್ಟಮದ, ಬಹಿರಂಗದ ಅಷ್ಟಮದ ಎಂದು ಎರಡು ಪ್ರಕಾರದ ಮದಗಳನ್ನು ಹೇಳಲಾಗಿದೆ.

ಆಂತರಂಗದ ಅಷ್ಟ ಮದಗಳು: ಸಂಸ್ಥಿತ, ತೃಣೀಕೃತ, ವರ್ತಿನಿ, ಕ್ರೋಧಿನಿ, ಮೋಹಿನಿ, ಅತಿಚಾರಿಣಿ, ಗಂಧಚಾರಿಣಿ, ವಾಸಿನಿ ಎಂಬವು.

ಬಹಿರಂಗದ ಅಷ್ಟ ಮದಗಳು: ಕುಲ, ಛಲ, ಧನ, ರೂಪ, ಯೌವನ, ವಿದ್ಯೆ, ರಾಜ್ಯ, ತಪ ಎಂಬವು.

ಬೇರೆಡೆಗೆ ಅನ್ನ, ಅರ್ಥ, ಯೌವನ, ಸ್ತ್ರೀ, ವಿದ್ಯೆ, ಕುಲ, ರೂಪ ಉದ್ಯೋಗ ಇವು ಎಂಟು ಮದಗಳೆಂದು ಹೇಳಲಾಗಿದೆ.

ಅಷ್ಟ ಮೂರ್ತಿಗಳು (ಮೂರ್ತಿಗಳೆಂಟು) (ಸಂ. ೮–೫೦):

ಪೃಥ್ವಿ, ಅಪ್ಪು, ಸಲಿಲ, ಪಾವಕ, ಪವನ, ಅಂಬರ, ರವಿ, ಶಶಿ, ಆತ್ಮ – ಇವು ಶಿವನ ಅಷ್ಟ ತನುಗಳು.

ಅಷ್ಟ ವಸುಗಳು (ಸಂ. ೯–೩೧):

ದೇವತೆಗಳ ಒಂದು ವರ್ಗದ ಹೆಸರು. ಆಪ ಇಲ್ಲವೆ ಆಹ, ಧ್ರುವ, ಸೋಮ, ಧರ ಅಥವಾ ಧವ, ಅನಿಲ, ಅನಲ, ಪ್ರತ್ಯೂಷ ಮತ್ತು ಪ್ರಭಾಸ – ಇವು ಅಷ್ಟ ವಸುಗಳ ಹೆಸರು.

ಅಷ್ಟವಿಧಪೂಜೆ (ಸಂ. ೧೦–೧):

ಜಲ, ಗಂಧ, ಅಕ್ಷತೆ, ಬಿಲ್ವಪತ್ರೆ ಅಥವಾ ತುಲಸಿದಳ, ಧೂಪ, ದೀಪ, ನೈವೇದ್ಯ, ತಾಂಬೂಲ ಇವು ಎಂಟು ದ್ರವ್ಯಗಳನ್ನು ಉಪಯೋಗಿಸಿ ಮಾಡುವ ಮೂರ್ತಿಪೂಜೆ.
ಹೋಲಿಸಿರಿ: "ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಆಯ್ಯಾ?" ಮಹಾದೇವಿಯಕ್ಕ.

ಅಷ್ಟವಿಧಭಕ್ತಿ (ಸಂ. ೩೨–೩೩):

ಅರ್ಚನ, ವಂದನ, ಸ್ಮರಣ, ಪಾದಸೇವನ, ಸ್ತವನ, ಪ್ರದಕ್ಷಿಣ, ಸಖ್ಯ, ಆತ್ಮನಿವೇದನ ಅಥವಾ ಆತ್ಮಾರ್ಪಣ – ಈ ಎಂಟು ವಿಧವಾದ ಕ್ರಿಯೆಗಳಿಂದ ವ್ಯಕ್ತಗೊಳಿಸುವ ಭಕ್ತಿಭಾವನೆ.

ಅಷ್ಟಶೋಭೆ (ಸಂ. ೫೨–೨೩):

ಸಮ್ಮಾರ್ಜನ, ನೀರಿನ ಚಳೆಯ, ರಂಗವೋಲೆ, ತಳಿರು–ತೋರಣ, ಧ್ವಜ ಮೊದಲಾದ ಎಂಟು ಪ್ರಕಾರದ ಶೋಭೆ.

CC-0. Jangamwadi Math Collection. Digitized by eGangotri

ಅಷ್ಟಾಂಗ:

ಪಾದ, ಮೊಣಕಾಲು, ಕರ, ಉರ (ಎದೆ), ಶಿರ (ಹಣೆ), ದೃಷ್ಟಿ (ಕಣ್ಣು), ವಚನ ಮತ್ತು ಬುದ್ಧಿ ಇವು ಅಷ್ಟಾಂಗಗಳು. ಇವನ್ನು ನೆಲಕ್ಕೂರಿ ಮಾಡುವ ವಂದನೆಗೆ ಸಾಷ್ಟಾಂಗ ನಮಸ್ಕಾರ ಎಂದು ಹೆಸರು.

ಎರಡು ಕಾಲು, ಕೈ, ಎದೆ, ಕುತ್ತಿಗೆ, ಹಣೆ ಮತ್ತು ಬೆನ್ನಿನ ಮಧ್ಯಭಾಗ ಇವು ಸಹ ಅಷ್ಟಾಂಗಗಳೆಂದು ಹೇಳುತ್ತಾರೆ.

ಅಷ್ಟಾಂಗಭಕ್ತಿ (ಸಂ. ೬–೩೦):

ಎಂಟು ವಿಧವಾದ ಭಕ್ತಿಕ್ರಿಯೆ. ಮೇಲೆ 'ಅಷ್ಟವಿಧ ಭಕ್ತಿ' ನೋಡಿರಿ.

ಅಷ್ಟಾಂಗಯೋಗ (ಸಂ. ೬–೩೦; ಸಂ. ೩೪–೨೦):

ಯೋಗಸಾಧನೆಯ ಅಥವಾ ಧ್ಯಾನಾನುಸಂಧಾನದ ಎಂಟು ಪ್ರಕಾರಗಳು. ಯಮ, ನಿಯಮ, ಆಸನ, ಪ್ರಾಣಾಯಾಮ, ಧ್ಯಾನ, ಧಾರಣ, ಸಮಾಧಿ – ಇವಕ್ಕೆ ಅಷ್ಟಾಂಗ ಯೋಗ ಎಂದು ಹೆಸರು. ಇವುಗಳಲ್ಲಿ ಮೊದಲಿನ ಐದಕ್ಕೆ ಪೂರ್ವಯೋಗವೆಂದೂ ಕೊನೆಯ ಮೂರಕ್ಕೆ ಉತ್ತರ ಯೋಗವೆಂದೂ ಹೆಸರು.

ಆಸನಗಳು (ಸಂ. ೩–೫, ೩೯):

ಯೋಗಸಾಧನೆಗೆ ಅನುಕೂಲಿಸುವ ಆಸನಗಳು ೮೪ ವಿಧವಾಗಿವೆ ಎಂದು ಯೋಗ ಶಾಸ್ತ್ರವು ತಿಳಿಸುತ್ತದೆ. ಇವುಗಳಲ್ಲಿ ಸಿದ್ಧಾಸನ, ಪದ್ಮಾಸನ ಸಿದ್ಧಪದ್ಮಾಸನ, ಇವು ಧ್ಯಾನಕ್ಕೆ ಹೆಚ್ಚು ಅನುಕೂಲವಾದವುಗಳೆಂದು ಹೇಳುತ್ತಾರೆ.

ಇಪ್ಪತ್ತೇಳು ನಕ್ಷತ್ರಗಳು (ಸಂ. ೧–೪೨):

ಅಶ್ವಿನೀ, ಭರಣೀ, ಕೃತ್ತಿಕಾ, ರೋಹಿಣೀ, ಮೃಗಶಿರಾ, ಆರ್ದ್ರಾ, ಪುನರ್ವಸು, ಪುಷ್ಯಾ, ಆಶ್ಲೇಷಾ, ಮಘಾ, ಹುಬ್ಬಾ, ಉತ್ತರಾ, ಹಸ್ತಾ, ಚಿತ್ತಾ, ಸ್ವಾತೀ, ವಿಶಾಖಾ, ಅನುರಾಧಾ, ಜ್ಯೇಷ್ಠಾ, ಮೂಲಾ, ಪೂರ್ವಾಷಾಢಾ, ಉತ್ತರಾಷಾಢಾ, ಶ್ರವಣಾ, ಧನಿಷ್ಠಾ, ಶತತಾರಾ, ಪೂರ್ವಭಾದ್ರಪದಾ, ಉತ್ತರ ಭಾದ್ರಪದಾ, ರೇವತೀ – ಇವು ೨೭ ನಕ್ಷತ್ರಗಳು. ಇವು ಚಂದ್ರನ ಹೆಂಡಂದಿರೆಂದೂ, ದಕ್ಷಬ್ರಹ್ಮನಿಗೆ ಮಕ್ಕಳೆಂದೂ ಹೇಳಲಾಗುತ್ತದೆ.

ಈಷಣತ್ರಯ (ಸಂ. ೨೭–೧; ಸಂ. ೩೯–೬೫):

ಈಷಣ ಎಂದರೆ ಬಯಕೆ, ಆಶೆ. ಇಂತಹ ಬಯಕೆಗಳು ಮೂರು ವಿಧವಾಗಿವೆ. ದಾರೇಷಣ, ಪುತ್ರೇಷಣ, ಅರ್ಥೇಷಣ (ವಿತ್ತೇಷಣ) ಎಂಬವು ಈ ಮೂರು ಬಯಕೆಗಳು.

ಉಭಯಕರ್ಮ (ಸಂ. ೬–೩೪; ಸಂ. ೭–೧):

ಇಹ–ಪರ ಲೋಕಗಳಿಗೆ ಸಂಬಂಧಪಟ್ಟ ಕರ್ಮಗಳು.

CC-0. Jangamwadi Math Collection. Digitized by eGangotri

ಉಭಯಪ್ರಸಾದ (ಸಂ. ೭–೨೬):

ಲಿಂಗಪ್ರಸಾದ ಮತ್ತು ಜಂಗಮಪ್ರಸಾದಗಳು.

ಉಭಯಸಂಸ್ಕಾರ (ಸಂ. ೩೮–೧೪):

ಆಂತರಂಗ ಮತ್ತು ಬಹಿರಂಗ ಶುದ್ಧಿಗಳು.

ಏಕಾದಶರುದ್ರರು (ಸಂ. ೧–೪೨; ಸಂ. ೯–೩೧):

ಮಹೇಶ್ವರನ ಮಾನಸೋದ್ಭವರಾದ ವೀರಭದ್ರ, ಶಂಭು, ಗಿರೀಶ, ಅಜ, ಏಕಪಾತ್ತು, ಅಹಿರ್ಬುಧ್ನ್ಯ, ಪಿನಾಕಿ, ಸ್ಥಾಣು, ಪಶುಪತಿ, ಭವ, ತ್ವಿಷಾಂಪತಿ ಎಂಬವರು ಏಕಾದಶ ರುದ್ರರು. ಇವರು ಶಿವನ ಕಡಿಮೆ ತರಗತಿಯ ಸಾಕಾರ ಸ್ವರೂಪರು.

ಕುಲಶೈಲಂಗಳು (ಸಂ ೧೦–೧೨; ಸಂ. ೧೪–೩೦):

ಮಹೇಂದ್ರಪರ್ವತ, ಮಲಯಪರ್ವತ, ಸಹ್ಯಾದ್ರಿ, ಶುಕ್ತಿಮಾನ್‌ಪರ್ವತ, ಋಕ್ಷ ಪರ್ವತ, ವಿಂಧ್ಯಾದ್ರಿ, ಪಾರಿಯಾತ್ರ – ಇವು ಸಪ್ತ ಕುಲಪರ್ವತಗಳು.

ಗುಣತ್ರಯ (ಸಂ. ೫೫–೬೨):

ಸತ್ವ, ರಜಸ್, ತಮಸ್ – ಇವು ಮೂರು ಗುಣಗಳು.

ಚತುರ್ದಶಭುವನ, ಈರೇಳುಲೋಕ (ಸಂ. ೨೧–೪೧, ೫೪; ಸಂ. ೫೧–೪೫):

ಪೃಥ್ವಿಯಿಂದ ಮೇಲೆ ಏಳು ಲೋಕಗಳೂ ಕೆಳಗೆ ಏಳು ಲೋಕಗಳೂ ಇರುವವೆಂದು ಹೇಳುವರು. ಇವಕ್ಕೆ ಊರ್ಧ್ವಲೋಕ, ಅಧೋಲೋಕ ಎಂದು ಹೆಸರು.

ಊರ್ಧ್ವಲೋಕಗಳು: ಭೂರ್ಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನರ್ಲೋಕ, ತಪರ್ಲೋಕ ಮತ್ತು ಸತ್ಯಲೋಕ.

ಅಧೋಲೋಕಗಳು: ಅತಲ, ವಿತಲ, ಸುತಲ, ರಸಾತಲ, ತಲಾತಲ, ಮಹಾತಲ ಮತ್ತು ಪಾತಾಲ.

ಚತುರ್ವಿಧಮುಕ್ತಿ (ಸಂ. ೧–೩೦, ೩೧; ಸಂ. ೨೩–೧೮):

ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ ಇವು ನಾಲ್ಕು ತೆರನಾದ ಮುಕ್ತಿಗಳು.

ಚತುರ್ವೇದ (ಸಂ. ೧–೪೭; ಸಂ. ೫೪–೧೬):

ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ – ಇವು ನಾಲ್ಕು ವೇದಗಳು.

CC-0. Jangamwadi Math Collection. Digitized by eGangotri

ತೇರಸರು, ಪದಿಮೂವರು (ಸಂ. ೪೭–೧೮; ಸಂ. ೫೦–೭೦, ೭೪ ಸಂ. ೫೩–೭೩):

ಬಸವರಾಜ, ಸಂಗಯ್ಯ, ಬೊಮ್ಮಿಸೆಟ್ಟಿ, ಸಾತ್ವಿಕಸಂಗಯ್ಯ, ಮೋಳಿಗೆ ನಿಜಸಂಗಮ್ಮೆ, ದೇವರಸ, ಕನ್ನಮರಸಿ, ಪಡಿಹಾರಿ ಬಸವಯ್ಯ, ಹೂವಿನ ಬಾಚಿದೇವಯ್ಯ, ದೇವಯ್ಯ, ಓಹಿಲ ದೇವಯ್ಯ, ಬೊಪ್ಪದೇವ, ಕಾಮಲದೇವಿ – ಈ ಹದಿಮೂರು ಜನರು ಕಲ್ಯಾಣ ಪಟ್ಟಣದಲ್ಲಿದ್ದ ತೇರಸ ಗಣಂಗಳು ಎಂದು ಪಾಲ್ಕುರಿಕೆ ಸೋಮನಾಥನು ಹೇಳುತ್ತಾನೆ.

ತ್ರಿನಯನ, ಲೋಚನತ್ರಯ (ಸಂ. ೯–೨೬; ಸಂ. ೪೯–೫೧):

ಸೂರ್ಯ, ಚಂದ್ರ, ಅಗ್ನಿ ನೇತ್ರಗಳು. ಇವು ಶಿವನಿಗಿರುವ ಮುಕ್ಕಣ್ಣುಗಳು.

ತ್ರಿಪುರ, ಪುರತ್ರಯ (ಸಂ. ೮–೫೦; ಸಂ. ೫೩–೫೪) :

ಶಿವನ ೨೫ ಲೀಲೆಗಳಲ್ಲಿ ಒಂದಾದ ತ್ರಿಪುರದಹನಲೀಲೆ ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಇವರು ಬೆಳ್ಳಿಯ, ಬಂಗಾರದ, ಕಬ್ಬಿಣದ ಮೂರು ಪಟ್ಟಣ ಗಳನ್ನು ರಚಿಸಿಕೊಂಡಿದ್ದರು ಎಂದು ವರ್ಣಿತವಾಗಿದೆ. ಸತ್ವ, ರಜ, ತಮ ಗುಣಗಳಿಗೂ ಹಾಗೂ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಿಗೂ ಒಮ್ಮೊಮ್ಮೆ ತ್ರಿಪುರ ಎಂದು ಹೇಳುವುದುಂಟು.

ತ್ರಿಭುವನ, ಲೋಕತ್ರಯ, ಮೂಜಗ, ಜಗತ್ತ್ರಯ, ತ್ರಿಜಗ (ಸಂ. ೩–೭: ೫೯–೬೨; ೭–೧೯; ೮–೨೯; ೯–೪೩):

ಸ್ವರ್ಗ, ಪೃಥ್ವಿ (ಮರ್ತ್ಯ), ಪಾತಾಳ ಲೋಕಗಳು. ಮೇಲೆ "ಚತುರ್ದಶಭುವನ" ಎಂಬುದನ್ನು ಹೋಲಿಸಿರಿ.

ತ್ರಿಮೂರ್ತಿಗಳು (ಸಂ. ೫೩–೭೯):

ಬ್ರಹ್ಮ, ವಿಷ್ಣು ಮತ್ತು ರುದ್ರ (ಮಹೇಶ್ವರ) ಇವರಿಗೆ ತ್ರಿಮೂರ್ತಿಗಳೆಂದು ಹೆಸರು.

ತ್ರಿವಿಧ (ಸಂ. ೩೮–೨೦):

ವೀರಶೈವ ಪರಿಭಾಷೆಯಲ್ಲಿ 'ತ್ರಿವಿಧ' ಶಬ್ದಕ್ಕೆ ವ್ಯಾಪಕವಾದ ಅರ್ಥವುಂಟು. ಸಂದರ್ಭಾನುಸಾರವಾಗಿ ಈ ಶಬ್ದಕ್ಕೆ ಕೆಳಗಿನಂತೆ ಅರ್ಥವಾಗುತ್ತದೆ:

ಗುರು, ಲಿಂಗ, ಜಂಗಮ (ಪೂಜ್ಯವಸ್ತು)	ಇಷ್ಟ, ಪ್ರಾಣ, ಭಾವ (ಲಿಂಗ)
ತನು, ಮನ, ಧನ (ದ್ರವ್ಯ)	ತ್ಯಾಗ, ಭೋಗ, ಯೋಗ (ಅಂಗ)
ಸ್ಥೂಲ, ಸೂಕ್ಷ್ಮ, ಕಾರಣ (ತನು)	ಜಾಗ್ರ, ಸ್ವಪ್ನ, ಸುಷುಪ್ತಿ (ಅವಸ್ಥೆ)
ಹೊನ್ನು, ಹೆಣ್ಣು, ಮಣ್ಣು (ಪದಾರ್ಥ)	ಜೀವಾತ್ಮ, ಅಂತರಾತ್ಮ, ಪರಮಾತ್ಮ (ಆತ್ಮ)
ಅರ್ಥ, ಪ್ರಾಣ, ಅಭಿಮಾನ	ವಿಶ್ವ, ತೈಜಸ, ಪ್ರಾಜ್ಞ (ಜೀವ)
ತನು, ಪ್ರಾಣ, ಭಾವ	ಭೂತ, ವರ್ತಮಾನ, ಭವಿಷ್ಯತ್ (ಕಾಲ)
ಕಾಯ, ಜೀವ, ಪ್ರಾಣ	ಉದಯ, ಮಧ್ಯಾಹ್ನ, ಅಸ್ತಮಾನ (ಸಮಯ)
ಮನ, ಪವನ, ಬಿಂದು	ಜ್ಞಾನ, ಕರ್ಮ, ಭಕ್ತಿ (ಸಾಧನೆ).

CC-0. Jangamwadi Math Collection. Digitized by eGangotri

ತ್ರಿವಿಧಪ್ರಸಾದ (ಸಂ. ೪–೬೬ ಸಂ. ೯–೪೫):

ಶುದ್ಧ, ಸಿದ್ಧ ಮತ್ತು ಪ್ರಸಿದ್ಧ ಎಂಬ ಪ್ರಸಾದಗಳು

ತ್ರಿವಿಧಭಕ್ತಿ (ಸಂ. ೪೮–೩೫):

ಗುರುಭಕ್ತಿ, ಲಿಂಗಭಕ್ತಿ ಮತ್ತು ಜಂಗಮಭಕ್ತಿ ಎಂಬ ಮೂರು ತೆರನಾದ ಭಕ್ತಿಗಳು.

ತ್ರಿವಿಧಾರ್ಪಣ (ಸಂ. ೪೨–೫):

ಕಾಯಾರ್ಪಣ, ಕರಣಾರ್ಪಣ ಮತ್ತು ಭಾವಾರ್ಪಣ ಎಂಬ ಮೂರು ವಿಧವಾದ ಆರ್ಪಣಗಳು.

ತ್ರಿವಿಧೋದಕ (ಸಂ. ೧೭–೪೯; ಸಂ. ೪೬–೧೭):

ಗುರುಪಾದೋದಕ, ಲಿಂಗಪಾದೋದಕ (ಲಿಂಗೋದಕ) ಮತ್ತು ಜಂಗಮಪಾದೋದಕ ಎಂಬ ಮೂರು ಪ್ರಕಾರದ ಪವಿತ್ರ ಉದಕ.

ತ್ರಿಸಂಧ್ಯಾ, ಮೂರವಸರ: (ಸಂ. ೬–೫೧; ಸಂ. ೩೨–೧೨; ಸಂ. ೪೪–೧೦)

ಸೂರ್ಯೋದಯ, ಸೂರ್ಯಾಸ್ತ ಮಧ್ಯಾಹ್ನ ಇಲ್ಲವೆ ಮಧ್ಯರಾತ್ರಿ ಇವಕ್ಕೆ ತ್ರಿಸಂಧ್ಯಾ ಎಂದು ಹೆಸರು.

ದಶಾಂಗ (ಸಂ. ೩೪–೧೪; ಸಂ. ೪೦–೨೨):

ಧೂಪದಲ್ಲಿ ಬೆರೆಸಿರುವ ಗುಗ್ಗುಳ, ಹಾಲುಮಡ್ಡಿ, ಲಾವಂಚ, ಹಗಿನ, ತುಪ್ಪ, ಜೇನುತುಪ್ಪ, ಮೊದಲಾದ ಹತ್ತು ಸುವಾಸಿಕ ದ್ರವ್ಯಗಳು.

ದಶಾವಸ್ಥೆಗಳು (ಸಂ. ೩೪–೩೨, ೩೪, ೩೫):

ವಿರಹಿಗಳ ದಶಾವಸ್ಥೆಗಳು – 'ದಶರೂಪಕ'ವೆಂಬ ಗ್ರಂಥದಲ್ಲಿ ವಿರಹಿಗಳು ಬಳಲುವ ಅವಸ್ಥಾದಶಕವನು ಕುರಿತು ಹೀಗೆ ಹೇಳಲಾಗಿದೆ:

ದೃಙ್‌ಮನಃ ಸಂಗಸಂಕಲ್ಪಾ ಜಾಗರಃ ಕೃಶತಾ ರತಿಃ ।
ಹ್ರೀ ತ್ಯಾಗೋನ್ಮಾದಮೂರ್ಛತಾ ಇತ್ಯನಂಗದಶಾ ದಶ ॥

'ಚೆನ್ನಬಸವಪುರಾಣ' (ಸಂ. ೧೯–೩೧)ದಲ್ಲಿ ಈ ದಶಾವಸ್ಥೆಗಳ ವಿವರವನ್ನು ಹೀಗೆ ನಿರೂಪಿಸಲಾಗಿದೆ:

(೧) ಬಿಡದೆ ನಿಟ್ಟಿಸುವ (೨) ಕಂಡೊಡನೆ ಚಿಂತಿಸುವ (೩) ನೊಂದು ಅಡಿಗಡಿಗೆ ಸುಯ್ವ (೪) ಜ್ವರವಿಡಿದು ತಾಪಿಸುವ (೫) ಸೆಕೆಗೆ ಒಡಲನುರೆ ಕಳಲ್ವ (೬) ಭುಕ್ತಿಗಳನುಳಿದು ವಿಕಳಿಸುವ (೭) ನುಡಿಯಡಗಿ ಸುಮ್ಮನಿರ್ಪ (೮) ಕಡು ಸೊರಗಿ ಮೂರ್ಛಿಸುವ (೯) ಸುಧೆಯುಂಡುದರಿಂ ಉಸುರ್ ಮಿಡುಕುತಿಹ (೧೦) ಗಳಗತಪ್ರಾಣೆಯಾಗಿ ಬಾಯ್ಗುಳಂ ಬಿಡುವ– ವಿರಹಿಗಳ ಈ ಹತ್ತು ಪ್ರಕಾರದ ಅವಸ್ಥೆಗಳಿಗೆ ದಶಾವಸ್ಥೆ ಎಂದು ಹೆಸರು.

CC-0. Jangamwadi Math Collection. Digitized by eGangotri

ಅಭಿಲಾಷೆ, ಚಿಂತೆ, ಸಂಸ್ಮೃತಿ, ವಿಭುಗುಣನುತಿ, ಸಂತಾಪನ, ಕ್ರಿಯಾದ್ವೇಷ, ವಿಕಳ, ಮೌನ, ಮೂರ್ಛೆ, ಮರಣ ಇವು ದಶ ಕಾಮಾವಸ್ಥೆಗಳು ಎಂದು 'ವಿವೇಕಚಿಂತಾಮಣಿ' ಯಲ್ಲಿ ಹೇಳಲಾಗಿದೆ.

ಭಕ್ತಿಸತಿಯ ವಿಕಳಾವಸ್ಥೆಯಲ್ಲಿಯೂ ಈ ದಶಾವಸ್ಥೆಗಳು ರೂಪಾಂತರ ಹೊಂದಿ ಪರವಸ್ತುವಿನಲ್ಲಿ ವೈಮರೆವ ಸ್ಥಿತಿಯನ್ನು ವ್ಯಕ್ತಗೊಳಿಸುತ್ತವೆ. ಇದರ ಸ್ವರೂಪವನ್ನು ಸಂ. ೩೪ ಪದ್ಯ ೩೪, ೩೫ ರಲ್ಲಿ ಕಾಣಬಹುದು.

ದ್ವಾದಶಾದಿತ್ಯರು (ಸಂ. ೧–೪೨; ಸಂ. ೯–೩೧):

ಧಾತೃ, ಮಿತ್ರ, ಆರ್ಯಮಾನ್, ರುದ್ರ, ವರುಣ, ಸೂರ್ಯ, ಭಗ, ವಿವಸ್ವಾನ್, ಪೂಷನ್, ಸವಿತೃ, ತ್ವಷ್ಟೃ, ವಿಷ್ಣು ಇವರು ದ್ವಾದಶ ಆದಿತ್ಯರು. ವರ್ಷದ ಹನ್ನೆರಡು ತಿಂಗಳಲ್ಲಿ ಇವರಲ್ಲಿ ಒಬ್ಬೊಬ್ಬರೂ ಸೂರ್ಯನನ್ನು ಪ್ರತಿನಿಧಿಸುತ್ತಾರೆ.

'ವಿವೇಕಚಿಂತಾಮಣಿ' ಯಲ್ಲಿ ಧಾತೃ, ಅರಿಯಮ, ಮಿತ್ರ, ವರುಣ, ಇಂದ್ರ, ವಿವಸ್ವಾನ್, ಪರ್ಜನ್ಯ, ಪೂಷನ್, ಆಂಶುಮಾನ್, ಗಭಸ್ತಿಮಾನ್, ತ್ವಷ್ಟೃ, ವಿಷ್ಣು – ಇವರು ದ್ವಾದಶ ಆದಿತ್ಯರು ಎಂದು ಹೇಳಲಾಗಿದೆ.

ನವಗ್ರಹ (ಸಂ. ೧–೪೨):

ಸೂರ್ಯ, ಚಂದ್ರ, ಮಂಗಳ, ಬುಧ, ಬೃಹಸ್ಪತಿ, ಶುಕ್ರ, ಶನಿ, ರಾಹು, ಕೇತು ಇವು ನವಗ್ರಹಗಳು.

ನವಬ್ರಹ್ಮರು: (ಸಂ. ೧–೪೨; ಸಂ. ೯–೩೧)

ಮರೀಚಿ, ಭೃಗು, ಆಂಗೀರಸ, ಪುಲಸ್ತ್ಯ, ಪುಲಹ, ಕ್ರತು, ದಕ್ಷ, ಅತ್ರಿ, ವಸಿಷ್ಠ – ಬ್ರಹ್ಮನಿಂದ ಹುಟ್ಟಿದ ಈ ಒಂಬತ್ತು ಜನರಿಗೆ ನವಬ್ರಹ್ಮರು ಎಂದು ಹೆಸರು.

ನವರತ್ನಗಳು (ಸಂ. ೧೦–೧೮):

ಮುತ್ತು, ಮಾಣಿಕ್ಯ, ವೈಡೂರ್ಯ, ಗೋಮೇದ, ವಜ್ರ, ವಿದ್ರುಮ (ಹವಳ), ಪದ್ಮರಾಗ, ಮರಕತ (ಪಚ್ಚೆ), ನೀಲ ಇವು ಒಂಬತ್ತು ರತ್ನಗಳು,

ವಿಕ್ರಮಾದಿತ್ಯ ರಾಜನ ಸಭಾಸ್ಥಾನದಲ್ಲಿದ್ದ ಒಂಬತ್ತು ಜನ ವಿದ್ವನ್ಮಣಿಗಳಿಗೆ ನವರತ್ನ ಎಂದೂ ಹೆಸರು. ಅವರ ಹೆಸರು ಇಂತಿವೆ:

ಧನ್ವಂತರಿ, ಕ್ಷಪಣಕ, ಅಮರಸಿಂಹ, ಶಂಕು, ವೇತಾಲಭಟ್ಟ, ಘಟಕರ್ಪರ, ಕಾಲಿದಾಸ, ವರಾಹಮಿಹಿರ, ವರರುಚಿ.

ನವರಸ (ಸಂ. ೪–೭೪; ಸಂ. ೪೧–೧):

ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ ಇವು ಎಂಟು ಮುಖ್ಯವಾದ ರಸಗಳಿಗೆ ಶಾಂತರಸವೊಂದನ್ನು ಸೇರಿಸಿ ನವರಸಗಳನ್ನು ಕಾವ್ಯದಲ್ಲಿ ನಿರೂಪಿಸುವರು.

CC-0. Jangamwadi Math Collection. Digitized by eGangotri

ಪಂಚಪಕ್ವಾನ್ನ, ಪಂಚಭಕ್ಷ್ಯರಸಾನ್ನ (ಸಂ. ೭–೧೪; ಸಂ. ೪೨–೨೦):

ಯಾವ ಬೇಕಾದ ಐದು ತರಹದ ಪಕ್ವಾನ್ನಗಳು.

ಪಂಚಮಹಾವಾದ್ಯ (ಸಂ. ೧೦–೪೯; ಸಂ. ೫೮–೫೮):

ಕಹಳೆ, ಪಟಹ, ಶಂಖ, ಭೇರಿ, ಜಯಘಂಟೆ – ಇವು ಪಂಚಮಹಾವಾದ್ಯಗಳು.

ಪಂಚವದನ (ಸಂ. ೨೭–೫೫):

ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಇವು ಐದು ಶಿವನ ಮುಖಗಳು.

ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ ಇವು ಭಕ್ತನ ಐದು ಮುಖಗಳು.

ಪಂಚೇಂದ್ರಿಯ (ಸಂ. ೪೨–೬):

ಘ್ರಾಣ, ಜಿಹ್ವಾ, ನೇತ್ರ, ತ್ವಕ್, ಕರ್ಣ (ಮೂಗು, ನಾಲಗೆ, ಕಣ್ಣು, ಚರ್ಮ, ಕಿವಿ) ಇವು ಐದು ಜ್ಞಾನೇಂದ್ರಿಯಗಳು.

ಗುದ, ಗುಹ್ಯ, ಪಾದ, ಪಾಣಿ, ವಾಕ್ (ಮಲದ್ವಾರ, ಮೂತ್ರದ್ವಾರ, ಕಾಲು, ಕೈ, ಮಾತು) ಇವು ಐದು ಕರ್ಮೇಂದ್ರಿಯಗಳು.

ಬತ್ತೀಸಾಯುಧ (ಸಂ. ೫೨–೫೩):

ಮಧ್ಯಯುಗದಲ್ಲಿ ಯುದ್ಧದ ಕಾಲಕ್ಕೆ ೩೨ ಪ್ರಕಾರದ ಆಯುಧಗಳನ್ನು ಬಳಸುತ್ತಿದ್ದರು. ಆ ಆಯುಧಗಳಿವು: ಖಡ್ಗ, ಕರಾಜೊರಿ, ಕಕ್ಕಡ, ಡುಗತ್ತಿ, ಸೆಣಿಗತ್ತಿ, ಸಬಳ, ಈಟಿ, ಇಡರು ಗತ್ತಿ, ಉಲ್ಬಣ, ಕಬ್ಬಿಣಕೋವು, ಚಕ್ರ, ಚಂಡು, ವೋಲೆ, ಚಲ್ಲೆಹ, ಬಲ್ಲೆಹ, ಬಂಕು, ಬಾಣ, ಗದೆಯ, ನರಾದಿ, ಶೂಲ, ಶರಾದಿ, ಚೂರಿ, ಚಿಕ್ಕತಾರಿ, ಕಿರಸಿ, ಪರಶು, ಪಾಶ, ಪಟ್ಟೆಹ, ಮಟ್ಟ, ಅಂಕುಶ, ವಂಕಿ, ತೋಡಿ, ಜವದಾಡಿ. (ವಿವೇಕಚಿಂತಾಮಣಿ).

ಬಾಹತ್ತರ ನಿಯೋಗ (ಸಂ. ೪೨–೨೮):

ಒಂದು ರಾಜ್ಯಶಕಟವು ಸರಿಯಾಗಿ ಸಾಗಲು ಮಂತ್ರಿಮಂಡಲವನ್ನೊಳಗೊಂಡು ೩೨ ಪ್ರಕಾರದ ಊಳಿಗದವರನ್ನು ನಿಯಮಿಸುವ ರೂಢಿಯಿತ್ತು. ಕೆಳಗೆ ಕಾಣಿಸಿದವರು ಆ ನಿಯೋಗದವರಲ್ಲಿ ಕೆಲವರು:

ಹಂಸವಿಂಶತಿ ಎಂಬ ತೆಲಗು ಕಾವ್ಯ (V–267)ದಲ್ಲಿ ೩೨ ನಿಯೋಗದವರ ಉಲ್ಲೇಖವು ಕೆಳಗಿನಂತೆ ಇರುತ್ತದೆ:

CC-0. Jangamwadi Math Collection. Digitized by eGangotri

ಗುರು, ಮಹಾಪ್ರಧಾನ, ಸಾಮಂತ, ಸೇನಾಪತಿ, ದ್ವಾರಪಾಲಕ, ಅವಸರಿಗ, ಘಟಿಕಾ ನಿರ್ಧಾರಿಕ, ಗಣಕ, ಲೇಖಿಕ, ಪೌರಾಣಿಕ, ಪುರೋಹಿತ, ಜ್ಯೋತಿಷಿಕ, ಕಾವ್ಯಜ್ಞ, ವಿದ್ವಜ್ಜನ, ದೇವತಾರ್ಚಕ, ಮಾಲ್ಯಕಾರ, ಪರಿಮಳಕಾರಕ, ಗೋಷ್ಠಾಧಿಕಾರ, ಗಜಾಧಿಕಾರ, ಅಶ್ವಾಧಿಕಾರ, ಭಾಂಡಾರಾಧಿಕಾರ, ಧಾನ್ಯಾಧಿಕಾರ, ಅಂಗರಕ್ಷಕ, ಸೂತ, ಸೂದ, ಭೇತಾಳ ಮತ, ತಾಂಬೂಲಿಕ, ತಾಳವೃಂತಕ, ನರವಾಹಕ, ಛಾತ್ರಿಕ, ಚಾಮರಿಕ, ಕಳಾಚಿಕ, ಕರಶಾರಿಕ, ಕಾರಪಾರಿಕ, ಪಾದುಕಾಧಾರ, ನರ್ತಕ, ಗಾಯಕ, ವೈಣಿಕ, ಶಾಕುನಿಕ, ಮಾಗಧ, ವೈತಾಳಿಕ, ಪರಿಹಾಸಕ, ಕಾಂಚುಕ, ಕ್ಷೌರಿಕ, ರಜಕ, ಸಾಚಿಕ, ಚರ್ಮಕಾರಕ, ಮುದ್ರಾಧಿಕಾರ, ಪುರಪಾಲಕ, ವನಪಾಲಕ, ನರವೈದ್ಯ, ಗಜವೈದ್ಯ, ಅಶ್ವವೈದ್ಯ, ಪಶುವೈದ್ಯ, ಭೇರಿವಾದಕ, ಮುರಜವಾದಕ, ರೌಮಿಕ, ಶಿಲಾಭೇದಕ, ಕಾಂಸ್ಯಕಾರಕ, ಕುಂಭಕಾರಕ, ಚಿತ್ರಕಾರಕ, ವ್ಯವಹಾರಿಕ, ಮೃಗಯಾರ್ಥಿ, ಪಕ್ಷಿಪೋಷಕ, ಪಣಿ ಹಾರಕ, ರಾಯಭಾರ, ಉಗ್ರಾಣಾಧಿಕಾರ, ವೇಶ್ಯೆ ಮುಂತಾದವರು.

ಭಕ್ತಿತ್ರಿತಯ (ಸಂ. ೬–೯, ೨೮):

ಗುರುಭಕ್ತಿ, ಲಿಂಗಭಕ್ತಿ, ಜಂಗಮಭಕ್ತಿ ಇವು ಮೂರು ಪ್ರಕಾರದ ಭಕ್ತಿ.

ಮಲತ್ರಯ (ಸಂ. ೫೬–೮೪):

ಆಣವಮಲ, ಮಾಯಾಮಲ, ಕಾರ್ಮಿಕಮಲ – ಇವು ಮೂರು ಮಲಗಳು.

ಮೂಲಮಂತ್ರ:

ಪ್ರಣವ, ಓಂಕಾರಮಂತ್ರಕ್ಕೆ ಮೂಲಮಂತ್ರವೆಂದು ಹೆಸರು.

ಯೋಗನಿದ್ರೆ (ಸಂ. ೪–೯):

ಯೋಗಸಾಧನೆಯಲ್ಲಿ ಇದು ಒಂದು ಅವಸ್ಥೆ. ಈ ಅವಸ್ಥೆಯಲ್ಲಿ ತಮೋವಿಶಿಷ್ಟವಾದ ನಿದ್ರೆಯಿರುವುದಿಲ್ಲ. ಬಾಹ್ಯ ಪ್ರಜ್ಞೆಯಿಲ್ಲದಿದ್ದರೂ ಆಂತರಂಗದಲ್ಲಿ ಅರಿವಿನಾನಂದದಲ್ಲಿ ಯೋಗಿಯು ತನ್ಮಯನಾಗಿರುತ್ತಾನೆ. ಆ ಅರಿವಿಗೆ ಬಾಹ್ಯದ ಜ್ಞಾನವಿರುವುದಿಲ್ಲವೆಂದಲ್ಲ. ನಿಜವಾದ ಅರಿವಿನ ಅಳವಿಗೆ ಆಂತರ್ಬಾಹ್ಯಜ್ಞಾನವು ಸಹಜವಾಗಿಯೇ ಅವಗತವಾಗುತ್ತದೆ.

ಲಿಂಗತ್ರಯ (ಸಂ. ೪೨–೫೫):

ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಇವು ಮೂರು ಪ್ರಕಾರದ ಲಿಂಗದ ಸ್ವರೂಪಗಳು.

ಲಿಂಗಧಾರಣೆಯ ಸ್ಥಲಗಳು (ಸಂ. ೬–೧೫):

ಕಕ್ಷೆ, ಕರಸ್ಥಲ, ಕಂಠ, ಉತ್ತಮಾಂಗ (ಶಿರ), ಉರಸೆಜ್ಜೆ, ಅಂಗಸೋಂಕು ಇವು ಆರು ಲಿಂಗಧಾರಣೆಯ ಸ್ಥಲಗಳು. ಹೊಕ್ಕುಳದ ಕೆಳಗೆ ಬರುವಂತೆ ಲಿಂಗವನ್ನು ಧರಿಸ ಕೂಡದೆಂದು ಹೇಳುತ್ತಾರೆ.

CC-0. Jangamwadi Math Collection. Digitized by eGangotri

ವರ್ಣಪಂಚಕ (ಸಂ. ೫–೧):

ನ ಮ ಶಿ ವಾ ಯ – ಈ ಐದಕ್ಷರಗಳಿಗೆ ವರ್ಣಪಂಚಕ, ಪಂಚಾಕ್ಷರಿ ಮಂತ್ರ ಎಂದು ಹೆಸರು.

ಶಿವಾದಿ ತತ್ವ (ಸಂ. ೭–೨೦):

ಶೈವಶಾಸ್ತ್ರದಲ್ಲಿ ಸೃಷ್ಟಿಯ ಉತ್ಪತ್ತಿಯನ್ನು ವಿವರಿಸುವಾಗ ಅದು ಪರಶಿವನಿಂದ ಉದಿಸಿತು ಎಂದು ತಿಳಿಸುತ್ತಾರೆ. ಸೃಷ್ಟಿಯ ರಚನೆಗೆ ಶಿವಶಕ್ತಿಯೇ ಕಾರಣ. ಇದನ್ನೆ ಶಿವನಿಂದ ಶಕ್ತಿಯ ಮುಖಾಂತರವಾಗಿ ಸೃಷ್ಟಿಯು ನಿರ್ಮಾಣವಾಯಿತು, ಎಂದು ಹೇಳುವುದುಂಟು ಈ ವಿಕಾಸಕ್ರಮದಲ್ಲಿ ಶಿವನನ್ನೊಡಗೂಡಿ 36 ತತ್ವಗಳನ್ನು ಶೈವರು ಗುರುತಿಸುತ್ತಾರೆ. ಆ ತತ್ವಗಳು ಕೆಳಗಿನಂತೆ ಇರುತ್ತವೆ:

ಶುದ್ಧ ತತ್ವಗಳು ಐದು: (೧) ಶಿವತತ್ವ (೨) ಶಕ್ತಿತತ್ವ (೩) ಸದಾಶಿವತತ್ವ (೪) ಈಶ್ವರತತ್ವ (೫) ಶುದ್ಧವಿದ್ಯಾತತ್ವ.

ಶುದ್ಧಾಶುದ್ಧತತ್ವಗಳು ಆರು: (೬) ಮಾಯಾ (೭) ಕಾಲ (೮) ಕಲಾ (೯) ವಿದ್ಯಾ (೧೦) ನಿಯತಿ (೧೧) ರಾಗ (೧೨) ಪುರುಷ.

ಅಶುದ್ಧ ತತ್ವಗಳು ಇಪ್ಪತ್ತುನಾಲ್ಕು:

ಅಂತಃಕರಣಗಳು ನಾಲ್ಕು: (೧೩) ಪ್ರಕೃತಿ (೧೪) ಬುದ್ಧಿ (೧೫) ಅಹಂಕಾರ (೧೬) ಮನಸ್.

ಜ್ಞಾನೇಂದ್ರಿಯಗಳು ಐದು: (೧೭) ಶ್ರೋತೃ (೧೮) ತ್ವಕ್ (೧೯) ಚಕ್ಷುಸ್ (೨೦) ಜಿಹ್ವಾ (೨೧) ನಾಸಿಕಾ.

ಕರ್ಮೇಂದ್ರಿಯಗಳು ಐದು: (೨೨) ವಾಕ್ (೨೩) ಪಾಣಿ (೨೪) ಪಾದ (೨೫) ಪಾಯು (೨೬) ಉಪಸ್ಥಾ.

ತನ್ಮಾತ್ರಗಳು ಐದು: (೨೭) ಶಬ್ದ (೨೮) ಸ್ಪರ್ಶ (೨೯) ರೂಪ (೩೦) ರಸ (೩೧) ಗಂಧ.

ಮಹಾಭೂತಗಳು ಐದು: (೩೨) ಆಕಾಶ (೩೩) ವಾಯು (೩೪) ತೇಜಸ್ (೩೫) ಜಲ (೩೬) ಪೃಥ್ವಿ.

ಷಡಂಗಮಂತ್ರ (ಸಂ. ೩–೬೮):

ನ ಮ ಶಿ ವಾ ಯ ಓಂ ಈ ಆರು ಅಕ್ಷರಗಳಿಂದ ಯುಕ್ತವಾದ ಷಡಕ್ಷರಿ ಮಂತ್ರ. ಇದರಲ್ಲಿಯ ಅಕ್ಷರಗಳು ಈ ಮಂತ್ರಕ್ಕೆ ಅಂಗವಾಗಿರುತ್ತವೆ.

ಷಟ್ಕಮಲ (ಸಂ. ೩–೮, ೯):

ಯೋಗಶಾಸ್ತ್ರದಲ್ಲಿ ಚಕ್ರಗಳಿಗೆ ಕಮಲ ಎಂದೂ ಹೆಸರುಂಟು. ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆರು ಚಕ್ರಗಳಿಗೆ ಷಟ್ಕಮಲವೆಂದು

CC-0. Jangamwadi Math Collection. Digitized by eGangotri

ಕರೆಯುವರು. ಈ ಕಮಲಗಳಲ್ಲಿ ಪ್ರತಿಯೊಂದಕ್ಕೆ ಕ್ರಮವಾಗಿ ೪, ೬, ೧೦, ೧೨, ೧೬, ೨ ದಳಗಳು ಇರುತ್ತವೆಂದು ಯೋಗಿಗಳು ಗುರುತಿಸಿದ್ದಾರೆ.

ಷಟ್ಕರ್ಮ (ಸಂ. ೨–೪೬):

(೧) ಪ್ರತಿಯೊಬ್ಬ ಬ್ರಾಹ್ಮಣನು ಪಾಲಿಸಬೇಕಾದ ಆರು ತೆರನಾದ ಕರ್ತವ್ಯ ಕರ್ಮಗಳಿಗೆ ಷಟ್ಕರ್ಮ ಎಂದು ಹೆಸರು. ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ ಇವೇ ಆ ಆರು ಕರ್ಮಗಳು.

(೨) ಇದು ಅಲ್ಲದೆ ತನ್ನ ಉಪಜೀವನಕ್ಕಾಗಿ ಬ್ರಾಹ್ಮಣನಾದವನು ಕಾಳುಗಳನ್ನು ಆರಿಸುವ, ದಾನ ಸ್ವೀಕರಿಸುವ, ಭಿಕ್ಷೆ ಬೇಡುವ, ವ್ಯಾಪಾರ ಮಾಡುವ, ಪಶುಗಳನ್ನು ಕಾಪಾಡುವ ಒಕ್ಕಲುತನ ಸಾಗಿಸುವ ಈ ಆರು ಕೆಲಸಗಳನ್ನೂ ಮಾಡಬಹುದು. ಇವಕ್ಕೂ ಷಟ್ಕರ್ಮ ಎಂದು ಹೆಸರು.

(೩) ಹಠಯೋಗ ಸಾಧನೆಯಲ್ಲಿಯ ಧೌತಿ, ಬಸ್ತಿ, ನೇತಿ, ನೌಲಿ, ತ್ರಾಟಕ, ಕಪಾಲಭಾತಿ ಎಂಬ ಆರು ವಿಧವಾದ ಕ್ರಿಯೆಗಳಿಗೂ ಷಟ್ಕರ್ಮ ಎಂಬ ಹೆಸರಿದೆ.

ಷಡಧ್ವ (ಸಂ. ೬–೪೮):

ಅಧ್ವನ್ ಎಂದರೆ ಮಾರ್ಗ, ದಾರಿ. ಶೈವಶಾಸ್ತ್ರದಲ್ಲಿ ಆರು ಮಾರ್ಗಗಳನ್ನು ಹೇಳುತ್ತಾರೆ: ಕಲಾ ತತ್ವ ಭುವನ ವರ್ಣ ಪದ ಮಂತ್ರ ಎಂಬವುಗಳೇ ಈ ಆರು ಅಧ್ವಗಳು. ಶಿವಾದಿ ೩೬ ತತ್ವಗಳಲ್ಲಿ ಶಿವತತ್ವದಿಂದ ಶುದ್ಧವಿದ್ಯೆಯ ವರೆಗಿನ ೫ ತತ್ವಗಳಿಗೆ ಶುದ್ಧಾಧ್ವ ಅಥವಾ ಕಲಾಧ್ವ ಎಂದು ಹೆಸರು. ಮಾಯಾ ತತ್ವದಿಂದ ಪುರುಷ ತತ್ವದ ವರೆಗಿನ ೬ ತತ್ವಗಳಿಗೆ ಮಿಶ್ರಾಧ್ವ ಇಲ್ಲವೆ ತತ್ತ್ವಾಧ್ವ ಎಂದು ಹೆಸರು. ಪ್ರಕೃತಿ ತತ್ವದಿಂದ ಪೃಥ್ವಿತ ತ್ವದ ವರೆಗಿನ ೨೫ ತತ್ವಗಳಿಗೆ ಅಶುದ್ಧಾಧ್ವ ಅಥವಾ ಭುವನಾಧ್ವ ಎಂದು ಹೆಸರು. ವರ್ಣಾಧ್ವವು ೫೧, ಪದಾಧ್ವವು ೮೧ ಮತ್ತು ಮಂತ್ರಾಧ್ವವು ೧೧ ಪ್ರಕಾರ ವಾಗಿಹುದೆಂದು ಹೇಳುತ್ತಾರೆ.

ಷಡರಿ, ಷಡ್ರಿಪು, ಷಡ್ವರ್ಗ: (ಸಂ. ೬–೬; ೬–೩೫)

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇವು ಆರು ವೈರಿಗಳೆಂದು ಹೇಳುತ್ತಾರೆ.

ಷಡ್ಗುಣ: (ಸಂ. ೭–೪೮)

ಐಶ್ವರ್ಯ, ಜ್ಞಾನ, ಯಶಸ್, ಶ್ರೀ, ವೈರಾಗ್ಯ, ಧರ್ಮ – ಇವು ಆರು ಪರಮೋತ್ಕೃಷ್ಟವಾದ ಗುಣಗಳು.

ಷಡ್ದರ್ಶನ: (ಸಂ. ೩–೭೨)

ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸ ಮತ್ತು ವೇದಾಂತ ಈ ಆರು ಭಾರತೀಯ ತತ್ವದರ್ಶನಗಳಿಗೆ ಷಡ್ದರ್ಶನ ಎಂದು ಹೆಸರು.

CC-0. Jangamwadi Math Collection. Digitized by eGangotri

ಷಡ್ರಸ (ಸಂ. ೬–೩೨):

ಆಹಾರದಲ್ಲಿ ಉಪ್ಪು, ಕಾರ, ಹುಳಿ, ಒಗರು, ಕಹಿ ಸಿಹಿ ಈ ಆರು ರಸಗಳನ್ನು ಪ್ರಮುಖ ವೆಂದು ತಿಳಿಯುತ್ತಾರೆ.

ಷೋಡಶರು (ಸಂ. ೪೭–೧೮; ಸಂ. ೫೩–೭೬):

ಹೊನ್ನಯ್ಯ, ಪಾಂಡ್ಯನಾಯಕ, ಗುಡ್ಡವ್ವೆ, ಕಿನ್ನರಿಯ ಬ್ರಹ್ಮಯ್ಯ, ಕೇತಲದೇವಿ, ಚಂದಯ್ಯ, ಬೀರದೇವಯ್ಯ, ಬಿಜ್ಜಯ್ಯ, ಕಂದುಲಿಗೆ ನಾಗಿದೇವಯ್ಯ, ಕಾಳವ್ವೆ, ಪಡಿಹಾರಿ ಸೋಮಿದೇವ, ಚಿಕ್ಕುಲಿಗೆ ನಾಗಯ್ಯ, ಸಿನನಾಥ, ದೇವರಬಾಚಯ್ಯ, ಹೂವಿನ ಬಾಚಿದೇವಿ, ಬಾಚಲದೇವಿ – ಇವರು ಷೋಡಶ ಗಣಂಗಳು ಎಂದು ಪಾಲ್ಕುರಿಕೆ ಸೋಮನಾಥನು ತಿಳಿಸುತ್ತಾನೆ.

ಷೋಡಶ ಉಪಚಾರ (ಸಂ. ೪೪–೧೧):

ಅತಿಥಿ ಅಭ್ಯಾಗತರಿಗೆ ಹಾಗು ದೇವತಾದಿಗಳಿಗೆ ಗೌರವ ಸೂಚಕವಾದ ೧೬ ಪ್ರಕಾರದ ಕ್ರಿಯೆಗಳು: ಆಸನ, ಸ್ವಾಗತ, ಪಾದ್ಯ, ಅರ್ಘ್ಯ, ಆಚಮನೀಯ, ಮಧುಪರ್ಕ, ಸ್ನಾನ, ವಸ್ತ್ರ, ಆಭರಣ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ ಮತ್ತು ವಂದನ.

ಷೋಡಶ ಸಂಸ್ಕಾರ (ಸಂ. ೩–೫೨):

ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಲ್ಲಿ ಮಾನವನಾಗಿ ಜನಿಸಿ ಬಂದ ವ್ಯಕ್ತಿಯು ತಾಯಿಯ ಗರ್ಭದಲ್ಲಿ ಮೂಡುವಂದು ಮೊದಲುಮಾಡಿ ಭೂತಾಯಿಯ ಗರ್ಭದಲ್ಲಿ ಪ್ರವೇಶಿಸು ವವರಿಗೆ ೧೬ ಪ್ರಕಾರದ ಸಂಸ್ಕಾರಗಳನ್ನು ಪಡೆಯುತ್ತಾನೆ. ಆ ಸಂಸ್ಕಾರಗಳಲ್ಲಿ ಮುಖ್ಯವಾದವು ಇಂತಿವೆ: ಗರ್ಭಾಧಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಉಪನಯನ, ವಿವಾಹ ಆಂತ್ಯವಿಧಿ.

ಸಪ್ತಋಷಿ, ಸಪ್ತರ್ಷಿ (ಸಂ. ೧–೪೨; ಸಂ. ೫೭–೪೦):

ಮರೀಚಿ, ಅತ್ರಿ, ಆಂಗೀರಸ, ಪುಲಸ್ತ್ಯ, ಪುಲಹ, ಋತು ಮತ್ತು ವಸಿಷ್ಠ ಇವರು ಸಪ್ತರ್ಷಿಗಳೆಂದು ಪ್ರಸಿದ್ಧರಾಗಿದ್ದಾರೆ.

ಸಪ್ತಧಾತು (ಸಂ. ೭–೩):

ರಸ, ರಕ್ತ, ಮಾಂಸ, ಮೇದಸ್, ಅಸ್ಥಿ, ಮಜ್ಜಾ, ಶುಕ್ರ ಇವು ಶರೀರದಲ್ಲಿಯ ಸಪ್ತ ಧಾತುಗಳು.

ಸಪ್ತ ಮಾತೃಕೆಯರು: (ಸಂ. ೯–೩೧; ಸಂ. ೫೭–೪೦)

ಬ್ರಾಹ್ಮೀ, ಮಾಹೇಶ್ವರೀ, ಚಂಡೀ, ವಾರಾಹೀ, ವೈಷ್ಣವೀ, ಕೌಮಾರೀ, ಚಾಮುಂಡಾ, ಚರ್ಚಿಕಾ – ಇವರು ಅಷ್ಟಮಾತೃಕೆಯರೆಂದು ಸಾಮಾನ್ಯವಾಗಿ ತಿಳಿಯಲ್ಪಡುತ್ತದೆ.

CC-0. Jangamwadi Math Collection. Digitized by eGangotri

ಆದರೆ ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ಮಾಹೇಂದ್ರೀ, ವಾರಾಹಿ, ಚಾಮುಂಡಾ ಈ ಏಳು ದೇವಮಾತೆಯರಿಗೆ ಸಪ್ತಮಾತೃಕೆಯರು ಎಂದು ಹೆಸರು.

ಇವರು ಸಾಮಾನ್ಯವಾಗಿ ಶಿವಸುತ ಸ್ಕಂದನನ್ನು ಜೋಪಾನ ಮಾಡುವವರು ಎಂದು ಪರಿಗಣಿಸಲಾಗಿದೆ.

ಸಪ್ತಯುಗ (ಸಂ. ೫೭–೪೦):

ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ, ದಿವ್ಯಯುಗ, ಮನ್ವಂತರ ಯುಗ, ಕಲ್ಪಯುಗ – ಇವು ಸಪ್ತಯುಗಗಳು. (ವಿವೇಕಚಿಂತಾಮಣಿ).

ಸಪ್ತರಸನ, ಸಪ್ತಾರ್ಚಿನ್ (ಸಂ. ೫೭–೪೦; ಸಂ. ೫೭–೬೭):

ಏಳು ನಾಲಗೆಗಳುಳ್ಳ ಅಗ್ನಿ: ಕರಾಲೀ, ಧೂಮಿನೀ, ಶ್ವೇತಾ, ಲೋಹಿತಾ, ನೀಲಲೋಹಿತಾ, ಸುವರ್ಣಾ, ಪದ್ಮರಾಗಾ ಇವು ಅಗ್ನಿಯ ಏಳು ನಾಲಗೆಗಳು.

ಸಪ್ತಸಮುದ್ರಗಳು (ಸಂ. ೫೨–೨೫):

ಲವಣಸಮುದ್ರ, ಇಕ್ಷುಸಮುದ್ರ, ಮಧು(ಸುರಾ)ಸಮುದ್ರ, ಘೃತಸಮುದ್ರ, ದಧಿ ಸಮುದ್ರ, ದುಗ್ಧಸಮುದ್ರ, ಸ್ವಾದೋದಕ(ಜಲ)ಸಮುದ್ರ – ಇವು ಏಳು ಸಮುದ್ರಗಳು.

ಸಪ್ತಸ್ವರಗಳು (ಸಂ. ೯–೩೨):

ಸ ರಿ ಗ ಮ ಪ ಧ ನೀ – ಇವು ಸಪ್ತಸ್ವರಗಳು. ಪರಶಿವನ ಈಶ್ವರ, ಸದ್ಯೋಜಾತ, ವಾಸುದೇವ, ಅಘೋರ, ತತ್ಪುರುಷ, ಈಶಾನ, ನಿರಂಗವೆಂಬೇಳು ಮುಖಕ್ರಮವಿಡಿದು ಷಡ್ಜ, ವೃಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದವೆಂಬ ಸಪ್ತ ಸ್ವರಗಳಾದವು. ಕಂಠ, ಶಿರಸ್ಸು, ನಾಸಿಕ, ಹೃದಯ, ಮುಖ, ತಾಲುಗೆ, ಪೂರ್ವಾಂಗ ಎಂಬವೇ ಪರಿವಿಡಿದಾ ಷಡ್ಜಾದಿ ಸ್ವರಜನನ ಸ್ಥಾನಗಳು.

ಸಪ್ತಾಶ್ವ (ಸಂ. ೫೩–೬೭):

ಸೂರ್ಯನ ರಥಕ್ಕೆ ಏಳು ಕುದುರೆಗಳನ್ನು ಹೂಡಿವೆ ಎಂಬ ಪೌರಾಣಿಕ ಕಲ್ಪನೆಯಿಂದ ಸೂರ್ಯನಿಗೆ ಸಪ್ತಾಶ್ವ ಎಂಬ ಹೆಸರುಂಟಾಯಿತು.

ಹದಿನೆಂಟು ಜಾತಿಗಳು (ಸಂ. ೫೪–೧೨, ೨೦):

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಲಿಂಗವಂತ, ಬಣಜಿಗ, ಗಂಗಡಿಕಾರ ಪೊಕ್ಕಲಿಗ, ಮಡಿವಾಳ, ಕೆಲಸಿಗ, ಕುರುಬ, ಕುಂಬಾರ, ಕಟುಕ, ಬಡಿಗ, ಅಕ್ಕಸಾಲೆ, ತೊರೆಯ, ಉಪ್ಪಾರ, ಬೆಸ್ತ, ಹೊಲೆಯ, ಮಾದಿಗ – ಇವು ಅಷ್ಟಾದಶ ಜಾತಿಗಳು.

CC-0. Jangamwadi Math Collection. Digitized by eGangotri

ಬಸವಪುರಾಣದಲ್ಲಿ ಬರುವ

ವ್ಯಕ್ತಿವಾಚಕ ಪದಗಳ ಸೂಚಿ

ಸಂಧಿ–ಪದ್ಯ

ಅ

ಅಂಕದೇವಯ್ಯ ೫೭–೮
ಅಜ್ಜಯ್ಯ ೫೮–೪
ಅಣುಮೂರ್ತಿ ೮–೩೭, ೨೬–೬
ಅಣ್ಣಲದೇವಿ ೪೬–೪
ಅತಿಭಕ್ತ ೨೬–೨೭
ಅನಂತಪಾಲ ೫೪–೨೪
ಅನಿಮಿಷಕೇಶಿ ೫೭–೪
ಅಮರಗುಂಡದ ಮಲ್ಲೇಶ್ವರ ೩೮–೩೪, ೫೬
ಅಮ್ಮವ್ವೆ ೮–೪೪, ೨೪–೭
ಅರಿಯಮರಾಜ ೫೨–೩೮, ೪೧, ೪೩, ೪೪, ೪೬, ೪೯
ಅರಿವಾಳ್ (ತಾಂಡಾರಿ) ೮–೩೭, ೨೬–೧೯
ಅರ್ಜುನ ೫೧–೧೬
ಅಲ್ಲಮಪ್ರಭು, ಪ್ರಭು ೭–೧, ೧೩, ೧೫, ೧೭, ೨೮, ೮–೪೬; ೫೫–೫೪; ೫೬–೯; ೩೬,೬; ೫೮–೩; ೫೯–೬೦,
ಅವನಿದಾಂಡಾರಿ ೨೬–೪೬
ಅವಿಮುಕ್ತಯ್ಯ ೫೭–೧೧

ಆ

ಆದಯ್ಯ ೨೮–೮; ೫೨–೨೧
ಆಯ್ದಕ್ಕಿ ಮಾರಯ್ಯಗಳು ೫೭–೩

ಇ

ಇಡುಗುಡಿಯ ನಾಯ್ನಾರು ೧೦–೩೬
ಇಡುಗುಡಿಯ ಪೆರ್ಮಾಡಿ ೧೦–೩೮
ಇಂಡೆಯ ರೇಕವ್ವೆ ೮–೩೫
ಇಂಡೆಯ ಬೊಮ್ಮಿದೇವ ೫೭–೧೧
ಇರಿತ್ತಾಂಡಾರಿ ೪೮–೪೩, ೪೬
ಇಜಿವ ತಾಂಡಾರಿ ೮–೪೭
ಇಜಿವತ್ತ, ಇಜಿಭಕ್ತ ೨೧–೧, ೩, ೧೧, ೧೭, ೨೦
ಇಳೆಯ ದಂಗುಳಿಯಾರ, (ಇಳೆಯಾಂಡ ಗುಡಿಮಾರ) ೪೬–೩೬
ಇಳಿಹಾಳ ಬೊಮ್ಮಯ್ಯ ೮–೪೬; ೫೯–೧೯

ಉ

ಉಡುತಡಿಯ ಮಹಾದೇವಿ ೩೯–೨೮
ಉತ್ತುಂಗಚೋಳ ೪೩–೫೮
ಉತ್ತಮಾಂಗದ ಕೇಶಿ ೫೭–೪
ಉದಯಮರಸು ೫೭–೨
ಉದ್ಭಟ ೮–೪೪; ೫೬–೬, ೭, ೯, ೧೨, ೧೩, ೨೦
ಉದರದ ರಾಮಯ್ಯದೇವ ೫೭–೧೧
ಉದಾಸಿ ಭೀಮಯ್ಯ ೫೫–೫೭
ಉಮಾದೇವಿ ೫೮–೮

ಏ

ಏಲೇಶ್ವರದ ಕೇತಯ್ಯ ೫೭–೫
ಏಕಾಂತರಾಮಯ್ಯ, ರಾಮತಂದೆ, ರಾಮಿತಂದೆ, ಏಕಾಂತರಾಮ, ಏಕಾಂತವಿಭು ೮–೪೭; ೪೮–೨, ೪, ೮, ೧೧, ೧೪; ೫೧–೩೮, ೪೧, ೪೩, ೪೬, ೪೯, ೫೧; ೫೭–೬

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ಏಣಾಧಿನಾಥ ೮–೩೯; ೨೬–೩೨;
ಏಲೇಶ್ವರದ ಕೇತಯ್ಯ ೮–೪೮; ೫೯–೧೨, ೧೬, ೧೮, ೧೯, ೨೬, ೨೯, ೩೦, ೩೪, ೩೫.

ಐ

ಐಚಿದೇವಯ್ಯ ೫೭–೧
ಐಚಲದೇವಿ ೫೮–೭

ಓ

ಒಡಿತೆಯ ವಿಳಾಸಿದೇವ ೩೬–೭
ಒಡಿತೆಯ ಬೊಪ್ಪಿದೇವ ೫೭–೧೨
ಓಹಿಲ ೮–೩೭; ೧೫–೧೭ ೧೯, ೨೯–೩೨, ೩೫, ೩೭, ೪೦–೪೨, ೫೦, ೫೩, ೫೫, ೬೮, ೪೨–೧೬, ೨೨, ೩೪, ೩೫, ೩೭, ೪೬, ೪೭, ೬೭, ೭೦, ೭೮, ೭೯, ೮೩; ೪೩–೮, ೧೨; ೫೩–೭೧.

ಕ

ಕಕ್ಕಯ್ಯ (ಸುಯಿಧಾನಿ) ೮–೪೬
ಕಕ್ಕಯ್ಯ (ಡೋಹರ) ೩–೮೨ ೩೬–೬; ೪೬–೩೪; ೫೬–೨೧, ೨೯, ೩೦; ೬೦–೯.
ಕಡವಳ ನಂಬಿ ೮–೩೬; ೨೬–೮
ಕಣ್ಣಪ್ಪ, ಕಣ್ಣಂದ, ಕಣ್ಣಪ್ಪದೇವ ೮–೩೫ ೧೭–೧, ೮, ೧೮, ೨೬, ೨೭, ೩೧, ೩೨, ೩೪, ೪೨, ೫೦, ೫೭; ೭೯, ೮೨, ೮೯, ೮೭, ೮೯, ೯೧, ೯೩, ೯೫, ೧೦೦, ೧೦೩, ೧೦೫. ೩೧–೨೧; ೩೭, ೪೬; ೫೬; ೪೨–೩೯

ಸಂಧಿ–ಪದ್ಯ

ಕದಿರ ರೇಮಯ್ಯ ೩೦–೩೨, ೪೭–೧; ೭, ೨೦, ೨೨: ೫೩–೭೪; ೫೭–೪
ಕಂಥೆಯ ಕಲ್ಲಿನಾಥಯ್ಯ ೫೭–೯
ಕನ್ನಡ ಬೊಮ್ಮಯ್ಯ, ಬೊಮ್ಮಿದೇವ ೩೦–೧, ೭. ೯, ೧೧, ೧೩, ೧೪, ೨೫, ೨೮, ೩೨. ೫೭–೨; ೬೦–೯
ಕಂಬಿಕಾರ ಹೊನ್ನಿದೇವ ೮–೪೧
ಕಪಿಲೇಶ ೫೭–೧೧
ಕಮಳಾಯಿ ೫೮–೮
ಕರವೂರ ಜೋಳ ೨೧–೧; ೨೪–೪; ೨೬–೩೮; ೪೩–೫೮; ೪೬–೩೬.
ಕರಸ್ಥಲದ ಅಪ್ಪಿದೇವ ೫೮–೪
ಕರಿಕಾಲ (ಚೋಳ) ೧೩–೨೪; ೨೫–೫೫; ೩೨–೧೩, ೧೫; ೪೩–೫೮; ೪೬–೩೪; ೫೩–೭೨, ೫೬–೮೩
ಕರಿವಾಳ ಬೊಮ್ಮಯ್ಯ ೫೭–೭
ಕಲಕೇತ ಬೊಮ್ಮಯ್ಯ ೫೭–೨; ೬೦–೯
ಕಲವತ್ತಿ ೩೦–೨೩
ಕಲ್ಯಾಣದೇವ ೫೮–೩
ಕಲಿ (ಕಲಿಯನಾಯನಾರ್) ೮–೪೧
ಕಲಿಕಾಮದೇವ ೨೫–೨೬, ೬೦
ಕಲಿಕೇತ ಬೊಮ್ಮಯ್ಯ ೨೮–೧, ೧೦, ೧೯, ೨೧, ೨೨, ೨೪, ೨೫. ೩೨, ೩೫
ಕಲಿಗಣೇಶ್ವರ ೪೩–೪೫
ಕಲಿದೇವಿ ೫೮–೭
ಕಲಿದೇವ ೫೮–೨
ಕಲಿಪಾಲ ೨೬–೬೮
ಕಲಿಯಂಬ ೧೭–೧೦೯; ೨೬–೪೧

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ಕಲ್ಲಿದೇವ ೩೬–೭
ಕಲ್ಲಿನಾಥ ೩೬–೪೬; ೫೭–೯
ಕಾಚಲದೇವಿ ೫೮–೭
ಕಾಟಕ ಗೊಲ್ಲತಿ ೯–೬
ಕಾಟಕೋಟ ಗೊಲ್ಲ ೮–೧೨
ಕಾಮಲದೇವಿ ೫೮–೮
ಕಾರಿಕಾಲಮ್ಮೆ ೧೩–೨೫
ಕಾಲಾಗ್ನಿ ರುದ್ರಯ್ಯ ೫೭–೬
ಕಾಶೀನಾಥ ೩೬–೭; ೫೮–೫
ಕಾಳೀ (ಮಡಿವಳ) ೨೦–೧೨
ಕಾಳಿದಾಸ ೫೩–೭೧
ಕಾಳಿದೇವ ೫೮–೨

ಕಿನ್ನರ ಬೊಮ್ಮಯ್ಯ, ಬೊಮ್ಮಿದೇವ ೮–೪೫; ೨೭–೩, ೭, ೧೦, ೧೬, ೨೭, ೨೯, ೩೫, ೩೬, ೪೬, ೪೯, ೫೦, ೫೨, ೬೦, ೬೨, ೬೮; ೨೮–೧೦, ೧೨, ೧೬, ೨೨, ೨೬, ೨೯, ೩೧, ೩೩, ೩೪

ಕಿನ್ನರದೇವ, ಕಿನ್ನರಯ್ಯ, ಕಿನ್ನರ ಬೊಮ್ಮಯ್ಯ ಕಿನ್ನರಿ, ಬೊಮ್ಮಣ್ಣ, ಕಿನ್ನರ ಬೊಮ್ಮಿದೇವ, ೩೪–೫೭, ೩೫–೧, ೨, ೪, ೬, ೯, ೧೧, ೧೬, ೨೦, ೩೧, ೩೫, ೪೪, ೪೫; ೩೬–೬, ೪೬–೩೭; ೫೩–೭೭; ೫೭–೨; ೬೦–೯

ಕುಮಾರಪಾಲಕ ಗುರ್ಜರ ೪೨–೧, ೬; ೪೩–೯೯, ೫೪, ೭೩; ೫೩–೭೫

ಕುಲಚ್ಚಜಿಯಾರು ೮–೪೮; ೪೯–೪೨
ಕುಲೋತ್ತುಂಗ ಚೋಳ ೪೯–೧೭
ಕೂಡಲಸಂಗಮೇಶ್ವರ ೩–೨೮, ೪೪; ೪–೫೬, ೫೭, ೬೯, ೭೦, ೭೪ ೫–೫, ೭, ೪೩, ೫೦; ೭–೯, ೫೩; ೮–೫, ೧೯, ೨೯

ಕೂನ ಪಾಂಡ್ಯ (ಸೌಂದರ ಪಾಂಡ್ಯ) ೪೯–೩೧
ಕೆಂಬಾವಿ ಭೋಗ ಭೋಗಯ್ಯ ೨೪–೮, ಸಂಧಿ–ಪದ್ಯ

ಕೆಂಬಾವಿ ಭೋಗಣ್ಣ ೮–೪೨, ೨೩–೭೨ ೩೭–೫೭, ೪೩, ೪೬, ೪೯, ೫೭, ೫೬–೩೧, ೩೩, ೩೮, ೪೪, ೪೫, ೫೭–೯.
ಕೇತಲದೇವಿ ೫೮–೮
ಕೇಶಿರಾಜ (ಸೇನಬೋವ) ೮–೪೨
ಕೇಶಿರಾಜ (ಕೊಂಡಗುಳಿ) ೧–೧೦ ೩೫–೫೯; ೩೬–೭; ೪೬–೩೫; ೫೭–೪; ೫೮–೫; ೬೦–೯.
ಕೇಳಿಕೆಯ ಮಹದೇವಿ ೫೮–೭
ಕೊಡಗೂಸು (ಚನ್ನಕ್ಕ) ೮–೩೮, ೧೩–೩, ೫, ೧೯, ೩೪.
ಕೋವೂರ ಬೊಮ್ಮಯ್ಯ ೪೯–೭೬, ೭೮, ೮೦

ಕೊಂಡೆಯರು:
ಉಗ್ರಚಂಡಿ ೧೦–೪
ಕರಿಯ ಕೇಶವ ೧೦–೪
ಕಸಪ ಮಂತ್ರಿ ೧೦–೪
ಕಾಳಿಮರಸ ೧೦–೪
ಕುಂಜತಮಿ ೧೦–೪
ಚೋಳಿಯಣ್ಣ ೧೦–೪
ಭೂಪಾಳ ೧೦–೪
ಮೇಳಿಗರಸ ೧೦–೪
ಹೆಮ್ಮಡಿ ೧೦–೪

ಗ

ಗಂಗಾಂಬಿಕೆ, ಗಂಗಾದೇವಿ ಗಂಗಾಂಬೆ, ಗಂಗಾಯಿ, ೪–೧೪, ೧೬; ೧೦–೨೨, ೨೮, ೪೦ ೧೯–೨೧ ೩೦, ೪೧–೪೨, ೪೯; ೫೮–೭
ಗಗನಿದೇವ ೫೮–೨
ಗಜೇಶ ಮಸಣಯ್ಯ, ಮಸಣಿದೇವ ೩೧–೩೪
ಗಂಡಗತ್ತರಿ ನಾಚಿದೇವ ೫೬–೧

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ಗಣದಾಸಿ ಭೀಮಯ್ಯ ೩೬–೭; ೫೭–೯
ಗಣದಾಸವ್ವೆ ೫೮–೬
ಗಣನಾಥ ೮–೪೨
ಗಿಜುಗಟಿಯ ನವಲಾಯಿದೇವ ೫೭–೧೦
ಗುಗ್ಗುಳ ಕಲಿಯನಾರ್ ೨೬–೧೪
ಗುಂಡಯ್ಯ (ಕುಂಬಾರ) ೮–೩೩, ೪೭: ೧೩–೨೩; ೨೩–೭೨
ಗುಡ್ಡವ್ವೆ, ಗುಡ್ಡಾದೇವಿ ೫೨–೨೧; ೫೬–೫೬, ೫೮, ೫೯, ೬೨, ೬೪
ಗುರುಭಕ್ತ ೩೮–೨, ೨೭, ೨೮, ೩೧, ೩೫, ೩೭, ೪೧, ೪೨, ೪೬, ೪೯, ೬೨, ೬೯, ೭೦, ೭೧, ೮೧
ಗುರುಭಕ್ತಿಯಾಂಡಾರಿ ೪೯–೨, ೮೭: ೪೧–೪೦; ೪೪–೧, ೩೧, ೪೮, ೪೮, ೫೪
ಗೆಲ್ಲದುತ್ತಮದೇವ ೫೭–೯
ಗೊಗ್ಗಯ್ಯ ೩೬–೬; ೫೭–೬
ಗೊಲ್ಲಳ, ಗೊಲ್ಲಳರಾಯ ೮–೧೬, ೩೫: ೨೩–೨೬, ೫೩–೧೬
ಗೋಡೆ ಮಲ್ಲಯ್ಯ ೫೭–೫
ಗೋಣಿಯ ಮಲ್ಲಿದೇವ ೫೭–೯
ಗೋವಿಂದ ಭಟ್ಟಾರಕ ೪೮–೧೬
ಘಂಟಾಕರ್ಣ ೫೨–೩೭

ಚ

ಚಂಗಳೆ, ಚಂಗಳೆದೇವಿ ೪೪–೩೮; ೪೬–೩೬: ೪೭–೨೬
ಚಂಡೇಶ್ವರ, ಚಂಡೇಶ ೮–೧೪, ೪೬; ೨೩–೨೬; ೩೦–೨೨; ೫೭–೩, ೨೬, ೩೧; ೫೮–೨೫
ಚನ್ನಬಸವ ೬–೩೫, ೪೨, ೪೪, ೫೧; ೧೧–೫೭, ೫೯; ೧೭–೧೦೭; ೩೪–೮, ೪೧, ೪೬; ೪೬–೩೭; ೬೦–೭೪, ೭೫
ಚನ್ನಯ್ಯ (ಮಾದರ) ೩–೮೨; ೮–೪೦; ೧೩–೨೬; ೧೭–೧೦; ೨೪–೪, ೮; ೩೭–೪೧; ೪೪–೩೭; ೫೫–೫೦
ಚವರದ ಚಿಕ್ಕದೇವ ೫೭–೩
ಚಾಕಲದೇವಿ ೫೮–೮೯
ಚಾಳೋಕ್ಯ ೫–೫೭
ಚಿಕ್ಕದೇವಿ ೫೮–೮
ಚಿಕ್ಕಮಾದಣ್ಣ ೪೬–೪, ೩೮, ೫೫, ೫೯, ೬೯
ಚಿಕ್ಕಯ್ಯ ೩–೮೨, ೫೭–೧೧
ಚಿಕ್ಕಲಗೆ ಮಾದಾಯಿ ೫೮–೬
ಚಿಜುತ್ತೊಣೆಯ ೨೬–೭೦
ಚಿಜುಪುಲಿಯಾರ ೨೬–೭೦
ಚೀಲಾಳ ೨೩–೧೧, ೧೨, ೧೫, ೧೬, ೩೩, ೪೩, ೪೭, ೪೯: ೨೪–೧೯
ಚೆಂಗಳೆ ೮–೪೦, ೧೭–೮೯, ೨೩–೧೦, ೩೫, ೩೬, ೪೭, ೪೯; ೨೪–೩೫, ೪೫, ೨೮–೮
ಚೇರಮ ೩–೮; ೮–೪೫, ೧೩–೨೩, ೨೪–೪, ೪೮: ೩೦–೨೪; ೪೩–೫೧; ೪೭–೩೪; ೫೩–೭೩; ೫೫–೧೭.
ಚೊಕ್ಕನಾಯ್ನಾರು ೧೦–೧೭
ಚೋಳ, ಚೋಳ ಮಹೇಳ, ಚೋಳರಾಯ ೮–೩೩; ೪೦; ೨೩–೭೮, ೮೫; ೨೪–೪೮; ೩೦–೨೪; ೩೭–೫೬; ೪೯–೨೨; ೫೧–೧೦
ಚೋಳಾದೇವಿ ೫೮–೮

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ಸಂಧಿ–ಪದ್ಯ

ಜ

ಜಗದೇವ ೮–೪೨; ೩೬–೬; ೬೦–೬, ೭, ೧೩, ೨೦, ೨೧, ೩೦
ಜಗದೇವಮಂತ್ರಿ ೫೯–೧, ೩, ೫, ೪೬, ೫೪, ೫೯, ೬೨
ಜಗದೇಕಮಲ್ಲ ೫೨–೬೯
ಜಕ್ಕಿಯರ ಬೊಮ್ಮಯ್ಯ ೫೭–೩
ಜಂಬೂರ ಮಹಾಕಾಳಯ್ಯ ೪೮–೧೫
ಜಾಯಿ ದೇವ ೫೭–೧೦
ಜೇಡರದಾಸ ದಾಸಿಮಯ್ಯ, ದಾಸಿ, ೧೦–೩೬ ೨೨–೪, ೫, ೧೦, ೨೧, ೩೯; ೨೩–೭೨, ೨೪–೫, ೨೭–೫೩, ೩೨–೩೩, ೩೫, ೩೯, ೪೧, ೩೬–೭; ೪೨–೨೯, ೪೮; ೪೬–೩೫; ೫೦–೨; ೩, ೧೦, ೧೬, ೩೬, ೪೨, ೫೮, ೬೨, ೬೩, ೬೫, ೫೩–೭೩, ೫೮–೫.

ಜೈನಮುನಿಗಳು

ಅಮರೇಂದ್ರಮುನಿ ೫೧–೧೮
ಆಚಾರ್ಯೇಂದ್ರಮುನಿ ೫೧–೧೮
ಕ್ಷಮಣಮುನಿದೇವ ೫೧–೧೭
ಚಂದ್ರಕೀರ್ತಿ ೫೧–೧೮
ಚಂದ್ರಮುನಿ ೫೧–೧೮
ದಮನಮುನಿ ೫೧–೧೭
ಧರ್ಮಸ್ರಾವಕೇಂದ್ರ ೫೧–೧೭
ರಾಜೇಂದ್ರಮುನಿ ೫೧–೧೮
ವಿಮಳೇಂದ್ರಮುನಿ ೫೧–೧೮
ಶ್ರೀವಿಜಯಮುನಿ ೫೧–೧೭

ಜ

ಜೊಮ್ಮವ್ವೆ ೫೬–೭

ಡ

ಡೋಹರ ಕಕ್ಕಿದೇವಯ್ಯ ೫೭–೩

ತ

ತಂಗಟೂರ ಮಾರಯ್ಯ ೩೫–೫೮
ತಿರುಕುಜಿಪಿ ೨೬–೬೯
ತಿರುಚಿಟ್ರಂಬಲ ೯–೯
ತಿರುನೀಲಕಂಠ ೨೬–೬೬, ೫೩–೭೨
ತಿರುಪರಂಧಾಮ ೨೬–೧೦
ತಿರುಮೂಲ ೨೬–೬೯
ತಿರುವಾಕರೀಶ ೪೮–೨೬, ೩೫, ೩೮; ೪೧, ೪೨
ತಿರುವಾರೂರ ನೈನಾರಿ ೮–೪೭
ತಿಲಕವ್ವೆ ೩೯–೨೮, ೫೧–೨೬
ತುಪ್ಪದ ನಾಗಲಾಯಿ ೫೮–೬
ತುಪ್ಪದ ಆಯ್ಯಾಮದೇವ ೫೭–೧೨
ತುಯ್ಯಲ ಆಲ್ಲಮದೇವ ೩೬–೬
ತೆಲುಗಬೊಮ್ಮಯ್ಯ ೩–೮೨, ೧೪–೧೯, ೨೩, ೨೫, ೨೫, ೨೯–೩೧, ೭೨, ೩೩–೧, ೩, ೩೬–೩೮, ೪೬–೩೬ ೫೩–೭೩, ೫೭–೬
ತೆಲುಗೇಶ ಮಸಣಯ್ಯ ೫೭–೬
ತ್ರಿಪುರಾಂತಕ ೫–೪೧
ತ್ರಿಪುರಾರಿದೇವ ೫೮–೨

ದ

ದಂಗುಳಿಯ ಮಾರಯ್ಯ, ೨೬–೪೯
ದಂಡಿ ೫೩–೭೦

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ದಂಡಿಗೆಯ ಗುಡ್ಡಾದೇವಿ ೫೮–೭
ದಸರಯ್ಯ, ದಸರಿದೇವ ೩೬–೬, ೩೭–೨, ೧೬, ೧೮, ೧೯, ೨೪, ೨೭, ೩೮, ೩೯–೪೧, ೪೬–೩೪, ೪೭, ೬೧, ೬೯, ೭೧, ೭೪, ೭೭.
ದೀಪದ ಕಲಿಯರು ೮–೩೬
ದೀಪದ ಕಲಿ ೧೫–೧, ೮, ೧೨, ೧೯–೨೦, ೨೭, ೨೯–೩೦, ೩೨.
ದುಗ್ಗಳೆ ೨೨–೬, ೧೦, ೩೫, ೪೧; ೨೮–೮, ೫೬–೩೪
ದೂಳಯ್ಯ ೪೬–೩೫
ದೇಸಿಂಗರಾಯ ೫೦–೨
ದೇವದಂಡಿಯ ಕಾಮಿದೇವ ೫೭–೧೦
ದೇವರದಾಸಿ ೮–೩೮, ೫೭–೪
ದೇವರಸು ೫೭–೧೧
ದೇವಲಾಂಬಿಕೆ ೫೮–೭
ದೇವಾರ್ಯ ೧–೧೪
ಧರ್ಮಜ ಧರ್ಮರಾಯ ೪೩–೬೪
ಧರಣಿದೇವ ೫೭–೧೧
ಧವಳೇಶ್ವರ ೫೭–೪
ಧವಳಿದೇವಯ್ಯ ೫೭–೭
ಧೂರ್ಜಟಿ ಕೇಶಿ ೫೭–೪
ಧೂಪದ ಮಾಚಯ್ಯ ೮–೩೭, ೪೩–೨೪

ನ

ನಕ್ಕನ್ನೈನಾರ್ ೧೨–೧೯
(ಸೌಂದರ) ನಂಬಿ, ನಂಬಿಯಣ್ಣ, ನಂಬ್ಯಣ್ಣ ೮–೪೧, ೧೩–೨೩, ೧೭–೧೨, ೧೯, ೨೪–೮, ೨೫–೪, ೧೧, ೧೪, ೧೯, ೨೧, ೨೪, ೪೨, ೪೫, ೪೬,, ೫೭, ೬೪, ೬೫, ೬೭, ೬೯, ೨೬–೭೪, ೭೫, ೨೭–೫೨, ೨೮–೧೨, ೨೬, ೩೦–೨೨, ೩೬–೪೪, ೪೨–೫೦, ೪೩–೫೨, ೫೭; ೪೬–೩೬; ೫೩–೭೩

ಸಂಧಿ–ಪದ್ಯ

ನಮಿನಂದಿ ೪೯–೫೩, ೫೫, ೬೧
ನರಸಿಂಗ ಮೊನೆಯೂರ ೨೩–೨೭, ೮೩
ನರೇಂದ್ರಚೋಳ ೪೩–೫೮
ನಾಗಲಾಂಬೆ ೭–೩೪
ನಾಗಾಲಾಂಬಿಕೆ, ನಾಗಲದೇವಿ ೩೩–೮೪, ೪–೪೯
ನಾಗೂರ ಬೊಮ್ಮಯ್ಯ ೫೭–೧೨
ನಾಟ್ಯಸಮಿತ್ತಡಿಯರು ೮–೪೪, ೧೬–೧, ೧೨, ೨೨, ೨೩.
ನಿಜಲಿಂಗದೇವ ೫೮–೧
ನಿಡುಮಾರ ೪೯–೪೩, ೪೬
ನಿಂಬಿ (ಸಮ್ಮಾರ್ಜನೆಯುವಳು) ೮–೪೧ ೧೩–೨೬, ೧೭–೯೦, ೪೨–೫೦
(ನೆಲ್ಲೂರ) ನಿಂಬೆಕ್ಕ ೧೭–೯೦
ನಿಂಬಿಯಕ್ಕ, ನಿಂಬಿಯಪ್ಪ ೩–೮೨, ೨೩–೧, ೫೨, ೫೬, ೬೦, ೬೪, ೭೫, ೮೫, ೮೫, ೩೫–೨೮, ೪೬–೩೭, ೪೭–೨೬, ೮೬–೮೯.
ನಿರಂಜನ ಧವಳಾಯಿ ೫೮–೬
ನಿರ್ವಾಣಿದೇವ ೫೮–೩
ನಿರಾಳದೇವ ೫೮–೨
ನಿವಾಳಯ ಬೊಮ್ಮಿದೇವಯ್ಯ ೫೭–೨
ನೀಲಕಂಠಯ್ಯ ೫೮–೨
ನುಲಿಯ ಚಂದಯ್ಯ ೩೫–೫೮ ೫೭–೭, ೫೮–೬.
ನೊಣಬೇಶ ೫೭–೧೧
ನಃಸಂಗಿ ನಿರಾಳದೇವ ೫೭–೭

ಪ

ಪಂಡಿತಯ್ಯ ೮–೪೩
ಪಡಿಹಾರಿ ಬಸವಯ್ಯ ೮–೪೮
ಪಡಿಹಾರಿ ಬಾಚಯ್ಯ, ಬಾಚರಸ ೩೫–೯, ೧೦, ೧೯, ೨೨, ೩೬–೩. ೪, ೧೩, ೧೪, ೧೬, ೨೦, ೨೨
ಪರವೆನಾಚಿ ೨೫–೫

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ಪರಿಣಾಮಿದೇವ ೫೮–೧
ಪರ್ವತಯ್ಯ ೫೮–೪
ಪರ್ಬದ ಪರ್ಬತಾಯಿ ೫೮–೬
ಪಲ್ಲೆಹದ ಅಪ್ಪಿದೇವ ೫೭–೧೨
ಪಾಂಡುರಂಗ ಪುರೋಹಿತರು ೮–೪೩
ಪಾಲ್ಕುರಿಕೆ ಸೋಮೇಶ, ೧–೧೪, ೧೬ ಮತ್ತು ಪ್ರತಿ ಕಾಂಡದ ಕೊನೆಯ ಪದ್ಯ.
ಪಿಟ್ಟವ್ವೆ ೧೩–೨೪, ೨೩–೭೩, ೨೪–೮, ೨೫–೫೪, ೫೫, ೫೭–೫೬, ೫೧–೧೦
(ಒಡೆಯ) ಪಿಳ್ಳೆ, ಪಿಳ್ಳೆ ನಾಯ್ನಾರ್ ೪೨–೪೯ ೪೩–೫೩
ಪಿಳ್ಳೆಯ ನಾಯ್ನಾರ್ ೮–೩೬
(ಜ್ಞಾನನಿಧಿ, ಜ್ಞಾನಸಂಬಂಧಿ) ೨೪–೪, ತಿರುಜ್ಞಾನಸಂಬಂಧಿ ೪೯–೧, ೧೬, ೨೧, ೨೬, ೩೦, ೪೦, ೪೫, ೪೯
ಪಿಳ್ಳೆ ನಾರುವ ೫೩–೭೫
ಪುಷ್ಪದತ್ತ ೮–೩೫
ಪುರಾತರಬ್ಬವ್ವೆ ೫೮–೬
ಪುಲಿಗೆರೆ ಸೋಮಣ ಸೋಮಿದೇವ ೫೧–೭೬, ೭೮, ೮೦, ೮೨, ೮೩
ಪೂಸಲ ನಾಯಿನಾರ್ ೨೬–೬೮
ಪೆರ್ಮಾಡಿ ೫೩–೭೪
ಪೋಚಲದೇವಿ ೫೮–೭
ಪೋಚಿದೇವ ೫೭–೧೨
ಪೋತಿದೇವ ೫೭–೧೦
ಪ್ರಸಾದಿಯ ದಾಸಿದೇವಯ್ಯ ೩೧–೩೩

ಬ

(ಸುಂಕದ) ಬಂಕಯ್ಯ ೪೬–೩೫
ಬಂಕನಾಥ ೫೭–೮

ಸಂಧಿ–ಪದ್ಯ

ಬಂಕಿದೇವಯ್ಯ ೫೭–೮
ಬಂಕಿದೇವ ೮–೩೮
ಬಡಗಿ ಮೋಚಲದೇವಿ ೫೪–೧೪
ಬಡಿಹೋರಿ ಬೊಮ್ಮಯ್ಯ ೫೭–೪
ಬಲದೇವ ೩–೮೬, ೪–೧, ೧೩, ೧೪, ೨೩, ೨೯, ೪೧, ೪೯, ೫–೩, ೪, ೪೯, ೭೦
ಬಲದೇವ ಭಂಡಾರಿ ೮–೪೮
ಬಲ್ಲ ಹರದೇವಯ್ಯ ೫೭–೯
(ಸಿಂಧು) ಬಲ್ಲಳ (ಬಲ್ಲಾಳ) ೮–೪೧
ಬಸವರಾಜ ೪–೧, ೨, ೯; ೫–೧, ೩, ೬, ೭, ೧೦, ೧೧; ೧೧–೧೩, ೪೩, ೪೬, ೪೭, ೫೦; ೧೩–೧೫, ೧೭, ೧೯, ೨೧, ೨೨; ೨೫–೨೭, ೨೯, ೩೨, ೩೬, ೩೮, ೪೪, ೫೧, ೫೫, ೫೧–೬೧, ೬೪–೬೭, ೭೦–೭೭; ೭೯, ೭೯–೮೧ ೮೧, ೮೩–೮೬.
ಬಸವಿದೇವರು ೫೭–೩
ಬಳ್ಳೇಶ್ವರ ಮಲ್ಲಯ್ಯ ೮–೧೧, ೪೬, ೪೬–೩೮
ಬಾಚರಸ ೩೬–೭
ಬಾಚಲದೇವಿ ೫೮–೭
ಬಾಡಗಿಯ ದಾಸಯ್ಯ ೫೭–೫
ಬಾಣ ೧–೧೩, ೨೫–೫೦, ೫೨; ೩೭–೩೯; ೫೩–೬೯.
ಬಾಣಸದ ಶಿವದೇವ ೫೭–೧೧
ಬಾದರಾಯಣ ೫೩–೩೨
ಬಾಲಲಿಂಗಣ್ಣ ೪೬–೨೯, ೪೦, ೪೭, ೫೩
ಬಾಹೂರ ಗೌರೀಕಾಂತ ೨೩–೭೭
ಬಾಹೂರ ಬೊಮ್ಮಯ್ಯ, ಬೊಮ್ಮಿದೇವ ೮–೧೬: ೨೧–೨೩, ೨೭, ೩೦, ೩೩, ೩೫; ೨೪–೪, ೨೭–೫೩; ೪೬–೩೭
ಬಿಜ್ಜಮಹಾದೇವಿ, ಬಿಜ್ಜಾಯಿ, ಅಮ್ಮವ್ವೆ ೧೪–೧, ೭, ೧೩, ೩೮

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ಬಿಜ್ಜಳ, ಬಿಜ್ಜಳರಾಯ ೩–೮೬, ೫–೬, ೯, ೧೩, ೧೭, ೧೯, ೪೩, ೪೪, ೬೧, ೬೭, ೬೮, ೭೧; ೯–೨, ೪, ೫೨; ೧೦–೪, ೬, ೧೦, ೧೯; ೨೦–೧೮, ೨೨, ೨೧–೩೬, ೫೭: ೨೭–೨೯, ೪೫, ೬೨, ೬೯; ೩೫–೪೦, ೪೩, ೫೧–೧೪, ೨೮, ೩೩, ೫೦; ೫೪–೩, ೮, ೧೦, ೧೨; ೫೫–೪೯; ೫೬–೬೬, ೭೪, ೮೫, ೯೧; ೫೭–೨೧, ೫೮–೫೫, ೬೦–೩, ೭, ೧೦, ೩೦, ೩೧, ೩೩, ೩೮

ಬಿಬ್ಬಬಾಚಯ್ಯ ಬಿಬ್ಬಿ ಬಾಚಯ್ಯ ೮–೪೫ ೫೫–೧, ೧೦, ೧೪, ೨೫, ೩೦, ೪೦, ೪೭

ಬೆಲ್ಲಪತ್ರೆಯ ಕೊಪ್ಪಿದೇವ ೫೭–೧೨

ಬೊಂತಾದೇವಿ ೫೮–೭

ಬೊಮ್ಮಯ್ಯ (ಬೇಂಟಿಕಾರ) ೮–೪೮

ಬೊಮ್ಮಿದೇವ ೪೬–೩೭, ೬೦–೯

ಭ

ಭಾಸ್ಕರದೇವ ೫೭–೧೧

ಭಾಷೆವಂತ ಅಲ್ಲಯ್ಯ ೫೭–೪

ಭೀಮಕವಿ ೧–೧೭

ಭೋಗಣ್ಣ (ಕೆಂಭಾವಿ) ೨೩–೭೨

ಭೋಗಿದೇವ ೫೭–೯

ಭೋಗಿದೇವಯ್ಯ ೫೮–೫

ಭೋಜರಾಜ ೫೬–೬, ೭, ೯, ೧೧, ೧೯, ೨೦

ಮ

ಮಂಗಯಕ್ಕರಸಿ, ಮಂಗಾಂಬಿ ೪೯–೨೬, ೫೮–೬

ಮಂಚಿದೇವ ೮–೩೯

ಸಂಧಿ–ಪದ್ಯ

ಮಡಿವಳ (ಮಡಿವಾಳ) ಮಾಚಯ್ಯ, ಮಾಚಿದೇವ ೮–೪೭ ೨೦–೩, ೬, ೧೦, ೧೩, ೩೨, ೪೫; ೨೧–೩೭, ೩೯, ೪೧, ೪೩, ೪೬, ೪೮; ೫೬, ೫೯, ೬೫, ೬೭, ೭೫–೭೯; ೨೬–೭೬, ೭೯; ೨೯–೨೬; ೩೫–೯, ೧೯, ೨೧, ೨೨, ೨೬; ೩೦, ೩೧, ೩೫, ೪೧, ೪೨, ೪೩, ೪೪, ೪೬; ೩೬–೩, ೫, ೮, ೧೪, ೧೫, ೨೦, ೨೨, ೨೪, ೨೭, ೩೭, ೪೭, ೪೪, ೪೬; ೫೬–೬೨; ೫೩–೭೭; ೫೭–೧; ೬೦–೮, ೬೫, ೭೪, ೭೫

ಮಂಡಿಗೆಯ ಮಾದಿರಾಜ ೨–೪೬

ಮಧುರ ಪಾಂಡ್ಯ ೧೦–೧೬

ಮಧುವರಸ (ಆಲವಟ್ಟಿದವ) ೮–೪೮

ಮಧುವಯ್ಯ ೩೬–೬; ೫೭–೯; ೬೦–೧, ೪, ೬;

ಮಲಯರಾಜ (ಸಾಮಂತ) ೮–೪೬

ಮಲುಹಣ ೪೧–೧, ೧೮, ೨೦, ೨೩, ೨೮, ೩೦, ೩೩, ೩೭, ೩೯; ೪೯–೭೪

ಮಲುಹಣಿ ೪೧–೧೯, ೨೮, ೩೨, ೩೩, ೩೯

ಮಲೆಯರಾಜ ೪೬–೩೬

ಮಲ್ಲಿಕಾರ್ಜುನ ಪಂಡಿತ ೧–೧೦

ಮಲ್ಲಿನಾಥ ೪೬–೩೬; ೪೭–೪; ೫೭–೯

ಮಸಣಿದೇವ, ಮಸಣಯ್ಯ ೪೬–೩೪, ೬೦–೯,

ಮಹದೇವಿ ೪೬–೩೮; ೫೮–೮

ಮಹಾಕಾಳಿದೇವ (ಮಾಕಾಳ) ೫೪–೫೪, ೫೭–೭

ಮಹಾಬಲ ಲಿಂಗದೇವ ೫೭–೬

ಮಳಿವೇಡ ದಾರಯ್ಯ ೫೭–೫

ಮಳೆಯ ರಾಜ ೪೩–೫೨; ೫೩–೭೪

ಮಾಚಲದೇವಿ ೫೮–೭

ಮಾದರಚನ್ನಯ್ಯ ೩೨–೧೬; ೪೬–೩೭

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ಮಾಡರ ದೂಳಯ್ಯ, ದೂಡಿದೇವ ೪೬–೩೫; ೫೪, ೫೬; ೫೫–೫೧; ೫೭–೫

ಮಾದಾಂಬಿಕೆ, ಮಾದಾಯಿ, ಮಾದಲೆ ೨–೪೭ ೪೯, ೫೪: ೩–೧೩, ೨೩, ೨೭, ೪೬: ೫–೪೯.

ಮಾದಿರಾಜ (ವೀಣೆಯ ಬಾರಿಸುವ) ೮–೪೪

ಮಾದಿರಾಜಯ್ಯ ೬೦–೯, ೬೫, ೭೩

ಮಾನಕಂಜರ ೧೦–೩೮; ೨೩–೨೩; ೨೪–೯: ೪೩–೫೨.

ಮಾಯಿದೇವ ೩೬–೭; ೫೭–೧೦

ಮಾಯಿದೇವಿ (ಬಸವನ ರಾಣಿ) ೧೦–೪೩, ೫೮–೬

ಮಾಯಿಭಟ್ಟರು ೫೭–೧

ಮಾಯಿಭಟ್ಟಿಪ್ರಭು ೮–೪೩

ಮಾರಯ್ಯ (ಆದುಗಬ್ಬುಗಳ) ೮–೪೧

ಮಾರುಡಿಗೆ ನಾಚಿಯ್ಯ ೫೦–೬೫, ೬೭, ೬೯, ೭೪

ಮಿಂಡಸಂಗಯ್ಯ ೫೮–೫

ಮುಗ್ಗ ಸಂಗಯ್ಯ ೧೧–೧, ೩೨, ೩೮,೪೬, ೫೭

ಮುಂಡು ಬೊಮ್ಮಯ್ಯ ೫೭–೧೧

ಮುತ್ತಿನಾರತಿಯ ಸೋವಣ್ಣ ೮–೩೬

ಮುಷ್ಟಿಯ ಚೌಡಯ್ಯ, ಮುಸುಟಿ ಚೌಡಯ್ಯ, (ಚಾವುಂಡರಾಯ) ೫೭–೫

೩೧–೧, ೫, ೭; ೯–೧೧, ೧೩; ೧೬–೧೮, ೨೫, ೨೮, ೨೯, ೩೧; ೩೬–೩೯; ೪೧–೪೨; ೪೪–೪೫; ೪೭–೫೦, ೫೩, ೫೫–೫೭; ೫೯–೬೧; ೬೩–೬೪.

ಮುರುಘದೇವ ೫೭–೭

ಮೂರ್ಖಿನಾರ್, ಮೂರ್ಖಿ ನಾಯ್ಕರು ೩೦–೨೧; ೪೩–೬೦

ಮೆಱಿಮಿಂಡ, ಮೆಱಿಮಿಂಡನಾರ ೨೫–೧ ೧೫, ೨೧; ೨೬–೨೫; ೩೬–೪೪.

ಸಂಧಿ–ಪದ್ಯ

ಮೇದರಕೇತಿದೇವ, ಕೇತಯ್ಯ ೩೬–೧, ೮, ೧೧, ೨೩, ೩೭, ೩೮, ೪೧, ೪೭, ೫೧, ೬೦, ೬೩; ೫೭–೮

ಮೊಕ್ಕಳದ ರಾಮಯ್ಯ ೫೭–೩

ಮೊನೆಯಧರ,ಮೊನೆಧರ೧೦–೩೭; ೨೪–೧೦

ಮೊನೆಯಿಡು ನಾಯ್ಕಾರ್ ೧೦–೩೭

ಮೊರಟಿದ ಬಂಕಯ್ಯ, ಬಂಕಿದೇವ ೮–೨೩, ೨೭; ೩೭–೪೦; ೪೮–೫೮. ೨೩, ೨೪, ೫೧–೩೫; ೫೭–೮.

ಮೊಱನ ವೇಮಯ್ಯ ೩೬–೭, ೫೭–೧೦

ಮೊಲ್ಲ ಬೊಮ್ಮಯ್ಯ ೬೦–೨೧, ೩೪

ಮೋಟ ಮಲಿದೇವ–ಮಲ್ಲಯ್ಯ ೩೭–೨೧, ೫೪, ೭೫.

ಮೋಳಗೆ ಮಾರಯ್ಯ ೨೯–೧, ೪, ೬೮, ೧೧, ೨೨, ೭೭, ೩೨.

ಮೋಳಗೆ ಮಾರಯ್ಯ ೫೭–೭

ಮೌಳಿದೇವಯ್ಯ ೫೭–೧೨

ಯ

ಯೋಗದೇವ ೫೭–೯

ಋಷಿ, ಮುನಿ, ಯತಿ, ಯೋಗಿ

ಅಗಸ್ತ್ಯ ೧೮–೨೬

ಅಂಗೀರಸ ೯–೨೭

ಅತ್ರಿ ೯–೨೮; ೪೯–೭೦

ಉಪಮನ್ಯು ೧–೫೨, ೯–೨೭, ೪೨–೪೧, ೫೩–೭೫, ೬೦; ೬೦–೧೮

ಕಣಾಶ (ಕಣಾದ) ೯–೨೯

ಕಣ್ವ ೯–೨೭

ಕಪಿಲ ೯–೨೭

CC-0. Jangamwadi Math Collection. Digitized by eGangotri

	ಸಂಧಿ–ಪದ್ಯ
ಕಶ್ಯಪ	೯–೨೭
ಕಾಂಡ	೯–೨೯
ಕುತ್ಸ	೯–೨೭
ಗಾರ್ಗ್ಯ	೯–೨೯
ಗೌತಮ	೧–೪೭; ೩–೭೭; ೯–೨೭; ೫೨–೫೫, ೫೯–೫೨.
ಚ್ಯವನ	೯–೨೯
ಜಮದಗ್ನಿ	೯–೨೯
ಜಹ್ನು	೯–೨೯
ಜೈಮಿನಿ	೯–೨೯
ದಧೀಚಿ	೩–೭೭; ೯–೨೯; ೪೨–೪೧; ೫೨–೫೫; ೫೩–೫೬.
ದಾರುಕ	೧–೫೨, ೯–೨೧
ದೂರ್ವಾಸ	೯–೨೮, ೪೨–೪೧, ೫೩–೫೫,
ನಾರದ	೧–೪೮, ೨–೩೩, ೯–೨೮, ೩೨, ೫೪–೫೬,
ಪತ್ಯು	೯–೨೯
ಪರಾಶರ	೯–೨೯
ಪರ್ಣಾದ	೯–೨೭
ಪರ್ವತ	೯–೨೮
ಪುಲಸ್ತ್ಯ	೯–೨೭
ಪುಲಹ	೯–೨೮
ಫಲಾದ	೯–೨೯
ಬಲ್ಲುಕ	೯–೨೭
ಭಾರದ್ವಾಜ	೯–೨೮
ಭಾರ್ಗವ	೯–೨೯
ಬ್ರಹ್ಮಪುತ್ರ	೯–೨೮
ಬ್ರಾಹ್ಮಣ್ಯ	೯–೨೭
ಭೃಗು	೩–೭೭; ೯–೨೭; ೪೨–೪೧; ೫೨–೫೫; ೫೩–೫೧; ೫೬–೭೭
ಮಂಕುಣ	೯–೨೮
ಮತಂಗ	೯–೨೯
ಮಂದಪಾಲ	೯–೨೮
ಮಾತಂಗ	೫೬–೭೨
ಮಾಂಡವ್ಯಮುನಿ	೩೦–೨೨

	ಸಂಧಿ–ಪದ್ಯ
ಮಾರ್ಕಂಡೇಯ	೯–೨೭
ಮೃಕಂಡು	೯–೨೯
ಮೈತ್ರಾವರಣ	೯–೨೮
ಮೌದ್ಗಲ್ಯ	೯–೨೭
ರುರುಮುಖಿ	೯–೨೯
ರೇಣುಕ	೧–೫೨, ೯–೨೧
ರೈಭ್ಯಕ	೯–೨೮
ವಸಿಷ್ಠ	೯–೨೭, ೫೬–೭೨
ವಾತಭಕ್ಷಣ	೯–೨೭
ವಾಮದೇವ	೯–೨೮, ೧೧–೨೫
ವ್ಯಾಘ್ರಪಾದ	೯–೨೮
ವ್ಯಾಸ	೩–೭೭; ೯–೨೮; ೫೩–೬೪, ೫೬–೨೪, ೭೨
ವಿಶ್ವಾಮಿತ್ರ	೯–೨೮
ಶಕ್ತಿ	೯–೨೭
ಶಿಲಾದ	೧–೬೪, ೬೫; ೨–೨, ೪, ೭, ೯, ೧೦; ೩–೨೦; ೯–೨೭, ೩೯
ಶುಕಮುನಿ	೧–೪೨; ೯–೨೯
ಶೌನಕ	೯–೨೯
ಶ್ವೇತ	೯–೨೭; ೩೯–೪೬; ೪೦–೪, ೫, ೨೦, ೨೫, ೨೬, ೨೮; ೫೩–೫೧.
ಸನಕ	೯–೨೯
ಸನಂದ	೧–೪೨
ಸನತ್‌ಸುತ (ಸನತ್ಕುಜಾತ)	೫೩–೪೯
ಸನದ	೯–೨೯
ಸವಿತ್ರಪಾಣಿ	೯–೨೮
ಸುನಕ	೯–೨೯
ಸುಪತ್ಥ	೯–೨೯
ಸುಪುತ್ರ	೯–೨೮
ಸುಮಂತ	೯–೨೮
ಸುಮದ	೯–೨೮
ಸುಮಿತ್ರ	೯–೨೮
ಸೂತ	೯–೨೭

CC-0. Jangamwadi Math Collection. Digitized by eGangotri

ವಸನಾವಳಿಗಳು
(ಸಂ. ೧೦ ರಿಂದ ೨೪)

ಉದಯರಾಗ	ಭಾವಜತಿಲಕ
ಕಟ್ಟುವಣ್ಣದ ಪಟ್ಟಿ	ಭೂತಿಲಕ
ಕಾಂಭೋಜಿ	ಭೂಸಲೆ
ಕೊಳನ ಮೇಘಂಬಿನಿ	ಮಣಿವಟ್ಟು
ಕೈದೊಡಕು	ಮನುಜಾವಳಿ
ಗಜದಾಳ	ಮಲಯಜಶ್ರೀ
ಗುಜ್ಜರಾಷ್ಟ್ರದ ಪಟ್ಟಿ	ಮರಕತದಪಟ್ಟಿ
ಗೌರಿಗೇಶ	ಮಾಂದಳಿರ ಪಟ್ಟಿ
ಚಂದ್ರಾತಪ	ಮೇಘವಣ್ಣದ ಪಟ್ಟಿ
ಚಿತ್ರಾವಳಿ	ರಾಯಶೇಖರ
ಜಯರಂಜನಿ	ರುದ್ರತಿಲಕ
ತವರಾಜ	ಲಲಿತ
ತುರಗಾವಳಿ	ವಲ್ಲಭಿ
ದಸರಿಯ ಪಟ್ಟಿ	ವಾರಾಣಸಿಯ ಪಟಾ
ನೇತ್ರಾವಳಿ	ವೀಣಾವಳಿ
ಪಟ್ಟಾವಳಿ	ಶರನಿಧಿರಾಜ
ಪಟ್ಟೀಂದ್ರರಾಗ	ಸಣ್ಣವಡಂಜಿ
ಪಳಿ	ಸಂಧ್ಯಾರಾಗ
ಪಿಂಜಾವಳಿ	ಸಿರಿಗಣಿ
ಪುಲಿಯುಗುರ	ಸಿರಿವಣ್ಣ ಪಟ್ಟಿ
ಪೊಂಬಟ್ಟಿ	ಹಂಸಾವಳಿ
ಬಲ್ಲಳದಟ್ಟಿ	

ರ

ರಘುರಾಮ	೫೩–೫೯, ೬೩
ರವಿದೇವ	೫೭–೧೧
ರಾಗರಸಾಂಕಿತ ಶಂಕರಯ್ಯ	೮–೫೯
ರಾಘವಾಂಕ ಕವಿ	೧–೧೧
ರಾಚಮಲ್ಲಯ್ಯ	೫೭–೧
ರಾಜನದ ಬೊಮ್ಮಿದೇವಯ್ಯ	೫೭–೨
ರಾಜೇಂದ್ರಚೋಳ	೪೩–೫೮
ರಾಮನಾಥ	೫೩–೬೨, ೬೩
ರಾಮಾದೇವಿ	೫೮–೮

ಸಂಧಿ–ಪದ್ಯ

ರಾವಣ	೫೨–೧೯, ೫೩–೫೦, ೬೨
ರುದ್ರದೇವಯ್ಯ	೫೭–೧
ರುದ್ರಪಶುಪತಿ	೮–೪೫; ೧೨–೧, ೨, ೮, ೧೦, ೧೧, ೧೬, ೧೮.
ರೆಬ್ಬಯ್ಯ	೩೬–೬
ರೇಚಯ್ಯ	೮–೩೭

ಲ

ಲಕ್ಕಿದೇವಯ್ಯ	೫೭–೩
ಲಿಂಗದ ಕಾಚಿದೇವ	೫೭–೧
ಲಿಂಗದೇವ	೫೮–೧
ಲಿಂಗಾದೇವಿ	೫೮–೭
ಲೆಂಕ ಬೊಮ್ಮಯ್ಯ	೫೭–೮
ಲೋಕನಾಥ	೫೮–೪

ವ

ವರದಾನಿ ಗುಡ್ಡವ್ವ	೪೭–೧೯
ವಾಗೀಶ	೮–೪೧
ವಾಗೀಶನಯನಾರ	೪೩–೪೭
ವೀರಗೆಲಸದಸೋಯಿದೇವ	೫೭–೧೦
ವಿಕ್ರಮ ಚೋಳ	೨೬–೬೭; ೪೩–೫೮
ವಿಮಳದೇವ	೫೭–೪
ವಿಮಳಾದೇವಿ	೫೮–೮
ವಿರೂಪಾಕ್ಷದೇವ	೫೮–೪
ವಿಶ್ವಯ್ಯದೇವ	೫೭–೧೧
ವೀರಚೋಳವ್ವೆ, ಚೋಳಾದೇವಿ	೮–೪೦ ೧೩–೨೫; ೩೨–೧೭; ೩೯–೬೯
ವೀರಬೊಮ್ಮಯ್ಯ	೫೭–೧೦
ವೀರಭದ್ರಯ್ಯ	೫೮–೩
ವೀರಲದೇವಿ	೫೮–೮
ವೀರಶಂಕರದಾಸ	೫೨–೫೦
ವೀರಿದೇವ	೫೭–೧೦

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ವೇಮನಾರ್ಯ ೪೫–೧, ೫, ೧೮, ೪೫,, ೫೬, ೬೦, ೬೨, ೬೪–೬೮; ೭೫–೭೮: ೮೦–೮೧

ಸೈಜವ್ವೆ ೫೧–೫, ೭, ೨೦, ೨೧, ೨೭, ೨೯.

ವ್ಯಾಘ್ರಪಾದ ೪೩–೪೬

ಶ

ಶಂಕರದಾಸಿಮಯ್ಯ ೮–೩೮; ೨೮–೩೧.

ಶಂಕರಶಿವದಾಸಿಮಯ್ಯ ೨೨–೧, ೪, ೫, ೭, ೧೦ ೧೩, ೨೫, ೨೬, ೨೯, ೩೪, ೩೫, ೪೧

ಶಂಕರಯ್ಯ ೩೬–೭, ೪೩–೪೬, ೪೩, ೪೮, ೪೬–೩೫, ೫೨, ೫೪–೪

ಶರಣದೇವಯ್ಯ ೫೭–೬

ಶಾಂತದೇವ ೫೭–೧೦

ಶಿವಕವಿದೇವ ೧–೧೭

ಶಿವಶಂಕರಯ್ಯ ೫೭–೮

ಶಿವಚಿತ್ಕ ೫೪–೫೫

ಶಿವದೇವ ೧೩–೧, ೨೮

ಶಿವದೇವಿ ೫೮–೭

ಶಿವನಾಗಿದೇವ ೫೩–೨೧

ಶಿವನಾಗಮಯ್ಯ ೩೭–೪೬; ೫೪–೨, ೫೬–೮೦, ೮೧, ೮೨, ೮೬, ೮೮, ೮೯; ೮, ೧೧, ೨೩.

ಶಿವಭದ್ರ ೮–೪೫

ಶಿವಮುಗ್ಧಯ್ಯ ೫೭–೪

ಶಿವಯೋಗಿ ಮಲ್ಲರಸ, ಮಲ್ಲಿಕಾರ್ಜುನ ದೇಸಿಕ ೧೮–೨೦, ೩೨, ೮೫; ೧೯–೮, ೧೦, ೨೫, ೩೧

ಶಿವರಾತ್ರಿ ಸಂಕಿದೇವ, ಸಂಕಣ್ಣ, ಸಂಕಯ್ಯ ೮–೫೯, ೫೭–೨, ೮

ಶಿವಲೆಂಕಮಂಚಣ್ಣ ೧–೧೦; ೫೨–೫೫, ೫೮, ೬೦, ೬೨, ೬೬

ಶಿವಾನಂದಯ್ಯ ೩೩–೪

ಶಿವಾಯಿ ೫೮–೬

ಸಂಧಿ–ಪದ್ಯ

ಶೀಲವಂತ ತಗ್ಗಯ್ಯ ೫೭–೭

ಶೂಲದ ಬೊಮ್ಮಿದೇವಯ್ಯ ೫೭–೨

ಶ್ವಪಚಯ್ಯ ೨೪–೪, ೫೫–೧೦೪

ಶ್ರೀಗಿರಯ್ಯ ೫೭–೯

ಶ್ರೀಪತಿಪಂಡಿತ ೧–೧೦; ೮–೪೩.

ಸ

ಸಕಳದೇವ ೫೮–೧

ಸಕಳೇಶ ಮಾದರಸ, ಮಾದಿರಾಜ, ಸಕಳೇಶ್ವರ ೧೮–೩, ೬, ೯, ೨೨, ೩೧–೩೨. ೧೯–೨, ೮, ೧೦, ೨೫, ೨೭, ೩೧, ೩೩, ೩೫–೩೬; ೩೬–೬: ೪೬–೧, ೪, ೬, ೨೪, ೩೮, ೪೮. ೫೭–೧, ೫೮–೧, ೬೦–೭೨

ಸಂಗಯ್ಯ ೧೯–೩೮, ೨೧–೨೫., ೬೧; ಸಂಗಮದೇವ ಸಂಗಮೇಶ್ವರ, ಸಂಗಮನಾಥ ೨೭–೭, ೨೯–೨೯, ೩೧–೯, ೧೧. ೩೪–೫೦, ೫೬–೨೦, ೫೭–೪೧; ೫೮–೧; ೬೦–೪೬, ೪೮, ೫೧, ೬೩

ಸತ್ಯೇಶ ಚಾಮಯ್ಯ ೩೫–೫೮, ೪೬–೩೫

ಸಪ್ಪೆಯ ಅಲ್ಲಮದೇವ ೫೭–೧೨

ಸಾಂಖ್ಯ (ತೊಂಡ) ೩೭–೫೫, ೪೨–೪೦

ಸಾಂಖ್ಯತೊಂಡ ೪೯–೬೨, ೬೫

ಸಾಂಖ್ಯಾಯನ ೩–೬೩, ೬೪

ಸಾಮವೇದಿ, ಸಾಮವೇದಿಗಳು ೮–೪೩. ೧೩–೨೫, ೨೩–೨೭, ೫೬–೧, ೫೫;

ಸಾಯಿದೇವ ೫೭–೧೦

ಸಾಯಿದೇವಿ ೫೮–೬

ಸಿಂಗಿಬೊಮ್ಮಯ್ಯ ೫೭–೬

ಸಿಗುರೆ ಚಂದಯ್ಯ ೫೭–೭

ಸಿಂಧುಬಲ್ಲಾಳ ೧೦–೩೭, ೨೩–೭೩, ೨೪–೯.

ಸಿಂಧು ಮರಾಳ ೩೭–೫೭

CC-0. Jangamwadi Math Collection. Digitized by eGangotri

ಸಂಧಿ–ಪದ್ಯ

ಸಿದ್ದಾದೇವಿ ೫೮–೮
ಸಿದ್ಧರಾಮ (ಸೊನ್ನಲಿಗೆ) ಸಿದ್ಧರಾಮಯ್ಯ, ಸಿದ್ಧವಿಭು ೯–೧೧, ೩೩, ೩೮, ೪೬–೩೮; ೫೧–೫೧; ೫೨–೨೭; ೫೪–೫೩
ಸಿರಿಪತಿಪಂಡಿತ ೫೪–೨೪, ೨೫
ಸಿರಿಯಾಳ, ಚಿರುತೊಂಡ ೮–೩೩, ೪೧, ೧೩–೨೬; ೧೭–೮೯; ೨೩–೨, ೩, ೬, ೩೦, ೩೩, ೪೬, ೪೬, ೭೪, ೭೬, ೭೮; ೨೪–೧೧, ೧೩, ೧೪, ೧೯, ೨೦, ೨೧, ೨೫, ೨೯, ೩೨, ೩೪, ೪೫, ೪೫, ೪೫, ೫೨.
ಸಿರಿಯಾಳ ೩೦–೨೩; ೩೬–೪೪; ೩೭–೫೮
ಸುಂಕದ ಬಂಕಯ್ಯ ೮–೩೯; ೫೭–೮
ಸುಗ್ಗಲದೇವಿ ೫೧–೨, ೪, ೧೦, ೬೩
ಸುರಗಿಯ ಚೌಡಯ್ಯ (ರಾಯ) ಚೌಡರಸ ೭–೧೫; ೮–೪೭; ೧೩–೩೭; ೩೨–೧, ೫, ೧೨, ೧೯, ೨೧; ೩೬–೭; ೪೬–೩೪; ೪೭–೫
ಸುರಂಗ ಗಣನಾಥ ೨೬–೫೬
ಸೇವಕದ ಗೌರವ್ವೆ ೫೮–೮
ಸೇದಿರಾಜ ೨೬–೩೫
ಸೊಡ್ಡಳ ಬಾಚರಸ (ಬಾಚಿರಾಜ) ೮–೪೨ ೪೬–೩೮; ೫೨–೧, ೬, ೮, ೧೬, ೧೮, ೨೭, ೨೯, ೩೧, ೩೫, ೭೨, ೭೪, ೭೫; ೫೩–೧; ೫೭–೧; ೮೦–೮೪
ಸೊನ್ನಲಿಗೆ ೯–೧೦, ೧೩
ಸೋವರಸ ೫೮–೭
ಸೌಂದರನಂಬಿ ೮–೩೩
ಸೌಂದರನಾಚಯ್ಯ ೫೯–೩೭, ೫೯
ಸೌಂದರ(ಕೂನ)ಪಾಂಡ್ಯ ೪೯–೩೧

ಹ

ಹರಳಯ್ಯ ೬೦–೧, ೪, ೬
ಹರಿಗಳಪ್ಪಣ್ಣ ೫೫–೫೫
ಹರಿಹರ ಕವಿ ೧–೧೧
ಹಲಾಯುಧ ೨೪–೧, ೧೮, ೨೧, ೩೨, ೩೬; ೩೮–೪೧, ೪೩; ೪೮–೪೯; ೫೧–೫೨,
ಹಾಟಕೇಶ್ವರ ಬೊಮ್ಮಿದೇವ ೫೭–೫
ಹಾವಿನಹಾಳ ಕಲ್ಲಯ್ಯ, ಕಲ್ಲಿದೇವ ೮–೪೪ ೩೧–೩೨, ೩೪, ೩೭, ೪೬, ೪೭, ೫೨, ೫೪; ೫೪–೨೬, ೨೮; ೫೭–೭
ಹಿಪ್ಪರಿಗೆ ಕಲ್ಲಯ್ಯ ೫೭–೧೨
ಹುಗ್ಗಿಯ ದುಗ್ಗಳವ್ವೆ ೫೮–೬
ಹೂವಿನ ಆಲ್ಲಮದೇವಿ ೫೮–೮
ಹೆಮ್ಮೆ ಸಂಗಯ್ಯ ೫೭–೨
ಹೊನ್ನತಂದೆ (ಅಗ್ಗವಣಿ), ಹೊನ್ನಿದೇವ, ಹೊನ್ನಯ್ಯ ೪೩–೪; ೪೪–೩೭; ೪೬–೪೭; ೫೭–೮

CC-0. Jangamwadi Math Collection. Digitized by eGangotri

ಬಸವಪುರಾಣದಲ್ಲಿ ಬರುವ

ಸ್ಥಳವಾಚಕ ಪದಗಳ ಸೂಚಿ

ಸ್ಥಳ	ಸಂಧಿ–ಪದ್ಯ
ಅಬ್ಬಲೂರು	೪೮–೨; ೫೧–೩೧,
ಅಭಿರಾಮಪುರ	೧೮–೪
ಅರಂಪೂರು	೫೩–೬೪
ಆರೂರು	೪೮–೪೩
ಇಂಗುಳೇಶ್ವರ ಬಾಗೆವಾಡಿ	೨–೪೫; ೫–೪೯
ಉಡುತಡಿ	೩೯–೨೮
ಉಡುವೂರು	೧೭–೧
ಉಳಿವೆ	೬೧–೭೪
ಎಲಿವೂರು	೧೨–೧
ಕಪ್ಪಡಿ ಸಂಗಮೇಶ್ವರ	೩–೨೮; ೪–೪೮, ೫೬; ೫–೧
ಕರವೂರು	೨೧–೧; ೨೪–೪; ೪೩–೫೮
ಕರ್ನಾಟದೇಶ	೨–೪೫
ಕಲ್ಯಾಣಪುರ, ಕಲ್ಯಾಣ	೫–೧೩, ೫೧; ೧೯–೩೩; ೩೧–೯, ೧೧, ೪೦; ೩೨–೪; ೩೩–೧೩, ೩೭; ೩೬–೨೧; ೫೪–೬, ೧೨; ೫೧–೪೮; ೫೮–೫೬; ೬೦–೧, ೨, ೮.
ಕಂಚಿ, ಕಾಂಚಿಯ ಪುರ, ಕಾಂಚಿ	೧೫–೧; ೧೬–೧; ೨೩–೨; ೨೪–೧೩
ಕಾವೇರಿ	೨೫–೫೪; ೪೯–೩೮
ಕಾಶಿ	೧೮–೨೩; ೫೨–೫೬; ೫೩–೫೪
ಕಾಳಹಸ್ತಿ, ತಿರುಕಾಳತಿ	೧೭–೧, ೨೬, ೧೦೩
ಕೂಡಲ(ಕೂಡಲಸಂಗಮೇಶ್ವರ)	೪೯, ೭೩ ೬೦–೪೦
ಕೆಂಬಾವಿ, ಕೆಂಭಾವಿ	೮–೪೨; ೫೬–೩೧, ೫೧
ಕೇತಾರ	೧೮–೨೩
ಕೋವೂರು	೪೯–೮೦
ಕೊಂಡುಗುಳಿ	೩೫–೫೯
ಕೋಠಾರ	೫೨–೭೩
ಕೊಳೂರು	೧೩–೧
ಗೊಬ್ಬೂರು	೫೫–೧, ೧೦, ೧೪, ೩೨, ೪೨.
ಜೊಂಗೊಂಡಿ	೨೫–೩
ಚಿಲ್ಲತ್ತಿರುವಡೂರು	೪೯–೫೩
ಚೋಳದೇಶ, ಚೋಳಭೂಮಂಡಲ	೧೫–೧; ೪೯–೬೨
ಜಂಬೂರು	೫೪–೫೪
ತಿರುನಾವಲೂರು	೪೮–೨೬
ತಿರುನೂರು	೪೯–೨೮, ೪೨
ತಿರುಮಡಕಡೆ	೪೨–೪೯
ತಿರುಮರಕ್ಕಡ	೪೯–೧೯
ತಿರುವಾಲವಾಯ	೪೯–೧೯
ತಿರುವಾರೂರು	೨೫–೫೯
ತಿರುವೂರು	೨೬–೬೯
ತಂಗಟೂರ	೩೫–೫೮
ತುಂಗಭದ್ರಾ	೪೩–೪
ದುಗ್ಗಾರಾಮ	೫೩–೬೩
ದೋರಸಮುದ್ರ	೫೩–೬೨
ದ್ರವಿಡದೇಶ, ದ್ರಾವಿಳಧರೆ	೨೧–೧; ೨೩–೨೭
ದ್ರಾಕ್ಷಾರಾಮ	೨೪–೧೦; ೪೨–೧೭; ೩೯–೨೯; ೫೭–೩೪

CC-0. Jangamwadi Math Collection. Digitized by eGangotri

ಸ್ಥಳ	ಸಂಧಿ–ಪದ್ಯ
ದ್ವಾರಾವತಿ	೫೩–೬೩
ನಂದಿಮಂಡಲ	೨–೨೮
ನಾವದಿಗೆ	೫೬–೫೭, ೬೪
ನೆಲ್ಲೂರ	೧೭–೯೦
ಪರಿವಳಿಗೆ	೫೧–೧, ೨೯
ಪಾಂಡ್ಯಮಂಡಲ	೨೬–೨೦
ಪುಲಿಗೆಱಿ, ಹುಲಿಗೆಱಿ	೫೦–೮, ೭೬, ೮೩; ೫೧–೨೧
ಪುಷ್ಪನಾರಿ	೫೩–೬೪
ಪೆನುಬಟ್ಟಪುಲಿಯೂರು	೨೬–೫೭
ಪೂಷೂರು	೨೭–೪
ಪ್ರತಾಪನಾರಾಯಣಪುರ	೫೨–೩೧
ಬಾಹೂರು	೨೧–೨೩, ೨೮
ಬೆಜವಾಡಪುರ	೩೯–೩
ಭೀಮೇಶ್ವರ	೩೨–೧೮
ಮತ್ಸ್ಯಕೇಶ್ವರ	೫೩ -೬೨
ಮಧುರಾ	೪೯–೨೦
ಮಹೇಂದ್ರಮಂಡಲಪುರ	೫೨–೩೮
ಮಾರುಡಿಗೆ	೫೦–೬೫, ೭೪
ಮುದನೂರು	೪೨–೩೯
ಮುದುಗೊಂಡೆ	೨೫–೫೪
ಮುಸುಟೆ	೩೧–೫
ಮೊರಟ	೪೮–೨೪
ವಾರಾಣಸಿ, ವಾರಣಾಸಿ	೫೨–೫೮, ೫೩–೬೫; ೫೬–೨೩; ೫೭–೩೪
ವ್ಯಾಸೇಶ್ವರ (ಲಿಂಗ)	೫೩–೬೮
ಶಾಂತಮಂಡಲ, ಶಾಂತಮಂಡಲಪುರ	೧೨–೧೯; ೪೯–೬೨
ಶ್ರೀಕಾಳಿ	೪೯–೧
ಶ್ರೀಕುಡಿ	೨೫–೫೬
ಶ್ರೀಗಿರಿ, ಸಿರಿಗಿರಿ ಶ್ರೀಪರ್ವತ, ಶ್ರೀಶೈಲ	೧೮–೨೦ ; ೧೧—೩೨, ೨೩–೨೫. ೩೨ ೫೪; ೨–೨೮, ೪೫; ೪೩–೭; ೫೨–೨೭, ೫೨; ೫೭–೩೪, ೫೮–೩; ೬೦–೭೩.

ಸ್ಥಳ	ಸಂಧಿ–ಪದ್ಯ
ಸಂಗಮೇಶ್ವರಪುರ	೬೦–೧೦
ಸಿದ್ದವಟಧಾಮ, ವಟಪುರಸಿದ್ಧ	೧–೨, ೨೦–೧
ಸೊನ್ನಲಿಗೆಪುರ, ಸೊನ್ನಲಿಗೆ	೫–೪೨೫–೨೭
ಸೌರಾಷ್ಟ್ರ ಸೌರಾಷ್ಟ್ರಪುರ	೫–೪೨, ೪೨–೧೭, ೩೫, ೫೨–೧೧, ೧೩; ೫೬–೫೮, ೬೦; ೫೭–೩೪.
ಹಾಟಕೇಶ್ವರ	೫೨–೫೨
ಹಾವಿನಹಾಳ	೫೪–೨೬
ಹಿಪ್ಪಲಿಗೆ	೨೦–೫
ಹುಲಿಗೆಱಿ ಪುಲಿಗೆಱಿ	೪೩–೬; ೫೧–೨೧
ಹೊಟಲಕೆಱಿ	೫೦–೧, ೩, ೫೨, ೭೨

ದೇವಾಲಯಗಳು

ಕಲ್ಲಿನಾಥ, ಕಲಿನಾಥ	೨೦–೪೦; ೨೧–೪೭ ೩೫–೧೬; ೩೬–೧೦.
ಕಾಶಿ ವಿಶ್ವೇಶ್ವರ	೫೨–೫೬, ೬೨, ೬೩, ೬೭; ೫೬–೨೩
ಕುಂಡಳೇಶ್ವರ	೨೧–೧
ಕೂಡಲಸಂಗಮೇಶ್ವರಲಿಂಗ	೬೦–೪೯
ಕೋಠಾರ ಸೋಮೇಶ್ವರ	೫೨–೩೦
ಜೆಡೆಯ ಶಂಕರ	೨೨–೧
ತಿರುನೀಲಕಂಠ	೨೬–೫೭, ೫೮
ತಿರುವಾಕರೀಶ	೨೬–೬೯
ತ್ರಿಪುರಾಂತಕ	೪೨–೪೯
ಬ್ರಹ್ಮೇಶ್ವರ	೪೨–೪೯; ೪೯–೧೯
ಮತ್ಸ್ಯಕೇಶ್ವರ	೫೩–೬೨
ಮೊರಟದ ಮಲ್ಲಿಕಾರ್ಜುನ	೪೮–೨೪; ೫೩–೬೪, ೭೬
ರಾಮನಾಥಲಿಂಗ	೫೦–೧೨, ೧೪, ೩೪, ೫೧, ೫೭, ೬೦.
ರಾಮೇಶ್ವರ	೪೨–೪೮

CC-0. Jangamwadi Math Collection. Digitized by eGangotri

	ಸಂಧಿ–ಪದ್ಯ
ರುದ್ರೇಶ್ವರಲಿಂಗ	೫೩–೬೪
ವೈಜನಾಥ	೫೧–೨೯
ವಾಲ್ಮೀಕೇಶ್ವರ	೨೫–೪, ೫, ೧೬, ೧೮, ೨೪, ೨೮, ೩೨, ೪೨, ೪೫.
ಶ್ರೀಕಾಳಿನಾಥ	೪೯–೧೫
ಶ್ರೀಗಿರಿಯ ಮಲ್ಲಿಕಾರ್ಜುನ	೪–೭
ಸಕಳೇಶಲಿಂಗ	೪೬–೫೦, ೫೧
ಸಂಗಮೇಶ್ವರ	೫೧–೪೯
ಸೊಡ್ಡಳದೇವ (ಸೌರಾಷ್ಟ್ರ ಸೋಮೇಶ್ವರ ಸೌರಾಷ್ಟ್ರಪತಿ)	೧೭–೧೯ ೨೪–೨೭.

	ಸಂಧಿ–ಪದ್ಯ
	೭೨; ೪೨–೧೬, ೨೦, ೨೧, ೩೧, ೩೩, ೪೭, ೫೮, ೭೦, ೭೧, ೭೪. ೫೨–೧೫: ೫೩–೩, ೨೭
ಸೌರಾಷ್ಟ್ರ ಸೋಮೇಶ್ವರಲಿಂಗ	೫೬–೭೦ ೬೪–೬೬
ಹುಲಿಗೆಜಾತೆಯ ಸೋಮನಾಥ, ಸೋಮೇಶ್ವರ	೪೩–೧, ೪, ೬, ೧೬, ೧೭, ೧೯, ೨೫, ೩೦ ೫೦–೮೨

CC-0. Jangamwadi Math Collection. Digitized by eGangotri

ಬಸವಪುರಾಣದಲ್ಲಿ ಬರುವ

ಉಪಕಥೆಗಳ ಸೂಚಿ

ಕಥೆ	ಸಂಧಿ–ಪದ್ಯ
ಅಂಗುಷ್ಠ ಗಣನಾಥನ ಕಥೆ	೭–೨೯, ೫೨
ಅಣುಮೂರ್ತಿಯ ಕಥೆ	೨೬–೧, ೬
ಅತಿಭಕ್ತನ ಕಥೆ	೨೬–೨೦, ೨೭
ಅರಿಯಮರಾಜನ ಕಥೆ	೫೨–೫೮, ೪೯
ಅರಿವಾಳ್ತಾಂಡಾರಿಯ ಕಥೆ	೨೬–೧೫, ೧೯
ಅವನಿದಾಂಡಾರಿಯ ಕಥೆ	೨೬–೪೨, ೪೬
ಇರಿವತ್ತಾಂಡಾರಿಯ ಕಥೆ	೪೮–೪೬, ೮೩,
ಉದ್ಭಟದೇವನ ಕಥೆ	೫೬–೬, ೨೦
ಏಣಾದಿನಾಥನ ಕಥೆ	೨೬–೨೭, ೩೨
ಏಲೇಶ್ವರಕೇತಯ್ಯನ ಕಥೆ	೫೯–೧೨, ೫೬
ಕಡವಳ ನಂಬಿಯರ ಕಥೆ	೨೬–೭, ೮
ಕರವೂರ ಚೋಳನ ಕಥೆ	೨೬–೩೬, ೩೮
ಕಲಿಕಾಮನ ಕಥೆ	೨೫–೫೬, ೬೧
ಕಲಿಪಾಳನ ಕಥೆ	೨೬–೬೯
ಕಲಿಯಂಬಿನ ಕಥೆ	೨೬–೩೯, ೪೧
ಕಾಮದಹನಲೀಲೆ	೧೭–೮೮
ಕಾಲಸಂಹಾರಲೀಲೆ	೧೭–೮೮
ಕೆಂಭಾವಿ ಭೋಗಣ್ಣನ ಕಥೆ	೫೬–೩೧, ೫೫
ಕೊರಡು ಕೊನರಿದ, ಬರಡು ಹಯನಾದ ಕಥೆ	೮–೨೩, ೨೭
ಕೋಳೂರು ಕೊಡಗೂಸಿನ ಕಥೆ	೧೩–೩೪
ಗುಗ್ಗುಳ ಕಲಿಯನಾರ್‌ನ ಕಥೆ	೨೬–೧೩, ೧೪
ಗೊಲ್ಲಾಳನ ಕಥೆ	೮–೧೬
ಘಂಟಾಕರ್ಣನ ಕಥೆ	೫೨–೩೭
ಚಂಡೇಶನ ಕಥೆ	೫೭–೨೨, ೨೬
ಚೇರಮರಾಯನ ಕಥೆ	೪೩–೫೧
ಜಂಬೂರ ಮಹಾಕಾಳಯ್ಯನ ಕಥೆ	೪೮–೧೫, ೧೭
ಜೋಳವು ಲಿಂಗವಾದ ಕಥೆ	೮–೧೬
ಜೋಳವು ಮುತ್ತುಗಳಾದ ಕಥೆ	೮–೨೦, ೨೨, ೨೮
ತಿರುಚ್ಚಿಟ್ಟಂಬಲನ ಕಥೆ	೯–೯, ೧೦
ತಿರುನೀಲಕಂಠನ ಕಥೆ	೨೬–೫೭, ೬೬
ತಿರುಪರಂಧಾಮನ ಕಥೆ	೨೬–೯, ೧೨
ತಿರುವಾಕರೀಶ(ವಾಗೀಶ)ನ ಕಥೆ	೪೮–೨೬, ೪೨
ತಿಲಕವ್ವೆಯ ಕಥೆ	೫೧–೨೬, ೨೭
ತ್ರಿಪುರದಹನಲೀಲೆ	೧೭–೮೮
ದಂಗುಳಿಯ ಮಾರಯ್ಯಗಳ ಕಥೆ	೨೬–೪೭, ೪೯
ದಕ್ಷಸಂಹಾರದ ಕಥೆ	೧೭–೫೨
ನಕ್ಕನೈನಾರನ ಕಥೆ	೧೨–೧೯
ನಮಿನಂದಿಯ ಕಥೆ	೪೯–೫೩, ೬೧
ನರಸಿಂಗಮೊನೆಯಾರನ ಕಥೆ	೨೩–೨೭
ನಾವದಿಗೆ ಗುಡ್ಡವ್ವೆಯ ಕಥೆ	೫೬–೫೬, ೬೬
ನಿಡುಮಾರನ ಕಥೆ	೪೯–೪೩, ೫೨
ಪಿಟ್ಟವ್ವೆಯ ಕಥೆ	೧೭–೫೧, ೨೫–೨೪, ೫೫
ಪೂಸಲ ನಾಯನಾರ್ ಕಥೆ	೨೬–೬೭, ೬೮
ಬದನೇಕಾಯಿಗಳು ಲಿಂಗವಾದ ಕಥೆ	೮–೧, ೫
ಬಳ್ಳ ಲಿಂಗವಾದ ಕಥೆ	೮–೬, ೧೧
ಬಾಣನ ಕಥೆ	೨೫–೫೦, ೫೩
ಮಧುರಪಾಂಡ್ಯನ ಕಥೆ	೧೦–೧೬, ೧೭
ಮಾದರ ದೂಳಯ್ಯನ ಕಥೆ	೫೫–೫೧, ೫೬
ಮುಸಟಿಯ ಚೌಡಯ್ಯನ ಕಥೆ	೪೫–೪೩, ೪೫
ಮೂರ್ಖನಾಯ್ನಾರನ ಕಥೆ	೪೩–೬೦, ೬೪
ಮೊರಟದ ಬಂಕಿದೇವನ ಕಥೆ	೪೮–೧೮
ರುದ್ರಪಶುಪತಿಯ ಕಥೆ	೧೨–೧, ೧೮
ವೀರಶಂಕರದಾಸನ ಕಥೆ	೫೨–೫೧, ೫೪

CC-0. Jangamwadi Math Collection. Digitized by eGangotri

ಕಥೆ	ಸಂಧಿ–ಪದ್ಯ
ವೈಜವ್ವೆಯ ಕಥೆ	೫೧–೧, ೧೯
ಶಂಕರದಾಸಿಯ ಕಥೆ	೫೨–೬೯, ೭೦
ಶಿವನು ನೊಸಲಕಣ್ಣ ಬೇಡಿದ ಕಥೆ	೮–೨೫
ಶಿವಲೆಂಕ ಮಂಚಣ್ಣನ ಕಥೆ	೫೨–೫೫, ೬೮
ಶಿವಾನಂದಯ್ಯಗಳ ಕಥೆ	೩೩–೪, ೨೦
ಶ್ರೀಪತಿಪಂಡಿತರ ಕಥೆ	೫೪–೨೪, ೨೫
ಸಾಮವೇದಿಗಳ ಕಥೆ	೫೬–೧, ೫
ಸಾಂಖ್ಯತೊಂಡನ ಕಥೆ	೪೯–೬೨, ೭೫

ಕಥೆ	ಸಂಧಿ–ಪದ್ಯ
ಸಿರಿಯಾಳ ಸೆಟ್ಟಿಯ ಕಥೆ	೧೭–೫೨
	೨೪–೧೨, ೧೫
ಸುರಂಗಗಣನಾಥನ ಕಥೆ	೨೬–೫೦, ೫೬
ಸೆಲದಿ ಕರಿಯ ಕಥೆ	೧೭–೩೭, ೪೪; ೪೨–೩೮
ಸೇದಿರಾಜನ ಕಥೆ	೨೬, ೧೫ ೩೩,
ಸೊನ್ನಲಿಗೆ ಸಿದ್ಧರಾಮಯ್ಯನ ಕಥೆ	೯–೧೧, ೫೧
ಸೋಮವ್ವೆಯ ಕಥೆ	೪೯–೫೬, ೫೯
ಹಾವಿನಹಾಳ ಕಲ್ಲಯ್ಯನ ಕಥೆ	೫೪-೨೬, ೫೩

CC-0. Jangamwadi Math Collection. Digitized by eGangotri

ಒಪ್ಪೋಲೆ

ಸಂಧಿ	ಪದ್ಯ	ಸಾಲು	ತಪ್ಪು	ಒಪ್ಪು
೩	೩೦	೬	ಅಱಿದೆನಿಸಿ	ಅರಿದೆನಿಸಿ
೩	೩೮	೧	ಮೊಱಿ	ಮೊರೆ
೬	೪೧	೫	ವರ	ದರ
೭	೩೦	೧	ಪ್ರಥಮ	ಪ್ರಮಥ
೭	೫೦	೪	ಕಾಯು	ಕಾಯ
೧೦	೪	೧	ಕಾಳಿಮರ ಸಂಕರಿಯ	ಕಾಳಿಮರಸಂ ಕರಿಯ
೧೧	೨೮	೨	ಷ್ಪಾವಸಶೇಷ	ಷ್ಪಾವಶೇಷ
೧೧	೩೨	೪	ದಾಕ್ಷಾ	ದ್ರಾಕ್ಷಾ
೧೨	೧೮	೧	ಹೆದರ	ಹೆದಱ
೧೩	೨೫	೨	ದಾವಾಗಂ	ದಾವಗಂ
೧೭	೬೩	೧	ಸೆರೆ	ಸೆಱಿ
೧೮	೨೬	೬	ಧನ	ಧನು
೧೮	೩೪	೪	ಪುರುಷ	ಪರುಷ
೧೮	೪೫	೩	ಧ್ರುಮ	ದ್ರುಮ
೧೮	೭೫	೩	ಲಿಂಗಂಗಳ	ಲಿಂಗಂಗಳಂ
೧೯	೧೨	೩	ತೋಱಿ	ತೋರ
೨೦	೪೨	೩	ಮಾವಂತುರು	ಮಾವಂತರು
೨೩	೨೩	೫	ತ್ರೊಂದನೆಂದಂ	ತ್ರೊಂದನೊಂದಂ
೨೫	೨೩	೩	ಕೊಂಡಿಲ್ಲಹದು	ಕೊಂಡಿಲ್ಲಹುದು
೨೫	೩೪	೩	ತಿಂತಿಣಿ	ತಿಂತ್ರಿಣಿ
೨೫	೬೪	೫	ನಯಮುಂ	ನಯಮಂ
೨೭	೨೮	೬	ಬೆನ್ನೃಸಿ	ಬೆನ್ನೃಸಿ
೨೭	೨೮	೬	ಮೊಱಿ	ಮೊರೆ
೨೮	೪	೫	ನೆಟ್ಟೆಲುವಿನಿನಂದದಿ	ನೆಟ್ಟೆಲುವಿನಂದದಿ
೩೪	೨೮	೨	ಕರತಳವೇಳ್ದು	ಕರತರವೇಳ್ದು
೩೯	೧೦	೩	ಮುಖವನರಿದು	ಮುಖವನಱಿದು
೪೩	೧	೨	ಶ್ವರನ ನಶ್ವರ	ಶ್ವರನನಶ್ವರ
೪೩	೫೦	೪	ಮೊಱಿಯೆ	ಮೊರೆಯೆ
೪೫	೨೨	೨	ಮೊಱಿವುತ	ಮೊರೆವುತ
೪೫	೨೯	೬	ದೆಂದರುಹಿ	ದೆಂದಱುಹಿ

CC-0. Jangamwadi Math Collection. Digitized by eGangotri

ಗಂಳಳ ಒಪ್ಪೋಲೆ

ಸಂಧಿ	ಪದ್ಯ	ಸಾಲು	ತಪ್ಪು	ಒಪ್ಪು
೪೯	೩	೩	ತೊಱಿವುತಿರಲು	ತೊರೆವುತಿರಲು
೪೯	೫೮	೩	ಕರುವುಮ	ಕಱುವುದು
೫೦	೨೨	೭	ಕರುವು	ಕಱುವು
೫೦	೨೩	೨	ಕರುವಿನ	ಕಱುವಿನ
೫೨	೨೦	೭	ಭಕ್ತಹೀನ	ಭಕ್ತಿಹೀನ
೫೭	೨೪	೪	ಬ ದನಧ್ವರ	ಬಂದನಧ್ವರ
೫೭	೪೮	೭	ಉತ್ಸಾತ	ಉತ್ಪಾತ
೫೭	೧೫	೩	ಶೈಲ	ಶೈವ
೫೮	೪೦	೭	ನಮಿಸುಲು	ನಮಿಸಲು

——(೦)——

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 331

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI.
Acc No. 3732 334 1018

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri